
ಗಳಗನಾಥ

ಸಂಪುಟ ೬

ಸಮಗ್ರ ಸಾಹಿತ್ಯ

ಕಾದಂಬರಿಗಳು



ಮ.ಗ್ರ.ಮಾ.

ಮನೋಹರ ಗ್ರಂಥ ಮಾಲಾ, ಧಾರವಾಡ.

ಗಳಗನಾಥ ಸಮಗ್ರ ಸಾಹಿತ್ಯ

'ಗಳಗನಾಥ ಸಮಗ್ರ ಸಾಹಿತ್ಯ'
ಎರಡನೆಯ ಮುದ್ರಣ ಸಂಪುಟ ಸಮಿತಿ

ಪ್ರಧಾನ ಸಂಪಾದಕರು
ಡಾ. ಎಂ.ಎಂ. ಕಲಬುರ್ಗಿ

ಸಂಪಾದಕ ಮಂಡಲಿ
ಪ್ರೊ. ದುಷ್ಯಂತ ನಾಡಗೌಡ
ಡಾ. ಹ.ವೆಂ. ಶಾಖಂಡಿಕಿ
ಡಾ. ರಮಾಕಾಂತ ಜೋಶಿ
ಶ್ರೀ ಸತೀಶ ಕುಲಕರ್ಣಿ
ಶ್ರೀ ವೆಂಕಟೇಶ ಬಿ. ಕುಲಕರ್ಣಿ
ಶ್ರೀ ಶ್ರೀಧರ ಎಸ್. ಜೋಶಿ

ಮೊದಲನೆಯ ಮುದ್ರಣ : ೧೯೯೯
ಎರಡನೆಯ ಮುದ್ರಣ : ೨೦೧೪

ಗಳಗನಾಥ ಸಮಗ್ರ ಸಾಹಿತ್ಯ

ಕಾದಂಬರಿಗಳು

ಸಂಪುಟ : ೬

ಪ್ರಬುದ್ಧ ಪದ್ಮನಯನೆ
ರಾಣೀ ಮೃಣಾಲಿನಿ
ವೈಭವ
ಧರ್ಮರಹಸ್ಯ
ಸಂಸಾರಸುಖ

ಗಳಗನಾಥ
(ವೆಂಕಟೇಶ ತಿರಕೋ ಕುಲಕರ್ಣಿ)

ಮನೋಹರ ಗ್ರಂಥ ಮಾಲಾ, ಧಾರವಾಡ.

GALAGANATHA SAMAGRA SAHITYA
(Complete works of GALAGANATHA)
Novels in Six Volumes
Vol - VI
1. Prabuddha Padmanayane
2. Raani Mrunalini
3. Vaibhava
4. Dharma Rahasya
5. Samsaar Sukha

Chief Editor : Dr. M.M. Kalburgi

Publisher : **MANOHARA GRANTHA MALA**
Laxmi Bhavan, Subhas Road, Dharwad - 580 001.
Phone : 0836 - 2441822, 2441823
www.granthamala.com

Website Design : Weblogix, Dharwad

Printer : **Lakshmi Mudranalaya**
Chamarajpeth, Bangalore - 560018.
Phone : 080 - 26613123, 26618752

Edition : Second Year : 2014 Pages : XXXX + 782 = 822
Paper : 70 gsm N.S. Maplitho

Cover Design : artec, Dharwad

Founder Editor : Late G. B. Joshi
Literary Advisors : Girish Karnad, Giraddi Govindaraj
Editor-Publisher : Ramakant Joshi
Manager : Sameer R. Joshi

Price : Rs.2000/- ISBN : 978-93-81822-41-8
(One set of Six Volumes)

ಪ್ರಕಾಶಕರ ಮಾತು

ಗಳಗನಾಥರು ಆಧುನಿಕ ಕನ್ನಡ ಸಾಹಿತ್ಯಕ್ಷೇತ್ರದ ಆದಿಪುರುಷರು. ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸಿದವರು. ತಮ್ಮ ಜೀವಿತ ಕಾಲದಲ್ಲಿ ಕನ್ನಡದಲ್ಲಿ ಕಾದಂಬರಿಗಳನ್ನು ಬರೆದು, ಸ್ವತಃ ಪ್ರಕಟಿಸಿ, ಚೀಲಗಳಲ್ಲಿ ತುಂಬಿಕೊಂಡು ಮನೆಮನೆಗೆ ಸಂಚರಿಸಿ ಮಾರಿದವರು. ಪ್ರಕಟನೆಯ ಪ್ರಪಂಚದಲ್ಲಿ ಕೈಸುಟ್ಟುಕೊಂಡು, ಸಾಲ ಸೋಲ ಮಾಡಿಕೊಂಡವರು. ಆದರೂ ತಮ್ಮ ಧ್ಯೇಯದಿಂದ ಒಂದಿಷ್ಟೂ ಅಲುಗಾಡದೆ ಮುನ್ನಡೆದವರು.

ಗಳಗನಾಥರ ಕಾಲಾನಂತರ ಅವರ ಕೃತಿಗಳೂ ಮಾರುಕಟ್ಟೆಯಿಂದ ಮಾಯವಾದವು. ಡಾ. ಎಂ.ಎಂ. ಕಲಬುರ್ಗಿಯವರು ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದ ಸಮಯದಲ್ಲಿ 'ಗಳಗನಾಥ'ರ ಕಾದಂಬರಿಗಳ ಪುನರುಜ್ಜೀವನ ಕಾರ್ಯವನ್ನು ಕೈಗೊಂಡರು. 'ಸಂಯುಕ್ತ ಕರ್ನಾಟಕ'ದ ಮಾತೃಸಂಸ್ಥೆಯಾದ 'ಲೋಕ ಶಿಕ್ಷಣ ಟ್ರಸ್ಟ್' ಈ ಉದ್ದೇಶಕ್ಕಾಗಿ ೬ ಲಕ್ಷ ರೂ.ಗಳ ಆರ್ಥಿಕ ಸಹಾಯ ನೀಡಿದ್ದರ ಫಲವಾಗಿ, ೧೯೯ರಲ್ಲಿ ಅವರ ಪ್ರಧಾನ ಸಂಪಾದಕತ್ವದಲ್ಲಿ 'ಗಳಗನಾಥ ಕಾದಂಬರಿ ಸಮಗ್ರ' ಎಂಬ ಹೆಸರಿನಲ್ಲಿ ೬ ಸಂಪುಟಗಳನ್ನು ರಿಯಾಯಿತಿ ಬೆಲೆಯಲ್ಲಿ ಹೊರತರಲಾಯಿತು. ಎಲ್ಲ ಸಂಪುಟಗಳು ಅಲ್ಪ ಸಮಯದಲ್ಲಿ ಖರ್ಚಾಗಿ ಹೋದವು. ಹೀಗಾಗಿ ಕಳೆದ ೧೦ ವರ್ಷಗಳಿಂದ ಮತ್ತೆ ಗಳಗನಾಥರು ಮರೆಯಾಗುವ ಸಂದರ್ಭ ಒದಗಿತು.

ಡಾ. ಕಲಬುರ್ಗಿಯವರ ಪ್ರಕಾರ ಗಳಗನಾಥರನ್ನು ಮತ್ತೆ ಒಂದು ಶತಮಾನದ ವರೆಗೆ ಜನರ ಮನಸ್ಸಿನಲ್ಲಿ ಉಳಿಯುವಂತೆ ಮಾಡಬೇಕಾದರೆ, ಅವರ ಸಾಹಿತ್ಯವನ್ನು ಮರು ಮುದ್ರಿಸಿ ಹೊಸ ಜನಾಂಗಕ್ಕೆ ಲಭ್ಯವಾಗುವಂತೆ ಮಾಡುವುದಾಗಿದೆ. ಈ ದೃಷ್ಟಿಯಿಂದ ಸಮಗ್ರ ಕಾದಂಬರಿಗಳ ಜೊತೆಗೆ ಅವರ ಇತರ ಪ್ರಕಟಿತ ಮತ್ತು ಅಪ್ರಕಟಿತ ಸಾಹಿತ್ಯವನ್ನು ಹೊರತರುವ ಉದ್ದೇಶದಿಂದ ಅವರ ಮೊಮ್ಮಕ್ಕಳಾದ ಶ್ರೀ ವೆಂಕಟೇಶ ಬಿಷ್ಟಪ್ಪ ಕುಲಕರ್ಣಿ ಅವರನ್ನು ಸಂಪರ್ಕಿಸಲಾಗಿ, ಅವರು ಸಂತೋಷದಿಂದ ತಮ್ಮ ಹತ್ತಿರವಿದ್ದ ಗಳಗನಾಥರ ಹಸ್ತಪ್ರತಿಯ ಪೆಟ್ಟಿಗೆಯನ್ನೇ ಕೊಟ್ಟರು. ಅದರಲ್ಲಿ

ಮಹಾಭಾರತದ ಎಲ್ಲ ಪರ್ವಗಳ ಕನ್ನಡ ಭಾಷಾಂತರವಿದ್ದರೂ (ಎರಡು ಪರ್ವಗಳನ್ನು ಅವರು ತಮ್ಮ ಜೀವಿತ ಕಾಲದಲ್ಲಿಯೇ ಪ್ರಕಟಿಸಿದ್ದರು) ಹಸ್ತಪ್ರತಿಯು ಜೀರ್ಣಾವಸ್ಥೆಯಲ್ಲಿದ್ದು ಪುಟಗಳೆಲ್ಲ ಹರಡಿ ಹಂಚಿ ಹೋಗಿವೆ. ಅವನ್ನು ಸರಿಯಾಗಿ ಹೊಂದಿಸಿ, ಪ್ರಕಟನೆಗೆ ಯೋಗ್ಯ ಮಾಡುವುದೇ ಪ್ರಯಾಸದ ಕೆಲಸ. ಪ್ರಕಟಿತ ಇತರ ಕೃತಿಗಳನ್ನು ಶೋಧಿಸುವುದೂ ಇನ್ನೊಂದು ಕೆಲಸ. ಈ ಹೊಣೆಯನ್ನು ಡಾ. ಕಲಬುರ್ಗಿಯವರ ನೇತೃತ್ವದಲ್ಲಿ ಪ್ರೊ. ದುಷ್ಯಂತ ನಾಡಗೌಡ, ಡಾ. ಹ.ವೆಂ. ಕಾಖಂಡಿಕಿ, ಡಾ. ರಮಾಕಾಂತ ಜೋಶಿ, ಶ್ರೀ ಸತೀಶ ಕುಲಕರ್ಣಿ ಇವರು ಹೊತ್ತುಕೊಂಡಿದ್ದಾರೆ.

ಸ್ವತಃ ಸಾಹಿತಿಯಾಗಿರುವ ಶ್ರೀಮತಿ ಸುಧಾಮೂರ್ತಿಯವರದು ಕನ್ನಡ ಸಾಹಿತ್ಯದ ಜೀರ್ಣೋದ್ಧಾರ ವಿಷಯದಲ್ಲಿ ಅತ್ತಿಮಬ್ಬೆಯ ಪ್ರಜ್ಞೆ. 'ಗಳಗನಾಥ ಸಮಗ್ರ ಕಾದಂಬರಿ'ಗಳಷ್ಟೇ ಅಲ್ಲದೆ ಅವರ ಎಲ್ಲ ಕೃತಿಗಳನ್ನು ಒಟ್ಟಿಗೇ ತರಲು ಸೂಚಿಸಿ, ಅದರ ಆರ್ಥಿಕ ಭಾರವನ್ನು ತಮ್ಮ ಇನ್‌ಫೋಸಿಸ್ ಫೌಂಡೇಶನ್, ಬೆಂಗಳೂರು ಮೂಲಕ ಭರಿಸುವದಾಗಿ ತಿಳಿಸಿದರು.

ಮೊದಲ ಹಂತವಾಗಿ, ಈಗಾಗಲೇ ಪ್ರಕಟವಾದ ಗಳಗನಾಥರ ಕಾದಂಬರಿಗಳ ಆರು ಸಂಪುಟಗಳನ್ನು ಹೊರತರುತ್ತಿದ್ದೇವೆ. ನಂತರ ಅವರ ಇತರ ಪ್ರಕಟಿತ–ಅಪ್ರಕಟಿತ ಕೃತಿಗಳ ಸಂಪುಟಗಳನ್ನು ಹೊರತರುತ್ತೇವೆ. ಓದುಗರಿಗೆ ಭಾರವಾಗದ ಹಾಗೆ ಯೋಗ್ಯ ರಿಯಾಯಿತಿ ಬೆಲೆಯಲ್ಲಿ ಸಂಪುಟಗಳನ್ನು ಒದಗಿಸಲಾಗುತ್ತದೆ. ಕಾದಂಬರಿ ಸಂಪುಟಗಳನ್ನು ಈ ಮೊದಲು ಹಂಪಿ ಕನ್ನಡ ವಿಶ್ವವಿದ್ಯಾಲಯ ಪ್ರಕಟಿಸಿದೆ. ಇವರೆಲ್ಲರಿಗೆ ಕೃತಜ್ಞರಾಗಿದ್ದೇವೆ.

ಗಳಗನಾಥರ ಇನ್ನೊಬ್ಬ ಮೊಮ್ಮಗನಾದ ಶ್ರೀಧರ ಶಂಕರಭಟ್ಟ ಜೋಶಿ ಇವರು ತಮ್ಮ ಹತ್ತಿರವಿದ್ದ ಗಳಗನಾಥರ ಕುಟುಂಬದ ಅಪರೂಪದ ಫೋಟೋವನ್ನು ನೀಡಿದ್ದಾರೆ.

ಬೆಂಗಳೂರಿನ ಲಕ್ಷ್ಮೀ ಮುದ್ರಣಾಲಯದವರು ಈ ಸಂಪುಟಗಳನ್ನು ಅತ್ಯಲ್ಪ ಸಮಯದಲ್ಲಿ ಮರುಮುದ್ರಣ ಮಾಡಿಕೊಟ್ಟಿದ್ದಾರೆ. ಸಂಪುಟಗಳ ಮುಖಪುಟವನ್ನು ಆರ್ಟೆಕ್, ಧಾರವಾಡ ಇವರು ಸಿದ್ಧಪಡಿಸಿದ್ದಾರೆ. ಇವರೆಲ್ಲರಿಗೂ ನಾನು ಆಭಾರಿ.

– ರಮಾಕಾಂತ ಜೋಶಿ

ನಿಮ್ಮ ನೆನೆದಾಗಲೆ ಉದಯ

'ಗಳಗನಾಥ' ಹಾವೇರಿ ಜಿಲ್ಲೆಯ ಒಂದು ಹಳ್ಳಿ. ವೇಂಕಟೇಶ ತಿರಕೋ ಕುಲಕರ್ಣಿ ಯವರು ತಮ್ಮ ಈ ಹಳ್ಳಿಯ ಹೆಸರನ್ನು ಕಾವ್ಯನಾಮವಾಗಿ ಬಳಸುವ ಮೂಲಕ, ಅದನ್ನು ಕನ್ನಡ ಸಾಹಿತ್ಯದಲ್ಲಿ ಚಿರಸ್ಥಾಯಿಗೊಳಿಸಿದರು.

ಧಾರವಾಡದ ಗಂಡುಮಕ್ಕಳ ಟ್ರೇನಿಂಗ್ ಕಾಲೇಜು ಇವರ ಸಾಹಿತ್ಯಿಕ ವ್ಯಕ್ತಿತ್ವವನ್ನು, ಅಗಡಿಯ ಆನಂದಾಶ್ರಮ ಇವರ ಆಧ್ಯಾತ್ಮಿಕ ವ್ಯಕ್ತಿತ್ವವನ್ನು ರೂಪಿಸಿದವು. ಈ ಎರಡೂ ಆಯಾಮಗಳಿಗೆ ಆಧಾರವಾದುದು ಅವರ ಕನ್ನಡ ಶಾಲೆಯ ಶಿಕ್ಷಕ ವೃತ್ತಿ. ಹೊಸಗನ್ನಡ ಸಾಹಿತ್ಯಿಕ ಪರಿಸರವನ್ನು ಮೈಸೂರು ಪ್ರದೇಶದಲ್ಲಿ ರಾಜರ ಆಸ್ಥಾನ ವಿದ್ವಾಂಸರು ಸೃಷ್ಟಿಸಿದರೆ, ಉತ್ತರ ಕರ್ನಾಟಕದಲ್ಲಿ ಕನ್ನಡ ಶಾಲೆಯ ಮಾಸ್ತರರು ಸೃಷ್ಟಿಸಿದರು. ಇವರಲ್ಲಿ ಎದ್ದು ಕಾಣುವ ಹೆಸರು ಗಳಗನಾಥ ಮಾಸ್ತರರದು.

ಕನ್ನಡವನ್ನು ಸಾವಿರ ವರ್ಷಗಳಿಂದ ಆಳಿದ ಪದ್ಯಪ್ರಕಾರವನ್ನು ಹಿಂದೆ ಸರಿಸಿ, ಇತ್ತೀಚಿನ ನೂರು ವರ್ಷ ಅದನ್ನು ಆಳಿದುದು ಗದ್ಯಪ್ರಕಾರ. ಶಿವಕೋಟ್ಯಾಚಾರ್ಯ, ಹರಿಹರ, ನಯಸೇನರಂಥವರ ವೈಯಕ್ತಿಕ ಪ್ರಯತ್ನಗಳನ್ನು ಬಿಟ್ಟರೆ, ಸಾವಿರ ವರ್ಷದ ಸುದೀರ್ಘ ಅವಧಿಯಲ್ಲಿ ಕನ್ನಡ ಗದ್ಯ ತೆವಳುತ್ತಲೇ ಬಂದಿತು. ಮುದ್ದಣನಲ್ಲಿ ಆಧುನಿಕ ಗದ್ಯದ ಲಕ್ಷಣಗಳು ಕಂಡುಬಂದರೂ ಆ ಹಾದಿ ಒಂದು ಮಾರ್ಗವಾಗಿ ಬೆಳೆಯಲಿಲ್ಲ. ಆದರೆ ತಮ್ಮ ಸಾಹಿತ್ಯಕೃಷಿ ಮತ್ತು ಪತ್ರಿಕಾ ಸಾಹಿತ್ಯಕೃಷಿಗಳ ಮೂಲಕ ಆಧುನಿಕ ಗದ್ಯಮಾರ್ಗವನ್ನು ಸಿದ್ಧಗೊಳಿಸಿದವರಲ್ಲಿ ಮುಖ್ಯರೆನಿಸಿದ್ದಾರೆ, ಗಳಗನಾಥರು.

೨೦ನೆಯ ಶತಮಾನದಲ್ಲಿ ಈ ಗದ್ಯಯುಗವನ್ನು ಆಳಿದುದು ಕಾದಂಬರಿ. ಹೀಗಾಗಿ ಈ ಶತಮಾನವನ್ನು "ಕಾದಂಬರಿ ಪ್ರಧಾನಯುಗ"ವೆಂದು ಕರೆಯಬಹುದಾಗಿದೆ. ಇದು ನವೋದಯ, ಪ್ರಗತಿಶೀಲ, ನವ್ಯವೆಂಬ ಮೂರು ಹಂತಗಳಲ್ಲಿ ಸಾಗಿಬಂದಿದೆ. ಇವುಗಳಲ್ಲಿ ಪ್ರಗತಿಶೀಲವೆಂಬುದು ಒಂದು ಪ್ರಯೋಗವಾಗಿ ಉಳಿಯಿತೇ ಹೊರತು ಪರಂಪರೆಯಾಗಿ ಬೆಳೆಯಲಿಲ್ಲ. ಇತ್ತೀಚೆ ನವ್ಯ ಕಾದಂಬರಿ ಒಂದು ಪರಂಪರೆಯಾಗಿ ಬೆಳೆಯುತ್ತಲಿದ್ದರೂ ಅದರ ಸಂಖ್ಯೆ ಕಡಿಮೆ. ಆದುದರಿಂದ ಇಂದಿಗೂ ಕಾದಂಬರಿ ಕ್ಷೇತ್ರವನ್ನು ಬಹುಪಾಲು ವ್ಯಾಪಿಸಿದುದು, ನವೋದಯ ಪ್ರಜ್ಞೆಯ ಕಾದಂಬರಿ. ಈ ಪ್ರಜ್ಞೆಯ ಮೂಲಪುರುಷರಲ್ಲಿ ಮುಖ್ಯರೆನಿಸಿದ್ದಾರೆ, ಕಾದಂಬರಿ ಪಿತಾಮಹ ಗಳಗನಾಥರು.

ಕಾದಂಬರಿ ಸಾಹಿತ್ಯ, ಧಾರ್ಮಿಕ ಸಾಹಿತ್ಯ, ನಿಬಂಧ ಸಾಹಿತ್ಯ ನೆಲೆಗಳಲ್ಲಿ ದುಡಿದಿದ್ದರೂ "ಗಳಗನಾಥರೆಂದರೆ ಕಾದಂಬರಿ, ಕಾದಂಬರಿಯೆಂದರೆ ಗಳಗನಾಥರು" ಎಂಬಂತೆ ಇವರ ಹೆಸರು ಕಾದಂಬರಿಗೆ ಪರ್ಯಾಯವೆನಿಸಿದೆ. ಸುಮಾರು ಐದು ಸಾವಿರ ಪುಟವ್ಯಾಪ್ತಿಯ ಕಾದಂಬರಿ ಸಾಹಿತ್ಯಸೃಷ್ಟಿ, ಕೆಲವೊಮ್ಮೆ ಒಂದು ಕಾದಂಬರಿಗೆ ಐದು ಆವೃತ್ತಿ, ಒಂದು ಆವೃತ್ತಿಗೆ ಐದು ಸಾವಿರ ಪ್ರತಿ, ಮಾರಾಟಕ್ಕೆ ಪುಸ್ತಕದ ಗಂಟುಹೊತ್ತು ಗ್ರಾಮದಿಂದ ಗ್ರಾಮಕ್ಕೆ ನಡೆಸಿದ ಸುತ್ತಾಟ-ಇವೆಲ್ಲವುಗಳಿಗೆ ಕನ್ನಡ ಕಾದಂಬರಿಯ ಇತಿಹಾಸದಲ್ಲಿ ಇಂದಿಗೂ ಏಕೈಕ ನಿದರ್ಶನವೆನಿಸಿದ್ದಾರೆ, ಗಳಗನಾಥರು.

ಒಂದು ಸಂಸ್ಕೃತಿಯ ಸಾಹಿತ್ಯ ಇನ್ನೊಂದು ಸಂಸ್ಕೃತಿಯಲ್ಲಿ ಮೊದಲು ಪ್ರವೇಶಿಸುವುದು, ಭಾಷಾಂತರದ ಮೂಲಕ. ಆಮೇಲೆ ಅದು ಭಾವಾಂತರ, ಸ್ವತಂತ್ರ ಸಾಹಿತ್ಯಗಳಿಗೆ ದಾರಿ ಮಾಡಿಕೊಡುತ್ತದೆ. ಇದಕ್ಕೆ ಅನುಗುಣವಾಗಿ ಆರಂಭದ ಕನ್ನಡ ಭಾವಗೀತೆ ಮತ್ತು ನಾಟಕಗಳು ಅನುವಾದದ ದಾರಿ ಹಿಡಿದೇ ಕನ್ನಡದೊಳಗೆ ಬಂದವು. ಅಂದರೆ ಇಂಗ್ಲಿಷ್‌ನಿಂದ ಕಾವ್ಯಸಾಹಿತ್ಯವನ್ನು, ಇಂಗ್ಲಿಷ್ ಮತ್ತು ಸಂಸ್ಕೃತಗಳಿಂದ ನಾಟಕಸಾಹಿತ್ಯವನ್ನು ಕನ್ನಡಿಗರು ಅನುವಾದಗೊಳಿಸಿಕೊಂಡರು. ಈ ಸಂದರ್ಭದ ಕಾದಂಬರಿ ಮಾತ್ರ, ಇಂಗ್ಲಿಷ್ ಅನುವಾದ ದಾರಿಯನ್ನು ಬಿಟ್ಟು, ಮರಾಠಿ, ಬೆಂಗಾಲಿ ಕಾದಂಬರಿಗಳ ಅನುವಾದದ ದಾರಿ ಹಿಡಿಯಿತು. ಐತಿಹಾಸಿಕ ಮತ್ತು ಸಾಮಾಜಿಕವೆಂಬ ಎರಡು ಮುಖ್ಯ ಕವಲುಗಳಲ್ಲಿ ಬಿಚ್ಚಿಕೊಂಡಿತು. ಇವುಗಳಲ್ಲಿ ಐತಿಹಾಸಿಕ ಕಾದಂಬರಿ ಲೋಕವನ್ನು ಸರಿಯಾಗಿ ರೂಪಿಸಿ, ಅದನ್ನು ಗುಣಾತ್ಮಕವಾಗಿ ಮತ್ತು ಗಾತ್ರಾತ್ಮಕವಾಗಿ ಬೆಳೆಸಿದವರು, ಗಳಗನಾಥರು.

೨೦ನೆಯ ಶತಮಾನ, ಭಾರತದಲ್ಲಿ ರಾಷ್ಟ್ರೀಯ ಪ್ರಜ್ಞೆ ಜಾಗೃತವಾಗುತ್ತಲಿದ್ದ ಸಂದರ್ಭ. ದೇಶಸೇವಕರಂತೆ ಸಾಹಿತಿಗಳೂ ಈ ಪ್ರಜ್ಞೆಯ ಉದ್ದೀಪನೆಗಾಗಿ ದುಡಿದರು. ಇಲ್ಲಿ ದೇಶಸೇವಕರು ಬ್ರಿಟಿಷರ ವಿರುದ್ಧ ನೇರವಾಗಿ ಚಳುವಳಿ ನಡೆಸಿದರೆ, ಬರಹಗಾರರು ಅವರಿಗೆ ಭೀತರಾಗಿ ಈ ಕಾರ್ಯವನ್ನು ಪರ್ಯಾಯವಾಗಿ ಪೂರೈಸಿದರು. ಅಂದರೆ ಬ್ರಿಟಿಷರ ದಬ್ಬಾಳಿಕೆಗೆ ಪರ್ಯಾಯವಾಗಿ, ಆ ಮೊದಲಿನ ಮುಸಲ್ಮಾನರ ಆಕ್ರಮಣವನ್ನು ಚಿತ್ರಿಸಿದರು. ಕಾದಂಬರಿ ಮಾಧ್ಯಮವನ್ನು ಈ ಚಿತ್ರಣಕ್ಕೆ ಬಳಸಿ, ರಾಷ್ಟ್ರೀಯ ಪ್ರಜ್ಞೆಯನ್ನು ಜಾಗೃತಗೊಳಿಸಿದವರಲ್ಲಿ ಗಣ್ಯರೆನಿಸಿದ್ದಾರೆ, ಗಳಗನಾಥರು.

ನವೋದಯ ಕಾಲದ ಸಾಹಿತ್ಯಕ್ಕೆ 'ಭಾವನೆ'ಯೇ ಮುಖ್ಯ ಭೂಮಿಕೆ. ಇದನ್ನು ಉದ್ದೀಪಿಸಿ, ರಸ ಉಕ್ಕಿಸುವುದೇ ಆ ಸಾಹಿತ್ಯದ ಗುರಿ. ಇದಕ್ಕೆ

ಹೇಳಿಮಾಡಿಸಿದ ಬರವಣಿಗೆಯಾಗಿದೆ, ಗಳಗನಾಥರ ಕಾದಂಬರಿ ಸಾಹಿತ್ಯ. ಗತಕಾಲೀನ ಮತ್ತು ಸಮಕಾಲೀನ ಪ್ರಜ್ಞೆಗಳ ಸಮನ್ವಯವಾಗಿರುವ ಇವರ ಕಾದಂಬರಿಗಳು, ೨೦ನೆಯ ಶತಮಾನದ ಪೂರ್ವಾರ್ಧದಲ್ಲಿ ಅಯಸ್ಕಾಂತದಂತೆ ಕಾರ್ಯ ಮಾಡಿದವು. ಹೀಗಾಗಿ ಗಳಗನಾಥರ ಕೃತಿಗಳು ಕೆಲವೇ ದಿನಗಳಲ್ಲಿ ಕನ್ನಡಿಗರ ಮನೆಮನೆಗಳಲ್ಲಿ, ಮನಮನಗಳಲ್ಲಿ, ತುಂಬಿ ನಿಂತವು. ಕ್ರಮೇಣ ಓದುವ ರುಚಿಸಂಸ್ಕಾರವನ್ನೂ ಕನ್ನಡ ಸಮಾಜದಲ್ಲಿ ಬೆಳೆಸಿದವು.

ಗಳಗನಾಥರ ಕಾದಂಬರಿಗಳ ವಸ್ತು ಸಾಮಾನ್ಯವಾಗಿ ಇತಿಹಾಸ. ದಾಖಲಾತ್ಮಕ ಇತಿಹಾಸವನ್ನು ಕಲಾತ್ಮಕ ಕಾದಂಬರಿಯನ್ನಾಗಿಸುವ ಕೌಶಲ ಅವರಿಗೆ ಕೈವಶವಾಗಿದ್ದಿತು. ಇದಕ್ಕೆ ನಿದರ್ಶನ, ಮಹಾಕಾವ್ಯದಂತೆ ಆ ಕಾಲಘಟ್ಟವನ್ನಾಳಿದ ಇವರ 'ಮಾಧವ ಕರುಣಾವಿಲಾಸ'. ಕರ್ನಾಟಕದ ಮೊದಲ "ಮಹಾಕಾದಂಬರಿ"ಯೆಂಬಂತೆ ರೂಪಗೊಂಡ ಇದರ ಎಡಬಲಗಳಲ್ಲಿ ಬೇರೆ ಬೇರೆ ಕಾದಂಬರಿಗಳು ಇವರಿಂದ ಹುಟ್ಟಿದವು. 'ಪ್ರಬುದ್ಧ ಪದ್ಮನಯನೆ'ಯಿಂದ (೧೮೯೮) 'ಸ್ವರಾಜ್ಯ ಸುಗಂಧ'ದ (೧೯೩೮) ವರೆಗಿನ ೪೦ ವರ್ಷಗಳ ಸುದೀರ್ಘ ಅವಧಿಯಲ್ಲಿ ಆ ಸಂಖ್ಯೆ ೨೨ನ್ನು ತಲುಪಿತು. ಇವುಗಳನ್ನು ಕನ್ನಡಿಗರಿಗೆ ಸಂಬಂಧಿಸಿದುವು ೨ ಸಂಪುಟ, ಮರಾಠರಿಗೆ ಸಂಬಂಧಿಸಿದುವು ೨ ಸಂಪುಟ, ರಜಪೂತರಿಗೆ ಸಂಬಂಧಿಸಿದುದು ೧ ಸಂಪುಟ, ಸಂಕೀರ್ಣ ವಸ್ತುವನ್ನೊಳಗೊಂಡುದು ೧ ಸಂಪುಟ – ಹೀಗೆ ೬ ಸಂಪುಟಗಳಲ್ಲಿ ಕೆಳಗಿನಂತೆ ಹಂಚಿ ಹಾಕಿದ್ದೇವೆ.

ಕನ್ನಡಿಗರಿಗೆ ಸಂಬಂಧಿಸಿದ ಕಾದಂಬರಿಗಳು:

	ಪ್ರಥಮ ಆವೃತ್ತಿ	**ಬಳಸಿದ ಆವೃತ್ತಿ**
ಸಂಪುಟ ೧		
೧. ಮಾಧವ ಕರುಣಾ ವಿಲಾಸ	೧೯೨೩	೧೯೬೪
ಸಂಪುಟ ೨		
೧. ಕನ್ನಡಿಗರ ಕರ್ಮಕಥೆ	೧೯೧೬	೧೯೬೯
೨. ಕುಮುದಿನಿ	೧೯೧೬	೧೯೬೩
೩. ದುರ್ಗದ ಬಿಚ್ಚುಗತ್ತಿ	೧೯೩೮	೧೯೩೮
ಮರಾಠರಿಗೆ ಸಂಬಂಧಿಸಿದ ಕಾದಂಬರಿಗಳು:		
ಸಂಪುಟ ೩		
೧. ಈಶ್ವರೀ ಸೂತ್ರ	೧೯೧೩	೧೯೪೭
೨. ಮರಾಟರ ಅಭ್ಯುದಯ	೧೯೧೮	೧೯೬೨
೩. ಕಮಲ ಕುಮಾರಿ	೧೯೧೦	೧೯೫೭

೪. ಛತ್ರಪತಿ	೧೯೧೯	೧೯೫೨
ಸಂಪುಟ ೪		
೧. ಗೃಹಕಲಹ	೧೯೨೧	೧೯೫೪
೨. ಶಿವಪ್ರಭುವಿನ ಪುಣ್ಯ	೧೯೧೮	೧೯೬೧
೩. ಸ್ವರಾಜ್ಯ ಸುಗಂಧ	೧೯೩೮	೧೯೬೩
೪. ಕುರುಕ್ಷೇತ್ರ	೧೯೧೯	೧೯೫೬
ರಜಪೂತರಿಗೆ ಸಂಬಂಧಿಸಿದ ಕಾದಂಬರಿಗಳು:		
ಸಂಪುಟ ೫		
೧. ಕ್ಷಾತ್ರತೇಜ	೧೯೧೪	೧೯೬೦
೨. ಸತ್ವಸಾರ	೧೯೧೫	೧೯೫೫
೩. ತಿಲೋತ್ತಮೆ	೧೯೧೭	೧೯೬೫
೪. ಧಾರ್ಮಿಕ ತೇಜ	೧೯೨೮	೧೯೬೩
೫. ರಾಣಾ ರಾಜಾಸಿಂಹ	೧೯೨೮	೧೯೫೨
ಸಂಕೀರ್ಣ ಕಾದಂಬರಿಗಳು:		
ಸಂಪುಟ ೬		
೧. ಪ್ರಬುದ್ಧ ಪದ್ಮನಯನೆ	೧೮೯೮	೧೯೫೭
೨. ರಾಣೀ-ಮೃಣಾಲಿನಿ	೧೯೧೧	೧೯೫೮
೩. ವೈಭವ	೧೯೧೨	೧೯೬೦
೪. ಧರ್ಮರಹಸ್ಯ	೧೯೧೪	೧೯೩೩
೫. ಸಂಸಾರಸುಖ	೧೯೨೬	೧೯೫೯

ಈ ವಸ್ತು ವೈವಿಧ್ಯವನ್ನು ನೋಡಿದರೆ, ಕನ್ನಡದಲ್ಲಿ ಬರೆದ ಇವುಗಳ ಅಧ್ಯಯನ ವೆಂಬುದು ಕೇವಲ ಕರ್ನಾಟಕದ ಅಧ್ಯಯನವಲ್ಲ, ಕರ್ನಾಟಕ, ಮಹಾರಾಷ್ಟ್ರ, ರಾಜಸ್ತಾನ–ಹೀಗೆ ಭಾರತದ ವಿವಿಧ ಪ್ರಾಂತಗಳ ವೀರಪರಂಪರೆಯ ಅಧ್ಯಯನವೇ ಆಗಿದೆಯೆಂದು ಸ್ಪಷ್ಟವಾಗುತ್ತದೆ. ಹೀಗಾಗಿ, ಈ ಕಾದಂಬರಿಗಳು ಕನ್ನಡಿಗರ ವ್ಯಷ್ಟಿಪ್ರಜ್ಞೆಗೆ ಸೀಮಿತವಾಗಿ ನಿಲ್ಲದೆ, ಭಾರತೀಯ ಸಮಷ್ಟಿಪ್ರಜ್ಞೆಗೆ ಪೂರಕವೆಂಬಂತೆ ಕೆಲಸಮಾಡಿದವು. ಕರ್ನಾಟಕದ ಎಚ್ಚಮನಾಯಕ, ಅಳಿಯ ರಾಮರಾಯ, ವಿದ್ಯಾರಣ್ಯರಂತೆ, ಮಹಾರಾಷ್ಟ್ರದ ಶಿವಾಜಿ, ಸಮರ್ಥ ರಾಮದಾಸ, ರಾಜಸ್ತಾನದ ಪ್ರತಾಪಸಿಂಹ, ಉತ್ತರ ಪ್ರದೇಶದ ಪೃಥ್ವೀರಾಜರೂ ನಮ್ಮವರೆಂಬ ಭಾವವನ್ನು ಕನ್ನಡಿಗರಲ್ಲಿ ಬೆಳೆಸಿ, ಅಖಂಡ ಭಾರತದ ಪ್ರಜ್ಞೆಯನ್ನು ಅವರಲ್ಲಿ ಮೂಡಿಸಿದವು; ರಾಷ್ಟ್ರಜೀವನದ ಪುನಾರಚನೆಗೆ ನೆರವಾದವು. ಸಾಮಾನ್ಯವಾಗಿ ಯುದ್ಧವೇ ಎಲ್ಲ ಕಾದಂಬರಿಗಳ

ಕೇಂದ್ರಕಥೆಯಾಗಿದ್ದರೂ ಅವುಗಳಲ್ಲಿ ಭಾರತೀಯ ಸಂಸ್ಕೃತಿಸಂಕಥನದ ಶ್ರುತಿ ಉದ್ದಕ್ಕೂ ಕೇಳಿಬರುತ್ತಲಿರುವುದು ಒಂದು ವಿಶೇಷ.

'ಸದ್ಗುರು ಪ್ರಭಾವ' ಒಂದರ್ಥದಲ್ಲಿ ಗಳಗನಾಥರ ಆತ್ಮಚರಿತ್ರೆಯೆನಿಸಿದೆ. ಅವರ ಜೀವನ-ಸಾಹಿತ್ಯಜೀವನಗಳನ್ನು ತಿಳಿಸಿಕೊಡಲು ಅದಕ್ಕಿಂತ ಉತ್ತಮ ಸಾಧನ ಇನ್ನೊಂದಿಲ್ಲ. ಹೀಗಾಗಿ ಈ ಕೃತಿಯ ಆಯ್ದ ಭಾಗಗಳನ್ನು ಪ್ರತಿಯೊಂದು ಸಂಪುಟದ ಆರಂಭಕ್ಕೆ 'ಹೊಸತಿಲು' ಶೀರ್ಷಿಕೆಯೊಂದಿಗೆ ಸೇರಿಸಿದ್ದೇವೆ. ಈ ಕಾದಂಬರಿಗಳನ್ನು ಓದುವವರಿಗೆ ಯೋಗ್ಯ ಪ್ರವೇಶಿಕೆಯಂತೆ ಇದು ನೆರವಾಗುವುದೆಂದು ನಂಬಿದ್ದೇವೆ.

ಸಾಹಿತ್ಯವನ್ನು ಸೃಷ್ಟಿಸುವವನು ಸಾಹಿತಿಯಾದರೂ ಅದರ ವಾರಸುದಾರರು ಸಹೃದಯರು. ಈಗಿನಂತೆ ಪುಸ್ತಕ ಉತ್ಪಾದನೆಯ ಅನುಕೂಲವಿಲ್ಲದ ಪ್ರಾಚೀನ ಕಾಲದಲ್ಲಿಯೂ ಸಹೃದಯರು ಉತ್ತಮ ಸಾಹಿತ್ಯಕೃತಿಗಳನ್ನು ತಲೆಮಾರಿನಿಂದ ತಲೆಮಾರಿಗೆ ಪ್ರತಿ ಮಾಡುತ್ತ-ಮಾಡಿಸುತ್ತ ಬಂದಿದ್ದಾರೆ. ಹೀಗಿರುವಾಗ ಎಲ್ಲ ಬಗೆಯ ಅನುಕೂಲತೆಗಳನ್ನು ಹೊಂದಿರುವ ಇಂದಿನ ಕಾಲದವರಾದ ನಾವು, ಅವುಗಳ ಮರುಮುದ್ರಣ ವಿಷಯದಲ್ಲಿ ಹೆಚ್ಚು ಆಸಕ್ತಿ ವಹಿಸುವುದು ತೀರ ಸಹಜ. ಆದುದರಿಂದ ಪ್ರಾಚೀನ ಹಸ್ತಪ್ರತಿಗಳ ಪರಿಷ್ಕರಣ-ಮುದ್ರಣ-ಮರುಮುದ್ರಣದಂತೆ, ನವೋದಯ ಕಾಲೀನ ಯಂತ್ರಪ್ರತಿಗಳನ್ನು ಮತ್ತೆ ಮತ್ತೆ ಅಚ್ಚಿಸಿ ಓದುಗರಿಗೆ ಒದಗಿಸುತ್ತಲಿದ್ದೇವೆ.

ನಾನು ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಯಾಗಿದ್ದ ಸಂದರ್ಭದಲ್ಲಿ ಗಳಗನಾಥರ ಎಲ್ಲ ೨೨ ಕಾದಂಬರಿಗಳನ್ನು ೬ ಸಂಪುಟಗಳಲ್ಲಿ ಮರು ಮುದ್ರಿಸಲು ನಿರ್ಧರಿಸಿದೆ. ಸಂಯುಕ್ತ ಕರ್ನಾಟಕ ದಿನಪತ್ರಿಕೆಯ ಮಾತೃಸಂಸ್ಥೆಯಾದ 'ಲೋಕಶಿಕ್ಷಣ ಟ್ರಸ್ಟ್' ಕಾರ್ಯದರ್ಶಿಗಳಾಗಿದ್ದ ಶ್ರೀ ಕೆ. ಶಾಮರಾವ್ ಅವರ ಆರ್ಥಿಕ ನೆರವಿನಿಂದ ನನ್ನ ನಿರ್ಧಾರ ಕ್ಷಿಪ್ರದಲ್ಲಿ ಕೈಗೂಡಿತು (೧೯೯೯).

ಈಗ ಅಂಥದೇ ಅವಕಾಶ ಬೆಂಗಳೂರಿನ ಇನ್‌ಫೋಸಿಸ್ ಫೌಂಡೇಶನ್ ಅಧ್ಯಕ್ಷೆ ಶ್ರೀಮತಿ ಸುಧಾಮೂರ್ತಿಯವರ ಆರ್ಥಿಕ ನೆರವಿನಲ್ಲಿ ನಮ್ಮ ನಾಡಿನ ಪ್ರತಿಷ್ಠಿತ ಪ್ರಕಾಶನ ಸಂಸ್ಥೆಯಾದ "ಮನೋಹರ ಗ್ರಂಥ ಮಾಲೆ"ಯ ಮೂಲಕ ಒದಗಿಬಂದಿದೆ. ಇತ್ತೀಚೆ ಮರೆಯಬಾರದ ಮಹತ್ವದ ಗ್ರಂಥಗಳ ಮರು ಮುದ್ರಣಕಾರ್ಯವನ್ನು ಕೈಗೆತ್ತಿಕೊಂಡಿರುವ ಅದು, ಗಳಗನಾಥ ಕಾದಂಬರಿಗಳ ಈ ಆವೃತ್ತಿಗೆ ನನ್ನನ್ನು ಪ್ರಧಾನ ಸಂಪಾದಕನನ್ನಾಗಿಸಿದೆ.

ಈ ಸಂದರ್ಭದಲ್ಲಿ ಗಳಗನಾಥರ ಅಪ್ರಕಟಿತ ಕೃತಿಗಳು ಸಿಗಬಹುದೆ? ಎಂಬ ಪ್ರಶ್ನೆ ನಮ್ಮನ್ನು ಕಾಡಿತು. ಹಾವೇರಿಯಲ್ಲಿರುವ ಗಳಗನಾಥ ಕುಟುಂಬದವರನ್ನು ಎರಡು ಸಲ ಕಂಡರೂ ಸಿಕ್ಕಿದ್ದು, ಮಹಾಭಾರತದ ಅನುವಾದಗಳು. ಅದೂ ಕೆಲವು ಪರ್ವ ಜೀರ್ಣಸ್ಥಿತಿಯಲ್ಲಿ, ಕೆಲವು ಪರ್ವ ಅಪೂರ್ಣಸ್ಥಿತಿಯಲ್ಲಿ. ಗಳಗನಾಥರ ಮರಿಮೊಮ್ಮಗ ಶ್ರೀ ವೆಂಕಟೇಶ ಅವರು ಇವೆಲ್ಲವನ್ನು ನಮಗೆ ಒಪ್ಪಿಸಿದ್ದಲ್ಲದೆ, ಕಾದಂಬರಿಗಳನ್ನು ಈಗ ಮತ್ತೊಮ್ಮೆ ಮುದ್ರಿಸಲು ಒಪ್ಪಿಗೆ ನೀಡಿದರು.

೧೯೯೯ರ ಆವೃತ್ತಿಯಲ್ಲಿ ನುಸುಳಿರಬಹುದಾದ ಅಚ್ಚಿನದೋಷಗಳನ್ನು ತಿದ್ದಲು ನಿರ್ಧರಿಸಿದೆವು. ಒಬ್ಬರಿಗೆ ಒಂದು ಕಾದಂಬರಿಯಂತೆ ೨೨ ಜನ ಓದುಗರಿಗೆ ಈ ಕೆಲಸ ವಹಿಸಿಕೊಟ್ಟೆವು. ಅವರು ಅಚ್ಚಿನ ದೋಷಗಳೊಂದಿಗೆ ಆ ಕಾಲದ ಶಬ್ದರೂಪಗಳನ್ನೂ (ಮರಾಟಾ>ಮರಾಠಾ) ತಿದ್ದಿದುದು ನಮ್ಮ ಗಮನಕ್ಕೆ ಬಂದಿತು. ಈ ತಿದ್ದುಪಡಿಯಲ್ಲಿ ಹಳೆಯ ಶಬ್ದರೂಪಗಳಾವುವು ? ಅಚ್ಚಿನ ದೋಷಗಳಾವುವು ? ಎಂಬುದನ್ನು ನಿರ್ಧರಿಸಲು ಕೆಲವೆಡೆ ಸಾಧ್ಯವಾಗಲೇ ಇಲ್ಲ. ಆದುದರಿಂದ ಅಚ್ಚಿನ ದೋಷಗಳು ಕ್ವಚಿತ್ತಾಗಿರುವುದನ್ನು ಗಮನಿಸಿ, ಇದ್ದ ರೂಪದಲ್ಲಿಯೇ ೧೯೯೯ರ ಆವೃತ್ತಿಯನ್ನು ಪ್ರಕಟಿಸಲು ತೀರ್ಮಾನಿಸಿದೆವು. ನಮ್ಮ ಸುದೈವವೆಂಬಂತೆ ಹಳೆಯ ಆವೃತ್ತಿಯ ಸಿ.ಡಿಗಳನ್ನು ಬೆಂಗಳೂರಿನ ಲಕ್ಷ್ಮೀ ಮುದ್ರಣಾಲಯ ಸಂರಕ್ಷಿಸಿದ್ದಿತು. ಹೀಗಾಗಿ ಯಾವುದೇ ವ್ಯತ್ಯಾಸವಿಲ್ಲದೆ ೧೯೯೯ರ ಆವೃತ್ತಿಯ ಪಠ್ಯ ಈಗ ಹೊರಬರುತ್ತಿದೆ.

ಈಗ ನಾವು ಮಾಡಬೇಕಾದುದು ಪ್ರಸ್ತಾವನೆಯಲ್ಲಿ ಒಂದಿಷ್ಟು ವ್ಯತ್ಯಾಸ. ಇದನ್ನು ಮಾತ್ರ ಪೂರೈಸಿದ ಕಾರಣ, ಈ ಆವೃತ್ತಿಗಾಗಿ ನಾನು ವಿಶೇಷ ಶ್ರಮವಹಿಸಿಲ್ಲವೆಂದೇ ಹೇಳಬೇಕು. ಆದರೂ ಈ ಮೊದಲು ೧೯೯೯ರ ಆವೃತ್ತಿಯನ್ನು ೬ ಸಂಪುಟಗಳಲ್ಲಿ ವಿನ್ಯಾಸಗೊಳಿಸಿದುದನ್ನು, ಪ್ರಸ್ತಾವನೆ ಬರೆಯುವ ಮೂಲಕ ಅಂದು ಪರ್ಯಾಯವಾಗಿ ಸಾಹಿತ್ಯಿಕ ಶ್ರಮವಹಿಸಿದುದನ್ನು ಗಮನಿಸಿ, ಈ ಆವೃತ್ತಿಯ ಪ್ರಕಾಶನದಲ್ಲಿಯೂ ನನ್ನನ್ನು ತೊಡಗಿಸಿ ಕೊಂಡಿದ್ದಾರೆ. ಈ ಔದಾರ್ಯಕ್ಕಾಗಿ ಮನೋಹರ ಗ್ರಂಥಮಾಲೆಯ ಶ್ರೀ ರಮಾಕಾಂತ ಜೋಶಿ, ಶ್ರೀ ಸಮೀರ ಜೋಶಿ ಅವರಿಗೆ ಕೃತಜ್ಞನಾಗಿದ್ದೇನೆ.

– ಡಾ. ಎಂ.ಎಂ. ಕಲಬುರ್ಗಿ
ಪ್ರಧಾನ ಸಂಪಾದಕರು

ಆರ್ಥಿಕ ನೆರವು

ಶ್ರೀಮತಿ ಸುಧಾ ಮೂರ್ತಿ

ಅಧ್ಯಕ್ಷರು

ಇನ್‌ಫೋಸಿಸ್ ಫೌಂಡೇಶನ್, ಬೆಂಗಳೂರು.



ಕುಳಿತವರು:

೧) ಮಲ್ಹಾರ ದೀಕ್ಷಿತ (ಕಕ್ಕನವರ) [ಗಳಗನಾಥರ ಮೊದಲನೆಯ ಅಳಿಯ]

೨) ಗಳಗನಾಥರು [ವೆಂಕಟೇಶ ತಿರಕೋ ಕುಲಕರ್ಣಿ]

೩) ಶಂಕರ ಮಲ್ಹಾರ ಜೋಶಿ [ಗಳಗನಾಥರ ಎರಡನೆಯ ಅಳಿಯ]

ಮೊದಲ ಸಾಲಿನಲ್ಲಿ ನಿಂತ ಮಕ್ಕಳು: ಅಹಲ್ಯಾ ; ಬಿಷ್ಟಪ್ಪ (ಮೊದಲನೆಯ ಅಳಿಯನ ಮಕ್ಕಳು)

ಹಿಂದಿನ ಸಾಲಿನಲ್ಲಿ ನಿಂತವರು:

೧) ಸುಭದ್ರಕ್ಕ (ಗಳಗನಾಥರ ಮೊದಲನೆಯ ಮಗಳು)
[ಬಗಲಲ್ಲಿ ಮಗ-ಕೃಷ್ಣ]

೨) ಗಳಗನಾಥರ ಹೆಂಡತಿ – ಗಂಗಾಬಾಯಿ

೩) ರೇಣುಕಾ (ಗಳಗನಾಥರ ಎರಡನೆಯ ಮಗಳು)

ಹೊಸತಿಲು

ಶ್ರೀ ಸದ್ಗುರುಪ್ರಭಾವ ಪೋಷಿತನಾದ ವೇಂಕಟೇಶನೆಂಬ ಹೆಸರಿನ ನಾನು, ಶುಕ್ಲ ಯುಜುರ್ವೇದಾಂತರ್ಗತ ಕಣ್ವಶಾಖೆಯ ಸ್ಮಾರ್ತ ಬ್ರಾಹ್ಮಣನು. ನನ್ನ ಗೋತ್ರ ಕೌಂಡಿಣ್ಯ. ನನ್ನ ಪೂಜ್ಯ ಪಿತೃಗಳಲ್ಲಿ ನನ್ನ ತಂದೆಯವರ ಹೆಸರು ತ್ರಿವಿಕ್ರಮಭಟ್ಟರು; ಅಜ್ಜಂದಿರ ಹೆಸರು ರಾಮ ಭಟ್ಟರು; ಮುತ್ತಂದಿರ ಹೆಸರು ವೆಂಕಣಭಟ್ಟರು! ನನ್ನ ಕುಲದೈವತವು ಶ್ರೀ ಲಕ್ಷ್ಮೀವೇಂಕಟೇಶನು! ಪುಣ್ಯಶಾಲಿಗಳಾದ ನನ್ನ ಹಿರಿಯರ ಪುಣ್ಯದಿಂದಲೂ, ಭಗವಂತನಾದ ಶ್ರೀ ಲಕ್ಷ್ಮೀಪತಿಯ ಕೃಪೆ ಯಿಂದಲೂ ಕನ್ನಡಿಗರ ಸೇವಕನೆನಿಸಿರುವ ನಾನು, ಸನ್ಮಾನ್ಯರಾದ ಮೈಸೂರ ಕನ್ನಡಿಗರನ್ನೊಳ ಗೊಂಡಿರುವ ಸಮಸ್ತ ಕನ್ನಡಿಗರೆಂಬ ಇಷ್ಟದೈವತವನ್ನು ಆಧ್ಯಾತ್ಮಿಕ ಭಾವದಿಂದ ಭಕ್ತಿ ಪುರಸ್ಸರ ವಾಗಿ ಮೊದಲು ಅಭಿವಂದಿಸುವೆನು!

ನಾನು ಕೇವಲ ಗಾವಿಲನೆಂತಲೇ ಹೇಳಬಹುದು. ಯಾಕೆಂದರೆ, ನಾನು ಹುಟ್ಟಿದ ಹಾವನೂರೆಂಬ ನನ್ನ ಮಾತಾಮಹರ ಊರು ಹಳ್ಳಿಯು. ನಾನು ಬೆಳೆದ ನನ್ನ ಸ್ವಂತದ ಗಳಗನಾಥವೆಂಬ ಕ್ಷೇತ್ರಸ್ಥಾನವು ತೀರ ಸಣ್ಣ ಹಳ್ಳಿಯು. ನಾನು ಕಲಿತ ನಾಲ್ಕೂ ಪ್ರಾಥಮಿಕ ಶಾಲೆಗಳು ಒಂದಕ್ಕಿಂತ ಒಂದು ಸಣ್ಣವಾದ ಹಳ್ಳಿಯವೆ! ಇಂತಹ ಗಾವಿಲನಾದ ನನಗೆ ದೊರೆತ ಶ್ರೇಷ್ಠ ಶಿಕ್ಷಣವೆಂದರೆ, ಧಾರವಾಡ ಕನ್ನಡ ಟ್ರೇನಿಂಗ ಕಾಲೇಜದ ಮೂರು ವರ್ಷದ ಕೌದಿಯ ಚಂದದ ಹಂಡಬಂಡ ಶಿಕ್ಷಣವು! ನನ್ನ ಕನ್ನಡ ಭಾಷೆಯ ಜ್ಞಾನವು, ಕೇವಲ ಜನ್ಮಭಾಷೆಯೆಂಬ ಪ್ರಧಾನಕಾರಣದಿಂದ ವಿಸ್ತೃತವಾಗಬಹುದಾದಷ್ಟರ ಮಟ್ಟಿಗೆ ಬೆಳವಣಿಗೆ ಹೊಂದಿದ್ದು, ಕೊಂಕಣಸ್ಥರ ಸಹವಾಸದಿಂದ ತಿಳಿಯಬಹುದಾದಷ್ಟು ಮಹಾರಾಷ್ಟ್ರಭಾಷೆಯು ನನಗೆ ತಿಳಿಯುತ್ತಿರುವದು. ನನ್ನ ಸಂಸ್ಕೃತಭಾಷೆಯ ಜ್ಞಾನವು, ನಾನು ಟ್ರೇನಿಂಗ ಕಾಲೇಜದಲ್ಲಿಯ ಪರೀಕ್ಷೆಗಳಿಗಾಗಿ ಮೂರು ವರ್ಷ ಓದಿದ ತೀರ ಸಾಮಾನ್ಯವಾದ ತಾಳು ತಂತು ಇಲ್ಲದ ಪುಸ್ತಕೀಯ ಜ್ಞಾನದಲ್ಲಿ ಹರಿದು ಮುರಿದು ಉಳಿದದ್ದು. ಇಂಗ್ಲೀಷ ಭಾಷೆಯ ಮೂಲಾಕ್ಷರಗಳನ್ನೂ ಸಾಲಾಗಿ ಬರೆಯಲಿಕ್ಕೆ ನನಗೆ ಬರುವದಿಲ್ಲ. ಒಟ್ಟಿಗೆ, ನಾನು ನನ್ನ ಪೂಜ್ಯ ಕನ್ನಡಿಗರ ಮುಂದೆ ಸುಳ್ಳುಹೇಳಿ ಪಾಪಕ್ಕೆ ಯಾಕೆ ಗುರಿಯಾಗಲಿ? ನಾನು ಯಾವ ಭಾಷೆಯ ಅಥವಾ ಯಾವ ಶಾಸ್ತ್ರದ ಅಭ್ಯಾಸವನ್ನೂ ಸಂಕಲ್ಪಪೂರ್ವಕವಾಗಿ ಗುರುಮುಖದಿಂದ ಮಾಡಿದವನಲ್ಲವಾದ್ದರಿಂದ, ನನ್ನಲ್ಲಿ ಯಾವ ಪಾಂಡಿತ್ಯವೂ ಇರುವದಿಲ್ಲ, ಯಾವ

* ಇದು ಶ್ರೀ ಗಳಗನಾಥರ 'ಸದ್ಗುರು ಪ್ರಭಾವ' ಕೃತಿಯಿಂದ ಆಯ್ದ ಭಾಗವಾಗಿದೆ.

ಪದವೀಧರತ್ವವೂ ಇರುವದಿಲ್ಲ. ತೆರಪಿಲ್ಲದೆ ನನ್ನಲ್ಲಿ ವಾಸಮಾಡಿಕೊಂಡಿರುವದೆಂದರೆ ಪಾಮರತ್ವವು!

ಈ ಚಂದದ ನಾನು, ಟ್ರೇನಿಂಗ ಕಾಲೇಜದಿಂದ ಹೊರಬಿದ್ದ ಬಳಿಕ ಹಳ್ಳಿ ಶಾಲೆಯ ಮಾಸ್ತರನಾಗಿ ಏಕನಿಷ್ಠೆಯಿಂದ ದುಡಿಯತೊಡಗಿದೆನು. ಕೆಲಸದಲ್ಲಿ ನನ್ನ ಪ್ರೀತಿ ಹೆಚ್ಚು; ನನ್ನಷ್ಟಕ್ಕೆ ನಾನಿರುವದರಲ್ಲಿ ನನ್ನ ಆಸಕ್ತಿ ಬಹಳ. ಕೆಲಸ ಬಿಟ್ಟು, ಸಿಕ್ಕಾಗ ಸಿಕ್ಕತ್ತ ಸುಮ್ಮನೆ ಎಡತಾಕುವ ಚಾಳಿಯಂತು ನನಗೆ ಗೊತ್ತೇ ಇಲ್ಲ. ನಾನಾಯಿತು, ನನ್ನ ಕೆಲಸವಾಯಿತು ಎಂಬ ಚಂದದಿಂದ ನಡೆಯುವ ಮನುಷ್ಯನು ನಾನು. ಏನಾದರೂ ಹೊತ್ತು ಸಿಕ್ಕರೆ ನನ್ನ ಯೋಗ್ಯತೆಯ ಸಾಮಾನ್ಯ ಜನರೇ ಮನಮೆಚ್ಚಿ ಓದುವಂತಹ ಪುಸ್ತಕಗಳನ್ನು ಬರೆದರೆ ಬರೆಯುವೆನು. ನನ್ನ ಅನುಭವವನ್ನು ಮೀರದಿರುವ, ಬಹಳವಾದರೆ ಸ್ವಲ್ಪ ಕಾಲು ಎತ್ತರಿಸಿದಾಗ ನನ್ನ ಅನುಭವಕ್ಕೆ ನಿಲಕಬಹುದಾದಂತಹ ವಿಷಯಗಳನ್ನಲ್ಲದೆ, ಹೆಚ್ಚು ಗಹನವಾದ ವಿಷಯಗಳನ್ನು ನಾನು ಬರೆದವನಲ್ಲ, ಈಗಲೂ ಬರೆಯುವದಿಲ್ಲ! ಯಾಕೆಂದರೆ ಅಂತಹ ಘನವಾದ ಅನುಭವವೇ ನನಗಿರುವದಿಲ್ಲ! ಅಂದಬಳಿಕ ಸಾಮಾನ್ಯ ಜನರಲ್ಲಿ ಒಬ್ಬನಾಗಿರುವ ನಾನು ಬರೆದ ನನ್ನ ಅನುಭವದ ಸವಿಯಾದ ಸುಲಭ ಲೇಖಗಳನ್ನು, ನನಗೆ ಸಮಾನಧರ್ಮಿಗಳಾದ ಸಾಮಾನ್ಯಜನರು ಯಾಕೆ ಪ್ರೀತಿಯಿಂದ ಓದದೆ ಬಿಟ್ಟಾರು? ಅಂತಹ ನನ್ನ ಆ ಲೇಖಗಳು ಸಾಮಾನ್ಯ ಜನರನ್ನು ಸಂತೋಷಪಡಿಸದೆಯಾದರೂ ಯಾಕೆ ಬಿಟ್ಟಾವು ? ಒಟ್ಟಿಗೆ, ನಾನು ನನ್ನ ಜೀವನಾಧಾರವಾದ ಶಿಕ್ಷಣದ ಕೆಲಸವನ್ನು ನಿರ್ವಂಚನೆಯಿಂದ ಮನಸ್ಸಿಗೆ ಹಚ್ಚಿಕೊಂಡು ಮಾಡುತ್ತ, ನನ್ನ ಮನಸ್ಸನ್ನು ರಮಿಸುವ ವಿಷಯಗಳನ್ನಾಗಲಿ, ನನ್ನ ಮನಸ್ಸನ್ನು ಸಮಾಧಾನಪಡಿಸುವ ವಿಷಯಗಳನ್ನಾಗಲಿ, ಹೊತ್ತು ಸಿಕ್ಕರೆ ನಿರ್ವಂಚನೆಯಿಂದ ಮನಃಪೂರ್ವಕವಾಗಿ ಅನುಭವವನ್ನು ಮುಂದೆಮಾಡಿ ಬರೆಯುತ್ತ, ಯಾವಾಗ ಸಮಾಧಾನದಿಂದ, ಯಾವಾಗ ಅಸಮಾಧಾನದಿಂದ ಕಾಲಹರಣ ಮಾಡತೊಡಗಿದೆನು.

ಈ ಬಗೆಯ ಸಂಕುಚಿತ ಕಾರ್ಯಕ್ಷೇತ್ರದಲ್ಲಿ ಕಾಲಕ್ಷೇಪಮಾಡುವ ಬಡವನು ನಾನು, ಪ್ರತಿತಿಂಗಳ ಹದಿನೈದು ರೂಪಾಯಿಗಳ ತಲಬಿನಿಂದ ಮೂವತ್ತು ರೂಪಾಯಿ ತಲಬಿನ ವರೆಗೆ ಏರುತ್ತ ಏರುತ್ತ, ಮುಖ್ಯ ಶಿಕ್ಷಕನಾಗಿಯೇ ಸಣ್ಣಹಳ್ಳಿಯಿಂದ ದೊಡ್ಡಹಳ್ಳಿಗೆ ವರ್ಗವಾಗಿ ಹೋಗುತ್ತ ಹೋಗುತ್ತ, ಕಡೆಗೆ ನಲವತ್ತೈದು ರೂಪಾಯಿ ತಲಬಿನಿಂದ ಟ್ರೇನಿಂಗ್ ಕಾಲೇಜದ ಕನ್ನಡ ಉಪಶಿಕ್ಷಕನಾದೆನು. ಮುಂದೆ ಒಂದೆರಡು ತಿಂಗಳೊಳಗೆ ಅಲ್ಲಿ ತಿಂಗಳಿಗೆ ಐವತ್ತು ರೂಪಾಯಿಗಳು ದೊರೆಯಹತ್ತಲು, ನನ್ನಂತಹ ಧನ್ಯನು ನಾನೇ ಎಂದು ಅಭಿಮಾನ ಪಡತೊಡಗಿದೆನು. ಪಾಪ! ಬಡವರ ಅಲ್ಪ ಸಂತುಷ್ಟತೆ! ಈ ಅವಧಿಯಲ್ಲಿ ನನ್ನಿಂದ "ಪದ್ಮನಯನೆ" ಎಂಬ ಕಾದಂಬರಿಯು, "ಲಘುನಿಬಂಧ-ಸಂಗ್ರಹ" ಎಂಬ ಪ್ರಬಂಧ ಶಿಕ್ಷಣದ ಪುಸ್ತಕವು, "ಉತ್ತರರಾಮಚರಿತ್ರಸಾರ" "ಶ್ರೀ ಗಿರಿಜಾಕಲ್ಯಾಣ" ಎಂಬವೆರಡು ಪೌರಾಣಿಕ ಸಣ್ಣ ಪುಸ್ತಕಗಳು ಬೈಲಿಗೆ ಬೀಳಲು, "ಗಳಗನಾಥನು ನೆಟ್ಟಗೆ ಬರೆಯುವನೆಂ"ದು ಜನರು ಅನ್ನಹತ್ತಿದರು. ಈ ಅವಧಿಯಲ್ಲಿ ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರತಿವರ್ಷದ ಉತ್ಸವದ ಕಾಲಕ್ಕೆ, ಅಧ್ಯಕ್ಷರಾಗಿರುತ್ತಿದ್ದ ಬಹುತರ ನಮ್ಮ ಮೈಸೂರ ಸನ್ಮಾನ್ಯ ವಿದ್ವಾಂಸರಾದ ಪದವೀಧರರ ಕೈಯಿಂದಲೇ ಒಂದು ವರ್ಷವೂ ತಪ್ಪದಂತೆ ೯–೧೦ ವರ್ಷ ಲೇಖನ ಭಾಷಣಗಳ

ಪರೀಕ್ಷೆಯಲ್ಲಿ ನಾನು ಉಚಿತಗಳನ್ನು ಪಡೆದದ್ದರಿಂದ ನನಗೆ "ಪಂಢರಪುರದ ವಾರಕರಿ" ಎಂದು ಆ ಸಂಘದವರು ವಿನೋದದಿಂದ ಅನ್ನುತ್ತಿದ್ದರು.

ಹೀಗೆ ನಾನು ಪಳ್ಳಿಯ ಸಣ್ಣ ಶಾಲೆಯಿಂದ ಟ್ರೇನಿಂಗ ಕಾಲೇಜದಂಥ ಗೌರವದ ಶಾಲೆಯ ವರೆಗೆ ಸಣ್ಣ ದೊಡ್ಡ ಶಾಲೆಗಳಲ್ಲಿ ಮನಃಪೂರ್ವಕ ಕೆಲಸ ಮಾಡುತ್ತ, ಪ್ರೀತಿಬಂದ ವಿಷಯಗಳನ್ನು ಬರೆಯುತ್ತ, ಸಂಘದ ಪಾರಿತೋಷಕಗಳಿಂದ ಉತ್ತೇಜನವನ್ನು ಹೊಂದುತ್ತ, ಅಭಿಮಾನದಿಂದ ಕಾಲಹರಣ ಮಾಡುತ್ತಿರುವಾಗ, ನನ್ನ ನೌಕರಿಯ ಮುದ್ದತ್ತು ಇಪ್ಪತ್ತು ವರ್ಷದ್ದಾಯಿತು. ನನ್ನ ಕೆಲಸದ ಬಗ್ಗೆ ನನ್ನ ಪೂಜ್ಯಗುರುಗಳಾದ ಕೈ. ವಾ. ರಾವಜಿ ರಾವ ಕರಂದಿಕರ ಪ್ರಿನ್ಸಿಪಾಲ ಟ್ರೇನಿಂಗ ಕಾಲೇಜ ಧಾರವಾಡರವರು "ಗಳಗನಾಥನು ಸಮರ್ಥ ಶಿಕ್ಷಕನು, ಗೊತ್ತಿದ್ದ ವಿಷಯವನ್ನು ಸವಿಯಾಗಿ ಬರೆಯುವವನು" ಎಂದು ಅನ್ನುತ್ತಿದ್ದರು! ಈ ಮಹನೀಯರೇ, ಪೂನಾದ ರಿಜನಲ್ ಟೆಕ್ಸ್ಟ ಬುಕ್ ಕಮೀಟಿಯಲ್ಲಿ ನನ್ನನ್ನು ಮೈಮುರಿದು ದುಡಿಸಿ, ನನಗೆ ಲೇಖನ ಕಲೆಯ ಹಿಡಿತಗಳು ತಿಳಿಯಲಿಕ್ಕೆ ಆಸ್ಪದ ಮಾಡಿಕೊಟ್ಟಿರುವರು. ನನ್ನ ಈ ತೇಜಸ್ವಿಗಳಾದ ಲೌಕಿಕ ಗುರುವರ್ಯರ ಸಹವಾಸವೂ, ಅವರ ಪ್ರಸನ್ನ ವಾಣಿಯ ಅಭಿಪ್ರಾಯವೂ ಈಗಲೂ ನನಗೆ ಸಂಜೀವನ ಮಂತ್ರಗಳಾಗಿ ನನ್ನಲ್ಲಿ ಕಾರ್ಯೋತ್ಸಾಹವನ್ನುಂಟು ಮಾಡುತ್ತಿರುವವು! ಹೀಗೆಯೇ ನಾನು ಇನ್ನೂ ಎರಡು ವರ್ಷ ಟ್ರೇನಿಂಗ್ ಕಾಲೇಜದ ಶಿಕ್ಷಕನಾಗಿದ್ದರೆ, ನನಗೆ ತಿಂಗಳಿಗೆ ಒಂದು ನೂರು ರೂಪಾಯಿ ಸಂಬಳವಾದರೂ ಆಗಿ, ನಾನೊಬ್ಬ ಗಣ್ಯಪುರುಷನಾಗು ತ್ತಿದ್ದೆನು! ಯಾಕಂದರೆ, ದುಡ್ಡಿನಿಂದಲೇ ಮನುಷ್ಯನ ಯೋಗ್ಯತೆಯನ್ನು ಅಳೆಯುವ ಕಾಲವಿದು! ಆದರೆ ನನ್ನ ಏಕನಿಷ್ಠೆಯ ಪರಿಶ್ರಮಕ್ಕೆ ಅಷ್ಟು ಪ್ರತಿಫಲವು ದೊರೆಯುವ ಯೋಗವಿದ್ದಿಲ್ಲ. ಯಾಕಂದರೆ ನಾನು ಅಕಸ್ಮಾತ್ ಮೊದಲು ಒಂದು ವರ್ಷದ ಫರ್ಲೋ ರಜೆಯನ್ನೂ, ಆಮೇಲೆ ಒಂದು ವರ್ಷದ ಸಿಕ್ ರಜೆಯನ್ನೂ ಭೋಗಿಸಿ, ಇನ್ನೂ ಹತ್ತು ವರ್ಷದ ನೌಕರಿಯ ಮುದ್ದತ್ತು ಇರುತ್ತಿರುವಾಗ ಪ್ರಯತ್ನ ಪೂರ್ವಕ ಪೆನಶನ್ನು ಪಡೆದೆನು. ಈಗ ನನಗೆ ತಿಂಗಳಿಗೆ ಹತ್ತೊಂಭತ್ತು ರೂಪಾಯಿ, ಆರು ಆಣೆ ಪೆನಶನ್ನು ದೊರೆಯುತ್ತಿರುವದು.

ನನ್ನ ಸದ್ಗುರುವು!

ಹೀಗೆ ಲಾಭಕಾಲದಲ್ಲಿ ನಾನು ಪೆನಶನ್ನು ಪಡೆದದ್ದಕ್ಕಾಗಿ ಒಬ್ಬರಿಲ್ಲೊಬ್ಬರಾದರೂ ಶಂಕಿಸಬಹುದಾಗಿದೆ. ಆದರೆ ನಾನು ಮಾಡುತ್ತಿದ್ದ ಅಧ್ಯಾಪಕ ಕೆಲಸದಲ್ಲಿ ಬೇಸರ ಮಾಡಿಯಾಗಲಿ, "ಇದರಲ್ಲೇನು ಲಾಭವಿಲ್ಲೆಂ"ಬ ಅಸಂತುಷ್ಟತೆಯಿಂದಲಾಗಿ, "ಅಚ್ಚ ಲೇಖಕನಾಗಿ ಸ್ವತಂತ್ರನೂ ದುಡ್ಡು ಗಳಿಸುವವನೂ ಎನಿಸಿಕೊಳ್ಳಬೇಕೆಂ"ಬ ಡೌಲಿನಿಂದಾಗಲಿ, "ದೇಶಭಕ್ತನೆನಿಸಿಕೊಳ್ಳಬೇಕೆಂ"ಬ ಉಬ್ಬಿನಿಂದಾಗಲಿ ನಾನು ನೌಕರಿಯನ್ನು ಬಿಟ್ಟವನಲ್ಲ. ಆದರೆ ಅಷ್ಟು ಹೊತ್ತಿಗೆ ಮೂರು ನಾಲ್ಕು ವರ್ಷಗಳಿಂದ ಅಗಡಿಯ ಆನಂದವನಸ್ಥ ಶ್ರೀ ಶೇಷಾಚಲ ಸಾಧುಗಳವರ ಸತ್ಸಹವಾಸವು ನನಗೆ ಒದಗಿ, ಆನಂದವನದಲ್ಲಿ ಸಂಸ್ಕೃತ ಪಾಠಶಾಲೆಯನ್ನು ಸ್ಥಾಪಿಸಿದ ಉಪಾಧಿಯ ಬಾಧೆಗೆ ಅಹಂಕಾರದಿಂದ ನಾನು ಒಳಗಾಗಿದ್ದೆನು. ಆ ಪಾಠಶಾಲೆಯ ಯೋಗಕ್ಷೇಮಕ್ಕಾಗಿ ನಾನು ಆರಂಭಿಸಿದ್ದ

"ಸದ್ಬೋಧಚಂದ್ರಿಕೆ" ಎಂಬ ಮಾಸಪತ್ರಿಕೆಯನ್ನು ಸಾಗಿಸುವುದಕ್ಕೂ, ಪಾಠಶಾಲೆಯನ್ನು ನನ್ನ ಸ್ವಭಾವಕ್ಕನುಸರಿಸಿ ನಡಿಸಲಿಕ್ಕೂ ನನ್ನ ನೌಕರಿಯು ವಿಘ್ನ ಮಾಡತೊಡಗಿತು. ಹೀಗೆ ಎರಡು ಪ್ರಬಲ ಉಪಾಧಿಗಳ ಇರುಕಿನಲ್ಲಿ ಸಿಕ್ಕ ನಾನು, ಯಾವದೊಂದು ಉಪಾಧಿಯಿಂದ ಮುಕ್ತನಾಗದಿದ್ದರೆ ಪರಿಣಾಮವಾಗುವ ಹಾಗಿದ್ದಿಲ್ಲ. ಹೀಗಿರುವಾಗ ನನ್ನ ಹಿರಿಯರ ಪುಣ್ಯದಿಂದಲೂ, ಶ್ರೀ ಲಕ್ಷ್ಮೀಪತಿಯ ಕೃಪೆಯಿಂದಲೂ ನಾನು ನೌಕರಿಯ ಉಪಾಧಿಯಿಂದ ಮುಕ್ತನಾಗಿ, ಮಹಾಪುರುಷ–ಸಂಶ್ರಯದ ಭಾಗ್ಯವನ್ನು ಪಡೆದೆನು! ಈ ಭಾಗ್ಯ ಪ್ರಾಪ್ತಿಯ ಸುಮಂಗಲ ಕಾಲವು ನನಗೆ ಒದಗಿಬಾರದಿದ್ದರೆ, ಅಂದಿನಿಂದ ಇಂದಿನ ವರೆಗೆಯೆಂದರೆ ಇಪ್ಪತ್ತೈದು ವರ್ಷ ಅಖಂಡ ಭಾಷಾಸೇವೆ ಮಾಡಿದ ನಾನು, ದೊಡ್ಡ ವಿದ್ವಾಂಸರ ದರ್ಶನದಿಂದ ಧನ್ಯನಾಗಿ, ಬೆಂಗಳೂರಲ್ಲಿಯೇ ಇದ್ದು ಬಿಡುವಷ್ಟು ಭಾಗ್ಯವಂತನು ಆಗುತ್ತಿದ್ದಿಲ್ಲ! ಸದ್ಗುರು ಪ್ರಭಾವಕ್ಕೆ ಯಾವದು ತಾನೆ ಅಸಾಧ್ಯವು?

ಹೀಗೆ ನನ್ನ ಧನ್ಯತೆಗೆ ಕಾರಣನಾದ ಅಲೌಕಿಕ ಮಹಿಮೆಯ, ಹಾಗು ಅಗಾಧಸತ್ವದ ಅಗಡಿ ಆನಂದವನಸ್ಥ ಶ್ರೀ ಶೇಷಸದ್ಗುರುನಾಥನು, ನನ್ನ ಹಾಗೆಯೇ ಗಾವಿಲನು! ಆತನ ಗೋತ್ರವೂ ಕೌಂಡಿಣ್ಯ; ಆತನೂ ಶುಕ್ಲ ಯಜುರ್ವೇದಾಂತರ್ಗತ ಕಣ್ವಶಾಖೆಯ ಸ್ಮಾರ್ತ ಬ್ರಾಹ್ಮಣನು. ಲೌಕಿಕ ಯೋಗ್ಯತೆಯಲ್ಲಿಯೂ. ಓದು–ಬರಹದಲ್ಲಿಯೂ, ಕೆಲಸ–ಕೈಗಾರಿಕೆಗಳಲ್ಲಿಯೂ ನಮ್ಮಿಬ್ಬರು ಗುರುಶಿಷ್ಯರನ್ನು ಒರೆಗೆ ಹಚ್ಚಿ ನೋಡಿದರೆ, ಶಿಷ್ಯನಾದ ನಾನೇ ನನ್ನ ಗುರುವಿಗಿಂತ ಶ್ರೇಷ್ಠನು ! ಆದರೆ ಕೇವಲ ನನ್ನಂತಹ ಮೂಢ ಜನರ ಉದ್ಧಾರಕ್ಕಾಗಿ ಅವತರಿಸಿ, ಮೂಢರಿಗಿಂತಲೂ ಮೂಢನಾಗಿ ತೋರುತ್ತ, ಅಡ್ಡ ಹಾದಿಗೆ ಹೋಗುತ್ತಿರುವ ಶಿಷ್ಯರನ್ನು ಅವರಿಗೆ ತಿಳಿಯದಂತೆ ಹಾದಿಗೆ ಹಚ್ಚಲು ಸಮರ್ಥನಾದ ದೀನರಕ್ಷಕ–ಪತಿತಪಾವನ ಸದ್ಗುರುನಾಥನ–ನನ್ನ ಶ್ರೀ ಶೇಷ ಸದ್ಗುರುನಾಥನಿಗಿಂತಲೂ ಹೆಚ್ಚಿನವನು ಈ ಜಗತ್ತಿನಲ್ಲಿ ಮತ್ತಾವನಿರುವನು?

ನನ್ನ ಈ ಗಾವಿಲನಾದ ಶ್ರೀ ಸದ್ಗುರುನಾಥನು ಅತ್ಯಂತ ಗಂಭೀರನು; ನನ್ನಂತಹ ಪಾಮರನನ್ನೂ ಅಂಗೀಕರಿಸಿ ಆದರಿಸುವಷ್ಟು ಉದಾರನು, ಕರುಣಾಶಾಲಿಯು. ಆತನು ಜಗತ್ತನ್ನೇ ಈಶ್ವರಸ್ವರೂಪವಾಗಿ ನೋಡಿ ದಾಸಾನುದಾಸನಾಗಿ ಸೇವಕವೃತ್ತಿಯಿಂದ ನಡೆದುಕೊಳ್ಳುವವನು; ಬ್ರಾಹ್ಮಣರಿಂದ ಚಂಡಾಲರ ವರೆಗೆ ತಲೆಬಾಗಿ–ತಲೆಬಾಗಿ, ನಮಿಸಿ–ನಮಿಸಿ ಈಗಿನ ಅಹಂಕಾರಾವೃತ ಜಗತ್ತಿಗೆ ದಾಸಭಾವದ ಸೊಬಗನ್ನು ತೋರಿಸುವವನು; ಸದ್ವೃತ್ತಿರೂಪದ ತಾನು ಸ್ವಯಂಸಿದ್ಧ ರಾಜಾಧಿರಾಜನಾಗಿದ್ದರೂ, ಅನ್ಯರಿಗೆ "ಮಹಾರಾಜ, ಮಹಾರಾಜಾ" ಎಂಬ ವಿನಯೋಕ್ತಿಯಿಂದ ಸಂಬೋಧಿಸಿ, ಜನರ ಮಾನಸಿಕ ವಿಕಾರ ಗಳನ್ನು ಕುಗ್ಗ ಬಡಿದು ಕ್ಷಣದಲ್ಲಿ ಜನರ ಮನಸ್ಸನ್ನು ಶಾಂತಗೊಳಿಸಿ, ಅವರನ್ನು ಆನಂದಭಾಜನರನ್ನಾಗಿ ಮಾಡುವವನು; ನನ್ನ ಈ ಆನಂದವನವು ಭುಕ್ತಿ–ಮುಕ್ತಿಗಳ ನೆಲೆಗಟ್ಟೆಂದು ತನ್ನ ಸರ್ವ ವ್ಯಾಪಕ ಸೇವಾಧರ್ಮ–ಸುಲಭ ಸದ್ಬೋಧಗಳಿಂದ ಡಂಗುರ ಹೊಡೆದು ವಿವೇಕಿಗಳನ್ನು ಎಚ್ಚರಗೊಳಿಸುತ್ತ, ಸಾತ್ವಿಕ ರೀತಿಯಿಂದ ಲೋಕಸಂಗ್ರಹವನ್ನು ಮಾಡುವವನು; ನನ್ನಂತಹ ಪತಿತರಿಗಿಂತಲೂ ಪತಿತನಾಗಿ ಗಾಂಭೀರ್ಯದಿಂದ ನಡೆದುಕೊಂಡು ಪತಿತ ಶಿಕ್ಷಕಾಗ್ರೇಸರನಾಗಿ ಲೌಕಿಕರಿಗೆ ತನ್ನ ನೆಲೆಯನ್ನು ತಿಳಿಯಗೊಡದೆ, ಮಿಂಚಿಹೋಗಿ ಮುಮುಕ್ಷುಗಳಿಗೆ ಪಶ್ಚಾತ್ತಾಪನವನ್ನುಂಟುಮಾಡಿದವನು! ಇಂಥ ನನ್ನ

ಸದ್ಗುರುನಾಥನ ಅಗಾಧ ಮಹಿಮೆಯನ್ನು ವರ್ಣಿಸಲು ನಾನು ಹೇಗೆ ಸಮರ್ಥನಾದೇನು? ಆ ಮಹಾಮಹಿಮನನ್ನು ನಮಸ್ಕರಿಸುವ ಯೋಗ್ಯತೆಯಾದರೂ ನನ್ನಲ್ಲಿ ಇರುವದೆಯೇ?

ಇಂತಹ ಸದ್ಗುರುನಾಥನ ಆನಂದವನವೆಂಬ ಪವಿತ್ರ ತಪೋಭೂಮಿಯಲ್ಲಿ ಅಹಂಕಾರಿಯು ನಾನು, ಸದ್ಗುರುನಾಥನ ಶಿಷ್ಯನೆಂಬ ಮಹಾಹಂಕಾರದಿಂದ ಬಾಧಿತನಾಗಿ, ಅಖಂಡ ಹದಿಮೂರು ಹದಿನಾಲ್ಕು ವರ್ಷ ಸಕುಟುಂಬ ಸಪರಿವಾರ ವಾಸಿಸಿ ಏನೇನೋ ಕೆಲಸಗಳನ್ನು ಮಾಡಿಬಿಟ್ಟೆನು! ನನ್ನ ಅಕ್ಕರೆಯ 'ಸದ್ಬೋಧ ಚಂದ್ರಿಕೆ'ಯೆಂಬ ಮಾಸಪತ್ರಿಕೆಯು ಸದ್ಗುರುನಾಥನ ಕೃಪೆಯಿಂದ ನನ್ನ ಜ್ಯೇಷ್ಠಪುತ್ರಿಯಂತೆ ಆನಂದವನದಲ್ಲಿ ಹುಟ್ಟಿದಳು. ಆಕೆಯು ತನ್ನ ತೊದಲು ನುಡಿಯ ಸವಿಯ, ಹಾಗು ತನ್ನ ಕಿರಿ ಗೆಜ್ಜೆಗಳ ಇಂಚರದ ರೂಪದಿಂದ ಕರ್ನಾಟಕದ ಪ್ರದೇಶವನ್ನೆಲ್ಲ ಆಕ್ರಮಿಸುತ್ತ ಆಕ್ರಮಿಸುತ್ತ ಹನ್ನೆರಡು ವರ್ಷಗಳಲ್ಲಿ ಕಾಶಿಯಿಂದ ರಾಮೇಶ್ವರದ ವರೆಗಷ್ಟೇ ಅಲ್ಲ, ಏಡನದಂತಹ ಭರತಭೂಮಿಯ ಹೊರಭಾಗದಲ್ಲಿಯೂ ಇರುವ ಕನ್ನಡಿಗರಲ್ಲಿಯ ಏಳುಸಹಸ್ರ ಜನ ಚಂದಾದಾರರ ಮನಸ್ಸುಗಳನ್ನು ಎಳೆದುಕೊಂಡು, ತನ್ನ ಸವಿಯಾದ ಗೌರವದ ನುಡಿಗಳಿಂದ ಅವರನ್ನು ಆನಂದಪರವಶರಾಗಮಾಡಿ "ಅಹಹ! ಸದ್ಬೋಧಚಂದ್ರಿಕೆಯು!" ಎಂಬ ಉದ್ಗಾರವನ್ನು ಹೊರಡಿಸಿದಳು! ಇಂತಹ ಸತ್ಪುತ್ರಿಯ ಭಾಗ್ಯವನ್ನು ನಾನು ಭೋಗಿಸಿದ್ದಲ್ಲದೆ, ಹಿಂದಕ್ಕೆ ಟ್ರೇನಿಂಗ್ ಕಾಲೇಜಿನಲ್ಲಿ ೯೧ ಜನ ವಿದ್ಯಾರ್ಥಿಗಳಲ್ಲಿ ಒಬ್ಬನಾಗಿ, ಅಲ್ಲಿಯ ಬ್ರಾಹ್ಮಣ ಭೋಜನಗೃಹದಲ್ಲಿ ಭುಂಜಿಸುತ್ತ ಅಲ್ಲಿಯ ವಿದ್ಯಾಮಂದಿರದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ನಾನು, ನನ್ನ ಸದ್ಗುರುನಾಥನ ಪ್ರಭಾವದಿಂದ ಆನಂದವನದಲ್ಲಿ ಚತುಃಶಾಖೆಯ ಬ್ರಾಹ್ಮಣರ ಎಂಬತ್ತು ಜನ ವಿದ್ಯಾರ್ಥಿಗಳಿಗೆ ಅನ್ನವಸ್ತ್ರಗಳನ್ನು ಕೊಟ್ಟು, ವೇದಯಾಜ್ಞಿಕ–ಕಾವ್ಯಶಾಸ್ತ್ರಗಳ ಅಧ್ಯಾಪನ ಮಾಡಿಸುವ ಎಂಟುಜನ ಅಧ್ಯಾಪಕರ ಅನುಗ್ರಹಕ್ಕೆ ಪಾತ್ರನಾದ ಪುಣ್ಯವಂತನೆಂಬ ಅಹಂಕಾರದಿಂದ ಮೆರೆದೆನು! ಪೂಜ್ಯರೇ, ಸದ್ಗುರುನಾಥನ ಬಾಗಿಲು ಕಾಯುವ ನಮ್ಮ ನಾಯಿಗಳ ಈ ಭಾಗ್ಯದ ಭೋಗವನ್ನೂ, ಅಹಂಕಾರದ ಮೆರವಣಿಗೆಯನ್ನೂ ನೋಡಿ ನೀವು ಆಶ್ಚರ್ಯಪಡುವಿರೇನು? ಅಥವಾ ಈ ಗಳಗನಾಥನು ಎಂತಹ ಆತ್ಮಶ್ಲಾಘಿಯೆಂದು ಅಸಹ್ಯಪಡುವಿರೋ? ಆದರೆ, ಹೀಗೆ ನೀವು ಆಶ್ಚರ್ಯ–ಅಸಹ್ಯಗಳ ವಿಕಾರಕ್ಕೆ ಒಳಗಾಗದೆ, ಅಹಂಕಾರವು ಪಾಮರರ ಸ್ವಭಾವಗುಣವೆಂದು ತಿಳಿದು ಕರುಣಾಳುಗಳಾಗಿ, ನನ್ನ ಸದ್ಗುರುನಾಥನಂತೆ ನೀವೂ ನನ್ನನ್ನು ಅನುಗ್ರಹಿಸಿ ಧನ್ಯನಾಗಮಾಡುವಿರೆಂದು ನಾನು ತಿಳಿದಿರುವೆನು. ಯಾಕಂದರೆ, ತನ್ನ ಕಾರ್ಯದಲ್ಲಿಯ ಅಹಂಕಾರವು ತನ್ನ ಬಂಧನಕ್ಕೆ ಕಾರಣವಾಗಿರುವಂತೆ, ಶ್ರೀ ಗುರುವಿನ ಕಾರ್ಯದಲ್ಲಿಯ ಅಹಂಕಾರವು ತನ್ನ ಮೋಕ್ಷಕ್ಕೆ ಕಾರಣವಾಗಿರುವದೆಂದು ನಾನು ಕಲ್ಪಿಸಿಕೊಂಡಿರುವೆನು. ನನ್ನ ಸದ್ಗುರುನಾಥನು ಒಮ್ಮೆ ನನ್ನನ್ನು ಕುರಿತು ವಾತ್ಸಲ್ಯದಿಂದ "ಮಹಾರಾಜ, ಸ್ವಾಮಿಯ ಸಂಸಾರವು ನಿಮ್ಮ ಸಂಸಾರವು ಅಹುದಷ್ಟೆ?" ಎಂದು ಕೈಹಿಡಿದು ಕೇಳಲು, ಕಂಪಿತ ಹೃದಯದಿಂದ "ಹೌದು" ಎಂದು ನಾನು ಉತ್ತರ ಕೊಟ್ಟೆನು ! ಆಗ ಕರುಣಾಘನನಾದ ನನ್ನ ಸದ್ಗುರುನಾಥನು ಆನಂದದಿಂದ "ಹೋಗಿರಿ ಮಹಾರಾಜಾ ! ನಿಮ್ಮ ಸಂಸಾರವನ್ನು ಸ್ವಾಮಿಯು ತಲೆಯಲ್ಲಿ ಹೊತ್ತು ಮಾಡುವನು" ಎಂದು ಹೇಳಿದನು! ಮಹನೀಯರೇ, ಆ ಮಾಹಮಹಿಮನ ಈ ಮಾತಿನ ರಹಸ್ಯವನ್ನು ಪಾಮರನು ನಾನು ಏನು ತಿಳಿಯುವೆನು? ಮೇಲೆ ಹೇಳಿದಂತೆ

ಗುರುಕಾರ್ಯದಲ್ಲಿಯ, ಅರ್ಥಾತ್ ಪರೋಪಕಾರದಲ್ಲಿಯ ಅಹಂಕಾರವು ತಾರಕವಾದ ದ್ದೆಂದಿಷ್ಟು ಮಾತ್ರ ಹುಂಬಗುತ್ತಿಗೆಯಿಂದ ನಾನು ತಿಳಿದುಕೊಂಡು ಬಿಟ್ಟಿದ್ದೇನೆ! ಸನ್ಮಾನ್ಯರೇ, ಗುರುಕಾರ್ಯದಲ್ಲಿಯ ಅಹಂಕಾರವು ಮತ್ತೆ ಹುಟ್ಟಿ ಬರಲಾರದ ಹುರಿದ ಬೀಜದಂತಹ ಅಹಂಕಾರವಾಗಿರಬಹುದಲ್ಲವೆ?

ಹೀಗೆ ಆನಂದವನದಲ್ಲಿ ಸದ್ಬೋಧಚಂದ್ರಿಕೆಯ ಸೊಬಗಿನಲ್ಲಿಯೂ, ವೈದಿಕ ಪಾಠ ಶಾಲೆಯ ವೈಭದಲ್ಲಿಯೂ ಒಮ್ಮೆ ಸುಖಪಡುತ್ತಾ ಒಮ್ಮೆ ದುಃಖಪಡುತ್ತಾ ಆನಂದಪ್ರಾಪ್ತಿಗಾಗಿ ಹಂಬಲಿಸಿ ನಾನು ವ್ಯವಹರಿಸುತ್ತಿದ್ದಾಗ, ಶ್ರೀ ಸದ್ಗುರುನಾಥನ ನಿರ್ಯಾಣವಾಗಿ ಎರಡು ವರ್ಷಗಳಾದವು. ಆಗ ಏಳು ಸಹಸ್ರ ರೂಪಾಯಿ ಕೊಟ್ಟು ಸಂಗ್ರಹಿಸಿದ್ದ ಮುದ್ರಣದ ಸಾಧನಗಳಲ್ಲಿ ಮುಖ್ಯವಾದವನ್ನೂ, ಸದ್ಬೋಧ ಚಂದ್ರಿಕೆಯ ಮೇಲಿನ ಮಮಕಾರವನ್ನೂ ಬಿಟ್ಟು, ಶ್ರೀ ಗುರುತಂತ್ರದಿಂದ ನಾನು ಪಾಠಶಾಲೆಯೊಡನೆ ಆನಂದವನದಿಂದ ಹಾವೇರಿಗೆ ಬರಬೇಕಾಯಿತು! ಮಹಾಯುದ್ಧದ ಕಾಲ, ರೂಪಾಯಿ ಕೊಟ್ಟರೆ ಎರಡು ಸೇರು ಕಾಳು, ಕೇಳಿದ ಪದಾರ್ಥಗಳೆಲ್ಲ ಮಿತಿ ಮೀರಿ ತುಟ್ಟಿ, ಪಾಠಶಾಲೆಯ ನಲವತ್ತು ಜನ ವಿದ್ಯಾರ್ಥಿಗಳ ಎರಡು ಹೊತ್ತಿನ ಊಟ, ಎಂಟು ಜನ ಅಧ್ಯಾಪಕರ ಮಾಸಾಶನದ ಪ್ರತಿ ತಿಂಗಳ ಸರಾಸರಿ ೨೦೦ ರೂಪಾಯಿ ವೆಚ್ಚ, ಪ್ರಿಂಟಿಂಗ್ ಪ್ರೆಸ್ಸಿನ ನೌಕರರ ನೂರಾರು ರೂಪಾಯಿ ಪಗಾರ, ತನ್ಮಧ್ಯೆ 'ಎಂಟು ಸಹಸ್ರ ರೂಪಾಯಿ ಕೊಟ್ಟು ಮುದ್ರಣದ ಸಾಧನಗಳನ್ನು ಕೊಳ್ಳುವ ಪ್ರಸಂಗ, ಇವೆಲ್ಲ ತೊಂದರೆಗಳ ತಿಕ್ಕಾಟದಲ್ಲಿ ನನ್ನ ಇಬ್ಬರು ಹೆಣ್ಣುಮಕ್ಕಳ ಸಾಲಂಕೃತ ಕನ್ಯಾದಾನದ ಸುಯೋಗ! ಅಂದಬಳಿಕ ಕೇಳುವದೇನು? ಹೊಳೆಯ ನೀರು ಏರಿದಂತೆ ಗಳಗನಾಥನ ಸಾಲವು ಭರದಿಂದ ಏರತೊಡಗಿ, ಹದಿನಾಲ್ಕು ಸಾವಿರ ರೂಪಾಯಿಗಳವರೆಗೆ ಅದು ಏರಿತು! ಅಷ್ಟು ಹೊತ್ತಿಗೆ ಗಳಗನಾಥನ ಲೇಖನ ವ್ಯವಸಾಯದಿಂದ ಅರವತ್ತು ಸಹಸ್ರ ರೂಪಾಯಿಗಳ ಸಂಪಾದನವಾಗಿ, ಆ ಸಂಪಾದನದ ಬಹು ದೊಡ್ಡ ಭಾಗವು ವೈದಿಕ ಪಾಠಶಾಲೆ-ಗೋಶಾಲೆಗಳಿಗಾಗಿ ವೆಚ್ಚವಾಗಿ ಹೋಗಿದ್ದಿತು!

ಈ ದೀರ್ಘ ವೆಚ್ಚಕ್ಕಾಗಿ, ಗಳಗನಾಥನು ಅಸೂಯೆ ಪಟ್ಟದಿಲ್ಲ; ಅಥವಾ ನೀಗದಷ್ಟು ಸಾಲವಾದದ್ದಕ್ಕಾಗಿ ಆತನು ಎದೆಗುಂದಿದ್ದಿಲ್ಲ, ಆತನ ಪಾಠಶಾಲೆ-ಸದ್ಗುರು ಮಾಸಪತ್ರಿಕೆಗಳು ಸಾಗುವ ಹಾಗೆ ಹಾವೇರಿಯಲ್ಲಿ ಸಾಗಿದ್ದವು; ಆದರೆ ಗಳಗನಾಥನ ಸತ್ವಪರೀಕ್ಷೆಗಾಗಿಯೋ ಅನ್ನುವಂತೆ, ಸಂಸ್ಕೃತ ಪಾಠಶಾಲೆಯು ಈಗ ನಾಲ್ಕು ವರ್ಷಗಳ ಹಿಂದೆ ಅಕಸ್ಮಾತ್ ನಿಂತುಬಿಟ್ಟಿತು. ಆಗ ಮಾತ್ರ ಗಳಗನಾಥನಿಗೆ ಪರಮಾವಧಿ ದುಃಖವಾಯಿತು! ಯಾಕಂದರೆ; ಪಾಠಶಾಲೆಯನ್ನು ತನ್ನ ಗುರುಸೇವೆಯ ಮುಖ್ಯಾಂಗವೆಂದು ಆತನು ತಿಳಿದಿರುವನು. ಹೀಗಿರಲು, ಸದ್ಗುರು ಪ್ರಭಾವದಿಂದ ಆತನು ಕರ್ತವ್ಯಭ್ರಷ್ಟನಾಗದೆ, ಅನಿವಾರ್ಯಪಕ್ಷ ಸದ್ಗುರು ಮಾಸಪತ್ರಿಕೆಯನ್ನು ನಿಲ್ಲಿಸಿ, ತನ್ನಲ್ಲಿ ಸಂಗ್ರಹವಾಗಿದ್ದ ನಾಲ್ವತ್ತು ಸಹಸ್ರ ರೂಪಾಯಿ ಗಳ ಪುಸ್ತಕಗಳನ್ನು ಮಾರಿ ಸಾಲ ತೀರಿಸಿ, ಆಮೇಲೆ ಪಾಠಶಾಲೆ-ಸದ್ಗುರು ಮಾಸಪತ್ರಿಕೆ ಯನ್ನು ಪುನಃ ಆರಂಭಿಸಬೇಕೆಂದು ನಿಶ್ಚಯಿಸಿ, ತನ್ನ ವಾರ್ಧಕ್ಯದ ಕಡೆಗೆ ನೋಡದೆ, ಸ್ವತಃ ಪುಸ್ತಕಗಳನ್ನು ತಲೆಯ ಮೇಲೆ ಹೊತ್ತುಕೊಂಡು ಕರ್ನಾಟಕದಲ್ಲಿ ಮಾರಲಿಕ್ಕೆ ಹೊರಟನು! ಕೂಡಿ ಕೂಡಿದಾಗ ಆತನು ಮಾರಿದ ಪುಸ್ತಕಗಳ ಮಾರಾಟದಿಂದ ಧಾರವಾಡ ಜಿಲ್ಲೆಯ ಹತ್ತೇ ತಾಲೂಕುಗಳಲ್ಲಿ ಎಂಟು ಸಹಸ್ರ ರೂಪಾಯಿಗಳ ಸಾಲವು ತೀರಿ,

ಸದ್ಯಕ್ಕೆ ಆರುಸಾವಿರ ರೂಪಾಯಿಗಳ ಸಾಲವು ಮಾತ್ರ ಉಳಿದಿರುವದು! ಈ ಅವಸರದಲ್ಲಿ ಗಳಗನಾಥನು ಭಾಷಾಸೇವೆಯ ಅಂಗಗಳಾದ ಮೂರೂ ಕೆಲಸಗಳನ್ನು ಕ್ರಮವಾಗಿ ಮಾಡಬೇಕಾಯಿತು. ಅವುಗಳಲ್ಲಿ ಪುಸ್ತಕ ಬರೆದದ್ದು ಒಂದನೆಯ ಕೆಲಸವು; ಆ ಬರೆದ ಪುಸ್ತಕಗಳನ್ನು ಮುದ್ರಿಸುವುದಕ್ಕಾಗಿ ಸ್ವತಃ ಎರಡು ಸ್ಥಳಗಳಲ್ಲಿ (ಅಗಡಿ, ಹಾವೇರಿ), ಪ್ರೆಸ್ಸು ಇಟ್ಟದ್ದು ಎರಡನೆಯ ಕೆಲಸವು; ಬೇಗನೆ ಸಾಲ ತೀರಬೇಕೆಂದು ಆ ಮುದ್ರಿಸಿದ ಪುಸ್ತಕಗಳನ್ನು ತಲೆಯ ಮೇಲೆ ಹೊತ್ತು ಈಗ ಮಾರತೊಡಗಿರುವದು ಮೂರನೆಯ ಕೆಲಸವು! ಈ ಮೂರೂ ಕೆಲಸಗಳನ್ನು ಬೇರೆ ಬೇರೆಯವರು, ಅಂದರೆ, ಲೇಖಕರು–ಮುದ್ರಕರು–ವ್ಯಾಪಾರಿಗಳು ಮಾಡುವ ವಾಡಿಕೆಯೇ ವಿಶೇಷವಾಗಿ ಇರಲು, ಅವನ್ನೆಲ್ಲ ಅಭಿಮಾನ ತೊರೆದು ಕೈಮುಟ್ಟಿಮಾಡಿ ಧನ್ಯನಾಗುವ ಸುಯೋಗವನ್ನು ಸರ್ವೇಶ್ವರನು ಒದಗಿಸಿ ಕೊಟ್ಟದ್ದಕ್ಕಾಗಿ ನನಗೆ ಪರಮಾನಂದವಾಗಿರುವದು; ಯಾಕಂದರೆ ಪ್ರಾಮುಖ್ಯವಾಗಿ ಪುಸ್ತಕ ಮಾರುವಾಗ ನನಗಾದ ಅನುಭವದ ಲಾಭವನ್ನು ನಾನು ಇಷ್ಟೆಂದು ಹೇಳುವ ಹಾಗಿಲ್ಲ!

ಇನ್ನು ಉಳಿದಿರುವ ನನ್ನ ಆರು ಸಾವಿರ ರೂಪಾಯಿಗಳ ಸಾಲವು ತೀರಿ ಪುನಃ ಪಾಠಶಾಲೆಯೂ, ಸದ್ಗುರು ಮಾಸಪತ್ರಿಕೆಯೂ ಪ್ರಕಟವಾಗುವದರಲ್ಲಿ ಆಶ್ಚರ್ಯವಿಲ್ಲ; ಯಾಕಂದರೆ ಉತ್ತರ ಕರ್ನಾಟಕದ ಬೆಳಗಾವಿ, ವಿಜಾಪುರ, ಕಾರವಾರ ಎಂಬ ಮೂರು ಜಿಲ್ಹೆಗಳು ಹಾಗೇ ಉಳಿದಿರುವವು; ಲಲಿತ ಕನ್ನಡದ ನಾಲ್ವಡಿ ಕೃಷ್ಣನ ಮೈಸೂರ ಸಂಸ್ಥಾನವು ಹಾಗೇ ಉಳಿದಿರುವದು; ಅಲ್ಲದೆ ನೈಜಾಮಪ್ರಾಂತವಿರುವದು, ಬಳ್ಳಾರಿಯ ಜಿಲ್ಲೆಯಿರವದು; ಅಂದಬಳಿಕ ಚಿಂತಿಸವದೇಕೆ? ಆದರೆ ತಟ್ಟನೆ ಸಾಲ ತೀರಲಿಕ್ಕೆ ಮೈಸೂರು ಸಂಸ್ಥಾನವೇ ತಕ್ಕದ್ದೆಂದು ನನ್ನ ಮನಸ್ಸಿಗೆ ತೋರಿತು; ಯಾಕಂದರೆ ನನ್ನ ಸದ್ಬೋಧ ಚಂದ್ರಿಕೆಯ ಚಂದಾದಾರರ ಸಂಖ್ಯೆಯು ಏಳು ಸಾವಿರಕ್ಕೆ ಮುಟ್ಟಿದಾಗ, ಒಂದೇ ಮೈಸೂರ ಸಂಸ್ಥಾನದಲ್ಲಿ ಸರಾಸರಿ ಮೂರು ಸಹಸ್ರ ಜನ ಚಂದಾದಾರರಿದ್ದರು; ಇತ್ತಿತ್ತ ನಾನು ಸದ್ಗುರು ಎಂಬ ಮಾಸಪತ್ರಿಕೆಯನ್ನು ಹೊರಡಿಸತೊಡಗಲು, ಅದಕ್ಕೂ ಮೈಸೂರವರ ಬೇಡಿಕೆಯೇ ಹೆಚ್ಚು; ಇಡಿಯ ಕನ್ನಡಿಗರಲ್ಲಿ ಸದಭಿಪ್ರಾಯದ–ಅಭಿನಂದನದಿಂದ ನನ್ನನ್ನು ಉತ್ತೇಜನಗೊಳಿಸುವುದರಲ್ಲಿ ಮುಂದಾದವರೆಂದರೆ ನಮ್ಮ ಮೈಸೂರಿನವರೇ ! ಈ ಮುಂತಾದ ಕಾರಣಗಳಿಂದ ಯಾವಾಗಲೂ ಮೈಸೂರವರಲ್ಲಿ ನನ್ನ ವಿಶ್ವಾಸವು ಹೆಚ್ಚು. ವಾಚನಾಭಿರುಚಿಯುಳ್ಳವರೆಂದರೆ ಮೈಸೂರವರೇ ಎಂಬುದು ನನ್ನ ನಂಬಿಗೆ! ಆದ್ದರಿಂದ ಮೈಸೂರ ಪರಿಚಯವು ನನಗೆ ಪ್ರತ್ಯಕ್ಷವಾಗಿ ಇರದಿದ್ದರೂ, ಅಲ್ಲಿಗೆ ಹೋದರೆಯೇ ನನ್ನ ಸಾಲವು ಆಯಾಸವಿಲ್ಲದೆ ಬೇಗನೆ ಕುಳಿತಲ್ಲಿ ತೀರಬಹುದೆಂದು ತಿಳಿದು, ಸಂಗಡ ಮೂರು ಜನರನ್ನು ಸಹಾಯಕ್ಕಾಗಿ ಕರೆದುಕೊಂಡು ಕರ್ನಾಟಕದ ಕೇಂದ್ರವೆನಿಸುವ ಬೆಂಗಳೂರಿಗೆ ಈಗ ನಾಲ್ಕು ತಿಂಗಳ ಹಿಂದೆ ನಾನು ಪುಸ್ತಕಗಳನ್ನು ಹೊತ್ತುಕೊಂಡು ಬಂದುಬಿಟ್ಟೆನು; ಇಲ್ಲಿಗೆ ಬಂದ ಬಳಿಕ ಬೆಂಗಳೂರಿಗೆ ಕಲ್ಯಾಣಪುರಿಯೆಂಬ ಮತ್ತೊಂದು ಹೆಸರು ಇರುತ್ತದೆಂಬದು ನನಗೆ ಗೊತ್ತಾಗಲು, ನನ್ನಂತಹ ದಿನಹೋದ ದಣಿದ ಲೇಖಕನ ಕಲ್ಯಾಣವನ್ನು ಕಲ್ಯಾಣಪುರಿಯು ನಿಶ್ಚಯವಾಗಿ ಮಾಡುವದೆಂಬ ನಂಬಿಗೆಯು ನನ್ನಲ್ಲಿ ಉಂಟಾಗಿದ್ದರೆ ಆಶ್ಚರ್ಯವಲ್ಲ!

ಬೆಂಗಳೂರು ಧನೌದಾರ್ಯವು

ಬೆಂಗಳೂರು ನಮ್ಮಂತಹ ಹಳ್ಳಿಯ ಜನರನ್ನು ಒಳಿತಾಗಿ ರಂಜಿಸುವಲ್ಲಿ ಸಂಶಯವಿಲ್ಲ. ಪುಸ್ತಕ ಮಾರಬಂದ ನಾನಂತು ಬೆಂಗಳೂರನ್ನು ನೋಡಿ ಹಿರಿ ಹಿರಿ ಹಿಗ್ಗಿದೆನು. ಅಲ್ಲಿಯ ಪ್ರಶಸ್ತವಾದ ಬೀದಿಗಳೇನು, ಸುಂದರ ಮನೆಗಳೇನು, ಸ್ವಚ್ಛತೆಯ ಸೊಬಗೇನು, ಜನರ ಚಟುವಟಿಕೆಯೇನು? ತೆರಪಿಲ್ಲದ ವಿವಿಧ ವಾಹನಗಳೇನು? ಇದಕ್ಕನ್ನಬೇಕು ನಾಗರಿಕತೆ! ಇಲ್ಲಿಯ ಜನರು ಮೃದು ನುಡಿಯವರು, ವಿನಯಭಾವದವರು, ಗುಣಗ್ರಾಹಿಗಳು; ನಾವು ಇಂತಹ ಪಂಥದವರೆಂಬುದು ಸ್ಪಷ್ಟವಾಗಿ ತಿಳಿಯುವಂತೆ ಧಾರ್ಮಿಕ ಬಾಹ್ಯ ಚಿಹ್ನಗಳನ್ನು ಸ್ಪಷ್ಟವಾಗಿ ಧರಿಸುವವರು! ಈ ಪಟ್ಟಣವನ್ನು ಕುರಿತು ನಾನು ನನ್ನ "ರಾಣೀ-ಮೃಣಾಲಿನೀ" ಕಾದಂಬರಿಯ ಪ್ರಸ್ತಾವನೆಯಲ್ಲಿ ವರ್ಣಿಸಿರುವಂತೆ ಇನ್ನೊಮ್ಮೆ ಇಲ್ಲಿಯೂ ವರ್ಣಿಸಿಬಿಡುವೆನು; ಯಾಕಂದರೆ ಆದರದಲ್ಲಿ ದ್ವಿರುಕ್ತಿಯು ಅವಶ್ಯವಾದದ್ದು, ಕರ್ನಾಟಕದಲ್ಲಿ ಇಷ್ಟು ಸುಸಂಸ್ಕೃತ ಪ್ರಜೆಗಳುಳ್ಳ ಪಟ್ಟಣವನ್ನು ನಾನು ನೋಡಿದ್ದು ಇದೇ ಮೊದಲು ಎಂದು ಹೇಳಬಹುದು. ಇಲ್ಲಿ ಎಲ್ಲಿ ನೋಡಿದರೂ ಪದವೀಧರರೂ, ಪಂಡಿತರೂ ಕಣ್ಣಿಗೆ ಬೀಳವರು; ಇಂಗ್ಲೀಷ ಭಾಷೆಯನ್ನು ಸುತರಾಂ ಅರಿಯದವರು ಅಪರೂಪವೆಂಬ ಹಾಗೆ ತೋರುವದು. ಅಕ್ಷರಸ್ಥರಲ್ಲದವರು ಇಲ್ಲಿ ಇಲ್ಲವೆಂತಲೇ ಹೇಳಬಹುದು. ಇಂಥ ಅಪರೂಪದ ಸುಸಂಸ್ಕೃತ ಸ್ಥಿತಿಗೆ ಇಲ್ಲಿಯ ಘನವಾದ ಸರಕಾರದಿಂದ ಒದಗಿಸಿಕೊಡಲಾಗಿರುವ ವಿದ್ಯಾಭ್ಯಾಸದ ಸಾಧನಗಳ ವೈಪುಲ್ಯವೇ ಕಾರಣವಾಗಿರುವದೆಂದು ನನಗೆ ತೋರುತ್ತದೆ. ಎಂತಹ ವಿದ್ಯಾಪೀಠವು, ಎಂತಹ ಕಾಲೇಜುಗಳು, ಎಷ್ಟು ಹೈಸ್ಕೂಲುಗಳು! ಮಿಡಲ ಸ್ಕೂಲು, ಪ್ರಾಯಮರಿ ಸ್ಕೂಲುಗಳಿಗಂತು ಅಳತೆಯಿಲ್ಲ! ಇಂತಹ ಸುಶಿಕ್ಷಣದಿಂದ ಸುಶಿಕ್ಷಿತರಾಗಿ ಉಚ್ಚಪದವಿಯನ್ನು ಹೊಂದಿದ ಈ ಪಟ್ಟಣದ ಮಹಾಜನರಲ್ಲಿ ನಿರಹಂಕಾರ, ಸೌಜನ್ಯ, ವಿನಯ, ಗುಣಗ್ರಾಹಕತೆ ಮುಂತಾದ ಸದ್ಗುಣಗಳು ತೋರುತ್ತಿದ್ದರೆ ಆಶ್ಚರ್ಯವೇನು? ವಾಚನಾಭಿರುಚಿಯು ಈ ಮೈಸೂರ ಪ್ರಾಂತದಲ್ಲಿಯಷ್ಟು ಕರ್ನಾಟಕದ ಇನ್ನಾವ ಬೇರೆ ಭಾಗದಲ್ಲಿಯೂ ಇಲ್ಲವೆಂಬುದನ್ನು ನನ್ನ ಮೂವತ್ತು ವರ್ಷದ ಲೇಖನ ವ್ಯವಸಾಯದ ಅನುಭವದಿಂದ ನಾನು ಹೇಳಬಲ್ಲೆನು.

ಇಂತಹ ಸೊಬಗಿನ ಬೆಂಗಳೂರಿಗೆ ಬಂದು ನನ್ನ ಪುಸ್ತಕದ ವ್ಯಾಪಾರವನ್ನು ಆರಂಭಿಸಿದೆನು; ಆದರೆ ನಾನು ಬೆಂಗಳೂರಿಗೆ ಬಂದ ಎಂಟು ಹತ್ತು ದಿನದ ಅನುಭವದಂತೆ ಮುಂದೆಯೂ ನನಗೆ ಅನುಭವ ಬಂದಿದ್ದರೆ, ಯಾವಾಗೋ ನಾನು ಬಂದ ಹಾದಿಗೆ ಸುಂಕವಿಲ್ಲೆಂದು ಪುಸ್ತಕ ಹೊತ್ತುಕೊಂಡು ತಿರುಗಿ ಊರಿಗೆ ಹೋಗಿಬಿಡುತ್ತಿದ್ದೆನು. ನಾನೂ, ನನ್ನ ಮೂವರು ಸಹಾಯಕರೂ, ಸ್ಥಳಿಕರೊಬ್ಬರೂ ಕೂಡಿ ಪುಸ್ತಕ ಮಾರಲು ಬೇಕಾದಷ್ಟು ಪ್ರಯತ್ನ ಮಾಡಿದೆವು; ಆದರೆ ನಿರಾಶೆಯ ಹೊರತು ಫಲವೇನು ಆಗಲಿಲ್ಲ! ಆಗ ನಮ್ಮ ಸಹಾಯಕರು- "ಇಲ್ಲಿ ಕನ್ನಡ ಪುಸ್ತಕಗಳ ಮೇಲೆ ಅಷ್ಟು ಆದರವಿಲ್ಲ! ನಮ್ಮ ಕಡೆಗೆ ನಿಮಗೆ ದಿನಾಲು ಇಪ್ಪತ್ತು ರೂಪಾಯಿ ಉತ್ಪನ್ನವಾಗುವ ಅನುಭವವಿದೆ; ಅಂದಬಳಿಕ ಸುಮ್ಮನೆ ಪಟ್ಟಣವಾಸದ ನಾಲ್ಕು ಜನರ ವೆಚ್ಚದ ತೊಂದರೆಗೆ ಒಳಗಾಗಿ ಯಾಕೆ ಇಲ್ಲಿ ಇರಬೇಕು? ಬೆಂಗಳೂರು ನೋಡಿದ ಹಾಗಾಯಿತು, ಬಂದಹಾಗೆ ಪುಸ್ತಕ ಹೊತ್ತುಕೊಂಡು ತಿರುಗಿ ಹೋಗಿಬಿಡುವದು ನಮಗೆ ನೆಟ್ಟಗೆ ಕಾಣುತ್ತದೆ. ಗಾಡಿಯ ವೆಚ್ಚದ ಮಟ್ಟಿಗೆ

ಯಾರಿಗಾದರೂ ಬುಕ್ಕಸೇಲರರಿಗೆ ಪುಸ್ತಕ ಕೊಟ್ಟು ಹೋಗಿಬಿಡೋಣ" ಎಂದು ಹೇಳಿದರು. ಕೂಡಲೆ ನಾನೂ ಅವರ ಮಾತಿಗೆ ಒಪ್ಪಿಕೊಂಡೆನು; ಆದರೆ ನನ್ನ ಮನಸ್ಸಿಗೆ ಮಾತ್ರ ಸಮಾಧಾನವಾಗಲಿಲ್ಲ! "ಬೆಂಗಳೂರಂತಹ ಅಚ್ಚ ಕನ್ನಡದ ಪಟ್ಟಣಕ್ಕೆ ಬಂದು ಏನೂ ಲಾಭ ಪಡೆಯದೆ ತಿರುಗಿ ಊರಿಗೆ ಹೋದರೆ ಜನರ ಮುಂದೆ ಏನು ಹೇಳಬೇಕು? ಬೆಂಗಳೂರ ಗೌರವವಾದರೂ ಏನು ಉಳಿದ ಹಾಗಾಗುವದು? ಶ್ರೀ ಸದ್ಗುರುನಾಥನು ನನ್ನ ಬೆನ್ನು ಬಿಟ್ಟನೆ? ಸದ್ಗುರುಪ್ರಭಾವವು ಅಡಗೀತೆ? 'ಈ ಮೊದಲೇ ಎಂಟು ಸಹಸ್ರ ರೂಪಾಯಿಗಳ ಸಾಲವನ್ನು ನಾನೇ ತೀರಿಸಿದೆನೇ'? ಎಂದು ಯೋಚಿಸುತ್ತಿರುವಾಗ, ಶ್ರೀ ಗುರುಪ್ರಭಾವದಿಂದ ನಾನು ನಮ್ಮವರ ಮುಂದೆ– "ನಾನು ಬೆಂಗಳೂರಲ್ಲಿ ಒಂದು ಸಹಸ್ರ ರೂಪಾಯಿಗಳನ್ನಾದರೂ ಸಂಪಾದಿಸದೆ ಊರಿಗೆ ಬರಲಿಕ್ಕಿಲ್ಲ; ಬೇಕಾದರೆ ನೀವು ಊರಿಗೆ ಹೋಗಬಹುದು" ಎಂದು ಹೇಳಿದೆನು! ಅಂದೇ ಬೆಂಗಳೂರಲ್ಲಿ ೨೫ ರೂಪಾಯಿಗಳ ಪುಸ್ತಕ ಮಾರಿದವು! ಅಂದಿನಿಂದ, ಅಂದರೆ ತಾರೀಖು ೧೧–೧೦–೨೭ನೇ ಇಸವಿಯಿಂದ ೨೭–೧–೨೮ನೆ ಇಸವಿಯವರೆಗೆ ಮೂರುವರೆ ತಿಂಗಳಲ್ಲಿ ಬೆಂಗಳೂರು ಹಾಗು ಬೆಂಗಳೂರು ಜಿಲ್ಹೆಯಲ್ಲಿ ಕೂಡಿ ಸರಾಸರಿ ಎರಡು ಸಾವಿರ ರೂಪಾಯಿಯ ಉತ್ಪತ್ತಿಯು ನನಗೆ ಆಯಿತು! ಒಂದು ಬೆಂಗಳೂರಲ್ಲಿ ಸಾವಿರದ ಐನೂರು ರೂಪಾಯಿಗಳ ಪುಸ್ತಕಗಳು ಮಾರಿದವು! ಶ್ರೀ ಸದ್ಗುರುನಾಥನು ಸತ್ಯಪ್ರತಿಜ್ಞನಲ್ಲವೆ? ಆತನ ಪ್ರಭಾವವು ಅಗಾಧವಾದದ್ದಲ್ಲವೆ? ಬೆಂಗಳೂರವರ ಈ ಔದಾರ್ಯಕ್ಕಾಗಿ ನಾನು ಎಷ್ಟು ಕೃತಜ್ಞನಾಗಿರಬಹುದು!

ಆದರೆ ಕೇವಲ ಒಂದುವರೆ ಸಾವಿರ ರೂಪಾಯಿಗಳ ಪುಸ್ತಕಗಳನ್ನು ಕೊಂಡದ್ದಕ್ಕಾಗಿ ನಮ್ಮ ಗೌರವದ ಬೆಂಗಳೂರಿಗೆ ನಾನು ಔದಾರ್ಯದ ಆರೋಪ ಮಾಡಿದ್ದರೆ, ನನ್ನ ಗಾವಿಲತನವು ಒಡೆದುಕಾಣದೆ ಹೋಗುತ್ತಿದ್ದಿಲ್ಲ. ಯಾಕಂದರೆ, ಬೆಂಗಳೂರು ಪಟ್ಟಣದ ವಿಸ್ತಾರವನ್ನೂ, ಅಲ್ಲಿಯ ಲಕ್ಷಾಂತರದ ಜನವಸತಿಯನ್ನೂ, ಅಲ್ಲಿ ಕಂಡುಬಂದ ಕನ್ನಡಭಾಷೆಯ ವಿಷಯದ ಗೌರವವನ್ನೂ, ಅಲ್ಲಿಯ ವಿದ್ಯಾಪ್ರಸಾರದ ವೇಗವನ್ನೂ, ಜನರ ವಿದ್ಯಾ ಪಕ್ಷಪಾತಿತ್ವವನ್ನೂ, ವಿದ್ವಾಂಸರ ವಿಪುಲತೆಯನ್ನೂ, ಗ್ರಂಥಕಾರರಿಗೆ ದೊರೆಯಬಹುದಾಗಿರುವ ಉತ್ತೇಜನದ ಸಾಧನಗಳನ್ನೂ ಮನಸ್ಸಿನಲ್ಲಿ ತಂದರೆ, ಒಂದು ಬೆಂಗಳೂರ ಔದಾರ್ಯದಲ್ಲಿ ನನ್ನ ಆರು ಸಹಸ್ರ ರೂಪಾಯಿಗಳ ಸಾಲವು ಸಹಜವಾಗಿ ತೀರತಕ್ಕದ್ದು; ಆದರೆ ಬೆಂಗಳೂರನ್ನೆಲ್ಲ ವ್ಯಾಪಿಸುವಷ್ಟು ಶಕ್ತಿಯು ನನ್ನಲ್ಲಿ ಇಲ್ಲದಿದ್ದರೆ, ಅದಕ್ಕೆ ಬೆಂಗಳೂರು ಏನು ಮಾಡಬೇಕು? ಆದರೆ ಬೆಂಗಳೂರಿಗೆ ನಾನು ಔದಾರ್ಯದ ಆರೋಪ ಮಾಡಿದ್ದರ ಮುಖ್ಯ ಕಾರಣವೇ ಬೇರೆ ಇರುವದು. ಅನ್ಯರ ಹಣದ ಕೊರತೆಯನ್ನು ಯಾವದೊಂದರ ಪ್ರತಿಫಲದ ರೂಪದಿಂದ ಪೂರಯಿಸಿ ಕೊಡುವ ಧನೌದಾರ್ಯಕ್ಕಿಂತ, ಅನ್ಯರ ಗುಣದ ಕೊರತೆಯನ್ನು ನಿಸ್ಪೃಹ ವೃತ್ತಿಯ ತಮ್ಮ ಸದ್ಗುಣಗಳ ಪ್ರದರ್ಶನದಿಂದ ಪೂರಯಿಸಿಕೊಡುವ ಗುಣೌದಾರ್ಯವು ಅತ್ಯಂತ ಶ್ರೇಷ್ಠವಾದದ್ದೆಂದು ನಾನು ಬರೆಯುವ ಕಾರಣವಿಲ್ಲ. ಇಂತಹ ಗುಣೌದಾರ್ಯವು ನನಗೆ ಬೆಂಗಳೂರಲ್ಲಿ ವಿಪುಲವಾಗಿ ಕಂಡುಬಂದದ್ದರಿಂದ, ನಾನು ಅದನ್ನು ಔದಾರ್ಯದ ಪಟ್ಟಣವೆಂದು ಕರೆದಿದ್ದೇನೆ. ಇನ್ನು ಅದರ ಧನೌದಾರ್ಯವನ್ನು ನಾನು

ಅಗೌರವಿಸುತ್ತಿರುವೆನೆಂದು ಮಾತ್ರ ಯಾರೂ ತಿಳಿಯಬಾರದು. ನನ್ನಂತಹ ಧನಾಕಾಂಕ್ಷಿಗಳಿಗಂತೂ ಧನದ ಔದಾರ್ಯವು ಅತ್ಯವಶ್ಯವಾದದ್ದು. ಅಂತಹ ಧನೌದಾರ್ಯವುಳ್ಳವರು ಕರ್ನಾಟಕದಲ್ಲಿರುವರೆಂಬ ನಂಬಿಗೆಯಿಂದಲೇ ನಾನು ಪುಸ್ತಕ ಹೊತ್ತುಕೊಂಡು ಕರ್ನಾಟಕದಲ್ಲಿ ತಿರುಗುತ್ತಲಿದ್ದೇನೆ; ಆದರೆ ಅಚ್ಚ ಕುಸುಬಿಯ ಎಣ್ಣೆಯಲ್ಲಿ, ಹಾಗು ಅಚ್ಚ ಆಕಳ ತುಪ್ಪದಲ್ಲಿ ಇರುವಂತಹ ಗುಣ-ತಾರತಮ್ಯವು ಈ ಎರಡು ಬಗೆಯ ಔದಾರ್ಯಗಳಲ್ಲಿ ಇರುವದೆಂದು ಹೇಳುವದು ನನ್ನ ತಾತ್ಪರ್ಯವಾಗಿರುವದು! ಇನ್ನು ಗುಣೌದಾರ್ಯವು ಬೆಂಗಳೂರಲ್ಲಿ ಏನು ಕಂಡುಬಂದಿತೆಂಬದನ್ನು ಹೇಳುವೆನು.

ಹೇಗಾದರೂ ನಾನು ನನ್ನ ಯೋಗ್ಯತೆಯಂತೆ ಬಹುದಿವಸಗಳಿಂದ ಲೇಖನಗಳನ್ನು ಬರೆಯುತ್ತ ಬಂದವನಷ್ಟೆ? ಆದರೆ "ನನಗೆ ಸಾಲವು ಬಹಳವಾಯಿತಲ್ಲ" ಎಂಬ ಚಿಂತೆಯಿಂದ ಲೇಖಕನು ಹೋಗಿ ಪುಸ್ತಕ ಮಾರುವವನು ಆದದ್ದರಲ್ಲಿ, ನನ್ನ ಗುಣದ ಕೊರತೆಯಲ್ಲದೆ ಮತ್ತೇನು ಕಂಡುಬರುವದು? ಇದೊಂದು ಲೋಕಸೇವೆಯೆಂದು ತಿಳಿದು ಸರ್ವವೂ ಈಶ್ವರಾಧೀನವೆಂಬ ಭಾವದಿಂದ ನಿಸ್ಪೃಹನಾಗಿ ಲೇಖನ ಕಾರ್ಯವನ್ನು ಸಾಗಿಸುವವರು ಶ್ರೇಷ್ಠ ಲೇಖಕರು! ಅವರನ್ನು ಈಶ್ವರನ ಪ್ರತಿನಿಧಿಗಳೆಂತಲೂ ಕರೆಯಬಹುದು; ಆದರೆ ಅಂತಹ ಯೋಗ್ಯತೆಯಂತು ಇರಲಿ, ಹೊಸ ಪುಸ್ತಕ ಬರೆದರೆ ಸದ್ಗುರವು ಹೊಸ ದುಡ್ಡು ಕೊಡುವನೆಂದು ತಿಳಿಯದೆ, "ಸಾಲವಾಯಿತಲ್ಲ" ಎಂಬ ಚಿಂತೆಯಿಂದ ಬರೆಯುದನ್ನೇ ಬಿಟ್ಟುಕೊಟ್ಟು, ಸದ್ಗುರುಪ್ರಭಾವವನ್ನು ಮರೆತುಬಿಟ್ಟು; ಪುಸ್ತಕ ಮಾರತೊಡಗಿದ್ದು, ಗಳಗನಾಥನಲ್ಲಿಯ ಉದಾತ್ತಗುಣದ ಕೊರತೆಯೇ ಸರಿ. ಚಿಂತೆಯಲ್ಲಿದ್ದವರ ಸದ್ಗುಣಗಳು ಮರೆಯಾಗುವದು ಸ್ವಭಾವಿಕವಷ್ಟೆ? ಇನ್ನು ಗಳಗನಾಥನು ತನ್ನ ಜೀವನ ಸರ್ವಸ್ವವನ್ನೇ ಗುರುಪ್ರಭಾವ ರೂಪವಾಗಿ ವಾಗಾಡಂಬರದಿಂದ ಔಪಚಾರಿಕವಾಗಿಯಾದರೂ ಭಾವಿಸುತ್ತಿರುವಾಗ, ಆತನ ಆ ಪ್ರಧಾನ ಕರ್ತವ್ಯದ ಭ್ರಷ್ಟತೆಯಲ್ಲಿ ಕೂಡ ಶ್ರೀ ಸದ್ಗುರುಪ್ರಭಾವದಿಂದ ಪಂಡಿತಮೈತ್ರಿ, ಮಹಾಪುರುಷರ ಸಹವಾಸ, ವಿವಿಧ ವಿಷಯಗಳ ಜ್ಞಾನ ಮುಂತಾದ ಲಾಭಗಳು ಆದದ್ದು ಸ್ವತಂತ್ರವಾದದ್ದು! ಆದರೂ ಬೆಂಗಳೂರ ಪಂಡಿತ ಜನರ ದರ್ಶನಮಾತ್ರದ ಮೈತ್ರಿಯು ನನ್ನನ್ನು ಮತ್ತೆ ಲೇಖಕನಾಗಿ ಮಾಡಿದ ನೆವದಿಂದ, ನನ್ನ ಗುಣಾಂಶವನ್ನು ಜಾಗ್ರತಗೊಳಿಸಿದ ಉಪಕೃತಿಯನ್ನು ನಾನು ಎಂದೂ ಮರೆಯಲಾರೆನು!

ನಾನು ಬೆಂಗಳೂರಿನಲ್ಲಿ ಪುಸ್ತಕ ಮಾರಿದ್ದೆಂದರೆ, ಎರಡೇ ದಿವಸ! ಉಳಿದ ದಿವಸಗಳಲ್ಲೆಲ್ಲ ನಾನು ಪುಸ್ತಕಗಳನ್ನು ಬರೆದಿರುವೆನು. ದುಡ್ಡಿನ ಭಕ್ತನು ನಾನು ಒತ್ತಾಯದಿಂದಾದರೂ ಕಾದಂಬರಿ ಬರೆಯುವದೇ ಬಹಳವಾದದ್ದರಿಂದ, ಈಗ ಸರಾಸರಿ ನಾಲ್ಕು ತಿಂಗಳಲ್ಲಿ ಕ್ರೌನ ಅಷ್ಟಪತ್ರದ ೭೫೨ ಪುಟಗಳ ಕಾದಂಬರಿಗಳನ್ನು ಬರೆದಿರುವೆನು. ಅವುಗಳಲ್ಲಿ ೨೯೬ ಪುಟಗಳನ್ನೊಳಗೊಂಡಿರುವ "ರಾಣೀ ಮೃಣಾಲಿನಿ" ಎಂಬ ಐತಿಹಾಸಿಕ ಕಾದಂಬರಿಯೂ, ೧೩೬ ಪುಟಗಳ "ಮಹಾರಾಣಾ ರಾಜಸಿಂಹ" ಎಂಬ ಐತಿಹಾಸಿಕ ಕಾದಂಬರಿಯೂ ವಿಶ್ವಕರ್ನಾಟಕದ ಶ್ರೀ ಲಕ್ಷ್ಮೀನರಸಿಂಹ ಪ್ರೆಸ್ಸಿನಲ್ಲಿ ಪ್ರಿಂಟಾಗಿದ್ದು, ಅವುಗಳ ಎರಡೆರಡು ಸಾವಿರ ಪ್ರತಿಗಳು ಮಾರಾಟಕ್ಕೆ ಸಿದ್ಧವಾಗಿರುವವು. ಇನ್ನೊಂದು ೩೨೦ ಪುಟದ "ಧಾರ್ಮಿಕ ತೇಜ" ಅಥವಾ "ವರ ಹಿತದಕ್ಷತಾ" ಎಂಬ ಐತಿಹಾಸಿಕ

ಕಾದಂಬರಿಯು ಬರೆದು ಸಿದ್ಧವಾಗಿದ್ದು, ಹಣದ ಅನನುಕೂಲತೆಯ ಮೂಲಕ ಮುದ್ರಿಸದೆ ಹಾಗೇ ಉಳಿದಿರುವದು! ಹೀಗೆ ಸಂಪೂರ್ಣ ಪುಸ್ತಕವು ಬರೆದು ಛಾಪಿಸದೆ ಉಳಿದದ್ದು, ನಾನು ಮಾಸಪತ್ರಿಕೆಯ ಉಪಾಧಿಗೆ ಒಳಗಾದಾಗಿನಿಂದ ಇಂದಿನ ವರೆಗೆ ಇದೇ ಮೊದಲು ಎಂದು ಹೇಳಬಹುದು. ಈ ಕಾದಂಬರಿಯ ವಿಷಯವಲ್ಲದೆ, ಪ್ರಬಂಧ ರೂಪದ ೧೪೪ ಪುಟದ ವಿಷಯವನ್ನು ಬರೆದಿರುವೆನು. ಅದರಲ್ಲಿ ಈ "ಸದ್ಗುರು ಪ್ರಭಾವವು" ಒಂದಾಗಿದ್ದು, ಇನ್ನೆರಡು ಸಣ್ಣ ಭಾಷಣಗಳಿರುವವು. ಅವು- "ಗೀತೆಯ ಶ್ರವಣಾಧಿಕಾರ" "ಶ್ರೀ ವಿವೇಕಾನಂದರು ವೈದಿಕರಿಗೆ ಯಾರು?" ಎಂಬವು. ಒಟ್ಟಿಗೆ, ಪ್ರಬಂಧದ ಪುಟಗಳೆಲ್ಲ ಪ್ರಿಂಟಾಗಿರುವವೆಂದು ಹೇಳಬಹುದು. ಹೀಗೆ ನಾನು ಬೆಂಗಳೂರ ಪುಣ್ಯದಿಂದ ಶ್ರೀ ನಾಲ್ವಡಿ ಕೃಷ್ಣರಾಜರ್ಷಿಯ ಪುಣ್ಯಭೂಮಿಯಲ್ಲಿ ಒಟ್ಟಿಗೆ ೮೯೬ ಪುಟದ ವಿಷಯವನ್ನು ನಾಲ್ಕು ತಿಂಗಳಲ್ಲಿ ಬರೆದ ಹಾಗಾಗಿರುವದು. ಇವುಗಳಲ್ಲಿ "ರಾಣೀ ಮೃಣಾಲಿನಿ" ಎಂಬ ಪ್ರಥಮ ಪುಸ್ತಕವನ್ನು ಶ್ರೀಮದ್ಯುವರಾಜ ಕಂಠೀರವ ನರಸರಾಜರವರ ಅಭ್ಯುದಯಕ್ಕಾಗಿಯೂ, "ಮಹಾರಾಣಾ ರಾಜಸಿಂಹ" ಎಂಬ ದ್ವಿತೀಯ ಪುಸ್ತಕವನ್ನು ಶ್ರೀ ರಾಜಕುಮಾರ ಜಯಚಾಮರಾಜರವರ ಅಭ್ಯುದಯಕ್ಕಾಗಿಯೂ ನನ್ನ ಕುಲಸ್ವಾಮಿ ಯಾದ ಶ್ರೀ ಲಕ್ಷ್ಮೀ ವೆಂಕಟೇಶನ ಚರಣಗಳಿಗೆ ಅರ್ಪಿಸಿದಾಗ, ಆ ಭಗವಂತನ ಚರಣ ಕಮಲಗಳು ಮಲ್ಲಿಕಾ-ಚಂಪಕಗಳೆಂಬ ಎರಡು ಪುಸ್ತಕರೂಪ ಕುಸುಮಗಳಿಂದ ಅಲಂಕೃತ ಗಳಾದವು. ಇನ್ನು ಮೇಲೆ ಈ "ಸದ್ಗುರು ಪ್ರಭಾವ" ರೂಪವಾದ ತೃತೀಯ ಪುಸ್ತಕವನ್ನು ಶ್ರೀಮನ್ನಾಲ್ವಡಿ ಕೃಷ್ಣಭೂವರರ ಅಭ್ಯುದಯಕ್ಕಾಗಿ ಶ್ರೀ ಲಕ್ಷ್ಮೀವೆಂಕಟೇಶನ ಚರಣಗಳಿಗೆ ಅರ್ಪಿಸುವಾಗ, ಆತನ ಚರಣಕಮಲಗಳು ತುಲಸೀಪತ್ರದಿಂದ ಸುಶೋಭಿತವಾಗ ಬೇಕಾಗಿರುವದು! ಹೀಗೆ ಬೆಂಗಳೂರ ದರ್ಶನಮಾತ್ರದ ಪಂಡಿತ ಮೈತ್ರಿಯ ಯೋಗದಿಂದ ಬೆಂಗಳೂರಲ್ಲಿ ಪ್ರಕಟವಾಗುವ ಪುಸ್ತಕಗಳನ್ನೆಲ್ಲ ಇನ್ನು ಮುಂದೆ ಮೈಸೂರ ಸಂಸ್ಥಾನದ ಪ್ರಭುಗಳಾದ ಶ್ರೀಮನ್ನಾಲ್ವಡಿ ಕೃಷ್ಣ ದೊರೆಗಳವರ ಅಭ್ಯುದಯಕ್ಕಾಗಿ ಶ್ರೀ ಲಕ್ಷ್ಮೀಪತಿಯ ಚರಣಕಮಲಗಳಿಗೆ ವಿವಿಧ ಪುಷ್ಪರೂಪಗಳಾಗಿ ಅರ್ಪಿಸಬೇಕೆಂದು ಮಾಡಿದ್ದೇನೆ. ನನ್ನ ಆ ಮನೋದಯವನ್ನು ಪೂರ್ಣಮಾಡಲು ಶ್ರೀ ಸದ್ಗುರುಪ್ರಭಾವವು ಸಮರ್ಥವಾಗಿರುವದು!

ಗಳಗನಾಥನ ಪುಸ್ತಕಗಳು

ಕರ್ನಾಕಟವು ಪ್ರಾಮುಖ್ಯವಾಗಿ ನನ್ನನ್ನು ಕಾದಂಬರಿಕಾರನೆಂದು ಗುರುತಿಸು ತ್ತಿರುವದು ನನಗೆ ಅಭಿಮಾನದ ಸಂಗತಿಯು. ಆದರೂ ನನ್ನ ಮನಸ್ಸಿನ ಒಲವು ನೈತಿಕ- ಧಾರ್ಮಿಕ ಸುಲಭತತ್ವದ ವ್ಯವಹಾರೋಪಯುಕ್ತ ವಿಷಯಗಳ ಕಡೆಗೆ ವಿಶೇಷವಾಗಿ ಇರುವದು. ಈ ಮಾತಿನ ಜುಳುಕನ್ನು "ಸತ್ವಸಾರ" "ಕುಮುದಿನಿ"ಯಂತಹ ನನ್ನ ಸ್ವತಂತ್ರ ಕಾದಂಬರಿಗಳಲ್ಲಿ ಅಲ್ಲಲ್ಲಿ ನೋಡಬಹುದಾಗಿದ್ದರೂ, "ಮಾಧವ ಕರುಣಾವಿಲಾಸ" ವೆಂಬ ನನ್ನ ವಿಸ್ತೃತವಾದ ಸ್ವತಂತ್ರ ಕಾದಂಬರಿಯ ಮಧ್ಯದಲ್ಲಿರುವ ಇಪ್ಪತ್ತೈದು ಪ್ರಕರಣಗಳು ಈ ಮಾತಿಗೆ ಸಾಕ್ಷಿಯನ್ನು ಕೊಡಬಹುದು. ಅಲ್ಲದೆ, ನನ್ನ ರೂಪಾಂತರದ, ಅಥವಾ ಭಾಷಾಂತರದ ಉಳಿದ ಕಾದಂಬರಿಗಳಲ್ಲಿಯೂ ಅಲ್ಲಲ್ಲಿ ಸುಲಭ ಬೋಧಪ್ರದ ವಿಷಯ ಗಳನ್ನು ಬುದ್ಧಿಪೂರ್ವಕ ನಾನು ಸೇರಿಸಿರುವೆನು. ನನ್ನ ಕಾದಂಬರಿಗಳಲ್ಲಿ ಬಹುತರ

ಒಬ್ಬ ಸತ್ಪುರಷನು ಇದ್ದೇ ಇರುವನು. ಆತನ ಯೋಗದಿಂದ ಸದ್ಬೋಧಗಳ ಲಾಭವು ವಾಚಕರಿಗೆ ಆಗುತ್ತಿರುತ್ತದೆ. ಕಾದಂಬರಿಗಳ ಹೊರತು ನಾನು ಬರೆದ ಉಪಯುಕ್ತ ಪ್ರಬಂಧಗಳೆಂದರೆ "ದಾಂಪತ್ಯ" "ಕುಟುಂಬ" "ನಿರ್ಯಾಣ ಮಹೋತ್ಸವ" "ಕನ್ಯಾಶಿಕ್ಷಕ" ಎಂಬ ಚಿಕ್ಕ ಪುಸ್ತಕಗಳು. ಇವಲ್ಲದೆ ಗೃಹಶಿಕ್ಷಣ, ನಮ್ಮ ದೇವರಪೂಜೆ, ದುಡ್ಡು, ಕಲಿತಾಂಡವ ಮೊದಲಾದ ಹತ್ತಿಪ್ಪತ್ತು ಸ್ಫುಟಲೇಖಗಳನ್ನು ಬರೆದಿರುವೆನು. ಮನಸ್ಸಿದ್ದರೂ ಹೆಚ್ಚಿನ ದೊಡ್ಡ ಪ್ರಬಂಧಗಳನ್ನು ಬರೆಯಲಿಕ್ಕೆ ನನಗೆ ಆಸ್ಪದವು ದೊರೆಯಲಿಲ್ಲ; ಯಾಕೆಂದರೆ ವೈದಿಕ ಪಾಠಶಾಲೆಯ ಪ್ರತಿ ತಿಂಗಳ ಸಾವಿರ ರೂಪಾಯಿಗಳ ವರೆಗಿನ ವೆಚ್ಚಕ್ಕೆ ಹಣವನ್ನು ಒದಗಿಸಿಕೊಡುವದಕ್ಕಾಗಿ ಕಾದಂಬರಿಗಳಿಗೆ ನನ್ನನ್ನು ಮಾರಿಕೊಳ್ಳಬೇಕಾಯಿತು! ನನ್ನ ಈ ಇಪ್ಪತ್ತು ವರ್ಷದ ಕಾದಂಬರೀ ಲೇಖನದಿಂದ ಕರ್ನಾಟಕದಲ್ಲಿ ವಾಚನಾಭಿರುಚಿಯು ಹೆಚ್ಚಿರುವದೆಂದು ಕನ್ನಡಿಗರ ಭಾವನೆಯಾದದ್ದನ್ನು ನಾನು ಕಿವಿಯಿಂದ ಕೇಳಿದ್ದೆನು: ಆದರೆ ಈಗ ಎರಡು ವರ್ಷಗಳಿಂದ ಊರೂರಿಗೆ ಹೋಗಿ ಪುಸ್ತಕ ಮಾರುತ್ತಿರುವಾಗ, ಹಳ್ಳಿಪಳ್ಳಿಗಳಲ್ಲಿಯೂ ನನ್ನ ಪುಸ್ತಕಗಳು ಇರುತ್ತಿರುವುದನ್ನೂ, ಸಾಧಾರಣವಾಗಿ ಅಕ್ಷರಸ್ತ ರಾದವರು ನನ್ನ ಒಂದಿಲ್ಲೊಂದು ಕಾದಂಬರಿಯನ್ನು ಓದಿರುವದನ್ನೂ ನೋಡಿ ನನಗೆ ಬಹಳ ಸಮಾಧಾನವಾಗುತ್ತಿರುವದು. ಈ ಮಾತಿನ ಅನುಭವವು ಬೆಂಗಳೂರಲ್ಲಿಯೂ ಪುಸ್ತಕ ಮಾರುತ್ತಿರುವ ನಮ್ಮವರಿಗೆ ಬಂದಿರುತ್ತದೆ. ಒಟ್ಟಿಗೆ ಕಾದಂಬರೀ ಲೇಖನದಿಂದ ಗಳಗನಾಥನು ಎಲ್ಲರ ಪರಿಚಯಸ್ತನಾಗಿರುವನು. ಹಿಂದೆಯೊಮ್ಮೆ ಹೇಳಿದಂತೆ, ನನ್ನ ಸದ್ಬೋಧ ಚಂದ್ರಿಕೆಯೆಂಬ ಮಾಸಪತ್ರಿಕೆಗೆ ಏಳು ಸಾವಿರ ಜನ ಚಂದಾದರರು ಕೂಡಿದ್ದಾಗ, ಕನ್ನಡಿಗರಿದ್ದ ಕರ್ನಾಟಕದ ಹೊರಗಿನ ಪ್ರಾಂತಗಳಲ್ಲಷ್ಟೇ ಅಲ್ಲ, ಹಿಂದುಸ್ಥಾನದ ಹೊರಗಿನ ಸ್ಥಳವಾದ ಏಡನದಲ್ಲಿಯೂ ಚಂದ್ರಿಕೆಯದೊಂದು ಪ್ರತಿಯು ಹೋಗುತ್ತಿದ್ದದ್ದು ಅಭಿಮಾನದ ಸಂಗತಿಯೇ ಸರಿ! ಅಲ್ಲದೆ ಈ ಮೈಸೂರ ಪ್ರಾಂತದಲ್ಲಿ ಮೆಟ್ರಿಕ್ಕಿಗೆ ಹಚ್ಚಿದ ನನ್ನ "ಧರ್ಮರಹಸ್ಯ" "ಕುಮುದಿನಿ" ಎಂಬೆರಡು ಕಾದಂಬರಿಗಳನ್ನು ವಿದ್ಯಾರ್ಥಿಗಳು ನಾಟಕ ರೂಪದಿಂದ ಪ್ರಯೋಗಮಾಡಿದ್ದು ಬಹು ಸಮಾಧಾನದ ಸಂಗತಿಯು !

ನನ್ನ ಕಾದಂಬರಿಗಳು ಇಷ್ಟು ಲೋಕಪ್ರಿಯವಾದದ್ದರ ಗುಟ್ಟನ್ನು ನಾನು ಈಗ ಹೇಳದೆ ಇರಲಾರೆನು. ಅಪ್ರಸಿದ್ಧ ನಾಯಕರಿದ್ದ ಕಾದಂಬರಿಗಳನ್ನು ಈವರೆಗೆ ನಾನು ಬರೆಯಲೇ ಇಲ್ಲ. ನನ್ನ ಕಾದಂಬರಿಗಳೊಳಗಿನ ನಾಯಕರೆಂದರೆ– "ವಿಜಯನಗರದ ರಾಜ್ಯಸ್ಥಾಪಕರಾದ ಮಾಧವಾಚಾರ್ಯರು, ಮಹಾರಾಷ್ಟ್ರ ರಾಜ್ಯಸ್ಥಾಪಕನಾದ ಶಿವಾಜಿ, ಅಕಬರನ ಕಾಲದಲ್ಲಿಯೂ ತನ್ನ ಸ್ವಾತಂತ್ರ್ಯವನ್ನು ಕಾಯ್ದುಕೊಂಡ ಮಹಾರಾಣಾ ಪ್ರತಾಪಸಿಂಹ, ಸುಪ್ರಸಿದ್ಧ ಪ್ರಾಚೀನ ಚಕ್ರವರ್ತಿಗಳಾದ ಅಶೋಕ–ಚಂದ್ರಗುಪ್ತರು, ಔರಂಗಜೇಬನಿಗೂ ತನ್ನ ಕೈತೋರಿಸಿದ ಸಾಧ್ವೀ ಚಂದ್ರಾವತೀ ರಾಣಿ, ಔರಂಗಜೇಬನ ಕಾಲದಲ್ಲಿಯೂ ಸ್ವಾತಂತ್ರ್ಯವನ್ನು ಸ್ಥಾಪಿಸಿದ ಛತ್ರಸಾಲ, ಕ್ಷತ್ರಿಯೋತ್ತಮನಾದ ರಾಣಾ ರಾಜಸಿಂಹ, ತಾಳೀಕೋಟೆಯ ಕಾಳಗದ ರಾಮರಾಜ ಮುಂತಾದ ಪ್ರಸಿದ್ಧ ಐತಿಹಾಸಿಕ ಪುರುಷರು! ಇವರ ಹೆಸರುಗಳನ್ನು ಕೇಳಿದ ಮಾತ್ರದಿಂದಲೇ ಜನರ ಮನಸ್ಸಿನಲ್ಲಿ ಆದರ–ಭಕ್ತಿಗಳು ಉತ್ಪನ್ನವಾಗುವವು. ಇಂತಹ ಪ್ರಸಿದ್ಧ ಐತಿಹಾಸಿಕ ಪುರುಷರಿಗೆ ಸಂಬಂಧಿಸಿದ ಪ್ರಸಂಗಗಳಿಂದಲೇ ವಾಚಕರಲ್ಲಿ ಉದಾತ್ತಗುಣಗಳ ಬೀಜಾರೋಪ–

ಪೋಷಣ–ಸಂವರ್ಧನಗಳು ಆಗುವವೆಂದು ನನ್ನ ನಂಬಿಗೆ. ಈ ನಂಬಿಗೆಯ ಮೂಲಕವಾಗಿಯೇ ಈವರೆಗೆ ನಾನು, ಅಪ್ರಸಿದ್ಧರಾದ ಕಲ್ಪಿತ ಸಾಮಾನ್ಯ ಜನರು ನಾಯಕರಾಗಿದ್ದ ಸಾಮಾಜಿಕ ಕಾದಂಬರಿಗಳನ್ನು ಒಂದೂ ಬರೆಯದಿರವದು. ಇನ್ನು ನಾನು ಬರೆದಿರುವ ಕಾಲ್ಪನಿಕ ಕಾದಂಬರಿಯೆಂದರೆ, ನಾನು ಮೊಟ್ಟ ಮೊದಲು ಬರೆದ "ಪ್ರಬುದ್ಧ ಪದ್ಮನಯನೆ"ಯೆಂಬುದೊಂದೇ ಒಂದು ಕಾದಂಬರಿಯು. ಅದರ ಐದು ಆವೃತ್ತಿಗಳು ಮುಗಿದು ಹೋಗಿ ಆರನೆಯ ಆವೃತ್ತಿಯನ್ನು ಈಗ ಹೊರಡಿಸಬೇಕಾಗಿದೆ! ಇರಲಿ, ಒಟ್ಟಿಗೆ ನನ್ನ ಕಾದಂಬರಿಗಳು ಇಷ್ಟು ಲೋಕಪ್ರಿಯವಾಗಲಿಕ್ಕೆ ಪ್ರಸಿದ್ಧ ಐತಿಹಾಸಿಕ ಪುರುಷರೇ ನಾಯಕರಾಗಿದ್ದ ಕಾದಂಬರಿಗಳನ್ನು ನಾನು ಬರೆದದ್ದು ಒಂದನೆಯ ಕಾರಣವು.

ಇನ್ನು ನನ್ನ ಕಾದಂಬರಿಗಳ ಲೋಕಪ್ರಿಯತೆಯ ಎರಡನೆಯ ಕಾರಣವೆಂದರೆ, ನಾನು ಭಾಷಾಪ್ರಭುತ್ವವನ್ನೂ, ವಿಷಯಯೋಜಕತೆಯ ಪ್ರಭುತ್ವವನ್ನೂ ಕಾಯ್ದುಕೊಂಡು ಕಾದಂಬರಿಗಳನ್ನು ಬರೆದದ್ದು. ಯಾವಪ್ರಾಂತದ ಭಾಷೆಯ ಅಧಿಕಾರಕ್ಕೂ ನಾನು ಒಳಗಾದವನಲ್ಲ. ನಾನು ನನ್ನ ಯೋಗ್ಯತೆಯಂತೆ ಬೇರೆಬೇರೆ ಪ್ರಾಂತಗಳ ಪ್ರಸಿದ್ಧ ಲೇಖಕರ ಕನ್ನಡ ಗ್ರಂಥಗಳನ್ನು ಓದುವಾಗ ನನ್ನಲ್ಲುಂಟಾದ ಭಾಷೆಗಳ ಪರಿಪಾಕದ ಸ್ವಾಭಾವಿಕವಾದ ಪ್ರಭುತ್ವದಿಂದ ನಾನು ಕಾದಂಬರಿಗಳನ್ನು ಬರೆದಿರುವೆನು. ನಾನು ಭಾಷೆಯ ಏಕೀಕರಣದ ಗೊಡವೆಗೂ ಹೋದವನಲ್ಲ; ಭಾಷೆಯ ಸಂಕರೀಕರಣದ ಗೊಡವೆಗೂ ಹೋದವನಲ್ಲ. ಭಿನ್ನ ಭಿನ್ನ ಭಾಷಾಸರಣಿಗಳ ಸುಪರಿಣಾಮದಿಂದ ನನ್ನ ಹುಟ್ಟು ಭಾಷೆಯಲ್ಲಾದ ಸಂಜೀವನೀಕರಣದ ಭಾಷೆಯಿಂದ ನಾನು ಕಾದಂಬರಿಗಳನ್ನು ಬರೆದಿರುತ್ತೇನೆ. ತಿರುಗಿ ಕೇಳಿದರೆ, ನನ್ನ ಕಾದಂಬರಿಗಳ ಲೋಕಪ್ರಿಯತೆಗೆ ನನ್ನ ಭಾಷಾಸರಣಿಯಾಗಲಿ, ನನ್ನ ಭಾಷಾ ಪಾಂಡಿತ್ಯ–ಪ್ರಾವೀಣ್ಯಗಳಾಗಲಿ ಕಾರಣಗಳಲ್ಲವೇ ಅಲ್ಲ. ಕೆಲವು ಪ್ರಾಂತಗಳಲ್ಲಿ ಕೆಲಮಟ್ಟಿಗೆ, ಕೆಲವು ಪ್ರಾಂತಗಳಲ್ಲಿ ಬಹುಮಟ್ಟಿಗೆ, ಕೆಲವು ಪ್ರಾಂತಗಳ ಸರ್ವಾಂಶದಿಂದ ನನ್ನ ಭಾಷೆಯು ಲೋಕಪ್ರಿಯವಾಗಿದ್ದರೂ, ನನ್ನ ಕಾದಂಬರಿಗಳ ಲೋಕಪ್ರಿಯತೆಗೆ ಆ ಭಾಷಾಮಾನ್ಯತೆಯು ಗೌಣಕಾರವೇ ಸರಿ. ನನ್ನ ಕಾದಂಬರಿಗಳ ಲೋಕಪ್ರಿಯತೆಯ ಮುಖ್ಯ ಕಾರಣವೆಂದರೆ, ಸಮಾಜವು ಮೆಚ್ಚುವಂತಹ ಕಾದಂಬರಿಗಳನ್ನೇ ಆರಿಸಿ, ಆ ಕಾದಂಬರಿಗಳಲ್ಲಿಯ ವಿಷಯಗಳ ಯೋಜನೆಯನ್ನು ವಾಚಕರ ಅನುಭವಕ್ಕೆ ನಡುವಂತೆ ಸಮರ್ಪಕವಾಗಿಯೂ, ಸುಂದರವಾಗಿಯೂ ಅಚ್ಚುಕಟ್ಟಿನಲ್ಲಿ ಮಾಡಿದ್ದು! ಲೇಖಕನು ಆರಿಸಿಕೊಂಡ ವಿಷಯಗಳ ಸೌಷ್ಟವದಲ್ಲಿ ಅವನ ಭಾಷೆಯ ಹುಳುಕುಗಳು ಮುಚ್ಚಿಹೋಗುವವೆಂಬುದನ್ನು ನಾನು ಅನುಭವದಿಂದ ಅರಿತಿರುವೆನು.

ಇನ್ನು ನನ್ನ ಕಾದಂಬರಿಗಳ ಲೋಕಪ್ರಿಯತೆಯ ಮೂರನೆಯ ಕಾರಣವೆಂದರೆ, ನಾನು ವಾಚಕರಲ್ಲಿ ಏಕೀಭವಿಸಿ ಕಾದಂಬರಿಗಳನ್ನು ಬರೆದದ್ದು. ನಾನು ವಾಚಕರಿಗಿಂತ ಶ್ರೇಷ್ಠನೆಂದಾಗಲಿ, ವಾಚಕರಿಗಿಂತ ಕನಿಷ್ಠನೆಂದಾಗಲಿ ತಿಳಿದು ಕಾದಂಬರಿಗಳನ್ನು ಬರೆದಿರುವದಿಲ್ಲ. ಬರೆಯುವಾಗ ನಾನು ವಾಚಕನಾಗಿರುವೆನು, ಓದುವಾಗ ವಾಚಕರು ಗಳಗನಾಥರಾಗುವರು. ಇದರಿಂದ ಗಳಗನಾಥನ ಮೆಚ್ಚಿಗೆಯೇ ವಾಚಕರ ಮೆಚ್ಚಿಕೆಯಾಗಿರುವದು. ಗಳಗನಾಥನು ಒಳ್ಳೆಯದೆಂದು ಬರೆದ ಕಾದಂಬರಿಯು ಗಳಗನಾಥನ ವಾಚಕರಿಗೆ

ಎಂದೂ ಕೆಟ್ಟದಾಗಿಯೇ ಇಲ್ಲ. ಇಷ್ಟು ಸ್ವಾವಲಂಬನದಿಂದ ನಾನು ಕಾದಂಬರಿಗಳನ್ನು ಬರೆದವನು. ನನ್ನ ಸ್ವಂತದ ಕಾದಂಬರಿಗಳಲ್ಲಂತು ನನ್ನ ಸ್ವಾವಲಂಬನವಿರುವದು ಸ್ವಾಭಾವಿಕವು; ಆದರೆ ಎಂತಹ ಪ್ರಸಿದ್ಧ ಕಾದಂಬರಿಕಾರರ ಕಾದಂಬರಿಗಳಿದ್ದರೂ, ಅವು ನನ್ನ ಹೃದಯವನ್ನು ಅಲ್ಲಾಡಿಸದಿದ್ದರೆ ಅಂತಹವನ್ನು ನನ್ನ ಕನ್ನಡಿಗರ ಕಣ್ಣು ಮುಂದೆ ನಾನು ಇಟ್ಟಿರುವದೇ ಇಲ್ಲ! ಮೊದಲು ನನ್ನ ಸಮಾಧಾನ, ಆಮೇಲೆ ನನ್ನ ವಾಚಕರ ಸಮಾಧಾನ! ನನ್ನ ಕಣ್ಣುಗಳಲ್ಲಿ ನೀರುಗಳನ್ನು ಉದುರಿಸಿದ ಕಾದಂಬರಿಗಳು ನಮ್ಮ ವಾಚಕರ ಕಣ್ಣುಗಳಲ್ಲಿ ನೀರು ಉದುರಿಸದೆ ಬಿಟ್ಟಿರುವದೇ ಇಲ್ಲ. ಇದೇ ಮಾತು ನನ್ನ ಹಾಗು ನನ್ನ ವಾಚಕರ ಎಲ್ಲ ವಿಚಾರ-ವಿಕಾರಗಳಿಗೂ ಹತ್ತುವದು! ನನ್ನ ಆಯುಷ್ಯದಲ್ಲಿ ನಾನು ಕೈ. ವಾ. ಆಪಟೆಯವರ "ಕಮಲಕುಮಾರಿ" ಎಂಬ ಒಂದು ಕಾದಂಬರಿಯ ಹೊರತು ಯಾವ ಕಾದಂಬರಿಯನ್ನೂ ಅಕ್ಷರಶಃ ಭಾಷಾಂತರ ಮಾಡಿರುವದಿಲ್ಲ. ಬೇಕಾದವರ ಕಾದಂಬರಿಯಿರಲಿ, ನಾನು ಹಾಗು ನನ್ನ ಕನ್ನಡಿಗರು, ಎಂಬ ಜೋಡನ್ನು ಮರೆಯದೆ ನಾನು ಕಾದಂಬರಿಯನ್ನು ಬೇಕಾದಲ್ಲಿ ಹಿಗ್ಗಿಸಿರುವೆನು. ಬೇಡಾದಲ್ಲಿ ಕುಗ್ಗಿಸಿರುವೆನು, ಬೇಕಾದಲ್ಲಿ ಹೊಸ ವಿಷಯವನ್ನು ಸೇರಿಸಿರುವೆನು, ಬೇಡಾದಲ್ಲಿ ಇದ್ದ ವಿಷಯವನ್ನು ತೆಗೆದುಹಾಕಿರುವೆನು. ಆ ಕಾದಂಬರಿಯೇ ನನ್ನ ಕೈಗೊಂಬೆಯಲ್ಲದೆ, ನಾನು ಕಾದಂಬರಿಯ ಕೈಗೊಂಬೆಯಾಗಿರುವದಿಲ್ಲ. ಇದರಿಂದಲೇ ನಾನು ಬರೆದಿರುವ ಕಾದಂಬರಿಗಳ ವಿಷಯವಾಗಿ ನನ್ನ ಮಮತ್ವವೂ, ನಮ್ಮ ಗಳಗನಾಥನು ಬರೆದ ಕಾದಂಬರಿಗಳೆಂಬ ಕಾರಣದಿಂದ ನಮ್ಮ ವಾಚಕ ಮಮತ್ವವೂ ಉಂಟಾಗಿ, ನಾನೂ ನನ್ನ ವಾಚಕರೂ ನನ್ನ ಕಾದಂಬರಿಗಳ ವಿಷಯದ ಮಮಕಾರದ ಸಂಬಂಧದಿಂದ ಏಕೀಭವಿಸಿ ಹೋಗಿರುವೆವು! ಕಾದಂಬರಿ ಬರೆಯುವಾಗ ವಾಚಕರ ಸ್ವರೂಪದ ಗಳಗನಾಥನೂ, ಕಾದಂಬರಿ ಓದುವಾಗ ಗಳಗನಾಥನ ಸ್ವರೂಪದ ವಾಚಕರೂ ಆಗಿ, ನಾವಿಬ್ಬರೂ ಕಾದಂಬರಿಗಳ ಸಾಮ್ರಾಜದಲ್ಲಿ ನಲಿದಾಡಿರುವೆವು! ಗಳಗನಾಥನ ಲೇಖನವೆಂದರೆ ವಾಚಕರು ಓದದೆ ಬಿಡಲಿಕ್ಕಿಲ್ಲ. ಕನ್ನಡಿಗರ ವಾಚನಾಭಿರುಚಿಯೆಂದರೆ ಗಳಗನಾಥನು ಬರೆಯದೆ ಬಿಡಲಿಕ್ಕಿಲ್ಲ. ಹೀಗೆ ನಾನೂ, ನನ್ನ ವಾಚಕರೂ ಒಂದುಗೂಡಿದ್ದರಿಂದ ಪರಸ್ಪರರ ವಿಷಯದ ಪ್ರೇಮಾದರಗಳು ಪರಸ್ಪರರಲ್ಲಿ ಉತ್ಪನ್ನವಾಗಿರುವವು. ಈ ಸ್ಥಿತಿಯೇ ಲೇಖನ ಕಲೆಯ ವೈಭವವು; ಈ ಸ್ಥಿತಿಯೇ ಮನೋಭೂಮಿಯನ್ನು ಬಿತ್ತಿ ಬೆಳೆಯುವ ಮರ್ಮವು! ಇಂತಹ ವೈಭವ-ಮರ್ಮಗಳು ಕೈಸೇರಲಿಕ್ಕೆ ಪಾಂಡಿತ್ಯಕ್ಕಿಂತ ತಪಸ್ಸೂ, ತಪಸ್ಸಿಗಿಂತ ದೈವೀಪ್ರಸನ್ನತೆಯ ಕಾರಣವಾದ ಸದ್ಗುರುಪ್ರಭಾವದಲ್ಲುಂಟಾದ ತನ್ನಲ್ಲಿಯ ತನ್ನ ಮರವೂ ಕಾರಣವೆಂದು ನನ್ನ ಭಾವನೆಯಂತು ಆಗಿರುವದು! "ಇದನ್ನು ನಾನು ಬರೆದಿಲ್ಲ, ದೇವರು ಬರೆಸಿರುವನು" ಎಂಬ ಕನಕದಾಸಾದಿ ಭಕ್ತಾಗ್ರೇಸರರ ಮಾತು, ಇಲ್ಲಿ ನನಗೆ ನೆನಪಾಗುವದು!

ಹೀಗೆ ನಾನು ಭಾಷೆಯ ಸಂಜೀವನವನ್ನು ಮಾಡಿಕೊಂಡು, ಭಾಷೆಯ ಹಾಗು ವಿಷಯದ ಪ್ರಭುವಾಗಿ, ಸ್ವಾವಲಂಬನದಿಂದ ಕನ್ನಡಿಗರಲ್ಲಿ ಶ್ರದ್ಧೆಯನ್ನಿಟ್ಟು ಪ್ರಸಿದ್ಧ ಪುರುಷರ ಕಾದಂಬರಿಗಳನ್ನು ಬರೆದಿರುವೆನು. ಇದರಿಂದ ನನಗೂ ನನ್ನ ಪ್ರಿಯವಾಚಕವರ್ಗಕ್ಕೂ ಆರಾಧ್ಯ-ಆರಾಧಕ ಭಾವವುಂಟಾದಂತಾಗಿರುತ್ತದೆ. ನಮ್ಮ ಈ ಪವಿತ್ರ ಭಾವಗಳಿಗೆ

ಶ್ರೀರಾಮ-ಶಬರಿಯರ ಭಾವವನ್ನು ಹೋಲಿಸಬಹುದು! ನಾನು ಶಬರಿಯು, ವಾಚಕರು ಶ್ರೀರಾಮರು; ನನ್ನ ಕಣ್ಣಿಗೆ ಬಿದ್ದ, ಅಥವಾ ನನ್ನ ಊರ್ಮಿಯಲ್ಲಿ ಸ್ಫುರಿಸಿದ ಕಾದಂಬರಿಗಳೇ ಶ್ರೀರಾಮರೂಪ ವಾಚಕವರ್ಗವೆಂಬ ನನ್ನ ಅಧಿದೈವತಕ್ಕೆ ಭಕ್ತಿಯಿಂದ ಅರ್ಪಿಸತಕ್ಕ ನನ್ನ ಬೋರೆಯ ಹಣ್ಣುಗಳು. ಪುಣ್ಯವಂತ ಶಬರಿಯು, ಇವು ಸೀಯೋ ಹುಳಿಯೋ ಎಂದು ನೋಡುವಾಗ ಸೇವ್ಯಭಕ್ತಿಯ ಅತಿರೇಕದಲ್ಲಿ ಇವು ಎಂಜಲಾದಾವೆಂಬ ಎಚ್ಚರಿಲ್ಲದೆ ಹಣ್ಣುಗಳನ್ನು ಕಡಿಕಡಿದು ನೋಡಿ ಹುಳಿಯಾದವುನ್ನು ಚಲ್ಲಿ ಕೊಟ್ಟು ಸೀಯಾದವನ್ನು ಶ್ರೀರಾಮರಿಗಾಗಿ ಇಟ್ಟುಕೊಂಡಳು. ಅಂತಹ ಕಡಿದು ನೋಡಿದ ಹಣ್ಣುಗಳನ್ನು ಭಕ್ತವಾತ್ಸಲ್ಯದ ಭರದಲ್ಲಿ ಎಂಜಲವೆಂಬ ಮಾತು ಮರೆತುಹೋಗಲು, ಶ್ರೀರಾಮರು ಅವನ್ನು ಭಕ್ಷಿಸಿದರು! ಆ ಸೇವ್ಯ-ಸೇವಕರಲ್ಲಿ ಪರಕೀಯ ಭಾವವಿದ್ದರಷ್ಟೇ ಎಂಜಲವಾಗುವದು! ಹೊಟ್ಟೆಯ ಹಸುಮಕ್ಕಳು ಉಂಡು ಉಳಿದದ್ದು ತಾಯಿಗೆಲ್ಲಿಯಾದರೂ ಎಂಜಲವೆ? ಭಕ್ತರಿಗೂ ದೇವರಿಗೂ ಇದೇ ಮಾತು! ಇನ್ನು ಶಬರಿಯ ಭಕ್ತಿಯು ನನ್ನಲ್ಲಿಲ್ಲವೆಂದು ನಾನು ಒಪ್ಪಿಕೊಳ್ಳುವೆನು. ಆದರೆ ಶ್ರೀರಾಮರ ಸೇವಕ ವಾತ್ಸಲ್ಯಕ್ಕಿಂತ ಹೆಚ್ಚಿನ ವಾತ್ಸಲ್ಯವು ನನ್ನ ವಿಷಯವಾಗಿ ನಮ್ಮ ಕನ್ನಡಿಗರಲ್ಲಿ ನಿಶ್ಚಯವಾಗಿ ಇರುತ್ತದೆ. ಯಾಕಂದರೆ ಬೇಗನೆ ಕಾದಂಬರಿ ಬರೆಯಬೇಕೆಂಬ ಅವಸರದಲ್ಲಿ ಒಂದೆರಡು ಸಾರೆ ಅಪಕ್ವರಸದ ಕಾದಂಬರಿಗಳನ್ನೇ ನಾನು ಕೊಡಲು, ಅವನ್ನೇ ಸವಿಯಾದ ಕಾದಂಬರಿಗಳಂತೆ ನಮ್ಮ ವಾಚಕರು ಪ್ರೀತಿಯಿಂದ ಓದಿದರು!

ಮಹನೀಯರೇ, ಕಾದಂಬರಿಗಳೆಂದರೆ ಕಡಿಮೆ ಯೋಗ್ಯತೆಯ ಗ್ರಂಥಗಳು, ಕಾದಂಬರಿಕಾರನೆಂದರೆ ಕಡಿಮೆ ಯೋಗ್ಯತೆಯ ಗ್ರಂಥಕಾರನು ಎಂಬ ತಿಳುವಳಿಕೆಯಿಂದ ನಾನು ಕಾದಂಬರಿಗಳನ್ನು ಬರೆದಿರುವದಿಲ್ಲ. ತಾತ್ವಿಕ ವಿಷಯಗಳೆಂಬ ಸಣ್ಣ ಕಹಿ ಗುಳಿಗೆಗಳನ್ನು ನವರಸಗಳ ಕಷಾಯದಲ್ಲಿ ಕೂಡಿಸಿ ಸರ್ವಗ್ರಾಹ್ಯವಾಗುವಂತೆ ಪೌಷ್ಟಿಕ ರಸಾಯನವಾಗ ಮಾಡುವ ಘನವಾದ ಯೋಗ್ಯತೆಯು ಕಾದಂಬರಿಕಾರರಲ್ಲಲ್ಲದೆ ಮತ್ತೊಬ್ಬ ಲೇಖಕರಲ್ಲಿ ಇರಲಾರದೆಂಬ ಅಹಂಕಾರದಿಂದ ನಾನು ಕಾದಂಬರಿಗಳನ್ನು ಬರೆದಿದ್ದೇನೆ! ಆದ್ದರಿಂದ ನನ್ನ ವಾಚಕವರ್ಗಕ್ಕೆ ಕಾದಂಬರಿಯೊಳಗಿನ ತತ್ವವೂ ಕಾದಂಬರಿಯಾಗಿಯೇ ಪರಿಣಮಿಸಿರುವದು. ಹೀಗೆ ಪರಿಣಾಮವಾಗಬೇಕೆಂಬುದನ್ನು ಲಕ್ಷಿಸದೆ ಬರೆದ ಕಾದಂಬರಿ ಕಾರನು ಗೌರವಶಾಲಿಯಾದ ರಸಿಕ ಕಾದಂಬರಿಕಾರನಲ್ಲವೇ ಅಲ್ಲ. ಕೆಲವು ಕಾದಂಬರಿ ಕಾರರು ಕೇವಲ ರಸಿಕರಿರಬಹುದು, ಕೆಲವು ಕಾದಂಬರಿಕಾರರು ಕೇವಲ ಗೌರವಶಾಲಿ ಗಳಿರಬಹುದು. ಕೇವಲ ರಸಿಕರಾದ ಕಾದಂಬರಿಕಾರರು ನನ್ನ "ಪ್ರಬುದ್ಧ ಪದ್ಮನಯನೆ" ಯಂತಹ ರಸಪ್ರಧಾನವಾದ ಸಾಮಾನ್ಯ ಜನಸೇವಿತ ಕಾದಂಬರಿಗಳನ್ನು ಬರೆಯಬಹುದು; ಕೇವಲ ಗೌರವಶಾಲಿಗಳಾದ ಕಾದಂಬರಿಕಾರರು ನನ್ನ "ಮಾಧವ ಕರುಣಾವಿಲಾಸ" ದಂತಹ ತತ್ವಪ್ರಧಾನವಾದ ತಾತ್ವಿಕ ಜನಸೇವಿತ ಕಾದಂಬರಿಗಳನ್ನು ಬರೆಯಬಹುದು. ಆದರೆ ಗೌರವಶಾಲಿಯಾದ ರಸಿಕ ಕಾದಂಬರಿಕಾರನಾಗಿಯೇ ಕಾದಂಬರಿಗಳನ್ನು ಬರೆಯುವದು ಶ್ರೇಯಸ್ಕರವೆಂದು ಭಾವಿಸಿ, ಸಾಧಿಸಿದ ಮಟ್ಟಿಗೆ ನಾನು ಕಾದಂಬರಿಗಳನ್ನು ಬರೆದಿರುತ್ತೇನೆ.

ನಾನು ಬರೆದಿರುವ ಕಾದಂಬರಿಗಳಲ್ಲಿ ಕನ್ನಡಿಗರವು, ಮರಾಟರವು, ರಜಪೂತರವು ಎಂಬ ಮೂರು ಬಗೆಯ ಕಾದಂಬರಿಗಳಿರುವವು. ಕನ್ನಡಿಗರವು ನಾಲ್ಕು, ಮರಾಟರವು ಏಳು, ರಜಪೂತರವು ಒಂಭತ್ತು, ಕಲ್ಪಿತವಾದದ್ದು ಒಂದು-ಹೀಗೆ ಒಟ್ಟು ಇಪ್ಪತ್ತೊಂದು ಕಾದಂಬರಿಗಳನ್ನು ಕೂಡಿ ಕ್ರೌನ ಅಷ್ಟ ಪತ್ರದ ೫೦೦೦ ಪುಟದ ಕಾದಂಬರೀ ವಿಷಯವನ್ನು ನಾನು ಬರೆದಿದ್ದೇನೆ. ಇವುಗಳಲ್ಲಿ ಯಾವ ಕಾದಂಬರಿಗಳು ಶ್ರೇಷ್ಠವೆಂದು ಯಾರಾದರೂ ಕನ್ನಡಿಗರು ಕೇಳಿದರೆ, ನಮ್ಮವರವೆಂಬ ದೃಷ್ಟಿಯಿಂದ ಕನ್ನಡಿಗರ ಕಾದಂಬರಿಗಳು, ನಮ್ಮ ನೆರೆಯವರವೆಂಬ ದೃಷ್ಟಿಯಿಂದ ಮರಾಟರ ಕಾದಂಬರಿಗಳು, ಕ್ಷಾತ್ರತೇಜದ ಉಗಮಸ್ಥಾನದವರೆಂಬ ದೃಷ್ಟಿಯಿಂದ ರಜಪೂತರ ಕಾದಂಬರಿಗಳು ಶ್ರೇಷ್ಠವೆಂದು ಮಾತ್ರ ನಾನು ಹೇಳಬಹುದಲ್ಲದೆ, ಅವರವರ ಅಭಿರುಚಿಯಂತೆ ಅವರವರ ಮನೋವೃತ್ತಿಗಳನ್ನು ತನ್ಮಯ, ತದ್ರೂಪ, ತದಾಕಾರವಾಗಿ ಮಾಡುವಲ್ಲಿ ಎಲ್ಲ ಕಾದಂಬರಿಗಳೂ ಬಹುತರ ಸಮಾನ ಯೋಗ್ಯತೆಯವೇ ಎಂದು ನಾನು ಹೇಳದೆ ಇರಲಾರೆನು. ಬಾಳೆಯಹಣ್ಣು, ಮಾವಿನಹಣ್ಣು, ದ್ರಾಕ್ಷಿಯಹಣ್ಣು, ಕಿತ್ತಳೆಹಣ್ಣು, ಪೇರಲಹಣ್ಣು ಮೊದಲಾದ ರಸಪುಷ್ಟವಾದ ಹಣ್ಣುಗಳಲ್ಲಿ ಯಾವದು ಶ್ರೇಷ್ಠವೆಂದು ಹೇಗೆ ಹೇಳಬೇಕು? ಅವವುಗಳ ರುಚಿ ಅವವಕ್ಕೆ! ಅವರವರ ಅಭಿರುಚಿಯಂತೆ ಆಯಾ ಹಣ್ಣುಗಳು ಅವರವರಿಗೆ ಶ್ರೇಷ್ಠವಾದವೆಂತಲೇ ಹೇಳಬೇಕಾಗುವದು. ಒಟ್ಟಿಗೆ, ಸರ್ವ ಸಮೀಚೀನ ಫಲಗಳು ಸರ್ವರಿಗೂ ಸೇವ್ಯವಾಗಿರುವಂತೆ, ನನ್ನ ಸರ್ವ ಕಾದಂಬರಿಗಳು ಎಲ್ಲರೂ ಓದತಕ್ಕವಾಗಿರುವವೆಂಬುದು ಅನುಭವದ ಸಂಗತಿಯು! ನಾನೊಂದು ಹೊಸ ಕಾದಂಬರಿಯನ್ನು ಪ್ರಕಟಿಸಲು, ಅದನ್ನು ಓದಿದ ಕೆಲವು ರಸಿಕ ವಾಚಕರು ನನ್ನನ್ನು ಕಂಡಾಗ-"ಈಗ ನೀವು ಪ್ರಕಟಿಸಿದ ಕಾದಂಬರಿಯು ಹಿಂದಿನ ಎಲ್ಲ ಕಾದಂಬರಿಗಳಿಗಿಂತ ಸವಿ" ಎಂದು ಹೇಳುತ್ತಿರುವದನ್ನು ಕೇಳಿ ನಾನು ಕೌತುಕಪಟ್ಟಿರುವೆನು. ಇತ್ತಿತ್ತಕಡೆಯ ಒಂದೆರಡು ಕಾದಂಬರಿಗಳ ವಿಷಯವಾಗಿ ಕೆಲ ಕೆಲವರು ಅಲ್ಪಸ್ವಲ್ಪ ಮೂಗು ಮುರಿದುದನ್ನು ನಾನು ಬಲ್ಲೆನು. ಅದರಿಂದ ನನ್ನ ಹಾಗು ನನ್ನ ವಾಚಕರ ಹೃದಯೈಕ್ಯವು ಚನ್ನಾಗಿ ತೋರುತ್ತಿರುವದು. ಮಹನೀಯರೇ, ದುಡ್ಡಿಗಾಗಿ ಭರದಿಂದ ಕಾದಂಬರಿಗಳನ್ನು ಬರೆಯತೊಡಗಿದಾಗ ಎಲ್ಲ ಉತ್ತಮ ಕಾದಂಬರಿಗಳನ್ನೇ ಬರೆದೇನೆಂಬ ಪ್ರತಿಜ್ಞೆಯು ನಡೆಯಲಿಕ್ಕಿಲ್ಲವೆಂಬ ಮಾತನ್ನು ನಾನು ಬರೆಯುವ ಕಾರಣವಿಲ್ಲ. ನನ್ನ ಆ ಮೂಗು ಮುರಿಸಿಕೊಂಡ ಕಾದಂಬರಿಗಳು, ನನ್ನ "ಈಶ್ವರೀ ಸೂತ್ರ" "ಕಮಲಕುಮಾರಿ" "ಕುಮುದಿನಿ" "ಧರ್ಮರಹಸ್ಯ" ಗಳಂಥ ಹದಿನೇಳು ಹದಿನೆಂಟು ಸುರಸ ಕಾದಂಬರಿಗಳ ಸ್ವಾದವನ್ನು ಒಂದರ ಹಿಂದೊಂದರಂತೆ ಸವಿದ ನಾಲಿಗೆಯ ರಸಮತ್ತತೆಯ ದೃಷ್ಟಿಯಿಂದ ಮೂಗು ಮುರಿಸಿಕೊಂಡಿರುವವೆಂಬದನ್ನು ಮಾತ್ರ ಮರೆಯಬಾರದು! ಒಟ್ಟಿಗೆ, ಹಡೆದವರಿಗೆ ಹಂದಿಯೂ ಮುದ್ದಾಗಿ ತೋರುತ್ತಿರಲು, ಬಹುಜನರ ಪ್ರೇಮಕ್ಕೆ ಪಾತ್ರವಾಗಿರುವ ಕಾದಂಬರಿಗಳನ್ನು, ಜನರು ಮತ್ತೂ ಅವನ್ನು

---

೧. ಇದೇ 'ಸದ್ಗುರು ಪ್ರಭಾವ' ಕೃತಿಯ ಕೊನೆಯಲ್ಲಿ ಕನ್ನಡಿಗರಿಗೇ ಸಂಬಂಧಿಸಿದವು-೪, ಮರಾಠರಿಗೆ ಸಂಬಂಧಿಸಿದವು-೮, ರಜಪೂತರಿಗೆ ಸಂಬಂಧಿಸಿದವು-೫, ಸಂಕೀರ್ಣ-೫. ಹೀಗೆ ೨೨ ಕಾದಂಬರಿಗಳನ್ನು ಗಳಗನಾಥರೇ ದಾಖಲಿಸಿದ್ದಾರೆ. ನಾವು ಈ ದಾಖಲೆಯನ್ನು ಅನುಸರಿಸಿದ್ದೇವೆ.

ಸೇವಿಸಿ ಕಾದಂಬರೀ ನಾಯಕರ ಉದಾತ್ತವೃತ್ತಿಯ ಲಾಭ ಮಾಡಿಕೊಳ್ಳಲೆಂಬ ಉದ್ದೇಶದಿಂದ ಇಷ್ಟು ಸವಿಮಾಡಿ ವರ್ಣಿಸಿದ್ದಕ್ಕಾಗಿ ನಾನು ಮಹನೀಯರಲ್ಲಿ ಕ್ಷಮೆಯನ್ನು ಯಾಚಿಸುವೆನು!

ಸಾಧಾರಣವಾಗಿ ಭರತಭೂಮಿಯೇ ಈಗ ಶ್ವವೃತ್ತಿಯಲ್ಲಿರುತ್ತಿರಲು, ತದಂತರ್ಗತ ಕರ್ನಾಟಕವು ಆ ವೃತ್ತಿಗೆ ಹೊರಗಾಗಿರುವದೆಂದು ಹೇಗೆ ಹೇಳಬೇಕು? ಯಾವುದೊಂದು ರಾಷ್ಟ್ರಕ್ಕಾಗಲಿ, ಯಾವುದೊಂದು ಜನಾಂಗಕ್ಕಾಗಲಿ ಬ್ರಾಹ್ಮವೃತ್ತಿ, ಕ್ಷಾತ್ರವೃತ್ತಿ, ವೈಶ್ಯವೃತ್ತಿ, ಶೂದ್ರವೃತ್ತಿ, ಶ್ವವೃತ್ತಿ ಎಂಬ ನಾಲ್ಕು ವೃತ್ತಿಗಳು ಚಕ್ರನೇಮಿಕ್ರಮದಿಂದ ಅಂಟಿಕೊಳ್ಳತಕ್ಕವೆ! ಯಾಕಂದರೆ ಈ ವೃತ್ತಿಪರಿವರ್ತನವು ಸೃಷ್ಟಿಯ ಸಾಂಸಿದ್ಧಿಕ ಧರ್ಮವಾಗಿರುವದು. ಶ್ವವೃತ್ತಿಯ ಮುಂದಿನ ಮೆಟ್ಟಲವೇ ನಾಶಕಾರಕವಾದ ಗ್ಲಾನಿಯು! ಅಂತಹ ಗ್ಲಾನಿಯ ಪ್ರಸಂಗ ಒದಗಿದಾಗೆಲ್ಲ ಕಲ್ಪಾಂತದ ವರೆಗೆ ಭಗವದವತಾರವಾಗಿ ಗ್ಲಾನಿಯು ದೂರವಾಗುತ್ತಿರುವದೆಂದು ನಮ್ಮ ವೈದಿಕ ಮತದ ಸಿದ್ಧಾಂತವು! ಒಟ್ಟಿಗೆ, ಗ್ಲಾನಿಯು ಕಾಲದಲ್ಲಿ ಪ್ರಬಲ ವಿಭೂತಿಯ ಸಹವಾಸದಿಂದ ಯಾವದೊಂದು ರಾಷ್ಟ್ರವಾಗಲಿ, ಜನಾಂಗವಾಗಲಿ, ವ್ಯಕ್ತಿಯಾಗಲಿ ತನ್ನ ಗ್ಲಾನಿಯನ್ನು ಕಳೆದುಕೊಂಡು ತನ್ನ ಅಧಿಕಾರದಂತೆ ಉಚ್ಚವೃತ್ತಿಯನ್ನು ತಳೆದು ವ್ಯವಸ್ಥಿತವಾಗುತ್ತಿರುವದು. ಬ್ರಾಹ್ಮ, ಕ್ಷಾತ್ರ, ವೈಶ್ಯ, ಶೂದ್ರ ಎಂಬೀ ನಾಲ್ಕು ವೃತ್ತಿಗಳು ವ್ಯವಸ್ಥಿತವಾದವುಗಳೆಂತಲೂ, ಅವುಗಳ ಬೆರಿಕೆಯು ತಕ್ಕ ಪ್ರಮಾಣದಿಂದ ರಾಷ್ಟ್ರದಲ್ಲಿ ಆಗಿರುವಾಗ ಅವೆಲ್ಲ ವೃತ್ತಿಗಳು ರಾಷ್ಟ್ರಪೋಷಕಗಳೆಂತಲೂ, ಹಾಗಿರದಾಗ ರಾಷ್ಟ್ರಘಾತಕಗಳೆಂತಲೂ ಆರ್ಯರ ಸಿದ್ಧಾಂತವಿರುವದರಿಂದ, ಆ ವೃತ್ತಿಗಳನ್ನು ಸಮಾನ ಯೋಗ್ಯತೆಯ ರಾಷ್ಟ್ರಘಟಕಗಳೆಂದು ತಿಳಿದು ಅವನ್ನು ಆ ನಮ್ಮ ಪೂಜ್ಯ ಪೂರ್ವಜರು ನಿಷ್ಕರ್ಷವಾಗಿ ಸ್ಥಿರಪಡಿಸಿರುವರು. ಅಂದಬಳಿಕ ಕರ್ನಾಟಕದಲ್ಲಿ ಈಗ ವಿಪುಲವಾಗಿರುವ ಶ್ವವೃತ್ತಿಯ ನಾಶವಾಗಿ ಯಾವದೊಂದು ವ್ಯವಸ್ಥಿತ ವೃತ್ತಿಯು ಬರಬೇಕಾದರೆ, ಅದರಲ್ಲಿಯೂ ಈಗ ಬೇಕಾಗಿರುವ ಬ್ರಹ್ಮವೃತ್ತಿಯ ಸಂಸ್ಕರಣದ ಕ್ಷಾತ್ರವೃತ್ತಿಯು ಬರಬೇಕಾದರೆ ಶ್ರೀ ಸಮರ್ಥ ರಾಮದಾಸರ ಶಿಷ್ಯನಾದ ಶಿವ ಛತ್ರಪತಿಯ, ಶ್ರೀ ವಿದ್ಯಾರಣ್ಯರ ಶಿಷ್ಯನಾದ ಹುಕ್ಕ ದೊರೆಯ, ಶ್ರೀ ವೈಕುಂಠಯೋಗಿ–ಶ್ರೀ ಪ್ರಾಣನಾಥ ಪ್ರಭುಗಳಂತಹ ಸತ್ಪುರುಷರ ಶಿಷ್ಯರಾದ ಹಲವು ರಜಪೂತ ವೀರರ ಕಾದಂಬರಿಗಳನ್ನು ಕನ್ನಡಿಗರು ಓದಲೇಬೇಕಾಗವದು. ಹಾಗೆ ಮಾಡದೆ ಶ್ವವೃತ್ತಿಯಲ್ಲಿ ಅಗ್ರೇಸರರಾದವರ, ಅಥವಾ ಉನ್ನತ ವಿಷಯಸುಖ ಮಗ್ನರಾದವರ ನಾಯಕತ್ವದ ಕಾದಂಬರಿಗಳನ್ನು ಓದಿದರೆ, ರಾಷ್ಟ್ರದ ವ್ಯಕ್ತಿಗಳಲ್ಲಿ ವ್ಯವಸ್ಥಿತ ವೃತ್ತಿಗಳ ಪೋಷಣವು ಸರ್ವಥಾ ಆಗಲಾರದು, ಯಾಕಂದರೆ, ಉಂಡದ್ದೇ ತೇಗಿನಲ್ಲಿ ಬರುವದು ವಾಡಿಕೆಯ ನಿಯಮವಾಗಿರುವದು. ಆದ್ದರಿಂದ ತಮ್ಮ ರಾಷ್ಟ್ರದ, ಅಥವಾ ಜನಾಂಗದ, ಇಲ್ಲವೆ ವ್ಯಕ್ತಿಯ ಕಲ್ಯಾಣವಾಗಬೇಕೆಂದು ಬಯಸುವವರು, ಆಬಾಲ ವೃದ್ಧರಿಗೆ, ವಿಶೇಷವಾಗಿ ವಿದ್ಯಾರ್ಥಿ ದಶೆಯಲ್ಲಿರುವವರಿಗೆ ಇಂತಹ ತೇಜಸ್ವಿತೆಯ ಕಾದಂಬರಿಗಳ ವಾಚನದ ಯೋಗವು ಒದಗಿಬರುವಂತೆ ಬುದ್ಧಿಪೂರ್ವಕ ವ್ಯವಸ್ಥೆ ಮಾಡತಕ್ಕದ್ದು. ಇಂತಹ ಮನಃಸಂಸ್ಕರಣದ, ಹಾಗು ಮನ ಉಜ್ಜೀವನೀಕರಣದ ಕಾದಂಬರಿಗಳನ್ನು ಓದುವದರಿಂದ ಮನುಷ್ಯನ ಮನೋಭೂಮಿಯಲ್ಲಿ ಸ್ವಾಭಿಮಾನದ ಅಂಕುರವು ಉತ್ಪನ್ನವಾಗುವದು; ಆದರೆ

ಅದರೊಡನೆ ನಾಸ್ತಿಕಭಾವದ, ಗುರುಹಿರಿಯರ ಅವಹೇಳನದ, ಧರ್ಮಹೀನತೆ-ಸ್ವಚ್ಛಂದ ವೃತ್ತಿಗಳ ಕೆಟ್ಟ ಕಸಗಳು ಮಾತ್ರ ಮೊಳೆಯಲಾರವು! ಇಂತಹ ಕಾದಂಬರಿಗಳನ್ನು ಓದುವವರ ಮನಸ್ಸಿನಲ್ಲಿ ದುಷ್ಟ ಶಾಸನದ ತ್ವೇಷವು ಉತ್ಪನ್ನವಾಗುವದು; ಆದರೆ ಆ ತ್ವೇಷವು ಗರ್ವದ ಸಂಪರ್ಕದಿಂದ ಒರಟೆಯೂ, ಸ್ವಾರ್ಥದ ವಿಷದಿಂದ ಕ್ರೂರವೂ ಮಾತ್ರ ಆಗಲಾರದು! ಇಂತಹ ಕಾದಂಬರಿಗಳನ್ನು ಓದುವರಿಂದ ಮನುಷ್ಯನು ದೃಢನಿಶ್ಚಯದವನಾಗುವನು; ಆದರೆ ಅವನ ಸ್ವಭಾವವು ಕಠೋರವೂ, ವಿಕ್ಷಿಪ್ತವೂ ಮಾತ್ರ ಆಗಲಾರದು! ಇಂತಹ ಕಾದಂಬರಿಗಳನ್ನು ಓದುವದರಿಂದ ಮನುಷ್ಯನು ತೇಜಸ್ವಿಯಾಗವನು; ಆದರೆ ಅವನ ಹೃದಯವು ಉಗ್ರವೂ, ನಡತೆಯು ತಾಪದಾಯಕವೂ ಆಗಲಾರದು! ಒಟ್ಟಿಗೆ ಇಂತಹ ಕಾದಂಬರಿಗಳನ್ನು ಓದುವವರು ಧರ್ಮಶ್ರದ್ಧೆಯುಳ್ಳವರೂ, ರಾಜನಿಷ್ಠರೂ, ಗುರುಹಿರಿಯುರನ್ನು ಮನ್ನಿಸುವವರೂ, ಪರೋಪಕರಾದ ಬುದ್ಧಿಯುಳ್ಳವರೂ, ತೇಜಸ್ವಿಗಳೂ, ದುಷ್ಟಶಾಸನ ಧುರೀಣರೂ, ಕಾದಂಬರಿ ಓದುತ್ತಿರುವಾಗಿನ ಮಟ್ಟಿಗಾದರೂ ನಿಶ್ಚಯವಾಗಿ ಆಗಿರವರೆಂದು ಅನುಭವದಿಂದ ಹೇಳಬಹುದು!

ಒಟ್ಟಿಗೆ, ಗಳಗನಾಥನು ಇಂತಹ ಕಾದಂಬರಿಗಳನ್ನಲ್ಲದೆ ಹಿಂದೆ ಹೇಳಿರುವಂತೆ "ಭಾಗವತಾಮೃತ" "ಶೈವಸುಧಾರ್ಣವ" "ತುಲಸೀ ರಾಮಾಯಣಾಮೃತ" ಎಂಬ ಪೌರಾಣಿಕ ಗ್ರಂಥಗಳನ್ನೂ, ಕೆಲವು ಪ್ರಬಂಧಗಳನ್ನೂ ಕೂಡಿ ಒಟ್ಟಿಗೆ ಕ್ರೌನ ಅಷ್ಟಪತ್ರದ ಸರಾಸರಿ ೮೦೦೦ ಪುಟಗಳ ವಿಷಯವನ್ನು ಬರೆದಿರುವನು.

ಈ ಮೇರೆಗೆ ಮೈಸೂರನಾಡಿನವರ ಅನುಗ್ರಹದಿಂದ ನನ್ನ ಸಾಲತೀರಿದ ಬಳಿಕ, ಅದರ ಶ್ರೇಯಸ್ಸನ್ನು ಧರ್ಮಿಷ್ಠ ಪ್ರಭುಗಳಾದ ಶ್ರೀಮನ್ನಾಲ್ವಡಿ ಕೃಷ್ಣರಾಜ ಒಡೆಯರವರ ಚರಣಗಳಿಗೆ ಅರ್ಪಿಸಬೇಕೆಂದು ಮಾಡಿದ್ದೇನೆ. ಆಮೇಲೆ "ಅರಮನೆಯಿಂದ ಗುರುಮನೆ" ಎಂಬಂತೆ, ಮೈಸೂರ ನಾಡಿನಲ್ಲಿಯ ಸರ್ವಮತಗಳ ಧರ್ಮಪೀಠಸ್ಥ ಶ್ರೀಗಳವರ ಚರಣದರ್ಶನದಿಂದ ಪುನೀತನಾಗಿ ಪುನಃ ವೈದಿಕ ಪಾಠಶಾಲೆಯನ್ನು ಆರಂಭಿಸಲು ದಿವ್ಯಸನ್ನಿಧಿಗಳ ಆಶೀರ್ವಾದ ಪಡೆದು ಧನ್ಯವಾಗಬೇಕೆಂದು ಆತುರಪಡುತ್ತಿರುವೆನು! ನನ್ನ ಈ ಪ್ರಾರ್ಥನೆ-ಈ ಇಚ್ಛೆ-ಈ ಆತುರಗಳನ್ನು ಸಫಲಗೊಳಿಸಲು, ನನ್ನ ಕುಲಸ್ವಾಮಿಯಾದ ಶ್ರೀ ಲಕ್ಷ್ಮೀವೆಂಕಟೇಶನು ಸಮರ್ಥನಿರುವನು!

ಗಳಗನಾಥರ ಕಾದಂಬರಿಗಳು

ಕನ್ನಡಿಗರಿಗೆ ಸಂಬಂಧಿಸಿದುವು

೧. **ಮಾಧವ-ಕರುಣಾವಿಲಾಸ-೧೯೨೩:** ತನ್ನ ವಿಶೇಷ ಗುಣಗಳಿಂದ ಕನ್ನಡಿಗರ ಆದರಕ್ಕೆ ಪಾತ್ರವಾಗಿರುವ ಈ ಸುರಸವಾದ ಅತಿ ಗೌರವದ ತತ್ವ ಪ್ರಕಾಶಕ ಸ್ವತಂತ್ರ ಐತಿಹಾಸಿಕ ಕಾದಂಬರಿಯು, ಡೆಮ್ಮಿ ಅಷ್ಟಪತ್ರದ ಆರುನೂರು ಪುಟಗಳುಳ್ಳದ್ದಾಗಿರುವದು. ಮೂರು ವರ್ಷಗಳಿಂದ ಬಹು ಶ್ರಮಪಟ್ಟು ಬರೆದಿರುವ ಈ ಘನತರವಾದ ಕಾದಂಬರಿಯನ್ನು ಪ್ರತ್ಯಕ್ಷ ಶ್ರೀ ಮಾಧವಾಚಾರ್ಯರೇ (ಶ್ರೀ ವಿದ್ಯಾರಣ್ಯರೇ)

ಬರೆಸಿರುವದರಿಂದ, ಅದರ ಯೋಗ್ಯತೆಯನ್ನು ನಾನು ವರ್ಣಿಸಲಾರೆನು. ಇಡಿಯ ಕರ್ನಾಟಕವ ಚಿತ್ತವನ್ನು ಈ ಕಾದಂಬರಿಯು ಆಕರ್ಷಿಸಿರುವದು. ಈಗಿನ ಕಾಲದಲ್ಲಿ ಈ ಕಾದಂಬರಿಯನ್ನು ಓದದ ಕನ್ನಡಿಗರು ನಿಶ್ಚಯವಾಗಿ ಅಧನ್ಯರು. ಕರ್ನಾಟಕ ಸಿಂಹಾಸನ ಸ್ಥಾಪನಾಚಾರ್ಯರ ಅಲೌಕಿಕ ಸಾಮರ್ಥ್ಯವು ಯಾವ ಕನ್ನಡಿಗರ ಸದೂರ್ಮಿಗಳನ್ನು ಸ್ಫೂರ್ತಿಗೊಳಿಸಲಿಕ್ಕಿಲ್ಲ? ಗಳಗನಾಥರ ವಿವಿಧ ಮನೋಹರ ಕಾದಂಬರಿಗಳಲ್ಲಿ ಇದು ಶ್ರೇಷ್ಠತರ ಕಾದಂಬರಿಯಾಗಿದ್ದು, ವಿದ್ಯಾರಣ್ಯರಂಥ ಮಹಾತ್ಮರ ಸತ್ ಸ್ಫೂರ್ತಿಯಿಂದ ಆ ಗಳಗನಾಥರ ಹೃದಯವು ಇದರಲ್ಲಿ ಬಿಚ್ಚಿ ಇಡಲ್ಪಟ್ಟಿರುವದು.

ಈ ಮನೋಹರ ಕಾದಂಬರಿಯಲ್ಲಿ ೬೦ ಪ್ರಕರಣಗಳಿದ್ದು, ಅವುಗಳಲ್ಲಿ ೧. ವ್ಯಾವಹಾರಿಕ ಯೋಗತ್ರಯಗಳು ೨. ಧರ್ಮದ ದುರಭಿಮಾನ ೩. ವೈದಿಕ ಧರ್ಮಗಳು ೪. ಅವೈದಿಕ ಧರ್ಮಗಳು ೫. ಶಾಂತಿಯ ಪ್ರತ್ಯಕ್ಷ ಕಾರಣವು ಅಧ್ಯಯನವಲ್ಲ, ಗುರು ಕೃಪೆಯು! ೬. ಅಸ್ಪೃಶ್ಯತೆಯೂ, ಧಾರ್ಮಿಕ ವ್ಯವಹಾರವೂ ೭. ಅಸ್ಪೃಶ್ಯತೆಯೂ ರಾಜಕೀಯ ವ್ಯವಹಾರವೂ, ೮. ಸಹಯೋಗ ೯. ಅಸಹಯೋಗದ ಪ್ರಭೇದಗಳು. ೧೦. ಅಹಿಂಸಾ ತತ್ವವೂ, ರಾಜಕೀಯ ಅಹಿಂಸೆಯೂ ೧೧. ರಾಷ್ಟ್ರದ ವಿವೇಕೋದಯ (ಬ್ರಾಹ್ಮಣ ಬ್ರಾಹ್ಮಣೇತರ ವಿವೇಕ) ೧೨. ದೇಶದ್ರೋಹವೂ, ರಾಜದ್ರೋಹವೂ ೧೩. ಪರತಂತ್ರರಿಗೆ ಸೆರೆಮನೆಯೇ ಸ್ವರಾಜ್ಯವು ೧೪. ದೇಶದ್ರೋಹಿಗಳ ಹೇಸಿನತ. ೧೫ ಸಜ್ಜನರಿಗೆ ಶತ್ರುಗಳೂ ಸ್ವಕೀಯರೇ. ೧೬ ದೇಶವಿಘಾತಕ ಭೇದಭಾವನಿರಸನ. ೧೭. ರಾಜದ್ರೋಹದ ಸ್ವರೂಪ ೧೮ ಅಂತಃಕಲಹವು ಅಳಿಗಾಲದ ಲಕ್ಷಣವು ಇತ್ಯಾದಿ ಮಹತ್ವದ ವಿಷಯಗಳನ್ನು ಕುರಿತು ಶ್ರೀ ಮಾಧವಾಚಾರ್ಯರು ಸಮರ್ಪಕವಾಗಿ ನಿರ್ಣಯಿಸಿರುತ್ತಾರೆ. ಈ ಪುಸ್ತಕವನ್ನು ಪ್ರತಿ ಒಬ್ಬ ಕನ್ನಡಿಗನೂ ಮನೆಯಲ್ಲಿ ಸಂಗ್ರಹಿಸತಕ್ಕದ್ದು.

ಈ ಕಾದಂಬರಿಯು ನಮ್ಮ "ಸದ್ಗುರು" ಎಂಬ ಮಾಸಪತ್ರಿಕೆಯಲ್ಲಿ ಭಾಗಶಃ ಎರಡು ವರ್ಷ ಪ್ರಕಟವಾಗಿ, ಉಳಿದ ಕಾದಂಬರೀ ಭಾಗವನ್ನು ಸ್ವತಂತ್ರವಾಗಿ ಬರೆದು ಮುಗಿಸಿರುತ್ತದೆ. ಇದರ ಐದು ಸಾವಿರ ಪ್ರತಿಗಳಲ್ಲಿ ಇನ್ನು ಬಹಳವಾದರೆ ಎರಡುಸಾವಿರ ಪ್ರತಿಗಳು ಉಳಿದಿರಬಹುದು! ಇದನ್ನು ಮುಂಬಯಿ ವಿಶ್ವವಿದ್ಯಾಲಯದವರು ಎಂ.ಎ., ಕ್ಲಾಸಿಗೆ ಪಠ್ಯ ಪುಸ್ತಕವಾಗಿ ನಿಯಮಿಸಿರುವರು. ಬೆಂಗಳೂರಿನ ಸಾಹಿತ್ಯ ಪರಿಷತ್ತಿನ ಅವಲೋಕನಕ್ಕಾಗಿ ಇದನ್ನು ಕಳಿಸಿದಾಗ, ಈವರೆಗೆ ಮಾಡಿದ ಕನ್ನಡಿಗರ ಗೌರವದ ಸೇವಾತಿಶಯಕ್ಕಾಗಿ ಆ ಪರಿಷತ್ತು ಗಳಗನಾಥರಿಗೆ ೨೫೦ ರೂಪಾಯಿ ಉಚಿತವಾಗಿ ಕೊಟ್ಟಿದೆ. ಮೈಸೂರ ಸರ್ಕಾರದ ದೇವರಾಜ ಚಾರ್ಟಿ ಫಂಡಿನಿಂದ ಇದಕ್ಕೆ ೨೦೦ ರೂಪಾಯಿಗಳ ಉಚಿತವು ದೊರೆತಿರುವದು. ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘವೂ ಇದಕ್ಕೆ ಉಚಿತವನ್ನು ಕೊಟ್ಟಿರುವದು. ಇದರ ಬೆಲೆ ೩-೧೨-೦. ಪೋಸ್ಟು ವೆಚ್ಚ ಎಂಟು ಆಣೆ.

೨. ಕನ್ನಡಿಗರ ಕರ್ಮಕಥೆ-೧೯೧೬: ಘನತರವಾದ ವಿಜಯನಗರದ ರಾಜ್ಯವು ಪ್ರಸಿದ್ಧ ತಾಳೀಕೋಟೆಯ ಕಾಳಗದಿಂದ ರಸಾತಳಕ್ಕೆ ಹೇಗೆ ಹೋಯಿತೆಂಬುದನ್ನು ಈ ವಿಸ್ತೃತ ಕಾದಂಬರಿಯಲ್ಲಿ ಬಹು ಮನೋಹರವಾಗಿ ವರ್ಣಿಸಿರುತ್ತದೆ. ಇದನ್ನು

ಓದುವವರಿಂದ ಕನ್ನಡಿಗರಲ್ಲಿ ಸ್ವಾಭಿಮಾನ ಮೂಲವಾದ ಹಲವು ವಿಕಾರಗಳೂ, ವಿಚಾರಗಳೂ ಉತ್ಪನ್ನವಾಗದೆ ಇರಲಿಕ್ಕಿಲ್ಲ! ರಾಮರಾಜ, ತಿರುಮಲ, ವೆಂಕಟಾದ್ರಿ, ಮೇಹರ್ಜಾನ, ರಣಮಸ್ತಖಾನ ಮೊದಲಾದ ಪಾತ್ರಗಳ ಚರಿತ್ರ ವಾಚನದಿಂದ ಮನಸ್ಸು ತಲ್ಲೀನವಾಗಿ ಹೋಗುತ್ತದೆ ! ಈ ವಿಸ್ತೃತ ಕಾದಂಬರಿಯ ಬೆಲೆಯು ೧-೮-೦. ಪೋಸ್ಟೇಜು ೫ ಆಣೆ.

೩. **ಕುಮುದಿನಿ-೧೯೧೬:** ಇದೂ ಒಂದು ಕನ್ನಡಿಗರ ಅತ್ಯಂತವಾದ ಅಭಿಮಾನಕ್ಕೆ ಆಸ್ಪದವಾದ ಕಾದಂಬರಿಯೇ ಆಗಿರುವದು. ಈ ಐತಿಹಾಸಿಕ ಸ್ವತಂತ್ರ ಕಾದಂಬರಿಯು ವಿಜಯನಗರದ ಇತಿಹಾಸಕ್ಕೆ ಸಂಬಂಧಿಸಿದ್ದು, ಈ ಕಾದಂಬರಿಯೊಳಗಿನ ಶೋಕರಸ ಪ್ರಧಾನವಾದ "ಅಂತಕನ ಕೋಲಾಹಲ" ಎಂಬ ಪ್ರಕರಣವನ್ನು ಓದಿ ನಿಜವಾಗಿ ನಾವು ಮೂರ್ಛಿತರಾದೆವೆಂದು, ಒಬ್ಬ ಮೈಸೂರ ಸೀಮೆಯ ಸಹೃದಯ ವಾಚಕರು ತಿಳಿಸಿರುತ್ತಾರೆ. ಇದನ್ನು ಮೈಸೂರ ಸರಕಾರದವರು ಮೆಟ್ರಿಕ ಕ್ಲಾಸಿಗೆ ಪಠ್ಯ ಪುಸ್ತಕವಾಗಿ ನಿಯಮಿಸಿರುವರು. ಇದರ ಭಾಷಾಂತರವು ಸಂಸ್ಕೃತದಲ್ಲಿ ಆಗಿದೆ. ಬೆಲೆ ೧ ರೂಪಾಯಿ. ಪೋಸ್ಟೇಜು ನಾಲ್ಕು ಆಣೆ.

೪. **ದುರ್ಗದ ಬಿಚ್ಚುಗತ್ತಿ-೧೯೩೮:** ನನ್ನ "ಮಾಧವ ಕರುಣಾ ವಿಲಾಸ" ಎಂಬ ಸ್ವತಂತ್ರವಾದ ದೊಡ್ಡ ಐತಿಹಾಸಿಕ ಕಾದಂಬರಿಯ ತರುವಾಯದಲ್ಲಿ ಬರೆದ ಸ್ವತಂತ್ರ ಐತಿಹಾಸಿಕ ಕಾದಂಬರಿ ಈ 'ದುರ್ಗದ ಬಿಚ್ಚುಗತ್ತಿ' ಇದನ್ನು "ಶ್ರೀ ಮುರುಗೇಶ ಗುರುವರರು' ಪ್ರೇರಿಸಿ ಬರೆಸಿರುವರು. ಈ ಕಾದಂಬರಿಯಲ್ಲಿ ಕರ್ನಾಟಕ ಪ್ರಸಿದ್ಧಿಯ ಚಿತ್ರದುರ್ಗ ಕೋಟೆಯ ನಾಯಕರ ಮನೆತನಕ್ಕೆ ಸಂಬಂಧಿಸಿದ ವೃತ್ತಾಂತ ನಿರೂಪಿತವಾಗಿದೆ. ಇದರ ಬೆಲೆ ೧-೨-೦.

ಮರಾಠರಿಗೆ ಸಂಬಂಧಿಸಿದುವು

೫. **ಈಶ್ವರೀಸೂತ್ರ-೧೯೧೩:** ಶಿವಾಜಿಯು ತೋರಣಗಡವೆಂಬ ದುರ್ಗವನ್ನು ತಕ್ಕೊಂಡು ಸ್ವರಾಜ್ಯವನ್ನು ಸ್ಥಾಪಿಸಿ ಸ್ವರಾಜ್ಯದ ತೋರಣ ಕಟ್ಟಿದ ಮನೋಹರ ವೃತ್ತಾಂತವು ಇದರಲ್ಲಿ ವರ್ಣಿಸಿರುತ್ತದೆ. ಇದರ ಲೋಕಪ್ರಿಯತೆಯನ್ನು ಇಷ್ಟೆಂದು ವರ್ಣಿಸಲಾಗುವದಿಲ್ಲ. ಕಾದಂಬರಿಯನ್ನು ಪುನಃ ಪುನಃ ಓದಿದರೂ ಮನಸ್ಸು ತೃಪ್ತವಾಗುವದಿಲ್ಲ. ಇದರ ಬೆಲೆ ೧ ರೂ. ಪೋಸ್ಟೇಜು ೪ ಆಣೆ.

೬. **ಮರಾಟರ ಅಭ್ಯುದಯ-೧೯೧೮:** ಮೇಲೆ ಹೇಳಿದಂತೆ ಶಿವಾಜಿಯು ರಾಜ್ಯವನ್ನು ಸ್ಥಾಪಿಸಿದ ಬಳಿಕ ಅದನ್ನು ನಾಶಮಾಡುವುದಕ್ಕಾಗಿ ವಿಜಾಪುರದ ಬಾದಶಹನು ಅಫಜುಲಖಾನನೆಂಬ ಬಲಾಢ್ಯ ಸರದಾರನನ್ನು ದೊಡ್ಡ ಸೈನ್ಯದೊಡನೆ ಕಳಿಸಲು, ಶಿವಾಜಿಯು ಆತನನ್ನು ಯುಕ್ತಿಯಿಂದ ಸಂಹರಿಸಿದ ಸಂಗತಿಯು ಇದರಲ್ಲಿ ಮನೋಹರವಾಗಿ ವರ್ಣಿಸಿರುತ್ತದೆ. ಇದನ್ನು ಓದುವಾಗ ಹಲವು ಕಡೆಯಲ್ಲಿ ವಾಚಕರ ಹೃದಯವು ಉಕ್ಕಿ ಬರುವುದೆಂಬುದು ಅನುಭವದ ಮಾತಾಗಿರುವುದು. ಬೆಲೆ ೧ ರೂ. ಪೋಸ್ಟೇಜು ೪ ಆಣೆ.

೭. **ಕಮಲಕುಮಾರಿ-೧೯೧೦:** ದಿಲ್ಲಿಯ ಬಾದಶಹನಾದ ಔರಂಗಜೇಬನು ಶಿವಾಜಿಯ ಹೆಚ್ಚಳವನ್ನು ತಡೆಯದೆ, ಉದಯಭಾನು ಎಂಬ ತನ್ನ ಶೂರ ಸರದಾರನನ್ನು ದೊಡ್ಡ ಸೈನ್ಯದೊಡನೆ ಆತನ ಮೇಲೆ ಕಳಿಸಿದಾಗ, ಶಿವಾಜಿಯ ಬಾಲಮಿತ್ರನಾದ ಅತ್ಯಂತ ಸ್ವಾಮಿನಿಷ್ಠ ತಾನಾಜಿಯು ಸಿಂಹಗಡವನ್ನು ಉದಯಭಾನುವಿನಿಂದ ಕಸಿದುಕೊಂಡು, ತನ್ನ ಒಡೆಯನ ಕಾರ್ಯವನ್ನು ಸಾಧಿಸಿದ ಮನೋಹರ ಪ್ರಸಂಗವನ್ನು ಈ ಕಾದಂಬರಿಯಲ್ಲಿ ವರ್ಣಿಸಿರುತ್ತದೆ. ಇದರ ಆರನೆಯ ಆವೃತ್ತಿಯು ಹೊರಡಬೇಕಾಗಿರುವುದು ಕಾದಂಬರಿಗಳಲ್ಲಿ ಇದನ್ನು ಸರಿಗಟ್ಟುವ ಕಾದಂಬರಿಗಳು ಅತಿ ವಿರಳವೆಂದು ಹೇಳಬಹುದು. ಬೆಲೆ ೧ ರೂ. ಪೋಸ್ಟೇಜು ೪ ಆಣೆ.

೮. **ಛತ್ರಪತಿ-೧೯೧೯:** ಮೇಲೆ ಹೇಳಿದಂತೆ ಶಿವಾಜಿಯು ಬಹು ಆಯಕಟ್ಟಿನ ಸ್ಥಳವಾದ ಸಿಂಹಗಡವನ್ನು ಸ್ವಾಧೀನಪಡಿಸಿಕೊಂಡು ಅತಿ ಬಲಿಷ್ಠನಾಗಲು, ಇದನ್ನು ಔರಂಗಜೇಬ ಬಾದಶಹನು ಸೈರಿಸದೆ, ರಾಜಾ ಜಯಸಿಂಗನೆಂಬ ತನ್ನ ಬಲಾಢ್ಯ ರಜಪೂತ ಸರದಾರನನ್ನು ದೊಡ್ಡ ಸೈನ್ಯದೊಡನೆ ಶಿವಾಜಿಯ ಮೇಲೆ ಕಳಿಸಿದನು. ಆಗ ಶಿವಾಜಿಯು ದೂರ ಲಕ್ಷ ಕೊಟ್ಟು ಜಯಸಿಂಗನೊಡನೆ ಯುದ್ಧಮಾಡದೆ ಆತನ ಸೂಚನೆಯಂತೆ ದಿಲ್ಲಿಗೆ ಬಾದಶಹನನ್ನು ಕಾಣುವದಕ್ಕಾಗಿ ಹೋಗಲು, ಬಾದಶಹನು ಆತನನ್ನು ಸೆರೆಯಲ್ಲಿರಿಸಿದನು. ಆಗ ಶಿವಾಜಿಯು ತನ್ನ ಮಗ ಸಂಭಾಜಿಯೊಡನೆ ಪೆಟ್ಟಿಗೆಯಲ್ಲಿ ಮಲಗಿಕೊಂಡು ಹೇಗೆ ಪಾರಾಗಿ ಬಂದನೆಂಬದನ್ನು ಈ ಕಾದಂಬರಿಯಲ್ಲಿ ಮನೋಹರವಾಗಿ ವರ್ಣಿಸಿರುತ್ತದೆ. ಬೆಲೆ ೧ ರೂ. ಪೋ. ೪ ಆಣೆ.

೯. **ಗೃಹಕಲಹ-೧೯೨೧:** ಇದು ಶಿವಾಜಿ ಮಹಾರಾಜರ ಮರಣ ಪ್ರಸಂಗದ ಕಾದಂಬರಿಯು. ಅತ್ಯಂತ ಶೋಕ ಪರ್ಯವಸಾಯಿ. ಇದು ಗೃಹಕಲಹದ ದುಷ್ಪರಿಣಾಮವನ್ನು ಹೃದಯಭೇದಕವಾಗಿ ವ್ಯಕ್ತಪಡಿಸುವದು. ಇದು ಅತ್ಯಂತ ಲೋಕಪ್ರಿಯವಾಗಿರುವದು ಬೆಲೆ ೧ ರೂ. ಪೋ. ೪ ಆಣೆ.

೧೦. **ಶಿವಪ್ರಭುವಿನ ಪುಣ್ಯ-೧೯೧೮:** ಶಿವಾಜಿಯ ಮಗ ಸಂಭಾಜಿಯನ್ನು ಔರಂಗಜೇಬನು ಅತಿಕ್ರೂರತನದಿಂದ ಕೊಲ್ಲಿಸಿದ ಪ್ರಸಂಗವೂ, ಶಿವಾಜಿಯ ಚಿಕ್ಕ ಮಗ ರಾಜಾರಾಮನು ಪರಿಪರಿಯ ಕಷ್ಟಗಳನ್ನು ಅನುಭವಿಸಿ, ಅಣ್ಣನ ಕಾಲದಲ್ಲಿ ನಾಶವಾದಂತಾಗಿದ್ದ ಮಹಾರಾಷ್ಟ್ರ ರಾಜ್ಯವನ್ನು ಮತ್ತೆ ಸ್ಥಾಪಿಸಿದ ಪ್ರಸಂಗವೂ ಈ ಕಾದಂಬರಿಯಲ್ಲಿ ಬಹು ಹೃದಯಂಗಮವಾಗಿ ವರ್ಣಿಸಲ್ಪಟ್ಟಿರುವವು. ಬೆಲೆ ೧ ರೂ. ಪೋ. ೪ ಆಣೆ.

೧೧. **ಸ್ವರಾಜ್ಯಸುಗಂಧ-೧೯೩೮:** ಶಿವಾಜಿಯು ಆಗಲೇ ರಾಯಗಡದಲ್ಲಿ ಛತ್ರಪತಿಯಾಗಿ ಪಟ್ಟಾಭಿಷಿಕ್ತನಾಗಿದ್ದ. ದಿಲ್ಲಿಯ ಮತ್ತು ವಿಜಾಪುರ ಬಾದಶಹರ ವಶದಲ್ಲಿದ್ದ ಅನೇಕ ಕೋಟೆಗಳನ್ನು ಗೆದ್ದುಕೊಂಡು ತನ್ನ ರಾಜ್ಯವನ್ನು ವಿಸ್ತರಿಸಿದ್ದ. ಆದರೆ ಈಗ ಆತನ ದೃಷ್ಟಿಯು 'ಕಲ್ಯಾಣ' ಮತ್ತು 'ರಾಜಮಾಚಿ' ಎಂಬ ಎರಡು ಕೋಟೆಗಳ ಕಡೆಗೆ ಕೇಂದ್ರೀಕೃತವಾಗಿತ್ತು. ಈ ಕಾದಂಬರಿಯಲ್ಲಿ ಈ ಎರಡೂ ಕೋಟೆಗಳನ್ನು ಆತನ ಸರದಾರರು ವಶಪಡಿಸಿಕೊಂಡ ವಿಷಯ ನಿರೂಪಿತವಾಗಿದೆ.

೧೨. ಕುರುಕ್ಷೇತ್ರ-೧೯೧೯: ಗರ್ವವು ನಾಶಕರವಾದದ್ದು. ಪ್ರತಾಪಶಾಲಿಯಾದ ಪೇಶ್ವೆ ಭಾವುಸಾಹೇಬನ ಅತಿ ಗರ್ವದ ಬಾಧೆಯಿಂದ ಪ್ರಸಿದ್ಧ ಪಾನಿಪತ್ತದ ಕಾಳಗದಲ್ಲಿ ಪೇಶ್ವೆಯವರ ಉತ್ಕರ್ಷವು ಕುಗ್ಗಿದ ದುಃಖಕಾರಕ ಸಂಗತಿಯು ಈ ಕಾದಂಬರಿಯ ಯೋಗದಿಂದ ಬೋಧಪ್ರದವಾಗಿ ಗೊತ್ತಾಗುತ್ತದೆ. ಆದರೂ ಮಹಾರಾಷ್ಟ್ರದ ಪ್ರತಾಪವೂ, ಸಾಮರ್ಥ್ಯವೂ ಎಷ್ಟು ಘನತರವಾದವಿದ್ದವೆಂಬುದನ್ನು ಈ ಕಾದಂಬರಿಯು ತೋರಿಸದೆ ಇರುವದಿಲ್ಲ. ಬೆಲೆ ೧ ರೂ. ಪೋ. ೪ ಆಣೆ.

ರಜಪೂತರಿಗೆ ಸಂಬಂಧಿಸಿದುವು

೧೩. ಕ್ಷಾತ್ರತೇಜ-೧೯೧೪: ಈ ಐತಿಹಾಸಿಕ ಕಾದಂಬರಿಯಲ್ಲಿ ಔರಂಗಜೇಬನ ಹಾಗು ರಜಪೂತರ ಗುಣಸ್ವಭಾವಗಳು ಚಿತ್ತಾಕರ್ಷಣಪೂರ್ವಕವಾಗಿ ಗೊತ್ತಾಗುತ್ತವೆ. ಇದರಲ್ಲಿ ರೂಪಮತಿಯ ಕುಲೀನತೆ, ಇಂದಿರೆ-ಪದ್ಮೆ-ದುರ್ಗಾದಾಸ ಇವರ ಸ್ವಾಮಿನಿಷ್ಠೆ, ಚಂದ್ರಾವತೀರಾಣಿಯ ತೇಜಸ್ವಿತೆ, ವೈಕುಂಠಯೋಗಿಗಳ ನಿಸ್ಪ್ರಹತೆ, ಮೊದಲಾದವನ್ನು ಸಾಂಸಾರಿಕರಾದ ನಾವು ಲಕ್ಷಪೂರ್ವಕ ಅವಲೋಕಿಸಬಹುದಾಗಿದೆ. ಇದನ್ನು ಮುಂಬಯಿ ವಿದ್ಯಾಖಾತೆಯವರು ಮೆಟ್ರಿಕ್ಕಿಗೆ ಪಠ್ಯಪುಸ್ತಕವಾಗಿ ನಿಯಮಿಸಿದ್ದರು. ಬೆಲೆ ೧ ರೂ. ಪೋ. ೪ ಆಣೆ.

೧೪. ಸತ್ವಸಾರ-೧೯೧೩: ಇದೊಂದು ಸುಂದರವಾದ ಐತಿಹಾಸಿಕ ಕಾದಂಬರಿಯು. ಮೇವಾಡದ ಸುಪ್ರಸಿದ್ಧ ಮಹಾರಾಜಾ ಪ್ರತಾಪಸಿಂಹನು ಈ ೧೪ ಕಾದಂಬರಿಯ ನಾಯಕನಾಗಿದ್ದಾನೆ. ಮಹಾತ್ಮರ ಸತ್ವದಿಂದಲ್ಲದೆ ಕೇವಲ ದ್ರವ್ಯಾದಿ ಉಪಕರಣಗಳಿಂದ ಮಹಾಕಾರ್ಯಗಳು ಆಗುವದಿಲ್ಲವೆಂತಲೂ, ಸತ್ವಶಾಲಿಯನ್ನು ದ್ರವ್ಯವು ತಾನಾಗಿ ಹೊಂದುವದೆಂತಲೂ ಈ ಕಾದಂಬರಿಯು ಕಲಿಸುವದು. ಇದನ್ನು ಕನ್ನಡಿಗರು ಈ ಕಾಲದಲ್ಲಿ ಓದಿಯೇ ತೀರಬೇಕೆಂದು ಆಗ್ರಹದಿಂದ ಹೇಳುವೆನು. ಇದನ್ನು ಮುಂಬಯಿ ಯೂನಿವರ್ಸಿಟಿಯವರು ಟೆಕ್ಸ್ಟ್ ಬುಕ್ಕಾಗಿ ನಿಯಮಿಸಿದ್ದರು. ಬೆಲೆ ೧ ರೂ. ಪೋ. ೪ ಆಣೆ.

೧೫. ತಿಲೋತ್ತಮೆ-೧೯೧೭: ಇದೂ ಒಂದು ಐತಿಹಾಸಿಕ ಮನೋಹರ ಕಾದಂಬರಿಯೇ ಇರುತ್ತದೆ. ಈ ಕಾದಂಬರಿಯಲ್ಲಿಯ ಆಯೇಷೆ, ತಿಲೋತ್ತಮೆ, ಉಸ್ಮಾನ, ಜಗತ್ಸಿಂಗ ಮೊದಲಾದ ಸದ್ಗುಣಮಂಡಿತ ಪಾತ್ರಗಳ ಸಹವಾಸದಿಂದ ವಾಚಕರ ಹೃದಯವು ದ್ರವಿಸಿ ಅದರಲ್ಲಿ ಸದ್ಗುಣಗಳ ಅಂಕುರಗಳು ತೋರದೆ ಇರವು. ಬೆಲೆ ೧ ರೂ. ಪೋ. ೪ ಆಣೆ.

೧೬. ಧಾರ್ಮಿಕತೇಜ-೧೯೨೮: ಇದು ಅತ್ಯಂತ ಗೌರವದ ಮನೋಹರ ಐತಿಹಾಸಿಕ ಹೊಸ ಕಾದಂಬರಿಯು. ಛತ್ರಸಾಲನೆಂಬ ಪ್ರತಾಪಿಯಾದ ಕ್ಷತ್ರಿಯನು ಔರಂಗಜೇಬ ಬಾದಶಹನ ಕಾಲದಲ್ಲಿ ಬುಂದೇಲಖಂಡದ ಸ್ವಾತಂತ್ರ್ಯವನ್ನು ಸ್ಥಾಪಿಸಿದ ವೃತ್ತಾಂತವು ಬಹು ಗಂಭೀರವಾಗಿ ವರ್ಣಿಸಲ್ಪಟ್ಟಿರುತ್ತದೆ. ಪ್ರಾಣನಾಥ ಪ್ರಭುಗಳ ಮಹಿಮೆ ಯಲ್ಲಿಯೂ, ದಲಪತರಾಯ ಸಭಾಕರಣ-ಹೀರಾದೇವಿ-ಸುಫಲದೇವಿ-ಕಂಚುಕಿರಾಯ-ರಣದುಲ್ಲಾಖಾನ ಮೊದಲಾದ ನೀಚೋಚ್ಚ ಪಾತ್ರಗಳ ಚರಿತ್ರ ವಾಚನದಲ್ಲಿಯೂ ಮನಸ್ಸು ತೊಡಗಿಹೋಗುವದು. ಬೆಲೆ ೧ ರೂ. ೮ ಆಣೆ. ಪೊ. ೫ ಆಣೆ.

೧೭. ರಾಣಾ ರಾಜಸಿಂಹ-೧೯೨೮: ಇದು ಔರಂಗಜೇಬನ ಕಾಲದ ಐತಿಹಾಸಿಕ ಹೊಸ ಕಾದಂಬರಿಯು. ಇದರಲ್ಲಿ ರಾಣಾ ರಾಜಸಿಂಹನ ಘನವಾದ ಯೋಗ್ಯತೆಯೂ, ಔರಂಗಜೇಬನ ಉದ್ದಾಮ ಮಹತ್ವಾಕಾಂಕ್ಷೆಯೂ, ಅನಂತಶರ್ಮರ ಸತ್ವವೂ, ಮೊಗಲ ಜನಾನಖಾನೆಯ ಸ್ಥಿತಿಯೂ ಚನ್ನಾಗಿ ಚಿತ್ರಿಸಿರುತ್ತದೆ. ಬೆಲೆ ೧೨ ಆಣೆ. ಪೋ. ೪ ಆ.

ಸಂಕೀರ್ಣ ಕಾದಂಬರಿಗಳು

೧೮. ಪ್ರಬುದ್ಧ ಪದ್ಮನಯನೆ-೧೮೯೮: ಇದೊಂದು ಕನ್ನಡಿಗರ ಪ್ರೀತಿಯ ಅತಿಮನೋಹರವಾದ ಸ್ವತಂತ್ರ ಕಾಲ್ಪನಿಕ ಕಾದಂಬರಿಯು. ಈವರೆಗೆ ಈ ಕಾದಂಬರಿಯು ಐದು ಆವೃತ್ತಿಗಳಾಗಿ ಹೋಗಿರುವವು. ಇದರ ಭಾಷಾಂತರವನ್ನು ಸಂಸ್ಕೃತದಲ್ಲಿ ಒಬ್ಬರು ಮಾಡಿರುವರು. ಹಳ್ಳಿಯ ಜನರು ಇದರ ಆಟಗಳನ್ನು ಕಟ್ಟಿ ಆಡಿರುವರು. ರಸಿಕರು ಅವಶ್ಯವಾಗಿ ಓದತಕ್ಕ ಕಾದಂಬರಿಯು. ಬೆಲೆ ೧ ರೂ. ಪೋ. ೪ ಆಣೆ.

೧೯. ರಾಣೀ ಮೃಣಾಲಿನಿ-೧೯೧೩: ಇದಕ್ಕೆ ಈ ಹೊಸ ಆವೃತ್ತಿಯಲ್ಲಿ ಹೆಚ್ಚು ವಿಷಯವನ್ನು ಸೇರಿಸಿ ದೊಡ್ಡ ಪುಸ್ತಕವಾಗಿ ಮಾಡಿರುತ್ತದೆ. ಈ ಐತಿಹಾಸಿಕ ಕಾದಂಬರಿಯಾದರೂ ಅತ್ಯಂತ ಚಿತ್ತಾಕರ್ಷಕವಾಗಿರುವದು. ಇದರ ಸ್ವಾರಸ್ಯವೆಷ್ಟು, ಲಾಲಿತ್ಯವೆಷ್ಟು, ಗಾಂಭೀರ್ಯವೆಷ್ಟು! ಶಾಭಾಶ್! ಕಾದಂಬರಿಕಾರರಿದ್ದರೆ ಬಂಕೀಮಚಂದ್ರರಂಥ ಕಾದಂಬರಿಕಾರರಿರಬೇಕು! ಈ ಕಾದಂಬರಿಗೆ ಹೊಸದಾಗಿ ಜೋಡಿಸಿದ ವಿಷಯವು ಸ್ವತಂತ್ರವಾಗಿ ಬರೆದದ್ದು. ಬೆಲೆ ೧ ರೂ ೮ ಆಣೆ. ಪೋ ೫ ಆಣೆ.

೨೦. ವೈಭವ-೧೯೧೨: ಇದು ಚಾಣಿಕ್ಯ-ಚಂದ್ರಗುಪ್ತರಿಗೆ ಸಂಬಂಧಿಸಿದ ಅತಿ ಮನೋಹರವಾದ ಐತಿಹಾಸಿಕ ಕಾದಂಬರಿಯಾಗಿರುತ್ತದೆ. ಇದನ್ನು ಓದಲು ಕೈಯಲ್ಲಿ ತಕ್ಕೊಂಡವರು ಪೂರ್ಣವಾಗಿ ಮುಗಿಸದೆ ಕೆಳಗಿಡುವ ಹಾಗಿಲ್ಲೆಂದು ನಾವು ನಂಬಿಗೆಯಿಂದ ಹೇಳುವೆವು. ಕನ್ನಡ ಮುದ್ರಾಮಂಜೂಷಕ್ಕೂ ಇದಕ್ಕೂ ಏನೂ ಸಂಬಂಧವಿಲ್ಲ. ಬೆಲೆ ೧ ರೂ. ಪೋ. ೪ ಆಣೆ.

೨೧. ಧರ್ಮರಹಸ್ಯ-೧೯೧೪: ಇದೊಂದು ಗಂಭೀರ ವಿಚಾರದ ಐತಿಹಾಸಿಕ ಕಾದಂಬರಿಯಾಗಿರುತ್ತದೆ. ಅಶೋಕರಾಜ, ಚಿದಾನಂದಸ್ವಾಮಿ, ಜಿತೇಂದ್ರ, ಮೊಗ್ಗಲೀಪುತ್ರ ಮೊದಲಾದ ನೀಚೋಚ್ಚ ಪಾತ್ರಗಳ ವಕ್ರ-ಸರಲಗತಿಗಳೂ, ಅನುದಾತ್ತ-ಉದಾತ್ತ ಭಾವಗಳೂ ಎಷ್ಟು ಹೃದಯಂಗಮವಾಗಿ ವರ್ಣಿಸಲ್ಪಟ್ಟಿರುವವೆಂಬದನ್ನು ಬರೆಯಲಾರೆವು. ಈ ಪುಸ್ತಕವನ್ನು ಬರೆಯಲುಪಕ್ರಮಿಸಿದಾಗ ಹಲವು ಸಾರೆ ಕಣ್ಣೀರುಗಳು ಉದುರಿರುವವು. ಇದನ್ನು ಮೈಸೂರ ವಿದ್ಯಾಖಾತೆಯವರು ಮ್ಯೆಟ್ರಿಕ್ ಕ್ಲಾಸಿಗೆ ಪಠ್ಯಪುಸ್ತಕವಾಗಿ ನಿಯಮಿಸಿದ್ದರು. ಬೆಲೆ ೧ ರೂ. ಪೋ. ೪ ಆಣೆ.

೨೨. ಸಂಸಾರ ಸುಖ-೧೯೨೬: ಇದು ಅಕಬರಬಾದಶಹನಿಗೆ ಸಂಬಂಧಿಸಿದ ಕಾದಂಬರಿಯು. ಅಂತಹ ದೊಡ್ಡ ಬಾದಶಹನೆಂದರೇನು, ಕಡೆಗೆ ಸಂಸಾರದ ತಾಪದಿಂದ ಹಣ್ಣಾದನು. ಮಾನಸಿಂಹನ ಸೋದರಳಿಯನಾದ ಖುಸರುವಿನ ದುರ್ದೈವವನ್ನು ನೆನಿಸಿ ಮನಸ್ಸು ವಿಷಾದಪಡುವದು. ರಾಜ್ಯತೃಷ್ಣೆಯು ಎಷ್ಟು ಅನರ್ಥಕಾರಕವೆಂಬುದನ್ನು ಈ ಕಾದಂಬರಿಯು ತಿಳಿಸುತ್ತದೆ. ಬೆಲೆ ೧ ರೂ. ಪೋ. ೪ ಆಣೆ.

◆ ◆ ◆

ಇತರ ಕೃತಿಗಳು

೧.	ಪದ್ಯಾರ್ಥ ಸಾರ	–	೧೮೯೭
೨.	ಲಘು ನಿಬಂಧ ಸಂಗ್ರಹ ಮತ್ತು ಪತ್ರವ್ಯವಹಾರ	–	೧೮೯೯
೩.	ಚಿದಂಬರ ಚರಿತ್ರೆ	–	೧೯೦೯
೪.	ನಿಬಂಧ ಶಿಕ್ಷಣ	–	೧೯೧೦
೫.	ಗಿರಿಜಾ ಕಲ್ಯಾಣ ಸಾರ	–	೧೯೧೧
೬.	ರಾಜನಿಷ್ಠೆಯು ನಮ್ಮ ಪುಣ್ಯಶಾಲಿಗಳಾದ ಸಾರ್ವಭೌಮರು	–	೧೯೧೨
೭.	ದಾಂಪತ್ಯ	–	೧೯೧೨
೮.	ಕುಟುಂಬ	–	೧೯೧೩
೯.	ನಿರ್ಯಾಣ ಮಹೋತ್ಸವ	–	೧೯೧೫
೧೦.	ಭಗವತೀ ಕಾತ್ಯಾಯಿನೀ	–	೧೯೧೯
೧೧.	ಭಾಗವತಾಮೃತ	–	೧೯೨೨
೧೨.	ಶೈವ ಸುಧಾರ್ಣವ	–	೧೯೨೩
೧೩.	ರಾಮಾಯಣಾಮೃತ (ತುಲಸಿ ರಾಮಾಯಣ)	–	೧೯೨೬
೧೪.	ಸದ್ಗುರು ಪ್ರಭಾವ	–	೧೯೨೮
೧೫.	ಗೀತೆಯ ಶ್ರವಣಾಧಿಕಾರ	–	೧೯೨೮
೧೬.	ವಿವೇಕಾನಂದರು ವೈದಿಕರಿಗೆ ಯಾರು?	–	೧೯೨೮
೧೭.	ಮಹಾಭಾರತಾಮೃತ ಆದಿಪರ್ವ	–	೧೯೩೧
೧೮.	ರಹಸ್ಯಗಳು	–	೧೯೩೩
೧೯.	ಮಹಾಭಾರತಾಮೃತ–ಸಭಾಸದನ	–	೧೯೩೩
೨೦.	ಕಲಿಕುಠಾರ ಅಥವಾ ಲೋಕಾಪುರಪೀಠ ಪ್ರಭಾವ ೨ನೇ ಭಾಗ	–	೧೯೩೮
೨೧.	ನಳ ಚರಿತ್ರ	–	೧೯೩೮
೨೨.	ವೀರ ಪ್ರತಾಪ ಅಥವಾ ಸ್ವಾಭಿಮಾನ ಸಂಭ್ರಮ	–	೧೯೪೯
೨೩.	ಕಲಿಕುಠಾರ ಜ್ಞಾನಯೋಗ ಪ್ರಧಾನ ಖಂಡ	–	೧೯೫೯
೨೪.	ಉತ್ತರ ರಾಮಚರಿತ್ರ ಸಾರ	–	ಸು. ೧೯೧೧
೨೫.	ಸಾಧು ಸದಾಶಿವ ಲೀಲೆ	–	ಸು. ೧೯೧೬
೨೬.	ಕನ್ಯಾ ಶಿಕ್ಷಕ	–	ಸು. ೧೯೨೦
೨೭.	ಬ್ರಾಹ್ಮಣ್ಯ ಪ್ರಾಪ್ತಿ ಸಾಧನೆ	–	ಸು. ೧೯೨೩
೨೮.	ಸುಂದರ ಲೇಖ ಸಮುಚ್ಚಯ	–	ಸು. ೧೯೨೮

ಆಧಾರ : ಗಳಗನಾಥರು ಮತ್ತು ಅವರ ಕಾದಂಬರಿಗಳು, ಕೃಷ್ಣಮೂರ್ತಿ ಕಿತ್ತೂರ
ಪ್ರ – ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೧೯೭೮

ಪ್ರಬುದ್ಧ ಪದ್ಮನಯನೆ

ಮುನ್ನುಡಿ

ಪ್ರಿಯ ವಾಚಕರೆ, ಪದ್ಧತಿಯಂತೆ ಪ್ರಸ್ತಾವನೆಯ ಸಂಬಂಧದಿಂದ ನಾಲ್ಕು ಮಾತುಗಳನ್ನು ಬರೆಯುವ ಮೊದಲು, ಪಾರಿತೋಷಕದ ಆಶೆಯನ್ನು ತೋರಿಸಿ, ಈ ಕಾದಂಬರಿಯನ್ನು ಬರೆಯಲ್ಹಚ್ಚಿದ ಕರ್ನಾಟಕ ವಿದ್ಯಾವರ್ಧಕ ಸಂಘದ ಉಪಕಾರವನ್ನೂ ಇದನ್ನು ಬರೆಯುವ ವಿಷಯವಾಗಿ ಯೋಗ್ಯ ಉಪದೇಶ ಮಾಡಿದ ರಾ. ಸಾ. ರಾಮಚಂದ್ರರಾವ ದೇಶಪಾಂಡೆಯವರ ಉಪಕಾರವನ್ನೂ ಸ್ಮರಿಸದೆ ಇರೆನು..........

'..........ಓದುವವನ ಯೋಗ್ಯತೆ ಇದ್ದಂತೆ ಬೇರೆಬೇರೆ ಜನರಿಗೆ ಬೇರೆ ಬೇರೆ ಪ್ರಕಾರದ ಗ್ರಂಥಗಳು ವಾಚನಾರ್ಹಗಳಾಗುವವು. ಶಾಸ್ತ್ರೀಯ ವಿಷಯಗಳ ಗಹನ ವಿಷಯಗಳ ಗ್ರಂಥಾವಲೋಕನವು ವಿದ್ವಾಂಸರಿಗೆ ಮಾತ್ರ ಸಾಧ್ಯವಾದದ್ದು. ಸಾಧಾರಣ ಜನರಿಗೆ ಆ ಗ್ರಂಥಗಳು ದುರ್ಬೋಧವಾಗಿ ಅವರು ಓದುವ ಲವಲವಿಕೆಯು ನಷ್ಟವಾಗುವ ಸಂಭವವುಂಟು. ಕಾರಣ ವಾಚನಾಭಿರುಚಿ ಇಲ್ಲದ ಜನರಲ್ಲಿ ವಾಚನಾಭಿರುಚಿಯನ್ನು ಹುಟ್ಟಿಸಲಿಕ್ಕೂ ಉದ್ಯೋಗಾತಿಶಯದಿಂದ ಕ್ರಾಂತರಾದವರಿಗೆ ವಿಶ್ರಾಂತಿಯಲ್ಲಿ ಆನಂದ ಗೊಳಿಸಲಿಕ್ಕೂ ಮನೋರಂಜನವಾಗಿ ನೀತಿ ಬೋಧವಾಗುವದಕ್ಕೂ ಉತ್ತಮ ಕಾದಂಬರಿಗಳು ಬೇಕೇ ಬೇಕು........ಮಾತೃಭಾಷಾ ಸೇವೆಯನ್ನು ಮಾಡಲೆಳಸಿ ನಾನು ಈ ಕಾದಂಬರೀ ರೂಪವಾದ ಅಲ್ಪ ಪ್ರಯತ್ನವನ್ನು ಮಾಡಿರುತ್ತೇನೆ. ಈ ಕಾದಂಬರಿಯಲ್ಲಿ 'ಪದ್ಮನಯನಾ' ಎಂಬ ಸ್ತ್ರೀಯು ಮುಖ್ಯ ನಾಯಿಕೆಯಾದ್ದರಿಂದ ಇದಕ್ಕೆ (ಆ) ಹೆಸರು ಕೊಡಲ್ಪಟ್ಟಿದೆ. ಇದರಲ್ಲಿ ಕಪಿಂಜಲದ ಯೋಗದಿಂದ ಸತ್ಸಮಾಗಮವೂ ಸುಮತಿಯ ವರ್ತನದಿಂದ ಸನ್ಮಿತ್ರನ ಮಹತ್ವವೂ ಜೀವನಕಲಾ ಪದ್ಮನಯನೆಯರ ಸ್ಥಿತಿಯಿಂದ ಸುಶಿಕ್ಷಿತರಾದ ಕುಲೀನ ಸ್ತ್ರೀಯರ ನಿರ್ಮಲಾಂತಃಕರಣವೂ, ದುಷ್ಟಬುದ್ಧಿಯ ಕುಮಾರ್ಗದಿಂದ ದುರ್ಜನರ ಕುಟಿಲತ್ವವೂ ಕಮಲಾಕ್ಷ ಪದ್ಮನಯನೆಯರಿ ಗೊದಗಿದ ಪ್ರಸಂಗಗಳಿಂದ ಅಪ್ರೌಢ ವಯಸ್ಕರ ಸ್ವತಂತ್ರಾಚರಣೆಯ ದುಷ್ಪರಿಣಾಮವೂ ಮೇಘನಾದ ಸಿಂಹನಾದರ ನಡಾವಳಿಯಿಂದ ತಾಮಸ ಪ್ರಕೃತಿಯಿಂದಾಗುವ ಹಾನಿಗಳೂ ವ್ಯಕ್ತವಾಗುತ್ತವೆ. ಈ ಕಾದಂಬರಿಯು ಮುಖ್ಯವಾಗಿ ಶೃಂಗಾರ–ವೀರ– ಶೋಕಾದ್ಭುತರಸ ಪ್ರಧಾನ್ಯವಾಗಿರುವದು. ಕಥಾ

ಸಂವಿಧಾನವು ನನ್ನ ಸ್ವಂತ ಕಲ್ಪನೆಯದಿದ್ದು ಅವಾಂತರ ಭಾಗದ ಹತ್ತೆಂಟು ಪುಟಗಳು ಮಾತ್ರ ಅನ್ಯ ಕಾದಂಬರಿಗಳ ಸಹಾಯದಿಂದ ಬರೆಯಲ್ಪಟ್ಟಿವೆ. ಇಷ್ಟರ ಹೊರತು ಇದರಲ್ಲಿ ಬೇರೆ ಗ್ರಂಥಗಳ ಎಂಜಲವು ಬಹುತರವಾಗಿ ದೊರೆಯಲಾರದು.

..........ಇದು ನನ್ನ ಮೊದಲನೆಯ ಪ್ರಯತ್ನವಾದುದರಿಂದ ಇದರಲ್ಲಿ ಅಸಮಂಜಸ ವರ್ಣನೆಗಳೂ, ಅಪಪ್ರಯೋಗಗಳೂ, ಬೇರೆ ಕೆಲವು ದೋಷಗಳೂ ತುಂಬಿರಬಹುದು. ಆದರೆ ವಿದ್ವಜ್ಜನರು ನನ್ನ ವಿಷಯವಾಗಿ ಶಿಷ್ಯ ಪ್ರೇಮವನ್ನು ವಹಿಸಿ ನಿರಭಿಮಾನದಿಂದ ತಪ್ಪು ಗಳನ್ನು ತಿಳಿಸಿದರೆ ಕೃತಜ್ಞನಾಗುವೆನು.

ನರೇಂದ್ರ
೧–೩–೧೮೯೮

ವೇಂಕಟೇಶ ತಿರಕೋ ಕುಲಕರ್ಣಿ
ಗಳಗನಾಥ

ಪಂಚಪ್ರಾಣ

ಮಂಗಲಕರವಾದ ಉಷಃಕಾಲವು ಪೂರ್ವದಿಕ್ಕು ಬಿಳುಪೇರಿದೆ. ನಸುಗಾಳಿಯು ಸುಳ್ಳನೆ ಸುಳಿಯಹತ್ತಿದೆ. ಕೋಳಿಗಳು ''ಕು ಕೂ ಕೂ'' ಎಂದು ಉಚ್ಚಸ್ವರದಿಂದ ಕೂಗತೊಡಗಿವೆ. ದುಂಡಮಲ್ಲಿಗೆ, ಕದರುಮಲ್ಲಿಗೆ, ಜಾಜಮಲ್ಲಿಗೆ, ಸಂಪಿಗೆ, ಗುಲಾಬಿ ಮೊದಲಾದ ಹೂಗಳ ಮೊಗ್ಗೆಗಳು ಅರಳತೊಡಗಿ, ನಾಕ್ಕೂ ಕಡೆಗೆ ತಮ್ಮ ಸುಗಂಧವನ್ನು ಬೀರುತ್ತಲಿವೆ. ಗೂಡಿನಲ್ಲಿದ್ದ ಹಕ್ಕಿಗಳು ಮೆಲ್ಲನೆ ಮುಖವೆತ್ತಿ ನೋಡಿ, ಮೈಕೊಡವಿ ಹೊರಬೀಳುವ ಉಬ್ಬಿನಿಂದ ಕಿಲಿಕಿಲಿ ಧ್ವನಿಮಾಡತೊಡಗಿವೆ. ಪಶು–ಮೃಗಾದಿಗಳು ಒಡ್ಡ ಮುರಿದು, ಆಕಳಿಸಿ, ಬಾಲಕೊಡವಿ ಚೇತರಿಸಿಕೊಳ್ಳಹತ್ತಿವೆ. ಸಂಸಾರಶ್ರಮದಿಂದ ಶಾಂತರಾಗಿ ನಿದ್ದೆಹೋಗಿದ್ದ ಜನರು ಎಚ್ಚತ್ತು, ತಮ್ಮ ತಮ್ಮ ಉದ್ಯೋಗಗಳನ್ನು ಕೈಕೊಳ್ಳುವ ಲವಲವಿಕೆಯಿಂದ ಪ್ರಾತರ್ವಿಧಿಗಳನ್ನು ತೀರಿಸಿಕೊಳ್ಳ ಹತ್ತಿದ್ದಾರೆ. ದೇವಭಕ್ತರ ಪ್ರಾತಸ್ಮರಣಗಳೂ, ಪ್ರಾರ್ಥನೆಗಳೂ ನಡೆದಿವೆ. ವಿದ್ಯಾರ್ಥಿಗಳು ತಮ್ಮ ಬೆಳಗುಮುಂಜಾವಿನ ಓದನ್ನು ಮುಗಿಸಿ, ಪುಸ್ತಕಗಳನ್ನು ಕಟ್ಟತೊಡಗಿದ್ದಾರೆ. ಕರ್ಮನಿರತರ ಪ್ರಾತಃಸ್ನಾನಗಳು ನಡೆದಿವೆ. ದೇವಾಲಯಗಳೊಳಗಿನ ಗಂಟೆಗಳ ನಾದಗಳು ಕಿವಿಗೆ ಇಂಪಾಗಿ ಕೇಳಿಸಹತ್ತಿವೆ. ಕೂಸುಗಳು ಎಚ್ಚತ್ತು ಕೆಲವು ಆಡತೊಡಗಿವೆ, ಕೆಲವು ಅಳತೊಡಗಿವೆ. ನವವಧುಗಳು ತಮ್ಮ ಪತಿಗಳ ಮಗ್ಗಲಲ್ಲಿ ಪಕ್ಕನೆ ಎಚ್ಚತ್ತು, ನಿದ್ದೆಗಣ್ಣುಗಳನ್ನು ತಿಕ್ಕುತ್ತ ತತ್ತರಿಸುತ್ತ ಲಜ್ಜಿತರಾಗಿ ಅವಸರದಿಂದ ಹೊರಗೆ ಬರತೊಡಗಿದ್ದಾರೆ. ಚಪಲರಾದ ತರುಣರು ಸ್ವಚ್ಛವಾದ ಬೈಲಹವೆಯಲ್ಲಿ ಉಲ್ಲಾಸದಿಂದ ಸಂಚರಿಸುತ್ತಲಿದ್ದಾರೆ. ಸೋಮಾರಿಗಳು ಮಾತ್ರ ಮುಸುಕಿನೊಳಗಿಂದ ಹಣಕಿ ನೋಡಿ ನೋಡಿ, ಇನ್ನೂ ಬೆಳಗಾಗಿಲ್ಲೆಂದು ಮತ್ತೆ ಮತ್ತೆ ಮುದುಡಿಕೊಂಡು ಬೀಳತೊಡಗಿದ್ದಾರೆ. ಕಾಗೆಗಳ ಕರ್ಕಶವಾದ ಕೂಗಿಗೂ ಅವರು ಎಚ್ಚರಿಯಲೊಲ್ಲರು! ಇಂಥ ಭಾಗ್ಯಹೀನರಿಗೆ ಉಷಃ ಕಾಲದಂಥ ಪ್ರಶಾಂತಸಮಯದ ಆನಂದದ ಅನುಭವವು ಹೇಗಾಗಬೇಕು?

ಹೀಗೆ ಬಿಳುಪೇರಿದ ಪೂರ್ವದಿಕ್ಕು ಮೆಲ್ಲಮೆಲ್ಲನೆ ಕೆಂಪಾಗತೊಡಗಿತು. ಇನ್ನು ಬಾಲಸೂರ್ಯನು ಹೊರಬಿದ್ದು ತನ್ನ ಹೊಂಬಣ್ಣದ ಕಿರಣಗಳನ್ನು ಹರವತಕ್ಕವನು, ಅಷ್ಟರಲ್ಲಿ ಗಂಗಾತೀರದ ಮಣಿಕರ್ಣಿಕೆಯ ಘಾಟಿನಮೇಲೆ ಒಬ್ಬ ಬ್ರಹ್ಮರ್ಷಿಯು

ಬೊಗಸೆಯಲ್ಲಿ ನೀರನ್ನು ತುಂಬಿಕೊಂಡು, ಅರ್ಘ್ಯಕೊಡುವದಕ್ಕಾಗಿ ಮಂತ್ರವನ್ನು ಉಚ್ಚರಿಸುತ್ತ ಪ್ರತಿಸೂರ್ಯನಂತೆ ನಿಂತುಕೊಂಡಿದ್ದನು. ಆತನಲ್ಲಿ ಬಾಹ್ಯಾಡಂಬರವು ಎಷ್ಟು ಮಾತ್ರವೂ ತೋರುತ್ತಿದ್ದಿಲ್ಲ. ಆತನು ಗೃಹಸ್ಥಾಶ್ರಮಿಯು ಆತನ ವಯಸ್ಸು ಅರವತ್ತರಮೇಲೆ ಎಪ್ಪತ್ತರ ಒಳಗೆ ಇರಬಹುದು. ಆ ಮಹಾತ್ಮನು ಶುಭ್ರವಸ್ತ್ರವನ್ನುಟ್ಟು ಕೊಂಡು, ಕೆಂಪುಶಾಲನ್ನು ಹೊದ್ದುಕೊಂಡಿದ್ದನು. ಆತನ ತಲೆಯಲ್ಲಿ ಕೆಂಪುಶಕಲಾತಿಯ ಮನೋಹರವಾದ ಟೊಪ್ಪಿಗೆಯು ಒಪ್ಪುತ್ತಿತ್ತು. ಆ ಶ್ಯಾಮ ಸುಂದರನು ಮೈತುಂಬ ಭಸ್ಮವನ್ನು ಹಚ್ಚಿಕೊಂಡು, ಕೊರಳಲ್ಲಿ ರುದ್ರಾಕ್ಷಮಾಲೆಯನ್ನೂ, ಸ್ಫಟಿಕಮಾಲೆಯನ್ನೂ ಹಾಕಿಕೊಂಡಿದ್ದನು. ಆತನ ಬಲಭಾಗದಲ್ಲಿ ಸುಮಾರು ನಲವತ್ತೈದು ವರ್ಷದ ತೇಜಪುಂಜ ನಾದ ಜಟಾಧಾರಿ ಶಿಷ್ಯನೊಬ್ಬನು, ಮತ್ತೆ ಅರ್ಘ್ಯೋದಕವನ್ನು ಸದ್ಗುರುವಿನ ಬೊಗಸೆಯಲ್ಲಿ ಹಾಕುವದಕ್ಕಾಗಿ ಗಂಗೋದಕದ ಕಲಶವನ್ನು ಕೈಯಲ್ಲಿ ಹಿಡಿದು ಬಗ್ಗಿ ಬಹು ವಿನಯದಿಂದ ನಿಂತುಕೊಂಡಿದ್ದನು. ಉಳಿದ ನಾಲ್ಕಾರು ಜನ ಶಿಷ್ಯರು ಆ ತೇಜೋಮೂರ್ತಿಯಲ್ಲಿಯೇ ಚಿತ್ತವನ್ನಿಟ್ಟು ನಿಂತುಕೊಂಡಿದ್ದರು. ಆಗಿನ ಮಣಿಕರ್ಣಿಕೆಯ ಘಾಟಿನ ವಿಚಿತ್ರವಾದ ಶೋಭೆ ಯನ್ನು ವರ್ಣಿಸುವದು ಸುಲಭವಲ್ಲ. ತರತರದ ಉಡಿಗೆ– ತೊಡಿಗೆಯ ಹಾಗು ವಿಚಿತ್ರವಾದ ನಡೆನುಡಿಯ ಹಲವು ಜಾತಿಯ ಜನರಿಂದ ಅದು ತುಂಬಿ ತುಳುಕುತ್ತಿತ್ತು. ಗಂಡಸರು ಸ್ನಾನಮಾಡಿ, ಕೆಲವರು ತ್ರಿಪುಂಡ್ರಭಸ್ಮವನ್ನೂ, ಕೆಲವರು ಮುದ್ರೆಗಳನ್ನೂ, ಕೆಲವರು ಕುಂಕುಮವನ್ನೂ ಧರಿಸಿದ್ದರು. ಹೆಂಗಸರು ಮೈತೊಳೆದು ಅರಿಶಿನ, ಕುಂಕುಮ, ಹೂಮಾಲೆ ಮೊದಲಾದ ಸೌಭಾಗ್ಯದ್ರವ್ಯಗಳಿಂದ ಒಪ್ಪುತ್ತಿದ್ದರು. ಸಂಧ್ಯಾವಂದನ, ವೇದಘೋಷ, ನಾಮ ಸಂಕೀರ್ತನ, ಗಂಗಾಪೂಜೆ, ಪ್ರತಿಮಾರ್ಚನ, ಪಾರ್ಥಿವಪೂಜೆ ಮೊದಲಾದವುಗಳ ಯೋಗ ದಿಂದ ಜನರ ಕಣ್ಣುಗಳೂ, ಕಿವಿಗಳೂ ಪವಿತ್ರವಾಗಿ ಮನಸ್ಸು ಪ್ರಸನ್ನವಾಗುತ್ತಿತ್ತು!

ಸೂರ್ಯನು ಮೇಲಕ್ಕೇರಿದಂತೆ ಅವನ ಕೆಂಪುಕಿರಣಗಳು ಸುತ್ತೆಲ್ಲ ಪಸರಿಸಿ, ಮಣಿಕರ್ಣಿಕೆಯ ಶೋಭೆಯನ್ನು ಹೆಚ್ಚಿಸಿದವು. ಬ್ರಹ್ಮರ್ಷಿಯು ಅನುಷ್ಠಾನವನ್ನು ತೀರಿಸಿಕೊಂಡು, ಘಾಟಿನ ಮೇಲಿದ್ದ ದತ್ತಮಂದಿರಕ್ಕೆ ಹೋದನು. ಆತನು ಶ್ರೀ ದತ್ತ ಸದ್ಗುರುವನ್ನು ಪೂಜಿಸಿದ ಬಳಿಕ, ಹೊರಗೆ ಬಂದು, ನೆರೆದ ಜನರನ್ನು ಬ್ರಹ್ಮಭಾವನೆಯಿಂದ ವಂದಿಸಿ, ಶಿಷ್ಯರು ಹಾಕಿದ ಕೃಷ್ಣಾಜಿನದ ಮೇಲೆ ಕುಳಿತುಕೊಂಡನು. ನೋಡನೋಡುತ್ತ ಗುಡಿಯು ಜನರಿಂದ ತುಂಬಿಹೋಯಿತು. ಯತಿಗಳು, ಗೃಹಸ್ಥಾಶ್ರಮಿಗಳು, ಸಾಧುಸಂತರು, ಬೈರಾಗಿಗಳು, ಹೆಂಗಸರು, ಹುಡುಗರು ಆ ಬ್ರಹ್ಮರ್ಷಿಯನ್ನು ಸುತ್ತುಗಟ್ಟಿ ಕುಳಿತರು. ಆ ಮಹಾತ್ಮನ ದಿವ್ಯವಾದ ತೇಜಸ್ಸು ಜನರ ಮನಸ್ಸನ್ನು ಆಕರ್ಷಿಸಿಬಿಟ್ಟಿತು. ಜನರು ಸದ್ಬೋಧಾಮೃತ ಶ್ರವಣದಿಂದ ಪರವಶರಾಗತೊಡಗಿದರು. ಈ ಮೇರೆಗೆ ಸಣ್ಣವರು– ದೊಡ್ಡವರು, ಗಂಡಸರು–ಹೆಂಗಸರು, ಪಂಡಿತರು–ಪಾಮರರು, ವಿರಕ್ತರು– ವಿಷಯಿಗಳು ಸರಿಯಾಗಿ ಸಮಾಧಾನಪಟ್ಟು, ಮಂದಿರದಲ್ಲಿ ಕುಳಿತಿರಲು, ತೇಜಃಪುಂಜನಾದ ಒಬ್ಬ ಪುರುಷನು ದರ್ಶನೋತ್ಕಂಠಿತನಾಗಿ ತನ್ನ ಪತ್ನಿಯೊಡನೆ ಅಲ್ಲಿಗೆ ಬಂದನು.

ಆ ದಿವ್ಯ ಪುರುಷನು ವಿನಯದ ಉಡಿಗೆ–ತೊಡಿಗೆಗಳನ್ನು ಧರಿಸಿದ್ದರೂ, ಅವನ ಮುಖದಲ್ಲಿ ರಾಜತೇಜವು ಉಕ್ಕುತ್ತಿತ್ತು. ಆತನ ವಯಸ್ಸು ಐವತ್ತರ ಮೇಲೆ ಇರಬಹುದು; ಅವನ ನಿಲುವಿಕೆ ಎತ್ತರ, ಮೈಕಟ್ಟು ಕಸುವಿನದು; ವಿಶಾಲವಾದ ವಕ್ಷಸ್ಥಲವೂ, ಆಜಾನುಬಾಹುಗಳೂ ಆತನ ಅಲೌಕಿಕತೆಯನ್ನು ವ್ಯಕ್ತಮಾಡುತ್ತಿದ್ದವು. ಒಟ್ಟಿಗೆ ಆತನ ಭವ್ಯ ಮೂರ್ತಿಯು ಜನರ ಚಿತ್ತವನ್ನು ಆಕರ್ಷಿಸತೊಡಗಿತು. ಆತನು ಪಂಚಫಲಗಳನ್ನು ಸಮರ್ಪಿಸಿ, ಬ್ರಹ್ಮರ್ಷಿಯನ್ನು ಸಾಷ್ಟಾಂಗವಾಗಿ ವಂದಿಸಿ, ಎದ್ದು ಕೈಜೋಡಿಸಿ ನಿಂತುಕೊಂಡನು. ಸ್ವಪ್ನದಲ್ಲಿ ದರ್ಶನಕೊಟ್ಟ ಮಹಾಪುರುಷನೇ ಪ್ರತ್ಯಕ್ಷ ತನ್ನ ಎದುರಿಗೆ ಕುಳಿತಿದ್ದನ್ನು ನೋಡಿ, ಆತನು ಆನಂದಾಶ್ಚರ್ಯಗಳಿಂದ ಪರವಶನಾದನು. ಆತನ ಕಣ್ಣೊಳಗಿಂದ ಆನಂದ ಬಾಷ್ಪಗಳು ಉದರತೊಡಗಿದವು; ಆತನ ದೇಹವು ರೋಮಾಂಚಿತವಾಯಿತು; ಆತನಲ್ಲಿ ವಿಚಿತ್ರವಾದ ಭಕ್ತಿಯು ತಲೆದೋರಿತು. ಬರಬರುತ್ತ ಆತನ ರಾಜತೇಜಸ್ಸು ಋಷಿಯ ಬ್ರಹ್ಮತೇಜಸ್ಸಿನಲ್ಲಿ ಅಡಗತೊಡಗಿತು. ಹೀಗೆ ಆ ವೀರವರ್ಮ–ಸಾರ್ವಭೌಮನು ಸ್ವಪರ ಪ್ರಭಾವಗಳನ್ನು ಮರೆತು, ಬ್ರಹ್ಮರ್ಷಿಯಲ್ಲಿ ನಟ್ಟಮನಸ್ಸುಳ್ಳವನಾಗಿ ಲೀನತೆಯಿಂದ ನಿಂತುಕೊಂಡಿರಲು, ಆತನ ಹೆಂಡತಿಯಾದ ಮನಮೋಹಿನಿಯು ಋಷಿಯನ್ನು ವಂದಿಸಿ, ಪತಿಯ ಬಳಿಯಲ್ಲಿ ನಿಂತುಕೊಂಡಿದ್ದಳು. ಉತ್ತರೀಯದಿಂದ ಆಕೆಯ ಸರ್ವಾಂಗವು ಮುಚ್ಚಿತ್ತು. ಆ ಸಾಧ್ವಿಯ ಮನೋಹರವಾದ ಮುಖಮಂಡಲದಲ್ಲಿ ಸುಪ್ರಸನ್ನತೆಯು ಒಪ್ಪುತ್ತಿತ್ತು. ಆಗಿನ ಆ ದತ್ತಮಂದಿರದ ಶೋಭೆಯು ವರ್ಣನೀಯವಾಗಿತ್ತು. ಏನು ಹೇಳುವದು! ಅಗ್ರಸ್ಥಾನದಲ್ಲಿ ಅಮೋಘವಾದ ಬ್ರಹ್ಮತೇಜಸ್ಸು ವಿರಾಜಮಾನವಾಗಿದ್ದು, ಅದರ ಸಮ್ಮುಖದಲ್ಲಿ ಪ್ರತಾಪಯುಕ್ತವಾದ ಕ್ಷಾತ್ರತೇಜಸ್ಸು ಸೌಭಾಗ್ಯದೊಡನೆ ಒಪ್ಪುತ್ತಲಿದೆ; ಅವೆರಡು ತೇಜಸ್ಸುಗಳನ್ನು ಚರಾಚರಾತ್ಮಕವಾದ ಪ್ರಪಂಚವೇ ಆಶ್ರಯಿಸಿರುವಂತೆ, ಶ್ರೋತ್ರಸಮೂಹವು ಆ ಬ್ರಹ್ಮರ್ಷಿಯನ್ನು ಸುತ್ತುಗಟ್ಟಿದೆ; ಹೀಗೆ ಆಕಸ್ಮಿಕವಾಗಿ ಒದಗಿದ ಈ ಅಪೂರ್ವ ಯೋಗದಿಂದ ಆ ಮಂದಿರವು ಕ್ಷಣಮಾತ್ರ ನಿಃಶಬ್ದವಾಯಿತು. ಬ್ರಹ್ಮರ್ಷಿಯ ಕೃಪಾದೃಷ್ಟಿಯು ವೀರವರ್ಮನ ಮೇಲೆ ಬಿದ್ದಿತ್ತು. ವೀರವರ್ಮನೂ, ಮನಮೋಹಿನಿಯೂ ಭಕ್ತಿಪುರಸ್ಸರವಾಗಿ ವಿನಯದಿಂದ ಬ್ರಹ್ಮರ್ಷಿಯ ಚರಣಗಳಲ್ಲಿ ದೃಷ್ಟಿಯನ್ನಿಟ್ಟು ನಿಂತಿದ್ದರು. ಕುಳಿತವರು ಕೌತುಕದಿಂದ ಒಮ್ಮೆ ವೀರವರ್ಮನನ್ನೂ, ಒಮ್ಮೆ ಬ್ರಹ್ಮರ್ಷಿಯನ್ನೂ ನೋಡುತ್ತಿದ್ದರು.

ಹೀಗಿರಲು, ವೀರವರ್ಮನು ಸದ್ಗದಿತಕಂಠನಾಗಿ ಬ್ರಹ್ಮರ್ಷಿಯನ್ನು ಕುರಿತು— ಮಹಾತ್ಮನೇ, ನಿನ್ನ ಪುಣ್ಯಕರವಾದ ಮೂರ್ತಿಯ ದರ್ಶನದಿಂದ ಈ ವೀರವರ್ಮನು ಕೃತಾರ್ಥನಾದನು. ಅವನ ಕುಲಕೋಟಿಯು ಉದ್ಧೃತವಾಯಿತು. ಅವನ ಪೂರ್ವಜರ ಪ್ರಜಾಪಾಲನದ ಪುಣ್ಯವೇ ಇಂದು ವೀರವರ್ಮನಿಗೆ ಲಭಿಸಿದಂತಾಗಿರುತ್ತದೆ. ನಮ್ಮಂಥ ಪತಿತರ ಉದ್ಧಾರಕ್ಕಾಗಿ ಪರಮೇಶ್ವರನು ಮಹಾಪುರುಷರ ರೂಪದಿಂದ ಆಗಾಗ್ಗೆ ಪ್ರಕಟವಾಗುತ್ತಾನಂತೆ! ಹಾಗಲ್ಲದಿದ್ದರೆ ಸಂಸಾರಮಗ್ನರಾದ ನಮ್ಮನ್ನು ಮೇಲಕ್ಕೆ ಯಾರು ಎತ್ತಿಕೊಳ್ಳಬೇಕು? ಮಹಾತ್ಮನೇ, ಪೂರ್ವಜರ ಪುಣ್ಯದಿಂದಲೂ, ನಿನ್ನ ಕೃಪೆಯಿಂದಲೂ

ನನಗೆ ಸಾರ್ವಭೌಮಪದವಿಯು ಪ್ರಾಪ್ತವಾಗಿರುತ್ತದೆ; ನನ್ನ ಐಶ್ವರ್ಯ–ವೈಭವಗಳಿಗೆ ಕೊರತೆಯಿಲ್ಲ; ಅಸಂಖ್ಯ ಜನರು ನನ್ನ ಮುಂದೆ—"ಜೀಯಾ" ಎಂದು ಕೈಕಟ್ಟಿಕೊಂಡು ನಿಂತು ಕೊಳ್ಳುತ್ತಾರೆ; ಪರರಾಜನನ್ನು ಪರಾಭವಗೊಳಿಸುವಷ್ಟು ಬಲವೂ, ಪ್ರತಾಪವೂ ನನ್ನಲ್ಲಿರುತ್ತವೆಂಬ ಅಭಿಮಾನವು ನನಗಿರುತ್ತದೆ; ಅನುಕೂಲೆಯೂ, ಸುಂದರಿಯೂ ಆದ ಈ ಹೆಂಡತಿ ಯಿದ್ದಾಳೆ; ಅವಯವಗಳಂತೆ ಸಹಾಯಮಾಡುವ ಮಂತ್ರಿಮಂಡಲವೂ, ಸೇನಾಪತಿಗಳೂ ಇದ್ದಾರೆ; ಯಾತಕ್ಕೇನು ಕೊರತೆಯಿದೆ? ಇದ್ದರೆ ಸಂತತಿಯ ಕೊರತೆಮಾತ್ರ ಇರಬಹುದು; ಆದರೆ ಅದಕ್ಕೆ ನಾನು ಸದ್ಯಕ್ಕೆ ಮಹತ್ವಕೊಡುವದಿಲ್ಲ. ಪುಣ್ಯಮೂರ್ತಿಯೇ, ಯಾರಿಗೂ ಇಲ್ಲದಷ್ಟು ಅನುಕೂಲತೆಗಳು ನನಗಿದ್ದು, ಕೃಪಾಮೂರ್ತಿಯಾದ ನಿನ್ನ ದರ್ಶನಮಾತ್ರದಿಂದ ಈಗಾಗಿರುವ ಸಾತ್ವಿಕಾನಂದದ ಅನುಭವವು ಇಂದಿನವರೆಗೆ ಒಮ್ಮೆಯಾದರೂ ನನಗೆ ಆಗಿರಬಾರದೆ? ಸತ್ಸಮಾಗಮದಲ್ಲಿಯೇ ಆನಂದವಿರುತ್ತದೆಂಬದನ್ನು ನಾನು ಇಂದು ಮನಗಂಡೆನು. ಈಗಿನ ಸದ್ವೃತ್ತಿಯು ಅಖಂಡವಾಗಿ ನನ್ನಲ್ಲಿ ನೆಲೆಸಿದರೆ, ಸಾರ್ವಭೌಮಪದವಿಗಿಂತ ಹೆಚ್ಚಿನ ಪದವಿಗಳನ್ನು ಅದರ ಮೇಲೆ ನಿವಾಳಿಸಿ ಒಗೆಯಬಹುದು. ಸಾಕು, ಹೆಚ್ಚಿನ ಸುಖಕ್ಕಾಗಿ ಮುಗಿಬಿದ್ದು, ಮುಗ್ಗರಿಸಿ ಗಾಸಿಯಾಗುವದು ಇಂದಿಗೆ ಸಾಕು. ಕರುಣಾಸಿಂಧುವೇ, ನೀನು ಸ್ವಪ್ನದಲ್ಲಿ ಬಂದು ನನ್ನನ್ನು ಎಚ್ಚರಗೊಳಿಸಿ ಇಲ್ಲಿಗೆ ಬರ ಮಾಡದಿದ್ದರೆ, ನಾನೆಲ್ಲಿ ಇಲ್ಲಿಗೆ ಬರುತ್ತಿದ್ದೆನು? ನಿನ್ನ ದರ್ಶನಲಾಭವು ನನಗೆಲ್ಲಿ ಆಗುತ್ತಿತ್ತು? ಈ ಅಲಂಬುದ್ಧಿಯು ನನ್ನಲ್ಲೆಲ್ಲಿ ಹುಟ್ಟುತ್ತಿತ್ತು? ನನ್ನ ಕನೋಜ ಪಟ್ಟಣವೆಲ್ಲಿ, ಕಾಶಿಯೆಲ್ಲಿ? ನನ್ನ ಆಗಿನ ಪುತ್ರಕಾಮನವೆಲ್ಲಿ, ಈಗಿನ ನಿಸ್ಪೃಹತೆಯಲ್ಲಿ? ಇಷ್ಟಾರ್ಥಪ್ರದನೇ, ದರ್ಶನಕ್ಕಾಗಿ ಬಂದ ನನ್ನನ್ನು ಸುಮ್ಮನೆ ಹಿಂದಕ್ಕೆ ಕಳಿಸಬೇಡ ಕಂಡೆಯಾ! ದರ್ಶನದಿಂದ ತೃಪ್ತವಾಗಿದ್ದ ನನ್ನ ಕಣ್ಣುಗಳಿಗೆ ನಿನ್ನ ಮೂರ್ತಿಯು ಮರೆಯಾಗದಂತೆ ಅನುಗ್ರಹಿಸು!

ಈ ಮೇರೆಗೆ ನುಡಿದು ವೀರವರ್ಮನು ಬ್ರಹ್ಮರ್ಷಿಯನ್ನು ಮತ್ತೆ ಸಾಷ್ಟಾಂಗವಾಗಿ ವಂದಿಸಿ, ಎದ್ದು ಕೈಜೋಡಿಸಿ ನಿಂತುಕೊಂಡನು. ಅದನ್ನು ನೋಡಿ ಬ್ರಹ್ಮರ್ಷಿಯು ಸಂತುಷ್ಟ ನಾಗಿ ವೀರವರ್ಮನನ್ನು ಕುರಿತು—"ನೃಪೋತ್ತಮನೇ, ಪತ್ನಿಸಮೇತನಾದ ನೀನು ಇತ್ತ ಬಾ, ಈ ಆಸನದಲ್ಲಿ ವಿಶ್ರಮಿಸು. ನೀನು ಬಹುಭಾಗ್ಯವಂತನು ಕಂಡೆಯಾ! ಈಶ್ವರಾಂಶನಾದ ನಿನ್ನ ಪುಣ್ಯವನ್ನು ನಾನೇನು ವರ್ಣಿಸುವೆನು? ನಿನ್ನ ಪ್ರಜಾವಾತ್ಸಲ್ಯಕ್ಕೂ, ಸತ್ವಕ್ಕೂ, ವಿನಯಕ್ಕೂ ಮೆಚ್ಚಿ ಭಗವಂತನು, ಯಃಕಶ್ಚಿತ ಬ್ರಾಹ್ಮಣನಾದ ನನ್ನ ರೂಪದಿಂದ ನಿನಗೆ ದರ್ಶನಕೊಟ್ಟಿರಬಹುದು. ನಿನ್ನ ಪುಣ್ಯದ ಬಲವಲ್ಲದೆ ಈ ಕಪಿಂಜಲನಲ್ಲೇನು ಮಹತ್ವವಿದೆ? ಈ ಜಗತ್ತಿನಲ್ಲಿ ಯಾವಾಗಲೂ ಎಚ್ಚರದಿಂದ ನಡೆಯುವ ನೀನು, ನನ್ನ ದರ್ಶನದಿಂದ ಅಲಂಬುದ್ಧಿಯನ್ನು ಪಡೆದೆನೆಂದು ಹೇಳುವದು ಔಪಚಾರಿಕವೇ ಸರಿ. ನಿನ್ನಂಥ ನಿಸ್ಪ್ರಹನನ್ನಲ್ಲದೆ, ಸಾರ್ವಭೌಮಪದವಿಯು ಮತ್ತಾರನ್ನು ಹೊಂದಬೇಕು? ಚಕ್ರವರ್ತಿಯೇ, ನಿನ್ನ ಪದವಿಯು ಸ್ಥಿರವಾಗಿರಲಿ; ನಿನ್ನ ಕೊರತೆಗಳೆಲ್ಲ ಕೂಡಿಬರಲಿ; ನೀನು ಜಯಶಾಲಿಯಾಗಿ ಬಾಳಿ, ಕಡೆಗೆ ಪತ್ನಿಯೊಡನೆ ಶಾಶ್ವತಸುಖವನ್ನು ಹೊಂದು" ಎಂದು ಆಶೀರ್ವದಿಸಿದನು.

ವೀರವರ್ಮನು ಕೆಲವು ದಿನ ಕಾಶಿಯಲ್ಲಿದ್ದು ಹೆಂಡತಿಯೊಡನೆ ಕಪಿಂಜಲನ ಸೇವೆಯನ್ನು ಮಾಡಿ ಆತನ ಮನಸ್ಸನ್ನು ಒಲಿಸಿಕೊಂಡನು. ಸತ್ಸಂಗತಿಯ ಮುಂದೆ ರಾಜ್ಯ ಸುಖವು ತುಚ್ಛವೆಂದು ತಿಳಿಯುವ ಆ ವೀರವರ್ಮನು, ಕಪಿಂಜಲನನ್ನು ಅಗಲಿ ಇರದಾದನು. ಆತನು ಕಪಿಂಜಲನನ್ನು ಪ್ರಾರ್ಥಿಸಿ, ಶಿಷ್ಯಸಮೇತನಾದ ಆ ಮಹಾ ಪುರುಷನನ್ನು ತನ್ನ ರಾಜಧಾನಿಗೆ ಪ್ರಯತ್ನ ಪೂರ್ವಕವಾಗಿ ಕರೆದೊಯ್ದನು. ಸ್ವಲ್ಪ ದಿನಗಳಲ್ಲಿಯೇ ಆತನು ಭವ್ಯವೂ, ಮನೋಹರವೂ ಆದ ಒಂದು ಮಂದಿರವನ್ನು ಕಪಿಂಜಲನ ಸಲುವಾಗಿ ಅರಮನೆಯ ಸಮೀಪದಲ್ಲಿ ಕಟ್ಟಿಸಿ ಅದರಲ್ಲಿ ಎಲ್ಲ ಬಗೆಯ ಅನುಕೂಲತೆಗಳನ್ನು ಒದಗಿಸಿಕೊಟ್ಟು, ತಾನು ಪತ್ನಿಯೊಡನೆ ಗುರುಸೇವಾ ತತ್ಪರನಾದನು.

ಈ ಮೇರೆಗೆ ವೀರವರ್ಮನ ಮನಸ್ಸು ಗುರುಸೇವೆಯಲ್ಲಿ ತೊಡಗಿ ಕೆಲವು ದಿನಗಳು ಕ್ರಮಿಸಲು, "ನಿನ್ನ ಕೊರತೆಗಳು ಕೂಡಿಬರಲಿ" ಎಂಬ ಸದ್ಗುರುವಿನ ಆಶೀರ್ವಚನವು ಸತ್ಯವಾಗುವ ಕಾಲವು ಒದಗಿತು. ಶ್ರೀಗುರು ಕೃಪೆಯಿಂದ ಮನಮೋಹಿನಿಯು ಗರ್ಭಿಣಿಯಾಗಿ, ಕಾಲೋಚಿತವಾದ ವೈಭವಗಳನ್ನು ಅನುಭವಿಸುತ್ತ ನವಮಾಸಗಳು ತುಂಬುತ್ತಲೇ ಹೆಣ್ಣುಮಗುವನ್ನು ಹೆತ್ತಳು. ಆಗ ಅರಸನಿಗಾದ ಆನಂದವನ್ನು ವರ್ಣಿಸುವದು ಸುಸಾಧ್ಯವಲ್ಲ. ಬಹುದಿವಸ ಮಕ್ಕಳು–ಮಕ್ಕಳೆಂದು ಹಲುಬಿದವರಿಗೆ ಗಂಡಾಗಲಿ, ಹೆಣ್ಣಾಗಲಿ ಸಂತತಿಯಾದರೆ, ಎಷ್ಟು ಸಂತೋಷವಾಗುತ್ತದೆಂಬದನ್ನು ಬರೆದು ತಿಳಿಸಲಾಗುವದಿಲ್ಲ, ಅದು ಅನುಭವದಿಂದ ತಿಳಿಯತಕ್ಕದ್ದಾಗಿರುವದು. ವೀರವರ್ಮನ ಅಂತಃಕರುಣವು ಆನಂದದಿಂದ ಉಕ್ಕಿಬರತೊಡಗಿತು. ಆತನು ನಿನ್ನ ಗುರುವನ್ನು ಮನಸ್ಸಿನಲ್ಲಿ ಸ್ಮರಿಸಿ ಶತಶಃ ಆತನನ್ನು ನಮಸ್ಕರಿಸಿದನು; ಯಾಚಕರಿಗೆ ದಾನಮಾಡುವದಕ್ಕಾಗಿ ಬಹಳ ಹಣವನ್ನು ಭಂಡಾರದೊಳಗಿಂದ ಕೊಡಿಸಿದನು; ಅವನ ಅಪ್ಪಣೆಯಿಂದ ಕಾರಾಗೃಹದಲ್ಲಿದ್ದ ಅಪರಾಧಿಗಳು ಮುಕ್ತರಾದರು; ಎಲ್ಲ ದೇವಾಲಯಗಳು ಶೃಂಗರಿಸಲ್ಪಟ್ಟವು; ಮಂಗಳವಾದ್ಯಗಳು ಮೊಳಗಿದವು. ರಾಜಪುತ್ರಿಯ ಜನನದ ಆನಂದಕ್ಕಾಗಿ ಪ್ರಜೆಗಳು ಸ್ವಾಮಿಭಕ್ತಿ ಪ್ರದರ್ಶಕವಾದ ಉತ್ಸವಗಳನ್ನು ಮಾಡ ತೊಡಗಿದರು. ಶಿಶುವನ್ನು ನೋಡಲು ಆತುರಪಡುತ್ತಿದ್ದ ಅರಸನಿಗೆ ದಾಸಿಯರು ರಾಜಪುತ್ರಿಯನ್ನು ತೋರಿಸಿದರು. ಆತನು ಕನ್ಯಾರತ್ನದ ಅಪ್ರತಿಮವಾದ ಸೌಂದರ್ಯಕ್ಕೆ ಬೆರಗಾಗಿ ಆನಂದಸಾಗರದಲ್ಲಿ ಮುಳುಗಿದನು. ಹೀಗೆ ಆನಂದಪರವಶನಾದ ಅರಸನು ಕಪಿಂಜಲ ಋಷಿಯ ಬಳಿಗೆ ಹೋಗಿ, ಪುತ್ರಿಯು ಜನಿಸಿದ ಸಂಗತಿಯನ್ನು ತಿಳಿಸಲು, ತ್ರಿಕಾಲಜ್ಞನಾದ ಆ ಮಹಾತ್ಮನು ಅರಸನನ್ನು ಕುರಿತು—"ದೊರೆಯೇ, ನಿನಗೆ ಸಂತತಿಯಾದದ್ದು ಬಹು ಸಂತೋಷವು. ಆ ಕೂಸಿಗೆ ಪದ್ಮನಯನೆಯೆಂದು ಹೆಸರನ್ನಿಡು. ಸಾರ್ವಭೌಮನ ಮಗಳಾದ ಪದ್ಮನಯನೆಯು ಸಾರ್ವಭೌಮನ ಹೆಂಡತಿಯೂ, ಸಾರ್ವಭೌಮನ ತಾಯಿಯೂ ಆಗುವಳು. ಅದನ್ನು ನೀನು ಕಣ್ಣಾರೆ ನೋಡುವೆ. ಇದೆಲ್ಲ ಸರಿ; ಆದರೆ ನಿನ್ನ ಪುತ್ರಿಯು ಹದಿನಾರನೆಯ ವರುಷದ ಪ್ರಾಯದಲ್ಲಿ ನಿನ್ನನ್ನು ಅಗಲಿ ಬಹಳ ಸಂಕಟಗಳನ್ನು ಅನುಭವಿಸುವಳು. ನೀನು ಮಾತ್ರ ಅವಳಿಗೆ ಯಾವತ್ತು ವಿದ್ಯಾಭ್ಯಾಸವನ್ನು ಮನಮುಟ್ಟಿ

ಮಾಡಿಸು. ಇಲ್ಲದಿದ್ದರೆ ಮುಂದೆ ಒದಗುವ ಸಂಕಟಗಳನ್ನು ನೀಗುವದು ಅವಳಿಗೆ ಬಹಳ ಕಠಿಣವಾದೀತು.

ಋಷಿಯ ಭವಿಷ್ಯವಚನದಲ್ಲಿ ಇಷ್ಟ ಸಂಗತಿಗಿಂತ ಅನಿಷ್ಟವಾದ ಸಂಗತಿಯು ಕಡಿಮೆಯಿದ್ದರೂ, ಆ ಅನಿಷ್ಟ ಸಂಗತಿಯಿಂದ ಅರಸನ ಮನಸ್ಸು ಬಹಳವಾಗಿ ನೊಂದಿತು. ಸಾಂಸಾರಿಕರು ಸದಾಸುಖವನ್ನು ಬಯಸುತ್ತಾರೆ; ದುಃಖದ ನೆರಳಿಗೆ ಸಹ ನಿಲ್ಲಲು ಅವರು ಅಂಜುವರು; ಆದರೆ ಸಂಸಾರದಲ್ಲಂತು ಸುಖ-ದುಃಖಗಳು ಬಹುತರ ಜೋಡಾಗಿಯೇ ಬರುವವು. ಸದಾ ಸುಖಿಯಾಗಿರುವ ಸದಾ ದುಃಖಿಯಾಗಿರುವ ಸಂಸಾರಿಕರನ್ನು ಕಾಣುವದು ಅಸಂಭವವು. ಹೀಗಿದ್ದರೂ, ಸತ್ಸಮಾಗಮದಿಂದ ವೀರವರ್ಮನ ಮನಸ್ಸಿನ ಮೇಲೆ ಬಹುಮಟ್ಟಿಗೆ ಸತ್ಪರಿಣಾಮವಾಗಿದ್ದರೂ ಮಗಳ ವಿಯೋಗ ದುಃಖವು ಆತನನ್ನು ಅಳುಕಿಸದೆ ಬಿಡಲಿಲ್ಲ. ವೀರವರ್ಮನು ತಲ್ಲಣಿಸಿ ಸದ್ಗುರುವನ್ನು ಕುರಿತು—ಮಹಾತ್ಮರೇ, ಮುಪ್ಪಿನಲ್ಲಿ ಮಗಳ ವಿಯೋಗ ದುಃಖವನ್ನು ನಾನು ಹೇಗೆ ತಡೆಯಲಿ? ಮುಂದೆ ಒದಗಬಹುದಾದ ದುಃಖದ ಸ್ಮರಣದಿಂದಲೇ ನನ್ನ ಮನಸ್ಸು ಇಷ್ಟು ವ್ಯಾಕುಲವಾಗಿರಲು, ಪ್ರತ್ಯಕ್ಷವಾಗಿ ಒದಗಿದ ದುಃಖವು ನನಗೆ ಹೇಗೆ ಸಹನವಾದೀತು? ಮಗಳು ಹುಟ್ಟದಿದ್ದರೆ ನೆಟ್ಟಗಾಗುತ್ತಿತ್ತೆಂದು ನನಗೆ ತೋರುತ್ತದೆ, ಅನ್ನಲು, ಋಷಿಯು—ಅರಸನೇ, ಏನು ವಿಚಿತ್ರವಿದು! ಮಗಳು ಹುಟ್ಟಿ ಒಂದು ದಿನವೂ ಆಗಿಲ್ಲ, ನಿನ್ನ ಚಿಂತೆಗೆ ಆರಂಭವಾಯಿತಲ್ಲ! ಸಾಂಸಾರಿಕರ ದಡ್ಡತನವು ಇಲ್ಲಿಯೇ ಇರುವದು. ಅವರು ಸಂಸಾರದಲ್ಲಿ ಕಾಣುವ ಸುಖದ ಪ್ರಸಂಗಗಳನ್ನು ಮಾತ್ರ ನೋಡಿ ಅವನ್ನು ಬಯಸಿ, ದುಃಖದ ಪ್ರಸಂಗಗಳನ್ನು ಮರೆತುಬಿಡುವರು. ಹೇಗೆಂದರೇ, ಅವರು ಮಕ್ಕಳನ್ನು ಬಯಸುವರು; ಆದರೆ ಮಕ್ಕಳಿಗೆ ಒದಗತಕ್ಕವಾಗಿರುವ ಬೇನೆ-ಬೇಸರಿಕೆ, ಸಾವು-ಕೇಡುಗಳನ್ನು ಮನಸ್ಸಿನಲ್ಲಿ ತರುವದಿಲ್ಲ; ಅದರಂತೆ ಅವರು ದುಡ್ಡಿಗೆ ಬಾಯಿ ತೆರೆಯುವರು; ಕಷ್ಟಪಟ್ಟು ಗಳಿಸಿದ ದುಡ್ಡನ್ನು ಅನ್ಯರು ಸೆಳೆದೊಯ್ಯುವಾಗ, ಇಲ್ಲವೆ ತಾವು ಈ ಲೋಕವನ್ನು ಬಿಟ್ಟು ತೆರಳುವಾಗ ಆಗುವ ದುಃಖವನ್ನು ಮನಸ್ಸಿನಲ್ಲಿ ತರುವದಿಲ್ಲ. ಅರಸೇ, ವಿಚಾರಮಾಡಿ ನೋಡು, ನೀನು ಮಗಳನ್ನು ಇನ್ನೂ ಎತ್ತಿಲ್ಲ-ಆಡಿಸಿಲ್ಲ, ಆಕೆಗೆ ಉಣಿಸಿಲ್ಲ-ತಿನಿಸಿಲ್ಲ ಆಕೆಯಿಂದ ಸುಖವಾಗಿಲ್ಲ- ಸಂತೋಷವಾಗಿಲ್ಲ; ಒಮ್ಮೆ ಮಗಳ ಮೋರೆಯನ್ನು ಮಾತ್ರ ನೋಡಿರುವೆ. ಅಷ್ಟೇ ಅಪರಾಧಕ್ಕೆ ಇಂಥ ಶಿಕ್ಷೆಯು ನಿನಗೆ ಒದಗಿರುವದೆಂದ ಬಳಿಕ ಈಶ್ವರೀ ಮಾಯೆಯ ಸಾಮರ್ಥ್ಯವು ಅಗಾಧವಾದದ್ದೇ ಸರಿ.

ಅರಸೇ, ವಿಚಾರಮಾಡು. ಆಗುವದನ್ನು ತಪ್ಪಿಸಲು ಯಾರು ಸಮರ್ಥರು? ಕಾಲಚಕ್ರಕ್ಕೆ ಅನುಸರಿಸಿ ಒದಗುವ ಸುಖದುಃಖಗಳನ್ನು ಅನುಭವಿಸಲಿಕ್ಕೆ ಮನುಷ್ಯನು ಎದೆಗೊಟ್ಟು ನಿಲ್ಲಲಿಕ್ಕೆ ಬೇಕು. ಸ್ವಕರ್ಮಾನುಸಾರ ಪರಮೇಶ್ವರನಿಂದೆ ನಿಯಮಿಸಲ್ಪಡುವ ಸುಖದುಃಖಗಳನ್ನು ಸಮಾನವಾಗಿ ತಿಳಿಯದಿದ್ದರೆ ಅಪರಾಧವಾಗುವದು. ಮನುಷ್ಯನು ಕಷ್ಟಗಳಿಗೆ ಹೆದರತಕ್ಕದ್ದಲ್ಲ. ಅವು ನಮ್ಮ ಹಿತಕ್ಕಾಗಿಯೇ ಬರುತ್ತವೆಂದು ತಿಳಿಯಬೇಕು. ಈವೊತ್ತಿನವರೆಗೆ ಬಗೆಬಗೆಯ ಕಷ್ಟಗಳನ್ನು ಅನುಭವಿಸಿದವರೇ ಧನ್ಯರಾಗಿರುವರು. ಪಾಂಡವರನ್ನು ನೋಡು, ಹರಿಶ್ಚಂದ್ರನನ್ನು ನೆನಪಿಗೆ ತಂದುಕೋ, ಸಿರಿಯಾಳರಾಜನನ್ನು ಮರೆಯಬೇಡ. ಅಶುದ್ಧವಾದ ಚಿನ್ನವನ್ನು ಪುಟಕ್ಕೆ

ಹಾಕದಿದ್ದರೆ ಅದು ಶುದ್ಧವಾಗಬಹುದೋ? ಅದರಂತೆ ಹೊಲಸಾದ ನಮ್ಮ ಮನಸ್ಸನ್ನು ಸಂಸಾರತಾಪವೆಂಬ ಅಗ್ನಿಯಲ್ಲಿ ಪುಟಕ್ಕೆ ಹಾಕದಿದ್ದರೆ ಶುದ್ಧವಾಗಲಾರದು. ಅರಸಾ ಇನ್ನು ಹದಿನಾರುವರ್ಷಗಳ ಮೇಲೆ ಆಗುವ ಮಗಳ ವಿಯೋಗದುಃಖದ ಪಾಡೇನು? ಆಜನ್ಮ ಒಂದನ್ನೊಂದು ಹೊಂದಿಕೊಂಡಿರುವ ನಿನ್ನ ಶರೀರಜೀವಗಳ ವಿಯೋಗವು ಒಂದಲ್ಲೊಂದು ದಿನ ಆಗತಕ್ಕದ್ದೇ ಎಂಬುದು ನಿನಗೆ ತಿಳಿದಿಲ್ಲವೋ? ಅದರ ಸಲುವಾಗಿ ನೀನು ವ್ಯಸನಮಾಡುತ್ತ ಸರ್ವಸಂಗಪರಿತ್ಯಾಗವನ್ನು ಈವರೆಗೆ ಯಾಕೆ ಮಾಡಲಿಲ್ಲ? ಮುಂದೆ ಒದಗುವ ದುಃಖಕ್ಕಾಗಿ ಈಗಿನ ಸುಖಕ್ಕೆ ಎರವಾಗುವದು ಜಾಣತನವಲ್ಲ. ಸುಖ–ದುಃಖಗಳು ಮನುಷ್ಯಾಧೀನವೇ? ಅವು ಮುಂಗಡ ಗೊತ್ತಾಗದಿರುವದರಿಂದಲೇ ಮೂಢರ ಎಲ್ಲ ವ್ಯವಹಾರಗಳು ಸುಸೂತ್ರವಾಗಿ ನಡೆದಿವೆ ನೀನು ಮೂಢನಾಗಬೇಡ. ಪರೀಕ್ಷಿತನ ವೃತ್ತಾಂತವನ್ನು ಇಲ್ಲಿ ನೆನಪಿಗೆ ತಂದುಕೋ. ಆ ಮಹಾತ್ಮನು ತನ್ನ ಮರಣಕಾಲವು ಗೊತ್ತಾದಾಗ ಸಮಾಧಾನಪಟ್ಟು ಮುಕ್ತಿಯನ್ನು ಸಾಧಿಸಿಕೊಂಡಂತೆ, ಜಾಗರೂಕನಾಗಿ ನೀನು ಮಗಳ ಹಿತವನ್ನು ಸಾಧಿಸು.

ಸದ್ಗುರುವಿನ ಈ ಉಪದೇಶದಿಂದ ವೀರವರ್ಮನ ಮನಸ್ಸು ಬಹುಮಟ್ಟಿಗೆ ಸಮಾಧಾನವಾಯಿತು. ಆತನು ಕಪಿಂಜಲನ ಹೇಳಿಕೆಯಂತೆ ಮಗಳಿಗೆ ಪದ್ಮನಯನೆಯೆಂದು ಹೆಸರನ್ನಿಡುವದಕ್ಕೆ ಹೇಳಿದನು. ಪದ್ಮನಯನೆಯು ದಿನದಿನಕ್ಕೆ ಬೆಳೆಯಹತ್ತಿದಳು. ಅವಳ ಬಾಲಕ್ರೀಡೆಗಳು ಎಲ್ಲರ ಮನಸ್ಸನ್ನು ಆನಂದಗೊಳಿಸಹತ್ತಿದವು. ರಾಜಪುತ್ರಿಯು ಐದು ವರ್ಷದವಳಾಗಲು, ಅರಸನು ಅವಳನ್ನು ವಿದ್ಯಾಭ್ಯಾಸಕ್ಕಾಗಿ ಕಪಿಂಜಲನ ಬಳಿಗೆ ಕಳುಹಿದನು. ಸಕಲ ವಿದ್ಯಾಪಾರಂಗತನಾದ ಕಪಿಂಜಲನು ರಾಜಪುತ್ರಿಯ ಯೋಗ್ಯತೆಯನ್ನನುಸರಿಸಿ ಕ್ರಮವಾಗಿ ಆಕೆಯನ್ನು ಜ್ಞಾನಸಂಪನ್ನಳಾಗಮಾಡಿದನು. ಪದ್ಮನಯನೆಯು ಋಷಿಯ ಪ್ರಸಾದದಿಂದ ತನ್ನ ಹದಿನಾಲ್ಕು ವರ್ಷದ ವಯಸ್ಸಿನಲ್ಲಿ ಸುಸಂಸ್ಕೃತಳಾದಳು. ಅರಸನು ಅವಳಿಗೆ ಧನುರ್ವಿದ್ಯೆಯನ್ನು ಸ್ವತಃ ಕಲಿಸಿದನು. ಕುದುರೆಹತ್ತುವಲ್ಲಿ ಪದ್ಮನಯನೆಯು ಒಳ್ಳೇ ಪ್ರಾವಿಣ್ಯವನ್ನು ಸಂಪಾದಿಸಿದಳು. ಆಕೆಯು ಮೊದಲೇ ಸ್ವಭಾವಸುಂದರಿಯು, ಮೇಲಾಗಿ ವಿದ್ಯಾವಿನಯಸಂಪನ್ನಳು, ಅದರಲ್ಲಿ ಯೌವನೋದಯವು; ಕೇಳುವದೇನು? ಬಹು ಜನ ರಾಜಪುತ್ರರು ಅವಳನ್ನು ಮದುವೆಯಾಗುವದಕ್ಕಾಗಿ ಆತುರಪಡುತ್ತಿದ್ದರು; ಆದರೆ ವೀರವರ್ಮನು ಮಗಳ ವಿಯೋಗದಭಯದಿಂದ ಹದಿನಾರು ವರ್ಷ ಮೀರುವವರೆಗೆ ಅವಳ ಲಗ್ನಮಾಡಲಿಕ್ಕಿಲ್ಲೆಂದು ನಿಶ್ಚಯಿಸಿದನು. ಶ್ರೀ ಗುರುಪ್ರಸಾದರೂಪವಾದ ಆ ಕನ್ಯಾರತ್ನವು ವೀರವರ್ಮನ ಪಂಚಪ್ರಾಣವಾಗಿತ್ತು!

ವೈಭವಶಿಖರ

ಬರಬರುತ್ತ ಪದ್ಮನಯನೆಗೆ ಹದಿನಾರು ವರ್ಷಗಳು ತುಂಬಿ ಯೌವನವು ವ್ಯಕ್ತವಾಯಿತು. ಆಕೆಯ ಶರೀರವು ಗೌರವರ್ಣದ್ದು, ಮೂಗು ಸರಳ, ಕಣ್ಣು ದೊಡ್ಡವು. ತುಟಿಗಳು ಅಚ್ಚಗೆಂಪು, ಕುಚಗಳು ತಮ್ಮ ಸೀಮೆಯನ್ನು ಒತ್ತಿ ಅದೇ ಮೇಲಕ್ಕೆ ಬಂದಿದ್ದವು, ಟೊಂಕವು ಸಣ್ಣಾಗಿತ್ತು ನಿತಂಬಗಳು ಸ್ಥೂಲವಾಗಿದ್ದವು. ಆಕೆಯು, ತುಂಬಿದ ಮೈಕಟ್ಟಿನಿಂದಲೂ, ಸ್ವಚ್ಛವಾದ ಹಣೆಯನ್ನ ಲಂಕರಿಸುವ ಉಂಗುರಗೂದಲುಗಳಿಂದಲೂ ಮನೋಹರವಾಗಿ ಒಪ್ಪುತ್ತಿದ್ದಳು. ಪದ್ಮನಯನೆಯ ಕಣ್ಣಿನ ನೋಟ, ಹುಬ್ಬುಗಳ ಅಪರೂಪದ ಅಲೆದಾಟ, ನಗೆಮೊಗದ ಮಾಟ, ಮಂಜುಲ ವಾಣಿಯ ಸವಿಯೂಟ ಇವು ಎಂಥವರನ್ನಾದರೂ ಮರಳುಮಾಡದೆ ಬಿಡುತ್ತಿದ್ದಿಲ್ಲ. ಆ ಸುಕುಮಾರಿಗೆ ವಸ್ತ್ರಾಭರಣದ ಆಡಂಬರವು ಸೇರದು. ಆಕೆಯು ಹಳದಿಯ ಬಣ್ಣದ ಸೂಕ್ಷ್ಮವಾದ ರೇಶಿಮೆಯ ಜರದಂಚಿನ ಸೀರೆಯನ್ನು ಉಡಲಿಕ್ಕೂ, ಜರದಂಚಿನ ಕೆಂಪು ರೇಶಿಮೆಯ ಕುಪ್ಪಸವನ್ನು ತೊಡಲಿಕ್ಕೂ ಬಹಳವಾಗಿ ಮೆಚ್ಚಿದ್ದಳು. ಎಂಥ ಸೀರೆ–ಕುಪ್ಪಸ ಗಳಿದ್ದರೂ ಪದ್ಮನಯನೆಯ ಚಲ್ವಿಕೆಯಲ್ಲಿ ಕೊರತೆಯುಂಟಾಗುತ್ತಿದ್ದಿಲ್ಲ. ಆ ಲೋಕ ಸುಂದರಿಯ ಮೈಮೇಲೆ ಅಲಂಕಾರಗಳು ಬಹು ವಿರಳವಾಗಿದ್ದವು. ಕಿವಿಯಲ್ಲಿ ವಜ್ರದ ಓಲೆ, ಮೂಗಿನಲ್ಲಿ ವಜ್ರದ ಮೂಗಬಟ್ಟು, ಕೊರಳಲ್ಲಿ ದೊಡ್ಡಮುತ್ತಿನ ಒಂಟೆಳೆಯ ಸರ, ಕೈಗಳಲ್ಲಿ ರತ್ನದ ಕಂಕಣ, ಟೊಂಕದಲ್ಲಿ ರತ್ನಖಚಿತವಾದ ಪಟ್ಟಿ, ಕಾಲಲ್ಲಿ ಸರಪಳಿ ಇಷ್ಟೇ ಪದ್ಮನಯನೆಯ ಪ್ರೀತಿಯ ಆಭರಣಗಳಾಗಿದ್ದವು. ಆಕೆಯ ತಲೆಯಲ್ಲಿ ಮುತ್ತಿನ ದಂಡೆಯೂ, ಚಕ್ರದುರುಬಿನಲ್ಲಿ ಒಂದೇ ಒಂದು ಸುಂದರವಾದ ಚಿನ್ನದ ಗುಲಾಬಿಯ ಹೂವೂ ಇರುತ್ತಿದ್ದವು. ಹಣೆಯಲ್ಲಿಯ ಸುಂದರವಾದ ತಿಲಕದಿಂದ ಆಕೆಯು ಎದ್ದು ಕಾಣುತ್ತಿದ್ದಳು. ಈ ಮೇರೆಗೆ ಪುಟಿಚಂಡಿನಂತೆ ಮನೋಹರವಾಗಿ ಒಪ್ಪುತ್ತಿದ್ದ ಪದ್ಮನಯನೆಯು, ವಿದ್ಯಾವಿನಯ ಸಂಪನ್ನೆಯಾದದ್ದರಿಂದ ಸ್ವರ್ಗಾಂಗನೆಯಂತೆ ಕಂಗೊಳಿಸಿ, ಮನುಷ್ಯಮಾತ್ರರ ಆದರಕ್ಕೆ ಪಾತ್ರಳಾಗಿದ್ದದ್ದು ಸೋಜಿಗವಲ್ಲ! ಆಗಾಗ್ಗೆ ಪದ್ಮನಯನೆಯು ಗಂಡಸರ ಉಡಿಗೆ–ತೊಡಿಗೆಗಳನ್ನು ಧರಿಸುತ್ತಿದ್ದಳು. ಆಗಿನ ಆಕೆಯ ಚಲ್ವಿಕೆಯಂತು ಬಲು ಕೌತುಕದ್ದಾಗಿರುತ್ತಿತ್ತು.

ಕಪಿಂಜಲನ ಭವಿಷ್ಯದ ಕಾಲಾವಧಿಯು ಒದಗಿರಲು; ವೀರವರ್ಮನು ಮಗಳ ರಕ್ಷಣವನ್ನು ಬಹಳ ಎಚ್ಚರದಿಂದ ಮಾಡುತ್ತಿದ್ದನು. ಆಕೆಗೆ ಅಂಗರಕ್ಷಕರು ನಿಯಮಿಸಲ್ಪಟ್ಟಿದ್ದರು. ರಾಜಪುತ್ರಿಯು ಕುದುರೆಹತ್ತುವಲ್ಲಿ ಒಳ್ಳೇ ಪ್ರವೀಣಳಾಗಿದ್ದಳೆಂದು ಹಿಂದೆ ಹೇಳಿರುತ್ತದಷ್ಟೆ? ಆದರೆ ಅರಸನ ನಿರ್ಧಾರದ ಅಪ್ಪಣೆಯಿದ್ದದ್ದರಿಂದ ಆಕೆಯು ಕುದುರೆಯ ಸನಿಯಕ್ಕೆ ಸಹ ಹೋಗುವಂತೆ ಇದ್ದಿಲ್ಲ. ಮನುಷ್ಯನ ಮನಸ್ಸಿನ ಕೋರಿಕೆಗಳು ಪ್ರತಿಬಂಧದಿಂದ ಮತ್ತಿಷ್ಟು ಬಲಪಡುತ್ತವೆ. ಅದರಂತೆ ವೀರವರ್ಮನ ಪ್ರತಿಬಂಧದಿಂದ ಪದ್ಮನಯನೆಯ ಕುದುರೆ ಹತ್ತುವ ಲವಲವಿಕೆಯು ಹೆಚ್ಚುತ್ತ ಹೋಯಿತು. ತಾನೊಂದು ಬಗೆದರೆ ದೈವವು ಮತ್ತೊಂದು ಬಗೆಯುತ್ತದಂತೆ. ಈ ಮೇರೆಗೆ ವೀರವರ್ಮನು ಮಗಳ ವಿಯೋಗವಾಗಬಾರದೆಂದು

ಯತ್ನಿಸುತ್ತಿದ್ದರೂ, ಆತನ ಮಗಳು ವಿಯೋಗದ ಬಲೆಗೆ ತಾನಾಗಿ ಬೀಳಲಿಕ್ಕೆ ಹಾತೊರೆಯುತ್ತಿದ್ದಳು! ಹೀಗೆ ಕೆಲವು ದಿನಗಳು ಕ್ರಮಿಸುತ್ತಿರಲು, ಕಪಿಂಜಲನು ವೃದ್ಧಾಪ್ಯದ ಮೂಲಕ ನಿರ್ಯಾಣವನ್ನು ಹೊಂದಿದನು. ಆ ಋಷಿವರ್ಯನಲ್ಲಿ ಅರಸನದಷ್ಟೇ ಅಲ್ಲ; ಪಟ್ಟಣದೊಳಗಿನ ಆಬಾಲವೃದ್ಧರ ಭಕ್ತಿಯೂ ವಿಶೇಷವಾಗಿತ್ತು. ಈ ಲೋಕಪ್ರೀಯತೆಗೆ ಅನುಸರಿಸಿ ಆ ಮಹಾತ್ಮನ ಸ್ಮಶಾನಯಾತ್ರೆಯು ಅಟ್ಟಹಾಸದಿಂದ ಸಾಗಿದ್ದು ಆಶ್ಚರ್ಯವಲ್ಲ. ಸದ್ಗುರುವಿನ ಮರಣದಿಂದ ವೀರವರ್ಮನ ಮನಸ್ಸು ಖಿನ್ನವಾದದ್ದರಿಂದ, ಆತನು ಮಗಳ ಯೋಗಕ್ಷೇಮದಲ್ಲಿ ಸ್ವಲ್ಪ ದುರ್ಲಕ್ಷಮಾಡಿದನು. ಈ ದುರ್ಲಕ್ಷ್ಯವೇ ತಂದೆ–ಮಕ್ಕಳ ವಿಯೋಗಕ್ಕೆ ಕಾರಣ ವಾಯಿತೆಂದು ಹೇಳಬೇಕಾಯಿತು.

ಕಪಿಂಜಲನ ಸ್ಮಶಾನಯಾತ್ರೆಯ ಸಮಾರಂಭಕ್ಕಾಗಿ ಅರಸನ ತೀಕ್ಷ್ಣವೇಗವೆಂಬ ಹೆಸರಿನ ಪಟ್ಟದ ಕುದುರೆಯು ಶೃಂಗರಿಸಲ್ಪಟ್ಟಿತ್ತು. ಪದ್ಮನಯನೆಯು ಅದನ್ನು ಹತ್ತುವ ಆತುರತೆಯನ್ನು ತೋರಿಸಲು, ಅರಸನು ಪ್ರಮಾದದಿಂದ ಅದಕ್ಕೆ ಒಡಂಬಟ್ಟನು. ಆಗ ಪದ್ಮನಯನೆಯ ಆನಂದವು ಹೊಟ್ಟೆಯಲ್ಲಿ ಹಿಡಿಸದಾಯಿತು. ಆಕೆಯು ಶೂರ ಸರದಾರರಿಗೆ ಒಪ್ಪುವಂಥ ಪೋಷಾಕನ್ನು ಹಾಕಿಕೊಂಡಳು. ಖಡ್ಗವು ಆಕೆಯ ಟೊಂಕದಲ್ಲಿ ಅಲೆದಾಡುತ್ತಿತ್ತು. ಬಿಲ್ಲು–ಬತ್ತಳಿಕೆಗಳು ಆಕೆಯ ಬೆನ್ನಿಗೆ ಒಪ್ಪುತ್ತಿದ್ದವು. ಹೀಗೆ ಉತ್ಸಾಹದಿಂದ ಪುರುಷವೇಷವನ್ನು ಧರಿಸಿದ ರಾಜಪುತ್ರಿಯನ್ನು ಪ್ರಜೆಗಳು ಕೌತುಕದಿಂದ ನೋಡುತ್ತಿರಲು, ಆಕೆಯು ಠೀವಿಯಿಂದ ಕುದುರೆಯನ್ನು ಹತ್ತಿದಳು. ಅಶ್ವಾರೋಹಣದಲ್ಲಿ ಆಕೆಯ ಗಟ್ಟಿಗತನವನ್ನು ಎಲ್ಲರೂ ಬಲ್ಲವರಾದ್ದರಿಂದ ಯಾವ ಬಗೆಯ ಆದೇಶಕ್ಕೂ ಅವಕಾಶವಿದ್ದಿಲ್ಲ. ಪದ್ಧತಿಯಂತೆ ಅಂಗರಕ್ಷಕರು ಕುದುರೆಯನ್ನೇರಿ ಸುತ್ತುಗಟ್ಟಿ ಆಕೆಯನ್ನು ರಕ್ಷಿಸುತ್ತಿದ್ದರು. ಮೆರವಣಿಗೆಯು ಉತ್ಸವದಿಂದ ಸಾಗಿತ್ತು. ''ಬಲವಿಲ್ಲದ ಕಾಲದಲ್ಲಿ ನೆಲವೆದ್ದು ಬಡೆಯಿತೆಂ''ಬ ನಾಣ್ಣುಡಿಯು ಸುಳ್ಳಲ್ಲ. ಪಟ್ಟದ ಕುದುರೆಯ ನೆಲೆಯನ್ನು ತಾನು ಬಲ್ಲವಳೆಂದು, ಪದ್ಮನಯನೆಯು ಅಭಿಮಾನಪಡುತ್ತಿದ್ದಳು; ಆದರೆ ''ಹೆಂಗಸರ ನೆಲೆ, ಕುದುರೆಯ ನೆಲೆ, ನೀರಿನ ನೆಲೆ ಯಾರಿಗೂ ತಿಳಿಯುವದಿಲ್ಲೆಂ''ದು ಅನುಭವಿಕರು ಹೇಳುವರು. ಯಾವದು ನಿಜವೋ ದೇವರಿಗೆ ಗೊತ್ತು! ಈಗಂತು ಪದ್ಮನಯನೆಯು ಕುದುರೆಯನ್ನು ಒಂದು ಸಾರೆ ಚಬಕದಿಂದ ಹೊಡೆದದ್ದೇ ತಪ್ಪು, ಅದು ಭಯಂಕರವಾದ ವೇಗದಿಂದ ಓಡತೊಡಗಿತು. ಕುದುರೆಯ ವೇಗಾತಿಶಯಕ್ಕೆ ಜನಸಮೂಹವು ಚದರಿತು; ಮೆರವಣಿಗೆಯು ಹಿಂದಾಯಿತು; ಅಂಗರಕ್ಷಕರು ಹಿಂದೆ ಉಳಿದರು. ಪದ್ಮನಯನೆಯು ಕುದುರೆಯನ್ನು ನಿಲ್ಲಿಸಲಿಕ್ಕೆ ವಿಶ್ವಪ್ರಯತ್ನ ಮಾಡಿದಾಗ್ಯೂ ಅದು ಆಕೆಯ ಅಂಕಿತಕ್ಕೆ ಬರಲಿಲ್ಲ. ತಡೆತಡೆದಂತೆ ಅದು ಹೆಚ್ಚು ಹೆಚ್ಚು ವೇಗದಿಂದ ಓಡತೊಡಗಿತು. ಹೀಗೆ ತಾಸುಹೊತ್ತು ಏರಿದಾಗಿನಿಂದ ಓಡಹತ್ತಿದ ಕುದುರೆಯು, ಒಂಬತ್ತುತ್ತಾಸಿನವರೆಗೆ ಓಡಿ ಓಡಿ, ಒಂದು ಅರಣ್ಯಮಧ್ಯವನ್ನು ಹೊಕ್ಕು ದಣಿದು ಕಳವಳಗೊಂಡು, ನೆಲಕ್ಕೆ ಬಿದ್ದಿತು. ಪದ್ಮನಯನೆಯೂ ಅರಣ್ಯದಲ್ಲಿ ಒತ್ತಟ್ಟಿಗೆ ಸಿಡಿದು ಬಿದ್ದಳು.

ಕುದುರೆಯ ಪ್ರಚಂಡವಾದ ವೇಗದಮೂಲಕವಾಗಿ ಹೌಹಾರಿ ಕುಳಿತುಕೊಂಡಿದ್ದ ಪದ್ಮನಯನೆಯು, ಕುದುರೆಯ ಮೇಲಿಂದ ಒಮ್ಮೆಲೆ ನೆಲಕ್ಕೆ ಬಿದ್ದದ್ದರಿಂದ ಬಹಳ ಗಾಸಿ

ಯಾದಳು. ಈ ಭಯಂಕರವಾದ ಅಪಘಾತದಲ್ಲಿ ಆ ಕೋಮಲೆಯ ಇಹಲೋಕದ ಯಾತ್ರೆಯೇ ಮುಗಿದು ಹೋಗತಕ್ಕದ್ದಿತ್ತು; ಆದರೆ ಆ ಯಾತ್ರೆಯಲ್ಲಿ ಆಕೆಯು ಇನ್ನೂ ಬಗೆಬಗೆಯ ಸುಖದುಃಖಗಳನ್ನು ಅನುಭವಿಸಬೇಕಾದದ್ದರಿಂದ ಹಾಗಾಗಲಿಲ್ಲ ಅಸಹ್ಯವೇದನೆ ಯಿಂದ ಆಕೆಯ ಪ್ರಜ್ಞೆಯು ಮಾತ್ರ ತಪ್ಪಿತು. ಆ ಅನಾಥಳು ಅರಣ್ಯದಲ್ಲಿ ಬೀಸುತ್ತಿದ್ದ ತಂಗಾಳಿಯಿಂದ ಕೆಲಹೊತ್ತಿನ ಮೇಲೆ ತಾನಾಗಿ ಎಚ್ಚತ್ತು, ಬೆದರಿದ ಚಿಗರೆಯಂತೆ ತನ್ನ ದೊಡ್ಡ ಕಣ್ಣುಗಳನ್ನು ನಾಲ್ಕೂಕಡೆಗೆ ತಿರುಗಿಸಿ ನೋಡಿದಳು. ಮರಣ ಹೊಂದಿದ ಕುದುರೆಯೂ, ಭಯಂಕರವಾದ ಅರಣ್ಯವೂ ಅವಳ ದೃಷ್ಟಿಗೆ ಬೀಳಲು, ಭಯ-ಶೋಕಗಳಿಂದ ಮೂರ್ಛೆಯು ಪುನಃ ಅವಳನ್ನು ಆವರಿಸಿತು. ಕೆಲಹೊತ್ತಿನ ಮೇಲೆ ಪದ್ಮನಯನೆಯು ಮತ್ತೆ ಎಚ್ಚತ್ತು ಎದ್ದು ಕುಳಿತುಕೊಳ್ಳಲು, ಭಯದಿಂದ ಆಕೆಯ ಮೈನಡುಗಹತ್ತಿತು; ತಾಯಿ ತಂದೆಗಳ ಸ್ಮರಣವಾದಕೂಡಲೆ ಆಕೆಯ ಕಣ್ಣೀರುಗಳು ಬಳಬಳ ಉದುರಿದವು! ಆಹಾ! ದೈವದ ಏನು ವಿಚಿತ್ರ ಲೀಲೆಯಿದು! ಸುಖಸಂಪದಗಳಲ್ಲಿ ಲೋಲಾಡುತ್ತಿದ್ದ ಸಾರ್ವಭೌಮನ ಮಗಳು, ನಾಲ್ಕೆಂಟು ತಾಸುಗಳಲ್ಲಿ ನಿರಾಶ್ರಿತಳಾಗಿ ದುಃಖದಲ್ಲಿ ಮುಳುಗಿದ್ದು ಆಶ್ಚರ್ಯವಲ್ಲವೆ? ರಾಜಪುತ್ರಿಯು ಅಪ್ರಬುದ್ಧಳಂತೆ ದೊಡ್ಡದನಿಯಿಂದ ಅಳುತ್ತ ಗದ್ಗದ ಕಂಠೆಯಾಗಿ—ಅಯ್ಯೋ, ಕುದುರೆಯನ್ನೇರಬೇಕೆಂಬ ನನ್ನ ಲವಲವಿಕೆಯ ಪರಿಣಾಮವು ಹೀಗಾಯಿತೇ? ನನ್ನನ್ನು ತನ್ನ ಪ್ರಾಣಕ್ಕಿಂತಲೂ ಹೆಚ್ಚೆಂದು ತಿಳಿದು ರಕ್ಷಿಸುತ್ತಿದ್ದ ಅರಸನ ಮೋರೆಯು, ನನ್ನ ಕಣ್ಣಿಗೆ ಇನ್ನು ಹೇಗೆ ಬಿದ್ದೀತು! ನಾನು ಯಾವಕಡೆಗೆ ಹೋಗಲಿ, ಯಾರನ್ನು ಹೊಂದಲಿ? ನನ್ನನ್ನು ಈ ಸಂಕಟದೊಳಗಿಂದ ಯಾರು ಪಾರುಮಾಡಿಯಾರು? ಅಪ್ಪಾ, ನನ್ನಿಂದ ದೊಡ್ಡ ತಪ್ಪಾಯಿತು, ಹೇಗಾದರೂ ಮಾಡಿ ನನ್ನನ್ನು ಕರಕೊಂಡುಹೋಗು, ನನಗೆ ಬಹಳ ಹೆದರಿಕೆ ಬರುತ್ತದೆ. ಅಪ್ಪಾ, ನಾನು ನಿನ್ನನ್ನು ಅಗಲಿದ್ದರಿಂದ ನೀನು ಎಷ್ಟು ಪ್ರಳಾಪಿಸು ತ್ತಿರುವೆಯೋ ತಿಳಿಯದು. ಈ ದುರ್ದೈವಿಯಾದ ಪದ್ಮನಯನೆಗೆ ಸ್ವಲ್ಪ ದುಃಖವಾದರೆ ನಿಮ್ಮ ಪ್ರಾಣವೇ ಹೋಗುತ್ತಿತ್ತಲ್ಲ! (ಸುಮ್ಮನಾಗಿ ಕಣ್ಣು ಒರಿಸುತ್ತ ಭ್ರಾಂತಿಯಿಂದ) ಛೆ, ನಾನು ಕನಸಿನಲ್ಲಿದ್ದೇನೆ. ಇಲ್ಲದಿದ್ದರೆ, ಇಂದು ಮುಂಜಾನೆ ಅರಮನೆಯಲ್ಲಿ ಸುಖದಿಂದಿದ್ದ ನಾನು, ಇಂಥ ಘೋರಾರಣ್ಯವನ್ನು ಸೇರಿ ಕಷ್ಟಪಡುವ ಬಗೆ ಹೇಗೆ? ಅಯ್ಯೋ! ಕನಸು ಹೇಗೆ ಆದೀತು, ಇದು ನಮ್ಮ ತೀಕ್ಷ್ಣವೇಗವೆಂಬ ಪಟ್ಟದ ಕುದುರೆಯು, ಅದರ ಮೇಲಿಂದ ಬಿದ್ದದ್ದರಿಂದ ನನ್ನ ಮೈಯೆಲ್ಲವು ಲಿಕಿಲಿಕಿಯಾಗಿವೆ, ನನ್ನ ಉಡಿಗೆ-ತೊಡಿಗೆಗಳು ರಕ್ತಮಯವಾಗಿವೆ, ಧನಸ್ಸು ಅಲ್ಲಿ ಸಿಡಿದು ಬಿದ್ದದೆ. ಅಲ್ಲ, ಇದು ಕನಸಲ್ಲ, ನಾನು ನಿಜವಾಗಿಯೇ ಅರಣ್ಯದಲ್ಲಿದ್ದೇನೆ. ಇನ್ನೆಲ್ಲಿಯ ತಂದೆಯು, ಇನ್ನೆಲ್ಲಿಯ ತಾಯಿಯು, ಇನ್ನೆಲ್ಲಿಯ ಆಪ್ತೇಷ್ಟರು! ಪರಮೇಶ್ವರಾ, ದೀನಬಂಧೋ, ಅನಾಥರಕ್ಷಕಾ, ಇಂಥ ದುರ್ಘಟ ಪ್ರಸಂಗವನ್ನು ನನ್ನ ಮೇಲೆ ಯಾಕೆ ತಂದೆ? ನಾನು ಮಾಡಿದ ಅಪರಾಧ ವಾದರೂ ಯಾವದು?

ಈ ಪ್ರಕಾರ ರಾಜಪುತ್ರಿಯು ಹಲುಬಿ, ಹಂಬಲಿಸಿ, ಚೀರಿ, ಹಣೆಯಪ್ಪಳಿಸಿ, ಎದೆ ಬಡಕೊಂಡು, ದುಃಖಿಸಿ ಹಣ್ಣಾದ ಮೇಲೆ ಮನಸ್ಸಿನಲ್ಲಿ—ನನ್ನ ಈ ಅರಣ್ಯ ರೋದನವನ್ನು

ಯಾರು ಕೇಳಬೇಕು? ನೀರಡಿಕೆಯಾಗಿ ಗಂಟಲು ಹರಿಯುತ್ತದೆ; ಹೇಗೂ ನಾನು ಇಂದು ಪ್ರಾಣಕ್ಕೆ ಎರವಾಗುವದು ನಿಶ್ಚಯವು. ನೀರು ಕುಡಿದಾದರೂ ಸಾಯುವೆನು, ಎಂದು ಯೋಚಿಸಿ, ಮೇಲಕ್ಕೇರಲು, ಕಸುವುಗೆಟ್ಟಿದ್ದರಿಂದ ಅವಳ ಕಣ್ಣುಗಳಲ್ಲಿ ದೀಪಹಚ್ಚಿದಂತಾಗಿ ಪುನಃ ಆಕೆಯು ನೆಲಕ್ಕೆ ಕುಳಿತಳು. ಆ ಅರಣ್ಯದಲ್ಲಿ ಗಿಡಗಳು ದಟ್ಟವಾಗಿ ಬೆಳೆದದ್ದರಿಂದ ಸೂರ್ಯಪ್ರಕಾಶಕ್ಕೆ ಆಸ್ಪದವಿದ್ದಿಲ್ಲ. ಕಾಡುಮೃಗಗಳ ಕಾಲತುಳಿತದ ಸಪ್ಪಳವೂ, ನೀರಿನ ಪ್ರವಾಹದ ಭೋರೆಂಬ ಸಪ್ಪಳವೂ, ಮರಗಳ ತಿಕ್ಕಾಟದಿಂದುಂಟಾದ ''ಜಿರ್ ಜಿಟ್ಟೆ''ಂಬ ಸಪ್ಪಳವೂ ಎಡೆಬಿಡದೆ ಕೇಳುತ್ತಿದ್ದವು. ರಾಜಪುತ್ರಿಯು ಸಾವರಿಸಿಕೊಂಡು ಮೆಲ್ಲನೆ ಎದ್ದು ನೀರಿದ್ದಲ್ಲಿ ಹೋಗುವದಕ್ಕಾಗಿ ಮುಂದಕ್ಕೆ ಹೆಜ್ಜೆಯಿಡಲು, ಕಾಲ್ತುಂಬ ಮುಳ್ಳುಗಳು ನಟ್ಟವು. ಆ ಮುಳ್ಳುಗಳ ಬಾಧೆಯಿಂದ ವಿಲಿವಿಲಿಯಾದ ಪದ್ಮನಯನೆಯು ನೆಲಕ್ಕೆ ಕುಸಿಬಿದ್ದು, ಆತುರದೊಡನೆ ನಟ್ಟ ಮುಳ್ಳುಗಳನ್ನು ತಕ್ಕೊಳ್ಳಲು, ಗಾಯಗಳಿಂದ ರಕ್ತವು ಸೋರಹತ್ತಿತು. ನೆಲದ ಮೇಲೆ ಕಾಲಿಟ್ಟ ಅನುಭವಿಲ್ಲದ ಆ ಸುಕುಮಾರಿಯ ಹೊಟ್ಟೆಯಲ್ಲಿ ದುಃಖವು ಪುಟಿದೆದ್ದು ನಿಲ್ಲದೆ ಮತ್ತೆ ಹೊರಬಿದ್ದಿತು. ಆಕೆಯ ಕಣ್ಣುಗಳಲ್ಲಿ ಮತ್ತೆ ನೀರುಗಳು ಉದುರಹತ್ತಿದವು. ಆಕೆಯು ಬುಡಗುಟ್ಟಿ ನೆಲದ ಮೇಲೆ ಉರುಳಾಡಹತ್ತಿದಳು, ಸಂತಾಪದಿಂದ ಕೈಯನ್ನು ನೆಲಕ್ಕಪ್ಪಳಿಸಹತ್ತಿದಳು; ಆದರೆ ಏನು ಮಾಡಿದರೂ ವ್ಯರ್ಥ. ನಿರಾಸೆಯ ಹೊರತು ಮತ್ತೊಂದು ಫಲವೇ ಆಕೆಗೆ ತೋರಲಿಲ್ಲ. ಅಷ್ಟರಲ್ಲಿ ಸೂರ್ಯನು ಅಸ್ತಂಗತನಾದದ್ದರಿಂದ ಅರಣ್ಯದಲ್ಲಿ ಕಗ್ಗತ್ತಲೆಯು ಮುಸುಕಲು, ಆಕೆಯು ಆಶೆದೊರೆದು ಪ್ರಾಯೋಪವೇಶನಕ್ಕೆ ಕುಳಿತಂತೆ ಒಂದು ಸ್ಥಳವನ್ನು ಹಿಡಿದು ಸುಮ್ಮನೆ ಕುಳಿತುಬಿಟ್ಟಳು.

ಪದ್ಮನಯನೆಯು ಕುಳಿತುಕೊಂಡಿದ್ದ ಅರಣ್ಯವು ಆಕೆಯ ತಂದೆಯ ರಾಜ್ಯದೊಳಗಿನದೇ ಇತ್ತು ಕನೋಜಪಟ್ಟಣವು ಅಲ್ಲಿಂದ ಉತ್ತರಕ್ಕೆ ಸುಮಾರು ನಾಲ್ವತ್ತು ಹರದಾರಿಯ ಮೇಲೆ ಇತ್ತೆಂದು ಹೇಳಬಹುದು. ಈಗಿನಂತೆ ಪೂರ್ವದಲ್ಲಿ ಬೈಲುಪ್ರದೇಶಗಳು ವಿಶೇಷವಾಗಿರುತ್ತಿದ್ದಿಲ್ಲ. ಪ್ರತಿಒಬ್ಬ ಅರಸನ ರಾಜ್ಯದಲ್ಲಿ ಹಲವು ಅರಣ್ಯಗಳು ಇರುತ್ತಿದ್ದವಲ್ಲದೆ, ಅರಸರು ತಮ್ಮ ತಮ್ಮ ರಾಜ್ಯಗಳ ಮೇರೆಗಳಲ್ಲಿ ಬುದ್ಧಿಪೂರ್ವಕವಾಗಿ ದೊಡ್ಡ ದೊಡ್ಡ ಅರಣ್ಯಗಳನ್ನು ಕಾದಿಡುತ್ತಿದ್ದರು. ಪರಚಕ್ರಗಳ ಅಭಿಯೋಗಕ್ಕೆ ಪ್ರತಿಬಂಧವಾಗಬೇಕೆಂಬದೇ ಅವರ ಉದ್ದೇಶವಾಗಿರುತ್ತಿತ್ತು. ಪದ್ಮನಯನೆಯ ಅಂಗರಕ್ಷಕರು ಆಕೆಯನ್ನು ಹಿಂಬಾಲಿಸಿದ್ದರೆ, ಆಕೆಯ ಸಂಕಟ ನಿವಾರಣವು ಸುಲಭವಾಗಿ ಆಗುವಂತೆ ಇತ್ತು; ಆದರೆ ಪದ್ಮನಯನೆಯ ದುರದೃಷ್ಟವು ಹಾಗೆ ಆಗಗೊಡಲಿಲ್ಲ. ಪಟ್ಟದ ಕುದುರೆಯ ತೀಕ್ಷ್ಣವೇಗವನ್ನು ಅಂಗರಕ್ಷಕರ ಕುದುರೆಗಳು ಸರಿಗಟ್ಟಲಾರದೆ ಹಿಂದಾದವು. ನೋಡನೋಡುತ್ತ ಪದ್ಮನಯನೆಯು ಅಂಗರಕ್ಷಕರಿಗೆ ಕಾಣದಾದಳು. ಕಡೆಗೆ ಪದ್ಮನಯನೆ ಯಿರುವದೊತ್ತಟ್ಟಿಗೆ, ಅಂಗರಕ್ಷಕರು ಹುಡುಕುವದೊತ್ತಟ್ಟಿಗೆ ಆಗಿ, ಅವರಲ್ಲಿ ಬಹುಜನರು ವೀರವರ್ಮನಿಗೆ ಮೋರೆ ತೋರಿಸಲಾರದೆ ದೆಸೆಗೆಟ್ಟು ಹೋಗಬೇಕಾಯಿತು! ಪ್ರಾರಬ್ಧ ಭೋಗವನ್ನು ಯಾರು ತಪ್ಪಿಸುವರು?

ರಾಜಪುತ್ರಿಯು ಸ್ವಸ್ಥವಾಗಿ ಕುಳಿತಿದ್ದರೂ, ಅವಳ ಮನಸ್ಸು ಸ್ವಸ್ಥವಾಗಿದ್ದಿಲ್ಲ. ಅದರಲ್ಲಿ ಬಗೆಬಗೆಯ ಕಲ್ಪನಾತರಂಗಗಳು ಹುಟ್ಟುತ್ತಿದ್ದವು. ತಾನು ಹಾವು-ಚೇಳುಗಳ ಕಡಿತದಿಂದ

ಜೀವಬಿಡುವೆನೋ, ಕ್ರೂರ ಮೃಗಗಳಿಗೆ ತುತ್ತಾಗುವೆನೋ, ಕಳ್ಳರ–ಕಾಕರ ದುರಾಶೆಯ ಬಲೆಗೆಬೀಳುವೆನೋ, ಪರರಾಜರ ಎಳತಕ್ಕೆ ಸಿಗುವೆನೋ, ಭೂತ–ಪಿಶಾಚಗಳ ಬಾಧೆಗೆ ಒಳಗಾಗುವೆನೋ! ದೇವರೇ, ನನ್ನ ಗತಿಯು ಏನಾಗುವದೋ, ಎಂದು ಆಕೆಯು ಚಿಂತಿಸುತ್ತಿದ್ದಳು. ರಾಕ್ಷಸರ ಭಯಂಕರವಾದ ಕೃತಿಗಳನ್ನು ಆಕೆಯು ಪುರಾಣಾಂತರಗಳಲ್ಲಿ ಕೇಳಿದ್ದಳು ಓದಿದ್ದಳು ಆ ಕೃತಿಗಳಂತು ನಮ್ಮ ಸುಕೋಮಲ ಹೃದಯದ ಪದ್ಮನಯನೆಯನ್ನು ಗಡಗಡನೆ ನಡುಗಿಸಿದವು. ರಾಕ್ಷಸರ ಪ್ರಾಚೀನಕಾಲದ ಬಲ–ವೈಭವಗಳು ಪದ್ಮನಯನೆಯ ಕಾಲದಲ್ಲಿ ಕೆಲಮಟ್ಟಿಗೆ ಕುಗ್ಗಿದ್ದರೂ, ಅವರ ಮಾಯಾ ವ್ಯಾಪಾರಗಳು ಮಾತ್ರ ಕುಗ್ಗಿದ್ದಿಲ್ಲ. ಇಂಥ ಕ್ರೂರ ರಾಕ್ಷಸರ ಬಾಧೆಯು ಎಲ್ಲಿ ತಟ್ಟುವದೋ, ಎಂದು ಆ ಅಬಲೆಯು ಚಿಂತಿಸಿದ್ದು ಆಶ್ಚರ್ಯವಲ್ಲ. ಒಟ್ಟಿಗೆ, ರಾಜಪುತ್ರಿಯ ಕೋಮಲ ಹೃದಯಕ್ಕೆ ಭಯ–ಶೋಕಗಳ ಘರ್ಷಣವಾಗುವಾಗ, ಆಕೆಗೆ ವಿಚಿತ್ರವಾದ ವ್ಯಥೆಯಾಗುತ್ತಿತ್ತು. ಆಕೆಯು ದುಃಖವೇಗವನ್ನು ಸಹಿಸಲಾರದೆ, ಒಮ್ಮೊಮ್ಮೆ ಕಣ್ಣೀರು ಸುರಿಸುವಳು, ನಿರಾಶೆಯಿಂದ ಮನಸ್ಸು ಕಲ್ಲುಮಾಡು ವಾಗ ಒಮ್ಮೊಮ್ಮೆ ಕಣ್ಣು ಒರಿಸಿಕೊಂಡು ಜಗತ್ತನ್ನೇ ತೃಣೀಕರಿಸುವಳು; ತಾಯಿ–ತಂದೆಗಳ ಹಾಗು ಬಂಧು–ಮಿತ್ರರ ಸ್ಮರಣವಾಗಿ ಮೋಹವು ಒತ್ತರಿಸಲು, ಹುಡುಗರಂತೆ ಒಮ್ಮೊಮ್ಮೆ ದೊಡ್ಡದನಿತೆಗೆದು ಅಳುವಳು; ಜಗತ್ತು ಅಶಾಶ್ವತವೆಂಬ ಕಲ್ಪನೆಯು ಮನಸ್ಸಿನಲ್ಲಿ ಹೊಳೆಯಲು, ತತ್ವಜ್ಞಾನಿಗಳಂತೆ ವೈರಾಗ್ಯದಿಂದ ಒಮ್ಮೊಮ್ಮೆ ಗಂಭೀರ ವೃತ್ತಿಯನ್ನು ತಾಳುವಳು. ಹೀಗೆ ವಿರುದ್ಧ ಸ್ಥಿತಿಗಳ ಜಗ್ಗಾಟದಿಂದ ಪದ್ಮನಯನೆಯು ಗಾಸಿಯಾಗುತ್ತಿರಲು, ಕುದುರೆಯ ಕೊಳಗಗಳ ಅಸ್ಪಷ್ಟವಾದ ಸಪ್ಪಳವು ಆಕೆಗೆ ಕೇಳಿಸತೊಡಗಿತು!

ಹೀಗೆ ಆಕಸ್ಮಿಕವಾಗಿ ಕೇಳತೊಡಗಿದ ಕುದುರೆಯ ಖುರಗಳ ಧ್ವನಿಯಿಂದ, ಪದ್ಮನಯನೆಯ ಮನಸ್ಸಿನೊಳಗಿನ ಕಲ್ಪನೆಗಳೆಲ್ಲ ಅಳಿದುಹೋಗಿ, ಆಕೆಯ ಮನಸ್ಸು ಏಕಾಗ್ರವಾಯಿತು. ಧ್ವನಿಯು ಕೇಳಬರುವ ದಿಕ್ಕಿಗೇ ಆಕೆಯು ಮೋರೆಮಾಡಿ ಕುಳಿತುಕೊಂಡು, ಸಪ್ಪಳವನ್ನು ಕಿವಿಗೊಟ್ಟು ಕೇಳತೊಡಗಿದಳು. ಬರಬರುತ್ತ ಸಪ್ಪಳವು ಸ್ಪಷ್ಟವಾಗಿ ಕೇಳಿಸಹತ್ತಿತು. ಸ್ವಲ್ಪ ಹೊತ್ತಿನಲ್ಲಿ ಅಶ್ವಾರೂಢನಾದ ಸರದಾರನೊಬ್ಬನು, ಪದ್ಮನಯನೆಯ ಎದುರಿಗೆ ಬಂದು ನಿಂತುಕೊಂಡನು. ಪದ್ಮನಯನೆಯು ಎಷ್ಟು ದಿಟ್ಟತನವನ್ನು ತಂದುಕೊಂಡರೂ, ಆಕೆಯ ಹೃದಯವು ಭಯದಿಂದ ತಲ್ಲಣಿಸದೆ ಇರಲಿಲ್ಲ. ಆಕೆಯು ಮುಖವೆತ್ತಿ ಆ ಸರದಾರನನ್ನು ನೋಡದಾದಳು. ಆಕೆಯ ಮನಸ್ಸು ಅಸ್ವಸ್ಥವಾಯಿತು. ಬಂದವನು ಯಾವನಿರುವನೋ, ಇನ್ನು ಏನು ಅನರ್ಥವು ಒದಗುವದೋ, ಎಂಬ ವಿಚಾರವು ಮನಸ್ಸಿನಲ್ಲಿ ಉತ್ಪನ್ನವಾದ ಕೂಡಲೆ, ಆಕೆಯ ಭಯವು ಮತ್ತಿಷ್ಟು ಹೆಚ್ಚಿತು. ಅಷ್ಟರಲ್ಲಿ ಕೃಷ್ಣಪಕ್ಷದ ಅಷ್ಟಮಿಯ ಚಂದ್ರನು ಉದಯವಾಗಿ, ಅದೇ ಮೇಲಕ್ಕೆ ಏರಹತ್ತಿದ್ದರಿಂದ, ಬೆಳದಿಂಗಳು ಅಸ್ಪಷ್ಟವಾಗಿ ಅರಣ್ಯದಲ್ಲಿ ಪಸರಿಸತೊಡಗಿತ್ತು. ಈ ಬೆಳದಿಂಗಳು ಪದ್ಮನಯನೆಗೆ ಆನಂದಕರವಾಗಲಿಲ್ಲ. ಪ್ರಾಣ ಸಂಕಟಕ್ಕೆ ಗುರಿಯಾಗಿದ್ದ ಆಕೆಗೆ, ಆ ಸರದಾರನು ಯಮಸ್ವರೂಪವಾಗಿ ತೋರಹತ್ತಿದ್ದ ರಿಂದ, ಅವನ ಸ್ಪಷ್ಟ ದರ್ಶನಕ್ಕಾಗಿ ಬೆದರಿ, ಆ ಭೀರುವು ಕಣ್ಣುಗಳನ್ನು ಮುಚ್ಚಿಕೊಂಡು

ಕುಳಿತಳು. ಆಗ ಆ ಸರದಾರನು ಕುದುರೆಯಿಂದ ಇಳಿದು—ರಾಜಪುತ್ರೀ, ಪದ್ಮನಯನೇ, ಏನು ದುರ್ಧರ ಪ್ರಸಂಗವಿದು! ನಾನು ಹಲವು ಸಂಕಟಗಳನ್ನು ಅನುಭವಿಸಿ, ಈಗ ನಿನ್ನನ್ನು ಸೇರದಿದ್ದರೆ, ನಿನ್ನ ಗತಿಯು ಏನಾಗುತ್ತಿತ್ತೋ ತಿಳಿಯದು. ಆಗುವದೇನು? ನೀನು ನಿಶ್ಚಯವಾಗಿ ಅಡವಿಯ ಪಾಲಾಗುತ್ತಿದ್ದೆ. ನಿನ್ನ ಅಂಗರಕ್ಷಕರೆಲ್ಲ ನಿನ್ನನ್ನು ಹಿಂಬಾಲಿಸಲಾರದೆ ಎತ್ತೆತ್ತೋ ಹೋಗಿಬಿಟ್ಟರು; ಆದರೆ ನಿನ್ನ ಹಿತಚಿಂತನವೇ ಕರ್ತವ್ಯವೆಂದು ತಿಳಿಯುವ, ಈ ಧನಮಲ್ಲನು ಸಾಹಸಪಟ್ಟು ನಿನ್ನ ಸಂರಕ್ಷಣಕ್ಕಾಗಿ ಸಿದ್ಧವಾಗಿ ನಿಂತಿದ್ದಾನೆ. ಇನ್ನು ಹೆದರಬೇಡ. ಶಂಕಿಸದೆ ಮುಖವೆತ್ತಿ ನನ್ನನ್ನು ನೋಡಿ ಸಮಾಧಾನಪಡು, ನನ್ನನ್ನೂ ಸಮಾಧಾನಪಡಿಸು.

ಈ ಮಾತುಗಳನ್ನು ಕೇಳಿ ಪದ್ಮನಯನೆಗೆ ಅಷ್ಟು ಸಮಾಧಾನವಾಗದಿದ್ದರೂ, ನೀರಲ್ಲಿ ಮುಳುಗುವವನಿಗೆ ಮುಳ್ಳಕಂಟೆಯೂ ಆಧಾರವಾಗಿ ತೋರಿ ಅವನು ಸಮಾಧಾನಪಡುವಂತೆ, ಆಕೆಯು ಧನಮಲ್ಲನ ಆಗಮನದಿಂದ ಸಮಾಧಾನಪಟ್ಟಳು. ಆ ಮಾರ್ಯಾದಶೀಲಳು ಮುಖವೆತ್ತಿ ಧನ ಮಲ್ಲವನ್ನು ನೋಡಿ ಕೃತಜ್ಞತೆಯಿಂದ ನನ್ನ ತಂದೆಯ ಆದರಕ್ಕೆ ಪಾತ್ರನಾದ ಧನಮಲ್ಲ ಸರದಾರನೇ, ನನ್ನ ಸಂಕಟಕಾಲದಲ್ಲಿ ಸಹಾಯಕನಾಗಿ ಬಂದು ಒದಗಿದ್ದರಿಂದ, ನೀನು ಇಂದಿನಿಂದ ನನ್ನ ಆದರಕ್ಕೂ ಪಾತ್ರನಾಗಿರುತ್ತೀ. ನೀನು ಬಾರದಿದ್ದರೆ ನಾನು ನಿಶ್ಚಯವಾಗಿ ಅಡವಿಯ ಪಾಲಾಗುತ್ತಿದ್ದೆನು. ನಿನ್ನ ಉಪಕಾರವು ನನ್ನ ಮೇಲೆ ಬಹಳವಾಯಿತು. ನಾನು ಆಗಾಗ್ಗೆ ನಿನ್ನನ್ನು ತಿರಸ್ಕರಿಸುತ್ತಿದ್ದದ್ದು ನಿಜವು ಅದನ್ನು ಮನಸ್ಸಿನಲ್ಲಿ ಹಿಡಿಯದೆ ನನ್ನನ್ನು ಕ್ಷಮಿಸು. ನಿನ್ನ ಅಮರ್ಯಾದೆಯ ನಡತೆಗಾಗಿ ನಾನು ನಿನ್ನನ್ನು ತಿರಸ್ಕರಿಸುತ್ತಿದ್ದೆನು; ಆದರೆ ಅನಾಥಳಾದ ನನ್ನನ್ನು ಉದ್ಧರಿಸುವದಕ್ಕೆ ನೀನು ದೇವರಂತೆ ಈಗ ಬಂದಿರುತ್ತೀ. ಅಪ್ಪಾ, ನಿನ್ನ ಆಯುಷ್ಯವು ಹೆಚ್ಚಲಿ; ದೇವರು ನಿನ್ನ ಕಲ್ಯಾಣ ಮಾಡಲಿ. ಅನಾಥೆಯಾದ ಈ ಅಬಲೆಯನ್ನು ಆಕೆಯ ತಂದೆಯ ಬಳಿಗೆ ಕಳಿಸಿ ಪುಣ್ಯಕಟ್ಟಿಕೋ. ನನ್ನ ವಿಷಯದ ದುರಾಶೆಯನ್ನು ಬಿಟ್ಟು, ನನ್ನನ್ನು ಒಡಹುಟ್ಟಿದವಳೆಂದು ತಿಳಿದು ಕೀರ್ತಿಯನ್ನು ಸಂಪಾದಿಸು. ನೀನು ಬೇಡಿದ ಅಧಿಕಾರ–ವೈಭವಗಳನ್ನು ನನ್ನ ತಂದೆಯು ನಿನಗೆ ಕೊಡುವನು; ಕೊಡದಿದ್ದರೆ ನಾನು ಹೇಳಿ ಕೊಡಿಸುವೆನು.

ಪದ್ಮನಯನೆಯ ಈ ಮಾತುಗಳನ್ನು ಕೇಳಿ, ಧನಮಲ್ಲನು ಅಟ್ಟಹಾಸದಿಂದ ನಗಹತ್ತಿದನು. ಧನಮಲ್ಲನು ಬಹು ಉಗ್ರಸ್ವರೂಪಿಯು. ಅವನ ಮೈಬಣ್ಣ ಅಚ್ಚಕಪ್ಪು, ಮೂಗು ಗಡುತರ, ಕಣ್ಣು ತೇಜಃಪುಂಜವಾದವುಗಳು, ನಿಲುವಿಕೆ ಎತ್ತರ, ಮೈಕಟ್ಟು ಕಸುವಿನದು–ಸ್ಥೂಲ, ತಲೆ ದೊಡ್ಡದು, ತಲೆಗೂದಲುಗಳು ಬಹು ಉದ್ದ, ಅವನು ದೊಡ್ಡ ರುಮಾಲದ ಹಾಗೆ ಏನೋ ಸುತ್ತಿದ್ದನು. ಮೈಯಲ್ಲಿ ಬಿಗಿಯಾದ ಅಂಗಿಯನ್ನು ತೊಟ್ಟಿದ್ದನು. ಅವನ ಸೈಲಾದ ಚಣ್ಣವು ಅವನ ಉಗ್ರಸ್ವರೂಪವನ್ನು ಹೆಚ್ಚಿಸುತ್ತಿತ್ತು. ಅವನ ಟೊಂಕದಲ್ಲಿ ದೊಡ್ಡ ಖಡ್ಗವೂ, ಬೆನ್ನಲ್ಲಿ ಢಾಲು–ಬಿಲ್ಲು–ಬತ್ತಳಿಕೆಗಳೂ, ಕೈಯಲ್ಲಿ ಬಾಲೆಯೂ ಒಪ್ಪುತ್ತಿದ್ದವು ಒಟ್ಟಿಗೆ ಧನಮಲ್ಲನು ಶೂರನೂ, ಉಗ್ರನೂ, ತಾಮಸ ಸ್ವಭಾವದವನೂ ಆಗಿದ್ದನು. ಆತನು ಪದ್ಮನಯನೆಯನ್ನು ಕುರಿತು—ಎಲೈ ಭುವನ ಸುಂದರಿಯೇ, ನನ್ನನ್ನು ನಿನ್ನ ತಂದೆಯು ಒಬ್ಬ

ಬಹು ಶೂರಸರದಾರನೆಂದೂ, ನೀನು ತಿರಸ್ಕರಣೀಯನಾದ ನರಾಧಮನೆಂದೂ ತಿಳಿದಿರುತ್ತೀರಿ. ನಿಮ್ಮಿಬ್ಬರ ತಿಳುವಳಿಕೆಯಲ್ಲಿ ಅರ್ಥವಿರಲಿ, ಇಲ್ಲದಿರಲಿ, ನಾನು ಯಾರೆಂಬ ದನ್ನೂ, ನನ್ನ ಮನಸ್ಸಿನಲ್ಲಿ ಏನಿರುತ್ತದೆಂಬದನ್ನೂ ಈಗ ಸ್ಪಷ್ಟವಾಗಿ ಹೇಳುತ್ತೇನೆ ಕೇಳು. ನಾನು ದೈತ್ಯರಾಜನಾದ ಮೇಘನಾದನು. ಸಿಂಹಲ ದ್ವೀಪವು ನನ್ನ ರಾಜ್ಯವು; ಶೋಣಿತ ಪುರವೇ ನನ್ನ ರಾಜಧಾನಿಯು. ಈ ಭರತಭೂಮಿಯಲ್ಲಿಯೂ ನನ್ನ ಹಲವು ಗುಪ್ತವಾದ ವಿಶ್ರಾಂತಿಸ್ಥಾನಗಳಿರುತ್ತವೆ. ನನ್ನಲ್ಲಿ ಅಸಂಖ್ಯ ಬಲವುಂಟು, ಅಭೇದ್ಯವಾದ ಹಡಗುಪಡೆ ಯುಂಟು, ಎಡೆಯಿಲ್ಲದ ಐಶ್ವರ್ಯವುಂಟು. ಹೀಗೆ ಪರಮ ವೈಭವಶಾಲಿಯಾದ ನಾನು ನಿನ್ನ ರೂಪಾತಿಶಯವನ್ನು ಕೇಳಿ, ನಿನ್ನ ಪ್ರಾಪ್ತಿಗಾಗಿ ನಿನ್ನ ತಂದೆಯ ಬಳಿಯಲ್ಲಿ ಸರದಾರನಾಗಿ ದುಡಿದೆನು; ನಿನ್ನ ಹಲವು ಕಠಿಣೋಕ್ತಿಗಳನ್ನು ಸಹಿಸಿದೆನು. ಮನಮೋಹಿನೀ, ನಿನ್ನ ಮೇಲಿನ ಮೋಹಾತಿಶಯದಿಂದ ನಾನು ಮರ್ಯಾದೆ ಬಿಟ್ಟು ಮಾತಾಡಿದ್ದನ್ನು, ನೀನು ನನ್ನ ಅನುಗ್ರಹವೆಂದು ತಿಳಿಯದೆ ಅಜ್ಞಾನದಿಂದ ಅಪರಾಧವೆಂದು ಭಾವಿಸಿದೆಯಲ್ಲ! ನನ್ನ ರಾಣೀವಾಸದಲ್ಲಿ ಅಸಂಖ್ಯ ಸುಂದರ ಸ್ತ್ರೀಯರು, ನನ್ನ ಬರವನ್ನು ಎದುರು ನೋಡುತ್ತಿರುವರು. ಜನ ವಾರ್ತೆಗಿಂತಲೂ ಅಧಿಕಾರವಾಗಿದ್ದ ನಿನ್ನ ರೂಪ-ಲಾವಣ್ಯಗಳೂ, ವಿನಯಾದಿ ಗುಣಗಳೂ, ವಿದ್ಯೆಯೂ ಮನಸ್ಸನ್ನು ಆಕರ್ಷಿಸಿದ್ದರಿಂದ ಈ ಮೇಘನಾದನು, ರಾವಣೇಶ್ವರ ನಂತೆ ಸ್ತ್ರೀ ದಾಸ್ಯವೃತ್ತಿಯನ್ನು ತಾಳಿ, ಕೈಕಟ್ಟಿಕೊಂಡು ನಿಂತಿರುತ್ತಾನೆಂದು ಭಾವಿಸು. ಮೋಹನಾಂಗಿಯೇ, ಮನಸ್ಸಿನೊಳಗಿನ ವಿಕಲ್ಪವನ್ನು ಬಿಟ್ಟು, ಈ ದಾಸನನ್ನು ಅನುಗ್ರಹಿಸಿ ಋಣಿಯಾಗಮಾಡು. ನೀನು ಅರ್ಧಾಂಗಿಯಾಗುವದಕ್ಕಿಂತ, ಹೆಚ್ಚಿನ ಯಾವ ಸುಖ ಸಾಧನವೂ ಸಾಧಿಸತಕ್ಕದ್ದಾಗಿ ನನ್ನ ಪಾಲಿಗೆ ಉಳಿದಿರುವದಿಲ್ಲ! ನೀನು ನನ್ನ ವೈಭವ ಶಿಖರವಾಗಿರುತ್ತೀ!!

ಕಾಲ್ಪನಿಕ-ಸುಖ

ರಾಜಪುತ್ರಿಯು ರಾಕ್ಷಸನ ಈ ಮಾತುಗಳನ್ನು ಕೇಳಿ, ವಿಚಾರಮಾಡಿದಳೇನಂದರೆ— ನಾನು ಈಗ್ಗೆ ಒಣ ಚಂಡಿತನವನ್ನು ಮಾಡಿದರೆ, ಈ ದುಷ್ಟನು ನನ್ನ ಮೇಲೆ ಬಲಾತ್ಕಾರ ಮಾಡದೆ ಬಿಡುವದಿಲ್ಲ, ಈಗ್ಗೆ ನನ್ನ ರಕ್ಷಣವನ್ನು ನಾನೇ ಮಾಡಿಕೊಳ್ಳಬೇಕು. "ವಿಪದಿ ಧೈರ್ಯಂ" ಎಂಬ ಉಕ್ತಿಯಂತೆ ವಿಪತ್ತನ್ನು ಧೈರ್ಯದಿಂದ ನೀಗಬೇಕಲ್ಲದೆ, ಎದೆಗುಂದಿ ವಿಚಾರಗೆಡುವವರಲ್ಲಿ ಪ್ರಯೋಜನವಿಲ್ಲ. ಈಗ ನಾನು ಸಂಪೂರ್ಣವಾಗಿ ಸಂಕಟದಲ್ಲಿ ಮುಳುಗಿ ಹೋಗಿರುವದು ನಿಜವು. ಆದರೂ ಕಾಲಗತಿಯು ಒಂದೇ ಸಮನೆ ಇರುವದಿಲ್ಲ ತೀರ ಕೆಳಗೆ ಹೋದ ಚಕ್ರದ ಭಾಗವು, ಕಾಲಗತಿಯಿಂದ ಮೇಲಕ್ಕೆ ಬರಲೇಬೇಕು. ಅದರಂತೆ ದುಃಖಮಗ್ನಳಾದ ನಾನು, ಕಾಲಾಂತರದಿಂದ ಸುಖವನ್ನು ಹೊಂದೇನು. ಕತ್ತಲೆಯ ಮುಂದೆ

ಬೆಳಕು ಇರುವಂತೆ ದುಃಖದ ಮುಂದೆ ಸುಖವು ಇರುವದು. ಒಂದು ವೇಳೆ ನೀಗಲಾರದ ಕಠಿಣ ಪ್ರಸಂಗವೇ ಒದಗಿದರೆ, ನನ್ನ ಜೀವವು ನನ್ನ ಕೈಯಲ್ಲಿಯೇ ಇರುತ್ತದೆ. ಕಪಿಂಜಲ ಗುರುಗಳು, ನಾನು ಸಾರ್ವಭೌಮನ ಹೆಂಡತಿಯೂ, ಸಾರ್ವಭೌಮನ ತಾಯಿಯೂ ಆಗುವೆನೆಂದು ಭವಿಷ್ಯವನ್ನು ಹೇಳಿರುವರು. ಅಂದಬಳಿಕ ಅವರ ಭವಿಷ್ಯ ಕಥನದಂತೆ, ಈಗ ನನಗೆ ಒದಗಿದ ಸಂಕಟಕ್ಕೆ ಅಷ್ಟು ಯಾಕೆ ಮಹತ್ವ ಕೊಡಬೇಕು? ಆಗುವದು ಅಕಸ್ಮಾತ್ತಾಗಿ ಆಗಿ ಹೋಗುತ್ತದೆ; ಹಾಗಾಗಲಿಲ್ಲ—ಹೀಗಾಗಲಿಲ್ಲ, ಹೀಗಾಗಬೇಕಾಗಿತ್ತು—ಹಾಗಾಗಬೇಕಾಗಿತ್ತು ಏನುಮಾಡಲಿ– ಹೇಗೆ ಮಾಡಲಿ, ಎಂಬ ಚೂಪಾದ ಮುಳ್ಳುಗಳಿಂದ ವ್ಯರ್ಥವಾಗಿ ಹೃದಯಕ್ಕೆ ಯಾಕೆ ಚುಚ್ಚಿಕೊಳ್ಳಬೇಕು? ರಾವಣನಂಥ ಪ್ರತಾಪಶಾಲಿಯನ್ನು ಮಣ್ಣುಗೂಡಿಸಿ, ಸೀತಾದೇವಿಯು ಪಾತಿವ್ರತ್ಯವನ್ನು ಕಾಯ್ದುಕೊಂಡು ಪಾರಾಗಿ ಬರಲಿಲ್ಲವೇನು? ದಮಯಂತಿಯು ದುಷ್ಟ ಕಿರಾತನನ್ನು ಸುಟ್ಟು ಬೂದಿಮಾಡಿ, ಪಾತಿವ್ರತ್ಯವನ್ನು ಕಾದು ಕೊಂಡು ಪತಿಯನ್ನು ಕೂಡಲಿಲ್ಲವೇನು? ದುರ್ಧರ ಸಂಕಟಗಳೊದಗಿದಾಗಲೂ, ತಮ್ಮ ಪಾತಿವ್ರತ್ಯವನ್ನು ಪ್ರಾಣಕ್ಕಿಂತಲೂ ಹೆಚ್ಚೆಂದು ತಿಳಿದು, ಕಾಪಾಡಿದ್ದರಿಂದಲೇ ಈ ಸತಿಯರ ಕೀರ್ತಿಯು ಜಗತ್ತಿನಲ್ಲಿ ಈವೊತ್ತಿನವರೆಗೆ ಪ್ರಕಾಶಿಸುತ್ತಿರುವದು. ಈಗ ರಾಕ್ಷಸನಿಗೆ ಅನುಕೂಲವಾಗಿ ನಡೆಯುವದರಲ್ಲಿ ಚಾತುರ್ಯವುಂಟು. ಅದರಲ್ಲಿಯೂ ರಾಕ್ಷಸನಿಗೆ ಯಾವ ಸಂಶಯವೂ ಬಾರದಂತೆ, ಇಲ್ಲದ ಚಿಕಿತ್ಸೆಯ ಗೊಡವೆಗೆ ಹೋಗದೆ, ಪ್ರೀತಿ ತೋರಿಸಿ ಬೇಗನೆ ಆತನಿಗೆ ಅನುಕೂಲವಾಗುವದರಲ್ಲಿ ಹೆಚ್ಚಿನ ಚಾತುರ್ಯವಿರುವದು. ಅಬಲೆಯಾಗಿದ್ದ ನಾನು ಸಬಲೆಯಾಗುವೆನು. ಇನ್ನು ಹೆದರುವದೇಕೆ? ಹದಿನಾರು ವರ್ಷದ ಸುಖಾನುಭವದಿಂದ ಕೋಮಲವಾಗಿದ್ದ ನನ್ನ ಹೃದಯಕ್ಕೆ, ಕೆಲವು ತಾಸುಗಳ ದುರ್ಧರವಾದ ದುಃಖಾನುಭವದಿಂದ ದಡ್ಡುಬಿದ್ದು, ಅದು ಯಾತಕ್ಕೂ ಹಣಿಯದಂತಾಗಿದೆ! ಆ ದಡ್ಡಿನಿಂದಲೇ ನಾನು ಈಗ ನಿರ್ಭಯ ಳಾಗಿದ್ದೇನೆ! ಸಂಕಟಪರಂಪರೆಗಳಿಂದ ಮನುಷ್ಯನ ವೃತ್ತಿಯ ಸುಧಾರಣೆಯು ಬಹುಬೇಗ ಆಗುತ್ತದೆಂಬದನ್ನು ಇಂದು ನಾನು ಮನಗಂಡೆನು! ಅದರಿಂದಲೇ ಸತ್ಪುರುಷರು, ಸಂಕಟಗಳನ್ನು ಈಶ್ವರೀ ಪ್ರಸಾದಗಳೆಂದು ಭಾವಿಸುತ್ತಿರಬಹುದು!!

ಪದ್ಮನಯನೆಯು ಈ ಪ್ರಕಾರ ಗಂಭೀರವಿಚಾರದಿಂದ ಗಾಂಭೀರ್ಯವನ್ನು ತಾಳಿ, ಮೇಘನಾದನನ್ನು ಕುರಿತು—ಪ್ರತಾಪಶಾಲಿಯೇ, ವಿಚಾರಮಗ್ನಳಾದ ನಾನು ನಿನ್ನ ಹಂಗು ಇಲ್ಲದೆ ಸುಮ್ಮನೆ ಕುಳಿತು, ನಿನ್ನನ್ನು ಅಪರಾಧಿಯಂತೆ ಇಲ್ಲಿಯವರೆಗೆ ನಿಲ್ಲಿಸಿದ್ದಕ್ಕಾಗಿ ಕ್ಷಮಿಸು. ವಿಚಾರಾಂತದಲ್ಲಿ ನಾನು ಮಹಾಪರಾಧಿಯೆಂದು ನಿರ್ಧರಿಸಿಕೊಂಡಿದ್ದೇನೆ. ನನ್ನ ಇಚ್ಛೆಯ ವಿರುದ್ಧವಾಗಿ ನನ್ನ ತಂದೆಯು, ನಿನ್ನನ್ನು ವಿಶೇಷವಾಗಿ ಆದರಿಸುತ್ತಿದ್ದದ್ದನ್ನು ನೆನಪಿಗೆ ತಂದುಕೊಂಡರೆ, ನಿನ್ನ ಶೌರ್ಯಾತಿಶಯದ ಕಲ್ಪನೆಯು ಯಾರಿಗಾದರೂ ಆಗುವಂತೆ ಇರುವದು. ರಾಜಾಧಿರಾಜನಾದ ನೀನು, ಸರದಾರನಾಗಿ ಬಂದು ನನ್ನಿಂದಾದ ಅಪಮಾನವನ್ನು ಸಹಿಸಿಕೊಂಡು, ಪ್ರೇಮದಲ್ಲಿ ಕೊರತೆಯನ್ನುಂಟುಮಾಡದೆ, ಪರಿಪರಿಯ ಕಷ್ಟಗಳನ್ನು ಅನುಭವಿಸಿ, ನನ್ನ ಸಂಕಟನಿವಾರಣಕ್ಕಾಗಿ ಇಲ್ಲಿಗೆ ಒದಗಿ, ವಿನಯವನ್ನೇ

ಪ್ರಕಟಿಸುವದನ್ನು ನೋಡಿದರೆ, ನಿನ್ನ ಜನ್ಮವೂ, ನನ್ನ ಮೇಲಿರುವ ನಿನ್ನ ಅನಿರ್ವಾಚ್ಯವಾದ ಪ್ರೇಮವೂ ಸಹಜವಾಗಿ ವ್ಯಕ್ತವಾಗುತ್ತವೆ. ನವವಧುವಿಗೆ ಇದಕ್ಕೂ ಹೆಚ್ಚಿನದೇನು ಬೇಕಾಗಿರುವದು? ನಿನ್ನಲ್ಲಿ ಸದ್ಗುಣಗಳಿರುವವು, ಶೌರ್ಯವಿರುವದು, ಐಶ್ವರ್ಯವಿರುವದು, ವೈಭವವಿರುವದು! ನಾನು ಹೇಗೂ ಅವಿವಾಹಿತಳಾಗಿದ್ದೇನೆ; ಪಶ್ಚಾತ್ತಾಪದಿಂದ ಶುದ್ಧ ವಾಗಿದ್ದ ನನ್ನ ಮನಸ್ಸಿನಲ್ಲಿ ನಿನ್ನ ವಿಷಯದ ಪವಿತ್ರ ಪ್ರೇಮವೂ ಉತ್ಪನ್ನವಾಗಿರುತ್ತದೆ; ಆಯಾಸದಿಂದಲೇ ಆಗಲೊಲ್ಲದೇಕೆ, ಏಕಾಂತಸ್ಥಳವು ತಾನಾಗಿ ಒದಗಿರುವದು. ಪ್ರಮದೆಯರಿಗೆ ನಿನ್ನಂಥ ಯೋಗ್ಯನಾದ ಪತಿಯ ಹೊರತು, ಹೆಚ್ಚಿನ ಆಪ್ತರು ಯಾರಿರುವರು? ಆದ್ದರಿಂದ ಈ ಭರತಭೂಮಿಯಲ್ಲಿರುವ ಸಮೀಪದ ನಿನ್ನ ಗುಪ್ತವಿಹಾರ ಸ್ಥಾನಕ್ಕೆ ನನ್ನನ್ನು ಕರೆದೊಯ್ಯ ಬೇಕು, ಎಂದು ಪ್ರಾರ್ಥಿಸಿದಳು. ಅಷ್ಟರಲ್ಲಿ ಕುದುರೆಯು ಭುರುಗುಟ್ಟುವದು ಕಿವಿಗೆ ಬೀಳಲು, ಆಕೆಯು ತಿರುಗಿ ನೋಡಿದಳು. ತೀಕ್ಷ್ಣವೇಗವು ಎದ್ದುನಿಂತು, ಪ್ರೀತಿಯಿಂದ ಪದ್ಮನಯನೆಯನ್ನು ನೋಡುತ್ತ, ಬಾಲಕೊಡವಿ ತಲೆಬಾಗಿಸುತ್ತ, ಮುಂಗಾಲು ಕೆದರಿ ಭುರುಗುಟ್ಟುತ್ತ ತನ್ನ ಉತ್ಸಾಹವನ್ನು ವ್ಯಕ್ತಮಾಡುತ್ತಿತ್ತು ಇದನ್ನು ನೋಡಿ ಪದ್ಮನಯನೆಗೆ ಪರಮಾಶ್ಚರ್ಯವಾಯಿತು. ಯೋಗ್ಯ ಪ್ರಸಂಗದಲ್ಲಿ ತೀಕ್ಷ್ಣವೇಗನು ಸಹಾಯಕನಾಗಿ ನಿಂತುಕೊಂಡದ್ದನ್ನು ನೋಡಿ, ಆಕೆಗೆ ಆನಂದವೂ ಆಯಿತು. ತೀಕ್ಷ್ಣವೇಗವು ಮರಣಹೊಂದಿರದೆ ಮಾರ್ಗಾಯಾಸದಿಂದ ಮೈಮರೆತು ಬಿದ್ದಿತ್ತು, ಆ ಅರಣ್ಯದ ಸಂಜೆಯ ತಂಗಾಳಿಯಿಂದ ಅದು ಚೇತರಿಸಿಕೊಂಡು ಎದ್ದು, ಸಮೀಪದ ಜಲಾಶಯದಲ್ಲಿ ನೀರುಕುಡಿದು, ಹುಲ್ಲು ಮೇದು ಹುರುಪುಗೊಂಡಿತ್ತು. ದುಃಖಮಗ್ನಳಾದ ಪದ್ಮನಯನೆಗೆ, ಈ ಯಾವ ಸಂಗತಿಯೂ ಗೊತ್ತಾಗಿದ್ದಿಲ್ಲ. ತನ್ನ ಪ್ರೀತಿಯ ಪಟ್ಟದ ಕುದುರೆಯನ್ನು ನೋಡಿ ಆಕೆಗೆ ಬಹು ಸಮಾಧಾನವಾಯಿತು.

ಮೇಘನಾದನು ರಾಜಪುತ್ರಿಯ ರೂಪಕ್ಕೂ, ಸವಿಮಾತಿಗೂ, ಗಾಂಭೀರ್ಯಕ್ಕೂ ಮರುಳಾಗಿ—ಸುಂದರೀ, ನಿನ್ನ ಅಪ್ಪಣೆಗೆ ನಾನು ಹೊರಗಾದವನಲ್ಲ, ಬಾ, ನಾವಿಬ್ಬರೂ ಈ ನನ್ನ ಕುದುರೆಯನ್ನು ಏರಿ ವಿಹಾರಸ್ಥಾನಕ್ಕೆ ಹೋಗೋಣ. ಕಡೆಯತನಕ ನಿನ್ನ ಸೇವೆಯಲ್ಲಿ ಈ ದೇಹವನ್ನು ಸವೆಸುವೆನು. ನನ್ನ ರಾಣೀವಾಸದೊಳಗಿನ ಪ್ರಮದೆಯರೆಲ್ಲರೂ ನಿನ್ನ ದಾಸಿಯರಾಗುವರು. ನನ್ನ ಪಟ್ಟದ ಮಹಿಷಿಯಾದ ನಿನಗೆ, ಎಣೆಯಿಲ್ಲದ ಐಶ್ವರ್ಯಾಧಿ ಕಾರಗಳು ಪ್ರಾಪ್ತವಾಗುವವು. ಇಂದಿಗೆ ನನ್ನ ಜನ್ಮವು ಸಫಲವಾಯಿತು. ನಿನ್ನ ಅಂಗಸ್ಪರ್ಶದಿಂದ ನನಗೆ ಸ್ವರ್ಗಸುಖವು ಪ್ರಾಪ್ತವಾಗುವದರಿಂದ, ಈ ಭೂಲೋಕವೇ ಸ್ವರ್ಗವೆಂದು ನಾನು ಭಾವಿಸುವೆನು. ಅನ್ನಲು, ಪದ್ಮನಯನೆಯು ಆ ಕಾಮುಕನ ಕಲ್ಪನೆಯನ್ನು ಮನಸ್ಸಿನಲ್ಲಿ ತಿರಸ್ಕರಿಸುತ್ತ ಪ್ರಕಟವಾಗಿ—ರಾಜಾಧಿರಾಜನೇ, ಬಹು ಯೋಗ್ಯಮಾತಾಡಿದೆ. ನಿನ್ನ ಅಪ್ಪಣೆಗೆ ನಾನು ಹೊರಗಾದವಳಲ್ಲ; ಆದರೆ ನಾನೊಂದು ಮಾತಿಗಾಗಿ ಹೇಳಿಕೊಳ್ಳುವೆನು. ಸುಖವನ್ನು ಕಲ್ಪಿಸುವದರಲ್ಲಿರುವಷ್ಟು ಆನಂದವು, ಅನುಭವಿಸುವದರಲ್ಲಿರುವದಿಲ್ಲೆಂದು ನಿನ್ನಂಥ ಪ್ರಾಜ್ಞನಿಗೆ ನಾನು ಹೇಳುವ ಕಾರಣವಿಲ್ಲ. ಅತ್ತು ಅತ್ತು ಮಂಗಲವಾಗಿದ್ದ ಮೋರೆಯನ್ನು ಸಹ ನಾನು ತೊಳಕೊಂಡಿಲ್ಲ; ರಕ್ತವೂ, ಧೂಳಿಯೂ ಹತ್ತಿ ಮಲೀನವಾಗಿದ್ದ ವಸ್ತ್ರಗಳನ್ನು ಬಿಟ್ಟಿಲ್ಲ; ಮೇಲಾಗಿ ನಾನು ಪುರುಷವೇಷಧಾರಿಯು; ಸ್ಥಳವು ಘೋರಾರಣ್ಯ. ಇಂಥ

ವಿಪನ್ನಸ್ಥಿತಿಯಲ್ಲಿ ನಿನ್ನಂಥ ಭಾಗ್ಯಶಾಲಿಯ ಪಾಣಿಗ್ರಹಣ ಮಾಡುವದು ಯೋಗ್ಯವೆ? ಪಾಣಿಗ್ರಹಣವಾಗುವವರೆಗೆ ಪುರುಷಸ್ಪರ್ಶವು ನಿಂದ್ಯವಲ್ಲವೆ? ಹಾಗು ನಿನ್ನ ಪುಣ್ಯದಿಂದ ತೀಕ್ಷ್ಣವೇಗನು ಉತ್ಸಾಹಪೂರ್ಣನಾಗಿ ನಿಂತುಕೊಂಡಿರುತ್ತಾನೆ. ನೀನು ನಿನ್ನ ಕುದುರೆಯನ್ನು ಏರು, ನಾನು ನನ್ನ ಪಟ್ಟದ ಕುದುರೆಯನ್ನು ಹತ್ತುತ್ತೇನೆ. ನಿನ್ನ ಸಮೀಪದ ವಿಹಾರಮಂದಿರಕ್ಕೆ ಹೋದಬಳಿಕ ಮುಂದಿನ ವಿಚಾರವು. ಈಗ ನೀನೂ ದಣಿದಿರುತ್ತೀ. ಇಷ್ಟು ಅವಸರವೇಕೆ? ಅವಿಚಾರದ ಅವಸರದಿಂದ ಮಾಡಿದ ಕಾರ್ಯವು ಕೆಡುವ ಸಂಭವವಿರುತ್ತದೆ.

ಹೀಗೆ ಮನಸ್ಸನ್ನು ಸಂಪೂರ್ಣವಾಗಿ ಆಕರ್ಷಿಸಿದ್ದರಿಂದ, ಪದ್ಮನಯನೆಯ ಪ್ರೇಮಾಲಿಂಗನಕ್ಕೆ ಮೇಘನಾದನು ಆತುರಪಡುತ್ತಿದ್ದರೂ, ಆತನು ಪದ್ಮನಯನೆಯ ಸಮರ್ಪಕವಾದ ಮಾತುಗಳನ್ನು ನಿರಾಕರಿಸಲಿಲ್ಲ. ಪದ್ಮನಯನೆಯನ್ನು ಪ್ರಸನ್ನೀಕರಿಸಿಕೊಳ್ಳುವದು ಆತನ ಕರ್ತವ್ಯವಾಗಿತ್ತು. ಆತನು ಪದ್ಮನಯನೆಯ ಸುವಿಚಾರಕ್ಕಾಗಿ ಆಕೆಯನ್ನು ಹೊಗಳಿ, ಅಲ್ಲಿಂದ ತನ್ನ ವಿಹಾರಮಂದಿರಕ್ಕೆ ಹೊರಡಲು ಸಿದ್ಧನಾದನು. ಅವರಿಬ್ಬರು ಸಮೀಪದ ಜಲಾಶಯದಲ್ಲಿ ಕೈಕಾಲು ಮೋರೆಗಳನ್ನು ತೊಳಕೊಂಡು ಸ್ವಲ್ಪ ವಿಶ್ರಮಿಸಿದರು. ಚಂದ್ರನು ಮೇಲಕ್ಕೇರಿದನು. ಬೆಳದಿಂಗಳು ಜಲಾಶಯದಲ್ಲಿ ಸ್ಪಷ್ಟವಾಗಿ ಬಿದ್ದಿತ್ತು ಮೇಘನಾದನಂಥ ಶೂರನು ರಕ್ಷಕನಾಗಿದ್ದದ್ದರಿಂದ, ಪದ್ಮನಯನೆಯ ಕ್ಷುದ್ರ ಭಯಗಳು ದೂರವಾಗಿದ್ದವು. ಪದ್ಮನಯನೆ ಯಂಥ ಲೋಕಸುಂದರಿಯು, ಏಕಾಂತದ ಉತ್ತರರಾತ್ರಿಯಲ್ಲಿ, ಜಲಾಶಯದ ದಂಡೆಯ ಮೇಲೆ ನಿರಾಶ್ರಿತಳಾಗಿ ತನ್ನ ಕೈಸೇರಿದ್ದರಿಂದ, ಮನೋರಾಜ್ಯದ ಉಚ್ಚಸಿಂಹಾಸನವೇರಿದ ಮೇಘನಾದನಿಗೆ ಸ್ವರ್ಗವು ಮೂರೇ ಗೇಣು ಉಳಿದಿತ್ತು! ಈ ಸ್ಥಿತಿಯಲ್ಲಿ ಅವರು ಒಂದೆರಡು ತಾಸುಗಳನ್ನು ಸಮಾಧಾನದಿಂದ ಕಳೆದಬಳಿಕ, ಮೇಘನಾದನು ಪದ್ಮನಯನೆಗೆ ಕುದುರೆಯನ್ನು ಹತ್ತಲು ಸೂಚಿಸಿದನು. ಪದ್ಮನಯನೆಯು ವಿನಯದಿಂದ ಅದಕ್ಕೆ ಸಮ್ಮತಿಸಿ, ತೀಕ್ಷ್ಣವೇಗವನ್ನು ಚಪ್ಪರಿಸಿ, ಉಲ್ಲಾಸವನ್ನು ಪ್ರಕಟಿಸುತ್ತ ಚಟ್ಟನೆ ಅದನ್ನು ಏರಿಕುಳಿತಳು. ಮೇಘನಾದನೂ ತನ್ನ ಕುದುರೆಯನ್ನು ಹತ್ತಿದನು. ಮೇಘನಾದನು ಪದ್ಮನಯನೆಗೆ ಎಷ್ಟು ತಿರಸ್ಕರಣೀಯನಾಗಿದ್ದರೂ, ಅವನು ಪರಿಚಯದವನಾಗಿದ್ದನು. ಮುಂದೆ ಮೇಘನಾದನು, ಹಿಂದೆ ಪದ್ಮನಯನೆಯು, ಹೀಗೆ ಅವರು ದಕ್ಷಿಣಾಭಿಮುಖವಾಗಿ ಮಾರ್ಗವನ್ನು ಕ್ರಮಿಸತೊಡಗಿದರು. ಮೇಘನಾದನನ್ನು ಅನುಸರಿಸಿ ಹೋಗುವದು ಪದ್ಮನಯನೆಗೆ ಎಳ್ಳಷ್ಟು ಸೇರದಿದ್ದರೂ, ಗತ್ಯಂತರ ಕಾಣದೆ ಆ ಧೂರ್ತಳು, ಅದರ ಸುಳವು ಸಹ ಆ ದೈತ್ಯನಿಗೆ ಹತ್ತಗೊಡಲಿಲ್ಲ. ಅವರ ಕುದುರೆಗಳು ವೇಗದಿಂದ ಸಾಗಿದ್ದವು. ಅವರು ಮರುದಿವಸ ಬೆಳಗಿನ ನಾಲ್ಕು ತಾಸಿಗೆ, ಸಂದಟಿತವಾಗಿ ಬೆಳೆದ ಒಂದು ಗಗನ ಚುಂಬಿತ ವೃಕ್ಷಗಳ ಗುಂಪಿನ ಎದುರಿಗೆ, ಬಂದು ನಿಂತುಕೊಂಡರು!

ಪದ್ಮನಯನೆಯು ಅಂಥ ಘೋರಾರಣ್ಯವನ್ನು ಎಂದೂ ನೋಡಿದ್ದಿಲ್ಲ. ಅದು ತಾನು ಮೊದಲು ನೋಡಿದ ಅರಣ್ಯದಿಂದ ಬಹಳವಾದರೆ, ಇಪ್ಪತ್ತೈದು ಮೂವತ್ತು ಮೈಲಿನ ಮೇಲಿರಬಹುದೆಂದು ಆಕೆಯು ಭಾವಿಸಿದ್ದಳು; ಆದರೆ ಅದು ನಿಜವಾಗಿ ನೂರಾರು ಮೈಲು ದೂರವಾಗಿತ್ತು. ಆ ಪ್ರದೇಶವು ದಂಡಕಾರಣ್ಯದ ಮಧ್ಯವಾಗಿತ್ತೆಂದು ಹೇಳಬಹುದು. ಇಷ್ಟು

ಮಾರ್ಗವನ್ನು ನಾಲ್ಕಾರು ತಾಸುಗಳಲ್ಲಿ ಕ್ರಮಿಸಿ ಹೋದದ್ದು, ವಾಚಕರಿಗೆ ಆಶ್ಚರ್ಯಕರವಾಗಿ ತೋರಬಹುದು; ಆದರೆ ರಾಕ್ಷಸೀ ಮಾಯೆಗೆ ಆ ಕೆಲಸವು ದೊಡ್ಡದಲ್ಲ. ಬಹಳವಾದರೆ ತನ್ನ ತಂದೆಯ ರಾಜಧಾನಿಯಿಂದ ಮೂರೇ ದಿನದ ಹಾದಿಯಲ್ಲಿ ತಾನಿರುತ್ತೇನೆಂದು ಭಾವಿಸಿ, ರಾಜಪುತ್ರಿಯು ಒಂದು ಬಗೆಯ ಸಮಾಧಾನವನ್ನು ತಾಳಿದ್ದಳು. ಪಾಪ! ತಾನು ಮೂವತ್ತು ದಿನದ ಹಾದಿಯ ಮೇಲಿದ್ದೇನೆಂಬುದು, ಆಕೆಗೆ ಹೇಗೆ ಗೊತ್ತಾಗಬೇಕು? ಇರಲಿ. ಮೇಘನಾದನು ಕೆಲವು ಸಾಂಕೇತಿಕ ಶಬ್ದಗಳನ್ನು ಉಚ್ಚರಿಸಿ, ಒಂದು ಬಾಣವನ್ನು ವೃಕ್ಷಗಳ ಗುಂಪಿನಲ್ಲಿ ಬಿಟ್ಟನು. ಕೂಡಲೆ ರಾಜಮಾರ್ಗವು ಉತ್ಪನ್ನವಾಗಲು, ಆತನು ಪದ್ಮನಯನೆಯೊಡನೆ ಮುಂದಕ್ಕೆ ಸಾಗಿದನು. ಈ ವಿಚಿತ್ರವನ್ನು ನೋಡಿ ಪದ್ಮನಯನೆಯು ಬೆದರಿದಳು. ಒಂದು ಬಾಣಬಿಟ್ಟ ಮಾತ್ರದಿಂದ ಸಂದಟಿತ ವೃಕ್ಷರಾಶಿಯ ಮಧ್ಯದಲ್ಲಿ ರಾಜಮಾರ್ಗವಾದದ್ದು ಆಕೆಯ ವಿಚಾರಕ್ಕೆ ನಿಲುಕದಾಯಿತು! ಇಂದ್ರಜಿತು–ಘಟೋತ್ಕಚರೇ ಮೊದಲಾದ ರಾಕ್ಷಸರ ಮಾಯಾ ವ್ಯಾಪಾರಗಳನ್ನು ಕೇಳಿದ ಆ ರಾಜಪುತ್ರಿಯು, ಅಂಥ ವ್ಯಾಪಾರವನ್ನು ಕಣ್ಣುಮುಟ್ಟಿ ನೋಡಿ ಭಯ ಭ್ರಾಂತಳಾದಳು. ಮತ್ತೆ ಆಕೆಯ ಚಿಂತೆಗೆ ಆರಂಭವಾಯಿತು. ಅವರು ಸುಮಾರು ಎರಡು ಮೈಲು ನಡೆದು ಹೋದ ಮೇಲೆ, ಒಂದು ಭವ್ಯವಾದ ಕೋಟೆಯ ಮಹಾದ್ವಾರವನ್ನು ಪ್ರವೇಶಿಸಿದರು. ಪದ್ಮನಯನೆಯು ವಿಚಾರಶೂನ್ಯಳಾಗಿ ಕೇವಲ ಮೇಘನಾದನಿಂದ ಎಳೆದೊಯ್ಯಲ್ಪಡುವಂತೆ ಸಾಗಿದ್ದಳು. ಮೇಘನಾದನು ಒಂದು ಸುಂದರವಾದ ವಿಶ್ರಾಂತಿಯ ಮಂದಿರದ ಬಾಗಿಲಲ್ಲಿ ನಿಂತು—ಪದ್ಮನಯನೇ, ಕುದುರೆಯನ್ನು ಇಳಿ; ಇಕೋ, ಇದೇ ನಿನ್ನ ವಿಹಾರಮಂದಿರವು; ಒಳಗೆ ಪ್ರವೇಶಿಸು, ಎಂದು ಹೇಳಿದನು.

ಪದ್ಮನಯನೆಯು ಮಂದಿರವನ್ನು ಪ್ರವೇಶಿಸುತ್ತಲೆ, ಸುಂದರಿಯಾದ ದಾಸಿಯರು ಆಕೆಯನ್ನು ಎದುರ್ಗೊಂಡು ವಿನಯದಿಂದ ಒಳಗೆ ಕರೆದೊಯ್ದರು. ಆ ಮಂದಿರದ ಸೌಂದರ್ಯ–ಸುವ್ಯವಸ್ಥೆಗಳನ್ನು ನೋಡಿ ಪದ್ಮನಯನೆಯು ದಂಗಾದಳು. ಸಾರ್ವಭೌಮನ ಮಗಳನ್ನು ದಂಗುಬಡಿಸುವ ಮಂದಿರವು, ಹೇಗಿರಬಹುದೆಂಬದನ್ನು ವಾಚಕರು ತರ್ಕಿಸ ಬಹುದು. ನಮ್ಮ ಪದ್ಮನಯನೆಯು ಹಸಿವೆಯಿಂದ ಕಂಗಾಲಾಗಿರಲು, ಸದ್ಯಕ್ಕೆ ನಾವು ಆ ಮಂದಿರವನ್ನು ವರ್ಣಿಸುವ ಗೊಡವಿಗೆ ಹೋಗುವದಿಲ್ಲ. ಮುಂದೆ ಸ್ವಲ್ಪ ವೇಳೆಯಲ್ಲಿಯೇ ದಾಸಿಯರು ಪಾಕವನ್ನು ಸಿದ್ಧಮಾಡಲು, ರಾಜಪುತ್ರಿಯು ಮೈತೊಳೆದು ಶುದ್ಧ ವಸ್ತ್ರವನ್ನುಟ್ಟು ಕೊಂಡು ಭೋಜನಮಾಡಿದಳು. ವಿನಯಶೀಲರಾದ ದಾಸಿಯರನ್ನು, ಅದರಲ್ಲಿಯೂ ಸುಮಧ್ಯಮೆಯೆಂಬ ದಾಸಿಯನ್ನು ನೋಡಿ, ಪದ್ಮನಯನೆಗೆ ಬಹಳ ಸಮಾಧಾನವಾಯಿತು. ಅವರ ಸಹವಾಸದಿಂದ ಕೆಲಹೊತ್ತಿನವರೆಗೆ ಆಕೆಗೆ ಮೇಘನಾದನ ವಿಸ್ಮೃತಿಯಾಗಿತ್ತೆಂದು ಹೇಳಬಹುದು. ಆಕೆಯು ದಾಸಿಯರನ್ನು ಹಿಂಬಾಲಿಸಿ, ವಿಹಾರ ಮಂದಿರದೊಳಗಿನ ಶಯನ ಗೃಹವನ್ನು ಹೊಕ್ಕಳು. ಮಾರ್ಗಾಯಾಸದಿಂದ ಬಳಲಿದ ನಮ್ಮ ಪದ್ಮನಯನೆಯು, ಅದರ ಸೌಂದರ್ಯಕ್ಕೆ ಲಕ್ಷ್ಯಗೊಡದೆ, ಮಂಚದ ಮೇಲೆ ಹಾಸಿದ್ದ ಮೃದುವಾದ ಹಾಸಿಗೆಯ ಮೇಲೆ

ವಿಶ್ರಮಿಸಿದಳು. ದಾಸಿಯರು ಆಕೆಯನ್ನು ಸುತ್ತುಗಟ್ಟಿ ಕೌತುಕದಿಂದ ನೋಡುತ್ತಿದ್ದರು. ಪದ್ಮನಯನೆಯು ಅವರನ್ನು ಕುರಿತು—ವಿನಯಶೀಲರೇ, ನೀವು ನನ್ನನ್ನು ಬಹಳವಾಗಿ ಉಪಚರಿಸಿದಿರಿ. ನಿಮ್ಮ ಉಪಚಾರದಿಂದ ನನ್ನ ಶ್ರಮವು ಅಳಿದುಹೋಗಿದೆ. ಕುಳಿತುಕೊಳ್ಳಿರಿ. ನಾನು ಅಪರಿಚಿತಳು, ಯಾರ ಯೋಗ್ಯತೆಯೇನು, ಯಾರ ಗುಣಗಳೇನು ಎಂಬದನ್ನರಿಯೆನು. ನನ್ನಿಂದಾಗುವ ತಪ್ಪುಗಳನ್ನು ಹೊಟ್ಟೆಯಲ್ಲಿ ಹಾಕಿಕೊಳ್ಳಿರಿ. ನನ್ನನ್ನು ನಿಮ್ಮ ಒಡಹುಟ್ಟಿದವಳೆಂದು ತಿಳಿಯಿರಿ. ಈ ಅಪರಿಚಿತವಾದ ಸ್ಥಳದಲ್ಲಿ ನೀವೇ ನನ್ನ ಆಪ್ತರು, ಎಂದು ನುಡಿಯುತ್ತ ಎಲ್ಲರ ಮೋರೆಗಳನ್ನು ಕೃತಜ್ಞತೆಯಿಂದ ನೋಡಿದಳು. ಅವರಲ್ಲಿ ಸುಮಧ್ಯಮೆಯು ಸಂಜ್ಞೆಯಿಂದ ಸುಮ್ಮನಿರೆಂದು ಸೂಚಿಸಿದ್ದರಿಂದ, ಪದ್ಮನಯನೆಯು ಹತ್ತರದಲ್ಲಿದ್ದ ರುದ್ರವೀಣೆಯನ್ನು ತಕ್ಕೊಳ್ಳುವ ನೆವದಿಂದ ಮಾತು ನಿಲ್ಲಿಸಿದಳು. ಬಳಿಕ ಪದ್ಮನಯನೆಯ ವೀಣಾವಾದನಕ್ಕೆ ಆರಂಭವಾಯಿತು; ಆದರೆ ಆಕೆಯ ಮನಸ್ಸು ಅನ್ಯವಿಚಾರದಲ್ಲಿ ತೊಡಗಿತ್ತು! ಇಷ್ಟರಲ್ಲಿ ಮೇಘನಾದನು ದರ್ಶನೋತ್ಕಂಠಿತನಾಗಿ ಬಂದಿರುವನೆಂದು ದಾಸಿಯರು ಆಕೆಗೆ ತಿಳಿಸಿದರು.

ಮೇಘನಾದನು ಬಂದದ್ದನ್ನು ಕೇಳಿ, ರಾಜಪುತ್ರಿಯು ಅಸಮಾಧಾನಪಟ್ಟಳು. ಆದರೂ ಆತನು ಒಳಗೆ ಬಂದಕೂಡಲೆ, ತಾನು ಕುಳಿತಿದ್ದ ಮಂಚದಿಂದ ಚಟ್ಟನೆ ಎದ್ದು, ಮುಗುಳುನಗೆ ನಗುತ್ತ ತಲೆಯನ್ನು ಬಾಗಿಸಿಕೊಂಡು ದೂರ ನಿಂತಳು. ಅವಳ ಕಟಾಕ್ಷಗಳು ದೈತ್ಯನ ಮನಸ್ಸನ್ನು ಭ್ರಮೆಗೊಳಿಸಿದವು. ಕಾಮಬಾಧೆಯಿಂದ ಅವನ ಸರ್ವಾಂಗದಲ್ಲಿ ಬೆವರೊಡೆಯಿತು. ಕುಲೀನಳೂ, ಸುಶಿಕ್ಷಿತಳೂ ಆದ ಪದ್ಮನಯನೆಯು, ತನ್ನ ಪ್ರಿಯಪತಿಯ ಸಂಗಡ ನಡೆದು ಕೊಳ್ಳುವಂತೆ, ಕುರುಪಿಯೂ, ದುಷ್ಟನೂ ಆದ ಆ ರಾಕ್ಷಸನ ಸಂಗಡ ನಡಕೊಳ್ಳುವಾಗ ಬಹಳ ವ್ಯಸನಪಟ್ಟಳು. ದೈತ್ಯನನ್ನು ರಮಿಸುವದು ಅವಶ್ಯವಾದದ್ದರಿಂದ, ಸುವಿಚಾರಿಯಾದ ಆ ಸುಂದರಿಯು, ಬಹಿರಂಗದಲ್ಲಿ ಹಾಗೆ ನಡೆದು ತೋರಿಸದಿದ್ದರೆ, ನಿರ್ವಾಹವಾಗುವಂತೆ ಇದ್ದಿಲ್ಲ. ರಾಜಪುತ್ರಿಯ ಉಪಚಾರವನ್ನು ನೋಡಿ ರಾಕ್ಷಸನು ಭ್ರಮೆಯಿಂದ—ಹರಿಣಾಕ್ಷೀ, ನಿನ್ನ ಸೇವಕನಾದ ನನ್ನನ್ನು ನೀನು ಇಷ್ಟು ಮನ್ನಿಸಲವಶ್ಯವಿಲ್ಲ. ನಿನಗಿಂತ ಅಧಿಕ ಪ್ರಿಯವಾದದ್ದು ನನಗೆ ಮತ್ತೊಂದಿಲ್ಲ. ನನ್ನ ರಾಜ್ಯವೂ, ಐಶ್ವರ್ಯವೂ, ಅಧಿಕಾರವೂ, ನಾನೂ ನಿನ್ನ ಅಧೀನವೆಂದು ತಿಳಿ. ನೀನು ದೂರ ನಿಂತದ್ದರಿಂದ ನಿನ್ನ ಶರೀರಾವಯವಗಳ ಸ್ಥಿತಿಯು ಹೇಗಾಗಿದೆ ನೋಡಿದೆಯಾ? ಕೋಮಲವಾದ ನಿನ್ನ ಚರಣಗಳು, ಮುಡಿ–ಮೊಲೆ–ತಿಗಗಳ ಭಾರದಿಂದ ರಕ್ತವರ್ಣವನ್ನು ಹೊಂದಿವೆ. ನಿನ್ನ ಸೂಕ್ಷ್ಮವಾದ ಕಟಿಯು ಮುಡಿ–ಮೊಲೆಗಳ ಭಾರವನ್ನೂ ಹೊರಲಾರದೆ ಬಾಗಿದೆ; ನಿನ್ನ ಕೆಳ ದುಟಿಯು ಹಲ್ಲುಗಳಿಂದ ಆಗುವ ಆಘಾತವನ್ನು ತಡೆಯದಾಗಿದೆ. ಇಲ್ಲಿಯವರೆಗೆ ನಿನ್ನನ್ನು ನಿಲ್ಲಗೊಟ್ಟ ಈ ಕ್ರೂರನಾದ ಮೇಘನಾದನು ಮಹಾಪರಾಧಿಯಾಗಿದ್ದಾನೆ. ಬಾ, ನನ್ನ ಪಾರ್ಶ್ವಭಾಗದಲ್ಲಿ ವಿಶ್ರಮಿಸು, ಎಂದು ನುಡಿದು ರಾಕ್ಷಸನು ರಾಜಪುತ್ರಿಯ ಕೈಯನ್ನು ಹಿಡಿಯಹೋಗಲು, ಅವಳು ಗಾಬರಿಯಾದವಳಂತೆ ತೋರಿಸಿ ದೂರ ಸರಿದು ನುಡಿದಳೇನಂದರೆ—ಪ್ರತಾಪಶಾಲಿಯೇ, ಸ್ವಲ್ಪ ತಾಳು, ಕೈಗೆಬಂದ ತುತ್ತು ಬಾಯಿಗೆ ಬರುವದು ತಡವಲ್ಲ. ನನ್ನ ವಿಜ್ಞಾಪನೆಯನ್ನು ಚಿತ್ತೈಸು.

ನನ್ನ ತಂದೆಯ ಪೂಜ್ಯ ಗುರುವಾದ ಕಪಿಂಜಲ ಋಷಿಯು, 16ನೆಯ ವರ್ಷದ ವಯಸ್ಸಿನಲ್ಲಿ ನಾನು, ತಾಯಿ–ತಂದೆಗಳನ್ನಗಲುವೆನೆಂದು ಭವಿಷ್ಯ ಹೇಳಿದ್ದನ್ನು ಕೇಳಿ, ನನಗೆ ಬಹಳ ಅಸಮಾಧಾನ ವಾಯಿತು. ಆಗ ನಾನು ಸೌಭಾಗ್ಯದೇವತೆಯಾದ ಶ್ರೀ ಗೌರಿಯನ್ನು ಕುರಿತು— ಜಗದಂಬೇ, ದುರ್ದೈವದಿಂದ ನನಗೆ ಒದಗತಕ್ಕದ್ದಾಗಿರುವ ವಿಯೋಗದಲ್ಲಿ ನಿನ್ನ ಕೃಪೆಯಿಂದ ಯೋಗ್ಯ ಪತಿಯು ದೊರೆತರೆ, ಒಂದು ವರ್ಷದವರೆಗೆ ವ್ರತಸ್ಥಳಾಗಿ ನಿನ್ನನ್ನು ಆರಾಧಿಸಿ, ಆ ಮೇಲೆ ಪತಿಯ ಪಾಣಿಗ್ರಹಣ ಮಾಡುವೆನೆಂದು ಪ್ರಾರ್ಥಿಸಿರುತ್ತೇನೆ. ಆ ಸರ್ವ ಮಂಗಲೆಯ ಕೃಪೆಯಿಂದ ಕಾರ್ಯವು ಸಾಧಿಸಿರಲು, ಸುಖಕ್ಕೆ ಆತುರಪಟ್ಟು ದೇವಿಯ ಕ್ಷೋಭವನ್ನು ಹೊಂದುವದರಿಂದ ಸುಖವಾಗಬಹುದೋ? ಒಂದು ವೇಳೆ ಈ ದೈವೀ ಕ್ಷೋಭಕ್ಕೆ ನಿಮ್ಮಂಥ ರಾಕ್ಷಸ ವೀರರು ಅಂಜಲಿಕ್ಕಿಲ್ಲ; ಆದರೆ ದುರ್ಬಲರಾದ ನಮ್ಮಂಥ ಮನುಷ್ಯರು ಅದಕ್ಕೆ ಹೆದರಬೇಕಾಗುವದು. ದಯಮಾಡಿ ನನ್ನ ವ್ರತವನ್ನು ಪೂರ್ಣ ಮಾಡಬೇಕು. ರಾಕ್ಷಸವೀರಾ, ಇದರ ಮೇಲೆಯೂ ನನ್ನ ವಿನಂತಿಯನ್ನು ಮನ್ನಿಸುವದು ನಿನಗೆ ಸರಿದೋರದಿದ್ದರೆ, ನಿನ್ನ ಅಪ್ಪಣೆಯಂತೆ ನಡಕೊಳ್ಳಲು ಸಿದ್ಧಳಾಗಿದ್ದೇನೆ. ಆದರೆ ಕೈಜೋಡಿಸಿ ಇನ್ನೊಮ್ಮೆ ಬೇಡಿಕೊಳ್ಳುವದೇನಂದರೆ—ನನ್ನ ಸಮಾಗಮ ಸುಖವು ಬಹುದಿವಸ ಒದಗಬೇಕೆಂದು ನೀನು ಬಯಸುತ್ತಿದ್ದರೆ, ದಯಮಾಡಿ ನನ್ನ ಕೋರಿಕೆಯನ್ನು ಕೊನೆಗಾಣಿಸ ಬೇಕು.ಪದ್ಮನಯನೆಯ ಈ ಕಾರಣವು ಮೇಘನಾದನಿಗೆ ಸಮರ್ಪಕವಾಗಿ ತೋರುವಂತೆ ಇದ್ದಿಲ್ಲ.

ಪದ್ಮನಯನೆಯಾದರೂ ಹಾಗೆ ತೋರಿತೆಂದು ಭಾವಿಸಿದ್ದಿಲ್ಲ. ಆಕೆಯು ಸದ್ಯಕ್ಕೆ ಏನಾದರೊಂದು ನೆವವನ್ನು ಮುಂದೆಮಾಡಿ, ರಾಕ್ಷಸನ ಪಾಣಿಗ್ರಹಣಕ್ಕೆ ಅಸಮ್ಮತಿಯನ್ನು ತೋರಿಸಬೇಕೆಂದು ಹೀಗೆ ಹೇಳಿದಳು. ಆಕೆಯ ತಂದೆಯಾದ ವೀರವರ್ಮನು, ತನ್ನ ಗುರುವಾದ ಕಪಿಂಜಲ ಋಷಿಯನ್ನು ಕುರಿತು ಒಮ್ಮೆ—ಮಹಾತ್ಮರೇ, ನನ್ನ ಮಗಳು ನನ್ನನ್ನಗಲಿ ಕಷ್ಟಪಡುತ್ತಿರುವಾಗ ಯಾವನಾದರೂ ದುಷ್ಟನು ಬಲಾತ್ಕರಿಸಿದರೆ ಮಾಡುವದೇನು? ಅಂಥ ಪ್ರಸಂಗದಲ್ಲಿ ಸುಶೀಲೆಯಾದ ಪದ್ಮನಯನೆಯು ಪ್ರಾಣತ್ಯಾಗ ಮಾಡದೆ ಇರಳು. ಕೃಪೆಮಾಡಿ ಇದಕ್ಕೆ ಯಾವದಾದರೊಂದು ಪ್ರತಿಕಾರೋಪಾಯವನ್ನು ಯೋಚಿಸಬೇಕೆಂದು ಪ್ರಾರ್ಥಿಸಿದ್ದನು. ಅದಕ್ಕೆ ಋಷಿವರ್ಯನು ನೃಪೋತ್ತಮನೇ ಅದಕ್ಕಾಗಿ ನೀನು ಚಿಂತಿಸಬೇಡ, ನನ್ನ ಶಾಸನ ದಿಂದ ಯಾವ ಪುರುಷನೂ ಪದ್ಮನಯನೆಯ ಮೇಲೆ ಬಲಾತ್ಕಾರ ಮಾಡಲು ಸಮರ್ಥ ನಾಗಲಾರನು. ಆ ನೀಚ ಕೆಲಸಕ್ಕೆ ತೊಡಗಿದವನ ಪ್ರಾಣಹಾನಿಯಾಗದೆ ಇರದು. ಪದ್ಮನ ಯನೆಯ ಪ್ರೀತಿಗೆ ಪಾತ್ರನಾದವನೇ, ಅವಳ ಪಾಣಿಗ್ರಹಣಕ್ಕೆ ಸಮರ್ಥನಾಗುವನು. ಪದ್ಮನಯನೆಯು, ಹದಿನಾರನೆಯ ವರ್ಷದಿಂದಲೇ ಶ್ರೀ ಗೌರಿಯನ್ನು ಭಕ್ತಿಯಿಂದ ಪೂಜಿಸ ತೊಡಗಬೇಕು. ತನ್ನನ್ನು ಲಗ್ನವಾಗಬೇಕೆಂದು ಬಯಸುವ ಅಯೋಗ್ಯಪುರುಷನ ಮುಂದೆ, ಅಸಮ್ಮತಿಯನ್ನು ತೋರಿಸುವಾಗ ಈ ಗೌರಿಯ ವ್ರತವನ್ನೇ ಆಕೆಯು ಮುಂದೆ ಮಾಡಬೇಕು ಎಂದು ಹೇಳಿದ್ದನು. ಇದನ್ನು ಪದ್ಮನಯನೆಯು ಕೇಳಿ, ಗುರುವಿನ ಅಪ್ಪಣೆಯಂತೆ ಹದಿನಾರನೆಯ

ವರ್ಷದಿಂದಲೇ ವ್ರತಸ್ಥಳಾಗಿ ಗೌರಿಯನ್ನು ಆರಾಧಿಸತೊಡಗಿದ್ದಳು. ಈ ಸಂಗತಿಯು ಮೇಘನಾದನಿಗೂ ಗೊತ್ತಿತ್ತು. ಮೇಘನಾದನು ಎಂಥ ಶೂರನಿದ್ದರೂ ಎಷ್ಟು ಮಾಯಾವಿಯಿದ್ದರೂ ಮಹಾತ್ಮರ ಶಾಪಭಯವು ಅವನನ್ನು ಬಾಧಿಸದೆ ಬಿಡಲಿಲ್ಲ. ಕಾಮುಕನಾದ ರಾವಣನು, ಇಂದ್ರಪುತ್ರನ ಶಾಪ ಭಯದಿಂದಲೇ, ಲೋಕಸುಂದರಿಯಾದ ಸೀತಾಮಾತೆಯನ್ನು ಬಲಾತ್ಕರಿಸಲಿಲ್ಲೆಂದು ಆನಂದರಾಮಾಯಣದಲ್ಲಿ ಹೇಳಿದೆ. ಈ ಸಂಗತಿಯನ್ನು ಮೇಘನಾದನು ಅರಿತವನಾಗಿದ್ದನು; ಅದರಿಂದ ಅವನಿಗೆ ಪದ್ಮನಯನೆಯು ಬಾಯಲ್ಲಿ ಹಾಕಿಕೊಂಡ ಬಿಸಿ ತುಪ್ಪದಂತೆ ಬಾಧಿಸತೊಡಗಿದಳು. ಆತನು ಮನಸ್ಸಿನಲ್ಲಿ—ಈಗ ನಾನು ಪದ್ಮನಯನೆಯ ಮಾತಿಗೆ ಒಪ್ಪದೆ ಆಕೆಯನ್ನು ಬಲಾತ್ಕರಿಸಿದರೆ, ಋಷಿಯ ಶಾಪವು ತಟ್ಟದೆ ಇರದು. ಹಾಗೆ ಮಾಡುವದು ಜಾಣತನವಲ್ಲ. ಕೈಮೀರುವ ಪ್ರಸಂಗ ಒದಗಿದಲ್ಲಿ ನಾನು ಈ ಸುಂದರಿಗಾಗಿ ಪ್ರಾಣವನ್ನರ್ಪಿಸಲಿಕ್ಕೂ ಹಿಂದೆ ಮುಂದೆ ನೋಡುವಹಾಗಿಲ್ಲ. ಮಾರ್ಗಾಯಾಸದಿಂದಲೂ, ಬಂಧು–ಮಿತ್ರರ ವಿಯೋಗ ದುಃಖದಿಂದಲೂ, ಅಪರಿಚಿತ ಸ್ಥಳದಲ್ಲಿರುವದರಿಂದಲೂ, ಮೊದಲೇ ಹೈರಾಣಾಗಿರುವ ಈ ಕೋಮಲೆಯ ಮನಸ್ಸನ್ನು ಮತ್ತಿಷ್ಟು ನೋಯಿಸುವದು ಹಿತಕರವಲ್ಲ. ಈಕೆಯನ್ನು ಒಲಿಸಿಕೊಳ್ಳುವದೇ ಸರ್ವಾಂಗ–ಸುಂದರವಾದ ಉಪಾಯವಾಗಿರುವದು.

ಈ ಮೇರೆಗೆ ಯೋಚಿಸಿ ರಾಕ್ಷಸನು ಪದ್ಮನಯನೆಯನ್ನು ಕುರಿತು—ಸುಂದರೀ, ನಿನ್ನ ಅಪ್ಪಣೆಗೆ ವಿರೋಧವಾಗಿ ನಾನು ಎಂದೂ ವರ್ತಿಸಲಾರೆನು. ನೀನು ದುಃಖದಿಂದ ಕಂಗೆಟ್ಟಿರುವದನ್ನು ನಾನು ಬಲ್ಲೆನು. ನಿನ್ನ ವ್ರತವು ಸಮಾಪ್ತವಾದ ಮೇಲೆಯೇ ನನ್ನ ಪಾಣಿಗ್ರಹಣಮಾಡುವ ಕೃಪೆಮಾಡು. ನಿನ್ನ ಸುಖವೇ ನನ್ನ ಸುಖವು; ನಿನ್ನ ಇಚ್ಛೆಯೇ ನನ್ನ ಇಚ್ಛೆಯು. ಒಂದು ವರ್ಷದ ಮೇಲಾದರೂ ನನ್ನನ್ನು ವರಿಸಲು ನೀನು ಸಮ್ಮತಿಸುವದು ಪರಮಾನುಗ್ರಹವಾಗಿರುವದು. ನಿನ್ನ ವ್ರತಕ್ಕೆ ತೊಂದರೆಯಾಗದಂತೆ ಎಲ್ಲ ಅನುಕೂಲತೆಗಳನ್ನು ಒದಗಿಸಿಕೊಡುತ್ತೇನೆ. ನಾನು ಮೇಲೆ ಮೇಲೆ ನಿನ್ನ ಬಳಿಗೆ ಬಂದು ನಿನಗೆ ತೊಂದರೆಯನ್ನು ಕೊಡುವದಿಲ್ಲ. ಶ್ರೀ ಗೌರಿಯ ದರ್ಶನಕ್ಕಾಗಿ ಮಂಗಳವಾರಕ್ಕೊಮ್ಮೆ ನಿನ್ನ ಸನ್ನಿಧಿಗೆ ಬರುವೆನು ಎಂದು ಹೇಳಿದನು. ಇದನ್ನು ಕೇಳಿ ಪದ್ಮನಯನೆಯು ಆನಂದವನ್ನು ಪ್ರಕಟಿಸುತ್ತ—ದೈತ್ಯರಾಜನೇ, ನಿನ್ನ ಉಪಕಾರವನ್ನು ನಾನು ಎಂದೂ ಮರೆಯುವದಿಲ್ಲ. ನಾನು ಸಂಪೂರ್ಣವಾಗಿ ನಿನ್ನ ಕೊರಳಿಗೆ ಬಿದ್ದವಳೆಂದು ತಿಳಿ. ನನ್ನ ಸಂರಕ್ಷಣದ ಭಾರವು ನಿನ್ನನ್ನೇ ಕೂಡಿದೆ. ಅನ್ನಲು ರಾಕ್ಷಸನು ಭಗ್ನಮನೋರಥನಾದರೂ ಉಪಾಯಗಾಣದೆ ಆನಂದವನ್ನು ಪ್ರಕಟಿಸುತ್ತ, ಪದ್ಮನಯನೆಯ ಅನುಮತಿಯನ್ನು ಪಡೆದು. ಶೋಣಿತಪುರಕ್ಕೆ ಹೊರಟುಹೋದನು.

ಪದ್ಮನಯನೆಯು ರಾಕ್ಷಸನಿಂದ ಒಂದು ವರ್ಷದ ಅವಧಿಯನ್ನು ಹೊಂದಿದಾಗ್ಯೂ, ಅವಳ ಮನಸ್ಸು ಶಾಂತವಾಗಲಿಲ್ಲ. ರಾಕ್ಷಸನ ಕಾಟವನ್ನು ತಪ್ಪಿಸಿಕೊಳ್ಳುವದಷ್ಟೇ ಆಕೆಯ ಸುಖದ ಪರಮಾವಧಿಯಾಗಿದ್ದಿಲ್ಲ. ದುರ್ಮಾರ್ಗಿಯೂ, ಪಾಪಿಷ್ಠನೂ ಆದ ಮೇಘನಾದನು, ಶಾಪಭಯದಿಂದ ತನ್ನ ವ್ರತಕ್ಕೆ ಈಗ ಸಮ್ಮತಿಸಿದ್ದರೂ, ಆ ತಾಮಸಿಯು ತನ್ನ ಪ್ರಾಣಹಾನಿ

ಯನ್ನು ಲೆಕ್ಕಿಸದೆ ಎಲ್ಲಿ ದುರ್ಮಾರ್ಗಕ್ಕೆ ಮನಸ್ಸು ಮಾಡುವನೋ, ಎಂದು ಆಕೆಯು ಹೆದರಿದಳು. ಬಾರಿಬಾರಿಗೆ ತಾಯಿ—ತಂದೆಗಳ ಸ್ಮರಣವಾಗಿ ಅವಳಿಗೆ ಬಹಳೇ ವ್ಯಸನವಾಗುತ್ತಿತ್ತು ಚಿಂತೆಯಿಂದ ಅವಳ ಶರೀರವು ಒಣಗಹತ್ತಿ ಮುಖ ಕಾಂತಿಯು ಕುಂದುತ್ತ ನಡೆಯಿತು. ಇದನ್ನು ಆಕೆಯ ಪ್ರೀತಿಯ ಗೆಳತಿಯಾದ ಸುಮಧ್ಯಮೆಯು ನೋಡಿ—ಅವ್ವಾ, ಪದ್ಮನಯನಾ ಹೀಗೆ ನೀನು ಶೋಕಮಾಡುತ್ತ ಕುಳಿತುಕೊಳ್ಳುವದರಲ್ಲಿ ಜಾಣತನವಿಲ್ಲ. ಹೇಗೂ ರಾಕ್ಷಸಕ್ರೂರನಿಂದ ಒಂದು ವರ್ಷದ ಅವಧಿಯನ್ನು ಪಡೆದಿರುತ್ತೀ. ಅಲ್ಲಿಯವರೆಗಂತೂ ದೇವರಲ್ಲಿ ವಿಶ್ವಾಸವಿಟ್ಟು ಸಮಾಧಾನದಿಂದ ಇರು. ಇದೇ ಕಾಲವೇ ಕಡೆತನಕ ಇರುತ್ತದೆಂದು ತಿಳಿಯಬೇಡ. ಕ್ಷಣದಲ್ಲಿ ಉಪ್ಪರಿಗೆಯು ತಿಪ್ಪೆಯಾಗುತ್ತದೆ, ತಿಪ್ಪೆಯು ಉಪ್ಪರಿಗೆಯಾಗುತ್ತದೆ. ಈ ಹೊತ್ತಿನವರೆಗೆ ಯಾರಿಗೂ ಪ್ರಾಪ್ತವಾಗದಿರುವ ರಾವಣನ ವೈಭವವನ್ನು, ದೈವೀಸತ್ವವು ಮಂಗಗಳ ಕೈಯಿಂದ ಮಣ್ಣುಗೂಡಿಸಿಬಿಟ್ಟಿತು. ದಾರಿದ್ರ್ಯದ ಪ್ರದರ್ಶನವಾದ ಸುದಾಮನ ಮುರುಕು ಗುಡಿಸಲನ್ನು ಅದೇ ದೈವೀಸತ್ವವು ಬಂಗಾರದ ಪಟ್ಟಣದೊಳಗಿನ ರಾಜಮಂದಿರವಾಗಮಾಡಿತು. ಅದರಂತೆ ವನವಾಸದ ಕಷ್ಟಗಳನ್ನು ಭೋಗಿಸಿದ ಪಾಂಡವರು ಸಾರ್ವಭೌಮರಾದರೆ, ಸಾರ್ವಭೌಮ ಪದವಿಯ ಸುಖವನ್ನನುಭವಿಸಿದ ಕೌರವರು ನಾಶಹೊಂದಿದರು! ಈ ಸೃಷ್ಟಿಯಲ್ಲಿ ಹಿಂದೆ ಆಗಿರುವ ಈಗ ಆಗುತ್ತಿರುವ ಇಂಥ ಸ್ಥಿತ್ಯಂತರಗಳನ್ನೇ ಹೇಳುತ್ತ ಕುಳಿತರೆ, ಅದೊಂದು ಗ್ರಂಥವೇ ಆಗಬಹುದು. ಇದನ್ನು ನೀನು ಅರಿಯದವಳಲ್ಲ, ಸತ್ಕಾರ್ಯದಲ್ಲಿ ಶರೀರವನ್ನು ಸವಿಸಬೇಕಲ್ಲದೆ, ಹಾಳು ಚಿಂತೆಗೆ ಗುರಿಮಾಡಿ ಅದನ್ನು ಸುಟ್ಟು ಬಿಡುವದು ಸರಿಯಲ್ಲ, ರಾಜಪುತ್ರಿ, ಹೊತ್ತು ಬಂದಹಾಗೆ ಕೊಡೆ ಹಿಡಿಯುವದು ಸತ್ವಶಾಲಿಗಳಿಗೆ ಒಪ್ಪದಿದ್ದರೂ, ಅವರು ಒಮ್ಮೊಮ್ಮೆ ದೂರದರ್ಶಿಗಳಾಗಿ ಹಾಗೆ ಮಾಡಬೇಕಾಗುತ್ತದೆಂಬದನ್ನು ಮರೆಯಬೇಡ. ನಿನ್ನ ವೃತ್ತಾಂತವನ್ನು ನಿನ್ನ ಮುಖದಿಂದಲೇ ಕೇಳಿದ ನನಗೆ ಬಹಳ ವ್ಯಸನವಾಗುತ್ತದೆ. ಅಮ್ಮಾ ನಮ್ಮನ್ನು ನೋಡು ನಾವೂ ನಿನ್ನ ಹಾಗೆ ಮನುಷ್ಯರಲ್ಲವೇ? ನಿನ್ನೆ ಹೇಳಿರುವ ನನ್ನ ವೃತ್ತಾಂತವನ್ನು ಕೇಳಿರುವೆಯಷ್ಟೇ? ನಾನೂ ಒಬ್ಬ ಮಾಂಡಲಿಕ ರಾಜನ ಮಗಳು, ಒಬ್ಬ ಧೀರ–ವೀರ–ರಾಜಪುತ್ರನ ಪಾಣಿಗ್ರಹಣ ಮಾಡಿದ್ದೆನು; ಆದರೆ ಈಗ ಆ ಸೌಭಾಗ್ಯವೆಲ್ಲಿ ಉಳಿದದೆ? ನನ್ನ ಪಾತಿವ್ರತ್ಯದ ತೇಜಸ್ಸೆಲ್ಲಿ ಮಿನುಗುತ್ತಲಿದೆ? ನಮ್ಮಂಥ ಅಬಲೆಯರ ಪಾತಿವ್ರತ್ಯವನ್ನು ಸುಟ್ಟು ಸೂರೆ ಮಾಡಿ, ಗೋಳುಕಟ್ಟಿಕೊಳ್ಳುವ ಚಾಂಡಾಲನಾದ ಮೇಘನಾದನ ವಂಶವು, ಹುರಿದು ಹೋಗದೆ ಇರುವದಿಲ್ಲ, ಪದ್ಮನಯನೇ, ನೀನು ಬಹುಪುಣ್ಯವಂತಳು ಕಂಡೆಯಾ! ಸತ್ಪುರುಷನ ಪ್ರಸಾದದಿಂದ ಉತ್ಪನ್ನವಾಗಿರುವ ನಿನ್ನ ಪವಿತ್ರ ದೇಹವನ್ನು ಕಲಂಕಿತವಾಗಮಾಡಲು, ಶ್ವಾನಸ್ವರೂಪನಾದ ಮೇಘನಾದನು ಸಮರ್ಥನಾಗಲಾರನು. ಮಹಾತ್ಮನಾದ ಕಪಿಂಜಲನ ಭವಿಷ್ಯವನ್ನು ನೀನು ಸ್ಮರಿಸುತ್ತಿರು! ನೀನು ಸಾರ್ವಭೌಮನ ಪತ್ನಿಯೂ ಸಾರ್ವಭೌಮನ ತಾಯಿಯೂ ಆಗುವೆಯಲ್ಲವೆ! ಬ್ರಹ್ಮಜ್ಞಾನಿಗಳ ಭವಿಷ್ಯದಲ್ಲಿಯೂ ಸಂಶಯಪಡುವ ಇರುವದೆ? ಬೇಡವ್ವಾ ದುಃಖಿಸಬೇಡ. ಸತ್ವಶೀಲೆಯಾಗು, ಕ್ಷಾತ್ರತೇಜಸ್ಸಿನಿಂದ ಮೆರೆ. ನಿನ್ನ ಉಗ್ರವ್ರತಾಚರಣೆಯಿಂದ ಹುರಿದು ಹೋಗುವ ಮೇಘನಾದನ ವಂಶವನ್ನು ನೋಡಿ ನಾವು ಆನಂದ

ಪಡುವಂತೆ ಮಾಡು. ವಿಷಯಾಸಕ್ತನಾದ ಚಾಂಡಾಲ ಮೇಘನಾದನು ಇಂದು ಪಟ್ಟಮಹಿಷಿಯಾಗ ಮಾಡಿದವಳನ್ನು ನಾಳೆ ದಾಸಿಯಾಗಮಾಡುವನು. ಅವನ ಸವಿನುಡಿಗಳನ್ನು ನಂಬಲಾಗದು ಕಂಡೆಯಾ! ಸಾರ್ವಭೌಮಕುವರೀ ಬಹು ಜಾಗರೂಕಳಾಗಿರು ನಮ್ಮನ್ನು ಸಹ ನೀನು ನಂಬತಕ್ಕದ್ದಲ್ಲ. ನಾವು ಅಂತರಂಗದಲ್ಲಿ ಮೇಘನಾದನಿಗೆ ಅನುಕೂಲವಾಗಿದ್ದು, ಬಹಿರಂಗದಲ್ಲಿ ನಿನ್ನ ಜೀವದ ಗೆಳತಿಯರಂತೆ ನಟಿಸಬಹುದು. ಅದೇ ಕಾರಣದಿಂದ ಹೊಸಬಳಾದ ನಿನಗೆ ಮನಬಿಚ್ಚಿ ಮಾತಾಡದೆ ಸುಮ್ಮನಿರಲು ಅಂದು ನಾನು ಸೂಚಿಸಿದೆನು. ಬಹಳ ಹೇಳುವದೇನು? ನಿನ್ನ ಕುಲಕ್ಕೂ, ವಂಶಕ್ಕೂ, ಶೀಲಕ್ಕೂ, ವಿದ್ಯೆಗೂ, ವಯಸ್ಸಿಗೂ, ಪ್ರಸಂಗಕ್ಕೂ ಒಪ್ಪುವಂತೆ ನಡೆಯೆಂದರಾಯಿತು. ಅದರಿಂದಲೆ ನಿನ್ನ ಕಲ್ಯಾಣವಾಗುವದು! ರಾಜಪುತ್ರೀ, ಮನುಷ್ಯನ ಸಂಸಾರಯಾತ್ರೆಗೆ ಕಟ್ಟಿದ ಬುತ್ತಿಯಾವದು? ಕಾಲ್ಪನಿಕ ಸುಖವಲ್ಲವೆ? ಅಂದಬಳಿಕ ಸುಖವನ್ನು ಕಲ್ಪಿಸುತ್ತ ಆನಂದದಿಂದಿರು.

ಸದ್ಬೋಧ

ಸುಮಧ್ಯಮೆಯ ಈ ಸರ್ವಾಂಗ–ಸುಂದರವಾದ ಸದುಪದೇಶದಿಂದ ಪದ್ಮನಯನೆಯ ಮನಸ್ಸು ಸಮಾಧಾನಪಟ್ಟಿತು. ಆಕೆಯು ಯಾವ ಚಿಂತೆಯೂ ಇಲ್ಲದೆ, ಗುರ್ವಾಜ್ಞೆಯಂತೆ ವ್ರತಸ್ಥಳಾಗಿ ಸರ್ವಮಂಗಲೆಯನ್ನು ಪೂಜಿಸುತ್ತ, ಸುಮಧ್ಯಮೆಯ ಸಹವಾಸದಲ್ಲಿ ಸುಖದಿಂದ ಕಾಲಹರಣ ಮಾಡುತ್ತಿದ್ದಳು. ಮೇಘನಾದನು ಕಳೆದು ಹೋಗುತ್ತಿರುವ ದಿವಸಗಳನ್ನು ಬಟ್ಟಿನಿಂದ ಎಣಿಸುತ್ತ ಪದ್ಮನಯನೆಯ ಬಳಿಗೆ ಬರುತ್ತಿದ್ದನು, ಹೋಗುತ್ತಿದ್ದನು. ಹಾವುಗಾರನು ಕಣ್ಣುಕಟ್ಟಿನಿಂದ ನೋಟಕರನ್ನು ಮೋಹಿಸುವಂತೆ, ಹುರುಳಿಲ್ಲದ ಸ್ತ್ರೀ ಚೇಷ್ಟೆಗಳಿಂದ ಪದ್ಮನಯನೆಯು ಆತನನ್ನು ಮೋಹಗೊಳಿಸುತ್ತಿದ್ದಳು. ಆಗಲಿ, ಮೇಘನಾದನ ಎಣಿಕೆಗೂ, ಪದ್ಮನಯನೆಯ ಚೇಷ್ಟೆಗಳಿಗೂ ನಾವು ಯಾಕೆ ವಿಘ್ನ ಮಾಡಬೇಕು? ಪ್ರಿಯ ವಾಚಕರೇ, ನಡಿಯಿರಿ, ನಾವು ಕನೋಜಪಟ್ಟಣಕ್ಕೆ ಹೋಗೋಣ. ಪಾಪ! ಬಹುದಿವಸ ಮಕ್ಕಳು– ಮಕ್ಕಳೆಂದು ಹಲುಬಿ, ಮುಪ್ಪಿನಲ್ಲಿ ಪದ್ಮನಯನೆಯನ್ನು ಪಡೆದು, ಪ್ರಾಣಕ್ಕಿಂತಲೂ ಹೆಚ್ಚೆಂದು ತಿಳಿದು ಆಕೆಯನ್ನು ರಕ್ಷಿಸಿದ ವೃದ್ಧ ವೀರವರ್ಮನು, ಪದ್ಮನಯನೆಯ ವಿಯೋಗದಿಂದ ನೆಲಕ್ಕೆ ಬಿದ್ದಿರಬಹುದಲ್ಲವೆ? ಇಂಥ ಪ್ರಸಂಗದಲ್ಲಿಯೇ ಮನುಷ್ಯನ ಪರೀಕ್ಷೆಯಾಗುತ್ತದೆ, ಇಂಥ ಪ್ರಸಂಗದಲ್ಲಿಯೇ ಸತ್ವಸಮಾಗಮದಿಂದ ಮನುಷ್ಯನ ವೃತ್ತಿಯಲ್ಲಿ ಆಗಿದ್ದ ಹೆಚ್ಚುಕಡಿಮೆಯು ಒಡೆದು ಕಾಣುತ್ತದೆ. ವೀರವರ್ಮನು ಸಾಮಾನ್ಯನಲ್ಲ ಒಂದು ತಪಕ್ಕಿಂತ ಹೆಚ್ಚುಕಾಲ ಸತ್ಸಮಾಗಮ ಮಾಡಿದ ಸಾರ್ವಭೌಮನು!

ವೀರವರ್ಮನು ಕಪಿಂಜಲನ ಸ್ಮಶಾನವಿಧಿಯನ್ನು ತೀರಿಸಿಕೊಂಡು ಮನೆಗೆ ಬಂದನು. ಆತನಿಗೆ ಪದ್ಮನಯನೆಯು ಇಲ್ಲದಾದ ಸಂಗತಿಯು ಬೇಗನೆ ಗೊತ್ತಾಗಲಿಲ್ಲ. ಅಂಗರಕ್ಷಕರಿಂದ ಸುತ್ತಲ್ಪಟ್ಟ ಪದ್ಮನಯನೆಯ ಸುರಕ್ಷಿತತೆಯ ವಿಷಯವಾಗಿ, ಯಾರಲ್ಲಿಯೂ ಶಂಕೆಯು ಉತ್ಪನ್ನ

ವಾಗುವಂತೆ ಇದ್ದಿಲ್ಲ, ಕುದುರೆ ಹತ್ತುವಲ್ಲಿ ಪದ್ಮನಯನೆಯು ಪ್ರವೀಣಳೇ ಇದ್ದಳು. ಮೇಲಾಗಿ ಆಕೆಯನ್ನು ಅಂಗರಕ್ಷಕರು ಹಿಂಬಾಲಿಸಿ ಹೋಗಿದ್ದರು. ಅಂದಬಳಿಕ, ಪಟ್ಟದ ಕುದುರೆಯು ಓಡಹತ್ತಿದಷ್ಟಕ್ಕೆ ಪದ್ಮನಯನೆಯು, ಅಡವಿಯ ಪಾಲಾಗುವಳೆಂದು ಯಾರ ಮನಸ್ಸಿನಲ್ಲಿ ಬರಬೇಕು? ಪದ್ಮನಯನೆಯಿಲ್ಲ—ಅಂಗರಕ್ಷಕರಿಲ್ಲ! ಅವರು ಈಗ-ಬಂದಾರು ಇನ್ನೊಂದು ತಾಸಿಗೆ ಬಂದಾರು ಎಂದು ಹಾದಿಯನ್ನು ನೋಡುವದರಲ್ಲಿಯೇ ಸಂಜೆಯಾಯಿತು ವೀರವರ್ಮನು ಗಾಬರಿಯಾದನು. ಅವನ ಹೃದಯಕ್ಕೆ ಕಪಿಂಜಲನ ಭವಿಷ್ಯ ರೂಪವಾದ ಬಾಣವು ನಟ್ಟು, ಅವನನ್ನು ಬಳಲಿಸಿತು. ಕಣ್ವರಂಥ ಮಹಾತ್ಮರೂ, ತಮ್ಮ ಸಾಕು ಮಗಳಾದ ಶಕುಂತಲೆಯನ್ನು ಗಂಡನ ಮನೆಗೆ ಕಳಿಸುವಾಗ ಕಣ್ಣೀರು ಹಾಕಿರಲು ಹೊಟ್ಟೆಯ ಮಗಳ ಆಕಸ್ಮಿಕ ವಿಯೋಗ ಪ್ರಸಂಗದಲ್ಲಿ ವೀರವರ್ಮನು ದುಃಖದಿಂದ ಕಣ್ಣೀರು ಸುರಿಸಿದ್ದರಲ್ಲಿ ಆಶ್ಚರ್ಯವೇನು? ಆ ವೃದ್ಧನಾದ ಸಾರ್ವಭೌಮನು ಮಗಳ ಗುಣಗಳನ್ನೂ ವಿದ್ಯೆಯನ್ನೂ ರೂಪವನ್ನೂ ನೆನಿಸಿ ನೆನಿಸಿ ಬಹಳವಾಗಿ ಹಲುಬಿದನು. ಹಾ ಹಾ ಅನ್ನುವದರೊಳಗೆ ಈ ದುಃಖದ ಸಂಗತಿಯು ಕನೋಜಪಟ್ಟಣದ ತುಂಬ ಹಬ್ಬಿತು. ಪ್ರಜೆಗಳು ಮರಮರನೆ ಮರುಗಿ ದುಃಖದಿಂದ ಕಣ್ಣೀರು ಸುರಿಸಹತ್ತಿದರು. ಅಂತಃಪುರದಲ್ಲಿ ಮನಮೋಹಿನಿಯೇ ಮೊದಲಾದವರು ಶೋಕಸಾಗರದಲ್ಲಿ ಮುಳುಗಿದರು. ಕಪಿಂಜಲನ ಶ್ಮಶಾನಯಾತ್ರೆಯಿಂದ ಮೊದಲೇ ಉದಾಸೀನವಾಗಿದ್ದ ಆ ರಾಜಧಾನಿಯು, ಪದ್ಮನಯನೆಯ ವಿಷಯದ ಈ ದುಷ್ಟವಾರ್ತೆಯನ್ನು ಕೇಳಿ ಕರ್ತವ್ಯಶೂನ್ಯವಾಯಿತು.

ಗುರುವಿನ ಪರಲೋಕಗಮನ, ಮಗಳ ವಿಯೋಗ ಇವೆರಡು ಒಮ್ಮೆಲೆ ಒದಗಿದ್ದರಿಂದ ವೀರವರ್ಮನ ಮನಸ್ಸಿನ ಸ್ಥಿತಿಯು ವಿಚಿತ್ರವಾಯಿತು. ಅವನ ಅವಸಾನವು ಅಳಿಯಿತು, ಆಧಾರವು ತಪ್ಪಿತು, ಆಶೆಯು ಹಾಳಾಯಿತು, ಬಾಳು ನೀರಸವಾಯಿತು! ಪದ್ಮನಯನೆಯು ತನ್ನ ಸುಖಸರ್ವಸ್ವವೆಂದೂ, ಕಪಿಂಜಲನು ಶಾಂತಿಯ ಮಂದಿರವೆಂದೂ ಆತನು ದೃಢವಾಗಿ ನಂಬಿದ್ದನು. ಈ ಸುಖ-ಶಾಂತಿಗಳು ಒಮ್ಮೆಲೆ ಕೈ ಬಿಟ್ಟು ಹೋದಬಳಿಕ ಏನಿದ್ದು ಏನು ಮಾಡಬೇಕು? ವೀರವರ್ಮನ ಬಾಳು ಮೂಗಿಲ್ಲದ ಮೋರೆಯಂತೆಯೂ, ವಿನಯವಿಲ್ಲದ ವಿದ್ಯೆಯಂತೆಯೂ, ಸದಾಚರಣೆಯಿಲ್ಲದ ವೇದಾಂತ ಜ್ಞಾನದಂತೆಯೂ ಅಮಂಗಲವಾಯಿತು. ನೋಡಿದತ್ತೆಲ್ಲ ಅವನಿಗೆ ಕಗ್ಗತ್ತಲೆಯೇ ತೋರಹತ್ತಿತು. ಇಬ್ಬಗೆಯ ಇರತಗಳಿಂದ ಆ ವೃದ್ಧನು ಜರ್ಜರನಾದನು. ದರ್ಶನಕ್ಕಾಗಿ ಬಂದ ಆಪ್ತೇಷ್ಟರು ಅವನ ಬೇಸರಕ್ಕೆ ಕಾರಣರಾದರು; ಉಪದೇಶಕರ ಉಪದೇಶಗಳು ನೀರಸವಾದವು; ಎಣೆಯಿಲ್ಲದ ಐಶ್ವರ್ಯ-ವೈಭವಗಳು ಅವನಿಗೆ ಅಸಹ್ಯವಾಗಿ ತೋರಹತ್ತಿದವು. ಆ ಗಂಭೀರನು ಪ್ರಸಿದ್ಧವಾಗಿ ಕಣ್ಣೀರು ಸುರಿಸಲಿಕ್ಕೆ ಸಂಕೋಚ ಪಟ್ಟರೂ, ಮೋಹ-ಭಕ್ತಿಗಳ ಹೆಚ್ಚಳದಿಂದ ಅವು ಕಣ್ಣೊಳಗಿಂದ ತಾವೇ ಹೊರಬಿದ್ದು ಸುರಿಯಹತ್ತಿದವು. ಪ್ರಿಯವಾಚಕರೇ, ಮಗಳ ಗುಣಾತಿಶಯವನ್ನು ನೆನಿಸಿ ನೆನಿಸಿ ದುಃಖಿತನಾದ ಆ ರಾಜನು ತನ್ನ ಗುರುವಿನ ಅಮಾನುಷ ಶಕ್ತಿಯನ್ನು ಸ್ಮರಿಸಿ ಭಕ್ತಿಪೂರ್ವಕ ವಾಗಿ ಆತನಿಗೆ ಶರಣುಹೋಗಿ ಮೊರೆಯಿಡುವಾಗ, ಸುರಿದ ಆ ಕಣ್ಣೀರುಗಳು ಮೋಹದವೋ-

ಭಕ್ತಿಯವೋ, ಎಂದು ಯಾರು ಹೇಳಬೇಕು? ನಾವಂತು ಆ ಮೋಹ–ಭಕ್ತಿಗಳ ಆಘಾತ ದಿಂದುಂಟಾದ ದೈನ್ಯದವೆಂದು ತಿಳಿಯುವೆವು. ಹೀಗೆ ದೈನ್ಯದಿಂದ ವೀರವರ್ಮನ ಕಣ್ಣೊಳಗಿಂದ ನೀರುಗಳು ತಾವಾಗಿ ಹೋಗುತ್ತಿರಲು, ಆಪ್ತೇಷ್ಟರೂ, ಪ್ರಜೆಗಳೂ ಆತನನ್ನು ಸುತ್ತುಗಟ್ಟಿ, ಸುಮ್ಮನೆ ಕಣ್ಣೀರು ಸುರಿಸುತ್ತ ನಿಂತುಕೊಂಡರು. ಆ ಸಂಕೋಚ ಮೂಲವಾದ ನಿಃಶಬ್ದ ಶೋಕಪ್ರಸಂಗವು ಬಹು ಹೃದಯಭೇಧಕವಾಗಿತ್ತು, ಇದರಿಂದ ವೀರವರ್ಮನ ದುಃಖವು ಮತ್ತಿಷ್ಟು ಹೆಚ್ಚಿತು. ಅದನ್ನು ಸಹಿಸಲಾರದೆ ಆ ವೃದ್ಧ ಸಾರ್ವಭೌಮನು ಕಣ್ಣು ತುಂಬ ನೀರು ತಂದು, ಎಲ್ಲರನ್ನು ದೈನ್ಯದಿಂದ ನೋಡುತ್ತ ಕೃತಜ್ಞತೆಯನ್ನು ಪ್ರಕಟಿಸುತ್ತ ಏಕಾಂತಗೃಹಕ್ಕೆ ಹೋಗಿ ಮನದಣಿಯಾಗಿ ಅಳಹತ್ತಿದನು. ಈ ಅನಿವಾರ್ಯವಾದ ಪ್ರಸಂಗದಲ್ಲಿ ಆತನು ಆಧಾರ ಕಾಣದೆ, ಅನನ್ಯಗತಿಕನಾಗಿ ಸದ್ಗುರುವನ್ನು ಶರಣು ಹೋಗುತ್ತಿರಲು, ಕಪಿಂಜಲ ಋಷಿಯ ಪಟ್ಟ ಶಿಷ್ಯನಾದ ಸುಮತಿಯೆಂಬವನು ಅವನ ಬದಿಯಲ್ಲಿ ಬಂದು ನಿಂತುಕೊಂಡನು.

ನಮ್ಮ ವಾಚಕರು ಸುಮತಿಯನ್ನು ಅರಿಯರು, ಅದರಿಂದ ಮೊದಲು ಆತನ ಪರಿಚಯವನ್ನು ಮಾಡಿಕೊಡೋಣ. ಲೋಕದಲ್ಲಿ ಕೊಟ್ಯಂತರ ಗುರುಗಳಿರುವರು, ಒಬ್ಬ ಗುರುವಿಗೆ ಅನೇಕ ಜನ ಶಿಷ್ಯರಿರುವದರಿಂದ, ದಶಕೋಟ್ಯಂತರ ಶಿಷ್ಯರೂ ಇರುವರು. ಆದರೆ ನಿಜವಾದ ಗುರು–ಶಿಷ್ಯರು ದುರ್ಲಭರು. ಅದರಲ್ಲಿ ನಮ್ಮ ಕಪಿಂಜಲ ಋಷಿ ಗಳಂಥ ಗುರುಗಳೂ, ಸುಮತಿಯಂಥ ಶಿಷ್ಯರೂ ಪರಮ ದುರ್ಲಭವೆಂದು ಹೇಳಬಹುದು. ಕಪಿಂಜಲ ಗುರುಗಳ ಮುಖ್ಯ ಧರ್ಮವು ಸಮದರ್ಶನವು. ಅದರಿಂದಲೇ ಆ ಮಹಾತ್ಮರು ತಟಸ್ಥವೃತ್ತಿಯಿಂದ ಇರಲು ಸಮರ್ಥರಾಗಿದ್ದರು. ಅವರಿಂದ ಕಠಿಣೋಕ್ತಿಗಳು ಎಂದೂ ಹೊರಡುತ್ತಿದ್ದಿಲ್ಲ. ''ಲೋಕದೊಳಗವರವರ ತೆರದೆ ನಡೆವವಜಾಣ'' ಎಂಬ ನಿಜಲಿಂಗ ಕವಿಗಳ ಉಕ್ತಿಯಂತೆ, ಲೌಕಿಕದಲ್ಲಿ ಅವರ ನಡತೆ ಇರುತ್ತಿತ್ತು; ಭೂತದಯದ ಸತ್ಯ ಸ್ವರೂಪವು ಅವರಲ್ಲಿಯೇ ವ್ಯಕ್ತವಾಗುತ್ತಿತ್ತು; ಅವರು ಗರ್ವರಹಿತರು; ಸದಾ ಶಾಂತರು; ಲೋಭ–ಕ್ಷೋಭಗಳಿಗೆ ನಿಲುಕದಂಥವರು. ಇಂಥ ಗುರುಗಳ ಬಳಿಯಲ್ಲಿ ಎಂಟು ವರ್ಷದಿಂದಿದ್ದು, ಸೇವೆಮಾಡಿ, ಗುರುಕೃಪೆಯನ್ನು ಪಡೆದ ಸುಮತಿಯ ಸುಮಹಿಮೆಯನ್ನೇನು ವರ್ಣಿಸಬೇಕು? ಆತನಿಗೆ ಈಗ 19ನೆಯ ವರ್ಷವು ನಡೆಯುತ್ತಿತ್ತು, ಪದ್ಮನಯನೆಯು ಕಪಿಂಜಲ ಋಷಿಗಳ ಬಳಿಯಲ್ಲಿ ವಿದ್ಯಾಭ್ಯಾಸಕ್ಕೆ ಬಂದಾಗ ಸುಮತಿಯೂ ಅಕಸ್ಮಾತ್ತಾಗಿ ಬಂದನು. ಆ ಪುಷ್ಯಶಾಲಿ ಯನ್ನು ನೋಡಿದಕೂಡಲೆ ಋಷಿಗಳು ಸಮಾಧಾನಪಟ್ಟು, ಆತನನ್ನು ತಮ್ಮ ಬಳಿಯಲ್ಲಿ ಇಟ್ಟುಕೊಂಡರು. ಉಪನಯನವನ್ನು ತಾವೇ ಮಾಡಿದರು. ಅಂದಬಳಿಕ ಕೇಳುವದೇನು? ಪಟ್ಟಗಟ್ಟಲೆಯಾಗಿ ಗುರು ಕುಲವಾಸಮಾಡಿ, ಕೇವಲ ಗುರುಗಳ ನೆರಳಾಗಿ ನಡೆದ, ಆ ಪುಣ್ಯವಂತನ ಬ್ರಹ್ಮತೇಜಸ್ಸು ಬಾಲಸೂರ್ಯನ ತೇಜಸ್ಸಿನಂತೆ ಹೆಚ್ಚುತ್ತ ಹೋಯಿತು. ಆತನು ಪದ್ಮನಯನೆಯ ಸಹಾಧ್ಯಾಯಿಯಾಗಿದ್ದನು. ಆ ಮೋಹಕ ಮೂರ್ತಿಯ ದರ್ಶನಮಾತ್ರ ದಿಂದ ಪ್ರಾಣಿಮಾತ್ರಗಳ ಮನಸ್ಸು ಪ್ರಸನ್ನವಾಗುತ್ತಿತ್ತು, ಆತನು ಬ್ರಹ್ಮಚರ್ಯ ವ್ರತಸ್ಥನು. ಆತನ ಮೈಬಣ್ಣವು ಕಾದಬಂಗಾರದಂತೆ ಇತ್ತು ಆತನ ನಿಲುವಿಕೆ ಗಿಡ್ಡ ಆತನಿಗೆ ಅದೇ ಮೀಸೆಗಳು

ಬರುತ್ತಿದ್ದವು. ಆತನು ಕೌಪೀನವನ್ನು ಹಾಕಿಕೊಂಡಿದ್ದನು. ಕಫನಿಯಿಂದ ಆತನ ಸರ್ವಾಂಗವು ಮುಚ್ಚಿ ಹೋಗಿತ್ತು. ಕೊರಳೊಳಗಿನ ರುದ್ರಾಕ್ಷಮಾಲೆ ತಲೆಯ ಮೇಲಿನ ಕೆಂಪು ಸಕಲಾತಿಯ ಕಿವಿಟೊಪ್ಪಿಗೆ, ಬಗಲೊಳಗಿನ ಕೃಷ್ಣಾಜಿನದ ಸುರುಳಿ, ಕೈಯೊಳಗಿನ ಜಪಮಾಲೆ, ಕಾಲೊಳಗಿನ ಆವುಗೆ ಇವುಗಳಿಂದ ಬ್ರಹ್ಮತೇಜಸ್ಸಿಗೆ ಮತ್ತಿಷ್ಟು ಕಳೆಯೇರಿತ್ತು. ಆತನು ಸರ್ವಾಂಗಕ್ಕೆಲ್ಲ ಭಸ್ಮವನ್ನು ಹಚ್ಚಿಕೊಂಡು, ಹಣೆಗೆ ಅರ್ಧಚಂದ್ರಾಕೃತಿಯ ಮೂರುಗೀರಿನ ಗಂಧವನ್ನು ಹಚ್ಚಿಕೊಂಡಿದ್ದನು. ಆ ಮಹಾತ್ಮನ ನಗೆಮೊಗದ ಸೊಬಗನ್ನು ವರ್ಣಿಸಲ ಸಾಧ್ಯವು! ಹೆಚ್ಚಿಗೆ ಹೇಳುವದೇನು? ಕಪಿಂಜಲಋಷಿಗಳು ತಮ್ಮ ಮುಪ್ಪಾದ ದೇಹವನ್ನು ಬಿಟ್ಟು, ತಮ್ಮ ತಪಃಪ್ರಭಾವದಿಂದ ಲೋಕಾನುಗ್ರಹಾರ್ಥವಾಗಿ, ತಾರುಣ್ಯದ ದೇಹವನ್ನು ಧರಿಸಿದಂತೆ ಸುಮತಿಯು ಒಪ್ಪುತ್ತಿದ್ದನು!

ಇಂಥ ತೇಜೋರಾಶಿಯು ಪಕ್ಕನೆ ಬಂದು ನಿಂತದ್ದರಿಂದ, ವೀರವರ್ಮನು ಎದ್ದುನಿಂತು ಸಾಷ್ಟಾಂಗವಾಗಿ ವಂದಿಸಿ, ಆತನಿಗೆ ಕುಳಿತುಕೊಳ್ಳಲಿಕ್ಕೆ ಆಸನವಿತ್ತನು. ಸುಮತಿಯು ಆಸನದಲ್ಲಿ ಕುಳಿತುಕೊಳ್ಳುತ್ತ ಅರಸನನ್ನು ಕುರಿತು—ನೃಪೋತ್ತಮನೇ, ನೋಡಿದೆಯೇನು ವಿಚಿತ್ರ ಯೋಗವನ್ನು? ಸದ್ಗುರುನಾಥನು ದೇಹಬಿಟ್ಟ ದಿವಸವೇ, ಪದ್ಮನಯನಾದೇವಿಯೂ ನಮ್ಮೆಲ್ಲರ ಕಣ್ಣುಮರೆಯಾಗಬೇಕೆ? ಪದ್ಮನಯನೆಯು ನನ್ನ ಒಡಹುಟ್ಟಿದ ತಂಗಿಯಂತೆ ನಡಕೊಳ್ಳುತ್ತಿದ್ದಳು. ಇಬ್ಬರೂ ಒಬ್ಬ ಗುರುವಿನ ಬಳಿಯಲ್ಲಿ ಕೂಡಿ ಕಲಿತೆವು ಕೂಡಿ ಆಡಿದೆವು. ಇಷ್ಟೇ ಸಂಬಂಧದಿಂದ ನನ್ನ ಮನಸ್ಸು ಆ ರಾಜಪುತ್ರಿಯ ವಿಯೋಗಕ್ಕಾಗಿ ತಲ್ಲಣಿಸಿರಲು, ರಕ್ತಸಂಬಂಧವುಳ್ಳ ನೀನೂ, ಮನಮೋಹಿನೀದೇವಿಯವರೂ ಶೋಕಸಾಗರದಲ್ಲಿ ಮುಳುಗಿ ರುವದು ಏನು ಆಶ್ಚರ್ಯವು! ದೊರೆಯೇ, ಇಂಥ ಕರುಣಾಸ್ಪದವಾದ ಪ್ರಸಂಗದಲ್ಲಿ ಯಾರ ಅಂತಃಕರುಣವು ಕರಗಿ ನೀರಾಗಿ ಅದು ಕಣ್ಣೀರುಗಳ ದ್ವಾರದಿಂದ ಹೊರಬೀಳಲಿಕ್ಕಿಲ್ಲ! ಸರ್ವಸಂಗಪರಿತ್ಯಾಗ ಮಾಡಿದ ಮಹಾತ್ಮರು, ಆ ಕರಗಿದ ಅಂತಃಕರಣಕ್ಕೆ ತಮ್ಮ ಆತ್ಮಸಂಯಮನದ ಒಡ್ಡು ಹಾಕುವದರಿಂದ, ಆ ಕರುಣಾಜಲವು ಸಂಚಯಹೊಂದಿ ಹೊಂದಿ ವಿಚಿತ್ರಶಕ್ತಿಯನ್ನು ತಾಳಿ, ಅದು ಪರೋಪಕಾರದ ಕೃತಿಗಳನ್ನು ಮಾಡುವದು! ಇನ್ನು ನೀನು ಸಾಮಾನ್ಯ ಜನರಂತೆ ಕಣ್ಣೀರು ಸುರಿಸುವದನ್ನು ಬಿಟ್ಟು, ಕಪಿಂಜಲ ಋಷಿಯ ಶಿಷ್ಯನೆಂಬದನ್ನು ನೆನಪಿಗೆ ತಂದು, ಪದ್ಮನಯನೆಯ ಹಿತದ ಕೆಲಸಗಳನ್ನು ಮಾಡು. ಆಕೆಯ ಕಲ್ಯಾಣಕ್ಕಾಗಿ ಈಶ್ವರಾರಾಧನೆ, ಅತಿಥಿಸೇವೆ, ಸತ್ಪಾತ್ರದಾನ ಮೊದಲಾದವುಗಳು ದೊಡ್ಡ ಪ್ರಮಾಣದಿಂದ ನಡೆಯಲಿ. ಇಂಥ ಸತ್ಕ್ರಿಯೆಗಳ ಪುಣ್ಯವೇ ರಾಜಪುತ್ರಿಯ ಕಷ್ಟನಿವಾರಣ ಮಾಡುವದು. ಆಕೆಯ ಶೋಧಾರ್ಥವಾಗಿ ನಾಲ್ಕೂಕಡೆಗೆ ಸೇವಕರನ್ನು ಕಳಿಸು. ಅರಸೇ ರಾಜಪುತ್ರಿಯ ವಿಷಯವಾಗಿ ಅನ್ಯಥಾ ಕಲ್ಪನೆಯನ್ನು ಮಾತ್ರ ಸರ್ವಥಾ ಮಾಡಬೇಡ ಕಂಡೆಯಾ? ಶ್ರೀ ಸದ್ಗುರುವು ಕೈಹಿಡಿದು ಆಕೆಯ ಸಂರಕ್ಷಣ ಮಾಡುವದಕ್ಕಾಗಿಯೇ, ನಮ್ಮೆಲ್ಲರನ್ನು ಅಗಲಿ ಮೊದಲೇ ಹೋಗಿರುವನೆಂದು ನಿಶ್ಚಯವಾಗಿ ತಿಳಿದುಕೋ. ಹಾಗಲ್ಲದಿದ್ದರೆ ನಮಗೆ ಇಬ್ಬರ ವಿಯೋಗ ದುಃಖವು ಒಂದೇ ದಿವಸ ಒದಗುತ್ತಿದ್ದಿಲ್ಲ, ನಾನು ನಿನಗೆ ಆಗ್ರಹದಿಂದ ಹೇಳುತ್ತೇನೆ ಇನ್ನು ನಿನ್ನ ದುಃಖವನ್ನು ನಿಲ್ಲಿಸು.

ತೇಜೋರಾಶಿಯ ಈ ಮಾತುಗಳನ್ನು ಕೇಳಿ ವೀರವರ್ಮನು—ಸದ್ಗುರು ಕೃಪೆಯಿಂದ ಧನ್ಯನಾದ ಸುಮತಿಯೇ, ನೀನು ವಯಸ್ಸಿನಿಂದ ಚಿಕ್ಕವನಾದರೂ ಸದ್ವೃತ್ತಿಯ ಬಲದಿಂದ ಹಿರಿಯನಾಗಿರುತ್ತೀ. ಗುರುವಿನ ತೇಜಸ್ಸು ನಿನ್ನ ಪವಿತ್ರ ದೇಹವನ್ನು ವ್ಯಾಪಿಸಿರುವದರಿಂದ ನೀನು ನನಗೆ ಗುರುಸ್ವರೂಪನು. ನಿನಗೆ ಅನಂತ ಪ್ರಣಾಮಗಳಿರಲಿ. ನಿನ್ನ ಅಪ್ಪಣೆಯು ನನಗೆ ಮಾನ್ಯವದೆ; ನನ್ನ ದುಃಖವನ್ನು ನಿಲ್ಲಿಸುವೆನು; ಆದರೆ, ನಾನು ಸಾಂಸಾರಿಕನಿದ್ದು ವಿರಕ್ತನ ಹಾಗೆ ನಟಿಸಲಾರೆನು. ನನ್ನ ಮೋಹವು ಅಳಿದುಹೋಗಿಲ್ಲ, ನನ್ನ ದುಃಖವನ್ನು ನಿನ್ನಮುಂದೆ ತೋಡಿ ಕೊಳ್ಳದೆ ಬಿಡುವದಿಲ್ಲ, ಕೃಪಾಘನಾ, ಗುರುಕೃಪೆಯಿಂದ ಹುಟ್ಟಿದ ಕೂಸು ನನ್ನಗಲಿ ಕಷ್ಟ ಪಡುತ್ತಿರಲು, ನಾನು ಸಮಾಧಾನ ಪಡುವ ಬಗೆಹೇಗೆ? ನನ್ನ ಪ್ರಾಣವಾದ ಪದ್ಮನಯನೆಯ ದುಃಖದ ಬಗೆಬಗೆಯ ಕಲ್ಪನೆಗಳು, ನನ್ನ ಮನಸ್ಸಿನಲ್ಲಿ ಉತ್ಪನ್ನವಾಗಿ ಹೃದಯವು ತಲ್ಲಣಿಸುತ್ತದೆ. ಸದ್ಗುರುವು ನನ್ನ ಕೂಸಿನ ಅಪರಾಧಕ್ಕಾಗಿ ಬೇಕಾದರೆ ನನ್ನನ್ನು ದಂಡಿಸಲಿ, ನನ್ನ ಪುಣ್ಯವಿದ್ದರೆ ಅದನ್ನು ನನ್ನ ಕೂಸಿಗೆ ಕೊಟ್ಟು, ಕಾಪಾಡಲಿ. ಗುರುಪುತ್ರಾ, ಸಮರ್ಥನ ಸೇವಕರಿಗೂ ಇಂಥ ಕಷ್ಟವೇ? ಹರ ಮುನಿದರೆ ಗುರು ಕಾಯ್ವನೆಂದು ದೊಡ್ಡವರು ಹೇಳುವರಲ್ಲ! ಮಾರ್ಕಂಡೇಯ ಋಷಿಗೆ ಪ್ರಾರಬ್ಧವಶದಿಂದ ಹದಿನಾಲ್ಕನೆಯ ವರುಷ ಮೃತ್ಯುವು ಒದಗಿರಲು, ಹರನು ಯಮನನ್ನು ದಂಡಿಸಿ, ಮಾರ್ಕಂಡೇಯನಿಗೆ ಉದ್ದಂಡವಾದ ಆಯುಷ್ಯವನ್ನು ಕೊಟ್ಟನು. ಈಗ ನಮ್ಮ ಸದ್ಗುರುವಿನಿಂದ ಮಾತ್ರ ನನ್ನ ಕೂಸಿನ ಪ್ರಾರಬ್ಧವು ನಾಶವಾಗಬಾರದೆ? ಸದ್ಗುರುವು ತನ್ನನ್ನು ಅನನ್ಯಭಾವದಿಂದ ಶರಣುಹೋದ ಧನ್ಯರನ್ನು ಉದ್ಧರಿಸುವದರಿಂದ, ಆತನ ಪತಿತಪಾವನತೆಯು ವ್ಯಕ್ತವಾಗುವದು; ಅದಕ್ಕಾಗಿ ಆತನು ನಮ್ಮಂಥ ಮೋಹವಶ ಪತಿತರನ್ನು ಉದ್ಧರಿಸಬೇಕಾಗುವದು. ದುಷ್ಟಶಾಸನ-ಶಿಷ್ಟಪರಿಪಾಲನಗಳ ಯೋಗದಿಂದ ದೇವರಲ್ಲಿ ವೈಷಮ್ಯಭಾವವಿರುತ್ತದೆಂದು ತೋರುವದು; ಆತನು ಭಕ್ತಾಭಿಮಾನಿಯಂತೆ; ಸ್ತೋತ್ರಪ್ರಿಯ ನಂತೆ; ಆದರೆ ಸದ್ಗುರುವಿನಲ್ಲಿ ಈ ಯಾವ ಗೊಂದಲಗಳೂ ಇರುವದಿಲ್ಲ, ಆತನ ಕೃಪಾದೃಷ್ಟಿಗೆ ಒಳಗಾದವರೆಲ್ಲ ಧನ್ಯರಾಗುವರು! ಇದಕ್ಕೆ ಹಲವು ಪ್ರಮಾಣಗಳುಂಟು. ಯಾವಾಗಲೂ ಹಾದಿಯನ್ನು ಬಡಿಯುತ್ತಿದ್ದ ವಾಲ್ಮೀಕಿಯು ಯಾವ ಪುಣ್ಯ ಮಾಡಿದ್ದನು? ಐದುವರ್ಷದ ಕೂಸಾದ ಧ್ರುವನು ಗುರುಸ್ತವನವನ್ನು ಎಷ್ಟರ ಮಟ್ಟಿಗೆ ಮಾಡಿದ್ದನು? ಶಬರಿಯು ಜಾತಿಯಿಂದ ಅನುಗ್ರಹಕ್ಕೆ ಎಷ್ಟರಮಟ್ಟಿಗೆ ಪಾತ್ರಳಿದ್ದಳು? ಇವರೆಲ್ಲರಿಗೆ ಗುರುಕೃಪೆಯಿಂದ ಈಶ್ವರ ದರ್ಶನವಾಗಲಿಲ್ಲವೆ? ಸೂರ್ಯ ಪ್ರಕಾಶದಂತೆ, ಶಿಷ್ಟರ ಮೇಲೆ ದುಷ್ಟರ ಮೇಲೆ, ಜ್ಞಾನಿಗಳ ಮೇಲೆ ಅಜ್ಞಾನಿಗಳ ಮೇಲೆ ಸರಿಯಾಗಿ ಕೃಪೆ ಮಾಡಲು ಸದ್ಗುರುವೇ ಮುಂದಾದವನು. ಅಂತೇ ಸದ್ಗುರುವಿಗೆ ಶರಣುಹೋದ ಸದಾಚಾರಿಯೂ-ದುರಾಚಾರಿಯೂ ಸಮಾನಸ್ಕಂದರಾಗುವರೆಂದು ಜ್ಞಾನಿಗಳು ಹೇಳುತ್ತಾರೆ. ಇನ್ನು ಸಾಕು ಗುರುಪುತ್ರಾ ನಾನು ಇನ್ನು ಸುಮ್ಮನಾಗುತ್ತೇನೆ. ಶೋಕಾಗ್ನಿಯು ನನ್ನನ್ನು ದಹಿಸಲೊಲ್ಲದೇಕೆ ಅಥವಾ ಸದ್ಗುರು ಕೃಪಾಜಲಧಿಯು ಪದ್ಮನಯನೆಯನ್ನು ನನ್ನೆದುರಿಗೆತಂದು ನಿಲ್ಲಿಸಿ, ಆ ಶೋಕಾಗ್ನಿಯನ್ನು ಶಾಂತಗೊಳಿಸಲೊಲ್ಲದೇಕೆ!

ಇದಕ್ಕೆ ಸುಮತಿಯು—ಸಾರ್ವಭೌಮನೇ, ನಿನ್ನಂಥ ಪ್ರಾಜ್ಞನ ಶೋಕವು ಲೋಕೋದ್ಧಾರಕ್ಕೆ ಕಾರಣವಾಗಿರುವಲ್ಲಿ ಸಂಶಯವಿಲ್ಲ. ಪದ್ಮನಯನೆಯಲ್ಲಿಯ ಅನಿರ್ವಾಚ್ಯವಾದ ನಿನ್ನ ಮೋಹ, ಸದ್ಗುರುವಿನ ಸಾಮರ್ಥ್ಯದಲ್ಲಿರುವ ನಿನ್ನ ನಂಬಿಗೆ, ಈಶ್ವರನ ಯತಾರ್ಥವಾದ ನಿನ್ನ ಗುಣಾನುವಾದ ಇವುಗಳನ್ನು ಕೇಳಿ, ನನಗೆ ಬಹಳ ಸಮಾಧಾನವಾಯಿತು. ನಿನ್ನಂಥ ನಿರ್ಮಲಾಂತಃಕರಣದ ಶಿಷ್ಯನ ಮೊರೆಯನ್ನು ಸದ್ಗುರುನಾಥನು ಹೇಗೆ ಕೇಳದೆ ಇದ್ದಾನು! ಬಾಹ್ಯಾಡಂಬರಕ್ಕೆ ಮೆಚ್ಚದೆ ಇದ್ದ ಕಪಿಂಜಲ ಋಷಿವರ್ಯನು ನಿನ್ನಲ್ಲಿ ತುಂಬಾ ವಾತ್ಸಲ್ಯವುಳ್ಳವನಾಗಿ ನಿನ್ನನ್ನು ಸಮಾದಾನಗೊಳಿಸುವದಕ್ಕಾಗಿ ನಿನ್ನೆ ಸ್ವಪ್ನದಲ್ಲಿ ನನ್ನನ್ನು ಆಜ್ಞಾಪಿಸಿರುವನು. ಆತನ ಆಜ್ಞೆಯಂತೆ ನಾನು ನಾಲ್ಕು ಮಾತುಗಳನ್ನು ನಿನಗೆ ಹೇಳುವೆನು. ಅವು ಸದ್ಗುರು ವಚನಗಳಂತಲೇ ಭಾವಿಸು. ಆತನೇ ನನ್ನಲ್ಲಿ ನೆಲಿಸಿ ಮಾತಾಡಿಸುವನೆಂದು ತಿಳಿ. ರಾಜಾ, ಮೋಹವನ್ನು ಬಿಡುವದು ಸುಲಭವಲ್ಲ, ನಿಜವಾದ ಮೋಹವುಳ್ಳವರೇ ವಿರಳವೆಂದು ತಿಳಿ. ಮೋಹಬಿಡಬೇಕೆನ್ನುವವರು ಮೊದಲು ನಿಜವಾದ ಮೋಹವನ್ನು ಸಂಪಾದಿಸಿಕೊಳ್ಳಬೇಕು. ಧನವಿಲ್ಲದವನಿಗೆ ಧನದಾಸೆಯನ್ನು ಬಿಡೆಂದು ಬೋಧಿಸುವದೂ, ಪುರುಷತ್ವವಿಲ್ಲದವನಿಗೆ ಸ್ತ್ರೀಯ ಅಭಿಲಾಷೆಯನ್ನು ಬಿಡೆಂದು ಬೋಧಿಸುವದೂ ವ್ಯರ್ಥವೇ ಸರಿ. ಯಾಕಂದರೆ, ಅವರಲ್ಲಿ ಅವುಗಳ ಮೋಹವಿದ್ದರೆ ಬಿಡಬೇಕಷ್ಟೇ? ಸ್ವಾರ್ಥತ್ಯಾಗಿಯಲ್ಲಲ್ಲದೆ ಅನ್ಯರಲ್ಲಿ ನಿಜವಾದ ಮೋಹವು ಇರಲಾರದು. ಜಗತ್ತಿನ ಜನರು ಹೆಂಡಿರು–ಮಕ್ಕಳ ಮೇಲೆ ಮಾಡುವ ಮೋಹವು ನಿಜವಾದ ಮೋಹವಲ್ಲ, ಅದು ಸ್ವಾರ್ಥ ಮೂಲವಾದ ಮೋಸಗಾರಿಕೆಯು, ತಮಗೆ ಅನುಕೂಲವಾಗಿರುವವರೆಗೆ, ಅಥವಾ ತಮಗೆ ಗರಜು ಇರುವವರೆಗೆ ಅವರು ಹೆಂಡಿರು–ಮಕ್ಕಳ ಮೇಲೆ ಮೋಹತೋರಿಸುತ್ತಾರೆ; ತಮಗೆ ವಿರುದ್ಧವಾಗಿ ನಡೆದಾಗ, ಇಲ್ಲವೆ ತಮಗೆ ಬೇಡಾದಾಗ ಹೆಂಡಿರು–ಮಕ್ಕಳನ್ನು ಅವರು ದ್ವೇಷಿಸುತ್ತಾರೆ. ಹೆಂಡತಿಯ ಮೇಲಿನ ನಿಜವಾದ ಮೋಹವುಳ್ಳ ತುಳಸಿದಾಸರು ಹೆಂಡತಿಯ ಯೋಗದಿಂದಲೇ ಮೋಹವನ್ನು ಬಿಟ್ಟರು. ದುಡ್ಡಿನ ಮೇಲೆ ನಿಜವಾದ ಮೋಹವುಳ್ಳ ಪುರಂದರದಾಸರು, ದುಡ್ಡಿನ ಯೋಗದಿಂದಲೇ ಮೋಹವನ್ನು ಬಿಟ್ಟರು; ಅಂದರೆ ಆ ದಾಸರಿಬ್ಬರು ಕ್ರಮವಾಗಿ ಹೆಂಡತಿಯ ಹಾಗು ದುಡ್ಡಿನ ಮೇಲೆ ಇದ್ದ ತಮ್ಮ ಅಕೃತ್ರಿಮ ಮೋಹವನ್ನು, ಈಶ್ವರನಲ್ಲಿಟ್ಟು ಕೃತಾರ್ಥರಾದರು. ಪದ್ಮನಯನೆಯ ಹಿತಕ್ಕಾಗಿ ಈಗ ನೀನು ನಿನ್ನ ಪುಣ್ಯವನ್ನು ಅರ್ಪಿಸಿದ್ದಲ್ಲದೆ, ನರಕದಲ್ಲೂ ಬೀಳುವದಕ್ಕೆ ಒಪ್ಪಿಕೊಳ್ಳುವದರಿಂದ, ನೀನು ಮಗಳಲ್ಲಿ ನಿಜವಾದ ಮೋಹವುಳ್ಳವನಿರುವೆಯೆಂದು ತಿಳಿಯುವೆನು; ನೀನು ಮೋಹಬಿಡಲಿಕ್ಕೆ ತಕ್ಕವನಾಗಿರುತ್ತೀ. ಆದ್ದರಿಂದ ವಿಚಾರದಿಂದ ಮೋಹವನ್ನು ಬಿಡು. ಕಪಿಂಜಲ ಸದ್ಗುರುವು ಮೋಹವನ್ನು ಬಿಟ್ಟಾತನು, ನೀನು ಮೋಹವನ್ನು ಬಿಡದವನು; ಅಂದಬಳಿಕ ನಿಮ್ಮಿಬ್ಬರ ಗತ್ತು ಹೇಗೆ ಒಂದಾಗಬೇಕು? ಅದೇ, ತಂದೆ–ಮಕ್ಕಳಿಬ್ಬರು ನೀವು ಮೋಹ ಬಿಡದವರಾದ್ದರಿಂದ ನೀವು ಸಮಾನ ಧರ್ಮಿಗಳು. ಕಳ್ಳನ ಕಡೆಗೆ ಕಳ್ಳನ ಮನಸ್ಸು ಹರಿಯುವಂತೆ, ನಿನ್ನ ಮನಸ್ಸು ಮಗಳ ಕಡೆಗೆ ಹರಿಯುವದು ಆಶ್ಚರ್ಯವಲ್ಲ, ಅರಸಾ, ತಿಳಿದು ನೋಡು. ಪದ್ಮನಯನೆಗಿಂತ ಕಪಿಂಜಲ ಗುರುಗಳ ಯೋಗ್ಯತೆಯು ಹೆಚ್ಚೆಂದು ನೀನು

ತಿಳಿದಿದ್ದರೂ, ಅವರಿಬ್ಬರ ವಿಯೋಗವು ಒದಗಿರುವಾಗ ನೀನು, ಗುರುವಿನ ಉಪದೇಶದಂತೆ ಸಮಾಧಾನ ಪಡದೆ, ಮಗಳ ವಿಯೋಗಕ್ಕಾಗಿ ದುಃಖಪಡುತ್ತೀ. ಈಗ ಸದ್ಗುರುವಿನ ವಿಯೋಗಕ್ಕಿಂತ ಮಗಳ ವಿಯೋಗವು ನಿನಗೆ ಹೆಚ್ಚು ತಾಪದಾಯಕವಾಗಿರುತ್ತದೆ. ಅಂದಬಳಿಕ ನಿನ್ನ ಮೋಹವು ಮಗಳಲ್ಲಿರುವದೋ ಗುರುವಿನಲ್ಲಿರುವದೋ ವಿಚಾರಮಾಡು. ಆತ್ಯಂತಿಕ ಮೋಹವು ಒಂದೇ ವಸ್ತುವಿನಲ್ಲಿರುತ್ತದೆ, ಅನೇಕ ವಸ್ತುಗಳಲ್ಲಿರುವದಿಲ್ಲ. ಮಗಳ ಮೇಲಿನ ನಿನ್ನ ಆತ್ಯಂತಿಕ ಮೋಹವು ಗುರುವಿನಲ್ಲಿ ಕೂತರೆ, ನಿನ್ನ ವ್ಯರ್ಥವಾದ ಮಗಳ ವಿಯೋಗ ದುಃಖವು ತಾನೇ ಹೋಗುವದು. ರಾಜಾ, ವಿಚಾರಮಾಡು ಮಗಳ ಮೇಲಿನ ಮೋಹಕ್ಕಾಗಿ ನಿನ್ನನ್ನು ನಾನು ನಿರಾಕರಿಸುತ್ತೇನೆಂದು ತಿಳಿಯಬೇಡ. ಇರುವವರೆಗೆ ತನ್ನ ಸುಖಕ್ಕೆ ಲಕ್ಷಗೊಡದೆ ಮಕ್ಕಳ ಸಂರಕ್ಷಣವನ್ನು ಮಾಡಬೇಕು. ಮಕ್ಕಳು ತನ್ನನ್ನಗಲಿ ಹೋದಬಳಿಕ, ಏನುಮಾಡಿದರೆ ಅವರಿಗೆ ಸುಖವಾದೀತೆಂಬದನ್ನು ವಿಚಾರದಿಂದ ಗೊತ್ತುಮಾಡಿಕೊಂಡು ನಡೆಯಬೇಕು. ಹಾಗೆ ಮಾಡದೆ ತಿಳಿಗೇಡಿತನದಿಂದ ದುಃಖಿಸಿದರೆ, ಸ್ವಾರ್ಥಪರಾಯಣತೆಯ ದೋಷವು ಬರುವದಿಲ್ಲವೆ? ''ಸಮರ್ಥನ ಸೇವಕರಿಗೂ ಕಷ್ಟವೇ'' ಎಂದು ನೀನು ಕೇಳುತ್ತೀಯಲ್ಲ? ಸಮರ್ಥನ ಸೇವಕರು ಕ್ಷುದ್ರವಾದ ಪ್ರಾರಬ್ಧ ಭೋಗಕ್ಕೆ ಹೆದರಬೇಕೇ, ನೀನೇ ಹೇಳು? ಪ್ರಾರಬ್ಧದ ಹಂಗೇನು? ಸಮರ್ಥರ ಶಿಷ್ಯರು ಅದನ್ನು ಸಹಜವಾಗಿ ಉಂಡು ತೀರಿಸತಕ್ಕದ್ದು. ಮೇಲಾಗಿ ಸಮರ್ಥರ ಕೃಪೆಯಿಂದ ಕೊನೆಗೆ ಸುಖಸಾಮ್ರಾಜ್ಯವೇ ಒದಗುವದೆಂಬದು ನಿನಗೆ ಗೊತ್ತಿದೆ. ರಾಜಾ, ಇಷ್ಟಿದ್ದು ನೀನು ದುಃಖಿ ಸುವೆಯಲ್ಲ! ಗುರು ಕೃಪೆಗೆ ನೀನು ಒಳಗಾಗಿರುವದರಿಂದ ನೀನು ಮುಕ್ತನೇ ಆಗಿರುತ್ತೀ, ಇದರಲ್ಲಿ ಸಂಶಯವಿಲ್ಲ; ಆದರೆ ಅಳುಬುರುಕರು ಯಾವಾಗಲೂ ಅಳುತ್ತಲೇ ಇರಬೇಕೆನ್ನುವಂತೆ ನಿನ್ನ ಗತಿಯಾಗಿದೆ. ತಮ್ಮ ಮನಸ್ಸಿನಂತೆ ಆಗದೆ ಇದ್ದಾಗ ಅಳುತ್ತ ಕೂಡ್ರುವದು ಸಾಂಸಾರಿಕ ಹುಟ್ಟುಗುಣವಾಗಿರುವದು. ಹುಟ್ಟುಗುಣವು ಹುಗಿದರೂ ಹೋಗುವದಿಲ್ಲವಂತೆ! ಹನುಮಂತನು ಎಷ್ಟು ದೊಡ್ಡ ದೇವರಾದರೂ ಮರಮರ ಹಾರುವದನ್ನು ಬಿಡಲಿಲ್ಲ; ನಾರದರು ಎಷ್ಟು ದೊಡ್ಡ ಋಷಿಗಳಾದರೂ ಚಾಡೀ ಹೇಳುವದನ್ನು ಬಿಡಲಿಲ್ಲ. ಸದ್ಗುರುವನ್ನು ಶರಣುಹೋದ ಬಳಿಕ ಮೋಕ್ಷಕ್ಕಾಗಿ ಚಿಂತೆಯೇ? ಇಂದಿಲ್ಲ ನಾಳೆ, ಈ ಜನ್ಮದಲ್ಲಿಲ್ಲ ಮುಂದಿನ ಜನ್ಮದಲ್ಲಿ ಮೋಕ್ಷವು ಆಗೇ ಆಗುವದು! ವಿಚಾರಮಾಡು, ಧೈರ್ಯತಾಳು, ಸದ್ಗುರುವಿನಲ್ಲಿ ನಂಬಿಗೆಯನ್ನಿಡು. ಇದರಮೇಲೆಯೂ ಮಗಳ ವಿಯೋಗ ದುಃಖವು ಪೀಡಿಸಿದರೆ ಪೀಡಿಸಲಿ, ಅದಕ್ಕೆ ನೀನೇನು ಮಾಡುವೆ—ನಾನೇನು ಮಾಡುವೆನು? ಮಾಡಿದರೆ ಸದ್ಗುರುವಿನ ಈ ಸದ್ಬೋಧವೇ ನಿನ್ನ ಸ್ಥಿತ್ಯಂತರವನ್ನು ಮಾಡೀತು?

ಉತ್ಕಟಪುಣ್ಯ

ಈ ಮೇರೆಗೆ ಉಪದೇಶಿಸಿ ಸುಮತಿಯು ತನ್ನ ಮಠಕ್ಕೆ ಬಂದನು. ವೀರವರ್ಮನೂ ಆತನ ಸದುಪದೇಶದಿಂದ ಬಹುಮಟ್ಟಿಗೆ ಸಮಾಧಾನ ಹೊಂದಿದನು. ಆಗಾಗ್ಗೆ ಸುಮತಿಯು ಸದ್ಬೋಧಗಳಿಂದ ಅರಸನ ಮನಸ್ಸನ್ನು ಸಮಾಧಾನಪಡಿಸುತ್ತಲೇ ಇದ್ದನು. ಹೀಗೆ ಕೆಲದಿನಗಳು ಕಳೆಯಲು ಕಪಿಂಜಲನು ಸುಮತಿಯ ಕನಸಿನಲ್ಲಿ ಬಂದು ಪದ್ಮನಯನೆಯ ಶೋಧಕ್ಕಾಗಿ ಹೊರಡಬೇಕೆಂದು ಆತನನ್ನು ಆಜ್ಞಾಪಿಸಿದನು. ಆಗ ಸುಮತಿಯು ವೀರವರ್ಮನ ಬಳಿಗೆ ಹೋಗಿ—ನೃಪೋತ್ತಮನೇ, ಸದ್ಗುರುವು ನಿನ್ನೆ ರಾತ್ರಿ ನನ್ನ ಸ್ವಪ್ನದಲ್ಲಿ ನುಡಿದದ್ದನ್ನು ಹೇಳುತ್ತೇನೆ ಕೇಳು. ನಾನು ಪದ್ಮನಯನೆಯ ವಿಯೋಗದಿಂದ ಅಸಮಾಧಾನಪಟ್ಟು, ಆಕೆಯ ಶೋಧವು ಹ್ಯಾಗಾದೀತೆಂದು ಚಿಂತಿಸುತ್ತ ಮಲಗಿರಲು, ಉತ್ತರ ರಾತ್ರಿಯಲ್ಲಿ ಸ್ವಲ್ಪನಿದ್ದೆ ಬಂದಂತಾಯಿತು. ಆಗ ಕಪಿಂಜಲ ಗುರುವರ್ಯರು ಸ್ವಪ್ನದಲ್ಲಿ ಬಂದು—ಸುಮತೀ, ನೀನು ವೀರವರ್ಮನ ಆಶ್ರಯದಲ್ಲಿದ್ದು ಅವನಿಗೊದಗಿದ ದುಃಖವನ್ನು ಕಣ್ಣಿನಿಂದ ನೋಡುತ್ತ ಕುಳಿತು ಕೊಳ್ಳುವದು ಯೋಗ್ಯವೇ? ಏಳು, ಪದ್ಮನಯನೆಯ ಶೋಧಕ್ಕಾಗಿ ಉದ್ಯೋಗಿಸು ಎಂದು ಹೇಳಿದರು. ಆಗ ನಾನು ಸ್ವಪ್ನದಲ್ಲಿಯೇ ಗುರುವಿಗೆ ಸಾಷ್ಟಾಂಗವಾಗಿ ವಂದಿಸಿ—ಮಹಾತ್ಮನೇ, ನನ್ನಂಥ ಕ್ಷುದ್ರನ ಉದ್ಯೋಗದಿಂದ ಆಗುವದೇನು? ನೀನು ಮಾರ್ಗದರ್ಶಕನಾದರೆ, ನಾನು ರಾಜಪುತ್ರಿಯ ಶೋಧಕ್ಕಾಗಿ ಹೊರಡುವೆನು ಎಂದು ಹೇಳಲು, ಋಷಿವರ್ಯನು—ಬಾಲಕಾ, ಈ ಮಾತಿನ ಸಲುವಾಗಿ ಸುಮ್ಮನೆ ವಿಚಾರಮಾಡುತ್ತ ಕುಳಿತುಕೊಳ್ಳಬೇಡ. ನೀನು ನಾಳೆ ಅರಸನ ಬಳಿಗೆ ಹೋಗಿ ಸ್ವಪ್ನದ ಸಂಗತಿಯನ್ನು ತಿಳಿಸಿ, ನಾಲ್ಕು ಸಮಾಧಾನದ ಮಾತುಗಳನ್ನು ಹೇಳಿ ರಾಜಪುತ್ರಿಯ ಶೋಧಕ್ಕಾಗಿ ಹೊರಡು. ನೀನು ದಕ್ಷಿಣಾಭಿಮುಖ ವಾಗಿ ಕೆಲವು ದಿನ ಮಾಗ್ರಕ್ರಮಣ ಮಾಡಲು, ನಿನಗೆ ಒಂದು ಶಿವಾಲಯವು ಹತ್ತುವದು. ಅಲ್ಲಿ ಶೂರನೂ, ಸುಂದರನೂ ಆದ ಒಬ್ಬ ರಾಜಪುತ್ರನು ನಿನ್ನ ಹಾದಿಯನ್ನು ನೋಡುತ್ತ ಕುಳಿತುಕೊಂಡಿರುವನು. ಅವನೇ ಪದ್ಮನಯನೆಯ ಪತಿಯು. ಆತನು ನಿನ್ನ ಶೋಧಕ್ಕೆ ಸಹಾಯಮಾಡುವನು, ಎಂದು ಹೇಳಿದನು; ಆದ್ದರಿಂದ ಪ್ರಭುವೇ ನಾನು ಪದ್ಮನಯನೆಯ ಶೋಧಕ್ಕಾಗಿ ಇಂದೇ ಹೊರಡುವೆನು. ನನ್ನ ಒಡಹುಟ್ಟಿದವಳಂತೆ ಇದ್ದ ಪದ್ಮನಯನಾದೇವಿಯ ಶೋಧಮಾಡಿದ ಹೊರತು ನಾನು ಯಾವ ಸುಖೋಪಭೋಗಗಳನ್ನೂ ಹೊಂದುವದಿಲ್ಲ, ಫಲ–ಮೂಲಗಳನ್ನು ಭಕ್ಷಿಸಿ, ಕೇವಲ ವ್ರತಸ್ಥನಾಗಿರುವೆನು, ನೀನು ಇನ್ನು ಮನಸ್ಸಿನ ಚಿಂತೆಯನ್ನು ಬಿಡು. ಪದ್ಮನಯನೆಯ ಶೋಧವಾಯಿತೆಂದು ತಿಳಿ. ಸ್ವಲ್ಪ ದಿನಗಳಲ್ಲಿ ಪದ್ಮನಯನೆಯು ಪತಿ—ಪುತ್ರರೊಡನೆ ಶ್ರೀ ಗುರುಕೃಪೆಯಿಂದ ನಿನ್ನನ್ನು ಹೊಂದುವಳು!

ಈ ಮೇರೆಗೆ ನಿರ್ಧಾರದಿಂದ ಆಡಿದ ಸುಮತಿಯ ಮಾತುಗಳನ್ನು ಕೇಳಿ ಅರಸನಿಗೆ ಬಹಳ ಸಮಾಧಾನವಾಯಿತು. ಆತನು ಸುಮತಿಗೆ—ತಪಸ್ಸಿದ್ಧನಾದ ಸುಮತಿಯೇ, ನಿನ್ನಂಥ ಮಹಾಪುರುಷನು ಶ್ರೀ ಗುರು ಪ್ರೇರಣೆಯಿಂದ ಆರಂಭಿಸಿದ ಕೆಲಸವು ಕಡೆಗಾಣುವದು

ಆಶ್ಚರ್ಯವಲ್ಲ. ನೀನು ನನ್ನ ಸಲವಾಗಿಯೂ ಶ್ರಮಪಡಲಿಕ್ಕೆ ಸಿದ್ಧನಾದ್ದರಿಂದ ನಮ್ಮ ಅಭ್ಯುದಯ ಕಾಲವು ಸಮೀಪಿಸಿತೆಂದು ತಿಳಿಯುವೆನು. ಪರಹಿತ–ತತ್ಪರರಾದ ನಿಮ್ಮಂಥ ಮಹಾತ್ಮರ ಉಪಕಾರವನ್ನು ನನ್ನಂಥ ಕ್ಷುದ್ರನು ಏನು ತಿಳಿಯುವೆನು? ಇನ್ನು ನಾನು ನಿಶ್ಚಿಂತನಾದೆನು. ಪದ್ಮನಯನೆಯ ಹಿತಚಿಂತನೆಯಲ್ಲಿ ಸದ್ಗುರುವು ಸದಾ ಜಾಗರೂಕನಾಗಿ ರುವನೆಂಬದರ ಅನುಭವವು ನನಗೆ ಬಂದಿತು. ಆ ಮಹಾತ್ಮನು ನಿನ್ನೆ ರಾತ್ರಿ ನನಗೂ ಸ್ವಪ್ನದಲ್ಲಿ ದರ್ಶನಕೊಟ್ಟು ''ಪದ್ಮನಯನೆಯ ಶೋಧಕ್ಕಾಗಿ ಸುಮತಿಯನ್ನು ನಾಳಿಗೆ ಕಳಿಸು'' ಎಂದು ಆಜ್ಞಾಪಿಸಿದನು. ತೇಜೋರಾಶಿಯೇ ನಿನ್ನನ್ನು ಆಜ್ಞಾಪಿಸುವದು ನನ್ನ ಯೋಗ್ಯತೆಯೇ? ಪತಿತನಾದ ನನ್ನನ್ನು ಉದ್ಧರಿಸಬೇಕೆಂದು ಪ್ರಾರ್ಥಿಸುವೆನು ಮಾತ್ರ!

ಸುಮತಿಯು ಅರಸನ ಈ ಮಾತುಗಳನ್ನು ಕೇಳಿ ಆತನ ವಿನಯಕ್ಕಾಗಿ ಸಮಾಧಾನಪಟ್ಟು, ಆತನ ಅನುಮತಿಯಿಂದ ಪದ್ಮನಯನೆಯ ಶೋಧಕ್ಕಾಗಿ ಹೊರಟನು. ಆತನು ಗುರುವಿನ ಅಪ್ಪಣೆಯಂತೆ ದಕ್ಷಿಣಾಭಿಮುಖವಾಗಿ ಸಾಗಿ, ಮಾರ್ಗದಲ್ಲಿ ದೊಡ್ಡದೊಡ್ಡ ಗುಡ್ಡಗಳನ್ನೂ, ಹೊಳೆಗಳನ್ನೂ, ಅರಣ್ಯ ಪ್ರದೇಶಗಳನ್ನೂ ದಾಟಿ ದಾಟಿ ದಣಿದನು. ಈ ಪ್ರಕಾರ ಬಹಳ ಕಷ್ಟಪಡುತ್ತ ಅಖಂಡ ಇಪ್ಪತ್ತು ದಿವಸಗಳವರೆಗೆ ನಡೆದು ಹೋದ ಬಳಿಕ ಒಂದು ವಿಸ್ತಾರವಾದ ಬಯಲಲ್ಲಿ ಒಂದು ದೇವಾಲಯವು ಅವನ ಕಣ್ಣಿಗೆ ಬಿತ್ತು. ಅದರ ಸುತ್ತಲೂ ಮನೋಹರವಾದ ತೋಟವು ಒಪ್ಪುತ್ತಿತ್ತು. ಆ ತೋಟದಲ್ಲಿಯ ಗಿಡಬಳ್ಳಿಗಳು ಹೂ–ಕಾಯಿಗಳಿಂದ ಜಗ್ಗುತ್ತಿದ್ದವು. ಅಲ್ಲಿ ಸಂಪಗೆ, ಸೇವಂತಿಗೆ, ಮಲ್ಲಿಗೆ, ಬಕುಳ ಮೊದಲಾದ ಸುಗಂಧದ ಪುಷ್ಪಗಳು ಸುವಾಸನೆ ಯನ್ನು ಬೀರುತ್ತಿದ್ದವು. ಮಾವು, ಹಲಸು, ಬಾಳೆ, ತೆಂಗು, ನೇರಲು ಮುಂತಾದ ಫಲಗಳು ಜನರ ಕ್ಷುಧಾಶಾಂತಿಯನ್ನು ಮಾಡುತ್ತಿದ್ದವು. ಆ ತೋಟದಲ್ಲಿದ್ದ ಸರೋವರವು ಸ್ವಚ್ಛವಾದ ಉದಕದಿಂದಲೂ, ಸುಂದರವಾದ ಕಟ್ಟಡದಿಂದಲೂ ನೋಡುವವರ ಮನಸ್ಸನ್ನು ರಮಿಸುತ್ತಿತ್ತು. ಸುಮತಿಯ ಆ ತೋಟವನ್ನು ದಾಟಿ ದೇವಾಲಯದ ಒಳಗೆ ಹೋಗಲು, ಅದರ ಭವ್ಯಸ್ವ ರೂಪವು ಅವನ ಕಣ್ಣಿಗೆ ಬಿತ್ತು. ಅವನು ಅಂಥ ಸುಂದರವಾದ ದೇವಾಲಯವನ್ನು ಎಂದೂ ನೋಡಿದ್ದಿಲ್ಲ. ಆ ದೇವಾಲಯದ ರಚನೆಯಲ್ಲಿ ತೋರುವ ಕಲಾ–ಕೌಶಲ್ಯವೂ, ಸಾಹಸವೂ ಪ್ರೇಕ್ಷಕರಲ್ಲಿ ಆನಂದಾಶ್ಚರ್ಯಗಳನ್ನುಂಟುಮಾಡುತ್ತಿದ್ದವು. ಸುಮತಿಯು ಆ ಭವ್ಯವಾದ ದೇವನಿಕೇತನವನ್ನು ಪ್ರವೇಶಿಸಲು ಒಬ್ಬ ದಿವ್ಯ ಪುರುಷನು ಅವನ ಕಣ್ಣಿಗೆ ಬಿದ್ದನು. ಅವನು ಸುಮತಿಯ ಬರವನ್ನು ನೋಡಿ ಎದ್ದುನಿಂತು ಸಾಷ್ಟಾಂಗವಾಗಿ ವಂದಿಸಿ, ಆಸನಾದಿಗಳಿಂದ ಉಪಚರಿಸಿದ ಮೇಲೆ—ವಿಪ್ರೋತ್ತಮನೇ ನಿನ್ನ ಬರುವಿಕೆಯಿಂದ ನಾನು ಕೃತಾರ್ಥನಾದೆನು. ನಿನ್ನ ದರ್ಶನದಿಂದ ವಿಚಿತ್ರವಾದ ಆನಂದವು ನನಗಾಗಿದೆ. ಒಬ್ಬ ಋಷಿ ಶ್ರೇಷ್ಠನು ಈಗ ನಾಲ್ಕಾರು ದಿನಗಳ ಹಿಂದೆ ಸ್ವಪ್ನದಲ್ಲಿ ಸೂಚಿಸಿದ ಸಂಗತಿಯು ನಿಜವಾಯಿ ತೆಂದು ನನಗೆ ತೋರುತ್ತದೆ ಎಂದನು.

ಆ ದಿವ್ಯ ಪುರುಷನ ವಯಸ್ಸು ಇಪ್ಪತ್ತೈದರ ಒಳಗೆ ಇರಬಹುದು. ಆ ಪ್ರಾಯಸ್ಥನ ಮುಖವು ಸುಂದರ–ಅಲೌಕಿಕವಾದ ರಾಜತೇಜಸ್ಸಿನಿಂದ ಒಪ್ಪುವಂಥಾದ್ದು; ಮೈಕಟ್ಟು ಕಸುವಿನದು—ಗರಡಿಯ ಸಾಧಕಗಳಿಂದ ಅದು ತಿದ್ದಿ ಮಾಡಿದಂತೆ ಇತ್ತು. ಆತನ ಶರೀರ

ಕಾಂತಿಯ ಸೊಬಗನ್ನಂತು ವರ್ಣಿಸಲಾಸಲ್ಲ. ಇಂಥ ಸುಂದರಾಕಾರದ ಗಂಭೀರ ಪುರುಷನನ್ನು ನೋಡಿ ಸುಮತಿಯು ಮೊದಲೇ ಬೆರಗಾಗಿದ್ದನು. ತರುಣನಲ್ಲಿ ವಿನಯವನ್ನು ನೋಡಿದ ಬಳಿಕಂತು ಆ ವಿಪ್ರಶ್ರೇಷ್ಠನ ಮನಸ್ಸು ಸುಪ್ರಸನ್ನವಾಯಿತು. ಇವನೇ ಪದ್ಮನಯನೆಯ ಪತಿಯಾಗಿದ್ದರೆ, ಬಹು ಯೋಗ್ಯವೆಂದು ಆತನು ನೆನಸಿದನು. ತೇಜಸ್ವಿಗಳಾದ ಆ ಇಬ್ಬರು ತರುಣರಿಂದ ಆ ಶಿವಾಲಯಕ್ಕೆ ಒಂದು ಬಗೆಯ ಕಳೆಯೇರಿತ್ತು. ಸುಮತಿಯು ಆ ಪ್ರಾಯಸ್ಥನನ್ನು ಕುರಿತು—ಸುಜ್ಞನೇ, ನಿನ್ನ ಆದರದಿಂದ ನನ್ನ ಮನಸ್ಸು ಬಹಳ ಸಮಾಧಾನವನ್ನು ಹೊಂದಿದೆ. ಪ್ರಾಯದಲ್ಲಿ ಈ ಪರಿಯ ವಿನಯವಿರುವದು ಹಿರಿಯರ ಪುಣ್ಯವೇ ಸರಿ. ಪರಮೇಶ್ವರನು ನಿನ್ನ ಕಲ್ಯಾಣಮಾಡುವನು; ಆದರೆ ನೀನು ಯಾರು? ನಿನ್ನ ವೃತ್ತಾಂತವೇನು? ಋಷಿಯು ಹೇಳಿದ ಭವಿಷ್ಯವು ಯಾವದು? ಇವನ್ನಿಷ್ಟು ದಯವಮಾಡಿ ಹೇಳು, ಅನ್ನಲು ರಾಜಪುತ್ರನು ತನ್ನ ವೃತ್ತಾಂತವನ್ನು ಈ ಪ್ರಕಾರ ಹೇಳಿದನು.

ಮಹಾತ್ಮನೇ, ವಿಂಧ್ಯಾದ್ರಿಯ ಉತ್ತರಕ್ಕೆ ಅಂದರೆ ಕನೋಜರಾಜ್ಯದ ದಕ್ಷಿಣಕ್ಕೆ ಮಾಳವಾ ಎಂಬದೊಂದು ರಾಜ್ಯವಿರುವದು. ಉಜ್ಜಯನೀ ಪಟ್ಟಣವೇ ಆ ರಾಜ್ಯದ ರಾಜಧಾನಿಯು. ಬಹು ಜನ ಕ್ಷತ್ರಿಯ ಅರಸರು ಆ ರಾಜ್ಯವನ್ನು ಆಳಿದ ಬಳಿಕ ಸುಲೋಚನನೆಂಬ ಅತಿ ವಿಖ್ಯಾತನಾದ ಅರಸನು ಈಗ ಅದನ್ನು ಆಳುತ್ತಿರುವನು. ಅವನ ಕೈಕೆಳಗೆ ಎಷ್ಟೋಜನ ಮಾಂಡಲಿಕ ರಾಜರು ಇರುವರು. ಸುಲೋಚನನಿಗೆ ಮುಪ್ಪಿನ ಕಾಲಕ್ಕೆ ನಾನೊಬ್ಬನೇ ಮಗನು ಹುಟ್ಟಲು ಅವನು ನನಗೆ ಕಮಲಾಕ್ಷನೆಂದು ಹೆಸರನ್ನಿಟ್ಟು, ಬಹು ಕಕ್ಕುಲತೆಯಿಂದ ನನ್ನ ರಕ್ಷಣಮಾಡಿ, ನನಗೆ ಸಕಲ ವಿದ್ಯೆಗಳನ್ನು ಕಲಿಸಿದನು. ತಾಯಿ—ತಂದೆಗಳ ಅಚ್ಚೆಯಿಂದ ಉದ್ಧಟತನವು ನನ್ನಲ್ಲಿ ಸೇರಿತು. ಮನಸ್ಸಿಗೆ ಬಂದಂತೆ ನಡೆಯಲಿಕ್ಕೆ ನಾನು ಮೆಚ್ಚಿದವನಾದೆನು. ಅನುರೂಪಳಾದ ಹೆಂಡತಿಯು ಸಿಕ್ಕ ಹೊರತು ಲಗ್ನವಾಗಲಿಕ್ಕಿಲ್ಲೆಂದು ನಾನು ನಿಶ್ಚಯ ಮಾಡಿದ್ದೆನು. ಅರಸನು ಬಹುಜನ ರಾಜಪುತ್ರಿಯರ ಭಾವಪಟಗಳನ್ನು ನನಗೆ ತೋರಿಸಿದರೂ, ನಾನು ಅವನ್ನೆಲ್ಲ ಧಿಕ್ಕರಿಸಿ, ಕಡೆಗೆ ನಾನು ಲಗ್ನವನ್ನೇ ಮಾಡಿಕೊಳ್ಳುವ ದಿಲ್ಲವೆಂದು ಖಂಡಿತವಾಗಿ ಹೇಳಿದೆನು. ಏನು ಮಾಡಿದರೂ ನನ್ನ ಹಟವನ್ನು ಬಿಡದಾದೆನು. ಆಗ ನಾನು ಎಣಿಕೆಗೆ ಬರಬೇಕೆಂದು ಅರಸನು ನನ್ನನ್ನು ಪ್ರತಿಬಂಧದೊಳಗಿರಿಸಿದನು. ಪ್ರತಿಬಂಧದೊಳಗಿದ್ದರೂ ನನಗೆ ಯಾವ ವೈಭವಕ್ಕೂ ಕೊರತೆಯಿದ್ದಿಲ್ಲ. ಸ್ವಾತಂತ್ರ್ಯವೊಂದು ಇಲ್ಲದ್ದರಿಂದ ನನ್ನ ವೈಭವವು ನಿಸ್ಸಾರವಾಗಿ ನಾನು ಕಾರಾಗೃಹದಿಂದ ಪಾರಾಗುವ ಹಂಚಿಕೆಯನ್ನು ಹುಡುಕಹತ್ತಿದೆನು. ಕಡೆಗೂ ನನ್ನ ಮೇಲೆ ತಂದೆಯ ಪ್ರೇಮವು ಬಹಳ ಸಿಟ್ಟಿನಿಂದ ನನ್ನನ್ನು ಪ್ರತಿಬಂಧ ದೊಳಗಿರಿಸಿದ್ದು ಆತನ ಪಶ್ಚಾತ್ತಾಪಕ್ಕೆ ಕಾರಣವಾಯಿತು. ಕಡೆಗೆ ಆತನು ಮಮತೆಯಿಂದ ನನ್ನನ್ನು ಕಾರಾಗೃಹದಿಂದ ಮುಕ್ತನಾಗಮಾಡಿದನು.

ಬ್ರಾಹ್ಮಣ ಶ್ರೇಷ್ಠಾ, ನನ್ನ ತಂದೆಯ ಈ ದಯಾಲುತ್ವವು ನನ್ನ ಅವಿಚಾರದ ಮೂಲಕ ನನ್ನ ದುಃಖಕ್ಕೆ ಕಾರಣವಾಯಿತು. ತಂದೆಯು ನನ್ನನ್ನು ಕಾರಾಗೃಹದಲ್ಲಿಟ್ಟು, ಅಪಮಾನ ಗೊಳಿಸಿದನೆಂಬ ಸಿಟ್ಟಿನಿಂದ ಆತನ ಮನಸ್ಸನ್ನು ನೋಯಿಸುವದಕ್ಕಾಗಿ, ದೇಶಾಂತರಕ್ಕೆ

ಹೋಗಬೇಕೆಂದು ನಾನು ನಿಶ್ಚಯಿಸಿದೆನು. ಒಂದುದಿನ ಬೇಟೆಯ ನೆವದಿಂದ ಕುದುರೆಯನ್ನೇರಿ, ಅರಮನೆಯಿಂದ ಹೊರಬಿದ್ದವನು ತಿರುಗಿ ಮನೆಗೇ ಹೋಗಲಿಲ್ಲ. ದಕ್ಷಿಣದಿಕ್ಕನ್ನು ಹಿಡಿದು ಒಂದೇಸವನೆ ಮಾರ್ಗಕ್ರಮಣ ಮಾಡಿದೆನು. ದುರಭಿಮಾನ–ಮೇಲೆ ಪ್ರಾಯದ ಸೊಕ್ಕು, ಕೇಳುವದೇನು? ಹೊತ್ತು ಮುಳುಗಿದಲ್ಲಿ ಇಳಕೊಳ್ಳುತ್ತ ಇದ್ದದ್ದನ್ನು ಮಾರಿ ಹೊಟ್ಟೆ ಹೊರಕೊಳ್ಳುತ್ತ ನಾನು ಇಪ್ಪತ್ತೈದು ದಿನ ಹಾದಿಯನ್ನು ನಡೆದು ಹಲವು ದೇಶಗಳನ್ನೂ, ಅರಣ್ಯಗಳನ್ನು ದಾಟಿದೆನು. ಆಗ ಒಂದು ಭಯಂಕರವಾದ ಅರಣ್ಯವು ನನಗೆ ಹತ್ತಿತು. ಕೆಲವು ಅಂತರವನ್ನು ಕ್ರಮಿಸಿ ಹೋದಬಳಿಕ ಆ ಅಪರಿಚಿತವಾದ ಅರಣ್ಯದಲ್ಲಿ ಒಂಟಿಗನಾಗಿ ಹೋಗುವಾಗ ಅಲ್ಪಸ್ವಲ್ಪ ಭಯವು ನನ್ನನ್ನು ಬಾಧಿಸಹತ್ತಿತು. ಭಯವೆಂದರೇನೆಂಬದರ ಅನುಭವವಾದದ್ದು ಇದೇ ಮೊದಲೆಂದು ಹೇಳಬಹುದು. ಒಂದು ದಿನ ಆ ಅರಣ್ಯದಲ್ಲಿಯೇ ಮಲಗಿ, ಎರಡನೆಯದಿನ ಸಂಜೆಯವರೆಗೆ ಹಾದಿಯನ್ನು ನಡೆದರೂ ಅರಣ್ಯವು ತೀರಲಿಲ್ಲ. ದ್ವಿಜೋತ್ತಮಾ, ಕಷ್ಟದ ಸುದ್ದಿಯಿಲ್ಲದೆ ಇಪ್ಪತ್ತೆರಡು ವರ್ಷ ಕಬ್ಬಿನಹಾಗೆ ಬೆಳೆದ ನನಗೆ ಇಪ್ಪತ್ತೈದು ದಿನಗಳ ಮಾರ್ಗಾಯಾಸವು ತ್ರಾಸದಾಯಕವಾಯಿತು. ಅರಮನೆಯೊಳಗೆ ಇಪ್ಪತ್ತೆರಡು ವರ್ಷಗಳಲ್ಲಿ ಬಾರದಿದ್ದ ಮಹತ್ವದ ಅನುಭವಗಳು ಪ್ರವಾಸದ ಈ ಇಪ್ಪತ್ತೈದು ದಿನಗಳಲ್ಲಿ ಬಂದು ನಾನು ಮೆತ್ತಗಾದೆನು. ತಾಯಿ–ತಂದೆಗಳ ಹಾಗು ಗುರು–ಹಿರಿಯರ ಹಿತೋಪದೇಶದ ಮಹತ್ವ ಅರಸೊತ್ತಿಗೆಯ ಗೌರವ ಅಪಕ್ವದೆಸೆಯಲ್ಲಿಯ ಸ್ವಾತಂತ್ರ್ಯಾಭಿಲಾಷೆಯ ದುಷ್ಟತನ ಇವು ಮನಸ್ಸಿನಲ್ಲಿ ಬಂದು, ಪಶ್ಚಾತ್ತಾಪದಿಂದ ಮನಸ್ಸಿಗೆ ಬರೆ ಕೊಟ್ಟಂತಾಯಿತು. ರಾತ್ರಿಯು ಬಹಳವಾದದ್ದರಿಂದ ಒಂದು ವಿಶಾಲವಾದ ವೃಕ್ಷದ ಬುಡದಲ್ಲಿ ನಾನು ಕುದುರೆಯನ್ನು ಕಟ್ಟಿ ಅಡ್ಡಾದೆನು. ಆದರೆ ಎರಡುದಿನ ಅನ್ನವಿಲ್ಲದ್ದರಿಂದ ನಿದ್ದೆಬರಲಿಲ್ಲ. ಆರುತಾಸು ರಾತ್ರಿಯಾಯಿತು, ಒಂಬತ್ತು ತಾಸು ಮೀರಿತು, ಕಣ್ಣಿಗೆ ಕಣ್ಣು ಹತ್ತಲಿಲ್ಲ. ಆದರೆ ಯಾವಾಗ ನಿದ್ದೆಹತ್ತಿತೋ ತಿಳಿಯದು ಬೆಳಗಾಗಿ ಎರಡು ತಾಸು ಹೊತ್ತು ಏರಿದಮೇಲೆ ಎದ್ದು ನೋಡುತ್ತೇನೆ, ಕುದುರೆಯಿಲ್ಲ ಧನುರ್ಬಾಣಗಳಿಲ್ಲ ವಸ್ತ್ರಾಭರಣಗಳಿಲ್ಲ; ಉಟ್ಟವಸ್ತ್ರವಲ್ಲದೆ ಉಳಿದದ್ದೇನೂ ನನ್ನ ಕಣ್ಣಿಗೆ ಬೀಳಲಿಲ್ಲ!

ದ್ವಿಜೋತ್ತಮಾ, ಆಗಿನ ನನ್ನ ಮನಸ್ಸಿನ ಸ್ಥಿತಿಯನ್ನು ಏನು ವರ್ಣಿಸಲಿ! ಈ ಮೊದಲೆ ನನ್ನ ಆ ನಿರಂಕುಶ ಪ್ರಭುತ್ವದ ಮನಸ್ಸಿಗೆ ಕೊಟ್ಟಿದ್ದ ಬರೆಗೆ, ಈಗ ಹುಣ್ಣು ಆದಂತಾಗಿ ಅದರ ನೋವು ಹೆಚ್ಚಿತು. ಕ್ಷುಧೆಯ ಉಪದ್ರವದಿಂದಲೂ, ಮಾರ್ಗಾಯಾಸದಿಂದ ಇಂದ್ರಿಯಗಳ ವ್ಯಾಪಾರಗಳು ಸಾಗದ ಹಾಗಾದದ್ದರಿಂದಲೂ, ಸಹಾಯಕಾರಿಗಳಾದ ಧನುರ್ಬಾಣಾಶ್ವಗಳು ಅದೃಶ್ಯವಾದದ್ದರಿಂದಲೂ ಮನಸ್ಸು ನಿರಾಶೆಯನ್ನು ಹೊಂದಿ, ಜೀವವು ತಳಮಳಿಸಹತ್ತಿ ನಾನು ವಿಚಾರಶೂನ್ಯನಾದೆನು. ಕೂಡಲೆ ನನಗೆ ತಾಯಿ–ತಂದೆಗಳ ನೆನಪಾಗಿ ಕಣ್ಣೀರುಗಳು ಉದುರಿದವು. ಕ್ರೂರ ಮೃಗಗಳ ಭಯಂಕರವಾದ ಶಬ್ದಗಳು ಕಿವಿಗೆ ಬೀಳಲು, ಧನುರ್ಬಾಣಗಳು ಅದೃಶ್ಯವಾದದ್ದರ ಸ್ಮರಣವಾಗಿ, ನಾನು ಭಯದಿಂದ ಹೌಹಾರಿ ಕುಳಿತುಕೊಂಡೆನು. ಹಣ್ಣುಗಳನ್ನಾದರೂ ತಿಂದು ಕ್ಷುಧೆಯನ್ನು ಶಾಂತಮಾಡಿಕೊಳ್ಳಬೇಕೆಂಬ ವಿಚಾರವು

ಒಮ್ಮೊಮ್ಮೆ ಮನಸ್ಸಿನಲ್ಲಿ ಬರುವದು; ಆದರೆ ಮಾಡಲೇನು? ನಾನು ಕುಳಿತುಕೊಂಡಿದ್ದ ಅರಣ್ಯ ಪ್ರದೇಶವು ಉಷ್ಣಕಟಿಬಂಧದಲ್ಲಿದ್ದ ಮೂಲಕ, ಅಲ್ಲಿಯ ಫಲಯುಕ್ತ ವೃಕ್ಷಗಳು ಮುಗಿಲಿಗೆ ಮುಟ್ಟಿದ್ದವು. ಅವುಗಳನ್ನು ಏರುವ ಸಾಮರ್ಥ್ಯವೂ, ರೂಢಿಯೂ ನನಗಿದ್ದಿಲ್ಲ. ಯುಕ್ತಾಯುಕ್ತಗಳ ವಿಚಾರ ಮಾಡದೆ ಯಾವದೊಂದು ಕೆಲಸಕ್ಕೆ ಕೈಹಾಕುವ ಅಪ್ರಬುದ್ಧನ ಸ್ಥಿತಿಯು, ಹೇಗಾಗುವದೆಂಬದರ ಅನುಭವವನ್ನು ಪ್ರಾರಬ್ಧವು, ಯೋಗ್ಯ ವಯಸ್ಸಿನಲ್ಲಿ ನನಗೆ ಒದಗಿಸಿಕೊಟ್ಟಿತು. ಈ ಪ್ರಕಾರ ನಾನು ಹಸಿವೆ—ಬಾಯಾರಿಕೆಗಳಿಂದಲೂ, ಹಾದಿಯ ಕಷ್ಟದಿಂದಲೂ, ಆಪ್ತೇಷ್ಟರ ವಿಯೋಗ ದುಃಖದಿಂದಲೂ ಬಳಲಿದವನಾಗಿ ಚಿಂತೆಮಾಡುತ್ತ ಮುಂದಿನ ಭೂಪ್ರದೇಶದಲ್ಲಿ ನಿರ್ಹೇತುಕನಾಗಿ ದೃಷ್ಟಿಯನ್ನಿಟ್ಟು ಎವೆಯಿಕ್ಕದೆ ನೋಡುತ್ತಿರಲು, ನೆಲಕ್ಕೆ ಹೊಂದಿ ಕಲ್ಲಿನ ಒಂದು ಸಣ್ಣ ಬಾಗಿಲು ನನಗೆ ಕಾಣಿಸಹತ್ತಿತು. ಅದರ ಸುತ್ತಲೂ ಗಿಡಗಂಟೆಗಳು ದಟ್ಟವಾಗಿ ಬೆಳೆದದ್ದರಿಂದ ನೋಡುವವರ ಕಣ್ಣಿಗೆ ಅದು ಬೇಗನೆ ಕಾಣುವ ಹಾಗಿದ್ದಿಲ್ಲ. ನಾನು ಕುಳಿತ ಸ್ಥಳವನ್ನು ಬಿಟ್ಟು ಆ ಬಾಗಿಲ ಹತ್ತರ ಹೋಗಿ ಪರೀಕ್ಷಿಸಿದೆನು. ಅದರ ಗರ್ಭವು ಒಬ್ಬ ಮನುಷ್ಯನು ಪ್ರಯಾಸದಿಂದ ಒಳಗೆ ಹೋಗುವಷ್ಟು ವಿಸ್ತಾರವಾಗಿತ್ತು ಮನುಷ್ಯನಿಗೆ ಕಷ್ಟವು ದುಸ್ಸಹವಾಯಿತೆಂದರೆ, ಜೀವವು ಬೇಸರವಾಗುತ್ತದೆ. ಅದರಂತೆ ನಾನಾದರೂ ಜೀವಕ್ಕೆ ಬೇಸತ್ತು ಅಪರಿಚಿತವೂ, ಭಯಂಕರವೂ ಆದ ಗುಹೆಯನ್ನು ಹೋಗುವದಕ್ಕೆ ಯತ್ನಿಸಿದೆನು; ಆದರೂ "ಜೀವವು ಬೆಲ್ಲಕ್ಕಿಂತ ಸವಿ" ಎಂಬ ನುಡಿಯಂತೆ ನನ್ನ ಮನಸ್ಸು ಈ ಘೋರಕೃತ್ಯಕ್ಕೆ ತೊಡಗುವದಕ್ಕಾಗಿ ಒಮ್ಮೊಮ್ಮೆ ಹಿಂಜರಿಯುತ್ತಿತ್ತು ಕಡೆಗೆ ಅದನ್ನು ದೃಢಪಡಿಸಿ ಗುಹೆಯಲ್ಲಿ ಹಾರಿಕೊಳ್ಳುವದನ್ನು ನಿಶ್ಚಯಿಸಿದೆನು.

ವಿಪ್ರವರ್ಯಾ, ಆ ಕಾಲದಲ್ಲಿ ನನ್ನ ಸ್ಥಿತಿಯು ಹೇಗಾಗಿರಬಹುದೆಂಬದರ ಕಲ್ಪನೆಯನ್ನು ನೀನೇ ಮಾಡು. ನನ್ನ ಮಾತಾ–ಪಿತೃಗಳೂ, ಬಂಧು–ಮಿತ್ರರೂ, ರಾಜೈಶ್ವರ್ಯಗಳೂ ಕಣ್ಣಮುಂದೆ ಕಟ್ಟಿದಂತಾಗಿ ದುಃಖದಿಂದ ನನ್ನ ಕುತ್ತಿಗೆಯ ಶಿರಗಳು ಉಬ್ಬಿದ್ದವು. ನೇತ್ರಗಳಿಂದ ಅಶ್ರುಗಳು ಹೊರಚಲ್ಲಹತ್ತಿದವು. ಆದರೂ ನಾನು ದೃಢನಿಶ್ಚಯದಿಂದ ಗಂಡುಗಚ್ಚೆಯನ್ನು ಹಾಕಿಕೊಂಡು, ಮೊದಲು ಗುಹೆಯಲ್ಲಿ ಹಣಿಕಿ ನೋಡಿದೆನು; ಅಲ್ಲಿ ಕತ್ತಲು ವಿಶೇಷವಾಗಿದ್ದದ್ದರಿಂದ ನನಗೆ ಏನೂ ಕಾಣಿಸಲಿಲ್ಲ. ಕಡೆಗೆ ಜೀವದ ಹಂಗುದೊರೆದು, ತಾಯಿ–ತಂದೆಗಳನ್ನು ಕಡೆಯಸಾರೆ ನೆನಿಸಿ, ಜಗದ್ರಕ್ಷಕನಾದ ಪರಮೇಶ್ವರನ ಮೇಲೆ ನಂಬಿಗೆಯನ್ನಿಟ್ಟು, ಗವಿಯಲ್ಲಿ ಹಾರಿದೆನು; ಆದರೆ ತಳವು ಬಹಳ ತಗ್ಗು ಇಲ್ಲದ್ದರಿಂದ ನನಗೇನು ಅಷ್ಟು ಪೆಟ್ಟು ಹತ್ತಲಿಲ್ಲ. ಪೂಜ್ಯನೆ, ಇಂಥ ಸಾಹಸ ಕೃತ್ಯವನ್ನು ಮಾಡಲಿಕ್ಕೆ ಕಾರಣವೇನೆಂಬದನ್ನು ಈಗ ನಾನು ಹೇಳಲಾರೆನು. ಮುಂದಿನ ಸಂಗತಿಯನ್ನು ಕೇಳಿದ ಬಳಿಕ, ಕರ್ಮ–ಧರ್ಮ ಸಂಯೋಗದಿಂದಲೇ ಇಂಥ ಸಾಹಸ ಕೃತ್ಯವನ್ನು ಮಾಡಲಿಕ್ಕೆ ಮನಸ್ಸು ಹರಿಯಿತೆಂದು ನಿನಗೇ ತಿಳಿಯಬಹುದು. ಮುಂದೆ ಗವಿಯಲ್ಲಿ ನಾಲ್ಕೂ ಕಡೆಗೆ ದಿಟ್ಟಿಸಿ ನೋಡುತ್ತಿರಲು, ಈಶಾನ್ಯ ಮೂಲೆಯಲ್ಲಿ ಒಂದು ಬಾಗಿಲು ಇದ್ದಂತೆ ನನಗೆ ತೋರಿತು. ಆಮೇಲೆ ಆ ಬಾಗಿಲೊಳಗಿಂದ ಸುಮಾರು 500 ಮೊಳ ಹೋದ ಮೇಲೆ ನನಗೆ ಮತ್ತೊಂದು ಸುಂದರವೂ, ಭವ್ಯವೂ ಆದ ಬಾಗಿಲೂ,

ಅದನ್ನು ದಾಟಿಹೋದ ಮೇಲೆ ವಿಸ್ತಾರವೂ, ಮನೋಹರವೂ ಆದ ತೋಟವೂ ನನಗೆ ತೋರಿದವು. ಗುಹೆಯೊಳಗೆ ಹಾರಿದಾಗಿನಿಂದ ಕಡೆಯ ಬಾಗಿಲಿಗೆ ಹೋಗುವವರೆಗೆ ಪ್ರಕಾಶವೇ ಇದ್ದಿಲ್ಲೆಂದು ಹೇಳಬಹುದು. ಇಂಥ ಕತ್ತಲೆಯಲ್ಲಿ ಒಂಬೈನೂರು ಮೊಳ ಹಾದಿಯನ್ನು ಹೇಗೆ ಹೋಗಿರ ಬಹುದೆಂಬದರ ಆಶ್ಚರ್ಯವು ನನಗೇ ಆಗುತ್ತದೆ. ದುರ್ನಿವಾರವಾದ ಪ್ರಾಣಸಂಕಟ ಒದಗಿದ್ದರಿಂದ, ನಾನು ತಲೆ ಮಾಸಿ ಕುಳಿತುಕೊಂಡಂತೆ ಆಗಿತ್ತು ಇರಲಿ ನಾನು ತೋಟದೊಳಗೆ ಹೋಗಲು ಸೂರ್ಯನು ಮಧ್ಯಾಕಾಶಕ್ಕೆ ಏರಿದ್ದರಿಂದ ಅವನ ಪ್ರಚಂಡ ಕಿರಣಗಳು ಕಣ್ಣುಗಳನ್ನು ಕುಕ್ಕಿದವು; ನನಗೆ ವಿಚಿತ್ರವಾದ ಆನಂದವಾಯಿತು. ನಾನು ನಿರ್ಭಯದಿಂದ ತೋಟವನ್ನು ಹೊಕ್ಕೆನು.

ವಿಪ್ರವರ್ಯಾ, ಆ ಸ್ಥಾನದ ಮಹಾತ್ಮವನ್ನು ಏನು ಹೇಳಲಿ? ಗುಹೆಯ ಭಯಂಕರತೆ ತೋಟದ ರಮಣೀಯತ್ವ ಇವನ್ನು ಮನಸ್ಸಿನಲ್ಲಿ ತಂದರೆ ಈ ಎಲ್ಲ ಕೃತಿಯು ಅಮಾನುಷ ವೆಂದು ನಿಶ್ಚಯವಾಗುವದು. ಆ ಸ್ಥಾನವು ಹೊರಗಿನಿಂದ ನೋಡುವವರಿಗೆ ಎಂದೂ ಕಾಣುವಹಾಗಿದ್ದಿಲ್ಲ. ಅದು ಒಂದು ಭಯಂಕರವಾದ ಕಂದರದಲ್ಲಿ ನಿರ್ಮಿಸಿದ್ದಾಗಿದ್ದು, ಅದನ್ನು ಪ್ರವೇಶಿಸುವ ಮಾರ್ಗವು ಮೇಲೆ ಹೇಳಿದಂತೆ ಭಯಂಕರವಾಗಿತ್ತು, ಸುತ್ತು ಮುತ್ತು ಅಭೇದ್ಯವಾದ ಅರಣ್ಯವಿತ್ತು, ನನ್ನ ಪ್ರವೇಶವಾದರೂ ಅಲ್ಲಿ ಹ್ಯಾಗಾಯಿತೆಂಬದರ ಗೂಢವೇ ತಿಳಿಯುವಹಾಗಿಲ್ಲ. ದೈವವಶಾತ್ತಾಗಿ ಆ ಸ್ಥಾನವನ್ನು ಪ್ರವೇಶಿಸಿದ ನಾನು ತೋಟದ ರಮಣೀಯತ್ವಕ್ಕಾಗಿ ದಂಗುಬಡೆದು ನಿಂತುಕೊಂಡೆನು. ಆ ತೋಟದಲ್ಲಿ ಓಡಾಡುವದಕ್ಕಾಗಿ ಮಾರ್ಗಗಳನ್ನು ಬಿಳೀ ಸಂಗಮವರೀ ಕಲ್ಲುಗಳಿಂದ ಮಾಡಿದ್ದರು. ವಿಚಿತ್ರವಾದ ಸೌಂದರ್ಯವುಳ್ಳ ಸಣ್ಣ ಸಣ್ಣ ಗಿಡಗಳು ಸಮಾಂತರದಿಂದ ವ್ಯವಸ್ಥಿತವಾಗಿ ಹಚ್ಚಲ್ಪಟ್ಟಿದ್ದವು. ಆ ಗಿಡಗಳಿಗೆ ಮಡಿಗಳನ್ನು ಕೆಂಪು, ಹಳದಿ, ಹಸರು ಮೊದಲಾದ ಬಗೆಬಗೆಯ ಬಣ್ಣಗಳ ಕಲ್ಲುಗಳಿಂದ ಬಹು ಮನೋಹರವಾಗಿ ಮಾಡಿದ್ದರು. ನಡನಡುವೆ ಮಧುರವಾದ ಫಲಗಳ ದೊಡ್ಡ ದೊಡ್ಡ ಗಿಡಗಳು ಮುಗಿಲಿಗೆ ಮುಟ್ಟಿ ಬೆಳೆದಿದ್ದವು. ದ್ರಾಕ್ಷ, ಸೂಜಿಮಲ್ಲಿಗೆ, ದುಂಡುಮಲ್ಲಿಗೆ, ಜಾಜಿಮಲ್ಲಿಗೆ ಮುಂತಾದ ಲತೆಗಳ ಮಂಟಪಗಳು ಬಹು ಮನೋಹರವಾಗಿ ಕಂಗೊಳಿಸುತ್ತಿದ್ದವು. ಹಣ್ಣಾದ ಎಲೆಗಳನ್ನೂ ಒಣಗಿದ ಟೊಂಗೆಗಳನ್ನೂ ಹಸಿಯಿಲ್ಲದ ಮಡಿಗಳನ್ನೂ ಆ ತೋಟದಲ್ಲಿ ಕಾಣುವದು ದುರ್ಲಭವು. ಮಧ್ಯದಲ್ಲಿ ಅಲ್ಲಲ್ಲಿ ಹಾರುತ್ತಿರುವ ಕಾರಂಜಿಗಳ ತುಂತುರ್ವನಿಗಳಿಂದ ವ್ಯಕ್ತವಾಗುವ ಇಂದ್ರಧನುಷ್ಯಗಳು ನೋಡುವವರ ಮನಸ್ಸನ್ನು ಬಹಳವಾಗಿ ರಮಿಸುವವು. ಬಂದುಂಬುವದಕ್ಕಾಗಿ ಭ್ರಮರಗಳು ಅಲ್ಲಿ ತಂಡತಂಡವಾಗಿ ಸಂಚರಿಸುವವು. ವಿಚಿತ್ರವಾದ ವರ್ಣಗಳುಳ್ಳ ಸುಂದರ ಪಕ್ಷಿಗಳು ಮಧುರ ಶಬ್ದಮಾಡುತ್ತಿದ್ದವು: ಅಲ್ಲಲ್ಲಿ ಕುಳಿತುಕೊಳ್ಳುವದಕ್ಕಾಗಿ ವಿಚಿತ್ರಾಕಾರದ ಆಸನಗಳೂ ಪೀಠಗಳೂ ನಿರ್ಮಿಸಲ್ಪಟ್ಟಿದ್ದವು. ಎಲ್ಲ ಕಡೆಗೆ ಪುಷ್ಪಗಳ ಸುಗಂಧವು ಇಡಗಿತ್ತು, ಗಾಳಿಯು ಆ ಸುಗಂಧದ ಭಾರದಿಂದ ದಣಿದು ಹೋಗಿರುವಂತೆ ಮೆಲ್ಲನೆ ಸುಳಿಯುತ್ತಿತ್ತು. ದುಃಖದಿಂದ ಸಂತಪ್ತನಾಗಿದ್ದ ನಾನು ಹಸಿವೆ-ನೀರಡಿಕೆಗಳನ್ನು ಮರೆತು ಚಕಿತನಾಗಿ ಆ ವನದ ಸೊಬಗನ್ನು ನೋಡಹತ್ತಿದೆನು.

ದ್ವಿಜೋತ್ತಮಾ, ಆ ತೋಟವನ್ನು ಎಷ್ಟು ನೋಡಿದರೂ ನನ್ನ ಮನಸ್ಸು ದಣಿಯ ಲೊಲ್ಲದು. ಕಡೆಗೆ ಬಹು ಪ್ರಯಾಸದಿಂದ ಮುಂದಕ್ಕೆ ಸಾಗಿ, ಸ್ವಲ್ಪ ದೂರ ಹೋದಕೂಡಲೆ ಒಂದು ರಮ್ಯವಾದ ಸರೋವರವು ನನ್ನ ಕಣ್ಣಿಗೆ ಬಿತ್ತು. ಅದರ ದಂಡೆಗಳು ಶುಭ್ರವಾದ ಉಸುಬಿನ ದಿನ್ನೆಗಳಿಂದ ಮನೋಹರವಾಗಿದ್ದು, ಆ ದಿನ್ನೆಗಳ ಮೇಲೆ ಹಂಸಪಕ್ಷಿಗಳ ಹೆಜ್ಜೆಗಳು ಸಾಲ್ಗೊಂಡು ಮೂಡಿದ್ದವು. ಆ ಸರೋವರದೊಳಗಿನ ನೀರು ಬಹು ನಿರ್ಮಲವಾಗಿದ್ದದ್ದರಿಂದ, ಅದರ ತಳದೊಳಗಿನ ಉಸುಬು–ಹರಳುಗಳು ಸ್ಪಷ್ಟವಾಗಿ ಕಾಣುತ್ತಿದ್ದವು. ಸೂರ್ಯನು ನೆತ್ತಿಯ ಮೇಲೆ ಬಂದಿದ್ದಾನೆ; ಆತನ ತಾಪಕ್ಕೆ ಪಕ್ಷಿಗಳು ತಮ್ಮ ಕಲಕಲಾಟವನ್ನು ನಿಲ್ಲಿಸಿ, ದಟ್ಟವಾದ ಎಲೆಗಳುಳ್ಳ ಟೊಂಗೆಗಳ ಮಧ್ಯದಲ್ಲಿ ಕುಳಿತುಕೊಳ್ಳ ತೊಡಗಿವೆ; ಪಾರಿವಾಳ ಮೊದಲಾದ ಕೆಲವು ಪಕ್ಷಿಗಳು ನೀರಲ್ಲಿ ಮೈ ತೋಯಿಸಿ ಕೊಡವಿ ಬಿಸಿಲು ಕಾಯಿಸಿಕೊಳ್ಳಹತ್ತಿವೆ; ದೂರ ಅತ್ತ ಕಡೆಯಲ್ಲಿ ಚಿಗರೆ, ಸಾರಂಗ ಮೊದಲಾದವು ನೀರು ಕುಡಿಯತೊಡಗಿವೆ; ಹಂಸ, ಬೆಳ್ಳಕ್ಕಿ, ನೀರಗೋಳಿ ಮೊದಲಾದವುಗಳ ಜಲಕ್ರೀಡೆಗಳು ನಡೆದವೆ; ಸರೋವರದ ದಂಡೆಗುಂಟ ಗಿಡಗಳ ಕಿರಿ ನೆರಳು ಬಿದ್ದವೆ; ಇಂಥ ಮನೋಹರವಾದ ನೋಟದಿಂದ ಸಂತುಷ್ಟನಾದ ನಾನು, ಆತುರದಿಂದ ಸರೋವರದಲ್ಲಿ ಕಾಲನ್ನಿಟ್ಟೆನು. ಮಧ್ಯಾಹ್ನದಲ್ಲಿಯೂ ಅದರ ನೀರು ತಂಪಾಗಿದ್ದವು. ಸ್ಫಟಿಕದಂತೆ ನಿರ್ಮಲವಾದ ಆ ಸರೋವರದ ನೀರಿನ ಸವಿಯನ್ನು ವರ್ಣಿಸ ಲಾರೆನು. ನಾನು ಆ ಸರೋವರದಲ್ಲಿ ಸ್ನಾನಮಾಡಿ ಉಟ್ಟದ್ದೊಂದ ವಸ್ತ್ರವನ್ನು ಹೇಗೋ ನಿರ್ಮಲವಾಗಿ ಒಗಿದು ಒಣಗಿಸಿ ಉಟ್ಟುಗೊಂಡು ಅಲ್ಲೇ ಸಮೀಪದಲ್ಲಿ ಕೈಗೆ ನಿಲುಕುವಂತೆ ಇದ್ದ ಕೆಲವು ಹಣ್ಣುಗಳನ್ನು ತಿಂದು ಕ್ಷುಧಾ ಶಾಂತಿಯನ್ನು ಮಾಡಿಕೊಂಡೆನು. ಆ ತೋಟದಲ್ಲಿ ಹೊಕ್ಕು ನಾಲ್ಕಯ್ದು ತಾಸುಗಳಾದರೂ, ಮನುಷ್ಯ ಸಂಚಾರವಿಲ್ಲದ್ದನ್ನು ನೋಡಿ, ನನಗೆ ಪರಮಾಶ್ಚರ್ಯವಾಯಿತು. ಕ್ಷುಧಾ ಶಾಂತಿಯಾದ್ದ ರಿಂದಲೂ, ಮೂರು ನಾಲ್ಕು ದಿನಗಳಿಂದ ಕಣ್ತುಂಬ ನಿದ್ದೆಯಿಲ್ಲದ್ದರಿಂದಲೂ, ಮನಸ್ಸಿನ ಸಂತಾಪವು ಕೆಲಮಟ್ಟಿಗೆ ಕಡಿಮೆಯಾದದ್ದ ರಿಂದಲೂ, ಕಷ್ಟಗಳ ಪರಂಪರೆಯಿಂದ ಎದೆಯು ಕೆಚ್ಚುಗಟ್ಟಿದ್ದರಿಂದಲೂ ನನಗೆ ತೂಕಡಿಕೆ ಬರಹತ್ತಿತು. ಹಾಸಿಕೊಳ್ಳಲಿಲ್ಲ, ಹೊದ್ದುಕೊಳ್ಳಲಿಲ್ಲ! ನಾನು ಅಲ್ಲಿಯೇ ಸರೋವರದ ದಂಡೆಯ ಮೇಲಿರುವ ಒಂದು ಸುಂದರವಾದ ಶಿಲಾಮಂಟಪಕ್ಕೆ ಹೋಗಿ, ಅದರ ತಂಪಾದ ಹಾಸುಗಲ್ಲ ಮೇಲೆ ಸುಖವಾಗಿ ಮಲಗಿದೆನು. ಮುಂದೆ ಸ್ವಲ್ಪ ಹೊತ್ತಿನಲ್ಲಿಯೇ ನನಗೆ ಗಾಢ ನಿದ್ರೆಯು ಹತ್ತಿತು!

''ಮೆತ್ತಗೆ ಮಾಡಿ ಮಲಗು'' ಎಂಬ ಮಾತಿನ ನಿಜವಾದ ಅರ್ಥದ ಅನುಭವವು ನನಗೆ ಆಗಿದ್ದಿಲ್ಲ, ದಣಿದ ಮನುಷ್ಯನಿಗೆ ಗಡದ್ದು ನಿದ್ದೆ ಹತ್ತುತ್ತದೆಂಬದನ್ನು ನಾನು ಅಂದು ಮನಗಂಡೆನು. ಮಲಗಿದ್ದೊಂದೇ ಎಚ್ಚರವು; ಮುಂದೆ ಸುಮಾರು ನಾಲ್ಕೈದು ತಾಸುಗಳಾದ ಬಳಿಕ ಎಚ್ಚತ್ತು ನೋಡಲು, ನನಗೆ ಶಿಲಾಮಂಟಪವೂ, ಸರೋವರವೂ, ತೋಟವೂ ಒಂದೂ ಕಾಣಿಸಲಿಲ್ಲ, ಆಗ ನಾನು ಚನ್ನಾಗಿ ಕಣ್ಣುಗಳನ್ನು ತೆರೆದು ನಾಲ್ಕೂ ಕಡೆಗೆ ದಿಟ್ಟಿಸಿ ನೋಡಿ, ನಾನೊಂದು ಭವ್ಯವಾದ ಮಂದಿರದಲ್ಲಿ ಮಲಗಿರುವೆನೆಂದು ಮನಗಂಡೆನು!

ಬ್ರಾಹ್ಮಣಶ್ರೇಷ್ಠಾ, ನನಗೆ ಹುಚ್ಚು ಹಿಡಿದುಹೋಯಿತು. ಆಗ ಸಂಧ್ಯಾಕಾಲವಿದ್ದದ್ದರಿಂದ ಆ ಮಂದಿರದಲ್ಲಿ ವಿದ್ಯುಜ್ಜ್ಯೋತಿಗಳು ಅಲ್ಲಲ್ಲಿ ಉರಿಯುತ್ತಿದ್ದವು. ನಾನು ಮಲಗಿಕೊಂಡಿದ್ದ ಮಂಚಕ್ಕೆ ಚಿನ್ನದ ತಗಡು ಕೂಡ್ರಿಸಿ, ನಡುನಡುವೆ ಬೆಲೆಯುಳ್ಳ ರತ್ನಗಳನ್ನು ಕೆಚ್ಚಿದ್ದರು. ಮಂದಿರದ ಮಾಳಿಗೆಯ ಒಳಮುಗ್ಗಲಲ್ಲಿ ಸುವರ್ಣದ ಚಿತ್ರ–ವಿಚಿತ್ರವಾದ ಬಳ್ಳಿಗಳು, ಎಲೆ–ಹೂ–ಕಾಯಿಗಳಿಂದ ಮನೋಹರವಾಗಿ ಒಪ್ಪುತ್ತಿದ್ದವು. ಗೋಡೆಗಳು ಬಗೆಬಗೆಯ ಸುಂದರ ಚಿತ್ರಗಳಿಂದ ರಮ್ಯವಾಗಿ ತೋರುತ್ತಿದ್ದವು. ನೆಲಕ್ಕೆ ಚಿತ್ರ ವಿಚಿತ್ರವಾದ ರತ್ನಗಂಬಳಿಯನ್ನು ಹಾಸಿ, ಕೂಡ್ರುವದಕ್ಕಾಗಿ ಅಲ್ಲಲ್ಲಿ ರತ್ನಕೆಚ್ಚಿದ ಸುಂದರವಾದ ಆಸನಗಳನ್ನು ವ್ಯವಸ್ಥೆಯಿಂದ ಇಟ್ಟಿದ್ದರು. ವಿಪ್ರವರ್ಯಾ, ಆ ಮಂದಿರದ ವರ್ಣನೆಯನ್ನು ಎಷ್ಟುಮಾಡಿದರೂ ಸ್ವಲ್ಪವೇ ಅದೆ. ಇಂದ್ರಭವನಕ್ಕೆ ಸರಿಯಾದ ಮಂದಿರದಲ್ಲಿ, ಇದೇನು ವಿಚಿತ್ರವೆಂದು ವಿಚಾರಶೂನ್ಯನಾಗಿ ದಂಗುಬಡಿದು ನಾನು ಕುಳಿತಿರಲು, ಎದುರಿಗೆ ನನ್ನ ಧನುಸ್ಸು ಕಣ್ಣಿಗೆ ಬಿತ್ತು ಅದರ ಬಳಿಯಲ್ಲಿಯೇ ಬಾಣಗಳಿಂದ ತುಂಬಿದ ನನ್ನ ಬತ್ತಳಿಕೆಯು ಇಟ್ಟಿತ್ತು, ನನ್ನ ಎಲ್ಲ ಉಡಿಗೆ–ತೊಡಿಗೆಗಳು, ಆಭರಣಗಳು ಅಲ್ಲಿ ಇದ್ದವು! ಅಹಹಾ! ನಾನು ಮೃದುವಾದ ಹಾಸಿಗೆಯ ಮೇಲೆ ಕುಳಿತಿದ್ದೇನೆ, ಸ್ವಚ್ಛವಾದ ಪ್ರಕಾಶವು ಬಿದ್ದದೆ, ನೋಡಿದತ್ತೆಲ್ಲ ರತ್ನಗಳು ಲಕಲಕನೆ ಹೊಳೆದು ಕಣ್ಣು ಕುಕ್ಕುತ್ತವೆ, ಅಡವಿಯಲ್ಲಿ ಕಳೆದು ಹೋಗಿದ್ದ ನನ್ನ ಧನುರ್ಬಾಣಗಳೂ, .ವಸ್ತ್ರಾಭರಣಗಳೂ ಎದುರಿಗೆ ಇಟ್ಟಿವೆ, ಇಷ್ಟೆಲ್ಲ ಇದ್ದರೂ ಜನರ ಸುಳುವೇ ಇಲ್ಲ! ಒಮ್ಮಿಂದೊಮ್ಮೆ ಮಂದಿರದಲ್ಲಿ ನನ್ನ ಪ್ರವೇಶವು ಹೇಗಾಯಿತೆಂಬದು ನನಗೆ ತಿಳಿಯಲೊಲ್ಲದು; ಅರಣ್ಯದಲ್ಲಿ ಕಳೆದು ಹೋಗಿದ್ದ ನನ್ನ ಪದಾರ್ಥಗಳು ತಾವಾಗಿ ಹೇಗೆ ಬಂದವೆಂಬದು ಗೊತ್ತಾಗಲೊಲ್ಲದು; ಅಂದಬಳಿಕ ಮನುಷ್ಯನು ಬ್ರಮಿಷ್ಟನಾಗಲಿಕ್ಕೆ ಇದಕ್ಕೂ ಹೆಚ್ಚಿಗೆ ಏನು ಬೇಕು? ಆಗ ನಾನು ಹುಚ್ಚನಂತೆ ನನ್ನ ಕಿವಿಯನ್ನು ನಾನೇ ಹಿಂಡಿಕೊಂಡೆನು. ಮಂಚದ ಮೇಲೆ ಕುಳಿತವನು ದಿಗ್ಗನೆ ಎದ್ದು ಭ್ರಮಿಷ್ಟನಂತೆ ತಿರುಗಾಡಿದೆನು. ಎದುರಿಗೆ ಇಟ್ಟಿದ್ದ ನನ್ನ ಧನುಸ್ಸನ್ನು ತಕ್ಕೊಂಡು ಅದಕ್ಕೆ ಬಾಣಗಳನ್ನು ಹೂಡಿ ಕಿವಿಯವರೆಗೆ ಜಗ್ಗಿ ಯಾವ ಉದ್ದೇಶವೂ ಇಲ್ಲದೆ ಕಿಡಿಕಿಯೊಳಗಿಂದ ಬೈಲಿಗೆ ಹೊಡೆಯ ಹತ್ತಿದೆನು. ಇದೇನು ಭೂತ ಚೇಷ್ಟೆಯೋ, ಸ್ವಪ್ನವೋ, ನನಗೆ ಹುಚ್ಚು ಹಿಡಿಯಿತೋ, ನಿಜವಾಗಿಯೇ ಇಂಥ ವೈಭವವು ನನಗೆ ಪ್ರಾಪ್ತವಾಯಿತೋ ಇವೇ ಮೊದಲಾದ ವಿಚಾರಗಳ ಗಲಿಬಿಲಿಯಿಂದ, ಏನೂ ತಿಳಿಯದೆ ನಾನು ಮೂಢನಾಗಿ ಸುಮ್ಮನೆ ಕುಳಿತುಬಿಟ್ಟೆನು; ಆದರೆ ಆ ಮಂದಿರದಲ್ಲಿಯ ಸುವ್ಯವಸ್ಥೆ, ಸ್ವಚ್ಛತೆ, ಪದಾರ್ಥಗಳ ಉತ್ತಮವಾದ ರಚನೆ ಇವುಗಳನ್ನು ಮನಸ್ಸಿನಲ್ಲಿ ತಂದರೆ, ಇದೇ ಈಗ ಇಲ್ಲಿ ಮನುಷ್ಯರು ಇದ್ದರೆಂಬಂತೆ ನನಗೆ ತೋರುತ್ತಿತ್ತು.

ಈ ಪ್ರಕಾರ ನಾನು ವಿಚಾರಮಗ್ನನಾಗಿರಲು, ಅಕಸ್ಮಾತ್ತಾಗಿ ಒಬ್ಬ ಸ್ತ್ರೀಯು ಅಲ್ಲಿಗೆ ಬಂದಳು. ಕೂಡಲೆ ನನ್ನ ಮೈ ಜುಮ್ಮೆಂದು ಕೂದಲುಗಳು ನೆಟ್ಟಗಾದವು. ಭಯದಿಂದ ನಾನು ಕಣ್ಣುಗಳನ್ನು ಮುಚ್ಚಿದೆನು. ಅಷ್ಟರಲ್ಲಿ ನನ್ನ ಮನಸ್ಸು ಸ್ವಲ್ಪ ಸ್ಥಿರವಾಗಲು, ನಾನು ಧೈರ್ಯತಾಳಿ ಕಣ್ಣು ತೆರೆದು ಮಂಚದ ಮೇಲೆ ಸುಮ್ಮನೆ ಕುಳಿತುಕೊಂಡೆನು. ನನ್ನನ್ನು ನೋಡಿ ಆ ಸ್ತ್ರೀಯೂ

ಬೆರಗಾಗಿರುವಳೆಂಬದನ್ನು ಅವಳ ಮುಖಚರ್ಯವು ಹೇಳುತ್ತಿತ್ತು. ನಮ್ಮಿಬ್ಬರ ಏಕ ದೃಷ್ಟಿಯಾಗಲು, ಅವಳು ಮುಂದುಗಾಣದೆ ಸುಮ್ಮನೆ ನಿಂತುಕೊಂಡಳು. ಆಗ ನಾನು ಆ ಸ್ತ್ರೀಯನ್ನು ಕುರಿತು—ಅಮ್ಮಾ ನೀವು ಯಾರು? ಈ ಮಂದಿರವು ಯಾರದು? ಇಲ್ಲಿಗೆ ನಾನು ಹೇಗೆ ಬಂದೆನು? ಎಂದು ಪ್ರಶ್ನೆ ಮಾಡಲು, ಆ ಸ್ತ್ರೀಯು—ಯಕ್ಷ—ಗಂಧರ್ವಾದಿಗಳು ಈ ಮಂದಿರವನ್ನು ಪ್ರವೇಶಿಸಲಿಕ್ಕೆ ಅಯೋಗ್ಯರೂ, ಅಶಕ್ತರೂ ಆಗಿರಲು, ದುರ್ಬಲರಾದ ಮನುಷ್ಯರ ಪ್ರವೇಶವಾದದ್ದನ್ನು ನೋಡಿ ನನಗೆ ಆಶ್ಚರ್ಯವಾಗುತ್ತದೆ! ಸಾಂಪ್ರತದ ಸ್ಥಿತಿಯು ಸಮಾಧಾನಕರವಿದ್ದರೂ, ಇನ್ನು ಸ್ವಲ್ಪ ವೇಳೆಯಲ್ಲಿಯೇ ಭಯವುಂಟಾಗುವ ದೆಂಬದನ್ನು ಮರೆಯಲಾಗದು. ಸ್ವಂತ ಸಾಮರ್ಥ್ಯದಿಂದ ಈ ಮಂದಿರದಲ್ಲಿ ಪ್ರವೇಶಮಾಡುವ ಯೋಗ್ಯತೆಯು, ಮನುಷ್ಯ ಮಾತ್ರರಲ್ಲಿ ಇಲ್ಲೆಂಬದನ್ನು ಈ ಮೊದಲೇ ನಾನು ನಿಶ್ಚಯಿಸಿದ್ದೇನೆ. ಈಗಾಗಿದ್ದ ಮನುಷ್ಯ ಪ್ರವೇಶವು ನರಮಾಂಸ ಪ್ರಿಯನೂ, ನಮ್ಮ ಹಾಗೂ ಈ ಮಂದಿರದ ಒಡೆಯನೂ ಆದ ಮೇಘನಾದನೆಂಬ ರಾಕ್ಷಸರಾಜನ ಮೋಸ ದಿಂದ ಆಗಿರಬಹುದು. ಮುಂದೆ ನಿಶ್ಚಯವಾಗಿ ಒದಗತಕ್ಕ ಸ್ವಜಾತಿಯ ಪ್ರಾಣಿಯ ಕೊಲೆಗಾಗಿ ನಾನು ಮರುಗುತ್ತೇನೆ. ಪತಂಗ ಹುಳವು ತನ್ನ ಮರಣಕ್ಕೆ ಕಾರಣವಾದ ದೀಪವನ್ನು ನೋಡಿ ಹಿಗ್ಗುವಂತೆ, ಈ ಮಂದಿರದ ಶೋಭೆಯನ್ನು ನೋಡಿ ಆನಂದಪಡುವದರಲ್ಲಿ ಏನು ಅರ್ಥವದೆ? ಎಂದು ನುಡಿದಳು.

ದ್ವಿಜೋತ್ತಮಾ, ಈ ಪ್ರಕಾರ ಆ ಸ್ತ್ರೀಯು ಆಡಿದ ಮಾತುಗಳನ್ನು ಕೇಳಿದ ಬಳಿಕಂತು, ನನ್ನ ಕೈಕಾಲುಗಳು ತಣ್ಣಗಾದವು. ಆ ಮಂದಿರದಲ್ಲಿ ನನ್ನ ಪ್ರವೇಶವು ಹೇಗಾಯಿತೆಂಬದು ನನಗೆ ತಿಳಿಯದ್ದರಿಂದ, ಇದೇನು ಭೂತ ಚೇಷ್ಟೆಯೋ, ರಾಕ್ಷಸ ಮಾಯೆಯೋ ಎಂದು ನಾನು ಮೊದಲೇ ಶಂಕಿಸುತ್ತಿದ್ದೆನು. ಆ ಶಂಕೆಯನ್ನು ಸ್ತ್ರೀಯಾಡಿದ ಮಾತುಗಳು ನಿಜವಾಗ ಮಾಡಿದ್ದರಿಂದ, ನನ್ನ ಸ್ಥಿತಿಯು ಹೇಗಾಗಿರಬಹುದೆಂಬದರ ಕಲ್ಪನೆಯನ್ನು ನೀನೇ ಮಾಡು. ಕೆಲಹೊತ್ತಿನವರೆಗೆ ಭಯದಿಂದ ಹೌಹಾರಿ ನಾನು ಸುಮ್ಮನೆ ಕುಳಿತುಕೊಂಡೆನು. ಈ ಸ್ಥಳದಿಂದ ಜೀವ ಉಳಿಸಿಕೊಂಡು ಪಾರಾಗಬೇಕಾದರೆ, ಏನು ಉಪಾಯ ಮಾಡಬೇಕೆಂಬ ವಿಚಾರದಲ್ಲಿ ನನ್ನ ಮನಸ್ಸು ತೊಡಗಿತು. ಒಮ್ಮೆ ನಾನು ಈಗಲೇ ಈ ಸ್ಥಳದಿಂದ ಓಡಿ ಹೋಗಬೇಕೆಂದು ನಿಶ್ಚಯಿಸಿದೆನು; ಆದರೆ ನಾನು ಆ ಮಂದಿರಕ್ಕೆ ಹೇಗೆ ಯಾವ ಮಾರ್ಗದಿಂದ ಬಂದೆನೆಂಬದೇ ನನಗೆ ಗೊತ್ತಿಲ್ಲದ್ದರಿಂದ ನನ್ನ ಆ ವಿಚಾರವು ತಾನೇ ನಿಷ್ಫಲವಾಯಿತು. ಮತ್ತೊಮ್ಮೆ ನಾನು, ಪ್ರಾಣವನ್ನು ರಕ್ಷಿಸಿಕೊಳ್ಳುವದಕ್ಕಾಗಿ ಆ ಸ್ತ್ರೀಯನ್ನೇ ಪ್ರಾರ್ಥಿಸಬೇಕೆಂದು ನಿಶ್ಚಯಿಸಿದೆನು; ಆದರೆ ಪರಾಧೀನಳಾದ ಆ ಅಬಲೆಯಿಂದ ಇಂಥ ಸಾಹಸ ಕೃತ್ಯವು ಆಗಲಾರದೆಂದು ನನಗೆ ತೋರಿದ್ದರಿಂದ, ನಾನು ಆ ಹವ್ಯಾಸಕ್ಕೆ ಹೋಗಲಿಲ್ಲ. ಈ ಪ್ರಕಾರ ಭಯದಿಂದ ವಿಚಾರಗೆಟ್ಟು ಕಂಗಾಲಾಗಿ ಅಸಂಭವ ಕಲ್ಪನೆಗಳನ್ನು ಮಾಡುತ್ತ ಕುಳಿತಿರಲು, ಸ್ವಾಭಾವಿಕವಾಗಿ ನನ್ನ ಮೇಲೆ ಭಯದ ಅಧಿಕಾರವು ಕೆಲಮಟ್ಟಿಗೆ ಕಡಿಮೆಯಾಯಿತು; ಅನ್ಯರ ಸಹಾಯದಿಂದ ಪಾರಾಗುವ ಆಶೆಯು ಉಳಿಯಲಿಲ್ಲ; ನನ್ನಿಂದ ಮಾಡಲ್ಪಟ್ಟ ಧನುರ್ವಿದ್ಯೆಯ ಅಭ್ಯಾಸದ ಅಭಿಮಾನವು

ನನ್ನಲ್ಲಿ ತಲೆದೋರಿತು. ಆಗ ನಾನು ಅತ್ಯಾವೇಶದಿಂದ ಆ ಸ್ತ್ರೀಯನ್ನು ಕುರಿತು ನುಡಿದೆನೇ ನಂದರೆ—ತಂಗೀ, ನನ್ನ ಹಿತವನ್ನು ಚಿಂತಿಸಿದ್ದಕ್ಕಾಗಿ ನಾನು ನಿನ್ನ ಉಪಕಾರವೆಣಿಸುವೆನು; ಆದರೆ ನನ್ನ ಸಲುವಾಗಿ ನೀನು ಚಿಂತಿಸಬೇಡ. ಯಕ್ಷ—ಗಂಧರ್ವಾದಿಗಳಿಂದಾಗದ ಕೆಲಸವನ್ನು ಮನುಷ್ಯರು ಮಾಡಿದ ಹಲವು ಉದಾಹರಣಗಳನ್ನು ಕೇಳಿಲ್ಲವೆ? ತನ್ನನ್ನು ಪ್ರಾಣಸಂಕಟದಲ್ಲಿ ಕೆಡವಿಕೊಳ್ಳಬೇಕೆಂಬ ಇಚ್ಛೆಯು ಯಾರಿಗಾದರೂ ಇರಬಹುದೋ? ನನ್ನ ಸಾಮರ್ಥ್ಯದಿಂದ ನಾನು ಈ ಮಂದಿರವನ್ನು ಪ್ರವೇಶಿಸಿರುವದಿಲ್ಲೆಂಬದು ನಿಜವು; ಆದರೆ ಮೋಸವು ಮೇಘನಾದ ದೈತ್ಯನಿಂದಲೇ ಆಗಿರಲಿ, ಮತ್ತೆ ಯಾರಿಂದಲೇ ಆಗಿರಲಿ, ಈ ಧನುಸ್ಸು ನನ್ನ ಕೈಯಲ್ಲಿರುವವರೆಗೆ ಅದಾವನು ನನಗೆ ಕೇಡು ಬಗೆಯುವನು? ಏನೂ ಚಿಂತೆಯಿಲ್ಲ ಹೊತ್ತು ಬಂದಾಗ್ಗೆ ನೋಡಲಿಕ್ಕೆ ಬಂದೀತು. ಪತಂಗದ ಹುಳದಂತೆ ವೈರಿಯ ತಾಪಕ್ಕೆ ಗುರಿಯಾಗಿ ಪ್ರಾಣಕೊಡಲಿಕ್ಕೆ ನಾನು ಕ್ಷುದ್ರ ಕೀಟಕವಲ್ಲ!

ಈ ಪ್ರಕಾರ ಆವೇಶದಿಂದ ನುಡಿದು ನಾನು ಧನುಸ್ಸನ್ನು ಮೇಲಕ್ಕೆತ್ತಿ ಮಂಚ ದಿಂದೇಳಲು, ಆ ಸ್ತ್ರೀಯು ಗಡಗಡನೆ ನಡುಗಿದಳು. ಆ ಅಬಲೆಗೆ ಹೀಗೆ ಭಯವನ್ನುಂಟು ಮಾಡಬೇಕೆಂದು ನಾನು ಇಚ್ಛಿಸಿದವನಲ್ಲ; ಆದರೆ ಆವೇಶದ ಭರದಲ್ಲಿ ಸೌಜನ್ಯಕ್ಕೆ ಒಪ್ಪದ ಈ ಕೆಲಸವು ನನ್ನಿಂದಾಯಿತು! ಆ ಸ್ತ್ರೀಯು ಇನ್ನು ಆ ಮಂದಿರದಿಂದ ಹೋಗತಕ್ಕವಳು, ಅಷ್ಟರಲ್ಲಿ ಅಧಿಕ ಲಾವಣ್ಯಯುಕ್ತಳಾದ ಮತ್ತೊಬ್ಬ ಸ್ತ್ರೀಯು, ತಾರಾಗಣದ ನಡುವಿನ ಚಂದ್ರನಂತೆ ಅಧಿಕ ಮೋಹಕಳಾಗಿ ದಾಸಿಯರೊಡನೆ ಅಲ್ಲಿಗೆ ಬಂದಳು. ನಾನು ಬಹುಜನ ರಾಜಪುತ್ರಿಯರನ್ನು ನಿರಾಕರಿಸಿದವನಾಗಿದ್ದರೂ, ಆ ಭುವನ ಸುಂದರಿಯ ರೂಪವೂ, ಸೌಮ್ಯ ಮುದ್ರೆಯೂ ನನ್ನ ಮನಸ್ಸನ್ನು ಎಳಕೊಳ್ಳದೆ ಬಿಡಲಿಲ್ಲ! ಆ ಮೋಹಕ ಮೂರ್ತಿಯಲ್ಲಿ ನಟ್ಟ ನನ್ನ ದೃಷ್ಟಿಗಳನ್ನು ತಕ್ಕೊಳ್ಳುವದಕ್ಕೆ ವಿಶ್ವಪ್ರಯತ್ನ ಮಾಡಿದರೂ ಅವು ನನ್ನ ಅಧೀನವಾಗಲಿಲ್ಲ, ಅವಳ ಸುಂದರವಾದ ಅವಯವಗಳೂ, ಸೂಕ್ಷ್ಮತನವೂ, ಮೈ ಸೊಬಗೂ, ಮುಖದ ಕಾಂತಿಯೂ ನನ್ನಲ್ಲಿ ಕಾಮವಿಕಾರವನ್ನುಂಟು ಮಾಡಿದವು! ಇಲ್ಲಿಯವರೆಗೆ ನನಗೆ ಈ ಮೋಹವಿಕಾರದ ಅನುಭವವಿದ್ದಿಲ್ಲ. ಮೋಹಪಾಶದಲ್ಲಿ ಬೀಳಬಾರದೆಂದು ನಾನು ಬಹಳ ಯತ್ನಿಸಿದರೂ, ಅದೆಲ್ಲ ನಿಷ್ಫಲವಾಗಿ ಕಡೆಯಲ್ಲಿ ಮನ್ಮಥನು ತನ್ನ ಸಾಮರ್ಥ್ಯವನ್ನು ನನ್ನ ಮೇಲೆ ಪೂರ್ಣವಾಗಿ ನಡಿಸಿದನು. ಆಗ ನಾನು ಮನಸ್ಸಿನಲ್ಲಿ—ಏನು ಅದ್ಭುತ ಸೌಂದರ್ಯವಿದು! ಈ ಮೂರ್ತಿಯ ರಚನೆಯಲ್ಲಿ ಸೃಷ್ಟಿಕರ್ತನ ಚಾತುರ್ಯವು, ಯೋಗ್ಯವಾಗಿ ವೆಚ್ಚಮಾಡಲ್ಪಟ್ಟಿರು ವದೆಂದು ಹೇಳಬಹುದು. ಅಹಾ! ನಾಸಿಕದ ಸರಳತ್ವವನ್ನೂ, ನೇತ್ರಗಳ ವಿಸ್ತಾರವನ್ನೂ, ಮುಖದ ಸೌಂದರ್ಯವನ್ನೂ, ಉಳಿದ ಶರೀರಾವಯವಗಳ ಯಥಾ ಯೋಗ್ಯ ರಚನೆಯನ್ನೂ ಎಷ್ಟೆಂತ ವರ್ಣಿಸಲಿ! ಈ ಸೌಂದರ್ಯ ರಾಶಿಯು ಯಾವ ಪುಣ್ಯ ಪುರುಷನಿಂದ ಸುಲಿದು ಸೂರೆ ಗೊಳ್ಳುವದೋ, ಅವನೇ ಧನ್ಯನು, ಅವನೇ ಭಾಗ್ಯಶಾಲಿಯು; ಅವನೇ ಕೃತಾರ್ಥನು. ಅವನ ಉತ್ಕಟಪುಣ್ಯವನ್ನು ಎಣಿಸುವ ಯೋಗ್ಯತೆಯು ಯಾರಿಗಿರುವದು?

ಪಾಣಿಗ್ರಹಣ

ಈ ಮೇರೆಗೆ ನಾನು ಆ ಸುಂದರಿಯ ಸೌಂದರ್ಯಾತಿಶಯಕ್ಕೆ ಬೆರಗಾಗಿರಲು ಆಕೆಯು ನನ್ನ ಹತ್ತರ ನಿಂತಿದ್ದ ಸ್ತ್ರೀಯನ್ನು ಕುರಿತು—''ಏನು, ಸುಮಧ್ಯಮೇ, ಇದೇನು ಆಟವನ್ನು ಹೂಡಿರುತ್ತೀ? ನಿನ್ನ ಸಂಗಡ ಮಾತಾಡುತ್ತಿದ್ದ ಈ ಪರಪುರುಷನು ಯಾರು? ಯಾವ ಧೈರ್ಯದಿಂದ ಆತನನ್ನು ಇಲ್ಲಿ ಬರಮಾಡಿದೆ? ಮೂರ್ಖಳೇ, ಇಂಥ ಹುಡುಗಾಟಿಕೆಯು ನನಗೆ ಸೇರುವದಿಲ್ಲೆಂಬದನ್ನು ನೀನು ಅರಿಯೆಯಾ? ಈ ತರದ ಅಸಹ್ಯ ಕೃತ್ಯಗಳಿಂದ ಯಾರ ಮಾನಭಂಗಮಾಡಬೇಕೆಂದು ಎಣಿಸಿರುತ್ತೀ? ಇರಲಿ, ನಿನ್ನ ಅಪರಾಧಕ್ಕೆ ಸರಿಯಾದ ಶಿಕ್ಷೆಯನ್ನು ಮಾಡಿಸದೆ ಬಿಡುವದಿಲ್ಲ, ಯಾವ ರಾಕ್ಷಸರಾಜನ ಶಾಸನವು ಸಕಲ ಪ್ರಾಣಿಗಳಿಗೂ ಭಯಪ್ರದವಾಗಿರುವದೋ, ಅಂಥವನನ್ನು ನೀನು ಗಣನೆಗೆ ಕೂಡ ತರಲಿಲ್ಲವಲ್ಲ! ನಾಚಿಕೆಯಿಲ್ಲದವಳೇ, ಹೋಗು ನನ್ನೆದುರಿಗೆ ನಿಲ್ಲಬೇಡ. ನಿನ್ನ ಮುಖಾವಲೋಕನದಿಂದ ನನ್ನ ಕ್ರೋಧಾಗ್ನಿಯು ಪ್ರಜ್ವಲಿಸುತ್ತದೆ.''

ಹೀಗಾ ಸುಂದರಿಯು ಸಿಟ್ಟಿನಿಂದ ಮಾತಾಡಲು, ಸುಮಧ್ಯಮೆಯು ನಡಗುತ್ತ ಕೈಜೋಡಿಸಿನಿಂತು—ಮಹಾತ್ಮಳೇ, ನಿನ್ನ ಪುಣ್ಯದಿಂದ ನಮ್ಮ ಕಷ್ಟಗಳು ಹಿಂಗಿರಲು, ನಿನಗೆ ವಿರುದ್ಧವಾದ ಕೆಲಸವನ್ನು ಮಾಡುವದು ನನ್ನಿಂದಾಗಬಹುದೇ? ದಿನದಂತೆ ನಾನು ಮಂದಿರಕ್ಕೆ ಬಂದಾಗ, ಈ ಪುರುಷನು ಆನಂದದಿಂದ ಮಂಚದಮೇಲೆ ಕುಳಿತಿದ್ದನು. ಆತನೊಡನೆ ನಾನು ಹೆಚ್ಚಿಗೆ ಮಾತುಗಳನ್ನು ಸಹ ಆಡಿಲ್ಲ, ಇದರಲ್ಲಿ ನನ್ನ ಅಪರಾಧವಿದ್ದರೆ, ದಯವಿಟ್ಟು ಕ್ಷಮಿಸಬೇಕೆಂದು ಸೆರಗೊಡ್ಡಿ ಬೇಡಿಕೊಳ್ಳುತ್ತೇನೆ. ಯಾವಾಗಲೂ ನಿನ್ನ ಸೇವೆಯಲ್ಲಿ ತೊಡಗಿರುವ ನನಗೆ ಇಂಥ ಘೋರಕರ್ಮವನ್ನು ಮಾಡಲಿಕ್ಕೆ ಅವಕಾಶವಾದರೂ ಹೇಗೆ ದೊರೆಯಬೇಕು?

ದಾಸಿಯ ಈ ಮಾತುಗಳನ್ನು ಕೇಳಿ ಆ ಸುಂದರಿಯು ತನ್ನ ಮನೋಹರವಾದ ಕಟಾಕ್ಷಗಳನ್ನು ನನ್ನ ಮೇಲೆ ಕೆಡವಿದಳು. ಅವಳ ಸಿಟ್ಟಿನ ಮಾತುಗಳನ್ನು ಕೇಳಿ ನಾನು ಅಸಮಾಧಾನಪಟ್ಟಿದ್ದರೂ, ಆ ಸುಂದರ ಕಟಾಕ್ಷಗಳು ನನ್ನನ್ನು ಆನಂದಗೊಳಿಸದೆ ಇರಲಿಲ್ಲ, ದ್ವಿಜೋತ್ತಮಾ, ಆಗಿನ ನನ್ನ ಸ್ಥಿತಿಯನ್ನು ಏನು ಹೇಳಲಿ? ಬೀಳಭೂಮಿಯಲ್ಲಿ ಧಾನ್ಯದ ಬೆಳೆಯು ಭರದಿಂದ ಬರುವಂತೆ, ಇಲ್ಲಿಯವರೆಗೆ ಕಾಮವಿಕಾರದ ಉತ್ಪತ್ತಿಗೆ ಆಸ್ಪದಕೊಡದ ನನ್ನ ಮನಸ್ಸಿನಲ್ಲಿ ಆ ವಿಕಾರವು ಕಸುವಿನಿಂದ ಬೆಳೆಯಿತು. ಅದರ ಬೆಳವಣಿಗೆಯ ಅಬ್ಬರಕ್ಕೆ ನನ್ನ ವಿಚಾರಶಕ್ತಿಯು ಕುಂಠಿತವಾಯಿತು; ನನ್ನ ಮೈ ಮೇಲಿನ ಕೂದಲುಗಳು ನೆಟ್ಟಗಾದವು; ಮೈ ಬೆವರೊಡೆಯಿತು; ದನಿಯು ನಡುಗಹತ್ತಿತು; ಶ್ವಾಸೋಚ್ಛ್ವಾಸದ ವ್ಯಾಪಾರವು ನನ್ನ ಇಚ್ಛೆಗೆ ವಿರುದ್ಧವಾಗಿ ಒತ್ತರದಿಂದ ಸಾಗಹತ್ತಿತು; ನಾನು ನಿರ್ಲಜ್ಜನಾಗಿ ಆ ಮೋಹಕ ಮೂರ್ತಿಯನ್ನು ಎವೆಯಿಕ್ಕದೆ ನೋಡಹತ್ತಿದೆನು. ಇದು ಸೌಜನ್ಯಕ್ಕೆ ಒಪ್ಪುವ ಮಾತಲ್ಲೆಂಬ ಸುವಿಚಾರವು, ಆಗಾಗ್ಗೆ ನನ್ನ ಮನಸ್ಸಿನಲ್ಲಿ ಬರುತ್ತಿದ್ದರೂ, ಮೋಹದ ಪರವಶತೆಯಿಂದ ಅದು ಕೂಡಲೆ ಕುಗ್ಗುತ್ತಿತ್ತು; ಕಡೆಗೆ ಪ್ರಯಾಸದಿಂದ ನನ್ನ ಮನಸ್ಸನ್ನು ಸಮಾಧಾನಗೊಳಿಸಿ, ನನ್ನ ದೃಷ್ಟಿಗಳನ್ನು

ಒತ್ತಾಯದಿಂದ ಬೇರೆ ಕಡೆಗೆ ತಿರುಗಿಸಿದೆನು. ಆ ವಿಶಾಲಾಕ್ಷಿಯ ಪ್ರಥಮ ದರ್ಶನವಾದಾಗಲೇ ಅವಳ ಗಾಂಭೀರ್ಯ- ಸೌಂದರ್ಯ-ಕುಲೀನತೆಗಳು ನನ್ನನ್ನು ಪ್ರತ್ಯುತ್ಥಾನಗೊಳಿಸಿದ್ದವು. ಈ ಪ್ರಕಾರ ತಪ್ಪುಗಾರನಂತೆ ಎದ್ದು ನಿಂತಿದ್ದ ನನ್ನನ್ನು ಉದ್ದೇಶಿಸಿ ಆ ಸುಂದರಿಯು ನುಡಿದಳೇನೆಂದರೆ—ಪುರುಷಶ್ರೇಷ್ಠನೇ, ನಿನ್ನ ಮುಖಚರ್ಯದಿಂದ ಕುಲೀನತೆ ಶೌರ್ಯ ಸರಳವರ್ತನ ಇವು ವ್ಯಕ್ತವಾಗುತ್ತವೆ. ಇಂಥ ನೀನು ಪರರಮನೆಯಲ್ಲಿ ನಿಶ್ಶಂಕೆಯಿಂದ ವರ್ತಿಸುವದನ್ನು ನೋಡಿ ಆಶ್ಚರ್ಯವಾಗುತ್ತದೆ. ಮನುಷ್ಯಸಂಚಾರಕ್ಕೆ ಯೋಗ್ಯವಲ್ಲದ ಈ ಸ್ಥಳದಲ್ಲಿ ನಿನ್ನ ಪ್ರವೇಶವಾದದ್ದು ಹೇಗೋ ತಿಳಿಯದು. ಇದು ಮೇಘನಾದರಾಕ್ಷಸನ ವಾಸಸ್ಥಳವು. ನೀನು ಇಲ್ಲಿಂದ ಸುರಕ್ಷಿತವಾಗಿ ಪಾರಾಗಲಾರೆ; ಆದರೂ ನನ್ನಿಂದಾದಷ್ಟು ಯತ್ನಮಾಡಿ ನಿನ್ನನ್ನು ಇಲ್ಲಿಂದ ಪಾರು ಮಾಡುವೆನು. ಬೇಗನೆ ಏಳು, ನನ್ನ ಬೆನ್ನುಹತ್ತಿ ಬಾ. ನಿನಗೆ ಅಪಾಯ ಒದಗಿದಲ್ಲಿ ಒಬ್ಬ ಸುಂದರಿಯ ಸುಖವು ಮಣ್ಣುಗೂಡಬಹುದು. ಜನ್ಮಾಂತರದ ಪಾಪದಿಂದ ನಾನು ದುರ್ನಿವಾರವಾದ ಕಷ್ಟಕ್ಕೆ ಒಳಗಾಗಿದ್ದರೂ, ಎರಡನೆಯವರ ಕಷ್ಟನಿವಾರಣ ಮಾಡಲು ಯತ್ನಿಸುವದು ನನ್ನ ಕರ್ತವ್ಯವಾಗಿರುತ್ತದೆ.

ಹೀಗೆ ಆ ಸುಂದರಿಯು ಸರಳತನವನ್ನು ಮುಂದೆಮಾಡಿ ಮಾತಾಡುತ್ತಿದ್ದರೂ, ಆಕೆಯ ಮನಸ್ಸು ಸರಳವಾಗಿದ್ದಿಲ್ಲೆಂಬದನ್ನು ಕೆಲವು ಲಕ್ಷಣಗಳಿಂದ ನಾನು ಗೊತ್ತುಹಿಡಿದೆನು. ನನ್ನಂತೆ ಅವಳಾದರೂ ಕೆಲಮಟ್ಟಿಗೆ ವಿಕಾರವಶಳಾಗಿದ್ದಳು; ಅವಳ ಕಣ್ಣುಗಳು ದ್ರವವೊಡೆದವು, ಮುಖದಲ್ಲಿ ಬೆವರ ಹನಿಗಳು ಮಿನುಗಹತ್ತಿದವು ದನಿಯು ಕುಗ್ಗಹತ್ತಿತು, ಎವೆಗಳ ಕಾರ್ಯವು ಮಂದವಾಯಿತು, ಮೇಲಿಂದಮೇಲೆ ಆಕೆಯು ನಿಟ್ಟುಸುರುಗಳನ್ನು ಬಿಡಹತ್ತಿದಳು, ಈ ಪ್ರೇಮದ ಲಕ್ಷಣಗಳನ್ನು ನೋಡಿ ಆಶಾಬದ್ಧನಾಗಿ ನಾನು ಉತ್ಸಾಹದಿಂದ ನುಡಿದೆನೇ ನೆಂದರೆ—ನಾನು ಪರಕೀಯನು, ಮೇಲಾಗಿ ಅಪರಿಚಿತನು; ನಿಮ್ಮ ಸಂಗಡ ಹೇಗೆ ಮಾತಾಡಬೇಕೆಂಬದು ತಿಳಿಯಲೊಲ್ಲದು. ಪರಸ್ತ್ರೀಯರ ಸಂಗಡವಂತೂ ಇರಲಿ, ಸ್ತ್ರೀಯರ ಸಂಗಡವೇ ಮಾತಾಡಿ ನನಗೆ ಗೊತ್ತಿಲ್ಲ. ಹುಟ್ಟಿ ಇಲ್ಲಿಯವರೆಗೆ ಸ್ವೇಚ್ಛೆಯಿಂದ ಬೆಳೆದಿದ್ದೇನೆ. ಆದ್ದರಿಂದ ನನ್ನ ಮಾತಿನಲ್ಲಿ ಏನಾದರೂ ಹೆಚ್ಚುಕಡಿಮೆಯಾದರೆ ಕ್ಷಮಿಸಬೇಕೆಂದು ಬೇಡಿಕೊಳ್ಳುವೆನು. ಸರೋವರದ ದಂಡೆಯ ಮೇಲಿದ್ದ ಶಿಲಾಮಂಟಪದಲ್ಲಿ ಮಲಗಿದ್ದ ನಾನು, ಇಲ್ಲಿ ಹೇಗೆ ಮಲಗಿಕೊಂಡೆನೆಂಬದು ಗೊತ್ತಾಗದ್ದರಿಂದ ಭ್ರಮಿಷ್ಟನಂತೆ ಆಗಿದ್ದೆನು. ಅಷ್ಟರಲ್ಲಿ ನಿಮ್ಮ ಸುಮಧ್ಯಮೆಯು ಬಂದು ನನ್ನನ್ನು ಆವೇಶಕ್ಕೆ ಗುರಿಮಾಡಿದಳು. ಹುಚ್ಚೊಂದು, ಆವೇಶವೊಂದು ಕೂಡಿ ನಾನು ಪೇಚಾಡುತ್ತಿರಲು, ಅಕಸ್ಮಾತ್ತಾಗಿ ನೀವು ಇಲ್ಲಿಗೆ ಬಂದಿರಿ. ನಿಮ್ಮ ಮಾತುಗಳನ್ನು ಕೇಳಿ ನನ್ನ ಹುಚ್ಚೂ, ಆವೇಶವೂ ಅಳಿದು ಹೋಗಿ, ನಿಚ್ಚಳವಾಗಿ ನನ್ನ ಕಣ್ಣುಗಳು ತೆರೆದವು. ಇದು ಮೇಘನಾದ ದೈತ್ಯನ ಸ್ಥಾನವೇ ಆಗಿರಲಿ ಬೇರೆ ಯಾರೊಬ್ಬರ ಸ್ಥಾನವೇ ಆಗಿರಲಿ, ಕ್ಷತ್ರಿಯವೀರರು ಅದಕ್ಕೆ ಸೊಪ್ಪುಹಾಕುವಹಾಗಿಲ್ಲ; ಯಾಕಂದರೆ ಅವರಿಗೆ ಜೀವವು ಹುಲ್ಲಿಗಿಂತ ಕಡೆಯಾಗಿರುವದು. ನೀವು ನನ್ನ ಹಿತವನ್ನು ಚಿಂತಿಸಿ ನನ್ನನ್ನು ಕಷ್ಟದಿಂದ ಪಾರಮಾಡಲು ಯತ್ನಿಸುವೆನೆಂದು ನುಡಿಯುತ್ತಿರುವದನ್ನು ಕೇಳಿ ನನಗೆ ಬಹಳ ಸಮಾಧಾನ

ವಾಗುತ್ತದೆ. ನನ್ನ ಕೇಡಿಗಾಗಿ ನನ್ನ ಹಿಂದೆ ದುಃಖಿಸುವವರು, ನನ್ನ ಮುಪ್ಪಿನ ತಾಯಿ-ತಂದೆಗಳ ಹೊರತು ಬೇರೆ ಯಾರೂ ಇರುವದಿಲ್ಲ. ಸ್ತ್ರೀಯರು ಸಂಕಟದಲ್ಲಿ ಬಿದ್ದಿರುವದನ್ನು ಕಣ್ಣಿನಿಂದ ನೋಡುವದು ಕ್ಷತ್ರಿಯರ ಶೀಲವಲ್ಲ. ತಮ್ಮ ಪ್ರಾಣವನ್ನು ಅರ್ಪಿಸಿಯಾದರೂ ಅವರು ಅಬಲೆಯರ ಸಂಕಟವನ್ನು ದೂರಮಾಡುವರು. ಅಬಲಾ ಮಣಿಯೇ, ನಿನಗೊದಗಿರುವ ದುರ್ನಿವಾರವಾದ ಸಂಕಟವಾವುದು ಹೇಳಬೇಕು, ಅದನ್ನು ದೂರಮಾಡದೆ ನಾನು ಇಲ್ಲಿಂದ ಉಲಕುವದಿಲ್ಲ.

ನನ್ನ ಮಾತುಗಳನ್ನು ಕೇಳಿ ಆ ಸುಂದರಿಯು ಬಹು ಸಮಾಧಾನಪಟ್ಟು ಕೃತಜ್ಞತೆಯಿಂದ—ಕ್ಷತ್ರಿಯ ವೀರನೇ, ನನ್ನ ಸಂಕಟವನ್ನು ದೂರಮಾಡಲು ಸಿದ್ಧನಾಗಿರುವದರಿಂದ ನೀನು ನನಗೆ ಆಪ್ತನಾಗಬೇಕಾಯಿತು. ನಮ್ಮಂಥ ಅನಾಥರ ಪಕ್ಷವನ್ನು ನಿನ್ನಂಥ ಉದಾರ ಚರಿತನಲ್ಲದೆ ಮತ್ತಾರು ಹಿಡಿಯಲು ಸಮರ್ಥರು? ನನ್ನ ದಾಸಿಯರ ಹೊರತು ನನ್ನವರೆನ್ನುವವರು ಇಲ್ಲಿ ಯಾರೂ ಇರುವದಿಲ್ಲ. ನೀರಿನಲ್ಲಿ ಮುಳುಗುತ್ತಿರುವವರನ್ನು ಕೈಕೊಟ್ಟು ಕರಕೊಳ್ಳಲಿಕ್ಕೆ ಬಂದಂತೆ ನೀನು ಬಂದಿರುತ್ತೀ; ಅಂದ ಬಳಿಕ ದುಃಖದಿಂದ ನನ್ನನ್ನು ಪಾರಮಾಡೆಂದು ನಾನು ನಿನ್ನ ಕೊರಳಿಗೆ ಬೀಳದೆ ಯಾಕೆ ಬಿಡಲಿ? ನಾನು ಅಬಲೆಯಾಗಿದ್ದರೂ ಕೇವಲ ಅಸಮರ್ಥಳೆಂದು ತಿಳಿಯಬೇಡ. ಮೇಘನಾದನಿಂದ ನಿನ್ನ ಕೂದಲು ಕೊಂಕದಂತೆ ನಾನು ನೋಡಿಕೊಳ್ಳುತ್ತೇನೆ, ಇರ ಇರುತ್ತ ಎಷ್ಟೋ ಸಂಗತಿಗಳು ನಿನಗೆ ತಿಳಿಯುವವು. ನೀನು ನನ್ನ ಆಪ್ತನೂ, ಮಿತ್ರನೂ ಆಗಿರುತ್ತೀ. ಸದ್ಯಕ್ಕೆ ನೀನು ದಣಿದಿರುವದರಿಂದ ಊಟಮಾಡಿ ಸ್ವಸ್ಥವಾಗಿ ಮಲಗಿಕೋ. ಸ್ವಪರ ಭೇದವಿಲ್ಲದೆ ಇಲ್ಲಿಯವರೆಗೆ ನಾನು ಪುರುಷರೊಡನೆ ಸರಳ ಮನಸ್ಸಿನಿಂದ ಮಾತಾಡುತ್ತ ಬಂದಂತೆ ಈಗಾದರೂ ನಿನ್ನ ಸಂಗಡ ಮಾತಾಡುತ್ತೇನೆ. ಅದರಲ್ಲಿ ಎಟ್ಟಿತನವೇನಾದರೂ ಇದ್ದರೆ ಅದನ್ನು ಮನಸ್ಸಿನಲ್ಲಿ ತರದೆ ಕ್ಷಮಿಸು ಎಂದು ಹೇಳಿ ಆಕೆಯು ತನ್ನ ದಾಸಿಯರ ಮೋರೆಯನ್ನು ನೋಡಿದಳು. ಕೂಡಲೆ ಅವರು ತಮ್ಮ ಒಡತಿಯು ಮೊದಲೇ ಆಜ್ಞಾಪಿಸಿದ್ದಂತೆ, ರಾಜಭೋಗಾರ್ಹವಾದ ಪದಾರ್ಥಗಳನ್ನು ತಕ್ಕೊಂಡು ಬಂದರು. ಅವರಲ್ಲಿ ಒಬ್ಬಳು ನನ್ನ ಜಡೆಕಟ್ಟಿದ ಕೂದಲುಗಳಿಗೆ ತರತರದ ಸುಗಂಧದ ಎಣ್ಣೆಗಳನ್ನು ಹಚ್ಚಿ ತೊಡಕು ಬಿಡಿಸಿದಳು; ಮತ್ತೊಬ್ಬಳು ನನ್ನ ಸ್ನಾನಕ್ಕಾಗಿ ಬಿಸಿನೀರುಗಳನ್ನು ತೋಡಿ ಇಟ್ಟಳು; ಇನ್ನೊಬ್ಬಳು ವಸ್ತ್ರಗಳ ಸಿದ್ಧತೆಯ ಕಡೆಗೆ ತೊಡಗಿದಳು. ಈ ಮೇರೆಗೆ ಒಬ್ಬೊಬ್ಬರು ಒಂದೊಂದು ಕೆಲಸವನ್ನು ಮಾಡಹತ್ತಿದ್ದರಿಂದ, ಮುಂದೆ ಸ್ವಲ್ಪ ಹೊತ್ತಿನಲ್ಲಿಯೇ ತರತರದ ಪಕ್ವಾನ್ನಗಳಿಂದ ತುಂಬಿದ ಚಿನ್ನದ ಪಾತ್ರೆಯು ನನ್ನ ಮುಂದೆ ಇಡಲ್ಪಟ್ಟಿತು.

ದ್ವಿಜೋತ್ತಮಾ, ಮನೆಯಿಂದ ಹೊರಟಂದಿನಿಂದ ಇಲ್ಲಿಯವರೆಗೆ ಬಗೆಬಗೆಯ ಕಷ್ಟಗಳನ್ನನುಭವಿಸಿದ ನನಗೆ ಈಗ ಎಷ್ಟು ಸಮಾಧಾನವಾಗಿರಬಹುದೆಂಬದನ್ನು ನೀನೇ ಕಲ್ಪಿಸು- ''ಇದ್ದ ಊರ ಗೌಡನು ಪರವೂರ ಮಂಗನೆಂ''ಬ ಗಾದೆಯಂತೆ, ರಾಜಗೃಹದಲ್ಲಿ ಮೃಷ್ಟಾನ್ನ ಭೋಜನದಿಂದುಂಟಾಗುತ್ತಿದ್ದ ಸುಖವನ್ನು, ವನವಾಸಿಯಾಗಿರುವಾಗ ನಾನು ಕಂದಮೂಲಗಳ, ಹಾಗೂ ಫಲಗಳ ಭಕ್ಷಣದಿಂದ ಸಂಪಾದಿಸಿಕೊಳ್ಳಬೇಕಾಗಿತ್ತು; ಮನೋಹರ

ವಾದ ರಾಜಗೃಹವಾಸದ ಸೌಖ್ಯವನ್ನು, ನಾನು ಬಿಸಿಲಲ್ಲಿ ಮಾರ್ಗವನ್ನು ಕ್ರಮಿಸುತ್ತಿರುವಾಗ ಗಿಡದ ನೆರಳಲ್ಲಿ ಕುಳಿತು ದೊರಕಿಸಿಕೊಳ್ಳಬೇಕಾಗಿತ್ತು; ಯುವರಾಜನಾಗಿದ್ದಾಗ ಸುಂದರವಾದ ಕಂಕಣಗಳ ಝಣತ್ಕಾರದಿಂದ ಬಾಲೆಯರು, ಸಾವಕಾಶವಾಗಿ ಬೀಸುವ ಚಾಮರಗಳ ಸುಗಂಧದ ಗಾಳಿಯಿಂದಾಗುತ್ತಿದ್ದ ಸುಖವು, ವನವಾಸಿಯಾದ ನನಗೆ ಮಾರ್ಗದ ಎಡಬಲಗಳಲ್ಲಿ ಗಾಳಿಯಿಂದಲ್ಲಾಡುವ ಗಿಡಗಳಿಂದ ದೊರೆಯಬೇಕಾಗಿತ್ತು; ನನ್ನ ಬಿರುದಾವಳಿಗಳನ್ನು ಉಚ್ಚರಿಸಿ, ನನ್ನ ಮನಸ್ಸನ್ನು ಉತ್ಸಾಹಗೊಳಿಸುವ ಸ್ತುತಿ ಪಾಠಕರ ಕಾರ್ಯವನ್ನು, ನಾನು ಅರಣ್ಯವಾಸಿಯಾಗಿರುವಾಗ ಪಕ್ಷಿಗಳು ಮಾಡಬೇಕಾಗಿತ್ತು; ನನ್ನ ಮನಸ್ಸಿನ ಒಲವನ್ನನುಸರಿಸಿ ವಿನಯದಿಂದ ಸೇವೆಮಾಡುವ ಸೇವಕರ ಸೇವೆಯನ್ನು, ಪ್ರವಾಸಿಯಾಗಿರುವಾಗ ನನ್ನ ಅವಯವಗಳು ಮಾಡುತ್ತಿದ್ದವು; ಪೂಜ್ಯನೇ, ಬಹಳ ಹೇಳುವದರಿಂದೇನು ಪ್ರಯೋಜನವು? ಆಯತವಾಗಿ ದೊರೆತ ರಾಜ ಭೋಗಗಳ ಮಹತ್ವವನ್ನರಿಯದ ನಾನು, ವನವಾಸಿಯಾದ್ದರಿಂದ ವ್ಯಸನಪಟ್ಟು, ಆ ರಾಜಭೋಗಗಳ ಸಲುವಾಗಿ ಲುಬ್ಧನಾಗಿರಲು, ದೇವರ ಪ್ರಸಾದದಿಂದ ಅವು ನನಗೆ ಪುನಃ ಪ್ರಾಪ್ತವಾದವೆಂಬಂತೆ ಆ ಸುಂದರಿಯ ಸಹವಾಸವು ನನಗಾಯಿತು. ದಾಸಿಯರಿಂದ ಬಡಿಸಲ್ಪಟ್ಟ ಉತ್ತಮೋತ್ತಮವಾದ ಪಕ್ವಾನ್ನಗಳನ್ನು ಆಸ್ಥೆಯಿಂದ ಉಂಡು, ನಾನು ಮೊದಲು ಮಲಗಿಕೊಂಡಿದ್ದ ಮಂದಿರಕ್ಕೆ ಹೋದೆನು. ಅಲ್ಲಿ ಆ ಸುಂದರಿಯು ನನ್ನ ಹಾದಿಯನ್ನು ನೋಡುತ್ತ ಕುಳಿತುಕೊಂಡಿದ್ದಳು. ನಾನು ಹೋದಕೂಡಲೆ ಆಕೆಯು ಎದ್ದುನಿಂತು ಉಪಚರಿಸಿ, ರಾತ್ರಿಯು ಬಹಳವಾದದ್ದರಿಂದ ಮಲಗಿಕೊಳ್ಳತಕ್ಕದ್ದೆಂದು ಹೇಳಿ, ದಾಸಿಯೊಡನೆ ಹೊರಟುಹೋದಳು.

ಕೆಲಹೊತ್ತಿನವರೆಗೆ ನನಗೆ ನಿದ್ದೆಯೇ ಬರಲಿಲ್ಲ, ಬಗೆಬಗೆಯ ವಿಚಾರಗಳು ಮನಸ್ಸಿನಲ್ಲಿ ಎಡತಾಕಹತ್ತಿದ್ದರಿಂದ, ನಾನು ಚಡಪಡಿಸುತ್ತ ಹಾಸಿಗೆಯ ಮೇಲೆ ಹೊರಳಾಡಹತ್ತಿದೆನು. ಆ ಪ್ರಮದೆಯು ನನ್ನ ಮನಸ್ಸನ್ನು ಪೂರ್ಣವಾಗಿ ಎಳಕೊಂಡಿದ್ದಳು. ಅವಳ ಗುಣಗಳನ್ನೂ, ರೂಪವನ್ನೂ ನೆನಿಸುತ್ತ, ಇಲ್ಲದ ಮನೋರಾಜ್ಯಗಳನ್ನು ಕಲ್ಪಿಸಿ ಶಂಕಿಸುತ್ತ—ಆಶೆಪಡುತ್ತ ಎಂಟು ತಾಸು ರಾತ್ರಿಯನ್ನು ಕಳೆದೆನು. ನಿದ್ದೆಯು ಎತ್ತೋ ಹೊರಟು ಹೋಯಿತು ನಾನು ಎದ್ದು ಕಿಡಿಕೆಯ ಬಳಿಯಲ್ಲಿ ಬಂದು ನೋಡಲು ಚಂದ್ರೋದಯವಾಗಿತ್ತು, ಬೆಳಗು ಮುಂಜಾವಿನ ತಂಗಾಳಿಯು ಸುಳಿಯುತ್ತಿತ್ತು, ನಾನು ತಲೆ ಬಿಟ್ಟುಕೊಡು ಸ್ವಲ್ಪ ಹೊತ್ತು ಗಾಳಿಗೆ ಕುಳಿತುಕೊಳ್ಳಲು, ಮನಸ್ಸು ಸ್ವಲ್ಪ ಸಮಾಧಾನಪಟ್ಟದ್ದರಿಂದ ಮತ್ತೆ ಮಲಗಿಕೊಂಡೆನು. ಯಾವಾಗ ನಿದ್ದೆ ಹತ್ತಿತೋ ತಿಳಿಯದು; ಮರುದಿನ ಎರಡುತಾಸು ಹೊತ್ತು ಏರಿ ನನಗೆ ಎಚ್ಚರಾಯಿತು! ಕಣ್ಣುತೆರೆದು ನೋಡುತ್ತೇನೆ, ಸುಮಧ್ಯಮೆಯು ನನ್ನ ಹಾದಿಯನ್ನು ನೋಡುತ್ತ ನಿಂತುಕೊಂಡಿದ್ದಾಳೆ! ನಾನು ಹಾಸಿಗೆಯಿಂದ ಚಟ್ಟನೆ ಎದ್ದು, ಆಕೆಯನ್ನು ಹಿಂಬಾಲಿಸಿ ಹೋಗಿ ಪ್ರಾತರ್ವಿಧಿಗಳನ್ನು ತೀರಿಸಿಕೊಂಡೆನು ಉಪಹಾರವಾಯಿತು. ತಿರುಗಿ ನನ್ನ ಸ್ಥಳಕ್ಕೆ ಬಂದು, ಸ್ವಸ್ಥವಾಗಿ ಕುಳಿತುಕೊಂಡೆನು. ಇಷ್ಟಾಗುವದರೊಳಗೆ ನಾಲ್ಕುತಾಸು ಹೊತ್ತು ಏರಿತು; ಆದರೆ ಆ ಸುಂದರಿಯ ಸುಳವೇ ಇಲ್ಲ! ಸುಮಧ್ಯಮೆಯು ವಿನಯದಿಂದಲೂ, ಬಹು

ಮರ್ಯಾದೆಯಿಂದಲೂ ನನ್ನ ಸಂಗಡ ಮಾತಾಡುತ್ತ ಸೇವಾತತ್ಪರಳಾಗಿದ್ದಳು. ನಾನು ಸುಖಾಸನದಲ್ಲಿ ಕುಳಿತು ಎದುರಿಗೆ ಕಪಾಟಿನಲ್ಲಿ ಇಟ್ಟಿರುವ ಪುಸ್ತಕಗಳಲ್ಲಿ ಒಂದನ್ನು ತಕ್ಕೊಂಡು ಓದಹತ್ತಲು ಆಕೆಯು ಅಲ್ಲಿಂದ ಹೊರಟು ಹೋದಳು.

ಪ್ರಿಯಮಿತ್ರಾ, ಅಂದು ಮಧ್ಯಾಹ್ನವಾಯಿತು, ಮಧ್ಯಾಹ್ನದ ಊಟವಾಯಿತು, ಒಂಬತ್ತು ತಾಸಾಯಿತು; ಆದರೆ ಆ ಸುಂದರಿಯ ಸುದ್ದಿಯಿಲ್ಲ! ಮತ್ತೆ ನನ್ನ ಚಿಂತೆಗೆ ಆರಂಭವಾಯಿತು. ಆ ಮೋಹಕ ಮೂರ್ತಿಯ ದರ್ಶನವಾದಾಗ ನನ್ನ ಮನಸ್ಸಿಗೆ ಆಗಿದ್ದ ಗಾಯವು ಮಾಯದೆ ಅದು ಬೆಳೆಯುತ್ತ ಹೋಯಿತು. ಆ ಮೂರ್ತಿಯು ಯಾವಾಗಲೂ ಕಣ್ಣಿಗೆ ಕಟ್ಟಿರಬೇಕೆಂದು ನನ್ನ ಮನಸ್ಸು ಬಯಸಹತ್ತಿತು. ಆ ಸುಂದರಿಯು ಯಾಕೆ ಬಂದಿರಲಿಕ್ಕಿಲ್ಲ? ನನ್ನಿಂದ ಏನಾದರೂ ಅಪರಾಧವಾಗಿರಬಹುದೋ? ನನ್ನ ದರ್ಶನದಿಂದ ನನ್ನಂತೆ ಆಕೆಯು ವಿಕಾರವಶಳಾಗಿರುವ ಳೆಂದು ನಾನು ಕಲ್ಪಿಸಿದ್ದು ಸುಳ್ಳಿರಬಹುದೋ? ಹೆಂಗಸರ ನೆಲೆಯು ಯಾರಿಗೂ ಹತ್ತುವದಿಲ್ಲೆಂದು ಕೇಳಿದ್ದೇನೆ; ಏನಾದರೂ ಮೋಸವಿರಲಿಕ್ಕಿಲ್ಲವಷ್ಟೆ? ಆಕೆ ಬಿಡಲಿ, ಸುಮಧ್ಯಮೆಯಾದರೂ ಯಾಕೆ ಮನಸ್ಸು ಬಿಚ್ಚಿ ಮಾತಾಡಬಾರದು? ಇವೇ ಮೊದಲಾದ ವಿಚಾರಗಳು ಮನಸ್ಸಿನಲ್ಲಿ ಉತ್ಪನ್ನವಾಗಿ ನಾನು ಅಸಮಾಧಾನ ಪಟ್ಟೆನು. ಆ ಸುಂದರವಾದ ಮಂದಿರವೂ, ಅಲ್ಲಿಯ ಸುವ್ಯವಸ್ಥೆಯೂ, ದಾಸಿಯರು ಮಾಡುತ್ತಿದ್ದ ರಾಜೋಪಚಾರಗಳೂ ನನ್ನ ಅಸಮಾಧಾನವನ್ನು ದೂರಮಾಡಲು ಸಮರ್ಥವಾಗಲಿಲ್ಲ ನನ್ನ ಮನಸ್ಸು ಬೇಸತ್ತಿತು. ಮುಂದೆ ಏನು ಮಾಡಬೇಕೆಂದು ವಿಚಾರಿಸುತ್ತ ನಾನು ಮಂದಿರದ ಈ ಗೋಡೆಯಿಂದ ಆ ಗೋಡೆಯವರೆಗೆ, ಆ ಗೋಡೆಯಿಂದ ಈ ಗೋಡೆಯವರೆಗೆ ಎಡತಾಕ ಹತ್ತಿದೆನು. ಮತ್ತೆ ಆಸನದಲ್ಲಿ ಕುಳಿತು ಪುಸ್ತಕವನ್ನು ಓದ ಹತ್ತಿದೆನು, ಮನಸ್ಸು ಸಮಾಧಾನಪಡದ್ದರಿಂದ ಹಾಸಿಗೆಯ ಮೇಲೆ ಬಿದ್ದುಕೊಂಡೆನು ಮತ್ತೆ ಎದ್ದೆನು. ಈ ಮೇರೆಗೆ ಉದಾಸೀನನಾಗಿ ಆತುರದಿಂದ ನಾನು ಆ ಸುಂದರಿಯ ಮಾರ್ಗವನ್ನು ನಿರೀಕ್ಷಿಸುತ್ತಿರಲು, ಎರಡುತಾಸು ಹೊತ್ತು ಇರುವಾಗ ಆಕೆಯು ನನ್ನ ಬಳಿಗೆ ಬಂದಳು!

ತಪೋನಿಧಿಯೇ, ಆಗಿನ ಆ ಸುಂದರಿಯ ಮೋಹಕ ಸ್ವರೂಪದಿಂದ ನನ್ನ ಚಿತ್ತವೃತ್ತಿಯು ಚಂಚಲವಾಯಿತು. ಆಕೆಯ ಗಾಂಭೀರ್ಯವೆಷ್ಟು, ಸರಳತನವೆಷ್ಟು, ಸೌಜನ್ಯವೆಷ್ಟು! ನನ್ನನ್ನು ನೋಡಿ ಆಕೆಯು ವಿಕಾರವಶವಾಗಿರುವಳೆಂದು, ನಾನು ಈ ಮೊದಲು ತಿಳಕೊಂಡದ್ದು ಪ್ರಮಾದವೆಂದೇ ಹೇಳತಕ್ಕದ್ದು, ಕೆಟ್ಟ ಮನಸ್ಸಿನಿಂದ ಪರಸ್ತ್ರೀಯನ್ನು ನೋಡುವ ನೀಚ ಪುರುಷನಿಗೆ, ಸ್ತ್ರೀಯರು ಕೆಟ್ಟ ಮನಸ್ಸಿನವರಾಗಿ ತೋರುವಂತೆ, ವಿಕಾರವಶನಾದ ನನಗೆ ಆ ಮೋಹಕ ಮೂರ್ತಿಯೂ ವಿಕಾರವಶವಾಗಿ ತೋರಿರಬಹುದು! ಆ ಸುಶೀಲೆಯು ನನ್ನ ಬಳಿಗೆ ಬಂದು ಸರಳತನದಿಂದ—ಪುರುಷಶ್ರೇಷ್ಠನೇ, ನಿರ್ವಾಹವಿಲ್ಲದ್ದರಿಂದ ನಿನ್ನ ಭೆಟ್ಟಿಗಾಗಿ ಬರಲಿಕ್ಕೆ ನನಗೆ ತಡವಾಯಿತು, ಕ್ಷಮಿಸಬೇಕು. ಅತಿಥಿಗಳನ್ನು ಈ ರೀತಿಯಾಗಿ ದುರ್ಲಕ್ಷಿಸುವದು ಗೃಹಸ್ಥಾಶ್ರಮಿಗಳ ಧರ್ಮವಲ್ಲ, ನನ್ನ ದಾಸಿಯರ ಸೇವೆಯಲ್ಲಿ ಏನಾದರೂ ತಪ್ಪುಗಳಾಗಿದ್ದರೆ, ಅದಕ್ಕಾಗಿಯೂ ನನ್ನನ್ನು ಕ್ಷಮಿಸುವದಾಗಬೇಕು. ನಿಮ್ಮಂಥ ಪರೋಪ ಕಾರಿಗಳೂ, ಸುಶೀಲರೂ, ತೇಜಸ್ವಿಗಳೂ ಆದ ಅತಿಥಿಗಳ ಸೇವೆಯು ಪರಮ ದುರ್ಲಭವು.

ಪುಣ್ಯಶಾಲಿಯೇ, ಅತಿಥಿ ಸ್ವರೂಪನಾಗಿ ಬಂದಿರುವ ನೀನು, ಇನ್ನು ಮನೆಯಾತನಾಗಬೇಕು. ಈ ಮನೆಯು ನಿನ್ನದೆಂದು ತಿಳಿ ಇದು ಉಪಚಾರದ ಮಾತಲ್ಲ, ಶ್ರೀ ಗೌರಿಯ ಪೂಜೆಗಾಗಿ ಪ್ರತಿಮಂಗಳ ವಾರವೂ ನನ್ನಿಂದ ಇದೇ ರೀತಿ ತಡವಾಗುವದು. ಉಳಿದ ದಿನಗಳಲ್ಲಿ ನಿನ್ನಂಥ ಸುಗುಣಿಯ ಸಹವಾಸದಲ್ಲಿ ನನ್ನ ಕಾಲಹರಣವಾಗುವದು ಬಹು ಸಮಾಧಾನಕರವು. ನಿನ್ನಿಂದ ನನ್ನ ದುಃಖದ ನಿವಾರಣವಾಗಲಿ—ಆಗದಿರಲಿ, ನೀನು ಈ ಮಂದಿರದಲ್ಲಿರುವ ವರೆಗೆ ನನ್ನ ಸಮಾಧಾನಕ್ಕೆ ಕೊರತೆಬಾರದು. ಯಾವ ಸಂಕೋಚವೂ ಇಲ್ಲದೆ, ಮನೆಯವರಂತೆ ತಿಳಿದು, ಮಿತ್ರಭಾವದಿಂದ ನಮ್ಮೆಲ್ಲರ ಸಂಗಡ ನಡಕೊಳ್ಳತಕ್ಕದ್ದು. ಮೇಘನಾದ ದೈತ್ಯನ ಈ ಸ್ಥಾನದಲ್ಲಿ ಯಾತಕ್ಕೇನೂ ಕೊರತೆಯಿಲ್ಲ; ಆದರೆ ನೀನು ಆತನ ಕಣ್ಣಿಗೆಬೀಳದಂತೆ ಎಚ್ಚರಪಡತಕ್ಕದ್ದು. ಪ್ರತಿಮಂಗಳ ವಾರಕ್ಕೊಮ್ಮೆ ಆತನು ಇಲ್ಲಿಗೆ ತಪ್ಪದೆ ಬರುತ್ತಾನೆ, ಉಳಿದ ದಿನ ಆತನ ಭಯವಿಲ್ಲ. ಪುರುಷಶ್ರೇಷ್ಠಾ, ಈ ಸ್ಥಾನದಲ್ಲಿ ನೀನು ಧಾರ್ಮಿಕ ನಿತ್ಯ ನೈಮಿತ್ತಿಕ ಕರ್ಮಗಳನ್ನು ಭಕ್ತಿಯಿಂದ ಆಚರಿಸಬಹುದು; ಶರೀರಸಾಮರ್ಥ್ಯವನ್ನು ಬೆಳೆಸುವದಕ್ಕಾಗಿ ಗರಡಿಯ ಸಾಧಕ ಮಾಡಬಹುದು; ಬೇಟೆಗಾಗಿಯೇ ಕಾದಿಟ್ಟಿದ್ದ ಅರಣ್ಯದಲ್ಲಿ ಬೇಟೆಯಾಡ ಬಹುದು; ಇಳಿಹೊತ್ತಾಗಲು, ಸರೋವರದಲ್ಲಿ ನಾವೆಗಳ ಸಹಾಯದಿಂದ ಸಂಚರಿಸಿ ರಮಿಸಬಹುದು; ಚದುರಂಗ ಮುಂತಾದ ಆಟಗಳನ್ನು ಆಡಬಹುದು; ಓದಬಹುದು–ಬರೆಯಬಹುದು; ಹಾಡಬಹುದು–ಬಾರಿಸಬಹುದು; ಒಟ್ಟಿಗೆ, ಸುಜನನೂ, ವಿವೇಕಿಯೂ ಆದ ನೀನು ಮನಸೋಕ್ತವಾಗಿ ಆಚರಿಸಬಹುದು.

ಗುರುಪುತ್ರಾ, ಆ ಪ್ರಮದೆಯ ಈ ಮಾತುಗಳನ್ನು ಕೇಳಿದ ನೀನು, ಅವಳ ಯೋಗ್ಯತೆಯನ್ನು ಮನಸ್ಸಿನಲ್ಲಿ ತೂಗಿ ನೋಡಿದ್ದೀ. ನಾನಂತು ಗಾಬರಿಯಾಗಿ, ಸಿಕ್ಕಹಾಗೆ ಹರಿದು ಹೋಗುವ ನನ್ನ ಖೋಡಿ ಮನಸ್ಸನ್ನು ಗುದ್ದಿ ಸುಮ್ಮನೆ ಕುಳ್ಳಿರಿಸಿಕೊಂಡೆನು. ಆದರೂ ಒಮ್ಮೆ ತನಗಾಗಿದ್ದ ನೋವನ್ನು ತಾಳಲಾರದೆ ಆ ಮನಸ್ಸು ಕೂತಲ್ಲಿಯೇ ನೆರಳಹತ್ತಿತ್ತು, ಬರಬರುತ್ತ ಆ ಸ್ತ್ರೀಯರ ತಂಡದ ಪರಿಚಯವಾಗಿ, ನಾನು ಅವರೊಡನೆ ಸಲಿಗೆಯಿಂದ ನಡೆಯ ಹತ್ತಿದೆನು. ಉಷಃಕಾಲಕ್ಕೆ ಎದ್ದಕೂಡಲೆ ಪ್ರಾತಃಸ್ಮರಣ ಮಾಡಿ ಪ್ರಾತರ್ವಿಧಿಗಳನ್ನು ತೀರಿಸಿಕೊಂಡು ನಿತ್ಯಕರ್ಮಗಳನ್ನು ಮುಗಿಸಿಕೊಳ್ಳುತ್ತಿದ್ದೆನು. ಅಷ್ಟರಲ್ಲಿ ಎರಡು ತಾಸು ಹೊತ್ತು ಏರುತ್ತಿತ್ತು, ಉಪಾಹಾರವು ತೀರಿದ ಮೇಲೆ ಗ್ರಂಥಗಳನ್ನು ಅವಲೋಕಿಸುತ್ತಿದ್ದೆನು. ಆರು ತಾಸಿಗೆ ಮಧ್ಯಾಹ್ನದ ಕರ್ಮಗಳು ಮುಗಿದು ಊಟವಾದಬಳಿಕ ಸ್ವಲ್ಪ ವಾಮಕುಕ್ಷಿ, ಕ್ರಂಥಾವ ಲೋಕನ, ಆಟ, ಉಪಹಾರ, ವ್ಯಾಯಾಮ ಇವು ಕ್ರಮವಾಗಿ ನಡೆಯುತ್ತಿದ್ದವು. ಅಷ್ಟರಲ್ಲಿ ಹೊತ್ತು ಮುಣುಗುತ್ತಿತ್ತು, ಸಂಧ್ಯಾವಂದನಾದಿ ಸಂಜೆಯ ಕರ್ಮಗಳು ಮುಗಿದ ಮೇಲೆ ಎರಡು ತಾಸು ರಾತ್ರಿಗೆ ಸಂಜೆಯ ಊಟವಾಗುತ್ತಿತ್ತು, ಸಂಜೆಯು ಊಟವಾದ ಬಳಿಕ ನಡೆಯುವ ಮುಖ್ಯ ಕೆಲಸವೆಂದರೆ ಹರಟೆಯು! ಬ್ರಾಹ್ಮಣೋತ್ತಮಾ, ಈ ಕ್ರಮದಿಂದ ನಾನು ಆ ಸುಂದರಿಯರ ಸಹವಾಸದಲ್ಲಿ 15 ದಿನಗಳನ್ನು ಕಳೆದರೂ, ಅವರು ನನ್ನ ವೃತ್ತಾಂತವನ್ನು ಕೇಳಲಿಲ್ಲ, ನಾನಾದರೂ ಅವರ ಸಂಗಾತಿಯನ್ನು ತಿಳಕೊಳ್ಳುವ ಸಾಹಸಕ್ಕೆ ಹೋಗಲಿಲ್ಲ ಒಮ್ಮೊಮ್ಮೆ ಬೆಳಗಿನ ಉಪಹಾರವಾದ ಬಳಿಕ ನಾನು ಆ ಸುಂದರಿಯೊಡನೆ ಬೇಟೆಯಾಡಲಿಕ್ಕೆ

ಹೋಗುತ್ತಿದ್ದೆನು; ಸಂಜೆಯ ಉಪಹಾರ ತೀರಿದ ಮೇಲೆ ಒಮ್ಮೊಮ್ಮೆ ಅವಳೊಡನೆ ಉಪವನದಲ್ಲಿ ಸಂಚರಿಸುತ್ತಿದ್ದೆನು; ಒಮ್ಮೊಮ್ಮೆ ಸರೋವರದಲ್ಲಿ ನಾವೆಯಲ್ಲಿ ಕುಳಿತು ವಿಶ್ರಾಂತಿಯನ್ನು ಹೊಂದುತ್ತಿದ್ದೆನು. ಆಕೆಯು ನನ್ನನ್ನು ಪುರುಷಶ್ರೇಷ್ಠಾ, ಎಂದು ಕರೆಯುತ್ತಿದ್ದಳು; ನಾನು ಸುಶೀಲೆ, ಎಂದು ಆಕೆಯನ್ನು ಕರೆಯುತ್ತಿದ್ದೆನು. ಇಷ್ಟು ದಿನವಾದರೂ ನಿಜವಾದ ಹೆಸರು ಕೇಳುವ ಧೈರ್ಯವು ಅವಳಿಗೂ ಆಗಲಿಲ್ಲ, ನನಗೂ ಆಗಲಿಲ್ಲ!

ಹೀಗೆ ನಾನು ತಂದೆ-ತಾಯಿಗಳನ್ನೂ, ರಾಜ್ಯಸುಖವನ್ನೂ, ಅರಣ್ಯವಾಸದ ಕಷ್ಟಗಳನ್ನೂ ಮರೆತು ಆನಂದದಿಂದ ಕಾಲಹರಣ ಮಾಡುತ್ತಿರಲು, ಒಂದು ದಿನ ನಾನು ನಮ್ಮ ಸುಶೀಲೆಯೊಡನೆ ಬೇಟೆಯಾಡುವದಕ್ಕೆ ಹೋದೆನು. ಹೊರಗೆ ಹೋಗುವಾಗ ಒಮ್ಮೊಮ್ಮೆ ನಾನು ಸ್ತ್ರೀ ವೇಷವನ್ನು ಧರಿಸುತ್ತಿದ್ದೆನು; ಒಮ್ಮೊಮ್ಮೆ ಸುಶೀಲೆಯು ಪುರುಷ ವೇಷವನ್ನು ಧರಿಸಿ ನನ್ನೊಡನೆ ಬರುತ್ತಿದ್ದಳು. ಆ ದಿನ ನಾವಿಬ್ಬರು ಪುರುಷವೇಷದಿಂದಲೇ ಬೇಟೆಗೆ ಹೋಗಿದ್ದೆವು! ಸುಶೀಲೆಯು ಧನುರ್ವಿದ್ಯೆಯ ಅಭ್ಯಾಸವನ್ನು ಚನ್ನಾಗಿ ಮಾಡಿದ್ದಳು. ಆಕೆಯು ಬೇಟೆಯಾಡುತ್ತಾಡುತ್ತ ಅರಣ್ಯದ ಮಧ್ಯವನ್ನು ಹೊಕ್ಕಳು. ಆಗ ನಾನೂ ಹಿಂಬಾಲಿಸಿ ಹೋಗಿದ್ದೆನೆಂದು ಹೇಳುವ ಕಾರಣವಿಲ್ಲ, ಅಷ್ಟರಲ್ಲಿ ಒಂದು ಹುಲಿಯು ಅಕಸ್ಮಾತ್ತಾಗಿ ಸುಶೀಲೆಯ ಮೇಲೆ ಧುಮುಕಿತ್ತು ಯೋಗ್ಯ ಪ್ರಸಂಗದಲ್ಲಿ ಸಹಾಯವು ದೊರೆಯದಿದ್ದರೆ, ಸುಶೀಲೆಯ ಕಥೆಯು ಮುಗಿದು ಹೋಗುತ್ತಿತ್ತು! ಯಾಕಂದರೆ, ಆ ದುಷ್ಟ ವ್ಯಾಗ್ರ್ರದ ಅಬ್ಬರಕ್ಕೆ ಸುಶೀಲೆಯು ಬೆದರಿ, ಮುಂದುಗಾಣದೆ ಕುದುರೆಯ ಮೇಲೆ ಸುಮ್ಮನೆ ಕುಳಿತಿದ್ದಳು. ಅಷ್ಟರಲ್ಲಿ ನನ್ನ ಧನುಸ್ಸಿನಿಂದ ಹೊರಬಿದ್ದು ಸೂಯಿಗುಟ್ಟುತ್ತ ಹೋದ ತೀಕ್ಷ್ಣ ಬಾಣವು ವ್ಯಾಘ್ರನ ಮುಖವನ್ನು ಪ್ರವೇಶಿಸಿ ಅದನ್ನು ಹಿಂದಕ್ಕೆ ಸರಿಸಿತು. ಆ ಭಯಂಕರ ಪ್ರಾಣಿಯು ತನ್ನ ಕೂರಂಬಿನ ಇರತಕ್ಕೆ ಹಿಂಜರಿಯದೆ ಸಿಟ್ಟಿನಿಂದ ಮತ್ತೆ ಸುಶೀಲೆಯ ಮೇಲೆ ಹಾರಲು, ನಾನು ಕೈಚಮತದಿಂದ ಆ ವ್ಯಾಘ್ರನ ಹಣೆ-ಎದೆ-ಬಾಯಿಗಳಲ್ಲಿ ಅನೇಕ ಬಾಣಗಳನ್ನು ನಡಿಸಿದೆನು. ಆಗ ಅದು ಹಿಂದಕ್ಕೆ ಬಿದ್ದು ವ್ಯಥೆಯನ್ನು ತಾಳಲಾರದೆ ಒದ್ದಾಡಿ ಪ್ರಾಣಬಿಟ್ಟಿತು. ಇದನ್ನು ನೋಡಿ ಸುಶೀಲೆಯು ಕೃತಜ್ಞತಾಪೂರ್ವಕವಾಗಿ ನನ್ನನ್ನು ನೋಡಿ—ಪುರುಷಶ್ರೇಷ್ಠಾ, ಇಂದು ನೀನು ನನಗೆ ಪ್ರಾಣದಾನ ಮಾಡಿರುವದನ್ನು ನಾನು ಎಂದೂ ಮರೆಯುವಹಾಗಿಲ್ಲ, ನೀನು ಧನುರ್ಧರಾಗ್ರೇ ಸರನಿರುತ್ತೀ. ನಿನ್ನಂಥ ಕ್ಷತ್ರಿಯ ವೀರನಿಗೇ ಅಗ್ರೇಸರತ್ವವು ಅಲಂಕಾರ ಭೂತವಾಗಿರುವದು.

ಈ ಮೇರೆಗೆ ಸುಶೀಲೆಯು ನನ್ನ ಅಭಿನಂದನ ಮಾಡುತ್ತಿರಲು, ನಾನು ನನ್ನ ಕುದುರೆಯನ್ನು ಹಿಂದಕ್ಕೆ ತಿರುಗಿಸಿದೆನು. ನಾವಿಬ್ಬರು ಮನೆಗೆ ಬಂದು ಸ್ನಾನಮಾಡಿ ಊಟವಾದ ಬಳಿಕ ವಿಶ್ರಾಂತಿಯನ್ನು ಹೊಂದಿದೆವು. ದಿನಕ್ಕಿಂತ ಆ ದಿನ ನಮಗೆ ವಿಶೇಷವಾಗಿ ಸುಶೀಲೆಗೆ ಬಹಳ ಶ್ರಮವಾಗಿತ್ತು, ಹುಲಿಯ ಭಯದಿಂದ ಆಕೆಯ ಮನಸ್ಸು ಬಹಳ ಅಸ್ವಸ್ಥವಾಗಿತ್ತು, ದಿನದ ಹೊತ್ತಿಗೆ ಆಕೆಯು ನನ್ನ ಮಂದಿರಕ್ಕೆ ಬಾರದಿರಲು, ನಾನೇ ಆಕೆ ಇದ್ದಲ್ಲಿಗೆ ಹೋದೆನು ಆಕೆಯು ಇನ್ನೂ ಮಲಗಿದ್ದಳು. ಗಾಢವಾದ ನಿದ್ರೆಯು ಹತ್ತಿತ್ತು, ನಾನು ದಾಸಿಯರಿಗೆ

ಎಬ್ಬಿಸದಂತೆ ಸನ್ನೆಮಾಡಿ ಅಲ್ಲೇ ಆಸನದಲ್ಲಿ ಕುಳಿತು, ವಿನೋದಕ್ಕಾಗಿ ಆ ದಿನದ ಹುಲಿಯ ಬೇಟೆಯ ಪ್ರಸಂಗದ ಚಿತ್ರವನ್ನು ತೆಗೆಯಹತ್ತಿದನು. ಎರಡನೆಯ ಸಾರೆ ಸುಶೀಲೆಯ ಮೇಲೆ ಜಿಗಿದ ಹುಲಿಯ ಚಿತ್ರವು ಮುಗಿಯಲು, ಅಷ್ಟರಲ್ಲಿ ಸುಶೀಲೆಯು–''ಪುರುಷಶ್ರೇಷ್ಠಾ, ಹುಲಿಯು'' ಎಂದು ಗಾಬರಿಯಾಗಿ ಎದ್ದು ಹಾಸಿಗೆಯಮೇಲೆ ಕುಳಿತು ಕಣ್ಣು ತಿಕ್ಕಿಕೊಂಡು ಸುತ್ತುಮುತ್ತು ನೋಡುತ್ತಾಳೆ, ಹತ್ತರ ದಾಸಿಯರು, ಅತ್ತ ಕಡೆಯ ಆಸನದಲ್ಲಿ ಪುರುಷಶ್ರೇಷ್ಠನು! ಕೂಡಲೆ ಸುಶೀಲೆಯು ಎದ್ದುನಿಂತು, ಪ್ರೀತಿಪೂರ್ವಕವಾದ ಆದರದಿಂದ ನನ್ನನ್ನು ನೋಡುತ್ತ ವಿನಯದಿಂದ—ಪ್ರಮಾದವಾಯಿತು! ತಾವು ಬಂದು ಕುಳಿತಿದ್ದರೂ ನನಗೆ ಎಚ್ಚರವಾಗ ಬಾರದೆ! ದಾಸಿಯರಿಗೂ ಬುದ್ಧಿಯಿಲ್ಲ, ಅವರಲ್ಲಿ ಒಬ್ಬರು ಹತ್ತರ ಬಂದು ನಿಂತಿದ್ದರೆ, ನನಗೆ ಎಚ್ಚರವಾಗುತ್ತಿತ್ತು! ಪುರುಷಶ್ರೇಷ್ಠರೇ, ನಿಮ್ಮಿಂದ ಇಂದು ನನ್ನ ಪ್ರಾಣರಕ್ಷಣವಾಯಿತು. ಜಾಗ್ರತಿಯಲ್ಲಿಯೂ, ಸ್ವಪ್ನದಲ್ಲಿಯೂ ಅದೇ ಪ್ರಸಂಗವು ನನ್ನ ಕಣ್ಣಿಗೆ ಕಟ್ಟಿರುತ್ತದೆ. ನಾನು ''ಪುರುಷಶ್ರೇಷ್ಠಾ'' ಎಂದು ಕನಸಿನಲ್ಲಿ ಕರೆದರೂ, ನನ್ನ ಸಂಕಟನಿವಾರಣಕ್ಕಾಗಿ ನಿಜವಾಗಿಯೇ ನೀವು ಸಿದ್ಧರಾಗಿ ಕುಳಿತಿರುವಿರಿ! ನುಡಿದಂತೆ ನನ್ನ ದುರ್ನಿವಾರವಾದ ಪ್ರಾಣಸಂಕಟವನ್ನು ದೂರಮಾಡಿದಿರಿ. ಹೀಗೆಯೇ ನಿಮ್ಮಿಂದ ನನ್ನ ಸಂಕಟಗಳೆಲ್ಲ ದೂರವಾಗಿ, ನಾನು ಜನ್ಮ ಜನ್ಮಾಂತರಗಳಲ್ಲಿ ನಿಮ್ಮ ತೊತ್ತಾಗಿರುವಂತೆ ಈಶ್ವರನು ಅನುಗ್ರಹಿಸಲಿ!!

ಆ ಕೋಮಲೆಯು ಆಡಿದ ಈ ಮಾತುಗಳನ್ನು ಕೇಳಿ, ನನಗೆ ಬಹಳ ಸಮಾಧಾನ ವಾಯಿತು. ಆಕೆಯು ನನ್ನನ್ನು ಬಹುವಚನದಿಂದ ಕರೆಯಲಾರಂಬಿಸಿದ್ದು ಇದೇ ಮೊದಲೆಂದು ಹೇಳಬಹುದು. ಅವಳಲ್ಲಿ ಮೊದಲಿನ ಸರಳತನವು ಇಂದು ಕಂಡುಬರಲಿಲ್ಲ, ನಾನು ತನ್ನ ಪ್ರಾಣವನ್ನು ರಕ್ಷಿಸಿದೆನೆಂಬ ಉಪಕಾರದಿಂದಲೋ, ನನ್ನ ಶೌರ್ಯವನ್ನು ಕಣ್ಣುಮುಟ್ಟ ನೋಡಿದ್ದರಿಂದಲೋ, ಬೇರೆ ಯಾವ ಕಾರಣದಿಂದಲೋ ತಿಳಿಯದು ಆ ಸುಂದರಿಯು ನನ್ನನ್ನು ಮೊದಲಿಗಿಂತ ಹೆಚ್ಚು ಗೌರವಿಸಹತ್ತಿದಳು. ಆಕೆಯ ನಿರ್ಮಲ ಮನಸ್ಸಿನಲ್ಲಿ ನನ್ನ ವಿಷಯವಾಗಿ ಆದರ–ಲಜ್ಜಾ–ಭಯಗಳು ಉತ್ಪನ್ನವಾದಂತೆ ತೋರಿದವು. ಭೂಸುರೋತ್ತಮಾ, ಪ್ರಾಯಸ್ಥರಿಗೆ ತಮ್ಮ ಆದರಕ್ಕೆ ಪಾತ್ರಳಾದವಳ ಮನಸ್ಸನ್ನು ಪ್ರಸನ್ನೀಕರಿಸಿ ಕೊಳ್ಳುವದಕ್ಕಿಂತ, ಹೆಚ್ಚು ಆನಂದಕರವಾದ ಕೆಲಸವು ಯಾವದಿರುವದು? ನನ್ನ ವಿಷಯವಾಗಿ ಸುಶೀಲೆಯು ಪ್ರಸನ್ನ ಚಿತ್ತಳಾದ್ದರಿಂದ, ನನಗೆ ಸ್ವರ್ಗಸುಖವು ಪ್ರಾಪ್ತವಾದಂತಾಯಿತು. ನಾನು ಆಕೆಯನ್ನು ಕುರಿತು— ''ಸನ್ಮಾನನೀಯಳಾದ ಅಬಲಾಮಣಿಯೇ, ನಿನ್ನ ಮಹದಾಶ್ರಯದಿಂದ ನನಗೆ ಎಣೆಯಿಲ್ಲದ ಸೌಖ್ಯವು ಪ್ರಾಪ್ತವಾಗಿರಲು, ಏನು ಮಾಡಿದರೂ ನಿನ್ನ ಉಪಕಾರವು ತೀರುವ ಹಾಗಿಲ್ಲ, ಸ್ವಜನರಲ್ಲಿ ಹೆಚ್ಚಿನ ಉಪಚಾರವು ಬೇಡ. ಇಂದಿನ ಬೇಟೆಯಲ್ಲಿ ನೀನು ವಿಶೇಷವಾಗಿ ದಣಿದಿರುವೆಯೆಂದು ತಿಳಿದು ನಿನ್ನ ಸಮಾಧಾನಕ್ಕಾಗಿ ನಾನೇ ಬಂದೆನು. ಆಗಲಿ, ಇಂದು ಇಲ್ಲಿಯೇ ಆಡೋಣ, ಎಂದು ನಾವಿಬ್ಬರು ಆನಂದದಿಂದ ಚದುರಂಗವಾಡಹತ್ತಿದೆವು''

ಹೀಗೆಯೇ ಆನಂದದಿಂದ ನಾವು ಕಾಲಹರಣ ಮಾಡುತ್ತಿದ್ದೆವು ದಿನ ದಿನಕ್ಕೆ ಪರಸ್ಪರರಲ್ಲಿ ಪ್ರೇಮವು ಹೆಚ್ಚುತ್ತ ಹೋಯಿತು. ಒಬ್ಬರನ್ನೊಬ್ಬರು ಅಗಲಿ ಇರದಾದೆವು ಪರಸ್ಪರರ

ದರ್ಶನವಾದ ಕೂಡಲೆ ಇಬ್ಬರಿಗೂ ಹರ್ಷವಾಯುವಿನ ಸಂಚಾರವಾದಂತಾಗುತ್ತಿತ್ತು. ಆ ಕೋಮಲೆಯು ನನ್ನನ್ನು ಏನೋ ಕೇಳಬೇಕೆಂದು ಹಲವು ಸಾರೆ ಯತ್ನಿಸಿದಳು. ಆದರೆ ಆಗ ಅವಳ ಮುಖದಿಂದ ಶಬ್ದಗಳೇ ಹೊರಡುತ್ತಿದ್ದಿಲ್ಲ! ಅದರ ಕಾರಣವು ಲಜ್ಜೆಯೋ, ಪುಕ್ಕತನವೋ, ಸೌಜನ್ಯವೋ ಯಾರಿಗೆ ಗೊತ್ತು! ಬಿಗಿಹಿಡಿದು ಗುದ್ದಿ ಕೂಡ್ರಿಸಿದ್ದ ನನ್ನ ಖೋಡಿ ಮನಸ್ಸು, ಬರಬರುತ್ತ ಮತ್ತೆ ಕಿಡಿಗೇಡಿತನ ಮಾಡಹತ್ತಿತು. ಅದರ ಕೈಯಲ್ಲಿ ಸಿಕ್ಕು ನಾನು ಎಷ್ಟೋಸಾರೆ ಸೌಜನ್ಯಕ್ಕೆ ಹಾನಿ ತಂದುಕೊಂಡೆನು. ವಿಪ್ರವರ್ಯಾ, ಆಗಿನ ಕಾಲದಲ್ಲೆಲ್ಲ ನಮ್ಮ ಸುಶೀಲೆಯು ಮುಗುಳುನಗೆಯಿಂದ ನನ್ನನ್ನು ನೋಡಿ ಕ್ಷಮಿಸುತ್ತಿದ್ದಳು. ಆ ಕ್ಷಮೆಯಿಂದ ನಾನು ಮತ್ತಿಷ್ಟು ಎಚ್ಚರಗೆಡುತ್ತಿದ್ದೆನು. ಒಂದು ದಿನ ನಾವು ಪಗಡಿಯಾಡ ಹತ್ತಿದ್ದೇವೆ, ದಾಸಿಯರಲ್ಲಿ ನಾಲ್ಕು ಜನರು ಆ ಸುಂದರಿಯ ಕಡೆಗೆ, ನಾಲ್ಕು ಜನರು ನನ್ನ ಕಡೆಗೆ ಆಗಿ ಕುಳಿತುಕೊಂಡಿದ್ದಾರೆ, ನಾಲ್ಕಾರು ಆಟಗಳು ಆಗಿ ಅವುಗಳಲ್ಲೆಲ್ಲ ಬಹುತರ ಆ ಸುಕುಮಾರಿಯೇ ಗೆದ್ದದ್ದರಿಂದ, ಆವೇಶಗೊಂಡು ಸ್ವಲ್ಪ ಲಜ್ಜೆದೊರೆದು ಆಕೆಯು ನನ್ನೊಡನೆ ಹಾಸ್ಯವಿನೋದಗಳನ್ನು ಮಾಡತೊಡಗಿದ್ದಾಳೆ, ಸೋತದ್ದಕ್ಕಾಗಿ ನನ್ನ ಧನ್ಯವಾದವನ್ನು ನಾನೇ ನನ್ನ ಮನಸ್ಸಿನಲ್ಲಿ ಮಾಡಿಕೊಳ್ಳಹತ್ತಿದ್ದೇನೆ, ಮೋಹಾತಿಶಯದಿಂದ ನನ್ನ ಮೈಮೇಲಿನ ಎಚ್ಚರವು ತಪ್ಪಿದಂತಾಗಿರುತ್ತದೆ. ಇಂಥ ಬಂಗಾರದಂಥ ಹೊತ್ತಿನಲ್ಲಿ ಆ ಹರಿಣಾಕ್ಷಿಯು, ಸುಂದರವಾದ ಕಟಾಕ್ಷಗಳಿಂದ ನನ್ನನ್ನು ನೋಡುತ್ತ—ಈ ಸಾರೆ ಆಟದಲ್ಲಿ ಒಂದು ಪಣ ಮಾಡಬೇಕು. ಈ ಸಾರೆಯಂತು ನಾನು ಗೆಲ್ಲುವದೇ ನಿಶ್ಚಯ! ಆಗ ಸೋತವರು ಏನು ಮಾಡಬೇಕು? ಎಂದು ಕೇಳಲು, ನಿರ್ಲಜ್ಜನಾದ ನಾನು—ಮಾಡುವದೇನು? ಗೆದ್ದವರು ಸೋತವರಿಗೆ ಒಂದು ಚುಂಬನ ಕೊಡಬೇಕು, ಎಂದು ಪಕ್ಕನೆ ನುಡಿದುಬಿಟ್ಟೆನು. ಅದನ್ನು ಕೇಳಿದ ಕೂಡಲೆ ದಾಸಿಯರು ಬೆರಗಾಗಿ ನನ್ನನ್ನು ನೋಡಹತ್ತಿದರು. ಆ ಚಂಚಲಾಕ್ಷಿಯು ಚಟ್ಟನೇ ಎದ್ದು—ಸುಮಧ್ಯಮೇ, ಹೊತ್ತಾಯಿತು, ಇನ್ನು ಆಟ ಸಾಕು, ಎಂದು ನುಡಿದು ಹೊರಟು ಹೋದಳು. "ಮಿಂಚಿ ಹೋದ ಮಾತಿಗೆ ಚಿಂತಿಸಿ ಫಲವೇನು?" ಕುಲೀನತೆಗೆ ಒಪ್ಪದ ಮಾತನ್ನು ಆಡಿದ್ದಕ್ಕಾಗಿ ನನಗೆ ಬಹಳ ಪಶ್ಚಾತ್ತಾಪ ವಾಯಿತು. ಅಂದು ರಾತ್ರಿ ನಾನು ಊಟ ಮಾಡಲಿಲ್ಲ, ಬೆಳತನಕ ನನಗೆ ನಿದ್ರೆ ಬರಲಿಲ್ಲ. ಬ್ರಾಹ್ಮಣೋತ್ತಮನೇ, ಎರಡು ದಿನ ನಾನು ಆಟದ ಕಡೆಗೆ ಹಣಿಕಿಸಹ ನೋಡಲಿಲ್ಲ, ಮನಬಿಚ್ಚಿ ಯಾರಸಂಗಡಲೂ ಮಾತಾಡಲಿಲ್ಲ. ಇನ್ನು ಮೇಲೆ ಆದಷ್ಟು ಮೌನದಿಂದಲೇ ಇರತಕ್ಕದ್ದೆಂದು ನಿಶ್ಚಯಮಾಡಿಕೊಂಡೆನು.

ನನ್ನ ಈ ಔದಾಸೀನ್ಯದಿಂದ ಆ ಸುಕುಮಾರಿಗೆ ಸುಖವಾದಂತೆ ತೋರಲಿಲ್ಲ. ಮೂರನೆಯ ದಿವಸ ಆಕೆಯು ಎರಡು ತಾಸು ಹೊತ್ತು ಇರುತ್ತ ತಾನಾಗಿ ನನ್ನ ಮಂದಿರಕ್ಕೆ ದಾಸಿಯರೊಡನೆ ಬಂದು, ಮಂಜುಲ ಸ್ವರದಿಂದ—ಪ್ರತಾಪಶಾಲಿಗಳೇ, ಈಗೆರಡು ದಿನಗಳಿಂದ ನನ್ನ ಮನಸ್ಸಿಗೆ ಸೊಗಸಿಲ್ಲ. ಈ ದಿನ ಒಬ್ಬೊಬ್ಬರು ಒಂದೊಂದು ನಾವೆಯಲ್ಲಿ ಕುಳಿತು, ಕ್ರೀಡಾವನ ದೊಳಗಿನ ಸರೋವರದಲ್ಲಿ ಸಂಜೆಯವರೆಗೆ ಯಥೇಚ್ಛವಾಗಿ ಸಂಚರಿಸೋಣ. ನಾನು ಮೊನ್ನೆ ನಡುವೇ ಆಟ ಬಿಟ್ಟು ಎದ್ದು ಹೋದದ್ದರಿಂದ, ನಿಮಗೆ ಸಿಟ್ಟು ಬಂದಂತೆ ತೋರುತ್ತದೆ. ನಾನು

ಯಾರ ಮೇಲಿನ ಸಿಟ್ಟಿನಿಂದಲೂ ಆಟವನ್ನು ಬಿಡಲಿಲ್ಲ. ಮನಸ್ಸಿಗೆ ಏನೋ ಒಂದು ತರವಾದ್ದರಿಂದ ಎದ್ದುಹೋದೆನು. ನನ್ನ ಈ ಉದ್ಧಟತನಕ್ಕಾಗಿ ಕ್ಷಮಿಸಬೇಕು ಇಗೋ, ಸೆರಗೊಡ್ಡುತ್ತೇನೆ, ಈ ಅಬಲೆಯಮಾತನ್ನು ನಡಿಸಿ ಜಲಕ್ರೀಡೆಗಾಗಿ ಸಿದ್ಧರಾಗಬೇಕು, ಎಂದು ಪ್ರಾರ್ಥಿಸುವಾಗ, ಆ ಸುಂದರಿಯು ಸಂಪೂರ್ಣವಾಗಿ ನನ್ನ ಮನಸ್ಸನ್ನು ಎಳಕೊಂಡು ಬಿಟ್ಟಳು. ಅಂದಿನಂಥ ಸುಂದರವಾದ ಉಡುಪು–ತೊಡಪುಗಳನ್ನೂ, ಅಲಂಕಾರಗಳನ್ನೂ ಆಕೆಯು ಎಂದೂ ಹಾಕಿಕೊಂಡಿದ್ದಿಲ್ಲ. ನಾನು ಮತ್ತೆ ನಿರ್ಲಜ್ಜನಾಗಿ ದೈನ್ಯದಿಂದ ಆ ಸುಂದರಿಯ ಮುಖ ಕಮಲವನ್ನು ಎವೆಯಿಕ್ಕದೆ ನೋಡಹತ್ತಿದೆನು; ಆಗ ಆಕೆಯು–ಹಾ! ಇನ್ನು ತಡವಾಗುತ್ತದೆ ಏಳಬೇಕು, ಎಂದು ನುಡಿದು ಮಂದಿರದಿಂದ ಹೊರಡಲು, ನಾನೂ ಪರವಶನಾಗಿ ಆಕೆಯ ಬೆನ್ನ ಹತ್ತಿದೆನು.

ಸರೋವರದ ತೀರದಲ್ಲಿದ್ದ ಶಿಲಾಮಂಟಪಕ್ಕೆ ಹೋಗಿ ನಾವು ಕುಳಿತುಕೊಳ್ಳಲು, ದಾಸಿಯರು ತೋಟದೊಳಗಿನ ಮಲ್ಲಿಗೆ ಮೊದಲಾದ ತರತರದ ಸುಗಂಧ ಪುಷ್ಪಗಳ ಅರಳು ಮೊಗ್ಗೆಗಳನ್ನು ತಂದು, ಮಾಲೆಗಳನ್ನು ಕಟ್ಟಹತ್ತಿದರು. ನಮ್ಮ ಸುಶೀಲೆಯು ತನ್ನ ಕೋಮಲ ಕರಗಳಿಂದ ಒಂದು ಸುಂದರವಾದ ಹಾರವನ್ನೂ, ಮನೋಹರವಾದ ಒಂದು ತುರಾಯಿ ಯನ್ನೂ ಹಾ ಹಾ ಅನ್ನುವದರೊಳಗೆ ಕಟ್ಟಿದಳು. ಬ್ರಹ್ಮರ್ಷಿಯೇ, ಆಗಿನ ಸುಖವನ್ನೇನು ವರ್ಣಿಸಲಿ! ಇಳಿ ಹೊತ್ತಾಗಿದೆ; ಅರಳು ಮೊಗ್ಗೆಗಳ ಮಿಶ್ರಸುಗಂಧವು ಎಲ್ಲ ಕಡೆಗೆ ಇಡಿಗಿದೆ; ತಂಗಾಳಿಯು ಅಲ್ಲಿ ಕೂಡಿದ್ದ ಸುಂದರಿಯರ ಸುಂದರಾಲಕಗಳನ್ನು ಮೆಲ್ಲನೆ ಹಾರಿಸುತ್ತ ಸುಳಿದಾಡಹತ್ತಿದೆ; ಪ್ರಮದೆಯರ ತಂಡವು ಕೈಯೊಳಗಿನ ಮಾಲೆಗಳನ್ನು ಮುಗಿಸತೊಡಗಿದೆ; ಸುಶೀಲೆಯಲ್ಲಿ ನಟ್ಟಿದ್ದ ನನ್ನ ಕಣ್ಣು—ಮನಗಳು ಕಿತ್ತಲಾರದಾಗಿವೆ. ಇಂಥ ಪ್ರಸಂಗದಲ್ಲಿ ಆ ಚಾರುಗಾತ್ರೆಯು ಮುಗುಳುನಗೆಯಿಂದ ನನ್ನ ಮೋರೆಯನ್ನು ನೋಡುತ್ತ ಸುಮಧ್ಯಮೆಯ ಕೈಯಲ್ಲಿ ಹಾರವನ್ನೂ, ತುರಾಯಿಯನ್ನೂ ಕೊಟ್ಟಳು. ಚತುರಳಾದ ಸುಮಧ್ಯಮೆಯು ನನ್ನ ಬಳಿಗೆಬಂದು, ಕೊರಳಲ್ಲಿ ಹಾರವನ್ನು ಹಾಕಿ, ಕೈಯಲ್ಲಿ ತುರಾಯಿ ಕೊಟ್ಟಳು. ದ್ವಿಜಶ್ರೇಷ್ಠಾ, ಸ್ವರ್ಗದಲ್ಲಿ ಇದಕ್ಕೂ ಹೆಚ್ಚಿನ ಸುಖವಿರಬಹುದೇ, ನೀನೇ ಹೇಳು! ಮಾಲೆ–ತುರಾಯಿಗಳನ್ನು ಕಟ್ಟಿ ಕೊಟ್ಟ ಕೂಡಲೇ ಆ ಚಪಲೆಯು ತನ್ನ ನಾವೆಯಕಡೆಗೆ ನಡೆದಳು. ನಾವೂ ಆಕೆಯನ್ನು ಹಿಂಬಾಲಿಸಿದೆವು. ನಾವೆಯನ್ನೇರಿದ ಆ ವಿಶಾಲಾಕ್ಷಿಯನ್ನು ದಾಸಿಯರು ಮಾಲೆಗಳಿಂದ ಅಲಂಕರಿಸಲು, ಆಕೆಯು ಸೌಂದರ್ಯದಿಂದ ಸ್ವರ್ಗಾಂಗನೆಯನ್ನು ಮೀರಿದಳು! ಆ ದಿವ್ಯ ಮೂರ್ತಿಯು ಈಗೂ ನನ್ನ ಕಣ್ಣಮುಂದೆ ಕಟ್ಟಿರುತ್ತದೆ.

ನಮ್ಮೆಲ್ಲರ ನಾವೆಗಳು ಸರೋವರದಲ್ಲಿ ಸಾಗಿದವು. ಅಬಲೆಯರು ಆವೇಶದಿಂದ ಹುಟ್ಟುಹಾಕಿ, ನಾನು ಮುಂದೆ ನೀನು ಮುಂದೆ ಎಂದು ನಾವೆ ನಡಿಸುವದನ್ನು ನೋಡಿ, ನನಗೆ ಕೌತುಕವಾಯಿತು. ಆಗಿನ ನಮ್ಮ ಚಾರುಗಾತ್ರೆಯ ಸೊಬಗನ್ನೇನು ವರ್ಣಿಸಲಿ! ಹುಟ್ಟು ಹಾಕಿ ದಣಿದದ್ದರಿಂದ ಅವಳ ಮುಖಕಮಲವು ಬೆವತಿತ್ತು, ಸರೋವರದೊಳಗಿನ ತಂಗಾಳಿಯಿಂದ ಅವಳ ನೀಲಾಲಕಗಳು ಹಾರಾಡುತ್ತಿದ್ದವು, ಹುಟ್ಟು ಹಾಕುವಾಗ ಸೆರಗು ಜಾರಿ

ಸ್ವಲ್ಪ ಹೊರಬಿದ್ದಿದ್ದ ಬಟ್ಟ ಕುಚಗಳು ಕುಪ್ಪಸವನ್ನು ಒತ್ತಿ ದೃಷ್ಟಿ ಬರುತ್ತಿದ್ದವು. ಅಹಹ! ದಣಿದು ಹುಟ್ಟು ಇಟ್ಟು ವಿಶ್ರಾಂತಿಗಾಗಿ ನಾವೆಯಲ್ಲಿ ಎದ್ದು ನಿಂತಾಗ, ಹೊರಸೂಸುವ ಆ ಹರಿಣಾಕ್ಷಿಯ ಕಟಾಕ್ಷಗಳ ತಾಕಲಾಟದಿಂದ ಯಾವ ಪುರುಷನು ಭ್ರಮಿಷ್ಟನಾಗಲಿಕ್ಕಿಲ್ಲ? ಶ್ರಮವಾರಿ ಬಿಂದುಗಳನ್ನು ಸೆರಗಿನಿಂದ ಒರಿಸಿಕೊಂಡು, ಸುಂದರಾಲಕಗಳನ್ನು ಸರಿಮಾಡಿ ಕೊಳ್ಳುವಾಗ ಆಕೆಯ ಚಾರು ಗಾತ್ರವನ್ನು ನೋಡಿ, ಯಾವನು ಮೋಹಿಸಲಿಕ್ಕಿಲ್ಲ? ಆನಂದದ ಲಹರಿಗಳೇಳಲು, ಆಕೆಯು ಮಂಜುಳಸ್ವರದಿಂದ ಗಾನಮಾಡುವಾಗ, ಯಾವನ ಧೈರ್ಯವು ಹಾಳಾಗಿ ಹೋಗಲಿಕ್ಕಿಲ್ಲ! ಬ್ರಾಹ್ಮಣಶ್ರೇಷ್ಠಾ, ಇಂಥ ಸುಂದರ ಮೂರ್ತಿಯನ್ನು ಬ್ರಹ್ಮನು ಸೃಷ್ಟಿಸಿರಲು, ವನಿತಾದಿ ವಿಷಯಗಳು ವಿಷಸಮವೆಂದು ಹರಟುವವರ ಹರಟೆಯು ವ್ಯರ್ಥವಲ್ಲವೆ? ಸಂಸಾರವು ಅಸಾರವೆಂದು ಗಿರಿ—ಗಂಹರಗಳನ್ನು ಸೇರುವವರ ಪೌರುಷವು ನಿಂದ್ಯವಾದದ್ದಲ್ಲವೇ? ನಾನಂತು ಸ್ವರ್ಗವಿದ್ದರೆ, ಅದು ಕ್ರೀಡಾವನದೊಳಗಿನ ಆಗಿನ ಕಾಲದ ಸರೋವರವೇ ಆಗಿರಬಹುದೆಂದು ತಿಳಿಯುವೆನು!

ದ್ವಿಜೋತ್ತಮಾ, ದಿನಮಣಿಯು ದಣಿದು ಪಶ್ಚಿಮದಿಕ್ಕಿನಲ್ಲಿ ಮರೆಯಾಗುವ ಹವಣಿಕೆಯಲ್ಲಿದ್ದನು; ಹೂ ಬಿಸಿಲು ಅಲ್ಲಲ್ಲಿ ಬಿದ್ದು ಸರೋವರದ ಶೋಭೆಯನ್ನು ಹೆಚ್ಚಿಸುತ್ತಿತ್ತು, ಪಕ್ಷಿಗಳು ಗೂಡು ಸೇರುವದಕ್ಕಾಗಿ ಆಕಾಶದಲ್ಲಿ ಹಾರಾಡುತ್ತಿದ್ದವು; ಕತ್ತಲಾಗುತ್ತದೆಂದು ಎಲ್ಲರೂ ನಮ್ಮ ನಮ್ಮ ನಾವೆಗಳನ್ನು ತಿರುಗಿಸಿದ್ದೆವು. ಅಷ್ಟರಲ್ಲಿ ನಾವೆಯೊಳಗೆ ಹುಟ್ಟುಹಾಕಿ ದಣಿದು ವಿಶ್ರಾಂತಿಯನ್ನು ಹೊಂದುತ್ತಿದ್ದ ಸುಶೀಲೆಯು, ತತ್ತರಿಸುತ್ತ ಒಮ್ಮಿಂದೊಮ್ಮೆ ಸರೋವರದಲ್ಲಿ ಬಿದ್ದಳು! ಆಗ ನನ್ನ ಹೃದಯಕ್ಕೆ ಸಿಡಿಲು ಬಡಿದಂತಾಯಿತು! ದಾಸಿಯರು ಹಾ ಹಾ ಕಾರವನ್ನುಂಟು ಮಾಡಿದರು! ದಿಕ್ಕುಗಳು ಶೂನ್ಯವಾದವು! ಕೂಡಲೆ ನಾನು ಸರೋವರದಲ್ಲಿ ಹಾರಿ, ಕ್ಷಣಾರ್ಧದಲ್ಲಿ ಸುಶೀಲೆಯ ಕೈಹಿಡಿದು ಮೇಲಕ್ಕೆತ್ತಿ ನಾವೆಯನ್ನು ಹತ್ತಿಸಿ ನಾನೂ ಹತ್ತಿದೆನು. ಭಯದಿಂದ ನಡುಗುತ್ತಿದ್ದ ನಮ್ಮ ಚಂಚಲಾಕ್ಷಿಯು ಬೆದರಿ ನನ್ನನ್ನು ಗಟ್ಟಿಯಾಗಿ ಅಪ್ಪಿಕೊಂಡು—ಪುರುಷಶ್ರೇಷ್ಠಾ, ಈ ಗೋಧೂಲಿಯ ಲಗ್ನದಲ್ಲಿ ಈ ಅನಾಥಳ ಪ್ರಾಣರಕ್ಷಣ ಮಾಡುವಾಗ ಪಾಣಿಗ್ರಹಣ ಮಾಡಿದ್ದು ವ್ಯರ್ಥವಾಗಬಾರದು ಕಂಡೆಯಾ! ಇನ್ನು ಪದ್ಮನಯನೆಯು ನಿರಾಶ್ರಿತಳಾಗಿ ಇರಲಾರಳು! ಇಗೋ, ಪಗಡೆಯ ಆಟದಲ್ಲಿ ನಿನ್ನ ಪಾಲಿನದಾಗಿ ಉಳಿದ ಚುಂಬನವು! ಎಂದು ಮುಖವೆತ್ತಲು, ಆಕೆಯ ಪಾಣಿಗ್ರಹಣ ಮಾಡಿದ ನಾನು, ಮೆಲ್ಲನೆ ಅದನ್ನು ಚುಂಬಿಸಿ ಕೃತಕೃತ್ಯನಾದೆನು!

ದುರದೃಷ್ಟ

ಪ್ರಿಯ ವಾಚಕರೇ, ಈ ಮೇರೆಗೆ ಆಕಸ್ಮಿಕವಾಗಿ ಆದ ಪ್ರಾಯಸ್ಥರ ಪಾಣಿಗ್ರಹಣ ಮಹೋತ್ಸವವನ್ನು ಓದಿ ನಿಮ್ಮ ಮನಸ್ಸು ಸಮಾಧಾನಪಟ್ಟಿರಬಹುದು. ಆ ಮಹೋತ್ಸವದಲ್ಲಿ ಚಾರುಗಾತ್ರೆಯು "ಇನ್ನು ಪದ್ಮನಯನೆಯು ನಿರಾಶ್ರಿತಳಾಗಿ ಇರಲಾರಳು!" ಎಂದು ನುಡಿದದ್ದನ್ನು ಓದಿ ಚಾಣಾಕ್ಷರಾದ ನೀವು ಮೊದಲೇ ತರ್ಕಿಸಿದ್ದಂತೆ, ಅವಳು ವೀರವರ್ಮನ ಮಗಳಾದ ಪದ್ಮನಯನೆಯೆಂದು ಗೊತ್ತು ಹಿಡಿದಿರಬಹುದು. ನಿಮ್ಮಂತೆ ಸುಮತಿಯಾದರೂ ಗೊತ್ತು ಹಿಡಿದನು. ಇರಲಿ, ತಿಳಿಯತಕ್ಕ ಸಂಗತಿಗಳು ಇನ್ನೂ ಹಲವು ಇರುವವು. ಕಮಲಾಕ್ಷನು ತನ್ನ ವೃತ್ತಾಂತವನ್ನು ಪೂರ್ಣವಾಗಿ ಹೇಳಿದನೆಂದರೆ ಎಲ್ಲ ಗೊತ್ತಾಗುವದು. ಬ್ರಹ್ಮಾನಂದದ ಸ್ಮರಣದಿಂದ ಸಂತುಷ್ಟನಾಗಿದ್ದ ಸುಮತಿಯನ್ನು ಕುರಿತು ಕಮಲಾಕ್ಷನು—ಭೂಸುರೋತ್ತಮನೇ, ಈ ಮೇರೆಗೆ ನಮ್ಮಿಬ್ಬರ ಪಾಣಿಗ್ರಹಣವಾದ ಬಳಿಕ ಆನಂದದಿಂದ ಎಲ್ಲರೂ ಮನೆಗೆ ಬಂದೆವು. ಇಂದಿನಿಂದ ನಮ್ಮ ಸುಶೀಲೆಯ, ಅಲ್ಲ ಅಲ್ಲ ಪದ್ಮನಯನೆಯ ನಡತೆಯಲ್ಲಿ ಅಂತರವಾಗಹತ್ತಿತು. ಇಲ್ಲಿಯವರೆಗೆ ಪರಕೀಯನಾಗಿದ್ದ ನಾನು ಇಂದು ಪದ್ಮನಯನೆಯ ಪತಿಯಾದ್ದರಿಂದ, ನಮ್ಮಿಬ್ಬರಲ್ಲಿ ಸತೀ—ಪತಿಗಳ ಪವಿತ್ರ ಸಂಬಂಧವು ಉತ್ಪನ್ನವಾಯಿತು. ಈ ಸಂಬಂಧಕ್ಕನುಸರಿಸಿ ನಮ್ಮಿಬ್ಬರ ನಡತೆಯಲ್ಲಿ ಪ್ರೇಮ ಗೌರವ ಆದರ ಇವು ಹೆಚ್ಚುತ್ತ ಹೋದವು. ಪರಸ್ಪರರ ವೃತ್ತಾಂತವನ್ನು ತಿಳಕೊಳ್ಳುವದಕ್ಕಾಗಿ ನಮ್ಮಿಬ್ಬರ ಮನಸ್ಸು ಹರಿಯ ಹತ್ತಿದವು. ಒಂದು ದಿನ ರಾತ್ರಿ ನಾವು ಆನಂದದಿಂದ ಮಾತಾಡುತ್ತ ಕುಳಿತಾಗ, ನಾನು ಪದ್ಮನಯನೆಯನ್ನು ಕುರಿತು—ಪ್ರಿಯೇ, ಪದ್ಮನಯನೇ, ನೀನು ನನ್ನ ಪಾಣಿಗ್ರಹಣ ಮಾಡಿದ್ದರಿಂದ ನಾನು ಕೃತಾರ್ಥನಾದೆನು. ನನ್ನ ವೃತ್ತಾಂತವನ್ನು ಕೇಳಬೇಕೆಂಬ ಕುತೂಲಹವು, ಸ್ವಾಭಾವಿಕವಾಗಿ ನಿನ್ನಲ್ಲಿ ಉಂಟಾಗಿರಬಹುದು. ನೀನು ಯಾರೆಂಬದನ್ನು ತಿಳಿಕೊಳ್ಳುವದಕ್ಕೆ ನನ್ನ ಮನಸ್ಸಾದರೂ ಹರಿಯುತ್ತದೆ. ಆದರೆ ನನ್ನ ವೃತ್ತಾಂತವನ್ನು ಮೊದಲು ಕೇಳು; ಹಿಂದಿನಿಂದ ನಿನ್ನ ವೃತ್ತಾಂತವನ್ನು ಹೇಳುವೆಯಂತೆ, ಎಂದು ನುಡಿದು ನಿನ್ನ ಮುಂದೆ ಇದೇ ಈಗ ಹೇಳಿದಂತೆ ನಾನು ಯಾವ ದೇಶದ ರಾಜಪುತ್ರನು, ನನ್ನ ಹೆಸರೇನು, ಯಾವ ಕಾರಣದಿಂದ ಕಾರಾಗೃಹದಲ್ಲಿ ಇಡಲ್ಪಟ್ಟೆನು, ಅಲ್ಲಿಂದ ಹೇಗೆ ಹೊರಬಿದ್ದೆನು, ಸಂಕಟಗಳ ಪರಂಪರೆಯು ಹೇಗೆ ಒದಗಿತು, ಗುಹಾ ಪ್ರವೇಶವು ಹೇಗಾಯಿತು, ಉಪವನವನ್ನು ನೋಡಿ ಎಷ್ಟು ಬೆರಗಾದೆನು, ಸರೋವರದ ತೀರದ ಶಿಲಾ ಮಂಟಪದಲ್ಲಿ ಹೇಗೆ ಶಯನ ಮಾಡಿದೆನು, ಎಂಬ ಇವೇ ಮೊದಲಾದ ಸಂಗತಿಗಳನ್ನು ಒಂದು ಅಕ್ಷರ ಬಿಡದೆ ಹೇಳಿ, ನಾನು ಅವಳನ್ನು ಕುರಿತು—ಚಾರುಗಾತ್ರಿಯೇ, ಸರೋವರದ ಶಿಲಾ ಮಂಟಪದಲ್ಲಿ ಮಲಗಿಕೊಂಡಿದ್ದ ನಾನು, ನಿನ್ನ ಈ ಭವ್ಯ ಮಂದಿರಕ್ಕೆ ಹೇಗೆ ಬಂದೆನೆಂಬದರ ಕಲ್ಪನೆಯೇ ಹರಿಯದ ಬಳಿಕ ಮುಂದಿನ ಸಂಗತಿಯನ್ನು ನಾನೇನು ಹೇಳುತ್ತೇನೆ? ಇದಕ್ಕಾಗಿ ಮನಸ್ಸಿನಲ್ಲಿ ವಿಕಲ್ಪವನ್ನು ತಂದುಕೊಳ್ಳಲಾಗದು, ಎಂದು ಹೇಳಿದೆನು.

ಈ ಪ್ರಕಾರ ನನ್ನ ವೃತ್ತಾಂತವನ್ನು ಕೇಳಿ, ಆ ಸುಂದರಿಯು ಪ್ರೇಮಯುಕ್ತ ಸೌಮ್ಯ ಸ್ವರದಿಂದ – ಪ್ರಭುಗಳೇ, ಸಾಕು ಬಿಡಿರಿ, ಮುಂದಿನ ಎಲ್ಲ ಸಂಗತಿಯು ನನಗೆ ಗೊತ್ತಿದ್ದದ್ದೇ ಅದೆ ಇಂದಿಗೆ ನಾನು ಧನ್ಯಳಾದೆನು. ಕಪಿಂಜಲ ಋಷಿಗಳ ಒಂದು ಮಾತು ಸತ್ಯವಾಯಿತು. ಆ ಮಹಾತ್ಮನು ನಾನು ಸಾರ್ವಭೌಮನ ಪಟ್ಟದ ರಾಣಿಯಾಗುವೆನೆಂದು ಭವಿಷ್ಯವನ್ನು ಹೇಳಿದ್ದನು. ತಾವು ಆಕಸ್ಮಿಕವಾಗಿ ಕಣ್ಣಿಗೆ ಬಿದ್ದವರಾದ ಕಾರಣ, ತಮ್ಮ ರೂಪವು ಮೋಹಕ ವಿದ್ದಂತೆ, ಅದಕ್ಕೆ ತಕ್ಕ ಗುಣಗಳೂ, ಕುಲೀನತೆಯೂ, ಚಾತುರ್ಯವೂ ತಮ್ಮಲ್ಲಿ ಇರುವವೋ ಇಲ್ಲವೋ ಎಂದು ನಾನು ಶಂಕಿಸುತ್ತಿದ್ದೆನು. ಅವೆಲ್ಲ ತಮ್ಮಲ್ಲಿ ಪರಿಪೂರ್ಣವಾಗಿರುವವಲ್ಲದೆ, ತಾವು ಶೌರ್ಯ ಸಾಗರರಿರುವಿರೆಂದು ಮನಗಂಡೆನು. ನಿಷ್ಕಲಂಕಳಾಗಿದ್ದ ನಾನು, ತಮ್ಮ ಸಂಶಯಗಳನ್ನೆಲ್ಲ ದೂರ ಮಾಡುವೆನೆಂಬ ನಂಬಿಗೆಯಿಂದಲೇ ನನ್ನ ತನುಮನೋಧನ ಗಳನ್ನು ಮನಃಪೂರ್ವಕವಾಗಿ ತಮಗೆ ಅರ್ಪಿಸಿದ್ದೇನೆ. ನನ್ನ ಶರೀರಕ್ಕೂ, ಪ್ರಾಣಕ್ಕೂ ನೀವೇ ಒಡೆಯರು, ಎಂದು ನುಡಿಯಲು, ನಾನು ಆ ಪ್ರಮದೆಯನ್ನು ಕುರಿತು ಕೃತಜ್ಞತೆಯಿಂದ— ಪ್ರಾಣಪ್ರಿಯೇ, ಇತ್ತ ಬಾ. ನೀನು ನಿಷ್ಕಳಂಕಳೆಂಬದನ್ನು ನಿನ್ನ ಸ್ವಾವಲಂಬನದಿಂದಲೇ ನಾನು ತಿಳಕೊಂಡೆನು. ಸುಂದರಿಯೂ, ಸುಗುಣೆಯೂ, ಸುಶಿಕ್ಷಿತಳೂ ಆದ ನೀನು ನನ್ನ ಅರ್ಧಾಂಗಿಯಾದದ್ದರಿಂದ, ನನಗಿಂತ ಧನ್ಯನು ಯಾವನಿರುವನು? ನನ್ನ ಶ್ರಮವು ಸಫಲ ವಾಯಿತು. ನಿನ್ನ ಮನಸ್ಸಿನ ದುಗುಡನ್ನು ಬಿಟ್ಟು, ನಿನ್ನ ವೃತ್ತಾಂತವನ್ನು ಹೇಳು, ಅನ್ನಲು, ಅವಳು ಉತ್ಸಾಹದಿಂದ ಅದನ್ನು ಹೇಳತೊಡಗಿದಳು.

ಪ್ರೀಯವಾಚಕರೇ, ಪದ್ಮನಯನೆಯ ಸುದ್ದಿಯನ್ನು ಕೆಲ ಮಟ್ಟಿಗೆ ನೀವು ಬಲ್ಲವ ರಾದ್ದರಿಂದ, ಅದನ್ನು ಮತ್ತೆ ಕೇಳಲಿಕ್ಕೆ ನಿಮಗೆ ಬೇಸರ ಬರಬಹುದು. ಆದರೆ ಪದ್ಮನಯನೆಯು ಪ್ರೀತಿ ಪೂರ್ವಕವಾಗಿ ತನ್ನ ಪತಿಯ ಮುಂದೆ, ಅದನ್ನು ಹೇಳುತ್ತಾಳೆಂಬದನ್ನು ಮರೆಯಬೇಡಿರಿ. ಇದಲ್ಲದೆ ಪದ್ಮನಯನೆಯ ಸಂಪೂರ್ಣವಾದ ಇತಿಹಾಸವನ್ನು ನೀವು ಅರಿತುಕೊಳ್ಳಬೇಕಾಗಿರುವದು. ಅದಕ್ಕಾಗಿ ನೀವು ಅದನ್ನು ಮೊದಲಿನಿಂದ ಸುಮತಿಯ ಸಂಗಡ ಇನ್ನೊಮ್ಮೆ ಕೇಳಿರಿ. ಪದ್ಮನಯನೆಯು ಕಮಲಾಕ್ಷನನ್ನು ಕುರಿತು–ಪ್ರಭುಗಳೇ, ಈ ಅನಾಥಳ ವೃತ್ತಾಂತವನ್ನು ಚಿತ್ತಗೊಟ್ಟು ಕೇಳುವದಾಗಬೇಕು. ವಿಂಧ್ಯಾದ್ರಿಯ ಉತ್ತರಕ್ಕೆ ಕನೋಜವೆಂಬ ಅತಿ ವಿಖ್ಯಾತವಾದ ರಾಜ್ಯವಿದ್ದದ್ದು ತಮಗೆ ಗೊತ್ತಿರಬಹುದು. ಅಲ್ಲಿ ವೀರವರ್ಮನೆಂಬ ಅರಸನು ನ್ಯಾಯದಿಂದ ರಾಜ್ಯ ಪರಿಪಾಲನೆಯನ್ನು ಮಾಡುತ್ತಿರಲು ಮುಪ್ಪಿನ ಕಾಲಕ್ಕೆ ಕಪಿಂಜಲ ಋಷಿಗಳ ಅನುಗ್ರಹದಿಂದ ಆತನಿಗೆ ನಾನೊಬ್ಬಳೇ ಮಗಳು ಹುಟ್ಟಿದೆನು. ನನಗೆ ಪದ್ಮನಯನೆಯೆಂದು ಹೆಸರಿಟ್ಟರು. ಕಪಿಂಜಲ ಋಷಿಗಳು ನನ್ನ ತಂದೆಗೆ—ಅರಸಾ, ನಿನ್ನ ಮಗಳು ಹದಿನಾರನೆಯ ವರ್ಷದಲ್ಲಿ ನಿನ್ನನ್ನು ಅಗಲಿ ಹೋಗಿ ಬಹಳ ಕಷ್ಟಪಡುವಳು; ಆದರೂ ಆಕೆಯು ಸಾರ್ವಭೌಮನ ರಾಣಿಯೂ, ಸಾರ್ವಭೌಮನ ತಾಯಿಯೂ ಆಗಿ ನಿನಗೆ ಕಡೆಗೆ ಸುಖವನ್ನು ಕೊಡುವಳು, ಎಂದು ಭವಿಷ್ಯವನ್ನು ಹೇಳಿದರು. ಅರಸನು ಅರಗಳಿಗೆಯಾದರೂ ಅಗಲದೆ ನನ್ನ ರಕ್ಷಣ ಮಾಡುತ್ತಿದ್ದನು; ಆದರೆ ದೊಡ್ಡವರ ಮಾತು ಹೇಗೆ ಸುಳ್ಳಾಗಬೇಕು? ಮುಂದೆ ಋಷಿಗಳು ಮುಪ್ಪಿನಿಂದ ದೇಹವಿಟ್ಟದ್ದರಿಂದ

ಅವರ ಸ್ಮಶಾನ ಯಾತ್ರೆಯು ಉತ್ಸವದಿಂದ ನಡೆಯಿತು. ಆಗ ನಾನು ತೀಕ್ಷ್ಣವೇಗವೆಂಬ ಹೆಸರಿನ ನನ್ನ ಪಟ್ಟದ ಕುದುರೆಯನ್ನು ಹತ್ತಿದೆನು. ಋಷಿಯ ವಚನವನ್ನು ಸತ್ಯವಾಗಿ ಮಾಡುವದಕ್ಕಾಗಿಯೋ ಏನೋ ತಿಳಿಯದು; ತೀಕ್ಷ್ಣವೇಗವು ಭಯಂಕರವಾದ ವೇಗದಿಂದ ಒಂದೇ ಸವನೆ ದಕ್ಷಿಣ ದಿಕ್ಕಿಗೆ ಒಂಬತ್ತು ತಾಸು ಓಡಿ, ಒಂದು ಅರಣ್ಯ ಮಧ್ಯವನ್ನು ಹೊಕ್ಕು ದಣಿದು ಬಿದ್ದಿತು. ಅಂಗರಕ್ಷಕರೆಲ್ಲ ಹಿಂದಾದರು. ಅವರಲ್ಲಿ ಧನಮಲ್ಲನೆಂಬ ಹೆಸರನ್ನಿಟ್ಟು ಕೊಂಡು, ನನ್ನನ್ನು ಅಪಹರಿಸುವದಕ್ಕಾಗಿ ನನ್ನ ತಂದೆಯ ಬಳಿಯಲ್ಲಿ ಸರದಾರನಾಗಿ ಬಹು ದಿವಸ ಹೊಂಚುಹಾಕಿದ್ದ ಮೇಘನಾದನೆಂಬ ದೈತ್ಯನು, ನನ್ನ ಬಳಿಗೆ ಬಂದು ನನ್ನನು ಅಪಹರಿಸಿಕೊಂಡು ಈ ಗುಪ್ತವಾದ ವಿಹಾರ ಮಂದಿರದಲ್ಲಿ ಇಟ್ಟನು. ಅವನು ಆಗಲೆ ನನ್ನ ಮೇಲೆ ಬಲಾತ್ಕಾರ ಮಾಡತಕ್ಕವನು; ಆದರೆ ಕಪಿಂಜಲ ಗುರುಗಳು, ನನ್ನ ಮೇಲೆ ಬಲಾತ್ಕಾರ ಮಾಡುವವರ ನಾಶವಾಗಲೆಂದು ಶಪಿಸಿದ್ದನ್ನು ಅವನು ಕೇಳಿದ್ದರಿಂದ, ಭಯಪಟ್ಟು ಆತನು ಹಾಗೆ ಮಾಡಲಿಲ್ಲ, ನಾನು ಶ್ರೀ ಗೌರಿಯ ಪೂಜೆಗಾಗಿ ರಾಕ್ಷಸನಿಂದ ಒಂದು ವರ್ಷದ ಅವಧಿಯನ್ನು ಪಡೆದಿದ್ದೇನೆ; ಏಳು ದಿನಕ್ಕೊಮ್ಮೆ ಅಂದರೆ ಪ್ರತಿ ಮಂಗಳವಾರ ಮಾತ್ರ ಆತನು ನನ್ನ ಭೆಟ್ಟಿಗೆ ಬರುತ್ತಾನೆ. ನಡುವೆ ಎಂದೂ ಬರುವದಿಲ್ಲ ನನ್ನ ಮೇಲಿನ ಲೋಭಾತಿಶಯ ದಿಂದಲೂ, ನನ್ನ ಸದ್ಗುಣಗಳ ಮೇಲಿನ ನಂಬಿಗೆಯಿಂದಲೂ ಮೇಘನಾದನು ನನಗೆ ಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟಿರುತ್ತಾನೆ. ನನ್ನ ಇಚ್ಛೆಯ ವಿರುದ್ಧವಾಗಿ ಏನಾದರೂ ಪ್ರಸಂಗ ಒದಗಿದರೆ, ಅಥವಾ ನನಗೆ ಏನಾದರೂ ಸಂಕಟ ಒದಗಿದರೆ, ನಾನು ಮೇಘನಾದನನ್ನು ಸ್ಮರಿಸಿದರೆ ಸಾಕು; ಆತನು ಇಲ್ಲಿ ಬಂದು ನಿಲ್ಲುವನು. ಅವನ ಮಾಯಾ ಸಾಮರ್ಥ್ಯವೇ ಅಂಥಾದ್ದು. ಅಂಥ ವಿಚಿತ್ರ ಸಾಮರ್ಥ್ಯವಿರುವದರಿಂದಲೇ ಈ ಉದ್ಯಾನದಲ್ಲಿ ಒಬ್ಬ ಕಾವಲಿಗನ ಅವಶ್ಯಕತೆ ಕೂಡ ಇರುವದಿಲ್ಲ. ಎಲ್ಲ ಮಾತು ನನ್ನ ಇಚ್ಛೆಯನ್ನವಲಂಬಿಸಿರುವದು. ವಿಹಾರಕ್ಕೆ ತಕ್ಕದ್ದಾದ ಇಂಥ ನಿಷ್ಕಂಟಕ ರಮ್ಯ ಸ್ಥಳವು ದೊರೆತಿದ್ದರೂ, ವಿಹಾರದ ಮುಖ್ಯ ಸಾಧನವು ನನ್ನ ಮನಸ್ಸಿನಂತೆ ದೊರೆಯದ್ದರಿಂದ ಇದು ನನಗೆ ಸ್ಮಶಾನದಂತೆ ತೋರುತ್ತಿರುವದು. ದಿನಾಲು ಇಳಿಹೊತ್ತಾದ ಕೂಡಲೆ ವಿಶ್ರಾಂತಿಗಾಗಿ ದಾಸಿಯರನ್ನು ಕೂಡಿಕೊಂಡು ಸರೋವರಕ್ಕೆ ಹೋಗುವದು ನನ್ನ ಕ್ರಮವಾಗಿತ್ತು ಅದರಂತೆ ನಾನು ಒಂದು ದಿನ ಸರೋವರಕ್ಕೆ ಬಂದಾಗ್ಗೆ ಶಿಲಾ ಮಂಟಪದಲ್ಲಿ ನೀವು ಮಲಗಿರುವದನ್ನು ನೋಡಿದೆನು. ನಿಮ್ಮ ರೂಪವೂ, ಪ್ರಾಯವೂ ನನ್ನ ಮನಸ್ಸನ್ನು ಎಳಕೊಂಡವು; ಆದರೆ ತಮ್ಮ ಗುಣಗಳನ್ನೂ, ಸತ್ವವನ್ನೂ ಪರೀಕ್ಷಿಸಬೇಕೆಂದು, ಮೇಘನಾದನಲ್ಲಿ ಮೊದಲೇ ಅಭ್ಯಾಸಿಸಿದ್ದ ಮೋಹಿನೀ ಮಂತ್ರದ ಸಹಾಯದಿಂದ, ನಿಮ್ಮನ್ನು ಈ ಮಂಚದ ಮೇಲೆ ತಂದು ಮಲಗಿಸಿ, ಮಂತ್ರವನ್ನು ಉಪಸಂಹರಿಸಿದೆನು. ಸುಮಧ್ಯಮೆಗೆ ಕಳಿಸತಕ್ಕದ್ದನ್ನು ಕಲಿಸಿ, ನಿಮ್ಮ ಬಳಿಗೆ ಕಳಿಸಿದಾಗ ನೀವು ಆಡಿದ ಮಾತುಗಳಿಂದ ನೀವು ಧೈರ್ಯಶಾಲಿ ಗಳಿರುವಿರೆಂದು ಮನಗಂಡೆನು. ಅಂದೇ ನಾನು ನಿಮ್ಮ ಪಾಣಿಗ್ರಹಣ ಮಾಡತಕ್ಕವಳು; ಆದರೆ ನಿಮ್ಮ ಕುಲಶೀಲಾದಿಗಳು ಗೊತ್ತಾಗದ್ದರಿಂದ ಕುಲೀನತೆಗೆ ಭಂಗ ಬಂದೀತೆಂಬ ಭಯದಿಂದ, ನನ್ನ ಮನೋಭಾವವನ್ನು ವ್ಯಕ್ತಮಾಡದೆ, ಗಾಂಭೀರ್ಯದಿಂದ ನಿಮ್ಮೊಡನೆ ನಡಕೊಂಡೆನು. ನೀವು ಬಂದ ದಿನವೇ ಮೇಘನಾದನು ತುಡುಗರನ್ನು ಸಂಹರಿಸಿ,

ಅವರ ಬಳಿಯಲ್ಲಿದ್ದ ವಸ್ತ್ರಾಭರಣಗಳನ್ನೂ, ಧನುರ್ಬಾಣಗಳನ್ನೂ ಕುದುರೆಯನ್ನು ತಂದು ನನಗೆ ಕೊಟ್ಟನು. ಅವುಗಳನ್ನು ನೋಡಿ ನಾನು ಇವು ಯಾವನೋ ಒಬ್ಬ ರಾಜಪುತ್ರನ ಪದಾರ್ಥಗಳೆಂದು ತರ್ಕಿಸಿದ್ದೆನು. ನೀವು ಉಟ್ಟ ದೋತರದಿಂದ ಶಿಲಾಮಂಟಪದಲ್ಲಿ ಮಲಗಿ ರುವದನ್ನು ನೋಡಿ, ಆ ಪದಾರ್ಥಗಳು ನಿಮ್ಮವೇ ಇರಬಹುದೆಂದು ತರ್ಕಿಸಿ, ಸತ್ಯತೆಯನ್ನು ತಿಳಿಯುವದಕ್ಕಾಗಿಯೇ ಅವನ್ನು ನಿಮ್ಮ ಮಂಚದ ಎದುರಿಗೆ ಬುದ್ಧಿಪೂರ್ವಕವಾಗಿ ಇಡಿಸಿದ್ದೆನು. ಸುದೈವದಿಂದ ನನ್ನ ತರ್ಕವು ನಿಜವಾಗಿದೆ! ಪ್ರಾಣಪ್ರೀಯರೇ, ಇದರ ಮುಂದಿನ ಸಂಗತಿಯು ನಿಮಗೆ ಗೊತ್ತೇ ಅದೆ, ಇನ್ನು ರಾಕ್ಷಸನಿಂದ ನನ್ನ ದೇಹವು ಕಲಂಕಿತವಾಗಿರ ಬಹುದೆಂಬ ಸಂಶಯವು ನಿಮ್ಮಲ್ಲಿ ಸ್ವಾಭಾವಿಕವಾಗಿ ಉತ್ಪನ್ನವಾಗಿರಬಹುದು; ನಾಳಿಗೆ ಮೇಘನಾದನು ಬಂದನೆಂದರೆ, ಅದರ ನಿರ್ಣಯವೂ ಆಗುವದು. ಈಗ ರಾತ್ರಿಯು ಬಹಳ ವಾಗಿರುವದರಿಂದ ಮಲಗಿಕೊಳ್ಳಬೇಕು, ಎಂದು ಹೇಳಿ, ಆ ಸುಂದರಿಯು ದಾಸಿಯರೊಡನೆ ಹೊರಟು ಹೋದಳು.

ಪದ್ಮನಯನೆಯ ವೃತ್ತಾಂತವನ್ನು ಕೇಳುತ್ತಿದ್ದ ಸುಮತಿಯು ನಡುವೇ ಬಾಯಿ ಹಾಕಿ ದುಃಖದಿಂದ ನುಡಿದನೇನಂದರೆ—ರಾಜಪುತ್ರಾ, ನನ್ನ ಸಹೋದರಿಯಂತೆ ಇದ್ದ ಪದ್ಮನಯನೆಯ ಸದ್ಗುಣಗಳನ್ನು ನೀನೇನು ಬಲ್ಲೆ? ಯಾವ ಸುಂದರಿಯ ಸದ್ಗುಣಗಳಿಗೂ, ಸದ್ವಿದ್ಯೆಗೂ, ರೂಪಕ್ಕೂ ಬಹುಜನ ರಾಜಕುಮಾರರು ಮೋಹಿತರಾಗಿರುವರೋ, ಆ ಸುಂದರಿಯ ಸ್ಥಿತಿಯು ಹೀಗಾಗಬೇಕೆ? ಅವಳಿಗೆ ನಿನ್ನಂಥ ಯೋಗ್ಯಪತಿಯು ದೊರೆತಿರುವದು ಬಹು ಸಮಾಧಾನಕರವು. ನಮ್ಮ ಪದ್ಮನಯನೆಯನ್ನು ಸರಿಗಟ್ಟುವ ಸ್ತ್ರೀಯರು ಭೂಮಿಯಲ್ಲಿ ವಿರಲವೆಂದು ತಿಳಿ. ಇರಲಿ, ಮುಂದಿನ ಸಂಗತಿಯನ್ನು ಹೇಳು. ಪದ್ಮನಯನೆಯು ಈಗ ನಿನ್ನ ಬಳಿಯಲ್ಲಿ ಇಲ್ಲದಿರುವದು, ಆಕೆಯ ಹೊಸ ದುಃಖದ ಮಂಗಲಾಚರಣೆವೆಂದು ನಾನು ಈ ಮೊದಲೇ ತರ್ಕಿಸಿದ್ದೇನೆ.

ಸುಮತಿಯ ಮಾತುಗಳನ್ನು ಕೇಳಿ, ಕಮಲಾಕ್ಷನಿಗೆ ಬಹಳ ಆಶ್ಚರ್ಯವಾಯಿತು. ಇಲ್ಲಿಯ ವರೆಗೆ ಅವನು ಸುಮತಿಯನ್ನು ಪರಕೀಯನೆಂದು ತಿಳಿದಿದ್ದನು; ಆದರೆ ಆ ಬ್ರಾಹ್ಮಣನು ತನ್ನ ಪ್ರಿಯ ಪದ್ಮನಯನೆಯ ಸಂಬಂಧವನ್ನು ಹೇಳಿದ್ದರಿಂದ, ರಾಜಪುತ್ರನು ಅವನನ್ನು ನೋಡಿ ದುಃಖದಿಂದ—ದ್ವಿಜೋತ್ತಮಾ, ನನ್ನ ಪ್ರೀತಿಗೆ ಪಾತ್ರಳಾದ ಪದ್ಮನಯನೆಯು ನಿನಗೇ ನಾಗಬೇಕು? ಅವಳ ವಿಯೋಗದಿಂದ ನನ್ನ ಶರೀರವು ಈ ವೊತ್ತಿಗೂ ಕ್ಷೀಣವಾಗುತ್ತ ನಡೆದದೆ. ಅವಳ ಸೌಜನ್ಯ, ವಿನಯ, ಪ್ರೇಮ, ಪತಿಭಕ್ತಿ ಇವುಗಳನ್ನು ಎಷ್ಟೆಂತ ವರ್ಣಿಸಲಿ? ನಾನು ಹತಭಾಗ್ಯನಾದದ್ದರಿಂದಲೇ ಆ ಸುಂದರಿಯನ್ನಗಲಿ ಕೊರಗುತ್ತೇನೆ. ಭೂಸುರೋತ್ತಮಾ, ಪದ್ಮನಯನೆಯು ನಿನಗೇನಾಗಬೇಕೆಂಬದನ್ನಷ್ಟು ದಯಮಾಡಿ ಹೇಳಿದರೆ ಉಪಕಾರವಾಗುವದು, ಅನ್ನಲು, ಸುಮತಿಯು—ರಾಜಪುತ್ರಾ, ಹೇಳುತ್ತೇನೆ ಕೇಳು. ನನ್ನ ಒಡಹುಟ್ಟಿದವಳಂತೆ ಇದ್ದ ರಾಜಪುತ್ರಿಯು, ಯಾವ ಸುಮತಿಯೊಡನೆ ಕಪಿಂಜಲ ಋಷಿಯ ಬಳಿಯಲ್ಲಿ ವಿದ್ಯಾಭ್ಯಾಸ ಮಾಡಿದೆನೆಂದು, ನಿನ್ನ ಮುಂದೆ ಹೇಳಿದಳೋ, ಆ ದೈವಗೇಡಿಯಾದ ಸುಮತಿಯು ನಾನೇ

ಎಂದು ಹೇಳಿದನು. ಅದನ್ನು ಕೇಳಿ ಕಮಲಾಕ್ಷನು ದುಃಖದಿಂದ ಕುತ್ತಿಗೆಯ ಶಿರಬಿಗಿದವನಾಗಿ—ಮಿತ್ರಾ, ಸುಮತೀ, ಇತ್ತ ಬಾ. ನಿನ್ನ ತಂಗಿಯನ್ನು ಬಿಟ್ಟುಬಂದು ನಾನೊಬ್ಬನೇ ನಿನ್ನ ಬಳಿಯಲ್ಲಿ ಕುಳಿತ ಅಪರಾಧಕ್ಕಾಗಿ ನನ್ನನ್ನು ದಂಡಿಸು. ಅಹಾ! ದಂಡಿಸಿದರಾದರೂ ನನ್ನ ಪ್ರೀಯಳು ಬರುವಳೇನು? ಇಲ್ಲ, ಇನ್ನೆಲ್ಲಿಯ ಪ್ರಿಯಳು! ಸಖೀ, ಪದ್ಮನಯನೇ, ನನ್ನನ್ನಗಲಿದೆಯಾ? ಎಂದು ಮೂರ್ಛಿತನಾದನು. ಕೂಡಲೆ ಸುಮತಿಯು ಸೀತೋಪಚಾರಮಾಡಿ ಎಚ್ಚರಗೊಳಿಸಿ ಹೇಳಿದ್ದೇನಂದರೆ—ರಾಜಪುತ್ರಾ, ಇದೇನು? ನಿನ್ನ ಸಂಗತಿಯನ್ನು ಪೂರ್ಣವಾಗಿ ಹೇಳದೆ, ಹೀಗೆ ಅಳುತ್ತ ಕುಳಿತುಕೊಂಡರೆ ಆಗುವದೇನು? ದುಃಖವನ್ನು ತಾಳಿಕೊಂಡು ಪದ್ಮನಯನೆಯ ದುರದೃಷ್ಟವನ್ನು ಸ್ವಸ್ಥ ಮನಸ್ಸಿನಿಂದ ಹೇಳು.

ದೌರ್ಜನ್ಯ

ರಾಜಪುತ್ರನಾದ ಕಮಲಾಕ್ಷನು ಸುಮತಿಯ ಮಾತುಗಳನ್ನು ಕೇಳಿ, ತನ್ನ ದುಃಖವನು ನುಂಗಿಕೊಂಡು—ಮಿತ್ರಾ, ಸುಮತಿ, ನೀನು ನನ್ನ ಪ್ರಿಯ ಪತ್ನಿಯ ಮಿತ್ರನಾದದ್ದರಿಂದ ನನಗೂ ಮಿತ್ರನೇ ಸರಿ. ಈ ಜಗತ್ತಿನಲ್ಲಿ ಮಿತ್ರರಿಗಿಂತ ಹೆಚ್ಚಿನ ವಸ್ತುವು ಮತ್ತೊಂದಿಲ್ಲ. ವಿಚಾರಮಾಡಲು ಬಂಧುಗಳಲ್ಲಿ ಪರಸ್ಪರ ಪ್ರೇಮವು ಬಂಧುತ್ವದಿಂದ ಉಂಟಾಗುತ್ತದೆ; ಅಂದರೆ ಬಂಧುಗಳು ಪರಸ್ಪರರ ಮೇಲೆ ತಂದೆ, ಮಗ, ಗಂಡ, ಹೆಂಡತಿ, ಮಾವ, ಅಳಿಯ ಇತ್ಯಾದಿ ಸಂಬಂಧಗಳಿಂದ ಪ್ರೇಮಮಾಡುವರು; ಆದರೆ ಮಿತ್ರರಲ್ಲಿಯ ಪ್ರೇಮವು ಬಂಧುತ್ವದಿಂದ ಹುಟ್ಟದೆ, ಬಂಧುತ್ವವೇ ಪ್ರೇಮದಿಂದ ಹುಟ್ಟುತ್ತದೆ. ಈ ಸಂಸಾರದಲ್ಲಿ ಪ್ರೇಮವು ಸುಖದ ಮೂಲಾಧಾರವಾದ್ದರಿಂದ, ಪ್ರೇಮದ ಯೋಗದಿಂದ ಬಂಧುವಾಗಿರುವ ಮಿತ್ರನು, ಬಂಧುಗಳಿಗಿಂತಲೂ ಹೆಚ್ಚಿನ ಬಂಧುವಾಗಿರುವನು. ಅವನು ನಂಬಿಗೆಗೆ ಯೋಗ್ಯನೂ, ಜೀವಕ್ಕೆ ಜೀವ ಕೊಡುವವನೂ ಆಗಿರುತ್ತಾನೆ. ಎಲೈ ಅನಿಮಿತ್ತ ಬಾಂಧವನಾದ ಮಿತ್ರಾ, ಸುಮತೀ ನಾನು ಹೇಳುವದನ್ನು ಚಿತ್ತವಿಟ್ಟು ಕೇಳು. ರಾಜಪುತ್ರಿಯು ಹೇಳಿದಂತೆ ಮೇಘನಾದನು ಮರುದಿವಸವೇ ಬಂದನು. ಪದ್ಮನಯನೆಯು ಅವನನ್ನು ಭೆಟ್ಟಿಯಾಗುವ ಸ್ಥಾನವನ್ನು ನಾನು ಇಲ್ಲಿಯವರೆಗೆ ನೋಡಿದ್ದಿಲ್ಲ. ನಾನು ನನ್ನ ಪ್ರಿಯಳ ಹೇಳಿಕೆಯಂತೆ, ಆ ಸ್ಥಾನದಲ್ಲಿ ಒತ್ತಟ್ಟಿಗೆ ಮರೆಗೆ ನಿಂತುಕೊಂಡಿದ್ದೆನು. ರಾಕ್ಷಸನು ಕಾಮುಕನಾಗಿ ಆ ಮೋಹನಾಂಗಿಯನ್ನು ನೋಡಿ—ಸುಂದರೀ, ಸಂಧ್ಯಾಕಾಲದ ಕಮಲ ಪುಷ್ಪದಂತೆ ಯಾವಾಗಲೂ ಬಾಡಿರುವ ನಿನ್ನ ಮುಖವು ಈದಿನ ಅರಳಿರುವದನ್ನು ನೋಡಿ, ನನಗೆ ಬಹಳ ಸಮಾಧಾನವಾಗಿದೆ. ನನ್ನ ಸಮಾಗಮ ಸುಖವನ್ನನುಭವಿಸುವ ಕಾಲವು ಸಮೀಪಿಸಿದ್ದರಿಂದ, ನೀನು ಇಷ್ಟು ಹಿಗ್ಗಿದಂತೆ ಕಾಣುತ್ತದೆ. ಇನ್ನು ಹದಿನೈದು ದಿನಗಳಾದ ಬಳಿಕ, ನಿನ್ನ ವ್ರತವು ಮುಗಿಯುತ್ತದಷ್ಟೆ? ಆಮೇಲೆ ನಮ್ಮಿಬ್ಬರ ವಿವಾಹಕ್ಕೆ ಯಾವ ಪ್ರತಿಬಂಧವೂ ಇಲ್ಲ, ಇತ್ತ ಬಾ, ಬಹಳ ದೂರ

ನಿಲ್ಲಬೇಡ. ನನ್ನ ಮಗ್ಗಲಲ್ಲಿ ಈ ಮಂಚದ ಮೇಲೆ ಕೂಡ್ರು, ಎಂದು ಹೇಳಿ, ರಾಜಪುತ್ರಿಯ ಕೈ ಹಿಡಿಯಹೋದನು. ಕೂಡಲೆ ಅವಳು ಹಿಂದಕ್ಕೆ ಸರಿದು, ಚಕಿತ ಮುದ್ರೆಯಿಂದ ಮೇಘನಾದನನ್ನು ನೋಡಲು, ಅವನು—ಓಹೋ, ಸುಂದರೀ, ನನ್ನಿಂದ ಬಹು ದೊಡ್ಡ ತಪ್ಪಾಗುತ್ತಿದೆ. ಈ ವೊತ್ತಿನ ನಿನ್ನ ಪ್ರಸನ್ನ ಮುದ್ರೆಯನ್ನು ನೋಡಿ ನಿನ್ನ ವ್ರತವನ್ನು ಮರೆತಿದ್ದೆನು. ಇಲ್ಲ, ಎಷ್ಟು ಮಾತ್ರವೂ ನಿನ್ನ ಅಂಗಸ್ಪರ್ಶ ಮಾಡುವದಿಲ್ಲ, ಬಾ, ದೂರ ಕುಳಿತು ನಿನ್ನ ಮಧುರ ಭಾಷಣಗಳಿಂದ ಈ ಮೇಘನಾದನ ಮನಸ್ಸನ್ನು ರಮಿಸು. ನಿನ್ನ ಅಪೇಕ್ಷೆಯು ಮತ್ತೇನಾದರೂ ಇದ್ದರೆ ಹೇಳು ಅದನ್ನು ಪೂರ್ಣಮಾಡಲಿಕ್ಕೆ ಈ ದಾಸನು ಸಿದ್ಧನಾಗಿದ್ದಾನೆ.

ರಾಕ್ಷಸ ಮಾತುಗಳನ್ನು ಕೇಳಿ ಪದ್ಮನಯನೆಯು—ಪ್ರತಾಪಶಾಲಿಗಳೇ, ನಿಮ್ಮ ಪುಣ್ಯ ಪ್ರಭಾವದಿಂದಲೂ, ಬಾಹುಬಲದ ಯೋಗದಿಂದಲೂ ನನಗೆ ಯಾವ ಮಾತಿನ ಕೊರತೆಯೂ ಇಲ್ಲ. ಎಲ್ಲ ಇಚ್ಛೆಗಳು ನನ್ನ ಮನದಲ್ಲಿ ಉತ್ಪನ್ನವಾಗುವದರೊಳಗೇ ಪೂರ್ಣವಾಗಿ ಹೋಗುತ್ತವೆ; ಆದರೆ ನನಗೆ ಈಗ ಒಂದು ಉತ್ತಮವಾದ ಧನುಸ್ಸು ಬೇಕಾಗಿರುವದು. ನಾನು ಚಿಕ್ಕಂದಿನಲ್ಲಿ ಧನುರ್ವಿದ್ಯೆಯನ್ನು ಅಭ್ಯಾಸ ಮಾಡಿರುವದು ನಿಮಗೆ ಗೊತ್ತೇ ಅದೆ. ನೀವು ಧನುಸ್ಸನ್ನು ತಂದು ಕೊಟ್ಟರೆ ಬೇಸರ ಬಂದಾಗ ಗುರಿ ಹೊಡೆದು ಇಲ್ಲವೆ ಬೇಟೆಯಾಡಿ ಮನಸ್ಸನ್ನು ರಮಿಸಿಕೊಳ್ಳುವೆನು. ದಯಮಾಡಿ ಈ ದಾಸಿಯ ಇಚ್ಛೆಯನ್ನು ಪೂರ್ಣಮಾಡಬೇಕು ಎಂದು ಹೇಳಿದಳು.

ಮಿತ್ರಾ, ಸುಮತೀ ರಾಜಪುತ್ರಿಯ ಪ್ರೇಮಯುಕ್ತ ಮಧುರ ಭಾಷಣಗಳು ರಾಕ್ಷಸನ ಮನಸ್ಸನ್ನು ಮರುಳುಮಾಡಿದವು. ಇಷ್ಟು ದಿನಗಳಲ್ಲಿ ಇಂದಿನಂತೆ ಅವಳು ರಾಕ್ಷಸನ ಸಂಗಡ ಮನಬಿಚ್ಚಿ ಎಂದೂ ಮಾತಾಡಿದಂತೆ ತೋರಲಿಲ್ಲ. ಯಾಕಂದರೆ ಈ ದಿನದ ಸ್ಥಿತಿಯು ಮೇಘನಾದನಿಗೆ ಅನುಕೂಲವಾಗಿ ತೋರಿದ್ದರಿಂದ, ಅವನು ಮೈ ಮರೆತು ಯಾವ ವಿಚಾರವನ್ನೂ ಮಾಡದೆ—ಸುಂದರೀ, ಇದಾವ ದೊಡ್ಡ ಮಾತು? ನನ್ನ ಪ್ರಾಣಕ್ಕಿಂತಲೂ ನೀನು ನನಗೆ ಅಧಿಕ ಪ್ರೀಯಳಾದ್ದರಿಂದ ಯಾವ ಧನುಸ್ಸಿನಿಂದ ಎರಡನೆಯವರು ನನ್ನ ಸಂಗಡ ಯುದ್ಧಮಾಡಿದರೆ ಮಾತ್ರ ನನಗೆ ಮರಣವು ಒದಗುವದೋ, ಆ ಪ್ರಚಂಡ ಧನುಸ್ಸನ್ನೇ ನಿನ್ನ ಸಂತೋಷಾರ್ಥವಾಗಿ ನಿನಗೆ ಕೊಡುವೆನು ಎಂದು ಹೇಳಿದನು. ರಾಕ್ಷಸನು ತನ್ನ ನಾಶವನ್ನು ತಾನೇ ಮಾಡಿಕೊಳ್ಳುವದನ್ನು ನೋಡಿ ಪದ್ಮನಯನೆಯು ಆನಂದಯುಕ್ತಳಾಗಿ ಮುಗುಳು ನಗೆಯಿಂದ ರಾಕ್ಷಸನನ್ನು ನೋಡಿ—ಪ್ರತಾಪಶಾಲಿಗಳೇ, ನಿಮ್ಮ ಔದಾರ್ಯವನ್ನೂ, ನನ್ನ ಮೇಲಿರುವ ನಿಮ್ಮ ಅನಿರ್ವಾಚ್ಯವಾದ ಪ್ರೇಮವನ್ನೂ ಎಷ್ಟೆಂತ ವರ್ಣಿಸಲಿ? ಈ ವೊತ್ತಿಗೆ ನನ್ನ ದುಃಖಗಳೆಲ್ಲ ನಾಶವಾದವು. ಈಗಲೇ ತಮ್ಮನ್ನು ಬಿಗಿಯಾಗಿ ಅಪ್ಪಿಕೊಳ್ಳಬೇಕೆಂಬ ಉತ್ಕಂಠೆಯು ನನಗಾಗಿದೆ, ಆದರೆ ಏನು ಮಾಡಲಿ? ಮೂರ್ಖಳಂತೆ ನನ್ನ ಸುಖಕ್ಕೆ ನಾನೇ ಅಂತರಿಸಿದ್ದೇನೆ. ಇರಲಿ ಉಪಾಯವಿಲ್ಲ, ತಪ್ಪು ಆಗದಂತೆ ನಡೆಯುವದೇ ಯೋಗ್ಯವು, ಎಂದು ಹೇಳಿ ತರತರದ ಮಧುರವಾದ ಪಕ್ವಾನ್ನಗಳಿಂದ ಅವನನ್ನು ತೃಪ್ತಿಪಡಿಸಿದಳು. ಆಗ ರಾಕ್ಷಸನು ರಾಜಪುತ್ರಿಯನ್ನು ಆನಂದದಿಂದ ನೋಡಿ, ತಾನು ಉಂಡ ಪದಾರ್ಥಗಳನ್ನು ವರ್ಣಿಸುತ್ತ

ಉನ್ಮತ್ತನಾಗಿ ನುಡಿದನೇನಂದರೆ—ಪ್ರಾಣಪ್ರಿಯೇ, ನಿನ್ನ ಯೋಗದಿಂದ ಎಣೆಯಿಲ್ಲದ ಸುಖಗಳು ನನಗೆ ಒದಗಿದವಲ್ಲದೆ ಇದಕ್ಕೂ ಹೆಚ್ಚಿನ ಸುಖಗಳು ಮುಂದೆ ಒದಗತಕ್ಕವಿರುತ್ತವೆ. ನಿನ್ನ ಉಪಕಾರವನ್ನು ನಾನು ಯಾವ ರೀತಿಯಿಂದ ತೀರಿಸಲಿ? ನಿನ್ನನ್ನು ಅಗಲಬೇಕಾದರೆ ನನ್ನ ಜೀವದಸುತ್ತು ಬರುತ್ತದೆ; ಆದರೆ ಮಾಡಲೇನು? ನಿನ್ನ ಮಾತನ್ನು ಮೀರುವದೆಂದರೆ ಅದಕ್ಕೂ ಕಠಿಣ ಪ್ರಸಂಗವು ಇರಲಿ ನಾನು ವಚನಕೊಟ್ಟಂತೆ ನಿನ್ನ ದೇವತಾರಾಧನೆಯ ಕಾಲವು ಮುಗಿಯುವವರೆಗೆ ನಿನ್ನ ಅಂಗಸ್ಪರ್ಶಮಾಡುವದಿಲ್ಲ. ನೀನಾದರೂ ನಿನ್ನ ಆರಾಧ್ಯ ದೇವತೆಯ ಆರಾಧನೆಯನ್ನು ಮನಮುಟ್ಟಿ ಮಾಡು. ಪ್ರಿಯೇ, ನಾನು ಇನ್ನೊಮ್ಮೆ ಬರುವಾಗ ನನ್ನ ಪ್ರಚಂಡ ಧನುಸ್ಸನ್ನು, ಬಾಣಗಳಿಂದ ತುಂಬಿದ ಬತ್ತಳಿಕೆಯೊಂದಿಗೆ ತರುವೆನು. ಇನ್ನು ಶೋಣಿತಪುರಕ್ಕೆ ಹೋಗಲು ನನಗೆ ಅನುಮತಿಸು ಎಂದು ಹೇಳಿ ಆ ಮದೋನ್ಮತ್ತನು ಆನಂದಭರಿತನಾಗಿ ಶೋಣಿತಪುರಕ್ಕೆ ನಡೆದನು.

ಮಿತ್ರಾ, ಸುಮತಿ, ಮುಂದಿನ ಸಂಗತಿಯನ್ನು ಚಿತ್ತಗೊಟ್ಟು ಕೇಳು ಮೇಘನಾದನ ಉಗ್ರಸ್ವರೂಪವನ್ನೂ, ರಾಜಪುತ್ರಿಯು ತನ್ನ ಶರೀರವು ಮಲಿನವಾಗದಂತೆ ಆ ರಾಕ್ಷಸನನ್ನು ಮರುಳು ಮಾಡಿದ್ದನ್ನೂ ನೋಡಿ ನನಗೆ ಪರಮಾಶ್ಚರ್ಯವಾಯಿತು. ಮೊದಲೇ ನಾನು ಆ ಸುಂದರಿಯ ರೂಪಾತಿಶಯಕ್ಕೆ ಮರುಳು ಆಗಿದ್ದೆನು. ಅವಳು ನಿರ್ದೋಷಿಯೆಂದು ತಿಳಿದ ಬಳಿಕಂತೂ ಕೇಳುವದೇನು, ಪ್ರೇಮದ ಭರಕ್ಕೆ ಆತಂಕವಿಲ್ಲದಂತೆ ಆಗಿ ಆ ಸುಂದರಿಯ ಪ್ರಾಪ್ತಿಯ ಸಲುವಾಗಿ ನಾನು ತೀರಾ ಉತ್ಸುಕನಾದೆನು. ನನ್ನ ಶರೀರವು ಪುಳಕಿತವಾಯಿತು; ಕಣ್ಣುಗಳಿಂದ ಆನಂದಾಶ್ರುಗಳು ಉದುರಹತ್ತಿದವು. ಅವಳ ಮನಸ್ಸನ್ನು ಯಾವಾಗ ಆನಂದಗೊಳಿಸೇನೆಂಬ ಲವಲವಿಕೆಯು ನನ್ನಲ್ಲಿ ಉತ್ಪನ್ನವಾಯಿತು. ಕೂಡಲೆ ನಾನು ಆನಂದದ ಆವೇಶದಿಂದ ರಾಜಪುತ್ರಿಯ ಬಳಿಗೆ ಹೋಗಲು, ಅವಳು ಮಂಚದಿಂದ ಎದ್ದು ಕೆಳಗೆ ನಿಂತು, ಮಂಜುಲ ಸ್ವರದಿಂದ—ಪ್ರಾಣಪ್ರಿಯರೇ, ತಮ್ಮ ಸಂಶಯವು ದೂರವಾಯಿತೇ? ಅನ್ನಲು, ನಾನು ಪ್ರೇಮದಿಂದ—''ಸಖೀ, ನನ್ನನ್ನು ಕ್ಷಮಿಸು, ನನ್ನ ಮನಸ್ಸಿನ ಸಂಶಯಗಳ ನಿವಾರಣವು ನಿನ್ನ ನಿಷ್ಕಲಂಕವಾದ ವರ್ತನದಿಂದ ತಾನೇ ಆಯಿತು. ನೀನು ಮನದ ಚಿಂತೆಯನ್ನೂ, ಸಂಶಯಗಳನ್ನೂ ಬಿಟ್ಟು ನನ್ನ ಮನಸ್ಸನ್ನು ರಮಿಸು.'' ಎಂದು ಹೇಳಿ, ಆ ಸುಂದರಿಯ ಕೈ ಬೆರಳನ್ನು ಹಿಡಿದು, ಮೆಲ್ಲನೆ ಮುಂದಕ್ಕೆ ಜಗ್ಗಲು, ಆ ಸುಕುಮಾರಿಯು ಪ್ರೇಮದೊಡನೆ ನನ್ನ ಹತ್ತರ ಬಂದಳು. ಪರಸ್ಪರರ ಅಂಗಸ್ಪರ್ಶದಿಂದ ಇಬ್ಬರಿಗೂ ಆದ ಆನಂದವನ್ನು ವರ್ಣಿಸಲ ಸಾಧ್ಯವು.

ಮಿತ್ರಾ, ಲೋಕ ಸುಂದರಿಯಾದ ನನ್ನ ಪ್ರಿಯಳು ಲಜ್ಜೆಯಿಂದ ತನ್ನ ಕೈ ಬೆರಳನ್ನು ನನ್ನ ಕೈಯೊಳಗಿಂದ ಕೊಸರಿಕೊಂಡಳು. ಅವಳ ಹಸ್ತಸ್ಪರ್ಶದಿಂದ ನನ್ನ ಹಸ್ತವು ಬೆವತು ನಡುಗಹತ್ತಿದ್ದರಿಂದಲೇ ಅವಳ ಈ ಪ್ರಯತ್ನವು ಸಹಜವಾಗಿ ಸಫಲವಾಯಿತು. ಆದರೆ ಆ ಸುಂದರಿಯ ಈ ಪ್ರಯತ್ನಕ್ಕೆ ಅವಳ ಮನಸ್ಸು ಪ್ರೇರಕವಾಗದೆ, ದಾಸಿಯರ ಉಪಹಾಸದ ಭಯವೂ, ತನ್ನ ಗೌರವದ ವರ್ತನದ ಉಲ್ಲಂಘತನದ ಭಯವೂ ಪ್ರೇರಕವಾದವು. ಅವಳು

ಮೃದುಸ್ಮಿತೆಯಾಗಿ ಮಧುರ ದೃಷ್ಟಿಗಳಿಂದ ನನ್ನನ್ನು ನೋಡುತ್ತ—''ಮನುಷ್ಯರು ತಮ್ಮ ಕಾರ್ಯಸಿದ್ಧಿಯಾಗುವವರೆಗೆ ಅನ್ಯರ ಮನಸ್ಸನ್ನು ಪ್ರಸನ್ನೀಕರಿಸಿಕೊಳ್ಳುವದಕ್ಕೆ ಹಲವು ಬಗೆಗಳಿಂದ ಯತ್ನಿಸುತ್ತಾರೆ. ಆಗ್ಗೆ ಅವರು ತೋರಿಸುವ ಪ್ರೇಮವೂ, ಆಡುವ ಮಾತುಗಳೂ, ಆಡುವ ಕೃತಿಗಳೂ ವಿಶ್ವಸನೀಯಗಳೆಂದು ಎಷ್ಟು ಮಾತ್ರವೂ ನಿಶ್ಚಯಿಸಲಾಗದು. ಅವು ಮೃಗಜಲದಂತೆ ಕೆಲವು ವೇಳೆ ಮನೋಹರವಾಗಿ ಕಂಗೊಳಿಸಿ ಕಡೆಗೆ ನಾಶವಾಗುತ್ತವೆ. ಸ್ವಸುಖಾಸಕ್ತರಾದ ಜನರು ಅನ್ಯರ ಸುಖ–ದುಃಖಗಳನ್ನು ನೋಡುವದು ಕಡಿಮೆ. ತನ್ನ ಸ್ತ್ರೀಯ ವಿಷಯವಾಗಿ ಪುರುಷನಲ್ಲಿ ನಿಷ್ಕಪಟವಾದ ಪ್ರೀತಿಯೂ, ನಿರಂತರವಾದ ವಿಶ್ವಾಸವೂ ಇದ್ದ ಹೊರತು ಆ ಸ್ತ್ರೀಗೆ ಅವನ ಸಮಾಗಮದಿಂದ ಸುಖವಾಗುವದಿಲ್ಲ. ಸದಾಚರಣೆಯ ಸ್ತ್ರೀಗೆ ದುರಾಚರಣೆಯ ಪತಿಯು ದೊರೆಯುವದರಿಂದ, ಆ ದಂಪತಿಗಳ ಸುಖದ ಬಣತೆಯೇ ಕೆಟ್ಟು ಹೋಗುತ್ತದೆ. ಪ್ರಿಯರೇ, ಬಹಳ ಹೇಳುವದರಿಂದ ಪ್ರಯೋಜನವೇನು? ಸುವಿಚಾರದ ಸ್ತ್ರೀಯು ಮೂರ್ಖನೂ, ದುರಾಚಾರಿಯೂ ಆದ ಪತಿಯ ಸಮಾಗಮ ಸುಖವನ್ನನು ಭವಿಸುವದಕ್ಕಿಂತ ಬ್ರಹ್ಮಚರ್ಯದಿಂದಿರುವದೇ ಲೇಸೆಂದು ನನಗೆ ತೋರುತ್ತದೆ. ಸ್ತ್ರೀಯು ವಿವಾಹಿತಳಾದಳೆಂದರೆ ತನ್ನ ಪತಿಯು ಸುವಿಚಾರಿಯೇ ಇರಲಿ, ಮೂರ್ಖನೇ ಇರಲಿ, ಅವನ ಮನೋವೃತ್ತಿಯನ್ನನುಸರಿಸಿ ಅವನ ಸೇವೆ ಮಾಡಿ, ಅವನ ಹಿತವನ್ನು ಚಿಂತಿಸುವದೇ ಅವಳ ಪಾತಿವೃತ್ಯದ ಧರ್ಮವಾಗಿರುವದು. ಅದರಿಂದಲೇ ಜಾಣರಾದ ಸ್ತ್ರೀಯರು, ತಮ್ಮ ವಿವಾಹವನ್ನು ಬಹು ವಿಚಾರದಿಂದ ಮಾಡಿಕೊಳ್ಳಬೇಕಾಗುವದು.'' ಎಂದು ನುಡಿದು ತಲೆವಾಗಿ ನಿಂತುಕೊಂಡಳು.

ಮಿತ್ರಾ, ನಾನು ಆ ಸುಂದರಿಯ ಪ್ರೇಮಯುಕ್ತ ಚಾತುರ್ಯದ ಮಾತುಗಳನ್ನು ಕೇಳಿ ಗಾಂಭೀರ್ಯದಿಂದ ''ಪ್ರಾಣಪ್ರಿಯೇ, ನಿನ್ನ ಚಾತುರ್ಯಕ್ಕೆ ಸೀಮೆಯಿಲ್ಲ. ಕಾರ್ಯ ಸಿದ್ಧಿಯ ವರೆಗೆ ಮಾತ್ರ ಪ್ರೇಮವನ್ನು ತೋರಿಸುವವರು, ಯೋಗ್ಯಾ ಯೋಗ್ಯಗಳ ವಿಚಾರ ಮಾಡದೆ ತಮ್ಮ ಕೆಲಸವನ್ನು ಆದಷ್ಟು ಬೇಗನೇ ಸಾಧಿಸಿಕೊಳ್ಳಲಿಕ್ಕೆ ಯತ್ನಿಸುತ್ತಾರೆ. ನಿರಂತರವಾಗಿ ಪ್ರೇಮವನ್ನಿಡಲಪೇಕ್ಷಿಸುವವರು ಯೋಗ್ಯ ವಿಚಾರ ಮಾಡದೆ, ಒಮ್ಮೆಲೆ ಪ್ರೇಮವನ್ನು ತೋರಿಸುವ ಭರಕ್ಕೆ ಹೋಗುವದಿಲ್ಲ. ಸ್ವಸುಖಾಸಕರಾದ ಜನರು ಸ್ವಕೀಯ ವಸ್ತುಗಳ ಮೇಲೆಯೂ ಪ್ರೇಮ ಮಾಡದೆ ಇರುವರೆ? ಮುಗ್ಧೆ, ಚಂಚಲನೂ, ಅವಿಚಾರಿಯೂ, ವಿಶ್ವಾಸ ಘಾತಕನೂ ನಾನಲ್ಲ ನಿನ್ನ ಮನಸ್ಸಿನ ಸಂಶಯಗಳನ್ನು ಬಿಡು. ನನ್ನ ಪ್ರಾಣವು ನಿನ್ನಾಧೀನ ವಾದದ್ದೆಂದು ತಿಳಿ.'' ಎನ್ನಲು, ರಾಜಪುತ್ರಿಯು ಸಾನಂದಹೃದಯಳಾಗಿ ''ಪ್ರಾಣದೊಡೆಯರೆ, ಸ್ತ್ರೀಗೆ ಪತಿಯ ಅನುಕೂಲತೆಯ ಹೊರತು ಅಧಿಕ ಪ್ರಿಯವಾದದ್ದು ಯಾವದಿರುವದು? ಸಕಲೈಶ್ವರ್ಯಗಳ ಅನುಕೂಲತೆಯಿದ್ದು ಇದೊಂದು ಮಾತಿನ ಕೊರತೆ ಇದ್ದರೆ, ಅವಳಿಗೆ ಆ ಐಶ್ವರ್ಯಗಳೆಲ್ಲ ವಿಷದಂತೆ ಭಾಸವಾಗುತ್ತದೆ. ಸ್ತ್ರೀಗೆ ಸಕಲೈಶ್ವರ್ಯಗಳೂ, ಶುಭವೂ, ಸೌಭಾಗ್ಯವೂ, ಮೋಕ್ಷವೂ ಪತಿಯೇ ಆಗಿರುವನು. ಹೀಗಿರಲು ನನ್ನ ಪ್ರಿಯಪತಿಗಳಾಗಿರುವ ನೀವು, ನನಗೆ ಅನುಕೂಲವಾಗಿರುವಾಗ ಇದಕ್ಕೂ ಹೆಚ್ಚಿನ ಸುಖವು ಮತ್ತಾವದಿರುವದು? ಇಂದಿಗೆ ನಾನು ಧನ್ಯಳಾದೆನು.''

ಮಿತ್ರಾ, ಸುಮತೀ, ಈ ಪ್ರಕಾರ ನಮ್ಮಿಬ್ಬರ ಸಂಭಾಷಣ ನಡೆದಿರಲು, ಚತುರಳೂ, ಧೂರ್ತಳೂ ಆದ ಸುಮಧ್ಯಮೆ ಎಂಬ ದಾಸಿಯು ಅಲ್ಲಿಗೆ ಬಂದಳು. ಅವಳು ಪದ್ಮನಯನೆಯ ಹಿತಚಿಂತಕಳಾದ್ದರಿಂದ ಪದ್ಮನಯನೆಯು ಅವಳನ್ನು ದಾಸಿಯರಲ್ಲಿ ಎಣಿಸದೆ ಗೆಳತಿ ಎಂದು ತಿಳಿದಿದ್ದಳು. ಆದರಿಂದ ಸುಮಧ್ಯಮೆಗೆ ಬಹುತರವಾಗಿ ಸ್ವತಂತ್ರದಿಂದ ವರ್ತಿಸುವ ಅಧಿಕಾರವಿತ್ತು. ಆಗಲಾ ಸುಮಧ್ಯಮೆಯು ನನ್ನನ್ನು ಕುರಿತು—''ರಾಜಾಧಿರಾಜರಾದ ಕಮಲಾಕ್ಷ ಪ್ರಭುಗಳೇ, ಬಂಧು—ಮಿತ್ರರ ವಿಯೋಗ ದುಃಖದಿಂದ ಕೊರಗುತ್ತಿರುವ ನನ್ನ ಒಡತಿಯಾದ ಪದ್ಮನಯನಾದೇವಿಯು, ತಮ್ಮ ಆಗಮನವಾದಂದಿನಿಂದ ಆನಂದವೃತ್ತಿಯಲ್ಲಿ ರುವದನ್ನು ನೋಡಿ ನನಗೆ ಬಹಳ ಸಂತೋಷವಾಗಿದೆ. ಅಧಿಕೋಕ್ತಿಯ ದೋಷವು ನನಗೆ ಬಂದರೂ ಚಿಂತೆಯಿಲ್ಲ, ಅಡವಿಯೊಳಗಿನ ಸುಗಂಧ ಪುಷ್ಪದಂತೆ ವ್ಯರ್ಥ ಬಾಡುತ್ತಿರುವ, ಲೋಕಸುಂದರಿಯಾದ ಪದ್ಮನಯನಾದೇವಿಯ ಯೌವನವನ್ನು ಸಫಲಮಾಡುವದಕ್ಕೆ ತಾವೇ ಯೋಗ್ಯರೆಂಬ ನನ್ನ ಅಭಿಪ್ರಾಯವನ್ನು ಹೊರೆಗೆಡವದೆ ಇರಲಾರೆನು. ಇದಕ್ಕೆ ನನ್ನ ಒಡತಿಯ ಅನುಮೋದನವೂ ಇರುವದೆಂಬದು ತಮಗೆ ಗೊತ್ತಾಗಿದೆ. ತಾವೂ, ನನ್ನ ಒಡತಿಯೂ ಸಾರ್ವಭೌಮರ ಮಕ್ಕಳಾಗಿದ್ದರೂ, ಈಗಿನ ಕಾಲಗತಿಯು ವಿಪರೀತವಿರುವದರಿಂದ ನಿಮ್ಮಿಬ್ಬರ ಯೋಗ್ಯತೆಗೆ ಅನುಸರಿಸಿ ನಿಮ್ಮ ವಿವಾಹವು ಆಗಲಾರದು. ಆದರೂ ತಾವು ಗಾಂಧರ್ವ ವಿವಾಹದಿಂದಲೇ ನನ್ನ ಒಡತಿಯ ಪಾಣಿಗ್ರಹಣ ಮಾಡಬೇಕೆಂದು ನನ್ನ ಪ್ರಾರ್ಥನೆಯಿದೆ. ಹಿಂದಕ್ಕೆ ಭರತಜನಕನಾದ ದುಷ್ಯಂತಮಹಾರಾಜನು, ಪತಿವ್ರತಾಶಿರೋಮಣಿಯಾದ ಶಕುಂತಲೆಯನ್ನು ಕಣ್ವಮಹಾಮುನಿಗಳ ಆಶ್ರಮದಲ್ಲಿ ಗಾಂಧರ್ವವಿವಾಹದಿಂದಲೇ ಕೂಡಿದನು. ಕ್ಷತ್ರಿಯರಿಗೆ ಗಾಂಧರ್ವ ವಿವಾಹವು ಸಮ್ಮತವಾಗಿರುವದು.'' ಎಂದು ಹೇಳಿ ತರತರದ ಭೋಗದ್ರವ್ಯಗಳಿಂದ ತುಂಬಿದ ಚಿನ್ನದ ತಾಟುಗಳನ್ನು ಕಮಲಾಕ್ಷನ ಅನುಮೋದನ ದಿಂದ ರಾಜಪುತ್ರಿಯ ಮುಂದೆ ಇಟ್ಟಳು. ಆಗ ಸುಕುಮಾರಿಯಾದ ಪದ್ಮನಯನೆಯು, ಚಟ್ಟನೆ ಎದ್ದು ವಿನಯದಿಂದ ಸೆರಗನ್ನು ಸಾವರಿಸಿಕೊಳ್ಳುತ್ತ, ಮೃದುಸ್ಮಿತೆಯಾಗಿ ಸುಗಂಧಯುಕ್ತವಾದ ಗಂಧವನ್ನು ತನ್ನ ಸೂಕ್ಷ್ಮವಾದ ಕರದಿಂದ ನನ್ನ ಮೈಗೆ ಹಚ್ಚಿ ಮೇಲೆ ಸುಗಂಧದ್ರವ್ಯಗಳನ್ನು ಹಾಕಿದಳು. ಆ ಮೇಲೆ ಆ ಸುಂದರಿಯು ಸುವಾಸನೆಯುಳ್ಳ ತರತರದ ಪುಷ್ಪಗಳಿಂದ ಕಟ್ಟಿದ ಮಾಲಿಕೆಯನ್ನು ಕೈಯಲ್ಲಿ ತೆಗೆದುಕೊಂಡು ಮಧುರ ದೃಷ್ಟಿಗಳಿಂದ ನನ್ನನ್ನು ನೋಡುತ್ತ, ನನ್ನ ಮನಸ್ಸು ತನ್ನಲ್ಲಿಯೇ ಇರಬೇಕೆಂಬ ಭಾವದಿಂದ ಅದಕ್ಕೆ ಪ್ರತಿಬಂಧಮಾಡುವಳೋ ಎಂಬಂತೆ, ಆ ಹೂಮಾಲೆಯನ್ನು ನನ್ನ ಕೊರಳಲ್ಲಿ ಹಾಕಿದಳು ಆಗ್ಗೆ ನನಗಾದ ಆನಂದವನ್ನು ವರ್ಣಿಸಲಳವಲ್ಲ, ಕಲ್ಪಿತವಾದ ಸ್ವರ್ಗಸುಖವು ಪ್ರತ್ಯಕ್ಷ ಒದಗಿದಂತಾಯಿತು. ಮಿತ್ರಾ, ಏನು ಹೇಳಲಿ? ಆ ಕಾಲಕ್ಕೆ ರಾಜಪುತ್ರಿಯ ಮುಖದಲ್ಲಿ ವ್ಯಕ್ತವಾಗಿದ್ದ ಮುಗುಳುನಗೆಯು ನನ್ನ ಕಣ್ಣಮುಂದೆ ಕಟ್ಟಿದಂತೆಯಾಗಿ, ದುಃಖಾಗ್ನಿಯನ್ನು ಹೊತ್ತಿಸುತ್ತದೆ.

ಈ ಪ್ರಕಾರ ರಾಜಪುತ್ರಿಯು ತರತರದ ಸುಗಂಧ ತೈಲಗಳಿಂದಲೂ, ಹೂಮಾಲೆ ಗಳಿಂದಲೂ, ಅಮೂಲ್ಯವಾದ ಆಭರಣಗಳಿಂದಲೂ ನನ್ನನ್ನು ಅಲಂಕರಿಸಿ, ಸುಮ್ಮನೆ ತನ್ನ

ಕೈಬೆರಳುಗಳನ್ನು ತಿಕ್ಕಿಕೊಳ್ಳುತ್ತ, ತಲೆಬಾಗಿ, ಕಡೆಗಣ್ಣಿನ ನೋಟಗಳಿಂದ ಆಗಾಗ್ಗೆ ನನ್ನನ್ನು ನೋಡುತ್ತ, ಚಿನ್ನದ ಪುತ್ತಳಿಯಂತೆ ನನ್ನೆದುರಿಗೆ ನಿಂತುಕೊಂಡಳು. ಆಗ್ಗೆ ಅವಳ ಮುಖದಲ್ಲಿ ಬೆವರಿನ ಹನಿಗಳು ಮಿನುಗುತ್ತಿರಲು ಅವುಗಳ ಮಧ್ಯದಲ್ಲಿದ್ದ ಮೂಗಬಟ್ಟು ನಕ್ಷತ್ರಮಂಡಲದ ಚಂದ್ರನಂತೆ ಹೊಳೆಯುತ್ತಿತ್ತು. ಅವಳು ಬೆವರಿನ ಹನಿಗಳನ್ನು ಒರಿಸಿಕೊಳ್ಳುವದಕ್ಕಾಗಿ, ತರ್ಜನಿಯ ಬೆರಳನ್ನು ಮೇಲ್ತುಟಿಯ ಮೇಲೆ ಆಡಿಸಿಕೊಳ್ಳುತ್ತಿರಲು, ನಿನ್ನ ಮನಸ್ಸನ್ನು ಸ್ವಾಧೀನಮಾಡಿಕೊಳ್ಳದೆ ಬಿಡುವದಿಲ್ಲೆಂಬ ಪುರುಷಾರ್ಥವನ್ನು ಪ್ರೇಮಮತ್ಸರದಿಂದ ನನಗೆ ತೋರಿಸುವಳೆಂಬ ಭಾವವು ವ್ಯಕ್ತವಾಗುತ್ತಿತ್ತು. ಅವಳು ಚಾತುರ್ಯದಿಂದ ಮಾಡುವ ಅಂಗವಿಕ್ಷೇಪದಿಂದ ನನ್ನಲ್ಲಿ ಕಾಮವಿಕಾರವು ಹೆಚ್ಚಿತು. ರಾತ್ರಿಯು ಬಹಳವಾದದ್ದರಿಂದ ಸುಮಧ್ಯಮೆಯೇ ಮೊದಲಾದ ದಾಸಿಯರು ಮಲಗುವದಕ್ಕಾಗಿ ತಮ್ಮ ತಮ್ಮ ಸ್ಥಳಗಳಿಗೆ ಹೊರಟುಹೋದರು. ಮಿತ್ರಾ, ನನ್ನ ಪ್ರಿಯಳಿಗೆ ಪತಿಯೊಡನೆ ಇದೇ ಮೊದಲನೆಯ ಸಮಾಗಮವಾದದ್ದರಿಂದ ಅವಳ ಸ್ಥಿತಿಯು ವಿಚಿತ್ರವಾಯಿತು. ಏಕಾಂತದಲ್ಲಿ ನನ್ನೊಡನೆ ಗುಟ್ಟಿನ ಹಲವು ಮಾತುಗಳನ್ನಾಡಬೇಕೆಂದು ಇಚ್ಛಿಸುತ್ತಿದ್ದ ಆ ಸುಂದರಿಯ ಮುಖದಿಂದ ಲಜ್ಜೆಯ ಮೂಲಕ ಅಕ್ಷರಗಳೇ ಹೊರಡಲಿಲ್ಲ. ಭಯದಿಂದ ಅವಳ ಸರ್ವಾಂಗವು ಕಂಪಿಸಹತ್ತಿ ಮೈ ಬೆವತಿತು. ಈ ಕಾಲಕ್ಕೆ ಹೇಗೆ ವರ್ತಿಸಬೇಕೆಂಬದು ಅವಳಿಗೆ ತಿಳಿಯದ್ದರಿಂದ ಅವಳ ಸ್ಥಿತಿಯು ವಿಲಕ್ಷಣವಾಯಿತು. ಈ ಪ್ರಕಾರ ಮುಂದುಗಾಣದೆ ಚಿತ್ರದ ಗೊಂಬೆಯಂತೆ ನಿಂತಿದ್ದ ಮುಗ್ಧೆಯನ್ನು ನಾನು ಪ್ರೇಮದಿಂದ ಕೈ ಹಿಡಿದು ಹತ್ತರ ಕುಳ್ಳರಿಸಿಕೊಂಡು ಸಂತಯಿಸಿದೆನು. ಆ ವೊತ್ತಿನ ರಾತ್ರಿಯು ನನ್ನ ಪ್ರಿಯಳ ಸಮಾಗಮದಿಂದ ಅರೆನಿಮಿಷವಾಯಿತು.

ಈ ಪ್ರಕಾರ ನಾವು ಸುಖಾಸಕ್ತರಾಗಿ ಆರು ದಿನಗಳನ್ನು ಕಳೆಯಲು, ಮೇಘನಾದನು ರಾಜಪುತ್ರಿಯ ಭೆಟ್ಟಿಗಾಗಿ ಬರತಕ್ಕ ಏಳನೆಯ ದಿನವು ಪ್ರಾಪ್ತವಾಯಿತು. ಅವನು ನಿಯಮಿತ ವೇಳೆಗೆ ರಾಜಪುತ್ರಿಯ ಮಂದಿರದೊಳಗೆ ಬಂದು ಭ್ರಮಿಷ್ಟನಾಗಿ ನನ್ನ ಪ್ರಿಯಳೊಡನೆ ಹರಟಹತ್ತಿದನು. ಅವನು ಪ್ರೇಮದ ಆವೇಶದಿಂದ—"ಪ್ರಾಣಪ್ರಿಯೆ, ಇದು ನೋಡು ನೀನು ಹೇಳಿದಂತೆ ಪ್ರಚಂಡ ಧನುಸ್ಸನ್ನೂ, ಬಾಣಗಳಿಂದ ತುಂಬಿದ ಬತ್ತಳಿಕೆಯನ್ನೂ ತಂದಿದ್ದೇನೆ. ಈ ಧನುಸ್ಸು ನಿನ್ನ ಕೈಯಲ್ಲಿ ಬಂದದ್ದರಿಂದ ನನ್ನ ಪ್ರಾಣವೇ ನಿನ್ನ ಕೈಯಲ್ಲಿ ಬಂದ ಹಾಗಾಯಿತು. ಇರಲಿ ಆದರೇನಾಯಿತು? ನೀನೇನು ಪರಕೀಯಳೇ? ನನ್ನ ಪ್ರಾಣದ ಸಲುವಾಗಿ ನನಗಿಂತಲೂ ನಿನಗೆ ವಿಶೇಷ ಚಿಂತೆಯಿರುವದು. ಬೇಟೆಯಿಂದಾಗಲಿ ಗುರಿ ಹೊಡೆಯುವದರಿಂದಾಗಲಿ ನಿನ್ನ ಬೇಸರನ್ನು ಕಳೆದುಕೋ" ಅನ್ನಲು, ರಾಜಪುತ್ರಿಯು ಆನಂದ ಯುಕ್ತಳಾಗಿ ಅವನನ್ನು ಆದರಾತಿಥ್ಯಗಳಿಂದ ಸಂತೋಷಗೊಳಿಸಿ, ಬೇಗನೆ ಶೋಣಿತಪುರಕ್ಕೆ ಕಳುಹಿದಳು. ಅವಳಿಗೆ ನನ್ನ ಸಮಾಗಮವಾದದ್ದಲ್ಲದೆ ದುಷ್ಟ ಮೇಘನಾದನನ್ನು ಕೊಲ್ಲುವ ಧನುಸ್ಸು ಕೈಸೇರಿದ್ದರಿಂದ ಅವಳ ಸಂತೋಷಕ್ಕೆ ನೆಲೆಯಿಲ್ಲದಾಯಿತು.

ಮಿತ್ರಾ ಸುಮತೀ, ಈ ಸಾರೆ ರಾಕ್ಷಸನು ರಾಜಪುತ್ರಿಯ ಸಂಗಡ ಆಡಿದ ಮಾತುಗಳನ್ನು ಸಹಿಸುವದು ನನ್ನಿಂದಾಗಲಿಲ್ಲ. ಹೆಂಡತಿಯ ಅಪಮಾನವನ್ನು ಕಣ್ಣುಮುಟ್ಟ ನೋಡಿ

ಸುಮ್ಮನಿರುವದು ನನಗೆ ದುಃಸಹವಾಗಲು, ನನ್ನ ಪ್ರಿಯಳನ್ನು ಕುರಿತು ನುಡಿದೆನೇನಂದರೆ— ಪ್ರಾಣಪ್ರಿಯೆ, ನಾನು ಪ್ರತ್ಯಕ್ಷವಾಗಿ ನಿನ್ನ ಹತ್ತರ ಇರುತ್ತಿರಲು ಎರಡನೆಯವರು ಬಂದು ನಿನಗೆ ಉಪದ್ರವ ಕೊಡುವದು ಲಜ್ಜಾಸ್ಪದವು. ಆ ರಾಕ್ಷಸನ ಸಾಮರ್ಥ್ಯವೆಂದರೇನು? ಅರೆಕ್ಷಣದಲ್ಲಿ ಅವನನ್ನು ಯಮಸದನಕ್ಕೆ ಅಟ್ಟಬಹುದು. ನಾವು ಹೀಗೆ ಪರತಂತ್ರರಾಗಿ ಎಲ್ಲಿಯವರೆಗೆ ಇರಬೇಕು? ಇಂಥ ಸ್ಥಿತಿಯು ನಿಜವಾದ ಶೌರ್ಯಕ್ಕೂ ಮನುಷ್ಯತ್ವಕ್ಕೂ ತಕ್ಕದ್ದಲ್ಲ. ಏನೇ ಆಗಲಿ ನಾನು ರಾಕ್ಷಸನಿಗೆ ಪ್ರತ್ಯಕ್ಷವಾಗಿ ಕಾಣಿಸಿಕೊಂಡು, ಅವನೊಡನೆ ಯುದ್ಧಮಾಡಿ ಕೊಲ್ಲುವೆನು, ಇಲ್ಲವೆ ನಾನು ಪ್ರಾಣಕೊಡುವೆನು. ಹೀಗೆ ಸ್ತ್ರೀಯರಂತೆ ಹೆದರಿ ಇನ್ನು ಮರೆಗೆ ಎಂದೂ ಕೂಡ್ರಲಿಕ್ಕಿಲ್ಲ.

ರಾಜಪುತ್ರಿಯು ನನ್ನ ಮಾತುಗಳನ್ನು ಕೇಳಿ ಮುಗುಳುನಗೆಯಿಂದ—''ಪ್ರಾಣಪ್ರಿಯರೇ, ತಮ್ಮ ಮಾತುಗಳು ಕಡುಗಲಿಗಳಿಗೆ ಸಹ ಸೋಜಿಗವನ್ನುಂಟು ಮಾಡದೆ ಇರಲಾರವು. ಯಾಕಂದರೆ ರಾಕ್ಷಸನ ಭಯಂಕರ ರೂಪವನ್ನು ಕಣ್ಣಿನಿಂದ ನೋಡುವದೂ ದುಃಸಹ ವಾಗಿರಲು, ಅವನಿಗೆ ಎದುರಾಗಿ ಯುದ್ಧ ಮಾಡುವದೆಂದರೆ ಎಂಥ ಶೌರ್ಯದ ಮಾತು! ತಾವು ಇಂಥ ಕಠಿಣ ಕೆಲಸಕ್ಕೆ ಕೈ ಹಾಕುವದನ್ನು ನೋಡಿ ನನಗೆ ಬಹಳ ವ್ಯಸನವಾಗುತ್ತದೆ. ತಾವು ವಿಷಪರೀಕ್ಷೆಯನ್ನು ಮಾಡಬಾರದು,'' ಎಂದು ಹೇಳಲು ನಾನು ರಾಜಪುತ್ರಿಯನ್ನು ಕುರಿತು—''ಭೀರು ಸ್ವಭಾವದ ನನ್ನ ಅರಗಿಳಿಯೇ ಸ್ತ್ರೀ ಜಾತಿಯ ಪ್ರೇಮಕ್ಕೆ ನಿನ್ನ ಭಾಷಣಗಳು ಒಪ್ಪುತ್ತವೆ. ನನ್ನ ಮೇಲೆ ನಿನ್ನ ಅನಿರ್ವಾಚ್ಯವಾದ ಪ್ರೇಮವು ಇರುವದೆಂಬದನ್ನು ನಾನು ಬಲ್ಲೆನು. ಇಲ್ಲಿಯವರೆಗೆ ನಿನ್ನನ್ನು ಪರಪರಿಯಿಂದ ಪೀಡಿಸಿದ ಆ ಖೂಳ ರಕ್ಕಸನ ಪ್ರಾಣವನ್ನು ಹಿಂಡಿದ ಹೊರತು, ನನಗೆ ಸಮಾಧಾನವಾಗಲರಿಯದು. ನೀನು ಇಲ್ಲದ್ದೊಂದು ಸಂಶಯ ತೆಗೆದುಕೊಂಡು ನನ್ನ ಸಲುವಾಗಿ ಚಿಂತೆಮಾಡಬೇಡ ಸ್ವಸ್ಥ ಮನಸ್ಸಿನವಳಾಗಿರು. ನಿರಾಯಾಸದಿಂದ ರಾಕ್ಷಸನ ಶಿರಸ್ಸನ್ನು ಭೂಮಿಗಿಳಿಸುವೆನು'' ಅನ್ನಲು ಪದ್ಮನಯನೆಯು ನನ್ನ ಮಾತಿಗೆ ಹರ್ಷಿತಳಾಗಿ ನುಡಿದಳೇ ನಂದರೆ—''ಪ್ರತಾಪ ಶಾಲಿಗಳೇ, ತಮ್ಮಲ್ಲಿ ಧೈರ್ಯವು ಎಷ್ಟರವಟ್ಟಿಗೆ ಇರುತ್ತದೆಂಬದನ್ನು ತಿಳಿಯುವದಕ್ಕಾಗಿ ಶೂರರಿಗೆ ಅಸಹ್ಯವಾದ ಕೀಳುಮಾತುಗಳನ್ನು ನಾನು ಆಡಿದೆನು. ಈ ಪದ್ಮನಯನೆಯಾದರೂ, ಧನುರ್ವಿದ್ಯೆಯನ್ನು ಅರಿತವಳಿರುತ್ತಾಳೆ; ಅವಳಿಂದ ನಿಮಗೆ ತಪ್ಪದೆ ಸಹಾಯವಾಗಬಹುದು. ಇದಲ್ಲದೆ ರಾಕ್ಷಸನ ಮೃತ್ಯು ರೂಪವಾದ ಧನುಸ್ಸು ನನ್ನ ಹತ್ತರ ಅದೆ. ಯಾವದೊಂದು ಉಪಾಯದಿಂದ ರಾಕ್ಷಸನ ನಾಶಮಾಡದಿದ್ದರೆ, ನಮಗೆ ಸುಖವಾಗಲರಿಯದೆಂಬದನ್ನು ನಾನು ಬಲ್ಲೆನು. ಇರಲಿ ಹೇಗಾದರೂ ನನ್ನ ವ್ರತದ ಅವಧಿಯು ಮುಗಿಯುತ್ತ ಬಂದದೆ. ಕಾಮುಕನಾದ ರಾಕ್ಷಸನು ಪರಸ್ತ್ರೀಯಾದ ನನ್ನನ್ನು ಕೆಣಕಿದರೆ ನಾಶವಾಗದೆ ಇರನು. ವೀರಾಗ್ರೇಸರಾದ ತಮ್ಮ ಬಲವು ನನಗಿರಲು ಆ ಖೂಳಕ್ರವ್ಯಾಧನ ಸಾಮರ್ಥ್ಯವನ್ನೂ, ಕ್ರೂರತನವನ್ನೂ ಏಕೆ ಲೆಕ್ಕಿಸಲಿ? ತಮ್ಮ ಬಾಹುಗಳ ನೆರಳಲ್ಲಿ ನಿರಾತಂಕವಾಗಿ ವಿಶ್ರಾಂತಿಯನ್ನು ತೆಗೆದುಕೊಳ್ಳುವೆನು. ಅವಧಿಯು ಮುಗಿಯುವವರೆಗೆ ತಾಳಬೇಕು ರಾಕ್ಷಸನ ದೌರ್ಜನ್ಯವೇ ಅವನ ನಾಶಕ್ಕೆ ಕಾರಣವಾಗುವದು.

ದುಷ್ಟಶಾಸನ

ಈ ಮೇರೆಗೆ ನನ್ನ ಪ್ರಿಯಳು ಹೇಳಿದ ಸಮಂಜಸ ಮಾತುಗಳಿಗೆ ನಾನು ಒಡಂಬಟ್ಟು, ಕೆಲವು ದಿನಗಳು ಕಳೆಯಲು ಆಕೆಯ ವ್ರತಸಮಾಪ್ತಿಯ ದಿವಸವು ಒದಗಿತು. ಒಕ್ಕಲಿಗನು ಹೊಡೆಯ ತಲೆಯಲ್ಲಿ ಮಳೆಯ ಹಾದಿಯನ್ನು ನೋಡುವಂತೆ, ಪದ್ಮನಯನೆಯ ಅಂಗ-ಸಂಗವನ್ನು ಎದುರು ನೋಡುತ್ತಿದ್ದ ಮೇಘನಾದನು, ಆ ದಿನ ಉತ್ಸಾಹಪೂರ್ಣನಾಗಿ ಪದ್ಮನಯನೆಯ ಬಳಿಗೆ ಬಂದನು. ಅವನ ಪೋಷಾಕು ಸುಂದರವಾಗಿತ್ತು ಮುತ್ತು-ರತ್ನಗಳ ಅಲಂಕಾರಗಳಿಂದ ಅವನು ಜಗ್ಗುತ್ತಿದ್ದನು. ತನ್ನ ವೈಭವದಿಂದ ಪದ್ಮನಯನೆಯನ್ನು ಮರಳು ಮಾಡುವ ವಿಷಯದಲ್ಲಿ ಅವನು ಎಳ್ಳಷ್ಟು ಔದಾಸೀನ್ಯವನ್ನು ತಾಳಿದ್ದಿಲ್ಲ. ರಥ, ಕುದುರೆ, ಅಂಗರಕ್ಷಕರು, ಪರಿಚಾರಕರು, ಸ್ತುತಿಪಾಠಕರು, ಪರಿಮಿತ ಚತುರಂಗ ಸೈನ್ಯ ಮೊದಲಾದವು ರಾಕ್ಷಸನ ಉತ್ಸಾಹವನ್ನು ಹೆಚ್ಚಿಸುತ್ತಿದ್ದವು. ಮನೋರಾಜ್ಯದ ಉಚ್ಚ ಶಿಖರವನ್ನೇರಿದ ಆ ದೈತ್ಯ ರಾಜನ ಮನಸ್ಸಿನಲ್ಲಿ ಆನಂದದ ತೆರೆಗಳು ಉತ್ಪನ್ನವಾಗಿದ್ದವು. ಅವನಿಗೆ ದಿಕ್ಕುಗಳು ಪ್ರಸನ್ನವಾಗಿ ತೋರುತ್ತಿದ್ದವು. ಉಚ್ಚ ಮನೋರಥಗಳನ್ನು ಕಲ್ಪಿಸಿ ಕಲ್ಪಿಸಿ, ಅವುಗಳ ಕಾಲ್ಪನಿಕ ಭೋಗದಿಂದ ಮನಸ್ಸು ತೃಪ್ತವಾಗದಿರಲು, ಅವನು ಒಮ್ಮೊಮ್ಮೆ ಚಡಪಡಿಸುವನು. ಇಂದು ಪದ್ಮನಯನೆಯ ಬಳಿಯಲ್ಲಿ ಹೀಗೆ ಕೂಡಬೇಕು—ಹಾಗೆ ಕೂಡಬೇಕು, ಹೀಗೆ ಮಾತಾಡಬೇಕು-ಹಾಗೆ ಮಾತಾಡಬೇಕು, ಆಕೆಗೆ ಇದನ್ನು ಕೊಡಬೇಕು—ಅದನ್ನು ಕೊಡಬೇಕು, ಆಕೆಯ ಮನಸ್ಸನ್ನು ಹೀಗೆ ರಮಿಸಬೇಕು, ಹಾಗೆ ರಮಿಸಬೇಕು. ಇವೇ ಮೊದಲಾದ ವಿಚಾರಗಳ ತಾಕಲಾಟದಿಂದ ವ್ಯಗ್ರನಾದ ಆ ತಾಮಸಿಯ ಮನಸ್ಸು ಪದ್ಮನಯನೆಯಿದ್ದಲ್ಲಿಗೆ ಹೋಗಿ ಹೋಗಿ ಬರುತ್ತಿತ್ತು ತನಗೆ ಒರೆ ಹಚ್ಚಿ ಜಗತ್ತನ್ನು ನೋಡುವದು ಮನುಷ್ಯನ ಸ್ವಭಾವವಾದ್ದರಿಂದ, ತನ್ನಂತೆ ಪದ್ಮನಯನೆ ಯಾದರೂ ಉತ್ಸಾಹಪೂರ್ಣಳಾಗಿ, ವಸ್ತ್ರಾಲಂಕಾರಗಳಿಂದ ತನ್ನ ಸೌಂದರ್ಯದಲ್ಲಿ ಸೊಬಗನ್ನುಂಟು ಮಾಡಿಕೊಂಡು, ಸರ್ವಸನ್ನಾಹದೊಡನೆ ತನ್ನ ಹಾದಿಯನ್ನು ನೋಡುತ್ತಿರು ವಳೆಂದು ಮೇಘನಾದನು ಕಲ್ಪಿಸಿದ್ದನು. ಪ್ರಿಯ ಮಿತ್ರಾ, ನಮ್ಮ ವಿಷಯ ಜನರ ಈ ಹಾಳು ವರ್ಣನವು ನಿನಗೆ ತಿರಸ್ಕರಣೀಯವಾಗಿ ತೋರಬಹುದು; ಆದರೆ, ''ಹೆತ್ತವರಿಗೆ ಹೆಗ್ಗಣವೇ ಮುದ್ದು'' ಎಂಬಂತೆ ನಮ್ಮಂಥ ವಿಷಯಿಗಳಿಗೆ ಇಂಥ ವರ್ಣನಗಳೇ ರಮ್ಯವಾಗಿ ತೋರುವವು. ಇರಲಿ ಕವಲೆತ್ತಿನಂತೆ ಸಿಂಗಾರಾಗಿದ್ದ ನಮ್ಮ ಮದುಮಗನು ಮದುವೆಯಾಗುವ ಉಬ್ಬಿನಿಂದ ಪದ್ಮನಯನೆಯ ವಿಹಾರ ಮಂದಿರವನ್ನು ಹೊಕ್ಕು ಬೆರಗಾಗಿ ನಿಂತುಕೊಂಡನು.

ಮೇಘನಾದನು ಪದ್ಮನಯನೆಯ ಮಂದಿರವನ್ನು ಪ್ರವೇಶಿಸಿದಾಗ ಎರಡು ತಾಸು ಹೊತ್ತು ಏರಿತ್ತು ಉತ್ಸಾಹದ ಯಾವ ಚಿಹ್ನಗಳೂ ಆ ಮಂದಿರದಲ್ಲಿ ಕಂಡುಬರುತ್ತಿದ್ದಿಲ್ಲ. ಪದ್ಮನಯನೆಯ ಗಂಭೀರ ಮುಖ ಮುದ್ರೆಯ ಮುಂದೆ ಮೇಘನಾದನ ಅಲಂಕಾರಿಕ ಮುದ್ರೆಯು ತೇಜೋಹೀನವಾಯಿತು. ಆಗ ಪದ್ಮನಯನೆಯು ಬೇಟೆಯಾಡಲಿಕ್ಕೆ ತಕ್ಕ ಪುರುಷವೇಷವನ್ನು ಧರಿಸಿದ್ದಳು. ಮೇಘನಾದನು ಕೊಟ್ಟಿದ್ದ ಪ್ರಚಂಡಧನುಸ್ಸು ಆಕೆಯ ಕೈಯಲ್ಲಿ ಒಪ್ಪುತ್ತಿತ್ತು

ಟೊಂಕದಲ್ಲಿ ಖಡ್ಗವು ಅಲೆದಾಡುತ್ತಿತ್ತು. ಆಕೆಯು ಹದನಾದ ಬರ್ಚಿಯನ್ನು ತಕ್ಕೊಂಡಿದ್ದಳು. ಒಟ್ಟಿಗೆ ಬೇಟೆಗೆ ಹೊರಟು ನಿಂತಿದ್ದ ಪ್ರತಾಪಿಯಾದ ಪ್ರಾಯದ ಕ್ಷತ್ರಿಯ ವೀರನಂತೆ ಆಕೆಯು ಮೇಘನಾದನಿಗೆ ತೋರಿದಳು. ಆಕೆಯು ಮೇಘನಾದನನ್ನು ಕುರಿತು—ರಾಕ್ಷಸ ಶ್ರೇಷ್ಠನೇ, ಒಳ್ಳೆಯ ಹೊತ್ತಿಗೆ ಬಂದೆ; ಇಲ್ಲದಿದ್ದರೆ ಒಬ್ಬಳೇ ಬೇಟೆಗೆ ಹೋಗಬೇಕಾಗಿತ್ತು. ನಿನ್ನ ಈ ಪ್ರಚಂಡ ಧನುಸ್ಸು ನನ್ನ ಕೈಸೇರಿದಾಗಿನಿಂದ ಬೇಟೆಯಾಡುವ ನನ್ನ ಉತ್ಸಾಹಕ್ಕೆ ಮೇರೆಯಿಲ್ಲದಾಗಿದೆ. ನಿನ್ನ ಈ ಧನುಸ್ಸು ಬಹು ಉತ್ತಮವಾದದ್ದು. ನಾನು ನಿನ್ನ ಪಾಣಿಗ್ರಹಣ ಮಾಡಿದನಂತರ ಪರಾಧೀನಳಾಗುವೆನು. ಈಗಿನಂತೆ ಬೇಟೆಯಾಡುವದಕ್ಕೆ ಅನುವು ದೊರೆಯುವದಿಲ್ಲ. ವಿವಾಹಿತ ಸ್ತ್ರೀಯ ಸ್ವಾತಂತ್ರ್ಯವು ಪತಿಯಿಂದಾಗಲಿ, ಸಂತತಿಯಿಂದಾಗಲಿ ಸೆಳೆದುಕೊಳ್ಳಲ್ಪಡುತ್ತದೆ. ಏಳು ಇಂದು ಆನಂದದಿಂದ ಬೇಟೆಯಾಡಿ ಬರೋಣ. ಇಂದು ವ್ರತಸಮಾಪ್ತಿಯಾದದ್ದರಿಂದ ಪಾಣಿಗ್ರಹಣ ಮಹೋತ್ಸವವು ನೆರವೇರತಕ್ಕದ್ದದೆ. ವೀರರಿಗೆ ಮೃಗಯೆಗಿಂತ ಹೆಚ್ಚು ಆನಂದದ ಸಂಗತಿಯಿಲ್ಲೆಂಬದನ್ನು ನಾನು ಯಾಕೆ ಹೇಳಬೇಕು? ಆ ಆನಂದದ ಸಂಗತಿಯು ನಮ್ಮ ವಿವಾಹದ ಪೂರ್ವದಲ್ಲಿ ಒದಗಲಿ. ವೀರಾಗ್ರಣಿಯೇ, ಈ ಪರಿವಾರದ ಗೊಂದಲವೇಕೆ? ನಿನ್ನ ಈ ಪರಿಚಾರಕರೂ, ಬಟ್ಟಂಗಿಗಳೂ, ಸೈನ್ಯವೂ, ರಥಾಶ್ವಗಳೂ ಶೋಣಿತಪುರಕ್ಕೆ ಹೋಗಲಿ. ನಿನ್ನ ಸಮಾಗಮಕ್ಕಾಗಿ ಬಹುದಿನ ಕಾದಿದ್ದ ನನಗೆ ನಿನ್ನ ವಿಯೋಗವು ಬೇಗನೆ ಒದಗದಂತೆ ವ್ಯವಸ್ಥೆಮಾಡು. ನೀನು ಚಿರಕಾಲ ಈ ವಿಹಾರ ಮಂದಿರದಲ್ಲಿ ಇರತಕ್ಕದ್ದು. ನಾನು ಅರ್ಧಾಂಗಿಯಾದ ಬಳಿಕ ನಿನ್ನ ಸೇವೆಯನ್ನು ಕೈಮುಟ್ಟಿ ಮಾಡುವದು ನನ್ನ ಧರ್ಮವಲ್ಲವೆ? ಅನ್ನಲು ರಾಕ್ಷಸನು ಮೋಹಪರವಶನಾಗಿ ಎಲ್ಲ ಪರಿವಾರವನ್ನು ಶೋಣಿತಪುರಕ್ಕೆ ಅಟ್ಟಿ ಪದ್ಮನಯನೆಯೊಡನೆ ಬೇಟೆಗೆ ಹೊರಟನು.

ಪದ್ಮನಯನೆಯು ಮೇಘನಾದನೊಡನೆ ಬೇಟೆಯಾಡುತ್ತಾಡುತ್ತ ಅರಣ್ಯದ ಮಧ್ಯವನ್ನು ಪ್ರವೇಶಿಸಿದಳು. ಪ್ರಿಯಮಿತ್ರಾ, ಏನು ಹೇಳಲಿ! ಏಕಾಂತವಾಸ, ದಟ್ಟವಾದ ಗಿಡದ ನೆರಳು, ಏರಿಕೆಯ ಬಿಸಿಲಿನಲ್ಲಿಯೂ ಉಷ್ಣತೆಯ ಬಾಧೆಯು ತಟ್ಟದಾಗಿದೆ, ಪದ್ಮನಯನೆಯು ತನ್ನ ಭಾಲೆಯನ್ನು ನೆಗಹಿ, ಹುಬ್ಬು ಗಂಟಿಕ್ಕಿ ಒಂದು ಮೃಗವನ್ನು ಬೆನ್ನಟ್ಟುವ ಹವಣಿಕೆಯಲ್ಲಿದ್ದಾಳೆ, ಮೇಘನಾದನ ಪಾಪದೃಷ್ಟಿಗಳು ಪದ್ಮನಯನೆಯಿಂದ ಕಿತ್ತಲಾರದಾಗಿವೆ; ಈ ಸ್ಥಿತಿಯಲ್ಲಿ ಆತನು ಪದ್ಮನಯನೆಯನ್ನು ಕುರಿತು—ಹರಿಣಾಕ್ಷೀ, ಬಿಡು, ಇನ್ನೂ ಬೇಟೆಯು ಸಾಕಾಗಲಿಲ್ಲವೇನು? ನೋಡು, ಈ ಸ್ಥಳವು ಎಷ್ಟು ರಮ್ಯವಾಗಿದೆ. ಬೇಟೆಯಲ್ಲಿ ನನ್ನ ಮನಸ್ಸು ಎಷ್ಟುಮಾತ್ರವೂ ರಮಿಸಲೊಲ್ಲದು ನಾನು ಕೇವಲ ಪರವಶನಾಗಿದ್ದೇನೆ, ಸರ್ವಾಂಗದಲ್ಲಿ ದಾಹವು ಉತ್ಪನ್ನ ವಾಗಿದೆ. ಈ ಪ್ರಸಂಗದಲ್ಲಿ ನೀನು ನನ್ನನ್ನು ಬಿಗಿದಪ್ಪಿ ಸಮಾಧಾನಗೊಳಿಸಲೇಬೇಕು, ಎಂದು ನುಡಿದು ಕುದುರೆಯಿಂದ ಆಕೆಯನ್ನು ಇಳಿಸಹೋದನು. ಆಗ ಆಕೆಯು—ಹಾ! ಅಧಮಾ, ಚಾಂಡಾಲಾ, ನನ್ನ ದೇಹಸ್ಪರ್ಶದಿಂದ ನಿನ್ನ ಪ್ರಾಣಹಾನಿಯಾಗುವದಂತು ಇರಲಿ ನಾನು ಅಪವಿತ್ರಳಾದೇನು? ಎಂದು ನುಡಿದು ಒಮ್ಮೆ ಭಾಲೆಯಿಂದ ಅವನನ್ನು ಇರಿದು ಸಾಂಕೇತಿಕ ಶಬ್ದವನ್ನು ಉಚ್ಚರಿಸಿದಳು. ಕೂಡಲೆ ಅಲ್ಲಿಯೇ ಮರೆಗೆ ಇದ್ದ ಕಮಲಾಕ್ಷನು ಅಶ್ವಾರೂಢನಾಗಿ ಬಂದು ಪದ್ಮನಯನೆಯನ್ನು ಬೆನ್ನಿಗೆ ಹಾಕಿಕೊಂಡು ನಿಂತುಕೊಂಡನು.

ಮಿತ್ರಶ್ರೇಷ್ಠನೇ, ಅಕಸ್ಮಾತ್ತಾಗಿ ನಾನು ಬಂದದ್ದನ್ನು ನೋಡಿ ಮೇಘನಾದನು ಬೆಪ್ಪಾದನು. ಆತನ ತಲೆಗೇರಿದ ಕಾಮವಿಕಾರವು ಝರ್ರನೆ ಇಳಿದು ಪದ್ಮನಯನೆಯ ಮೋಸದ ಚಿತ್ರವು ಅವನ ಕಣ್ಣಿಗೆ ಕಟ್ಟಿತು. ತನ್ನ ಸರಳತನ ಪದ್ಮನಯನೆಯ ಮೋಸ ನನ್ನ ಉದ್ಧಾಮತನ ಇವು ಮನಸ್ಸಿನಲ್ಲಿ ಹೊಳೆಯಲು ಆ ತಾಮಸಿಯು ಕ್ರೋಧಕ್ಕೆ ಈಡಾದನು. ಅವನ ಕ್ರೋಧಾಗ್ನಿಯು ಪುಟವಾಗಿ ಹೆಚ್ಚುತ್ತ ಹೋಗಲು ಕ್ಷಣಕ್ಷಣಕ್ಕೆ ಅವನ ಮುಖಮುದ್ರೆಯು ಬದಲಾಗಹತ್ತಿತ್ತು. ಅವನು ಆವೇಶದಿಂದ ನನ್ನನ್ನು ಕುರಿತು–ದುರ್ಬಲನಾದ ನರಾಧಮನೇ, ಸ್ಥಾನಾಸ್ಥಾನದ ವಿಚಾರವನ್ನು ಮಾಡದೆ ಯಾರ ಭಯವನ್ನೂ ಮನಸ್ಸಿನಲ್ಲಿ ತಾರದೆ ಪ್ರಾಯದ ಸೊಕ್ಕಿನಿಂದ ಮೈಮರೆತು ಪದ್ಮನಯನೆಯ ಬೆನ್ನುಕಟ್ಟುವೆಯಾ? ಬೇಟೆಯ ನೆವದಿಂದ ನನ್ನನ್ನು ಇಲ್ಲಿಗೆ ಕರತಂದು ಕೈ ತೋರಿಸಬೇಕೆಂದು ನೀವು ಎಷ್ಟುದಿನ ಹೊಂಚುಹಾಕಿದ್ದೀರಿ? ನಿಮ್ಮಂಥ ದುರ್ಬಲರಿಂದ ಆಗುವದೇನು? ಇಗೋ, ನಿನ್ನಲ್ಲಿ ಸಾಮರ್ಥ್ಯವಿದ್ದರೆ ಉಳಿದುಕೋ, ಎಂದು ಖಡ್ಗವನ್ನೆತ್ತಿ ಕುದುರೆಯನ್ನು ನೂಕಿ ನನ್ನ ಮೈಮೇಲೆ ಬಂದನು. ಕೂಡಲೆ ನಾನು ಅಸಂಖ್ಯ ಬಾಣಗಳನ್ನು ಆ ರಾಕ್ಷಸನ ಸರ್ವಾಂಗದಲ್ಲಿ ನಡಿಸಿ, ಅವನನ್ನು ಹಿಂದಕ್ಕಟ್ಟಿ ನುಡಿದೆ ನೇನೆಂದರೆ— ಎಲೈ ತಾಮಸಿಯೇ, ಸಮರದಲ್ಲಿ ನಿನಗೆ ಎದುರಾಗಿ ನನ್ನ ಬಾಹುಬಲವನ್ನು ತೋರಿಸುವೆನಲ್ಲದೆ ನಿನ್ನ ಹಾಗೆ ಗಳಹುವದಿಲ್ಲ. ಸುಶೀಲೆಯೂ ಸುಕುಮಾರಿಯೂ, ಸುಶಿಕ್ಷಿತಳೂ ಆದ ಪದ್ಮನಯನೆಯು, ಗುಣಹೀನನಾದ ನಿನ್ನ ಪ್ರತಿಬಂಧದಿಂದ ಕೊರಗುತ್ತಿರಲು, ಪುರುಷಧರ್ಮವನ್ನನುಸರಿಸಿ ನಾನು ಅವಳ ಬಂಧವಿಮೋಚನ ಮಾಡಲಿಕ್ಕೆ ನಿಂತದ್ದರಲ್ಲಿ ಅಪರಾಧವೇನಿರುವದು? ಪದ್ಮನಯನೆಯು ನನ್ನ ವಿವಾಹಿತ ಸ್ತ್ರೀಯಿರುತ್ತಾಳೆ; ನಮ್ಮಿಬ್ಬರ ವಿವಾಹಕ್ಕೆ ಪರಸ್ಪರರಲ್ಲಿ ಉತ್ಪನ್ನವಾದ ಪ್ರೇಮವು ಕಾರಣವಾಗಿರುತ್ತದೆ. ನಿಜವಾದ ಪ್ರೇಮವು ಐಶ್ವರ್ಯ, ಸಾಮರ್ಥ್ಯ, ಅಧಿಕಾರ ಮುಂತಾದ ಬಾಹ್ಯಕಾರಣಗಳಿಂದ ಉತ್ಪನ್ನವಾಗು ತ್ತಿರುವದಿಲ್ಲ. ನಿನ್ನ ಸಾಮರ್ಥ್ಯದ ಭಯವು ನನಗಿರುತ್ತಿದ್ದರೆ, ಪದ್ಮನಯನೆಯನ್ನು ನಾನು ಕಣ್ಣೆತ್ತಿ ಸಹ ನೋಡುತ್ತಿದ್ದಿಲ್ಲ. ನೀನು ಮೈಸೊಕ್ಕುಬಿಟ್ಟು ಎಚ್ಚರದಿಂದ ನನ್ನೊಡನೆ ಯುದ್ಧಮಾಡು, ಅಂದರೆ ನಮ್ಮಿಬ್ಬರ ಪರಾಕ್ರಮದ ನಿರ್ಣಯವಾಗುವದು.

ನನ್ನ ಈ ಮಾತುಗಳನ್ನು ಕೇಳಿ ರಾಕ್ಷಸನಿಗೆ ಮಿತಿಮೀರಿ ಸಿಟ್ಟುಬಂದರೂ, ಪದ್ಮನಯನೆಯ ಕೈಯಲ್ಲಿ ತನ್ನ ಮೃತ್ಯು ರೂಪವಾದ ಪ್ರಚಂಡಧನಸ್ಸಿರುವದನ್ನು ನೋಡಿ ಅವನು ಕುಂಠಿತನಾದನು. ಮೇಘನಾದನು ತನ್ನ ಈ ಮನದ ದುಗುಡನ್ನು ವ್ಯಕ್ತಮಾಡದೆ, ಶಸ್ತ್ರಗಳ ಹೊಡತಗಳಿಂದ ನನ್ನನ್ನು ಬಹಳವಾಗಿ ನೋಯಿಸಿದನು. ಆಗ ನಾನು ಖತಿಗೊಂಡು ಬಾಣಗಳ ಮಳೆ ಸುರಿಸಿ ರಾಕ್ಷಸನ ಸರ್ವಾಂಗವನ್ನು ಛಿದ್ರಮಯವಾಗಿ ಮಾಡಲು, ಅವನು ಕಾಲನಂತೆ ಅರ್ಭಟಿಸುತ್ತ ನನ್ನ ಬಾಣಗಳನ್ನು ಲೆಕ್ಕಿಸದೆ ಮೇಲ್ವಾಯ್ದು ಖಡ್ಗದಿಂದ ನನ್ನನ್ನು ಬಹಳವಾಗಿ ನೋಯಿಸಿದನು ಇದನ್ನು ನೋಡಿ ನನ್ನ ಪ್ರಿಯಳು ಬಹಳ ಅಸಮಾಧಾನಪಟ್ಟಳು. ಅವಳು ಸ್ವತಃ ಯುದ್ಧ ಮಾಡಲಿಕ್ಕೆ ಟೊಂಕ ಕಟ್ಟಿದಳು. ಇಂಥ ಸಾಹಸಕ್ಕೆ ಹೋಗಲಾಗದೆಂದು ನಾನು ಅವಳನ್ನು ಪ್ರತಿಬಂಧಿಸಲು ನನ್ನ ಬಹಿಃಪ್ರಾಣವಾದ ಆ ಸುಂದರಿಯು ನುಡಿದಳೇನಂದರೆ—

ಆರ್ಯರೇ, ನಾನು ತಮ್ಮ ಸುಖ–ದುಃಖಗಳಿಗೆ ಪಾಲುಗಾರಳಾಗಿರಲು, ಸಂಕಟಸಮಯದಲ್ಲಿ ತಮಗೆ ಸಹಾಯ ಮಾಡದೆ ಇರುವರೆ? ಸಹಾಯಮಾಡಲಿಕ್ಕೆ ನನಗೆ ಅನುಕೂಲವೇ ಇರದಿದ್ದರೆ ಉಪಾಯವಿಲ್ಲ, ನಾನು ಚಿಕ್ಕಂದಿನಲ್ಲಿ ಧನುರ್ವಿದ್ಯೆಯನ್ನು ಅಭ್ಯಾಸಿಸಿದ್ದೇನೆ. ಅದರ ಉಪಯೋಗವನ್ನು ಈಗಲ್ಲದೆ ಮತ್ತೆ ಯಾವಾಗ ಮಾಡಬೇಕು? ಈ ಚರಣ ಸೇವೆಯಲ್ಲಿ ದೇಹವನ್ನು ಸವಿಸಿ ಕೃತಾರ್ಥಳಾಗಲಿಕ್ಕೆ ಪ್ರತಿಬಂಧವಿರಬಾರದೆಂದು ನಾನು ಬೇಡಿಕೊಳ್ಳುತ್ತೇನೆ. ಮನೋಹರರೇ, ಎರಡನೆಯ ವಿಚಾರ ಮಾಡದೆ, ನನಗೆ ಭಾರವಾಗಿರುವ ಈ ಪ್ರಚಂಡ ಧನುಸ್ಸನ್ನು ತಾವು ತೆಗೆದುಕೊಂಡು, ನನಗೆ ತಮ್ಮ ಹಗುರಾದ ಧನುಸ್ಸನ್ನು ಕೊಡಬೇಕು.

ಈ ಪ್ರಕಾರ ರಾಜಪುತ್ರಿಯು ನನ್ನನ್ನು ಆಗ್ರಹದಿಂದ ಹಿಂದಕ್ಕೆ ಸರಿಸಿ, ಧನುಷ್ಪಾಣಿಯಾಗಿ ರಾಕ್ಷಸನಿಗೆ ಎದುರಾಗಲು ಅವನು—ಎಲೈ ವಿಶ್ವಾಸಘಾತಕಿಯೇ, ನಿನ್ನ ಪ್ರಿಯನನ್ನು ಹಿಂದಕ್ಕೆ ಸರಿಸಿ ನೀನು ನನ್ನ ಸಂಗಡ ಯುದ್ಧಕ್ಕೆ ಬಂದೆಯಾ? ಏನೂ ಚಿಂತೆಯಿಲ್ಲ, ಇನ್ನು ಮೇಲೆ ಮಾತ್ರ ನೀವು ಬೇಗನೆ ಜಯವನ್ನು ಹೊಂದಿ ನನ್ನ ಕಾಟವನ್ನು ತಪ್ಪಿಸಿಕೊಳ್ಳುವಿರಿ. ನಿನ್ನನ್ನು ಒಮ್ಮೆಲೆ ಕೊಲ್ಲಲಿಕ್ಕೆ ನಾನು ಮನಸ್ಸು ಮಾಡುವದಿಲ್ಲ. ನೀನು ಯುದ್ಧಮಾಡಲಿಚ್ಛಿಸುತ್ತಿದ್ದರೆ ಯಥೇಚ್ಛವಾಗಿ ಬಾಣಗಳನ್ನು ಬಿಡು. ಅವುಗಳಿಂದ ಲೇಶವಾದರೂ ನನಗೆ ಬಾಧೆಯಾಗಲರಿಯದು ಎನ್ನಲು ರಾಜಪುತ್ರಿಯು ಸಿಟ್ಟಿನಿಂದ ಹುಬ್ಬು ಗಂಟಿಕ್ಕಿದಳು; ಅವಳ ಕೋಮಲವಾದ ಕೆಳದುಟಿಯು ನಡುಗಹತ್ತಿತು. ಅವಳು ರಾಕ್ಷಸನನ್ನು ಕುರಿತು—ಎಲೈ ಪರೇಂಗಿತಜ್ಞನಲ್ಲದ ಮತ್ತನಾದ ದೈತ್ಯಾಧಮನೇ, ಅನಾಥರಾದ ಅಬಲೆಯರನ್ನು ಪ್ರತಿಬಂಧಿಸಿ, ಒತ್ತಾಯದಿಂದ ಅವರನ್ನು ವಶಮಾಡಿಕೊಳ್ಳುವ ನಿನ್ನ ಆಯುಷ್ಯವು ಕ್ಷೀಣವಾಗಲಿ; ನಿನ್ನ ವಂಶವು ನಿರ್ವಂಶವಾಗಲಿ. ಅಧಮಾ, ನಾನು ದೆಸೆಗೇಡಿಯಾಗಿ ಅರಣ್ಯದಲ್ಲಿ ಹಲಬುತ್ತಿರಲು, ನನ್ನ ದುಃಖಕ್ಕೆ ಲಕ್ಷಗೊಡದೆ, ಸ್ವಹಿತವನ್ನೇ ಚಿಂತಿಸಿದೆಯಲ್ಲ! ನಿನ್ನಂತೆ ನಾನೂ ತಾಮಸಿಯಾಗಿದ್ದರೆ, ಇಷ್ಟು ಹೊತ್ತಿಗೆ ನಿನ್ನ ಬಲೆಗೆ ಬೀಳುತ್ತಿದ್ದೆನು, ಇಲ್ಲವೆ ಪ್ರಾಣಕ್ಕೆ ಎರವಾಗುತ್ತಿದ್ದೆನು. ಸ್ವಾರ್ಥಪರನೂ ನಿರ್ದಯನೂ ಆದ ನಿನಗೆ ಅನುಕೂಲವಾಗಿ ನಡೆಯುವದು ಯೋಗ್ಯವೆಂದು ನನಗೆ ತೋರಿದ್ದರಿಂದ ಮುರ್ಖನಾದ ನಿನ್ನ ಒಲವಿನಂತೆ ನಡೆದು ನನ್ನ ನಡತೆಯನ್ನು ಪರಿಶುದ್ಧವಾಗಿಟ್ಟುಕೊಂಡೆನು. ಕುಲಗೇಡಿಯೇ, ತಾವು ಮನಮುಟ್ಟಿ ಪ್ರೀತಿಸದ ಪುರುಷನನ್ನು ಪ್ರಮದೆಯರು ಹುಳಬಿದ್ದ ಹುಚ್ಚನಾಯಿಗಿಂತಲೂ ಕಡೆಯೆಂದು ತಿಳಿಯುತ್ತಾರೆಂಬದನ್ನು ಅರಿಯೆಯಾ? ನೀನು ಗುಣಹೀನನಾದ್ದರಿಂದ ನಿನ್ನ ಐಶ್ವರ್ಯ—ಸಾಮರ್ಥ್ಯಗಳು ನನಗೆ ತ್ಯಾಜ್ಯವಾಗಿರುವವು. ಇಲ್ಲಿಯವರೆಗೆ ನಾನು ಪ್ರಾಣಧಾರಣ ಮಾಡಿದ್ದು ನಿನ್ನ ಸಮಾಗಮದ ಇಚ್ಛೆಯಿಂದಲ್ಲ; ಈ ಜಗತ್ತಿನಲ್ಲಿ ಮನುಷ್ಯರಾಗಿ ಹುಟ್ಟಿ, ಆ ಅಲಭ್ಯ ಜನ್ಮವನ್ನು ಸಾರ್ಥಕವಾಗಮಾಡದೆ, ವ್ಯರ್ಥ ದೇಹವನ್ನು ನೀಗುವದು, ಅಯೋಗ್ಯವೆಂದು ತಿಳಿದು ಹೇಗಾದರೂ ಪ್ರಾಣಧಾರಣ ಮಾಡಿರುತ್ತೇನೆ. ಈಗ ನನ್ನ ಪ್ರಿಯ ಪತಿಯ ಸಹಾಯಾರ್ಥವಾಗಿ ಯುದ್ಧ ಮಾಡಲು ನಿಂತಿರುವೆನು. ದೈವಯೋಗದಿಂದ ನೀನು ಯುದ್ಧದಲ್ಲಿ ನಾಶವನ್ನು ಹೊಂದಿದರೆ ನನ್ನ ಈ ದೇಹವನ್ನು ಪತಿ ಸೇವೆಯಲ್ಲಿ ಸವಿಸುವೆನು. ಈಶ್ವರೇಚ್ಛೆಯಿಂದ ವಿಪರೀತ ಪ್ರಸಂಗವೇ ಒದಗಿದಲ್ಲಿ

ಈ ಜಡದೇಹವನ್ನು ನನ್ನ ಪ್ರಿಯ ಪತಿಗೆ ಅರ್ಪಿಸಿ ಅಖಂಡ ಸೌಭಾಗ್ಯವನ್ನು ಹೊಂದುವೆನು. ಮೈ ಸೊಕ್ಕಿನಿಂದ ನನ್ನ ಸಾಮರ್ಥ್ಯವನ್ನು ಲೆಕ್ಕಿಸದೆಯಿದ್ದ ನಿನ್ನನ್ನು ಅಸ್ತ್ರ ಪ್ರಯೋಗದಿಂದ ನಾನು ಜರ್ಜರವಾಗ ಮಾಡದಿದ್ದರೆ ನನಗೂ ನನ್ನ ಧನುರ್ವಿದ್ಯೆಯ ಅಭ್ಯಾಸಕ್ಕೂ ಧಿಕ್ಕಾರವಿರಲಿ, ಎಂದು ಹೇಳಿ ಅಸಂಖ್ಯ ಬಾಣಗಳನ್ನು ರಾಕ್ಷಸನ ಸರ್ವಾಂಗದಲ್ಲಿ ನಡಿಸಿದಳು.

ಪದ್ಮನಯನೆಯು ಬತ್ತಳಿಕೆಯಿಂದ ಬಾಣಗಳನ್ನು ತೆಗೆಯುವದೂ, ಅವುಗಳನ್ನು ಹೆದೆಗೇರಿಸುವದೂ, ಕಿವಿಯವರೆಗೆ ಜಗ್ಗುವದೂ ಯಾರಿಗೂ ಗೊತ್ತಾಗುತ್ತಿದ್ದಿಲ್ಲ. ಅವಳ ಧನುಸ್ಸು ಯಾವಾಗಲೂ ವರ್ತುಲಾಕೃತಿಯಾಗಿರುವಂತೆ ತೋರುತ್ತಿತ್ತು. ವಿಪ್ರವರ್ಯಾ, ನನ್ನ ಪ್ರೀಯಳ ಹಸ್ತ ಚಾಪಲ್ಯವನ್ನೂ, ಸಾಮರ್ಥ್ಯವನ್ನೂ, ನೋಡಿ ನನಗೂ ರಾಕ್ಷಸನಿಗೂ ಸರಿಯಾಗಿಯೇ ಆಶ್ಚರ್ಯವಾಯಿತು. ಸಾಕ್ಷಾತ್ ಶ್ರೀ ಕೃಷ್ಣಪರಮಾತ್ಮನು ನರಕಾಸುರನ ಸಂಗಡ ಯುದ್ಧ ಮಾಡುವಾಗ್ಗೆ ಆತನ ಹೆಂಡತಿಯಾದ ಸತ್ಯಭಾಮಾದೇವಿಯು ಆ ದೈತ್ಯಾಧಮನ ಸಂಗಡ ಯುದ್ಧಮಾಡಿದ್ದನ್ನು ನಾನು ಪುರಾಣದಲ್ಲಿ ಮಾತ್ರ ಕೇಳಿದ್ದೆನು; ಆದರೆ ನನ್ನ ಪ್ರಿಯ ಪದ್ಮನಯನೆಯು ಅದನ್ನು ಪ್ರತ್ಯಕ್ಷ ಪ್ರಯೋಗ ಮಾಡಿ ತೋರಿಸಿದಳು. ಮೇಘನಾದನು ರಾಜಪುತ್ರಿಯ ಶೌರ್ಯಕ್ಕೆ ಬೆರಗಾದದ್ದಲ್ಲದೆ ಅವಳ ಬಾಣಗಳಿಂದಾದ ಗಾಯಗಳ ನೋವಿನಿಂದ ಕಳವಳಗೊಂಡು ಮಿತಿಮೀರಿ ಸಿಟ್ಟಿಗೆದ್ದನು. ಅವನ ಕೋಪಾಟೋಪಕ್ಕೆ ನಮ್ಮ ಸುಕುಮಾರಿಯು ಈಡಾಗಲಿಲ್ಲ. ಮರ್ಮಕ್ಕೆ ಒಂದು ಬಾಣವು ತಾಕಿ ಆಕೆಯು ಇಳಿಗೆ ಒರಗಿದಳು. ಸಮೀಪದಲ್ಲಿದ್ದ ಸುಮಧ್ಯಮೆಯು ಕೂಡಲೆ ಅವಳನ್ನು ಎತ್ತಿಕೊಂಡು ಶೀತೋಪ ಚಾರಗಳನ್ನು ಮಾಡತೊಡಗಿದಳು. ಮಿತ್ರಾ, ನನ್ನ ಪ್ರಿಯಳಿಗೊದಗಿದ ಈ ದುರವಸ್ಥೆಯನ್ನು ನೋಡಿ ನನ್ನ ಮನಸ್ಸು ಎಷ್ಟು ವ್ಯಾಕುಲಗೊಂಡಿರಬಹುದೆಂಬದರ ಕಲ್ಪನೆಯನ್ನು ನೀನೇ ಮಾಡು. ಪ್ರಚಂಡವಾಯುವಿನ ಪೆಟ್ಟಿನಿಂದ ಬಾಳೆಯಗಿಡವು ಇಳೆಗೆರಗುವಂತೆ ತನ್ನ ವಿಶಾಲವಾದ ನೇತ್ರ ಕುಮುದಗಳನ್ನು ಮುಚ್ಚಿಕೊಂಡು ನಿಶ್ಚೇಷ್ಟಳಾಗಿ ಬಿದ್ದ ನನ್ನ ಪ್ರಾಣಪ್ರಿಯಳನ್ನು ನೋಡಿ ನನ್ನ ಸುಖದ ಆಶೆಯು ಹಾಳಾಯಿತು, ಯುದ್ಧೋತ್ಸಾಹವು ಕುಗ್ಗಿತು. ನಾನು ವಿಚಾರಗೇಡಿಯಾಗಿ ಕಣ್ಣೀರು ಸುರಿಸುತ್ತ ಪ್ರಿಯಳ ಬಳಿಯಲ್ಲಿ ಸುಮ್ಮನೆ ಕುಳಿತುಕೊಂಡೆನು.

ದ್ವಿಜವರ್ಯನಾದ ಸುಮತಿಯೇ, ಈ ಪ್ರಕಾರ ಇಂದ್ರಜಿತುವಿನ ಮಾಯಾ ಸೀತೆಯ ಮೃತ ಶರೀರವನ್ನು ನೋಡಿ ಶ್ರೀ ರಾಮಚಂದ್ರನು ಯುದ್ಧ ವ್ಯಾಪಾರವನ್ನು ಬಿಟ್ಟಂತೆ ನನ್ನ ಪ್ರಿಯಳಾದ ರಾಜಪುತ್ರಿಯ ನಿಶ್ಚೇಷ್ಟವಾದ ಶರೀರವನ್ನು ನೋಡಿ ನಾನು ಸುಮ್ಮನೆ ಕುಳಿತಿದ್ದರೂ, ಮೇಘನಾದನು ನನಗೆ ಕೇಡು ಬಗೆಯಲಿಲ್ಲ. ರಾಜಪುತ್ರಿಯ ಬಾಣಗಳ ಪೆಟ್ಟಿನಿಂದ ಅವನು ಕಂಗಾಲಾಗಿರಬಹುದು; ತಾನು ಪದ್ಮನಯನೆಗೆ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟಿದ್ದಕ್ಕಾಗಿ ಅವನಿಗೆ ಪಶ್ಚಾತ್ತಾಪವಾಗಿರಬಹುದು; ತನ್ನ ಮೃತ್ಯು ರೂಪವಾದ ಧನಸ್ಸು, ವೈರಿಗಳ ಕೈಸೇರಿದ್ದರಿಂದ ಅವನ ಎದೆಯೊಡೆದು ನೀರಾಗಿರಬಹುದು. ಮುಂದೆ ಕೆಲಹೊತ್ತಿನ ಮೇಲೆ ರಾಜಪುತ್ರಿಯು ಸುಮಧ್ಯಮೆಯ ಶೀತೋಪಚಾರಗಳಿಂದ ಮೂರ್ಛೆ ತಿಳಿದು ಎದ್ದಳು. ಅವಳು ದೀನ

ಮುದ್ರೆಯಿಂದ ನನ್ನನ್ನು ಕುರಿತು—ಪ್ರಾಣಪ್ರಿಯರೇ, ಯಮಸ್ವರೂಪಿಯಾದ ರಾಕ್ಷಸನು ಇನ್ನೂ ಜೀವದಿಂದಲೇ ಇರುವನೆ? ಏನೂ ಚಿಂತೆಯಿಲ್ಲ. ಇಗೋ ನೋಡಿರಿ ನಾನು ಎಚ್ಚತ್ತಿರುವೆನು, ನೀವು ಧೈರ್ಯಬಿಡಬೇಡಿರಿ. ಇದು ಮೋಹಕ್ಕೆ ಒಳಗಾಗುವ ಪ್ರಸಂಗವಲ್ಲ. ನಾನು ಧನುರ್ವಿದ್ಯೆಯನ್ನು ಕಲಿತವಳಾಗಿದ್ದರೂ ಸ್ತ್ರೀಯಾದದ್ದರಿಂದ ನನಗೆ ಯುದ್ಧಮಾಡುವ ಪ್ರಸಂಗವು ಒದಗಿದ್ದಿಲ್ಲ. ಈಗ ನಾನು ಅನುಭವಸಿದ್ಧಳಾಗಿದ್ದೇನೆ.

ಮಿತ್ರಾ, ಈ ಪ್ರಕಾರ ರಾಜಪುತ್ರಿಯು ಆಡಿದ ಮಾತುಗಳಿಂದ ನನ್ನ ಮನಸ್ಸು ಸಂತಾಪಗೊಂಡಿತು. ಹೆಂಡತಿಯ ಸಹಾಯವನ್ನು ಪಡೆಯುವ ಪ್ರಸಂಗವು ಒದಗಿದ್ದನ್ನು ಒದಗಿದ್ದನ್ನು ನೋಡಿ ನನಗೆ ಬಹಳ ಪಶ್ಚಾತ್ತಾಪವಾಯಿತು. ಕೂಡಲೆ ನಾನು ಧನುಸ್ಸಿಗೆ ಹೆದೆಯನ್ನೇರಿಸಿ ಧ್ವನಿಮಾಡುತ್ತ ರಾಕ್ಷಸನಿಗೆ ಎದುರಾದೆನು. ತನ್ನ ಮೃತ್ಯು ರೂಪವಾದ ಧನುಸ್ಸಿನ ಝೇಂಕಾರ ಧ್ವನಿಯನ್ನು ಕೇಳಿ, ರಾಕ್ಷಸನ ಎದೆಯೊಡೆದು ನೀರಾಯಿತು; ಅವನ ಮುಖವು ಕಳೆಗುಂದಿತು; ಶೌರ್ಯವು ಅಡಗಿತು; ಸಿಂಹ ನಾದವು ಕೇಳದ ಹಾಗಾಯಿತು. ಅವನು ನನ್ನನ್ನು ಕುರಿತು ಕಪಟದಿಂದ—ಪ್ರತಾಪಶಾಲಿಯೇ ನಿನ್ನ ಶೌರ್ಯಕ್ಕೆ ಮೆಚ್ಚಿದೆನು. ನಾನು ಬಹು ಜನರ ಸಂಗಡ ಯುದ್ಧಮಾಡಿದ್ದರೂ, ನಿನ್ನಂಥ ಅಪ್ರತಿಮ ವೀರನ ಸಂಘಟನೆಯು ನನಗಾಗಿದ್ದಿಲ್ಲ. ನಿನ್ನ ಸಂಗಡ ಯುದ್ಧ ಮಾಡುವ ಸಾಮರ್ಥ್ಯವು ನನಗಿಲ್ಲ ಕರುಣಾಸಾಮುದ್ರನೇ, ನಾನು ನಿನಗೆ ಶರಣು ಬಂದಿದ್ದೇನೆ, ಜೀವ ದಾನ ಕೊಡು. ನಿನ್ನನ್ನೂ, ನಿನ್ನ ಪ್ರಿಯಳಾದ ಪದ್ಮನಯನಾದೇವಿಯನ್ನೂ ಪೀಡಿಸಿದ್ದಕ್ಕಾಗಿ ನನ್ನನ್ನು ಕ್ಷಮಿಸು. ಶರಣು ಬಂದವರನ್ನು ರಕ್ಷಿಸುವದು ಶೂರರ ಧರ್ಮವೆಂಬದನ್ನು ನಿನಗೆ ಹೇಳುವ ಕಾರಣವಿಲ್ಲ. ನಿನ್ನ ಮಿತ್ರತ್ವವನ್ನು ನಾನು ಮನಃಪೂರ್ವಕವಾಗಿ ಬಯಸುತ್ತಿರುವೆನು. ಬಹು ಸ್ಥೂಲವಾದ ಧನುಸ್ಸನ್ನು ಹೊತ್ತುಕೊಂಡು ಯಾಕೆ ಬಳಲುತ್ತೀ? ಇತ್ತ ಬಾ, ಈ ಗಿಡದ ನೆರಳಿನಲ್ಲಿ ವಿಶ್ರಮಿಸೋಣ!!

ಮಿತ್ರಾ, ಈ ಪ್ರಕಾರ ರಾಕ್ಷಸನು ಆಡಿದ ಮಾತುಗಳನ್ನು ಕೇಳಿ ನನ್ನ ಮನಸ್ಸು ಕರಗಿತು. ಇನ್ನು ಮೇಲೆ ನಾನು ಧನುಸ್ಸನ್ನು ಕೆಳಗಿಡತಕ್ಕವನು. ಅಷ್ಟರಲ್ಲಿ ರಾಜಪುತ್ರಿಯು ದೂರದಿಂದಲೇ ನನ್ನನ್ನು ಕುರಿತು—ಆರ್ಯಪುತ್ರರೇ, ನೀವು ಆ ರಾಕ್ಷಸನ ಮಾತುಗಳಿಗೆ ಮರುಳಾಗತಕ್ಕದ್ದಲ್ಲ. ಈಗ ಬಹುದಿವಸಗಳಿಂದ ಆತನ ದುರ್ನಡತೆಯನ್ನೂ, ಕ್ರೂರತನವನ್ನೂ ನಾನು ನೋಡುತ್ತ ಬಂದಿರುತ್ತೇನೆ. ಹಿಂಸಕನಾದ ಆ ಖಳನಿಗೆ ದಯವು ಎಲ್ಲಿಯದು? ನೀವು ಸರಳಮನಸ್ಸಿನಿಂದ ಅವನಿಗೆ ಅನುಕೂಲವಾದರೆ, ನಿಮ್ಮ ಪ್ರಾಣವನ್ನು ನೀವೇ ನಾಶಮಾಡಿಕೊಂಡಂತಾಗುವದು. ಎರಡನೆಯ ವಿಚಾರ ಮಾಡದೆ ಬೇಗನೆ ಪ್ರಚಂಡ ಧನುಸ್ಸಿಗೆ ಬಾಣವನ್ನು ಹೂಡಿ ಬಿಟ್ಟು, ರಾಕ್ಷಸನ ಸಂಹಾರ ಮಾಡಿರಿ. ಇದರ ಮೇಲೆಯೂ ನನ್ನ ಮಾತು ಕೇಳದೆ ಧನುಸ್ಸನ್ನು ಕೆಳಗಿಟ್ಟರೆ ಅವನು ನಿಶ್ಚಯವಾಗಿ ಅದನ್ನು ತಕ್ಕೊಳ್ಳುವನು. ಆಮೇಲೆ ಆ ನೀಚನು ನನಗೂ, ನಿಮಗೂ ನಮ್ಮ ನಿಮ್ಮ ಹಿರಿಯರಿಗೂ ಮಣೆಯಲಿಕ್ಕಿಲ್ಲ. ನನ್ನನ್ನು ಸಮಾಧಾನಪಡಿಸಬೇಕೆಂದು ನಿಮ್ಮ ಮನಸ್ಸಿನಲ್ಲಿದ್ದರೆ ಬೇಗನೆ ಆ ರಾಕ್ಷಸ ಕ್ರೂರನನ್ನು ಸಂಹರಿಸಿರಿ.

ನನ್ನ ಪ್ರಿಯಳ ಮಾತುಗಳನ್ನು ಕೇಳಿದ ಮೇಲೆ ನನಗೆ ಎಚ್ಚರಹುಟ್ಟಿದ್ದಲ್ಲದೆ ನನ್ನ ವಿಚಾರದ ಬಗ್ಗೆ ನಾಚಿಕೆಯುಂಟಾಯಿತು. ಕೂಡಲೆ ನಾನು ಧನುಸ್ಸಿಗೆ ತೀಕ್ಷ್ಣವಾದ ಬಾಣಗಳನ್ನು ಹೂಡಿ ಕಿವಿಯವರೆಗೆ ಜಗ್ಗಿ ರಾಕ್ಷಸನ ಮೇಲೆ ಬಿಡಲು, ಅವನು ಅವುಗಳನ್ನು ಡಾಲಿನ ಸಹಾಯದಿಂದ ತಪ್ಪಿಸಿಕೊಂಡು ಸಮೀಪದಲ್ಲಿಯೇ ಇದ್ದ ಒಂದು ಬಂಡೆಯನ್ನು ತಕ್ಕೊಂಡು ನನ್ನ ಮೇಲೆ ಒಗೆಯುವದಕ್ಕೆ ಬಂದನು. ಅಷ್ಟರಲ್ಲಿ ನಾನು ಮತ್ತೊಂದು ಬಾಣವನ್ನು ಹೂಡಿ ರಾಕ್ಷಸನ ಹಣೆಗೆ ಗುರಿನೋಡಿ ಬಿಟ್ಟೆನು. ಅದು ತಪ್ಪದೆ ಹಣೆಗೆ ಬಡೆದು ರಾಕ್ಷಸನ ಪ್ರಾಣವನ್ನು ತಕ್ಕೊಂಡಿತು. ಮೇಘನಾದನು ಸಾಯುವಾಗ್ಗೆ ಭಯಂಕರವಾದ ಧ್ವನಿಯಿಂದ ಒದರಲು ಅದರ ಪ್ರತಿಧ್ವನಿಯು ಅರಣ್ಯದಲ್ಲೆಲ್ಲ ಹಬ್ಬಿತು. ಅವನ ಪರ್ವತಪ್ರಾಯವಾದ ಶರೀರವು ಇಳೆಗೊರಗಿದ್ದನ್ನು ಕಂಡು ರಾಜಪುತ್ರಿಯು ನನ್ನ ಕಡೆಗೆ ಬಂದು ಆನಂದದಿಂದ ನನ್ನನ್ನು ಬಿಗಿಯಾಗಿ ಅಪ್ಪಿಕೊಂಡಳು. ಆ ಮೇಲೆ ನಾವು ತೋಟದೊಳಗಿನ ಸರೋವರಕ್ಕೆ ಹೋಗಿ ಸ್ನಾನಮಾಡಿ ಶುಚಿರ್ಭೂತರಾಗಿ ಮಂದಿರಕ್ಕೆ ಹೋದೆವು. ರಾಕ್ಷಸನ ಸಂಗಡ ಬಹಳ ಹೊತ್ತು ಯುದ್ಧ ಮಾಡಿದ್ದರಿಂದ ನಮಗೆ ಬಹಳ ಹಸಿವೆಯಾಗಿತ್ತು. ದಾಸಿಯರು ಅಡಿಗೆಯನ್ನು ಸಿದ್ಧಮಾಡಿರಲು, ನಾವು ಆನಂದದಿಂದ ಭೋಜನಮಾಡಿ ವಿಹಾರಮಂದಿರಕ್ಕೆ ಹೋಗಿ ವಿಶ್ರಾಂತಿಯನ್ನು ಹೊಂದಿದೆವು. ಆ ಸ್ಥಳದಲ್ಲಿ ಮೇಘನಾದನ ಹೊರತು ಅನ್ಯರ ಪ್ರವೇಶವಾಗುವ ಸಂಭವವು ತೀರ ಕಡಿಮೆಯಿದ್ದದ್ದರಿಂದ ಅಲ್ಲಿ ನಮಗೆ ಸದ್ಯಕ್ಕೆ ಯಾತರ ಭಯವೂ ಇದ್ದಿಲ್ಲ. ದುಷ್ಟ ಶಾಸನದಿಂದ ನಾವು ನಿಷ್ಕಂಟಕರಾದೆವು.

ಶೋಧೋಪಕ್ರಮ

ವಿಪ್ರವರ್ಯಾ, ಇನ್ನು ಮುಂದೆ ನಮ್ಮ ಪ್ರಿಯ ಪದ್ಮನಯನೆಯಿಂದ ಒದಗಿದ ಸುಖವನ್ನು ಎಷ್ಟು ವರ್ಣಿಸಿದರೂ ಸ್ವಲ್ಪವೇ ಇರುವದು. ಇಲ್ಲಿಯವರೆಗೆ ನಮಗೆ ರಾಕ್ಷಸನ ಭಯವಿದ್ದದ್ದರಿಂದ ಸುಖೋಪಭೋಗವು ಯಥೇಚ್ಛವಾಗಿ ಆಗುತ್ತಿದ್ದಿಲ್ಲ. ರಾಕ್ಷಸನ ಕ್ರೂರತನವನ್ನೂ, ಸಾಮರ್ಥ್ಯವನ್ನೂ ನೋಡಿ ಒಮ್ಮೊಮ್ಮೆ ನನಗೂ ನನ್ನ ಪ್ರಿಯಳಿಗೂ ಸರಿಯಾಗಿಯೇ ವ್ಯಸನವಾಗುತ್ತಿತ್ತು. ರಾಕ್ಷಸನ ಮರಣದಿಂದ ನಾವು ನಿಷ್ಕಂಟಕರಾದೆವು. ವಿಷಯೋಪಭೋಗದ ಹೊರತು ಬೇರೆ ಉದ್ಯೋಗವು ಇಲ್ಲದ್ದರಿಂದ, ನಾನು ಪದ್ಮನಯನೆಯೊಡನೆ ಕೆಲವು ವೇಳೆಯನ್ನು ಜಲಕ್ರೀಡೆಯಲ್ಲಿಯೂ, ಕೆಲವು ವೇಳೆಯನ್ನು ವೀಣೆ—ಜಲತರಂಗ ಮುಂತಾದ ವಾದ್ಯಗಳನ್ನು ಬಾರಿಸುವುದರಲ್ಲಿಯೂ ಕೆಲವು ವೇಳೆಯನ್ನು ಉದ್ಯಾನದಲ್ಲಿ ವಿಹರಿಸುವದರಲ್ಲಿಯೂ ಕೆಲವು ವೇಳೆಯನ್ನು ಆಟಗಳಲ್ಲಿಯೂ ಕಳೆಯುತ್ತಿದ್ದೆನು. ದುರ್ಲಭಳಾದ ಸುಂದರಿಯ ಸಹವಾಸದಿಂದ ಕಾಲವು ಬಹುಬೇಗ ಕ್ರಮಿಸಹತ್ತಿತು. ಆನಂದದ ಭರದಲ್ಲಿ ನಾನು ಮಾತಾ—ಪಿತೃಗಳನ್ನೂ, ಆಪ್ತೇಷ್ಟರನ್ನೂ, ದೇಶ—ಕೋಶಗಳನ್ನೂ

ಇಷ್ಟ–ಮಿತ್ರರನ್ನೂ ಮರೆತೆನು. ಪದ್ಮನಯನೆಯಂತು ನನ್ನ ಮನಸ್ಸನ್ನು ಒಲಿಸಿಕೊಳ್ಳಲಿಕ್ಕೆ ಯಾವಾಗಲೂ ತವಕಿಸುತ್ತಿದ್ದಳು. ಇಂಥ ಸುಗುಣೆಯಾದ ಸುಂದರಿಯೊಡನೆ ಅಖಂಡ ಆರು ತಿಂಗಳನ್ನು ಕಳೆದೆನು. ಆಗ ವಿಷಯಸುಖದ ಹೊರತು ಮತ್ತೊಂದರ ಸ್ಮರಣವು ನಮಗಿದ್ದಿಲ್ಲ.

ಹೀಗಿರಲು, ಒಂದಾನೊಂದು ದಿನ ನಾನು ರಾಜಪುತ್ರಿಯೊಡನೆ ಉದ್ಯಾನದಲ್ಲಿ ತಿರುಗಾಡಲಿಕ್ಕೆ ಹೋಗಿದ್ದೆನು. ಅದು ವಸಂತಕಾಲವಿತ್ತು ಇಳಿಹೊತ್ತು ಉಪವನದೊಳಗಿನ ಗಿಡಗಳು ನವ ಪಲ್ಲವಗಳಿಂದ ಒಪ್ಪುತ್ತಲಿವೆ, ಸುಗಂಧ–ಪುಷ್ಪಗಳ ಸುವಾಸನೆಯು ದಿಕ್ಕು–ದಿಕ್ಕಿಗೆ ಹಬ್ಬಿವೆ, ಹಕ್ಕಿಗಳು ಆನಂದದಿಂದ ಶಬ್ದಮಾಡುತ್ತ ಗಿಡದಿಂದ–ಗಿಡಕ್ಕೆ ಹಾರುತ್ತಲಿವೆ, ಮಾವಿನ ಗಿಡಗಳು ತರತರದ ಬಣ್ಣದ ಕಾಯಿಗಳಿಂದ ಜಗ್ಗುತ್ತಲಿವೆ, ಮಂದ ಮಾರುತನು ಸುಗಂಧವನ್ನು ಹೊತ್ತುಕೊಂಡು ಮೆಲ್ಲನೆ ಸಂಚರಿಸತೊಡಗಿದ್ದಾನೆ. ಇಂಥ ಆನಂದದಾಯಕ ವಾದ ಸಮಯದಲ್ಲಿ ಒಂದು ಮನೋಹರವಾದ ಮಾವಿನ ಗಿಡದ ಮೇಲೆ ಆನಂದದಿಂದ ಮಾತಾಡುತ್ತ ಕುಳಿತಿದ್ದ ಒಂದು ಅರಗಿಳಿಯು ನಮ್ಮ ಕಣ್ಣಿಗೆ ಬಿತ್ತು, ಅದರ ಚಿತ್ರ—ವಿಚಿತ್ರವಾದ ಐದು ಬಣ್ಣಗಳೂ, ಸವಿ ಮಾತುಗಳೂ ನಮ್ಮನ್ನು, ವಿಶೇಷವಾಗಿ ರಾಜಪುತ್ರಿಯನ್ನು ಮರುಳು ಮಾಡಿದವು. ಆಗ ಅವಳು ನನ್ನನ್ನು ಕುರಿತು—ಮನಮೋಹನರೇ, ಈ ಗಿಳಿಯ ಚಂದವನ್ನು ನೋಡಿದಿರಾ! ಅದರ ಮುದ್ದು ಮಾತುಗಳನ್ನೂ, ಮೈ ಮಾಟವನ್ನೂ ನೋಡಿ ಯಾರು ಮೋಹಿಸಲಿಕ್ಕಿಲ್ಲ? ನಾನಂತು ಈ ಗಿಳಿಯನ್ನು ಬಿಟ್ಟು ಮುಂದಕ್ಕೆ ಹೆಜ್ಜೆಯನ್ನು ಇಡಲಾರೆನು. ಇದು ಮನೋರಂಜನದ ದೊಡ್ಡ ಸಾಧನವಾಗಿರುವದು. ಹೇಗಾದರೂ ಮಾಡಿ ಇದನ್ನು ನನಗೆ ಸಂಪಾದಿಸಿಕೊಡಬೇಕು ಎಂದು ಹೇಳಿದಳು. ರಾಜಪುತ್ರಿಯ ಈ ಮಾತುಗಳು ನನಗೆ ಅಸಮಂಜಸವಾಗಿ ತೋರಲಿಲ್ಲ. ನನ್ನ ಮನಸ್ಸಾದರೂ ಆ ಗಿಳಿಯ ಮೇಲೆ ಕುಳಿತಿತ್ತು ಅದರಿಂದ ನಾನು ಮರವನ್ನೇರುವದಕ್ಕೆ ಟೊಂಕಕಟ್ಟಿದೆನು. ಬರಿಗೈಗೆ ಗಿಳಿಯು ಸಿಗಲಾರದೆಂಬ ವಿಚಾರವು ನನ್ನಲ್ಲಿ ಉತ್ಪನ್ನವಾಗಲಿಲ್ಲ. ಗಿಳಿಯು ಗಿಡದಿಂದ ಗಿಡಕ್ಕೆ ಹಾರಿದಂತೆ ನಾನೂ ಗಿಡ—ಗಿಡ ಹತ್ತಿ ಅದನ್ನು ಹಿಡಿಯಲು ಯತ್ನಿಸಿದೆನು, ನನ್ನ ಯತ್ನವು ಸಫಲವಾಗುವ ಸಂಭವವು ಎಷ್ಟು ಮಾತ್ರವೂ ತೋರಲಿಲ್ಲ. ಆದರೆ ಗಿಳಿಯೇ ಕನಿಕರ ಪಟ್ಟು ನನ್ನ ಕೈಗೆ ಸಿಕ್ಕಿತೆಂದು ಹೇಳಬಹುದು. ಆ ಸುಂದರವಾದ ಪಕ್ಷಿಯು ಹಾರಿ–ಹಾರಿ ದಣಿದಂತೆ ನಟಿಸಿ, ಗಿಡದ ದಟ್ಟವಾದ ಟೊಂಗೆಯಲ್ಲಿ ಅಡಗಿರಲು, ನಾನು ಅದನ್ನು ಹಿಡಿದೆನು. ಈ ದುಷ್ಟ ಗಿಳಿಯೇ ನನ್ನ ಹಾಗೂ ನನ್ನ ಪ್ರಿಯಳ ವಿಯೋಗಕ್ಕೆ ಕಾರಣವಾಗುತ್ತದೆಂದು ಆಗ್ಗೆ ನನಗೆ ತಿಳಿಯಲಿಲ್ಲ, ನಾವು ಸಂತೋಷದಿಂದ ಅದನ್ನು ಮನೆಗೆ ಒಯ್ದು ಆಸ್ಥೆಯಿಂದ ಜೋಕೆಮಾಡ ಹತ್ತಿದೆವು.

ಆ ಅರಗಿಳಿಯು ಬರಬರುತ್ತ ನಮ್ಮ ಚಿತ್ತವನ್ನು ಪೂರ್ಣವಾಗಿ ಹರಣಮಾಡಿತು. ರಾಜಪುತ್ರಿಯಂತು ಅದನ್ನು ಅರಗಳಿಗೆ ಅಗಲುತ್ತಿದ್ದಿಲ್ಲ. ಅದಕ್ಕೆ ಹಣ್ಣು ಹಂಪಲಗಳನ್ನೂ, ಕಾಳು ಕಡಿಗಳನ್ನೂ ತಿನಿಸಿದ ಹೊರತು ಆಕೆಯು ಊಟಮಾಡುತ್ತಿದ್ದಿಲ್ಲ, ಒಂದು ವೇಳೆ ತನ್ನ ಸುಖದಲ್ಲಿ ಕೊರತೆಯಾದರೂ ಆಕೆಯು ಅದನ್ನು ಲೆಕ್ಕಿಸದೆ ಆ ಗಿಳಿಯನ್ನು ತನ್ನ ಪ್ರಾಣ ಕ್ಕಿಂತಲೂ ಹೆಚ್ಚೆಂದು ತಿಳಿದು ಜೋಕೆ ಮಾಡುತ್ತಿದ್ದಳು. ನಮ್ಮಿಬ್ಬರ ಮಿತಿಮೀರಿದ ಪ್ರೇಮವು

ಅದರ ಮೇಲೆ ಕೂಡ್ರುಲಿಕ್ಕೆ ಆ ಗಿಳಿಯಲ್ಲಿದ್ದ ಜ್ಞಾನಕಲೆಯೇ ಕಾರಣವು. ಅದು ಬೇರೆ ಗಿಳಿಗಳಂತೆ ಕಲಿಸಿದ ಮಾತುಗಳನ್ನು ಮಾತ್ರ ಆಡದೆ ಮನೋವಿಕಾರಗಳಿಗನುಸರಿಸಿ ಮನುಷ್ಯರಂತೆ ಬೇರೆ ಬೇರೆ ಸ್ವರಗಳಿಂದ ಸ್ವತಂತ್ರವಾಗಿ ಮಾತಾಡುತ್ತಿತ್ತು. ಅದರ ವಿನೋದಪರ ಭಾಷಣಗಳನ್ನು ಕೇಳುವದಕ್ಕಾಗಿ ನಾನೂ ರಾಜಪುತ್ರಿಯೂ ಸರಿಯಾಗಿಯೇ ತವಕಿಸುತ್ತಿದ್ದೆವು. ಹೀಗಿರುವಲ್ಲಿ ಒಂದು ದಿನ ಆ ಗಿಳಿಯು ನಮ್ಮಿಬ್ಬರನ್ನುದ್ದೇಶಿಸಿ ಅಂದಿತೇನಂದರೆ—ಮನೋಹರ ಸ್ವರೂಪಿಗಳಾದ ತರುಣದಂಪತಿಗಳೇ ನಿಮ್ಮ ಸುಂದರ ರೂಪವನ್ನೂ, ಪರಸ್ಪರರಲ್ಲಿರುವ ಅಕೃತಿಮ ಪ್ರೇಮವನ್ನೂ ನೋಡಿ ತಾನು ಪರಮ ಹರ್ಷಿತನಾಗಿದ್ದೇನೆ; ಆದರೆ ಮಾತಾ—ಪಿತೃಗಳ ವಿಯೋಗದುಃಖವು ನಿಮ್ಮಲ್ಲಿ ಕಿಂಚಿತ್ತಾದರೂ ಇಲ್ಲದ್ದನ್ನು ನೋಡಿ ನನಗೆ ಬಹಳ ಆಶ್ಚರ್ಯವಾಗುತ್ತದೆ. ನೀವು ನಿಮ್ಮ ಸುಖದಲ್ಲಿಯೇ ಮಗ್ನರಾಗಿರುವಿರಲ್ಲದೆ, ತಾಯಿ—ತಂದೆಗಳ ಸ್ಥಿತಿಯು ಏನಾಗಿರಬಹುದೆಂಬದನ್ನು ಸ್ವಲ್ಪವಾದರೂ ಆಲೋಚಿಸುವಂತೆ ತೋರುವದಿಲ್ಲ. ಬಹಳ ಶ್ರಮವನ್ನೂ ದುಃಖವನ್ನೂ ಅನುಭವಿಸಿ, ಇಷ್ಟಿದ್ದವರನ್ನು ಇಷ್ಟುಮಾಡಿ ಜ್ಞಾನಾಮೃತವನ್ನು ಕುಡಿಸಿ ಧನ್ಯರಾಗಮಾಡಿದ ಮಾತಾ—ಪಿತೃಗಳ ನಿರಾಕರಣವು ಇಷ್ಟರಮಟ್ಟಿಗೆ ಆಗಬೇಕೆ? ತಾವು ಜ್ಞಾನಿಗಳೆಂಬ ಹೆಮ್ಮೆಯಿಂದ ಸೆಟೆಸೆಟೆದು ಬೀಳುವ ಮನುಷ್ಯರ ಜ್ಞಾನದ ಪರಿಣಾಮವು ಈ ಸ್ಥಿತಿಗೆ ಬರುವದೆಂದರೆ, ಬಹಳ ಲಾಂಛನದ ಮಾತು. ''ತಾಯಿಗಿಂತ ಹಿತವಂತರಿಲ್ಲ, ಉಪ್ಪಿಗಿಂತ ರುಚಿಯಿಲ್ಲ'' ಎಂಬ ಗಾದೆಯು ವಿಷಯಾಸಕ್ತರಾದ ದಂಪತಿಗಳಿಗೆ ಹತ್ತುವದಿಲ್ಲೆಂಬಂತೆ ತೋರುತ್ತದೆ. ಇದು ನಿಜವಾದ ಪ್ರೇಮದ ಲಕ್ಷಣವಲ್ಲ. ಈಗಿನ ಸುಖವೇ ಕಡೆತನಕ ಇರುತ್ತದೆಂದು ತಿಳಿಯಬೇಡಿರಿ. ಸುಖ—ದುಃಖಗಳು ಕ್ಷಣಿಕವಾದವುಗಳೆಂಬದನ್ನು ಚನ್ನಾಗಿ ನೆನಪಿನಲ್ಲಿಡಿರಿ. ನಿಮ್ಮ ಬಂಧು—ಮಿತ್ರರೂ, ರಾಜಕೋಶಗಳೂ ಒತ್ತಟ್ಟಿಗಿರಲು ನೀವು ಪ್ರಾಯದಮದದಿಂದ ಮೈಮರೆತು ಈ ರಾಕ್ಷಸ—ಮಾಯಾ—ನಿರ್ಮಿತವಾದ ಸ್ಥಳದಲ್ಲಿ ಸುಖಾಸಕ್ತರಾಗಿ ಕಾಲಕ್ರಮಣ ಮಾಡುವದು ಹಿತವಲ್ಲ. ಮೇಘನಾದನೊಬ್ಬನು ಮರಣಹೊಂದಿದರೇನಾಯಿತು? ಅವನ ಆಪ್ತೇಷ್ಟರಾದ ಅಸಂಖ್ಯ ರಾಕ್ಷಸರಿಂದ ಶೋಣಿತಿಪುರವು ತುಂಬಿರುತ್ತದೆ. ಯಾವಕಾಲಕ್ಕೆ ಎಂಥ ಪ್ರಸಂಗವು ಒದಗೀತೆಂಬದರ ನಿಯಮವಿಲ್ಲ. ನೀವು ಇನ್ನು ಎಚ್ಚತ್ತು ನನ್ನ ಮಾತನ್ನು ಚನ್ನಾಗಿ ವಿಚಾರಿಸಿ ಬೇಗನೆ ಇಲ್ಲಿಂದ ಹೊರಡುವ ಯೋಚನೆ ಮಾಡಿರಿ. ಅದರಲ್ಲಿಯೇ ನಿಮ್ಮ ಕಲ್ಯಾಣವಿರುವದು.

ಮಿತ್ರನೇ, ಗಿಳಿಯ ಉಪದೇಶವು ಮುಂದೆ ನಮಗೆ ದುಃಖಕ್ಕೆ ಕಾರಣವಾದರೂ, ಅದು ಅಯೋಗ್ಯವಾದದ್ದೆಂದು ನಾನು ಹೇಳಲಾರೆನು. ಅದರ ಮಾತುಗಳನ್ನು ಕೇಳಿ ನಮ್ಮಿಬ್ಬರಿಗೂ ತಾಯಿ–ತಂದೆಗಳ ಸ್ಮರಣವಾಗಿ ಬಹಳ ದುಃಖವಾಯಿತು; ಕಣ್ಣೀರುಗಳು ಸುರಿದವು; ರಮಣೀಯವಾಗಿ ತೋರುತ್ತಿದ್ದ ಗುಹಾವಾಸವು ಬೇಸರಕ್ಕೆ ಕಾರಣವಾಯಿತು. ತಾಯಿ–ತಂದೆಗಳ ಬಳಿಗೆ ಹೋಗುವದನ್ನು ನಾವು ಅಂದೇ ನಿಶ್ಚಯಿಸಿದೆವು. ಊಟ–ಉಪಚಾರಗಳು ತೀರಿದ ಬಳಿಕ ಪ್ರವಾಸದ ಸಾಧನಗಳನ್ನು ಸಿದ್ಧಗೊಳಿಸಿದೆವು! ಪ್ರಾಯದ ಏರಿಕೆಯು ರಕ್ತದಲ್ಲಿ, ಚಟ್ಟನೆ ಕಾರ್ಯಪ್ರವೃತ್ತವಾಗುವದು ವಾಡಿಕೆಯಾಗಿರುವದು. ಅದರಂತೆ

ನಾವು ಅಂದೇ ರಾತ್ರಿ ಚಂದ್ರೋದಯವಾದ ಬಳಿಕ ಹೊರಡುವದನ್ನು ನಿಶ್ಚಯಿಸಿದೆವು. ಅರಣ್ಯದ ಏಕಾಂತವಾಸದಲ್ಲಿ ಇದ್ದುದಡ್ಡುಬಿದ್ದದ್ದರಿಂದ ನಮ್ಮ ಪದ್ಮನಯನೆಯೇ ಮೊದಲಾದ ಪ್ರಮದೆಯರ ಅಂಜಿಕೆಯು ಮುರಿದು ಹೋಗಿತ್ತು. ಪ್ರಯಾಣೋತ್ಸುಕರಾದ ನಮಗೆ ನಿದ್ದೆಯು ಬರಲಿಲ್ಲ. ಚಂದ್ರೋದಯವಾಯಿತು; ನಿಶಾಪತಿಯು ಮೆಲ್ಲಮೆಲ್ಲನೆ ಮೇಲಕ್ಕೇರತೊಡಗಿದನು. ನಾನು ಸುಮಧ್ಯಮೆಯನ್ನು ಎಬ್ಬಿಸಿ, ಉಳಿದ ದಾಸಿಯರನ್ನು ಎಬ್ಬಿಸಲು ಸೂಚಿಸಿದೆನು; ಆದರೆ ದಾಸಿಯರೊಬ್ಬರೂ ಕಣ್ಣಿಗೆ ಬೀಳಲಿಲ್ಲ. ನಮ್ಮ ಕುದುರೆಗಳೂ ಕಟ್ಟಿದಲ್ಲಿ ಇದ್ದಿಲ್ಲ. ಇದನ್ನು ನೋಡಿ ನಮಗೆ ಆಶ್ಚರ್ಯವಾದದ್ದಲ್ಲದೆ, ಭಯವೂ ಉತ್ಪನ್ನವಾಯಿತು. ಇದು ರಾಕ್ಷಸ ಚೇಷ್ಟೆಯಲ್ಲದೆ ಮತ್ತೊಂದಲ್ಲೆಂದು ನಾವು ನಿಶ್ಚಯಿಸಿದೆವು. ಸುಮಧ್ಯಮೆಯು ಕೇವಲ ನಮ್ಮ ಹಿತಕರ್ತಳಾದ್ದರಿಂದ ನಮ್ಮನ್ನಗಲಿ ಇರುತ್ತಿದ್ದಿಲ್ಲ. ಅವಳು ನಮ್ಮ ಶಯನಗೃಹದೊಳಗಿನದೊಂದು ಕೋಣೆಯಲ್ಲಿ ಮಲಗುತ್ತಿದ್ದಳು. ಉಳಿದ ದಾಸಿಯರು ಬೇರೆ ಕಡೆಗೆ ಮಲಗುತ್ತಿದ್ದರು. ಈ ಆಕಸ್ಮಿಕ ಪ್ರಸಂಗದಿಂದ ನಮ್ಮ ಪ್ರಯಾಣವು ತಡೆದು ನಿಂತಿತು ನಾವು ಮುದುಗಾಣದಾದೆವು ಬಗೆಬಗೆಯ ಕಲ್ಪನೆಗಳು ಹುಟ್ಟುತ್ತಿದ್ದವು—ಅಡಗುತ್ತಿದ್ದವು. ಮುಂದೇನು ಮಾಡಬೇಕೆಂಬ ವಿಚಾರದಲ್ಲಿ ಬೆಳಗಾಯಿತು. ಮೇಘನಾದನ ನಾಶಕ್ಕೆ ಕಾರಣವಾದ ಪ್ರಚಂಡ ಧನುಸ್ಸನ್ನು ನಾನು ಬಹಳ ಜಾಗ್ರತೆಯಿಂದ ಕಾಯುತ್ತಿದ್ದೆನು. ಈಗಂತು ಅದರ ಮಹತ್ವವು ವಿಶೇಷವಾಗಿ ತೋರಹತ್ತಿತು. ನಾವು ಹೀಗೆ ಚಿಂತಾಕ್ರಾಂತರಾಗಿ ಕುಳಿತಿರುವದನ್ನು ನೋಡಿ ಪಂಜರದೊಳಗಿದ್ದ ಗಿಳಿಯು—ಯಾಕೆ, ರಾಜಪುತ್ರಾ, ಚಿಂತಾಮಗ್ನನಾಗಿ ಕುಳಿತುಕೊಂಡೆ? ನನ್ನ ಮಾತಿನ ಅನುಭವವಾಯಿತೆ? ಮೇಘನಾದನನ್ನು ಕೊಂದಮಾತ್ರದಿಂದ ನೀನು ನಿಷ್ಕಂಟಕ ನಾಗಲಿಲ್ಲ. ಇನ್ನಾದರೂ ನನ್ನ ಮಾತನ್ನು ಮೀರಬೇಡ ಸುಮಧ್ಯಮಾ ಪದ್ಮನಯನೆಯರೊಡನೆ ನೀನು ಬಂದ ಮಾರ್ಗದಿಂದ ಈಗಲೇ ಪ್ರಯಾಣ ಮಾಡು ಎಂದು ಹೇಳಿತು.

ದ್ವಿಜೋತ್ತಮಾ, ಗಿಳಿಯ ಈ ಮಾತುಗಳು ನನಗೆ ಸಮಂಜಸವಾಗಿ ತೋರಿದವು. ನಾನು ಸುಮಧ್ಯಮಾ—ಪದ್ಮನಯನೆಯರೊಡನೆ ಹೊರಟೆನು. ಸುಮಧ್ಯಮೆಯು ಗಿಳಿಯ ಪಂಜರವನ್ನು ಹಿಡಕೊಂಡಿದ್ದಳು ಗುಹೆಯನ್ನು ಪ್ರವೇಶಿಸಿ, ಸುರಕ್ಷಿತವಾಗಿ ನಾವು ಹೊರಬಿದ್ದೆವು. ರಾಕ್ಷಸನ ಮಾಯಾಪ್ರದೇಶದಿಂದ ಹೊರಬಿದ್ದು ಬಂದದ್ದಕ್ಕಾಗಿ ನಮಗೆ ಒಂದು ಬಗೆಯಿಂದ ಸಮಾಧಾನವಾಯಿತು. ತಾಯಿ—ತಂದೆಗಳನ್ನು ನೋಡುವ ಕೂತೂಹಲವು ನಮ್ಮಲ್ಲಿ ಬಹಳ ಇದ್ದದ್ದರಿಂದ ಆದಷ್ಟು ದೊಡ್ಡ ಪ್ರಯಾಣವನ್ನು ಮಾಡುತ್ತ ಉತ್ತರಾಭಿಮುಖವಾಗಿ ಮಾರ್ಗಕ್ರಮಣಮಾಡಲು, ನಮಗೆ ಒಂದು ಬೈಲು ಪ್ರದೇಶವು ಹತ್ತಿತು. ಅಲ್ಲಿ ಉನ್ನತವಾದ ಗಿಡಗಳು ವಿರಳವಾಗಿದ್ದವು. ಮಧ್ಯಾಹ್ನದ ಸಮಯವಾಗಲು ಬಿಸಿಲ ತಾಪವು ಹೆಚ್ಚಿತು. ತಣ್ಣೆಳಲಲ್ಲಿ ಕೆಲಹೊತ್ತು ವಿಶ್ರಾಂತಿಯನ್ನು ಹೊಂದಿ, ಬಿಸಿಲು ಇಳದ ಬಳಿಕ ಹೊರಡಬೇಕೆಂದು ಯೋಚಿಸಿ, ನನ್ನ ವಿಚಾರವನ್ನು ರಾಜಪುತ್ರಿಗೆ ತಿಳಿಸಿದೆನು. ಆ ಸುಕುಮಾರಿಗೂ ಅಷ್ಟೇ ಬೇಕಾಗಿತ್ತು ಆಕೆಯು ಮಾರ್ಗಾಯಾಸದಿಂದ ಬಹಳವಾಗಿ ಬಳಲಿದ್ದಳು. ಆ ರಮಣೀಯವಾದ ಸ್ಥಳದಲ್ಲಿ ನಾವು ಕುಳಿತುಕೊಂಡಿರಲು, ಸುಮಧ್ಯಮಾ—ಪದ್ಮನಯನೆಯರು ಅಲ್ಲಿಯೇ ಒತ್ತಟ್ಟಿಗೆ ಅಡ್ಡಾಗಿ ಸುಖದಿಂದ ನಿದ್ದೆ ಮಾಡತೊಡಗಿದರು.

ರಾಜಪುತ್ರಿಯಾದ ಪದ್ಮನಯನೆಯು ನೆಲದ ಮೇಲೆಯೇ ಮಲಗಿಕೊಂಡು ಸುಖದಿಂದ ನಿದ್ರೆ ಮಾಡಹತ್ತಿದ್ದನ್ನು ನೋಡಿ ನನಗೆ ಬಹಳ ವ್ಯಸನವಾಯಿತು. ಹಂಸತೂಲದ ಮೃದುವಾದ ತಲ್ಪದ ಮೇಲೆ ಯಾವಾಗಲೂ ಮಲಗುತ್ತಿದ್ದ ಆ ಸುಂದರಿಗೆ ತಗ್ಗು ದಿನ್ನೆಗಳುಳ್ಳ ನೆಲವು ಸುಖಕರವಾಗುವದಕ್ಕೆ ಅವಳಿಗಾದ ಮಾರ್ಗಶ್ರಮವೇ ಕಾರಣವು. ಬಿಸಿಲಿನಿಂದ ಅವಳ ಮೈ ಬಣ್ಣವು ಕಪ್ಪಾಗಿತ್ತು; ನಾಲ್ಕೂಕಡೆಗೆ ಅಸ್ತವ್ಯಸ್ತವಾಗಿ ಹಾರಾಡುತ್ತಿದ್ದ ಅವಳ ಸುಂದರ ನೀಲಾಲಕಗಳ ಮೇಲೆ, ಮಾರ್ಗದೊಳಗಿನ ಧೂಳಿಯು ಕುಳಿತಿತ್ತು, ಅವಳು ಹಣೆಯ ಮೇಲಿನ ಬೆವರನ್ನು ಮೇಲೆ ಮೇಲೆ ಒರಿಸಿಕೊಂಡದ್ದರಿಂದ ಕಸ್ತೂರಿಯ ತಿಲಕವು ಸಂಪೂರ್ಣವಾಗಿ ನಾಶ ಹೊಂದಿರಲು ಲಲಾಟವು ಸ್ವಚ್ಛವಾದ ಮಣಿ ಮುಕುಟದಂತೆ ಕಂಗೊಳಿಸುತ್ತಿತ್ತು, ಧೂಳಿಯಿಂದ ಅವಳ ವಸ್ತ್ರಗಳು ಮಲಿನವಾಗಿದ್ದವು; ಹಸಿವೆ ಬಾಯಾರಿಕೆಗಳಿಂದ ಆ ಸುಕುಮಾರಿಯ ಮುಖಕಮಲವು ಬಾಡಿತ್ತು ಮಿತ್ರಾ, ಯಾವ ಸುಂದರಿಯು ಲಜ್ಜಾ–ಮಾನಗಳ ಮೂಲಕವಾಗಿ ತನ್ನ ಶರೀರವನ್ನು ನಿದ್ರೆಯಲ್ಲಾದರೂ ಉತ್ತರೀಯದಿಂದ ಸಂಪೂರ್ಣವಾಗಿ ಆಚ್ಛಾದಿಸು ತ್ತಿದ್ದಳೋ, ಅದೇ ಸುಂದರಿಯು ಮಾರ್ಗಾಯಾಸದಿಂದ ಕಂಗೆಟ್ಟು, ನಿದ್ರೆಯಿಂದ ಪರವಶಳಾಗಿ ಮಲಗಿರಲು ಉತ್ತರೀಯವು ಅಸ್ತವ್ಯಸ್ತವಾದದ್ದರಿಂದ ಅವಳ ಸುಂದರವಾದ ಅವಯವಗಳು ಪ್ರೇಕ್ಷಕರ ಮನಸ್ಸನ್ನು ಮೋಹಗೊಳಿಸುವಂತೆ ಕಂಗೊಳಿಸುತ್ತಿದ್ದವು. ನನ್ನ ಪ್ರಿಯಳು ಎಚ್ಚತ್ತ ಬಳಿಕ ತಾನು ಅಮರ್ಯಾದೆಯಿಂದ ಮಲಗಿಕೊಂಡದ್ದಕ್ಕಾಗಿ, ಮನದಲ್ಲಿ ನೊಂದುಕೊಂಡಾ ಳೆಂಬ ಭಯದಿಂದ, ನನ್ನ ಮೇಲಿನ ಸೆಲ್ಲೆಯನ್ನು ಅವಳಿಗೆ ಹೊಚ್ಚಿ ನಾನು ಕುಳಿತ ಸ್ಥಳದಿಂದ ಎದ್ದು ಹೋದೆನು. ಭಯಂಕರವಾದ ಅರಣ್ಯದಲ್ಲಾದರೂ ತಗ್ಗು ದಿನ್ನೆಯಾದ ನೆಲದ ಮೇಲೆ ಸುಖದಿಂದ ನಿದ್ರೆಮಾಡುತ್ತಿದ್ದ ನನ್ನ ಪ್ರಿಯಳಿಗೊದಗಿದ ಶ್ರಮದ ಕಲ್ಪನೆಯಾಗಿ, ನನ್ನ ಕಣ್ಣೊಳಗಿಂದ ನೀರುಗಳು ತಾವೇ ಉದರಹತ್ತಿದವು. ತನಗೆ ನೀಗಲಾರದಷ್ಟು ಶ್ರಮವಾಗಿದ್ದರೂ ಅದನ್ನು ನನ್ನ ಮುಂದೆ ಆಡದೆ ಯಾವಾಗಲೂ ಮೃದುಸ್ಮಿತೆಯಾಗಿ ಆನಂದವನ್ನು ಪ್ರಕಟಿಸುವ ನನ್ನ ಪ್ರಿಯಳ ನಿಜವಾದ ಪ್ರೇಮಕ್ಕೂ ಸೌಜನ್ಯಕ್ಕೂ ನನ್ನ ಮನಸ್ಸು ಮತ್ತಿಷ್ಟು ವ್ಯಾಕುಲಗೊಂಡಿತು.

ಈ ಪ್ರಕಾರ ನನ್ನ ಸ್ಥಿತಿಯು ವಿಚಿತ್ರವಾಗಿರಲು, ನಿಃಶಬ್ದವಾದ ಅರಣ್ಯದಲ್ಲಿ ನನ್ನ ಮನಸ್ಸು ಅಸಮಾಧಾನ ಹೊಂದಿತು. ಆಗ ನಾನು ಸುವರ್ಣ ಪಂಜರದೊಳಗಿದ್ದ ಗಿಳಿಯನ್ನು ಮುಂದಿಟ್ಟು ಕೊಂಡು ಅದರ ಕೂಡ ಮಾತಾಡಹತ್ತಿದೆನು. ಇಲ್ಲಿಯವರೆಗೂ ನಾವು ಅದನ್ನು ಪಂಜರದಿಂದ ಹೊರಗೆ ಬಿಟ್ಟಿದ್ದಿಲ್ಲ, ಈಗಾದರೂ ಅದನ್ನು ಹೊರಗೆ ಬಿಡುವ ಮನಸ್ಸು ನನಗಿದ್ದಿಲ್ಲ, ಆದರೆ ಗಿಳಿಯು ಕಕ್ಕುಲತೆಯಿಂದ ನನ್ನನ್ನು ಕುರಿತು—"ರಾಜಪುತ್ರಾ, ನಾನು ನಿಮ್ಮ ಬಳಿಯಲ್ಲಿರುವದಕ್ಕೆ ಆನಂದದಿಂದ ಸಮ್ಮತಿಸುತ್ತಿರಲು, ಸೆರೆಯುವನಂತೆ ನನ್ನನ್ನು ಯಾಕೆ ಪಂಜರದೊಳಗೆ ಹಾಕಿದ್ದೀರಿ? ನಾನು ಎರಡನೆಯ ಗಿಳಿಗಳಂತೆ ಅಜ್ಞಾನಿಯಲ್ಲ; ಸುಜನರು ಯಾರು, ಯಾವ ಸ್ಥಳದಲ್ಲಿರುವದರಿಂದ ನನಗೆ ಅಪಾಯವು ಸಂಭವಿಸಲಿಕ್ಕಿಲ್ಲ, ಯಾವ ಸ್ಥಳದಲ್ಲಿರುವದರಿಂದ ನನ್ನ ಜೀವಕ್ಕೆ ಅಪಾಯವಾಗಬಹುದು, ಇವೇ ಮೊದಲಾದ ಸಂಗತಿಗಳನ್ನು

ತಿಳಿಯುತ್ತೇನೆ. ನಾನು ದೇವರನ್ನು ಸ್ಮರಿಸಿ ಹೇಳುವದೇನಂದರೆ, ನೀನು ನನ್ನನ್ನು ಸ್ವಲ್ಪ ವೇಳೆ ಆಡುವದಕ್ಕಾಗಿ ಪಂಜರದಿಂದ ಹೊರಗೆ ಬಿಟ್ಟರೆ, ನಿನಗೆ ವಿಶ್ವಾಸಘಾತ ಮಾಡದೆ ನಿನ್ನ ಆಜ್ಞಾನುಸಾರವಾಗಿಯೇ ನಾನು ವರ್ತಿಸುವೆನು. ನನ್ನ ಮಾತನ್ನು ಮಾತ್ರ ನಿರಾಕರಿಸಬೇಡ ಎಂದು ಅಂಗಲಾಚಿ ಹೇಳಿಕೊಳ್ಳಲು, ನನಗೆ ದಯಹುಟ್ಟಿ ಪಂಜರದ ಬಾಗಿಲನ್ನು ತೆರೆಯಹೋದೆನು. ಆದರೆ ಅದಕ್ಕೆ ಬೀಗವನ್ನು ಹಾಕಿದ್ದರಿಂದ ನಾನು ನಿರುಪಾಯನಾಗಿರಲು, ಗಿಳಿಯು—''ರಾಜಪುತ್ರಾ, ಸ್ವಲ್ಪಕ್ಕಾಗಿ ನನ್ನ ಮಾತನ್ನು ಮುರಿಯಬೇಡ. ಅಗೋ ನೋಡು; ರಾಜಪುತ್ರಿಯ ಕೊರಳಲ್ಲಿ ಸುವರ್ಣದ ಸರಪಳಿಯಲ್ಲಿ ಈ ಪಂಜರಕ್ಕೆ ಹಾಕಿದ ಬೀಗದ ಕೈಯು ಕಾಣುತ್ತದೆ. ರಾಜಪುತ್ರಿಗೆ ಗಾಢ ನಿದ್ದೆಯು ಹತ್ತಿರುವದರಿಂದ ಅವಳಿಗೇನು ಎಚ್ಚರವಾಗುವ ಹಾಗಿಲ್ಲ. ಈ ಮನೋಹರವಾದ ವನದ ಸೊಬಗನ್ನೂ, ಮಧುರವಾದ ಫಲಗಳನ್ನೂ ನೋಡಿ ನನ್ನ ಮನಸ್ಸು ಹೊರಗೆ ಬರುವದಕ್ಕಾಗಿ ಬಹಳ ಆತುರಪಡುತ್ತಿರುವದರಿಂದ ನಾನು ಇಷ್ಟು ಹೇಳಿಕೊಳ್ಳುತ್ತೇನೆ. ಇದರ ಮೇಲೆ ನಿನ್ನ ಮನಸ್ಸು ನಾನು ನಿಮಗೆ ಅಧೀನವಾಗಿರಲು, ಹೆಚ್ಚಿಗೆ ಆಗ್ರಹ ಮಾಡುವದಕ್ಕೆ ಹೇಗೆ ಬರುತ್ತದೆ? ವಿಚಾರಶೀಲನಾದ ನಿನಗೆ ನಾನು ಹೆಚ್ಚಿಗೆ ಹೇಳುವದಿಲ್ಲ.''

ದ್ವಿಜವರ್ಯಾ, ಗಿಳಿಯ ಕಪಟದ ಮಾತುಗಳನ್ನು ನಂಬುವದಕ್ಕೆ ಬಲವತ್ತರ ಕಾರಣಗಳಿರದಿದ್ದರೂ ''ವಿನಾಶಕಾಲೇ ವಿಪರೀತ ಬುದ್ಧಿಃ'' ಎಂಬ ಉಕ್ತಿಯಂತೆ ನಾನು ರಾಜಪುತ್ರಿಯ ಕೊರಳೊಳಗಿದ್ದ ಕೀಲಿಯ ಕೈಯನ್ನು ಅವಳಿಗೆ ಎಚ್ಚರಾಗದಂತೆ ಬಹಳ ಮೆಲ್ಲಗೆ ತೆಗೆದುಕೊಂಡು, ಪಂಜರದ ಬೀಗವನ್ನು ತೆಗೆದು ಗಿಳಿಯನ್ನು ನನ್ನ ಮುಂಗೈ ಮೇಲೆ ಕುಳ್ಳಿರಿಸಿಕೊಂಡೆನು. ಆಗ ಅದು ತನ್ನ ಸವಿಮಾತುಗಳಿಂದ ನನ್ನನ್ನು ಬಹಳ ಆನಂದಗೊಳಿಸಿತು. ಆನಂದದ ಭರದಲ್ಲಿ ನಾನು ಪರವಶನಾಗಿ ಕುಳಿತಿರಲು ಅದು ಒಮ್ಮೆಲೆ ನನ್ನ ಕೈಯಿಂದ ಮೇಲಕ್ಕೆ ಹಾರಿ ಕೆಲವು ಅಂತರದಲ್ಲಿ ಭೂಮಿಯ ಮೇಲೆ ಕುಳಿತುಕೊಂಡಿತು. ಕೈಯಲ್ಲಿದ್ದ ಗಿಳಿಯು ಒಮ್ಮಿಂದೊಮ್ಮೆ ಇಲ್ಲದಂತೆ ಆದದ್ದನ್ನು ನೋಡಿ, ನನಗೆ ಬಹಳ ಅಸಮಾಧಾನವಾದದ್ದಲ್ಲದೆ ಮೂರ್ಖತನದಿಂದ ಪಂಜರದೊಳಗಿದ್ದ ಗಿಳಿಯನ್ನು ಹೊರಗೆ ಬಿಟ್ಟದ್ದಕ್ಕಾಗಿ ನನಗೆ ಪಶ್ಚಾತ್ತಾಪವೂ ಆಯಿತು. ರಾಜಪುತ್ರಿಗೆ ಪ್ರಾಣಕ್ಕಿಂತಲೂ ಅಧಿಕ ಪ್ರಿಯವಾಗಿದ್ದ ವಸ್ತುವನ್ನು ನಾನು ಕಳೆದದ್ದರಿಂದ ಅವಳು ನನಗೆ ಏನು ಅನ್ನುವಳೋ, ಎಷ್ಟು ಶೋಕ ಮಾಡುವಳೋ, ಎಂದು ನಾನು ತಳಮಳಗೊಂಡೆನು. ಗಿಳಿಯು ಸಮೀಪದಲ್ಲಿಯೇ ಕುಳಿತದ್ದನ್ನು ನೋಡಿ ನಾನು—''ಅರಗಿಳಿಯೇ, ಬಹಳ ತಡವಾಯಿತು. ರಾಜಪುತ್ರಿಯು ಎಚ್ಚತ್ತರೆ ತನ್ನನ್ನು ಕೇಳದೆ ನಿನ್ನನ್ನು ಹೊರಗೆ ಬಿಟ್ಟದ್ದಕ್ಕಾಗಿ ಅವಳು ವಿಪರೀತವನ್ನು ತಿಳಕೊಂಡಾಳು. ಬೇಗನೆ ಬಾ; ಮೊದಲಿನಂತೆ ನಿನ್ನ ಪಂಜರದಲ್ಲಿ ಕುಳಿತುಕೊ,'' ಅನ್ನಲು ಗಿಳಿಯು—''ರಾಜಪುತ್ರಾ, ನಿಲ್ಲು; ಹೀಗೆ ಯಾಕೆ ಒತ್ತರಿಸುತ್ತೀ? ನೀನು ಹೀಗೆಯೇ ನನ್ನ ಮಾತು ಕೇಳಿದೆಯಾ? ಬಿಡುವವರೆಗೆ ನಿನ್ನ ಸ್ವಾಧೀನವು; ಇನ್ನು ಮೇಲೆ ನಾನು ಬಂದಾಗ್ಗೆ ಪಂಜರಕ್ಕೆ ಬೀಗವನ್ನು ಹಾಕುವೆಯಂತೆ. ರಾಜಪುತ್ರಿಗೆ ನೀನು ಇಷ್ಟು ಯಾಕೆ ಹೆದರುತ್ತೀ? ಅವಳೇನು ನಿನ್ನ ಮೇಲಧಿಕಾರಿಯೇ?

ನಿಲ್ಲು; ಇನ್ನಷ್ಟು ವಿಶ್ರಾಂತಿಯನ್ನು ತೆಗೆದುಕೊಂಡು ಆಮೇಲೆ ಪಂಜರದೊಳಗೆ ಬರುತ್ತೇನೆ'' ಎಂದು ಹೇಳಿ, ಅಲ್ಲಿಂದ ಮತ್ತೆ ಹಾರಿ ಕೆಲವು ಅಂತರದ ಮೇಲೆ ಹೋಗಿ ನೆಲದ ಮೇಲೆ ಕುಳಿತುಕೊಂಡಿತು. ಆದರೂ ನನಗೆ ಅದರ ಅವಶ್ಯಕತೆಯು ಹೆಚ್ಚು ಇದ್ದದ್ದರಿಂದ ಅದರ ಬೆನ್ನು ಹತ್ತಿ ತಿರುಗಹತ್ತಿದೆನು. ಗಿಳಿಯು ಸಮೀಪದಲ್ಲಿಯೇ ಕುಳಿತಂತೆ ತೋರಿಸಿ, ನಾನು ಹಿಡಿದು ಹೋಗಲು, ಕೂಡಲೆ ಹಾರಿ ಮುಂದಕ್ಕೆ ಹೋಗುವದು. ಈ ಪ್ರಕಾರ ನಾನು ಗಿಳಿಯನ್ನು ಹಿಡಿಯುವ ಹವ್ಯಾಸಕ್ಕೆ ಬಿದ್ದು, ಮೈ ಮೇಲೆ ಎಚ್ಚರಿಲ್ಲದೆ, ಸಂಜೆಯವರೆಗೆ ಹಾದಿಯನ್ನು ನಡೆದು ಎಷ್ಟೋ ಕಂದರಗಳನ್ನೂ, ಗುಡ್ಡಗಳನ್ನೂ, ಹೊಳೆಗಳನ್ನೂ ದಾಟಿದೆನು. ಮಾರ್ಗದ ಸ್ಮರಣವು ನನಗೆ ಎಷ್ಟು ಮಾತ್ರವೂ ಉಳಿಯಲಿಲ್ಲ, ನಾನು ಹಾದಿಯನ್ನೂ ಹಿಡಿದು ಹೋಗಿದ್ದಿಲ್ಲ. ಹೊತ್ತು ಮುಳುಗಿ ಕತ್ತಲೆ ಬಿದ್ದದ್ದನ್ನು ನೋಡಿ, ನನಗೆ ಪದ್ಮನಯನೆಯ ನೆನಪಾಯಿತು; ಆದರೆ ಅವಳು ಕುಳಿತಿರುವ ಸ್ಥಳವು ಯಾವದಿಕ್ಕಿಗೆ ಎಷ್ಟು ದೂರ ಉಳಿಯಿತೆಂಬದರ ಕಲ್ಪನೆಯೇ ನನಗೆ ಹರಿಯಲಿಲ್ಲ. ಕತ್ತಲಾದದ್ದರಿಂದ ಗಿಳಿಯು ಒಂದು ಎತ್ತರವಾದ ಮರದ ತುದಿಯಲ್ಲಿ ಕುಳಿತಿತು. ಇಷ್ಟು ಶ್ರಮಬಟ್ಟರೂ ನನ್ನ ಕೋರಿಕೆಯು ಕೊನೆಗಾಣದ್ದನ್ನು ನೋಡಿ ನನಗೆ ಬಹಳ ದುಃಖವಾಯಿತು. ಮರಳಿ ರಾಜಪುತ್ರಿಯ ಬಳಿಗೆ ಹೋಗಬೇಕೆಂಬ ವಿಚಾರವು ನನ್ನ ಮನಸ್ಸಿನಲ್ಲಿ ಉತ್ಪನ್ನವಾದರೂ, ಮಾರ್ಗವು ಗೊತ್ತಿಲ್ಲದ್ದರಿಂದಲೂ, ಅವಳು ಕುಳಿತಿರುವ ಸ್ಥಳವು ದೂರ ಉಳಿದದ್ದರಿಂದಲೂ, ಬಹಳ ಕತ್ತಲಾದ್ದರಿಂದಲೂ ವಿಪರೀತಕಾಲಕ್ಕನುಸರಿಸಿ ಆ ವಿಚಾರವು ಕೂಡಲೆ ನಷ್ಟವಾಯಿತು. ನಾನು ಗಿಳಿಯು ಕುಳಿತಿದ್ದ ಮರದ ಕೆಳಗೇ ತಳಮಳಿಸುತ್ತ ಬೆಳಗಾಗುವವರೆಗೆ ಬಿದ್ದುಕೊಂಡೆನು.

ಮರುದಿವಸ ಮುಂಜಾನೆ ಆ ಗಿಳಿಯು ಹಾರುವದಕ್ಕಿಂತ ಮೊದಲೇ ನಾನು ಎದ್ದು ಕುಳಿತು, ಅದು ಹಾರಿದ ಕೂಡಲೆ ಅದರ ಬೆನ್ನಹತ್ತಿ ಹೊರಟೆನು. ಆ ವೊತ್ತಿಗೆ ದಿನವೂ ಮುನ್ನಿನ ದಿನದಂತೆ ನಾನು ಸಂಜೆಯವರೆಗೆ ತಿರುಗಿದೆನು; ಅದರಿಂದ ಫಲವೇನೂ ಆಗಲಿಲ್ಲ. ಮಾರ್ಗದೊಳಗಿನ ಕೆಲವು ಹಣ್ಣು ಹಂಪಲಗಳನ್ನು ತಿಂದು, ನಿರ್ವಾಹ ಮಾಡುತ್ತ ಹೀಗೆ ಆ ದಿನವೂ ಗಿಳಿಯ ಬೆನ್ನಹತ್ತಿ ತಿರುಗಿದೆನು. ಆದರೂ ನನ್ನ ಯತ್ನವೆಲ್ಲ ನಿಷ್ಫಲವಾಗಿ ಮುಂದೆ ಗಿಳಿಯು ಒಮ್ಮಿಂದೊಮ್ಮೆ ನನ್ನ ಕಣ್ಣಿಗೆ ಕಾಣದಹಾಗಾಯಿತು. ಮಿತ್ರಾ, ಸುಮತೀ ಆಗ್ಗೆ ನನಗೆ ಒದಗಿದ ದುಃಖದ ಕಲ್ಪನೆಯನ್ನು ನೀನೇ ಮಾಡು ನಾನು ನನ್ನ ಬಾಯಿಂದ ಅದನ್ನು ವರ್ಣಿಸಲಾರೆನು. ಘೋರಾರಣ್ಯದಲ್ಲಿ ರಾಜಪುತ್ರಿಯನ್ನು ಬಿಟ್ಟು ಬಂದು ಮೂರು ದಿನಗಳು ಆಗಿ ಹೋದದ್ದರಿಂದ ಅಲ್ಲಿ ಅವಳ ಗತಿಯು ಏನಾಗಿರುವದೋ, ಎಂದು ಮನದೊಳಗೆ ಚಿಂತಿಸಿದೆನು. ಏನು ಹೇಳಲಿ! ಅತ್ತ ರಾಜಪುತ್ರಿಯನ್ನೂ ಅಗಲಿದೆನು; ಇತ್ತ ಗಿಳಿಯೂ ಕಣ್ಣುಮರೆಯಾಯಿತು. ಮರಳಿ ರಾಜಪುತ್ರಿಯ ಕಡೆಗೆ ಹೋಗಬೇಕೆಂದರೆ ಅದೂ ಅಸಂಭವವಾಗಿ ತೋರಿತು. ತಾಯಿ–ತಂದೆಗಳನ್ನಾದರೂ ಹೊಂದಬೇಕೆಂದರೆ ನನಗೆ ದಿಗ್‌ಭ್ರಮಣವಾಗಿ ಯಾವಕಡೆಗೆ ಹೋಗಬೇಕೆಂಬದು ತಿಳಿಯದೆ ಹೋಯಿತು. ಈ ಪ್ರಕಾರ ಗಿಳಿಯ ಮೋಸದಿಂದ ನನಗಾದ ದುಃಖವನ್ನು ವರ್ಣಿಸುವದು ಅಶಕ್ಯವು ಅಸಹ್ಯವಾದ

ದುಃಖದಿಂದ ನನಗೆ ಜೀವವು ಬೇಸರವಾಯಿತು. ಮನಃಪ್ರಿಯಳಾದ ಪದ್ಮನಯನೆಯೊಡನೆ ಆ ವೊತ್ತಿನವರೆಗೆ ಅನುಭವಿಸಿದ ಸುಖಗಳೆಲ್ಲ ಸ್ವಪ್ನದಲ್ಲಿಯ ಸುಖಗಳಂತೆ ತೋರಹತ್ತಿದವು. ಸುಖದಿಂದ ಕಳೆದ ಕಾಲವು ಬಹು ದೊಡ್ಡದಿದ್ದರೂ, ಅದು ಅಲ್ಪವಾಗಿ ತೋರುವದು. ಅದೇ ದುಃಖದಿಂದ ಕಳೆದ ಕಾಲವು ಅಲ್ಪವಾಗಿದ್ದರೂ, ಅದು ದೊಡ್ಡದಾಗಿ ಕಾಣುವದು. ಇದರಂತೆ ರಾಜಪುತ್ರಿಯೊಡನೆ ನಾನು ಬಹುಕಾಲ ಅನುಭವಿಸಿದ ಸುಖವು ಅಗೋಚರವಾಗಿ, ಸಾಂಪ್ರತಕ್ಕೆ ಒದಗಿದ ದುಃಖವು ದುಃಸಹವಾಯಿತು. ಪ್ರಾಣಕ್ಕಿಂತಲೂ ಅಧಿಕಳಾದ ಪ್ರಿಯ ಪದ್ಮನಯನೆಗೂ, ದುರ್ಲಭರಾದ ಮಾತಾ–ಪಿತೃಗಳಿಗೂ ದುಃಖ ಕೊಟ್ಟು ಈ ಜೀವವನ್ನು ಇಡುವದರಲ್ಲಿ ಸುಖವೂ, ಪುರಷಾರ್ಥವೂ ಇಲ್ಲೆಂದು ತಿಳಿದು ನಾನು ಪ್ರಾಣತ್ಯಾಗ ಮಾಡುವದನ್ನು ನಿಶ್ಚಯಿಸಿದೆನು.

ಪ್ರಿಯಮಿತ್ರಾ, ದುಃಖದಿಂದ ವಿವೇಕಭ್ರಷ್ಟನಾದ ನಾನು ಪ್ರಾಣತ್ಯಾಗದ ಹಲವು ಉಪಾಯಗಳನ್ನು ಚಿಂತಿಸತೊಡಗಿದೆನು. ಒಮ್ಮೆ ನನ್ನ ಬಳಿಯಲ್ಲಿದ್ದ ತೀಕ್ಷ್ಣವಾದ ಖಡ್ಗದಿಂದ ನನ್ನ ಶಿರಚ್ಛೇದವನ್ನು ಮಾಡಿಕೊಳ್ಳುವದಕ್ಕೆ ಉದ್ಯೋಗಿಸಿದೆನು; ಆದರೆ ಈ ಕೃತಿಯಿಂದ ಪ್ರೇತವು ಅನಾಥವಾಗಿ ಹದ್ದು ಕಾಗೆಗಳ ಪಾಲಾಗುವದೆಂಬ ವಿಚಾರವು ನನ್ನ ಮನದೊಳಗೆ ಬಂದದ್ದರಿಂದ, ನಾನು ಆ ಸಾಹಸಕ್ಕೆ ಹೋಗದೆ, ಅಗ್ನಿಪ್ರವೇಶದಿಂದ ದೇಹತ್ಯಾಗಮಾಡುವದು ಯೋಗ್ಯವೆಂದು ತಿಳಿದು, ಆ ಅರಣ್ಯದೊಳಗಿನ ಒಣಗಿದ ಕಟ್ಟಿಗೆಗಳನ್ನು ಆರಿಸಹತ್ತಿದೆನು. ಸ್ವಲ್ಪ ಹೊತ್ತಿನಲ್ಲಿಯೇ ಕಟ್ಟಿಗೆಯ ರಾಶಿಯು ಪರ್ವತಪ್ರಾಯವಾಗಿ ನನ್ನ ಮುಂದೆ ಬಿದ್ದಿತು. ನಾನು ಚಕಮಕಿಯಿಂದ ಅಗ್ನಿಯನ್ನು ಉತ್ಪನ್ನ ಮಾಡಿ ಮೈ ಮೇಲಿನ ವಸ್ತ್ರಗಳನ್ನು ಅದಕ್ಕೆ ಇಂಧನವಾಗಿ ಹಾಕಿ ಹೊತ್ತಿಸಿದೆನು. ಅದರಿಂದ ಅಗ್ನಿಯು ಹುತವಾಗಿ ಭಯಂಕರ ಜ್ವಾಲೆಯು ಉತ್ಪನ್ನವಾಯಿತು. ಅದನ್ನು ನೋಡಿ ನನ್ನ ಪ್ರಿಯಳ ಹಾಗು ಮಾತಾ–ಪಿತೃಗಳ ಸ್ಮರಣವಾಗಿ ನನ್ನ ಕಣ್ಣುಗಳಿಂದ ಅಶ್ರುಗಳು ಧಾರಾಳವಾಗಿ ಸುರಿಯಹತ್ತಿದವು. ಮಿತ್ರಾ, ಪ್ರಾಣತ್ಯಾಗವು ಸುಲಭವಲ್ಲ, ನನಗೆ ಜೀವವು ಬೇಸರವಾಗಿದ್ದರೂ, ಅದನ್ನು ನಾಶಮಾಡುವ ಕಾಲವು ಪ್ರತ್ಯಕ್ಷವಾಗಿ ಒದಗಿದ್ದನ್ನು ನೋಡಿ ನನಗೆ ಬಹಳ ದುಃಖವಾಯಿತು. ನಾನು ಆಕಾಶದ ಕಡಗೆ ಮುಖವೆತ್ತಿ ದೀನ ಮುದ್ರೆಯಿಂದ ದೇವರನ್ನು ಕುರಿತು—ಜಗತ್ಪಾಲಕಾ ಪರಮೇಶ್ವರಾ ನಿನ್ನ ಲೀಲೆಯು ಅಗಾಧವಾದದ್ದು, ಪ್ರಾಣಿ ಮಾತ್ರಗಳ ರಕ್ಷಣ ಕರ್ತೃವೂ ಕರುಣಾಸಮುದ್ರವೂ ನೀನಿದ್ದು, ಈ ದೆಸೆಗೇಡಿಯಾದ ಕಮಲಾಕ್ಷನ ಮೇಲೆ ಇಂಥ ದುರ್ಘಟ ಪ್ರಸಂಗವು ಯಾಕೆ ಬಂದಿರಬಹುದು? ನನ್ನ ಕರ್ಮವು ಬಲಿಷ್ಟವಾಗಿರುವವರೆಗೆ ಯಾರೇನು ಮಾಡುವರು? ಸಾವಿಗೆ ನಾನು ಹೆದರುವದಿಲ್ಲ, ಆದರೆ ನನ್ನ ತಾಯಿ ತಂದೆಗಳೂ, ಪ್ರಾಣಪ್ರಿಯಳಾದ ಪದ್ಮನಯನೆಯೂ ನನ್ನ ವಿಯೋಗ ದುಃಖ ಸಾಗರದ ಅಂತವನ್ನು ಎಂದೂ ಕಾಣುವದಿಲ್ಲೆಂಬದನ್ನು ನೆನಿಸಿ ನನಗೆ ಮಿತಿಮೀರಿ ದುಃಖವಾಗುತ್ತದೆ. ದಯಾನಿಧಿಯೇ, ನಿನ್ನ ಚರಣವನ್ನು ಹೊಂದಲಿಚ್ಛಿಸಿ ಅಗ್ನಿಪ್ರವೇಶ ಮಾಡಲುದ್ಯೋಗಿಸಿದ್ದೇನೆ. ನನ್ನಿಂದ ದೋಷಾಸ್ಪದವಾದ ಕೃತಿಗಳು ಸಂಘಟಿಸಿದ್ದರೂ ನೀನು ಕ್ಷಮಾಶೀಲನಾದದ್ದರಿಂದ ಅವುಗಳನ್ನು

ಎಣಿಸದೆ ನನ್ನನ್ನು ನಿನ್ನ ಹತ್ತರ ಕರೆದುಕೋ. ನೀನಲ್ಲದೆ ನನ್ನ ಮೊರೆಯನ್ನು ಯಾರು ಕೇಳಬೇಕು? ತಂದೆಯೂ, ತಾಯಿಯೂ, ಆಪ್ತನೂ, ಮಿತ್ರನೂ ನೀನೇ. ನಿನ್ನ ಹೊರತು ನನ್ನನ್ನು ದುಃಖಸಾಗರದಿಂದ ಮುಕ್ತನಾಗಮಾಡುವ ಸಮರ್ಥರು ಮತ್ತಾರಿದ್ದಾರೆ? ನನ್ನ ಮೇಲಿನ ನಿನ್ನ ದಯವು ಇರುವವರೆಗೆ ಮಾತ್ರ ನನ್ನ ತಂದೆ ತಾಯಿಗಳೂ, ಬಂಧು ಮಿತ್ರರೂ, ಪ್ರಾಣಕ್ಕಿಂತಲೂ ಅಧಿಕಳಾದ ಪದ್ಮನಯನೆಯೂ ನನ್ನ ಸುಖಕ್ಕೆ ಕಾರಣವಾದರು. ಈಗ ನನ್ನ ದುಷ್ಕರ್ಮಯೋಗದಿಂದ ನಿನ್ನ ದಯೆಯು ತಪ್ಪಿರಲು, ಯಾರಾದರೂ ಈ ಅನಾಥ ಕಮಲಾಕ್ಷನ ದುಃಖವನ್ನು ಕೇಳುವದಕ್ಕಾದರೂ ಬಂದಿರುವರೇ? ಶರಣಜನ ರಕ್ಷಕಾ, ಸೃಷ್ಟಿ–ಸ್ಥಿತಿ–ಲಯಾದಿಕರ್ತಾ, ನೀನು ನನ್ನನ್ನು ಉಪೇಕ್ಷಿಸಬೇಡ. ಮಾತಾ–ಪಿತೃಗಳಿಗೂ, ಪ್ರಾಣಪ್ರಿಯಳಾದ ಪದ್ಮನಯನೆಗೂ ಚಿರಕಾಲ ಅಖಂಡ ಸುಖವನ್ನಿತ್ತು ರಕ್ಷಿಸೆಂಬ ನನ್ನ ವಿಜ್ಞಾಪನೆಯನ್ನಾಲಿಸಿ, ಗುರುವು ಶಿಷ್ಯನನ್ನೂ, ತಂದೆಯು ಮಗನನ್ನೂ ಪ್ರೀತಿಯಿಂದ ಆದರಿಸುವಂತೆ, ತಂದೆಯೂ, ಗುರುವೂ ಆದ ನೀನು ನನ್ನನ್ನು ಆದರಿಸು. ತಂದೆಯೇ, ನಿನ್ನ ದಯದಿಂದ ನನಗೆ ಪ್ರಾಪ್ತಳಾಗಿದ್ದ ಪದ್ಮನಯನೆಯು, ನನ್ನನ್ನಗಲಿ ಹೋದದ್ದರಿಂದ ನಾನು ಭ್ರಮಿಷ್ಟನಾಗಿರಲು, ವೇದಗಳಿಗೂ ಅಗೋಚರವಾದ ನಿನ್ನ ಮಹಿಮೆಯನ್ನು ಹೊಗಳಲು ಪಾಮರನಾದ ನಾನು ಹೇಗೆ ಸಮರ್ಥನಾಗುವೆನು? ತಾಯಿಯು ಮೂರ್ಖ ಮಗನನ್ನಾದರೂ ಮುದ್ದಾಡಿ ಆದರಿಸುವಂತೆ, ತಾಯಿಯ ತಾಯಿಯಾದ ನೀನು ನನ್ನನ್ನು ಆದರಿಸು ಕರುಣಾ ಸಮುದ್ರವೇ, ನನ್ನ ಕರ್ಮಾನುಸಾರವಾಗಿ ಸುಖ–ದುಃಖಗಳನ್ನೀ ಯುವದಕ್ಕೆ ಮಾತ್ರ ಕಾರಣರೂ, ಅಸ್ವಂತಂತ್ರರೂ, ನಾಶವಂತರೂ ಆದ ಬಂಧುಮಿತ್ರರನ್ನೂ, ಪದ್ಮನಯನೆಯನ್ನೂ, ನಂಬಿ, ಅನಿಮಿತ್ತ ಬಾಂಧವನೂ, ಸರ್ವತಂತ್ರ ಸ್ವತಂತ್ರನೂ, ನಾಶರಹಿತನೂ ಆದ ನಿನ್ನನ್ನು ಮರೆತುಬಿಟ್ಟ ನನ್ನ ಮೂರ್ಖತನಕ್ಕೆ ಎಣೆಯಿಲ್ಲ, ಅಯ್ಯೋ ದೇವಾ, ಏನು ಮಾಡಲಿ? ನನ್ನ ಮನೋವೃತ್ತಿಯ ಪ್ರವಾಹವು ಸಂಸಾರಸಾಗರವನ್ನು ಸೇರಿ ಮೋಹಬದ್ಧ ವಾಗಿರುವದರಿಂದ ಅದು ಮತ್ತೂ ನನ್ನ ಪ್ರಿಯಳನ್ನು ನೆನಿಸಿ ತೊಳಲುತ್ತದಲ್ಲದೆ, ಕರುಣಾಳುವಾದ ನಿನ್ನ ಪಾದಾರವಿಂದದಲ್ಲಿ ಸಿಲುಕಲೊಲ್ಲದು. ಹಾ! ಪದ್ಮನಯನೇ, ನಿನ್ನನ್ನೊಡಗೂಡಿರುವಾಗ ಈ ಕಮಲಾಕ್ಷನ ಐಶ್ವರ್ಯಕ್ಕೂ, ಸುಖಕ್ಕೂ ಎಣೆಯಿದ್ದಿಲ್ಲ. ಆದರೆ ಈಗ ನಿನ್ನನ್ನಗಲಿ ಅನಾಥ ನಾದದ್ದರಿಂದ ಅವನಿಗೊದಗಿದ ದುರ್ದಶೆಯನ್ನು ಎಷ್ಟೆಂತ ವರ್ಣಿಸಬೇಕು? ಯಾವ ನಿನ್ನ ಸುಗುಣಗಳೂ, ನಿಜವಾದ ಪ್ರೇಮವೂ ಸೌಜನ್ಯವೂ, ಸೌಕುಮಾರ್ಯವೂ, ಸೌಂದರ್ಯವೂ ನಿನ್ನ ಸಹವಾಸಿಯಾಗಿರುವಾಗ್ಗೆ ಕಮಲಾಕ್ಷ ಆನಂದಾಭಿವೃದ್ಧಿಗೆ ಕಾರಣವಾಗಿದ್ದವೋ, ಅವೇ ಈಗ ನಿನ್ನನ್ನು ಅಗಲಿದ್ದರಿಂದ ಅವನಿಗೆ ವಿಷರೂಪವಾಗಿ ಬಾಧಿಸುತ್ತವೆ. ಕೋಮಲೇ ನೀನು ಘೋರಾರಣ್ಯದಲ್ಲಿ ಅನಾಥಳಾಗಿ ಒಬ್ಬಳೇ ಕುಳಿತಿರುವದರಿಂದ ನಿನ್ನ ಗತಿಯು ಏನಾಗಿರಬಹುದು? ನಿನಗೆ ಮಾರ್ಗವೇನು? ನೀನು ಯಾರನ್ನು ಹೊಂದುವೆ? ನೀನು ಏಳುತಿಂಗಳ ಗರ್ಭಿಣಿಯಲ್ಲವೆ? ನನ್ನೊಡನೆ ಅರಣ್ಯದಲ್ಲಿ ಮಾರ್ಗಕ್ರಮಣ ಮಾಡುವಾಗ ಗರ್ಭಭಾರದಿಂದ ಬಳಕುತ್ತ ಒಮ್ಮೊಮ್ಮೆ ನನ್ನ ಕೈಯನ್ನು ಹಿಡಿದು ಮೆಲ್ಲ ಮೆಲ್ಲನೆ

ನಡೆಯುತ್ತಿದ್ದೆಯಲ್ಲ!! ಸುಂದರೀ, ಇನ್ನು ನಿನ್ನ ಮೋರೆಯನ್ನು ಯಾರು ಕೇಳಬೇಕು? ಸರ್ವಾಂಶದಿಂದ ನನ್ನನ್ನು ನಂಬಿ ಸರ್ವಸ್ವವನ್ನೂ ನನಗೆ ಒಪ್ಪಿಸಿ, ನನ್ನಾಧೀನಳಾದ ನಿನ್ನನ್ನು ಕಟಕನಂತೆ ಕೆಟ್ಟ ಗಿಳಿಯು ಆಶೆಯಿಂದ ನಾನು ಅಗಲಿಸಿಬಿಟ್ಟೆನಲ್ಲ! ಸುಕುಮಾರೀ, ಗರ್ಭಲಾಂಛನಗಳಿಂದ ಮನೋಹರವಾಗಿ ಒಪ್ಪುತ್ತಿದ್ದ ನಿನ್ನ ಮುಖಕಮಲವು ಇನ್ನು ನನ್ನ ಕಣ್ಣಿಗೆ ಹೇಗೆ ಬಿದ್ದೀತು? ನಿಷ್ಕಾರಣವಾಗಿ ನಿನ್ನನ್ನಗಲಿಸಿದ ನನ್ನ ಅವಿವೇಕ ಬುದ್ಧಿಗೆ ಧಿಕ್ಕಾರವಿರಲಿ!

ಮಿತ್ರಾ, ಸುಮತೀ, ಈ ಪ್ರಕಾರ ದುಃಖಿಸುತ್ತಿರುವಾಗ ನನ್ನ ಕುತ್ತಿಗೆಯ ಶಿರಗಳು ಬಿಗಿದು, ನೇತ್ರಗಳು ಅಶ್ರುಗಳಿಂದ ತುಂಬಿ ಮುಖದಿಂದ ಅಕ್ಷರಗಳೇ ಹೊರಡದಹಾಗಾಗಲು ದೊಡ್ಡ ಧ್ವನಿಯಿಂದ ನಾನು ಅಳಹತ್ತಿದೆನು. ಕೆಲಹೊತ್ತು ಮನದಣಿಯೇ ಅತ್ತ ಮೇಲೆ ನನ್ನ ಮನಸ್ಸು ನಿರಾಶೆಯನ್ನು ಹೊಂದಿ ಅಗ್ನಿ ಪ್ರವೇಶಕ್ಕೆ ಸಿದ್ಧವಾಯಿತು. ಕಡೆಯ ಸಾರೆ ನಾನು ಮಾತಾ– ಪಿತೃಗಳನ್ನೂ ಪ್ರಿಯ ಪದ್ಮನಯನೆಯನ್ನೂ, ಜಗದ್ರಕ್ಷಕನಾದ ಪರಮೇಶ್ವರನನ್ನೂ ನೆನಿಸಿ, ಯಜ್ಞೇಶ್ವರನಿಗೆ ಪ್ರದಕ್ಷಿಣೆ ಮಾಡಿ ಹಾರಿಕೊಳ್ಳುವ ಸಂಧಿಯಲ್ಲಿ ದೂರ ಯಾರೋ— ''ರಾಜಪುತ್ರಾ, ನಿಲ್ಲು ನಿಲ್ಲು ಮೂರ್ಖತನದಿಂದ ಇಂಥ ಸಾಹಸ ಕೃತ್ಯವನ್ನು ಮಾಡಬೇಡ. ಇಗೋ ನೋಡು ಬಂದೆನು;'' ಎಂದು ಉಚ್ಚ ಸ್ವರದಿಂದ ಒದರಿದ್ದು ನನ್ನ ಕಿವಿಗೆ ಬೀಳಲು, ನಾನು ಚಕಿತನಾಗಿ ನಾಲ್ಕೂಕಡೆಗೆ ನೋಡಹತ್ತಿದೆನು. ಆಗ ಒಬ್ಬ ಋಷಿಯು ಕೈ ಸನ್ನೆಯಿಂದ ''ನಿಲ್ಲು ನಿಲ್ಲು'' ಎಂದು ಹೇಳುತ್ತ ಲಗಬಗೆಯಿಂದ ಬರುವದು ನನ್ನ ಕಣ್ಣಿಗೆ ಬಿತ್ತು. ಅದರಿಂದ ಅಗ್ನಿಪ್ರವೇಶ ಮಾಡತೊಡಗಿದ ನಾನು, ಮೂರ್ಖತನವೇನಾಯಿತೆಂದು ತಿಳಿಯುವ ಕಾಂಕ್ಷೆಯಿಂದ ಋಷಿಯ ಮಾರ್ಗಪ್ರತೀಕ್ಷೆ ಮಾಡುತ್ತ ಸುಮ್ಮನೆ ನಿಂತುಕೊಂಡೆನು. ಋಷಿಯು ಸಮೀಪಕ್ಕೆ ಬರಲು ನಾನು ಆತನಿಗೆ ಸಾಷ್ಟಾಂಗ ನಮಸ್ಕಾರವನ್ನು ಮಾಡಿದೆನು. ಆಗ ಆತನು—''ರಾಜಪುತ್ರಾ, ಆಯುಷ್ಮಂತನಾಗು'' ಎಂದು ಆಶೀರ್ವದಿಸಿ, ತನ್ನ ವರದಹಸ್ತವನ್ನು ನನ್ನ ತಲೆಯಮೇಲೆ ಇಟ್ಟನು. ಆ ಮೇಲೆ ನಾನು ಮೇಲಕ್ಕೆ ಎದ್ದು ಕೈ ಜೋಡಿಸಿಕೊಂಡು ಎದುರಿಗೆ ನಿಂತುಕೊಂಡದ್ದನ್ನು ನೋಡಿ ಆ ಋಷಿಯು ನುಡಿದನೇನಂದರೆ—''ಪ್ರತಾಪಿಯೇ, ನೀನು ರಾಜಪುತ್ರನಿರುವೆಯೆಂಬದನ್ನೂ, ನಿನಗೆ ಯಾವ ಯಾವ ಸಂಕಟಗಳು ಒದಗಿದ ವೆಂಬದನ್ನೂ ನಾನು ಆಗಲೇ ನನ್ನ ಜ್ಞಾನ ದೃಷ್ಟಿಯಿಂದ ತಿಳಕೊಂಡೆನು. ಮಾತಾ– ಪಿತೃಗಳ, ಹಾಗು ಪ್ರಿಯಳ ವಿಯೋಗ ದುಃಖಕ್ಕಾಗಿ ನೀನು ಪ್ರಾಣಕೊಟ್ಟರೆ, ನಿನ್ನ ಹಿತವನ್ನು ಮಾತ್ರ ನೋಡಿದಂತೆ ಆಗುತ್ತದಲ್ಲದೆ ಅನ್ಯರ ದುಃಖದ ನಿವಾರಣದ ಕಡೆಗೆ ನೀನು ಮನಸ್ಸು ಮಾಡಿದಂತೆ ಆಗುವದಿಲ್ಲ. ಸ್ವಂತದ ಹಿತವನ್ನು ಮಾತ್ರ ಸಾಧಿಸಿಕೊಳ್ಳುವವರು ನೀಚ ವರ್ಗದ ಜನರೊಳಗೆ ಸೇರಿಸಲ್ಪಡುತ್ತಾರೆ. ಪ್ರಾಣತ್ಯಾಗವು ನಿನ್ನ ಮಾತಾ–ಪಿತೃಗಳ ಇಲ್ಲವೆ ನಿನ್ನ ಪ್ರಿಯಳ ಸಮಾಗಮನಿಮಿತ್ತವಾಗಲಿ ದರ್ಶನೋಪಾಯವಾಗಲಿ ಆಗುವದೋ? ಪ್ರಾಣಿಗಳ ಮಾರ್ಗಗಳು ಅವುಗಳ ಕರ್ಮಾನುಸಾರವಾಗಿ ಬೇರೆ ಬೇರೆಯಾಗಿರುವದರಿಂದ ಒಬ್ಬರ ನ್ನೊಬ್ಬರು ಹಿಂಬಾಲಿಸಲಾರರು. ಯಾವ ಪ್ರಯೋಜನವೂ ಇಲ್ಲದೆ ಇಂಥ ಸಾಹಸ ಮಾಡುವದು ಮೂರ್ಖತನವಲ್ಲವೆ? ಮನುಷ್ಯ ಶರೀರವು ಸುಲಭವಾಗಿ ದೊರೆಯತಕ್ಕದ್ದಲ್ಲ. ಅದನ್ನು ಪುಣ್ಯ ರೂಪವಾದ ದೊಡ್ಡ ಬೆಲೆಕೊಟ್ಟುಕೊಳ್ಳಬೇಕಾಗುತ್ತದೆ. ಮೋಕ್ಷವು ಈ

ಶರೀರದ ಯೋಗದಿಂದಲೇ ದೊರೆತರೆ ದೊರೆಯಬೇಕು. ಹೀಗಿರಲು, ದುರ್ಲಭವಾದ ನಿನ್ನ ಶರೀರದ ಮಹತ್ವವು ನಿನಗೆ ಏನೂ ತೋರುವದಿಲ್ಲವೆ? ಇತ್ತಬಾ. ಮೂರ್ಖನಂತೆ ಅಸಂಗತ ಕೆಲಸಮಾಡಬೇಡ. ಇನ್ನು ಸ್ವಲ್ಪ ಕಾಲದಲ್ಲಿಯೇ ನಿನ್ನ ಪ್ರಿಯಳ, ಹಾಗು ಮಾತಾ-ಪಿತೃಗಳ ಸಮಾಗಮ ಸುಖವು ನಿನಗೆ ದೊರೆಯುವದು. ನಾನು ಹೇಳುವ ಮಾತನ್ನು ಸ್ವಲ್ಪ ಲಕ್ಷಗೊಟ್ಟು ಕೇಳು ಯಾವ ಪ್ರಯತ್ನವನ್ನೂ ಮಾಡದೆ ಹೆಂಗಸಿನಂತೆ ಜೀವ ಕೊಡುವದು ಪೌರುಷವಲ್ಲ. ಯತ್ನ ಮಾಡಿಯೂ ಸಾಧ್ಯವಾಗದಿದ್ದರೆ, ಅಲ್ಲಿ ಯಾವ ದೋಷವೂ ಇಲ್ಲ. ಯತ್ನ ಮಾಡುತ್ತಿರುವದು ಪುರುಷ ಧರ್ಮವಾಗಿರುವದು.

ಈ ಪ್ರಕಾರ ಆ ಋಷಿಯು ನನಗೆ ಉಪದೇಶಮಾಡಿ, ಮತ್ತೆ ಹೇಳಿದನೇನಂದರೆ—''ರಾಜಪುತ್ರಾ, ನೀನು ಎರಡನೆಯ ವಿಚಾರವನ್ನು ಮಾಡದೆ, ಇಲ್ಲಿಂದ ನೆಟ್ಟಗೆ ಪೂರ್ವಾಭಿಮುಖವಾಗಿ ಮುಂದಕ್ಕೆ ಸಾಗು; ಸ್ವಲ್ಪ ದಿನಗಳಲ್ಲಿಯೇ ಒಂದು ಶಿವಾಲಯವು ನಿನಗೆ ಹತ್ತುವದು. ಅಲ್ಲಿ ಶಿವಾರಾಧನೆಯಲ್ಲಿ ಹತ್ತು ದಿನಗಳನ್ನು ಕಳೆಯುವದರೊಳಗಾಗಿ ಸುಮತಿಯೆಂಬ ಒಬ್ಬ ಬ್ರಾಹ್ಮಣನು ಅಲ್ಲಿಗೆ ಬರುವನು. ಅವನ ಸಹಾಯದಿಂದ ನಿನ್ನ ಪ್ರಿಯಳನ್ನು ಹುಡುಕುವ ಪ್ರಯತ್ನ ಮಾಡಿದರೆ ನಿಶ್ಚಯವಾಗಿ ಯಶಸ್ಸು ದೊರೆಯುವದು.'' ಮಿತ್ರಾ, ಋಷಿಯು ಈ ಪ್ರಕಾರ ಭವಿಷ್ಯವನ್ನು ಮುಖ್ಯವಾಗಿ ನನ್ನ ಪ್ರಿಯಳು ದೊರೆಯುವಳೆಂಬದನ್ನು ಹೇಳಿದ್ದರಿಂದ ನನ್ನ ಮನಸ್ಸು ಆಗಲೇ ಅಗ್ನಿಪ್ರವೇಶವನ್ನು ನಿರಾಕರಿಸಿತು. ಋಷಿಗೆ ನಾನು ಭಯ-ಭಕ್ತಿಯಿಂದ ಸಾಷ್ಟಾಂಗ ನಮಸ್ಕಾರ ಮಾಡಿ ಮೇಲಕ್ಕೆ ಎದ್ದು ನೋಡಲು ಆತನು ಅಲ್ಲಿ ಇದ್ದಿಲ್ಲ. ಒಮ್ಮಿಂದೊಮ್ಮೆ ಋಷಿಯು ಅದೃಶ್ಯನಾದದ್ದನ್ನು ನೋಡಿ ಆತನ ವಿಷಯವಾಗಿಯೂ ಆತನ ಭವಿಷ್ಯದ ವಿಷಯವಾಗಿಯೂ ನನ್ನಲ್ಲಿ ಪೂಜ್ಯಬುದ್ಧಿಯೂ ನಂಬಿಗೆಯೂ ಉಂಟಾದವು. ಕೂಡಲೆ ನಾನು ಪೂರ್ವದಿಕ್ಕನ್ನು ಹಿಡಿದು ಮಾರ್ಗಕ್ರಮಣ ಮಾಡಿ ಈ ಶಿವಾಲಯಕ್ಕೆ ಬಂದೆನು. ಹೇಳಿಕೆಯಂತೆ ಈವೊತ್ತೇ ಹತ್ತನೆಯ ದಿವಸವಿರಲು, ನೀನು ಬಂದಿರುತ್ತೀ; ಅಂದಬಳಿಕ ಋಷಿಯ ಮಾತಿನಂತೆ ಇನ್ನು ಸ್ವಲ್ಪ ದಿವಸದೊಳಗೆ ನನ್ನ ಪ್ರಿಯ ಪದ್ಮನಯನೆಯ ಶೋಧವು ಆಗಬಹುದಲ್ಲವೆ! ಅನ್ನಲು ಅದಕ್ಕೆ ಸುಮತಿಯು—''ರಾಜಪುತ್ರಾ, ಅದ್ಭುತವಾದ ನಿನ್ನ ಚರಿತ್ರವನ್ನು ಕೇಳಿ ನನಗೆ ಬಹಳ ಆಶ್ಚರ್ಯವಾಯಿತು. ನಿನಗೆ ಭವಿಷ್ಯವನ್ನು ಹೇಳಿದ ಋಷಿಯು ನನ್ನ ಹಾಗೂ ಪದ್ಮನಯನೆಯ ಗುರುವಾದ ಕಪಿಂಜಲ ಋಷಿಯೆಂಬದಕ್ಕೆ ಸಂದೇಹವಿಲ್ಲ, ಆ ಋಷಿಯು ನಿನಗೆ ಪ್ರತ್ಯಕ್ಷವಾಗಿ ಭವಿಷ್ಯವನ್ನು ಹೇಳಿದಂತೆ, ನನ್ನ ಸ್ವಪ್ನದಲ್ಲಿಯೂ ಬಂದು ಶಿವಾಲಯಕ್ಕೆ ಹೋಗಹೇಳಿದನು. ಇರಲಿ ಅರಣ್ಯದಲ್ಲಿ ಪದ್ಮನಯನೆಯ ವ್ಯವಸ್ಥೆಯು ಏನಾಯಿತೋ, ಆಕೆಯು ಎಷ್ಟು ಕಷ್ಟಗಳನ್ನನು ಭವಿಸುತ್ತಿರುವಳೋ, ಪರಮೇಶ್ವರನೇ ಬಲ್ಲ! ಆದಮಾತಿಗೆ ಸುಮ್ಮನೆ ವ್ಯಸನಪಟ್ಟು ಪ್ರಯೋಜನವೇನು? ಗುರುವಿನ ಮಾತಿನ ಮೇಲಿಂದ ಅವಳಿಗೆ ಮರಣದ ಭಯವಿಲ್ಲೆಂದು ನಾನು ನಂಬಿದ್ದೇನೆ. ಸದ್ಗುರುವು ರಾಜಪುತ್ರಿಯ ರಕ್ಷಣ ಮಾಡಲಿಕ್ಕೆ ಸಮರ್ಥನಿರಲು ನೀನೂ ನಾನೂ ಯಾಕೆ ಚಿಂತಿಸಬೇಕು? ಏಳು, ತಡವೇಕೆ? ರಾಜಪುತ್ರಿಯ ಶೋಧಕ್ಕಾಗಿ ಹೊರಡೋಣ'' ಅನ್ನಲು, ಅದಕ್ಕೆ ರಾಜಪುತ್ರನಾದ ಕಮಲಾಕ್ಷನು ಸಮ್ಮತಿಸಿದ್ದರಿಂದ ಅವರು ಪದ್ಮನಯನೆಯ ಶೋಧಕ್ಕೆ ಉಪಕ್ರಮಿಸಿದರು.

ದುಃಖ–ಪರಂಪರೆ

ವಾಚಕರೇ, ಯೋಗ್ಯಮಿತ್ರನಾದ ಸುಮತಿಯ ಸಹವಾಸದಿಂದ ಕೆಲಮಟ್ಟಿಗೆ ಸಮಾಧಾನವನ್ನು ಹೊಂದಿದ ಕಮಲಾಕ್ಷನನ್ನು ಬಿಟ್ಟು, ನಾವು ಅನಾಥಳಾದ ಪದ್ಮನಯನೆಯ ಸಮಾಚಾರವನ್ನು ತೆಗೆದುಕೊಳ್ಳೋಣ ನಡೆಯಿರಿ. ಅರಣ್ಯದಲ್ಲಿ ಮಲಗಿಕೊಂಡಿದ್ದ ಪದ್ಮನಯನೆಯು ಕೆಲವು ಹೊತ್ತಿನ ಮೇಲೆ ಎಚ್ಚತ್ತು ಕಣ್ದೆರೆದು ನೋಡಲು, ರಾಜಪುತ್ರನೂ, ಗಿಳಿಯೂ ಇದ್ದಿಲ್ಲ; ಅದರಿಂದ ಅವಳು ಮನದಲ್ಲಿ ಬೆದರಿದಳು. ಕೂಡಲೆ ಆಕೆಯು ಸುಮಧ್ಯಮೆಯನ್ನು ಎಬ್ಬಿಸಿ—"ಸುಮಧ್ಯಮೇ, ಗಿಳಿಯೂ, ಪ್ರಾಣದೊಡೆಯರೂ ಎಲ್ಲಿದ್ದಾರೆ," ಎಂದು ಕೇಳಲು ಅವಳು ಗಾಬರಿಯಾಗಿ ಮುಂದುಗಾಣದೆ ತತ್ತರಿಸುತ್ತ—"ಒಡೆಯಳೇ, ಈ ದಾಸಿಯಿಂದ ದೊಡ್ಡ ಅಪರಾಧವಾಗಿದೆ. ಏನು ಮಾಡಲಿ? ನಾನು ಮಾರ್ಗಶ್ರಮದಿಂದ ಬಳಲಿದವಳಾದ ಕಾರಣ ಈ ಬಿಸಿಲಿನ ತಾಪದಿಂದ ಕಣ್ಣಿಗೆ ಮಬ್ಬುಬಂದಂತಾಯಿತು. ಅದರಿಂದ ನೀನು ಮಲಗಿದ ಕೂಡಲೆ ನಾನೂ ಮಲಗಿಕೊಂಡೆನು. ನಾನು ಮಲಗುವಾಗ್ಗೆ ರಾಜಪುತ್ರರು ಯಾವದೋ ವಿಚಾರದಲ್ಲಿ ತೊಡಗಿದ್ದರು. ಮುಂದೆ ಅವರು ಏನು ಮಾಡಿದರು, ಎಲ್ಲಿಗೆ ಹೋದರು, ಎಂಬದು ನನಗೆ ಗೊತ್ತಿಲ್ಲ ನನ್ನಿಂದಾದ ಅಪರಾಧವನ್ನು ಕ್ಷಮಿಸಬೇಕು." ಎಂದು ಹೇಳಿಕೊಳ್ಳಲು ರಾಜಪುತ್ರಿಯು—"ಅವ್ವಾ, ಒಬ್ಬರನ್ನೊಬ್ಬರು ಶಿಕ್ಷಿಸುವದಕ್ಕೂ, ಒಬ್ಬರ ಅಪರಾಧವನ್ನೊಬ್ಬರು ಕ್ಷಮಿಸುವದಕ್ಕೂ ಮನುಷ್ಯರು ಸ್ವತಂತ್ರರಲ್ಲ, ಹೀಗಿರಲು, ನನಗೆ ನೀನೇಕೆ ಇಷ್ಟು ಹೇಳಿಕೊಳ್ಳುತ್ತೀ? ರಾಜಪುತ್ರರೊಬ್ಬರನ್ನೇ ಕುಳ್ಳಿರಿಸಿ, ನಾವು ಸುಖದಿಂದ ನಿದ್ದೆಮಾಡಿದ ಅಪರಾಧಕ್ಕಾಗಿ ದೇವರು ನಮ್ಮಿಬ್ಬರನ್ನೂ ಶಿಕ್ಷಿಸಿರುತ್ತಾನೆ." ಎಂದು ಹೇಳಿ, ಪದ್ಮನಯನೆಯು ಮನಸ್ಸಿನಲ್ಲಿ ವಿಚಾರ ಮಾಡಿದಳೇನಂದರೆ—"ರಾಜಪುತ್ರರು ಬಹಳ ಮಾಡಿ ಗಿಳಿಯನ್ನು ಹೊರಗೆ ಬಿಟ್ಟಿರಬಹುದು; ಅದು ಅವರ ಕೈಮೀರಿ ಹೋಗಿದ್ದರೂ ಹೋಗಿರಬಹುದು; ಆದರೆ ನನಗಿಂತಲೂ ಆ ಗಿಳಿಯೇನು ಅವರಿಗೆ ಹೆಚ್ಚಿನದಲ್ಲ. ಅರಣ್ಯದಲ್ಲಿ ನನ್ನನ್ನು ಬಿಟ್ಟು ಗಿಳಿಯ ಬೆನ್ನು ಹತ್ತಿಹೋಗಲಿಕ್ಕೆ ಅವರೇನು ತಿಳಿಗೇಡಿಗಳೇ? ಛೆ, ಛೆ, ಹೀಗೆ ಹೇಗಾದೀತು? ಹೊತ್ತುಮುಣುಗುವದರೊಳಗಾಗಿ ರಾಜಪುತ್ರರು ಎಲ್ಲಿದ್ದರೂ ಬಂದೇ ಬರುವರು. ಇಂಥ ಭಯಂಕರವಾದ ನಿರ್ಜನ ಪ್ರದೇಶದಲ್ಲಿ, ಅಬಲೆಯರಾದ ನಮ್ಮಿಬ್ಬರನ್ನೇ ಬಿಟ್ಟು ಹೋಗಲಿಕ್ಕೆ ಅವರ ಕಾಲುಗಳಾದರೂ ಹೇಗೆ ಎದ್ದಾವು? ನಾವು ಸುಮ್ಮನೆ ಮನಸ್ಸಿನಲ್ಲಿ ಇಲ್ಲದ್ದೊಂದು ಕುವಿಚಾರ ಮಾಡುತ್ತ ಕುಳಿತುಕೊಳ್ಳುವದು ಸರಿಯಲ್ಲ, ಸಮಾಧಾನದಿಂದ ಅವರ ಮಾರ್ಗಪ್ರತೀಕ್ಷೆ ಮಾಡುತ್ತ ಕುಳಿತುಕೊಳ್ಳಬೇಕು."

ಈ ಪ್ರಕಾರ ರಾಜಪುತ್ರಿಯು ಸಮಾಧಾನಮಾಡಿಕೊಂಡರೂ ಅವಳ ಜೀವಕ್ಕೆ ಸೊಗಸಾಗಲಿಲ್ಲ, ಹೊತ್ತು ಮುಣುಗುತ್ತ ಬಂದಹಾಗೆ ಅವಳ ಮನಸ್ಸು ಹೆಚ್ಚು ಹೆಚ್ಚು ಅಸಮಾಧಾನಪಡುತ್ತ ಹೋಯಿತು. ಹೊತ್ತು ಮುಳುಗಿ ಕತ್ತಲಾದರೂ ಕಮಲಾಕ್ಷನು ಬಾರದ್ದನು ನೋಡಿ ಅವಳು ದುಃಖದಿಂದ ಮೈಮರೆತು ಬಿದ್ದಳು. ಕೂಡಲೆ ಸುಮಧ್ಯಮೆಯು

ಶೀತೋಪಚಾರಗಳಿಂದ ಆಕೆಯನ್ನು ಎಚ್ಚರಗೊಳಿಸಿದಳು. ನಿಶ್ಶಬ್ದವಾದ ಅರಣ್ಯದಲ್ಲಿ ಕತ್ತಲೆಯು ಸದ್ದಿಲ್ಲದೆ ಹಬ್ಬಿ, ಒಬ್ಬರ ಮೋರೆಯು ಮತ್ತೊಬ್ಬರಿಗೆ ಕಾಣದಹಾಗಾಯಿತು! ಸುತ್ತುಮುತ್ತಲಿನ ಗಿಡಗಳಲ್ಲಿ ಒಂದು ಜಾತಿಯ ಹುಳಗಳು "ಜಿರ್ ಜಿರ್" ಎಂದು ಶಬ್ದ ಮಾಡಹತ್ತಿದವು! ಗೂಗೆಗಳ ಅಮಂಗಲವಾದ ಧ್ವನಿಗಳೂ, ಸಿಂಹ, ಹುಲಿ, ನರಿ ಮುಂತಾದ ವನ್ಯ ಮೃಗಗಳ ಭಯಂಕರವಾದ ಶಬ್ದಗಳೂ ಕೇಳಹತ್ತಿದವು! ಎಡ-ಬಲಗಳಲ್ಲಿ ಹುಳ-ಹುಪ್ಪಡಿಗಳು "ಸಳ ಸಳ" ಓಡಾಡಹತ್ತಿದವು! ತೊಗಲ ಬಾವುಲಿ, ಗೂಗೆ ಮುಂತಾದ ರಾತ್ರಿಯಲ್ಲಿ ಸಂಚಾರ ಮಾಡುವ ಪಕ್ಷಿಗಳೂ "ಫರ್ ಫರ್" ಎಂದು ರೆಕ್ಕೆಗಳ ಸಪ್ಪಳಮಾಡುತ್ತ ಒಂದು ಗಿಡದಿಂದ ಮತ್ತೊಂದು ಗಿಡಕ್ಕೆ ಹಾರಹತ್ತಿದವು. ವಾಚಕರೇ, ಇಂಥ ಪ್ರಸಂಗದಲ್ಲಿ ಭೀರುಗಳಾದ ಆ ಅಬಲೆಯರ ಸ್ಥಿತಿಯು ಏನಾಗಿರಬಹುದೆಂಬದನ್ನು ನೀವೇ ವಿಚಾರ ಮಾಡತಕ್ಕದ್ದು. ಅದನ್ನು ವರ್ಣಿಸುವ ಯೋಗ್ಯತೆಯು ನನಗಿಲ್ಲ. ಸುತ್ತುಮುತ್ತು ಏನಾದರೂ ಸಪ್ಪಳವಾದಕೂಡಲೇ ಭಯಭ್ರಾಂತರಾದ ಆ ಪ್ರಮದೆಯರು ಕಮಲಾಕ್ಷನೇ ಬಂದನೆಂದು ತಿಳಿದು ನಾಲ್ಕೂಕಡೆಗೆ ನೋಡಲು, ನಿರಾಶೆಪಟ್ಟು ಅವರ ಮನಸ್ಸು ಮತ್ತಿಷ್ಟು ನೋಯುವದು. ಭಯದ ಮೂಲಕ ಗಟ್ಟಿಯಾಗಿ ಉಸುರು ಸಹ ಬಿಡದೆ, ಆಕಳಕರುವು ಮುಚ್ಚಂಜೆಯಲ್ಲಿ ತನ್ನ ತಾಯಿಯ ಕಾಲ ಸಪ್ಪಳವನ್ನಾಲಿಸುವಂತೆ, ನಮ್ಮ ಪದ್ಮನಯನಾ-ಸುಮಧ್ಯಮೆಯರು ಕಮಲಾಕ್ಷನ ಕಾಲಸಪ್ಪಳವನ್ನಾಲಿಸುತ್ತಿದ್ದರು. ಇದರಿಂದ ಅವರಿಗೆ ಅರಣ್ಯದೊಳಗಿನ ಭಯಂಕರವಾದ ಸಣ್ಣ ದೊಡ್ಡ ಸಪ್ಪಳಗಳು ಸ್ಪಷ್ಟವಾಗಿ ಕೇಳಹತ್ತಲು, ಅವರು ಮತ್ತಿಷ್ಟು ಭಯಪಡುತ್ತಿದ್ದರಲ್ಲದೆ, ಹೆಚ್ಚಿನ ಪ್ರಯೋಜನವೇನೂ ಆಗುತ್ತಿದ್ದಿಲ್ಲ.

ಪದ್ಮನಯನೆಯು ಕಡೆಗೆ ನಿರಾಶೆಪಟ್ಟು ಭಯವನ್ನು ಬಿಟ್ಟು ದುಃಖದಿಂದ ಆಕ್ರೋಶ ಮಾಡಹತ್ತಿದಳು. ಆಗ ಸುಮಧ್ಯಮೆಯು ಅವಳನ್ನು ಎದೆಗವಚಿಕೊಂಡು ಸಮಾಧಾನ ಮಾಡತೊಡಗಲು ಪದ್ಮನಯನೆಯು—"ಸುಮಧ್ಯಮೇ ಹತಭಾಗ್ಯಳಾದ ಈ ಪದ್ಮನಯನೆಗೆ ಇಷ್ಟು ಯಾಕೆ ಉಪಚಾರಮಾಡುತ್ತೀ? ದುಃಖದಿಂದ ಕೊರಗುತ್ತ ಸಾಯುವದಕ್ಕಿಂತ ಒಮ್ಮೆಲೆ ಪ್ರಾಣ ಹೋದರೆ ಲೇಸಾಗುವದು. ನನ್ನ ದುರ್ದೈವವನ್ನು ಎಷ್ಟೆಂತ ವರ್ಣಿಸಲಿ! ನನ್ನ ಘೋರವಾದ ದುಃಖವು ರಾಜಪುತ್ರರಿಂದ ದೂರವಾಗಿ ನಾನು ಅವರ ಸಮಾಗಮ ಸುಖವನ್ನನು ಭವಿಸುತ್ತಿರುವಷ್ಟರಲ್ಲಿಯೇ, ನನ್ನ ಕೆಟ್ಟದೈವವು ಅದಕ್ಕೆ ವಿಘ್ನ ತಂದಿತು. ಇಲ್ಲ; ಸುಖಾನುಭವವೇ ನನ್ನ ದೈವದಲ್ಲಿಲ್ಲ. ನನ್ನ ಮೃತ್ಯುರೂಪವಾದ ಗಿಳಿಯು ಎಲ್ಲಿ ಕುಳಿತಿತ್ತೋ, ಅದರ ಮೇಲೆ ನನ್ನ ಪ್ರೇಮವು ಅಷ್ಟು ಯಾಕೆ ಬೆಳೆದಿತ್ತೋ ತಿಳಿಯದು. ಅಯ್ಯೋ! ಎಷ್ಟು ಜನರು ಗಿಳಿಯನ್ನು ಸಾಕುವದಿಲ್ಲ? ಅವರಿಗೆಲ್ಲ ಇದೇ ಪ್ರಕಾರದ ಭವಣೆಯು ಆಗುತ್ತದೇನು? ಗಿಳಿಯೇನು ಮಾಡೀತು? ನನ್ನ ಪ್ರಾರಬ್ಧವು! (ದೈನ್ಯದೊಡನೆ ಏಕ ದೃಷ್ಟಿಯಿಂದ ನೋಡಿ ಕಣ್ಣೀರು ಸುರಿಸುತ್ತ)—ಅಯ್ಯೋ ದೈವವೇ! ಸವಿ ಮಾತುಗಳಿಂದ ಮನಸ್ಸನ್ನು ಆನಂದಗೊಳಿಸುವ ಕೆಟ್ಟ ಗಿಳಿಗಾಗಿ, ಎಲ್ಲ ರೀತಿಯಿಂದಲೂ ಮನಸ್ಸನ್ನು ಆನಂದಗೊಳಿಸುವ ರಾಜಪುತ್ರರೆಂಬ ಅರಗಿಳಿಯನ್ನು ಕಳಕೊಂಡೆನಲ್ಲ!! ಇನ್ನು ಮುಂದೆ ನನ್ನ ಗತಿಯೇನು? ಎಷ್ಟು ಮಾಡಿದರೂ ನನ್ನ

ಸ್ಥಿತಿಯು ಮೊದಲಿನ ಮನೆಗೇ ಬಂದಿತು. ಹಾ! ರಾಜಪುತ್ರಾ, ಮನಮೋಹನಾ, ಈ ಅನಾಥಳ ಗತಿಯನ್ನು ಚಿಂತಿಸದೆ ಕಠಿಣ ಹೃದಯರಂತೆ ನನ್ನನ್ನು ಅಗಲಿ ಹೋದದ್ದು ಯೋಗ್ಯವೆ? ನನ್ನ ಸಲುವಾಗಿ ನೀನು ಬಹಳ ಕಷ್ಟಪಟ್ಟು, ದೊಡ್ಡ ದೊಡ್ಡ ಸಂಕಟಗಳಿಂದ ಮುಕ್ತನಾದೆ; ಆದರೆ ಉಪಯೋಗವೇನು? ಕಡೆಗೂ ಈ ನೀಚಳಾದ ಪದ್ಮನಯನೆಯು ನಿನಗೆ ದುಃಖ ಕೊಡುವದಕ್ಕೆ ಟೊಂಕಕಟ್ಟಿಕೊಂಡು ನಿಂತಿದ್ದಾಳೆ; ನೀನಾದರೂ ಏನುಮಾಡಿ. (ದುಃಖದ ಆವೇಶದಿಂದ) ಛೇ, ಅಂಥ ಕ್ರೂರನಾದ ಮೇಘನಾದ ದೈತ್ಯನ ಸಾಮರ್ಥ್ಯವನ್ನು ಲೆಕ್ಕಿಸದ ವೀರನು ನೀನು, ನನ್ನಂಥ ಅಬಲೆಯ ಪ್ರಯತ್ನಕ್ಕೆ ಒಳಗಾಗುತ್ತೀಯಾ? ಅರಗಳಿಗೆಯಾದರೂ ನನ್ನನ್ನು ಅಗಲದವನು ಇಷ್ಟು ಹೊತ್ತಿನವರೆಗೂ ಯಾಕೆ ತಡೆದಿರುತ್ತೀ? ಮರೆಗೆ ನಿಂತು ನನ್ನ ಉಪಹಾಸ ಮಾಡಬೇಕೆಂದು ನೀನು ಯೋಚಿಸಿದ್ದರೆ ನಿನ್ನ ಕೋರಿಕೆಯು ನಿಶ್ಚಯವಾಗಿ ಕೈಗೂಡಿತು. ನೀನು ಇಲ್ಲದ್ದರಿಂದ ನಾನು ಭ್ರಮಿಷ್ಠಳೂ, ಶೋಕಮಗ್ನಳೂ ಆಗುವುದೇ ನಿಜವು. ಹಿಗ್ಗುವ ಪದಾರ್ಥವನ್ನು ಹರಿಯುವವರೆಗೆ ಜಗ್ಗಬಾರದು. ಸಾಕು; ದುಃಖಾಗ್ನಿಯು ಸಂತಾಪಗೊಳಿಸುತ್ತದೆ. ನಿನ್ನ ದರ್ಶನ ರೂಪವಾದ ಜಲದಿಂದ ಅದನ್ನು ಶಾಂತಮಾಡು. ಅಯ್ಯೋ! ಪ್ರೀಯಾ, ಕತ್ತಲಾಯಿತು ಇದೇ ಹೊತ್ತಿನಲ್ಲಿ ದಿನಾಲು ನಾನೂ ನೀನೂ ಕೂಡಿ, ಗುಹೆಯೊಳಗಿದ್ದ ಮಂದಿರದಲ್ಲಿ ತರತರದ ವಾದ್ಯಗಳನ್ನು ಬಾರಿಸುತ್ತ ವಿನೋದಮಾಡುತ್ತ ಆನಂದದಿಂದ ಕಾಲಕಳೆಯುತ್ತಿದ್ದಿಲ್ಲವೆ? ಹಾ! ಪರಮೇಶ್ವರಾ, ಈ ಅನಾಥಳ ಮೇಲೆ ಇಷ್ಟು ಯಾಕೆ ಮುನಿದೆ!

ಈ ಪ್ರಕಾರ ರಾಜಪುತ್ರಿಯು, ಶೋಕಮಾಡುತ್ತ ಕುಳಿತಿರಲು ಮಧ್ಯರಾತ್ರಿಯಾಯಿತು. ಅಷ್ಟರಲ್ಲಿ ಒಂದು ಭಯಂಕರವಾದ ಸರ್ಪವು ಭೋರ್ಗರೆಯುತ್ತ ಅವಳ ಸಮೀಪಕ್ಕೆ ಬಂದಿತು. ಆದರೆ ಅವಳು ದುಃಖದಿಂದ ಜೀವದ ಆಶೆ ಬಿಟ್ಟವಳಾದ ಕಾರಣ, ತನ್ನಲ್ಲಿ ಧನುರ್ಬಾಣಗಳೂ, ಹೊಡೆಯುವ ಸಾಮರ್ಥ್ಯವೂ ಇದ್ದರೂ ಮನಃಪೂರ್ವಕವಾಗಿಯೇ ಆ ಸರ್ಪವನ್ನು ಬರಗೊಟ್ಟಳು. ಸರ್ಪದ ಪ್ರಚಂಡವಾದ ಫೂತ್ಕಾರವೂ ಕೆಂಡದಂತೆ ಹೊಳೆಯುತ್ತಿದ್ದ ಅದರ ಕಣ್ಣುಗಳೂ ಸುಮಧ್ಯಮೆಯನ್ನು ಮೂರ್ಛೆಗೊಳಿಸಿದವು. ಸರ್ಪವು ರಾಜಪುತ್ರಿಯನ್ನು ತಡವದೆ ಸಮೀಪದಲ್ಲಿ ಮೈ ಮರೆತು ಬಿದ್ದಿದ್ದ ಸುಮಧ್ಯಮೆಯನ್ನು ಮೆಲ್ಲ ಮೆಲ್ಲನೆ ನುಂಗಹತ್ತಿತು. ಪದ್ಮನಯನೆಯು ಪತಿಧ್ಯಾನದಲ್ಲಿ ಮಗ್ನಳಾಗಿದ್ದದ್ದರಿಂದ ತನ್ನ ದಾಸಿಯು ಪ್ರಾಣಸಂಕಟದಲ್ಲಿ ಬಿದ್ದದ್ದು ಅವಳ ಲಕ್ಷಕ್ಕೆ ಬರಲಿಲ್ಲ. ಕಡೆಯಲ್ಲಿ ಸರ್ಪವು ಸುಮಧ್ಯಮೆಯನ್ನು ಪೂರ್ಣವಾಗಿ ನುಂಗಿ, ಒಂದು ಮರಕ್ಕೆ ಸುತ್ತುಹಾಕಲು, ಅದರ ಹೊಟ್ಟೆಯಲ್ಲಿ ಸುಮಧ್ಯಮೆಯ ಎಲವುಗಳು ಮುರಿದು ಚೂರು–ಚೂರಾದವು. ಆ ಮೇಲೆ ಸರ್ಪವು ಭಯಂಕರವಾದ ಧ್ವನಿಮಾಡುತ್ತ ಆ ಎಲವುಗಳನ್ನು ಕಾರಹತ್ತಲು, ರಾಜಪುತ್ರಿಯು ಬೆದರಿ ಸುತ್ತು ಮುತ್ತು ನೋಡಹತ್ತಿದಳು. ಆಗ ತನ್ನ ದಾಸಿಯು ಎಲ್ಲಿಯೂ ಕಣ್ಣಿಗೆ ಬೀಳದ್ದನ್ನೂ ಸರ್ಪದ ಬಾಯಿಂದ ಹೊರಬೀಳುವ ಶುಭ್ರವಾದ ಎಲವುಗಳನ್ನೂ ನೋಡಿ ಸುಮಧ್ಯಮೆಯು ಸರ್ಪಕ್ಕೆ ಆಹುತಿಯಾದಳೆಂದು ತಿಳಿದು ಆ ರಾಜಪುತ್ರಿಯು ಬಹಳ ವ್ಯಸನಪಟ್ಟಳು. ಅವಳು ದೇವರನ್ನು ಕುರಿತು— ''ಪರಮೇಶ್ವರಾ, ಪ್ರಾಣಕ್ಕಿಂತಲೂ ಅತ್ಯಧಿಕನಾದ ಪತಿಯನ್ನೂ, ಅತಿ ಪ್ರಿಯಳಾದ

ದಾಸಿಯನ್ನೂ ಕಳಕೊಂಡು, ಈ ಚಾಂಡಾಲೆಯಾದ ಪದ್ಮನಯನೆಯು ಜೀವದಿಂದಿರುವದು ನಿನಗೆ ನ್ಯಾಯವಾಗಿ ತೋರುತ್ತದೋ? ಬೇಗನೆ ನನ್ನನ್ನು ಈ ಶೋಕ ಸಾಗರದಿಂದ ಮುಕ್ತಳಾಗ ಮಾಡು. ಇನ್ನೂ ನಾನು ಯಾವ ಯಾವ ಸಂಕಟಗಳನ್ನನುಭವಿಸಬೇಕಾಗಿದೆಯೆಂಬದನ್ನು ನೀನೇ ಬಲ್ಲೆ, ನನ್ನ ಸುಖವು ಹಾಳಾಯಿತೆಂದು ನಾನು ಇಷ್ಟು ಶೋಕಿಸುವದಿಲ್ಲ, ನಿನ್ನ ಪ್ರಸಾದದಿಂದ ದೊರೆತಿದ್ದ ದುರ್ಲಭನಾದ ಪತಿಯನ್ನೂ ವಿಶ್ವಾಸದಿಂದ ಸೇವಿಸದೆ, ಆತನನ್ನು ಹಲವುತರದ ಸಂಕಟಗಳಿಗೆ ಗುರಿಮಾಡಿ, ಪರಿಪರಿಯಿಂದ ಬಳಲಿಸಿ, ಕಡೆಯಲ್ಲಿ ಕೆಟ್ಟ ಗಿಳಿಯ ನೆವದಿಂದ ಆತನನ್ನು ದೇಶಭ್ರಷ್ಟನಾಗಮಾಡಿದ್ದಕ್ಕಾಗಿ ದುಃಖಿಸುತ್ತೇನೆ.''

ಈ ಪ್ರಕಾರ ರಾಜಪುತ್ರಿಯು ದೇವರಿಗೆ ಮೊರೆಯಿಟ್ಟಳು! ದುಃಖ ವೇಗವನ್ನು ತಾಳಲಾರದೆ ಅವಳು ಮನದಣಿಯೆ ಅತ್ತು ದುಃಖವನ್ನು ಕೆಲಮಟ್ಟಿಗೆ ಕಡಿಮೆ ಮಾಡಿಕೊಂಡಳು. ''ದೈವವು ಪ್ರತಿಕೂಲವಾಯಿತೆಂದರೆ ಸಂಕಟಗಳು, ಮೇಲಿಂದ ಮೇಲೆ ಒದಗುತ್ತವೆ.'' ಪದ್ಮನಯನೆಯು ಈ ಪ್ರಕಾರ ಶೋಕ ಮಾಡುತ್ತ ಒಂದು ಬಂಡೆಯ ಮೇಲೆ ಕುಳಿತಿರಲು, ಆ ಬಂಡೆಯ ಕೆಳಗೆ ಮತ್ತೊಂದು ಹಾವು ಮಲಗಿತ್ತು, ಅದನ್ನು ಅವಳು ತನ್ನ ದುಃಖದಲ್ಲಿ ನೋಡಿದ್ದಿಲ್ಲ ರಾಜಪುತ್ರಿಯ ಇಳಿಬಿದ್ದ ಕಾಲನ್ನು, ಸರ್ಪವು ಹಿಡಿದು ಮೆಲ್ಲನೆ ನುಂಗಹತ್ತಿತು. ರಾಜಪುತ್ರಿಯು ಗಾಬರಿಯಾಗಿ ಕೆಳಗೆ ಬಗ್ಗಿ ನೋಡಲು, ಬೃಹದ್ದೇಹಿಯಾದ ಸರ್ಪವು ಅವಳ ಕಣ್ಣಿಗೆ ಬಿತ್ತು ಎಂಥ ದುಃಖದಲ್ಲಿಯೇ ಆಗಲಿ, ಪ್ರಾಣಿಗಳಿಗೆ ಜೀವದ ಮೇಲಿನ ಬಲವಾದ ಆಶೆಯು ತಪ್ಪುವದಿಲ್ಲ, ಅದರಂತೆ ಅನಾಥಳಾದ ಪದ್ಮನಯನೆಯು ಅಂಥ ದುಸ್ಥಿತಿ ಯಲ್ಲಾದರೂ ಮೋರೆಯನ್ನು ಮೇಲಕ್ಕೆ ಎತ್ತಿ—''ದೇವರೆ, ಈಗ ನನ್ನನ್ನು ಈ ಸಂಕಟದಿಂದ ಪಾರಮಾಡಲಿಕ್ಕೆ ನಿನ್ನ ಹೊರತು ಯಾರೂ ಇಲ್ಲ'' ಎಂದು ಪ್ರಾರ್ಥಿಸಿದಳು; ಆದರೆ ದುಃಸಹವಾದ ದುಃಖವು ಅವಳ ಮನಸ್ಸನ್ನು ಕೂಡಲೆ ತಿರುಗಿಸಿತು. ಆಗ ರಾಜಪುತ್ರಿಯು ತನ್ನ ಮನಸ್ಸಿನಲ್ಲಿ—''ನಾನು ಎಂಥ ತಿಳಿಗೇಡಿಯು! ಈ ಅಪರಿಹಾರ್ಯವಾದ ಸಂಕಟದೊಳಗಿಂದ ನಾನು ಪಾರಾಗಬಹುದೆ? ಒಂದು ವೇಳೆ ಪಾರಾದರೂ ಈ ಸ್ಥಿತಿಯಲ್ಲಿ ನಾನು ಬದುಕಿ ಮಾಡುವದೇನು? ಮರಣದ ಹೊರತು ದುಃಖ ನಿವಾರಣೋಪಾಯವು ನನಗೆ ಮತ್ತೊಂದಿಲ್ಲ, ಮರಣವು ಪ್ರತ್ಯಕ್ಷವಾಗಿ ಬಾಯ್ದೆರೆದು ನಿಂತಿರುತ್ತದೆ ಹೀಗಿರಲು, ನಾನು ದೇವರಿಗೆ ಮೊರೆಯಿಟ್ಟದ್ದು ಹುಚ್ಚತನವು ನನ್ನ ಕರ್ಮಕ್ಕೆ ದೇವರೇನು ಮಾಡುವನು? ಯಾರೂ ಗಿಳಿಯನ್ನು ಸಾಕುವದಿಲ್ಲವೇ? ನನ್ನ ತಂದೆಯ ಮನೆಯಲ್ಲಿ ಎಷ್ಟೋ ಗಿಳಿಗಳು ಇರುತ್ತವೆ; ಆದರೆ ಅವುಗಳಲ್ಲಿ ಒಂದಾದರೂ ಇಂಥ ದುರ್ಘಟ ಪ್ರಸಂಗವನ್ನು ತಂದಿಲ್ಲ, ಇದಲ್ಲದೆ ಪಕ್ಷಿಗಳಿಗೆ ವಿಚಾರ ಶಕ್ತಿಯೂ ಸ್ವತಂತ್ರವಾಗಿ ಮನುಷ್ಯರಂತೆ ಮಾತಾಡುವ ಸಾಮರ್ಥ್ಯವೂ ಇದ್ದದ್ದನ್ನು ನಾನು ಎಲ್ಲಿಯೂ ಕೇಳಿಲ್ಲ, ಇದರಿಂದ ವಿಚಾರ ಮಾಡಲು, ನಾನು ಸಾಕಿದ್ದು ಗಿಳಿಯಲ್ಲ; ನನ್ನ ದುರ್ದೈವವು ಗಿಳಿಯ ರೂಪದಿಂದ ನನ್ನಲ್ಲಿ ವಾಸಮಾಡಿ ಕಡೆಗೆ ನನಗೆ ಈ ಭವಣೆಯನ್ನುಂಟು ಮಾಡಿತು.'' ಈ ಪ್ರಕಾರ ರಾಜಪುತ್ರಿಯು ವಿಚಾರಮಾಡಿ, ಅಜಗರವನ್ನು ಕುರಿತು— ''ಉರಗೇಂದ್ರನೇ, ನಿನಗೆ ನಾನು ಪ್ರತಿಬಂಧ ಮಾಡುವದಿಲ್ಲ, ಯಥೇಚ್ಛವಾಗಿ ನನ್ನನ್ನು

ನುಂಗಿಬಿಡು, ನಾನು ನಿನ್ನ ಹೊಟ್ಟೆಯಲ್ಲಿ ಸಮಾಧಾನದಿಂದ ಜೀವ ಬಿಡುವೆನು ದಯಮಾಡಿ ಬೇಗನೆ ನನ್ನನ್ನು ನುಂಗು'' ಈ ಪ್ರಕಾರ ಪದ್ಮನಯನೆಯು, ತನಗೆ ಒದಗಿದ ಸಂಕಟವನ್ನು ನೀಗುವದಕ್ಕಾಗಿ ಮರಣಕ್ಕೆ ಸಿದ್ಧಳಾಗಿ ಅಜಗರನ ಬಾಯೊಳಗೆ ಕಾಲು ಸಡಿಲು ಬಿಟ್ಟು ಕಣ್ಣು ಮುಚ್ಚಿಕೊಂಡು ಪತಿಯನ್ನು ನೆನಿಸುತ್ತ ಸಮಾಧಾನದಿಂದ ಕುಳಿತುಕೊಂಡಳು. ಆದರೆ ಪರಮೇಶ್ವರನಿಗೆ ಅವಳ ಮರಣವು ಮಾನ್ಯವಾಗಲಿಲ್ಲೆಂದು ತೋರುತ್ತದೆ. ಅಷ್ಟರಲ್ಲಿ ಒಬ್ಬ ರಾಕ್ಷಸನು ಅಜಗರವನ್ನು ಕೊಂದು, ಪದ್ಮನಯನೆಯನ್ನು ಸಾವಿನ ದವಡೆಯೊಳಗಿಂದ ಬಿಡಿಸಿದನು.

ರಾಜಪುತ್ರಿಯು ತನ್ನ ಕಾಲ ಎಳತವು ಒಮ್ಮೆಲೆ ನಿಂತದ್ದನ್ನು ತಿಳಿದು ಬೆರಗಾಗಿ ಕಣ್ದೆರೆದು ನೋಡಲು, ಮೇಘನಾದನನ್ನು ಹೋಲುವ ಒಬ್ಬ ರಾಕ್ಷಸನು ಅವಳ ಕಣ್ಣಿಗೆ ಬಿದ್ದನು. ಕೂಡಲೆ ಅವಳು ಮೇಘನಾದನೇ ಬಂದನೆಂಬ ಭಯದಿಂದ ಮೂರ್ಛೆಹೊಂದಿದಳು. ಕೆಲವು ಹೊತ್ತಿನ ಮೇಲೆ ಪದ್ಮನಯನೆಯು ಚೇತರಿಸಿ ಎದ್ದು ಕುಳಿತುಕೊಳ್ಳಲು, ರಾಕ್ಷಸನು ಕೋಪಾವಿಷ್ಟನಾಗಿ ನುಡಿದನೇನಂದರೆ—''ವಿಶ್ವಾಸಘಾತಕಳೇ, ನನ್ನ ಅಣ್ಣನನ್ನು ಮೋಸದಿಂದ ಕೊಲ್ಲಿಸಿ ನೀನು ನಿರಾತಂಕಳಾದೆಯಾ? ಇನ್ನು ಹೇಗೆ ನನ್ನ ಕೈಯೊಳಗಿಂದ ಪಾರಾಗಿ ಹೋಗುತ್ತೀ ಹೋಗು. ನಿನಗೆ ಹಲವು ತರದ ಸುಖಗಳನ್ನಿತ್ತ ನಿನ್ನ ಪತಿಯಾದ ಆ ನೀಚ ಕಮಲಾಕ್ಷನ ಕೈಯಿಂದ ನನ್ನನ್ನು ಕೊಲ್ಲಿಸು. ಉದ್ಧಟಳೇ, ನಿನ್ನ ಪ್ರಾಣವನ್ನು ಇಷ್ಟರಲ್ಲಿ ಹರಣ ಮಾಡುತ್ತಿದ್ದೆನು. ಆದರೆ ನಿನ್ನ ಅಪರಾಧಕ್ಕೆ ಅದು ಸರಿಯಾದ ಶಿಕ್ಷೆಯಾಗುವದಿಲ್ಲೆಂದು ತಿಳಿದುಬಿಟ್ಟಿದ್ದೇನೆ. ನನ್ನ ಅಣ್ಣನಾದ ಮೇಘನಾದನು ನಿನ್ನನ್ನು ತನ್ನ ಪ್ರಾಣಕ್ಕಿಂತಲೂ ಹೆಚ್ಚೆಂದು ತಿಳಿದು, ನೀನು ಬಯಸಿದ ಬಯಕೆಗಳನ್ನೆಲ್ಲ ಪೂರ್ಣ ಮಾಡುತ್ತಿರಲು, ಅವನಿಗೆ ಅಪಾಯಕರವಾದ ಬಯಕೆಗಳನ್ನು ಬಯಸಿದೆಯಾ? ಒಳ್ಳೇದು, ನಿನ್ನ ವಿಶ್ವಾಸಘಾತಕತನಕ್ಕೂ, ಕ್ರೂರತನಕ್ಕೂ ಯೋಗ್ಯವಾದ ಶಿಕ್ಷೆಯನ್ನು ಮಾಡುವದಕ್ಕೆ ಮೇಘನಾದನ ತಮ್ಮನಾದ ಈ ಸಿಂಹನಾದನು ಸಮರ್ಥನಿದ್ದಾನೆ. ನೀನು ನನ್ನ ಅಣ್ಣನಿಗೆ ಮಾಡಿದ ಮೋಸದ ಮುಯ್ಯಕ್ಕಾಗಿ ನಾನು ಗಿಳಿಯಾಗಿ ನಿನ್ನನ್ನು ಮೋಸಗೊಳಿಸಿದೆನು; ಸುಮಧ್ಯಮೆಯ ಹೊರತು ಉಳಿದ ದಾಸಿಯರನ್ನೂ, ನಿಮ್ಮ ಕುದುರೆಗಳನ್ನೂ ಸ್ಥಾನಭ್ರಷ್ಟ ಮಾಡಿಸಿದೆನು. ನಮ್ಮ ರಾಕ್ಷಸಕುಲಕ್ಕೆ ಮೃತ್ಯುಸ್ವರೂಪವಾಗಿದ್ದ ಈ ಪ್ರಚಂಡಧನಸ್ಸನ್ನು ಅಪಹರಿಸಿದೆನು. ಆ ಧನಸ್ಸಿನ ಭಯದಿಂದಲೇ ನಾನು ಇಷ್ಟು ಕಷ್ಟಪಡಬೇಕಾಯಿತು. ನೀನು ಮನಃಪೂರ್ವಕವಾಗಿ ಕೊಟ್ಟ ಹೊರತು, ಅಥವಾ ಉದಾಸೀನ ಭಾವದಿಂದ ಅದನ್ನು ಚಲ್ಲಿಕೊಟ್ಟ ಹೊರತು ಅದು ನನ್ನ ಕೈಸೇರುವ ಹಾಗಿದ್ದಿಲ್ಲ. ಇಗೋ ನೋಡು ಪತಿಯ ವಿಯೋಗ ದುಃಖದಿಂದ ನೀನು ಅದನ್ನು ಚಲ್ಲಿಕೊಟ್ಟಿರಲು ನಾನು ಸ್ವೀಕರಿಸಿದ್ದೇನೆ. ಇನ್ನುಮೇಲೆ ನಿನ್ನ ವಿಷಯವಾಗಿ ನನಗೆ ಎಳ್ಳಷ್ಟು ಭಯವಿಲ್ಲ ನಿನ್ನ ಪ್ರಾಣಪ್ರಿಯನಾದ ಕಮಲಾಕ್ಷನನ್ನು ಈ ಮೊದಲೇ ಕೊಂದೆನು. ಇನ್ನುಮೇಲೆ ನನ್ನ ನಿಜರೂಪದಿಂದ ನಿನ್ನನ್ನು ಹಲವು ಬಗೆಯಾಗಿ ಪೀಡಿಸಿ, ಮಾನಭಂಗ ಮಾಡಿ, ಅಸಹ್ಯ ವೇದನೆಗಳನ್ನನುಭವಿಸಹಚ್ಚುತ್ತೇನೆ. ಆದರೆ ಈ ಎಲ್ಲ ಕೃತಿಗಳು ಶೋಣಿತಪುರದಲ್ಲಿ ಎಲ್ಲರ

ಸಮಕ್ಷಮದಲ್ಲಿ ಆಗಬೇಕಾಗಿರುವದರಿಂದ ಇಲ್ಲಿ ನಾನು ನಿನ್ನ ಕೂದಲು ಸಹ ಕೊಂಕಿಸುವದಿಲ್ಲ.'' ಎಂದು ಹೇಳಿ ಸಿಂಹನಾದನು ಪದ್ಮನಯನೆಯನ್ನು ಬಲಾತ್ಕಾರದಿಂದ ಹರಣ ಮಾಡಿ, ಆಕಾಶದಲ್ಲಿ ಉಡ್ಡಾಣ ಮಾಡಿದನು. ಆಗ ರಾಜಪುತ್ರಿಗೆ ಒದಗಿದ ದುಃಖವನ್ನು ಪರಮೇಶ್ವರನೇ ಬಲ್ಲ. ಅವಳು ತನ್ನ ಮರಣಕ್ಕಾಗಿ ವ್ಯಸನಪಡುತ್ತಿದ್ದಿಲ್ಲ. ಮಾನಭಂಗ ಮಾಡುವೆನೆಂದೂ, ಕಮಲಾಕ್ಷನನ್ನು ಕೊಂದೆನೆಂದೂ ಸಿಂಹನಾದನು ಆಡಿದ್ದನ್ನು ಕೇಳಿ, ಅವಳಿಗೆ ಬಹಳ ವ್ಯಸನವಾಯಿತು. ಅವಳು ತನಗೆ ಮುಂದೆ ಒದಗಬಹುದಾದ ದುಃಖದ ಕಲ್ಪನೆ ಮಾಡಿ, ಮನದಲ್ಲಿ ಮರಗುತ್ತ ಕಣ್ಣೀರು ಸುರಿಸಹತ್ತಿದಳು. ಆಗ ಕಮಲಾಕ್ಷನೂ, ಸುಮಧ್ಯಮೆಯೂ ರಾಜಪುತ್ರಿಯ ಕಣ್ಣಮುಂದೆ ಕಟ್ಟಿದಂತೆ ಆಗಿ, ಅವಳ ಶೋಕವು ವೃದ್ಧಿಂಗತವಾಯಿತು.

ಈ ಪ್ರಕಾರ ಸಿಂಹನಾದನು ಪದ್ಮನಯನೆಯನ್ನು ನಿಷ್ಕರುಣನಾಗಿ ಬಲಾತ್ಕಾರದಿಂದ ಹರಣಮಾಡಿ ಒಯ್ಯುತ್ತಿರಲು ಮಾರ್ಗದಲ್ಲಿ ಉಗ್ರದಂಷ್ಟ್ರನೆಂಬ ಮತ್ತೊಬ್ಬ ರಾಕ್ಷಸನು ಅವನಿಗೆ ಎದುರಾದನು. ಉಗ್ರದಂಷ್ಟ್ರನು ಸಿಂಹನಾದನ ಓರಿಗೆಯವನಿದ್ದು, ಅವರಿಬ್ಬರೊಳಗೂ ತಮ್ಮ ತಮ್ಮ ಸಾಮರ್ಥ್ಯದ ಸಂಬಂಧದ ವೈರವು ಬಹಳ ದಿವಸಗಳಿಂದ ಇತ್ತು. ಅವರು ಎಷ್ಟೋಸಾರೆ ತಮ್ಮ ತಮ್ಮೊಳಗೆ ಯುದ್ಧ ಮಾಡಿದ್ದರೂ ಯಾವನೂ ಪರಾಜಿತನಾಗಿದ್ದಿಲ್ಲ. ಉಗ್ರದಂಷ್ಟ್ರನು ಸಿಂಹನಾದನನ್ನು ಕುರಿತು—''ಏನೋ, ಎಲ್ಲಿಗೆ ಹೋಗಿದ್ದೀ? ಬಹಳ ಅವಸರದಿಂದ ಹೊತ್ತುಕೊಂಡು ಹೋಗುವ ಪದಾರ್ಥವು ಯಾವದು? ಸ್ವಲ್ಪ ನಿಲ್ಲು; ನಿನ್ನ ಸಾಮರ್ಥ್ಯದ ಸೊಕ್ಕಿನಿಂದಲೇ ಮೆರೆಯಬೇಡ. ನಿನ್ನ ವೈರಿಯಾದ ಉಗ್ರದಂಷ್ಟ್ರನು ಎದುರಾದದ್ದನ್ನು ನೋಡು.'' ಅನ್ನಲು ಸಿಂಹನಾದನು—''ನಾನು ಹೋಗುವದನ್ನು ತೆಗೆದುಕೊಂಡು ನೀನೇನು ಮಾಡುತ್ತೀ? ನಾನು ಹೊತ್ತುಕೊಂಡ ಪದಾರ್ಥವು ಏನಿದ್ದ ಭಾಗ್ಯವು ನಿನಗೇನು? ನಿನ್ನ ಮಾತಿನಿಂದ ನಿಂತುಕೊಳ್ಳಲಿಕ್ಕೆ ನಾನೇನು ಅಷ್ಟುರವನಲ್ಲ. ಉಗ್ರದಂಷ್ಟ್ರನ ವೈರವೂ, ಸಾಮರ್ಥ್ಯವೂ ಬಹಳ ಸಾರೆ ನನ್ನಿಂದ ಪರೀಕ್ಷಿಸಲ್ಪಟ್ಟಿದೆ. ಸುಮ್ಮನೆ ನಿನ್ನ ಹಾದಿಯ ಹಿಡಿದು ಹೋಗು.'' ಅನ್ನಲು, ಉಗ್ರದಂಷ್ಟ್ರನು ಸಿಂಹನಾದನ ಉದ್ಧಟತನದ ಬಿರಿ ಮಾತು ಗಳಿಗಾಗಿ ಸಿಟ್ಟಾಗಿ ಕೂಡಲೆ ಅವನು ಆವೇಶದಿಂದ ಸಿಂಹನಾದನ ವಕ್ಷಸ್ಥಲಕ್ಕೆ ಕಸುವಿನಿಂದ ಒದ್ದನು. ಅದರಿಂದ ಸಿಂಹನಾದನು ಕೆರಳಿದ ಕೇಸರಿಯಂತೆ ಭಯಂಕರವಾದ ಧ್ವನಿಯಿಂದ ಗರ್ಜಿಸಿ, ಪದ್ಮನಯನೆಯನ್ನು ಒತ್ತಟ್ಟಿಗೆ ಕುಳ್ಳಿರಿಸಿ ಉಗ್ರದಂಷ್ಟ್ರನ ಸಂಗಡ ಯುದ್ಧಕ್ಕೆ ನಿಂತನು.

ಪ್ರಾಯಸ್ಥರಾದ ಉಗ್ರದಂಷ್ಟ್ರ ಸಿಂಹನಾದರು ಮದ್ದಾನೆಗಳಂತೆ ಮಲೆತು ನಿಂತು ಹೊಡೆದಾಡಿದರು. ನೆರೆಹೊರೆಯ ಮರಗಳೂ, ಕಲ್ಲು—ದುಂಡೆಗಳೂ, ಅವರ ಹೊಡೆದಾಟಕ್ಕೆ ಸಾಲಲಿಲ್ಲ. ಅವರು ಒಮ್ಮೆ ಭುಜದಿಂದ ಭುಜಕ್ಕೆ ಹಾಯುವರು; ಒಮ್ಮೆ ಟಗರುಗಳಂತೆ ತಲೆಗಳಿಂದ ಕಾದಾಡುವರು; ಮತ್ತೊಮ್ಮೆ ಮಲ್ಲಯುದ್ಧದಿಂದ ಒಬ್ಬರನ್ನೊಬ್ಬರು ನೆಲಕ್ಕೆ ಅಪ್ಪಳಿಸುವರು. ಈ ಪ್ರಕಾರ ರಾಕ್ಷಸರು ಮೂರು ತಾಸುಗಳವರೆಗೆ ಜಯಾಭಿಲಾಷೆಯಿಂದ ಛಲದೊಡನೆ ಕಾದಿದರೂ, ಅವರ ಜಯಾಪಜಯಗಳ ನಿರ್ಣಯವಾಗಲಿಲ್ಲ. ಅವರ ಭಯಂಕರವಾದ ಯುದ್ಧವನ್ನು ನೋಡಿ ಪದ್ಮನಯನೆಯು ಬೆರಗಾಗಿದ್ದಳು. ಅವಳು ಮನದಲ್ಲಿ

ಆಲೋಚಿಸಿದಳೇನಂದರೆ—''ಈ ಖಳರು ಇಬ್ಬರೂ ಇಷ್ಟು ಛಲದಿಂದ ಕಾದುತ್ತಿರುವ ಕಾರಣ, ಇವರಲ್ಲಿ ಒಬ್ಬರಿಗಂತು ಮರಣವು ಒದಗುವದು ನಿಶ್ಚಯವೇ; ಆದರೆ ಯಾರು ಬದುಕಿದ ಭಾಗ್ಯವು ನನಗೇನು? ಹೇಗಿದ್ದರೂ ನನಗೆ ಒದಗುವ ಅಪಮಾನವು ದೂರವಾಗುವ ಸಂಭವವು ಇಲ್ಲ, ಬದುಕಿದವನು ನನ್ನ ರೂಪಕ್ಕೆ ಮೋಹಗೊಂಡು ಕೆಟ್ಟ ಹಾದಿಯನ್ನು ಹಿಡಿಯುವದು ನಿಶ್ಚಯವು! ಪರಮೇಶ್ವರಾ, ನನ್ನನ್ನು ಈ ಸಂಕಟದೊಳಗಿಂದ ಪಾರಮಾಡಲು ನೀನೇ ಸಮರ್ಥನು ನೀನು ಅನಾಥರಿಗೆ ನಾಥನಲ್ಲವೆ?

ಈ ಪ್ರಕಾರ ರಾಜಪುತ್ರಿಯು ವ್ಯಸನಬಟ್ಟು ದೇವರನ್ನು ಮರೆಹೋಗುತ್ತಿರಲು, ಅವರಿಬ್ಬರೂ ರಾಕ್ಷಸರು ಯುದ್ಧ ಮಾಡುತ್ತ ಮಾಡುತ್ತ ಮಿತಿಮೀರಿ ಸಿಟ್ಟಿಗೆದ್ದು ಭಯಂಕರವಾಗಿ ಗರ್ಜಿಸಿ ಧನುಸ್ಸಿಗೆ ಬಾಣಗಳನ್ನು ಹೂಡಿ ಗುರಿ ನೋಡಿ ಒಬ್ಬರ ಮೇಲೊಬ್ಬರು ಬಿಟ್ಟರು. ಆಗ ಅವರಿಬ್ಬರ ಬಾಣಗಳು ಪರಸ್ಪರರ ಹೃದಯಕ್ಕೆ ತಗಲಿ ಇಬ್ಬರೂ ಭೂಮಿಯ ಮೇಲೆ ಬಿದ್ದು ಪ್ರಾಣ ಬಿಟ್ಟರು. ಆಗ ರಾಜಪುತ್ರಿಯು ತನಗೊದಗಿದ ಸಂಕಟದ ನಿವಾರಣವು ತನ್ನಿಂದ ತಾನೇ ಆದದ್ದನ್ನು ನೋಡಿ ದೇವರನ್ನು ಕೊಂಡಾಡಿದಳು. ಮಾನಹಾನಿಯಾಗುವ ಪ್ರಸಂಗವು ತಪ್ಪಿದ್ದರಿಂದ ಅವಳಿಗೆ ಮೊದಲು ಸ್ವಲ್ಪ ಆನಂದವಾಯಿತು. ಆದರೆ ಪತಿಯ ವಿಯೋಗದ ಸ್ಮರಣವಾದಕೂಡಲೆ ಮಿತಿಮೀರಿ ವ್ಯಸನವಾಯಿತು. ಅವಳು ಮನದಲ್ಲಿ—''ನಾನು ಇನ್ನು ಪ್ರಾಣವನ್ನು ಯಾವ ಆಸೆಯಿಂದ ಇಡಬೇಕು? ಹೀಗೆ ದೆಸೆಗೇಡಿಯಾಗಿ ಬದುಕುವದಕ್ಕಿಂತ ಪ್ರಾಣತ್ಯಾಗ ಮಾಡಿಕೊಳ್ಳುವದೇ ತಕ್ಕದ್ದು ನನ್ನ ದುಃಖದ ಭೋಗವು ಇನ್ನೂ ಮುಗಿದಂತೆ ತೋರುವದಿಲ್ಲ, ಇನ್ನೂ ಯಾವ ಯಾವ ಸಂಕಟಗಳನ್ನನುಭವಿಸಬೇಕಾಗಿದೆಯೋ ದೇವರೇ ಬಲ್ಲ, ಕಾಗೆಗಳು ಬೀದಿಯಲ್ಲಿ ಬಿದ್ದ ಮಾಂಸದ ಕರಣೆಯನ್ನು ಇಚ್ಛಿಸುವಂತೆ, ದುರ್ಜನರು ಅನಾಥ ಸ್ತ್ರೀಯನ್ನು ಇಚ್ಛಿಸುತ್ತಿರುವದರಿಂದ ಮಾನಹಾನಿಯ ಭಯವು ನನಗೆ ಮೇಲೆ ಮೇಲೆ ಒದಗತಕ್ಕದ್ದೇ; ಕಾರಣ ಇಂಥ ದುರವಸ್ಥೆಯಲ್ಲಿ ಬದುಕಿ ಸುಖವಿಲ್ಲ, ಅಪಮಾನವು ಮರಣಕ್ಕಿಂತ ಅಸಹ್ಯವಲ್ಲವೆ! ಎಂದು ಆಲೋಚಿಸಿ, ಆತ್ಮಘಾತಮಾಡಿಕೊಳ್ಳುವದನ್ನು ನಿಶ್ಚಯಿಸಿದಳು. ಆದರೆ ಅವಳು ಗರ್ಭಿಣಿ ಇದ್ದದ್ದರಿಂದ ಅವಳ ಮನಸ್ಸು ಆ ವಿಚಾರಕ್ಕೆ ಒಡಂಬಡಲಿಲ್ಲ, ಸೀತೆ, ಶಕುಂತಲೆ ಮುಂತಾದ ಸತಿಯರು, ಕೆಲವೊಂದು ಕಾರಣದಿಂದ ಪತಿಯ ನಿರಾಕರಣಕ್ಕೆ ಗುರಿಯಾಗಿ ಅನಾಥರಾದರೂ, ದೈವ ಸಹಾಯದಿಂದ ಅವರು ತಮ್ಮ ಗರ್ಭಭಾರವನ್ನು ಅನಾಯಾಸವಾಗಿ ಇಳಿಸಿಕೊಂಡು ಮುಂದೆ ಅಖಂಡವಾದ ಸುಖವನ್ನೂ, ಕೀರ್ತಿಯನ್ನೂ ಹೊಂದಿದ್ದು ಅವಳಿಗೆ ನೆನಪಾಯಿತು. ಹೊರತು ತಾನು ಆತ್ಮಘಾತ ಮಾಡಿಕೊಂಡರೆ ಗರ್ಭದಲ್ಲಿದ್ದ ಶಿಶುವಿನ ನಾಶವಾಗಿ, ಬಾಲಹತ್ಯದ ದೋಷವು ತನ್ನ ಪಾಲಿಗೆ ಬರುವದೆಂಬದನ್ನು ತಿಳಿದು ಆಕೆಯು ಪಾಪಕ್ಕೆ ಅಂಜಿ ಹಿಂದಕ್ಕೆ ಸರಿದಳು. ಈ ಮೇರೆಗೆ ಪದ್ಮನಯನೆಯು ಅಪತ್ಯ ವಾತ್ಸಲ್ಯದಿಂದ ಬದುಕುವ ಆಶೆ ಹಿಡಿದು, ಎಲ್ಲಿಯಾದರೂ ಜನ ವಸತಿಯುಳ್ಳ ಪ್ರದೇಶವು ಕಣ್ಣಿಗೆ ಬಿದ್ದರೆ ನೋಡಬೇಕೆಂದು ಯೋಚಿಸಿ ಸುತ್ತು ಮುತ್ತು ನೋಡಹತ್ತಿದಳು. ಆದರೆ ನೋಡಿದತ್ತೆಲ್ಲ ಭಯಂಕರವಾದ ಅರಣ್ಯವೇ ಕಣ್ಣಿಗೆ ಬಿತ್ತಲ್ಲದೆ, ಜನ ವಸತಿಯ ಕುರುಹುಗಳೇನೂ ಕಾಣಲಿಲ್ಲ,

ಮುಂದೆ ಬರಬರುತ್ತ ಉಗ್ರಶ್ವಾಪದಗಳೂ ಅವಳ ಕಣ್ಣಿಗೆ ಬೀಳಹತ್ತಿದವು. ಆದರೂ ಅವಳು ಹೆದರದೆ ಧೈರ್ಯದಿಂದ ಒಂದು ಸ್ಥಳ ಹಿಡಿದು ವಿಚಾರಮಾಡುತ್ತ ಕುಳಿತುಕೊಂಡಳು. ಒಮ್ಮೆ ಅವಳ ಮನದಲ್ಲಿ ಸಂತಾನದ ಯೋಗದಿಂದ ಒದಗುವ ಸುಖದ ಕಲ್ಪನೆಯಾಗಿ ಅವಳು ಆನಂದಪಡುತ್ತಿದ್ದಳು; ಒಮ್ಮೆ ಪತಿಯ ವಿಯೋಗದ ಸ್ಮರಣವಾಗಿ ಅವಳು ದುಃಖದಿಂದ ಕಣ್ಣೀರು ಸುರಿಸುವಳು; ಮತ್ತೊಮ್ಮೆ ತನ್ನ ದುರವಸ್ಥೆಯನ್ನು ನೆನಿಸಿ ನಿರಾಶೆಪಡುವಳು!

ಈ ಪ್ರಕಾರ ರಾಜಪುತ್ರಿಯ ಮನದಲ್ಲಿ ತರತರದ ಕಲ್ಪನಾತರಂಗಗಳು ಉದ್ಭವಿಸಿ ಕೂಡಲೆ ಅವು ನಾಶಹೊಂದುತ್ತಿರಲು, ಅವಳು ಕುಳಿತಿರುವ ದಿಕ್ಕಿನ ಕಡೆಗೆ ಕಲಕಲಾಟವಾಗುವದನ್ನು ಅವಳು ಕೇಳಿದಳು. ಅದು ನಾಯಿಗಳ ಹಾಗೂ ಮನುಷ್ಯರ ಧ್ವನಿಗಳಿಂದ ಆಗುತ್ತಿತ್ತು ಅದರಿಂದ ಅವಳು ಯಾರೋ ಮೃಗಯಾರ್ಥ ಬಂದಿರುವರೆಂದು ತರ್ಕಿಸಿದಳು. ರಾಜಪುತ್ರಿಯ ತರ್ಕವು ಅಕ್ಷರಶಃ ನಿಜವಿತ್ತು, ಮುಂದೆ ಸ್ವಲ್ಪ ವೇಳೆಯಲ್ಲಿಯೇ ಅಸಂಖ್ಯ ಜನರೂ, ನಾಯಿಗಳೂ ಅವಳಿಗೆ ಕಂಡದ್ದಲ್ಲದೆ ಅವರೆಲ್ಲರೂ ತನ್ನ ಕಡೆಗೇ ಬರುವದನ್ನು ನೋಡಿ ಅವಳು ಸಮಾಧಾನ ಪಟ್ಟಳು. ಆ ದಂಡಿನವರು ಬೇಟೆಯಾಡುತ್ತಾಡುತ್ತ ಪದ್ಮನಯನೆಯಿದ್ದೆಡೆಗೆ ಬಂದರು. ಅವರಲ್ಲಿ ಕೆಲವರು ರಾಜಪುತ್ರಿಯನ್ನು ನೋಡಿ ಅವಳ ಲಾವಣ್ಯಕ್ಕೆ ಬೆರಗಾಗಿ ತಮ್ಮ ಒಡೆಯನಾದ ಸಿಂಹಕೇತುರಾಜನಿಗೆ ಈ ಸಂಗತಿಯನ್ನು ತಿಳಿಸಲು ಕೂಡಲೆ ಅವನು ರಾಜಪುತ್ರಿಯು ಕುಳಿತಲ್ಲಿಗೆ ಬಂದನು. ಸಿಂಹಕೇತುವು ಪದ್ಮನಯನೆಯ ರೂಪಕ್ಕೂ, ಅವಳ ಅರಣ್ಯವಾಸಕ್ಕೂ ಬೆರಗಾದ ದ್ದಲ್ಲದೆ, ಆಕೆಯ ದೀನಮುದ್ರೆಯನ್ನು ನೋಡಿ, ಕನಿಕರಪಟ್ಟನು. ಆತನು ವಿಚಾರಿಯೂ, ಸುಶೀಲನೂ, ಪರನಾರೀಸೋದರನೂ, ಕರುಣೆಯೂ ಇದ್ದನು. ಅವನು ರಾಜಪುತ್ರಿಯನ್ನು ಕುರಿತು—"ತಂಗೀ, ನೀನು ಯಾರು? ಇಂಥ ಘೋರಾರಣ್ಯದಲ್ಲಿ ಒಬ್ಬಳೇ ಕುಳಿತಿರುವ ಕಾರಣವೇನು? ಬೆದರಬೇಡ. ನಿನ್ನ ಮುಖಚರ್ಯದ ಮೇಲಿಂದಲೇ ನಾನು ನಿನ್ನ ಸುಗುಣ ಗಳನ್ನೂ ಕುಲೀನತೆಯನ್ನೂ, ದುಸಹವಾದ ದುಃಖವನ್ನೂ ಅರಿತಿದ್ದೇನೆ. ನನ್ನಿಂದ ನಿನಗೆ ಯಾವ ಸಂಕಟವೂ, ತೊಂದರೆಯೂ ಒದಗುವಹಾಗಿಲ್ಲ, ನಾನು ನಿನ್ನ ಒಡಹುಟ್ಟಿದವನೆಂದು ತಿಳಿದು ನನ್ನ ಸಂಗಡ ಮಾತಾಡು." ಅನ್ನಲು, ರಾಜಪುತ್ರಿಯು ಸಿಂಹಕೇತುವಿನ ಪ್ರಾಯವನ್ನು ನೋಡಿ ಆತಂಕಪಟ್ಟವಳಾಗಿದ್ದರೂ, ಅವನ ನಿಷ್ಕಲಂಕವಾದ ಭಾಷಣವನ್ನು ಕೇಳಿ ನಿಃಶಂಕೆಯಿಂದ ಅವನೊಡನೆ ಮನಬಿಚ್ಚಿ ಮಾತಾಡಲುದ್ಯೋಗಿಸಿದಳು. ಆದರೆ ಶೋಕಗ್ರಸ್ತನಾದ ಮನುಷ್ಯನ ದುಃಖವು ಸ್ವಕೀಯರ ದರ್ಶನದಿಂದ ಉಕ್ಕೇರುವಂತೆ, ಸಿಂಹಕೇತುವಿನ ದರ್ಶನದಿಂದ ರಾಜಪುತ್ರಿಯ ದುಃಖವು ಅವಳ ಉದರವನ್ನು ಅತಿಕ್ರಮಿಸಿ, ಅಶ್ರುರೂಪದಿಂದ ನೇತ್ರಗಳ ಮಾರ್ಗವಾಗಿ ಹೊರಚಲ್ಲಹತ್ತಿತು. ಅವಳ ಕತ್ತಿಗೆಯ ಶಿರಉಬ್ಬಿ ಮಾತುಗಳು ಹೊರಡದಾದವು. ಕಡೆಗೆ ರಾಜಪುತ್ರಿಯು ತನ್ನ ದುಃಖವನ್ನು ಕೆಲಮಟ್ಟಿಗೆ ಕಡಿಮೆಮಾಡಿ ನುಡಿದಳೇನಂದರೆ— "ತಂದೆಯು ಮಗಳ ಕಷ್ಟವನ್ನು ನೋಡಿ ಕಳವಳಿಸುವಂತೆ, ನನ್ನ ಹಡೆದ ತಂದೆಯಂತಿದ್ದ ನೀವು, ನನ್ನ ಸ್ಥಿತಿಯನ್ನು ನೋಡಿ ಕಳವಳಿಸುವದಕ್ಕಾಗಿ ನಾನು ಕೃತಜ್ಞಳಾಗಿರುವೆನು. ಅನಾಥಳಾದ ನನ್ನನ್ನು ನಿಷ್ಕಾಮ ಪ್ರೀತಿಯಿಂದ ಆದರಿಸುವ ನಿಮಗೆ ದೇವರು ಉದ್ದಂಡವಾದ ಆಯುಷ್ಯ

ವನ್ನೂ, ಅಖಂಡವಾದ ಐಶ್ವರ್ಯವನ್ನೂ ಕೊಡಲಿ. ಅನಾಥರೂ, ಮುಗ್ಧೆಯರೂ ಆದ ಸ್ತ್ರೀಯರನ್ನು ನಿಷ್ಕಾಮ ಪ್ರೀತಿಯಿಂದ ಆದರಿಸುವ ಪುಣ್ಯವಂತರು ವಿರಳ. ನಿಮ್ಮ ಈ ಸದ್ವರ್ತನವು ನನ್ನ ದುಃಖವನ್ನು ಅರ್ಧ ಕಡಿಮೆ ಮಾಡಿತು. ಮಹಾತ್ಮರ ದರ್ಶನ ಲಾಭವೇ ಅಂಥಾದ್ದು ಈವೊತ್ತಿಗೆ ನನ್ನ ದುಃಖಪರಂಪರೆಯು ಮುಗಿಯಿತೆಂದು ನಾನು ಭಾವಿಸುವೆನು.

ಅಂತರ್ಧಾನ

ಈ ಪ್ರಕಾರ ಸಿಂಹಕೇತುವು ತನ್ನನ್ನು ಆದರಿಸಿದ್ದಕ್ಕಾಗಿ ರಾಜಪುತ್ರಿಯು ಕೃತಜ್ಞತೆಯಿಂದ ಅವನ ಹಿತಚಿಂತನ ಮಾಡಿ, ಹಲವು ಬಗೆಯಾಗಿ ಆತನನ್ನು ಕೊಂಡಾಡಿದಳು. ಪ್ರಸವಕಾಲವು ಸಮೀಪಿಸಿರಲು ತನಗೊದಗಿದ ಮಹದಾಶ್ರಯಕ್ಕಾಗಿ ಅವಳು ಭಕ್ತಿಯಿಂದ ದೇವರನ್ನು ಸ್ತುತಿಸಿದಳು. ಭಾವೀಸುಖದ ಕಲ್ಪನೆಯಿಂದ ಸಮಾಧಾನ ತಾಳಿದ ಆ ಅಬಲೆಯು ತನ್ನ ದುಃಖಕರವಾದ ಸಂಗತಿಯನ್ನು ಸ್ವಲ್ಪದರಲ್ಲಿ ಸಿಂಹಕೇತುವಿಗೆ ಹೇಳಲು, ಆತನು—ಅಮ್ಮಾ ಸಾರ್ವಭೌಮಕುವರೀ, ನಿನ್ನ ವೃತ್ತಾಂತವನ್ನು ಕೇಳಿ ನನಗೆ ಬಹಳ ದುಃಖವಾಗಿದೆ. ನಿನ್ನ ತಾಳ್ಮೆ–ಪ್ರಸಂಗಾವಧಾನ–ಸುವಿಚಾರಗಳು, ಬಾಲ್ಯದಲ್ಲಿ ನೀನು ಸತ್ಸಮಾಗಮದ ಯೋಗದಿಂದ ಸಂಪಾದಿಸಿದ ಜ್ಞಾನದ ಫಲಗಳಾಗಿವೆ. ನಿನ್ನಂಥ ಮಹಾತ್ಮಳಿಗೆ ಇಂಥ ಕಷ್ಟಕಾಲವು ಬರಬಾರದು. ಇರಲಿ ಪ್ರಾರಬ್ಧಭೋಗವು ಯಾರಿಗೂ ಬಿಟ್ಟಿಲ್ಲ. ಮನುಷ್ಯರ ಸತ್ವಪರೀಕ್ಷೆಗೆ ದುಃಖ ಪರಂಪರೆಯು ಒರೆಗಲ್ಲಾಗಿರುವದು. ನಿನ್ನ ಸತ್ಸಮಾಗಮದ ಪುಣ್ಯವು ಬಲವತ್ತರವಾಗಿರುವದರಿಂದಲೇ ಇಲ್ಲಿಯವರೆಗೆ ನಿನ್ನ ಪಾತಿವ್ರತ್ಯದ ರಕ್ಷಣವಾಗಿರುತ್ತದೆ. ಕಪಿಂಜಲ ಋಷಿಗಳ ಪುಣ್ಯ ಪ್ರತಾಪವೂ ಸಾಮರ್ಥ್ಯವೂ ಪ್ರಕಟವಾಗಲಿಕ್ಕೆ ನಿಮ್ಮಂಥ ಸಚ್ಛಿಷ್ಯರೇ ಮಾರ್ಗವಾಗಿರುವರು ಅಮ್ಮಾ ನಿನ್ನ ದರ್ಶನದಿಂದ ನಾನು ಧನ್ಯನಾದೆನು. ಈಗ ನೀನು ತುಂಬಾ ಗರ್ಭಿಣಿಯಿರುತ್ತೀ. ಹೀಗೆ ಅಡವಿಯಲ್ಲಿ ಕುಳಿತುಕೊಂಡರೆ ನಿನ್ನ ಗತಿಯೇನಾಗಬೇಕು? ನಾನು ಪಾಂಡ್ಯದೇಶದ ರಾಜನಾದ ಸಿಂಹಕೇತುವಿದ್ದೇನೆ. ನನ್ನ ರಾಜಧಾನಿಯಾದ ಮಧುರಾ ಪಟ್ಟಣವು ಇಲ್ಲಿಂದ ಸಮೀಪದಲ್ಲಿಯೇ ಇರುತ್ತದೆ. ನೀನು ಯಾವ ಸಂಶಯವನ್ನೂ ತೆಗೆದುಕೊಳ್ಳದೆ ನನ್ನ ಸಂಗಡ ಬಂದರೆ, ನನ್ನ ಯೋಗ್ಯತಾನುಸಾರವಾಗಿ ನಿನ್ನ ಆರಯ್ಕೆ ಮಾಡುವೆನು; ನಿನ್ನ ಪತಿಯ ಶೋಧಾರ್ಥವಾಗಿ ದೂತರನ್ನು ದೇಶವಿದೇಶಗಳಿಗೆ ಕಳಿಸುವೆನು. ನಿನ್ನ ಮಾವನಾದ ಸುಲೋಚನ ರಾಜನೂ, ತಂದೆಯಾದ ವೀರವರ್ಮ ರಾಜನೂ ಸಾಧಾರಣ ಅರಸರೊಳಗಿನವರಲ್ಲ. ಅವರ ಕೈ ಕೆಳಗೆ ನಮ್ಮಂಥ ಎಷ್ಟೋ ಜನ ಮಾಂಡಲಿಕ ಅರಸರಿದ್ದಾರೆ. ಅನಾಯಾಸವಾಗಿಯೇ ನಿನ್ನ ಯೋಗದಿಂದ ಅವರ ಸ್ನೇಹಲಾಭವು ನನಗಾಗುತ್ತಿರಲು, ನೀನು ನನ್ನ ಮಾತನ್ನು ನಿರಾಕರಿಸಬೇಡ.

ಪದ್ಮನಯನೆಯು ಸಿಂಹಕೇತುವಿನ ಮೃದುವಚನಗಳನ್ನು ಕೇಳಿ, ಸಂತೋಷಪಟ್ಟು— ಮಹಾತ್ಮರೇ, ದೇವರು ನಿಮಗೆ ಬಹುಜನ ಹೆಣ್ಣು ಮಕ್ಕಳನ್ನೂ, ಗಂಡುಮಕ್ಕಳನ್ನೂ ಕೊಡಲಿ; ನಿಮ್ಮ ಐಶ್ವರ್ಯವೂ, ರಾಜ್ಯವೂ ಅಭಿವೃದ್ಧಿಯನ್ನು ಹೊಂದಲಿ. ಮಾವನೂ, ತಂದೆಯೂ, ಪತಿಯೂ ಸಮರ್ಥರಿದ್ದರೂ, ಈಗಿನ ನನ್ನ ಕಷ್ಟವನ್ನು ದೂರಮಾಡುವದಕ್ಕೆ ಯಾರಾದರೂ ಬಂದಿರುವರೇ? ಈವೊತ್ತಿಗೆ ನೀವೇ ನನ್ನ ಹಡೆದ ತಂದೆಯು. ನಿಮ್ಮ ಹೆಸರಿನ ಮೂರ್ತಿಯನ್ನು ಮಾಡಿಸಿ ಪ್ರತಿ ನಿತ್ಯ ಪೂಜಿಸಿದರೂ ನಿಮ್ಮ ಉಪಕಾರವು ತೀರಲಾರದು. ಅಪರಿಚಿತರೂ, ಪರಕೀಯರೂ ಆದ ನೀವು ಕೇವಲ ಉಪಕಾರ ಬುದ್ಧಿಯಿಂದಲೇ ನನ್ನ ಹಿತವನ್ನು ಬಯಸುತ್ತಿರಲು, ನಿಮ್ಮ ಮಾತಿಗೆ ನಾನು ಪ್ರತಿಕೂಲಳಾಗುವೆನೇ? ಈ ಕಾಲಕ್ಕೆ ನೀವು ಇಲ್ಲಿಗೆ ಬರದಿದ್ದರೆ ಈ ಅನಾಥ–ಪದ್ಮನಯನೆಯನ್ನು ಯಾರು ಕೇಳುತ್ತಿದ್ದರು? ಸ್ವಾಭಾವಿಕವಾಗಿಯೇ ನಾನು ಅಡವಿಯ ಪಾಲಾಗುತ್ತಿದ್ದೆನು. ನಿಮ್ಮ ಉಪಕಾರವು ನನಗೆ ದುಃಸ್ಸಹವಾಗಿರಲು, ತಿರುಗಿ ನೀವೇ ನನಗೆ ಹೇಳಿಕೊಳ್ಳವದೆಂದರೆ ನಿಮ್ಮ ಔದಾರ್ಯಕ್ಕೆ ನೆಲೆಯಿಲ್ಲದಾಯಿತು. ಈಗ ನಾನು ಸಂತೋಷದಿಂದ ನಿಮ್ಮೊಡನೆ ಮಧುರೆಗೆ ಬರುತ್ತೇನೆ. ಪರದೇಶಿಯಾದ ನನ್ನನ್ನು ನಿರಾಕರಿಸದೆ, ನಿಮ್ಮ ಒಡಹುಟ್ಟಿದವಳೆಂದು ತಿಳಿದು ನನ್ನನ್ನು ರಕ್ಷಿಸಿ, ಅಖಂಡವಾದ ಕೀರ್ತಿಯನ್ನು ಸಂಪಾದಿಸಿರಿ. ಅನ್ನಲು, ಕೂಡಲೆ ಸಿಂಹಕೇತುವಿನ ಅಪ್ಪಣೆಯಿಂದ ಸಾರಥಿಯು ಒಂದು ಉತ್ತಮವಾದ ರಥವನ್ನು ಸಿದ್ಧಮಾಡಿದನು. ಆ ಮೇಲೆ ಸಿಂಹಕೇತುವು ಪದ್ಮನಯನೆ ಯನ್ನು ಆ ರಥದಲ್ಲಿ ಕುಳ್ಳಿರಿಸಿ, ತಾನು ಅಶ್ವಾರೂಢನಾಗಿ ರಥದ ಹಿಂದೆ ಹೊರಟು ಸ್ವಲ್ಪ ವೇಳೆಯಲ್ಲಿಯೇ ಸಕಲ ಸೈನ್ಯದೊಡನೆ ಪದ್ಮನಯನೆಯನ್ನು ಕರಕೊಂಡು ಮಧುರೆಗೆ ಮುಟ್ಟಿದನು. ಪೌರರೂ, ರಾಜ ಗೃಹವಾಸಿಗಳೂ ಪದ್ಮನಯನೆಯನ್ನು ನೋಡಿ ಆಶ್ಚರ್ಯಪಟ್ಟು ಹಲವು ಪ್ರಕಾರದ ತರ್ಕಗಳನ್ನು ಮಾಡಹತ್ತಿದರು. ಸಿಂಹಕೇತುವು ರಾಜಪುತ್ರಿನ್ನೊಡಗೊಂಡು ನೆಟ್ಟಗೆ ತನ್ನ ಪ್ರಿಯ ಪತ್ನಿಯಾದ ಮಂಜುಘೋಷೆಯು ಇರುವ ಅಂತಃಪುರಕ್ಕೆ ಹೋದನು. ನಿಃಶಂಕೆಯಿಂದ ಸಖಿಯರೊಡನೆ ವಿನೋದ ಮಾಡುತ್ತ ಆನಂದದಿಂದ ಕುಳಿತಿದ್ದ ಮಂಜು ಘೋಷೆಯು, ತನ್ನ ರಮಣನು ಅಪರಿಚಿತಳಾದ ಸ್ತ್ರೀಯನ್ನೊಡಗೊಂಡು ಅಕಸ್ಮಾತ್ತಾಗಿ ಬರುವದನ್ನು ನೋಡಿ, ಅಸ್ತವ್ಯಸ್ತವಾದ ಉತ್ತರೀಯವನ್ನು ಲಗಬಗೆಯಿಂದ ಸಾವರಿಸಿಕೊಳ್ಳುತ್ತ ಯಾವತ್ತೂ ವ್ಯವಸ್ಥೆಯನ್ನು ಮಾಡುವದಕ್ಕಾಗಿ ದಾಸಿಯರಿಗೆ ಹೇಳಿ ತಾನು ಪತಿಯನ್ನು ಪ್ರೇಮ ಕಟಾಕ್ಷಗಳಿಂದ ಆನಂದಗೊಳಿಸುವ ಅಭಿಲಾಷೆಯಿಂದ ಒತ್ತಟ್ಟಿಗೆ ಸಖಿಯರ ಮರೆಗೆ ನಿಂತುಕೊಂಡಳು. ಅವಳು ಸಮಯೋಚಿತವಾಗಿ ತನ್ನ ದೃಷ್ಟಿಯನ್ನು ಪತಿಯ ದೃಷ್ಟಿಗೆ ಮೇಲನ ಮಾಡಲು ಯತ್ನಿಸಿ, ತನ್ನ ಬಾಗಿದ ಮುಖವನ್ನು ಸ್ವಲ್ಪ ಮೇಲಕ್ಕೆ ಎತ್ತುತ್ತ ಊರ್ಧ್ವದೃಷ್ಟಿ ಯೊಡನೆ ಬಾರಿಬಾರಿಗೆ ಪತಿಯ ಮಾರ್ಗ ಪ್ರತೀಕ್ಷೆ ಮಾಡುತ್ತಿದ್ದಳು. ಸಿಂಹಕೇತುವು ಗಾಂಭೀರ್ಯದಿಂದ ಮಂದಿರವನ್ನು ಪ್ರವೇಶಿಸಿ, ದರ್ಶನೋತ್ಕಂಠಿತಳಾದ ಸತಿಯು ಮನದಾಸೆಯನ್ನು ಪ್ರೇಮಪೂರ್ವಕವಾಗಿ ಪೂರಯಿಸಿ, ಯೋಗ್ಯಾಸನದಲ್ಲಿ ವಿಶ್ರಮಿಸಿ ಪದ್ಮನಯನೆಯನ್ನು ಕುರಿತು—''ಅಮ್ಮಾ ಪದ್ಮನಯನೇ, ಇಲ್ಲಿ ನೆರೆದವರೆಲ್ಲರೂ ಅಪರಿಚಿತರೆಂದು ತಿಳಿದು ಶಂಕಿಸಬೇಡ. ಅಪರಿಚಿತಳಾದ ನಿನ್ನ ಮುಂದೆ ನನ್ನ ಗೌರವವನ್ನು

ಕಾಯುವದಕ್ಕಾಗಿ, ಅಧಿಕ ಲಜ್ಜೆಯೊಡನೆ ಸಖಿಯರ ತಂಡದಲ್ಲಿ ತಲೆವಾಗಿ ನಿಂತುಕೊಂಡಿದ್ದ ನನ್ನ ಪ್ರಿಯಳು ನಿನ್ನ ಅತ್ತಿಗೆಯೆಂದು ತಿಳಿ. ಸಮವಯಸ್ಕರಾದ ನೀವಿಬ್ಬರೂ ಪರಮ ಸ್ನೇಹಿತರಾಗಿ ಇರುವದನ್ನು ನೋಡುವ ನಾನೇ ಧನ್ಯನು. ನಿನ್ನಂಥ ಸಚ್ಚರಿತ್ರಳ ಸೇವೆ ಮಾಡುವ ಪ್ರಸಂಗವು ನನಗೆ ಬಂದದ್ದರಿಂದ ನನ್ನ ಪುಣ್ಯಕ್ಕೆ ಜೋಡಿಲ್ಲ'' ಎಂದು ಹೇಳಿದನು.

ಈ ಪ್ರಕಾರ ಸಿಂಹಕೇತುವು ಆಡಿದ ಮಾತುಗಳನ್ನು ಕೇಳಿ, ಕೂಡಲೆ ಮಂಜುಘೋಷಿಯು ಅತ್ಯಾನಂದದಿಂದ ಪದ್ಮನಯನೆಯ ಕೈಹಿಡಿದು ಹತ್ತರ ಕರಕೊಂಡಳು. ಆಗ ಪದ್ಮನಯನೆಯು ಸಿಂಹಕೇತುವನ್ನು ಕುರಿತು—''ಅಣ್ಣಾ'' ಇಂದಿಗೆ ನಾನೇ ಧನ್ಯಳು. ನಿನಗಿಂತಲೂ ನನಗೆ ನನ್ನ ಅತ್ತಿಗೆಯು ಪ್ರೀಯಳಿದ್ದಾಳೆ. ನಿನ್ನ ಹಿತವನ್ನು ಚಿಂತಿಸುತ್ತ ಆನಂದದಿಂದ ನಿನ್ನ ಮನೆಯಲ್ಲಿರುತ್ತೇನೆ. ನೀನು ನನ್ನ ಸಲುವಾಗಿ ಬಹಳದಣಿದೆ. ಬೇಟೆಯಾಡಿ ನಿನಗೆ ಬಹಳ ಹಸಿವೆಯಾಗಿದ್ದೀತು. ಇದಲ್ಲದೆ ಓರಿಗೆಯವರಾದ ರಾಜಪುತ್ರರು ಅರಮನೆಯ ಬಾಗಿಲಲ್ಲಿ ನಿನ್ನ ಹಾದಿಯ ಕಾಯುತ್ತ ನಿಂತುಕೊಂಡಿದ್ದಾರು ನಾನೇನು ಇಂದಿದ್ದು ನಾಳೆ ಹೋಗುವವಳಲ್ಲ, ನಿನ್ನಿಂದ ಸಂಪೂರ್ಣವಾಗಿ ಸೇವೆಯನ್ನು ತೆಗೆದುಕೊಳ್ಳಲಿಕ್ಕೆ ಬಂದಿದ್ದೇನೆ. ನೀನು ರಾಜಗೃಹಕ್ಕೆ ಹೋಗಿ ಭೋಜನ ಮಾಡಿ ಸ್ವಸ್ಥ ಚಿತ್ತನಾಗಿ ಬಂದರೆ, ನನ್ನ ಜೀವಕ್ಕೆ ಸೊಗಸಾಗುತ್ತದೆ'' ಎನ್ನಲು, ಸಿಂಹಕೇತುವು ಆಕೆಯನ್ನು ಉದ್ದೇಶಿಸಿ—ಅಮ್ಮಾ ನಿನಗಿಂತ ನನಗೆ ಹೆಚ್ಚು ಶ್ರಮವಾಗಿ ರುವದಿಲ್ಲ, ಅನ್ನ ನೀರುಗಳಿಲ್ಲದೆ ನೀನು ಬಳಲಿರುವಷ್ಟು ನಾನು ಬಳಲಿರುವದಿಲ್ಲ, ರಾಜ ಪುತ್ರರು ನನ್ನ ಹಾದಿಯನ್ನು ನೋಡುವದಂತು ಇರಲಿ, ನಿನ್ನ ಸೇವೆಯನ್ನು ಭಕ್ತಿಪೂರ್ವಕವಾಗಿ ಮಾಡುವವರನ್ನು ಅನುಗ್ರಹಿಸುವದಕ್ಕಾಗಿ ಸಾಕ್ಷಾತ್ ಕಪಿಂಜಲ ಋಷಿಗಳು ಹಾದಿಯನ್ನು ನೋಡುತ್ತಿರುವರು. ಸತೀ ಮಣಿಯೇ, ಈ ಮನೆಯು ನಿನ್ನದದೆ, ನಾವೆಲ್ಲರೂ ನಿನ್ನವರಿದ್ದೇವೆ. ಯಾವದಕ್ಕೂ ಸಂಕೋಚಪಡದೆ, ಸತ್ಸೇವೆಯ ಲಾಭವನ್ನು ಒದಗಿಸಿಕೊಟ್ಟು, ನಮ್ಮನ್ನು ಧನ್ಯರಾಗಮಾಡತಕ್ಕದ್ದು ಎಂದು ಹೇಳಿ ಹೆಂಡತಿಯನ್ನು ಪ್ರೀತಿಪೂರ್ವಕವಾಗಿ ನೋಡಿ, ಪದ್ಮನಯನೆಯ ಅನುಮತಿ ಯಿಂದ ಹೊರಟುಹೋದನು.

ಇತ್ತ ಮಂಜುಘೋಷೆಯು ತನ್ನ ಪತಿಯ ಸೌಜನ್ಯಕ್ಕೂ, ಔದಾರ್ಯಕ್ಕೂ ಸಂತೋಷ ಪಟ್ಟು ದಾಸಿಯರಿಗೆ ಭೋಜನದ ಸಿದ್ಧತೆಯನ್ನು ಮಾಡಹೇಳಿ ಪೂಜ್ಯ ಭಾವದಿಂದ ಪದ್ಮನಯನೆಯ ಕೈಹಿಡಿದು ಆದರದಿಂದ ಮೇಲೆ ಕುಳ್ಳಿರಿಸಿಕೊಂಡು ನುಡಿದಳೇನಂದರೆ— ''ನಿಮ್ಮ ಸೌಂದರ್ಯ, ಸದ್ಗುಣಗಳ ವರ್ಚಸ್ಸು, ದೈನ್ಯಭಾವ ಇವು ಕಠಿಣಹೃದಯ ವನ್ನಾದರೂ ಕರಗಿಸದೆ ಬಿಡವು. ನಿಮ್ಮ ಯಾವ ಸುದ್ದಿಯನ್ನೂ ಅರಿಯದ ನನ್ನ ಮನಸ್ಸಿನಲ್ಲಿ ನಿಮ್ಮ ಬಗ್ಗೆ ಅನಿರ್ವಾಚ್ಯವಾದ ಪೂಜ್ಯಬುದ್ಧಿಯುಂಟಾಗಿದೆ. ಅಕಲ್ಪಿತವಾಗಿ ದೊರೆತ ಸತ್ಸಂಗದಿಂದ ನಾನು ಕೃತಾರ್ಥಳಾಗಿದ್ದೇನೆ. ನೀವು ಯಾರೆಂಬದನ್ನು ತಿಳಿಯುವ ಉತ್ಕಂಠೆಯು ನನಗೆ ಬಹಳ ಇದ್ದರೂ, ಪಥಶ್ರಮದಿಂದ ಬಳಲಿದವರಾದ ನಿಮಗೆ ನಾನು ಈಗ ಆಗ್ರಹ ಮಾಡುವದಿಲ್ಲ, ಈ ಮನೆಯು ನಿಮ್ಮದದೆ ಯಾವ ಸಂಶಯವನ್ನೂ ತೆಗೆದುಕೊಳ್ಳದೆ ನಿಶ್ಚಿಂತೆಯಿಂದ ಇರಬೇಕು. ಬಹಳ ಹೇಳುವದರಿಂದೇನು ಪ್ರಯೋಜನವು? ನನ್ನನ್ನು ನಿಮ್ಮ ಒಡಹುಟ್ಟಿದ ತಂಗಿಯಂತೆ ಭಾವಿಸಿ ನಡಿಸಿಕೊಳ್ಳಿರಿ.'' ಈ ಪ್ರಕಾರ ಮಂಜುಘೋಷೆಯು

ಉಚಿತವಾದ ಸವಿ ಮಾತುಗಳಿಂದ ಪದ್ಮನಯನೆಯನ್ನು ಶ್ಲಾಘಿಸುತ್ತಿರಲು, ದಾಸಿಯರು ಭೋಜನದ ಸಿದ್ಧತೆಯಾಯಿತೆಂದು ತಿಳಿಸಿದರು. ಆಗ ಮಂಜುಘೋಷೆಯು ಪದ್ಮನಯನೆಯನ್ನು ಭೋಜನ ಶಾಲೆಗೆ ಕರಕೊಂಡು ಹೋಗಿ, ತಾನೂ ಅವಳೊಡನೆ ಭೋಜನಕ್ಕೆ ಕುಳಿತಳು.

ಪದ್ಮನಯನೆಯು ಮಂಜುಘೋಷೆಯ ಆದರಕ್ಕೂ, ಸುಗುಣಗಳಿಗೂ ಪ್ರಸನ್ನಳಾಗಿ ಅವಳನ್ನು ಹಲವು ಬಗೆಯಾಗಿ ಸ್ತುತಿಸುತ್ತ ತನ್ನ ಯಾವತ್ತೂ ಸಂಗತಿಯನ್ನು ತಿಳಿಸಿ ನುಡಿದಳೇನಂದರೆ—"ಮಂಜುಘೋಷಾ, ಇನ್ನು ಮೇಲೆ ನಾನು ಪರಕೀಯಳೆಂದು ತಿಳಿಯದೆ, ನಿನ್ನ ಒಡಹುಟ್ಟಿದವಳೆಂಬ ಭಾವದಿಂದ ನನ್ನನ್ನು ನಡಿಸಿಕೊ. ನಿನ್ನ ಶುದ್ಧ ಮನಸ್ಸನ್ನೂ ತಿಳಿದ ನಾನು, ಎಲ್ಲ ರೀತಿಯಿಂದಲೂ ನಿನ್ನವಳಾಗಿದ್ದೇನೆ. ನಿನ್ನನ್ನೂ, ನಿನಗೆ ಎಲ್ಲ ರೀತಿಯಿಂದಲೂ ತಕ್ಕವನಾಗಿರುವ ನಿನ್ನ ಪತಿಯನ್ನೂ ನೋಡಿ ನನಗೆ ಬಹಳ ಸಂತೋಷವಾಗಿದೆ. ಸ್ವಲ್ಪದಿನಗಳ ಹಿಂದೆ ಪತಿಯೊಡನೆ ಆನಂದದಿಂದ ರಮಿಸುತ್ತಿದ್ದ ನಾನು, ಚಕೋರನನ್ನಗಲಿದ ಚಕೋರಿಯಂತೆ "ಪತಿ ಪತಿ" ಎಂದು ಹಲಬುತ್ತ ನಿನ್ನನ್ನು ಹೊಂದಿದ್ದೇನೆ. ಎಂದು ಹೇಳಿ, ಪದ್ಮನಯನೆಯು ಕಣ್ಣೀರು ಸುರಿಸಿದಳು. ಅವಳ ದುಃಖಕಾರಕ ಸಂಗತಿಯನ್ನೂ, ವಿನಯವನ್ನೂ ನೋಡಿ ಮಂಜುಘೋಷೆಗೂ ಅಲ್ಲಿ ನೆರೆದಿದ್ದ ಎಲ್ಲ ದಾಸಿಯರಿಗೂ ಬಹಳ ದುಃಖವಾಗಿ ಅವರ ಸೆರಗುಗಳು ಅಶ್ರುಗಳಿಂದ ತೊಯ್ದವು. ಮಂಜುಘೋಷೆಯು ದುಃಖದಿಂದ ಪದ್ಮನಯನೆಯನ್ನು ಕುರಿತು—"ಅವ್ವಾ, ಪದ್ಮನಯನಾ, ನಿನ್ನ ದುಃಖವನ್ನು ಶಾಂತಮಾಡು. ನೀನು ಅಲೌಕಿಕ ಸ್ತ್ರೀಯಿರುತ್ತೀ ಸ್ವಲ್ಪ ದಿನಗಳಲ್ಲಿಯೇ ದೇವರ ದಯದಿಂದ ನೀನು ನಿನ್ನ ಪತಿಯನ್ನು ಕೂಡುವೆಯೆಂದು ನಾನು ಖಂಡಿತವಾಗಿ ಹೇಳುತ್ತೇನೆ. ಗರ್ಭವತಿಯಾದ ನೀನು ಹೀಗೆ ಶೋಕಮಾಡುವದು ನೆಟ್ಟಗಲ್ಲ ಬಿಡು, ಇನ್ನು ಕಣ್ಣೀರು ಹಾಕಬೇಡು." ಎಂದು ಹೇಳಿ ಅವಳು ತನ್ನ ಸೆರಗಿನಿಂದ ಪದ್ಮನಯನೆಯ ಕಣ್ಣೀರುಗಳನ್ನು ಒರಿಸಿದಳು.

ಇರುಇರುತ್ತ ಸಮ ವಯಸ್ಕರಾದ ಮಂಜುಘೋಷಾ–ಪದ್ಮನಯನೆಯರ ಸಖ್ಯವು ಹೆಚ್ಚುತ್ತ ಹೋಯಿತು. ಸಿಂಹಕೇತುವಾದರೂ ಪದ್ಮನಯನೆಯ ಬಯಕೆಗಳನ್ನು ಪೂರ್ಣ ಮಾಡುವದರಲ್ಲಿ ತತ್ಪರನಾಗಿದ್ದನು. ಈ ಪ್ರಕಾರ ರಾಜಪುತ್ರಿಯು ತನ್ನ ಸುಗುಣಗಳಿಂದ ಬಹುಜನರ ಆದರಕ್ಕೆ ಪಾತ್ರಳಾಗಿ, ಸುಖದಿಂದ ಕಾಲಹರಣ ಮಾಡುತ್ತಿರಲು, ಅವಳಿಗೆ ನವಮಾಸಗಳು ಪೂರ್ಣವಾಗಿ ಒಳ್ಳೇ ಮುಹೂರ್ತದಲ್ಲಿ ಆಕೆಯು ಗಂಡುಮಗುವನ್ನು ಹೆತ್ತಳು. ಆಗ ಮಂಜುಘೋಷೆಗೂ, ಸಿಂಹಕೇತುವಿಗೂ ಬಹಳ ಸಂತೋಷವಾದದ್ದಲ್ಲದೆ, ಕೂಸಿನ ರೂಪವನ್ನೂ, ವರ್ಚಸ್ಸನ್ನೂ ನೋಡಿ ಅವರೆಲ್ಲರು ಬೆರಗಾದರು. ಕಮಲಾಕ್ಷನ ರೂಪವನ್ನು ಅಚ್ಚಳಿಯದೆ ಹೋಲುತ್ತಿದ್ದ ಪುತ್ರನ ರೂಪವನ್ನು ನೋಡಿ, ಪದ್ಮನಯನೆಯು ಆನಂದಸಾಗರದಲ್ಲಿ ಮುಳುಗಹತ್ತಿದಳು. ಜ್ಯೋತಿಷಿಗಳು ಆ ಕೂಸಿನ ಸಾಮುದ್ರಿಕ ಲಕ್ಷಣಗಳನ್ನೂ, ಜನನಕಾಲದ ಮುಹುರ್ದೆಸೆಯನ್ನೂ ನೋಡಿ ಅದಕ್ಕೆ ವಿಕ್ರಮಾರ್ಕನೆಂದು ಹೆಸರನ್ನಿಡುವದಕ್ಕೆ ಹೇಳಿದರು. ವಿಕ್ರಮಾರ್ಕನು ದಿನದಿನಕ್ಕೆ ಬೆಳೆಯುತ್ತ ಹೋದಂತೆ ಅವನ ಬಾಲಕ್ರೀಡೆಗಳು ತಾಯಿಯಾದ ಪದ್ಮನಯನೆಯ ದುಃಖವನ್ನು ನಾಶಮಾಡುತ್ತ ಹೋದವು. ಅವಳು ಮಂಜುಘೋಷೆಯ

ಮುಂದೆ ತನ್ನ ಪತಿಯ ಗುಣಗಳನ್ನು ಹೊಗಳುತ್ತ ಆತನು ವಿಕ್ರಮಾರ್ಕನ ಬಾಲಕ್ರೀಡೆಗಳನ್ನು ನೋಡಲಿಲ್ಲೆಂದು ಯಾವಾಗಲೂ ದುಃಖಪಡುತ್ತಿದ್ದಳು. ಇತ್ತ ಸಿಂಹಕೇತುವು ಕಮಲಾಕ್ಷನ ಶೋಧಾರ್ಥವಾಗಿ ಬಹಳ ಯತ್ನಿಸಿದರೂ, ಅದೆಲ್ಲ ನಿಷ್ಫಲವಾದದ್ದರಿಂದ ಅವನು ಕುಂಠಿತನಾದನು.

ವಿಕ್ರಮಾರ್ಕನು ದಿನದಿನಕ್ಕೆ ದೊಡ್ಡವನಾಗಹತ್ತಿದನು, ಅವನ ತೇಜಸ್ಸು, ಚಾಪಲ್ಯ, ಸೌಂದರ್ಯ ಇವು ಜನರ ಚಿತ್ತವನ್ನು ಆಕರ್ಷಿಸುತ್ತಿದ್ದವು. ಅವನಿಗೆ ಒಂದು ವರ್ಷ ತುಂಬಿತು, ಅವನು ಎರಡು ವರ್ಷದವನಾದನು, ಅವನ ವಯಸ್ಸು ನಾಲ್ಕು ವರ್ಷದ್ದಾಯಿತು. ಒಂದುದಿನ ಪದ್ಮನಯನೆಯು ತನ್ನ ಮಂದಿರದಲ್ಲಿ ಕುಳಿತುಕೊಂಡಿದ್ದಾಳೆ, ಮಧ್ಯಾಹ್ನದ ಸಮಯ, ಬಿಸಿಲು ರಣಗುಟ್ಟಿ ಸುರಿಯುತ್ತಲಿದೆ, ವಿಕ್ರಮಾರ್ಕನು ಬಳಿಯಲ್ಲಿ ಮಲಗಿಕೊಂಡು ನಿದ್ದೆ ಮಾಡುತ್ತಲಿದ್ದಾನೆ, ಸುಂದರವಾದ ಜಾವಳಗಳಿಂದಲೂ, ಬಾಲದೊಡಿಗೆಗಳಿಂದಲೂ ಅವನ ಮುಖವು ಮುದ್ದು ಸುರಿಯುತ್ತಲಿದೆ, ತುಂಟತನದಿಂದ ಹುಡಿಯಲ್ಲಿ ಆಡಿದ್ದರಿಂದ ಅವನ ಮೈಗೆ ಅಲ್ಲಲ್ಲಿ ಧೂಲಿಯು ಹತ್ತಿದೆ, ಅವನ ಆಟದ ಒಡವೆಗಳು ಅತ್ತೊಂದು ಇತ್ತೊಂದು ಬಿದ್ದವೆ, ಆಡಲಿಕ್ಕೆ ತಕ್ಕೊಂಡಿದ್ದ ಚಿಕ್ಕ ಧನುಸ್ಸು ಅವನ ಎಡಗೈಯಲ್ಲಿ ಒಪ್ಪುತ್ತಲಿದೆ, ಬಲ ಅಂಗೈಯಲ್ಲಿ ಸಾರ್ವಭೌಮ ಚಿಹ್ನಗಳು ಸ್ಪಷ್ಟವಾಗಿ ಕಾಣುತ್ತಲಿವೆ, ಅವನು ಹೊಚ್ಚಿದ್ದ ಸೂಕ್ಷ್ಮವಾದ ಶಾಲನ್ನು ಕಾಲಿನಿಂದ ಒದ್ದು ಸರಿಸಿದ್ದಾನೆ, ಇಂಥ ದುರ್ಲಭನಾದ ಪುತ್ರನನ್ನು ಸಾಭಿಲಾಷೆಯಿಂದ ಎವೆಯಿಕ್ಕದೆ ನೋಡುತ್ತಿದ್ದ ಪದ್ಮನಯನೆಯ ಕಣ್ಣುಗಳೊಳಗಿಂದ ಎರಡೆಂದರೆ ಎರಡೇ ಆನಂದ ಬಾಷ್ಪದ ಹನಿಗಳು ಉದುರಿದವು. ಅವಳು ಮಮತೆಯಿಂದ ಮಗನ ಮೈಮೇಲೆ ಕೈಯಾಡಿಸಿ, ಜಾರಿಹೋದ ಶಾಲನ್ನು ಮೆಲ್ಲನೆ ಮೈಮೇಲೆ ಎಳೆದು ಆನಂದದ ಭರದಿಂದ—''ವಿಕ್ರಮಾರ್ಕಾ, ನಿನ್ನ ಹಡೆದವರು ಎಲ್ಲಿ?'' ಎಂದು ತಟ್ಟನೆ ನುಡಿದಳು. ಅದೇ ಆಕೆಯ ನುಡಿಯು, ಆಕೆಯ ಕರ್ಣರಂಧ್ರದ್ವಾರದಿಂದ ಆಕೆಯ ಹೃದಯವನ್ನು ಪ್ರವೇಶಿಸಿ ಅಲ್ಲಿದ್ದ ದುಃಖಾಗ್ನಿಯನ್ನು ಜಾಗ್ರತಗೊಳಿಸಿತು. ಆ ಅಗ್ನಿಗೆ ವಿಕ್ರಮಾರ್ಕನ ರೂಪಸಾದೃಶ್ಯದಿಂದ ಅವಳ ಸ್ಮೃತಿ ಪಟಲದ ಮೇಲೆ ಮೂಡಹತ್ತಿದ ಕಮಲಾಕ್ಷನ ಸುಂದರರೂಪವೂ, ಆ ಸುಂದರ ರೂಪಕ್ಕೆ ಅಲಂಕಾರ ಭೂತವಾದ ಅವನ ಸದ್ಗುಣಗಳೂ, ಆ ಸದ್ಗುಣಗಳ ತೇಜಸ್ಸನ್ನು ವೃದ್ಧಿಗೊಳಿಸುವ ಅದ್ವಿತೀಯವಾದ ಪರಾಕ್ರಮವೂ ಆ ರೂಪ–ಗುಣ–ಪರಾಕ್ರಮಗಳಿಗೆ ಲುಬ್ಧಳಾಗಿ ತಾನು ಅವನೊಡನೆ ಮಾಡಿದ ಲೀಲೆಗಳೂ ಉರವಲವಾಗಿ, ಆ ಅಗ್ನಿಯು ಭುಗಿಭುಗಿಲೆಂದು ಪ್ರಜ್ವಲಿಸಿತು. ಆ ದುಃಖಾಗ್ನಿಜ್ವಾಲೆಯಿಂದ ಆಕೆಯ ಕರುಣಾರಸವು ಕಾದು ಉಕ್ಕೇರಿ ಅಶ್ರು ರೂಪದಿಂದ ಹೊರಬೀಳಹತ್ತಿತು.

ಪ್ರಿಯ ವಾಚಕರೆ, ಸಾಂಸಾರಿಕರಾದ ನಮ್ಮ ವಿಚಿತ್ರ ಸ್ಥಿತಿಯನ್ನು ಮನಸ್ಸಿನಲ್ಲಿ ತಂದಿರೇನು? ನಮ್ಮ ದುರ್ಬಲ ಮನಸ್ಸು ಕ್ಷಣದಲ್ಲಿ ಆನಂದಮಯವಾಗಿ ನೇತ್ರಗಳು ಬಾಷ್ಪ ಪೂರಿತವಾದರೆ, ಮತ್ತೊಂದು ಕ್ಷಣದಲ್ಲಿ ಅದೇ ಮನಸ್ಸು ದುಃಖಮಯವಾಗಿ ಅವೇ ನೇತ್ರಗಳು ದುಃಖಾಶ್ರುಪೂರ್ಣವಾಗುವವು. ಪದ್ಮನಯನೆಯ ಸ್ಥಿತಿಯಾದರೂ ಹೀಗೆಯೇ ಆಯಿತು.

ಆಕೆಯು ಮಗನ ಸುಂದರ ರೂಪವನ್ನು ನೋಡಿ ಆನಂದ ಬಾಷ್ಪಗಳನ್ನು ಉದರಿಸುತ್ತಿರುವಷ್ಟರಲ್ಲಿ ಪತಿಯ ಸ್ಮರಣವಾಗಲು, ಆ ಬಾಷ್ಪಗಳು ಅಶ್ರು ರೂಪವನ್ನು ಹೊಂದಿದವು. ಹೀಗೆ ಸಾಂಸಾರಿಕರ ಮನಸ್ಸು ಆಗಾಗ್ಗೆ ಕಾಯುತ್ತ ತಂಪಾಗುತ್ತ ಹೋಗುವದರಿಂದ ಅವರು ನುಗ್ಗಾಗುತ್ತಿದ್ದರೂ, ಅವರ ಆ ಕೋಮಲ ಮನಸ್ಸು ಈಶ ನಿರ್ಮಿತ ಸೃಷ್ಟಿ ರೂಪವಾದ ರಂಗಭೂಮಿಯಲ್ಲಿ ಬೋಧ ಪ್ರದವಾದ ಸುಂದರ ನಾಟಕಗಳ ಉತ್ಪತ್ತಿಗೆ ಕಾರಣ ವಾಗಿರುತ್ತದೆಂಬದನ್ನು ಮರೆಯಲಾಗದು. ಮಹಾ ಭಾರತ–ರಾಮಾಯಣಾದಿ ವೇದತುಲ್ಯ ಗ್ರಂಥಗಳಲ್ಲಿ ಆ ಕೋಮಲ ಮನಸ್ಸಿನಿಂದಾದ ನಾಟಕಗಳೇ ವರ್ಣಿಸಲ್ಪಟ್ಟಿವೆ. ಇರಲಿ, ಈಗ ಪದ್ಮನಯನೆಯ ಮನಸ್ಸು ಪುತ್ರ–ದರ್ಶನಾನಂದದಿಂದ ತಂಪಾಗಿ, ಕೂಡಲೆ ಅದು ಪತಿಯ ವಿಯೋಗ ಸ್ಮರಣದಿಂದ ಕಾದದ್ದರಿಂದ ಆಕೆಯು ತೀರ ಹಣ್ಣಾದಳು. ಮಧ್ಯಾಹ್ನದ ಬಿಸಿಲು ರಣಗುಟ್ಟಿ ಸುರಿಯುತ್ತಿರಲು, ಆಗ ಆಕೆಯ ಬಳಿಗೆ ಯಾರೂ ಬರುವಂತೆ ಇದ್ದಿಲ್ಲ; ಆದ್ದರಿಂದ ಆಕೆಯು ನಿಶ್ಶಂಕೆಯಿಂದ ಕಣ್ಣೀರು ಸುರಿಸುತ್ತ ತನ್ನ ಕಂದನು ಎಚ್ಚತ್ತಾನೆಂಬ ಅಂಜಿಕೆಯಿಂದ ಕುತ್ತಿಗೆಯೊಳಗೆ ಅಳುತ್ತ—“ಬಾಳಾ, ಏನು ನನ್ನ ದುರ್ದೈವವಿದು? ಬಾಲ ಮಾರ್ತಾಂಡನಂತೆ ಇದ್ದ ನಿನ್ನ ಪೋಷಣವನ್ನು ಮಾಡಲಿಕ್ಕೆ ನಡುವಗಲ ಮಾರ್ತಾಂಡನೇ ಸಮರ್ಥನಲ್ಲದೆ, ನನ್ನಂಥ ತೇಜೋಹೀನಳು ಸಮರ್ಥಳೇ? ದೈವಹೀನೆಯ ಹೊಟ್ಟೆಯಲ್ಲಿ ಹುಟ್ಟಿದ್ದರಿಂದ ನೀನು ಪರದೇಶಿಯಾಗಿ ಬಾಳಬೇಕಾಯಿತಲ್ಲ? ಶಿವ ಶಿವ! ಬಾಳಾ, ನಾನು ನಿನಗೆ ಏನು ಮಾಡುವ ಹಾಗಿದ್ದೇನೆ? ನಿನ್ನ ಯೋಗ್ಯವಾದ ಲಾಲನ ಪಾಲನಗಳನ್ನು ಮಾಡಲಿಕ್ಕೆ ಅಬಲೆಯಾದ ನನಗೆ ಸಬಲರ ಸಥಿಯ ಸಹಾಯವಿಲ್ಲ; ನಿನ್ನ ಜ್ಞಾನವನ್ನು ಹೆಚ್ಚಿಸಲಿಕ್ಕೆ ನಾನು ಜ್ಞಾನಿಯಲ್ಲ; ಪೌರುಷವನ್ನು ಹೆಚ್ಚಿಸಲಿಕ್ಕೆ ನಾನು ಪುರುಷಳಲ್ಲ; ವೈಭವವನ್ನು ಹೆಚ್ಚಿಸಲಿಕ್ಕೆ ನಾನು ವೈಭವಶಾಲಿಯಲ್ಲ! ನನ್ನಂಥ ಅನಧಿಕಾರಿಯಾದ ಅಬಲೆಯ ಸಹಾಯದಿಂದ ನೀನು ತೇಜೋಹೀನನಾಗಬಹುದು. ಹೇಗೂ ನಿನ್ನ ಪ್ರತ್ಯಕ್ಷ ಸೋದರ ಮಾವನಂತೆ ಇದ್ದ ಸಿಂಹಕೇತು ರಾಜನು ನಿನ್ನ ಯೋಗಕ್ಷೇಮವನ್ನು ತಕ್ಕೊಳ್ಳಲಿಕ್ಕೆ ಸಮರ್ಥನಿದ್ದಾನೆ. ತಾಯಿ ಹೋಗಿ ಸೋದರಮಾವನು ಉಳಿಯಲೆಂದು ಜನರು ಆಡುವದುಂಟು. ಅಂದ ಬಳಿಕ ನಾನಿದ್ದು ಮಾಡುವದೇನು? ಬಾಳಾ, ವಿಕ್ರಮಾರ್ಕಾ, ನನ್ನ ಕಾಲಗುಣವು ಒಳ್ಳೆಯದಲ್ಲ ಕಂಡೆಯಾ! ಈ ಹತ ಭಾಗ್ಯಳಿಗೆ ಪ್ರಥಮದಲ್ಲಿ ಆಶ್ರಯ ಕೊಟ್ಟ ತಾಯಿ–ತಂದೆಗಳು ದುಃಖದಲ್ಲಿ ಮುಳುಗಿರುವರು; ಮಧ್ಯದಲ್ಲಿ ಆಶ್ರಯ ಕೊಟ್ಟ ಮೇಘನಾದನು ನಾಶವನ್ನು ಹೊಂದಿದನು; ನ್ಯಾಯದಿಂದ ಪಾಣಿಗ್ರಹಣ ಮಾಡಿದ ಕಮಲಾಕ್ಷ ಪ್ರಭುಗಳು ದೇಶಭ್ರಷ್ಟರಾದರು; ಪ್ರಾಣಕ್ಕಿಂತಲೂ ಹೆಚ್ಚಾಗಿದ್ದ ಪ್ರಿಯ ಸಖಿಯಾದ ಸುಮಧ್ಯಮೆಯು ಯಾವಾಗಲೂ ಅಗಲದೆ ನೆರಳಿನಂತೆ ನನ್ನ ಬಳಿಯಲ್ಲಿರುತ್ತಿರಲು, ಹಾವಿಗೆ ತುತ್ತಾದಳು; ದುಷ್ಟ ಮನಸ್ಸಿನಿಂದ ಕ್ಷಣಮಾತ್ರ ನನ್ನ ನೆರಳಿಗೆ ನಿಂತ ಸಿಂಹನಾದನು ನಾಶವಾದದ್ದಂತು ಇರಲಿ, ಅವನ ಸಹವಾಸಮಾಡಿದ ಉಗ್ರದಂಷ್ಟ್ರನು ಕೂಡ ನನ್ನ ಕೆಟ್ಟ ಕಾಲ ಗುಣದ ಸುಂಕದಿಂದ ನಾಶವನ್ನು ಹೊಂದಿದನು! ಇನ್ನೇನು ಬೇಕು? ಕಂದಾ, ಈಗ ನಿನ್ನ ಮಾವನೂ ನೀನೂ ಈ ದೈವ ಹೀನೆಯ ಯೋಗದಿಂದ ಕೇಡಿಗೊಳಗಾದರೆ ಮಾಡುವದೇನು? ಇಷ್ಟು ದಿನ ನೀವಿಬ್ಬರೂ ಸುರಕ್ಷಿತವಾಗಿದ್ದದ್ದೇ ಸಾಕು.

ಇನ್ನು ನಾನು ಪ್ರಾಣವಿಡುವದಿಲ್ಲ. ಹಡೆದ ತಪ್ಪಿಗಾಗಿ ನಿನಗೆ ಸ್ತನಪಾನ ಮಾಡಿಸುವ ಉದ್ದೇಶದಿಂದ ನಾನು ಇಲ್ಲಿಯವರೆಗೆ ಪ್ರಾಣಧಾರಣ ಮಾಡಿದೆನು. ಈಗ ನೀನು ಕೈ ಮುಟ್ಟಿ ಉಣ್ಣುವಹಾಗಾದೆ; ಸ್ವತಂತ್ರವಾಗಿ ಆಡುವ ಹಾಗಾದೆ; ಸವಿ ಮಾತುಗಳಿಂದ ಜನರ ಮನಸ್ಸನ್ನು ಆಕರ್ಷಿಸುವ ಯೋಗ್ಯತೆಯು ನಿನ್ನಲ್ಲಿದೆ; ನಿನ್ನ ರೂಪ–ಪ್ರತಾಪಗಳನ್ನು ನೋಡಿದ ಮಾತ್ರದಿಂದ ಜನರು ನಿನ್ನಾಧೀನವಾಗುತ್ತಾರೆ. ಇನ್ನೇನು ಬೇಕು! ಬಾಳಾ, ಸಾಕು, ನಾಲ್ಕು ವರ್ಷ ನನ್ನ ದುಃಖವನ್ನು ಮರೆಯಿಸಿ, ನಿನ್ನ ಸುಂದರವಾದ ಜಾವಳಗಳನ್ನು ಸರಿಮಾಡುತ್ತ ಮೊಲೆಯುಣಿಸುವಾಗ ಪ್ರಸನ್ನವದನನಾಗಿ ನನ್ನ ಮೋರೆಯನ್ನು ನೋಡಿ ಅಕಸ್ಮಾತ್ತಾಗಿ ಮೊಲೆಯುಣ್ಣುವದನ್ನು ಬಿಟ್ಟು ನಕ್ಕು ನನ್ನನ್ನು ಧನ್ಯಳಾಗವಾಡಿದೆ! ಇನ್ನು ನಾನು ಜೀವದಿಂದಿರುವದು ಎಷ್ಟು ಮಾತ್ರವೂ ನ್ಯಾಯವಲ್ಲ. ಪ್ರಿಯಪತಿಯ ವಿಯೋಗದಲ್ಲಿ ಜೀವದಿಂದಿರುವದು ಸತೀ ಧರ್ಮಕ್ಕೆ ಗೌಣವಾಗಿರುವದು. ನಿನ್ನಂಥ ತೇಜಸ್ವಿಯು ನನ್ನ ಉದರದಲ್ಲಿ ಜನಿಸಿದ್ದೇ ನನ್ನ ಸ್ತ್ರೀ ಜನ್ಮದ ಸಾರ್ಥಕತೆಯು! ತೇಜೋ ವಿಶೇಷದಿಂದ ನೀನು ಜಗತ್ತಿನಲ್ಲಿ ಪ್ರಕಾಶಮಾನನಾಗು. ಸರ್ವೇಶನು ನಿನಗೆ ಉದ್ದಂಡವಾದ ಆಯುಷ್ಯವನ್ನೀಯಲಿ– ಈ ಲೋಕದಲ್ಲಿ ನನ್ನ ಕೆಲಸವು ಇಂದಿಗೆ ಮುಗಿದಂತಾಯಿತು.

ಈ ಮೇರೆಗೆ ಪದ್ಮನಯನೆಯು ಶೋಕಮಗ್ನಳಾಗಿ ಕಣ್ಣೀರು ಸುರಿಸುತ್ತ ಮಗನ ಮುಖವನ್ನು ನೋಡುತ್ತ ಕುಳಿತಿರಲು, ವಿಕ್ರಮಾರ್ಕನು ಒಂಮ್ಮಿಂದೊಮ್ಮೆ ''ಅಪ್ಪಾ, ಅಪ್ಪಾ,'' ಎಂದು ಕನಕರಿಸುತ್ತ ಎದ್ದು ಕುಳಿತುಕೊಂಡನು. ಅವನು ತಾಯಿಯನ್ನು ಕುರಿತು—ಅವ್ವಾ, ಇನ್ನು ಸುಮ್ಮನಾಗು, ಅಳಬೇಡ. ನಾನು ಆ ಹುಲಿಯನ್ನು ಕೊಂದುಬಂದೆನು; ಇನ್ನು ಮೇಲೆ ಅದು ನಿನ್ನನ್ನು ತಿನ್ನುವದಿಲ್ಲ. ಅಪ್ಪನು ಎಲ್ಲಿ ಇದ್ದಾನೆ? ಆತನಿಗೆ ಆ ಹುಲಿಯನ್ನು ತೋರಿಸುತ್ತೇನೆ; ಅನ್ನಲು, ಪದ್ಮನಯನೆಯ ದುಃಖವು ಒತ್ತರಿಸಿ ಬಂದಿತು. ಆಕೆಯು ಮಗನನ್ನು ಬಿಗಿಯಾಗಿ ಅಪ್ಪಿಕೊಂಡು ಮೊಲೆಯುಣಿಸಹತ್ತಿ ತಲೆಯ ಮೇಲೆ ಕೈಯಾಡಿಸುತ್ತ—ಕಂದಾ, ದೈವಹೀನೆ ಯಾದ ನಾನು ನಿನ್ನ ಲೀಲೆಗಳಿಗೆ ಲುಬ್ಧಳಾಗಿ ಪ್ರಾಣಧಾರಣ ಮಾಡಲಿಯಾ, ಅಥವಾ ಸತೀ ಧರ್ಮವನ್ನನುಸರಿಸಿ ಪ್ರಾಣತ್ಯಾಗ ಮಾಡಲಿಯಾ, ಹೇಳು; (ದುಃಖದಿಂದ ಕುತ್ತಿಗೆಯ ಶಿರಗಳು ಬಿಗಿದು) ಒಟ್ಟಿಗೆ, ನನ್ನ ಪರಿಣಾಮವು ನೆಟ್ಟಗಿಲ್ಲ. ಎಲೈ ದುರ್ದೈವವೇ, ಹೀಗೆ ನೀನು ನೂಲಿನಿಂದ ಕುತ್ತಿಗೆಯನ್ನು ಕೊಯ್ಯುವದಕ್ಕಿಂತ, ತೀಕ್ಷ್ಣವಾದ ಖಡ್ಗದಿಂದ ಒಮ್ಮೆಲೆ ನನ್ನ ಶಿರಸ್ಸನ್ನು ಹಾರಿಸಬಾರದೆ! ಯಾಕೆ ನನ್ನನ್ನು ಇಷ್ಟು ಗೋಳಾಡಿಸುತ್ತೀ? ನಿನಗಾದರೂ ನಾನು ಇಷ್ಟು ಯಾಕೆ ಹೇಳಿಕೊಳ್ಳಬೇಕು? ಇಷ್ಟು ದೈನ್ಯವನ್ನಾದರೂ ಯಾಕೆ ತಾಳಬೇಕು? ಎಲೈ ಪದ್ಮನಯನೇ, ಸಾಕು; ಇನ್ನು ನಿನ್ನ ಮರುಳತನವು ಸಾಕು. ಮೋಹಪಾಶಕ್ಕೆ ಒಳಗಾಗಬೇಡ. ಪ್ರಾಣತ್ಯಾಗದ ವಿಷಯವಾಗಿ ನಿನ್ನ ಮಗನನ್ನೇ ಸಾಕ್ಷಿಯಾಗಿ ಇಟ್ಟು ಪ್ರತಿಜ್ಞೆಯನ್ನು ಮಾಡಿ ಬಿಡು, ಎಂದು ನುಡಿದು, ಆ ಸತ್ವಶೀಲೆಯು ಪ್ರತಿಜ್ಞೆಯನ್ನು ಉಚ್ಚ ಅರಿಸುತ್ತಿರಲು, ಎಂದು ನುಡಿದು, ಆ ಸತ್ವಶೀಲೆಯು ಪ್ರತಿಜ್ಞೆಯನ್ನು ಉಚ್ಚರಿಸುತ್ತಿರಲು, ಒಬ್ಬ ಋಷಿಯು ಅಕಸ್ಮಾತ್ತಾಗಿ ಅವಳೆದುರಿಗೆ ಬಂದು ನಿಂತನು!

ಪದ್ಮನಯನೆಯ ಮನಸ್ಸು ಶೋಕಾಗ್ನಿಯಿಂದ ಕಾದು ನಿರ್ದೋಷವಾಗಿತ್ತು, ಪುಣ್ಯರಾಶಿಯಂತೆ ಇದ್ದ ಆ ಬ್ರಹ್ಮರ್ಷಿಯು ಅಕಸ್ಮಾದ್ದರ್ಶನದಿಂದ ಆ ನಿರ್ದೋಷ ಮನಸ್ಸಿನಲ್ಲಿ ಕೂಡಲೆ ಅನಿರ್ವಾಚ್ಯವಾದ ಭಕ್ತಿಯು ಉತ್ಪನವಾಯಿತು. ಪರಲೋಕ ಹೊಂದಿದ ಸದ್ಗುರುವಾದ ಕಪಿಂಜಲ ಋಷಿಯು ಪ್ರತ್ಯಕ್ಷ ಎದುರಿಗೆ ನಿಂತುಕೊಂಡಿರಲು, ಪದ್ಮನಯನೆಯ ಎವೆಯಿಕ್ಕದೆ ನೋಡುತ್ತ ವಿಕ್ರಮಾರ್ಕನನ್ನು ಋಷಿಯ ಚರಣಕ್ಕೆ ಕೆಡವಿದಳು. ಆ ಪುಣ್ಯವಂತಳು ತಾನೂ ಋಷಿಗೆ ಸಾಷ್ಟಾಂಗ ನಮಸ್ಕಾರ ಮಾಡಿ ಕೈಜೋಡಿಸಿ ಎದ್ದು ನಿಂತುಕೊಳ್ಳಲು, ಋಷಿಯು ವಿಕ್ರಮಾರ್ಕನ ತಲೆಯ ಮೇಲೆ ವರದ ಹಸ್ತವನ್ನಿಟ್ಟು, ಪದ್ಮನಯನೆಯನ್ನು ಸಂತೈಸಿ ನೆತ್ತಿಯನ್ನು ಮೂಸಿನೋಡಿ–ವತ್ಸ, ನಿನ್ನ ದುಃಖದ ಕಾಲವು ಮುಗಿಯುತ್ತ ಬಂದಿರಲು, ಪ್ರಾಣತ್ಯಾಗದ ಬಗ್ಗೆ ಪ್ರತಿಜ್ಞೆಯೇಕೆ? ಜಾಗರೂಕಳಾಗು. ನಿನ್ನ ಪತಿಯು ಸುರಕ್ಷಿತವಾಗಿದ್ದಾನೆ. ನೀನು ಪ್ರಾಣತ್ಯಾಗ ಮಾಡಿ ಆತನನ್ನು ದುಃಖ ಸಾಗರದಲ್ಲಿ ದೂಡಬೇಕೆನ್ನುತ್ತೀಯಾ? ನನ್ನ ಭವಿಷ್ಯ ವಚನದಲ್ಲಿಯೂ ನಿನ್ನ ಅವಿಶ್ವಾಸವೇ? ಈಗ ಸತ್ತ್ವದಿಂದ ಸಂಕಟ ಪರಂಪರೆಗಳನ್ನು ನೀಗಿ ಶುದ್ಧ ಸತ್ವಶಾಲಿಗೆಗಳಾಗಿ ಉಳಿದವರ ಕೀರ್ತಿಯೇ ಈ ಜಗತ್ತಿನಲ್ಲಿ ಹೊಳೆಯುವದು. ಪಾಂಡವರನ್ನು ನೋಡು ಹರಿಶ್ಚಂದ್ರನನ್ನು ನೆನಪುಮಾಡಿಕೊ, ಇತ್ತಿತ್ತ ಕಲಿಯುಗದಲ್ಲಿ ಆಗಿಹೋದ ಚಂದ್ರಗುಪ್ತನ ಚರಿತ್ರವನ್ನು ಪರಿಶೀಲಿಸು. ಇನ್ನು ನೀನು ದುಃಖಕ್ಕೆ ಇಂಬುಗೊಡಬೇಡ ಶಾಂತಚಿತ್ತಳಾಗು. ಆಗುವದೆಲ್ಲ ನಿನ್ನ ಹಿತಕ್ಕೇ ಆಗುತ್ತದೆಂದು ಗಟ್ಟಿಯಾಗಿ ನಂಬು. ನಿನಗೆ ಹಲವು ದುಃಖದ ಪ್ರಸಂಗಗಳು ಒದಗಿದ್ದು ನಿಜವು; ಆದರೆ ಆ ಪ್ರಸಂಗಗಳಲ್ಲೆಲ್ಲ ಪರಮೇಶ್ವರನು ನಿನ್ನನ್ನು ರಕ್ಷಿಸಿ ಕಲ್ಯಾಣಮಾಡುತ್ತಲೇ ಬಂದಿರುವದನ್ನು ಮರೆತು ಕೃತಘ್ನಳಾಗಬೇಡ. ಪ್ರಾಣತ್ಯಾಗವು ಕೃತಜ್ಞತೆಯ ಲಕ್ಷಣವಲ್ಲವೇ? ಇರಲಿ, ಆದದ್ದು ಒಳಿತಾಯಿತು. ನಿಮ್ಮಂಥ ಶುದ್ಧಾಂತಃಕರಣದ ಪುಣ್ಯಶಾಲಿಗಳಿಗೆ ದೋಷಕೊಡುವದಾದರೂ ಅಪರಾಧವೆಂದೇ ತಿಳಿಯಬೇಕು. ನೀನು ಪ್ರಾಣತ್ಯಾಗಕ್ಕೆ ಸಿದ್ಧಳಾಗದಿದ್ದರೆ ನಾನೆಲ್ಲಿ ನಿನಗೆ ದರ್ಶನಕೊಡುತ್ತಿದ್ದೆನು? ನಿಮ್ಮಂಥ ಸದ್ಭಕ್ತರನ್ನು ಸಮಾಧಾನ ಗೊಳಿಸುವದಕ್ಕಾಗಿಯೇ ಪರಮೇಶ್ವರನು ಪ್ರಸಂಗಕ್ಕೆ ತಕ್ಕಂತೆ ಹಲವು ರೂಪಗಳಿಂದ ಪ್ರಕಟವಾಗಿರುವನು. ದ್ರೌಪದಿಯ ವಸ್ತ್ರಾಪಹರಣದ ಕಾಲದಲ್ಲಿ ಗುಪ್ತವಾಗಿ ಆತನು ಆ ಪತಿವ್ರತೆಯ ಬೆನ್ನುಕಟ್ಟಿ ನಿಲ್ಲಬೇಕಾಯಿತು; ಧರ್ಮರಾಜನು ಯಜ್ಞ ಮಾಡಿ ಅಭಿಮಾನಪಟ್ಟು ಅಜ್ಞಾನಕ್ಕೆ ಒಳಗಾಗುತ್ತಿರಲು, ಆ ಭಗವಂತನು ಮಂಗಲಿಯಾಗಿ ಅವನ ಅಜ್ಞಾನವನ್ನು ದೂರಮಾಡಬೇಕಾಯಿತು; ಅರ್ಜುನನ ಅನುತಾಪವನ್ನು ದೂರಮಾಡಲಿಕ್ಕೆ ಆತನು ವಿರಾಟ ರೂಪವನ್ನು ಪ್ರಕಟಿಸಬೇಕಾಯಿತು; ನಾಮದೇವನ ಸಿದ್ಧ ಸ್ಥಿತಿಯನ್ನು ಸ್ಥಾಪಿಸುವದಕ್ಕಾಗಿ ನಾಯಿಯಾಗಬೇಕಾಯಿತು. ದಶಾವತಾರಗಳಾದರೂ ಭಕ್ತರ ಉದ್ಧಾರಕ್ಕಾಗಿಯೇ ಭಗವಂತನಿಂದ ಎತ್ತಲ್ಪಟ್ಟಿರುವವು. ಅಂದಬಳಿಕ ದೇವರನ್ನು ಮನಸ್ಸಿಗೆ ಬಂದಹಾಗೆ ಕುಣಿಸುವ ಸತ್ವಶಾಲಿಗಳು ನಿಮ್ಮಂಥ ನಿರ್ಮಲಾಂತಃಕರಣದ ಸದ್ಭಕ್ತರಲ್ಲದೆ ಮತ್ತೆ ಯಾರಿರುವರು? ವತ್ಸೆ, ನನ್ನ ಮಾತನ್ನು ಮರೆಯ ಬೇಡ, ನಿನ್ನ ದುಃಖದ ಕಾಲವು ಮುಗಿಯುತ್ತ ಬಂದಿರುವದೆಂದು ಇನ್ನೊಮ್ಮೆ ಹೇಳುತ್ತೇನೆ. ಏಳು, ವಿಕ್ರಮಾರ್ಕನು ಹಸಿದಿದ್ದಾನೆ, ಆತನಿಗೆ ಅಟ್ಟಿಸಿದ ಹಾಲು ಕೊಡು, ಎಂದು ಹೇಳುತ್ತಿರಲು, ಅತ್ತ ಹೊರಗೆ

ಮಂಜುಘೋಷೆಯು—ದೇವೀ, ಪದ್ಮನಯನೆ, ಏನು ಮಾಡುತ್ತೀ, ಎಂದು ನುಡಿಯುತ್ತ ಹಸನ್ಮುಖಿಯಾಗಿ ಅಲ್ಲಿಗೆ ಬಂದಳು. ಅಷ್ಟರಲ್ಲಿ ಋಷಿಯು ಅಂತರ್ಧಾನವನ್ನು ಹೊಂದಿದ್ದನು! ಆ ಋಷಿವರ್ಯನ ಆಶ್ಚರ್ಯಕರವಾದ ಅಂತರ್ಧಾನದ ಸಂಗಡ ಪದ್ಮನಯನೆಯ ದುಃಖದ ಅಂತರ್ಧಾನವೂ ಆಯಿತು!!

ಕ್ರಿಯಾಸಿದ್ಧಿ

ಈ ಮೇರೆಗೆ ಕ್ಷಣಮಾತ್ರ ಮಿಂಚಿಹೋದ ಅಮಾನುಷ ಕೃತಿಯಿಂದ ಪದ್ಮನಯನೆಯ ದುಃಖವು ಅಳಿದು ಹೋಗಿ, ಆಕೆಯು ತನ್ನ ಬಳಿಗೆ ಪ್ರೀತಿಯಿಂದ ಬಂದ ಮಂಜುಘೋಷೆಯನ್ನು ಆದರಿಸಿದಳು. ಪಾಪ! ಮಂಜುಘೋಷೆಗೆ ಯಾವ ಸಂಗತಿಯೂ ಗೊತ್ತಾಗಲಿಲ್ಲ. ಆಕೆಯು ಒಳಗೆ ಬಂದದ್ದನ್ನು ನೋಡಿದ ಕೂಡಲೆ ದಿಟ್ಟನಾದ ವಿಕ್ರಮಾರ್ಕನು ದುಡುದುಡು ಓಡಿಹೋಗಿ ಆಕೆಯನ್ನು ಅಪ್ಪಿಕೊಂಡದ್ದರಿಂದ ಅನ್ಯವಿಚಾರಗಳಿಗೆ ಆಕೆಗೆ ಆಸ್ಪದವೇ ಉಳಿಯಲಿಲ್ಲ. ಆ ಸರಳ ಹೃದಯದ ಮಂಜುಘೋಷೆಯು ವಿಕ್ರಮಾರ್ಕನನ್ನು ಎತ್ತಿ ಎದೆಗವಚಿಕೊಂಡು, ಪ್ರೀತಿಯಿಂದ ಮುದ್ದಿಟ್ಟು ಮೂರ್ಧ್ನಾಘ್ರಾಣಮಾಡುತ್ತ ಬಂದು ಕುಳಿತುಕೊಂಡಳು. ಇದನ್ನು ನೋಡಿ ಪದ್ಮನಯನೆಯು ಗದ್ಗದ ಕಂಠೆಯಾಗಿ ಕೃತಜ್ಞತೆಯಿಂದ—ಸಖೀ, ಮಂಜುಘೋಷೆ, ನಮ್ಮ ತಾಯಿ–ಮಕ್ಕಳ ಮೇಲೆ ನಿನ್ನ ಲೋಭವೆಷ್ಟವ್ವಾ! ಹಡೆದ ಮಕ್ಕಳನ್ನು ಕೂಡ ಈಪರಿ ಪ್ರೀತಿಸುವವರು ವಿರಳ! ನಿನ್ನ ಈ ಸರಳ ಹೃದಯಕ್ಕಾಗಿ ಇನ್ನು ವರ್ಷ ತುಂಬುವದರೊಳಗೆ ನನ್ನ ವಿಕ್ರಮಾರ್ಕನಂಥ ಮಗನು ನಿನಗೆ ಹುಟ್ಟುವನು–ನಿಶ್ಚಯವಾಗಿ ಹುಟ್ಟುವನು, ಎಂದು ತಟ್ಟನೆ ನುಡಿದಳು. ಇದನ್ನು ಕೇಳಿ ಮಂಜುಘೋಷೆಗೆ ಪರಮಾನಂದವಾಗಿ, ಆಕೆಯು—ಅಕ್ಕಾ, ನಿನ್ನಂಥ ಸತ್ವಶೀಲೆಯಾದ ಸತಿಯ ಆಶೀರ್ವಾದವು ಸುಳ್ಳಾಗುವದೇ? ಆಗಲೆಮ್ಮಾ ನಿನ್ನ ಬಾಯಿಹರಿಕೆಯಿಂದ ನಮ್ಮ ಕುಲಕೋಟಿಯು ಉದ್ಧೃತವಾಗಲಿ! ನಾವು ದಂಪತಿಗಳು ಸಂತತಿಯಾಗದ್ದರಿಂದ ಅಸಮಾಧಾನಪಡುತ್ತಿರಲು, ನಮ್ಮನ್ನು ಸಮಾಧಾನಗೊಳಿಸುವದಕ್ಕಾಗಿಯೇ ಮಹಾ ಸತಿಯಾದ ನೀನು ಪ್ರಕಟವಾಗಿರುತ್ತೀ, ಎಂದು ಅಭಿನಂದಿಸಿದಳು. ಶ್ರೀ ಗುರುದರ್ಶನದಿಂದ ದೈವೀಭಾವವನ್ನು ವಹಿಸಿದ್ದ ಪದ್ಮನಯನೆಯ ಅಚಿಂತ್ಯವಾದ ಭವಿಷ್ಯವಾಣಿಯು ಸುಳ್ಳಾಗಲಿಲ್ಲ, ವರ್ಷ ತುಂಬುವದರೊಳಗೆ ಮಂಜುಘೋಷೆಯಿಂದ ರವಿವರ್ಮನು ಜನಿಸಿ, ಪದ್ಮನಯನೆಯಲ್ಲಿದ್ದ ಅವಳ ಭಕ್ತಿ–ವಿಶ್ವಾಸಗಳನ್ನು ಹೆಚ್ಚಿಸಿದನು. ಸಿಂಹಕೇತುವಿನ ರಾಜಗೃಹವು ರವಿವರ್ಮನ ನಿಮಿತ್ತ ಅಟ್ಟಹಾಸದಿಂದ ಅಲಂಕರಿಸಲ್ಪಟ್ಟಿತು!

ಪ್ರಿಯ ವಾಚಕರೇ, ವಿಕ್ರಮಾರ್ಕ–ರವಿವರ್ಮರ ಉದಯದ ಆನಂದದಲ್ಲಿ ನಾವು ಕಮಲಾಕ್ಷ–ಸುಮತಿಗಳನ್ನು ಮರೆತುಬಿಟ್ಟೆವು. ಸುಖಿಸುವವರನ್ನು ನೋಡಿ ಸಮಾಧಾನ

ಪಡುವದಕ್ಕಿಂತ, ಅಳುವವರ ಕಣ್ಣು ಒರಿಸಲಿಕ್ಕೆ ಮನುಷ್ಯನ ಮನಸ್ಸು ಮೆಚ್ಚುವದು ಸ್ವಾಭಾವಿಕವು. ನಡೆಯಿರಿ, ಆ ನೂತನ ಮಿತ್ರರ ಗತಿಯು ಏನಾಯಿತೆಂಬದನ್ನು ವಿಚಾರಿಸುವಾ, ಪದ್ಮನಯನೆಯನ್ನು ಹುಡುಕುವದಕ್ಕಾಗಿ ಶಿವಾಲಯದಿಂದ ಹೊರಟ ಅವರು ಹಲವು ದೇಶಗಳನ್ನೂ, ಅರಣ್ಯಗಳನ್ನೂ, ಪರ್ವತಗಳನ್ನೂ ತಿರುಗಿ ತಿರುಗಿ ದಣಿದರೂ ಪದ್ಮನಯನೆಯ ಶೋಧವಾಗಲಿಲ್ಲ, ಆಗ ಅವರು ತಮ್ಮೊಳಗೆ—ನಮ್ಮಿಂದ ಇದುವರೆಗೆ ರಾಜಪುತ್ರಿಯ ಶೋಧವಾಗಲಿಲ್ಲ, ಅವಳೇನು ಮರಣ ಹೊಂದಿದಳೋ, ಜೀವದಿಂದಿರುವಳೋ ತಿಳಿಯದು. ಏನೇ ಆಗಿರಲಿ, ಅವಳ ಗೊತ್ತು ಹತ್ತುವವರೆಗೆ ನಾವು ವ್ರತಸ್ಥರಾಗಿಯೇ ಇರತಕ್ಕದ್ದು. ಈಗ ನಾಲ್ಕು ವರ್ಷ ತಿರುಗಿದೆವು. ಪಟ್ಟಣಗಳು ಉಳಿಯಲಿಲ್ಲ ಹಳ್ಳಿಗಳು ಉಳಿಯಲಿಲ್ಲ ಅರಣ್ಯ ಪ್ರದೇಶಗಳು ಉಳಿಯಲಿಲ್ಲ ಇನ್ನು ಮೇಘನಾದನ ರಾಜಧಾನಿಯಾದ ಶೋಣಿತ ಪುರಕ್ಕೆ ಹೋಗಿ ಹುಡುಕುವದೊಂದು ಉಳಿದಿದೆ. ರಾಕ್ಷಸರು ಬಹು ಮಾಯಾವಿಗಳು. ಮೇಘನಾದನನ್ನು ಕೊಂದ ಸೇಡಿಗಾಗಿ ಅವರು ಪದ್ಮನಯನೆಯನ್ನು ಅಪಹರಿಸಿ ಒಯ್ದಿದ್ದರೂ ಒಯ್ದಿರಬಹುದು; ಆದ್ದರಿಂದ ಒಂದು ಹಡಗವನ್ನು ಗೊತ್ತು ಮಾಡಿಕೊಂಡು ಸಿಂಹಲ ದ್ವೀಪಕ್ಕೆ ಹೋಗತಕ್ಕದ್ದು, ಎಂದು ಯೋಚಿಸಿ, ದಕ್ಷಿಣಾಭಿಮುಖವಾಗಿ ಅವರು ಮಾರ್ಗವನ್ನು ಕ್ರಮಿಸತೊಡಗಿದರು.

ಒಂದಾನೊಂದು ದಿವಸ ಆ ತರುಣರು ಮಾರ್ಗ ಶ್ರಮದಿಂದ ಬಳಲಿ ಮಧ್ಯಾಹ್ನಕ್ಕೆ ಒಂದು ಸರೋವರದ ತೀರವನ್ನು ಹೊಂದಿದರು. ಅಲ್ಲಿಯ ಅಪೂರ್ವ ಸೃಷ್ಟಿ ಸೌಂದರ್ಯವು ಅವರ ಮನಸ್ಸನ್ನು ಎಳಕೊಂಡಿತು. ಸರೋವರದ ತೀರದ ವಿಶಾಲವಾದ ಆಲದಮರಕ್ಕೆ ಮುಟ್ಟಿದ್ದೇ ತಡ, ಅವರು ತಮ್ಮ ಗಂಟು–ಗದಡಿಗಳನ್ನು ಗಿಡದಬುಡದಲ್ಲಿಟ್ಟು ಉಸ್ಸೆಂದು ಕುಳಿತುಕೊಂಡರು. ಪರಸ್ಪರರ ಮುಖಾವಲೋಕನದಿಂದ ಇಬ್ಬರ ಅಂತಃಕರಣಗಳು ಒಮ್ಮಿಂದೊಮ್ಮೆ ಉಕ್ಕಿ ಬಂದವು. ಅವರು ಆತ್ಮಸಂಯಮನ ಮಾಡದಿದ್ದರೆ ಇಬ್ಬರ ಕಣ್ಣುಗಳಿಂದಲೂ ನೀರು ಸುರಿಯತಕ್ಕವೇ; ಈ ಆಕಸ್ಮಿಕ ಮನೋವಿಕಾರದ ಉತ್ಪತ್ತಿಯ ಕಾರಣವನ್ನು ಮನಸ್ಸಿನಲ್ಲಿ ಶೋಧಿಸುತ್ತ ಅವರಿಬ್ಬರು ಕೆಲಹೊತ್ತು ಸರೋವರವನ್ನು ನೋಡುವವರಂತೆ ಸುಮ್ಮನೆ ಕುಳಿತುಕೊಂಡರು. ಬರಬರುತ್ತ ಸುಮತಿಯ ಮುಖಮುದ್ರೆಯು ಗಂಭೀರವಾಗಹತ್ತಿತು. ಕಮಲಾಕ್ಷನು ತನ್ನ ಹೃದ್ಗತವನ್ನು ಹೊರಗೆಡವಲು ಆತುರಪಡ ಹತ್ತಿದನು. ಈ ಸ್ಥಿತಿಯಲ್ಲಿಯೂ ಕೆಲಕಾಲವು ಕ್ರಮಿಸಿದ ಮೇಲೆ ಕಮಲಾಕ್ಷನು ಸುಮತಿಯನ್ನು ಕುರಿತು—ಸನ್ಮಾನನೀಯನಾದ ಮಿತ್ರನೇ, ನಿಸ್ಪ್ರಹನಾದ ನೀನು ರಾಜಪುತ್ರಿಯ ಸಲುವಾಗಿ ಶ್ರಮಪಡುವದನ್ನು ನೋಡಿ ನನಗೆ ಬಹಳ ಅಸಮಾಧಾನವಾಗುತ್ತದೆ. ವಿಷಯಾಸಕ್ತರಾದ ನಮ್ಮ ಸಹವಾಸದಿಂದ ನೀನೂ ತಪಶ್ಚರ್ಯವನ್ನು ಬಿಟ್ಟು ಸಾಮಾನ್ಯರಂತೆ ದುಃಖಕ್ಕೆ ಒಳಗಾದೆ! ಪದ್ಮನಯನೆಯ ಶೋಧರೂಪವಾದ ಉಪಾಧಿಯು ನಿನ್ನ ಈಶ್ವರ ಚಿಂತನವನ್ನು ಬಿಡಿಸಿತು. ನಿನ್ನ ಸದಾನಂದ ಸ್ಥಿತಿಗೆ ಭಂಗವನ್ನು ತರುವದಾದರೂ ಒಂದು ಬಗೆಯ ಅಪರಾಧವಾಗಿಯೇ ನನಗೆ ತೋರುತ್ತದೆ. ನೋಡಿದೆಯಾ! ಸತ್ಸಂಗದ ಯೋಗದಿಂದ ನಿಸ್ಸಂಗನಾದ ನೀನು, ಮೋಹ

ರಹಿತನಾಗಿ ಶಾಂತಚಿತ್ತನಾಗುವದನ್ನು ಬಿಟ್ಟು, ಸಾಂಸಾರಿಕರಾದ ನಮ್ಮ ಶಳವಿಗೆ ಬಿದ್ದು ತೊಳಲುತ್ತಿರುವೆ! ನಿನ್ನನ್ನು ಈ ತಾಪಕ್ಕೆ ಗುರಿಮಾಡಿದ್ದಕ್ಕಾಗಿ ಪರಮೇಶ್ವರನ ದಂಡನೆಗೆ ಯಾರು–ಯಾರು ಗುರಿಯಾಗುವೆವೋ ಪರಮೇಶ್ವರನೇ ಬಲ್ಲ! ವಿಪ್ರವರ್ಯ್ಯಾ, ಇಲ್ಲಿಗೆ ಪದ್ಮನಯನೆಯ ಶೋಧವು ಸಾಕು; ಇನ್ನು ಆಯಾಸಪಡಬೇಡ. ನೀನು ಯಥೇಚ್ಛವಾಗಿ ಹೋಗು ಪದ್ಮನಯನೆಯ ಅಗಲುವಿಕೆಯ ಕಿಚ್ಚು ನನ್ನ ಹೃದಯದಲ್ಲಿ ಹೊತ್ತುತ್ತಿರುವದರಿಂದ ನಾನು ಭ್ರಮಿಷ್ಟನಂತೆ ಅತ್ತಿತ್ತ ಅಲೆದಾಡಿ ಕಡೆಗೆ ನಾಶಹೊಂದುವೆನು. ನಮ್ಮಂಥ ಮೋಹಪರವಶರಿಗೆ ಇಂಥ ಶಿಕ್ಷೆಯಾಗುವದು ನ್ಯಾಯವು, ಎಂದು ನುಡಿದನು.

ಕಮಲಾಕ್ಷನ ಮಾತುಗಳನ್ನು ಕೇಳಿ ಸುಮತಿಯು—ರಾಜಪುತ್ರಾ, ನಿನ್ನ ಮಾತನ್ನು ನಾನು ಅಲ್ಲಗಳೆಯಲಾರೆನು. ನಿನ್ನ ಅನುಭವವನ್ನು ನೀನು ಹೇಳುತ್ತೀ ಅನುಭವಕ್ಕೆ ಬಾರದ ದೊಡ್ಡ–ದೊಡ್ಡ ವೇದಾಂತದ ಮಾತುಗಳನ್ನು ಆಡುವದೂ, ಕೇಳುವದೂ ವಿಕಲ್ಪಕ್ಕೆ ಕಾರಣವು ನೀನು ಹೇಳಿದಂತೆ ಸತ್ಸಂಗ ಮಾಡುವದೂ, ಈಶ್ವರನಲ್ಲಿ ಮನಸ್ಸನ್ನಿಡುವದೂ, ವಿಷಯದ ಬಲೆಗೆ ಸಿಲುಕದಿರುವದೂ ಹಿತಕರವು; ಆದರೆ ಪ್ರಸಂಗವಶದಿಂದ ಮಹಾತ್ಮರೂ ಕೂಡ ದುಷ್ಟರ ನೆರಳಿಗೆ ಹೋಗಬೇಕಾಗುವದು, ಈಶ್ವರನಲ್ಲಿದ್ದ ಮನಸ್ಸನ್ನು ಅನ್ಯ ಉಪಾಧಿಯಲ್ಲಿ ಸೇರಿಸ ಬೇಕಾಗುವದು, ವಿಷಯದ ಬಲೆಗೆ ಬೀಳಬೇಕಾಗುವದು. ವಿಚಾರಮಾಡು; ಭೀಷ್ಮ–ದ್ರೋಣಾದಿಗಳು ದುರ್ಯೋಧನನ ಸಂಗವನ್ನು ಯಾಕೆ ಮಾಡಿದರು? ಶ್ರೀರಾಮದಾಸ ಸ್ವಾಮಿಗಳು ತಮ್ಮ ಈಶ್ವರ ಚಿಂತನದಲ್ಲಿಯೇ ಇರದೆ ಆಗಾಗ್ಗೆ ರಾಜಕಾರಣದಲ್ಲಿ ಯಾಕೆ ಸೇರುತ್ತಿದ್ದರು? ಶ್ರೀ ಶಂಕರಾಚಾರ್ಯರು ಅಮರಕ ರಾಜನ ರಾಣಿಯರ ವಿಲಾಸದ ಬಲೆಗೆ ಯಾಕೆ ಸಿಕ್ಕರು? ಇವರೆಲ್ಲರೂ ಸದುದ್ದೇಶದಿಂದಲೇ ಆಗಲಿ, ಅಡ್ಡ ಮಾರ್ಗವನ್ನು ಹಿಡಿದದ್ದಕ್ಕಾಗಿ ತಾಪ ಪಡಲೇಬೇಕಾಯಿತು; ಆದರೆ ಆ ತಾಪವು ಜನಹಿತಕ್ಕೆ, ಅರ್ಥಾತ್ ಪರೋಪಕಾರಕ್ಕೆ ಕಾರಣವಾದದ್ದರಿಂದ ಸ್ತೋತ್ರಾರ್ಹವಾಗಿರುವದು. ಮನಸ್ಸಿಗೆ ದೊರೆಯತಕ್ಕ ಸಂಗಗಳು ಎರಡು ಒಂದು ಸತ್ಸಂಗ, ಮತ್ತೊಂದು ದುಸ್ಸಂಗ. ದೇವರಲ್ಲಿ ಧರ್ಮದಲ್ಲಿ ಅಥವಾ ಸಜ್ಜನರಲ್ಲಿ ಮನಸ್ಸನ್ನಿಡುವದು ಸತ್ಸಂಗ, ಬೇರೆಕಡೆಯಲ್ಲಿ ಮನಸ್ಸನ್ನಿಡುವದು ದುಸ್ಸಂಗ. ಸ್ವತಃ ಮನಸ್ಸು ವಿಕಾರರಹಿತವಾದದ್ದು ಅಂದರೆ ಗುಣಹೀನವು. ಅದನ್ನು ಶುಭ್ರವಸ್ತ್ರಕ್ಕೆ ಹೋಲಿಸ ಬಹುದು. ಸಂಗದ ಯೋಗದಿಂದ ಸೇರಿದ ಗುಣಗಳಂತೆ ಅದು ಕಾರ್ಯಮಾಡತೊಡಗುತ್ತದೆ; ಆದ್ದರಿಂದ ಮನಸ್ಸು ಸಂಗದ ಯೋಗದಿಂದ ನಮ್ಮಲ್ಲಿ ಸೇರುವ ಗುಣಗಳ ಪ್ರದರ್ಶನದ ರಂಗಸ್ಥಳವೆಂದು ಹೇಳಬಹುದು. ನಿನ್ನ ಮಾತಿನಂತೆ ನಾನು ದುಸ್ಸಂಗದಲ್ಲಿರುತ್ತೇನೆಂದು ಒಡಂಬಡುತ್ತೇನೆ; ಆದರೆ ಪರೋಪರಾಕರಕ್ಕಾಗಿಯೇ ನಾನು ಆ ಸಂಗವನ್ನು ಮಾಡಿದ್ದರೆ, ಅದು ನನ್ನನ್ನು ಬಾಧಿಸಲಾರದೆಂಬದಿಷ್ಟೇ ಅಲ್ಲ ಸತ್ಸಂಗ ಮಾಡಿದ್ದಕ್ಕಿಂತ ಹೆಚ್ಚು ಫಲವನ್ನು ಕೊಡುವದು. ಪರೋಪ ಕಾರವೆಂದು ನಾವು ಸಂಸಾರವನ್ನು ಮಾಡಿದರೆ ಬಾಧಿಸುವದಿಲ್ಲೆಂದು ದೊಡ್ಡವರು ಹೇಳುವದರ ಮರ್ಮವನ್ನು ವಿಚಾರಿಸು; ಅಂದರೆ ಪದ್ಮನಯನೆಯ ಶೋಧದ ಕಾರ್ಯವು ಕಡಮೆಯತರದ್ದೆಂದು ನೀನು ಹೇಳಲಿಕ್ಕಿಲ್ಲ, ಇರಲಿ ವಿಳು ಬಿಸಿಲ ತಾಪವು

ಬಹಳವಾಗಿದೆ. ಈ ಸ್ವಚ್ಛವಾದ ಸರೋವರದಲ್ಲಿ ಯಥೇಚ್ಛವಾಗಿ ರಮಿಸೋಣ. ಸ್ನಾನವಾದ ಮೇಲೆ ಹಣ್ಣು- ಹಂಪಲಗಳನ್ನು ತಿಂದು ವಿಶ್ರಮಿಸಿ ಮತ್ತಿಷ್ಟು ಮಾತಾಡೋಣವಂತೆ. ಒಟ್ಟಿಗೆ, ಸ್ವೀಕೃತ ಕಾರ್ಯದಲ್ಲಿ ದೇಹಪಾತವಾದರೂ ಶ್ರೇಯಸ್ಕರವೇ, ಅದಕ್ಕೆ ದೇವರು ಮೆಚ್ಚುವನು. ಕಷ್ಟಕ್ಕೆ ಗುರಿಯಾಗದೆ ಹಚ್ಚಗಿದ್ದಲ್ಲಿ ಮೇದು ಬೆಚ್ಚಗಿದ್ದಲ್ಲಿ ಮಲಗುವದು ಉಂಡಿಗತನವು. ಹೀಗೆ ಎಡತಾಕುವದು ಹಿತಕರವಲ್ಲ, ಎಂದು ಹೇಳಿದನು.

ಸುಮತಿಯ ಅಪ್ಪಣೆಯನ್ನು ಶಿರಸಾವಹಿಸಿ ಕಮಲಾಕ್ಷನು ಏಳಲು, ಅವರಿಬ್ಬರೂ ಸರೋವರದಲ್ಲಿ ಈಸಬಿದ್ದರು. ಇಬ್ಬರೂ ಪ್ರಾಯಸ್ಥರು, ಮೇಲಾಗಿ ಈಸುವದರಲ್ಲಿ ಪ್ರವೀಣರು. ಕೇಳುವದೇನು? ಸರೋವರವು ಅಪರಿಚಿತವಾದದ್ದೆಂಬದನ್ನು ಅವರು ಮನಸ್ಸಿನಲ್ಲಿ ತರಲಿಲ್ಲ, ನಿರ್ಜನ ಪ್ರದೇಶವೆಂದು ಅವರು ಬೆದರಲಿಲ್ಲ ನೀರಿನ ನೆಲೆ ಹೆಂಗಸಿನ ನೆಲೆ ತಿಳಿಯುವದು ಕಠಿಣವೆಂಬ ಲೋಕೋಕ್ತಿಯನ್ನು ಅವರು ಲಕ್ಷಕ್ಕೆ ತರಲಿಲ್ಲ, ನಿರ್ಭಯದಿಂದ ಅವರು ಸರೋವರದಲ್ಲಿ ಈಸಾಡತೊಡಗಿದರು. ವ್ಯಾಯಾಮದ ಸಾಧನಗಳಲ್ಲಿ ಈಸುವ ಸಾಧನವು ಮೇಲಾದದ್ದು ಆ ತರುಣರಿಬ್ಬರು ಮನಸೋಕ್ತವಾಗಿ ಈಸಿ ದಣಿದು ದಂಡೆಗೆ ಬಂದರು. ಕಮಲಾಕ್ಷನು ಮೈ ಒರಿಸಿಕೊಂಡು ಒಣ ವಸ್ತ್ರವನ್ನು ಉಟ್ಟುಕೊಳ್ಳತೊಡಗಿದನು. ಆಗ ಸುಮತಿಯು ಒಬ್ಬನೇ ಮತ್ತೆ ಸರೋವರದಲ್ಲಿ ದುಮುಕಿ ಮಾರಗೈ ಹಾಕುತ್ತ ಬಹುದೂರ ಹೋದನು. ಅದನ್ನು ನೋಡಿ ಕಮಲಾಕ್ಷನು ದೋತರ ಉಟ್ಟುಕೊಳ್ಳುತ್ತ—ವಿಪ್ರೋತ್ತಮಾ, ಸಾಕು, ಇನ್ನು ಏಳು; ಯಾವದೂ ಅತಿಯಾಗಬಾರದು; ಹೊಟ್ಟೆ ಬಹಳ ಹಸಿದದೆ; ಎಂದು ಹೇಳುತ್ತಿರಲು ಸುಮತಿಯು ಒಮ್ಮೆಲೆ ನೀರಲ್ಲಿ ಮುಳುಗಿದನು. ಬಹಳ ಹೊತ್ತಾದರೂ ಅವನು ಮೇಲಕ್ಕೇಳದ್ದರಿಂದ ಕಮಲಾಕ್ಷನು ಗಾಬರಿಯಾಗಿ ನೀರಲ್ಲಿ ಹಾರಿಕೊಂಡು ಸುಮತಿಯ ಬಳಿಗೆ ಹೋಗಹತ್ತಿದನು. ಅಷ್ಟರಲ್ಲಿ ಸುಮತಿಯು ಒಂದು ಮೊಸಳಿಯ ಸಂಗಡ ಗುದಮುರಿಗೆ ಹಾಕುತ್ತ ಮೇಲಕ್ಕೆದ್ದನು. ಆದನ್ನು ನೋಡಿ ಕಮಲಾಕ್ಷನು ತ್ವರೆಯಿಂದ ಮುಂದಕ್ಕೆ ಸಾಗಲು, ಸುಮತಿಯು ಮೊಸಳೆಯೊಡನೆ ಮತ್ತೆ ಮುಳುಗಿದವನು ಬಹಳ ಹೊತ್ತಾದರೂ ಮೇಲಕ್ಕೇಳಲಿಲ್ಲ. ಕಮಲಾಕ್ಷನ ಕೈಗಳು ಸೋತವು. ಆತನು ಪ್ರಯಾಸದಿಂದ ದಂಡೆಗೆ ಮುಟ್ಟಿದನು. ಮುಂದೆ ಏನು ಮಾಡಬೇಕೆಂಬದು ಆತನಿಗೆ ತೋಚದಾಯಿತು. ಅವನು ಮೂಢನಂತೆ ಸುಮ್ಮನೆ ಸರೋವರದ ಪಾವಟಿಗೆಯ ಮೇಲೆ ಕುಳಿತುಬಿಟ್ಟನು. ಕೆಲಹೊತ್ತಿನ ಮೇಲೆ ಅವನ ಕಣ್ಣೊಳಗಿಂದ ನೀರುಗಳು ಹೋಗಹತ್ತಿದವು. ಅವನು ಕೇವಲ ವೈರಾಗ್ಯವನ್ನು ತಾಳಿ ನಿರಾಶೆಯಿಂದ—ಪ್ರಿಯಮಿತ್ರಾ, ಬ್ರಾಹ್ಮಣ ಶ್ರೇಷ್ಠಾ, ತಪಸ್ವಿದ್ಧಾ, ಯಥೇಚ್ಛವಾಗಿ ಹೋಗೆಂದು ನಾನು ಅಂದ ಮಾತಿಗೆ ಈ ಬಗೆಯಾಗಿ ಪ್ರತ್ಯುತ್ತರವನ್ನು ಕೊಟ್ಟೆಯಾ? ಸ್ವೀಕೃತ ಕಾರ್ಯದಲ್ಲಿ ದೇಹಪಾತವಾದರೂ ಶ್ರೇಯಸ್ಕರವೆಂದು ಉಪದೇಶಿಸಿದ ನೀನು ಜಲಸಮಾಧಿಯನ್ನು ಹೊಂದಿದೆಯಲ್ಲ! ಆಗಲಿ, ಈ ದೈವ ಹೀನನಾದ ಕಮಲಾಕ್ಷನಿಗೆ ಯಾವ ಆಶೆಯೂ ಉಳಿಯದ್ದರಿಂದ, ಅವನು ದುಃಖಿಸಿಯಾದರೂ, ಕಣ್ಣೀರು ಸುರಿಸಿದಯಾದರೂ, ಅಸಮಾಧಾನ ಪಟ್ಟಾದರೂ, ಚಿಂತೆಯಿಂದ ಕೊರಗಿಯಾದರೂ ಮಾಡುವದೇನು? ಇಲ್ಲಿಗೆ ನನ್ನ ದುಃಖದ ಪರಿಸಮಾಪ್ತಿಯು ಆಯಿತು. ಇನ್ನು ನಾನು ಈ ಕೆಟ್ಟ ದೇಹವು ಬೀಳುವವರೆಗೆ ಮನಬಂದತ್ತ

ತಿರುಗುವೆನು. ಮರಣವು ಈವೊತ್ತೇ ಒದಗಲಿ, ಕಾಲಾಂತರದಿಂದ ಒದಗಲಿ; ಜಗತ್ತು ನನಗೆ ಶೂನ್ಯರೂಪವಾಯಿತು, ಎಂದು ನುಡಿದು ತಟ್ಟನೆ ಸರೋವರದಿಂದ ಹೊರಟು ಮಾರ್ಗವನ್ನು ಕ್ರಮಿಸಹತ್ತಿದನು. ಅವನು ಹಸಿವೆಯೆನ್ನಲಿಲ್ಲ, ನೀರಡಿಕೆಯೆನ್ನಲಿಲ್ಲ; ಪೂರ್ವವೆನ್ನಲಿಲ್ಲ, ಪಶ್ಚಿಮವೆನ್ನಲಿಲ್ಲ; ಇಳಿಹೊತ್ತೆನ್ನಲಿಲ್ಲ, ರಾತ್ರಿಯೆನ್ನಲಿಲ್ಲ, ಭ್ರಮಿಷ್ಠನಂತೆ ಸಂಚರಿಸುತ್ತ ಹೇಗೆ ಹೇಗೋ ಹೊಟ್ಟೆಯನ್ನು ಹೊರಕೊಳ್ಳುತ್ತ ಇಪ್ಪತ್ತು ದಿನಗಳವರೆಗೆ ಮಾರ್ಗವನ್ನು ಕ್ರಮಿಸಿಹೋಗಿ ಇಪ್ಪತ್ತೊಂದನೆಯ ದಿನ ಹೊರಗೆ ಒಂದುತಾಸು ಹೊತ್ತು ಇರುವಾಗ ಒಂದು ರಾಜಧಾನಿಯ ಉಪವನವನ್ನು ಪ್ರವೇಶಿಸಿದನು.

ತಾನು ನೆಟ್ಟಗಿದ್ದರೆ ಜಗತ್ತು ನೆಟ್ಟಗೆ, ತಾನು ಆನಂದದಿಂದಿದ್ದರೆ ಜಗತ್ತು ಆನಂದಕರ. ಕಮಲಾಕ್ಷನ ಹೃದಯದೊಳಗಿನ ಪದ್ಮನಯನೆಯೇ ಮೊದಲಾದ ಸುಂದರ ಜ್ಯೋತಿಗಳು ನಂದಿಹೋದದ್ದರಿಂದ ಅದು ಕಗ್ಗತ್ತಲು ಮುಸುಕಿರಲು, ಅವನ ಪಾಲಿಗೆ ಜಗತ್ತೂ ಕಗ್ಗತ್ತಲು ಮುಸುಕಿದ್ದಾಗಿ, ಎದುರಿಗಿದ್ದ ಪದಾರ್ಥಗಳೂ ಅವನ ಕಣ್ಣಿಗೆ ಕಾಣದಹಾಗಾದವು. ಅವನು ಈಗ ಸುಂದರವಾದ ಉಪವನದಲ್ಲಿ ಕುಳಿತುಕೊಂಡಿದ್ದರೂ ಆ ಉಪವನದ ಸೌಂದರ್ಯದ ಪರಿಣಾಮವು ಎಳ್ಳಷ್ಟೂ ಅವನ ಮನಸ್ಸಿನ ಮೇಲೆ ಆಗಿದ್ದಿಲ್ಲ. ಇದರ ಮೇಲಿಂದ ನೋಡಿದರೆ ಆನಂದವು ತನ್ನಲ್ಲಿಯೇ ಇರುತ್ತದಲ್ಲದೆ ಹೊರಗೆ ಇರುವದಿಲ್ಲೆಂದು ಅನ್ನಬೇಕಾಗುತ್ತದೆ. ಕಮಲಾಕ್ಷನು ಸಚಿಂತಮುದ್ರೆಯಿಂದ ಒಂದು ಗಿಡದ ಬುಡದಲ್ಲಿ ಕುಳಿತಿರುವಾಗ, ಇಳಿವಯಸ್ಸಿನ ಒಬ್ಬ ಗಂಭೀರ ಪುರುಷನು ಅಲ್ಲಿಗೆ ಬಂದನು. ಅವನನ್ನು ನೋಡಿ ಕಮಲಾಕ್ಷನು ಮಾತಾಡಲಿಲ್ಲ–ಕಥೆಯಾಡಲಿಲ್ಲ; ಶಿಷ್ಟಾಚಾರಕ್ಕನುಸರಿಸಿ ಒಮ್ಮೆ ವಿನಯದಿಂದ ನಮಸ್ಕಾರ ಮಾತ್ರ ಮಾಡಿದನು. ಆ ಒಂದೇ ನಮಸ್ಕಾರವು ಆ ಸದ್ಗೃಹಸ್ಥನ ಮನಸ್ಸನ್ನು ಎಳಕೊಳ್ಳಲಿಕ್ಕೆ ಸಾಕಾಯಿತು. ಕಮಲಾಕ್ಷನು ದರಿದ್ರ ಮನುಷ್ಯನಿದ್ದಿಲ್ಲವೆಂಬದನ್ನು ವಾಚಕರೂ ಬಲ್ಲರು. ಅವನ ಮುಖದಲ್ಲಿ ರಾಜ ತೇಜವು ಉಕ್ಕುತ್ತಿತ್ತು. ಸಿಂಹವು ವಿಪತ್ತಿಗೆ ಗುರಿಯಾಗಿ ಸೊರಗಿದ್ದರೂ ನಾಯಿಯಾಗಲಾರದು. ಆ ಗಂಭೀರ ಪುರುಷನು ಕಮಲಾಕ್ಷನನ್ನು ಕುರಿತು—ಸದ್ಗೃಹಸ್ಥನೇ, ನೀನು ಯಾರು? ಘೋರವಾದ ವಿಪತ್ತಿಗೆ ಒಳಗಾಗಿರುವವನಂತೆ ಕಾಣುತ್ತೀ. ವಿಪದ್ಗ್ರಸ್ತರ ವಿಷಯವಾಗಿ ದಯವನ್ನು ತೋರಿಸಲಿಕ್ಕೆ ನಮ್ಮ ಒಡೆಯನಾದ ವೀರವರ್ಮನ ಅಪ್ಪಣೆಯಾಗಿರುವದರಿಂದ, ದಿನಾಲು ನಾನು ಸ್ವತಃ ಈ ಹೊತ್ತಿನಲ್ಲಿ ಬೇರೆ ಬೇರೆ ಕಡೆಗೆ ತಿರುಗುತ್ತಿರುತ್ತೇನೆ. ಈ ದಿನ ಈ ಉಪವನಕ್ಕೆ ಬರಲು ನಿನ್ನ ದರ್ಶನವಾಯಿತು. ಪ್ರಿಯ ಪುತ್ರಿಯಾದ ಪದ್ಮನಯನೆಯ ವಿಯೋಗ ದುಃಖದಿಂದ ಕೊರಗುತ್ತಿದ್ದ ನಮ್ಮ ಪೂಜ್ಯ ಸಾರ್ವಭೌಮನು, ಪರರ ವಿಪನ್ನಿವಾರಣವೇ ತನ್ನ ವ್ರತವೆಂದು ತಿಳಿದಿರುವನು. ನಿನ್ನ ವಿಪತ್ತಿನ ನಿವಾರಣವು ಆತನಿಂದ ಆಗದೆ ಇರಲಿಕ್ಕಿಲ್ಲ. ಕೃಪೆ ಮಾಡಿ ನನ್ನೊಡನೆ ಬರಬೇಕು. ನೀನು ರಾಜಕುಲಕ್ಕೆ ಸಂಬಂಧಿಸಿದವನೆಂಬದನ್ನು ನಿನ್ನ ಮುಖಚರ್ಯದಿಂದಲೇ ತಿಳಕೊಂಡೆನು. ವಿಪದ್ಗ್ರಹಸ್ತರ ಶೋಧಕ್ಕಾಗಿ ವೀರವರ್ಮ ಸಾರ್ವಭೌಮನು ತನ್ನ ಮುಖ್ಯ ಮಂತ್ರಿಯಾದ ನನ್ನನ್ನೇ ನಿಯಮಿಸಿರುತ್ತಾನೆ. ನನ್ನ ಹೆಸರು ದೇವದತ್ತನು ಪರರ ವಿಪನ್ನಿವಾರಣದ ಪುಣ್ಯದ ಬಲದಿಂದ

ತನ್ನ ಹಾಗೂ ತನ್ನ ಮಗಳಾದ ಪದ್ಮನಯನೆಯ ವಿಪನ್ನಿವಾರಣವಾಗಿ ಪರಸ್ಪರರ ದರ್ಶನ ಯೋಗವು ಒದಗಬಹುದೆಂದು ನಮ್ಮ ಉದಾರ ಮನಸ್ಸಿನ ಸಾರ್ವಭೌಮನು ನಂಬಿರುವನು. ಹು! ಏಳಬೇಕು, ಯಾವ ಸಂಕೋಚವನ್ನೂ ಮನಸ್ಸಿನಲ್ಲಿ ತಂದುಕೊಳ್ಳಬಾರದು. ಒಮ್ಮೆಲೆ ರಾಜಗೃಹಕ್ಕೆ ಹೋಗಲಿಕ್ಕೆ ಸಂಕೋಚವಾದರೆ, ಕೆಲವುದಿನ ನನ್ನ ಮನೆಯಲ್ಲಿರಬೇಕು. ನಿನ್ನ ದರ್ಶನಮಾತ್ರದಿಂದ ಯಾಕೋ ನನ್ನ ಚಿತ್ತಹರಣವಾಗಿದೆ. ನನ್ನ ವಿನಂತಿಗೆ ಅಸಮ್ಮತಿ ಪಡಬಾರದು, ಎಂದು ಹೇಳಿಕೊಂಡನು.

ಈ ಮಾತುಗಳು ಕಿವಿಗೆ ಬಿದ್ದಕೂಡಲೆ ಕಮಲಾಕ್ಷನ ಹೃದಯದಲ್ಲಿ ಮಿನುಗುಟ್ಟುವ ದೊಂದು ಜ್ಯೋತಿಯು ಉತ್ಪನ್ನವಾಗಿ ಮಂದ ಪ್ರಕಾಶವು ಬಿದ್ದಂತಾಗಲು, ಅವನು ಒಮ್ಮೆಲೆ ಎಚ್ಚತ್ತು ದೇವದತ್ತನನ್ನು ಆಶ್ಚರ್ಯದಿಂದ ನೋಡಹತ್ತಿದನು. ಅವನ ಮನೋವೃತ್ತಿಯು ವಿಚಿತ್ರವಾಗಹತ್ತಿತು. ತನ್ನ ಪ್ರಿಯಳಾದ ಪದ್ಮನಯನೆಯನ್ನು ಅಗಲಿ ತಾನೊಬ್ಬನೇ ಅವಳ ಜನ್ಮ ಭೂಮಿಯಾದ ಕನೋಜ ಪಟ್ಟಣವನ್ನು ಪ್ರವೇಶಿಸುವ ಪ್ರಸಂಗವು ಬಂದದ್ದರಿಂದ ಅವನ ದುಃಖವು ಉಕ್ಕೇರಹತ್ತಿತು. ಅವನು ತನ್ನ ದುಃಖವನ್ನು ಬಹು ಪ್ರಯಾಸದಿಂದ ನುಂಗಿಕೊಂಡನು. ತನ್ನ ನಿಜವಾದ ಸಂಗತಿಯನ್ನು ದೇವದತ್ತನಿಗೆ ತಿಳಿಸಿದರೆ, ಪದ್ಮನಯನೆಯ ವಿಯೋಗದಿಂದ ನೊಂದುಕೊಂಡವರಾದ ಈ ಪಟ್ಟಣದವರ ದುಃಖವು ಪುನರುಜ್ಜೀವನಕ್ಕೆ, ತಾನೇ ಕಾರಣನಾಗುವೆನೆಂದು ತಿಳಿದು, ಆತನು ಹಾಗೆ ಮಾಡದೆ ಬೇರೊಂದು ಉಪಾಯವನ್ನು ಯೋಚಿಸಿದನು. ಆ ಮೇಲೆ ಅವನು ಎದ್ದು ನಿಂತು ದೇವದತ್ತನಿಗೆ ಸಾಷ್ಟಾಂಗ ನಮಸ್ಕಾರ ಮಾಡಿ ಕೈಜೋಡಿಸಿಕೊಂಡು ವಿನಯದಿಂದ– ಮಂತ್ರಿವರ್ಯರೇ, ನಾನು ಯಾವದನ್ನೂ ತಿಳಿಯದೆ ಮೂರ್ಖನಂತೆ ತಮ್ಮ ಕೂಡ ಸಮಾನಸ್ಕಂದನಾಗಿ ವರ್ತಿಸಿದ್ದಕ್ಕಾಗಿ ನನ್ನನ್ನು ಕ್ಷಮಿಸಬೇಕು, ಎಂದು ಹೇಳಿಕೊಳ್ಳಲು, ದೇವದತ್ತನು—ಸುಜ್ಞನೇ, ನಿನ್ನಿಂದ ಅಸಮಾಧಾನಕರ ವಾದ ಯಾವ ಸಂಗತಿಯೂ ವರ್ತಿಸಿಲ್ಲ ಸುಮ್ಮನೆ ಅಸಮಾಧಾನ ಪಡಬೇಡ. ನೀನು ಯಾರೆಂಬದನ್ನು ತಿಳಕೊಳ್ಳುವ ಕುತೂಹಲವು ನನಗೆ ಬಹಳವಾಗಿದೆ. ಅದನ್ನು ಪೂರ್ಣ ಮಾಡುವಂತೆ ಇದ್ದರೆ ಮಾಡಬೇಕು, ಎಂದು ಹೇಳಲು ರಾಜಪುತ್ರನು ತಾನು ಯೋಚಿಸಿದಂತೆ ತನ್ನ ಸತ್ಯವಾದ ಸಂಗತಿಯನ್ನು ಮುಚ್ಚಿ ಹೇಳಿದನೇನಂದರೆ—ಮಂತ್ರಿಶ್ರೇಷ್ಠರೇ, ಸದ್ಯಕ್ಕೆ ನಾನು ನಿಜವಾದ ವೃತ್ತಾಂತವನ್ನು ತಿಳಿಸಲಾರೆನು; ಇದಕ್ಕಾಗಿ ನನ್ನನ್ನು ಕ್ಷಮಿಸಬೇಕೆಂದು ಪ್ರಾರ್ಥಿಸುತ್ತೇನೆ. ನಾನು ಪ್ರಾಯದ ಸೊಕ್ಕಿನಿಂದ ತಾಯಿ–ತಂದೆಗಳನ್ನು ಧಿಕ್ಕರಿಸಿ ಮನೆಬಿಟ್ಟು ಹೊರಟು ಈಗ ಐದು ವರ್ಷಗಳಿಂದ ತಿರುಗುತ್ತಿದ್ದ ಒಬ್ಬ ಪ್ರಾಯಸ್ಥನಿರುತ್ತೇನೆಂಬದನ್ನಿಷ್ಟೇ ಅರಿಕೆ ಮಾಡಿ ಕೊಳ್ಳುವೆನು. ಮಾತಾ–ಪಿತೃಗಳ ವಿಯೋಗ ದುಃಖವು ನನ್ನನ್ನು ಬಾಧಿಸುತ್ತಿದ್ದರೂ, ಕೈಲಾಗ ದವನಂತೆ ಈಗ ಅವರನ್ನು ಕಾಣಲು ನಾಚಿಕೊಳ್ಳುತ್ತೇನೆ. ಮಹದಾಶ್ರಯದಿಂದ ಉತ್ಕರ್ಷವನ್ನು ಹೊಂದಿ ತಾಯಿ–ತಂದೆಗಳನ್ನು ಕಾಣುವ ಕುತೂಹಲವು ನನಗೆ ಬಹಳವಾಗಿದೆ. ಆಶ್ರಯ ಸ್ಥಾನವನ್ನು ಶೋಧಿಸುತ್ತ ಈ ಪಟ್ಟಣಕ್ಕೆ ಬಂದಿರುವೆನು. ಮುಟ್ಟಮೊದಲು ತಮ್ಮಂಥ ಮಹನೀಯರ ದರ್ಶನವಾದದ್ದು ಸುಚಿಹ್ನವಾಗಿರುವದು.

ದೇವದತ್ತನು ಹೆಚ್ಚಿನ ಯಾವ ಸಂಗತಿಯನ್ನು ವಿಚಾರಿಸದೆ, ಕಮಲಾಕ್ಷನನ್ನು ರಥದಲ್ಲಿ ಕುಳ್ಳಿರಿಸಿಕೊಂಡು ಪಟ್ಟಣದ ಕಡೆಗೆ ನಡೆದನು. ಕಮಲಾಕ್ಷನು ಪಟ್ಟಣದ ವಿಚಿತ್ರವಾದ ಶೋಭೆಯನ್ನೂ, ಐಶ್ವರ್ಯವನ್ನೂ ನೋಡಿ ಬೆರಗಾಗುತ್ತ, ಕೆಲವು ವೇಳೆಯಲ್ಲಿ ಮಂತ್ರಿಯಾದ ದೇವದತ್ತನ ಮನೆಗೆ ಮುಟ್ಟಿದನು. ಕನೋಜ ಪಟ್ಟಣವು ಅವನ ಮನಃಪ್ರಿಯಳಾದ ಪದ್ಮನಯನೆಯ ಜನ್ಮಸ್ಥಾನವಾದ ಕಾರಣ, ಆ ಪಟ್ಟಣದೊಳಗಿನ ಜನರೆಲ್ಲರೂ ಅವನಿಗೆ ಆಪ್ತರಂತೆ ತೋರಿ ದುಃಖಕೊಡಹತ್ತಿದರು. ಪದ್ಮನಯನೆಯೊಡನೆ ತಾನು ಪುರಪ್ರವೇಶ ಮಾಡಿದ್ದರೆ, ಒದಗಬಹುದಾಗಿದ್ದ ಆನಂದದ ಸ್ಥಿತಿಯನ್ನು ಕಲ್ಪಿಸುತ್ತ ಅವನು ಮರುಗಹತ್ತಿದನು. ಮೋಹದ ಬಲೆಯು ಬಲು ತೊಡಕುಳ್ಳದ್ದು ಮೋಹಕ್ಕೆ ಪ್ರತ್ಯಕ್ಷ ಪಾತ್ರವಾಗಿದ್ದ ವಸ್ತುವಿನಿಂದಷ್ಟೇ ದುಃಖವು ಆಗದೆ, ವಸ್ತುವಿಗೆ ಸಂಬಂಧಿಸಿದ ಬೇರೆ ವಸ್ತುಗಳಿಂದಲೂ ದುಃಖವಾಗುತ್ತದೆ. ಸತ್ತ ಹೆಂಡತಿಯ ವಸ್ತ್ರ-ಒಡವೆಗಳೂ, ಕಸೂತಿ ಮೊದಲಾದ ಕಲಾ ಕೌಶಲ್ಯಗಳೂ ಗಂಡನಿಗೆ ದುಃಖಕೊಡುವದನ್ನು ನೋಡಿದರೆ, ಈ ಮಾತಿನ ನಿಜತ್ವವು ಗೊತ್ತಾಗಬಹುದು. ಸಣ್ಣ ಕೂಸುಗಳು ಸತ್ತರೆ, ತಾಯಿ-ತಂದೆಗಳು ಆ ಕೂಸುಗಳ ವಸ್ತ್ರ-ಒಡವೆ, ಅರಿವೆ-ಅಂಚಡಿ, ಹಾಸಿಗೆ-ಹುಪ್ಪಡಿ, ತೊಟ್ಟಿಲು-ಆಟಿಗೆ ಮೊದಲಾದವನ್ನು ನೋಡಿ ಅಳುವದು ವಾಡಿಕೆಯಾಗಿರುವದು! ಇದು ಮೂರ್ಖತನವೆಂದು ಬಾಯಿಂದ ಹೇಳಬಹುದು; ಆದರೆ ಕೃತಿಯಿಂದ ತೋರಿಸುವದು ಎಲ್ಲರಿಗೂ ಶಕ್ಯವಲ್ಲ. ಕಮಲಾಕ್ಷನ ಸ್ಥಿತಿಯು ಹೀಗೆಯೇ ಆಯಿತು. ಪದ್ಮನಯನೆಯ ಊರು, ಆಕೆಯ ಆಪ್ತೇಷ್ಟರು, ಆಕೆಯ ಗುಣಾನುವಾದ ಇವುಗಳ ಯೋಗದಿಂದ ಅವನು ಮನಸ್ಸಿನಲ್ಲಿ ಅಸಮಾಧಾನಪಡಹತ್ತಿದನು. ದೇವದತ್ತನ ಮನೆಯಲ್ಲಿ ಯಾವ ಮಾತಿನ ಕೊರತೆಯೂ ಇದ್ದಿಲ್ಲ. ಅವನು ಕಮಲಾಕ್ಷನ ಆದರಾತಿಥ್ಯವನ್ನು ಆಸ್ಥೆಯಿಂದಲೂ, ಪ್ರೀತಿಯಿಂದಲೂ ಮಾಡತೊಡಗಿದನು. ಕಮಲಾಕ್ಷನು ತನ್ನ ಸದ್ಗುಣಗಳ ಯೋಗದಿಂದ ಸ್ವಲ್ಪ ದಿನಗಳಲ್ಲಿಯೇ ದೇವದತ್ತನ ಮನಸ್ಸನ್ನು ಎಳಕೊಂಡನು.

ಹೀಗೆ ಇರ ಇರುತ್ತ ಒಂದು ದಿನ ರಾಜಪುತ್ರನು ಮನಸ್ಸಿನಲ್ಲಿ—ನಾನು ಹೀಗೆ ಸುಮ್ಮನೆ ದೇವದತ್ತನ ಮನೆಯಲ್ಲಿ ಸುಖವನ್ನು ಭೋಗಿಸುತ್ತ ಕಾಲಹರಣ ಮಾಡಹತ್ತಿದರೆ ಯಾವ ಪುರುಷಾರ್ಥವನ್ನು ಸಾಧಿಸಿದಂತಾಗುವದು? ಇದರಿಂದ ಪದ್ಮನಯನೆಯ ಶೋಧವಾದಂತಾಗುವದಿಲ್ಲ; ವೀರವರ್ಮನಿಗೆ ಸಹಾಯ ಮಾಡಿದಂತಾಗುವದಿಲ್ಲ; ಪರೋಪಕಾರವನ್ನು ಸಾಧಿಸಿದಂತಾಗುವದಿಲ್ಲ, ಒಬ್ಬರಿಗೆ ಭಾರವಾಗಿ ಬದುಕಿದಂತೆ ಮಾತ್ರ ಆಗುವದು. ಪರಾಕ್ರಮವನ್ನು ತೋರಿಸುವದು ಕ್ಷತ್ರಿಯರ ಸ್ವಾಭಾವಿಕ ಧರ್ಮವು. ಆ ಧರ್ಮವನ್ನು ಬಿಟ್ಟು, ಕೃತ್ರಿಮವಾದ ಈ ಸ್ತ್ರೀ ಧರ್ಮವನ್ನು ಸ್ವೀಕರಿಸುವದು ಲಾಂಛನವೇ ಸರಿ; ಸ್ವಧರ್ಮದಲ್ಲಿ ನಿಧನವಾದರೂ ಶ್ರೇಯಸ್ಕರವು. ವೀರವರ್ಮನ ಆಶ್ರಯದಿಂದ ಸೈನ್ಯದಲ್ಲಿ ಸೇರಿ ಪರಾಕ್ರಮವನ್ನು ತೋರಿಸಿ, ಪ್ರಸಿದ್ಧಿಗೆ ಬರುವದು ತಕ್ಕದ್ದು ಎಂದು ಯೋಚಿಸಿ, ಹೊತ್ತು ನೋಡಿ ತನ್ನ ವಿಚಾರವನ್ನು ದೇವದತ್ತನಿಗೆ ತಿಳಿಸಲು, ಅವನು ಸಂತೋಷಪಟ್ಟು—ಕಮಲಾಕ್ಷಾ, ನಿನ್ನ ವಿಚಾರವು ಶೌರ್ಯಕ್ಕೂ, ದೊಡ್ಡಸ್ತನಕ್ಕೂ ಒಪ್ಪುವಹಾಗಿದೆ. ಏನೂ ಚಿಂತೆಯಿಲ್ಲ, ನಮ್ಮ

ಪ್ರಭುವು ಗುಣಗ್ರಾಹಿಯಿದ್ದಾನೆ; ನಿನ್ನ ಕೋರಿಕೆಯು ಸಹಜವಾಗಿ ಕೊನೆಗಾಣುವದು; ಆದರೆ ನಾನು ನಿನಗೆ ಆಗ್ರಹದಿಂದ ಹೇಳಿಕೊಳ್ಳುವದೇನಂದರೆ, ನೀನು ಯಾವ ಉದ್ಯೋಗವನ್ನು ಕೈಕೊಂಡರೂ ನನ್ನನ್ನು ಮಾತ್ರ ಅಗಲಬೇಡ, ನಿನ್ನ ವಿಯೋಗದಿಂದ ನನ್ನ ಮನಸ್ಸು ಅಸಮಾಧಾನಪಡುವದು. ನೀನು ಸುಜ್ಞನಿರುವದರಿಂದ ಹೆಚ್ಚಿಗೆ ಹೇಳುವ ಕಾರಣವಿಲ್ಲ, ಎನ್ನಲು, ಕಮಲಾಕ್ಷನು ಮಂತ್ರಿಯ ವಿಚಾರಕ್ಕೆ ವಿನಯದಿಂದ ಒಪ್ಪಿಕೊಂಡು ಆತನ ಅಪ್ಪಣೆಯಿಂದ ರಾಜದರ್ಶನದ ಸಿದ್ಧತೆಯನ್ನು ಮಾಡತೊಡಗಿದನು. ಆತನು ಸ್ವತಃ ಅಶ್ವಶಾಲೆಗೆ ಹೋಗಿ ಉತ್ತಮ ಲಕ್ಷಣದ ಬಿಳಿಯ ಕುದುರೆಯನ್ನು ಆರಿಸಿಕೊಂಡು ಜೀನು ಹಾಕಿಸಿದನು. ಕುದುರೆಯು ಮೊದಲೇ ಸುಂದರ ಅದನ್ನು ಬೆಲೆಯುಳ್ಳ ಬಗೆ ಬಗೆಯ ಅಲಂಕಾರಗಳಿಂದ ಶೃಂಗರಿಸಿದ ಬಳಿಕ ಕೇಳುವದೇನು? ಆ ಸುಂದರ ಪ್ರಾಣಿಯು ಕಮಲಾಕ್ಷನ ರಾಜ ದರ್ಶನದ ಉತ್ಸುಕತೆಯನ್ನು ಹೆಚ್ಚಿಸಿತು. ಆ ವೀರ ಪುರುಷನು ಲಷ್ಕರಿಯ ರೀತಿಯ ಪೋಷಾಕನ್ನು ಹಾಕಿಕೊಂಡು, ಕತ್ತಿ ಭಾಲೆಗಳನ್ನೂ, ಧನುರ್ಬಾಣಗಳನ್ನೂ ತೆಗೆದುಕೊಂಡು, ಮನುಷ್ಯಾ ಕೃತಿಯನ್ನು ಧರಿಸಿದ ಮನ್ಮಥನೋ ಅನ್ನುವಂತೆ ರಾಜದರ್ಶನಕ್ಕೆ ಹೊರಟನು. ಲೋಕ ಸುಂದರನಾದ ಕಮಲಾಕ್ಷನ ಸೌಂದರ್ಯಕ್ಕೆ ಈ ಪ್ರಕಾರದ ಸುವ್ಯವಸ್ಥೆಯಿಂದ ಮತ್ತಿಷ್ಟು ಕಳೆಯೇರಿತು. ಮಾರ್ಗದಲ್ಲಿ ಪೌರರು ಚಕಿತ ಮುದ್ರೆಯಿಂದ ಅವನ ರೂಪವನ್ನು ಎವೆ ಬಡಿಯದೆ ನೋಡುತ್ತಿದ್ದರು. ಇಂಥ ಮೋಹಕ ಸ್ವರೂಪಿಯಾದ ಕಮಲಾಕ್ಷನು ರಾಜ ತೇಜಸ್ಸಿನಿಂದ ರಾಜ ಸಭೆಯನ್ನು ಪ್ರವೇಶಿಸಲು, ಅಲ್ಲಿಯ ಯಾವತ್ತು ಜನರು ಸೋಜಿಗಪಟ್ಟರು ಕೂಡಲೆ ವೀರವರ್ಮನ ಚಿತ್ತಹರಣವಾಯಿತು. ಆತನು ಕಮಲಾಕ್ಷನ ಅದ್ವಿತೀಯವಾದ ರೂಪವನ್ನು ನೋಡಿ, ತನ್ನ ಮಗಳ ರೂಪವನ್ನು ನೆನಿಸಿ ದುಃಖಪಟ್ಟನು. ಕಮಲಾಕ್ಷನು ವೀರವರ್ಮನಿಗೆ ಸಾಷ್ಟಾಂಗ ನಮಸ್ಕಾರ ಮಾಡಿ, ಕೈ ಜೋಡಿಸಿಕೊಂಡು ವಿನಯದಿಂದ ನಿಂತುಕೊಳ್ಳಲು, ಅರಸನು ಅವನನ್ನು ಕುರಿತು—ಎಲೈ ಮೋಹಕ ಸ್ವರೂಪಿಯೇ, ನಿನ್ನ ದರ್ಶನದಿಂದ ನನಗೆ ಬಹಳ ಸಮಾಧಾನವಾಗಿದೆ. ನೀನು ಯಾರು? ಇಲ್ಲಿಗೆ ಯಾವ ಕಾರಣದಿಂದ ಬಂದೆ? ನನ್ನಿಂದ ಆಗತಕ್ಕ ಕಾರ್ಯವು ಯಾವದು, ಎಂದು ಕೇಳಲು, ಕಮಲಾಕ್ಷನು—ಪ್ರಭುಗಳೇ, ನಾನು ಕೆಲಮಟ್ಟಿಗೆ ಯುದ್ಧ ಕಲೆಯನ್ನು ಅರಿತ ಒಬ್ಬ ಸರದಾರನಿರುತ್ತೇನೆ. ತಮ್ಮ ಕೀರ್ತಿಯನ್ನು ಕೇಳಿ ಆಶ್ರಯವನ್ನು ಪಡೆಯಲು ಬಂದಿರುವೆನು. ನನ್ನ ಹೆಸರು ಕಮಲಾಕ್ಷ. ಪ್ರಭುಗಳ ಔದಾರ್ಯದಿಂದ ನನ್ನ ಕೋರಿಕೆಯು ನಿಶ್ಚಯವಾಗಿ ಕೊನೆ ಗಾಣುವದೆಂದು ನಂಬಿದ್ದೇನೆ, ಎಂದು ಹೇಳಿದನು.

ವೀರವರ್ಮನು ಕಮಲಾಕ್ಷನ ಮಾತುಗಳನ್ನು ಕೇಳಿ ಸಂತೋಷಪಟ್ಟು ಅವನನ್ನು ಒಂದು ಸೈನ್ಯದ ಮುಖ್ಯಾಧಿಕಾರಿಯಾಗಿ ನಿಯಮಿಸಿದನು. ಪದ್ಮನಯನೆಯ ವಿಯೋಗವಾದಂದಿನಿಂದ ವೀರವರ್ಮನು ಸರಿಯಾಗಿ ರಾಜ್ಯಕಾರಭಾರದ ಕಡೆಗೆ ಲಕ್ಷಗೊಡುತ್ತಿದ್ದಿಲ್ಲ; ಅದರಿಂದ ಬಹು ಜನ ಅರಸರು ಅವನನ್ನು ಮೀರಿ ನಿಂತಿದ್ದರು. ಪ್ರತಾಪಿಯಾದ ಕಮಲಾಕ್ಷನು ಮುಂದೆ ಸ್ವಲ್ಪ ಕಾಲದಲ್ಲಿಯೇ ಎಷ್ಟೋ ಯುದ್ಧಗಳಲ್ಲಿ ವೈರಿಗಳನ್ನು ಸೋಲಿಸಿ ವೀರವರ್ಮನನ್ನು ನಿಷ್ಕಂಟಕ

ನಾಗ ಮಾಡಿದನು. ಇದರಿಂದ ಕಮಲಾಕ್ಷನ ಕೀರ್ತಿಯು ದಿಕ್ಕು-ದಿಕ್ಕಿಗೆ ಹಬ್ಬಿತು. ಅವನು ಸೈನ್ಯದೊಳಗಿನ ಬೇರೆ ಅಧಿಕಾರಿಗಳಿಗೂ, ತನ್ನ ಕೈಕೆಳಗಿನ ಜನರಿಗೂ ಬಹು ಪ್ರಿಯಕರನಾಗಿದ್ದನು- ಅರಸನಲ್ಲಂತು ಅವನ ಪ್ರಸ್ಥವು ವಿಶೇಷವಾಗಿ ಬೆಳೆದಿತ್ತು, ಗುಣಜ್ಞರಾದ ಬೇರೆ ಬೇರೆ ಅಧಿಕಾರಿಗಳೂ, ಪ್ರಧಾನರೂ ಕಮಲಾಕ್ಷನ ಗುಣಗಳಿಗೆ ಲುಬ್ಧರಾಗಿ, ಅವನ ಸ್ನೇಹವನ್ನು ಸಂಪಾದಿಸಲು ಯತ್ನಿಸುತ್ತಿದ್ದರು. ಕಮಲಾಕ್ಷನು ವಿನಯಶಾಲಿಯಾಗಿದ್ದರೂ ಬಾಲಬಡಿಯವ ಸ್ವಭಾವದವನಿದ್ದಿಲ್ಲ. ಅವನು ಸ್ಪಷ್ಟವಾದಿಯೂ, ಗುಣೈಕಪಕ್ಷಪಾತಿಯೂ, ನಿಸ್ಪ್ರಹನೂ ಇದ್ದದ್ದರಿಂದ ಎಲ್ಲರ ಮೇಲೆ ಅವನ ವರ್ಚಸ್ಸು ಕುಳಿತಿತ್ತು. ಕುಹಕರೂ, ಹೇಡಿಗಳೂ, ಸೋಮಾರಿಗಳೂ, ದುರ್ಗುಣಿಗಳೂ ಅವನ ನೆರಳಿಗೆ ನಿಲ್ಲಲು ಅಂಜುತ್ತಿದ್ದರು. ಸ್ವಲ್ಪದಿನಗಳಲ್ಲಿ ಕಮಲಾಕ್ಷನು ಗುಣಿಜನರನ್ನು ಸಂಗ್ರಹಿಸಿದನು. ಆತನು ಸರ್ವಸಮ್ಮತನಾಗಲಿಕ್ಕೆ ಯತ್ನಿಸುತ್ತಿದ್ದಿಲ್ಲ; ಜನರು ಹೊಗಳಲಿ, ಬೊಗಳಲಿ ತನ್ನ ಸತ್ಯಪಥವನ್ನು ಹಿಡಿದು ಸಾಗುತ್ತಿದ್ದನು. ಇದರಿಂದ ಕೆಲವರು ಅಜ್ಞಾನದಿಂದ ಮಾತ್ಸರ್ಯವನ್ನು ತಾಳಿದರೂ, ಅವರ ಆಟವೇನೂ ನಡೆಯುತ್ತಿದ್ದಿಲ್ಲ. ಬರಬರುತ್ತ ಕಮಲಾಕ್ಷನ ನಿಸ್ಪ್ರಹತೆ-ನಿರ್ಧಾರ-ದಯಾಲುತ್ವಾದಿ ಗುಣಗಳ ವರ್ಚಸ್ಸಿನಿಂದ ಮಾತ್ಸರ್ಯವು ಅಳಿಯುತ್ತ ಹೋಗಿ, ಪರಸ್ಪರರಲ್ಲಿ ನಿಜವಾದ ಪ್ರೇಮವು ಉತ್ಪನ್ನವಾಗ ಹತ್ತಿತು ಮರೆಮೋಸಗಳಿಗೆ ಆಸ್ಪದವು ಕಡಿಮೆಯಾಯಿತು. ವೇಷಧಾರಿಗಳು ಕಮಲಾಕ್ಷನ ಮುಂದೆ ನಿಲ್ಲದಾದರು. ಕುಟಿಲಹೃದಯದವರು ಕಾಲು ತೆಗೆದರು. ಒಟ್ಟಿಗೆ ವೀರವರ್ಮನ ದರ್ಬಾರದಲ್ಲಿ ತೇಜಸ್ವಿಗಳ ಸಂಖೆಯು ಹೆಚ್ಚಿ, ಆಯಾ ಕಾರ್ಯಗಳು ಸುವ್ಯವಸ್ಥಿತವಾಗಿ ಪ್ರಾಮಾಣಿಕತನದಿಂದ ನಡೆಯಹತ್ತಿದ ಕಾರಣ, ಪ್ರಜೆಗಳ ಸುಖವು ಹೆಚ್ಚಿತು. ಇದಕ್ಕೆಲ್ಲ ಕಮಲಾಕ್ಷನ ತೇಜಸ್ಸೇ ಕಾರಣವೆಂದು ತಿಳಿದು ಪ್ರಜೆಗಳು ಆತನನ್ನು ಹಾಡಿ ಹರಿಸಹತ್ತಿದರು. ಮಹಾತ್ಮರ ಸತ್ವದಲ್ಲಿಯೇ ಕ್ರಿಯಾಸಿದ್ಧಿಯು ಇರುವದು.

ಮಿತ್ರಲಾಭ

ದೇವದತ್ತನು ವೀರವರ್ಮನ ಮುಖ್ಯ ಮಂತ್ರಿಯೆಂದು ಮತ್ತೆ ಹೇಳುವ ಕಾರಣವಿಲ್ಲ, ಅವನು ಕ್ಷತ್ರಿಯನಿದ್ದರೂ ರಾಜಕಾರಣ ಪಟುತ್ವದಿಂದ ಮಂತ್ರಿಪದವನ್ನು ಹೊಂದಿದ್ದನು. ವೀರವರ್ಮನಿಗೆ ಕಪಿಂಜಲನ ಪ್ರಸಾದದಿಂದ ಪದ್ಮನಯನೆಯು ಜನಿಸಿದ ನಾಲ್ಕು ವರ್ಷಗಳ ಮೇಲೆ, ದೇವದತ್ತನಿಗಾದರೂ ಅದೇ ಋಷಿಯ ಪ್ರಸಾದದಿಂದ ಒಂದು ಕನ್ಯಾರತ್ನವು ಜನಿಸಿತು. ಆ ಸುಕುಮಾರಿಯ ಹೆಸರು ಜೀವನಕಲೆಯು ಪದ್ಮನಯನೆಯೂ, ಜೀವನ ಕಲೆಯೂ ಕೂಡಿ ಆಡಿದವರಾದ್ದರಿಂದ, ಅವರು ಜೀವದ ಗೆಳತಿಯರಾಗಿದ್ದರು. ಜೀವನಕಲೆಯು ಪದ್ಮನಯನೆಯ ಸಹವಾಸದಿಂದ ಸಕಲ ವಿದ್ಯೆಗಳನ್ನು ಕಲಿತಿದ್ದಳು. ಆ ಮಂತ್ರಿ ಕುವರಿಯ ಸೌಂದರ್ಯದ ಕೀರ್ತಿಯು ಎಲ್ಲ ಕಡೆಯಲ್ಲಿ ಹಬ್ಬಿದ್ದರಿಂದ, ಬಹು ಜನ ರಾಜಕುಮಾರರೂ,

ಮಂತ್ರಿಕುವರರೂ ಅವಳನ್ನು ಲಗ್ನವಾಗಲು ಯತ್ನಿಸಿದರು. ಆದರೆ ಜೀವನಕಲೆಯ ಮನಸ್ಸು ಮೆಚ್ಚುವಂಥವರನು ದೊರೆಯದ್ದರಿಂದಾಗಲಿ, ಬ್ರಹ್ಮಸಂಕಲ್ಪವು ಒದಗದ್ದರಿಂದಾಗಲಿ ಅವಳು ಇಲ್ಲಿಯವರೆಗೆ ಅವಿವಾಹಿತಳಾಗಿಯೇ ಇದ್ದಳು. ದೇವದತ್ತನ ಪ್ರೇಮವು ಮಗಳ ಮೇಲೆ ವಿಶೇಷವಾಗಿ ಇದ್ದದ್ದರಿಂದ ಅವನು ಅವಳ ಮನೋವೃತ್ತಿಯ ವಿರುದ್ಧವಾಗಿ ಎಂದೂ ನಡೆಯುತ್ತಿದ್ದಿಲ್ಲ. ಜೀವನ ಕಲೆಯು ಕಮಲಾಕ್ಷನ ಸೌಂದರ್ಯವನ್ನೂ, ಸುಗುಣಗಳನ್ನೂ, ಕೀರ್ತಿಯನ್ನೂ ನೋಡಿ, ಮನಸೋತು ಅವನನ್ನು ಪ್ರಸನ್ನವಾದ ಅಂತಃಕರಣದಿಂದ ಪ್ರೀತಿಸುತ್ತಿದ್ದಳು. ಕಮಲಾಕ್ಷನು ಪದ್ಮನಯನೆಯನ್ನು ಅಗಲಿದಂದಿನಿಂದ ಯಾವತ್ತು ವಿಷಯ ಸುಖಗಳ ಆಶೆಯನ್ನು ಬಿಟ್ಟವನಾದ್ದರಿಂದ, ಅವನು ಜೀವನಕಲೆಯ ನಡತೆಯ ಕಡೆಗೆ ವಿಶೇಷವಾಗಿ ಲಕ್ಷ್ಯಗೊಡುತ್ತಿದ್ದಿಲ್ಲ. ಮುಂದೆ ಬರಬರುತ್ತ ಜೀವನಕಲಾ–ಕಮಲಾಕ್ಷರ ಪರಿಚಯವು ಹೆಚ್ಚುತ್ತ ಹೋದಂತೆ, ಪರಸ್ಪರರ ಪ್ರೇಮವೂ ಹೆಚ್ಚುತ್ತ ಹೋಯಿತು. ಆದರೆ ಭೇದವಿಷ್ಟೇ, ಕಮಲಾಕ್ಷನ ಪ್ರೇಮವು ನಿರಭಿಲಾಷೆಯುಳ್ಳದ್ದೂ, ಜೀವನಕಲೆಯ ಪ್ರೇಮವು ಅಭಿಲಾಷೆಯುಳ್ಳದ್ದೂ ಆಗಿದ್ದವು. ಈ ಭೇದವನ್ನು ಮರ್ಮಜ್ಞನಾದ ಕಮಲಾಕ್ಷನು ತನ್ನ ದುಃಸ್ಥಿತಿಯಲ್ಲಾದರೂ ಗೊತ್ತುಹಿಡಿದನು.

ಜೀವನಕಲೆಯು ಅಯೋಗ್ಯಸ್ಥಾನದಲ್ಲಿ ಪ್ರೇಮವನ್ನು ಇಡತಕ್ಕವಳಲ್ಲೆಂಬ ನಂಬಿಗೆಯು ಅಬಾಲವೃದ್ಧರಿಗೂ ಇದ್ದದ್ದರಿಂದ, ಅವಳು ಪರಪುರುಷರ ಸಂಗಡ ಸರಳ ಮನಸ್ಸಿನಿಂದ ವರ್ತಿಸುವದಕ್ಕೆ ಎಷ್ಟು ಮಾತ್ರವೂ ಪ್ರತಿಬಂಧಕವಿದ್ದಿಲ್ಲ. ಜೀವನಕಲೆಯಂಥ ಸುಶೀಲೆಯಾದ ಕುಲೀನ ಸ್ತ್ರೀಯು, ಪರಪುರುಷರ ಮುಖಾವಲೋಕನ ಮಾಡುವದೇ ಅಸಂಭವವು; ಆದರೆ ಕಮಲಾಕ್ಷನು ಜೀವನಕಲೆಯ ಮನಸ್ಸನ್ನು ಆಕರ್ಷಿಸಿಕೊಂಡದ್ದರಿಂದ ಅವಳು ಕಮಲಾಕ್ಷನು ಸಂಗಡ ಮನಬಿಚ್ಚಿ ಮಾತಾಡಹತ್ತಿದಳು. ಪದ್ಮನಯನೆಯ ವಿಯೋಗದಿಂದ ವಿಷಯ ಸುಖಗಳನ್ನು ಬಯಸದ ಕಮಲಾಕ್ಷನು, ಜೀವನ ಕಲೆಯ ವರ್ತನದಿಂದ ವಿಶೇಷ ಸಮಾಧಾನ ಪಡದಿದ್ದರೂ, ಅವಳು ತನ್ನ ಮೇಲೆ ಮಾಡುವ ಪ್ರೇಮಕ್ಕಾಗಿ ಕೃತಜ್ಞತೆಯನ್ನು ತೋರಿಸತಕ್ಕದ್ದೆಂದು ನೆನಿಸಿದನು. ಈ ಬುದ್ಧಿಯು ಉತ್ಪನ್ನವಾದಂದಿನಿಂದ ಅವನು, ಜೀವನ ಕಲೆಯ ಉಪಕಾರ ವನ್ನು ನೆನಿಸಹತ್ತಿದನು. ಧೂರ್ತಳಾದ ಜೀವನಕಲೆಯು ಕಮಲಾಕ್ಷನ ಕೃತಜ್ಞತೆಯಿಂದ ಆನಂದ ಪಡಹತ್ತಿದಳು. ಒಂದು ದಿನ ಕಮಲಾಕ್ಷನು ಜೀವನಕಲೆಯ ಬಳಿಗೆ ನಿತ್ಯಕ್ರಮದಂತೆ ಹೋಗಿರಲು, ಅವರಿಬ್ಬರ ಸಂಭಾಷಣವು ಈ ಪ್ರಕಾರ ಆಯಿತು.

ಜೀವನಕಲೆ(ತನ್ನ ದಾಸಿಯರನ್ನು ಉದ್ದೇಶಿಸಿ)—''ಪ್ರಿಯತಮೇ, ಯೋಗಾಯೋಗವು ಹೇಗಿದೆ ನೋಡಿದೆಯಾ? ಇದೇ ಈಗ ನಾನು ನಿನ್ನೊಡನೆ ಕಮಲಾಕ್ಷ ಸರದಾರರ ಗುಣಗಳನ್ನು ಶ್ಲಾಘಿಸುತ್ತಿರಲು, ಈಗ ಅವರೇ ಪ್ರತ್ಯಕ್ಷವಾಗಿ ಬಂದಿರುವರು. ಅವರಿಗೆ ಸಂಪೂರ್ಣ ನೂರು ವರ್ಷ ಆಯುಷ್ಯವಿರುವದು. ಅವರ ದರ್ಶನ ಮಾತ್ರದಿಂದ ನನಗೆ ಬಹಳ ಆನಂದವಾಗುತ್ತದೆ.''

ಕಮಲಾಕ್ಷ—''ಮಂತ್ರಿಕುವರೀ, ಮನುಷ್ಯರು ಸ್ವತಃ ಆನಂದವೃತ್ತಿಯವರಿದ್ದರೆಂದರೆ, ಅವರ ಆನಂದಕ್ಕಾಗಿ ಎರಡನೆಯವರು ವಿಶೇಷವಾಗಿ ಕಾರಣರಾಗುವದಿಲ್ಲ. ಸುಶಿಕ್ಷಿತಳೂ, ರಸಿಕಳೂ ಆದ ನಿನ್ನನ್ನು ಆನಂದಗೊಳಿಸುವಷ್ಟು ಜ್ಞಾನವೂ, ರಸಿಕತನವೂ ನನ್ನಲ್ಲಿಲ್ಲ. ಹೀಗಿದ್ದು ನನ್ನನ್ನು ನೀನು ಶ್ಲಾಘಿಸುವದು ನಿನ್ನ ದೊಡ್ಡಿಸ್ತನದ ಲಕ್ಷಣವಾಗಿದೆ.''

ಜೀವನಕಲೆ—''ಅದು ಹೇಗೇ ಇರಲಿ, ತಿಳಿದವರು ಕಾರಣವಿಲ್ಲದೆ ತಮ್ಮ ಬಾಯಿಂದ ತಮ್ಮ ಸ್ತೋತ್ರ ಮಾಡಿಕೊಳ್ಳುವದಿಲ್ಲ. ನೀವು ಆನಂದ ವೃತ್ತಿಯಲ್ಲಿರಬೇಕೆಂದು ನಾನು ಮನಮುಟ್ಟಿ ಬಯಸುವೆನು. ನೀವು ಯಾವಾಗಲೂ ಉದಾಸೀನರಾಗಿರುವದನ್ನು ನೋಡಿ ನನಗೆ ಬಹಳ ಅಸಮಾಧಾನವಾಗುತ್ತದೆ. ತಮ್ಮ ಸ್ಥಿತಿಯು ಹೀಗಾಗುವದಕ್ಕೆ ಕಾರಣವಾದರೂ ಯಾವದೋ ತಿಳಿಯದು.''

ಕಮಲಾಕ್ಷ—''ಸುಗುಣಪೂರ್ಣಳೇ, ನೀನು ನನ್ನ ದುಃಸ್ಥಿತಿಯನ್ನು ನೋಡಿ ಅಸಮಾಧಾನ ಪಡುವದಕ್ಕಾಗಿ ನಾನು ಕೃತಜ್ಞನಾಗಿದ್ದೇನೆ. ದಿನಾಲು ನನ್ನನ್ನು ಸಮಾಧಾನ ಪಡಿಸುವದಕ್ಕಾಗಿ ಯತ್ನಿಸುತ್ತಿರುವದರಿಂದ, ನೀನು ನನಗೆ ಹೆಚ್ಚಿನ ಆಪ್ತಳಾಗಿರುತ್ತೀ.''

ಜೀವನಕಲೆ—''ತಮ್ಮ ನುಡಿಯು ಸತ್ಯವಿದ್ದರೆ, ಆಪ್ತರ ಬಳಿಯಲ್ಲಿ ದುಃಖದ ಕಾರಣವನ್ನು ಹೇಳಲಿಕ್ಕೆ ಪ್ರತಿಬಂಧವೇನು?''

ಕಮಲಾಕ್ಷ—''ಪ್ರತಿಬಂಧವಿಲ್ಲ ಆದರೆ ಸ್ಥಾನಾಸ್ಥಾನದ ವಿಚಾರಮಾಡಿ ಮಾತುಗಳನ್ನಾಡ ಬೇಕಾಗುತ್ತದೆ. ಸುಶೀಲೆಯಾದ ನಿನ್ನ ಮುಂದೆ ಹೇಳಲಿಕ್ಕೆ ತಕ್ಕದ್ದಲ್ಲದ ಲಜ್ಜಾಸ್ಪದವಾದ ಮಾತನ್ನು ನಾನಾದರೂ ಹೇಗೆ ಹೇಳಲಿ?''

ಜೀವನಕಲೆ—''(ದಯಾರ್ದ್ರ ದೃಷ್ಟಿಯಿಂದ ನೋಡುತ್ತ) ಸತ್ಯವದೆ ಸದಾಚಾರಿಗಳಾದ ನೀವು ನನ್ನ ಮುಂದೆ ಹೇಳುವದಕ್ಕಾಗಿ ಅಂದೇಶಪಡುತ್ತಿರುವ ಸಂಗತಿಯನ್ನು ನಾನು ಎಷ್ಟೋ ದಿವಸಗಳ ಹಿಂದೆ ಅರಿತಿದ್ದೇನೆ. ಸುಶೀಲೆಯಾದ ಸುಂದರಿಯೋರ್ವಳು ನಿಮ್ಮನ್ನಗಲಿರುವದರಿಂದ ನೀವು ಇಷ್ಟು ಉದಾಸೀನರಾಗಿರುವಿರಲ್ಲವೆ?''

ಕಮಲಾಕ್ಷ—(ಕಣ್ಣಲ್ಲಿ ನೀರು ತಂದು) ದಯಾಘನೇ, ದೂರದರ್ಶಿಯಾದ ನಿನ್ನ ತರ್ಕವು ಸುಳ್ಳೆಂದು ಹೇಗೆ ಅನ್ನಲಿ? ನನ್ನ ಪ್ರೇಮಕ್ಕೆ ಸ್ಥಾನವಾದ ವಸ್ತುವೇ ಹೋದದ್ದರಿಂದ ನಾನು ಉದಾಸೀನನಾಗಿರುವದು ಸ್ವಾಭಾವಿಕವು.''

ಜೀವನಕಲೆ—''ನಿಮ್ಮ ಪ್ರೇಮಕ್ಕೆ ಪಾತ್ರಳಾದ ಸ್ತ್ರೀಯೇ ಧನ್ಯಳು. ನಿಮ್ಮ ಈಗಿನ ಸ್ಥಿತಿ ಯನ್ನು ನೋಡಿ ನನಗೆ ಬಹಳ ವ್ಯಸನವಾಗಿದೆ ಉಪಾಯವಿಲ್ಲ. ಪುರುಷರಿಗೆ ಬಹು ಜನ ಸ್ತ್ರೀಯರನ್ನು ಮದುವೆಯಾಗುವ ಅಧಿಕಾರವಿರುವದಷ್ಟೇ?''

ಕಮಲಾಕ್ಷ(ದುಃಖದ ಆವೇಶದಿಂದ)—''ಜೀವನಕಲೆ, ಏನು ಹೇಳಲಿ! ನನ್ನ ಎಲ್ಲ ಪ್ರೇಮವನ್ನು ನನ್ನ ಪ್ರಿಯಳಿಗೆ ಕೊಟ್ಟುಬಿಟ್ಟಿರುವದರಿಂದ, ಇನ್ನೊಬ್ಬಳನ್ನು ಪ್ರೀತಿಸುವದಕ್ಕಾಗಿ ಪ್ರೇಮವೇ ನನ್ನಲ್ಲಿ ಉಳಿದಿರುವದಿಲ್ಲ. ಅಂದಬಳಿಕ ಇನ್ನೊಬ್ಬಳನ್ನು ಮದುವೆಯಾಗಿಯಾದರೂ ನಾನು ಮಾಡುವದೇನು? ಒಂದು ವೇಳೆ ಮದುವೆಯಾದರೂ, ಮೊದಲಿನ ನನ್ನ ಪ್ರಿಯಳನ್ನು ಮರೆಸುವಂಥ ಸುಗುಣೆಯಾದ ಸುಂದರಿಯು ದೊರೆಯುವದಂತೂ ಅಸಂಭವವು.''

ಜೀವನಕಲೆ(ಆನಂದವನ್ನು ಪ್ರಕಟಿಸುತ್ತ)—"ನಿಜವಾದ ಪ್ರೇಮದ ಗುಣವೇ ಅಂಥಾದ್ದು. ನೀವು ನಿಮ್ಮ ಪ್ರಿಯಳ ಮೇಲಣ ಪ್ರೇಮದಿಂದ ವಿಷಯ ಸುಖಗಳ ವಿಷಯವಾಗಿ ಉದಾಸೀನರಾದದ್ದು ನಿಮ್ಮ ದಯಾಗುಣಕ್ಕೆ ಭೂಷಣವಾಗಿದೆ. ಆದ ಮಾತಿನ ಸಲುವಾಗಿ ವ್ಯಸನಪಡುವದೂ ಯೋಗ್ಯವಾಗಲಾರದು. ಪ್ರೇಮದ ಉತ್ಪತ್ತಿಗೂ; ನಾಶಕ್ಕೂ ಕಾರಣಗಳು ಬೇಕಾಗುವದರಿಂದ, ನಿಮ್ಮ ಪ್ರಿಯಳ ವಿಯೋಗದಿಂದ ನಾಶವಾಗಿರುವ ನಿಮ್ಮ ಪ್ರೇಮವು, ನಿಮ್ಮ ಪ್ರಿಯಳನ್ನು ಮರೆಸುವಂಥ ಇನ್ನೊಬ್ಬ ಸ್ತ್ರೀಯು ನಿಮಗೆ ಪ್ರಾಪ್ತಳಾದರೆ ನಿಮ್ಮಲ್ಲಿ ಪ್ರೇಮವು ಮತ್ತೆ ಉತ್ಪನ್ನವಾಗುವದು ಸ್ವಾಭಾವಿಕವು."

ಈ ಪ್ರಕಾರ ಮಾತಾಡುತ್ತಿರಲು, ಜೀವನಕಲೆಯ ಕೆಲವು ಗೆಳತಿಯರು ಅಲ್ಲಿ ಬಂದದ್ದರಿಂದ ಕಮಲಾಕ್ಷನು ಅಲ್ಲಿಂದ ಹೊರಟುಹೋದನು. ದಿನಕ್ಕಿಂತಲೂ ಈವೊತ್ತು ಕಮಲಾಕ್ಷನು ಜೀವನಕಲೆಯ ಸಂಗಡ ಬಹಳ ಹೊತ್ತು ಮಾತಾಡುತ್ತ ಕುಳಿತದ್ದರಿಂದ, ಆ ಸುಂದರಿಯ ಮೋಹಕ ಸ್ವರೂಪದ ಪ್ರತಿಬಿಂಬವು ಅವನ ಮನದಲ್ಲಿ ಸ್ಥಿರವಾಗಿ ಮೂಡಿ, ಅದರ ಯೋಗದಿಂದ ಪದ್ಮನಯನೆಯ ಸ್ಮರಣವಾಗಿ ಅವನ ಮನಸ್ಸು ಬಹಳ ಅಸಮಾಧಾನ ಹೊಂದಿತು. ಅವನು ಆವೊತ್ತಿನ ರಾತ್ರಿ ಊಟ—ಉಡಿಗೆಗಳನ್ನೇನೂ ಮಾಡದೆ, ತಳಮಳಿಸುತ್ತ ಹಾಸಿಗೆಯ ಮೇಲೆ ಬಿದ್ದುಕೊಂಡನು. ಪದ್ಮನಯನೆಯ ತದೇಕ ಧ್ಯಾನದಲ್ಲಿ ಅವನ ಮನಸ್ಸು ತೊಡಗಿತು. ವಾಚಕರೇ, ಪ್ರಾಯದಲ್ಲಿ ಸುಶೀಲೆಯೂ, ಸುಂದರಿಯೂ ಆದ ಸ್ತ್ರೀಯನ್ನಗಲಿದ ಪುರುಷನ ಬಾಳುವೆಯನ್ನು ಸುಡತಕ್ಕದ್ದು. ವಿಷಯ ಸುಖಗಳಿಗೆ ಸ್ತಂಭರೂಪವಾದ ಸ್ತ್ರೀರತ್ನವು ಅಳಿದು ಹೋಗುವದರಿಂದ, ಅವನ ಎಲ್ಲ ಸುಖಗಳು ಸಮೂಲವಾಗಿ ನಾಶವಾಗುವವೆಂದು ಹೇಳಬಹುದು. ದೇವಾಂಶರೂ–ನೀತಿ ನಿಪುಣರೂ–ಧೀರರೂ ಆದ ಶ್ರೀ ರಾಮನೇ ಮೊದಲಾದವರು ಸ್ತ್ರೀವಿಯೋಗದಿಂದ ದುಃಖ ಪಟ್ಟಿರಲು, ಕಮಲಾಕ್ಷನಂಥ ಪಾಮರನು ತನ್ನ ಪ್ರಿಯಳ ವಿಯೋಗಕ್ಕಾಗಿ ಹಲಬುವದೇ ನಚ್ಚರಿಯು? ಕಮಲಾಕ್ಷನು ತನ್ನ ಬಾಹುಬಲದ ಯೋಗದಿಂದ ವೈರಿಗಳ, ಸುಗುಣಗಳ ಯೋಗದಿಂದ ಅರಸನ ಹಾಗು ಎಲ್ಲ ಸಣ್ಣ ದೊಡ್ಡ ಅಧಿಕಾರಿಗಳ, ವಿದ್ಯೆಯಿಂದ ಪಂಡಿತರ, ರೂಪಾತಿಶಯದಿಂದ ಸ್ತ್ರೀಯರ, ದಯಾಗುಣದಿಂದ ಎಲ್ಲ ಪ್ರಜೆಗಳ ಮನಸ್ಸನ್ನು ಜಯಿಸಿ, ಎಲ್ಲರಿಂದ ಹೊಗಳಿಸಿಕೊಳ್ಳುತ್ತಿದ್ದರೂ, ಅವನ ಮನಸ್ಸು ವಿಷಯ ಸುಖಗಳಿಂದ ಜಯಿಸಲ್ಪಟ್ಟಿದ್ದರಿಂದ ಅವನು ರಾತ್ರಿಯಲ್ಲಿ ಶಯನ ಮಾಡಿದನೆಂದರೆ, ಒಂದೊಂದು ದಿನ ಪದ್ಮನಯನೆಯ ತದೇಕ ಧ್ಯಾನದಿಂದಲೇ ರಾತ್ರಿಯೆಲ್ಲ ಅಳಿದು ಹೋಗುತ್ತಿತ್ತು. ಅದರಂತೆ ಈ ವೊತ್ತಾದರೂ ಆಯಿತು. ಅವನು ನಿರಾಶೆಯನ್ನು ಹೊಂದಿ ಮನದಲ್ಲಿ—"ಅಯ್ಯೋ! ನಾನು ಏನು ಮಾಡಿದ ಭಾಗ್ಯವೇನು? ನನ್ನ ಪೌರುಷವನ್ನೂ, ಅಖಂಡವಾದ ಯಶಸ್ಸನ್ನೂ ನೋಡಿ ಸಂತೋಷಪಡುವ ಆಪ್ತರು ಯಾರಿರುವರು? ನನ್ನ ಪ್ರಿಯಳಾದ ಪದ್ಮನಯನೆಯೇ ನನ್ನೆದುರಿಗೆ ಇರುತ್ತಿದ್ದರೆ, ನನ್ನ ಶ್ರಮವು ಸಫಲವಾಗುತ್ತಿತ್ತಲ್ಲ. ಕಮಲಾಕ್ಷನ ಯಾವ ಮಗ್ಗಲಲ್ಲಿ ಸುಕುಮಾರಿಯ ಮೃದ್ವಂಗವು ಒಪ್ಪುತ್ತಿತ್ತೋ, ಆ ಮಗ್ಗಲು ಈಗ ನನ್ನ ಪ್ರಿಯಳಿಲ್ಲದೆ ಬಂಜೆಯಾದದ್ದರಿಂದ, ನಾನು ಬಾರಿ–ಬಾರಿಗೆ ಹಂಬಲಿಸಬೇಕಾಗುತ್ತದೆ.

ಅಹಾ! ನನ್ನ ಪ್ರಿಯ ಪದ್ಮನಯನೆಯ ಉತ್ಸಾಹಕಾರಕವಾದ ಅಧರೋಷ್ಠ ಚುಂಬನವೂ, ಆನಂದಾತಿಶಯವನ್ನುಂಟು ಮಾಡುವ ಅವಳ ಕೋಮಲಾಂಗದ ಆಲಿಂಗನವೂ, ಪ್ರೇಮವನ್ನು ವೃದ್ಧಿಗೊಳಿಸುವ ಅವಳ ಮೃದು ವಚನಗಳೂ ಸ್ವಪ್ನದಲ್ಲಿ ಸಹ ದೊರೆಯದಾದವಲ್ಲ!! ಇನ್ನು ನಾನು ಹೇಗೆ ಕಾಲಹರಣಮಾಡಲಿ? ನನ್ನ ಪ್ರಿಯಳ ಶೋಧವಾಗುವದು ತೀರ ಅಸಂಭವವಾಗಿ ತೋರುತ್ತದೆ.''

ಈ ಪ್ರಕಾರ ವಿಚಾರಮಾಡುತ್ತಿರಲು, ಅವನ ಕಣ್ಣುಗಳಲ್ಲಿ ನೀರುಗಳು ಸುರಿಯಹತ್ತಿದವು. ಅವನು ಹಾಸಿಗೆಯ ಮೇಲೆ ಎದ್ದು ಕುಳಿತು ಮೀರಿದ ದುಃಖದಿಂದ ದೊಡ್ಡ ದನಿತೆಗೆದು ಅಳತೊಡಗಿದನು. ದುಃಖದ ಭಾರವು ತಗ್ಗಿದ ಮೇಲೆ ಪುನಃ ಅವನು ಮಲಗಿಕೊಳ್ಳಲು, ಬೆಳಗು ಮುಂಜಾವಿನಲ್ಲಿ ಸ್ವಲ್ಪ ನಿದ್ದೆ ಹತ್ತಿತು. ದುರ್ದೈವಿಯಾದ ಕಮಲಾಕ್ಷನಿಗೆ ಸ್ವಪ್ನದಲ್ಲಾದರೂ ಪದ್ಮನಯನೆಯ ವಿಯೋಗ ದುಃಖವು ತಪ್ಪಲಿಲ್ಲ, ತಾನು ಗಿಳಿಯ ಮೋಸದಿಂದ ಪದ್ಮನಯನೆ ಯನ್ನಗಲಿ, ಅಗ್ನಿ ಪ್ರವೇಶ ಮಾಡುತ್ತಿದ್ದಂತೆ ಅವನು ಕನಸು ಕಂಡು ದುಃಖಿಸುತ್ತಿರಲು, ಅವನಿಗೆ ಅಗ್ನಿಪ್ರವೇಶಕಾಲಕ್ಕೆ ಸದುಪದೇಶ ಮಾಡಿದ ಋಷಿಯು ಸ್ವಪ್ನದಲ್ಲಿ ಬಂದು—''ರಾಜಪುತ್ರಾ, ವ್ಯರ್ಥವಾಗಿ ದುಃಖ ಮಾಡಬೇಡ. ನೀನು ದುಃಖಕ್ಕೆ ಪೂರ್ಣವಾಗಿ ಆಶ್ರಯ ಕೊಟ್ಟದ್ದರಿಂದ, ಅದು ನಿನ್ನನ್ನು ಯಾವಾಗಲೂ ಪೀಡಿಸುತ್ತದೆ. ನಿನ್ನ ಪ್ರಿಯಳಾದ ಪದ್ಮನಯನೆಯು ಸುರಕ್ಷಿತ ವಾಗಿರುವಳು. ಇನ್ನು ಸ್ವಲ್ಪ ದಿನಗಳಲ್ಲಿಯೇ ನೀನು ಅವಳನ್ನು ಕಾಣುತ್ತೀ ಇನ್ನು ಮೇಲೆ ನೀನು ವ್ಯಸನಪಡದೆ, ನಿನ್ನನ್ನು ಮನಮುಟ್ಟಿ ಪ್ರೀತಿಸುತ್ತಿರುವ ಜೀವನಕಲೆಯನ್ನು ಮಾತ್ರ ಮದುವೆಯಾಗು. ಇದರಿಂದ ನಿನಗೆ ತಪ್ಪದೆ ಕಲ್ಯಾಣವಾಗುವದು.'' ಎಂದು ನುಡಿದು, ಆ ಋಷಿಯು ಅಂತರ್ಧಾನ ಹೊಂದಿದಂತೆ ಆಯಿತು. ಕಮಲಾಕ್ಷನು ಕೆಲವು ವೇಳೆಯ ಮೇಲೆ ಎಚ್ಚತ್ತು ತನಗೆ ಬಿದ್ದ ಸ್ವಪ್ನವನ್ನು ಕೌತುಕದಿಂದ ವಿಚಾರಮಾಡತೊಡಗಿದನು. ಹಿಂದಕ್ಕೊಮ್ಮೆ ಆ ಋಷಿಯ ಭವಿಷ್ಯವು ನಿಜವಾದದ್ದರಿಂದ, ಅವನಿಗೆ ಸ್ವಪ್ನದ ಸಂಗತಿಯು ಅಕ್ಷರಶಃ ನಿಜವಿರ ಬೇಕೆಂದು ತೋರಹತ್ತಿತು. ಪದ್ಮನಯನೆಯ ಹಿತವನ್ನು ಬಯಸಿ ಅಂದಿನಿಂದ ಅವನು ಜೀವನಕಲೆಯೊಡನೆ ಸಲಿಗೆಯಿಂದ ನಡೆಯಹತ್ತಿದನು. ಇದರಿಂದ ಅವರಿಬ್ಬರ ಪ್ರೇಮವು ಪರಸ್ಪರರಲ್ಲಿ ಹೆಚ್ಚಾಗುತ್ತ ಹೋಯಿತು. ಒಂದು ದಿನ ಆತನು ಜೀವನಕಲೆಯನ್ನು ಕುರಿತು—''ಸಖೀ, ಜೀವನಕಲಾ, ನೀನು ನನ್ನನ್ನು ಈ ಬಗೆಯಾಗಿ ಪ್ರೀತಿಸುತ್ತಿರುವದರಿಂದ, ನನ್ನ ಪ್ರಿಯಳ ವಿಯೋಗ ದುಃಖವು ಕಡಿಮೆಯಾಗಿ, ಯೋಗ್ಯ ಸ್ತ್ರೀಯನ್ನು ಮದುವೆಯಾಗುವ ಇಚ್ಛೆಯು ನನಗಾಗಿದೆ. ನೀನು ಚತುರಳೇ ಇರುವದರಿಂದ ನಾನು ಈ ಸಂಬಂಧದಿಂದ ನಿನಗೆ ಹೆಚ್ಚಿಗೆ ಹೇಳಲಾರೆನು. ನನ್ನ ಮನದ ಆಶೆಯನ್ನು ಪೂರ್ಣಮಾಡುವ ಭಾರವು ನಿನ್ನನ್ನು ಕೂಡಿದೆ.'' ಅನ್ನಲು, ಜೀವನಕಲೆಯು ಸಂತುಷ್ಟಳಾಗಿ ನಸು ಲಜ್ಜೆಯೊಡನೆ ಸೌಮ್ಯ ಸ್ವರದಿಂದ—ವೀರಾಗ್ರಣಿಗಳೇ ನಾನು ಹೆಚ್ಚಿಗೇನೂ ಹೇಳಲಾರೆನು. ತಮ್ಮ ಸುಖಕ್ಕಾಗಿ ನನ್ನ ಶರೀರವನ್ನು ಸವಿಸಿ, ಅದನ್ನು ಸಫಲವಾಗಿ ಮಾಡುವೆನೆಂಬದನ್ನು ತಾವು ದೃಢವಾಗಿ ನಂಬಬೇಕು.

ಜೀವನಕಲೆಯ ವಿವಾಹಕ್ಕೆ ಅವಳು ಯೋಗ್ಯವರನನ್ನು ಆರಿಸಿಕೊಳ್ಳುವದೊಂದೇ ಪ್ರತಿಬಂಧಕವಾಗಿತ್ತು, ಆ ಮೋಹಿನಿಯ ಮನಸ್ಸನ್ನು ಪೂರ್ಣವಾಗಿ ಆಕ್ರಮಿಸಿಕೊಂಡಿದ್ದ

ಕಮಲಾಕ್ಷನಿಗೆ ಅವಳ ಪ್ರಾಪ್ತಿಯು ಸುಲಭವಾಗಿ ಆಯಿತು. ಜೀವನಕಲೆಯು ತನ್ನ ತಾಯಿಯ ಮುಖಾಂತರವಾಗಿ, ತಂದೆಯಾದ ದೇವದತ್ತನಿಗೆ, ತಾನು ಕಮಲಾಕ್ಷನನ್ನು ಮದುವೆಯಾಗುವೆನೆಂಬ ಅಭಿಪ್ರಾಯವನ್ನು ತಿಳಿಸಲು, ಅವನು ಸಂತೋಷದಿಂದ ಜೀವನಕಲೆಯನ್ನು ಕಮಲಾಕ್ಷನಿಗೆ ಮದುವೆ ಮಾಡಿಕೊಟ್ಟನು. ಜೀವನಕಲೆಯು ಪದ್ಮನಯನೆಯ ಬಾಲ ಮಿತ್ರಳಿದ್ದಳು; ಅವಳ ಗುಣಗಳು ಪದ್ಮನಯನೆಯ ಗುಣಗಳನ್ನು ಜಯಿಸುವಂತೆ ಇದ್ದವು. ಅವಳ ಸೌಂದರ್ಯವಂತೂ ಸುಪ್ರಸಿದ್ಧವೇ ಇತ್ತು. ಕಮಲಾಕ್ಷನು ಕೃತಜ್ಞತೆಯಿಂದಲ್ಲದೆ, ಉಳಿದ ಯಾವ ಮಾತಿನಿಂದಲೂ ಪದ್ಮನಯನೆಯನ್ನು ನೆನಿಸದಂತೆ ಜೀವನಕಲೆಯು ಅವನಿಗೆ ಅನುಕೂಲೆಯಾಗಿ ವರ್ತಿಸಹತ್ತಿದಳು.

ಬರಬರುತ್ತ ಜೀವನಕಲಾ–ಕಮಲಾಕ್ಷರ ಪ್ರೇಮವು ವೃದ್ಧಿಂಗತವಾಗ ಹತ್ತಿತು. ಕಮಲಾಕ್ಷನು ಮೆಲ್ಲ ಮೆಲ್ಲನೆ ಪದ್ಮನಯನೆಯನ್ನು ಮರೆಯತೊಡಗಿದನು. ತನ್ನ ಪ್ರಿಯ ಪತಿಯ ಧವಲಕೀರ್ತಿಯ ವಿಸ್ತಾರ, ತನ್ನ ಪ್ರಿಯಳ ವಿಷಯದ ಆತನ ವಿಸ್ಮೃತಿ ಇವುಗಳಿಂದ ಜೀವನಕಲೆಗೆ ಬಹು ಸಮಾಧಾನವಾಗುತ್ತಿತ್ತು. ಆಕೆಯು ಬಹು ರಸಿಕಳು, ಉದಾರಳು, ದಯಾಪೂರ್ಣಳು. ಸ್ತ್ರೀ ಜನರಲ್ಲಿ ವಿಶೇಷವಾಗಿ ಕಂಗೊಳಿಸುವ ಈರ್ಷಾಸೂಯಾದಿ ದುರ್ಗುಣಗಳ ಗಾಳಿಯು ಸಹ ಆಕೆಯನ್ನು ಸೋಂಕಿದ್ದಿಲ್ಲ. ಈ ಸದ್ಗುಣಗಳ ಮೂಲಕ ಆಕೆಯು ತಂದೆಯ ವಾತ್ಸಲ್ಯಾತಿಶಯಕ್ಕೆ ಪಾತ್ರಳಾಗಿದ್ದಳು. ಜೀವನಕಲೆಯ ವಿಹಾರ ಮಂದಿರವು ಇಂದ್ರನ ಅಮರಾವತಿಯೊಳಗಿನ ವಿಹಾರ ಮಂದಿರವನ್ನು ಹೀಯಾಳಿಸುತ್ತಿತ್ತು. ಅಂಥ ಮಂದಿರಕ್ಕೆ ಅಲಂಕಾರಭೂತಳಾದ ಆ ಮಂತ್ರಿ ಕುವರಿಯು ತನ್ನ ಸೌಂದರ್ಯ–ಲಾವಣ್ಯಗಳಿಂದ ನೋಡುವವರ ಚಿತ್ತವನ್ನು ಭ್ರಮೆಗೊಳಿಸುತ್ತ ಮಂಚದ ಮೇಲೆ ಹರಡಿದ ಗುಲಾಬಿ ಹೂಗಳನ್ನು ಒತ್ತಿ ಪವಡಿಸಿದ್ದಳು; ಹರಡಿದ ಆ ಗುಲಾಬಿಯ ಹೂಗಳ ಸುಗಂಧದಲ್ಲಿ ಅವಳು ಮುಡಿದಿದ್ದ ಮಲ್ಲಿಗೆಯ ಹೂಗಳ ಸುಗಂಧವು ಕೂಡಿ ಉಂಟಾದ ಮಿಶ್ರ ಸುಗಂಧವು ಮನುಷ್ಯ ಮಾತ್ರರ ಘ್ರಾಣೇಂದ್ರಿಯವನ್ನು ತೃಪ್ತಿಪಡಿಸುತ್ತಿತ್ತು. ಹೀಗೆ ಒತ್ತಟ್ಟಿಗೆ ಸುಗಂಧಗಳ ಮಿಶ್ರಣದ ವ್ಯಾಪಾರವು ನಡೆದಿರಲು, ಮತ್ತೊತ್ತಟ್ಟಿಗೆ ಬಣ್ಣಗಳ ಮಿಶ್ರಣದ ವ್ಯಾಪಾರವು ನಡೆದಿತ್ತು. ಜೀವನಕಲೆಯ ಶರೀರದ ಗೌರವರ್ಣ, ಅವಳು ಉಟ್ಟ ವಸ್ತ್ರದ ಶುಭ್ರವರ್ಣ, ಹಾಸಿದ ಹೂಗಳ ಗುಲಾಬಿಯ ವರ್ಣ, ಇಟ್ಟುಕೊಂಡ ಅಲಂಕಾರಗಳೊಳಗಿನ ನವರತ್ನಗಳ ವಿಚಿತ್ರವರ್ಣ ಇವುಗಳ ಸಂಕರದಿಂದುಂಟಾದ ಮಿಶ್ರವರ್ಣದ ಹೊಳಪಿನಿಂದ ಜೀವನಕಲೆಯ ಸೌಂದರ್ಯಕ್ಕೆ ಒಪ್ಪ ಹಾಕಿದಂತೆ ಆಗಿತ್ತು. ತನ್ನ ಪತಿಯ ಮನಸ್ಸನ್ನು ಸೌಜನ್ಯದಿಂದ ಪೂರ್ಣವಾಗಿ ಎಳಕೊಂಡು, ಅದರೊಳಗಿನ ಪತ್ನಿ–ವಿಯೋಗರೂಪವಾದ ಅಗ್ನಿಯನ್ನು ತನ್ನಲ್ಲಿದ್ದ ನಿಷ್ಕಲಂಕವಾದ ಉದಾತ್ತ ಪ್ರೇಮಲಖದಿಂದ ಆರಿಸಿ, ಆತನನ್ನು ಸುಖ ಸಾಮ್ರಾಜ್ಯದ ಸಿಂಹಾಸನವೇರಿಸಿದ್ದನ್ನು ನೆನಿಸಿ–ನೆನಿಸಿ ಆಕೆಯು ಸುಖಿಸುತ್ತಿದ್ದಳು! ಅಷ್ಟರಲ್ಲಿ ಮಂದಿರದ ಕಳ್ಳ ಬಾಗಿಲನ್ನು ಪಕ್ಕನೆ ತೆರೆದು ಮುಗುಳು ನಗೆ ನಗುತ್ತ ಕಮಲಾಕ್ಷನು ಅಲ್ಲಿಗೆ ಬರಲು, ದಾಸಿಯರು ಹೊರಟುಹೋದರು.

ಪತಿಯ ಆಗಮನವಾದದ್ದನ್ನು ನೋಡಿ ಜೀವನಕಲೆಯು ಉತ್ಸಾಹಪಟ್ಟು, ಲಗಬಗೆಯಿಂದ ಏಳುವದನ್ನು ನೋಡಿ, ಕಮಲಾಕ್ಷನು ಅವಳ ಕೋಮಲವಾದ ಕೈಯನ್ನು ತನ್ನ ಕೈಯಿಂದ ಹಿಡಿದು ಅವಳನ್ನು ಹಾಗೆಯೇ ಮಲಗಿಸುತ್ತ—ಸುಂದರೀ, ಇಷ್ಟು ಆಯಾಸವೇಕೆ? ಈ ಗುಲಾಬಿಯ ಹೂಗಳ ಮೇಲೆ ಹೊರಳಾಡುವಾಗಲೇ ನೀನು ಸ್ವರ್ಗಾಂಗನೆಯಂತೆ ಮನೋಹರವಾಗಿ ಒಪ್ಪುತ್ತೀ, ಮಲಗು-ಮಲಗು; ಅನ್ನಲು, ಜೀವನಕಲೆಯು ಆನಂದ ಪೂರ್ಣವಾದ ಮುದ್ರೆಯಿಂದ ಸುಮ್ಮನೆ ಪತಿಯನ್ನು ನೋಡತೊಡಗಿದಳು. ಆಗ ಆತನು—ಮನೋಹರೇ, ಈ ದಿನ ನನಗೆ ಅತ್ಯಂತವಾದ ಆನಂದವಾಗಿದೆ. ಆ ಆನಂದದ ಕಾರಣವನ್ನು ನೀನೇ ಗೊತ್ತು ಹಿಡಿದರೆ, ನಿನ್ನನ್ನು ಎದ್ದು ಕೂಡಗೊಡುವೆನು, ಇಲ್ಲದಿದ್ದರೆ ಹೀಗೆಯೇ ಹಿಡಕೊಂಡು ಕೂಡ್ರುವೆನು!

ಜೀವನಕಲೆ—ಪ್ರತಾಪದಿಂದ ಭೂಮಂಡಲವನ್ನೇ ದಂಗುಬಡಿಸಿದವರಿಗೆ ಪ್ರತಿ ಒಂದು ಸಂಗತಿಯು ಆನಂದಕರವಾಗಿಯೇ ಪರಿಣಮಿಸುತ್ತದೆ. ಪ್ರಭುಗಳ ಮನಸ್ಸನ್ನು ನೋಯಿಸಲಿಕ್ಕೆ ಅದಾವ ಸಂಗತಿಯು ಮುಂದಾಗುವದು?

ಕಮಲಾಕ್ಷ—ಪ್ರಿಯತಮೆ, ತಪ್ಪಿದಿ ಎಲ್ಲ ಸಂಗತಿಗಳಿಂದ ನನಗೆ ಆನಂದವಾಗಹತ್ತಿದರೆ, ನನ್ನ ಮಹತ್ವವಾದರೂ ಏನು ಉಳಿಯುವದು! ಕೆಲವು ಶ್ರೇಷ್ಠ ಸಂಗತಿಗಳು ಮಾತ್ರ ನನಗೆ ಆನಂದವನ್ನೀಯಲು ಸಮರ್ಥವಾಗಿರುವವು. ನಿನ್ನ ವಿಷಯದ ಪ್ರತಿ ಒಂದು ಸಂಗತಿಯಿಂದ ನನಗೆ ಆನಂದವಾಗುವದನ್ನು ನೋಡಿ, ಜಗತ್ತಿನಲ್ಲಿ ಎಲ್ಲ ಸಂಗತಿಗಳಿಂದ ನನಗೆ ಆನಂದ ವಾಗುತ್ತದೆಂಬ ಭ್ರಾಂತಿಗೆ ನೀನು ಒಳಗಾದಂತೆ ತೋರುತ್ತದೆ. ಕಮಲಾಕ್ಷನ ಮನಸ್ಸನ್ನು ಪ್ರಸನ್ನೀಕರಿಸಿಕೊಳ್ಳುವದು ಪರಮ ದುಸ್ತರವು. ಆ ಬಂಗಾಲಿಯ ವಿದ್ಯೆಯು ಈ ದೊಡ್ಡ ಕಣ್ಣುಗಳ ಕುಣಿಕೆಯೊಳಗಿಂದ ಹೊರಬೀಳುವ ದೃಷ್ಟಿಗಳಿಗೆ ಮಾತ್ರ ಸಾಧಿಸಿರುತ್ತದೆ. ಹೂ, ಹೇಳು ಬೇಗನೆ ಹೇಳು, ನನ್ನ ಆನಂದದ ಕಾರಣವು ಯಾವದು?

ಜೀವನಕಲೆ—ಹೂ! ಹಾಗೇ ಆಗಲಿ, ಹೇಳುತ್ತೇನೆ ಪ್ರಭುಗಳು ಯಾವದೊಂದು ಹೊಸ ಕವಿತೆಯನ್ನು ಇದೇ ಈಗ ರಚಿಸಿ ಮುಗಿಸಿರಬಹುದು; ಯಾವನೊಬ್ಬ ಬಲಿಷ್ಠ ಸಾರ್ವಭೌಮನು ಈ ಚರಣಗಳ ಪ್ರಭಾವಕ್ಕೆ ದಂಗುಬಡೆದು ಕೃಪಾ ಛತ್ರವನ್ನು ಆಶ್ರಯಿಸಿರಬಹುದು; ಲೋಕಹಿತದ ಮಹತ್ಕಾರ್ಯವು ಸಾಧಿಸಿರಬಹುದು; ಔದಾರ್ಯದ ಆಳಿಕೆಗೆ ಮೆಚ್ಚಿ ಪ್ರಜೆಗಳು ಸುಪ್ರಸನ್ನರಾಗಿರಬಹುದು; ಗುಣಿಜನರ ಲಾಭವಾಗಿರಬಹುದು; ಇವುಗಳಲ್ಲಿ ಯಾವ ಕಾರಣವೂ ಇರದಿದ್ದರೆ ಇನ್ನು ಇನ್ನು ....

ಹೀಗೆ ನುಡಿಯುತ್ತಿರಲು, ಒಮ್ಮೆಲೆ ಜೀವನಕಲೆಯ ಮುಖಮುದ್ರೆಯು ರೂಪಾಂತರಿಸಿತು. ಆಕೆಯ ಹುಬ್ಬುಗಳು ಗಂಟಿಕ್ಕಿದವು, ಹಣೆಗೆ ನಿರಿಗೆಗಳು ಬಿದ್ದವು, ಆಕೆಯು ತನ್ನ ವಿಶಾಲವಾದ ನೇತ್ರದಿಂದ ಒಂದು ತೀಕ್ಷ್ಣ ಕಟಾಕ್ಷವನ್ನು ಕಿತ್ತು ಕಮಲಾಕ್ಷನನ್ನು ಚುಚ್ಚಿ—

ಜೀವನಕಲೆ—ಇನ್ನು ಬಚ್ಚಿಯಾದರೂ ಯಾಕೆ ಇಡಬೇಕು? ನನ್ನಲ್ಲಿ ನಟ್ಟುಹೋಗಿದ್ದ ತಮ್ಮ ಚಿತ್ತವನ್ನು ಬಲಾತ್ಕಾರದಿಂದ ಕಿತ್ತುಕೊಳ್ಳುವದಕ್ಕಾಗಿ ಯಾವಳಾದರೂ ಒಬ್ಬ ಸುಂದರಿಯು ತಮ್ಮ ಕಣ್ಣಿಗೆ ಬಿದ್ದಿರಬಹುದು!

ಹೀಗೆ ನುಡಿದು ಜೀವನಕಲೆಯು ಕಮಲಾಕ್ಷನ ಕಡೆಗಾಗಿದ್ದ ತನ್ನ ಮೋರೆಯನ್ನು ಬೇರೆ ಕಡೆಗೆ ತಿರುಗಿಸಿ, ಕಣ್ಣುಮುಚ್ಚಿಕೊಂಡಳು.

ಇದನ್ನು ನೋಡಿ ಕಮಲಾಕ್ಷನ ನಗೆಯು ಹೆಚ್ಚಿತು. ಆತನು ತನ್ನ ಕೈಯಿಂದ ಜೀವನಕಲೆಯ ಮೋರೆಯನ್ನು ತನ್ನ ಕಡೆಗೆ ತಿರುಗಿಸಿಕೊಂಡು—ಮನಮೋಹಿನೀ, ಪುರುಷರನ್ನು ಪೂರಾ ಹತವೀರ್ಯರಾಗ ಮಾಡುವ ಸ್ತ್ರೀಯರ ಲೀಲೆಗಳು, ಈರ್ಷೆಯಿಂದಲೇ ಹುಟ್ಟಿ ಬರುತ್ತವೆಂಬಂತೆ ಕಾಣುತ್ತದೆ. ಜೀವನಕಲೆಯನ್ನು ಅಸಮಾಧಾನಗೊಳಿಸಲು ಸಮರ್ಥಳಾದ ಅಪ್ಸರೆಯು ಈ ಜಗತ್ತಿನಲ್ಲಿ ಅದಾವಳಿರುವಳು? ತೆಗೆ ಆ ಕಣ್ಣುಗಳನ್ನು; ಪ್ರಿಯೇ, ನೀನು ಸೋತೆಯಷ್ಟೇ? ಹಾಗಾದರೆ, ನನ್ನ ಆನಂದದ ಕಾರಣವನ್ನು ನನ್ನ ಮುಖದಿಂದಲೇ ಹೇಳುತ್ತೇನೆ ಕೇಳು, ಎನ್ನಲು, ಜೀವಕಲೆಯು ಕಣ್ಣುಗಳನ್ನು ಅರ್ಧ ತೆಗೆದು, ಕಾರಣವನ್ನು ಕೇಳುವ ಉತ್ಕಂಠೆಯು ತನ್ನ ಮುಖಮುದ್ರೆಯಲ್ಲಿ ವ್ಯಕ್ತವಾಗಬಾರದೆಂದು ಪ್ರಯತ್ನ ಮಾಡತೊಡಗಿದಳು.

ಕಮಲಾಕ್ಷನು ತನ್ನ ಪ್ರಿಯಳ ರಸಿಕತನಕ್ಕೆ ತಲೆದೂಗುತ್ತ ಕರವಸ್ತ್ರದಲ್ಲಿ ಮುಚ್ಚಿಕೊಂಡು ತಂದಿದ್ದ ಒಂದು ರತ್ನದ ಪದಕವನ್ನು ಅವಳ ಮೋರೆಯ ಮೇಲೆ ಇಟ್ಟನು. ಕೂಡಲೆ ಪದಕದೊಳಗಿನ ಉಜ್ವಲ ರತ್ನಗಳ ಕಾಂತಿಗಳು ಕಣ್ಣು ಕುಕ್ಕತೊಡಗಿದವು. ಮಂದಿರವು ವಿಚಿತ್ರ ಕಾಂತಿಮಯವಾಯಿತು ಸಂಜೆಯ ಸೂರ್ಯ ಕಿರಣಗಳ ಪರಾವರ್ತನದ ವಿಚಿತ್ರ ವರ್ಣದ ಆಕಾಶ ತಲದಲ್ಲಿ ಯಥೇಚ್ಛವಾಗಿ ಶಯನ ಮಾಡಿದ ದೇವತೆಯಂತೆ ಜೀವನ ಕಲೆಯು ಶೋಭಿಸತೊಡಗಿದಳು! ಆಗ ಅವಳು ಪತಿಯ ಕೈಮೇಲೆ ಮೆಲ್ಲನೆ ತನ್ನ ಮೈ ಭಾರವನ್ನು ಹಾಕಿ ಸೆರಗು ಹೊದ್ದುಕೊಳ್ಳುತ್ತ ಎದ್ದು ಕುಳಿತು—ಅಹಾ! ಈ ಅಪರೂಪದ ಪದಕವು ಎಲ್ಲಿ ದೊರೆಯಿತು! ಇಂದಿನವರೆಗೆ ಇಂಥ ಅಲಂಕಾರವನ್ನು ನಾನು ನೋಡಿದವಳಲ್ಲ, ಆನಂದದ ಇಂಥ ಗುಪ್ತಕಾರಣವು ನನಗೆ ಹೇಗೆ ಗೊತ್ತಾಗಬೇಕು? ಒಮ್ಮೆ ಪದ್ಮನಯನೆಯನ್ನು ತನ್ನ ಪ್ರಭುವಿಗೆ ಕೊಡಬೇಕೆಂದು ಕೇಳಬಂದಿದ್ದ ಸಿಂಧುದೇಶದ ರಾಜನ ಮಂತ್ರಿಯು, ಇಂಥ ಒಂದು ಪದಕವನ್ನು ಪದ್ಮನಯನೆಗೆ ಕಾಣಿಕೆಯಾಗಿ ತಂದದ್ದನ್ನು ನೋಡಿದ್ದೆನು, ಎಂದು ಪಕ್ಕನೆ ನುಡಿದಳು.

ಪದ್ಮನಯನೆಯ ಹೆಸರಿನೊಳಗಿನ ಐದು ಅಕ್ಷರಗಳ ತೆರೆಗಳು ಆ ಮಂದಿರದ ವಾತಾವರಣದಲ್ಲಿ ಉತ್ಪನ್ನವಾಗಿ ಅವು ಕಮಲಾಕ್ಷನ ಕರ್ಣರಂದ್ರವನ್ನು ಪ್ರವೇಶಿಸಲು, ಅವನ ಮೋರೆಯು ಝುರ್ರೆಂದು ಇಳಿಯಿತು. ಅವನ ಆನಂದವು ಅಂತರ್ಧಾನವನ್ನು ಹೊಂದಿ, ಅದರ ಸ್ಥಳವನ್ನು ಅಸಮಾಧಾನವು ಆಕ್ರಮಿಸಿತು. ಬಹಳ ಹೊತ್ತಾದರೂ ಅವನ ಮುಖದಿಂದ ಅಕ್ಷರಗಳೇ ಹೊರಡಲಿಲ್ಲ. ಇದೇ ಈಗ ಶೃಂಗಾರಸಾಗರದಲ್ಲಿ ಈಸಾಡಿ ಮೈ ಕೂಡ ಆರದೆ ಇದ್ದ ಆ ತರುಣನು, ಪದ್ಮನಯನೆಯೆಂಬ ಶಬ್ದವು ಕಿವಿಗೆ ಬಿದ್ದ ಕೂಡಲೆ ಜೀವನಕಲೆಯ ಮುಖವನ್ನು ನೋಡಲಿಕ್ಕೂ ಸಂಕೋಚಪಡುವಷ್ಟು ವೈರಾಗ್ಯವನ್ನು ತಾಳಿದನು. ಕಮಲಾಕ್ಷನು ತನ್ನ ಮನಸ್ಸಿನಲ್ಲಿ—ಹಾ! ನೀಚಾ, ಕಮಲಾಕ್ಷಾ, ಸರ್ವಸ್ವವನ್ನು ನಿನಗೆ ಅರ್ಪಿಸಿ, ಸರ್ವವೂ ನೀನೇ ಎಂದು ನಂಬಿ, ನಿನ್ನ ಸಲುವಾಗಿ ಸರ್ವಸಂಗ ಪರಿತ್ಯಾಗ ಮಾಡಿದ ಪದ್ಮನಯನೆಯನ್ನು ಇಷ್ಟರಲ್ಲಿಯೇ ಮರೆತು, ಆಕೆಯ ಗತಿಯು ಏನಾಗಿರಬಹುದೆಂಬದನ್ನು ಕೂಡ ಚಿಂತಿಸದೆ

ವಿಲಾಸಮಗ್ನನಾದೆಯಾ? ನೀನು ಇಷ್ಟು ನಾಚಿಕೆಗೇಡಿಯೂ, ಕೃತಘ್ನನೂ ಹೇಗಾದೆ? ಹಾ! ಪ್ರಿಯೇ ಪದ್ಮನಯನೇ, ಕಟಕನಾದ ನನ್ನನ್ನು ನಂಬಿ ನೀನು ಎಷ್ಟು ಕಂಗಾಲಳಾದೆಯಲ್ಲ! ನಿನ್ನಂಥ ಸತ್ವಶೀಲೆಯ ಉಪಮರ್ದವು ನನ್ನಿಂದ ಇಷ್ಟರ ಮಟ್ಟಿಗೆ ಆಗಬೇಕೆ? ಕಮಲಾಕ್ಷಾ, ಎಚ್ಚರಿಕೆ ಯಿರಲಿ; ವಿಷಯೋಪಭೋಗದ ಮದದಿಂದ ಮೈ ಮರೆಯಬೇಡ, ಬಲವಾದ ಶಿಕ್ಷೆಗೆ ಒಳಗಾದೀ, ಎಂದು ತನ್ನನ್ನು ತಿರಸ್ಕರಿಸಿಕೊಂಡನು. ಹೀಗೆ ತಿರಸ್ಕರಿಸಿಕೊಳ್ಳುವಾಗ ಅವನ ಕಂಠವು ಬಿಗಿದು ಬಂದಿತ್ತು. ಹೀಗೆ ಒಮ್ಮಿಂದೊಮ್ಮೆ ಪತಿಯ ಮುಖ-ಮುದ್ರೆಯಲ್ಲಿ ಆದ ಹೆಚ್ಚು ಕಡಿಮೆ ಯನ್ನು ನೋಡಿ ಜೀವನಕಲೆಯು ಬೆರಗಾದಳು. ಕಾರಣವನ್ನು ವಿಚಾರಿಸುವ ಧೈರ್ಯವು ಆಕೆಗೆ ಆಗಲೊಲ್ಲದು. ಅವಳ ಸಂಶಯವನ್ನು ದೂರ ಮಾಡುವ ಧೈರ್ಯವು ಕಮಲಾಕ್ಷನಿಗಾಗ ಲೊಲ್ಲದು. ಈ ಸ್ಥಿತಿಯಲ್ಲಿ ಆ ಸತೀ-ಪತಿಗಳು ಮೌನವನ್ನು ತಾಳಿ ಅಸಮಾಧಾನಕ್ಕೆ ಗುರಿಯಾಗಿ ಚಿತ್ರದ ಗೊಂಬೆಗಳಂತೆ ಕುಳಿತುಕೊಂಡರು. ಕೆಲಹೊತ್ತಿನ ಮೇಲೆ ಜೀವನಕಲೆಯೇ ಧೈರ್ಯವನ್ನು ತಾಳಿ ಪತಿಯನ್ನು ಕುರಿತು—ವೀರಾಗ್ರಣಿಗಳೇ, ಈ ದಾಸಿಯ ಔದ್ಧತ್ಯಕ್ಕಾಗಿ ಕ್ಷಮೆಯಿರಬೇಕು. ಆಕಸ್ಮಿಕವಾಗಿ ತಮ್ಮ ಮುಖವು ಬಾಡಿದ್ದನ್ನು ನೋಡಿ ನನಗೆ ಬಹಳ ವ್ಯಸನವಾಗಿದೆ. ಈ ದಾಸಿಯು ಕೇಳಲಿಕ್ಕೆ ತಕ್ಕವಳಿದ್ದರೆ, ಕಾರಣವನ್ನು ತಿಳಿಸುವ ಕೃಪೆಯಾಗಬೇಕು, ಎನ್ನಲು, ಕಮಲಾಕ್ಷನು— ವಲ್ಲಭೇ, ನಿನಗಿಂತಲೂ ಹೆಚ್ಚಿನ ಆಪ್ತರು ಈ ಜಗತ್ತಿನಲ್ಲಿ ಸದ್ಯಕ್ಕೆ ನನ್ನ ಪಾಲಿಗೆ ಯಾರೂ ಉಳಿದಿಲ್ಲೆಂದು ಹೇಳಬಹುದು. ಅಂದಬಳಿಕ ನನ್ನ ದುಃಖದ ಕಾರಣವನ್ನು ನಿನ್ನ ಮುಂದೆ ಹೇಳದೆ ಮತ್ತೆ ಯಾರ ಮುಂದೆ ಹೇಳಲಿ? ಇಲ್ಲಿಯವರೆಗೆ ಬುದ್ಧಿಪೂರ್ವಕವಾಗಿ ಮುಚ್ಚಿ ಇಟ್ಟಿದ್ದ ನನ್ನ ನಿಜವಾದ ಚರಿತ್ರವನ್ನು ಹೇಳುವೆನು ಕೇಳು. ಇದರಿಂದ ನನಗೂ ದುಃಖದ ಭಾರವು ಕೆಲಮಟ್ಟಿಗೆ ಕಡಿಮೆಯಾಗಬಹುದು, ಎಂದು ಹೇಳಿ, ತನ್ನನ್ನು ಯಾವಾಗಲೂ ಬಾಧಿಸುತ್ತಿದ್ದ ಪದ್ಮನಯನೆಯ ವಿಯೋಗದ ದುಃಖವನ್ನು ಸಾದ್ಯಂತವಾಗಿ ಹೇಳಿದನು.

ಕಮಲಾಕ್ಷನ ಆಶ್ಚರ್ಯಕರವಾದ ಚರಿತ್ರವನ್ನು ಕೇಳಿ ಜೀವನಕಲೆಯು ಕೆಲವು ವೇಳೆಯ ವರೆಗೆ ಸುಮ್ಮನೆ ಕುಳಿತುಕೊಂಡಳು. ಬಳಿಕ ಆ ಕೋಮಲೆಯು ದುಃಖದಿಂದ—ಪ್ರಭುಗಳೇ, ತಮ್ಮ ಅದ್ಭುತ ಚರಿತ್ರವನ್ನು ಕೇಳಿ ನಾನು ಭ್ರಮಿಷ್ಠಳಾದೆನು. ಸರ್ವರ ಲೋಭಕ್ಕೆ ಪಾತ್ರಳೂ, ನನ್ನ ಜೀವದ ಗೆಳತಿಯೂ ಆದ ಪದ್ಮನಯನೆಯ ಸ್ಥಿತಿಯು ಹೀಗಾದೀತೆಂದು ಯಾರಿಗೂ ತಿಳಿದಿದ್ದಿಲ್ಲ. ಭವಿತವ್ಯವನ್ನು ತಪ್ಪಿಸಲು ಯಾರೂ ಸಮರ್ಥರಲ್ಲ. ನನ್ನ ಸಖಿಯು ದುಃಖ ಪಡುತ್ತಿರಲು, ನಾನು ಅವಳ ಪತಿಯೊಡನೆ ವಿಲಾಸ ಮಗ್ನಳಾಗಿರುವದನ್ನು ನೆನಿಸಿದರೆ, ಮನಸ್ಸಿಗೆ ವಿಷಾದವಾಗುತ್ತದೆ. ಏನು ವಿಚಿತ್ರ ಯೋಗವಿದು! ನನ್ನ ಪ್ರಿಯ ಸಖಿಯು ಸುದೈವದಿಂದ ಇಲ್ಲಿಗೆ ಪ್ರಾಪ್ತಳಾದರೆ, ಯಾವ ಮೋರೆಯಿಂದ ನಾನು ಆಕೆಯನ್ನು ಕಾಣಲಿ! ನನ್ನ ದುಷ್ಟತನದ ಪರಮಾವಧಿಯಾಯಿತು, ದಯಾಶೂನ್ಯತೆಯ ಮೇರೆಯು ತಪ್ಪಿತು, ಸೌಜನ್ಯವು ಪೂರಾ ಹಾಳಾಗಿ ಹೋಯಿತು. (ಕಣ್ಣಲ್ಲಿ ನೀರುತಂದು)— ಪ್ರಿಯ ಸಖೀ, ಪದ್ಮನಯನೇ, ನನ್ನ ನೀಚತನವೆಷ್ಟವ್ವಾ! ನಿನ್ನನ್ನು ದುಃಖಕ್ಕೆ ಗುರಿಮಾಡಿ, ನಿನ್ನ ಪ್ರಾಣಪದಕವನ್ನು ಹೃದಯದಲ್ಲಿ ಧರಿಸಿದ ಹೆಮ್ಮೆಯಿಂದ ಮೆರೆಯುವದಕ್ಕಾಗಿಯೇ ನಾನು ಜನ್ಮ ತಾಳಿದೆನೇ!! ಮಹಾ ಸತಿಯೇ,

ನಿನ್ನ ಆ ಗಂಭೀರವೃತ್ತಿಯೆತ್ತ ನನ್ನ ಈ ಬಾಲಭಾವವೆತ್ತ! ನಾನೂ ನೀನೂ ಕೂಡಿ ಆಡಿದವರಲ್ಲವೆ? ನನ್ನನ್ನು ಒಡಹುಟ್ಟಿದ ತಂಗಿಯಂತೆ ನೀನು ನಡಿಸಿಕೊಂಡೆಯಲ್ಲ! ಸೌಜನ್ಯವು ಯಾರ ಸಹವಾಸದಿಂದ ನನ್ನಲ್ಲಿ ಪ್ರಾಪ್ತವಾಯಿತು ಹೇಳು. ನಿನ್ನ ಸದ್ಗುಣ, ನಿನ್ನ ಸೌಜನ್ಯ, ನಿನ್ನ ಸೌಂದರ್ಯ, ನಿನ್ನ ಸರಳತನ, ನಿನ್ನ ಸೌಹಾರ್ದ್ಯ, ನಿನ್ನ ದಯಾಲುತ್ವ ಇವು ನಿನ್ನಲ್ಲಿಯೇ ಅಲ್ಲದೆ ಮತ್ತಾರಲ್ಲಿ ಇರುವವು? ನೀನು ಸಾಮಾನ್ಯ ಸ್ತ್ರೀಯಲ್ಲ; ನಿನ್ನ ಚರಿತ್ರವನ್ನು ಕೇಳಿದ್ದರಿಂದ ನನ್ನ ಅಭಿಮಾನವು ಹಾಳಾಗಿ, ನಿನ್ನಲ್ಲಿ ಪೂಜ್ಯ ಬುದ್ಧಿಯು ಉತ್ಪನ್ನವಾಗಿದೆ. ಕಮಲಾಕ್ಷ ಪ್ರಭುಗಳಿಗೆ ತಕ್ಕ ಹೆಂಡತಿಯು ನೀನೇ, ನಾನು ನಿನ್ನ ದಾಸಿಯಾಗಲಿಕ್ಕೂ ತಕ್ಕವಳಲ್ಲ, ಪ್ರಿಯ ಸಖೀ, ಪದ್ಮನಯನೇ, ದೇವರ ದಯದಿಂದ ನಿನ್ನ ಶೋಧವಾದರೆ, ನಿಶ್ಚಯವಾಗಿ ನಾನು ನಿನ್ನ ತೊತ್ತಾಗಿ ಬಾಳುವೆನು. ಇಂದಿಗೆ ನನ್ನ ಸಂಸಾರದ ಸವಿಯು ಹೋಯಿತು. ಮೊದಲೇ ತಿಳಿದಿದ್ದರೆ ಕಮಲಾಕ್ಷ ಪ್ರಭುಗಳ ಸೇವೆಮಾಡುತ್ತ ನಿನ್ನ ಶೋಧವಾಗುವವರೆಗೆ ನಾನು ಅವಿವಾಹಿತಳಾಗಿಯೇ ಇರುತ್ತಿದ್ದೆನು; ಈಗಾದರೂ ಏನಾಯಿತು? ಎಲೈ ಸಾರ್ವಭೌಮ ಕುವರೀ, ನನ್ನ ಪ್ರತಿಜ್ಞೆಯನ್ನು ಕೇಳು. ನಿನ್ನ ಗೊತ್ತು ಹತ್ತುವವರೆಗೆ ಬ್ರಹ್ಮಚರ್ಯದಿಂದ ಪತಿಸೇವೆಯನ್ನು ಮಾಡುವೆನು; ಸುಖೋಪಭೋಗದ ಒಡವೆಗಳನ್ನು ಮುಟ್ಟೆನು; ಸುಖ–ಸಲ್ಲಾಪಗಳನ್ನು ಆಡೆನು; ಐಶ್ವರ್ಯವನ್ನು ಕಣ್ಣೆತ್ತಿ ನೋಡೆನು. ಒಟ್ಟಿಗೆ, ವ್ರತಸ್ಥಳಾಗಿ ನಾನು ಉಳಿದ ಆಯುಷ್ಯವನ್ನು ಕಳೆಯುವೆನು, ಎಂದು ನುಡಿದು ಆಕೆಯು ದುಃಖದಿಂದ ಕಣ್ಣೀರು ಸುರಿಸಹತ್ತಿದಳು.

ಜೀವನಕಲಾ—ಕಮಲಾಕ್ಷರ ದುಃಖಕ್ಕೆ ಸಾಧಾರಣ ಕಾರಣವಾಗಿದ್ದ ಪದ್ಮನಯನೆಯು ಅವರಿಬ್ಬರ ಸಖ್ಯವನ್ನು ಮತ್ತಿಷ್ಟು ಬೆಳಿಸಲಿಕ್ಕೆ ಕಾರಣಳಾದಳು. ಪತ್ನಿಯ ವಿಷಯವಾಗಿ ದುಃಖ ಪಡುವ ಕಮಲಾಕ್ಷನ ದಯಾಲುತ್ವವನ್ನು ನೋಡಿ ಜೀವನಕಲೆಯೂ, ಸಖಿಯ ವಿಷಯವಾಗಿ ದುಃಖಪಡುತ್ತಿರುವ ಜೀವನಕಲೆಯ ಸರಳತನವನ್ನು ನೋಡಿ ಕಮಲಾಕ್ಷನೂ ಸಮಾಧಾನ ಪಟ್ಟು, ಇಬ್ಬರೂ ಪರಸ್ಪರರ ಸೌಜನ್ಯವನ್ನು ಶ್ಲಾಘಿಸತೊಡಗಿದರು. ಆ ಸತೀ–ಪತಿಗಳಲ್ಲಿ ಪರಸ್ಪರರ ವಿಷಯವಾಗಿ ದೃಢತರವಾದ ವಿಶ್ವಾಸವು ಉತ್ಪನ್ನವಾಯಿತು. ಕಮಲಾಕ್ಷನು ಜೀವನಕಲೆಯನ್ನು ಕುರಿತು—ಪ್ರಿಯತಮೇ, ಪದ್ಮನಯನೆಯ ಮೇಲಿನ ಪ್ರೇಮದಿಂದ ನೀನು ಮಾಡಿದ ಪ್ರತಿಜ್ಞೆಯನ್ನು ನಾನೂ ತಪ್ಪದೆ ಪಾಲಿಸುವೆನು. ಮಾತ್ಸರ್ಯರಹಿತರಾದ ನಿನ್ನಂಥ ಸ್ತ್ರೀಯರು ವಿರಳ! ನಾನು ಪದ್ಮನಯನೆಯ ಶೋದಾರ್ಥವಾಗಿ ಹೊರಡುವೆನು. ಈ ಸಾರೆ ಆಕೆಯ ಗೊತ್ತು ಹತ್ತದೆಯಿರುವದಿಲ್ಲೆಂದು ನನ್ನ ಮನೋದೇವತೆಯು ಹೇಳುತ್ತದೆ. ಇನ್ನು ವಿಳಂಬಮಾಡುವದು ನನ್ನಿಂದಾಗದು. ನಾಳಿಗೇ ನಾನು ಹೊರಡತಕ್ಕವನು. ಇಗೋ, ಈ ಉಂಗುರವು ನನ್ನ ನೆನಪಿಗಾಗಿ ನಿನ್ನ ಬೆರಳಿನಲ್ಲಿ ಇರಲಿ. ಈ ತೇಜೋಮಯವಾದ ಪದಕವನ್ನು ತೆಗೆದಿಡು; ಪದ್ಮನಯನೆಯು ಬಂದಳೆಂದರೆ, ಆಕೆಗೆ ಕಾಣಿಕೆಯಾಗಿ ಇದನ್ನು ಕೈಮುಟ್ಟಿ ನೀನೇ ಅರ್ಪಿಸುವೆಯಂತೆ. ಈ ಪದಕದ ಇತಿಹಾಸವನ್ನು ಹಿಂದಿನಿಂದ ಹೇಳುವೆನು. ಪದ್ಮನಯನೆಯ ಶೋಧದ ವಿಷಯವಾಗಿ ಉತ್ಸುಕ ನಾಗಿರುವ ನನ್ನ ಪ್ರಯಾಣಕ್ಕೆ ನೀನು ಅನುಕೂಲಿಸಬೇಕೆಂದು ಹೇಳಿಕೊಳ್ಳುವೆನು, ಅನ್ನಲು, ಜೀವನ ಕಲೆಯು—ಆಹಾ! ಸಖಿಯ ಶೋಧದ ಸಮ್ಮತಿಗಾಗಿ ತಾವು ನನಗೆ ಹೇಳಿಕೊಳ್ಳಬೇಕೆ?

ಸಹಾಯಕಳಾಗಿ ಹೊರಡೆಂದು ಆಜ್ಞಾಪಿಸುವ ಕೃಪೆಯನ್ನು ಮಾಡ ಬಾರದೇನು? ನಾನು ತಮ್ಮನ್ನು ಹಿಂಬಾಲಿಸಿ ಬರುವದಕ್ಕಿಂತ ಹೆಚ್ಚಿನ ಅನುಕೂಲವಿಲ್ಲವಷ್ಟೇ. ಅರ್ಧಾಂಗಿಯೆಂಬ ಪದವಿಗೆ ನನ್ನ ಪೂಜ್ಯ ಸಖಿಯು ಪಾತ್ರಳಿದ್ದರೂ, ನಾನು ಆ ಸಾರ್ವಭೌಮ ಕುವರಿಯ ದಾಸಿಯೂ ಅಲ್ಲವೇನು? ಈಗಲೇ ಹೊರಡತಕ್ಕದ್ದು, ನಾನು ಸಿದ್ಧಳಿದ್ದೇನೆ. ಮಿತ್ರಲಾಭಕ್ಕಿಂತ ಹೆಚ್ಚಿನ ಲಾಭವು ಅದಾವದಿರುವದು?

ಸುಮತಿ

ಜಗತ್ತಿನಲ್ಲಿ ಸರ್ವಸಮ್ಮತನಾದವನು ದೊರೆಯಲಾರನು. ಈಶ್ವರಾಂಶರೂ ಈ ಪದವಿಯನ್ನು ಹೊಂದಲಿಲ್ಲ ಕಮಲಾಕ್ಷನು ಗುಣ ಪೂರ್ಣನಿದ್ದರೂ ಸರ್ವ ಸಮ್ಮತನಿದ್ದಿಲ್ಲ; ಬಹು ಜನ ಸಮ್ಮತನಾಗಿದ್ದನೆಂದು ಮಾತ್ರ ಹೇಳಬಹುದು. ವೀರವರ್ಮ ಸಾರ್ವಭೌಮನ ತಮ್ಮನ ಮಗನಾದ ದುಷ್ಟಬುದ್ಧಿಯೆಂಬವನು ಕಮಲಾಕ್ಷನ ಗುಪ್ತ ಹಗೆಯಾಗಿದ್ದನು. ದುಷ್ಟಬುದ್ಧಿಯು ಶೂರನಿದ್ದರೂ, ಪರೋತ್ಕರ್ಷವನ್ನು ಸಹಿಸದವನೂ, ತಂತ್ರಗಾರನೂ ಆಗಿದ್ದನು. ಕಮಲಾಕ್ಷನ ಮೇಲಿನ ವೀರವರ್ಮನ ಲೋಭಕ್ಕಾಗಿಯೂ, ಕಮಲಾಕ್ಷನ ಉತ್ಕರ್ಷಕ್ಕಾಗಿಯೂ, ಜೀವನಕಲೆಯ ಪಾಣಿಗ್ರಹಣಕ್ಕಾಗಿಯೂ ಅವನು ಹೊಟ್ಟೇಕಿಚ್ಚುಬಟ್ಟು ಉರುಳುತ್ತಿದ್ದನು. ದುಷ್ಟಬುದ್ಧಿಯು ಕನೋಜದ ಸಿಂಹಾಸನದ ಮೇಲೆ ಕಣ್ಣು ಇಟ್ಟಿದ್ದ ರಾಜ ದ್ರೋಹಿಗಳಲ್ಲಿ ಒಬ್ಬನು. ಆದರೆ ಕಮಲಾಕ್ಷನ ಮುಂದೆ ಅವನು ಆಟವೇನೂ ನಡೆಯುವಹಾಗೆ ಇಲ್ಲದ್ದರಿಂದ ಅವನು ಕಮಲಾಕ್ಷನ ನಾಶಕ್ಕಾಗಿ ಹೊಂಚುಹಾಕಿದ್ದನು. ಹೊರಗೆ ಕಮಲಾಕ್ಷನ ಪರಮ ಮಿತ್ರನಂತೆ ತೋರಿಸಿ, ಒಳಗೆ ಕಮಲಾಕ್ಷನ ಕುತ್ತಿಗೆ ಕೊಯ್ಯಲಿಕ್ಕೆ ಕುಳಿತಿದ್ದ ಆ ಅಧಮನು, ವೀರವರ್ಮನನ್ನಾದರೂ ಸಂಪೂರ್ಣವಾಗಿ ಮೋಸಗೊಳಿಸಿದ್ದನು. ಹೊಟ್ಟೆಯ ಮಕ್ಕಳು ಸಹ ತೋರಿಸದಷ್ಟು ಭಕ್ತಿ-ವಿಶ್ವಾಸಗಳನ್ನು ಆತನು ವೀರವರ್ಮನ ವಿಷಯವಾಗಿ ತೋರಿಸುತ್ತಿದ್ದನು. ಸ್ವಾರ್ಥ ಪರಾಯಣರ ಆಚರಣೆಯೇ ಹೀಗೆ ಇರುತ್ತದೆ. ಇವರು ಮಾತಿನಲ್ಲಿ ಸಕ್ಕರೆಯ ಚೀಲವನ್ನು ಉರುಳಿಸುವರು, ಕೃತಿಯಲ್ಲಿ ಅತ್ಯಾಸಕ್ತಿಯನ್ನು ತೋರಿಸುವರು, ಠಕ್ಕ ವಿನಯಕ್ಕಂತು ಅವರಲ್ಲಿ ಕೊರತೆಯಿರುವದಿಲ್ಲ. ಈ ಸೋಗಿನ ವಿಷಕಂಟಕರ ಅಂತರಂಗ ದೊಳಗಿನ ವಿಷವು ತಿಳಿಯದ್ದರಿಂದ ಅನರ್ಥಕ್ಕೆ ಗುರಿಯಾಗುವ ಪ್ರಸಂಗವು ಸರಳ ಸ್ವಭಾವದ, ಎಷ್ಟೋ ಜನರಿಗೆ ಬಂದಿರುತ್ತದೆ. ಆ ಪ್ರಸಂಗವು ಸದ್ಯಕ್ಕೆ ಕಮಲಾಕ್ಷನಿಗೂ, ವೀರವರ್ಮನಿಗೂ ಬಂದೊದಗಲಿಕ್ಕೆ ಹಾದಿಯನ್ನು ನೋಡುತ್ತಿತ್ತೆಂದು ಹೇಳಬಹುದು. ಕಮಲಾಕ್ಷನು ಕಾರ್ಯಾಂತರ ದಿಂದ ಅಲ್ಪ ಪರಿವಾರದೊಡನೆ ಪ್ರವಾಸಕ್ಕೆ ಹೊರಡುವನೆಂಬ ಸುದ್ದಿಯು ಪಟ್ಟಣದ ತುಂಬೆಲ್ಲ ಹಬ್ಬಿದ್ದರಿಂದ, ಅವನ ವಿಯೋಗಕ್ಕಾಗಿ ಜನರು ಮರುಗಹತ್ತಿದರು. ಈ ಪ್ರಸಂಗವನ್ನು ವ್ಯರ್ಥ ಕಳಕೊಳ್ಳಬಾರದೆಂದು ತಿಳಿದು ದುಷ್ಟಬುದ್ಧಿಯು, ತಾನು ಕಮಲಾಕ್ಷನ ಸಹಾಯಕನಾಗಿ

ಹಿಂಬಾಲಿಸಿ ಹೋಗುವೆನೆಂದು ವೀರವರ್ಮನಿಗೆ ಹೇಳಿಕೊಂಡನು. ತನ್ನನ್ನು ಕರಕೊಂಡು ಹೋಗಬೇಕೆಂದು ಕಮಲಾಕ್ಷನನ್ನಾದರೂ ಆ ದುಷ್ಟನು ಪ್ರಾರ್ಥಿಸಿದನು. ದುಷ್ಟಬುದ್ಧಿಯ ಆದರವನ್ನೂ, ಉತ್ಸುಕತೆಯನ್ನೂ ನೋಡಿ ವೀರವರ್ಮನು ಕಮಲಾಕ್ಷನ ಸಹಾಯಕನಾಗಿ ಹೋಗಲಿಕ್ಕೆ ಆತನಿಗೆ ಅಪ್ಪಣೆ ಕೊಟ್ಟನು. ಕಮಲಾಕ್ಷನು ಆತನನ್ನು ಕರಕೊಂಡು ಹೋಗಲಿಕ್ಕೆ ಒಪ್ಪಿಕೊಂಡನು. ಇತ್ತ ದುಷ್ಟಬುದ್ಧಿಯು ಸಮಾಧಾನಪಟ್ಟು ತನ್ನ ಒಳಸಂಚು ನಡಿಸಿದನು.

ಸುಮುಹೂರ್ತವನ್ನು ನೋಡಿ ಕಮಲಾಕ್ಷನು ಪ್ರಯಾಣ ಬೆಳಿಸಿದನು. ಆದರೆ ಪದ್ಮನಯನೆಯ ಶೋಧಕ್ಕಾಗಿ ಹೊರಡುವೆನೆಂಬ ಸುದ್ದಿಯು ಯಾರಿಗೂ ಗೊತ್ತಾಗಲಿಲ್ಲ. ಜನರ ಯಾವತರದ ಕಲ್ಪನೆಗೂ ಆಸ್ಪದವು ದೊರೆಯಬಾರದೆಂದು ಕಮಲಾಕ್ಷನು ಜೀವನಕಲೆಗೆ ತಿಳಿಯ ಹೇಳಿ ಆಕೆಯನ್ನು ಬಿಟ್ಟು ಒಬ್ಬನೇ ಹೊರಟಿದ್ದನು. ಅತ್ತ ದುಷ್ಟಬುದ್ಧಿಯು ತನ್ನ ಸಂಗಡ ಯಾರನ್ನೂ ಕರಕೊಳ್ಳದೆ ಒಬ್ಬನೇ ಹೊರಟಿದ್ದನು. ಈ ಮೇರೆಗೆ ಕಮಲಾಕ್ಷನು ಪದ್ಮನಯನೆಯ ಶೋಧಮಾಡುವ ನಿರ್ಧಾರದಿಂದ ಹೊರಟು ಎಂಟು ದಿವಸ ಮಾರ್ಗವನ್ನು ಕ್ರಮಿಸಿ ಹೋಗಲು, ಒಂಬತ್ತನೆಯ ದಿವಸ ಸೂರ್ಯಾಸ್ತದ ಸಮಯದಲ್ಲಿ ಮಾರ್ಗದೊಳಗೆ, ಹತ್ತು ಹನ್ನೊಂದು ವರ್ಷದ ಒಬ್ಬ ಬ್ರಾಹ್ಮಣ ಬಾಲಿಕೆಯು ಕಣ್ಣೀರು ಸುರಿಸುತ್ತ ಕುಳಿತಿರುವದು ಅವನ ಕಣ್ಣಿಗೆ ಬಿತ್ತು. ಕಮಲಾಕ್ಷನು ಕೂಡಲೆ ತನ್ನ ಕುದುರೆಯನ್ನು ನಿಲ್ಲಿಸಿದನು. ಉಳಿದವರು ತಮ್ಮ ತಮ್ಮ ಕುದುರೆಗಳನ್ನು ನಿಲ್ಲಿಸಿದರು. ಇವರನ್ನೆಲ್ಲ ನೋಡಿ ಆ ಬಾಲಿಕೆಯು ದೊಡ್ಡ ದನಿಯಿಂದ ಅಳಹತ್ತಿದಳು. ಕಮಲಾಕ್ಷನು ಕೂಡಲೆ ಕುದುರೆಯಿಂದ ಇಳಿದು ಆ ಹುಡಿಗೆಯ ಬಳಿಗೆ ಹೋಗಿ—ತಂಗೀ, ನೀನು ಯಾರು? ಒಬ್ಬಳೇ ಇಲ್ಲಿ ಅಳುತ್ತ ಯಾಕೆ ಕುಳಿತು ಕೊಂಡಿರುವೆ? ಬಿಡು, ಅಳಬೇಡ. ನಿನ್ನನ್ನು ಅಳಿಸಿದವರು ಯಾರು ಹೇಳು. ಅವರನ್ನು ಈಗಲೇ ಶಿಕ್ಷಿಸುತ್ತೇನೆ. ಅನ್ನಲು, ಆ ಹುಡಿಗೆಯು—ಅಪ್ಪಾ, ನಾವು ರಾಮೇಶ್ವರದ ಯಾತ್ರೆಗೆ ಹೋಗುತ್ತಿದ್ದೆವು. ನನ್ನ ತಾಯಿ–ತಂದೆಗಳನ್ನೂ, ಬೇರೆ ಯಾತ್ರಿಕರನ್ನೂ ಕಳ್ಳರು ಆ ಹಳ್ಳದಲ್ಲಿ ಬಡಿದು ಸುಲಿದು ಕೊಳ್ಳಹತ್ತಿದ್ದಾರೆ. ನಾನು ಯಾರಿಗೂ ಕಾಣದಂತೆ ಇಲ್ಲಿ ತಪ್ಪಿಸಿಕೊಂಡು ಬಂದು ಕುಳಿತಿದ್ದೇನೆ, ಎಂದು ಹೇಳಿದಳು. ಕೂಡಲೆ ಕಮಲಾಕ್ಷನು ಒಬ್ಬ ಸರದಾರನನ್ನು ಆ ಹುಡಿಗೆಯ ಬಳಿಯಲ್ಲಿ ಇರಿಸಿ, ಉಳಿದವರೊಡನೆ ಕ್ಷಣಮಾತ್ರದಲ್ಲಿ ಆ ಹಳ್ಳಕ್ಕೆ ಹೋದನು. ಕಳ್ಳರ ಗುಂಪು ಬಹು ದೊಡ್ಡದಿತ್ತು, ಅಂತೇ ಅವರು ನೂರಾರು ಜನ ಯಾತ್ರಿಕರನ್ನು ಸುಳಿಯಲು ಸಮರ್ಥ ರಾಗಿದ್ದರು. ಅಕಸ್ಮಾತ್ತಾಗಿ ಕುದುರೆಯ ಸವಾರರು ತಮ್ಮನ್ನು ಮುತ್ತಿದ್ದನ್ನು ನೋಡಿ ಕಳ್ಳರು ಬೆದರಿದರು. ಆದರೂ ಅವರು ಕೈ ಗೆಡದೆ ಕಮಲಾಕ್ಷನ ಪರಿವಾರದೊಡನೆ ಕಾದಲಿಕ್ಕೆ ಹಿಂದೆ ಮುಂದೆ ನೋಡಲಿಲ್ಲ. ಕಡೆಗೆ ಕಳ್ಳರು ಸೋತು ಕಮಲಾಕ್ಷನಿಗೆ ಶರಣು ಬರಬೇಕಾಯಿತು. ಓಡಿ ಹೋಗಲಿಕ್ಕೂ ಅವರಿಗೆ ಆಸ್ಪದವು ದೊರೆಯಲಿಲ್ಲ. ಕಮಲಾಕ್ಷನು ಕಳ್ಳರನ್ನೂ, ಯಾತ್ರಿಕರನ್ನೂ ಕೂಡಿಕೊಂಡು ನೆರೆಯ ಗ್ರಾಮಕ್ಕೆ ಹೋದನು. ಹಾದಿಯಲ್ಲಿ ಅಳುತ್ತ ಕುಳಿತಿದ್ದ ಹುಡಿಗೆಯ ಮೇಲೆ ಕಮಲಾಕ್ಷನ ವಾತ್ಸಲ್ಯವು ವಿಶೇಷವಾಗಿ ಕುಳಿತಿತ್ತು, ಆತನು ಕಳ್ಳರನ್ನು ಗ್ರಾಮಾಧಿಕಾರಿಗೆ ಒಪ್ಪಿಸಿ, ಒಂದು ವಿಶಾಲವಾದ ಶಿವಾಲಯದಲ್ಲಿ ಯಾತ್ರಿಕರೊಡನೆ ಇಳಕೊಂಡನು.

ಕಮಲಾಕ್ಷನಿಂದ ತಮ್ಮ ವಿತ್ತ—ಜೀವಿತಗಳ ರಕ್ಷಣವಾದದ್ದನ್ನು ನೋಡಿ ಯಾತ್ರಿಕರೆಲ್ಲರೂ ಮನಃಪೂರ್ವಕವಾಗಿ ಆತನ ಕಲ್ಯಾಣವನ್ನು ಚಿಂತಿಸಿದರು. ಕಮಲಾಕ್ಷನು ತನಗೆ ಮಾರ್ಗದಲ್ಲಿ ಭೆಟ್ಟಿಯಾದ ಬ್ರಾಹ್ಮಣ ಬಾಲಿಕೆಯನ್ನು ಕರೆದು ಹತ್ತರ ಕುಳ್ಳಿರಿಸಿಕೊಂಡನು. ಬಾಲಿಕೆಯು ಸುಂದರಳಿದ್ದಳು. ಅವಳ ಮುಖವು ಗಂಭೀರವಾಗಿದ್ದು, ಕಣ್ಣುಗಳು ತೇಜಃಪುಂಜವಾಗಿದ್ದವು. ಆಕೆಯ ಮೈ ಬಣ್ಣ ನಸುಗೆಂಪು, ಮೈಕಟ್ಟು ಹವಣೆಯದು, ನಿಲುವಿಕೆಯು ಮೈಮಾಟಕ್ಕೆ ಒಪ್ಪುವಂಥಾದ್ದು, ಸ್ವಭಾವ ಸರಳ. ಆಕೆಯನ್ನು ನೋಡಿ ಕಮಲಾಕ್ಷನು ಕೌತುಕದಿಂದ— ತಂಗೀ, ನಿನ್ನ ಹೆಸರೇನವ್ವಾ? ನಿನ್ನ ತಾಯಿತಂದೆಗಳ ಭೆಟ್ಟಿಗಳನ್ನು ಮಾಡಿಸುವೆಯಾ, ಎಂದು ಕೇಳಲು, ಆ ಹುಡುಗೆಯು ವಿನಯದಿಂದ—ಭಾಗ್ಯವಂತನೇ, ನನ್ನ ಹೆಸರು ಯಶೋದೆಯು; ನಿಲ್ಲು ಇದೇ ಈಗ ಅಪ್ಪನನ್ನೂ, ಅವ್ವನನ್ನೂ ಕರಕೊಂಡು ಬರುತ್ತೇನೆ, ಎಂದು ಹೇಳಿ ಚಟ್ಟನೆ ಎದ್ದು ಹೋದಳು. ಸ್ವಲ್ಪ ಹೊತ್ತಿನಲ್ಲಿ ಆಕೆಯು ಸುಮಾರು ಎಪ್ಪತ್ತು ವರ್ಷದ ವಯಸ್ಸುಳ್ಳ ತೇಜಃಪುಂಜನಾದ ಒಬ್ಬ ಬ್ರಾಹ್ಮಣನನ್ನೂ, ಅರ್ಧಮರ್ಧ ನೆರೆಗೂದಲುಳ್ಳ ಒಬ್ಬ ಸಾಧ್ವಿಯನ್ನೂ ಕರಕೊಂಡು ಕಮಲಾಕ್ಷನ ಬಳಿಗೆ ಬಂದಳು. ಆ ತೇಜೋಮೂರ್ತಿಗಳನ್ನು ನೋಡಿ ಕಮಲಾಕ್ಷನು ಭಕ್ತಿಯಿಂದ ನಮಿಸಿದನು. ಆಗಲಾ ಭೂಸುರೋತ್ತಮನು— ''ಆಯುಷ್ಮಂತನೇ, ವಿಜಯಿಯಾಗು'' ಎಂದು ಆಶೀರ್ವದಿಸಿ, ಕಮಲಾಕ್ಷನನ್ನು ವಾತ್ಸಲ್ಯದಿಂದ ಹಿಡಿದೆತ್ತಲು, ಆ ಸಾಧ್ವಿಯು ಬಾಷ್ಪಪೂರಿತಲೋಚನೆಯಾಗಿ—ಅಪ್ಪಾ, ಆಯುಷ್ಮಂತನಾಗು, ನಿನ್ನ ವಂಶವು ಹಬ್ಬಲಿ, ಅಖಂಡವಾದ ಐಶ್ವರ್ಯವು ನಿನ್ನನ್ನು ಹೊಂದಲಿ, ಎಂದು ಹರಸಿದಳು. ಗಾಂಭೀರ್ಯ–ಪರಾಕ್ರಮಗಳಿಂದ ಸಿಂಹನಂತೆ ಒಪ್ಪುತ್ತಿದ್ದ ಕಮಲಾಕ್ಷನನ್ನು ನೋಡಿ ಆ ಬ್ರಾಹ್ಮಣ ದಂಪತಿಗಳಿಗೆ ಬಹಳ ಸಂತೋಷವಾಯಿತು. ಕಮಲಾಕ್ಷನು ತನ್ನನ್ನು ಕೌತುಕದಿಂದ ನೋಡುತ್ತ ನಿಂತಿರುವ ಆ ಹುಡಿಗೆಯನ್ನು ಕುರಿತು—ತಂಗೀ, ಕುಳಿತುಕೊಳ್ಳವ್ವಾ, ನಿಂತುಕೊಂಡೆಯೇಕೆ? ಎಂದು ಮರ್ಯಾದೆಯಿಂದ ಹೇಳಲು, ಆ ಬ್ರಾಹ್ಮಣನು ಕಮಲಾಕ್ಷನನ್ನು ಕುರಿತು—ನಮ್ಮ ಯಶೋದೆಯ ಲಗ್ನವು ಇಷ್ಟು ಹೊತ್ತಿಗೆ ಆಗಬೇಕಾಗಿತ್ತು, ಆದರೆ ನಮ್ಮ ದುರ್ದೈವವು ಆಗಗೊಡಲಿಲ್ಲ, ಆಕೆಗೆ ಹತ್ತು ವರ್ಷ ತುಂಬುತ್ತ ಬಂದವು, ಹೇಗೂ ನೀವು ಆಕೆಯ ಪ್ರಾಣವನ್ನು ಉಳಿಸಿರುತ್ತೀರಿ. ಪ್ರಾಣವನ್ನು ರಕ್ಷಿಸಿದವನು ತಂದೆಗೆ ಸಮಾನನು ಯೋಗ್ಯವರ ನನ್ನು ನೋಡಿ ಆಕೆಯ ಲಗ್ನವನ್ನಿಷ್ಟು ಮಾಡಿ ಪುಣ್ಯ ಕಟ್ಟಿಕೊಳ್ಳಿರಿ. ನಿಮ್ಮ ರಾಜಚಿನ್ಹಗಳನ್ನೂ, ಪ್ರತಾಪವನ್ನೂ ನೋಡಿ ನನ್ನ ಕೂಸನ್ನು ನಿಮ್ಮ ಉಡಿಯಲ್ಲಿ ಹಾಕಿರುತ್ತೇನೆ. ಇನ್ನು ಆಕೆಯ ಲಗ್ನವನ್ನು ಬಿಡುವಂತೆ ಇಲ್ಲ ತಿರುಗಿ ನಮ್ಮ ಮಾಳವ ರಾಜ್ಯಕ್ಕೆ ಹೋಗುವತನಕ ಲಗ್ನ ಬಿಡುವದು ಅಯೋಗ್ಯವು, ಎಂದು ಹೇಳಿದನು.

ಮಾಳವದ ಹೆಸರನ್ನು ಕೇಳಿದ ಕೂಡಲೆ ಕಮಲಾಕ್ಷನ ಮನಸ್ಸು ಚಂಚಲವಾಯಿತು. ಅವನು ಬ್ರಾಹ್ಮಣನನ್ನು ಕುರಿತು—ಪೂಜ್ಯರೇ ನಿಮ್ಮ ಅಪ್ಪಣೆಯು ನನಗೆ ಮಾನ್ಯವದೆ. ಬ್ರಾಹ್ಮಣರ ಸೇವೆಯು ಈಶ್ವರಸೇವೆಯು ಅಗತ್ಯವಾಗಿ ನಿಮ್ಮ ಮಗಳ ಲಗ್ನವನ್ನು ಮಾಡುವೆನು ಚಿಂತೆಬಿಡಿರಿ; ಆದರೆ ಮಾಳವ ರಾಜ್ಯದಲ್ಲಿ ನೀವು ಯಾವ ಊರವರು? ಇಲ್ಲಿಗೆ ಬಂದ

ಕಾರಣವೇನು? ಇದನ್ನು ದಯಮಾಡಿ ಹೇಳಬೇಕು. ಅನ್ನಲು, ಬ್ರಾಹ್ಮಣನು ನಿಟ್ಟುಸಿರು ಬಿಟ್ಟು ನುಡಿದನೇನಂದರೆ—''ಪುಣ್ಯವಂತನೇ, ನೀನು ಪರರ ಸಂಕಟಗಳನ್ನು ನಿವಾರಣಮಾಡುವವನಾದದ್ದರಿಂದ, ದೇವರು ನಿನ್ನ ಸಂಕಟಗಳನ್ನು ನಿಶ್ಚಯವಾಗಿ ನಿವಾರಣಮಾಡುವನು. ನಮ್ಮ ಸಂಗತಿಯನ್ನು ಹೇಳಬೇಕಾದರೆ ಲಜ್ಜೆಯು ಉತ್ಪನ್ನವಾಗಿ ದುಃಖವು ಒತ್ತರಿಸುತ್ತದೆ. ಆದರೂ ನಿರ್ವಾಹವಿಲ್ಲ ನಿನ್ನ ಮುಂದೆ ಅವಶ್ಯವಾಗಿ ಹೇಳತಕ್ಕದ್ದು. ಸ್ವಲ್ಪದರಲ್ಲಿ ಹೇಳುತ್ತೇನೆ ಕೇಳು—ನಾನು ಉಜ್ಜಯನೀ ಪಟ್ಟಣದ ಸುಲೋಚನರಾಜನ ಕುಲಪುರೋಹಿತನಾದ ಸುಶರ್ಮನು. ನಾನು ರಾಮೇಶ್ವರದ ಯಾತ್ರೆಗೆ ಹೋಗಬೇಕೆಂದು ಯೋಚಿಸಿ, ರಾಜಾಶ್ರಯವನ್ನು ಹೊಂದಿ ಹೆಂಡತಿಯನ್ನೂ, ಮಗಳನ್ನೂ ಕೂಡಿಕೊಂಡು ಹೊರಟೆನು. ನಮ್ಮೊಡೆಯನಾದ ಸುಲೋಚನನು ಎಲ್ಲ ಅನುಕೂಲತೆಗಳನ್ನು ಮಾಡಿಕೊಟ್ಟು, ನಮ್ಮ ಸಂರಕ್ಷಣಕ್ಕಾಗಿ ಇಪ್ಪತ್ತೈದು ಜನ ರಾವುತರನ್ನು ಕೊಟ್ಟನು. ನಾವು ಮಾರ್ಗಕ್ರಮಣ ಮಾಡುತ್ತಿರಲು, ದುರ್ದೈವದಿಂದ ಹಾದಿಯತಪ್ಪಿ ಅಡವೀಬಿದ್ದೆವು. ಹಲವು ರೀತಿಯಿಂದ ಕಷ್ಟಪಡುತ್ತ ಅರಣ್ಯದಲ್ಲಿ ಮುಂದಕ್ಕೆ ಸಾಗುತ್ತಿರಲು, ಕಾಡುಜನರದೊಂದು ಗುಂಪು ದೂರ ಇರುವಾಗಲೇ ನಮಗೆ ಕಂಡಿತು. ಮುಂದೆ ಸ್ವಲ್ಪ ವೇಳೆಯಲ್ಲಿ ಆ ನೀಚರು ಹತ್ತರ ಬರಲು, ಅವರ ಉಗ್ರರೂಪಗಳನ್ನು ನೋಡಿ, ನಮ್ಮ ಕೈಕಾಲುಗಳೇ ಹೋದವು. ಭಯದಿಂದ ನಾವು ನಡುಗಹತ್ತಿದೆವು. ನಮ್ಮ ರಾವುತರಿಗೂ, ಆ ಕಾಡು ಜನರಿಗೂ ಯುದ್ಧವಾಗಿ, ಯುದ್ಧದಲ್ಲಿ ನಮ್ಮ ರಾವುತರೆಲ್ಲರೂ ಮಡಿದು ಹೋದರು. ಆ ಕಾಡು ಜನರು ನಮ್ಮ ಸಂಪತ್ತನ್ನೆಲ್ಲ ಸುಲಕೊಂಡು ಹೋದರು. ಅನಾಥರಾದ ನಾವು ಅಡವಡವಿ ತಿರುಗುತ್ತಿರಲು, ರಾಮೇಶ್ವರಕ್ಕೆ ಹೋಗುವ ಯಾತ್ರಿಕರ ಈ ದೊಡ್ಡ ಗುಂಪು ಭೆಟ್ಟಿಯಾಯಿತು. ಅವರಲ್ಲಿ ನಾವೂ ಬೆರೆತು ಮಾರ್ಗವ ಕ್ರಮಿಸುತ್ತಿರುವಾಗ ಸುಲಿಗೆಗಾರರ ಕೈಯಲ್ಲಿ ಸಿಗಲು, ನೀನು ಬಿಡಿಸಿ ಪುಣ್ಯ ಕಟ್ಟಿಕೊಂಡೆ. ರಾಮೇಶ್ವರದಲ್ಲಿಯೇ ಯಶೋದೆಯ ಲಗ್ನಮಾಡಬೇಕೆಂದು ಮಾಡಿದ್ದೆವು. ಇನ್ನು ಏನಾಗುತ್ತದೋ ತಿಳಿಯದು! ಸುಲೋಚನ ಸಾರ್ವಭೌಮನ ಆಶ್ರಯದಲ್ಲಿ ಸುಖದಿಂದಿದ್ದ ನಮ್ಮ ಪಡಿಪಾಟಲನ್ನು ವರ್ಣಿಸಲಾರೆನು. ನಾವು ಈ ರೀತಿಯಿಂದ ದುಃಖದಲ್ಲಿರಲು, ನಮ್ಮ ಅರಸನಾದ ಸುಲೋಚನನು ಕಮಲಾಕ್ಷನೆಂಬ ಪುತ್ರನನ್ನಗಲಿ ದಿನದಿನಕ್ಕೆ ಕೃಶವಾಗುತ್ತಿರುವನು. ಆ ಕಮಲಾಕ್ಷನು ಎಲ್ಲಿ ಹೋದನೆಂಬದು ಈವರೆಗೂ ಗೊತ್ತಾಗಲಿಲ್ಲ! ಆ ದುಃಖದ ಸಂಗತಿಯನ್ನು ನಾನು ಹೇಳಲಾರೆನು. ಉಪಾಯವಿಲ್ಲ, ಈಶ ಸಂಕಲ್ಪವಿದ್ದಂತೆ ಆಗುವದು ಅದನ್ನು ತಪ್ಪಿಸಲಿಕ್ಕೆ ಯಾರೂ ಸಮರ್ಥರಲ್ಲ. ಯಶೋದೆಯ ಪುಣ್ಯದಿಂದ ನಿನ್ನ ದರ್ಶನವಾದದ್ದಕ್ಕಾಗಿ, ನಮಗೆ ಬಹಳ ಸಂತೋಷವಾಗಿದೆ.

ಈ ಪ್ರಕಾರ ಬ್ರಾಹ್ಮಣನು ಆಡಿದ ಮಾತುಗಳನ್ನು ಕೇಳಿ ಕಮಲಾಕ್ಷನು ಮನಸ್ಸಿನಲ್ಲಿ—''ಅಹಾ! ದುರ್ದೈವಿಯಾದ ಕಮಲಾಕ್ಷನ ದುಃಖವು ಹೆಚ್ಚುತ್ತ ಹೋಗುವದಲ್ಲ! ನಮ್ಮ ಕುಲ ಪುರೋಹಿತನಾದ ಸುಶರ್ಮನಿಗೆ ಇಂಥ ಪ್ರಸಂಗವು ಒದಗಬೇಕೆ? ವೃದ್ಧನಾದ ತಂದೆಗೆ ದುಃಖಕೊಟ್ಟು ನಾನು ಜೀವದಿಂದಿರುವದು ಯೋಗ್ಯವೆ? ನನ್ನ ಕೃತಘ್ನತೆಗೆ ಧಿಕ್ಕಾರವಿರಲಿ, ನನ್ನ ಬಾಳುವೆಯನ್ನು ಸುಡಲಿ. ನನ್ನ ಮಿತ್ರನಾದ ಸುಮತಿಯಾದರೂ ಈಗ ಇರುತ್ತಿದ್ದರೆ ಎಷ್ಟು

ಹಿತವಾಗುತ್ತಿತ್ತು! ರೂಪ–ಗುಣ ಸಂಪನ್ನೆಯಾದ ಈ ಯಶೋದೆಯು ಅವನನ್ನು ಲಗ್ನವಾಗಿ ಧನ್ಯಳಾಗುತ್ತಿದ್ದಳು! ಪರಮೇಶ್ವರಾ, ನಿನ್ನ ಇಚ್ಛೆಗೆ ಬಂದಂತಾಗಲಿ, ಎಂದು ಬ್ರಾಹ್ಮಣನನ್ನು ಕುರಿತು—ವಿಪ್ರೋತ್ತಮರೇ, ನಿಮ್ಮ ವೃತ್ತಾಂತವನ್ನು ಕೇಳಿ ನನಗೆ ಬಹಳ ದುಃಖವಾಗಿದೆ. ಇಲ್ಲಿಯವರೆಗೆ ನನ್ನ ನಿಜವಾದ ವೃತ್ತಾಂತವನ್ನು ಪದ್ಮನಯನಾ–ಜೀವನಕಲೆಯರ ಹೊರತು ಯಾರಿಗೂ ಹೇಳದಿದ್ದರೂ, ಕುಲುಗುರುಗಳಾದ ತಮ್ಮ ಮುಂದೆ ಅದನ್ನು ಹೇಳುವೆನು, ಕೇಳುವ ಕೃಪೆಮಾಡಬೇಕು, ಎಂದು ನುಡಿದು, ತಾನು ತಂದೆಯ ಸೆರೆಯಿಂದ ತಪ್ಪಿಸಿಕೊಂಡು ಹೋಗಿ, ಪದ್ಮನಯನೆಯನ್ನು ಲಗ್ನವಾಗಿ, ಆಕೆಯನ್ನು ಅಗಲಿ, ವೀರವರ್ಮನ ಆಶ್ರಯಕ್ಕೆ ಬಂದು, ಜೀವನಕಲೆಯ ಲಗ್ನವಾದ ಮೇಲೆ ಮತ್ತೆ ಪದ್ಮನಯನೆಯ ಶೋಧಕ್ಕೆ ಹೊರಟ ಸಂಗತಿಯನ್ನು ಸಾದ್ಯಂತವಾಗಿ ಹೇಳಿದನು.

ತಮ್ಮನ್ನು ಬಂಧಮುಕ್ತರಾಗಿ ಮಾಡಿದ ಪುಣ್ಯವಂತನು ತನ್ನ ಯಜಮಾನನಾದ ಸುಲೋಚನ ರಾಜನ ಮಗ ಕಮಲಾಕ್ಷನಿರುವನೆಂಬದನ್ನು ತಿಳಿದು, ಸುಶರ್ಮನುಸಾನಂದಾಶ್ಚರ್ಯವುಳ್ಳವನಾದನು. ಕಮಲಾಕ್ಷನು ಉಜ್ಜಯನಿಯಲ್ಲಿರುವಾಗ್ಗೆ ಪ್ರಾಯದಲ್ಲಿ ತಂದೆಯ ಅವಕೃಪೆಗೆ ಪಾತ್ರನಾಗಿ ಸೆರೆಮನೆಯಲ್ಲಿದ್ದದ್ದರಿಂದ ಅವನು ಈ ಪರಿ ಶೂರನಿದ್ದದ್ದು ವ್ಯಕ್ತವಾಗಿದ್ದಿಲ್ಲ. ಸುಶರ್ಮನು ಕಮಲಾಕ್ಷನನ್ನು ಕುರಿತು—"ಪ್ರತಾಪಶಾಲಿಯಾದ ಕಮಲಾಕ್ಷನೇ, ನಿನ್ನ ಅದ್ಭುತವಾದ ಚರಿತ್ರವನ್ನು ಕೇಳಿ ಸೋಜಿಗಗೊಂಡೆನಲ್ಲದೆ ನಿನ್ನ ಅಗಾಧವಾದ ಶೌರ್ಯಕ್ಕಾಗಿ. ನನಗೆ ಪರಮ ಹರ್ಷವಾಗಿದೆ. ಆದರೆ ನಿನ್ನ ಈ ಪ್ರತಾಪವನ್ನು ನಿನ್ನ ತಂದೆಯಾದ ಸುಲೋಚನನು ನೋಡಿ ಧನ್ಯನಾಗದಿರುವದು ಅನ್ಯಾಯವು. ನೀನು ಉಜ್ಜಯನಿಯನ್ನು ಬಿಟ್ಟು ಈವೊತ್ತಿಗೆ ಆರುವರ್ಷವಾದುದರಿಂದ, ನಿನ್ನ ಪರಿಚಯವು ನನಗೆ ಹತ್ತಲಿಲ್ಲ ಪ್ರಾಯದಲ್ಲಿ ಮನುಷ್ಯನ ಲಕ್ಷಣಗಳು ಬದಲಾಗುತ್ತವೆಂಬದು ಸುಳ್ಳಲ್ಲ, ನೀನು ಇದೇರೀತಿಯಿಂದ ಅಭಿವೃದ್ಧಿಯನ್ನು ಹೊಂದು; ಮತ್ತು ನಿನ್ನನ್ನಗಲಿದ ಪದ್ಮನಯನೆಯು ಪುನಃ ನಿನಗೆ ಪ್ರಾಪ್ತಳಾಗಿ, ನೀನು ಅವಳನ್ನೂ, ಜೀವನಕಲೆಯನ್ನೂ ಕೂಡಿಕೊಂಡು, "ನೀನು ವಿವಾಹ ಮಾಡಿಕೊಳ್ಳಲಿಲ್ಲ"ಂಬ ಚಿಂತೆಯಿಂದ ಮುಪ್ಪಾಗಿರುವ ಸುಲೋಚನರಾಜನನ್ನು ಕಂಡು, ಆತನನ್ನು ಸಂತೋಷಗೊಳಿಸು. ಇನ್ನುಮೇಲೆ ಮಾತ್ರ ನಿನ್ನ ತಂದೆಯನ್ನು ಕಾಣುವದಕ್ಕೆ ವಿಳಂಬ ಮಾಡಬೇಡ. ಯಾಕಂದರೆ, ಆತನು ನಿನ್ನ ವಿಯೋಗದುಃಖದಿಂದ ದಿನದಿನಕ್ಕೆ ಕೃಶವಾಗುತ್ತ ನಡೆದಿರುವನು. ಗೋ–ಬ್ರಾಹ್ಮಣರ ರಕ್ಷಣ ಮಾಡತಕ್ಕದ್ದು ಕ್ಷತ್ರಿಯರ, ವಿಶೇಷವಾಗಿ ನಿಮ್ಮ ವಂಶದವರ ಧರ್ಮವಿರುವದರಿಂದ, ಈವೊತ್ತು ನಮ್ಮ ಬಂಧವಿಮೋಚನೆಮಾಡಿದ್ದು ನಿನ್ನ ಕರ್ತವ್ಯವಾಗಿದ್ದರೂ, ಅದು ದುರ್ಘಟ ಪ್ರಸಂಗವಿದ್ದದ್ದರಿಂದ ಆದನ್ನು ದೂರಮಾಡಿದ ನಿನ್ನ ಉಪಕಾರವನ್ನು ನಾನು ಮರೆಯಲಾರೆನು," ಅನ್ನಲು, ಕಮಲಾಕ್ಷನು ಕಣ್ಣುಗಳಲ್ಲಿ ನೀರು ತಂದು ನುಡಿದನೇನಂದರೆ—"ಪೂಜ್ಯರೇ, ಚಾಂಡಾಲನಾದ ನನ್ನನ್ನು ನೆನಿಸಿ ತಂದೆಯು ಕೃಶವಾಗುತ್ತಿರುವನೆ! ನನ್ನ ನೀಚತನವನ್ನು ಎಷ್ಟು ವರ್ಣಿಸಿದರೂ ಸ್ವಲ್ಪವೇ ಇರುವದು ಉಪಾಯವಿಲ್ಲ, ನನಗೆ ಒಂದಕ್ಕಿಂತಲೂ ಒಂದು ದುರ್ಘಟ ಪ್ರಸಂಗಗಳು ಬಂದದ್ದರಿಂದ

ತಂದೆಯ ದರ್ಶನಕ್ಕೆ ಇಲ್ಲಿಯವರೆಗೆ ವಿಳಂಬವಾಯಿತು. ಇನ್ನು ಬೇಗನೆ ತಂದೆಯ ಚರಣವನ್ನು ಕಾಣುವೆನು. ಈಗ ನನ್ನಿಂದಾದ ಅಪರಾಧಕ್ಕಾಗಿ ತಾವು ಅಸಮಾಧಾನಪಡದೆ, ನನ್ನನ್ನು ಕ್ಷಮಿಸಿರಿ ನಿಮ್ಮ ಆಶೀರ್ವಾದವಿದ್ದರಾಯಿತು; ಇದಕ್ಕಿಂತ ಹೆಚ್ಚಿನ ಕಠಿಣ ಪ್ರಸಂಗಗಳನ್ನು ನೀಗುವೆನು. ತಮ್ಮ ಶ್ಲಾಘನೆಗೆ ನಾನು ತಕ್ಕವನಲ್ಲ

ಕಮಲಾಕ್ಷನ ವಿನಯ ವಚನಗಳಿಂದ ಸುಶರ್ಮನ ಅಂತಃಕರಣವು ಪ್ರಸನ್ನವಾಯಿತು; ಆದರೆ ಆ ವಚನಗಳ ಶ್ರವಣದಿಂದ ದುಷ್ಟಬುದ್ಧಿಯ ಹೊಟ್ಟೆಯಲ್ಲಿ ಸಾಸಿವೆ ಅರೆದಂತೆ ಆಯಿತು. ಅವನು ಮನದಲ್ಲಿ—''ಕಮಲಾಕ್ಷನು ಪದ್ಮನಯನೆಯ ಪತಿಯೆಂಬದು ವೀರವರ್ಮನಿಗೆ ತಿಳಿದರೆ, ಅವನು ನನ್ನನ್ನು ನಿಶ್ಚಯವಾಗಿ ನಿರಾಕರಿಸುವನು. ಏನಿಲ್ಲದೆ ಕಮಲಾಕ್ಷನ ಮೇಲೆ ಕುಳಿತಿದ್ದ ವೀರವರ್ಮನ ಪ್ರೇಮವು, ಇವನ ನಿಜವಾದ ವೃತ್ತಾಂತ ಶ್ರವಣದಿಂದ ವೃದ್ಧಿಂಗತವಾಗಿ, ಅದು ಕಡೆಗೆ ಇವನನ್ನು ವೀರವರ್ಮನ ಹಿಂದೆ ಅರಸನಾಗ ಮಾಡಬಹುದು. ನನಗೆ ಇದು ಸಾಧಾರಣವಾದ ಅವಮಾನವೇ? ಯಾವದೊಂದು ಯುಕ್ತಿಯಿಂದ ಕಮಲಾಕ್ಷನನ್ನು ನಾಶ ಮಾಡಿದ ಹೊರತು ಈ ಅಪಮಾನದ ನಿವಾರಣವು ಆಗುವಂತೆ ಇಲ್ಲ. ಈ ಕೆಲಸದಲ್ಲಿ ನನ್ನ ಪ್ರಾಣಹಾನಿಯಾದರೂ ಚಿಂತೆಯಿಲ್ಲ ಕಮಲಾಕ್ಷನ ಸಂಹಾರವನ್ನು ಮಾಡದೆ ಬಿಡಬಾರದು.'' ಎಂದು ಯೋಚಿಸಿ ಹೊತ್ತು ಕಾಯಹತ್ತಿದನು; ಆದರೆ ಸರಳ ಮನಸ್ಸಿನವನಾದ ಕಮಲಾಕ್ಷನಿಗೆ ಈ ಮೋಸವು ತಿಳಿಯದೆ, ಅವನು ದುಷ್ಟ ಬುದ್ಧಿಯ ಸಂಗಡ ಮೊದಲಿನಂತೆ ನಂಬಿಗೆ ಇಟ್ಟು ನಡೆಯುತ್ತಿದ್ದನು. ಕಮಲಾಕ್ಷನು ಯಾತ್ರಿಕ ರನ್ನೆಲ್ಲ ಕಳಿಸಿ, ತಾಯಿ–ತಂದೆಗಳೊಡನೆ ಕೂಡಿರುವ ಯಶೋದಯನ್ನೊಡಗೊಂಡು ಸಾಗಿದನು. ದುರ್ಜನರಿಗೆ ಸಜ್ಜನರು ಸಹ ದುರ್ಜನರಂತೆ ತೋರುವದರಿಂದ, ದುರ್ಜನನಾದ ದುಷ್ಟಬುದ್ಧಿಗೆ ನಿರ್ಮಲಾಂತಃಕರಣದವನೂ, ನಿಷ್ಕಾಮ ಪ್ರೀತಿಯವನೂ, ಧರ್ಮ ತತ್ಪರನೂ ಆದ ಕಮಲಾಕ್ಷನು ಸಹ ದುರ್ಜನನಾಗಿಯೇ ತೋರಿದನು. ಪಾಪ ಮಲಿನರೂ, ದುರಭಿಮಾನಿಗಳೂ ಆದ ಜನರು ತಮ್ಮ ಕೃತಿಯು ಅನುಚಿತವೆಂದು ತಿಳಿದಾಗ್ಯೂ, ತಮ್ಮ ದುರ್ವ್ಯಾಪಾರಗಳನ್ನು ನಡಿಸದೆ ಬಿಡುವದಿಲ್ಲ. ಅದರಿಂದಲೇ ಅವರಿಗೆ ದುರ್ಜನರೆಂಬ ಬಿರುದು ಪ್ರಾಪ್ತವಾಗಿರುತ್ತದೆ. ದುಷ್ಟಬುದ್ಧಿಯ ಸ್ಥಿತಿಯಾದರೂ ಹೀಗೆಯೇ ಆಯಿತು. ಅವನ ಮನಸ್ಸು ಕಮಲಾಕ್ಷನ ಮೇಲಣ ಅಸೂಯೆಯಿಂದ ಹೆಚ್ಚು ಹೆಚ್ಚು ಅಸಮಾಧಾನ ಹೊಂದಿ, ಅವನು ಕಮಲಾಕ್ಷನ ನಾಶದ ಯುಕ್ತಿಯನ್ನು ಯೋಚಿಸಹತ್ತಿದನು.

ಕಮಲಾಕ್ಷನು ತನ್ನ ಪರಿವಾರದೊಡನೆ ಮಾರ್ಗಕ್ರಮಣ ಮಾಡುತ್ತ ವಿಂಧ್ಯಾದ್ರಿಯ ನೆರೆಯಲ್ಲಿರುವ ಸುವರ್ಣ ಪುರವೆಂಬ ಹಳ್ಳಿಗೆ ಬರಲು, ಸೂರ್ಯನು ಅಸ್ತಂಗತನಾದನು. ಅವರೆಲ್ಲರು ಊರ ಹೊರಗಿರುವ ಮಾರುತಿಯ ದೇವಾಲಯದಲ್ಲಿಯೂ, ಅದರ ನೆರೆಯಲ್ಲಿರುವ ಮಾವಿನ ತೋಪಿನಲ್ಲಿಯೂ ಇಳಕೊಂಡರು. ಆ ಸ್ಥಳವು ಬಹು ರಮ್ಯವಾಗಿತ್ತು ದುಷ್ಟಬುದ್ಧಿಯು ಆ ದಿನ ವಿಶ್ರಾಂತಿಯನ್ನು ಹೊಂದಲಿಚ್ಛಿಸಿದ್ದರಿಂದ ಕಮಲಾಕ್ಷನು ಪಯಣವನ್ನು ನಿಲ್ಲಿಸಬೇಕಾಯಿತು. ಈ ಸಂಧಿಯನ್ನು ಸಾಧಿಸಿ ದುಷ್ಟಬುದ್ಧಿಯು ತನ್ನ

ದುರಾಲೋಚನೆಯನ್ನು ಕೊನೆಗಾಣಿಸುವದನ್ನು ನಿಶ್ಚಯಿಸಿದನು. ಒಂದು ದಿನ ಏಳುತಾಸು ರಾತ್ರಿಯಾಗಿದೆ, ಕಗ್ಗತ್ತಲು ಮುಸುಕಿದೆ, ಎಲ್ಲರೂ ನಿದ್ರಾಪರವಶರಾಗಿದ್ದಾರೆ, ಶಾಂತಿಯ ಸಾಮ್ರಾಜ್ಯವು ಪ್ರಸ್ಥಾಪಿತವಾದದ್ದರಿಂದ ಪ್ರಾಣಿ ಮಾತ್ರಗಳ ಸುಖದ ಮಾನವು ಹೆಚ್ಚಾಗಿದೆ; ಅಷ್ಟರಲ್ಲಿ ಒಂದು ಸಾಂಕೇತಿಕ ಧ್ವನಿಯು ಆಗಲು, ದುಷ್ಟಬುದ್ಧಿಯು ನಿದ್ರಾ ಪರವಶನಾದ ಕಮಲಾಕ್ಷನ ಎದೆಯ ಮೇಲೆ ಕುಳಿತು ಕಠಾರಿಯಿಂದ ಅವನನ್ನು ಇರಿಯಹತ್ತಿದನು. ಅತ್ತ ನಿದ್ದೆ ಮಾಡುತ್ತಿದ್ದ ಕಮಲಾಕ್ಷನ ಅಲ್ಪ ಸೈನ್ಯವನ್ನು ಒಂದು ದೊಡ್ಡ ಸೈನ್ಯವು ಮುತ್ತಿ ಸ್ವಲ್ಪ ವೇಳೆಯಲ್ಲಿ ಅದನ್ನು ಸಂಪೂರ್ಣವಾಗಿ ನಾಶಗೊಳಿಸಿತು. ದುಷ್ಟಬುದ್ಧಿಯು ಹಲವು ಇರತ ಗಳಿಂದ ಕಮಲಾಕ್ಷನನ್ನು ಇರಿದು, ಸತ್ತನೆಂದು ತಿಳಿದು ಅವಸರದಿಂದ ಹೊರಟುಹೋದನು. ಇಷ್ಟು ಜನರ ಪ್ರಾಣಹಾನಿಯು ಸದ್ದಿಲ್ಲದೆ ಆದದ್ದರಿಂದ ಗರ್ಭಾಗಾರದಲ್ಲಿ ಮಲಗಿದ್ದ ಸುಶರ್ಮನಿಗೂ, ಅವನ ಹೆಂಡತಿಗೂ ಎಚ್ಚರವೇ ಆಗಿದ್ದಿಲ್ಲ. ದುಷ್ಟಬುದ್ಧಿಯು ಕಮಲಾಕ್ಷನ ಕೊಲೆ ಮಾಡಲುದ್ಯೋಗಿಸುವ ಮೊದಲು, ಗರ್ಭಾಗಾರದ ಹೊರಗಿನ ಚಿಲಕವನ್ನು ಹಾಕಿ ಕೊಂಡಿದ್ದನು. ಮುಂದೆ ಕೆಲವು ಹೊತ್ತಿನ ಮೇಲೆ ಸುಶರ್ಮನು ಹೊರಗೆ ಬರುವದಕ್ಕಾಗಿ ಬಾಗಿಲು ತೆರೆಯಲು, ಅದು ಬರಲಿಲ್ಲ. ಆ ವೃದ್ಧ ಬ್ರಾಹ್ಮಣನು ಕಮಲಾಕ್ಷನನ್ನೂ, ದುಷ್ಟ ಬುದ್ಧಿಯನ್ನೂ ಒದರಿ ಒದರಿ ಬೇಸತ್ತನು. ಅವನ ಗದ್ದಲಕ್ಕೆ ಅವನ ಹೆಂಡತಿಯೂ, ಮಗಳೂ ಎಚ್ಚತ್ತರು ಆ ಮೂವರೂ ಎದ್ದು ಕುಳಿತು ಹೀಗೆ ಯಾಕಾಗಿರಬಹುದೆಂಬದನ್ನು ಆಲೋಚಿಸ ತೊಡಗಿದರು. ಅವರ ಮನಸ್ಸಿನಲ್ಲಿ ತರತರದ ದುಷ್ಟ ಕಲ್ಪನೆಗಳು ಬರಲು, ಆ ಮೂವರೂ ಕೂಡಿ ಗದ್ದಲ ಮಾಡಿದರು. ಆ ಗದ್ದಲಕ್ಕೆ ನೆರೆಯ ಜನರು ಎದ್ದು ಬಂದು ದೀಪ ಹಚ್ಚಿ ನೋಡುತ್ತಾರೆ, ಗಾಯಪಟ್ಟು ಮರಣೋನ್ಮುಖನಾದ ಒಬ್ಬ ಮನುಷ್ಯನು ಬಿದ್ದಿದ್ದಾನೆ, ಗುಡಿಯೊಳಗೆ ಮೂವರು ಆಕ್ರೋಶ ಮಾಡತೊಡಗಿದ್ದಾರೆ. ಇದನ್ನು ನೋಡಿ ನೆರೆಯವರು ಹೆದರಿ ಈ ಸಂಗತಿಯನ್ನು ಗ್ರಾಮಾಧಿಕಾರಿಗೆ ತಿಳಿಸಿದರು. ಗುಡಿಯಲ್ಲಿ ಜನರ ಗದ್ದಲವು ನೆರೆಯಿತು ಗರ್ಭಾಗಾರದ ಚಿಲಕವನ್ನು ತೆಗೆದಿದ್ದರಿಂದ ಸುಶರ್ಮನೂ, ಮೀನಾಕ್ಷಿಯೂ ಬಂದು ಕಮಲಾಕ್ಷನ ಬಳಿಯಲ್ಲಿ ಕುಳಿತುಕೊಂಡರು. ಯಶೋದೆಯು ದೊಡ್ಡ ದನಿಯಿಂದ ಅಳತೊಡಗಿದಳು.

ಗ್ರಾಮಾಧಿಕಾರಿಯು ಕಮಲಾಕ್ಷನ ಕೊಲೆಯ ಬಗ್ಗೆ ವಿಚಾರಮಾಡಿದನು; ಏನೂ ಗೊತ್ತಾಗಲಿಲ್ಲ. ಕಮಲಾಕ್ಷನ ದುಸ್ಥಿತಿಯನ್ನು ನೋಡುತ್ತಿದ್ದ ಸುಶರ್ಮ–ಮೀನಾಕ್ಷಿಯರು ದುಃಖದಿಂದ ಮೈ ಮರೆತರು. ಯಶೋದೆಯು ಹೌಹಾರಿ ಕುಳಿತಳು. ಹೊರಗಿನಿಂದ ಚಿಲಕ ಹಾಕಿದ್ದರಿಂದ ಒಳಗಿನವರು ಈ ಘೋರ ಕೃತ್ಯದಲ್ಲಿ ಸೇರಿದ್ದರ ಸಂಶಯವು ಯಾರಿಗೂ ಬರಲಿಲ್ಲ. ಅತ್ತ ಮಾವಿನ ತೋಪಿನಲ್ಲಿ ಇಳಕೊಂಡಿದ್ದ ಸೈನಿಕರೆಲ್ಲ ಮರಣಹೊಂದಿ ಬಿದ್ದಿರುವದನ್ನು ನೋಡಿ ಜನರು ಭಯಗ್ರಸ್ತರಾದರು. ಅವರು ಇದೇನೋ ದ್ವೇಷ ಮೂಲಕವಾಗಿ ದೊಡ್ಡ ಮೋಸವಾಗಿದೆಯೆಂದು ಭಾವಿಸಿದರು. ಮೃತಪ್ರಾಯವಾಗಿ ಬಿದ್ದಿರುವ ಕಮಲಾಕ್ಷನ ಶರೀರ ವನ್ನು ನೋಡಿ, ನೆರೆದವರೆಲ್ಲರೂ ಮರಮರನೆ ಮರುಗಿದರು. ಕಮಲಾಕ್ಷನು ಅತಿ ಸಾವಕಾಶ

ವಾಗಿ ಉಸುರಾಡಿಸುತ್ತಿದ್ದನು. ಅದನ್ನು ಕಂಡು ಕೆಲವರು ಓಡಿಹೋಗಿ ಆ ಊರಲ್ಲಿ ಧರ್ಮಾರ್ಥವಾಗಿ ಔಷಧ ಕೊಡುತ್ತಿದ್ದ ಒಬ್ಬ ಬ್ರಾಹ್ಮಣನನ್ನು ಕರೆತಂದರು. ಅವನ ವಯಸ್ಸು ಇಪ್ಪತ್ತು-ಇಪ್ಪತ್ತೈದು ವರ್ಷಗಳಿಗಿಂತ ಹೆಚ್ಚಿದ್ದಿಲ್ಲ; ಅವನಿಗೆ ಅದೇ ಮೀಸೆಗಳು ಬರತೊಡಗಿದ್ದವು; ಅವನು ಕೌಪೀನವನ್ನು ಹಾಕಿ ಕಪನಿಯನ್ನು ತೊಟ್ಟಿದ್ದನು; ಅವನ ಮುಖದಲ್ಲಿ ಬ್ರಹ್ಮ ತೇಜಸ್ಸು ಉಕ್ಕುತ್ತಿತ್ತು, ಈ ಮಹಾ ತಪಸ್ವಿಯನ್ನು ನೋಡಿ ಸುಶರ್ಮನು ಬೆರಗಾಗದನು. ಆ ತರುಣ ಬ್ರಾಹ್ಮಣನು ಸುಶರ್ಮಾ- ಮೀನಾಕ್ಷಿಯರನ್ನು ನೋಡಿದ ಕೂಡಲೆ ಬಹು ವಿನಯದಿಂದ ನಮಸ್ಕಾರ ಮಾಡಿದನು. ಮಂಗಲ ಸ್ವರೂಪರಾದ ಈ ವೃದ್ಧ ದಂಪತಿಗಳ ದುಃಖಕ್ಕೆ ನಿಶ್ಚೇಷ್ಟಿತನಾಗಿ ಬಿದ್ದಿರುವ ಈ ಮನುಷ್ಯನೇ ಕಾರಣನೆಂದು ತಿಳಿದು, ಕನಿಕರ ಪಟ್ಟು ಹತ್ತರ ಹೋಗಿ ಅವನ ಸರ್ವಾಂಗವನ್ನು ದಿಟ್ಟಿಸಿ, ನೋಡಹತ್ತಿದನು. ಆಗ ಅವನಿಗೆ ಆ ಮನುಷ್ಯನ ಮುಸಮುಸಕಾದ ಗುರುತು ಹತ್ತಿದಂತೆ ಆಗುತ್ತಿತ್ತು, ಕೆಲವು ಹೊತ್ತಿನ ಮೇಲೆ ಆ ಬ್ರಾಹ್ಮಣನ ನೇತ್ರಗಳಿಂದ ಆಶ್ರುಗಳು ಸುರಿಯಹತ್ತಿದವು. ಅವನು ಮೇಲೆ ಮೇಲೆ ಕಮಲಾಕ್ಷನ ಮೈ ಮೇಲೆ ಕೈಯಾಡಿಸುವನು. ಅವನ ಗುಣಗಳನ್ನೂ, ಮಿತ್ರಾಭಿಮಾನವನ್ನೂ, ನೆನಿಸಿ ನೆನಿಸಿ ದೊಡ್ಡ ದನಿಯಿಂದ ಅಳಹತ್ತಿದನು. ಅವನು ದೀನ ಸ್ವರದಿಂದ—''ಮಿತ್ರಾ, ಕಮಲಾಕ್ಷಾ, ನಿನ್ನ ಅವಸ್ಥೆಯು ಏನಾಯಿತು? ಈ ಸ್ಥಿತಿಯಲ್ಲಿ ನಿನ್ನನ್ನು ನೋಡುವ ನನಗೆ ಎಷ್ಟು ದುಃಖವಾಗಿರ ಬಹುದೆಂಬದನ್ನು ನಾನೇ ಬಲ್ಲೆನು. ನಿನ್ನನ್ನು ಹುಡುಕುತ್ತ ದೇಶ ದೇಶಗಳನ್ನು ತಿರುಗಹತ್ತಿದ್ದೇನೆ. ಪದ್ಮನಯನೆಯ ಶೊಧಕ್ಕಾಗಿ ನಾವಿಬ್ಬರೂ ಹೊರಟಿರಲು, ನೀನು ಹೀಗೆ ನಡುವೆ ಪರಲೋಕ ವನ್ನು ಕುರಿತು ತೆರಳುವದು ಯಾವ ನ್ಯಾಯವು? ಇದು ನಿನ್ನ ಮಿತ್ರತ್ವದ ಲಕ್ಷಣವಲ್ಲ ನನ್ನನ್ನು ಕಣ್ದೆರೆದು ನೋಡು. ನಿನ್ನ ಪ್ರಿಯ ಪದ್ಮನಯನೆಯ ಮಿತ್ರನಾದ ಸುಮತಿಯು ಬಂದಿದ್ದೇನೆ. ನನ್ನ ನಿನ್ನ ಗೆಳೆತನವು ಅಲ್ಪಕಾಲದ್ದಾದರೂ, ಕಲಂಕವಿಲ್ಲದ್ದಿರುತ್ತದೆ.''

ಪ್ರಾಣಪ್ರತಿಷ್ಠಾಪನೆ

ಈ ಪ್ರಕಾರ ಸುಮತಿಯು ವ್ಯಸನಪಡುತ್ತಿರಲು, ನೆರೆದವರೆಲ್ಲರೂ ಆಶ್ಚರ್ಯಪಟ್ಟರು. ಮಿತ್ರನ ಮೊರೆ ಕೇಳಿ ಎಚ್ಚತ್ತವನಂತೆ, ಕಮಲಾಕ್ಷನು ಸ್ವಲ್ಪ ಮಿಸಿಕಾಡಹತ್ತಿದನು. ದುಷ್ಟಬುದ್ಧಿಯ ಶಸ್ತ್ರ-ಪ್ರಹಾರಗಳಿಂದ ಅವನ ಪ್ರಾಣವು ಹೋಗಿದ್ದಿಲ್ಲ; ಮಿತಿಮೀರಿದ ವ್ಯಥೆಯ ಮೂಲಕ ಅವನ ಮೈ ಮೇಲಿನ ಎಚ್ಚರವು ಮಾತ್ರ ತಪ್ಪಿತ್ತು; ಅವನಿಗೆ ಬಲವಾದ ಗಾಯಗಳು ಬಹಳ ಆಗಿದ್ದವು. ಆಗ ಸುಮತಿಯು ತನ್ನ ಕಮಂಡಲೂದಕದಿಂದ ಕಮಲಾಕ್ಷನ ಶರೀರಕ್ಕೆ ಹತ್ತಿದ್ದ ರಕ್ತವನ್ನು, ವಿಶೇಷವಾಗಿ ಮುಖಕ್ಕೆ ಹತ್ತಿದ ರಕ್ತವನ್ನು ಚನ್ನಾಗಿ ತೊಳೆದನು. ಸುಮತಿಯು ವನಸ್ಪತಿಗಳ ಸಾಮರ್ಥ್ಯವನ್ನು ಬಲ್ಲವನಾದಕಾರಣ, ಗಾಯಗಳಿಗೆ ಕೆಲವು ಔಷಧಗಳನ್ನು ಅರೆದು ಹಚ್ಚಿದನು. ರಕ್ತದ ಬಿಗತವು ಕಡಿಮೆಯಾದದ್ದರಿಂದಲೂ, ವನಸ್ಪತಿಗಳ ಸಾಮರ್ಥ್ಯದಿಂದ

ಗಾಯಗಳ ನೋವು ಕೆಲವಂಶ ಕಡಿಮೆಯಾದಂತಾದ್ದರಿಂದಲೂ ಕಮಲಾಕ್ಷನು ಕಣ್ತೆರೆದು ಸುತ್ತು ಮುತ್ತು ನೋಡಹತ್ತಿದನು. ಅದನ್ನು ನೋಡಿ ಎಲ್ಲರಿಗೂ ಸಮಾಧಾನವಾಗಿ, ಸುಮತಿಯ ಪ್ರಾರ್ಥನೆಯಂತೆ ನೆರೆದವರೆಲ್ಲರೂ ಗಾಳಿಯಾಡಲಿಕ್ಕೆ ಆಸ್ಪದವಾಗಬೇಕೆಂದು ಕಮಲಾಕ್ಷನನ್ನು ಬಿಟ್ಟು ಹಿಂದಕ್ಕೆ ಸರಿದು ದೂರ ನಿಂತರು. ಕಮಲಾಕ್ಷನಿಗೆ ಇನ್ನೂ ಚನ್ನಾಗಿ ಎಚ್ಚರ ಹುಟ್ಟಿದ್ದಿಲ್ಲ. ಸುಮತಿಯು ಅವನಿಗೆ ಗಾಳಿಹಾಕಿ ನೆತ್ತಿಗೆ ನೀರು ತಟ್ಟಿದನು. ಆಗ ಕಮಲಾಕ್ಷನು ಸ್ವಲ್ಪ ಎಚ್ಚತ್ತು ಸುಮತಿಯನ್ನು ದಿಟ್ಟಿಸಿ ನೋಡಹತ್ತಿದನು. ಸುಮತಿಯು ವಿರಕ್ತನಾಗಿ ರೂಪಾಂತರ ಹೊಂದಿದ್ದರಿಂದ ಕಮಲಾಕ್ಷನಿಗೆ ಅವನ ಗುರುತು ಹತ್ತಲಿಲ್ಲ. ಧಷ್ಟ–ಪುಷ್ಟವಾಗಿದ್ದ ಸುಮತಿಯ ಶರೀರವು, ಮಿತ್ರ ವಿಯೋಗ ದುಃಖದಿಂದ ಕೃಶವಾಗಿತ್ತು; ಅವನ ಗೌರಕಾಯವು ಶೀತೋಷ್ಣಗಳ ಬಾಧೆಯಿಂದ ಕೃಷ್ಣ ವರ್ಣವನ್ನು ಹೊಂದಿತ್ತು. ಸುಮತಿಯು ಕಮಲಾಕ್ಷನನ್ನು ಕುರಿತು ಸಮಾಧಾನದಿಂದ—''ಮಿತ್ರಾ, ಈಗ ಮಾತ್ರ ನನಗೆ ಸಮಾಧಾನವಾಯಿತು. ಇನ್ನು ಮೇಲೆ ನಿನಗೆ ಅಪಾಯವಾಗುವ ಭಯವಿಲ್ಲ. ಹೇಗಾದರೂ ಮಾಡಿ ನಿನ್ನನ್ನು ನೆಟ್ಟಗೆ ಮಾಡುತ್ತೇನೆ. ಗುರುವಿನ ಕೃಪೆಯೊಂದಿದ್ದರಾಯಿತು ಆದರೆ ಇದುವರೆಗೆ ನಾನು ಸುಮತಿ ಎಂಬುದು ನಿನಗೆ ತಿಳಿಯದೇ ಇದ್ದದ್ದೇ ಬಹಳ ಆಶ್ಚರ್ಯವು'' ಎಂದು ಹೇಳಿದನು. ಕಮಲಾಕ್ಷನ ಮಿತ್ರ ವಾತ್ಸಲ್ಯವು ಎಷ್ಟು ಬಲವಾದದ್ದೋ ತಿಳಿಯದು. ಸುಮತಿಯೆಂಬ ಶಬ್ದವು ಕಿವಿಗೆ ಬಿದ್ದ ಕೂಡಲೆ, ತನ್ನಲ್ಲಿ ಮೇಲಕ್ಕೆ ಏಳುವಷ್ಟು ಸಾಮರ್ಥ್ಯವು ಇರದಿದ್ದರೂ, ಅವನು ಆವೇಶ ದಿಂದ ಮೇಲಕ್ಕೆ ಎದ್ದು, ಸುಮತಿಯ ಮೈಮೇಲೆ ಬಿದ್ದನು. ಆಗ್ಗೆ ಅವನಿಗೆ ಮಾತಾಡುವಷ್ಟು ಅವಸಾನವು ಇಲ್ಲದ್ದರಿಂದ, ಅವನ ಕಣ್ಣುಗಳೊಳಗಿಂದ ಒಂದೇಸವನೆ ನೀರು ಮಾತ್ರ ಹೋಗಹತ್ತಿದವು. ಈ ಎಲ್ಲ ಸಂಗತಿಯನ್ನು ನೋಡಿ ಸುಶರ್ಮ—ಮೀನಾಕ್ಷಿಯರಿಗೆ ಆದ ಆನಂದವನ್ನು ವರ್ಣಿಸಲಾಸಲ್ಲ. ತನ್ನ ಮಿತ್ರನಾದ ಸುಮತಿಯೆಂಬ ಒಬ್ಬ ಬ್ರಾಹ್ಮಣನು ಇದ್ದನೆಂದು ಕಮಲಾಕ್ಷನು ಈ ಮೊದಲೇ ಅವರ ಮುಂದೆ ಹೇಳಿದ್ದನಲ್ಲದೆ, ಅವನು ಇದ್ದರೆ ಅವನೊಡನೆ ಯಶೋದೆಯ ವಿವಾಹ ಮಾಡುತ್ತಿದ್ದೆನೆಂದು ಸಹ ಹೇಳಿದ್ದನು. ಅದರಿಂದ ಪ್ರಾಯಸ್ಥನೂ, ತೇಜಸ್ವಿಯೂ, ಚಲುವನೂ ಆದ ಸುಮತಿಯನ್ನು ನೋಡಿ, ಆ ವೃದ್ಧ ದಂಪತಿಗಳಿಗೆ ಪರಮಾನಂದವಾಯಿತು. ಆ ಮೇಲೆ ಸುಮತಿಯು ಸುಶರ್ಮನ ಮುಖದಿಂದ ಕಮಲಾಕ್ಷನ ಎಲ್ಲ ವೃತ್ತಾಂತವನ್ನು ಸ್ವಲ್ಪದರಲ್ಲಿ ಕೇಳಿಕೊಂಡು, ವ್ಯಸನಬಟ್ಟು, ನೆರೆದವರ ಸಹಾಯದಿಂದ ಕಮಲಾಕ್ಷನನ್ನು ಆ ಊರೊಳಗಿರುವ ಒಂದು ಪ್ರಶಸ್ತವಾದ ಮನೆಯಲ್ಲಿರಿಸಿ, ಸುಶರ್ಮ, ಮೀನಾಕ್ಷಿಯರೊಡನೆ ಅವನ ಆರೈಕೆ ಮಾಡಹತ್ತಿದನು.

ಇತ್ತ ದುಷ್ಟಬುದ್ಧಿಯು ಕಮಲಾಕ್ಷನು ಮರಣ ಹೊಂದಿದನೆಂದು ತಿಳಿದು ದೇವಾಲಯ ದಿಂದ ಹೊರಟು ಹೋದದ್ದನ್ನು ಹಿಂದೆ ಹೇಳಿದೆ. ಅವನು ಕೆಲವು ಅಂತರವನ್ನು ಕ್ರಮಿಸಿದ ಬಳಿಕ, ಕಮಲಾಕ್ಷನ ಸೈನ್ಯವನ್ನು ಸಂಹರಿಸಿದ ದೊಡ್ಡ ಸೈನ್ಯವು ದುಷ್ಟಬುದ್ಧಿಯನ್ನು ಕೂಡಿಕೊಂಡಿತು. ದುಷ್ಟ ಬುದ್ಧಿಯ ಒಳಸಂಚಿನಿಂದಲೇ ಆ ಸೈನ್ಯವು ಕಮಲಾಕ್ಷನ ಸೈನ್ಯವನ್ನು ಸಂಹರಿಸಿತ್ತು. ದುಷ್ಟಬುದ್ಧಿಯು ಆ ಸೈನ್ಯವನ್ನು ಕೂಡಿಕೊಂಡು ಕನೋಜ ಪಟ್ಟಣಕ್ಕೆ ಹೊರಟು,

ಸಾಂಕೇತಿಕ ಸ್ಥಳದಲ್ಲಿ ಅದನ್ನು ಬಿಟ್ಟು ಒಬ್ಬನೇ ವೀರವರ್ಮನಿಗೆ ಭೆಟ್ಟಿಯಾದನು. ಆ ವೃದ್ಧ ಸಾರ್ವಭೌಮನು ಕಮಲಾಕ್ಷನಿಲ್ಲದೆ ದುಷ್ಟಬುದ್ಧಿಯೊಬ್ಬನೇ ಬಂದದ್ದನ್ನು ನೋಡಿ ಅಸಮಾಧಾನಪಟ್ಟು—''ತಮ್ಮಾ ಕಮಲಾಕ್ಷನೆಲ್ಲಿ?'' ಎಂದು ಕೇಳಿದನು. ಅದಕ್ಕೆ ದುಷ್ಟ ಬುದ್ಧಿಯು—ಪ್ರಭುವೇ, ಕಮಲಾಕ್ಷನು ನನ್ನನ್ನು ಮೋಸಗೊಳಿಸಿ ತನ್ನ ಸೈನ್ಯದೊಡನೆ ಎಲ್ಲಿಯೋ ಹೋದನು. ಪ್ರಭುಗಳ ಚರಣಗಳಲ್ಲಿ ಅವನ ವಿಶ್ವಾಸವಿದ್ದಂತೆ ತೋರುವದಿಲ್ಲ. ಅವನು ಮಹಾ ಕಪಟಿಯು, ಮಹತ್ವಾಕಾಂಕ್ಷಿಯು; ಪ್ರಭುಗಳು ಅವನ ವರ್ಚಸ್ಸನ್ನು ಅಬಾಧಿತವಾಗಿ ಬೆಳೆಯ ಗೊಟ್ಟಿದ್ದರಿಂದ ಅವನು ಬಲಿಷ್ಠನಾಗಿರುವನು. ಅವನು ತಮ್ಮ ಸಿಂಹಾಸನಕ್ಕೆ ಕೇಡು ಬಗೆಯದೆ ಇರನು. ನನ್ನನ್ನು ಮೋಸಗೊಳಿಸಿದವನು ಪ್ರಭುಗಳನ್ನು ಮೋಸಗೊಳಿಸಲಿಕ್ಕಿಲ್ಲೆಂದು ಹೇಗೆ ಹೇಳಬೇಕು? ಎಂದು ದೇವದತ್ತ ಮಂತ್ರಿಯ ಸಮಕ್ಷ ಕಮಲಾಕ್ಷನನ್ನು ಹಳಿದನು. ದುಷ್ಟಬುದ್ಧಿಯ ಅಸೂಯದ ಭಾಷಣಗಳನ್ನು ಕೇಳಿ ಅರಸನಿಗೆ ಸಮಾಧಾನವಾಗಲಿಲ್ಲ. ಕಮಲಾಕ್ಷನ ಬಾಹುಬಲದ ಯೋಗದಿಂದಲೇ ಅವನಿಗೆ ಸ್ವಚಕ್ರ—ಪರಚಕ್ರಗಳ ಬಾಧೆಯು ತಪ್ಪಿತ್ತು ದೇವದತ್ತನಿಗಂತು, ತನ್ನ ಅಳಿಯನಾದ ಕಮಲಾಕ್ಷನ ಅವಸ್ಥೆಯು ಏನಾಯಿತೋ, ಈ ದುಷ್ಟನೇನಾದರೂ ಅವನಿಗೆ ಕೇಡುಬಗೆದನೋ, ಅವನನ್ನು ತಿರುಗಿ ಕಾಣುವೆನೋ ಇಲ್ಲವೋ ಎಂಬ ಬಗ್ಗೆ ಮಿತಿಮೀರಿ ದುಃಖವಾಯಿತು. ಅಷ್ಟರಲ್ಲಿ ಅಕಲ್ಪಿತವಾಗಿ ಪಾಂಡ್ಯ ದೇಶದ ರಾಜಧಾನಿಯಾದ ಮಧುರೆಯಿಂದ ಒಬ್ಬ ದೂತನು ಬಂದು, ತನ್ನ ಒಡೆಯನಾದ ಸಿಂಹಕೇತು ರಾಜನು ಕೊಟ್ಟಿದ್ದ ಪತ್ರವನ್ನು ವೀರವರ್ಮನ ಸನ್ನಿಧಿಯಲ್ಲಿರಿಸಿದನು. ಅದರಲ್ಲಿ ಸಿಂಹಕೇತುವು—''ನನ್ನ ರಾಜಧಾನಿಯಾದ ಮಧುರೆಯಲ್ಲಿ ನಿಮ್ಮ ಪುತ್ರಿಯೂ, ನನ್ನ ತಂಗಿಯೂ ಆದ ಪದ್ಮನಯನಾ ದೇವಿಯು ವಿಕ್ರಮಾರ್ಕನೆಂಬ ಮಗನೊಡನೆ ಸುಖದಿಂದಿರು ವಳೆಂ''ದು ಬರೆದಿದ್ದನು. ಅದನ್ನು ಕೇಳಿ ವೀರವರ್ಮನೇ ಮೊದಲಾದವರಿಗೆ ಸಾನಂದಾಶ್ಚರ್ಯ ವಾಯಿತು. ವಿವಾಹವಾಗದೆ ಕನೋಜ ಪಟ್ಟಣದಿಂದ ಹೋಗಿದ್ದ ಪದ್ಮನಯನೆಯು, ಪುತ್ರವತಿಯಾಗಿ ಮಧುರೆಯಲ್ಲಿದ್ದದ್ದಕ್ಕಾಗಿ ಬೇರೆ ಬೇರೆ ಜನರ ತರ್ಕಗಳು ಬೇರೆ ಬೇರೆ ಆದವು. ವೀರವರ್ಮನು ಆನಂದದ ಭರದಿಂದ ತಾನೇ ತನ್ನ ಪುತ್ರಿಯನ್ನು ಕರತರುವನೆಂದು ಮಧುರೆಗೆ ಹೊರಡಲುದ್ಯೋಗಿಸಿದನು. ದೇವದತ್ತನು ಆತನನ್ನು ಕುರಿತು—''ಪ್ರಭುಗಳೇ, ಸೇವಕನಾದ ನಾನು ಸ್ವಲ್ಪ ದಿವಸಗಳಲ್ಲಿ ಪದ್ಮನಯನಾದೇವಿಯನ್ನು ಕರತರುತ್ತೇನೆ, ನನಗೆ ಅಪ್ಪಣೆ ದೊರೆಯಬೇಕು. ಸೇವಕನಿರಲು, ತಾವು ಹೊರಡುವದೇಕೆ? ಎಂದು ನುಡಿಯಲು, ಅರಸನು ಒಡಂಬಟ್ಟು ದೇವದತ್ತನಿಗೆ ಮಧುರೆಗೆ ಹೋಗುವದಕ್ಕಾಗಿ ಅಪ್ಪಣೆ ಕೊಟ್ಟನು.

ದೇವದತ್ತನು ಅರಸನ ಅಪ್ಪಣೆಯನ್ನು ಹೊಂದಿ ತನ್ನ ಮನೆಗೆ ಹೋಗಿ, ಅಸಮಾಧಾನ ದಿಂದ ಜೀವನಕಲೆಗೆ ಕಮಲಾಕ್ಷನ ಸಂಬಂಧದ ಯಾವತ್ತೂ ಸಂಗತಿಯನ್ನೂ, ಪದ್ಮನಯನೆಯ ವೃತ್ತಾಂತವನ್ನೂ, ಅರಸನ ಅಪ್ಪಣೆಯನ್ನೂ ತಿಳಿಸಲು, ಅವಳು ತನ್ನ ತಂದೆಯನ್ನು ಕುರಿತು— ''ಅಪ್ಪಾ, ದುಷ್ಟನಾದ ಆ ದುಷ್ಟಬುದ್ಧಿಯ ಮಾತುಗಳ ಮೇಲಿಂದ ವಿಚಾರಮಾಡಿ ನೋಡಿದರೆ, ಅವನಿಂದ ನನ್ನ ಪತಿಗೆ ಏನೋ ಅಪಾಯವು ಸಂಭವಿಸಿದಂತೆ ತೋರುತ್ತದೆ. ನನ್ನ ಪ್ರಾಣ

ದೊಡೆಯರಾದ ಕಮಲಾಕ್ಷ ಪ್ರಭುಗಳೇ ನನ್ನ ಬಾಲ ಸಖಿಯಾದ ಪದ್ಮನಯನೆಯ ಪತಿಯೆಂಬದು ನನ್ನ ಹೊರತು ಇಲ್ಲಿಯವರೆಗೆ ಯಾರಿಗೂ ಗೊತ್ತಿಲ್ಲ. ಇನ್ನು ಗೊತ್ತಾಗಿಯಾದರೂ ಮಾಡುವದೇನು? ಸುಮ್ಮನೆ ಜನರ ಮನಸ್ಸು ಮಾತ್ರ ಅಸಮಾಧಾನವಾಗುವದು. ನಾನು ಯಾವ ಆಧಾರದಿಂದ ಪತಿಯ ಮಾರ್ಗ ಪ್ರತೀಕ್ಷೆಯನ್ನು ಮಾಡುತ್ತ ಕುಳಿತುಕೊಳ್ಳಲಿ? ಪತಿಯನ್ನಗಲಿದ ಸ್ತ್ರೀಯ ಜನ್ಮವು ವ್ಯರ್ಥವಲ್ಲವೇ? ನನ್ನ ಬಾಲಮಿತ್ರಳೂ, ಸುಖ–ದುಃಖಗಳ ಪಾಲುಗಾರಳೂ ಆದ ಪದ್ಮನಯನೆಯ ಅನುಮತಿಯಂತೆ ನಾನು ನಡೆಯಬೇಕಾಗಿರುವದರಿಂದ, ನಾನೂ ನಿನ್ನ ಸಂಗಡ ಮಧುರೆಗೆ ಬರುತ್ತೇನೆ, ಇದರಿಂದ ನಾನು ಪದ್ಮನಯನೆಗೆ ಒಂದು ಬಗೆಯಾಗಿ ಮಾನ ಕೊಟ್ಟಂತೆ ಆಗಿ, ಆಕೆಯು ನನಗೆ ಪ್ರಸನ್ನಳಾಗಬಹುದು.'' ಅನ್ನಲು, ಪುತ್ರಿಯಲ್ಲಿ ಹೇರಳವಾದ ವಾತ್ಸಲ್ಯವುಳ್ಳ ದೇವದತ್ತನು ಆಕೆಯ ಮಾತಿಗೆ ಒಡಂಬಟ್ಟು, ಅವಳನ್ನೊಡಗೊಂಡು ಸೈನ್ಯದೊಡನೆ ಮಧುರೆಗೆ ಹೊರಟನು.

ಪ್ರಯಾಣಸ್ಥನಾದ ದೇವದತ್ತನು ಮಾರ್ಗಕ್ರಮಣ ಮಾಡುತ್ತಿರಲು, ವೃದ್ಧಾಪ್ಯದ ಮೂಲಕವಾಗಿ ಅವನಿಗೆ ಮಾರ್ಗಾಯಾಸವೂ, ಭಿನ್ನವಾದ ಹವೆಯೂ ತಡೆಯದ್ದರಿಂದ ಜ್ವರೋಪದ್ರವವೂ ಆಗಿ ಅವನು ನಡುದಾರಿಯಲ್ಲಿಯೇ ಮರಣ ಹೊಂದಿದನು. ಆಗ ಜೀವನಕಲೆಗಾದ ದುಃಖವನ್ನು ಹೇಳಲಾಸಲ್ಲ. ಪ್ರಾಯಸ್ಥಳಾದ ಆ ಅಬಲೆಯನ್ನು ಅವಳ ತಂದೆಯು ನಡುವೇ ಕೈಬಿಟ್ಟು ಹೋದದ್ದರಿಂದ, ನೀರ ಬಿಟ್ಟ ಮರಿಮೀನದಂತೆ ಆ ವನಿತೆಯು ಬಹಳ ತಳಮಳಿಸಹತ್ತಿದಳು. ಆದರೂ ಆ ಚದುರೆಯು ನಡು ಹಾದಿಯಲ್ಲಿ ಸುಮ್ಮನೆ ದುಃಖಿಸುತ್ತ ವಿಚಾರಗೇಡಿಯಾಗಿ ಕೂಡದೆ, ತಂದೆಯ ಪ್ರೀತಿಯ ಸರದಾರರನ್ನು ಕರೆದು ತನ್ನನ್ನು ಅವರಿಗೆ ಒಪ್ಪಿಸಿ—''ನೀವು ನನ್ನ ತಂದೆಯ ನಂಬಿಗೆಯವರೂ, ಹಿತಕರ್ತರೂ ಆದದ್ದರಿಂದ ಈ ಸ್ಥಿತಿಯಲ್ಲಿ ನನ್ನನ್ನು ರಕ್ಷಿಸುವದು ನಿಮ್ಮನ್ನೇ ಕೂಡಿದೆ.'' ಎಂದು ಹೇಳಿ ಕಣ್ಣೀರು ಸುರಿಸಲು, ಅವರು ಮಮತೆಯಿಂದ—''ಅಮ್ಮಾ, ನೀನು ದುಃಖಿಸಬೇಡ. ಈ ಸೈನ್ಯದವರಿಂದ ಎಷ್ಟು ಮಾತ್ರವೂ ನಿನಗೆ ಮೋಸವು ಬಾರದು. ನಮ್ಮ ಮೇಲೆ ನಂಬಿಗೆಯನ್ನಿಟ್ಟು ನಿಶ್ಚಿಂತೆಯಿಂದ ಇರು, ಮಧುರೆಗೆ ಮುಟ್ಟುವವರೆಗೆ ನಿನಗೆ ಯಾವ ಮಾತಿನ ಭಯವೂ, ಕೊರತೆಯೂ ಬಾರದು. ಮಧುರೆಗೆ ಹೋದ ಬಳಿಕ ಮಾತ್ರ ನಿನ್ನ ಸಂರಕ್ಷಣಕ್ಕೆ ನಮ್ಮ ಸಹಾಯಕ್ಕಿಂತಲೂ, ನಿನ್ನ ಚಾತುರ್ಯವೇ ಅವಶ್ಯವಾಗಿರುವದು.''

ಸರದಾರರ ಮಾತುಗಳನ್ನು ಕೇಳಿ ಜೀವನಕಲೆಯು ಇದ್ದದ್ದರಲ್ಲಿ ಸಮಾಧಾನ ಮಾಡಿಕೊಂಡಳು. ತಾನು ಹೀಗೆ ಸ್ತ್ರೀ ರೂಪದಿಂದ ಹೊರಟರೆ, ತನ್ನ ರೂಪವು ಪರರಾಜರ ಕಣ್ಣುಗಳಲ್ಲಿ ಒತ್ತಿ ಅನರ್ಥಕ್ಕೆ ಕಾರಣವಾದೀತೆಂದು ಯೋಚಿಸಿ, ಪುರುಷವೇಷವನ್ನು ಧರಿಸಿದಳು. ಶಸ್ತ್ರಾಸ್ತ್ರಗಳಿಂದ ಸಜ್ಜಾಗಿ ಉತ್ತಮವಾದ ಕುದುರೆಯನ್ನೇರಿ, ಅವಳು ಕೆಲವು ದಿವಸ ಮಾರ್ಗಕ್ರಮಣ ಮಾಡಿ, ಮಧುರಾ ಪಟ್ಟಣದ ಸೀಮೆಯಲ್ಲಿದ್ದ ಅರಣ್ಯವನ್ನು ಹೊಕ್ಕಳು. ಅಲ್ಲಿ ಮೃಗಯಾರ್ಥ ಬಂದಿದ್ದ ಸಿಂಹಕೇತುವು ಜೀವನಕಲೆಯ ಪುರುಷವೇಷದ ರೀತಿಯನ್ನೂ, ಗಾಂಭೀರ್ಯವನ್ನೂ, ಸೌಂದರ್ಯವನ್ನೂ ನೋಡಿ ಬೆರಗಾದನು. ಅಷ್ಟರಲ್ಲಿ

ಒಂದು ಹುಲಿಯು ಅಕಸ್ಮಾತ್ತಾಗಿ ಸಿಂಹಕೇತುವಿನ ಮೈಮೇಲೆ ಬರಲು, ಜೀವನಕಲೆಯು ದೂರದಿಂದಲೇ ಆ ಹುಲಿಯನ್ನು ನೋಡಿ ಬಾಣಪ್ರಯೋಗದಿಂದ ಅದನ್ನು ಭೂಮಿಗೆ ಉರುಳಿಸಿದಳು. ಅಕಲ್ಪಿತವಾಗಿ ಜೀವನಕಲೆಯಿಂದ ತನಗಾದ ಉಪಕಾರವನ್ನು ತಿಳಿದು ಸಿಂಹಕೇತುವು ಸಮಾಧಾನಪಟ್ಟು, ಅವಳು ಇದ್ದೆಡೆಗೆ ಬಂದು ವಿನಯದಿಂದ— ''ಪರಾಕ್ರಮಿಯೇ, ಎಂಥ ಪ್ರಸಂಗದಲ್ಲಿ ನೀನು ನನಗೆ ಸಹಾಯ ಮಾಡಿದೆಯಲ್ಲ! ನೀನು ಇಲ್ಲಿ ಬರದಿದ್ದರೆ ನಾನು ಪ್ರಾಣಸಂಕಟದಲ್ಲಿ ಬೀಳುತ್ತಿದ್ದೆನು. ನನ್ನ ಮೇಲೆ ಆದ ನಿನ್ನ ಉಪಕಾರವು ಇಷ್ಟೆಂದು ಹೇಳುವಹಾಗಿಲ್ಲ. ಬಹಿರಂಗದಲ್ಲಿ ವ್ಯಕ್ತವಾಗುವ ನಿನ್ನ ಸುಲಕ್ಷಣಗಳಿಗೆ ಈ ಭೂತದಯವು ಭೂಷಣವೇ ಸರಿ. ದಯಮಾಡಿ ನೀನು ನನ್ನ ರಾಜಧಾನಿಯಾದ ಮಧುರಾಪಟ್ಟಣಕ್ಕೆ ಬಂದು, ಕೆಲವು ದಿನ ವಿಶ್ರಾಂತಿಯನ್ನು ತೆಗೆದುಕೊಂಡು ಹೋಗಬೇಕೆಂದು ನಾನು ಹೇಳಿಕೊಳ್ಳುತ್ತೇನೆ.'' ಅನ್ನಲು, ಜೀವನಕಲೆಯು—''ನೃಪೋತ್ತಮನೇ, ನಿನ್ನ ವಿನಯವು ತಾನೇ ಪರರನ್ನು ಅಂಕಿತವಾಗಿ ಮಾಡಿಕೊಳ್ಳುತ್ತದೆ. ನಿನ್ನ ಪುಣ್ಯಪ್ರಭಾವವು ನಿನ್ನನ್ನು ಸಂಕಟದಿಂದ ಮುಕ್ತಮಾಡಿತಲ್ಲದೆ, ಅನ್ಯರು ಮಾಡಲಿಕ್ಕೆ ಎಷ್ಟರವರು? ನಾನು ಮಧುರಾಪಟ್ಟಣಕ್ಕೆ ಸಂತೋಷದಿಂದ ಬರುತ್ತೇನೆ. ಅನಾಯಾಸವಾಗಿ ನಿನ್ನಂಥ ವೀರನ ಸ್ನೇಹಲಾಭವು ಒದಗುತ್ತಿರಲು, ನಾನು ಅದನ್ನು ಹೇಗೆ ನಿರಾಕರಿಸಲಿ?'' ಅನ್ನಲು, ಸಿಂಹಕೇತುವು ಸಂತೋಷ ಪಟ್ಟು ಕೂಡಲೆ ಪಟ್ಟಣಕ್ಕೆ ತಿರುಗಿದನು. ಅವರಿಬ್ಬರೂ ಕೂಡಿ, ಸಕಲ ಸೈನ್ಯದೊಡನೆಸ್ವಲ್ಪ ವೇಳೆಯಲ್ಲಿಯೇ ಮಧುರಾ ಪಟ್ಟಣಕ್ಕೆ ತಲುಪಿದರು. ಸಿಂಹಕೇತುವು ಜೀವನಕಲೆಗಾಗಿ ಒಂದು ಉತ್ತಮವಾದ ಮಂದಿರವನ್ನು ಗೊತ್ತುಮಾಡಿ, ಅಲ್ಲಿ ಎಲ್ಲ ಬಗೆಯ ರಾಜ ಭೋಗಾರ್ಹವಾದ ಸಾಹಿತ್ಯಗಳನ್ನು ಒದಗಿಸಿಕೊಟ್ಟನು. ಆಕೆಯ ಸೈನಿಕರ ವ್ಯವಸ್ಥೆಯನ್ನೂ ಚನ್ನಾಗಿ ಇಡಿಸಿದನು. ಸಿಂಹಕೇತುವಿನ ಗುಣಗಳು ತಿಳಿಯದ್ದರಿಂದಲೂ, ಪದ್ಮನಯನೆಯ ಸದ್ವರ್ತನದ ಮೇರೆಯನ್ನು ನೋಡಬೇಕಾದದ್ದರಿಂದಲೂ ಜೀವನಕಲೆಯು, ತನ್ನ ಅಪ್ಪಣೆಯ ಹೊರತು ತಮ್ಮ ನಿಜವಾದ ವರ್ತಮಾನವನ್ನು ಹೇಳದಂತೆ ತನ್ನ ಸೈನಿಕರಿಗೆ ಅಪ್ಪಣೆಮಾಡಿದ್ದಳು. ಅವಳ ಚಾತುರ್ಯವು ಸಿಂಹಕೇತುವಿನ ಮನಸ್ಸನ್ನು ಪ್ರಸನ್ನೀಕರಿಸಿಕೊಂಡಿತ್ತು, ಅವನು ಜೀವನಕಲೆಯನ್ನು ಕುರಿತು ಪುರುಷನೆಂಬ ಭಾವದಿಂದ—''ಮಿತ್ರಾ, ನಿನ್ನ ದೇಶವಾವುದು? ಯಾವ ಕಾರಣದಿಂದ ನೀನು ಪ್ರವಾಸ ಮಾಡುತ್ತೀ? ನಿನ್ನ ಹೆಸರೇನು?'' ಎಂದು ಕೇಳಲು, ಅವಳು ತನ್ನ ನಿಜವಾದ ವರ್ತಮಾನವನ್ನು ಮುಚ್ಚಿ ಹೇಳಿದಳೇನಂದರೆ—''ನೃಪೋತ್ತಮನೇ, ನಾನು ಚೋಳರಾಜ್ಯದ ಅರಸನ ಪ್ರಿತ್ಯಾಸ್ಪದನಾದ ಮನಮೋಹನನೆಂಬ ಸರದಾರನಿದ್ದೇನೆ. ಬೇರೆ ಬೇರೆ ದೇಶದೊಳಗಿನ ಬೇರೆ ಬೇರೆ ವ್ಯವಸ್ಥೆಗಳನ್ನು ತಿಳಕೊಳ್ಳುವದಕ್ಕಾಗಿ ಅರಸನ ಅಪ್ಪಣೆಯನ್ನು ಹೊಂದಿ, ಪ್ರವಾಸಮಾಡಹತ್ತಿರುವೆನು. ನಾನು ಕಾಂಚಿಪುರವೆಂಬ ರಾಜಧಾನಿಯನ್ನು ಬಿಟ್ಟು ಈವೊತ್ತಿಗೆ ಏನಿಲ್ಲೆಂದರೂ ಆರು ತಿಂಗಳಾಗಿರಬಹುದು. ಇನ್ನು ಸ್ವಲ್ಪ ದಿನಗಳಲ್ಲಿಯೇ ನನ್ನ ಸೈನ್ಯದೊಂದಿಗೆ ಅರಸನ ಸನ್ನಿಧಿಗೆ ಹೋಗ ಬೇಕಾಗಿದೆ.''

ಸಿಂಹಕೇತುವು ಜೀವನಕಲೆಯ ಮಾತುಗಳನ್ನು ಕೇಳಿ—ಮಿತ್ರಾ, ಮನಮೋಹನಾ, ನಿನ್ನ ವಿಯೋಗವು ಸ್ವಲ್ಪ ದಿನಗಳಲ್ಲಿಯೇ ಆಗುವದನ್ನು ಕೇಳಿ, ನನಗೆ ಪರಮಾವಧಿ ವ್ಯಸನವಾಗುತ್ತದೆ. ಅಪರಿಚಿತನಾದ ನಿನ್ನ ಮೇಲೆ ನನ್ನ ಪ್ರೇಮವು ಕುಳಿತುಕೊಳ್ಳಲಿಕ್ಕೆ ಪೂರ್ವದ ಋಣಾನುಬಂಧವಲ್ಲದೆ ಮತ್ತೊಂದು ಕಾರಣವಿಲ್ಲ, ನಿನ್ನ ಉಪಕಾರವನ್ನು ಹೇಗೆ ತೀರಿಸಬೇಕೆಂಬದರ ಕಲ್ಪನೆಯೇ ನನಗೆ ಹರಿಯಲೊಲ್ಲದು; ಇರಲಿ, ಆ ಸಂಬಂಧದಿಂದ ನಾನು ನಿನ್ನ ಋಣಿಯಾಗಿದ್ದೇನೆ. ಆದರೆ ನೀನು ಇನ್ನು ಒಂದು ತಿಂಗಳಾದರೂ ನನ್ನ ರಾಜಧಾನಿಯಲ್ಲಿ ಇರಲಿಕ್ಕೇಬೇಕು.'' ಎಂದು ಹೇಳಲು, ಜೀವನಕಲೆಯು ಸಿಂಹಕೇತುವಿನ ಮಾತಿಗೆ ಆದರಪೂರ್ವಕವಾಗಿ ಒಡಂಬಟ್ಟು, ಪದ್ಮನಯನೆಯ ಭೆಟ್ಟಿಯಾಗುವ ಸಂಧಿಯನ್ನು ಹುಡುಕುತ್ತ ಮಧುರೆಯಲ್ಲಿರಹತ್ತಿದಳು. ಜೀವನಕಲೆಯು ತನ್ನ ಸ್ತ್ರೀ ರೂಪವನ್ನು ಪ್ರಕಟಮಾಡದೆ ಇದ್ದದ್ದು ಅವಳ ಅನಿರ್ವಾಚ್ಯವಾದ ಚಾತುರ್ಯದ ಉದಾಹರಣವಾಗಿದೆ.

ಹೀಗೆ ಇರಇರುತ್ತ ಒಂದು ದಿನ ಜೀವನಕಲೆಯು ದಿನದಂತೆ ಅರಸನ ದರ್ಶನಕ್ಕಾಗಿ ಅರಮನೆಗೆ ಹೋಗಿರಲು, ಆಗ ಅರಸನು ಐದು ವರ್ಷದ ಹುಡುಗನೊಡನೆ ವಿನೋದ ಮಾಡುತ್ತ ಕುಳಿತಿದ್ದನು. ಅವನು ಜೀವನಕಲೆಯು ಬಂದದ್ದನ್ನು ನೋಡಿ—''ಮಿತ್ರಾ, ಮನಮೋಹನಾ, ಇತ್ತ ಬಾ'' ಎಂದು ಬಹು ಮರ್ಯಾದೆಯಿಂದ ಅವನನ್ನು ಹತ್ತರ ಕುಳ್ಳಿರಿಸಿಕೊಂಡನು. ಅಪರಿಚಿತನಾದ ಮನುಷ್ಯನು ಅರಸನ ಹತ್ತರ ಕುಳಿತದ್ದನ್ನು ನೋಡಿ, ಆ ಹುಡುಗನು—''ಮಾವಾ, ಇವರು ಯಾರು? ಇಷ್ಟು ದಿವಸ ಇವರು ಎಲ್ಲಿಗೆ ಹೋಗಿದ್ದರು? ನಿನ್ನ ಅಪ್ಪಣೆಯನ್ನು ಕೇಳದೆ ಒಳಗೆ ಹೇಗೆ ಬಂದರು? ಅದು ನೋಡು, ಅವರ ಉಂಗರವು ಎಷ್ಟು ಚಂದಕಾಣಿಸುತ್ತದೆ. ಅದನ್ನು ನನಗೆ ಕೊಡಿಸಬಾರದೆ?'' ಎಂದು ಹೇಳಿ ಸಿಂಹಕೇತುವನ್ನು ಪರಿಪರಿಯಿಂದ ಪೀಡಿಸಹತ್ತಿದನು. ಆಗ ಅರಸನು—ಬಾಳಾ, ವಿಕ್ರಮಾರ್ಕಾ, ಆ ಉಂಗರವು ನಮ್ಮದಲ್ಲ, ನಿನಗೆ ಬೇಕಾದರೆ ನಾನು ಬೇರೆ ಉಂಗರವನ್ನು ಕೊಡುತ್ತೇನೆ. ನೀನು ಹೀಗೆ ಎರಡನೆಯವರ ಒಡವೆಯನ್ನು ಬೇಡಹತ್ತಿದರೆ, ಅವರು ನಿನ್ನ ಮನೆಗೆ ಹೇಗೆ ಬಂದಾರು? ಸುಮ್ಮನೆ ಕೂಡ್ರಬೇಕು ಹೀಗೆ ಹುಚ್ಚನಹಾಗೆ ಮಾಡಬಾರದು. ಯಾಕೆ ಮೊನ್ನೆ ಅವ್ವ ಹೇಳಿದ ಮಾತು ಮರೆತೆಯಾ?'' ಎಂದು ಕೇಳಲು, ವಿಕ್ರಮಾರ್ಕನು—''ಮಾವಾ, ಇಲ್ಲ ಮರೆತಿಲ್ಲ ಇನ್ನು ಮೇಲೆ ನಿನಗೆ ಉಂಗರ ಕೇಳುವದಿಲ್ಲ. ಅವ್ವನ ಮುಂದೆ ಮಾತ್ರ ನಾನು ಉಂಗರ ಕೇಳಿದೆನೆಂದು ಹೇಳಬೇಡ. ಯಾಕಂದರೆ ನಾನುಯೇನಾದರೂ ತಪ್ಪು ಮಾಡಿದರೆ, ಆಕೆಯು ನನ್ನ ಸಂಗಡ ನೆಟ್ಟಗೆ ಮಾತಾಡುವದಿಲ್ಲ; ಮತ್ತು ನನ್ನನ್ನು ಕರೆದುಕೊಳ್ಳುವದಿಲ್ಲ.

ಜೀವನಕಲೆಯು ಆ ಹುಡುಗನ ತಿಳುವಳಿಕೆಯ ಮಾತುಗಳನ್ನು ಕೇಳಿ, ಬೆರಗಾದದ್ದಲ್ಲದೆ, ಕಮಲಾಕ್ಷನ ರೂಪವನ್ನು ಅಚ್ಚಳಿಯದೆ ಹೋಲುತ್ತಿದ್ದ ಆ ಹುಡುಗನ ರೂಪವನ್ನು ನೋಡಿ, ಪದ್ಮನಯನೆಯ ಧನ್ಯತೆಗೆ ಸಂತೋಷಪಟ್ಟಳು. ಪದ್ಮನಯನೆಗೆ ವಿಕ್ರಮಾರ್ಕನೆಂಬ ಮಗನಿರುವನೆಂಬದನ್ನು ಆಕೆಯು ಕನೋಜಪಟ್ಟಣದಲ್ಲಿರುವಾಗಲೇ ತನ್ನ ತಂದೆಯ ಮುಖ ದಿಂದ ಕೇಳಿದ್ದಳು. ತನ್ನ ಪತಿಯ ರೂಪದ ಪ್ರತಿಬಿಂಬವಾದ ರೂಪವು ಕಣ್ಣಿಗೆ ಬಿದ್ದಕೂಡಲೆ, ಆಕೆಯ ಅಂತಃ

ಕರಣವು ಕರಗಿ, ಪ್ರಾಣಕ್ಕಿಂತಲೂ ಹೆಚ್ಚೆಂದು ತಿಳಿದು ಜತನ ಮಾಡುತ್ತಿದ್ದ ಆ ಉಂಗರವನ್ನು ಕೂಡಲೆ ಉಚ್ಚಿ, ವಿಕ್ರಮಾರ್ಕನ ಕೈಯಲ್ಲಿ ಹಾಕಿದಳು. ಆಗ ವಿಕ್ರಮಾರ್ಕನು ಆನಂದದಿಂದ ಕುಣಿದಾಡುತ್ತ "ಅವ್ವನಿಗೆ ತೋರಿಸಿ ಬರುತ್ತೇನೆ"ಂದು ಹೇಳಿ, ಓಡಿಹೋಗುತ್ತಿರಲು, ಸಿಂಹಕೇತುವು ಪ್ರತಿಬಂಧಿಸಿದನು. ಆಗ ಜೀವನಕಲೆಯು—"ಮಿತ್ರಾ, ಬಿಡು, ಉಂಗರವು ಎಲ್ಲಿ ಹೋಗುತ್ತದೆ? ಅವನು ತನ್ನ ತಾಯಿಗೆ ತೋರಿಸಿಬರಲೊಲ್ಲನೇಕೆ. ಅವನನ್ನು ನೋಡಿದಾಗಿನಿಂದ ಅವನ ಮೇಲೆ ನನ್ನ ಪ್ರೇಮವು ಬಹಳ ಕೂತಿದೆ." ಎಂದು ಹೇಳಿ, ವಿಕ್ರಮಾರ್ಕನನ್ನು ಅಪ್ಪಿಕೊಂಡು—"ಬಾಳಾ, ವಿಕ್ರಮಾರ್ಕಾ, ಹೋಗು. ನಿಮ್ಮ ಅವ್ವನಿಗೆ ತೋರಿಸಿ ಬಾ" ಎಂದು ಕೈಬಿಡಲು, ಅವನು ಓಡುತ್ತ ತಾಯಿಯ ಬಳಿಗೆ ಹೋಗಿ—"ಅವ್ವಾ, ಇಲ್ಲಿ ನೋಡು; ಮಾವನ ಹತ್ತರ ಯಾರೋ ಬಂದಿದ್ದರು. ಅವರು ನನಗೆ ಈ ಉಂಗರವನ್ನು ಕೊಟ್ಟರು" ಎಂದು ಹೇಳಿ, ಉಂಗರವನ್ನು ಪದ್ಮನಯನೆಯ ಕೈಯಲ್ಲಿ ಕೊಟ್ಟನು. ಆಗ ಆಕೆಯು ತನ್ನ ಪತಿಯಾದ ಕಮಲಾಕ್ಷನ ಹೆಸರಿನ ಮುದ್ರಿಕೆಯುಳ್ಳ ತನ್ನ ಗುರುತಿನದಾದ ಉಂಗರವನ್ನು ನೋಡಿ ಬಹಳ ಗೊಂದಲದಲ್ಲಿ ಬಿದ್ದಳು. ಅವಳು ಕೌತುಕದಿಂದ ಅದನ್ನು ಪರೀಕ್ಷಿಸಿ ನೋಡಿ, ಇದು ನಿಜವಾಗಿಯೇ ತನ್ನ ಪ್ರಾಣದೊಡೆಯನ ಉಂಗರವೆಂದು ಗೊತ್ತುಹಿಡಿದು ಅದನ್ನು ಹಲವು ಸಾರೆ ಚುಂಬಿಸಿದಳು. ತನ್ನನ್ನು ದುಃಖದಿಂದ ಮುಕ್ತಳಾಗ ಮಾಡುವದಕ್ಕಾಗಿ ಪ್ರತ್ಯಕ್ಷ ಕಮಲಾಕ್ಷನೇ ಬಂದನೆಂಬ ಸಂಶಯದಿಂದ, ಅವಳು ವಿಕ್ರಮಾರ್ಕನನ್ನು ಕುರಿತು—"ಬಾಳಾ, ನಿನಗೆ ಈ ಉಂಗರವನ್ನು ಕೊಟ್ಟವರು ಯಾರ ಹಾಗೆ ಇದ್ದರು? ಹೇಳು ನೋಡೋಣ," ಅನ್ನಲು, ಅವನು ತೊದಲು ಬದಲು ಮಾತಾಡುತ್ತ—ಅವ್ವಾ, ಆತಗಲ್ಲ, ಮೀಸಿ ಬಂದಿಲ್ಲ; ಮತ್ತು ಕೆಂಪಗಿದ್ದ; ತೆಳ್ಳಗಿದ್ದ; ಗಿಡ್ಡ ಇದ್ದ; ಮತ್ತು ಒಳ್ಳೇ ಚಂದಗಿದ್ದ ನೋಡು" ಎಂದು ಹೇಳಲು, ಪದ್ಮನಯನೆಯು, ಇವು ತನ್ನ ಪತಿಯ ರೂಪದ ಲಕ್ಷಣಗಳಲ್ಲೆಂದು ತಿಳಿದು ವ್ಯಸನಬಟ್ಟಳು. ಆದರೂ ಆ ಉಂಗರವಿದ್ದವರಿಗೆ ತನ್ನ ಪತಿಯ ಸಂಗತಿಯೇನಾದರೂ ಗೊತ್ತಿರ ಬಹುದೆಂದು ಯೋಚಿಸಿ, ಆ ಮನುಷ್ಯನನ್ನು ಯಾವಾಗ ನೋಡೇನೆಂಬ ಕುತೂಹಲವು ಅವಳ ಮನದಲ್ಲಿ ಉತ್ಪನ್ನವಾಯಿತು. ಉಂಗರವನ್ನು ತಿರುಗಿ ಕಳಿಸಿಕೊಡದಿದ್ದರೆ, ಆ ಮನುಷ್ಯನು ಯಾವ ರೀತಿಯಿಂದಾದರೂ ತನ್ನ ಕಣ್ಣಿಗೆ ಬಿದ್ದಾನೆಂದು ತಿಳಿದು, ಪದ್ಮನಯನೆಯು ವಿಕ್ರಮಾರ್ಕನನ್ನು ಮರಳಿ ಅರಸನ ಬಳಿಗೆ ಕಳುಹಲಿಲ್ಲ.

ಇತ್ತ ಜೀವನಕಲೆಯು, ಬಹಳ ಹೊತ್ತಾದರೂ ವಿಕ್ರಮಾರ್ಕನು ಬಾರದ್ದನ್ನು ನೋಡಿ ಪದ್ಮನಯನೆಯು ಅವನನ್ನು ತಡೆದಿರಬಹುದೆಂದು ನಿಶ್ಚಯಿಸಿ, ಅರಸನ ಅಪ್ಪಣೆಯನ್ನು ಹೊಂದಿ ತನ್ನ ಮಂದಿರಕ್ಕೆ ಹೋದಳು. ಜೀವನಕಲೆಯು ಇರುತ್ತಿದ್ದ ಮಂದಿರಕ್ಕೆ ಹೊಂದಿಯೇ ಪದ್ಮನಯನೆಯ ಮಂದಿರವಿತ್ತು, ಆದರೂ ಇಲ್ಲಿಯವರೆಗೆ ಪರಸ್ಪರರ ಮುಖಾವಲೋಕನ ವಾಗಿದ್ದಿಲ್ಲ. ಆ ಪೊತ್ತಿನದಿವಸ ಜೀವನಕಲೆಯು ಸಂಧ್ಯಾರಾಗದ ಸೊಬಗನ್ನು ನೋಡಿ, ಸಂತೋಷದಿಂದ ಗಾಯನ ಮಾಡಹತ್ತಿದಳು. ಅವಳ ಸುಸ್ವರವೂ ಪದ್ಯದ ಮಾಧುರ್ಯವೂ ಕೇಳುವವರ ಮನಸ್ಸನ್ನು ಆನಂದಗೊಳಿಸುತ್ತಿದ್ದವು. ಪದ್ಮನಯನೆಯು ತನ್ನ ಪತಿಯಿಂದ

ರಚಿಸಲ್ಪಟ್ಟ ಪದ್ಯವು ಮಧುರ ಸ್ವರದೊಂದಿಗೆ ಕಿವಿಗೆ ಬೀಳುವದನ್ನು ತಿಳಿದು ಬೆರಗಾದಳು. ಅವಳು ಧ್ವನಿಯ ಸುಳುವನ್ನು ಹಿಡಿದು ಆಲಿಸಿ, ತನ್ನ ಮಂದಿರದ ನೆರೆಯ ಮಂದಿರದಲ್ಲಿಯೇ ಯಾರೋ ಗಾಯನ ಮಾಡುತ್ತಿರುವರೆಂಬದನ್ನು ಗೊತ್ತುಹಚ್ಚಿದಳು. ಕೂಡಲೆ ಪದ್ಮನಯನೆಯು ತನ್ನ ದಾಸಿಯಾದ ಮೌಕ್ತಿಕೆಯನ್ನು ಕರೆದು—''ಮೌಕ್ತಿಕೇ, ನೀನು ಈಗಲೇ ಆ ನೆರೆಯ ಮಂದಿರಕ್ಕೆ ಹೋಗಿ, ಅಲ್ಲಿ ಹಾಡುವವರನ್ನು ನಾನು ಕರೆದೆನೆಂದು ಹೇಳಿ ಬೇಗನೆ ಕರಕೊಂಡು ಬಾ; ಹೆಂಗಸಿನ ಧ್ವನಿಯಂತೆ ಕೇಳುತ್ತದೆ'' ಎಂದು ಹೇಳಲು, ಮೌಕ್ತಿಕೆಯು ತವಕದಿಂದ ಜೀವನಕಲೆಯ ಹತ್ತರ ಬಂದು—''ದೊರೆಗಳೇ, ತಮ್ಮನ್ನು ನಮ್ಮ ಒಡತಿಯರಾದ ಪದ್ಮನಯನಾ ದೇವಿಯವರು ಕರೆತರುವದಕ್ಕೆ ಹೇಳಿದ್ದಾರೆ. ಬೇಗನೆ ಬರೋಣವಾಗಬೇಕೆಂ''ದು ಹೇಳಿದರು. ಜೀವನಕಲೆಯು ತನ್ನ ಕಾರ್ಯಸಾಧನದ ವೇಳೆಯು ಸಮೀಪಿಸಿತೆಂದು ತಿಳಿದು ಆತುರದಿಂದ ಮೌಕ್ತಿಕೆಯೊಡನೆ ಪದ್ಮನಯನೆಯ ಬಳಿಗೆ ಹೋದಳು. ಆಗ ವಿಕ್ರಮಾರ್ಕನು ಪದ್ಮನಯನೆಯನ್ನು ಕುರಿತು—''ಅವ್ವಾ, ನನಗೆ ಉಂಗರವನ್ನು ಕೊಟ್ಟವರು ಇಲ್ಲಿಯೇ ಬಂದಿದ್ದಾರೆ ನೋಡು'' ಎಂದು ಹೇಳಲು, ಪದ್ಮನಯನೆಯು ಜೀವನಕಲೆಯ ಕಡೆಗೆ ತಿರುಗಿ ನೋಡಿ, ಯಾವನೋ ಪುರುಷನು ಬಂದಿರುವನೆಂದು ತಿಳಿದು, ತಕ್ಕ ಮರ್ಯಾದೆಯಿಂದ ಅವನಿಗೆ ಆದರ ಮಾಡಿದಳು.

ಬಾಲ್ಯದಲ್ಲಿ ಜೀವನಕಲೆಯೂ, ಪದ್ಮನಯನೆಯೂ ಕೂಡಿ ಆಡಿದವರಾಗಿದ್ದರೂ, ಈಗ್ಗೆ ಪದ್ಮನಯನೆಗೆ ಜೀವನಕಲೆಯ ಗುರುತು ಸಿಗುವ ಸಂಭವವಿದ್ದಿಲ್ಲ. ಆಗ ಪದ್ಮನಯನೆಯು ಜೀವನಕಲೆಯನ್ನು ಕುರಿತು—ಸದ್ಗೃಹಸ್ಥರೇ, ಯೋಗ್ಯಾ ಯೋಗ್ಯ ವಿಚಾರ ಮಾಡದೆ, ಅಪರಿಚಿತರಾದ ತಮ್ಮನ್ನು ಉದ್ಧಟತನದಿಂದ ನಾನು ಕರೆಸಿದ್ದಕ್ಕಾಗಿ ಕ್ಷಮಿಸಿರಿ. ಒಡಹುಟ್ಟಿದವಳೆಂಬ ಭಾವದಿಂದ ನನ್ನ ಮೇಲೆ ದಯವಿಟ್ಟು, ನನ್ನ ಪ್ರಶ್ನೆಗಳಿಗೆ ಉತ್ತರ ಕೊಡುವದಕ್ಕಾಗಿ ನಾನು ತಮಗೆ ಅಂಗಲಾಚಿ ಬೇಡಿಕೊಳ್ಳುತ್ತೇನೆ. ನಿಮ್ಮ ಗಾಯನವನ್ನು ಕೇಳಿ ನನಗೆ ಬಹಳ ಸಂತೋಷವಾಯಿತು. ಆದರೆ ಈ ಪದ್ಯವನ್ನು ತಾವು ಯಾರಿಂದ ಸಂಪಾದಿಸಿದಿರಿ? ಮತ್ತು ಈ ವೊತ್ತಿನ ದಿವಸ ವಿಕ್ರಮಾರ್ಕನಿಗೆ ನೀವು ಕೊಟ್ಟ ಉಂಗರವು ನಿಮ್ಮ ಹತ್ತರ ಹೇಗೆ ಬಂದಿತು? ಅನ್ನಲು, ಜೀವನಕಲೆಯು ಮನದಲ್ಲಿ—''ಪದ್ಮನಯನೆಯು ತನ್ನ ಪತಿಯನ್ನಗಲಿ ಇಲ್ಲಿ ವಾಸಮಾಡಿದ ಬಳಿಕ ವಿಕ್ರಮಾರ್ಕನು ಹುಟ್ಟಿರಬಹುದು. ಸಿಂಹಕೇತುವು ನಮ್ಮೊಡೆಯನಿಗೆ ಪತ್ರಕಳಿಸಿದ್ದು ನಿಜವಾಯಿತು. ಆದರೆ ಇವಳ ಪಾತಿವ್ರತ್ಯದ ನಿಕಟವು ಎಷ್ಟರಮಟ್ಟಿಗೆ ಇರುವದೆಂಬದನ್ನು ಪರೀಕ್ಷಿಸುವವರೆಗೆ ನನ್ನ ನಿಜವಾದ ವೃತ್ತಾಂತವನ್ನು ಹೇಳಬಾರದು.'' ಎಂದು ಯೋಚಿಸಿ, ಪದ್ಮನಯನೆಯನ್ನು ಕುರಿತು ಕಪಟದಿಂದ—''ದೊರೆಸಾನಿಯೇ, ನೀನು ಕೇಳುವ ಪ್ರಶ್ನೆಗಳಿಗೆ ಉತ್ತರ ಕೊಡಬೇಕೆಂದರೆ ದುಃಖದಿಂದ ನನ್ನ ಕುತ್ತಿಗೆಯ ಶಿರಗಳು ಬಿಗಿಯುತ್ತವೆ. ಆದರೂ ನಿನ್ನ ಮಾತನ್ನು ಮುರಿಯಬಾರದೆಂಬ ಉದ್ದೇಶದಿಂದ ಹೇಳುತ್ತೇನೆ; ಚಿತ್ತಗೊಟ್ಟು ಕೇಳು;—ನಾನು ಸುಮಾರು ಈಗ ಐದು ವರ್ಷಗಳ ಹಿಂದೆ, ಅರಣ್ಯದಲ್ಲಿ ಬೇಟೆಯಾಡುತ್ತಿರಲು, ಅಲ್ಲಿಗೆ ಅಪ್ರತಿಮ ರೂಪಶಾಲಿಯಾದ ಕಮಲಾಕ್ಷನೆಂಬವನೊಬ್ಬ ರಾಜಪುತ್ರನು ಬಂದನು. ಅವನು ಮಾರ್ಗಶ್ರಮದಿಂದ ಬಹಳ ಬಳಲಿರಲು ನಾನು ಅವನಿಗೆ ಆದರ ಮಾಡಿ

ತಕ್ಕ ಉಪಚಾರದಿಂದ ಅವನ ಮಾರ್ಗಶ್ರಮವನ್ನು ಹೋಗಲಾಡಿಸಿದೆನು. ಇದರಿಂದ ನಮ್ಮಿಬ್ಬರ ಮಿತ್ರತ್ವ ಕೂಡಿ, ಮುಂದೆ ಅದು ವೃದ್ಧಿಂಗತವಾಗುತ್ತ ಹೋಯಿತು. ಅವನು ಯಾವಾಗಲೂ ತನ್ನ ಪ್ರಿಯ ಪತ್ನಿಯಾದ ಪದ್ಮನಯನೆಯೆಂಬವಳನ್ನು ನೆನಿಸಿ ನೆನಿಸಿ, ಪ್ರಳಾಪಿಸುತ್ತಿದ್ದನು. ಅವನ ಶೌರ್ಯದ ಹಾಗು ಪದ್ಮನಯನೆಯ ಮೇಲಿದ್ದ ಅವನ ಪ್ರೇಮದ ಸಂಗತಿಗಳನ್ನು ಹೇಳಹತ್ತಿದರೆ ಎರಡು ದಿನಗಳು ಸಾಲಲಿಕ್ಕಿಲ್ಲ. ಆ ಕಮಲಾಕ್ಷನೇ ತನ್ನ ಪ್ರಿಯ ಪದ್ಮನಯನೆಯ ವರ್ಣನದಿಂದ ತುಂಬಿದ ಈ ಪದ್ಯವನ್ನು ಯಾವಾಗಲೂ ಅನ್ನುತ್ತಿದ್ದುದರಿಂದ, ಅದು ತನ್ನಿಂದ ತಾನೇ ನನ್ನ ಸ್ಮರಣದಲ್ಲಿ ನಿಂತಿತು. ಆ ಪುಣ್ಯವಂತನ ಸುಗುಣಗಳನ್ನೂ, ಮಿತ್ರತ್ವವನ್ನೂ ಎಷ್ಟು ವರ್ಣಿಸಿದರೂ ಸ್ವಲ್ಪವೇ ಅದೆ. ಇಂಥ ದುರ್ಲಭನಾದ ಮಿತ್ರನು ಒಂದು ದಿನ ರಾತ್ರಿಯಲ್ಲಿ ಮಲಗಿರಲು, ಅವನಿಗೆ ಸರ್ಪದಂಶವಾಗಿ, ಬೆಳಗಾಗುವದ ರೊಳಗೇ ಅವನು ಹಾಸಿಗೆಯ ಮೇಲೆ ಮರಣಹೊಂದಿದ್ದನು. ಅವನ ಸ್ಥಿತಿಯನ್ನು ನೋಡಿ, ನನಗಾದ ದುಃಖವನ್ನು ಹೇಳಲಸಾಧ್ಯವು. ಆದರೆ ಈಶ್ವರೇಚ್ಛೆಗೆ ವಿರುದ್ಧವಾಗಿ ಯಾರ ಯತ್ನವು ನಡೆಯುವದು? ನಾನು ನಿರುಪಾಯನಾಗಿ, ಮಿತ್ರಧರ್ಮಕ್ಕನುಸರಿಸಿ ಯಥಾಪ್ರಕಾರ ಅವನ ಉತ್ತರಕ್ರಿಯೆಯನ್ನು ಮಾಡಿದೆನು. ಈ ಉಂಗುರವು ಆ ಕಮಲಾಕ್ಷನ ಬೆರಳಿನಲ್ಲಿಯೇ ಇತ್ತು.

ಜೀವನಕಲೆಯ ಮುಖದಿಂದ ಕಮಲಾಕ್ಷನ ವೃತ್ತಾಂತವನ್ನು ಕೇಳುತ್ತಿರುವಾಗ, ಪದ್ಮ ನಯನೆಯ ಕಣ್ಣುಗಳೊಳಗಿಂದ ನೀರುಗಳು ಏಕ ಪ್ರಕಾರವಾಗಿ ಸುರಿಯುತ್ತಿದ್ದವು. ಕಮಲಾಕ್ಷನು ಮರಣ ಹೊಂದಿದನೆಂಬದನ್ನು ಕೇಳಿದ ಬಳಿಕಂತು ಅವಳ ದುಃಖವು ಅನಿವಾರವಾಯಿತು. ಹಲವು ರೀತಿಯಿಂದ ಕಮಲಾಕ್ಷನ ಗುಣಗಳನ್ನು ನೆನಿಸುತ್ತ ಪದ್ಮನಯನೆಯು ಮೂರ್ಛಿತ ಳಾದಳು. ಕೂಡಲೆ ಮೌಕ್ತಿಕೆಯು ತಕ್ಕ ಉಪಚಾರಗಳಿಂದ ಅವಳನ್ನು ಎಚ್ಚರಗೊಳಿಸಿದಳು. ಜೀವನಕಲೆಯಾದರೂ ಪದ್ಮನಯನೆಯ ಶೋಕವನ್ನು ನೋಡಿ, ಪತಿಯಾದ ಕಮಲಾಕ್ಷನನ್ನು ನೆನಿಸಿ ತಾನೂ ಮನದಣಿಯೆ ಅತ್ತಳು. ಪದ್ಮನಯನೆಯ ಪ್ರೇಮವು ಕಮಲಾಕ್ಷನ ಮೇಲೆ ಪೂರ್ಣ ವಾಗಿರುವದೆಂಬದನ್ನು ಜೀವನಕಲೆಯು ಮನಗಂಡರೂ, ಅವಳ ಮನಸ್ಸನ್ನು ಪೂರ್ಣವಾಗಿ ಪರೀಕ್ಷಿಸುವ ಉದ್ದೇಶದಿಂದ ಪದ್ಮನಯನೆಯನ್ನು ಕುರಿತು—''ಸುಂದರಿಯೇ, ಆದ ಮಾತಿಗೆ ದುಃಖಪಟ್ಟು ಪ್ರಯೋಜನವೇನು? ನಿನ್ನ ಪತಿಯೂ, ನನ್ನ ಮಿತ್ರನೂ ಆದ ಕಮಲಾಕ್ಷನು ತಿರುಗಿ ಬರುವ ಮಾರ್ಗದಿಂದ ಹೋಗಿರುವನೇ? ಇನ್ನು ಮೇಲೆ ಅವನ ಆಶೆಯು ನಮಗೇಕೆ? ಭೂಮಿಯ ಮೇಲೆ ಇರುವವರೆಗೆ ಸುಖವನ್ನನುಭವಿಸಿ, ಕಾಲವು ತುಂಬಿದ ಬಳಿಕ ಒಂದು ದಿವಸ ಕಮಲಾಕ್ಷನನ್ನು ಹಿಂಬಾಲಿಸಿ ನಾವೂ ಹೋದರಾಯಿತು. ಈಗ ನೀನು ಐದುವರ್ಷ ಗಳಿಂದ ಪತಿಯ ವಿಯೋಗ ದುಃಖವನ್ನು ಅನುಭವಿಸುತ್ತ ಇಂದ್ರಿಯ ನಿಗ್ರಹಮಾಡಿ ಶರೀರ ವನ್ನು ಒಣಗಿಸಿದ್ದು ನನಗೆ ಯೋಗ್ಯವಾಗಿ ತೋರುವದಿಲ್ಲ. ಆದದ್ದು ಆಗಿ ಹೋಯಿತು. ನಿನ್ನ ಸೌಂದರ್ಯವನ್ನು ನೋಡಿ ನನ್ನ ಮನಸ್ಸು ಆಗಲೇ ಕರಗಿ ಹೋಗಿದೆ; ಮಿತ್ರವಾತ್ಸಲ್ಯವೂ, ನೀತಿ ಮಾರ್ಗವೂ ಹಾಳಾಗಿ ಹೋಗಿವೆ'' ಎಂದು ಹೇಳಿ ಜೀವನಕಲೆಯು ಕೆಟ್ಟ ಭಾವದಿಂದ ಪದ್ಮನಯನೆಯನ್ನು ಎವೆ ಬಡಿಯದೆ ನೋಡಹತ್ತಿದಳು. ಪರೇಂಗಿತಜ್ಞಳಾದ ಪದ್ಮನಯನೆಯು,

ಪುರುಷವೇಷವನ್ನು ಧರಿಸಿದ ಜೀವನಕಲೆಯನ್ನು ಸ್ತ್ರೀಯೆಂದು ತಿಳಿಯದೆ, ಅವಳ ದುಷ್ಟ ವಾಸನೆಯನ್ನು ಕೂಡಲೆ ತಿಳಿದು, ಅವಳನ್ನು ಮನಸ್ಸಿನಲ್ಲಿ ಹಳಿಯುತ್ತ ನುಡಿದಳೇನಂದರೆ— ''ಸದ್ಗೃಹಸ್ಥನೆ, ನೀನು ನನ್ನ ಪತಿಯ ಮಿತ್ರನಾದುದರಿಂದ ನನಗೆ ಒಡಹುಟ್ಟಿದವನಾಗಲಿಲ್ಲವೇ? ಈ ವಿಚಾರವನ್ನು ಮನಸ್ಸಿನಲ್ಲಿ ತರದೆ ಯಾವ ಧೈರ್ಯದಿಂದ ದುರಾಲೋಚನೆ ಮಾಡಿದೆ? ನಿನ್ನ ಮಿತ್ರವಾತ್ಸಲ್ಯಕ್ಕೂ, ಸದ್ವರ್ತನಕ್ಕೂ ಉರಿಹಚ್ಚಲಿ. ಪತಿಯ ವಿಯೋಗ ದುಃಖದಿಂದ ಸಂತಪ್ತಳಾದ ನನ್ನನ್ನು ಹೃದಯ ಭೇದಕ ಭಾಷಣಗಳಿಂದ ನೋಯಿಸಿದ ಅಪರಾಧಕ್ಕಾಗಿ ಪರಮೇಶ್ವರನು ನಿನಗೆ ಬಲವಾದ ಶಿಕ್ಷೆಯನ್ನು ಮಾಡದೆ ಇರನು. ಪ್ರಿಯ ಪತಿಯಾದ ಕಮಲಾಕ್ಷನು ಮರಣ ಹೊಂದಿದ ಬಳಿಕ ವೈಧವ್ಯವನ್ನು ಅನುಭವಿಸುತ್ತ ಕಾಲಹರಣ ಮಾಡುವದು ಎಂಥ ನೀಚತನವು! ಇದಲ್ಲದೆ, ಅನಾಥರಾದ ಅಬಲೆಯರನ್ನು ನಿನ್ನಂಥ ದುರ್ಜನರು ಇಚ್ಛಿಸುವದರಿಂದ ಪಾತಿವ್ರತ್ಯಕ್ಕೆ ತಪ್ಪದೆ ಭಂಗಬರುವದು. ಇಂಥ ನಿಂದ್ಯವಾದ ಜೀವನವು ಕಮಲಾಕ್ಷನ ವೀರ ಪತ್ನಿಯಾದ ಈ ಪದ್ಮನಯನೆಗೆ ಸಹನವಾಗುವದೇ? ನನ್ನ ಪತಿಯ ಮರಣವನ್ನು ಕೇಳಿ, ನಾನು ಅನ್ಯರ ಸಹಾಯದಿಂದ ಸೌಖ್ಯ ಹೊಂದಲಿಯಾ? ಇಂಥ ನಿನ್ನ ದುರ್ಭಾಷಣಗಳನ್ನು ಕೇಳುತ್ತ ಇಲ್ಲಿಯವರೆಗೆ ನಾನು ಬದುಕಿದ್ದದ್ದು, ನನ್ನ ಪೂರ್ವಾರ್ಜಿತ ಪಾಪದ ಫಲವಾಗಿದೆ. ಪತಿಯ ವಿಯೋಗದಿಂದ ಮಲೀನವಾದ ಈ ದೇಹವನ್ನು ಅಗ್ನಿಯಲ್ಲಿ ಈಡಾಡಿದ ಹೊರತು ಸಮಾಧಾನವಾಗದು. ಆದರೆ ಇನ್ನು ನೀನು ಇಲ್ಲಿ ಕುಳಿತುಕೊಳ್ಳಬೇಡ. ದುರ್ಮಾರ್ಗಿಗಳಾದ ನಿಮ್ಮಂಥವರ ದರ್ಶನವೇ ನಿಂದ್ಯವು. ನಿನ್ನ ಮಂದಿರಕ್ಕೆ ಹೋಗು, ಅನ್ನಲು ಜೀವನಕಲೆಯು ಪದ್ಮನಯನೆಯ ಪತಿ ಭಕ್ತಿಗೆ ಆಶ್ಚರ್ಯಪಡುತ್ತ, ಎರಡನೆಯ ಯಾವ ಮಾತನ್ನೂ ಆಡದೆ, ತನ್ನ ಮನಸ್ಸು ನೊಂದಂತೆ ತೋರಿಸಿ, ಅಲ್ಲಿಂದ ಹೊರಟು ತನ್ನ ಮಂದಿರಕ್ಕೆ ಬಂದಳು. ಆದರೆ ಈ ಪರಿ ಪದ್ಮನಯನೆಯ ಮನಸ್ಸನ್ನು ನೋಯಿಸಿದ್ದಕ್ಕಾಗಿ ಅವಳ ಜೀವಕ್ಕೆ ಸೊಗಸಾಗಲಿಲ್ಲ.

ಇತ್ತ ಪದ್ಮನಯನೆಯು, ಮನಮೋಹನನಿಂದ ತನಗೆ ತಿಳಿದ ಪತಿಯ ಮರಣದ ಸಂಗತಿಯನ್ನಷ್ಟೇ ಸಿಂಹಕೇತುವಿಗೆ ತಿಳಿಸಿ, ಸಹಗಮನಕ್ಕಾಗಿ ಅಪ್ಪಣೆಯನ್ನು ಕೇಳಿದಳು. ಆದರೆ ಸಿಂಹಕೇತುವು ಅದಕ್ಕೆ ಸಮ್ಮತಿಸದೆ—''ತಂಗೀ, ಪದ್ಮನಯನಾ, ನಿನ್ನ ವಿಚಾರವು ಪತಿ ಭಕ್ತಿಗೆ ತಕ್ಕದ್ದಾಗಿದ್ದರೂ, ಹಸುಗೂಸಾದ ಈ ವಿಕ್ರಮಾರ್ಕನನ್ನು ನೋಡಿದರೆ, ಅದು ಅಯೋಗ್ಯವಾಗಿ ತೋರುತ್ತದೆ. ನೀನು ಮೂರ್ಖತನದಿಂದ ಅಗ್ನಿಪ್ರವೇಶ ಮಾಡಿದರೆ ಅದರಿಂದಾಗುವ ಪ್ರಯೋಜನವಾದರೂ ಯಾವದು? ಮನುಷ್ಯರ ಬೇರೆ ಬೇರೆ ಕರ್ಮಗಳಿಗನುಸರಿಸಿ, ಅವರ ಪರಲೋಕದ ಹಾದಿಗಳು ಬೇರೆ ಬೇರೆ ಇರಲು, ನೀನು ನಿನ್ನ ಪತಿಯನ್ನು ಹಿಂಬಾಲಿಸುವದಂತೂ ದುಸ್ತರವೆ. ಅದೂ ಇರಲಿ; ಇದರಿಂದ ನಿನ್ನ ಪತಿಗಾದರೂ ಹಿತಮಾಡಿದಂತಾಗುವದೇನು? ಇಲ್ಲ, ನಿನ್ನ ದುಃಖಶಮನಕ್ಕೆ ಮಾತ್ರ ಪ್ರಾಣಕೊಟ್ಟಂತೆ ಆಗುವದು. ಜೀವದಿಂದ ಇದ್ದು ತರ್ಪಣಾದಿ ಗಳಿಂದ ಪತಿಯನ್ನು ತೃಪ್ತಿ ಬಡಿಸುವದನ್ನು ಬಿಟ್ಟು, ಹುಚ್ಚಿಯಂತೆ ಇಂಥ ಸಾಹಸ ಕೃತ್ಯವನ್ನು ಮಾಡಬೇಡ. ಯಾಕೆ? ಕುಂತಿ, ಉತ್ತರೆ ಮೊದಲಾದ ಎಷ್ಟೋ ಸ್ತ್ರೀಯರು ತಮ್ಮ ಪತಿಯ

ಮರಣಕ್ಕಾಗಿ ಪ್ರಾಣ ಕೊಟ್ಟರೇನು? ಈ ತರದ ಸ್ವಾರ್ಥಪರವಾದ ಕೃತವನ್ನು ಮಾಡುವದು ನಿನ್ನಂಥ ಸುಜ್ಞಳಿಗೆ ಯೋಗ್ಯವಲ್ಲ. ಇದಲ್ಲದೆ ನಿನ್ನ ತಂದೆಗೆ, ನೀನು ಇಲ್ಲಿ ಇರುವ ವರ್ತಮಾನವನ್ನು ತಿಳಿಸಿರುತ್ತೇನೆ. ಅತ್ತ ಕಡೆಯ ಯಾವದೊಂದು ವರ್ತಮಾನವು ತಿಳಿದ ಹೊರತು ಹಾರಿಕೆಯ ವರ್ತಮಾನದಿಂದ ಇಂಥ ಸಾಹಸ ಕೃತ್ಯಮಾಡುವದು ತಕ್ಕದ್ದಲ್ಲ'' ಎಂದು ಉಪದೇಶ ಮಾಡುತ್ತಿರಲು, ಮಂಜುಘೋಷೆಯು ತನ್ನ ಗೆಳತಿಯಾದ ಪದ್ಮನಯನೆಯು ಅಗ್ನಿಪ್ರವೇಶ ಮಾಡುವಳೆಂಬದನ್ನು ಕೇಳಿ ದುಃಖದಿಂದ ಅವಳೆಡೆಗೆ ಬಂದಳು. ಪದ್ಮನಯನೆಯು ಮಂಜುಘೋಷೆಯನ್ನು ನೋಡಿ ದೊಡ್ಡ ಧ್ವನಿಯಿಂದ ಅಳುತ್ತ—''ಮಂಜುಘೋಷೇ, ಈ ಚಾಂಡಾಲೆಯ ಮುಖವು ನಿಮ್ಮಂಥ ಸುಮಂಗಲೆಯರಿಗೆ ನೋಡಲಿಕ್ಕೆ ಅಯೋಗ್ಯವಾಯಿತು. ಅಂದಬಳಿಕ ಅದನ್ನು ಸುಡದೆ ಬಿಡುವುದು ಯೋಗ್ಯವೆ? ಈ ವಿಕ್ರಮಾರ್ಕನು ನನ್ನ ಮಗನಲ್ಲ, ನಿನ್ನ ಮಗನೆಂದು ತಿಳಿದು ಜೋಕೆಮಾಡು, ಎಂದು ಹೇಳಿ, ಮಂಜುಘೋಷೆಯನ್ನು ಬಿಗಿಯಾಗಿ ಅಪ್ಪಿಕೊಂಡಳು. ಮಂಜುಘೋಷೆಯು ದುಃಖದಿಂದ ಕಣ್ಣೀರು ಸುರಿಸುತ್ತ ಪದ್ಮನಯನೆಗೆ ಸಹಗಮನ ಮಾಡಬೇಡೆಂದು ಹಲವು ಬಗೆಯಾಗಿ ಹೇಳಿದಳು. ಆದರೂ ಆಕೆಯ ಮನಸ್ಸು ತಿರುಗದ್ದನ್ನು ನೋಡಿ ಸಿಂಹಕೇತುವು ನಿರುಪಾಯನಾಗಿ ಧರ್ಮಸಮ್ಮತವೂ, ಪರಂಪರಾಗತವೂ ಆದ ಪದ್ಮನಯನೆಯ ವಿಚಾರಕ್ಕೆ ಒಡಂಬಟ್ಟನು.

ಮುಂದೆ ಕೆಲವು ಹೊತ್ತಿನ ಮೇಲೆ ಸಿಂಹಕೇತುವಿನ ಅಪ್ಪಣೆಯಿಂದ ಚಿತೆಯು ಸಿದ್ಧವಾಯಿತು. ಪದ್ಮನಯನೆಯು ಆನಂದದಿಂದ ಅದರ ಕಡೆಗೆ ಹೋದಳು. ಆಗ್ಗೆ ಅಬಾಲ ವೃದ್ಧರು ಪದ್ಮನಯನೆಯ ಸ್ಥಿತಿಯನ್ನು ನೋಡಿ, ಅವಳ ಸುಗುಣಗಳಿಗಾಗಿಯೂ, ಔದಾರ್ಯಕ್ಕಾಗಿಯೂ ಮರಮರನೆ ಮರುಗಿದರು. ಆದರೆ ಅವಳ ಪತಿ ಭಕ್ತಿಗಾಗಿ ಜನರು ಮಾಡುವ ಅವಳ ಸ್ತೋತ್ರದಿಂದ, ಪದ್ಮನಯನೆಯಂಥ ಪತಿವ್ರತೆಯರ ಅಂತಃಕರಣಗಳು ಸಾಫಲ್ಯವನ್ನು ಹೊಂದಿ, ಅವರ ಕಣ್ಣುಗಳೊಳಗಿಂದ ಆನಂದಾಶ್ರುಗಳು ಉದರಹತ್ತಿದವು. ಆಗ ವಿಕ್ರಮಾರ್ಕನು ಮುದ್ದು ಮಾತುಗಳನ್ನಾಡುತ್ತ ತಾಯಿಯ ಬಳಿಗೆ ಹೋದನು. ಅವನು ತಾಯಿಯ ಉದಾಸೀನ ವೃತ್ತಿಯನ್ನು ನೋಡಿ, ಅಳುವ ಮೋರೆಮಾಡಿ—''ಅವ್ವಾ, ಹಿಂದಕ್ಕೆ ಸರಿಯೇ. ಬೆಂಕಿ ಸುಟ್ಟೀತು; ಬಾ, ಮನೆಗೆ ಹೋಗೋಣ. ಮಾವನು ಯಾಕೆ ಅಳುತ್ತಾನೆ? ನೀನು ಮನೆಗೆ ಬರದಿದ್ದರೆ ನಾನು ಉಣ್ಣುವದೇ ಇಲ್ಲ, ನೀನು ಈವೊತ್ತು ಹಣೆ ತುಂಬ ಕುಂಕುಮ ಯಾಕೆ ಹಚ್ಚಿಕೊಂಡಿರುವೆ? ಇವರೆಲ್ಲರೂ ನಿನ್ನನ್ನು ಇಷ್ಟೇಕೆ ನೋಡುತ್ತಾರೆ? ನನ್ನನ್ನು ಎತ್ತಿಕೊ. ಹೀಗೆ ಮಾಡಿದರೆ ನಾನು ನಿನಗೆ ಮುದ್ದು ಕೊಡುವದಿಲ್ಲ ನೋಡು'' ಎಂದು ಪದ್ಮನಯನೆಯ ಸೆರಗನ್ನು ಹಿಡಿದು ಜಗ್ಗಹತ್ತಿದನು. ಈ ಅನರ್ಥವನ್ನು ನೋಡಿ ಮಕ್ಕಳೊಂದಿಗರು ಘೋಳೆಂದು ಅತ್ತರು. ಮಿತಿಮೀರಿದ ಪುತ್ರವಾತ್ಸಲ್ಯವುಳ್ಳ ಪದ್ಮನಯನೆಯು ಮಗನ ಮಾತುಗಳನ್ನು ಕೇಳಿ ಕಣ್ಣೀರು ಸುರಿಸುತ್ತ—''ಬಾಳಾ, ವಿಕ್ರಮಾರ್ಕಾ, ಅಲ್ಲಿ ಮಾವನ ಹತ್ತರ ಹೋಗು. ಆತನು ನಿನ್ನನ್ನು ಯಾವ ಕೊರತೆಯೂ ಬಾರದ ಹಾಗೆ ರಕ್ಷಿಸುತ್ತಾನೆ. ನಾನು ನಿನ್ನ ತಾಯಿಯಾಗಿದ್ದರೆ ನಿನಗೆ ಇಷ್ಟು ದುಃಖಕೊಡುತ್ತಿದ್ದಿಲ್ಲ'' ಎಂದು ವಿಕ್ರಮಾರ್ಕನನ್ನು ಎದೆಗೆ ಅವಚಿಕೊಂಡು

ದೊಡ್ಡ ಧ್ವನಿಯಿಂದ ಅಳುತ್ತ—''ಅಪ್ಪಾ ವಿಕ್ರಮಾ, ಇನ್ನೊಮ್ಮೆ ನನಗೆ ನಿನ್ನ ಮುದ್ದು ಮೋರೆಯನ್ನು ತೋರಿಸು; ಸ್ವಲ್ಪ ಹೊತ್ತಿನಲ್ಲಿಯೇ ನಿನ್ನನ್ನಗಲಿ, ನಾನು ಪರಲೋಕಕ್ಕೆ ಹೋಗುತ್ತೇನೆ. ಅಣ್ಣಾ, ಸಿಂಹಕೇತೂ, ನಿನ್ನ ಅಳಿಯನನ್ನು ಕರೆದುಕೊ; ಹಲವು ಪರಿಯಿಂದ ನನ್ನನ್ನು ನೀನು ಇಲ್ಲಿಯವರೆಗೆ ಜೋಪಾನ ಮಾಡಿದೆ. ಇನ್ನು ಮೇಲೆ ನನ್ನ ಮಗನೊಬ್ಬನನ್ನೇ ನಿನ್ನ ಕೈಯಲ್ಲಿ ಕೊಡುತ್ತೇನೆ. ಅವನ ರಕ್ಷಣ ಮಾಡತಕ್ಕ ಭಾರವು ನಿನ್ನನ್ನೇ ಕೂಡಿದೆ.'' ಎಂದು ವಿಕ್ರಮಾರ್ಕನನ್ನು ಜುಲುಮೆಯಿಂದ ಸಿಂಹಕೇತುವಿನ ಕೈಯಲ್ಲಿ ಕೊಟ್ಟಳು. ಆಗ ವಿಕ್ರಮಾರ್ಕನು ದೊಡ್ಡ ಧ್ವನಿಯಿಂದ ಬಿಕ್ಕಿ ಬಿಕ್ಕಿ ಅಳುತ್ತ—''ಮಾವಾ, ಬಿಡೊ; ನಾನೂ ಅವ್ವನ ಸಂಗಡ ಪರಲೋಕಕ್ಕೆ ಹೋಗುತ್ತೇನೆ. ನಾನು ಬಹಳ ದಿವಸ ಹೋಗದೆ, ಬೇಗನೆ ಅವ್ವನನ್ನು ಕರಕೊಂಡು ನಿನ್ನ ಹತ್ತರ ಬರುವೆನು. ನಾನು ಪರಲೋಕವನ್ನು ನೋಡಿಲ್ಲ.'' ಎಂದು ಕೈ-ಕಾಲುಗಳನ್ನು ಜಾಡಿಸುತ್ತ ಸಿಂಹಕೇತುವಿನ ಕೈಯಿಂದ ಕೊಸರಿ ಹೋಗುವದಕ್ಕೆ ಪ್ರಯತ್ನ ಮಾಡಹತ್ತಿದನು. ಆಗ ಆ ಕೂಸಿನ ಮಾತುಗಳನ್ನು ಕೇಳಿ ನಿಂತವರ ಕಣ್ಣುಗಳಿಂದ ನೀರುಗಳು ತಾವೇ ಹೋಗಹತ್ತಿದವು.

ಇತ್ತ ಜೀವನಕಲೆಯು ತನ್ನ ಮನೆಗೆ ಹೋಗಿ, ಪದ್ಮನಯನೆಯು ಪತಿವ್ರತಾ ಶಿಖಾಮಣಿಯಂತಲೂ, ಸಿಂಹಕೇತುವು ಪಾಪಭೀರುವೆಂತಲೂ ಮನಗಂಡು, ತನ್ನ ಪುರುಷವೇಷವನ್ನು ಬಿಟ್ಟು, ನಿಜವಾದ ತನ್ನ ಸ್ತ್ರೀ ರೂಪದಿಂದಲೇ ಪದ್ಮನಯನೆಯನ್ನು ಕಾಣುವದಕ್ಕಾಗಿ ಹೊರಟಳು. ಆದರೆ ಪದ್ಮನಯನೆಯು ಸಹಗಮನಕ್ಕೆ ಸಿದ್ಧಳಾಗಿರುವಳೆಂಬದನ್ನು ತಿಳಿದು, ಆಕೆಯು ಗಾಬರಿಯಾಗಿ, ತನ್ನ ಮೂರ್ಖತನವನ್ನು ಹಳಿದುಕೊಳ್ಳುತ್ತ ಪದ್ಮನಯನೆಯು ಅಗ್ನಿಪ್ರವೇಶ ಮಾಡುತ್ತಿರುವಲ್ಲಿಗೆ ಲಗುಬಗೆಯಿಂದ ಬಂದಳು. ಆಗ ಪದ್ಮನಯನೆಯು ಗಂಡು ಗಚ್ಚಿಯನ್ನು ಹಾಕಿ, ಅಗ್ನಿಗೆ ಮೂರುಸಾರೆ ಪ್ರದಕ್ಷಿಣೆ ಮಾಡಿ ದೀನಮುದ್ರೆಯಿಂದ ಆಕಾಶದ ಕಡೆಗೆ ಮುಖವೆತ್ತಿ—ಪರಮೇಶ್ವರಾ, ನಾನು ನಿನಗೆ ಮೊರೆಹೊಕ್ಕಿದ್ದೇನೆ. ಪರಲೋಕದಲ್ಲಾದರೂ ನನಗೆ ನನ್ನ ಪತಿಯ ದರ್ಶನ ಮಾಡಿಸು. ಅನಾಥರಕ್ಷಕನೆಂಬ ಬಿರುದು ನಿನಗಿದ್ದದ್ದರಿಂದ, ನನ್ನ ಕೂಸಿನ ಚಿಂತೆಯು ನನಗಿಲ್ಲ. ನಿನಗೆ ಸೆರಗೊಡ್ಡಿ ಬೇಡಿಕೊಳ್ಳುವದೇನಂದರೆ, ಅನಿಮಿತ್ತ ಭಾಂಧವನಾದ ಈ ಸಿಂಹಕೇತುರಾಜನಿಗೆ ಕಲ್ಯಾಣಮಾಡಿ, ಜನ್ಮ-ಜನ್ಮಾಂತರದಲ್ಲಾದರೂ ಕಮಲಾಕ್ಷ ಪ್ರಭುವೇ ನನಗೆ ಪತಿಯಾಗುವಂತೆ ಅನುಗ್ರಹಿಸು.'' ಎಂದು ಪ್ರಾರ್ಥಿಸಿ ಅಗ್ನಿಯಲ್ಲಿ ಹಾರಿಕೊಳ್ಳುವ ಸಂಧಿಯಲ್ಲಿ, ಜೀವನಕಲೆಯು ಓಡುತ್ತ ಬಂದು, ಪದ್ಮನಯನೆಯ ಕೈಯನ್ನು ಹಿಡಿದು—''ಪೂಜ್ಯಳಾದ ನನ್ನ ಸಖಿಯೇ, ನಿಲ್ಲು; ಇಂಥ ಸಾಹಸಕೃತ್ಯವನ್ನು ಮಾಡಬೇಡ. ನಿನ್ನ ಬಾಲಸಖಿಯೂ, ದೇವದತ್ತನ ಪುತ್ರಿಯೂ ಆದ ಜೀವನಕಲೆಯು ನಿನ್ನ ಕೈ ಹಿಡಿದಿರುವಳೆಂದು ತಿಳಿ. ನಿನ್ನ ಪಾತಿವ್ರತ್ಯದ ಕೀರ್ತಿಯು ಜಗತ್ತಿನಲ್ಲಿ ಸ್ಥಿರವಾಗಿ ನಿಲ್ಲುವದು. ನನ್ನ ಸಂಗತಿಯನ್ನು ಪೂರ್ಣವಾಗಿ ತಿಳಕೊಂಡ ಬಳಿಕ, ನಿನ್ನ ಮನಸ್ಸಿಗೆ ಬಂದಂತೆ ಮಾಡು. ಅಲ್ಲಿಯವರೆಗೆ ಮಾತ್ರ ನಿನ್ನ ಶರೀರವನ್ನು ಅಗ್ನಿಗೆ ಆಹುತಿಯಾಗ ಮಾಡಬೇಡ'' ಎಂದು ನುಡಿಯುತ್ತಿರಲು, ನೆರೆದವರಿಗೆಲ್ಲ ಬಹಳ ಆಶ್ಚರ್ಯವಾದದ್ದಲ್ಲದೆ, ಅವಳ ಮಾತುಗಳನ್ನು ಕೇಳಿ, ಅವರು ಸಮಾಧಾನಪಟ್ಟರು. ಪದ್ಮನಯನೆಯು ಜೀವನಕಲೆಯನ್ನು ದಿಟ್ಟಿಸಿ ನೋಡಿ,

ಇವಳು ತನ್ನ ಬಾಲಸಖಿಯಾದ ಮಂತ್ರಿಪುತ್ರಿ ಎಂದು ನಿಶ್ಚಯಿಸಿ ಅವಳನ್ನು ಬಿಗಿಯಾಗಿ ಅಪ್ಪಿಕೊಂಡಳು. ಬಹುದಿನ ಬಳಗದವರ ವಾರ್ತೆಯರಿಯದ ಪದ್ಮನಯನೆಗೆ ಜೀವನಕಲೆಯ ದರ್ಶನದಿಂದ ಸಮಾಧಾನವಾಯಿತು. ಆಗ ಪದ್ಮನಯನೆಯು ದುಃಖದಿಂದ—''ಜೀವನ ಕಲಾ, ನನ್ನ ಪ್ರಾಣದೊಡೆಯರಾದ ಕಮಲಾಕ್ಷ ಪ್ರಭುಗಳು ಮರಣಹೊಂದಿದರೆಂಬ ಅಮಂಗಲವಾದ ವರ್ತಮಾನವು ಈವೊತ್ತು ನನಗೆ ಗೊತ್ತಾದದ್ದರಿಂದ, ನಾನು ಅಗ್ನಿಪ್ರವೇಶ ಮಾಡತೊಡಗಿರುವೆನು. ಈ ಸಂಬಂಧದಿಂದ ನಿನಗೇನಾದರೂ ವರ್ತಮಾನವಿರುವದೋ?'' ಅನ್ನಲು, ಜೀವನಕಲೆಯು—''ರಾಜಪುತ್ರೀ, ಕಮಲಾಕ್ಷ ಪ್ರಭುಗಳು ಮರಣ ಹೊಂದಿದ್ದು ನಿಜವಲ್ಲ, ಅವರಿಗೆ ಅಖಂಡವಾದ ಆಯುಷ್ಯವನ್ನು ಕೊಡುವದಕ್ಕಾಗಿ ನಾನು ದೇವರನ್ನು ಪ್ರಾರ್ಥಿಸುತ್ತೇನೆ. ಅವರ ಸಂಬಂಧದ ಪೂರ್ಣವಾದ ಸಂಗತಿಯು ನನಗೆ ಗೊತ್ತಿದೆ; ನಿನ್ನ ಮನಸ್ಸಿನ ದುಗುಡನ್ನು ಬಿಟ್ಟು, ನನ್ನ ಮಾತನ್ನು ನಂಬು.'' ಅನ್ನಲು, ಪದ್ಮನಯನೆಯ ದೇಹದಲ್ಲಿ ಪ್ರಾಣಪ್ರತಿಷ್ಠಾಪನೆಯಾದಂತಾಗಿ ಆಕೆಯು ಅಗ್ನಿಪ್ರವೇಶ ಮಾಡುವದನ್ನು ಬಿಟ್ಟು ಸಿಂಹಕೇತುವಿನೊಡನೆ ವಿಕ್ರಮಾರ್ಕನನ್ನು ಕೂಡಿಕೊಂಡು ಅರಮನೆಗೆ ತಲುಪಿದಳು.

ಸುಖಸಾಮ್ರಾಜ್ಯ

ಇತ್ತ ಜೀವನಕಲೆಯ ಅಪ್ಪಣೆಯಂತೆ, ಅವಳ ಸೈನಿಕರೆಲ್ಲರೂ ಹೊಸ ಪೋಷಾಕಿನಿಂದ ಮೆರೆಯುತ್ತ ''ತಾವು ಕನೋಜದ ರಾಜನಾದ ವೀರವರ್ಮನ ಸೈನಿಕರಿದ್ದು, ಪದ್ಮನಯನಾ ದೇವಿಯನ್ನು ಕರೆಯಲಿಕ್ಕೆ ಬಂದಿರುವೆವೆ''ಂದು ಹೇಳಹತ್ತಿದರು. ಇದನ್ನು ನೋಡಿ ಸಿಂಹ ಕೇತುವಿಗೂ, ಪದ್ಮನಯನೆಗೂ ಬಹಳ ಸಂತೋಷವಾಯಿತು. ಮನಮೋಹನನು ತನ್ನ ನೀಚಕೃತ್ಯಕ್ಕಾಗಿ ಭಯಪಟ್ಟು, ತನ್ನ ಸೈನ್ಯದೊಡನೆ ಓಡಿಹೋದನೆಂದು ಪದ್ಮನಯನೆಯೂ, ಸಿಂಹಕೇತುವೂ ತಿಳಿದರಲ್ಲದೆ, ಇದೆಲ್ಲ ಜೀವನಕಲೆಯ ತಂತ್ರವೆಂಬದು ಅವರ ಸ್ವಪ್ನದಲ್ಲಿ ಸಹ ಬರಲಿಲ್ಲ, ಇದು ಜೀವನಕಲೆಯ ಧೈರ್ಯಚಾತುರ್ಯಗಳ ಪರಿಣಾಮವೆಂದು ಹೇಳಬಹುದು. ಜೀವನಕಲೆಯು ಏಕಾಂತದಲ್ಲಿ ಪದ್ಮನಯನೆಗೆ ತನ್ನ ಯಾವತ್ತೂ ನಿಜವಾದ ವರ್ತಮಾನವನ್ನು ತಿಳಿಸಿ, ನುಡಿದಳೇನಂದರೆ—''ಸಖೀ, ಪರಗೃಹವಾಸದೋಷವು ಸೀತೆಯಂಥ ಪತಿವ್ರತೆಯನ್ನು ಸಹ ಬಿಟ್ಟಿಲ್ಲ, ಆದರಿಂದ ನಿನ್ನ ಸದ್ವರ್ತನವೂ, ಪಾತಿವ್ರತ್ಯವೂ ಜನರಿಗೂ, ದೈವಯೋಗದಿಂದ ಕಮಲಾಕ್ಷ ಪ್ರಭುಗಳ ಸಂದರ್ಶನವಾದಲ್ಲಿ ಅವರಿಗೂ ತಿಳಿಯಲೆಂಬ ಉದ್ದೇಶದಿಂದ ಈ ಮೋಸವನ್ನು ಮಾಡಿದೆನು. ಈ ತಪ್ಪಿಗಾಗಿ ನನ್ನನ್ನು ಕ್ಷಮಿಸು.'' ಎಂದು ಅನ್ನಲು, ಪದ್ಮನಯನೆಯು ಜೀವನಕಲೆಯ ಮಾತುಗಳನ್ನು ಕೇಳಿ ಸಮಾಧಾನ ತಾಳಿ—''ಮಂತ್ರಿ ಪುತ್ರೀ, ಕ್ಷಮಿಸೆಂದು ನನ್ನನ್ನು ಪ್ರಾರ್ಥಿಸುವಂಥ ತಪ್ಪೇನೂ ನಿನ್ನಿಂದ ಆಗಿಲ್ಲ, ವಿಚಾರ

ಮಾಡಿದರೆ, ಈಗಿನ ನನ್ನ ಸ್ಥಿತಿಗೆ ನೀನು ಮಾಡಿದ ಯುಕ್ತಿಯು ಹಿತಕರವೆಂದು ನನಗೆ ತೋರುತ್ತದೆ. ಬಹಿರಂಗವನ್ನಲ್ಲದೆ ಅಂತರಂಗವನ್ನು ತಿಳಿಯಲು ಜನರು ಸಮರ್ಥರಲ್ಲ. ಇರಲಿ, ನನ್ನ ಪತಿಯೇ ನಿನ್ನ ಪತಿಯಾದ್ದರಿಂದ, ನಮ್ಮಿಬ್ಬರ ವಿಯೋಗವಾಗುವ ಸಂಭವವು ಇಲ್ಲವೇ ಇಲ್ಲ. ಆದರೆ ಆ ಸುಯೋಗವನ್ನು ಕಾಣಬೇಕಾದರೆ, ಕಮಲಾಕ್ಷ ಪ್ರಭುಗಳ ಶೋಧವಾಗಬೇಕಷ್ಟೇ? ನಿನ್ನ ವಿಚಾರದಂತೆ ನನ್ನ ತಂದೆಯಾದ ವೀರವರ್ಮನ ದರ್ಶನಕ್ಕಾಗಿ ಕನೋಜಪಟ್ಟಣಕ್ಕೆ ನಾನು ಬರುತ್ತೇನೆ. ವೃದ್ಧರಾದ ನನ್ನ ತಾಯಿ-ತಂದೆಗಳ ದುಃಖವನ್ನು ದೂರಮಾಡುವದು ನನ್ನ ಕರ್ತವ್ಯವಾಗಿದೆ.'' ಎಂದು ಹೇಳಿ, ಪದ್ಮನಯನೆಯು ಸಿಂಹಕೇತುವಿನ ಅಪ್ಪಣೆಯನ್ನು ಪಡೆದು ವಿಕ್ರಮಾರ್ಕನೊಡನೆ ತಂದೆಯನ್ನು ಕಾಣುವದಕ್ಕಾಗಿ ಕನೋಜಪಟ್ಟಣಕ್ಕೆ ಹೊರಟಳು. ಮಂಜುಘೋಷೆಗೂ, ಸಿಂಹಕೇತುವಿಗೂ ಪದ್ಮನಯನೆಯ ವಿಯೋಗವಾಗುವದೆಂದು ಬಹಳ ವ್ಯಸನವಾಯಿತು. ಜೀವನಕಲೆಯೂ, ಪದ್ಮನಯನೆಯೂ ಪುರುಷವೇಷವನ್ನು ಧರಿಸಿ, ತಮ್ಮ ಸೈನ್ಯವನ್ನೂ, ಸಿಂಹಕೇತುವು ಸಹಾಯಾರ್ಥವಾಗಿ ಕೊಟ್ಟಿದ್ದ ಸೈನ್ಯವನ್ನೂ ಕೂಡಿಕೊಂಡು ಮಧುರಾಪಟ್ಟಣದಿಂದ ಮುಂದಕ್ಕೆ ಸಾಗಿದರು.

ಈ ಪ್ರಕಾರ ಇವರು ಮಾರ್ಗಕ್ರಮಣ ಮಾಡುತ್ತಿರಲು, ಇತ್ತ ಸುವರ್ಣಪುರದಲ್ಲಿ ಕಮಲಾಕ್ಷನ ವ್ಯವಸ್ಥೆಯು ಏನಾಯಿತೆಂಬದನ್ನು ವಿಚಾರಿಸುವಾ. ಸುಮತಿಯ ವನಸ್ಪತಿಗಳ ಸಾಮರ್ಥ್ಯದಿಂದ ಅವನ ಗಾಯಗಳು ಮಾಯುತ್ತಹೋಗಿ, ಸ್ವಲ್ಪದಿನಗಳಲ್ಲಿಯೇ ಅವನು ಮೊದಲಿನಂತೆ ಆದನು. ಒಂದು ದಿನ ಕಮಲಾಕ್ಷನು ಸುಮತಿಯನ್ನು ಕುರಿತು—''ಮಿತ್ರಾ, ಸುಮತೀ, ನೀನು ಯಶೋದೆಯ ಪಾಣಿಗ್ರಹಣಮಾಡಿ, ಆಕೆಯ ತಾಯಿ-ತಂದೆಗಳನ್ನು ಸಂತೋಷಪಡಿಸಬೇಕೆಂದು ಹೇಳಿಕೊಳ್ಳುವೆನು.'' ಅನ್ನಲು, ಸುಮತಿಯು—ಮಿತ್ರಾ, ನಿನ್ನ ಮಾತು ಅಯೋಗ್ಯವಾದದ್ದಲ್ಲ ಗೃಹಸ್ಥಾಶ್ರಮವು ಧನ್ಯವಾದದ್ದೆಂದು ದೊಡ್ಡವರು ಹೇಳುತ್ತಾರೆ. ಆ ಆಶ್ರಮವು ಪರೋಪಕಾರಕ್ಕೆ ಬಹು ಅನುಕೂಲವಾದದ್ದು ಮನುಷ್ಯನ ನಿಜವಾದ ಉನ್ನತಿಯು ಗೃಹಸ್ಥಾಶ್ರಮದಿಂದಲೇ ಆಗುವದೆಂದು ಹೇಳಬಹುದು. ಮನಸ್ಸಿನ ಶುದ್ಧೀಕರಣಕ್ಕೂ, ಸತ್ವಪರೀಕ್ಷೆಗೂ ಇದೇ ಆಶ್ರಮವು ತಕ್ಕದ್ದು ನ್ಯಾಯ ನೀತಿಗಳು ಈ ಆಶ್ರಮದಲ್ಲಿಯೇ ವಿಶೇಷವಾಗಿ ತೋರುವವು. ನಿಜವಾದ ಸಂಸಾರ ಪರಮಾರ್ಥಗಳೆರಡೂ ಒಂದೇ ಎಂದು ತೋರಿಸುವವರು ಈ ಆಶ್ರಮವನ್ನು ಅಂಗೀಕರಿಸ ಬೇಕಾಗುವದು. ಹೃದಯವು ಕೋಮಲವಾಗಲಿಕ್ಕೆ ಇದರಷ್ಟು ಅನುಕೂಲವಾದ ಬೇರೊಂದು ಆಶ್ರಮವಿಲ್ಲ. ಅಂದಬಳಿಕ ನಾನು ನಿನ್ನ ಮಾತನ್ನು ಹೇಗೆ ನಿರಾಕರಿಸಲಿ? ಆದರೆ ಪದ್ಮನಯನೆಯ ಶೋಧವಾದ ಹೊರತು ನಾನು ವಿವಾಹಕ್ಕೆ ಸಮ್ಮತಿಸುವಹಾಗಿಲ್ಲ. ದೇವರ ದಯದಿಂದ ಇಂದೇ ಪದ್ಮನಯನೆಯ ಶೋಧವಾದರೆ, ನಾಳೇ ಈ ಯಶೋದೆಯ ಪಾಣಿಗ್ರಹಣವನ್ನು ಆನಂದದಿಂದ ಮಾಡುವೆನು. ಸರೋವರದಲ್ಲಿ ಮುಳುಗಿದ ನಾನು ಮೊಸಳೆಯಿಂದ ಎಳೆಯಲ್ಪಟ್ಟವನಾಗಿ ಬಹಳ ಕಷ್ಟಪಟ್ಟೆನು. ನನ್ನ ಮೈಮೇಲಿನ ಎಚ್ಚರವು ತಪ್ಪಿದಂತಾಗಿರಲು, ಯಾರೋ ನನ್ನನ್ನು ದಂಡೆಗೆ ತಂದು ಚೆಲ್ಲಿದಂತಾಯಿತು! ನೀನೂ ನನ್ನನ್ನು ಅಗಲಿ ಹೋದದ್ದರಿಂದ ನನಗೆ ಬಹಳ ದುಃಖವಾಯಿತು.

ಕಡೆಗೆ ನಾನು ಯಾವತ್ತೂ ಸುಖಗಳನ್ನು ತ್ಯಜಿಸಿ ವಿರಕ್ತನಾಗಿ, ದೇಶ ದೇಶಗಳನ್ನು ತಿರುಗುತ್ತ ನಿರಾಶ್ರಿತನಾಗಿ ಹೊಂದಿ, ಕನೋಜರಾಜ್ಯದ ಉಕ್ಕಡವಾದ ಈ ಸುವರ್ಣಪುರದಲ್ಲಿ ವಾಸ ಮಾಡಿದೆನು. ಕನೋಜರಾಜ್ಯಕ್ಕೆ ಹೋಗುವವರು ಬಹುತರವಾಗಿ ಈ ಪಟ್ಟಣದಲ್ಲಿ ವಸ್ತಿಯನ್ನು ಮಾಡುವರು. ಈ ಗ್ರಾಮದ ಪುಣ್ಯದಿಂದ ನಿನ್ನ ಶೋಧವಾದದ್ದರಿಂದ ನನಗೆ ಕೆಲಮಟ್ಟಿಗೆ ಆನಂದವಾಗಿದೆ. ಗುರುವಿನ ಪಾದಾನುಗ್ರಹದಿಂದ ಸ್ವಲ್ಪದಿನಗಳಲ್ಲಿಯೇ ಪದ್ಮನಯನೆಯ ಶೋಧವಾಗಬಹುದು. ಆಮೇಲೆ ಯಾವ ಸುಖೋಪಭೋಗಕ್ಕೂ ವಿಘ್ನವಿಲ್ಲ'' ಎಂದು ಹೇಳಲು, ಕಮಲಾಕ್ಷನು ನಿರುಪಾಯನಾಗಿ ಸುಮ್ಮನಾದನು.

ಹೀಗೆ ಇರಇರುತ್ತ ಒಂದು ದಿನ ಕಮಲಾಕ್ಷನು ಇಳಿಹೊತ್ತಿನಲ್ಲಿ ವಸ್ತ್ರಾಲಂಕಾರಗಳಿಂದ ಅಲಂಕೃತನಾಗಿ, ಕುದುರೆಯನ್ನೇರಿ ವ್ಯಾಯಾಮ ಮಾಡುವದಕ್ಕಾಗಿ ನಿತ್ಯಕ್ರಮದಂತೆ ಊರ ಹೊರಗೆ ಹೋದನು. ಅವನು ಕೆಲವು ಅಂತರವನ್ನು ಕ್ರಮಿಸಿ ಹೋದಮೇಲೆ ಒಂದು ಮರದ ಕೆಳಗೆ, ಮಾರ್ಗಶ್ರಮವನ್ನು ಕಳೆದುಕೊಳ್ಳುತ್ತ ಕುಳಿತಿರುವ ಇಬ್ಬರು ಚಲುವರಾದ ಪುರುಷರನ್ನು ನೋಡಿದನು. ಅವರ ಬಳಿಯಲ್ಲಿ ಲಾವಣ್ಯಯುಕ್ತನಾದ ಒಬ್ಬ ಹುಡುಗನು ಆಡುತ್ತಿದ್ದನು. ಆ ಹುಡುಗನ ಚಾಪಲ್ಯಕ್ಕೂ, ಚಲ್ವಿಕೆಗೂ ಕಮಲಾಕ್ಷನು ಬೆರಗಾದದ್ದಲ್ಲದೆ, ಅವನನ್ನು ಅಪ್ಪಿಕೊಳ್ಳುವ ಇಚ್ಛೆಯು ಕಮಲಾಕ್ಷನಿಗಾಯಿತು. ಕಾರಣ ಅವನು ಮುಂದಕ್ಕೆ ಒಂದು ಹೆಜ್ಜೆಯನ್ನು ಸಹ ಇಡದೆ, ಅಲ್ಲಿಯೇ ಕುದುರೆಯನ್ನಿಳಿದು, ಮರದ ಕೆಳಗೆ ಕುಳಿತಿರುವ ಪುರುಷರನ್ನು ತನ್ನ ಪ್ರಾಣಪ್ರಿಯರಾದ ಪದ್ಮನಯನಾ–ಜೀವನಕಲೆಯರೆಂದು ತಿಳಿಯದೆ, ನಿಜವಾದ ಪುರುಷರೇ ಎಂದು ತಿಳಿದು, ಮರ್ಯಾದಾರ್ಥವಾಗಿ ತಲೆವಾಗಿ ಅವರಿಗೆ ನಮಸ್ಕಾರ ಮಾಡಿದನು. ಪತಿವ್ರತಾಶಿಖಾಮಣಿಗಳಾದ ಪದ್ಮನಯನಾ–ಜೀವನಕಲೆಯರು, ಕಮಲಾಕ್ಷನು ಹತ್ತರ ಬಂದಕೂಡಲೆ, ತಮ್ಮ ತೀಕ್ಷ್ಣವಾದ ಬುದ್ಧಿಸಾಮರ್ಥ್ಯದಿಂದ ಅವನನ್ನು ತಮ್ಮ ಪತಿಯೆಂದು ಕೂಡಲೆ ಗೊತ್ತುಹಿಡಿದರು. ಆಗ ಅವರಿಗಾದ ಆನಂದವನ್ನು ಯಾರು ವರ್ಣಿಸುವರು!! ಆನಂದದ ಭರದಲ್ಲಿ ಅವರಿಗೆ ತಮ್ಮ ಪತಿಯನ್ನು ಅಪ್ಪಿಕೊಳ್ಳುವ ಕುತೂಹಲವು ಉತ್ಪನ್ನವಾಯಿತು. ಆದರೆ ಮನೋನಿಗ್ರಹ ಧುರೀಣರಾದುದರಿಂದ, ಅವರು ಹಾಗೆ ಮಾಡದೆ, ತಮ್ಮ ಮನಸ್ಸನ್ನು ಬಿಗಿ ಹಿಡಿದರು. ಸಂತೋಷದಿಂದ ಅವರ ಮೈಮೇಲಿನ ಕೂದಲಗಳು ನೆಟ್ಟಗಾದವು; ಆನಂದ ಬಾಷ್ಪಗಳು ಉದರಹತ್ತಿದವು; ಪ್ರಿಯನ ಮುಖಾವಲೋಕನದಿಂದ ಅವರ ಹೊಟ್ಟೆಯೊಳಗಿನ ದುಃಖವು ಪ್ರಕಟವಾಗುತ್ತಿತ್ತು, ಆದರೂ ಅವರು ಬಹು ಪ್ರಯಾಸ ದಿಂದ ತಮ್ಮ ಮನೋಭಾವಗಳನ್ನು ಮುಚ್ಚಿಕೊಂಡು, ಕಮಲಾಕ್ಷನನ್ನು ಮರ್ಯಾದೆಯಿಂದ ಮೇಲೆ ಕುಳ್ಳಿರಿಸಿದರು. ಪರಸ್ಪರ ಕುಶಲ ಪ್ರಶ್ನೆಗಳು ನಡೆದಿರಲು, ಸಮೀಪದಲ್ಲಿಯೇ ಆಡುತ್ತಿದ್ದ ವಿಕ್ರಮಾರ್ಕನು ಓಡುತ್ತ ಬಂದು, ಕಮಲಾಕ್ಷನ ಮೇಲೆ ಬಿದ್ದನು. ಕೂಡಲೆ ಕಮಲಾಕ್ಷನು ವಿಕ್ರಮಾರ್ಕನನ್ನು ಹಿಡಿದೆತ್ತಿ ಮುದ್ದಿಡುತ್ತ ಅವನನ್ನು ಬಿಗಿಯಾಗಿ ಅಪ್ಪಿಕೊಂಡನು. ಆಮೇಲೆ ಆವನು ಅವರೆಲ್ಲರನ್ನು ಆಗ್ರಹದಿಂದ ತನ್ನ ಮನೆಗೆ ಕರತಂದನು. ಆಗ ಸುಮತಿಯು ಸುರೂಪಿಗಳಾದ ಆ ಇಬ್ಬರು ಪುರುಷರನ್ನೂ, ಪ್ರೀತಿಗೆ ಪಾತ್ರನಾದ ವಿಕ್ರಮಾರ್ಕನನ್ನೂ

ನೋಡಿ, ಬೆರಗಾದದ್ದಲ್ಲದೆ, ಅವರ ದೊಡ್ಡಸೈನ್ಯವನ್ನು ನೋಡಿ, ಇವರು ಯಾರೋ ರಾಜಪುತ್ರರಿರಬಹುದೆಂದು ತರ್ಕಿಸಿದನು.

ಪದ್ಮನಯನಾ–ಜೀವನಕಲೆಯರು, ತಮ್ಮ ಪತಿಯು ಆಕಸ್ಮಿಕವಾಗಿ ದೊರೆತದ್ದಕ್ಕಾಗಿ ದೇವರನ್ನು ಮನಸ್ಸಿನಲ್ಲಿ ಕೊಂಡಾಡುತ್ತ ತಮ್ಮ ಪುರುಷ ವೇಷವನ್ನು ಬಿಟ್ಟು ಲಾವಣ್ಯಯುಕ್ತವಾದ ತಮ್ಮ ಸ್ತ್ರೀರೂಪದಿಂದ ಕಮಲಾಕ್ಷ–ಸುಮತಿಗಳಿಗೆ ಭೆಟ್ಟಿಯಾದರು. ಆಗ ಕಮಲಾಕ್ಷನು ಸಾನಂದಾಶ್ಚರ್ಯದಿಂದ ಸಂಶಯದೊಡನೆ ಅವರನ್ನು ನೋಡುತ್ತಿರಲು, ಪದ್ಮನಯನೆಯು ಅವನನ್ನು ಆಲಿಂಗಿಸಿ—''ಪ್ರಾಣವಲ್ಲಭರೇ, ಈ ಅನಾಥ ಅಬಲೆಯರ ಪರಿಚಯವು ಇನ್ನೂ ತಮಗೆ ಹತ್ತಲೊಲ್ಲದೊ?'' ಎಂದು ಕಣ್ಣೀರಿನಿಂದ ಅವನ ಹೃದಯವನ್ನು ತೋಯಿಸಿದಳು. ಆಗ ಕಮಲಾಕ್ಷನು ಆನಂದಪರವಶನಾಗಿ, ಜೀವನಕಲಾ–ಪದ್ಮನಯನೆಯರನ್ನು ಎಡಬಲ ಪಾರ್ಶ್ವಗಳಲ್ಲಿ ಕುಳ್ಳಿರಿಸಿಕೊಂಡು ತನ್ನ ದೋತರದ ಸೆರಗಿನಿಂದ ಅವರ ಕಣ್ಣುಗಳನ್ನು ಒರಿಸುತ್ತ—''ಹರಿಣಾಕ್ಷಿಯರೇ, ನಿಮ್ಮ ದುಃಖವನ್ನು ಸಾಕುಮಾಡಿರಿ. ಇಲ್ಲಿಯವರೆಗೆ ನೀವು ಅನುಭವಿಸಿದ ದುಃಖಗಳು ಸಾಕಾಗಲಿಲ್ಲವೇ?'' ಎಂದು ಹೇಳಿ ಅವರನ್ನು ಸಮಾಧಾನಗೊಳಿಸಿದನು. ಜೀವನಕಲೆಯ ಮುಖದಿಂದ ಪದ್ಮನಯನೆಯ ಅದ್ಭುತವಾದ ಪಾತಿವ್ರತ್ಯವನ್ನು ಕೇಳಿ, ಕಮಲಾಕ್ಷನೂ, ಸುಮತಿಯೂ ಆಶ್ಚರ್ಯಪಟ್ಟು, ಸಮಾಧಾನವನ್ನು ಹೊಂದಿದರು. ಸುಮತಿಯು ತನ್ನ ಸಲುವಾಗಿ ಇಷ್ಟು ಕಷ್ಟಪಟ್ಟನೆಂದು ತಿಳಿದು, ಪದ್ಮನಯನೆಯು ಅವನನ್ನು ಕೊಂಡಾಡಿದಳು. ವಿಕ್ರಮಾರ್ಕನು ಕಮಲಾಕ್ಷನ ಮಗನೆಂಬದನ್ನು ತಿಳಿದು ಎಲ್ಲರೂ ಆನಂದಪಟ್ಟರು.

ಹಲವು ಕಷ್ಟಗಳನ್ನು ಅನುಭವಿಸಿ, ಪುನಃ ಪತಿಯನ್ನು ಹೊಂದಿದ್ದಕ್ಕಾಗಿ ಪದ್ಮನಯನೆಗೆ ಪರಮಾನಂದವಾಯಿತು. ಅವಳು ಏಕಾಂತದಲ್ಲಿ ಪತಿಯನ್ನು ಕಣ್ಣುತುಂಬಾ ನೋಡಲು ಬಯಸುತ್ತಿದ್ದಳು. ಧೂರ್ತಳಾದ ಜೀವನಕಲೆಯು ಈ ಸಂಗತಿಯನ್ನು ತಿಳಿದು, ಆವೊತ್ತಿನ ರಾತ್ರಿ ಪದ್ಮನಯನೆಯನ್ನು ಕಮಲಾಕ್ಷನ ಏಕಾಂತವಾಸಕ್ಕಾಗಿ ಆಗ್ರಹದಿಂದ ಕಳಿಸಿದಳು. ಪದ್ಮನಯನೆಯ ಪ್ರೇಮವು ಕಮಲಾಕ್ಷನ ಮೇಲೆ ಮಿತಿಮೀರಿ ಇತ್ತು. ಅದರಿಂದಲೇ ಅವಳು ಹಲವು ಸಂಕಟಗಳು ಬಂದಾಗೂ ಅವನ್ನೆಲ್ಲ ತಾಳಿಕೊಂಡು, ನಿಷ್ಕಲಂಕವಾದ ಭಕ್ತಿಯಿಂದ ಪತಿಯ ಸಮಾಗಮವನ್ನು ಎದುರು ನೋಡುತ್ತಿದ್ದಳು. ಪತಿಯ ಮುಖವನ್ನು ಏಕಾಂತದಲ್ಲಿ ನೋಡಿದ ಕೂಡಲೇ ಆಕೆಯ ಮನದ ನೋವುಗಳೆಲ್ಲ ಇಲ್ಲದಂತಾದವು; ಆಕೆಯ ಮುಖಕಮಲವು ಪ್ರಫುಲ್ಲಿತವಾಯಿತು; ಆನಂದವೃತ್ತಿಯು ಉಕ್ಕೇರಿತು. ಅವಳು ತಟ್ಟನೆ ಹಾಯ್ದು ಪತಿಯ ಕೊರಳಿಗೆ ಬಿದ್ದಳು. ಅವರಿಬ್ಬರ ವಿಯೋಗವಾಗಿ ಬಹಳ ದಿವಸಗಳಾಗಿದ್ದರೂ, ಪರಸ್ಪರರ ಪ್ರೇಮ ಭಾವವು ಕುಂದಿದ್ದಿಲ್ಲ ಇದೇ ನಿಜವಾದ ಪ್ರೇಮದ ಲಕ್ಷಣವು. ಆ ಪ್ರೇಮವೇ ಅವರಿಬ್ಬರನ್ನು ಎಳೆದು ತಂದು ಕೂಡಿಸಿತೆಂಬದಕ್ಕೆ ಸಂದೇಹವಿಲ್ಲ. ಕಮಲಾಕ್ಷನು ಪದ್ಮನಯನೆಯನ್ನು ಅತ್ಯಾದರದಿಂದ ಹಲವುಸಾರೆ ಚುಂಬಿಸಿದನು. ಆ ದಂಪತಿಗಳು ಪರಸ್ಪರರ ವಿಯೋಗವಾದಮೇಲೆ ತಮಗೆ ಒದಗಿದ ಕಥೆಗಳನ್ನು ಹೇಳಲಾರಂಭಿಸಿ, ಪ್ರೇಮಪೂರಿತವಾದ ಮನಸ್ಸಿನಿಂದ ಮಾತಾಡುತ್ತ ಮಲಗಿರಲು, ಬೆಳಗಾದರೂ ಅವರ ಕಥೆಗಳು ಮುಗಿಯಲಿಲ್ಲ. ಮರುದಿವಸವೇ ಕಮಲಾಕ್ಷನು

ಎಲ್ಲರನ್ನು ಕರಕೊಂಡು, ತನ್ನ ತಂದೆಯ ದರ್ಶನಕ್ಕಾಗಿ ಉಜ್ಜಯನಿಗೆ ಹೊರಟನು.

ಪುತ್ರವಿಯೋಗ ದುಃಖದಿಂದ ಕ್ಷೀಣವಾಗುತ್ತ ನಡೆದಿದ್ದ ಸುಲೋಚನ ರಾಜನು ತನ್ನ ಮಗನಾದ ಕಮಲಾಕ್ಷನು ಸತೀ ಪುತ್ರರೊಡನೆ ಅಕಲ್ಪಿತವಾಗಿ ಬಂದದ್ದನ್ನು ನೋಡಿ ಧನ್ಯನಾದನು. ಮೊಮ್ಮಗನಾದ ವಿಕ್ರಮಾರ್ಕನನ್ನು ನೋಡಿ, ಅವನಿಗಾದ ಆನಂದವು ಅವನ ಹೊಟ್ಟೆಯಲ್ಲಿ ಹಿಡಿಸದಾಯಿತು. ಸುಶರ್ಮನು ತನ್ನ ಮಗಳಾದ ಯಶೋದೆಯನ್ನು ಕಮಲಾಕ್ಷನ ಮಿತ್ರನಾದ ಸುಮತಿಗೆ ಸಮಾರಂಭದಿಂದ ಲಗ್ನ ಮಾಡಿಕೊಟ್ಟನು. ಕಮಲಾಕ್ಷನು ಸತೀಪುತ್ರ ಮಿತ್ರರನ್ನೊಡಗೊಂಡು ಉಜ್ಜಯನಿಯಲ್ಲಿ ಒಂದು ತಿಂಗಳು ಇದ್ದು ತರುವಾಯ ತನ್ನ ತಂದೆಯ ಅಪ್ಪಣೆಯನ್ನು ಪಡೆದು, ತನ್ನ ಮಾವನಾದ ವೀರವರ್ಮನ ದರ್ಶನಕ್ಕಾಗಿ ಕನೋಜ ಪಟ್ಟಣಕ್ಕೆ ಹೊರಟನು. ಆಗ ಪದ್ಮನಯನೆಯೂ, ಜೀವನಕಲೆಯೂ, ವಿಕ್ರಮಾರ್ಕನೂ, ಸುಮತಿಯೂ, ಕೆಲವು ಸೈನ್ಯವೂ ಅವನನ್ನು ಹಿಂಬಾಲಿಸಿದವು.

ಇತ್ತ ಕನೋಜರಾಜ್ಯದಲ್ಲಿ ವೀರವರ್ಮನ ಹಿತಶತ್ರುವಾದ ದುಷ್ಟಬುದ್ಧಿಯು ಕನೋಜ ಪಟ್ಟಣಕ್ಕೆ ಮುತ್ತಿಗೆ ಹಾಕಿದನು. ಆಗ ವೀರವರ್ಮನು ಅವನನ್ನು ಓಡಿಸಲು ವಿಶ್ವಪ್ರಯತ್ನ ಮಾಡಿದಾಗೂ ಆ ಕೆಲಸವು ಕೈಗೂಡಲಿಲ್ಲ. ಉಭಯ ಸೈನ್ಯಗಳಲ್ಲಿಯೂ ಹಲವು ಸರದಾರರೂ, ಆನೆ ಕುದುರೆಗಳೂ, ಶೂರರಾದ ರಥಿಕರೂ, ಕಾಲಾಳುಗಳೂ ಕಾಲಾಧೀನವಾದರು. ಕಡೆಯಲ್ಲಿ ದುಷ್ಟಬುದ್ಧಿಗೇ ಜಯವಾಗುವ ಲಕ್ಷಣತೋರಹತ್ತಿತು. ಆಗ ವೀರವರ್ಮನು ಕಮಲಾಕ್ಷನನ್ನು ನೆನಿಸಿ ದುಃಖಿಸಿದನು. ಅವನು ಮನದಲ್ಲಿ ''ಈ ಕಾಲಕ್ಕೆ ನನ್ನ ಶೂರ ಸರದಾರನಾದ ಕಮಲಾಕ್ಷನು ಇದ್ದರೆ, ಅವನು ಈ ವೈರಿಗಳನ್ನು ಲೆಕ್ಕಿಸುತ್ತಿದ್ದನೇ? ವೃದ್ಧಾಪ್ಯದಲ್ಲಿ ನಾನು ಹಗೆಗಳ ಆಧೀನವಾಗಬೇಕಾಯಿತು! ಇನ್ನೇನು ಮಾಡಲಿ?'' ಎಂದು ಚಿಂತೆ ಮಾಡುತ್ತಿರಲು, ಸೇವಕರು ವೀರವರ್ಮನ ಬಳಿಗೆ ಬಂದು ಕೈಜೋಡಿಸಿ ನಿಂತು—''ರಾಜಾಧಿ ರಾಜರೇ, ಉನ್ಮತ್ತನಾಗಿ ನಮ್ಮ ಪಟ್ಟಣವನ್ನು ಸ್ವಾಧೀನಮಾಡಿಕೊಳ್ಳಲು ಯತ್ನಿಸಿದ್ದ ದುಷ್ಟಬುದ್ಧಿಯನ್ನು ಯಾವನೋ ಒಬ್ಬ ಪುಣ್ಯವಂತನು ಕೆಲವು ಸೈನ್ಯದೊಡನೆ ಕಲಿತನದಿಂದ ಕಾದಿ ಸೋಲಿಸಿದನು.'' ಅವನ ಪರಾಕ್ರಮಕ್ಕೆ ಈಡಾಗದೆ ವೈರಿಯು ಓಡಿದನು.'' ಎಂದು ಹೇಳಿದನು. ಅದನ್ನು ಕೇಳಿ ವೀರವರ್ಮನು ಸಂತೋಷಪಟ್ಟು, ತನಗೆ ಮಹದುಪಕಾರ ಮಾಡಿದ ಪುಣ್ಯವಂತನ ದರ್ಶನಕ್ಕಾಗಿ ಸಮಾರಂಭದಿಂದ ಹೊರಟನು.

ವೀರವರ್ಮನ ವೈರಿಗಳನ್ನು ಓಡಿಸಿದ್ದ ವೀರನು ಕಮಲಾಕ್ಷನೇ ಆಗಿದ್ದನು. ಕಮಲಾಕ್ಷನು ತನ್ನ ಸತಿ–ಪುತ್ರ–ಮಿತ್ರರನ್ನು ಕೂಡಿಕೊಂಡು ಕನೋಜ ಪಟ್ಟಣಕ್ಕೆ ಬರುತ್ತಿರಲು, ಮಾರ್ಗದಲ್ಲಿ—''ವೈರಿಗಳು ಕನೋಜ ಪಟ್ಟಣಕ್ಕೆ ಮುತ್ತಿಗೆ ಹಾಕಿ, ಅದನ್ನು ಸ್ವಾಧೀನ ಮಾಡಿಕೊಳ್ಳಲು ಯತ್ನಿಸಿದ್ದಾರೆಂ''ಬ ವರ್ತಮಾನವು ಅವನಿಗೆ ಹತ್ತಿದ್ದರಿಂದ, ಅವನು ತನ್ನ ದಂಡನ್ನು ತೆಗೆದುಕೊಂಡು, ಯುದ್ಧಕ್ಕೆ ನಿಂತು, ವೈರಿಗಳನ್ನು ಓಡಿಸಿದನು. ವೀರವರ್ಮನು ತನ್ನನ್ನು ಕಾಣುವದಕ್ಕೆ ಬರುವನೆಂಬದನ್ನು ತಿಳಿದು ಕಮಲಾಕ್ಷನು ಪಾದಚಾರಿಯಾಗಿ ಆತನ

ಎದುರಿಗೆ ಹೋದನು. ವೀರವರ್ಮನು ಹತ್ತರ ಬಂದಕೂಡಲೆ ಕಮಲಾಕ್ಷನು ಅವನಿಗೆ ಸಾಷ್ಟಾಂಗ ನಮಸ್ಕಾರವನ್ನು ಮಾಡಿ, ಬಹು ವಿನಯದಿಂದ ನಿಂತುಕೊಳ್ಳಲು, ಅರಸನು ಕಮಲಾಕ್ಷನನ್ನು ನೋಡಿ ಇವನೇ ತನ್ನ ವೈರಿಗಳನ್ನು ಓಡಿಸಿದನೆಂದು ತಿಳಿದು ಗಂಭೀರ ಮುದ್ರೆಯಿಂದ—''ಕಮಲಾಕ್ಷಾ, ಕಡೆಗೆ ನನ್ನ ಸಂಕಟ ನಿವಾರಣಕ್ಕೆ ನೀನೇ ಕಾರಣನಾದೆಯಾ!! ದೇವರು ನಿನಗೆ ಕಲ್ಯಾಣ ಮಾಡಲಿ ನೀನೇ ನನ್ನ ಪುತ್ರನು ಈ ಎಲ್ಲ ರಾಜ್ಯವು ನಿನ್ನದೇ ಇರುತ್ತದೆ. ಪ್ರಜಾ ಪಾಲನ ರೂಪವಾದ ಹೊರೆಯನ್ನು ಹೊರಲಾರದೆ ದಣಿದಿರುವ ನನ್ನನ್ನು ಹೊರೆಯಿಳಿಸಿ ಕೊಂಡು ನಿಶ್ಚಿಂತನಾಗಿ ಮಾಡು, ಎಂದು ಹೇಳಿ ಅವನನ್ನು ಕೊಂಡಾಡಿದನು. ಕಮಲಾಕ್ಷನು ವಿನಯಪೂರ್ವಕವಾಗಿ ವೀರವರ್ಮನನ್ನು ತನ್ನ ಬಿಡಾರಕ್ಕೆ ಕರಕೊಂಡು ಬರಲು, ಪದ್ಮನಯನೆಯೂ, ಜೀವನಕಲೆಯೂ, ವಿಕ್ರಮಾರ್ಕನೂ ಅವನ ಚರಣಗಳಿಗೆ ಪೊಡಮೊಟ್ಟರು. ಆಗ್ಗೆ ಆ ವೃದ್ಧ ನೃಪತಿಯ ಸ್ಥಿತಿಯು ಹೇಗಾಗಿರಬಹುದೆಂಬದನ್ನು ಸಹೃದಯದ ವಾಚಕರೇ ತರ್ಕಿಸಬಹುದು. ಆನಂದದಿಂದ ಅವನ ಮೈ ಉಬ್ಬಿ, ಬಾಷ್ಪಗಳು ಉದುರಹತ್ತಿದವು. ಅವನು ಭ್ರಮಿಷ್ಟನಂತೆ ಆಡಹತ್ತಿದನು ಅವನಿಗೆ ಇದೆಲ್ಲ ಸ್ವಪ್ನವೆಂಬಂತೆ ತೋರಹತ್ತಿತು. ಆನಂದದ ಭರವು ಕೆಲಮಟ್ಟಿಗೆ ಕಡಿಮೆಯಾದ ಬಳಿಕ, ವೀರವರ್ಮನು ಪುತ್ರಿಯಾದ ಪದ್ಮನಯನೆಯನ್ನು ಕುರಿತು—''ಪದ್ಮನಯನೇ, ಇತ್ತ ಬಾ. ನನಗೆ ನಿನ್ನ ಮುಖ ಕಮಲವನ್ನು ತೋರಿಸು! ಇಂದಿಗೆ ನಾನೇ ಧನ್ಯನು! ನಿನ್ನ ವಿಯೋಗ ತಾಪದಿಂದ ಸಂತಪ್ತವಾದ ನನ್ನ ಶರೀರವನ್ನು ನಿನ್ನ ದರ್ಶನರೂಪವಾದ ಜಲವು ಶಾಂತ ಮಾಡಿದ್ದರಿಂದ ನಾನು ಕೃತ ಕೃತ್ಯನಾದೆನು.'' ಎಂದು ಅವನು ಮೈಮೇಲೆ ಪ್ರೀತಿಯಿಂದ ಕೈಯಾಡಿಸಿ ಕುರುಗಳನ್ನು ತೀಡಿದನು.

ಈ ಪ್ರಕಾರ ವೀರವರ್ಮನು ಸಂತುಷ್ಟನಾಗಿರಲು, ಸುಮತಿಯು ಅವನಿಗೆ, ಕಮಲಾಕ್ಷನು ಪದ್ಮನಯನಾ–ಜೀವನಕಲೆಯರ ಪತಿಯೆಂತಲೂ, ವಿಕ್ರಮಾರ್ಕನು ಪದ್ಮನಯನೆಯ ಮಗನೆಂತಲೂ ತಿಳಿಸಿದ್ದರಿಂದ, ವೀರವರ್ಮನ ಆನಂದವು ಅಪಾರವಾಯಿತು. ಅವನಿಗೆ ಕಮಲಾಕ್ಷನು ಮೊದಲಿಗಿಂತಲೂ ಅಧಿಕ ಪ್ರಿಯನಾಗಿ ತೋರಿದ್ದು ಆಶ್ಚರ್ಯವಲ್ಲ. ಪದ್ಮನಯನೆಯು ವಿಕ್ರಮಾರ್ಕನನ್ನು ವೀರವರ್ಮನ ಬಳಿಗೆ ಕಳುಹಲು, ಅವನು ದೌಹಿತ್ರನನ್ನು ಪ್ರೇಮ ಪೂರ್ವಕವಾಗಿ ನೋಡಿ ಮುದ್ದಾಡಿದನು. ದೇವದತ್ತನು ಮಾರ್ಗದಲ್ಲಿ ಮರಣ ಹೊಂದಿದ್ದಕ್ಕಾಗಿ ಎಲ್ಲರೂ ದುಃಖಿಸಹತ್ತಿದರು. ತಂದೆಯ ಮರಣದಿಂದ ದುಃಖಪಡುತ್ತಿರುವ ಜೀವನಕಲೆಗೆ ವೀರವರ್ಮನು ಸಮಾಧಾನ ಹೇಳಿ, ಅವಳನ್ನು ತನ್ನ ಮಗಳೆಂದು ತಿಳಿದನು. ತರುವಾಯ ಪರೋಪಕಾರ ದಕ್ಷಕನಾದ ಸುಮತಿಯನ್ನು ಕೊಂಡಾಡುತ್ತ ಅವರೆಲ್ಲರು ಪುರಪ್ರವೇಶಾಭಿಮುಖರಾದರು.

ಪದ್ಮನಯನೆಯು ಪತಿ–ಪುತ್ರ–ಮಿತ್ರರನ್ನು ಕೂಡಿಕೊಂಡು, ಮರಳಿ ಬಂದಳೆಂಬದನ್ನು ಕೇಳಿ ಪೌರರು ಅತ್ಯಾನಂದದಿಂದ ಹಲವು ಪ್ರಕಾರದ ಉತ್ಸವಗಳನ್ನು ಮಾಡಹತ್ತಿದರು. ಆಕೆಯ ತಾಯಿಯಾದ ಮನಮೋಹಿನಿಯು ಆನಂದಮಗ್ನಳಾದಳು. ನೋಡಿದತ್ತ ಆನಂದಪ್ರದವಾದ

ಸುಲಕ್ಷಣಗಳೇ ಕಂಗೊಳಿಸುತ್ತಿದ್ದವು. ಮಂಗಳ ಸ್ವರವು ಹಬ್ಬಿತು. ಯಾಚಕರು ದಾನ ತೆಗೆದುಕೊಂಡು ದಣಿದರು. ಕಮಲಾಕ್ಷನು ಮಾಳವದ ರಾಜ್ಯಕ್ಕೂ, ಕನೋಜದ ರಾಜ್ಯಕ್ಕೂ ತಾನೇ ಒಡೆಯನಾಗಿ ಸುಮತಿಯನ್ನು ಮಂತ್ರಿಯ ಅಧಿಕಾರದಲ್ಲಿ ನಿಯಮಿಸಿಕೊಂಡು ನ್ಯಾಯದಿಂದ ರಾಜ್ಯ ಪರಿಪಾಲನೆಯನ್ನು ಮಾಡಹತ್ತಿದನು. ಸಿಂಹಕೇತುವು ಕಮಲಾಕ್ಷನ ಪರಮ ಮಿತ್ರನಾದನು. ಪದ್ಮನಯನಾ–ಜೀವನಕಲೆಯರು ಸುಶೀಲರೂ, ಜ್ಞಾನ ಸಂಪನ್ನರೂ ಇದ್ದದ್ದಲ್ಲದೆ, ಅವರು ಬಾಲ ಮಿತ್ರರಾದದ್ದರಿಂದ ಅವರಿಂದ ಕಮಲಾಕ್ಷನ ಸುಖವು ಹೆಚ್ಚಳವನ್ನು ಹೊಂದಿತು. ಒಟ್ಟಿಗೆ, ಸತ್ಸಮಾಗಮದಿಂದ ಸತ್ವಶೀಲರಾದ ಅವರೆಲ್ಲರೂ ಕಡೆಗೆ ಸುಖ ಸಾಮ್ರಾಜ್ಯವನ್ನು ಹೊಂದಿದರು. ಅವರ ಚರಿತ್ರ ಶ್ರವಣದಿಂದ ಸರ್ವರೂ ಸುಖ ಸಾಮ್ರಾಜ್ಯವನ್ನು ಹೊಂದುವಂತೆ ಶ್ರೀ ಸದ್ಗುರುವು ಅನುಗ್ರಹಿಸಲಿ!!!

ಸಂಪೂರ್ಣ

ರಾಣೀ–ಮೃಣಾಲಿನಿ

ಪ್ರಸ್ತಾವನೆ

ಈಗ ಸುಮಾರು ಹತ್ತು ಹದಿನೈದು ವರ್ಷಗಳ ಹಿಂದೆ ಈ ಕಾದಂಬರಿಯನ್ನು ''ಮಾಸಿಕ ಮನೋರಂಜನ''ವೆಂಬ ಸುಪ್ರಸಿದ್ಧ ಮರಾಠೀ ಮಾಸಿಕ ಪುಸ್ತಕದಲ್ಲಿ ಮೊಟ್ಟಮೊದಲು ನಾನು ಓದಿದೆನು. ಇದು ಬಲು ಸವಿಯಾದದ್ದು. ಈ ಪಡಿಕಟ್ಟಿನ ಕಾದಂಬರಿಗಳು ವಿರಳವೆಂದು ಹೇಳಬಹುದು. ಅಂತೇ ಇದರ ಕರ್ತೃಗಳಾದ ಪರಲೋಕವಾಸಿ ರಾಯಬಹದ್ದೂರ ಬಾಬು ಬಂಕಿಮಚಂದ್ರ ಚಟರ್ಜಿ ಸಿ. ಆಯ್. ಈ. ಇವರು ಬಂಗಾಲದ ಪ್ರಸಿದ್ಧ ಕಾದಂಬರಿಕಾರರೆಂದು ಎಲ್ಲರಿಂದ ಹೊಗಳಿಸಿ ಕೊಳ್ಳುತ್ತಾರೆ.

''ಮಳೆನಿಂತರೂ ಮರದ ಹನಿ ನಿಲ್ಲಲಿಲ್ಲವೆ''ಂಬಂತೆ, ನಾನು ಕಾದಂಬರಿಯನ್ನು ಓದಿ ಬಿಟ್ಟರೂ, ಓದಿದ್ದರಿಂದ ನನ್ನ ಮನಸ್ಸಿಗಾಗಿದ್ದ ಸುಖವು ನನ್ನನ್ನು ಬಿಟ್ಟು ಹೋಗಲಿಲ್ಲ, ಮೃಣಾಲಿನಿಯ ಸ್ಮರಣವಾದ ಕೂಡಲೆ ನನ್ನ ಮನಸ್ಸು ಪ್ರಸನ್ನವಾಗಹತ್ತಿತು! ಅಹಾ, ಎಂಥ ಮನೋರಮೆಯು—ಎಂಥ ಆಕೆಯ ಮಾಲೆಕಟ್ಟುವ ಪ್ರಸಂಗವು! ಎಂಥ ಮೃಣಾಲಿನಿಯು—ಎಂಥ ಆಕೆಯ ತಲೆಯು ಕಲ್ಲಿಗೆ ಅಪ್ಪಳಿಸೋಣವು! ಎಂಥ ಗಿರಿಜೆಯು—ಎಂಥ ಆಕೆಯ ಆನಂದ ವೃತ್ತಿಯು! ಶಾಬಾಸ್!! ಇಂಥ ರುಚಿವೈಚಿತ್ರ್ಯದ ಪಾತ್ರಗಳ ಸುರಚಿರ–ಚರಿತ್ರ–ಶ್ರವಣದಿಂದ ಯಾರ ಅಂತಃಕರಣವು ಪ್ರಸನ್ನವಾಗಲಿಕ್ಕಿಲ್ಲ?

ಹೀಗೆ ಮೃಣಾಲಿನಿಯು ನನ್ನ ಮನಸ್ಸಿನಲ್ಲಿ ಮನೆಮಾಡಿಕೊಂಡಿರಲು, ವಿದ್ಯಾರ್ಥಿಗಳ ಹಿತಚಿಂತಕರಾದ ನಾಮದಾರ ರಾವಬಹದ್ದೂರ ರೊದ್ದ ಶ್ರೀನಿವಾಸ ರಾಯರವರು ಧಾರವಾಡ ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರಾಗಿರುವಾಗ, ಕಾಲೇಜದ ವಿದ್ಯಾರ್ಥಿಗಳನ್ನು ಮೈಸೂರ ಪ್ರವಾಸಕ್ಕೆ ಕರೆದೊಯ್ದರು. ಆಗ ನಾನೂ ನನ್ನ ಮಿತ್ರರಾದ ರಾ|| ರಾ|| ತಮ್ಮಾಜಿ ನಾರಾಯಣ ಅಮ್ಮಿನಭಾವಿಯವರೂ ಹೋಗಿದ್ದೆವು. ಪ್ರವಾಸಕ್ಕೆ ಹೊರಡುವಾಗ ನಾವಿಬ್ಬರು ಮನಸ್ಸಿನಲ್ಲಿ ಒಂದು ಮಾತು ಗೊತ್ತು ಮಾಡಿಕೊಂಡೆವು; ಗಾಡಿಯಲ್ಲಿ ಹೋಗಹೋಗುತ್ತ 'ಮೃಣಾಲಿನಿ'ಯನ್ನು ಭಾಷಾಂತರಿಸಬೇಕೆಂದು ನಾನು ಗೊತ್ತುಮಾಡಿಕೊಂಡೆನು, ''ಮುರಾರಿರಾವ'' ಎಂಬ ಕಾದಂಬರಿಯನ್ನು ಭಾಷಾಂತರಿಸಬೇಕೆಂದು ಅವರು ಗೊತ್ತುಮಾಡಿಕೊಂಡರು. ದೇವರ ದಯದಿಂದ ಪುಸ್ತಕವು ಮುಗಿದರೆ, ಪ್ರವಾಸದ ಸಂಸ್ಮರಣೆಗಾಗಿ ಅದನ್ನು ನಮ್ಮ ಪ್ರಿನ್ಸಿಪಾಲ ಸಾಹೇಬರಿಗೇ ಅರ್ಪಿಸಬೇಕೆಂದು ನಾನು ಮನಸ್ಸಿನಲ್ಲಿ ಮುಂಡಿಗೆ ತಿಂದಿದ್ದೆನು.

ಪ್ರವಾಸ ತೀರಿಸಿ ತಿರುಗಿ ಬರುವದರೊಳಗೆ ನನ್ನ ಕೆಲಸವು ಅರ್ಧಕ್ಕೆ ನಿಲುಕಹತ್ತಿತು. ಆದರೆ, ಮುಂದೆ ನಾನು ಒಂದು ಅಕ್ಷರವನ್ನಾದರೂ ಬರೆಯದೆ, ಕೆಲಸವನ್ನು ಅಷ್ಟಕ್ಕೇ ಚಲ್ಲಿಕೊಟ್ಟು ಬಿಟ್ಟೆನು. ಯಾವದಕ್ಕಾದರೂ ಯೋಗ ಬರಬೇಕಾಗುತ್ತದೆ. ಹೀಗೆ 2–3 ವರ್ಷ ಮೂಲೆಗೆ ಬಿದ್ದಿದ್ದ ಕೆಲಸವು, ಸದ್ಬೋಧ ಚಂದ್ರಿಕೆಯ ಪುಣ್ಯದಿಂದ ಮತ್ತೆ ಬೈಲಿಗೆ ಬರುವ ಪ್ರಸಂಗವು ಒದಗಿತು. ಚಂದ್ರಿಕೆಯಲ್ಲಿ "ಕಮಲಕುಮಾರಿ" ಎಂಬ ಮನೋಹರ ಕಾದಂಬರಿಯು ಮುಗಿದ ಕೂಡಲೆ, ಅದರ ಸ್ಥಳವನ್ನು ಮೃಣಾಲಿನಿಯಿಂದ ಅಲಂಕರಿಸುವದು ಗೊತ್ತಾಯಿತು.

ಶ್ರೀ ಗುರು ಕೃಪೆಯಿಂದ ಮೃಣಾಲಿನಿಯು ಈಗ ಸದ್ಬೋಧ ಚಂದ್ರಿಕೆಯಲ್ಲಿ ಮುದ್ರಿಸಿ ಪೂರ್ಣವಾಗಿರಲು, ನನ್ನ ಇಚ್ಛೆಗಳೂ ಪೂರ್ಣವಾದಂತಾದವು; ಅಂದರೆ, ನಾಮದಾರರಿಗೆ ಪುಸ್ತಕವನ್ನರ್ಪಿಸಲು ಅನುವು ದೊರೆಯಿತು, ಯಥಾಶಕ್ತಿ ಚಂದ್ರಿಕೆಯ ಅಲಂಕರಣವೂ ಆಯಿತು! ಕುರುಡನಿಗೆ ಬೇಕಾದದ್ದೇನು? ಎರಡು ಕಣ್ಣೇ ಅಲ್ಲವೆ?

ಈ ಕಾದಂಬರಿಯೊಳಗಿನ ಮನೋಹರಮೆಯಂಥ ಉದಾತ್ತ ಪಾತ್ರಗಳಿಂದ ನಾವು ಆತ್ಮಸಂಯಮನಾದಿ ಹಲವು ಉದಾತ್ತಗುಣಗಳ ಮಹತ್ವವನ್ನು ತಿಳಕೊಳ್ಳಬಹುದಾಗಿದೆ. ರಾಜದ್ರೋಹಿಯಾದ ಪಶುಪತಿಗೊದಗಿದ ಯೋಗ್ಯ ಶಾಸನದಿಂದ, ರಾಜದ್ರೋಹಕ್ಕೆ ಯಾರಾದರೂ ಅಂಜಿ ಹೇಸಿಕೊಳ್ಳುವಹಾಗಿದೆ. ಮಾಧವಾಚಾರ್ಯರಂಥ ಗಂಭೀರವಾದ ಪವಿತ್ರ ಪಾತ್ರದಿಂದ ನಾವು ಕರ್ತವ್ಯ ನಿಷ್ಠರಾಗಬಹುದಾಗಿದೆ. ಗಿರಿಜೆ–ದಿಗ್ವಿಜಯರಿಂದ ನಕ್ಕು ನಕ್ಕು, ಇಡೀ ಕಾದಂಬರಿಯನ್ನು ಓದಿ ಆನಂದಸಾಗರದಲ್ಲಿ ಮುಣುಗಬಹುದಾಗಿದೆ.

ಪ್ರಿಯವಾಚಕರೇ, ಹ್ಯಾಗಿದ್ದರೇನು? ಕೆಲಸ ಬಿಟ್ಟು ಅದನ್ನು ನಾನು ಯಾಕೆ ಹೊಗಳುತ್ತ ಕುಳಿತುಕೊಳ್ಳಬೇಕು? ಇಕೋ, ಕಾದಂಬರಿಯಿದೆ, ನೀವಿದ್ದೀರಿ. ನಾನಂತು ಸನ್ಮಾನನೀಯರಾದ ನಮ್ಮ ಕನ್ನಡ ನಾಮದಾರ ಸಾಹೇಬರಿಗೆ ಭಕ್ತಿಪೂರ್ವಕವಾಗಿ ಮೃಣಾಲಿನಿಯನ್ನು ಸಮರ್ಪಿಸಿ, ಅಭಿಮಾನದಿಂದ ಆನಂದಪಡುವೆನು.

ಸದ್ಗುರುವು ಎಲ್ಲರಿಗೂ ಆನಂದವನ್ನೀಯಲಿ.

ಆನಂದವನ ಅಗಡಿ
ತಾ|| ೨೮.೧೨.೧೯೧೧

ಕನ್ನಡಿಗರ ಸೇವಕ
ವೇ. ತಿ. ಕುಲಕರಣಿ
ಗಳಗನಾಥ

ಆಚಾರ್ಯನು

ಮಳೆಗಾಲವು; ಮೂರೂಸಂಜೆಯಾಗಿತ್ತು; ಮಿತಿಮೀರಿ ಮಳೆಯಾದುದರಿಂದ ಗಂಗಾ-ಯಮುನೆಗಳ ಪಾತ್ರಗಳು ತುಂಬಿ ಹೊರಸೂಸುತ್ತಿದ್ದವು. ಯೌವನಭರದಿಂದ ಮರೆಯುತ್ತಿದ್ದ ಅಕ್ಕ—ತಂಗಿಯರಿಬ್ಬರು, ಒಬ್ಬರನ್ನೊಬ್ಬರು ಅಪ್ಪಿಕೊಳ್ಳುವದಕ್ಕೆ ಮುಂದುವರಿಯುವಂತೆ ಅವೆರಡೂ ಹೊಳೆಗಳು ಭರದಿಂದ ಸಾಗಿದ್ದವು; ಗಾಳಿಯಿಂದ ನಡನಡುವೆ ಹುಟ್ಟುತ್ತಿದ್ದ ತೆರೆಗಳಿಂದ ಗಂಭೀರವಾದ ಧ್ವನಿಯು ಹುಟ್ಟುತ್ತಿದ್ದಿತು; ವಿಚಿತ್ರಗತಿಯಿಂದ ಮುಂದಕ್ಕೆ ಸಾಗಿದ್ದ ಆ ಜಲರಾಶಿಯು, ನೋಡುವವರ ಮನಸ್ಸಿನಲ್ಲಿ ಕೌತುಕವನ್ನುಂಟುಮಾಡುತ್ತಿತ್ತು. ಒಟ್ಟಿನ ಮೇಲೆ ಪ್ರಯಾಗ ತೀರ್ಥದ ಆಗಿನ ಶೋಭೆಯು ರಮಣೀಯವೂ, ಪ್ರೇಕ್ಷಣೀಯವೂ ಆಗಿತ್ತು.

ನೋಡುನೋಡವಷ್ಟರಲ್ಲಿ ಮಬ್ಬುಗತ್ತಲಾಯಿತು. ಆ ಮಬ್ಬುಗತ್ತಲೆಯಲ್ಲಿ ಹೊಳೆಯೊಳಗೆ ದೂರದಿಂದ ಬರುತ್ತಿದ್ದ ನಾವೆಯು ದಂಡೆಯ ಮೇಲಿನವರಿಗೆ ಮಸುಮಸುಕಾಗಿ ಕಾಣ ತೊಡಗಿತು. ಅದು ದಂಡೆಯ ಕಡೆಗೆ ಬಂದಬಂದಂತೆ ಹೆಚ್ಚು ಹೆಚ್ಚು ನಿಚ್ಚಳವಾಗಿ ಕಾಣಹತ್ತಿತು. ಮುಂದೆ ಸ್ವಲ್ಪ ಕಾಲದಲ್ಲಿಯೇ ಅದು ದಂಡೆಗೆ ಬರಲು, ಅದರಲ್ಲಿ ಕುಳಿತುಕೊಂಡಿದ್ದ ಇಬ್ಬರು ಪ್ರಾಯಸ್ಥರಲ್ಲಿ ಒಬ್ಬನು ಕೆಳಗಿಳಿದನು. ಇನ್ನೊಬ್ಬನು ನಾವೆಯಲ್ಲಿಯೇ ಕುಳಿತಿದ್ದನು. ಕೆಳಗಿನವನ ವಯಸ್ಸು ಇಪ್ಪತ್ತೈದು ವರ್ಷಕ್ಕಿಂತ ಹೆಚ್ಚು ಇದ್ದಿಲ್ಲ. ಅವನು ತೇಜಸ್ವಿಯೂ, ಪುಷ್ಟವಾದ ಶರೀರವುಳ್ಳವನೂ, ಕಸುವಿನ ಮೈಕಟ್ಟಿನವನೂ ಆಗಿದ್ದನು. ಅವನು ವೀರರಿಗೆ ಒಪ್ಪುವಂಥ ಉಡಿಗೆ-ತೊಡಿಗೆಗಳಿಂದ ಒಪ್ಪುತ್ತಿದ್ದನು.

ಸಂಸಾರ ವಿಷಯದಲ್ಲಿ ಉದಾಸೀನರಾಗಿ, ಈಶ್ವರ ಭಜನೆಯಲ್ಲಿ ಕಾಲಹರಣ ಮಾಡುವಂಥ ಸನ್ಯಾಸಿಗಳು, ತಪಸ್ವಿಗಳು ಮೊದಲಾದವರ ಸಣ್ಣ-ದೊಡ್ಡ ಆಶ್ರಮಗಳು, ಆ ಪ್ರಯಾಗಕ್ಷೇತ್ರದಲ್ಲಿ ಗಂಗಾ-ಯಮುನೆಗಳ ದಂಡೆಗುಂಟ ಹಲವು ಇದ್ದವು. ಅವುಗಳಲ್ಲಿ ಒಂದು ಆಶ್ರಮವನ್ನು ನಮ್ಮ ಪ್ರಾಯಸ್ಥನು ಹೊಕ್ಕನು. ಆಗ ಆ ಆಶ್ರಮದಲ್ಲಿ ಒಬ್ಬ ದಿನ ಹೋದ ಬ್ರಾಹ್ಮಣನು ಗೋಮುಖಿಯಲ್ಲಿ ಕೈ ಹಾಕಿಕೊಂಡು ಜಪಮಾಡುವದರಲ್ಲಿ ಮಗ್ನನಾಗಿದ್ದನು. ಬ್ರಾಹ್ಮಣನು ಮುದುಕನೂ, ವಿರಕ್ತನೂ ಆಗಿದ್ದರೂ, ಅವನ ಗಂಭೀರ ಮುದ್ರೆಯನ್ನೂ, ಕೆಂಪಡರಿದ ಕಣ್ಣುಗಳನ್ನೂ ನೋಡಿದರೆ, ನೋಡುವವರ ಮನಸ್ಸಿನಲ್ಲಿ ಪೂಜ್ಯಭಾವಯುಕ್ತವಾದ ಭಯವು ಉತ್ಪನ್ನವಾಗುತ್ತಿತ್ತು. ಆಗಂತುಕನೊಬ್ಬನು ತನ್ನ ಮಠದಲ್ಲಿ

ಬಂದದ್ದನ್ನು ತಿಳಿದು ಆ ಬ್ರಾಹ್ಮಣನು ಮುಖವೆತ್ತಿ ಅವನನ್ನು ನೋಡಿ ಮುಗುಳುನಗೆ ನಕ್ಕನು. ಆಗ ಪ್ರಾಯಸ್ಥನು ವಿನಯದಿಂದ ಬ್ರಾಹ್ಮಣನಿಗೆ ನಮಸ್ಕರಿಸಿ, ಒಂದು ಬದಿಗೆ ಸರಿದು ನಿಂತುಕೊಳ್ಳಲು, ಬ್ರಾಹ್ಮಣನು ಅವನನ್ನು ಆಶೀರ್ವದಿಸಿ—

ಬ್ರಾಹ್ಮಣ—ಹೇಮಚಂದ್ರಾ, ನಾನು ಬಹುದಿವಸದಿಂದ ನಿನ್ನ ಹಾದಿಯನ್ನು ನೋಡುತ್ತಿರುವೆನು.

ಹೇಮಚಂದ್ರ—ಗುರುಗಳೇ, ಕ್ಷಮಿಸಬೇಕು. ನಾನು ದಿಲ್ಲಿಗೆ ಹೋದುದರಿಂದ ಪ್ರಯೋಜನವಾಗುವದು ಒತ್ತಟ್ಟಿಗೆ ಉಳಿದು, ತಿರುಗಿ ಮುಸಲ್ಮಾನರೇ ನನ್ನನ್ನು ಹಿಡಿಯುವದಕ್ಕೆ ಹೊಂಚುಹಾಕಿದ್ದರು; ಆದುದರಿಂದ ನಾನು ಎಚ್ಚರದಿಂದ ಗುಪ್ತವಾಗಿ ತಮ್ಮೆಡೆಗೆ ಬರಬೇಕಾಯಿತು. ತಮ್ಮ ದರ್ಶನವನ್ನು ತಕ್ಕೊಳ್ಳುವದರಲ್ಲಿ ತಡವಾಗಲಿಕ್ಕೆ ಇದೇ ಕಾರಣವು.

ಬ್ರಾಹ್ಮಣ—ದಿಲ್ಲಿಯೊಳಗಿನ ಸುದ್ದಿಯನ್ನೆಲ್ಲ ನಾನು ಕೇಳಿರುವೆನು. ಬಖತ್ಯಾರ ಖಿಲಜಿಯು ಆನೆಯ ಕಾಲಲ್ಲಿ ಸಿಕ್ಕು ಸಾಯುತ್ತಿದ್ದನಂತೆ. ಸತ್ತಿದ್ದರೆ ಬಹಳ ಒಳಿತಾಗುತ್ತಿತ್ತು. ಆ ಗೋ-ಬ್ರಾಹ್ಮಣರ ವೈರಿಯು ಪಶುವಿನಿಂದ ಮರಣಹೊಂದುತ್ತಿರಲು, ನೀನೇಕೆ ಅವನನ್ನು ಉಳಿಸಿದೆ?

ಹೇಮಚಂದ್ರ—ಯುದ್ಧದಲ್ಲಿ ಎದುರಾಗಿ ಅವನ ಪ್ರಾಣಹರಣ ಮಾಡಬೇಕೆಂಬ ಉದ್ದೇಶದಿಂದಲೇ ಆಗ ನಾನು ಅವನನ್ನು ಬದುಕಿಸಿದೆನು. ಬಖತ್ಯಾರನು ನನ್ನ ತಂದೆಯ ವೈರಿಯಾಗಿದ್ದಾನೆ. ಆ ದುಷ್ಟನು ನನ್ನ ತಂದೆಯ ರಾಜ್ಯವನ್ನು ಹರಣ ಮಾಡಿರುವನು. ಅವನ ಜೀವವನ್ನು ಹಿಂಡಿದಹೊರತು ನನಗೆ ಸಮಾಧಾನವಾಗಲರಿಯದು.

ಬ್ರಾಹ್ಮಣ—ಹೀಗಿದ್ದರೆ, ಆ ದುಷ್ಟನ ಮೇಲೆ ಏರಿಹೋದ ಮದ್ದಾನೆಯನ್ನು ನೀನೇಕೆ ಕೊಂದೆ?

ಹೇಮ—ಕಳ್ಳನಹಾಗೆ ನಾನೇಕೆ ಅವನ ಕುತ್ತಿಗೆಯನ್ನು ಕೊಯ್ದೇನು! ಈ ಕೆಲಸವು ಹೇಮಚಂದ್ರನಿಂದ ಪ್ರಾಣಾಂತ್ಯದಲ್ಲಾದರೂ ಆಗದು. ನಾನು ಮಗಧ ರಾಜನ ರಕ್ತದಿಂದ ಜನಿಸಿದ್ದರೆ, ನನ್ನ ತಂದೆಯ ರಾಜ್ಯವನ್ನು ಹರಣಮಾಡಿರುವ ಆ ಬಖತ್ಯಾರನಿಗೆ ಸಮರಾಂಗಣದಲ್ಲಿ ಎದುರಾಗಿ ಸೈನ್ಯಸಹಿತವಾಗಿ ಅವನನ್ನು ಸಂಹರಿಸಿ ನನ್ನ ರಾಜ್ಯವನ್ನು ಕಸಿದುಕೊಳ್ಳುವೆನು. ಹೀಗೆ ಮಾಡದಿದ್ದರೆ, ನನ್ನ ಕುಲಕ್ಕೂ, ಶೀಲಕ್ಕೂ ಕಳಂಕವುಂಟಾಗುವದು.

ಹೇಮಚಂದ್ರನ ಈ ಮಾತುಗಳನ್ನು ಕೇಳಿ ಬ್ರಾಹ್ಮಣನು ಕೆಲವು ಹೊತ್ತು ಸುಮ್ಮನಿದ್ದು ಆಮೇಲೆ—

ಬ್ರಾಹ್ಮಣ—ನೀನು ದಿಲ್ಲಿಯನ್ನು ಬಿಟ್ಟು ಬಹಳ ದಿವಸಗಳಾದವು; ನಿಜವಾಗಿ ನೋಡಿದರೆ, ನೀನು ಇದಕ್ಕೂ ಕೆಲವು ದಿನ ಮೊದಲೇ ಇಲ್ಲಿ ಇರಬಹುದಾಗಿತ್ತು. ಹೀಗಿದ್ದು ಇಷ್ಟು ವಿಳಂಬವಾದ ಕಾರಣವೇನು? ನೀನು ಮಥುರೆಗೆ ಹೋಗಿದ್ದಿಲ್ಲವಷ್ಟೇ?

ಬ್ರಾಹ್ಮಣನ ಈ ಮಾತುಗಳನ್ನು ಕೇಳಿ ಹೇಮಚಂದ್ರನು ತಲೆಬಾಗಿಸಿಕೊಂಡು ಸುಮ್ಮನೆ ನಿಂತುಕೊಂಡನು. ಆಗ ಬ್ರಾಹ್ಮಣನು—

ಬ್ರಾಹ್ಮಣ—ಹೀಗೋ? ನೀನು ಮಥುರೆಗೆ ಹೋಗಿದ್ದೆಯೋ? ಮಥುರೆಗೆ ಹೋಗ ಬೇಡೆಂದು ನಾನು ಖಂಡಿತವಾಗಿ ನಿನಗೆ ಹಲವು ಸಾರೆ ಹೇಳಿದ್ದರೂ, ಅದನ್ನು ಲೆಕ್ಕಿಸದೆ ಕಡೆಗೆ ನೀನು ಮಥುರೆಗೆ ಹೋದೆಯಲ್ಲ! ಒಳ್ಳೆಯದು, ನೀನು ಈ ಮಾಧವಾಚಾರ್ಯನ ಮಾತನ್ನು ಮೀರಿ ಮಥುರೆಗೆ ಹೋಗಿ ಕಾರ್ಯವನ್ನಾದರೂ ಸಾಧಿಸಿದೆಯಾ?

ಹೇಮಚಂದ್ರ—(ಮೋರೆಯನ್ನು ಮೇಲಕ್ಕೆತ್ತಿ ಸ್ವಲ್ಪ ವಿರಕ್ತ ಮುದ್ರೆಯಿಂದ) ಇಲ್ಲ, ಕಾರ್ಯವು ಸಾಧಿಸಲಿಲ್ಲ; ಕಾರ್ಯವಾಗದ್ದಕ್ಕೆ ತಮ್ಮ ಪರಮಕೃಪೆಯೇ ಕಾರಣವಾಗಿರಬಹುದು. ಮೃಣಾಲಿನಿಯನ್ನು ತಾವು ಎತ್ತ ಕಳುಹಿದಿರಿ?

ಮಾಧವಾಚಾರ್ಯ—ಏನು? ಮೃಣಾಲಿನಿಯನ್ನು ನಾನೇ ಕಳುಹಿದೆನೋ? ನೀನು ಇದನ್ನು ಹೇಗೆ ತರ್ಕಿಸಿದೆ?

ಹೇಮ—ತರ್ಕಿಸುವದೇನು? ತಮ್ಮ ಹೊರತು ಈ ಕೆಲಸವನ್ನು ಯಾರು ಮಾಡುವರು? ಮೃಣಾಲಿನಿಯ ದಾಸಿಯು ಎಲ್ಲ ಸಂಗತಿಯನ್ನು ನನಗೆ ತಿಳಿಸಿದ್ದಾಳೆ. ನನ್ನ ಉಂಗುರವನ್ನು ನೋಡಿ, ನಾನೇ ಬಂದೆನೆಂಬ ನಂಬಿಗೆಯಿಂದ ತೋಟಕ್ಕೆ ಹೋದ ಮೃಣಾಲಿನಿಯು ತಿರುಗಿ ಬರಲಿಲ್ಲವಂತೆ. ನೀವು ಹಾದಿಯ ವೆಚ್ಚಕ್ಕೆಂದು ನನ್ನ ಉಂಗುರವನ್ನು ಇಸುಕೊಂಡಿದ್ದಿರಿ. ಉಂಗುರದ ಬದಲು, ಬೇಕಾದಷ್ಟು ಬೆಲೆ ಬಾಳುವ ಬೇರೆ ಒಡವೆಯನ್ನು ಕೊಡಲಿಕ್ಕೆ ನಾನು ಒಡಂಬಟ್ಟರೂ, ನೀವು ಉಂಗುರವೇ ಬೇಕೆಂದು ಹಟಹಿಡಿದಿರಿ. ಆಗ ನನಗೆ ಸ್ವಲ್ಪ ಸಂಶಯವು ಉತ್ಪನ್ನವಾಯಿತು; ಆದರೆ ತಮ್ಮ ಮಾತನ್ನು ಮೀರುವದು ಕಠಿಣವಾದುದರಿಂದ ನಾನು ನಿರುಪಾಯನಾಗಿ ತಮಗೆ ಉಂಗುರವನ್ನು ಒಪ್ಪಿಸಿದೆನು. ನೀವು ಅದಕ್ಕೆ ತಕ್ಕ ಪ್ರತಿಫಲವನ್ನು ಈಗ ನನಗೆ ಒಪ್ಪಿಸಿರುತ್ತೀರಿ.

ಮಾಧವ—ನೀನಂದಂತೆ ನಾನು ನಿಜವಾಗಿ ವರ್ತಿಸಿದ್ದರೂ, ಅದಕ್ಕಾಗಿ ನೀನು ನನ್ನ ಮೇಲೆ ಸಿಟ್ಟಾಗಬೇಡ; ಅಪ್ಪಾ, ಹೇಮಚಂದ್ರಾ, ನಿನ್ನ ತಲೆಯ ಮೇಲೆ ಬಿದ್ದಿರುವ ಮಹತ್ಕಾರ್ಯವನ್ನು ನೀನಲ್ಲದೆ ಮತ್ತಾರು ವಹಿಸಿ ಮಾಡುವರು? ದುಷ್ಟ ಯವನರ ನಾಶವು ಹೇಮಚಂದ್ರನಿಂದಲ್ಲದೆ ಅನ್ಯರಿಂದ ಆಗುವದೋ? ದುಷ್ಟ ಯವನರ ಸದ್ದು ಅಡಗುವಂತೆ ಮಾಡುವದು ನಿನ್ನ ಕರ್ತವ್ಯವಲ್ಲವೇ? ಈಗಿನ ಕಾಲದಲ್ಲಿ ಮೃಣಾಲಿನಿಯ ಸಂಬಂಧದ ವಿಚಾರಗಳು ನಿನ್ನ ಮನಸ್ಸಿನಲ್ಲಿ ಬರುವದು ಸುಲಕ್ಷಣವಲ್ಲ. ಹೇಮಚಂದ್ರಾ, ನೀನು ಹಿಂದಕ್ಕೆ ಮೃಣಾಲಿನಿಯ ಹವ್ಯಾಸಕ್ಕೆ ಬಿದ್ದು, ಯುದ್ಧಕ್ಕೆ ಹೋಗದೆ, ಹಿಂದೆ ಮಥುರೆಯಲ್ಲಿ ಕುಳಿತು, ನಿನ್ನ ತಂದೆಯ ರಾಜ್ಯವನ್ನು ಕಳಕೊಳ್ಳಲಿಲ್ಲವೇ? ಈಗ ಮತ್ತೆ ಮೃಣಾಲಿನಿಯ ಮೋಹಪಾಶದಲ್ಲಿ ಸಿಲುಕಿ ನೀನು ಕರ್ತವ್ಯಪರಾಙ್ಮುಖನಾಗಬೇಕೆಂದು ಬಯಸುತ್ತಿಯಾ? ಆದರೆ ನೀನು ಸೆರಗಿಗೆ ಗಂಟು ಹೊಡೆದುಕೊಳ್ಳು; ಈ ಮಾಧವಾಚಾರ್ಯನ ಶರೀರದಲ್ಲಿ ಪ್ರಾಣವಿರುವವರೆಗೆ ತಿರುಗಿ ಹಾಗಾಗಲಾರದು. ಇನ್ನು ಮೇಲೆ ನಿನಗೆ ಆ ಮೃಣಾಲಿನಿಯ ದರ್ಶನವಾಗದಂತೆ ಗುಪ್ತವಾದ ಸ್ಥಳದಲ್ಲಿ ಆಕೆಯನ್ನು ಇಟ್ಟುಬಿಟ್ಟಿರುತ್ತೇನೆ.

ಹೇಮಚಂದ್ರ—(ಸಿಟ್ಟಿನ ಭರದಿಂದ) ಆ ನಿಮ್ಮ ಮಹತ್ಕಾರ್ಯವು ನಿಮಗೇ ಇರಲಿ; ಆ ಮಹತ್ಕಾರ್ಯದಿಂದ ನೀವೇ ಸುರಿದುಕೊಳ್ಳಿರಿ. ನನ್ನ ಮನಸ್ಸನ್ನು ಸಂಪೂರ್ಣವಾಗಿ ಎಳೆದುಕೊಂಡಿರುವ ಆ ಸುಂದರಿಯ ಸುದ್ದಿಯು ತಿಳಿಯುವವರೆಗೂ ನಾನು ಯಾವ ಮಹತ್ಕಾರ್ಯಕ್ಕೂ ಕೈಹಾಕುವದಿಲ್ಲ. ಮೃಣಾಲಿನಿಯು ಇಲ್ಲದಂತಾದುದರಿಂದ ನನಗೆ ಜಗತ್ತೇ ಶೂನ್ಯವಾಗಿದೆ. ಯಾವ ಮೃಣಾಲಿನಿಯ ಸಂತೋಷಕ್ಕಾಗಿ ನಾನು ಸಾಹಸ ಕರ್ಮವನ್ನು ಮಾಡುತ್ತಿದ್ದೆನೋ, ಆ ಮೃಣಾಲಿನಿಯೇ ಇಲ್ಲದಂತಾದುದರಿಂದ ಅವಳ ಸಂಗಡಲೇ ನನ್ನ ಶೌರ್ಯ—ಸಾಹಸಗಳು ಹೋದವು. ನನ್ನ ಪ್ರತ್ಯಕ್ಷ ಗುರುಗಳಾದ ತಾವು ನನ್ನನ್ನು ಮೋಸಗೊಳಿಸಿ ಉಂಗುರವನ್ನು ಇಸಕೊಂಡು ಮೃಣಾಲಿನಿಯನ್ನು ಅಗಲಿಸಬಹುದೋ? ನಿಮ್ಮಂಥ ಸತ್ಯ ಶೀಲರಾದ ಬ್ರಾಹ್ಮಣರಿಗೆ ಈ ಮೋಸವು ಒಪ್ಪುವದೋ? ಇನ್ನು ನಾನು ರಾಜ್ಯ ಗಳಿಸಿಯಾದರೂ ಮಾಡುವದೇನು? ಯಾರ ಸಲುವಾಗಿ ಅದನ್ನು ಗಳಿಸಬೇಕು? ಆ ರಾಜ್ಯದ ಗಳಿಕೆಯನ್ನು ನೀವೇ ಮಾಡಿರಿ. ನಾನಂತು ಈ ಖಡ್ಗವನ್ನು ಕೆಳಗಿಡು—

ಮಾಧವ—ಎಲೈ ಅಧಮಾ, ನಿಶ್ಚಯವಾಗಿ ನಿನ್ನ ಬುದ್ಧಿಗೆ ಭ್ರಂಶವಾಗಿದೆ. ಹೇಮಚಂದ್ರಾ, ಇದೇ ಏನು ನಿನ್ನ ಕ್ಷಾತ್ರತೇಜಸ್ಸು? ನಿನ್ನ ತಾಯಿಯಾದ ಆ ಸಾಧ್ವಿಯು ವ್ಯರ್ಥವಾಗಿ ನಿನ್ನನ್ನು ಒಂಬತ್ತು ತಿಂಗಳು ಒಂಬತ್ತು ದಿವಸಗಳವರೆಗೆ ಹೊಟ್ಟೆಯಲ್ಲಿ ಇಟ್ಟು ಕೊಂಡು ಕಷ್ಟವನ್ನು ಅನುಭವಿಸಿದಳು, ನಿನ್ನಿಂದ ದೇಶಹಿತದ ಯಾವದೊಂದು ಮಹತ್ಕಾರ್ಯ ವನ್ನು ಸಾಧಿಸಿಕೊಳ್ಳಬಹುದೆಂಬ ಆಶೆಯಿಂದ ನಾನಾದರೂ ಮೋಕ್ಷಸಾಧನದ ಮಾರ್ಗವನ್ನು ಬಿಟ್ಟು, ಹನ್ನೆರಡು ವರ್ಷಗಳವರೆಗೆ ಚಾಂಡಾಲನಾದ ನಿನಗೆ ವಿದ್ಯೆಕಲಿ—

ಸಂತಪ್ತನಾದ ಮಾಧವಾಚಾರ್ಯನ ಬಾಯಿಂದ ಮುಂದೆ ಶಬ್ದಗಳೇ ಹೊರಡದಂತಾದವು. ಇತ್ತ ಹೇಮಚಂದ್ರನ ಮುಖಕಮಲವೂ ಮೆಲ್ಲ ಮೆಲ್ಲನೆ ಕೆಂಪಾಗತೊಡಗಿತು. ಬಹಳ ಹೊತ್ತಾದರೂ ಆತನೂ ಪಿಟ್ಟೆಂದು ಮಾತಾಡದಾದನು. ಕಡೆಗೆ ಮಾಧವಾಚಾರ್ಯನೇ ಸ್ವಲ್ಪ ಸಮಾಧಾನವನ್ನು ತಾಳಿ ಹೇಮಚಂದ್ರನನ್ನು ಕುರಿತು—

ಮಾಧವಾಚಾರ್ಯ—ಹೇಮಚಂದ್ರಾ, ಹೀಗೆ ಸಿಟ್ಟಿಗೇಳಬೇಡ, ಧೈರ್ಯವಿರಲಿ, ಮೃಣಾಲಿನಿಯು ಎಲ್ಲಿರುವಳೆಂಬುದನ್ನು ನಾನು ನಿನಗೆ ಹೇಳುವೆನು; ಅವಳೊಡನೆ ನಿನ್ನ ಲಗ್ನವನ್ನಾದರೂ ಮಾಡುವೆನು. ಆದರೆ ಈಗ ನಾನು ಹೇಳಿದಂತೆ ನೀನು ಕೇಳು. ನಿನ್ನ ಕೊರಳಿಗೆ ಬಿದ್ದಿರುವಕಾರ್ಯವನ್ನು ಮೊದಲು ಕೊನೆಗಾ—

ಹೇಮಚಂದ್ರ—ಮೃಣಾಲಿನಿಯು ಎಲ್ಲಿರುವಳೆಂಬದನ್ನು ತಿಳಿದುಕೊಂಡ ಹೊರತು ನಾನು ಖಡ್ಗವನ್ನು ಮುಟ್ಟುವದಿಲ್ಲ.

ಮಾಧವ—ಮೃಣಾಲಿನಿಯು ಸತ್ತಿದ್ದರೋ?

ಇದನ್ನು ಕೇಳಿ ಹೇಮಚಂದ್ರನ ಕಣ್ಣುಗಳು ಕೆಂಡದಂತಾದವು. ಆತನು ಆವೇಶದ ಭರದಿಂದ—

ಹೇಮಚಂದ್ರ—ಹಾಗಾದರೆ, ನೀವೇ ಆಕೆಯನ್ನು ಕೊಂದಿರಿ!

ಮಾಧವ—ಅಹುದು, ನಾನು ಒಪ್ಪುತ್ತೇನೆ. ಮಹತ್ಕಾರ್ಯಕ್ಕೆ ಪ್ರತಿಬಂಧವಾಗಿರುವ ಆ ಕಂಟಕವನ್ನು ನಾನೇ—

ಮಾಧವಾಚಾರ್ಯನ ಮಾತು ಮುಗಿಯುವದರೊಳಗಾಗಿಯೇ ಹೇಮಚಂದ್ರನು ತನ್ನ ಖಡ್ಗವನ್ನು ಮೇಲಕ್ಕೆತ್ತಿ ಆತನ ಮೇಲೆ ದುಮುಕಿದನು. ಮತ್ತು ಗದ್ದರಿಸಿ—

ಹೇಮಚಂದ್ರ—ಮೃಣಾಲಿನಿಯ ಕೊಲೆ ಮಾಡಿದವನ ಮುಂಡವನ್ನು ನನ್ನ ಈ ಕರವಾಳವು ದಿಂಡದಿಂದ ಬೇರೆಮಾಡುವದು. ಈ ನನ್ನ ಪ್ರೀತಿಯ ಖಡ್ಗವು ಗುರುಹತ್ಯ, ಬ್ರಹ್ಮ ಹತ್ಯಗಳನ್ನು ಮಾಡಲಿಕ್ಕೂ ಈಗ ಹಿಂಜರಿಯುವದಿಲ್ಲ.

ಮಾಧವ—(ಸ್ವಲ್ಪ ನಕ್ಕು) ಗುರುಹತ್ಯ, ಬ್ರಹ್ಮಹತ್ಯಗಳನ್ನು ಮಾಡುವಾಗ ನಿನಗಾಗು ವಷ್ಟು ಆನಂದವು, ಸ್ತ್ರೀಹತ್ಯವನ್ನು ಮಾಡುವಾಗ ನನಗೆ ಆಗುವದಿಲ್ಲ. ಎಲೈ ಹೇಮಚಂದ್ರಾ, ನೀನು ಕಾರಣವಿಲ್ಲದೆ ಪಾಪವನ್ನು ಮಾಡಬೇಡ; ಮೃಣಾಲಿನಿಯು ಸತ್ತಿಲ್ಲ, ಬದುಕಿರುವಳು. ಹೋಗು, ನಿನ್ನಲ್ಲಿ ಪುರುಷಾರ್ಥವಿದ್ದರೆ, ಆಕೆಯನ್ನು ಹುಡುಕಿ ಎಲ್ಲಿರುವಳೆಂಬದನ್ನು ಗೊತ್ತುಹಚ್ಚು. ನನ್ನ ಈ ಪವಿತ್ರವಾದ ಆಶ್ರಮಕ್ಕೆ ಕಳಂಕವನ್ನುಂಟು ಮಾಡಬೇಡ. ನಿನ್ನಂಥ ಕುಪಾತ್ರನಾದ ಮನುಷ್ಯನಿಗೆ ನಾನು ಏನೂ ಹೇಳಲಾರೆನು. ಈಗಲೇ ನೀನು ಇಲ್ಲಿಂದ ಎದ್ದು ಹೋಗು.

ಈ ಮೇರೆಗೆ ನುಡಿದು ಮಾಧವಾಚಾರ್ಯನು ಕಣ್ಣು ಮುಚ್ಚಿಕೊಂಡು ಮೊದಲಿನಂತೆ ಜಪ ಮಾಡುವದರಲ್ಲಿ ನಿಮಗ್ನನಾದನು. ಹೇಮಚಂದ್ರನಾದರೂ ಸಿಟ್ಟಿನ ಭರದಲ್ಲಿ ನಿಂತಕಾಲಲ್ಲಿಯೇ ಆಶ್ರಮದಿಂದ ಹೊರಹೊರಟು, ನೆಟ್ಟಗೆ ಹೊಳೆಗೆ ಹೋಗಿ ನಾವೆಯನ್ನು ಏರಿದನು. ಅವನು ಆ ನಾವೆಯಲ್ಲಿ ತನ್ನ ಹಾದಿಯನ್ನೇ ನೋಡುತ್ತ ಕುಳಿತಿರುವವನನ್ನು ಕುರಿತು—

ಹೇಮಚಂದ್ರ—ಹ! ದಿಗ್ವಿಜಯಾ, ನಾವೆಯನ್ನು ನಡೆಸು.

ದಿಗ್ವಿಜಯ—(ವಿನಯದಿಂದ) ಎಲ್ಲಿಗೆ ಹೋಗತಕ್ಕದ್ದು?

ಹೇಮಚಂದ್ರ—ನೀನು ಮೂರ್ಖನಲ್ಲವೋ! ನಡೆ, ಹುಟ್ಟುಹಾಕು, ಸುಡುಗಾಡಿಗೆ ಹೋಗತಕ್ಕದ್ದು.

ದಿಗ್ವಿಜಯನು ತನ್ನ ಒಡೆಯನ ಸ್ವಭಾವವನ್ನು ಅರಿತೇ ಇದ್ದನು. ಅವನು ಮನಸ್ಸಿನಲ್ಲಿ—ಓಹೋ! ಆ ಸ್ಥಳವಂತೂ ಅತೀ ಸಮೀಪದಲ್ಲಿಯೇ ಇರುವದು, ಎಂದು ಅಂದುಕೊಳ್ಳುತ್ತ ಪ್ರವಾಹದಲ್ಲಿ ನಾವೆಯನ್ನು ಬಿಟ್ಟನು. ಬಹಳ ಹೊತ್ತಿನವರೆಗೆ ಹೇಮಚಂದ್ರನು ಪಿಟ್ಟೆಂದು ಮಾತಾಡದೆ ಸ್ತಬ್ಧನಾಗಿ ಕುಳಿತುಬಿಟ್ಟಿದ್ದನು. ನಾವೆಯು ದೂರ ಹೋದ ಮೇಲೆ ಒಮ್ಮೆಲೆ ಎಚ್ಚತ್ತಂತಾಗಿ ಆತನು ದಿಗ್ವಿಜಯನಿಗೆ—ಎಲಾ, ನಾವೆಯನ್ನು ಹಿಂದಕ್ಕೆ ತಿರುಗಿಸು, ಎಂದು ಹೇಳಿದನು. ದಿಗ್ವಿಜಯನು ಅಪ್ಪಣೆಯಂತೆ ನಾವೆಯನ್ನು ಮೊದಲಿನ ಸ್ಥಳಕ್ಕೆ ಹಚ್ಚಲು, ಹೇಮಚಂದ್ರನು ಕೆಳಗಿಳಿದು ಮತ್ತೆ ಮಾಧವಾಚಾರ್ಯನ ಬಳಿಗೆ ಹೋದನು. ಆಗ ಮಾಧವಾಚಾರ್ಯನು—ಮತ್ತೇಕೆ ಬಂದೆ? ಎಂದು ಕೇಳಲು, ಹೇಮಚಂದ್ರನು ಪಶ್ಚಾತ್ತಾಪಯುಕ್ತ ಸ್ವರದಿಂದ—ನಾನು ತಮ್ಮ ಅಪ್ಪಣೆಯನ್ನು ತಲೆಯಲ್ಲಾಂತು ಮನ್ನಿಸುವೆನು.

ಮೃಣಾಲಿನಿಯು ಎಲ್ಲಿರುವಳೆಂಬದನ್ನು ಮಾತ್ರ ದಯಮಾಡಿ ಹೇಳಬೇಕು, ಎಂದು ಬೇಡಿಕೊಂಡನು. ಅದಕ್ಕೆ ಮಾಧವಾಚಾರ್ಯನು—

ಮಾಧವ—ಹೇಮಚಂದ್ರಾ, ನೀನು ಸತ್ಯಪ್ರತಿಜ್ಞನಿರುತ್ತೀ. ನನ್ನ ಅಪ್ಪಣೆಯಂತೆ ನಡೆಯಲು ನೀನು ಸಮ್ಮತಿಸಿದ್ದಕ್ಕಾಗಿ ನನಗೆ ಬಹಳ ಸಮಾಧಾನವಾಗಿದೆ. ಮೃಣಾಲಿನಿಯ ಚಿಂತೆಯನ್ನು ಬಿಡು; ಆಕೆಯನ್ನು ಗೌಡನಗರದಲ್ಲಿದ್ದ ನನ್ನ ಒಬ್ಬ ಶಿಷ್ಯನ ಮನೆಯಲ್ಲಿ ಗುಪ್ತವಾಗಿ ಇಟ್ಟಿದ್ದೇನೆ. ನೀನು ಹೇಗೂ ಈಗ ಅತ್ತಕಡೆಗೇ ಹೋಗಬೇಕಾಗಿದೆ. ಆದರೆ ಆಕೆಯು ನಿನ್ನ ಕಣ್ಣಿಗೆ ಬಿದ್ದಾಳೆಂದು ಮಾತ್ರ ನೀನು ತಿಳಿದುಕೊಳ್ಳಬೇಡ. ಆಕೆಯನ್ನು ನಾನು ಒಳ್ಳೇ ಭದ್ರವಾಗಿ ಇಟ್ಟು ಬಂದಿರುವೆನು. ನನ್ನ ಶಿಷ್ಯನ ಮನೆಯಲ್ಲಿ ಪರಪುರುಷರ ಧ್ವನಿಯು ಕೂಡ ಆಕೆಯ ಕಿವಿಗೆ ಬೀಳದಂತೆ ವ್ಯವಸ್ಥೆ ಮಾಡಿರುವೆನು. ಅಂದಬಳಿಕ ಆಕೆಯು ಅನ್ಯರ ದೃಷ್ಟಿಗೆ ಬೀಳುವದಂತೂ ದೂರವೇ.

ಹೇಮಚಂದ್ರ—ನನಗೆ ಆಕೆಯ ದರ್ಶನವಾಗದಿದ್ದರೂ ಚಿಂತೆಯಿಲ್ಲ; ಆಕೆಯು ಸುರಕ್ಷಿತವಾಗಿರುವಳೆಂಬದನ್ನು ಕೇಳಿ ನನ್ನ ಮನಸ್ಸಿಗೆ ಬಹಳ ಆನಂದವಾಗುತ್ತದೆ. ಇನ್ನು ಮೇಲೆ ತಮ್ಮ ಅಪ್ಪಣೆಯೇನಿರುವದೆಂಬದನ್ನು ಅರುಹಬೇಕು.

ಮಾಧವ—ನೀನು ದಿಲ್ಲಿಗೆ ಹೋಗಿದ್ದೆಯಲ್ಲ? ಯವನರ ಒಳಸಂಚು ನಿನಗೇನು ಗೊತ್ತಾಗಿದೆ?

ಹೇಮಚಂದ್ರ—ಅವರು ಬಂಗಾಲಪ್ರಾಂತದ ಮೇಲೆ ದೌಡುಮಾಡಲು ಯೋಚಿಸಿದಂತೆ ತೋರುತ್ತದೆ. ಬಖತ್ಯಾರಖಿಲಜಿಯು ತೀವ್ರವಾಗಿ ಸೈನ್ಯದೊಡನೆ ಗೌಡದೇಶದಮೇಲೆ ಸಾಗಿಹೋಗತಕ್ಕವನಿದ್ದಾನೆ.

ಇದನ್ನು ಕೇಳಿ ಮಾಧವಾಚಾರ್ಯನ ಮುಖಕಮಲವು ಹರ್ಷ ಪ್ರಫುಲ್ಲಿತವಾಯಿತು. ಅವನು ಹೇಮಚಂದ್ರನನ್ನು ಕುರಿತು—ಅಂತೂ ಕಡೆಗೆ ನಮ್ಮ ದೇವರಿಗೆ ದಯವು ಹುಟ್ಟಿತೆಂದು ತಿಳಿಯಬೇಕು, ಎಂದು ನುಡಿದನು. ಅದನ್ನು ಕೇಳಿ ಹೇಮಚಂದ್ರನು, ಮಾಧವಾಚಾರ್ಯನ ಮೋರೆಯನ್ನು ಮಿಕಿ ಮಿಕಿ ನೋಡುತ್ತನಿಂತುಕೊಂಡನು. ಆಗ ಮಾಧವಾಚಾರ್ಯನು—

ಮಾಧವ—ನಾನು ಬಹುದಿವಸದಿಂದ ಒಂದು ಗಣಿತ ಮಾಡತೊಡಗಿದ್ದೆನು. ಆ ಗಣಿತದಿಂದ ನಾನು ಕಂಡುಹಿಡಿದ ಸಂಗತಿಯ ಪ್ರಾರಂಭ ಕಾಲವೂ ಸಮೀಪಿಸಿತೆಂಬಂತೆ ನನಗೆ ತೋರುತ್ತದೆ.

ಹೇಮಚಂದ್ರ—-ಅದು ಹೇಗೆ?

ಮಾಧವ—ಬಂಗಾಲ ದೇಶದ ರಾಜನಿಂದ ಯವನರು ನಿರ್ಮೂಲರಾಗುವರೆಂದು ಗಣಿತದಿಂದ ನನಗೆ ಗೊತ್ತಾಗಿದೆ.

ಹೇಮ—ಒಂದು ಪಕ್ಷದಲ್ಲಿ ಹಾಗೆ ಆದರೂ ಆಗಬಹುದು. ಆದರೆ ಕಾರ್ಯವು ಎಷ್ಟು ದಿವಸಕ್ಕೆ ಆಗಬಹುದು? ಅದನ್ನು ಯಾರು ಕೊನೆಗಾಣಿಸಬಹುದು?

ಮಾಧವ—ನಾನು ಗಣಿತದಿಂದ ಅದನ್ನೂ ನೋಡಿದ್ದೇನೆ. ಪಶ್ಚಿಮ ದೇಶದ ವ್ಯಾಪಾರಸ್ಥರು ಯವನರೊಡನೆ ಯುದ್ಧವನ್ನು ಆರಂಭಿಸಿದಾಗಲೇ, ಅವರು ನಿರ್ಮೂಲರಾಗುವರು.

ಹೇಮು—ಅಂದಬಳಿಕ ನಾನು ಜಯಪ್ರಾಪ್ತಿಯ ಆಸೆಯನ್ನು ಬಿಟ್ಟು ಬಿಡಬೇಕೆಂದ ಹಾಗಾಯಿತು. ಯಾಕಂದರೆ, ನಾನಂತು ವ್ಯಾಪಾರಸ್ಥನಲ್ಲ.

ಮಾಧವ—ನೀನೇ ಆ ವ್ಯಾಪಾರಸ್ಥನಿರುವೆ. ಮೃಣಾಲಿನಿಗೆ ಮನಸೋತು, ಆಕೆಯ ಪ್ರಾಪ್ತಿಗಾಗಿ ನೀನು ಮಥುರೆಯಲ್ಲಿ ಹಗಲು-ರಾತ್ರಿ ಯತ್ನ ಮಾಡಿದೆಯಲ್ಲ? ಆಗ ನೀನು ಯಾವ ವೇಷವನ್ನು ಹಾಕಿಕೊಂಡಿದ್ದೆ ಹೇಳು ನೋಡೋಣ.

ಹೇಮಚಂದ್ರ—ನಾನು ಆಗ ವ್ಯಾಪಾರಸ್ಥನ ವೇಷವನ್ನು ಹಾಕಿಕೊಂಡಿದ್ದು ನಿಜವು.

ಮಾಧವ—ಅಂದಬಳಿಕ ನೀನೇ ಪಶ್ಚಿಮ ದೇಶದ ವ್ಯಾಪಾರಸ್ಥನು; ನೀನು ಗೌಡ ರಾಜ್ಯಕ್ಕೆ ಹೋಗಿ ಅಲ್ಲಿ ಯವನರೊಡನೆ ಯುದ್ಧವನ್ನು ಆರಂಭಿಸು; ಅಂದರೆ, ಯವನರು ನಿಶ್ಚಯವಾಗಿ ಸೋಲುವರು. ಹೇಮಚಂದ್ರಾ, ಇನ್ನು ನೀನು ಗೌಡದೇಶಕ್ಕೆ ಹೋಗಲು ವಿಳಂಬ ಮಾಡಬೇಡ. ನಾನು ನಿನ್ನನ್ನು ಇನ್ನೊಂದು ಮಾತಿನ ಸಲುವಾಗಿ ಎಚ್ಚರ ಗೊಳಿಸುವೆನು. ನೀನು ಗೌಡದೇಶಕ್ಕೆ ಹೋಗಿ ಯವನರನ್ನು ಪೂರ್ಣವಾಗಿ ಸೋಲಿಸುವವರೆಗೆ ಮೃಣಾಲಿನಿಯನ್ನು ಕಾಣಬೇಡ.

ಹೇಮು—(ನಿಟ್ಟುಸಿರು ಬಿಟ್ಟು) ಆಗಲಿ! ತಮ್ಮ ಅಪ್ಪಣೆಯಂತೆ ನಡೆದುಕೊಳ್ಳುವೆನು; ಆದರೆ ನನ್ನೊಬ್ಬನಿಂದ ಆಗುವದೇನು?

ಮಾಧವ—ನೀನಂತೂ ಹೋಗು. ಅಲ್ಲಿ ಗೌಡದೇಶದ ಅರಸನ ಸೈನ್ಯವು ಸಿದ್ಧವಾಗಿರುತ್ತದೆ.

ಹೇಮು—ಏನು! ಗೌಡ ರಾಜನ ಸೈನ್ಯವೋ! ಒಂದು ವೇಳೆ ತಾವು ಹೇಳಿದಂತೆ ಅದು ಸಿದ್ಧವಿದ್ದರೂ ಇರಬಹುದು. ಆದರೆ ಅದು ನನಗೆ ವಶವಾಗುವ ಬಗೆಯೆತ್ತ?

ಮಾಧವ—ನೀನು ಸುಮ್ಮನೆ ಹೋಗು. ನವದ್ವೀಪದಲ್ಲಿ ನಾನು ನಿನ್ನನ್ನು ಕಾಣುವೆನು. ಆಮೇಲೆ ನಾವು ಅದರ ವ್ಯವಸ್ಥೆಯನ್ನು ಮಾಡೋಣವಂತೆ. ಗೌಡದೇಶದ ರಾಜನು ನನ್ನ ಗುರುತಿನವನಿದ್ದಾನೆ.

ಹೇಮು—ಒಳ್ಳೆಯದು, ಹಾಗಾದರೆ ನಾನು ಹೋಗಿಬರುತ್ತೇನೆ.

ಈ ಮೇರೆಗೆ ನುಡಿದು, ಹೇಮಚಂದ್ರನು ಗುರುವನ್ನು ನಮಸ್ಕರಿಸಿ, ಹೊರಟು ಹೋದನು. ಆ ಪಟ್ಟ ಶಿಷ್ಯನ ವೀರ ಮೂರ್ತಿಯು ಕಣ್ಮರೆಯಾಗುವವರೆಗೆ ಮಾಧವಾಚಾರ್ಯನು ಅದನ್ನು ಎವೆಯಿಕ್ಕದೆ ನೋಡುತ್ತಿದ್ದನ್ನು . ಹೇಮಚಂದ್ರನು ಮರೆಯಾದ ಕೂಡಲೆ, ಆ ಸದ್ಗುರುವು ತನ್ನ ಮನಸ್ಸಿನಲ್ಲಿ—ಹೋಗು, ಮಗುವೆ, ಹೋಗು. ಕೆಲಸವನ್ನು ಕೊನೆಗಾಣಿಸಿ ಬಾ. ನಿನ್ನನ್ನು ನಾನು ಪೂರ್ಣವಾಗಿ ಆಶೀರ್ವದಿಸುತ್ತೇನೆ. ನಾನು ನಿಜವಾದ ಬ್ರಾಹ್ಮಣ-ವಂಶದಲ್ಲಿ ಹುಟ್ಟಿದವನಾ ಗಿದ್ದರೆ, ನಿನ್ನ ಕೂದಲು ಕೊಂಕಗೊಡುವದಿಲ್ಲ, ಮೃಣಾಲಿನಿಯೆಂದು ಕೇಳುವಿಯಾ? ಮಗುವೆ, ಆ ಮೃಣಾಲಿನಿಯ ಚಿಂತೆಯನ್ನು ಬಿಟ್ಟುಬಿಡು. ನಿನ್ನ ಮೃಣಾಲಿನೀ—ರೂಪವಾದ ಪಕ್ಷಿಯನ್ನು ನಿನ್ನ ಸಲುವಾಗಿಯೇ ಪಂಜರದಲ್ಲಿ ಹಾಕಿ ಇಟ್ಟಿರುವೆನು. ಯಾರಿಗೆ

ಗೊತ್ತು! ನೀನು ಆಕೆಯ ಮಧುರ ಧ್ವನಿಗೆ ಮರುಳಾಗಿ, ಮಹತ್ಕಾರ್ಯವನ್ನೂ ಮರೆತುಬಿಟ್ಟೀ. ನಿನ್ನ ಪರಮ ಮಂಗಲಕಾಂಕ್ಷಿಯಾದ ಈ ಗುರುವು, ಇಷ್ಟರ ಸಲುವಾಗಿಯೇ ಅಲ್ಪ ಕಾಲದ ವರೆಗೆ ನಿನ್ನ ಮನಸ್ಸನ್ನು ಪೀಡಿಸುವನು, ಎಂದು ಅಂದುಕೊಂಡನು.

ಪಂಜರದೊಳಗಿನ ಹಕ್ಕಿ

ಪ್ರಿಯ ವಾಚಕರೇ, ನಡೆಯಿರಿ; ನಾವು ಇನ್ನು ಲಕ್ಷ್ಮಣಾವತೀ ನಗರಕ್ಕೆ ಹೋಗೋಣ. ಅಗೋ, ಅಲ್ಲಿ ಎದುರಿಗೆ ಕಾಣುವದೇ ಹೃಷೀಕೇಶ—ಬ್ರಾಹ್ಮಣನ ಮನೆಯು. ಅಂತಃಪುರದಲ್ಲಿ ಕುಳಿತುಕೊಂಡಿರುವ ಆ ಇಬ್ಬರು ತರುಣಿಯರನ್ನು ನೋಡಿದಿರೇನು? ಹೀಗೆ ಬನ್ನಿರಿ, ನಾವು ಈ ಗೋಡೆಯ ಮರೆಗೆ ನಿಂತುಕೊಳ್ಳೋಣ. ಅಂದರೆ, ಅವರಾಡುವ ಮಾತುಗಳು ನಮಗೆ ಸಹಜವಾಗಿ ಕೇಳಬಹುದು. ಅತ್ತ ನೋಡಿರಿ, ಒಬ್ಬಳು ಮಾತಾಡತೊಡಗಿದಳು.

''ಮೃಣಾಲಿನೀ, ನನ್ನ ಪ್ರಶ್ನೆಗೆ ನೀನು ಉತ್ತರವನ್ನೇ ಕೊಡಲಿಲ್ಲವಲ್ಲ! ಆ ರಾಜಪುತ್ರನ ಸಂಗತಿಯು ನಿಶ್ಚಯವಾಗಿ ಒಳ್ಳೇ ಚಿತ್ತವೇಧಕವಿರುತ್ತದೆ.''

ಮೃಣಾ—ಗೆಳತೀ, ಮಣಿಮಾಲಿನೀ, ನೀನು ಸಂತೋಷದಿಂದ ಅದನ್ನು ಹೇಳು. ನಾನು ಚಿತ್ತಕೊಟ್ಟು ಕೇಳುವೆನು.

ಮಣಿ—ಆ ಸಂಗತಿಯು ಮನೋವೇಧಕವಿದ್ದರೂ, ಅದನ್ನು ಕೇಳಿದ್ದರಿಂದ ನನ್ನ ಮನಸ್ಸಿಗಾದ ನೋವನ್ನು ವರ್ಣಿಸಲಾರೆನು. ಅಂದಬಳಿಕ ಅಂಥ ಸಂಗತಿಯನ್ನು ನಿನ್ನ ಮುಂದೆ ಹೇಳಿ, ಮತ್ತೆ ನಿನ್ನ ಮನಸ್ಸನ್ನು ಹೇಗೆ ನೋಯಿಸಲಿ?

ಮೃಣಾ—ನಿನಗೆ ಆ ಸಂಗತಿಯನ್ನು ಹೇಳಿದವರಾರು? ನಿನ್ನ ಪತಿಯೋ?

ಮಣಿ—ಅವರು ಹೇಳದೆ ಎರಡನೆಯವರಾರು ಹೇಳುವರು!—ಅದಿರಲಿ ಬಿಡು. ಸಖೀ, ಮಾಧವಚಾರ್ಯನ ಸಂಗತಿಯನ್ನು ಹೇಳೇನಂತೆ ಎಂದು ನೀನು ಹಲವು ಸಾರೆ ನನ್ನ ಮುಂದೆ ಅಂದಿರುತ್ತೀ. ಆದರೆ, ಇನ್ನೂ ನನಗೆ ಅದನ್ನು ಹೇಳಲೊಲ್ಲೆ ಮೃಣಾಲಿನೀ, ಮಾಧವಾಚಾರ್ಯನ ಮಾತನ್ನು ಕೇಳಿ, ತಂದೆಯ ಮನೆಯಿಂದ ನೀನೇಕೆ ಹೊರಟು ಬಂದೆ?

ಮೃಣಾ—ಮಾಧವಾಚಾರ್ಯನ ಮಾತಿನಿಂದೇನೂ ನಾನು ಬಂದವಳಲ್ಲ; ಮಾಧವಾಚಾರ್ಯನ ಗುರುತು ಸಹ ನನಗಿಲ್ಲ; ಸ್ವಸಂತೋಷದಿಂದಲೂ ನಾನು ಇಲ್ಲಿಗೆ ಬರಲಿಲ್ಲ. ಒಂದು ದಿನ ಸಂಜೆಯ ಮುಂದೆ ನನ್ನ ಒಬ್ಬ ದಾಸಿಯು ಈ ಉಂಗುರವನ್ನು ತಂದುಕೊಟ್ಟು, ''ಒಬ್ಬ ತರುಣ ಮನುಷ್ಯನು ತೋಟದಲ್ಲಿ ನಿಮ್ಮ ದಾರಿಯನ್ನು ನೋಡುತ್ತ ನಿಂತಿರುವನು'' ಎಂದು ಹೇಳಿದಳು. ಹೇಮಚಂದ್ರನೇ ಗುರುತಿನ ಸಲುವಾಗಿ ಈ ಉಂಗುರವನ್ನು ಕಳಿಸಿರಬಹುದೆಂದು ತಿಳಿದು, ನಾನು ತೋಟಕ್ಕೆ ಹೋದೆನು. ನಮ್ಮ ಮನೆಗೆ ಹೊಂದಿಯೇ ನದಿಯ ದಂಡೆಯ ಮೇಲೆ ಒಂದು ತೋಟವಿರುತ್ತದೆ. ಈ ಮೊದಲು ಹೇಮಚಂದ್ರನು

ಗುರುತಿಗಾಗಿ ಈ ಉಂಗುರವನ್ನು ನನ್ನ ಕಡೆಗೆ ಹಲವುಸಾರೆ ಕಳುಹಿದ್ದರಿಂದ, ನಾವಿಬ್ಬರೂ ಆ ತೋಟದಲ್ಲಿ ಗುಪ್ತ ರೀತಿಯಿಂದ ಹಲವುಸಾರೆ ಒಬ್ಬರನ್ನೊಬ್ಬರು ಕಂಡು ಪ್ರೀತಿಯಿಂದ ಮಾತಾಡಿದ್ದೆವು.

ಮಣಿ—ಸಖೀ, ಮೃಣಾಲಿನೀ! ನನ್ನ ಮೇಲೆ ಸಿಟ್ಟುಮಾತ್ರ ಮಾಡಬೇಡ ಕಂಡೆಯಾ, ನಿನ್ನ ವಿಪರೀತವಾದ ಮಾತುಗಳನ್ನು ಕೇಳಿ, ನನ್ನ ಮನಸ್ಸಿಗೆ ಹೇಗೆ ಹೇಗೋ ಆಗುತ್ತದೆ. ಅಲ್ಲೇ, ಇನ್ನೂ ನಿನ್ನ ಲಗ್ನವಾಗಿರುವದಿಲ್ಲ, ಹೀಗಿದ್ದು, ಗುಪ್ತರೀತಿಯಿಂದ ಪರಪುರುಷನನ್ನು ಕಂಡು ಪ್ರೀತಿಯಿಂದ ಮಾತಾಡುತ್ತಿದ್ದೆನೆಂದು ಹೇಳುತ್ತೀ, ಇದೇನು ಕುಲೀನತೆಗೆ ಉಚಿತವಾಗಿ ತೋರುವ—

ಮೃಣಾ—ಛೀ, ಹಾಗೆನ್ನಬೇಡ, ಅವರು ಪರಪುರುಷರಲ್ಲ; ನನ್ನ ಪತಿಯು. ಪತಿಯೊಡನೆ ಹಿತದ ಮಾತುಗಳನ್ನಾಡುವದಕ್ಕೆ ವ್ಯತ್ಯಾಸವೇನು?

ಮಣಿ—ಅದೆಲ್ಲ ಸರಿಯಾಯಿತು. ಆದರೆ, ಈವೊತ್ತಿನವರೆಗೆ ಅವರು ನಿನಗೆ ಪತಿಯಾಗಿರುವದಿಲ್ಲವಷ್ಟೇ? ಗೆಳತೀ, ಸಿಟ್ಟಾಗಬೇಡ. ನೀನು ನನಗೆ ಒಡಹುಟ್ಟಿದವಳಿಗಿಂತ ಹೆಚ್ಚೆಂದು ನಾನು ತಿಳಿದುಕೊಂಡದ್ದರಿಂದ, ನನಗೆ ಸರಿದೋರಿದ್ದನ್ನು ಸರಳ ಮನಸ್ಸಿನಿಂದ ಹೇಳಿದೆನು.

ಇದನ್ನು ಕೇಳಿ ಮೃಣಾಲಿನಿಯು ವಿಚಾರಮಗ್ನಳಾಗಿ, ಕೆಲವು ವೇಳೆಯವರೆಗೆ ಮೋರೆ ತಗ್ಗಿಸಿಕೊಂಡು ಕುಳಿತಳು. ಸ್ವಲ್ಪ ಹೊತ್ತಿನ ಮೇಲೆ ಆಕೆಯು ಕಣ್ಣೀರು ಒರಸಿಕೊಳ್ಳುತ್ತ—

ಮೃಣಾ—ಮಣಿಮಾಲಿನೀ, ಈ ಪರದೇಶದಲ್ಲಿ ನನ್ನವರೆನ್ನುವವರು ಯಾರೂ ಇಲ್ಲ, ನನ್ನ ಪ್ರೀತಿಯವರ ದರ್ಶನವಂತೂ ಈ ಜನ್ಮದಲ್ಲಿ ತಿರುಗಿ ಎಂದೂ ಆಗುವಂತೆ ಇಲ್ಲ, ಈ ಜಗತ್ತಿನಲ್ಲಿ ನನ್ನವಳೆಂದರೆ, ಸದ್ಯಕ್ಕೆ ನೀನೊಬ್ಬಳು ಮಾತ್ರ ಇರುತ್ತೀ. ನೀನೂ ನನ್ನನ್ನು ಪ್ರೀತಿಸದಿದ್ದರೆ, ಸಖೀ, ನಾನು ಯಾರ ಮೋರೆಯನ್ನು ನೋಡಲಿ!!

ಮಣಿ—(ದುಃಖದಿಂದ) ಸಖೀ, ನೀನು ಹೀಗೆ ಮಾತಾಡಬೇಡಕ್ಕಾ! ನಾನು ನಿನ್ನನ್ನು ಮನಮುಟ್ಟಿ ಪ್ರೀತಿಸುವೆನು. ನಾನೊಬ್ಬಳೇ ಏಕೆ? ಪ್ರತಿಯೊಬ್ಬರೂ ನಿನ್ನ ಸುಂದರವಾದ ಗುಣಗಳಿಗೆ ಲುಬ್ಧರಾದಾರು. ಆದರೆ, ನೀನು ಇದೇ ಈಗ ಹೇಳಿದ ವಿಪರೀತ ಸಂಗತಿಯನ್ನು ಕೇಳಿ—

ಮೃಣಾ—ಸಖೀ, ಮಣಿಮಾಲಿನೀ, ಬೇಡ, ಮುಂದಿನ ಮಾತನ್ನು ನುಡಿಯಬೇಡ; ಅದನ್ನು ನಾನು ಕೇಳಲಾರೆನು ಕಂಡೆಯಾ? ನಾನು ದುಷ್ಟ ಸ್ತ್ರೀಯಲ್ಲ; ಪತಿವ್ರತೆಯಿರುತ್ತೇನೆ; ನಾನು ಎಳ್ಳಷ್ಟಾದರೂ ವಿಪರೀತವಾಗಿ ವರ್ತಿಸಿಲ್ಲ, ಕುತ್ತಿಗೆ ಕೊಯ್ದರೂ ಯಾರಮುಂದೂ ಹೇಳುವದಿಲ್ಲೆಂದು ನೀನು ಆಣೆಮಾಡಿ ಹೇಳಿದರೆ, ನನ್ನ ವೃತ್ತಾಂತವನ್ನೆಲ್ಲ ನಿನಗೆ ಹೇಳುವೆನು. ಅದನ್ನು ನೀನು ಕೇಳಿದೆಯೆಂದರೆ, ನನ್ನ ವಿಷಯವಾಗಿ ನಿನಗಿರುವ ಇಲ್ಲದ ಸಂಶಯವು ದೂರವಾಗಿ, ನೀನು ಮೊದಲಿಗಿಂತ ನನ್ನನ್ನು ಹೆಚ್ಚು ಪ್ರೀತಿಸಬಹುದು.

ಮಣಿ—ನಾನು ಆಣೆಮಾಡಿ ಹೇಳುತ್ತೇನೆ. ನೀನು ಹೇಳುವ ಮಾತುಗಳೊಳಗಿನ ಒಂದು ಅಕ್ಷರವನ್ನಾದರೂ ಎರಡನೆಯವರ ಮುಂದೆ ನಾನು ಹೇಳುವದಿಲ್ಲ, ಇನ್ನಾದರೂ ಆಯಿತೇ?

ಮೃಣಾ—ನಿನ್ನ ತುರುಬಿನೊಳಗಿನ ಹೂವಿನ ಆಣೆಮಾಡಿ ಹೇಳು.

ಮಣಿಮಾಲಿನಿಯು ಹಾಗೆ ಮಾಡಲು, ಮೃಣಾಲಿನಿಯು ಆಕೆಯ ಕಿವಿಯಲ್ಲಿ ಏನೋ ಹೇಳಿದಳು. ಅದನ್ನು ಕೇಳಿದಕೂಡಲೆ, ಮಣಿಮಾಲಿನಿಯ ಸಂಶಯವೆಲ್ಲ ದೂರವಾಯಿತು. ಆಗ ಅವಳು—

ಮಣಿ—ಆಮೇಲೆ ನೀನು ಮಾಧವಾಚಾರ್ಯನ ಸಂಗಡ ಹೇಗೆ ಬಂದೆ?

ಮೃಣಾ—ಹೇಮಚಂದ್ರನ ಉಂಗುರವನ್ನು ನೋಡಿದ ಕೂಡಲೆ, ನಾನು ತೋಟಕ್ಕೆ ಹೋದೆನು. ಹೇಮಚಂದ್ರನು ನಾವೆಯಲ್ಲಿರುತ್ತಾನೆಂದು ದಾಸಿಯು ಹೇಳಿದ್ದಳು. ಬಹು ದಿವಸದಿಂದ ಆತನ ದರ್ಶನವಾಗದೆಯಿದ್ದುದರಿಂದ ದರ್ಶನೋತ್ಕಂಠೆಯಾದ ನಾನು, ಮನಸ್ಸಿನಲ್ಲಿ ಯಾವ ವಿಕಲ್ಪವನ್ನು ಎಣಿಸದೆ, ನದಿಯ ದಂಡೆಯಲ್ಲಿ ನಿಂತಿರುವ ನಾವೆಯ ಕಡೆಗೆ ಸಾಗಿದೆನು. ನಾವೆಯ ಬಳಿಯಲ್ಲಿ ಯಾರೋ ನಿಂತಂತೆ ದೂರದಿಂದ ನನಗೆ ಕಾಣಿಸಿತು. ಅವರನ್ನೇ ಹೇಮಚಂದ್ರನೆಂದು ತಿಳಿದು, ನಾನು ತ್ವರೆಯಿಂದ ನಾವೆಯ ಬಳಿಗೆ ತೆರಳಿದೆನು. ಆಗ ನಾವೆಯಲ್ಲಿ ಕುಳಿತಿದ್ದ ಒಬ್ಬ ಗೃಹಸ್ಥನು ಕೆಳಗಿಳಿದು ನನ್ನ ಕೈಯನ್ನು ಹಿಡಿದು ಒತ್ತಾಯದಿಂದ ನಾವೆಯಲ್ಲಿ ಕುಳ್ಳಿರಿಸಿಕೊಂಡನು. ಕೂಡಲೆ ನಾವಿಕನು ನಾವೆಯನ್ನು ಮುಂದಕ್ಕೆ ಸಾಗಿಸಲು, ಈ ವಿಲಕ್ಷಣ ಪ್ರಕಾರವನ್ನೆಲ್ಲ ನೋಡಿ, ಏನೋ ಅನರ್ಥ ಒದಗಿತೆಂದು ತಿಳಿದು, ನಾನು ಮುಂದುಗಾಣದೆ ಚಿತ್ರದ ಗೊಂಬೆಯಂತೆ ಸುಮ್ಮನೆ ಕುಳಿತುಬಿಟ್ಟೆನು.

ಮಣಿ—ಆಗ ನೀನು ಅಂಜಿಕೆಯಿಂದ ಮುಂದುಗಾಣದೆ ಚಿಟ್ಟನೆ ಚೀರಿರಬಹುದಲ್ಲವೇ?

ಮೃಣಾ—ಇಲ್ಲ ನಾನು ಚೀರಲಿಲ್ಲ; ಚೀರಬೇಕೆಂದು ಒಮ್ಮೆ ಪ್ರಯತ್ನ ಮಾಡಿದೆನು. ಆದರೆ ಏನಾಯಿತೋ ತಿಳಿಯದು, ನನ್ನ ಬಾಯಿಂದ ಅಕ್ಷರಗಳು ಹೊರಡಲಿಲ್ಲ.

ಮಣಿ—ಅವ್ವಯ್ಯಾ! ನಾನಾಗಿದ್ದರೆ, ಕೂಡಲೆ ನೀರಿನಲ್ಲಿ ಹಾರಿಕೊಂಡು ಪ್ರಾಣ ತ್ಯಾಗವನ್ನೇ ಮಾಡುತ್ತಿದ್ದೆನು.

ಮೃಣಾ—ಹೇಮಚಂದ್ರನನ್ನು ನೋಡಲು ಆತುರಪಡುತ್ತಿದ್ದ ಜೀವವು, ನನ್ನ ಶರೀರವನ್ನು ತೊಲಗಿ ಹೇಗೆ ಹೋದೀತು? ನಾನು ನೀರಲ್ಲಿ ಹಾರಿಕೊಳ್ಳಲಿಲ್ಲ.

ಮಣಿ—ಸರಿ, ಮುಂದೇನಾಯಿತು?

ಮೃಣಾ—ಆ ಮುದುಕ ಮನುಷ್ಯನು ತಾಯೀ, ಎಂದು ನನ್ನನ್ನು ಕರೆದು, ನುಡಿದದ್ದೇನಂದರೆ—ತಾಯೀ, ನಾನು ನಿನ್ನ ಮಗನಿದ್ದೇನೆ, ನೀನು ನನಗೆ ತಾಯಿಯ ಸಮಾನಳಿರುತ್ತೀ, ಮನಸ್ಸಿನಲ್ಲಿ ಯಾವ ತರದ ವಿಕಲ್ಪವನ್ನು ಎಣಿಸಬೇಡ. ನಾನು ಹೇಮಚಂದ್ರನ ಗುರುವೂ, ಹಿತಚಿಂತಕನೂ ಆದ ಒಬ್ಬ ವೃದ್ಧ ಬ್ರಾಹ್ಮಣನಿರುತ್ತೇನೆ. ನನ್ನ ಹೆಸರು ಮಾಧವಾಚಾರ್ಯ. ನಾನು ಈಗ ಒಂದು ಮಹತ್ಕಾರ್ಯವನ್ನು ಆರಂಭಿಸಿರುವೆನು. ಆ ಕಾರ್ಯದಲ್ಲಿ ಹೇಮಚಂದ್ರನ ಅವಶ್ಯಕತೆಯು ವಿಶೇಷವಾಗಿರುವದು. ನೀನು ಆ ಕಾರ್ಯಸಾಧನದಲ್ಲಿ ವಿಘ್ನವಾಗಿರುವದರಿಂದ ನಿನ್ನನ್ನು ದೂರ ಕಳಿಸಬೇಕೆಂದು, ಇಂದು ನಾನು ಈ ರೀತಿಯಾಗಿ ನಿನ್ನನ್ನು ಕರತಂದಿದ್ದೇನೆ.

ಈ ಮೇರೆಗೆ ಆ ವೃದ್ಧ ಬ್ರಾಹ್ಮಣನು ಆಡಿದ ಮಾತುಗಳಿಂದ ನನಗೆ ಬಹಳ ಸಿಟ್ಟು ಬಂದಿತು. ಆಗ ನಾನು ತಿರಸ್ಕಾರದ ಮುದ್ರೆಯಿಂದ ಆ ಬ್ರಾಹ್ಮಣನನ್ನು ನೋಡಿ,—ಏನು? ಆ ಕಾರ್ಯದಲ್ಲಿ ನಾನು ವಿಘ್ನವೆ? ಎಂದು ಕೇಳಿದೆನು. ಆಗ ಆ ಬ್ರಾಹ್ಮಣನು—ಅಹುದು, ನೀನೇ ವಿಘ್ನವಾಗಿರುತ್ತೀ. ರಾಜ್ಯ ಸ್ಥಾಪನೆಯ ಕೆಲಸವು ಸುಲಭವಲ್ಲ, ಆ ಕೆಲಸವು ಹೇಮಚಂದ್ರ ನಿಂದಲ್ಲದೆ, ಬೇರೆ ಯಾರಿಂದಲೂ ಆಗದು. ಹೇಮಚಂದ್ರನಂತು ನಿನಗೆ ಮರುಳಾಗಿ ಹೋಗಿರುತ್ತಾನೆ. ಆತನು ನಿನ್ನ ಹಂಬಲವನ್ನು ಬಿಡುವವರೆಗೆ ಆತನಿಂದ ಯಾವ ಕೆಲಸವೂ ಆಗುವಂತೆ ಇಲ್ಲ, ಪೂರ್ಣ ನಿನ್ನ ಅಧೀನನಾದುದರಿಂದಲೇ ಯವನರನ್ನು ಹಣಿಯುವದು ಅವನಿಗೆ ನೀಗದ ಕೆಲಸವಾಗಿದೆ. ಇದಕ್ಕಾಗಿಯೇ ನಿನ್ನನ್ನು ಇಲ್ಲದ ಹಾಗೆ ಮಾಡ.....ಎಂದು ಆ ವೃದ್ಧ ಬ್ರಾಹ್ಮಣನು ನುಡಿಯುತ್ತಿರಲು, ನಾನು ನಡುವೇ ಬಾಯಿಹಾಕಿ,—ತಮ್ಮ ಮನಸ್ಸಿನ ಒಲವು ಗೊತ್ತಾಯಿತು. ನನ್ನನ್ನು ಕೊಂದಹೊರತು, ಯವನರ ನಾಶವಾಗದು. ತಮ್ಮ ಪ್ರಿಯ ಶಿಷ್ಯನು ಇದಕ್ಕಾಗಿಯೇ ನನಗೆ ಈ ಉಂಗುರವನ್ನು ಕೊಟ್ಟು, ನನ್ನನ್ನು ಮೋಸದಿಂದ ಕೊಲ್ಲುವ ಕೆಲಸವನ್ನು ನಿಮ್ಮಂಥ ಸತ್ವಶೀಲರಾದ ಬ್ರಾಹ್ಮಣರಿಗೆ ಒಪ್ಪಿಸಿದನೋ? ಎಂದು ಕೇಳಿದೆನು.

ಮಣಿ—ನೀನು ಹೀಗೆ ಮಾಧವಾಚಾರ್ಯನ ಮನಸ್ಸಿಗೆ ನಡುವಂಥ ಮಾತುಗಳನ್ನು ಯಾಕೆ ಆಡಿದೆ?

ಮೃಣಾ—ಗೆಳತೀ, ಏನು ಹೇಳಲಿ! ಆ ಮುದುಕನ ಮಾತು ಕೇಳಿ ನನಗೆ ಮಿತಿಮೀರಿ ಸಂತಾಪವಾಗಿತ್ತು, ಅವನನ್ನು ತಿನ್ನಲಿಯಾ, ಎಂಬ ಸಿಟ್ಟು ನನಗೆ ಬಂದಿತ್ತು ಸಂತಾಪದಿಂದ ನನ್ನ ಎಲವುಗಳೂ ಕಾಯ್ದುಹೋಗಿದ್ದವು. ಸಂಕಟ ಸಮಯದಲ್ಲಿ ನಾಚಿಕೆಯು ಕೆಲಸದ್ದಲ್ಲ, ಮಾಧವಾ ಚಾರ್ಯನು, ಮನಸ್ಸಿನಲ್ಲಿ ನನಗೆ ಬಾಯಿಬಡಿಕಿಯೆಂದು ಅಂದರೂ ಅಂದಿರಬಹುದು. ಯಾಕಂದರೆ ನನ್ನ ಮಾತುಗಳಿಂದ ಆತನು ಸಿಟ್ಟಿಗೇಳದೆ ಮುಗುಳು ನಗೆ ನಕ್ಕು—ತಂಗೀ, ನೀನು ಈಗ ಬೇಕಾದದ್ದು ಅನ್ನು, ನನಗೆ ಬೇಕಾದಷ್ಟು ಬಯ್ಯು; ಆದರೆ, ನಿನ್ನನ್ನು ಈ ರೀತಿಯಾಗಿ ಕರತಂದದ್ದನ್ನು ಹೇಮಚಂದ್ರನು ಎಷ್ಟು ಮಾತ್ರವೂ ಅರಿಯೆನು. ಸುಮ್ಮನೆ ಆತನನ್ನು ದೂಷಿಸಬೇಡ. ಅಮ್ಮಾ ನಾನು ನಿನಗೆ ಹಿತವನ್ನು ಹೇಳುತ್ತೇನೆ. ನೀನು ಮನಸ್ಸಿನಲ್ಲಿ ಇಲ್ಲದ್ದೊಂದು ಎಣಿಸಬೇಡ. ಜೀವಕ್ಕೆ ಅಪಾಯವನ್ನು ಮಾಡಿಕೊಳ್ಳಬೇಡ. ಸ್ವಲ್ಪ ದಿವಸಗಳ ವರೆಗೆ ಹೇಮಚಂದ್ರನ ವಿರಹವನ್ನು ತಾಳು; ಅದರಿಂದಲೇ ನಿನ್ನ ಕಲ್ಯಾಣವಾಗುವದು. ಹೇಮಚಂದ್ರನು ಅರಸನಾದ ಮೇಲೆ ನೀನು ಬೇಗನೆ ಆತನ ಅರಸಿಯಾದೀ. ನನ್ನ ಈ ಮಾತುಗಳು ನಿನಗೆ ರುಚಿಸುವದಿಲ್ಲವೋ? ನಿನಗೆ ಮರುಳಾಗಿರುವ ಹೇಮಚಂದ್ರನು ಕರ್ತವ್ಯ ಪರಾಮ್ಮುಖನಾಗಿ ಮೂಢನಾಗಿರಲು, ಆತನನ್ನು ಎಚ್ಚರಗೊಳಿಸುವದು ನಿನ್ನ ಕರ್ತವ್ಯವಲ್ಲವೋ? ಎನ್ನಲು, ನಾನು—ನನ್ನಿಂದ ಅವರಿಗೆ ಕೇಡೇ ಒದಗುತ್ತದೆಂದಬಳಿಕ ಇನ್ನು ಮೇಲೆ ಅವರು ನನಗೆ ದರ್ಶನ ಕೊಡುವರೆಂಬ ಆಸೆಯು ವ್ಯರ್ಥವಾದದ್ದೇ ಸರಿ ಎಂದು ಹೇಳಿದೆನು.

ಅದನ್ನು ಕೇಳಿ ಮಾಧವಾಚಾರ್ಯನು—ತಂಗೀ, ನೀನು ನನ್ನಲ್ಲಿ ನಂಬುಗೆಯನ್ನಿಡು. ನಾನು ನಿಮ್ಮಿಬ್ಬರಲ್ಲಿ ಒಬ್ಬರ ಅಕಲ್ಯಾಣವನ್ನೂ ಮಾಡುವವನಲ್ಲ, ಇದರ ಮೇಲೆ ನನ್ನ

ಮಾತುಗಳು ನಿನಗೆ ರುಚಿಸಲಿ, ರುಚಿಸದಿರಲಿ; ನನ್ನ ಮಾತಿಗೆ ನಿನ್ನ ಒಪ್ಪಿಗೆಯು ಇರಲಿ, ಇರದಿರಲಿ; ನಾನು ಮನಸ್ಸಿನಲ್ಲಿ ಸಂಕಲ್ಪ ಮಾಡಿದಂತೆ ನಡೆಯತಕ್ಕವನೇ. ಇನ್ನು ಮೇಲೆ ನಾನು ನಿನ್ನನ್ನು ಪರದೇಶದಲ್ಲಿ ಒಂದು ಗುಪ್ತವಾದ ಸ್ಥಳದಲ್ಲಿ ಇಡತಕ್ಕವನಿದ್ದೇನೆ. ಗೌಡದೇಶದಲ್ಲಿ ನನ್ನ ನಂಬುಗೆಯವನಾದ ಒಬ್ಬ ಸತ್ವಶೀಲ ಬ್ರಾಹ್ಮಣನಿರುವನು. ಇನ್ನು ಮೇಲೆ ಆತನ ಮನೆಯಲ್ಲಿ ನೀನು ಇರಬೇಕಾಗುವದು. ಆತನು ನಿನ್ನನ್ನು ಹೊಟ್ಟೆಯ ಮಗಳಂತೆ ಸಂರಕ್ಷಿಸುವನು. ಯಾವ ಮಾತಿನಿಂದಲೂ ಕೊರತೆಯಾಗಲಿಕ್ಕಿಲ್ಲ. ಅಲ್ಲಿ ಒಂದು ವರ್ಷದವರೆಗೆ ಆನಂದದಿಂದ ಇರು. ಆಮೇಲೆ ನಿನ್ನನ್ನು ನಿನ್ನ ತಂದೆಯ ಬಳಿಗೆ ಕಳುಹುವೆನು. ಇದಲ್ಲದೆ ನಾನೊಂದು ಮಾತಿನ ಸಲುವಾಗಿ ನಿನಗೆ ವಚನ ಕೊಡುತ್ತೇನೆ, ನಿನ್ನನ್ನು ನಿನ್ನ ತಂದೆಯ ಮನೆಗೆ ಮುಟ್ಟಿಸುವಾಗ ಹೇಮಚಂದ್ರನು ಯಾವ ಸ್ಥಳದಲ್ಲಿದ್ದರೂ, ಯಾವ ಸ್ಥಿತಿಯಲ್ಲಿದ್ದರೂ ಅವನೊಡನೆ ನಿನ್ನ ವಿವಾಹವನ್ನು ಮಾಡುವೆನು, ಎಂದು ಹೇಳಿದನು. ಮಾಧವಾಚಾರ್ಯನ ಈ ಮಾತುಗಳನ್ನು ಕೇಳಿ ನಾನು ಯಾವ ಮಾತನ್ನೂ ಆಡಲಿಲ್ಲ, ಸಖೀ, ಮುಂದೆ ಆತನು ನನ್ನನ್ನು ಇಲ್ಲಿಗೆ ಕರತಂದು ಬಿಟ್ಟನು. ಅಂದಿನಿಂದ ನಾನು ಪಂಜರದೊಳಗಿನ ಹಕ್ಕಿಯ ಹಾಗೆ ಆಗಿದ್ದೇನೆ. ಅದರ ಮುಂದಿನ ಸಂಗತಿಯು ನಿನಗೆ ಗೊತ್ತೇ ಇರುವದು.

ಗಿರಿಜೆ

ಈ ಮೇರೆಗೆ ಅವರಿಬ್ಬರು ಗೆಳತಿಯರೂ ಮಾತಾಡುತ್ತ ಕುಳಿತಿರುವಷ್ಟರಲ್ಲಿ, ಮಂಜುಲವಾದ ಗಾಯನದ ಧ್ವನಿಯು ಅವರ ಕಿವಿಗೆ ಬಿದ್ದಿತು. ಮೃಣಾಲಿನಿಯು ಗಾಯನ ಪ್ರಿಯಳಿದ್ದಳು. ಸ್ವಾಭಾವಿಕವಾಗಿಯೇ ಬಹು ಮಂಜುಲವಾಗಿದ್ದ ಆ ಗಾಯನದ ಧ್ವನಿಯು, ಏಕನಾಥದ ಇಂಪಾದ ನಾದದಲ್ಲಿ ಬೆರೆತು ಹೋಗಿ, ರಸಿಕರ ಮನಸ್ಸನ್ನು ಎಳೆದುಕೊಳ್ಳುತ್ತಿದ್ದಿತು. ಆಗ ಮೃಣಾಲಿನಿಯು ಬಹು ಆತುರತೆಯಿಂದ ಮಣಿ ಮಾಲಿನಿಯನ್ನು ಕುರಿತು—ಸಖೀ, ಮಣಿಮಾಲಿನೀ, ಗಾಯನದ ಮಂಜುಲ ಧ್ವನಿಯನ್ನು ಕೇಳಿದಿಯಾ? ಅದು ಯಾವ ಕಡೆಯಿಂದ ಬರುತ್ತಿರಬಹುದು? ಇಂಥ ಮಂಜುಲ ಸ್ವರದಿಂದ ಯಾರು ಹಾಡುತ್ತಿರಬಹುದು? ಎಂದು ಕೇಳಲು, ಅದಕ್ಕೆ ಮಣಿಮಾಲಿನಿಯು—ಯಾವಳೋ ಭಿಕ್ಷುಕಿಯು ಬೀದಿಯಲ್ಲಿ ಹಾಡುತ್ತಿದ್ದಾಳು, ಎಂದು ಹೇಳಿದಳು. ಈ ಮೇರೆಗೆ ಅವರ ಸಂಭಾಷಣವು ನಡೆದಿರಲು, ಭಿಕ್ಷುಕಿಯು ಹಾಡುತ್ತ ಅವರ ಮನೆಯ ಕಡೆಗೇ ಬರತೊಡಗಿದಳು. ಸಮಿ–ಸಮೀಪಕ್ಕೆ ಬಂದ ಬಂದಹಾಗೆ ಗಾಯನವು ಸ್ಪಷ್ಟವಾಗಿ ಕೇಳಿಸಹತ್ತಿತು. ಆ ಗಾಯನದಲ್ಲಿ, ತನ್ನ ಪ್ರಿಯನಾದ ಹೇಮಚಂದ್ರನು, ತನ್ನನ್ನು ಅಗಲಿ ದುಃಖಿಸುತ್ತ ಹುಡುಕುವಂತೆ ಕೇಳಿದ್ದರಿಂದಂತು ಮೃಣಾಲಿನಿಯ ಆತುರತೆಯು ಮತ್ತಿಷ್ಟು ಹೆಚ್ಚಿತು. ಆಕೆಯು ಭಿಕ್ಷುಕಿಯನ್ನು ಯಾವಾಗ ನೋಡೇನು, ಆಕೆಯ ಬಾಯಿಂದ ಸಂಪೂರ್ಣ ಹಾಡನ್ನು ಯಾವಾಗ ಕೇಳೇನು ಎಂದು ಚಡಪಡಿಸಹತ್ತಿದಳು. ಆಗ ಆಕೆಯು ಮತ್ತೆ

ಮಣಿಮಾಲಿನಿಗೆ ದುಂಬಾಲು ಬಿದ್ದು—ಸಖೀ, ಭಿಕ್ಷುಕಿಯ ಗಾಯನವು ಎಷ್ಟು ಮಂಜುಲವಾಗಿದೆ ನೋಡಿದಿಯಾ? ಹೋಗು, ಆಕೆಯು ನಮ್ಮ ಮನೆಯ ಹತ್ತರವೇ ಬಂದಂತೆ ಕಾಣುತ್ತದೆ; ಬೇಗನೆ ಆಕೆಯನ್ನು ಕರೆದುಕೊಂಡು ಬಾ. ಏಳು, ಚಟ್ಟನೆ ಏಳು. ಆಕೆಯು ಎಲ್ಲಿಯಾದರೂ ಹೋದಗೀದಾಳು, ಎಂದಳು.

ಮೃಣಾಲಿನಿಯ ಮಾತಿನಂತೆ ಮಣಿಮಾಲಿನಿಯು ಅವಸರದಿಂದ ಹೋಗಿ, ಭಿಕ್ಷುಕಿಯನ್ನು ಕರಕೊಂಡು ಬಂದಳು. ಆಕೆಯನ್ನು ನೋಡಿ ಮೃಣಾಲಿನಿಗೆ ಬಹಳ ಸಂತೋಷವಾಯಿತು. ಭಿಕ್ಷುಕಿಯು ಸಾದಗಪ್ಪಿನ ಮೇಲೆ ಇದ್ದಳು. ಆಕೆಯ ಯಾವತ್ತು ಅವಯಗಳ ರಚನೆಯು ಬಹು ಮೋಹಕವಾಗಿದ್ದಿತು. ಆಕೆಯು ಬಹು ತೇಜಸ್ವಿಯಾಗಿದ್ದಳು. ಕಪ್ಪು ಬಣ್ಣದಿಂದ ಚಲ್ವಿಕೆಯಲ್ಲಿ ಕೊರತೆಯುಂಟಾಗುವದರ ಬದಲು ಅದರಿಂದ ಚಲ್ವಿಕೆಗೆ ವಿಶೇಷ ತರದ ಶೋಭೆಯುಂಟಾಗಿತ್ತು. ಆಕೆಯ ಕಣ್ಣುಗಳು ಹೊಳಪುಳ್ಳವಾಗಿದ್ದವು. ಮಾಗಿದ ತೊಂಡಿಯ ಹಣ್ಣಿನಂಥ ಕೆಳದುಟಿಯೊಳಗಿಂದ, ಕುಂದ ಪುಷ್ಪದ ಮೊಗ್ಗೆಗಳ ಸಾಲಿನಂತೆ ಹಲ್ಲುಗಳ ಸಾಲುಗಳು ಬಲು ಚಂದ ಕಾಣಿಸುತ್ತಿದ್ದವು. ನಗೆಮೊಗದ ಆ ಭಿಕ್ಷುಕಿಯ ಮುಖ ಮುದ್ರೆಯಲ್ಲಿ ಆನಂದವು ತುಂಬಿ ತುಳುಕುತ್ತಿತ್ತು. ಕಣ್ಣುಗಳಲ್ಲಿ ವಿಚಿತ್ರವಾದ ಮೋಹಕ ಶಕ್ತಿಯು ಇದ್ದದ್ದರಿಂದ ನೋಡುವವರೆಲ್ಲ ಆಕೆಯ ವಿಷಯದಲ್ಲಿ ಆತುರ ಬುದ್ಧಿಯುಳ್ಳವರಾಗುತ್ತಿದ್ದರು. ರೇಶಿಮೆಯಂತೆ ಮೆತ್ತಗಾದ ಕಪ್ಪುಗೂದಲಿನ ಆಕೆಯ ಹೆರಳು, ಹೂವಿನ ಮಾಲೆಯಿಂದ ಬಹು ಮನೋಹರವಾಗಿ ಒಪ್ಪುತ್ತಿತ್ತು. ಆಕೆಗೆ ಅದೇ ಹದಿನೈದು ತುಂಬಿ, ಹದಿನಾರನೆಯ ವರ್ಷವು ನಡೆಯುತ್ತಿತ್ತು. ಆ ಭಿಕ್ಷುಕಿಯ ಉಡಿಗೆ—ತೊಡಿಗೆಗಳು ಕಡಿಮೆ ತರದವಾಗಿದ್ದರೂ, ಅವು ಜಳ ಜಳ ಇದ್ದು ವ್ಯವಸ್ಥೆಯುಳ್ಳವಾಗಿದ್ದವು. ಭಿಕ್ಷುಕರಿಗೆ ಒಪ್ಪುವಂಥ ಅಲಂಕಾರಗಳನ್ನು ಆಕೆಯು ಇಟ್ಟುಕೊಂಡಿದ್ದಳು. ಆಕೆಯ ಕೈಯಲ್ಲಿ ತರತರದ ದುಂಡುಗಳೂ, ಕೊರಳಲ್ಲಿ ತುಲಸಿಯ ಮಣಿಗಳ ಹಾರವೂ ಒಪ್ಪುತ್ತಿದ್ದವು. ಆಕೆಯು ಹಣೆಯಲ್ಲಿ ಎರಡೂ ಹುಬ್ಬುಗಳ ನಡುವೆ ತಿಲಕವನ್ನು ಇಟ್ಟಿದ್ದಳು. ಇಂಥ ಮನೋಹರಾಕಾರದ ಭಿಕ್ಷುಕಿಯ ಗಾಯನಕ್ಕೆ ಮನಸೋತ ಮೃಣಾಲಿನಿಯು, ನಿನ್ನ ಪದವನ್ನು ಇನ್ನೊಮ್ಮೆ ಮೊದಲಿನಿಂದ ಹಾಡೆಂದು ಹೇಳಲು, ಆ ಆನಂದವೃತ್ತಿಯ ಭಿಕ್ಷುಕಿಯು ಆ ಪದವನ್ನು ಮೊದಲಿನಿಂದ ಹಾಡತೊಡಗಿದ್ದಳು.

ಅಗಲಿದೆಯಾ । ಸಖಿಯೇ, । ಮೃದುಭಾಷಿಣೀ, ।
ಅಗಲಿದೆಯಾ ಸಖಿಯೇ ।
ಅಗಿಲಿಪೋಗಿ ನೀನಾವ ಮಂದಿರದೊಳು ।
ಅಡಗಿಕೊಂಡಿಹೆ, ಮಧುರಾ ಪುರವಾಸಿನಿ ॥ಪಲ್ಲ॥

ರಸಿಕ–ಮುರಾರಿಯೊಳು । ನೀನೇತಕೆ ।
ಕೋಪಿಸಿ ಪೋದೆಗಡ ॥
ಬಿಸರುಹ–ನಯನೆ, ನಿನ್ನಗಲಿಕೆ–ಕಿಚ್ಚಿನಿಂ ।
ವ್ಯಥಿಸಿ ನಿನ್ನನ್ನು ಶೋಧಿಸುತಲಂಡಲೆವಂ ॥೧॥

ಯಮುನಾ–ತೀರದೊಳು । ಪ್ರಿಯದಯಿತೇ ।
ಉಪವನ–ಕೇಳಿಯೊಳು ॥
ವಿಮಲೆ ನಿನ್ನೊಳು ತಾನು ಮುದಿಸಿದ ಪರಿಯಂ ।
ಸ್ಮರಿಸಿ ಮುರಾರಿಯು ವ್ಯಥಿಸಿ ಕುದಿಯುವನಯ್ಯೋ ॥೨॥

ರುಚಿರ–ಗುಣಾನ್ವಿತೆಯೇ, । ಕರುಣಾಕರೆ,
ದೀನ–ಮುರಾರಿಯೊಳು ॥
ಉಚಿತವಲ್ಲವೆಲೆ ರೋಷವಮಾಳ್ಪದು ಗಡ ।
ಸ್ಮರಿಸಿ ನಿನ್ನನ್ನು ತಾಂ ಕೊರಲುವನಸಖೀ, ॥೩॥

ಈ ಮೇರೆಗೆ ಹಾಡು ಮುಗಿದ ಕೂಡಲೆ, ಮೃಣಾಲಿನಿಯು ಭಿಕ್ಷುಕಿಯನ್ನು ಕುರಿತು ಅಮ್ಮಾ, ನೀನು ಬಹು ಸುಂದರವಾದ ಹಾಡನ್ನು ಹಾಡಿದೆ, ಎಂದು ಹೊಗಳಿ, ಮಣಿಮಾಲಿನಿಗೆ— ಗೆಳತೀ, ಮಣಿಮಾಲಿನಿ, ಇವಳಿಗೆ ಉಚಿತವನ್ನು ಕೊಡುವದಕ್ಕಾಗಿ ಏನಾದರೂ ತರಬಾರದೇ? ಎಂದು ನುಡಿಯಲು, ಮಣಿಮಾಲಿನಿಯು ಅಪ್ಪಣೆಯಂತೆ ಏನಾದರೂ ತರಬೇಕೆಂದು ಒಳಗೆ ಹೋದಳು. ಈ ಸಂಧಿಯನ್ನು ನೋಡಿ ಮೃಣಾಲಿನಿಯು ಭಿಕ್ಷುಕಿಗೆ—

ಮೃಣಾ—ನಿನ್ನ ಕಂಠವು ಬಹು ಮಂಜುಲವಿದೆ, ನಿನ್ನ ಹೆಸರೇನು?

ಭಿಕ್ಷುಕಿ—ನನ್ನ ಹೆಸರು ಗಿರಿಜೆ.

ಮೃಣಾ—ನೀನು ಎಲ್ಲಿ ಇರುತ್ತೀ?

ಗಿರಿಜೆ—ನಾನು ಈ ಪಟ್ಟಣದಲ್ಲಿಯೇ ಇರುತ್ತೇನೆ.

ಮೃಣಾ—ನೀನು ಹಾಡಿಯೇ ಹೊಟ್ಟೆ ತುಂಬಿಕೊಳ್ಳುತ್ತಿಯೇನು?

ಗಿರಿಜೆ—ಅವ್ವನವರೇ, ಹಾಡಿ ತುಂಬಿಕೊಳ್ಳದೇನು ಮಾಡಲಿ! ಹಾಡುವದರ ಹೊರತು ಬೇರೆ ಕೆಲಸವೇ ನನಗೆ ಬರುವದಿಲ್ಲ,

ಮೃಣಾ—ಆಗಲಿ, ಈ ಹಾಡನ್ನು ನೀನು ಎಲ್ಲಿ ಕಲಿತೆ?

ಗಿರಿಜೆ—ಹಾಡು ಕಲಿಯುವದೇನು? ಎಲ್ಲಿಯಾದರೂ ಚಲುವಾದ ಹಾಡು ಕಿವಿಗೆ ಬಿದ್ದಕೂಡಲೆ, ಅದನ್ನು ಕೂಡಿಸಿ ಗಟ್ಟಿಮಾಡಿ ಹಾಡುತ್ತಿರುತ್ತೇನೆ.

ಮೃಣಾ—ಹಾಗಾದರೆ, ಈ ಹಾಡು ನಿನ್ನ ಕಿವಿಗೆ ಎಲ್ಲಿಬಿದ್ದಿತು?

ಗಿರಿಜೆ—ಒಂದು ದಿನ ಒಬ್ಬ ಪ್ರವಾಸಿಯು ಸಹಜವಾಗಿ ಹಾಡುತ್ತ ಕುಳಿತಿದ್ದನು. ಆ ಹಾಡು ನನ್ನ ಮನಸ್ಸಿಗೆ ಬಂದದ್ದರಿಂದ ಅದನ್ನು ನಾನು ಗಟ್ಟಿ ಮಾಡಿದೆನು.

ಮೃಣಾ—ಆ ಪ್ರವಾಸಿಯು ನಿನ್ನನ್ನು ಎಲ್ಲಿ ಕಂಡಿದ್ದನು?

ಗಿರಿಜೆ—ಆತನು ಈ ಪಟ್ಟಣದಲ್ಲಿಯೇ ಇರುತ್ತಾನೆ.

ಗಿರಿಜೆಯ ಈ ಕಡೆಯ ಮಾತುಗಳನ್ನು ಕೇಳಿ ಮೃಣಾಲಿನಿಯು ಹಿರಿ ಹಿರಿ ಹಿಗ್ಗಿದಳು. ಆಕೆಯ ಮೋರೆಯು ಇಷ್ಟಗಲವಾಯಿತು. ಆಗ ಆಕೆಯು ಗಿರಿಜೆಗೆ,—

ಮೃಣಾ—ನಿನ್ನ ಆ ಹಾದಿಕಾರನು ಯಾವ ಉದ್ಯೋಗವನ್ನು ಮಾಡುತ್ತಿರುವನು?

ಗಿರಿಜೆ—ಆತನು ವ್ಯಾಪಾರಸ್ಥನಿದ್ದಾನೆ.

ಮೃಣಾ—ವ್ಯಾಪಾರಸ್ಥನು! ವ್ಯಾಪಾರಸ್ಥರಂತು ಯಾವದಾದರೊಂದ ಜೀನಸಿನ ವ್ಯಾಪಾರವನ್ನು ಮಾಡುತ್ತಿರುತ್ತಾರೆ, ನಿನ್ನ ವ್ಯಾಪಾರಸ್ಥನು ಏತರ ವ್ಯಾಪಾರವನ್ನು ಮಾಡುತ್ತಿರುವನು?

ಗಿರಿಜೆ—ಅವ್ವನವರು ವಿಚಿತ್ರವಾದ ಪ್ರಶ್ನವನ್ನು ಮಾಡಿದಿರಿ! ಜಗತ್ತಿನ ಜನರೆಲ್ಲ ಮಾಡುವ ವ್ಯಾಪಾರವನ್ನೇ ನಮ್ಮ ವ್ಯಾಪಾರಸ್ಥನೂ ಮಾಡುತ್ತಿರುತ್ತಾನೆ.

ಮೃಣಾ—ಹೌದು, ಆತನು ಯಾವ ಜೀನಸಿಯ ವ್ಯಾಪಾರ ಮಾಡುತ್ತಾನೆಂಬದನ್ನು ಬಿಚ್ಚಿ ಹೇಳಬಾರದೇ?

ಗಿರಿಜೆ—ಅವನಲ್ಲವೆ? ಅವನು ಮಾತಿನ ವ್ಯಾಪಾರವನ್ನೇ ಮಾಡುತ್ತಾನೆ.

ಮೃಣಾ—ಏನು! ಮಾತಿನ ವ್ಯಾಪಾರವೇ? ಬಹಳ ಚನ್ನಾಗಿ ಹೇಳಿದೆ, ಮಾತಿನ ವ್ಯಾಪಾರದಲ್ಲಿ ವ್ಯಾಪಾರಸ್ಥನಿಗೆ ಆಗುವ ಲಾಭವೇನು? ಬಾಯಿ ನೋಯುವದೇ ಲಾಭವೇನು?

ಗಿರಿಜೆ—ಬಾಯಿ ನೋಯುವದೇ ಏಕೆ? ಅದರಲ್ಲಿಯೂ ಲಾಭಹಾನಿಗಳುಂಟು. ಮಾತಿನ ವ್ಯಾಪಾರದಲ್ಲಿ ಆಗುವ ಲಾಭವೆಂದರೆ, ಪ್ರೇಮಲಾಭವು. ಹಾನಿಯೆಂದರೆ, ಪ್ರೇಮಭಂ—

ಮೃಣಾ—ಭಲೇ! ನೀನು ಒಳ್ಳೆಯ ಜಾಣಳಿರುತ್ತೀಯೇ! ಇರಲಿ, ನೀನು ಯಾವ ಯಾವ ಹಾಡು ಕಲಿತಿರುತ್ತೀ? ಇನ್ನೊಂದು ಹಾಡನ್ನು ಹಾಡು ನೋಡೋಣ.

ಮೃಣಾಲಿನಿಯ ಮಾತನ್ನು ಕೇಳಿ ಗಿರಿಜೆಯು ಮತ್ತೊಂದು ಹಾಡನ್ನು ಹಾಡತೊಡಗಿದಳು. ಅದನ್ನು ಕೇಳಿ ಮೃಣಾಲಿನಿಯು, ಹೇಮಚಂದ್ರನವೇ ಈ ಹಾಡುಗಳೆಂದು ನಿಶ್ಚಯಿಸಿದಳು. ಗಿರಿಜೆಯ ಹಾಡುಗಳನ್ನು ಕೇಳಿದ್ದರಿಂದ ಆಕೆಗೆ ಹಿಂದಿನದೆಲ್ಲ ನೆನಪಾಯಿತು. ತನ್ನ ಮೇಲಿದ್ದ ಹೇಮಚಂದ್ರನ ಪ್ರೀತಿಯನ್ನೂ, ಆತನ ಮನೋಹರ ವೀರ ಮೂರ್ತಿಯನ್ನೂ ಆಕೆಯು ನೆನಿಸಿದಳು. ಆಕೆಯ ಕಣ್ಣುಗಳು ನೀರಿನಿಂದ ತುಂಬಿದವು; ದುಃಖವು ಒತ್ತರಿಸಿತು. ಆಕೆಯು ಧೈರ್ಯದಿಂದ ತನ್ನ ಮನೋವಿಕಾರವನ್ನು ಹೊರಗೆಡವದೆ, ಗಿರಿಜೆಯ ಏಕನಾಥದ ಕಡೆಗೆ ನೋಡುತ್ತ ಕುಳಿತುಕೊಂಡಳು. ಆ ಏಕನಾಥದ ಕುಂಬಳಕಾಯಿಯ ಮೇಲೆ ಚಂದಕ್ಕಾಗಿ ಗಿರಿಜೆಯು ಹಾಕಿದ್ದ ಕಸೂತಿಯ ಕರವಸ್ತ್ರವು ಮೃಣಾಲಿನಿಗೆ ತನ್ನ ಗುರುತಿನದಾಗಿ ತೋರಹತ್ತಿತು. ಇದು, ತಾನು ಬಹು ಪ್ರೇಮದಿಂದ ತನ್ನ ಚಾತುರ್ಯವನ್ನೆಲ್ಲ ವೆಚ್ಚಮಾಡಿ, ತನ್ನ ಪ್ರಿಯನಾದ ಹೇಮಚಂದ್ರನಿಗೆ ಹಾಕಿ ಕೊಟ್ಟಿದ್ದ ಕಸೂತಿಯ ವಸ್ತ್ರವಿರಬೇಕೆಂದು ಆಕೆಯು ತರ್ಕಿಸಿದಳು. ಆಗ ಮೃಣಾಲಿನಿಯು ಗಿರಿಜೆಗೆ—ಗಿರಿಜೇ, ನಿನ್ನ ಆ ಏಕನಾಥದ ಕಾಯಿಯ ಮೇಲಿರುವ ಆ ಕರವಸ್ತ್ರವನ್ನು ಕೊಡು, ನೋಡೋಣ; ನಿನ್ನ ಆ ವಸ್ತ್ರವು ಬಹು ಚಂದವಾಗಿದೆ ಎನ್ನಲು, ಗಿರಿಜೆಯು ಕೂಡಲೆ ಬಹು ವಿನಯದಿಂದ ಎದ್ದು, ಅದನ್ನು ಮೃಣಾಲಿನಿಯ ಕೈಯಲ್ಲಿ ಕೊಟ್ಟಳು.

ಮೃಣಾಲಿನಿಯು ಆ ವಸ್ತ್ರವನ್ನು ಆತುರದಿಂದ ತೆಗೆದುಕೊಂಡು ನೋಡಲು, ತಾನು ಬಹು ಚಾತುರ್ಯದಿಂದ ಸುಳುವಿನ ಸಂದಿಗಳಲ್ಲಿ ಸೇರಿಸಿದ ಹೇಮಚಂದ್ರನ ಹೆಸರಿನ ಅಕ್ಷರಗಳು ಆಕೆಯ ಕಣ್ಣಿಗೆ ಬಿದ್ದವು, ಅದನ್ನು ನೋಡಿದ ಕೂಡಲೆ, ಇಲ್ಲದ ಕಲ್ಪನೆಗಳು ಆಕೆಯ ಮನಸ್ಸಿನಲ್ಲಿ ಬರತೊಡಗಿದವು. ಹೇಮಚಂದ್ರನು ಪ್ರೀತಿಯ ಕುರುಹೆಂದು ತಿಳಿದು, ಬಹು ಅಕ್ಕರೆಯಿಂದ ಜೋಕೆಮಾಡಿಕೊಂಡಿದ್ದ ಈ ವಸ್ತ್ರವು, ಈ ಪ್ರಾಯಸ್ಥಳಾದ ಭಿಕ್ಷುಕಿಯ ಬಳಿಯಲ್ಲಿ ಹೇಗೆ ಬಂದಿತೆಂಬದನ್ನು ಕುರಿತು ಆಕೆಯು ಪರಿಪರಿಯಿಂದ ಯೋಚಿಸತೊಡಗಿದಳು. ಒಂದೂ

ಯೋಚನೆಯು ಬಗೆಹರಿಯಲೊಲ್ಲದು. ಹೇಮಚಂದ್ರನ ಕುಲೀನತೆಯನ್ನೂ ಸರಳ ಸ್ವಭಾವವನ್ನೂ ಅರಿತವಳಾದುದರಿಂದ ಕೆಟ್ಟ ಕಲ್ಪನೆಯನ್ನು ಮಾಡಲಿಕ್ಕೆ ಆಕೆಗೆ ಆಸ್ಪದವಿದ್ದಿಲ್ಲ. ಅದರಂತೆ ಮನೋಹರಾಕಾರದ ತರುಣ ಭಿಕ್ಷುಕಿಯ ಬಳಿಯಲ್ಲಿ ಈ ವಸ್ತ್ರವು ಯಾಕೆ ಬಂದಿತೆಂಬದರ ಗೂಢವೂ ಆಕೆಗೆ ತಿಳಿಯಲಿಲ್ಲ. ಹೀಗಾಗಿ ಈ ಕೋಮಲಾಂತಃಕರಣದ ಮೃಣಾಲಿನಿಯು, ಕಲ್ಪನೆಗಳ ತೆರೆಗಳಲ್ಲಿ ಸಿಕ್ಕು ಪೇಚಾಡಹತ್ತಿದಳು. ಅಷ್ಟರಲ್ಲಿ ಆಕೆಯ ಮನಸ್ಸಿನಲ್ಲಿ ಒಂದು ವಿಚಾರವು ಹೊಳೆಯಿತು. ಇದೇ ವಿಚಾರವೇ ನಿಜವಿರಲಿಕ್ಕೆ ಬೇಕೆಂದು ತಿಳಿದು ಆಕೆಯು ಗಿರಿಜೆಯನ್ನು ಕುರಿತು—

ಮೃಣಾ—ಗಿರಿಜೇ, ಈ ಸುಂದರ ವಸ್ತ್ರವನ್ನು ನಿನಗೆ ಯಾರು ಕೊಟ್ಟರು? ಜನರನ್ನು ಮರಳು ಮಾಡುವ ಶಕ್ತಿಯು ನಿನ್ನಲ್ಲಿ ವಿಚಿತ್ರವಾಗಿರುವದು ಬಿಡು.

ಗಿರಿಜೆ—ಜನರನ್ನು ಮರುಳು ಮಾಡುವದು! ಹಾಗಂದರೇನು? ನಿಮ್ಮ ಮಾತಿನ ಅರ್ಥವೇ ನನಗೆ ತಿಳಿಯಲೊಲ್ಲದು! ನನಗೆ ಈ ವಸ್ತ್ರವನ್ನು ನಮ್ಮ ವ್ಯಾಪಾರಸ್ಥನು ಅನಕಾ ಕೊಟ್ಟಿರುವನು.

ಮೃಣಾ—ಅನಕಾ ಕೊಟ್ಟಿರುವನೋ? ಈ ವಸ್ತ್ರವನ್ನು ನಿನಗೆ ಕಡೆಗೇ ಕೊಟ್ಟಿರುವದಿಲ್ಲೇನು? ಈ ವಸ್ತ್ರವನ್ನು ತಿರುಗಿ ನೀನು ಆತನಿಗೆ ಯಾವಾಗ ಕೊಡುವೆ?

ಗಿರಿಜೆ—ನನಗೆ ಈ ವಸ್ತ್ರವನ್ನು ಆತನು ಕಡೆಗೇ ಕೊಟ್ಟಿರುವದಿಲ್ಲ. ಈ ವಸ್ತ್ರವನ್ನು ನೋಡಿ ಹುಚ್ಚುಹಿಡಿದ ಹಾಗೆ ಮಾಡುವ ತರುಣಿಯು ಭೆಟ್ಟಿಯಾಗುವವರೆಗೆ, ಇದನ್ನು ನಿನ್ನ ಏಕನಾಥದ ಕಾಯಿಯ ಮೇಲೆ ಹಾಕಿಕೊಂಡಿರೆಂದು ಆತನು ಹೇಳಿರುವನು. ಇರಲಿ, ನೋಡುವ ದಾಯಿತಲ್ಲವೆ? ಇನ್ನು ಆ ವಸ್ತ್ರವನ್ನು ನನಗೆ ಬೇಗನೆ ಕೊಟ್ಟುಬಿಡಿರಿ.

ಮೃಣಾ—ಗಿರಿಜೇ, ಈ ವಸ್ತ್ರವು ನನಗೆ ಬೇಕು! ಇದರ ಬೆಲೆಯನ್ನು ಬೇಡಿದಷ್ಟು ಕೊಡುವೆನು. ಈ ವಸ್ತ್ರವು ತಿರುಗಿ ನಿನಗೆ ದೊರೆಯಲಾರದು.

ಗಿರಿಜೆ—ಅಮ್ಮನವರು ನೆಟ್ಟಗೆ ಮಾಡುತ್ತೀರಿ! ವ್ಯಾಪಾರಸ್ಥನು ತನ್ನ ಜೀವಕ್ಕಿಂತಲೂ ಹೆಚ್ಚೆಂದು ತಿಳಿದ ಜತನ ಮಾಡಿಟ್ಟುಕೊಂಡಿದ್ದ ಈ ವಸ್ತ್ರವನ್ನು, ವಿಶ್ವಾಸದಿಂದ ನನಗೆ ಕೊಟ್ಟಿರಲು, ಅದನ್ನು ನಿಮಗೆ ಕೊಡಬೇಕೆ? ಈ ವಸ್ತ್ರವನ್ನು ನೋಡುತ್ತ ಆ ವ್ಯಾಪಾರಸ್ಥನು ಕಾಲವನ್ನು ಕಳೆಯುತ್ತಿರುವನು. ಅಮ್ಮಾ, ನನಗೆ ಹೊತ್ತಾಗುತ್ತದೆ, ಬೇಗನೆ ವಸ್ತ್ರವನ್ನು ಕೊಡಿರಿ!

ಮೃಣಾ—ಗಿರಿಜೇ, ನಿನ್ನ ವ್ಯಾಪಾರಸ್ಥನು ಏನು ಕೊಟ್ಟರೂ ಇದನ್ನು ಮುಂದಿಗೆ ಕೊಡಬೇಡೆಂದು ಹೇಳಿರುವನೇನು?

ಗಿರಿಜೆ—ಹಾಗೇನೂ ಹೇಳಿಲ್ಲ. ಆತನು ತನ್ನದೊಂದು ಉಂಗುರವನ್ನು ಕಳಕೊಂಡಿರುತ್ತಾನಂತೆ! ಆ ಉಂಗುರವನ್ನು ಯಾರಾದರೂ ಕೊಟ್ಟರೆ, ಈ ವಸ್ತ್ರವನ್ನು ಕೊಡೆಂದು ಹೇಳಿರುವನು. ಆ ಕೆಟ್ಟ ಉಂಗುರವೇ ಆತನನ್ನು ಹಲಬುತ್ತ ಊರೂರು ತಿರುಗುವ ಹಾಗೆ ಮಾಡಿದೆಯಂತೆ. ಆತನ ಮಾತಿನ ಅರ್ಥವೇನಿರುವದೋ ನಾನರಿಯೆನು. ಉಂಗುರವನ್ನು ಕೊಟ್ಟ ತರುಣಿಯು ಇರುವ ಸ್ಥಳವನ್ನು ನೆಟ್ಟಗೆ ಗೊತ್ತಿಟ್ಟುಕೊಂಡು ಬಾರೆಂತಲೂ ಹೇಳಿರುವನು. ಇನ್ನು ದಯಮಾಡಿ ನನ್ನ ವಸ್ತ್ರವನ್ನಷ್ಟು ಕೊಟ್ಟುಬಿಡಿರಿ, ನಾನು ಹೋಗುತ್ತೇನೆ.

ಮೃಣಾ—ಗಿರಿಜೇ, ನೀನು ಈ ಹಾಡನ್ನು ಹಾಡುತ್ತ ಯಾಕೆ ತಿರುಗುತ್ತೀಯೆಂಬದು ನನಗೆ ತಿಳಿಯಿತು! ಈ ಕಳ್ಳತನದ ವ್ಯಾಪಾರದಿಂದ ಪ್ರಯೋಜನವಾಗದೆಂದು ನಿನ್ನ ಆ ವ್ಯಾಪಾರಸ್ಥನಿಗೆ ಹೇಳು.

ಗಿರಿಜೆ—ತಾನು ಕಳಕೊಂಡಿದ್ದ ಧನವನ್ನು ಕಳವಿನಿಂದಲೇ ತಿರುಗಿ ಸಂಪಾದಿಸಬೇಕೆಂತಲೇ ನಮ್ಮ ವ್ಯಾಪಾರಸ್ಥನು ಯತ್ನಿಸುತ್ತಿರುವನು.

ಮೃಣಾ—ಇಂಥ ಕಳ್ಳತನದ ವ್ಯಾಪಾರದಿಂದ ಸಾಧು ಜನರ ಜೀವವು ಹೋಗುತ್ತದೆ; ಇದನ್ನು ನಿಮ್ಮ ವ್ಯಾಪಾರಸ್ಥನು ಅರಿಯನೋ?

ಗಿರಿಜೆ—ಅಮ್ಮನವರೇ, ಧನಪ್ರಾಪ್ತಿಯಾಗದಿದ್ದರೆ, ನಮ್ಮ ವ್ಯಾಪಾರಸ್ಥನ ಜೀವವೂ ಉಳಿಯಲಾರದೆಂದು ನನಗೆ ತೋರುತ್ತದೆ. ಆತನು ರಾಜ್ಯ ವೈಭವವನ್ನು ಅಸಾರವೆಂದು ತಿಳಿದು, ಹಗಲೆನ್ನದೆ ರಾತ್ರಿಯೆನ್ನದೆ, ಮೃಣಾಲಿನೀ ರೂಪವಾದ ಧನವನ್ನು ಮನಸ್ಸಿನಲ್ಲಿ ಚಿಂತಿಸುತ್ತ ಒಂದೇಸವನೆ ತಿರುಗುತ್ತಿರುವನು!

ಗಿರಿಜೆಯ ಈ ಮಾತುಗಳನ್ನು ಕೇಳಿ ಮೃಣಾಲಿನಿಯು ಕೋಮಲ ಸ್ವರದಿಂದ—

ಮೃಣಾಲಿನಿ—ಗಿರಿಜೇ, ನಿನಗೆ ಆ ಮೃಣಾಲಿನಿಯನ್ನು ಹುಡುಕಿಕೊಟ್ಟರೆ?

ಗಿರಿಜೆ—ಬಂಗಾರವಾಯಿತು! ಕುರುಡನಿಗೇನು ಬೇಕಾಗಿದೆ? ಎರಡು ಕಣ್ಣೇ ಅಲ್ಲವೇ?

ಮೃಣಾಲಿನಿ—ಒಳ್ಳೆಯದು, ನಿನ್ನ ವ್ಯಾಪಾರಸ್ಥನ ಪ್ರೀತಿಯ ಕರವಸ್ತ್ರವನ್ನು ಆತನಿಗೇ ಕೊಡು. ಆ ಕೆಟ್ಟ ಉಂಗುರದ ಸುದ್ದಿಯನ್ನು ಬಿಡು. ನಾನೊಂದು ಹಾಡನ್ನು ನಿನಗೆ ಹೇಳುತ್ತೇನೆ. ಅದನ್ನು ನೆನಪಿನಲ್ಲಿಟ್ಟುಕೊಂಡು ನಿನ್ನ ವ್ಯಾಪಾರಸ್ಥನ ಮುಂದೆ ಹಾಡಿತೋರಿಸುವೆಯಾ?

ಗಿರಿಜೆ—ಅವಶ್ಯವಾಗಿ ಹಾಡಿತೋರಿಸುವೆನು. ಹಾಡು ಹಗುರಾಗಿದ್ದರೆ, ಒಂದೇಸಾರೆ ಕೇಳಿದರೆ ಸಾಕು, ನನಗೆ ಗಟ್ಟಿಯಾಗುವದು.

ಗಿರಿಜೆಯ ಈ ಮಾತುಗಳನ್ನು ಕೇಳಿ ಮೃಣಾಲಿನಿಯು ಮಂಜುಲ ಸ್ವರದಿಂದ ಹಾಡಿದಳು. ಆ ಹಾಡು ಚುರುಕುಬುದ್ಧಿಯ ಆ ಗಿರಿಜೆಗೆ, ಬಹುಮಟ್ಟಿಗೆ ಗಟ್ಟಿಯಾಯಿತು. ಹಾಡುವದಾದ ಮೇಲೆ ಮೃಣಾಲಿನಿಯು—ಗಿರಿಜೇ, ಹಾಡು ಗಟ್ಟಿಯಾಯಿತೇ, ಎಂದು ಕೇಳಲು, ಗಿರಿಜೆಯು ಆಯಿತೆಂದು ಉತ್ತರ ಕೊಟ್ಟಳು.

ಈಮೇರೆಗೆ ಮೃಣಾಲಿನಿ—ಗಿರಿಜೆಯರು ಮಾತಾಡುತ್ತ ಕುಳಿತಿರಲು, ಮೃಣಾಲಿನಿಗೆ ಯಾರೋ ಬಂದ ಸಪ್ಪಳವು ಕೇಳಿಸಿತು. ಅದರಿಂದ ಆಕೆಯು ಗಿರಿಜೆಗೆ ಕಣ್ಣ ಸನ್ನೆ ಮಾಡಿ, ಮೆಲ್ಲಗೆ ಆಕೆಯ ಕಿವಿಯಲ್ಲಿ—ಸಖೀ ಗಿರಿಜೇ, ಇಲ್ಲಿಗೆ ನನ್ನ ಅವಸಾನವು ತೀರಿತು. ಇನ್ನು ನಾನು ತಡೆಯಲಾರೆನು. ನಾಳಿನವರೆಗೆ ನಿನ್ನ ಹಾದಿಯನ್ನು ನೋಡುತ್ತ ಕುಳಿತುಕೊಳ್ಳುವದು ಅಸಹ್ಯವಾದೀತು. ಆದುದರಿಂದ ಇಂದೇ ನೀನು ಮೂರುತಾಸು ರಾತ್ರಿಯ ಹೊತ್ತಿಗೆ ಈ ಎದುರಿಗಿನ ಮಾವಿನ ಗಿಡದ ಕೆಳಗೆ ನಿಂತಿರು. ಅಲ್ಲಿ ನಾನು ನಿನ್ನನ್ನು ಕಾಣುವೆನು. ನಿನ್ನ ವ್ಯಾಪಾರಸ್ಥನು ಬರುತ್ತಿದ್ದರೆ, ಆತನನ್ನು ಕರಕೊಂಡು ಬಾ, ಎನ್ನಲು, ಗಿರಿಜೆಯು—ಹಾಗೇ ಆಗಲಿ, ಇಂದಿನ ರಾತ್ರಿ ನಾನು ನಿಶ್ಚಯವಾಗಿ ಬರುವೆನು, ಎಂದು ಹೇಳಿ, ಕರವಸ್ತ್ರವನ್ನು ಇಸಕೊಂಡು ಹೊರಟುಹೋದಳು.

ಗಿರಿಜೆಗೆ ಏನಾದರೂ ತಂದು ಕೊಡೆಂದು ಮಣಿಮಾಲಿನಿಗೆ ಹೇಳಿದ್ದನ್ನು ಮೃಣಾಲಿನಿಯು ಈ ಗದ್ದಲದಲ್ಲಿ ಮರೆತು ಬಿಟ್ಟಳು. ಅಷ್ಟರಲ್ಲಿ ಮಣಿಮಾಲಿನಿಯು ಭಿಕ್ಷುಕಿಗೆ ಕೊಡುವದಕ್ಕಾಗಿ ಬೊಗಸಿ ಅಕ್ಕಿಯನ್ನೂ, ಒಂದು ದುಡ್ಡನ್ನೂ, ಹಳೆಯದೊಂದು ಸೀರೆಯನ್ನೂ ತಕ್ಕೊಂಡು ಬಂದಳು. ಭಿಕ್ಷುಕಿಯೊಡನೆ ಕಿವಿ ಮಾತುಗಳನ್ನಾಡುತ್ತಿದ್ದ ಮೃಣಾಲಿನಿಯು ತಾನು ಬಂದಕೂಡಲೆ ಸುಮ್ಮನಾದದ್ದನ್ನೂ, ಭಿಕ್ಷುಕಿಯು ಹೊರಟು ಹೋದದ್ದನ್ನೂ ನೋಡಿ ಮಣಿಮಾಲಿನಿಯು ಸಂಶಯ ಪಟ್ಟಳು. ಆಕೆಯ ಸಂಶಯವು ಗಟ್ಟಿಮುಟ್ಟಿಯಾಗುವಂತೆ ಮೃಣಾಲಿನಿಯ ಮುಖಮುದ್ರೆಯಲ್ಲಿ ಹೆಚ್ಚುಕಡಿಮೆಯೂ ಆಗಿತ್ತು, ಆಗ ಅವಳು ಮೃಣಾಲಿನಿಯನ್ನು ಕುರಿತು— ಸಖೀ, ನೀನು ಹೀಗೇಕೆ ಗಾಬರಿಯಾದಹಾಗೆ ಕಾಣುತ್ತೀ? ಭಿಕ್ಷುಕಿಯು ಯಾಕೆ ಹೋದಳು? ಆಕೆಯ ಕಿವಿಯಲ್ಲಿ ನೀನು ಏನೋ ಹೇಳಿದ ಹಾಗಿ ಕಂಡಿತಲ್ಲ? ಬಂದು ಕೇಳಿದಳು. ಅದಕ್ಕೆ ಮೃಣಾಲಿನಿಯು—ಭಿಕ್ಷುಕಿಯು ನಿನ್ನ ದಾರಿಯನ್ನು ನೋಡಿ ನೋಡಿ ಬೇಸತ್ತು ಹೊರಟು ಹೋದಳು. ನಾಳೆ ಬಾರೆಂದು ನಾನು ಆಕೆಗೆ ಹೇಳಿದ್ದೇನೆ. ನೀನು ಇಷ್ಟು ತಡವೇಕೆ ಮಾಡಿದೆ?? ಎಂದು ನುಡಿಯುತ್ತ ಮಣಿಮಾಲಿನಿಯ ಸಂಶಯವನ್ನು ದೂರಮಾಡಬೇಕೆಂದು ಯತ್ನಿಸಿದಳು; ಆದರೆ ಅದರಿಂದ ಮಣಿಮಾಲಿನಿಯ ಸಂಶಯದ ನಿವಾರಣವು ಆದಂತೆ ತೋರಲಿಲ್ಲ.

ಮಾಧವಾಚಾರ್ಯರ ಮೂರ್ತಿಯು

ಮೃಣಾಲಿನಿಯನ್ನು ಹುಡುಕುತ್ತಿದ್ದ ಹೇಮಚಂದ್ರನು, ಲಕ್ಷ್ಮಣಾವತೀ ನಗರಕ್ಕೆ ಬಂದು, ಅಲ್ಲಿಯ ಧನಾನಂದನೆಂಬ ಹೆಸರಿನ ಧನಾಢ್ಯವರ್ತಕನ ಮನೆಯಲ್ಲಿ ಇರುತ್ತಿದ್ದನು. ಆ ಮನೆಯ ಬಾಗಿಲೆದುರಿನಲ್ಲಿ ಒಂದು ಅಶೋಕ ವೃಕ್ಷವಿತ್ತು ಹೇಮಚಂದ್ರನು ಈ ದಿನ ಅಶೋಕವೃಕ್ಷದ ಬುಡದಲ್ಲಿ ನಿಂತುಕೊಂಡು ಚಿಂತೆಮಾಡುತ್ತ ಆಗಾಗ್ಗೆ ದಾರಿಯಕಡೆಗೆ ನೋಡುತ್ತಿದ್ದನು. ನಡು ನುಡವೆ ಆತನು ನಿಟ್ಟುಸಿರುಗಳನ್ನು ಬಿಡುವನು. ಆಗಾಗ ಇತ್ತಿಂದತ್ತ ಅತ್ತಿಂದಿತ್ತ ಸುಮ್ಮನೆ ಹಾಸುಹೊಯ್ಯುವನು. ಒಂದು ಕ್ಷಣದಲ್ಲಿ ಅವನು ಆಕಾಶವನ್ನು ನೋಡಿದರೆ, ಮತ್ತೊಂದು ಕ್ಷಣದಲ್ಲಿ ಭೂಮಿಯನ್ನು ದಿಟ್ಟಿಸಿ ನೋಡುವನು. ನಡುನಡುವೆ ಅವನ ಕೈಯೊಳಗಿನ ಖಡ್ಗವು ಹೂ—ಚಿಗರುಗಳಿಂದ ತುಂಬಿದ ಅಶೋಕ ವೃಕ್ಷದ ಸುಂದರವಾದ ಕೊಂಬೆಗಳನ್ನು ಕಾರಣ ವಿಲ್ಲದೆ ಕತ್ತರಿಸಿ ಚಲ್ಲುತ್ತಿತ್ತು, ಈಗ್ಗೆ ಹೇಮಚಂದ್ರನ ಮನಸ್ಸು ತೀರ ಅಸ್ವಸ್ಥವಾಗಿದ್ದಿತು. ಅವನು ಯಾವದೋ ಒಂದು ಗಹನ ವಿಚಾರದಲ್ಲಿ ತೊಡಗಿರುವಂತೆ ತೋರುವನು. ಸಮೀಪದಲ್ಲಿ ಯಾತರದಾದರೂ ಸ್ವಲ್ಪ ಸಪ್ಪಳವಾದರಾಯಿತು, ಅವನು ಕೂಡಲೆ ಗಡಬಡಿಸಿ, ಸುತ್ತುಮುತ್ತು ನೋಡುವನು. ಆಗ ದೂರದಿಂದ ಯಾರಾದರೂ ಬರುತ್ತಿದ್ದರೆ, ಅವರು ತನಗೆ ಬೇಕಾದವರೇ ಇರಬಹುದೆಂಬ ಆಸೆಯಿಂದ ಎವೆಯಿಕ್ಕದೆ ಅತ್ತಕಡೆಗೆ ನೋಡುತ್ತ ನಿಲ್ಲುವನು; ಆದರೆ ಇದರಿಂದ ಮೇಲೆ ಮೇಲೆ ಮೋಸಹೋಗಿ ನಿರಾಶೆಪಡುವನು. ಬಹಳ ಹೊತ್ತಾದರೂ ತನಗೆ

ಬೇಕಾಗಿರುವ ಮನುಷ್ಯನು ಬಾರದ್ದರಿಂದ ಅವನು ಬೇಸತ್ತು ದಿಗ್ವಿಜಯನನ್ನು ಕರೆದು—ದಿಗ್ವಿಜಯಾ, ಭಿಕ್ಷುಕಿಯು ಇನ್ನೂ ಏಕೆ ಬಂದಿರಲಿಕ್ಕಿಲ್ಲ! ನೋಡು ನೋಡು, ಹುಡುಕು; ಆಕೆಯು ಇಷ್ಟು ಹೊತ್ತು ಏಕೆ ತಡೆದಳೋ ಏನೋ?

ಒಡೆಯನ ಅಪ್ಪಣೆಯಾದ ಕೂಡಲೆ ದಿಗ್ವಿಜಯನು ಭಿಕ್ಷುಕಿಯನ್ನು ಹುಡುಕುವದಕ್ಕೆ ಹೊರಟನು. ಅವನು ಊರ ಅಗಸಿಯ ಬಳಿಯಲ್ಲಿ ಬರುವದರೊಳಗೇ, ಅಲೆದಾಡುತ್ತ ಮುರಕ ಮಾಡುತ್ತ ದೂರದಲ್ಲಿ ಭಿಕ್ಷುಕಿಯು ಬರುತ್ತಿದ್ದಳು. ದಿಗ್ವಿಜಯನು ಆಕೆಯನ್ನು ನೋಡದವನಂತೆ ಮುಂದಕ್ಕೆ ಒತ್ತರದಿಂದ ಸಾಗಿದನು. ಜಾಣೆಯಾದ ಗಿರಿಜೆಯು ಕೂಡಲೆ ಇದನ್ನರಿತು—ದಿವ್ವಿಜರೇ—ದಿವ್ವಿಜರೇ, ಎಂದು ಕೂಗಿದಳು. ಆಗ ದಿಗ್ವಿಜಯನು ಒಮ್ಮೆಲೆ ಎಚ್ಚತ್ತವನಂತೆ ನಟಿಸಿ, ಇಲ್ಲದ ಸಿಟ್ಟನ್ನು ತಂದುಕೊಂಡು ಗಿರಿಜೆಯ ಮೈಮೇಲೆ ಹೋಗಿ ಗದ್ದರಿಸಿ—ಏನು, ನಿನಗೆ ನೆಟ್ಟಗೆ ಮಾತಾಡಲಿಕ್ಕೆ ಬರುವದಿಲ್ಲವೆ? ನನ್ನ ಹೆಸರು ದಿವ್ವಿಜನಲ್ಲ ದಿಗ್ವಿಜಯನು, ಎಂದು ಹೇಳಿದನು. ಆಗ ಗಿರಿಜೆಯು—

ಗಿರಿಜೆ—ತಪ್ಪಾಯಿತು, ಬೇಕಾದರೆ ನಾನು ಕ್ಷಮೆಯನ್ನು ಬೇಡಿಕೊಳ್ಳುವೆನು, ಆದರೆ ಈ ಮಟ ಮಟ ಮಧ್ಯಾಹ್ನದಲ್ಲಿ ತಮ್ಮ ಸವಾರಿಯು ಯಾವ ವಿಜಯವನ್ನು ಸಂಪಾದಿಸಲಿಕ್ಕೆ ಯಾವ ದಿಕ್ಕಿಗೆ ಹೊರಟಿರುವದೆಂಬದನ್ನು ಹೇಳುವಿರೋ?

ದಿಗ್ವಿಜಯ—ಗಿರಿಜೆಯ ದಿಕ್ಕಿನ ಕಡೆಗೇ ನಾನು ವಿಜಯವನ್ನು ಸಂಪಾದಿಸಲಿಕ್ಕೆ ಹೊರಟಿರುತ್ತೇನೆ.

ಗಿರಿಜೆ—ಮಹಾರಾಜರು ಏನಂದಿರಿ? ಗಿರಿಜೆಯ ದಿಕ್ಕಿನ ಕಡೆಗೋ? ದಿಕ್ಕಿನ ಹೆಸರು ಸಹ ಪೂರಾ ಗೊತ್ತಿಲ್ಲದ ತಾವು ವಿಜಯವನ್ನು ಸಂಪಾದಿಸುವದು ಮೇಲೆಯೇ ಕಾಣುತ್ತದೆ. ನನ್ನನ್ನೇ ಒಂದು ದಿಕ್ಕೆಂದು ತಾವು ತಿಳಿಯುತ್ತೀರೋ?

ದಿಗ್ವಿಜಯ—ಗಿರೀ, ನೀನು ಮೂರ್ತಿಮಂತವಾದ ಕಗ್ಗತ್ತಲೆಯ ಗುಡ್ಡದಂತೆ ನಡುವೆ ಬಂದಬಳಿಕ ನನಗೆ ದಿಕ್ಕಿನ ಹೆಸರು ಮರೆತದ್ದರಲ್ಲೇನಾಶ್ಚರ್ಯವು? ಈಗ ಅದಿರಲಿ ಬಿಡು; ಹೂ, ಲುಟು ಲುಟು ಹೇಗೆ ನಡೆಯುತ್ತಾಳೋ ನೋಡೋಣ! ಮಹಾರಾಜರು ಒಂದೇ ಸವನೆ ನಿನ್ನ ಹಾದಿಯನ್ನೇ ನೋಡುತ್ತ ಕುಳಿತಿರುತ್ತಾರೆ.

ಗಿರಿಜೆ—ಅದೇನು ಕಾರಣ? ಇಂದು ಅದೇಕೆ ಇಷ್ಟು ಆತುರತೆಯಿಂದ ನನ್ನ ಹಾದಿಯನ್ನು ನೋಡುತ್ತಾರೆ?

ದಿಗ್ವಿಜಯ—ಯಾಕೆಂಬದನ್ನು ನಾನು ನಿಜವಾಗಿ ಹೇಳಲಾರೆನು; ಆದರೆ,

ಗಿರಿಜೆ—ಕಡೆಗೆ ಆದರೆ' ಏಕೆ?

ದಿಗ್ವಿಜಯ—ಹೀಗೆಯೇ ಮನಸ್ಸಿನಲ್ಲಿ ನಾನೊಂದು ತರ್ಕ ಮಾಡಿರುವೆನು. ಅದನ್ನು ಹೇಳಬಾರದೆಂದರೆ, ಅದು ಮನಸ್ಸಿನಲ್ಲಿ ನಿಲ್ಲದೆ ಓಡುತ್ತಿರುವದು; ಗಿರಿಜೇ, ಹೇಳಿಬಿಡಲೋ?

ಗಿರಿಜೆ—ಹೇಳು ಹೇಳು. ನಿನ್ನ ತರ್ಕವು ಕುದುರೆಯ ಮುಂದೆ ಓಡುತ್ತದೋ, ಕತ್ತೆಯ ಮುಂದೆ ಓಡುತ್ತದೋ ಅದನ್ನು ಬಿಚ್ಚಿ ಹೇಳಿಬಿಡು.

ದಿಗ್ವಿಜಯ—ಮಹಾರಾಜರು ಈಗಲೇ ನನಗೆ ನಿನ್ನನ್ನು ಲಗ್ನ ಮಾಡಿಕೊಟ್ಟು, ನಿನಗೆ ಸುಖವನ್ನುಂಟುಮಾಡಬೇಕೆಂದು ಯೋಚಿಸಿರುವಂತೆ ನಾನು ತರ್ಕಿಸುತ್ತೇನೆ.

ಗಿರಿಜೆ—ಮಣ್ಣುಗೂಡಿತು ನಿನ್ನ ಆ ತರ್ಕವು! ಖೋಡಿಗೆ ಹುಚ್ಚು ಹಿಡಿದದೆ; ಲಗ್ನದ ಹೊರತು ಮತ್ತೊಂದು ಮಾತೇ ಗೊತ್ತಿಲ್ಲ, ನಿನ್ನ ಮೋರೆಗೆ ಬೆಂಕಿಯನ್ನು ಹಚ್ಚುವದಕ್ಕಾಗಿ ಮಹಾರಾಜರಿಗೆ ಮತ್ತೆ ಯಾರೂ ಸಿಗಲಿಲ್ಲವೆ?

ದಿಗ್ವಿಜಯ—ಛೇ! ಹಾಗೆ ಹೇಗಾದೀತು? ನನ್ನ ಮೋರೆಗೆ ನೀನೇ ಅರಿಸಿನ ಹಚ್ಚಬೇಕೆಂದು ಮಹಾರಾಜರು ಮನಮುಟ್ಟಿ ಬಯಸುತ್ತಾರೆ; ಸುಮ್ಮನೆ ಒಟಗುಟ್ಟಬೇಡ. ಹ! ಲಗು ಲಗು ನಡೆ, ನೋಡೋಣ.

ಈ ಮೇರೆಗೆ ಹಾದಿಯಲ್ಲಿ ಹಾಸ್ಯ ವಿನೋದಗಳನ್ನು ಮಾಡುತ್ತ ಅವರಿಬ್ಬರು ಧನಾನಂದನ ಮನೆಯನ್ನು ಮುಟ್ಟಿದರು. ದಿಗ್ವಿಜಯನು ಗಿರಿಜೆಯನ್ನು ಅಶೋಕ ವೃಕ್ಷದ ಬುಡದಲ್ಲಿ ಬಿಟ್ಟು ತಾನು ಬೇರೊಂದು ಕಡೆಗೆ ಹೋದನು. ಮನೋವ್ಯಥೆಯಿಂದ ಪೀಡಿತನಾದ ಹೇಮಚಂದ್ರನು ಆಗ ಭ್ರಮಿಷ್ಠನಂತೆ ಆಗಿ ತನ್ನಷ್ಟಕ್ಕೆ ತಾನೇ—

''ಯಮುನಾ–ತೀರದೊಳು । ಪ್ರಿಯದಯಿತೇ ।
ಉಪವನ–ಕೇಳಿಯೊಳು ।''

ಎಂದು ಹಾಡುತ್ತ ಕುಳಿತಿರಲು, ಗಿರಿಜೆಯು ಸದ್ದುಮಾಡದೆ ಸುಮ್ಮನೆ ಹೋಗಿ ಅವನ ಹಿಂದೆ ನಿಂತುಕೊಂಡು—

''ವಿಮಲೆ ನಿನ್ನೊಳು ತಾನು ಮುದಿಸಿದಪರಿಯಂ ।
ಸ್ಮರಿಸಿ ಮುರಾರಿಯು ವ್ಯತಿಸಿ ಕುದಿಯುವನಯ್ಯೊ ॥''

ಎಂಬ ಪದ್ಯವನ್ನು ಪೂರ್ಣಮಾಡಿದಳು. ಅದನ್ನು ಕೇಳಿ ಹೇಮಚಂದ್ರನು ಒಮ್ಮೆಲೆ ಮೆಟ್ಟಿಬಿದ್ದು ಹಿಂದಿರುಗಿ ನೋಡಲು, ಗಿರಿಜೆಯು! ಆಗ ಹೇಮಚಂದ್ರನಿಗಾದ ಆನಂದವನ್ನು ವರ್ಣಿಸುವದು ಕಷ್ಟ. ಅವನ ಖಿನ್ನವಾದ ಮುಖವು ಹಿಗ್ಗಿ ಅರಳಿತು. ಅವನು ನಗುತ್ತ—

ಹೇಮಚಂದ್ರ—ಗಿರಿಜೇ, ಇಂದೇನಾದರೂ ಗೊತ್ತುಹತ್ತಿತೇನು?

ಗಿರಿಜೆ—ಉಹು! ಇಂದು ನಾನು ಬಹಳ ಓಣಿಗಳನ್ನು ತಿರುಗಿದೆನು. ಆ ಕೆಟ್ಟ ಓಣಿಗಳ, ಹಾಗು ಮನೆಗಳ ಹೆಸರುಗಳನ್ನು ಹೇಳಿ ಹೇಳಿ ನನಗೆ ಬೇಸರಿಕೆ ಬಂದಿರುತ್ತದೆ.

ಹೇಮಚಂದ್ರ—(ಕೈಯಿಂದ ತಲೆಯನ್ನು ಹಿಡಕೊಂಡು ನಿರಾಶೆಯಿಂದ) ಗಿರಿಜೇ, ನಾನು ಬಹು ದುರ್ದೈವಿಯು. ನೀನು ಒಂದೇ ಸವನೆ ಇಷ್ಟು ದಿವಸ ಹಡುಕಿದರೂ ಗೊತ್ತು ಹತ್ತಲೊಲ್ಲದು. ಇದೇನು ಸಾಮಾನ್ಯವಾದ ದುರ್ದೈವವೇ? ದೇವರ ಮನಸ್ಸಿನಲ್ಲಿ ಏನಿರುತ್ತದೋ ತಿಳಿಯದು! ಗಿರಿಜೇ, ನಿನಗೆ ಬಹಳ ಶ್ರಮವಾಗಿರುತ್ತದೆಂಬದನ್ನು ನಾನುಬಲ್ಲೆನು; ಆದರೆ ನೀನು ನೊಂದುಕೊಳ್ಳಬೇಡಕ್ಕಾ, ಇನ್ನೊಮ್ಮೆ ಯತ್ನಮಾಡಿ ನೋಡು. ಪ್ರಯತ್ನದ ಕಡೆಯಲ್ಲಿ ಪರಮೇಶ್ವರನಾದರೂ ದರ್ಶನ ಕೊಡುವನಂತೆ. ನಾಳೆ ನೀನು ತೀರ ನಸಿಕಿನಲ್ಲಿ ಎದ್ದುಹೋಗು.

ಗಿರಿಜೆ—ಆಗಲಿ, ತಮ್ಮ ಅಪ್ಪಣೆಯಂತೆ ನಾಳೆಯೂ ಹೋಗುವೆನು.

ಈ ಮೇರೆಗೆ ನುಡಿದು, ಗಿರಿಜೆಯು ಅಲ್ಲಿಂದ ಹೊರತು ಹೋಗುವವಳಂತೆ ನಟಿಸಿದಳು. ಆಕೆಯು ಇಂದು ಬುದ್ಧಿ ಪೂರ್ವಕವಾಗಿ ಖಿನ್ನ ಮುದ್ರೆಯನ್ನು ತೋರಿಸಲಿಕ್ಕೆ ಯತ್ನಿಸುತ್ತಿದ್ದಳು. ಆದರೂ ಅವಳ ಮುಖಚರ್ಯವು ಹೇಮಚಂದ್ರನಿಗೆ ಏನೋ ಚಮತ್ಕಾರವಾಗಿ ತೋರಿತು. ಆಗ ಅವನು ಗಿರಿಜೆಯನ್ನು ತಡೆದು ನಿಲ್ಲಿಸಿ—

ಹೇಮ—ಗಿರಿಜೇ, ನಿನ್ನ ದೇವರ ಆಣೆಯು, ಇನ್ನು ನನ್ನ ಆಳವನ್ನು ಪರೀಕ್ಷಿಸಬೇಡ, ನಿಜವಾದ ಸಂಗತಿಯನ್ನು ಒಡೆದು ಹೇಳು. ನಿನ್ನ ಕಣ್ಣುಗಳು ಇಂದು ನನಗೆ ಬೇರೊಂದು ತರವಾಗಿ ಕಾಣಿಸುತ್ತವೆ. ನಿಜವಾದ ಸಂಗತಿಯನ್ನು ಬೇಗನೆ ದಯವಿಟ್ಟು ಹೇಳು. ಆ ಹಾಡನ್ನು ಕೇಳಿ ಯಾರಾದರೂ ನಿನಗೆ ಪ್ರಶ್ನೆ ಮಾಡಿದರೇನು?

ಗಿರಿಜೆ—ಇಲ್ಲದ್ದೇ ಒಂದು ಕಲ್ಪನೆಯು! ನಾನೆಂದಾದರೂ ಅದನ್ನು ತಮ್ಮಿಂದ ಬಚ್ಚಿ ಇಟ್ಟೇನೇ? ಹಾಡು ಕೇಳಿ ನನಗೆ ಪ್ರಶ್ನೆ ಮಾಡುವದಂತು ಒತ್ತಟ್ಟಿಗಿರಲಿ, ಒಬ್ಬ ಮುದುಕಿಯು ನನ್ನನ್ನು ಹೊಡೆಯಲಿಕ್ಕೆ ಬಂದಿದ್ದಳು!

ಹೇಮ—(ನಿರಾಶೆಯ ಮುದ್ರೆಯಿಂದ ನಿಟ್ಟಿಸಿರುಬಿಟ್ಟು ತನ್ನೊಳಗೆ) ಪ್ರಯತ್ನಪಟ್ಟರೂ ಉಪಯೋಗವಾಗದ ಬಳಿಕ ಇನ್ನು ನಾನು ಮೃಣಾಲಿನಿಯ ಕಾಣುವ ಆಶೆಯನ್ನು ಹಿಡಿಯುವದು ವ್ಯರ್ಥವೇ ಸರಿ. ಗುರುವಿನ ಅಪ್ಪಣೆಯನ್ನು ಮೀರಿ ಸುಮ್ಮನೆ ಇಷ್ಟು ದಿನಗಳನ್ನು ಕಳೆದೆನು, ಎಂದು ನುಡಿಯುತ್ತಿರಲು, ಗಿರಿಜೆಯು ಮಂಜುಲ ಸ್ವರದಿಂದ ಹಾಡತೊಡಗಿದಳು—

ಅಗಲಿದೆಯಾ ಸುಖಿಯೇ । ಮೃದುಭಾಷಿಣೀ॥

ಹೇಮಚಂದ್ರನು ನಡುವೇ ಬಾಯಿಹಾಕಿ—ಗಿರಿಜೇ, ಇನ್ನು ಮೇಲೆ ಈ ಹಾಡನ್ನು ಹಾಡಬೇಡ, ಅದನ್ನು ಮರೆತುಬಿಡು. ಅದನ್ನು ಕೇಳುವದರಿಂದ ನನ್ನ ಮನಸ್ಸಿಗೆ ಮತ್ತಿಷ್ಟು ತಾಪವಾಗುತ್ತದೆ. ನೀನು ಎರಡನೆಯ ಯಾವದಾದರೊಂದು ಹಾಡನ್ನು ಹಾಡು.

ಗಿರಿಜೆ—ಯಾವದನ್ನು ಹಾಡಲಿ?

ಹೇಮ—ಯಾವದಾದರೊಂದು ದೇವರ ಮೇಲಿನ ಹಾಡನ್ನು ಹಾಡು.

ಗಿರಿಜೆ—

ನೀನೇ ದಯಾಳು ನಿರ್ಮಲಚಿತ್ತ ಗೋವಿಂದ ।
ನಿಗಮಗೋಚರ ಮುಕುಂದ॥

ಹೀಗೆ ಗಿರಿಜೆಯು ಗಿರಡಿಯನ್ನು ಹೊರ ಹೊರಳಿಸಿ ಹಾಡುತ್ತಿರಲು, ಹೇಮಚಂದ್ರನು ಮುಂದೆ ಹಾಡಗೊಡದೆ ಗದ್ದರಿಸಿ—

ಹೇಮ—ಏ! ಗಿರಿಜೇ, ಇನ್ನು ಮೇಲೆ ಆ ಮುಕುಂದನ ಹೆಸರನ್ನು ನನ್ನೆದುರಿಗೆ ಎತ್ತಬೇಡ! ಆತನಿಗೆ ಈಗಿನ ನನ್ನ ವಿರಹದ ಸ್ಥಿತಿಯ ಪ್ರತ್ಯಕ್ಷ ಅನುಭವವಿದ್ದು, ನಾನು ಹಗಲು ರಾತ್ರಿ ಆತನನ್ನು ಬೇಡಿಕೊಳ್ಳುತ್ತಿದ್ದರೂ ನನ್ನ ಮೇಲೆ ಆತನು ದಯಮಾಡಲೊಲ್ಲನು! ನೀನು ತಿರುಗಿ ಆತನ ಹೆಸರನ್ನು ಉಚ್ಚರಿಸಬೇಡ. ಎರಡನೆಯ ಯಾವದಾದರೊಂದು ಹಾಡನ್ನು ಹಾಡು.

ಹೇಮಚಂದ್ರನ ಈ ಮಾತನ್ನು ಕೇಳಿ ಗಿರಿಜೆಯು, ಮೃಣಾಲಿನಿಯು ಕಲಿಸಿದ ಹಾಡನ್ನು ಹಾಡತೊಡಗಿದಳು. ಅದನ್ನು ಕೇಳುತ್ತ ಹೋದ ಹೋದ ಹಾಗೆ ಹೇಮಚಂದ್ರನ ಆತುರವು

ಹೆಚ್ಚುತ್ತ ಹೋಯಿತು. ಆತನು ನಡನಡುವೆ—ಗಿರಿಜೇ, ಈ ಹಾಡನ್ನು ಯಾರು ಹೇಳಿದರು? ಇದು ನನ್ನ ಮೃಣಾಲಿನಿಯ ಹಾಡೇ, ಸಂಶಯವಿಲ್ಲ, ಯಾರು ಹೇಳಿದರು ಹೇಳಬಾರದೇ? ಎಂದು ಅಂಗಲಾಚಿ ಕೇಳುತ್ತಿದ್ದನು; ಆದರೆ ಗಿರಿಜೆಯು ಅವನ ಕಡೆಗೆ ನೋಡದೆ ತಾನಿನ ಮೇಲೆ ತಾನು ಏರಿಸುತ್ತ ಹಾಡುತ್ತಿದ್ದಳು. ಆಗ ಹೇಮಚಂದ್ರನು ಗಿರಿಜೆಯ ತೋಳು ಹಿಡಿದು ಅಲ್ಲಾಡಿಸಿ—

ಹೇಮ—ಗಿರಿಜೇ, ನಿನ್ನ ಹಾಡು ಸಾಕು ಬಿಡು. ನನಗೆ ಏನೆಂಬದನ್ನು ಸ್ಪಷ್ಟವಾಗಿ ಮಾತಿನಿಂದ ಹೇಳು. ಬೇಗನೆ ಹೇಳು, ಮೃಣಾಲಿನಿಯು ಎಲ್ಲಿರುವಳು?

ಗಿರಿಜೆ—ಇದೇ ಪಟ್ಟಣದಲ್ಲಿರುತ್ತಾಳೆ.

ಹೇಮ—(ಸಂತಾಪದಿಂದ) ಪಾಪಿಷ್ಠಳೇ, ಅದನ್ನು ನೀನೇಕೆ ಹೇಳಬೇಕು? ಮೃಣಾಲಿನಿಯು ಇದೇ ಪಟ್ಟಣದಲ್ಲಿರುವಳೆಂದು ನಾನೇ ನಿನಗೆ ಹೇಳಿರುವೆನಲ್ಲ? ಈ ಊರಲ್ಲಿ ಯಾವ ಓಣಿಯಲ್ಲಿ ಯಾರ ಮನೆಯಲ್ಲಿ ಇರುವಳೆಂಬದನ್ನು ಸ್ಪಷ್ಟವಾಗಿ ಹೇಳಬಾರದೇ?

ಗಿರಿಜೆ—ಸ್ವಲ್ಪ ಸಮಾಧಾನ ಮಾಡುವಿರೋ ಇಲ್ಲವೋ?

ಹೇಮ—ಬೇಗನೆ ಹೇಳು, ಆಕೆಯು ಇಲ್ಲಿಂದ ಎಷ್ಟು ದೂರವಿರುವಳು?

ಗಿರಿಜೆ—ಮೃಣಾಲಿನಿಯು ಇಲ್ಲಿಂದ ಬಹಳ ದೂರದಲ್ಲಿದ್ದಾಳೆ.

ಹೇಮ—ಬಹಳ ದೂರ! ನನಗೆ ಹೇಳು ನೋಡೋಣ? ಇಲ್ಲಿಂದ ಮೊದಲು ಯಾವ ದಿಕ್ಕಿಗೆ ಹೋಗಬೇಕು?

ಗಿರಿಜೆ—ಇಲ್ಲಿಂದ ಹೊರಟಿರೆಂದರೆ, ಮೊದಲು ದಕ್ಷಿಣಕ್ಕೆ, ಆಮೇಲೆ ಪೂರ್ವಕ್ಕೆ, ಅದರ ತರುವಾಯ ಉತ್ತರಕ್ಕೆ, ಅಲ್ಲಿಂದ ಪಶ್ಚಿಮಕ್ಕೆ ಹೋಗಬೇಕು!

ಹೇಮ—(ಸಿಟ್ಟಿಗೆದ್ದು ಕೈ ಮುಷ್ಟಿಯನ್ನು ನೆಗಹಿ) ದುಷ್ಟಳೇ, ಹುಡುಗಾಟಿಕೆಯನ್ನು ಬಿಡುವಿಯೋ, ನಿನ್ನ ತಲೆಯೊಡೆಯಲೋ?

ಗಿರಿಜೆ—ಮಹಾರಾಜರೇ, ತಾಳಿಕೊಳ್ಳಿರಿ, ಕೈಕಾಲು ಬಿಡಬೇಡಿರಿ. ನಿಮಗೆ ಹಾದಿಯನ್ನು ಹೇಳಿದರೆ ಗೊತ್ತಾಗ್ತಗಲಿಕ್ಕಿಲ್ಲ, ಸುಮ್ಮನೆ ಯಾಕೆ ಕೇಳುತ್ತಿರಿ? ಇಚ್ಛೆಯಿದ್ದರೆ ನಿಮ್ಮನ್ನು ಅವಳೆಡೆಗೆ ಕರೆದೊಯ್ಯುವೆನು.

ಇದನ್ನು ಕೇಳಿ ಹೇಮಚಂದ್ರನ ಮುಖಕಮಲವು ಮೋಡಹೋದ ಸೂರ್ಯನಂತೆ ಕಳೆಯೇರಿತು. ಅವನು ಗಿರಿಜೆಗೆ—ದೇವರು ನಿನ್ನ ಯಾವತ್ತು ಮನೋರಥಗಳನ್ನು ಪೂರ್ತಿ ಮಾಡಲಿ ಎಂದು ಹರಿಸಿದನು. ಮತ್ತು ಆಕೆಯನ್ನು ಕುರಿತು—

ಹೇಮ—ಗಿರಿಜೇ, ನನ್ನ ವಿಯೋಗದಿಂದ ಮೂರ್ಛಿತಳಾಗಿ ಬಿದ್ದೆನೆಂದು ಹಾಡಿದ ಮೃಣಾಲಿನಿಯು ಈಗ ಹೇಗೆ ಇದ್ದಾಳೆ?

ಗಿರಿಜೆ—ಹೇಳಿಕೊಳ್ಳುವಂಥ ಶರೀರ ವಿಕಾರವೇನೂ ಆಕೆಗೆ ಆಗಿರುವದಿಲ್ಲ.

ಹೇಮ—ಆದರೆ ಮೃಣಾಲಿನಿಯು ನಗುತ್ತ ಕೆಲೆಯುತ್ತ ಸಂತೋಷದಿಂದಿರುವಳೋ? ಚಿಂತೆಯಿಂದ ಖಿನ್ನಳಾಗಿರುವಳೋ?

ಗಿರಿಜೆ—ಆನಂದದಿಂದಿರುವಳೇನೆಂದು ಕೇಳುವಿರಾ, ಆಕೆಯು ಸುಂದರವಾದ ಸೀರೆಯನ್ನು ಉಟ್ಟುಕೊಂಡಿರುವಳು. ಆಕೆಯ ಮೈ ಮೇಲೆ ತಕ್ಕಮಟ್ಟಿಗೆ ಅಲಂಕಾರಗಳೂ ಇದ್ದವು.

ಹೀಗೆ ನುಡಿಯುತ್ತಿರಲು, ಹೇಮಚಂದ್ರನು ರೇಗಿಗೆದ್ದು—ಏ ಗಿರಿಜೇ, ಸಾಕು, ನಿನ್ನ ಪಂಚಾಂಗವನ್ನು ಕಟ್ಟು. ಇಲ್ಲಿಂದ ಹಾಳಾಗಿಯಾದರೂ ಹೋಗು, ನಾನು ಆಕೆಯ ವಸ್ತ್ರಾಲಂಕಾರಗಳನ್ನು ಕೇಳಲಿಲ್ಲ, ಸದ್ಯಕ್ಕೆ ಆಕೆಯ ಮನಸ್ಸಿನ ಸ್ಥಿತಿಯು ಹೇಗಿರುತ್ತದೆಂಬದನ್ನು ಬೊಗಳು.

ಗಿರಿಜೆ—ಮಳೆಗಾಲದ ಕಮಲದಂತೆ ಆಕೆಯ ಮುಖಕಮಲವು ನೀರ ಮೇಲೆ ತೇಲುತ್ತದೆ.

ಹೇಮ—ಎರಡನೆಯವರ ಮನೆಯಲ್ಲಿ ಸದ್ಯಕ್ಕೆ ಈಗ ಆಕೆಯು ಹೇಗೆ ನಡೆದುಕೊಳ್ಳುತ್ತಾಳೆಂಬದನ್ನು ಹೇಳಬಾರದೆ?

ಗಿರಿಜೆ—ಈ ಅಶೋಕವೃಕ್ಷದ ರಮ್ಯವಾದ ಹೂವಿನ ಗೊಂಚಲದಂತೆ ಮೃಣಾಲಿನಿಯು ತನ್ನ ಗೌರವದಲ್ಲಿಯೇ ಲೀನವಾಗಿರುವಳು.

ಗಿರಿಜೆಯ ಈ ಮಾತುಗಳನ್ನು ಕೇಳಿ ಹೇಮಚಂದ್ರನ ವಿರಕ್ತವೂ ಔದಾಸ್ಯ ಪೂರ್ಣವೂ ಆದ ಮುಖಕಮಲದ ಮೇಲೆ ಎಳೆನಗೆಯು ಮಿನುಗಹತ್ತಿ ಆಗ ಆತನು ಗಿರಿಜೆಯನ್ನು ಕುರಿತು ಗಿರಿಜೇ, ನೀನು ವಯಸ್ಸಿನಿಂದ ಚಿಕ್ಕವಳಿರುವದು ನಿಜವು; ಆದರೆ ನಿನ್ನಂಥ ಚತುರಳಾದ ಬುದ್ಧಿವಂತ ಹುಡಿಗಿಯನ್ನು ನಾನು ಇಲ್ಲಿಯವರೆಗೆ ಒಬ್ಬಳನ್ನಾದರೂ ನೋಡಿರುವದಿಲ್ಲ.

ಗಿರಿಜೆ—ಯಾತಕ್ಕೆ? ನನ್ನ ಈ ಗುಣಗಳು ತಲೆ ಒಡಿಸಿಕೊಳ್ಳಲಿಕ್ಕೇ?

ಹೇಮ—ಗಿರಿಜೇ, ಇರಲಿಬಿಡು; ಇನ್ನುಮೇಲೆ ಆ ಮಾತನ್ನು ತೆಗೆಯಬೇಡ. ಮೃಣಾಲಿನಿಯು ಮತ್ತೇನಂದಳು, ಬೇಗನೆ ಹೇಳು.

ಹೇಮಚಂದ್ರನ ಈ ಮಾತುಗಳನ್ನು ಕೇಳಿ ಗಿರಿಜೆಯು ಹೇಮಚಂದ್ರನನ್ನು ಮತ್ತೆ ಸಿಟ್ಟಿಗೆಬ್ಬಿಸುವದಕ್ಕಾಗಿ ಹುಡುಗಾಟಿಕೆಯಿಂದ ಕೆಳಗಿನ ಪದ್ಯವನ್ನು ಹಾಡತೊಡಗಿದಳು—

''ದಯಾಮಾಡಲೊಲ್ಲ್ಯಾ । ದಯಾನಿಧೇ ॥''

ಗಿರಿಜೆಯ ಈ ಹುಡುಗಾಟಿಕೆಯನ್ನು ನೋಡಿ ಹೇಮಚಂದ್ರನು ಸಂತಪ್ತನಾಗಿ ಆಕೆಯ ಹೆರಳನ್ನು ಹಿಡಿದು—''ನಾಚಿಕೆಗೇಡಿಯೇ! ಯಾವಾಗಲೂ ಹುಡುಗಾಟಿಕೆಯೇ ಏನು?''

ಗಿರಿಜೆ—ಬಿಡಿರಿ ಬಿಡಿರಿ, ಮಹಾರಾಜರೇ ಬಿಡಿರಿ! ಎಲ್ಲಾ ಹೇಳುತ್ತೇನೆ ಬಿಡಿರಿ.

ಹೇಮ—ಹೇಳು ಹಾಗಾದರೆ ನೆಟ್ಟಗೆ.

ಹೇಮಚಂದ್ರನು ಗಿರಿಜೆಯ ಹೆರಳನ್ನು ಬಿಟ್ಟನು. ಆಮೇಲೆ ಗಿರಿಜೆಯು ಮುಗುಳು ನಗೆಯಿಂದ ನಗುತ್ತ ಮೊದಲಿನಿಂದ ಕಡೆಯವರೆಗೆ ಎಲ್ಲ ಸುದ್ದಿಯನ್ನು ಹೇಳಿದಳು. ಹೇಳುವದಾದ ಮೇಲೆ ಕಡೆಗೆ ಆಕೆಯು ಹೇಮಚಂದ್ರನಿಗೆ—ನೀವು ಮೃಣಾಲಿನಿಯನ್ನು ಕಾಣುವದಕ್ಕೆ ಆತುರ ಪಡುತ್ತಿದ್ದರೆ, ಈ ದಿನ ಮೂರುತಾಸು ರಾತ್ರಿಗೆ ನನ್ನ ಸಂಗಡ ಬರಬೇಕು. ಅಂದರೆ ಆಕೆಯ ಭೆಟ್ಟಿಯನ್ನು ಮಾಡಿಸುವೆನು.

ಗಿರಿಜೆಯ ಬಾಯಿಂದ ಮೃಣಾಲಿನಿಯ ಸವಿಸ್ತರ ವೃತ್ತಾಂತವನ್ನು ಕೇಳಿ ಹೇಮಚಂದ್ರನು ಗಹನ ವಿಚಾರದಲ್ಲಿ ಮುಣುಗಿ ಹೋದನು. ಆ ವಿಚಾರದಲ್ಲಿಯೇ ಆತನು ಅಶೋಕ ವೃಕ್ಷದ ಬುಡದಲ್ಲಿ ಅತ್ತಿಂದಿತ್ತ ಇತ್ತಿಂದತ್ತ ಸುಮ್ಮನೆ ತಿರುಗಾಡುತ್ತಿದ್ದನು. ಬಹಳ ಹೊತ್ತು ಈ ವಿಚಾರಮಗ್ನ ಸ್ಥಿತಿಯಲ್ಲಿದ್ದ ಮೇಲೆ ಆತನು ತನ್ನಲ್ಲಿ ತಾನೇ ಏನೋ ಒಂದು ನಿರ್ಣಯ ಮಾಡಿಕೊಂಡು ಏನೂ ಮಾತಾಡದೆ ಒಮ್ಮೆಲೆ ಮನೆಯೊಳಗೆ ಹೋದನು. ಸ್ವಲ್ಪ ಪೊತ್ತಿನ ಮೇಲೆ ಆತನು ಹೊರಗೆ ಬಂದು ಗಿರಿಜೆಯ ಕೈಯಲ್ಲಿ ಒಂದು ಪತ್ರವನ್ನು ಕೊಟ್ಟು—ಈಗ ನಾನು ಮೃಣಾಲಿನಿಯನ್ನು ಪ್ರತ್ಯಕ್ಷ ಕಾಣುವಂತಿಲ್ಲ. ಈ ದಿನ ರಾತ್ರಿ ನೀನು ಆಕೆಯನ್ನು ಕಂಡು ಈ ಪತ್ರವನ್ನು ಕೊಡು. ದೇವರ ದಯವಿದ್ದರೆ ಇನ್ನು ಒಂದು ಒರ್ಷದ ಮೇಲೆ ಉಭಯರ ಭೆಟ್ಟಿಯಾಗುವದೆಂದು ಆಕೆಗೆ ಹೇಳು. ಆಕೆಯು ಏನು ಅಂದಳೆಂಬದನ್ನು ಮಾತ್ರ ಈವೊತ್ತಿನ ರಾತ್ರಿಯೇ ನೀನು ಹೇಳಬೇಕು. ಏಳು, ಇನ್ನು ನೀನು ಹೋಗು, ಎಂದು ಹೇಳಿದನು. ಆಗ ಗಿರಿಜೆಯು ಯಾಕಾಗಲೊಲ್ಲದೆಂದು ಹೇಳಿ ಹೊರಟುಹೋದಳು.

ಗಿರಿಜೆಯು ಹೋದಬಳಿಕ ಹೇಮಚಂದ್ರನು ಒಬ್ಬನೇ ಆ ಅಶೋಕವೃಕ್ಷದ ಕೆಳಗಿನ ಕೋಮಲವಾದ ಹುಲ್ಲಿನ ಹಾಸಿಗೆಯ ಮೇಲೆ ಬಿದ್ದುಕೊಂಡನು. ಆತನು ತನ್ನ ಎರಡೂ ಹಸ್ತಗಳ ಮೇಲೆ ತಲೆಯನ್ನಿಟ್ಟುಕೊಂಡು ಆಕಾಶದ ಕಡೆಗೆ ಬೆನ್ನು ಮಾಡಿಕೊಂಡು ಮಲಗಿದ್ದನು. ಆತನ ಮನಸ್ಸು ಗಹನ ವಿಚಾರದಲ್ಲಿ ಮಗ್ನವಾಗಿತ್ತು, ಮೃಣಾಲಿನಿಯನ್ನು ಕುರಿತು ಆತನು ಬಗೆ ಬಗೆಯಾಗಿ ಆಲೋಚಿಸುತ್ತಿದ್ದನು. ಅಷ್ಟರಲ್ಲಿ ಯಾರೋ ಆತನ ಬೆನ್ನನ್ನು ಮೆಲ್ಲನೆಚಪ್ಪರಿಸಿ ದರು. ಕೂಡಲೆ ಮೆಟ್ಟಿಬಿದ್ದು ಹೇಮಚಂದ್ರನು ಮೇಲಕ್ಕೆ ಮೋರೆಯನ್ನೆತ್ತಿ ನೋಡುತ್ತಾನೆ, ಎದುರಿಗೆ ಮಾಧವಾಚಾರ್ಯರ ಮೂರ್ತಿಯು!

ನೀಚವರ್ತನ

ಶಿಷ್ಯನ ದೃಷ್ಟಿಯು ತನ್ನ ಮೇಲೆ ಬಿದ್ದಕೂಡಲೆ ಮಾಧವಾಚಾರ್ಯನು ಮುಗುಳು ನಗೆ ನಕ್ಕು—ಹೇಮಚಂದ್ರಾ, ಏಳು, ಹೀಗೇಕೆ ಗಾಬರಿಯಾಗಿದ್ದೀ? ನಿನ್ನ ಯಾವತ್ತೂ ನಡವಳಿಕೆ ಯನ್ನು ನೋಡಿ ನನ್ನ ಮನಸ್ಸಿಗೆ ಬಹಳ ಅಸಮಾಧಾನವಾಗಿದೆ. ಆದರೂ, ಇದ್ದದ್ದರಲ್ಲಿ ಸ್ವಲ್ಪ ಸಮಾಧಾನವಾಗಿರುವದು, ಹೇಮಚಂದ್ರಾ, ನೀನು ಇನ್ನೂ ನವದ್ವೀಪಕ್ಕೆ ಹೋಗದೆ ಸುಮ್ಮನೆ ಹಾದಿಯಲ್ಲಿ ಯಾಕೆ ಇಷ್ಟು ತಡಮಾಡುತ್ತಿರುವೆ? ನಿನ್ನ ಈ ಮೋಸದ ನಡತೆಗಾಗಿ ನನಗೆ ಬಹಳ ಸಿಟ್ಟುಬಂದಿದೆ; ಆದರೆ ಮೃಣಾಲಿನಿಯು ಗೊತ್ತುಹತ್ತಿದ್ದರೂ, ಆಕೆಯ ದರ್ಶನಕ್ಕಾಗಿ ಹಾತೊರೆ ಯುತ್ತಿದ್ದ ನೀನು, ನನಗೆ ವಚನ ಕೊಟ್ಟದ್ದನ್ನು ನೆನಸಿ ಮನಸ್ಸನ್ನು ಬಿಗಿ ಹಿಡಿದು, ಈ ದಿನ ಆಕೆಯ ದರ್ಶನ ಲಾಭವನ್ನು ಕಳಕೊಂಡೆ. ಇರಲಿ. ಆದ ಮಾತಿಗಾಗಿ ನಿನಗೆ ಹೆಸರಿಡುವದಿಲ್ಲ, ಇನ್ನು ನೀನು ಚಟ್ಟನೆ ಏಳು, ನನ್ನನ್ನು ಹಿಂಬಾಲಿಸು, ನಿನ್ನ ಶಸ್ತ್ರಾಸ್ತ್ರಗಳನ್ನು ತೆಗೆದುಕೊಳ್ಳು; ನಾನು

ಈಗ ನವದ್ವೀಪಕ್ಕೆ ಹೊರಟಿದ್ದೇನೆ. ಮೃಣಾಲಿನಿಯ ಉತ್ತರದ ಹಾದಿಯನ್ನು ನೋಡಲಿಕ್ಕೂ ನಿನಗೆ ಅವಕಾಶವು ದೊರೆಯಲಾರದು. ಯಾರಿಗೆ ಗೊತ್ತು! ಚಂಚಲವಾದ ಮನಸ್ಸು ಅಡ್ಡ ಹಾದಿಗೆ ಬಿದ್ದು ಕೆಲಸವು ಕೆಟ್ಟು ಹೋದೀತು. ಹೂ! ಏಳು, ಸಿದ್ಧನಾಗು.

ಈ ಅಕಲ್ಪಿತವಾದ ಪ್ರಸಂಗವನ್ನು ನೋಡಿ ಹೇಮಚಂದ್ರನು ಬೆಪ್ಪಾದನು! ಸ್ವಲ್ಪ ಹೊತ್ತು ಸುಮ್ಮನಿದ್ದು ಆಮೇಲೆ ಆತನು––ಏನೂ ಚಿಂತೆಯಿಲ್ಲ, ಮೃಣಾಲಿನಿಯ ಕಾಣುವ ಆಶೆಯನ್ನೂ, ಆಕೆಯ ಪ್ರಾಪ್ತಿಯ ಆಶೆಯನ್ನೂ ನಾನು ಸಂಪೂರ್ಣವಾಗಿ ಬಿಟ್ಟುಬಿಟ್ಟಿದ್ದೇನೆ. ಗುರುಗಳೇ, ಇನ್ನು ನಿಮ್ಮ ಮುಂದೆ ನಾನು ಕೈ ಊರಿದೆನು! ನೀವು ನಿಶ್ಚಯವಾಗಿ ಈ ಲೋಕದ ಮನುಷ್ಯರಲ್ಲ! ತಾವು ಮಂದಿಯ ಅಂತರಂಗವನ್ನು ತಿಳಕೊಳ್ಳುವ ಸಾಮರ್ಥ್ಯವುಳ್ಳ ಯಾರೋ ಒಬ್ಬ ಮಹಾ ಪುರುಷರಿರುತ್ತೀರಿ. ತಮ್ಮ ಅಪ್ಪಣೆಯು ನನಗೆ ಪೂರ್ಣ ಮಾನ್ಯವಾಗಿರುವದು! ನಡೆಯಬೇಕು, ನಾನು ಸಿದ್ಧನಾಗಿದ್ದೇನೆ. ಎಂದು, ಮತ್ತೆ ಮನೆಯೊಳಗೆ ಹೋಗಿ ತನ್ನ ಆಯುಧಗಳನ್ನೆಲ್ಲ ತಕ್ಕೊಂಡು ಪ್ರೇಮದಿಂದ ಮನೆಯ ಯಜಮಾನನ ಅಪ್ಪಣೆಯನ್ನು ಪಡೆದ ಮೇಲೆ ಮಾಧವಾಚಾರ್ಯನನ್ನು ಹಿಂಬಾಲಿಸಿದನು.

ಇತ್ತ ಗಿರಿಜೆಯು ಮೊದಲು ಗೊತ್ತಾದಂತೆ ಮೃಣಾಲಿನಿಯನ್ನು ಕಾಣುವದಕ್ಕಾಗಿ ಹೃಷಿಕೇಶ ಬ್ರಾಹ್ಮಣನ ಮನೆಯ ಹತ್ತರಿದ್ದ ಮಾವಿನ ಮರದ ಬುಡಕ್ಕೆ ಬಂದು ಮುಟ್ಟಿದಳು. ಮೃಣಾಲಿನಿ ಯಾದರೂ ಅಲ್ಲಿಗೆ ಯಾರಿಗೂ ಗೊತ್ತಾಗದಂತೆ ಈ ಮೊದಲೇ ಬಂದು ಗಿರಿಜೆಯ ಹಾದಿಯನ್ನು ನೋಡುತ್ತಿದ್ದಳು. ಇಬ್ಬರ ಭೆಟ್ಟಿಯಾದ ಕೂಡಲೇ ಮೃಣಾಲಿನಿಯು ಗಿರಿಜೆಯನ್ನು ಕುರಿತು—''ನೀನು ಒಬ್ಬಳೇ ಬಂದೆಯಲ್ಲ? ಹೇಮಚಂದ್ರನೆಲ್ಲಿ?'' ಎಂದು ಕೇಳಲು, ''ಅವರು ಬರಲಿಲ್ಲ'' ಎಂದು ಗಿರಿಜೆಯು ಹೇಳಿದಳು. ಅದನ್ನು ಕೇಳಿ ಮೃಣಾಲಿನಿಯು ಖಿನ್ನಳಾಗಿ ತನ್ನೊಳಗೇ ಒಟಗುಟ್ಟಿದಳು. ಬಹಳ ಹೊತ್ತು ಅವರಿಬ್ಬರೂ ಮಾತಾಡದೆ ಸ್ತಬ್ಧವಾಗಿದ್ದರು. ಕೆಲವೊತ್ತಿನ ಮೇಲೆ ಮೃಣಾಲಿನಿಯು ಬಾಡಿದ ಮೋರೆಯಿಂದ—''ಅವರು ಯಾಕೆ ಬರಲಿಲ್ಲ'' ಎಂದು ಕೇಳಲು ಗಿರಿಜೆಯು—ಯಾಕೆಂಬದು ನನಗೆ ಗೊತ್ತಿಲ್ಲ, ಅವರು ಈ ಪತ್ರವನ್ನು ಕೊಟ್ಟಿದ್ದಾರೆ'' ಎಂದು ಹೇಳಿ, ಹೇಮಚಂದ್ರನು ಕೊಟ್ಟಿದ್ದ ಪತ್ರವನ್ನು ಮೃಣಾಲಿನಿಯ ಕೈಯಲ್ಲಿ ಕೊಟ್ಟಳು.

ಪತ್ರವನ್ನು ನೋಡಿ ಮೃಣಾಲಿನಿಯು ಬಹಳ ಉತ್ಕಂಠೆಯಿಂದ ಗಿರಿಜೆಯನ್ನು ಕುರಿತು—ಅವರ ಈ ಪತ್ರವನ್ನು ಈ ಕತ್ತಲೆಯಲ್ಲಿ ನಾನು ಹೇಗೆ ಓದಲಿ? ಮನೆಯೊಳಗೆ ಹೋಗಿ ದೀಪಹಚ್ಚಿ ಓದಬೇಕೆಂದರೆ, ಮಣಿಮಾಲಿನಿಯು ಎಚ್ಚತ್ತಾಳು. ಈ ಪತ್ರವನ್ನು ಓದಲಿಕ್ಕೆ ಏನು ಮಾಡ ಬೇಕಾದೀತು, ಎಂದು ಉಪಾಯಗಾಣದೆ ನುಡಿಯಲು, ಗಿರಿಜೆ—ಅಮ್ಮಾ ಹೀಗೆ ಕೈಕಾಲು ಬಿಡಬೇಡಿರಿ. ಈ ಮಾತು ನನಗೆ ಮೊದಲೇ ಹೊಳೆದದ್ದರಿಂದ ನಾನು ಎಲ್ಲ ಜೋಡಣೆಯನ್ನು ಮಾಡಿಕೊಂಡು ಬಂದಿದ್ದೇನೆ, ಎಂದು ಹೇಳಿ, ಬರುವಾಗ ಸಂಗಡ ತಕ್ಕೊಂಡು ಬಂದಿದ್ದ ಚಕಮಕಿಯ ಕಲ್ಲಿನಿಂದ ಬೆಂಕಿಯನ್ನು ಮಾಡಿದಳು. ತರುವಾಯ ಎಣ್ಣೆಯಲ್ಲಿ ತೋಯಿಸಿಕೊಂಡು ಬಂದಿದ್ದ ಬತ್ತಿಯನ್ನು ಅದರ ಮೇಲಿಟ್ಟು ಹೊತ್ತಿಸಿ ಕೂಡಲೆ ದೀಪವನ್ನು ಹಚ್ಚಿದಳು. ಗಿರಿಜೆಯ ಈ ಮುಂಜಾಗ್ರತೆಗಾಗಿ ಮೃಣಾಲಿನಿಯು ಬಹಳ ಆನಂದಪಟ್ಟು, ಮನಸ್ಸಿನಲ್ಲಿ ಗಿರಿಜೆಯ ಉಪಕಾರವನ್ನು ಬಹಳವಾಗಿ ನೆನಿಸಿದಳು. ಮೇಲೆ ಹೇಳಿದಂತೆ ಚಕಮಕಿಯ ಕಲ್ಲನ್ನು ಕಟೆಯು

ವಾಗ ಆದ ಸಪ್ಪಳವು, ಹೃಷೀಕೇಶ ಬ್ರಾಹ್ಮಣನ ಮನೆಯೊಳಗಿನವನೊಬ್ಬನ ಕಿವಿಗೆ ಬೀಳಲು, ಆತನು ಸಂಶಯ ಮುದ್ರೆಯಿಂದ ನಾಲ್ಕೂ ಕಡೆಗೆ ಕಿವಿಗೊಟ್ಟು ಕೇಳುತ್ತಿದ್ದನು. ಅಷ್ಟರೊಳಗೆ ಮಾವಿನ ಮರದ ಬುಡದಲ್ಲಿ ದೀಪವು ಅವನ ಕಣ್ಣಿಗೆ ಬಿದ್ದಿತು. ಮತ್ತು ಒಬ್ಬ ಸ್ತ್ರೀಯ ಮಸಮುಸಕಾದ ಆಕೃತಿಯನ್ನು ಅವನು ನೋಡಿದನು. ಆಗ ಅವನು ಇದೇನು ಚಮತ್ಕಾರವೆಂದು ಒತ್ತಟ್ಟಿಗೆ ದೂರ ಕತ್ತಲಲ್ಲಿ ನಿಂತುಕೊಂಡನು. ಇತ್ತ ಗಿರಿಜೆಯ ಕೈಯೊಳಗಿನ ದೀಪದ ಬೆಳಕಿನಲ್ಲಿ ಮೃಣಾಲಿನಿಯು ಪತ್ರವನ್ನು ಮನಸ್ಸಿನಲ್ಲಿ ಓದತೊಡಗಿದಳು—

"ಮೃಣಾಲಿನಿಯೇ,

ಕ್ಷಮಿಸೆಂದು ನಿನ್ನನ್ನು ಯಾವ ಮೋರೆಯಿಂದ ಹೇಳಿಕೊಳ್ಳಲಿ? ಈ ದಿನ ಈ ಪತ್ರವನ್ನು ಬರೆಯಲಿಕ್ಕೂ ನನಗೆ ಧೈರ್ಯವಾಗುವದಿಲ್ಲ; ಆದರೆ ನಿನ್ನ ಅಂತಃಕರುಣವು ಬಹು ಕೋಮಲವಾಗಿದ್ದು ಸಮುದ್ರದಂತೆ ನೆಲೆಯಿಲ್ಲದ ದಯಾಗುಣವು ಅದರಲ್ಲಿ ತುಂಬಿ ಕೊಂಡಿರುತ್ತದೆ; ಆದ್ದರಿಂದ ನೀನು ನನ್ನ ತಪ್ಪುಗಳನ್ನೆಲ್ಲ ಹೊಟ್ಟೆಯಲ್ಲಿ ಹಾಕಿಕೊಂಡು ಕ್ಷಮಿಸೀಯೆಂಬ ನಂಬಿಗೆಯಿಂದ ಈ ಪತ್ರವನ್ನು ಬರೆಯತೊಡಗಿದ್ದೇನೆ. ಸುಂದರೀ, ಕೇವಲ ನನ್ನ ಸಲುವಾಗಿಯೇ ನೀನು ಇಷ್ಟು ಕಷ್ಟಪಡುತ್ತಿರುವೆ; ನನ್ನ ಸಲುವಾಗಿಯೇ ತಂದೆ—ತಾಯಿ, ಬಂಧು—ಬಳಗ, ಮನೆ—ಮಾರುಗಳನ್ನು ಬಿಟ್ಟು ಮಂದಿಯ ಮನೆಯಲ್ಲಿ ದುಃಖದಿಂದ ಕಾಲಕ್ರಮಣ ಮಾಡುತ್ತಿರುವೆ. ಪ್ರಿಯೇ, ಆ ಪರಕಿಯರ ಮನೆಯಲ್ಲಿ ನಿನ್ನ ಆಪ್ತೇಷ್ಟರು, ಇಲ್ಲವೆ ಗುರುತಿನವರು ಯಾರಿದ್ದಾರೆ ಹೇಳು! ದೇವರ ದಯದಿಂದ ನೀನಿರುವ ಸ್ಥಳವು ನನಗೆ ಗೊತ್ತಾಗಿದ್ದರೂ ಇಂದು ನಾನು ನಿನ್ನನ್ನು ಕಾಣುವಂತೆ ಇಲ್ಲ! ಇದಕ್ಕಾಗಿ ನನ್ನನ್ನು ಕೆಚ್ಚೆದೆಯವನೆಂದು ನೀನು ತಿಳಿಯಬಹುದು. ಅದರಂತೆ ನನ್ನಂಥ ನಿರ್ದಯನು ಈ ಪೃಥ್ವಿಯಲ್ಲಿ ಯಾವನೂ ಇಲ್ಲೆಂದು ನೀನು ಭಾವಿಸಬಹುದು. ಆದರೆ ನೀನು ಎಂದಿಗೂ ಹೀಗೆ ತಿಳಿಯುವವಳಲ್ಲ, ಭಾವಿಸುವವಳಲ್ಲ! ಇಂಥ ಅಮಂಗಳ ವಿಚಾರಗಳು ನಿನ್ನ ಮನಸ್ಸನ್ನು ಮುಟ್ಟುವಂತೆ ಇಲ್ಲ. ನೀನು ಕೇವಲ ದಯಾಗುಣದ ಮೂರ್ತಿಯಾಗಿರುತ್ತೀ. ಪ್ರೀತಿಯ ಸಮುದ್ರವು ನಿನ್ನ ಅಂತಃಕರಣ ದಲ್ಲಿ ತುಂಬಿಕೊಂಡಿರುತ್ತದೆ. ನೀನಲ್ಲದೆ ಮತ್ತೊಬ್ಬಳಾವಳಾದರೂ ಆಗಿದ್ದರೆ, ನನ್ನ ಮೇಲೆ ತಪ್ಪುಹೊರಿಸುತ್ತಿದ್ದಳು. ಆದರೆ ನನ್ನ ಮೇಲೆ ನೀನು ಎಂದೂ ಸಿಟ್ಟಾಗಲಿಕ್ಕಿಲ್ಲೆಂದು ನಾನು ಪೂರ್ಣವಾಗಿ ನಂಬಿದ್ದೇನೆ. ಮೃಣಾಲಿನೀ, ನಿನ್ನನ್ನು ನಾನು ಕಾಣದಿರುವ ಕಾರಣವು ನಿನಗೂ ತಿಳಿದಿರಬಹುದು. ನಾನು ಒಂದು ಪವಿತ್ರ ವ್ರತಕ್ಕೆ ಭಂಗ ತಂದುಕೊಂಡರೆ, ನನ್ನಂಥ ಅಧಮನೂ, ಕುಲಕಂಟಕನೂ ಈ ಜಗತ್ತಿನಲ್ಲಿ ಯಾರೂ ಇಲ್ಲೆಂದು ಹೇಳಬೇಕಾಗುವದು. ಆ ವ್ರತವು ಪೂರ್ಣವಾಗುವವರೆಗೆ ನಾನು ನಿನ್ನನ್ನು ಕಾಣುವದಿಲ್ಲೆಂದು ಗುರುವಿನ ಬಳಿಯಲ್ಲಿ ಪ್ರತಿಜ್ಞೆ ಯನ್ನು ಮಾಡಿದ್ದೇನೆ. ಆದ್ದರಿಂದ ಮೃಣಾಲಿನೀ, ಈವೊತ್ತಿನವರೆಗೆ ಧೈರ್ಯದಿಂದ ವಿರಹ ದುಃಖವನ್ನು ಸಹಿಸಿದಂತೆ, ಇನ್ನೊಂದು ವರ್ಷ ಸಹಿಸು. ಆಮೇಲೆ ಗುರುವಿನ ಆಶೀರ್ವಾದ ದಿಂದಲೂ, ಪರಮೇಶ್ವರನ ಕೃಪೆಯಿಂದಲೂ ನಾನು ನಿನ್ನನ್ನು ಮಗಧ ದೇಶದ ಒಡತಿಯನ್ನಾಗಿ

ಮಾಡಿ, ಯಾವಾಗಲೂ ನಿನ್ನ ಸೇವೆಯಲ್ಲಿ ತತ್ಪರನಾಗಿರುವೆನು. ಪರಮೇಶ್ವರನು ಆ ಸುದಿನವನ್ನು ಬೇಗನೆ ಒದಗಿಸಿ ಕೊಡಲಿ.

ಪ್ರಿಯೇ, ಹೆಚ್ಚಿಗಿನ್ನೇನು ಬರೆಯಲಿ? ಚಿಕ್ಕವಳಾದರೂ ಚತುರಳೂ, ಬುದ್ಧಿವಂತೆಯೂ ಆದ ಗಿರಿಜೆಯ ಕಡೆಗೇ ಈ ಪತ್ರದ ಉತ್ತರವನ್ನು ಬರೆದುಕೊಡು; ಅಂದರೆ ಆ ಪತ್ರವು ನನಗೆ ಮುಟ್ಟಿ, ನಿನ್ನನ್ನು ಪ್ರತ್ಯಕ್ಷ ಕಂಡ ಹಾಗಾಯಿತೆಂದು ತಿಳಿದು ನಾನು ಕೃತಾರ್ಥನಾಗುವೆನು.

ಹೇಮಚಂದ್ರ''

ಪತ್ರ ಓದುವದಾದ ಮೇಲೆ ಅದನ್ನು ಹೃದಯದಲ್ಲಿಟುಕೊಂಡು, ಅದಕ್ಕೆ ಮುದ್ದು ಕೊಟ್ಟು ವೃಣಾಲಿನಿಯು ನುಡಿದಳೇನಂದರೆ—ಗೆಳತೀ ಗಿರಜೇ, ಈ ಪತ್ರದ ಉತ್ತರವನ್ನು ಬರೆದುಕೊಡಬೇಕೆಂದು ಮನಸ್ಸು ಹರಿಯುತ್ತದೆ; ಆದರೆ ಮಾಡಲೇನು? ಈ ಅಪರಾತ್ರಿಯಲ್ಲಿ ಕಾಗದ, ದೌತಿ, ಲೆಕ್ಕಣಿಕೆಗಳು ಸಿಗುವಂತೆ ಇಲ್ಲ, ಆದ್ದರಿಂದ ಬಾಯಿ ಮಾತಿನಿಂದಲೇ ನೀನು ಹೇಳು. ನಿನ್ನ ಮೇಲೆ ನನ್ನ ಸಂಪೂರ್ಣ ನಂಬಿಗೆ ಇರುತ್ತದೆ. ನೀನು ಈ ದಿನ ಬಹಳ ದಣಿದಿರುತ್ತೀ. ನಿನ್ನಿಂದ ಬಹು ದೊಡ್ಡ ಕೆಲಸವಾಗಿದೆ. ಇದಕ್ಕಾಗಿ ನನ್ನ ಮೈಮೇಲಿನ ಈ ಅಲಂಕಾರಗಳನ್ನು ಉಚಿತವಾಗಿ ಕೊಡುತ್ತೇನೆ. ಇವನ್ನು ನೀನು ತೆಗೆದುಕೊಳ್ಳಬೇಕು. ಎಂದು ನುಡಿದು ಮೃಣಾಲಿನಿಯು ಮೈಮೇಲಿನ ಆಭರಣಗಳನ್ನು ತೆಗೆಯಹತ್ತಿದಳು. ಆಗ ಗಿರಿಜೆಯು ಆಕೆಯನ್ನು ತಡೆದು, ಅವ್ವನವರೇ, ಉತ್ತರವನ್ನು ಯಾರಿಗೆ ಒಯ್ದು ಕೊಡಲಿ? ಅವರು ಈ ಪತ್ರವನ್ನು ನನ್ನ ಕೈಯಲ್ಲಿ ಕೊಟ್ಟು ''ಇದೇ ದಿನ ರಾತ್ರಿ ಇದರ ಉತ್ತರವನ್ನು ತೆಗೆದುಕೊಂಡು ಬಾ'' ಎಂದು ಹೇಳಿದ್ದರು. ರಾತ್ರಿಯಲ್ಲಿ ಹೊತ್ತಾದದ್ದರಿಂದ ನಿಮಗೆ ಕಾಗದ, ಮಸಿ ಮೊದಲಾದವು ಹೊತ್ತಿಗೆ ದೊರೆಯಲಿಕ್ಕಿಲ್ಲೆಂದು ತಿಳಿದು ಇತ್ತಕಡೆಗೆ ಬರುವಾಗ ಕಾಗದ, ಮಸಿಗಳನ್ನು ಇಸಕೊಂಡು ಬರಬೇಕೆಂದು ನಾನೇ ಅವರ ಕಡೆಗೆ ಹೋಗಿದ್ದೆನು; ಆದರೆ ಅವರು ಇದ್ದೇ ಇಲ್ಲ. ಅಲ್ಲಿ ವಿಚಾರಿಸಲು, ಒಮ್ಮಿಂದೊಮ್ಮೆಲೆ ಅವರು ನವದ್ವೀಪಕ್ಕೆ ಹೊರಟು ಹೋದರೆಂದು ಗೊತ್ತಾಯಿತು.

ಇದನ್ನು ಕೇಳಿ ವೃಣಾಲಿನಿಯು ಬೆಪ್ಪಾಗಿ ನಿಂತುಕೊಂಡಳು. ಆಕೆಯು ಗಿರಿಜೆಗೆ— ''ಏನಂದೀ? ನವದ್ವೀಪಕ್ಕೆ ಹೋದರೆ?'' ಎಂದು ಕೇಳಲು, ಗಿರಿಜೆಯು, ಇಂದು ಸಂಜೆಯ ಮುಂದೆಯೇ ಅವರ ಗುರುಗಳು ಬಂದಿದ್ದರಂತೆ, ಅವರ ಸಂಗಡ ನವದ್ವೀಪಕ್ಕೆ ಹೋದರೆಂದು ಅಲ್ಲಿದ್ದವನೊಬ್ಬನು ಹೇಳಿದನು, ಎಂದು ಹೇಳಿದಳು. ಅದಕ್ಕೆ ವೃಣಾಲಿನಿಯು ''ಏನು, ಇವೊತ್ತೇ ಸಂಜೆಯಮುಂದೆ ಹೋದರೆ!'' ಎಂದು ನಿಟ್ಟುಸಿರು ಬಿಟ್ಟು ''ಅವನೇ, ಅವನೇ ಆ ನನ್ನ ವೈರಿಯಾದ ಮಾಧವಾಚಾರ್ಯನು!'' ಎಂದು ನುಡಿದು, ಚಿಂತೆಮಾಡುತ್ತ ಸುಮ್ಮನೆ ಕುಳಿತುಕೊಂಡಳು. ಕೆಲಹೊತ್ತಿನ ಮೇಲೆ ಆಕೆಯು ಗಿರಿಜೆಗೆ—ಗಿರಿಜೇ, ಇನ್ನು ನೀನು ಹೋಗು, ಬಹಳಹೊತ್ತು ಹೀಗೆ ರಾತ್ರಿ ಮನೆಯ ಹೊರಗೆ ಇರುವದು ಸರಿಯಲ್ಲ, ಎನ್ನಲು, ಗಿರಿಜೆಯು ಹಾಗೇ ಆಗಲೆಂದು ಅಲ್ಲಿಂದ ಹೊರಟುಹೋದಳು.

ಗಿರಿಜೆಯು ಹೊರಟು ಹೋದ ಬಳಿಕ ವೃಣಾಲಿನಿಯು ವಿಚಾರ ಮಗ್ನಳಾಗಿ ಮೆಲ್ಲನೆ ಹೆಜ್ಜೆಯಿಡುತ್ತ ತಿರುಗಿ ಮನೆಯೊಳಗೆ ಹೋದಳು, ಆಕೆಯು ಮನೆಯೊಳಗೆ ಹೋಗಿ ಬಾಗಿಲಿಕ್ಕಿ

ಕೊಳ್ಳುವಷ್ಟರಲ್ಲಿ ಹಿಂದಿನಿಂದ ಯಾವನೋ ಒಬ್ಬನು ಬಂದು ಒಮ್ಮೆಲೆ ಆಕೆಯ ಕೈಯನ್ನು ಹಿಡಿದನು. ಮೊದಲೇ ದುಃಖಪೀಡಿತಳಾಗಿದ್ದ ಮೃಣಾಲಿನಿಯು ಇದನ್ನು ನೋಡಿದ ಕೂಡಲೆ ಬೆಚ್ಚಿ ಬಿದ್ದು ಗಾಬರಿಯಾದಳು. ಆಗ ಕೈಯನ್ನು ಹಿಡಿದ ಮನುಷ್ಯನು ಮೆಲ್ಲನೆ, ಆದರೆ ಮೃಣಾಲಿನಿಯ ಮನಸ್ಸಿಗೆ ನಡುವಂತೆ, ''ಯಾಕೆ, ಹೇಗಿದೆ? ಅವ್ವನವರು ಈ ಹೊತ್ತು ಸಿಕ್ಕಿರಲ್ಲ! ಪಾತಿವ್ರತ್ಯವು ಎಲ್ಲಿ ಓಡಿ ಹೋಯಿತು?'' ಎಂದು ಕೇಳಿದನು. ಆಗ ಮೃಣಾಲಿನಿಯು ಸಿಟ್ಟಿನಿಂದ ನಡುಗುತ್ತ ''ವ್ಯೋಮಕೇಶಾ! ಎಲಾ ದುಷ್ಟಾ, ನಿನಗೆ ನಾಚಿಕೆ ಬರುವದಿಲ್ಲವೇ? ಯಾಕೆ, ಕೈ ಬಿಡುತ್ತಿಯೋ, ಇಲ್ಲವೋ'' ಎಂದು ಗದ್ದರಿಸಿದಳು.

ಹೀಗೆ ನಡುವೇ ಅವತರಿಸಿದ ಮೂರ್ತಿಯು ಯಾವದೆಂಬದರ ಸ್ವಲ್ಪ ಗುರುತನ್ನು ವಾಚಕರಿಗೆ ಮಾಡಿ ಕೊಡುವದು ಅವಶ್ಯವಾಗಿರುವದು. ಮಾಧವಾಚಾರ್ಯನು ಮೃಣಾಲಿನಿಯನ್ನು ಹೃಷೀಕೇಶ ಬ್ರಾಹ್ಮಣನ ಮನೆಯಲ್ಲಿ ತಂದಿಟ್ಟಿದ್ದನೆಂಬದನ್ನು ವಾಚಕರು ಬಲ್ಲರು. ಈ ವ್ಯೋಮಕೇಶನು ಹೃಷೀಕೇಶ ಬ್ರಾಹ್ಮಣನ ಹಿರಿಯ ಮಗನು. ಈತನ ಅಧ್ಯಯನವು ಅಕಟೋದಿಂದ ವಿಕಟೋದವರೆಗೆ ಆಗಿದ್ದು, ಮಹಾ ಮೂರ್ಖರಲ್ಲಿ ಇವನ ಎಣಿಕೆ ಇತ್ತು. ಊರೊಳಗಿನ ನಿರುದ್ಯೋಗಿಗಳೂ, ಕಿಡಿಗೇಡಿಗಳೂ, ದುರ್ವ್ಯಸನಿಗಳೂ, ಕ್ಷುಲ್ಲಕರೂ ಆದ ಜನರ ಸಂಗಡ ಇವನ ಗೆಳೆತನವಿತ್ತು. ಕೇವಲ ಬಂಗಿ, ಅಫು, ಮೊದಲಾದ ಸಾಮಾನ್ಯ ವ್ಯಸನದಲ್ಲಿಯೇ ಇವರು ಪ್ರವೀಣರಾಗಿದ್ದರೆಂತಲ್ಲ, ಜಗತ್ತಿನೊಳಗಿನ ನಿಂದ್ಯವಾದ ವ್ಯಸನಗಳಲ್ಲಿಯೂ, ಘೋರವಾದ ಪಾಪ ಕೃತ್ಯಗಳಲ್ಲಿಯೂ ಈ ಮಹಾತ್ಮರು ಪೂರ್ಣ ಪ್ರಾವೀಣ್ಯವನ್ನು ಸಂಪಾದಿಸಿದ್ದರು; ಆದರೆ ಹೊರಗೆ ಮಾತ್ರ ಬಹು ದೊಡ್ಡ ಸಾಧು ವೃತ್ತಿಯನ್ನು ತೋರಿಸುತ್ತಿದ್ದರು. ಸಂಧ್ಯಾವಂದನದ ಇಪ್ಪತ್ತುನಾಲ್ಕು ಹೆಸರುಗಳನ್ನು ಉಚ್ಚರಿಸುವಾಗ ಇಪ್ಪತ್ತೇಳು ತಪ್ಪುಗಳಾಗುತ್ತಿದ್ದರೂ, ಇವರ ತ್ರಿಕಾಲ ಸಂಧ್ಯಾವಂದನದ ಆಡಂಬರವನ್ನು ನೋಡುವವರಿಗೆ ಇವರು ಕರ್ಮಠರಾದ ಸತ್ವಶೀಲ ಬ್ರಾಹ್ಮಣರೆಂದು ಭಾಸವಾಗದೆ ಇರುತ್ತಿದ್ದಿಲ್ಲ. ಒಟ್ಟಿಗೆ ವ್ಯೋಮಕೇಶನ ಮನೆಯೊಳಗಿನ ನಡತೆಯು ಯಾರಿಗೂ ಸಂಶಯ ಬರುವಂತೆ ಇದ್ದಿಲ್ಲ; ಆದರೆ ಒಳಗೆ ಆತನು ಪಾಪದ ಮೂರ್ತಿಯಾಗಿದ್ದನು. ಮೃಣಾಲಿನಿಯು ಮನೆಗೆ ಬಂದ ದಿವಸದಿಂದ ಆಕೆಯ ಅಪ್ರತಿಮ ಲಾವಣ್ಯವನ್ನು ನೋಡಿ ಆ ನೀಚನು ಭ್ರಾಂತನಾಗಿದ್ದನು. ಮೃಣಾಲಿನಿಯು ತನಗೆ ವಶವಾಗಬೇಕೆಂಬ ಬಗ್ಗೆ ಇವನ ಗುಪ್ತವಾದ ಪ್ರಯತ್ನಗಳು ಒಂದೇಸವನೆ ನಡೆದಿದ್ದವು. ಸಂಧಿಯು ದೊರೆತ ಕೂಡಲೆ ಬಲಾತ್ಕಾರ ಮಾಡಿ ಮೃಣಾಲಿನಿಯ ಪಾತಿವ್ರತ್ಯವನ್ನು ಕೆಡಿಸಬೇಕೆಂದು ಆ ಪಾಪಿಯು ಮನಸ್ಸಿನಲ್ಲಿ ನಿಶ್ಚಯ ಮಾಡಿಕೊಂಡಿದ್ದನು. ಆ ಸಂಧಿಯು ಯಾವಾಗ ಒದಗೀತೆಂದು ಒಂದೇಸವನೆ ಟಕ್ಕು ಹಿಡಿದು ಹಾದಿಯನ್ನು ನೋಡುತ್ತಿದ್ದನು; ಆದರೆ ಮೃಣಾಲಿನಿ, ಮಣಿಮಾಲಿನಿ ಇವರಿಬ್ಬರೂ ಒಂದು ಕ್ಷಣವಾದರೂ ಒಬ್ಬರನ್ನೊಬ್ಬರು ಅಗಲದೆ ಇದ್ದದ್ದರಿಂದ ಆ ಪಾಪಿಯ ದುಷ್ಟ ವಾಸನೆಯು ಪ್ರಕಟವಾಗಿದ್ದಿಲ್ಲ. ಈ ದಿನ ಎಲ್ಲ ಕಡೆಯಲ್ಲಿ ಸ್ತಬ್ಧತೆಯಿದ್ದು, ಮಧ್ಯರಾತ್ರಿಯ ಕತ್ತಲೆಯಲ್ಲಿ ಅನಾಥೆಯೂ, ಅಸಹಾಯಳೂ, ಅಬಲೆಯೂ ಆದ ಮೃಣಾಲಿನಿಯು ಪೂರ್ಣ ತನ್ನ ಕೈಯಲ್ಲಿ ಸಿಕ್ಕದ್ದನ್ನು ನೋಡಿ ಆ ನೀಚನು ಬಲಾತ್ಕಾರದಿಂದ ಆಕೆಯ ಪಾತಿವ್ರತ್ಯ ಭಂಗಮಾಡುವದನ್ನು ನಿಶ್ಚಯಿಸಿದ್ದನು.

ಮೇಲೆ ಹೇಳಿದಂತೆ ಮೃಣಾಲಿನಿಯು ವ್ಯೋಮಕೇಶನನ್ನು ತಿರಸ್ಕರಿಸಿದ್ದಕ್ಕಾಗಿ ಆ ನೀಚನು ನಾಚಲಿಲ್ಲ. ಅವನ ನಾಚಿಕೆಗೇಡಿತನಕ್ಕೆ ಮತ್ತಿಷ್ಟು ಕಳೆಯೇರಿ ಅವನು ಮೃಣಾಲಿನಿಗೆ, ''ಸರಿ, ಸರಿ. ಬಹುದಿವಸಕ್ಕೆ ನೀನು ನನ್ನ ಕೈಯಲ್ಲಿ ಸಿಕ್ಕಿರಲು, ಮನೋರಥವನ್ನು ಪೂರ್ಣಮಾಡಿಕೊಂಡ ಹೊರತು ಕೈಯನ್ನು ಬಿಟ್ಟೇನೆ? ಮೊದಲು ನನ್ನ ಮಾತು ಕೇಳು, ಆ ಮೇಲೆ ಬೇಕಾದಲ್ಲಿಗೆ ಹೋಗು. ಮೃಣಾಲಿನೀ, ನೀನು ಸಿಟ್ಟಾಗಬೇಡ, ವಿಚಾರಮಾಡು. ನಾನೂ ನಿನ್ನಂತೆಯೇ ಒಬ್ಬ ಮನುಷ್ಯನಿದ್ದೇನೆ. ನಿನ್ನಂತೆಯೇ ನನಗೂ ಮನೋವಿಕಾರಗಳಿರುತ್ತವೆ. ನೀನು ಇದೇ ಈಗ ಒಬ್ಬನ ಮನೋರಥವನ್ನು ಪೂರ್ಣಮಾಡಿ ಬಂದಿರುತ್ತೀ. ಅದರಂತೆ ಇನ್ನೊಬ್ಬನ ಮನೋರಥ ವನ್ನು ಪೂರ್ಣಮಾಡಿದರೆ ತಪ್ಪೇನು?'' ಎಂದು ನೀಚತನದಿಂದ ನುಡಿದನು. ಆಗ ಮೃಣಾಲಿನಿಯು—ದುಷ್ಟಾ, ಪಾಪಿಷ್ಠಾ, ಅಧಮಾ! ಇಂಥ ಹೊಲಸು ಮಾತುಗಳನ್ನಾಡುವ ನಿನ್ನ ನಾಲಿಗೆಯು ಇನ್ನೂ ಯಾಕೆ ಉದರಿ ಬೀಳಲೊಲ್ಲದು? ನಿನ್ನ ಮಯ್ಯೆಲ್ಲ ಹುಳುಗಳು ಏಕೆ ಬೀಳಲೊಲ್ಲವು! ಯಾಕೆ, ಬಿಡುತ್ತೀಯೋ ಇಲ್ಲವೋ ಕೈಯ್ಯ? ಒದರಿ ಎಲ್ಲರನ್ನೂ ಎಬ್ಬಿಸಲೊ?

ಮೃಣಾಲಿನಿಯ ಈ ಮಾತುಗಳನ್ನು ಲೆಕ್ಕಿಸದೆ ವ್ಯೋಮಕೇಶನು, ಮೃಣಾಲಿನೀ, ಇಂಥ ಬಡಿವಾರವನ್ನು ತೋರಿಸಬೇಡ! ಹಾಳು ಬೆದರಿಕೆಗೆ ಬೆದರುವಂಥ ಅಳ್ಳೆದೆಯವನು ಈ ವ್ಯೋಮಕೇಶನಲ್ಲೆಂಬದನ್ನು ಚನ್ನಾಗಿ ನೆನಪಿನಲ್ಲಿಡು. ಒದರು, ಬೇಕಾದಹಾಗೆ ಗಟ್ಟಿಯಾಗಿ ಒದರು, ಪಾಪ ಕರ್ಮವನ್ನು ಮಾಡುವಾಗ ಈಕೆಯನ್ನು ಹಿಡಿದಿದ್ದೇನೆಂದು ಎಲ್ಲರ ಮುಂದೆ ಹೇಳುತ್ತೇನೆ......

ವ್ಯೋಮಕೇಶನ ಈ ಅಮಂಗಲ ಮಾತುಗಳನ್ನು ಕೇಳಿದ ಕೂಡಲೆ ಮೃಣಾಲಿನಿಯು ಸಂತಾಪದ ಭರದಿಂದ ವಿಚಾರಶೂನ್ಯಳಾಗಿ ಬಾಯಿಂದ ಮಾತಾಡದೆ ಕಸುವಿನಿಂದ ಕೈಯನ್ನು ಕೊಸರಿಕೊಂಡು ಹೋಗಬೇಕೆಂದು ಪ್ರಯತ್ನ ಮಾಡತೊಡಗಿದಳು; ಆದರೆ ಬಲಿಷ್ಠನಾದ ವ್ಯೋಮಕೇಶನ ಮುಂದೆ ಆಕೆಯ ಪ್ರಯತ್ನಗಳೆಲ್ಲ ನಿಷ್ಫಲವಾದವು. ಮೃಣಾಲಿನಿಯ ಈ ಗುದುಮುರಿಗೆಯನ್ನು ನೋಡಿ ವ್ಯೋಮಕೇಶನು ಇಲ್ಲದ ಸಲಿಗೆಯನ್ನು ತೋರಿಸುತ್ತ ಆಕೆಗೆ—ಮೃಣಾಲಿನೀ, ಹೀಗೆ ಅಗಡುತನವನ್ನು ಮಾಡಬೇಡ. ನನ್ನ ಮಾತನ್ನು ಕೇಳು. ಕೂಡಲೆ ನಿನ್ನನ್ನು ಬಿಟ್ಟುಬಿಡುವೆನು. ಈಗ ಆ ನಿನ್ನ ಪ್ರೀತಿಯ ತಂಗಿಯಾದ ಮಣಿಮಾಲಿನಿಯು ಎಲ್ಲಿ ಹೋಗಿದ್ದಾಳೆ? ಅನ್ನಲು, ಮೃಣಾಲಿನಿಯು ಸಿಟ್ಟಿನಿಂದ, ''ನಾನೇ ನಿನ್ನ ತಂಗಿಯು'' ಎಂದಳು. ಮೃಣಾಲಿನಿಯ ಈ ಮಾತಿಗೆ ವ್ಯೋಮಕೇಶನು ನಾಚಿಗೆಗೇಡಿತನದಿಂದ, ನೀನು ನನ್ನ ತಂಗಿಯು ಹೇಗೆ ಆದೀ. ನೀನು ನನ್ನ ಪ್ರಾಣಪ್ರಿಯಳಾದ ರಾಧಿಕೆಯು, ಹೃದಯಾನಂದಿನಿಯು ಎಂದು ಮೃಣಾಲಿನಿಯನ್ನು ಹೊರಗೆ ಎಳೆಯ ಹತ್ತಿದನು. ಮೃಣಾಲಿನಿಯು ತನ್ನನ್ನು ಮಾಧವಾಚಾರ್ಯನು ಎಳೆದೊಯ್ಯುವಾಗ ಒದರದೆ ಸುಮ್ಮನೆ ಇದ್ದಂತೆ ಈಗಾದರೂ ಸುಮ್ಮನೆ ಇದ್ದಳು. ಆಕೆಯಿಂದ ಒದರುವದಾಗಲಿಲ್ಲ. ಆಕೆಯು ಸಿಟ್ಟಿನಿಂದ ಕಾದು, ವ್ಯೋಮಕೇಶನ ಟೊಂಕಕ್ಕೆ ಕಸುವಿನಿಂದ ಒದ್ದಳು. ಮೃಣಾಲಿನಿಯ ಈ ಲತ್ತಾಪ್ರಹಾರ ರೂಪವಾದ ಪ್ರಸಾದವು ದೊರೆತಕೂಡಲೆ ಆ ಕಾಮಾಂಧನಾದ ನಾಚಿಕೆಯಿಲ್ಲದ ವ್ಯೋಮಕೇಶನು ನಗುತ್ತ ನಗುತ್ತ ಅಹಹ! ನಾನು ಇಂದು

ಧನ್ಯನಾದೆನು! ನಿನ್ನ ಕೋಮಲ ಚರಣಸ್ಪರ್ಶವನ್ನು ನಾನು ಮೋಕ್ಷಕ್ಕಿಂತಲೂ ಹೆಚ್ಚು ಸುಖಕರವೆಂದು ತಿಳಿಯುವೆನು. ಸುಂದರೀ, ನೀನು ನನ್ನ ದ್ರೌಪದಿಯು ನಾನು ನಿನ್ನ ಜಯದ್ರಥನು......"

ಇಷ್ಟು ನುಡಿಯುತ್ತಿರಲು, ಯಾರೋ ಹಿಂದಿನಿಂದ ಮೆಲ್ಲನೆ ನಾನು ನಿನ್ನ ಅರ್ಜುನನು ಎಂದು ನುಡಿದರು. ಕೂಡಲೆ ವ್ಯೋಮಕೇಶನು ಮೃಣಾಲಿನಿಯ ಕೈಯನ್ನು ಬಿಟ್ಟು, ತನ್ನ ಬೆನ್ನ ಮೇಲೆ ಕೈಯಾಡಿಸಿಕೊಳ್ಳುತ್ತ ದೊಡ್ಡದನಿಯಿಂದ ಚೀರಿದನು. ಅವನ ಬೆನ್ನಿನಿಂದ ರಕ್ತವು ಒಂದೇಸವನೆ ಹರಿಯುತ್ತಿತ್ತು, ದುಷ್ಟ ವ್ಯೋಮಕೇಶನಿಂದ ಬಿಡಲ್ಪಟ್ಟ ಮೃಣಾಲಿನಿಯೂ ಅಲ್ಲಿಂದ ಕದಲಲಿಲ್ಲ, ಈ ಆಕಸ್ಮಿಕ ಪ್ರಕಾರವನ್ನು ನೋಡಿ ಬೆರಗಾಗಿ ನಿಂತಲ್ಲಿ ನಿಂತುಬಿಟ್ಟಳು. ಹೀಗೆ ಬೆರಗಾಗಿ ನಿಂತಿರುವ ಮೃಣಾಲಿನಿಯ ಹಿಂದಿನಿಂದ ಮೆಲ್ಲನೆ ಬಂದು ಆಕೆಯ ಸೀರಿಯಸೆರಗನ್ನು ಜಗ್ಗಿ, ತನ್ನ ಸಂಗಡ ಓಡಿಬರುವದಕ್ಕಾಗಿ ಗಿರಿಜೆಯು ಸನ್ನೆ ಮಾಡಿದಳು; ಆದರೆ ಮೃಣಾಲಿನಿಯು ಗಿರಿಜೆಯ ಆ ಸೂಚನೆಯನ್ನು ಮನ್ನಿಸಲಿಲ್ಲ. ಓಡಿಹೋಗುವ ವಿಚಾರವು ಆಕೆಗೆ ಎಷ್ಟುಮಾತ್ರವೂ ಸೇರಲಿಲ್ಲ. ಒಂದು ಕಲ್ಲಿನ ಗೊಂಬೆಯಂತೆ ಆಕೆಯು ನಿಂತಲ್ಲಿ ನಿಂತುಬಿಟ್ಟಳು. ಇತ್ತ ವ್ಯೋಮಕೇಶನು ದೈನ್ಯದಿಂದ ದೊಡ್ಡದೊಡ್ಡ ದನಿಗಳನ್ನು ತೆಗೆದು ಒದರಹತ್ತಿದನು. ಆತನು ದನದಂತೆ ಒದರುವದನ್ನು ಕೇಳಿ ಮನೆಯವರೂ ನೆರೆಹೊರೆಯವರೂ ಎಚ್ಚತ್ತರು. ಎಲ್ಲಕಡೆಯಲ್ಲಿ ಜನರು ಎಚ್ಚರಾಗುವದನ್ನು ನೋಡಿ ಮೃಣಾಲಿನಿಯು ಮೆಲ್ಲನೆ ಮನೆಯೊಳಗೆ ಹೋಗಹತ್ತಿದಳು. ವ್ಯೋಮಕೇಶನ ಒದರಾಟವನ್ನು ಕೇಳಿ ಹೃಷೀಕೇಶನು ಎಚ್ಚತ್ತು ಹೊರಗೆ ಬರಲಿಕ್ಕೂ, ಮೃಣಾಲಿನಿಯು ಒಳಗೆ ಹೋಗಲಿಕ್ಕೂ ಗಂಟುಬಿದ್ದಿತು. ಹೃಷೀಕೇಶನು ಹೊರಗೆ ಬಂದು ಮಗನನ್ನು ಕುರಿತು, ಏನಾಯಿತೋ? ಏನು ಗದ್ದಲವದು? ಎಂದು ಕೇಳಿದನು. ಅದಕ್ಕೆ ವ್ಯೋಮಕೇಶನು, ಪಾಪಿಷ್ಠಳಾದ ಮೃಣಾಲಿನಿಯು ಕತ್ತಲಲ್ಲಿ ಪಾಪಕರ್ಮವನ್ನು ಮಾಡುತ್ತಿರುವಾಗ ನಾನು ಹಿಡಿಯಲು, ಆ ಸಾಹಸಿಯು ಸಿಟ್ಟಿಗೆದ್ದು ನನ್ನ ಬೆನ್ನಿಗೆ ಕಡಿದಳು, ಎಂದು ನೀಚತನದಿಂದ ಉತ್ತರವನ್ನು ಕೊಟ್ಟನು.

ನಸುಗೋಪದ ನೋಟ

ವ್ಯೋಮಕೇಶನ ನೀಚ ಕೃತ್ಯಗಳು ಹೃಷಿಕೇಶನಿಗೆ ಗೊತ್ತಿದ್ದಿಲ್ಲ. ಅಂದಬಳಿಕ ಆತನು ಮಗನ ವಿಷಯವಾಗಿ ಸ್ವಾಭಾವಿಕವಾಗಿಯೇ ಸಂಶಯಪಡಲಿಲ್ಲ, ಹೊರತು ಮೃಣಾಲಿನಿಯು ಕತ್ತಲೆಯಲ್ಲಿ ಹೊರಗಿನಿಂದ ಒಬ್ಬಳೇ ಮನೆಯೊಳಗೆ ಬರುವದನ್ನು ಅದೇ ಕಣ್ಣುಮುಟ್ಟ ನೋಡಿದ್ದನು. ಆದ್ದರಿಂದ ಆ ವೃದ್ಧ ಬ್ರಾಹ್ಮಣನು ತನ್ನ ಮಗನು ಹೇಳಿದ ಮಾತನ್ನೇ ಸಂಪೂರ್ಣವಾಗಿ ನಂಬಿದನು. ಆತನು ಮುಂದೆ ಪಿಟ್ಟೆಂದು ಮಾತಾಡದೆ, ಒಮ್ಮೆಲೆ ಹಿಂದಿರುಗಿ, ಮೃಣಾಲಿನಿಯ ಬಳಿಗೆ ಹೋಗಿ, ಗಂಭೀರ ಮುದ್ರೆಯಿಂದ ಮೃಣಾಲಿನೀ, ಇದೇನು ಕೆಲಸ ಮಾಡಿದೆ ಎಂದು ಕೇಳಲು, ಮೃಣಾಲಿನಿಯು ಏನಾಯಿತು? ಎಂದು ಕೇಳಿದಳು. ಆಗ ವೃದ್ಧ ಬ್ರಾಹ್ಮಣನು, ನಾಚಿಕೆಗೇಡಿಯೇ,

ಮತ್ತೆ ಮೂಗು ಮೇಲೆ ಮಾಡಿಕೊಂಡು ಏನಾಯಿತೆಂದು ನನ್ನನ್ನೇ ಕೇಳುವಿಯಾ? ನೀನು ಯಾರ ಮಗಳು, ನಿನ್ನ ನಡಾವಳಿಯು ಹೇಗಿರುವದು ಮೊದಲಾದ ಸಂಗತಿಗಳಾವವೂ ನನಗೆ ಗೊತ್ತಿಲ್ಲ; ಕೇವಲ ಗುರುವಿನ ಅಪ್ಪಣೆಯನ್ನು ಮನ್ನಿಸಿ, ನಿನಗೆ ಆಶ್ರಯಕೊಟ್ಟೆನು. ನನ್ನ ಮಣಿಮಾಲಿನಿಯಂತೆಯೇ ನಿನ್ನನ್ನು ನಡಿಸಿಕೊಂಡೆನು, ಸ್ವಲ್ಪವಾದರೂ ಅಂತರವಾಗಗೊಡಲಿಲ್ಲ; ಆದರೆ ಇದೇನು ಕೆಟ್ಟ ಕೆಲಸಮಾಡಿದೆ? ಪಾಪಕರ್ಮದಲ್ಲಿ ಹೊರಳಾಡಲಿಕ್ಕೆ ನಿನಗೆ ನಾಚಿಕೆ ಹೇಗೆ ಬರಲಿಲ್ಲ?

ವೃದ್ಧ ಬ್ರಾಹ್ಮಣನ ಈ ಮಾತಿಗೆ ಪ್ರತಿಯಾಗಿ ಮೃಣಾಲಿನಿಯು, ಸುಮ್ಮ ಸುಮ್ಮನೆ ನನ್ನ ಮೇಲೆ ಅಪವಾದ ಹೊರಿಸುವವರನ್ನು ದೇವರು ನೋಡಿಕೊಳ್ಳಲಿ, ಎಂದು ನುಡಿದಳು, ತನಗೇ ಈ ಮಾತಾಡಿದಳೆಂದು ತಿಳಕೊಂಡು ಆ ವೃದ್ಧ ಹೃಷೀಕೇಶನು ಕೋಪ ಸಂತಪ್ತನಾಗಿ ನಡುಗುವ ದನಿಯಿಂದ ಎಲೈ ದುಷ್ಟಳೇ, ನನ್ನ ಮನೆಯ ಅನ್ನವನ್ನು ಉಂಡು, ಪಾಪ ಕರ್ಮವನ್ನು ಮಾಡಿ, ತಿರುಗಿ ನನಗೇ ಕೆಟ್ಟ ಮಾತುಗಳನ್ನಾಡುವಿಯಾ? ಈಗಲೇ ನನ್ನ ಮನೆಯಿಂದ ಹೊರಬೀಳು ಎನ್ನಲು, ಮೃಣಾಲಿನಿಯು, ಯಾಕಾಗಲೊಲ್ಲದು! ನಾಳೆ ಬೆಳಗಿನಲ್ಲಿ ತಮಗೆ ನನ್ನ ಮೋರೆಯನ್ನು ತೋರಿಸುವದಿಲ್ಲ, ಎಂದು ಸ್ಪಷ್ಟವಾಗಿ ಉತ್ತರ ಕೊಟ್ಟಳು.

ತನ್ನ ಮನೆಯಿಂದ ಹೊರಟು ಹೋದಕೂಡಲೆ, ಮೃಣಾಲಿನಿಯು ನಿರಾಶ್ರಿತಳೂ, ಅಸಹಾಯಳೂ ಆಗುವಳೆಂಬದು ಸ್ಪಷ್ಟವಾಗಿ ಕಾಣುತ್ತಿದ್ದರೂ, ಆಕೆಯು ನಾಳೆ ಮೋರೆ ತೋರಿಸುವದಿಲ್ಲೆಂದು ಉದ್ಧಟತನದಿಂದ ಉತ್ತರಕೊಟ್ಟದ್ದನ್ನು ಕೇಳಿ, ವೃದ್ಧ ಬ್ರಾಹ್ಮಣನು ಮತ್ತಿಷ್ಟು ಸಂತಾಪಗೊಂಡನು. ಆಕೆಯು ಮುಂದೆ ತನ್ನ ಗತಿಯು ಏನಾದೀತೆಂಬದರ ಭಯವನ್ನೂ ಎಳ್ಳಷ್ಟಾದರೂ ಮನಸ್ಸಿನಲ್ಲಿ ಎಣಿಸದೆ, ಎರಡನೆಯ ಕಡೆಗೆ ಹೋಗುವ ಬಿಂಕವನ್ನು ತೋರಿಸುತ್ತಾಳಾದುದರಿಂದ ಈಕೆಯು ನಿಶ್ಚಯವಾಗಿ ವ್ಯಭಿಚಾರಿಣಿಯಿರುತ್ತಾಳೆಂದು ಆತನು ತಿಳಿದುಕೊಂಡನು. ಜಾರನ ಆಶ್ರಯವಿರುವದರಿಂದಲೇ ಈಕೆಯು ಇಷ್ಟು ನಿರ್ಭಯದಿಂದ ಉತ್ತರ ಕೊಡುತ್ತಾಳೆಂದು ಆತನು ಭಾವಿಸಿದನು. ಇವೆಲ್ಲ ವಿಚಾರಗಳು ಮನಸ್ಸಿನಲ್ಲಿ ಬಂದ ಕೂಡಲೆ, ಆ ವೃದ್ಧ ಹೃಷಿಕೇಶನು ಮತ್ತಿಷ್ಟು ರೊಚ್ಚಿಗೆದ್ದು "ಎಲೈ ಪಾಪಿಷ್ಠೇ, ನಾಳೆ ಮುಂಜಾನೆ ಏಕೆ! ಈಗಿಂದೀಗಲೇ ನನ್ನ ಮನೆಯಿಂದ ಹೊರಬೀಳು. ನಿನ್ನ ಈ ಕೆಟ್ಟ ಮೋರೆಯು ಅರಕ್ಷಣವಾದರೂ ನನ್ನ ಕಣ್ಣೆದುರಿಗೆ ಇರಬೇಡ" ಎನ್ನಲು, ಮೃಣಾಲಿನಿಯು, ಯಾಕಾಗಲೊಲ್ಲದು, ಮಣಿಮಾಲಿನಿಯ ಅಪ್ಪಣೆಯನ್ನು ಪಡೆದು, ಈಗಲೇ ಹೊರಟು ಹೋಗುತ್ತೇನೆ. ಎಂದು ಮಣಿಮಾಲಿನಿಯ ಬಳಿಗೆ ಹೋಗಹತ್ತಿದಳು. ಆಗ ಆ ಮುದುಕನು ಆಕೆಯನ್ನು ತಡೆದು ಸಿಟ್ಟಿನಿಂದ ನಡಗುತ್ತ, ಜಾರಿಣಿಯೇ, ಕುಲಕಂಟಕಳಾದ ನಿನ್ನ ಅಮಂಗಲ ಮುಖದ ದರ್ಶನವು ನನ್ನ ಮಣಿಮಾಲಿನಿಗೆ ಆಗಲಾರದು. ಹೊರಬೀಳು ಬೇಗನೆ, ಎಂದು ನಿಷ್ಠುರ ಮಾತುಗಳನ್ನು ಆಡಿದನು.

ಹೃಷೀಕೇಶನ ಮುಖದಿಂದ ಹೊರಟ ಈ ಭಯಂಕರ ಶಬ್ದಗಳನ್ನು ಕೇಳಿ, ಮೃಣಾಲಿನಿಯ ಕಣ್ಣುಗಳು ನೀರಿನಿಂದ ತುಂಬಿದವು. ದುಃಖದಿಂದ ಆಕೆಯ ಅಂತಃಕರಣವು ವ್ಯಾಕುಲವಾಯಿತು. ಮುಂದೆ ಆಕೆಯು ಪಿಟ್ಟೆಂದು ಒಂದು ಶಬ್ದವನ್ನಾದರೂ ನುಡಿಯದೆ, ಆ ವೃದ್ಧ ಬ್ರಾಹ್ಮಣನನ್ನು ನಮಿಸಿ, ಹಾಗೆಯೇ ಮನೆಯಿಂದ ಹೊರಬಿದ್ದಳು. ಅತ್ತ ವ್ಯೋಮಕೇಶನು ಕೆಟ್ಟ ದನಿಯಿಂದ

ಒದರಿದಾಗ, ಎಲ್ಲ ಜನರ ಸಂಗಡ ಮಣಿಮಾಲಿನಿಯೂ ಎಚ್ಚತ್ತಿದ್ದಳು. ಆಕೆಯು ಅಣ್ಣನ ಸಮಾಚಾರವನ್ನು ತಕ್ಕೊಳ್ಳುವದಕ್ಕಾಗಿ ಹೋಗಿದ್ದಳು. ನಿಜವಾದ ಸಂಗತಿಯು ಆಕೆಯ ಮನಸ್ಸಿಗೆ ಹೊಳೆಯಲು, ಆಕೆಯು ಅಣ್ಣನನ್ನು ಬಹಳವಾಗಿ ತಿರಸ್ಕರಿಸಿದಳು. ಕೆಲವು ಹೊತ್ತಿನ ಮೇಲೆ ಆಕೆಯು ಮನೆಯೊಳಗೆ ಬರುತ್ತಿರಲು, ಗಾಬರಿಯಿಂದ ಬಾಡಿದ ಮೋರೆಯುಳ್ಳ ಮೃಣಾಲಿನಿಯು ಆಕೆಗೆ ಅಂಗಳದಲ್ಲಿ ಭೆಟ್ಟಿಯಾದಳು. ಆಕೆಯನ್ನು ನೋಡಿ ಮಣಿಮಾಲಿನಿಯು, ಗೆಳತೀ, ಇಂಥ ಅಪರಾತ್ರಿಯಲ್ಲಿ ನೀನು ಎಲ್ಲಿಗೆ ಹೊರಟೆ? ಎಂದು ಕೇಳಲು, ಆಕೆಯ ದುಃಖವು ಒತ್ತರಿಸಿ, ಗೆಳತೀ ಮಣಿಮಾಲಿನೀ, ದೇವರು ನಿನಗೂ ನಿನ್ನ ಗಂಡನಿಗೂ ಉದ್ದಂಡವಾದ ಆಯುಷ್ಯವನ್ನು ಕೊಟ್ಟು ಸುಖಿಗಳಾಗಮಾಡಲಿ. ಇನ್ನು ಮೇಲೆ ನೀನು ನನ್ನ ಸಂಗಡ ಮಾತಾಡಬೇಡ, ನನ್ನ ಮೋರೆಯನ್ನೂ ನೋಡಬೇಡ; ನಿನ್ನ ತಂದೆಗೆ ಸಿಟ್ಟು ಬಂದೀತು, ಎಂದು ಉತ್ತರ ಕೊಟ್ಟಳು.

ಮೃಣಾಲಿನಿಯ ಈ ಮಾತುಗಳನ್ನು ಕೇಳಿ, ಅಳುವ ಮೋರೆಯಿಂದ ಮಣಿಮಾಲಿನಿಯು— ಮೃಣಾಲಿನೀ, ಹೀಗೇಕೆ ಮಾಡುವೆಯಕ್ಕಾ! ನೀನು ಹೀಗೆ ಅಳುವದೇಕೆ? ವಿಚಾರವಿಲ್ಲದೆ ನಮ್ಮ ಅಪ್ಪನು ಏನಾದರೂ ಕೆಟ್ಟ ಮಾತಾಡಿದ್ದಾನು. ಅದನ್ನು ನೀನು ಮನಸ್ಸಿನಲ್ಲಿ ಹಿಡಿಯಬೇಡ. ತಿರುಗು ಹಿಂದಕ್ಕೆ, ಇನ್ನು ಮುಂದಕ್ಕೆ ಹೆಜ್ಜೆಯನ್ನಿಟ್ಟರೆ, ನಿನಗೆ ನನ್ನ ಕೆಟ್ಟ ಆಣೆಯಿರುತ್ತದೆ ಎಂದು ಹೇಳಿದಳು. ಇದರಿಂದ ಏನೂ ಉಪಯೋಗವಾಗಲಿಲ್ಲ. ಮೃಣಾಲಿನಿಯು ತನ್ನ ಗೆಳತಿಯ ದೈನ್ಯ ವೃತ್ತಿಗೂ, ಅಂತಃಕರಣದ ಪ್ರಾರ್ಥನೆಗೂ ಲಕ್ಷ್ಯಗೊಡಲಿಲ್ಲ; ಗುಡ್ಡದ ತುದಿಯಿಂದ ಉರುಳಿ ಬೀಳುವ ಕಲ್ಲಿನ ಗುಂಡಿನಂತೆ ಅಭಿಮಾನಿಯಾದ ಆ ಸಾಧ್ವಿಯು ಅಲ್ಲಿಂದ ಹೊರಟುಹೋದಳು. ಆಕೆಯು ಹೊರಗೆ ಬಂದು ನೋಡುತ್ತಾಳೆ, ಆ ಪೂರ್ವಸಂಕೇತದ ಸ್ಥಳದಲ್ಲಿ ಗಿರಿಜೆಯು ಹಾದಿಯನ್ನು ನೋಡುತ್ತ ನಿಂತುಕೊಂಡಿದ್ದಳು. ಆಕೆಯನ್ನು ನೋಡುತ್ತಲೇ ಮೃಣಾಲಿನಿಯು ಸೋಜಿಗಗೊಂಡು ಗಿರಿಜೇ, ನೀನು ಇನ್ನೂ ಇಲ್ಲಿಯೇ ಇರುವಿಯೋ? ಎಂದು ಕೇಳಲು, ಗಿರಿಜೆಯು—ಅಮ್ಮಾ, ನಾನು ನಿಮಗೆ ನನ್ನ ಸಂಗಡ ಓಡಿಬನ್ನಿರಿ ಎಂದು ಹೇಳಿದ್ದೇನಲ್ಲ? ಅದರಂತೆ ಬರುವಿರೋ ಹೇಗೆ ನೋಡಬೇಕೆಂದು ಹಾದಿಯನ್ನು ನೋಡುತ್ತ ನಿಂತು ಕೊಂಡಿರುವೆನು ಎಂದು ಹೇಳಿದಳು.

ಮೃಣಾ—ವ್ಯೋಮಕೇಶನ ಬೆನ್ನಿಗೆ ನೀನೇ ಕಡಿದಹಾಗೆ ಕಾಣುತ್ತದೆ.

ಗಿರಿಜೆ—ಇದರಲ್ಲಿ ಆದ ಅನ್ಯಾಯವೇನು? ಇನ್ನೂ ಆ ದುಷ್ಟನ ಗಂಟಲದ ರಕ್ತವನ್ನು ಕುಡಿಯಬೇಕಾಗಿತ್ತು!

ಮೃಣಾ—ನಾನು ಮನೆಯೊಳಗೆ ಬಂದಕೂಡಲೆ ನೀನು ಅತ್ತ ಹೊರಟು ಹೋಗಿದ್ದಿಲ್ಲವೆ?

ಗಿರಿಜೆ—ಹೌದು, ನಾನು ಹೊರಟುಹೋದದ್ದು ನಿಜವು; ಆದರೆ ನಿಮ್ಮ ದನಿಯು ನನ್ನ ಕಿವಿಗೆ ಬೀಳಲು, ಯಾರಸಂಗಡಲೋ ವಾದವಿವಾದವು ನಡೆದಿರುವದೆಂದು ತಿಳಿದು, ಹಾಗೇ ನಾನು ಹಿಂದಕ್ಕೆ ತಿರುಗಿದೆನು. ಆ ಹಂದಿಯಂಥ ಹಾರುವನು ನನಗೆ ಒಮ್ಮೆ ''ಕರಿಯ ಹೆಗ್ಗಣ'ವೆಂದು ಅಂದು ನಾಲ್ಕು ಮಂದಿಯಲ್ಲಿ ಚೇಷ್ಟೆ ಮಾಡಿದ್ದನು. ಅದರ ಸೇಡನ್ನು ತೀರಿಸಿಕೊಂಡೆನು. ಇರಲಿ, ನೀವು ಸರಿ ರಾತ್ರಿಯಲ್ಲಿ ಯಾವ ಕಡೆಗೆ ಹೊರಟಿರಿ?

ಮೃಣಾ—ನಿನಗೆ ಮನೆ-ಮಾರು ಇರಬಹುದಲ್ಲವೆ?

ಗಿರಿಜೆ—ಇರುತ್ತದೆ. ನನ್ನ ಮನೆಯೆಂದರೆ ಒಂದು ಮುರಕ ಗುಡಿಸಲು.

ಮೃಣಾ—ನಿನ್ನ ಮನೆಯಲ್ಲಿ ಯಾರು ಯಾರು ಇದ್ದಾರೆ?

ಗಿರಿಜೆ—ಮುಪ್ಪಿನ ಮುದುಕಿಯಾದ ನಮ್ಮ ಅಮ್ಮನೊಬ್ಬಳು ಇದ್ದಾಳೆ.

ಮೃಣಾ—ನಡೆ ಹಾಗಾದರೆ, ನಿನ್ನ ಮನೆಗೇ ಹೋಗೋಣ.

ಗಿರಿಜೆ—ಅವ್ವನವರು ನಡೆಯಬೇಕು, ಮನೆಯು ತಮ್ಮದೇ ಇರುತ್ತದೆ.

ಹೀಗೆ ಮಾತಾಡುತ್ತ ಇಬ್ಬರೂ ಹೊರಟರು. ಹಾದಿಯಲ್ಲಿ ಗಿರಿಜೆಯು ಮೃಣಾಲಿನಿಯನ್ನು ಕುರಿತು–

ಗಿರಿಜೆ—ಅವ್ವನವರೇ, ಹೇಳಿ ಕೇಳಿ ನಾವು ಬಿಕ್ಕೆ ಬೇಡುವವರು; ನಮ್ಮ ಮನೆಯಲ್ಲಿ ನೀವು ಎಷ್ಟು ದಿವಸ ಇದ್ದೀರಿ?

ಮೃಣಾ—ನಾಳಿಗೇ ನಾನು ಎರಡನೆಯ ಕಡೆಗೆ ಹೋಗುತ್ತೇನೆ.

ಗಿರಿಜೆ—ಎಲ್ಲಿಗೆ? ಮಥುರೆಗೆ ಹೋಗುವಿರೇನು?

ಮೃಣಾ—ಈ ಜನ್ಮದಲ್ಲಿ ನಾನು ಮಥುರೆಗೆ ಎರವಾದೆನೆಂದು ತಿಳಿದುಕೋ.

ಗಿರಿಜೆ—ಹಾಗಾದರೆ, ಎಲ್ಲಿಗೆ ಹೋಗಬೇಕೆಂದು ಮಾಡಿರುತ್ತೀರಿ?

ಮೃಣಾ—ಸುಡುಗಾಡಿಗೆ ಹೋಗುತ್ತೇನೆ. ಅದನ್ನು ತಕ್ಕೊಂಡು ನೀನೇನು ಮಾಡುತ್ತೀ?

ಮುಂದೆ ಗಿರಿಜೆಯು ಏನೂ ಮಾತಾಡಲಿಲ್ಲ, ಸುಮ್ಮನಾಗಿಬಿಟ್ಟಳು. ಇಬ್ಬರೂ ಸುಮ್ಮನೆ ಹಾದಿಯನ್ನು ನಡೆಯಹತ್ತಿದರು. ಕೆಲಹೊತ್ತಿನ ಮೇಲೆ ಮೃಣಾಲಿನಿಯು ಗಿರಿಜೆಗೆ—ಗಿರಿಜೇ, ಏನು ವಿಚಾರಮಾಡುತ್ತಿರುವೆ?

ಗಿರಿಜೆ—ಏನೂ ಇಲ್ಲ, ಸುಡುಗಾಡಿಗೆ ಹೋಗುವ ಮೊದಲು, ಎರಡನೆಯದೊಂದು ಸ್ಥಳಕ್ಕೆ ಹೋಗಿ ಬಂದಿದ್ದರೆ–

ಮೃಣಾ–ಗಿರಿಜೇ, ಎಲ್ಲಿಗೆ ಹೋಗಬೇಕೆನ್ನುತ್ತೀ?

ಗಿರಿಜೆ—ನವದ್ವೀಪಕ್ಕೆ.

ಮೃಣಾ—ಗಿರಿಜೇ, ನೀನು ಯಾವಳೋ ಒಬ್ಬ ಅಂತರ್ಯಾಮಿಯಾದ ದೇವಿಯಾಗಿರುತ್ತೀ. ನನ್ನ ಮನಸ್ಸಿನೊಳಗಿನ ಮಾತನ್ನು ನಿನ್ನ ಮುಂದೆ ಯಾಕೆ ಬಚ್ಚಿಡಲಿ? ನಾಳೆ ಬೆಳಗಿನಲ್ಲಿಯೇ ನವದ್ವೀಪಕ್ಕೆ ಹೋಗಬೇಕೆಂದು ನಿಶ್ಚಯಿಸಿರುತ್ತೇನೆ.

ಗಿರಿಜೆ—ಒಬ್ಬರೇ ಹೋಗುತ್ತೀರೇನು?

ಮೃಣಾ—ಹಾಗಾದರೆ ಏನು ಮಾಡಬೇಕು? ಜೋಡಿಗೆ ಯಾರುಬರುವರು?

ಗಿರಿಜೆ—ನಾನು ಬರಲೋ?

ಮೃಣಾ—ಬರುತ್ತಿಯೋ? ನೀನು ಬರುವದು ನಿಶ್ಚಯವೆ?

ಗಿರಿಜೆ—ಸಂತೋಷದಿಂದ ಬರುತ್ತೇನೆ. ನಮಗೇನರಿ? ಹೊಟ್ಟೆತುಂಬಿದತ್ತ ಹೋದ ರಾಯಿತು. ನಮ್ಮ ಮನೆ-ಮಾರು ಹೆಗಲಮೇಲೆ. ರಾಜಧಾನಿಯಲ್ಲಿ ಭಿಕ್ಷೆಯು ಬೇಕಾದಷ್ಟು

ಸಿಗುವದು. ಬಾರದೇನು ಮಾಡಲಿ?

ಈ ಮೇರೆಗೆ ಸಂಭಾಷಣವಾದ ಬಳಿಕ ಅವರಿಬ್ಬರು ನವದ್ವೀಪದ ಹಾದಿಯನ್ನು ಹಿಡಿದರು. ಮೃಣಾಲಿನಿಯ ಮನಸ್ಸಿಗೆ ಸಮಾಧಾನವಿದ್ದಿಲ್ಲ. ತಾನು ಹೃಷಿಕೇಶ ಬ್ರಾಹ್ಮಣನ ಮನೆಯೊಳಗಿಂದ ಹೊರಟು ಬಂದದ್ದಕ್ಕಾಗಿ, ಜನರು ಏನು ಅಪವಾದ ಹೊರಿಸುವರೋ, ಎಂದು ಆಕೆಯು ಚಿಂತಿಸುವಳು. ತಾನು ನವದ್ವೀಪಕ್ಕೆ ಹೋಗಿ, ಗಿರಿಜೆಯ ಮುಖಾಂತರ ತನ್ನ ಪವಿತ್ರತೆಯನ್ನು ಸಿದ್ಧಮಾಡುವಾಗ ಹೇಮಚಂದ್ರನ ಮನಸ್ಸು ಸ್ವಚ್ಛವಾಗದಿದ್ದರೆ, ತನ್ನ ಗತಿ ಏನಾಗುವದೋ ಎಂದು ದುಃಖಿಸುವಳು. ವ್ಯೋಮಕೇಶನಂಥ ನೀಚ ಬ್ರಾಹ್ಮಣನ ಕೈಯೊಳಗಿಂದ ಪಾರಾದ ಆಕೆಯು ಸರ್ವಸಾಕ್ಷಿಯಾದ ಪರಮೇಶ್ವರನು, ಮುಂದೆ ಎಂದಾದರೂ ಹೇಮ ಚಂದ್ರನನ್ನು ಕೂಡಿಸಿಯಾನೆಂದು ಕಲ್ಪಿಸಿ ಆನಂದಪಡುವಳು. ಅತ್ತ ತಂದೆಯ ಮನೆಯು ಅಂತರಿಸಿತು. ಇತ್ತ ಹೃಷೀಕೇಶ ಬ್ರಾಹ್ಮಣನ ಆಶ್ರಯವೂ ತಪ್ಪಿತು. ಹೇಮಚಂದ್ರನ ಭೆಟ್ಟಿಯಂತೂ ಒಂದು ವರ್ಷದವರೆಗೆ ಆಗುವಂತಿಲ್ಲ. ಇವೆಲ್ಲ ವಿಚಾರಗಳು ಮನಸ್ಸಿನಲ್ಲಿ ಬಂದಕೂಡಲೆ, ಆಕೆಯ ಎದೆಯೊಡೆದು ನೀರಾಗುವದು. ಸ್ವಚ್ಛಂದ ವೃತ್ತಿಯ ಗಿರಿಜೆಯ ನಿರ್ಮಲ ಮನಸ್ಸಿನ ಮೇಲೆಯೂ ಮೃಣಾಲಿನಿಯ ಈ ದುಃಸ್ಥಿತಿಯ ಪರಿಣಾಮವಾಗಿ, ಆಕೆಯ ಮನಸ್ಸು ಆಗಾಗ್ಗೆ ವ್ಯಾಕುಲವಾಗುತ್ತಿತ್ತು. ಈ ಸ್ಥಿತಿಯಲ್ಲಿ ಅವರು ಮಾರ್ಗವನ್ನು ಕ್ರಮಿಸುತ್ತ ಗಂಗಾತೀರಕ್ಕೆ ತಲುಪಿದರು.

ಅಷ್ಟು ಹೊತ್ತಿಗೆ ಹೊತ್ತು ಮುಳುಗಿತು. ಎಲ್ಲ ಸೃಷ್ಟಿಗೆ ಸೌಂದರ್ಯವನ್ನುಂಟುಮಾಡುವ ಸೂರ್ಯನು ಅದೇ ಅಸ್ತಂಗತನಾದುದರಿಂದ ಕತ್ತಲೆಯು ಮುಚ್ಚುಹಾಕಹತ್ತಿತು. ಆಗ ಭಾಗೀರಥಿಯೊಳಗಿನ ನಾವೆಯಲ್ಲಿ ಮೃಣಾಲಿನಿ—ಗಿರಿಜೆಯರು ಕುಳಿತುಕೊಂಡು ಜಲ ಪರ್ಯಟನ ಮಾಡಹತ್ತಿದರು. ಗಿರಿಜೆಯು ಮೃಣಾಲಿನಿಯನ್ನು ಕುರಿತು—ನಡೆಯಿರಿ, ಈವೊತ್ತಿನ ಒಂದು ದಿನವಂತು ಪಾರಾಯಿತು. ಅನ್ನಲು, ಮೃಣಾಲಿನಿಯು ಯಾವ ಮಾತನ್ನೂ ಆಡಲಿಲ್ಲ. ಆಗ ಗಿರಿಜೆಯು ಮತ್ತೆ ಮೃಣಾಲಿನಿಗೆ, ನಾಳಿನ ದಿವಸವೂ ಪಾರಾಗುವದು, ನಾಡದದ ದಿವಸವೂ ಪಾರಾಗುವದು. ಈ ಎಲ್ಲ ಕೆಟ್ಟ ದಿವಸಗಳೂ ದೇವರ ದಯದಿಂದ ಹೋಗಬಹುದು. ಅನ್ನಲು, ಅದಕ್ಕೂ ಮೃಣಾಲಿನಿಯು ಯಾವ ಉತ್ತರವನ್ನೂ ಕೊಡಲಿಲ್ಲ. ಆಕೆಯು ಆಕಾಶದ ಕಡೆಗೆ ನೋಡಿ, ಒಂದು ನಿಟ್ಟುಸಿರು ಮಾತ್ರ ಬಿಟ್ಟಳು. ಮೃಣಾಲಿನಿಯ ಈ ಖಿನ್ನವಾದ ಮುದ್ರೆಯನ್ನು ನೋಡಿ ಗಿರಿಜೆಯು, ಅವ್ವನವರೇ, ಇಡಿಯ ದಿವಸ ಹೀಗೆ ವಿಚಾರ ಮಗ್ನರಾಗಿದ್ದರೆ ಗತಿಯೇನು? ಹೀಗೆ ಯಾವಾಗಲೂ ಚಿಂತೆಮಾಡುತ್ತ ಕುಳಿತುಕೊಳ್ಳುವದನ್ನು ನೋಡುವದು ನನ್ನಿಂದಾಗದು. ನದಿಯಾ ರಾಜಧಾನಿಗೆ ಹೋಗುವದು ನಿಮ್ಮ ಮನಸ್ಸಿಗೆ ಬಾರದಿದ್ದರೆ ತಿರುಗಿರಿ; ಇಲ್ಲಿಂದಲೇ ಹಿಂದಕ್ಕೆ ಹೋಗೋಣ, ಅಂದಳು. ಅದಕ್ಕೆ ಮೃಣಾಲಿನಿಯು—

ಮೃಣಾ(ಶಾಂತಸ್ವರದಿಂದ)—ಇನ್ನೆಲ್ಲಿಗೆ ಹೋಗಬೇಕು?

ಗಿರಿಜೆ—ನಡೆಯಿರಿ, ಹೃಷೀಕೇಶ ಬ್ರಾಹ್ಮಣನ ಮನೆಗೇ ಹೋಗೋಣ?

ಮೃಣಾ—ಅದಕ್ಕಿಂತ ಈಗ ಗಂಗಾನದಿಯಲ್ಲಿ ಹಾರಿಕೊಂಡು ಪ್ರಾಣ ಕೊಡುವದೇನು ಕೆಡಕು?

ಗಿರಿಜೆ—ಹಾಗಾದರೆ ಮಥುರೆಗೆ ನಡೆಯಿರಿ ಹೋಗೋಣ.

ಮೃಣಾ—ಗಿರಿಜೇ, ಮಥುರೆಯ ಮಾತನ್ನು ನಾನು ನಿನಗೆ ಮೊದಲೇ ಹೇಳಿಬಿಟ್ಟಿದ್ದೇನೆ. ಈ ಜನ್ಮದಲ್ಲೇನು ನಾನು ಮಥುರೆಯನ್ನು ಕಾಣುವದಿಲ್ಲ. ಕುಟಿಲ ಸ್ತ್ರೀಯಂತೆ ರಾತ್ರಿ ಯಾರಿಗೂ ಹೇಳದೆ ಕೇಳದೆ ತಂದೆಯ ಮನೆಯಿಂದ ಹೊರಬಿದ್ದು ಬಂದಿದ್ದ ನಾನು, ತಿರುಗಿ ಅಲ್ಲಿಗೆ ಯಾವ ಮೋರೆಯಿಂದ ಹೋಗಲಿ?

ಗಿರಿಜೆ—ನೀವಾಗಿ ತಂದೆಯ ಮನೆಯಿಂದ ಹೊರಬಿದ್ದಿರುವದಿಲ್ಲ. ಅದಕ್ಕೆಲ್ಲ ಮಾಧವಾಚಾರ್ಯನ ತಂತ್ರವು ಕಾರಣವು. ಮೇಲಾಗಿ ಕೆಟ್ಟ ಉದ್ದೇಶದಿಂದಲೂ ತಂದೆಯ ಮನೆಯಿಂದ ಹೊರಬಿದ್ದು ಬಂದಿರುವದಿಲ್ಲ. ಅಂದಬಳಿಕ ನಿಮ್ಮ ತಂದೆಯ ಮನೆಗೆ ಹೋಗಲಿಕ್ಕೆ ಪ್ರತಿಬಂಧವೇನು?

ಮೃಣಾ—ಪ್ರತಿಬಂಧವಿಲ್ಲ; ಆದರೆ ಗಿರಿಜೇ, ಅದನ್ನು ನಿಜವೆಂದು ಯಾರು ತಿಳಿಯುವರು? ಜನರು ಕೆಟ್ಟ ಕಲ್ಪನೆ ಮಾಡುವದೇ ನಿಶ್ಚಯವು. ಮೊದಲು ತಂದೆಯ ಮನೆಯಲ್ಲಿ ಎಲ್ಲರಿಗೂ ಪ್ರೀಯಳಾಗಿದ್ದು, ಎಲ್ಲರ ಆದರಕ್ಕೂ ಪಾತ್ರಳಾಗಿದ್ದ ನಾನು ಅದೇ ತಂದೆಯ ಮನೆಯಲ್ಲಿ ಜನರ ಬೇಸರಕ್ಕೂ, ತಿರಸ್ಕಾರಕ್ಕೂ ಗುರಿಯಾಗಲಿಕ್ಕೆ ಹೋಗೆಂದು ನೀನು ನನಗೆ ಹೇಳುತ್ತೀಯೇನು?

ಹೀಗೆ ಮಾತಾಡುತ್ತಿರುವಾಗ ಮೃಣಾಲಿನಿಯ ಕಣ್ಣೊಳಗಿಂದ ನೀರುಗಳು ಸುರಿದವು; ಆದರೆ ಕಗ್ಗತ್ತಲೆಯಲ್ಲಿ ಅವು ಗಿರಿಜೆಗೆ ಕಾಣಲಿಲ್ಲ. ಆಗ ಗಿರಿಜೆಯು ಮೃಣಾಲಿನಿಗೆ–

ಗಿರಿಜೆ—ಹಾಗಾದರೆ ಎಲ್ಲಿಗೆ ಹೋಗಬೇಕೆನ್ನುತ್ತೀರಿ?

ಮೃಣಾ—ಹೋಗತಕ್ಕಲ್ಲಿಗೇ ಈಗ ನಾವು ಹೊರಟಿದ್ದೇವೆ.

ಗಿರಿಜೆ—ಹಾಗಿದ್ದರಂತೂ ಆನಂದವೇ ಸರಿ; ಆದರೆ ನೀವು ಹೀಗೆ ಹಗಲೆಲ್ಲ ಚಿಂತೆಮಾಡುತ್ತ ಕುಳಿತುಕೊಳ್ಳಲಿಕ್ಕೇನು ಮಾಡಬೇಕು? ನೀವು ಈ ದಿನ ಇಷ್ಟೇಕೆ ಚಿಂತೆಗೆ ಗುರಿಯಾಗುತ್ತೀರಿ? ಪ್ರಿಯನ ದರ್ಶನಕ್ಕಾಗಿ ಹೊರಟಿರುವ ನೀವು ಆನಂದಪಡಬೇಕಲ್ಲವೆ? ಬಯಸಿದ ಒಡವೆಯು ಸಿಗುವದರಲ್ಲಿ ಪೂರ್ಣ ನಂಬಿಗೆಯಿರುವದಕ್ಕಿಂತ ಬೇರೆ ಆನಂದದ ಸಂಗತಿಯು ಈ ಜಗತ್ತಿನಲ್ಲಿರುವದೆ? ಅಂದಬಳಿಕ ಸುಮ್ಮನೆ ಚಿಂತೆಯಿಂದ ಏಕೆ ಕೊರಗುವಿರಿ?

ಮೃಣಾ—ನದಿಯಾ ರಾಜಧಾನಿಯಲ್ಲಿ ನನಗೆ ಹೇಮಚಂದ್ರನ ದರ್ಶನವಾಗುವದಿಲ್ಲ.

ಗಿರಿಜೆ—ಅದೇಕೆ? ಅವರು ಅಲ್ಲಿ ಇರುವದಿಲ್ಲೇನು?

ಮೃಣಾ—ಅವರೆಲ್ಲಿ ಅಲ್ಲಿ ಇರುವರು; ಆದರೆ ಒಂದು ವರ್ಷದವರೆಗೆ ನನ್ನನ್ನು ಕಾಣಲಿಕ್ಕಿಲ್ಲೆಂಬ ವ್ರತವನ್ನು ಮಾತಾಡಿರುವರಲ್ಲವೆ? ವ್ರತಭಂಗವನ್ನು ಮಾಡಲಿಕ್ಕೆ ಹೇಗೆ ಬರುವದು?

ಈ ಮಾತುಗಳನ್ನು ಕೇಳಿ ಗಿರಿಜೆಯು ಸುಮ್ಮನಾದಳು. ಆಕೆಯು ಮಾತಾಡದಿರುವದನ್ನು ನೋಡಿ ಮೃಣಾಲಿನಿಯು ಮತ್ತೆ—ಗಿರಿಜೇ, ನಾನು ಯಾವ ಮೋರೆಯಿಂದ ಅವರ ಬಳಿಗೆ ಹೋಗಲಿ? ಹೃಷೀಕೇಶ ಬ್ರಾಹ್ಮಣನ ಮೇಲೆ ಸಿಟ್ಟಾಗಿ ಬಂದಿರುವೆನೆಂದು ಅವರಿಗೆ ಹೇಳಲೋ? ನನ್ನ ನಡತೆಯ ವಿಷಯವಾಗಿ ಸಂಶಯಪಟ್ಟು ನನ್ನನ್ನು ಆ ಬ್ರಾಹ್ಮಣನು ಮನೆಬಿಟ್ಟು ಹೊರಗೆ ಹಾಕಿದನೆಂದು ಹೇಳಲೋ? ಅವರಿಗೆ ಹೇಳಲಾದರೂ ಏನು? ಎಂದು ಕೇಳಿದಳು. ಇದನ್ನೆಲ್ಲ ಗಿರಿಜೆಯು ಸ್ವಸ್ಥ ಮನಸ್ಸಿನಿಂದ ಕೇಳುತ್ತಿದ್ದಳು. ಮೃಣಾಲಿನಿಯು ಬಹಳ ಹೊತ್ತು ಮಾತಾಡದೆ ಸುಮ್ಮನಿರುವದನ್ನು ನೋಡಿ ಗಿರಿಜೆಯು–

ಗಿರಿಜೆ—ಹಾಗಾದರೆ ಅಲ್ಲಿ ನೀವು ಒಬ್ಬರನ್ನೊಬ್ಬರು ಕಾಣುವಂತೆ ಇಲ್ಲ!

ಮೃಣಾ—ಇಲ್ಲ.

ಗಿರಿಜೆ—ಅಂದಬಳಿಕ ಇಷ್ಟು ಕಷ್ಟಪಟ್ಟು ಅಲ್ಲಿಗೆ ಏಕೆ ಹೋಗುತ್ತೀರಿ?

ಮೃಣಾ—ಅವರಂತು ನನ್ನನ್ನು ಕಾಣುವಹಾಗಿಲ್ಲ, ನಾನೇ ಯುಕ್ತಿಯಿಂದ ಅವರ ಬಳಿಗೆ ಹೋಗಿ, ಅವರಿಗೆ ಕಾಣದಂತೆ ಅವರನ್ನು ನೋಡಿ ಸಮಾಧಾನಪಡುವೆನು. ಅವರನ್ನು ನೋಡಲಿಕ್ಕಂತೇ ಇಷ್ಟು ಕಷ್ಟಪಟ್ಟು ಹೋಗುತ್ತೇನೆ.

ಗಿರಿಜೆ—(ಸ್ವಲ್ಪ ನಕ್ಕು) ನಿಮ್ಮದೆಲ್ಲ ನೆಟ್ಟಗದೆ. ಹೇಮಚಂದ್ರರವರನ್ನು ನೋಡಿದ ಮಾತ್ರದಿಂದ ನಿಮ್ಮ ಹೊಟ್ಟೆಯು ತುಂಬಬಹುದು. ಅವರ ದರ್ಶನದ ಮುಂದೆ ಹಸಿವೆ ನೀರಡಿಕೆಗಳ ಪರಿವೆಯೂ ನಿಮಗೆ ಉಳಿಯಲಿಕ್ಕಿಲ್ಲ! ಆದರೆ ನನ್ನ ಹೊಟ್ಟೆಯ ಗತಿಯೇನು? ಹೊಟ್ಟೆಯಲ್ಲಿ ಈಗ ಕಾಗೆಯಾಡಹತ್ತಿವೆ. ಮಂದಿಯ ಮೋರೆಯನ್ನು ನೋಡಿದಷ್ಟಕ್ಕೆ ನನ್ನ ಹೊಟ್ಟೆಂತು ತುಂಬುವದಿಲ್ಲ. ಅದು ತುಂಬಲಿಕ್ಕೆ ಏನಾದರೂ ತಿನಿಸು ಹೊಟ್ಟೆಯಲ್ಲಿ ಬೀಳಲೇಬೇಕು. ಆ ತಿನಸು ಹೇಗೆ ಸಿಗಬೇಕು? ಈಗ ನಾನು ನಿಮ್ಮ ದಾಸಿಯಾಗಿದ್ದೇನೆ. ನೀವು ನನ್ನ ಹೊಟ್ಟೆಗೆ ಹಾಕಲೇಬೇಕು!

ಮೃಣಾ—ಗಿರಿಜೇ, ನೀನು ಹೆದರಬೇಡ. ನಿನ್ನನ್ನು ನಾನು ಎಂದೂ ಉಪವಾಸ ಬೀಳಗೊಡುವದಿಲ್ಲ. ಮಥುರೆಯಲ್ಲಿರುವಾಗ ನಾನು ಒಂದೆರಡು ಕಲೆಗಳನ್ನು ಕಲಿತಿದ್ದೇನೆ. ನಾನು ಸುಂದರವಾದ ಮಾಲೆಗಳನ್ನು ಕಟ್ಟುವೆನು, ಕಸೂತಿಗಳನ್ನು ಹಾಕುವೆನು, ಸುಂದರವಾದ ಚಿತ್ರಗಳನ್ನು ಬರೆಯುವೆನು. ಅವನ್ನು ನೀನು ಪೇಟೆಯಲ್ಲಿ ಒಯ್ದು ಮಾರು.

ಗಿರಿಜೆ—ಅವ್ವನವರೇ, ಅವನ್ನು ಮಾರುವಾಗ ''ಅಗಲಿದೆಯಾ ಸಖಿಯೇ। ಮೃದುಭಾಷಿಣಿ॥'' ಎಂಬ ಪದವನ್ನು ಹಾಡಲೇನು?

ಇದನ್ನು ಕೇಳಿ ಮೃಣಾಲಿನಿಯು ಮುಗುಳುನಗೆ ನಗುತ್ತ ಗಿರಿಜೆಯನ್ನು ನಸುಗೋಪದಿಂದ ನೋಡಿದಳು.

ತದೇಕಧ್ಯಾನ

ಮಾಧವಾಚಾರ್ಯರು ಶಿಷ್ಯನಾದ ಹೇಮಚಂದ್ರನನ್ನು ಕರಕೊಂಡು ಲಕ್ಷ್ಮಣಾವತೀ ನಗರಕ್ಕೆ (ನದಿಯಾಪಟ್ಟಣಕ್ಕೆ) ಬಂದರು. ಅಲ್ಲಿ ಗೌಡ ದೇಶಾಧಿಪತಿಯ ದರ್ಶನವು ಆಚಾರ್ಯರಿಗೆ ದರ್ಬಾರದಲ್ಲಿ ಆಯಿತು. ಯವನರು ಗೌಡ ದೇಶದ ಮೇಲೆ ದಂಡೆತ್ತಿ ಬಂದರೆ ಏನು ಮಾಡುವಿರೆಂದು ಆಚಾರ್ಯರು ಅರಸನನ್ನು ಕೇಳಿದರು. ಅದಕ್ಕೆ ವೃದ್ಧನಾದ ಗೌಡೇಶ್ವರನು ಹತಾಶನಾಗಿ, ನನ್ನಿಂದ ಯುದ್ಧಕಾರ್ಯವು ನೀಗುವಹಾಗಿಲ್ಲ, ಮುಂದಿನ ಅಪಮಾನವನ್ನು ಅನುಭವಿಸುವದಕ್ಕಿಂತ ದೇವರು ಕಣ್ಣು ಮುಚ್ಚಿದರೆ ನೆಟ್ಟಗಾಗುವದೆಂದು ಹೇಳಲು, ಅರಸನ ಮಂತ್ರಿಯಾದ ಪಶುಪತಿಯೆಂಬವನು ಆಚಾರ್ಯರಿಗೆ, ಯವನರು ದಂಡೆತ್ತಿ ಬಂದರೆ, ಯುದ್ಧ ಮಾಡಿ ಅವರನ್ನು ಹಿಂದಕ್ಕಟ್ಟುವೆವೆಂತಲೂ, ರಾವುತರು, ತೋಪುಗಳು, ಕಾಲಾಳುಗಳೊಂದಿಗೆ ಯುದ್ಧಕ್ಕೆ ಸಿದ್ಧವಾಗಿರುವೆವೆಂತಲೂ ಹೇಳಿದನು. ಇದಕ್ಕಾಗಿ ಆಚಾರ್ಯರು ಪಶುಪತಿಯನ್ನು ಹೊಗಳಿ—ಮಂತ್ರಿಶ್ರೇಷ್ಠನೇ, ಯೋಗ್ಯತೆಗೆ ಒಪ್ಪುವಂತೆ ಮಾತಾಡಿದೆ. ಮಗಧೇಶ್ವರನ ಪುತ್ರನಾದ ಹೇಮಚಂದ್ರನೆಂಬ ವೀರ ಶಿರೋಮಣಿಯು ತಾನು ಪ್ರವಾಸದಲ್ಲಿರುವಾಗ ತನ್ನ ರಾಜ್ಯವನ್ನು ಯವನರು ಹರಣ ಮಾಡಿದ್ದಕ್ಕಾಗಿ ಅವರ ಸೇಡು ತೀರಿಸಿಕೊಳ್ಳಲಿಕ್ಕೆ ಹವಣಿಸಿ, ಇಲ್ಲಿಗೆ ಬಂದಿದ್ದಾನೆ. ಆತನಿಗೆ ಆಶ್ರಯ ಕೊಟ್ಟರೆ, ಉಭಯರ ಕಲ್ಯಾಣವೂ ಆಗುವದು ಎಂದು ಹೇಳಿದರು. ಅದಕ್ಕೆ ಪಶುಪತಿಯು ಒಪ್ಪಿಕೊಂಡು, ಹೇಮಚಂದ್ರನನ್ನು ಕಂಡು ಎಲ್ಲ ಸಂಗತಿಯನ್ನು ನಿರ್ಧರಿಸುವೆನೆಂದು ಆಚಾರ್ಯರಿಗೆ ಕೇಳಿ, ಹೇಮಚಂದ್ರನಿಗೆ ಇರಲಿಕ್ಕೆ ಗಂಗಾತೀರದಲ್ಲಿರುವ ಮಂದಿರವನ್ನು ತೆರವುಮಾಡಿ ಕೊಡಿರೆಂದು ಸೇವಕರಿಗೆ ಆಜ್ಞಾಪಿಸಿದನು.

ಮಾಧವಾಚಾರ್ಯರ ಅಪ್ಪಣೆಯಂತೆ ಹೇಮಚಂದ್ರನು ಗಂಗಾತೀರದ ಸ್ವಚ್ಛ ಹವೆಯ ಮಂದಿರದಲ್ಲಿ ಇರಹತ್ತಿದನು. ಈ ಮಂದಿರದಲ್ಲಿ ಸ್ವಲ್ಪ ದಿನಗಳಿಂದ ಜನಾರ್ದನನೆಂಬ ಒಬ್ಬ ಬ್ರಾಹ್ಮಣನು ಇರುತ್ತಿದ್ದನು. ದಿನ ಹೋದವನಾದುದರಿಂದ ಆತನ ಶಕ್ತಿಯು ಕ್ಷೀಣವಾಗಿತ್ತು. ಅವಯವಗಳು ಶಿಥಿಲವಾಗಿದ್ದವು. ಅದರಲ್ಲಿ ಕಿವಿಗಳು ತೀರಾ ಹೋಗಿ ಬಿಟ್ಟದ್ದರಿಂದ ಬ್ರಾಹ್ಮಣನ ಬಾಳು ತೀರ ಪರಾಧೀನವಾಗಿತ್ತು. ಆ ಬ್ರಾಹ್ಮಣನು ಸೂರ್ಯ—ಚಂದ್ರರು ಆಡುವ ತನ್ನ ಮುರಕ ಗುಡಿಸಲಲ್ಲಿ ಇರುತ್ತಿದ್ದನು. ಆದರೆ ದುರ್ದೈವದಿಂದ ಅದೂ ಸುಟ್ಟು ಹೋಗಲು, ವೃದ್ಧನೂ, ಅಶಕ್ತನೂ, ಪರಾಧೀನನೂ, ಅಸಹಾಯನೂ ಆದ ಜನಾರ್ದನನು ಗತಿಯಿಲ್ಲದೆ ಬೈಲಲ್ಲಿ ಕುಳಿತುಕೊಂಡನು. ಜನಾರ್ಧನನ ಈ ದುಸ್ಥಿತಿಯನ್ನು ನೋಡಿ ರಾಜ್ಯಾಧಿಕಾರಿಗಳು ಕನಿಕರಪಟ್ಟು, ಎರಡನೆಯ ಕಡೆಗೆ ಅನುಕೂಲವಾಗುವವರೆಗೆ ಕೆಲವು ದಿನ ಆ ಗಂಗಾತೀರದ ರಾಜ ಮಂದಿರದಲ್ಲಿ ಆತನಿಗೆ ಇರಹೇಳಿದನು. ಅದರಂತೆ ಆ ದುಃಖಿತನಾದ ವೃದ್ಧ ಬ್ರಾಹ್ಮಣನು ತನ್ನ ವೃದ್ಧ ಪತ್ನಿಯನ್ನೂ, ಪ್ರಾಯಸ್ಥಳಾದ ಒಬ್ಬ ಮೊಮ್ಮಗಳನ್ನೂ ಕೂಡಿಕೊಂಡು ಕೆಲವು ದಿನಗಳ ಹಿಂದೆ ಆ ರಾಜ ಮಂದಿರದಲ್ಲಿ ಬಂದು ಇರಹತ್ತಿದನು. ರಾಜ ಮಂದಿರವು ಬಹು ದೊಡ್ಡದಿತ್ತು; ಬ್ರಾಹ್ಮಣನ ಬಳಿಕೆಯಲ್ಲಿ ಒಂದೆರಡು ಕೋಣೆಗಳಷ್ಟೇ ಇದ್ದವು; ಆದರೆ

ಯಾವನೋ ಒಬ್ಬ ರಾಜಪುತ್ರನು ಇಲ್ಲಿಗೆ ಬರುವವನಿದ್ದಾನೆಂದು ಕೇಳಿದ ಕೂಡಲೆ, ಆ ಮಾನಿಯಾದ ಬ್ರಾಹ್ಮಣನಿಗೆ ಇನ್ನು ಇಲ್ಲಿ ಇರುವದು ಪ್ರಶಸ್ತವಲ್ಲೆಂದು ತೋರಿದ್ದರಿಂದ ಆತನು ಆ ಮಂದಿರದಿಂದ ಎರಡನೆಯ ಕಡೆಗೆ ಹೋಗುವ ವಿಚಾರದಲ್ಲಿದ್ದನು.

ತಾನು ಬಂದದ್ದರಿಂದ ಅಸಮಾಧಾನಪಟ್ಟು, ಈ ಅನಾಥನಾದ ವೃದ್ಧ ಬ್ರಾಹ್ಮಣನು ಇಲ್ಲಿಂದ ಹೋಗುತ್ತಿದ್ದಾನೆಂದು ಕೇಳಿ ಹೇಮಚಂದ್ರನು ಬಹಳ ಮರುಗಿದನು. ಆತನು ತನ್ನೊಳಗೆ—ಮಂದಿರವು ಇಷ್ಟು ದೊಡ್ಡದಿರಲು, ದುರ್ದೈವಿಯಾದ ಬಡ ಬ್ರಾಹ್ಮಣನನ್ನು ಹೊರಗೆ ಕಳಿಸಿ, ಆತನಿಗೆ ಸುಮ್ಮನೆ ಏಕೆ ತಾಪವನ್ನುಂಟು ಮಾಡಬೇಕು? ನಾವಿಬ್ಬರೂ ಇಲ್ಲಿ ಸುಖವಾಗಿರಬಹುದು, ಎಂದು ಯೋಚಿಸಿ, ತನ್ನ ಸೇವಕನನ್ನು ಕರೆದು—ದಿಗ್ವಿಜಯಾ ಹೋಗು, ಬ್ರಾಹ್ಮಣನಿಗೆ ಇಲ್ಲಿಂದ ಹೋಗಬೇಡೆಂದು ಹೇಳು. ಆತನು ಮೊದಲಿದ್ದಂತೆ ಸುಖವಾಗಿ ಇಲ್ಲಿಯೇ ಇರಲಿ. ಆತನು ಇರುವದರಿಂದ ಯಾವ ಪ್ರಕಾರದ ತೊಂದರೆಯೂ ನನಗೆ ಆಗುವದಿಲ್ಲೆಂದು ತಿಳಿಸು, ಎಂದು ಹೇಳಿದನು. ಅದಕ್ಕೆ ದಿಗ್ವಿಜಯನು ಸ್ವಲ್ಪ ನಕ್ಕು—ದೊರೆಗಳೇ, ಆ ಬ್ರಾಹ್ಮಣನು ನನ್ನಂಥವರ ಮಾತು ಕೇಳುವವನಲ್ಲ, ತಾವೇ ಸಮಕ್ಷ ಹೇಳಲು ಕೇಳಿದರೆ ಕೇಳಬಹುದು, ಎಂದು ಉತ್ತರ ಕೊಟ್ಟನು.

ನಿಜವಾಗಿ ಆ ಬ್ರಾಹ್ಮಣನು ದಿಗ್ವಿಜಯನಂದಂತೆಯೇ ಸಿಕ್ಕವರ ಮಾತು ಕೇಳುವವನಿದ್ದಿಲ್ಲ. ಇಬ್ಬರ ಕಾರಣ ಮಾತ್ರ ಬೇರೆ. ದಿಗ್ವಿಜಯನು ಮೈಗಳ್ಳನಾದುದರಿಂದ ಬ್ರಾಹ್ಮಣನನ್ನು ಕೇಳಲಿಕ್ಕೆ ಹೋಗಲಾರದೆ ಅವನು ನನ್ನ ಮಾತು ಕೇಳುವದಿಲ್ಲವೆಂದು ಹೇಳಿದನು. ಆದರೆ ಬ್ರಾಹ್ಮಣನು ಅಂಥವನಿದ್ದಿಲ್ಲ. ಪಾಪ! ಅವನು ಕಿವುಡನಿದ್ದದ್ದರಿಂದ ಮಂದಿಯ ಮಾತು ಕೇಳುತ್ತಿದ್ದಿಲ್ಲ. ಹೇಮಚಂದ್ರನಿಗೆ ದಿಗ್ವಿಜಯನ ಮಾತು ಅಯೋಗ್ಯವಾಗಿ ತೋರಲಿಲ್ಲ, ಯಾಕಂದರೆ, ತಾನು ಸ್ವತಃ ಹೇಳದೆ ಸೇವಕರಿಂದ ಹೇಳಿಕಳಿಸಿದರೆ, ಮರ್ಯಾದೆಯ ಬ್ರಾಹ್ಮಣನು ಒಂದು ಪಕ್ಷದಲ್ಲಿ ಕೇಳಲಿಕ್ಕಿಲ್ಲೆಂಬ ವಿಚಾರವು ಆತನ ಮನಸ್ಸಿನಲ್ಲಿ ಹೊಳೆಯಿತು. ಆದ್ದರಿಂದ ಆತನು, ಗಂಟು ಗದಡಿಗಳನ್ನು ಕಟ್ಟುತ್ತಿರುವ ಜನಾರ್ದನನ ಬಳಿಗೆ ಹೋಗಿ, ಬಹು ವಿನಯದಿಂದ ನಮಸ್ಕರಿಸಿದನು. ಆಗ ಬ್ರಾಹ್ಮಣನು ಹೇಮಚಂದ್ರನನ್ನು ಆಶೀರ್ವದಿಸಿ, ನೀನು ಯಾರು? ಎಂದು ಕೇಳಿದನು. ಅದಕ್ಕೆ ಹೇಮಚಂದ್ರನು ವಿನಯದಿಂದ, ನಾನು ತಮ್ಮ ಸೇವಕನು ಎಂದು ಹೇಳಲು, ಜನಾರ್ದನನು, ಏನಂದಿ? ನಿನ್ನ ಹೆಸರು ರಾಮಕೃಷ್ಣನೋ ಎಂದು ಕೇಳಿದನು. ಆಗ ಹೇಮಚಂದ್ರನು ಬ್ರಾಹ್ಮಣನ ಕಿವಿಗಳು ಸ್ವಲ್ಪ ಮಂದವೆಂದು ತಿಳಿದು ಗಟ್ಟಿಯಾಗಿ ''ನನ್ನ ಹೆಸರು ರಾಮಕೃಷ್ಣನಲ್ಲ, ಹೇಮಚಂದ್ರನು. ತಮ್ಮ ಚರಣಸೇ......'' ಎಂದು ನುಡಿಯುತ್ತಿರಲು, ಜನಾರ್ಧನನು ನಡುವೇ ಬಾಯಿಹಾಕಿ, ಒಳ್ಳೆಯದೊಳ್ಳೆಯದು. ನನಗೆ ಮೊದಲು ನೆಟ್ಟಗೆ ಕೇಳಲಿಲ್ಲ, ನಿನ್ನ ಹೆಸರು ಹನುಮಾನ್‌ದಾಸನೇನು? ಎಂದು ಕೇಳಿದನು. ಆಗ ಹೇಮಚಂದ್ರನು ತನ್ನೊಳಗೆ, ಈಗ ಹೆಸರು ತಕ್ಕೊಂಡು ಮಾಡುವದೇನು? ಮುಖ್ಯ ಕೆಲಸವಾದರಾಯಿತು. ಎಂದು ಬಗೆದು, ಮತ್ತೆ ಉಚ್ಚ ಸ್ವರದಿಂದ, ಈ ಮಂದಿರವು ನವದ್ವೀಪದ ಅರಸನದಿದ್ದು, ನಾನು ಅತಿಥಿಯಾಗಿ ಇಲ್ಲಿ ಇರಲಿಕ್ಕೆ ಬಂದಿದ್ದೇನೆ. ನೀವು ಇಲ್ಲಿಂದ ಎರಡನೆಯ ಕಡೆಗೆ ಹೋಗುವವರಿದ್ದೀ

ರೆಂದು ಕೇಳುತ್ತೇನೆ. ಎಂದು ಮಾತಾಡುತ್ತಿರಲು, ಆ ವೃದ್ಧ ಬ್ರಾಹ್ಮಣನು ನಡುವೇ ಬಾಯಿಹಾಕಿ ಗಂಭೀರ ಸ್ವರದಿಂದ, ಇಲ್ಲ ಇನ್ನೂ ಗಂಗಾಸ್ನಾನಕ್ಕೆ ಹೋಗಿಲ್ಲ, ಈಗ ಹೊರಡುವ ಸಿದ್ಧತೆಯಲ್ಲಿ ತೊಡಗಿರುತ್ತೇನೆ ಎಂದು ಹೇಳಿದನು.

ಬ್ರಾಹ್ಮಣನ ಈ ಮಾತುಗಲನ್ನು ಕೇಳಿ, ಹೇಮಚಂದ್ರನು ತನ್ನಲ್ಲಿ ಶಕ್ತಿಯಿದ್ದಷ್ಟು ಒದರಿ, ತಾವು ಗಂಗಾಸ್ನಾನಕ್ಕೆ ಸಾವಕಾಶವಾಗಿ ಹೋಗಬಹುದು. ಅದನ್ನು ನಾನು ಕೇಳುವದಿಲ್ಲ, ನಾನೊಂದು ಮಾತಿಗಾಗಿ ತಮ್ಮನ್ನು ಬೇಡಿಕೊಳ್ಳುತ್ತೇನೆ. ತಾವು ಇಲ್ಲಿಂದ ಎರಡನೆಯ ಕಡೆಗೆ ಹೋಗಬಾರದು. ಎಂದು ನುಡಿದದ್ದಲ್ಲದೆ, ಹೋಗಬೇಡಿರೆಂದು ಕೈಯಿಂದಲೂ ಸನ್ನೆ ಮಾಡಿ ತೋರಿಸಿದನು. ಆ ಬ್ರಾಹ್ಮಣನು ಪ್ರಸನ್ನ ಮುದ್ರೆಯಿಂದ—ಮನೆಯಲ್ಲಿ ಉಣ್ಣಬೇಡವೆ? ಅದೇಕಪ್ಪಾ?

ನಿನ್ನ ಮನೆಯಲ್ಲಿ ಶ್ರಾದ್ಧವಿದ್ದಂತೆ ಕಾಣುತ್ತದೆ? ಒಳ್ಳೇದು, ನಾನು ಬರುತ್ತೇನೆ, ಬರುತ್ತೇನೆ! ಆ !

ಬ್ರಾಹ್ಮಣನ ಈ ಮಾತುಗಳನ್ನು ಕೇಳಿ ಹೇಮಚಂದ್ರನು ನಕ್ಕು—ಯಾಕಾಗಲೊಲ್ಲದು, ನೀವು ಊಟಕ್ಕೂ ಬರಬೇಕು. ಈಗ ಹೇಳಿಕೊಳ್ಳುವದೇನಂದರೆ, ನೀವು ಈ ಮಂದಿರದಲ್ಲಿ ಇಲ್ಲಿಯವರೆಗೆ ಇರುತ್ತಬಂದಂತೆ ಈಗಾದರೂ ಇರಬೇಕು. ಮಂದಿರವನ್ನು ಬಿಟ್ಟು ಎರಡನೆಯ ಕಡೆಗೆ ಹೋಗುವ ಕಾರಣವಿಲ್ಲ, ಎನ್ನಲು, ಬ್ರಾಹ್ಮಣನು ಒಳ್ಳೇದು, ಆದರೆ ದಕ್ಷಿಣೆ! ಇರಲಿ, ನೀವು ತಿಳಿದವರೇ ಇದ್ದೀರಿ. ನಿಮ್ಮ ಮನೆಯಲ್ಲಿ ಅದೆ?

ಈ ಮಾತನ್ನು ಕೇಳಿ ಹೇಮಚಂದ್ರನು ಹತಾಶಮುದ್ರೆಯಿಂದ ಹೊರಟು ಹೋಗುತ್ತಿರಲು, ಯಾರೋ ಹಿಂದಿನಿಂದ ಆತನ ಧೋತರದ ಸೆರಗನ್ನು ಹಿಡಿದು ಜಗ್ಗಿದರು. ಕೂಡಲೆ ಹೇಮಚಂದ್ರನು ಹಿಂದಿರುಗಿ ನೋಡುತ್ತಾನೆ, ಪ್ರಸನ್ನಮಯಿಯಾದ ದೇವಿಯ ಮೂರ್ತಿಯು ನಿಂತಿದೆ! ಮತ್ತೊಮ್ಮೆ ನೋಡುತ್ತಾನೆ, ಆ ಮೂರ್ತಿಯು ಸಜೀವವಾಗಿರುತ್ತದೆ, ಮತ್ತೂ ನೋಡುತ್ತಾನೆ, ನಿಂತದ್ದು ಮೂರ್ತಿಯಾಗಿರದೆ, ಬ್ರಹ್ಮದೇವನು ತನ್ನ ಕೌಶಲ್ಯವನ್ನೆಲ್ಲ ವೆಚ್ಚಮಾಡಿ ನಿರ್ಮಿಸಿದ ಬಾಲಿಕೆಯು—ಅಲ್ಲ ಅಲ್ಲ! ನವಯೌವನ ಸಂಪನ್ನೆಯಾದ ತರುಣಿಯು ಹಿಂದೆ ನಿಂತಿದ್ದಾಳೆ!!! ಆಕೆಯು ಬಾಲಿಕೆಯೋ, ತರುಣಿಯೋ ಎಂಬದರ ನಿಶ್ಚಯವೇ ಹೇಮಚಂದ್ರನಿಗೆ ಬಹಳ ಹೊತ್ತಿನವರೆಗೆ ಆಗಲೊಲ್ಲದು. ಅವನಾದರೂ ಒಂದು ಕಲ್ಲು ಗೊಂಬೆಯಂತೆ ನಿಂತಲ್ಲಿ ಉಲುಕಾಡದೆ ನಿಂತು ಬಿಟ್ಟನು. ಅಷ್ಟರಲ್ಲಿ ಮಧುರವಾದ ವೀಣೆಯ ನಾದವನ್ನು ನಾಚಿಸುವ ಮಂಜುಳ ಸ್ವರದಿಂದ ಆ ಸುಂದರಿಯು ಹೇಮಚಂದ್ರನನ್ನು ಕುರಿತು—ನೀವು ಏನು ಕೇಳುತ್ತಿದ್ದಿರಿ? ಅವರಿಗೆ ಕಿವಿಯಿಲ್ಲ, ನಿಮ್ಮ ಮಾತು ಅವರಿಗೆ ಹೇಗೆ ತಿಳಿದಾವು ನೀವೇ ಹೇಳಿರಿ?

ಹೇಮಚಂದ್ರ—ಅದರ ಅನುಭವವು ಒಳಿತಾಗಿ ಬಂದಿತು! ಇರಲಿ, ತಾವು ಯಾರು? ತಮ್ಮ ಹೆಸರೇನು?

—ನನ್ನ ಹೆಸರು ಮನೋರಮೆ.

ಹೇಮ—ಇವರು ನಿಮಗೇನು ಆಗಬೇಕು?

ಮನೋರಮೆ—ಇವರು ನಮ್ಮ ಅಜ್ಜಂದಿರು. ನೀವು ಅವರಿಗೇನು ಕೇಳುತ್ತಿದ್ದಿರಿ?

ಹೇಮ—ಇವರು ಈ ಮಂದಿರವನ್ನು ಬಿಟ್ಟು ಹೋಗುತ್ತಾರೆಂದು ಕೇಳಿ, ಹಾಗೆ ಮಾಡಬಾರದೆಂದು ಹೇಳಲಿಕ್ಕೆ ಬಂದಿದ್ದೆನು.

ಮನೋರಮೆ—ಆದರೆ, ಈ ಮಂದಿರಕ್ಕೇನೋ ಒಬ್ಬ ರಾಜಪುತ್ರನು ಬರುವವನಿದ್ದಾನಂತೆ, ಆತನು ನಮ್ಮನ್ನು ಇಲ್ಲಿ ಏಕೆ ಇರಗೊಟ್ಟಾನು?

ಹೇಮ—ನಾನೇ ಆ ರಾಜಪುತ್ರನು. ನಾನು ನಿಮಗೆ ಹೇಳಿಕೊಳ್ಳುವದೇನಂದರೆ, ನೀವು ಇಲ್ಲಿಂದ ಬೇರೆ ಕಡೆಗೆ ಹೋಗಬಾರದು.

ಮನೋರಮೆ—ಅದೇಕೆ?

ಈ "ಅದೇಕೆ" ಎಂಬ ಪ್ರಶ್ನದ ಉತ್ತರವನ್ನು ಕೊಡಲಿಕ್ಕೆ ಹೇಮಚಂದ್ರನಿಗೆ ಬರಲಿಲ್ಲ. ಅವನಿಗೇನೂ ತೋಚಲೊಲ್ಲದು, ಕಡೆಗೆ ಬಹಳ ಹೊತ್ತಿನ ಮೇಲೆ ಹೇಮಚಂದ್ರನು—

ಹೇಮ—ಯಾಕೆಂಬದರ ವಿಚಾರವನ್ನು ನೀವೇ ಮಾಡಿರಿ. ಈದಿನ ನಿಮ್ಮ ಅಣ್ಣನಾಗಲಿ, ತಮ್ಮನಾಗಲಿ ಯಾರಾದರೂ ಬಂದಿದ್ದರೆ, ನಿಮ್ಮನ್ನು ಹೊರಗೆ ಹಾಕುತ್ತಿದ್ದರೋ?

ಮನೋರಮೆ—ಹಾಗಾದರೆ ನೀನು ನನ್ನ ಅಣ್ಣನೇನು!

ಹೇಮ—ಹೌದು ಮನೋರಮೇ, ಇಂದಿನಿಂದ ನೀನು ನನ್ನನ್ನು ಒಡಹುಟ್ಟಿದ ಅಣ್ಣನೆಂತಲೇ ತಿಳಿದುಕೋ, ಇನ್ನಾದರೂ ಆಯಿತೇ?

ಮನೋ—ಅಣ್ಣಾ ಬಡವೆಯಾದ ಈ ನಿನ್ನ ತಂಗಿಯನ್ನು ನೀನು ಎಂದೂ ತಿರಸ್ಕರಿಸುವದಿಲ್ಲವಷ್ಟೇ?

ಸರಳ ಸ್ವಭಾವದ ಬಾಲಿಕೆಯ ಸರಳವಾದ ಈ ಭಾಷಣವನ್ನು ಕೇಳಿ, ಹೇಮಚಂದ್ರನು ಮನಸ್ಸಿನಲ್ಲಿ, ಅಹಹ! ಏನು ಈಕೆಯ ಈ ಅಪ್ರತಿಮವಾದ ಲಾವಣ್ಯವು! ಎಷ್ಟು ನಿಷ್ಕಪಟವಾದ ವೃತ್ತಿಯು! ಎಂಥ ಅಕೃತ್ರಿಮವಾದ ಪ್ರೇಮವು! ಎಂದು ಮನಸ್ಸಿನಲ್ಲಿ ಅಂದುಕೊಂಡು—

ಹೇಮ—ತಂಗೀ, ಏಕೆ ನಾನು ನಿನ್ನ ತಿರಸ್ಕಾರವನ್ನು ಮಾಡೇನು ಹೇಳು?

ಮನೋ—ನನ್ನಿಂದ ಏನಾದರೂ ತಪ್ಪು ಆದರೆ?

ಹೇಮ—ತಪ್ಪು ಕಂಡು ಯಾರು ಸುಮ್ಮನಿದ್ದಾರು?

ಈ ಮಾತುಗಳನ್ನು ಕೇಳಿ ಮನೋರಮೆಯು ಖಿನ್ನವಾದ ಮುದ್ರೆಯಿಂದ ಸುಮ್ಮನೆ ನಿಂತುಕೊಂಡಳು. ಆ ಮೇಲೆ ಆಕೆಯು ಹೇಮಚಂದ್ರನನ್ನು ಕುರಿತು—

ಮನೋ—ನಾನು ಎಂದೂ ಅಣ್ಣನನ್ನು ಕಂಡಾಕೆಯಲ್ಲ, ಅಣ್ಣನ ಮುಂದೆ ನಾಚಬೇಕೇನು?

ಹೇಮ—ಅದೇನು ನಾಚುವ ಕಾರಣವಿಲ್ಲ.

ಮನೋ—ಹಾಗಾದರೆ, ನಾನು ನಿನಗೆ ನಾಚುವದಿಲ್ಲ. ಏನೋ ಅಣ್ಣಾ ನೀನು ನನಗೆ ನಾಚುವೆಯೇನು?

ಇದನ್ನು ಕೇಳಿ ಹೇಮಚಂದ್ರನು ನಕ್ಕನು, ಏನೂ ಮಾತಾಡಲಿಲ್ಲ. ಆತನು ಮನೋರಮೆಗೆ, ನನ್ನ ವಿನಂತಿಯು ನಿಮ್ಮ ಅಜ್ಜನಿಗೆ ತಿಳಿಯಲಿಲ್ಲ, ಅದಕ್ಕೇನು ಉಪಾಯ ಮಾಡಬೇಕು? ಅನ್ನಲು, ಮನೋರಮೆಯು ಅವರಿಗೆ ನಾನು ಹೇಳುವೆನು. ಎಂದು ನುಡಿದು, ಜನಾರ್ಧನನ ಕಿವಿಗೆ ಬಾಯಿಹಚ್ಚಿ, ಮಧುರ ಸ್ವರದಿಂದ ಏನೋ ಹೇಳಿದಳು. ತಾನು ಒದರಿ ಒದರಿ ಹೇಳಿದರೂ ಕೇಳಿಸದಿರಲು, ಮನೋರಮೆಯು ಮೆಲ್ಲಗೆ ಹೇಳಿದ್ದು ಜನಾರ್ಧನನಿಗೆ ಕೇಳಿಸಿದ್ದನ್ನು ನೋಡಿ, ಹೇಮಚಂದ್ರನು ಸೋಜಿಗಪಟ್ಟನು. ಮನೋರಮೆಯು ಹೇಳಿದ ಮಾತುಗಳನ್ನು ಕೇಳಿ ಜನಾರ್ಧನನು ಸಂತೋಷಪಟ್ಟು, ಹೇಮಚಂದ್ರನನ್ನು ಆಶೀರ್ವದಿಸಿದನು, ಆ ಮೇಲೆ ಆತನು ಮನೋರಮೆಗೆ, ಮನೋರಮೆ, ನೀನು ನಿಮ್ಮ ಅಮ್ಮನಿಗೆ ಇಂದು ನಿನ್ನ ದೈವವು ತೆರೆಯಿತೆಂದು ಹೇಳು. ರಾಜಪುತ್ರನು ಮೊಮ್ಮಗನಾಗಿದ್ದಾನೆ, ಕೇಳುವದೇನು? ಬೇಗನೆ ಹೊರಗೆ ಬಂದು ಆತನನ್ನು ಆಶೀರ್ವದಿಸೆಂದು ಆಕೆಗೆ ಹೇಳು. ಎಂದು ಹೇಳಿ ಸ್ವತಃ ಗಟ್ಟಿಯಾಗಿ ಕೂಗಿ ಕೂಗಿ ಹೆಂಡತಿಯನ್ನು ಕರೆಯಹತ್ತಿದನು. ಈ ಕಾಲಕ್ಕೆ ಆ ಬಡವೆಯು ಯಾವದೋ ಒಂದು ಮನೆ ಕೆಲಸದಲ್ಲಿ ತೊಡಗಿದ್ದರಿಂದ ಗಂಡನ ಕೂಗೋಣವು ಆಕೆಗೆ ಕೇಳಿಸಲಿಲ್ಲ. ಇದನ್ನು ನೋಡಿ ಜನಾರ್ಧನನು ಅಸಂತುಷ್ಟನಾಗಿ, ಮುದುಕಿಯಲ್ಲಿ ಇದೊಂದು ದೊಡ್ಡ ದೋಷವಿದೆ, ಆಕೆಯ ಕಿವಿ ಸ್ವಲ್ಪ ಮಂದ, ಎಂದನು.

ಹೇಮಚಂದ್ರನು ಮನೋರಮೆಯ ಒಪ್ಪಿಗೆಯನ್ನು ಪಡೆದು, ತನ್ನ ಸ್ಥಳಕ್ಕೆ ಹೋದನು. ಅವನ ಮನಸ್ಸಿನಲ್ಲಿ ಸ್ವಾಸ್ಥವಿದ್ದಿಲ್ಲ. ಔದಾಸೀನ್ಯದಿಂದ ಅವನು ಕಾಲಹರಣ ಮಾಡುತ್ತಿದ್ದನು. ಸರಳವೂ, ನಿಷ್ಕಪಟವೂ ಆದ ಮನೋರಮೆಯ ಭಗಿನೀ ಪ್ರೇಮದಿಂದ ಹೇಮಚಂದ್ರನಿಗೆ ನಡು ನಡುವೆ ಅಲ್ಪ ಸ್ವಲ್ಪ ವಿರಾಮವಾಗುತ್ತಿದ್ದದ್ದು ನಿಜವು; ಆದರೆ ಆ ವಿರಾಮವು ಬಹು ದಿವಸ ನಿಲ್ಲಲಿಲ್ಲ. ಮನೋರಮೆಯು ಹೇಮಚಂದ್ರನೊಡನೆ ಒಮ್ಮೊಮ್ಮೆ ನಿರ್ಮಲ ಮನಸ್ಸಿನಿಂದ ಮೂರು ಮೂರು ತಾಸು ಹಿತಾಹಿತದ ಮಾತುಗಳನ್ನು ಆಡುತ್ತ ಕುಳಿತುಕೊಳ್ಳುವಳು. ತನ್ನ ಸ್ನೇಹ ಪೂರ್ಣವಾದ ಮಧುರ ಭಾಷಣದಿಂದ ಆತನ ನೊಂದ ಮನಸ್ಸನ್ನು ಶಾಂತಗೊಳಿಸುತ್ತಿದ್ದಳು; ಆದರೆ ಒಮ್ಮೊಮ್ಮೆ ಆಕೆಯು ಇದಕ್ಕೆ ವಿರುದ್ಧವಾದ ವೃತ್ತಿಯನ್ನು ತೋರಿಸುತ್ತಿದ್ದಳು. ಹೇಮಚಂದ್ರನು ಎಷ್ಟು ಹೇಳಿಕೊಂಡರೂ, ಎಷ್ಟು ಉತ್ಸುಕತೆಯನ್ನು ತೋರಿಸಿದರೂ ಆತನ ಸಂಗಡ ಪಿಟ್ಟೆಂದು ಮಾತಾಡುತ್ತಿದ್ದಿಲ್ಲ. ಆತನ ಪ್ರಾರ್ಥನೆಯನ್ನೂ ಆರ್ಜವ ವೃತ್ತಿಯನ್ನೂ ಎಷ್ಟು ಮಾತ್ರವೂ ಲೆಕ್ಕಿಸುತ್ತಿದ್ದಿಲ್ಲ. ಈ ಚಮತ್ಕಾರದ ವೃತ್ತಿಯ ಅನುಭವವು ಹೇಮಚಂದ್ರನಿಗೆ ನಡು ನಡುವೆ ಬರಹತ್ತಿತು. ಒಮ್ಮೊಮ್ಮೆಯಂತು ಆಕೆಯು ಕಣ್ಣಿಗೆ ಕಾಣದಂತೆಯೇ ಆಗುತ್ತಿದ್ದಳು. ತಾಸು ತಾಸು ಎರಡೆರಡು ತಾಸುಗಳವರೆಗೆ ಆಕೆಯ ಗೊತ್ತೇ ಆಗುತ್ತಿದ್ದಿಲ್ಲ. ಮನೋರಮೆಯು ಹೀಗೆ ಗುಪ್ತರೀತಿಯಿಂದ ಹೋಗುವದಾದರೂ ಎಲ್ಲಿಗೆ? ಆಕೆಯು ಮಾಡುತ್ತಾಳಾದರೂ ಏನು? ಎಂಬದರ ಗೂಢವೇ ಹೇಮಚಂದ್ರನಿಗೆ ತಿಳಿಯದಾಯಿತು. ಮನೋರಮೆಯ ಲೋಕೋತ್ತರ ವಾದ ಲಾವಣ್ಯ, ಆ ಲಾವಣ್ಯಕ್ಕೆ ಒಪ್ಪುವಂಥ ನಿಷ್ಕಲಂಕವಾದ ವರ್ತನ, ಸರಳ ಸ್ವಭಾವ, ಪ್ರೇಮ ಪೂರ್ಣವಾದ ಹೃದಯ, ನಿಷ್ಕಪಟವೃತ್ತಿ ಮೊದಲಾದವನ್ನು ನೋಡಿ ಹೇಮಚಂದ್ರನು ಆಕೆಯ

ಮೇಲೆ ಬಹಳ ಲೋಭಮಾಡುತ್ತಿದ್ದನು; ಆದರೆ ನಡುನಡುವಿನ ಆಕೆಯ ಈ ವಿಲಕ್ಷಣವಾದ ಆಚರಣವನ್ನು ನೋಡಿ ಉದಾಸೀನನಾಗುವನು.

ಹೇಮಚಂದ್ರನಿಗೆ ಮೊದಲು ಮನೋರಮೆಯ ವಯಸ್ಸಿನ ವಿಷಯವಾಗಿ ಬಹಳ ಆಶ್ಚರ್ಯವಾಗಹತ್ತಿತು. ಮನೋರಮೆಯ ಊಡಕಸ್ವಭಾವವನ್ನೂ, ಸರಳ ವೃತ್ತಿಯನ್ನೂ ನೋಡಿ ಆಕೆಯು ಇನ್ನೂ ಬಾಲಿಕೆಯೇ ಇರುವಳೆಂಬಂತೆ ಅವನಿಗೆ ತೋರುತ್ತಿತ್ತು. ಆದರೆ ಒಮ್ಮೊಮ್ಮೆ ಆಕೆಯು ಬಹು ಗಂಭೀರವಾಗಿ ತೋರುವಳು. ಇವನ್ನೆಲ್ಲ ಮನಸ್ಸಿನಲ್ಲಿ ತಂದರೆ ಮನೋರಮೆಯು ಇನ್ನೂವರೆಗೆ ಕುಮಾರಿಕೆಯೇ ಇರುವಳೋ, ಆಕೆಯ ಲಗ್ನವಾಗಿರುವದೋ ಎಂಬದರ ನಿರ್ಧರವೇ ಅವನಿಗೆ ಆಗದಾಯಿತು. ಒಂದು ದಿನ ಮನೋರಮೆಯು ಹೇಮಚಂದ್ರನೊಡನೆ ಹಿತದ ಮಾತುಗಳನ್ನು ಬಿಚ್ಚು ಮನಸ್ಸಿನಿಂದ ಆಡುತ್ತ ಕುಳಿತಿದ್ದಳು. ಆಗ ಹೇಮಚಂದ್ರನು ಬಹು ದಿವಸದ ತನ್ನ ಸಂಶಯವನ್ನು ಈಗ ದೂರ ಮಾಡಿಕೊಳ್ಳಬೇಕೆಂದು ಮನೋರಮೆಗೆ—ಮನೋರಮೇ, ನಿನ್ನ ಅತ್ತೆಯ ಮನೆಯು ಎಲ್ಲಿರುವದು, ಎಂದು ಕೇಳಲು, ಅದಕ್ಕೆ ಮನೋರಮೆಯು ಉತ್ತರವನ್ನೇ ಕೊಡಲಿಲ್ಲ. ಅದರಂತೆ ಮತ್ತೊಮ್ಮೆ ಹೇಮ ಚಂದ್ರನು—''ನಿನಗೆ ಎಷ್ಟು ವರ್ಷಗಳು'' ಎಂದು ಆಕೆಯನ್ನು ಕೇಳಿದನು. ಅದಕ್ಕೆ ಮನೋರಮೆಯು—''ನನಗೆ ಗೊತ್ತಿಲ್ಲೆಂದು ಹೇಳಿ, ಕೂಡಲೆ ಅಲ್ಲಿಂದ ಹೊರಟುಹೋದಳು.

ಹೇಮಚಂದ್ರನು ಮನೋರಮೆಯ ವೃತ್ತಾಂತವನ್ನು ತಿಳಕೊಳ್ಳುವದಕ್ಕಾಗಿ ದಿನದಿನಕ್ಕೆ ಬಹಳ ಆತುರಪಡಹತ್ತಿದನು; ಆದರೆ ಏನು ಮಾಡಿದರೂ ಅವನ ಜಿಜ್ಞಾಸೆಯು ತೃಪ್ತವಾಗ ಲೊಲ್ಲದು. ಆಕೆಯ ವೃತ್ತಾಂತವನ್ನು ಕೇಳುವದಾದರೂ ಯಾರನ್ನು, ಹೇಳುವವರಾದರೂ ಯಾರು? ಕೆಪ್ಪನಾದ ವೃದ್ಧ ಜನಾರ್ದನನಿಂದ ತನಗೆ ಎಷ್ಟರಮಟ್ಟಿಗೆ ಸಮಾಧಾನವಾದೀತೆಂಬದರ ಅನುಭವವು ಅವನಿಗೆ ಈ ಮೊದಲೇ ಚನ್ನಾಗಿ ಬಂದು ಹೋಗಿತ್ತು. ಇರಲಿ.

ಇತ್ತ ಮಾಧವಾಚಾರ್ಯನು ಹೇಮಚಂದ್ರನನ್ನು ನವದ್ವೀಪದಲ್ಲಿಟ್ಟು ದೇಶಪರ್ಯ ಟನಕ್ಕಾಗಿ ಹೊರಟುಹೋದನು. ಗೌಡದೇಶದ ಮಾಂಡಲಿಕ ರಾಜರನ್ನು, ಗೆಳೆಯರಾದ ಬೇರೆ ವೀರಪುರುಷರನ್ನು ಕಂಡು ಸಸೈನ್ಯವಾಗಿ ಗೌಡದೇಶಾಧಿಪತಿಗೆ ಸಹಾಯ ಮಾಡುವಂತೆ ಅವರ ಮನಸ್ಸು ಒಲಿಸುವದಷ್ಟೇ ಆಚಾರ್ಯರ ಹೇತುವಾಗಿತ್ತು. ನವದ್ವೀಪವನ್ನು ಬಿಟ್ಟು ಬಹು ದಿವಸಗಳಾದುದರಿಂದ ಗುರುಗಳ ಹಾದಿಯನ್ನು ಹೇಮಚಂದ್ರನು ಒಂದೇಸವನೆ ನೋಡುತ್ತಿದ್ದನು; ಆದರೆ, ಅವರ ಗೊತ್ತೇ ಹತ್ತಲಿಲ್ಲ. ಕೆಲಸವಿಲ್ಲ, ಬೊಗಸೆಯಿಲ್ಲ; ಈ ಸ್ಥಿತಿಯಲ್ಲಿ ಬಹುದಿವಸ ಕುಳಿತು ಸೋಮಾರಿಯಂತೆ ಹೊತ್ತು ಕಳೆಯುವದು ಹೇಮಚಂದ್ರನಿಗೆ ತಲೆ ಬೇಸರಿಟ್ಟಿತು. ಅವನಿಗೆ ಬಹಳ ತ್ರಾಸವಾಗಹತ್ತಿತು. ಅವನು ''ಗೌಡನಗರಕ್ಕಾದರೂ ಒಮ್ಮೆ ಹೋಗಿಬರ ಬೇಕೆಂ''ದು ಒಮ್ಮೊಮ್ಮೆ ಎಣಿಸುವನು; ಆದರೆ, ಪ್ರತಿಜ್ಞಾ ಭಂಗಮಾಡಿ ಮೃಣಾಲಿನಿಯನ್ನು ಕಾಣಬೇಕೆ? ಛೀ! ಕಲ್ಪಾಂತರದಲ್ಲಿಯಾದರೂ ಈ ಕೆಲಸವು ನನ್ನಿಂದಾಗದು. ಮೃಣಾಲಿನಿಯನ್ನು ಕಾಣಲಿಕ್ಕೆ ಬಾರದಿದ್ದ ಬಳಿಕ ಗೌಡನಗರಕ್ಕೆ ಹೋಗಿಯಾದರೂ ಮಾಡುವದೇನು?'' ಎಂಬ ವಿಚಾರವು ಮನಸ್ಸಿನಲ್ಲಿ ಬರಲು, ಆತನು ಗೌಡನಗರಕ್ಕೆ ಹೋಗುವ ಉಸಾಬರಿಯನ್ನು

ಬಿಟ್ಟುಬಿಟ್ಟನು. ಆದರೆ ಮೃಣಾಲಿನಿಯ ಕಡೆಗೆ ಹೋಗಿದ್ದ ಮನಸ್ಸನ್ನು ತಿರುಗಿಸಿಕೊಳ್ಳುವದು ಮಾತ್ರ ಅವನಿಂದಾಗಲಿಲ್ಲ. ಉಣ್ಣುವಾಗ, ತಿನ್ನುವಾಗ, ಮಾತಾಡುವಾಗ, ನಡೆಯುವಾಗ, ಸ್ವಪ್ನದಲ್ಲಿರುವಾಗ ಆತನ ಮನಸ್ಸು ತನ್ನ ಆರಾಧ್ಯದೇವತೆಯನ್ನು ಒಂದೇಸವನೆ ನೆನೆಸುತ್ತಿತ್ತು. ''ಮೃಣಾಲಿನಿ, ಮೃಣಾಲಿನಿ, ಮೃಣಾಲಿನಿ!'' ಹೇಮಚಂದ್ರನಿಗೆ ಇದರ ಹೊರತು ಎರಡನೆಯ ವಿಷಯವೇ ಇಲ್ಲದಾಯಿತು. ತದೇಕ ಧ್ಯಾನಮಗ್ನರಿಗೆ ಅನ್ಯ ವಿಷಯವೆಲ್ಲಿಯದು?

ಪಾಪ! ನೋಡದೇನು ಮಾಡಿಯಾನು

ಮೂರೂ ಸಂಜೆಯು, ಅದೇ ಕತ್ತಲು ಬೀಳುತ್ತಲಿತ್ತು. ಆಗ ಹೇಮಚಂದ್ರನು ತನ್ನ ಮಂದಿರದೊಳಗಿನ ಮಂಚದ ಮೇಲೆ ಸ್ವಸ್ಥ ಬಿದ್ದುಕೊಂಡು, ಮೃಣಾಲಿನಿಯ ಚಿಂತನದಲ್ಲಿ ಮುಣುಗಿಹೋಗಿದ್ದನು. ಇಷ್ಟರಲ್ಲಿ ಪೂರ್ಣ ಕಲೆಗಳಿಂದ ನಭೋಮಂಡಲವನ್ನೆಲ್ಲ ಉಜ್ವಲ ಗೊಳಿಸುವ ಶರಚ್ಚಂದ್ರನು, ಆಕಾಶದಲ್ಲಿ ಪ್ರಾಪ್ತನಾದನು. ಅಸಹ್ಯ ವಿರಹದುಃಖದಿಂದ ತ್ರಸ್ತಳಾಗಿದ್ದ ರಾತ್ರಿಯೆಂಬ ಸ್ತ್ರೀಯು, ಪ್ರೀಯಪತಿಯ ದರ್ಶನವಾದ ಕೂಡಲೆ, ನಕ್ಷತ್ರಗಳೆಂಬ ಸಖಿಯ ರೊಡನೆ ಪ್ರಸನ್ನ ಮುದ್ರೆಯಿಂದ ಜಗತ್ತನ್ನು ಆನಂದ ಗೊಳಿಸಹತ್ತಿದಳು. ತನ್ನ ಪ್ರೀತಿಯ ಗೆಳತಿಯಾದ ರಜನಿಯು ಕಾಂತ–ಸಮಾಗಮ–ಸುಖದಲ್ಲಿ ಮುಳುಗಿ ಹೋದದ್ದನ್ನು ನೋಡಿದ ಕೂಡಲೆ, ಭಾಗೀರಥಿಯ ಆನಂದವು ಉಕ್ಕೇರಿತು. ಆಕೆಯು ತನ್ನ ಆನಂದದ ಊರ್ಮಿಯ ಭರದಲ್ಲಿ ಗಟ್ಟಿಯಾಗಿ ಕೂಗಹತ್ತಿದಳು. ನೋಡಿದತ್ತೆಲ್ಲ ಅಪೂರ್ವವಾದ ಸೃಷ್ಟಿ ಸೌಂದರ್ಯವು ಕಂಗೊಳಿಸಹತ್ತಿತು. ಭಾಗೀರಥಿಯ ವಕ್ಷಸ್ಥಳದಲ್ಲಿ ಕುತೂಹಲದಿಂದ ನರ್ತನಮಾಡುತ್ತಿದ್ದ ಆ ರಾತ್ರಿಯ ತಂಗಾಳಿಯು, ದಂಡೆಯ ಮೇಲಿರುವ ಸುಗಂಧಪುಷ್ಪಗಳೊಳಗಿನ ಗಂಧವನ್ನು ಒತ್ತಾಯದಿಂದ ತಕ್ಕೊಂಡು, ಭಾಗೀರಥಿಯ ತಣ್ಣೀರು ತುಂತುರ ಹನಿಗಳೊಡನೆ ಹೇಮಚಂದ್ರನ ಮಂದಿರದ ಕಿಡಕಿಯೊಳಗಿಂದ ಹೊಕ್ಕು, ಮೃಣಾಲಿನಿಯ ಚಿಂತೆಯಿಂದ ಅಸಮಾಧಾನ ಪಟ್ಟಿರುವ ಆತನ ಮನಸ್ಸನ್ನು ಶಾಂತಗೊಳಿಸಹತ್ತಿತು. ಈ ಕಾಲದಲ್ಲಿ ಹೇಮಚಂದ್ರನ ಮನೋವೃತ್ತಿಯು ಬಹು ಪ್ರಸನ್ನವಾಯಿತು.

ಇಷ್ಟರಲ್ಲಿ ಒಮ್ಮಿಂದೊಮ್ಮೆ ಕಿಡಿಕಿಯ ಬಾಗಿಲು ಮರೆಯಾಗಿ ತಂಪಾದ ಚಂದ್ರಕಿರಣ ಗಳಿಗೆ ಪ್ರತಿಬಂಧವು ಆಯಿತು. ಕಿಡಿಕೆಯೊಳಗಿಂದ ಮನುಷ್ಯನ ಮೋರೆಯು ಕಾಣಹತ್ತಿತು. ಕಿಡಿಕೆಯು ನೆಲದಿಂದ ಎತ್ತರವಿದ್ದದ್ದರಿಂದ ಮನುಷ್ಯನ ಕೈಕಾಲು ಮೊದಲಾದ ಅವಯವಗಳಾವವೂ ಕಾಣಲಿಲ್ಲ, ಬರಿಯ ಮೋರೆಯಷ್ಟೇ ಕಾಣಿಸಿತು. ವಿಶಾಲವಾದ ಮೀಸೆಗಳಿಂದಲೂ, ಪಿಂಗಲ ವರ್ಣದ ಗಡ್ಡಗಳಿಂದಲೂ ಆ ಮೋರೆಯು ಮುಚ್ಚಿಹೋಗಿತ್ತು. ತಲೆಯ ಮೇಲೆ ಶಿರಸ್ತ್ರಾಣ ವಿತ್ತು. ಆ ಉಜ್ವಲವಾದ ಚಂದ್ರ ಪ್ರಕಾಶದೊಳಗೆ ಗಡ್ಡ—ಮೀಸೆಗಳೆಲ್ಲ ಮುಚ್ಚಿ ಹೋಗಿದ್ದ ಮೋರೆಯು ಕಣ್ಣಿಗೆ ಬಿದ್ದ ಕೂಡಲೆ, ಹೇಮಚಂದ್ರನು ಮಂಚದಿಂದ ಹಾರಿ, ಖಡ್ಗವನ್ನು

ತಕ್ಕೊಂಡು ಕಿಡಿಕೆಯ ಕಡೆಗೆ ಹೋದನು; ಆದರೆ ಅಲ್ಲಿ ಏನಿದೆ? ಮನುಷ್ಯರಿಲ್ಲ ಮಕ್ಕಳಿಲ್ಲ! ಹೇಮಚಂದ್ರನು ಧಡಲ್ಲನೆ ಬಾಗಿಲು ತೆರೆದು, ಹೊರಗೆ ಕಿಡಿಕೆಯ ಹತ್ತರ ಬಂದು ನೋಡಿದನು. ಅಲ್ಲಿಯೂ ಯಾರೂ ಇದ್ದಿಲ್ಲ. ಬಳಿಕ ಅವನು ಮಂದಿರದ ಸುತ್ತುಮುತ್ತು ಗಂಗೆಯ ದಂಡೆಯಲ್ಲಿ, ಸಮೀಪದ ವನಪ್ರದೇಶದಲ್ಲಿ ಹುಡುಕಿ ನೋಡಿದನು. ಎಲ್ಲಿಯೂ ಮನುಷ್ಯರ ಸುಳಿವು ಕಾಣಲಿಲ್ಲ. ಆಗ ಹೇಮಚಂದ್ರನು ಮನೆಗೆ ತಿರುಗಿ ಬಂದು, ಕೂಡಲೆ ಪೋಷಾಕು ಹಾಕಿಕೊಂಡನು. ತನ್ನ ಶಸ್ತ್ರಗಳನ್ನೆಲ್ಲ ತಕ್ಕೊಂಡನು. ಕುದುರೆಯನ್ನು ಏರಿ, ಅಂಥ ಸರಿರಾತ್ರಿಯಲ್ಲಿ ಹೊರ ಹೊರಟನು. ಕಿಡಿಕೆಯಲ್ಲಿ ಮೋರೆಯು ಕಣ್ಣಿಗೆ ಬಿದ್ದಾಗಲೇ ತುರುಕನು ಬಂದಿರುವನೆಂದು ಆತನು ತಿಳಕೊಂಡಿದ್ದನು.

ತನ್ನ ಆಹಾರವನ್ನು ನೋಡಿದ ಕೂಡಲೆ ಆವೇಶದಿಂದ ಎರಗಲಿಕ್ಕೆ ಓಡಿ ಹೋಗುವ ಹಸಿದ ಹುಲಿಯಂತೆ, ತುರುಕನನ್ನು ನೋಡಿದ ಹೇಮಚಂದ್ರನ ಸ್ಥಿತಿಯಾಯಿತು. ಅವನು ತುರುಕನನ್ನು ಹುಡುಕುವದಕ್ಕಾಗಿ ಕುದುರೆಯನ್ನು ಏರಿ, ಆವೇಶದಿಂದ ನಡೆದನು. ಆಗ ಅವನ ಮುಖ ಮುದ್ರೆಯು ಉಗ್ರವಾಗಿಯೂ, ಭಯಪ್ರದವಾಗಿಯೂ ತೋರುತ್ತಿತ್ತು. ತುರುಕನ ಶೋಧಾರ್ಥ ವಾಗಿ ಅವನು ಹೊರಟಿದ್ದರೂ ಯಾವ ಹಾದಿಯಿಂದ ಬೆನ್ನಟ್ಟಿ ಹೋದರೆ, ತುರುಕನು ಸಿಗುವನೆಂಬದರ ನಿಶ್ಚಯವು ಅವನಿಗಿದ್ದಿಲ್ಲ. ಅವನು ದೊಡ್ಡ ಹಾದಿಯನ್ನು ಹಿಡಿದು ಕುದುರೆಯನ್ನು ಓಡಿಸುತ್ತಸಾಗಿದ್ದನು.

ಹೇಮಚಂದ್ರನು ಒಬ್ಬ ತುರುಕನನ್ನು ಮಾತ್ರ ನೋಡಿದ್ದನು. ಆದರೂ ಆ ತುರುಕ ನೊಬ್ಬನೇ ಇರದೆ, ತುರುಕನ ಸೈನ್ಯವು ಪಟ್ಟಣದ ಸಮೀಪದಲ್ಲಿ ಅಡಗಿಕೊಂಡಿರಬಹುದೆಂದು ಆತನು ತರ್ಕಿಸಿದನು. ಹಾಗಿಲ್ಲದಿದ್ದರೂ, ತನ್ನ ದೃಷ್ಟಿಗೆ ಬಿದ್ದಿದ್ದ ತುರುಕನು ವೈರಿಗಳ ಕಡೆಯ ನೆಲೆಗಾರನಾದರೂ ಇರಬಹುದು ಎಂದು ಅವನು ಅನುಮಾನಿಸಿದನು. ಹೇಮಚಂದ್ರನ ತರ್ಕದಂತೆ ನಿಜವಾಗಿಯೇ ವೈರಿಗಳ ಸೈನ್ಯವು ಪಟ್ಟಣದ ಸಮೀಪದಲ್ಲಿ ಬಂದಿತ್ತು; ಹೇಮಚಂದ್ರ ನೊಬ್ಬನೇ ಯುದ್ಧಮಾಡಿದ್ದರೆ, ಅವನು ಜಯಶಾಲಿಯಾಗುವ ಸಂಭವವಾದರೂ ಇತ್ತೋ? ಆದರೆ ವಜ್ರದಂತೆ ಅಭೇದ್ಯವಾದ ಹೃದಯವುಳ್ಳ ಹೇಮಚಂದ್ರನಂಥ ಸಾಹಸಿಯಾದ ವೀರನಿಗೆ ಇಂಥ ವಿಚಾರಗಳ ಪಾಡೇನು! ಪ್ರಾಣಕ್ಕಿಂತಲೂ ಪ್ರಿಯಳಾದ ಮೃಣಾಲಿನಿಯನ್ನು ಕೂಡ ಯಾವ ಮಹತ್ಕಾರ್ಯಕ್ಕಾಗಿ ಆತನು ಬಿಟ್ಟುಬಿಟ್ಟಿದ್ದನೋ, ಆ ಮಹತ್ಕಾರ್ಯಕ್ಕೋಸ್ಕರ ಆ ವೀರ ಶಿರೋಮಣಿಯು ಉದಾಸೀನನಾಗುವ ಸಂಭವವು ಎಷ್ಟು ಮಾತ್ರವೂ ಇದ್ದಿಲ್ಲ. ಇದಕ್ಕೆ ಬದಲಾಗಿ ಆ ಎದೆಗಾರನು ಯವನರ ಪಾರುಪತ್ಯದಲ್ಲಿ ತುಂಬಾ ಆನಂದಪಡುತ್ತಿದ್ದನು. ಕಿಡಿಕೆಯ ಮಾರ್ಗವಾಗಿ ಯವನನ ಆಕೃತಿಯು ದೃಷ್ಟಿಗೆ ಬಿದ್ದಬಳಿಕಂತೂ ಸೇಡು ತೀರಿಸಿಕೊಳ್ಳುವ ಇಚ್ಛೆಯು ಅವನಲ್ಲಿ ಬಲವತ್ತರವಾಯಿತು. ಅಂದಬಳಿಕ ಆ ದಿನ ರಾತ್ರಿ ಅವನು ಮನೆಯಲ್ಲಿ ಸಮಾಧಾನದಿಂದಿರುವ ಬಗೆಯೇನು? ಆತನಿಗೆ ಸುಖದಿಂದ ನಿದ್ದೆಯಾದರೂ ಹೇಗೆ ಹತ್ತಬೇಕು? ಆದುದರಿಂದ ಆತನು ಹಗಲು ರಾತ್ರಿಗಳ ವಿಚಾರಮಾಡದೆ, ವೈರಿಗಳನ್ನು ಸಂಹರಿಸುವದಕ್ಕಾಗಿ ವಾಯುವೇಗದಿಂದ ಹೊರಟಿದ್ದನು.

ಬಹುದೂರ ಹಾದಿಯನ್ನು ನಡೆದು ಹೋದಬಳಿಕ ಹೇಮಚಂದ್ರನು ಒಂದು ನಿರ್ಜನವಾದ ಅರಣ್ಯದ ಮಧ್ಯದಲ್ಲಿರುವ ಒಂದು ವಿಶಾಲವಾದ ಸರೋವರದ ದಂಡೆಗೆ ಮುಟ್ಟಿದನು. ಆ ಸರೋವರವು ವಿಶಾಲವಿದ್ದಂತೆ ರಮಣೀಯವಾದರೂ ಇದ್ದಿತು. ಸುತ್ತಮುತ್ತಲಿನ ಬಕುಳ, ಸಂಪಗೆ, ಕದಂಬ, ಮಾವು, ಅಶೋಕ, ಆಲ, ಅರಳೆ ಮೊದಲಾದ ಸುಂದರ ವೃಕ್ಷಗಳ ಸಾನಿಧ್ಯದಿಂದ ಅದು ಬಹು ಮನೋಹರವಾಗಿ ಕಂಗೊಳಿಸುತ್ತಿತ್ತು, ರಾಗ, ದ್ವೇಷ, ಹಿಂಸೆ ಮೊದಲಾದ ಮಾನವಿ ದುರ್ಗುಣಗಳ ಗಾಳಿ ಕೂಡ ತಗಲದ ಆ ಗಿಡಗಳು, ಒಂದರಕೂಡೊಂದು ಪ್ರೀತಿಯಿಂದ ಇರುತ್ತಿದ್ದು, ತಮ್ಮ ಹರಿಗಳೆಂಬ ತೋಳುಗಳಿಂದ ಒಂದನ್ನೊಂದು ಅಪ್ಪಿಕೊಳ್ಳು ವದರಲ್ಲಿ ತೊಡಗಿದ್ದರಿಂದ ನಡುಹಗಲಲ್ಲಾದರೂ ಆ ಸರೋವರದ ಪ್ರದೇಶದಲ್ಲಿ ದಟ್ಟವಾದ ನೆರಳು ಬೀಳುತ್ತಿತ್ತು; ಅಂದಬಳಿಕ ರಾತ್ರಿಯಲ್ಲಿ ಈ ಗಿಡಗಳಿಂದ ಕಗ್ಗತ್ತಲ ಮುಸುಕಿದ್ದರಲ್ಲಿ ಸೋಜಿಗವೇನು? ಈ ಸರೋವರನ್ನು ಪೂರ್ವಕಾಲದಲ್ಲಿ ಒಬ್ಬ ಅರಸನು ಕಟ್ಟಿಸಿದ್ದನು. ಈಗ್ಗೆ ಅದು ಮುರುಕಳಿಗೆ ಬಂದಿದ್ದರೂ, ಕೆಲವೆಡೆಗಳಲ್ಲಿ ಮೊದಲಿನ ಕಟ್ಟಡವು ಅಚ್ಚಳಿಯದೆ ಒಪ್ಪುತ್ತಿತ್ತು. ನೀರಿನ ಬುಡದಿಂದ ತೀರ ಮೇಲಿನವರೆಗೆ ನಾಲ್ಕೂ ಮಗ್ಗಲುಗಳಲ್ಲಿ ಕಲ್ಲಿನ ಪಾವಟಿಗೆಗಳನ್ನು ಕಟ್ಟಿದ್ದರು. ಸರೋವರದ ನೀರು ಆಕಾಶದಂತೆ ನಿರ್ಮಲವಾದ ನೀಲವರ್ಣದ ವಿದ್ದು ಬಹು ಮಧುರವಾಗಿದ್ದವು. ಉದ್ವಿಗ್ನವಾದ ಮನಸ್ಸನ್ನು ಕ್ಷಣಮಾತ್ರ ರಮಿಸಲಿಕ್ಕೆ ಇದರಷ್ಟು ತಕ್ಕದ್ದಾದ ಏಕಾಂತಸ್ಥಳವು ಸುತ್ತುಮುತ್ತು ಎಲ್ಲಿಯೂ ಇರಲಿಕ್ಕಿಲ್ಲ. ಆದರೆ ಆಶ್ಚರ್ಯವೇನಂದರೆ, ಯಾವನೋ ಒಬ್ಬ ವಿಲಕ್ಷಣ ಪುರುಷನು, ಆ ಸರೋವರದಲ್ಲಿ ದೆವ್ವಗಳು ಚಲ್ಲಾಟವಾಡುತ್ತ ವೆಂಬ ಸುದ್ದಿಯನ್ನು ಬೀರಿಬಿಟ್ಟದ್ದರಿಂದ ನೆರೆ ಗ್ರಾಮಗಳ ಜನರು, ಹಗಲುಹಾಡೇ ಅಲ್ಲಿಗೆ ಹೋಗಲಿಕ್ಕೆ ಹಿಂಜರಿ ಯುತ್ತಿದ್ದರು. ಒಬ್ಬೊಂಟಿಗರಂತೂ ಆ ಸ್ಥಳಕ್ಕೆ ಎಂದೂ ಹೋಗಿರಲಿಕ್ಕಿಲ್ಲ. ಎದೆಗಾರರಾದ ಗಂಡಸರ ಸ್ಥಿತಿಯೇ ಹೀಗಾದಮೇಲೆ, ಹುಟ್ಟಾ ಅಂಜುಬುರುಕರಾದ ಹೆಂಗಸರಿಗೆ ಜನ್ಮದಾರಭ್ಯ ಈ ಸರೋವರದ ದರ್ಶನವಾಗದಿದ್ದರೆ ಆಶ್ಚರ್ಯವೇನು? ರಾತ್ರಿಯಲ್ಲಿಯಂತು ಈ ಸ್ಥಳದ ಕಡೆಗೆ ಯಾರೂ ಹಣಿಕಿ ಹಾಕುತ್ತಿದ್ದಿಲ್ಲ.

ಈಗಿನ ಕಾಲದಲ್ಲಾದರೂ ಭೂತಪಿಶಾಚಗಳನ್ನು ನಂಬುವವರು ಇರುವರು. ಕೆಲವರಂತು, ಭೂತಪಿಶಾಚಗಳ ಕೃತಿಗಳನ್ನು ಕಣ್ಣುಮುಟ್ಟ ನೋಡಿರುವೆವೆಂದು ಪ್ರತಿಪಾದಿಸುವರು. ಅಂದಬಳಿಕ ಹೇಮಚಂದ್ರನ ಕಾಲದಲ್ಲಿ ದೆವ್ವಗಳ ಕಲ್ಪನೆಯು ಬಲವತ್ತರವಾದದ್ದರಲ್ಲಿ ಆಶ್ಚರ್ಯ ವೇನು? ಹೇಮಚಂದ್ರನಾದರೂ ಈ ಕಲ್ಪನೆಗೆ ತೀರ ಹೊರಗಾದವನಿದ್ದಿಲ್ಲ; ಆ ಸರೋವರದ ದಂತಕತೆಯನ್ನಾದರೂ ಆತನು ಕೇಳಿದ್ದನು. ಆದರೆ ಆತನು ವೀರಪುರುಷನಿದ್ದು, ಒಳ್ಳೇ ಧೈರ್ಯಶಾಲಿಯಾದುದರಿಂದ ಮನಸ್ಸಿನಲ್ಲಿ ಸ್ವಲ್ಪವಾದರೂ ಬೆದರದೆ, ಆ ಸರೋವರದ ಹಾದಿಯನ್ನೇ ಹಿಡಿದು ಮುಂದಕ್ಕೆ ಸಾಗಿದ್ದನು. ಸರೋವರವು ಸಮೀಪಿಸಿದಂತೆ ಅವನು ಕೌತುಕದಿಂದ ಅತ್ತಕಡೆಗೇ ನೋಡುತ್ತ ಸಾಗಿದನು. ಹಾ ಹಾ ಅನ್ನುವದರೊಳಗಾಗಿ ಆ ವೀರ ಶಿರೋಮಣಿಯು ಸರೋವರದ ತೀರವನ್ನು ತಲುಪಿದನು. ಅಪರಾತ್ರಿಯು, ಸುತ್ತು ಮುತ್ತು ಮನುಷ್ಯರ ಗಾಳಿಯಿಲ್ಲ, ಆಗ ಸರೋವರದಲ್ಲಿ ಅದ್ಭುತ ಚಮತ್ಕಾರವು ಕಣ್ಣಿಗೆ ಬೀಳಲು,

ಹೇಮಚಂದ್ರನು ಬೆರಗಾಗಿ ನಿಂತನು. ಕೆರೆಯೊಳಗಿನ ಎಲ್ಲಕ್ಕೂ ಕೆಳಗಿನ ಪಾವಟಿಗೆಯ ಮೇಲೆ ಶುಭ್ರವಸ್ತ್ರವನ್ನು ಉಟ್ಟುಕೊಂಡು, ಕೆರೆಯೊಳಗೆ ಕಾಲು ಇಳಿ ಬಿಟ್ಟುಕೊಂಡು ಕುಳಿತಿರುವ ಒಂದು ಮನುಷ್ಯಾಕೃತಿಯು ಅವನ ಕಣ್ಣಿಗೆ ಬಿದ್ದಿತು. ಹೇಮಚಂದ್ರನು ಮತ್ತಿಷ್ಟು ಮುಂದಕ್ಕೆ ಹೋಗಿ ದಿಟ್ಟಿಸಿ ನೋಡಲು, ಅದು ಸ್ತ್ರೀಯಾಕೃತಿಯೆಂದು ಅವನಿಗೆ ಸ್ಪಷ್ಟವಾಗಿ ಗೊತ್ತಾಯಿತು. ಹದಿನೈದು—ಹದಿನಾರು ವರ್ಷದ ಒಬ್ಬ ತರುಣ ಸ್ತ್ರೀಯು, ತಲೆಗೂದಲುಗಳನ್ನು ಉಚ್ಚಿಕೊಂಡು, ಚಿಂತೆ ಮಾಡುತ್ತ ಕುಳಿತುಕೊಂಡಿದ್ದಳು. ಆಕೆಯ ತಲೆಗೂದಲುಗಳು ಗಾಳಿಯಿಂದ ಆಕೆಯ ಬೆನ್ನ ಮೇಲೆ, ಹೆಗಲ ಮೇಲೆ, ಮೋರೆಯ ಮೇಲೆ, ಎದೆಯ ಮೇಲೆ ಅಸ್ತವ್ಯಸ್ತವಾಗಿ ಹರವಿದ್ದವು. ಇಂಥ ಅಪರಾತ್ರಿಯ ವೇಳೆಯಲ್ಲಿ ನಿರ್ಜನವಾದ ಸರೋವರದೊಳಗೆ ಇಂಥ ಭಯಪ್ರದ ಮೂರ್ತಿಯನ್ನು ನೋಡಿದ ಕೂಡಲೆ, ಎಂಥವರಿಗಾದರೂ ಅಂಜಿಕೆ ಬರುವದು ಸ್ವಾಭಾವಿಕವು. ಆದರೆ ಹೇಮಚಂದ್ರನು ಅದನ್ನು ಲೆಕ್ಕಿಸದೆ, ಅದೊಂದು ಪಿಶಾಚವಿರಬಹುದೆಂದು ತಿಳಿದು, ತೀವ್ರವಾಗಿ ತನ್ನ ಕುದುರೆಯನ್ನು ಮುಂದಕ್ಕೆ ನಡಿಸತೊಡಗಿದನು. ಸ್ವಲ್ಪ ಮುಂದಕ್ಕೆ ಹೋದ ಮೇಲೆ ಹೊಸ ವಿಚಾರವು ಅವನ ಮನಸ್ಸಿನಲ್ಲಿ ಬಂದು, ಅವನು ತನ್ನ ಕುದುರೆಯನ್ನು ಹಿಂದಕ್ಕೆ ತಿರುಗಿಸಿದನು. ತಾನು ನೋಡಿದ ಆಕೃತಿಯು ಪಿಶಾಚವಾಗಿರದೆ ಸ್ತ್ರೀಯಾಗಿರಬಹುದೆಂಬ ಸಂಶಯವು ಅವನ ಮನಸ್ಸಿನಲ್ಲಿ ಉತ್ಪನ್ನವಾಯಿತು. ಸ್ತ್ರೀಯಾಗಿದ್ದರೆ, ಈ ಹಾದಿಯಿಂದ ಹೋಗಿದ್ದ ತುರುಕನನ್ನು ಆಕೆಯು ನೋಡಿರಬಹುದೆಂತಲೂ ಆತನು ನೆನಸಿದನು. ಅವನು ಕುದುರೆಯನ್ನೂ ಸರೋವರದ ತೀರದಲ್ಲಿ ನಿಲ್ಲಿಸಿ, ಲಗುಬಗೆಯಿತಂದ ಪಾಪಟಿಗೆಗಳನ್ನು ಇಳಿದು, ಆ ಸ್ತ್ರೀಮೂರ್ತಿಯ ಹತ್ತರಕ್ಕೆ ಹೋದನು. ಆ ನಿಶಾಚರಿಯಾದ ಸ್ತ್ರೀಯು, ಮೇಲಿಂದ ಒಬ್ಬ ಮನುಷ್ಯನು ತನ್ನ ಕಡೆಗೆ ಬರುತ್ತಾನೆಂಬದನ್ನು ನೋಡಿದರೂ, ಕುಳಿತ ಸ್ಥಳದಿಂದ ಉಲುಕಲಿಲ್ಲ. ಕಡೆಗೆ ಹೇಮಚಂದ್ರನು ತೀರ ಮಗ್ಗಲಲ್ಲಿ ಬಂದದ್ದನ್ನು ನೋಡಿ, ಆಕೆಯು ಕೂಡಲೆ ಎದ್ದುನಿಂತು, ಅಸ್ತವ್ಯಸ್ತವಾದ ತಲೆಗೂದಲುಗಳನ್ನು ಸಾವರಿಸಿಕೊಂಡಳು. ಗಿಡಗಳ ಕೊಂಬೆಗಳ ನೆರಳೊಳಗಿಂದ ಬರುವ ಮಂದವಾದ ಚಂದ್ರಪ್ರಕಾಶದಿಂದ ಆ ಮೂರ್ತಿಯ ಮುಖವು ಸ್ಪಷ್ಟವಾಗಿ ಕಾಣಲು, ಆ ಮೂರ್ತಿಯು ಸ್ತ್ರೀಯೆಂಬದನ್ನು ಹೇಮಚಂದ್ರನು ಸ್ಪಷ್ಟವಾಗಿ ಅರಿತುಕೊಂಡನು; ಆದರೆ ಪಿಶಾಚವನ್ನು ನೋಡಿದ್ದರೆ, ಅವನಿಗೆ ಆಗಬಹುದಾಗಿದ್ದ ಆಶ್ಚರ್ಯಕ್ಕಿಂತ ಹಲವು ಮಡಿ ಹೆಚ್ಚಾದ ಆಶ್ಚರ್ಯವು, ಆ ಹೆಂಗಸನ್ನು ನೋಡಿದ್ದರಿಂದ ಹೇಮಚಂದ್ರನಿಗೆ ಆಯಿತು. ಆಗ ಆತನು ಅಚ್ಚರಿಗೊಂಡು ಉಚ್ಚಸ್ವರದಿಂದ ನುಡಿದನೇನಂದರೆ—ಯಾರು!! ಮನೋರಮೇ, ಇದೇನು? ನೀನೇಕೆಯಿಲ್ಲಿ?

ಮನೋ—(ಗಂಭೀರ ಸ್ವರದಿಂದ) ನಾನು ಇಲ್ಲಿಗೆ ದಿನಾಲು ಬರುತ್ತಿರುತ್ತೇನೆ. ಆದರೆ ಅಣ್ಣಾ, ನೀನು ಇಲ್ಲಿಗೆ ಬಂದ ಕಾರಣವೇನು?

ಹೇಮ—ನಾನೊಂದು ಮಹತ್ವದ ಕೆಲಸದ ನಿಮಿತ್ತವಾಗಿ ಬಂದಿರುವೆನು.

ಮನೋ—ಇಂಥ ಅಪರಾತ್ರಿಯಲ್ಲಿ ಅದೆಂಥ ನಿನ್ನ ಮಹತ್ವದ ಕೆಲಸವಪ್ಪಾ!

ಹೇಮ—ಅದನ್ನು ಆಮೇಲೆ ಹೇಳುವೆನು; ಆದರೆ ನೀನು ಇಷ್ಟುರಾತ್ರಿಯಲ್ಲಿ ಇಲ್ಲಿಗೇಕೆ ಬಂದಿರುತ್ತೀ ಹೇಳು.

ಮನೋರಮೆಯು ಹೇಮಚಂದ್ರನ ಈ ಪ್ರಶ್ನಕ್ಕೆ ಉತ್ತರವನ್ನು ಕೊಡದೆ, ಅವನ ಬೆಪ್ಪಾದ ಮೋರೆಯ ಕಡೆಗೆ ಲಕ್ಷಗೊಡದೆ ಶಾಂತಮನಸ್ಸಿನಿಂದ ಆತನನ್ನು ಕುರಿತು—

ಮನೋ—ಅಣ್ಣಾ, ಇಂದು ನೀನು ಇಂಥ ಉಡಪು ತೊಡಪುಗಳನ್ನು ಯಾಕೆ ಧರಿಸಿರುತ್ತೀ? ಕೈಯಲ್ಲಿ ಶೂಲವಿದೆ, ಟೊಂಕದಲ್ಲಿ ಖಡ್ಗವು ಅಲೆದಾಡುತ್ತಲಿದೆ. ಅಲ್ಲೋ ಖಡ್ಗದ ಹಿಡಿಕೆಯಲ್ಲಿ ಲಕಲಕನೆ ಹೊಳೆಯುವದೇನು? ರತ್ನವೇನು? ನಿನ್ನ ತಲೆಯ ಮೇಲಿರುವದರ ಹೆಸರೇನು? ಅದರೊಳಗಿರುವವೂ ರತ್ನಗಳೇ ಏನು? ಇಷ್ಟು ರತ್ನಗಳುಳ್ಳ ಆಭರಣಗಳನ್ನು ಹಾಕಿಕೊಂಡು, ಇಂಥ ಅಪರಾತ್ರಿಯಲ್ಲಿ ನೀನು ಹೋಗುವದೆತ್ತ? ನಿನಗೆ ಕಳ್ಳರ ಭಯವಿಲ್ಲವೋ?

ಹೇಮ—ಕಳ್ಳರು ನನ್ನನ್ನು ಕೆಣಕಲಾರರು.

ಮನೋ—ಅದಿರಲಿ, ಇಷ್ಟು ಅಲಂಕಾರಗಳನ್ನಿಟ್ಟು ಕೊಂಡು ರಾತ್ರಿಯಲ್ಲಿ ನೀನು ಹೋಗುವದಾದರೂ ಎಲ್ಲಿಗೆ? ಲಗ್ನಮಾಡಿಕೊಳ್ಳಲಿಕ್ಕೆ ಹೋಗುತ್ತೀಯೇನು?

ಹೇಮ—ನಿನಗೆ ಹೇಗೆ ಕಾಣುತ್ತದೆ ಹೇಳು ನೋಡೋಣ?

ಮನೋ—ನನಗೆ ಕಾಣುವದೇನು? ಮನುಷ್ಯವಧವನ್ನು ಮಾಡುವ ಶಸ್ತ್ರಗಳನ್ನು ಧರಿಸಿದವನು ಲಗ್ನಮಾಡಿಕೊಳ್ಳಲಿಕ್ಕೆ ಹೋಗಲಾರನು; ಕಾರಣ ನೀನು ಯುದ್ಧಕ್ಕೋಸ್ಕರ ಹೊರಟಿರುತ್ತೀ?

ಹೇಮ—ಒಳ್ಳೆಯದು, ಅದಿರಲಿ, ನೀನು ಈ ಸರೋವರದಲ್ಲಿ ಏನು ಮಾಡುತ್ತಿದ್ದೆ; ನನಗೆ ಹೇಳು?

ಮನೋ—ನಾನಲ್ಲವೆ, ನಾನು ಸರೋವರದಲ್ಲಿ ಮೈ ತೊಳಕೊಳ್ಳುತ್ತಿದ್ದೆನು. ಇದೋ ನೋಡು ಬೇಕಾದರೆ? ನನ್ನ ಕೂದಲುಗಳು ಇನ್ನೂ ಆರಿರುವದಿಲ್ಲ.

ಹೀಗೆಂದು ಮನೋರಮೆಯು ತನ್ನ ಕೂದಲುಗಳನ್ನು ಹೇಮಚಂದ್ರನ ಕೈಗೆ ಸೊಂಕಿಸಿದಳು. ಆಗ—

ಹೇಮ—ರಾತ್ರಿಯಲ್ಲಿ ಅದೆಂಥ ನಿನ್ನ ಮೈ ತೊಳಕೊಳ್ಳೋಣವವ್ವಾ?

ಮನೋ—ನನ್ನ ಮೈಯು ಬಹಳ ಉರಿಯುತ್ತಿತ್ತು.

ಹೇಮ—ಹಾಗಿದ್ದರೆ, ಮನೆಯೊಳಗೆ ಮೈ ತೊಳಕೊಳ್ಳಬೇಕಾಗಿತ್ತು? ಇಂಥ ನಿರ್ಜನವಾದ ಸರೋವರಕ್ಕೆ ರಾತ್ರಿ ಬಂದದ್ದರಲ್ಲಿ ಪ್ರಯೋಜನವೇನು?

ಮನೋ—ಈ ಸರೋವರದ ನೀರು ಬಹು ತಂಪಾಗಿದೆ.

ಹೇಮ—ನೀನು ಇಲ್ಲಿಗೆ ದಿನಾಲು ಬರುತ್ತೀಯಾ?

ಮನೋ—ಹೌದು.

ಹೇಮ—ಒಳ್ಳೇದು, ಇನ್ನು ಮೇಲೆ ಬೇಗನೆ ನಿನ್ನ ಲಗ್ನವಾಗುತ್ತದೆ, ಆಮೇಲೆ ನೀನು ಇಲ್ಲಿಗೆ ಹೇಗೆ ಬರುತ್ತೀ?

ಮನೋ—ಮೊದಲು ಆಗಿಯಾದರೂ ಆಗಲಿ.

ಹೇಮ—(ನಕ್ಕು) ಮನೋರಮೇ, ನಿನಗೆ ನಾಚಿಕೆ ಬರುವದಿಲ್ಲವೆ? ನೀನು ಗಂಡನನ್ನು ತಪ್ಪಿಸಿ ಬರುವಷ್ಟು ನಾಚಿಕೆಗೇಡಿಯಾಗುತ್ತೀಯೇನು

ಮನೋ—(ಕರುಣ ಸ್ವರದಿಂದ) ಅಣ್ಣಾ, ನೀನು ನನ್ನನ್ನು ಎಂದೂ ನಿರಾಕರಿಸುವದಿಲ್ಲೆಂದು ನನಗೆ ವಚನ ಕೊಟ್ಟಿರುತ್ತೀ. ಅಂದ ಬಳಿಕ ಈಗ ನನ್ನನ್ನು ಹೇಗೆ ನಿರಾಕರಿಸುತ್ತೀ?

ಮನೋರಮೆಯ ನಿಷ್ಕಳಂಕವಾದ ನಡತೆಯಲ್ಲಿ ಹೇಮಚಂದ್ರನ ನಂಬುಗೆಯು ಪೂರ್ಣವಾಗಿ ಇತ್ತು, ಸಚ್ಚರಿತ್ರಳಾದ ಆ ಬಾಲೆಯು ಅಡ್ಡಹಾದಿಯನ್ನು ತುಳಿಯುವವಳಲ್ಲವೆಂದು ಆತನು ಪೂರ್ಣವಾಗಿ ಅರಿತಿದ್ದನು. ಆದರೂ ಇಂಥ ಅಪರಾತ್ರಿಯಲ್ಲಿ ಆಕೆಯು ಇಂಥ ನಿರ್ಜನ ಪ್ರದೇಶಕ್ಕೆ ಯಾಕೆ ಬಂದಿರಬಹುದೆಂಬದರ ಗೂಢವು ಆತನಿಗೆ ತಿಳಿಯದಾಯಿತು. ''ಅಣ್ಣಾ! ಈಗ ನನ್ನನ್ನು ನಿರಾಕರಿಸುವೆಯಾ'' ಎಂದು ಆಕೆಯು ಪ್ರಶ್ನೆ ಮಾಡಿದ ಕೂಡಲೆ, ಆತನು ಮಾತಿನ ಹೊಯಿಲವನ್ನೇ ತಿರುಗಿಸಿ ನುಡಿದದ್ದೇನಂದರೆ–

ಹೇಮ—ಮನೋರಮೇ, ಅದು ಹಾಗಿರಲಿ, ಈ ಹಾದಿಯಿಂದ ಯಾರಾದರೂ ಹೋದದ್ದನ್ನು ನೀನು ನೋಡಿದೆಯೇನು?

ಮನೋ—ಹೌದು, ಒಬ್ಬನನ್ನು ನೋಡಿದೆನು.

ಹೇಮ—ಅವನ ಪೋಷಾಕು ಯಾರಹಾಗಿತ್ತು?

ಮನೋ—ತುರುಕನ ಹಾಗೆ.

ಹೇಮ—(ಅತ್ಯಂತ ವಸ್ಮಿತನಾಗಿ) ಏನು? ತುರುಕನ ಹಾಗಿತ್ತೇ? ತುರುಕರನ್ನು ನೀನು ನೋಡಿರುತ್ತೀಯಾ?

ಮನೋ—ನಾನು ಈ ಮೊದಲು ಬಹುಜನ ತುರುಕರನ್ನು ನೋ—

ಹೇಮ—ಅ! ನೀನು ತುರುಕರನ್ನು ನೋಡಿರುತ್ತೀಯಾ? ಎಲ್ಲಿ ನೋಡಿರುತ್ತೀ?

ಮನೋ—ಎಲ್ಲಿಯಾದರೂ ನೋಡಿರಲೊಲ್ಲನೇಕೆ, ಅದನ್ನು ತಕ್ಕೊಂಡು ನೀನೇನು ಮಾಡುತ್ತೀ? ನೀನು ಆ ತುರುಕನನ್ನು ಹುಡುಕುವದಕ್ಕಾಗಿಯೇ ಹೊರಟಿರುತ್ತೀಯೇನು?

ಹೇಮ—ಹೌದು, ಆ ತುರುಕನು ಯಾವ ಹಾದಿಯಿಂದ ಹೋದನೆಂಬದನ್ನು ನೀನು ನೋಡಿದೆಯಾ?

ಮನೋ—ಅದನ್ನು ಕೇಳಿ ನೀನೇನು ಮಾಡುತ್ತೀ?

ಹೇಮ—ಅವನನ್ನು ನಾನು ಕೊಲ್ಲಬೇಕಾಗಿದೆ.

ಮನೋ—ಮನುಷ್ಯರನ್ನು ಕೊಂದು ನೀನು ಗಳಿಸುವದೇನು?

ಹೇಮ—ತುರುಕನು ನನ್ನ ವೈರಿಗಳಿರುತ್ತಾರೆ, ಅವರನ್ನು ಕೊಲ್ಲಲು ಪ್ರತಿಜ್ಞೆ ಮಾಡಿರುತ್ತೇನೆ.

ಮನೋ—ಪ್ರತಿಜ್ಞೆಯನ್ನು ಈಡೇರಿಸುವ ಸಾಮರ್ಥ್ಯವು ನಿನಗಿರುವದೋ?

ಹೇಮ—ನಿಶ್ಚಯವಾಗಿ ಇರುವದು.

ಮನೋ—ಹಾಗಾದರೆ ನನ್ನ ಬೆನ್ನುಹತ್ತಿ ಬಾ.

ಮನೋರಮೆಯಾಡಿದ ಈ ಮಾತುಗಳನ್ನು ಕೇಳಿ ಹೇಮಚಂದ್ರನು ಕಂಬದಂತೆ ನಿಂತುಬಿಟ್ಟನು. ಯವನರ ಯುದ್ಧದಲ್ಲಿ ಈ ಬಾಲಿಕೆಯೇ ಹಾದಿಯನ್ನು ತೋರಿಸುವವಳಾಗುವಳೋ, ಎಂಬ ಭಾವವು ಅವನ ಮನಸ್ಸಿನಲ್ಲಿ ಉತ್ಪನ್ನವಾಯಿತು. ಮನೋರಮೆಯು ಈ ಭಾವವನ್ನು ಅರಿತು—ಅಣ್ಣಾ ನನ್ನನ್ನು ಬಾಲಿಕೆಯೆಂದು ತಿಳಿದು ನೀನು ಶಂಕಿಸುತ್ತೀಯಲ್ಲ, ಎಂದು ಕೇಳಲು, ಹೇಮಚಂದ್ರನು ಮನೋರಮೆಯ ಮೋರೆಯನ್ನೇ ದಿಟ್ಟಿಸಿ ನೋಡುತ್ತ ನಿಂತುಕೊಂಡನು. ಪಾಪ! ನೋಡದೇನು ಮಾಡಿಯಾನು.

ಪಶುಪತಿ

ಗೌಡೇಶ್ವರನ ಮುಖ್ಯ ಪ್ರಧಾನನಾದ ಪಶುಪತಿಯು ಒಬ್ಬ ಅಸಾಧಾರಣ ವ್ಯಕ್ತಿಯಾಗಿದ್ದನು. ಆತನ ದರ್ಪವು ದೇಶದಲ್ಲೆಲ್ಲ ವಿಲಕ್ಷಣ ರೀತಿಯಿಂದ ಹಬ್ಬುಗೊಂಡಿತ್ತು. ಗೌಡೇಶ್ವರನಿಗೂ ಕೂಡ ಆತನ ಭಯವಿತ್ತು. ಪಶುಪತಿಯು ಮಾಡಿದ್ದೇ ಮಟ್ಟ, ಕಟ್ಟಿದ್ದೇ ಪಟ್ಟವಾಗಿತ್ತು. ಆತನ ಇಚ್ಛೆಯಂತೆ ರಾಜ್ಯದ ಯಾವತ್ತು ಆಡಳಿತವೂ ಜರಗುತ್ತಿತ್ತು. ಗೌಡೇಶ್ವರನು ಹೆಸರಿಗೆ ಮಾತ್ರ ಅರಸನಾಗಿದ್ದನು; ಅವನನ್ನು ಮುಪ್ಪು ಆವರಿಸಿತ್ತು; ದಿನಹೋದುದರಿಂದ ಅವನ ಉತ್ಸಾಹವು ಕುಗ್ಗಿತ್ತು; ಶಕ್ತಿಯು ಕ್ಷೀಣವಾಗಿತ್ತು; ಬುದ್ಧಿಯು ಮಸಣಿಸಿ ಹೋಗಿತ್ತು; ಅವನು ತೀರ ಪರಾಧೀನನಾಗಿದ್ದನು. ರಾಜ್ಯ ಕಾರಭಾರದ ಕಡೆಗೆ ಅವನು ಎಷ್ಟು ಮಾತ್ರವೂ ಲಕ್ಷಕೊಡುತ್ತಿದ್ದಿಲ್ಲ. ಒಂದು ಪಕ್ಷದಲ್ಲಿ ಆತನಿಂದ ಆ ಕೆಲಸವು ನೀಗುವಂತೆ ಇದ್ದಿಲ್ಲವೆಂದರೂ ಸಲ್ಲುವದು. ಆದರೆ ಇತ್ತ ಮುಖ್ಯಮಂತ್ರಿಯಾದ ಪಶುಪತಿಯ ಸ್ಥಿತಿಯು ಇದಕ್ಕೆ ವಿರುದ್ಧವಾಗಿತ್ತು. ಅವನು ಒಳ್ಳೇ ಮಹತ್ವಾಕಾಂಕ್ಷಿಯಾಗಿದ್ದನು. ಬಲವತ್ತರವಾದ ಕರ್ತೃತ್ವಶಕ್ತಿಯು ಅವನಲ್ಲಿ ನೆಲೆಗೊಂಡಿತ್ತು. ಅವನಲ್ಲಿ ಉತ್ಸಾಹಕ್ಕೆ ಕೊರತೆಯಿದ್ದಿಲ್ಲ. ಈ ಉಜ್ವಲ ಗುಣಗಳಿಂದ ಆತನು ಮೆಲ್ಲಮೆಲ್ಲನೆ ರಾಜ್ಯಕಾರಭಾರದ ಎಲ್ಲ ಸೂತ್ರಗಳನ್ನು ತನ್ನ ಕೈಯಲ್ಲಿ ತಕ್ಕೊಂಡಿದ್ದನು. ಇದಲ್ಲದೆ ಅವನು ಅರಸನ ಸಂಪೂರ್ಣವಾದ ಬಲವನ್ನು ಪಡೆದು ಅನಿಯಂತ್ರಿತವಾದ ರಾಜ್ಯಶಕಟವನ್ನು ನಡೆಸುತ್ತಿದ್ದನು. ಅರಸನು ಪಶುಪತಿಯ ಕೆಲಸಕ್ಕೆ ಪಿಟ್ಟೆಂದು ಮಾತಾಡದೆ ಒಪ್ಪಿಕೊಳ್ಳುತ್ತಿದ್ದನು. ಒಟ್ಟಿಗೆ, ಪಶುಪತಿಯ ಅಧಿಕಾರ—ವೈಭವ—ಸನ್ಮಾನಗಳು ಅರಸನಿಗಿಂತಲೂ ಹೆಚ್ಚಾಗಿದ್ದವು.

ಈಗ್ಗೆ ಈ ಕರ್ತೃತ್ವಶಾಲಿಯ ವಯಸ್ಸು ಸ್ವಲ್ಪ ಹೆಚ್ಚು ಕಡಿಮೆ ಮೂವತ್ತಯ್ದು ವರ್ಷದ್ದಿದ್ದಿತು. ಆತನು ಒಳ್ಳೇ ಚಲುವನಾಗಿದ್ದನು. ಅವನ ಶರೀರ ಪ್ರಕೃತಿಯು ಸದೃಢವಾಗಿತ್ತು. ಮೈಕಟ್ಟು ಕಸುವಿನದಾಗಿತ್ತು. ವಿಶಾಲವಾದ ವಕ್ಷಸ್ಥಳದಿಂದಲೂ, ತಕ್ಕಷ್ಟು ಅಸ್ತಿ–ಮಾಂಸಗಳಿಂದ ತುಂಬಿಕೊಂಡಿದ್ದ ತೋಳು–ಕೈಕಾಲು ಮುಂತಾದ ಅವಯವಗಳಿಂದಲೂ ಆತನ ದೀರ್ಘ ದೇಹವು ಬಹು ಸುಂದರವಾಗಿ ಒಪ್ಪುತ್ತಿತ್ತು. ಕಾದ ಬಂಗಾರವನ್ನು ಹೋಲುವ ಅವನ

ಅಂಗಕಾಂತಿಯೂ, ಉನ್ನತವಾದ ಹಣೆಯೂ, ಗಿಳಿಯ ಮೂಗನ್ನು ಹೋಲುವ ದೊಡ್ಡ ಮೂಗೂ, ಎಣೆಯಿಲ್ಲದ ತೇಜಸ್ಸೂ, ಪ್ರಕಾಶಮಾನವಾದ ಕಣ್ಣುಗಳೂ, ಜ್ಞಾನ—ಗಾಂಭೀರ್ಯ—ವಿಲಕ್ಷಣ ಕರ್ತೃತ್ವ ಶಕ್ತಿಗಳು ಮಿನುಗುವ ಅವನ ಮೋರೆಯ ಕಳೆಯೂ, ನೋಡುವವರ ಮನಸ್ಸಿನಲ್ಲಿ ಅವನ ವಿಷಯವಾಗಿ ಪೂಜ್ಯಭಾವವನ್ನೇ ಉಂಟುಮಾಡುತ್ತಿದ್ದವು. ಇನ್ನು ದಿಟ್ಟಿಸಿ ನೋಡಿದರೆ, ಆತನ ಮುಖಮುದ್ರೆಯಲ್ಲಿ ಯಾವದೋ ಒಂದು ಗಹನವಾದ ಚಿಂತೆಯ ಕರ್ಕಶಛಾಯೆಯು ಮಾತ್ರ ಅಲ್ಪ ಸ್ವಲ್ಪ ತೋರುತ್ತಿತ್ತೆಂಬದು ನಿಜವು; ಆದರೂ ಅಷ್ಟು ದೊಡ್ಡ ರಾಜ್ಯದಲ್ಲಿ ಅವನಷ್ಟು ಸರ್ವಾಂಗಸುಂದರನಾದ ಘನತರ ಯೋಗ್ಯತೆಯ ಪುರುಷನು ಒಬ್ಬನಾದರೂ ಇದ್ದಿಲ್ಲ. ಅಂದಬಳಿಕ ಅವನು ಅರಸನ ಮುಪ್ಪಿನ ಯೋಗದಿಂದ ತನಗಾಗಬಹುದಾಗಿದ್ದ ಲಾಭವನ್ನು ಪಡೆದದ್ದರಲ್ಲಿ ಆಶ್ಚರ್ಯವೇನು?

ಪಶುಪತಿಯು ಜಾತಿಯಿಂದ ಬ್ರಾಹ್ಮಣನಾಗಿದ್ದನು; ಆದರೆ ಆತನ ಹುಟ್ಟಿದ ಸ್ಥಳವಾವದು? ಅವನ ಆಪ್ತೇಷ್ಟರು ಯಾರು? ಅವರು ಎಲ್ಲಿ ಇರುವರು? ಅವನ ಕುಲಗೋತ್ರಗಳ ವಿಚಾರವೇನು? ಎಂಬಿವೇ ಮೊದಲಾದ ಸಂಗತಿಗಳ ಸಂಪೂರ್ಣಜ್ಞಾನವು, ಇಡಿಯ ರಾಜ್ಯದಲ್ಲಿ ಒಬ್ಬನಿಗಾದರೂ ಇದ್ದಿಲ್ಲ. ಪಶುಪತಿಯು ಒಬ್ಬ ವಿದ್ವಾಂಸನಾದ ಬಡ ಬ್ರಾಹ್ಮಣನ ಮಗನೆಂಬದನ್ನು ಮಾತ್ರ ಜನರು ಅರಿತಿದ್ದರು. ಕೇವಲ ತನ್ನ ಬುದ್ಧಿಪರಾಕ್ರಮದಿಂದಲೂ, ಕರ್ತೃತ್ವಶಕ್ತಿಯ ಬಲದಿಂದಲೂ ಆತನು ಮುಖ್ಯ ಪ್ರಧಾನ—ಪದವಿಯನ್ನು ಪಡೆದು, ಸಾಂಪ್ರತದ ಗೌಡದೇಶದ ಎರಡನೆಯ ಅರಸನೇ ಆಗಿದ್ದನು. ಪ್ರಾಯದಲ್ಲಿ ಆತನು ಕಾಶೀಪಟ್ಟಣದೊಳಗೆ ತನ್ನ ತಂದೆಯ ಬಳಿಯಲ್ಲಿ ಶಾಸ್ತ್ರಾಧ್ಯಯನ ಮಾಡಿದ್ದನು. ಅದೇ ಪಟ್ಟಣದಲ್ಲಿದ್ದ ಕೇಶವನೆಂಬ ಬ್ರಾಹ್ಮಣನ ಮಗಳಾದ ಎಂಟುವರ್ಷದ ಹೈಮವತಿ ಎಂಬ ಕನ್ಯೆಯೊಡನೆ ಆತನ ಲಗ್ನವಾಗಿತ್ತು. ಹೈಮವತಿಯು ಒಳ್ಳೆಯ ಚಲುವೆಯಾಗಿದ್ದಳು. ಲಗ್ನವಾದ ರಾತ್ರಿಯೇ ಕೇಶವನು ಹೈಮವತಿಯೊಡನೆ ಒಮ್ಮಿಂದೊಮ್ಮೆ ಅದೃಶ್ಯನಾದವನು. ಈವೊತ್ತಿನ ವರೆಗೂ ಬಾರದ್ದರಿಂದ ಪಶುಪತಿಯು ಹೆಸರಿಗೆ ಲಗ್ನವಾಗಿ ಕುಲಗೆಟ್ಟಂತೆ ಮಾತ್ರ ಆಗಿತ್ತು. ಆತನಿಗೆ ಈವೊತ್ತಿನವರೆಗೆ ಪತ್ನಿ ಸಹವಾಸವಿದ್ದಿಲ್ಲ. ಕೆಲವೊಂದು ವಿಶೇಷ ಕಾರಣಕ್ಕಾಗಿ ಆತನು ಎರಡನೆಯ ಲಗ್ನವನ್ನು ಮಾಡಿಕೊಂಡಿದ್ದಿಲ್ಲ. ಅವನು ಅರಮನೆಯನ್ನು ಹೀಯಾಳಿಸುವಂಥ ಸುಖವೈಭವ ಸಂಪನ್ನವಾದ ಮಂದಿರದಲ್ಲಿ ವಾಸಿಸುತ್ತಿದ್ದರೂ, ಹೃದಯಾನಂದವನ್ನೀಯುವ ಗೃಹದೇವತೆಯ ಕಟಾಕ್ಷಕಾಂತಿಯ ಅಭಾವದ ಮೂಲಕ ಆ ಮಂದಿರವು, ಕಗ್ಗತ್ತಲೆಯ ಹಾಳು ಮನೆಯಂತೆ ಅವನಿಗೆ ತೋರುತ್ತಿದ್ದಿತು.

ಒಂದುದಿನ ನಾಲ್ಕುತಾಸು ರಾತ್ರಿಯಾಗಿ ಎಲ್ಲ ಕಡೆಯಲ್ಲಿ ಸದ್ದು ಅಡಗಿತ್ತು. ಆಗ ಪಶುಪತಿಯು ತನ್ನ ಮನೆಯೊಳಗಿನ ಒಂದು ಕೋಣೆಯಲ್ಲಿ ದೀಪದ ಮಂದಪ್ರಕಾಶದೊಳಗೆ ಸಚಿಂತ ಮುದ್ರೆಯಿಂದ ಯಾರದೋ ಹಾದಿಯನ್ನು ನೋಡುತ್ತ ಕುಳಿತಿದ್ದನು. ಏಕಾಂತವಾದ ಆ ಕೋಣೆಗೆ ಹೊಂದಿ ಒಂದು ಮಾವಿನ ತೋಪು ಇದ್ದು, ಆ ತೋಪಿನೊಳಗಿಂದ ಮನೆಯೊಳಗೆ ಗುಪ್ತವಾಗಿ ಬರಲಿಕ್ಕೂ, ಮನೆಯಿಂದ ತೋಪಿಗೆ ಗುಪ್ತವಾಗಿ ಹೋಗಲಿಕ್ಕೂ ಮಾರ್ಗವಿತ್ತು. ಆ

ಗುಪ್ತಮಾರ್ಗದ ಬಾಗಿಲನ್ನು ಯಾವನೋ ಒಬ್ಬನು ಹೊರಗಿನಿಂದ ಮೆಲ್ಲನೆ ಬಡಿದನು. ಕೂಡಲೆ ಪಶುಪತಿಯು ಎದ್ದುಹೋಗಿ ಬಾಗಿಲನ್ನು ತೆರೆಯಲು, ಒಬ್ಬ ಮುಸಲ್ಮಾನ ಗೃಹಸ್ಥನು ಒಳಗೆ ಬಂದನು. ತರುವಾಯ ಪಶುಪತಿಯು ಬಾಗಿಲು ಇಕ್ಕಿಕೊಂಡು ಬಂದು ತನ್ನ ಸ್ಥಳದಲ್ಲಿ ಕುಳಿತುಕೊಂಡನು. ಹೇಮಚಂದ್ರನು ತನ್ನ ಕಿಡಿಕಿಯೊಳಗಿಂದ ನೋಡಿದ್ದ ಮುಸಲ್ಮಾನ ವ್ಯಕ್ತಿಯೇ ಈಗ ಇಲ್ಲಿಗೆ ಬಂದಿದ್ದನು. ಆ ಮುಸಲ್ಮಾನನು ತನ್ನ ಬಳಿಯಲ್ಲಿ ಬಂದು ಕುಳಿತ ಕೂಡಲೆ, ಪಶುಪತಿಯು ನಂಬಿಗೆಗಾಗಿ ಗುರುತು ಕೇಳಿದನು. ತುರುಕನು ಅದನ್ನು ಕೊಡಲು, ಕೆಳಗೆ ಬರೆದಂತೆ ಅವರ ಸಂಭಾಷಣವಾಯಿತು—

ಪಶು—ತಾವು ತುರುಕ ಸೇನಾಪತಿಯ ಗುಪ್ತ ಚಾರರಾದುದರಿಂದ ನನ್ನ ನಂಬಿಗೆಗೂ ಪೂರ್ಣವಾಗಿ ಪಾತ್ರರಿರುತ್ತೀರಿ. ತಮ್ಮ ಹೆಸರು ಮುಹಮ್ಮದಲಿಯಲ್ಲವೇ? ಸೇನಾಪತಿಯ ಕಡೆಯಿಂದ ಯಾವ ಸುದ್ದಿಯನ್ನು ತಂದಿರುತ್ತೀರಿ?

ಮುಹಮ್ಮದಲಿ—ಖಿಲಜೀಸಾಹೇಬರ ಹೇತುವನ್ನು ತಾವು ಬಲ್ಲಿರಷ್ಟೇ? ಯುದ್ಧವಾಗದೆ, ಒಂದು ರಕ್ತದ ಹನಿಯಾದರೂ ಭೂಮಿಯಲ್ಲಿ ಬೀಳದೆ ಗೌಡದೇಶವು ಕೈಸೇರಬೇಕೆಂದು ಅವರು ಮನಮುಟ್ಟಿ ಬಯಸುವರು. ಏನುಮಾಡಿದರೆ ನೀವು ಈ ರಾಜ್ಯವನ್ನು ನಮಗೆ ಹಾಗೆ ಒಪ್ಪಿಸುವಿರಿ?

ಪಶು—(ಸ್ವಲ್ಪ ವಿಕಟಹಾಸ್ಯಮಾಡಿ) ಖಿಲಜೀಸಾಹೇಬರಿಗೆ ವಚನಕೊಟ್ಟಂತೆ ನಾನು ಗೌಡರಾಜ್ಯವನ್ನು ಅವರಿಗೆ ಒಪ್ಪಿಸುವೆನೋ ಇಲ್ಲವೋ ಎಂಬುದನ್ನು ನಿಶ್ಚಯವಾಗಿ ಹೇಳಲಾರೆನು. ರಾಜದ್ರೋಹಿಯಾಗುವದು ಭಯಂಕರ ಪಾಪವಾಗಿರುವದು. ನಾನು ಈ ಭಯಂಕರ ಪಾಪವನ್ನು ಹೇಗೆ ಮಾಡ........

ಈ ಪ್ರಕಾರ ಪಶುಪತಿಯು ನುಡಿಯುತ್ತಿರಲು, ಮುಹಮ್ಮದಲ್ಲಿಯು ಸಿಟ್ಟಿನಿಂದ ತಟ್ಟನೆ ಮೇಲಕ್ಕೆದ್ದು ಹಿಂತಿರುಗಿ ಹೋಗುವ ಸೋಗು ತೋರಿಸಿ ಅನ್ನುತ್ತಾನೆ—

ಮುಹ—ಒಳಿತಾಯಿತು, ನಾನು ಹೋಗುತ್ತೇನೆ. ನಿಮ್ಮ ನಿಶ್ಚಯವಿಲ್ಲದಿದ್ದರೆ, ನೀವಾಗಿ ಖಿಲಜೀಸಾಹೇಬರ ಕಡೆಗೆ ದೂತನನ್ನು ಏಕೆ ಕಳಿಸಿದ್ದೀರಿ?

ಪಶು—(ನಗುತ್ತ) ಯುದ್ಧಮಾಡುವದರ ಉಬ್ಬು, ಖಿಲಜೀಸಾಹೇಬರಲ್ಲಿ ಎಷ್ಟರ ಮಟ್ಟಿಗೆ ಇರುತ್ತದೆಂಬದನ್ನು ತಿಳಕೊಳ್ಳುವದಕ್ಕಾಗಿ.

ಮುಹ—ಹೀಗೋ! ಒಳಿತಾಯಿತು. ಇನ್ನು ಮೇಲೆ ಅದನ್ನು ತಿಳಕೊಳ್ಳಿರಿ. ನಿಮಗೆ ನಾನು ಖಂಡಿತವಾಗಿ ಹೇಳುತ್ತೇನೆ. ಯುದ್ಧದಿಂದ ಖಿಲಜೀಸಾಹೇಬರಿಗಾಗುವಷ್ಟು ಆನಂದವು ಬೇರೆ ಯಾತರಿಂದಲೂ ಆಗುವದಿಲ್ಲ, ಇದನ್ನು ಮರೆಯಬೇಡಿರಿ.

ಈ ಪ್ರಕಾರ ನುಡಿದು ಮುಹಮ್ಮದಲಿಯು ಸಂತಾಪದಿಂದ ಹೊರಟು ಹೋಗಹತ್ತಿದನು. ಆಗ ಪಶುಪತಿಯು ಅವನ ಕೈಯನ್ನು ಹಿಡಿದು ಒತ್ತಾಯದಿಂದ ಕೆಳಗೆ ಕುಳ್ಳಿರಿಸಿಕೊಂಡು ನುಡಿಯುತ್ತಾನೆ.

ಪಶು—ಹೀಗೆ ಸಿಟ್ಟಾಗಬೇಡಿರಿ, ನಾನನ್ನುವದನ್ನು ನೆಟ್ಟಗೆ ಕೇಳಿಕೊಳ್ಳಿರಿ. ಮುಸಲ್ಮಾನರಿಗೆ ರಾಜ್ಯವನ್ನು ಒಪ್ಪಿಸುವದಕ್ಕಾಗಿ ನಾನು ಎಳ್ಳಷ್ಟಾದರೂ ಹಿಂದೆ ಮುಂದೆ ನೋಡುವದಿಲ್ಲ. ನಿಜವಾಗಿ ನಾನೇ ಗೌಡೇಶ್ವರನಿದ್ದು, ಈಗಿದ್ದ ಅರಸನು ಹೆಸರಿಗೆ ಮಾತ್ರ ಅರಸನಾಗಿರುವದರಿಂದ ಹಾಗೆ ಮಾಡುವದು ನನಗೆ ಅಸಾಧ್ಯವೂ ಅಲ್ಲ; ಆದರೆ ನೀವೇ ಹೇಳಿರಿ, ಖಿಲಜೀಸಾಹೇಬರಿಂದ ನನಗೆ ಯೋಗ್ಯವಾದ ಪ್ರತಿಫಲವು ದೊರೆತಹೊರತು, ನಾನು ನನ್ನ ರಾಜ್ಯವನ್ನು ನಿಮಗೆ ಏಕೆ ಒಪ್ಪಿಸಬೇಕು?

ಮಹ—ನೀವು ಪ್ರತಿಫಲವನ್ನೇನು ಬಯಸುವಿರಿ?

ಪಶು—ಖಿಲಜೀಸಾಹೇಬರು ಏನು ಕೊಟ್ಟಾರು?

ಮಹ—ನಿಮಗೆ ಈಗ ಇದ್ದದ್ದರಲ್ಲಿ ಅವರು ಎಷ್ಟು ಮಾತ್ರವೂ ಕೈಹಾಕುವದಿಲ್ಲ, ನಿಮ್ಮ ಜೀವನವು, ಐಶ್ವರ್ಯವು, ಪದವಿಯು, ಅಧಿಕಾರವು ಇವು ಈಗಿನಂತೆಯೇ ಮುಂದಾದರೂ ನಡಿಸಲ್ಪಡುವವು.

ಪಶು—ಹೀಗಾದಲ್ಲಿ ನನಗೆ ಹೆಚ್ಚಿನದೇನು ದೊರೆಯಿತು? ಇವೆಲ್ಲ ಈಗ ನನಗೆ ದೊರತೇ ಇರುವವು. ಅಂದಬಳಿಕ ಏತರ ಆಶೆಯಿಂದ ನಾನು ಭಯಂಕರ ಪಾಪವನ್ನು ಮಾಡಲಿಕ್ಕೆ ಹೆಣಗಲಿ?

ಮಹ—ಪ್ರಧಾನಸಾಹೇಬರೇ, ನೀವು ಒಂದು ಮಾತನ್ನು ಮರೆತುಬಿಟ್ಟಿರಿ, ಚನ್ನಾಗಿ ವಿಚಾರಮಾಡಿರಿ. ನಮ್ಮ ಪ್ರೀತಿಯನ್ನು ನೀವು ಸಂಪಾದಿಸದಿದ್ದರೆ, ಈಗಿದ್ದದ್ದರಲ್ಲಿ ನಿಮಗೆ ಏನೂ ಉಳಿಯಲಿಕ್ಕಿಲ್ಲ, ಯುದ್ಧಕ್ಕೆ ಸಿದ್ಧರಾದಲ್ಲಿ ನಿಮ್ಮ ಈವೊತ್ತಿನ ಅಧಿಕಾರ ವೈಭವಗಳಂತು ಒತ್ತಟ್ಟಿಗಿರಲಿ, ಜೀವಕ್ಕೂ ನೀವು ಎರವಾದೀರಿ.

ಪಶು—ಸೋಲುಗೆಲವುಗಳು ಯಾರ ಕೈಯಲ್ಲಿಯೂ ಇರುವದಿಲ್ಲ, ಯುದ್ಧದಿಂದ ನಿರ್ಣಯವಾಗುವವರೆಗೆ ಪರಿಣಾಮವು ಹೀಗೆಯೇ ಆದೀತು, ನಾನು ಹೀಗೆಯೇ ಮಾಡೇನು ಎಂಬದನ್ನು ಯಾವನೂ ಹೇಳಲಾರನು. ಯುದ್ಧ ಮಾಡಲಿಕ್ಕೆ ನಾನು ಅಂಜುವೆನೆಂದು ನೀವು ಎಷ್ಟುಮಾತ್ರವೂ ತಿಳಕೊಳ್ಳಬೇಡಿರಿ. ಇನ್ನೊಂದು ಮಾತನ್ನು ನೀವು ನೆನಪಿನಲ್ಲಿಡತಕ್ಕದ್ದು. ಈಗಿನ ಕಾಲವು ಯುದ್ಧಮಾಡಲಿಕ್ಕೆ ನಮಗೆ ಒಳ್ಳೇ ಅನುಕೂಲವಾಗಿರುತ್ತದೆ; ಏಕೆಂದರೆ, ಮಗಧ ದೇಶದಲ್ಲಿ ಬಂಡಾಯವು ಎದ್ದಿದ್ದು, ಖಿಲಜೀಸಾಹೇಬರು ಅದನ್ನು ಮುರಿಯತೊಡಗಿದ್ದಾರೆ. ಆ ಬಂಡು ಮುರಿಯುವವರೆಗೆ ಅವರು ಗೌಡದೇಶವನ್ನು ಕೈವಶ ಮಾಡಿಕೊಳ್ಳುವ ಆಶೆಯನ್ನು ಬಿಡಬೇಕಾಗಿದೆ. ಇವೆಲ್ಲ ಸಂಗತಿಗಳನ್ನು ನಾನು ಬಲ್ಲೆನು. ನಾನು ಕೇಳಿಕೊಳ್ಳುವದನ್ನು ಖಿಲಜೀ ಸಾಹೇಬರು ನಡಿಸಲಿ—ನಡಿಸದಿರಲಿ, ಯುದ್ಧಮಾಡುವ ಪ್ರಸಂಗವೇ ಒದಗಿದಲ್ಲಿ ಈಗಿನ ಕಾಲವು ನಮಗೆ ಅನುಕೂಲವಾಗಿರುವದು.

ಮಹಮ್ಮದಲಿ—(ಸ್ವಲ್ಪ ತಿರಸ್ಕಾರದಿಂದ) ಉಹ್! ಇಂಥ ಕ್ಷುದ್ರ ನೊರಜುಗಳ ಕಾಟವನ್ನು ನಾವು ಲೆಕ್ಕಿಸುವವರಲ್ಲ; ಆದರೆ ನಿಮ್ಮ ಆಂಬೋಣವಾದರೂ ತಿಳಿದರೆ, ಖಿಲಜೀಸಾಹೇಬರಿಗೆ ತಿಳಿಸಲಿಕ್ಕೆ ನೆಟ್ಟಗಾಗುತ್ತದೆ!

ಪಶು—ನಾನು ಸಾಂಪ್ರತದಲ್ಲಿ ಗೌಡದೇಶದ ಅರಸನಿರುತ್ತೇನೆಂಬದರಲ್ಲಿ ಸಂಶಯವಿಲ್ಲ. ಆದರೂ ಜನರು ನನ್ನನ್ನು ಅರಸನೆಂದು ತಿಳಿದಿರುವದಿಲ್ಲ. ಈ ಕಳಂಕದಿಂದ ದೂರವಾಗಿ, ಜನರಿಂದ ಅರಸನೆಂದು ಕರಿಸಿಕೊಳ್ಳಬೇಕೆಂತಲೂ, ಸಿಂಹಾಸನವೇರಿ ರಾಜ್ಯವಾಳಬೇಕೆಂತಲೂ ನಾನು ಬಯಸುತ್ತೇನೆ. ಗೌಡದೇಶದ ಸಿಂಹಾಸನದ ಮೇಲೆ ಈಗಿನ ಅರಸನ ವಂಶದವರ ಹಕ್ಕು ಉಳಿಯದೆ, ನಾನೂ ನನ್ನ ವಂಶದವರೂ ರಾಜ್ಯಾರೂಢರಾಗಬೇಕೆಂಬ ಆಕಾಂಕ್ಷೆಯನ್ನು ನಾನು ಧರಿಸಿದ್ದೇನೆ.

ಮಹಮ್ಮದಲಿ—ಹೀಗಾದಲ್ಲಿ ನಮಗಾಗುವ ಲಾಭವೇನು? ಇಷ್ಟು ಪ್ರಯತ್ನಪಟ್ಟು ಕಡೆಯಲ್ಲಿ ನಮ್ಮ ಕೈಸೇರುವದೇನು? ನೀವು ನಮಗೇನು ಕೊಡುವಿರಿ?

ಪಶು—ನಾನು ಯವನರ ಮಾಂಡಲಿಕನಾಗಿ ಅವರಿಗೆ ವರ್ಷ ವರ್ಷಕ್ಕೆ ಕರಭಾರವನ್ನು ಕೊಡುತ್ತಹೋಗುವೆನು.

ಮಹಮ್ಮದಲಿ—ಒಳ್ಳೇದು, ನನ್ನ ಮಾತಿಗಿಷ್ಟು ಉತ್ತರ ಕೊಡಿರಿ. ನೀವು ಹೇಗೂ ಈಗ ಗೌಡದೇಶದ ನಿಜವಾದ ಅರಸರಾಗಿರುತ್ತೀರಿ. ಈಗಿದ್ದ ಅರಸನು ಕೇವಲ ನಾಮಧಾರಿಯಾಗಿರುತ್ತಾನೆ. ಯಾವತ್ತು ಅಧಿಕಾರವು ನಿಮ್ಮ ಕೈಯಲ್ಲಿಯೇ ಇರುತ್ತದೆ. ಅಂದಬಳಿಕ ನಮ್ಮ ಸಹಾಯವನ್ನು ನೀವು ಬಯಸುವದೇಕೆ? ನಮ್ಮೊಡನೆ ಗುಪ್ತವಾದ ಕರಾರುಗಳನ್ನು ಮಾಡಿಕೊಂಡು ನಮಗೆ ಪ್ರತಿವರ್ಷ ನಿರರ್ಥಕವಾಗಿ ಕಪ್ಪಕಾಣಿಕೆಗಳನ್ನಾದರೂ ನೀವು ಯಾಕೆ ಕೊಡುತ್ತೀರಿ?

ಪಶು–ಬಹು ಯೋಗ್ಯವಾಗಿ ಮಾತಾಡಿದಿರಿ. ನನ್ನ ಮನಸ್ಸಿನಲ್ಲಿದ್ದದ್ದನ್ನು ಬಚ್ಚಿಡದೆ ನಿಮಗೆ ಹೇಳುತ್ತೇನೆ. ಈಗಿನ ಅರಸನು ನನ್ನ ಯಜಮಾನನಿರುತ್ತಾನೆ. ಮುಪ್ಪಿನಿಂದ ಪರಾಧೀನನಾದುದರಿಂದ ಆತನು ರಾಜ್ಯದ ಯಾವತ್ತು ಕಾರಭಾರವನ್ನು ನಂಬಿಗೆಯಿಂದ ನನಗೆ ಒಪ್ಪಿಸಿರುವನು. ಇದಲ್ಲದೆ ಆತನು ನನ್ನನ್ನು ಮನಮುಟ್ಟಿ ಪ್ರೀತಿಸುತ್ತಿರುವನು. ಹೀಗಿದ್ದು, ಅಧಿಕಾರದ ಬಲದಿಂದ ನಾನು ಆತನನ್ನು ಪದಚ್ಯುತನಾಗಮಾಡಿ, ನಾನೇ ಸಿಂಹಾಸನವೇರಿದರೆ, ಪ್ರತಿ ಒಬ್ಬರೂ ನನ್ನನ್ನು ಕೃತಘ್ನನೂ, ಪಾತಕಿಯೂ ಎಂದು ತಿರಸ್ಕರಿಸಬಹುದು. ಎಲ್ಲರೂ ನನ್ನೊಡನೆ ದ್ವೇಷಬಳಿಸಿ, ನನಗೆ ಸುಖದಿಂದ ರಾಜ್ಯವಾಳಗೊಡಲಿಕ್ಕಿಲ್ಲ; ಆದರೆ ನೀವು ಯುದ್ಧದ ನೆವದಿಂದ ರಾಜಧಾನಿಗೆ ಬಂದಾಗ ನಾನು ಸಹಾಯಮಾಡಿ, ರಕ್ತಪಾತವಾಗದಂತೆ ನಿಮಗೆ ರಾಜ್ಯವನ್ನು ಒಪ್ಪಿಸಿಕೊಟ್ಟರೆ, ನೀವು ವೃದ್ಧ ಅರಸನನ್ನ ಪದಚ್ಯುತನಾಗಮಾಡಿ, ನನ್ನನ್ನು ಪಟ್ಟಕ್ಕೆ ಕೂಡ್ರಿಸುವಿರಿ. ಹೀಗಾಗುವದರಿಂದ ಯಾರಿಗೂ ಯಾವಮಾತಿನ ಸಂಶಯವು ಬರುವದಿಲ್ಲ; ನನ್ನ ಮೇಲೆ ಯಾರೂ ತಪ್ಪು ಹೊರಿಸುವದಿಲ್ಲ. ಹೊರತು ಎರಡನೆಯ ಸಂಗತಿಯೇನಂದರೆ, ಅರಸನದೇನೂ ತಪ್ಪು ಇಲ್ಲದೆ ಅನ್ಯಾಯದಿಂದ ನಾನು ಆತನನ್ನು ಸಿಂಹಾಸನದಿಂದ ತಳ್ಳಿ ಪಟ್ಟವೇರಿದರೆ, ರಾಜ್ಯದೊಳಗಿನ ಸರದಾರರೂ ಯಾವತ್ತು ಪ್ರಜೆಗಳೂ ನನ್ನನ್ನು ಮೀರಿನಿಂತು ಬಂಡಾಯವನ್ನೆಬ್ಬಿಸಬಹುದು. ಇಂಥ ಪ್ರಸಂಗದಲ್ಲಿ ನಿಮ್ಮ ಸಹಾಯವಿದ್ದರೆ, ನಾನು ಸಹಜವಾಗಿ ಆ ಬಂಡಾಯವನ್ನು ಮುರಿದು ಹಾಕುವೆನು. ಇವೆರಡು ಸಂಗತಿಗಳ ಹೊರತು ನಿಮ್ಮ ಸಹಾಯವನ್ನು ಬಯಸಲಿಕ್ಕೆ ಮೂರನೆಯದೊಂದು ಸಂಗತಿಯು ಕಾರಣವಾಗಿರುವದು. ಅದನ್ನೂ

ಹೇಳುತ್ತೇನೆ ಕೇಳಿರಿ. ಈಗ ನಿಮ್ಮೊಡನೆ ಸಖ್ಯ ಬೆಳಿಸದೆ ಸ್ವತಂತ್ರವಾಗಿ ಈಗಿನ ಅರಸನನ್ನು ಪಟ್ಟದಿಂದ ದೂಡಿ ನಾನು ಅರಸನಾದರೆ, ಈಗಿನ ಅರಸನಿಗೂ ನಿಮಗೂ ಇರುವ ದ್ವೇಷ ಸಂಬಂಧವೇ ನನಗೂ ನಿಮಗೂ ಉಂಟಾಗಿ, ನೀವು ನನ್ನೊಡನೆ ಯುದ್ಧಕ್ಕೆ ಬರಬಹುದು. ಇನ್ನು ನಾನು ಯುದ್ಧ ಮಾಡಲಿಕ್ಕೆ ಹೆದರುತ್ತೇನೆಂದು ತಿಳಿಯಬೇಡಿರಿ. ಆದರೂ ಪ್ರಜೆಗಳು ಅಸಂತುಷ್ಟ ರಾಗಿರುವಾಗ್ಗೆ ನಿಮ್ಮೊಡನೆ ಯುದ್ಧ ಮಾಡತೊಡಗುವದು ಸ್ವಲ್ಪ ವಿಚಾರಿಸತಕ್ಕ ಮಾತಾಗಿರುವದು, ಜಯಾಪಜಯಗಳು ಯಾರಿಗೆ ಒದಗುವವೆಂಬದನ್ನು ಹೇಳಲಿಕ್ಕಾಗದಿದ್ದರೂ, ಜಯದಿಂದ ನನಗೆ ವಿಶೇಷ ಲಾಭವೇನೂ ಆಗದೆ, ಅಪಜಯವಾದರೆ ಮಾತ್ರ ನಾನು ಸರ್ವಸ್ವವನ್ನು ಕಳಕೊಂಡು ಪ್ರಾಣಕ್ಕೆ ಎರವಾಗಬಹುದು; ಆದರೆ ನಿಮ್ಮೊಡನೆ ಗುಪ್ತಕರಾರುಗಳನ್ನು ಮಾಡಿಕೊಂಡು ಪಟ್ಟವನ್ನು ಏರಿದರೆ, ಯಾತರ ಅಂಜಿಕೆಯೂ ಉಳಿಯದು. ಇದೂ ಅಲ್ಲದೆ, ಯುದ್ಧದಲ್ಲಿ ತೊಡಗಿದರೆ, ಹೊಸ ರಾಜ್ಯವು ಬಹು ಕಾಲದವರೆಗೆ ಸುಯಂತ್ರವಾಗಿ ಸಾಗಲಾರದು.

ಈ ಮೇರೆಗೆ ಪಶುಪತಿಯು ಆಡಿದ ಮಾತುಗಳನ್ನು ಮಹಮ್ಮದಲಿಯು ಚಿತ್ತಕೊಟ್ಟು ಕೇಳಿ ಅನ್ನುತ್ತಾನೆ.

ಮಹ—ನೀವು ಒಳ್ಳೆಯ ಕಾರಸ್ಥಾನಿಗಳೂ, ದೂರದರ್ಶಿಗಳೂ ಆದ ಮುತ್ಸದ್ದಿಗಳಿರು ವಿರೆಂದು ನಾನು ಮನಗಂಡೆನು. ನೀವು ನಿಮ್ಮ ಮನಸ್ಸಿನಲ್ಲಿದ್ದದ್ದನ್ನು ಬಚ್ಚಿಡದೆ ನನ್ನ ಮುಂದೆ ಹೇಳಿದ್ದಕ್ಕಾಗಿ ನಾನು ಉಪಕೃತನಾಗಿದ್ದೇನೆ. ನಿಮ್ಮ ಮನಸ್ಸಿನಲ್ಲಿ ಏನಿರುತ್ತದೆಂಬದರ ಸಂಶಯವು ನನಗೆ ಎಷ್ಟುಮಾತ್ರವೂ ಉಳಿಯಲಿಲ್ಲ, ಇನ್ನು ಮೇಲೆ ನಾನಾದರೂ ಖಿಲಜೀಸಾಹೇಬರ ಮನಸ್ಸಿನಲ್ಲಿದ್ದದ್ದನ್ನು ಸ್ಪಷ್ಟವಾಗಿ ಹೇಳುತ್ತೇನೆ ಕೇಳಿರಿ. ನೀವು ಹೇಳಿದಂತೆ ಸಾಂಪ್ರತದಲ್ಲಿ ಖಿಲಜೀಸಾಹೇಬರ ಮನಸ್ಸು ಹಲವು ಬಗೆಯ ಚಿಂತೆಗಳಲ್ಲಿ ಮುಳುಗಿರುವದು ನಿಜವು. ಆದರೂ ಇಡೀ ಹಿಂದುಸ್ಥಾನದಲ್ಲಿ ಮುಸಲ್ಮಾನರ ಹೊರತು ಅನ್ಯರ ಆಳ್ವಿಕೆಯು ಇರಕೂಡದೆಂದು ಮುಸಲ್ಮಾನರಾದ ನಮ್ಮೆಲ್ಲರ ಮಹತ್ವಾಕಾಂಕ್ಷೆಯಾಗಿರುವದು. ನಿಮ್ಮ ಬಯಕೆಯಂತೆ ನಿಮ್ಮನ್ನು ಗೌಡದೇಶದ ಮಾಂಡಲೀಕರನ್ನಾಗಿ ಮಾಡಬಹುದು. ಘೋರೀ ಮಹಮ್ಮದನ ಪ್ರತಿನಿಧಿಯಾದ ಕುತುಬದ್ದೀನನು ದಿಲ್ಲಿಯಲ್ಲಿದ್ದಂತೆಯೂ, ಕುತುಬುದ್ದೀನನ ಪ್ರತಿನಿಧಿಯು ಪೂರ್ವಪ್ರಾಂತದಲ್ಲಿ ಬಖತ್ಯಾರಖಿಲಜಿಯು ಇರುವಂತೆಯೂ, ಬಖತ್ಯಾರಖಿಲಜಿಯ ಪ್ರತಿನಿಧಿಗಳಾಗಿ ನೀವು ಗೌಡದೇಶದಲ್ಲಿರಬಹುದು. ಇದಕ್ಕೆ ನೀವು ಸಮ್ಮತಿಸುವಿರಲ್ಲವೇ?

ಪಶು—ಹೌದು, ಸಮ್ಮತಿಸುವೆನು.

ಮಹ—ಒಳ್ಳೆಯದಾಯಿತು. ನಮಗೆ ಇನ್ನೊಂದು ಮಾತು ಹೇಳಿರಿ; ನೀವು ಅನಾಯಾಸ ವಾಗಿ ರಾಜ್ಯವನ್ನು ನಮಗೆ ಒಪ್ಪಿಸುತ್ತೇವೆಂದು ಹೇಳಿದಿರಲ್ಲ? ಆ ಮಾತು ನಿಶ್ಚಯವಾಗಿ ಕೊನೆ ಗಾಣುವದೆಂದು ನಾವು ಯಾತರ ಮೇಲಿಂದ ನಂಬಬೇಕು?

ಪಶು—(ಆವೇಶದಿಂದ) ನನ್ನ ಒಪ್ಪಿಗೆಯ ಹೊರತು ಒಬ್ಬ ದಂಡಾಳುವಾದರೂ ಮುಂದಕ್ಕೆ ಅಡಿಯನ್ನು ಇಡಲಾರನು. ರಾಜ್ಯದ ಭಂಡಾರವು ನನ್ನ ನಂಬಿಗೆಯ ಮನುಷ್ಯನ ಕೈಯ್ಯಲ್ಲಿರುವದರಿಂದ ನನ್ನ ಅಪ್ಪಣೆಯ ಹೊರತು ಯುದ್ಧಕ್ಕಾಗಿ ಒಂದು ಕಾಸಾದರೂ

ವೆಚ್ಚವಾಗಲಾರದು. ಖಿಲಜೀಸಾಹೇಬರು ಹತ್ತಿಪ್ಪತ್ತು ಜನರೊಡನೆ ಅರಮನೆಯನ್ನು ಪ್ರವೇಶಿಸಲಿ; ಆಗ ಅವರನ್ನು "ನೀವು ಯಾರು? ಎಲ್ಲಿಗೆ ಹೋಗುತ್ತೀರಿ?" ಎಂದು ಪ್ರಶ್ನೆಯನ್ನು ಕೂಡ ಮಾಡದಂತೆ ನಾನು ವ್ಯವಸ್ಥೆ ಮಾಡುವೆನು.

ಮಹ—ಹಾಗಾದರೆ ಚಿಂತೆಯಿಲ್ಲ. ಇನ್ನೊಂದು ಮಾತು ನಿಮಗೆ ಹೇಳುವದುಳಿಯಿತು. ನಮ್ಮ ಪರಮ ವೈರಿಯಾದ ಹೇಮಚಂದ್ರನು ಇದೇ ಈಗ ನಿಮ್ಮ ಪಟ್ಟಣದೊಳಗೆ ಬಂದಿರುವನಂತೆ. ಈವೊತ್ತಿನ ರಾತ್ರಿಯಲ್ಲಿ ಅವನ ತಲೆಯನ್ನು ನಮ್ಮ ದಂಡಿನ ಛಾವಣಿಗೆ ನೀವು ಮುಟ್ಟಿಸಬೇಕು.

ಪಶು—(ಸ್ವಲ್ಪ ಸಂಶಯದ ಮುದ್ರೆಯಿಂದ) ಮೆಹರ್ಬಾನಿಗಿಯಿಂದ ಆ ಕೆಲಸವನ್ನು ತಾವೇ ಮಾಡತಕ್ಕದ್ದು. ಶರಣಾಗತನನ್ನು ಸಂಹರಿಸಿದ ಪಾಪಕ್ಕೆ ನನ್ನನ್ನು ಗುರಿಮಾಡಬೇಡಿರಿ.

ಮಹ—ಈ ಮಾತು ನಡೆಯಲಾರದು. ನೀವೇ ಈ ಕಲಸವನ್ನು ಮಾಡಲಿಕ್ಕೇ ಬೇಕು. ಈ ದಿನ ರಾತ್ರಿ ಕೊಲೆಗಡಕರನ್ನು ಕಳುಹಿ, ಅವನ ಶಿರಚ್ಛೇದನವನ್ನು ಮಾಡಿಸಿರಿ. ನಾಳೆ ಬೆಳಗಾಗುತ್ತಲೆ ಅವನ ತಲೆಯು ನಮ್ಮ ಕಡೆಗೆ ಬರಲೇಬೇಕು.

ಪಶು—ಒಳ್ಳೇದು. ಆದರೆ—ಆದರೆ ನಾನು ಅನಾಯಾಸವಾಗಿ ನಿಮಗೆ ರಾಜ್ಯವನ್ನು ಒಪ್ಪಿಸಿದ ಮೇಲೆ ನೀವು ನನ್ನನ್ನು ದೂಡಿ ಬಿಟ್ಟರೆ ನಾನು........

ಮಹ—ನೀವು ಯಾವ ಚಿಂತೆಗೂ ಒಳಗಾಗಬೇಡಿರಿ, ನಿರ್ಭಯದಿಂದ ಇರಿರಿ.

ಈ ಮೇರೆಗೆ ನುಡಿದು, ಮಹಮ್ಮದಲ್ಲಿಯು ಬಂದ ದಾರಿಯಿಂದ ತಿರುಗಿ ಹೋದನು.

ಹು! ಆಗುವೆನು

ಮಹಮ್ಮದಲಿಯು ಹೋದ ಮೇಲೆ ಎರಡನೆಯವನೊಬ್ಬ ಗೃಹಸ್ಥನು ಪಶುಪತಿಯ ಕೋಣೆಯಲ್ಲಿ ಬಂದನು. ಅವನನ್ನು ನೋಡಿದ ಕೂಡಲೆ ಪಶುಪತಿಯು ಉತ್ಸುಕತೆಯಿಂದ—

ಪಶು—ಶಾಂತಶೀಲಾ, ನೀನು ಯವನರ ದಂಡನ್ನು ಹೊಕ್ಕು ಬಂದೆಯಾ?

ಶಾಂತಶೀಲ—ಹೌದು ಪ್ರಭುವೇ, ಹೊಕ್ಕು ಬಂದೆನು. ತುರುಕರ ಸೋಗಿನಿಂದ ದಂಡನ್ನು ಪ್ರವೇಶಿಸಲಿಕ್ಕೆ ನನಗೆ ಬಹು ಪ್ರಯಾಸವಾಯಿತು. ಬಖತ್ಯಾರಖಿಲಜಿಯು ತನ್ನೊಡನೆ ಇಪ್ಪತ್ತೈದು ಸಾವಿರಕ್ಕಿಂತ ಹೆಚ್ಚು ದಂಡನ್ನು ತಕ್ಕೊಂಡು ಬಂದಿರುವನು.

ಪಶು—ಮತ್ತೆ ಯಾವ ಸುದ್ದಿಯನ್ನು ತಂದಿರುವೆ?

ಶಾಂತ—ಹೇಳಿಕೊಳ್ಳುವಂಥ ಮತ್ತಾವ ಸುದ್ದಿಯೂ ಇಲ್ಲ; ಆದರೆ ಮಹಮ್ಮದಲಿಯು ಗುಪ್ತರೀತಿಯಿಂದ ತಮ್ಮ ಬಳಿಗೆ ಬಂದದ್ದರ ಪರಿಣಾಮವು ಭಯಂಕರವಾದೀತೆಂಬ ಅಂಜಿಕೆಯು ನನ್ನಲ್ಲಿ ಉತ್ಪನ್ನವಾಗಿದೆ.

ಪಶು—(ಗಾಬರಿಯಾಗಿ) ಅದೇಕೆ?

ಶಾಂತ—ತೀರ ಗುಪ್ತರೀತಿಯಿಂದ ಬರುವದು ಅವನಿಂದಾಗಲಿಲ್ಲ. ಅವನು ಬರುವದನ್ನು ಕೆಲವು ಜನರು ನೋಡಿದಂತೆ ತೋರುತ್ತದೆ.

ಶಾಂತಶೀಲನ ಈ ಮಾತಿನಿಂದ ಪಶುಪತಿಯು ತೀರ ಖಿನ್ನನಾದನು. ಅವನು ಚಿಂತಾಯುಕ್ತ ಮುದ್ರೆಯಿಂದ ಶಾಂತಶೀಲನನ್ನು ಕುರಿತು—

ಪಶು—ಈ ಸುದ್ದಿಯು ಅವರಿಗೆ ಹೇಗೆ ತಿಳಿದಿರಬಹುದು?

ಶಾಂತ—ಅದನ್ನು ನಾನು ಹೇಳಲಾರೆನು; ಆದರೆ ನಾನು ಈಗ ತಮ್ಮೆಡೆಗೆ ಬರುತ್ತಿರುವಾಗ್ಗೆ ಒಂದು ಗಿಡದ ಮರೆಯಲ್ಲಿ ಒಬ್ಬ ಮನುಷ್ಯನು ಅಡಗಿಕೊಂಡು ಕುಳಿತಿರುವದನ್ನು ನೋಡಿದೆನು. ನಾನು ಅವನೊಡನೆ ಸಂಭಾಷಣ ಮಾಡಲು, ಮಹಮ್ಮದಲಿಯು ತಮ್ಮ ಮಂದಿರವ ಪ್ರವೇಶಿಸುವದನ್ನು ಅವನು ನೋಡಿರುವನೆಂತಲೂ, ಮಹಮ್ಮದಲಿಯ ಹಾದಿಯನ್ನು ನೋಡುತ್ತ ಆ ಮನುಷ್ಯನು ಅಲ್ಲಿ ಕುಳಿತಿರುವನೆಂತಲೂ ನನಗೆ ಗೊತ್ತಾಯಿತು. ಕತ್ತಲಲ್ಲಿ ಅವನ ಗುರುತು ನನಗೆ ಹತ್ತಲಿಲ್ಲ.

ಪಶು—ಒಳ್ಳೆಯದು ಮುಂದೆ?

ಶಾಂತ—ಮುಂದೆ ನಾನು ಅವನನ್ನು ಸೆರೆಹಿಡಿದು, ತಮ್ಮ ನೆಲ ಮನೆಯ ಕೋಣೆಯಲ್ಲಿ ಪ್ರತಿಬಂಧಿಸಿ ಇಟ್ಟು, ಹಾಗೆಯೇ ನಿಮ್ಮೆಡೆಗೆ ಬಂದಿದ್ದೇನೆ.

ಶಾಂತಶೀಲನ ಈ ಸಮಯ ಸೂಚಕತೆಗಾಗಿ ಪಶುಪತಿಯು ಇವನನ್ನು ಬಹಳವಾಗಿ ಕೊಂಡಾಡಿ ಬೆನ್ನು ಚಪ್ಪರಿಸಿ ನುಡಿಯುತ್ತಾನೆ.

ಪಶು—ನಿನ್ನಂಥ ಧೂರ್ತ ಮನುಷ್ಯನ ಸಹಾಯವಿದ್ದಬಳಿಕ ಆರಂಭಿಸಿದ ಕೆಲಸವು ಕೊನೆಗಾಣುವದೇನಾಶ್ಚರ್ಯವು? ಒಳ್ಳೆಯದು, ಅದಿರಲಿ. ಆ ಮನುಷ್ಯನು ಈದಿನ ರಾತ್ರಿ ಸೆರೆಮನೆಯಲ್ಲಿಯೇ ಇರಲೊಲ್ಲನೇಕೆ! ನಾಳೆ ಅವನ ವ್ಯವಸ್ಥೆಯ ಬಗ್ಗೆ ವಿಚಾರ ಮಾಡೋಣ. ಈಗ ನಾನು ನಿನಗೊಂದು ಮಹತ್ವದ ಕೆಲಸವನ್ನು ಒಪ್ಪಿಸುತ್ತೇನೆ. ನೀನು ಈಗಲೆ ಹೇಮಚಂದ್ರನನ್ನು ಸಂಹರಿಸಿ, ಅವನ ತಲೆಯನ್ನು ಬೆಳಗಾಗುವದರೊಳಗೆ ಬಖತ್ಯಾರಖಿಲಜಿಗೆ ಒಪ್ಪಿಸಬೇಕು.

ಶಾಂತ—ಈ ಕೆಲಸವು ಸುಲಭವಾದದ್ದಲ್ಲ.

ಪಶು—ನೀನು ಒಬ್ಬನೇ ಹೋಗೆಂದು ನಾನು ಹೇಳುವದಿಲ್ಲ. ಕೆಲವು ಶೂರ ಜನರನ್ನು ಕೂಡಿಕೊಂಡು ರಾತ್ರಿ ಅವನ ಮನೆಯನ್ನು ಮುತ್ತಿ ಅವನ ಶಿರಚ್ಛೇದ ಮಾಡು.

ಶಾಂತ—ಹೀಗೆ ಮಾಡಿದರೆ ಜನರು ಏನು ಅಂದಾರು?

ಪಶು—ಕೊಲೆಗಡಕರು ಅವನನ್ನು ಕೊಂದರೆಂದು ಅಂದಾರು. ಆ ನೀಚತನದ ಆರೋಪವು ನಿನ್ನ ಮೇಲೆ ಬರಲಾರದು.

ಶಾಂತ—ಆಗಲಿ, ಅಪ್ಪಣೆಯಂತೆ ಕೆಲಸ ಮಾಡುವೆನು.

ಈ ಮೇರೆಗೆ ನುಡಿದು ಶಾಂತಶೀಲನು ಹೊರಟು ಹೋದನು. ಆಗ ಪಶುಪತಿಯು ಆ ಏಕಾಂತದ ಕೋಣೆಯ ಗುಪ್ತದ್ವಾರವನ್ನು ಇಕ್ಕಿಕೊಂಡು ತನ್ನ ದೇವರ ಮನೆಯನ್ನು ಹೊಕ್ಕನು.

ಹಲವು ವಿಧದ ಕಲಾಕೌಶಲ್ಯದಿಂದ ಮನೋಹರವಾಗಿದ್ದ ಆ ಪ್ರಶಸ್ತ ದೇವಾಲಯದೊಳಗೆ ಝುಗಝುಗಿಸುವ ದೀಪದ ಪ್ರಕಾಶದಲ್ಲಿ ರತ್ನಖಚಿತವಾದ ಆಸನದ ಮೇಲೆ ಅಷ್ಟಭುಜಾಂಕಿತ ವಾದ ದುರ್ಗಾ ಪ್ರತಿಮೆಯು ಒಪ್ಪುತ್ತಿತ್ತು, ಪಶು ಪತಿಯು ದೇವಿಗೆ ಸಾಷ್ಟಾಂಗ ನಮಸ್ಕಾರವನ್ನು ಮಾಡಿ ಎದ್ದುನಿಂತು ಕೈ ಜೋಡಿಸಿ, ಅನನ್ಯವಾಣಿಯಿಂದ ಪ್ರಾರ್ಥಿಸತೊಡಗಿದನು.—ಹೇ ಮಾತೇ, ಜಗಜ್ಜನನೀ, ನಾನು ಅಗಾಧವಾದ ಸಮುದ್ರದಲ್ಲಿ ಹಾರಿಕೊಳ್ಳುತ್ತೇನೆ. ನನ್ನನ್ನು ರಕ್ಷಿಸು. ನಾನು ನಿಜವಾಗಿ ಯವನರ ಮಾಂಡಲಿಕನಾಗಲಿಚ್ಛಿಸುವದಿಲ್ಲ, ಈಗಿನ ಗೌಡೇಶ್ವರನ ರಾಜ್ಯವನ್ನು ಅಪಹರಿಸಲಿಚ್ಛಿಸುವದಷ್ಟು ನನ್ನ ಪಾಪವಾಸನೆಯು. ಮುಳ್ಳಿನಿಂದ ಮುಳ್ಳನ್ನು ತೆಗೆದು, ಕಡೆಗೆ ಎರಡೂ ಮುಳ್ಳನ್ನು ಚಲ್ಲಿಕೊಡುವಂತೆ, ಯವನರ ಸಹಾಯದಿಂದ ಗೌಡರಾಜ್ಯವನ್ನು ಸಂಪಾದಿಸಿ, ಆ ರಾಜ್ಯದ ಸಹಾಯದಿಂದ ಯವನರನ್ನು ನಿರ್ಮೂಲ ಮಾಡುವೆನು. ತಾಯಿಯೇ, ಇದರಲ್ಲಿ ಪಾಪವೇನಿರುವದು; ಒಂದು ಪಕ್ಷದಲ್ಲಿ ಪಾಪವು ಘಟಿಸಿದರೆ, ಪ್ರಾಣವಿರುವವರೆಗೆ ಪ್ರಜೆಗಳ ಹಿತವನ್ನು ಚಿಂತಿಸಿ, ಆ ಪಾಪವನ್ನು ತೊಳಕೊಳ್ಳುವೆನು. ಹೇ ಜಗಜ್ಜನನೀ, ಭಕ್ತಸುಖಕಾರಿಣೀ, ಪ್ರಸನ್ನಳಾಗು; ನನ್ನ ಬಯಕೆಯನ್ನು ಪೂರ್ಣಮಾಡು.

ಈ ಮೇರೆಗೆ ಪ್ರಾರ್ಥಿಸಿ ಪಶುಪತಿಯು ಮತ್ತೆ ದೇವಿಗೆ ಸಾಷ್ಟಾಂಗವೆರಗಿ ಎದ್ದುನಿಂತು ಕೊಳ್ಳಲು, ಆಶ್ಚರ್ಯಕರವಾದ ಸಂಗತಿಯು ಅವನ ಕಣ್ಣಿಗೆ ಬಿದ್ದಿತು. ಆತನ ಜೀವನದ ಆಧಾರವಾದ ಸುಂದರಿಯು ಬಾಗಿಲಲ್ಲಿ ನಿಂತುಕೊಂಡಿದ್ದಳು. ಆಕೆಯನ್ನು ನೋಡಿದಕೂಡಲೆ ಪಶುಪತಿಯ ಮೈಮೇಲಿನ ಕೂದಲಗಳು ನೆಟ್ಟಗಾದವು. ಆಗ ಆ ಸುಂದರಿಯು, ವೀಣೆಯ ನಾದವನ್ನು ಹೀಯಾಳಿಸುವ ಮಂಜುಲ ಸ್ವರದಿಂದ—ಏನು ನಡೆದದೆ? ಎಂದು ಕೇಳಿದಳು. ಹೀಗೆ ಕೇಳಿದ ಸುಂದರಿಯು ವಾಚಕರಿಗೆ ಹೊಸಬಳಲ್ಲ, ಆಕೆಯು, ವಿಚಿತ್ರ ಚರಿತ್ರದ ಮನೋರಮೆಯಾಗಿದ್ದಳು!

ಮನೋರಮೆಯು ತನ್ನ ಹಸಿಯಾದ ತಲೆ ಗೂದಲುಗಳನ್ನು ಕೈಯಿಂದ ಹಿಡಿದಿದ್ದಳು. ಹೆಗಲ ಮೇಲೆಯೂ, ಮೋರೆಯ ಮೇಲೆಯೂ ಗಾಳಿಯಿಂದ ಸ್ವಾಭಾವಿಕವಾಗಿ ಹಾರಾಡುತ್ತಿರುವ ಉಂಗರ ಗೂದಲುಗಳಿಂದ ಆಕೆಯ ಮನೋಹರವಾದ ಲಾವಣ್ಯಕ್ಕೆ ಹೊಸ ಉಕ್ಕು ಬಂದಿತ್ತು, ಬಾಗಿಲೊಳಗಿಂದ ಬರುವ ಚಂದ್ರನ ಕಿರಣಗಳಲ್ಲಿಯೂ, ದೇವಿಯ ಮಂದಿರದೊಳಗಿನ ರತ್ನಖಚಿತವಾದ ಸಮೆಗಳೊಳಗಿನ ದೀಪಗಳ ಉಜ್ವಲ ಪ್ರಕಾಶದಲ್ಲಿಯೂ ಆಕೆಯ ಮನೋಹರವಾದ ಮುಖಕಾಂತಿಯು, ಅಲೌಕಿಕ ಶೋಭೆಯನ್ನು ವ್ಯಕ್ತಪಡಿಸುತ್ತಿತ್ತು, ಆಕೆಯು ಅಚಲವಾದ ದೃಷಿಯಿಂದ ನೋಡುತ್ತ ಬಾಗಿಲಲ್ಲಿ ನಿಂತುಕೊಂಡಿದ್ದಳು. ಇಂಥ ಮನೋರಮೆ ಯನ್ನು ಅಕಸ್ಮಾತ್ತಾಗಿ ನೋಡಿದ ಪಶುಪತಿಯು ಬೆರಗಾಗಿ, ಎವೆಯಿಕ್ಕದೆ ಅವಳನ್ನು ನೋಡುತ್ತ ಬಹಳ ಹೊತ್ತಿನವರೆಗೆ ಸುಮ್ಮನೆ ನಿಂತುಬಿಟ್ಟನು. ಬರಬರುತ್ತ ಮನೋರಮೆಯ ಮುಖಲಕ್ಷಣವು ಬದಲಾಗಹತ್ತಿತು. ಸೌಮ್ಯಕಳೆಯು ಅಳಿದು ಹೋಗಿ, ಉಗ್ರ ಕಳೆಯು ತೋರಹತ್ತಿತು. ಅದನು ನೋಡಿ ಪಶುಪತಿಯು ಗಾಬರಿಯಾಗಿ ನುಡಿದನೇನಂದರೆ—

ಪಶು—ಮನೋರಮೇ, ನೀನು ಒಮ್ಮಿಂದೊಮ್ಮೆ ಇಂಥ ಅಪರಾತ್ರಿಯಲ್ಲಿ ಇಲ್ಲಿಗೆ ಬಂದ ಕಾರಣವೇನು? ಇಂದು ನಿನ್ನ ಮುಖಮುದ್ರೆಯು ಒಮ್ಮಿಂದೊಮ್ಮೆ ಇಷ್ಟು ಉಗ್ರವಾದದ್ದೇಕೆ? ನಿನ್ನ ಈ ಸ್ವರೂಪವನ್ನು ನೋಡಿ ನನಗೆ ಬಹಳ ಅಂಜಿಕೆ ಬರುತ್ತದೆ.

ಮನೋ—ತಮಗೆ ಅಂಜಿಕೆ ಬರುತ್ತದೋ? ಇಷ್ಟು ಅಪರಾತ್ರಿಯವರೆಗೆ ಎಚ್ಚತ್ತು ತಾವು ಯಾವ ವಿಚಾರ ಮಾಡುತ್ತಿದ್ದಿರಿ?

ಪಶು—ನಾನು ರಾಜ ಪ್ರಕರಣದಲ್ಲಿ ತೊಡಗಿದ್ದೆನು.

ಮನೋ—ರಾಜಪ್ರಕರಣದಲ್ಲಿ ತೊಡಗಿದ್ದಿರಾ? ಸ್ವಂತದ ಗುಪ್ತ ಕೆಲಸದಲ್ಲಿ ತೊಡಗಿದ್ದಿಲ್ಲವಷ್ಟೆ?

ಪಶು—ರಾಜ್ಯಕಾರಣವಿರಲಿ, ಸ್ವಂತದ ಕೆಲಸವಿರಲಿ ನಾನು ಯಾವಾಗಲೂ ಅವುಗಳಲ್ಲಿ ಮುಳುಗಿ ಹೋಗಿರುತ್ತೇನೆ; ಆದರೆ ನೀನು ಈವೊತ್ತಿನ ದಿವಸ ಇಷ್ಟು ಕೆದರಿ ಕೆದರಿ ಯಾಕೆ ಕೇಳುತ್ತೀ? ನಿನ್ನ ಮುಖಮುದ್ರೆಯು ಇಷ್ಟು ಭಯಂಕರವಾಗಿರುವ ಕಾರಣವೇನು?

ಮನೋ—(ಗಂಭೀರಸ್ವರದಿಂದ) ನಾನು ಎಲ್ಲಾ ಕೇಳಿದ್ದೇನೆ.

ಪಶು—ಅದೇನು ಕೇಳಿರುವೆ?

ಮನೋ—ತಮ್ಮ ಕಾರಸ್ಥಾನವೆಲ್ಲ ನನಗೆ ಗೊತ್ತಾಯಿತು. ಯವನರೊಡನೆ ನಡೆದ ಒಳಸಂಚನ್ನೂ, ಶಾಂತಶೀಲನು ತಮಗೆ ಹೇಳಿದ ವರ್ತಮಾನವನ್ನೂ, ತಾವು ಅವನಿಗೆ ಮಾಡಿದ ಘೋರವಾದ ಆಜ್ಞೆಯನ್ನೂ ಒಂದುಳಿಯದಂತೆ ಗೋಡೆಯ ಮರೆಗೆ ನಿಂತು ನಾನೆಲ್ಲ ಕೇಳಿದ್ದೇನೆ.

ಮನೋರಮೆಯಾಡಿದ ಈ ಮಾತುಗಳಿಂದ ಪಶುಪತಿಯ ಮೋರೆಯು ಕರ್‍ರಗಾಯಿತು. ಅವನ ಕಣ್ಣು ಕತ್ತಲೆಗುಡಿಸಹತ್ತಿದವು. ಬಹಳ ಹೊತ್ತಿನವರೆಗೆ ಸಚಿಂತಮುದ್ರೆಯಿಂದ ಆತನು ಉಲುಕದೆ ಕುಳಿತುಕೊಂಡು, ಕಡೆಗೆ ಮನೋರಮೆಯನ್ನು ಕುರಿತು—

ಪಶು—ನನ್ನ ಗುಪ್ತಕಾರಸ್ಥಾನಗಳೆಲ್ಲ ನಿನಗೆ ತಿಳಿದದ್ದು ಒಂದು ರೀತಿಯಿಂದ ನೆಟ್ಟಗಾಯಿತು. ಸಾವಕಾಶವಾಗಿ ನಾನೇ ಅವುಗಳನ್ನೆಲ್ಲ ನಿನಗೆ ಹೇಳುವವನಿದ್ದೆನು.

ಮನೋ—ನನ್ನನ್ನು ನೀವು ಬಿಟ್ಟುಬಿಡುವಿರಷ್ಟೇ?

ಪಶು—ಮನೋರಮೇ, ನಿನ್ನ ಸಲುವಾಗಿಯೇ ಈ ಎಲ್ಲ ವ್ಯೂಹವನ್ನು ಹೂಡಿರಲು, ನಿನ್ನನ್ನು ಬಿಡುವದೆತ್ತ? ಈ ವಿಚಾರವಾದರೂ ನಿನ್ನಲ್ಲಿ ಹೇಗೆ ಹುಟ್ಟಿತು? ಈಗ ನಾನು ಸರ್ವಸತ್ತಾಧೀಶನಾಗಿದ್ದರೂ ಅರಸನಾಗಿರುವದಿಲ್ಲ, ಆದುದರಿಂದ ನಾನು ಸ್ವೇಚ್ಛೆಯಿಂದ ನಡೆಯಲಾಗದು. ಈವೊತ್ತೇ ನಾನು ನಿನ್ನನ್ನು ಲಗ್ನವಾದರೆ, ವಿಧವಾವಿವಾಹ ಮಾಡಿಕೊಂಡವನೆಂದು ಜನರು ನನ್ನನ್ನು ನಿಂದಿಸಬಹುದು; ಆದರೆ ಸ್ವತಃ ಅರಸನಾದ ಬಳಿಕ ನನ್ನನ್ನು ನಿಂದಿಸಲು ಯಾರು ಸಮರ್ಥರಾಗುವರು? ಪಟ್ಟವೇರಿದಕೂಡಲೆ ನಾನು ವಿಧವಾವಿವಾಹದ ಕಾಯದೆಯನ್ನು ಮಾಡಿ, ನಾನೇ ಮೊದಲು ಕಾಯದೆಯನ್ನು ಅಮಲಿನಲ್ಲಿ ತರುವೆನು. ಆ ಮೇಲೆ ಜನರು ತಾವಾಗಿ ನನ್ನ ಅನುಕರಣ ಮಾಡತೊಡಗುವರು.

ಮನೋ—ಇದೆಲ್ಲ ಮನೋರಾಜ್ಯವು. ತಾವು ಅರಸರಾದ ಬಳಿಕ ನನ್ನ ಸುಖವು ಮಣ್ಣುಗೂಡುವದೆಂತಲೇ ತಿಳಿಯಬೇಕು. ತಾವು ಪಟ್ಟವೇರಿದ ಬಳಿಕ ನಾನು ಪಟ್ಟರಾಣಿಯಾಗುವ ಸಂಭವವು ಎಷ್ಟು ಮಾತ್ರವೂ ಇರುವದಿಲ್ಲ.

ಪಶು—ಅದೇಕೆ?

ಮನೋ—ತಾವು ಅರಸರಾದ ಬಳಿಕ ನನ್ನನ್ನು ಮಾತಾಡಿಸುವಿರೋ? ರಾಜ್ಯದ ಮುಂದೆ ಉಳಿದದ್ದೇನೂ ನಿಮಗೆ ಕಾಣುವದಿಲ್ಲ. ನನ್ನ ಮೇಲಿನ ನಿಜವಾದ ಪ್ರೇಮವು ಉಳಿಯಲಾರದು. ತಾವು ನನ್ನನ್ನು ನಿಶ್ಚಯವಾಗಿ ನಿರಾಕರಿಸುವಿರಿ. ಅಂದಬಳಿಕ ಸುಮ್ಮನೆ ಲಗ್ನದ ಉರಲು ಹಾಕಿಕೊಳ್ಳುವದರಲ್ಲಿ ಜಾಣತನವೇನು?

ಪಶು—ಇಲ್ಲದ ಈ ಕೆಟ್ಟ ಸಂಶಯವು ನಿನ್ನ ಮನಸ್ಸಿನಲ್ಲಿ ಯಾಕೆ ಹುಟ್ಟಿತು? ಈ ಜಗತ್ತಿನಲ್ಲಿ ನಿನಗಿಂತ ಹೆಚ್ಚು ಪ್ರಿಯವಾದ ವಸ್ತುವು ಮತ್ತೊಂದಿಲ್ಲೆಂದು ದೇವರನ್ನು ಸ್ಮರಿಸಿ ಹೇಳುತ್ತೇನೆ. ಮೊದಲು ನೀನು, ಆಮೇಲೆ ರಾಜ್ಯವು.

ಮನೋ—ಅರಸರಾದ ಬಳಿಕ ರಾಜ್ಯಕ್ಕಿಂತ ನನ್ನನ್ನು ಹೆಚ್ಚು ಪ್ರೀತಿಸಹತ್ತಿದರೆ, ನೀವು ರಾಜ್ಯವಾಳಲಿಕ್ಕೆ ಅಯೋಗ್ಯರಾಗುವಿರೆಂದು ನಾನು ಖಂಡಿತವಾಗಿ ಹೇಳುತ್ತೇನೆ. ಹೆಣ್ಣಿಗೆ ಮರುಳಾದವರ ಅರಸೊತ್ತಿಗೆಯು ಬಹುಕಾಲ ನಿಲ್ಲಲಾರದು.

ಪಶು—(ಅಭಿಮಾನ ಪೂರ್ವಕ ಪ್ರಸನ್ನ ಮುದ್ರೆಯಿಂದ ಎವೆಯಿಕ್ಕದೆ ನೋಡಿ ಮುಗುಳುನಗೆ ನಕ್ಕು) ವಾಮಾಂಗದಲ್ಲಿ ಈ ಸರಸ್ವತಿಯು ಕುಳಿತು ಕೊಂಡಬಳಿಕ ನನಗೆ ಯಾತರ ಭಯವಿರುವದು? ಒಂದು ವೇಳೆ ಅಂಥ ಪ್ರಸಂಗವೇ ಒದಗಿದಲ್ಲಿ ನಿನ್ನ ಸಲುವಾಗಿ ನಾನು ರಾಜ್ಯ ಲೋಭವನ್ನು ನಿಶ್ಚಯವಾಗಿ ಬಿಡುವೆನು.

ಮನೋ—ಹೀಗಿದ್ದರೆ, ಇಷ್ಟು ಖಟಾಟೋಪವೇತಕ್ಕೆ? ರಾಜ್ಯ ಲೋಭವನ್ನು ಬಿಡುವದಕ್ಕೇ ಸಿದ್ಧವಾದ ಬಳಿಕ ರಾಜ್ಯ ಪ್ರಾಪ್ತಿಗಾಗಿ ಇಂಥ ಭಯಂಕರ ವ್ಯೂಹವನ್ನಾದರೂ ಯಾಕೆ ಹೂಡುವಿರಿ?

ಪಶು—ನಿನ್ನನ್ನು ಲಗ್ನವಾಗುವದಕ್ಕಾಗಿಯೇ; ಬೇರೆ ಕಾರಣವೇನಿರುವದು?

ಮನೋ—(ಆವೇಶಯುಕ್ತಸ್ವರದಿಂದ) ಆ ಆಶೆಯನ್ನು ಬಿಟ್ಟುಬಿಡಿರಿ, ನಾನು ಎಂದೂ ನಿಮ್ಮ ಪಟ್ಟದರಾಣಿಯಾಗಲಿಕ್ಕಿಲ್ಲ.

ಪಶು—ಮನೋರಮೇ, ಕಾರಣವಿಲ್ಲದೆ ಹೀಗೆ ನನ್ನ ಮೇಲೆ ಯಾಕೆ ಸಿಟ್ಟಾಗುತ್ತೀ? ನಾನು ಅಂಥ ಅಪರಾಧವನ್ನಾದರೂ ಏನು ಮಾಡಿರುವೆನು?

ಮನೋ—ಅಪರಾಧವೆಂದು ಕೇಳುವಿರೋ? ಹೀಗೆ ಕೇಳಲಿಕ್ಕೆ ನಿಮ್ಮ ನಾಲಿಗೆಯಾದರೂ ಹೇಗೆ ಏಳುತ್ತದೆ? ನೀವು ಮಹಾ ವಿಶ್ವಾಸಘಾತಕರಿರುತ್ತೀರಿ. ವಿಶ್ವಾಸಘಾತಕರನ್ನು ಪ್ರೀತಿಸ ಬಹುದೋ? ವಿಶ್ವಾಸಘಾತಕಿಯ ಮೇಲೆ ಭಕ್ತಿಯನ್ನಿಡೆಂದು ನೀವು ನನ್ನನ್ನು ಬೋಧಿಸುವಿರಾ?

ಪಶು—ನಾನು ಅಂಥ ಯಾವ ವಿಶ್ವಾಸಘಾತಕತನವನ್ನು ಮಾಡಿದ್ದೇನೆ? ಕಾರಣವಿಲ್ಲದೆ ನನ್ನನ್ನು ಹೀಗೆ ಯಾಕೆ ನಿಂದಿಸುತ್ತೀ?

ಮನೋರಮೆ—ಅನ್ನದಾತಾರನಾದ ಪ್ರಭುವಿನ ಮೇಲೆ ತಿರುಗಿ ಬಿದ್ದು ರಾಜದ್ರೋಹಿ ಯಾಗುವದೂ, ಶರಣಾಗತನಾದ ಹೇಮಚಂದ್ರ ರಾಜಪುತ್ರನನ್ನು ಕೊಲ್ಲಲಪ್ಪಣೆಯಾಗುವದೂ ಕೃತಘ್ನತೆಯಲ್ಲದೆ ಮತ್ತೇನಿರುವದು? ಯಾವನು ತನ್ನ ಅರಸನ ಮೇಲೆ ತಿರುಗಿ ಬೀಳುವನೋ, ಯಾವನು ಶರಣಾಗತನ ಅಭಿಮಾನವನ್ನು ಬಿಟ್ಟು ಕೊಡುವನೋ, ಅವನು ತನ್ನ ಹೆಂಡತಿಯ ವಿಶ್ವಾಸಘಾತವನ್ನು ಮಾಡಲಿಕ್ಕಿಲ್ಲೆಂದು ಯಾರು ಹೇಳುವರು?

ಮನೋರಮೆಯ ಈ ಮಾತುಗಳಿಂದ ಪಶುಪತಿಯ ಮೋರೆಯು ಝುರ್ರನೇ ಇಳಿದು ಅದಕ್ಕೆ ಹೆಣದ ಕಳೆಯೇರಿತು! ಅವನು ನಾಚಿಕೆಯಿಂದ ತಲೆ ಬಗ್ಗಿಸಿಕೊಂಡು ಸುಮ್ಮನೆ ಕುಳಿತುಕೊಂಡನು. ಆಗ ಮನೋರಮೆಯು ಆತನನ್ನು ಕುರಿತು—

ಮನೋ—ನಾನು ತಮ್ಮನ್ನು ಸೆರಗೊಡ್ಡಿ ಬೇಡಿಕೊಳ್ಳುತ್ತೇನೆ. ಇನ್ನಾದರೂ ರಾಜದ್ರೋಹದಂಥ ನೀಚ ಕೃತ್ಯಕ್ಕೆ ಸರ್ವಥಾ ಮನಸ್ಸು ಮಾಡಬೇಡಿರಿ; ಶರಣಾಗತನನ್ನು ರಕ್ಷಿಸಿರಿ; ಒಟ್ಟಿಗೆ ನೀವು ದುಷ್ಟ ಬುದ್ಧಿಯನ್ನು ಸಂಪೂರ್ಣವಾಗಿ ಬಿಟ್ಟುಬಿಡಿರಿ.

ಪಶುಪತಿಯು ಬಗ್ಗಿಸಿದ ಮೋರೆಯನ್ನು ಮೇಲಕ್ಕೆತ್ತಲೇ ಇಲ್ಲ, ಅವನು ಖಿನ್ನ ಮುದ್ರೆಯಿಂದ ಸುಮ್ಮನೆ ಕುಳಿತುಬಿಟ್ಟನು. ಅನಿವಾರವಾದ ರಾಜ್ಯಲೋಭವೂ, ಮನೋರಮೆಯ ಆಶೆಯೂ ಅವನನ್ನು ಜಗ್ಗಿ ನುಗ್ಗು ಮಾಡತೊಡಗಿದವು. ಯಾವದನ್ನು ಬಿಡಬೇಕು, ಯಾವದನ್ನು ಹಿಡಿಯಬೇಕು? ಎಂಬ ವಿಚಾರಗಳ ಬಡಿದಾಟದಲ್ಲಿ ಅವನು ಹಣ್ಣಾಗಹತ್ತಿದನು. ಅವನು ಎಷ್ಟು ವಿಚಾರ ಮಾಡಿದರೂ ಎರಡರಲ್ಲಿ ಒಂದನ್ನು ಬಿಡಲಿಕ್ಕೂ ಅವನ ಮನಸ್ಸು ಮೆಚ್ಚಲಿಲ್ಲ, ಅವನಿಗೆ ಎರಡೂ ಬೇಕಾಗಿದ್ದವು. ಮನೋರಮೆಯ ನಿಶ್ಚಯದ ಮಾತುಗಳಿಂದ ಅವನಿಗೆ ಬಹಳ ದುಃಖವಾಗಿತ್ತು, ರಾಜ್ಯಲೋಭಿಯಾದರೆ ಮನೋರಮೆಯು ಲಭಿಸುವದಿಲ್ಲೆಂಬ ಮಾತು ಅವನ ಎದೆಯೊಡೆಸಿಬಿಟ್ಟಿತು. ಏನು ಮಾಡಬೇಕೆಂಬದನ್ನು ಅವನು ನಿಶ್ಚಯಿಸದಾದನು. ಅವನು ಒಮ್ಮೆ ಮನಸ್ಸಿನಲ್ಲಿ—''ಮನೋರಮೆಯ ಸಹವಾಸದಲ್ಲಿ ಭಿಕ್ಷೆ ಬೇಡಿದರೂ ಸುಖವಿರುವದು; ಅಂದಬಳಿಕ ರಾಜ್ಯವನ್ನು ಸಂಪಾದಿಸಿ ಮಾಡುವದೇನು?'' ಎಂದು ಚಿಂತಿಸುವನು. ಮತ್ತೊಮ್ಮೆ—''ನಾನು ಮನೋರಮೆಯ ಲಗ್ನವಾದರೆ, ವಿಧವೆಯ ಲಗ್ನವಾದವನೆಂದು ಜನರು ನನ್ನನ್ನು ನಿಂದಿಸುವರು, ನನಗೆ ಸಮಾಜವು ಬಹಿಷ್ಕಾರ ಹಾಕುವದು, ನಾನು ಜಾತಿಭ್ರಷ್ಟನಾಗುವೆನು, ಎಲ್ಲರ ತಿರಸ್ಕಾರಕ್ಕೆ ಗುರಿಯಾಗಬೇಕಾಗುವದು. ಇದನ್ನೆಲ್ಲ ಹೇಗೆ ತಡೆಯಲಿ'' ಎಂದು ಚಿಂತಿಸುವನು.

ಈ ಮೇರೆಗೆ ವಿಚಾರಮಗ್ನನಾಗಿ ಪಶುಪತಿಯು ಸುಮ್ಮನೆ ಕುಳಿತದ್ದನ್ನು ನೋಡಿ ಮನೋರಮೆಯು—ನನ್ನ ಮಾತಿಗೆ ತಾವು ಉತ್ತರ ಕೊಡುವದಿಲ್ಲ, ಒಳಿತಾಯಿತು, ನಾನು ಹೋಗುತ್ತೇನೆ. ತಮ್ಮ ಸಮಕ್ಷ ನಾನು ಪ್ರತಿಜ್ಞೆ ಮಾಡುವೆನು, ಲಕ್ಷಕೊಡಿರಿ. ಈವೊತ್ತಿನಿಂದ ನಾನು ವಿಶ್ವಾಸ ಘಾತಕಿಯ ಮುಖಾವಲೋಕನವನ್ನು ಮಾಡುವದಿಲ್ಲ!

ಮನೋರಮೆಯ ಈ ನಿರ್ಧಾರದ ಮಾತುಗಳನ್ನು ಕೇಳಿ ಪಶುಪತಿಯ ದುಃಖವು ಒತ್ತರಿಸಿತು; ಅವನ ಕುತ್ತಿಗೆಯ ಶಿರಗಳು ಬಿಗಿದವು; ಟಪಟಪನೆ ಕಣ್ಣೀರ ಹನಿಗಳು ಉದುರ ಹತ್ತಿದವು. ಇದನ್ನು ನೋಡಿ ಕೋಮಲ ಹೃದಯದ ಮನೋರಮೆಯು ಬಹಳವಾಗಿ ದುಃಖಪಟ್ಟಳು. ಸಿಟ್ಟಿನಿಂದ ಹೊರಟು ಹೋಗಲುದ್ಯೋಗಿಸಿದ ಆಕೆಯು, ಪಶುಪತಿಯ ಬಳಿಗೆ ಬಂದು ಅವನ ಕೈ ಹಿಡಿದಳು. ಎಚ್ಚರದಪ್ಪಿದವನು ಎಚ್ಚತ್ತ ಬಳಿಕ ಸುತ್ತು ಮುತ್ತು ಸೂಕ್ಷ್ಮ ದೃಷ್ಟಿಯಿಂದ ನೋಡುವಂತೆ, ಪಶುಪತಿಯು ಕಣ್ದೆರೆದು ಎಲ್ಲ ಕಡೆಗೆ ನೋಡಹತ್ತಿದನು. ಆಗ ಮನೋರಮೆಯ ಉಗ್ರಸ್ವರೂಪವು ಅಡಗಿಹೋಗಿ, ಆಕೆಯು ಹೊರಸೂಸುವ ಪ್ರೇಮದಿಂದ ಕಣ್ಣೀರು ಸುರಿಸುತ್ತಿದ್ದಳು. ಆಕೆಯು ಪ್ರೇಮಯುಕ್ತವಾದ ಮಂಜುಲ ಸ್ವರದಿಂದ—

ಮನೋ—ನೀವು ಹೀಗೆ ಯಾಕೆ ಅಳುತ್ತೀರಿ?

ಪಶು—(ಕಣ್ಣು ಒರಿಸಿಕೊಳ್ಳುತ್ತ) ನೀನು ನನ್ನನ್ನು ಬಿಟ್ಟು ಹೋಗುತ್ತಿದ್ದೆಯೆಂದು!

ಮನೋ—ಇಲ್ಲ, ಇನ್ನು ಮೇಲೆ ನಾನು ಎಂದೂ ಹಾಗೆಮಾಡುವದಿಲ್ಲ.

ಪಶು—ಇದು ನಿಜವೋ? ನೀನು ನನ್ನ ಪಟ್ಟದರಾಣಿಯಾಗುವೆಯಾ?

ಮನೋ—ಹೂ, ಆಗುವೆನು.

ಮನೋರಮೆಯ ಈ ಮಾತಿನಿಂದ ಪಶುಪತಿಗೆ ಹೊಸ ಜೀವ ಬಂದಂತಾಯಿತು. ಅವನು ಆನಂದಸಾಗರದಲ್ಲಿ ಮುಣುಗಿ ಹೋದನು. ಬಹಳ ಹೊತ್ತಿನವರೆಗೆ ಒಬ್ಬರನ್ನೊಬ್ಬರು ಎವೆಯಿಕ್ಕದೆ ನೋಡುತ್ತ ಸುಮ್ಮನೆ ನಿಂತುಕೊಂಡರು. ಹೀಗಿರಲು, ಮನೋರಮೆಯು ಒಮ್ಮಿಂದೊಮ್ಮೆ ಅಲ್ಲಿಂದ ಹೊರಟು ಹೋದಳು.

ಭಗವಂತನಿಗೆ ಗೊತ್ತು!

ಹಿಂದೆ 8ನೆಯ ಪ್ರಕರಣದಲ್ಲಿ ಹೇಮಚಂದ್ರನು ತುರುಕನ ಶೋಧಕ್ಕಾಗಿ ಮನೋರಮೆಯ ಬೆನ್ನುಹತ್ತಿ ಹೋದನೆಂದು ಹೇಳಿದ್ದು ವಾಚಕರ ಸ್ಮರಣದಲ್ಲಿರಬಹುದು. ಕೆಲವು ಅಂತರವನ್ನು ಕ್ರಮಿಸಿದಮೇಲೆ ಅವನಿಗೆ ಒಂದು ಭವ್ಯವಾದ ಮಂದಿರವು ಕಾಣಹತ್ತಿತು. ಇಲ್ಲಿಯವರೆಗೆ ಪಿಟ್ಟೆಂದು ಮಾತಾಡದೆ ಸಾಗಿದ್ದ ಮನೋರಮೆಯು, ಒಮ್ಮಿಂದೊಮ್ಮೆ ಹೇಮಚಂದ್ರನನ್ನು ಕುರಿತು ಹೇಮಚಂದ್ರಾ, ಆ ಎದುರಿಗಿನ ಮಂದಿರವನ್ನು ನೋಡಿದೆಯಾ? ಎಂದು ಕೇಳಿದಳು. ಅದಕ್ಕೆ ಹೇಮಚಂದ್ರನು ''ನೋಡಿದೆನು'' ಎಂದು ಉತ್ತರ ಕೊಡಲು, ಮನೋರಮೆಯು, ಅದೇ ಮಂದಿರದಲ್ಲಿ ಆ ತುರುಕನು ಹೋಗಿದ್ದಾನೆ ಎಂದು ಹೇಳಿದಳು. ಅದನ್ನು ಕೇಳಿ ಆಶ್ಚರ್ಯ ಚಕಿತನಾದ ಹೇಮಚಂದ್ರನು, ಏನನ್ನುವೆ? ತುರುಕನು ಆ ಮಂದಿರದಲ್ಲಿರುವನೇ? ಎಂದು ಪ್ರಶ್ನೆ ಮಾಡುತ್ತಿರಲು, ಮನೋರಮೆಯು ಅತ್ತ ಲಕ್ಷಗೊಡದೆ, ಆ ತುರಕನು ಇದೇ ಮಾರ್ಗದಿಂದ ಈಗ ಬರುವನು. ನೀನು ಈ ಮರದ ಬುಡದಲ್ಲಿ ಅಡಗಿಕೊಂಡಿರು, ನಾನು ಈಗಲೇ ಬರುವೆನು. ಎಂದು ಹೇಳಿ ಸ್ವಲ್ಪ ಹೊತ್ತಿನಲ್ಲಿ ಕಾಣದಹಾಗಾದಳು.

ಇದನ್ನು ನೋಡಿ ಹೇಮಚಂದ್ರನಿಗೆ ಮಿತಿಮೀರಿ ಆಶ್ಚರ್ಯವಾಯಿತು; ಅವನ ತರ್ಕವೇನೂ ನಡೆಯಲೊಲ್ಲದು. ಅವನು ಮನೋರಮೆಯ ಅಪ್ಪಣೆಯಂತೆ ತುರುಕನ ಹಾದಿಯನ್ನು ನೋಡುತ್ತ ಗಿಡದ ಮರೆಯಲ್ಲಿ ಕುಳಿತುಕೊಂಡನು. ಅಷ್ಟರಲ್ಲಿ ಪಶುಪತಿಯ ಮನೆಗೆ ಹೊರಟಿದ್ದ ಶಾಂತಶೀಲನು ಅಲ್ಲಿಗೆ ಬಂದನು. ಹದ್ದಿನ ಕಣ್ಣಿನ ಆ ಶಾಂತಶೀಲನಿಗೆ ಗಿಡದ ಬುಡದಲ್ಲಿ ಮನುಷ್ಯಾಕೃತಿಯು ತೋರಿದ್ದರಿಂದ ಅವನು ಸ್ವಲ್ಪ ಸಮೀಪಕ್ಕೆ ಹೋದನು. ಆಗ ಗಂಭೀರ ಮುದ್ರೆಯಿಂದ ಒಪ್ಪುವ ವೀರ ವೇಷದ ಹೇಮಚಂದ್ರನ ಮೂರ್ತಿಯು ಅವನ ಕಣ್ಣಿಗೆ ಬಿದ್ದಿತು. ಆಗ ಶಾಂತಶೀಲನು ಅಂಜುತ್ತಂಜುತ್ತ ಆ ವ್ಯಕ್ತಿಯನ್ನು ಕುರಿತು—

ಶಾಂತ—ತಾವು ಯಾರು? ಇಲ್ಲಿ ಏನು ಮಾಡುತ್ತಿರುವಿರಿ?

ಹೇಮ—ನಾನು ತುರುಕನ ಹಾದಿಯನ್ನು ನೋಡುತ್ತಿರುವೆನು.

ಶಾಂತ—(ಗಾಬರಿಯಾಗಿ) ತುರುಕನು ಎತ್ತಹೋಗಿದ್ದಾನೆ?

ಹೇಮ—ಅಗೋ ಆ ಎದುರಿಗಿನ ಮನೆಗೆ.

ಶಾಂತ—(ಭಯಭೀತನಾಗಿ) ಆ ಮನೆಗೆ ಏಕೆ ಹೋಗಿರುವನು?

ಹೇಮ—ಅದನ್ನು ನಾನರಿಯೆನು.

ಶಾಂತ—ಈ ಮಂದಿರವು ಯಾರದು?

ಹೇಮ—ಅದನ್ನೂ ನಾನರಿಯೆನು.

ಶಾಂತ—ಹೀಗಿದ್ದರೆ, ಒಳಗೆ ತುರುಕನು ಹೋದನೆಂದು ನಿಮಗೆ ಹೇಗೆ ಗೊತ್ತಾಯಿತು?

ಹೇಮ—ಹೇಗಾದರೂ ಗೊತ್ತಾಗಿರಲೊಲ್ಲದೇಕೆ, ಅದರ ಗೊಡವೆ ನಿಮಗೇನು?

ಶಾಂತ—ದಯಮಾಡಿ ಸಿಟ್ಟಾಗಬಾರದು, ಈ ಮಂದಿರವು ನನ್ನದು. ಒಳಗೆ ತುರುಕನು ಹೊಕ್ಕಿರುತ್ತಾನೆಂದು ನೀನು ಹೇಳುತ್ತೀರಿ. ದುಷ್ಟ ವಿಚಾರದಿಂದಲೇ ಅವನು ನಮ್ಮ ಮನೆಯನ್ನು ಹೊಕ್ಕಿಸುವನೆಂಬದರಲ್ಲಿ ಸಂಶಯವಿಲ್ಲ, ತಾವು ವೀರಪುರುಷರಿದ್ದು ತುರುಕರ ದ್ವೇಷಿಗಳಿದ್ದಂತೆ ತೋರುತ್ತದೆ. ಆದುದರಿಂದ ನನ್ನ ಸಹಾಯಕ್ಕಾಗಿಯೇ ಪರಮೇಶ್ವರನು ತಮ್ಮನ್ನು ಇಲ್ಲಿಗೆ ಬರಮಾಡಿದನೆಂದು ತಿಳಿಯುವೆನು. ಈಗ ತಾವು ನನ್ನೊಡನೆ ಬಂದು ತುರುಕನನ್ನು ಹಿಡಿಯಲಿಕ್ಕೆ ನೆರವಾಗಬೇಕೆಂದು ಬಿದ್ದು ಹೇಳಿಕೊಳ್ಳುವೆನು.

ಕಪಟಿಯಾದ ಶಾಂತಶೀಲನ ಈ ಮಾತುಗಳನ್ನು ಸರಳ ಮನಸ್ಸಿನ ಹೇಮಚಂದ್ರನು ನಿಜವೆಂದು ನಂಬಿದನು. ತುರುಕನನ್ನು ಹುಡುಕಲಿಕ್ಕೆ ಹೊರಟಿದ್ದ ಆ ವೀರನು ಶಾಂತಶೀಲನ ಬೆನ್ನುಹತ್ತಿ ಹೊರಟು ಮಹಾದ್ವಾರವನ್ನು ದಾಟಿ, ಪಶುಪತಿಯ ಮಂದಿರವನ್ನು ಹೊಕ್ಕನು. ಆಗ ಶಾಂತಶೀಲನು ಹೇಮಚಂದ್ರನನ್ನು ಆ ಮಂದಿರದೊಳಗಿನ ನೆಲಮನೆಯೊಳಗೆ ಕರಕೊಂಡು ಹೋಗಿ—ಇಲ್ಲಿ ನಮ್ಮ ಬೆಲೆಯುಳ್ಳ ವಸ್ತು-ಒಡವೆಗಳೂ, ದ್ರವ್ಯ-ಭಾಂಡಾರ ಮೊದಲಾದವೂ ಇರುತ್ತವೆ. ನೀವು ಎಚ್ಚರದಿಂದ ಕಾಯುತ್ತ ಇಲ್ಲಿಯೇ ಇರಬೇಕು. ತುರುಕನು ಎಲ್ಲಿ ಅಡಗಿರುವನೆಂಬದನ್ನು ನಾನು ಗೊತ್ತುಹಚ್ಚುವೆನು. ಎಂದು ಹೇಳಿ, ಹೇಮಚಂದ್ರನ ಉತ್ತರದ ಹಾದಿಯನ್ನು ನೋಡದೆ, ಆ ಠಕ್ಕ ಶಾಂತಶೀಲನು ಒಮ್ಮೆಲೆ ಹೊರಗೆ ಬಂದು ನೆಲಮನೆಯ ಬಾಗಿಲು ಇಕ್ಕಿಕೊಂಡನು. ಈ ಮೇರೆಗೆ ತುರುಕನನ್ನು ಹಿಡಿಯ ಹೊರಟಿದ್ದ ಹೇಮಚಂದ್ರನು ಮೋಸಹೋಗಿ ತಾನೇ ಸೆರೆಮನೆಯ ಸೋಬತಿಯಾದನು.

ಇತ್ತ ಪಶುಪತಿಯ ದೇವಿಯ ಮಂದಿರದಿಂದ ಹೊರಬಿದ್ದ ಮನೋರಮೆಯು, ಲಗಬಗೆಯಿಂದ ಆ ನೆಲಮನೆಗೆ ಬಂದಳು. ಶಾಂತಶೀಲನು ಪಶುಪತಿಯ ಮುಂದೆ ಹೇಳಿದುದನ್ನೆಲ್ಲ ಆಕೆಯು ಮರೆಗೆ ನಿಂತು ಕೇಳಿದವಳಾದುದರಿಂದ ಹೇಮಚಂದ್ರನನ್ನು ಪ್ರತಿಬಂಧಿಸಿಟ್ಟಿದ್ದ ನೆಲಮನೆಯು ಇದೇ ಎಂದು ಆಕೆಯು ಅರಿತಿದ್ದಳು. ಆಕೆಯು ನೆಲಮನೆಯ ಬಾಗಿಲನ್ನು ತೆರೆದು—ಹೇಮಚಂದ್ರಾ, ಇಲ್ಲಿಂದ ಬೇಗನೆ ನಡೆ ಎಂದು ಹೇಳಿದಳು. ಅದನ್ನು

ಕೇಳಿ ಹೇಮಚಂದ್ರನಿಗೆ ಪರಮಾಶ್ಚರ್ಯವಾಯಿತು. ಅವನು ಮೊದಲಿನಂತೆ ಮನೋರಮೆಯ ಬೆನ್ನುಹತ್ತಿ ಸಾಗಿದನು. ಅವರಿಬ್ಬರು ಮಂದಿರದಿಂದ ದೂರ ಹೋದ ಮೇಲೆ ಹೇಮಚಂದ್ರನು ಮನೋರಮೆಯನ್ನು ಕುರಿತು—

ಹೇಮ—ಮನೋರಮೇ, ನನ್ನನ್ನು ಪ್ರತಿಬಂಧದಲ್ಲಿಟ್ಟ ಕಾರಣವೇನು?

ಮನೋ—ಅದನ್ನು ಹಿಂದುಗಡೆಯಲ್ಲಿ ಹೇಳುವೆನು.

ಹೇಮ—ನನ್ನನ್ನು ಸೆರೆಯಲ್ಲಿಟ್ಟವರು ಯಾರು?

ಮನೋ—ಶಾಂತಶೀಲನು.

ಹೇಮ—ಶಾಂತಶೀಲನೆಂಬುವವನು ಯಾರು? ಅವನು ಹೀಗೆ ಮಾಡಿದ್ದರ ಉದ್ದೇಶವೇನು?

ಮನೋ—ಅದನ್ನು ಹಿಂದುಗಡೆಯಲ್ಲಿ ಹೇಳುವೆನು.

ಹೇಮ—ಈ ಮಂದಿರವು ಶಾಂತಶೀಲನದೇನು?

ಮನೋ—ಅಲ್ಲ.

ಹೇಮ—ಹಾಗಾದರೆ ಮತ್ತೆ ಯಾರದು?

ಮನೋ—ಅದನ್ನೂ ಹಿಂದುಗಡೆ ಹೇಳುವೆನು.

ಹೇಮ—ತುರುಕನು ಎತ್ತ ಹೋದನು?

ಮನೋ—ಮಹಾವನದಲ್ಲಿದ್ದ ತನ್ನ ದಂಡಿನ ಬೀಡಿಗೆ.

ಹೇಮ—ಮಹಾವನವು ಎತ್ತ ಕಡೆಗಿರುವದು? ದಂಡಿನಲ್ಲಿದ್ದ ದಂಡಾಳುಗಳ ಸಂಖ್ಯೆಯೆಷ್ಟು?

ಮನೋ—ಈ ಪಟ್ಟಣದ ಉತ್ತರದಲ್ಲಿ ಮಹಾವನವಿದೆ. ದಂಡಿನಲ್ಲಿ ಇಪ್ಪತ್ತೈದು ಸಾವಿರ ದಂಡಾಳುಗಳಿದ್ದಾರೆ.

ಹೇಮ—ಈ ಸಂಗತಿಗಳೆಲ್ಲ ನಿನಗೆ ತಿಳಿದ ಬಗೆಯೇನು?

ಮನೋ—ಇದಕ್ಕೂ ಹೆಚ್ಚಿನ ಸಂಗತಿಗಳು ತಿಳಿದಿರುತ್ತವೆ. ಈ ದಿನ ರಾತ್ರಿ ನಿನ್ನನ್ನು ಕೊಲ್ಲುವದಕ್ಕಾಗಿ, ಕೊಲೆಗಡಕರು ನಿನ್ನ ಮನೆಯನ್ನು ಮುತ್ತ ತಕ್ಕವರಿದ್ದಾರೆ. ನೀನು ಮನೆಗೆ ಹೋಗಬೇಡ.

ಈ ಮೇರೆಗೆ ನುಡಿದು, ಮನೋರಮೆಯು ಗಾಬರಿಯಿಂದ ಓಡಿಹೋದಳು. ಮನೋರಮೆಯ ಒಂದೊಂದು ಕೃತಿಯನ್ನು ನೋಡುತ್ತ ಹೋದಂತೆ, ಹೇಮಚಂದ್ರನು ಹೆಚ್ಚು ಹೆಚ್ಚು ಆಶ್ಚರ್ಯಮಗ್ನನಾದನು. ಅವನ ಮತಿಯು ಕುಂಠಿತವಾಯಿತು. ಆದರೂ ಆಕೆಯ ಶುದ್ಧವೂ, ಪವಿತ್ರವೂ ಆದ ನಡತೆಯ ವಿಷಯವಾಗಿ ಅವನಲ್ಲಿ ಎಳ್ಳಷ್ಟಾದರೂ ಸಂಶಯವು ಉತ್ಪನ್ನವಾಗಲಿಲ್ಲ. ಮನೋರಮೆಯ ವಿಚಿತ್ರವಾದ ವರ್ತನವನ್ನೂ, ಆಕೆಯ ಗೂಢವಾದ ಚರಿತ್ರವನ್ನೂ ಕುರಿತು ತರ್ಕಿಸಲು, ಅವನು ಎಷ್ಟು ಮಾತ್ರವೂ ಸಮರ್ಥನಾಗಲಿಲ್ಲ. ಅದರ ಸುಳವೇ ಅವನಿಗೆ ಹತ್ತದಾಯಿತು. ಸದ್ಯಕ್ಕೆ ಅದರ ಶೋಧಕ್ಕಾಗಿ ಯತ್ನಿಸಲಿಕ್ಕೆ ಅವಕಾಶವೂ ಅವನಿಗಿದ್ದಿಲ್ಲ. ಅವನ ಮನಸ್ಸೆಲ್ಲ ತುರುಕನ ಶೋಧದಲ್ಲಿ ತೊಡಗಿಹೋಗಿತ್ತು. ಮಹಾವನದಲ್ಲಿ

ಇಪ್ಪತ್ತೈದು ಸಾವಿರ ಮೊಗಲ ದಂಡಾಳುಗಳು ಬೀಡು ಬಿಟ್ಟಿರುವರೆಂಬ ಸುದ್ದಿಯನ್ನು ಮನೋರಮೆಯ ಬಾಯಿಂದ ಕೇಳಿದ ಕೂಡಲೆ, ಆತನು ತನ್ನ ವಾಸಸ್ಥಳಕ್ಕೆ ಹೋಗಿ, ಬೇರೆ ಉಡುಪು–ತೊಡಪುಗಳನ್ನು ಧರಿಸಿ, ತನ್ನ ಚಪಲವಾದ ಕುದುರೆಯನ್ನೇರಿ ಮಹಾವನದ ಹಾದಿಯನ್ನು ಹಿಡದನು. ಹಾ ಹಾ ಅನ್ನುವದರೊಳಗಾಗಿ ಊರಗಡಿಯು ಹಿಂದಾಯಿತು; ಮುಂದಿನ ವಿಸ್ತಾರವಾದ ಬೈಲೂ ಹಿಂದುಳಿಯಿತು. ಹೇಮಚಂದ್ರನು ವಾಯುವೇಗದಿಂದ ಮುಂದಕ್ಕೆ ನಡೆದಿದ್ದನು.

ಕೆಲಹೊತ್ತಿನ ಮೇಲೆ ತನ್ನ ಎಡಗಡೆಯ ಹೆಗಲು ಬಹಳವಾಗಿ ನೋಯುತ್ತಿರುವಂತೆ ಹೇಮಚಂದ್ರನಿಗೆ ಭಾಸವಾಯಿತು. ಅವನು ಅತ್ತಕಡೆಗೆ ನೋಡುತ್ತಾನೆ, ಒಂದು ತೀಕ್ಷ್ಣ ಬಾಣವು ಹೆಗಲಲ್ಲಿ ನಟ್ಟಿದೆ! ಸ್ವಲ್ಪ ಹೊತ್ತಿನಲ್ಲಿಯೇ ದೂರ ಕುದುರೆಯ ಕೊಳಗಗಳ ಸಪ್ಪಳವಾಗುತ್ತಿದ್ದದ್ದೂ ಅವನ ಕಿವಿಗೆ ಬಿದ್ದಿತು. ಹೇಮಚಂದ್ರನು ಹಿಂದಿರುಗಿ ನೋಡಲು, ಮೂವರು ಕುದುರೆಯ ಸವಾರರು ಅತೀ ವೇಗದಿಂದ ಅವನ ಬೆನ್ನಟ್ಟಿ ಬರುತ್ತಿದ್ದರು. ಶೂರನಾದ ಹೇಮಚಂದ್ರನು ಕೂಡಲೆ ಕುದುರೆಯನ್ನು ನಿಲ್ಲಿಸಿ, ಬೆನ್ನಟ್ಟಿ ಬರುತ್ತಿರುವವರ ಕಡೆಗೆ ಮೋರೆಮಾಡಿ, ಅವರ ಹಾದಿಯನ್ನು ನೋಡುತ್ತ ನಿಂತುಕೊಂಡನು. ಅರಕ್ಷಣದಲ್ಲಿ ಆ ಯಮಸ್ವರೂಪರಾದ ಮೂವರು ಕುದುರೆಯ ಸವಾರರು, ಹೇಮಚಂದ್ರನ ಹತ್ತರಕ್ಕೆ ಬಂದು ಬಾಣಗಳ ಮಳೆಯನ್ನು ಸುರಿಸ ಹತ್ತಿದರು. ಹೇಮಚಂದ್ರನ ಈ ಕಾಲದ ಯುದ್ಧ ಕೌಶಲ್ಯವನ್ನೇನು ವರ್ಣಿಸುವದದೆ? ಅವನು ಎಳ್ಳಷ್ಟಾದರೂ ಬೆದರದೆ ತನ್ನ ಟೊಂಕದ ಪಟ್ಟಾಕತ್ತಿಯನ್ನು ಗರಗರನೆ ತಿರುಗಿಸುತ್ತ ಆ ಸವಾರರ ಬಾಣಗಳು ಮೈಗೆ ತಗಲುವದರೊಳಗೆ ಅವನ್ನು ತುಂಡರಿಸಿ ಚಲ್ಲುತ್ತಿದ್ದನು.

ತಾವು ಮಿತಿಮೀರಿ ಶೌರ್ಯದಿಂದ ಕಾದಿದರೂ ಹೇಮಚಂದ್ರನಿಗೆ ಒಂದಾದರೂ ಬಾಣವು ತಗಲದಿರುವದನ್ನು ನೋಡಿ ಸವಾರರು ಮತ್ತಿಷ್ಟು ಸಂತಾಪಗೊಂಡು, ತಮ್ಮ ಇದ್ದಬಿದ್ದ ಯುದ್ಧಕೌಶಲ್ಯವನ್ನೆಲ್ಲ ವೆಚ್ಚಮಾಡಿದರು. ಆದರೂ ವ್ಯರ್ಥವು. ಹೇಮಚಂದ್ರನ ಮುಂದೆ ಅವರ ಆಟವೇನೂ ನಡೆಯಲಿಲ್ಲ, ಶರವೃಷ್ಟಿಯಿಂದ ಕೈವಶವಾಗದಿರುವ ಇವನನ್ನು ಯಾವ ಉಪಾಯದಿಂದ ಹಣ್ಣು ಮಾಡಬೇಕೆಂದು ಆ ಸವಾರರು ತಮ್ಮೊಳಗೆ ಯೋಚಿಸತೊಡಗಿದರು. ಅಷ್ಟರಲ್ಲಿ ಹೇಮಚಂದ್ರನು ಒಬ್ಬ ಸವಾರನ ಮಸ್ತಕಕ್ಕೆ ಗುರಿಯಟ್ಟು ಒಂದು ತೀಕ್ಷ್ಣ ಬಾಣವನ್ನು ಎಸೆಯಲು, ಕೂಡಲೆ ಆ ಬಾಣವು ಮಸ್ತಕದಲ್ಲಿ ನಟ್ಟು ಪಾರಾಗಿ ಹೋಯಿತು. ಸವಾರನು ದಪ್ಪನೆ ನೆಲಕ್ಕೆ ಬಿದ್ದು ಪ್ರಾಣಬಿಟ್ಟನು. ಅದನ್ನು ನೋಡಿ ಉಳಿದ ಇಬ್ಬರು ಸವಾರರು ಜೀವದ ಹಂಗುದೊರೆದು ಬರಚಿಗಳನ್ನು ತಕ್ಕೊಂಡು ಹೇಮಚಂದ್ರನ ಮೇಲೆ ಧುಮುಕಿದರು. ಆದರೆ ಶೂರನಾದ ಆ ಹೇಮಚಂದ್ರನು ಬರಚಿಗಳ ಇರತದಿಂದಲೂ ತನ್ನ ರಕ್ಷಣ ಮಾಡಿಕೊಳ್ಳತೊಡಗಿದನು. ಅವರ ಆಟವೇನೂ ನಡೆಯದಾಯಿತು. ಆಗ ಸವಾರರು, ಮೊದಲು ಹೇಮಚಂದ್ರನ ಕುದುರೆಯನ್ನು ಕೊಂದು ಆ ಮೇಲೆ ಅವನ ಮೇಲೆ ಕೈ ಮಾಡಬೇಕೆಂದು ತಮ್ಮೊಳಗೆ ಯೋಚಿಸಿ ಒಬ್ಬೊಬ್ಬರು ಹೇಮಚಂದ್ರನ ಒಂದೊಂದು ನಿಟ್ಟಿಗಾಗಿ, ಇಬ್ಬರೂ ಒಮ್ಮೆಲೆ ಅವನ ಮೇಲೆ ಧುಮುಕಿದರು. ಸವಾರರ ಈ ಯುಕ್ತಿಯು

ಮಾತ್ರ ಸಫಲವಾಯಿತು. ಹೇಮಚಂದ್ರನು ಮೇಲ್ವಾಯ್ದು ಬರುವ ಒಬ್ಬ ಸವಾರನನ್ನು ಹಿಂದಕ್ಕಟ್ಟಿದರೂ ಇನ್ನೊಬ್ಬನ ಮೇಲೆ ಕೈ ಮಾಡಲಿಕ್ಕೆ ಅವನಿಗೆ ಅನುವು ದೊರೆಯಲಿಲ್ಲ, ಆದುದರಿಂದ ಕುದುರೆಯ ಮರ್ಮಸ್ಥಾನಕ್ಕೆ ಕಡತಬಿದ್ದು, ಆ ಶೂರ ಪ್ರಾಣಿಯು ಪ್ರಾಣಾಂತದ ವ್ಯಥೆಯನ್ನು ಅನುಭವಿಸುತ್ತ ಕೂಡಲೆ ನೆಲಕ್ಕೆ ಬಿದ್ದಿತು; ಮತ್ತು ತನ್ನ ಒಡೆಯನನ್ನು ನೋಡುತ್ತ ನೋಡುತ್ತ ಸ್ವಾಮಿಕಾರ್ಯದಲ್ಲಿ ದೇಹವನ್ನರ್ಪಿಸಿ ಕೃತಾರ್ಥವಾಯಿತು!

ಯುದ್ಧದ ಮಾತು ಈ ಮನೆಗೆ ಬಂದರೂ, ಹೇಮಚಂದ್ರನು ಬೆದರಲಿಲ್ಲ, ಕುದುರೆಯು ಮರಣವ್ಯಥೆಯನ್ನು ಹೊಂದಿ ನೆಲಕ್ಕುರುಳುವಷ್ಟರಲ್ಲಿ ಆತನು ಸಮಯ ಸೂಚಕತೆಯಿಂದ ಟಣ್ಣನೆ ನೆಲಕ್ಕೆ ಹಾರಿದನು. ಸವಾರರು ಈ ಪರಿಯನ್ನು ನೋಡುತ್ತಿರುವಷ್ಟರಲ್ಲಿ ಆತನು ಯಮನಂತೆ ಗರ್ಜಿಸಿ–ಎಲ್ಯೆ ನೋಡಿರಿ, ನೋಡಿರಿ; ನನ್ನ ಪೂರ್ವಜರಿಂದ ದೊರೆತಿರುವ ಈ ದಿವ್ಯ ಶಸ್ತ್ರವು ವೈರಿಯ ರಕ್ತವನ್ನು ಕುಡಿಯದೆ ಎಂದೂ ಹಿಂದಿರುಗತಕ್ಕದ್ದಲ್ಲ, ಎಂದು ನುಡಿದು, ಅಸ್ತ್ರ ಪ್ರಯೋಗ ಮಾಡಿದನು. ಅವನ ಈ ಮಾತುಗಳು ಮುಗಿಯುವದರೊಳಗೆ ಅವರೊಳಗಿನ ಎರಡನೆಯ ಸವಾರನು ನೆಲಕ್ಕುರುಳಿ ದೀರ್ಘ ನಿದ್ರೆಯನ್ನು ಹೊಂದಿದನು. ಇದನ್ನು ನೋಡಿ ಉಳಿದ ಮೂರನೆಯ ಸವಾರನು ಅಂಜಿ ಕೈ ಕಾಲು ಬಿಟ್ಟು, ವಿದ್ಯುದ್ವೇಗದಿಂದ ದಾರಿಸಿಕ್ಕತ್ತ ಓಡಿದನು. ಆ ಓಡಿದವನು ಠಕ್ಕ ಶಾಂತಶೀಲನಾಗಿದ್ದನು.

ಈ ಮೇರೆಗೆ ವೈರಿಗಳು ಗೊತ್ತಿಗೆ ಹತ್ತಿದ ಬಳಿಕ ಹೇಮಚಂದ್ರನಿಗೆ ಸ್ವಲ್ಪ ಅವಕಾಶವು ದೊರೆತಂತಾಗಲು, ತನ್ನ ಹೆಗಲ ನೋವಿನ ಕಡೆಗೂ ಅಲ್ಲಿ ನೆಟ್ಟಿದ್ದ ಬಾಣದ ಕಡೆಗೂ ಅವನ ಲಕ್ಷವು ಹೋಯಿತು. ಬಾಣವು ಒಳಗೆ ಬಹಳ ನಟ್ಟಿದ್ದಿತು. ಹೇಮಚಂದ್ರನು ಕಸುವಿನಿಂದ ಅದನ್ನು ಕಿತ್ತಿದನು. ಆದರೆ, ಬಾಣದ ಸಂಗಡ ಗಾಯದೊಳಗಿಂದ ರಕ್ತಪ್ರವಾಹವು ಹರಿಯಲಾರಂಭಿಸಿತು. ಸೆಲ್ಲೆಯನ್ನು ಹರಿದು ಗಾಯವನ್ನು ಕಟ್ಟಿ ರಕ್ತಪ್ರವಾಹವನ್ನು ನಿಲ್ಲಿಸಲಿಕ್ಕೆ ಹೇಮಚಂದ್ರನು ತನ್ನಿಂದಾದಷ್ಟು ಯತ್ನಿಸಿದನು; ಆದರೆ ಅದು ವ್ಯರ್ಥವಾಯಿತು. ಯುದ್ಧದ ಶ್ರಮವು ಬಹಳ ವಾದುದರಿಂದಲೂ, ಶರೀರದೊಳಗಿಂದ ಮಿತಿಮೀರಿ ರಕ್ತವು ಹರಿದು ಹೋದುದರಿಂದಲೂ ಅವನು ಕಸುವುಗೆಟ್ಟನು. ತುರುಕರ ಶೋಧಕ್ಕಾಗಿ ಮಹಾವನಕ್ಕೆ ಹೋಗುವ ತ್ರಾಣವು ಅವನಲ್ಲಿ ಉಳಿಯಲಿಲ್ಲ, ಅವನ ಕುದುರೆಯಂತು ಸತ್ತು ಹೋಗಿತ್ತು; ಆದುದರಿಂದ ಆತನು ನಿರಾಶೆಪಟ್ಟು, ಮೆಲ್ಲಮೆಲ್ಲನೆ ಮತ್ತೆ ಪಟ್ಟಣದ ಕಡೆಗೆ ಸಾಗಿದನು.

ಶಕ್ತಿಹೀನನಾಗುತ್ತ ನಡೆದಿದ್ದ ಹೇಮಚಂದ್ರನು ಸಾವಕಾಶ ಹೆಜ್ಜೆಗಳನ್ನಿಡುತ್ತ ಬಹಳ ಹೊತ್ತಿನ ಮೇಲೆ ಆ ವಿಸ್ತಾರವಾದ ಬೈಲನ್ನು ದಾಟಿ, ಊರಗಡಿಯೊಳಗೆ ಬಂದನು. ಆದರೆ ಮುಂದೆ ಅವನ ಕಾಲುಗಳೇ ಏಳದಂತಾದವು. ಅವನು ತೀರ ಕಸುವುಗೆಟ್ಟಿದ್ದನು. ಅವನ ಸರ್ವಾಂಗವು ರಕ್ತದಲ್ಲಿ ಅದ್ದಿದಂತಾಗಿತ್ತು, ಅವನ ತಲೆ ತಿರುಗುತ್ತಿತ್ತು, ಕಣ್ಣು ಕತ್ತಲೆಗುಡಿಸುತ್ತಿದ್ದವು; ಆದುದರಿಂದ ವಿಶ್ರಾಂತಿಗಾಗಿ ಆತನು ಒಂದು ಆಲದಮರದ ಬುಡದಲ್ಲಿ ಕುಳಿತುಕೊಂಡನು. ಇದು ಬೆಳಗುಮುಂಜಾವಿನ ಸಮಯವಾಗಿತ್ತು, ಆ ರಾತ್ರಿಯ ಭಯಂಕರವಾದ ಯುದ್ಧಶ್ರಮ, ಇಡೀ ರಾತ್ರಿಯ ನಿದ್ದೆಗೇಡು, ರಕ್ತಶ್ರಾವದ ಮೂಲಕ ಉಂಟಾದ ಗ್ಲಾನಿ ಮುಂತಾದವುಗಳ

ಯೋಗದಿಂದ ಹೇಮಚಂದ್ರನು ಬಹಳವಾಗಿ ದಣಿದಿದ್ದನು. ಅವನ ಕಣ್ಣಲ್ಲಿ ನಿದ್ದೆಯು ಕಟ್ಟಿತ್ತು. ಆತನು ಆಲದಮರದ ಬುಡದಲ್ಲಿ ಸ್ವಲ್ಪ ಅಡ್ಡಾದದ್ದೇ ತಡ, ಅವನಿಗೆ ನಿದ್ರೆಯು ಹತ್ತಿತು. ನಿದ್ರೆಯಲ್ಲಿ ಅವನಿಗೆ ಕನಸುಗಳು ಬೀಳಹತ್ತಿದವು. ಆ ಸ್ವಪ್ನದಲ್ಲಿ ಯಾರೋ ಹಾಡಿದಂತೆ ಅವನಿಗೆ ಕೇಳಿಸಹತ್ತಿತು. ಅದೇನು ಸ್ವಪ್ನವೋ ಎಚ್ಚರವೋ, ಎಂಬದರ ನಿರ್ಣಯವೇ ಅವನಿಗೆ ಬಹಳ ಹೊತ್ತಿನವರೆಗೆ ಆಗಲಿಲ್ಲ.

ಆ ಮರದ ಬಳಿಯಲ್ಲಿಯೇ ಒಂದು ಸಣ್ಣ ಗುಡಿಸಲು ಇದ್ದಿತು. ಒಬ್ಬ ಬಡ ಒಕ್ಕಲಿಗನು ತನ್ನ ಚಿಕ್ಕ ಪರವಾರದೊಡನೆ ಅಲ್ಲಿ ವಾಸಿಸುತ್ತಿದ್ದನು. ಗುಡಿಸಿಲಿನ ಮುಂದಿನ ಬಾಗಿಲದ ಎಡಬಲದಲ್ಲಿ ಕಟ್ಟೆಗಳಿದ್ದು, ಕಟ್ಟೆಗಳ ಮುಂದೆ ಪ್ರಶಸ್ತವಾದ ಅಂಗಳವು ಇತ್ತು ಆ ಅಂಗಳಕ್ಕೆ ಹೊಂದಿ ಆಲದಮರವಿತ್ತು, ಗುಡಿಸಿಲಿನ ಹಿಂದಿನ ಬಾಗಿಲ ಹಿಂದೆ ಹಿತ್ತಲವಿತ್ತು, ಹಿತ್ತಲಕಡೆಯ ಕೋಣೆಯಲ್ಲಿ ಅಡಿಗೆ ಮಾಡುತ್ತಿದ್ದರು. ಮುಂಚಿಯ ಕಡೆಯ ಕೋಣೆಯಲ್ಲಿ ಒಕ್ಕಲಿಗನೂ, ಅವನ ಹೆಂಡಿರು ಮಕ್ಕಳೂ ಮಲಗುತ್ತಿದ್ದರು. ಈ ಅಡಿಗೆ ಮನೆ—ಮಲಗುವ ಮನೆಗಳ ನಡುವಿನ ಸ್ಥಳದಲ್ಲಿ, ಅಂದರೆ ನಡುಮನೆಯಲ್ಲಿ, ಒಕ್ಕಲಿಗನ ಮಗಳಾದ ರತ್ನಮಯಿ, ಬೇರೆ ಇಬ್ಬರು ತರುಣ ಸ್ತ್ರೀಯರು ಈ ಹೊತ್ತು ಮಲಗಿದ್ದರು.

ರಾತ್ರಿಯು ಹೋಗಿ ಬೆಳ್ಳಗೆ ಬೆಳಗಾಯಿತು. ನಸುಕಿನಲ್ಲಿಯೇ ಎಚ್ಚತ್ತಿದ್ದ ರತ್ನಮಯಿಯು ಎಚ್ಚರಿಕೆಯಿಂದಲೇ ಇಷ್ಟುಹೊತ್ತಿನವರಿಗೆ ಹಾಸಿಗೆಯ ಮೇಲೆ ಬಿದ್ದುಕೊಂಡಿದ್ದಳು. ಸ್ವಚ್ಛ ಬೆಳಗಾದದ್ದನ್ನು ನೋಡಿ ಆಕೆಯು ಚಟ್ಟನೆ ಎದ್ದು, ಹಾಸಿಗೆಯನ್ನು ಸುತ್ತಿ ತನ್ನ ಬಳಿಯಲ್ಲಿ ಮಲಗಿಕೊಂಡಿದ್ದ ತರುಣಿಗೆ, ಅಕ್ಕಾ, ಯಾಕೆ ಏಳುವದಿಲ್ಲೇನು? ನೋಡು, ಬೆಳ್ಳಗೆ ಬೆಳಗಾಗಿದೆ, ಮುಸಕನ್ನಾದರೂ ತೆಗೆ ನೋಡೋಣ ಅಂದಳು. ಅದಕ್ಕೆ ಆ ತರುಣಿಯು, ಬೇಕಾದರೆ ನೀನು ಹೋಗು, ಎಂದು ಮಲಗಿಕೊಂಡೇ ಉತ್ತರಕೊಟ್ಟಳು. ಅದಕ್ಕೆ ರತ್ನಮಯಿಯು, ನೀನೇನು ಆರುತಾಸಿನವರೆಗೆ ಹೀಗೆಯೇ ಮಲಗಿಕೊಳ್ಳುವಹಾಗೆ ಕಾಣುತ್ತದೆ, ಏಳುತ್ತೀಯೋ ಇಲ್ಲವೋ ಬೇಗನೆ ಹೇಳು; ಮೈಮೇಲೆ ನೀರು ಉಗ್ಗಲೋ, ಎಂದು ನಗುತ್ತ ಹೊರಟು ಹೋದಳು. ಇತ್ತ ಆ ಹುಡುಗಾಟಿಕೆಯ ಸ್ವಭಾವದ ಅಕ್ಕನು ಮಂಜುಲಸ್ವರದಿಂದ ಹಾಡತೊಡಗಿದಳು.

ರತ್ನಮಯಿಯೊಡನೆ ನಡೆದ ಈ ವಿನೋದವನ್ನೂ, ಅತ್ತ ರತ್ನಮಯಿಯು ಹೋದ ಕೂಡಲೆ ಇತ್ತ ಮುಸುಕಿನಲ್ಲಿಯೇ ಅಕ್ಕನು ಮಂಜುಲ ಸ್ವರದಿಂದ ಹಾಡುವದನ್ನು 3ನೆಯ ತರುಣಿಯು ಕೇಳುತ್ತ ಸುಮ್ಮನೆ ಮಲಗಿಕೊಂಡಿದ್ದಳು. ಇಷ್ಟು ಹೊತ್ತಾದರೂ ಆಕೆಯು ಪಿಟ್ಟೆಂದು ಮಾತಾಡಿದ್ದಿಲ್ಲ. ಇದನ್ನು ತಿಳಿದು ಹಾಡುತ್ತಿದ್ದ ಆ ತರುಣಿಯು ಆ ಮೂರನೆಯ ತರುಣಿಯನ್ನು ಕುರಿತು, ಅವ್ವನವರು ಇನ್ನು ಏಳುವಿರೇನು? ನಿಮಗೆ ಎಚ್ಚರವಾಗಿದೆಯೇ? ಎಂದು ಕೇಳಿದಳು. ಅದಕ್ಕೆ ಆ ತರುಣಿಯು ನಾನು ಎಚ್ಚರದಿಂದಲೇ ಇದ್ದೇನೆ, ಯಾವಾಗಲೂ ಎಚ್ಚತ್ತೇ ಇರುವೆನು. ಎನ್ನಲು, ಆ ಗಾಯಕಿಯು, ಏನಂದಿರಿ? ಆಗಿನಿಂದ ನೀವು ಎಚ್ಚತ್ತೇ ಇರುವಿರಾ? ಎಚ್ಚತ್ತು ಯಾವ ಗೂಢ ವಿಚಾರದಲ್ಲಿ ತೊಡಗಿದ್ದಿರಿ? ಎಂದು ಕೇಳಿದಳು.

ಅದಕ್ಕೆ ಆ ತರುಣಿಯು, ನನ್ನ ಕರ್ಮದ ವಿಚಾರದಲ್ಲಿ! ಎರಡನೆಯ ವಿಚಾರವೇನಿರಬೇಕು? ಅನ್ನಲು, ಅದನ್ನು ಕೇಳಿ ಆ ಗಾಯಕಿಗೆ ಬಹಳ ಅಸಮಾಧಾನವಾಯಿತು. ಆಕೆಯು ನಿರಾಸೆ

ಯಿಂದ, ಅವ್ವನವರೇ, ನಾನಾದರೂ ಏನು ಮಾಡಲಿ? ತಮ್ಮ ಪಾದದ ಆಣೆಮಾಡಿ ಹೇಳುತ್ತೇನೆ, ಎಳ್ಳಷ್ಟಾದರೂ ನನ್ನ ತಪ್ಪು ಇರುವದಿಲ್ಲ. ಅವರು ಇದೇ ಪಟ್ಟಣದಲ್ಲಿರುತ್ತಾರೆಂದು ಕೇಳಿದ್ದರಿಂದ ಮೊನ್ನೆ ನಾವು ಇಲ್ಲಿಗೆ ಬಂದೆವು. ಅಂದಿನಿಂದ ನಾನು ನಸುಕಿನಲ್ಲಿ ಹೊರಟು ಸಂಜೆಯವರೆಗೆ ಅವರನ್ನು ಹುಡುಕುತ್ತ ಒಂದೇ ಸವನೆ ಪಟ್ಟಣದಲ್ಲಿ ತಿರುಗಾಡುತ್ತಿರುವೆನು. ನಾವು ಇಲ್ಲಿಗೆ ಬಂದಾದರೂ ಎಷ್ಟು ದಿವಸಗಳಾಗಿವೆ? ಎರಡೇ ದಿನವಷ್ಟೆ? ಯಾವಾಗಲೂ ನೀವು ಹೀಗೆ ಯಾಕೆ ಚಿಂತೆಯಿಂದ ಕೊರಗುತ್ತೀರಿ? ದೇವರು ಇಂದಿಲ್ಲ ನಾಳೆ ಕಣ್ಣು ತೆರೆದಾನು. ಆತನ ಮೇಲೆ ಭಾರಹಾಕಿ ಸಮಾಧಾನದಿಂದ ಇರಿರಿ. ಇಂದು ಹೇಗಾದರೂ ಮಾಡಿ ಅವರ ಗೊತ್ತುಹಚ್ಚಿಕೊಂಡು ಬರುತ್ತೇನೆ, ಎಂದಳು.

ಗಾಯಕಿಯ ಈ ಮಾತುಗಳನ್ನು ಕೇಳಿ ಆ ತರುಣಿಯು ವ್ಯಸನದಿಂದ, ಅಕ್ಕಾ ಗಿರಿಜೇ, ಈ ಊರಲ್ಲಿ ಅವರ ಗೊತ್ತುಹತ್ತದಿದ್ದರೆ, ಮುಂದೆ ನನಗೆ ಗತಿಯಾವದಕ್ಕಾ? ಪಾಪ! ಬಡವೆಯಾದ ಈ ರತ್ನಮಯಿಯ ತಂದೆಯ ಮನೆಯೇ ಗತಿಯೇನು? ಸಾಯುವವರೆಗೆ ನಾನು ಇಲ್ಲಿಯೇ ಇರಬೇಕಾಗುವದೋ? ದುರ್ದೈವಿಯಾದ ನನಗೆ ಬೇರೆ ಒಂದಾದರೂ ಸ್ಥಳವು ಉಳಿದಿರುವದಿಲ್ಲವಲ್ಲ!!

ಹೀಗೆಂದು ನುಡಿಯುವಾಗ ಆ ತರುಣಿಯ ಕಣ್ಣುಗಳು ದುಃಖಾಶ್ರುಗಳಿಂದ ತುಂಬಿದವು. ಆಕೆಯು ಬಿಕ್ಕಿಬಿಕ್ಕಿ ಅಳತೊಡಗಿದಳು. ಗಿರಿಜೆಯೂ ಮೋರೆಗೆ ಸೆರಗು ಹಾಕಿ ಕಣ್ಣೀರುಗಳಿಂದ ತನ್ನ ಗಲ್ಲಗಳನ್ನು ತೋಯಿಸಹತ್ತಿದಳು. ಅಷ್ಟರಲ್ಲಿ ರತ್ನಮಯಿಯು ಅವಸರದಿಂದ ಅಲ್ಲಿಗೆ ಬಂದು, ಅವ್ವನವರೇ, ಮೃಣಾಲಿನವ್ವನವರೇ, ಏಳಿರಿ ಬೇಗನೆ ಗುಡಿಸಲ ಮುಂದಿನ ಆಲದ ಮರದ ಬುಡದಲ್ಲಿ ಒಬ್ಬ ಗಂಡಸು ಮಲಗಿರುವನು, ಅವನು ಎಂಥ ಚಲುವನಿದ್ದಾನೆಂದಿರಿ! ಅವನ ಉಡಿಗೆ—ತೋಡಿಗೆಗಳಾದರೂ ವಿಚಿತ್ರವಾಗಿರುತ್ತವೆ. ಹು! ಏಳಿರಿ, ಬೇಗನೆ ಏಳಿರಿ ಎಂದಳು.

ಈ ಮಾತು ಕಿವಿಗೆ ಬಿದ್ದಕೂಡಲೆ ಗಿರಿಜೆಯು ಹಕ್ಕಿಯಂತೆ ಹಾರಿ, ಕೂಡಲೆ ಹೊರಗೆ ಹೋದಳು. ಮೃಣಾಲಿನಿಯಾದರೂ ಲಗಬಗೆಯಿಂದ ಆಕೆಯನ್ನು ಹಿಂಬಾಲಿಸಿದಳು. ನೋಡನೋಡುತ್ತ ಅಕಸ್ಮಾತ್ತಾಗಿ ಸಮುದ್ರಕ್ಕೆ ಉಕ್ಕು ಬಂದಂತಾಯಿತು. ಮೃಣಾಲಿನಿಯು ಹರ್ಷದಿಂದ ಗಿರಿಜೆಯನ್ನು ಅಪ್ಪಿಕೊಂಡಳು. ಗಿರಿಜೆಯಾದರೂ ಆನಂದ ಪರವಶಳಾಗಿ ಹಾಡತೊಡಗಿದಳು. ಇದೇ ಹಾಡೇ ಹೇಮಚಂದ್ರನಿಗೆ ಕನಸಿನಲ್ಲಿ ಕೇಳಿದಂತಾಗಿ, ಇದೇನು ಕನಸೋ, ಎಚ್ಚರಿಕೆಯೋ ಎಂಬ ವಿಚಾರದಲ್ಲಿ ಆತನು ಮಗ್ನನಾಗಿದ್ದನು. ಕಡೆಗೆ ಆತನು ವಿಚಾರಮಾಡುತ್ತ ಪೂರಾ ಎಚ್ಚತ್ತು ಗಿಡದ ಬುಡದಲ್ಲಿ ಎದ್ದು ಕುಳಿತುಕೊಂಡನು.

ಇತ್ತ ಮೃಣಾಲಿನಿಯು ಬಾಗಿಲಮರೆಗೆ ನಿಂತುಕೊಂಡು ಗಿರಿಜೆಯನ್ನು ಕುರಿತು—ಅಕ್ಕಾ ಗಿರಿಜೇ, ಅವರ ಕಣ್ಣಿಗೆ ಬೀಳದೆ, ಅವರು ಏನೇನು ಮಾಡುತ್ತಾರೆ, ಎಲ್ಲೆಲ್ಲಿಗೆ ಹೋಗುತ್ತಾರೆ ಇದನ್ನು ಮೊದಲು ನೋಡು. ಅವರಿಗೆ ಗೊತ್ತಾಗದ ಹಾಗೆ ಅವರ ಬೆನ್ನಹತ್ತಿ ಹೋಗಿ ಅವರು ಇರುವ ಮನೆಯನ್ನು ಗೊತ್ತುಹಚ್ಚಿಕೊಂಡು ಬಾ; ಆದರೆ ಗಿರಿಜೇ, ಇದೇನೇ? ರಕ್ತದಲ್ಲಿ ಸ್ನಾನಮಾಡಿದಹಾಗೆ ಯಾಕೆ ಕಾಣುತ್ತಾರೆ? ಏನಾಗಿರಬಹುದು? ಅಕ್ಕಾ, ಇದನ್ನು ನೋಡುವದು ನನ್ನಿಂದಾಗದು; ನಾನು ನಿನ್ನ ಸಂಗಡ ಬರುತ್ತೇನೆ, ಎಂದಳು.

ಈಗಂತು ಬೆಳ್ಳಗೆ ಬೆಳಗಾಗಿತ್ತು. ಹೇಮಚಂದ್ರನು ಸ್ವಲ್ಪ ಹೊತ್ತು ಕುಳಿತು, ಕಣ್ಣು ತಿಕ್ಕಿಕೊಂಡು ಬರಚಿಯ ಗಣೆಯನ್ನು ಊರಿ ಎದ್ದು ನಿಂತು, ಗಣೆಯನ್ನು ಊರುತ್ತ ಮೆಲ್ಲನೆ ಊರಹಾದಿಯನ್ನು ಹಿಡಿದನು. ಅವನು ಸ್ವಲ್ಪ ದೂರ ಹೋದ ಮೇಲೆ ಗಿರಿಜೆಯೂ, ಮೃಣಾಲಿನಿಯೂ ಅವನನ್ನು ಹಿಂಬಾಲಿಸಿದರು. ಇದೆಲ್ಲ ಚಮತ್ಕಾರವನ್ನು ನೋಡಿ ಬೆಪ್ಪಾಗಿದ್ದ ಬಡ ಒಕ್ಕಲಿಗನ ಮಗಳಾದ ರತ್ನಮಯಿಯು ಜಿಜ್ಞಾಸಾಪೂರ್ವಕವಾಗಿ ಮೃಣಾಲಿನಿಗೆ—ಅವ್ವನವರೇ, ಅವರು ನಿಮಗೇನಾಗಬೇಕು? ಎಂದು ಕೇಳಿದಳು. ಅದಕ್ಕೆ ಮೃಣಾಲಿನಿಯು ''ಭಗವಂತನಿಗೇ ಗೊತ್ತು'' ಎಂದು ನುಡಿದು ಗಿರಿಜೆಯನ್ನು ಹಿಂಬಾಲಿಸಿ ಹೋದಳು.

ನೀನು ಇಲ್ಲಿಗೆ ಯಾವಾಗ ಬಂದೆ?

ಬರಚಿಯ ಗಣೆಯನ್ನು ಊರುತ್ತ ಸಾಗಿದ್ದ ಹೇಮಚಂದ್ರನು ಕೆಲಹೊತ್ತಿನ ಮೇಲೆ ತನ್ನ ಮನೆಗೆ ಮುಟ್ಟಿದನು. ಮನೋರಮೆಯು ಬಾಗಿಲಲ್ಲಿಯೇ ನಿಂತಿದ್ದಳು. ಹೇಮಚಂದ್ರನನ್ನು ಹಿಂಬಾಲಿಸಿ ಬಂದಿದ್ದ ಗಿರಿಜೆಯೂ, ಮೃಣಾಲಿನಿಯೂ ಬಾಗಿಲಲ್ಲಿ ಚಿನ್ನದ ಪುತ್ತಳಿಯಂತೆ ನಿಂತುಕೊಂಡಿದ್ದ ಮನೋರಮೆಯನ್ನು ನೋಡಿದರು. ಆಗ ಮೃಣಾಲಿನಿಯ ಮನಸ್ಸಿಗೆ ಒಮ್ಮೆಲೆ ಚಿವುಟಿದಂತಾಯಿತು. ಆಕೆಯು ಮನಸ್ಸಿನಲ್ಲಿ—ನನ್ನ ಸರ್ವಸ್ವವಾದ ಹೇಮಚಂದ್ರನು ಬರಿಯ ರೂಪಕ್ಕೆ ಮರುಳಾಗಿದ್ದರೆ, ಇನ್ನು ನನ್ನ ಸುಖವು ಮಣ್ಣುಗೂಡಿದಂತಾಯಿತು. ದುರ್ದೈವಿಯಾದ ನನ್ನ ದುಃಖಕ್ಕೆ ಇನ್ನು ಕಡೆಯೇ ಇಲ್ಲ. ಯಾವಾಗಲೂ ದುಃಖದಿಂದ ಕೊರಗುತ್ತ ಸಾಯಬೇಕಾಯಿತು. ಎಂದು ಚಿಂತಿಸಿದಳು. ಇತ್ತ ಗಿರಿಜೆಯಾದರೂ ತನ್ನೊಳಗೆ ಏನೋ ಒಟಗುಟ್ಟುತ್ತ—ರಾಜಪುತ್ರನು ರೂಪಕ್ಕೆ ಮರುಳಾಗುವವನಿದ್ದರೆ ನನ್ನ ಒಡತಿಯ ಕಥೆಯು ಮುಗಿಯಿತೆಂದು ತಿಳಿಯಬೇಕು. ಅಹಹ! ಎಂಥ ಚಲ್ವಿಕೆಯಿದು! ಇಂಥ ಚಲ್ವಿಕೆಗೆ ಯಾವ ಗಂಡಸು ಮರುಳಾಗಲಿಕ್ಕಿಲ್ಲ? ಎಂದು ಅಂದುಕೊಂಡಳು.

ಹೇಮಚಂದ್ರನು ಮನೋರಮೆಯ ತೀರ ಸಮೀಪಕ್ಕೆ ಹೋಗಿ—ಮನೋರಮೇ, ನೀನು ಹೀಗೇಕೆ ನಿಂತಿರುವೆ? ಎಂದು ಕೇಳಿದನು. ಆದರೆ ಅದಕ್ಕೆ ಉತ್ತರವೇ ಇಲ್ಲ. ಮತ್ತೆ ಹೇಮಚಂದ್ರನು—ಮನೋರಮೇ, ನೀನು ಮಾತಾಡುವದಿಲ್ಲವೇಕೆ? ಎಂದು ಕೇಳಿದನು. ಅದಕ್ಕೂ ಮನೋರಮೆಯು ಉತ್ತರವನ್ನೇ ಕೊಡಲಿಲ್ಲ. ಆಕೆಯು ಆಕಾಶದಕಡೆಗೆ ಮುಖವೆತ್ತಿ ದಿಟ್ಟಿಸಿ ನೋಡುತ್ತ ನಿಂತುಕೊಂಡಿದ್ದಳು. ಆಗ ಹೇಮಚಂದ್ರನು ಗಟ್ಟಿಯಾಗಿ ಕೂಗಿ—ಮನೋರಮೇ, ಹೀಗೆ ನಿಲ್ಲಲಿಕ್ಕೆ ಆದದ್ದಾದರೂ ಏನು? ಎಂದು ಕೇಳಿದನು. ಆಗ ಮನೋರಮೆಯು ಸ್ವಲ್ಪ ಎಚ್ಚತ್ತು, ಆಕಾಶದಲ್ಲಿ ಸ್ಥಿರವಾಗಿದ್ದ ದೃಷ್ಟಿಗಳನ್ನು ಕಿತ್ತುಕೊಂಡು, ಮೆಲ್ಲಮೆಲ್ಲನೆ ಕೆಳಗಿಳಿಸುತ್ತ ಹೇಮಚಂದ್ರನ ಮೋರೆಯನ್ನು ನೋಡಿದಳು. ಕೆಲಹೊತ್ತಿನವರೆಗೆ ಅವನ ಮೋರೆಯನ್ನೇ ದಿಟ್ಟಿಸಿ ನೋಡುತ್ತ ನಿಂತುಕೊಂಡಳು. ಬಳಿಕ ರಕ್ತದಲ್ಲಿ ಮುಳುಗಿ

ಹೋಗಿದ್ದ ಅವನ ಮೈಯನ್ನೂ, ಅರಿವೆಯನ್ನೂ ನೋಡಿ ಮೆಟ್ಟಿಬಿದ್ದು—ಹೇಮಚಂದ್ರಾ! ಈ ರಕ್ತವೇತರದು? ನಿನ್ನ ಮೋರೆಯು ಇಷ್ಟೇಕೆ ಬಾಡಿರುವದು? ಎಂದು ಕೇಳಿದಳು. ಆಗ ಹೇಮಚಂದ್ರನು ಬೊಟ್ಟುಮಾಡಿ ತನ್ನ ಹೆಗಲಿಗಾಗಿದ್ದ ಗಾಯವನ್ನು ತೋರಿಸಿದನು. ಕೂಡಲೆ ಮನೋರಮೆಯು ಆತನ ಕೈಹಿಡಿದು ಒಳಗೆ ಕರೆದೊಯ್ದು, ಒಂದು ಪಾತ್ರೆಯಲ್ಲಿ ನೀರು ತುಂಬಿಕೊಂಡು ಬಂದು ಒದ್ದೆಯ ಅರಿವೆಯಿಂದ ಆತನ ಮೈಗೆ ಹತ್ತಿದ ರಕ್ತವನ್ನು ಒರಿಸಿದಳು; ಮತ್ತು ರಕ್ತದಲ್ಲಿ ತೊಯ್ದುಹೋಗಿದ್ದ ಅವನ ವಸ್ತ್ರಗಳನ್ನೂ ಬದಲಿಸಿದಳು. ಇಷ್ಟಾದ ಬಳಿಕ ಆಕೆಯು ಹೊರಗೆ ಬಂದು, ಗಾಯವು ತುಂಬಿಬರುವ ಒಂದು ವನಸ್ಪತಿಯನ್ನು ತಕ್ಕೊಂಡು ಬಂದು ಕುಂದಪುಷ್ಪದ ಮೊಗ್ಗೆಗಳನ್ನು ಹೀಯಾಳಿಸುವ ತನ್ನ ಸುಂದರವಾದ ಹಲ್ಲುಗಳಿಂದ ಅದನ್ನು ಜಿಗಿದು ಜಿಗಿದು ಗಾಯದಲ್ಲಿ ಅದರ ರಸವನ್ನು ಹಿಂಡಿದಳು. ತರುವಾಯ ಬೆಳ್ಳಗಿನ ಸ್ವಚ್ಛವಾದ ಅರಿವೆಯ ಪಟ್ಟಿಯಿಂದ ಗಾಯವನ್ನು ಗಟ್ಟಿಯಾಗಿ ಕಟ್ಟಿಬಿಟ್ಟು, ಹೇಮಚಂದ್ರನನ್ನು ಕುರಿತು—ಹೇಮಚಂದ್ರಾ, ನಿನಗೆ ನಿನ್ನೆ ರಾತ್ರಿಯೆಲ್ಲ ನಿದ್ದೆಯಿಲ್ಲ, ನೀನು ಸ್ವಲ್ಪ ಹೊತ್ತು ಸ್ವಸ್ಥ ಮಲಗಿಕೊಂಡು ನಿದ್ದೆಮಾಡು, ಎಂದು ಹೇಳಿ, ಮಂಚದ ಮೇಲೆ ಹಾಸಿ ಹೇಮಚಂದ್ರನನ್ನು ಮಲಗಿಸಿ, ಆತನ ಸೇವೆಯ ಸಲುವಾಗಿ ತಾನು ಹಾಸಿಗೆಯ ಬಳಿಯಲ್ಲಿ ಕುಳಿತಳು.

ಈ ಎಲ್ಲ ಪ್ರಕಾರವನ್ನು ಗುಪ್ತರೀತಿಯಿಂದ ನಿಂತುಕೊಂಡು ಮೃಣಾಲಿನಿಯು ನೋಡುತ್ತಿದ್ದಳು. ಆಕೆಯು ಗಿರಿಜೆಯನ್ನು ಕುರಿತು—

ಮೃಣಾ—ಗಿರಿಜೇ, ಈಕೆ ಯಾರಾಗಿದ್ದಾಳು.

ಗಿರಿಜೆ—(ಚಿವುಗಣ್ಣುಮಾಡಿ, ತಲೆ ಅಲ್ಲಾಡಿಸುತ್ತ) ಹೆಸರಂತೂ ಮನೋರಮೆಯದೆ.

ಮೃಣಾ—ಈಕೆಯು ಹೇಮಚಂದ್ರನ ಮನೋರಮೆಯೇನು?

ಗಿರಿಜೆ—ನಿಮಗೆ ಹೇಗೆ ಕಾಣುತ್ತದೆ?

ಮೃಣಾ—ನಾನಂತು ಮನೋರಮೆಯು ಬಹು ಪುಣ್ಯವತಿಯೆಂದು ಎಣಿಸುತ್ತೇನೆ! ಹೀನ ಪುಣ್ಯಳಾದ ನನ್ನಿಂದ ಅವರ ಸೇವೆಯು ಘಟಿಸಲಿಲ್ಲ; ಅದನ್ನು ಮನೋರಮೆಯು ಮಾಡುತ್ತಿರುವಳು. ಹಗಲು ರಾತ್ರಿ ಯಾರ ಸಲುವಾಗಿ ನನ್ನ ಅಂತಃಕರುಣವು ಸುಟ್ಟು ಬೂದಿ ಯಾಗುತ್ತಿರುವದೋ, ಅವರ ಸಹವಾಸಸುಖವು ಮನೋರಮೆಗೆ ಒದಗಿರುವದು. ದೇವರು ಆ ಬಡವೆಯನ್ನಾದರೂ ಸುಖವಾಗಿಟ್ಟು, ಆಕೆಗೆ ದೀರ್ಘಾಯುಷ್ಯವನ್ನು ಕೊಡಬೇಕು. ಗಿರಿಜೇ, ನಾನು ಇನ್ನು ಮನೆಗೆ ಹೋಗುತ್ತೇನೆ, ಇನ್ನು ಇಲ್ಲಿ ನಿಲ್ಲುವದು ಯೋಗ್ಯವಲ್ಲ, ನೀನು ಇಲ್ಲಿಯೇ ಸಮೀಪದಲ್ಲಿದ್ದು ನನ್ನ ಪ್ರಿಯಕರನ ಸುದ್ದಿಯನ್ನು ಆಗಾಗ್ಗೆ ತಿಳಿಸುತ್ತಿರು. ಮನೋರಮೆಯು ಯಾರೇ ಇರಲಿ, ಹೇಮಚಂದ್ರನಂತು ನನ್ನಾತನೇ ಇರುವನು!

ಈ ಮೇರೆಗೆ ನುಡಿದು ಮೃಣಾಲಿನಿಯು ಗಿರಿಜೆಯ ಒಪ್ಪಿಗೆಯನ್ನು ಪಡೆದು ಮನೆಗೆ ಹೋದಳು. ಇತ್ತ ಗಿರಿಜೆಯು ಹೇಮಚಂದ್ರನ ಮಂದಿರದ ಸುತ್ತಲಿನ ತೋಟದಲ್ಲಿ ತಿರುಗಾಡ ಹತ್ತಿದಳು. ಕಿಡಿಕಿಗಳ ಬಾಗಿಲು ತೆರೆದಲ್ಲೆಲ್ಲ ಆಕೆಯು ಎಚ್ಚರಿಕೆಯಿಂದ ನಿಂತು ಹಣಿಕಿ ನೋಡುತ್ತಿದ್ದಳು. ಕಡೆಗೆ ಹೇಮಚಂದ್ರನು ಮಲಗಿರುವ ಕೋಣೆಯ ಕಿಡಿಕೆಯ ಹತ್ತರವೇ

ಆಕೆಯು ಬಂದು ನಿಂತಳು. ಕಿಡಿಕಿಯೊಳಗಿಂದ ಹಣಿಕಿ ನೋಡುತ್ತಾಳೆ, ಒಳಗೆ ಮಂಚದ ಮೇಲೆ ಹೇಮಚಂದ್ರನು ಮಲಗಿದ್ದು, ಬಳಿಯಲ್ಲಿ ಮನೋರಮೆಯು ಗಂಭೀರಮುದ್ರೆಯಿಂದ ಹೇಮಚಂದ್ರನನ್ನು ಎವೆಯಿಕ್ಕದೆ ನೋಡುತ್ತ ಕುಳಿತುಕೊಂಡಿದ್ದಾಳೆ! ಈ ಪ್ರಕಾರವನ್ನು ನೋಡಿ ಗಿರಿಜೆಯು ಆ ಕಿಡಿಕೆಯ ಬುಡದಲ್ಲಿಯೇ ತನ್ನ ಗದ್ದಿಗೆಯನ್ನು ಹಾಕಿದಳು.

ಏಕಾಂತದಲ್ಲಿ ಆಗುವ ಮನೋರಮಾ--ಹೇಮಚಂದ್ರರ ಸಂಭಾಷಣವನ್ನು ಕೇಳಿ, ಅವನ್ನು ತೂಗಿ ನೋಡಿ ಹೊರಡುವ ಹುರುಳನ್ನು ತನ್ನ ಒಡತಿಯಾದ ಮೃಣಾಲಿನಿಯ ಮುಂದೆ ಓದಬೇಕೆಂದು ಆಕೆಯು ಆ ಕಿಡಕಿಯ ಬುಡದಲ್ಲಿ ಕುಳಿತಿದ್ದಳು; ಆದರೆ ಆ ಸರಳಮನಸ್ಸಿನ ವಿನೋದ ಪ್ರಿಯಳ ಕೋರಿಕೆಯು ನಿಷ್ಫಲವಾಯಿತು. ಯುದ್ಧದ ಶ್ರಮದಿಂದಲೂ, ರಾತ್ರಿಯ ನಿದ್ದೆಗೇಡಿನಿಂದಲೂ ಬಹಳ ದಣಿದಿದ್ದ ಹೇಮಚಂದ್ರನಿಗೆ ಗಡದ್ದು ನಿದ್ದೆಹತ್ತಿ ಬಹಳ ಹೊತ್ತಿನ ವರೆಗೆ ಆತನು ಮಲಗಿಬಿಟ್ಟನು. ಆಗ ಎದ್ದಾನು, ಇನ್ನೊಂದು ತಾಸಿಗೆ ಎದ್ದಾನು, ಇನ್ನೊಂದು ಗಳಿಗೆಗೆ ಎದ್ದಾನು, ಇನ್ನು ಮೇಲೆ ನಿಶ್ಚಯವಾಗಿ ಏಳುವನು, ಎಂದು ಹಾದಿಯ ನೋಡಿ ನೋಡಿ, ಆ ಗಿರಿಜೆಯು ಬೇಸತ್ತು ಹೋದಳು. ನಿರಾಶೆಯ ಹೊರತು ಆಕೆಗೆ ಬೇರೆ ಫಲವೇನೂ ದೊರೆಯಲಿಲ್ಲ. ಇಂಥ ಸ್ಥಿತಿಯಲ್ಲಿ ಕೈಬಾಯಿ ಮುಚ್ಚಿಕೊಂಡು ಸುಮ್ಮನೆ ಕುಳಿತುಕೊಳ್ಳುವದು ಗಿರಿಜೆಗೆ ದುಸ್ತರವಾಯಿತು. ಯಾರಸಂಗಡ ಮಾತಾಡುವಹಾಗಿಲ್ಲ, ಕತೆಯಾಡುವಹಾಗಿಲ್ಲ; ನಗುವಹಾಗಿಲ್ಲ, ಕಲೆಯುವಹಾಗಿಲ್ಲ; ಯಾರಸಂಗಡ ಹುಡುಗಾಟಿಕೆ ಮಾಡುವಹಾಗಿಲ್ಲ; ಹಾಡುವ ಹಾಗಿಲ್ಲ! ಹೀಗೆ ಸತ್ತವರಂತೆ ಎಷ್ಟುಹೊತ್ತು ಕುಳಿತುಕೊಳ್ಳಬೇಕು? ಮೊದಲೇ ಸ್ತ್ರೀಜಾತಿ, ಅದರಲ್ಲಿಯೂ ಗಿರಿಜೆಯಂಥ ಚತುರಳೂ, ವಿನೋದಪ್ರೀಯಳೂ ಆದ ಸ್ತ್ರೀಯು!! ಗಿರಿಜೆಯ ಈ ಸ್ಥಿತಿಯು ತೀರಾ ತಲೆಬೇಸರಿಟ್ಟಿತು. ಆಕೆಯ ನಾಲಿಗೆಯು ಚುರುಗುಟ್ಟಹತ್ತಿತು. ಆಕೆಯು ತನ್ನೊಳಗೆ ಆ ಖೋಡಿ ದಿಗ್ವಿಜಯನಾದರೂ ಎಲ್ಲಿ ಹೋಯಿತೋ ಏನೋ! ಕಣ್ಣಿಗೆ ಬೀಳದಾಗಿದ್ದಾನೆ. ಅವನ ಸಂಗಡಲಾದರೂ ಎರಡು ಮಾತುಗಳನ್ನು ಆಡೇನಂದೆ! ಎಂದು ಯೋಚಿಸಿದಳು.

ಗುಪ್ತವಾಗಿ ಕುಳಿತುಕೊಂಡಿದ್ದರಿಂದ ಗಿರಿಜೆಯು ಯಾರಸಂಗಡಲೂ ಬಾಯಿಬಿಚ್ಚಿ ಮಾತಾಡುವ ಹಾಗಿದ್ದಿಲ್ಲ, ಆದರೆ ಆಕೆಯ ಚಡಪಡಿಕೆಯು ಕಡಿಮೆಯಾಗಲೊಲ್ಲದು. ಯಾರ ಸಂಗಡಲಾದರೂ ಚೇಷ್ಟೆ ಮಾಡಬೇಕೆಂತಲೂ, ಒಂದು ಗಳಿಗೆ ಹರಟೆಕೊಚ್ಚಬೇಕೆಂತಲೂ ಆಕೆಯ ಮನಸ್ಸು ಹಾತೊರೆಯಹತ್ತಿತು. ಮನಸ್ಸು ಬಿಗಿಹಿಡಿಯುವದು ಆಕೆಯಿಂದಾಗದಂತಾಯಿತು. ಮಾತಾಡಲಿಕ್ಕೆ ಎರಡನೆಯವರಾರೂ ಸಿಗುವ ಹಾಗಿದ್ದಿಲ್ಲ. ಆಗ ಆಕೆಯು ತನ್ನ ಮನಸ್ಸಿನಲ್ಲಿಯೇ ಒಬ್ಬ ಸ್ತ್ರೀಯನ್ನು ಕಲ್ಪಿಸಿ ಮನಸ್ಸಿನಲ್ಲಿಯೇ ಆಕೆಯ ಸಂಗಡ ಮಾತಾಡತೊಡಗಿದಳು! ಗಿರಿಜೆಯೇ ಪ್ರಶ್ನಮಾಡುವವಳು, ಗಿರಿಜೆಯೇ ಉತ್ತರಕೊಡುವವಳು! ಹೀಗಿರಲು, ಗಿರಿಜೆಯ ಕಾಲ್ಪನಿಕ ಸ್ತ್ರೀಯು ಗಿರಿಜೆಯನ್ನು ಕೇಳುತ್ತಾಳೆ.

ಕಾಲ್ಪನಿಕಸ್ತ್ರೀ—ಯಾರೇ ನೀನು ಇಲ್ಲಿ ಕುಳಿತವಳು?

ಗಿರಿಜೆ—ನಾನು, ಗಿರಿಜೆಯು.

ಕಾಲ್ಪ—ಇಲ್ಲಿ ನಿನ್ನ ಕೆಲಸವೇನು? ಯಾತಕ್ಕೆ ಕುಳಿತಿರುವೆ?

ಗಿರಿಜೆ—ಮೃಣಾಲಿನಿಯ ಸಲುವಾಗಿ ಕುಳಿತಿರುವೆನು.

ಕಾಲ್ಪ—ಮೃಣಾಲಿನಿಯು ನಿನಗೇನಾಗಬೇಕು?

ಗಿರಿಜೆ—ಏನೂ ಇಲ್ಲ.

ಕಾಲ್ಪ—ಏನೂ ಆಗದಿದ್ದರೆ ಸುಮ್ಮನೆ ಆಕೆಯ ಸಲುವಾಗಿ ಜೀವಕ್ಕೆ ಯಾಕೆ ಇಷ್ಟು ತೊಂದರೆ ಮಾಡಿಕೊಳ್ಳುತ್ತೀ?

ಗಿರಿಜೆ—ನನಗೆ ಎರಡನೆಯ ಕೆಲಸವಾದರೂ ಏನಿದೆ? ಸುಮ್ಮನೇ ತಿರುಗಿದರಾದರೂ ಏನು ಸಿಗುವದು?

ಕಾಲ್ಪ—ಒಳ್ಳೇದು, ಮೃಣಾಲಿನಿಯ ಸಲುವಾಗಿ ಇಲ್ಲಿ ಏತಕ್ಕೆ ಬಂದಿದ್ದೆ?

ಗಿರಿಜೆ—ಆಕೆಯ ಪಂಜರದೊಳಗಿನ ಹಕ್ಕಿಯು ಸರಪಳಿಯನ್ನು ಹರಿದು ಇಲ್ಲಿಗೆ ಓಡಿ ಬಂದಿರುತ್ತದೆ.

ಕಾಲ್ಪ—ನೀನು ಆ ಹಕ್ಕಿಯನ್ನು ಹಿಡಿದುಕೊಂಡು ಮೃಣಾಲಿನಿಯ ಬಳಿಗೆ ಒಯ್ಯುವೆಯೆಂದು ಕಾಣುತ್ತದೆ?

ಗಿರಿಜೆ—ಸರಪಳಿಯನ್ನು ಹರಿದು ಓಡಿಬಂದ ಹಕ್ಕಿಯನ್ನು ಹಿಡಿದು ಮಾಡುವದೇನು? ಅದನ್ನು ಹಿಡಿಯುವ ಬಗೆಯಾದರೂ ಹೇಗೆ?

ಕಾಲ್ಪ—ಈ ಮಾತು ತಿಳಿದಿದ್ದ ಬಳಿಕ ಸುಮ್ಮನೆ ಇಲ್ಲಿ ನೀನು ಕುಳಿತ ಕಾರಣವೇನು?

ಗಿರಿಜೆ—ಆ ಹಕ್ಕಿಯು ಸರಪಳಿಯನ್ನು ಪೂರಾ ಹರಿದಿರುವದೋ ಹೇಗೆಂಬದನ್ನು ನೋಡಲಿಕ್ಕೆ.

ಕಾಲ್ಪ—ಅದನ್ನು ನೋಡಿ ನೀನು ಕಟ್ಟಿಕೊಳ್ಳುವದೇನು?

ಗಿರಿಜೆ—ತನ್ನ ಪ್ರೀತಿಯ ಪಕ್ಷಿಯ ಸಲುವಾಗಿ ಮೃಣಾಲನಿಯು ದಿನಾಲು ಗಳಗಳ ಅಳುತ್ತಾಳೆ. ಈದಿನ ಆಕೆಯು ಮಾಡುವ ರಂಬಾಟವನ್ನು ನೋಡಿದರೆ, ನಿನ್ನ ಮನಸ್ಸು ಕರಗಿ ಹೋದೀತು. ಹಕ್ಕಿಯ ಸಂಬಂಧದ ಒಳ್ಳೆಯ ಸುದ್ದಿಯನ್ನು ಒಯ್ದರೆಯೇ ಮೃಣಾಲಿನಿಯು ಬದುಕಬಹುದು.

ಕಾಲ್ಪ—ಆ ಹಕ್ಕಿಯು ಸರಪಳಿಯನ್ನು ಪೂರಾ ಹರಿದು ಬಿಟ್ಟಿದ್ದರೆ?

ಗಿರಿಜೆ—ಹಾಗಾದರೆ ಮಾಡುವದೇನು? ಹಕ್ಕಿಯು ಕೈಮೀರಿ ಹೋದದ್ದರಿಂದ ನೀನು ಅದರ ಆಶೆಯನ್ನು ಬಿಡೆಂತಲೂ, ''ರಾಮ ರಾಮ'' ಎಂಬ ಶಬ್ದವನ್ನು ಕೇಳುವ ಇಚ್ಛೆಯು ನಿನಗಿದ್ದರೆ, ಇನ್ನೊಂದು ಅಡವಿಯೊಳಗಿನ ಹಕ್ಕಿಯನ್ನು ಹಿಡಕೊಂಡು ಬಾರೆಂತಲೂ, ಈಗಿನ ಮಾತು ಕಲಿತ ಹಕ್ಕಿಯು ತಿರುಗಿ ಸಿಗುವ ಆಸೆಯಿಲ್ಲೆಂತಲೂ, ಪಂಜರವನ್ನು ತೆರವು ಇಡಬೇಕೆಂತಲೂ ನಾನು ಮೃಣಾಲಿನಿಗೆ ಹೇಳುವೆನು.

ಕಾಲ್ಪ—ನಿನ್ನ ಮನಸ್ಸಿಗೆ ಬಂದಂತೆ ಈಗ ನೀನು ಮಾತಾಡುತ್ತಿರುವೆ. ಆದರೆ, ಮೃಣಾಲಿನಿಯು ಸಿಟ್ಟಿನಿಂದ ಪಂಜರವನ್ನೇ ಚಲ್ಲಿ ಕೊಟ್ಟುಬಿಟ್ಟರೆ ಏನು ಮಾಡುತ್ತೀ?

ಗಿರಿಜೆ—ನೀನಾಡುವ ಮಾತೂ ಸುಳ್ಳಲ್ಲ. ಹಾಗೂ ಆಗಬಹುದು. ವೃಣಾಲಿನಿಯು ಪಂಜರವನ್ನು ಚಲ್ಲಿ ಕೊಡಲಿಕ್ಕಿಲ್ಲೆಂದು ನಾನು ಅನ್ನುವದಿಲ್ಲ.

ಕಾಲ್ಪ—ಹೀಗಿದ್ದ ಬಳಿಕ ಇಲ್ಲಿ ರಣಗುಟ್ಟುವ ಬಿಸಿಲಿನಲ್ಲಿ ಯಾಕೆ ಬೇಯುತ್ತ ಕುಳಿತುಕೊಂಡಿರುತ್ತೀ?

ಗಿರಿಜೆ—ಅದಿರಲಿ ಬಿಡು; ಆದರೆ ಇದೇನಾಶ್ಚರ್ಯವವ್ವಾ, ಈ ಒಳಗೆ ಕುಳಿತು ಕೊಂಡಿರುವ ಹುಡುಗಿಯು ಮೂಕಿ ಕಾಣುತ್ತದೆ. ಇಷ್ಟು ಹೊತ್ತಾದರೂ ಬಾಯಿಂದ ಪಿಟ್ಟೆಂದು ಮಾತಾಡಲೊಲ್ಲದು! ಹೆಂಗಸಾಗಿ ಇಷ್ಟು ಹೊತ್ತು ಸುಮ್ಮನೆ ಕುಳಿತಿರುತ್ತದೆ! ಹೆಣ್ಣಿನ ಜಾತಿಗೆ ಇದು ಚಂದವಾದರೂ ಕಾಣುತ್ತದೆಯೇ? ಆಕೆಯು ನಿಶ್ಚಯವಾಗಿ ಮೂಕಿಯಿರುತ್ತಾಳೆ ಬಿಡು!

ಗಿರಿಜೆಯ ಈ ವಿನೋದ ಪ್ರಿಯ ಭಾಷಣದ ಪ್ರವಾಹವು ಬೇಕಾದಷ್ಟು ಹೊತ್ತು ನಡೆಯುವ ಹಾಗಿತ್ತು ಆ ವಿನೋದಪ್ರಿಯಳಾದ ಭಿಕ್ಷುಕಿಗೆ ಆ ಮಾತಿನ ಬೇಸರವೂ ಆಗುವ ಹಾಗಿದ್ದಿಲ್ಲ; ಆದರೆ ಅಷ್ಟರಲ್ಲಿ ಹೇಮಚಂದ್ರನು ಎಚ್ಚತ್ತುದರಿಂದ ಗಿರಿಜೆಯು ತನ್ನ ಗೆಳತಿಗೆ ಹೋಗಹೇಳಿ ಮತ್ತು ಕಿವಿಯಾನಿಸಿ ಒಳಗಿನ ಮಾತುಗಳನ್ನು ಕೇಳತೊಡಗಿದಳು. ಹೇಮಚಂದ್ರನು ಎದ್ದು ಕುಳಿತುಕೊಂಡಕೂಡಲೆ ಮನೋರಮೆಯು—''ನೆಟ್ಟಗೆ ನಿದ್ದೆಹತ್ತಿತಷ್ಟೇ?'' ಎಂದು ಕೇಳಲು, ಹೇಮಚಂದ್ರನು ''ಹತ್ತಿತೆ'ಂದು ಉತ್ತರಕೊಟ್ಟನು. ಬಳಿಕ ಮನೋರಮೆಯು—ನಿನ್ನೆ ರಾತ್ರಿ ನಿನಗೆ ಗಾಯವಾದ ಕಾರಣವೇನು? ದಯಮಾಡಿ ಒಂದುಳಿಯದಂತೆ ನನಗೆ ಹೇಳು ಎಂದು ಕೇಳಿದಳು.

ಹೇಮಚಂದ್ರನು ರಾತ್ರಿಯೊದಗಿದ ಸಂಗತಿಯನ್ನೆಲ್ಲ ಮನೋರಮೆಗೆ ಹೇಳಿದನು. ಅದನ್ನು ಕೇಳಿ ಮನೋರಮೆಯು ಚಿಂತಾಮಗ್ನಳಾಗಿ ವಿಚಾರಮಾಡುತ್ತ ಕುಳಿತುಕೊಂಡಳು. ಆಗ ಹೇಮಚಂದ್ರನು—ಮನೋರಮೇ, ನಿನ್ನ ಜಿಜ್ಞಾಸೆಯೆಲ್ಲ ತೃಪ್ತವಾಯಿತಷ್ಟೇ? ಇನ್ನು ನನ್ನ ಪ್ರಶ್ನಗಳಿಗೆ ಉತ್ತರವನ್ನು ಕೊಡು. ನಿನ್ನೆ ರಾತ್ರಿ ಆರು ತಾಸಿನಲ್ಲಿ ಆ ಮಂದಿರದಿಂದ ಹೊರಬಿದ್ದ ನೀನು ಮುಂದೆ ಎಲ್ಲಿಗೆ ಹೋದೆ? ಏನೇನು ಸಂಗತಿ ಒದಗಿತು? ಅದನ್ನೆಲ್ಲ ವಿಸ್ತಾರವಾಗಿ ಹೇಳು ಎಂದು ಕೇಳಿದನು. ಮನೋರಮೆಯು ಮೆಲ್ಲನೆ ಏನೋ ಹೇಳಹತ್ತಿದಳು; ಆದರೆ ಅದು ಗಿರಿಜೆಗೆ ಕೇಳಿಸಲಿಲ್ಲ. ಏನಾದರೂ ಅವರ ಗುಪ್ತ ಮಾತುಗಳಿರಬಹುದೆಂದು ಆಕೆಯು ತರ್ಕಿಸಿದಳು. ಬಹಳ ಹೊತ್ತು ಕುಳಿತರೂ ಒಂದಾದರೂ ಮಾತು ಕೇಳಿಸಲಿಲ್ಲ. ಆಗ ಆಕೆಯು ತನ್ನ ಮೊದಲಿನ ಕಾಲ್ಪನಿಕ ಗೆಳತಿಯನ್ನು ಮತ್ತೆ ಕರೆದು—

ಗಿರಿಜೆ—ಕೇಳಿದೆಯೇನೇ?

ಕಾಲ್ಪ—ಏನನ್ನುವೆಯವ್ವಾ?

ಗಿರಿಜೆ—ಹಕ್ಕಿಯ ಲಕ್ಷಣವೇನಾದರೂ ತಿಳಿಯಿತೇ?

ಕಾಲ್ಪ—ಯಾವ ಲಕ್ಷಣವೆಂಬದನ್ನು ಬಾಯಿಬಿಚ್ಚಿ ಹೇಳಿದರೆ ಏನಾದರೂ ಹೇಳೇನು?

ಗಿರಿಜೆ—(ಕೈ ಬೆರಳುಗಳಿಂದ ಎಣಿಸುತ್ತ) ಒಂದನೆಯ ಮಾತು—ಆ ಹುಡುಗೆಯು ಬಹು ಚಲುವೆಯು. ಬೆಂಕಿಯ ಹತ್ತರ ಬೆಣ್ಣೆಯು ಕರಗದಿರುವ ಬಗೆಯಾದರೂ ಹೇಗೆ?

ಎರಡನೆಯ ಮಾತು—ಹೇಮಚಂದ್ರನ ಮೇಲೆ ಮನೋರಮೆಯ ಪ್ರೇಮವು ಬಹಳವಾಗಿದೆ. ಹಾಗಿಲ್ಲದಿದ್ದರೆ ಇಷ್ಟು ಆತನ ಸೇವೆಯನ್ನು ಆಕೆಯು ಮಾಡುತ್ತ ಆತನ ಸಲುವಾಗಿ ಕಷ್ಟಪಡುವ ಕಾರಣವೇನು? ಮೂರನೆಯ ಮಾತು—ಇಬ್ಬರೂ ಒತ್ತಟ್ಟಿಗಿರುವದು. ನಾಲ್ಕನೆಯ ಮಾತು—ರಾತ್ರಿಯಲ್ಲಿ ಕೂಡಿ ತಿರುಗುವದು. ಐದನೆಯ ಮಾತು—ಗುಪ್ತಮಾತುಗಳನ್ನಾಡುವದು.

ಗಿರಿಜೆಯು ಹೀಗೆ ಬೆರಳುಗಳನ್ನು ಎಣಿಸುತ್ತಿರುವಾಗ ಆಕೆಯ ಕಾಲ್ಪನಿಕ ಸಖಿಯು ನಡುವೇ ಬಾಯಿಹಾಕಿ ನಿಲ್ಲಿಸಿ—ಅಲ್ಲೇ, ಮನೋರಮೆಯು ಹೇಮಚಂದ್ರನ ಮೇಲೆ ಪ್ರೀತಿ ಮಾಡುತ್ತಿರಬಹುದು; ಆದರೆ ಹೇಮಚಂದ್ರನಿಗೆ ಅದರ ಹಂಗೇನು? ಎಂದು ಕೇಳಿದಳು. ಅದಕ್ಕೆ ಗಿರಿಜೆಯು ಸ್ವಲ್ಪ ಸಿಟ್ಟಾಗಿ—ಇದೇನು ನಿನ್ನ ಕೇಳೋಣವೇ? ಗಾಳಿಯಿಲ್ಲದೆ ಎಲ್ಲಿಯಾದರೂ ತೆರೆಗಳು ಹುಟ್ಟುತ್ತವೆಯೋ? ನಾವು ಅನ್ಯರನ್ನು ಪ್ರೀತಿಸಿದ ಬಳಿಕ ಅನ್ಯರಲ್ಲಿ ನಮ್ಮ ವಿಷಯವಾಗಿ ಪ್ರೇಮವು ಉತ್ಪನ್ನವಾಗಲೇಬೇಕು ಎಂದಳು. ಆಗ ಕಾಲ್ಪನಿಕ ಸ್ತ್ರೀಯು—ತಂಗೀ, ಹಾಗಲ್ಲಕ್ಕಾ, ಮೃಣಾಲಿನಿಯು ಈಗ ಹೇಮಚಂದ್ರನನ್ನು ಮನಮುಟ್ಟಿ ಪ್ರೀತಿಸುತ್ತಿರುವದನ್ನು ನೆನಪಿಗೆ ತಂದುಕೋ ಅನ್ನಲು, ಗಿರಿಜೆಯು ಅದೆಲ್ಲ ನಿಜವು; ಆದರೆ ಸದ್ಯಕ್ಕೆ ಮೃಣಾಲಿನಿಯು ದೂರ ಇರುವಳು, ಮನೋರಮನೆಯು ಹತ್ತರ ಇರುವಳು. ಇದನ್ನು ನೀನೂ ಮರೆಯಬೇಡ ಎಂದಳು.

ಈ ಮೇರೆಗೆ ತನ್ನೊಳಗೆ ಮಾತಾಡುತ್ತ—ಮಾತಾಡುತ್ತ ಗಿರಿಜೆಯು ಮುಂಚೆಯ ಬಾಗಿಲಿಗೆ ಬಂದು ''ಭಿಕ್ಷೆನೀಡಿರಿ'' ಎಂದು ಒದರಿ, ಮಧುರ ಸ್ವರದಿಂದ ಕೆಳಗಿನ ಹಾಡು ಹಾಡತೊಡಗಿದಳು.

ಅಗಲಿದೆಯಾ ಸಖಿಯೇ? ಮೃದುಭಾಷಿಣೆ ।
ಅಗಲಿದೆಯಾ ಸಖಿಯೇ ॥
ಅಗಲಿ ಪೋಗಿನೀನಾವ ಮಂದಿರದೊಳು ।
ಅಡಗಿಕೊಂಡಿಹೆ ಮಥುರಾ ಪುರವಾಸಿನೀ ॥ಪಲ್ಲ॥

ಗುರುತಿನ ಈ ದನಿಯನ್ನು ಕೇಳಿದ ಕೂಡಲೆ ಹೇಮಚಂದ್ರನ ಮನಸ್ಸು ಅತ್ತ ತಿರುಗಿತು. ಬೆಳಗಿನಲ್ಲಿ ಕನಸಿನೊಳಗೆ ಕೇಳಿದ ಹಾಡಿನ ದನಿಯು ಇದೇ ಇರಬಹುದೇ? ಎಂಬ ಸಂಶಯವೂ ಅವನನ್ನು ಬಾಧಿಸಹತ್ತಿತು. ಗಿರಿಜೆಯ ಹಾಡು ನಡೆದೇ ಇತ್ತು, ಹಾಡು ಗುರುತಿನದು, ದನಿ ಗುರುತಿನದು. ಕೂಡಲೆ ಹೇಮಚಂದ್ರನು ಹಾಸಿಗೆಯಿಂದ ಎದ್ದು ಗಿರಿಜೆಯಿದ್ದಲ್ಲಿಗೆ ಬಂದನು. ಗಿರಿಜೆಯು ತಾನಿನ ಮೇಲೆ ತಾನು ಏರಿಸಿ ಹಾಡತೊಡಗಿದ್ದಳು . ಅದನ್ನು ನೋಡಿ ಆಶ್ಚರ್ಯದಿಂದ—

ಹೇಮ—ಯಾರು? ಗಿರಿಜೇ! ನೀನು ಇಲ್ಲಿಗೆ ಯಾವಾಗ ಬಂದೆ?

ಯೋಗಾಯೋಗವು ವಿಚಿತ್ರವಾದದ್ದು

ಈ ಮೇರೆಗೆ ಹೇಮಚಂದ್ರನು ಆಶ್ಚರ್ಯದಿಂದ ಗಿರಿಜೆಯನ್ನು ಕೇಳಲು, ಆ ವಿನೋದಪ್ರಿಯಳಾದ ಗಿರಿಜೆಯು—''ನಾನಲ್ಲವೆ? ನಾನು ಇಲ್ಲಿಗೆ ಬಂದು ಬಹಳ ದಿವಸಗಳಾದವು. ನೀವು ಒಳಿತಾಗಿರುವಿರಷ್ಟೇ?'' ಎಂದು ಕೇಳಿ ಮತ್ತೆ ಹಾಡಹತ್ತಿದಳು. ಆಗ ಹೇಮಚಂದ್ರನು ಬೆರಗಾಗಿ—''ಏನಂದಿ? ನೀನು ಇಲ್ಲಿಗೆ ಬಂದು ಬಹಳ ದಿವಸವಾಯಿತೇ? ನೀನು ಇಲ್ಲಿಗೆ ಹೇಗೆ ಬಂದೆ? ಬಂದ ಕಾರಣವೇನು?'' ಎಂದು ಕೇಳಿದನು. ಅದಕ್ಕೆ ಗಿರಿಜೆಯು—''ಪ್ರಭುವೇ, ನಮ್ಮ ಬಡವರ ಬರೋಣವೇನು, ಹೋಗೋಣವೇನು? ಇಡಿಯ ಭೂಮಂಡಲವೇ ನಮ್ಮದಾಗಿರುವದು. ಭಿಕ್ಷೆ ದೊರೆತತ್ತ ನಾವು ಹೋಗತಕ್ಕವರು. ಪಟ್ಟಣದಲ್ಲಿ ಭಿಕ್ಷೆಯು ವಿಶೇಷವಾಗಿ ದೊರೆಯುತ್ತದೆಂಬ ಆಶೆಯಿಂದ ತಿರುಗುತ್ತ ತಿರುಗುತ್ತ ಇಲ್ಲಿಗೆ ಬಂದೆನು'' ಎಂದು ಉತ್ತರ ಕೊಟ್ಟು ಮತ್ತೆ ಹಾಡಹತ್ತಿದಳು. ಆಗ ಹೇಮಚಂದ್ರನು ಆತುರತೆಯಿಂದ ಗಿರಿಜೆಗೆ—

ಹೇಮ—ಮೃಣಾಲಿನಿಯು ನೆಟ್ಟಗಿರುವಳೋ? ನೀನು ಅವಳನ್ನು ಕಂಡಿದ್ದೆಯಾ?

ಗಿರಿಜೆ—ಯಾರು? ಮೃಣಾಲಿನಮ್ಮನವರೋ? ಆ ಹೊತ್ತಿನಿಂದ ಅವರನ್ನು ನಾನು ತಿರಗಿ ಕಂಡೇಯಿಲ್ಲ. (ಮತ್ತೆ ಹಾಡತೊಡಗುವಳು)

ಹೇಮ—ಗಿರಿಜೇ, ದಯವಮಾಡಿ ಹಾಡುವದನ್ನಷ್ಟು ಬಿಟ್ಟು ನನಗೆ ಮೊದಲು ಮೃಣಾಲಿನಿಯ ಸುದ್ದಿಯನ್ನು ಹೇಳು.

ಗಿರಿಜೆ—ಏನು ಹೇಳಲಿ?

ಹೇಮ—ಮೃಣಾಲಿನಿಯನ್ನು ನೀನು ಕಾಣದಿರುವ ಬಗೆಯೇನು?

ಗಿರಿಜೆ—ಆಕೆಯು ಗೌಡನಗರದಲ್ಲಿದ್ದರಷ್ಟೇ ಕಾಣುವದು!

ಹೇಮ—ಹಾಗಾದರೆ ಅವಳೆತ್ತ ಹೋದಳು?

ಗಿರಿಜೆ—ಆಕೆಯು ಮಥುರೆಗೆ ಹೋಗಿರುವಳೆಂದು ನಾನು ಕೇಳು........

ಹೇಮ—ಏನನ್ನುವೆ? ಮಥುರೆಗೆ ಹೋಗಿರುವಳೆ? ಮಥುರೆಗೆ ಅವಳು ಯಾರ ಸಂಗಡ ಹೋದಳು?

ಗಿರಿಜೆ—(ಗಂಭೀರ ಸ್ವರದಿಂದ) ಮೃಣಾಲಿನಿಯು ಗೌಡನಗರದಲ್ಲಿದ್ದುದು ಆಕೆಯ ತಂದೆಗೆ ಹೇಗೆ ತಿಳಿಯಿತೋ ದೇವರೇ ಬಲ್ಲ! ಅವನು ಆಕೆಯನ್ನು ಕರೆಸಿಕೊಂಡು ಆಕೆಯ ಲಗ್ನದ ಸಿದ್ಧತೆಯನ್ನು ಮಾಡಿರುವನಂತೆ. ಇನ್ನು ಸ್ವಲ್ಪ ದಿವಸಗಳಲ್ಲಿ ಆಕೆಯ ಲಗ್ನವಾಗುವದಂತೆ. ಲಗ್ನಮಾಡಬೇಕೆಂತಲೇ ಮೃಣಾಲಿನಿಯನ್ನು ಆಕೆಯ ತಂದೆಯು ಕರೆಸಿಕೊಂಡನೆಂದು ನಾನು ಕೇಳಿದ್ದೇನೆ.

ಹೇಮ—(ಸ್ತಂಭಿತನಾಗಿ)—ಏನು-ಏನು-ಏನನ್ನುವೆ? ಆಕೆಯನ್ನು ಮಥುರೆಗೆ ಯಾರು ಕರೆದೊಯ್ದರಂದಿ?

ಗಿರಿಜೆ—ಲಗ್ನ ಮಾಡಲಿಕ್ಕೆ ಆಕೆಯನ್ನು ಆಕೆಯ ತಂದೆಯು ಕರೆಸಿಕೊಂಡನೆಂದು ನಾನು ಕೇಳಿದ್ದೇನೆ

ಕೂಡಲೆ ಹೇಮಚಂದ್ರನು ಮೋರೆಯನ್ನು ತಿರುಗಿಸಿದನು. ಅದನ್ನು ಗಿರಿಜೆಯು ನೋಡಲಿಲ್ಲ. ಹೀಗೆ ಒಮ್ಮೆಲೆ ಮೋರೆ ತಿರುಗಿಸಿದ್ದರಿಂದ ಹೇಮಚಂದ್ರನ ಹೆಗಲಿಗಾಗಿದ್ದ ಗಾಯದ ಮೋರೆಯು ಪಿಕಲಿ, ಮನೋರಮೆಯು ಅದಕ್ಕೆ ಕಟ್ಟಿದ್ದ ಬಿಳೀ ಅರಿವೆಯು ರಕ್ತದಿಂದ ತೊಯ್ದು ಒದ್ದೆಯಾಯಿತು. ಇದಾದರೂ ಗಿರಿಜೆಯ ಕಣ್ಣಿಗೆ ಬೀಳಲಿಲ್ಲ. ವಿನೋದ ಪ್ರಿಯಳಾದ ಆ ಭಿಕ್ಷುಕಿಯು ಮತ್ತೆ ಹಾಡತೊಡಗಿದಳು.

ಹೇಮಚಂದ್ರನು ಮತ್ತೆ ಗಿರಿಜೆಯ ಕಡೆಗೆ ಮೋರೆಯನ್ನು ತಿರುವಿ ಕೆಲವು ವೇಳೆಯ ಮೇಲೆ ಆಕೆಯನ್ನು ಕುರಿತು—''ಗಿರಿಜೇ, ನೀನು ಈ ದಿವಸ ಒಳ್ಳೆಯ ಆನಂದದ ಸುದ್ದಿಯನ್ನು ಹೇಳಿದೆ. ಬಹಳ ಒಳ್ಳೆಯ ಕೆಲಸವಾಯಿತು'' ಎಂದು ನುಡಿದು ನೆಟ್ಟಗೆ ಅಲ್ಲಿಂದ ಮನೆಗೆ ಹೊರಟುಹೋದನು.

ಹೇಮಚಂದ್ರನ ಈ ಮಾತನ್ನು ಕೇಳಿ ಗಿರಿಜೆಯ ತಲೆಯ ಮೇಲೆ ಆಕಾಶದ ಕೊಡಲಿಯು ಬಿದ್ದಂತಾಯಿತು. ಅವಳ ಹುಡುಗಾಟಿಕೆಯು ಓಡಿಹೋಯಿತು. ತಾನು ಮಾತಾಡಿದ್ದೊಂದು, ಆದದ್ದೊಂದು ಎಂದು ಆಕೆಯು ಬಹಳ ನೊಂದುಕೊಂಡಳು. ಆಕೆಯು ತನ್ನೊಳಗೆ—ಎಲಾ, ಇದೇನಾಯಿತು? ಹೇಮಚಂದ್ರನ ಮನಸ್ಸನ್ನು ಪರೀಕ್ಷಿಸಬೇಕೆಂದು ನಾನು ಬೇಕಂತ ಮೃಣಾಲಿನಿಯ ಲಗ್ನದ ಸುದ್ದಿಯನ್ನು ಹುಟ್ಟಿಸಿಕೊಂಡು ಹೇಳಿದೆನು. ಈ ಸುಳ್ಳು ಸುದ್ದಿಯು ಪರಿಣಾಮವು ನೆಟ್ಟಗಾಗಲ್ಲ, ಮೃಣಾಲಿನಿಯ ಲಗ್ನವಾಗುತ್ತದೆಂಬದನ್ನು ಕೇಳಿ ಹೇಮಚಂದ್ರನು ಮೈ ಮರೆತಾನು, ಹುಚ್ಚನಂತೆ ನಿಂತುಕೊಂಡಾನು, ಅನರ್ಥವನ್ನುಂಟು ಮಾಡಿಯಾನು ಎಂದು ನಾನು ನಂಬಿದ್ದೆನು. ಆದರೆ ಹಾಗೇನೂ ಆಗದೆ ಹೇಮಚಂದ್ರನು ''ಬಹಳ ಒಳ್ಳೆಯ ಕೆಲಸವಾಯಿತು'' ಎಂದು ನುಡಿದು ತಟ್ಟನೆ ಹೊರಟುಹೋದನು.

ಈ ಮೇರೆಗೆ ಚಿಂತಿಸಿ ಹಣೆಹಣೆ ಗಟ್ಟಿಸಿಕೊಳ್ಳುತ್ತ—ಅಯ್ಯಯ್ಯೋ! ಸುಳ್ಳು ಹೇಳಿ ಹುಚ್ಚಮಂಗನಾದೆನಲ್ಲ! ಡಾಣಾಡಂಗುರವಾಗಿ ಆತನಿಗೆ ಸುಳ್ಳು ಸುದ್ದಿಯನ್ನು ನಾನು ಯಾಕೆ ಹೇಳಿದೆನು! ಮೃಣಾಲಿನಿಯ ಲಗ್ನದ ಸುದ್ದಿಯನ್ನು ಕೇಳಿ ಹೇಮಚಂದ್ರನಿಗಂತು ಆನಂದವಾದಂತೆ ತೋರುತ್ತದೆ; ಇಲ್ಲದಿದ್ದರೆ ಆತನು ''ಬಹಳ ಒಳ್ಳೆಯ ಕೆಲಸವಾಯಿತು'' ಎಂದು ನುಡಿಯುತ್ತಿದ್ದನೆ! ಮೇಲೆಯೇ ಕಾಣುತ್ತದೆ. ಇನ್ನು ಮೇಲೆ ಆತನು ನಿಶ್ಚಿಂತನಾದನು!! ಅಹಾ! ಇನ್ನು ಮೃಣಾಲಿನಿಯ ಗತಿಯು ಏನಾದೀತು? ಇದನ್ನು ಕೇಳಿ ಆಕೆಯು ಪ್ರಾಣವನ್ನು ಕಳಕೊಳ್ಳದೆ ಬಿಡಳು ಎಂದು ದುಃಖಿಸಿದಳು.

ಹೇಮಚಂದ್ರನು ''ಬಹಳ ಒಳ್ಳೆಯ ಕೆಲಸವಾಯಿತು'' ಎಂದು ನುಡಿದು ತಟ್ಟನೆ ಹೊರಟು ಹೋದದ್ದರ ನಿಜವಾದ ಅರ್ಥವು ಸಕಳಮನಸ್ಸಿನ ಗಿರಿಜೆಗೆ ತಿಳಿಯಲಿಲ್ಲ. ಹೇಮಚಂದ್ರನು ಮೃಣಾಲಿನಿಯ ವಿಷಯವಾಗಿ ಉದಾಸೀನನಾಗಿ, ಆಕೆಯನ್ನು ನಿರಾಕರಿಸಿ ನಿಶ್ಚಿಂತನಾದನೆಂದು ಆಕೆಯು ತಿಳಕೊಂಡಳು; ಆದರೆ ಹಾಗಿದ್ದಿಲ್ಲ. ತಾನು ಮೃಣಾಲಿನಿಯನ್ನು

ಮನಮುಟ್ಟಿ ಪ್ರೀತಿಸುತ್ತಿರಲು, ಆಕೆಯು ತನ್ನ ಅಪಮಾನ ಮಾಡಲುದ್ಯುಕ್ತಳಾಗಿ ಪ್ರೇಮಭಂಗ ಮಾಡಿದ್ದನ್ನು ನೋಡಿ ಆ ಅಭಿಮಾನಿಯಾದ ಹೇಮಚಂದ್ರನು ಮಿತಿಮೀರಿ ಸಿಟ್ಟಿಗೆದ್ದು ಸಿಟ್ಟಿನ ಭರದಲ್ಲಿ ''ಬಹಳ ಒಳ್ಳೆಯ ಕೆಲಸವಾಯಿತೆ''ಂದು ನುಡಿದನು. ಹಿಂದಕ್ಕೆ ಇದೇ ಮೃಣಾಲಿನಿಯ ಸಲುವಾಗಿಯೇ ಈ ವೀರನು ಕೋಪಸಂತಪ್ತನಾಗಿ ಪ್ರತ್ಯಕ್ಷ ತನ್ನ ಗುರುವಿನ ಮೇಲೆ ಖಡ್ಗವನ್ನು ಪ್ರಯೋಗಿಸಲು ಸಿದ್ಧನಾಗಿದ್ದನು.

ಗಂಡಹೆಂಡಿರ ಪ್ರೇಮದ ಹೊಯ್ಲವನ್ನರಿಯದ ಗಿರಿಜೆಯು ಹೇಮಚಂದ್ರನ ಮಾತಿನ ನಿಜವಾದ ಅರ್ಥವನ್ನು ತಿಳಿಯಲು ಸಮರ್ಥಳಾಗದೆ, ಮನಸ್ಸಿನಲ್ಲಿ ಇಲ್ಲದ್ದೊಂದು ಕಲ್ಪಿಸ ಹತ್ತಿದಳು. ಆಕೆಯ ಕಲ್ಪನೆಯ ಅಳವಿನೊಳಗೆ ಮನೋರಮೆಯ ಸುಂದರ ಮೂರ್ತಿಯು ತಟ್ಟನೆ ಬಂದುನಿಂತಿತು. ಆಗ ಆಕೆಯು—ಹಾ! ಹೀಗಿರಬಹುದು; ಹೇಮಚಂದ್ರನು ಮೃಣಾಲಿನಿಯನ್ನು ನಿರಾಕರಿಸಲಿಕ್ಕೆ ಇದೇ ಕಾರಣವಿರಬಹುದು; ಮನೋರಮೆಯು ಅಪ್ಸರೆಯಂತೆ ಸುಂದರಿ ಯಾಗಿದ್ದಾಳೆ, ಮೃಣಾಲಿನಿಯು ಆಕೆಯ ಅಂಗುಷ್ಠಕ್ಕೆ ಹತ್ತುವಹಾಗಿಲ್ಲ; ಮನೋರಮಾ—ಹೇಮಚಂದ್ರರ ಪ್ರೀತಿಯು ಕೂಡಿರುವದು; ಮನೋರಮೆಯು ಹೇಮಚಂದ್ರನ ಬಳಿಯಲ್ಲಿದ್ದಾಳೆ, ಮೃಣಾಲಿನಿಯು ದೂರದಲ್ಲಿದ್ದಾಳೆ; ಅಂದಬಳಿಕ ಬೇರೆ ಸಂಶಯವೇಕೆ? ಹೇಮಚಂದ್ರನು ಮನೋರಮೆಗೆ ಮನಸೋತು ಮೃಣಾಲಿನಿಯ ಮೇಲೆ ಬೇಸರಮಾಡಿದನು, ಎಂದು ಗಿರಿಜೆಯು ನಿಶ್ಚಯಿಸಿದಳು. ಆ ದಿನ ಆಕೆಗೆ ಯಾರೂ ಭಿಕ್ಷೆ ಹಾಕಲಿಲ್ಲ, ಆಕೆಯೂ ಭಿಕ್ಷೆ ಹಾಕುವ ಹಾದಿಯನ್ನೂ ನೋಡಲಿಲ್ಲ, ಖಿನ್ನಳಾಗಿ ಸುಮ್ಮನೆ ಹೊರಟುಹೋದಳು.

ಅತ್ತ ಗಿರಿಜೆಯು ಖಿನ್ನಳಾಗಿ ಮನೆಗೆ ಹೋಗಲು, ಇತ್ತ ಮಾಧವಾಚಾರ್ಯನು ಹೇಮಚಂದ್ರನಲ್ಲಿಗೆ ಬಂದನು. ಬಹು ದಿವಸದ ಪ್ರವಾಸವನ್ನು ಮುಗಿಸಿಕೊಂಡು ಶಿಷ್ಯನನ್ನು ಕಾಣುವದಕ್ಕಾಗಿ ಬಂದ ಆ ಗುರುವು ಹೇಮಚಂದ್ರನನ್ನು ಬಿಗಿದಪ್ಪಿ ಆಶೀರ್ವದಿಸಿ ಕುಶಲ ಪ್ರಶ್ನೆಗಳನ್ನು ಕೇಳಿದನು. ಆ ಕಾಲದಲ್ಲಿ ಗುರುಶಿಷ್ಯರಿಗಾದ ಆನಂದವನ್ನು ವರ್ಣಿಸಲಸಾಧ್ಯವು. ಅವರು ಬಹಳ ಹೊತ್ತು ಏಕಾಂತದಲ್ಲಿ ಮಾತಾಡಿದರು. ಮಾಧವಾಚಾರ್ಯನು ತನ್ನ ದೇಶ ಪರ್ಯಟನದ ವೃತ್ತಾಂತವನ್ನೆಲ್ಲ ತಿಳಿಸಿ ಹೇಮಚಂದ್ರನನ್ನು ಕುರಿತು—ಇಷ್ಟು ಕಷ್ಟಪಟ್ಟರೂ ಕಡೆಗೆ ಕೆಲಸವಾದುದರಿಂದ ಮನಸ್ಸಿಗೆ ಬಹಳ ಸಮಾಧಾನವಾಗಿದೆ. ಬಹುತರ ಎಲ್ಲ ಮಾಂಡಲಿಕ ರಾಜರನ್ನು ಕಣ್ಣುಮುಟ್ಟ ಕಂಡು, ಯವನರಿಂದಾಗುತ್ತಿರುವ ಕಷ್ಟಗಳನ್ನು ಅವರ ಮುಂದೆ ವಿವರಿಸಿದೆನು. ತೀವ್ರವಾಗಿ ಯಾವತ್ತು ಅರಸರು ಸಸೈನ್ಯವಾಗಿ ಸಮರಾಂಗಣದಲ್ಲಿ ಸಿದ್ಧರಾಗ ತಕ್ಕವರಿದ್ದಾರೆ, ಎಂದು ಹೇಳುತ್ತಿರಲು, ಹೇಮಚಂದ್ರನು ನಡುವೇ ಬಾಯಿಹಾಕಿ—ಆದರೆ ಅವರು ಈಗಿನಿಂದೀಗಲೇ ಬಂದೊದಗಿದರೆ ಏನಾದರೂ ಪ್ರಯೋಜನವಾಗಬಹುದು. ಇಲ್ಲದಿದ್ದರೆ, ಮಾಡಿದ ಪ್ರಯತ್ನವೆಲ್ಲ ವ್ಯರ್ಥವಾಗುವ ಹೊತ್ತು ಒದಗಿದೆ; ಯಾಕಂದರೆ ಯವನ ಸೈನ್ಯವು ಪಟ್ಟಣದ ಸಮೀಪಕ್ಕೆ ಬಂದಿರುತ್ತದೆ. ಅದು ಮಹಾವನದ ಬೈಲಲ್ಲಿ ಬೀಡು ಬಿಟ್ಟಿರುವದು. ಇಂದಿನ ರಾತ್ರಿಯಲ್ಲಿ ಇಲ್ಲವೆ ನಾಳಿನ ಬೆಳಗಿನಲ್ಲಿ ಬಹಳವಾದರೆ ನಾಡದು ಅವರು ರಾಜಧಾನಿಯನ್ನು ಮುತ್ತತಕ್ಕವರಿದ್ದಾರೆ, ಎಂದು ಹೇಳಿದನು.

ಇದನ್ನು ಕೇಳಿ ಮಾಧವಾಚಾರ್ಯನು ಕಲ್ಲಿನ ಗೊಂಬೆಯಂತೆ ಉಲುಕದೆ ಕುಳಿತು ಕೊಂಡನು. ಅವನಿಗೆ ಏನೂ ತೋಚದಾಯಿತು. ಬಹಳ ಹೊತ್ತಿನ ಮೇಲೆ ಆತನು ಹೇಮಚಂದ್ರನನ್ನು ಕುರಿತು—ಗೌಡೇಶ್ವರನು ಈ ವರ್ತಮಾನವನ್ನು ಅರಿಯೆನೇ? ಯವನರ ಪ್ರತಿಕಾರಕ್ಕಾಗಿ ಅವನೇನು ವ್ಯವಸ್ಥೆ ಮಾಡುತ್ತಿರುವನು? ಎಂದು ಕೇಳಿದನು. ಅದಕ್ಕೆ ಹೇಮಚಂದ್ರನು—ಗುರುಗಳೇ, ಅರಸನಿಗೆ ಯಾವ ಸಂಗತಿಯೂ ಗೊತ್ತಾಗಿಲ್ಲ, ಆತನು ಪ್ರತಿಕಾರಾರ್ಥವಾಗಿ ಯಾವ ಉಪಾಯವನ್ನೂ ಮಾಡಿರುವದಿಲ್ಲ. ದೈವಯೋಗದಿಂದ ನಿನ್ನೆ ರಾತ್ರಿ ಈ ಸುದ್ದಿಯು ನನಗೆ ಗೊತ್ತಾಯಿತು. ಎನ್ನಲು ಮಾಧವಾಚಾರ್ಯನು—ಹೀಗಿದ್ದರೆ, ನೀನು ಕೂಡಲೆ ಅರಸನನ್ನು ಕಂಡು ಆತನನ್ನು ಏಕೆ ಎಚ್ಚರಗೊಳಿಸಲಿಲ್ಲ, ಎಂದು ಕೇಳಿದನು. ಅದಕ್ಕೆ ಹೇಮಚಂದ್ರನು—ನನಗೆ ಈ ಸಂಗತಿಯು ತಿಳಿಯುತ್ತಿರುವಷ್ಟರಲ್ಲಿಯೇ ನಾನು ಕಳ್ಳರ ಕೈಯಲ್ಲಿ ಸಿಕ್ಕು ಗಾಯಹೊಂದಿ ಮೂರ್ಛಿತನಾಗಿ ಬಿದ್ದೆನು. ಮೂರ್ಛೆತಿಳಿದೆದ್ದ ಮೇಲೆ ಮನೆಗೆ ಬಂದು ಸ್ವಲ್ಪ ದಣಿವಾರಿಸಿಕೊಂಡು ಮುಂಜಾನೆ ರಾಜದರ್ಶನಕ್ಕಾಗಿ ಹೋಗಬೇಕೆಂದು ಮಾಡಿದೆನು. ಆದರೆ ಶಕ್ತಿ ಕ್ಷೀಣವಾದುದರಿಂದ ನನ್ನಿಂದ ಮುಂದಕ್ಕೆ ಹೆಜ್ಜೆಯನ್ನಿಡುವದು ಕೂಡ ಆಗಲಿಲ್ಲ. ಇದೇ ಈಗ ನಾನು ಎದ್ದೆನು. ಇನ್ನು ಮೇಲೆ ಅರಸನಲ್ಲಿಗೆ ಹೋಗತಕ್ಕವನಿದ್ದೇನೆ, ಎಂದನು.

ಶಿಷ್ಯನ ಮಾತುಗಳನ್ನು ಕೇಳಿ ಮಾಧವಾಚಾರ್ಯನು—ಹೇಮಚಂದ್ರಾ, ನೀನು ಬಹಳ ಶಕ್ತಿ ಹೀನನಾಗಿರುತ್ತೀ. ಇಂದು ನೀನು ಮನೆಯಲ್ಲಿಯೇ ವಿಶ್ರಮಿಸು. ನಾನೇ ರಾಜಸಭೆಗೆ ಹೋಗಿ ಅಲ್ಲಿ ನಡೆದ ಸಂಗತಿಯನ್ನು ಅರಿತು ನಿನಗೆ ತಿಳಿಸುವೆನು. ಎಂದು ಹೇಳಿ ಮಾಧವಾಚಾರ್ಯನು ಕೂಡಲೆ ಎದ್ದನು. ಆಗ ಹೇಮಚಂದ್ರನು ಅವಸರದಿಂದ—ಗುರುವರ್ಯರೇ, ತಾವು ಗೌಡನಗರಕ್ಕೆ ಹೋಗಿದ್ದಿರೇನು? ಎಂದು ಕೇಳಲು, ಅದಕ್ಕೆ ಮಾಧವಾಚಾರ್ಯನು—ಹೌದು ಹೋಗಿದ್ದೆನು. ನೀನು ಮೃಣಾಲಿನಿಯ ವಿಷಯವಾಗಿ ನನ್ನನ್ನು ಕೇಳುತ್ತಿರಬಹುದು; ಆದರೆ ಮೃಣಾಲಿನಿಯು ಅಲ್ಲಿ ಇರುವದಿಲ್ಲ, ಎಂದು ಹೇಳಿದನು. ಆಗ ಹೇಮಚಂದ್ರನು—ಹಾಗಾದರೆ ಆಕೆಯು ಎಲ್ಲಿಗೆ ಹೋದಳು! ಎಂದು ಮತ್ತೆ ಪ್ರಶ್ನೆಮಾಡಲು, ಅದಕ್ಕೆ ಮಾಧವಾಚಾರ್ಯನು ಖಿನ್ನನಾಗಿ—ತಮ್ಮಾ ಅದೊಂದು ದೊಡ್ಡ ರಾಮಾಯಣವಿರುತ್ತದೆ. ಯುದ್ಧದ ಗೊಂದಲ ತೀರಿದ ಮೇಲೆ ಅದನ್ನೆಲ್ಲ ಸಾವಕಾಶವಾಗಿ ನಿನಗೆ ಹೇಳೇನಂತೆ, ಎಂದು ನುಡಿಯಲು, ಹೇಮಚಂದ್ರನ ಉನ್ನತವಾದ ಹಣೆಯ ವೇಳೆ ವೈರಾಗ್ಯದ ರೇಷೆಗಳು ವ್ಯಕ್ತವಾಗಿ ಮೂಡಿದವು. ಆತನು ಧನುಷ್ಯಾಕಾರದ ಹುಬ್ಬುಗಳನ್ನು ಗಂಟಿಕ್ಕಿ ಕರ್ಕಶ ಸ್ವರದಿಂದ ತನ್ನ ಗುರುವನ್ನು ಕುರಿತು—ಪೂಜ್ಯರೇ, ಮೃಣಾಲಿನಿಯ ನಿಜವಾದ ವರ್ತಮಾನವನ್ನು ಕೇಳಿದರೆ, ದುಃಖದಿಂದ ನಾನು ಅವಸಾನಗೇಡಿಯಾಗುವೆನೆಂದು ತಾವು ಎಂದಿಗೂ ತಿಳಿಯಬಾರದು. ತಾವು ಹೇಳುವದಕ್ಕಿಂತ ಮೊದಲೇ ಆ ಸುದ್ದಿಯು ನನ್ನ ಕಿವಿಗೆ ಬಿದ್ದಿದೆ. ತಮಗೆ ಗೊತ್ತಿದ್ದದ್ದನ್ನು ಸಂಕೋಚಮಾಡಿಕೊಳ್ಳದೆ ಸ್ಪಷ್ಟವಾಗಿ ಹೇಳಬೇಕು, ಎಂದನು.

ಮಾಧವಾಚಾರ್ಯನು ಗೌಡನಗರದಲ್ಲಿ ಹೃಷೀಕೇಶ ಬ್ರಾಹ್ಮಣನ ಮನೆಯಲ್ಲಿದ್ದಾಗ್ಗೆ ಮೃಣಾಲಿನಿಯ ವಿಷಯವಾಗಿ ಶೋಧಮಾಡಿದ್ದನು. ಹೃಷೀಕೇಶನ ಮಗನ ದುರ್ನಡತೆಯ ಮೂಲಕ ಮೃಣಾಲಿನಿಯು ಹೃಷೀಕೇಶನ ಮನೆಬಿಡಬೇಕಾಯಿತೆಂಬದನ್ನು ವಾಚಕರು ಮರೆತಿರಲಿಕ್ಕಿಲ್ಲ. ಹೃಷೀಕೇಶನು ತನ್ನ ಮಗನ ದುರ್ನಡತೆಯನ್ನು ಅರಿಯದವನಾದ ಕಾರಣ ಅವನು ಮೃಣಾಲಿನಿಯನ್ನು ಒತ್ತಾಯದಿಂದ ಹೊರದೂಡಿದ್ದಾದರೂ ವಾಚಕರ ಸ್ಮರಣದಲ್ಲಿರ ಬಹುದು. ಹೃಷೀಕೇಶನು ತನ್ನ ತಿಳುವಳಿಕೆಯಂತೆ ಮೃಣಾಲಿನಿಯ ಸಂಬಂಧವಾದ ಅಮಂಗಲ ವಾದ ವರ್ತಮಾನವನ್ನು ಮಾಧವಾಚಾರ್ಯನಿಗೆ ಹೇಳಿಬಿಟ್ಟನು. ಮಾಧವಾಚಾರ್ಯನಿಗೆ ಆ ಸಂಗತಿಯು ನಿಜವಾಗಿಯೇ ತೋರಿತು. ಆ ಜನ್ಮ ಬ್ರಹ್ಮಚರ್ಯವ್ರತವನ್ನು ಪಾಲಿಸಲು ದೃಢನಿಶ್ಚಯ ಮಾಡಿರುವ ಹಾಗು ಸ್ತ್ರೀಯರ ಪ್ರೇಮದ ವಿಷಯವಾಗಿ ಸ್ವಲ್ಪವಾದರೂ ಪರಿಚಯವಿಲ್ಲದ ಮಾಧವಾಚಾರ್ಯನಿಗೆ, ಸ್ತ್ರೀ ಚರಿತ್ರದ ಗೂಢವು ಹೇಗೆ ತಿಳಿಯಬೇಕು? ಅದರಿಂದಲೇ ಆತನು ಹಿಂದು ಮುಂದು ನೋಡದೆ ಮೃಣಾಲಿನಿಯು ದುರ್ನಡತೆಯವಳೆಂದು ನಂಬಿದನು. ಅವಳ ದುರ್ನಡತೆಯ ಹಾರಿಕೆಯ ಸುದ್ದಿಯು ಹೇಮಚಂದ್ರನಿಗೂ ಹತ್ತಿರ ಬಹುದೆಂದು ಆತನು ಯೋಚಿಸಿದನು. ಇದಲ್ಲದೆ ಹೇಮಚಂದ್ರನ ಮುಖಮುದ್ರೆಯ ಮೇಲಿಂದ ಅವನಲ್ಲಿ ಮೃಣಾಲಿನಿಯ ವಿಷಯವಾಗಿ ಅನಾದರವು ಉತ್ಪನ್ನವಾಗಿರುತ್ತದೆಂಬದನ್ನು ಆ ಮಾಧವಾಚಾರ್ಯನು ಅರಿತಿದ್ದನು. ಆದುದರಿಂದಲೇ ಆತನು ತನ್ನ ಕಾರ್ಯಕ್ಕೆ ವಿಘ್ನವಾಗಿರುವ, ಮತ್ತು ದುಶ್ಚರಿತ್ರೆಯಾದುದರಿಂದ ಸರ್ವಥಾ ತ್ಯಾಜ್ಯಳಾಗಿರುವ ಮೃಣಾಲಿನಿಯ ವಿಷಯವಾಗಿ ಹೇಮಚಂದ್ರನಲ್ಲಿ ಅನಾದರವನ್ನುಂಟುಮಾಡುವದು ಯೋಗ್ಯವೆಂದು ನೆನಿಸಿದನು. ಮೃಣಾಲಿನಿಯನ್ನು ನಿರಾಕರಿಸುವ ಹೇಮಚಂದ್ರನು ಆಕೆಯ ವಿಷಯದ ಅಮಂಗಲ ವರ್ತಮಾನವನ್ನು ಕೇಳಿ ಸಂತಾಪಗೊಳ್ಳಲಿಕ್ಕಿಲ್ಲೆಂತಲೂ ಆ ಆಚಾರ್ಯವರ್ಯನು ಭಾವಿಸಿದ್ದನು. ಆದ್ದರಿಂದ ಆತನು ಎದ್ದವನು ಮತ್ತೆ ಕುಳಿತುಕೊಂಡು ಹೃಷೀಕೇಶನ ಮನೆಯಲ್ಲಿ ನಡೆದ ಸಂಗತಿಯನ್ನೆಲ್ಲ ಹೇಮಚಂದ್ರನ ಮುಂದೆ ವಿರಕ್ತ ಮುದ್ರೆಯಿಂದ ಹೇಳಿದನು.

ಹೇಮಚಂದ್ರನು ದುಃಖಾಕ್ರಾಂತವಾದ ತನ್ನ ಮುಖವನ್ನು ಎಡದ ಅಂಗೈ ಮೇಲೆ ಇಟ್ಟುಕೊಂಡು ಅಲುಕದೆ ಯಾವತ್ತು ಸಂಗತಿಯನ್ನು ಕೇಳುತ್ತಿದ್ದನು. ಮಾಧವಾಚಾರ್ಯನು ಹೇಳುವದು ಮುಗಿದರೂ ಹೇಮಚಂದ್ರನು ಹಾಗೆಯೇ ಕುಳಿತಿದ್ದನು. ಒಂದು ತುಟಿ ಎರಡು ಮಾಡಲಿಲ್ಲ. ಆಗ ಮಾಧವಾಚಾರ್ಯನು—ಹೇಮಚಂದ್ರಾ, ಎಂದು ಕರೆದನು. ಆದರೂ ಹೇಮಚಂದ್ರನು ಮಾತಾಡಲಿಲ್ಲ, ಮತ್ತೆ ಮಾಧವಾಚಾರ್ಯನು—ಹೇಮಚಂದ್ರಾ, ಎಂದು ಗಟ್ಟಿಯಾಗಿ ಕೂಗಿದನು. ಆದರೂ ಹೇಮಚಂದ್ರನು ಉತ್ತರವನ್ನು ಕೊಡಲಿಲ್ಲ. ದೇಹದೊಳಗಿಂದ ಪ್ರಾಣವು ಹೊರಟು ಹೋಗಿರುವಂತೆ ಆತನು ನಿಶ್ಚಯನಾಗಿ ಕುಳಿತುಬಿಟ್ಟಿದ್ದನು. ಹೇಮಚಂದ್ರನ ಕರುಣಾಸ್ಪದವಾದ ಈ ಸ್ಥಿತಿಯನ್ನು ನೋಡಿ ಕರುಣಾಳುವಾದ ಗುರುವಿನ ಅಂತಃಕರುಣವು ಕರಗಿ ನೀರಾಯಿತು. ಆತನು ಮರಮರನೆ ಮರುಗಿ ಗದ್ಗದಿಸುವ ಪ್ರೇಮಲ ಸ್ವರದಿಂದ—ಮಗುವೇ, ಮೇಲಕ್ಕೆ ನೋಡು. ನನ್ನೊಡನೆ ಮಾತಾಡು, ಎಂದು ಹೇಳಿದನು.

ಆದರೂ ಹೇಮಚಂದ್ರನು ಉತ್ತರವನ್ನು ಕೊಡಲಿಲ್ಲ. ಆಗ ಮಾಧವಾಚಾರ್ಯನು ತನ್ನ ಕೈಯಿಂದ ಅವನ ಮುಖವನ್ನು ಮೇಲಕ್ಕೆತ್ತಿ ಅದರ ಮೇಲೆ ಕೈಯಾಡಿಸುತ್ತ—ತಮ್ಮಾ, ಹೇಮಚಂದ್ರಾ, ನೀನು ಹೀಗೇಕೆ ಮಾಡುತ್ತೀ, ಎಂದು ಕೇಳಿದನು. ಆಗ ಹೇಮಚಂದ್ರನು ಎಚ್ಚತ್ತು-ತಲೆಯನ್ನು ಮೇಲಕ್ಕೆತ್ತಿ ಏಕಾಗ್ರದೃಷ್ಟಿಯಿಂದ ತನ್ನ ಗುರುವನ್ನು ನೋಡಹತ್ತಿದನು. ಆಗಿನ ಅವನ ವಿಚಿತ್ರವಾದ ಮುಖಮುದ್ರೆಯನ್ನು ನೋಡಿ ಮಾಧವಾಚಾರ್ಯನು ಮನಸ್ಸಿನಲ್ಲಿ ಬೆದರಿದನು. ಅವನು ಹೇಮಚಂದ್ರನನ್ನು ಕುರಿತು—ಮಗುವೇ, ನನ್ನೊಡನೆ ಮಾತಾಡು. ನಿನ್ನ ಮನಸ್ಸಿಗಾಗುವ ತಳಮಳವನ್ನು ಒಡನುಡಿದುಬಿಡು. ಹೀಗೇಕೆ ಹುಚ್ಚನಹಾಗೆ ಮಾಡುತ್ತೀ, ಎಂದು ಕೇಳಿದನು. ಆಗ ಕ್ರೋಧಪೂರಿತವಾದ ಸಜಲ ನಯನದಿಂದ ಹೇಮಚಂದ್ರನು—ಗುರವರ್ಯರೇ, ನಾನು ಯಾರ ಮಾತನ್ನು ನಿಜವೆಂದು ತಿಳಿಯಲಿ? ಹೃಷೀಕೇಶನಂತೂ ನಿಮಗೆ ಹೀಗೆ ಹೇಳಿದ್ದಾನೆ, ಅತ್ತ ಭಿಕ್ಷುಕಿಯು ನನಗೆ ಬೇರೆ ವಿಧವಾಗಿ ಹೇಳಿದ್ದಾಳೆ, ಎನ್ನಲು, ಮಾಧವಾಚಾರ್ಯನು ಬೆರಗಾಗಿ—ಭಿಕ್ಷುಕಿಯು ಯಾರು? ಆಕೆಯು ಏನು ಹೇಳಿದಳು? ಎಂದು ಕೇಳಿದನು. ಆಗ ಹೇಮಚಂದ್ರನು ಭಿಕ್ಷುಕಿಯು ಹೇಳಿದ್ದನ್ನು ಮಾಧವಾಚಾರ್ಯನ ಮುಂದೆ ಸಂಕ್ಷೇಪವಾಗಿ, ಹೇಳಿದನು. ಅದನ್ನು ಕೇಳಿ ಮಾಧವಾಚಾರ್ಯನು—ಹಾಗಾದರೆ, ಹೃಷೀಕೇಶನ ಮಾತು ಸುಳ್ಳು ಇರಬಹುದು, ಎಂದು ನುಡಿಯಲು, ಹೇಮಚಂದ್ರನು ಯಮನಂತೆ ಕ್ರುದ್ಧವಾದ ಮುದ್ರೆಯನ್ನು ತಾಳಿ—ಗುರುಗಳೇ, ಹೃಷೀಕೇಶನು ಪ್ರತ್ಯಕ್ಷ ತಮ್ಮ ಮುಂದೆ ಹೇಳಿದ್ದಾನೆ! ಆ ವೃದ್ಧ ಬ್ರಾಹ್ಮಣನೇನು ಸುಳ್ಳು ಆಡುವನೋ? ಎಂದು ನುಡಿದು, ಅವನು ಒಮ್ಮೆಲೆ ಮೇಲಕ್ಕೆದ್ದು ತನ್ನ ಪಿತೃದತ್ತವಾದ ಶೂಲವನ್ನು ಗರಗರನೆ ತಿರುವುತ್ತ ಕಂಪಿತ ಹೃದಯದಿಂದ ಇತ್ತಿಂದತ್ತ ಅತ್ತಿಂದಿತ್ತ ತಿರುಗಾಡಹತ್ತಿದನು. ಆಗ ಆತನ ಕಣ್ಣುಗಳು ಕೆಂಡದಂತಾಗಿದ್ದವು. ಮೂಗಿನ ಹೊರಳೆಗಳೊಳಗಿಂದ ಬೆಚ್ಚನ್ನು ಉಸಿರು ಒತ್ತರದಿಂದ ಹೊರಡುತ್ತಿತ್ತು, ಕೆಳದುಟಿಯು ಥರಥರ ನಡಗುತ್ತಿತ್ತು, ಅವನ ಈ ವಿಲಕ್ಷಣವಾದ ಮುದ್ರೆಯನ್ನು ನೋಡಿ ಮಾಧವಾಚಾರ್ಯನು ಬೆದರಿದನು. ಅವನು ಪ್ರೇಮಳ ಸ್ವರದಿಂದ ತನ್ನ ಶಿಷ್ಯನನ್ನು ಕುರಿತು—ಮಗುವೇ ಹೇಮಚಂದ್ರಾ, ನೀನು ಇಷ್ಟೇಕೆ ಸಿಟ್ಟಾಗಿರುತ್ತೀ. ನಿನ್ನ ಮನಸ್ಸಿನಲ್ಲಿ ನಡೆದ ವಿಚಾರವೇನು? ಎಂದು ಕೇಳಿದನು. ಆಗ ಹೇಮಚಂದ್ರನು ತನ್ನ ಕೈಯೊಳಗಿನ ಶೂಲವನ್ನು ಮೇಲಕ್ಕೆತ್ತಿ ಆವೇಶದಿಂದ—ಆ ಚಾಂಡಾಲಳ ತಲೆಯನ್ನು ಈ ಶೂಲದಿಂದ ಸೀಳಿಬಿಡುವೆನು. ಎಂದು ನುಡಿಯಲು, ಮಾಧವಾಚಾರ್ಯನು ನಿರುತ್ತರನಾದನು.

ಪ್ರಿಯ ವಾಚಕರೇ, ಪ್ರಸಂಗವು ಹೇಗಿರುತ್ತಿದೆ ನೋಡಿದಿರಾ? ಹೇಮಚಂದ್ರನು ಇಷ್ಟು ನಿಷ್ಠುರನಾದಾನೆಂಬದರ ಕಲ್ಪನೆಯಾದರೂ ಮೃಣಾಲಿನಿಗೆ ಇತ್ತೋ? ಆಕೆಯು ಒಕ್ಕಲಿಗನ ಮನೆಯಲ್ಲಿ ಕುಳಿತುಕೊಂಡು ಗಿರಿಜೆಯು ಏನು ಸುದ್ದಿಯನ್ನು ತರುವಳೋ ಎಂದು ಉತ್ಕಂಠೆಯಿಂದ ಹಾದಿಯನ್ನು ನೋಡುತ್ತಿರುವಳಲ್ಲ; ಇಂದೇ ಮುಂಜಾನೆ ಮೃಣಾಲಿನಿಯು—"ಮನೋರಮೆಯು ಯಾರಾದರೂ ಇರಲಿ, ಹೇಮಚಂದ್ರನು ನನ್ನವನೇ ಇರುತ್ತಾನೆ" ಎಂದು ಅಭಿಮಾನ ಪಡಲಿಲ್ಲವೆ? ಆ ಅಭಿಮಾನದ ಫಲವು ಹೀಗಾಗಬೇಕೆ? ಸಂಸಾರದಲ್ಲಿ ಪ್ರಸಂಗಗಳು ಹೇಗೆ ಅಕಲ್ಪಿತವಾಗಿ ಬದಲಾಗುತ್ತದೆಂಬದನ್ನು ಇದರಿಂದ ನಾವು ಚನ್ನಾಗಿ ನೋಡಿಕೊಳ್ಳ

ಬಹುದು. ಗಿರಿಜೆಯು ಸುಳ್ಳು ಏಕೆ ಹೇಳಬೇಕು? ಅದೇ ಪ್ರಸಂಗದಲ್ಲಿ ಮಾಧವಾಚಾರ್ಯನು ಬಂದು ಬೇರೊಂದು ಸುದ್ದಿಯನ್ನು ಏಕೆ ಹೇಳಬೇಕು? ಎಂಥ ಪ್ರಸಂಗ ಒದಗಿತು ನೋಡಿರಿ. ಗುರುವಿಗೆ ಅಸಮಾಧಾನ, ಶಿಷ್ಯನಿಗೆ ಅಸಮಾಧಾನ, ಗಿರಿಜೆಗೆ ಅಸಮಾಧಾನ, ಗಿರಿಜೆಯ ಒಡತಿಗೂ ಒಂದು ಬಗೆಯ ಅಸಮಾಧಾನ! ಯೋಗಾಯೋಗವು ವಿಚಿತ್ರವಾದದ್ದು!

ಪ್ರೇಮ ಮೀಮಾಂಸೆ

ಹೇಮಚಂದ್ರನು ತನ್ನ ಕೋಣೆಯಲ್ಲಿ ಒಬ್ಬನೇ ಕುಳಿತಿರುವದನ್ನು ನೋಡಿ ಮನೋರಮೆಯು ಅವನೆಡೆಗೆ ಹೋದಳು. ಅವಳಿಗೆ ಹೇಮಚಂದ್ರನ ಮುಖಮುದ್ರೆಯು ವಿಚಿತ್ರವಾಗಿ ತೋರುತ್ತಿತ್ತು. ಒಳಗೆ ಬಂದಕೂಡಲೆ ಆಕೆಯು ಹೇಮಚಂದ್ರನನ್ನು ಕುರಿತು— ಅಣ್ಣಾ, ಇಂದು ನೀನು ಹೀಗೇಕೆ ಕಾಣುತ್ತೀ? ನಿನ್ನ ಮನಸ್ಸು ಅಸ್ವಸ್ಥವಾಗಿರುವ ಕಾರಣವೇನು? ಎಂದು ಕೇಳಿದಳು. ಅದಕ್ಕೆ ಹೇಮಚಂದ್ರನು—

ಹೇಮ—ಯಾಕೆ? ನನಗೇನಾಗಿದೆ?

ಮನೋ—ನೀನು ನನ್ನನ್ನು ವಂಚಿಸಬೇಡ, ನಿಜವಾಗಿ ಹೇಳು. ನಿನ್ನ ಮೋರೆಯು ಇಷ್ಟು ಯಾಕೆ ಕಪ್ಪು ಇಟ್ಟಿದೆ? ನಿನ್ನ ಅಂತಃಕರುಣವು ಕ್ಷೋಭಿಸಿದಂತೆ ಯಾಕೆ ಕಾಣುತ್ತದೆ? ನಿನ್ನ ಕಣ್ಣುಗಳು ಬಿಗಿದಿರುತ್ತವಲ್ಲ? ಇದೇನು ನಿನ್ನ ಕಣ್ಣುಗಳಲ್ಲಿ ನೀರು ತುಂಬಿವೆ! ಅಣ್ಣಾ ಅಳುತ್ತಿಯೋ ಏನು?

ಹೇಮಚಂದ್ರನು ಮನೋರಮೆಯ ಈ ಮಾತುಗಳನ್ನು ಕೇಳಿ ಎವೆಯಿಕ್ಕದೆ ಆಕೆಯನ್ನು ನೋಡಹತ್ತಿದನು. ಕೆಲಹೊತ್ತಿನ ಮೇಲೆ ಅವನು ಕೆಳಗೆ ನೋಡಹತ್ತಿದನು. ಆಮೇಲೆ ಕಿಡಿಕಿಯನ್ನು ನೋಡಹತ್ತಿದನು. ಇದನ್ನು ನೋಡಿ ಮನೋರಮೆಯು ಮುಂದುಗಾಣದಾದಳು. ಆಕೆಯು ತನ್ನ ಮನಸ್ಸಿನಲ್ಲಿ—ಈತನ ಸ್ಥಿತಿಯು ಹೀಗಾಗಲಿಕ್ಕೆ ಬೇರೆ ಕಾರಣವೇನೂ ಇರಲಿಕ್ಕಿಲ್ಲ. ಮನಸ್ಸಿನೊಳಗಿನ ಭಯಂಕರವಾದ ದುಃಖವನ್ನು ಎರಡನೆಯವರ ಮುಂದೆ ಯಾವಾಗ ತೋಡಿ ಕೊಂಡೇನೆನ್ನುವಂತೆ ಆಗಿ, ಆ ದುಃಖವನ್ನು ಹೇಳಹೋಗಲು, ಶಬ್ದಗಳು ಕುತ್ತಿಗೆಯವರೆಗೆ ಬಂದಿದ್ದರೂ ಮನುಷ್ಯನ ತುಟಿಗಳೇ ಅಲ್ಲಾಡುವದಿಲ್ಲ. ಈ ಪ್ರಕಾರ ಮನಸ್ಸಿನ ಚಮತ್ಕಾರದ ಸ್ಥಿತಿಯಾದಾಗ ದೃಷ್ಟಿಯು ಹೀಗಾಗುತ್ತದೆ. ಹೇಮಚಂದ್ರನು ನಿಜವಾಗಿ ಯಾವದೋ ಒಂದು ಮನೋವ್ಯಥೆಯಿಂದ ಪೀಡಿತನಾಗಿದ್ದಾನೆ. ಅದನ್ನು ಹೊರಗೆಡವಲಿಕ್ಕೇ ಬೇಕು; ಎಂದು ಯೋಚಿಸಿ ಆಕೆಯು ಹೇಮಚಂದ್ರನನ್ನು ಕುರಿತು—

ಮನೋ—ಹೇಮಚಂದ್ರಾ, ನೀನೇಕೆ ದುಃಖಪಡುವೆ? ನಿನ್ನ ದುಃಖವನ್ನು ನನಗೆ ಹೇಳುವದಿಲ್ಲವೆ?

ಹೇಮ—(ಜೋಲು ಮೋರೆಯಿಂದ) ಛೇ, ನನಗೇನಾಗಿದೆ? ಏನೂ ಇಲ್ಲ.

ಮನೋರಮೆಯು ಹೇಮಚಂದ್ರನ ಮಾತಿಗೆ ತಿರುಗಿ ಉತ್ತರವನ್ನೇ ಕೊಡಲಿಲ್ಲ. ಆಕೆಯು ತನ್ನ ಮನಸ್ಸಿನೊಳಗೆ ವಿಚಾರ ಮಾಡುತ್ತ ಸುಮ್ಮನೆ ಕುಳಿತುಕೊಂಡಳು. ಮಂದಿಯ ಮುಂದೆ ಹೇಳದೆ ಒಳಗಿಂದೊಳಗೆ ಹೀಗೇ ದುಃಖದಿಂದ ಕೊರಗುವದು ಹಿತವಲ್ಲೆಂಬ ವಿಚಾರವು ಮನಸ್ಸಿನಲ್ಲಿ ಬರಲು, ಹಾ ಹಾ ಅನ್ನುವದರೊಳಗೆ ಆ ಪ್ರೇಮಲ ಸ್ವಭಾವದ ಮನೋರಮೆಯ ಕಣ್ಣುಗಳು ನೀರಿನಿಂದ ತುಂಬಿದವು. ಆಕೆಯು ಗದ್ಗದಸ್ವರದಿಂದ ಹೇಮಚಂದ್ರನಿಗೆ—

ಮನೋ—ಹೇಮಚಂದ್ರಾ, ನನ್ನೆದುರಿಗೆ ನಿನ್ನ ದುಃಖವನ್ನು ಮುಚ್ಚಿಕೊಳ್ಳುವೆಯಾ? ನಾನು ನಿನ್ನ ತಂಗಿಯಲ್ಲವೆ? ತಂಗಿಯನ್ನು ನೀನು ಇಷ್ಟು ವಂಚಿಸುವರೇ? ಹೇಳು ಹೇಳು, ನಿನ್ನ ದುಃಖವನ್ನು ತಿಳಕೊಳ್ಳದೆ ನನ್ನ ಮನಸ್ಸು ಶಾಂತವಾಗಲಾರದು.

ತನ್ನ ಮನೋವ್ಯಥೆಯನ್ನು ನೋಡಿ ಮನೋರಮೆಗಾದ ಅಸಹ್ಯ ದುಃಖವನ್ನೂ, ಆಕೆಯ ಬಾಡಿದ ಮೋರೆಯನ್ನೂ, ಮಧುರವಾಣಿಯನ್ನೂ, ವಿಲಕ್ಷಣ ಸಹೃದಯತ್ವವನ್ನೂ ನೋಡಿ ಹೇಮಚಂದ್ರನ ಮನಸ್ಸು ಕರಗಿತು. ಆತನು ಸದ್ಗದಿತವಾದ ಅಸ್ಪಷ್ಟ ಧ್ವನಿಯಿಂದ ಮನೋರಮೆಯನ್ನು ಕುರಿತು—

ಹೇಮ—ಮನೋರಮೇ, ನನ್ನ ಮನೋವ್ಯಥೆಯು ತಂಗಿಯ ಮುಂದೆ ಹೇಳುವಂತಹದಲ್ಲ.

ಮನೊ—(ಮನಸ್ಸಿಗೆ ನಡುವೆ ಧ್ವನಿಯಿಂದ) ಹಾಗಾದರೆ ನಾನು ನಿನ್ನ ತಂಗಿಯಲ್ಲ.

ಇದಕ್ಕೆ ಹೇಮಚಂದ್ರನು ಉತ್ತರವನ್ನು ಕೊಡಲಿಲ್ಲ. ಮನೋರಮೆಯು ಕುತೂಹಲದಿಂದ ಒಂದೇ ಸವನೆ ಅವನ ಮೋರೆಯನ್ನು ನೋಡುತ್ತಿದ್ದಳು. ಬಹಳ ಹೊತ್ತಾದರೂ ಅವನು ಮಾತಾಡದಿರುವದನ್ನು ನೋಡಿ ಆಕೆಯು—ಅಣ್ಣಾ, ನಾನು ನಿನಗೆ ಯಾರೂ ಅಲ್ಲವೆ? ಎಂದು ಮತ್ತೆ ಹೇಮಚಂದ್ರನನ್ನು ಕೇಳಿದಳು. ಅದಕ್ಕೆ ಹೇಮಚಂದ್ರನು—ತಂಗೀ, ನನ್ನ ಮನೋವ್ಯಥೆಯನ್ನು ತಂಗಿಯ ಮುಂದಾಗಲಿ, ಬೇರೆ ಯಾರ ಮುಂದಾಗಲಿ ಹೇಳುವಂತೆ ಇಲ್ಲವ್ವಾ!

ಹೀಗೆ ನುಡಿಯುವ ಹೇಮಚಂದ್ರನ ಕುಗ್ಗಿದ ಧ್ವನಿಯನ್ನೂ, ಅಶ್ರುಪೂರ್ಣವಾದ ದೀನ ದೃಷ್ಟಿಯನ್ನೂ, ವ್ಯಥಿತವಾದ ಮುದ್ರೆಯನ್ನೂ ನೋಡಿ ಮನೋರಮೆಯ ಮನಸ್ಸು ಬಹಳವಾಗಿ ನೊಂದಿತು. ಆಕೆಯು ದಯಾಪೂರ್ಣವಾದ ದೃಷ್ಟಿಯಿಂದ ಅವನನ್ನು ನೋಡತೊಡಗಿದಳು. ನೋಡ ನೋಡುವಷ್ಟರಲ್ಲಿ ಹೇಮಚಂದ್ರನ ಮುಖಮುದ್ರೆಯು ರೂಪಾಂತರವನ್ನು ಹೊಂದಿತು. ಅವನ ಕಣ್ಣೊಳಗಿಂದ ನೀರು ಅಟ್ಟಿಸಿ, ಕಣ್ಣು ಕೆಂಡದಂತಾದವು. ನೋಡುವವರಿಗೆ ಅವುಗಳಿಂದ ಕಿಡಿಗಳುದುರುವವೋ, ಎಂಬಂತೆ ತೋರುವದು. ಕ್ಷೋಭಿಸಿದ ಸಮುದ್ರದಂತೆ ಅವನ ಅಂತಃಕರಣವು ಅಲ್ಲೋಲಕಲ್ಲೋಲವಾಯಿತು. ಅವನ ಸರ್ವಾಂಗವು ಸಿಟ್ಟಿನಿಂದ ನಡುಗಹತ್ತಿತು. ಆಗ ಅವನು ಅವಡುಗಚ್ಚಿ ಕರ್ಕಶ ಧ್ವನಿಯಿಂದ ನುಡಿದನೇನಂದರೆ—ನನಗೆ ಏನು ದುಃಖ ವಾಗಿದೆ! ಏನೂ ಇಲ್ಲ. ನಾನು ರತ್ನಹಾರವೆಂಬ ಸಂಭ್ರಮದಿಂದ ಕೃಷ್ಣಸರ್ಪವನ್ನು ಕೊರಳಲ್ಲಿ ಧಳಿಸಿದ್ದೆನು, ಅದನ್ನು ಈದಿನ ತೆಗೆದು ಬಿಸುಟಿರುತ್ತೇನೆ.

ಇದಕ್ಕೆ ಮನೋರಮೆಯು ಏನೂ ಮಾತಾಡದೆ ಮೊದಲಿನಂತೆ ಎವೆಯಿಕ್ಕದೆ ಹೇಮಚಂದ್ರನನ್ನು ನೋಡತೊಡಗಿದಳು. ಮೆಲ್ಲಮೆಲ್ಲನೆ ಹೇಮಚಂದ್ರನ ಮುಖಮುದ್ರೆಯು ಬದಲಾಗುತ್ತ ಹೋಯಿತು. ಈಗಂತು ಅವನ ತೇಜಸ್ವಿಯಾದ ಮುಖಕಮಲದ ಮೇಲೆ ಅತೀ ಮಧುರವಾದ ಕರುಣಾಯುಕ್ತ ಹಾಸ್ಯ ರೇಖೆಯು ಮಿನುಗಹತ್ತಿತು. ಅದನ್ನು ನೋಡಿ ಚಾಣಾಕ್ಷಳಾದ ಮನೋರಮೆಯು ಮುಗುಳುನಗೆ ನಕ್ಕು ಶಾಂತವಾಣಿಯಿಂದ—ಹ! ನನಗೆ ಈಗ ಗೊತ್ತಾಯಿತು. ನೀನು ವಿಚಾರಮಾಡದೆ ಯಾರೋ ಒಬ್ಬರ ಮೇಲೆ ಅನುರಕ್ತನಾಗಿದ್ದೀಯಾದೀತು. ಅದಕ್ಕಾಗಿ ನಿನಗೆ ಈಗ ಪಶ್ಚಾತ್ತಾಪವಾದಂತೆ ತೋರುತ್ತದೆ. ಹೇಳು ಅಣ್ಣಾ, ನನ್ನ ಮಾತು ಸಟೆಯೋ ದಿಟವೋ?

ಹೇಮ—ಅಹುದು, ನಾನು ಒಬ್ಬರನ್ನು ಪ್ರೀತಿಸಿದ್ದು ನಿಜವು.

ಹೀಗೆ ನುಡಿಯುತ್ತಿರಲು, ಹೇಮಚಂದ್ರನ ಎರಡೂ ಕಣ್ಣುಗಳು ನೀರಿನಿಂದ ತುಂಬಿದವು. ಆಗ ಮನೋರಮೆಯು ಭ್ರಮರದಂತೆ ಕಪ್ಪಾದ ತನ್ನ ಕೂದಲಿನದೊಂದು ಲಡಿಯನ್ನು ಎಡಗೈಯಿಂದ ಒತ್ತುತ್ತ ಸ್ವಲ್ಪ ವಿರಕ್ತಸ್ವರದಿಂದ—

ಮನೋ—ಛೆ ಛೆ! ಇಂಥ ನಿರ್ದಯತ್ವವು ನಿನಗೆ ಒಪ್ಪುವದಿಲ್ಲ.

ಹೇಮ—(ಕ್ರೋಧ ಕಂಪಿತಸ್ವರದಿಂದ) ನಿರ್ದಯತ್ವವು! ನಾನೇನು ನಿರ್ದಯತ್ವವನ್ನು ಮಾಡಿದೆನು

ಮನೋ—ಅಣ್ಣಾ ಪ್ರೀತಿಸುತ್ತಿದ್ದೆನೆಂದು ಯಾಕೆ ಅನ್ನುತ್ತೀ, ಈಗೂ ಪ್ರೀತಿಸುತ್ತೇನೆಂದು ಅನ್ನಬಾರದೇ! ಪ್ರೀತಿಸದಿದ್ದರೆ, ಈ ದಿನ ನಿನ್ನ ಮನಸ್ಸಿನ ಸ್ಥಿತಿಯು ಹೀಗೆ ಏಕಾಗುತ್ತಿತ್ತು? ಅಲ್ಲೋ, ನಿನ್ನ ಪ್ರೀಯ ಜನರು ತಪ್ಪು ಮಾಡಿದರೆ, ಅವರ ಮೇಲಿದ್ದ ನಿನ್ನ ಪ್ರೇಮವು ಕೂಡ ನಷ್ಟವಾಗುವದೆಂದು ನೀನು ತಿಳಿಯುತ್ತಿಯೇನು? ಈ ವಿಷಯವನ್ನು ನೀನು ಯಾರ ಬಳಿಯಲ್ಲಿ ಕಲಿತೆಯಪ್ಪಾ!

ಮಾತಾಡುತ್ತಾಡುತ್ತ ಮನೋರಮೆಯ ಮುಖ—ಮುದ್ರೆಯು ಗಂಭೀರವಾಯಿತು. ಆಕೆಯು ಸ್ವಲ್ಪ ಕ್ರುದ್ಧವೂ, ತಿರಸ್ಕಾರಯುಕ್ತವೂ ಆದ ಸ್ವರದಿಂದ—

ಮನೊ—ಎಲಾ! ಇದೆಲ್ಲ ಗರ್ವಿಷ್ಠರಾದ ನಿಮ್ಮ ಗಂಡಸರ ಅಭಿಮಾನದ ಆಟವಾಗಿರುವದು. ಹುಚ್ಚಾ, ಇಂಥ ಅಭಿಮಾನದಿಂದ ಪ್ರೇಮಾಗ್ನಿಯು ಎಂದಾದರೂ ಶಾಂತವಾಗುವದೋ? ಮಳೆಗಾಲದಲ್ಲಿ ತುಂಬಿ ಹೊರಸೂಸಿ ಹರಿಯುವ ಶಳವಿನ ಹೊಳೆಯನ್ನು ಮಳಲಿನ ಒಡ್ಡಿನಿಂದ ತಡೆದರೂ ತಡೆಯಬಹುದು; ಆದರೆ ನೀನು ಪ್ರಿಯ ಜನರನ್ನು ಮನಸ್ಸಿನಲ್ಲಿ ಎಷ್ಟು ಪಾಪಿಗಳೆಂದು ತಿಳಕೊಂಡರೂ ನಿನ್ನ ಮನಸ್ಸಿನಲ್ಲಿರುವ ಅವರ ವಿಷಯದ ಪ್ರೇಮದ ಪ್ರವಾಹವನ್ನು ತಡೆಯುವದು ಏತರಿಂದಲೂ ನಿನಗೆ ಶಕ್ಯವಿಲ್ಲ.

ಈ ಪ್ರಕಾರ ಮನೋರಮೆಯು ನುಡಿದು ಅಸ್ಪಷ್ಟ ಧ್ವನಿಯಿಂದ ತನ್ನೊಳಗೆ ಒಟಗುಟ್ಟುತ್ತ—ದೇವರೇ, ಜಗತ್ತಿನೊಳಗಿನ ಯಾವತ್ತು ಗಂಡಸರನ್ನು ಹೀಗೆಯೇ ಕೃತಘ್ನರನ್ನಾಗಿ ಮಾಡಿರುವೆಯಾ, ಎಂದಳು.

ಮನೋರಮೆಯ ಈ ಮಾತುಗಳನ್ನು ಕೇಳಿ ಹೇಮಚಂದ್ರನು ಸೋಜಿಗಗೊಂಡು—ಈ ಹೆಣ್ಣುಮಗಳು ಇಷ್ಟೊಂದು ಜ್ಞಾನವನ್ನು ಎಲ್ಲಿ ಸಂಪಾದಿಸಿರಬಹುದು, ಎಂದು ಮನಸ್ಸಿನಲ್ಲಿ ಅಂದುಕೊಂಡು ಜಿಜ್ಞಾಸಾಪ್ರೇರಿತವಾದ ಉತ್ಸುಕತೆಯಿಂದ ಆಕೆಯನ್ನು ಕುರಿತು—ಮನೋರಮೇ, ಪ್ರೇಮಕ್ಕೆ ಪಾತ್ರಾಪಾತ್ರಗಳ ವಿಚಾರವಿಲ್ಲೇನು? ಮಹಾಪಾಪಿಯ ಮೇಲೆಯೂ ಪ್ರೇಮವನ್ನು ಮಾಡಬೇಕೋ, ಎಂದು ಕೇಳಿದನು. ಆಗ ಮನೋರಮೆಯು ಮುಗುಳುನಗೆ ನಗುತ್ತ—ಅಣ್ಣಾ ಪಾಪಿಷ್ಠರ ಮೇಲೆಯಾದರೂ ಪ್ರೀತಿಯು ಕೂಡುತ್ತದೆ. ಪ್ರೀತಿಗೆ ಪಾತ್ರಾಪಾತ್ರಗಳ ವಿಚಾರವಿಲ್ಲ, ಅಣ್ಣಾ ನೀನೇ ವಿಚಾರಮಾಡಿ ನೋಡು. ನಿಜವಾಗಿ ಪ್ರಿಯವಾಗಿರುವ ವಸ್ತುವಿನ ಮೇಲೆ ಯಾರು ತಾನೇ ಪ್ರೇಮಮಾಡದೆ ಇದ್ದಾರು? ಅಂಥ ವಸ್ತುವಿನ ಮೇಲೆ ಪ್ರೇಮಮಾಡುವದರಲ್ಲಿ ದೊಡ್ಡಿಸ್ತನವಾದರೂ ಏನು? ಆದರೆ ಪ್ರೀತಿಗೆ ಪಾತ್ರರಲ್ಲದವರ ಮೇಲೆ ತಮ್ಮನ್ನು ಮರೆತು ನಿಷ್ಕಾಮವಾಗಿ ಪ್ರೀತಿಮಾಡುವವರೇ ಶ್ರೇಷ್ಠರು, ಅವರೇ ಧನ್ಯರು, ಅಂಥವರೇ ನನಗೆ ಸೇರುವರು!

ಇದನ್ನು ಕೇಳಿ ಹೇಮಚಂದ್ರನು ಮತ್ತಿಷ್ಟು ಬೆರಗಾಗಿ—ಮನೋರಮೇ, ಇದನ್ನೆಲ್ಲ ನೀನು ಯಾರ ಹತ್ತರ ಕಲಿತೆ? ನಿನ್ನ ಗುರುವು ಧನ್ಯನೇ ಸರಿ, ಎಂದನು. ಈ ಪ್ರಶ್ನವನ್ನು ಕೇಳಿ ಮನೋರಮೆಯ ಗಾಂಭೀರ್ಯವು ನಷ್ಟವಾಯಿತು. ಆಕೆಯ ಮೋರೆಯು ಕಪ್ಪಿಟ್ಟಿತು. ಆಕೆಯು ಉದಾಸೀನಳಾಗಿ—ಅಣ್ಣಾ ಆ ನನ್ನ ಗುರುವಿನ ಯೋಗ್ಯತೆಯನ್ನೇನು ವರ್ಣಿಸಲಿ? ಆತನು ಸರ್ವಜ್ಞಾನಿಯು; ಆದರೆ......'' ಎಂದು ನುಡಿದು ಸುಮ್ಮನಾಗಲು, ಹೇಮಚಂದ್ರನು—ಮನೋರಮೇ, ''ಆದರೆ'' ಎಂದು ನುಡಿದು ಸುಮ್ಮನಾದೆಯಲ್ಲ? ಅದರ ಅರ್ಥವೇನು, ಎಂದು ಕೇಳಿದನು. ಅದಕ್ಕೆ ಮನೋರಮೆಯು—ಹೇಮಚಂದ್ರಾ, ನನ್ನ ಗುರುವಿನ ಜ್ಞಾನವು ಅಗ್ನಿಯಂತೆ ಇರುವದು. ಅಗ್ನಿಯು ಪ್ರಕಾಶವನ್ನೂ ಕೊಡುವದು, ಸುಟ್ಟು ಬೂದಿಯನ್ನೂ ಮಾಡುವದು. ಎಂದು ನುಡಿದು ಲಜ್ಜೆಯಿಂದ ತಲೆಬಾಗಿಸಿಕೊಂಡು ಸುಮ್ಮನೆ ಕುಳಿತಳು.

ಮನೋರಮೆಯ ಮುಖಮುದ್ರೆಯನ್ನು ನೋಡಿ ಹೇಮಚಂದ್ರನು—ಮನೋರಮೇ, ಈಗಿನ ನಿನ್ನ ಮುಖಚರ್ಯದ ಮೇಲಿಂದಲೂ, ಈವರೆಗೆ ನೀನು ಆಡಿದ ಮಾತುಗಳ ಮೇಲಿಂದಲೂ ನನ್ನ ಮನಸ್ಸಿನಲ್ಲಿ ಒಂದು ಸಂಶಯವು ಉತ್ಪನ್ನವಾಗಿದೆ. ನಿನ್ನ ಪ್ರೀತಿಯಾದರೂ ಯಾರ ಮೇಲೆಯೋ ಕುಳಿತಂತೆ ಕಾಣುತ್ತದೆ. ಮನೋರಮೇ, ಸುಳ್ಳಾಡಬೇಡ, ಯಾವನದೋ ಜ್ಞಾನವು ಅಗ್ನಿಕಣದಂತೆ ಇರುತ್ತದೆಂದು ಈಗ ಹೇಳಿದೆಯಲ್ಲ, ಅವನ ಮೇಲೆಯೇ ನಿನ್ನ ಪ್ರೀತಿಯು ಕುಳಿತಿರುವದೇನು?

ಹೇಮಚಂದ್ರನ ಈ ಪ್ರಶ್ನೆಗೆ ಮನೋರಮೆಯು ಉತ್ತರವನ್ನೇ ಕೊಡಲಿಲ್ಲ, ಆಕೆಯು ಮೊದಲಿನಂತೆ ಸುಮ್ಮನೆ ಕುಳಿತುಬಿಟ್ಟಳು. ಅದನ್ನು ನೋಡಿ, ಹೇಮಚಂದ್ರನು—ಮನೋರಮೇ, ನನ್ನ ಸಂಶಯವು ನಿಜವಿದ್ದರೆ, ನನ್ನದೊಂದು ಮಾತನ್ನು ಕೇಳು. ಸ್ತ್ರೀಯರಿಗೆ ಪಾತಿವ್ರತ್ಯಕ್ಕಿಂತ ಹೆಚ್ಚಿನ ಧರ್ಮವಿಲ್ಲ, ಪಾತಿವ್ರತ್ಯವನ್ನು ಕಾಯ್ದುಕೊಳ್ಳದ ಸ್ತ್ರೀಯು ನಾಯಿಗಿಂತಲೂ ಕಡೆಯಾಗಿರುವಳು. ಪಾತಿವ್ರತ್ಯವು ಪ್ರತ್ಯಕ್ಷ ಭ್ರಷ್ಟವಾಗಬೇಕೆಂತಲ್ಲ, ಅನ್ಯಪುರುಷರನ್ನು ಬರಿಯ ಮನ್ನಸಿನಲ್ಲಿ ನೆನಿಸುವದರಿಂದಲೂ ಪಾತಿವ್ರತ್ಯವು ಭಂಗವಾಗುತ್ತದೆ.

ಮನೋರಮೇ, ನೀನು ವಿಧವೆಯಿರುತ್ತೀಯೆಂಬದನ್ನು ಚನ್ನಾಗಿ ನೆನಪಿನಲ್ಲಿಡು. ನಿನ್ನ ಮನಸ್ಸಿಗೆ ಅನ್ಯಪುರುಷನ ವಿಚಾರದ ಸ್ಪರ್ಶವಾದರೂ ನೀನು ಇಹಲೋಕದಲ್ಲಿಯೂ, ಪರಲೋಕದಲ್ಲಿಯೂ ಪತಿತಳಾದೀ. ಆದುದರಿಂದ ಮತ್ತೊಮ್ಮೆ ಹೇಳುತ್ತೇನೆ. ಎಚ್ಚರಿಕೆಯಿಂದ ಇರು. ನಿನ್ನ ಮನಸ್ಸು ಯಾರಕಡೆಗಾದರೂ ಹರಿಯುತ್ತಿದ್ದರೆ, ಕೂಡಲೆ ಆ ಪುರುಷನನ್ನು ಮರೆತುಬಿಡು!

ಹೇಮಚಂದ್ರನ ಈ ವೇದಾಂತವನ್ನು ಕೇಳಿ ಮನೋರಮೆಯು ಒಂದೇ ಸವನೆ ನಗಹತ್ತಿದಳು. ಹೊಟ್ಟೆಯಲ್ಲಿ ಹಿಡಿಸಲಾರದ ತನ್ನ ನಗೆಯನ್ನು ಬಿಗಿಹಿಡಿಯಲಿಕ್ಕೆ ಆಕೆಯು ಬಾಯ ಮೇಲೆ ಸೆರಗುಹಾಕಿಕೊಂಡಳು, ಬೇರೆ ಉಪಾಯಗಳನ್ನೂ ಮಾಡಿದಳು. ಆದರೂ ಆಕೆಯ ನಗೆಯು ನಿಲ್ಲಲೊಲ್ಲದು. ಅದನ್ನು ನೋಡಿ ಹೇಮಚಂದ್ರನು ಸ್ವಲ್ಪ ಸಿಟ್ಟಿನ ಮುದ್ರೆಯಿಂದ—ಮನೋರಮೇ, ನಿನಗೆ ನಗಲಿಕ್ಕೇನಾಯಿತು, ಎಂದು ಕೇಳಿದನು. ಅದಕ್ಕೆ ಮನೋರಮೆಯು ನಗುತ್ತಲೇ—ಅಣ್ಣಾ, ನಾನು ನಗದೆ ಮತ್ತೇನು ಮಾತಾಡಲಿ? ನೀನು ಈ ನದಿಯ ದಂಡೆಯ ಮೇಲೆ ನಿಂತುಕೊಂಡು ಭಾಗೀರಥಿಗೆ—ಅವ್ವಾ ಭಾಗೀರಥೀ, ನೀನು ಪುನಃ ಪರ್ವತದ ಕಡೆಗೆ ತಿರುಗು, ಎಂದು ಹೇಳು.

ಹೇಮ—ಅದೇಕೆ?

ಮನೋ—ನೀನು ಹುಚ್ಚನ ಹಾಗೆ ಹೀಗೆ ಏಕೆ ಮಾತಾಡುತ್ತೀ? ಸ್ಮೃತಿಯು ಇಚ್ಛೆಯ ಅಧೀನವಾಗಿರುವದೋ? ಪ್ರಿಯವಸ್ತುವಿನ ಸ್ಮರಣವಾದಕೂಡಲೆ ಇಚ್ಛೆಯು ಅತ್ತಕಡೆಗೆ ಹೊರಳುವದು ಸ್ವಾಭಾವಿಕವು. ಬಹಳ ದೂರವೇಕೆ? ಹೇಮಚಂದ್ರಾ, ನಿನ್ನ ಆ ಭುಜಂಗದ ಸ್ಮರಣದಿಂದ ನಿನಗೇನು ಸುಖವಾಗಬೇಕಾಗಿದೆ? ಹೀಗಿದ್ದರೂ ಅದರ ಮರವು ನಿನಗೆ ಏಕಾಗುವದಿಲ್ಲ?

ಹೇಮ—ಅದರ ಕಡತದ ಅಸಹ್ಯವಾದ ಜ್ವಾಲೆಯ ಮೂಲಕ ಅದರ ಮರವು ನನಗಾಗುವದಿಲ್ಲ.

ಮನೋ—ಅದು ಕಡಿಯದಿದ್ದರೆ ಅದನ್ನು ಮರೆಯುವದು ನಿನ್ನಿಂದಾಗುತ್ತಿತ್ತೋ?

ಇದನ್ನು ಕೇಳಿ ಹೇಮಚಂದ್ರನು ನಿರುತ್ತರನಾದನು. ಮನೋರಮೆಯು ಮತ್ತೆ ನುಡಿದಳೇನಂದರೆ—ಅಣ್ಣಾ, ನಿನ್ನ ಕೊರಳೊಳಗಿನದು ರತ್ನಹಾರವಾಗಿರದೆ, ಕರಿಯ ಹಾವಿರುವದೆಂದು ತಿಳಕೊಂಡರೂ ಅದನ್ನು ಹೃದಯದೊಳಗಿಂದ ಹೊರದೂಡಲು ನೀನು ಸಮರ್ಥನಾಗಲೊಲ್ಲೆ, ಇನ್ನು ನಾನು! ನಾನಂತು ಹುಚ್ಚಿಯು; ನನ್ನ ಹೂವಿನ ಸರವನ್ನು ಯಾಕೆ ಹರಿದು ಚಲ್ಲಲಿ?

ಮನೋರಮೆಯ ಈ ಮಾತುಗಳನ್ನು ಕೇಳಿ ಹೇಮಚಂದ್ರನು ಶಾಂತಸ್ವರದಿಂದ—ಮನೋರಮೇ, ನಿನ್ನ ಮಾತು ಸರಿಯಾದದ್ದು. ಸ್ಮೃತಿಯು ಇಚ್ಛೆಯ ಅಧೀನವಾಗಿರುವದೇ ಇಚ್ಛೆಯೇ ಸ್ಮೃತಿಯ ಅಧೀನವಾಗಿರುತ್ತದೆಂಬದು ಪೂರಾ ಸತ್ಯವಾದದ್ದು. ತಮ್ಮ ಮೈಮೇಲೆ ಪ್ರಸಂಗ ಬರುವದಕ್ಕಿಂತ ಮೊದಲು, ಮಂದಿಗೆ ದೊಡ್ಡ ದೊಡ್ಡ ಬ್ರಹ್ಮೋಪದೇಶ ಮಾಡುವ ಜನರು ವಿಶೇಷವಾಗಿರುವರು. ನಿಜವಾಗಿ ಇದಕ್ಕಿಂತ ನಗೆಗೇಡಾದ ಮಾತು ಮತ್ತೊಂದಿಲ್ಲ. ದುಡ್ಡಿನ ಆಸೆಯನ್ನು ಬಿಡಬೇಕು, ಕೀರ್ತಿಯ ಮಹತ್ವಾಕಾಂಕ್ಷೆಗೆ ಒಳಗಾಗಬಾರದು,

ಜ್ಞಾನಾಭಿಲಾಷೆಯನ್ನು ಬಿಡಬೇಕು, ಹಸಿವೆ—ನೀರಡಿಕೆ—ನಿದ್ರೆ ಇವುಗಳನ್ನು ಮರೆಯಬೇಕು, ಅಭಿಮಾನವು ಕೆಲಸದ್ದಲ್ಲ, ಎಂದು ಯಾರಾದರೂ ಹೇಳಬಹುದು; ಆದರೆ ಅದರಂತೆ ನಡೆಯುವವರು ತೀರ ಅಪರೂಪ. ಪ್ರೇಮದ ಯೋಗ್ಯತೆಯು ಇವೆಲ್ಲವುಗಳಿಗಿಂತ ಹೆಚ್ಚಿನದಿರುವದು. ಅಂದಬಳಿಕ ಅದನ್ನು ಬಿಡೆಂದು ಹೇಳುವ ಯೋಗ್ಯತೆಯು ಯಾರದೂ ಅಲ್ಲ, ಆದರೂ ಧರ್ಮಕ್ಕಿಂತ ಪ್ರೇಮದ ಯೋಗ್ಯತೆಯು ಕಡಿಮೆಯೆಂದು ನಿರ್ವಿವಾದವಾಗಿ ಹೇಳಬಹುದು. ಜಗತ್ತಿನಲ್ಲಿ ಧರ್ಮದ ಯೋಗ್ಯತೆಯು ಶ್ರೇಷ್ಠವಾದುದರಿಂದ ಅದರ ಸಲುವಾಗಿ ಪ್ರೇಮದ ಸಂಹಾರವನ್ನು ಮಾಡಬೇಕಾಗುವದು. ಪಾತಿವ್ರತ್ಯವು ಸ್ತ್ರೀಯರ ಶ್ರೇಷ್ಠಧರ್ಮವಾಗಿರುವದು; ಅದುದರಿಂದ ಮನೋರಮೇ, ನಾನು ಪುನಃ ಪುನಃ ಆಗ್ರಹ ದಿಂದ ನಿನಗೆ ಹೇಳುತ್ತೇನೆ, ಧರ್ಮವನ್ನು ಕಾಯ್ದುಕೊಳ್ಳಬೇಕೆಂತಲೂ, ಪಾತಿವ್ರತ್ಯದಿಂದ ಭ್ರಷ್ಟವಾಗಬಾರದೆಂತಲೂ ನೀನು ಇಚ್ಛಿಸುತ್ತಿದ್ದರೆ, ಮತ್ತು ಇವನ್ನು ಸಾಧಿಸುವಷ್ಟು ನಿನ್ನಲ್ಲಿ ಮನೋನಿಗ್ರಹವಿದ್ದರೆ ನಿನ್ನ ಹೃದಯದೊಳಗಿನ ಅಪವಿತ್ರ ಪ್ರೇಮದ ಸಂಹಾರವನ್ನು ಮಾಡು.

ಇದನ್ನು ಕೇಳಿ ಮನೋರಮೆಯು ಗಂಭೀರವಾಣಿಯಿಂದ ನುಡಿದಳೇನಂದರೆ—ಅಣ್ಣಾ ನಾನಂತೂ ಹೇಳಿ ಕೇಳಿ ಅಬಲೆಯು, ಪರವಶಳು, ಮಂದಮತಿಯು! ಧರ್ಮಾಧರ್ಮದ ತಿಳುವಳಿಕೆಯು ನನಗಿಲ್ಲ, ನನಗೊಂದು ಮಾತು ಮಾತ್ರ ಗೊತ್ತಿರುತ್ತದೆ. ಧರ್ಮದ ಹೊರತು ಪ್ರೇಮವು ಉತ್ಪನ್ನವಾಗುವದೇ ಇಲ್ಲ,

ಮನೋರಮೆಯ ಈ ಮಾತುಗಳನ್ನು ಕೇಳಿ ಹೇಮಚಂದ್ರನು ಆವೇಶದಿಂದ— ಮನೋರಮೇ, ಜೋಕೆ, ಜೋಕೆ! ಎಚ್ಚರಗೆಡಬೇಡ. ತಂಗೀ, ವಾಸನೆಯಿಂದ ಭ್ರಾಂತಿಯೂ, ಭ್ರಾಂತಿಯಿಂದ ಅಧರ್ಮವೂ ಉತ್ಪನ್ನವಾಗುವವು. ಸದ್ಯಕ್ಕೆ ನಿನ್ನ ಮನಸ್ಸಿನ ಪ್ರವಾಹವು ಭ್ರಾಂತಿಯವರೆಗೆ ಹೋದಂತೆ ತೋರುತ್ತದೆ. ಅಧರ್ಮ ಮಾರ್ಗದಲ್ಲಿ ನೀನು ಇನ್ನೂ ಹೆಜ್ಜೆಯನ್ನಿಟ್ಟಂತೆ ತೋರುವದಿಲ್ಲ, ನೀನೇ ಮನಸ್ಸಿನಲ್ಲಿ ತಿಳಿದು ನೋಡು, ಧರ್ಮದಿಂದ ನೀನು ಒಬ್ಬನ ಹೆಂಡತಿಯಾಗಿರಲು, ಮನಸ್ಸಿನಿಂದ ಎರಡನೆಯವರ ಹೆಂಡತಿಯಾದರೆ ಪಾಪಿಷ್ಟೆ ಯಿಂದು, ಎಣಿಸಲ್ಪಡುವಿಯೋ ಇಲ್ಲವೋ?

ಇದನ್ನು ಕೇಳಿ ಮನೋರಮೆಯು ಗೋಡೆಗೆ ತೂಗಹಾಕಿದ್ದ ಹೇಮಚಂದ್ರನ ಢಾಲನ್ನು ಕೈಯಲ್ಲಿ ತಕ್ಕೊಂಡು—ಅಣ್ಣಾ, ನಿನ್ನ ಈ ಢಾಲಿನ ತೊಗಲು ಯಾತರದೋ, ಎಂದು ಕೇಳಲು, ಹೇಮಚಂದ್ರನು ನಕ್ಕನು. ಮನೋರಮೆಯ ನಿರ್ದೋಷವಾದ ಮುಖವನ್ನು ನೋಡಿ, ಆತನು ಮನಸ್ಸಿನಲ್ಲಿ—ಪಾಪ! ಸರಳ ಮನಸ್ಸಿನ ಭೋಳೆ ಸ್ವಭಾವದ ಹುಡುಗಿಯು, ಎಂದು ಸುಮ್ಮನಾದನು.

ಸಚ್ಚರಿತ್ರ ಚಿಂತನ

ಇತ್ತ ಗಿರಿಜೆಯು ತಾನು ಇಳಕೊಂಡು ಸ್ಥಳಕ್ಕೆ ಬರುತ್ತಿರುವಾಗ ದಾರಿಯಲ್ಲಿ—ಏನೇ ಆಗಲಿ, ಹೇಮಚಂದ್ರನು ಮನೋರಮೆಗೆ ಮರುಳಾದದ್ದನ್ನು ಮೃಣಾಲಿನಿಯ ಮುಂದೆ ಹೇಳಲಿಕ್ಕಿಲ್ಲ ಎಂದು ಮನಸ್ಸಿನೊಳಗೆ ನಿರ್ಧರಿಸಿದ್ದಳು. ಅತ್ತ ಮೃಣಾಲಿನಿಯು ಒಕ್ಕಲಿಗನ ಮನೆಯಲ್ಲಿ ಪಂಜರದೊಳಗಿನ ಹಕ್ಕಿಯಂತೆ ಒಂದೇ ಸವನೆ ಗಿರಿಜೆಯ ಹಾದಿಯನ್ನು ನೋಡುತ್ತ ತಳಮಳಿ ಸುತ್ತ ಕುಳಿತಿದ್ದಳು. ಕೆಲಹೊತ್ತಿನ ಮೇಲೆ ಗಿರಿಜೆಯು ಬಂದಳು. ಆಕೆಯು ಕಣ್ಣಿಗೆ ಬಿದ್ದಕೂಡಲೆ ಮೃಣಾಲಿನಿಯು ಒಮ್ಮೆಲೆ ಆಕೆಯನ್ನು ಬಿಗಿದಪ್ಪಿ—ಗಿರಿಜೇ, ಹೇಳು ಹೇಳು, ಏನು ನೋಡಿಬಂದಿ? ಹೇಮಚಂದ್ರನ ಪ್ರಕೃತಿಯು ಈಗ ಹೇಗಿರುತ್ತದೆ?

ಗಿರಿಜೆ—ಈಗ ನೆಟ್ಟಗಿರುತ್ತದೆ.

ಮೃಣಾ—ಸಖೀ ಗಿರಿಜೇ, ಇಂದು ನೀನು ಹೀಗೆ ಏಕೆ ಮಾಡುತ್ತೀ? ನಿನ್ನ ಮುಖ ಮುದ್ರೆಯಲ್ಲಿ ಉತ್ಸಾಹವು ಏಕೆ ತೋರುವದಿಲ್ಲ? ನಿನ್ನ ಮೋರೆಯು ಬಾಡಿರುವ ಕಾರಣವೇನು?

ಗಿರಿಜೆ—(ಜುಲುಮೆಯ ನಗು ಮೋರೆಯಿಂದ) ನಿಮ್ಮದೊಂದು ಇಲ್ಲದ್ದೇ ಕೋಳೋಣವು! ನನಗೇನಾಗಿದೆ?

ಮೃಣಾ—ಗಿರಿಜೇ, ನಿನಗೆ ನನ್ನ ಕೊರಳ ಆಣೆಯಿರುತ್ತದೆ, ನನಗೆ ಮೋಸಮಾಡಬೇಡ. ಇದ್ದದ್ದನ್ನು ಬಚ್ಚಿಡದೆ ನಿಜವಾಗಿ ಹೇಳಿಬಿಡು. ಅವರ ಪ್ರಕೃತಿಯು ನೆಟ್ಟಗಿದೆಯೋ ಇಲ್ಲವೋ? ನೆಟ್ಟಗಿಲ್ಲದಿದ್ದರೆ, ಹಾಗೆ ನನಗೆ ಸ್ಪಷ್ಟವಾಗಿ ಹೇಳು. ಸಂದೇಹದಲ್ಲಿ ಮುಳುಗಿ ತರ್ಕವಿತರ್ಕಗಳನ್ನು ಮಾಡುತ್ತ ಕುಳಿತುಕೊಳ್ಳುವದಕ್ಕಿಂತ ನಿಜವಾದ ಸಂಗತಿಯನ್ನು ತಿಳಕೊಂಡು ಕುಳಿತುಕೊಳ್ಳುವದು ನೆಟ್ಟಗೆ.

ಗಿರಿಜೆ—(ಮತ್ತಿಷ್ಟು ನಗುತ್ತ) ಅವ್ವನವರೇ, ನೀವು ಮನಸ್ಸಿನಲ್ಲಿ ಇಲ್ಲದ್ದೊಂದು ವಿಕಲ್ಪವನ್ನು ಯಾಕೆ ತಂದುಕೊಳ್ಳುತ್ತೀರಿ? ನಾನು ಆಣೆಮಾಡಿ ಹೇಳುತ್ತೇನೆ, ಅವರ ಪ್ರಕೃತಿಯು ನೆಟ್ಟಗದೆ.

ಮೃಣಾ—(ಒಂದು ಕ್ಷಣ ಸುಮ್ಮನಿದ್ದು) ಅವರ ಭಾಷಣವನ್ನು ಕೇಳಿದೆಯೋ?

ಗಿರಿಜೆ—ಕೇಳಿದೆನು, ಸ್ವಲ್ಪ ಸಂಭಾಷಣವನ್ನು ಕೇಳಿದ್ದು ನಿಜವು.

ಮೃಣಾ—ಏನು ಕೇಳಿದೆ?

ಹೇಮಚಂದ್ರನು ಮನೋರಮೆಯ ಸಂಗಡ ಆಡಿದ ಮಾತುಗಳನ್ನೆಲ್ಲ ಗಿರಿಜೆಯು ಸ್ವಲ್ಪದರಲ್ಲಿ ಹೇಳಿದಳು; ಆದರೆ ಮನೋರಮೆಯು ರಾತ್ರಿ ಹೇಮಚಂದ್ರನ ಸಂಗಡ ತಿರುಗಾಡಲಿಕ್ಕೆ ಹೋದದ್ದನ್ನೂ, ಆಕೆಯು ಹೇಮಚಂದ್ರನ ಕಿವಿಯಲ್ಲಿ ಮಾತಾಡಿದ್ದನ್ನು ಮಾತ್ರ ಹೇಳಲಿಲ್ಲ. ಇದನ್ನೆಲ್ಲ ಕೇಳಿ ಮೃಣಾಲಿನಿಯು—

ಮೃಣಾ—ನೀನು ಹೇಮಚಂದ್ರನನ್ನು ಪ್ರತ್ಯಕ್ಷ ಕಂಡಿದ್ದೆಯಾ?

ಗಿರಿಜೆ—ಕಂಡಿದ್ದೆನು.

ಮೃಣಾ—ಅವರೇನು ಅಂದರು?

ಗಿರಿಜೆ—ನಿಮ್ಮ ಸುದ್ದಿಯನ್ನು ಕೇಳಿದರು.

ಮೃಣಾ—ಅದಕ್ಕೆ ನೀನೇನು ಹೇಳಿದೆ?

ಗಿರಿಜೆ—ಅವ್ವನವರು ನೆಟ್ಟಗಿದ್ದಾರೆಂದು ಹೇಳಿದೆನು.

ಮೃಣಾ—ನಾನು ಇಲ್ಲಿಗೆ ಬಂದಿರುವ ಸುದ್ದಿಯನ್ನು ಹೇಳಿದೆಯೇನು?

ಗಿರಿಜೆ—ಇಲ್ಲ.

ಗಿರಿಜೆಯ ಈ ಉತ್ತರಕೊಡುವ ರೀತಿಯನ್ನೂ, ಅವಳ ಅಸ್ಪಷ್ಟ ಭಾಷಣವವನ್ನೂ ವಿಚಾರಿಸಿ ಮೃಣಾಲಿನಿಯು—ಗಿರಿಜೇ, ನೀನು ಹೀಗೆ ಕುಗ್ಗುತ್ತ ಮಾತಾಡುವ ಕಾರಣವೇನು? ನಿನ್ನ ಮೋರೆಯು ತೀರ ಬತ್ತಿಹೋಗಿದೆ. ನನ್ನ ಮೋರೆಯ ಕಡೆಗೆ ನೋಡುವ ಧೈರ್ಯವೂ ನಿನಗಿಲ್ಲ. ಇದರಿಂದ ನೀನು ಯಾವದೋ ಒಂದು ಕೆಟ್ಟ ಸುದ್ದಿಯನ್ನು ನನಗೆ ಹೇಳಬಾರದೆಂದು ಬೇಕೆಂತ ಮುಚ್ಚುತ್ತೀ. ನಿನ್ನ ಈ ಅತಂತ್ರಮಾತಿನ ಮೇಲೆ ನನ್ನ ನಂಬಿಗೆಯು ಎಷ್ಟುಮಾತ್ರವೂ ಕುಳಿತುಕೊಳ್ಳುವದಿಲ್ಲ. ದೈವದಲ್ಲಿದ್ದದ್ದಾಗಲಿ, ನಾನೇ ಹೇಮಚಂದ್ರನನ್ನು ಕಾಣಲಿಕ್ಕೆ ಹೋಗುವೆನು. ಮನಸ್ಸಿದ್ದರೆ ನೀನೂ ನನ್ನ ಸಂಗಡ ಬಾ. ನೀನು ಬಾರದಿದ್ದರೆ ನಾನೊಬ್ಬಳೇ ಹೋಗುತ್ತೇನೆ.

ಈ ಮೇರೆಗೆ ನುಡಿದು ಮೃಣಾಲಿನಿಯು ಕೂಡಲೆ ಹೇಮಚಂದ್ರನಿದ್ದ ಅರಮನೆಯ ಕಡೆಗೆ ಹೊರಟಳು. ಇದನ್ನು ನೋಡಿ ಗಿರಿಜೆಯು ಬೆಪ್ಪಾಗಿ ಕೆಲಹೊತ್ತಿನವರೆಗೆ ನಿಂತಲ್ಲಿ ನಿಂತುಬಿಟ್ಟಳು. ಮುಂದೆ ಏನು ಮಾಡಬೇಕೆಂಬದು ಆಕೆಗೆ ತೋಚದಾಯಿತು. ಕಡೆಗೆ ಆಕೆಯು ಓಡುತ್ತ ಮೃಣಾಲಿನಿಯ ಬೆನ್ನುಹತ್ತಿ ಹೋಗಿ ಬಹುದೂರ ಆಕೆಯನ್ನು ಕೂಡಿ, ಆಕೆಯ ಕೈ ಹಿಡಿದು ಹಿಂದಕ್ಕೆ ತಿರುಗಿಸಿ ನುಡಿದಳೇನಂದರೆ—ಅವ್ವನವರೇ, ಹೀಗೆ ಹುಚ್ಚರ ಹಾಗೆ ಇದೇನು ಮಾಡುವಿರಿ! ಮನೆಗೆ ನಡೆಯಿರಿ, ನಾನು ನಿಮಗೆ ಎಲ್ಲ ಸಂಗತಿಯನ್ನು ಹೇಳುತ್ತೇನೆ, ಎಳ್ಳಷ್ಟಾದರೂ ಬಚ್ಚಿಡುವದಿಲ್ಲ.

ಇದನ್ನು ಕೇಳಿ ಮೃಣಾಲಿನಿಯು ಹಿಂದಿರುಗಿದಳು. ಮನೆಗೆ ಬಂದ ಬಳಿಕ ಗಿರಿಜೆಯು ತಾನು ಬಚ್ಚಿಟ್ಟಿದ್ದ ಸಂಗತಿಗಳನ್ನೆಲ್ಲ ಮೃಣಾಲಿನಿಯ ಮುಂದೆ ಹೇಳಿದಳು. ಅಭಿಮಾನಿಯಾದ ಹೇಮ ಚಂದ್ರನನ್ನು ಮೋಸಗೊಳಿಸಿದಂತೆ, ಚತುರೆಯಾದ ಮೃಣಾಲಿನಿಯನ್ನು ಮೋಸ ಗೊಳಿಸುವದು ಗಿರಿಜೆಯಿಂದಾಗಲಿಲ್ಲ. ಆಕೆಯು ಎಲ್ಲ ಸಂಗತಿಯನ್ನು ಹೇಳಲೇಬೇಕಾಯಿತು. ಗಿರಿಜೆಯ ಮಾತು ಮುಗಿದ ಮೇಲೆ ಮೃಣಾಲಿನಿಯು—ಗಿರಿಜೇ, ಅವರು ಸಿಟ್ಟಿನಿಂದ "ಬಹಳ ಒಳ್ಳೆಯ ಕೆಲಸವಾಯಿತು" ಎಂದು ನುಡಿದಿರಬಹುದು. ನೀನು ಇಲ್ಲದ್ದೊಂದು ಹೇಳಿದ ಬಳಿಕ ಅವರಿಗೆ ಸಿಟ್ಟು ಬರದೇನು ಮಾಡೀತು; ಆದರೆ ಗೆಳತೀ, ನೀನು ಹೀಗೆ ಮಾಡಿದ್ದು ನೆಟ್ಟಗಾಗಲಿಲ್ಲ. ಒಳ್ಳೆಯದು, ಇರಲಿ, ಆದದ್ದು ತಿರುಗಿ ಬರುವದಿಲ್ಲ. ಈಗ ನೀನು ನಿನ್ನ ಊಟ-ಉಡಿಗೆ ಗಳನ್ನು ತೀರಿಸಿಕೋ. ಅಷ್ಟರಲ್ಲಿ ನಾನೊಂದು ಪತ್ರವನ್ನು ಬರೆಯುತ್ತೇನೆ. ಊಟವಾದ ಕೂಡಲೆ ಅದನ್ನು ತಕ್ಕೊಂಡು ಹೋಗಿ ಅವರ ಕೈಯಲ್ಲಿ ಕೊಡು, ಎಂದು ಹೇಳಿ ಪತ್ರವನ್ನು ಹೀಗೆ ಬರಯತೊಡಗಿದಳು.

''ಪ್ರಿಯರೇ, ಈದಿನ ಮುಂಜಾನೆ ಗಿರಿಜೆಯು ತಮ್ಮ ಮುಂದೆ ಹೇಳಿದ್ದು ಸುಳ್ಳು ಇರುತ್ತದೆ. ಆಕೆಯು ಹೀಗೆ ಯಾಕೆ ಸುಳ್ಳು ಹೇಳಿದಳೆಂಬದು ಆಕೆಯನ್ನೇ ಕೇಳಿದರೆ ತಿಳಿಯುವದು. ನಾನು ಮಥುರೆಗೆ ಹೋಗಿಲ್ಲ, ತಮ್ಮ ಉಂಗುರವನ್ನು ನೋಡಿ ಮಥುರೆಯಿಂದ ಹೊರಟ ಆ ರಾತ್ರಿಯಿಂದ ಮಥುರೆಯ ಕಡೆ ಹಾದಿಯು ನನ್ನ ಪಾಲಿಗೆ ತೀರಾ ಕಟ್ಟಾಗಿರುತ್ತದೆ. ಮಥುರೆಗೆ ಹೋಗದೆ ತಮ್ಮನ್ನು ನೋಡುವದಕ್ಕಾಗಿ ನವದ್ವೀಪಕ್ಕೆ ಬಂದಿರುತ್ತೇನೆ. ನಾನು ಇಲ್ಲಿಗೆ ಬಂದೂ, ಇಷ್ಟು ಹೊತ್ತಿನವರೆಗೆ ತಮ್ಮನ್ನು ಪ್ರತ್ಯಕ್ಷ ಕಾಣದೆ ಇರುವದರ ಕಾರಣವು ತಮಗೆ ಗೊತ್ತಿರಬಹುದು. ನನ್ನ ದರ್ಶನದಿಂದ ತಮ್ಮ ವ್ರತಕ್ಕೆ ಭಂಗವುಂಟಾಗಬಾರದೆಂತಲೇ ನಾನು ತಮ್ಮ ದರ್ಶನ ಮಾಡಿಕೊಳ್ಳುವ ಸಾಹಸಕ್ಕೆ ಬಿದ್ದಿಲ್ಲ. ಒಮ್ಮೆ ಪ್ರತ್ಯಕ್ಷ ದರ್ಶನ ಮಾಡಿಕೊಳ್ಳ ಬೇಕೆಂಬ ಇಚ್ಛೆಯು ಬಹಳವಾಗಿದೆ, ನನ್ನ ಇಚ್ಛೆಯು ಪೂರ್ಣವಾಗಬಹುದೋ?''

ಮೃಣಾಲಿನಿಯ ಈ ಪತ್ರವು ಪೂರ್ಣವಾಗುವದರೊಳಗೆ ಇತ್ತ ಗಿರಿಜೆಯು ಊಟವನ್ನು ಮಾಡಿದಳು. ಆಕೆಯು ಪತ್ರವನ್ನು ತಕ್ಕೊಂಡು ಪುನಃ ಹೇಮಚಂದ್ರನ ಬಳಿಗೆ ಹೊರಟಳು. ಮನೋರಮೆಯ ಸಂಗಡ ಹಿಂದೆ ಹೇಳಿದಂತೆ ಸಂಭಾಷಣವಾದ ಬಳಿಕ ಹೇಮಚಂದ್ರನು ಸಂಜೆಯ ಮುಂದೆ ನದಿಯ ದಂಡೆಯ ಕಡೆಗೆ ತಿರುಗಾಡಲಿಕ್ಕೆ ಹೊರಟಿದ್ದನು. ಗಿರಿಜೆಯು ಹಾದಿಯಲ್ಲಿಯೇ ಆತನನ್ನು ಕಂಡಳು. ಹೇಮಚಂದ್ರನನ್ನು ಕಂಡಕೂಡಲೆ ಆಕೆಯು ಮೃಣಾಲಿನಿಯ ಪತ್ರವನ್ನು ಅವನ ಕೈಯಲ್ಲಿ ಕೊಟ್ಟಳು. ಹೇಮಚಂದ್ರನು ಚಕಿತನಾಗಿ— ಗಿರಿಜೇ, ಮತ್ತೆ ಏಕೆ ಬಂದೆ?

ಗಿರಿಜೆ—ಪತ್ರವನ್ನು ತಕ್ಕೊಂಡು ಬಂದಿದ್ದೇನೆ.

ಹೇಮ—ಯಾರ ಪತ್ರವನ್ನು?

ಗಿರಿಜೆ—ಅವ್ವನವರ ಪತ್ರವನ್ನು

ಹೇಮ—(ಅವಡು ಗಚ್ಚುತ್ತ) ಅದು ನಿನ್ನ ಬಳಿಯಲ್ಲಿ ಹೇಗೆ ಬಂದಿತು?

ಗಿರಿಜೆ—(ನಡುಗುವ ದನಿಯಿಂದ) ಮೃಣಾಲಿನಿ ಅವ್ವನವರು ಇಲ್ಲಿಯೇ ಇದ್ದಾರೆ. ನಾನು ಮುಂಜಾನೆ ತಮ್ಮ ಮುಂದೆ ಹೇಳಿದ ಮಥುರೆಯ ಸಂಬಂಧದ ಸುದ್ದಿಯು ಸುಳ್ಳು ಇರುತ್ತದೆ.

ಹೇಮ—(ಸಂತಾಪದ ಭರದಿಂದ) ಇದು ಮೃಣಾಲಿನಿಯ ಪತ್ರವೋ?

ಗಿರಿಜೆ—(ಅಂಜುತ್ತಂಜುತ್ತ) ಮೃಣಾಲಿನಿ ಅವ್ವನವರು ತಮ್ಮ ಕೈಯಿಂದಲೇ ಈ ಪತ್ರವನ್ನು ಬರೆದಿದ್ದಾರೆ.

ಹೇಮಚಂದ್ರನು ಆ ಪತ್ರವನ್ನು ಓದಿ ನೋಡುವದು ಒತ್ತಟ್ಟಿಗಿರಲಿ, ತೆರೆದು ಸಹ ನೋಡದೆ ಕ್ರೋಧಾವೇಶದಿಂದ ಅದನ್ನು ಚೂರು ಚೂರು ಮಾಡಿ ಆಕಾಶದಲ್ಲಿ ಚೆಲ್ಲಿಕೊಟ್ಟು ಬಿಟ್ಟನು! ಆಮೇಲೆ ಆತನು ಹಲ್ಲುಗಳಿಂದ ತನ್ನ ತುಟಿಯನ್ನು ಕಚ್ಚಿ—ನೀನು ಸುಳ್ಳಿಯಿರುತ್ತೀ ಯೆಂಬದು ನನಗೆ ಮೊದಲೇ ಗೊತ್ತಾಗಿದೆ. ಈಗ ಪತ್ರವನ್ನು ಬರೆದು ಕಳುಹಿರುವ ಪಾಪಿಷ್ಠೆಯು ಲಗ್ನ ಮಾಡಿಕೊಳ್ಳುವದಕ್ಕಾಗಿ ಮಥುರೆಗೆ ಹೋಗಿರದೆ, ಹೃಷೀಕೇಶನು ಆ ಜಾರಿಣಿಯನ್ನು

ಮನೆಬಿಡಿಸಿ ಹೊರಗೆ ಹಾಕಿದ್ದರಿಂದ ಅವಳು ತನ್ನ ದುಷ್ಕರ್ಮದ ಫಲವನ್ನು ಭೋಗಿಸುತ್ತ ಮನೆ— ಮನೆ ತಿರುಗುತ್ತಿರುವಳೆಂಬುದು ನನಗೆ ಗೊತ್ತಾಗಿದೆ. ನಾನು ಜಾರಿಣಿಯ ಪತ್ರವನ್ನು ಓದಲಿಚ್ಛಿಸುವದಿಲ್ಲ, ನೀನು ಇಲ್ಲಿಂದ ಹೊರಟು ಹೋಗು; ಎಂದು ಗದ್ದರಿಸಿದನು. ಈ ಅಕಲ್ಪಿತವಾದ ಭಯಂಕರ ಮಾತುಗಳನ್ನು ಕೇಳಿ ಗಿರಿಜೆಯು ಸ್ತಂಭಿತಳಾದಳು. ಪಾಪ! ಅವಳಿಗೆ ಮುಂದೇನು ಮಾತಾಡಬೇಕೆಂಬುದು ತಿಳಿಯಲೊಲ್ಲದು. ಹೇಮಚಂದ್ರನ ಮೋರೆಯನ್ನು ಮಿಕಿಮಿಕಿ ನೋಡುತ್ತ ಆ ಬಡವಿಯು ಸುಮ್ಮನೆ ನಿಂತುಬಿಟ್ಟಳು. ಆಗ ಹೇಮಚಂದ್ರನು ಗಿಡದ ಒಂದು ಟೊಂಗೆಯನ್ನು ಮುರಕೊಂಡು ಅದನ್ನು ಗಿರಿಜೆಯ ಮೇಲೆ ಎತ್ತಿ—ಪಾಪಿಷ್ಠೇ, ದೂರ ಸರಿ; ಇಲ್ಲದಿದ್ದರೆ ನಿನ್ನ ಬೆನ್ನು ಹುಳತೀತು, ಎಂದು ಗದ್ದರಿಸಿದನು.

ಈಗ ಮಾತ್ರ ಗಿರಿಜೆಯಿಂದ ತಡೆಯುವದಾಗಲಿಲ್ಲ. ಆಕೆಯ ಕಣ್ಣುಗಳು ನೀರಿನಿಂದ ತುಂಬಿದವು. ಅಳುವ ದನಿಯಿಂದ, ಆದರೆ ತ್ವೇಷದಿಂದಲೂ, ದಿಟ್ಟತನದಿಂದಲೂ ಆಕೆಯು ನುಡಿದಳೇನೆಂದರೆ—ಶಾಬಾಸ! ತಾವು ಒಳ್ಳೇ ಶೂರಪುರುಷರಿರುವಂತೆ ಕಾಣುತ್ತದೆ! ಇಂಥ ದಿಗ್ವಿಜಯವನ್ನು ಮಾಡಲಿಕ್ಕೆ ಇಷ್ಟು ದೂರ ಗೌಡದೇಶಕ್ಕೆ ತಾವು ಬರುವ ಕಾಣವಿದ್ದಿಲ್ಲ. ಮಗಧದೇಶದಲ್ಲಿಯೇ ಇದ್ದು ಈ ಪರಾಕ್ರಮವನ್ನು ತೋರಿಸಬಹುದಾಗಿತ್ತು. ಅನಾಥ ಸ್ತ್ರೀಯ ಮೇಲೆ ಕೈಯೆತ್ತಲಿಕ್ಕೆ ನಿಮಗೆ ನಾಚಿಕೆ ಬರುವದಿಲ್ಲವೇ? ನಿಮ್ಮ ಕ್ಷಾತ್ರತೇಜಕ್ಕೆ ಬೆಂಕಿಹಚ್ಚಲಿ!

ಈ ಮಾತುಗಳನ್ನು ಕೇಳಿ ಹೇಮಚಂದ್ರನು ಸ್ವಲ್ಪ ನಾಚಿದನು. ಆತನು ಕೈಯೊಳಗಿನ ಕಟ್ಟಿಗೆಯನ್ನು ದೂರ ಚೆಲ್ಲಿಕೊಟ್ಟನು. ಆದರೂ ಗಿರಿಜೆಯ ಸಿಟ್ಟು ಶಾಂತವಾಗಲಿಲ್ಲ, ಆಕೆಯು ಸಿಟ್ಟಿನ ಆವೇಶದಿಂದ ಮತ್ತೆ ನುಡಿದಳೇನಂದರೆ—ಅಹಹ! ಏನು ಪರಾಕ್ರಮವಿದು!! ಇಂಥ ಮುಸುಡಿಗೆ ಆರತಿಯನ್ನೇ ಬೆಳಗಬೇಕು!!! ಅಯ್ಯ! ನೀನು ಮೃಣಾಲಿನಿಯನ್ನು ಲಗ್ನವಾಗುವೆಯಾ? ಥೂ, ಅವ್ವಾಳಿ, ಮೃಣಾಲಿನಿಯಂತೂ ಒತ್ತಟ್ಟಿಗಿರಲಿ, ನನ್ನನ್ನು ಸಹ ಲಗ್ನವಾಗಲಿಕ್ಕೆ ನೀನು ಯೋಗ್ಯನಲ್ಲ.

ಈ ಮೇರೆಗೆ ನುಡಿದು ಗಿರಿಜೆಯು ಅಳುತ್ತಳುತ್ತ ಸಿಟ್ಟಿನಿಂದ ಹೊರಟುಹೋದಳು. ಇತ್ತ ಹೇಮಚಂದ್ರನು ಬೆರಗಾಗಿ ಕಲ್ಲಿನ ಗೊಂಬೆಯಂತೆ ಉಲುಕಾಡದೆ ನಿಂತುಬಿಟ್ಟನು. ಮನೆಗೆ ಬಂದಕೂಡಲೆ ಗಿರಿಜೆಯು ಮೃಣಾಲಿನಿಯ ಮುಂದೆ ಹೇಮಚಂದ್ರನ ಆಚರಣವನ್ನು ಇದ್ದಕ್ಕಿದ್ದಹಾಗೆ ಹೇಳಿದಳು. ಈ ಸಾರೆ ಒಂದು ಅಕ್ಷರವನ್ನಾದರೂ ಮುಚ್ಚಿಡಲಿಲ್ಲ. ಈ ಸಂಗತಿಯನ್ನು ಕೇಳಿ ಮೃಣಾಲಿನಿಯು ಏನೂ ಮಾತಾಡಲಿಲ್ಲ. ಆಕೆಗೆ ದುಃಖವಾಯಿತೋ ಇಲ್ಲವೋ, ಆಕೆಯದು ಆಕೆಗೇ ಗೊತ್ತು. ಆಕೆಯೇನು ಅಳಲಿಲ್ಲ, ಕರೆಯಲಿಲ್ಲ. ಗಿರಿಜೆಯ ಮೋರೆಯನ್ನು ಮಿಕಿ ಮಿಕಿ ನೋಡಹತ್ತಿದಳು. ಮೃಣಾಲಿನಿಯ ಆ ಮುಖ ಮುದ್ರೆಯನ್ನು ನೋಡಿ ಗಿರಿಜೆಯು ಮಾತ್ರ ಬಹಳ ವ್ಯಸನಪಟ್ಟಳು. ಬರೇ ವ್ಯಸನವೇಕೆ, ಅಂಜಿಕೆಯೂ ಅವಳಲ್ಲಿ ಉತ್ಪನ್ನವಾಯಿತು. ಈ ವೇಳೆಯಲ್ಲಿ ಹೆಚ್ಚು ಕಡಿಮೆ ಮಾತಾಡುವದು ನೆಟ್ಟಗಲ್ಲೆಂಬ ಯೋಗ್ಯ ವಿಚಾರದಿಂದ ಗಿರಿಜೆಯು ಮೆಲ್ಲನೆ ಅಲ್ಲಿಂದ ಎರಡನೆಯ ಕಡೆಗೆ ಹೊರಟುಹೋದಳು.

ಈಗ್ಗೆ ಸುಮಾರು ಮೂರುತಾಸು ರಾತ್ರಿಯಾಗಿತ್ತು. ಮೃಣಾಲಿನಿಯನ್ನು ಬಿಟ್ಟು ಹೊರಟು ಬಂದಿದ್ದ ಗಿರಿಜೆಯು ಬಹಳಹೊತ್ತು ಒಂದು ಕೆರೆಯ ದಂಡೆಯ ಮೇಲೆ ಕುಳಿತಿದ್ದಳು. ಮೃಣಾಲಿನಿಯಂತೆಯೇ ಆಕೆಯ ಅಂತಃಕರಣವು ದುಃಖದಿಂದ ವ್ಯಾಪ್ತವಾಗಿತ್ತು. ಏಕಾಂತದಲ್ಲಿ ಕುಳಿತುಕೊಂಡು ಬಹಳ ಹೊತ್ತಿನವರೆಗೆ ಆಕೆಯು ಕಣ್ಣೀರು ಸುರಿಸಿದಳು. ಆ ಮೇಲೆ ಕಣ್ಣು ಒರಿಸಿಕೊಂಡು, ಆಕೆಯು ಕೆರೆಯ ನೀರಿಗೆ ಹೊಂದಿರುವ ಪಾವಟಿಗೆಯ ಮೇಲೆ ಕುಳಿತುಕೊಂಡು, ಬೆಳದಿಂಗಳ ಶುಭ್ರ ಪ್ರಕಾಶದಲ್ಲಿ ಕೆರೆಯೊಳಗಿನ ನೀಲವರ್ಣದ ನೀರಿನ ಮೇಲೆ ಮೆಲ್ಲ ಮೆಲ್ಲನೆ ಉತ್ಪನ್ನವಾಗುವ ತೆರೆಗಳನ್ನೂ, ಆ ತೆರೆಗಳೊಡನೆ ಕ್ರೀಡಿಸುವ ಚಂದ್ರ ಕಿರಣಗಳ ಶೋಭೆಯನ್ನೂ ನೋಡುತ್ತ ತನ್ನೊಳಗೇ ಏನೋ ಗುಣುಗುಟ್ಟುತ್ತಿದ್ದಳು. ಆಕೆಯ ಕಣ್ಣುಗಳು ಸೃಷ್ಟಿಯ ಶೋಭೆಯನ್ನು ನೋಡುವದರಲ್ಲಿ ದಂಗಾಗಿದ್ದವು; ಬಾಯಿಯು ಹಾಡುತ್ತಿತ್ತು. ಆದರೆ ತಲೆಯು ಮಾತ್ರ ಮೃಣಾಲಿನಿಯ ವಿಚಾರದಲ್ಲಿ ತುಂಬಿಹೋಗಿತ್ತು. ಆದುದರಿಂದ ಈಗ ಆಕೆಯ ಮೈಮೇಲಿನ ಎಚ್ಚರವು ತಪ್ಪಿದಂತೆ ಆಗಿತ್ತೆಂದು ಹೇಳಬಹುದಾಗಿತ್ತು.

ನೋಡನೋಡುತ್ತ ಕೆರೆಯೊಳಗಿನ ನೀರ ಮೇಲೆ ಒಮ್ಮಿಂದೊಮ್ಮೆ ನೆರಳು ಕಂಡಂತೆ ಆಕೆಗೆ ಭಾಸವಾಯಿತು; ಆದರೂ ಅದು ಆಕೆಯ ಲಕ್ಷದಲ್ಲಿ ಬರಲಿಲ್ಲ. ಬರಬರುತ್ತ ಆ ನೆರಳು ಸ್ಪಷ್ಟವಾಗಿ ಕಾಣೆಸಹತ್ತಿತು. ಅದರಿಂದ ಆಕೆಯು ಸ್ವಾಭಾವಿಕವಾಗಿ ಹಿಂದಿರುಗಿ ನೋಡಲು, ನೀರ ಮೇಲೆ ಬಿದ್ದದ್ದು ಬರೇ ನೆರಳಾಗಿರದೆ, ಕೆರೆಯ ದಂಡೆಯ ಮೇಲೆ ಯಾರೋ ಮನುಷ್ಯರು ನಿಂತಿರುವದು ಆಕೆಗೆ ಕಾಣಿಸಿತು. ನಿಂತವರು ಹೆಂಗಸೆಂದು ಆಕೆಯು ಬಗೆಯುತ್ತಿರಲು, ಮೃಣಾಲಿನಿಯೇ ನಿಂತಿರುವಳೆಂಬದು ಬೇಗನೆ ಆಕೆಗೆ ಗೊತ್ತಾಯಿತು. ಕೂಡಲೆ ಆಕೆಯು ಮೃಣಾಲಿನಿಯ ಬಳಿಗೆ ಹೋದಳು. ಆಗ ಮೃಣಾಲಿನಿಯು ಒಂದೇ ಸವನೆ ಅಳುತ್ತಿದ್ದಳು. ಅದನ್ನು ನೋಡಿ ಗಿರಿಜೆಗೆ ಬಹು ಸಮಾಧಾನವಾಯಿತು; ಯಾಕಂದರೆ, ಅಳೋಣವು ದುಃಖದ ಶಾಂತಿಗೆ ಕಾರಣವಾಗಿರುತ್ತದೆಂಬದು ಆಕೆಗೆ ಗೊತ್ತಿದ್ದಿತು. ದುಃಖವನ್ನು ನುಂಗಲಿಕ್ಕೆ ಪ್ರಯತ್ನಮಾಡಿದರೆ, ಅದು ಕಡಿಮೆಯಾಗದೆ ಹೆಚ್ಚಾಗುತ್ತ ಹೋಗುವದು; ಆದರೆ, ರೋದನದ ದ್ವಾರದಿಂದ ಅದಕ್ಕೆ ಹಾದಿಯನ್ನು ಮಾಡಿಕೊಟ್ಟರೆ, ದುಃಖದ ಭಾರವು ಬಹು ಮಟ್ಟಿಗೆ ಕಡಿಮೆಯಾಗಿರುತ್ತದೆ. ಈ ಮಾತು ಮೃಣಾಲಿನಿಗೂ ಹತ್ತಿತ್ತು. ಬಹಳಹೊತ್ತು ಅವರಿಬ್ಬರೂ ಸ್ತಬ್ಧವಾಗಿ ನಿಂತುಕೊಂಡರು. ಒಬ್ಬರು ಮತ್ತೊಬ್ಬರ ಸಂಗಡ ಮಾತಾಡದಾದರು. ಮಾತಾಡಲಿಕ್ಕೆ ಮೃಣಾಲಿನಿಯ ಬಾಯಿಯು ಏಳಲೊಲ್ಲದು. ಕೇಳಲಿಕ್ಕೆ ಗಿರಿಜೆಗೆ ಧೈರ್ಯವಾಗಲೊಲ್ಲದು. ಈ ಸ್ಥಿತಿಯಲ್ಲಿಯೇ ಬಹುಕಾಲವು ಕ್ರಮಿಸಿಹೋಯಿತು. ಕಡೆಗೆ ಸ್ತಬ್ಧತೆಯ ಭಂಗಮಾಡಿ ಮೃಣಾಲಿನಿಯು ನುಡಿದಳೇನಂದರೆ—ಗಿರಿಜೇ, ಇನ್ನೊಮ್ಮೆ ನೀನು ಅವರ ಬಳಿಗೆ ಹೋಗಬೇಕಾಗುವದು.

ಈ ಮಾತುಗಳನ್ನು ಕೇಳಿ, ಗಿರಿಜೆಯು ಆವೇಶದಿಂದ—ಏನಂದಿರಿ? ನೀಚನೂ ಕೃತಘ್ನನೂ ಆದ ಆ ಅಧಮನ ಬಳಿಗೆ ಮತ್ತೆ ಹೋಗಬೇಕೆನ್ನುತ್ತೀರಾ? ಎನ್ನಲು ಮೃಣಾಲಿನಿಯು—ಬೇಡವ್ವಾ, ಹೀಗೆ ಕೆಟ್ಟ ಮಾತುಗಳನ್ನು ಆಡಬೇಡ! ಅವರೇನು ಅಂಥವರಲ್ಲ. ಸಂಶಯವು

ಅವರ ಮನಸ್ಸನ್ನು ಮುಚ್ಚಿಕೊಂಡಿದೆ. ಈ ಸಂಸಾರದಲ್ಲಿ ಸಂಶಯರೂಪವಾದ ಪಿಶಾಚದ ಕೈಯಿಂದ ಯಾರು ಪಾರಾಗಿರುವರು? ಅವರು ನಿರ್ದಯರಲ್ಲೆಂಬದನ್ನು ನಾನು ನಿಶ್ಚಯವಾಗಿ ಬಲ್ಲೆನು! ನಾನೇ ಅವರ ಬಳಿಗೆ ಹೋಗುವವಳಿದ್ದೇನೆ. ನೀನು ನನ್ನ ಸಂಗಡ ನಡೆ. ಅಮ್ಮಾ ಗಿರಿಜೇ, ನನ್ನ ಮೇಲೆ ನಿನ್ನ ಉಪಕಾರವು ಬಹಳವಾಗಿದೆ. ಅದನ್ನು ನಿನ್ನ ಮೋರೆಯ ಮುಂದೆ ಆಡಬೇಕೆನ್ನುವಂತೆ ಇಲ್ಲ, ನಾನು ನಿಜವಾಗಿ ಹೇಳುತ್ತೇನೆ, ಒಡಹುಟ್ಟಿದ ತಂಗಿಯು ಸಹ ನಿನ್ನಂತೆ ನಡೆಯಲಿಕ್ಕಿಲ್ಲ, ತಂಗಿಗಿಂತಲೂ, ಅದೇಕೆ ಪ್ರತ್ಯಕ್ಷ ನನ್ನ ತಾಯಿಗಿಂತಲೂ ನೀನು ನನ್ನ ಮೇಲೆ ಹೆಚ್ಚು ಪ್ರೀತಿಮಾಡುತ್ತೀ. ನನ್ನ ಸಲುವಾಗಿ ಮಾಡಬೇಕಾದದ್ದನ್ನು ನೀನು ಉಳಿಸಿರುವದಿಲ್ಲ. ನನ್ನ ಮನಸ್ಸಿಗೆ ಹತ್ತುವಂಥ ಯಾವ ಸಂಗತಿಯೂ ಈವೊತ್ತಿನವರೆಗೆ ನಿನ್ನಿಂದ ಒದಗಿರುವದಿಲ್ಲ, ಅದರಂತೆ ನೀನು ಯಾವಾಗಲೂ ನನ್ನ ಮುಂದೆ ಸುಳ್ಳು ಆಡಿರುವದಿಲ್ಲ. ಆದರೆ ಗಿರಿಜೇ, ಹೇಮಚಂದ್ರನು ತಪ್ಪಿಲ್ಲದೆ ನನ್ನನ್ನು ಬಿಟ್ಟದ್ದನ್ನು, ಪ್ರತ್ಯಕ್ಷ ಆತನ ಬಾಯಿಂದ ಕೇಳಿದಹೊರತು ನಾನು ಮನಸ್ಸು ಹೇಗೆ ಕಲ್ಲುಮಾಡಲಿ ನೀನೇ ಹೇಳು. ಆದುದರಿಂದ ಇದೊಂದು ಸಾರೆ ನನ್ನ ಸಂಗಡ ನಡೆ. ನಾವು ಅವರನ್ನು ಕಾಣೋಣ. ''ವ್ಯಭಿಚಾರಿಣಿಯೆಂದು ತಿಳಿದು ನಿನ್ನನ್ನು ಬಿಟ್ಟೆನೆಂದು ಅವರು ನುಡಿದರೆ, ಗಿರಿಜೇ, ಅವರ ಚರಣದಲ್ಲಿಯೇ ಈ ದೇಹವನ್ನು ಬಿಡುವೆನು''

ಹೀಗೆ ನುಡಿಯುವಾಗ ಮೃಣಾಲಿನಿಯ ಕುತ್ತಿಗೆಯ ಶಿರಗಳು ಬಿಗಿದವು. ಆಕೆಯು ಗಿರಿಜೆಯ ಹೆಗಲ ಮೇಲೆ ತನ್ನ ಮಸ್ತವನ್ನು ಚಲ್ಲಿಕೊಟ್ಟು ಕಣ್ಣೀರು ಸುರಿಸಹತ್ತಿದಳು. ಅದನ್ನು ನೋಡಿ ಗಿರಿಜೆಯ ದುಃಖವು ಒತ್ತರಿಸಿ ಆಕೆಯೂ ಅಳತೊಡಗಿದಳು. ಹೀಗೆ ಇತ್ತ ಇವರಿಬ್ಬರೂ ಕಣ್ಣೀರು ಸುರಿಸಿ, ತಮ್ಮ ದುಃಖದ ಭಾರವನ್ನು ಕಡಿಮೆಮಾಡಿಕೊಳ್ಳುತ್ತಿರುವಾಗ ಅತ್ತ ಹೇಮಚಂದ್ರನ ಸ್ಥಿತಿಯು ವಿಚಿತ್ರವಾಗಿತ್ತು, ಆತನು ಮಾಧವಾಚಾರ್ಯನ ಮಾತಿನ ಮೇಲಿಂದ, ಮೃಣಾಲಿನಿಯು ವ್ಯಭಿಚಾರಿಣಿಯೆಂದು ನಿರ್ಧರಿಸಿದನು. ಅದರಿಂದಲೇ ಆತನು ಆಕೆಯ ಪತ್ರವನ್ನು ಓದದೆ ಸಂತಾಪದ ಭರದಲ್ಲಿ ಅದನ್ನು ಹರಿದು ಚೂರು ಚೂರು ಮಾಡಿ ಚಲ್ಲಿ ಕೊಟ್ಟನು. ಸಿಟ್ಟಿನ ಭರದಲ್ಲಿ ಆತನು ಗಿರಿಜೆಯನ್ನು ಹೊಡೆಯಲಿಕ್ಕೂ ಹೋಗಿದ್ದನು. ಇಷ್ಟಾದರೂ ಮೃಣಾಲಿನಿಯ ವಿಷಯವಾಗಿ ಆತನಲ್ಲಿ ಪ್ರೀತಿಯು ಎಳ್ಳಷ್ಟದರೂ ಕಡಿಮೆಯಾಗಿರ ಬಹುದೋ? ಮೃಣಾಲಿನಿಯ ಸಲುವಾಗಿಯೇ ಆತನು ರಾಜ್ಯವನ್ನು ಬಿಟ್ಟು ಮಥುರೆಯಲ್ಲಿ ಬಂದು ಇದ್ದನು. ಮೃಣಾಲಿನಿಯ ಸಲುವಾಗಿಯೇ ಆತನು ಪ್ರತ್ಯಕ್ಷ ತನ್ನ ಗುರುವಿನ ಮೇಲೆ ಖಡ್ಗವನ್ನೆತ್ತಲಿಕ್ಕೆ ಹಿಂದೆಮುಂದೆ ನೋಡಲಿಲ್ಲ, ಈ ಪ್ರಿಯ ಮೃಣಾಲಿನಿಯ ಸಲುವಾಗಿಯೇ ಆ ರಾಜಪುತ್ರನು ತನ್ನ ಪವಿತ್ರ ವ್ರತಕ್ಕೆ ಭಂಗವನ್ನು ತಂದುಕೊಂಡು, ಗೌಡನಗರದಲ್ಲಿ ತಿರುಕಳಾದ ಗಿರಿಜೆಯ ಮನಸ್ಸನ್ನೊಲಿಸಿಕೊಂಡಿದ್ದನು. ಆದರೆ, ಅದೇ ಹೇಮಚಂದ್ರನು ತನ್ನ ಶೂಲದಿಂದ ಮೃಣಾಲಿನಿಯ ಮಸ್ತಕವನ್ನು ಚೂರು ಚೂರು ಮಾಡಲಿಕ್ಕೂ ಒಮ್ಮೆ ಸಿದ್ಧನಾಗಿದ್ದನು. ಹೇಮಚಂದ್ರನ ಈ ವಿರುದ್ಧ ಸ್ಥಿತಿಯನ್ನು ಮನಸ್ಸಿನಲ್ಲಿ ತೂಗಿ ನೋಡಿದರೆ, ಮೃಣಾಲಿನಿಯ ಮೇಲಿದ್ದ ಆತನ ಪ್ರೇಮವು ಒಮ್ಮೆಲೆ ನಷ್ಟವಾಗುವದು ಸಂಭವನೀಯವಾದದ್ದಲ್ಲವೆಂದು ಹೇಳಬೇಕಾಗುವದು. ಏಕೆಂದರೆ, ದೀರ್ಘಪರಿಚಯದಿಂದುಂಟಾಗಿರುವ ದೃಢವಾದ ಪ್ರೇಮದ

ನಾಶವು ಹೀಗೆ ಒಂದು ಕ್ಷಣದಲ್ಲಿ ಆಗಲಾರದು. ಪರ್ವತದ ಹೊಟ್ಟೆಯೊಳಗೆ ಹುಟ್ಟಿ ಬಹುಕಾಲದಿಂದ ವೇಗವಾಗಿ ಹರಿದುಬರುವ ನದಿಯ ಪ್ರವಾಹವು ಒಂದು ದಿವಸದ ಸೂರ್ಯನ ಬಿಸಿಲಿನಿಂದ ಒಣಗಲಾರದು. ಸಮುದ್ರವನ್ನು ಸೇರಲು ಆತುರ ಪಡುತ್ತಿರುವ ಆ ಪ್ರವಾಹವು ತನ್ನ ಮಾರ್ಗವನ್ನೇ ಅನುಸರಿಸಿ ಸಾಗೀತು. ಆ ಪ್ರವಾಹದ ಮಾರ್ಗವನ್ನು ಪ್ರತಿಬಂಧಿಸುವದು ಶಕ್ಯವಲ್ಲ.

ಹೇಮಚಂದ್ರನು ರಾತ್ರಿ ತನ್ನ ಮಂಚದ ಮೇಲೆ ಬಿದ್ದುಕೊಂಡು ಎದುರಿಗಿನ ತೆರೆದ ಕಿಡಿಕಿಯೊಳಗಿಂದ ಆಕಾಶವನ್ನು ಎವೆಯಿಕ್ಕದೆ ನೋಡುತ್ತಿದ್ದನು. ಆತನು ಆ ರಾತ್ರಿ ಸೃಷ್ಟಿ ಸೌಂದರ್ಯವನ್ನು ನೋಡುವದರಲ್ಲಿ ಮಗ್ನನಾಗಿರಬಹುದೋ? ಆ ಕಾಲಕ್ಕೆ ಮನೋರಮೆಯು ಅಲ್ಲಿಗೆ ಬಂದು—ಅಣ್ಣಾ, ಇಂದಿನ ರಾತ್ರಿಯು ಬೆಳದಿಂಗಳದೋ ಕತ್ತಲೆಯದೋ ಎಂದು ಕೇಳಿದರೆ, ಅವನು ಸರಿಯಾಗಿ ಉತ್ತರವನ್ನು ಕೊಡಲು ಸಮರ್ಥನಾಗುತ್ತಿದ್ದನೋ ಇಲ್ಲವೋ? ಎಂಬದನ್ನು ನಿಶ್ಚಯದಿಂದ ಹೇಳಲಾಗುವದಿಲ್ಲ. ಯಾಕಂದರೆ ಬಾಹ್ಯಾಕಾಶದ ರಾತ್ರಿಯ ಕಡೆಗೆ ಅವನ ಲಕ್ಷವು ಎಷ್ಟು ಮಾತ್ರವೂ ಇದ್ದಿಲ್ಲ. ಆತನು ತನ್ನ ಹೃದಯಾಕಾಶದೊಳಗಿನ ರಾತ್ರಿಯನ್ನು ಸೂಕ್ಷ್ಮ ರೀತಿಯಿಂದ ಅವಲೋಕಿಸುತ್ತಿದ್ದನು. ಆ ರಾತ್ರಿಯು ಇನ್ನೂ ಬೆಳದಿಂಗಳದಾಗಿತ್ತು, ಹಾಗಿಲ್ಲದಿದ್ದರೆ ಹೇಮಚಂದ್ರನ ಅಂತಃಕರುಣವು ಇಷ್ಟು ಕರಗುತ್ತಿದ್ದಿಲ್ಲ. ಈ ಕಾಲಕ್ಕೆ ಹೇಮಚಂದ್ರನು ಒಂದೇ ಸವನೆ ಬಿಕ್ಕಿ ಬಿಕ್ಕಿ ಅಳುತ್ತಿದ್ದನು. ಅವನ ಹೃದಯಾಕಾಶದಲ್ಲಿ ಕೃಷ್ಣಮೇಘದ, ಉದಯವು ಅದೇ ಆಗುತ್ತಿತ್ತು. ಯಾವಾಗಲೂ ಹೃದಯಾಕಾಶದಲ್ಲಿ ಕತ್ತಲೆಯು ವ್ಯಾಪಿಸಿರುವ, ಹಾಗು ರಮಣೀಯವಾದ ಬೆಳದಿಂಗಳ ಪ್ರಕಾಶವು ಎಂದೂ ಉದಯ ವಾಗದಿರುವ ಮನುಷ್ಯನ ಅಂತಃಕರುಣವು ಎಂದೂ ಕರಗಲಾರದು, ಅವನು ಎಂದೂ ಅಳಲಾರನು.

ಈ ಜಗತ್ತಿನಲ್ಲಿ ಎಂದೂ ಅಳದೆಯಿದ್ದ ಮನುಷ್ಯನು ಮಹಾಪಾಪಿಯೂ ಅಧಮನೂ, ಚಾಂಡಾಲನೂ ಎಂದು ತಿಳಿಯಲಿಕ್ಕೇ ಬೇಕು! ಅವನನ್ನು ಯಾರೂ ನಂಬಲಾಗದು! ಆ ಹೀನಭಾಗ್ಯನು ಜಗತ್ತಿನೊಳಗಿನ ಸುಖವನ್ನನುಭವಿಸಲು, ಎಂದೂ ಸಮರ್ಥನಾಗಲಿಕ್ಕಿಲ್ಲ! ಇದಲ್ಲದೆ ಆ ದುಷ್ಟನು ಮಂದಿಯ ಸುಖವನ್ನೂ ಸಹಿಸಲಾರನೆಂದು ನಿಶ್ಚಯವಾಗಿ ನಂಬಬೇಕು. ಒಬ್ಬಾನೊಬ್ಬ ಜಿತೇಂದ್ರಿಯನಾದ ಮಹಾತ್ಮನು ಕಣ್ಣೀರುದುರಿಸದೆ ಅಸಹ್ಯವಾದ ಪೀಡೆಯನ್ನೂ, ಈ ಮನೋದುಃಖವನ್ನೂ ಸಹಿಸಲು ಸಮರ್ಥನಾಗುವನೆಂದು ಹೇಳುವದುಂಟು. ಒಂದು ಪಕ್ಷದಲ್ಲಿ ಮಾತು ನಿಜವಿದ್ದರೂ ಇರಬಹುದು! ಆದರೆ ಏಕಾಂತದಲ್ಲಿ ಒಂದು ಪ್ರಸಂಗದಲ್ಲಿ ಯಾದರೂ ತನ್ನ ಕಣ್ಣೀರ ಒಂದಾನೊಂದು ಹನಿಯಿಂದಲೂ ಭೂಮಿಯನ್ನು ತೋಯಿಸದವನಿದ್ದರೆ, ಅವನು ಒಳ್ಳೇ ಜಿತೇಂದ್ರಿಯನಿರಲಿ, ದೊಡ್ಡ ಮಹಾತ್ಮನಿರಲಿ, ತಾಪಸಿ ಇರಲಿ, ಮುಕ್ತನಿರಲಿ ಅವನ ನೆರಳು ಸಹ ನಮಗೆ ಬೇಡ! ಜನರು ಅವನನ್ನು ಬೇಕಾದಷ್ಟು ವರ್ಣಿಸಲಿ, ಬೇಕಾದಹಾಗೆ ಅವನನ್ನು ಭಜಿಸಲಿ; ಒಬ್ಬಾನೊಬ್ಬ ಮಹಾ ಚಾಂಡಾಲನ ಸಹವಾಸವನ್ನಾದರೂ ಮಾಡಬಹುದು; ಅಂಥ ಕಠಿಣ ಹೃದಯದ ಮಹಾತ್ಮನ ಗಾಳಿಗೆ ನಾವು ನಿಲ್ಲಲಿಕ್ಕಿಲ್ಲ! ಅವನ ಮೇಲೆ ವಿಶ್ವಾಸವನ್ನೂ ಇಡಲಿಕ್ಕಿಲ್ಲ.

ನಮ್ಮ ಹೇಮಚಂದ್ರನ ಹೃದಯವು ಬಹು ಕೋಮಲವಾದದ್ದು. ಪಾಪಿಯೂ, ಕುಕರ್ಮಿಯೂ, ಹೃದಯದಲ್ಲಿ ಸ್ಥಾನವನ್ನು ಹೊಂದಲಿಕ್ಕೆ ಅಪಾತ್ರಳೂ ಎಂದು ನಂಬಿದ್ದ ಮೃಣಾಲಿನಿಯ ಸಲುವಾಗಿಯೇ ಈಗ ಆತನು ಒಂದೇಸವನೆ ಅಳುತ್ತಿದ್ದನು! ಮೃಣಾಲಿನಿಯು ಕುಕರ್ಮಿಯೆಂದು ನಂಬಿದ್ದರೂ ಆತನು ಈಗ ಏಕೆ ಅಳುತ್ತಿದ್ದನು? ಅವನು ಕೇವಲ ಮೃಣಾಲಿನಿಯ ದುಷ್ಟಾಚಾರಣೆಯನ್ನೇ ಚಿಂತಿಸುತ್ತಿದ್ದಿಲ್ಲ, ಆಕೆಯ ಚರಿತ್ರದೋಷದ ವಿಚಾರದ ಸಂಗಡ ಬೇರೆ ಹಲವು ವಿಚಾರಗಳು ಅವನ ಮನಸ್ಸಿನಲ್ಲಿ ಉದ್ಭವಿಸಿದ್ದವು. ಮೃಣಾಲಿನಿಯ ಪ್ರೇಮಪರಿಪೂರ್ಣವಾದ ಸುಂದರ ಮುಖಕಮಲ, ಪ್ರೇಮಪರಿಪೂರ್ಣವಾದ ಮೋಹಕ ಮಧುರ ಭಾಷಣ, ಪ್ರೇಮಪರಿಪೂರ್ಣವಾದ ರುಚಿರ ವರ್ತನ, ಆಕೆಯ ಪ್ರತಿಯೊಂದು ಪ್ರೇಮ ಪೂರ್ಣವಾದ ಸಂಗತಿ ಇವೆಲ್ಲ ಒಂದೊಂದಾಗಿ ಆತನ ಅಂತಃಕರಣದಲ್ಲಿ ನಿಂತಿದ್ದವು. ಇಂಥ ಪ್ರಿಯ ಮೃಣಾಲಿನಿಯು ಕಡೆಗೆ ಇಷ್ಟು ವಿಶ್ವಾಸಘಾತಕಿಯಾದಳಲ್ಲವೇ, ಎಂಬ ವಿಚಾರವು ಅವನ ಮನಸ್ಸಿನಲ್ಲಿ ಉತ್ಪನ್ನವಾಗಿ ಅವನು ಮೃಣಾಲಿನಿಯ ಒಂದೊಂದು ಸಚ್ಚರಿತ್ರಗಳನ್ನು ಚಿಂತಿಸಹತ್ತಿದನು.

ಒಮ್ಮೆ ಮಥುರೆಯಲ್ಲಿರುವಾಗ ಹೇಮಚಂದ್ರನು ಮೃಣಾಲಿನಿಗೆ ಒಂದು ಗುಪ್ತ ಪತ್ರವನ್ನು ಕಳಿಸಬೇಕೆಂದು ಮಾಡಿದ್ದನು. ಆದರೆ ಎಷ್ಟು ಪ್ರಯತ್ನ ಮಾಡಿದರೂ ನಂಬಿಗೆಯ ದೂತನು ಒಬ್ಬನೂ ಸಿಗಲಿಲ್ಲ, ಹೇಮಚಂದ್ರನು ಮೃಣಾಲಿನಿಯ ಮಂದಿರದ ಹತ್ತರದಲ್ಲಿರುವ ಉದ್ಯಾನದಲ್ಲಿ ಸುಮ್ಮನೆ ಸುತ್ತುತ್ತಿದ್ದನು. ಕೆಲಹೊತ್ತಿನ ಮೇಲೆ ಮೃಣಾಲಿನಿಯು ತನ್ನ ಮಂದಿರದ 5ನೆಯ ಅಂತಸ್ತಿನ ಕಿಟಕಿಯ ಬಳಿಯಲ್ಲಿ ನಿಂತುಕೊಂಡದ್ದು ಅವನ ಕಣ್ಣಿಗೆ ಬಿದ್ದಿತು. ಉತಾವಳಿಯ ಸ್ವಭಾವದ ಹೇಮಚಂದ್ರನು ತನ್ನ ಮನಸ್ಸಿನ ಅಭಿಪ್ರಾಯವನ್ನು ಒಂದು ಮಾವಿನ ಹಣ್ಣಿನ ಮೇಲೆ ಬರೆದು, ಮೃಣಾಲಿನಿಗೆ ಕಣ್ಸುಸನ್ನೆಮಾಡಿ ಆ ಹಣ್ಣನ್ನು ಆಕೆಯ ಕಡೆಗೆ ಒಗೆದನು. ನನ್ನ ಪ್ರಿಯಕರನು ಒಗೆದ ಹಣ್ಣನ್ನು ಬಗ್ಗಿ ತಕ್ಕೊಳ್ಳಬೇಕೆಂದು ಮೃಣಾಲಿನಿಯು ಸ್ವಲ್ಪ ಮುಂದಕ್ಕೆ ಸರಿದಳು. ಆದರೆ ಆ ಹಣ್ಣು ನೆಟ್ಟಗೆ ಕೈಯಲ್ಲಿ ಬರದೆ ಮೃಣಾಲಿನಿಯ ಕಿವಿಗೆ ತಾಕಿತು. ಅದರಿಂದ ಆಕೆಯ ಕಿವಿಯೊಳಗಿನ ರತ್ನ ಕುಂಡಲವು ಛಿನ್ನವಿಚ್ಛಿನ್ನವಾಗಿ ಕಿವಿಗೆ ಬಲವಾದ ಗಾಯವಾಯಿತು. ಆ ಸುಕುಮಾರಿಯಾದ ಸುಂದರಿಯ ಕಿವಿಯೊಳಗಿಂದ ಬಳಬಳ ರಕ್ತವು ಸೋರಿ ಅದು ಹೆಗಲ ಮೇಲೆಯೂ, ಮೈ ಮೇಲೆಯೂ ಬಿದ್ದು, ಆಕೆಯು ಉಟ್ಟುಕೊಂಡಿದ್ದ ಜಿನಗು ಶುಭ್ರವಸ್ತ್ರವು ಅರಕ್ಷಣದಲ್ಲಿ ರಕ್ತಮಯವಾಯಿತು. ಆದರೆ ಮೃಣಾಲಿನಿಯ ಲಕ್ಷವು ಎಷ್ಟು ಮಾತ್ರವೂ ಅತ್ತ ಕಡೆಗೆ ಹೋಗಲಿಲ್ಲ, ಆ ಪ್ರೇಮಲಾಂತಃಕರಣದ ಅಬಲೆಯು ರಕ್ತಮುಣುಗಿ ಹೋಗಿದ್ದ ತನ್ನ ಕಿವಿಯನ್ನು ಮುಟ್ಟಲಿಲ್ಲ, ತನ್ನ ಪ್ರಿಯಸು ಒಗೆದ ಆಮ್ರ ಫಲವನ್ನು ನಗೆಮೊಗದಿಂದ ತಕ್ಕೊಂಡು ಉತ್ಕಂಠೆಯಿಂದಲೂ, ಪ್ರೇಮದಿಂದಲೂ ಅದರ ಮೇಲೆ ಬರೆದ ಸಂಗತಿಯನ್ನು ಓದಿ ಅದರ ಉತ್ತರವನ್ನು ಕೂಡಲೇ ಅದೇ ಹಣ್ಣಿನ ಬೆನ್ನಮೇಲೆ ಬರೆದು, ತಿರುಗಿ ಹೇಮಚಂದ್ರನ ಕಡೆಗೆ ಒಗೆದಳು. ಹೇಮಚಂದ್ರನು ಕಣ್ಣಿಗೆ ಬೀಳುವವರೆಗೆ ಆಕೆಯು ಕಿಡಿಕೆಯೊಳಗಿಂದ ಉಲುಕಲಿಲ್ಲ, ಹಾಸ್ಯ ಮುಖದಿಂದಲೂ, ಪ್ರೇಮಪೂರ್ಣವಾದ

ದೃಷ್ಟಿಯಿಂದಲೂ ಒಂದೇಸವನೆ ಆತನ ಕಡೆಗೆ ನೋಡುತ್ತಿದ್ದಳು. ಇದೆಲ್ಲ ಹೇಮಚಂದ್ರನಿಗೆ ಇಂದು ನೆನಪಾಗಿತ್ತು, ಆತನು ಇಂಥ ಮೃಣಾಲಿನಿಯು ಅವಿಶ್ವಾಸವನ್ನು ಮಾಡಬಹುದೋ? ಛೇ ಎಂದಿಗೂ ಮಾಡಲಿಕ್ಕಿಲ್ಲ, ಎಂದು ನೆನಸಿದನು.

ಒಮ್ಮೆ ಮೃಣಾಲಿನಿಗೆ ಚೇಳು ಕಚ್ಚಿತ್ತು, ಅದರ ವ್ಯಥೆಯನ್ನು ತಾಳಲಾರದೆ ಆಕೆಯು ಒಂದೇ ಸವನೆ ಅಳುತ್ತಿದ್ದಳು. ಆಕೆಯ ದಾಸಿಗೆ ಒಂದು ವನಸ್ಪತಿಯು ಗೊತ್ತಿದ್ದಿತು. ಅದರ ರಸವನ್ನು ಚೇಳು ಕಚ್ಚಿದ ಸ್ಥಳಕ್ಕೆ ಹಚ್ಚಿದ ಕೂಡಲೆ ತಣ್ಣಗಾಗುತ್ತಿತ್ತು, ಮೂರು ನಾಲ್ಕು ಜನರಿಗೆ ತಣ್ಣಗಾದುದನ್ನು ಮೃಣಾಲಿನಿಯು ನೋಡಿದ್ದಳು. ಆ ವನಸ್ಪತಿಯನ್ನು ತರಲಿಕ್ಕೆ ದಾಸಿಯು ಹೋಗಿರಲು, ಇತ್ತ ಹೇಮಚಂದ್ರನ ದೂತಿಯು ಬಂದು—''ಹೇಮಚಂದ್ರನು ತೋಟದಲ್ಲಿ ನಿಂತಿದ್ದಾನೆ, ನಿನ್ನ ಹಾದಿಯನ್ನು ನೋಡುತ್ತಿರುವನು'' ಎಂದು ಹೇಳಿದಳು. ಮೃಣಾಲಿನಿಯ ದಾಸಿಯು ಒಂದು ಕ್ಷಣದಲ್ಲಿ ಔಷಧವನ್ನು ತರತಕ್ಕವಳಿದ್ದಳು; ಆದರೆ ಮೃಣಾಲಿನಿಯು ಔಷಧದ ಹಾದಿಯನ್ನು ನೋಡಲಿಲ್ಲ, ಹೇಮಚಂದ್ರನ ನಿರೂಪವು ಕಿವಿಗೆ ಬಿದ್ದಕೂಡಲೆ ಆಕೆಯು ಹಕ್ಕಿಯಂತೆ ಅರಕ್ಷಣದಲ್ಲಿ ಹೇಮಚಂದ್ರನಿದ್ದಲ್ಲಿಗೆ ಬಂದಳು. ಮುಂದೆ ಆಕೆಗೆ ಔಷಧವೇ ಬೇಕಾಗಲಿಲ್ಲ, ಹೇಮಚಂದ್ರನ ದರ್ಶನದಿಂದ ನೋವು ತಾನೇ ಹೋಯಿತು. ಹೀಗೆ ತನ್ನ ಸಲುವಾಗಿ ಅಸಹ್ಯ ವೇದನೆಯನ್ನೂ ಸಹನಮಾಡಿದ್ದು ಇಂದು ಹೇಮಚಂದ್ರನಿಗೆ ನೆನಪಾಗಿತ್ತು, ಆತನು—ಇಂಥ ಮೃಣಾಲಿನಿಯು ಬ್ರಾಹ್ಮಣ ಕುಲಕಲಂಕನಾದ ವ್ಯೋಮಕೇಶನಲ್ಲಿ ರಮಿಸಿ ನನಗೆ ಕೃತಘ್ನಳಾಗ ಬಹುದೋ? ಛೇ ಎಂದಿಗೂ ಆಗಲಿಕ್ಕಿಲ್ಲ, ಎಂದು ನೆನಿಸಿದನು.

ಒಮ್ಮೆ ಹೇಮಚಂದ್ರನು ಮಾಧವಾಚಾರ್ಯರ ದರ್ಶನಕ್ಕಾಗಿ ಮಥುರೆಯಿಂದ ಹೊರಟಿದ್ದನು. ಮೂರುತಾಸು ನಡೆದು ಹೋದ ಮೇಲೆ ಒಮ್ಮಿಂದೊಮ್ಮೆ ಆತನಿಗೆ ಜಡ್ಡಾಯಿತು. ಆತನು ಹಾದಿಯೊಳಗಿನ ಧರ್ಮಶಾಲೆಯಲ್ಲಿ ಮಲಗಿಕೊಂಡನು. ಈ ವ್ಯಾಧಿಯು ಮೃಣಾಲಿನಿಗೆ ಹೇಗೆ ಗೊತ್ತಾಯಿತೋ ದೇವರೇ ಬಲ್ಲ, ಆಕೆಯು ನಂಬಿಗೆಯ ಒಬ್ಬ ದಾಸಿಯನ್ನು ಕರಕೊಂಡು ಸರಿರಾತ್ರಿಯಲ್ಲಿ ತೇಕುತ್ತ ಹೇಮಚಂದ್ರನಿದ್ದಲ್ಲಿಗೆ ಬಂದಳು. ಆ ಭಯಂಕರವಾದ ರಾತ್ರಿಯಲ್ಲಿ ಅಡವಿಯೊಳಗೆ ಕಲ್ಲು-ಮುಳ್ಳು ತುಳಿಯುತ್ತಾ ನಾಲ್ಕು ಹರದಾರಿ ನಡೆದು ಬಂದದ್ದರಿಂದ ಮೃಣಾಲಿನಿಯ ಕಾಲಲ್ಲಿ ಮುಳ್ಳುಗಳು ನಟ್ಟಿದ್ದವು. ತಗ್ಗುದಿನ್ನೆಯ ನೆಲದಲ್ಲಿ ಎಡವುತ್ತ ಮುಗ್ಗುತ್ತ ಬಂದದ್ದರಿಂದ ಬೆರಳುಗಳು ಒಡೆದಿದ್ದವು. ಆಕೆಯ ಕಾಲುಗಳು ಸೋತುಹೋಗಿ ಪಾದಗಳು ರಕ್ತಮಯವಾಗಿದ್ದವು. ಆಕೆಯು ಧಾವಿಸಿ ಧರ್ಮಶಾಲೆಗೆ ಬಂದಕೂಡಲೆ ಮಿತಿಮೀರಿ ಆಯಾಸ ದಿಂದ ಮೂರ್ಛೆಬಂದು ಬಿದ್ದಳು. ಎಚ್ಚತ್ತಮೇಲೆ ಹೇಮಚಂದ್ರನನ್ನು ಮಾತಾಡಿಸಿ ಉಪಚರಿಸಿ ಆ ಪ್ರೇಮಲ ಸ್ವಭಾವದ ಕೋಮಲೆಯು ತಂದೆಯ ಭಯದಿಂದ ಅದೇ ರಾತ್ರಿ ತನ್ನ ಮನೆಗೆ ಹೋದಳು. ಇಂಥ ಅಕೃತ್ರಿಮ ಪ್ರೇಮದ ಸಂಗತಿಯು ಹೇಮಚಂದ್ರನಿಗೆ ನೆನಪಾಗಿ ಆತನು—ಇಂಥ ಮೃಣಾಲಿನಿಯು, ಚಾಂಡಾಲನೂ, ನರಾಧಮನೂ ಆದ ವ್ಯೋಮಕೇಶನನ್ನು ಕೂಡಿ ನನ್ನನ್ನು ಬಿಡಬಹುದೋ? ನನ್ನಲ್ಲಿ ಅವಿಶ್ವಾಸವನ್ನು ಮಾಡಬಹುದೋ? ಈ ಮಾತು ಎಂದಿಗೂ ಸಂಭವಿಸುವದಿಲ್ಲ, ಇಂಥ ಮೃಣಾಲಿನಿಯ ವಿಷಯವಾಗಿ ಅವಿಶ್ವಾಸವನ್ನು ಮಾಡುವವನೇ

ಅವಿಶ್ವಾಸಿಯೂ, ನರಾಧಮನೂ, ಕೃತಘ್ನನೂ, ಚಾಂಡಾಲನೂ ಎಂದು ತಿಳಿಯಬೇಕು. ಎಂದು ತನ್ನೊಳಗೆ ಅಂದುಕೊಂಡನು. ಹೀಗೆ ಮೃಣಾಲಿನಿಯ ಹಲವು ಸಚ್ಚರಿತ್ರಗಳ ಚಿಂತನವನ್ನು ಹೇಮಚಂದ್ರನು ಮಾಡತೊಡಗಿದ್ದನು.

ತಿಳಿಗೇಡಿತನವು

ಮೇಲಿನ ಪ್ರಕರಣದಲ್ಲಿ ವರ್ಣಿಸಿದ್ದ ಸಚ್ಚರಿತ್ರ ಚಿಂತನದಿಂದ ಹೇಮಚಂದ್ರನಿಗೆ ಬಹಳ ಪಶ್ಚಾತ್ತಾಪವಾಯಿತು. ಅವನ ತಲೆಯು ತಿರುಗಹತ್ತಿತ್ತು. ಕಣ್ಣೊಳಗಿಂದ ಒಂದೇ ಸವನೇ ನೀರುಗಳು ಸುರಿಯಹತ್ತಿದವು. ಬಹಳ ಹೊತ್ತಿನವರೆಗೆ ಅತ್ತಬಳಿಕ ಆತನು ತನ್ನೊಳಗೆ—ಚಾಂಡಾಲನಾದ ನಾನು ಮೃಣಾಲಿನಿಯ ಪತ್ರವನ್ನು ಏಕೆ ಓದಿರಲಿಕ್ಕಿಲ್ಲ? ಮೃಣಾಲಿನಿಯು ನವದ್ವೀಪಕ್ಕೆ ಏಕೆ ಬಂದಳೆಂಬದನ್ನೂ, ಪತ್ರದಲ್ಲಿ ಬೇರೆ ಯಾವ ಸಂಗತಿಯ ಬರೆದಿದ್ದಳೆಂಬದನ್ನೂ ನಾನು ಯಾಕೆ ತಿಳಕೊಂಡಿರಲಿಕ್ಕಿಲ್ಲ? ಎಲ ಎಲಾ! ನಾನೆಂಥ ಅವಿಚಾರಿಯು, ಎಂಥ ದುಷ್ಟನು!

ಈ ಮೇರೆಗೆ ಮನಸ್ಸಿನಲ್ಲಿ ಅಂದುಕೊಂಡು ಹೇಮಚಂದ್ರನ ಮನಸ್ಸಿನಲ್ಲಿ ಮತ್ತೇನು ಹೊಳೆಯಿತೋ ಯಾರಿಗೆ ಗೊತ್ತು! ಆತನು ಒಮ್ಮೆಲೆ ಎದ್ದು, ಅದೇ ದಿನ ಗಿರಿಜೆಯು ತನಗೆ ಭೆಟ್ಟಿಯಾದಲ್ಲಿಗೆ ಹೋದನು, ಬೆಳದಿಂಗಳಲ್ಲಿ ಅವನು ಏನೋ ಹುಡುಕಹತ್ತಿದನು. ಆತನು ಅಲ್ಲಿ ಏನು ಕಳಕೊಂಡಿರಬಹುದು? ಕಳಕೊಳ್ಳುವದೇನು? ಕ್ರೋಧಾವೇಶದಿಂದ ವಿಚಾರಗೆಟ್ಟು ಚೂರು ಚೂರು ಮಾಡಿ ಚಲ್ಲಿಕೊಟ್ಟಿದ್ದ ಮೃಣಾಲಿನಿಯ ಪತ್ರದ ಚೂರುಗಳು ಸಿಕ್ಕರೆ ನೋಡಬೇಕೆಂದು ಆತನು ಹುಡುಕುತ್ತಿದ್ದನು. ಆದರೆ ಆಕಾಶದಲ್ಲಿ ಚಲ್ಲಿಕೊಟ್ಟಿದ್ದ ಆ ಚೂರುಗಳು ಗಾಳಿಯಿಂದ ಎತ್ತೋ ಹಾರಿಹೋಗಿದ್ದವು. ಒಂದೂ ಸಿಗಲಿಲ್ಲ. ಹೇಮಚಂದ್ರನು ಹುಡುಕಿ ಹುಡುಕಿ ಬೇಸತ್ತನು. ಕೆಟ್ಟ ಗಾಳಿಯ ಕೃತಿಯನ್ನು ನೆನಿಸಿ ಹೇಮಚಂದ್ರನು ಸಂತಾಪಗೊಂಡನು. ಆತನು ತನ್ನ ಕೈಯ ಮೇಲೆ ಬಹಳ ಸಿಟ್ಟಾದನು. ಸಿಟ್ಟಿನಿಂದ ಅವಡುಗಚ್ಚುತ್ತಾ ಅವನು ತನ್ನ ಟೊಂಕದಲ್ಲಿ ಅಲೆದಾಡುತ್ತಿದ್ದ ಖಡ್ಗಕ್ಕೆ ಕೈ ನೀಡಿದನು; ಆದರೆ ಸುದೈವದಿಂದ ಆಗ ಖಡ್ಗವು ಆತನ ಟೊಂಕದಲ್ಲಿ ಅಲೆದಾಡುತ್ತಿರದೇ, ಆತನ ಆಯುಧ ಶಾಲೆಯೊಳಗೆ ಒರಿಯಲ್ಲಿ ಮಲಗಿಕೊಂಡು ಸ್ವಸ್ಥ ನಿದ್ರೆಮಾಡುತ್ತಿತ್ತು, ಇಲ್ಲದಿದ್ದರೆ, ಸಂತಾಪಿಯೂ, ವಿವೇಕ ಶೂನ್ಯನೂ ಆದ ಆ ತರುಣವೀರನು ಮೃಣಾಲಿನಿಯ ಪತ್ರವನ್ನು ಹರಿದು ಚೂರು ಚೂರು ಮಾಡಿ ಚಲ್ಲಿಕೊಟ್ಟಿದ್ದ ಆ ದುಷ್ಟ ಕೈಯನ್ನು ಕೂಡಲೆ ತುಂಡರಿಸಿ ಚಲ್ಲುತ್ತಿದ್ದನು.

ಇಷ್ಟಾದ ಮೇಲೆ ಹೇಮಚಂದ್ರನು ಅಲ್ಲಿಂದ ಹೊರಟು ಮನೆಗೆ ಬಂದು ಪುನಃ ಹಾಸಿಗೆಯ ಮೇಲೆ ಬಿದ್ದುಕೊಂಡನು. ಅವನ ಮನಸ್ಸಿನಲ್ಲಿ ವಿಚಾರಗಳು ಮತ್ತೆ ಉತ್ಪನ್ನವಾಗಹತ್ತಿದವು. ಅವನು—''ಆದರೆ ಸುಮ್ಮನೆ ಮಾಧವಾಚಾರ್ಯರು ಯಾಕೆ ಸುಳ್ಳು ಹೇಳಿಯಾರು? ಆಚಾರ್ಯರು ಅತ್ಯಂತ ಸತ್ಯನಿಷ್ಠರು. ಜೀವಹೋದರೂ ಅವರು ಸುಳ್ಳು ಆಡಕ್ಕವರಲ್ಲ, ಇದಲ್ಲದೆ

ಅವರು ನನ್ನನ್ನು ಹೊಟ್ಟೆಯ ಮಗನಿಗಿಂತಲೂ ಹೆಚ್ಚು ಪ್ರೀತಿಸುತ್ತಿರುವರು! ಆ ಕೆಟ್ಟ ಸುದ್ದಿಯನ್ನು ಕೇಳಿ ಮರಣಪ್ರಾಯವಾದ ದುಃಖವು ನನಗಾದೀತೆಂಬದು ಅವರಿಗೆ ಪೂರಾ ಗೊತ್ತಿರುತ್ತದೆ. ಹೀಗಿದ್ದು ಸುಮ್ಮಸುಮ್ಮನೆ ಸುಳ್ಳು ಮಾತು ಹೇಳಿ ನನ್ನ ಮನಸ್ಸನ್ನು ನೋಯಿಸಲಿಕ್ಕೆ ಅವರು ಮುಂದಾಗಬಹುದೋ? ಇದಲ್ಲದೆ ಅವರು ತಾವಾಗಿ ಈ ಸುದ್ದಿಯನ್ನು ಹೇಳಲೇ ಇಲ್ಲ, ನಾನೇ ಅಭಿಮಾನದಿಂದ ಅವರ ಬಾಯಿಂದ ಹೊರಡಿಸಿದೆನು. ಈ ಮೊದಲೇ ಆ ಸಂಗತಿಯು ನನಗೆ ಗೊತ್ತಾಗಿರುತ್ತದೆಂದು ನಾನು ಹೇಳಿದ ಬಳಿಕ ಅವರು ಕುಗ್ಗುತ್ತ ಕುಗ್ಗುತ್ತ ಅದನ್ನು ಹೇಳಿದರು. ಸುಳ್ಳು ಹೇಳಬೇಕೆಂತಲೇ ಅವರ ಮನಸ್ಸಿನಲ್ಲಿದ್ದರೆ ನಿರ್ವಾಹವಿಲ್ಲದೆ ಕಷ್ಟದ ಮುದ್ರೆಯಿಂದ ಯಾಕೆ ಅದನ್ನು ಹೇಳುತ್ತಿದ್ದರು? ಇನ್ನು ಹೃಷೀಕೇಶನೇ ಅವರ ಮುಂದೆ ಸುಳ್ಳು ಹೇಳಿರ ಬಹುದೆಂದು ಒಂದು ವೇಳೆ ಕಲ್ಪಿಸಬಹುದು; ಆದರೆ ಪಾಪ! ಆ ವೃದ್ಧನಾದ ಸಾತ್ವಿಕ ಸ್ವಭಾವದ ಬ್ರಾಹ್ಮಣನು ತನ್ನ ಗುರುವಿನ ಮುಂದೆ ಸುಮ್ಮಸುಮ್ಮನೆ ಸುಳ್ಳು ಹೇಳಬಹುದೋ? ಆತನು ಪ್ರತ್ಯಕ್ಷ ತನ್ನ ಮಗನ ದುರ್ಲೌಕಿಕವನ್ನು ಮಾಡಬಹುದೋ? ಛೀ ಛೀ, ಹೀಗೆ ಎಷ್ಟು ಮಾತ್ರವೂ ಸಂಭವಿಸದು! ಅದೂ ಇರಲಿ. ಮೃಣಾಲಿನಿಯಾದರೂ ಆ ಬ್ರಾಹ್ಮಣನ ಮನೆಯನ್ನು ಬಿಟ್ಟು ನವದ್ವೀಪಕ್ಕೆ ಏಕೆ ಬರಬೇಕು?

ಅಭಿಮಾನಿಯಾದ ಹೇಮಚಂದ್ರನ ಮಸ್ತಕವು ಈ ವಿಚಾರದಿಂದ ಸಂತಪ್ತವಾಯಿತು. ಅವನ ಮೋರೆಯು ಕಪ್ಪೇರಿತು, ಹಣೆಯ ಮೇಲೆ ಬೆವರ ಹನಿಗಳು ತೋರಹತ್ತಿದವು, ಅವನ ಸರ್ವಾಂಗವು ಥರಥರ ನಡುಗಹತ್ತಿತು. ಮೈಯಲ್ಲಿ ಅಕಸ್ಮಾತ್ ವಿದ್ಯುತ್ ಸಂಚಾರವಾದಂತಾಗಿ ಆತನು ತಟ್ಟನೆ ಎದ್ದನು. ಕೆಂಡದಂತೆ ಕಣ್ಣು ಕೆಂಪಗೆಮಾಡಿಕೊಂಡು ಅವಡುಗಚ್ಚುತ್ತ ಆತನು ಶೂಲವನ್ನು ತಕ್ಕೊಂಡನು. ಪುನಃ ಮೃಣಾಲಿನಿಯ ಪ್ರೇಮಮಯವಾದ ಮೂರ್ತಿಯು ನಖಶಿಖಾಂತವಾಗಿ ಅವನ ಕಣ್ಣಿಗೆ ಕಟ್ಟಿತು. ಕೂಡಲೆ ಅವನ ಸಿಟ್ಟು ಶಾಂತವಾಯಿತು. ಕಂಠವು ಸದ್ಗದಿತವಾಗಿ ಅವನು ವ್ಯಾಕುಲಪಟ್ಟನು. ಅವನ ಕೈಯೊಳಗಿನ ಶೂಲವು ಕಳಚಿಬಿದ್ದಿತು. ಹೇಮಚಂದ್ರನು ಮತ್ತೆ ಹಾಸಿಗೆಯ ಮೇಲೆ ದೊಪ್ಪನೆ ಬಿದ್ದು ಕಣ್ಣುಗಳ ಮೇಲೆ ಕೈಯಿಟ್ಟು ಕೊಂಡು ಸಣ್ಣ ಹುಡುಗರಂತೆ ಬಿಕ್ಕಿ ಬಿಕ್ಕಿ ಅಳಹತ್ತಿದನು. ಹೀಗೆ ಹೇಮಚಂದ್ರನು ಅಳುತ್ತ ಮಲಗಿರಲು, ಅಕಸ್ಮಾತ್ತಾಗಿ ಅವನ ಕೋಣೆಯ ಬಾಗಿಲು ತೆರೆಯಿತು. ಹೇಮಚಂದ್ರನು ಮುಖವೆತ್ತಿ ನೋಡುತ್ತಾನೆ, ಒಬ್ಬ ಸ್ತ್ರೀಯು.

ಹೇಮಚಂದ್ರನು ಮೊದಲು ಮೊದಲು ಆಕೆಯು ಮನೋರಮೆಯೇ ಇರಬಹುದೆಂದು ತಿಳಿದಿದ್ದನು; ಆದರೆ ಆಕೆಯು ಮನೋರಮೆಯಾಗಿರದೆ ಬೇರೆ ಯಾವಳೋ ಒಬ್ಬ ಸ್ತ್ರೀಯಿರುವಳೆಂಬದು ಆತನಿಗೆ ಬೇಗನೇ ಗೊತ್ತಾಯಿತು. ಅವನು ದಿಟ್ಟಿಸಿ ನೋಡುತ್ತಾನೆ, ಗಿರಿಜೆ. ಇಂಥ ಅಪರಾತ್ರಿಯಲ್ಲಿ ತನ್ನ ಕೋಣೆಯೊಳಗೆ ಗಿರಿಜೆಯು ಬಂದದ್ದನ್ನು ನೋಡಿ ಹೇಮಚಂದ್ರನು ಬೆಪ್ಪಾದನು. ಗಿರಿಜೆಯ ಆಗಮನದಿಂದ ಅವನಿಗೆ ಆಶ್ಚರ್ಯವಾದದ್ದಂತು ಸರಿಯೇ, ಅವನಿಗೆ ಅದರಿಂದ ಆನಂದವೂ ಆಯಿತು. ಆಶ್ಚರ್ಯಚಕಿತನಾಗಿ ಹೇಮಚಂದ್ರನು ಗಿರಿಜೆಯನ್ನು ಕುರಿತು ನುಡಿದನೇನಂದರೆ,—ಗಿರಿಜೇ! ಮತ್ತೆ ಏಕೆ ಬಂದೆ?

ಈ ಮಾತುಗಳನ್ನು ಕೇಳಿ ಗಿರಿಜೆಯು ತನ್ನ ದಿನದ ಹಾಸ್ಯಯುಕ್ತವಾದ ಗಂಭೀರ ಸ್ವರದಿಂದ—ಏಕೆ ಬರುವದೇನು? ಮೃಣಾಲಿನಿಗೆ ನಿಮ್ಮ ಹುಚ್ಚು ಹೋಗುವದಿಲ್ಲ! ನೀವಂತು ಆಕೆಯ ಸ್ಮರಣಮಾಡುವ ಹಾಗೂ ಇಲ್ಲ, ಅಂದ ಬಳಿಕ ಮೃಣಾಲಿನಿಯ ದಾಸಿಯಾದ ನಾನು ಒಡತಿಯ ಮಾತು ಮೀರಲಾರದೆ ಮತ್ತೆ ಮತ್ತೆ ನಿಮ್ಮ ಬಳಿಗೆ ಬರಬೇಕಾಗುವದು. ನೀವು ನನ್ನ ಬೆನ್ನು ಹುಳಿಯುವ ಹಾಗೆ ಹೊಡೆಯತಕ್ಕವರಿರುತ್ತೀರಷ್ಟೇ ಹೊಡೆಯಿರಿ, ಹೊಡೆಯಿರಿ, ಸಂತೋಷದಿಂದ ಹೊಡೆಯಿರಿ! ನನ್ನ ಒಡತಿಯ ಸಲುವಾಗಿ ನಾನು ನಿಮ್ಮ ಕೈಯಿಂದ ಮೈಮುರಿಯ ಲತ್ತೆ ತಿನ್ನಬೇಕೆಂದು ನಿಶ್ಚಯವನ್ನೇ ಮಾಡಿರುತ್ತೇನೆ.

ಗಿರಿಜೆಯ ಈ ನಟ್ಟು ಪಾರಾಗುವ ಮಾತುಗಳನ್ನು ಕೇಳಿ ಹೇಮಚಂದ್ರನು—''ಗಿರಿಜೆ, ನನ್ನನ್ನು ಕ್ಷಮಿಸು. ನಾನು ಅವಿಚಾರದಿಂದ ಹಾಗೆ ನುಡಿದದ್ದು ನಿಜವು. ನಾನು ಎಂದೂ ಹೆಂಗಸರ ಮೇಲೆ ಶಸ್ತ್ರವೆತ್ತ ತಕ್ಕವನಲ್ಲ. ನೀನು ಎಷ್ಟು ಮಾತ್ರವೂ ಬೆದರಬೇಡ. ಹೇಳು ನೀನು ಏಕೆ ತಿರುಗಿ ಬಂದೆ? ಈಗ ಮೃಣಾಲಿನಿಯು ಎಲ್ಲಿರುವಳು? ಆಕೆಯು ಇಲ್ಲಿಗೆ ಬಂದಿರುವಳೆಂದು ನೀನು ಬೆಳಗಿನಲ್ಲಿ ಹೇಳಿದೆಯಲ್ಲವೇ? ಈ ನವದ್ವೀಪಕ್ಕೆ ಆಕೆಯು ಬಂದ ಕಾರಣವೇನು? ನಾನು ಆಕೆಯ ಪತ್ರವನ್ನು ಓದದೆ ಹರಿದು ಹಾಕಿದ್ದು ತಪ್ಪಾಯಿತು. ಆ ತಪ್ಪನ್ನು ನೀನು ಹೊಟ್ಟೆಯಲ್ಲಿ''— ಹೀಗೆ ನುಡಿಯುತ್ತಿರಲು, ಗಿರಿಜೆಯು ನಡುವೇ ಬಾಯಿಹಾಕಿ— ''ಮೃಣಾಲಿನಿಯು ತಮ್ಮನ್ನು ಕಾಣುವದಕ್ಕಾಗಿಯೇ ಇಲ್ಲಿಗೆ ಬಂದಿರುವಳು.'' ಎಂದು ನುಡಿದಳು.

ಇದನ್ನು ಕೇಳಿ ಹೇಮಚಂದ್ರನ ಶರೀರವು ಮತ್ತೆ ರೋಮಾಂಚಿತವಾಯಿತು. ಇಂಥ ಮೃಣಾಲಿನಿಯನ್ನು ಜಾರ ಸ್ತ್ರೀಯೆಂದು ತಿಳಿದು ಆಕೆಯ ಮಾನಭಂಗ ಮಾಡಿದೆನೆಂದು ಪಶ್ಚಾತ್ತಾಪಪಟ್ಟು ಆತನು ಗಿರಿಜೆಯನ್ನು ಕುರಿತು—ಗಿರಿಜೇ, ಸದ್ಯಕ್ಕೆ ಮೃಣಾಲಿನಿಯು ಎಲ್ಲಿರುವಳು, ಆಕೆಯು ಏನು ಮಾಡುತ್ತಿರುವಳು, ಎಂದು ಕೇಳಿದನು. ಅದಕ್ಕೆ ಗಿರಿಜೆಯು—ನನ್ನ ಒಡತಿಯಾದ ಆ ಮೃಣಾಲಿನಿಯು ತಮ್ಮ ಕಟ್ಟ ಕಡೆಯ ಭೆಟ್ಟಿಯನ್ನು ತಕ್ಕೊಂಡು, ಹೇಳಿ ಹೋಗಬೇಕೆಂದು ಇಲ್ಲಿಗೆ ಬಂದಿರುವಳು. ಆ ಸಮೀಪದ ಕೆರೆಯ ದಂಡೆಯ ಮೇಲೆ ನಿಮ್ಮ ಹಾದಿಯನ್ನೇ ನೋಡುತ್ತ ಕುಳಿತಿರುವಳು. ಎಂದು ಹೇಳಿ ಆಕೆಯು ಕೂಡಲೆ ಹೇಮಚಂದ್ರನ ಕೋಣೆಯಿಂದ ಹೊರಟುಹೋದಳು. ಹೇಮಚಂದ್ರನಾದರೂ ಒಳ್ಳೇ ವೇಗದಿಂದ ಆಕೆಯ ಬೆನ್ನು ಹತ್ತಿ ನಡೆದನು. ತಡವಿಲ್ಲದೆ ಅವರಿಬ್ಬರೂ ಸರೋವರದ ತೀರವನ್ನು ಹೊಂದಿದರು. ಆಗ ಮೃಣಾಲಿನಿಯನ್ನು ನೋಡಿ ಗಿರಿಜೆಯು—ಅವ್ವನವರೇ, ಇತ್ತನೋಡಿರಿ, ರಾಜಪುತ್ರರು ಬಂದಿದ್ದಾರೆ, ಎಂದು ಹೇಳಿದಳು.

ಹೇಮಚಂದ್ರನನ್ನು ನೋಡಿದ ಕೂಡಲೆ ಮೃಣಾಲಿನಿಯು ಗಡಬಡಿಸಿ ಎದ್ದು ನಿಂತಳು. ಕೆಲಹೊತ್ತಿನವರೆಗೆ ಅವರಿಬ್ಬರೂ ಚಕಿತ ಮುದ್ರೆಯಿಂದ ಒಬ್ಬರನ್ನೊಬ್ಬರು ನೋಡುತ್ತ ನಿಂತು ಕೊಂಡರು. ಒಮ್ಮಿಂದೊಮ್ಮೆ ಮೃಣಾಲಿನಿಯ ಕಣ್ಣಲ್ಲಿ ಕತ್ತಲು ಗೂಡಿಸಿದಂತಾಗಿ ಆಕೆಯ ಕಣ್ಣುಗಳು ನೀರಿನಿಂದ ತುಂಬಿದವು. ಆಶ್ರಯವು ತಪ್ಪಿದ ಬಳ್ಳಿಯು ನೆಲಕ್ಕುರುಳುವಂತೆ, ಮೃಣಾಲಿನಿಯು ನಿಂತನಿಂತಿರಲು ಹೇಮಚಂದ್ರನ ಪಾದಗಳ ಮೇಲೆ ಬಿದ್ದಳು. ಅದನ್ನು ನೋಡಿ ಗಿರಿಜೆಯು

ತಡಮಾಡದೆ ಅಲ್ಲಿಂದ ದೂರ ಹೊರಟು ಹೋದಳು. ಇತ್ತ ಹೇಮಚಂದ್ರನು ಮೃಣಾಲಿನಿಯ ಕೈಹಿಡಿದು ಎಬ್ಬಿಸಿದನು. ಆಮೇಲೆ ಬಹಳ ಹೊತ್ತು ಅವರಿಬ್ಬರು ಒಬ್ಬರನ್ನೊಬ್ಬರು ನೋಡುತ್ತ ಸುಮ್ಮನೆ ನಿಂತುಕೊಂಡರು.

ಬಹುದಿವಸಗಳ ಮೇಲೆ ಉಭಯತರ ಭೆಟ್ಟಿಯಾದದ್ದು. ಹಿಂದಕ್ಕೆ ಮಥುರೆಯಲ್ಲಿ ಯಮುನಾನದಿಯ ದಂಡೆಯ ಮೇಲೆ ರಾತ್ರಿ ಬಕುಲವೃಕ್ಷದ ಬುಡದಲ್ಲಿ ನಿಂತು, ಇಬ್ಬರೂ ಕಣ್ಣಿನಲ್ಲಿ ನೀರು ತುಂಬಿಕೊಂಡು ಒಬ್ಬರ ಒಪ್ಪಿಗೆಯನ್ನೊಬ್ಬರು ಪಡೆದು ಹೋದ ಬಳಿಕ ಇಂದೇ ತಿರುಗಿ ಅವರು ಒಬ್ಬರನ್ನೊಬ್ಬರು ಹೀಗೆ ಕಂಡದ್ದು. ರಾತ್ರಿಯ ಸಮಯ ಏಕಾಂತವಾಸ, ಶಾಂತವಾದ ಸರೋವರತೀರ, ನಾಲ್ಕೂ ಕಡೆಯಲ್ಲಿ ನಿಬಿಡವಾದ ಅರಣ್ಯವು ಹಬ್ಬಿಕೊಂಡಿದೆ. ಹುಣ್ಣಿಮೆಯ ಚಂದ್ರನ ನಿಚ್ಚಳವಾದ ಬೆಳದಿಂಗಳು, ಆಕಾಶದಲ್ಲಿ ಗಿಡಗಳ ಹರಿಗಳ ಮೇಲೆ, ಸರೋವರದ ಪಾವಟಿಗೆಗಳ ಮೇಲೆ, ನೀಲವರ್ಣದ ನೀರಮೇಲೆ ಹಿಟ್ಟು ಚಲ್ಲಿದ ಹಾಗೆ ಬಿದ್ದಿದೆ. ಇಂಥ ಶಾಂತವಾದ ಗಂಭೀರ ಸಮಯದಲ್ಲಿ ಮೃಣಾಲಿನಿಯು ಎವೆಯಿಕ್ಕದೆ ಹೇಮ ಚಂದ್ರನ ಮುಖವನ್ನು ನೋಡುತ್ತ ನಿಂತುಕೊಂಡಳು. ಇಬ್ಬರೂ ಪಿಟ್ಟೆಂದು ಮಾತಾಡಲಿಲ್ಲ.

ಅದೇಕೆ? ಮೌನವೇಕೆ? ಭಾಷೆಯಲ್ಲಿ ಶಬ್ದಗಳಿಲ್ಲವೋ? ಆಡುವ ಮಾತುಗಳಿದ್ದಿಲ್ಲವೋ? ಆಡಲಿಕ್ಕೆ ಬಾಯಿಯಿದ್ದಿಲ್ಲವೋ? ಎಲ್ಲ ಇದ್ದವು; ಆದರೆ ಬಹುಕಾಲ ಒಬ್ಬರನ್ನೊಬ್ಬರು ಅಗಲಿದ ಪ್ರಿಯ ಜನರು ಪರಸ್ಪರರನ್ನು ಕಂಡಾಗ್ಗೆ ಅವರ ಅಂತಃಕರಣವು ಉಕ್ಕಿ ಬರುವದರಿಂದ ಅವರ ಬಾಯಿಂದ ಶಬ್ದಗಳೇ ಹೊರಡುವದಿಲ್ಲ. ಇಂಥ ಪ್ರಸಂಗದಲ್ಲಿ ಒಬ್ಬರಬಳಿಯಲ್ಲೊಬ್ಬರು ನಿಂತುಕೊಳ್ಳುವದೇ ಪರಮ ಸುಖಪ್ರದವಾಗಿರುತ್ತದೆ. ಆ ಸುಖವನ್ನು ವರ್ಣಿಸಲಿಕ್ಕೆ ಮನುಷ್ಯ ಕಲ್ಪಿತವಾದ ಶಬ್ದಗಳು ಕೆಲಸಕ್ಕೆ ಬರುವದಿಲ್ಲ. ಅದನ್ನು ವರ್ಣಿಸುವದು ಶಬ್ದದ ಕೆಲಸವಲ್ಲ. ಭಾಷೆಯ ಕೆಲಸವೂ ಅಲ್ಲ. ಈಶ್ವರನು ಮನುಷ್ಯ ಮಾತ್ರರಿಗೆ ದಯಪಾಲಿಸಿರುವಂಥ ವಿಶಿಷ್ಟ ಭಾಷೆಯಲ್ಲಿ ಮಾತ್ರ ಆ ಸುಖವನ್ನು ವರ್ಣಿಸುವ ಶಕ್ತಿಯಿರುವದು. ಆ ವಿಶಿಷ್ಟ ಭಾಷೆಯೇ ಮೂಕ ಭಾಷೆಯು. ಅದನ್ನೇ ಮೃಣಾಲಿನೀ — ಹೇಮಚಂದ್ರರು ಆಡುತ್ತಿದ್ದರು. ಸುಖ ಮಗ್ನರಾದವರ ಮುಖದಿಂದ ಶಬ್ದಗಳಾದರೂ ಹ್ಯಾಗೆ ಹೊರಡಬೇಕು? ಮೂಕವ್ರತದಿಂದಲೇ ಅವರಿಬ್ಬರು ಕಣ್ಣಲ್ಲಿ ನೀರು ತುಂಬಿಕೊಂಡು ಬಹಳಹೊತ್ತು ಒಬ್ಬರನ್ನೊಬ್ಬರು ನೋಡುತ್ತ ನಿಂತುಕೊಂಡಿದ್ದರು. ಹೇಮಚಂದ್ರನು ಮೃಣಾಲಿನಿಯ ಪ್ರೇಮಪೂರ್ಣವಾದ ನಿಷ್ಕಳಂಕ ಮುಖಕಮಲವನ್ನು ನೋಡಿ ನೋಡಿದಂತೆ ಹೃಷಿಕೇಶನ ಮಾತಿನಿಂದ ಉತ್ಪನ್ನವಾಗಿದ್ದ ಆತನ ಸಂಶಯವು ದೂರವಾಗತೊಡಗಿತು. ಕಮಲದಂತೆ ದೀರ್ಘವೂ, ಚಿಗರೆಯ ಕಣ್ಣುಗಳಂತೆ ಚಂಚಲವೂ ಆದ, ಹಾಗು ಅಂತಃಕರಣದ ಕನ್ನಡಿಯಂತೆ ಒಪ್ಪುವ ಮೃಣಾಲಿನಿಯ ನಿರ್ದೋಷವಾದ ಕಣ್ಣುಗಳನ್ನು ಹೇಮಚಂದ್ರನು ಬಹಳ ಹೊತ್ತು ನೋಡುತ್ತ ನಿಂತು ಕೊಂಡನು. ಆ ಕಣ್ಣುಗಳೊಳಗಿಂದ ಪ್ರೇಮಾಶ್ರುಗಳು ಉದುರುತ್ತಿದ್ದವು. ಅದನ್ನು ನೋಡಿ ಹೇಮಚಂದ್ರನು—ಇಂಥ ನಿರ್ದೋಷವಾದ ಕಣ್ಣುಗಳಿಂದೊಪ್ಪುವ ಮೃಣಾಲಿನಿಯ ಮೇಲೆ ನಾನು ಅವಿಶ್ವಾಸಪಡಬೇಕೆ? ಎಂದು ನೆನಿಸುವಾಗ ಅವನ ಅಂತಃಕರುಣವು ಉಕ್ಕಿ ಬಂದಿತು. ಆತನು ಸದ್ಗದಿತವಾದ ಸ್ವರದಿಂದ—''ಮೃಣಾಲಿನೀ, ನೀನು ನೆಟ್ಟಗಿದ್ದಿಯಷ್ಟೇ,'' ಎಂದು

ಕೇಳಿದನು. ಪಾಪ! ಮೃಣಾಲಿನಿಯ ಬಾಯಿಂದ ಅಕ್ಷರಗಳೇ ಹೊರಡಲಿಲ್ಲ. ಆಕೆಯ ಚಿತ್ತವು ಇನ್ನೂ ಶಾಂತವಾಗಿದ್ದಿಲ್ಲ. ಒಂದೆರಡುಸಾರೆ ಆಕೆಯು ಉತ್ತರ ಕೊಡಬೇಕೆಂದು ಪ್ರಯತ್ನ ಮಾಡಿದಳು; ಆದರೆ ಕುತ್ತಿಗೆಯ ಶಿರಬಿಗಿದು ಕಣ್ಣೀರು ಒತ್ತರಿಸಿದ್ದರಿಂದ ಅಕ್ಷರಗಳೇ ಹೊರಡಲೊಲ್ಲವು.

ಇದನ್ನು ನೋಡಿ ಹೇಮಚಂದ್ರನು ಮತ್ತೆ ಮೃಣಾಲಿನಿಯನ್ನು ಕುರಿತು—''ಮೃಣಾಲಿನೀ, ನೀನು ಇಲ್ಲಿ ಏಕೆ ಬಂದೆ?'' ಎಂದು ಕೇಳಿದನು. ಆದರೂ ಮೃಣಾಲಿನಿಯಿಂದ ಮಾತುಗಳು ಹೊರಡಲಿಲ್ಲ. ಆಕೆಯ ಅಂತಃಕರುಣವು ಮತ್ತಿಷ್ಟು ಉಕ್ಕಿ ಬರಹತ್ತಿತು. ಹೇಮಚಂದ್ರನು ಮೃಣಾಲಿನಿಯನ್ನು ಕೈಹಿಡಿದು ಕೆರೆಯ ಪಾಟಿಗೆಗಳ ಮೇಲೆ ಕುಳ್ಳಿರಿಸಿ, ತಾನೂ ಆಕೆಯ ಬಳಿಯಲ್ಲಿ ಕುಳಿತು, ಪ್ರೀತಿಯಿಂದ ಪ್ರಶ್ನೆ ಮಾಡುತ್ತಿದ್ದನು. ಇದರಿಂದಲೇ ಆಕೆಯ ಅಂತಃಕರುಣದ ಸ್ಥೈರ್ಯವು ಮತ್ತಿಷ್ಟು ಉನ್ಮತ್ತವಾಯಿತು. ಕ್ರಮಕ್ರಮವಾಗಿ ಆಕೆಯ ಮಸ್ತಕವು ತನ್ನಿಂದ ತಾನೇ ಬಾಗುತ್ತ ಬಾಗುತ್ತ ಹೋಗಿ, ಹೇಮಚಂದ್ರನ ಹೆಗಲ ಮೇಲೆ ಅದು ಸ್ಥಿರವಾಯಿತು. ಈ ಸಂಗತಿಯು ಮೃಣಾಲಿನಿಗೆ ಗೊತ್ತಾಯಿತು; ಆದರೆ ತಿಳಿಯಲಿಲ್ಲ. ಮೃಣಾಲಿನಿಯು ಒಂದೇಸವನೆ ಕಣ್ಣೀರು ಸುರಿಸುತ್ತಿದ್ದಳು. ಆಕೆಯ ಅಶ್ರುಗಳಿಂದ ಹೇಮಚಂದ್ರನ ಹೆಗಲೂ, ವಕ್ಷಸ್ಥಳವೂ ತೊಯ್ದು ಹೋದವು. ಹುಟ್ಟಿದಂದಿನಿಂದ ಇಲ್ಲಿಯವರೆಗೆ ಅನುಭವಿಸಿದ ಮೃಣಾಲಿನಿಯ ಯಾವ ಸೌಖ್ಯವೂ, ಇಂದಿನ ಆಕೆಯ ಈ ರೋದನದ ಸೌಖ್ಯವನ್ನು ಸರಿಗಟ್ಟಲಿಕ್ಕಿಲ್ಲ!

ಹೇಮಚಂದ್ರನು ಮತ್ತೆ ಮೃಣಾಲಿನಿಯನ್ನು ಕುರಿತು—''ಮೃಣಾಲಿನೀ, ನಾನು ಮಹಾಪರಾಧಿಯು, ನನ್ನನ್ನು ಕ್ಷಮಿಸು. ನಿನ್ನ ನಡತೆಯ ವಿಷಯದ ಅಮಂಗಲವಾದ ವರ್ತಮಾನವನ್ನು ಕೇಳಿ, ಅದನ್ನು ನಾನು ನಿಜವೆಂದು ನಂಬಿದ್ದೆನು. ಹಾಗೆ ನಂಬಲಿಕ್ಕೆ ಕೆಲವು ಕಾರಣಗಳೂ ಇದ್ದವು. ಅದಿರಲಿ, ನನ್ನ ಸಂಶಯದ ನಿವಾರಣವನ್ನು ನೀನು ಈಗ ಮಾಡಬಹುದಲ್ಲವೆ? ಎಂದು ಕೇಳಿದನು. ಆಗ ಮೃಣಾಲಿನಿಯು ಹೇಮಚಂದ್ರನ ಹೆಗಲ ಮೇಲೆ ಮಸ್ತಕವನ್ನು ಹಾಗೇ ಸ್ಥಿರವಾಗಿ ಇಟ್ಟು ''ಆ ಸಂಶಯವು ಯಾವದು?'' ಎಂದು ಕೇಳಿದಳು. ಅದಕ್ಕೆ ಹೇಮಚಂದ್ರನು—ನೀನು ಹೃಷೀಕೇಶನ ಮನೆಯನ್ನು ಬಿಟ್ಟ ಕಾರಣವೇನು, ಎಂದು ಕೇಳಲು, ಸಿಟ್ಟಿಗೆದ್ದ ನಾಗರಹಾವಿನಂತೆ ಮೃಣಾಲಿನಿಯು ತನ್ನ ಮಸ್ತಕವನ್ನು ಹೇಮಚಂದ್ರನ ಹೆಗಲಿನಿಂದ ಎತ್ತಿ—ಆ ದುಷ್ಟ ಹೃಷೀಕೇಶನು ನನ್ನನ್ನು ಮನೆಬಿಡಿಸಿ ಹೊರಗೆ ಹಾಕಿದನು,'' ಎಂದು ಹೇಳಿದಳು.

ಈ ಮಾತುಗಳನ್ನು ಕೇಳಿ ಹೇಮಚಂದ್ರನು ಬಹಳ ಖಿನ್ನನಾದನು. ಆತನನ್ನು ಸಂಶಯವು ಸ್ವಲ್ಪ ಬಾಧಿಸಿತು. ಆತನು ವಿಚಾರಮಗ್ನನಾದನು. ಈ ಅವಧಿಯಲ್ಲಿ ಮೃಣಾಲಿನಿಯು ತನ್ನ ಮಸ್ತಕವನ್ನು ಮತ್ತೆ ಹೇಮಚಂದ್ರನ ಹೆಗಲ ಮೇಲೆ ಇಟ್ಟಳು. ಆ ಸುಖಾಸನದ ಮೇಲೆ ಮಸ್ತಕವನ್ನಿರಿಸುವದರಿಂದ ಆಕೆಗೆ ಪರಮಾವಧಿ ಸುಖವಾಗುತ್ತಿತ್ತು. ಒಂದು ಕ್ಷಣವಾದರೂ ಆ ಆಸನವನ್ನು ಆಕೆಯು ಬಿಡದಾದಳು. ಇತ್ತ ಸಂಶಯಗ್ರಸ್ತನಾದ ಹೇಮಚಂದ್ರನು ಮತ್ತೆ ಮೃಣಾಲಿನಿಗೆ—

"ಹೃಷೀಕೇಶನು ನಿನ್ನನ್ನು ಮನೆಬಿಡಿಸಿ ಹೊರಗೆ ಹಾಕಲಿಕ್ಕೆ ಕಾರಣವೇನು?" ಎಂದು ಕೇಳಲು, ಆಕೆಯು ಹೇಮಚಂದ್ರನ ವಕ್ಷಸ್ಥಳದ ಮೇಲೆ ತನ್ನ ಮನೋಹರವಾದ ಮುಖವನ್ನು ಸ್ಥಿರಗೊಳಿಸಿ ಮಧುರಸ್ವರದಿಂದ—ತಮಗೇನು ಹೇಳಲಿ? ಹೃಷಿಕೇಶನು ನಾನು ಜಾರಿಣಿ..........

ಮೃಣಾಲಿನಿಯ ಈ ಕಡೆಯ ಶಬ್ದವು ಆಕೆಯ ಬಾಯೊಳಗೆ ಇರುವಾಗಲೇ ಹೇಮಚಂದ್ರನು ಬಾಣದಂತೆ ತಟ್ಟನೆ ಎದ್ದು ನಿಂತನು. ಕೂಡಲೆ ಅವನ ಹೃದಯದಲ್ಲಿದ್ದ ಮೃಣಾಲಿನಿಯ ಕೋಮಲವಾದ ಮಸ್ತಕವು ಆಶ್ರಯ ತಪ್ಪಿದ್ದರಿಂದ ದೊಪ್ಪನೆ ಕೆರೆಯ ಪಾವಟಿಗೆಗೆ ಅಪ್ಪಳಿಸಿತು. ಹೇಮಚಂದ್ರನು ಕ್ರುದ್ಧನಾಗಿ ಗದ್ದರಿಸುತ್ತ—"ಪಾಪಿಷ್ಟೇ, ಪ್ರತ್ಯಕ್ಷ ನಿನ್ನ ಬಾಯಿಂದಲೇ "ನಾನು ಜಾರಿಣಿ" ಎಂದು ಒಪ್ಪಿಕೊಳ್ಳುತ್ತಿಯಾ ಎಂದು ನುಡಿದು ಅಲ್ಲಿಂದ ಹೊರಟು ಹೋದನು. ಹಾದಿಯಲ್ಲಿ ಅವನಿಗೆ ಗಿರಿಜೆಯು ಭೆಟ್ಟಿಯಾದಳು. ಹೇಮಚಂದ್ರನ ಆಗಿನ ಕೃತಾಂತನಂಥ ಭಯಂಕರವಾದ ಮುದ್ರೆಯನ್ನು ನೋಡಿ ಆ ಬಡವೆಯು ಬೆದರಿದಳು. ಹೇಮಚಂದ್ರನ ಆಗಿನ ಅವಿಚಾರದ ನಡತೆಯನ್ನು ಹೇಳಲಿಕ್ಕೆ ನಾಚಿಕೆ ಬರುತ್ತಿದ್ದರೂ, ಹೇಳದಿದ್ದರೆ ನಿರ್ವಾಹವಿಲ್ಲ, ಆ ವಿಚಾರಶೂನ್ಯನು ಹಾದಿಯಲ್ಲಿ ನಿಂತುಕೊಂಡಿದ್ದ ಗಿರಿಜೆಯನ್ನು ಒಮ್ಮೆ ಕಸುವಿನಿಂದ ಒದ್ದು, ಅವಡುಗಚ್ಚುತ್ತ ಒದರುತ್ತ ಆಕೆಯ ಮೈಮೇಲೆ ಹೋಗಿ—ನಿನ್ನ ನೀಚಳಾದ ಒಡತಿಯನ್ನು ಒದ್ದಿದ್ದರೆ, ನನ್ನ ಚರಮವು ದೂಷಿತವಾಗುತ್ತಿತ್ತು, ಎಂದು ನುಡಿದು ನೆಟ್ಟಗೆ ಅಲ್ಲಿಂದ ಹೊರಟು ಹೋದನು.

ಧೈರ್ಯವಿಲ್ಲದ ಹಾಗು ಕ್ರೋಧದಿಂದ ಅಂಧನಾದವನಿಗೆ ಈ ಜಗತ್ತಿನೊಳಗಿನ ಸಖಾಸ್ವಾದವು ಎಂದೂ ದೊರಕದು! ಕೇವಲ ಈ ಅಧೈರ್ಯ ದೋಷದಿಂದಲೇ ವೀರಶ್ರೇಷ್ಠನಾದ ದ್ರೋಣಾಚಾರ್ಯನು ನಾಶ ಹೊಂದಿದನೆಂದು ಕವಿಯು ಕಲ್ಪಿಸಿರುತ್ತಾನೆ. "ಅಶ್ವತ್ಥಾಮನು ಬಿದ್ದನು" ಎಂಬ ಶಬ್ದವು ಕಿವಿಗೆ ಬಡಿದಕೂಡಲೆ ಆ ವಿರಾಗ್ರಣಿಯ ಕೈಯೊಳಗಿನ ಧನಸ್ಸು ಕಳಚಿ ಬಿದ್ದಿತು. "ಅಶ್ವತ್ಥಾಮನು ಯಾರು? ಅವನು ಹೇಗೆ ಬಿದ್ದನು" ಮೊದಲಾದವುಗಳ ಸಂಬಂಧ ದಿಂದ ಆ ಪುತ್ರವತ್ಸಲನು ವಿಚಾರವನ್ನೇ ಮಾಡಲಿಲ್ಲ, ಹೇಮಚಂದ್ರನಲ್ಲಿ ಈ ಅಧೈರ್ಯ ದೋಷವು ಒಂದೇ ಅಲ್ಲದೆ, ಅಭಿಮಾನ, ಕ್ರೋಧ ಎಂಬ ಎರಡು ಪಿಶಾಚಗಳು ಅವನಿಗೆ ಗಂಟು ಬಿದ್ದಿದ್ದವು.

ಮೆಲ್ಲಮೆಲ್ಲನೆ ಉಷಃಕಾಲದ ತಂಪಾದ ನಸುಗಾಳಿಯು ಸುಳಿಯಹತ್ತಿತು. ಪೂರ್ವದಿಕ್ಕು ಬಿಳುಪೇರತೊಡಗಿತು. ಪಾವಟಿಗೆಗೆ ಒಳಿತಾಗಿ ಅಪ್ಪಳಿಸಿದ್ದರಿಂದ ನೋಯುತ್ತಿದ್ದ ತಲೆಯನ್ನು ಮೃಣಾಲಿನಿಯು ಎರಡೂ ಕೈಗಳಿಂದ ಹಿಡಕೊಂಡು ಕುಳಿತಿದ್ದಳು. ಅಷ್ಟರಲ್ಲಿ ಗಿರಿಜೆಯು ಅಲ್ಲಿಗೆ ಬಂದು—ಅಪ್ಪನವರೇ, ತಲೆಯು ಬಹಳ ನೋಯುತ್ತದೇನು? ಎಂದು ಕೇಳಲು, ಮೃಣಾಲಿನಿಯು ಬೆರಗಾಗಿ—ನೋವು ಯಾತರದೇ? ಎಂದು ಕೇಳಿದಳು. ಅದಕ್ಕೆ ಗಿರಿಜೆಯು—ಕೆರೆಯ ಪಾವಟಿಗೆಗೆ ತಲೆಯು ಅಪ್ಪಳಿಸಿದ್ದರ ನೋವು, ಎಂದು ಹೇಳಲು ಮೃಣಾಲಿನಿಯು—ನನ್ನ ತಲೆಯು ಪಾವಟಿಗೆಗೆ ಅಪ್ಪಳಿಸಿತೇ? ಗೊತ್ತಿಲ್ಲವ್ವಾ ನನಗೆ, ಎಂದು ಉತ್ತರಕೊಟ್ಟಳು. ಪಾಪ! ನಿರ್ಮಲಾಂತಃಕರುಣದ ಮೃಣಾಲಿನಿಯು ಹೇಮಚಂದ್ರನ ತಿಳಿಗೇಡಿತನದಿಂದ ಕಾರಣವಿಲ್ಲದೆ ಪೆಟ್ಟು ತಿನ್ನಬೇಕಾಯಿತು.

ಪ್ರಿಯವಾಚಕರೇ, ಈ ವಿಚಿತ್ರವನ್ನು ನೋಡಿದಿರಾ! ಮೃಣಾಲಿನಿಯ ವಿಷಯವಾಗಿ ನೀವು ಮರಮರ ಮರುಗುತ್ತಿರಬಹುದಲ್ಲವೇ? ಮರುಗಿ ಮಾಡುವದೇನು? ನಿಮಗೆ ಗೊತ್ತಿದ್ದಂತೆ ಹೇಮಚಂದ್ರನಿಗೆ ಮೃಣಾಲಿನಿಯ ನಿರ್ಮಲಾಂತಃಕರಣವು ಗೊತ್ತಾಗಿದ್ದರೆ, ಅವನಿಂದ ಈ ಕಠೋರ ಕೃತ್ಯವು ಒದಗುತ್ತಿದ್ದಿಲ್ಲ. ಅವನೇನು ಜಾತ್ಯಾ ಕೆಟ್ಟ ಮನುಷ್ಯನಲ್ಲ, ಸರಳಮನಸ್ಸಿನವನು; ಆದರೆ ಸಂಶಯರೂಪವಾದ ಪಿಶಾಚವು ಬಡಕೊಂಡದ್ದರಿಂದ ಅವನ ಮೈಮೇಲಿನ ಎಚ್ಚರವು ತಪ್ಪಿ ಯಾವದನ್ನು ನಂಬಬೇಕು, ಯಾವದನ್ನು ನಂಬಬಾರದು, ಎಂಬದರ ನಿಶ್ಚಯವೇ ಅವನಿಗೆ ಆಗದಾಯಿತು. ಸಂಶಯದ ವಿಚಾರಗಳ ಜಗ್ಗಾಟದಿಂದ ಅವನು ತೀರಾ ಹಣ್ಣಾಗಿದ್ದನು. ಮೃಣಾಲಿನಿಯ ದುಃಖವು ಮಾತ್ರ ನಮ್ಮ ಕಣ್ಣಿಗೆ ಕಾಣುತ್ತದೆ; ಆದರೆ ಹೇಮಚಂದ್ರನಿಗೇನು ಸ್ವಲ್ಪ ದುಃಖವಾಗಿದ್ದಿಲ್ಲ! ಅವನ ದುಃಖದ ಕಲ್ಪನೆಯು ಅನುಭವವಿಲ್ಲದವರಿಗೆ ಆಗಲಾರದು. ಹೇಮಚಂದ್ರನ ಉದಾಹರಣದಿಂದ ನಾವು ಒಂದು ಮಾತನ್ನು ನೆನಪಿನಲ್ಲಿಟ್ಟರೆ, ಹಿತವಾಗುವದು. ಹೇಮಚಂದ್ರನಂತೆ ನಾವಾದರೂ ಸಂಶಯಕ್ಕೆ ಒಳಗಾಗಿ ಸಂಸಾರದಲ್ಲಿ ಪೇಚಾಡುತ್ತಿರುತ್ತೇವೆ. ''ಪ್ರತ್ಯಕ್ಷ ಕಂಡರೂ ಪ್ರಾಮಾಣಿಸಿ ನೋಡೆಂ''ಬ ಹಿರಿಯರ ಮಾತನ್ನು ಮರೆಯಲಾಗದು. ಸಂಶಯ ಬಂದರೂ, ಅದಕ್ಕೊಳಗಾಗಿ ಕೆಟ್ಟ ಕೆಲಸಕ್ಕೆ ಮನಸ್ಸು ಮಾಡಬಾರದು. ಈ ಸಂಶಯ ರೂಪವಾದ ಪಿಶಾಚದಿಂದ ಹಲವು ಅನರ್ಥಗಳಾಗುವದನ್ನು ಕಣ್ತೆರೆದು ನೋಡಿ, ನೆನಪಿಗೆ ತಂದುಕೊಂಡು, ಎಚ್ಚರದಿಂದ ನಡೆಯತಕ್ಕದ್ದು. ''ಸಂಶಯಾತ್ಮಾವಿನಶ್ಯತಿ'' ಎಂಬ ಉಕ್ತಿಯು ವ್ಯರ್ಥವಾದದ್ದಲ್ಲ. ಹೇಮಚಂದ್ರನು ಸಂಶಯವನ್ನು ನಿಜವೆಂದು ನಂಬಿ ಅವಿಚಾರದಿಂದ ನಡೆದುದರಿಂದ ಮೃಣಾಲಿನಿಗೂ ಸುಖವಾಗಲಿಲ್ಲ. ಒಟ್ಟಿಗೆ ಸಂಶಯ ನಿವಾರಣವಾಗುವವರೆಗೆ ನಾವು ಆವುದನ್ನೂ ನಂಬಿ ನಡೆಯಲಾಗದು, ಇದನ್ನು ಎಲ್ಲರೂ ನೆನಪಿಡತಕ್ಕದ್ದು.

ಮನೋರಮೆಯು ಕುಂಠಿತಳಾದಳು

ಪ್ರಿಯ ವಾಚಕರೇ, ಬಹಳ ಹೊತ್ತಾಯಿತು, ಗೌಡದೇಶದ ಮಂತ್ರಿ ಶ್ರೇಷ್ಠನಾದ ಪಶುಪತಿಯ ಸಮಾಚಾರವನ್ನು ತಕ್ಕೊಳ್ಳುವಾ ನಡೆಯಿರಿ. ಮುದಿ ಅರಸನ ಪರಾಧೀನತೆಯಿಂದ ಪಶುಪತಿಯ ಪ್ರಸ್ಥವು ವಿಶೇಷವಾಗಿ ಬೆಳೆದಿತ್ತು. ಸದ್ಯಕ್ಕೆ ಆತನು ಅರಮನೆಯನ್ನು ಹೀಯಾಳಿಸುವ ಸುಂದರವಾದ ಭವ್ಯಮಂದಿರದಲ್ಲಿ ವಾಸಿಸುತ್ತಿದ್ದನು. ಯಾವತ್ತು ನವದ್ವೀಪದಲ್ಲಿ ಆತನ ಮಂದಿರದಂಥ ಬೇರೆ ಮಂದಿರವಿದ್ದಿಲ್ಲ. ಸೇವಕರಿಂದ ಆತನ ಮಂದಿರವು ತುಂಬಿಹೋಗಿದ್ದಿತು; ಅಲ್ಲಿ ಐಶ್ವರ್ಯಕ್ಕೆ ಕೊರತೆಯಿದ್ದಿಲ್ಲ. ಆದರೆ ಪ್ರಯೋಜನವೇನು? ಏನಿದ್ದು ಏನು ಮಾಡಬೇಕು? ಆ ಮಂದಿರದಲ್ಲಿ ಕುಲವಧುವಿನ ಪಾದಸಂಚಾರದಿಂದುಂಟಾದ ಮಧುರ ನೂಪುರ ಧ್ವನಿಯು ಪಸರಿಸದಿರುವದರಿಂದ ಅದು ನಿಸ್ತೇಜವೂ, ರುಕ್ಷವೂ, ಉದಾಸವೂ, ಭಯಪ್ರದವೂ ಆಗಿ ತೋರುತ್ತಿತ್ತು. ಸುವಾಸಿನಿಯ ಹರಿಣಲೋಚನದ ಕಾಂತಿಯಿಂದ ಬೆಳಗದ,

ಹಾಗು ಗೃಹ ರತ್ನಗಳಾದ ಹುಡುಗರ ಅಟ್ಟಹಾಸದ ನಗೆಯಿಂದ ದಿಮಿಗುಟ್ಟದ ಮಂದಿರವು ಎಷ್ಟು ಭವ್ಯವಿದ್ದರೂ, ಎಷ್ಟು ಸುಂದರವಿದ್ದರೂ, ಎಷ್ಟು ಸುಖಸಾಧನಗಳಿಂದ ತುಂಬಿದ್ದರೂ ಅದು ಸ್ಮಶಾನಕ್ಕಿಂತ ಭಯಪ್ರದವಾದದ್ದೆಂದು ನಾವಂತು ತಿಳಿಯುವೆವು. ಹೆಂಡಿರು—ಮಕ್ಕಳಿಲ್ಲದ ಮನೆಯು ಎಷ್ಟು ತುಂಬಿದ್ದರೂ ಹಾಳಾದದ್ದು, ಅದು ಎಂಥ ಪ್ರಕಾಶವಾನವಾಗಿದ್ದರೂ ಅಂಧಃಕಾರಯುಕ್ತವಾದದ್ದು. ಸದ್ಯಕ್ಕೆ ಪಶುಪತಿಯು ಇಂಥ ತೇಜೋಹೀನವಾದ ಹಾಳು ಮನೆಯಲ್ಲಿ ಇದ್ದಂತೆ ಆಗಿತ್ತು.

ಪಶುಪತಿಯ ಮನಸ್ಸಿಗೆ ಈ ಕೊರತೆಯು ಹೊಳೆದಿದ್ದಿಲ್ಲವೆಂತಲ್ಲ, ಪ್ರಾಣೇಶ್ವರಿಯಿಂದ ರಹಿತವಾದ ತನ್ನ ಮನೆಯು ಮಠವೆಂದು ಆತನು ಭಾವಿಸಿದ್ದನು. ಒಮ್ಮೆ ಆತನು ತನ್ನ ಏಕಾಂತದ ಕೋಣೆಯಲ್ಲಿ ಕುಳಿತುಕೊಂಡು ತನ್ನೊಳಗೆ—''ನನ್ನ ಈ ಅಧಿಕಾರ, ಈ ಐಶ್ವರ್ಯ, ಈ ವಿದ್ವತ್ತೆ ಈ ಮಾನ್ಯತೆಗಳಿಂದ ಪ್ರಯೋಜನವೇನು? ತಾಯೇ, ಜಗದಂಬೇ, ದುರ್ಗೇ ನಿನ್ನ ಕೃಪೆಯ ಮೇಲೆಯೇ ನನ್ನ ನಂಬಿಗೆಯಿರುವದು. ನಿನ್ನ ಮೇಲೆ ಎಲ್ಲ ಭಾರಹಾಕಿ ಆ ಚಾರುವದನೆಯಾದ ಮನೋರಮೆಯ ಪ್ರಾಪ್ತಿಗಾಗಿಯೇ ಇಂಥ ವ್ಯೂಹವನ್ನು ಒಡ್ಡಿರುವೆನು, ಈ ಬಗೆಯ ಭಗೀರಥ ಪ್ರಯತ್ನವನ್ನು ನಡಿಸಿರುವೆನು. ಜಗದಂಬೇ, ನಿನ್ನ ಆಶೀರ್ವಾದದಿಂದ ನನ್ನ ಇಚ್ಛೆಯು ಬೇಗನೆ ಪೂರ್ಣವಾಗಿ ನನ್ನ ಪ್ರಾಣೇಶ್ವರಿಯು ನನ್ನ ಮನೆಯೊಳಗಿನ ಕಗ್ಗತ್ತಲೆಯನ್ನು ದೂರಮಾಡಲಿ!

ಪಶುಪತಿಯು ಈ ಬಗೆಯ ಮನೋರಾಜ್ಯದಲ್ಲಿ ಮಗ್ನನಾಗಿರುವಾಗಲೇ, ಚಟ್ಟನೇ ಎದ್ದನು. ತನ್ನ ಮನೋರಾಜ್ಯದ ಸಿದ್ಧಿಗಾಗಿ ಇನ್ನೊಮ್ಮೆ ಅನನ್ಯ ಭಾವದಿಂದ ಜಗದಂಬೆಯನ್ನು ಆರಾಧಿಸಬೇಕೆಂದು ಆತನು ಆ ದೇವಿಯ ಮಂದಿರವನ್ನು ಹೊಕ್ಕನು. ದಿನಾಲು ಮಲಗುವದ ಕ್ಕಿಂತ ಮೊದಲು ದೇವಿಯನ್ನು ಪ್ರಾರ್ಥಿಸುವದು ಪಶುಪತಿಯ ನಿಯಮವಾಗಿತ್ತು. ತನ್ನ ನಿಯಮದಂತೆ ಆತನು ಈದಿನ ಮಂದಿರವನ್ನು ಹೊಕ್ಕನು. ಆದರೆ ಅಲ್ಲಿ ಒಂದು ವಿಲಕ್ಷಣ ಪ್ರಕಾರವು ಅವನ ಕಣ್ಣಿಗೆ ಬಿದ್ದಿತು. ಅಷ್ಟಭುಜಾಂಕಿತವಾದ ದೇವಿಯ ಅಚೇತನ ಮೂರ್ತಿಯು ಪೀಠದಲ್ಲಿದ್ದು, ಆ ಮೂರ್ತಿಯ ಎದುರಿಗೆ ಮತ್ತೊಂದು ಸಚೇತನ ಮೂರ್ತಿಯು ಹೂಮಾಲೆ ಮಾಡುತ್ತ ಕುಳಿತುಕೊಂಡಿತ್ತು! ಇದನು ನೋಡಿ ಪಶುಪತಿಯು ಬೆರಗಾದನು. ಆತನು ಮಂದಿರದ ಬಾಗಿಲಲ್ಲಿ ನಿಂತುಕೊಂಡು, ಆ ಸಚೇತನ ಮೂರ್ತಿಯನ್ನು ಎವೆಯಿಕ್ಕದೆ ಸೂಕ್ಷ್ಮದೃಷ್ಟಿಯಿಂದ ನೋಡತೊಡಗಿದನು; ಆ ಮೂರ್ತಿಯು ಬೇರೆ ಮತ್ತೆಯಾರೂ ಇರದೆ, ತಾನು ಯಾವಾಗಲೂ ಹೃದಯದಲ್ಲಿ ಚಿಂತಿಸುತ್ತಿದ್ದ ಇಷ್ಟ ದೇವತೆಯಾದ ಮನೋರಮೆಯೇ ಆಗಿದ್ದಳು. ಮನೋರಮೆಯು ಅಷ್ಟಭುಜಾಂಕಿತೆಯಾದ ದುರ್ಗೆಗಿಂತ ಪಶುಪತಿಗೆ ಪೂಜ್ಯಳೂ, ಪ್ರೀಯಳೂ ಆಗಿದ್ದಳು. ಹಗಲು ರಾತ್ರಿ ಎಡೆಬಿಡದೆ ಧ್ಯಾನಿಸುತ್ತಿದ್ದ ಇಷ್ಟ ದೇವತೆಯು ಪ್ರಸನ್ನಳಾಗಿ ಹೀಗೆ ತಾನಾಗಿ ಅಕಲ್ಪಿತ ದರ್ಶನ ಕೊಟ್ಟದ್ದರಿಂದ ಅವನ ಆನಂದ ಸಮುದ್ರಕ್ಕೆ ಮೇರೆಯಿಲ್ಲದಾಯಿತು! ಆತನು ಒಮ್ಮೆಲೆ ಮುಂದುವರಿದು ಪ್ರೇಮಪೂರಿತವಾದ ಸ್ವರದಿಂದ—''ಪ್ರಾಣೇಶ್ವರೀ, ನೀನು ಯಾವಾಗ ಬಂದೆ!'' ಎಂದು ಕೇಳಿದನು.

ಮನೋರಮೆಯು ದೇವಿಯ ಮುಂದೆ ಕುಳಿತುಕೊಂಡು ಮಗ್ಗಲಿಗೆ ಬಿದ್ದಿದ್ದ ನಿರ್ಮಾಲ್ಯದ ಹೂಗಳ ಮಾಲೆಯನ್ನು ದಾರವಿಲ್ಲದೆ ಕಟ್ಟುತ್ತಿದ್ದಳು. ಆಕೆಯು ಪಶುಪತಿಯಾಡಿದ ಮಾತುಗಳನ್ನು ಕೇಳಿದಳು, ಆತನು ಹತ್ತರ ಬಂದದ್ದೂ ಆಕೆಗೆ ಗೊತ್ತಾಯಿತು. ಆದರೂ ಆಕೆಯು ಅವನೊಡನೆ ಮಾತಾಡಲಿಲ್ಲ, ಮುಖವೆತ್ತಿ ಆತನನ್ನು ನೋಡಲೂ ಇಲ್ಲ. ಸ್ವಸ್ಥವಾಗಿ ಆಕೆಯು ಮಾಲೆಕಟ್ಟುತ್ತಾ ಕುಳಿತುಕೊಂಡಿದ್ದಳು. ಹೀಗೆ ಸುಮ್ಮನೆ ಕುಳಿತದ್ದನ್ನು ನೋಡಿ ಪಶುಪತಿಯು ಮತ್ತೆ ಮನೋರಮೆಯನ್ನು ಕುರಿತು—ಮನೋರಮೇ, ಮಾತಾಡು—ಮಾತಾಡು. ನಿನ್ನ ಈ ದಿವ್ಯ ಸ್ವರೂಪವು ಕಣ್ಣಿಗೆ ಬಿದ್ದಕೂಡಲೆ ನನ್ನ ಸ್ಥಿತಿಯು ಬಹು ಚಮತ್ಕಾರವಾಗುತ್ತದೆ. ನನಗೆ ಏನೂ ತೋಚುವದಿಲ್ಲ. ಮಾತಾಡು, ನೀನು ಯಾವಾಗ ಬಂದೆ, ಯಾತಕ್ಕೆ ಬಂದೆ? ಎಂದು ಕೇಳಿದನು. ಆದರೂ ಮನೋರಮೆಯು ಸುಮ್ಮನೆ ಮಾಲೆಯನ್ನು ಕಟ್ಟುತ್ತ ಕುಳಿತುಕೊಂಡಿದ್ದಳು; ಆಕೆಯು ಪಶುಪತಿಯ ಮಾತಿಗೆ ಉತ್ತರವನ್ನೂ ಕೊಡಲಿಲ್ಲ, ಕಣ್ಣೆತ್ತಿ ಆತನನ್ನೂ ನೋಡಲೂ ಇಲ್ಲ. ಈ ಮೇರೆಗೆ ಬಹಳಹೊತ್ತು ಅವನು ಸುಮ್ಮನೆ ಕುಳಿತುಕೊಳ್ಳಬೇಕಾಯಿತು. ಅಷ್ಟು ಹೊತ್ತಿಗೆ ಮನೋರಮೆಯ ಮಾಲೆಯೂ ಮುಗಿಯುತ್ತ ಬಂದಿತ್ತು, ಆಗ ಆಕೆಯು ಮೋರೆಯನ್ನು ಮೇಲಕ್ಕೆತ್ತಿ ಮುಗುಳುನಗೆ ನಕ್ಕು—ನಾನು ನಿಮಗೆ ಏನೋ ಹೇಳಬೇಕೆಂದು ಬಂದಿದ್ದೆನು. ಆದರೆ ಅದು ಮರೆತುಹೋಯಿತು, ಈಗ ನೆನಪಾಗುವದಿಲ್ಲ.

ಮನೋರಮೆಯ ಈ ಮಾತುಗಳನ್ನು ಕೇಳಿ ಪಶುಪತಿಗೆ ಒಳಿತಾಗಿ ಧೈರ್ಯಬಂದಿತು. ಆತನು ಮನೋರಮೆಗೆ—ಏನೂ ಚಿಂತೆಯಿಲ್ಲ, ನೀನು ನೆನಪು ಮಾಡಿಕೋ, ನಾನು ಕೂಡುತ್ತೇನೆ, ಎಂದನು. ಅಷ್ಟರಲ್ಲಿ ಮುಗಿಯುತ್ತ ಬಂದಿದ್ದ ಮನೋರಮೆಯ ಕೈಯೊಳಗಿನ ಮಾಲೆಯು ದುರ್ದೈವದಿಂದ ಹರಿಯಿತು. ಆಕೆಯು ಮತ್ತೆ ಮಾಲೆ ಕಟ್ಟುತ್ತ ಕುಳಿತುಕೊಂಡಳು. ಬಹಳ ಹೊತ್ತಾದರೂ ಮಾಲೆ ಮುಗಿಯಲೊಲ್ಲದು, ಆಕೆ ಮಾತಾಡಲೊಲ್ಲಳು. ಪಾಪ! ಪಶುಪತಿಯ ಸ್ಥಿತಿಯು ವಿಚಿತ್ರವಾಯಿತು. ಕಡೆಗೆ ಪಶುಪತಿಯೇ ಸುಮ್ಮನಿರಲಾರದೆ ಮನೋರಮೆಯ ಸಂಗಡ ಮಾತಾಡತೊಡಗಿದನು.—ಮನೋರಮೇ, ನಾನೂ ನಿನಗೊಂದು ಮಾತು ಕೇಳಬೇಕೆಂದು ಮಾಡಿದ್ದೇನೆ. ಈವೊತ್ತಿನವರೆಗೆ ನಾನು ವಿದ್ಯೆ ಕಲಿತೆನು, ವಿಪುಲವಾಗಿ ದ್ರವ್ಯವನ್ನು ಸಂಪಾದಿಸಿದೆನು, ಕೀರ್ತಿಯನ್ನು ಗಳಿಸಿದೆನು, ಬಹುಮಾನ ಪಡೆದೆನು, ಅಧಿಕಾರವನ್ನು ಭೋಗಿಸಿದೆನು, ಮನಸ್ಸಿನ ಪ್ರತಿಯೊಂದು ಇಚ್ಛೆಯನ್ನೂ ಪೂರ್ಣಮಾಡಿಕೊಂಡೆನು; ಆದರೂ ಸಂಸಾರ—ಸುಖೋಪಭೋಗವು ಮಾತ್ರ ಈವೊತ್ತಿನವರೆಗೂ ನನಗೆ ಲಭಿಸಿರುವದಿಲ್ಲ. ಮೊದಲಿನಿಂದಲೇ ಲಗ್ನದ ವಿಷಯವಾಗಿ ನನ್ನಲ್ಲಿ ವೈರಾಗ್ಯವು ಉತ್ಪನ್ನವಾದುದರಿಂದ ಈವೊತ್ತಿನವರೆಗೆ ಎಂದೂ ಲಗ್ನದ ಗೊಂದಲದಲ್ಲಿ ನಾನು ಮನಸ್ಸು ಹಾಕಲಿಲ್ಲ; ಆದರೆ ನಿನ್ನ ಈ ಮೋಹಕ ಮೂರ್ತಿಯು ನನ್ನ ಕಣ್ಣಿಗೆ ಬಿದ್ದಂದಿನಿಂದ ನನ್ನ ಮನಸ್ಸಿನ ನಿಶ್ಚಯವು ಅಳಿದು ಹೋಗಿ, ನಿನ್ನನ್ನೇ ಲಗ್ನಮಾಡಿಕೊಂಡು ಗೃಹಸ್ಥಾಶ್ರಮಿಯಾಗಬೇಕೆಂಬ ಉತ್ಕಟವಾದ ಇಚ್ಛೆಯು ಅಂತಃಕರಣದಲ್ಲಿ ಉತ್ಪನ್ನವಾಗಿದೆ. ನಿನ್ನ ಸಹವಾಸದಿಂದಲೇ ನನ್ನ ಜನ್ಮವು ಸಾರ್ಥಕವಾಗುವದು. ನಿನ್ನ ಪ್ರಾಪ್ತಿಯಾದ ಹೊರತು ನನ್ನ ಬಾಳು ವ್ಯರ್ಥವೆಂದು ನನಗೆ ತೋರಿದ್ದರಿಂದ ನಿನ್ನ

ಚರಣಸೇವಕನಾಗಬೇಕೆಂದು ನಿಶ್ಚಯಿಸಿ ನಿನ್ನ ಸಲುವಾಗಿ ಇಂಥ ಸಾಹಸದ ಕಾರ್ಯಕ್ಕೆ ಕೈಹಾಕಿದ್ದೇನೆ. ಜಗದಂಬೆಯ ಕೃಪೆಯಿಂದ ಈವೊತ್ತಿವರೆಗೆ ನನ್ನ ಪ್ರಯತ್ನಕ್ಕೆ ಯಶಸ್ಸೇ ಬರುತ್ತ ಹೋಗಿರುವದು. ಇನ್ನು ಒಂದೆರಡು ದಿನಗಳೊಳಗೇ ನನ್ನ ಮನಸ್ಸಿನ ಬಯಕೆಗಳೆಲ್ಲ ಈಡೇರಿ ನನಗೆ ರಾಜ್ಯಪ್ರಾಪ್ತಿಯಾಗುವದು. ಸಿಂಹಾಸನವೇರಿದ ಕೂಡಲೆ ಮೊದಲು ನಿನ್ನ ಲಗ್ನ ಮಾಡಿ ಕೊಳ್ಳುವೆನು. ಇನ್ನು ನೀನು ವಿಧವೆಯಿರುವದರಿಂದ ನಿನ್ನೊಡನೆ ಲಗ್ನವಾಗಲಿಕ್ಕೆ ಜನ ರೂಢಿಯು ಅಡ್ಡಬರುವದೆಂಬ ಮಾತು ನಿಜವಾದದ್ದು; ಆದರೂ ನಾನು ಹಲವು ಶಾಸ್ತ್ರಾಧಾರ ಗಳನ್ನು ತೋರಿಸಿ ವಿಧವಾ ವಿವಾಹವನ್ನು ಶಾಸ್ತ್ರಸಮ್ಮತವಾಗಿದ್ದುದನ್ನು ಸಿದ್ಧಮಾಡುವೆನು. ಇದಲ್ಲದೆ ನಾನೇ ಸತ್ತಾಧೀಶನಾದ ಮೇಲೆ ನನ್ನನ್ನು ವಕ್ರ ದೃಷ್ಟಿಯಿಂದ ನೋಡುವವರಾದರೂ ಯಾರು? ಯಾರಿಗೆ ಈ ಧೈರ್ಯವಾದೀತು? ಮನೋರಮೇ, ಈ ವಿವಾಹಕ್ಕೆ ನಿನ್ನ ಒಪ್ಪಿಗೆಯಿರುವದಷ್ಟೇ? ಮಾತಾಡು ಮಾತಾಡು, ನೀನು ನನ್ನ ಮನಸ್ಸಿನ ಬಯಕೆಯನ್ನು ಪೂರ್ಣಮಾಡುವೆಯೋ ಇಲ್ಲವೋ?

ಮನೋರಮೆಯು ಪಶುಪತಿಯ ಈ ಮಾತಿಗೆ ಏನೊಂದು ಉತ್ತರವನ್ನು ಕೊಡಲಿಲ್ಲ. ಈ ಮಾತುಗಳನ್ನು ಆಕೆಯು ಕೇಳಿದಳೋ ಇಲ್ಲವೋ ಎಂಬದನ್ನಾದರೂ ನಿಶ್ಚಯದಿಂದ ಹೇಳಲಾಗುವದಿಲ್ಲ. ಪಶುಪತಿಯ ಮಾತು ನಡೆದಾಗ ಆಕೆಯು ತನ್ನ ಹತ್ತರ ಕುಳಿತುಕೊಂಡಿದ್ದ ಒಂದು ಕರೆ ಬಾವುಗದ ಕೊರಳಿಗೆ ತಾನು ಮಾತಾಡಿದ ಮಾಲೆಯನ್ನು ಹಾಕುವದರಲ್ಲಿ ಪೂರ್ಣವಾಗಿ ತೊಡಗಿದ್ದಳು; ಆದರೆ ಆ ಬಾವುಗಕ್ಕೆ ಈ ಅಲಂಕಾರ ಸೇರದೆ ಅದು ಮನೋರಮೆಯ ಕೈಯನ್ನು ಕೊಸರಿಕೊಂಡು ಓಡಿಹೋಯಿತು. ಪಾಪ! ಮನೋರಮೆಯು ಇಷ್ಟು ಕಷ್ಟಪಟ್ಟು ಕಟ್ಟಿದ ಮಾಲೆಯು ಕೆಳಗೆ ಬಿದ್ದು ಹರಿಯಿತು! ಮನೋರಮೆಯು ತನ್ನ ತಲೆಯೊಳಗಿನ ಒಂದೆರಡು ಕೂದಲುಗಳನ್ನು ತೆಗೆದುಕೊಂಡು ಅದರಿಂದ ಮತ್ತೆ ಮಾಲೆ ಕಟ್ಟಲಿಕ್ಕೆ ಕುಳಿತುಕೊಂಡಳು. ಇತ್ತ ಪಶುಪತಿಯಂತು ಆಕೆಯ ಉತ್ತರದ ಹಾದಿಯನ್ನು ನೋಡುತ್ತ ಉತ್ಸುಕತೆಯಿಂದ ಕುಳಿತುಕೊಂಡಿದ್ದನು; ಆದರೆ ಮನೋರಮೆಯ ಬಾಯಿಂದ ಮಾತುಗಳೇ ಹೊರಡಲೊಲ್ಲವು. ಮಾತಾಡುತ್ತಾನೇನು? ಉಪಾಯಗಾಣದೆ ಆತನು ಮನೋರಮೆಯ ಕೈ ಬೆರಳಿನ ಮಾಲೆ ಕಟ್ಟುವ ಅನುಪಮ ಕೌಶಲ್ಯವನ್ನು ನೋಡುತ್ತ ಸುಮ್ಮನೆ ಕುಳಿತುಕೊಳ್ಳ ಬೇಕಾಯಿತು.

ಮನೋರಮೆಯ ಮನಸ್ಸಿನೊಳಗಿದ್ದುದನ್ನು ತಿಳಕೊಳ್ಳುವದಕ್ಕಾಗಿ ಪಶುಪತಿಯು ಪರಮಾವಧಿಯಾಗಿ ಯತ್ನಿಸಿದನು. ಆದರೆ ಅದರ ಸುದ್ದಿಯೇ ಅವನಿಗೆ ಹತ್ತಲಿಲ್ಲ. ಕಡೆಗೆ ಆತನು ಬೇಸತ್ತು—ಮನೋರಮೇ, ಈಗ ರಾತ್ರಿಯು ಬಹಳವಾಯಿತು, ನನಗೆ ನಿದ್ರೆಯೂ ಬಂದಿದೆ, ನಾನು ಮಲಗಿಕೊಳ್ಳುವದಕ್ಕೆ ಹೋಗಲಿಯಾ? ಎಂದು ಕೇಳಿದನು. ಅದಕ್ಕೆ ಮನೋರಮೆಯು ಮೋರೆಯನ್ನು ಮೇಲಕ್ಕೆತ್ತದೆ—ಹೂ! ಹೋಗಿರಿ, ಎಂದು ಹೇಳಿದಳು. ಇದನ್ನು ಕೇಳಿ ಪಶುಪತಿಯು ವಿಚಾರದಲ್ಲಿ ತೊಡಗಿದನು. ಇನ್ನು ಯಾವ ಹಂಚಿಕೆ ಮಾಡಬೇಕೆಂಬುದು ಬೇಗನೆ ಆತನಿಗೆ ಹೊಳೆಯದಾಯಿತು. ಅವನು ಮಲಗಲಿಕ್ಕಂತು ಹೋಗಲೇ ಇಲ್ಲ;

ಮನೋರಮೆಯ ಬಳಿಯಲ್ಲಿ ಆಕೆ ಮಾಡುವ ಮಾಲೆಯನ್ನು ಎವೆಯಿಕ್ಕದೆ ನೋಡುತ್ತ ಕುಳಿತು ಕೊಂಡನು. ಕಡೆಗೆ ಆತನ ಮನಸ್ಸಿನಲ್ಲಿ ಒಂದು ಕಲ್ಪನೆಯು ಹೊಳೆಯಿತು. ಎಷ್ಟಾದರೂ ಮನೋರಮೆಯು ಹೇಳಿ ಕೇಳಿ ಹೆಂಗಸು, ಆಕೆಯನ್ನಿಷ್ಟು ಅಂಜಿಸಿದರೆ ಮಾತಾಡಬಹುದು, ಎಂದು ಆತನು ಬಗೆದು ಅಂಜಿಸುವ ಉದ್ದೇಶದಿಂದ—

ಪಶು—ಮನೋರಮೇ, ಈಗ ಮುಸಲ್ಮಾನರು ಬಂದರೆ ನೀನು ಎತ್ತ ಹೋಗುವೆ?

ಮನೋ—(ಮಾಲೆಯನ್ನು ಕಟ್ಟುತ್ತ) ಮನೆಗೆ.

ಪಶು—ಅಲ್ಲಿ ನಿನ್ನನ್ನು ಯಾರು ರಕ್ಷಿಸುವರು?

ಮನೋ—ಪರಮೇಶ್ವರನು.

ಪಶು—ಒಳ್ಳೇದು, ನೀನು ಇಲ್ಲಿಗೆ ಯಾತಕ್ಕೆ ಬಂದಿದ್ದಿ?

ಮನೋ—ದೇವರಿಗೆ ನಮಸ್ಕಾರ ಮಾಡಲಿಕ್ಕೆ

ಮನೋರಮೆ ಈ ಉತ್ತರಗಳನ್ನು ಕೇಳಿ ಪಶುಪತಿಯು ತೀರಾ ಬೇಸತ್ತು—ಮನೋರಮೇ, ನಾನು ನಿನ್ನ ಕಾಲು ಬೀಳುತ್ತೇನೆ, ಕಾರಣವಿಲ್ಲದೆ ಹೀಗೆ ನನ್ನನ್ನು ಛಲಿಸಬೇಡ. ಮಾತಾಡು ನೀನು ನನ್ನೊಡನೆ ಪುನರ್ವಿವಾಹವನ್ನು ಮಾಡಿಕೊಳ್ಳುವಿಯೋ ಇಲ್ಲವೋ, ಇಂದೇ ನನಗೆ ಸ್ಪಷ್ಟವಾಗಿ ಹೇಳು.

ಓಡಿ ಹೋಗಿದ್ದ ಭಾವುಗವು ಸ್ವಲ್ಪ ಹೊತ್ತಿನ ಮೇಲೆ ಮನೋರಮೆಯ ಹತ್ತರಬಂದು ಕುಳಿತುಕೊಂಡಿತ್ತು, ಮನೋರಮೆಯ ಮಾಲೆಯೂ ಈಗ ಮುಗಿದಿತ್ತು ಆ ಕರೆ ಬಾವುಗನ ಕೊರಳಿಗೆ ಮಾಲೆಹಾಕುವದರಲ್ಲಿ ಆಕೆಯು ಮತ್ತೆ ತೊಡಗಿದಳು. ಅಂದಬಳಿಕ ಪಶುಪತಿಯ ಮಾತುಗಳು ಆಕೆಗೆ ನೆಟ್ಟಗೆ ಕೇಳಿಸಿದವೋ ಇಲ್ಲವೋ ಯಾರಿಗೆ ಗೊತ್ತು? ಯಾಕಂದರೆ ಆ ಮಾತುಗಳಿಗೆ ಮನೋರಮೆಯು ಉತ್ತರವನ್ನೇ ಕೊಡಲಿಲ್ಲ, ಇತ್ತ ಮನೋರಮೆಯು ಬಾವುಗವನ್ನು ಗಟ್ಟಿಯಾಗಿ ಹಿಡಿದು ಅದರ ಕೊರಳಿಗೆ ಮಾಲೆ ಹಾಕುತ್ತಿದ್ದಳು. ಭಾವುಗವು ಹಾಕಿಸಿಕೊಳ್ಳದೆ ತನ್ನ ಅಸಮ್ಮತಿಯನ್ನು ವ್ಯಕ್ತಪಡಿಸುತ್ತಿತ್ತು, ಬಾವುಗವು ತಲೆಜಾಡಿಸಿ ಮಾಲೆಯನ್ನು ನೆಲಕ್ಕೆ ಕೆಡವಬೇಕು, ಮನೋರಮೆಯು ಬಿದ್ದ ಮಾಲೆಯನ್ನು ಮತ್ತೆ ಮತ್ತೆ ಅದರ ಕೊರಳಿಗೆ ಹಾಕಲು ಯತ್ನಿಸಬೇಕು. ಇಬ್ಬರ ಕೆಲಸಗಳು ಎಡೆಬಿಡದೆ ನಡೆದಿದ್ದವು. ಒಬ್ಬರೂ ತಮ್ಮ ಹಟವನ್ನು ಬಿಡಲೊಲ್ಲರು. ಮನೋರಮೆಯು ನಗೆಮೊಗದಿಂದ ಆ ಲೀಲೆಯನ್ನು ನೋಡುತ್ತಿದ್ದಳು. ಆದರೆ ಇದನ್ನು ನೋಡುತ್ತಿದ್ದ ಪಶುಪತಿಯ ಸರ್ವಾಂಗವು ಕಾಯಹತ್ತಿತು. ಕಡೆಗೆ ಸಿಟ್ಟು ತಡೆಯದೆ ಆತನು ಬಾವುಗನ ಬೆನ್ನಿಗೆ ಒಮ್ಮೆ ಕಸುವಿನಿಂದ ಗುದ್ದಿದನು. ಕೂಡಲೇ ಬಾವುಗವು ಮೆವ್ ಗುಟ್ಟುತ್ತ ಓಡಿಹೋಯಿತು.! ಇದರಿಂದ ಮನೋರಮೆಯ ನಗೆಯು ಮತ್ತಿಷ್ಟು ಹೆಚ್ಚಾಯಿತು. ಆಕೆಯು ನಗುತ್ತ ನಗುತ್ತ ಆ ಮಾಲೆಯನ್ನು ಪಶುಪತಿಯ ಕೊರಳಿಗೆ ಹಾಕಿದಳು.

ಬೆಕ್ಕು ನಿರಾಕರಿಸಿದ್ದ ಮಾಲೆ ತನ್ನ ಕೊರಳಿಗೆ ಬಿದ್ದದ್ದನ್ನು ನೋಡಿ ಪಶುಪತಿಗೆ ಸ್ವಲ್ಪ ಸಿಟ್ಟು ಬಂದಿತು. ಆದರೆ, ಕುಂದದ ಮೊಗ್ಗೆಗಳನ್ನು ಹೀಯಾಳಿಸುವ ದಂತಪಂಗ್ತಿಯಿಂದೊಪ್ಪುವ

ಮನೋರಮೆಯ ನಗೆಮೊಗವನ್ನೂ, ಆಕೆಯ ಅಪೂರ್ವ ರೂಪಮಾಧುರಿಯನ್ನೂ ನೋಡಿ ಅರಕ್ಷಣದಲ್ಲಿ ಆತನ ಮೈಮೇಲಿನ ಎಚ್ಚರವು ತಪ್ಪಿತು. ತನ್ನ ಬಾಹುಪಾಶವನ್ನು ಪಸರಿಸಿ ಆಕೆಯನ್ನು ಅಪ್ಪಿಕೊಳ್ಳಲಿಕ್ಕೆ ಆತನು ಮುಂದುವರಿದನು; ಆದರೆ ಮನೋರಮೆಯು ನಾಗರಹಾವಿನಂತೆ ಕ್ರುದ್ಧವಾದ ಮುದ್ರೆಯನ್ನು ತಾಳಿ ಚಟ್ಟನೆ ಎದ್ದು ದೂರಸರಿದು ನಿಂತಳು. ಪಶುಪತಿಯು ತೀರಾ ನಾಚಿಕೊಂಡನು. ಬಹಳ ಹೊತ್ತಿನವರೆಗೆ ಮನೋರಮೆಯ ಮೋರೆಯ ಕಡೆಗೆ ನೋಡುವ ಧೈರ್ಯವೂ ಅವನಿಗಾಗಲೊಲ್ಲದು. ಕಡೆಗೆ ಅವನು ಕುಗ್ಗುತ್ತ ಕುಗ್ಗುತ್ತ— ಮನೋರಮೇ, ನನ್ನನ್ನು ಕ್ಷಮಿಸು. ನೀನು ನನ್ನ ಹೆಂಡತಿಯಾಗು, ನೀನು ನನ್ನನ್ನು ಸ್ವೀಕರಿಸು, ಎಂದನು. ಆಗ ಮನೋರಮೆಯು ಒಂದು ತೀವ್ರವಾದ ನೇತ್ರಕಟಾಕ್ಷವನ್ನು ಎಸೆದು ಪಶುಪತಿಯನ್ನು ಕುರಿತು—

ಮನೋ—ಕೇಶವನ ಕನ್ಯೆಯು ಎಲ್ಲಿ ಇದ್ದಾಳೆ?

ಪಶು—ಕೇಶವನ ಕನ್ಯೆಯು ಎಲ್ಲಿ ಇರುತ್ತಾಳೆಂಬದು ನನಗೆ ಗೊತ್ತಿಲ್ಲ, ಅದನ್ನು ತಿಳಕೊಳ್ಳುವ ಇಚ್ಛೆಯೂ ನನಗಿಲ್ಲ, ನೀನೊಬ್ಬಳೇ ನನ್ನ ಹೆಂಡತಿಯೆಂದು ಮಾತ್ರ ನಾನು ತಿಳಕೊಂಡಿದ್ದೇನೆ.

ಮನೋ—(ಗಂಭೀರ ಮುದ್ರೆಯಿಂದ) ಏನು? ಗೊತ್ತಿಲ್ಲವೋ? ಅದನ್ನು ತಿಳಕೊಳ್ಳುವ ಇಚ್ಛೆಯೂ ಇಲ್ಲವೋ? ಕೇಳಿರಿ ಹಾಗಾದರೆ, ಕೇಶವನ ಕನ್ಯೆಯು ಎಲ್ಲಿರುತ್ತಾಳೆಂಬದನ್ನೂ, ಆಕೆಯ ವರ್ತಮಾನವೇನೆಂಬುದನ್ನೂ ನಾನು ನಿಮಗೆ ಹೇಳುತ್ತೇನೆ.

ಮನೋರಮೆಯ ಈ ಮಾತುಗಳನ್ನು ಕೇಳಿ ಪಶುಪತಿಯು ಚಿತ್ರದೊಳಗಿನ ಗೊಂಬೆಯಂತೆ ಆಕೆಯ ಮೋರೆಯನ್ನು ಎವೆಯಿಕ್ಕದೆ ನೋಡುತ್ತ ನಿಂತುಕೊಂಡನು. ಆಗ ಮನೋರಮೆಯು ಮುಂದೆ ಮಾತಾಡತೊಡಗಿದಳು. ಒಬ್ಬ ಜ್ಯೋತಿಷಿಯು ಕೇಶವನ ಕನ್ಯೆಯ ಜನ್ಮ ಪತ್ರಿಕೆಯನ್ನು ನೋಡಿ, ಆಕೆಯು ಲಗ್ನವಾದ ಬಳಿಕ ಪತಿಯ ಸಹವಾಸ ಸೌಖ್ಯವನ್ನು ಭೋಗಿಸದೆ ಸ್ವಲ್ಪ ಕಾಲದಲ್ಲಿಯೇ ವಿಧವೆಯಾಗಿ ಪತಿಯೊಡನೆ ಸಹಗಮನ ಮಾಡುವಳೆಂದು ಭವಿಷ್ಯವನ್ನು ಹೇಳಿದ್ದನು. ಇದನ್ನು ಕೇಳಿ ಕೇಶವನು ತನ್ನ ಒಬ್ಬಳೇ ಮಗಳ ವಿಯೋಗದುಃಖವನ್ನು ಸ್ಮರಿಸಿ ಧೈರ್ಯಗೆಟ್ಟು, ವಿಧಿಲಿಖಿತವನ್ನು ತಪ್ಪಿಸುವ ಸಾಹಸದಿಂದ ಲಗ್ನವಾದ ರಾತ್ರಿಯೇ ಮಗಳಾದ ಹೇಮವತಿಯನ್ನು ಕಟ್ಟಿಕೊಂಡು ಪ್ರಯಾಗಕ್ಷೇತ್ರಕ್ಕೆ ಓಡಿಹೋದನು. ತನ್ನ ಕನ್ಯೆಯ ಕಿವಿಗೆ ಪತಿಯ ಮರಣವಾರ್ತೆಯು ಮುಟ್ಟಬಾರದೆಂಬುದೇ ಆತನ ಉದ್ದೇಶವು. ಪತಿ ಮರಣ ವಾರ್ತೆಯೇ ಹತ್ತದೆ ಇದ್ದ ಬಳಿಕ ಮಗಳು ಸಹಗಮನ ಮಾಡುವ ಪ್ರಸಂಗವಿಲ್ಲೆಂತಲೂ, ಸಹಗಮನ ಮಾಡದಿದ್ದರೆ ಮಗಳ ವಿಯೋಗ ದುಃಖವು ಒದಗದೆಂತಲೂ ಆತನು ಭಾವಿಸಿದ್ದನು. ಆ ಪ್ರೇಮಲ ಸ್ವಭಾವದ ತಂದೆಯ ಇಚ್ಛೆಯು ಬಹುಮಟ್ಟಿಗೆ ಪೂರ್ಣವಾಯಿತು. ಆತನಿಗೆ ತನ್ನ ಪ್ರೀತಿಯ ಮಗಳ ವಿಯೋಗ ದುಃಖವನ್ನನುಭವಿಸುವ ಪ್ರಸಂಗವೇ ಬರಲಿಲ್ಲ, ಆದರೆ ದುರ್ದೈವಿಯಾದ ಮಗಳಿಗೆ ಮಾತ್ರ ಪತಿಯ ವಿಯೋಗ ದುಃಖದೊಡನೆ ತಂದೆಯ ವಿಯೋಗ ದುಃಖವನ್ನೂ ಅನುಭವಿಸುವ ಪ್ರಸಂಗ ಒದಗಿತು. ಕೇಶವನು ವೃದ್ಧಾಪ್ಯದ ಮೂಲಕ ಪ್ರಯಾಗ

ಕ್ಷೇತ್ರದಲ್ಲಿ ಮರಣಹೊಂದಿದನು. ಹೇಮವತಿಗೆ ಕಠಿಣ ಪ್ರಸಂಗವು ಒದಗಿತು. ಆಕೆಯ ತಾಯಿಯು ಚಿಕ್ಕಂದಿನಲ್ಲಿಯೇ ತೀರಿಕೊಂಡಿದ್ದಳು. ಹೇಮವತಿಯು ತೀರಾ ನಿರಾಶ್ರಿತಳಾದಳು. ಮಗಳಿಗೆ ಮುಂದೆ ಒದಗಬಹುದಾದ ಕಷ್ಟವನ್ನು ಮನಸ್ಸಿನಲ್ಲಿ ತಂದು ಕೇಶವನು ಮರಣ ಕಾಲದಲ್ಲಿ ತನ್ನ ಒಬ್ಬ ಮಿತ್ರನನ್ನು ಕುರಿತು ತನ್ನ ಅನಾಥೆಯಾದ ಮಗಳನ್ನು ರಕ್ಷಿಸಬೇಕೆಂತಲೂ ಪಶುಪತಿಯೊಡನೆ ಆದ ಲಗ್ನದ ವರ್ತಮಾನವನ್ನು ಯಾರ ಮುಂದೂ ಹೇಳಬಾರದೆಂತಲೂ ಹೇಳಿ, ಹಾಗೆ ಮಾಡುವಂತೆ ಆತನಿಂದ ವಚನವನ್ನು ತಕ್ಕೊಂಡು. ಕೇಶವನ ಮಿತ್ರನು ತಾನು ಕೊಟ್ಟ ವಚನವನ್ನು ಇಲ್ಲಿಯವರೆಗೆ ಪಾಲಿಸಿದನು. ಹೇಮವತಿಯನ್ನು ಹೊಟ್ಟೆಯ ಮಗಳಂತೆ ರಕ್ಷಿಸಿ ನಿಮ್ಮೊಡನೆ ಆದ ಆಕೆಯ ಲಗ್ನದ ವರ್ತಮಾನವನ್ನು ಬಚ್ಚಿಟ್ಟನು.

ಚಮತ್ಕಾರದ ಈ ವೃತ್ತಾಂತವನ್ನು ಕೇಳಿ ಪಶುಪತಿಯು ಸೋಜಿಗಗೊಂಡು— ಹೇಮವತಿಯು ಈಗ ಎಲ್ಲಿ ಇದ್ದಾಳೆಂದು ಮನೋರಮೆಯನ್ನು ಕೇಳಿದನು. ಅದಕ್ಕೆ ಮನೋರಮೆಯು—ಎಲ್ಲಿರುವಳೆಂದು ಕೇಳುವಿರೋ? ತಮ್ಮ ಮುಂದೆ ನಿಂತುಕೊಂಡಿರುವ ಮನೋರಮೆಯೇ ಕೇಶವನ ಮಗಳಾದ ಹೇಮವತಿಯು! ಜನಾರ್ದನನು ನನ್ನ ತಂದೆಯ ಮಿತ್ರನು.

ಪಶುಪತಿಯ ಮಸ್ತಕವು ಪರಿಭ್ರಮಿಸಹತ್ತಿತು. ತನಗೆ ಕನಸು ಬಿದ್ದಿರುವದೋ, ತಾನು ಎಚ್ಚತ್ತಿರುವೆನೋ ಎಂಬದರ ನಿರ್ಣಯವೇ ಅವನಿಗೆ ಆಗಲೊಲ್ಲದು. ಕೆಲಹೊತ್ತಿನ ಮೇಲೆ ಅವನು ಎಚ್ಚತ್ತು ದುರ್ಗಾದೇವಿಗೆ ಸಾಷ್ಟಾಂಗ ನಮಸ್ಕಾರವನ್ನು ಮಾಡಿದನು. ಆ ಮೇಲೆ ಎದ್ದು ಅಶ್ರುಪೂರ್ಣವಾದ ಲೋಚನೆಗಳಿಂದ ಮನೋರಮೆಯನ್ನು ಎದೆಗವಚಿಕೊಳ್ಳಲಿಕ್ಕೆ ಮುಂದುವರಿದನು. ಮನೋರಮೆಯು ಮೊದಲಿನಂತೆ ತಟ್ಟನೆ ಹಿಂದಕ್ಕೆ ಸರಿದು ನಿಂತು—ಹ! ದೂರಸರಿಯಿರಿ, ಎಂದಳು. ಆಗ ಪಶುಪತಿಯು ಸಂತಪ್ತನಾಗಿ—

ಪಶು—ರಾಕ್ಷಸಿಯೇ, ಇಷ್ಟು ದಿವಸ ಈ ಸುದ್ದಿಯನ್ನು ನನಗೆ ಯಾಕೆ ತಿಳಿಸಲಿಲ್ಲ?

ಮನೋ—ನೀವು ನನ್ನ ಮಾತಿನ ಮೇಲೆ ವಿಶ್ವಾಸವನ್ನಾದರೂ ಇಡುತ್ತಿದ್ದಿರಾ?

ಪಶು—ಮನೋರಮೇ, ನೀನೇಕೆ ಹೀಗೆ ನನ್ನನ್ನು ಅಳುಕಿಸುತ್ತೀ? ನಾನು ಎಂದಾದರೂ ನಿನ್ನ ಮಾತಿನ ಮೇಲೆ ಅವಿಶ್ವಾಸ ಮಾಡಿದ್ದೆನೋ? ಒಂದುವೇಳೆ ನನಗೆ ಸಂಶಯವೆ ಬಂದಿದ್ದರೆ ಜನಾರ್ಧನನನ್ನು ಕೇಳಿ ಸಂಶಯ ನಿವೃತ್ತಿಯನ್ನು ಮಾಡಿಕೊಳ್ಳುತ್ತಿದ್ದೆನು.

ಮನೋ—ಮರಣಕಾಲಕ್ಕೆ ನನ್ನ ತಂದೆಗೆ ವಚನ ಕೊಟ್ಟಿರುವದರಿಂದ ಜನಾರ್ಧನನು ಈ ಸುದ್ದಿಯನ್ನು ತಮಗೆ ಹೇಳುತ್ತಿದ್ದಿಲ್ಲ.

ಪಶು—ಹಾಗಾದರೆ ಅವನು ನಿನಗೆ ಈ ಸುದ್ದಿಯನ್ನು ಹೇಗೆ ಹೇಳಿದನು?

ಮನೋ—ಅವನೇನು ನನಗೆ ಈ ಸುದ್ದಿಯನ್ನು ಹೇಳಿದವನಲ್ಲ, ಒಂದುದಿನ ಜನಾರ್ಧನನು ಏಕಾಂತದಲ್ಲಿ ತನ್ನ ವೃದ್ಧ ಪತ್ನಿಯ ಮುಂದೆ ಈ ಸುದ್ದಿಯನ್ನು ಹೇಳುತ್ತಿದ್ದನು. ದೈವಯೋಗದಿಂದ ನಾನು ಹತ್ತಿರದ ಕೋಣೆಯಲ್ಲಿ ಇದ್ದುದರಿಂದ ಆ ಸುದ್ದಿಯು ನನಗೆ ಕೇಳಿಸಿತು. ನಾನು ವಿಧವೆಯೆಂದು ಎಣಿಸಲ್ಪಡುತ್ತಿರುವೆನು. ಒಂದು ವೇಳೆ ತಾವು ನನ್ನ ಮಾತಿನ

ಮೇಲೆ ವಿಶ್ವಾಸವಿಡುತ್ತಿದ್ದಿರಿ; ಆದರೆ ಇತರರು ನನ್ನ ಮಾತನ್ನು ಹೇಗೆ ನಂಬುತ್ತಿದ್ದರು? ಅಂದಬಳಿಕ ಲೋಕನಿಂದೆಗೆ ಗುರಿಯಾಗದೆ ನನ್ನ ಪಾಣಿಗ್ರಹಣವನ್ನು ನೀವು ಹೇಗೆ ಮಾಡುತ್ತಿದ್ದಿರಿ?

ಪಶು—ನಾನು ಎಲ್ಲ ಜನರನ್ನು ಒಟ್ಟುಗೂಡಿಸಿ ಈ ವರ್ತಮಾನವನ್ನು ಸ್ಪಷ್ಟವಾಗಿ ತಿಳಿಸುತ್ತಿದ್ದೆನು.

ಮನೋ—ಒಂದು ವೇಳೆ ಜನರು ಒಪ್ಪಿಕೊಳ್ಳುತ್ತಿದ್ದರೆಂದು ಭಾವಿಸೋಣ; ಆದರೆ ಜ್ಯೋತಿಷಿಯು ಹೇಳಿದ ಭವಿಷ್ಯದ ಗತಿಯೇನು?

ಪಶು—ನಾನು ಗ್ರಹಶಾಂತಿಯನ್ನು ಮಾಡಿಸುತ್ತಿದ್ದೆನು. ಇರಲಿ, ಆಗುವದಾಗಿ ಹೋಗಿದೆ. ಅದಕ್ಕಾಗಿ ದುಃಖಿಸುವದರಲ್ಲಿ ಅರ್ಥವಿಲ್ಲ. ಈಗ ಹಕ್ಕಿನಿಂದ ಪ್ರಾಪ್ತವಾಗಿದ್ದ ರತ್ನವನ್ನು ನಾನು ಎಂದೂ ಉದಾಸೀನಮಾಡಿ ಬಿಡಲಿಕ್ಕಿಲ್ಲ. ಹಗಲು ರಾತ್ರಿ ಅದನ್ನು ಕೊರಳಲ್ಲಿ ಧರಿಸುವೆನು. ಮನೋರಮೇ, ನೀನು ನನ್ನ ಧರ್ಮಪತ್ನಿಯಿರುತ್ತೀ. ನಿನ್ನ ಮೇಲೆ ನನ್ನ ಅಧಿಕಾರವಿರುವದು. ಈಗ ನಾನು ನಿನ್ನನ್ನು ಇಲ್ಲಿಂದ ಹೋಗಗೊಡುವದಿಲ್ಲ.

ಮನೋ—(ಗಂಭೀರವಾಣಿಯಿಂದ) ಈ ಮನೆಯನ್ನು ನಾನಷ್ಟೇ ಅಲ್ಲ, ನೀವೂ ಬಿಡಬೇಕಾದೀತು. ನಾನು ಇದೇ ಮಾತನ್ನು ಹೇಳಲಿಕ್ಕೆ ಬಂದಿದೆನು. ಈ ಮನೆಯನ್ನು ಬಿಟ್ಟುಬಿಡಿರಿ, ರಾಜ್ಯಲೋಭದ ನಿಮ್ಮ ದುಷ್ಟವಾದ ಅಭಿಲಾಷೆಯು ಅಳಿದು ಹೋಗಲಿ. ನಿಮ್ಮ ಪ್ರಭುವಿನ ಅನಿಷ್ಟವನ್ನು ಚಿಂತಿಸಬೇಡಿರಿ. ಈ ದೇಶವನ್ನು ಬಿಟ್ಟು, ಕಾಶೀಕ್ಷೇತ್ರದಲ್ಲಿ ವಾಸಮಾಡೋಣ. ಅಲ್ಲಿ ನಾನು ತಮ್ಮ ಚರಣಗಳನ್ನು ಸೇವಿಸಿ ಆಯುಷ್ಯವನ್ನು ಸಾರ್ಥಕ ಮಾಡಿಕೊಳ್ಳುವೆನು. ಆಮೇಲೆ ಒಮ್ಮೆಲೆ ಪರಲೋಕಕ್ಕೆ ಹೋಗೋಣವಂತೆ. ತಾವು ನನ್ನ ಈ ಮಾತಿಗೆ ಒಪ್ಪಿಕೊಂಡರೆ ಮಾತ್ರ ತಮ್ಮ ಮೇಲಿದ್ದ ನನ್ನ ಭಕ್ತಿಯು ಸ್ಥಿರವಾಗಿ ಉಳಿಯುವದು. ಇಲ್ಲದಿದ್ದರೆ......ಎಂದು ನುಡಿಯುತ್ತಿರಲು, ಪಶುಪತಿಯು ನಡುವೇ ಬಾಯಿಹಾಕಿ ''ಇಲ್ಲದಿದ್ದರೆ ಏನು ಮಾಡುತ್ತೀ?'' ಎಂದು ಕೇಳಿದನು. ಆಗ ಮನೋರಮೆಯು ದೇವಿಯ ಮುಂದೆ ನಿಂತು ಕಣ್ಣಲ್ಲಿ ನೀರು ತುಂಬಿಕೊಂಡು ಕರುಣಾವಾಣಿಯಿಂದ—ಈ ಜಗದಂಬೆಯ ಚರಣವನ್ನು ಸ್ಮರಿಸಿ ಪ್ರತಿಜ್ಞೆ ಮಾಡುತ್ತೇನೆ, ನೀವು ನನ್ನ ಮಾತು ನಡಿಸದಿದ್ದರೆ ಇದೇ ಕಡೆಯ ಭೆಟ್ಟಿಯೆಂದು ತಿಳಿಯಿರಿ, ಎಂದು ಹೇಳಿದಳು. ಆಗ ಪಶುಪತಿಯು ದೇವಿಯ ಮುಂದೆ ನಿಂತುಕೊಂಡು—ಮನೋರಮೇ, ನಾನೂ ಪ್ರತಿಜ್ಞೆಮಾಡುತ್ತೇನೆ ಕೇಳು. ನಾನು ಜೀವದಿಂದಿರುವವರೆಗೆ ನೀನು ಈ ಮನೆಯಿಂದ ಹೊರಗೆ ಹೋಗಲಾರೆ! ನಾನು ಹಿಡಿದ ಹಾದಿಯಿಂದ ಹಿಂದಕ್ಕೆ ತಿರುಗುವ ಹಾಗಿದ್ದರೆ ನಿನ್ನ ಮಾತಿನಂತೆ ಸಂತೋಷದಿಂದ ಹಿಂದಿರುಗುತ್ತಿದ್ದೆನು; ಆದರೆ ಹಿಂದಿರುಗದಷ್ಟು ದೂರ ಹೋಗಿದ್ದೇನೆ. ಗಂಟು ಗಟ್ಟಿಯಾಗಿ ಬಿದ್ದದೆ, ಉಚ್ಚುವ ಹಾಗಿಲ್ಲ. ಪ್ರಬಲವಾದ ಪ್ರವಾಹದ ಎಳತಕ್ಕೆ ನಾವೆಯು ಸಿಕ್ಕಿದೆ, ತಿರುಗಿಸುವಹಾಗಿಲ್ಲ. ಆಗಿರುವದೆಲ್ಲ ಆಗಿ ಹೋಗಿರುವದು. ಮನೆಗೆ ಬಂದಿರುವ ಲಕ್ಷ್ಮಿಯನ್ನು ಕಾಲಿನಿಂದ ಒದೆಯುವರೆ, ನೀನು ಹೆಂಗಸು, ನಿನಗಿಂತಲೂ ನಾನು ಹೆಚ್ಚು ತಿಳಿದವನಿರುತ್ತೇನೆ. ಮನೋರಮೇ, ಏನೇ ಇರಲಿ,

ನನ್ನ ದೈವದಲ್ಲಿದ್ದದ್ದಾಗಲಿ. ನೀನು ನನ್ನ ಧರ್ಮಪತ್ನಿಯೆಂಬದನ್ನು ಚನ್ನಾಗಿ ನೆನಪಿನಲ್ಲಿಡು. ಸ್ವಲ್ಪ ನಿಲ್ಲು, ಈಗ ಹೊರಗೆ ಹೋಗಿ ಬರುತ್ತೇನೆ, ಎಂದು ಪಶುಪತಿಯು ದೇವಿಯ ಮಂದಿರದಿಂದ ಹೊರಬಿದ್ದನು. ಆತನು ಹೊರಗೆ ಹೋದ ಕಾರಣವನ್ನು ಚಾಣಾಕ್ಷಳಾದ ಮನೋರಮೆಯು ಕಂಡುಹಿಡಿದಳು. ಪಶುಪತಿಯು ಮಂದಿರದ ಬಾಗಿಲುಗಳನ್ನೆಲ್ಲ ಇಕ್ಕಿಸಿ ಹೊರಗೆ ಬಲವಾದ ಕಾವಲಿಟ್ಟು ತಿರುಗಿ ಒಳಗೆ ಬಂದು—ಪ್ರಾಣೇಶ್ವರಿಯೇ, ಇನ್ನು ನೀನು ಈ ಮನೆಬಿಟ್ಟು ಹೋಗದಂತೆ ತಕ್ಕ ವ್ಯವಸ್ಥೆಯನ್ನು ಮಾಡಿರುವೆನು, ಎಂದು ಹೇಳಿದನು. ಅದನ್ನು ಕೇಳಿ ಮನೋರಮೆಯು ಕುಂಠಿತಳಾದಳು.

ದುಃಖದ ಪರಮಾವಧಿಯು

ಮದ್ಯಾಹ್ನದ ಸಮಯದಲ್ಲಿ ಯಾವನೋ ಪರರಾಜನ ಹದಿನೇಳು ಮಂದಿ ಕುದುರೆಯ ಸವಾರರು ರಾಜಮಂದಿರದ ಕಡೆಗೆ ಒಳ್ಳೆಯ ವೇಗದಿಂದ ಸಾಗಿದ್ದರು. ಅವರನ್ನು ನೋಡಿ ಪಟ್ಟಣದೊಳಗಿನ ಜನರು ಬೆರಗಾದರು. ಆ ಸವಾರರ ಭವ್ಯಾಕೃತಿಗಳಿಗಾಗಿ ನವದ್ವೀಪದ ಪ್ರಜೆಗಳು ಮನಸ್ಸಿನಲ್ಲಿ ಅವರನ್ನು ಹೊಗಳಹತ್ತಿದರು. ಅವರ ನಿಲುವಿಕೆ ಎತ್ತರವಾಗಿದ್ದು ಮೈಕಟ್ಟು ಪುಷ್ಟವಾಗಿತ್ತು ಮೈಬಣ್ಣವು ಕಾದ ಬಂಗಾರವನ್ನು ಹೋಲುತ್ತಿತ್ತು ಕೆಂಪು ಮೋಡದಂತೆ ಒಪ್ಪುತ್ತಿರುವ ಗಡ್ಡಗಳಿಂದ ಅವರ ಮುಖಮುದ್ರೆಯು ಭವ್ಯವಾಗಿ ತೋರುತ್ತಿತ್ತು ಅವರ ವಿಶಾಲವಾದ ಕಣ್ಣುಗಳು ಹೊಳಪುಳ್ಳವಾಗಿದ್ದವು. ಉಡಪು—ತೊಡಪುಗಳು ಸಾಧಾರಣ ತರದವೇ ಇದ್ದರೂ ಅವು ಮೈಗೆ ನಡುವಂತೆ ಇದ್ದವು. ಎಲ್ಲರ ಮುಖಮುದ್ರೆಯಲ್ಲಿ ಸಂಪೂರ್ಣವಾದ ಕಳೆಯು ಉಕ್ಕುತ್ತಿತ್ತು, ಅವರು ಹತ್ತಿದ ಕುದುರೆಗಳು ಒಳ್ಳೇ ಚಿತ್ತಾಕರ್ಷಕವಾಗಿದ್ದವು. ನವದ್ವೀಪದೊಳಗಿನ ಜನರು ಇಂಥ ಬೆಟ್ಟದಂಥ ವಿಶಾಲ ದೇಹದ ಕುದುರೆಗಳನ್ನು ಎಂದೂ ನೋಡಿದ್ದಿಲ್ಲ! ನಗರವಾಸಿಗಳಾದ ಜನರು ಅಲ್ಲಲ್ಲಿ ನಿಂತುಕೊಂಡು ಅವರನ್ನು ಮಿಕಿ ಮಿಕಿ ನೋಡಹತ್ತಿದರು.

ಹದಿನೇಳು ಮಂದಿ ಸವಾರರೂ ಚಕಾರಶಬ್ದ ಮಾಡದೆ ನೆಟ್ಟಗೆ ರಾಜಮಂದಿರದ ಕಡೆಗೆ ನಡೆದಿದ್ದರು. ಪಶುಪತಿಯ ಅಪ್ಪಣೆಯಂತೆ ಶಾಂತಶೀಲನು ಕೋಷ್ಠಪಾಲರಿಗೂ, ಪ್ರಾಂತಪಾಲರಿಗೂ ಮೊದಲೇ ಹೇಳಿದ್ದರಿಂದ ಹಾದಿಯಲ್ಲಿ ಆ ಸವಾರರನ್ನು ಯಾರೂ ಪ್ರತಿಬಂಧಿಸಲಿಲ್ಲ, ತೊಂದರೆಯಿಲ್ಲದೆ ನಗರದಲ್ಲಿ ಅವರ ಪ್ರವೇಶವಾಯಿತು. ಹಾ ಹಾ! ಅನ್ನುವದರೊಳಗಾಗಿ ಅವರು ರಾಜಮಂದಿರದ ಬಳಿಗೆ ಬಂದು ಮುಟ್ಟಿದರು. ಮುದಿ ಅರಸನ ದೌರ್ಬಲ್ಯದಿಂದಲೂ, ಪಶುಪತಿಯು ಮೊದಲ ವ್ಯೂಹವನ್ನು ರಚಿಸಿಟ್ಟಿದ್ದರಿಂದಲೂ ಪಟ್ಟಣವು ದೈನ್ಯಾವಸ್ಥೆಯನ್ನು ಹೊಂದಿತ್ತು, ರಾಜ್ಯದಲ್ಲಿಯ ಸರದಾರರಿಗೂ, ಸೈನಿಕರಿಗೂ ಸುಮ್ಮನೆ ಕೂಡುವಂತೆ ಅಪ್ಪಣೆಮಾಡಿದ್ದರಿಂದ, ಈಗ್ಗೆ ನಗರದಲ್ಲಿ ದುರ್ಬಲರೂ, ಶಸ್ತ್ರಹೀನರೂ ಆದ

ಪ್ರಜೆಗಳು ಮಾತ್ರ ಉಳಿದಿದ್ದರು. ರಾಜಮಂದಿರದ ಬಾಗಿಲಲ್ಲಿ ಸ್ವಲ್ಪ ಜನ ಸಿಪಾಯರು ಕಾವಲಾಗಿ ನಿಂತಿದ್ದರು. ಈ ವಿಚಿತ್ರಾಕಾರದ ಕುದುರೆಯ ಸವಾರರು ಅವಸರದಿಂದ ರಾಜ ಮಂದಿರದ ಕಡೆಗೆ ಬರುವದನ್ನು ನೋಡಿ ಆ ಸಿಪಾಯಿಗಳಲ್ಲಿ ಒಬ್ಬನು ಆ ಸವಾರನನ್ನು ಕುರಿತು—ನೀವು ಇತ್ತಕಡೆಗೆ ಯಾಕೆ ಬಂದಿರಿ? ಇಷ್ಟು ಅವಸರದಿಂದ ಹೋಗುವದೆತ್ತ? ಎಂದು ಕೇಳಿದನು. ಅದಕ್ಕೆ ಒಬ್ಬ ಸವಾರನು ತಡಮಾಡದೆ—ನಾವು ಮುಸಲ್ಮಾನ ಬಾದಶಹನ ದೂತರು, ಅರಸನನ್ನು ಕಾಣುವದಕ್ಕಾಗಿ ಹೋಗುತ್ತೇವೆ, ಎಂದು ಉತ್ತರವನ್ನು ಕೊಡಲು, ಅದಕ್ಕೆ ಕಾವಲುಗಾರನು—ಮಹಾರಾಜರು ಅಂತಃಪುರದಲ್ಲಿರುವರು, ಈಗ ಅವರ ದರ್ಶನ ವಾಗಲಾರದು. ನೀವು ಸ್ವಲ್ಪ ಹೊತ್ತು ನಿಂತುಕೊಳ್ಳಿರಿ, ಒಳಗೆ ಹೋಗಿ ಕೇಳಿಬರುತ್ತೇನೆ, ಎಂದನು; ಆದರೆ ಆ ಸವಾರನು—''ನಮಗೆ ನಿಲ್ಲಲಿಕ್ಕೆ ಅವಕಾಶವಿಲ್ಲ'' ಎಂದು ಹೇಳಿ ಸಿಂಹದ್ವಾರದಿಂದ ಒಳಗೆ ನುಗ್ಗತೊಡಗಿದನು. ಅವನ ಈ ಅತಿಪ್ರಸಂಗವನ್ನು ನೋಡಿ ಎರಡನೆಯ ಕಾವಲುಗಾರನು ಮುಂದುವರಿದು ಬಂದು ಕೈಯೊಳಗಿನ ಬರ್ಚಿಯನ್ನು ಎತ್ತಿ ಗದ್ದರಿಸಿ—ಏ, ಹಿಂದಕ್ಕೆ ಸರಿ, ಇಲ್ಲದಿದ್ದರೆ ತುಂಡರಿಸೇನು, ಎಂದನು.

''ಹಾಗಾದರೆ ನೀನೇ ಸಾಯಿ'' ಎಂದು ಮರ್ಕಟಾಕಾರದ ಸವಾರನು ಟೊಂಕದೊಳಗಿನ ಖಡ್ಗವನ್ನು ತಕ್ಕೊಂಡು ಅರಕ್ಷಣದಲ್ಲಿ ಆ ಬಡಕಾವಲುಗಾರನ ಚಂಡನ್ನು ತುಂಡರಿಸಿದನು. ಕೂಡಲೆ ಉಳಿದ ಹದಿನಾರು ಮಂದಿ ಸವಾರರ ಖಡ್ಗಗಳೂ ಹೊಳೆಯಹತ್ತಿ ಅವು ಕಣ್ಣುಮುಚ್ಚಿ ಕಣ್ಣು ತೆರೆಯುವದರೊಳಗಾಗಿ ಕಾವಲುಗಾರರನ್ನು ನೆಲಕ್ಕುರುಳಿಸಿದವು. ಪಾಪ! ಕಾವಲು ಗಾರರು ಮೈಮರೆತವರಾದ್ದರಿಂದ ತಮ್ಮ ರಕ್ಷಣವನ್ನು ಮಾಡಿಕೊಳ್ಳಲು ಸಮರ್ಥರಾಗಲಿಲ್ಲ. ಆ ಸವಾರರ ಖಡ್ಗಗಳಿಗೆ ಎಲ್ಲರೂ ತುತ್ತಾದರು. ಇದೇನು ಗದ್ದಲವೆಂದು ಹಾ ಹಾ ಅನ್ನುವದರೊಳಗೆ ಅಲ್ಲಿ ಜನಸಮೂಹವು ನೆರೆಯಿತು. ಮೊದಲೇ ಕ್ರೂರರಾದ ಆ ತುರ್ಕ ಸವಾರರು, ರಕ್ತಪ್ರವಾಹ ವನ್ನು ನೋಡಿದ ಕೂಡಲೆ, ಮತ್ತಿಷ್ಟು ಸ್ಫುರಣಗೊಂಡು ಕೂಡಿದ ಜನರನ್ನು ಕೊಲ್ಲುವದಕ್ಕಾಗಿ ''ದೀನ ದೀನ'' ಎಂದು ತಮ್ಮ ಕುದುರೆಗಳನ್ನು ನಾಲ್ಕೂ ಕಡೆಗೆ ನೂಕಿದರು. ಕೇಳುವದೇನು, ನಿಃಶಸ್ತ್ರರಾದ ದೀನ ಪ್ರಜೆಗಳ ಮೇಲೆ ಹದಿನೇಳು ಮಂದಿ ಸವಾರರ ಜಗಿತವು, ಕುರಿಯ ಹಿಂಡಿನ ಮೇಲೆ ತೋಳಗಳು ಜಿಗಿದಂತಾಯಿತು! ಆ ಗದ್ದಲದಲ್ಲಿ ಒಬ್ಬರಮೇಲೊಬ್ಬರು ಅಪ್ಪಳಿಸಿ ಎಷ್ಟೋ ಜನರು ಸತ್ತರು. ಎಷ್ಟೋ ಜನರು ಭಯದಿಂದಲೇ ಮರಣಹೊಂದಿದರು. ಉಳಿದವರನ್ನು ಆ ಯಮದೂತರು ಹೇಚು ಪೇಚು ನೋಡದೆ ತುಂಡರಿಸಿ ಚಲ್ಲಿದರು. ಅವರು ಮುದುಕರೆನ್ನಲಿಲ್ಲ, ಅಶಕ್ತರೆನ್ನಲಿಲ್ಲ, ಹೆಳವರೆನ್ನಲಿಲ್ಲ, ಹೆಂಗಸರೆನ್ನಲಿಲ್ಲ, ಹುಡುಗರೆನ್ನಲಿಲ್ಲ! ಕೈಗೆ ಸಿಕ್ಕವರನ್ನು ನೆಲಕ್ಕುರುಳಿಸಿದರು. ಪಟ್ಟಣದೊಳಗಿನ ಜನರು ಹಾದಿಸಿಕ್ಕತ್ತ ಅಸ್ತವ್ಯಸ್ತವಾಗಿ ಓಡತೊಡಗಿದರು. ನೋಡಿದತ್ತೆಲ್ಲ ಹಾಹಾಕಾರವುಂಟಾಯಿತು. ಸ್ವಲ್ಪ ವೇಳೆಯಲ್ಲಿಯೇ ಈ ಸುದ್ದಿಯು ರಾಜಮಂದಿರದೊಳಗೂ ಬಂದು ಮುಟ್ಟಿತು. ಆಗ ಅಲ್ಲಿ ಉಂಟಾದ ಆ ಆಕ್ರೋಶವನ್ನು ವರ್ಣಿಸಲಸಾಧ್ಯವು. ''ಯವನರು ಪಟ್ಟಣವನ್ನು ಪ್ರವೇಶಿಸಿ, ಪ್ರಜೆಗಳನ್ನು ಕೊಲ್ಲುತ್ತ ತನ್ನ ಕಡೆಗೆ ಬರುತ್ತಿರುವರು'' ಎಂಬ ಭಯಂಕರವಾದ ಸುದ್ದಿಯು ಕಿವಿಗೆ ಬಿದ್ದ

ಕೂಡಲೆ ಮುದಿ ಅರಸನ ಸೊಂಡೆಯು ಒಣಗಿಹೋಯಿತು. ಆತನು ಬಾಯೊಳಗೆ ಹಾಕಿಕೊಳ್ಳ ಬೇಕೆಂದು ತಕ್ಕೊಂಡಿದ್ದ ತುತ್ತು ಕೈಯಲ್ಲಿಯೇ ಉಳಿದು, ಗದಗದ ನಡುಗಹತ್ತಿದನು. ಪಟ್ಟದ ರಾಣಿಯು ಅಲ್ಲಿಯೇ ಇದ್ದಳು. ಆಕೆಯು ಮೂರ್ಛೆಬಂದು ಬೀಳುವ ಅರಸನನ್ನು ಸಾವರಿಸಿ ಹಿಡಿದು, ಒಳ್ಳೆಯ ಪ್ರಸಂಗಾವ ಧಾನವನ್ನು ಕಾಯ್ದುಕೊಂಡು, ರಾಜಮಂದಿರದ ಪಶ್ಚಿಮದ ಬಾಗಿಲಲ್ಲಿ ನದಿಯೊಳಗೆ ಸಿದ್ದಪಡಿಸಿ ಇಟ್ಟಿದ್ದ ನಾವಿನಲ್ಲಿ ಆತನನ್ನು ಕುಳ್ಳಿರಿಸಿದಳು. ಅರಕ್ಷಣದಲ್ಲಿ ನಾವೆಯು ತೀವ್ರವಾಗಿ ಹೊರಟುಹೋಯಿತು. ಇತ್ತ ಆ ಬಖತ್ಯಾರಖಿಲಜಿಯು ತನ್ನ ಹದಿನಾರು ಜನ ಸಂಗಡಿಕರೊಡನೆ ರಾಜಮಂದಿರವನ್ನು ಪ್ರವೇಶಿಸಿ ಸಿಂಹಾಸವನ್ನು ಕೈಸೇರಿಸಿಕೊಂಡನು. ಆ ರಾಜಕುಲಕಳಂಕನಾದ ಮುದಿ ಅರಸನ ಸಂಗಡ ಗೌಡದೇಶದ ರಾಜ್ಯಲಕ್ಷ್ಮಿಯೂ ಹೊರಟು ಹೋದಳು.

ಈ ಸಂಗತಿಯು ಒದಗಿ ಅರವತ್ತು ವರ್ಷಗಳಾದ ಮೇಲೆ ಮುಸಲ್ಮಾನ ಇತಿಹಾಸಕಾರನಾದ ಮಿನಹಾಚಉದ್ದೀನನು ಮೇಲೆ ಹೇಳಿದಂತೆ ತನ್ನ ಪುಸ್ತಕದಲ್ಲಿ ವರ್ಣಿಸಿರುವನು. ಇದರಲ್ಲಿ ಸಟಿಯೆಷ್ಟೋ ದಿಟವೆಷ್ಟೋ ದೇವರೇ ಬಲ್ಲ! ಮೊದಲೇ ಜಾತ್ಯಾ ದುರ್ಬಲವಾದ ಗೌಡದೇಶವು; ಅದರಲ್ಲಿ ಶತ್ರುಗಳು ಬರೆದ ಇತಿಹಾಸವು!

ಸಿಂಹಾಸನವು ಕೈಸೇರಿದ ಮೇಲೆ ಬಖತ್ಯಾರಖಿಲಜಿಯು ಪಶುಪತಿಯನ್ನು ಕರತರುವದಕ್ಕಾಗಿ ದೂತರನ್ನು ಕಳಿಸಿದನು. ತಾನು ರಚಿಸಿದ ವ್ಯೂಹವು ಸಫಲವಾಗಿ, ಇಂದು ಪ್ರತ್ಯಕ್ಷ ಫಲವು ದೊರಕುವದೆಂದು ನೆನಸಿ ಪಶುಪತಿಯು ಆನಂದಭರಿತನಾಗಿದ್ದನು. ದೂತರು ಬಂದಕೂಡಲೆ ಇಷ್ಟ ದೇವತೆಯನ್ನು ವಂದಿಸಿ, ಕ್ರುದ್ಧಳಾದ ಮನೋರಮೆಯ ಅನುಮತಿಯನ್ನು ಪಡೆದು, ಸಂಶಯಗಳಿಂದ ಕೂಡಿದ ಮನಸ್ಸುಳ್ಳವನಾಗಿ ರಾಜಮಂದಿರಕ್ಕೆ ಬಂದನು. ಪಶುಪತಿಯು ಬಂದಕೂಡಲೆ ಬಖತ್ಯಾರನು ಬಹು ಮರ್ಯಾದೆಯಿಂದ ಎದ್ದು ನಿಂತು, ವಿನಯದಿಂದ ಬಾಗಿ ಸಲಾಮು ಮಾಡಿ, ತನ್ನ ಹತ್ತರ ಕುಳ್ಳಿರಿಸಿಕೊಂಡು, ಪ್ರಸನ್ನ ಮುದ್ರೆಯಿಂದ ಆತನ ಕ್ಷೇಮ ಸಮಾಚಾರವನ್ನು ವಿಚಾರಿಸಿದನು. ಪಟ್ಟಣದೊಳಗಿನ ನಿರಪರಾಧಿಗಳಾದ ಜನರ ರಕ್ತದ ಪ್ರವಾಹಗಳನ್ನು ದಾಟುತ್ತಾ, ಅವರ ಛಿನ್ನವಿಚ್ಛಿನ್ನವಾದ ಅವಯವಗಳನ್ನು ತುಳಿಯುತ್ತಾ ಬಂದದ್ದರಿಂದ ಪಶುಪತಿಯ ಮನಸ್ಸು ಬಹಳ ವ್ಯಥಿತವಾಗಿತ್ತು, ಆತನ ಮೋರೆಯು ಬಾಡಿತ್ತು ಆದುದರಿಂದ ಆತನು ಪ್ರಸನ್ನಮುದ್ರೆಯಿಂದ ಬಖತ್ಯಾರಖಿಲಜಿಗೆ ಉತ್ತರ ಕೊಡಲು ಸಮರ್ಥನಾಗಲಿಲ್ಲ, ಸುಮ್ಮನೆ ಕುಳಿತುಕೊಂಡನು. ಬಖತ್ಯಾರನು ಈ ಸಂಗತಿಯನ್ನು ಆಗಲೇ ತಿಳಿದುಕೊಂಡಿದ್ದನು. ಆ ಕಲ್ಲೆದೆಯ ಯವನನು ಅಟ್ಟಹಾಸದಿಂದ ನಕ್ಕು ನುಡಿದನೇನಂದರೆ—ಪಂಡಿತರೇ, ಸಿಂಹಾಸನವನ್ನು ಏರಲಿಕ್ಕೆ ಹೋಗುವ ಹಾದಿಯು ಹೂವಿನಿಂದ ತುಂಬಿರುವದಿಲ್ಲ, ಆ ಹಾದಿಯಿಂದ ಹೋಗುವವನು ತನ್ನ ಆಪ್ತೇಷ್ಟರ ಹೆಣಗಳ ಪರ್ವತಗಳನ್ನು ತುಳಿಯ ಬೇಕಾಗುವದು.

ಈ ಮಾತುಗಳನ್ನು ಕೇಳಿ ಪಶುಪತಿಯು ಸ್ವಲ್ಪ ಸಿಟ್ಟಿನ ಮುದ್ರೆಯಿಂದ—ತಾವು ಅನ್ನುವದೂ ನಿಜವು. ಅಂಥವನಿಗೆ ತನ್ನ ವೈರಿಗಳನ್ನೂ ತನ್ನ ಕಾರ್ಯಕ್ಕೆ ಅಡ್ಡಬರುವವರನ್ನೂ

ಸಂಹರಿಸುವ ಪ್ರಸಂಗ ಬರುತ್ತದೆ. ಆದರೆ ಪಾಪ! ಈ ಪ್ರಜೆಗಳು ನಿರಪರಾಧಿಗಳೂ ದುರ್ಬಲರೂ—

ಬಖತ್ಯಾರ—ರಕ್ತದ ಪ್ರವಾಹವನ್ನು ನೋಡಿ ತಮಗೆ ಅಂಜಿಕೆಬಂದಂತೆ ತೋರುತ್ತದಲ್ಲವೇ! ತಮ್ಮ ಕರಾರುಗಳನ್ನು ತಾವು ಮರೆತಿರುರಿವರೋ ಏನು?

ಪಶು—ನಾನು ಆಡಿದಂತೆ. ತಪ್ಪದೆ ನಡೆಯುವೆನು, ತಾವಾದರೂ ತಮ್ಮ ವಚನವನ್ನು ಪಾಲಿಸುವಿರೆಂದು ನಂಬಿದ್ದೇನೆ.

ಬಖತ್ಯಾರ—ಅಲಬತ್! ನಾವು ಮುಸಲ್ಮಾನರು, ನಿಮ್ಮ ಹಿಂದುಗಳ ಹಾಗೆ ಎಂದೂ ವಚನಭ್ರಷ್ಟರಾಗುವವರಲ್ಲ; ಆದರೆ ಒಂದು ವಿನಂತಿ—

ಪಶು—ಹೇಳಿರಿ, ತಮ್ಮ ಅಪ್ಪಣೆಯು ಏನಿರುತ್ತದೆ?

ಬಖ–ಕುತುಬುದ್ದೀನನು ಬಂಗಾಲದ ರಾಜ್ಯವ್ಯವಸ್ಥೆಯನ್ನು ತಮ್ಮ ಕಡೆಗೆ ಒಪ್ಪಿಸಿರುವನು. ಈವೊತ್ತಿನಿಂದ ತಾವು ಬಂಗಾಲದ ರಾಜರ ಪ್ರತಿನಿಧಿಗಳಾದಿರಿ; ಆದರೆ ಕುತುಬುದ್ದೀನನು ಮುಸಲ್ಮಾನರ ಹೊರತು ಅನ್ಯರನ್ನು ತನ್ನ ರಾಜ್ಯದಲ್ಲಿ ಮಾಂಡಲಿಕರನ್ನಾಗಿ ಮಾಡಲಿಕ್ಕಿಲ್ಲೆಂದು ಸಂಕಲ್ಪಮಾಡಿರುವನು. ಬಾದಶಹನ ಆ ಸಂಕಲ್ಪದಂತೆ ತಾವು ಮುಸಲ್ಮಾನ ಧರ್ಮವನ್ನು ಸ್ವೀಕರಿಸಬೇಕಾಗುವದು.

ಇದನ್ನು ಕೇಳಿದ ಕೂಡಲೆ ಪಶುಪತಿಯ ತಲೆಯ ಮೇಲೆ ಸಿಡಿಲು ಬಿದ್ದಂತಾಯಿತು. ಆತನ ಮೋರೆಯು ಕಪ್ಪಿಟ್ಟಿತು. ಆತನು ಆಕಳಿನಂತೆ ತೀರಾ ಸಭ್ಯನಾಗಿ ದೀನಸ್ವರದಿಂದ—''ಆದರೆ, ನನ್ನೊಡನೆ ಕರಾರು ಮಾಡಿಕೊಳ್ಳುವಾಗ ಈ ಮಾತು ಹೊರಟಿದ್ದಿಲ್ಲ'' ಎಂದು ನುಡಿದನು. ಇದನ್ನು ಕೇಳಿ ಬಖತ್ಯಾರನು ಗಂಭೀರ ಸ್ವರದಿಂದ—ಈ ಮಾತು ಹೊರಟಿರದಿದ್ದರೆ ಅದು ಆಗ ನೆನಪಾಗಲಿಲ್ಲೆಂದು ತಿಳಿಯಬೇಕು. ಈ ಮಾತು ಆಗ ಹೊರಡದಿದ್ದರೂ ನಿಮ್ಮಂಥ ಬುದ್ಧಿಶಾಲಿಯಾದ ಪುರುಷನ ಮನಸ್ಸಿನಲ್ಲಿ ಅದು ಕೂಡಲೆ ಹೊಳೆದಿರಬಹುದು. ಯಾಕಂದರೆ, ಹೊಸದಾಗಿ ಗೆದ್ದುಕೊಂಡಿದ್ದ ಹಿಂದುವಿನ ರಾಜ್ಯವನ್ನು ಮುಸಲ್ಮಾನರು ತಿರುಗಿ ಹಿಂದುವಿಗೇ ಕೊಟ್ಟಾರೆಂದು ಒಬ್ಬ ಹುಚ್ಚನೂ ಕಲ್ಪಿಸಲಿಕ್ಕಿಲ್ಲ!

ಬಖತ್ಯಾರನು ಜೋಡಿಸಿದ ''ಬುದ್ಧಿಶಾಲಿ'' ಎಂಬ ವಿಶೇಷಣವು ಪಶುಪತಿಯ ಮನಸ್ಸಿಗೆ ಎಷ್ಟರಮಟ್ಟಿಗೆ ಸೇರಿಕೆಯಾದೀತೆಂಬದನ್ನು ಹೇಳಲಿಕ್ಕಾಗುವದಿಲ್ಲ. ಬಹಳ ಹೊತ್ತಿನವರೆಗೆ ಅವನು ಸುಮ್ಮನೆ ಕುಳಿತುಕೊಂಡನು. ಪಶುಪತಿಯು ಮಾತಾಡದಿರುವದನ್ನು ನೋಡಿ ಬಖತ್ಯಾರನು—ಯಾಕೆ? ತಾವು ಸುಮ್ಮನೆ ಕುಳಿತುಕೊಂಡಿರಿ?

ಪಶುಪತಿ—ನಮ್ಮ ಕರಾರುಗಳಲ್ಲಿ ಈ ಮಾತು ಗೊತ್ತಾಗಿದ್ದಿಲ್ಲ.

ಬಖತ್ಯಾರ—ಮೊದಲು ಗೊತ್ತಾಗದಿದ್ದರೆ ಈಗ ಗೊತ್ತುಮಾಡೋಣ. ತಾವು ಮುಸಲ್ಮಾನೀ ಧರ್ಮವನ್ನು ಸ್ವೀಕರಿಸುವ ಸಿದ್ಧತೆಯನ್ನು ಮಾಡಬೇಕು.

ಬಖತ್ಯಾರ ಖಿಲಜಿಯ ಈ ವಿಶ್ವಾಸಘಾತದ ನಡತೆಯನ್ನು ನೋಡಿ ಪಶುಪತಿಯು ಬಹಳ ಸಿಟ್ಟಾದನು. ಅವನು ಅಭಿಮಾನಪೂರ್ವಕವಾಗಿ ನುಡಿದನೇನಂದರೆ—ಸೇನಾಪತೀ,

ಮುಸಲ್ಮಾನ ಬಾದಶಹನು ಕೇವಲ ಬಂಗಾಲ ರಾಜ್ಯವನ್ನೇ ಏಕೆ, ಇಡೀ ಹಿಂದುಸ್ಥಾನದ ರಾಜ್ಯವನ್ನೇ ಉಚಿತವಾಗಿ ಕೊಟ್ಟರೂ, ನಾನು ಸನಾತನ ಧರ್ಮವನ್ನು ತ್ಯಜಿಸಿ ನರಕವಾಸದ ಸಿದ್ಧತೆಯನ್ನು ಮಾಡಿಕೊಳ್ಳಲಾರೆನು.

ಪಶುಪತಿಯ ಈ ಮಾತುಗಳನ್ನು ಕೇಳಿ ಬಖತ್ಯಾರನು ಶಾಂತಸ್ವರದಿಂದ—ಪಶುಪತೀ, ನಿಮ್ಮ ಮಾತು ಸರಿಯಾದದ್ದಲ್ಲ. 'ಸನಾತನ'ವೆಂದು ಹೊಗಳಿಕೊಳ್ಳುವ ನಿಮ್ಮ ಧರ್ಮವು ಧರ್ಮವೇ ಅಲ್ಲ, ಅದು ಭೂತ ಪಿಶಾಚಗಳ ಪೂಜೆಯ ಬಂಡಾಗಿರುವದು. ನಮ್ಮ ಕುರಾಣದಲ್ಲಿ ಹೇಳಿದ ಧರ್ಮವು ನಿಜವಾದದ್ದು. ನೀವು ಜಾಣರಾದರೆ, ನಿಜವಾದ ಧರ್ಮವನ್ನು ಸ್ವೀಕರಿಸಿ ಇಹ—ಪರಲೋಕದ ಹಿತವನ್ನು ಸಾಧಿಸಿಕೊಳ್ಳತಕ್ಕದ್ದು. ನಾನು ಹಿತಬುದ್ಧಿಯಿಂದ ಈ ಮಾತನ್ನು ನಿಮಗೆ ಹೇಳುತ್ತೇನೆ, ಎಂದು ನುಡಿದನು. 'ಹೊಳೆದಾಟಿದ ಬಳಿಕ ಅಂಬಿಗನ ಮಿಂಡನೆ'ಂಬ ಗಾದೆಯಂತೆ ನಡೆಯುವ ನೀಚರ ಸಾಲಿನಲ್ಲಿ ಬಖತ್ಯಾರನು ಬರುತ್ತಾನೆಂಬುದು ಪಶುಪತಿಗೆ ಈಗ ಸ್ಪಷ್ಟವಾಗಿ ತಿಳಿಯಿತು. ಮುಸಲ್ಮಾನರ ಕಮಚಿಯ ಹೊಡತವೂ, ಮೋಸವೂ ಮೂರ್ತಿಮಂತವಾಗಿ ಈಗ ಅವನ ಮುಂದೆ ನಿಂತುಕೊಂಡವು. ಆತನಿಗೆ ಬಹಳ ಪಶ್ಚಾತ್ತಾಪವಾಯಿತು, ತಾನು ವೈರಿಗಳಲ್ಲಿ ವಿಶ್ವಾಸವನ್ನಿಟ್ಟು ತನ್ನ ಸ್ವಾಮಿಯ ಮೇಲೆ ತಿರುಗಿಬಿದ್ದೆನೆಂತಲೂ, ಸ್ವಬಾಂಧವರನ್ನು ಮುಣುಗಿಸಿದೆನೆಂತಲೂ, ದೇಶದ್ರೋಹ—ಧರ್ಮದ್ರೋಹಗಳನ್ನು ಕಟ್ಟಿಕೊಂಡೆನೆಂತಲೂ ಆತನು ಪಶ್ಚಾತ್ತಾಪಪಟ್ಟನು. ಅವನಿಗೆ ಬಹಳ ವ್ಯಥೆಯಾಯಿತು. ಆದರೂ ಆತನು ಹೊರಗೆ ಸಮಾಧಾನ ಪಟ್ಟವನಂತೆ ತೋರಿಸಿ, ಮೋಸಗಾರರಿಗೆ ಮೋಸವನ್ನೇ ಮಾಡಿ ಫಲವನ್ನು ಸಾಧಿಸಿಕೊಳ್ಳತಕ್ಕದ್ದೆಂದು ಭಾವಿಸಿ ಬಖತ್ಯಾರನನ್ನು ಕುರಿತು—ಯಾಕಾಗಲೊಲ್ಲದು, ತಮ್ಮ ಅಪ್ಪಣೆಯನ್ನು ತಲೆಯಲ್ಲಾಂತು ಮನ್ನಿಸುವೆನು. ನಾನು ಮುಸಲ್ಮಾನೀ ಧರ್ಮವನ್ನು ಸ್ವೀಕರಿಸಲಿಕ್ಕೆ ಸಿದ್ಧನಾಗಿದ್ದೇನೆ, ಎಂದು ಹೇಳಿದನು.

ಬಖತ್ಯಾರ ಖಿಲಜೀಯೇನು ಕಡಿಮೆಯವನಿದ್ದಿಲ್ಲ! ಆತನು ಪಶುಪತಿಯ ಈ ಹಿಡಿತವನ್ನು ಅವನಿಗಿಂತ ಮೊದಲೇ ತಿಳಕೊಂಡಿದ್ದನು. ಆತನು ಸೇರಿಗೆ ಸವ್ವಾಸೇರಾಗಿ ಪಶುಪತಿಯನ್ನು ಕುರಿತು ನುಡಿದನೇನಂದರೆ—ತಾವು ಬಾದಶಹರ ಅಪ್ಪಣೆಯನ್ನು ವಹಿಸಿದ್ದಕ್ಕಾಗಿ ನನಗೆ ಬಹಳ ಸಂತೋಷವಾಗುತ್ತದೆ. ಇಂದಿನ ದಿವಸವು ಶುಭದಿವಸವೆಂದು ನಾನು ತಿಳಿಯುತ್ತೇನೆ. ''ಶುಭಸ್ಯ ಶೀಘ್ರಂ'' ಎಂಬಂತೆ ಬೇಗನೆ ಕಾರ್ಯವಾದಷ್ಟು ನೆಟ್ಟಗೆ. ನಮ್ಮ ಪುರೋಹಿತನು ಇಲ್ಲಿಯೇ ಇದ್ದಾನೆ. ಇಲ್ಲಿಂದಲೇ ತಮಗೆ ಮುಸಲ್ಮಾನೀ ಧರ್ಮದ ದೀಕ್ಷೆಯನ್ನೂ, ಗಾದಿಯ ಅಧಿಕಾರವನ್ನೂ ಕೊಡಲಾಗುವದು, ಎಂದು ಹೇಳಿ ತನ್ನ ಸಂಗಡಿಗರಾದ ಸವಾರರಲ್ಲಿ ಒಬ್ಬನನ್ನು ಕರೆದು ಪಶುಪತಿಗೆ ಮುಸಲ್ಮಾನೀ ಧರ್ಮದ ದೀಕ್ಷೆಯನ್ನು ಕೊಡೆಂದು ಆಜ್ಞಾಪಿಸಿದನು. ಇದನ್ನೆಲ್ಲ ಪಶುಪತಿಯು ನೋಡುತ್ತಲೇ ಇದ್ದನು. ಇನ್ನು ಪರಿಣಾಮವಿಲ್ಲ, ಸರ್ವನಾಶವಾಗುವ ಹೊತ್ತು ಬಂತೆಂದು ತಿಳಿದು ಆತನು ದೈನ್ಯ ಮುದ್ರೆಯಿಂದ—ನನಗೆ ಸ್ವಲ್ಪ ಅವಧಿಯನ್ನು ಕೊಡಿರಿ, ಮನೆಯ ಜನರನ್ನು ಕರೆದುಕೊಂಡು ಬರುತ್ತೇನೆ, ಎಲ್ಲರೂ ಕೂಡಿ ಒಮ್ಮೆಲೆ ಮುಸಲ್ಮಾನೀ ಧರ್ಮವನ್ನು ಸ್ವೀಕರಿಸಬೇಕೆಂದು ಇಚ್ಛಿಸುವೆನು ಎಂದನು. ಅದಕ್ಕೆ

ಬಖತ್ಯಾರನು—ಹಾಗಾದರಂತೂ ಬಹಳ ನೆಟ್ಟಗೆ. ತಮ್ಮ ಇಚ್ಛೆಯಂತೆ ನಡೆಯಲಾಗುವದು. ಇನ್ನು ಮೇಲೆ ತಾವು ಈ ದೇಶದ ಮಾಂಡಲಿಕ ರಾಜರಾಗತಕ್ಕವರು. ನಾವೆಲ್ಲರೂ ತಮ್ಮ ಕೈಕೆಳಗಿನವರು. ಒಡೆಯನ ಸೇವೆಗಾಗಿ ಇಷ್ಟು ಜನರು ಸಿದ್ಧರಾಗಿರಲು, ಒಡೆಯರು ಮನೆಯತನಕ ಹೋಗುವ ಆಯಾಸಪಡುವದೇಕೆ? ತಮ್ಮ ಕುಟುಂಬದೊಳಗಿನ ಜನರನ್ನು ಕರತರುವದಕ್ಕೆ ಸೇವಕರನ್ನು ಕಳಿಸುತ್ತೇನೆ.

ಬಖತ್ಯಾರನ ಈ ಮಾತುಗಳನ್ನು ಕೇಳಿ ಪಶುಪತಿಯು ಮಂಗನಾದನು. ಅವನಿಗೆ ಏನೂ ತೋಚದಾಯಿತು. ಅವನು ಕಕ್ಕಾಬಿಕ್ಕಿಯಾಗಿ ಬಖತ್ಯಾರನ ಮೋರೆಯನ್ನು ನೋಡುತ್ತ ಕುಳಿತುಕೊಂಡನು. ಆಗ ಬಖತ್ಯಾರನು ಸಿಟ್ಟಿನಿಂದ—"ನಮಕಹರಾಮ! ನನ್ನನ್ನು ಮೋಸ ಗೊಳಿಸಲು ಯತ್ನಿಸುತ್ತೀಯೇನು?" ಎಂದು ಗರ್ಜಿಸಿ, ಪಶುಪತಿಯನ್ನು ಒಬ್ಬ ಕಾವಲುಗಾರನ ವಶಕ್ಕೆ ಒಪ್ಪಿಸಿ ಇವನನ್ನು ಪ್ರತಿಬಂಧದಲ್ಲಿಡಿರೆಂದು ಆಜ್ಞಾಪಿಸಿದನು. ರತ್ನಖಚಿತವಾದ ಅಲಂಕಾರದ ಬದಲು ಕಬ್ಬಿಣದ ಕಡೆಗಳು ಪಶುಪತಿಯ ಕೈಗೆ ಒಪ್ಪಹತ್ತಿದವು. ಪಶುಪತಿಯು ಸೆರೆಮನೆಗೆ ಹೋಗುವಾಗ ಅಳುತ್ತಳುತ್ತ—ಇದೇನು? ನಾನು ಸೆರೆಯಾಳಾದೆನಲ್ಲ? ಎಂದು ನುಡಿದನು.

ಇದನ್ನು ಕೇಳಿ ಬಖತ್ಯಾರನು ಗದ್ದರಿಸಿ—ತುಡುಗಾ! ಹೆಚ್ಚು ಒಟಗುಟ್ಟಬೇಡ. ನೀನು ನಿನ್ನ ಅರಸನ ಮೇಲೆ ಕಾರಣವಿಲ್ಲದೆ ತಿರುಗಿಬಿದ್ದಿ, ಉಂಡಮನೆಯಗಳ ಎಣಿಸಿದಿ. ಇಂಥ ನಿನಗೆ ಬಂದೀವಾಸವಷ್ಟೇ ಅಲ್ಲ, ಆನೆಯ ಕಾಲಿಗೆ ಕಟ್ಟಿ ತುಳಿಸಿದರೂ ತಕ್ಕ ಶಿಕ್ಷೆಯಾಗಲಿಕ್ಕಿಲ್ಲ! ಹೋಗು, ನೀನು ಸದ್ಯಕ್ಕೆ ಕಣ್ಣುಮರೆಯಾಗು. ನಮಗೆ ಬೇರೆ ಮಹತ್ವದ ಕೆಲಸಗಳಿರುತ್ತವೆ. ಹಿಂದಿನಿಂದ ನಿನ್ನ ವಿಚಾರವನ್ನು ಮಾಡೋಣ, ಎಂದು ನುಡಿದನು. ಈ ಮೇರೆಗೆ ಪಶುಪತಿಯು ತಾನೇ ತೋಡಿದ ತಗ್ಗಿನಲ್ಲಿ ತಾನಾಗಿಬಿದ್ದನು.

ಇತ್ತ ಪಶುಪತಿಯು ಪ್ರತಿಬಂಧದಲ್ಲಿಟ್ಟಿದ್ದ ಮನೋರಮೆಯು ಬಿಡುಗಡೆ ಹೊಂದುವ ಉಪಾಯವೇನೆಂದು ಚಿಂತಿಸುತ್ತ ಕುಳಿತಿದ್ದಳು. ಮಂದಿರದ ಎಲ್ಲ ಬಾಗಿಲುಗಳು ಹೊರಗಿನಿಂದ ಇಕ್ಕಿದ್ದು, ಪ್ರತಿ ಒಂದು ಬಾಗಿಲಿಗೆ ಕಾವಲುಗಾರರು ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ಕಾಯುತ್ತ ಕುಳಿತಿದ್ದರು. ಮನೋರಮೆಯು ಎಷ್ಟು ಹುಡುಕಿದರೂ ಹಾದಿಯು ಸಿಗಲೊಲ್ಲದು. ದೇವರ ಮನೆಯಿಂದ ಮಲಗುವ ಮನೆಗೆ, ಮಲಗುವ ಮನೆಯಿಂದ ಅಡಿಗೆಯ ಮನೆಗೆ, ಅಡಿಗೆಯ ಮನೆಯಿಂದ ಕೂಡುವ ಮನೆಗೆ, ಕೂಡುವ ಮನೆಯಿಂದ ಬಚ್ಚಲ ಮನೆಗೆ ಹೀಗೆ ಪ್ರತಿ ಒಂದು ಮನೆಯನ್ನೂ ಕೋಣೆಯನ್ನೂ ಹುಡುಕಿ ಹುಡುಕಿ ಆಕೆಯು ಬೇಸತ್ತಳು. ಆದರೂ ಹೊರಬೀಳಲಿಕ್ಕೆ ಎಲ್ಲಿಯೂ ಕಳ್ಳಹಾದಿಯು ಸಿಗಲೊಲ್ಲದು. ಕಡೆಗೆ ಆಕೆಯು ಬಹಳ ಸಂತಾಪಗೊಂಡಳು, ದುಃಖಿಸಿದಳು, ಸನ್ನಿಪಾತವಾದವಳಂತೆ ಬಗೆಬಗೆಯ ಚೇಷ್ಟೆಗಳನ್ನು ಮಾಡಿದಳು. ಮನೋರಮೆಗೆ ಈಗ ನಿಶ್ಚಯವಾಗಿ ಹುಚ್ಚು ಹಿಡಿದಿತ್ತು. ಆಕೆಯು ಇತ್ತಿಂದ ಅತ್ತ ಅತ್ತಿಂದ ಇತ್ತ ಒಂದೇಸವನೆ ತಿರುಗುವಳು, ಕ್ಷಣದಲ್ಲಿ ನಡುವೆ ಕೂಡುವಳು, ಮತ್ತೆ ಏಳುವಳು, ಮತ್ತೆ ತಿರುಗುವಳು, ಮಲಗುವಳು. ಹೀಗೆ ಬಹಳಹೊತ್ತು ಎಡತಾಕಿ, ಕೂತು, ಎದ್ದು ಮಲಗಿ

ತಳಮಳಗೊಂಡಮೇಲೆ ಆಕೆಯು ಪಶುಪತಿಯು ಮಲಗಿಕೊಳ್ಳುತ್ತಿದ್ದ ಮನೆಗೆ ಬಂದಳು. ಈ ಮನೆಗೆ ಭೂಮಿಯಿಂದ ಬಹಳ ಎತ್ತರದ ಮೇಲೆ ಒಂದು ಕಿಡಿಕಿ ಇತ್ತು. ನಿಚ್ಚಣಿಕೆಯನ್ನು ಹಾಕದೆ ಆ ಕಿಡಕಿಯನ್ನು ಮುಟ್ಟುವಹಾಗಿದ್ದಿಲ್ಲ. ಮುಟ್ಟಿದರೂ ಆ ಕಿಡಿಕಿಯೊಳಗಿಂದ ಮನುಷ್ಯ ದೇಹವು ಹೊರಬೀಳುವಂತೆ ಇದ್ದಿಲ್ಲ. ಒಂದು ಪಕ್ಷದಲ್ಲಿ ಹೊರಬಿದ್ದು ಕೆಳಗೆ ಹಾರಿಕೊಂಡರೆ ಎಲಬು ಪುಡಿಯಾಗದೆ ಉಳಿಯುತ್ತಿದ್ದಿಲ್ಲ. ಇಂಥ ಪ್ರತಿಕೂಲಸ್ಥಿತಿಯಲ್ಲಾದರೂ ಮನೋರಮೆಯು ನಿರಾಶೆಪಡಲಿಲ್ಲ. ಆಕೆಯು ಮಂದಿರದ ಮಾಳಿಗೆಯ ಹಲಿಗೆಗಿದ್ದ ಒಂದು ಒಂಕಿಗೆ ಹಗ್ಗವನ್ನು ಒಗೆದು, ಆ ಹಗ್ಗದ ಹಾಗು ಪಶುಪತಿಯು ಮಲಗುವ ಪಲ್ಲಂಗದ ಸಹಾಯದಿಂದ ಕಿಡಿಕಿಗೆ ಏರಿಹೋಗಲು ಯತ್ನಿಸಿದಳು. ಈ ಪ್ರಯತ್ನದಲ್ಲಿ ಆಕೆಯು ಒಂದೆರಡುಸಾರೆ ಬಿದ್ದರೂ ಧೈರ್ಯ ಬಿಡದೆ ಕಡೆಗೆ ಕಿಡಕಿಯನ್ನು ಮುಟ್ಟಿದಳು. ಆಮೇಲೆ ಆಕೆಯು ಪಲ್ಲಂಗದ ಕಂಬದ ಮೇಲೆ ತನ್ನ ಮೈಭಾರವನ್ನೆಲ್ಲ ಹಾಕಿ ಮೊದಲು ಒಂದು ಕೈಯನ್ನು ಹೊರಗೆ ಚಾಚಿದಳು. ಆಮೇಲೆ ಎರಡನೆಯ ಕೈಯನ್ನು ಚಾಚಿ ಯುಕ್ತಿ ಪ್ರಯುಕ್ತಿಗಳಿಂದ ತಲೆಯನ್ನೂ ಎದೆಯನ್ನೂ ಹೊರಗೆ ನೂಕಿದಳು. ತರುವಾಯ ಆಕೆಯು ಟೊಂಕದವರೆಗೆ ದೇಹವನ್ನು ಹೊರಗೆ ಒಯ್ಯಲು, ಆಕೆಯ ದೈವಯೋಗದಿಂದ ಒಂದು ದೊಡ್ಡ ಮಾವಿನಮರದ ಹರಿಯು ಗಾಳಿಯಿಂದ ಹೊಯ್ದಾಡುತ್ತ ಕಿಡಿಕೆಯ ಬಳಿಗೆ ಬರುತ್ತಿತ್ತು. ಇದನ್ನು ಹೊಂಚುಹಾಕಿ ಮನೋರಮೆಯು ಒಮ್ಮೆಲೆ ಆ ಹರಿಯನ್ನು ಹಿಡಕೊಂಡು ಸರಕ್ಕನೆ ಹೊರಗೆ ಬಂದಳು. ಆಕೆಯ ಮೈಭಾರದಿಂದ ಆ ಮಧ್ಯಮ ತರದ ಹರಿಯು ನೆಲಕ್ಕೆ ಜೋಲಲು, ಮನೋರಮೆಯು ತೀರ ನೆಲಕ್ಕಿಳಿದಳು. ಕೂಡಲೆ ಆಕೆಯು ಕೈಬಿಟ್ಟದ್ದರಿಂದ ಪೆಟ್ಟುಹತ್ತದೆ ನೆಲದ ಮೇಲೆ ನಿಂತುಕೊಂಡಳು. ಇದರಿಂದ ಮನೋರಮೆಗೆ ಬಹಳ ಆನಂದವಾಯಿತು. ಆಕೆಯು ಅತ್ತಿತ್ತನೋಡದೆ ನೆಟ್ಟಗೆ ಜನಾರ್ಧನನ ಮನೆಗೆ ಹೊರಟು ಹೋದಳು.

ಅತ್ತ ಆ ರಾತ್ರಿ ನವದ್ವೀಪದಲ್ಲಿ ದಯಾಶೂನ್ಯರಾದ ಯವನರು ನಡಿಸಿದ ಕೊಲೆ ಸುಲಿಗೆಗಳನ್ನು ವರ್ಣಿಸುವದು ಶಕ್ಯವಲ್ಲ. ಹಾ ಹಾ ಅನ್ನುವದರೊಳಗಾಗಿ ನಾಲ್ವತ್ತು ಸಾವಿರ ಮುಸಲ್ಮಾನ ಸೈನ್ಯವು ಪಟ್ಟಣವನ್ನು ನುಗ್ಗಿ ದಯಾಶೂನ್ಯವಾಗಿ ಅಸಂಖ್ಯ ನಿರಪರಾಧಿ ಪ್ರಜೆಗಳನ್ನು ಕೊಂದಿತು. ಆ ಸೈನ್ಯವು ಮಾಡಿದ ಅನರ್ಥವನ್ನು ಏನು ವರ್ಣಿಸುವದು! ಕೆಲವೊಬ್ಬನ ತಲೆಯನ್ನು ಖಡ್ಗದಿಂದ ಕಡಿ, ಕೆಲವೊಬ್ಬನನ್ನು ಬರ್ಚಿಯಿಂದ ಇರಿ, ಕೆಲವೊಬ್ಬನನ್ನು ಕುದುರಿಯಿಂದ ತುಳಿಸು, ಕೆಲವೊಬ್ಬನ ಅವಯವಗಳನ್ನು ಕಡಿಕಡಿದು ಕೊಲ್ಲು, ಹೀಗೆ ನಾನಾವಿಧವಾಗಿ ಹಿಂಸೆಪಡಿಸುತ್ತ ಮನುಷ್ಯ ಸಂಹಾರದ ಕಾರ್ಯವನ್ನು ನಡಿಸಿತು. ಬರಬರುತ್ತ ಸೈನಿಕರ ಪಶುವೃತ್ತಿಗೆ ಮತ್ತಿಷ್ಟು ಕಳೆಯೇರಿತು. ಮರಣಭಯದಿಂದ ಮನಯೆನ್ನು ಸೇರಿ ಬಾಗಿಲಿಕ್ಕಿಕೊಂಡಿದ್ದವರನ್ನು ಬಾಗಿಲು ಮುರಿದು ಹಿಡಿದೆಳೆದು ಬೈಲಿಗೆ ತಂದು ಪರಿಪರಿಯಿಂದ ಹಿಂಸಿಸಿ ಕೊಲ್ಲುವರು; ಬಾಗಿಲು ತೆಗೆಯಲಿಕ್ಕೆ ಬಾರದ ಮನೆಗಳಿಗೆ ಬೆಂಕಿಹಚ್ಚುವರು! ಅವರು ದೇವಸ್ಥಾನಗಳನ್ನು ಭ್ರಷ್ಟಮಾಡಿದರು. ಸಿಕ್ಕ ಅಮೂಲ್ಯ ಪದಾರ್ಥ ಗಳನ್ನು ಸುಲಿದರು. ಆ ನೀಚರು ರೂಪವತಿಯರಾದ ತರುಣ ಸ್ತ್ರೀಯರ ಹಿಂಸೆಪಡಿಸಿದ್ದನ್ನು

ನೋಡಿದರೆ, ನರಪಶುವಿನ ಪಾಪಿಹೃಯದವೂ ಕರಗಿ ನೀರಾಗದೆ ಇರದು! ಪಟ್ಟಣದಲ್ಲೆಲ್ಲ ಖಡ್ಗಗಳ ''ಖಣಖಟಲೆಂ''ಬ ಸಪ್ಪಳವೂ, ತುಬಾಕಿಗಳ ''ಧಡಲ್ ಧಡಲ್'' ಎಂಬ ಸಪ್ಪಳವೂ, ಕುದುರೆಗಳ ಖುರ ಪುಟಗಳ ''ಪಟಪಟ್ಟೆಂಬ'' ರಣಕರ್ಕಶವಾದ ಸಪ್ಪಳವೂ, ಜಯಶಾಲಿಗಳಾದ ಮುಸಲ್ಮಾನರ ಅಟ್ಟಹಾಸದ ಖದ ಖದ ಎಂಬ ಸಪ್ಪಳವು ಪತಿವ್ರತೆಯರ ಲಟಕು ಮುರಿಯುವ ''ಲಟ್ ಲಟ್ಟೆಂ''ಬ ಸಪ್ಪಳವೂ ಕಿವಿಗೆ ಬೀಳುತ್ತಿದ್ದವಲ್ಲದೆ, ದುಃಖಿತರ ಘೋರೆಂಬ ಅಳುವ ಧ್ವನಿಯೂ, ಹುಡುಗರ ಚೀರಾಟದ ಧ್ವನಿಯೂ, ರೋಗಿಗಳ ಹಾಗು ಮುದುಕರ ನರಳುವ ಧ್ವನಿಯೂ ಕರ್ಣಕಠೋರವಾಗಿ ಕೇಳುತ್ತಿದ್ದವು. ಮೈಮೇಲೆ ಮುಳ್ಳುಬರುವ ಆ ಭಯಂಕರವಾದ ನೋಟವನ್ನು ಯಥಾರ್ಥವಾಗಿ ವರ್ಣಿಸುವ ಸಾಮರ್ಥ್ಯವು ಯಾರಲ್ಲಿರುವದು? ಹಾಯ್ ಹಾಯ್ ದುಃಖದ ಪರಮಾವಧಿಯು!!

ಸಂಶಯ ನಿವಾರಣ

ಪಟ್ಟಣದಲ್ಲಿ ಇಂಥ ಅನರ್ಥಗಳು ಒದಗಿದ್ದನ್ನು ಕೇಳಿ ಹೇಮಚಂದ್ರನು ದುಃಖಿಸಿ ಯುದ್ಧದ ಉಡುಪು—ತೊಡವುಗಳನ್ನು ಧರಿಸಿ ತಂದೆಯು ಕೊಟ್ಟಿದ್ದ ತ್ರಿಶೂಲವನ್ನು ಹಿಡಿದು ಸಿದ್ಧನಾಗಿ, ದಿಗ್ವಿಜಯನು ಬಾಗಿಲಮುಂದೆ ನಿಲ್ಲಿಸಿದ ಸುಂದರವಾದ ಕುದುರೆಯನ್ನು ಏರಿ ಪಟ್ಟಣಕ್ಕೆ ವೇಗದಿಂದ ನಡೆದನು. ಮದಾಂಧವಾದ ಯವನ ಸೇನೆಯು ಯುದ್ಧವನ್ನು ಮಾಡದೆ ಧನ ಲೋಭದಿಂದ ಕೊಲೆಸುಲಿಗೆಗಳನ್ನು ನಡಿಸಿತ್ತು, ಎಲ್ಲ ದಂಡಾಳುಗಳು ಧನಲೋಭದಿಂದಲೂ, ಕ್ರೂರಕರ್ಮದಿಂದಲೂ ಎಚ್ಚರಗೆಟ್ಟು, ಹೋಗಿದ್ದರು. ಒಕ್ಕಟ್ಟಿನಿಂದ ಹೇಮಚಂದ್ರನೊಡನೆ ಕಾದಲಿಕ್ಕೆ ಯಾರೂ ಮುಂದುವರಿಯಲೊಲ್ಲರು. ಎದುರಾಗಿ ದಂಡಾಳುಗಳನ್ನು ಹೇಮಚಂದ್ರನು ಅರಕ್ಷಣದಲ್ಲಿ ಯಮಪುರಿಗೆ ಅಟ್ಟತೊಡಗಿದನು. ಹೀಗೆ ಎಷ್ಟೋ ಜನ ಮುಸಲ್ಮಾನ ದಂಡಾಳುಗಳು ಹೇಮಚಂದ್ರನ ಕೈಯಿಂದ ಮರಣಹೊಂದಿದರು. ಆದರೆ ಈ ಬಗೆಯಾಗಿ ಯವನರ ಪ್ರಾಣಹರಣ ಮಾಡುವದು ಹೇಮಚಂದ್ರನ ಮನಸ್ಸಿಗೆ ಬರಲೊಲ್ಲದು; ಯಾಕಂದರೆ, ಶೂರರಂತೆ ಯಾವನೂ ಯುದ್ಧಮಾಡಲಿಕ್ಕೆ ಬರಲೊಲ್ಲನು. ನೆರೆದವರೆಲ್ಲ ಬಾಜಾರ ಬುಣಗಿನವರು; ಹೇಮಚಂದ್ರನು ಯುದ್ಧಮಾಡುವ ಉಬ್ಬಿನಿಂದ ಬಂದವನು. ಅಂದಬಳಿಕ ಕೈಲಾಗದ ಸಿಪಾಯಿಗಳೊಡನೆ ಹೊಡದಾಡಿ ತನ್ನ ಶಸ್ತ್ರಗಳನ್ನು ಅಪವಿತ್ರ ಮಾಡಿಕೊಳ್ಳಲಿಕ್ಕೆ ಅವನ ಮನಸ್ಸು ಹೇಗೆ ಒಪ್ಪಬೇಕು? ಆದುದರಿಂದ ಅವನು ಯುದ್ಧವನ್ನೇ ಬಿಟ್ಟು, ಕಷ್ಟದಲ್ಲಿ ಮುಳುಗಿದವರಿಗೆ ಸಹಾಯ ಮಾಡುವದಕ್ಕಾಗಿ ಮುಂದುವರಿದನು; ಆದರೆ ಅದರಲ್ಲಿಯೂ ಅವನಿಗೆ ಹೇಳಿಕೊಳ್ಳುವಂತೆ ಸಂತೋಷವಾಗಲಿಲ್ಲ, ಯಾಕಂದರೆ, ಒತ್ತಟ್ಟಿಗೆ ಸಹಾಯ ಮಾಡುವದರೊಳಗೆ ಬೇರೆ ಅಸಂಖ್ಯ ಸ್ಥಳಗಳಲ್ಲಿ ಯವನರ ಅತ್ಯಾಚಾರವು ಕಣ್ಣಿಗೆ ಬೀಳತೊಡಗಿತು. ಸಹಾಯ ಮಾಡುವ ಹೇಮಚಂದ್ರನೊಬ್ಬನು, ಗೊಂದಲ ಹಾಕುವ ಮುಸಲ್ಮಾನರು ಅಸಂಖ್ಯ

ಜನರು. ಒಂದೇ ಕಾಲಕ್ಕೆ ಎಲ್ಲರ ಪಾರಪತ್ಯವನ್ನು ಹೇಗೆ ಮಾಡುವ ದಾಗಬೇಕು? ಆದರೂ ಅಯೋಗ್ಯರಾದ ಸಿಪಾಯಿಗಳೊಡನೆ ಯುದ್ಧಮಾಡಿ ನಿರುತ್ಸಾಹವನ್ನು ಹೊಂದುವದಕ್ಕಿಂತ, ಎರಡನೆಯ ಮಾರ್ಗವೇ ಅವನಿಗೆ ಹೆಚ್ಚು ಸಮಾಧಾನಕಾರಕವಾಗಿ ತೋರಿತು. ಆತನು ಸಂಕಟಕ್ಕೊಳಗಾದವರಿಗೆ ಕೈಲಾದ ಮಟ್ಟಿಗೆ ಸಹಾಯಮಾಡತೊಡಗಿದನು. ಹೀಗೆ ತಾನು ಕೈಕೊಂಡ ಕಾರ್ಯವನ್ನು ಒತ್ತರದಿಂದ ನಡಿಸಿರಲು, ಹತ್ತರದ ಗುಡಿಸಲಲ್ಲಿ ಹೃದಯಭೇದಕವಾದ ಆರ್ತಸ್ವರವುಂಟಾದದ್ದು ಕಿವಿಗೆ ಬಿದ್ದಿತು. ಕೂಡಲೆ ಹೇಮಚಂದ್ರನು ಆ ಗುಡಿಸಲಿಗೆ ಹೋಗಿ ನೋಡಲು, ಒಬ್ಬ ತರುಣ ಬ್ರಾಹ್ಮಣನು, ಶಸ್ತ್ರಗಳ ಭಯಂಕರವಾದ ಗಾಯಗಳಿಂದ ರಕ್ತಮಯನಾಗಿ ಕರ್ಣಕಠೋರವಾದ ಆರ್ತಧ್ವನಿಯಿಂದ ಒದರುತ್ತ ಸಾವು ಸಮೀಪಿಸಿರಲು, ತಳಮಳಿಸುತ್ತ ಭೂಮಿಯ ಮೇಲೆ ಬಿದ್ದಿದ್ದನು. ಹೇಮಚಂದ್ರನು ಬಂದದ್ದನ್ನು ನೋಡಿ ಯಾವನೋ ಮುಸಲ್ಮಾನನು ಬಂದನೆಂದು ತಿಳಿದು ಆ ತರುಣ ಬ್ರಾಹ್ಮಣನು ಗಟ್ಟಿಯಾಗಿ ಕೂಗಿ—''ಬಾ—ಬಾ—ಇನ್ನೊಮ್ಮೆ ಹೊಡಿ, ಕೊಂದುಬಿಡು. ನನ್ನ ತಲೆಯನ್ನು ತುಂಡರಿಸಿ ಆ ರಾಕ್ಷಸಿಗೆ ಒಯ್ದು ಕೊಡು.—ಅವ್ವಾ—ಅವ್ವಾ—ಅಯ್ಯೋ—ಅಯ್ಯೋ—ದೇವರೇ, ಪ್ರಾಣವು ಹಾರುತ್ತದೆ—ನೀರು—ನೀರು —ನೀರು ಕೊಡಿರಿ.''

ಹೇಮಚಂದ್ರನ ಕೋಮಲವಾದ ಅಂತಃಕರುಣವು ಕರಗಿಹೋಯಿತು. ಕಣ್ಣೀರು ಸುರಿಸುತ್ತ ಆತನು—ಮನೆಯಲ್ಲಿ ನೀರು ಅವೆಯೋ ಎಂದು ಕೇಳಿದನು. ಬ್ರಾಹ್ಮಣನು ಮತ್ತಿಷ್ಟು ಆಕ್ರೋಶಮಾಡತೊಡಗಿದನು. ನೀರು—ನೀರು—ರಾಕ್ಷಸಿಯೇ! ನಿನ್ನಿಂದಲೇ ಇಂದು ನನ್ನ ಗತಿಯು ಹೀಗಾಯಿತು!

ಹೇಮಚಂದ್ರನು ಮನೆತುಂಬ ಹುಡುಕಿದನು. ಒತ್ತಟ್ಟಿಗೆ ಒಂದು ಮೂಲೆಯಲ್ಲಿ ಮಣ್ಣುಗಡಿಗೆಯೊಳಗೆ ನೀರು ಇದ್ದವು; ಆದರೆ ಸಣ್ಣ ಪಾತ್ರೆಗಳು ಎಲ್ಲಿಯೂ ಸಿಗಲೊಲ್ಲವು. ಅವನು ಬೊಗಸೆಯಲ್ಲಿ ನೀರು ತಂದು ಬ್ರಾಹ್ಮಣನಿಗೆ ಕುಡಿಸಹೋದನು. ನೀರಡಿಕೆಯಿಂದ ಬ್ರಾಹ್ಮಣನ ಜೀವವು ಹೋಗುತ್ತಿದ್ದರೂ—''ಬೇಡ—ಬೇಡ. ಮುಸಲ್ಮಾನರ ಕೈಯೊಳಗಿನ ನೀರು ಬೇಡ,'' ಎಂದು ಮೋರೆಯನ್ನು ತಿರುಗಿಸಿದನು. ಆಗ ಹೇಮಚಂದ್ರನು—ನಾನು ಮುಸಲ್ಮಾನನಲ್ಲ, ಹಿಂದುವಿದ್ದೇನೆ. ನಿಮಗೆ ಸಹಾಯ ಮಾಡುವದಕ್ಕಾಗಿ ಬಂದಿರುವೆನು, ಎಂದು ತಿಳಿಸಿ ಹೇಳಿದನು. ಆದರೂ ಆ ಬ್ರಾಹ್ಮಣನು ಕೇಳಲೊಲ್ಲನು. ನೀರಡಿಕೆಯಿಂದ ಅವನ ಗಂಟಲವು ತೀರ ಒಣಗುತ್ತ ನಡೆದಿತ್ತು, ಕಡೆಗೆ ಹೇಮಚಂದ್ರನು ಒತ್ತಾಯದಿಂದ ಅವನ ಬಾಯಲ್ಲಿ ಸ್ವಲ್ಪ ನೀರು ಹಾಕಿದ ಬಳಿಕ ಆತನು ಸ್ವಲ್ಪ ಚೇತರಿಸಿಕೊಂಡನು. ಆಮೇಲೆ ಹೇಮಚಂದ್ರನು ಅವನನ್ನು ಕುರಿತು—ನಿಮಗೆ ಇನ್ನೇನು ಬೇಕು, ಎಂದು ಕೇಳಲು, ಬ್ರಾಹ್ಮಣನು—

ಬ್ರಾಹ್ಮಣ—ನನಗೆ—ನನಗೆ—ಇನ್ನೇನು ಬೇಕು?—ಮೃತ್ಯು! ಮೃತ್ಯು! ಒಂದೇ ಕಡತದಿಂದ ನನ್ನ ಜೀವವು ತಟ್ಟನೆ ಹಾರಿಹೋಗುವಂತೆ ಮಾಡು.

ಹೇಮ—ಯಾರಾದರೂ ನಿಮ್ಮ ಅಂತಃಕರಣದ ಆಪ್ತರು ಇರುವರೋ? ಅವರಿಗೇನಾದರೂ ಹೇಳಬೇಕೇ ಹೇಗೆ?

ಬ್ರಾಹ್ಮಣ—ನನ್ನ ಅಂತಃಕರಣದವರೇ?—ನನ್ನವರೆ—ನನ್ನವರೆ—ಯಾರೂ ಇಲ್ಲ, ಆ ಚಾಂಡಾಲಳಿಗೆ—ರಾಕ್ಷಸಿಗೆ—ಆ ರಾಕ್ಷಸಿಗೆ—ಹೇಳು— ನನ್ನ ಪಾಪದ—ನನ್ನ ಕುಕರ್ಮದ ಫಲವು ನನಗೆ ಇದೇ ಜನ್ಮದಲ್ಲಿ ದೊರಕಿತು. —ಯವನರ ಕೈಯಿಂದ—ಅವ್ವಾ—ಅವ್ವಾ—ಅಯ್ಯೋ—

ಹೇಮ—ಯಾರವಳು? ಅವಳ ಹೆಸರೇನು? ಅವಳು ಎಲ್ಲಿರುವಳು?

ಬ್ರಾಹ್ಮಣ—ಆ ರಾಕ್ಷಸಿಯ ಹೆಸರು ಗೊತ್ತಿಲ್ಲವೆ?—ಮೃಣಾಲಿನಿ—ಮೃಣಾಲಿನಿ—ಮೃಣಾಲಿನಿ—ರಾಕ್ಷಸಿ—ರಾಕ್ಷಸಿ—ಹೀಗೆ ನುಡಿದು ಬ್ರಾಹ್ಮಣನು ಬಹಳ ತಳಮಳಿಸಹತ್ತಿದನು. ಮೃಣಾಲಿನಿಯ ಹೆಸರು ಕಿವಿಗೆ ಬಿದ್ದಕೂಡಲೆ ಹೇಮಚಂದ್ರನು ಬೆರಗಾದನು. ಆತನು ಆ ಬ್ರಾಹ್ಮಣನನ್ನು ಕುರಿತು—

ಹೇಮ—ಮೃಣಾಲಿನಿಯು ನಿಮಗೇನಾಗಬೇಕು?

ಬ್ರಾಹ್ಮಣ—ಮೃಣಾಲಿನಿ —ಮೃಣಾಲಿನಿ—ಮೃಣಾಲಿನಿ—ನನಗೇನಾಗಬೇಕು? ನನಗೇನಾಗಬೇಕು?—ನನಗೇನೂ ಸಂಬಂಧವಿಲ್ಲ—ಇಲ್ಲ—ನನ್ನ ಮೃತ್ಯುವು—ಮೃತ್ಯುವು—ಅಯ್ಯಯ್ಯೋ—ದೇವರೇ—

ಹೇಮ—ನಿಮ್ಮ ಮೃತ್ಯುವು? ಮೃಣಾಲಿನಿಯು ಅಂಥದೇನು ನಿಮಗೆ ಮಾಡಿರುವಳು?

ಬ್ರಾಹ್ಮಣ—ಏನು ಮಾಡಿದ್ದಾಳೆಂದು ಕೇಳುವಿರಾ?—ಅಯ್ಯೋ—ಸತ್ತೆನು—ಸತ್ತೆನು—ಅವ್ವಾ—ಅವ್ವಾ—ನಿನಗೇನು ಹೇಳಲಿ?—ಏನೂ ಇಲ್ಲ—ಏನೂ ಇಲ್ಲ, ಆ ಬಡವೆಯು ನನಗೇನೂ ಮಾಡಿಲ್ಲ–ನಾನೇ–ನಾನೇ–ಆಕೆಯನ್ನು ದೆಸೆಗೇಡಿಯಾಗ ಮಾಡಿದೆನು—ಸುಳ್ಳು ಅಪವಾದವನ್ನು ಆಕೆಯ ಮೇಲೆ ಹೊರಿಸಿದೆನು. —ಆಕೆಯ ಮಾನ ಕಳೆದೆನು—ಅದರ ಯೋಗ್ಯಫಲವು ದೊರೆಯಿತು. —ಅಯ್ಯೋ—ದೇವರೇ—ದೇವರೇ—

ಹೇಮ—ನೀವೇನು ಆಕೆಗೆ ಮಾಡಿದಿರಿ?

ಬ್ರಾಹ್ಮಣ—ನಾನು ಇನ್ನು ಮಾತಾಡಲಾರೆನು—ಅವ್ವಾ—ಅವ್ವಾ—ಸತ್ತೆನು—ಸತ್ತೆನು—ನೀರು—ನೀರು—

ಹೇಮಚಂದ್ರನು ಆ ಬ್ರಾಹ್ಮಣನಿಗೆ ಮತ್ತೆ ನೀರು ಕೊಟ್ಟನು. ಸ್ವಲ್ಪ ಹೊತ್ತಿನ ಮೇಲೆ ಅವನು ಸ್ವಲ್ಪ ಎಚ್ಚತ್ತದ್ದನ್ನು ನೋಡಿ—''ನಿಮ್ಮ ಹೆಸರೇನು?''

ಬ್ರಾಹ್ಮಣ—ಬೆಂಕಿಹಚ್ಚಿತು ನನ್ನ ಹೆಸರಿಗೆ. ನಾನು ಮಹಾಪಾಪಿಯು– ಚಾಂಡಾಲನು–ನನ್ನ ಹೆಸರು ವ್ಯೋಮಕೇಶ.

ವ್ಯೋಮಕೇಶನೆಂಬ ಶಬ್ದವು ಕಿವಿಗೆ ಬಿದ್ದಕೂಡಲೆ ಹೇಮಚಂದ್ರನ ಕಣ್ಣು ಕೆಂಡದಂತಾದವು. ಸರ್ವಾಂಗದಲ್ಲಿ ಕಂಪವು ಉತ್ಪನ್ನವಾಯಿತು. ಆತನು ಅವಡುಗಚ್ಚಿ ಹತ್ತರವೇ ಇಟ್ಟಿದ್ದ ಶೂಲವನ್ನು ಕೈಯಲ್ಲಿ ತಕ್ಕೊಂಡನು; ಆದರೆ ಕೂಡಲೆ ಸಮಾಧಾನ ತಾಳಿ ಅವನು ನುಡಿದನೇನಂದರೆ—ನಿಮ್ಮ ಮನೆಯು ಎಲ್ಲಿ ಅದೆ.

ವ್ಯೋಮ—ಗೌಡನಗರದಲ್ಲಿ—ಗೌಡನಗರವನ್ನು ನೀವು ನೋಡಿಲ್ಲವೊ? ಮೃಣಾಲಿನಿಯು ನಮ್ಮ ಮನೆಯಲ್ಲಿಯೇ ಇರುತ್ತಿದ್ದಳು.

ಹೇಮ—ಒಳ್ಳೆಯದು, ಮುಂದೆ—

ವ್ಯೋಮ—''ಮುಂದೇನು''—ಮುಂದೆ ನನ್ನ ಗತಿಯು ಹೀಗಾಯಿತು. ಮೃಣಾಲಿನಿಯು ಮಹಾ ದುಷ್ಟಳು—ನಿರ್ದಯಳು. ಆ ಚಾಂಡಾಲಳು ಎಂದೂ ನನ್ನನ್ನು ಕಣ್ಣೆತ್ತಿ ಸಹ ನೋಡಲಿಲ್ಲ. ಆಕೆಯ ಸೇಡು ತೀರಿಸಿಕೊಳ್ಳುವದಕ್ಕಾಗಿ ಆಕೆಯ ಮೇಲೆ ಇಲ್ಲದ ಕೆಟ್ಟ ಅಪವಾದ ಹೊರಿಸಿ, ಆಕೆಯು ಪಾಪಿಷ್ಠಳಿರುತ್ತಾಳೆಂದು ನನ್ನ ತಂದೆಯ ಮನಸ್ಸಿನಲ್ಲಿ ತುಂಬಿದೆನು. ನನ್ನ ಮಾತನ್ನು ನಂಬಿ ನನ್ನ ತಂದೆಯು ಆ ನಿರಪರಾಧಿಯಾದ ಸಾಧ್ವಿಯನ್ನು ಮನೆಬಿಡಿಸಿ ಹೊರಗೆ ಹಾಕಿದನು. ಆ ರಾಕ್ಷಸಿಯು ನನ್ನನ್ನು ತ್ಯಜಿಸಿ ಹೋದಳು.

ಹೇಮ—ಹಾಗಾದರೆ ಈಗ ಆಕೆಯ ಹೆಸರಿನಿಂದ ಕಲ್ಲು ಯಾಕೆ ಒಡೆಯುತ್ತೀರಿ?

ವ್ಯೋಮ—ಕಲ್ಲು ಒಡೆಯದೇನು ಮಾಡಲಿ? ಮೃಣಾಲಿನಿಯು—ಆ ರಾಕ್ಷಸಿಯು ನನ್ನನ್ನು ಕಣ್ಣೆತ್ತಿಸಹ ನೋಡುತ್ತಿದ್ದಿಲ್ಲ—ನಾನು ಮಾತ್ರ ಆಕೆಯನ್ನು ನೋಡಿ ಜೀವಧಾರಣ ಮಾಡಿದ್ದೆನು. ಆಕೆಯು ಹೊರಟು ಹೋದಕೂಡಲೆ ನನಗೆ ಮನೆಮಾರು ಬೇಡಾಗಿ ಆಕೆಯನ್ನು ಹುಡುಕುತ್ತ ಊರೂರು ತಿರುಗಹತ್ತಿದೆನು. ಎಲ್ಲಿಯೂ ಗೊತ್ತಾಗಲಿಲ್ಲ. ಗಿರಿಜೆ ಎಂಬ ಹೆಸರಿನ ಒಬ್ಬ ಭಿಕ್ಷುಕರ ಹುಡುಗೆಯು ಆಕೆಯ ಗುರುತಿನವಳಿದ್ದಳು. ಆಕೆಯೂ ಮೃಣಾಲಿನಿಯ ಸಂಗಡ ಹೊರಟು ಹೋದಳು. ಗಿರಿಜೆಯ ತಾಯಿಯು, ಗಿರಿಜೆಯು ನವದ್ವೀಪಕ್ಕೆ ಹೋಗಿರುವಳೆಂದು ಹೇಳಿದ್ದರಿಂದ ನಿನ್ನೆ ಇಲ್ಲಿಗೆ ಬಂದೆನು. ಗಿರಿಜೆಯನ್ನು ಕಂಡು ಮೃಣಾಲಿನಿಯು ಎಲ್ಲಿ ಇರುವಳೆಂದು ಕೇಳಿಕೊಳ್ಳುವವನಿದ್ದೆನು; ಆದರೆ ಗಿರಿಜೆಯ ಭೆಟ್ಟಿಯಾಗಲಿಲ್ಲ; ನನ್ನ ಇಚ್ಛೆಯಿಲ್ಲ ದಿದ್ದರೂ ಯವನರ ಭೆಟ್ಟಿಯಾಗಿ ಅವರಿಂದ ಈ ಪ್ರಾಯಶ್ಚಿತ್ತವು ನನಗೆ ದೊರೆಯಿತು. ನನ್ನ ಅಘೋರ ಪಾತಕಕ್ಕಾಗಿ ನನಗೆ ಇದಕ್ಕೂ ಹೆಚ್ಚಿನ ಕ್ರೂರ ಶಾಸನವು ಆಗಬೇಕಾಗಿತ್ತು, ನನಗಾಗುತ್ತಿರುವ ವ್ಯಥೆಯ ಬಗ್ಗೆ ನಾನು ದುಃಖಿಸುವದಿಲ್ಲ; ಪರಮೇಶ್ವರನ ಅಗಾಧ ಕೃತಿಯ ಬಗ್ಗೆ ಕೌತುಕ ಪಡುತ್ತೇನೆ.—ಅಯ್ಯೋ ಸತ್ತೆನು—ಇನ್ನು ನಾನು ಮಾತಾಡಲಾರೆನು. ಪ್ರಾಣವು ಹಾರುತ್ತದೆ. ಮೃಣಾಲಿನಿಯು ನಿಮಗೆ ಭೆಟ್ಟಿಯಾದರೆ, ಪಾಪಿಷ್ಠನಾದ ವ್ಯೋಮಕೇಶನಿಗೆ ಅವನ ಪಾಪದ ಫಲವು ಈ ಜನ್ಮದಲ್ಲೇ ಸಿಕ್ಕಿತೆಂದು ಹೇಳಿರಿ—

ಮಾತಾಡುತ್ತಾಡುತ್ತ ವ್ಯೋಮಕೇಶನ ಮುಖವು ವಿದ್ರೂಪವಾಯಿತು. ಸೋಟೆ ಓರೆಯಾಯಿತು. ಕೂಡಲೆ ಅವನ ಪಾಪಮಯವಾದ ದೇಹದಿಂದ ಪ್ರಾಣಜ್ಯೋತಿಯು ಹೊರಟುಹೋಯಿತು. ಬಳಿಕ ಹೇಮಚಂದ್ರ ಅಲ್ಲಿ ನಿಲ್ಲಲಿಲ್ಲ, ಕೂಡಲೆ ತನ್ನ ವಾಸಸ್ಥಳಕ್ಕೆ ಹೊರಟುಹೋದನು. ಅವನ ಸಂಶಯ ನಿವಾರಣವಾಯಿತು. ಅಷ್ಟರಲ್ಲಿ ಪಟ್ಟಣದೊಳಗಿನ ಕೊಲೆ ಸುಲಿಗೆಯೂ ತಣ್ಣಗಾಯಿತು.

ಇತ್ತ ಮೃಣಾಲಿನಿಯು ತನ್ನ ತಲೆ ಅಪ್ಪಳಿಸಿದ ಕಲ್ಲಮೇಲೆಯೇ ಇನ್ನೂ ಬಿದ್ದುಕೊಂಡಿದ್ದಳು. ಆಕೆಗೆ ಹೋಗಲಿಕ್ಕೆ ಇಂದು ಪೃಥ್ವಿಯ ಮೇಲೆ ಎರಡನೆಯ ಸ್ಥಳವೇ ಇಲ್ಲದಾಗಿತ್ತು, ವಿವೇಕ

ಶೂನ್ಯಳಾಗಿ ಕಡೆಗೆ ಕಗ್ಗತ್ತಲೆಯು ಮುಸುಕಿದಂತಾಗಿತ್ತು, ವಿವೇಕಶೂನ್ಯಳಾಗಿ ಆಕೆಯು ಚಲಿಸದೆ ಬಿದ್ದುಕೊಂಡಿದ್ದಳು. ಕ್ರಮಕ್ರಮವಾಗಿ ರಾತ್ರಿಯು ಹೋಯಿತು, ಬೆಳಗಾಯಿತು; ಆದರೂ ಮೃಣಾಲಿನಿಯು ಅಲ್ಲಿಯೇ ಇದ್ದಳು. ಗಿರಿಜೆಯು ಅವಳ ಸಂಗಡ ಮಾತಾಡಬೇಕೆಂದು ಬಹಳ ಯತ್ನಿಸಿದಳು; ಆದರೆ ಮೃಣಾಲಿನಿಯು ಪಿಟ್ಟೆಂದು ಮಾತಾಡಲಿಲ್ಲ. ಕಡೆಗೆ ಗಿರಿಜೆಯ ಮಾತುಗಳು ಕೇಳಿಸಿದವೋ ಇಲ್ಲವೋ ಯಾರಿಗೆಗೊತ್ತು! ಹೊರಗೆ ಬೆಳ್ಳಗೆ ಬೆಳಗಾಯಿತು, ಮೂರುತಾಸು ಹೊತ್ತು ಏರಿತು. ಆದರೂ ಮೃಣಾಲಿನಿಯು ಕಲ್ಲುಬಿಟ್ಟ ಕದಲಲೊಲ್ಲಳು. ಮೈತೊಳಕೊಳ್ಳುವ ಹೊತ್ತು ಮೀರಿತು. ಅದನ್ನು ನೋಡಿ ಗಿರಿಜೆಯು ಮೃಣಾಲಿನಿಯನ್ನು ಒತ್ತಾಯದಿಂದ ಕೆರೆಗೆ ಕರೆದೊಯ್ದು ಮೈತೊಳಿಸಿದಳು. ಮೃಣಾಲಿನಿಯು ಮೈತೊಳಕೊಂಡು ಬಂದು ಮೊದಲಿನ ಕಲ್ಲಮೇಲೆ ಮತ್ತೆ ಕುಳಿತುಬಿಟ್ಟಳು. ಉಟ್ಟ ಒದ್ದೆಯನ್ನು ಸಹ ಬಿಡಲಿಲ್ಲ. ಹಾ ಹಾ ಅನ್ನುವದರೊಳಗಾಗಿ ಆರುತಾಸಾಯಿತು. ಗಿರಿಜೆಯ ಹೊಟ್ಟೆಯಲ್ಲಿ ಕಾಗೆಗಳು ಆಡಹತ್ತಿದವು. ಆಗ ಆಕೆಯು ಬಳಿಯಲ್ಲಿರುವ ತೋಟದೊಳಗಿನ ಬಿದ್ದ ಹಣ್ಣುಗಳನ್ನು ತಂದು ಮೃಣಾಲಿನಿಯ ಮುಂದೆ ಇಟ್ಟಳು. ಮೃಣಾಲಿನಿಯು ಕೈಮುಟ್ಟಿ ಆ ಹಣ್ಣುಗಳನ್ನು ದೂರಸರಿಸಿದಳು. ಬಳಿಕ ಗಿರಿಜೆಯು ಅವನ್ನು ತಿಂದಳು.

ಬರಬರುತ್ತ ಇಳಿಹೊತ್ತಾಯಿತು, ಹೊತ್ತು ಮುಣುಗಿತು, ಕತ್ತಲಾಯಿತು; ಆದರೂ ಮೃಣಾಲಿನಿಯು ಕಲ್ಲುಬಿಟ್ಟು ಮೇಲಕ್ಕೇಳಲಿಲ್ಲ. ಇದರಿಂದ ಗಿರಿಜೆಯು ಬೇಸತ್ತಳು. ನಿನ್ನೆ ರಾತ್ರಿ ಅಖಂಡ ನಿದ್ದೆಯಿಲ್ಲ, ಈದಿನ ಉಪವಾಸ, ರಣಗುಟ್ಟುವ ಬಿಸಿಲಿನ ಹೊಡತ, ಮೇಲಾಗಿ ಈ ದಿನ ರಾತ್ರಿಯೂ ನಿದ್ದೆಯಾಗುವ ಲಕ್ಷಣ ತೋರಲೊಲ್ಲದು. ಅಂದಬಳಿಕ ಆ ಬಡವೆಯ ಚಿತ್ತವು ಅಸ್ವಸ್ಥವಾಗದೇನು ಮಾಡೀತು? ಆದರೆ ಮಾಡುತ್ತಾಳೇನು? ಮೃಣಾಲಿನಿಯನ್ನೊಬ್ಬಳನ್ನೇ ಆ ನಿರ್ಜನವಾದ ಅರಣ್ಯದಲ್ಲಿ ಬಿಟ್ಟು ಹೋಗುವದು ಆಕೆಯಿಂದಾಗಲೊಲ್ಲದು. ಬೇರೆ ಗತಿ ಕಾಣದೆ ಆಕೆಯು ಸುಮ್ಮನೆ ಎದ್ದುಹೋಗಿ ತರಗೆಲೆಗಳನ್ನು ತಂದು ಕೆರೆಯ ಒಂದು ಪ್ರಶಸ್ತ ಪಾವಟಿಗೆಯ ಮೇಲೆ ಅವನ್ನು ಹರವಿದಳು. ಮೃಣಾಲಿನಿಯು ಗಿರಿಜೆಯ ಈ ಗತ್ತನ್ನು ತಿಳಿದು—ಗಿರಿಜೇ, ನೀನು ಮನೆಗೆ ಹೋಗಿ ಮಲಗಿಕೋ, ಎಂದಳು. ಹ್ಯಾಗಾದರೂ ಮೃಣಾಲಿನಿಯು ಒಮ್ಮೆ ಮಾತಾಡಿದಳೆಂದು ಗಿರಿಜೆಗೆ ಬಹಳ ಸಂತೋಷವಾಯಿತು. ಆಗ ಆಕೆಯು ಮೃಣಾಲಿನಿಗೆ—

ಗಿರಿಜೆ—ನಾವಿಬ್ಬರೂ ಕೂಡಿಯೇ ಹೋಗೋಣ.

ಮೃಣಾ—ನಾನು ಬರಲಿಕ್ಕೆ ಸ್ವಲ್ಪ ಅವಕಾಶವಿರುವದು.

ಗಿರಿಜೆ—ನೀವು ಬರುವವರೆಗೆ ನಾನು ನಿಲ್ಲುತ್ತೇನೆ, ಈ ಕಲ್ಲ ಮೇಲೆ ತರಗೆಲೆಗಳನ್ನು ಪಸರಿಸಿ ಎರಡುಗಳಿಗೆ ಅಡ್ಡಾದರೆ, ಈ ತಿರಕಿಯ ಮೈಯು ನೋಯುವದಿಲ್ಲ.

ಹೀಗೆ ನುಡಿದು ಗಿರಿಜೆಯು ಆ ತರಗೆಲೆಯ ಹಾಸಿಗೆಯ ಮೇಲೆ ಅಡ್ಡಾಗಿ ವಿಚಾರ ಮಾಡತೊಡಗಿದಳು. ಕೆಲಹೊತ್ತಿನ ಮೇಲೆ ಆಕೆಯು—

ಗಿರಿಜೆ—ನಿಮಗೆ ಸಿಟ್ಟುಬಾರದಿದ್ದರೆ, ಒಂದು ಮಾತು ಕೇಳುತ್ತೇನೆ.

ಮೃಣಾ—ಕೇಳು.

ಗಿರಿಜೆ—(ದಿಟ್ಟತನದಿಂದ) ನೋಡುತ್ತಿರಲಿಕ್ಕೆ ನಿಮಗೂ ರಾಜಪುತ್ರನಿಗೂ ಸಂಬಂಧ ವಾಗುವದು ಈ ಜನ್ಮದಲ್ಲಿಯಂತು ಅಸಂಭವವಾಗಿ ತೋರುತ್ತದೆ! ಅಂದಬಳಿಕ ಈ ಕಾರ್ತಿಕದ ಥಂಡಿಯಲ್ಲಿ ಕಟಗುಟ್ಟುತ್ತ ಕುಳಿತುಕೊಳ್ಳುವದರಲ್ಲಿ ಲಾಭವೇನು?

ಮೃಣಾ—ಗಿರಿಜೇ, ಹೀಗೆನ್ನಬೇಡ. ಈ ಜನ್ಮದಲ್ಲಿಯಂತೂ ಇರಲಿ, ಜನ್ಮಜನ್ಮಾಂತರ ದಲ್ಲಿಯೂ ಅವರ ಸಂಬಂಧವು ಕಡಿಯಲಿಕ್ಕಿಲ್ಲ, ನಾನು ನಿನ್ನೆ ಅವರ ದಾಸಿಯಾಗಿದ್ದಂತೆ ಈ ದಿನವಾದರೂ ಅವರ ದಾಸಿಯಾಗಿಯೇ ಇರುತ್ತೇನೆ. ಜನ್ಮವಿರುವವರೆಗೂ ಅವರ ದಾಸಿಯಾಗಿಯೇ ಇರುವೆನು. ಜನ್ಮಜನ್ಮಾಂತರದಲ್ಲಿಯೂ ಅವರ ಚರಣಸೇವೆಯನ್ನೇ ಮಾಡುವೆನು!

ಇದನ್ನು ಕೇಳಿ ಗಿರಿಜೆಗೆ ತಡೆಯಲಿಲ್ಲ, ಆಕೆಯು ಬಹಳ ಸಂತಾಪಗೊಂಡಳು. ಸಂತಾಪದ ಭರದಲ್ಲಿ ಆಕೆಯು ಎದ್ದು ಕುಳಿತು ಕ್ರೋಧ ಸಂತಪ್ತಳಾಗಿ ನಡಗುತ್ತ ನಡಗುತ್ತ—ಅವ್ವನವರೇ, ನಿಮ್ಮ ಮೈಮೇಲೆ ಎಚ್ಚರವಿರುವದೋ, ನಿಮಗೇನು ಹುಚ್ಚುಗಿಚ್ಚು ಹಿಡಿದಿರುವದೋ? ಇಷ್ಟಾದರೂ ಆ ಅಧಮನ ದಾಸಿಯೆಂದು ಹೇಳಲಿಕ್ಕೆ ನಿಮಗೆ ನಾಚಿಕೆ ಬರುವದಿಲ್ಲವೇ? ನೀವು ಇನ್ನೂ ಆ ದುಷ್ಟನ ದಾಸಿಯೆಂದು ತಿಳಕೊಳ್ಳುತ್ತಿದ್ದರೆ, ಇಗೋ, ನಾನು ಹೊರಟೆನು. ಇಲ್ಲಿ ನನ್ನ ಕೆಲಸವಿಲ್ಲ.

ಮೃಣಾ—(ಗಂಭೀರಸ್ವರದಿಂದ) ಗಿರಿಜೇ, ಹೇಮಚಂದ್ರನು ನಿನ್ನನ್ನು ಪೀಡಿಸಿದ್ದರೆ, ಬೇಕಾದರೆ ಎರಡನೆಯ ಕಡೆಗೆ ಹೋಗಿ ಆತನನ್ನು ನಿಂದಿಸು. ಆದರೆ ನನ್ನೆದುರಿಗೆ ಅವರ ವಿಷಯವಾಗಿ ಕಠಿಣ ಶಬ್ದಗಳನ್ನು ಉಚ್ಚರಿಸಬೇಡ! ಆ ಶಬ್ದಗಳು ನನ್ನ ಕಿವಿಯನ್ನು ಸೇರಿ ಅಸಹ್ಯ ವೇದನೆಯನ್ನುಂಟು ಮಾಡುತ್ತವೆ. ಅವರು ರಾಜಪುತ್ರರಿರುತ್ತಾರೆ, ಪ್ರಾಣಪ್ರಿಯರಿರುತ್ತಾರೆ, ನಾನು ಅವರ ಚರಣಸೇವಕಳಾಗಿರುತ್ತೇನೆ. ನನ್ನೆದುರಿಗೆ ಅವರನ್ನು ನಿಂದಿಸಬೇಡ.

ಇದನ್ನು ಕೇಳಿ ಗಿರಿಜೆಯು ಮತ್ತಿಷ್ಟು ಸಿಟ್ಟಾದಳು. ಆಕೆಯು ಬಹಳ ಕಷ್ಟಪಟ್ಟು ಹಾಸಿದ ತನ್ನ ತರಗೆಲೆಯ ಹಾಸಿಗೆಯನ್ನು ಕೆಡಿಸಿ ಸೊಟ್ಟ ಮೋರಮಾಡಿ ಸಿಟ್ಟಿನಿಂದ—''ನಿಂದಿಸಬೇಡ? ಒಮ್ಮೆ ನಿಂದಿಸಿಬಿಡುವೆನೇ? (ತರಗೆಲೆಗಳನ್ನು ಹರಿದು ನೀರಲ್ಲಿ ಚಲ್ಲುತ್ತ) ಹತ್ತುಸಾರೆ ನಿಂದಿಸುವೆನು! (ಮತ್ತೆ ಎಲೆಗಳನ್ನು ಚಲ್ಲಚಲ್ಲುತ್ತ) ಸಾವಿರಸಾರೆ ನಿಂದಿಸುವೆನು!! ಯಾಕೆ ನಿಂದಿಸಬಾರದು? ಆ ದುಷ್ಟನು ನಿಮ್ಮನ್ನು ಇಷ್ಟೇಕೆ ಪೀಡಿಸಿದನು?'' ಹೀಗೆ ಮಾತಮಾತಾಡುತ್ತ ಗಿರಿಜೆಯು ಬಿಕ್ಕಿ ಬಿಕ್ಕಿ ಅಳಹತ್ತಿದಳು. ಇದನ್ನು ನೋಡಿ ಮೃಣಾಲಿನಿಯು ಕಣ್ಣಲ್ಲಿ ನೀರು ತಂದು—ಗೆಳತೀ, ನಾನು ನಿನ್ನ ಕಾಲಬೀಳುತ್ತೇನೆ, ಅವರಿಗೆ ಹೀಗೆ ಕೆಟ್ಟ ಮಾತುಗಳನ್ನಾಡಬೇಡವ್ವಾ! ಅವರು ನನ್ನನ್ನು ತಿರಸ್ಕರಿಸಿದ್ದರಲ್ಲಿ ಅವರ ಅಪರಾಧವೇನೂ ಇಲ್ಲ, ನನ್ನದೇ ತಪ್ಪು ಇರುವದು. ಎಲ್ಲ ಸಂಗತಿಯನ್ನು ನನಗೆ ಹೇಳಲಿಕ್ಕೆ ಬರಲಿಲ್ಲ, ನಾನು ಹೇಳಿದ್ದೊಂದು, ಅವರು ತಿಳಕೊಂಡದ್ದು ಮತ್ತೊಂದು ಆಯಿತು.

ಗಿರಿಜೆ—ಅವ್ವನವರೇ, ನಿಮ್ಮ ತಲೆಮುಟ್ಟಿಕೊಂಡು ನೋಡಿರಿ.

ಮೃಣಾ—(ಕೈಮುಟ್ಟಿ ನೋಡಿ) ನೋಯುತ್ತದೆ.

ಗಿರಿಜೆ—ಯಾಕೆ ನೋಯುತ್ತದೆ?

ಮೃಣಾ—ನೆನಪಾಗಲೊಲ್ಲದು.

ಗಿರಿಜೆ—ಅಪ್ಪನವರೇ, ನಿಮಗೆ ಏನನ್ನಬೇಕು! ಹೇಮಚಂದ್ರನ ಹೃದಯದಲ್ಲಿ ನೀವು ಮಸ್ತಕವನ್ನಿಟ್ಟಿರಲು, ಆತನು ಸಿಟ್ಟಿನಿಂದ ನಿಮ್ಮನ್ನು ಕೆಳಗೆ ದೂಡಿದನು; ಅದರಿಂದ ತಲೆಯು ಕಲ್ಲಿಗೆ ಅಪ್ಪಳಿಸಿ ಗಾಯವಾಯಿತು.

ಮೃಣಾ—(ನೆನಪು ಮಾಡಿಕೊಂಡು) ಗಿರಿಜೇ, ನೆನಪಾಗಲೊಲ್ಲದು. ನಾನೇ ಕಡಕೊಂಡು ಬಿದ್ದದ್ದರಿಂದ ಗಾಯವಾಗಿರಬಹುದಾಗಿ ತೋರುತ್ತದೆ.

ಇದನ್ನು ಕೇಳಿ ಗಿರಿಜೆಯು ಆಶ್ಚರ್ಯಪಟ್ಟು—ಅಪ್ಪನವರೇ, ನೀವು ನಿಜವಾಗಿ ಈ ಸಂಸಾರದಲ್ಲಿ ಸುಖಿಗಳಾಗಿರುತ್ತೀರಿ.

ಮೃಣಾ—ಯಾತರ ಮೇಲಿಂದ?

ಗಿರಿಜೆ—ಯಾರ ವಿಷಯವಾಗಿಯೂ ನಿಮಗೆ ಸಿಟ್ಟುಬರುವದಿಲ್ಲವೆಂದು?

ಮೃಣಾ—ನೀನಂದಂತೆ ನಾನು ನಿಜವಾಗಿಯೂ ಸುಖಿಯಾಗಿರುತ್ತೇನೆ. ಕಾರಣವು ಮಾತ್ರ ಭಿನ್ನವಾಗಿರುವದು.

ಗಿರಿಜೆ—ಅದು ಯಾವ ಕಾರಣವು?

ಮೃಣಾ—ಹೇಮಚಂದ್ರನ ಪ್ರತ್ಯಕ್ಷ ದರ್ಶನವಾಯಿತು. ಇದಕ್ಕಿಂತ ಹೆಚ್ಚಿನ ಕಾರಣವು ಯಾವದಿರಬೇಕು?

ವಿರಹಿಗಳ ದರ್ಶನವು

ಮೃಣಾಲಿನಿಯ ಈ ಮಾತುಗಳನ್ನು ಕೇಳಿ ಗಿರಿಜೆಯು ಆಶ್ಚರ್ಯಪಟ್ಟಳು. ಕೆಲಹೊತ್ತಿನ ಮೇಲೆ ಆಕೆಯು ಮೃಣಾಲಿನಿಯನ್ನು ಕುರಿತು— ಇನ್ನು ನಾವು ಮನೆಗೆ ಹೋಗೋಣ, ಎಂದು ಕೇಳಲು, ಮೃಣಾಲಿನಿಯು ಆ ಮಾತಿಗೆ ಉತ್ತರವನ್ನು ಕೊಡದೆ—ಗಿರಿಜೇ, ಗದ್ದಲವೆಲ್ಲಿಯದಿದು? ಜನರು ಎಷ್ಟು ಒದರುತ್ತಾರಲ್ಲ! ಈ ಭಯಂಕರವಾದ ಕೂಗಾಟವು ಯಾತರದಿರಬಹುದು? ಎಂದು ಕೇಳಿದಳು. ಬರಬರುತ್ತ ಪಟ್ಟಣದೊಳಗಿನ ಕೋಲಾಹಲವು ಸ್ಪಷ್ಟವಾಗಿ ಕೇಳಿಸಹತ್ತಿತು. ಆ ಗದ್ದಲಕ್ಕೆ ಹೆದರಿ ಅವರಿಬ್ಬರೂ ಗಾಬರಿಯಾಗಿ ಮನೆಗೆ ಹೋಗಬೇಕೆಂದು ಹೊರಟರು. ಅವರು ರಾಜಮಾರ್ಗಕ್ಕೆ ಬರಲು, ಜನರು ಎಚ್ಚರಿಲ್ಲದೆ ಓಡಾಡುವದನ್ನೂ, ಅವರ ದೀನವಸ್ಥೆಯನ್ನೂ ನೋಡಿ ಆ ಹೆಣ್ಣುಮಕ್ಕಳು ಮತ್ತಿಷ್ಟು ಗಾಬರಿಯಾದರು. ಈ ಗದ್ದಲದಲ್ಲಿ ಮನೆಗೆ ಹೋಗುವದು ಅವರಿಗೆ ಅಶಕ್ಯವಾಗಿ ತೋರಿತು. ಮತ್ತೆ ಅವರು ಸರೋವರದ ದಂಡೆಗೆ ಬಂದಬಳಿಕ ಗಿರಿಜೆಯು ನಡಗುತ್ತ—"ಅಪ್ಪನವರೇ, ಇಲ್ಲಿಯೂ ಅವರು ಬಂದರೆ ಹೇಗೆ?"

ಈ ಕಾಲಕ್ಕೆ ಗಂಭೀರ ವಿಚಾರದಲ್ಲಿ ಮಗ್ನಳಾಗಿದ್ದ ಮೃಣಾಲಿನಿಯು ಗಿರಿಜೆಯ ಮಾತಿಗೆ ಉತ್ತರವನ್ನೇ ಕೊಡಲಿಲ್ಲ, ಗಿರಿಜೆಯು ತಾನೇ ಮುಂದೆ ಮಾತಾಡತೊಡಗಿದಳು.—''ಅವರು ಇಲ್ಲಿಗೂ ಬರುವಹಾಗೆ ಕಂಡರೆ, ಆ ಎದುರಿಗಿನ ಗಿಡಗಳಲ್ಲಿ ಅಡಗಿಕೊಳ್ಳೋಣ; ಅಂದರೆ ನಮ್ಮನ್ನು ಯಾರೂ ನೋಡಲಿಕ್ಕಿಲ್ಲ''

ಕೆಲವು ಹೊತ್ತಿನ ಮೇಲೆ ಬಾಡಿದ ಮೋರೆಯಿಂದ ಮೃಣಾಲಿನಿಯು—ಗಿರಿಜೇ, ಇನ್ನು ಮೇಲೆ ನನ್ನ ಸರ್ವಸ್ವವು ನಾಶವಾಗುವ ಹೊತ್ತು ಬಂತೆಂಬಂತೆ ಕಾಣುತ್ತದೆ, ಎಂದಳು. ಅದನ್ನು ಕೇಳಿ ಗಿರಿಜೆಯು ಆಶ್ಚರ್ಯದ ಮುದ್ರೆಯಿಂದ—ಅವ್ವನವರೇ, ಛೀ! ಹಾಗನ್ನಬಾರದು; ಈಗ ಅಂಥ ಪ್ರಸಂಗವೇನು ಬಂದದೆ? ಅನ್ನಲು, ಮೃಣಾಲಿನಿಯು—ಈಗ ಇದೇ ಮಾರ್ಗದಿಂದ ಒಬ್ಬ ಕುದುರೆಯ ಸವಾರನು ತ್ವರೆಯಿಂದ ಹೋದದ್ದನ್ನು ನೋಡಲಿಲ್ಲವೇ? ಹೇಮಚಂದ್ರನೇ ಆತನು! ಗೆಳತೀ, ಪಟ್ಟಣದಲ್ಲಿ ಭಯಂಕರವಾದ ಪ್ರಳಯವು ಉಂಟಾಗಿರುತ್ತದೆ. ಹೇಮಚಂದ್ರನು ಒಳ್ಳೆಯ ಸಾಹಸಿಯು. ಆತನ ಪರಾಕ್ರಮದ ವಿಷಯವಾಗಿ ನನಗೆ ಸಂಶಯವಿಲ್ಲ; ಆದರೆ ಒಬ್ಬನಿಂದ ಆಗುವದೇನು? ಯಾರಿಗೆ ಗೊತ್ತು! ಏನಾದರೂ ವಿಪರೀತ ಪ್ರಸಂಗ ಒದಗುವದೋ ಏನೋ ಎಂಬ ಭಯವು ನನಗೆ ಉತ್ಪನ್ನವಾಗಿದೆ ಎಂದಳು.

ಮೃಣಾಲಿನಿಯ ಈ ಮಾತುಗಳನ್ನು ಕೇಳಿ ಆಕೆಗೆ ಧೈರ್ಯ ಹೇಳಲಿಕ್ಕೆ ಗಿರಿಜೆಗೆ ಎಚ್ಚರಿದ್ದರಷ್ಟೆ! ಆ ಬಡವೆಯು ಯಾವಾಗಲು ಕನಸು ಕಂಡು ಗೊರಕೆ ಹೊಡೆಯುತ್ತಿದ್ದಳು. ಇದನ್ನು ಮೃಣಾಲಿನಿಯು ನೋಡಿದಳು. ಇತ್ತ ಮೃಣಾಲಿನಿಗೂ ತೂಕಡಿಕೆ ಬರಹತ್ತಿತು. ನಿನ್ನಿನಿಂದ ಆಹಾರ ನಿದ್ರೆಗಳಿಲ್ಲದ್ದರಿಂದ ಆಕೆಯು ತೀರಾ ದುರ್ಬಲಳಾಗಿದ್ದಳು; ಮೇಲಾಗಿ ಹಗಲುರಾತ್ರಿ ಒಂದೇಸವನೆ ವಿಚಾರ ಮಾಡಿ ಮಾಡಿ ಬಹಳ ದಣಿದಿದ್ದಳು; ಅದರಿಂದ ಕಣ್ಣಿಗೆ ತಾಮಸು ಬಂದಂತಾಗಿ ಆಕೆಯು ಸ್ವಲ್ಪ ಅಡ್ಡಾದಳು. ಆ ತಾಮಸಿನಲ್ಲಿ ಮೃಣಾಲಿನಿಗೆ ಕನಸು ಬಿದ್ದಿತು—

ಹೇಮಚಂದ್ರನು ಒಬ್ಬನೇ ಸೈನ್ಯವನ್ನು ಸೋಲಿಸಿ ಜಯಶಾಲಿಯಾಗಿದ್ದಾನೆ—ವಿಜಯಿಯಾದ ಹೇಮಚಂದ್ರನಿಗೆ ಆರತಿ ಬೆಳಗುವದಕ್ಕಾಗಿ ಮೃಣಾಲಿನಿಯು ರಾಜಮಾರ್ಗದಲ್ಲಿ ನಿಂತುಕೊಂಡಿದ್ದಾಳೆ—ಹೇಮಚಂದ್ರನ ಹಿಂದುಗಡೆಯಲ್ಲಿ ಅಸಂಖ್ಯ ಆನೆಗಳೂ, ಕುದುರೆಯ ಸವಾರರೂ, ಕಾಲಾಳು ಬರುತ್ತಲಿವೆ—ವಿಜಯೋತ್ಸವದ ಸೂಚಕವಾದ ರಣದುಂದುಭಿಯ ಗಂಭೀರಧ್ವನಿಯಿಂದ ಆಕಾಶವು ದಿಮಿಗುಟ್ಟುತ್ತಲಿದೆ—ವೀರರ ಹರ್ಷನಾದದಿಂದ ಪೃಥ್ವಿಯು ಕಂಪಿಸಹತ್ತಿದೆ—ಹಹ! ಆ ನೋಟವು ಎಷ್ಟು ಮನೋಹರವಾದದ್ದು! ಮೃಣಾಲಿನಿಯು ಮೈಮರೆತು ಕಣ್ಣು ಪ್ರೀತಿ ತೀರದೆ ಅದನ್ನು ನೋಡುತ್ತ ಮಾರ್ಗದಲ್ಲಿ ನಿಂತಿರಲು, ಜನರ ಸಂದಣಿಯು ಹೆಚ್ಚಾಗಿ—ಮೃಣಾಲಿನಿಯು ಜನರ ಗದ್ದಲದಲ್ಲಿ ಸಿಕ್ಕಿದ್ದಾಳೆ. ಅಸಂಖ್ಯ ಜನರು ಆಕೆಯನ್ನು ತುಳಿಯುತ್ತಾರೆ. ಗದ್ದಲದಲ್ಲಿ ಯಾರು ಯಾರನ್ನೂ ಕೇಳದಾಗಿದ್ದಾರೆ—ಮೃಣಾಲಿನಿಯು ಬಿದ್ದು ಆಕೆಯ ತಲೆಗೆ ಬಹಳ ಗಾಯವಾಗಿದೆ—ತಲೆಯು ಬಹಳ ನೋಯಹತ್ತಿದ್ದರಿಂದ ಮೃಣಾಲಿನಿಯು ನರಳಹತ್ತಿದ್ದಾಳೆ—ಅಕಲ್ಪಿತವಾಗಿ ಹೇಮಚಂದ್ರನ ಕಣ್ಣಿಗೆ ಆಕೆಯು ಬಿದ್ದದ್ದರಿಂದ ಆತನು ಅಮೌಲ್ಯ ವಸ್ತ್ರಾಭರಣಗಳಿಂದ ಒಪ್ಪುವ ಕುದುರೆಯಿಂದ

ಒಮ್ಮೆಲೆ ಕೆಳಗೆ ಧುಮುಕಿ ಮೃಣಾಲಿನಿಯನ್ನು ಎತ್ತಿ ಎದೆಗೆ ಅವಚಿಕೊಂಡಿದ್ದಾನೆ. ಮೃಣಾಲಿನಿಯು ಹೇಮಚಂದ್ರನನ್ನು ಬಿಗಿದಪ್ಪಿ, ''ಪ್ರಾಣನಾಥನೇ! ದಾಸಿಯು ಈವೊತ್ತಿನವರೆಗೆ ಅಸಂಖ್ಯ ದುಃಖಗಳನ್ನು ಸಹಿಸಿದಳು; ಇನ್ನು ದುಃಖಭಾರವನ್ನು ಸಹಿಸುವ ತ್ರಾಣವು ಆಕೆಯ ಮೈಯಲ್ಲಿ ಉಳಿದಿರುವದಿಲ್ಲ. ಇನ್ನು ಮೇಲೆ ದಾಸಿಯನ್ನು ನಿರಾಕರಿಸಬೇಡಿರಿ ಕಂಡಿರಾ!'' ಎಂದು ಹೇಳಿಕೊಳ್ಳಹತ್ತಿದ್ದಾಳೆ—ಹೇಮಚಂದ್ರನು ಅಶ್ರುಪೂರ್ಣವಾದ ನೇತ್ರಗಳಿಂದ ''ಇನ್ನು ನಾನು ಎಂದೆಂದಿಗೂ ನಿನ್ನನ್ನು ಬಿಡುವದಿಲ್ಲ'' ಎಂದು ಸಮಾಧಾನ ಹೇಳುತ್ತಾನೆ.—

ಅಹಹ! ತನ್ನ ಪ್ರಿಯನ ಮುಖದಿಂದ ಹೊರಟ ಅಮೃತಕ್ಕೆ ಸಮಾನವಾದ ಈ ಮಧುರ ವಾಕ್ಯಗಳನ್ನು ಕೇಳಿದ್ದರಿಂದ ಮೃಣಾಲಿನಿಗಾದ ಆನಂದವನ್ನು ಏನು ವರ್ಣಿಸುವದದೆ? ಆ ಆನಂದದ ಭರದಲ್ಲಿ ಆಕೆಯು ಮೆಟ್ಟಿಬಿದ್ದು ಎಚ್ಚತ್ತಳು. ''ಇನ್ನು ನಾನು ಎಂದೆಂದಿಗೂ ನಿನ್ನನ್ನು ಬಿಡುವದಿಲ್ಲ'' ಎಂಬ ಧ್ವನಿಯು ಮತ್ತೆ ಆಕೆಯ ಕಿವಿಗೆ ಬಿದ್ದಿತು. ಆಕೆಯು ಕಣ್ಣುತೆರೆದಳು. ಆಗ ಆಕೆಯ ಕಣ್ಣಿಗೆ ಬಿದ್ದ ಸಂಗತಿಯು ನಿಜವಾದುದೋ, ಸ್ವಪ್ನಭಾಸವೋ ಎಂಬದರ ನಿರ್ಣಯವೇ ಆಕೆಗೆ ಆಗಲಿಲ್ಲ. ಆಕೆಗೆ ತನ್ನ ಕಣ್ಣಿನ ನಂಬಿಗೆಯೇ ತನಗೆ ಆಗಲೊಲ್ಲದು, ಕಿವಿಯ ಮೇಲೆ ಆಕೆಯ ವಿಶ್ವಾಸವು ಕೂಡಲೊಲ್ಲದು. ಆಕೆಯು ಮತ್ತೆ ಕಣ್ಣು ಮುಚ್ಚಿದಳು, ಮತ್ತೆ ತೆರೆದಳು. ತಾನು ಎಚ್ಚತ್ತಿರುವೆನೋ, ತನಗೆ ಕನಸುಬಿದ್ದಿರುವದೋ, ಎಂಬದರ ನಿರ್ಣಯವೇ ಆಕೆಗೆ ಆಗಲೊಲ್ಲದು! ಆಕೆಯು ಮನಸ್ಸಿನಲ್ಲಿ—ಎಲೈ ದುರದೃಷ್ಟವೇ, ಇಷ್ಟೇಕೆ ನೀನು ನನ್ನನ್ನು ಹಣ್ಣುಮಾಡುತ್ತೀ, ಎಂದು ವಿವೇಕಶೂನ್ಯಳಾಗಿ ದೊಡ್ಡದನಿಯಿಂದ ಅಳತೊಡಗಿದಳು.

ಈಗ ನಿಜವಾಗಿಯೇ ಹೇಮಚಂದ್ರನು ಮೃಣಾಲಿನಿಯನ್ನು ಎದೆಗವಚಿಕೊಂಡು ಕರುಣಾವಾಣಿಯಿಂದ—ಮೃಣಾಲಿನೀ, ನಾನು ಮಹಾಪರಾಧಿಯು, ನನ್ನ ಅಪರಾಧವನ್ನು ಕ್ಷಮಿಸು, ಇನ್ನು ನಾನು ಎಂದೆಂದಿಗೂ ನಿನ್ನನ್ನು ಬಿಡುವದಿಲ್ಲ, ಎಂದು ಪ್ರಾರ್ಥಿಸುತ್ತಿದ್ದನು. ನಿರಭಿಮಾನಿಯಾದ (ಬೇಕಾದರೆ ನಿರ್ಲಜ್ಜಳೆಂದರೂ ಅನ್ನಬಹುದು) ಮೃಣಾಲಿನಿಯು ತನಗಾದ ಅಪಮಾನವನ್ನೆಲ್ಲ ಮರೆತು ಪ್ರೇಮದಿಂದ ಮೈಮರೆತು ಹೇಮಚಂದ್ರನ ಹೆಗಲಮೇಲೆ ಮತ್ತೆ ತನ್ನ ಮಸ್ತಕವನ್ನಿಟ್ಟಳು! ಆಗ ದಂಪತಿಗಳಿಗಾದ ಆನಂದವನ್ನು, ಅವರಿಗೊದಗಿದ ಸುಖಕರ ಪ್ರಸಂಗವನ್ನೂ ಕೇವಲ ಕಲ್ಪನೆಯಿಂದಲೇ ತಿಳಕೊಳ್ಳಬಹುದಲ್ಲದೆ ವರ್ಣಿಸಿ ವ್ಯಕ್ತಮಾಡುವದು ಅಸಾಧ್ಯವು.

ಆನಂದಾತಿಶಯದಿಂದ ಹುಚ್ಚಿಯಾಗಿದ್ದ ಮೃಣಾಲಿನಿಯ ಕೋಮಲ ಹಸ್ತವನ್ನು ತನ್ನ ಕೈಯಲ್ಲಿ ಹಿಡಕೊಂಡು ಹೇಮಚಂದ್ರನು ತನ್ನ ವಾಸಸ್ಥಳದ ಕಡೆಗೆ ಹೊರಟನು. ತನ್ನ ಪ್ರಿಯನ ಕೆಟ್ಟ ಸಂಶಯವೆಲ್ಲ ದೂರವಾಗಿ ಆತನು ಮೊದಲಿನಂತೆ ಪ್ರೇಮಪರಿಪೂರ್ಣನಾಗಿ ಅಕಲ್ಪಿತ ತನಗೆ ದರ್ಶನಕೊಟ್ಟು, ತನ್ನನ್ನು ಪ್ರೀತಿಯಿಂದ ಸ್ವೀಕರಿಸಿದ್ದರಿಂದ ಮೃಣಾಲಿನಿಯು ಹರ್ಷಭರದಿಂದ ವ್ಯಾಕುಲಳಾದಳು. ಆಕೆಯ ಮೈಮೇಲಿನ ಎಚ್ಚರವು ತಪ್ಪಿದಂತಾಗಿತ್ತು. ಒಮ್ಮೆ ಮೃಣಾಲಿನಿಯು ವ್ಯಭಿಚಾರಿಯೆಂದು ತಿರಸ್ಕರಿಸಿ, ಆಕೆಯ ತಲೆಯೊಡೆದು, ಆಕೆಯ ಮೇಲಿನ ಸಿಟ್ಟಿನಿಂದ ತನ್ನನ್ನು ಒದ್ದುಹೋಗಿದ್ದ ಹೇಮಚಂದ್ರನು, ಈವೊತ್ತು ತಾನಾಗಿ ಬಂದು ಹೀಗೆ ಬಣ್ಣ ಸುರಿಸುವದನ್ನು ನೋಡಿ ಗಿರಿಜೆಯು ಆಶ್ಚರ್ಯಪಟ್ಟಳು. ಮೃಣಾಲಿನಿಯು ತನಗಾದ

ಅಪಮಾನದ ಸಂಬಂಧದಿಂದ ಒಂದು ಶಬ್ದವನ್ನೂ ಉಚ್ಚರಿಸಲಿಲ್ಲ, ಸಿಟ್ಟಿನಿಂದ ಒಮ್ಮೆಯಾದರೂ ಹೇಮಚಂದ್ರನನ್ನು ನೋಡಲಿಲ್ಲ, ಪಾಪ! ಆಕೆಗೆ ಎಚ್ಚರವೇ ಇದ್ದಿಲ್ಲ, ಆಕೆಯು ತನ್ನ ಎರಡೂ ಗಲ್ಲಗಳ ಮೇಲೆ ಒಂದೇಸವನೆ ಸುರಿಯುತ್ತಿರುವ ಆನಂದಾಶ್ರುಗಳನ್ನು ಸೆರಗಿನಿಂದ ಒರಸಿಕೊಳ್ಳುತ್ತ ಹೇಮಚಂದ್ರನನ್ನು ಹಿಂಬಾಲಿಸಿ ಹೊರಟಳು. ಮನೆಗೆ ಬಾರೆಂದು ಗಿರಿಜೆಯನ್ನು ಕರೆಯುವ ಪ್ರಸಂಗವೇ ಆಕೆಗೆ ಬರಲಿಲ್ಲ, ಕೆಲವು ಅಂತರದ ಮೇಲೆ ನಿಂತು ಕೊಂಡು ಆ ವಿರಹಿ ಜನರ ಸುಖಕರವಾದ ದರ್ಶನವನ್ನು ಕೌತುಕದಿಂದ ಕಣ್ಣುತುಂಬ ನೋಡುತ್ತ ನೋಡುತ್ತ ಗಿರಿಜೆಯು ಅವರನ್ನು ಹಿಂಬಾಲಿಸಿ ಹೊರಟಳು.

ಹೇಮಚಂದ್ರನೂ, ಮೃಣಾಲಿನಿಯೂ ಮನೆಗೆ ಬಂದು ಮುಟ್ಟಿದ ಕೂಡಲೆ ತಮ್ಮ ಸುಖ—ದುಃಖಗಳನ್ನು ತೋಡಿಕೊಳ್ಳಹತ್ತಿದರು. ಮೃಣಾಲಿನಿಯ ವಿಷಯವಾಗಿ ಸಂಶಯ ಉಂಟಾಗಲಿಕ್ಕೆ ಒದಗಿದ ಕಾರಣವನ್ನೂ, ಆ ಸಂಶಯವು ದೂರವಾದ ಬಗೆಯನ್ನೂ ಸರಳ ಮನಸ್ಸಿನಿಂದ ಹೇಮಚಂದ್ರನು ಮೃಣಾಲಿನಿಗೆ ಹೇಳಿದನು. ಮೃಣಾಲಿನಿಯಾದರೂ ತಾನು ಹೃಷೀಕೇಶ ಬ್ರಾಹ್ಮಣನ ಮನೆಯಿಂದ ಹೇಗೆ ಹೊರಬಿದ್ದೆನೆಂಬದನ್ನೂ, ನವದ್ವೀಪಕ್ಕೆ ಹೇಗೆ ಬಂದೆನೆಂಬದನ್ನೂ, ಇಲ್ಲಿಯವರೆಗೆ ಏನೇನು ಕಷ್ಟಗಳನ್ನು ಅನುಭವಿಸಿದೆನೆಂಬದನ್ನೂ ಮನಸ್ಸು ಕರಗುವಂತೆ ಹೇಳಿದಳು. ಆಗ ಅವರಿಗೆ ಮೊದಲಿನ ಎಷ್ಟೋ ಸಂಗತಿಗಳು ನೆನಪಾಗಿ ಅವನ್ನು ಒಬ್ಬರಿಗೊಬ್ಬರು ಹೇಳಿದರು. ಮುಂದಿನ ಎಷ್ಟೋ ಮನೋರಾಜ್ಯಗಳನ್ನು ಮನಸ್ಸಿನಲ್ಲಿ ಕಲ್ಪಿಸಿದರು. ಹೊಸಹೊಸ ವಚನಗಳಿಂದಲೂ, ಪ್ರತಿಜ್ಞೆಗಳಿಂದಲೂ ಒಬ್ಬರನ್ನೊಬ್ಬರು ಬಿಗಿದುಕೊಳ್ಳಹತ್ತಿದರು. ತೀರ ಸಣ್ಣ ಮಾತನ್ನು ಮಹತ್ವದ್ದೆಂದು ತಿಳಿದು ಅವರು ಗಂಭೀರ ವಿಚಾರ ಮಾಡತೊಡಗಿದರು. ಪರಸ್ಪರರ ಮುಖಗಳನ್ನು ನೋಡಿ ನಡುನಡುವೆ ಸುಮ್ಮನೆ ಮುಗುಳುನಗೆ ನಗುತ್ತಿದ್ದರು. ಆ ನಗೆಯ ಅರ್ಥವು ''ನಾವು ಇಂದು ಜಗತ್ತಿನಲ್ಲಿ ಎಂಥ ಸುಖಿಗಳು'' ಎಂದು ಪರಸ್ಪರರಿಗೆ ತಿಳಿಸುವದಾಗಿತ್ತೆಂದು ಬೇರೆ ಹೇಳುವ ಕಾರಣವಿಲ್ಲ. ಈ ದಂಪತಿಗಳ ಇಂದಿನ ಮಹಾನಂದವನ್ನೂ, ಸ್ವರ್ಗಸುಖವನ್ನೂ ಪೂರ್ಣವಾಗಿ ವರ್ಣಿಸುವದು ಅಶಕ್ಯವು. ಅದನ್ನು ವರ್ಣಿಸಲಿಕ್ಕೆ ಭಾಷೆಯಲ್ಲಿ ಶಬ್ದಗಳಿಲ್ಲ, ಲೆಕ್ಕಣಿಕೆಯಲ್ಲಿ ಸಾಮರ್ಥ್ಯವಿಲ್ಲ. ಅಸಹ್ಯ ವಿರಹ ವ್ಯಥೆಯಿಂದ ಪೀಡಿತರಾದ ಅತ್ಯಂತ ಪ್ರೀತಿಯ ದಂಪತಿಗಳ ಪರಸ್ಪರ ದರ್ಶನ ವಾಯಿತೆಂದು ಹೇಳಿಬಿಟ್ಟರೆ, ನಮ್ಮ ಚತುರ ವಾಚಕರು ಆ ಪ್ರಸಂಗವನ್ನು ಯಥಾರ್ಥವಾಗಿ ಕಲ್ಪಿಸಬಹುದು. ಆ ದಂಪತಿಗಳು ಅಂದಿನ ರಾತ್ರಿಯ ಮೇಲೆ ಬಹಳ ಸಿಟ್ಟಾದರು; ಯಾಕಂದರೆ, ಅವರ ಸುಖವನ್ನು ನೋಡುವದು ಆ ಕೃಷ್ಣಮುಖಿಯಾದ ನಿಶೆಗೆ ಅಸಹ್ಯವಾಗಿ, ಆಕೆಯು ಕ್ಷಣಾರ್ಧದಲ್ಲಿ ಹೊರಟು ಹೋದಳು. ಮಾತಾಡುತ್ತಾಡುತ್ತ ಬೆಳಗಾಯಿತು. ಬರುವ ಹಾಗಿದ್ದರೆ ಹೇಮಚಂದ್ರನು ಆ ಕೆಟ್ಟ ರಾತ್ರಿಯ ರುಂಡವನ್ನು ತನ್ನ ಖಡ್ಗದಿಂದ ತುಂಡರಿಸಿ ಚಲ್ಲುತ್ತಿದ್ದನು! ಆದರೆ ಪಾಪ! ಏನುಮಾಡಿಯಾನು? ಅದು ನೀಗುವಹಾಗಿದ್ದಿಲ್ಲ!

ಹೇಮಚಂದ್ರನೂ, ಮೃಣಾಲಿನಿಯೂ ಈ ಮೇರೆಗೆ ಸ್ವರ್ಗಸುಖದಲ್ಲಿ ಮಗ್ನರಾಗಿರಲು, ಮಂದಿರದ ಎರಡನೆಯದೊಂದು ಕೋಣೆಯಲ್ಲಿ ಮಹಾ ಪ್ರಳಯವು ಉಂಟಾಗಿತ್ತು! ಒಡೆಯನ

ಅಪ್ಪಣೆಯಂತೆ ಮನೆಯನ್ನು ಕಾಯುತ್ತಿದ್ದ ದಿಗ್ವಿಜಯನು ರಾತ್ರಿಯೆಲ್ಲ ಎಚ್ಚತ್ತಿದ್ದನು. ಮೃಣಾಲಿನಿಯನ್ನು ಕರಕೊಂಡು ಹೇಮಚಂದ್ರನು ಮನೆಯೊಳಗೆ ಬರುವದನ್ನು ನೋಡಿ ಆತನು ಬೆರಗಾದನು. ಮೃಣಾಲಿನಿಯ ಗುರುತಂತು ಆತನಿಗೆ ಇದ್ದೇ ಇತ್ತು; ಮೇಲಾಗಿ ಆಕೆಯ ವೃತ್ತಾಂತವೆಲ್ಲವನ್ನೂ ಅವನು ತಿಳಿದಿದ್ದನು. ಅಂತೇ ಹೇಮಚಂದ್ರನೂ, ಮೃಣಾಲಿನಿಯೂ ಕೂಡಿ ಕೊಂಡದ್ದನ್ನು ನೋಡಿ ಅವನಿಗೆ ಮತ್ತೆ ಮತ್ತೆ ಆಶ್ಚರ್ಯವಾಗಹತ್ತಿತು. ಅವನಿಗೆ ಅದರ ಮರ್ಮವೇ ತಿಳಿಯದಾಯಿತು; ಆದರೆ ಯಜಮಾನನನ್ನು ವಿಚಾರಿಸಿ ಆ ಮರ್ಮವನ್ನು ತಿಳಕೊಳ್ಳುವ ಧೈರ್ಯವು ಅವನಿಗಿದ್ದಿಲ್ಲ, ಹೇಮಚಂದ್ರನ ಸ್ವಭಾವವನ್ನು ಆತನು ಚನ್ನಾಗಿ ಅರಿತಿದ್ದನು. ಪಾಪ, ಆ ಬಡವನು ಏನು ಮಾಡಿಯಾನು? ಅವನಿಗೆ ಸಮಾಧಾನವಾಗಲೊಲ್ಲದು. ಅಷ್ಟರಲ್ಲಿ ಗಿರಿಜೆಯೂ ಅಲ್ಲಿಗೆ ಬಂದು ಮುಟ್ಟಿದಳು. ಆಕೆಯನ್ನು ನೋಡಿಯಂತೂ ಆತನು ಮತ್ತಿಷ್ಟು ಬೆರಗಾದನು. ದಿಗ್ವಿಜಯನು ಹೇಮಚಂದ್ರನ ಒಬ್ಬ ಯಃಕಶ್ಚಿತ ಸೇವಕನಿದ್ದರೂ ಅವನು ಸಾಮಾನ್ಯ ಮೂರ್ತಿ ಇದ್ದಿಲ್ಲ, ಅವನ ತಲೆಯು ಕಲ್ಪನೆಯ ಆಗರವಾಗಿತ್ತು, ಎರಡನೆಯ ವರೆನ್ನದಿದ್ದರೂ, ಸ್ವತಃ ಅವನಂತು ತಾನು ಬಹು ಬುದ್ಧಿಶಾಲಿಯೆಂದು ತಿಳಿದಿದ್ದನು. ತಲೆತುರಿಸುತ್ತಾ ದಿಗ್ವಿಜಯನು ತನ್ನೊಳಗೆ—"ಹಾ-ಸರಿಸರಿ. ಈಗ ತಿಳಿಯಿತು! ಇವರಿಬ್ಬರು ಗೌಡನಗರದಿಂದ ನಮ್ಮಿಬ್ಬರನ್ನು ಕಾಣುವದಕ್ಕಾಗಿಯೇ ಇಲ್ಲಿಗೆ ಬಂದಿರುತ್ತಾರೆ. ಹೌದು, ಇದೇ ನಿಜವು ಎರಡನೆಯದೇನೂ ಇಲ್ಲ! ಅವ್ವನವರಂತು ನನ್ನ ಒಡೆಯನನ್ನು ಕಾಣಲಿಕ್ಕೆ ಬಂದರು. ಈ-ಈ ಕರೇಮುಸಡಿಯವಳು ನನ್ನನ್ನು ಅಗಲಿ ಕ್ಷಣವಾದರೂ ಇರದೆ ಬೆನ್ನಗುಂಟ ಬಂದಳು!"

ದಿಗ್ವಿಜಯನು ಮನಸ್ಸಿನಲ್ಲಿ ಹೀಗೆ ಒಟಗುಟ್ಟುತ್ತಿರಲು, ಅವನ ಕೈಯು ಅಸ್ತವ್ಯಸ್ತವಾಗಿ ಹಾರಾಡುತ್ತಿರುವ ಅವನ ಮೀಸೆಗಳ ಮೇಲೆಯೂ, ಜುಲುಪೆಗಳ ಮೇಲೆಯೂ ಆಡಹತ್ತಿತು. ಅದು ಅವಸರದಿಂದ ಕೂದಲುಗಳನ್ನು ತೀಡಹತ್ತಿತು. ಅರಕ್ಷಣದಲ್ಲಿ ದಿಗ್ವಿಜಯನ ಮೀಸೆಗಳೂ ಹುರಿಯಾದವು. ಜುಲುಪೆಗಳೂ ಮಿನುಗಹತ್ತಿದವು. ಅವನ ಮುಖಮುದ್ರೆಯು ಪ್ರಫುಲ್ಲಿತವಾಗಿ ತೋರಹತ್ತಿತು! ದಿಗ್ವಿಜಯನು ಮೀಸೆಯನ್ನು ಹುರಿ ಮಾಡುತ್ತ—"ಅನುಮಾನವೇ ಬೇಡ, ಅಂತೇ ಈ ಕರಿಕೆಯು ಇಲ್ಲಿಗೆ ಬಂದಿದ್ದಾಳೆ; ಆದರೆ ಇವಳು ಒಳ್ಳೇ ಹೊಯ್ಮಾಲಿಯು! ಒಂದು ದಿನವಾದರೂ ಪ್ರೀತಿಯಿಂದ ಮಾತಾಡಿದ್ದರೆ ಆಣೆಯು. ಆಕೆಯು, ನೋಡಿದಾಗೆಲ್ಲ ಬೈಯ್ಯುತ್ತಲೇ ಇರುವಳು. ಇಂಥವಳು ಕಷ್ಟಪಟ್ಟು ನನ್ನ ಸಲುವಾಗಿ ಯಾಕೆ ಬಂದಾಳು?— ಛೇನಿನ—ಅದು ಆಕೆಯ ಹುಡುಗಾಟಿಕೆಯು! ಆಕೆಯು ನನಗೆ ಮರುಳಾಗಿರುವದೇ ನಿಜವು. ಹಾಗಿಲ್ಲದಿದ್ದರೆ ಇಷ್ಟ ದೂರ ಕಷ್ಟಪಟ್ಟು ನನ್ನನ್ನು ಹುಡುಕುತ್ತ ಯಾಕೆ ಬರುತ್ತಿದ್ದಳು? ಅಷ್ಟು ದೂರವೇಕೆ, ನೋಡಿಯೇ ಬಿಡೋಣ. ಬೆಳಗಾಗುತ್ತಲೇ ಬಂದಿದೆ, ದನಿಯರೂ ಮನೆಯಲ್ಲಿದ್ದಾರೆ. ನಾನು ಎಲ್ಲಿಯಾದರೂ ಮರೆಗೆ ಹೋಗಿ ಮಲಗಿಕೊಳ್ಳುವೆನು. ಹುಡುಗಿಯು ನನ್ನನ್ನು ಹುಡುಕುವಳೋ ಇಲ್ಲವೋ ತಿಳಿಯುವದು, ಎಂದು ಆಲೋಚಿಸಿ ದಿಗ್ವಿಜಯನ ಸವಾರಿಯು ಎದ್ದದ್ದೇ ಮರೆಗೆ ಹೋಗಿ ಮಲಗಿಕೊಂಡಿತು. ಗಿರಿಜೆಯು ಇದನ್ನೆಲ್ಲ ದೂರದಿಂದ ನೋಡಿದ್ದಳು.

ರಾತ್ರಿಯಲ್ಲಿ ದಿಗ್ವಿಜಯನಿಗೆ ನಿದ್ದೆಯಿಲ್ಲದ್ದರಿಂದ ಅವನು ಬಹಳ ದಣಿದಿದ್ದನು. ಅವನು

ಏಕಾಂತ ಸ್ಥಳದಲ್ಲಿ ಅಡ್ಡಾದಕೂಡಲೆ ದುರ್ದೈವದಿಂದ ಬೇಗನೆ ಅವನಿಗೆ ನಿದ್ದೆಹತ್ತಿತು. ಇಷ್ಟರಲ್ಲಿ ಗಿರಿಜೆಯು ಮನೆಯೊಳಗೆ ಬಂದಳು. ಗಿರಿಜೆಯ ಸ್ವಭಾವವು ವಾಚಕರಿಗೆ ಗೊತ್ತೇ ಇರುವದು! ಆ ವಿನೋದ ಪ್ರೀಯಳು ಮನೆಯೊಳಗೆ ಹೋಗಹೋಗುತ್ತ—"ನಾನಂತು ಹೇಳೀ ಕೇಳೀ ಅವ್ವನವರ ದಾಸಿಯು. ಅವ್ವನವರು ಈ ಮನೆಯ ಯಜಮಾನರಿರುವರು, ಇಲ್ಲವೇ ಬೇಗನೇ ಆಗುವರು. ಅಂದಬಳಿಕ ಈ ಮನೆಯ ಕಸಕಡ್ಡಿ ನೋಡಿಕೊಳ್ಳುವ ಅಧಿಕಾರವು ನನ್ನದೇ ಇರುತ್ತದೆ," ಎಂದು ಟೊಂಕಕಟ್ಟಿ ಮೂಲೆಯೊಳಗಿನ ಕಸಬರಿಗೆಯನ್ನು ತಕ್ಕೊಂಡು ದಿಗ್ವಿಜಯನು ಗೊರಿಕೆ ಹೊಡೆಯುತ್ತಿದ್ದಲ್ಲಿಗೆ ಹೋದಳು. ಗಿರಿಜೆಯ ಕಾಲ ಸಪ್ಪಳಕ್ಕೆ ದಿಗ್ವಿಜಯನು ಎಚ್ಚತ್ತನು; ಆದರೆ ಹುಡಿಗೆಯು ಏನು ಮಾಡುತ್ತಾಳೆ ನೋಡಬೇಕೆಂದು ಆತನು ಕಣ್ಣುಮುಚ್ಚಿಕೊಂಡು ನಿದ್ದೆಯ ಸೋಗಿನಿಂದ ಬಿದ್ದುಕೊಂಡನು. ಗಿರಿಜೆಯು ತನ್ನನ್ನು ಹುಡುಕುತ್ತ ಬಂದಿರುವದರಿಂದ ತನ್ನ ಮೇಲೆ ಆಕೆಯ ಪ್ರೀತಿಯು ಇರುತ್ತದೆಂದು ದಿಗ್ವಿಜಯನು ಬಹಳ ಹಿಗ್ಗಿದನು. "ಆಕೆಯು ಬಂದು ತನ್ನನ್ನು ಎಬ್ಬಿಸಬಹುದು—ರಮಿಸಬಹುದು—ನಾನು ಮಾತಾಡುವದೇ ಇಲ್ಲ— ಆಕೆಯು ಏನು ಮಾತಾಡುವಳೋ ಕೇಳುತ್ತ ಸುಮ್ಮನೆ ಮಲಗಿ ಕೊಳ್ಳುವೆನು." ಇತ್ಯಾದಿ—ಮನೋರಾಜ್ಯಗಳಲ್ಲಿ ದಿಗ್ವಿಜಯನು ಮುಳುಗಿ ಹೋಗಿರಲು, ಕಸಬರಿಗೆಯ ಧಪ್ ಧಪ್ ಎಂಬ ಸಪ್ಪಳವು ಕೇಳಿಸಹತ್ತಿತು. ದಿಗ್ವಿಜಯನಿಗೆ ಗಡದ್ದು ನಿದ್ದೆ ಹತ್ತಿದ್ದರೂ, ಗಿರಿಜೆಯ ಆ ಕಸಬರಿಗೆಯ ಹೊಡತಕ್ಕೆ ಎಚ್ಚರಾಗದೆ ಇರುತ್ತಿದ್ದಿಲ್ಲ. ಈ ವಿಲಕ್ಷಣ ಪ್ರಕಾರವನ್ನು ನೋಡಿ ದಿಗ್ವಿಜಯನ ಬುದ್ಧಿಯು ಕುಂಠಿತವಾಯಿತು. ಗಿರಿಜೆಯು ನೆಲಕ್ಕೆ ಕಸಬರಿಗೆಯ ಪೆಟ್ಟುಗಳನ್ನು ಹಾಕುವಾಗ—"ಎಂಥಾ ಹೇಸಿ ಮಂದಿಯವ್ವಾ ಇದು! ಮನೆಯಲ್ಲಿ ಮೊಣಕಾಲುಮಟ ಕಸಬಿದ್ದಿರುತ್ತದೆ, ನೋಡುವವರೇ ಇಲ್ಲ—ಎಲ! ಇಲ್ಲಿ ಯಾರೋ ಅಡಗಿಕೊಂಡು ಕುಳಿತಿರುವರಲ್ಲ! ನಿದ್ದೆಯ ಸೋಗು ಹಾಕಿದಂತೆ ತೋರುತ್ತದೆ. ಕಳ್ಳರು ಕಾಕರಲ್ಲವಷ್ಟೇ, ಎಂದು ದಿಗ್ವಿಜಯನ ಬೆನ್ನ ಮೇಲೆ ಕಸಬರಿಗೆಯಿಂದ ಹೊಡೆಯಹತ್ತಿದಳು. ಪಾಪ! ಬಡವನಾದ ದಿಗ್ವಿಜಯನ ಬೆನ್ನು ಕೆಂಪಾಯಿತು.

ಗಿರಿಜೆಯ ಕಸಬರಿಗೆಯ ಹೊಡತವನ್ನು ತಾಳಲಾರದೆ ದಿಗ್ವಿಜಯನು ಒದರಿ—"ಏ ಗಿರಿ! ನಾನು–ನಾನು. ನಾನು–ಅವ"

ಗಿರಿಜೆ—ನೀನಾರೋ ಮಗನೇ? ಇಲ್ಲಿ ನಿನ್ನ ಕೆಲಸವೇನು? ಗಿರಿ ಎಂದು ಒಂಟಿ ಹೆಸರಿಲಿ ಕರೆಯಲಿಕ್ಕೆ ನೀನೇನು ಗುಗ್ಗರಿತಿಂದು ಹೆಸರು ಇಟ್ಟಿದಿಯಾ? ನಿನ್ನ ಮೋರೆಗೆ ಬೆಂಕೆಹಚ್ಚಿತು. (ಮತ್ತಿಷ್ಟು ಹೊಡೆಯ ಹತ್ತಿದಳು).

ದಿಗ್ವಿ—ಹೊಡೆಯಬೇಡ—ಹೊಡೆಯಬೇಡ—ನಾನು—ನಾನು—ಆ ದಿಗ್ವಿಜಯನು!

ಗಿರಿಜೆ—ಇನ್ನೊಮ್ಮೆ ಕಳವುಮಾಡಲಿಕ್ಕೊಂದು ಬಾ! ದಿಗ್ವಿಜಯನಂತೆ! ಎಲ್ಲಿಯವನೋ ನೀನು ದಿಗ್ವಿಜಯನು? ಇಲ್ಲಿ ನಿನ್ನ ಕೆಲಸವೇನಿತ್ತು? ಕಳ್ಳಖೋಡಿ! (ಬಾಯಿಯ ಸಂಗಡ ಕಸಬರಿಗೆಯ ಪೆಟ್ಟುಗಳು ಬೆನ್ನ ಮೇಲೆ ಬೀಳುತ್ತಲೇ ಇದ್ದವು).

ದಿಗ್ವಿ—(ಅಳುವ ಮೋರೆಯಿಂದ) ಗಿರಿಜೇ, ಇಷ್ಟರೊಳಗೆ ನೀನು ನನ್ನ ಗುರುತು ಮರೆತೆಯಾ?

ಗಿರಿಜೆ—(ತಲೆಯಿಂದ ಕಾಲತನಕ ಕಸಬೊರಗಿಯಿಂದ ಹೊಡೆಯುತ್ತ) ಖೋಡೀ, ನಿನ್ನ ನಾಲಿಗೆ ಉದ್ದವಾಗಿದೆ ಹೌದೆ? ಬೆಂಕಿಹಚ್ಚಲಿ ನಿನ್ನ ಮೋರೆಗೆ, ಮುಳ್ಳುಮುರಿಯಲಿ ನಿನ್ನ ನಾಲಿಗೆಗೆ; ನನಗೂ ನಿನಗೂ ಎಲ್ಲಿಯ ಗುರುತೋ? ಹೇಳು— ಖೋಡೀ ಹೇಳು—

ಈ ಪರಿಯನ್ನು ನೋಡಿ ದಿಗ್ವಿಜಯನು, ಓಡಿಹೋಗದಿದ್ದರೆ ಪರಿಣಾಮವಿಲ್ಲೆಂದು ಬಗೆದು, ಅಲ್ಲಿಂದ ಓಡಿಹೋದನು. ಗಿರಿಜೆಯು ಕಸಬರಿಗೆ ತಕ್ಕೊಂಡು ಬೆನ್ನುಹತ್ತಿದಳು.

ಗುರು–ಶಿಷ್ಯರು

ಬೆಳ್ಳಗೆ ಬೆಳಗಾಯಿತು. ಹೇಮಚಂದ್ರನು ಮುಖಮಾರ್ಜನಾದಿ ವಿಧಿಗಳನ್ನು ತೀರಿಸಿ ಕೊಂಡು ಮಾಧವಾಚಾರ್ಯರನ್ನು ಕಾಣುವದಕ್ಕೆ ಹೊರಟನು. ಆಗ ಅವರು ಜಪ ಮಾಡುತ್ತಿದ್ದರು. ಕೆಲಹೊತ್ತಿನ ಮೇಲೆ ಅವರು ಕಣ್ಣುತೆರೆಯಲು, ಹೇಮಚಂದ್ರನು ಅವರನ್ನು ವಂದಿಸಿ—ಗುರುಗಳೇ, ನಮ್ಮ ಪ್ರಯತ್ನಗಳೆಲ್ಲ ನಿಷ್ಫಲವಾದವು. ಇನ್ನು ಈ ಸೇವಕನಿಗೆ ಅಪ್ಪಣೆ ಮಾಡತಕ್ಕದ್ದನ್ನು ಮಾಡಬೇಕು. ಯವನರಂತು ಗೌಡದೇಶವನ್ನು ಕೈವಶಮಾಡಿ ಕೊಂಡರು. ಈ ದೈವಗೇಡಿಯಾದ ಭರತಭೂಮಿಯ ದೈವದಲ್ಲಿ ಯಾವಾಗಲೂ ಮುಸಲ್ಮಾನರ ದಾಸ್ಯವನ್ನು ವಹಿಸಬೇಕೆಂದು ಬರೆದಂತೆ ತೋರುತ್ತದೆ! ಹಾಗಲ್ಲದಿದ್ದರೆ ಗೌಡದೇಶವು ಅನಾಯಾಸವಾಗಿ ಅವರ ಕೈಸೇರಬಹುದಾಗಿತ್ತೋ? ಈ ದೇಹವನ್ನು ಬಲಿಯಾಗಿ ಅರ್ಪಿಸುವದರಿಂದ ಈ ಗೌಡದೇಶವು ಒಂದು ದಿವಸವಾದರೂ ಶತ್ರುಗಳ ಕೈಯಿಂದ ಮುಕ್ತವಾಗುವ ಹಾಗಿದ್ದರೆ, ನಾನು ನನ್ನ ದೇಹವನ್ನು ಅರ್ಪಿಸಲು ಸಿದ್ಧನಾಗಿದ್ದೇನೆ! ಇದೇ ಉದ್ದೇಶದಿಂದ ನಿನ್ನೆ ರಾತ್ರಿ ಯುದ್ಧ ಮಾಡುವದಕ್ಕಾಗಿ ಪಟ್ಟಣದೊಳಗೆ ಹೋಗಿದ್ದೆನು. ಹೋಗಿ ನೋಡುತ್ತೇನೆ, ಅಲ್ಲಿ ಏನು ಇದೆ! ಯುದ್ಧದ ಹೆಸರೇ ಇಲ್ಲ! ಒಬ್ಬನು ಶಸ್ತ್ರವನ್ನು ತಕ್ಕೊಂಡು ಬೆನ್ನಹತ್ತಿದ್ದಾನೆ, ಮತ್ತೊಬ್ಬನು ಓಡುತ್ತಾನೆ! ಇದೇ ರೀತಿಯು ಎಲ್ಲ ಕಡೆಯಲ್ಲಿಯೂ ಕಣ್ಣಿಗೆ ಬಿದ್ದಿತು? ಅದನ್ನು ನೋಡಿ ನಾನು ಉದಾಸೀನನಾದೆನು.

ಮಾಧವಾ—ತಮ್ಮಾ ಹೀಗೆ ಕಷ್ಟಕ್ಕೆ ಒಳಗಾಗಬೇಡ. ವಿಧಿಲಿಪಿಯು ಎಂದಿಗೂ ಸುಳ್ಳಾಗಲಾರದು. ನಾನು ಗಣಿತದಿಂದ ನಿಶ್ಚಯಿಸಿದ ಹೊತ್ತಿನಲ್ಲಿ ಮುಸಲ್ಮಾನರು ಸೋಲ ಬೇಕು. ಮುಸಲ್ಮಾನರು ಗೌಡದೇಶವನ್ನು ಸ್ವಾಧೀನಪಡಿಸಿಕೊಂಡ ಮಾತ್ರದಿಂದ ಗೌಡ ದೇಶವೆಲ್ಲ ಅವರ ಕೈಸೇರಿದಂತಾಗಲಿಲ್ಲ. ಮುಖ್ಯ ಅರಸನು ಸಿಂಹಾಸನವನ್ನು ಬಿಟ್ಟು ಓಡಿಹೋದರೂ, ಈ ರಾಜ್ಯದ ಆಧಾರಸ್ತಂಭಗಳಾದ ಬೇರೆ ಮಾಂಡಲಿಕ ಅರಸರು ಬಹು ಜನರಿದ್ದಾರೆ. ಅವರನ್ನೇನು ಮುಸಲ್ಮಾನರು ಇನ್ನೂವರೆಗೆ ಸೋಲಿಸಿಲ್ಲ. ಈ ಮಾಂಡಲಿಕ ರಾಜರೆಲ್ಲರೂ ಒಕ್ಕಟ್ಟಾಗಿ ಮುಸಲ್ಮಾನರ ಮೇಲೆ ಶಸ್ತ್ರಹಿಡಿದರೆ, ಯವನರ ನಾಶವಾಗಲಿಕ್ಕೆ ತಡವಾಗಲಿಕ್ಕಿಲ್ಲ.

ಹೇಮ—ಇದು ಇಷ್ಟು ಸಂಭವನೀಯವಾಗಿ ತೋರುವದಿಲ್ಲ.

ಮಾಧವಾ—ಹೇಮಚಂದ್ರಾ, ಹೀಗೆನ್ನಬೇಡ. ಹೊತ್ತುಬಂದರೆ ಅಶಕ್ಯವೂ, ಕಲ್ಪನಾತೀತವೂ ಆಗಿ ತೋರುವ ಸಂಗತಿಗಳು ಪ್ರತ್ಯಕ್ಷ ಒದಗಿ, ಜಗತ್ತನ್ನು ಆಶ್ಚರ್ಯಗೊಳಿಸುತ್ತವೆ. ನನ್ನ ಜೋತಿಷ್ಯವು ಎಂದೂ ಸುಳ್ಳಾಗದು. ಜೋತಿಷ್ಯದಲ್ಲಿ ನಾನು ಸ್ವಲ್ಪ ತಪ್ಪಿದಂತೆ ಕಾಣುತ್ತದೆ. ಪೂರ್ವದೇಶದಲ್ಲಿ ಮುಸಲ್ಮಾನರ ನಾಶವಾಗುವದೆಂದು ಜ್ಯೋತಿಷ್ಯದಿಂದ ನನಗೆ ಗೊತ್ತಾಗಿತ್ತು, ಆ ಪೂರ್ವದೇಶವು ನವದ್ವಿಪವೆಂತಲೇ ಇಲ್ಲಿಯವರೆಗೆ ನಾನು ತಿಳಕೊಂಡಿದ್ದೆನು; ಆದರೆ, ಗೌಡದೇಶವೇನು ನಿಜವಾದ ಪೂರ್ವದೇಶವಲ್ಲ, ಕಾಮರೂಪದೇಶವೇ ಪೂರ್ವದೇಶ ವಾಗಿರುವದು. ಈ ಕಾಮರೂಪದೇಶದಲ್ಲಿ ನಿಶ್ಚಯವಾಗಿ ಮುಸಲ್ಮಾನರು ಸೋಲುವವರಿದ್ದಾರೆ.

ಹೇಮ—ಆದರೆ, ಸದ್ಯಕ್ಕಂತು ಮುಸಲ್ಮಾನರು ಕಾಮರೂಪದೇಶಕ್ಕೆ ದಂಡೆತ್ತಿಹೋಗುವ ಸಂಭವವು ತೋರುವದಿಲ್ಲ.

ಮಾಧವಾ—ತಮ್ಮಾ, ನಿನಗೆ ಆ ಮುಸಲ್ಮಾನರ ನೆಲೆಯು ಗೊತ್ತಾಗಿಲ್ಲ! ಅವರು ಒಂದು ಕ್ಷಣವಾದರೂ ಸುಮ್ಮನೆ ಕುಳಿತುಕೊಳ್ಳಲಾರರು. ಅವರಿಗೆ ಅನಿವಾರವಾದ ರಾಜ್ಯತೃಷ್ಣೆಯು ಉತ್ಪನ್ನವಾಗಿದೆ. ಗೌಡದೇಶದಲ್ಲಿ ತಮ್ಮ ಅಧಿಕಾರವು ಸಂಪೂರ್ಣವಾಗಿ ನೆಲೆಗೊಂಡಿತೆಂದು ಕಂಡಕೂಡಲೆ, ಅವರು ಕಾಮರೂಪದೇಶದ ಮೇಲೆ ದಂಡೆತ್ತಿಹೋಗುವರು.

ಹೇಮ—ನೀವು ಅಂದಂತೆ ಮುಸಲ್ಮಾನರು ಕಾಮರೂಪದೇಶದ ಮೇಲೆ ದಂಡೆತ್ತಿ ಹೋಗುವರೆಂತಲೂ, ಅವರು ಅಲ್ಲಿ ಸೋಲುವರೆಂತಲೂ ಒಂದು ಕ್ಷಣ ತಿಳಿಯುವೆನು; ಆದರೆ, ಹೀಗಾದ ಮಾತ್ರದಿಂದ ನನ್ನ ತಂದೆಯ ರಾಜ್ಯದ ಉದ್ಧಾರವು ಹೇಗಾದೀತು?

ಮಾಧವಾ—ಇಲ್ಲಿಯವರೆಗೆ ಈ ಮುಸಲ್ಮಾನರಿಗೆ ಹೋದತ್ತೆಲ್ಲ ಜಯವಾಗುತ್ತ ಬಂದಿರುವದರಿಂದ ಭರತಖಂಡದಲ್ಲೆಲ್ಲ ಅವರು ಅಂಜಿಕ್ಯರೆಂದು ಭಾವಿಸಲ್ಪಡಹತ್ತಿದ್ದಾರೆ. ಎಲ್ಲ ಹಿಂದೂ ಅರಸರಿಗೂ ಅವರ ಅಂಜಿಕೆಯು ವಿಶೇಷವಾಗಿರುತ್ತದೆ. ಅವರಿಗೆ ಎದುರಾಗಲಿಕ್ಕೆ ಯಾರ ಎದೆಯೂ ಸಾಲುವದಿಲ್ಲ; ಆದರೆ, ಎಲ್ಲಿಯಾದರೂ ಅವರು ಒಮ್ಮೆ ಸೋತರೆ ಸಾಕು, ಅವರ ಜಿಗಟು ಎಲ್ಲರಿಗೆ ಗೊತ್ತಾಗಿ ಅವರ ವಿಷಯದ ವ್ಯರ್ಥವಾದ ಭಯವು ದೂರವಾಗುವದು. ಎಲ್ಲ ಹಿಂದೂರಾಜರೂ ಇವರ ಅತ್ಯಾಚಾರಕ್ಕೆ ಬೇಸತ್ತಿದ್ದಾರೆ. ಅವರೆಲ್ಲರೂ ಒಕ್ಕಟ್ಟಾಗಿ ಮುಸಲ್ಮಾನರಿಗೆ ಎದುರಾಗಬಹುದು. ಹೀಗೆ ಒಕ್ಕಟ್ಟಿನಿಂದ ಹಿಂದೂ ಜನರು ಹೋರಾಡಹತ್ತಿದರೆ, ಮುಸಲ್ಮಾನರು ಎಷ್ಟು ದಿವಸ ನಿಂತಾರು?

ಹೇಮ—ಗುರುಗಳೇ, ತಾವು ಮುಂದಿನ ಆಸೆಯಿಂದ ಮುಂದಿನ ಸಂಗತಿಯನ್ನು ಕಲ್ಪಿಸುತ್ತೀರಿ; ಆಗಲಿ, ನೀವು ನೆನಿಸಿದಂತೆ ಯಾವತ್ತು ಸಂಗತಿಗಳು ಒದಗಿ ಬರಲೆಂದು ನಾನು ಇಚ್ಛಿಸುತ್ತೇನೆ. ಆದರೆ ಮುಂದೆ ನಾನು ಏನು ಮಾಡಬೇಕೆಂಬದನ್ನು ಅಪ್ಪಣೆಕೊಡಿಸಬೇಕು.

ಮಾಧವಾ—ನಾನೂ ಅದನ್ನೇ ವಿಚಾರಿಸತೊಡಗಿದ್ದೇನೆ. ಇನ್ನು ನೀನು ಈ ಪಟ್ಟಣ ದಲ್ಲಿರುವದು ನೆಟ್ಟಗೆ ಕಾಣುವದಿಲ್ಲ, ಮುಸಲ್ಮಾನರು ನಿನ್ನನ್ನು ಕೊಲ್ಲಲಿಕ್ಕೆ ಹೊಂಚುಹಾಕಿ ಕುಳಿತಿದ್ದಾರೆ. ಹೇಮಚಂದ್ರಾ, ನೀನು ಇಂದೇ ಈ ಪಟ್ಟಣವನ್ನು ಬಿಡು.

ಹೇಮು—ಬಿಟ್ಟು ಎಲ್ಲಿಗೆ ಹೋಗಲಿ?

ಮಾಧವಾ—ನನ್ನ ಸಂಗಡ ಕಾಮರೂಪದೇಶಕ್ಕೆ ನಡೆ.

ಹೇಮು—(ತಲೆ ತಗ್ಗಿಸಿ ಬೆದರುತ್ತ ಬೆದರುತ್ತ ಮೆಲ್ಲನೆ) ಮೃಣಾಲಿನಿಯನ್ನು ಎಲ್ಲಿ ಇಟ್ಟು ಬರಲಿ?

ಮಾಧವಾ—(ಆಶ್ಚರ್ಯದಿಂದ) ಏನಂದಿ? ಮೃಣಾಲಿನಿಯನ್ನೇ! ಇನ್ನೂವರೆಗೆ ಮೃಣಾಲಿನಿಯು ನಿನ್ನ ಹೃದಯದಲ್ಲಿ ಸ್ಥಿರವಾಗಿ ಇರುವಳೇ? ನಿನ್ನೆ ನಾನು ಹೇಳಿದ ಸಂಗತಿಯನ್ನು ಕೇಳಿ ಮೃಣಾಲಿನಿಯನ್ನು ಮರೆತು ಬಿಟ್ಟಿದ್ದೀಯೆಂದು ಮಾಡಿದ್ದೆನು.

ಹೇಮಚಂದ್ರ—(ಮೊದಲಿನಂತೆ ಮೋರೆ ತಗ್ಗಿಸಿ ಮೆಲ್ಲನೆ) ನಾನು ಮೃಣಾಲಿನಿಯನ್ನು ಬಿಡುವಹಾಗಿಲ್ಲ. ಆಕೆಯು ನನ್ನ ಧರ್ಮಪತ್ನಿ ಇರುವಳು.

ಇದನ್ನು ಕೇಳಿ ಮಾಧವಾಚಾರ್ಯನು ಮತ್ತಿಷ್ಟು ಬೆರಗಾದನು. ಆತನಿಗೆ ಅಸಮಾಧಾನ ವಾದದ್ದಲ್ಲದೆ ಸ್ವಲ್ಪ ಸಿಟ್ಟೂ ಬಂದಿತು. ಆತನು ಹುಬ್ಬು ಏರಿಸಿ ನುಡಿದನೇನಂದರೆ—

ಮಾಧವ—ಇಲ್ಲಿಯವರೆಗೆ ನೀನು ಈ ಮಾತನ್ನು ನನಗೆ ತಿಳಿಸಿಯೇ ಇಲ್ಲವಲ್ಲ.

ಹೇಮಚಂದ್ರ—ಗುರುವರ್ಯರೇ, ಮೃಣಾಲಿನಿಯ ತವರುಮನೆಯು ಮಥುರೆ ಯೆಂಬುದು ತಮಗೆ ಗೊತ್ತಿರುವದು. ಮಥುರೆಯಲ್ಲಿಯ ಬೌದ್ಧಧರ್ಮದ ಒಬ್ಬ ದೊಡ್ಡ ಸಾವುಕಾರನು ಮೃಣಾಲಿನಿಯ ತಂದೆಯು. ಮಥುರೆಯ ಅರಸನ ಮಗಳದೂ ಮೃಣಾಲಿನಿಯದೂ ಗೆಳೆತನ ಬಹಳ. ಅವರಿಬ್ಬರೂ ಒಂದುದಿನ ನಾವಿನಲ್ಲಿ ಕುಳಿತು ಮಥುರೆಯಲ್ಲಿ ಜಲಕ್ರೀಡೆ ಯಾಡುತ್ತಿದ್ದರು. ಅಷ್ಟರಲ್ಲಿ ಬಿರುಗಾಳಿ ಬಿಟ್ಟು ಅವರ ನಾವೆಯು ಮುಣುಗಿತು. ಅಂಬಿಗರು ಅವರನ್ನು ಉಳಿಸಲಿಕ್ಕೆ ಬಹು ಪ್ರಯಾಸಪಟ್ಟರು. ಅವರು ರಾಜಪುತ್ರಿಯನ್ನು ಸುರಕ್ಷಿತವಾಗಿ ದಂಡೆಗೆ ಮುಟ್ಟಿಸಿದರು. ಮೃಣಾಲಿನಿಯು ಹರಿಗುಂಟ ತೇಲುತ್ತ ನೀರು ಗುಟುಕರಿಸುತ್ತ ಹೊರಟಳು. ಅಷ್ಟರಲ್ಲಿ ನಾನು ನನ್ನ ನಾವೆಯನ್ನು ಬಿರುಗಾಳಿಯ ಭಯದಿಂದ ದಂಡೆಗೆ ಒಯ್ಯುತ್ತಿದ್ದೆನು. ನಾನು ಮೃಣಾಲಿನಿಯ ಕೂದಲು ನದಿಯಲ್ಲಿ ತೇಲಾಡುವದನ್ನು ಕಂಡು, ಯಮುನೆಯಲ್ಲಿ ಹಾರಿ ಆಕೆಯನ್ನು ದಂಡೆಗೆ ಕರೆದೊಯ್ದೆನು. ಮೃಣಾಲಿನಿಯ ಗುರುತು ನನಗಿದ್ದಿಲ್ಲ, ನನ್ನ ಗುರುತು ಮೃಣಾಲಿನಿಗಿದ್ದಿಲ್ಲ. ನಾನು ಮೃಣಾಲಿನಿಯನ್ನು ಆಕೆಯ ತಂದೆಯ ಬಳಿಗೆ ಅಂದೇ ಕಳಿಸಬೇಕೆಂದು ಮಾಡಿದ್ದೆನು; ಆದರೆ ಅಂದು ಒಂದೇ ಸವನೆ ಮಳೆಹೊಡೆದದ್ದ ರಿಂದ ಮನೆಬಿಟ್ಟು ಹೊರಗೆ ಕಾಲು ಇಡುವಂತೆ ಇದ್ದಿಲ್ಲ. ನಾವಿಬ್ಬರು ಮನೆಯಲ್ಲಿಯೇ ಇದ್ದದ್ದರಿಂದ ಪರಸ್ಪರರ ಪರಿಚಯವಾಗಿ ಪರಸ್ಪರರ ಗುಣ—ರೂಪಗಳು ಪರಸ್ಪರರ ಮನಸ್ಸಿಗೆ ಬಂದು ಒಬ್ಬರಮೇಲೊಬ್ಬರು ಪ್ರೀತಿಮಾಡಹತ್ತಿದೆವು. ಮೃಣಾಲಿನಿಯು ಆಗ ಹದಿನೈದು ವರ್ಷದವಳಿದ್ದಳು. ಆಕೆಗೆ ಎಲ್ಲ ಮಾತು ತಿಳಿಯುತ್ತಿದ್ದಿಲ್ಲ. ನಾನು ಆಕೆಗೆ ದೇವರಂತೆ ಪೂಜ್ಯನಾಗಿ ತೋರುತ್ತಿದ್ದೆನು. ನನ್ನನ್ನು ಲಗ್ನಮಾಡಿಕೊಳ್ಳೆಂದು ನಾನು ಆಜ್ಞಾಪಿಸಿದ್ದರಿಂದ ಆಕೆಯು ಒಡಂಬಟ್ಟಳು. ಆಕೆಯ ಅಬಚಿಯು ಆಕೆಯ ಮೇಲಿನ ಲೋಭದಿಂದ ಕನ್ಯಾದಾನ ಮಾಡಿ ಕೊಟ್ಟಳು. ನಮ್ಮ ಪುರೋಹಿತನು ನಮ್ಮ ಲಗ್ನಮಾಡಿಸಿದನು. ನಮ್ಮ ಲಗ್ನದಲ್ಲಿ ದಿಗ್ವಿಜಯನು

ಒಳಿತಾಗಿ ಶ್ರಮಪಟ್ಟಿದ್ದಾನೆ. ಲಗ್ನವಾದಬಳಿಕ ಮೃಣಾಲಿನಿಯು ತಂದೆಯಮನೆಗೆ ಹೋದಳು. ಆಕೆಯನ್ನು ನೋಡಿ ಆಕೆಯ ತಂದೆಗೆ ಬಹಳ ಸಂತೋಷವಾಯಿತು ಲಗ್ನದ ಸುದ್ದಿಯನ್ನೊಂದು ಬಿಟ್ಟು ಉಳಿದ ಸಂಗತಿಯನ್ನೆಲ್ಲ ಆಕೆಯು ತನ್ನ ತಂದೆಯ ಮುಂದೆ ಒಂದುಳಿಯದಂತೆ ಹೇಳಿದಳು. ಆಕೆಯ ತಂದೆಯು ಆಕೆಯ ಲಗ್ನಮಾಡಬೇಕೆಂದು ಬೇರೆ ವರನನ್ನು ನಿಶ್ಚಯ ಮಾಡಿದ್ದನು; ಆದರೆ ಮೃಣಾಲಿನಿಯ ಲಗ್ನವು ಮೊದಲೇ ಆದದ್ದರಿಂದ ಆಕೆಯು ಜ್ವರದ ನೆವದಿಂದ ಲಗ್ನವನ್ನು ತಪ್ಪಿಸಿಕೊಂಡಳು. ಆಕೆಗೆ ಸಹಾಯ ಮಾಡುವದಕ್ಕಾಗಿ ನಾನು ರತ್ನದಾಸನೆಂಬ ಹೆಸರಿನಿಂದ ಮಥುರೆಯಲ್ಲಿ ವ್ಯಾಪಾರಮಾಡುತ್ತಿದ್ದೆನು. ನಾನು ಅಲ್ಲಿ ಇಲ್ಲದಾಗ ದಿಗ್ವಿಜಯನನ್ನು ಇಟ್ಟು ಹೋಗುತ್ತಿದ್ದೆನು. ಹೊತ್ತು ಬಿದ್ದಾಗ ನಾನು ತಪ್ಪಿದರೆ, ದಿಗ್ವಿಜಯನು ಆಕೆಗೆ ಸಹಾಯ ಮಾಡುವಂತೆ ಇದ್ದನು. ಪೂಜ್ಯರೇ, ಇದರ ಮೇಲೆ ತಾವು ಉಂಗುರ ತೋರಿಸಿ ಮೃಣಾಲಿನಿಯನ್ನು ಹೃಷೀಕೇಶ ಬ್ರಾಹ್ಮಣನ ಮನೆಯಲ್ಲಿ ಇಟ್ಟಿರುವದು ತಮಗೆ ಗೊತ್ತೇ ಇರುವದು.

ಮಾಧವಾ—ಮೃಣಾಲಿನಿಯು ನಿನ್ನ ಧರ್ಮಪತ್ನಿಯಿದ್ದರೂ ವ್ಯಭಿಚಾರಿಣಿಯಾದ ಹೆಂಡತಿಯು ಶಾಸ್ತ್ರದಂತೆ ತ್ಯಾಜ್ಯಳಿರುವಳು. ಮೃಣಾಲಿನಿಯ ದೂಷಿತವಾದ ಆಚರಣವನ್ನು ನಾನು ನಿನಗೆ ಹೇಳಿಯೇ ಇರುವೆನು.

ಗುರುಗಳ ಈ ಮಾತುಗಳನ್ನು ಕೇಳಿ ಹೇಮಚಂದ್ರನು ವ್ಯೋಮಕೇಶನ ನೀಚತನದ ಸಂಬಂಧದ ವೃತ್ತಾಂತವನ್ನು ಸವಿಸ್ತಾರವಾಗಿ ಹೇಳಿದನು. ನಿಜವಾದ ಸಂಗತಿಯೆಲ್ಲ ತಿಳಿದ ಮೇಲೆ ಮಾಧವಾಚಾರ್ಯನು ಆನಂದದಿಂದ ನುಡಿದನೇನಂದರೆ—ತಮ್ಮಾ, ಇದನ್ನು ಕೇಳಿ ನನಗೆ ಬಹಳ ಕೌತುಕವುಂಟಾಗಿದೆ. ನಿನ್ನ ಪ್ರಿಯತಮೆಯಾದ ಗುಣವತಿ ಭಾರ್ಯೆಯನ್ನೂ, ನಿನ್ನನ್ನೂ ಅಗಲಿಸಿ ಇಬ್ಬರಿಗೂ ಕ್ಲೇಶವನ್ನುಂಟುಮಾಡಿದ್ದಕ್ಕಾಗಿ ನನ್ನಮೇಲೆ ಸಿಟ್ಟಾಗಬೇಡ. ನೀವು ದೀರ್ಘಾಯುಷಿಗಳಾಗಿರೆಂತಲೂ, ಆನಂದದಿಂದಲೂ, ಧರ್ಮಾಚರಣೆಯಿಂದಲೂ ನಿಮ್ಮ ಸಂಸಾರಯಾತ್ರೆಯು ಸಫಲವಾಗಲೆಂತಲೂ ನಿಮ್ಮನ್ನು ಆಶೀರ್ವದಿಸುತ್ತೇನೆ. ನಿನ್ನ ಕಾರ್ಯದ ಆರಂಭವು ಇನ್ನೂ ಆಗಿರುವದಿಲ್ಲೆಂತಲೇ ತಿಳಿ. ಸಾಧ್ವಿಯಾದ ಮೃಣಾಲಿನಿಯು ''ರಾಣೀ—ಮೃಣಾಲಿನಿ''ಯಾಗುವವರೆಗೆ ನಿನ್ನ ಈ ಗುರುವಿಗೆ ವಿಶ್ರಾಂತಿಯು ದೊರೆಯಲಾರದು, ನಿನಗೂ ವಿಶ್ರಾಂತಿಯು ದೊರೆಯಲಾರದು!

ಧಾತುಮೂರ್ತಿಯ ವಿಸರ್ಜನ

ಹಿಂದೆ ಹೇಳಿದಂತೆ ನವದ್ವೀಪದಲ್ಲಿ ಯವನ ಸೇನೆಯು ಕೊಲೆ ಸುಲಿಗೆಗಳನ್ನು ನಡಿಸಿದ ರಾತ್ರಿಯನ್ನೆಲ್ಲ ಪಶುಪತಿಯು ಕಾರಾಗೃಹದಲ್ಲಿ ಕಳೆದದ್ದನ್ನು ವಾಚಕರು ಬಲ್ಲರು. ಎರಡನೆಯ ದಿವಸ ಕೊಲೆ ಸುಲಿಗೆಗಳು ನಿಲ್ಲಿಸಲ್ಪಟ್ಟು ಯವನ ಸೇನೆಯು ತಿರುಗಿ ಪಾಳಯಕ್ಕೆ ಹೋಯಿತು.

ನಸಿಕಿನಲ್ಲಿ ಮುಹಮ್ಮದಲಿಯು ಕಾರಾಗೃಹದಲ್ಲಿರುವ ಪಶುಪತಿಯನ್ನು ಕಾಣಲಿಕ್ಕೆ ಬಂದನು. ಅವನನ್ನು ನೋಡಿದ ಕೂಡಲೆ ಪಶುಪತಿಯು ಸಿಟ್ಟಿನಿಂದ—ಮುಸಲಾ! ನಿನ್ನ ಸವಿ ಮಾತುಗಳನ್ನು ಕೇಳುವ ಇಚ್ಛೆಯು ನನಗಿಲ್ಲ! ನಿನ್ನ ಆ ಸವಿಮಾತುಗಳನ್ನು ನಂಬಿದ್ದರಿಂದಲೇ ನಾನು ಈ ಗತಿಗೆ ಮುಟ್ಟಿದೆನು. ವಿಧರ್ಮಿಗಳಾದ ಯವನರ ಮೇಲೆ ನಂಬಿಕೆಯನ್ನಿಟ್ಟದ್ದಕ್ಕೆ ಯೋಗ್ಯ ಫಲವು ನನಗೆ ದೊರೆತಿರುತ್ತದೆ. ಇನ್ನು ಬರಿಯ ಮೃತ್ಯುವಿನ ಹೊರತು ಮತ್ತೊಂದು ಹಾದಿಯನ್ನು ನಾನು ನೋಡುವದಿಲ್ಲ, ನನಗೆ ನಿನ್ನ ಸವಿಮಾತುಗಳು ಸರ್ವಥಾ ಬೇಡ, ಎನ್ನಲು ಮುಹಮ್ಮದಲಿಯು ಗಂಭೀರವಾಣಿಯಿಂದ—ನನ್ನ ಒಡೆಯನ ಅಪ್ಪಣೆಯಂತೆ ನಾನು ನಡಕೊಂಡೆನು. ಈಗಾದರೂ ಒಡೆಯನ ಅಪ್ಪಣೆಯಂತೆ ನಡೆಯುವದಕ್ಕಾಗಿಯೇ ಇಲ್ಲಿಗೆ ಬಂದಿರುತ್ತೇನೆ. ನೀವು ಸುಮ್ಮನೆ ಈ ಯವನ ವೇಷವನ್ನು ಧಾರಣ ಮಾಡಿರಿ, ಎಂದು ನುಡಿದು ಪಶುಪತಿಯ ಸಲುವಾಗಿ ತಂದಿದ್ದ ಮುಸಲ್ಮಾನರ ಉಡುಪು—ತೊಡಪುಗಳನ್ನು ಅವನ ಮುಂದೆ ಇಟ್ಟನು. ಅದನ್ನು ನೋಡಿ ಪಸುಪತಿಯು ಸಂತಪ್ತನಾಗಿ—

ಪಶು—ಜೀವ ಹೋದರೂ ಚಿಂತೆಯಿಲ್ಲ, ನಾನು ಮುಸಲ್ಮಾನ ಧರ್ಮವನ್ನು ಸ್ವೀಕರಿಸುವದಿಲ್ಲ.

ಮುಹ—(ಶಾಂತಮುದ್ರೆಯಿಂದ) ಹೀಗೆ ಹಟ ಹಿಡಿಯಬೇಡಿರಿ, ನಾನು ಈಗ ಮುಸಲ್ಮಾನೀ ಧರ್ಮವನ್ನು ಸ್ವೀಕರಿಸಿರೆಂದು ನಿಮಗೆ ಹೇಳುವದಿಲ್ಲ, ಕೇವಲ ರಾಜಾಜ್ಞೆಯ ಸಲುವಾಗಿ ಮುಸಲ್ಮಾನರ ಉಡುಪು—ತೊಡುಪುಗಳನ್ನು ಧರಿಸಿರೆಂದು ಬೇಡಿಕೊಳ್ಳುತ್ತೇನೆ.

ಪಶು—ಪ್ರಾಣಾಂತದಲ್ಲಾದರೂ ಈ ವೇಷವನ್ನು ಧರಿಸಲಾರೆನು.

ಮುಹ—ಸುಮ್ಮನೆ ಹೀಗೆ ಹುಚ್ಚರಹಾಗೆ ಮಾಡಬೇಡಿರಿ. ನೀವು ನಮ್ಮ ಸೆರೆಯಾಳಾಗಿರುತ್ತೀರಿ. ದೊಡ್ಡಿಸ್ತನ ಕೊಟ್ಟು ನಾನು ಹೇಳಿದಂತೆ ನಡೆಯುವದರಲ್ಲಿ ಭೂಷಣವಿರುವದು. ಸುಮ್ಮನೆ ಚಂಡಿತನ ಮಾಡಿದರೆ, ಅಪಮಾನವಾದೀತು. ಸಂತೋಷದಿಂದ ನಮ್ಮ ಅಪ್ಪಣೆಯನ್ನು ನಡಿಸದಿದ್ದರೆ, ಬಲಾತ್ಕಾರದಿಂದ ನಡಿಸಲಾದೀತು.

ಇದನ್ನು ಕೇಳಿ ಪಶುಪತಿಯು ಸುಮ್ಮನಾದನು. ಆ ಮೇಲೆ ಮುಹಮ್ಮದಲ್ಲಿಯು ತನ್ನ ಕೈಮುಟ್ಟಿ ಪಶುಪತಿಗೆ ಮುಸಲ್ಮಾನೀ ಪೋಷಾಕನ್ನು ಏರಿಸಿದನು. ಬಳಿಕ ಆತನು—

ಮುಹ—ನಡೆಯಿರಿ, ಇನ್ನು ನಮ್ಮ ಸಂಗಡ ನಡೆಯಿರಿ.

ಪಶು—ಎಲ್ಲಿಗೆ ಹೋಗತಕ್ಕದ್ದು?

ಮುಹಮ್ಮದಲಿ—(ಹುಬ್ಬು ಗಂಟಿಕ್ಕಿ) ನಾನು ನಿಮ್ಮನ್ನು ಬುದ್ಧಿವಂತರೆಂದು ತಿಳಿದಿದ್ದೆನು; ಆದರೆ ತಾವು ತೀರಾ ಮೂರ್ಖರಿದ್ದಂತೆ ತೋರುತ್ತದೆ! ಹೇಳಿ ಕೇಳಿ ನೀವು ನಮ್ಮ ಸೆರೆಯಾಳಾಗಿರುತ್ತೀರಿ. ಕರೆದತ್ತ ಬರಲಿಕ್ಕೇಬೇಕು; ಅಂದಬಳಿಕ ಎಲ್ಲಿಗೆ ಹೋಗಬೇಕು, ಏನು ಮಾಡಬೇಕು, ಎಂದು ಕೇಳುವದರಲ್ಲಿ ನಿಮಗೆ ಪ್ರಯೋಜನವೇನು? ಸುಮ್ಮನೆ ಎದ್ದರೇನೋ, ನನ್ನ ಬೆನ್ನಹತ್ತಿ ಬಂದರೇನೋ.

ಮಾತಾಡುತ್ತಾನೇನು? ಪಾಪ! ಪಶುಪತಿಯು ಮಹಮ್ಮದಲಿಯ ಬೆನ್ನಹತ್ತಿ ನಡೆದನು. ಅವರ ಬೆನ್ನಹತ್ತಿ ನಾಲ್ವರು ಕಾವಲುಗಾರರು ಹೊರಟಿದ್ದರೆಂದು ಬೇರೆ ಹೇಳುವ ಕಾರಣವಿಲ್ಲ. ಸಿಂಹದ್ವಾರಕ್ಕೆ ಬಂದು ಮುಟ್ಟಿದ ಕೂಡಲೆ, ಅಲ್ಲಿದ್ದ ಮುಸಲ್ಮಾನ ಕಾವಲುಗಾರರಿಗೆ ಮಹಮ್ಮದಲಿಯು ತನ್ನ ಗುರುತು ಹೇಳಿ ಕೆಲವು ಸಾಂಕೇತಿಕ ಶಬ್ದಗಳನ್ನು ಉಚ್ಚರಿಸಿದನು. ಕೂಡಲೆ ಬಾಗಿಲು ಕಾಯುವವರು ಎಲ್ಲರನ್ನು ಹೊರಗೆ ಬಿಟ್ಟರು. ಊರಬಿಟ್ಟು ಬಹಳ ದೂರ ಹೋದ ಮೇಲೆ ಸುತ್ತು ಮುತ್ತು ಯಾರೂ ಇಲ್ಲದ್ದನ್ನು ನೋಡಿ ಮಹಮ್ಮದಲಿಯು ಪಶುಪತಿಯನ್ನು ಕುರಿತು—ಪಂಡಿತಜೀ! ನೀವು ತಪ್ಪಿಲ್ಲದೆ ನನ್ನ ಮೇಲೆ ಸಿಟ್ಟಾಗುತ್ತೀರಿ. ಬಖತ್ಯಾರಖಿಲಜಿಯ ಮನಸ್ಸಿನಲ್ಲಿ ಹೀಗಿದ್ದೀತೆಂಬದು ನನಗೆ ಮೊದಲು ಗೊತ್ತಾಗಲಿಲ್ಲ. ಗೊತ್ತಾಗಿದ್ದರೆ, ಆ ನೀಚನ ಕೆಲಸವನ್ನು ಮೈಮೇಲೆ ತಕ್ಕೊಂಡು ನಾನು ತಮ್ಮ ಕಡೆಗೆ ಎಂದೂ ಬರುತ್ತಿದ್ದಿಲ್ಲ. ಆದದ್ದು ತಿರುಗಿ ಬರುವಹಾಗಿಲ್ಲ. ಅಂದಬಳಿಕ ಅದನ್ನು ಕುರಿತು ವ್ಯರ್ಥವಿಚಾರ ಮಾಡುವದರಲ್ಲಿ ಅರ್ಥವಿಲ್ಲ. ನನ್ನ ಮಾತನ್ನು ನಂಬಿ ನೀವು ಈ ದುರ್ದಶೆಯನ್ನು ಹೊಂದಿದ್ದಕ್ಕಾಗಿ ನನಗೆ ಬಹಳ ದುಃಖವಾಗುತ್ತದೆ. ಆ ದುಃಖದ ಪರಿಹಾರಕ್ಕಾಗಿಯೇ ನಾನು ತಮ್ಮನ್ನು ಗುಪ್ತವೇಷದಿಂದ ಇಲ್ಲಿಗೆ ಕರಕೊಂಡು ಬಂದಿದ್ದೇನೆ. ತಮ್ಮ ಸಲುವಾಗಿ ನದಿಯಲ್ಲಿ ನಾವೆ ಸಿದ್ಧವಾಗಿರುವದು. ತಾವು ಅದರಲ್ಲಿ ಕುಳಿತು ಯೋಗ್ಯವೆಂದು ತೋರಿದ ಸ್ಥಳಕ್ಕೆ ಹೋಗಿರಿ.

ಮಹಮ್ಮದಲಿಯ ಈ ಮಾತುಗಳನ್ನು ಕೇಳಿ ಪಶುಪತಿಯು ಬೆರಗಾಗಿ ಮಹಮ್ಮದಲಿಯ ಮೋರೆಯನ್ನು ಮಿಕಿ ಮಿಕಿ ನೋಡುತ್ತ ನಿಂತುಕೊಂಡನು. ಆಗ ಮಹಮ್ಮದಲಿಯು—ನೀವು ಈಗಲೇ ಈ ಪಟ್ಟಣವನ್ನು ಬಿಟ್ಟು ಹೋಗಿರಿ. ನೀವು ಇಲ್ಲಿ ಇರುವದು ಬಖತ್ಯಾರಖಿಲಜಿಗೆ ಗೊತ್ತಾದರೆ ಅನರ್ಥವಾದೀತು. ಅವನಿಗೆ ತಿಳಿಯದಂತೆ, ಅದೇಕೆ ಅವನ ಅಪ್ಪಣೆಯ ವಿರುದ್ಧವಾಗಿ ನಿಮ್ಮನ್ನು ಬಂಧಮುಕ್ತ ಮಾಡಿದ್ದೇನೆ; ಆದ್ದರಿಂದ ಇನ್ನುಮೇಲೆ ಒಂದು ಕ್ಷಣವಾದರೂ ಇಲ್ಲಿ ನಿಲ್ಲಬೇಡಿರಿ, ಎಂದು ಹೇಳಿ ಮಹಮ್ಮದಲಿಯು ಪಶುಪತಿಯ ಅಪ್ಪಣೆಯನ್ನು ಪಡೆದು ಹೊರಟುಹೋದನು. ಇದನ್ನು ನೋಡಿ, ಪಶುಪತಿಯು ಆಶ್ಚರ್ಯ, ದುಃಖ, ಪಶ್ಚಾತ್ತಾಪ, ಕ್ರೋಧ ಮೊದಲಾದ ಪ್ರಬಲಮನೋವಿಕಾರಗಳಿಂದ ಹುಚ್ಚನಂತಾಗಿ ನದಿಯ ದಂಡೆಗುಂಟ ಸಾಗಿದನು. ಕಾಲು ಒಯ್ದತ್ತ ಅವನು ಹೋಗುತ್ತಿದ್ದನು. ಇಂಥ ಸ್ಥಳಕ್ಕೆ ಹೋಗ ಬೇಕೆಂದು ಅವನ ಮನಸ್ಸಿನ ನಿಶ್ಚಯವೇನೂ ಆಗಿದ್ದಿಲ್ಲ. ಈ ಜಗತ್ತಿನಲ್ಲಿ ಮೋರೆ ತೋರಿಸಲಿಕ್ಕೆ ಅವನಿಗೆ ಸ್ಥಳವೇ ಉಳಿದಿದ್ದಿಲ್ಲ. ಮಹಮ್ಮದಲಿಯು ಅವನ ಮೇಲೆ ಉಪಕಾರಮಾಡಿ ಕಾರಾಗೃಹ ದಿಂದ ಬಿಡಿಸಿ, ಇನ್ನು ಕ್ಷಣಸಹ ಇಲ್ಲಿನಿಲ್ಲದೆ ಸುರಕ್ಷಿತವಾದ ಸ್ಥಳಕ್ಕೆ ಹೋಗೆಂದು ಹೇಳಿದ್ದನು; ಆದರೆ ಈಗ ಪಶುಪತಿಯ ಮೈಮೇಲಿನ ಎಚ್ಚರವು ತಪ್ಪಿದ್ದರಿಂದ ಮಹಮ್ಮದಲಿಯು ಹೇಳಿದ್ದು ಅವನ ನೆನಪಿನಲ್ಲಿ ಉಳಿಯಲಿಲ್ಲ. ಅವನು ಮೆಲ್ಲ ಮೆಲ್ಲನೆ ಪಟ್ಟಣದ ಕಡೆಗೆ ಹೋಗುವ ಹಾದಿಯನ್ನು ಹಿಡಿದನು. ಬಹು ದೂರ ಹೋದ ಮೇಲೆ ಪಶುಪತಿಯು ಎಚ್ಚತ್ತನು. ಆಗ ಅವನ ಕಣ್ಣಿಗೆ ಬಿದ್ದ ಸಂಗತಿಯಿಂದ ಅವನ ಮನಸ್ಸು ಮತ್ತಿಷ್ಟು ವ್ಯಾಕುಲವಾಯಿತು. ಪಟ್ಟಣದೊಳಗಿನ ಅಸಂಖ್ಯ ಪ್ರಜೆಗಳ ಹೆಣಗಳ ರಾಶಿ—ರಾಶಿಗಳು ಅಲ್ಲಲ್ಲಿ ಬಿದ್ದಿರುತ್ತವೆ; ನರಿ—ನಾಯಿ—

ಹದ್ದುಗಳು ಆ ಹೆಣಗಳಿಗೆ ಮುಗಿಬಿದ್ದು ಅವನ್ನು ತುಂಡರಿಸಿ ತಿನ್ನುತ್ತಿವೆ; ಭೂಮಿಯು ರಕ್ತಮಯವಾಗಿದೆ; ಹಾದಿ ಹಿಡಿದು ಹೋಗುವಾಗ ಹೆಜ್ಜೆಹೆಜ್ಜೆಗೆ ಹೆಣಗಳನ್ನು ತುಳಿಯ ಬೇಕಾಗುತ್ತದೆ; ರಕ್ತದ ಕೆಸರಿನಿಂದ ಪಶುಪತಿಯ ಎರಡೂ ಕಾಲುಗಳು ಮುಣುಗಿ ಹೋಗಿವೆ. ಇದನ್ನೆಲ್ಲ ನೋಡಿ ಅವನಿಗೆ ಬಹಳ ದುಃಖವಾಯಿತು. ದುಃಖದ ಆವೇಶದಲ್ಲಿ ಅವನು ಮಹಮ್ಮದಲಿಯ ಮೇಲೆ ಸಿಟ್ಟಾಗಿ ಮನಸ್ಸಿನಲ್ಲಿ—ಈ ಭಯಂಕರ ಸ್ಥಿತಿಯನ್ನು ನೋಡುವದಕ್ಕಾಗಿ ನನ್ನನ್ನು ಬಂಧಮುಕ್ತನಾಗ ಮಾಡಿದ ನೀನು ನನ್ನ ಮಿತ್ರನಾಗಿರದೆ ಶತ್ರುವಾಗಿರುತ್ತೀ. ಹೀಗೆ ಮಾಡದೆ ಸೆರೆಮನೆಯಲ್ಲಿ ನನ್ನನ್ನು ಪರಿಪರಿಯಾಗಿ ಕಾಡಿ ನನ್ನನ್ನು ಕೊಂದಿದ್ದರೆ ನಿನ್ನನ್ನು ಮಿತ್ರನೆನ್ನುತ್ತಿದ್ದೆನು, ಎಂದು ಅಂದುಕೊಂಡನು.

ಪಶುಪತಿಯು ಹಾಗೆಯೇ ಮುಂದಕ್ಕೆ ನಡೆದನು. ಮುಂದೆ ಮುಂದೆಯೆಂತೂ ಹೆಚ್ಚು ಹೆಚ್ಚು ಭಯಂಕರವಾದ ನೋಟಗಳು ಕಣ್ಣಿಗೆ ಬೀಳತೊಡಗಿದವು. ನಿನ್ನೆ ಅಸಂಖ್ಯ ಪ್ರಜೆಗಳ ಬಗೆಬಗೆಯ ವ್ಯಾಪಾರಗಳಿಂದ ಗಜಬಜಿಸಿ ಹೋದದ್ದರಿಂದ ಪ್ರಫುಲ್ಲಿತವಾಗಿ ತೋರುತ್ತಿದ್ದ ಪಟ್ಟಣವು, ಇಂದು ಪ್ರತ್ಯಕ್ಷ ಸ್ಮಶಾನವಾಗಿದೆ; ಮಾರ್ಗದ ಎರಡೂ ಬದಿಗಳಲ್ಲಿರುವ ಮನೆಗಳೆಲ್ಲ ಹಾಳಾಗಿ ಬಿದ್ದುಹೋಗಿವೆ; ನಿನ್ನೆ ಪಟ್ಟಣಕ್ಕೆ ಅಲಂಕಾರಭೂತವಾಗಿದ್ದ ದೊಡ್ಡ ದೊಡ್ಡ ಮಂದಿರಗಳು ಇಂದು ನೆಲಸಮವಾಗಿವೆ; ಎಷ್ಟೋ ಮನೆಗಳಿಗೆ ಬೆಂಕಿಹತ್ತಿದೆ; ಭಯದಿಂದ ಒಳಗೆ ಅಡಗಿಕೊಂಡಿದ್ದ ಜನರು ಸುಟ್ಟುಕೊಂಡು ಸಾಯಲಾರದೆ ಆಕ್ರೋಶಮಾಡಹತ್ತಿದ್ದಾರೆ. ಎಂಥ ಭಯಂಕರ ನೋಟವಿದು! ಪಶುಪತಿಯಿಂದ ಅದನ್ನು ನೋಡುವದಾಗಲೊಲ್ಲದು. ಇದಕ್ಕೆ ಕಾರಣರಾದವರಾರು? ತಾನೇ ಸ್ವತಃ ಪಶುಪತಿಯು!

ಪಶುಪತಿಯ ಎದೆಯೊಡೆದು ನೀರಾಯಿತು. ಅಲ್ಲಿ ಅವನು ಒಂದು ಕ್ಷಣವಾದರೂ ಇರದಾದನು. ಆಗ ಅವನಿಗೆ ತನ್ನ ಅಷ್ಟಭುಜದುರ್ಗೆಯ ಸ್ಮರಣವಾಯಿತು; ಆದರೆ ದೇವಿಯ ಬಳಿಯಲ್ಲಿ ಆತನು ಯಾವ ವರವನ್ನು ಬೇಡಿಕೊಳ್ಳಬೇಕು! ಬೇಡಿಕೊಳ್ಳುವಂಥ ವರವು ಯಾವದೂ ಉಳಿದಿದ್ದಿಲ್ಲ. ಪಶುಪತಿಯು ಆಕಾಶದ ಕಡೆಗೆ ನೋಡಿದನು. ಆ ಅಮರ್ಯಾದಿತ ವಾದ ಆಕಾಶದಲ್ಲಿ ಮಿನುಗುವ ಲೆಕ್ಕವಿಲ್ಲದ ನಕ್ಷತ್ರಗಳೂ, ಪೂರ್ಣ ಕಲಾಯುಕ್ತನಾದ ಚಂದ್ರಮನೂ ನಗುವಂತೆ ಆತನಿಗೆ ತೋರುತ್ತಿದ್ದವು; ಆದರೆ ಪಶುಪತಿಗೆ ಆ ಹಾಸ್ಯವೂ, ಅಪೂರ್ವವಾದ ಕಾಂತಿಯೂ, ಶೋಭೆಯೂ ಸಹನವಾಗಲಿಲ್ಲ. ಆತನು ತನ್ನ ಕಣ್ಣುಗಳನ್ನು ಮುಚ್ಚಿಕೊಂಡನು. ಒಮ್ಮಿಂದೊಮ್ಮೆ ಅವನ ಅಂತಃಕರಣದಲ್ಲಿ ವಿಲಕ್ಷಣವಾದ ಭೀತಿಯು ಉತ್ಪನ್ನವಾಗಿ ಅವನು ಥರ ಥರ ನಡುಗಹತ್ತಿದನು. ಅವನ ಕಾಲುಗಳು ಏಳಲೊಲ್ಲವು. ಅವನು ತೀರಾ ಬಲಹೀನನಾಗಿ ಹೋದದರಿಂದ ಹಾದಿಯಲ್ಲಿಯೇ ಒಂದು ಎತ್ತರವಾದ ಸ್ಥಳದಲ್ಲಿ ಕುಳಿತುಕೊಂಡನು. ಸ್ವಲ್ಪ ಹೊತ್ತಿನ ಮೇಲೆ ಎಚ್ಚತ್ತು ನೋಡುತ್ತಾನೆ, ತಾನು ಒಂದು ಹೆಣದ ಮೇಲೆ ಕುಳಿತುಕೊಂಡದ್ದು, ಅದರ ರಕ್ತದಿಂದ ತನ್ನ ಮೈಯೂ, ಅರಿವೆಗಳೂ ತೊಯ್ದುಹೋಗಿವೆ. ಪಶುಪತಿಯ ಶರೀರವು ರೋಮಾಂಚಿತವಾಯಿತು. ಅವನು ಗಡಬಡಿಸಿ ಎದ್ದು ಭರಭರ ಮುಂದಕ್ಕೆ ಸಾಗಿದನು. ಒಮ್ಮಿಂದೊಮ್ಮೆ ಅವನಿಗೆ ತನ್ನ ಮಂದಿರದ ಸ್ಮರಣವಾಯಿತು. ಪಟ್ಟಣ

ದೊಳಗಿನ ಉಳಿದ ಮಂದಿರಗಳಂತೆ ತನ್ನ ಮಂದಿರದ ಅವಸ್ಥೆಯು ಆಗಿರಬಹುದೋ? ಆ ಮಂದಿರದಲ್ಲಿ ಪ್ರತಿಬಂಧಿಸಿ ಇಟ್ಟು ಬಂದಿದ್ದ ಕೋಮಲಾಂಗಿಯ ಗತಿಯು ಏನಾಗಿರಬಹುದು? ಪ್ರಿಯತಮೆಯೂ—ಸುಂದರಿಯೂ ಆದ ಮನೋರಮೆಯು ಈಗ ಎಲ್ಲಿ ಇರಬಹುದು? ಆಕೆಯು ಏನಾಗಿರಬಹುದು? ಮನೋರಮೆಯು ಈ ಪಾಪ ಮಾರ್ಗದಿಂದ ಹಿಂದಿರುಗಲಿಕ್ಕೆ ನನ್ನನ್ನು ಆಗಾಗ್ಗೆ ಉಪದೇಶಿಸುತ್ತಿದ್ದಳು. ದ್ರವ್ಯಲೋಭದಿಂದ ಅಂಧನಾದ ಅಧಮನು ನಾನು, ಆ ಸಾಧ್ವಿಯ ಸದುಪದೇಶವನ್ನು ಕೇಳಲಿಲ್ಲ. ಪಾಪಿಷ್ಠನಾದ ನನ್ನ ಪಾಪರೂಪವಾದ ಅಗ್ನಿಕುಂಡದಲ್ಲಿ ಆ ಪುಣ್ಯವತಿಯಾದ ದೇವಿಯೂ ಸುಟ್ಟು ಭಸ್ಮವಾಗಿರಲಿಕ್ಕಿಲ್ಲವಷ್ಟೇ?

ಈ ವಿಚಾರವು ಉತ್ಪನ್ನವಾಗುತ್ತಲೇ ಪಶುಪತಿಯು ತನ್ನ ಮಂದಿರದ ಕಡೆಗೆ ಓಡುತ್ತ ನಡೆದನು. ಅಲ್ಲಿಗೆ ಹೋಗಿ ನೋಡುತ್ತಾನೆ, ತನ್ನ ಕಲ್ಪನೆಗಿಂತಲೂ ಭಯಂಕರವಾದ ನೋಟವು ಕಣ್ಣಿಗೆ ಬಿದ್ದಿತು. ಉನ್ನತವೂ, ವಿಶಾಲವೂ ಆದ ಅವನ ಮಂದಿರದೊಳಗಿಂದ ಭಯಂಕರವಾದ ಹೊಗೆಯೂ, ಜ್ವಾಲೆಯೂ ಹೊರಬೀಳಹತ್ತಿವೆ. ಅದನ್ನು ನೋಡಿ ಪಶುಪತಿಯು—ಪಟ್ಟಣದ ಬೇರೆ ಕಡೆಯಲ್ಲಿ ಮಾಡಿದಂತೆ ದುಷ್ಟ ಯವನರು ನನ್ನ ಪ್ರಾಣಪ್ರಿಯಳನ್ನು ಕೊಂದುಹಾಕಿ ಮಂದಿರಕ್ಕೆ ಬೆಂಕಿಯನ್ನು ಹಚ್ಚಿದ್ದಾರೆ, ಎಂದು ಕ್ಷಣಹೊತ್ತು ಏಕಾಗ್ರದೃಷ್ಟಿಯಿಂದ ಆ ಮಂದಿರದ ಕಡೆಗೆ ನೋಡುತ್ತ ನಿಂತುಕೊಂಡು, ಒಮ್ಮಿಂದೊಮ್ಮೆ ದೀಪದ ಹುಳದಂತೆ ಆ ಬೆಂಕಿಹತ್ತಿದ ತನ್ನ ಮನೆಯಲ್ಲಿ ಧುಮುಕಿದನು. ಪಶುಪತಿಗೆ ತನ್ನ ಮೈಮೇಲಿನ ಎಚ್ಚರವು ಉಳಿದಿದ್ದಿಲ್ಲ. ಮಹಾ ವೇಗದಿಂದ ಅವನು ಅಗ್ನಿಜ್ವಾಲೆಯನ್ನು ಪ್ರವೇಶಿಸಿದನು. ಅವನ ಕಾಲುಗಳು ಸುಟ್ಟವು; ಮೈಯು ಹುರಪಳಿಸಿ ಹೋಯಿತು; ನಿಗಿ ನಿಗಿ ಕೆಂಡಗಳ ಮಳೆಯು ಅವನ ಮೈಮೇಲೆ ಸುರಿಯಹತ್ತಿತು; ಆದರೂ ಅವನು ಯಾವದಕ್ಕೂ ಹಣಿಯಲಿಲ್ಲ. ಮುಖ್ಯ ಬಾಗಿಲಿನಿಂದ ಅವನು ನೆಟ್ಟಗೆ ತನ್ನ ಮಲಗುವ ಮನೆಗೆ ಹೋದನು. ಮನೋರಮೆಯು ಅಲ್ಲಿ ಇದ್ದಿಲ್ಲ! ಅವನು ಕಕ್ಕಾಬಿಕ್ಕಿಯಾಗಿ ಮನೆತುಂಬ ಅತ್ತಿಂದ ಇತ್ತ ಇತ್ತಿಂದ ಅತ್ತ ಓಡಾಡಹತ್ತಿದನು. ಆ ಬೆಂಕಿಹತ್ತಿದ ಮನೆಯಲ್ಲಿ ಭರದಿಂದ ಓಡುವಾಗ ಕ್ಷಣಕ್ಷಣಕ್ಕೆ ಅವನ ಅವಯವಗಳೆಲ್ಲ ಬೆಂಕಿಯಿಂದ ಬೇಯುತ್ತಿದ್ದವು. ಕಾಲಬುಡಕ್ಕೆ ಬೆಂಕಿ, ಮೇಲೆ ಬೆಂಕಿಯಮಳೆ, ಎಡಬಲದಲ್ಲಿ ಭಯಂಕರವಾದ ಅಗ್ನಿ ಜ್ವಾಲೆಗಳು, ಎಲ್ಲ ಸ್ಥಳದಲ್ಲಿ ಬೆಂಕಿಯ ಮಯವು; ಬೆಂಕಿಯ ಹೊರತು ಸ್ಥಳವೇ ಇಲ್ಲವು! ಆದರೆ ಆತನ ಅಂತರಂಗದಲ್ಲಿ ಉತ್ಪನ್ನವಾಗಿದ್ದ ಅಗ್ನಿಯ ಮುಂದೆ ಈ ಅಗ್ನಿಯ ಆಟವು ಏನೂ ನಡೆಯುವಹಾಗಿದ್ದಿಲ್ಲ. ಪಶುಪತಿಯು ಒಂದೇಸವನೆ ಮನೆತುಂಬ ಕುಣಿಯುತ್ತಿದ್ದನು.

ಮನೆಯ ಯಾವತ್ತು ಭಾಗಗಳಿಗೆ ಬೆಂಕಿಯು ಹತ್ತಿತು. ಅಗ್ನಿಯ ಭಯಂಕರವಾದ ಜ್ವಾಲೆಯ ಸಂಗಡ ಅಂತಸ್ತುಗಳು ಒಂದರಹಿಂದೊಂದು ಕಡಕೊಂಡು ಬೀಳತೊಡಗಿದವು. ಮೇಘಗರ್ಜನೆಯನ್ನು ಮೀರಿದ ಭಯಂಕರ ಗರ್ಜನೆಗಳು ಆಗತೊಡಗಿದವು. ಮನೋರಮೆಯ ಮೃತದೇಹವಾದರೂ ದೃಷ್ಟಿಗೆ ಬೀಳಬೇಕೆಂದು ಪಶುಪತಿಯು ಇಚ್ಛಿಸುತ್ತಿದ್ದನು; ಆದರೆ ಅವನ ಇಚ್ಛೆಯು ವ್ಯರ್ಥವಾಯಿತು. ಪಾಪ! ಆ ಭ್ರಮಿಷ್ಟ ಪಶುಪತಿಯು ಹತಾಶನಾದನು. ಕಡೆಗೆ ಓಡುತ್ತ

ಹೋಗುವಾಗ ಅವನಿಗೆ ದೇವಿಯ ಮಂದಿರವು ಕಾಣಿಸಿತು. ದೇವಿಯ ಮಂದಿರವಾದರೂ ಅಗ್ನಿ ಜ್ವಾಲೆಯಿಂದ ಪ್ರಕಾಶಿತವಾಗಿತ್ತು. ಪಶುಪತಿಯು ಒಮ್ಮೆಲೇ ಒಳಗೆ ಧುಮುಕಿದನು. ನೋಡುತ್ತಾನೆ, ಒಳಗೆಲ್ಲ ಬೆಂಕಿಹತ್ತಿದ್ದು, ತನ್ನ ಅಷ್ಟಭುಜಾಂಕಿತವಾದ ದೇವಿಯ ಪ್ರತಿಮೆಯು ಆಸನದ ಮೇಲೆ ವಿರಾಜಮಾನವಾಗಿರುತ್ತದೆ. ಆ ಕಾಲದ ದೇವಿಯ ಭಯಂಕರವಾದ ಮುದ್ರೆಯನ್ನು ನೋಡಿ ಪಶುಪತಿಯ ಚಿತ್ತವು ಮತ್ತಿಷ್ಟು ಕ್ಷುಬ್ಧವಾಯಿತು. ಅವನು ಉನ್ಮತ್ತನಾದನು. ಆತನು ದೇವಿಯನ್ನು ಕುರಿತು ನುಡಿದನೇನಂದರೆ—ಇನ್ನು ನಿನ್ನನ್ನು ಜಗದಂಬೆಯೆಂದು ಕರೆಯುವದಿಲ್ಲ, ನಿನ್ನ ಪೂಜೆಯನ್ನೂ ಮಾಡುವದಿಲ್ಲ, ನಿನಗೆ ನಮಸ್ಕಾರ ವನ್ನೂ ಮಾಡುವದಿಲ್ಲ! ಆಜನ್ಮ ನಾನು ಕಾಯಾ—ವಾಚಾ—ಮನಸ್ಸಿನಿಂದ ನಿನ್ನನ್ನು ಸೇವಿಸಿದೆನು. ಭಕ್ತಿಪೂರ್ವಕ ನಿನ್ನನ್ನು ಪೂಜಿಸಿದೆನು. ನಿನ್ನ ಧ್ಯಾನದಲ್ಲಿಯೇ ಜನ್ಮದ ಸಾರ್ಥಕ್ಯ ವೆಂದು ಭಾವಿಸಿದೆನು. ಅಂಥ ನೀನು ಈದಿನ ನನಗೆ ಇಂಥ ಫಲವನ್ನು ಕೊಟ್ಟೆಯಾ? ಒಂದುದಿವಸದ ಪಾಪಾಚರಣದಿಂದ ಇಂಥ ಫಲವೇ? ಅಂದಬಳಿಕ ನಿನ್ನ ಸೇವೆಯ—ಪೂಜೆಯ—ಧ್ಯಾನದ ಫಲವೇನು? ನನ್ನ ಪಾಪಮಯವಾದ ಬುದ್ಧಿಯನ್ನು ನೀನು ಯಾಕೆ ತಿರುಗಿಸಲಿಲ್ಲ? ಅಧಃಪತನದಿಂದ ನನ್ನನ್ನು ಯಾಕೆ ಉದ್ಧಾರಮಾಡಲಿಲ್ಲ? ಎಲೈ ಧಾತು ಮೂರ್ತಿಯೇ, ನೋಡು! ನೀನು ಕೇವಲ ಧಾತುವಿನ ಮೂರ್ತಿಯೇ ಇರುತ್ತೀ. ದೇವಿಯಲ್ಲ, ನಿನ್ನಲ್ಲಿ ದೇವತ್ವವಿಲ್ಲ, ನನ್ನ ಪ್ರಿಯ ಮನೋರಮೆಯಂತೆಯೇ ನೀನೂ ಈಗ ಸುಟ್ಟು ಹೋಗುತ್ತೀ; ಆದರೆ ನಿನ್ನನ್ನು ಸ್ಥಾಪನಮಾಡಿದ ನಾನು ನಿನಗೆ ಮುಕ್ತಿಯನ್ನು ಕೊಡುತ್ತೇನೆ, ಎಂದು ಉನ್ಮತ್ತನಾದ ಪಶುಪತಿಯು ಧಾತುಮೂರ್ತಿಯನ್ನು ಎತ್ತುವದಕ್ಕಾಗಿ ಅದನ್ನು ತೆಕ್ಕೆಬಿದ್ದನು. ಕೆಂಪಗೆ ಕಾದಿದ್ದ ಆ ಧಾತು ಮೂರ್ತಿಯಿಂದ ಪಶುಪತಿಯ ಸರ್ವಾಂಗವು ಸುಟ್ಟುಹೋಯಿತು. ಆಗ ಉನ್ಮತ್ತ ಪಶುಪತಿಯು—ದೇವೀ, ನಿನ್ನ ಸ್ಪರ್ಶದಿಂದ ನನ್ನ ದೇಹವು ಸುಟ್ಟಿತು; ಆದರೆ ಹೃದಯವು ಸುಡಲಿಲ್ಲ; ಸಂತಾಪದಿಂದ ಚಿತ್ತಶುದ್ಧಿಯಾಗಲಿಲ್ಲ; ಚಿತ್ತಶುದ್ಧಿಯಿಲ್ಲದ ನನ್ನ ಪೂಜೆಯನ್ನು ನೀನು ಪರಿಗ್ರಹಿಸದ್ದರಿಂದ, ಅಥವಾ ನನ್ನ ಆ ದುಷ್ಟ ಹೃದಯವು ಅನುತಾಪದಿಂದ ಶುದ್ಧವಾಗ ಬೇಕೆಂಬ ಉದ್ದೇಶದಿಂದ ನೀನು ನನಗೆ ಈ ಘೋರ ಶಿಕ್ಷೆಯನ್ನು ವಿಧಿಸಿದ್ದೇ ನಿಶ್ಚಯವು! ದೇಶ ದ್ರೋಹಿಯೂ, ಸ್ವಾಮಿದ್ರೋಹಿಯೂ ಆದ ನಾನು ಇನ್ನೇನು ಮಾಡಲಿ? ನನ್ನ ಮನೋರಮೆಯ ಮಾತು ಕೇಳಲಿಲ್ಲವಲ್ಲ! ಮನೋರಮೇ, ಮನೋರಮೇ!! ಯವನರನ್ನು ನಂಬಿ ನಾನು ಕೆಟ್ಟೆನು, ಸ್ವದೇಶಬಾಂಧವರನ್ನು ಕೆಡಿಸಿದೆನು. ಅಯ್ಯೋ! ದೇವೀ, ಅಸುರಮರ್ದಿನೀ, ಭವಾನೀ, ನಿನ್ನ ಕೈಯೊಳಗಿನ ಈ ತೀಕ್ಷ್ಣ ಖಡ್ಗದಿಂದ ಯವನರ ಚಂಡುಗಳನ್ನು ಹಾರಿಸಬಾರದೇ? ಮನೋರಮೇ, ಮನೋರಮೇ! ನೀನು ನನ್ನ ಶಕ್ತಿಸ್ವರೂಪಳು, ನೀನು ಈ ಖಡ್ಗವನ್ನು ತಕ್ಕೊಂಡು ಯವನರನ್ನು ಸಂಹರಿಸು; ಹಿಡಿ, ಬೇಗನೆ ಹಿಡಿ, ಎಂದು ಪಶುಪತಿಯು ದೇವಿಯ ಕೈಯೊಳಗಿನ ಖಡ್ಗವನ್ನು ತಕ್ಕೊಂಡು ಮುಂದಕ್ಕೆ ಚಾಚಲು, ಅದನ್ನು ಯಾರೋ ಇಸಕೊಂಡರು. ಅಷ್ಟರಲ್ಲಿ ದೇವಿಯ ಮಂದಿರವು ಕುಸಿಬಿದ್ದದ್ದರಿಂದ ಮೂರ್ತಿಸಹಿತವಾಗಿ ಪಶುಪತಿಗೆ ಜೀವಂತ ಸಮಾಧಿಯು ಪ್ರಾಪ್ತವಾಯಿತು!

ಪ್ರತಿಜ್ಞೆಗೆ ಪ್ರತಿಬಂಧ

ಪಶುಪತಿಯು ದುರ್ಗಾಪೂಜೆಯನ್ನು ಸ್ವತಃ ಮಾಡುತ್ತಿದ್ದರೂ, ದೇವಿಯ ನಿತ್ಯ ಪೂಜೆಯ ಸಲುವಾಗಿ ದುರ್ಗಾದಾಸನೆಂಬ ಒಬ್ಬ ಸತ್ವಶೀಲ ಬ್ರಾಹ್ಮಣನನ್ನು ನಿಯಮಿಸಿದ್ದನು. ಪಟ್ಟಣದೊಳಗಿನ ಗದ್ದಲವು ಶಾಂತವಾದ ಮೇಲೆ ಪಶುಪತಿಯ ಮಂದಿರವು ಹಾಳಾಯಿತೆಂಬ ವರ್ತಮಾನವು ದುರ್ಗಾದಾಸನ ಕಿವಿಗೆ ಮುಟ್ಟಿತು. ಮುಸಲ್ಮಾನರ ಅಂಜಿಕೆಯಿಂದ ಆ ಬಡ ಬ್ರಾಹ್ಮಣನು ಮನೆಯಿಂದ ಹೊರಬಿದ್ದಿದ್ದಿಲ್ಲ, ತನ್ನ ಯಜಮಾನನ ಮಂದಿರವೂ, ಆ ಮಂದಿರದೊಡನೆ ದೇವಿಯ ಪ್ರಿತಮೆಯೂ ನಾಶವಾದವೆಂಬ ವರ್ತಮಾನವನ್ನು ಕೇಳಿ ಅವನಿಗೆ ಬಹಳ ದುಃಖವಾಯಿತು. ದೇವಿಯ ಮೂರ್ತಿಯು ಸಿಕ್ಕರೆ, ಅದನ್ನು ತಂದು ತನ್ನ ಮನೆಯೊಳಗೆ ಸ್ಥಾಪಿಸಬೇಕೆಂದು ಸಂಕಲ್ಪಮಾಡಿ ಆತನು ಪಶುಪತಿಯ ಮಂದಿರದ ಬಳಿಗೆ ಹೋದನು.

ಯಥೇಚ್ಛವಾಗಿ ಸುಲಿದ ಮುಸಲ್ಮಾನರು ಈಗ ತೃಪ್ತರಾಗಿದ್ದರು. ಪ್ರಜೆಗಳನ್ನು ನಿಷ್ಕಾರಣವಾಗಿ ಹಿಂಸೆಪಡಿಸಬಾರದೆಂದು ಬಖತ್ಯಾರಖಿಲಜಿಯು ತನ್ನ ಸೈನಿಕರಿಗೆ ಈಗ ಅಪ್ಪಣೆಮಾಡಿದ್ದನು, ಆದ್ದರಿಂದ ದುರ್ಗಾದಾಸನಿಗೆ ಪಶುಪತಿಯ ಮಂದಿರದ ಕಡೆಗೆ ಹೋಗಲಿಕ್ಕೆ ತೊಂದರೆಯಾಗಲಿಲ್ಲ. ದುರ್ಗಾದಾಸನು ಅಲ್ಲಿಗೆ ಹೋಗಿ ದೇವಿಯ ಮಂದಿರವಿರುವ ಸ್ಥಳವನ್ನು ಬಹು ಪ್ರಯಾಸದಿಂದ ಹುಡುಕಿದನು. ಆ ಸ್ಥಳದಲ್ಲಿ ಇಟ್ಟಂಗಿಗಳೂ, ದೊಡ್ಡ ದೊಡ್ಡ ಕಲ್ಲುಗಳೂ, ಗೋಡೆ ಮೊದಲಾದವೂ ಕಡಕೊಂಡು ಬಿದ್ದಿದ್ದವು. ಅದನ್ನೆಲ್ಲ ತೆಗೆಯುವದು ದುರ್ಗಾದಾಸನೊಬ್ಬನಿಂದ ಆಗಲೊಲ್ಲದು. ಅವನು ಊರೊಳಗೆ ಹೋಗಿ ತನ್ನ ಮಗನನ್ನು ಕರಕೊಂಡು ಬಂದನು. ಅವರಿಬ್ಬರೂ ಕೂಡಿ ನೀರು ಹೊಡೆದು ಕಾದಕಲ್ಲು—ಇಟ್ಟಂಗಿಗಳು ಆರಿದ ಮೇಲೆ ಅವನ್ನು ತೆಗೆಯಹತ್ತಿದರು. ಬಹಳ ಪ್ರಯಾಸಪಟ್ಟ ಮೇಲೆ ದೇವಿಯ ಪ್ರತಿಮೆಯು ಒಮ್ಮೆ ಕಣ್ಣಿಗೆ ಬಿದ್ದಿತು. ಅವರು ಮತ್ತಿಷ್ಟು ಶ್ರಮಪಟ್ಟು ಸುತ್ತುಮುತ್ತು ಬಿದ್ದಿದ್ದ ಕಲ್ಲು ಮಣ್ಣುಗಳನ್ನು ತೆಗೆಯಲು, ದೇವಿಯ ಕಾಲುಬಳಿಯಲ್ಲಿ ಒಂದು ಹೆಣವು ಅವರ ಕಣ್ಣಿಗೆ ಬಿದ್ದಿತು. ಅದನ್ನು ನೋಡಿ ತಂದೆಮಕ್ಕಳು ಸ್ವಲ್ಪ ಹೆದರಿದರು. ಅವರು ಹೆಣವನ್ನು ದಿಟ್ಟಿಸಿ ನೋಡಲು, ಅದು ತಮ್ಮ ಯಜಮಾನನಾದ ಪಶುಪತಿಯ ಹೆಣವೆಂದು ಅವರಿಗೆ ಗೊತ್ತಾಯಿತು. ಆಗ ದುರ್ಗಾದಾಸನು ತನ್ನ ಮಗನಿಗೆ—ಯಜಮಾನರ ಕರ್ಮಗಳು ಹೇಗೇ ಇರಲಿ, ಅವರ ಪಾಪಪುಣ್ಯಗಳಿಗೆ ಅವರೇ ಯಜಮಾನನಿರುತ್ತಾರೆ. ಹೇಗಿದ್ದರೂ ನಾವು ಅವರ ಉಪ್ಪು ಉಂಡಿರುವೆವು. ಇದಲ್ಲದೆ ಬ್ರಾಹ್ಮಣಜಾತಿಯಲ್ಲಿ ಅವರ ಜನ್ಮವಾಗಿರುವದರಿಂದ ಅವರಿಗೆ ಅಗ್ನಿಸಂಸ್ಕಾರ ಮಾಡುವದು ನಮ್ಮ ಕರ್ತವ್ಯವಾಗಿರುವದು, ಎಂದು ಹೇಳಿದನು.

ಬಳಿಕ ತಂದೆ—ಮಕ್ಕಳಿಬ್ಬರೂ ಕೂಡಿ ಶವವನ್ನು ಗಂಗಾತೀರಕ್ಕೆ ಒಯ್ದರು. ಮಗನನ್ನು ಹೆಣದ ಬಳಿಯಲ್ಲಿ ಕುಳ್ಳಿರಿಸಿ ದಹನಕ್ಕೆ ಬೇಕಾಗುವ ಪದಾರ್ಥಗಳನ್ನು ತರಲಿಕ್ಕೆ ಮತ್ತೆ ಪಟ್ಟಣದೊಳಗೆ ಹೋದನು. ಕೆಲ ಹೊತ್ತಿನ ಮೇಲೆ ಆತನು ಆ ಪದಾರ್ಥಗಳನ್ನು ತಕ್ಕೊಂಡು ತಿರುಗಿ ಬಂದನು. ಆ ಮೇಲೆ ಅವರು ಚಿತೆಯನ್ನು ರಚಿಸಿ ಮಂತ್ರವನ್ನು ಉಚ್ಚರಿಸಿ, ಪಶುಪತಿಯ ಶವವನ್ನು ಚಿತೆಯ ಮೇಲಿಟ್ಟು ಇನ್ನು ಅಗ್ನಿಸಂಸ್ಕಾರ ಮಾಡತಕ್ಕವರು. ಅಷ್ಟರಲ್ಲಿ ಒಬ್ಬ ತರುಣ

ಸ್ತ್ರೀಯು ಅಕಸ್ಮಾತ್ತಾಗಿ ಅಲ್ಲಿಗೆ ಬಂದು ನಿಂತಳು. ತಂದೆ—ಮಕ್ಕಳು ಬೆರಗಾಗಿ ಆ ಸ್ತ್ರೀಯನ್ನು ನೋಡುತ್ತ ನಿಂತುಕೊಂಡರು. ಆ ಸ್ತ್ರೀಯು ಮಲಿನ ವಸ್ತ್ರಗಳನ್ನು ಉಟ್ಟಿದ್ದಳು, ಕೂದಲುಗಳನ್ನು ಬಿಚ್ಚಿದಳು, ಆಕೆಯ ಸರ್ವಾಂಗವು ಧೂಳಿಯಿಂದ ಮುಳುಗಿತ್ತು, ಬಡವನಾದ ದುರ್ಗಾದಾಸನು ಬಹಳ ಗಾಬರಿಯಾದನು. ಸ್ಮಶಾನದಲ್ಲಿ ವಾಸಿಸುವ ಭೂತಗೀತವಾಗಿರಲಿಕ್ಕಿಲ್ಲವಷ್ಟೇ? ಎಂದು ಆತನು ಶಂಕಿಸುತ್ತ, ಅಂಜುತ್ತಂಜುತ್ತ ಆ ಸ್ತ್ರೀಯನ್ನು ಕುರಿತು—ನೀನು ಯಾರವ್ವಾ? ಎಂದು ಕೇಳಿದನು. ಅದಕ್ಕೆ ಆ ತರುಣಿಯು ಉತ್ತರವನ್ನು ಕೊಡದೆ—ನೀವು ಯಾರ ಪ್ರೇತಕ್ಕೆ ಅಗ್ನಿ ಸಂಸ್ಕಾರಮಾಡುತ್ತೀರಿ, ಎಂದು ಕೇಳಿದಳು. ಅದಕ್ಕೆ ದುರ್ಗಾದಾಸನು ನಡಗುತ್ತನಡಗುತ್ತ—ಈ ರಾಜ್ಯದ ಮುಖ್ಯ ಪ್ರಧಾನನಾದ ಪಶುಪತಿಯ ಪ್ರೇತಕ್ಕೆ ಎಂದು ನುಡಿಯುತ್ತಿರಲು, ಪಶುಪತಿಯು ಹೇಗೆ ಸತ್ತನು, ಎಂದು ಕೇಳಿದಳು. ಅದಕ್ಕೆ ದುರ್ಗಾದಾಸನು—ನಿನ್ನೆ ಬೆಳಗಿನಲ್ಲಿ ಮುಸಲ್ಮಾನರು ಪಶುಪತಿಯನ್ನು ಸೆರೆಯಲ್ಲಿ ಹಾಕಿರುವರೆಂದು ಜನರು ಮಾತಾಡುತ್ತಿದ್ದರು. ಆತನು ಅಲ್ಲಿಂದ ಯಾವಯುಕ್ತಿಯಿಂದ ಪಾರಾದನೋ ತಿಳಿಯದು. ಆತನು ಸೆರೆಮನೆಯಿಂದಂತು ಪಾರಾಗಿರ ಬಹುದು. ಈ ದಿನ ನಾವು ಆತನ ಸುಟ್ಟು ಹೋಗಿದ್ದ ಮನೆಗೆ ಹೋಗಿ ದೇವಿಯ ಮೂರ್ತಿಯನ್ನು ಹುಡುಕುತ್ತಿರಲು, ಮೂರ್ತಿಯ ಕಾಲಬಳಿಯಲ್ಲಿ ಆತನ ಹೆಣವು ಸಿಕ್ಕಿತು, ಎಂದು ಹೇಳಿದನು. ಅದಕ್ಕೆ ತರುಣಿಯು ಯಾವ ಮಾತನ್ನೂ ಆಡದೆ ಬಹಳಹೊತ್ತು ಸುಮ್ಮನೆ ನಿಂತುಕೊಂಡಳು. ಆ ಮೇಲೆ ಆಕೆಯು ದುರ್ಗಾದಾಸನನ್ನು ಕುರಿತು—

ತರುಣಿ—ನೀವು ಯಾರು?

ದುರ್ಗಾದಾಸ—ನಾವು ಬಡಬ್ರಾಹ್ಮಣರು, ಪಶುಪತಿಯ ಆಶ್ರಯದಲ್ಲಿದ್ದೆವು. ಆತನ ಉಪ್ಪು ಉಂಡದ್ದರಿಂದ ಯಜಮಾನರ ಮೃತಶರೀರದ ಉತ್ತರ ಕಾರ್ಯವನ್ನು ನಡಿಸಿರುತ್ತೇವೆ. ಅವ್ವಾ, ನೀನು ಯಾರು?

ತರುಣಿ—ನಾನು ಆ ಪಶುಪತಿಯ ಧರ್ಮಪತ್ನಿಯು.

ದುರ್ಗಾ—ಪಶುಪತಿಯ ಪತ್ನಿಯಂತು ಬಾಲ್ಯದಲ್ಲಿಯೇ ಎಲ್ಲಿಯೋ ಹೋಗಿದ್ದಾಳೆ. ನೀನೆಲ್ಲಿಯ ಆತನ ಪತ್ನಿಯು?

ತರುಣಿ—ಆ ಎಲ್ಲಿಯೋ ಹೋದ ಕೇಶವನ ಮಗಳು ನಾನೇ! ಪತಿಯೊಡನೆ ಸಹಗಮನ ಮಾಡುವ ಯೋಗವು ನನ್ನ ಜನ್ಮಪತ್ರಿಕೆಯ ಮೇಲಿಂದ ನಮ್ಮ ತಂದೆಗೆ ಗೊತ್ತಾಗಲು, ಆತನು ನನ್ನ ವಿಯೋಗ ದುಃಖವನ್ನು ಸಹಿಸಲಾರದೆ ನನ್ನನ್ನು ಇಲ್ಲಿಯವರೆಗೆ ಬಚ್ಚಿಟ್ಟಿದ್ದನು. ಇಂದು ಆ ಸಮಯವು ಪ್ರಾಪ್ತವಾಗಿರುವದರಿಂದ ವಿಧಿಲಿಖಿತವನ್ನು ಸತ್ಯವಾಗಿ ಮಾಡುವದಕ್ಕಾಗಿ ನಾನು ಇಲ್ಲಿಗೆ ಬಂದಿದ್ದೇನೆ.

ಇದನ್ನು ಕೇಳಿದ ಕೂಡಲೆ ತಂದೆ—ಮಕ್ಕಳು ತಟಸ್ಥರಾದರು. ಅವರು ಏನೂ ಮಾತಾಡದಿರುವದನ್ನು ನೋಡಿ ತರುಣಿಯು—ಹ, ಇನ್ನು ತಡ ಮಾಡಬೇಡಿರಿ. ಬೇಗನೆ ಎಲ್ಲ ಸಿದ್ಧಗೊಳಿಸಿರಿ, ಎಂದಳು. ದುರ್ಗಾದಾಸನಿಗೆ ಆ ತರುಣಿಯ ಮನಸ್ಸಿನಲ್ಲಿದ್ದದ್ದು ಗೊತ್ತಾಯಿತು. ಆತನು ಮಗನ ಮೋರೆಯನ್ನು ನೋಡತೊಡಗಿದನು. ಪಾಪ! ಹುಡುಗನಾದರೂ ಏನು

ಹೇಳುವನು? ಆತನು ಸುಮ್ಮನೆ ಕುಳಿತನು. ಕಡೆಗೆ ದುರ್ಗಾದಾಸನೇ ಆ ಸ್ತ್ರೀಯನ್ನು ಕುರಿತು—ತಂಗೀ, ನೀನು ತೀರಾ ಚಿಕ್ಕವಳು. ಈ ಭಯಂಕರ ಕೃತ್ಯಕ್ಕೆ ಮನಸ್ಸು ಮಾಡಬೇಡ. ಈಶ್ವರನ ಸೇವೆಯನ್ನು......ಎಂದು ಮುಂದೆ ಮಾತಾಡುತ್ತಿರಲು, ತರುಣಿಯು ಸಿಟ್ಟಿನಿಂದ ನಡುವೇ ಬಾಯಿಹಾಕಿ—ನೀವು ಬ್ರಾಹ್ಮಣರಿದ್ದು, ನನಗೆ ಅಧರ್ಮವನ್ನು ಬೋಧಿಸುವಿರಾ? ಸಹಗಮನದ ಸಾಹಿತ್ಯವನ್ನು ಸಿದ್ಧಗೊಳಿಸಿರಿ, ಎಂದು ಹೇಳಿದಳು.

ದುರ್ಗಾದಾಸನಿಗೆ ಮುಂದೆ ಮಾತಾಡಲಿಕ್ಕೆ ಧೈರ್ಯವಾಗಲೊಲ್ಲದು. ಸಹಗಮನದ ಸಾಹಿತ್ಯವನ್ನು ತರುವದಕ್ಕಾಗಿ ಆತನು ಮತ್ತೆ ಊರೊಳಗೆ ಹೊರಟನು. ಆಗ ತರುಣಿಯು—ಈಗ ನೀವು ಪಟ್ಟಣದೊಳಗೆ ಹೋಗೇಹೋಗುತ್ತೀರಿ. ನಗರದ ಮಗ್ಗಲಿಗೆ ಉಪವನದಲ್ಲಿರುವ ಮಂದಿರದಲ್ಲಿ ಹೇಮಚಂದ್ರನೆಂಬ ಹೆಸರಿನ ಒಬ್ಬ ಪರದೇಶದ ರಾಜಪುತ್ರನು ಇದ್ದಾನೆ. ಆತನಿಗೆ—ಮನೋರಮೆಯು ಗಂಗಾತೀರದಲ್ಲಿ ಅಗ್ನಿಪ್ರವೇಶ ಮಾಡುವಳು. ಒಮ್ಮೆ ನಿಮ್ಮನ್ನು ಕಾಣಬೇಕೆಂಬದಿಷ್ಟೇ ಇಹಜನ್ಮದ ಇಚ್ಛೆಯು ಆಕೆಗೆ ಉಳಿದಿರುತ್ತದೆ, ಎಂದು ಅವಶ್ಯವಾಗಿ ಹೇಳಿರಿ ಎಂದು ನುಡಿದಳು.

ದುರ್ಗಾದಾಸನು ಹೇಮಚಂದ್ರನನ್ನು ಕಂಡು ಮನೋರಮೆ ಹೇಳಿದ್ದನ್ನೆಲ್ಲ ತಿಳಿಸಲು, ಆತನು ಬೆರಗಾದನು. ಪಾಪ! ಆತನಿಗೆ ಇಲ್ಲಿಯವರೆಗೆ ಮನೋರಮೆಯ ಯಾವ ಸುದ್ದಿಯೂ ಗೊತ್ತಾಗಿದ್ದಿಲ್ಲ. ಆತನು ದುರ್ಗಾದಾಸನ ಸಂಗಡ ಬಂದು ಮನೋರಮೆಯ ಆಗಿನ ಅತ್ಯಂತ ದೀನವಾದ ಖಿನ್ನ ಮುದ್ರೆಯನ್ನೂ, ಆಕೆಯ ಗಂಭೀರವೂ, ಮನೋಹರವೂ ಆದ ಮುಖ ಕಾಂತಿಯನ್ನೂ ನೋಡಿದ ಕೂಡಲೆ ಹೇಮಚಂದ್ರನ ಕಣ್ಣೊಳಗಿಂದ ದಳದಳ ನೀರು ಇಳಿಯಹತ್ತಿದವು. ಆತನು ಸದ್ಗದಿತವಾದ ಸ್ವರದಿಂದ ಮನೋರಮೆಯನ್ನು ಕುರಿತು—ಮನೋರಮೇ, ಏನಿದು!

ಮನೋರಮೆ—(ಗಂಭೀರವಾಣಿಯಿಂದ) ಅಣ್ಣಾ, ಇಂದು ನಾನು ನಿಜವಾಗಿ ಭಾಗ್ಯವತಿಯು! ಯಾರ ಸಲುವಾಗಿ ಇಲ್ಲಿಯವರೆಗೆ ನಾನು ಪ್ರಾಣಧಾರಣಮಾಡಿದ್ದೆನೋ, ಅವರ ಪರಿಸಮಾಪ್ತಿಯು ಇಂದು ಆಯಿತು. ನಾನು ಇಂದು ನನ್ನ ಪತಿಯೊಡನೆ ಅನ್ಯಲೋಕವನ್ನು ಕುರಿತು ಗಮನ ಮಾಡುತ್ತಿರುವೆನು.

ಮನೋರಮೆಯು ಸ್ವಲ್ಪದರಲ್ಲಿ ತನ್ನ ವೃತ್ತಾಂತವನ್ನು ಹೇಮಚಂದ್ರನಿಗೆ ಹೇಳಿದ ಮೇಲೆ ಆತನನ್ನು ಕುರಿತು—ಅಣ್ಣಾ, ನನ್ನ ಗಂಡನು ಅಗಣಿತ ದ್ರವ್ಯವನ್ನು ಸಂಪಾದಿಸಿರುವನು. ಆ ಧನದ ಒಡತಿಯು ಈಗ ನಾನೇ ಇರುತ್ತೇನೆ. ನಾನು ಆ ಧನವನ್ನು ನಿನಗೆ ಕೊಡುತ್ತೇನೆ. ಅದನ್ನು ಸಂತೋಷದಿಂದ ಸ್ವೀಕರಿಸು. ನೀನು ಆ ದ್ರವ್ಯವನ್ನು ಸ್ವೀಕರಿಸದಿದ್ದರೆ, ಅದು ಪಾಪಿಷ್ಠರಾದ ಯವನರ ಕೈಸೇರುವದರಿಂದ ನನ್ನ ಆತ್ಮಕ್ಕೆ ದುಃಖವಾದೀತು. ಆ ದ್ರವ್ಯದೊಳಗಿಂದ ಸ್ವಲ್ಪ ದ್ರವ್ಯವನ್ನು ಜನಾರ್ಧನನಿಗೆ ಕೊಡು. ಆತನಿಗೆ ಹೆಚ್ಚು ದ್ರವ್ಯವನ್ನು ಕೊಡಬೇಡ; ಯಾಕಂದರೆ ದುಡ್ಡಿನಕಾಲಲ್ಲಿ ಆ ವೃದ್ಧ ಬ್ರಾಹ್ಮಣನು ಮುಸಲ್ಮಾನರ ಉಪದ್ರವಕ್ಕೆ ಒಳಗಾಗಬೇಕಾದೀತು. ಆದ್ದರಿಂದ ಆತನ ಉದರ ಪೋಷಣೆಯ ಮಟ್ಟಿಗೆ ಆತನಿಗೆ ದ್ರವ್ಯವನ್ನು ಕೊಡು. ಆತನನ್ನು

ಕಾಶಿಗೆ ಒಯ್ದು ಮುಟ್ಟಿಸು. ನನ್ನನ್ನು ದಹನ ಮಾಡಿದ ಮೇಲೆ ನನ್ನ ಮಂದಿರದ ಬಳಿಗೆ ಹೋಗು. ನಾನು ಆಗಲೆ ಹೇಳಿದ ಸ್ಥಳದಲ್ಲಿ ಅಗಿ, ಅಂದರೆ ಆ ದುಡ್ಡು ನಿನಗೆ ಸಿಗುವದು. ನನ್ನ ಹೊರತು ಉಳಿದವರಿಗಾರಿಗೂ ಆ ಸ್ಥಳವು ಗೊತ್ತಿಲ್ಲ.

ಮನೋರಮೆಯು ಹೇಮಚಂದ್ರನಿಗೆ ಬಹಳ ಸಂಗತಿಗಳನ್ನು ಹೇಳಿದಳು. ತನ್ನ ವಿಷಯವಾಗಿ ಜನಾರ್ಧನನಿಗೂ, ಆತನ ಹೆಂಡತಿಗೂ ಮನೋರಮೆಯು ಅಂತಃಕರುಣದ ಎಷ್ಟೋಮಾತುಗಳನ್ನು ಹೇಮಚಂದ್ರನ ಸಂಗಡ ಹೇಳಿ ಕಳಿಸಿದಳು. ಆ ಮೇಲೆ ಗಟ್ಟಿಮನಸ್ಸು ಮಾಡಿ ಹೇಮಚಂದ್ರನ ಅನುಮತಿಯನ್ನು ಪಡೆದಬಳಿಕ ಬ್ರಾಹ್ಮಣನಿಗೆ ಮಂತ್ರವನ್ನು ಅನ್ನೆಂದು ಹೇಳಿದಳು. ದುರ್ಗಾದಾಸನು ಮನೋರಮೆಯ ಕೈಯಿಂದ ವಿಧಿಪೂರ್ವಕವಾಗಿ ಸತೀವ್ರತದ ಕರ್ಮಗಳನ್ನು ಮಾಡಿಸಿದ ಮೇಲೆ ಚಿತೆಯನ್ನು ಹೊತ್ತಿಸಿದನು.

ಮನೋರಮೆಯು ಈಗ ಶುಭ್ರವಸ್ತ್ರವನ್ನುಟ್ಟುಕೊಂಡು ದಿವ್ಯವಾದ ಪುಷ್ಪಮಾಲೆಯನ್ನು ಕೊರಳಲ್ಲಿ ಹಾಕಿಕೊಂಡಿದ್ದಳು. ಹಣೆಗೆ ಮಂಗಲಕರವಾದ ಪಟ್ಟೆ ಕುಂಕುಮವನ್ನು ಹಚ್ಚಿದ್ದಳು. ನಿಯಮಗಳೆಲ್ಲ ತೀರಿದ ಮೇಲೆ ಆಕೆಯು ಪ್ರಜ್ವಲಿತವಾದ ಚಿತೆಗೆ ಮೂರು ಪ್ರದಕ್ಷಿಣೆಗಳನ್ನು ಮಾಡಿದಳು. ಇನ್ನು ಆಕೆಯು ನಗನಗುತ್ತ ಪತಿಯೊಡನೆ ಅಗ್ನಿ ಶೆಯ್ಯೆಯ ಮೇಲೆ ಶಯನ ಮಾಡತಕ್ಕವಳು; ಅಷ್ಟರಲ್ಲಿ ಒಬ್ಬ ತೇಜಃಪುಂಜನಾದ ತಪೋಧನನು—ಸಾಧ್ವೀ, ತಡೆ, ದುಡುಕಬೇಡ. ಎಂದು ನುಡಿಯುತ್ತ ಮನೊರಮೆಯ ಬಳಿಗೆ ಬಂದನು. ಆ ಮಹಾತ್ಮನ ದಿವ್ಯತೇಜಸ್ಸನ್ನು ನೋಡಿ ಮನೋರಮೆಯು ತಟಸ್ಥಳಾದಳು. ಪತಿವಿಯೋಗದ ಮೂಲಕ ವೈರಾಗ್ಯತಾಳಿ ಶೂನ್ಯಹೃದಯಳಾಗಿದ್ದ ಆ ಸಾಧ್ವಿಯಲ್ಲಿ ಆ ಗಂಭೀರ ಮುದ್ರೆಯ ನಿರ್ಮಲ ಮೂರ್ತಿಯನ್ನು ನೋಡಿ ಭಕ್ತಿರೂಪ ರಾಗವು ಉತ್ಪನ್ನವಾಯಿತು. ಆಕೆಯು ತಟ್ಟನೆ ಕೈಜೋಡಿಸಿ ಆ ಮಹಾತ್ಮನನ್ನು ಕುರಿತು—

ಮನೋ—ಸ್ವಾಮಿನ್, ನನ್ನ ಪವಿತ್ರಕಾರ್ಯಕ್ಕೆ ಪ್ರತಿಬಂಧವೇಕೆ?

ಋಷಿ—ಪ್ರತಿಬಂಧವಲ್ಲ, ನನ್ನ ಮಾತು ಕೇಳಿ ಆಮೇಲೆ ಮಾಡಬೇಕಾದದ್ದನ್ನು ಮಾಡು.

ಮನೋ—ಪತಿವಿಹೀನಳಿಗೆ ಇದಕ್ಕಿಂತ ಹೆಚ್ಚಿನ ಉಜ್ವಲ ಕರ್ತವ್ಯವು ಯಾವದು?

ಋಷಿ—ಪತಿಯ ಮರಣಕಾಲದ ಅಭೀಷ್ಟವನ್ನು ಪೂರ್ಣಮಾಡುವದು!

ಋಷಿಯ ಈ ಮಾತುಗಳನ್ನು ಕೇಳಿ ಮನೋರಮೆಯು ತನ್ನೊಳಗೆ—ನಾನು ಪಶುಪತಿಯ ಮರಣಕಾಲದಲ್ಲಿ ಆತನ ಬಳಿಯಲ್ಲಿದ್ದಿಲ್ಲ. ಆತನ ಅಭಿಷ್ಟದ ಗಂಧವೂ ನನಗೆ ಬಡಿದಿರುವದಿಲ್ಲ; ಅಂದಬಳಿಕ ಈ ಬ್ರಾಹ್ಮಣನ ಮಾತನ್ನು ಹೇಗೆ ನಂಬಬೇಕು? ಅಥವಾ ಇಂಥ ತಪೋಧನರ ಮಾತು ಅಸತ್ಯವೆಂದು ಭಾವಿಸುವದಾದರೂ ಹೇಗೆ? ಹಾಗೆ ಭಾವಿಸುವದು ಪಾಪಕ್ಕೆ ಕಾರಣವಲ್ಲವೇ? ಎಂದು ಯೋಚಿಸಿ, ತಟ್ಟನೆ ಋಷೀಶ್ವರನನ್ನು ಕುರಿತು—''ಪೂಜ್ಯವರ, ಪ್ರಿಯಪತಿಯ ಅಂತ್ಯಕಾಲದ ಅಭಿಷ್ಟವಾದರೂ ಏನು?'' ಎಂದು ಪ್ರಶ್ನಮಾಡಲು, ಆ ಋಷಿಶ್ರೇಷ್ಠನು ಒಂದು ಖಡ್ಗವನ್ನು ಮುಂದೆಮಾಡಿ—''ಇದನ್ನು ಕೇಳು; ಶ್ರೀ ದುರ್ಗೆಯ ಕೈಯೊಳಗಿನ ಈ ತೀಕ್ಷ್ಣಧಾರೆಯ ಖಡ್ಗವು ನಿನಗೆಲ್ಲ ಎಲ್ಲ ಸಂಗತಿಯನ್ನು ಹೇಳುವದು,'' ಎಂದು ನುಡಿದನು.

ತಪೋಧನನ ಈ ಮಾತುಗಳನ್ನು ಕೇಳಿ ಮನೋರಮೆಯು ಬೆರಗಾಗಿ ಆತನ ಮುಖವನ್ನೊಮ್ಮೆ ಖಡ್ಗವನ್ನೊಮ್ಮೆ ದಿಟ್ಟಿಸಿ ನೋಡಹತ್ತಿದಳು; ತಪೋಧನನ ಮೈಮೇಲೆ ಸುಟ್ಟ ಗುಳ್ಳೆಗಳು ಕಾಣಹತ್ತಿದವು; ಖಡ್ಗ ಹಿಡಿದ ಆತನ ಕೈಯು ಬೆಂದುಹೋಗಿತ್ತು. ಆಕೆಯು ಕೈ ಜೋಡಿಸಿ—ಸ್ವಾಮಿನ್, ಈ ಗೂಢವು ನನಗೆ ಹೇಗೆ ತಿಳಿಯಬೇಕು? ಅನುಗ್ರಹಿಸಿ ಪತಿಯ ಅಂತ್ಯಕಾಲದ ಅಭಿಷ್ಟವನ್ನು ಕುರಿತು ನನ್ನನ್ನು ಆಜ್ಞಾಪಿಸಬೇಕು, ಎಂದು ಬೇಡಿಕೊಂಡಳು. ಆಗ ಋಷೀಶ್ವರನು ಮನೋರಮೆಯನ್ನು ಕುರಿತು—ಸಾಧ್ವಿಯೇ, ನಿನ್ನ ಉಜ್ವಲವಾದ ಪಾತಿವ್ರತ್ಯಕ್ಕೂ, ಅಗಾಧವಾದ ಮನೋನಿಗ್ರಹಕ್ಕೂ ಪ್ರಸನ್ನನಾಗಿದ್ದ ನಾನು, ಬೆಂಕಿಹತ್ತಿದ ತನ್ನ ದೇವಿಯ ಮಂದಿರವನ್ನು ಹೊಕ್ಕಿದ್ದ ನಿನ್ನ ಪತಿಯಾದ ಪಶುಪತಿಯನ್ನು ನೋಡಿದೆನು. ಕೂಡಲೆ ಅಂತಃಕರುಣ ಕರಗಲು, ಆತನನ್ನು ಬದುಕಿಸುವ ಇಚ್ಛೆಯು ನನಗಾಯಿತು. ಕೂಡಲೆ ನಾನೂ ಧಾವಿಸಿ ದೇವಿಯ ಮಂದಿರವನ್ನು ಹೊಕ್ಕೆನು. ಈಗ ಪಶುಪತಿಯ ಹೃದಯವು ಪಶ್ಚಾತ್ತಾಪದಿಂದ ಶುದ್ಧವಾದುದರಿಂದ ಸ್ವದೇಶೋದ್ಧಾರದ ಕಾರ್ಯದಲ್ಲಿ ಈ ಹೇಮಚಂದ್ರನಿಗೆ ಆತನಿಂದ ಸಹಾಯವಾದೀತೆಂತಲೂ ನಾನು ಭಾವಿಸಿದ್ದೆನು; ಆತನನ್ನು ಬದುಕಿಸಿ ಕರೆತಂದಿದ್ದರೆ, ನಿನ್ನ ವೈಧವ್ಯದ ಕಲಂಕವು ತಪ್ಪಿಹೋಗಿ ದೇಶೋದ್ಧಾರದ ಕಾರ್ಯಕ್ಕೂ ಸಹಾಯಮಾಡಿದಂತಾಗುತ್ತಿತ್ತು; ಆದರೆ ಈಶ್ವರೀ ಸಂಕೇತವು ಹಾಗಿದ್ದಂತೆ ತೋರಲಿಲ್ಲ. ನಾನು ಹೋದಾಗ ಪಶುಪತಿಯು ಏನೇನೋ ಹರಟುತ್ತಿದ್ದನು. ನಾನು ಬಂದದ್ದು ಆತನಿಗೆ ಸರ್ವಥಾ ಗೊತ್ತಾದಂತೆ ತೋರಲಿಲ್ಲ, ನಾನು ಆತನ ಹತ್ತಿರ ಹೋದಾಗ ಆತನ ಮುಖದಿಂದ—"ಅಹಹ! ನನ್ನ ಮನೋರಮೆಯ ಮಾತು ನಾನು ಕೇಳಲಿಲ್ಲವಲ್ಲ! ಮನೋರಮೇ—ಮನೋರಮೇ, ಯವನರನ್ನು ನಂಬಿ ನಾನು ಕೆಟ್ಟೆನು; ಸ್ವದೇಶ ಬಾಂಧವರನ್ನೂ ಕೆಡಿಸಿದೆನು; ನಿನ್ನ ಸುಖವನ್ನೂ ಮಣ್ಣುಗೂಡಿಸಿದೆನು. ಅಯ್ಯೋ! ದೇವೀ, ಭವಾನೀ, ಅಸುರಮರ್ದಿನೀ, ನಿನ್ನ ಕೈಯೊಳಗಿನ ಈ ತೀಕ್ಷ್ಣ ಖಡ್ಗದಿಂದ ದುಷ್ಟ ಯವನರ ಚೆಂಡುಗಳನ್ನು ತುಂಡರಿಸಬಾರದೆ! ಮನೋರಮೇ—ಮನೋರಮೇ—ಏ ಮನೋರಮೇ! ನೀನು ನನ್ನ ಶಕ್ತಿಸ್ವರೂಪಳು. ನೀನು ಈ ಖಡ್ಗದಿಂದ ಯವನರನ್ನು ಸಂಹರಿಸು; ಅಂದರೆ, ದೇಶದ್ರೋಹಿಯೂ, ಧರ್ಮದ್ರೋಹಿಯೂ, ದೈವದ್ರೋಹಿಯೂ ಆದ ನಾನು, ನರಕದಲ್ಲಿ ಬೇಯುತ್ತಿರುವಾಗ ನಿನ್ನ ಆ ಯವನರ ರುಂಡಗಳ ಚೆಂಡಾಟದಿಂದ ಸಮಾಧಾನಪಡುವೆನು! ಹಿಡಿ, ಬೇಗನೆ ಹಿಡಿ, ಹಿಂಜರಿಯಬೇಡ" ಎಂಬರ್ಥದ ಮಾತುಗಳು ಹೊರಟು ಆತನು ದೇವಿಯ ಕೈಯೊಳಗಿನ ಈ ಖಡ್ಗವನ್ನು ಕಸಿದು ಮುಂದಕ್ಕೆ ಚಾಚಿದನು; ಕೂಡಲೆ ನಾನು ಅದನ್ನು ತಕ್ಕೊಂಡು, ಇನ್ನು ಮೇಲೆ ಪಶುಪತಿಯ ಕೈಹಿಡಿದು ಜಗ್ಗತಕ್ಕವನು, ಅಷ್ಟರಲ್ಲಿ ದೇವಿಯ ಮಂದಿರವು ಕುಸಿಬಿದ್ದದ್ದರಿಂದ, ಮೂರ್ತಿಯಿಂದ ಸಹಿತವಾಗಿ ಪಶುಪತಿಗೆ ಜೀವಂತ ಸಮಾಧಿಯು ಪ್ರಾಪ್ತವಾಯಿತು! ಹರಹರ! ಭವಿತ್ಯವನ್ನು ತಪ್ಪಿಸುವದು ಯಾರಿಂದಾಗುವದು?

ಹೀಗೆ ನುಡಿದ ಋಷಿವರ್ಯನ ಮಾತುಗಳನ್ನು ಕೇಳಿ ಮನೋರಮೆಯು ಬದಲು ಮಾತಾಡದೆ, ಗಾಂಭೀರ್ಯದಿಂದ ಆ ಮಹಾನುಭಾವನ ಕೈಯೊಳಗಿನ ಖಡ್ಗವನ್ನು ಸ್ವೀಕರಿಸಿ ಆತನನ್ನು ನಮಸ್ಕರಿಸಿ ಹೇಮಚಂದ್ರನನ್ನು ಕುರಿತು—"ಅಣ್ಣಾ, ನಿನ್ನ ದೇಶೋದ್ಧಾರದ ಕಾರ್ಯದಲ್ಲಿ ನಿನ್ನ ಒಡಹುಟ್ಟಿದ ತಂಗಿಯಂತೆ ಇರುವ ಈ ಮನೋರಮೆಯನ್ನು ಮರೆಯಬೇಡ

ಕಂಡೆಯಾ!'' ಎಂದು ನುಡಿದು ದಣಗುಟ್ಟಿ ಉರಿಯುವ ಪತಿಯ ಚಿತೆಯನ್ನು ದುಃಖದಿಂದ ನೋಡುತ್ತಾ, ಅದಕ್ಕೆ ಪ್ರದಕ್ಷಿಣ ನಮಸ್ಕಾರ ಮಾಡಿ ಅಲ್ಲಿಂದ ತಟ್ಟನೆ ಹೊರಟು ಹೋಗಿಬಿಟ್ಟಳು! ಆಗ ಅಲ್ಲಿ ನೆರೆದಿದ್ದವರ ಕಣ್ಣಿಗೆ ನಿಶಿತ ಖಡ್ಗಪಾಣಿಯಾದ ಆ ಮನೋರಮೆಯು ಅಸುರ ಮರ್ದಿನಿ ಶ್ರೀ ದುರ್ಗೆಯಂತೆ ತೋರಿದಳು.

ಹೊಸರಾಜ್ಯ ಸ್ಥಾಪನೆ

ಹೀಗೆ ಮನೋರಮೆಯನ್ನು ತಡೆದು ನಿಲ್ಲಿಸಿದವನು ಮಹಾತ್ಮನಾದ ಮಾಧವಾಚಾರ್ಯನೇ! ತಾನು ಬಹು ಶ್ರಮಪಟ್ಟು ಬಂಗಾಲದ ಮಾಂಡಲಿಕ ರಾಜರನ್ನೂ, ಸರದಾರ—ಸೇನಾಪತಿಗಳನ್ನೂ, ಪ್ರಜೆಗಳನ್ನೂ ಕಂಡು ಬೋಧಿಸಿ ಮಾಡಿದ ಲೋಕಸಂಗ್ರಹವು ಪಶುಪತಿಯ ಹೇಸಿತನದಿಂದ ವ್ಯರ್ಥವಾಗಿ ಹೋಗಲು, ಅಸಮಾಧಾನಪಟ್ಟು ಮುಂದೇನು ಮಾಡಬೇಕೆಂದು ಆ ತಪೋಧನನು ಯೋಚಿಸುತ್ತಿದ್ದನು. ನದಿಯಾ ರಾಜಧಾನಿಯಲ್ಲಿ ಮುಸಲ್ಮಾನರು ನಡಿಸಿದ ಕ್ರೂರತನವನ್ನು ನೋಡಿ ಆತನ ಹೃದಯವು ಕರಗಿತು. ಅನುವು ನೋಡಿ ಹೊಸರಾಜ್ಯವನ್ನು ಸ್ಥಾಪಿಸಿಯಲ್ಲದೆ ಗತಿಗಾಣದೆಂದು ಆತನು ನಿರ್ಧರಿಸಿದನು. ತನ್ನ ಶಿಷ್ಯ ಹೇಮಚಂದ್ರನು ಎಷ್ಟು ಬಲಿಷ್ಠನೂ ಎಂತಹ ತೇಜಸ್ವಿಯೂ ಇದ್ದರೂ ಆತನೊಬ್ಬನಿಂದ ಕಾರ್ಯವಾಗಲಾರದೆಂದು ತಿಳಿದು, ತೇಜಸ್ವಿಗಳನ್ನು ಸಂಗ್ರಹಿಸಲೆಳಿಸುವಾಗ ಆತನಿಗೆ ಪಶುಪತಿಯ ನೆನಪಾಯಿತು; ಆದರೆ ಪಶುಪತಿಗೆ ಅಗ್ನಿ ಸಮಾಧಿಯು ಪ್ರಾಪ್ತವಾದ ಸಂಗತಿಯು ಲಕ್ಷದಲ್ಲಿ ಬರಲು, ಆ ತೇಜಸ್ವಿ ಬ್ರಾಹ್ಮಣನಿಗೆ ನಿರಾಶೆಯು ಆಯಿತು. ಪಶುಪತಿಯ ಯೋಗ್ಯತೆಯನ್ನು ಮಾಧವಾಚಾರ್ಯನು ಅರಿಯದವನಿದ್ದಿಲ್ಲ. ತೇಜಸ್ವಿಯಾದ ಆ ಬ್ರಾಹ್ಮಣಮುತ್ಸದ್ದಿ—ಪಶುಪತಿಯು ನೀಚಸ್ವಾರ್ಥದ ಬಲೆಗೆ ಬೀಳದಿದ್ದರೆ ಬಂಗಾಲ ರಾಜ್ಯವು ಸರ್ವಥಾ ನಷ್ಟವಾಗುತ್ತಿದ್ದಿಲ್ಲವೆಂಬ ಮಾತು ಈ ತಪೋಧನನಿಗೆ ಗೊತ್ತಿದ್ದಿತು. ಬ್ರಾಹ್ಮಣ ಜಾತಿಯಲ್ಲಿ ಹೇರಳವಾಗಿ ಕಾಣದ ಪಶುಪತಿಯ ಅಸದೃಶ ಪರಾಕ್ರಮವನ್ನೂ ಮಾಧವಾಚಾರ್ಯನು ಅರಿತಿದ್ದನು; ಆದರೆ ಏನಿದ್ದು ಏನು ಮಾಡಬೇಕು? ಸರ್ವನಾಶಕಾರಕವಾದ ನೀಚಸ್ವಾರ್ಥದ ಮಡುವಿನಲ್ಲಿ ಆ ದುಷ್ಟ ಮಂತ್ರಿಯು ಮುಣುಗಿ ಹೋಗಿದ್ದನಲ್ಲ! ನದಿಯಾ ರಾಜಧಾನಿಯಲ್ಲಿ ಮುಸಲ್ಮಾನರ ಕ್ರೂರಕೃತ್ಯಗಳು ತಡೆಯಿಲ್ಲದೆ ನಡೆದಿರುವಾಗಲೇ ಹಿಂದಿನ ಪ್ರಕರಣದಲ್ಲಿ ಹೇಳಿದಂತೆ ದೇವಿಯ ಕೈಯೊಳಗಿನ ಖಡ್ಗವು ಆ ಆಚಾರ್ಯರ ಕೈಗೆ ಸಿಕ್ಕಿತು. ಅದೇ ಖಡ್ಗವೇ ಮನೋರಮೆಯ ದ್ವಾರದಿಂದ ಹೇಮಚಂದ್ರನ ಹೊಸರಾಜ್ಯದ ಸ್ಥಿರೀಕರಣಕ್ಕೆ ಕಾರಣವಾದದ್ದು ಆಶ್ಚರ್ಯದ ಸಂಗತಿಯೇ ಸರಿ! ಇರಲಿ.

ಹಿಂದೆ ಹೇಳಿದಂತೆ ಮನೋರಮೆಯು ಹೊರಟು ಹೋದದ್ದನ್ನು ನೋಡಿ ಹೇಮಚಂದ್ರನು ಬೆರಗಾಗಿ ನಿಂತುಕೊಂಡನು. ಮಾಧವಾಚಾರ್ಯರೂ ಕೌತುಕದಿಂದ ಆ ದಿಟ್ಟೆ ಮನೋರಮೆಯ ಕಡೆಗೆ ಕ್ಷಣಹೊತ್ತು ನೋಡಿದರು. ಬಳಿಕ ಅವರು ಹೇಮಚಂದ್ರನನ್ನು ಕುರಿತು—

ಮಾಧವಾಚಾರ್ಯ—ವತ್ಸ, ಯಾಕೆ, ಮನೋರಮೆಯನ್ನು ಆಶ್ಚರ್ಯ ಚಕಿತನಾಗಿ ನೋಡುವೆ? ಅವಳ ಸ್ವಭಾವದ ಪರಿಚಯವು ನಿನಗೆ ಆಗಿರುವದಿಲ್ಲವೇ?

ಹೇಮಚಂದ್ರ—ಆಗಿರುವದು ಮಹಾತ್ಮನ್, ಆ ನಿರ್ಮಲಭಾವದ ಸರಳ ಮನಸ್ಸಿನ ಮನೋರಮೆಯ ವಿಲಕ್ಷಣ ಕೃತಿಗಳು ಒಂದೊಂದಾಗಿ ಆಶ್ಚರ್ಯಪಡತಕ್ಕವೇ ಸರಿ.

ಮಾಧವಾಚಾರ್ಯ—ಅದರಲ್ಲಿ ಸಂಶಯವೇನು? ಇಂಥ ಆಶ್ಚರ್ಯಕಾರಕ ಕೃತಿಗಳ ವಿಲಕ್ಷಣ ವ್ಯಕ್ತಿಗಳು, ಪುರುಷರಲ್ಲಿ ಹುಟ್ಟುವದೂ ಅಪರೂಪವಾಗಿರುವಾಗ, ಸ್ತ್ರೀಯರ ಮಾತೇಕೆ? ಮನೋರಮೆಯಂತಹ ಅಚಲ ಧೈರ್ಯಶಾಲಿಗಳೂ, ಸಚ್ಚರಿತ್ರರೂ ಪುರುಷ ರಲ್ಲಾದರೂ ಈಗ ಎಲ್ಲಿರುವರು?

ಹೇಮಚಂದ್ರ—ಇಲ್ಲ ಸರ್ವಥಾ ಇಲ್ಲ; ಗುರುವರ, ಹೀಗೆ ನುಡಿಯುವಾಗ ನನಗೆ ನಾಚಿಕೆ ಬರುತ್ತದೆ. ಮನೋರಮೆಯಿಂದ ನಾನು ಹಲವು ಸಂಗತಿಗಳನ್ನು ಕಲಿಯಬೇಕಾಗಿರುವದು.

ಮಾಧ—ವತ್ಸ, ಅದರಲ್ಲಿ ಸಂಶಯವೇನು? ರಾಜ್ಯಭಾರವ ವಹಿಸುವವರು ಹೀಗೆ ಗುಣಗ್ರಹಣದಿಂದ ಪರಿಪಕ್ವ ವೃತ್ತಿಯವರಾಗಬೇಕಾಗುತ್ತದೆ.

ಹೀಗೆ ನುಡಿದ ಗುರುವಿನ ನುಡಿಕೇಳಿ ಹೇಮಚಂದ್ರನು ಸ್ವಲ್ಪ ಯೋಚಿಸಿ ಸಂತಾಪಗೊಂಡು—

ಹೇಮ—ಸ್ವಾಮಿನ್, ಬಂಗಾಲದ ಮಾಂಡಲಿಕ ರಾಜರ ಸೈನ್ಯದ ಸಹಾಯವು ಎಂದು ಒದಗುವದು? ನದಿಯಾ ರಾಜಧಾನಿಯನ್ನು ಈ ಪರಿ ಗೋಳಿಗೀಡುಮಾಡಿ ನಾನು ಹೀಗೆ ಸುಮ್ಮನೆ ಕುಳಿತುಕೊಳ್ಳಲಾರೆನು. ಶತ್ರುಶಾಸನಕ್ಕಾಗಿ ನನ್ನ ಬಾಹುಗಳು ಸ್ಫುರಿಸುತ್ತಿರುವವು.

ಮಾಧವಾ—ಶಿಷ್ಯವರ, ನೀನು ಅಂತಹ ವೀರನೇ ಎಂಬುದನ್ನು ನಾನು ಬಲ್ಲೆನು; ಆದರೆ, ಪ್ರಸಂಗಗಳ ತಾರತಮ್ಯವರಿಯದೆ ವೀರ್ಯವ ತೋರಿಸಹೋದರೆ ಅಪಾಯವಾಗುವ ಸಂಭವವಿರುವದು.

ಹೇಮ—ಹಾಗಾದರೆ ನನಗೇನು ಅಪ್ಪಣೆಯಾಗುವದು?

ಮಾಧವಾ—ಹೊಸ ರಾಜ್ಯವ ಸ್ಥಾಪಿಸೆಂದು ನಿನಗೆ ನಾನು ಹೇಳುವೆನು.

ಹೇಮ—ಭಗವನ್, ಇದ್ದ ರಾಜ್ಯವನ್ನು ಕಾದುಕೊಳ್ಳಲಾರದವನು ಹೊಸರಾಜ್ಯವನ್ನು ಸ್ಥಾಪಿಸಲು ಸಮರ್ಥನಾಗಬಹುದೇ? ಸ್ತ್ರೀಮೋಹಕ್ಕೊಳಗಾಗಿ ತಂದೆಯ ರಾಜ್ಯವನ್ನು ಕಳೆದು ಕೊಂಡವನೂ, ಸಹಾಯ ಮಾಡಬಂದು ಬಂಗಾಲದ ರಾಜ್ಯವನ್ನು ಉಳಿಸಿಕೊಳ್ಳಲಾರದವನೂ ಹೊಸ ರಾಜ್ಯವನ್ನು ಹೇಗೆ ಸ್ಥಾಪಿಸುವನು?

ಮಾಧವಾ—ಹೇಮಚಂದ್ರಾ, ಹೀಗೆ ಉತ್ಸಾಹಗೆಡಬೇಡ, ಈಶ್ವರೀ ತಂತ್ರದಿಂದ ಕಾಲಕ್ಕನುಸರಿಸಿ ಆಗುವದು ಆಗಿಯೇ ಆಗುತ್ತದೆಂಬುದನ್ನು ದೃಢವಾಗಿ ನಂಬಿ ಸಮಾಧಾನಪಡು; ಆದರೆ ಆ ಈಶ್ವರೀ ತಂತ್ರವು ನಮಗೆ ತಿಳಿಯದೆ ಇರುವದರಿಂದಲೂ, ಈಶ್ವರನು ನಮಗೆ ಸದಸದ್ವಿವೇಕ ಬುದ್ಧಿಯನ್ನು ಕೊಟ್ಟಿರುವದರಿಂದಲೂ ನಾವು ಕಾರ್ಯಕಾರಣ ಭಾವವನ್ನರಿತು, ಪರಿಸ್ಥಿತಿಯ ಅನುಕೂಲತೆ—ಪ್ರತಿಕೂಲತೆಗಳನ್ನು ತೂಗಿನೋಡಿ ಯೋಗ್ಯತೋರಿದ್ದನ್ನು ಮಾಡಬೇಕಾಗುವದು. ಮುಸಲ್ಮಾನರು ಈಗ ಒಂದರಹಿಂದೊಂದರಂತೆ ಹೊಸರಾಜ್ಯಗಳನ್ನು

ಸಂಪಾದಿಸತೊಡಗಿರುವದರಿಂದ, ಆ ರಾಜ್ಯ ಸಂಪಾದನದ ಕಾರ್ಯದೊಡನೆ ಸಂಪಾದಿತ ರಾಜ್ಯಗಳ ಸಂರಕ್ಷಣದ ಕಾರ್ಯವನ್ನೂ ಅವರು ಮಾಡಬೇಕಾಗುವದು. ಮುಸಲ್ಮಾನರು ತಾತ್ಕಾಲಿಕ ಲಾಭಕ್ಕೆ ಆಸೆಪಟ್ಟು ಸಿಕ್ಕಲ್ಲಿ ಸಿಕ್ಕಷ್ಟು ಸುಲಿಗೆಯನ್ನು ಸಂಪಾದಿಸಿ ಸಂತೋಷ ಪಡುವಂತೆ, ಏನಾದರೂ ಮಾಡಿ ಹೊಸ ರಾಜ್ಯವನ್ನು ಸಂಪಾದಿಸಿ ಸಂತೋಷಪಡತೊಡಗಿದ್ದಾರೆ; ಆದುದರಿಂದ ಅವರ ರಾಜ್ಯ ಸಂಪಾದನದ ಕಾರ್ಯವೂ ಸುಲಿಗೆಯ ಚಂದದ್ದೇ ಆಗಿರುವದು. ಒಟ್ಟಿಗೆ ಭರತಭೂಮಿಯಲ್ಲಿ ಇದ್ದ ಸಂಪತ್ತನ್ನೂ, ರಾಜ್ಯಗಳನ್ನೂ ಸಂಪಾದಿಸಿ, ಅವನ್ನು ಕಾದುಕೊಳ್ಳುವದು ಅವರ ಕರ್ತವ್ಯವಾಗಿರಲು, ನಮ್ಮ ಹೊಸರಾಜ್ಯ ಸ್ಥಾಪನೆಯ ಕಡೆಗೆ ಅವರು ಲಕ್ಷವನ್ನು ಪೂರಯಿಸಲು, ಆ ಲಾಭವಿಲ್ಲದ ಕೆಲಸಕ್ಕೆ ಕೈಹಾಕಲು ಅವರಿಗೆ ಈಗ ಕೂಡುವ ಹಾಗೂ ಇಲ್ಲ; ಆದುದರಿಂದ ಹೊಸರಾಜ್ಯವನ್ನು ಸ್ಥಾಪಿಸಿ, ಅದನ್ನು ಮುಸಲ್ಮಾನರಿಗೆ ಅಭೇದ್ಯವಾಗುವಂತೆ ಮಾಡುವದು ಈಗ ಅವಶ್ಯವಾಗಿರುವದು.

ಹೇಮ—ಆ ಕಾರ್ಯಕ್ಕೆ ಮೊದಲು ಹೇರಳ ದ್ರವ್ಯ ಸಹಾಯವು ಬೇಕಲ್ಲವೇ?

ಮಾಧವಾ—ಪಶುಪತಿಯು ಸಂಗ್ರಹಿಸಿಟ್ಟಿದ್ದ ವಿಪುಲ ದ್ರವ್ಯವು ಇರುತ್ತದಲ್ಲ, ಅದಿರುವ ಸ್ಥಳವನ್ನು ಮನೋರಮೆಯು ನಿನಗೆ ಹೇಳಿರುವಳಲ್ಲವೇ?

ಹೇಮ—ಅಹುದು, ಹೇಳಿರುವಳು; ಆದರೆ ಆ ದ್ರೋಹಿಯ ದ್ರವ್ಯವನ್ನು ಸ್ವೀಕರಿಸುವದು ನ್ಯಾಯವಾಗಬಹುದೋ?

ಮಾಧವಾ—ಹೇಮಚಂದ್ರಾ, ಅನ್ಯ ಪ್ರಸಂಗದಲ್ಲಿ ಈ ಧನವನ್ನು ಸ್ವೀಕರಿಸಬೇಕೋ, ಸ್ವೀಕರಿಸಬಾರದೋ ಎಂಬ ವಿಷಯವಾಗಿ ನಿನ್ನಂತೆ ನನಗಾದರೂ ಸಂಶಯವು ಉತ್ಪನ್ನ ವಾಗುತ್ತಿತ್ತು. ಕೇವಲ ಸ್ವಾರ್ಥದ ಪ್ರಸಂಗವಿದ್ದಲ್ಲಿ, ಅದನ್ನು ಸ್ವೀಕರಿಸಲಾಗದೆಂದು ಈಗಲಾದರೂ ಖಂಡಿತವಾಗಿ ನಾನು ಹೇಳುತ್ತಿದ್ದೆನು; ಆದರೆ ಪ್ರಜೆಗಳ ಸುಖ—ಶಾಂತಿಗಳಿಗಾಗಿ ಸ್ಥಾಪಿಸ ಬೇಕಾಗಿರುವ ಹೊಸರಾಜ್ಯದ ವಿಷಯದಲ್ಲಿ ಈ ಧನವನ್ನು ಅವಶ್ಯವಾಗಿ ಸ್ವೀಕರಿಸೆಂದು ನಿನ್ನನ್ನು ನಾನು ಆಜ್ಞಾಪಿಸುತ್ತೇನೆ. ಪಶುಪತಿಯ ನಿಕ್ಷಿಪ್ತನಿಧಿಯು ಹೇಗಿದ್ದರೂ ಪ್ರಜೆಗಳ ನಿಧಿಯೇ ಆಗಿರುವದು. ಪ್ರಜೆಗಳ ಧರ್ಮವನ್ನು ಪ್ರಜೆಗಳ ಸುಖ—ಶಾಂತಿಗಳ ಸಲುವಾಗಿ ವಿನಿಯೋಗಿಸಿ, ನೀನು ಅದರ ಭೋಗರಹಿತ—ಸ್ವಾಮಿತ್ವ ಪಡೆಯುವದರಲ್ಲಿ ಪಾಪವೇನು? ಈ ದ್ರವ್ಯದ ಸಹಾಯದಿಂದ, ಪಶುಪತಿಯ ಶತ್ರುವೂ ಆಗಿರುವ ಬಖತ್ಯಾರಖಿಲಿಜಿಯ ಪಾರಪತ್ಯಮಾಡಲಿಕ್ಕೆ ಬರುವದರಿಂದ, ಪಶುಪತಿಯ ಆತ್ಮಶಾಂತಿಗೂ ಬಹುಮಟ್ಟಿಗೆ ಅದು ಕಾರಣವಾಗುವದು; ಆದ್ದರಿಂದ ನಿಶ್ಶಂಕೆಯಿಂದ ಆ ಧನವನ್ನು ನೀನು ಸ್ವೀಕರಿಸು.

ಈ ಮೇರೆಗೆ ಮಾಧವಾಚಾರ್ಯರು ಆಜ್ಞಾಪಿಸಲು, ಪಶುಪತಿಯು ಹೂಳಿ ಇಟ್ಟಿದ್ದ ಹೇರಳ ಧನವನ್ನು ಹೇಮಚಂದ್ರನು ಸ್ವೀಕರಿಸಿ ಅದರ ಸಹಾಯದಿಂದ ಸೈನ್ಯವನ್ನು ಹೆಚ್ಚಿಸಿ ಕೊಂಡು ಬಲಿಷ್ಠನಾದನು, ಮಾಧವಾಚಾರ್ಯರ ಅಪ್ಪಣೆಯಂತೆ ಭಾಗೀರಥೀ ಮುಖದ ಸುಂದರಬನದ ಬಳಿಯ ಅರಣ್ಯ ಪ್ರದೇಶದಲ್ಲಿ ಹೇಮವತೀ ರಾಜಧಾನಿಯ ಕಟ್ಟಡಕ್ಕೆ ಆರಂಭವಾಗಿ, ಹೊಸ ರಾಜ್ಯದ ಸ್ಥಾಪನೆಯಾಯಿತು. ಹೇಮಚಂದ್ರನು ಆ ಪಟ್ಟಣವನ್ನು

ಕಟ್ಟಿಸಿದ್ದರಿಂದ ಅದಕ್ಕೆ ಹೇಮವತೀಯೆಂಬ ಹೆಸರನ್ನು ಮಾಧವಾಚಾರ್ಯರ ಅಪ್ಪಣೆಯಿಂದ ಇಡಲಾಯಿತು. ಹೇಮಚಂದ್ರನು ಮಗಧದ ರಾಜಪುತ್ರನಾದುದರಿಂದ ಆತನು ಸ್ಥಾಪಿಸಿದ ಆ ನೂತನ ರಾಜಧಾನಿಗೆ ಮಾಗಧೀಪುರವೆಂಬ ಮತ್ತೊಂದು ಹೆಸರೂ ಉಂಟಾಯಿತು. ಮುಸಲ್ಮಾನರ ಕೊಲೆ—ಸುಲಿಗೆಗಳಿಂದ ಗತಿಗಾಣದೆ ಬಳಲುತ್ತಿದ್ದ ಜನರೆಲ್ಲ ಹೇಮಚಂದ್ರನ ಆಶ್ರಯವನ್ನು ಪಡೆಯಹತ್ತಿದ್ದರಿಂದ, ಹೇಮವತೀ ನಗರವು ಬಹುಬೇಗ ಬೆಳವಣಿಗೆಯನ್ನು ಹೊಂದಿ, ಕೋಟೆ—ಕೊತ್ತಲಗಳಿಂದ ಅದು ಅತ್ಯಂತ ಭದ್ರವಾಯಿತು. ಶ್ರೀಮಂತರೂ, ವ್ಯಾಪಾರಸ್ಥರೂ, ಒಕ್ಕಲಿಗರೂ ಸಮರ್ಥನಾದ ಹೇಮಚಂದ್ರನ ಆಶ್ರಯದಿಂದ ಸುರಕ್ಷಿತರಾದರು. ತನ್ನ ಭಾಂಡಾರದೊಳಗಿನ ಅಪರಿಮಿತ ಧನದಿಂದ ಹೇಮಚಂದ್ರನು ಪ್ರಜೆಗಳಿಗೆ ಸೌಖ್ಯವನ್ನೂ, ಉತ್ತೇಜನವನ್ನೂ ಕೊಡತೊಡಗಿದನು. ಒಕ್ಕಲತನ, ವ್ಯಾಪಾರ, ಕೈಗಾರಿಕೆ ಇವುಗಳ ಅಭಿವೃದ್ಧಿಯು ಅಲ್ಪಕಾಲದಲ್ಲಿಯೇ ಆಯಿತು. ಹೇಮಚಂದ್ರನು ತನ್ನ ಸೈನ್ಯದಲ್ಲಿ ತೇಜಸ್ವಿಗಳೂ, ಪರಾಕ್ರಮಿಗಳೂ, ಸ್ವಾಮಿನಿಷ್ಠರೂ ಆದ ಸೈನಿಕರನ್ನು ಸೇರಿಸಿಕೊಂಡು, ತನ್ನ ಉದಾರಚರಿತದಿಂದ ಅವರನ್ನು ತಮ್ಮವರನ್ನಾಗಿ ಮಾಡಿಕೊಂಡನು. ಆಶ್ರಯರಹಿತರಾಗಿದ್ದ ಹಿಂದೂ ಜನರಿಗೆ ಹೇಮಚಂದ್ರನು ಸುರಕ್ಷಿತದ ಆಶ್ರಯಸ್ಥಾನವಾದುದರಿಂದ ಲೋಕಸಂಗ್ರಹಕ್ಕೂ, ಗುಣಸಂಗ್ರಹಕ್ಕೂ, ಧನಸಂಗ್ರಹಕ್ಕೂ ಆತನಿಗೆ ಹೆಚ್ಚು ಆಯಾಸವಾಗಲಿಲ್ಲ. ಒಟ್ಟಿಗೆ ಅಲ್ಪಕಾಲದಲ್ಲಿಯೇ ಹೇಮಚಂದ್ರನ ರಾಜಧಾನಿಯ ಕೀರ್ತಿಯು ನಾಲ್ಕು ಕಡೆಗೂ ಹಬ್ಬಿತು. ರಾಜ್ಯದ ಸಿಂಹಾಸನದ ಮೇಲೆ ಮಾಧವಾಚಾರ್ಯರು ಹೇಮಚಂದ್ರನಿಗೆ ಮೃಣಾಲಿನಿಯೊಡನೆ ಸಶಾಸ್ತ್ರ ಪಟ್ಟಾಭಿಷೇಕ ಮಾಡಿದರು. ಮೃಣಾಲಿನಿಯು ಹೇಮಚಂದ್ರನ ಪಟ್ಟಮಹಿಷಿಯಾದಳು. ಸಾವುಕಾರನ ಮಗಳು ರಾಣಿಯಾದದ್ದು ಅಪರೂಪವೇ ಸರಿ. ಆಕೆಯ ಸೌಖ್ಯಕ್ಕೆ ಎಣೆಯಿಲ್ಲದಾಯಿತು. ಒಂದಾನೊಂದು ಕಾಲದಲ್ಲಿ ಮಹತ್ತರವಾದ ಸಂಕಟವನ್ನೂ, ಮಾನಹಾನಿಯನ್ನೂ, ವಿಪತ್ತನ್ನೂ, ಕ್ಲೇಶವನ್ನೂ ಅನುಭವಿಸಿದ ಸಾಧ್ವಿಯಾದ ಮೃಣಾಲಿನಿಯು, ತನ್ನ ಪವಿತ್ರ ಪ್ರೇಮ, ಶುದ್ಧವಾದ ಆಚರಣೆ, ದೃಢವಾದ ಈಶ್ವರ ಭಕ್ತಿ ಇವುಗಳ ಬಲದಿಂದ ಸ್ವರ್ಗಸುಖವನ್ನು ಅನುಭವಿಸತೊಡಗಿದಳು.

ಗಿರಿಜೆಯಾದರೂ ಬೇಗನೆ ದಿಗ್ವಿಜಯನ ಪಟ್ಟದರಸಿಯಾದಳು. ಗಿರಿಜೆಯು ಮೃಣಾಲಿನಿಯ ದಾಸಿಯಾಗಿ ಆಕೆಯ ಬಳಿಯಲ್ಲಿಯೇ ನಿಂತುಕೊಂಡಳು. ದಿಗ್ವಿಜಯನೂ ಮೊದಲಿನಂತೆ ಹೇಮಚಂದ್ರನ ಸೇವೆಮಾಡತೊಡಗಿದನು! ಗಿರಿಜಾ—ದಿಗ್ವಿಜಯರ ಪ್ರೇಮವು ದಿನದಿನಕ್ಕೆ ವೃದ್ಧಿಂಗತವಾಗತೊಡಗಿತು! ಲಗ್ನವಾದ ಕ್ಷಣದಿಂದ ದಿಗ್ವಿಜಯನ ಬೆನ್ನ ಮೇಲೆ ಗಿರಿಜೆಯ ಹೊಡತದ ಒಂದು ಬಾಸಾಳವಾದರೂ ಮೂಡದೆ ಒಂದುದಿವಸವೂ ಹೋಗಲಿಲ್ಲವೆಂದು ಹೇಳಬಹುದು. ಪ್ರತಿದಿನ ತನ್ನ ಹೆಂಡತಿಯಿಂದಾಗುತ್ತಿದ್ದ ಈ ಸಂಭಾವನೆ ಯಿಂದ ದಿಗ್ವಿಜಯನಿಗಾಗುತ್ತಿದ್ದ ಆನಂದವನ್ನು ವರ್ಣಿಸುವದು ಶಕ್ಯವಲ್ಲ. ಒಂದೊಂದುದಿನ ಗಿರಿಜೆಯು ಕೆಲಸದಲ್ಲಿ ತೊಡಗಿಹೋಗಿದ್ದರೆ, ಇಲ್ಲವೆ ಆಕೆಯ ಮನಸ್ಸು ಪ್ರಸನ್ನವಾಗಿರದಿದ್ದರೆ, ಆಕೆಯು ದಿಗ್ವಿಜಯನ ಬೆನ್ನ ಮೇಲೆ ಕಸಬರಿಗೆಯ ಪೆಟ್ಟನ್ನು ಹಾಕುತ್ತಿದ್ದಿಲ್ಲ. ಅದರಿಂದ ದಿಗ್ವಿಜಯನಿಗೆ ಹಿಡಿದು ಬಿಸುಟಿದಹಾಗೆ ಆಗುತ್ತಿತ್ತು! ಆ ದಿವಸವೆಲ್ಲ ಆತನಿಗೆ ಸಮಾಧಾನವೇ ಆಗುತ್ತಿದ್ದಿಲ್ಲ. ಆಗ

ಅವನು ಏಕಾಂತದಲ್ಲಿ ಗಿರಿಜೆಯನ್ನು ಕುರಿತು—ಗಿರೀ, ಇಂದು ನನ್ನ ಮೇಲೆ ಯಾಕೆ ಸಿಟ್ಟಾದೆ ಹೇಳು? ನಾನೇನು ಅಂತಹ ತಪ್ಪುಮಾಡಿದ್ದೇನೆ? ಎಂದು ಕೇಳುತ್ತಿದ್ದನು. ಗಿರಿಜೆಯ ಕೈಯು ಕಸಬರಿಗೆಯ ಪೆಟ್ಟು ತಿನ್ನುವದರಿಂದ ದಿಗ್ವಿಜಯನಿಗೆ ಬ್ರಹ್ಮಾನಂದವು ಪ್ರಾಪ್ತವಾಗುತ್ತಿತ್ತು! ಇರಲಿ.

ಹೇಮಚಂದ್ರನನ್ನು ಹೊಸರಾಜ್ಯದ ಅರಸನಾಗಮಾಡಿ, ರಾಜ್ಯವು ಒಳ್ಳೆಯ ಸ್ಥಿತಿಯನ್ನು ಹೊಂದುವವರೆಗೆ ಮಾಧವಾಚಾರ್ಯರು ಹೇಮವತೀ ನಗರದಲ್ಲಿಯೇ ಇದ್ದರು. ಇನ್ನು ತಾವು ಹೋದರೆ ಏನೂ ತೊಂದರೆಯಾಗುವದಿಲ್ಲವೆಂದು ಕಂಡುಬಂದ ಮೇಲೆ ಕಾಮರೂಪದೇಶಕ್ಕೆ ನಡೆದರು. ಹೇಮಚಂದ್ರನು ದಕ್ಷಿಣದಲ್ಲಿ ಸಂಪೂರ್ಣವಾಗಿ ಯವನರನ್ನು ಮುರಿದನು. ಮುಂದೆ ಆತನು ಕಾಮರೂಪದೇಶಕ್ಕೆ ಹೋಗಿ ತನ್ನ ವೈರಿಯಾದ ಬಖತ್ಯಾರ ಖಿಲಿಜಿಯನ್ನು ಪೂರ್ಣವಾಗಿ ಸೋಲಿಸಿ ಅವನನ್ನು ಹೊಡೆದೋಡಿಸಿದನು. ಬಖತ್ಯಾರನು ಓಡಿಹೋಗುತ್ತಿರುವಾಗ ಹಾದಿಯಲ್ಲಿ ಕಷ್ಟವನ್ನೂ, ಅಪಮಾನವನ್ನೂ ಹೊಂದಿ ಕೊಲ್ಲಲ್ಪಟ್ಟನು; ಆದರೂ ಬಂಗಾಲ ಪ್ರಾಂತದೊಳಗಿನ ಮುಸಲ್ಮಾನರನ್ನು ಹಣಿಯುವದು ಹೇಮಚಂದ್ರನಿಂದ ಆಗಿದ್ದಿಲ್ಲ. ಈ ನವೀನವಾದ ಹಿಂದೂ ರಾಜ್ಯವು ತಮ್ಮ ಚಕ್ಕಂದಕ್ಕೆ ಅಂತಕವನ್ನುಂಟುಮಾಡುವದೆಂದು ತಿಳಿದು, ಆ ಮುಸಲ್ಮಾನರು ಅದನ್ನು ಮತ್ಸರಿಸಹತ್ತಿದರು. ಅವರ ಮಾತ್ಸರ್ಯಾಗ್ನಿಯಿಂದ ತನ್ನ ರಾಜ್ಯವನ್ನು ರಕ್ಷಿಸಿಕೊಳ್ಳುವದೊಂದು ಹೇಮಚಂದ್ರನಿಗೆ ಅವಶ್ಯದ ಕೆಲಸವಾಗಿತ್ತು. ಮೊದಮೊದಲು ಮುಸಲ್ಮಾನರಿಗೆ ಹೇಮಚಂದ್ರನ ರಾಜ್ಯವು ಗಣ್ಯವಾಗಿದ್ದಿಲ್ಲ; ಇದು ಯಾವಗಿಡದ ತೊಪ್ಪಲವೆಂದು ಅವರು ಉಪಹಾಸ ಮಾಡುತ್ತಲೂ ಇದ್ದರು. ಆ ಕಾಫರರ ರಾಜ್ಯವನ್ನು ಪುಷ್ಟವಾಗಗೊಟ್ಟು, ಆ ಮೇಲೆ ಅದನ್ನು ಹಿಂಡಿ ಹಿಪ್ಪೆಮಾಡುವದರಲ್ಲಿ ಲಾಭವು ಹೆಚ್ಚು ಎಂದು ಅವರು ತಮ್ಮತಮ್ಮೊಳಗೆ ನಗೆಯಾಡಿ ಮಾತಾಡಿಕೊಳ್ಳುತಿದ್ದರು. ಈ ಉಪಹಾಸದ ಹಾಗು ನಗೆಯಾಟದ ದುರ್ಲಕ್ಷವೇ ಹೇಮಚಂದ್ರನ ರಾಜ್ಯದ ಬೆಳವಣಿಗೆಗೆ ಕಾರಣವಾಯಿತು. ಹೇಮಚಂದ್ರನು ಅತ್ಯಂತ ಬಲಿಷ್ಠನಾದ ಬಳಿಕ ಮುಸಲ್ಮಾನರು ಅವನ ನಾಶಕ್ಕಾಗಿ ಹೆಣಗಹತ್ತಿದರು. ಈ ಅವರ ಕೃತಿಯು ಉಗುರಿನಿಂದ ಹೋಗುವದಕ್ಕೆ ಕೊಡಲಿಯನ್ನು ತಕ್ಕೊಳ್ಳುವಂತೆ ಆಯಿತು. ಹೇಮಚಂದ್ರನಂತು ಯಾವಾಗಲೂ ಜಾಗರೂಕನಾಗಿಯೇ ಇರುತ್ತಿದ್ದನು. ಯಾವದನ್ನಾದರೂ ಗಳಿಸುವದಕ್ಕಿಂತ ಗಳಿಸಿದ್ದನ್ನು ಕಾದುಕೊಳ್ಳುವದು ಕಠಿಣವಲ್ಲವೇ? ಹೇಮಚಂದ್ರನ ರಾಜ್ಯವು ಇಷ್ಟು ಘನತೆಗೇರಿದರೂ, ಆ ಘನತೆಗೆ ಮೂಲಾಧಾರಳಾಗಿ ಧನರಾಶಿಯನ್ನು ಒದಗಿಸಿಕೊಟ್ಟಿರುವ ಮನೋರಮೆಯ ಗೊತ್ತು ಹೇಮಚಂದ್ರನಿಗೆ ಹತ್ತದಾಯಿತು; ಆದರೆ ಖಡ್ಗಪಾಣಿಯಾಗಿ ಸ್ಮಶಾನದಿಂದ ತಟ್ಟನೆ ಹೊರಟುಹೋಗಿದ್ದ ಆಕೆಯ ವೀರಮೂರ್ತಿಯು ಮಾತ್ರ ಹೇಮಚಂದ್ರನ ಹೃತ್ಪಟಲದೊಳಗಿಂದ ಅಳಿಸಿ ಹೋಗಲಿಲ್ಲ. ಅವನು ಯಾವಾಗಲೂ ಮನೋರಮೆಯ ಅಲೌಕಿಕತೆಯನ್ನು ಸ್ಮರಿಸುತ್ತಿದ್ದನು. ಆಕೆಯ ಶೋಧಮಾಡಿಸುವಲ್ಲಿಯೂ ಆತನು ಬೇಸರ ಮಾಡಲಿಲ್ಲ. ಆಕೆಯ ಸೂಚನೆಯಂತೆ, ಆಕೆಯ ಅಜ್ಜ—ಅಜ್ಜಿಯರ ವ್ಯವಸ್ಥೆ ಮಾಡಿದನು; ಆದರೆ ಆ ವೃದ್ಧ ದಂಪತಿಗಳಿಗೂ ಪುನಃ ಮನೋರಮೆಯ ದರ್ಶನವಾಗಿದ್ದಿಲ್ಲ! ಹೀಗೆ ಎಲ್ಲರ ಕಣ್ಣಿಗೆ ಇಂಗುಹಚ್ಚಿ ಮನೋರಮೆಯು ಎಲ್ಲಿಗೆ ಹೋಗಿರಬಹುದು, ಏನು ಮಾಡುತ್ತಿರಬಹುದು!

ಯಜ್ಞದ ಪೂರ್ಣಾಹುತಿ

ಒಂದು ಕಗ್ಗತ್ತಲೆಯ ರಾತ್ರಿಯ ನಿರಭ್ರವಾದ ಆಕಾಶದಲ್ಲಿ ಅಸಂಖ್ಯ ನಕ್ಷತ್ರಗಳು ಲಕಲಕನೆ ಹೊಳೆಯುತ್ತಿದ್ದವು. ಹೇಮವತೀ ನಗರದ ಉಪವನದಲ್ಲಿಯ ಸುಗಂಧ ಪುಷ್ಪಗಳ ಮಿಶ್ರಗಂಧವನ್ನು ಹೊತ್ತುಕೊಂಡು ಮಂದಮಾರುತನು ಸದುವು ನೋಡಿ ಸಂಚರಿಸುತ್ತಿಲಿದ್ದನು. ನಿಶ್ಯಬ್ದವಾದ ಆ ಕಾಳರಾತ್ರಿಯನ್ನು ನೋಡಿದರೆ, ಹಗಲಶ್ರಮದಿಂದ ಇಡಿಯ ಪ್ರಪಂಚವೇ ಗಾಢವಾದನಿದ್ರೆಗೆ ವಶವಾಗಿರುವಂತೆ ತೋರುತ್ತಿತ್ತು, ಆ ನಿದ್ದೆಹೋದ ಪ್ರಪಂಚದ ನಿದ್ದೆಯು ಕೆಡಬಾರದೆಂಬ ಉಪಕಾರ ಬುದ್ಧಿಯಿಂದಲೋ, ಎಂಬಂತೆ ರಾತ್ರಿರೂಪಸ್ತ್ರೀಯು ಸೂರ್ಯ ರೂಪವಾದ ದೀಪವನ್ನು ಕಳೆದು, ಪ್ರಪಂಚಕ್ಕೆ ಕತ್ತಲೆರೂಪ ಮುಸುಕು ಹಾಕಿರುವಂತೆ ಕಾಣುವದು. ಕೆಳಗೆ ಕತ್ತಲೆ, ಮೇಲೆ ಕತ್ತಲೆ, ಹಿಂದೆ ಕತ್ತಲೆ, ಮುಂದೆ ಕತ್ತಲೆ ಹೀಗಾಗಿ ಹೋದಲ್ಲಿ ಕತ್ತಲೆಯೇ ಕತ್ತಲೆಯಾಗಿ ಹೋಗಿತ್ತು, ಇಂತಹ ಭಯಂಕರ ರಾತ್ರಿಯಲ್ಲಿ ಒಬ್ಬ ತರುಣಿ ಬೈರಾಗಿಣಿಯು ಯಾವ ಭಯವನ್ನೂ ಲೆಕ್ಕಿಸದೆ ಹೇಮಚಂದ್ರನ ನಂದನಾವಾಸವೆಂಬ ದೊಡ್ಡದಾದ ಮನೋಹರ ಅಂತಃಪುರದ ಉದ್ಯಾನದ ಕಡೆಗೆ ಸಾಗಿದ್ದಳು. ಕಳ್ಳರ–ಕಾಕರ ಭಯವಾಗಲಿ, ಹುಳ–ಹುಪ್ಪಡಿಗಳ ಅಂಜಿಕೆಯಾಗಲಿ, ದೆವ್ವ—ಭೂತಗಳ ಆತಂಕವಾಗಲಿ ಆಕೆಗೆ ಇದ್ದಂತೆ ತೋರಲಿಲ್ಲ, ಆಕೆಯು ಪಿಶಾಚಗಳಿಗೇ ಪಿಶಾಚಸ್ವರೂಪಳಾಗಿದ್ದಳೆಂದು ಹೇಳಬಹುದು. ಆಕೆಯು ಉದ್ಯಾನವನ್ನು ಸುತ್ತಿ ಕೆಲವು ಅಂತರವನ್ನು ಕ್ರಮಿಸಿ ಹೋದಬಳಿಕ ಒಂದು ಚಿಕ್ಕ ಹೊಳೆಯು ಆಕೆಗೆ ಹತ್ತಿತು. ಹೊಳೆಯಲ್ಲಿ ಮೊಳಕಾಲು ತೊಯ್ಯುವಷ್ಟು ನೀರು ಮಾತ್ರ ಇದ್ದಿತು. ಆ ತರುಣಿಯು ನಿರ್ಭಯದಿಂದ ಹೊಳೆಯನ್ನು ದಾಟಿ ಉದ್ಯಾನವನದ ಕಡೆಗೆ ಸಾಗಿದಳು. ಅಷ್ಟರಲ್ಲಿ ಮೂಡಲು ಬಿಳುಪೇರಿ ಚಂದ್ರೋದಯವಾಗಲು, ಸ್ವರ್ಗಭವನದಂತಿರುವ ನಂದನಾವಾಸವು ಆಕೆಗೆ ಸ್ಪಷ್ಟವಾಗಿ ಕಾಣಿಸಹತ್ತಿತು. ಆ ಉದ್ಯಾನದ ಪ್ರತಿಯೊಂದು ಬಾಗಿಲಲ್ಲಿಯೂ ಕಾವಲುಗಾರರು ಇದ್ದದ್ದರಿಂದ ಆ ತರುಣಿಯು ಸುಲಭವಾಗಿ ಉದ್ಯಾನವನ್ನು ಪ್ರವೇಶಿಸುವಹಾಗಿದ್ದಿಲ್ಲ. ಆಕೆಯು ಸ್ವಲ್ಪ ಹೊತ್ತಿನಲ್ಲಿ ನಂದನಾವಾಸದ ಹೆಬ್ಬಾಗಿಲಿಗೆ ಮುಟ್ಟಿದಳು. ಅಲ್ಲಿ ಉಗ್ರತೇಜಸ್ಸಿನ ಶೀಖ ಮುದುಕ ಶಿಪಾಯಿಯೊಬ್ಬನು ಜಾಗರೂಕನಾಗಿ ಬಾಗಿಲು ಕಾಯುತ್ತಿದ್ದನು. ತರುಣಿಯು ಆತನ ಬಳಿಗೆ ಹೋಗಿ ದಿಟ್ಟತನದಿಂದ ಆತನನ್ನು ಕುರಿತು—''ನಾನು ರಾಜದರ್ಶನಕ್ಕೆ ಬಂದಿದ್ದೇನೆ. ದಾರಿಯನ್ನು ಬಿಡು,'' ಎಂದು ಕೇಳಿಕೊಂಡಳು. ಆ ತರುಣ ಬೈರಾಗಿಣಿಯನ್ನು ನೋಡಿ ಮುದುಕನು ಆಶ್ಚರ್ಯಪಟ್ಟು ಆಕೆಯನ್ನು ದಿಟ್ಟಿಸಿ ನೋಡತೊಡಗಿದನು. ಬೈರಾಗಿಣಿಯ ವಯಸ್ಸು ಹದಿನೆಂಟುವರ್ಷಗಳೊಳಗಿರಬಹುದೆಂದು ಆತನಿಗೆ ತೋರಿತು. ಸಾದುಗಪ್ಪಿನ ಆ ತರುಣಿಯ ರೂಪವು ಅತ್ಯಂತ ಮೋಹಕ, ಧ್ವನಿಯು ಅತ್ಯಂತ ಮಂಜುಲ, ದೃಷ್ಟಿಗಳು ಅತ್ಯಂತ ತೇಜಃಪುಂಜ! ಇದನ್ನು ನೋಡಿ ಆ ವೃದ್ಧ ಕಾವಲುಗಾರನು ಮತ್ತಿಷ್ಟು ಆಶ್ಚರ್ಯಮಗ್ನನಾದನು. ಇಂಥ ಧೈರ್ಯಶಾಲಿಯಾದ ವಿಲಕ್ಷಣ ಹೆಣ್ಣುಮಗಳನ್ನು ಆತನು ತನ್ನ ಜನ್ಮದಲ್ಲಿ ಎಂದೂ ಕಂಡಿದ್ದಿಲ್ಲ, ಆ ವೃದ್ಧನು ಅತ್ಯಂತ ಕೌತುಕದಿಂದ ಆ ತರುಣ ಬೈರಾಗಿಣಿಯನ್ನು ಕುರಿತು—

ಕಾವಲುಗಾರ—ಇಂಥ ಸರಿರಾತ್ರಿಯಲ್ಲಿ ಮಹಾರಾಜರ ಬಳಿಯಲ್ಲಿ ನಿನ್ನ ಕೆಲಸವೇನು?

ಬೈರಾಗಿಣಿ—ಆ ಕೆಲಸವು ಮಹಾರಾಜರ ಮುಂದೆಯೇ ಹೇಳತಕ್ಕದ್ದು, ನಿನ್ನ ಮುಂದೆ ಹೇಳತಕ್ಕದ್ದಲ್ಲ.

ಕಾವಲುಗಾರ—ರಾತ್ರಿ ಯಾರನ್ನೂ ಬಿಡಲಾಗದೆಂದು ಮಹಾರಾಜರ ಕಟ್ಟಪ್ಪಣೆಯಿರುವದು.

ಬೈರಾಗಿಣಿ—ರಾಜಕಾರಣದ ಗೂಢ ಕೆಲಸವಿದ್ದರೂ ಬಿಡಬಾರದೆಂದು ಮಹಾರಾಜರ ಅಪ್ಪಣೆಯಾಗಿದೆಯೇ?

ಕಾವಲುಗಾರ—ಅದಾವುದನ್ನೂ ನಾನು ಅರಿಯೆನು, ನಾನು ಅಪ್ಪಣೆಯ ದಾಸನು.

ಬೈರಾಗಿಣಿ—ಸರಿಸರಿ! ನಿನ್ನ ಮಾತು ಒಪ್ಪತಕ್ಕದ್ದೇ ಸರಿ; ಆದರೆ ಸ್ವಾಮಿನಿಷ್ಠನೇ, ಕಾರ್ಯವು ಅತ್ಯಂತ ಸೂಕ್ಷ್ಮವಾಗಿರುವದು. ನನ್ನನ್ನು ಬಿಡದಿದ್ದರೆ ಹಿತವಾಗಲಿಕ್ಕಿಲ್ಲ ವಿಚಾರಮಾಡಿ ನೋಡು.

ಕಾವಲುಗಾರ—ಅಮ್ಮಾ ಇಷ್ಟು ರಾತ್ರಿಯಲ್ಲಿ ನೀನು ಮಹಾರಾಜರ ಬಳಿಗೆ ಹೋಗಿ ಮಾಡುವದಾದರೂ ಏನು? ಅವರು ಈಗ ಮಲಗಿರುವರು.

ಬೈರಾಗಿಣಿ—ಮಲಗಿದವರನ್ನು ನಾನು ಎಬ್ಬಿಸುವೆನು.

ಬೈರಾಗಿಣಿಯ ಈ ಮಾತುಗಳನ್ನು ಕೇಳಿ ಕಾವಲುಗಾರನು ಸುಮ್ಮನೆ ವಿಚಾರ ಮಾಡತೊಡಗಿದನು. ಆತನಿಗೆ ಏನು ಮಾಡಬೇಕೆಂಬದು ತಿಳಿಯದಾಯಿತು. ಅಷ್ಟರಲ್ಲಿ ಆಕೆಯು—

ಬೈರಾಗಿಣಿ—ಯಾಕಯ್ಯಾ, ನನ್ನನ್ನು ಬಿಡುವದಕ್ಕೆ ಅಂಜುವೆಯೇನು?

ಕಾವಲುಗಾರ—ಮಹಾರಾಜರಿಗಾಗಿ ಭಯ!

ಬೈರಾಗಿಣಿ—ಒಬ್ಬ ಯಃಕಶ್ಚಿತ ಬೈರಾಗಿಣಿಯನ್ನು—ಅಬಲೆಯನ್ನು ಬಿಟ್ಟದ್ದಕ್ಕಾಗಿ ಮಹಾರಾಜರು ನಿನ್ನನ್ನು ದಂಡಿಸುವರೆಯೇ? ಅಷ್ಟು ಅವರು ಕಠಿಣ ಹೃದಯರಾಗಿದ್ದರೆ, ವಾತ್ಸಲ್ಯದಿಂದ ಪ್ರಜೆಗಳನ್ನು ಆಳಲಿಕ್ಕೆ ತಕ್ಕವರಲ್ಲವೆಂದು ಭಾವಿಸಬೇಕಾಗುವದು. ಕರ್ತವ್ಯ ನಿಷ್ಠನೇ, ಈ ಬಡ ಬೈರಾಗಿಣಿಯು ತನ್ನ ಹಿತಕ್ಕಾಗಿ ರಾಜದರ್ಶನವನ್ನು ಇಚ್ಛಿಸುವದಿಲ್ಲ, ರಾಜರ ಹಿತಕ್ಕಾಗಿಯೇ ರಾಜರ ದರ್ಶನವನ್ನು ಇಚ್ಛಿಸುವಳು. ಇಷ್ಟು ಪುಕ್ಕತನವು ನಿನಗೆ ಒಪ್ಪುವದಿಲ್ಲ.

ಪುಕ್ಕತನವೆಂದಕೂಡಲೆ ಆ ಶೀಖನ ಕಣ್ಣುಗಳು ಸಿಟ್ಟಿನಿಂದ ಕೆಂಪಾದವು. ಅತ್ತ ರಾಜಾಜ್ಞೆಯು, ಇತ್ತ ಬೈರಾಗಿಣಿಯ ಚಂಡಿತನವು. ಈ ಮಧ್ಯ ಸಿಕ್ಕು ಆ ಮುದುಕನು ತಲೆ ತುರಿಸಿಕೊಳ್ಳಹತ್ತಿದನು. ಅಷ್ಟರಲ್ಲಿ ಕಾವಲು ಬದಲುಮಾಡುವ ಹೊತ್ತು ಆಗಲು, ಸರದಿಯ ಮತ್ತೊಬ್ಬ ಸಿಪಾಯಿಯು ಅಲ್ಲಿಗೆ ಬಂದನು. ಅವರಿಬ್ಬರು ಆಲೋಚಿಸಿ ಮೊದಲನೆಯ ಮುದುಕ ಸಿಪಾಯಿಯು ಮಹಾರಾಜರನ್ನು ಕೇಳಿಬರುವದಕ್ಕಾಗಿ ಹೋದನು.

ಹೇಮಚಂದ್ರನು ರಾತ್ರಿಯ ಮೊದಲ ಯಾಮದಲ್ಲಿ ರಾಜಕಾರಣಗಳನ್ನೆಲ್ಲ ತೀರಿಸಿ, ಮೂರನೆಯ ಯಾಮದಲ್ಲಿ ಮಲಗಿಕೊಳ್ಳುತ್ತಿದ್ದನು. ಆಮೇಲೆ ಕಡೆಯ ಯಾಮದಲ್ಲಿ ಎದ್ದು, ರಾಜ್ಯದ ಮಂಗಲ ಚಿಂತನವನ್ನು ಮಾಡಿ , ಸೈನ್ಯಾದಿಗಳ ರಕ್ಷಣದ ವಿಚಾರಗಳನ್ನು ಕುರಿತು

ಆಲೋಚಿಸುತ್ತಿದ್ದನು. ಆ ಕ್ರಮವನ್ನು ನೋಡಿದರೆ, ಕಾವಲುಗಾರನು ಅಂತಗೃಹಕ್ಕೆ ಹೋದಾಗ ಹೇಮಚಂದ್ರನು ಮಲಗಿರಬೇಕಾಗಿತ್ತು; ಆದರೆ ರಾಜ್ಯದ ಹಿತಕ್ಕಾಗಿ ಒಂದು ಯಜ್ಞವನ್ನು ಆರಂಭಿಸಿದ ರಾಜನು, ಬೆಳಗಾಗುತ್ತಲೇ ಆಗುವ ಯಜ್ಞದ ಪೂರ್ಣಾಹುತಿಯ ಮೂಲಕ ಎಚ್ಚತ್ತಿರಬೇಕಾಗಿತ್ತು. ಆ ದಿನ ರಾತ್ರಿ ಯಾರೂ ಮಲಗಿರಲಿಲ್ಲ, ಸಹಸ್ರಾವಧಿ ದೀಪಗಳು ಅರಮನೆಯಲ್ಲಿ ಪ್ರಜ್ವಲಿಸುತ್ತಿದ್ದವು. ಮೂರನೆಯ ಯಾಮವಾದ ಕೂಡಲೆ ಎಲ್ಲರೂ ಯಜ್ಞಾನುಷ್ಠಾನದಲ್ಲಿ ತೊಡಗುವವರಿದ್ದರು. ಹೇಮಚಂದ್ರನು ವಿಸ್ತಾರವಾದ ದಿವಾನಖಾನೆಯಲ್ಲಿ ಅತ್ತಿತ್ತ ತಿರುಗುತ್ತ ಯಾವದೋ ರಾಜಕಾರಣವನ್ನು ಕುರಿತು ಮನಸ್ಸಿನಲ್ಲಿ ಆಲೋಚಿಸುತ್ತಿದ್ದನು. ಆ ಸಮಯದಲ್ಲಿ ಕಾವಲುಗಾರನು ಪ್ರವೇಶಿಸಿ, ಎಥಾವಿಧಿ ನಮಸ್ಕರಿಸಿ, ಒಬ್ಬ ಬೈರಾಗಿಣಿಯು ದರ್ಶನಾಪೇಕ್ಷಿಯಾಗಿ ಬಂದಿರುವದನ್ನು ನೀವೇದಿಸಿದನು. ಅದಕ್ಕೆ ಹೇಮಚಂದ್ರನು—

ಹೇಮ—ಆಕೆಯ ವಯಸ್ಸು ಎಷ್ಟು?

ಕಾವಲುಗಾರ—ಧರ್ಮಾವತಾರ, ಹದಿನೆಂಟು ವರ್ಷಗಳ ಒಳಗಿರಬಹುದು.

ಹೇಮ—ಯಾವ ಜಾತಿಯವಳು?

ಕಾವಲುಗಾರ—ಹಿಂದೂ ಬೈರಾಗಿಣಿಯು.

ಹೇಮ—ನಾಳೆ ಬೆಳಗಿನಲ್ಲಿ ಕಾಣಬಹುದೆಂದು ಹೇಳು.

ಕಾವಲುಗಾರ—ಮಹಾರಾಜ, ಅವಳು ಕೇಳುವಹಾಗಿಲ್ಲ, ಸೂಕ್ಷ್ಮ ರಾಜಕಾರಣವಿರುವದರಿಂದ ಈಗಲೇ ಕಾಣಬೇಕಾಗಿರುವದೆನ್ನುವಳು; ಮೇಲೆ ಮಾತಿನಲ್ಲಿ ಸೋಲುವವಳಲ್ಲ, ಬಲು ಚತುರೆಯು!

ಹೇಮ—ಹಾಗಾದರೆ ಒಳಗೆ ಕರೆದುಕೊಂಡು ಬಾ.

ಕಾವಲುಗಾರನು ಹೊರಟುಹೋದನು. ಸ್ವಲ್ಪ ಹೊತ್ತಿನಲ್ಲಿ ಬೈರಾಗಿಣಿಯು ಬಂದು ಹೇಮಚಂದ್ರನ ಮುಂದೆ ನಿಂತು—ಮಹಾರಾಜರಿಗೆ ಜಯವಾಗಲಿ, ಎಂದು ಹರಿಸಿದಳು. ಆಗ ರಾಜನು ಆಕೆಯ ಧ್ವನೀ, ರೂಪ, ಎತ್ತರ, ತೇಜಸ್ವಿತೆ, ದಿಟ್ಟತನ ಇವನ್ನು ನೋಡಿ ಏನೋ ಶಂಕಿಸತೊಡಗಿದನು. ಮೊನ್ನೆ ಮೊನ್ನೆ ಯಾರನ್ನೋ ನೋಡಿದ ಸ್ಮರಣವು ರಾಜನಿಗೆ ಆಗ ತೊಡಗಿತು; ಆದರೆ ಇಂಥವರೇ ಎಂಬದು ಆತನ ಲಕ್ಷಕ್ಕೆ ಬರಲೊಲ್ಲದು, ಆತನು ನೆನಪು ಮಾಡಿಕೊಳ್ಳುತ್ತ ಬೈರಾಗಿಣಿಯನ್ನು ಕುರಿತು—

ಹೇಮ—ಇಂಥ ಅಪರಾತ್ರಿಯಲ್ಲಿ ಅಂಥ ರಾಜಕಾರಣವೇನವ್ವಾ?

ಬೈರಾಗಿಣಿ—ಧರ್ಮರಕ್ಷಕಾ, ರಾಜಕಾರಣಕ್ಕೆ ಕಾಲನಿರ್ಬಂಧವಿರುವದೋ? ರಾಜನೂ, ರಾಜನ ಹಿತೇಚ್ಛುಗಳೂ ಯಾವಾಗಲೂ ಒಂದಿಲ್ಲೊಂದು ಬಗೆಯ ರಾಜಕಾರಣದಲ್ಲಿ ತೊಡಗಿರಬೇಕಾಗಿರುವದು. ಯಜ್ಞ ಸಮಾರಂಭ ನಿಮಗ್ನನಾದ ನಿನ್ನನ್ನು ಕೂಡಲೆ ಎಚ್ಚರಗೊಳಿಸುವದು ಅವಶ್ಯವಿದ್ದುದರಿಂದಲೇ ಇಂಥ ಭಯಂಕರ ರಾತ್ರಿಯಲ್ಲಿ ನಿನ್ನನ್ನು ಕಾಣಲಿಕ್ಕೆ ನಾನು ಬಂದೆನು.

ಈ ತೇಜೋಮಯ ಭಾಷಣವನ್ನು ಕೇಳಿ ಹೇಮಚಂದ್ರನು ಅತ್ಯಾತುರದಿಂದ ನೆನಪು ಮಾಡಿಕೊಳ್ಳುತ್ತಿರಲು, ಮನೋರಮೆಯು ಆತನ ಕಣ್ಣಿಗೆ ಕಟ್ಟಿ, ಕಳೆದುಕೊಂಡಿದ್ದ ಪ್ರೀತಿಯ ವಸ್ತುವು ಸಿಕ್ಕಂತೆ ಆತನು ಸಮಾಧಾನಪಟ್ಟನು. ಮನೋರಮೆಯ ಆ ತೇಜಸ್ವಿತೆ, ಆ ಸೌಂದರ್ಯ,

ಆ ನಿರ್ಭಯತೆ, ಆ ಸರಳತನ, ಆ ನಿಲುವಿಕೆ ಇವೆಲ್ಲ ಕೂಡಿದವು; ಆದರೆ ಕಪ್ಪುಬಣ್ಣದ ಸಂಶಯವೊಂದು ಹೇಮಚಂದ್ರನನ್ನು ಬಾಧಿಸತೊಡಗಿತು. ಆತನು ಮತ್ತೆ ವಿಚಾರಮಾಡಿ ಬೈರಾಗಿಣಿಯ ಪಾದಗಳನ್ನು ನೀರಿಕ್ಷಿಸಿ ಪಕ್ಕನೆ—

ಹೇಮ—ಮನೋರಮೇ!

· ಬೈರಾಗಿಣಿ—ಅಣ್ಣಾ!

ಈಗ ಹೇಮಚಂದ್ರನಿಗಾದ ಆನಂದವು ಆತನ ಹೊಟ್ಟೆಯಲ್ಲಿ ಹಿಡಿಸದಾಯಿತು. ಆತನು ತಟ್ಟನೆ ಮುಂದಕ್ಕೆ ಬಂದು ವಾತ್ಸಲ್ಯದಿಂದ ಬೈರಾಗಿಣಿಯ ಮೈಮೇಲೆ ಕೈಯಾಡಿಸುತ್ತ— ''ತಂಗೀ, ಇಷ್ಟುದಿವಸ ಎಲ್ಲಿಗೆ ಹೋಗಿದ್ದೆಯವ್ವಾ? ಎಲ್ಲಿ ಇದ್ದಿ? ಏನು ಮಾಡುತ್ತಿದ್ದಿ? ಈ ಬೈರಾಗಿಣಿಯ ವೇಷವೇಕೆ? ಶ್ರೀ ಗುರುಗಳವರ ಮಾತು ಕೇಳಿ ಕೂಡಲೆ ಖಡ್ಗಪಾಣಿಯಾಗಿ ವಾಯುವೇಗದಿಂದ ನೀನು ಹೊರಟುಹೋಗಿಬಿಟ್ಟೆಯಲ್ಲ! ನಿನ್ನ ಅಣ್ಣನು ನಿನ್ನ ಪುಣ್ಯದಿಂದ ರಾಜನಾಗಿರಲು, ನೀನು ಹೀಗೆ ಅರಣ್ಯವಾಸಿಗಳಂತೆ ವ್ಯವಹರಿಸಬಹುದೇ? ನಿನ್ನ ಜೀವನವು ಎಷ್ಟು ಕಷ್ಟಮಯವಾದದ್ದು! ಆಗಲಿ, ನಿನ್ನನ್ನು ಕಂಡ ಇಂದಿನ ದಿವಸವೇ ಸುದಿವಸವು. ನೀನು ಮೋರೆಯ ಬಣ್ಣವನ್ನು ಬದಲಿಸಿಕೊಂಡದ್ದರಿಂದ ಬೇಗನೆ ಗುರುತು ಹತ್ತಲಿಲ್ಲ. ಆಗಲವ್ವಾ! ಒಳಗೆ ನಡೆ. ನಿನ್ನ ಪುಣ್ಯದಿಂದ ಪಟ್ಟದರಾಣಿಯೆನಿಸಿರುವ ಮೃಣಾಲಿನಿಯು ನಿನ್ನನ್ನು ಸೇವಿಸಲು ಸಿದ್ಧಳಾಗಿರುವಳು. ನಿನ್ನನ್ನು ನೆನಿಸದಿರುವ ದಿನವನ್ನು ನಾವು ಕಾಣೆವು. ಅಯ್ಯೋ! ಎಷ್ಟು ಬಡವಾಗಿ ಹೋಗಿರುವೆ! ಎಂತಹ ಕಷ್ಟವವ್ವಾ ನಿನ್ನದು!

ಈ ಮೇರೆಗೆ ಹೇಮಚಂದ್ರನು ಅತ್ಯಂತ ಕರುಣಾಮಯನಾಗಿ ಅಂತಃಕರಣ ಪೂರ್ವಕ ಮನೋರಮೆಯನ್ನು ಸಂತಯಿಸುತ್ತಿರಲು, ಆಕೆಯು ನಕ್ಕು ಹೇಮಚಂದ್ರನನ್ನು ಕುರಿತು—ಅಣ್ಣಾ ನಿನ್ನ ಸೌಜನ್ಯವೇ ಅಂತಹದಪ್ಪಾ! ಯುದ್ಧದಲ್ಲಿಯ ನಿನ್ನ ವಜ್ರಹೃದಯವು ನನ್ನನ್ನು ನೋಡಿ ಈಪರಿ ಕರಗಿದ್ದನ್ನು ನೋಡಿ, ರಾಗ—ವಿರಾಗಗಳನ್ನೆಲ್ಲ ಕಳೆದುಬಿಟ್ಟು ಶೂನ್ಯಳಾಗಿದ್ದ ನನ್ನ ಹೃದಯದಲ್ಲಿಯೂ ನಿನ್ನ ದಯಾಮೂರ್ತಿಯ ಯೋಗದಿಂದ ರಾಗಾವಿರ್ಭಾವವಾಯಿತು! ಅಣ್ಣಾ ಜಗತ್ತನ್ನೆಲ್ಲಾ ತೊಲಗಿ ನಿರಾಧಾರಳಾಗಿ ಕೇವಲ ಪತಿಯ ಆಜ್ಞೆಯ ಆಸರದಿಂದ ಹೇಗಾದರೂ ವ್ಯವಹರಿಸುತ್ತಿರುವ ನನ್ನನ್ನು ಮತ್ತೆ ಮಮಕಾರಾವೃತಳನ್ನಾಗಿ ಮಾಡುವೆಯಲ್ಲ! ಹೌದು, ನನ್ನಂಥ ನಿಸ್ಪೃಹಳಿಗೂ ನೀನು ನಿಜವಾಗಿಯೇ ಅಣ್ಣನು! ಬಂಧುಪ್ರೇಮದಿಂದ ನನ್ನ ಹೃದಯವು ಇಂದು ರಸಪೂರ್ಣವಾಯಿತು! ಅಣ್ಣಾ ನಾನು ನಿನ್ನ ತಂಗಿಯಲ್ಲವೆ? ಅಂದಬಳಿಕ ಪತಿವಿಹೀನೆಯಾದ ನಾನು ನಿನ್ನಂತಹ ಸಮರ್ಥ ಅಣ್ಣನ ಆಶ್ರಯವನ್ನು ಬಿಟ್ಟು ಬೇರೆ ಕಡೆಗೆ ಎತ್ತ ಹೋಗಲಿ? ಪತಿಯ ಅಪ್ಪಣೆಯನ್ನು ಪಾಲಿಸುವವರೆಗೆ, ಇಗೋ, ಆ ರಣಕರ್ಕಶದುರ್ಗಿಯ ಈ ನಿಶಿತ ಖಡ್ಗಧಾರೆಗೆ ಯವನ ರಕ್ತದ ನೀರು ಕುಡಿಸುತ್ತ ನಿನ್ನ ನೂತನ ರಾಜ್ಯವನ್ನು ಸ್ಥಿರಗೊಳಿಸು ವವರೆಗೆ ಅಣ್ಣಾ, ಅನಾಥೆಯೂ, ಅಬಲೆಯೂ ಆದ ನಿನ್ನ ಈ ತಂಗಿಯು ನಿನ್ನ ರಾಜ್ಯದಲ್ಲಿಯೇ ಯವನರ ಸುಳುವು ನೋಡುತ್ತ ಆಸರ ದೊರೆತಲ್ಲಿ ಇರುತ್ತಿರುವಳು! ಎಂದು ಹೇಳಿ ಮತ್ತೆ ಖಡ್ಗವನ್ನಡಗಿಸಿದಳು.

ಹೀಗೆ ಗುಪ್ತವಾಗಿರಿಸಿಕೊಂಡಿದ್ದ ಖಡ್ಗವನ್ನು ಮುಂದೆ ಚಾಚಿ ಮತ್ತೆ ಅಡಗಿಸಿ ಬಿಟ್ಟ ಮನೋರಮೆಯ ವೀರ ಮೂರ್ತಿಯನ್ನು ನೋಡಿ ಹೇಮಚಂದ್ರನು ಸ್ತಬ್ಧನಾಗಿ ನಿಂತುಕೊಂಡನು. ಆಗ ಮನೋರಮೆಯು—

ಮನೋರಮೆ—ಅಣ್ಣಾ, ಯುದ್ಧಕ್ಕೆ ನಿನ್ನ ಸೈನ್ಯವು ಸಿದ್ಧವಾಗಿದೆಯಷ್ಟೇ?

ಹೇಮಚಂದ್ರ—ಅಲ್ಲದೇನು? ನಿಮ್ಮ ಅಣ್ಣನು ಯವನರ ಮಗ್ಗಲು ಮುರಿಯುವದಕ್ಕಾಗಿ ಯಾವಾಗಲೂ ಸಸೈನ್ಯ ಸಜ್ಜಾಗಿಯೇ ಇರುವನು; ಆದರೆ ಹೀಗೆ ನೀನು ಕೇಳುವ ಕಾರಣವೇನು?

ಮನೋರಮೆ—ಅತ್ಯಂತ ಮಹತ್ವದ ಕಾರಣವಿರುವದು. ನೀನು ಯಜ್ಞಸಮಾರಂಭದಲ್ಲಿ ತೊಡಗಿರುವಾಗಲೇ ನಿನ್ನ ಪಟ್ಟಣವನ್ನು ಅಕಸ್ಮಾತ್ತಾಗಿ ಮುತ್ತಬೇಕೆಂದು ಯೋಚಿಸಿ ಸೈನ್ಯ ದೊಡನೆ ಸದ್ದಿಲ್ಲದೆ ಯವನರು ಹೊರಟು ಬರುವವರಿರುವರು. ಅವರು ಬಹಿರಂಗದಲ್ಲೇನೋ ಬೇರೇ ಕೆಲಸಕ್ಕಾಗಿ ಹೋಗುವವರಂತೆ ನಟಿಸುತ್ತಿದ್ದರೂ, ಅವರ ಗುರಿಯಿರುವದು ನಿನ್ನ ಹೊಸ ಹೇಮವತೀ ಪಟ್ಟಣದ ಮೇಲೆಯೇ! ಅವರು ನಾಡದು ನಿನ್ನ ಪಟ್ಟಣವನ್ನು ನಿಶ್ಚಯವಾಗಿ ಮುತ್ತುವರು. ಅವರ ಬಳಿಯಲ್ಲಿ ಈಗ ಹತ್ತು ಸಹಸ್ರ ಸೈನ್ಯವಿರುವದು. ಮಹಮ್ಮದಲಿಯ ಸೈನ್ಯವು ಅದನ್ನು ಕೂಡಿದರೆ, ಅದು ಅಪಾರವಾಗಿ ಗೆಲ್ಲಲು ನಿನಗೆ ದುಸ್ತರವಾಗುವದು; ಆದ್ದರಿಂದ ನಾಳೆ ಸಂಜೆಯಲ್ಲಿಯೇ ತುಮುಲಕದ ನೆರೆಯ ಆಮ್ರವನದಲ್ಲಿ ನಿನ್ನ ಸೇನೆಯ ಬೀಡು ಬಿಟ್ಟಿರ ಬೇಕು ನೋಡು; ಅಂದರೆ ಬೆಳಗಾಗುತ್ತಲೆ ತುಮುಲಕದಲ್ಲಿರುವ ಮುಸಲ್ಮಾನರ ಪಾಳಯದ ಮೇಲೆ ಬೀಳಲಿಕ್ಕೆ ನಿನಗೆ ಅನುಕೂಲವಾಗುವದು. ನನ್ನ ಪತಿಯ ಹಸ್ತಕನಾಗಿದ್ದ ಶಾಂತಶೀಲನು, ''ಕೊಡಲಿಯ ಕಾವು ಕುಲಕ್ಕೆ ಮೂಲವಾದಂ''ತೆ, ಹಿಂದೂ ರಾಜ್ಯಗಳಿಗೆ ಮೂಲವಾಗಿರುವನು. ಆ ದುಷ್ಟನಿಂದ ಹಿಂದೂ ಜನರಿಗಾಗುತ್ತಿರುವ ಕಷ್ಟ–ನಷ್ಟಗಳನ್ನು ವರ್ಣಿಸುವದು ಶಕ್ಯವಲ್ಲ; ಆದರೆ ನಿನ್ನ ಪವಿತ್ರ ಧರ್ಮಕಾರ್ಯವಾದ ಕಲ್ಯಾಣಕಾರಕ ಯಜ್ಞಸಮಾರಂಭವನ್ನು ಪೂರ್ಣಾಹುತಿಯಿಂದ ಸಮಾಪ್ತಮಾಡಿ, ಕೂಡಲೆ ಸೈನ್ಯಸಾಗಿಸಿಕೊಂಡು ತುಮುಲಕಕ್ಕೆ ನಡೆ, ವಿಳಂಬಮಾಡಬೇಡ. ನನ್ನನ್ನು ನೀನು ಪುನಃ ಕಾಣುವದು ರಣಮಂಡಲದಲ್ಲಿಯೇ, ಎಂದು ನುಡಿದು ಮನೋರಮೆಯು ತಟ್ಟನೆ ಅಲ್ಲಿಂದ ಹೊರಟು ಹೋದವಳು ಹೋಗಿಯೇ ಬಿಟ್ಟಳು.

ಮನೋರಮೆಯ ಚಾರಿತ್ರವೇ ವಿಲಕ್ಷಣವು. ಆಕೆಯೊಮ್ಮೆ ಸುಶಿಕ್ಷಿತ ನಾಗರೀಕಳಂತೆ ತೋರುವಳು; ಒಮ್ಮೆ ಉನ್ಮಾದಿನಿಯಂತೆ ಕಾಣುವಳು. ಆಕೆಯ ಕಾರ್ಯವೇಗವನ್ನು ತಡೆಯುವದು ಹೇಮಚಂದ್ರನಿಗೂ ಅಸಾಧ್ಯವಾಗಿತ್ತು, ಅವನೇನೋ ಕ್ಷತ್ರಿಯ ಮಹಾವೀರನು. ಅಂಥವನನ್ನು ಒಬ್ಬ ಬ್ರಾಹ್ಮಣನ ತರುಣಿಯು ಅತಿಕ್ರಮಿಸುವದೆಂದರೆ, ವಿಲಕ್ಷಣವಲ್ಲದೆ ಮತ್ತೇನು? ಹೇಮಚಂದ್ರನು ಕಣ್ಮರೆಯಾಗುವವರೆಗೆ ಮನೋರಮೆಯನ್ನು ಆಶ್ಚರ್ಯದಿಂದ ನೋಡುತ್ತ ನಿಂತುಕೊಂಡು, ಕೂಡಲೆ ಮೃಣಾಲಿನಿಯ ಬಳಿಗೆ ಹೋದನು. ಮನೋರಮೆಯನ್ನು ಕಂಡ ಸಂತೋಷವನ್ನು ಮೃಣಾಲಿನಿಯ ಮುಂದೆ ವ್ಯಕ್ತಪಡಿಸಲಿಕ್ಕೆ ಆತನು ತುಂಬಾ ಆತುರನಾಗಿದ್ದನು.

ಹೇಮಚಂದ್ರನು ಅಂತರ್ಗೃಹವನ್ನು ಪ್ರವೇಶಿಸಿದಾಗ ಮೃಣಾಲಿನಿಯು ಸುವರ್ಣ ಮಂಚದ ಮೇಲಿರುವ ಮಖಮಲಿನ ಹಾಸಿಗೆಯ ಸುರಳಿಯ ಮೇಲೆ ತನ್ನ ಮೈಭಾರವನ್ನು ಹಾಕಿ ಏಕದೃಷ್ಟಿಯಿಂದ ಏನೋ ಆಲೋಚಿಸುತ್ತ ನಿಂತುಕೊಂಡಿದ್ದಳು. ಆಕೆಯ ಮುಖಕಮಲವು ಖಿನ್ನವಿಷ್ಟೇ ಅಲ್ಲ, ಮಾತ್ಸರ್ಯಾಗ್ನಿಯಿಂದ ಬಾಡಿದಹಾಗೆಯೂ ತೋರುತ್ತಿತ್ತು. ಹೇಮಚಂದ್ರನು ಅಕಸ್ಮಾತ್ತಾಗಿ ತನ್ನ ಬಳಿಗೆ ಬಂದರೂ ಆಕೆಯು ಬುದ್ಧಿಪೂರ್ವಕವಾಗಿಯೇ ಆತನನ್ನು ಆದರಿಸಲಿಲ್ಲ, ಮಾತಾಡಿಸಲೂ ಇಲ್ಲ. ಇದನ್ನರಿತ ಹೇಮಚಂದ್ರನು ಆಶ್ಚರ್ಯದಿಂದ ನಗುತ್ತ—

ಹೇಮಚಂದ್ರ—ನಿಂತುಕೊಂಡೇ ನಿದ್ದೆಮಾಡುವದೇನು?

ಮೃಣಾಲಿನಿ—(ಅಭಿಮಾನದಿಂದ) ಹೆಂಗಸರ ನಿದ್ದೆಯೇನು? ಕುಳಿತುಕೊಂಡರೂ ಬರುವದು! ನಿಂತುಕೊಂಡರೂ ಬರುವದು. ಹೆಂಗಸರು ಕಣ್ಣುತೆರೆದು ಎಚ್ಚತ್ತಿದ್ದರೂ ಮುಂದಿಗೆ ಅವರು ನಿದ್ದೆಮಾಡುವಹಾಗೆಯೇ ತೋರುತ್ತದೆ.

ಹೇಮಚಂದ್ರ—(ಪ್ರೇಮಪೂರ್ವಕವಾಗಿ ಆಲಿಂಗಿಸಿ) ಯಜ್ಞದೀಕ್ಷೆಯಲ್ಲಿ ಈ ತರದ ಅಭಿಮಾನವೇಕೆ? ನಾಳೆ ಯಜ್ಞಸಮಾಪ್ತಿಯಾಗುವದಲ್ಲವೇ? ನಿಮ್ಮೊಡನೆ ನಾನು ಯಜ್ಞೇಶ್ವರನಿಗೆ ಪೂರ್ಣಾಹುತಿಯನ್ನು ಕೊಡಬೇಕಾಗುವದು.

ಮೃಣಾ—ಅಭಿಮಾನವೇತರದು? ಪೂರ್ಣಾಹುತಿಗೆ ಬರಲು ಒಲ್ಲೆನೆಂದವರಾರು? ಆದರೆ.......

ಹೇಮ—ನನ್ನ ಸಂಗಡ ಮಾತಾಡುವಾಗೂ ಸಂಕೋಚವೇ? "ಆದರೆ....." ಎಂದು ನುಡಿದು ಅಷ್ಟಕ್ಕೆ ನಿಂತುಕೊಂಡದ್ದೇಕೆ? ಏನಿದ್ದದ್ದನ್ನು ಸ್ಪಷ್ಟವಾಗಿ ಹೇಳು.

ಮೃಣಾ—ಆಗಲೇ ಯಾವ ತರುಣಿಯ ಸಂಗಡಲೋ ಮಾತಾಡುತ್ತ ನಿಂತಂತೆ ತೋರಿತು, ಆಕೆಯು ಯಾರು?

ಹೇಮ—(ವಿನೋದದಿಂದ) ನೀನೆಲ್ಲಿ ನೋಡಿದೆ? ಎರಡನೆಯವರ ಸಂಗಡ ಮಾತಾಡುವದೂ ಕಳವಾಯಿತಲ್ಲ; ಕಂಡಾಗೆಲ್ಲ ಕೆಟ್ಟ ಕಲ್ಪನೆಯೇ ಏನು? ಮೃಣಾಲಿನೀ ಈಪರಿ ನನ್ನನ್ನು ಪರಾಧೀನನನ್ನಾಗಿ ಮಾಡುವದು ಸರಿಯೇ?

ಮೃಣಾ—(ಗಾಬರಿಯಾಗಿ) ಮಹಾರಾಜ, ಪರಾಧೀನರಾಗಿ ಮಾಡುವದಲ್ಲ, ನನ್ನ ಹೃದಯವೇ ಕೆಟ್ಟದ್ದು! ನಿಮ್ಮ ದಾಸಿಯಾಗಿರುವ ನಾನು ನಿಮ್ಮನ್ನು ಪರಾಧೀನಳನ್ನಾಗಿ ಮಾಡುವೆನೇ? ಮಾತಾಡುವ ದನಿಕೇಳಿ ಇನ್ನೂ ನಿದ್ದೆಗೆಟ್ಟಿರುವದೇಕೆ, ಎಂದು ನೋಡಲಿಕ್ಕೆ ಬಂದಾಗ ನಾನು ಆಕೆಯನ್ನು ನೋಡಿದೆನು. ಸಂಶಯಪಡುವದು ನನ್ನ ಖೋಡಿ ಚಾಳಿಯು!

ಹೇಮ—ಪ್ರಿಯೇ ಮೃಣಾಲಿನೀ, ನಿನಗಿಂತ ಪ್ರೀಯರಾದವರು ನನಗೆ ಈ ಜಗತ್ತಿನಲ್ಲಿ ಮತ್ತೊಬ್ಬರಿಲ್ಲ, ನೀನು ಕಾಸಿ ಒರೆಗೆ ಹಚ್ಚಿದ ಚೊಕ್ಕಚಿನ್ನವೆಂದು ಗೊತ್ತಾಗಿ ಹೋಗಿರುವದರಿಂದ, ಪತಿಪ್ರಾಣಳಾದ ನಿನ್ನಂತಹ ಗುಣಸುಂದರಿಯನ್ನಲ್ಲದೆ ಇನ್ನಾರನ್ನು ಈ ಜನ್ಮದಲ್ಲಿ ನಾನು ಪ್ರೀತಿಸಲಿ? ನನ್ನ ತಂಗಿಯಾದ ಮನೋರಮೆಯು ಬೈರಾಗಿಣಿಯ ವೇಷದಿಂದ ಅಕಸ್ಮಾತ್ ಬಂದು ಗೂಢ ರಾಜಕಾರಣವನ್ನು ತಿಳಿಸಿ ಹೋದಳು. ನಾನು ಮಾತಾಡಿದ್ದು ಆಕೆಯ ಸಂಗಡಲೇ. ಆಕೆ ಬಂದ ಸುದ್ದಿಯನ್ನು ಹೇಳುವದಕ್ಕಾಗಿ ನಾನು ನಿನ್ನ ಬಳಿಗೆ ಬಂದಿದ್ದೇನೆ.

ಮೃಣಾ—ಅವ್ವಯ್ಯಾ! ಮನೋರಮೆ ಬಂದಿದ್ದಳೇ? ಆ ಪರಿಶುದ್ಧಾಂತಃಕರಣದ ಸತಿ ಶಿಖಾಮಣಿಯ ದರ್ಶನವನ್ನು ನನಗೆ ಯಾಕೆ ಮಾಡಿಸಲಿಲ್ಲ? ಆಕೆಯ ದರ್ಶನದಿಂದ ನನ್ನ ಈ ಸಂಶಯದ ಸ್ವಭಾವವು ಹಾಳಾಗಿ ಹೋಗಬಹುದಾಗಿತ್ತು. ಮಹಾರಾಜ, ಸ್ವಾಮಿನ್, ಕ್ಷಮಿಸಬೇಕು. ನಾನು ಎಂದೂ ತಮ್ಮಲ್ಲಿ ಅವಿಶ್ವಾಸವನ್ನು ಎಣಿಸುವದಿಲ್ಲ. ನನ್ನ ಅಧಿದೈವತದಲ್ಲಿ ನನ್ನ ಅಪನಂಬಿಗೆಯೇ? ನೀವು ನನ್ನ ಪ್ರಾಣವಾಗಿರುವದಲ್ಲದೆ, ಎಲ್ಲ ಬಂಧು—ಬಳಗವೂ ನೀವೇ ಆಗಿರುವದರಿಂದಲೇ ಹೀಗೆ ಒಮ್ಮೊಮ್ಮೆ ಅಭಿಮಾನದಿಂದ ನಾನು ಪರವಶಳಾಗಿರುತ್ತಿರುತ್ತೇನೆ. ತಮ್ಮಲ್ಲದೆ ನಾನು ಯಾರಲ್ಲಿ ಅಭಿಮಾನ ತೋರಿಸಲಿ? ಇರಲಿ, ಸಾಧ್ವಿ—ಮನೋರಮೆಯು ಈಗ ಎಲ್ಲಿರುವಳು?

ಹೇಮ—ಮನೋರಮೆಯು ನಮ್ಮಂಥ ಕ್ಷುದ್ರ ಸಾಂಸಾರಿಕರ ಕೈಗೆ ಸಿಗತಕ್ಕವಳಲ್ಲ. ಆ ಮಹಾತ್ಮಳು ಪತಿಯೊಡನೆ ಸಹಗಮನ ಮಾಡುವದನ್ನು ಬಿಟ್ಟು ಕೇವಲ ಪತಿಯ ಕಟ್ಟಕಡೆಯ ಬಯಕೆಯನ್ನು ಪೂರ್ಣಮಾಡುವದಕ್ಕಾಗಿಯೇ ಬದುಕಿ ಉಳಿದಿರುವದರಿಂದ, ಆ ಕೆಲಸವೊಂದನ್ನು ಬಿಟ್ಟು ಯಾವ ಉಸಾಬರಿಗೂ ಹೋಗುವವಳಲ್ಲ. ಆ ನಿಸ್ಪೃಹಮೂರ್ತಿಗೆ ಜಗತ್ತೇ ತೃಣಪ್ರಾಯವಾಗಿರುವಾಗ ನನ್ನ ನಿನ್ನಂತಹವರ ಹಂಗೇನು?

ಮೃಣಾ—ಸ್ವಾಮಿನ್, ಆಕೆಯ ಪತಿಯ ಕಟ್ಟಕಡೆಯ ಬಯಕೆ ಯಾವದು?

ಹೇಮ—ಮುಸಲ್ಮಾನರ ಚಂಡುಗಳನ್ನು ತುಂಡರಿಸುವದು!

ಮೃಣಾ—(ಭಯದಿಂದ ಮೈ ಜುಮ್ಮೆನ್ನಲು) ಅವ್ವಯ್ಯಾ! ಮಹಾ ಮಹಾ ವೀರರಿಗೂ ಅಶಕ್ಯವಾದ ಕ್ರೂರಕಾರ್ಯವಿದು! ಮನೋರಮೆಯ ಈ ಸಾಹಸಕಾರ್ಯವನ್ನು ನೆನಿಸಿದರೆ, ನಡುಗು ಬರುತ್ತದೆ. ಪಾಪ! ಪತಿಸಮಾಗಮದ ನಿರಾಶೆಯ ನಿಶ್ಚಯದಿಂದ ಆಕೆಯ ದಯಾರ್ದ್ರ ಕೋಮಲ ಹೃದಯವು ದಯಾಶೂನ್ಯವಾಗಿ ಕೆಚ್ಚುಗಟ್ಟಿ ಹೋಗಿರುತ್ತದೆ! ಅಹಹ! ಪತಿಸಮಾಗಮ—ವಿಹೀನರ ಹೃದಯವು ಹೀಗೆಯೇ ಆಗುವದೋ ಏನು!

ಈ ಮೇರೆಗೆ ನುಡಿದ ಕೋಮಲ ಹೃದಯದ ಮೃಣಾಲಿನಿಯು ನಿಜವಾಗಿಯೇ ನಡಗುತ್ತ ಪತಿಯನ್ನು ಆಲಿಂಗಿಸಿದಳು! ಹೇಮಚಂದ್ರನು ತನ್ನ ಭೀರುಸ್ವಭಾವದ ದಯಾರ್ದ್ರಹೃದಯದ ಪತ್ನಿಯನ್ನು ಸಂತಯಿಸುತ್ತಿರಲು, ನಂದನಾವಾಸದ ಬೆಳಗಿನ ನೌಬತ್ತುಗಳು ಬಾರಿಸತೊಡಗಿದವು. ಧೂಪದ ಸುಗಂಧವೂ, ವಿವಿಧ ಪುಷ್ಪಗಳ ಸುಗಂಧವೂ ದಿಗಂತವನ್ನು ವ್ಯಾಪಿಸುತ್ತಿದ್ದವು. ಶಾಸ್ತ್ರವೇತ್ತರಾದ ವೇದಜ್ಞ ಬ್ರಾಹ್ಮಣರ ವೇದಘೋಷವು ಕಿವಿಗೆ ಬೀಳತೊಡಗಿತು. ಬ್ರಾಹ್ಮಣರು, ಪರಿಚಾರಕರು, ಪ್ರೇಕ್ಷಕರು ಇದರ ಸಂದಣಿ ಸಂಭಾಷಣಗಳಿಂದ ಅರಮನೆಯೂ, ಯಜ್ಞಶಾಲೆಯೂ ತುಂಬಿ ದಿಮಿಗುಟ್ಟತೊಡಗಿದವು. ಅಷ್ಟರಲ್ಲಿ ದಾಸಿಯು ಬಂದು—ಮಹಾರಾಜರು ರಾಣಿಯವರೊಡನೆ ಯಜ್ಞಶಾಲೆಗೆ ದಯಮಾಡಿಸಬೇಕೆಂದು ಬೇಡಿಕೊಳ್ಳಲಿಕ್ಕೆ ಪುರೋಹಿತರು ನನ್ನನ್ನು ಆಜ್ಞಾಪಿಸಿರುವರು, ಎಂದು ಹೇಳಿದಳು.

ಪ್ರಾಣಪ್ರತಿಷ್ಠಾಪನೆ

ತುಮುಲಕವೆಂಬದು ಮೇದಿನೀಪುರ ಜಿಲ್ಲೆಯೊಳಗಿನದೊಂದು ಹಳ್ಳಿಯು. ಕಲಕತ್ತೆಯಿಂದ ನೈಋತ್ಯಕ್ಕೆ ಸುಮಾರು ಹದಿನೆಂಟು ಹರದಾರಿಯ ಮೇಲಿರುವದು. ಇದರ ಪೂರ್ವದ ಹೆಸರು ತಾಮ್ರಲಿಪ್ತ. ಆಗ ಅದು ಅತ್ಯಂತ ಸಮೃದ್ಧವಾದ ಪಟ್ಟಣವಾಗಿತ್ತು. ಆಗಿನ ಸಮೃದ್ಧಿಯು ಈಗ ಇಲ್ಲದ್ದರಿಂದ ತುಮುಲಕವೆಂಬ ಹೆಸರಿನಿಂದ ಅದು ಹಳ್ಳಿಯಲ್ಲಿ ಎಣಿಸಲ್ಪಡುತ್ತಿತ್ತು. ತುಮುಲಕದ ಸಮೀಪದಲ್ಲಿರುವ ಮಾವಿನ ಬನವು ಬಹು ವಿಸ್ತಾರವಾದದ್ದು. ಅದರ ನೆರಳು ಬಹುದಟ್ಟ. ಒಂದುದಿನ ಮಧ್ಯರಾತ್ರಿಯಲ್ಲಿ ಸಹಸ್ರಾವಧಿ ಸೈನ್ಯವು ಸದ್ದಿಲ್ಲದೆ ಆ ಬನವನ್ನು ಅಕಸ್ಮಾತ್ತಾಗಿ ಪ್ರವೇಶಿಸತೊಗಿತು. ಆ ಬನಕ್ಕೆ ಸಮೀಪವಾಗಿರುವ ಮುಸಲ್ಮಾನರ ಛಾವಣಿಗೆ ಈ ಸೈನ್ಯದ ಸುಳವು ಕೂಡ ಗೊತ್ತಾಗಲಿಲ್ಲ. ಈ ಪ್ರಸಂಗದಲ್ಲಿ ಮನೋರಮೆಯ ನೆನಪು ವಾಚಕರಿಗೆ ಆಗಿ ಆ ಸೈನ್ಯವು ಹೇಮಚಂದ್ರನದೆಂಬ ಮಾತು ಅವರ ಲಕ್ಷದಲ್ಲಿ ಬಂದಿರಬಹುದು. ಮನೋರಮೆಯ ಸೂಚನೆಯಂತೆಯೇ ಹೇಮಚಂದ್ರನು ಒಂದು ದಿನವೂ ವಿಳಂಬಮಾಡದೆ ಸೈನ್ಯದೊಡನೆ ಬಂದಿದ್ದನು. ಹೇಮಚಂದ್ರನು ಯಜ್ಞಸಮಾರಂಭದಲ್ಲಿ ತೊಡಗಿರುವದು ಮುಸಲ್ಮಾನರಿಗೆ ಗೊತ್ತಿದ್ದದ್ದರಿಂದ, ಆತನು ಯುದ್ಧದ ವಿಷಯದಲ್ಲಿ ಮೈಮರೆತಿರಬಹುದೆಂದು ತಿಳಿದು ತಾವೇ ಅಕಸ್ಮಾತ್ ಅವನನ್ನು ಮುತ್ತಬೇಕೆಂದು ಮುಸಲ್ಮಾನರು ಮಾಡಿದ್ದರು, ಇನ್ನು ಎರಡುದಿನ ತಡವಾಗಿದ್ದರೆ, ಮುಸಲ್ಮಾನರೇ ಮಾಗಧೀನಗರವನ್ನು ಮುತ್ತುತ್ತಿದ್ದರು. ಮುಸಲ್ಮಾನರು ಇಲ್ಲಿಯವರೆಗೆ ಒಂದು ಕಡೆಯಲ್ಲಿ ಸ್ಥಳ ಊರಿ ನಿಂತುಕೊಳ್ಳುತ್ತಿರಲಿಲ್ಲ. ಯಾವಾಗಲೂ ಸುಲಿಗೆ ಗಾರರಂತೆ ದೇಶವನ್ನು ಸುಲಿಯುತ್ತ ಸಂಚರಿಸುತ್ತಿದ್ದರು. ಅವರಿಗೆ ಸುಲಿಗೆಯಲ್ಲಿಯೇ ಹೆಚ್ಚು ಲಾಭವು ತೋರುತ್ತಿತ್ತು. ಹೇಮಚಂದ್ರನು ಕಾಮರೂಪದೇಶದಿಂದ ಬಖತ್ಯಾರ ಖಿಲಜಿಯನ್ನು ಸೋಲಿಸಿ ಓಡಿಸಿದಾಗ, ಹಿಂದೆ ಹೇಳಿದಂತೆ ಆ ಯವನ ನಾಯಕನು ಹಾದಿಯಲ್ಲಿ ಮರಣ ಹೊಂದಲು, ಆತನ ಸರದಾರರೂ, ಸೇನಾಪತಿಗಳೂ ತಂಡತಂಡವಾಗಿ ಬಂಗಾಲದಲ್ಲಿ ಸಂಚರಿಸುತ್ತ ಕೊಲೆ—ಸುಲಿಗೆಗಳಿಂದ ಪ್ರಜೆಗಳನ್ನು ತಲ್ಲಣಗೊಳಿಸುತ್ತ ಅಲ್ಲಲ್ಲಿ ಬೀಡುಬಿಟ್ಟು ಕೊಂಡು ಇರುತ್ತಿದ್ದರು. ರುಸ್ತುಮಲಿಯು ತನ್ನ ಜನರೊಡನೆ ಇತ್ತಕಡೆಯಲ್ಲಿ ಹಾವಳಿ ನಡೆಸಿದ್ದರೆ, ಮಹಮ್ಮದಲಿಯು ಮತ್ತೊಂದು ಕಡೆಯಲ್ಲಿ ತನ್ನ ಜನರೊಂದಿಗೆ ಹಾವಳಿಯನ್ನು ನಡಿಸುತ್ತಿದ್ದನು. ಜನಸಮ್ಮರ್ದವು ಹೆಚ್ಚು ಇದ್ದು, ಹೆಚ್ಚು ಕೊಲೆಸುಲಿಗೆಗಳನ್ನು ಮಾಡಿ ಹೆಚ್ಚು ಧನಸಂಗ್ರಹ ಮಾಡಿದ ಒಗರಿನಿಂದ ಕ್ರೂರಾಗ್ರೇಸರರಾದವರೇ ತಂಡಗಳ ಮುಖ್ಯರೆನಿಸುತ್ತಿದ್ದರು. ಈ ದೃಷ್ಟಿಯಿಂದ ನೋಡಿದರೆ, ಈಗ ಮಹಮ್ಮದಲಿಯೇ ಬಂಗಾಲದ ಎಲ್ಲ ಮುಸಲ್ಮಾನ ತಂಡಗಳಲ್ಲಿ ಹೆಚ್ಚಿನವನಾಗಿದ್ದನು. ಅವನ ಬಳಿಯಲ್ಲಿ ಸೈನ್ಯವೂ ದೊಡ್ಡದಿದ್ದಿತು. ರುಸ್ತುಮಲಿಯು ಹೇಮಚಂದ್ರನ ರಾಜ್ಯವನ್ನು ಮಣ್ಣುಗೂಡಿಸುವದಕ್ಕಾಗಿ ಮಹಮ್ಮದಲಿಯ ಸಹಾಯವನ್ನು ಕೇಳಿಕೊಂಡಿದ್ದನು. ಆತನಿಂದ ಸಹಾಯವು ಒದಗಿದ ಕೂಡಲೆ ರುಸ್ತುಮಲಿಯು ಹೇಮವತೀ ನಗರವನ್ನು ಮುತ್ತತಕ್ಕವನು; ಆದರೆ ಮನೋರಮೆಯು ಯಾವ ಮಾಯದಿಂದಲೋ ಇದನ್ನು

ತಿಳಿದು ಹೇಮಚಂದ್ರನಿಗೆ ಮುಂಚೆಯೇ ತಿಳಿಸಿಬಿಟ್ಟಿದ್ದರಿಂದ ಮುಸಲ್ಮಾನರ ಶಕ್ತಿಸಂವರ್ಧನಕ್ಕೆ ಆತಂಕ ಉಂಟಾಯಿತು. ಮಹಮ್ಮದಲಿಯ ಸಹಾಯವು ಒದಗಲಿಕ್ಕೆ ಇನ್ನು ಎರಡು ದಿನಗಳಾದರೂ ಬೇಕೆಂದು ತಿಳಿದು ರುಸ್ತುಮಲಿಯು ಆತುರದಿಂದ ಆ ಸಹಾಯದ ಮಾರ್ಗ ಪ್ರತೀಕ್ಷೆ ಮಾಡುತ್ತಿದ್ದನು.

ಇತ್ತ ಹೇಮಚಂದ್ರನು ಸದ್ದಿಲ್ಲದೆ ಸೈನ್ಯಸಹಿತನಾಗಿ ಮಾವಿನ ಬನದಲ್ಲಿ ಬಂದಿಳಿದ ಬಳಿಕ, ಆತನು ಮೊದಲೇ ತನ್ನ ಮಂತ್ರಿಗಳೊಡನೆ ಆಲೋಚಿಸಿದಂತೆ ತನ್ನ ಸೈನ್ಯದಲ್ಲಿ ನಾಲ್ಕು ಭಾಗಗಳನ್ನು ಮಾಡಿ ಮುಸಲ್ಮಾನ ಛಾವಣಿಯ ನಾಲ್ಕುನಿಟ್ಟಿನಲ್ಲಿ ಒಬ್ಬೊಬ್ಬರಂತೆ ಇರಹೇಳಿ. ಸಂಕೇತವರಿತು ನಾಲ್ಕು ದಿಕ್ಕಿನಿಂದ ಅಕಸ್ಮಾತ್ ಛಾವಣಿಯ ಮೇಲೆ ಬೀಳಬೇಕೆಂದು ವ್ಯವಸ್ಥೆ ಮಾಡಿದನು. ಹೇಮಚಂದ್ರನ ಮುಖ್ಯ ಸೈನ್ಯವು ಆತನ ಆಧಿಪತ್ಯದಿಂದ ಮೊದಲು ಯುದ್ಧವನ್ನು ಆರಂಭಿಸಲಿಕ್ಕೆ ಸಜ್ಜಾಯಿತು. ಇಷ್ಟೆಲ್ಲ ಆಗುವದರೊಳಗಾಗಿ ಅರುಣೋದಯಕಾಲವು ಒದಗಿತು. ಅಪ್ಪಣೆಯಾದ ಕೂಡಲೆ ಹೇಮಚಂದ್ರನ ಸೈನಿಕರ ತೋಫುಗಳು ಹಾರಹತ್ತಿದವು. ಆಗ ಮುಸಲ್ಮಾನರ ಛಾವಣಿಯಲ್ಲಾದ ಅವ್ಯವಸ್ಥೆಯನ್ನು ಕೇಳುವದೇನು? ಕೊಲೆ—ಸುಲಿಗೆಗಳಿಂದ ಮತ್ತರಾಗಿ ರಾತ್ರಿ ಸೆರೆಕುಡಿದು ಮೈ ಮರೆತು ಮಲಗಿದ್ದ ಮುಸಲ್ಮಾನರ ಅಮಲಿಳಿದು ನಿದ್ರೆಯು ನಿಚ್ಚಳವಾಗಿ ಹರಿಯಿತು. ಅಕಸ್ಮಿಕವಾದ ತೋಫುಗಳ ಹೊಡತದಿಂದ ಸೈನಿಕರು ಅರಿವಿಲ್ಲದೆ ಅತ್ತಿತ್ತ ಓಡಾಡಹತ್ತಿದರು. ''ಯಾ ಅಲ್ಲಾ! ಯಾ ತೋಬಾ'' ಎಂದು ಯಾರು ಕುದುರೆಗಳಿಗೆ ಜೀನು ಹಾಕುತ್ತಿದ್ದರು; ಯಾರು ಶಸ್ತ್ರಾಸ್ತ್ರಗಳನ್ನು ಹುಡುಕಹತ್ತಿದರು; ಯಾರು ಚಿಲಕತ್ತುಗಳನ್ನು ಏರಿಸಹತ್ತಿದರು. ಹೀಗೆ ಮುಂದುಗಾಣದೆ ಸೈನಿಕರು ಎಡತಾಕುತ್ತಿರುವಾಗ ರುಸ್ತುಮಲಿಯು ಇದೇನೆಂದು ಗಾಬರಿಯಾಗಿ ಶಾಂತಶೀಲನನ್ನು ಕರೆಸಿದನು. ಕಾಫರರ ಈ ದಾಳಿಯು ಅಕಸ್ಮಾತ್ತಾಗಿ ಆದ ಸೈತಾನನ ದಾಳಿಯಂತೆ ಆತನಿಗೆ ತೋರಿತು. ಇವರೇನು ಭೂಮಿಯ ಬಗೆದು ಎದ್ದರೋ, ಆಕಾಶದಿಂದ ಇಳಿದುಬಂದರೋ, ದಿಕ್ಕುಗಳಿಂದ ಹೊರಟು ಬಂದರೋ ಎಂದು ಆಶ್ಚರ್ಯದಿಂದ ಅವನು ಆಲೋಚಿಸತೊಡಗಿದನು. ಆಗ ಆಲೋಚನೆ ಮಾಡುತ್ತ ನಿಂತುಕೊಳ್ಳುವ ಹಾಗೂ ಇದ್ದಿಲ್ಲ. ಶಾಂತಶೀಲನು ಬಂದಕೂಡಲೆ ಆತನ ಆಲೋಚನೆಯಂತೆ ಶೀಘ್ರವಾಗಿ ತಮ್ಮ ಸೈನ್ಯವನ್ನು ಯುದ್ಧಕ್ಕೆ ಅಣಿಮಾಡಿದನು. ಮುಸಲ್ಮಾನರು ಜಾತ್ಯಾ ಶೂರರು; ಮೇಲೆ ಪರದೇಶದಲ್ಲಿ ಹೊಸಬರಾಗಿ ಸುಲಿಯ ಬಂದವರು; ಆದ್ದರಿಂದ ಅವರ ಸೈನ್ಯದ ಸಿದ್ಧತೆಯು ಕ್ಷಣದಲ್ಲಿ ಆಗುತ್ತಿತ್ತು; ಅಥವಾ ಪ್ರಸಂಗ ಬಂದಕೂಡಲೆ ಯುದ್ಧಕ್ಕೆ ಸಿದ್ಧರಾಗುವ ಚಂದದಿಂದಲೇ ಅವರು ಯಾವಾಗಲೂ ವ್ಯವಹರಿಸುತ್ತಿದ್ದರು; ಆದ್ದರಿಂದ ಹಿಂದೂ ಜನರ ತೋಫುಗಳಿಗೆ ಪ್ರತ್ಯುತ್ತರವನ್ನು ಅವರು ಸ್ವಲ್ಪಕಾಲದಲ್ಲಿಯೇ ಕೊಡಹತ್ತಿದರು; ಆದರೆ ಇಷ್ಟರಲ್ಲಿ ಮುಸಲ್ಮಾನರ ದಂಡಿನಲ್ಲಿ ಜನಸಂಹಾರವು ಬಹುಮಟ್ಟಿಗೆ ಆಗಿ ಅವ್ಯವಸ್ಥೆಯ ಮೂಲಕ ದಂಡಾಳುಗಳು ದಿಗಿಲು ಬಿದ್ದರು. ತಾವು ಯುದ್ಧದಲ್ಲಿ ಸೋತರೆ ಒಬ್ಬರೂ ಹಿಂದೂಜನರ ಕೈಯೊಳಗಿಂದ ಪಾರಾಗಲಾರೆವೆಂಬ ಮಾತು ಅವರಿಗೆ ಗೊತ್ತಿದ್ದದ್ದರಿಂದ, ಯುದ್ಧದಲ್ಲಿ ಅವರು ಎಂದೂ ಹಿಂದೆಗೆಯುತ್ತಿದ್ದಿಲ್ಲ. ಪ್ರತಿ ಒಬ್ಬ ದಂಡಾಳುವು ಜೀವದ ಹಂಗುದೊರೆದು ಕಾದುತ್ತಿದ್ದನು; ಅಂಥ ರಣಧೀರ ಮುಸಲ್ಮಾನರು ಕೂಡ ಹಿಂದೂ ಜನರ ಈಗಿನ ಆಕಸ್ಮಿಕ ಮುತ್ತಿಗೆಯಿಂದ ಸ್ವಲ್ಪ ಬೆದರಿದರು.

ಉಭಯ ದಂಡಾಳುಗಳೂ ಯುದ್ಧವನ್ನು ಮಾಡುತ್ತಿರುವಾಗ ಮೊದಲ ರಭಸಕ್ಕೆ ಮುಸಲ್ಮಾನರು ಹಿಂದಕ್ಕೆ ಸರಿದಂತೆ ತೋರಿತು; ಆ ಮಾನದಿಂದ ಹಿಂದೂ ಸೈನಿಕರು ಮುಗಿಬಿದ್ದು ಮುಸಲ್ಮಾನ ಸೈನ್ಯವನ್ನು ನುಗ್ಗಿದರು; ಇವರ ರಭಸವು ಹೆಚ್ಚಾದಂತೆ ಮುಸಲ್ಮಾನರು ಹಿಂದಕ್ಕೆ ಸರಿಯಹತ್ತಿದರು; ಆದರೆ ಮುಸಲ್ಮಾನರ ಈ ಹಿಂದಕ್ಕೆ ಸರಿಯೋಣವು ಸೋಲಿನ ಲಕ್ಷಣ ವಾಗಿರದೆ, ಅವರು ಹಿಂದೂ ಸೈನಿಕರನ್ನು ತಮ್ಮ ಮೈಮೇಲೆ ಬರಮಾಡಿಕೊಳ್ಳಬೇಕೆಂಬ ಹಂಚಿಕೆಯಾಗಿತ್ತು. ಹಿಂದೂ ಸೈನಿಕರು ಅಳವಿನಲ್ಲಿ ಬಂದಕೂಡಲೆ ಮುಸಲ್ಮಾನ ಸೈನಿಕರು ಒಮ್ಮೆಲೆ ಮೇಲ್ವಾಯ್ದರು. ಅವರ ತೋಫುಗಳು ಇಮ್ಮಡಿ ರಭಸದಿಂದ ಹಾರಹತ್ತಿದವು; ಮುಸಲ್ಮಾನ ದಂಡಾಳುಗಳು ''ದೀನದೀನ'' ಎಂದು ಅರ್ಭಟಿಸುತ್ತ ಹಿಂದೂ ಜನರ ಮೇಲೆ ಬಿದ್ದರು; ಆದರೆ ವೀರಾಗ್ರೇಸರನಾದ ಹೇಮಚಂದ್ರನಿಂದ ಶಿಕ್ಷಿತರಾದ ಹಿಂದೂ ದಂಡಾಳುಗಳು ಹಿಂದಕ್ಕೆ ಸರಿಯಲಿಲ್ಲ. ಉಭಯರೂ ರೊಚ್ಚಿಗೆದ್ದು ಸಮದಂಡಿಯಿಂದ ಕಾದತೊಡಗಿದರು. ಬರಬರುತ್ತಾ ಕೈಗೆ ಕೈಹತ್ತಿ ಒಬ್ಬರ ಗುರುತು ಒಬ್ಬರಿಗೆ ಹತ್ತದಾಯಿತು; ತನ್ನವರಾರು, ಶತ್ರುದಳದವರಾರು ಎಂಬದು ತಿಳಿಯದಾಯಿತು. ಜನ ಸಂಹಾರಕ್ಕೆ ಮಿತಿಯಿಲ್ಲದಾಯಿತು. ದಂಡಾಳುಗಳು ಪಟಪಟ ಸಾಯಹತ್ತಿದರು. ಹೀಗೆ ಉಭಯ ಸೈನಿಕರೂ ರಣಮದದಿಂದ ಮತ್ತರಾಗಿ ಕಾದುತ್ತಿರುವಾಗ ನೋಡುವವರಿಗೆ ರಣವ್ಯಾಪಾರವು ಅತ್ಯಂತ ಭೀಕರವಾಗಿ ತೋರಹತ್ತಿತು. ಇತ್ತ ಹೇಮಚಂದ್ರನು, ಅತ್ತ ರುಸ್ತುಮಲಿಯು ತಮ್ಮ ಅತುಲ ಪರಾಕ್ರಮದಿಂದ ತಮ್ಮ ತಮ್ಮ ಸೈನಿಕರನ್ನು ಪ್ರೋತ್ಸಾಹ ಗೊಳಿಸಹತ್ತಿದರು. ತಕ್ಷಣದಲ್ಲಿ ರಣಭೂಮಿಯು ರಕ್ತಮಯವಾಯಿತು. ವೀರರ ಕೋಲಾಹಲ ಧ್ವನಿಯಿಂದಲೂ, ಗಾಯಪಟ್ಟವರ ಕರ್ಕಶ ಕೂಗುಗಳಿಂದಲೂ, ಕುದುರೆಗಳ ಹೇಷಾರವ ದಿಂದಲೂ, ತೋಫುಗಳ ಅಬ್ಬರದಿಂದಲೂ, ಆ ರಣವ್ಯಾಪಾರವು ಕರ್ಣಕಠೋರವಾಯಿತು. ಹರಹರ! ಯುದ್ಧವ್ಯಾಪಾರವು ಕೇಳಲಿಕ್ಕೆ ಇಲ್ಲವೆ ಬರೆಯಲಿಕ್ಕೆ ಅಥವಾ ಓದಲಿಕ್ಕೆ ಚಂದವಲ್ಲದೆ, ನೋಡಲಿಕ್ಕೆ ಅಸಹ್ಯವಾದದ್ದೆಂದು ಅಂದಿನ ಘೋರಯುದ್ಧವನ್ನು ನೋಡಿ ದೊಡ್ಡ ದೊಡ್ಡ ವೀರರೂ ಅಂದುಕೊಳ್ಳುತ್ತಿದ್ದರು!

ಹೀಗೆ ಉಭಯರೂ ಸಮಬಲರಾಗಿ ಕಾದಾಡುತ್ತಿರುವಾಗ ಯಾರು ಜಯಶಾಲಿಗಳಾ ದಾರೆಂಬದನ್ನು ತೂಗಿ ಹೇಳಲಾರದಾಯಿತು. ಅಷ್ಟರಲ್ಲಿ ಒಮ್ಮಿಂದೊಮ್ಮೆ ಮುಸಲ್ಮಾನರ ಕೈ ಮೇಲಾಯಿತು. ಅವರ ವೀರಾವೇಶದ ರಣಸಂಭ್ರಮಕ್ಕೆ ಹಿಂದೂ ಜನರು ಈಡಾಗದೆ ಹಿಂದಕ್ಕೆ ಸರಿಯತೊಡಗಿದರು. ಮುಸಲ್ಮಾನರ ಉತ್ಸಾಹವು ಹೆಚ್ಚಿತು. ಅವರು ಕಾಫೀರರನ್ನು ಈಗ ತುಂಡರಿಸುವೆವೆಂದು ಮುಂದಕ್ಕೆ ಸರಿದರು. ರುಸ್ತುಮಲಿಯು ತಮ್ಮ ಸೈನಿಕರನ್ನು ಹುರುಪು ಗೊಳಿಸುತ್ತಲೇ ಇದ್ದನು; ಆದರೂ ವೀರಾಗ್ರಣಿಯಾದ ಹೇಮಚಂದ್ರನು ತನ್ನ ಸ್ಥಳವನ್ನು ಬಿಟ್ಟು ಕದಲದೆ, ಮುಸಲ್ಮಾನರ ಸೈನಿಕರ ಸಂಹಾರವನ್ನು ಮಿತಿಮೀರಿ ಮಾಡಹತ್ತಿದನು. ಅಷ್ಟರಲ್ಲಿ ಇನ್ನೊಬ್ಬ ತರುಣ ರಾವುತನು ಮುಸಲ್ಮಾನ ಸೈನಿಕರ ಸಂಹಾರವನ್ನು ಮಿತಿಮೀರಿ ಮಾಡಹತ್ತಿದನು. ಈ ಆಕಸ್ಮಿಕ ಸಹಾಯದಿಂದ ಹೇಮಚಂದ್ರನ ವೀರಾವೇಶವು ಹೆಚ್ಚಿ, ಶತ್ರುಸಂಹಾರದಲ್ಲಿ ಅವರಿಬ್ಬರು ವೀರರ ಮೇಲಾಟವು ಉತ್ಪನ್ನವಾದಂತಾಯಿತು. ಒಮ್ಮೆ ಹೇಮಚಂದ್ರನು

ಮುಂದಾಗುವನು. ಒಮ್ಮೆ ಆ ತರುಣ ಸಾವರನು ಮುಂದಾಗುವನು, ಆ ತರುಣನ ಪರಾಕ್ರಮವು ಹೇಮಚಂದ್ರನನ್ನು ಬೆರಗುಮಾಡಿತು. ಹೇಮಚಂದ್ರನು ಆಗಾಗ ಆ ತರುಣನನ್ನು ಶ್ಲಾಘಿಸುತ್ತ ಆತನ ಉತ್ಸಾಹವನ್ನು ಹೆಚ್ಚಿಸುತ್ತಿದ್ದನು; ಆದರೆ ಮುಸಲ್ಮಾನರ ಕಸುವು ಕುಗ್ಗಲೊಲ್ಲದು. ಆಗ ಹೇಮಚಂದ್ರನು ಸಾಂಕೇತಿಕ ತೋಫನ್ನು ಹಾರಿಸಲು, ಉತ್ತರದಿಕ್ಕಿನಿಂದ ಹಿಂದೂ ಸೈನಿಕರು ಮುಸಲ್ಮಾನರ ಮೇಲೆ ಬಿದ್ದರು. ಆಗ ಮುಸಲ್ಮಾನರು ಎರಡು ನಿಟ್ಟಿನವರೊಡನೆ ಕಾದಬೇಕಾಯಿತು. ಹೀಗೆ ಕೆಲಕಾಲ ಕಾದುತ್ತಿರಲು, ಪೂರ್ವ—ಪಶ್ಚಿಮ ದಿಕ್ಕುಗಳಿಂದಲೂ ಹಿಂದೂ ಸೈನಿಕರು ಮುಸಲ್ಮಾನರ ಮೇಲೆ ಎರಗಿದರು. ನಾಲ್ಕೂ ಕಡೆಯಿಂದಲೂ ಹಿಂದುಗಳು ಮುಸಲ್ಮಾನರನ್ನು ಮುತ್ತಿದ ಹಾಗಾಯಿತು. ದಣಿಯದೆಯಿದ್ದ ಮೂರೂ ನಿಟ್ಟಿನ ದಂಡಾಳುಗಳೊಡನೆ ಕಾದಬೇಕಾದುದರಿಂದ ಯವನ ಸೈನ್ಯದ ಸಂಹಾರದ ಮಿತಿಯು ಮೀರಿ ಅವರ ಕಸುವು ಕುಗ್ಗತೊಡಗಿತು. ಅವರಿಗೆ ಹೊರಗಿನಿಂದ ಸಹಾಯವು ದೊರೆಯುವ ಆಶೆಯು ಇದ್ದಿಲ್ಲ. ಅಷ್ಟರಲ್ಲಿ ಹೇಮಚಂದ್ರನ ನೆರೆಯ ತರುಣ ವೀರನು ಶೌರ್ಯದಿಂದ ಮುಸಲ್ಮಾನರ ಸೈನ್ಯ ವ್ಯೂಹವನ್ನು ಭೇದಿಸಿ ಒಳಹೊಕ್ಕನು. ಹೇಮಚಂದ್ರನು ಅವನನ್ನು ಶ್ಲಾಘಿಸುತ್ತ ಅವನನ್ನು ಹಿಂಬಾಲಿಸಿದನು. ಅವರಿಬ್ಬರು ಸಾಹಸ—ಪರಾಕ್ರಮಗಳನ್ನು ನೋಡಿ ವೀರಾವೇಶಗೊಂಡು ಅರಸನ ಅಂಗರಕ್ಷಕರೂ, ಉಳಿದ ದಂಡಾಳುಗಳೂ ಮುಸಲ್ಮಾನರ ಸೈನ್ಯವನ್ನು ಹೊಕ್ಕರು. ಆಗಾಗ ಜನಸಂಹಾರವನ್ನು ವರ್ಣಿಸಲಾಸಲ್ಲ. ಬರಬರುತ್ತಾ ಹಿಂದೂ ಜನರ ಕೈ ಮೇಲಾಯಿತು. ಮುಸಲ್ಮಾನರು ಹಿಂದಕ್ಕೆ ಸರಿಯಹತ್ತಿದರು. ನಾಲ್ಕೂ ಕಡೆಯಿಂದಾಗುವ ಹಿಂದೂ ಜನರ ದಾಳಿಗಳನ್ನು ತಡೆಯಲಾರದೆ ಮುಸಲ್ಮಾನ ದಂಡಾಳುಗಳು ಸಮರ ಭೂಮಿಯಿಂದ ಕಾಲು ತೆಗೆಯಹತ್ತಿದರು. ಹಿಂದೂ ದಂಡಾಳುಗಳು ಅವರನ್ನು ಬೆನ್ನಟ್ಟಿದರು. ಆಗಿನ ಆ ಅಪರಿಚಿತ ತರುಣ ವೀರನ ಪರಾಕ್ರಮವನ್ನು ನೋಡಿ ಹೇಮಚಂದ್ರನು ಸಂತೋಷಪಟ್ಟನು— ''ಭಾಪುರೇ ರಣಪಂಡಿತಾ! ಭಾಪು ಭಾಪು!! ನೀನು ಅದ್ವಿತೀಯ ವೀರನು'' ಎಂದು ಶ್ಲಾಘಿಸಿದನು. ಮುಸಲ್ಮಾನರು ಸಂಪೂರ್ಣವಾಗಿ ಸೋತು ಓಡಹತ್ತಿದರು; ಆದರೆ ಓಡಿ ಹೋಗುವಾಗ ಅವರಲ್ಲಿ ಒಬ್ಬನ ಬರ್ಚಿಯ ಇರಿತದಿಂದ ಮೈಮರೆತಿದ್ದ ಹೇಮಚಂದ್ರನಿಗೆ ಬಲವಾದ ಗಾಯವಾಯಿತು. ಆತನು ಇನ್ನು ಮೂರ್ಛಿತನಾಗಿ ಕುದುರೆಯ ಮೇಲಿಂದ ಬೀಳತಕ್ಕವನು, ಅಷ್ಟರಲ್ಲಿ ಅ ಪರಿಚಿತ ತರುಣನು ಕುದುರೆಯಿಂದ ಹಾರಿ ಆತನನನ್ನು ಬೀಳಗೊಡದೆ ತಾನೂ ಆತನ ಕುದುರೆಯನ್ನೇರಿ, ಅವನೊಡನೆ ಸಮರ ಭೂಮಿಯಿಂದ ಜಾರಿ ಒಂದು ವಿಶಾಲವೃಕ್ಷದ ಬುಡವನ್ನು ಸೇರಿದನು. ಅಷ್ಟರಲ್ಲಿ ಒಬ್ಬ ದಂಡಾಳು ಆ ತರುಣ ಸರದಾರನ ತೆರವಾದ ಕುದುರೆಯನ್ನು ಹತ್ತಿಕೊಂಡು ಅದೇ ಮರದ ಬಡಕ್ಕೆ ಬಂದನು.

ಈ ಅಪರಿಚಿತ ಮನುಷ್ಯನನ್ನು ನೋಡಿ ಆ ತರುಣ ರಾವುತನು ಕೂಡಲೆ ತನ್ನ ಖಡ್ಗವನ್ನು ಹಿರಿದು ಅವನ ಮೇಲೆ ದುಮುಕಲು, ದಂಡಾಳು ಸಾಷ್ಟಾಂಗವೆರಗಿ—''ವೀರನೇ, ನಾನು ಹೊರಗಿನವನಲ್ಲ, ದೊರೆಗಳ ದಂಡಾಳುವೇ ಆಗಿರುವೆನು'' ಎಂದು ಹೇಳಿ, ಅಂದಿನ ಸೈನ್ಯದ ಸಾಂಕೇತಿಕ ಶಬ್ದವನ್ನು ಉಚ್ಚರಿಸಿದನು. ಆಗ ಆ ತರುಣ ರಾವುತನು ಖಡ್ಗವನ್ನು ಒರೆಗಾಣಿಸಿ,

ಆ ದಂಡಾಳಿನ ಸಹಾಯದಿಂದ ಹೇಮಚಂದ್ರನ ಗಾಯವನ್ನು ತೊಳೆದು, ಗಾಯದಲ್ಲಿ ಔಷಧವನ್ನು ತುಂಬಿದನು. ಇತ್ತ ಮುಸಲ್ಮಾನರು ಹಿಂದೂ ಜನರಿಂದ ಪೂರ್ಣವಾಗಿ ಸೋತು ಸಮರ ಭೂಮಿಯಿಂದ ಓಡಿದರು. ಹಿಂದೂ ಜನರು ಪೂರ್ಣ ಜಯಶಾಲಿಗಳಾಗಿ ಪಾಳಯಕ್ಕೆ ತಿರುಗಿದರು; ಕೆಲವರು ಮುಸಲ್ಮಾನರನ್ನು ಬೆನ್ನಟ್ಟಿ ಹೋದರು. ಮುಸಲ್ಮಾನರು ಬಂಗಾಲವನ್ನು ಪ್ರವೇಶಿಸಿದಾಗಿನಿಂದ ಇಂಥ ಪರಾಜಯವನ್ನು ಎಂದೂ ಹೊಂದಿರಲಿಲ್ಲ. ಈ ಭಯಂಕರ ಯುದ್ಧವು ಮಧ್ಯರಾತ್ರಿಗೆ ಮುಗಿಯಿತು. ಇತ್ತ ಆ ತರುಣನು ಹೇಮಚಂದ್ರನನ್ನು ಬಗೆಬಗೆಯಾಗಿ ಉಪಚರಿಸುತ್ತಿರಲು, ಬೆಳಗು ಮುಂಜಾವಿನಲ್ಲಿ ಹೇಮಚಂದ್ರನು ಕಣ್ದೆರೆದು ಸುತ್ತುಮುತ್ತು ನೋಡತೊಡಗಿದನು. ಇನ್ನೂ ಆತನಿಗೆ ಪೂರಾ ಎಚ್ಚರವಾಗಿದ್ದಿಲ್ಲ. ಯುದ್ಧದ ಶ್ರಮದಿಂದಲೂ, ಗಾಯದಿಂದ ರಕ್ತವು ಬಹಳ ಹೋದದ್ದರಿಂದಲೂ ಆತನು ಆಯಾಸದಿಂದ ಮತ್ತೆ ಕಣ್ಣುಗಳನ್ನು ಮುಚ್ಚಿದನು. ಆ ತರುಣನು ಮತ್ತೆ ಉಪಚರಿಸಲು, ಕೆಲಹೊತ್ತಿನ ಮೇಲೆ ಹೇಮಚಂದ್ರನು ಮತ್ತೆ ಎಚ್ಚತ್ತು ಬೆಳದಿಂಗಳಲ್ಲಿ ನಾಲ್ಕೂ ಕಡೆಗೆ ನೋಡಿ—

ಹೇಮಚಂದ್ರ—ಈಗ ನಾನು ಎಲ್ಲಿ ಇದ್ದೇನೆ?

ತರುಣ—ನೀವು ಸಮುದ್ರತೀರದ ಆಮ್ರವನದಲ್ಲಿರುವಿರಿ.

ಹೇಮ—ನಾನು ಗಾಯಪಟ್ಟಿರುವೆನೋ?

ತರುಣ—ಅಹುದು, ನಿಮಗೆ ಬಲವಾದ ಗಾಯವಾಗಿರುವದು.

ಹೇಮ—ನೀನು ನಮ್ಮ ಸೈನಿಕನೋ?

ತರುಣ—ಅಲ್ಲ, ನಾನು ನಿಮ್ಮ ಸೈನಿಕನಲ್ಲ.

ಹೇಮ—ಹಾಗಾದರೆ ನೀನು ಮುಸಲ್ಮಾನನೇ? ನಾನು ಸೆರೆಯಾಳಾಗಿರುವೆನೇನು?

ತರುಣ—ನಾನು ಮುಸಲ್ಮಾನನೂ ಅಲ್ಲ. ನೀವು ಸೆರೆಯಾಳೂ ಆಗಿರುವದಿಲ್ಲ. ನೀವು ಪೂರ್ಣ ಜಯಶಾಲಿಗಳಾಗಿರುವಿರಿ; ಆದರೆ ಅಣ್ಣಾ ಏನು ನಿನ್ನ ಸಾಹಸವು! ಮಹಾರಾಜನು ನೀನು ಹೀಗೆ ಪಕ್ಕನೆ ಯವನ ಸೈನ್ಯವನ್ನು ನುಗ್ಗಿ ನೂತನ ಹಿಂದೂ ರಾಜ್ಯವನ್ನು ಸಂಕಟಕ್ಕೆ ಗುರಿಮಾಡಬಹುದೇ?

ಹೇಮ—(ಆತುರದಿಂದ ಎದ್ದು) ಯಾರು, ರಾಮನೋರಮೆಯೇನು? ತಂಗೀ ಏನಮ್ಮಾ ನಿನ್ನ ಪರಾಕ್ರಮವು! ಆ ತರುಣ ಸರದಾರನು ನೀನೇ ಎಂಬದರಲ್ಲಿ ಸಂದೇಹವಿಲ್ಲ. ನೀನಲ್ಲದೆ ಅಷ್ಟು ಸಾಹಸದಿಂದ ಶತ್ರುಸೈನ್ಯವನ್ನು ಭೇದಿಸಿ ಮತ್ತಾರು ಹೋಗುವರು? ಹಿಂದಕ್ಕೆ ದೇವಾಸುರ ಯುದ್ಧದಲ್ಲಿ ದೇವ ಸೇನಾನಿಯಾದ ಕಾರ್ತಿಕೇಯನು ಅಗಾಧ ಪರಾಕ್ರಮವನ್ನು ತೋರಿಸಿದನೆಂದು ಪುರಾಣದಲ್ಲಿ ಕೇಳಿದ್ದನ್ನು ಇಂದು ನನಗೆ ನೀನು ಪ್ರತ್ಯಕ್ಷ ಮಾಡಿಕೊಟ್ಟೆ. ಅಮ್ಮಾ ನಿನ್ನ ಯೋಗ್ಯತೆಯೇ ಅಂತಹ ಘನವಾದದ್ದು! ನೀನು ದುಷ್ಟ ಶಾಸನಕ್ಕಾಗಿ ಅವತರಿಸಿದ ಪ್ರತ್ಯಕ್ಷ ಚಂಡಿಯೇ ಇರುತ್ತೀ. ನಿನ್ನ ಕೈ ಖಡ್ಗವು ಇಂದು ಮುಸಲ್ಮಾನರ ರಕ್ತಕುಡಿದ ಪರಿಯನ್ನು ನೋಡಿದರೆ, ಅದು ನಿಜವಾಗಿಯೇ ಶ್ರೀ ದುರ್ಗೆಯ ಕೈಖಡ್ಗವಾಗಿರುವದೆಂದು ಹೇಳಬೇಕಾಗಿರುವದು. ತಂಗೀ, ಇಂದಿನ ಪರಾಕ್ರಮವನ್ನು ನೋಡಿ ನಾನು ಧನ್ಯನಾದೆನು.

ಈ ಮೇರೆಗೆ ನುಡಿಯುತ್ತ ಹೇಮಚಂದ್ರನು ಪ್ರೇಮಾವೇಶದಿಂದ ಎದ್ದು ತನ್ನ ತಂಗಿಯ ಬೆನ್ನ ಮೇಲೆ ಕೈಯಾಡಿಸಿ ಆಕೆಯನ್ನು ಅಭಿನಂದಿಸುತ್ತಿರುವಾಗ, ಒಮ್ಮೆಲೇ ಗಾಯದ ಬಾಯಿ ಪಿಕಲಿ ಮತ್ತೆ ರಕ್ತವು ಸೋರಹತ್ತಲು, ಹೇಮಚಂದ್ರನು ಮತ್ತೆ ಮೂರ್ಛಿತನಾದನು. ಆಗ ಮನೋರಮೆಯು ಮತ್ತೆ ಗಾಯಕ್ಕೆ ಔಷಧಹಚ್ಚಿ ತನ್ನ ಬಳಿಯಲ್ಲಿಯ ಸ್ವಲ್ಪ ಮಾದಕ ದ್ರವ್ಯವನ್ನು ಹೇಮಚಂದ್ರನ ಹೊಟ್ಟೆಲ್ಲಿ ಹಾಕಿದಳು. ಕೂಡಲೆ ಹೇಮಚಂದ್ರನಿಗೆ ಗಾಢ ನಿದ್ರೆಯ ಹತ್ತಿ ಬೆಳಗಾಗುವವರೆಗೆ ಆತನು ಸ್ವಸ್ಥವಾಗಿ ಮಲಗಿಕೊಂಡನು. ಆಗ ಮನೋರಮೆಯು ಅಣ್ಣನಿಗೆ ಎಲ್ಲಿ ಎಚ್ಚರವಾದೀತೋ ಎಂಬ ಅಂಜಿಕೆಯಿಂದ ಗಟ್ಟಿಯಾಗಿ ಉಸುರನ್ನೂ ಆಡಿಸದೆ, ಆತನನ್ನು ರಕ್ಷಿಸುತ್ತ ಕುಳಿತುಕೊಂಡಳು. ಅತ್ತ ಹೇಮಚಂದ್ರನ ಆ ಸ್ವಾಮಿನಿಷ್ಟ ದಂಡಾಳುವು ಸೇವಾತತ್ಪರನಾಗಿ ದೂರ ಕುಳಿತುಕೊಂಡಿದ್ದನು; ಆ ದಂಡಾಳು ಅನ್ಯರಾರೂ ಅಲ್ಲದೆ, ಹಿಂದಕ್ಕೆ ಹೇಮಚಂದ್ರನಿಗೆ ಸ್ವಪ್ನದ ಸಂಗತಿ ಹೇಳಿ ಅಳುತ್ತ ಕುಳಿತಿದ್ದ ತರುಣ ಸ್ತ್ರೀಯ ಗಂಡನಾಗಿದ್ದನು.

ಹೀಗೆ ಅಣ್ಣನನ್ನು ಕಾಯುತ್ತ ಕುಳಿತಾಗ ಮನೋರಮೆಯ ಮನಸ್ಸಿನಲ್ಲಿ ಇಲ್ಲದ ವಿಚಾರಗಳು ಬರತೊಡಗಿದವು. ತನ್ನ ಬಾಲ್ಯ, ವಿವಾಹ, ಜ್ಯೋತಿಷಿಯ ಭವಿಷ್ಯ, ಕಿವುಡ ಅಜ್ಜನ ಸಂರಕ್ಷಣೆಯಲ್ಲಿ ತಾನು ಕಾಲ ಕಳೆದದ್ದು, ನದಿಯಾ ರಾಜಧಾನಿಯಲ್ಲಿ ಕೊಲೆ ಸುಲಿಗೆಗಳು, ತನ್ನ ಪತಿಯ ಅಗ್ನಿಸಮಾಧಿ, ತನ್ನ ಸಹಗಮನದ ಪ್ರತಿಬಂಧ ಇವೇ ಮೊದಲಾದ ಸಂಗತಿಗಳನ್ನು ಸ್ಮರಿಸುತ್ತಿರುವಾಗ, ಮುಸಲ್ಮಾನರನ್ನು ತಾನು ಸಂಹರಿಸಿದ್ದರ ನೆನಪಾಗಲು, ಆ ವೀರ ವನಿತೆಯು ಆವೇಶಗೊಂಡು ಮೈಮರೆತು ಸರಕ್ಕನೆ ಒರೆಯಿಂದ ಶ್ರೀ ದುರ್ಗೆಯ ಖಡ್ಗವನ್ನು ಹಿರಿದು— ''ಈ ಖಡ್ಗವು ಇನ್ನೂ ಮುಸಲ್ಮಾನರ ರಕ್ತಕುಡಿದು ತೃಪ್ತವಾಗಿರುವದಿಲ್ಲ'' ಎಂದು ನುಡಿಯುತ್ತಿರಲು,—''ಇಲ್ಲ ಇಲ್ಲ! ಅದು ನಿಶ್ಚಯವಾಗಿಯೂ ತೃಪ್ತವಾಗಿರುವದಿಲ್ಲ, ಮನೋರಮೇ, ಹೀಗೆಯೇ ಈ ನೀತೀಖಡ್ಗವು ಇನ್ನೆರಡು ಸಾರೆ ಮುಸಲ್ಮಾನರ ರಕ್ತಪಾನ ಮಾಡಿದಾಗ ತೃಪ್ತವಾಗುವದು'' ಎಂದು ನುಡಿಯುತ್ತ ಒಬ್ಬ ತೇಜಃಪುಂಜನಾದ ಬ್ರಾಹ್ಮಣನು ಅಲ್ಲಿಗೆ ಬಂದನು. ಈ ಗದ್ದಲಕ್ಕೆ ಹೇಮಚಂದ್ರನು ಎಚ್ಚತ್ತು ಕಣ್ತೆರೆದು ಸುತ್ತು ಮುತ್ತು ನೋಡುತ್ತಿರಲು, ಆ ಬ್ರಾಹ್ಮಣನು ಆತನ ಹತ್ತಿರ ಬಂದು—ಹೇಮಚಂದ್ರಾ, ಮೇಲಕ್ಕೇಳಬೇಡ, ಇದು ನನ್ನ ಆಜ್ಞೆಯು ಎಂದು ನುಡಿಯುತ್ತ ನಮಸ್ಕರಿಸುವ ಮನೋರಮೆಯನ್ನು ಕುರಿತು— ''ಸಾಧ್ವೀ, ಪತಿಗೆ ಮೋಕ್ಷ ಕೊಡುವವಳಾಗು'' ಎಂದು ಆಶೀರ್ವದಿಸುತ್ತ ಏನೋ ತನ್ನ ಜೋಳಿಗೆಯೊಳಗಿಂದ ತೆಗೆದು ಹೇಮಚಂದ್ರನ ಬಾಯಲ್ಲಿ ಹಾಕಿ ಕಮಂಡಲೋದಕದಿಂದ ಹೇಮಚಂದ್ರನ ಸರ್ವಾಂಗವನ್ನು ಪ್ರೋಕ್ಷಿಸಿದನು; ಆಗ ಹೇಮಚಂದ್ರನು ಹೊಸಮನುಷ್ಯನಂತೆ ಉತ್ಸಾಹಗೊಂಡನು—

ಹೇಮ—ಗುರುವರ, ಏಳಲಿಕ್ಕೆ ಇನ್ನೂ ನನಗೆ ಅಪ್ಪಣೆಯಾಗುವದಿಲ್ಲವೇ? ಇಂದು ನನ್ನ ಈ ಮೋಹದ ತಂಗಿ ಮನೋರಮೆಯು ನನ್ನ ಪ್ರಾಣ ಪ್ರತಿಷ್ಠಾಪನ ಮಾಡಿದಳು.

ಹೀಗೆಂದು ಗುರುವರನ ಮುಂದೆ ನುಡಿಯುವಾಗ ಹೇಮಚಂದ್ರನ ಕಂಠವು ಬಿಗಿದು ಕಣ್ಣುಗಳಿಂದ ಅಶ್ರುಗಳು ಸುರಿಯಹತ್ತಿದವು. ಅದನ್ನು ನೋಡಿ ಸರಳಸ್ವಭಾವದ

ಮನೋರಮೆಯು ಸಣ್ಣ ಹುಡುಗಿಯಂತೆ ಬಿಕ್ಕಿ ಬಿಕ್ಕಿ ಅಳತೊಡಗಿದಳು. ಈ ಪವಿತ್ರ ಮೂರ್ತಿಗಳ ಪವಿತ್ರ ಪ್ರೇಮದ ಪ್ರಸಂಗವನ್ನು ನೋಡಿ, ದಯಾಳು ಮಾಧವಾಚಾರ್ಯರ ಕಣ್ಣುಗಳಿಂದಲೂ ನೀರು ಬಂದವು. ಈ ಆನಂದದ ಪ್ರಸಂಗದಲ್ಲಿ ಯಾರಮುಖದಿಂದಲೂ ಶಬ್ದಗಳು ಹೊರಡದಾದವು. ಅಷ್ಟರಲ್ಲಿ ಹೇಮಚಂದ್ರನನ್ನು ಕಾಣದೆ ಅಸಮಾಧಾನಪಟ್ಟು ಹುಡುಕುತ್ತಿರುವ ಆತನ ಮಂತ್ರಿ—ಸೇನಾಪತಿಗಳು ಅಲ್ಲಿಗೆ ಬಂದು ಆನಂದಪಟ್ಟು ಮಾಧವಾಚಾರ್ಯರನ್ನು ಸಾಷ್ಟಾಂಗವಾಗಿ ವಂದಿಸಿದರು!

ಅತ್ಯಾಚಾರಗಳು

ಹೇಮಚಂದ್ರನಿಂದ ಸೋತ ಮುಲ್ಲಾನ ಸೈನಿಕರು ನಡುವೆ ಎಲ್ಲಿಯೂ ನಿಲ್ಲದೆ, ಒಂದೇ ಸವನೆ ಹತ್ತು ಹರದಾರಿ ಓಡಿ ಬಂದು ನದಿಯ ತೀರದಲ್ಲಿ ತಳ ಊರಿದರು. ಸುಲಿಗೆಗಾರರ ಚಂದದಿಂದ ವ್ಯವಹರಿಸುತ್ತಿದ್ದ ಅವರಿಗೆ ಹೀಗೆ ಓಡಲಿಕ್ಕೆ ತೊಂದರೆಯಾಗುತ್ತಿದ್ದಿಲ್ಲ. ಅವರ ಹತ್ತು ಸಾವಿರ ಸೈನ್ಯದಲ್ಲಿ ಬಹು ಸ್ವಲ್ಪ ಜನರು ಮಾತ್ರ ಉಳಿದಿದ್ದರು. ಇಂಥ ಭಯಂಕರವಾದ ಸೋಲು ಬಂಗಾಲದಲ್ಲಿ ತಮಗೆ ಎಂದೂ ಎಲ್ಲಿಯೂ ಆಗಿದ್ದಿಲ್ಲವೆಂದು ಅವರು ಆಗಾಗ ಅಂದು ಕೊಳ್ಳುತ್ತಿದ್ದರು. ಓಡಿಬರುವ ಅವಸರದಲ್ಲಿ ತೋಫು ತುಬಾಕಿಗಳನ್ನು ಅವರು ಚಲ್ಲಿಕೊಟ್ಟಿದ್ದರು; ಆನೆ—ಕುದುರೆಗಳ ಪರಿವೆಯು ಅವರಿಗೆ ಉಳಿದಿದ್ದಿಲ್ಲ; ಜೀವ ಉಳಿದರೆ ಸಾಕೆಂದು ಅವರು ಉಟ್ಟ—ತೊಟ್ಟ ಅರಿವೆಯಿಂದ ಓಡಿಬಂದಂತಾಗಿತ್ತು. ಇಷ್ಟು ದೂರ ಓಡಿಬಂದರೂ ಹೇಮಚಂದ್ರನ ಸೈನಿಕರ ಭಯವು ಅವರನ್ನು ಬಾಧಿಸುತ್ತಲೇ ಇತ್ತು. ಈ ಸ್ಥಿತಿಯಲ್ಲಿ ತಾವು ಇನ್ನು ಏನು ಮಾಡಬೇಕೆಂದು ಆಲೋಚಿಸತೊಡಗಿದರು. ಸ್ವಜನದ್ರೋಹಿಯಾದ ಶಾಂತ ಶೀಲನು ಭಗ್ನಮನೋರಥನಾಗಿ ಎಲ್ಲಿಯೋ ಇದ್ದುಬಿಟ್ಟಿದ್ದನು. ತನ್ನ ಗುಪ್ತವಾದ ಆಲೋಚನೆಯು ಹೇಗೆ ಹೇಗೋ ಹೇಮಚಂದ್ರನಿಗೆ ಗೊತ್ತಾಗಿ, ಮುಸಲ್ಮಾನರಲ್ಲಿಯ ತನ್ನ ಗೌರವಕ್ಕೆ ಹಾನಿಯೊದಗಿದಂತಾಯಿತಲ್ಲ, ಎಂದು ಆತನು ಚಿಂತಿಸತೊಡಗಿದನು. ಆ ನೀಚ ಸ್ವಾರ್ಥಪರನು ತನ್ನ ದೇಶಬಾಂಧವರ ಸರ್ವನಾಶವಾಗಿ ತನಗೆ ಮುಸಲ್ಮಾನರ ಪ್ರಸನ್ನತೆಯ ಲಾಭವು ಒದಗಲಿಲ್ಲವೆಂದು ದುಃಖಿಸಿದನು. ದುಷ್ಟವಾದ ಸ್ವಾರ್ಥಬುದ್ಧಿಯು ಪ್ರಸಂಗದಲ್ಲಿ ಹೆಂಡಿರು—ಮಕ್ಕಳನ್ನೂ ನೋಡದಿರುವಾಗ, ಅವರ ಮುಂದೆ ದೇಶಬಾಂಧವರ ಪಾಡಾದರೂ ಏನು? ಮುಸಲ್ಮಾನರ ಮನಸ್ಸನ್ನೊಲಿಸಿಕೊಳ್ಳುವದೊಂದು ಶಾಂತಶೀಲನ ಮುಖ್ಯ ಕೆಲಸವಾಗಿತ್ತು; ಆ ಕೆಲಸದಲ್ಲಿ ಆತನು ಏನು ಮಾಡಲಿಕ್ಕೂ ಹೇಸುತ್ತಿದ್ದಿಲ್ಲ. ಈಗ ತನ್ನ ಮನಸ್ಸು ಇಷ್ಟು ನೊಂದಿದ್ದರೂ, ಮುಸಲ್ಮಾನರ ಕೃಪಾಪ್ರಸಾದವು ಇನ್ನು ತನಗೆ ಹೇಗೆ ಆದೀತೆಂಬ ಆತನ ಚಿಂತೆಯು ದೂರವಾಗಿದ್ದಿಲ್ಲ. ರುಸ್ತುಮಲಿಯು ಇನ್ನು ತನ್ನನ್ನು ಕರಿಸಲಿಕ್ಕೇ ಇಲ್ಲವೇ, ಎಂದು ಆತನು ಚಿಂತಿಸತೊಡಗಿದ್ದನು. ಈಗ ಮುಸಲ್ಮಾನರಿಗಾಗಿದ್ದ ಭಯಂಕರ ಅರ್ಥಹಾನಿ—

ಪ್ರಾಣಹಾನಿಗಳಿಗೆ ತಾನೇ ಕಾರಣ ನಾದದ್ದರಿಂದ, ರೊಚ್ಚಿನ ಸ್ವಭಾವದ ಮುಸಲ್ಮಾನರ ತನ್ನನ್ನು ಎಲ್ಲಿ ದಂಡಿಸುವರೋ ಎಂಬ ಭಯವೂ ಆತನನ್ನು ಬಾಧಿಸಹತ್ತಿತು; ಯಾಕಂದರೆ, ಈ ಯುದ್ಧದ ಪ್ರಸಂಗದ ಮುಖ್ಯ ಪ್ರವರ್ತಕನು ಆತನೇ ಆಗಿದ್ದನು.

ಹೀಗೆ ಶಾಂತಶೀಲನು ಶಂಕೆ—ಭಯಗಳಿಂದ ಬಾಧಿತನಾಗಿರಲು, ರುಸ್ತುಮಲಿಯು ಆತನನ್ನು ಕರತರುವದಕ್ಕಾಗಿ ಸೇವಕನನ್ನು ಕಳುಹಿದನು. ಕಾರ್ಯಸಾಧಕರಾದ ಮುಸಲ್ಮಾನರು ಕೇವಲ ತಮ್ಮ ಅನುಕೂಲತೆಗಾಗಿಯೇ ಶಾಂತಶೀಲನನ್ನು ಕಾದಿದ್ದರಲ್ಲದೆ, ಅವನ ಯಾವ ಗುಣಗಳಿಗೂ ಲುಬ್ಧರಾಗಿ ಅವರು ಆತನಿಗೆ ಆಶ್ರಯ ಕೊಟ್ಟಿದ್ದಿಲ್ಲ; ಹೇಳಿ ಕೇಳಿ ಅವರು ಪರನಾಡಪಕ್ಷಿಗಳು, ನಾಡನೆಲೆಯರಿತವರಿಲ್ಲದಿದ್ದರೆ ಅವರ ಕೆಲಸವಾಗುವಂತೆ ಇದ್ದಿಲ್ಲ. ಶಾಂತಶೀಲನು ಎಷ್ಟು ದುರ್ಗುಣಿಯಿದ್ದರೂ, ತಮ್ಮಿಂದ ಲಾಭಪಡಕೊಳ್ಳುವ ಆಶೆಯಿಂದ ಬೇಕಾದದ್ದನ್ನು ಮಾಡಲಿಕ್ಕೆ ಅವನು ಹಿಂದೆ ಮುಂದೆ ನೋಡುವದಿಲ್ಲವೆಂಬ ಮಾತನ್ನು ಅವರು ಅರಿತಿದ್ದರು; ಆದರೆ ಇಂದಿನ ಸೋಲಿನಿಂದಮಾತ್ರ ರುಸ್ತುಮಲಿಯು ಸಂಶಯಗ್ರಸ್ತನಾಗಿದ್ದನು. ಇಂದಿನ ತಮ್ಮ ಸೋಲಿಗೆ ಶಾಂತಶೀಲನು ಕಾರಣವಾಗಿದ್ದರೂ ಆಗಿರಬಹುದೆಂಬ ಸಂಶಯವು ರುಸ್ತುಮಲಿಯನ್ನು ಬಾಧಿಸುತ್ತಿತ್ತು; ಯಾಕಂದರೆ, ಮುಸಲ್ಮಾನರ ಪಕ್ಷವಹಿಸಿ ನದಿಯಾ ರಾಜಧಾನಿಯನ್ನು ಮಣ್ಣುಗೂಡಿಸಿದ ಪಶುಪತಿಯು, ಕಡೆಗೆ ಬಖತ್ಯಾರನ ವಿಶ್ವಾಸಘಾತದಿಂದ ಮರಣ ಹೊಂದಿದ ಉದಾಹರಣೆಯು ಎಲ್ಲರ ಮುಂದೆಯೂ ಇತ್ತು. ಈ ಉದಾಹರಣವನ್ನು ಪಶುಪತಿಯ ಹಸ್ತಕನಾದ ಶಾಂತಶೀಲನು ಮನಸ್ಸಿನಲ್ಲಿಟ್ಟುಕೊಂಡು ಅದರ ಸೇಡು ತೀರಿಸಿಕೊಳ್ಳುವದಕ್ಕಾಗಿಯೇ ನಮ್ಮಲ್ಲಿ ಏಕೆ ಇರಬಾರದೆಂಬ ಸಂಶಯದಿಂದ ಆ ಯವನ ವೀರನು ಆಲೋಚಿಸತೊಡಗಿದ್ದನು. ಆದರೆ ದುಷ್ಟನಾದ ಶಾಂತಶೀಲನಲ್ಲಿ ಇಂತಹ ಸ್ವಜನಾಭಿಮಾನವು ಸರ್ವಥಾ ಇದ್ದಿಲ್ಲ. ಪಶುಪತಿಯು ಬಖತ್ಯಾರನ ಸೂಚನೆಯಂತೆ ಮುಸಲ್ಮಾನನಾಗದೆ ಇದ್ದದ್ದೊಂದು, ಅಪರಾಧವೆಂದು ಶಾಂತಶೀಲನು ಭಾವಿಸಿ, ತಾನು ಪ್ರಸಂಗದಲ್ಲಿ ಮುಸಲ್ಮಾನನಾಗಲು ಸಿದ್ಧನಾಗಿರುವದರಿಂದ ಪಶುಪತಿಗೊದಗಿದ ಅನರ್ಥವು ತನ್ನ ಪಾಲಿಗೆ ಸರ್ವಥಾ ಬರುವಹಾಗಿಲ್ಲೆಂದು ಆತನು ದೃಢವಾಗಿ ನಂಬಿದ್ದನು. ಆತನ ಈ ನಂಬಿಗೆಯು ಮುಸಲ್ಮಾನರ ಪ್ರಸನ್ನೀಕರಣಕ್ಕೆ ಬಲವಾದ ಸಾಧನವೇ ಆಗಿ ಆತನ ಪಾಲಿಗೆ ಕುಳಿತಿದ್ದಿತು. ಬಾದಶಹನು ಸುಪ್ರಸನ್ನನಾಗುವಂತಹ ಕೃತಿಯು ನನ್ನಿಂದ ಆದಾಗ ನಾನು ಮುಸಲ್ಮಾನನಾಗಲು ಒಪ್ಪಿಕೊಂಡು ಬಿಟ್ಟರೆ, ಪಶುಪತಿಗಾಗಿ ಬಡಿಸಿದ ಎಡೆಯು ನಿಷ್ಫಲವಾದದ್ದಲ್ಲವೆಂಬ ಬಗ್ಗೆ ರುಸ್ತುಮಲಿಯೂ, ಮಹಮ್ಮದಲಿಯೂ ಆತನಿಗೆ ಅಭಿವಚನವನ್ನಿತ್ತಿದ್ದರು.

ಹೀಗೆ ಪರಸ್ಪರರ ಮನೋವೃತ್ತಿಗಳ ಅಂದೋಲನಗಳು ನಡೆದಿರುವಾಗ, ರುಸ್ತುಮಲಿಯ ಸೇವಕನು ಶಾಂತಶೀಲನ ಬಳಿಗೆ ಬಂದನು. ಆಗ ಶಾಂತಶೀಲನಿಗೆ ಒಂದು ಬಗೆಯಿಂದ ಸಮಾಧಾನವಾದರೂ, ಪ್ರಸಂಗವು ಹೇಗಿರುವದೋ, ಎಂಬ ಸಂಶಯವು ಅವನನ್ನು ಬಾಧಿಸದೆ ಹೋಗಲಿಲ್ಲ. ಆತನು ಕೂಡಲೆ ಸೇವಕನನ್ನು ಹಿಂಬಾಲಿಸಿ ರುಸ್ತುಮಲಿಯ ಬಳಿಗೆ ಹೋಗಿ, ಬಹುವಿನಯದಿಂದ ಸಲಾಮು ಮಾಡಿದನು. ಆಗ ರುಸ್ತುಮಲಿಯು ಗಾಂಭೀರ್ಯದಿಂದ—

ರುಸ್ತುಮಲಿ—ಬರಬೇಕು, ದೋಸ್ತ ಹೀಗೆ ಬರಬೇಕು. ನಿಮ್ಮ ಒಳಸಂಚಿನ ಪರಿಣಾಮ ಹೇಗೆ ಆಯಿತು?

ಶಾಂತಶೀಲ—ಖಾನಸಾಹೇಬ, ನನಗೆ ಮಾತಾಡಲಿಕ್ಕೆ ಮೋರೆಯಿಲ್ಲದ್ದರಿಂದಲೇ ಇಷ್ಟುಹೊತ್ತು ತಮ್ಮನ್ನು ಕಾಣಲಾರದೆ ಸುಮ್ಮನೆ ಕುಳಿತುಬಿಟ್ಟಿದ್ದೆನು. ಸರ್ವಾನರ್ಥಕ್ಕೆ ನಾನೇ ಕಾರಣನಾದಂತಾಗಿರುವದು.

ರುಸ್ತುಮಲಿ—(ಸ್ವಲ್ಪ ಸಿಟ್ಟಿನಿಂದ) ಅಲಬತ್! ಅಲಬತ್! ನೀವೇ ಕಾರಣರಾದಿರಿ. ನಾನು ಈ ಯುದ್ಧಪ್ರಸಂಗಕ್ಕೆ ಮೊದಲು ಒಪ್ಪಿಕೊಂಡವನಲ್ಲ.

ಶಾಂತಶೀಲ—ಖಾನಸಾಹೇಬ, ಅದನ್ನು ನಾನು ಬಲ್ಲೆನು. ನಮ್ಮ ಗುಪ್ತಾಲೋಚನೆಯು ಹೊರಬೀಳದಿದ್ದರೆ.....

ಈ ಮೇರೆಗೆ ನುಡಿಯುತ್ತಿರುವದರೊಳಗೆ ರುಸ್ತುಮಲಿಯು ನಡುವೇ ಬಾಯಿಹಾಕಿ ಮತ್ತಿಷ್ಟು ಸಿಟ್ಟಿನಿಂದ—

ರುಸ್ತುಮಲಿ—ಶಾಂತಶೀಲ, ''ಹೊರಬೀಳದಿದ್ದರೆ'' ''ಹಾಗಾಗಿದ್ದರೆ,'' ''ಹೀಗಾಗಿದ್ದರೆ'' ಇಂಥ ಮಾತುಗಳಿಂದ ಪ್ರಯೋಜನವೇನು? ನಮ್ಮ ಗುಪ್ತವಾದ ಆಲೋಚನೆಯು ಹೇಗೆ ಹೊರಬಿದ್ದಿತು? ಅದು ಹೊರಬೀಳಲಿಕ್ಕೆ ನೀವೇ ಕಾರಣರೆಂದು ನಾವೇಕೆ ತಿಳಿಯಬಾರದು?

ಶಾಂತ—ಖಾನಸಾಹೇಬರೇ ಕುಳಿತು ಹೀಗೆಂದಬಳಿಕೆ ನಾನೇನು ಹೇಳಲಿ? ನಾನೇ ಈ ಗೂಢದ ಸ್ಫೋಟಕ್ಕೆ ಕಾರಣನೆಂಬ ಮಾತು ಗೊತ್ತಾಗಿದ್ದರೆ, ಬೇಕಾದ ಶಿಕ್ಷೆಯನ್ನು ನನಗೆ ವಿಧಿಸಬಹುದು; ಅಥವಾ ನನಗೆ ಅಪ್ಪಣೆಕೊಟ್ಟರೆ ಬುದ್ಧಿ ತೋಚಿದತ್ತ ನಾನು ಹೋಗುವೆನು; ಸುಮ್ಮನೇ ಅಪವಾದ ಹೊರಿಸಬಾರದು.

ಶಾಂತಶೀಲನ ಈ ಮಾತುಗಳನ್ನು ಕೇಳಿ ರುಸ್ತಮಲಿಯು ಸ್ವಲ್ಪ ನಮ್ರನಾದನು; ಯಾಕಂದರೆ ಆತನು ಶಾಂತಶೀಲನನ್ನು ಈಗ ಬಿಡುವಾಗಿದ್ದಿಲ್ಲ, ಶಾಂತಶೀಲನು ತನ್ನ ಜನರೊಡನೆ ಹೋಗಿ ಬಿಟ್ಟರೆ, ರುಸ್ತುಮಲಿಯ ಪರಿಣಾಮವಾಗುವಹಾಗಿದ್ದಿಲ್ಲ; ಆತನು ಅತ್ಯಂತ ಕ್ಷೀಣ ಬಲನಾಗಿದ್ದನು. ಆತನು ನಗುತ್ತ ಶಾಂತಶೀಲನನ್ನು ಕುರಿತು—

ರುಸ್ತುಮಲಿ—ಪ್ರಿಯದೋಸ್ತ, ಅಪವಾದ ಹೊರಿಸುವ ಮಾತಲ್ಲ; ಮಿತಿಮೀರಿ ನಮ್ಮ ಹಾನಿಯಾದದ್ದರಿಂದ ಬಹಳ ದುಃಖವಾಗಿ ಆಡಿದಮಾತು; ಸಿಟ್ಟಾಗದೆ ಕ್ಷಮಿಸರಿ. ನಮ್ಮ ಈಗಿನ ವಿಪತ್ತನ್ನು ನೀವೇ ಪರಿಹರಿಸಿ, ಬಾದಶಹರ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ಹೇಳಿಕೊಳ್ಳುವೆನು.

ಶಾಂತಶೀಲ—ಖಾವಿಂದ, ತಾವು ಹೇಳಿಕೊಳ್ಳುವದೆಂದರೇನು? ಈ ಗುಲಾಮನು ಏನು ಮಾಡಬೇಕೆಂಬ ಬಗ್ಗೆ ಆಜ್ಞಾಪಿಸಬೇಕು.

ರುಸ್ತುಮಲಿ—ನಮಗೆ ಈಗ ಮುಖ್ಯವಾಗಿ ಆಗಬೇಕಾದದ್ದು ಧನ ಧಾನ್ಯಗಳ ಸಂಗ್ರಹ. ಈ ಕೆಲಸದಲ್ಲಿ ವಿಳಂಬವಾಗಲಾಗದು. ನಾವು ಹೊರಗಿನವರು. ಇಲ್ಲಿಯ ಗ್ರಾಮ—ಪಟ್ಟಣಗಳ ಸ್ಥಿತಿ—ಗತಿಗಳು ನಿಮಗೆ ಗೊತ್ತಿದ್ದಹಾಗೆ ನಮಗೆ ಗೊತ್ತಿರುವದಿಲ್ಲ, ಮೇಲಾಗಿ ನೀವು ಬ್ರಾಹ್ಮಣರು, ಕಾರ್ಯಕುಶಲರು; ಆದುದರಿಂದ ನಿಮಗೆ ನಾನು ಹೇಳುವದೇನಂದರೆ, ನೀವು

ಮುಖ್ಯವಾಗಿ ಧನ—ಧಾನ್ಯಗಳ ಸಂಗ್ರಹವನ್ನು ಮಾಡಬೇಕು. ಇಲ್ಲಿಯ ನೆರೆಹೊರೆಯ ಹಳ್ಳಿಗಳ ಸುಲಿಯುವದರ ಸಂಗಡ, ಅದೋ ಅಲ್ಲಿ ರಾಧಾನಗರದಲ್ಲಿ ಒಂದು ದೇವಸ್ಥಾನವಿರುವದಲ್ಲ; ಅಲ್ಲಿ ವಿಪುಲ ಸಂಪತ್ತು ಇರುವದೆಂದು ಕೇಳಿದ್ದೇನೆ. ಆ ದೇವಸ್ಥಾನವನ್ನೂ ಸುಲಿದು ಬಿಡಬೇಕು. ಈಗಿನ ಸಂಕಟಕಾಲದಲ್ಲಿ ನೀವು ನಮಗೆ ಸಹಾಯ ಮಾಡಿದರೆ, ದಿಲ್ಲಿಯ ನಮ್ಮ ಕುತುಬದ್ದೀನ ಬಾದಶಹರ ಮುಂದೆ ನಿಮ್ಮ ಶಿಫಾರಸು ಮಾಡಲಿಕ್ಕೆ ನಮಗೆ ನೆಟ್ಟಗಾಗುವದು. ಮೇಲಾಗಿ ನೀವು ಮುಸಲ್ಮಾನರಾಗಿ ನಮ್ಮ ಮಹಮ್ಮದಲಿಯವರ ಸುಂದರ ಕುಮಾರಿಕೆಯನ್ನು ಲಗ್ನವಾಗಬೇಕೆಂದು ಗೊತ್ತಾಗಿದೆಯಷ್ಟೇ? ಆದರೆ ಈಗ ರಾಧಾರಮಣನ ದೇವಾಲಯವನ್ನು ನೀವು ಕೈಮುಟ್ಟಿ ಸುಲಿದರೆ, ಮಹಮ್ಮದಲಿಯವರಿಗೂ ನೀವು ಮುಸಲ್ಮಾನರಾಗುವ ವಿಷಯದಲ್ಲಿ ಸಂಶಯವು ಉತ್ಪನ್ನವಾಗಲಿಕ್ಕಿಲ್ಲ.

ಶಾಂತಶೀಲ—(ಉತ್ಸಾಹದಿಂದ) ಅವಶ್ಯವಾಗಿ ಆಗಲಿ, ನಾನೇ ಆ ಕೆಲಸವನ್ನು ಸಂತೋಷದಿಂದ ಮಾಡುವೆನು; ಆದರೆ ದೋಸ್ತ, ನಾನು ಮುಸಲ್ಮಾನನಾಗುವಲ್ಲಿ ಏನು ಉಳಿದದೆ?

ರುಸ್ತುಮಲಿ—ಇಲ್ಲ ಏನೂ ಉಳಿದಿರುವದಿಲ್ಲ, ಸುರಾಪಾನವು ನಡೆದದೆ, ಗೋಮಾಂಸ ಭಕ್ಷಣವು ಸಾಗಿದೆ, ನಡೆಯದಿದ್ದದ್ದೆಂದರೆ, ಸುನತಿ ಮಾಡಿಸಿಕೊಳ್ಳುವದು, ಗಡ್ಡಬಿಡಿಸುವದು ಇವೆರಡೇ ಆದರೆ, ದೋಸ್ತ ಅವೆರಡನ್ನು ಮಾಡಿಸಿಕೊಳ್ಳಲಿಕ್ಕೆ ವಿಳಂಬವೇಕೆ? ಒಮ್ಮೆ ಪೂರಾ ಕೆಲಸವಾಗಿ ಹೋಗುವದು ನೆಟ್ಟಗಲ್ಲವೇ?

ಶಾಂತಶೀಲ—ಸರಿ, ನೀವು ಹೇಳುವದು ಯೋಗ್ಯವಾದದ್ದೂ, ನನಗೆ ಹಿತಕರವಾದದ್ದೂ ಇದ್ದರೂ, ಒಂದು ಸೂಕ್ಷ್ಮಮಾತಿಗಾಗಿ ಕೈಕಾಯಬೇಕಾಗಿದೆ; ಆ ಮಾತು ಪ್ರಸಂಗ ಒದಗಿದಾಗ ಹೇಳುವೆನು. ಇರಲಿ, ನನ್ನಿಂದ ನಿಮಗಾಗಿರುವ ಹಾನಿಯನ್ನು ಕೆಲಮಟ್ಟಿಗಾದರೂ ತುಂಬಿ ಕೊಡುವದಕ್ಕಾಗಿ ನಾನು ಇನ್ನು ಕಾರ್ಯ ಪ್ರವರ್ತಕನಾಗುವೆನು.

ಈ ಮೇರೆಗೆ ನುಡಿದು ಶಾಂತಶೀಲನು ಕೂಡಲೇ ಸೈನ್ಯದಲ್ಲಿ ಬೇರೆ ಬೇರೆ ಭಾಗಗಳನ್ನು ಮಾಡಿ, ಆ ಬೇರೆ ಬೇರೆ ಭಾಗಗಳನ್ನು ಬೇರೆ ಬೇರೆ ಹಳ್ಳಿಗಳನ್ನು ಸುಲಿಯುವದಕ್ಕೆ ಕಳಿಸಿ, ದೊಡ್ಡ ಸೈನ್ಯಭಾಗದೊಡನೆ ರಾಧಾರಮಣ ದೇವಾಲಯವನ್ನು ಸುಲಿಯುವದಕ್ಕಾಗಿ ತಾನೇ ಹೊರಟನು. ಆಗ ಮಧ್ಯಾಹ್ನದ ಸಮಯವಾಗಿತ್ತು, ಹಳ್ಳಿಗಳ ಜನರಲ್ಲಿ ಕೆಲವರು ಊಟಮಾಡುತ್ತಲಿದ್ದರು, ಕೆಲವರು ಉಂಡು ವಿಶ್ರಾಂತಿಯನ್ನು ಹೊಂದುತ್ತಲಿದ್ದರು. ಕೆಲವರು ಹೆಂಡಿರು—ಮಕ್ಕಳೊಡನೆ ಸುಖ—ಸಲ್ಲಾಪಗಳನ್ನು ನಡೆಸುತ್ತಲಿದ್ದರು. ಅಷ್ಟರಲ್ಲಿ ಮುಸಲ್ಮಾನರ ತಂಡಗಳು ದೀನ ದೀನ ಎಂದು ಗರ್ಜಿಸುತ್ತ ಹಳ್ಳಿಗಳ ಮೇಲೆ ಬಿದ್ದವು. ಆಗ ಯವನರು ನಡಿಸಿದ ಅತ್ಯಾಚಾರಗಳನ್ನು ವರ್ಣಿಸಲಸಾಧ್ಯವು. ದುಷ್ಟ ಮುಸಲ್ಮಾನರು ಕೈಗೆ ಸಿಕ್ಕವರನ್ನು ತುಂಡರಿಸಹತ್ತಿದರು; ಸುಂದರ ಸ್ತ್ರೀಯರನ್ನು ಅಪಹರಿಸಹತ್ತಿದರು; ಸಿಕ್ಕ ಒಡವೆಗಳನ್ನೂ, ಧನ—ಧಾನ್ಯಗಳನ್ನೂ, ದನಕರುಗಳನ್ನೂ ಸಂಗ್ರಹಿಸಹತ್ತಿದರು. ಆ ಕೊಲೆಗಡಕರಿಗೆ, ಹಸು ಮಕ್ಕಳೆಂಬ ಕುಕ್ಕುಲತೆಯು ಬಾಧಿಸಲಿಲ್ಲ; ಮುದುಕರೆಂಬ ಕನಿಕರವು ಪ್ರತಿಬಂಧಮಾಡಲಿಲ್ಲ; ಹೆಂಗಸರೆಂಬ ದಯೆಯು

ಅಡ್ಡಬರಲಿಲ್ಲ. ಆದುದರಿಂದ ಅವರು ತಾಯಿ—ತಂದೆಗಳ ಬಗಲಲ್ಲಿರುವ ಕೂಸುಗಳನ್ನು ಹಿಡಿದೆಳೆದು ತುಂಡರಿಸಿದರು; ಮುಗ್ಗರಿಸಿ ಬೀಳುವ ಮುದುಕರನ್ನು ಸಂಹರಿಸಿದರು; ಗಂಡಂದಿರನ್ನು ತೆಕ್ಕೆಬಿದ್ದು ಬಿಡಲಾರದ ಹೆಂಗಸರನ್ನು ಕೊಸರಿಬಿಡಿಸಿ, ಬೇಡಾದವರನ್ನು ಕೊಂದರು—ಬೇಕಾದವರ ಪಾತಿವ್ರತ್ಯ ಭಂಗ ಮಾಡಿದರು. ಇಂತಹ ಆ ಕ್ರೂರರ ಒಂದಲ್ಲ ಎರಡಲ್ಲ ಹಲವು ಬಗೆಯ ಅತ್ಯಾಚಾರಗಳನ್ನು ನೋಡಿದರೆ, ಕ್ರೂರ ವ್ಯಾಘ್ರಗಳ ಕ್ರೂತನವೂ ಹತ್ತುಪಾಲಿಗೆ ಬೇಕೆನ್ನುವಹಾಗೆ ಆಗುತ್ತಿತ್ತು. ಆಗಿನ ಬಂಗಾಲದ ಅನಾಯಕತ್ವ—ಅನೇಕತ್ವಗಳಿಗೆ ಬಹುದಿವಸಗಳಿಂದ ಮೈ ಉಣ್ಣುತ್ತ ಬಂದಿದ್ದ ಅವರ ಹೇಡಿತನವು ಜೋಡಾಗಲು, ಕಟುಕತನದ ಮುಸಲ್ಮಾನರ ಕೈಯೊಳಗಿನ ಕೊಯ್ಗುರಿಗಳಂತೆ ಬಂಗಾಲಿಗಳ ಸ್ಥಿತಿಯು ಶೋಚನೀಯವಾಯಿತು. ಈ ಮೇರೆಗೆ ಮುಸಲ್ಮಾನರು ಯಥೇಚ್ಛ ಕೊಲೆ ಸುಲಿಗೆಗಳನ್ನು ಮಾಡಿ, ಅದು ಸಾಕಾದದ್ದರಿಂದಲೋ, ಎಂಬಂತೆ ಊರುಗಳಿಗೆ ಬೆಂಕಿಹಚ್ಚಿದರು. ಆ ಮನೆಗಳು ಸುಡುವದು ಮುಸಲ್ಮಾನರ ಚಕ್ಕಂದದ ನಗೆಗೆ ಕಾರಣವಾಯಿತು. ಬಳಿಕ ಸುಲಿಗೆಯಲ್ಲಿ ಸಿಕ್ಕ ಸಾಮಾನುಗಳನ್ನು ಹಳ್ಳಿಗಳಲ್ಲಿಯ ಬಂಡಿಗಳಲ್ಲಿ ಹೇರಿಕೊಂಡು, ಹಳ್ಳಿಯವರ ಎತ್ತುಗಳನ್ನೇ ಅವಕ್ಕೆ ಹೂಡಿಕೊಂಡು ದನ—ಕರು—ಮರಿಗಳೊಡನೆ ತಮ್ಮ ಪಾಳಯವನ್ನು ಸೇರಿದರು. ಆಗ ಆ ಕ್ರೂರರ ಕೈಯ್ಯಲ್ಲಿ ಸಿಕ್ಕಿದ್ದ ಹೆಂಗಸರ ಗೋಳಾಟವನ್ನು ಹೇಳಲಾಸಲ್ಲ! ಮುಸಲ್ಮಾನರ ಈ ಪ್ರಕಾರದ ಕೊಲೆ—ಸುಲಿಗೆಗಳು ಆಗ ಬಂಗಾಲ ಪ್ರಾಂತದಲ್ಲೆಲ್ಲ ನಡೆದಿದ್ದವೆಂದು ಹೇಳಬಹುದು. ಅತ್ತ ಶಾಂತಶೀಲನೂ ಇದೇ ಚಂದದಿಂದ ಪಟ್ಟಣವನ್ನು ಹಾಳುಮಾಡಿ, ರಾಧಾರಮಣನ ದೇವಾಲಯವನ್ನು ಸುಲಿದು, ಕೊಲೆ—ಸುಲಿಗೆಗಳಲ್ಲಿ ತಾನಾದರೂ ಮುಸಲ್ಮಾನರಿಗೆ ಹಿಂದಾಗತಕ್ಕವನಲ್ಲವೆಂಬದನ್ನು ತೋರಿಸಿ, ಹಿಂದೂ ಜನರ ಶಾಪಸಹಸ್ರಗಳಿಂದ ತಿರಸ್ಕೃತನಾಗಿ ರುಸ್ತುಮಲಿಯನ್ನು ಆನಂದದಿಂದ ಕಂಡನು.

ಮುಸಲ್ಮಾನರ ಊಟ—ಉಡಿಗೆಗಳಾಗಿ ತಮ್ಮ ಸ್ವಭಾವಕ್ಕನುಸರಿಸಿ ಅವರು ಮದ್ಯಾಪಾನದಿಂದ ಮತ್ತರಾಗುತ್ತಿರಲು, ಆ ದಿನದ ರಾತ್ರಿಯು ಕಳೆದುಹೋಯಿತು. ಮರುದಿವಸ ಮುಂದೇನು ಮಾಡಬೇಕೆಂದು ಅವರು ಶಾಂತಶೀಲನೊಡನೆ ಆಲೋಚಿಸತೊಡಗಿದರು. ಇನ್ನು ಹೇಮಚಂದ್ರನ ನೆರಳಿಗೆ ಹೋಗದೆ, ಉತ್ತರ ದೇಶಕ್ಕೆ ಸುಲಿಗೆ ಮಾಡುವದಕ್ಕಾಗಿ ಹೋಗಿ ಬಿಡಬೇಕೆಂದು ಅವರು ಮಾಡಿದ್ದರು. ರಸ್ತುಮಲಿಯು ಆ ಮಾತನ್ನು ಶಾಂತಶೀಲನಿಗೆ ತಿಳಿಸಲು, ಶಾಂತಶೀಲನು—

ಶಾಂತಶೀಲ—ಖಾನಸಾಹೇಬ, ಹೇಮಚಂದ್ರನನ್ನು ಬಗ್ಗುಬಡೆಯದಿದ್ದರೆ, ನೀವು ಬಂಗಾಲಪ್ರಾಂತದಲ್ಲಿ ಕಾಲೂರಿ ನಿಲ್ಲಲಾರಿರಿ. ನಮ್ಮ ಕೊಲೆ—ಸುಲಿಗೆಗಳು ಎಷ್ಟು ದಿವಸ ನಡೆಯುವವು? ನಮ್ಮ ತಾಪದಿಂದ ಇಡಿಯ ಬಂಗಾಲವೇ ತ್ರಸ್ತವಾಗಿ ರೇಗಿರುವದರಿಂದ, ಹೇಮಚಂದ್ರನಿಗೆ ಅದರ ಸಹಾಯವು ದೊರೆತು, ಆತನು ನಮ್ಮನ್ನು ದಿಲ್ಲಿಯವರೆಗೆ ಓಡಿಸಿ ಬಿಡಬಹುದು. ನಮ್ಮ ಸಾರ್ವತ್ರಿಕವಾದ ಕ್ರೂರತನವೇ ಕಡೆಗೆ ಬಂಗಾಲಪ್ರಾಂತದ ಒಕ್ಕಟ್ಟಿಗೆ ಸಾಧನವಾಗಿ, ಈಗ ಹೇಡಿಗಳೆನಿಸಿರುವ ಬಂಗಾಲಿಗಳು ರಣಶೂರರಾಗಿ ಬೈಲಿಗೆಬಂದು ನಮ್ಮ ನಾಶಕ್ಕೆ ಕಾರಣವಾಗಬಹುದು; ಆದ್ದರಿಂದ ನಾವು ಈ ಸುಲಿಗೆಯ ಪದ್ಧತಿಯನ್ನು ಕಡಿಮೆಮಾಡಿ,

ನಮ್ಮ ಸರ್ವಬಲವನ್ನು ಒಟ್ಟುಗೂಡಿಸಿ ಮೊದಲು ಹೇಮಚಂದ್ರನನ್ನು ಗೊತ್ತಿಗೆ ಹಚ್ಚಬೇಕು. ಹಾಗೆ ಮಾಡದಿದ್ದರೆ ನಮ್ಮಿಂದ ಕಷ್ಟನಷ್ಟಗಳನ್ನು ಹೊಂದಿದ ಬಂಗಾಲದ ಜನರು ಹೇಮಚಂದ್ರನ ಆಶ್ರಯಪಡೆದು ಯುದ್ಧಕಲಾ ನಿಪುಣರಾಗಲು, ಹೇಮಚಂದ್ರನು ಅತ್ಯಂತ ಬಲಿಷ್ಠನಾಗಿ, ಕಡೆಗೆ ದಿಲ್ಲಿಯ ಕುತುಬುದ್ದೀನ ಬಾದಶಹರನ್ನು ಹಣ್ಣುಮಾಡಬಹುದು. ಇನ್ನು ಈಗಿನ ಬಂಗಾಲದ ಜನರ ನೀಚ ಸ್ಥಿತಿಯಿಂದ ಹೀಗಾಗುವದು ಅಶಕ್ಯತೋರಿದರೂ, ನಾವು ಬಂಗಾಲದಲ್ಲಿ ಹಿಂದೂ ಜನರನ್ನು ಬಲಿಷ್ಠರಾಗಗೊಡುವದು ಸರಿಯಲ್ಲ. ಹೇಮಚಂದ್ರನ ರಾಜ್ಯವನ್ನು ನಾಶಮಾಡಿ, ಬಾದಶಾಹೀನ ರಾಜ್ಯವನ್ನು ಸ್ಥಿರಪಡಿಸಿ, ಅದರಿಂದ ಪ್ರಜೆಗಳಿಗೆ ನೆಮ್ಮದಿಯಾಗುವಂತೆ ವ್ಯವಸ್ಥೆ ಮಾಡಬೇಕು; ಅಂದರೆಯೇ ನಾವು ಬಂಗಾಲದಲ್ಲಿ ಸ್ಥಿರವಾಗಿ ಚಲ್ಲಾಟವಾಡಬಹುದು.

ರುಸ್ತುಮಲಿ—ದೋಸ್ತ ನಿಮ್ಮ ಮಾತು ವಾಸ್ತವವು. ನೀವು ಹಿಂದುಗಳಿದ್ದು ಹಿಂದುಗಳ ಸತ್ವಹರಣದ ಉಪಾಯವನ್ನು ಸೂಚಿಸುತ್ತಿರುವದಕ್ಕಾಗಿ, ನಾನು ಬಾದಶಹರಮುಂದೆ ನಿಮ್ಮನ್ನು ಒಳಿತಾಗಿ ಶ್ಲಾಘಿಸುವೆನು; ಆದರೆ ನಮ್ಮ ಈಗಿನ ಬಲವು ಹೇಮಚಂದ್ರನಿಗೆ ಹೇಗೆ ಈಡಾದೀತು? ಆತನು ಮಹಾವೀರನು, ಯುದ್ಧಕಲಾನಿಪುಣನು, ಅತ್ಯಂತ ಜಾಗರೂಕನು; ಅಂದಬಳಿಕ ಏನು ಮಾಡುವದನ್ನು ವಿಚಾರದಿಂದ ಮಾಡಬೇಕಲ್ಲವೆ? ಇಲ್ಲದಿದ್ದರೆ ಈಗಿನಂತೆ ಪೆಟ್ಟುತಿಂದು ಓಡಿ ಬರಬೇಕಾದೀತು. ಹೀಗಾಗದಂತೆ ನಮ್ಮ ಬಲವನ್ನು ಹೇಗೆ ಹೆಚ್ಚಿಸಿಕೊಳ್ಳಬೇಕು ಹೇಳಿರಿ.

ಶಾಂತಶೀಲ—ನಾನು ಹೇಳುವದೇನು? ತಮಗೆ ತಮಗೆ ಅರಿಯದ್ದು ಒಂದೂ ಇರುವದಿಲ್ಲ. ಬಂಗಾಲ ಪ್ರಾಂತದಲ್ಲಿ ಅಲ್ಲಲ್ಲಿ ಸುಲಿಗೆ ಮಾಡುತ್ತಿರುವ ನಮ್ಮ ಟೋಳಿಗಳನ್ನು ಕರೆಸಿ ಒಟ್ಟುಗೂಡಿಸಬೇಕು. ಮಹಮ್ಮದಲಿಯವರೂ ಪಶ್ಚಿಮ ದೇಶದವಲ್ಲಿಯ ತಮ್ಮ ಸುಲಿಗೆಯನ್ನು ನಿಲ್ಲಿಸಿ ನಮ್ಮನ್ನು ಕೂಡಿಕೊಳ್ಳುವಂತೆ ನಿಕರದ ಪತ್ರ ಬರೆಯಬೇಕು. ಅಂದರೆ ಹೇಮಚಂದ್ರನನ್ನು ಹಣಿಯಲು ನಾವು ಸಮರ್ಥರಾಗುವೆವು. ಖಾನಸಾಹೇಬ, ಈ ಕಾರ್ಯದಲ್ಲಿ ವಿಳಂಬವು ಸರ್ವಥಾ ಉಪಯೋಗವಲ್ಲ. ವಿಳಂಬವಾದರೆ ಹೇಮಚಂದ್ರನು ಬಲಿಷ್ಠನಾಗಲು ಆಸ್ಪದದೊರೆತು, ಆತನು ಕಡೆಗೆ ದುರ್ದಮನಾಗುವನು. ನೀವು ಸೈನ್ಯದ ಬಲವನ್ನು ಹೆಚ್ಚಿಸಿ ಕೊಳ್ಳಿರಿ, ನಾನು ಯುಕ್ತಿ ಪ್ರಯುಕ್ತಿಗಳಿಂದ ಹೇಮವತೀ ನಗರವನ್ನು ಗುಪ್ತವೇಷದಿಂದ ಸೇರಿ, ಪ್ರಸಂಗದಲ್ಲಿ ಪಟ್ಟಣದ ಮಹಾದ್ವಾರವನ್ನು ತೆರೆದು ನಿಮ್ಮ ಸೈನ್ಯದ ಪ್ರವೇಶಕ್ಕೆ ಆಸ್ಪದ ವನ್ನುಂಟು ಮಾಡುವೆನು.

ರುಸ್ತುಮಲಿಯೂ, ಶಾಂತಶೀಲನೂ ಹೀಗೆ ಆಲೋಚಿಸಿ ಸದ್ಯದ ಸ್ಥಿತಿಯಲ್ಲಿ ತಾವು ಹೇಮಚಂದ್ರನ ಕಣ್ಣಿಗೆ ಬೀಳದಂತೆ ಎಲ್ಲಿಯಾದರೂ ಅಡಗಿಕೊಂಡಿರುವದು ಯೋಗ್ಯವೆಂದು ತಿಳಿದು, ತಮ್ಮ ಪರಿವಾರದೊಡನೆ ಗುಡ್ಡವನ್ನು ಸೇರಿ, ಒಂದು ಗುಪ್ತಸ್ಥಳದಲ್ಲಿ ಪಾಳಯವನ್ನು ಬಿಟ್ಟರು. ಕೆಲದಿನಗಳ ಮೇಲೆ ಮಹಮ್ಮದಲಿಯೂ ತನ್ನ ಸೈನ್ಯದೊಡನೆ ಬಂದನು. ಎಲ್ಲರೂ ಆಲೋಚಿಸತೊಡಗಿದರು. ಮಹಮ್ಮದಲಿಯು ನುರಿತ ವೀರನಾಗಿದ್ದನು. ಆತನ ಮುಖಾಂತರವಾಗಿ ಆದ ಭೇದೋಪಾಯದಿಂದಲೇ ಪಶುಪತಿಯು ಬಖತ್ಯಾರನ ಬಲೆಯಲ್ಲಿ ಸಿಕ್ಕು ಸತ್ತು ಹೋದದ್ದನ್ನು ವಾಚಕರು ಬಲ್ಲರು. ಆ ಧೂರ್ತನಾದ ಮಹಮ್ಮದಲಿಯು ಎಲ್ಲ ಪರಿಸ್ಥಿತಿಯನ್ನೂ

ಪರ್ಯಾಲೋಚಿಸಿದನು. ಶಾಂತಶೀಲನಿಂದ ಕೇಳಿಕೊಳ್ಳತಕ್ಕದ್ದನ್ನೆಲ್ಲ ಕೇಳಿಕೊಂಡನು. ರುಸ್ತುಮಲ್ಲಿಯ ಆಲೋಚನೆಯನ್ನೂ ಗ್ರಹಿಸಿದನು; ಬೇರೆ ಸೇನಾಪತಿಗಳ ವಿಚಾರವನ್ನೂ ಮನಸ್ಸಿನಲ್ಲಿ ತಂದನು. ಒಟ್ಟಿನಲ್ಲಿ ಆತನಿಗೆ ಶಾಂತಶೀಲನ ವಿಚಾರವೇ ಸಮರ್ಪಕವಾಗಿ ತೋರಿತು. ಮೋಸದ ಉಪಾಯವನ್ನು ಶಾಂತಶೀಲನೂ, ರುಸ್ತುಮಲಿಯೂ ಕೂಡಿ ಸಫಲ ಗೊಳಿಸಬೇಕೆಂದು ಗೊತ್ತಾಗಿ, ಅವರು ತಮ್ಮ ತಮ್ಮ ಕಾರ್ಯದಲ್ಲಿ ತೊಡಗಿದರು. ಸೈನ್ಯದ ಬಲವನ್ನು ಹೆಚ್ಚಿಸಿ ಅದನ್ನು ಸರ್ವಸನ್ನಾಹಗಳೊಡನೆ ಸಜ್ಜುಗೊಳಿಸುವ ಕೆಲಸವನ್ನು ಮಹಮ್ಮದಲಿಯು ನಡೆಸಿದನು. ಈ ಅವಸರದಲ್ಲಿ ಬಂಗಾಲದ ಕೊಲೆಸುಲಿಗಗಳ ಕಾಟವು ಕಡಿಮೆಯಾಗಿ, ಕೆಲದಿನ ಬಂಗಾಲಿಗಳಿಗೆ ಶಾಂತಿಯ ಅನುಭವವಾಯಿತು.

ಬ್ರಾಹ್ಮಣರು ಭೋಜನಪ್ರಿಯರು

ಇತ್ತ ಹೇಮಚಂದ್ರನಾದರೂ ಸುಮ್ಮನೆ ಕುಳಿತಿದ್ದಿಲ್ಲ. ಮಾಧವಾಚಾರ್ಯರ ತಂತ್ರದಂತೆ ಯುದ್ಧದ ಸಿದ್ಧತೆಯಲ್ಲಿ ತೊಡಗಿದ್ದನು. ತಮಗೆ ಈಗಾಗಿರುವ ಜಯವು ಕ್ಷಣಿಕವಲ್ಲದೆ ಶಾಶ್ವತ ವಲ್ಲವೆಂದು ಆತನು ತಿಳಿದಿದ್ದನು. ಜಾತ್ಯಾ ಶೂರರಾದ ಅಫಗಾಣರು ಸುಮ್ಮನೆ ಕುಳಿತುಕೊಳ್ಳ ರೆಂತಲೂ, ಇನ್ನೊಮ್ಮೆ ತಾನು ಅವರೊಡನೆ ಬೇಗನೆ ನಿಕರದಯುದ್ಧ ಮಾಡಬೇಕಾಗುವ ದೆಂತಲೂ ಆತನು ಭಾವಿಸಿದ್ದನು. ಬಂಗಾಲದ ತರುಣರನ್ನು ಸೈನ್ಯದಲ್ಲಿ ಹೆಚ್ಚು ಹೆಚ್ಚು ಸೇರಿಸಿಕೊಂಡು ತನ್ನ ಬಲವ ಹೆಚ್ಚಿಸಿಕೊಳ್ಳುವ ಯತ್ನವನ್ನು ಆತನು ನಡಿಸಿದ್ದನು. ಈ ಸೈನಿಕರ ಸಂಗ್ರಹಕ್ಕಾಗಿಯೂ, ಬಂಗಾಲದ ಪರಿಸ್ಥಿತಿಯನ್ನು ಕಣ್ಣುಮುಟ್ಟ ನೋಡಿ, ಪ್ರಜೆಗಳು ಧೈರ್ಯದಿಂದ ಮುಸಲ್ಮಾನರನ್ನು ಎದುರಿಸುವಂತೆ ಬೋಧಿಸುವದಕ್ಕಾಗಿಯೂ ನ್ಯಾಯರತ್ನ ನೆಂಬ ಒಬ್ಬ ಬ್ರಾಹ್ಮಣ ಪಂಡಿತನನ್ನು ಕಳಿಸಿದ್ದನು. ಮಾಧವಾಚಾರ್ಯರಾದರೂ ಸುಮ್ಮನೆ ಕುಳಿತಿದ್ದಿಲ್ಲ. ಸ್ವತಃ ಹೇಮಚಂದ್ರನೂ ಸೈನ್ಯದ ಸುಧಾರಣೆಯಲ್ಲಿ ತೊಡಗಿ ಹೋಗಿದ್ದನು. ಅವನು ತನ್ನ ಸೈನಿಕರ ಇರವು, ಅವರ ಯುದ್ಧ ಕಲಾನಿಪುಣತೆ, ಅವರ ಸಾಂಸಾರಿಕ ಸುಖದುಃಖಗಳು ಇವನ್ನು ಕುರಿತು ಮನಃಪೂರ್ವಕವಾಗಿ ವಿಚಾರಿಸುತ್ತ ಯೋಗ್ಯ ಅನುಕೂಲತೆಗಳನ್ನು ಉದಾರ ಮನಸ್ಸಿನಿಂದ ಹೊತ್ತಿಗೆ ಸರಿಯಾಗಿ ಒದಗಿಸಿಕೊಡುತ್ತಿದ್ದನು. ಆದ್ದರಿಂದ ಸೈನಿಕರು ಹೇಮಚಂದ್ರ ನಲ್ಲಿ ಪಿತೃಭಾವವನ್ನು ವಹಿಸಿ, ತಮ್ಮ ಸ್ವಾಮಿಕಾರ್ಯದಲ್ಲಿ ತಮ್ಮ ದೇಹವನ್ನು ಅರ್ಪಿಸುವದು ತಮ್ಮ ಪವಿತ್ರ ಕರ್ತವ್ಯವೆಂದು ತಿಳಿಯುತ್ತಿದ್ದರು. ಸೈನಿಕರ ಈ ಸದ್ಭಾವವು ಹೇಮಚಂದ್ರನ ಸೈನ್ಯಬಲವು ಬಹುಬೇಗ ಹೆಚ್ಚಲಿಕ್ಕೆ ಕಾರಣವಾಯಿತು. ತರುಣ ಬಂಗಾಲಿಗಳು ಬಡಬಡ ಸೈನ್ಯದಲ್ಲಿ ಸೇರಹತ್ತಿದರು.

ಹೇಮಚಂದ್ರನು ಒಂದುದಿನ ಸೈನ್ಯದಲ್ಲಿಯ ಕೆಲಸವನ್ನು ತೀರಿಸಿಕೊಂಡು ಮನೆಗೆ ಬರುತ್ತಿರಲು, ಒಬ್ಬ ಸುಂದರ ಸ್ತ್ರೀಯು ಮಾರ್ಗದ ಒಂದು ಮಗ್ಗಲಿಗೆ ಕುಳಿತುಕೊಂಡು

ಅಳುತ್ತಿದ್ದಳು. ಅವಳ ಎದುರಿಗೆ ಒಂದು ಏಳು ವರ್ಷದ ಗಂಡುಮಗುವು ಅಳುತ್ತ ಕುಳಿತು ಕೊಂಡಿತ್ತು. ಹೇಮಚಂದ್ರನು ಆ ಸ್ತ್ರೀಯ ಹತ್ತರ ಹೋಗಿ ಅಳುವ ಕಾರಣವನ್ನು ವಿಚಾರಿಸಲು, ಆಕೆಯು ಮಾತಾಡಲಿಲ್ಲ. ಕೂಸು ಮಾತ್ರ—''ಅಪ್ಪನು ಹೊಡೆದದ್ದರಿಂದ ಅವ್ವನು ಅಳುತ್ತಿರುವಳು'' ಎಂದು ಹೇಳಿತು. ಹೀಗೆಯೇ ಕೂಸಿನೊಡನೆ ನಡೆಸಿದ ಸಂಭಾಷಣದಿಂದ ಆ ಹೆಣ್ಣುಮಗಳ ಗಂಡನು ಒಬ್ಬ ದಂಡಾಳು ಎಂಬದು ಹೇಮಚಂದ್ರನಿಗೆ ಗೊತ್ತಾಯಿತು. ಅಗಂತೂ ಆತನು ಅಳುವ ಕಾರಣವನ್ನು ತಿಳಿಯಲೇಬೇಕೆಂದು ನಿಶ್ಚಯಿಸಿದನು. ಆತನು ಆ ಸ್ತ್ರೀಯನ್ನು ಎಷ್ಟು ಕೇಳಿದರೂ ಆಕೆಯು ಗಂಡನ ಹೆಸರು ಹೇಳಲೊಲ್ಲಳು. ಕೂಸಿಗೂ ತನ್ನ ತಂದೆಯ ಹೆಸರು ಹೇಳಲಿಕ್ಕೆ ಬರಲೊಲ್ಲದು. ಆ ತರುಣೆಯು ಹೇಮಚಂದ್ರನನ್ನು ಅರಿಯಳು; ಆದರೂ ಈತನೊಬ್ಬ ಸೈನ್ಯದ ದೊಡ್ಡ ಅಧಿಕಾರಿಯಿರಬಹುದೆಂದಲೂ, ತನ್ನ ಗಂಡನ ಹೆಸರು ಹೇಳಿದರೆ ತನ್ನನ್ನು ಬಡಿದದ್ದಕ್ಕಾಗಿ ತನ್ನ ಗಂಡನನ್ನು ಶಿಕ್ಷಿಸಬಹುದೆಂತಲೂ ತರ್ಕಿಸಿ, ಏನಾದರೂ ತನ್ನ ಗಂಡನ ಹೆಸರು ಹೇಳಲಿಕ್ಕಿಲ್ಲವೆಂದು ಆಕೆಯು ನಿರ್ಧರಿಸಿ ಸುಮ್ಮನಾಗಿಬಿಟ್ಟಳು. ಆಗ ಹೇಮಚಂದ್ರನು ಆಕೆಯನ್ನು ಕುರಿತು ಮತ್ತೆ—

ಹೇಮ—ಅಮ್ಮಾ ಇಷ್ಟು ಕೇಳಿದರೂ ನೀನು ನಿನ್ನ ಗಂಡನ ಹೆಸರು ಹೇಳದಿದ್ದ ಬಳಿಕ, ನೀನು ಏನೋ ಅಪರಾಧ ಮಾಡಿರಬಹುದು, ಅಥವಾ ನಿನ್ನ ಗಂಡನೇ ಅಪರಾಧಿಯಾಗಿರ ಬಹುದು. ನೀನು ಅಪರಾಧ ಮಾಡದಿದ್ದರೆ ನಿನ್ನನ್ನು ಆತನು ಹೊಡೆಯುವನೇಕೆ? ನೀನು ಅಪರಾಧ ಮಾಡದೆಯೂ ಹೀಗೆ ಅಳುತ್ತಿರುವ ಪಕ್ಷದಲ್ಲಿ ನಿನ್ನ ಗಂಡನೇ ಮಹಾಪರಾಧಿ ಯಾಗಿರಬೇಕು. ಇದರ ವಿಚಾರವನ್ನು ಪೂರ್ಣವಾಗಿ ಮಾಡಬೇಕಾಯಿತು.

ಈ ಮಾತುಗಳನ್ನು ಕೇಳಿ ಆ ಸ್ತ್ರೀಯು, ಈ ಅಧಿಕಾರಿಯು ತನ್ನ ಗಂಡನನ್ನು ಶಿಕ್ಷಿಸ ಬಹುದೆಂದು ಅಂಜಿ ಆತನನ್ನು ಕುರಿತು—

ಸ್ತ್ರೀ—ಸ್ವಾಮೀ, ನನ್ನ ಗಂಡನು ಬಹು ಸುಗುಣೆಯು. ನನ್ನ ಮೇಲೆ ಬಹಳ ಪ್ರೇಮ ಮಾಡುವನು; ಆದರೆ ಆತನ ಸ್ವಭಾವವು ಸಂಶಯದ್ದು. ಸಿಟ್ಟು ಬಂದರೆ ತಡೆಯುವದಿಲ್ಲ. ಹೇಗಿದ್ದರೂ ಆತನು ನನ್ನ ದೇವರಲ್ಲವೇ? ದೇವರು ಅಪರಾಧಿಯೆಂದು ನಾನು ಹೇಗೆ ಹೇಳಲಿ? ನಾನು ಬಾಯಿಬಡಿಕೆಯು, ಸಿಕ್ಕಹಾಗೆ ಮಾತಾಡುವೆನು, ಸಿಕ್ಕಹಾಗೆ ನಗುವೆನು. ನನ್ನ ದಡ್ಡತನದಿಂದ ನಾನು ಪೆಟ್ಟು ತಿನ್ನುತ್ತಿರಬಹುದು. ನನ್ನ ಗಂಡನು ನನ್ನ ಮೇಲೆ ಪಂಚಪ್ರಾಣ ಮಾಡುವನು. ಆತನದೇನೂ ತಪ್ಪು ಇಲ್ಲ. ಇದು ನನ್ನ ಕೂಸು.

ಈ ಮೇರೆಗೆ ನುಡಿದು ಮಗುವನ್ನು ತಬ್ಬಿಕೊಂಡು ಮುದ್ದಿಟ್ಟಳು. ಕಗ್ಗ ಜನರಲ್ಲಿಯ ಈ ಶುದ್ಧವಾದ ಪತಿಭಕ್ತಿಯನ್ನು ನೋಡಿ ಹೇಮಚಂದ್ರನು ಬಹು ಸಮಾಧಾನಪಟ್ಟನು. ಆತನು ಕೌತುಕದಿಂದ ಮತ್ತೆ ಆ ಸ್ತ್ರೀಯನ್ನು ಕುರಿತು—

ಹೇಮ—ಅಮ್ಮಾ ನಿಮ್ಮಿಬ್ಬರಲ್ಲಿ ಪ್ರೀತಿಯಿರಲಿ, ಇಲ್ಲದಿರಲಿ; ನಿನ್ನನ್ನು ಆತನು ಹೊಡೆಯುವದು ನನಗೆ ಸರಿಯಾಗಿ ತೋರುವದಿಲ್ಲ; ಆದುದರಿಂದ ನೀನು ನಿನ್ನ ಪತಿಯ ಹೆಸರನ್ನು ಹೇಳು. ನಾನು ಆತನ ಹೆಸರನ್ನು ಮಹಾರಾಜರಿಗೆ ತಿಳಿಸುವೆನು.

ತರುಣಿ—(ಸಂಶಯಪಡುತ್ತ) ಇದೇನು ನಿಮ್ಮ ಒತ್ತಾಯವು? ಸ್ವತಃ ನೀವು ಮಹಾರಾಜರಾಗಿದ್ದರೂ ನನ್ನ ಗಂಡನ ಹೆಸರು ನಾನು ಹೇಳುವದದಿಲ್ಲ. ಹೀಗೆ ಪತಿಯ ಹೆಸರು ಹೇಳಿ ಆತನ ಆಯುಷ್ಯವನ್ನು ಕಡಿಮೆ ಮಾಡುವದು ಯೋಗ್ಯವಲ್ಲ. ನನ್ನ ಪತಿಯು ಕಷ್ಟಪಟ್ಟು ಹಣ ದೊರಕಿಸುವದು ನಮ್ಮ ಸಲುವಾಗಿ; ಹೀಗೆ ಆತನು ಕಷ್ಟಪಟ್ಟು ತಂದ ಹಣವನ್ನು ನಾವು ಮನೆಯಲ್ಲಿ ಕುಳಿತು ಚಕ್ಕಂದದಿಂದ ನಮ್ಮ ಸುಖಕ್ಕಾಗಿ ವೆಚ್ಚ ಮಾಡುತ್ತೇವೆ. ಪತಿಯು ನಮಗೆ ಅನ್ನ ಕೊಡುವವನು. ಅಂಥವನ ಹೆಸರನ್ನು ಆತನ ಅಪರಾಧದ ವಿಚಾರಕ್ಕಾಗಿ ನಿಮ್ಮ ಮುಂದೆ ಹೇಳಲಾ? ನನ್ನ ಪತಿಯ ತಪ್ಪೂ ನನ್ನ ತಪ್ಪೇ ಆಗಿರುವದು; ಆದ್ದರಿಂದ ನನ್ನ ತಲೆಯ ಮೇಲೆ ಕಲ್ಲು ಹಾಕಿದರೂ ನಾನು ಪತಿಯ ಹೆಸರು ಹೇಳಲಾರೆನು.

ಹೇಮು—ನಿನ್ನ ಪತಿಯನ್ನು ಯಾವಬಗೆಯಿಂದಲೂ ಶಿಕ್ಷಿಸುವದಿಲ್ಲ, ಆತನ ಹೆಸರು ಹೇಳು.

ತರುಣಿ—ಘನವಂತರೇ, ಗಂಡ—ಹೆಂಡಿರ ವ್ಯವಹಾರದಲ್ಲಿ ಇಷ್ಟು ನಿಮ್ಮ ಅರೆದಾಟವೇಕೆ? ಗಂಡನ ಹೆಸರು ಹೇಳುವದರಿಂದ ಆತನ ಆಯುಷ್ಯವು ಕಡಿಮೆಯಾಗುವದೆಂದು ಆಗಲೇ ನಾನು ಹೇಳಲಿಲ್ಲವೇ? ಮಹಾರಾಜರಾದರೂ ಗಂಡ—ಹೆಂಡಿರ ವ್ಯವಹಾರದಲ್ಲಿ ಏಕೆ ಕೈಹಾಕುವರು? ಮಹಾರಾಜರು ನಮ್ಮನ್ನು ಎಲ್ಲ ಬಗೆಯಿಂದಲೂ ಮಕ್ಕಳಂತೆ ಸಂರಕ್ಷಿಸುವದರಿಂದ, ಅವರ ಅಧಿಕಾರವು ನಮ್ಮ ದೇಹದ ಮೇಲೆ ಮಾತ್ರ ಇರುವದು. ಮನಸ್ಸಿನ ಮೇಲೆ ಅವರ ಅಧಿಕಾರವೇನಿರುವದು? ಅಪ್ಪಾ, ನಮ್ಮ ಮನೆಯ ಜಗಳದಲ್ಲಿ ಇಷ್ಟು ಮನಸ್ಸಿಡುವದಕ್ಕಿಂತ, ಮುಸಲ್ಮಾನರೊಡನೆ ನಮ್ಮ ಮಹಾರಾಜರು ಹೂಡಿರುವ ಜಗಳದಲ್ಲಿ ಮನಸ್ಸಿಡಬಾರದೇ? ಗಂಡ—ಹೆಂಡಿರೇನು? ಒಮ್ಮೆ ಬಡಿದಾಡುವರು, ಒಮ್ಮೆ ಕೂಡುವರು; ಆದರೆ ದುಷ್ಟ ಮುಸಲ್ಮಾನರು ನಮ್ಮಂಥ ಅಬಲೆಯರ ಮಾನಭಂಗಮಾಡುತ್ತ ಕೊಲೆ—ಸುಲಿಗೆಗಳನ್ನು ನಡಿಸಿ ದೇಶವನ್ನು ಹಾಳುಗೆಡವುತ್ತಿರುವರು. ಅಂಥವರನ್ನು ಶಿಕ್ಷಿಸುವದಕ್ಕಾಗಿ ಮಹಾರಾಜರಿಗೆ ನೀನು ಸಹಾಯಮಾಡಬಾರದೇ? ನನ್ನ ಗಂಡನೇನು ತಪ್ಪುಮಾಡಿದ್ದಾನೆ? ಇನ್ನೆರಡು ದಿನಗಳಲ್ಲಿ ಏನೋ ಅನರ್ಥವು ಒದಗುವಂತೆ ನಿನ್ನೆ ನನಗೆ ಬಿದ್ದಿರುವ ಕೆಟ್ಟ ಕನಸಿನಿಂದ ನಾನು ಗಾಬರಿಯಾಗಿದ್ದೇನೆ. ಮಹಾರಾಜರು ಇಷ್ಟು ಕಷ್ಟಪಟ್ಟು ಸ್ಥಾಪಿಸಿದ ಹೊಸರಾಜ್ಯವನ್ನು ಮುಸಲ್ಮಾನರು ಎಲ್ಲಿ ನಾಶಮಾಡುವರೋ ಎಂಬ ಚಿಂತೆಯಿಂದ ನನಗೆ ಏನೂ ಬೇಡಾಗಿದೆ. ನಾನು ಅದೇ ಚಿಂತೆಯಿಂದ ಸುಮ್ಮನೆ ಕುಳಿತಿರುವಾಗ ನಮ್ಮ ಗಂಡ—ಹೆಂಡಿರ ವಾದವಿವಾದವಾಗಿ ನಾನು ಪೆಟ್ಟು ತಿಂದಿರುವೆನು. ಹೋಗು, ಈ ಸುದ್ದಿಯನ್ನು ಮಹಾರಾಜರಿಗೆ ಹೇಳಿ, ಮಹಾರಾಜರನ್ನು ಜಾಗ್ರತಗೊಳಿಸು ಹೋಗು. ಮುಸಲ್ಮಾನರು ಇನ್ನೆರಡು ದಿನಗಳಲ್ಲಿ ಮೋಸದಿಂದ ಮಹಾರಾಜರ ಮೇಲೆ ದಾಳಿ ಮಾಡುವರೆಂದು ನಮ್ಮ ಕಾಲಿಕಾಮಾತೆಯು ಕನಸಿನಲ್ಲಿ ಹೇಳಿರುವಳು; ಆದರೆ ಹೆಂಗಸಾದ ನಾನು ಏನುಮಾಡಲಿ?

ಈ ಮೇರೆಗೆ ನುಡಿಯುವಾಗ ಆ ತರುಣಿಯ ಕಣ್ಣುಗಳೊಳಗಿಂದ ನೀರು ಸುರಿದವು. ಆಕೆಯು ದುಃಖದ ಭರದಲ್ಲಿ ಮಗನನ್ನು ಅಪ್ಪಿಕೊಂಡು—ನನ್ನ ಸರದಾರಾ, ನೀನಾದರೂ

ಹೋಗಿ ಮುಸಲ್ಮಾನರನ್ನು ಕೊಂದು ಮಹಾರಾಜರ ಗಂಡಾಂತರವನ್ನು ದೂರಮಾಡಬಾರದೇ? ಆ ನಮ್ಮ ದೊರೆಯು ನನ್ನಂಥ ಅಬಲೆಯರ ಮಾನರಕ್ಷಕನು, ದೇಶೋದ್ಧಾರಕನು, ಎಂದು ಮಗನನ್ನು ಮುದ್ದಾಡಲು, ಆ ಕೂಸು ತಾಯಿಯಿಂದ ಕೊಸರಿ ಎದ್ದುನಿಂತು ಆವೇಶದಿಂದ— ಅವ್ವಾ, ನನಗೊಂದು ಸಣ್ಣ ಕತ್ತಿಯನ್ನು ಕೊಡಿಸಬಾರದೇನೇ? ಈಗ ಮುಸಲ್ಮಾನರನ್ನು ತುಂಡರಿಸಿ ಚಲ್ಲುವೆನು!

ಈ ವಿಲಕ್ಷಣ ಪ್ರಸಂಗದಿಂದ ಹೇಮಚಂದ್ರನ ಕಂಠಬಿಗಿದು, ಹೃದಯಕರಗಿ ಕಣ್ಣೀರುಗಳು ಹೊರಸೂಸುತ್ತಿರಲು, ಆತನು ಒಂದು ಕ್ಷಣವಾದರೂ ಅಲ್ಲಿ ನಿಲ್ಲದೆ, ತಾನು ಧನ್ಯನೆಂದು ಭಾವಿಸಿಕೊಳ್ಳುತ್ತ ಅರಮನೆಗೆ ಹೋದನು. ಕೂಡಲೇ ಆತನು ಸೇನಾಧ್ಯಕ್ಷನನ್ನು ಕರೆಸಿ, ತಾನು ನೋಡಿದ ತರುಣಿಯು ಕುಳಿತಿರುವ ಸ್ಥಳದ ಗುರುತು ಹೇಳಿ, ಆಕೆಯ ಪತಿಯ ಹೆಸರೇನೆಂಬದನ್ನು ಅನ್ಯರ ಮುಖದಿಂದ ತಿಳಿದುಕೊಂಡು ನನಗೆ ತಿಳಿಸಬೇಕೆಂತಲೂ, ಈ ವಿಷಯದಲ್ಲಿ ಆ ಹೆಣ್ಣುಮಗಳನ್ನು ಪ್ರತ್ಯಕ್ಷ ಕೇಳುವಪ್ರಸಂಗವು ಸರ್ವಥಾ ಬರಲಾಗದೆಂತಲೂ ಆಜ್ಞಾಪಿಸಿದನು.

ಭಾವಿಕನಾದ ಹೇಮಚಂದ್ರನು ಕಾಲಿಕಾಮಾತೆಯ ಗಂಡಾಂತರದ ಸೂಚನೆಯು ವ್ಯರ್ಥವಾದದ್ದಲ್ಲವೆಂದು ಭಾವಿಸಿದನು. ಭಗವತಿಯೇ ಸ್ತ್ರೀ ರೂಪದಿಂದ ತನ್ನನ್ನು ಜಾಗ್ರತ ಗೊಳಿಸಿದಳೆಂದು ಆತನು ನಿಶ್ಚಯಿಸಿದನು. ಪತಿವ್ರತಾ ಸ್ತ್ರೀಯರು ಕಾಲಿಕಾಮಾತೆಗೆ ಸರಿಯಾದ ವರಲ್ಲದೆ ಮತ್ತೇನು? ಅವರು ಶಾಪಾನುಗ್ರಹ ಸಮರ್ಥರು. ಎಂಬಿವೇ ಮೊದಲಾದ ಸದ್ಭಾವದ ವಿಚಾರಗಳಲ್ಲಿ ಆ ತರುಣ ವೀರನು ತಲ್ಲೀನನಾಗುತ್ತಿರಲು, ಪರಿಚಾರಕನು ಬಂದು— ನ್ಯಾಯರತ್ನ ಪಂಡಿತರು ದರ್ಶನಾಪೇಕ್ಷಿಗಳಾಗಿ ದಿವಾಣಖಾನೆಯಲ್ಲಿ ಕಾದಿರುವರು, ಎಂದು ಅರಿಕೆಮಾಡಿ ಕೊಂಡನು. ಹೇಮಚಂದ್ರನು ಅವರನ್ನು ಅಲ್ಲಿಗೆ ಕರತರಬಹುದೆಂದು ಆಜ್ಞಾಪಿಸಲು, ಕೂಡಲೇ ನ್ಯಾಯರತ್ನನು ಬಂದು, ನಮಸ್ಕರಿಸುವ ಅರಸನನ್ನು ಆಶೀರ್ವದಿಸಿ ಯೋಗ್ಯಾಸನದಲ್ಲಿ ಕುಳಿತು ಕೊಂಡನು. ನ್ಯಾಯರತ್ನನೂ ಬಂಗಾಲಪ್ರಾಂತದ ಸ್ಥಿತಿ— ಗತಿಗಳನ್ನು ತಿಳಿದುಕೊಂಡು, ಹೊಸ ಸೈನ್ಯವನ್ನು ಕೂಡಿಸುವದಕ್ಕಾಗಿ ಅರಸನಿಂದ ಕಳುಹಲ್ಪಟ್ಟಿದ್ದನಷ್ಟೇ? ನ್ಯಾಯರತ್ನನು ಚತುರರಾದ ಜನರನ್ನು ನಾಲ್ಕೂಕಡೆಗೆ ಕಳಿಸಿ ಸೈನಿಕರನ್ನು ಕೂಡಿಸಿದ್ದಲ್ಲದೆ, ತಾನೂ ಅತ್ಯಾಸಕ್ತಿಯಿಂದ ಆ ಕಾರ್ಯದಲ್ಲಿ ತೊಡಗಿದ್ದನು. ಆ ಬ್ರಾಹ್ಮಣನು ಬಂದಾಗ ಹೇಮಚಂದ್ರನ ಅಂತಃಕರಣವು ಶುದ್ಧಾಂತಃಕರಣದ ಪತಿವ್ರತಾ ಸ್ತ್ರೀಯ ಯೋಗದಿಂದ ಅತ್ಯಂತ ಉದಾತ್ತವಾಗಿತ್ತು; ಆಕೆಯ ಕೂಸಿನ ವೀರಾಲಾಪಗಳಿಂದಂತು ಆ ವೀರ ಹೇಮಚಂದ್ರನಿಗೆ ಯವನರು ಕಃಪದಾರ್ಥವಾಗಿ ತೋರುತ್ತಲಿದ್ದರು. ಈ ಸ್ಥಿತಿಯಲ್ಲಿ ಹೇಮಚಂದ್ರನು ನ್ಯಾಯರತ್ನನನ್ನು ಕುರಿತು—

ಹೇಮ—ಮಹನಿಯರೇ, ಕುಶಲವೇ?

ನ್ಯಾಯರತ್ನ—ಭಗವತ್ಕೃಪೆಯಿಂದ ನಿಮ್ಮ ಹಾಗು ನಿಮ್ಮ ರಾಜ್ಯದ ಕುಶಲದೊಡನೆ ನಾವೆಲ್ಲರೂ ಕುಶಲರು. ಮಹಾರಾಜಾ, ವಿಶೇಷಸಂಗತಿಯೇನು?

ಹೇಮು—ಯುದ್ಧಪ್ರಶಕ್ತಿಯ ಹೊರತು ವಿಶೇಷಸಂಗತಿಯೇನೂ ಇಲ್ಲವು. ಮುಸಲ್ಮಾನರನ್ನು ಬಂಗಾಲದಿಂದ ಹೊರದೂಡುವದು ಪ್ರಕೃತದ ವಿಷಯವಾಗಿರುವದು; ತಾವು ಎಲ್ಲಿಯವರೆಗೆ ಹೋಗಿದ್ದಿರಿ?

ನ್ಯಾಯರತ್ನ—ಬಹುತರ ಬಂಗಾಲದಲ್ಲೆಲ್ಲ ತಿರುಗಿದೆನು. ಆದರೇನು? ನೋಡಿದಲ್ಲೆಲ್ಲ ಅತ್ಯಾಚಾರ, ನೋಡಿದಲ್ಲೆಲ್ಲ ಕೊಲೆ—ಸುಲಿಗೆಗಳು. ಒಟ್ಟಿಗೆ ಬಂಗಾಲವು ಸ್ಮಶಾನ ದಂತಾಗಿರುವದು!

ಹೇಮು—ಮುಸಲ್ಮಾನರು ಇಷ್ಟು ನೀಚರಾಗಿರುವರೇ?

ನ್ಯಾಯರತ್ನ—ಮಹಾರಾಜರೇ, ಈಗಿನ ಮುಸಲ್ಮಾನರೇ ಏಕೆ? ಮುಸಲ್ಮಾನರು ಬರುವದಕ್ಕೆ ಮೊದಲೇ ಹಿಂದುಗಳೂ ನೀಚರಾಗಿದ್ದರು. ಆ ಹಿಂದುಗಳ ನೀಚತನವು ಉತ್ತರೋತ್ತರ ಹೆಚ್ಚಾಗುತ್ತ ಬಾರದಿದ್ದರೆ, ಮುಸಲ್ಮಾನರಿಗೆ ಬಂಗಾಲದ ಪ್ರವೇಶಕ್ಕೆ ಆಸ್ಪದವೇ ಆಗುತ್ತಿದ್ದಿಲ್ಲ. ಈಗಂತು ಮುಸಲ್ಮಾನರ ನೀಚತನದ ನೆವದಿಂದ ಹಿಂದುಗಳ ನೀಚತನವೂ ಪರಮಾವಧಿಗೆ ಮುಟ್ಟಿರುವದು. ಒಟ್ಟಿಗೆ, ಪರಿಸ್ಥಿತಿಯು ಚಿಂತಾಜನಕವಾದದ್ದೇ ಸರಿ!

ಹೇಮು—ಯಾವ ವರ್ಗದ ಹಿಂದುಗಳು ಅತ್ಯಾಚಾರಿಗಳಾಗಿರುವರು?

ನ್ಯಾಯರತ್ನ—ಇಂತಹ ವರ್ಗದವರೇ ಅತ್ಯಾಚಾರಿಗಳೆಂದು ಹೇಳಲಾಗುವದಿಲ್ಲ. ಇದ್ದವರೆಲ್ಲ ಅತ್ಯಾಚಾರಿಗಳೇ ಆಗಿರುವರು.

ಹೇಮು—ಚನ್ನಾಗಿ ಹೇಳಿರಿ, ನನ್ನ ಕಷ್ಟವನ್ನು ಹೆಚ್ಚಿಸಬೇಡಿರಿ.

ನ್ಯಾಯರತ್ನ—ಪ್ರಭುವೇ, ನೀನೇ ಕಣ್ಣುಮುಟ್ಟಿ ಆ ಸ್ಮಶಾನಸ್ವರೂಪದ ಬಂಗಾಲವನ್ನು ನೋಡಿದರೆ, ನಿನ್ನ ಕಷ್ಟವು ನಿಶ್ಚಯವಾಗಿ ಮೇರೆದಪ್ಪುವದು. ಆದರೆ ಮಾಡುವದೇನು? ದೇವರ ಮನಸ್ಸಿಗೆ ಹೀಗಾಗಬೇಕೆಂದು ಬಂದಂತೆ ತೋರುತ್ತದೆ. ದೊರೆಯೇ, ಹಿಂದುಗಳ ಅಧಃಪತನ ವನ್ನೆಷ್ಟಂತ ಹೇಳಲಿ? ಹಿಂದುಗಳು ನೀಚಸ್ವಾರ್ಥದ ಬಲೆಗೆ ಬೀಳದಿದ್ದರೆ, ಹಿಂದುಗಳೇ ಹಿಂದುಗಳ ರಕ್ತ ಸುರಿಸುವಲ್ಲಿ ಆಸಕ್ತರಾಗಿರದಿದ್ದರೆ, ಹಿಂದುಗಳೇ ಹಿಂದುಗಳ ಬಾಯೊಳಗಿನ ತುತ್ತನ್ನು ಕಸಿದುಕೊಳ್ಳಲಿಕ್ಕೆ ಹೋಗದಿದ್ದರೆ, ಹಿಂದುಗಳೇ ಹಿಂದುಗಳ ಸುಂದರ ಸ್ತ್ರೀಯರನ್ನು ಅವರ ಪತಿಯಿಂದ ಅಪಹರಿಸತೊಡಗಿದ್ದರೆ, ಹಿಂದುಗಳೇ ಹಿಂದುಗಳ ಕಷ್ಟಾರ್ಜಿತ ದ್ರವ್ಯವನ್ನು ಅಪಹರಿಸಿ ಧನಿಕರಾಗಲು ಯತ್ನಿಸದಿದ್ದರೆ ದೇಶದಲ್ಲಿ ಈ ತರದ ಹಾಹಾಕಾರವೇಳುತ್ತಿದ್ದಿಲ್ಲ. ಧರ್ಮರಕ್ಷಕಾ, ಹಿಂದುಗಳ ಮುಸಲ್ಮಾನರ ಕೊಲೆಸುಲಿಗೆಗಳನ್ನು ನಿಲ್ಲಿಸುವದರ ಬದಲು ಅವರೊಡನೆ ತಾವೂ ಆ ಕೆಲಸದಲ್ಲಿ ತೊಡಗಿ, ಪ್ರಜೆಗಳ ಕಷ್ಟ—ನಷ್ಟಗಳನ್ನು ಹೆಚ್ಚಿಸು ತ್ತಿರುವರು! ಮನೆಮನೆಗೆ ಕಳ್ಳರ ಸಮೂಹ, ಮನೆಮನೆಗೆ ದುಷ್ಟರ ಗುಂಪು! ದೇಶದ ಜಮೀನ ದಾರರೆಲ್ಲ ಅತ್ಯಾಚಾರಿಗಳು, ಸುಲಿಗೆಗಾರರು; ಆದುದರಿಂದಲೇ ದೇಶವು ಭೀಷಣ ಶ್ಮಶಾನ ವಾಗಿದೆ! ಆ ದಿನ ರಾತ್ರಿ ನೀವು ನವದ್ವೀಪದಲ್ಲಿ ನದಿಯಾ ರಾಜಧಾನಿಯಲ್ಲಿ ನೋಡಿದ ಭಯಂಕರ ಸ್ಥಿತಿಯು ಈಗ ದೇಶದ ತುಂಬ ವ್ಯಾಪಿಸಿರುತ್ತದೆ!

ಈ ಮಾತುಗಳನ್ನು ಕೇಳಿ ಹೇಮಚಂದ್ರನ ಮುಖಮಂಡಲವು ಕೆಂಪಾಯಿತು, ಕಣ್ಣುಗಳು ಕೆಂಡದಂತಾದವು, ಬಿಸಿಬಿಸಿಯಾದ ಉಸುರು ಭರದಿಂದ ಹೊರಬೀಳಹತ್ತಿತು. ಆತನು ಕಂಪಿತ ಸ್ವರದಿಂದ—

ಹೇಮ—ಹೇಮಚಂದ್ರನ ಈ ಕ್ಷುದ್ರಪ್ರಾಣದ ವಿನಿಮಯದಿಂದ ದೇಶದಲ್ಲಿ ಶಾಂತಿಯು ನೆಲೆಗೊಳ್ಳಲಾರದೆ?

ನ್ಯಾಯರತ್ನ—ಸಂಭವವಿಲ್ಲ. ಒಂದು ಪಕ್ಷದಲ್ಲಿ ಕೇವಲ ಮುಸಲ್ಮಾನರೇ ಅತ್ಯಾಚಾರಿಗಳಾಗಿದ್ದರೆ, ಹಿಂದುಗಳ ಸಹಾಯದಿಂದ ದೇಶದಲ್ಲಿ ಶಾಂತಿಯನ್ನು ನೆಲೆಗೊಳಿಸಬಹುದಾಗಿತ್ತು; ಆದರೆ ಧರ್ಮದ್ರೋಹಿಗಳಾದ ಹಿಂದುಗಳೇ ಅತ್ಯಾಚಾರಿಗಳಾದಬಳಿಕ, ಬೇಲಿಯೇ ಎದ್ದು ಹೊಲ ಮೇಯುವ ಸ್ಥಿತಿಯಲ್ಲಿ ಯಾರ ಸಹಾಯದಿಂದ ದೇಶದಲ್ಲಿ ಶಾಂತಿಯನ್ನು ನೆಲೆಗೊಳಿಸಬೇಕು? ಶಕ್ತಿಯಿದ್ದವರೆಲ್ಲ ಅತ್ಯಾಚಾರಿಗಳಾಗಿರುವರು; ಕಳವು ದರವಡೆಗಳು ಜನರ ಒಂದು ಬಗೆಯ ಉದ್ಯೋಗಗಳಾಗಿರುವವು; ಬಡಿಗೆಯ ಬಲವಿದ್ದವರು ದೊಡ್ಡವರಾಗಿರುವರು; ದೊಡ್ಡ ದೊಡ್ಡ ಜಮೀನುದಾರರೂ ಘಟಿಂಗರನ್ನು ಕಟ್ಟಿಕೊಂಡು ಆತ್ಮರಕ್ಷಣದಲ್ಲಾಗಲಿ, ದರವಡೆ ಮಾಡುವದರಲ್ಲಾಗಲಿ ತೊಡಗುತ್ತಿರುವರು! ಈಗಿನ ಸನ್ಯಾಸಿಗಳು ಠಕ್ಕರು, ಅತಿಥಿಗಳು ಕಳ್ಳರು; ಹೀಗಾಗಿ ಸಂಭಾವಿತರು ಮನೆತನಸ್ಥರಾಗಿರಲಿಕ್ಕೆ ಮಾರ್ಗವಿಲ್ಲದಾಗಿದೆ! ಮಹಾರಾಜಾ, ಮುಸಲ್ಮಾನರು ಬರುವ ಮೊದಲೇ ನಮ್ಮ ಜನರು ಇಷ್ಟು ನಿಕೃಷ್ಟಸ್ಥಿತಿಗೆ ಹೋದದ್ದರಿಂದ, ಸೇರಿಗೆ ಸವ್ವಾಸೇರು ಅನ್ನುವಂತೆ ನಮ್ಮ ಶಾಸನಕ್ಕಾಗಿ ದೇವರೇ ಮುಸಲ್ಮಾನರನ್ನು ನಮ್ಮ ದೇಶಕ್ಕೆ ಅತ್ಯಾಚಾರದ ಪರಮಾವಧಿಯನ್ನು ಮಾಡುವದಕ್ಕಾಗಿ ಬರಮಾಡಿರುವನೆಂದು ತಿಳಿಯಬೇಕಾಗುವದು!

ಹೇಮ—(ಕಣ್ಣೀರುದುರುತ್ತಿರಲು ಉಸುರ್ಗರೆದು) ಹಾಯ್! ನಾನು ವ್ಯರ್ಥವಾಗಿ ಹುಟ್ಟಿದೆನು, ನನ್ನ ಬಾಹುಗಳಲ್ಲಿ ಬಲವು ವ್ಯರ್ಥವಾಗಿ ಉಂಟಾಯಿತು! ನರಿ—ನಾಯಿಗಳಂತೆ ಬಡಿಗೆಗಳ ಪೆಟ್ಟಿನಿಂದ ನನ್ನ ದೇಶಬಾಂಧವರು ಸಾಯುತ್ತಿರುವಾಗ, ನಾನು ಸುರಮ್ಯ ರಾಜಮಂದಿರದಲ್ಲಿ ವಿಲಾಸಗಳನ್ನು ಭೋಗಿಸುತ್ತಿರುವೆನು! ಭಗವತೀ, ವಂಗಭೂಮಾತೇ, ಹೇಮಚಂದ್ರನಂತೆಯೇ ನಿನ್ನ ಮಕ್ಕಳೆಲ್ಲರೂ ವಿವೇಕಭ್ರಷ್ಟರೇ ಆಗಿರುವರೇನು?

ನ್ಯಾಯರತ್ನ—ಮಹಾರಾಜ, ವ್ಯಸನಪಡಲಾಗದು. ಪುರುಷಪ್ರಯತ್ನವು ಶ್ರೇಷ್ಠವಾದದ್ದು; ಹತಾಶರಾಗದೆ ಕರ್ತವ್ಯವೆಂದು ನಾವು ಪ್ರಯತ್ನವನ್ನು ಮಾಡಲೇ ಬೇಕು. ಬಹುಜನ ತರುಣರನ್ನು ಉಪದೇಶದಿಂದ ಹಾದಿಗೆ ತಂದು ದಂಡಾಳುಗಳಾಗುವದಕ್ಕಾಗಿ ಕರೆತಂದಿದ್ದೇನೆ. ಅವರು ಕಳವು—ಸುಲಿಗೆಗಳನ್ನು ಬಿಟ್ಟು ಬಂದಿರುವರು. ಅವರನ್ನು ಸೇನಾಪತಿಯ ವಶಕ್ಕೆ ಕೊಟ್ಟಿರುವೆನು!

ಹೇಮ—ವಿಪ್ರವರ, ಆಗಲಿ, ಪ್ರಯತ್ನಮಾಡೋಣ, ಪ್ರಯತ್ನ ಮಾಡುತ್ತ ದೇಶಬಾಂಧವರಿಗಾಗಿ ದೇಹವನ್ನರ್ಪಿಸೋಣ! ಅದಕ್ಕಾಗಿ ಹೀಗೆಯೇ ದೇಶದಲ್ಲಿ ದಂಡಾಳುಗಳನ್ನು ಕೂಡಿಸಬೇಕಾಗಿರುವದು; ಮುಸಲ್ಮಾನರೊಡನೆ ನಾವು ಬೇಗನೆ ಯುದ್ಧಮಾಡಬೇಕಾಗುವದು. ಈ ಮೊದಲೇ ನಮಗುಂಟಾಗಿದ್ದ ಜಯವು ಅತ್ಯಂತ ಕ್ಷುದ್ರವಾದದ್ದು, ಅದು ಯುದ್ಧದಲ್ಲಿ ಗಣ್ಯವಾದದ್ದೇ ಅಲ್ಲ.

ನ್ಯಾಯ—ತಾವು ಅನ್ನುವದು ಯಥಾರ್ಥವು. ಈಗ ಸ್ವಲ್ಪ ದಿನಗಳಿಂದ ಮುಸಲ್ಮಾನರ ಹಾವಳಿಯು ದೇಶದಲ್ಲಿ ಕಡಿಮೆಯಾಗಿರುವದರಿಂದ, ಅವರು ಎಲ್ಲಿಯೋ ಒಟ್ಟುಗೂಡಿ ಸಂಧಾನ ನಡಿಸುತ್ತಿರುವಂತೆ ತೋರುತ್ತದೆ.

ಹೇಮ—ನಿಶ್ಚಯವು. ಮಾಗಧನಗರಿಯನ್ನು ಮುತ್ತುವದಕ್ಕಾಗಿಯೇ ಅವರು ಯೋಚಿಸುತ್ತಿರುವದು ನಿಶ್ಚಯವು. ಅದಕ್ಕೆ ಪ್ರತಿಯಾಗಿ ನಾವು ಸರ್ವಮುಖಗಳಿಂದ ಯತ್ನಿಸಬೇಕು. ನಿಮ್ಮ ಪರಿಶ್ರಮವನ್ನು ನೋಡಿ ನನಗೆ ಬಹಳ ಸಂತೋಷವಾಯಿತು. ಇದರಂತೆಯೇ ನಮ್ಮ ಮಾಗಧೀನಗರಿಯ ರಕ್ಷಣಕ್ಕಾಗಿ ಶಕ್ತಿ—ಯುಕ್ತಿಗಳಿಂದ ನೀವೆಲ್ಲರೂ ಯತ್ನಿಸತಕ್ಕದ್ದು.

ಈ ಮೇರೆಗೆ ಇವರ ಸಂಭಾಷಣವು ನಡೆದಿರಲು, ರತ್ನದಾಸ ಸೆಟ್ಟಿಯು ಬಂದಿರುವನೆಂದು ಸೇವಕನು ವಿಜ್ಞಾಪಿಸಿದನು. ಕೂಡಲೇ ಅರಸನ ಅಪ್ಪಣೆಯಿಂದ ಸೆಟ್ಟರು ಒಳಗೆ ಬಂದು ನಮಸ್ಕರಿಸಿ ಕುಳಿತುಕೊಂಡರು. ಹೇಮಚಂದ್ರನ ಸೈನ್ಯದ ಸರ್ವಸನ್ನಾಹಗಳನ್ನು ಒದಗಿಸಿಕೊಡುವದು ರತ್ನದಾಸಸೆಟ್ಟರ ಕೆಲಸವಾಗಿತ್ತು. ಮುಸಲ್ಮಾನರು ಬೇಗನೆ ಮಾಗಧೀನಗರಿಯ ಮೇಲೆ ಸಾಗಿಬರುವರೆಂದು ಎಲ್ಲರೂ ತಮ್ಮ ತಮ್ಮ ಕೆಲಸಗಳಲ್ಲಿ ತೊಡಗಿಹೋಗಿ, ಆಗಾಗ್ಗೆ ಮಹಾರಾಜರನ್ನು ಕಂಡು ತಮ್ಮ ತಮ್ಮ ಕೆಲಸಗಳನ್ನು ಕುರಿತು ಅರಿಕೆಮಾಡಿಕೊಳ್ಳುತ್ತಿದ್ದರು. ಹೇಮಚಂದ್ರನು ರತ್ನದಾಸನನ್ನು ಕುರಿತು—

ಹೇಮಚಂದ್ರ—ಸೆಟ್ಟರೇ, ನಿಮ್ಮ ಕೆಲಸವು ಸರಿಯಾಗಿ ನಡೆದಿದೆಯೇ?

ರತ್ನದಾಸ—ಪ್ರಭುಗಳ ಕೆಲಸವು ಸರಿಯಾಗಿ ನಡೆಯದಿರುವದುಂಟೇ? ಸೈನ್ಯದ ಒಂದು ವರ್ಷದ ಸಾಮಗ್ರಿಯನ್ನು ಸಿದ್ಧಪಡಿಸಿರುವೆನು. ಇನ್ನೂ ಸಂಗ್ರಹದ ಕೆಲಸವು ನಡದೇ ಇರುವದು. ನಮ್ಮ ಕೆಲಸಕ್ಕೆ ಪಾಟಣಾದ ವರ್ತಕನಿಂದ ಬಹಳ ಸಹಾಯವಾಯಿತು. ಹೊತ್ತಿಗೆ ಸಾಮಾನುಗಳನ್ನು ಒದಗಿಸಿಕೊಡುವಲ್ಲಿ ಆತನು ಒಳ್ಳೇ ಸಮರ್ಥನು; ಮೇಲೆ ದೊಡ್ಡ ಶ್ರೀಮಂತನು; ಆತನು ಪ್ರಭುಗಳಿಗೆ ಈ ಮೊದಲೇ ಕಾಣಿಕೆಯಾಗಿ ಒಪ್ಪಿಸಿರುವ ರತ್ನಗಳ ಬೆಲೆಯೇ ಕೋಟ್ಯಂತರ ರೂಪಾಯಿಯಾಗಬಹುದು.

ಹೇಮಚಂದ್ರ—ಅದರಲ್ಲಿ ಸಂಶಯವೇನು? ಆದರೆ ಇಷ್ಟು ಕಾಣಿಕೆ ಕೊಡುವದು ವ್ಯಾಪಾರ ದೃಷ್ಟಿಯಿಂದ ಹೆಚ್ಚೇಸರಿ; ಆದ್ದರಿಂದ ಆ ವರ್ತಕನ ಮೇಲೆ ಪೂರ್ಣಲಕ್ಷವಿರುವಂತೆ ನಾವು ಸೇವಕರಿಗೆ ಹೇಳಿರುತ್ತೇವೆ. ನೀವಾದರೂ ಆತನನ್ನು ದುರ್ಲಕ್ಷಿಸಬೇಡಿರಿ.

ರತ್ನದಾಸ—ಪ್ರಭುಗಳ ಅಪ್ಪಣೆಯು ಬಹು ಯೋಗ್ಯವಾದದ್ದು. ನಾನು ಅತಿ ಸೂಕ್ಷ್ಮ ರೀತಿಯಿಂದ ಆತನ ನಡತೆಯನ್ನು ಪರೀಕ್ಷಿಸುತ್ತಿರುವೆನು. ಪ್ರಭುಗಳ ಸೇವಕರಾದರೂ ಆ ವರ್ತಕನ ಹಡಗು ಮೊದಲಾದವನ್ನು ಸೂಕ್ಷ್ಮರೀತಿಯಿಂದ ಶೋಧಿಸುತ್ತಿರುವರು. ಆತನು ನಿಯಮಕ್ಕಿಂತ ಹೆಚ್ಚು ಜನರನ್ನು ಬರಮಾಡಿಕೊಳ್ಳದಂತೆಯೂ, ಆ ಜನರು ಯಾವಾಗಲೂ ನಿಶ್ಶಸ್ತ್ರರಾಗಿರುವಂತೆಯೂ, ಯುದ್ಧೋಪಯುಕ್ತವಾದ ಸಾಮಾನುಗಳು ಬಾರದಂತೆಯೂ ನೋಡಿಕೊಳ್ಳುತ್ತಿರುವರು; ಆದ್ದರಿಂದ ಆ ವರ್ತಕನ ವಿಷಯದಲ್ಲಿ ಪ್ರಭುಗಳು ನಿಶ್ಚಿಂತರಾಗಿರಬೇಕು; ಆದರೆ ಮಹಾರಾಜ, ವರ್ತಕನು ಅತ್ಯಂತ ಸಜ್ಜನನಾಗಿ ತೋರುವನಲ್ಲದೆ, ಅತ್ಯುದಾರನಾಗಿಯೂ

ಇರುವನು. ಮಹಾಪ್ರಭುಗಳಲ್ಲಿ ಆತನ ತುಂಬಾ ವಿಶ್ವಾಸ; ಆದ್ದರಿಂದ ಒಂದು ಮಾತಿನ ಸಲುವಾಗಿ ಆತನು ಪ್ರಭುಗಳನ್ನು ಪ್ರಾರ್ಥಿಸುತ್ತಿರುವನು.

ಹೇಮಚಂದ್ರ—ಅದೇನು ಪ್ರಾರ್ಥನೆ?

ರತ್ನದಾಸ—ಇನ್ನು ಆತನು ತನ್ನ ಪಟ್ಟಣಕ್ಕೆ ಹೋಗುವವನಿದ್ದು, ಪ್ರಭುಗಳ ನಂದನಾವಾಸದಲ್ಲಿ ಪ್ರಭುಗಳಿಗೆ ಪ್ರೀತಿ ಭೋಜನ ಮಾಡಿಸಬೇಕೆಂದು ಆತನು ಇಚ್ಛಿಸುತ್ತಿರುವನು. ಪ್ರಭುಗಳ ವಿಷಯದ ಆತನ ಭಕ್ತಿ ವಿಶ್ವಾಸಗಳನ್ನು ನೋಡಿದರೆ, ಆತನ ಇಚ್ಛೆಯನ್ನು ಪೂರ್ಣಮಾಡುವದು ಯೋಗ್ಯವಾಗಿ ತೋರುತ್ತದೆ.

ಹೇಮಚಂದ್ರ—ವೈರಿಗಳು ಎದೆಯ ಮೇಲಿರುವಾಗ ಭೋಜನ ಸಮಾರಂಭವೇ?

ಈ ಮೇರೆಗೆ ಪ್ರಶ್ನಮಾಡುತ್ತಿರಲು, ಬ್ರಾಹ್ಮಣ ಶ್ರೇಷ್ಠನಾದ ನ್ಯಾಯರತ್ನನು—ಪ್ರಭುಗಳೇ, ಭೋಜನ ಪ್ರಸಂಗದಲ್ಲಿ ಭಯವೇನು? ಪರದೇಶದ ವರ್ತಕನು ಇಷ್ಟು ಭಕ್ತಿ—ವಿಶ್ವಾಸ ತೋರಿಸುವದೇ ಹೆಚ್ಚು. ಆತನ ಮನಸ್ಸಾದರೂ ಯಾಕೆ ನೋಯಿಸಬೇಕು? ಒಟ್ಟುಗೂಡಿದ ಪ್ರಮುಖ ರಾಜನಿಷ್ಠ ಪುರುಷರಲ್ಲಿ ಕಾರ್ಯೋತ್ಸಾಹವನ್ನುಂಟುಮಾಡಲಿಕ್ಕೊಂದು ಆನಂದದ ಪ್ರಸಂಗವು ಅನಾಯಾಸವಾಗಿ ಒದಗಿದಂತಾಗುವದು, ಎಂದು ಹೇಳಿ, ಭೋಜನ ಸಮಾರಂಭಕ್ಕೆ ಹೇಮಚಂದ್ರನ ಒಪ್ಪಿಗೆಯನ್ನು ಪಡೆದನು. ಕಡೆಗೂ ''ಬ್ರಾಹ್ಮಣರು ಭೋಜನ ಪ್ರಿಯರೆ''ಂಬ ಮಾತು ಸುಳ್ಳಲ್ಲ!

ಘೋರ—ಸಂಗ್ರಾಮ

ಹೇಮಚಂದ್ರ ಮಹಾರಾಜನ ವಿಲಾಸಭವನವು ಈದಿನ ದೀಪಪಂಗ್ತಿಗಳಿಂದ ಪರಿಶೋಭಿಸುತ್ತಿರುವದು. ರಾಜಧಾನಿಯೊಳಗಿನ ದೊಡ್ಡದೊಡ್ಡ ಸರದಾರರೂ, ಸೇನಾಪತಿಗಳೂ, ಮಂತ್ರಿಗಳೂ, ರಾಜ್ಯಾಧಿಕಾರಿಗಳೂ ಅಲ್ಲಿಗೆ ಪಾಟಣಾದ ವರ್ತಕನ ಆತಿಥ್ಯವನ್ನು ಕೈಕೊಳ್ಳುವದಕ್ಕೆ ಬಂದಿರುವರು. ಆ ವರ್ತಕನು ಕೈ ಸಡಿಲುಬಿಟ್ಟು, ಹಣ ವೆಚ್ಚಮಾಡಿ ಅಂದಿನ ಭೋಜನ ಸಮಾರಂಭವನ್ನು ಅತ್ಯುತ್ತಮ ರೀತಿಯಿಂದ ಮಾಡಿಸಿದ್ದನು. ಆಯಾ ಧರ್ಮದವರ ಪದ್ಧತಿಗನುಸರಿಸಿ ಬೇರೆ ಬೇರೆ ಅಡಿಗೆಗಳು ಸಿದ್ಧವಾಗಿದ್ದವು. ಬ್ರಾಹ್ಮಣರ ಭೋಜನ ಸಮಾರಂಭದ ಕೆಲಸವು ನ್ಯಾಯರತ್ನ ಪಂಡಿತರ ಮೇಲ್ನೋಟದಲ್ಲಿ ಜರುಗುತ್ತಿರುವದು. ಭೋಜನ ಗೃಹವು ಸುಗಂಧದ ಧೂಪಗಳಿಂದ ಘಮಘಮಿಸುತ್ತಿದ್ದು, ವಿವಿಧ ಭಕ್ಷ್ಯ ಭೋಜ್ಯಗಳಿಂದ ಅತಿಥಿಗಳು ಸಂತುಷ್ಟರಾಗುತ್ತಿರುವರು. ವರ್ತಕನ ವಿನಯಭಾವ, ಔದಾರ್ಯದ ವ್ಯವಸ್ಥೆ, ಕಾರ್ಯದಲ್ಲಿಯ ಸುಸಂಗತತೆ ಇವನ್ನು ನೋಡಿ ಹೇಮಚಂದ್ರನು ಬಹು ಸಂತುಷ್ಟನಾಗಿದ್ದನು. ಆ ವರ್ತಕನು ಊಟಕ್ಕೆ ಕುಳಿತವರನ್ನು ಸಾವಕಾಶವಾಗಲೆಂದು ಹೇಳಿಕೊಳ್ಳುವಾಗ—''ಮಹಾರಾಜ, ನಾನೇನು ನನ್ನ ಮನೆಯ ಹಣದಿಂದ ಸಮಾರಂಭ ಮಾಡಿದಂತಾಗಿರುವದಿಲ್ಲ; ಯಾಕಂದರೆ ನಿಮ್ಮ ಪಟ್ಟಣ

ದಲ್ಲಿಯ ವ್ಯಾಪಾರದಿಂದ ನನಗಾದ ಲಾಭಾಂಶದಲ್ಲಿ ಈ ಸಮಾರಂಭವನ್ನು ಮಾಡಿರುವದರಿಂದ, ತಮ್ಮ ಮನೆಯಲ್ಲಿ ತಾವು ಸಂಕೋಚವಿಲ್ಲದೆ ಭೋಜನ ಮಾಡುವಂತೆ ಸಾವಕಾಶ ಭೋಜನ ಮಾಡಬೇಕು. ಹೇಗಿದ್ದರೂ ನಾನೊಬ್ಬ ಸಾಮಾನ್ಯ ವರ್ತಕನು; ಅಂದಬಳಿಕ ಮಹಾರಾಜರ ಆತಿಥ್ಯಮಾಡುವ ಪಾತ್ರತೆಯು ನನಗೆ ಹೇಗೆ ಬರುವದು? ಆದರೂ ಘನವಂತರಾದ ತಾವು ನನ್ನನ್ನು ಅನುಗ್ರಹಿಸಿ ಕೊರತೆಗಳನ್ನು ಲಕ್ಷಿಸದೇ ಕ್ಷಮಿಸಿ ಬಡವನ ಅತಿಥ್ಯವನ್ನು ಸ್ವೀಕರಿಸಬೇಕು.'' ಎಂಬರ್ಥದಿಂದ ಕೈಜೋಡಿಸಿ ಪ್ರಾರ್ಥಿಸುತ್ತಿದ್ದನು.

ಭೋಜನಾನಂತರ ಎಲ್ಲರೂ ದಿವಾಣಖಾನೆಯಲ್ಲಿ ಯೋಗ್ಯಾಸನಗಳಲ್ಲಿ ಮಂಡಿಸಿ ತಾಂಬೂಲಗಳನ್ನು ಸವಿಯುತ್ತಿದ್ದರು. ವರ್ತಕನ ಕಡೆಯ ಜನರು ವಿವಿಧ ಸುಗಂಧದ್ರವ್ಯ ಗಳಿಂದಲೂ, ಪುಷ್ಪಮಾಲೆಗಳಿಂದಲೂ ಜನರನ್ನು ಸಂತೋಷಪಡಿಸುತ್ತ ಅಲ್ಲಲ್ಲಿ ಸಂಚರಿಸು ತ್ತಲಿದ್ದರು. ಅತ್ತ ನಾಚು—ರಂಗುಗಳು ಯಥಾಪ್ರಕಾರವಾಗಿ ನಡೆದಿದ್ದವು. ವರ್ತಕನು ಬ್ರಾಹ್ಮಣರಿಗೆ ವಿಪುಲ ದಕ್ಷಿಣೆ ಕೊಟ್ಟನು. ದೊಡ್ಡ ದೊಡ್ಡ ಅಧಿಕಾರಿಗಳಿಗೆ ಕೊಡುವದಕ್ಕಾಗಿ ಬೆಲೆಯುಳ್ಳ ಕಾಣಿಕೆಗಳನ್ನು ಸಿದ್ಧಪಡಿಸಿದ್ದನು. ಅರಸನಿಗಂತು ಲಕ್ಷಾವಧಿ ರೂಪಾಯಿಗಳ ಕಾಣಿಕೆ ಕೊಡುವ ವ್ಯವಸ್ಥೆಯಾಗಿತ್ತು. ತಾಸೆರಡುತಾಸು ನೃತ್ಯ—ಗೀತೆಗಳಲ್ಲಿ ಕಾಲಹರಣವಾಗಿ ಎಲ್ಲರೂ ವರ್ತಕನ ಔದಾರ್ಯವನ್ನು ಶ್ಲಾಘಿಸುತ್ತಿರಲು, ಕಾಣಿಕೆ ಕೊಡುವ ಪ್ರಸಂಗವು ಒದಗಿತು. ಆಗ ವರ್ತಕನು ಅರಸನಿಗೆ ಕೊಡತಕ್ಕ ಬಹು ಬೆಲೆಯುಳ್ಳ ಕಾಣಿಕೆಯ ವಸ್ತುಗಳನ್ನು ತಕ್ಕೊಂಡು ಅತ್ಯಂತ ವಿನಯದಿಂದ ರಾಜನ ಬಳಿಗೆ ಹೋದನು. ಕೂಡಲೆ ಒಬ್ಬ ಅಪರಿಚಿತ ತರುಣ ಸರದಾರನು ಆತನನ್ನು ಹಿಂಬಾಲಿಸಿದನು; ವರ್ತಕನ ಲಕ್ಷವು ಆ ತರುಣ ಸರದಾರನ ಕಡೆಗಿದ್ದಿಲ್ಲ. ಆತನು ಬಾಗಿ ಅರಸನಿಗೆ ಕಾಣಿಕೆಯನ್ನು ಅರ್ಪಿಸುವ ನೆವದಿಂದ ತನ್ನ ಗುಪ್ತ ಶಸ್ತ್ರವನ್ನು ಬೈಲಿಗೆಳೆದು ನೆಗಹಿ ಅರಸನನ್ನು ಸಂಹರಿಸತಕ್ಕವನು, ಅಷ್ಟರಲ್ಲಿ ಅವನ ಹಿಂದೆ ನಿಂತಿದ್ದ ತರುಣ ಸರದಾರನ ಕೈ ಖಡ್ಗದಿಂದ ವರ್ತಕನ ತಲೆ ಕತ್ತರಿಸಿ ಹೇಮಚಂದ್ರನ ಮುಂದೆ ಬಿದ್ದಿತು; ಅಷ್ಟರಲ್ಲಿ ಇನ್ನೊಬ್ಬ ತರುಣ ಸರದಾರನು ನ್ಯಾಯರತ್ನನ ಮೇಲೆ ಸಾಗಿಹೋಗಿದ್ದ ವರ್ತಕನ ಗುರುವಿನ ರುಂಡವನ್ನು ಹಾರಿಸಿದ್ದನು. ಈ ಅಕಲ್ಪಿತವಾದ ಭಯಂಕರ ಪ್ರಸಂಗವನ್ನು ನೋಡಿ ಸಭಿಕರು ಮುಂದುಗಾಣದೆ ಅತ್ತಿತ್ತ ನೋಡುತ್ತಿರಲು, ಇದೇ ಅವಸರದಲ್ಲಿ ಹೇಮಚಂದ್ರನ ಸೈನಿಕರು ವರ್ತಕನ ಪರಿವಾರದವರ ಗುಪ್ತ ಶಸ್ತ್ರಗಳನ್ನು ಕಸಿದುಕೊಂಡು ಅವರ ಹೆಡಮುರಿಗೆಗಳನ್ನು ಕಟ್ಟಿದರು. ಹೇಮಚಂದ್ರನಿಗೆ ಈ ಗೂಢವಾವುದೂ ಗೊತ್ತಾಗದ್ದರಿಂದ, ಏನು ಮಾಡಬೇಕೆಂಬ ದನ್ನರಿಯದೆ ಜಡಮೂಢನಂತೆ ಕುಳಿತುಬಿಟ್ಟಿದ್ದನು. ಆಗ ವರ್ತಕನ ರುಂಡವಿಳಿಸಿದ ಮೊದಲನೆಯ ತರುಣ ಸರದಾರನು ಗಂಭೀರಸ್ವರದಿಂದ—

ಮಹಾರಾಜರೇ, ಸಮಸ್ತ ಭಾರತೀಯ ಬಾಂಧವರೇ, ನಾನು ಮಾಡಿದ ವರ್ತಕನ ಕೊಲೆಯ ವಿಷಯವಾಗಿಯೂ, ನಮ್ಮ ಇನ್ನೊಬ್ಬ ತರುಣನು ಮಾಡಿರುವ ಈ ದುಷ್ಟ ಸಾಹುಕಾರನ ಗುರುವಿನ ಕೊಲೆಯ ವಿಷಯವಾಗಿಯೂ ನೀವು ಆಶ್ಚರ್ಯದಿಂದ ಆಲೋಚಿಸು ತ್ತಿರಬಹುದು; ಆದರೆ ನಿಮ್ಮ ಆ ಆಲೋಚನೆಯನ್ನು ತಟ್ಟನೆ ದೂರಮಾಡಿ ನಿಮ್ಮೆಲ್ಲರನ್ನು

ಈಕ್ಷಣ ಯುದ್ಧಸನ್ನದ್ಧರನ್ನಾಗಿ ಮಾಡುವದು ಅವಶ್ಯವಾಗಿರುತ್ತದೆ. ಈ ಸತ್ತುಬಿದ್ದಿರುವ ವರ್ತಕನು ಒಬ್ಬ ದುಷ್ಟನಾದ ಮುಸಲ್ಮಾನ ಸರದಾರನು; ಆತನ ಹೆಸರು ರುಸ್ತುಮಲಿ; ಅಗೋ, ಅಲ್ಲಿ ಸತ್ತುಬಿದ್ದಿರುವ ವರ್ತಕನ ಗುರುವು ಒಬ್ಬ ಸ್ವಜನರ ಹಾಗೂ ಸ್ವದೇಶದ ದ್ರೋಹಿಯಾದ ಹಿಂದುವು. ಆತನ ಹೆಸರು ಶಾಂತಶೀಲ! ನಮ್ಮ ದೇಶಬಾಂಧವರ ಕೊಲೆ—ಸುಲಿಗೆಗಳಿಂದ ಸಂಪಾದಿಸಿದ ಧನರಾಶಿಯನ್ನೂ, ಮುತ್ತುರತ್ನಗಳನ್ನೂ ಸಿಕ್ಕಹಾಗೆ ವೆಚ್ಚಮಾಡಿ ನಿಮ್ಮನ್ನು ಮೋಹಿಸಿ, ನಮ್ಮ ನೂತನ ರಾಜ್ಯವನ್ನು ಮಣ್ಣುಗೂಡಿಸುವದಕ್ಕಾಗಿ ಈ ವರ್ತಕ ವೇಷಧಾರಿಯಾದ ರುಸ್ತುಮಲಿಯೂ, ಆತನ ಗುರುವೆನಿಸಿ ವ್ಯವಹರಿಸುತ್ತಿದ್ದ ಶಾಂತಶೀಲನೂ ಬಹು ದಿವಸಗಳಿಂದ ನಿಮ್ಮ ರಾಜಧಾನಿಯಲ್ಲಿಯೇ ಇದ್ದು, ಅರಸನ ಕೊಲೆಮಾಡುವದಕ್ಕಾಗಿ ಕಾದಿದ್ದರು. ಇನ್ನು ಒಂದು ಕ್ಷಣ ಕ್ರಮಿಸಿದ್ದರೆ, ವರ್ತಕನಿಂದ ನಮ್ಮ ಉದಾರ ಹೃದಯದ ಹೇಮಚಂದ್ರ ಪ್ರಭುವೂ, ವರ್ತಕನ ಗುರುವಿನಿಂದ ಸರಳ ಹೃದಯದ ನ್ಯಾಯರತ್ನ ಪಂಡಿತರೂ, ವರ್ತಕನ ಈ ಪರಿಜನರಿಂದ ನಿಶ್ಯಸ್ತ್ರರಾಗಿರುವ ನಿಮ್ಮಲ್ಲಿಯ ಮುಖ್ಯರಾದವರೂ ಹತರಾಗುತ್ತಿದ್ದರು. ನಮ್ಮ ಆರ್ಯ ಭೂಮಾತೆಯ ಮಕ್ಕಳ ಸತ್ಯಸಂಧತೆ—ಸರಳತನ—ಭೂತದಯೇ ಇವುಗಳ ದುರುಪಯೋಗ ಮಾಡಿ, ದುಷ್ಟ ಯವನರು ಈವರೆಗೆ ಹಲವು ಕಡೆ ನಮ್ಮ ನಾಶಮಾಡಿರುವಂತೆ, ಈಗಲೂ ನಮ್ಮ ನಾಶಮಾಡುತ್ತಿದ್ದರು. ಈ ವರ್ತಕನ ಒಬ್ಬ ಮನುಷ್ಯನೂ ಈ ದಿವಾನಖಾನೆಯನ್ನು ಬಿಟ್ಟು ಹೊರಗೆ ಹೋಗದಂತೆ ನಾನು ತಂತ್ರವೆಸಗಿದ್ದನ್ನು ನೀವು ನೋಡಿರುವಿರಿ; ಹಾಗೆ ತಂತ್ರವೆಸಗಿದ್ದರೆ ಅನರ್ಥವಾಗುವ ಪ್ರಸಂಗವಿತ್ತು; ಯಾಕಂದರೆ, ಇಲ್ಲಿ ಒದಗಬೇಕಾಗಿದ್ದ ನಿಮ್ಮ ಸಂಹಾರರೂಪ ಅನರ್ಥಕಾರಕ ಕೃತಿಯು ಸಫಲವಾದ ಸುದ್ದಿಯು ತಿಳಿದಕೂಡಲೆ ನಮ್ಮನ್ನೂ, ನಮ್ಮ ಈ ಮಾಗಧೀಪುರಿಯನ್ನೂ ಸುಟ್ಟು ಸೂರೆಗೊಳ್ಳುವದಕ್ಕಾಗಿ ಪ್ರಚಂಡ ಮುಸಲ್ಮಾನ ಸೇನೆಯು ಇಲ್ಲಿಂದ ಎರಡು ಹರದಾರಿ ದೂರದಲ್ಲಿ ಸಿದ್ಧವಾಗಿ ನಿಂತಿರುವದು! ಇಗೋ, ಈ ವರ್ತಕರೂಪ ಯವನ ಸರದಾರನಿಗೆ—ರುಸ್ತುಮಲಿಗೆ ಅವರ ಮುಖ್ಯನಾದ ಮಹಮ್ಮದಲಿಯೂ ಬರೆದ ಈ ಪತ್ರವನ್ನು ನೋಡಿರಿ. ಅದನ್ನು ಈಶ್ವರೀ ಕೃಪೆಯಿಂದ ನಾನು ಹೇಗೆ ಹೇಗೋ ಸಂಪಾದಿಸಿ, ಅದು ಈ ದುಷ್ಟ ಸರದಾರನ ಕೈಗೆ ಹತ್ತದಂತೆ ಮಾಡಿರುವೆನು. ಈ ಪತ್ರವು ಮುಟ್ಟದ್ದರಿಂದ ತನ್ನ ಯವನ ಸೇನೆಯು ಬಂದಿದೆಯೋ ಇಲ್ಲವೋ ಎಂದು ಶಂಕಿಸುತ್ತಿರುವಾಗ ಈ ದುಷ್ಟ ವರ್ತಕನ ರುಂಡವನ್ನು ಈ ಭವಾನಿಯ ಕೈಯೊಳಗಿನ ಖಡ್ಗವು ತುಂಡರಿಸಿ, ತನ್ನ ಯವನ ರಕ್ತಪಾನದ ಕಾರ್ಯವನ್ನು ಈಡೇರಿಸಿರುವದು! ಏಳಿರಿ, ಇನ್ನು ಸರ್ವಸನ್ನಾಹದಿಂದ ಯವನರೊಡನೆ ಯುದ್ಧಮಾಡುವದಕ್ಕಾಗಿ ಕ್ಷಣದ ವಿಳಂಬವೂ ಆಗದಂತೆ ಸಿದ್ಧರಾಗಿರೇಳಿರಿ! ಎಂದು ಹೇಳುತ್ತಿರಲು, ಹೇಮಚಂದ್ರನು ಎದ್ದು ನಿಂತು ಆ ತರುಣನ ಬೆನ್ನ ಮೇಲೆ ಕೈಯಾಡಿಸಿ ಅಭಿನಂದಿಸುತ್ತ—ತಂಗೀ, ನಮ್ಮ ಈ ನೂತನ ಹಿಂದೂ ರಾಜ್ಯದ ಮೇಲೆ ನಿನಗದೆಷ್ಟು ಉಪಕೃತಿಯಮ್ಮಾ! ನೀನು ಮನುಷ್ಯಮಾತ್ರಳೆಂದು ನಾನು ಹೇಗೆ ತಿಳಿಯಲಿ? ದುಷ್ಟ ಶಾಸನ—ಶಿಷ್ಟ ಪರಿಪಾಲನಗಳಿಗಾಗಿ ಅವತರಿಸಿದ ಸಾಕ್ಷಾತ್ ಆದಿಶಕ್ತಿಯೆಂದು ನಾನು ತಿಳಿಯುವೆನು. ಇರಲಿ, ಈಗ ಹೆಚ್ಚಿನ ಮಾತುಬೇಡ, ನಿನ್ನ ಅಪ್ಪಣೆಯಂತೆ ನಮ್ಮ ಸೇನಾಪತಿಗಳು ಯುದ್ಧ

ಸನ್ನದ್ಧರಾಗತಕ್ಕದ್ದು. ನಡೆ, ಸದಾ ನಿನ್ನ ಧ್ಯಾನಮಗ್ನಳಾಗಿರುವ ಮೃಣಾಲಿನಿಗೆ ದರ್ಶನಕೊಟ್ಟು ಆಕೆಯನ್ನು ಧನ್ಯಳಾಗಮಾಡು, ಎಂದು ನುಡಿದು, ಆ ತರುಣ ವೇಷಧಾರಿ ಮನೋರಮೆಯೊಡನೆ, ದರ್ಬಾರದಿಂದ ಹೊರಟು ನಡೆದನು. ಆಗ ಆ ಇನ್ನೊಬ್ಬ ಅಪರಿಚಿತ ತರುಣನಿಗೆ ಮನೋರಮೆಯು ಕೈಕೊಡಲು, ಹೇಮಚಂದ್ರನನ್ನು ಹಿಂಬಾಲಿಸಿ ಹೋದನೆಂದು ಹೇಳಲವಶ್ಯವಿಲ್ಲ. ದರ್ಬಾರದ ಜನರೂ ಆಶ್ಚರ್ಯಮಗ್ನರಾಗಿ ಮೂಢರಂತೆ ಏನೇನೋ ತರ್ಕಿಸುತ್ತ ತಮ್ಮ ತಮ್ಮ ಮನೆಗಳಿಗೆ ಹೋದರು!

ಇತ್ತ ಮಹಮ್ಮದಲಿಯು ಮಾಗಧೀ ನಗರದಲ್ಲಿ ನಡೆದ ಸಂಗತಿಯ ಸುದ್ದಿಯ ಹಾದಿಯನ್ನು ನೋಡುತ್ತಾ ಸೈನ್ಯದೊಡನೆ ಸಂಕೇತದ ಸ್ಥಳದಲ್ಲಿ ನಿಂತುಕೊಂಡಿದ್ದನು. ಸುದ್ದಿಯು ಬರುತ್ತಲೇ ಆತನು ಮಧ್ಯರಾತ್ರಿಯಲ್ಲಿಯೇ ಅಕಸ್ಮಾತ್ ಪಟ್ಟಣವನ್ನು ಮುತ್ತತಕ್ಕವನು; ಆದರೆ ಹೋದ ಸೇವಕನು ಬಹಳ ಹೊತ್ತಾದರೂ ಬಾರದಿರುವದನ್ನು ನೋಡಿ ಆತನು ಶಂಕಿತನಾದನು. ಮಧ್ಯರಾತ್ರಿಯೊಳಗೇ ಅಲ್ಲಿಯ ಸುದ್ದಿಯು ಗೊತ್ತಾಗಬೇಕೆಂದು ಸಂಕೇತವಾಗಿರಲು, ಮಧ್ಯರಾತ್ರಿಯು ಕಳೆದು ಹೋದರೂ ಯಾವ ಸುದ್ದಿಯೂ ಬರಲಿಲ್ಲ; ಸುದ್ದಿಯು ತರಹೋದ ಸೇವಕನೂ ಬರಲಿಲ್ಲ; ಆದುದರಿಂದ ಮೊದಲಿಗೇ ಗೊತ್ತಾದಂತೆ ಮಾಗಧೀ ನಗರವನ್ನು ಅಕಸ್ಮಾತ್ ಮುತ್ತಬೇಕೋ ಮುತ್ತಬಾರದೋ ಎಂಬ ಬಗ್ಗೆ ಮಹಮ್ಮದಲಿಯು ಶಂಕಿಸಹತ್ತಿದನು. ಮಾಧವಾಚಾರ್ಯರ ತಂತ್ರಗಳನ್ನೂ, ಹೇಮಚಂದ್ರನ ಶೌರ್ಯವನ್ನೂ ಆತನು ಅರಿತಿದ್ದನು. ಈ ಮೊದಲೇ ಹೇಮಚಂದ್ರನೊಡನೆ ಆದ ಯುದ್ಧದಲ್ಲಿ ತಮ್ಮವರು ಅನುಭವಿಸಿದ ಬವಣೆಯನ್ನು ಆತನು ಮರೆತಿದ್ದಿಲ್ಲ. ಆದುದರಿಂದ ಆತನು ಒಮ್ಮೆಲೇ ದುಡುಕದೆ, ಆಲೋಚಿಸಿ ಕಾರ್ಯ ಮಾಡಬೇಕೆಂದು ತಿಳಿದು ಮತ್ತೆ ಇಬ್ಬರು ರಾವುತರನ್ನು ಮಾಗಧೀಪುರಿಗೆ ಅಟ್ಟಿ ತಾನು ಯುದ್ಧದ ವಿಷಯವನ್ನು ಕುರಿತು ಸೈನ್ಯದಲ್ಲಿಯ ಮುಖ್ಯರೊಡನೆ ಆಲೋಚಿಸತೊಡಗಿದನು. ಕಾರ್ಯಚತುರರೂ, ಸಾಹಸಿಗಳೂ ಆದ ರುಸ್ತುಮಲಿಯೂ, ಶಾಂತಶೀಲನೂ ತಮ್ಮ ಆಲೋಚನೆಯಲ್ಲಿಲ್ಲದಿರುವದು ಅವರಿಗೊಂದು ಕೊರತೆಯಾಗಿತ್ತು; ಆ ಮಾನದಿಂದ ಅವರು ಕೆಲಮಟ್ಟಿಗೆ ನಿರುತ್ಸಾಹಿಗಳೂ ಆಗಿದ್ದರೆಂದು ಹೇಳಬಹುದು. ಅವರ ಆಲೋಚನೆಯಲ್ಲಿ ತಾಸೆರಡು ತಾಸುಗಳು ಕಳೆದವು; ಆದರೆ ಹೋದ ಅವರಿಬ್ಬರು ರಾವುತರೂ ತಿರುಗಿ ಬರಲಿಲ್ಲ; ವೈರಿಗಳ ಸೈನ್ಯದ ಸುಳಿದಾಟವೂ ಕಿವಿಗೆ ಬೀಳಲಿಲ್ಲ; ಅದರಿಂದ ಅವರು ಚಿಂತೆಗೊಳಗಾಗಿ, ಇದೇನು ಗೂಢವೆಂದು ಮತ್ತೆ ಆಲೋಚಿಸಹತ್ತಿದರು. ಹೋದವರು ತಿರುಗಿ ಬಾರದಿರುವದರ ಕಾರಣವು, ಅವರ ಮರಣವಾಗಲಿ, ಅವರ ಕಾರಾಗೃಹವಾಸವಾಗಲಿ ಇರಬೇಕೆಂದು ತಿಳಿದು, ಶತ್ರುವು ಅತ್ಯಂತ ಜಾಗರೂಕನಾಗಿರುವನತೆಂದು ಭಾವಿಸಿದರು. ಈ ಸ್ಥಿತಿಯಲ್ಲಿ ಇನ್ನು ಒಬ್ಬಿಬ್ಬರನ್ನು ಕಳಿಸಿ ಕಾಲಹರಣ ಮಾಡುವದರಿಂದ ಲಾಭವಾಗದೆಂತಲೂ, ಸರ್ವಸೈನ್ಯದೊಡನೆ ಪಟ್ಟಣವನ್ನು ಮುತ್ತಿ ಸ್ವಾಧೀನಪಡಿಸಿಕೊಳ್ಳುವದೊಂದೇ ಉಪಾಯವೆಂತಲೂ ಅವರು ನಿಶ್ಚಯಿಸಿದರು. ಅವರ ನಿಶ್ಚಯವು ಫಲಕಾರಿಯಾಗಲು ತಕ್ಕ ಅನುಕೂಲತೆಗಳೂ ಆಗ ಅವರಿಗಿದ್ದವು. ಹೇಮಚಂದ್ರನ ಸೈನ್ಯದ ಇಮ್ಮಡಿಯಷ್ಟು ಸೈನ್ಯಸಂಗ್ರಹವು ಅವರಲ್ಲಿದ್ದಿತು. ತಮಗೆ ಹೊತ್ತು ಹೊತ್ತಿಗೆ ಅನ್ನ

ಸಾಮಗ್ರಿಗಳು ಒದಗುವಂತೆ ಅವರು ವ್ಯವಸ್ಥೆಯನ್ನು ಮಾಡಿದ್ದರು. ರಣದಲ್ಲಿ ಮಡಿಯಬೇಕಲ್ಲದೆ, ಕಾಫಿರರ ರಾಜ್ಯವನ್ನು ಮಣ್ಣುಗೂಡಿಸದೆ ಹೋಗಲಾಗದೆಂಬ ನಿಶ್ಚಯದಿಂದ ಅವರು ಬಂದವರಾಗಿದ್ದರು. ಈ ಸಾರೆಯ ಯುದ್ಧದಲ್ಲಿ ತಮಗೆ ಅಪಜಯವಾದರೆ, ತಾವು ಮರಳಿ ದಿಲ್ಲಿಗೆ ಹೋಗುವದೇ ದುಸ್ತರವಾಗುವದೆಂಬ ಮಾತು ಅವರಿಗೆ ಚನ್ನಾಗಿ ಗೊತ್ತಿದ್ದಿತು. ಈ ಸ್ಥಿತಿಯಲ್ಲಿ ಅವರು ತಮಗೆಷ್ಟು ಕಷ್ಟ ಒದಗಿದರೂ, ಎಷ್ಟೋ ಹಾನಿಯಾದರೂ ಯುದ್ಧವ್ಯಾಪಾರ ದಲ್ಲಿ ಶೈಥಿಲ್ಯವನ್ನು ಸರ್ವಥಾ ಹೊಂದುವಹಾಗಿದ್ದಿಲ್ಲ. ಇವೆಲ್ಲ ಕಾರಣಗಳಿಂದ ಮಹಮ್ಮದಲಿಯು ತನ್ನ ಮಿತ್ರರೊಡನೆ ಆಲೋಚಿಸಿ, ಕೂಡಲೆ ಮಾಗಧೀಪುರಿಯನ್ನು ಮುತ್ತಿ ಪಟ್ಟಣದ ಮೇಲೆ ತೋಫುಗಳ ಮಳೆ ಸುರಿಸಹತ್ತಿದನು.

ಹೀಗೆ ಶತ್ರುಗಳು ಮುತ್ತಿಗೆ ಹಾಕಿದರೂ, ಅವರ ತೋಫುಗಳು ಹಾರಹತ್ತಿದರೂ ಹೇಮಚಂದ್ರನು ಯಾವತರದ ಪ್ರತಿಕ್ರಿಯೆಯನ್ನು ಮಾಡದೆ, ಅಂಜಿದವನಂತೆ ಆತ್ಮರಕ್ಷಣದ ವ್ಯವಸ್ಥೆಯನ್ನಷ್ಟು ಮಾಡಿಕೊಂಡು ಕೋಟೆಯ ಬಾಗಿಲು ಮುಚ್ಚಿಸಿ ಸುಮ್ಮನೆ ಇದ್ದುಬಿಟ್ಟಿದ್ದನು. ತನಗೆ ಒಬ್ಬ ಸೈನಿಕನ ಹೆಂಡತಿಯು ಹೇಳಿದ ಸ್ವಪ್ನವನ್ನು ನಂಬಿ ಇನ್ನೆರಡು ದಿನಗಳಲ್ಲಿ ಮುಸಲ್ಮಾನರ ಸೈನ್ಯದ ಮುತ್ತಿಗೆ ಬೀಳುವದೆಂದು ತಿಳಿದು, ಸೈನ್ಯದ ಸರ್ವಸಿದ್ಧತೆಯನ್ನು ಮಾಡಿದ್ದೊಂದು ಈಗ ಆತನಿಗೆ ಉಪಕಾರವೇ ಆಯಿತು; ಮತ್ತು ಆಕೆಯ ಸ್ವಪ್ನವು ನಿಜವಾದದ್ದರ ಸ್ಮರಣದಿಂದ ಆ ಭಾವಿಕನ ದೈವೀಭಾವನೆಯು ಅಭಿವೃದ್ಧವಾಗಿ, ಜಯಪ್ರಾಪ್ತಿಗಾಗಿ ಶ್ರೀ ದುರ್ಗೆಯನ್ನು ಆತನು ಪ್ರಾರ್ಥಿಸಿದನು; ಮತ್ತು ಮನೋರಮೆಯ ಆಲೋಚನೆಯಂತೆ ಸೈನ್ಯದ ವ್ಯವಸ್ಥೆಯನ್ನು ಬಹು ಚಾತುರ್ಯದಿಂದ ಜಾಗ್ರತೆಯಾಗಿ ಮಾಡಿಬಿಟ್ಟಿದ್ದನು. ಆತನಿಗೆ ಶತ್ರುಗಳು ತನ್ನ ಅಳವಿನೊಳಗೆ ಮಾತ್ರ ಬರಬೇಕಾಗಿತ್ತು, ಅತ್ತ ಮುಸಲ್ಮಾನರು ಶತ್ರುಗಳ ಈ ಸ್ತಬ್ಧತೆಯನ್ನು ಅಂಜಿದ ಲಕ್ಷಣವನ್ನು ನೋಡಿ ಆವೇಶದಿಂದ ಪಟ್ಟಣದ ಕೋಟೆಗೆ ದಾಳಿಯನ್ನಿಟ್ಟರು. ಅವರು ರಭಸದಿಂದ ಕೋಟೆಯ ಗೋಡೆಗಳವರೆಗೆ ಹೋಗಿ ಆಯಕಟ್ಟಿನ ಸ್ಥಳದಲ್ಲಿ ತೋಫುಗಳನ್ನು ಹೂಡಿ ಹಾರಿಸಹತ್ತಿ ಕೋಟೆಯ ಗೋಡೆಗಳನ್ನು ಶಿಥಿಲ ಮಾಡತೊಡಗಿದರು. ಕೋಟೆಯ ಸುತ್ತಲೂ ಸೈನಿಕರ ಮುತ್ತಿಗೆಯು ಬಿದ್ದಿತು. ಕೋಟೆಯ ಕಂದಕದಲ್ಲಿ ನೀರಿಲ್ಲದ್ದರಿಂದ ಹಾಗೆ ಮುತ್ತಿಗೆ ಹಾಕಲಿಕ್ಕೆ ಅವರಿಗೆ ಆಯಾಸವೂ ಆಗಲಿಲ್ಲ. ಶತ್ರುಗಳಂತು ಒಂದು ತೋಫನ್ನೂ ಹಾರಿಸುತ್ತಿದ್ದಿಲ್ಲ. ಈ ಸ್ಥಿತಿಯನ್ನು ನೋಡಿ ಮುಸಲ್ಮಾನರು ಕೋಟೆಯ ಬಾಗಿಲದವರೆಗೆ ಏರಿಹೋದರು. ಹೀಗಾಗುತ್ತಿರಲು, ಒಮ್ಮೆಲೆ ಆಗಳತದಲ್ಲಿ ಜಲಪ್ರವಾಹವು ಭೋರ್ಗರೆಯುತ್ತಾ ಬಂದು ಅಗಳತ ವನ್ನು ತುಂಬಹತ್ತಿತು. ಇದೇನೆಂದು ಸೈನಿಕರು ನೋಡುತ್ತಿರಲು, ಒಮ್ಮೆಲೆ ಕೋಟೆಯೊಳಗಿಂದ ಜಡಿಮಳೆಯಂತೆ ತೋಫುಗಳ ಗುಂಡುಗಳೂ, ತುಬಾಕಿಗಳ ಗುಂಡುಗಳೂ ಸುರಿಯಹತ್ತಿದವು. ಮುಸಲ್ಮಾನ ಸೈನ್ಯದ ಕೆಲವು ಭಾಗವು ಅಗಳತದ ಒಳಗೆ, ಕೆಲವು ಭಾಗವು ಅಗಳತದ ಹೊರಗೆ ಆಗಿ, ಅವರ ಸೈನ್ಯದಲ್ಲಿ ಅವ್ಯವಸ್ಥೆಯುಂಟಾಯಿತು. ಕೋಟೆಯ ಮೇಲಿನಿಂದ ಒಂದೇಸವನೆ ಹೊಡತಬಿದ್ದು ಸೈನಿಕರು ನೆಲಕ್ಕೆ ಉರುಳಹತ್ತಿದ್ದರಿಂದ, ಒಳಗಿನವರು ಹಣ್ಣಾದರು. ಅವರು ಅಗಳತದ ಹೊರಗೆ ಬರಬೇಕೆಂದರೆ ನೀರಿನ ಪ್ರತಿಬಂಧ, ಅಲ್ಲಿ ನಿಂತು ಯುದ್ಧಮಾಡಬೇಕೆಂದರೆ

ಮೇಲಿನಿಂದ ಸುರಿಯುವ ಬೆಂಕಿಯ ಮಳೆ! ಈ ಕಷ್ಟದ ಸ್ಥಿತಿಯಲ್ಲಿ ಎಷ್ಟೋ ಜನರು ಅಗಳತದಲ್ಲಿ ಧುಮುಕಿ ಮುಣುಗಿ ಸತ್ತರು. ಎಷ್ಟೋ ಜನರು ಶತ್ರುಗಳ ಹೊಡತದಿಂದ ಮಡಿದರು. ಹೀಗೆ ಅನರ್ಥಕಾರಕ ಸ್ಥಿತಿಯೊದಗಿರುವಾಗ ಅಗಳತದ ಹೊರಗಿದ್ದ ಮುಸಲ್ಮಾನರ ದಂಡಿನ ಮೇಲೆ ಒಬ್ಬ ತರುಣ ಹಿಂದಿ ಸರದಾರನು ತನ್ನ ಸೈನ್ಯದೊಡನೆ ವೀರಾವೇಶದಿಂದ ಬಿದ್ದು ಅದನ್ನು ಸಂಹರಿಸತೊಡಗಿದನು. ಹೀಗೆ ಕೋಟೆಯ ಒಳಗಿನಿಂದ ಹಾಗೂ ಕೋಟೆಯ ಹೊರಗಿನಿಂದ ಹಿಂದೂ ಜನರು ಒಮ್ಮೆಲೇ ತಮ್ಮನ್ನು ಸಂಹರಿಸ ಹತ್ತಿದ್ದರಿಂದಲೂ, ಕೋಟೆಯ ಅಗಳತವು ಜಲಪೂರ್ಣವಾಗಲು, ತಮ್ಮ ಸೈನ್ಯವು ಇತ್ತಂಡವಾದುದರಿಂದಲೂ ಮುಸಲ್ಮಾನರಿಗೆ ನಿಕರದಿಂದ ಕಾದಲಿಕ್ಕೆ ಆಸ್ಪದವಾಗಲೊಲ್ಲದು; ಆದರೂ ಆ ವೀರರು ಧೈರ್ಯತಾಳಿ ಎರಡೂ ಕಡೆಗೂ ಶತ್ರುಗಳಿಗೆ ಕೈಕೊಡಹತ್ತಿದರು; ಆದರೆ ಶತ್ರುಗಳ ಹೊಡತವನ್ನು ತಾಳುವದು ಅವರಿಂದ ಆಗಲಿಲ್ಲ! ಕೋಟೆಯ ಹೊರಗಿನಿಂದ ತಮ್ಮ ಮೇಲೆ ಬಿದ್ದಿದ್ದ ಹಿಂದೂ ತರುಣ ಸರದಾರನ ಕೈಖಡ್ಗವು ಮಾಡುವ ಸಂಹಾರ ವ್ಯಾಪಾರವನ್ನು ನೋಡಿದರೆ, ಇದು ಅದ್ಭುತವ್ಯಾಪಾರವೆಂದು ಯಾರಾದರೂ ಅನ್ನಬಹುದಾಗಿತ್ತು. ಮುಸಲ್ಮಾನರ ಸೈನ್ಯವು ಅರ್ಧಕ್ಕರ್ಧ ಕಡಿಮೆಯಾಯಿತು. ಹಿಂದೂ ಸೈನ್ಯವು ನಾಶವಾದರೂ ಅದಕ್ಕೆ ಹೊರಗಿನಿಂದ ಹೊಸ ಸೈನ್ಯದ ಸಹಾಯವು ಒದಗಹತ್ತಿತ್ತು. ಅಗಳತದ ಹೊರಗಿನ ಮುಸಲ್ಮಾನ ಸೈನಿಕರು ಶೌರ್ಯದಿಂದ ಕಾದಿ ಹಿಂದೂ ಜನರ ಸೈನ್ಯವನ್ನು ಭೇದಿಸಿ ಹೋಗಬೇಕೆಂದು ನಾಲ್ಕಾರುಸಾರೆ ನಿಕರದ ಯತ್ನಮಾಡಿ ನೋಡಿದರು; ಆದರೆ ಬಹುಜನರ ನಾಶದಹೊರತು ಬೇರೆ ಫಲವೇನೂ ಅವರಿಗೆ ಆಗಲಿಲ್ಲ. ಇದೆಲ್ಲ ಸ್ಥಿತಿಯನ್ನು ನೋಡಿ ಮುಹಮ್ಮದಲಿಯು ಬೆದರಿದನು. ತಮಗೆ ಮರಣದ ಹೊರತು ಅನ್ಯಗತಿಯಿಲ್ಲೆಂದು ಮುಸಲ್ಮಾನ ಸೈನಿಕರು ಹತಾಶರಾದರು. ಅವರ ಯುದ್ಧೋತ್ಸಾಹವು ಅಳಿದುಹೋಯಿತು. ವ್ಯರ್ಥವಾಗಿ ಜನ ಸಂಹಾರವಾಗಗೊಡುವದು ಯೋಗ್ಯವಲ್ಲೆಂದು ತಿಳಿದು, ಮುಹಮ್ಮದಲಿಯು ಒಡಂಬಡಿಕೆಯ ಬಿಳಿಯ ನಿಶಾನೆಯನ್ನು ಹಿಡಿದು ಹೇಮಚಂದ್ರನಿಗೆ ಒಡಂಬಡಿಕೆಯನ್ನು ಬೇಡಿಕೊಂಡನು.

ಹೀಗೆ ಅದ್ಭುತ ರಣವಿಕ್ರಮವನ್ನು ತೋರಿಸಿದ ತರುಣ ಸರದಾರನು ಅನ್ಯರಾರೂ ಆಗಿರದೆ ಮನೋರಮೆಯೇ ಆಗಿದ್ದಳು. ಹೇಮಚಂದ್ರನು ಇಂದಿನ ಯುದ್ಧದಲ್ಲಿ ಮನೋರಮೆಯ ಅಂಗರಕ್ಷಕನಾಗಿದ್ದನು. ಆತನು ಮುಸಲ್ಮಾನರ ಬಿಳಿಯ ನಿಶಾನೆಯನ್ನು ನೋಡಿ ಮನೋರಮೆಯನ್ನು ಕುರಿತು—ತಂಗೀ, ಶಾಂತಳಾಗು, ನಿನ್ನ ಕೈಯಲ್ಲಿರುವ ರಣ ದುರ್ಗೆಯ ಖಡ್ಗವನ್ನು ಒರೆಗಾಣಿಸು. ಶರಣಾಗತರನ್ನು ಸಂಹರಿಸುವದು ಧರ್ಮವಲ್ಲವೆಂದು ನೀವು ಬ್ರಾಹ್ಮಣರೇ ಕ್ಷತ್ರಿಯರಾದ ನಮ್ಮನ್ನು ಬೋಧಿಸುತ್ತಿರುವಿರಿ. ಎಂದು ಹೇಳಲು, ಮನೋರಮೆಯು ಖಡ್ಗವನ್ನು ಒರೆಗಾಣಿಸಿದಳು. ಹೇಮಚಂದ್ರನ ಅಪ್ಪಣೆಯಿಂದ ಯುದ್ಧ ವ್ಯಾಪಾರವು ನಿಂತಿತು. ಅಷ್ಟರಲ್ಲಿ ಮುಹಮ್ಮದಲಿಯ ಬಳಿಯಿಂದ ಒಡಂಬಡಿಕೆಗಾಗಿ ರಾಯಭಾರಿಯು ಬಂದು ಹೇಮಚಂದ್ರನ ಅಪ್ಪಣೆಯಿಂದ ಆತನನ್ನು ಕಾಣಲು, ಮನೋರಮೆಯ ಸೂಚನೆಯಂತೆ ಒಡಂಬಡಿಕೆಯ ಕರಾರುಗಳು ಕೆಳಗೆ ಬರೆದಂತೆ ಆದವು.

1. ನೀವು ಮುಸಲ್ಮಾನರು ಬಂಗಾಲವನ್ನು ಬಿಟ್ಟು ನಿಶ್ಯಸ್ತ್ರರಾಗಿ ಹೊರಟು ಹೋಗಬೇಕು.

2. ನಮಗಾಗಿರುವ ನಷ್ಟವು ಕೂಡಿಬರುವದಕ್ಕಾಗಿ ಹದಿನೈದು ಕೋಟಿ ರೂಪಾಯಿಗಳನ್ನು ಕೊಡಬೇಕು. ಈ ರಕಮನ್ನು ರೋಖಡಿಯಾಗಿ ಕೊಡಲಿಕ್ಕೆ ಆಗದಿದ್ದರೆ, ನಮ್ಮ ಪ್ರಾಂತವನ್ನು ಸುಲಿದು ಸಂಪಾದಿಸಿದ ಮುತ್ತು ರತ್ನ, ಭಂಗಾರ, ಬೆಳ್ಳಿ ಮೊದಲಾದ ಒಡವೆಗಳ ರೂಪ ದಿಂದಲೂ, ಆನೆ, ಕುದುರೆಗಳ ಬೆಲೆಯ ರೂಪದಿಂದಲೂ ಮುಟ್ಟಿಸಬಹುದು.

3. ನಿಃಶಸ್ತ್ರರಾದ ನಿಮ್ಮನ್ನು ಸುರಕ್ಷಿತವಾಗಿ ಬಂಗಾಲಪ್ರಾಂತದಿಂದ ದಾಟಿಸಲಿಕ್ಕೆ ನಮ್ಮ ಸೈನಿಕರು ಬರುವರು. ಅವಶ್ಯ ತೋರಿದರೆ ನಿಮ್ಮ ಹಾದಿಯ ವೆಚ್ಚವನ್ನೂ ನಾವು ನಡೆಸಬಹುದು.

ಈ ಕರಾರುಗಳಂತೆ ನಾಳೆ ಸೂರ್ಯೋದಯದೊಳಗೆ ನಡೆಯದಿದ್ದರೆ, ಮತ್ತೆ ಯುದ್ಧವು ಆರಂಭವಾಗುವದು. ಎಂದು ಹೇಮಚಂದ್ರನು ಕಟ್ಟು ಮಾಡಿದನು. ಅಭಿಮಾನಿಗಳೂ, ಶೂರರೂ ಆದ ಮುಸಲ್ಮಾನರಿಗೆ ಈ ಕರಾರುಗಳನ್ನು ನೋಡಿ ಸಂತಾಪವಾಯಿತು. ಯುದ್ಧದಲ್ಲಿ ಸಾಯಬಹುದು, ಶಸ್ತ್ರಗಳನ್ನು ಕೆಳಗಿಡಲಾಗದೆಂದು ಅವರು ನುಡಿದರು; ಆದರೆ ಈಗಿನ ಕಾಲದಲ್ಲಿ ಅಪಮಾನವನ್ನು ಸಹಿಸುವದೇ ಯೋಗ್ಯವೆಂದು ತಿಳಿದು ಮುಹಮ್ಮದಲಿಯು ತಡಮಾಡದೆ ಕಾರಾರುಗಳಿಗೆ ಒಪ್ಪಿಕೊಂಡು ಸಹಿಮಾಡಿ ಹೇಮಚಂದ್ರನ ಕಡೆಗೆ ಕಳಿಸಿದನು. ಕರಾರಿನಂತೆ ಹೇಮಚಂದ್ರನು ಅವರ ಸಂರಕ್ಷಣಕ್ಕಾಗಿ ಸೈನಿಕರನ್ನೂ, ವೆಚ್ಚಕ್ಕಾಗಿ ತಕ್ಕಷ್ಟು ಹಣವನ್ನೂ ಕೊಡಲು, ಮುಹಮ್ಮದಲಿಯು ಪರಿವಾರದೊಡನೆ ಬಂಗಾಲ ಪ್ರಾಂತವನ್ನು ಬಿಟ್ಟು ಹೊರಟುಹೋದನು. ಇತ್ತ ಮಾಗಧೀ ನಗರವು ವಿಜಯೋತ್ಸವ ಮಗ್ನವಾಗುತ್ತಿರುವಾಗ ಮನೋರಮೆಯು ನೂತನ ಸರದಾರನೊಡನೆ ಎಂದಿನಂತೆ ಎತ್ತೋ ಗುಪ್ತವಾಗಿ ಹೋಗಿದ್ದಳು!

ಕುತಬುದ್ದೀನಶಹಾ

ಘೋರೀಮಹಮ್ಮದನ ಪ್ರತಿನಿಧಿಯಾದ ಕುತುಬುದ್ದೀನನು ಪರದೇಶದ ಮೊದಲನೇ ಭಾರತೇಶ್ವರನಾಗಿ ದಿಲ್ಲಿಯಲ್ಲಿ ಆಳತೊಡಗಿದ್ದನು. ಆತನು ಒಂದು ದಿನ ಸಾಯಂಕಾಲದಲ್ಲಿ ಸಿಂಹಾಸನದಲ್ಲಿ ಕುಳಿತು, ಮಂತ್ರಿ—ಸೇನಾಪತಿಗಳೊಡನೆ ಆಲೋಚಿಸುತ್ತಿದ್ದನು. ಹೊಸ ಹೊಸ ಹಿಂದೂ ರಾಜ್ಯಗಳನ್ನು ಸ್ವಾಧೀನಪಡಿಸಿಕೊಳ್ಳುವದೂ, ಹಿಂದೂ ಅರಸರನ್ನು ತಿರುಕರಾಗಿ ಮಾಡುವದೂ, ವೈಭವ ಸಂಪನ್ನಗಳಾದ ಸುಂದರ ಪಟ್ಟಣಗಳನ್ನು ಸ್ಮಶಾನಗಳಾಗಮಾಡುವದೂ ಆತನ ಕೆಲಸವಾಗಿದ್ದವು. ಈಶ್ವರೀ ಆಜ್ಞೆಯಂತೆ ಇಡಿಯ ಭರತಭೂಮಿಯಲ್ಲಿ ಯಾವನೀ ಸತ್ತೆಯನ್ನುಂಟು ಮಾಡುವುದು, ತನ್ನ ಕರ್ತವ್ಯವೆಂದು ಯವನ ಭೂಪತಿಯು ನಂಬಿ ದಿನದಿನಕ್ಕೆ ತನ್ನ ರಾಜ್ಯದ ವಿಸ್ತಾರವನ್ನು ಹೆಚ್ಚಿಸತೊಡಗಿದ್ದನು. ಈ ಸ್ಥಿತಿಯಲ್ಲಿ ಬಂಗಾಲದಲ್ಲಿ ತಮ್ಮವರಿಗಾದ ದುರವಸ್ಥೆಯು ಕುತುಬದ್ದೀನನ ಅಸಮಾಧಾನಕ್ಕೆ ಕಾರಣವಾಯಿತೆಂದು ಹೇಳಲವಶ್ಯವಿಲ್ಲ. ಕಾಫರನಾದ ಹೇಮಚಂದ್ರನು ಮಾಡಿಕೊಂಡ ಅಸಮಾಧಾನಕಾರಕ ಒಡಂಬಡಿಕೆಗಾಗಿ ಆ

ಯವನ ಭೂಪತಿಯು ಸಂತಾಪಗೊಂಡನು; ಆ ಸಂತಾಪದ ಭರದಲ್ಲಿ ತಾನು ಸ್ವತಃ ಬಂಗಾಲದ ಮೇಲೆ ಸಾಗಿಹೋಗಬೇಕೆಂದು ಆತನು ಆತುರ ಪಟ್ಟನು; ಆದರೆ ಜೋಧಪುರವನ್ನು ಆಕ್ರಮಿಸ ಬೇಕೆಂದು ನಿಶ್ಚಯಿಸಿದ್ದ ಆತನಿಗೆ ಹಾಗೆ ಮಾಡಲಿಕ್ಕೆ ಬರುವಹಾಗಿದ್ದಿಲ್ಲ; ಮೇಲಾಗಿ ತಾನು ದಿಲ್ಲಿಯನ್ನು ಬಿಟ್ಟು ಹೋದರೆ, ಅಲ್ಲಿಯ ಅಧಿಕಾರವನ್ನೇ ಆತನು ಕಳೆದುಕೊಳ್ಳಬಹುದಾಗಿತ್ತು; ಯಾಕಂದರೆ ಭರತಭೂಮಿಯಲ್ಲಿ ಅದೇ ಕಾಲೂರತೊಡಗಿದ್ದ ಮುಸಲ್ಮಾನರಿಗೆ ರಾಜ್ಯದಲ್ಲಿ ಇನ್ನು ಸ್ಥೈರ್ಯವು ಉಂಟಾಗಿದಿಲ್ಲ. ಆದ್ದರಿಂದ ತಾನು ಹೋಗದೆ ಮುಖ್ಯ ಸೇನಾಪತಿಯೊಡನೆ ದೊಡ್ಡ ಸೈನ್ಯವನ್ನು ಹೇಮಚಂದ್ರನ ಮೇಲೆ ಕಳಿಸಬಹುದಾಗಿತ್ತು; ಆದರೆ ಹಾಗೆ ಸೈನ್ಯಕಳಿಸಿದರೆ ಜೋಧಪುರಕ್ಕೆ ಹಾಕಿದ ಬಲೆಯನ್ನು ಕಿತ್ತುಕೊಳ್ಳಬೇಕಾಗಿತ್ತು; ಆದುದರಿಂದ ಆತನು ಮಹಮ್ಮದಲಿಯನ್ನು ಕುರಿತು—

ಕುತುಬದ್ದೀನಶಹಾ—ಮಹಮ್ಮದಲೀ, ನೀವು ಮೊದಲು ಹೇಮಚಂದ್ರನ ಶಾಸನ ಮಾಡಬೇಕೆಂದು ಹೇಳುವದು ಯುಕ್ತವಾಗಿರುತ್ತದೆ. ಆ ಕಾಫರನು ನಮ್ಮನ್ನು ಅವಮಾನ ಗೊಳಿಸಿದ್ದನ್ನು ನೋಡಿದರೆ, ಹಾಗೆ ಅವಶ್ಯವಾಗಿ ಮಾಡತಕ್ಕದ್ದು; ಆದರೆ ಸದ್ಯದಲ್ಲಿ ಜೋಧಪುರವನ್ನು ನಾವು ಆಕ್ರಮಿಸಬೇಕಾಗಿರುವದರಿಂದ, ಆ ಹೇಮಚಂದ್ರ ಕಾಫರನನ್ನು ನಮ್ಮ ಒಬ್ಬ ಮಾಂಡಲೀಕನನ್ನಾಗಿ ಮಾಡಿಕೊಳ್ಳುವದು ಯೋಗ್ಯವಾಗಿ ತೋರುತ್ತದೆ. ನೀವು ಹೇಳುವಂತೆ ಹೇಮಚಂದ್ರನು ಶೂರನಿದ್ದು, ನಮಗೆ ಕಪ್ಪ ಕೊಟ್ಟು ಮಾಂಡಲೀಕನಾದರೆ, ಆತನಿಂದ ಬಂಗಾಲದಲ್ಲಿಯ ನಮ್ಮ ಸ್ವಾಸ್ಥ್ಯಗಳು ಸುರಕ್ಷಿತವಾಗಿರುವ ಸಂಭವವಿದೆ.

ಮಹಮ್ಮದಲಿ—ಜಹಾಪನಾಹ! ಸೇವಕನ ಅಪರಾಧವನ್ನು ಕ್ಷಮಿಸಬೇಕು. ಮುಸಲ್ಮಾನ ರನ್ನು ದ್ವೇಷಿಸುವದೇ ತನ್ನ ವ್ರತವೆಂದು ಆ ಕಾಫರನು ತಿಳಿದಿರುವಾಗ, ಆತನು ತಮ್ಮ ಸ್ನೇಹಬಳಸಿ ತಮ್ಮ ಮಾಂಡಿಲಿಕನಾಗುವದು ಶಕ್ಯವಿರುವದಿಲ್ಲ; ಮುಸಲ್ಮಾನರ ಅಧಿಕಾರವು ತಮ್ಮ ಭರತ ಭೂಮಿಯಲ್ಲಿ ಇರಲಾಗದೆಂದು ಆತನು ಅನ್ನುತ್ತಿರುವನು.

ಮಹಮ್ಮದಲಿಯ ಈ ಮಾತುಗಳನ್ನು ಕೇಳಿ ಕುತುಬುದ್ದೀನನ ಕಣ್ಣುಗಳು ಕೆಂಪಾದವು. ಇಂತಹ ಉದ್ದಾಮನಾದ ಹೇಮಚಂದ್ರನನ್ನು ಮೊದಲು ಶಿಕ್ಷಿಸಿಯೇ ತೀರಬೇಕೆಂದು ಆತನು ನಿಶ್ಚಯಿಸಿದನು. ಹಿಂದೂ ಜನರು ತಮ್ಮ ಮನೆಯಲ್ಲಿ ತಾವು ಸ್ವತಂತ್ರದಿಂದ ಇರುವದೂ, ಈ ತಾಮಸೀ ಮುಸಲ್ಮಾನರ ದೃಷ್ಟಿಯಿಂದ ಅಪರಾಧವಾಗುತ್ತಲಿತ್ತು, ಕುತುಬುದ್ದೀನನು ಮುಖ್ಯ ಸೇನಾಪತಿಯನ್ನು ಕುರಿತು—ಖಾಜಾಜಹಾನ, ನೀವು ಒಂದು ಲಕ್ಷ ಸೈನ್ಯದೊಡನೆ ಬಂಗಾಲದ ಮೇಲೆ ಸಾಗಿಹೋಗಿ ಹೇಮಚಂದ್ರ ಕಾಫರನ ರಾಜ್ಯವನ್ನು ನಾಶಮಾಡತಕ್ಕದ್ದು. ಈ ಮಹಮ್ಮದಲಿ ಯವರು ನಿಮಗೆ ಸಹಾಯಕರಾಗಿರುವರು. ಅಲ್ಲಾನ ಅಪ್ಪಣೆಯಂತೆ ನಾವು ಭರತ ಭೂಮಿಯಲ್ಲಿ ಇಸ್ಲಾಮಿಸತ್ತೆಯನ್ನು ಸ್ಥಾಪಿಸುತ್ತಿರಲು, ಆ ಕಾಫರನು ಪ್ರತಿಬಂಧಮಾಡಲು ಎಷ್ಟರವನು?

ಈ ಮೇರೆಗೆ ಕುತುಬುದ್ದೀನಶಹನಿಂದ ಆಜ್ಞಾಪಿತನಾಗಿ ಖಾಜಾಜಹಾನನು ಸೈನ್ಯದೊಡನೆ ಬಂಗಾಲದ ಮೇಲೆ ಸಾಗಿಹೋದನು. ಈ ವರ್ತಮಾನವು ಗುಪ್ತಚಾರರ ಮುಖಾಂತರ

ಹೇಮಚಂದ್ರನಿಗೆ ಗೊತ್ತಾಯಿತು. ಈಗಿನ ಯುದ್ಧದ ಪ್ರಸಂಗವು ಸಾಮಾನ್ಯವಾದದ್ದಲ್ಲವೆಂತಲೂ, ಈ ಪ್ರಸಂಗದಲ್ಲಿ ತಾವು ಸೋತರೆ, ತಮ್ಮ ಸರ್ವನಾಶವಾಗುವದೆಂತಲೂ, ದೇವರ ಕೃಪೆಯಿಂದ ತಾವೇ ಜಯಶಾಲಿಗಳಾದರೆ, ಕೆಲ ದಿನಗಳ ಮಟ್ಟಿಗಾದರೂ ತಮ್ಮ ಕಡೆಗೆ ಮುಸಲ್ಮಾನರು ಹಣಿಕಿ ನೋಡರೆಂತಲೂ ಹೇಮಚಂದ್ರನು ತಿಳಿದನು. ಅದರಂತೆ ಯುದ್ಧದ ಪ್ರಸಂಗವನ್ನು ಕುರಿತು ಮಂತ್ರಿ ಸೇನಾಪತಿಗಳೊಡನೆ ಆತನು ಆಲೋಚಿಸಿ, ತಾನು ದೊಡ್ಡ ಸೈನ್ಯವನ್ನು ಸಿದ್ಧಮಾಡಿದನು. ರಾಜಧಾನಿಯವರೆಗೆ ಮುಸಲ್ಮಾನರನ್ನು ಬರಗೊಡುವದಕ್ಕಿಂತ ಕಾಲೀಕೋಟದ ಹತ್ತರ ಗಂಗಾತೀರದಲ್ಲಿ ಮೊದಲಿಗೇ ತಾವು ಸೈನ್ಯದೊಡನೆ ಕಾದಿದ್ದು ಸರ್ವಸಿದ್ಧತೆಯೊಡನೆ ಮುಸಲ್ಮಾನರನ್ನು ಎದುರಿಸುವದು ಯೋಗ್ಯವೆಂದು ಆತನು ಮಾಧವಾಚಾರ್ಯರ ಆಲೋಚನೆಯಂತೆ ನಿಶ್ಚಯಿಸಿದನು. ರಾಜಧಾನಿಯ ರಕ್ಷಣಕ್ಕಾಗಿ ತಕ್ಕಷ್ಟು ಸೈನ್ಯವಿಟ್ಟು. ಐವತ್ತು ಸಾವಿರ ಸೈನ್ಯದೊಡನೆ ಹೇಮಚಂದ್ರನು ತಾನೇ ದಂಡಯಾತ್ರೆಗೆ ಹೊರಟನು. ನಾಲ್ಕನೆಯ ದಿವಸ ಸಾಯಂಕಾಲಕ್ಕೆ ಹೇಮಚಂದ್ರನ ಸೇನೆಯು ಕಾಲೀಕೋಟೆಗೆ ಬಂದು ಮುಟ್ಟಿತು. ಆಗ ಮುಸಲ್ಮಾನರ ಸೇನೆಯು ವರ್ಧಮಾನಕ್ಕೆ ಬಂದು ಮುಟ್ಟಿರುವದೆಂಬ ವರ್ತಮಾನವನ್ನು ಚಾರರು ಹೇಮಚಂದ್ರನಿಗೆ ತಿಳಿಸಿದರು. ಆಗ ಹೇಮಚಂದ್ರನ ಸೈನಿಕರು ಅತ್ಯಾತುರದಿಂದ ಸೇನಾನಿವಾಸ, ಪ್ರಕಾರ ಮೊದಲಾದವನ್ನು ಸಿದ್ಧಪಡಿಸಿಕೊಳ್ಳಹತ್ತಿದರು. ಮುಂದೆ ಏಳನೆಯ ದಿವಸ ಮುಸಲ್ಮಾನರ ಸೇನೆಯು ಇವರ ಸಮೀಪಕ್ಕೆ ಬಂದಿತು.

ಮುಸಲ್ಮಾನರ ಸೇನೆಯು ತೀರ ಸನಿಯಕ್ಕೆ ಬಂದು ತಳ ಊರುವದರೊಳಗಾಗಿ ಹಿಂದೂ ಜನರ ತೋಫುಗಳು ಗರ್ಜಿಸತೊಡಗಿದವು. ಒಮ್ಮೆಲೆ ಆಗಹತ್ತಿದ ತೋಫಿನ ಈ ಹೊಡತದಿಂದ ಮುಸಲ್ಮಾನರು ಸ್ವಲ್ಪ ಬೆದರಿದರು. ಕಡೆಗೆ ಅವರೂ ಸೈನ್ಯವನ್ನು ಸಜ್ಜುಗೊಳಿಸಿ ಯುದ್ಧವನ್ನು ಆರಂಭಿಸಿದರು. ಎರಡೂ ನಿಟ್ಟಿನವರ ತೋಫುಗಳಿಂದ ಅಗ್ನಿವೃಷ್ಟಿಯು ಆಗಹತ್ತಿತು. ಒಂದೇ ದಿವಸದ ಭೀಷಣ ಯುದ್ಧದಿಂದ ಎರಡೂ ದಳಗಳಲ್ಲಿ ಅನೇಕ ಸಾವಿರ ಜನರ ನಾಶವಾಯಿತು. ಆದರೆ ಅಂದು ಮಳೆಯಾದದ್ದರಿಂದ ತುಸುಹೊತ್ತಿನಲ್ಲಿ ಯುದ್ಧವು ಶಾಂತವಾಯಿತು.

ಹೀಗೆ ಆರುದಿನ ಒಂದೇಸವನೆ ಯುದ್ಧವಾಗಿ ಎರಡೂ ನಿಟ್ಟಿನವರ ಸೇನೆಗಳೂ ನಷ್ಟವಾದವು. ಅವರಲ್ಲಿ ಮುಸಲ್ಮಾನ ಸೈನಿಕರು ದುರ್ಗಪ್ರಾಕಾರಾದಿಗಳನ್ನು ರಚಿಸಿಕೊಳ್ಳದೆ ಇರುವದರಿಂದಲೂ, ಅವರಿಗೆ ಆಹಾರದ ಪೂರೈಕೆಯು ಸರಿಯಾಗಿ ಆಗದೆ ಹೋದುದರಿಂದಲೂ ಅವರ ಸೈನ್ಯದ ನಾಶವು ವಿಶೇಷವಾಗಿ ಆಯಿತು. ಹಿಂದೂ ಸೈನಿಕರು ಹತ್ತುಸಾವಿರಕ್ಕೆ ಹೆಚ್ಚು ಇರಲಿಲ್ಲ, ಮುಸಲ್ಮಾನರು ಹದಿನೈದು ಸಾವಿರ ಜನರು ಮಾತ್ರ ಉಳಿದಿರಬಹುದು. ಉಭಯ ಪಕ್ಷದವರೂ ಅತ್ಯಂತ ಕ್ಷೀಣಬಲರಾಗಿದ್ದರು. ಈ ತರದ ಘೋರ ಯುದ್ಧವು ವಂಗದೇಶದಲ್ಲಿ ಈ ಮೊದಲೇ ಎಂದೂ ಆಗಿರುವದಿಲ್ಲ. ಏಳನೆಯ ದಿವಸ ಹೇಮಚಂದ್ರನು ಸೇನಾಪತಿಯನ್ನು ಕರೆದು ಸೈನ್ಯವು ಸಿದ್ಧವಾಗುವದಕ್ಕಾಗಿ ಅಪ್ಪಣೆಕೊಟ್ಟನು. ರಣದುಂದುಭಿಯು ಧ್ವನಿಮಾಡಹತ್ತಿತು. ಅತ್ತ ಖಾಜಾಜಹಾನನು ತನ್ನ ಸೈನಿಕರನ್ನು ಕುರಿತು—ವೀರರೇ, ಇನ್ನು ಕೆಲವು ದಿನಗಳವರೆಗೆ ಯುದ್ಧವು ಹೀಗೆಯೇ ನಡೆದರೆ ನಾವು ಅನ್ನವಿಲ್ಲದೆ ಸಾಯುವದೇ ನಿಶ್ಚಯವು. ಆದುದರಿಂದ ಈ ದಿನ

ಎಲ್ಲರೂ ಜೀವದ ಹಂಗುದೊರೆದು ಕಾದತಕ್ಕದ್ದು. ದಿಲ್ಲಿಯು ಇಲ್ಲಿಂದ ಎಷ್ಟು ದೂರವಿರುತ್ತ ದೆಂಬದನ್ನು ಲಕ್ಷದಲ್ಲಿ ತೆಗೆದುಕೊಳ್ಳಿರಿ; ಮಾರ್ಗದಲ್ಲಿ ಬಂಗಾಲಿಗಳಿಂದ ನಮಗಾಗಬೇಕಾಗಿರುವ ತೊಂದರೆಗಳನ್ನು ಮರೆಯಬೇಡಿರಿ. ಸಾಯುವದೇ ನಿಶ್ಚಯವಾದ ಬಳಿಕ ವೈರಿಗಳನ್ನು ಹೊಡೆದು ಸಾಯೋಣ. ಇಸ್ಲಾಮರ ಶೌರ್ಯದ ಪರೀಕ್ಷೆಯ ಕಾಲವು ಒದಗಿರುವದು, ಎಂದು ಹೇಳಿ ಯುದ್ಧಕ್ಕೆ ಹುರಿದುಂಬಿಸಿದನು.

ಯುದ್ಧವು ಆರಂಭವಾಗಿ ಉಭಯ ಸೈನಿಕರೂ ರೊಚ್ಚಿನಿಂದ ಕಾದಹತ್ತಿದರು. ಎರಡೂ ಸೈನಿಕರೂ ಯುದ್ಧಮಾಡಿ ಬೇಸತ್ತಿರವದರಿಂದ ಒಮ್ಮೆ ಸೋಕ್ಷ–ಮೋಕ್ಷವು ಕಂಡು ಹೋಗಲೆಂದು ನಿಕರದಿಂದ ಕಾದತೊಡಗಿದರು. ಅಂದಿನ ಮುಸಲ್ಮಾನರ ಪರಾಕ್ರಮವು ಹಿಂದುಗಳ ಪರಾಕ್ರಮ ವನ್ನು ಮೀರಿತು. ಅವರು ಹಿಂದೂ ಸೈನ್ಯದ ಸಂಹಾರವನ್ನು ಅತ್ಯದ್ಭುತವಾಗಿ ನಡೆಸಿದರು. ಕ್ರಮವಾಗಿ ದಿನಮಣಿಯು ಆಕಾಶಮಧ್ಯಗತನಾದನು. ಆತನ ಪ್ರಖರ ಕಿರಣಗಳಿಂದ ಸೈನಿಕರು ಬೇಯಹತ್ತಿದರು. ಯುದ್ಧಕ್ಕೆ ವಿರಾಮವಿಲ್ಲ, ವಿಶ್ರಾಂತಿಯಿಲ್ಲ, ಈ ದಿನ ಮುಸಲ್ಮಾನರ ಪ್ರತಾಪಕ್ಕೆ ಹಿಂದುಗಳು ಬೆದರಿದರು. ರಣಭೂಮಿಯಲ್ಲಿ ಅವರ ಕಾಲುಗಳು ನಿಲ್ಲಲೊಲ್ಲವು. ಅವರ ಆಶೆಯು ನಷ್ಟವಾಗತೊಡಗಿತು. ಸಂಹಾರ ವ್ಯಾಪಾರವು ಮಿತಿಮೀರಿತು. ಇನ್ನೇನು, ಹಿಂದುಗಳು ಪರಾಭೂತರಾದರೆಂದು ಮುಸಲ್ಮಾನರು ರಣಗರ್ಜನೆ ಮಾಡತೊಡಗಿದರು. ಹಿಂದೂ ಸೈನ್ಯವು ಓಡತೊಡಗಿತು. ತೋಫಿನವರು ತೋಫು ಚಲ್ಲಿಕೊಟ್ಟು ಓಡಿದರು; ಶಸ್ತ್ರಪಾಣಿಗಳು ಶಸ್ತ್ರಚಲ್ಲಿ ಓಡಿದರು; ಸಿಕ್ಕವರು ಸಮರಭೂಮಿಯಲ್ಲಿ ಶಯನ ಮಾಡಿದರು. ಹೇಮಚಂದ್ರನೂ, ಸೇನಾಧ್ಯಕ್ಷನೂ ಹಲವು ಉಪಾಯಮಾಡಿದರೂ ಸೈನಿಕರು ರಣದಲ್ಲಿ ಕಾಲೂರಿನಿಲ್ಲಲೊಲ್ಲರು, ಶತ್ರುಗಳೊಡನೆ ಕಾದಲೊಲ್ಲರು.

ಹೀಗೆ ಹಿಂದೂ ಸೈನ್ಯವು ವಾತಾಹತವಾಗಿ ಓಡುತ್ತಿರುವಾಗ ಹೇಮಚಂದ್ರನು ಸಂತಾಪ ದಿಂದ ಅದರ ಹಂಗುಯಿಡದೆ ತನ್ನ ತೀಕ್ಷ್ಣಾ ಸ್ವಭಾವದಂತೆ ನಿಯಮಿತ ಶೂರಸರದಾರರೊಡನೆ ಶತ್ರುಗಳ ಮೇಲೆ ಬಿದ್ದನು. ಹೇಮಚಂದ್ರನ ನಿಜವಾದ ಶೌರ್ಯ– ಧೈರ್ಯಗಳು ಅಂದು ಪ್ರಕಟವಾದವೆಂದು ಹೇಳಬಹುದು. ಯುದ್ಧಾವೇಶದಲ್ಲಿ ಆತನಿಗೆ ಯಾತರ ಪರಿವೆಯೂ ಉಳಿದಿದ್ದಿಲ್ಲ. ಆ ವೀರ ಶಿಖಾಮಣಿಯು ಶತ್ರುಗಳನ್ನು ಸಂಹರಿಸುತ್ತ ಬಹುದೂರ ಹೋಗಿ ಬಿಟ್ಟನು. ಆತನ ಶೂರಪರಿವಾರವು ನಷ್ಟವಾಗತೊಡಗಿತ್ತು, ಇನ್ನೇನು, ಹೇಮಚಂದ್ರನು ಮುಸಲ್ಮಾನರ ಕೈಯಲ್ಲಿ ಸಿಕ್ಕನೆಂದು ಉಭಯ ದಳದವರೂ ತಿಳಿದುಕೊಂಡರು. ಶೂರರೂ, ಸ್ವಾಮಿನಿಷ್ಠರೂ ಆದ ಹಿಂದೂ ಸೈನಿಕರು, ಓಡುವ ತಮ್ಮವರನ್ನು ತಿರಸ್ಕರಿಸುತ್ತ ತಮ್ಮ ಪ್ರಭುವನ್ನು ಹಿಂಬಾಲಿಸುವಾಗ ಶತ್ರುಗಳ ಅಪರಿಮಿತ ಪ್ರಾಣಹಾನಿಯನ್ನು ಮಾಡಿದರು; ಆದರೆ ಈ ಅಲ್ಪ ಜನರು ರೊಚ್ಚಿಗೆದ್ದಿದ್ದ ಮುಸಲ್ಮಾನರಿಗೆ ಈಡಾಗಲೊಲ್ಲರು. ಅಷ್ಟರಲ್ಲಿ ಒಬ್ಬ ತರುಣ ಸ್ತ್ರೀಯು ಅಶ್ವಾರೂಢಳಾಗಿ ಶೂರಪರಿವಾರದೊಡನೆ ''ಜಯ ಚಂಡಿ'' ಎಂದು ಗರ್ಜಿಸುತ್ತ ಮುಸಲ್ಮಾನ ಸೇನೆಯನ್ನು ಹೊಕ್ಕಳು. ಆಕೆಯ ಯುದ್ಧಾವೇಶವನ್ನು ನೋಡಿ, ಓಡಿಹೋಗುತ್ತಿದ್ದ ಹಿಂದೂ ಸೈನಿಕರು ನಾಚಿ ಆಕೆಯನ್ನು ಹಿಂಬಾಲಿಸಿದರು. ಆಗ ಉಭಯ ಸೈನಿಕರೂ ರಣಮದ

ದಿಂದ ಮೈಮರೆತು ಕಾದತೊಡಗಿದರು. ಆ ರಣಚಂಡಿಯು ತನ್ನ ಕೈ ಖಡ್ಗದಿಂದ ಅಸಂಖ್ಯ ಮುಸಲ್ಮಾನ ದಂಡಾಳುಗಳ ಶಿರಸ್ಸುಗಳನ್ನು ಭೂಮಿಗಿಳಿಸಿದಳು. ಸೈನ್ಯ ಮಧ್ಯವನ್ನು ಸೇರಿ ಅಸಹಾಯನಾಗ ತೊಡಗಿರುವ ಹೇಮಚಂದ್ರನ ಬಳಿಗೆ ಹೋಗಲು ಆಕೆಯು ಧಾವಿಸಿದಳು. ಆಗಿನ ಆಕೆಯ ಉಗ್ರರೂಪವು ಅತ್ಯಂತ ಭಯಪ್ರದವಾಯಿತು. ಇದೇನು ಅದ್ಭುತವೆಂದು ಖಾಜಾಜಹಾನನು ಆಶ್ಚರ್ಯದಿಂದ ನೋಡತೊಡಗಿದನು. ಬರಬರುತ್ತ ಯುದ್ಧದ ಸ್ವರೂಪವು ಬದಲಾಗಿ, ಮುಸಲ್ಮಾನರ ಪ್ರತಾಪವು ಕುಗ್ಗತೊಡಗಿತು. ಕ್ಷಣದಲ್ಲಿ ರಣಚಂಡಿಯು ಹೇಮಚಂದ್ರನ ಬಳಿಗೆ ಹೋಗಿ ಆತನನ್ನು ಕುರಿತು—''ಶಾಬಾಸ, ವೀರಾಗ್ರಣೀ, ಅಣ್ಣಾ! ಶಾಬಾಸ!! ಇಲ್ಲಿ ನೋಡು, ಈ ರಣಚಂಡಿಯ ಕೈ ಖಡ್ಗವನ್ನು'' ಎಂದು ನುಡಿಯಲು, ಹೇಮಚಂದ್ರನು ಎಚ್ಚತ್ತು ಮಗ್ಗಲಲ್ಲಿರುವ ಮನೋರಮೆಯನ್ನು ನೋಡಿ ಆಶ್ಚರ್ಯ ಚಕಿತನಾದನು. ಆತನು ಯುದ್ಧೋತ್ಸಾಹದಿಂದ—''ತಂಗೀ, ನೀನು ಮನೋರಮೆಯಲ್ಲ ನಮ್ಮ ಜಯಲಕ್ಷ್ಮಿಯು'' ಎಂದು ಆಕೆಯನ್ನು ಅಭಿನಂದಿಸಿದನು. ಅಷ್ಟರಲ್ಲಿ ಮುಸಲ್ಮಾನ ಸೈನ್ಯವು ಓಡತೊಡಗಿತು; ಆಗ ಕೇಳುವದೇನು? ಹಿಂದೂ ಜನರು ಜಯಘೋಷ ಮಾಡುತ್ತ ಅವರನ್ನು ಬೆನ್ನಟ್ಟಿದರು. ನಿರಾಶೆಪಟ್ಟ ಖಾಜಾಜಹಾನನು, ತನ್ನ ತುಬಾಕಿಯಿಂದ ಗುರಿಯಿಟ್ಟು ಮನೋರಮೆಯ ಎದೆಗೆ ಹೊಡೆದನು; ಆದರೆ ಗುಂಡಿನ ಗುರಿತಪ್ಪಿ ಎದೆಗೆ ತಾಕುವದರ ಬದಲು ಗುಂಡು ಮನೋರಮೆಯ ಬಲ ಭುಜಕ್ಕೆ ತಾಕಿ ಪಾರಾಗಿ ಹೋಯಿತು. ಆಗ ಆ ರಣಚಂಡಿಯು ಮೂರ್ಛಿತಳಾಗಿ ಕುದುರೆಯ ಮೇಲಿಂದ ಬೀಳುತ್ತಿರಲು, ಕ್ಷಣಮಾತ್ರದಲ್ಲಿ ಹೇಮಚಂದ್ರನು ಕುದುರೆಯಿಂದ ಧುಮುಕಿ ಆಕೆಯನ್ನು ಹಿಡಿದು ತನ್ನ ಕುದುರೆಯ ಮೇಲೆ ಕುಳ್ಳಿರಿಸಿಕೊಂಡು ಸಮರ ಭೂಮಿಯಿಂದ ಹಿಂದಕ್ಕೆ ಜಾರಿದನು. ಇಷ್ಟೇ ಅವಕಾಶವು ಖಾಜಾಜಹಾನನಿಗೆ ಬೇಕಾಗಿತ್ತು, ಆತನ ಉಳಿದ ಸೈನ್ಯವು ರಣಭೂಮಿಯಿಂದ ಓಡಿಹೋಗಿ ಆಸರನೋಡಿ ನಿಂತುಕೊಂಡಿತು. ಇತ್ತ ಹಿಂದೂ ಸೈನಿಕರು ತಮ್ಮ ಪ್ರಭುವು ಸಮರಭೂಮಿಯಯಿಂದ ಜಾರಿದ್ದನ್ನು ನೋಡಿ ಶತ್ರುಗಳ ಬೆನ್ನಟ್ಟುವದನ್ನು ನಿಲ್ಲಿಸಿ ತಮ್ಮ ಪಾಳಯಕ್ಕೆ ತಿರುಗಿದರು. ಅಷ್ಟರಲ್ಲಿ ಸೂರ್ಯನು ಈ ಮಾನವೀ ಕ್ರೌರ್ಯವನ್ನು ನೋಡಲಾರದೆ ಅಸ್ತಾಚಲವನ್ನು ಸೇರಿದನು!

ಹೇಮಚಂದ್ರನು ಒಂದು ವೃಕ್ಷದ ಬುಡದಲ್ಲಿ ಮನೋರಮೆಯನ್ನು ತನ್ನ ಸೆಲ್ಲೆಯ ಮೇಲೆ ಮಲಗಿಸಿ ಬಹು ದುಃಖದಿಂದ ಆಕೆಯನ್ನು ಉಪಚರಿಸಹತ್ತಿದನು; ಎಷ್ಟು ಉಪಚರಿಸಿದರೂ ಆಕೆಯ ಮೂರ್ಛೆಯು ದೂರವಾಗಲೊಲ್ಲದು. ಅಷ್ಟರಲ್ಲಿ ಆತನ ಗುರುಗಳಾದ ಮಾಧವಾಚಾರ್ಯ ಅಲ್ಲಿಗೆ ಬಂದು, ತಮ್ಮ ಕಮಂಡಲೂದಕವನ್ನು ಮನೋರಮೆಯ ಮೈಮೇಲೆ ಪ್ರೋಕ್ಷಿಸಿ, ಬಾಯಲ್ಲಿ ಭಸ್ಮಹಾಕಿ ಕೃಪಾದೃಷ್ಟಿಯಿಂದ ಆಕೆಯನ್ನು ನೋಡಿದರು. ಆಗ ಮನೋರಮೆಯು—''ಎಲೈ! ನಿಲ್ಲಿರಿ—ನಿಲ್ಲಿರಿ; ಏಕೆ ಓಡಿಹೊಗುವಿರಿ? ಪತಿಯ ಬಳಿಗೆ ಬರುವವಳನ್ನು ಹೀಗೆ ನಡುವೇ ಕೈಬಿಟ್ಟು ಹೋಗಬಹುದೇ? ನಿಲ್ಲಿರಿ, ಆ ತಪೋಧನನೇನು ನಿಮಗೆ ಮಾಡುವನು? ನಾನು ಆ ಮಹಾತ್ಮನನ್ನು ಪ್ರಾರ್ಥಿಸಿ ನಿಮ್ಮನ್ನು ಹೊಡೆಯದಂತೆ ಸುಮ್ಮನಿರಿಸುವೆನು'' ಎಂದು ನುಡಿದು, ಕಣ್ತೆರೆಯಲು, ಮಾಧವಾಚಾರ್ಯರು ಆಕೆಯನ್ನು ಕುರಿತು–ಸಾಧ್ವೀ,

ಮನೋರಮೇ, ನಿನ್ನ ಈ ಮೇನಕೆಯನ್ನು ಅತಂತ್ರಳಾಗಮಾಡಿ ಎಲ್ಲಿಗೆ ಹೊರಟಿದ್ದೆ? ಎಂದು ನುಡಿದು, ತಮ್ಮ ಸಂಗಡ ಕರೆತಂದಿದ್ದ ಒಬ್ಬ ತರುಣಿಯನ್ನು ಮನೋರಮೆಯ ಬಳಿಯಲ್ಲಿ ಕುಳ್ಳಿರಿಸಿದರು. ಆಕೆಯನ್ನು ನೋಡಿದ ಕೂಡಲೆ ಮನೋರಮೆಯು ಎದ್ದು ಆಚಾರ್ಯರನ್ನು ನಮಸ್ಕರಿಸಿ, ''ಅಣ್ಣನೆಲ್ಲಿ'' ಎಂದು ಕೇಳುತ್ತ ಮೇನಕೆಯನ್ನು ಪ್ರೇಮದಿಂದ ತಬ್ಬಿಕೊಂಡಳು. ಆಗ ಮಾಧವಾಚಾರ್ಯರ ಅಪ್ಪಣೆಯಿಂದ ಅಲ್ಲಿ ಒಂದು ಕ್ಷಣವಾದರೂ ನಿಂತುಕೊಳ್ಳದೆ ಹೇಮ ಚಂದ್ರನು ಮನೋರಮೆಯನ್ನು- ಮೇಣೆಯಲ್ಲಿ ಮಲಗಿಸಿಕೊಂಡು ಪರಿವಾರದೊಡನೆ ಪಾಳಯಕ್ಕೆ ಹೊರಟುಹೋದನು. ಇತ್ತ ಮುಸಲ್ಮಾನರು ತಾವು ಇಲ್ಲಿ ರಾತ್ರಿ ಉಳಿದರೆ ನಾಳೆ ಒಬ್ಬರೂ ಜೀವದಿಂದ ಉಳಿಯುವ ಸಂಭವವಿಲ್ಲವೆಂದು ತಿಳಿದು, ಆಗಲೇ ಪಲಾಯನ ಸೂಕ್ತವನ್ನು ಪಠಿಸಿದರು. ಬೆಳಗಾದರೂ ಅವರು ಒತ್ತಟ್ಟಿಗೆ ನಿಂತುಕೊಳ್ಳಲಿಲ್ಲ.

ಸ್ಪಷ್ಟೀಕರಣ

ಮುಂಜಾವು, ತಾಸು ಹೊತ್ತು ಏರಿದೆ. ಎಲ್ಲರೂ ಪ್ರಾತರ್ವಿಧಿಗಳನ್ನೂ, ನಿತ್ಯಕರ್ಮಗಳನ್ನೂ ತೀರಿಸಿಕೊಂಡು, ಹೇಮಚಂದ್ರನ ಪಾಳಯದ ಸಭಾಮಂದಿರದಲ್ಲಿ ಕುಳಿತುಕೊಂಡಿದ್ದಾರೆ. ಸಮರ ಜಯೋತ್ಸಾಹದಿಂದ ಎಲ್ಲರ ಮುಖಗಳೂ ಪ್ರಫುಲ್ಲಿತವಾಗಿವೆ. ಏಳು ದಿವಸಗಳ ಯುದ್ಧಗಳಲ್ಲಿ ಒದಗಿದ ಒಂದೊಂದು ವಿಲಕ್ಷಣ ಪ್ರಸಂಗವನ್ನು ನೆನಿಸಿ ಅವರವರ ಯೋಗ್ಯತೆಯಂತೆ, ಹಾಗು ಅವರವರಿಗೊದಗಿದ ಪ್ರಸಂಗಗಳಂತೆ ಆಶ್ಚರ್ಯ, ಶೋಕ, ಆನಂದ; ಖೇದ, ಕ್ರೋಧ, ಭಯ ಮುಂತಾದ ವಿಕಾರಗಳು ಸಭಿಕರ ಮನಸ್ಸಿನಲ್ಲಿ ಉತ್ಪನ್ನವಾಗುತ್ತಲಿವೆ. ಯಾರು ಮಾಧವಾ ಚಾರ್ಯರ ಮಹಾತ್ಮ್ಯವನ್ನು ಸ್ಮರಿಸಿ ಪೂಜ್ಯ ಬುದ್ಧಿಯುಳ್ಳವರಾಗುತ್ತಲಿದ್ದಾರೆ; ಯಾರು ಮನೋರಮೆಯ ಶೌರ್ಯ-ಸಾಹಸ-ಚಾತುರ್ಯಗಳನ್ನು ಮನಸ್ಸಿನಲ್ಲಿ ತಂದು, ಈಕೆಯು ಶಕ್ತಿಯ ಅವತಾರವೇ ಸರಿಯೆಂದು ಕಲ್ಪಿಸತೊಡಗಿದ್ದಾರೆ. ಹೀಗೆ ಆ ಸಭಾಮಂದಿರವು ವಿವಿಧ ಮಾನಸಿಕ ವಿಚರಾಗಳ ಅಲ್ಲೋಲ ಕಲ್ಲೋಲಗಳಿಂದ ಕಲಕುತ್ತಿರುವಾಗ, ವಂದಿಗಳು ಸ್ತುತಿ ಪಾಠಮಾಡುತ್ತಿರಲು, ಮಾಧವಾಚಾರ್ಯರನ್ನು ಹಿಂಬಾಲಿಸಿ ಹೇಮಚಂದ್ರನು ಸಬಾಮಂದಿರ ವನ್ನು ಪ್ರವೇಶಿಸಿದನು. ಹೇಮಚಂದ್ರನನ್ನು ಅನುಸರಿಸಿಯೇ ರಾಣೀ-ಮೃಣಾಲಿನಿಯು, ಮೇನಕೆ-ಮನೋರಮೆಯರ ಕೈಯನ್ನು ಹಿಡಕೊಂಡು ಸಭಾಮಂದಿರವನ್ನು ಪ್ರವೇಶಿಸಿದಳು. ಹೀಗೆ ಹಿಂದೂ ರಾಜ್ಯದ ಘಟನೆಯ ಕರ್ತಾರರೆನಿಸುವ ಈ ಪ್ರಧಾನ ಪಾತ್ರಗಳು ಸಭಾಮಂದಿರ ವನ್ನು ಪ್ರವೇಶಿಸಿದ ಕೂಡಲೆ, ಸಭೆಗೆ ಸಭೆಯೇ ಭಕ್ತಿಪರವಶವಾಗಿ ಎದ್ದುನಿಂತಿತು. ಗುರುಗಳು ಅಗ್ರ ಪೀಠವನ್ನು ಆರೋಹಿಸಿದಬಳಿಕ, ಅವರ ಸೂಚನೆಯಂತೆ ಹೇಮಚಂದ್ರನು ಸಿಂಹಾಸನ ವೇರಿದನು. ಮೃಣಾಲಿನಿಯು ಆ ಇಬ್ಬರು ಸತಿಯರೊಡನೆ ಮಾಧವಾಚಾರ್ಯರ ಸಮ್ಮುಖದಲ್ಲಿ ಕುಳಿತುಕೊಂಡಳು; ದರ್ಬಾರದ ಜನರ ವಂದನೆಗಳ ಶಿಷ್ಟಾಚಾರವು ಮುಗಿದ ಬಳಿಕ ಎಲ್ಲರೂ

ತಮ್ಮ ತಮ್ಮ ಸ್ಥಳದಲ್ಲಿ ಕುಳಿತುಕೊಂಡರು. ಕ್ಷಣಹೊತ್ತು ಆ ಜನಸಂದಟಿತವಾದ ಸಭಾ ಮಂದಿರವು ಸ್ತಬ್ಧವಾಗಿ ಇದ್ದು ಬಿಟ್ಟಿತ್ತು.

ಸಭಾಮಂದಿರದ ಈ ಮೂಕೀ ಭಾವವನ್ನು ಭಂಗಪಡಿಸುತ್ತ ಮಹಾತ್ಮರಾದ ಮಾಧವಾಚಾರ್ಯರು ನುಡಿದದ್ದೇನಂದರೆ–ಪ್ರಭೋ, ಹೇಮಚಂದ್ರಾ, ಸನ್ಮಾನನೀಯ ಸಾಧ್ವೀಶಿಖಾಮಣಿಗಳೇ, ಸಾಮ್ರಾಜ್ಯ ಮಂದಿರದ ಆಧಾರಸ್ತಂಭಗಳಾದ ಸಮಸ್ತ ಸಭಾಸದರೇ, ಪರಮೇಶ್ವರನ ಕೃಪೆಯಿಂದ ನಮ್ಮ ನೂತನ ಸಾಮ್ರಾಜ್ಯವು ಶತ್ರುಗಳ ದವಡೆಯ ಹಲ್ಲುಗಳನ್ನು ಮುರಿಯುವಷ್ಟು ದಾರ್ಢ್ಯವನ್ನು ಹೊಂದಿ ಸ್ಥಿರವಾದದ್ದಕ್ಕಾಗಿ ನಿಮ್ಮೊಡನೆ ನಾನೂ ಆನಂದಪಡುವೆನು. ನೀವೆಲ್ಲರು ಅತ್ಯಂತ ಸ್ವಾಮಿನಿಷ್ಠರೂ ಸ್ವಾರ್ಥರಹಿತರೂ ಆಗಿ ನಿಮ್ಮ ಮೈಮೇಲೆ ಬಂದ ಪ್ರಸಂಗಗಳಿಗೆಲ್ಲ ಎದೆಗೊಟ್ಟು ನಿಂತು ಆ ಪ್ರಸಂಗಗಳಿಂದ ಪಾರಾದದ್ದರಿಂದಲೇ ನಾವು ಆ ಆನಂದದ ಸುದಿನವನ್ನು ಕಂಡೆವು. ಈ ಸುದಿನವನ್ನು ಕಾಣಿಸುವ ವಿಷಯದಲ್ಲಿ ಯಾರು ಹೆಚ್ಚಿನವರು, ಯಾರು ಕಡಿಮೆಯವರು ಎಂಬದನ್ನು ನಾನೇನು ಹೇಳಲಿ? ಸ್ವೀಕೃತ ಸತ್ಕಾರ್ಯವು ಸಾಧಿಸಬೇಕೆಂಬ ಸದ್ಭಾವದ ದೃಷ್ಟಿಯಿಂದ ನೀವೆಲ್ಲರೂ ಸಮಾನರೆಂದು ನಾನು ತಿಳಿಯುತ್ತೇನೆ. ಇನ್ನು ಕೆಲವರ ಮೇಲೆ ಹೆಚ್ಚು ಕಠಿಣ ಪ್ರಸಂಗಗಳು, ಕೆಲವರ ಮೇಲೆ ಕಡಿಮೆ ಕಠಿಣ ಪ್ರಸಂಗಗಳು ಬಂದವೆಂಬ ಮಾತು ಒಪ್ಪಿಕೊಳ್ಳತಕ್ಕದ್ದೇ ಸರಿ. ಇಂಥ ಕಠಿಣ ಪ್ರಸಂಗಗಳು ಒದಗಿದಾಗ ಆಲೋಚನಾ ದೃಷ್ಟಿಯಿಂದಲೂ, ದೇಹದಂಡನದ ದೃಷ್ಟಿಯಿಂದಲೂ ಹೇಮಚಂದ್ರ ಪ್ರಭುವಿಗೆ ಸಹಾಯ ಮಾಡಿದವರಲ್ಲಿ ಸಾಧ್ವೀಮಣಿಯಾದ ಮನೋರಮೆಯು ಶ್ರೇಷ್ಠಳೆಂದು ನಾನು ಹೇಳುವೆನು. ನೂತನವಾದ ಮಾಗಧೀ ರಾಜ್ಯದ ಮೇಲೆ ಆಕೆಯಿಂದಾದ ಉಪಕೃತಿಯನ್ನು ನಾನು ಇಷ್ಟೆಂದು ಹೇಳಲಾರೆನು. ಆ ಪುಣ್ಯವಂತಳು ನನ್ನ ಮಾತಿನಲ್ಲಿ ವಿಶ್ವಾಸವಿಟ್ಟು ಸಹಗಮನರೂಪ ಶ್ರೇಷ್ಠ ಸತಿಧರ್ಮವನ್ನು ಪರಿತ್ಯಜಿಸಿ ದೇಶೋದ್ಧಾರದ ಕಾರ್ಯದಲ್ಲಿ ತೊಡಗಿದ್ದಕ್ಕಾಗಿ, ನಾನೊಬ್ಬನೇ ಅಲ್ಲ ಈ ಸಿಂಹಾಸನಾಧಿಷ್ಠಿತ ಪ್ರಭುವೂ, ಆತನ ಪ್ರಜೆಗಳೂ ಅತ್ಯಂತ ಕೃತಜ್ಞರಾಗಿರತಕ್ಕದ್ದು. ಈ ಸತೀಮಣಿಯ ಒಂದೊಂದು ಗೂಢಕಾರ್ಯವನ್ನೂ, ಸಮರಸಾಹಸವನ್ನೂ ನೋಡಿದರೆ, ಈಕೆಯೇನು ಅವತಾರಿಕಳೋ, ದೇವಾವೇಶಹೊಂದಿದ ಮಹಾತ್ಮಳೋ ಎಂಬ ಸದ್ಭಾವವು ಉತ್ಪನ್ನವಾಗದೆ ಇರುವದಿಲ್ಲ. ಈ ತೇಜಸ್ವಿನೀ ಅಬಲೆಯು, ಅತ್ಯಂತ ಪವಿತ್ರಾಚರಣೆಯವಳು, ಭೂತದಯಾಪರಳು, ಪೂರ್ಣ ಮನೋನಿಗ್ರಹಿಯು, ಅತ್ಯಂತ ಕರ್ತವ್ಯನಿಷ್ಠುರಳು ಆಗಿರುವಳು. ಈ ವೈರಾಗ್ಯಶೀಲಳು ಎಂಥ ಎಂಥವೋ ಮಹತ್ಕಾರ್ಯಗಳನ್ನು ಮಾಡಿದರೂ ಹೇಮಚಂದ್ರ ಪ್ರಭುವಿನ ಅರಮನೆಯ ಒಂದು ದಿನದ ಸತ್ಕಾರವನ್ನೂ ಹೊಂದಿರುವದಿಲ್ಲ. ಕಾರ್ಯಾನಂತರ ಮಹಾ ಯೋಗಿನಿಯಂತೆ ತತ್‌ಕ್ಷಣ ಅದೃಶ್ಯಳಾಗುತ್ತಿದ್ದಳು. ಈಗ ಈ ತಪಸ್ವಿನಿಯ ಬಲ ರಟ್ಟೆಗೆ ಗುಂಡು ಬಡಿದು ಬಲವಾದ ಗಾಯವಾಗಿ ಐದು ದಿನಗಳಾಗಿರುವವು; ಗಾಯವು ಇನ್ನೂ ಮಾದಿರುವದಿಲ್ಲ. ಇಷ್ಟರಲ್ಲಿಯೇ ಈ ಪತಿಪ್ರಾಣಳು ಪರಲೋಕದಲ್ಲಿ ಕಾದಿರುವ ಪತಿಯ ದರ್ಶನಮಾಡಿಕೊಳ್ಳುವದಕ್ಕಾಗಿ ಇಂದೇ ಸಹಗಮನ ಮಾಡುತ್ತಿರುವಳು. ಇಂಥ ಪುಣ್ಯಾತ್ಮಳ ದರ್ಶನದಿಂದ ಪುನೀತರಾಗಬೇಕೆಂಬದೇ ಇಂದಿನ ಸಭೆಯ ಉದ್ದೇಶವಿರುತ್ತದೆ. ಇಂಥ ಸತೀ

ಶಿಖಾಮಣಿಗಳು ಭರತ ಭೂಮಿಯಲ್ಲಿ ಅಲ್ಲಲ್ಲಿ ಹುಟ್ಟುತ್ತಿರುವದರಿಂದ, ಯಾವ ಕಾಲದಲ್ಲಿಯೂ ಅದರ ತೇಜೋಹಾನಿಯಾಗಲಾರದು!

ಈ ಮೇರೆಗೆ ನುಡಿದು ಆಚಾರ್ಯವರ್ಯರು ಸುಮ್ಮನಾಗುತ್ತಿರಲು, ಮನೋರಮೆಯು ಅವರ ಚರಣಕ್ಕೆರಗಿ ಕಂಪಿತಸ್ವರದಿಂದ—ನಾನು ಪಾಮರಳು, ಮಹಾತ್ಮರ ಮಾತನ್ನು ಸುಳ್ಳೆಂದು ಹೇಗೆ ಹೇಳಲಿ? ನಾನು ಸಹಗಮನವನ್ನು ಬಿಟ್ಟು ಲೋಕಾರಾಧನಾರೂಪ ಶ್ರೇಷ್ಠ ದೇವತಾ ಪೂಜೆಯನ್ನು ಮಾಡಲಿಕ್ಕೆ ಈ ಮಹಾತ್ಮರ ಅನುಗ್ರಹವೇ ಕಾರಣವು; ಅದರಂತೆ ನಾನು ನನ್ನ ಅಣ್ಣನಾದ ಹೇಮಚಂದ್ರಪ್ರಭುವಿಗೊದಗಿದ ಸಂಕಟವನ್ನು ಅಕಸ್ಮಾತ್ ಸೂಚಿಸಲಿಕ್ಕೆ, ಈ ಪತಿವ್ರತಾ ಶಿಖಾಮಣಿಯಾದ ಮೇನಕೆಯ ಸಹಾಯವು ಕಾರಣವು; ಹಾಗೆಯೇ ಸಮರ ಭೂಮಿಯಲ್ಲಿ ನಾನು ಮಹಾ ಪೌರುಷವನ್ನು ತೋರಿಸಲಿಕ್ಕೆ ಈ ಪತಿಹಸ್ತದತ್ತವಾದ ಶ್ರೀ ದುರ್ಗೆಯ ಖಡ್ಗವು ಕಾರಣವು. ಈ ಖಡ್ಗವನ್ನು ಧರಿಸಿದಕೂಡಲೆ ನನಗೆ ವಿಲಕ್ಷಣ ಆವೇಶ ವುಂಟಾಗುವದು. ನನ್ನ ಅನುಭವದ ಮಾತಾಗಿರುವದು. ಈಗ ಈ ಪವಿತ್ರ ಖಡ್ಗವನ್ನು ಧರಿಸುವ ನನ್ನ ಬಲಗೈಗೆ ಗುಂಡುಬಡಿದು ಅದು ಊನವಾಗಿರುವದರಿಂದ, ಇಲ್ಲಿಗೆ ನಾನು ಖಡ್ಗವನ್ನು ಧರಿಸುವ ಪ್ರಸಂಗಗಳು ತೀರಿದವೆಂದು ನಾನು ತಿಳಿಯುತ್ತೇನೆ. ಅದರಂತೆ, ಮಹಾತ್ಮರಾದ ಆಚಾರ್ಯವರ್ಯರು ಭವಿಷ್ಯವಾಣಿಯನ್ನು ನುಡಿದಂತೆ, ನನ್ನ ಈ ನಿಶಿತ ಖಡ್ಗವು ಮೂರುಸಾರೆ ಯವನ ರಕ್ತಪಾನಮಾಡಿತು; ಆದ್ದರಿಂದ ಕೇವಲ ಪತಿಯ ಕಟ್ಟಕಡೆಯ ಇಚ್ಛೆಯನ್ನು ಪೂರ್ಣ ಮಾಡುವದಕ್ಕಾಗಿಯೇ ಸಹಗಮನ ಮಾಡದೆ ಇದ್ದ ನಾನು, ಕಾರ್ಯವಾದ ಬಳಿಕ ಏಕೆ ನಿಂತುಕೊಳ್ಳಲಿ? ಈ ಸಹಗಮನವನ್ನು ನಾನು ಸರ್ವಪರಿಯಿಂದ ನನಗೆ ಪೂಜ್ಯಳಾದ ಪತಿಪ್ರಾಣೆ ಮೃಣಾಲಿನಿಯ ಸನ್ನಿಧಿಯಲ್ಲಿ ಮಾಡುತ್ತಿರುವದಕ್ಕಾಗಿ ನನ್ನಲ್ಲಿ ಪರಮ ಧನ್ಯತೆಯುಂಟಾಗಿದೆ. ಸಾಧ್ವೀ ಮೃಣಾಲಿನಿಯ ಪತಿಭಕ್ತಿಯು ಅಗಾಧವಾದದ್ದು; ಆಕೆಯ ಚಾರಿತ್ರ್ಯವನ್ನು ಮನನ ಮಾಡಿದವರಿಗೆ ಲೋಕಮಾತೆ ಶ್ರೀ ಜಾನಕಿಯ ಸ್ಮರಣವಾಗದೆಯಿರದು. ನಾನು ಬ್ರಾಹ್ಮಣ ಸ್ತ್ರೀಯಾದದ್ದರಿಂದ ಕ್ಷತ್ರಿಯಳಾದ ಮೃಣಾಲಿನಿಗೆ ದೇಹದಿಂದ ನಮಸ್ಕಾರಮಾಡಲಿಕ್ಕೆ ಧರ್ಮತಃ ನನಗೆ ಬರುವಹಾಗಿಲ್ಲ; ಆದರೂ ಮನಸ್ಸಿನಿಂದ ಶತಶಃ ಸಹಸ್ರಶಃ ನಮಿಸುವ ಈ ವಿಧವೆಯಾದ ಮನೋರಮೆಯನ್ನು ಸಾಧ್ವೀ ಮೃಣಾಲಿನಿಯು ಅಖಂಡಪತಿ ಸಮಾಗಮವಾಗುವಂತೆ ನನ್ನನ್ನು ಅನುಗ್ರಹಿಸಬೇಕೆಂದು ಪ್ರಾರ್ಥಿಸುವೆನು.

ನಾನು ಈಗ ಪರಲೋಕಗಮನ ಸಿದ್ಧಳಾಗಿರುವದರಿಂದ ನನ್ನ ಸನ್ಮಾನನೀಯ ಮೇನಕೆಯ ವೃತ್ತಾಂತವನ್ನು ಹೇಳಿ ಆ ನಿರ್ಮಲಚರಿತ್ರಳಿಗೆ ಪತಿಸಮಾಗಮವನ್ನುಂಟುಮಾಡಿಕೊಡದಿದ್ದರೆ, ನನಗೆ ನಿಶ್ಚಯವಾಗಿ ಪರಲೋಕದಲ್ಲಿ ಪತಿಯದರ್ಶನವಾಗಲಿಕ್ಕಿಲ್ಲ. ಈ ಮೇನಕೆಯು ನದಿಯಾ ರಾಜಧಾನಿಯಲ್ಲಿಯ ಒಬ್ಬ ಬ್ರಾಹ್ಮಣನ ಮಗಳು. ಈಕೆಯನ್ನು ದೇಶದ್ರೋಹಿ ಶಾಂತಶೀಲನಿಗೆ ಕೊಡಬೇಕೆಂದು ಆಕೆಯ ತಾಯಿತಂದೆಗಳು ಮಾಡಿದ್ದರು. ಆದರೆ ಚಾಣಾಕ್ಷಳಾದ ಮೇನಕೆಯು ಆ ದುರ್ವೃತ್ತನನ್ನು ಲಗ್ನವಾಗಲಿಕ್ಕೆ ಸರ್ವಥಾ ಒಪ್ಪಲಿಲ್ಲ. ಆಗ ಆಕೆಯ ತಂದೆ ತಾಯಿಗಳು ವೇಣೀ ಮಾಧವನೆಂಬ ಸಾತ್ವಿಕ ಬ್ರಾಹ್ಮಣನೊಡನೆ ಈಕೆಯ ಲಗ್ನಮಾಡಿದರು. ವೇಣೀಮಾಧವನು

ಕಾಶಿಗೆ ಶಾಸ್ತ್ರಾಧ್ಯಯನಕ್ಕಾಗಿ ಹೋಗಿರಲು, ಮೇನಕೆಯು ತಂದೆಯ ಮನೆಯಲ್ಲಿಯೇ ಇದ್ದಳು, ಆದರೆ ನನ್ನ ಪತಿಯ ಒಳಸಂಚಿನಿಂದ ನದಿಯಾ ರಾಜಧಾನಿಯು ಸ್ಮಶಾನವಾಗಲು, ದುಷ್ಟ ಶಾಂತಶೀಲನು ಈಕೆಯನ್ನು ಅಪಹರಿಸಿದನು. ಇಂಥ ಕಠಿಣ ಪ್ರಸಂಗದಲ್ಲಿ ಈ ಜಾಣೆಯು ತನ್ನ ಪಾತಿವ್ರತ್ಯವನ್ನು ಕಾಯ್ದುಕೊಂಡದ್ದು ಕೌತುಕದ ಸಂಗತಿಯಾಗಿರುವದು. ಈಕೆಯು ದುರ್ವೃತ್ತ ಶಾಂತಶೀಲನನ್ನು ಕುರಿತು ನಗೆಮೊಗದಿಂದ ''ಇನ್ನೇನು? ನಾನು ತಮ್ಮವಳೇ ಆದೆನು. ತಾವು ಯವನರ ಸಹಾಯದಿಂದ ದೊಡ್ಡ ಪದವಿಗೇರಿದರೆ ನನ್ನನ್ನು ಹಿಡಿದವರಾರು? ಆದರೂ ನೀವು ಮುಸಲ್ಮಾನರಾಗದೆ ಬಾದಶಹರಿಂದ ಒಂದು ಶಾಶ್ವತ ಪದವಿಯನ್ನು ಹೊಂದುವವರೆಗೆ ಮನೋನಿಗ್ರಹಮಾಡಿರಿ. ಹಾಗೆ ಮನೋನಿಗ್ರಹಮಾಡದಿದ್ದರೆ ನಿಮಗೆ ಜೀವಂತ ಮೇನಕೆಯು ಸಿಗಲಿಕ್ಕಿಲ್ಲ'' ಎಂದು ಹೇಳಿ, ಬಗೆಬಗೆಯ ಹಂಚಿಕೆಗಳಿಂದ ಆತನ ಮನಸ್ಸನ್ನೊಲಿಸಿಕೊಂಡು ಮರುಳುಮಾಡಿ ಆತನ ಗುಪ್ತ ಕಾರಸ್ಥಾನಗಳನ್ನೆಲ್ಲಾ ಕೇಳಿಕೊಂಡು ಕೂಡಲೆ ನನಗೆ ತಿಳಿಸುತ್ತಿದ್ದಳು; ಅಂತರಂಗದಲ್ಲಿ ಆ ದುಷ್ಟನ ಪ್ರಾಣಹರಣಮಾಡುವ ತನ್ನ ಪ್ರತಿಜ್ಞೆಯನ್ನು ಪೂರ್ಣ ಮಾಡುವದಕ್ಕಾಗಿ ಆತುರಪಡುತ್ತಿದ್ದಳು. ನಿಮ್ಮ ಭೋಜನಸಮಾರಂಭದ ದರ್ಬಾರದಲ್ಲಿ ಶಾಂತಶೀಲನ ಶಿರಚ್ಛೇದಮಾಡಿ ಈಕೆಯು ತನ್ನ ಪ್ರತಿಜ್ಞೆಯನ್ನು ಪೂರ್ಣಮಾಡಿಕೊಂಡದ್ದು ನೀವು ಅರಿಯದ ಮಾತಲ್ಲ. ಈಕೆಯ ಪತಿಯಾದ ವೇಣೀಮಾಧವ ಪಂಡಿತರನ್ನು ನಾನು ಇಲ್ಲಿಗೆ ಕರೆಸಿದ್ದೇನೆ. ಅವರು ಇಂಥ ಸಾಧ್ವೀ ಶಿರೋಮಣಿಯಾದ ಪತ್ನಿಯನ್ನು ಪರಿಗ್ರಹಿಸುವದು ಯೋಗ್ಯವಲ್ಲವೇ? ಎಂದು ಪ್ರಶ್ನಮಾಡಿ ಸಭಾಸದರಕಡೆಗೆ ನೋಡಲು, ಅರಸನಿಂದ ಯಃಕಶ್ಚಿತ ಸೈನಿಕರವರೆಗೆ ಎಲ್ಲರೂ ಪರವಶರಾಗಿ ''ಯೋಗ್ಯವು, ಅತ್ಯಂತ ಯೋಗ್ಯವು'' ಎಂದು ನುಡಿದರು. ಆಗ ಮಾಧವಾಚಾರ್ಯರು ವೇಣೀಮಾಧವನನ್ನು ಕುರಿತು ''ಪಂಡಿತವರ, ವೇಣೀಮಾಧವ, ಇತ್ತ ಬರಬೇಕು. ನೀವು ನನಗೆ ಅರಿಯದವರಲ್ಲ'' ಎಂದು ನುಡಿದರು. ಕೂಡಲೆ ವೇಣೀ ಮಾಧವನು ಮಾಧವಾಚಾರ್ಯರನ್ನು ನಮಿಸಿ, ನಮಸ್ಕರಿಸುವ ಅರಸನನ್ನು ಆಶೀರ್ವದಿಸಿ ಅಸನದಲ್ಲಿ ಕುಳಿತುಕೊಂಡನು. ಆ ತೇಜಃಪುಂಜನಾದ ಪಂಡಿತನು ಪ್ರತ್ಯಕ್ಷ ಬ್ರಹ್ಮತೇಜಸ್ಸೇ ಮೂರ್ತಿಗೊಂಡಂತೆ ಸಭಿಕರಿಗೆ ತೋರಿದನು. ಅತ್ತ ಮೇನಕೆಯು ಪುಳಕಿತಗಾತ್ರೆಯಾಗಿ ಯಾವಾಗೋ ತನ್ನ ಸ್ಥಳದಲ್ಲಿ ತಲೆಬಾಗಿ ನಿಂತುಕೊಂಡಿದ್ದಳು.

ಹೀಗೆ ಎದ್ದುನಿಂತಿರುವ ಮೇನಕೆಯನ್ನು ಮನೋರಮೆಯು ಆದರದಿಂದ ''ಕುಳಿತು ಕೊಳ್ಳಮ್ಮಾ'' ಎಂದು ಕೈಹಿಡಿದು ಕುಳ್ಳಿರಿಸಿಕೊಳ್ಳುತ್ತಿರಲು, ಪ್ರಭುವಾದ ಹೇಮಚಂದ್ರನು— ''ಗುರುವರ, ಈ ವಿಜಯೋತ್ಸವದ ಸಮಾರಂಭದಲ್ಲಿ ಈ ಸಭೆಯ ಸಮಕ್ಷ ಪಂಡಿತರವರು ಮೇನಕಾ ದೇವಿಯ ಪಾಣಿಗ್ರಹಣಮಾಡಿಬಿಡಲಿ! ಈ ಮಂಗಲ ಪ್ರಸಂಗವು ಒದಗಿದ ಆನಂದ ದಲ್ಲಿಯೇ ನನ್ನ ತಂಗಿಯಾದ ಮನೋರಮೆಯ ಸಹಗಮನ ಸಮಾರಂಭವಾಗಲಿ, ಅನ್ನುತ್ತಿರಲು, ಸಾಧ್ವಿಯಾದ ಮೃಣಾಲಿನಿಯು ಮನೋರಮೆಯನ್ನು ನಮಸ್ಕರಿಸಿ ಮೇನಕೆಯ ಕೈಯನ್ನು ಹಿಡಿದು ಗುರವರರ ಬಳಿಗೆ ಕರತಂದಳು. ಆಗ ಮಾಧವಾಚಾರ್ಯರು ವಾತ್ಸಲ್ಯದಿಂದ—

''ಪಂಡಿತ ವೇಣೀಮಾಧವ'' ಎಂದು ಸಂಬೋಧಿಸಲು, ಆ ಪಂಡಿತವರನು ಕೂಡಲೆ ಎದ್ದು ಗುರುಗಳನ್ನು ನಮಸ್ಕರಿಸಿ, ಧನ್ಯತೆಯಿಂದ ತನ್ನ ಪತ್ನಿಯಾದ ಮೇನಕೆಯ ಪಾಣಿಗ್ರಹಣ ಮಾಡಿದನು. ಆಗ ಆನಂದೋದ್ಗಾರಗಳಿಂದ ಸಭಾಮಂದಿರವು ತುಂಬಿಹೋಯಿತು. ಆಗ ಹೇಮಚಂದ್ರನು ಸಭಿಕರನ್ನು ಕುರಿತು –ಸಭಿಕರೇ, ಈ ಪಂಡಿತವರರ ತೇಜಸ್ಸಿಗೆ ಲೀನನಾಗಿದ್ದ ನಾನು ನನ್ನ ನೂತನ ರಾಜ್ಯದಲ್ಲಿ ಇವರು ನನ್ನ ಆಲೋಚನಾ ಮಂತ್ರಿಗಳಾಗಿರಬೇಕೆಂದು ಇಚ್ಛಿಸುತ್ತೇನೆ, ಎಂದು ಹೇಳಲು, ಆ ತರುಣ ಪಂಡಿತನು ಅದಕ್ಕೆ ಸಂತೋಷದಿಂದ ಒಪ್ಪಿಕೊಂಡನು. ಮೃಣಾಲಿನಿಯೊಡನೆ ಮೇನಕೆಯು ಮನೋರಮೆಯ ಬಳಿಗೆ ಹೋಗುತ್ತಿರಲು, ಸಭೆಯ ಕಾರ್ಯವು ಮುಗಿದು ಎಲ್ಲರೂ ಸಹಗಮನ ಮಾಡುವ ಸತೀ–ಮನೋರಮೆಯ ದರ್ಶನದಿಂದ ಪುನೀತರಾಗುವುದಕ್ಕಾಗಿ ಯುದ್ಧಭೂಮಿಗೆ ಹೋದರು.

ಮನೋರಮೆಗೆ ಗುಂಡುಬಡೆದ ಸ್ಥಳದಲ್ಲಿ ಹೇಮಚಂದ್ರನ ಅಪ್ಪಣೆಯಿಂದ ಚಿತೆಯು ಸಿದ್ಧವಾಗಿತ್ತು ಸಹಗಮನಕ್ಕೆ ಬೇಕಾಗುವ ಪದಾರ್ಥಗಳೂ, ಮಂತ್ರಹೇಳುವ ಬ್ರಾಹ್ಮಣರೂ ಸಿದ್ಧವಾಗಿದ್ದರು. ಮನೋರಮೆಯು ಆನಂದದಿಂದ ಆ ಸ್ಥಳಕ್ಕೆ ಬಂದಳು. ಮೃಣಾಲಿನಿಯೂ, ಮೇನಕೆಯೂ ಆಕೆಯನ್ನು ಹಿಂಬಾಲಿಸಿದರು. ಮನೋರಮೆಯು ಈಗ ಶುಭ್ರವಸ್ತ್ರ ವನ್ನುಟ್ಟುಕೊಂಡು ದಿವ್ಯವಾದ ಪುಷ್ಪಮಾಲೆಯನ್ನು ಕೊರಳಲ್ಲಿ ಹಾಕಿಕೊಂಡಿದ್ದಳು. ಹಣೆಗೆ ಮಂಗಲಕರವಾದ ಪಟ್ಟೆಕುಂಕುಮವನ್ನು ಹಚ್ಚಿದ್ದಳು. ವಿಧಿಯಂತೆ ಮಾಡುವ ದಾನಧರ್ಮಗಳನ್ನು ಮಾಡಿದಳು. ಆಕೆಯು ತನ್ನನ್ನು ಕುರಿತು ದುಃಖಮಾಡಲಾಗದೆಂದು ಮೃಣಾಲಿನಿ–ಮೇನಕೆ ಯರಿಗೂ, ಹೇಮಚಂದ್ರನಿಗೂ ಪುನಃ ಪುನಃ ಆಗ್ರಹದಿಂದ ಹೇಳಿದಳು. ಹೇಮಚಂದ್ರನು ಕಣ್ಣಲ್ಲಿ ನೀರುತಂದು–ತಂಗೀ, ಮನೋರಮೇ, ನಿನ್ನ ಅಣ್ಣನಿಗೆ ಮತ್ತೇನು ಹೇಳುವೆ? ಎಂದು ನುಡಿದು, ಮನೋರಮೆಯ ಚರಣಗಳ ಮೇಲೆ ಮಸ್ತಕವಿಡಲು, ಮನೋರಮೆಯು ಸದ್ಗದಿತಾಂತಃಕರಣ ದಿಂದ—''ಅಣ್ಣಾ, ಮತ್ತೆ ಮೋಹವನ್ನು ಹುಟ್ಟಿಸಬೇಡಪ್ಪಾ, ನೀನು ದೀರ್ಘಾಯುಷ್ಯ ವಂತನಾಗು, ಜಯ ಶೀಲನಾಗು, ಪುತ್ರವಂತನಾಗು. ನಿನ್ನಂಥ ಪ್ರತಾಪಿಯಾದ ಅಣ್ಣನಿದ್ದುದ ರಿಂದಲೇ ನಾನು ಇಷ್ಟು ಚಾರಿತ್ರ್ಯಶೀಲೆಯೆಂದು ಹೆಸರುಪಡೆದೆನು. ಅಣ್ಣಾ, ಈ ಕೀರ್ತಿಯೆಲ್ಲಾ ನಿನ್ನದು! ನೀನು ಭಾರತಮಾತೆಯ ಸತ್ಪುತ್ರನು. ನಿನ್ನಂತಹ ಒಬ್ಬ ಮಗನನ್ನು ಹಡೆದರೂ ಈಗಿನ ಕಾಲಕ್ಕೆ ಆ ಭೂಮಾತೆಯ ಗೌರವಕ್ಕೆ ಸಾಕಾಗಿರುವದು; ಪ್ರೇಮದ ಅಣ್ಣನು ನೀನು ನನ್ನನು ಕುರಿತು – ನನಗೆ ಮತ್ತೇನು ಹೇಳುವೆ'' ಎಂದು ಕೇಳುತ್ತಿರುವೆಯಲ್ಲ! ಆದರೆ ಹೇಳುತ್ತೇನೆ ಕೇಳು. ನಾನು ನನ್ನ ಪತಿಸ್ವರೂಪವೆಂದು ತಿಳಿದು ಈ ಖಡ್ಗದೊಡನೆ ಚಿತಾ ಪ್ರವೇಶಮಾಡುವೆನಷ್ಟೆ? ನನ್ನ ಅಸ್ತಿಗಳನ್ನು ಈ ಖಡ್ಗದಿಂದ ಅಗಲಿಸಬೇಡ. ಏನು ವ್ಯವಸ್ಥೆಮಾಡಿದರೂ ಎರಡರದನ್ನೂ ಕೂಡಿಯೇ ಮಾಡು. ಇನ್ನು ಮಾತಾಡಬೇಡ, ನನಗೆ ವಿಳಂಬವಾಗುವದು, ಎಂದು ಹೇಳಿ, ನಮಸ್ಕರಿಸುವ ಮೃಣಾಲಿನೀ–ಮೇನಕೆಯರನ್ನು ಆಶೀರ್ವದಿಸಿ, ಆಚಾರ್ಯವರ್ಯರನ್ನೂ, ಬ್ರಾಹ್ಮಣರನ್ನೂ ವಂದಿಸಿ, ಸಮಸ್ತಜನರು ನಮಸ್ಕರಿಸಲು ಅವರನ್ನು ಹರಸುತ್ತಾ ಬ್ರಾಹ್ಮಣರು

ಮಂತ್ರವನ್ನುತ್ತಿರುವಾಗ ಪಜ್ವಲಿತ ಚಿತೆಯಲ್ಲಿ ಖಡ್ಗದೊಡನೆ ಆ ಸತಿಯು ಶಯನಮಾಡಿದಳು! ನೋಡನೋಡುತ್ತ ಆಕೆಯ ನಶ್ವರ ದೇಹವು ಭಸ್ಮವಾಗಿ ಆ ಸತಿಮಣಿಯು ಕೀರ್ತಿಶೇಷಳಾದಳು! ಹೇಮಚಂದ್ರನು ಆಕೆಯ ಹೇಳಿಕೆಯಂತೆ ಅಸ್ತಿಗಳೊಡನೆ ಖಡ್ಗವನ್ನು ಹುಗಿದು, ಅದರ ಮೇಲೆ ಸಮಾಧಿಯನ್ನು ಮಾಡಿಸಿ ಸ್ಮೃತಿಮಂದಿರವನ್ನು ಕಟ್ಟಿಸಿದ್ದಲ್ಲದೆ, ಮತ್ತೊಂದು ಮಂದಿರವನ್ನು ಕಟ್ಟಿಸಿ ಅಲ್ಲಿ ಶಿವಶಕ್ತಿಯ ಪ್ರತಿಮೆಯನ್ನು ಸ್ಥಾಪಿಸಿದನು.

ಸಮಾಪ್ತ

ವೈಭವ

ಮುನ್ನುಡಿ

ಶ್ರೀ ಸದ್ಗುರುವಿನ ಕೃಪೆಯಿಂದ ''ವೈಭವ''ವೆಂಬ ಕಾದಂಬರಿಯು ಪೂರ್ಣವಾಯಿತೆಂದು ಬರೆಯಲು ತುಂಬಾ ಸಂತೋಷವಾಗುತ್ತದೆ. ಈ ಕಾದಂಬರಿಯ ಪ್ರಸಂಗವು ಒದಗಿದ ಕಾಲದಲ್ಲಿ ಅಂದರೆ ಈಗ ಸುಮಾರು ಎರಡೂವರೆ ಸಾವಿರ ವರ್ಷಗಳ ಪೂರ್ವದಲ್ಲಿ ನಮ್ಮ ಈ ಹಿಂದು ಸ್ಥಾನವು ಗ್ರೀಕ–ಯವನ ಮೊದಲಾದ ಹೆಸರಿನಿಂದ ಪ್ರಸಿದ್ಧವಾಗಿದ್ದ ಪಾಶ್ಚಿಮಾತ್ಯರ ಪ್ರವೇಶ ಸ್ಥಾನವಾಯಿತು. ಬಹು ದಿವಸದಿಂದ ವಿಷಯಸುಖದ ನಂಜು ತಲೆಗೇರಿ ಅಂತಃಕಲಹದಿಂದ ವಿವೇಕಭ್ರಷ್ಟರಾಗುತ್ತ ನಡೆದಿದ್ದ ನಮ್ಮನ್ನು ಎಚ್ಚರಗೊಳಿಸುವದಕ್ಕಾಗಿಯೇ ಪರಮ ಕಾರುಣಿಕನಾದ ಪರಮೇಶ್ವರನು ಈ ಘನವಂತರನ್ನು ಬರಮಾಡಿದನೆಂದು ತಿಳಿಯಬೇಕಾಗುತ್ತದೆ; ಯಾಕಂದರೆ ಆತನ ಸೂತ್ರದ ಹೊರತು ಜಗತ್ತಿನ ಕಡ್ಡಿಕೂಡ ಕದಲುವದಿಲ್ಲೆಂದು ಜ್ಞಾನಿಗಳು ಹೇಳುವದುಂಟು. ಹೀಗೆ ಕಾಲಕ್ಕನುಸರಿಸಿ ಈಶ್ವರೀ ಸೂತ್ರದಿಂದ ಪ್ರಾಪ್ತವಾಗತೊಡಗಿದ್ದ ಹೀನ ಸ್ಥಿತಿಯಲ್ಲಿಯೂ ಆರ್ಯರ ವೈಭವದ ತೇಜಸ್ಸು ಮಿನುಕದೆ ಬಿಡಲಿಲ್ಲ. ಈ ಕಾದಂಬರಿಯೊಳಗಿನ ರಾಕ್ಷಸನೆಂಬ ಹೆಸರಿನ ಘನವಂತನಿಂದ ಸ್ವಾಮಿನಿಷ್ಠೆಯ ವೈಭವವೂ, ಚಾಣಕ್ಯನೆಂಬ ಹೆಸರಿನ ಪರಮ ತೇಜಸ್ವಿಯಿಂದ ಬುದ್ಧಿಯ ವೈಭವವೂ, ಚಂದ್ರಗುಪ್ತನೆಂಬ ಹೆಸರಿನ ಭಾಗ್ಯಶಾಲಿಯಿಂದ ಪ್ರತಾಪ ವೈಭವವೂ, ವಸುಭೂತಿಯೆಂಬ ಹೆಸರಿನ ಸಾತ್ವಿಕನಿಂದ ಶಾಂತಿ ವೈಭವವೂ, ಮುರೆಯೆಂಬ ಕರ್ಕಶ ಸ್ತ್ರೀಯ ಯೋಗದಿಂದ ಕ್ರೂರತನದ ವೈಭವವೂ ಪ್ರಕಟವಾಗುವದರಿಂದ ಈ ಕಾದಂಬರಿಯು ಹಲವು ವೈಭವಗಳ ಸಮುಚ್ಚಯ ಸ್ಥಾನವೆಂದು ತಿಳಿದು ಇದಕ್ಕೆ ವೈಭವವೆಂಬ ಹೆಸರು ಕೊಡಲ್ಪಟ್ಟಿರುವದು.

ಇದು ರಾಜಸ–ತಾಮಸಗುಣ ಪ್ರಧಾನವಾಗಿರುವ ಕಾದಂಬರಿಯಿರುತ್ತದೆ; ಆದರೂ ಇದರೊಳಗಿನ ರಾಕ್ಷಸ–ಚಾಣಕ್ಯರಂಥ ಮಹಾತ್ಮರ ಆಚರಣೆಯ ಮೂಲವನ್ನು ಶೋಧಿಸಿದರೆ, ಶೋಧಕರ ಯೋಗ್ಯತೆಯಂತೆ ಆಶ್ಚರ್ಯಾನಂದಗಳು ಉಂಟಾಗದೆ ಹೋಗಲಿಕ್ಕಿಲ್ಲ. ಚಾಣಕ್ಯನ ಆಚರಣೆಯಿಂದ ನಿಸ್ಪೃಹತೆಯಲ್ಲಿ ವಿಚಿತ್ರವಾದ ಸ್ಪೃಹತೆಯೂ, ರಾಕ್ಷಸನ ಆಚರಣೆಯಿಂದ ಸ್ಪೃಹತೆಯಲ್ಲಿ ವಿಚಿತ್ರವಾದ ನಿಸ್ಪೃಹತೆಯು ಪ್ರಕಟವಾಗಿ, ಕರ್ತವ್ಯದಕ್ಷತೆಯಲ್ಲಿ ಸ್ಪೃಹತೆಯಲ್ಲಿ ವಿಚಿತ್ರವಾದ ನಿಸ್ಪೃಹತೆಯು ಪ್ರಕಟವಾಗಿ, ಕರ್ತವ್ಯದಕ್ಷತೆಯಲ್ಲಿ ಸ್ಪೃಹತೆ–ನಿಸ್ಪೃಹತೆಗಳೆರಡೂ ಗೌಣಾಂಗಗಳಾಗಿ ಪರಿಣಮಿಸುವವೆಂಬ ಮಹತ್ವದ ಸಂಗತಿಯು ವ್ಯಕ್ತವಾಗಿರುತ್ತದೆ. ಮೂಲತಃ ಚಾಣಕ್ಯನು ಕೇವಲ ನಿಸ್ಪೃಹನು; ಆತನಿಗೆ ಹೆಂಡರಿದ್ದಿಲ್ಲ–ಮಕ್ಕಳಿದ್ದಿಲ್ಲ; ಜಗತ್ತೇ ಆತನಿಗೆ

ತೃಣಪ್ರಾಯವಾಗಿತ್ತು; ಆದರೆ ಆತನು ತನ್ನ ಪ್ರತಿಜ್ಞೆಯನ್ನು ಪೂರ್ಣಮಾಡಿಕೊಳ್ಳುವಾಗ ತೋರಿಸಿದ ಅತ್ಯಾಸಕ್ತಿಯನ್ನೂ, ಆ ಅತ್ಯಾಸಕ್ತಿಯ ಮೂಲಕ ಆತನು ಮಾಡಿದ ಹಲವು ಅನನ್ವಿತ ಕೃತ್ಯಗಳನ್ನೂ, ಪ್ರತಿಜ್ಞಾಪೂರ್ತಿಯ ನಂತರ ಎಲ್ಲವನ್ನು ಕಾಲಿನಿಂದ ಒದ್ದು, ಲಂಗೋಟಿ-ಕೃಷ್ಣಾಜಿನದ ಸುರುಳಿಗಳೊಡನೆ ತಪಶ್ಚರ್ಯಕ್ಕೆ ಹೊರಡಲು ಸಿದ್ಧನಾದದ್ದನ್ನೂ ನೋಡಿದರೆ, ಮರ್ಮಜ್ಞರಲ್ಲದ ನಮ್ಮಂಥವರಿಗೆ ಹುಚ್ಚು ಹಿಡಿದ ಹಾಗಾಗುವದರಲ್ಲಿ ಆಶ್ಚರ್ಯವಿಲ್ಲ. ಇದರಂತೆ, ಕುಟುಂಬವತ್ಸಲನೂ, ರಾಜಕಾರ್ಯ ಧುರಂಧರ ಮಂತ್ರಿಶ್ರೇಷ್ಠನೂ ಆದದ್ದರಿಂದ ಅತ್ಯಂತ ಸ್ವಾರ್ಥಪರನಾಗಿ ತೋರುವ ರಾಕ್ಷಸನು, ತನ್ನ ಅಕೃತ್ರಿಮ ಸ್ವಾಮಿನಿಷ್ಠೆಗಾಗಿ ತನ್ನ ವೈಭವದ ನಾಶದ, ಅದೇಕೆ ತನ್ನ ಕುಟುಂಬದವರ ಪ್ರಾಣಹಾನಿಯ ಭಯವನ್ನು ಕೂಡ ಲೆಕ್ಕಿಸದೆ, ''ಸತ್ಯಕ್ಕೆ ಸಾವಿಲ್ಲ'' ಎಂದು ವೈರಿಗಳ ಸಮೂಹದ ಮಧ್ಯದಲ್ಲಿ ನಿರ್ಭಯದಿಂದ ಇರತೊಡಗಿ ಕೇವಲ ನಿಸ್ಪೃಹತೆಯ ಪ್ರಕಟಿಸಿದ್ದನ್ನು ಮನಸ್ಸಿನಲ್ಲಿ ತಂದರೆ, ಆ ಅಮಾತ್ಯವರ್ಯನ ಮೇಲಿನ ಪೂಜ್ಯಬುದ್ಧಿಯಿಂದ ಮೈ ಜುಮ್ಮೆಂದು ಕೂದಲುಗಳು ನೆಟ್ಟಗಾಗುವದರಲ್ಲಿಯೂ ಆಶ್ಚರ್ಯವಿಲ್ಲ. ದೊಡ್ಡವರ ನೆಲೆಯು ಯಾರಿಗೆ ಹತ್ತಬೇಕು? ಅತ್ಯಂತ ದುರ್ಲಭವಾದ ತಮ್ಮ ತೇಜಸ್ಸನ್ನು ಮಹಾತ್ಮರು ನಿಸ್ಪೃಹತೆಯಿಂದ ಭೂಷಿಸಿಕೊಳ್ಳುವರೋ, ಸ್ಪೃಹತೆಯಿಂದ ಭೂಷಿಸಿಕೊಳ್ಳುವರೋ ಯಾರಿಗೆ ಗೊತ್ತು? ತೇಜೋಹೀನರ ಸ್ಪೃಹತೆಯೆಂದೇನು ಪ್ರಯೋಜನ, ನಿಷ್ಪೃಹತೆಯಿಂದೇನು ಪ್ರಯೋಜನ? ತೇಜೋಹೀನರಲ್ಲಿ ಸ್ಪೃಹತೆ-ನಿಸ್ಪೃಹತೆಗಳೆರಡೂ ಸರ್ವಥಾ ವ್ಯರ್ಥವೆಂದು ಹೇಳಬೇಕಾಗುವದು; ಯಾಕಂದರೆ, ಷಂಢನು ಸ್ತ್ರೀವಿಷಯಕವಾದ ನಿಸ್ಪೃಹತೆಯನ್ನು ತಾಳಿದರೂ ಅಷ್ಟೇ, ಸ್ಪೃಹತೆಯನ್ನು ತಾಳಿದರೂ ಅಷ್ಟೇ. ಒಟ್ಟಿಗೆ ನಮ್ಮ ನಮ್ಮ ದೃಷ್ಟಿಯಿಂದ ರಾಕ್ಷಸ-ಚಾಣಕ್ಯರಲ್ಲಿ ಕಂಡು ಬಂದ ದೋಷಗಳನ್ನು ಬಿಟ್ಟುಕೊಟ್ಟು ಗುಣಗಳನ್ನು ಗ್ರಹಿಸುವದು ತಕ್ಕದ್ದು.

ಗುಣದೋಷಗಳ ಯಥಾರ್ಥ ವಿವೇಚನವನ್ನು ಸಾಧಿಸುವದು ಸುಲಭವಲ್ಲೆಂಬ ಮಾತು ಒಪ್ಪತಕ್ಕದ್ದಾಗಿದೆ; ಒಂದು ಪಕ್ಷದಲ್ಲಿ ಸಾಧಿಸಿದರೂ ಬರಿಯ ವಿವೇಚನ ಮಾತ್ರದಿಂದ ಪ್ರಯೋಜನವಾದೀತೆಂದೂ ಹೇಳಲಿಕ್ಕಾಗುವದಿಲ್ಲ. ಅದರಿಂದಲೇ ''ಮಂದಿಯ ಗುಣ ತಕ್ಕೊಂಡು ನಾವು ಮಾಡುವದೇನೆ''ಂಬ ಮಾತು ಜನಸಾಧಾರಣವಾಗಿರುತ್ತದೆ; ಆದರೂ ಲೇಖನ ಕಾರ್ಯಕ್ಕೆ ಕೈ ಹಾಕಿದ ತಪ್ಪಿಗಾಗಿ ತಿಳಿದಮಟ್ಟಿಗಾದರೂ ನಾವು ಗುಣ-ದೋಷಗಳನ್ನು ವಿವೇಚಿಸಲೇಬೇಕಾಗಿರುವದು. ರಾಕ್ಷಸನಲ್ಲಿದ್ದ ಸ್ವಾಮಿನಿಷ್ಠೆ-ಸರಳತೆಗಳನ್ನೂ, ಚಾಣಕ್ಯನಲ್ಲಿದ್ದ ಕರ್ತವ್ಯಜಾಗರೂಕತೆ- ಕರ್ತೃತ್ವ ಶಕ್ತಿಗಳನ್ನೂ, ಇವರಿಬ್ಬರಲ್ಲಿಯೂ ತೋರಿಬಂದ ಸ್ವಧರ್ಮನಿಷ್ಠೆಯನ್ನೂ ಗ್ರಹಿಸಿ ಅದರಂತೆ ನಡೆದರೆ ಹಿತವಾಗದೇ ಇರದು. ಇತ್ತ ರಾಕ್ಷಸನಲ್ಲಿ ಕಾಲಮಹಿಮೆಯಿಂದಲೇ ಆಗಲೊಲ್ಲದೇಕೆ, ಸೇರಿಕೊಳ್ಳಹತ್ತಿದ್ದ ಆಲಸ್ಯ ದುರಭಿಮಾನಗಳನ್ನೂ, ಅತ್ತ ಚಾಣಕ್ಯನಲ್ಲಿ ಕಾರ್ಯಸಾಧನದ ನೆವದಿಂದಲೇ ಆಗಲ್ಲೊದೇಕೆ ಕಂಡುಬಂದ ಕೌಟಿಲ್ಯ- ಕ್ರೌರ್ಯಗಳನ್ನು ಬಿಟ್ಟುಕೊಡಲಿಕ್ಕೆ ನಿರ್ಧಾರದಿಂದ ಯತ್ನಿಸಲಿಕ್ಕೆ ಬೇಕು. ಒಟ್ಟಿಗೆ ದೇಹಧಾರಣ ಮಾಡಿದ ನಾವು ವೇದಾಂತದ ಹೆಸರಿನಿಂದ ಸೋಮಾರಿಗಳಾಗದೆ, ಕರ್ತವ್ಯಜಾಗರೂಕತೆಯ ನೆವದಿಂದ ಕ್ರೂರತನದ ಮಜಲಿಗೆ ಮುಟ್ಟದೆ ಯಾವದೊಂದು ನ್ಯಾಯದ ಉದ್ಯೋಗವನ್ನು ಕೈಕೊಂಡು

ಅದರಲ್ಲಿ ನಿಷ್ಠೆಯಿಂದಲೂ, ದಕ್ಷತೆಯಿಂದಲೂ, ನಿಯಮಿತತನದಿಂದಲೂ ವ್ಯವಹರಿಸಿ ಚಾಣಕ್ಯ- ರಾಕ್ಷಸರಂತೆ ಯಶಸ್ವಿಗಳಾಗತಕ್ಕದ್ದು.

ಚಾಣಕ್ಯನ ಸಂಗಡ ರಾಕ್ಷಸನೂ ಯಶಸ್ವಿಯಾದನೆಂದು ಮೇಲೆ ಹೇಳಿರುವದನ್ನು ನೋಡಿ ವಾಚಕರು ಆಶ್ಚರ್ಯಪಡಬಹುದು. ನಂದರ ಸಂಹಾರವಾಗಿ, ಚಂದ್ರಗುಪ್ತನು ಸಾರ್ವಭೌಮಪದವನ್ನು ಹೊಂದಿದ್ದರಿಂದ ಚಾಣಕ್ಯನು ಯಶಸ್ವಿಯಾದದ್ದು ನಿಜವು; ಆದರೆ ಅಕೃತ್ರಿಮ ಸ್ವಾಮಿನಿಷ್ಠನಾದ ರಾಕ್ಷಸನು ತನ್ನ ಸ್ವಾಮಿಯ ಕುಲಕ್ಷಯವನ್ನು ಮಾಡಿಕೊಂಡು, ಯಶಸ್ವಿಯಾದದ್ದು ಹ್ಯಾಗೆಂದು ವಾಚಕರು ಪ್ರಶ್ನವನ್ನು ಮಾಡಬಹುದು. ಆ ಪ್ರಶ್ನಕ್ಕೆ ಉತ್ತರವಿಷ್ಟೇ, ಯಶಸ್ವಿಯಾದ ಚಾಣಕ್ಯನು ತನ್ನ ಕುಟಿಲ ನೀತಿಯ ದೌರ್ಬಲ್ಯವನ್ನೂ, ಘಾತಕತನವನ್ನೂ ಅರಿತು, ಕಡೆಗೆ ರಾಕ್ಷಸನಿದ್ದಲ್ಲಿಗೆ ಹೋಗಿ, ಆತನ ಅಕೃತ್ರಿಮ ಸ್ವಾಮಿನಿಷ್ಠೆಯನ್ನು ಅಭಿನಂದಿಸಿ, ಪುನಃ ಆತನನ್ನು ನಂದವಂಶದ ಚಂದ್ರಗುಪ್ತನ ಅಮಾತ್ಯನಾಗುವದಕ್ಕಾಗಿ ಬಗೆಬಗೆಯಿಂದ ಪ್ರಾರ್ಥಿಸಿರುವದನ್ನು ನೋಡಿದರೆ, ರಾಕ್ಷಸನು ತನ್ನ ಸದ್ಗುಣಗಳ ಯೋಗದಿಂದ ಚಾಣಕ್ಯಾದಿಕರನ್ನು ಗೆದ್ದು, ಯಶಸ್ವಿಯಾದನೆಂತಲೇ ಹೇಳಬೇಕಾಗುವದು. ರಾಕ್ಷಸನ ದುರಭಿಮಾನ-ಕಿಂಚಿದಾಲಸ್ಯಗಳ ಯೋಗದಿಂದ ಚಾಣಕ್ಯನ ಜಾಗರೂಕತೆ-ಕುಟಿಲತನಗಳಿಗೆ ಅನುವು ದೊರೆತು ರಾಕ್ಷಸನು ಮೊದಲು ಸೋತರೂ, ಕಡೆಗೆ ರಾಕ್ಷಸನ ಸ್ವಾಮಿನಿಷ್ಠೆ, ಸನ್ನಿಷ್ಠೆ, ಸತ್ಯನಿಷ್ಠೆ, ಪರಾಕ್ರಮ ಮೊದಲಾದ ದೇದೀಪ್ಯಗುಣಗಳ ಮುಂದೆ ಚಾಣಕ್ಯನ ಕುಟಿಲತನವು ನಿಸ್ತೇಜವನ್ನು ಹೊಂದಿ ಚಾಣಕ್ಯನು ಸೋತದ್ದಕ್ಕಿಂತಲೂ ಹೆಚ್ಚಾಗಿ ರಾಕ್ಷಸನಿಗೆ ಶರಣು ಬಂದದ್ದನ್ನು ವಾಚಕರು ಮರೆಯತಕ್ಕದ್ದಲ್ಲ. ಈ ವಿಚಿತ್ರ ಪ್ರಸಂಗದಿಂದ ಮುಂದಿನ ಮಹತ್ವದ ಮಾತನ್ನು ಎಲ್ಲರೂ ನೆನಪಿಡಬಹುದಾಗಿದೆ. ಜವಾಬುದಾರರಲ್ಲದ ರಾಜದ್ರೋಹಿಗಳಾದ ತುಂಟರು ಲಂಡತನದಿಂದ ಪ್ರಸಂಗವಶಾತ್ ರಾಜ್ಯವನ್ನು ಸಂಪಾದಿಸಿದರೂ, ಆ ರಾಜ್ಯವನ್ನು ಸುರಕ್ಷಿತವಾಗಿ ಕಾಯ್ದುಕೊಂಡು ಅದರಲ್ಲಿ ಸುಖ-ಶಾಂತಿಗಳನ್ನು ನೆಲೆಗೊಳಿಸುವದಕ್ಕೆ ಅವರು ತೀರಾ ಅಸಮರ್ಥರೂ, ಅಯೋಗ್ಯರೂ ಆಗುವರೆಂಬದು ಚಾಣಕ್ಯನ ಅಭಿಪ್ರಾಯದಿಂದಲೇ ಸಿದ್ಧವಾಗುವದು. ಸರ್ವಗುಣಸಂಪನ್ನನಾದ ತಪೋನಿಷ್ಠ ಚಾಣಕ್ಯನು ಚಂದ್ರಗುಪ್ತನ ಮಂತ್ರಿ ಪದಕ್ಕೆ ರಾಕ್ಷಸನೇ ಯೋಗ್ಯನೆಂದು ನಿರ್ಧರಿಸಿ, ಆತನನ್ನು ಪ್ರಾರ್ಥಿಸಿ ಒಡಂಬಡಿಸಿ ಕರೆತಂದು, ಚಂದ್ರಗುಪ್ತನ ಮಂತ್ರಿಯಾಗಮಾಡಿದ್ದು ಈ ಕಾದಂಬರಿಯೊಳಗಿನ ಬಹು ಮಹತ್ವದ ಸಂಗತಿಯಾಗಿರುತ್ತದೆಂದು ನಾವು ತಿಳಿಯುತ್ತೇವೆ.

ಈ ಕಾದಂಬರಿಯನ್ನು ಓದುವ ಭರದಲ್ಲಿ ಎಷ್ಟೋ ಜನರು ಚಾಣಕ್ಯನಂಥ ದುಷ್ಟ ಪುರುಷನೂ, ಮುರೆಯಂತ ದುಷ್ಟ ಸ್ತ್ರೀಯೂ ಸಿಗಲಿಕ್ಕಿಲ್ಲೆಂದು ಮನಸ್ಸಿನಲ್ಲಿ ಅಂದುಕೊಂಡಿರಬಹುದು-ಮಂದಿಯ ಮುಂದೂ ಆಡಿಕೊಂಡಿರಬಹುದು; ಆದರೆ ಇಂಥ ಅನನ್ವಿತ ಕೃತ್ಯಗಳನ್ನು ಮಾಡುವ ಸ್ತ್ರೀ-ಪುರುಷರು ಈಗಿನ ಕಲಿಕಾಲದಲ್ಲಿ ಅಪರೂಪವಲ್ಲೆಂಬದು ಕಣ್ದೆರೆದು ಬಾಳುವೆ ಮಾಡುವವರ ಅನುಭವಕ್ಕೆ ಬಾರದೆ ಇರಲಿಕ್ಕಿಲ್ಲ. ಸ್ವಾರ್ಥಪರಾಯಣತೆಯ ಈ ದುಡ್ಡಿನ ಯುಗದಲ್ಲಿ ವಿಷಯಾಸಕ್ತರಾದ ಸ್ತ್ರೀ-ಪುರುಷರು ಎಂಥ ಎಂಥ ಭಯಂಕರ ಕೃತ್ಯಗಳನ್ನು ಮಾಡುತ್ತಾರೆಂಬದನ್ನು

ಮನಸ್ಸಿನಲ್ಲಿ ತಂದರೆ, ಅವರ ಮುಂದೆ ಚಾಣಕ್ಯ– ಮುರೆಯರು ಮೋರೆಯಮೇಲೆ ಶರಗು ಹಾಕಿಕೊಂಡು ಓಡಿಹೋಗಬೇಕಾದೀತು. ಮಂದಿಯ ದುರ್ಗುಣಗಳಿಗಾಗಿ ಹೇಸಿಕೊಂಡಂತೆ, ಅಂಥ ದುರ್ಗುಣಗಳು ನಮ್ಮಲ್ಲಿದ್ದರೆ ಅವಕ್ಕಾಗಿ ಹೇಸಿಕೊಂಡು ಅವನ್ನು ಬಿಟ್ಟುಕೊಟ್ಟರೆ ಈ ಕಾಂದಬರಿಯನ್ನು ಓದಿದ್ದು ಸಾರ್ಥಕವಾಯಿತೆಂದು ತಿಳಿಯಲಾಗುವದು.

ಇದು ಮರಾಠಿಯ ಪ್ರಸಿದ್ಧ ಕಾದಂಬರಿಕಾರರಾದ ಮ.ರಾ.ರಾ. ಹರಿ ನಾರಾಯಣ ಆಪಟೆ, ಎಂಬವರ ''ಚಂದ್ರಗುಪ್ತ'' ಎಂಬ ಕಾದಂಬರಿಯ ಆಧಾರದಿಂದ ಬರೆದದ್ದಾಗಿರುತ್ತದೆ. ಇದು ಮೂಲ ಕಾದಂಬರಿಗಿಂತ ಬಹುಮಟ್ಟಿಗೆ ಸಣ್ಣದಾಗಿರುವದು. ಲೇಖಕರಾದವರು ಈ ವೈಭವ ಕಾದಂಬರಿಯನ್ನು ಓದಿದಮೇಲೆ ಮೂಲ ಮರಾಠಿ ಕಾದಂಬರಿಯನ್ನು ಓದಿ ನೋಡಿದರೆ, ಲೇಖನ ವ್ಯವಸಾಯಕ್ಕೆ ಸಂಬಂಧಿಸಿದ ಹಲವು ಉಪಯುಕ್ತ ಸಂಗತಿಗಳು ಅವರ ಮನಸ್ಸಿನಲ್ಲಿ ಹೊಳೆಯಬಹುದು. ಕನ್ನಡದಲ್ಲಿ ಮುದ್ರಾಮಂಜೂಷವೆಂಬ ಹೆಸರಿನ ಕಾದಂಬರಿಯು ಪ್ರಸಿದ್ಧ ವಾಗಿರುತ್ತದಷ್ಟೇ; ಆದರೆ ಆದರೊಳಗಿನ ಚಂದ್ರಗುಪ್ತ, ಭಾಗುರಾಯಣ, ಚಾಣಕ್ಯ, ರಾಕ್ಷಸ, ಚಂದನದಾಸ ಈ ಹೆಸರುಗಳ ಹೊರತು ಬೇರೆ ಯಾವತರದ ವಿಷಯವೂ ಬಹುತರ ಈ ಕಾದಂಬರಿಗೆ ಸಂಬಂಧಪಟ್ಟಿರುವದಿಲ್ಲೆಂದು ಸ್ಪಷ್ಟವಾಗಿ ಹೇಳಬಹುದು. ಮುದ್ರಾಮಂಜೂಷ ದಲ್ಲಿ ರಾಕ್ಷಸನ ತಂತ್ರಗಳನ್ನೆಲ್ಲ ಚಾಣಕ್ಯನು ಅವನ ಕೊರಳಿಗೇ ಹಾಕಿ ಕಡೆಗೆ ಚಂದನದಾಸನ ಮರಣದ ನೆವದಿಂದ ರಾಕ್ಷಸನನ್ನು ತನ್ನ ಬಳಿಗೆ ಬರಮಾಡಿಕೊಂಡಿದ್ದಾನೆ. ಆದರೆ ಈ ವೈಭವ ಕಾದಂಬರಿಯಲ್ಲಿ ಚಾಣಕ್ಯನೇ ಒಂದೊಂದು ಬಲೆಯನ್ನು ಒಡ್ಡಿ ರಾಕ್ಷಸನನ್ನು ಬಿಗಿದು ನೆಲಕ್ಕೆ ಕೆಡವಿದ್ದಾನೆ; ಆದರೆ ಸತ್ವಶಾಲಿಯಾದ ರಾಕ್ಷಸನು ತನ್ನ ಸ್ವಾಮಿನಿಷ್ಠೆ ಮೊದಲಾದ ಉಜ್ವಲ ಗುಣಗಳಿಂದ ಬಲೆಗಳನ್ನು ಹರಿದು ಎದ್ದು ನಿಂತಿದ್ದರಿಂದ ಚಾಣಕ್ಯನು ಗುಣಲುಬ್ಧನಾಗಿ ರಾಕ್ಷಸನಿಗೆ ಶರಣುಹೋಗಿದ್ದಾನೆ. ಅಂತರ್ರಚನೆಯ ಸಂಬಂಧದಿಂದಲೂ, ಉದಾತ್ತವಿಚಾರಗಳ ಸಂಬಂಧದಿಂದಲೂ, ತಂತ್ರಗಳ ಚಮತ್ಕೃತಿಯ ಸಂಬಂಧದಿಂದಲೂ ಕೆಲಕೆಲವು ಕಡೆಯಲ್ಲಿ ಮುದ್ರಾಮಂಜೂಷವು ವೈಭವಕ್ಕಿಂತ ಕೆಳಮಟ್ಟಿಗೆ ಸರಸವಾಗಿದ್ದರೂ, ''ಸತ್ಯಮೇವ ಜಯತೆ'' ಎಂಬ ದೃಷ್ಟಿಯಿಂದ ನೋಡಿದರೆ, ವೈಭವವು ಮುದ್ರಾಮಂಜೂಷಕ್ಕಿಂತ ಗಂಭೀರವಾಗಿರುತ್ತ ದೆಂದು ನಮಗೆ ತೋರುತ್ತದೆ. ಒಟ್ಟಿಗೆ ಭಿನ್ನ ಭಿನ್ನ ಸ್ಥಳಗಳಲ್ಲಿ ಭಿನ್ನ ಭಿನ್ನ ದೃಷ್ಟಿಯಿಂದ ಈ ಕನ್ನಡ ಮಹಾರಾಷ್ಟ್ರ ಕಾದಂಬರಿಗಳೆರಡೂ ಅತ್ಯಂತ ಗೌರವವುಳ್ಳವಾಗಿರುತ್ತವೆಂದು ನಾವು ವಾಚಕರಿಗೆ ಸ್ಪಷ್ಟವಾಗಿ ತಿಳಿಸುವೆವು.

ಆನಂದವನ
೧೮–೧೨–೧೯೧೨

ವಿಧೇಯ,
ವೇ. ತಿ. ಗಳಗನಾಥ

ಪ್ರತಿಜ್ಞೆ

ಶ್ರೀ ಮಹಾಭಾರತಾದಿ ಗ್ರಂಥಗಳಲ್ಲಿ ''ಗಾಂಧಾರ''ವೆಂಬ ದೇಶವು ಪ್ರಸಿದ್ಧವಾಗಿರುವದಷ್ಟೇ? ಧೃತರಾಷ್ಟ್ರನ ಹೆಂಡತಿಯಾದ ಗಾಂಧಾರಿಯು ಗಾಂಧಾರರಾಜನ ಪುತ್ರಿಯೆಂಬದನ್ನಾದರೂ ಬರೆಯುವ ಕಾರಣವಿಲ್ಲ. ಈಗ ಅಫಗಾಣಿಸ್ಥಾನದಲ್ಲಿ ''ಕಂದಹಾರ''ವೆಂಬ ಪಟ್ಟಣವಿರುವ ಪ್ರದೇಶವೇ ಗಾಂಧಾರ ದೇಶವು. ಪ್ರಾಚೀನಕಾಲದಿಂದ ಅಲ್ಲಿ ಆರ್ಯ ಸಾಮ್ರಾಜ್ಯವು ನೆಲೆಗೊಂಡಿತ್ತು. ತಕ್ಷಶಿಲಾ ಪಟ್ಟಣವು ಅದರ ರಾಜಧಾನಿಯು. ಸುಮಾರು ಎರಡುವರೆ ಸಾವಿರ ವರ್ಷಗಳ ಹಿಂದೆ ಗ್ರೀಕ ರಾಜನಾದ ಅಲೆಕ್ಸಂದರನು ಆ ದೇಶವನ್ನು ಗೆದ್ದು ತನ್ನ ರಾಜ್ಯವನ್ನು ಸ್ಥಾಪಿಸಿದನು. ಗ್ರೀಕರ ಆಳಿಕೆಯಲ್ಲಿ ಆರ್ಯಪಂಡಿತರಿಗೆ ಆಶ್ರಯವಿಲ್ಲದಾಯಿತು. ಬರಬರುತ್ತ ಗ್ರೀಕರ ಕಾಟವು ಹೆಚ್ಚಿತು; ಅದರಿಂದ ಆರ್ಯ ಋಷಿಗಳ ಆಶ್ರಮಗಳು ಒಂದೊಂದೇ ಗುಳೆಕಟ್ಟ ತೊಡಗಿದ್ದು ಆಶ್ಚರ್ಯವಲ್ಲ. ನಮ್ಮ ವಿಷ್ಣುಶರ್ಮನೆಂಬ ತರುಣ ವಿದ್ವಾಂಸನು ಈ ಸ್ಥಿತಿಯನ್ನು ನೋಡಿ ಚಡಪಡಿಸುತ್ತ ಮಂತ್ರಬದ್ಧವಾದ ಸರ್ಪವು ತನ್ನ ಸ್ಥಳವನ್ನು ಬಿಟ್ಟು ಕದಲದೆ ಇದ್ದಂತೆ ತನ್ನ ಆಶ್ರಮವನ್ನು ಬಿಡದೆ ಇದ್ದನು.

ವಿಷ್ಣುಶರ್ಮನ ಆಶ್ರಮವು ಬಹು ಸಣ್ಣದು. ಅದಕ್ಕೆ ಆಶ್ರಮವೆನ್ನುವದಕ್ಕಿಂತ ಮುರುಕ ಹುಲ್ಲ ಗುಡಿಸಲವೆಂದರೆ ಒಪ್ಪಬಹುದು. ಆ ಪರ್ಣಕುಟಿಕೆಯು ಆತನಿಗೂ, ಆತನ ಮುಪ್ಪಿನ ತಾಯಿಗೂ ಕೂಡ ಪ್ರಶಸ್ತವಾಗಿ ಸಾಲುವಷ್ಟು ಇದ್ದಿಲ್ಲ. ದಾರಿದ್ರ್ಯವು ಮೂರ್ತಿಮಂತವಾಗಿ ಅಲ್ಲಿ ವಾಸಿಸುತ್ತಿತ್ತು. ಆರ್ಯ ವಿಷ್ಣುಶರ್ಮನು ಅತ್ಯುತ್ತಮ ವಿದ್ವಾಂಸನಾಗಿದ್ದನು. ಚತುರ್ವೇದಗಳು ಆತನಿಗೆ ಮುಖೋದ್ಗತವಾಗಿದ್ದವು; ಕರ್ಮಕಾಂಡವು ಆಕಾರಗೊಂಡು ಆತನ ರೂಪದಿಂದಲೇ ಪೃಥ್ವಿಯಲ್ಲಿ ಅವತರಿಸಿರುವಂತೆ ತೋರುತ್ತಿತ್ತು. ನೀತಿಶಾಸ್ತ್ರದಲ್ಲಂತು ಆತನ ಕೈ ಹಿಡಿಯುವವರು ಯಾರೂ ಇದ್ದಿಲ್ಲ; ಧನುರ್ವಿದ್ಯೆಯಲ್ಲಿ ಆತನು ಪ್ರತಿ ದ್ರೋಣಾಚಾರ್ಯನೇ ಆಗಿದ್ದನು. ಆತನು ತನ್ನ ಶಿಷ್ಯರಿಗೆ ಕಲಿಸುವದಕ್ಕಾಗಿ ಹಲವು ಸುಲಭ ಗ್ರಂಥಗಳನ್ನು ರಚಿಸಿ, ತಾಡವಾಲಿಗಳ ಮೇಲೆ ಬರೆದು ಅವನ್ನು ಆಸ್ಥೆಯಿಂದ ಆ ಕ್ಷುದ್ರ ಗುಡಿಸಲಿನಲ್ಲಿಯೇ ಒತ್ತಟಿಗೆ ರಾಶಿಯಾಗಿ ವ್ಯವಸ್ಥೆಯಿಂದ ಒಟ್ಟಿದ್ದನು.

ವಿಷ್ಣುಶರ್ಮನ ತಂದೆಯು ವಿಷ್ಣುಶರ್ಮನಂತೆಯೇ ಘನವಂತನಾಗಿದ್ದನು. ಆತನು ಮರಣ ಹೊಂದಿ ಏಳೆಂಟು ವರ್ಷಗಳಾಗಿದ್ದವು. ಪತಿಯ ವಿಯೋಗದುಃಖದಿಂದ ಹಾಸಿಗೆಯನ್ನು ಹಿಡಿದಿದ್ದ ವಿಷ್ಣುಶರ್ಮನ ತಾಯಿಯು, ಇನ್ನೂ ಹಾಸಿಗೆಯನ್ನು ಬಿಟ್ಟಿದ್ದಿಲ್ಲ; ಮುಂದೆಯಾದರೂ

ಬಿಟ್ಟಾಳೆಂಬ ಆಸೆಯು ಎಷ್ಟುಮಾತ್ರವೂ ಇದ್ದಿಲ್ಲ. ಆಕೆಯ ಎಲ್ಲ ಸೇವೆಯನ್ನು ಮಾತೃಭಕ್ತನಾದ ವಿಷ್ಣುಶರ್ಮನೇ ಮಾಡಬೇಕಾಗಿತ್ತು. ಆತನು ಎಳ್ಳಷ್ಟು ಬೇಸರ ಮಾಡದೆ ತಾಯಿಯ ಸೇವೆಯನ್ನು ಭಕ್ತಿಯಿಂದ ಮಾಡುತ್ತಿದ್ದನು. ಬರಬರುತ್ತ ತಾಯಿಯ ಬೇನೆಯು ಹೆಚ್ಚಾಯಿತು; ವಿಷ್ಣುಶರ್ಮನ ಮೈಮೇಲೆ ಕೆಲಸದ ಭಾರವು ವಿಶೇಷವಾಗಿ ಬೀಳತೊಡಗಿತು; ಆದರೂ ಆ ಸತ್ವಶೀಲನಾದ ಪುತ್ರನು ಎಳ್ಳಷ್ಟು ಬೇಸರ ಮಾಡಲಿಲ್ಲ; ಆದ್ದರಿಂದ ಮುಪ್ಪಿನ ತಾಯಿಯು ಕ್ಷಣಕ್ಷಣಕ್ಕೆ ಮಗನನ್ನು ಹರಿಸುತ್ತಿದ್ದಳು; ತಾಯಿಯ ಈ ಹರಿಕೆಯಿಂದಲೇ ವಿಷ್ಣುಶರ್ಮನು ಸಂತೋಷಪಡುತ್ತಿದ್ದನು; ಅದೇ ತನ್ನ ಶ್ರಮದ ಪ್ರತಿಫಲವೆಂದು ಆತನು ತಿಳಿದು ಸೇವಾತತ್ಪರನಾಗಿದ್ದನು.

ವಿಷ್ಣುಶರ್ಮನು ತೇಜಸ್ವಿಯಾಗಿದ್ದು ಘನಪಂಡಿತನಾಗಿದ್ದದ್ದರಿಂದ ಎಷ್ಟೋ ವಿದ್ಯಾರ್ಥಿಗಳು ಅಧ್ಯಯನಕ್ಕೋಸ್ಕರ ಅವನ ಬಳಿಗೆ ಬರುತ್ತಿದ್ದರು; ಆದರೆ ಗ್ರೀಕರ ಆಳಿಕೆಯಲ್ಲಿ ಆರ್ಯವಿದ್ಯೆಗೆ ಉತ್ತೇಜನ ದೊರೆಯದ ಹಾಗಾದದ್ದರಿಂದಲೂ, ಮುಪ್ಪಿನ ತಾಯಿಯ ಶುಶ್ರೂಷೆಯಲ್ಲಿ ಅಧ್ಯಾಪನಕ್ಕೆ ಹೊತ್ತು ಸಿಗದಹಾಗೆ ಆದದ್ದರಿಂದಲೂ ವಿದ್ಯಾರ್ಥಿಗಳ ಸಂಖ್ಯೆಯು ಕಡಿಮೆಯಾಗ ಹತ್ತಿತ್ತು. ಹೀಗೆ ಇರಇರುತ್ತ ಒಂದಾನೊಂದು ದಿನ ತಾಯಿಯ ಬೇನೆಯು ಹೆಚ್ಚಾಯಿತು. ಮೊದಲೇ ಮುಪ್ಪಿನವಳು, ಬಹುದಿವಸದ ಬೇನೆ, ಅದರಲ್ಲಿ ದಮ್ಮಿನ ಅಡ್ಡಬೇನೆಯು ಕೂಡಿ ಶ್ವಾಸವು ಉತ್ಪನ್ನವಾಯಿತು; ಅಂದ ಬಳಿಕ ಕೇಳುವದೇನು? ವಿಷ್ಣುಶರ್ಮನ ಉಪಚಾರಗಳೆಲ್ಲ ವ್ಯರ್ಥವಾದವು; ಯಾವದೂ ಗೊತ್ತಿಗೆ ಮುಟ್ಟಲಿಲ್ಲ ಆದಿನ ನಾಲ್ಕುಗಳಿಗೆ ರಾತ್ರಿಯಾಗಿರಲು, ಆ ಮುದುಕೆಯು ಮಗನನ್ನು ಕುರಿತು—''ತಮ್ಮಾ, ಇನ್ನು ನೀನು ಬೇಗನೇ ಭಾಗ್ಯಶಾಲಿ ಯಾಗುವೆ; ನನ್ನ ಸೇವೆಮಾಡಿದ್ದು ಎಂದೂ ವ್ಯರ್ಥವಾಗಲಾರದು'' ಎಂದು ಆಶೀರ್ವದಿಸಿ ದೇಹವನ್ನು ಬಿಟ್ಟಳು.

ತಾಯಿಯ ಮರಣದಿಂದ ವಿಷ್ಣುಶರ್ಮನಿಗೆ ವ್ಯಸನವಾದದ್ದು ಆಶ್ಚರ್ಯವಲ್ಲ. ಆತನನ್ನು ಸಮಾಧಾನಗೊಳಿಸಲಿಕ್ಕೆ ಸಹ ಅಲ್ಲಿ ಯಾರೂ ಇದ್ದಿಲ್ಲ. ಆ ತೇಜಸ್ವಿಯು ತನ್ನ ದುಃಖವನ್ನು ತಾನೇ ನುಂಗಿಕೊಂಡು ತಾಯಿಯ ಉತ್ತರ ಕ್ರಿಯೆಯನ್ನು ಬಹು ಕಷ್ಟದಿಂದ ತೀರಿಸಿದನು. ಬಡತನವು ಬಹುಕೆಟ್ಟದು. ವಿಷ್ಣುಶರ್ಮನು ಎಷ್ಟು ವಿದ್ವಾಂಸನಿದ್ದರೂ, ನಿರ್ಧನನಾದ್ದರಿಂದ ತೊಂದರೆ ಗೊಳಗಾಗಬೇಕಾಯಿತು. ತಾಯಿಯ ಉತ್ತರ ಕ್ರಿಯೆಯು ತೀರಿದ ಮೇಲೆ ಆತನು ಪರಿಯುಚ್ಚಿದ ಹಾವಿನಂತಾದನು. ತಕ್ಷಶಿಲೆಯಲ್ಲಿ ನಿಲ್ಲಲಿಕ್ಕೆ ಆತನ ಮನಸ್ಸು ಮೆಚ್ಚಲಿಲ್ಲ. ಅಲ್ಲಿ ನಿಲ್ಲಲಿಕ್ಕೆ ಕಾರಣವೂ ಇದ್ದಿಲ್ಲ. ಕೇವಲ ಜನ್ಮಭೂಮಿಯೆಂಬ ಅಭಿಮಾನದಿಂದ ಪರತಂತ್ರವಾಗಿ ವಾಸಿಸುವದಕ್ಕೆ ಮನಸ್ವಿಗಳು ಮೆಚ್ಚಲಾರರು. ಗ್ರೀಕರ ಆತಂಕದಿಂದ ಪಾರಾಗಿ, ಗುಣಜ್ಞನಾದ ಆರ್ಯಭೂಪತಿಯ ಆಶ್ರಯವನ್ನು ಹೊಂದಿ, ಅನುವು ದೊರೆತರೆ ಆ ಭೂಪತಿಗೆ ತನ್ನ ಧನುರ್ವಿದ್ಯೆಯ ಪಾರಂಗತತೆಯ, ಹಾಗು ನೀತಿಶಾಸ್ತ್ರದ ನಿಪುಣತೆಯ ಸಹಾಯವನ್ನು ಒದಗಿಸಿಕೊಟ್ಟು, ಆತನಿಂದ ಗ್ರೀಕರನ್ನೂ, ಅವರ ಪಕ್ಷಪಾತಿಗಳಾದ ಆರ್ಯ ರಾಜರನ್ನೂ ಓಡಿಸಿ ಭರತಭೂಮಿಯನ್ನು ಶುದ್ಧ ಆರ್ಯಮಯವಾಗಿ ಮಾಡಬೇಕೆಂಬ ಮಹತ್ವಾಕಾಂಕ್ಷೆ ಯನ್ನು ವಿಷ್ಣುಶರ್ಮನು ಧರಿಸಿದ್ದನು. ಅದರಿಂದ ಆತನು ತನ್ನ ಜನ್ಮಭೂಮಿಯನ್ನು ನಮಸ್ಕರಿಸಿ,

ಪರ್ಣಕುಟೀರದಿಂದ ಹೊರಡಲುದ್ಯೋಗಿಸಿದನು. ತನ್ನ ಮುರುಕ ಗುಡಿಸಿಲದ ಹಂಗು ಆತನಿಗಿದ್ದಿಲ್ಲ, ಆದರೆ ಆ ಗುಡಿಸಿಲದಲ್ಲಿ ತನ್ನ ಪ್ರಾಣಕ್ಕಿಂತಲೂ ಹೆಚ್ಚೆಂದು ತಿಳಿದು ರಕ್ಷಿಸಿದ್ದ ತಾಡವಾಲಿಯ ಪುಸ್ತಕಗಳನ್ನು ಬಿಟ್ಟು ಹೋಗುವದು ಅವನ ಜೀವದಸುತ್ತ ಬಂದಂತಾಯಿತು. ಆ ಪುಸ್ತಕಗಳನ್ನು ಹೊತ್ತುಕೊಂಡು ಹೋಗುವಂತೆ ಇದ್ದಿಲ್ಲ, ಅನ್ಯಮಾರ್ಗದಿಂದ ಒಯ್ಯಲಿಕ್ಕೆ ದ್ರವ್ಯಾನುಕೂಲವಿದ್ದಿಲ್ಲ, ಕಡೆಗೆ ಆತನು ಉಪಾಯಗಾಣದೆ, ಬಂಗಾಲದಲ್ಲಿ ಹೊಟ್ಟೆಯ ಮಕ್ಕಳನ್ನು ರಕ್ಷಿಸಲಾರದೆ ದುಃಖದಿಂದ ಎರಡನೆಯವರಿಗೆ ಒಪ್ಪಿಸುವ ದರಿದ್ರರಂತೆ, ತನ್ನ ಪುಸ್ತಕಗಳನ್ನು ಒಬ್ಬ ನಂಬಿಗೆಯ ಮಿತ್ರನ ಬಳಿಯಲ್ಲಿ ಇಟ್ಟು ವಿಷ್ಣುಶರ್ಮನು ದೇಶಾಂತರಕ್ಕೆ ಹೊರಟು, ಮಗಧ ರಾಜ್ಯವನ್ನು ಸೇರಿದನು.

ಈ ಕಾಲದಲ್ಲಿ ಉತ್ತರ ಹಿಂದುಸ್ಥಾನದೊಳಗೆ ಮಗಧ ದೇಶವು ಬಹು ಪ್ರಸಿದ್ಧವಾಗಿತ್ತು ಅದರ ರಾಜಧಾನಿಯಾದ ಪಾಟಲೀಪುತ್ರ ಅಥವಾ ಪುಷ್ಪಪುರೀ ಪಟ್ಟಣದ ವೈಭವಕ್ಕೆ ಎಣೆಯಿದ್ದಿಲ್ಲ, ಗ್ರೀಕರ ಅಧಿಕಾರಕ್ಕೆ ಒಳಪಟ್ಟು ಇರಲಾರದವರು, ದೇಶಾಂತರಕ್ಕೆ ಹೊರಟು ಪಾಟಲೀಪುತ್ರಕ್ಕೆ ಬಂದು ತಮ್ಮ ಕಾರ್ಯಕರ್ತೃತ್ವವನ್ನು ಪರೀಕ್ಷಿಸಿಕೊಳ್ಳುತ್ತಿದ್ದರು. ಲೋಕ ವಿಜಯಿಯೆನಿಸಿದ ವೀರ ಶಿರೋಮಣಿಯಾದ ಶಿಕಂದರನನ್ನೂ ಹಿಂದಕ್ಕಟ್ಟಿದ ಮಗಧರ ಪ್ರತಾಪವನ್ನೇನು ವರ್ಣಿಸುವದದೆ? ಆ ಮಗಧ ದೇಶವನ್ನು ಬಹುದಿವಸಗಳಿಂದ ನಂದರೆಂಬ ಪ್ರತಾಪಶಾಲಿಗಳಾದ ಅರಸರು ಆಳುತ್ತಿದ್ದರು. ವಿಷ್ಣುಶರ್ಮನು ಪಾಟಲಿಪುತ್ರಕ್ಕೆ ಬಂದಾಗ ಧನಾನಂದನೆಂಬ ಅರಸನು ರಾಜ್ಯವಾಳುತ್ತಿದ್ದನು. ಗ್ರೀಕರ ಕೈಸೇರಿದ ಆರ್ಯರಾಜ್ಯಗಳೊಳಗಿನ ಬಹುಜನ ವಿದ್ವಾಂಸರು ಅವನ ಆಶ್ರಯವನ್ನು ಪಡೆದಿದ್ದರು. ಮೊದಮೊದಲು ಈ ವಿದ್ವಾಂಸರ ಆಗಮನವು ಕೌತುಕಕ್ಕೆ ಕಾರಣವಾದರೂ, ಬರಬರುತ್ತ ಅದು ಮೊದಲಿನ ಆಸ್ಥಾನದ ಪಂಡಿತರಲ್ಲಿ ಮಾತ್ಸರ್ಯವನ್ನು ಉತ್ಪನ್ನಮಾಡತೊಡಗಿತು. ವಿಷ್ಣುಶರ್ಮನು ಬರುವ ಮೊದಲು ದೊಡ್ಡ ದೊಡ್ಡ ಪಂಡಿತರು ಧನಾನಂದನ ಆಸ್ಥಾನವನ್ನು ಸೇರಿದ್ದರಿಂದ, ಮೊದಲಿನ ಆಸ್ಥಾನ ಪಂಡಿತರು ಹೊಟ್ಟೇಕಿಚ್ಚುಬಟ್ಟು ಉರುಳುತ್ತಿದ್ದರು. ವಿಷ್ಣುಶರ್ಮನು ಪದ್ಧತಿಯಂತೆ ಯಾವನೊಬ್ಬ ಆಸ್ಥಾನ ಪಂಡಿತನ ದ್ವಾರದಿಂದ ರಾಜ ಸಭೆಯನ್ನು ಪ್ರವೇಶಿಸದೆ, ಸ್ವತಂತ್ರವಾಗಿ ಪ್ರವೇಶಿಸಿದನು. ತನ್ನಲ್ಲಿ ಏನಾದರೂ ಗುಣವಿದ್ದರೆ ಅರಸನು ಮನ್ನಿಸುವನು, ಇಲ್ಲದಿದ್ದರೆ ಇಲ್ಲ; ಎಂಬ ಒಗರಿನಿಂದ ಆ ಜಮದಗ್ನಿ ಗೋತ್ರದ ಬ್ರಾಹ್ಮಣನು ದೂರ್ವಾಸಋುಷಿಯಂತೆ ಪಕ್ಕನೆ ಅರಸನನ್ನು ಕಂಡು ಆಶೀರ್ವದಿಸಿದನು. ತಾನು ಸ್ವತಃ ರಚಿಸಿದ ಆಶೀರ್ವಾದದ ಶ್ಲೋಕವನ್ನು ಧೀರವೂ, ಗಂಭೀರವೂ, ಅಸ್ಖಲಿತವೂ ಆದ ವಾಣಿಯಿಂದ ಉಚ್ಚರಿಸಿದಕೂಡಲೆ ಸಭೆಯು ಬೆರಗಾಗಿ ಆ ತೇಜೋ ಮೂರ್ತಿಯನ್ನು ಎವೆಯಿಕ್ಕದೆ ನೋಡುತ್ತ ಕುಳಿತುಕೊಂಡಿತು. ಸಭಾಪಂಡಿತರು ವಿಷ್ಣುಶರ್ಮನ ಈ ಉದ್ಧತವೃತ್ತಿಯನ್ನು ನೋಡಿ ಇವನು ಯಾವನೋ ಒಬ್ಬ ಅಸಮಾನ್ಯ ಬುದ್ಧಿಶಾಲಿಯಾದ ತೇಜಸ್ವಿ ಬ್ರಾಹ್ಮಣನಿರುವನೆಂತಲೂ, ಅವನು ಒಮ್ಮೆ ಆಸ್ಥಾನವನ್ನು ಅಂಟಿಕೊಂಡರೆ, ತಮ್ಮ ತಲೆಯಮೇಲೆ ಮೆಣಸು ಅರೆಯದೆ ಬಿಡನೆಂತಲೂ ಭಾವಿಸಿ, ಇವನನ್ನು ಅರಕ್ಷಣವಾದರೂ ಇಲ್ಲಿ ಇರಗೊಡಬಾರದೆಂದು ತಮ್ಮತಮ್ಮೊಳಗೆ ಗುಣಗುಟ್ಟತೊಡಗಿದರು.

ಇತ್ತ ಧನಾನಂದನು ಅತಿಥಿಯಾಗಿ ಬಂದ ಬ್ರಾಹ್ಮಣನ ಧೀರ–ಗಂಭೀರ ವಾಣಿಯಿಂದ ನಮ್ರನಾಗಿ ಸ್ವಾಭಾವಿಕರೀತಿಯಿಂದ ಸಿಂಹಾಸನದಿಂದ ಎದ್ದು ತನ್ನ ಬಳಿಯಲ್ಲಿ ಆತನಿಗೆ ಆಸನವನ್ನು ಕೊಟ್ಟನು. ಇದರಿಂದಂತು ಸಭಾ ಪಂಡಿತರ ಮಾತ್ಸರ್ಯಾಗ್ನಿಯು ಭುಗಿಭುಗಿಲೆಂದು ಉರಿಯತೊಡಗಿತು. ಇಂದಿನವರೆಗೆ ಅರಸನು ಹೀಗೆ ತಾನಾಗಿ ಯಾವ ವಿದ್ವಾಂಸನನ್ನೂ ಉಪಚರಿಸಿದ್ದಿಲ್ಲ, ಯಾವನೊಬ್ಬ ಸಭಾಪಂಡಿತನು ಮೊದಲು ಹೊಸ ಪಂಡಿತನ ಗುರುತು–ಪರಿಚಯ ಮಾಡಿಕೊಡಬೇಕು, ಆಮೇಲೆ ಅರಸನು ಎದ್ದುನಿಂತು ಪಂಡಿತರ ಸಭೆಯಲ್ಲಿ ಆ ಹೊಸ ಪಂಡಿತನಿಗೆ ಕುಳಿತುಕೊಳ್ಳುವದಕ್ಕಾಗಿ ಆಸನವನ್ನು ತೋರಿಸಬೇಕು; ಇದೇ ಕ್ರಮವೇ ಸಾಗುತ್ತಾ ಬಂದಿತ್ತು, ಅಂದಬಳಿಕ ವಿಷ್ಣುಶರ್ಮನು ಎಲ್ಲ ವಿದ್ವಾಂಸರ ತಲೆಯಮೇಲೆ ಕುಳಿತುಕೊಂಡದ್ದು ಪಂಡಿತರಿಗೆ ಹ್ಯಾಗೆ ತಡೆಯಬೇಕು? ಸದ್ಯಕ್ಕೆ ಈ ಆಗುಂತಕನಿಗೆ ಆಗಿರುವ ಬಹುಮಾನಕ್ಕೆ ತಕ್ಕ ಮಂಗಳಾರತಿಯನ್ನು ಹ್ಯಾಗೆ ಮಾಡಿಸಬೇಕೆಂದು ಪಂಡಿತ ಮಂಡಲವು ಯೋಚಿಸತೊಡಗಿತು. ಧನಾನಂದನು ಅತಿಥಿಯನ್ನು ಕುರಿತು–ಸ್ವಾಮಿ, ತಮ್ಮ ಸ್ಥಳವು ಯಾವದು? ಯಾವ ನಿಮಿತ್ತದಿಂದ ಬರೋಣವಾಯಿತು? ತಮ್ಮ ಆಗಮನದಿಂದ ನಾನು ಕೃತಾರ್ಥನಾದೆನು, ಎಂದು ನುಡಿಯಲು, ವಿಷ್ಣುಶರ್ಮನು–ಪ್ರಭುವೇ, ಗ್ರೀಕರ ಅನನ್ವಿತ ಕೃತ್ಯಗಳಿಗೆ ಬೇಸತ್ತು ನಿನ್ನ ನಿರ್ಮಲ ಕೀರ್ತಿಯನ್ನು ಕೇಳಿ, ಆಶ್ರಯವನ್ನು ಪಡೆಯಲು ಬಂದಿದ್ದೇನೆ; ಎಂದು ಹೇಳಿ ತನ್ನ ವೃತ್ತಾಂತವನ್ನು ಸ್ವಲ್ಪದರಲ್ಲಿ ತಿಳಿಸಿದನು.

ವಿಷ್ಣುಶರ್ಮನ ಈ ಮಾತುಗಳನ್ನು ಕೇಳಿದ ಕೂಡಲೆ ರಾಜಾಶ್ರಿತ ಪಂಡಿತರಲ್ಲೊಬ್ಬನು ಗಾಂಭೀರ್ಯದಿಂದ ಎದ್ದುನಿಂತು–ರಾಜನ್, ತಾವು ಬಂದ ಅತಿಥಿಗಳನ್ನು ವಿನಯದಿಂದ ಬರಮಾಡಿಕೊಂಡು ಆದರಿಸುತ್ತಿರುವದು ದಾನಶೂರತ್ವಕ್ಕೆ ಯೋಗ್ಯವಾಗಿರುತ್ತದೆ. ಆದರ ವನ್ನಾಗಲಿ, ದಾನವನ್ನಾಗಲಿ ಪಾತ್ರಾಪಾತ್ರಗಳನ್ನು ವಿಚಾರಿಸಿ ಮಾಡಬೇಕೆಂದು ಆಶ್ರಿತರಾದ ನಾವು ಬೇಡಿಕೊಳ್ಳುವೆವು. ಗ್ರೀಕರು ಆರ್ಯರ ರಾಜ್ಯಗಳನ್ನು ನುಂಗಲಿಕ್ಕೆ ಬಾಯಿತಕ್ಕೊಂಡು ಕುಳಿತಿರುತ್ತಾರೆ. ಅವರು ಯಾವ ನೆವದಿಂದ ಯಾರನ್ನು ಪ್ರಭುಗಳ ಸನ್ನಿಧಿಗೆ ಕಳಿಸಿಕೊಟ್ಟಾ ರೆಂಬದನ್ನು ನಿಶ್ಚಯದಿಂದ ಹೇಳಲಾಗುವದಿಲ್ಲ, ಪಂಚಜನದ (ಪಂಜಾಬದ) ಸಂಹಾರವು ಇಂಥ ವಿಶ್ವಾಸಘಾತಕಿಗಳ ವಿಶ್ವಾಸಘಾತದ ಕೃತಿಗಳಿಂದಲೇ ಆಯಿತು. ಹಾಗಲ್ಲದಿದ್ದರೆ ಯವನರಾಜರು ಭರತ ಭೂಮಿಗೆ ಬಂದು ಆರ್ಯಭೂಪತಿಗಳನ್ನು ಗೆಲ್ಲುವ ಸಂಭವವಾದರೂ ಇತ್ತೋ? ತಕ್ಷಶಿಲೆಯು ಸದ್ಯಕ್ಕೆ ಯವನರ ಕೈಯಲ್ಲಿದ್ದು, ಅದೇ ಪಟ್ಟಣದಿಂದ ಇವರು ಇಲ್ಲಿಗೆ ಬಂದಿದ್ದಾರೆ. ಗ್ರೀಕರ ಬಾಧೆಗೆ ಬೇಸತ್ತು ನಿನ್ನೇ ತಕ್ಷಶಿಲೆಯಿಂದ ಇಲ್ಲಿಗೆ ಬಂದಿದ್ದ ಒಬ್ಬ ಗೃಹಸ್ಥನು, ಗ್ರೀಕರಾಜನು ಯಾವನೋ ಒಬ್ಬ ವಿದ್ವಾಂಸ ಬ್ರಾಹ್ಮಣನನ್ನು ಇಲ್ಲಿಗೆ ಕಳಿಸಿ, ಇಲ್ಲಿಯ ಹುರುಳು ಅರಿತುಕೊಳ್ಳುವ ವಿಚಾರದಲ್ಲಿದ್ದಾನೆಂದು ಹೇಳಿದನು. ಪ್ರಭುಗಳು ಈ ಸಂಗತಿಯನ್ನು ಚಿತ್ತಯಿಸಿ ಮಾಡತಕ್ಕ ಆದರಾತಿಥ್ಯಗಳನ್ನು ಮಾಡಬೇಕು. ಇವರ ಗುರುತು ನಮಗಿಲ್ಲ, ನಮ್ಮ ಗುರುತು ಇವರಿಗಿಲ್ಲ; ಅಂದಬಳಿಕ ಗ್ರೀಕ ಅರಸನು ಕಳಿಸಿದ ಗುಪ್ತಚಾರರು ಈ ಬ್ರಾಹ್ಮಣ ರಲ್ಲೆಂದು ಯಾರು ಹೇಳಬೇಕು? ಇನ್ನು ಇವರು ಚಾರರೇ ಇರುವರೆಂದು ನಾವು ಯಾರೂ

ನಂಬಿಗೆಯಿಂದ ಹೇಳುವದಿಲ್ಲ, ಒಂದು ಪಕ್ಷದಲ್ಲಿ ಇದ್ದರೆ ಹಾವಿಗೆ ಹಾಲೆರದಂತೆ ಪಶ್ಚಾತ್ತಾಪ ಪಡುವ ಪ್ರಸಂಗ ಬರಬಾರದೆಂದು ಸನ್ನಿಧಿಯಲ್ಲಿ ಇಷ್ಟು ಸ್ಪಷ್ಟವಾಗಿ ದೂರಿಕೊಂಡಿದ್ದೇವೆ, ಎಂದು ನುಡಿದು ಆ ಪಂಡಿತನು ತನ್ನ ಸ್ಥಳದಲ್ಲಿ ಕುಳಿತುಕೊಂಡನು.

ಧನಾನಂದನು ಕೀರ್ತಿಲೋಲುಪನೂ, ದಾನಶೂರನೂ ಇದ್ದರೂ ಸ್ವಲ್ಪ ಚಂಚಲನೂ, ಸಂಶಯ ಸ್ವಭಾವದವನೂ ಆಗಿದ್ದನು. ಶಿಕಂದರ ಬಾದಶಹನು ಪಂಜಾಬದಲ್ಲಿ ಉಂಟುಮಾಡಿದ ಪ್ರಳಯವನ್ನು ಈ ಮೊದಲೇ ಆತನು ಕೇಳಿದ್ದರಿಂದ ತನ್ನ ಸಭಾ ಪಂಡಿತನು ಆಡಿತ ಮಾತುಗಳಲ್ಲಿ ತಥ್ಯವಿರುವದೆಂದು ಆ ನಂದಭೂಪತಿಯು ಎಣಿಸಿದನು. ಈ ಬ್ರಾಹ್ಮಣನು ತನ್ನ ಅದ್ವಿತೀಯವಾದ ಪಾಂಡಿತ್ಯದ ಆವೇಶದಿಂದ ಸಭೆಯನ್ನು ಪ್ರವೇಶಿಸಿ ಉದ್ಧಟತನದಿಂದ ನಡೆದನು; ವಿದ್ಯಕ್ಕೆ ಜೋಡಾಗಿ ಒಪ್ಪಬೇಕಾಗಿದ್ದ ವಿನಯವು ಈತನಲ್ಲಿ ಎಷ್ಟು ಮಾತ್ರವೂ ಕಂಡುಬರುವದಿಲ್ಲ; ಆದ್ದರಿಂದ ಇವನ ಲಕ್ಷಣವು ನೆಟ್ಟಗೆ ಕಾಣುವದಿಲ್ಲ ಎಂಬ ವಿಚಾರವು ಮನಸ್ಸಿನಲ್ಲಿ ಉತ್ಪನ್ನವಾದ ಕೂಡಲೆ ಧನಾನಂದನು ಆ ಬ್ರಾಹ್ಮಣನನ್ನು ಕುರಿತು – ನಮ್ಮ ಸಭಾಪಂಡಿತನು ಈಗ ಆಡಿದ ಮಾತುಗಳು ಅಕ್ಷರಶಃ ನಿಜವಾಗಿರುತ್ತವೆ. ತಾವು ಒಳಗೆ ಬಂದ ಕೂಡಲೆ ನಾನು ತಮ್ಮನ್ನು ಉಪಚರಿಸಿದ್ದು ನಿಜವು; ಆದರೆ ತಾವು ಈ ಊರಲ್ಲಿ ಯಾರ ಗುರುತನ್ನಾದರೂ ಹೇಳಿದ ಹೊರತು ಇನ್ನು ಈ ಸ್ಥಳದಲ್ಲಿ ಕುಳಿತುಕೊಳ್ಳುವದು ತಮಗಾದರೂ ಉಚಿತವಾಗಿ ತೋರಲಿಕ್ಕಿಲ್ಲ, ರಾಜನೀತಿಗೆ ವಿರುದ್ಧವಾಗದಂತೆ ಈ ಊರಲ್ಲಿ ಯಾರಾದರೂ ತಮ್ಮ ಗುರುತಿನವರು ಇದ್ದರೆ ದಯಮಾಡಿ ಹೇಳಬೇಕು.

ಈ ಮಾತುಗಳನ್ನು ಕೇಳಿದ ಕೂಡಲೆ ಆ ಕೋಪಿಷ್ಠ ಬ್ರಾಹ್ಮಣನ ಸರ್ವಾಂಗವು ತಪ್ತವಾಯಿತು. ಆತನು ಕೂಡಲೆ ಧನಾನಂದನನ್ನು ಕುರಿತು – ರಾಜಾ, ಇದೇನು ಮಾತಾಡಿದೆ? ಗ್ರೀಕರ ಆಳಿಕೆಗೆ ಹೇಸಿಕೊಂಡು ಯಾವನಾದರೂ ಆರ್ಯ ಭೂಪತಿಯ ಆಶ್ರಯವನ್ನು ಪಡೆಯಬೇಕೆಂಬ ಉದ್ದೇಶದಿಂದ ಬಂದ ಬ್ರಾಹ್ಮಣನಿಗೆ ಕಪಟಾಚರಣೆಯನ್ನು ಆರೋಪಿಸುವೆಯಲ್ಲ! ಆಶ್ರಯಪಡೆಯಬೇಕೆಂದಿಷ್ಟೇ ಅಲ್ಲ, ನನ್ನ ನೀತಿ–ಜ್ಞಾನದ ಹಾಗು ಧನುರ್ವೇದಾಧ್ಯಯನದ ಲಾಭವನ್ನು ಪಡೆಯುವ ಪ್ರತಾಪಶಾಲಿಯಾದ ರಾಜನು ಲಭಿಸಿದರೆ, ತ್ರಿಕರಣಪೂರ್ವಕವಾಗಿ ಆತನಿಗೆ ಸಹಾಯಮಾಡಿ, ಗ್ರೀಕರನ್ನು ಈ ದೇಶದಿಂದ ಹೊಡೆದೋಡಿಸಿ, ಗ್ರೀಕರ ಒತ್ತಾಶೆಯಿಂದ ಉನ್ಮತ್ತರಾದ ಆರ್ಯರಾಜರನ್ನು ಕುಕ್ಕರಬಡೆದು, ಪುನಃ ಎಲ್ಲಕಡೆಗೆ ಆರ್ಯ ಸಾಮ್ರಾಜ್ಯವನ್ನು ಸ್ಥಾಪಿಸಿಬೇಕೆಂದು ಬಗೆದು ಬಂದಿದ್ದ ನಮಗೆ ಹೀನೋಕ್ತಿಗಳನ್ನು ಆಡುವದು ಯುಕ್ತವೇ? ನಿನ್ನ ಕೀರ್ತಿಯನ್ನು ಕೇಳಿ ನಾನು ಇಲ್ಲಿಗೆ ಬಂದಿದ್ದೇನೆ. ಗ್ರೀಕರ ದ್ವೇಷವು ನನ್ನ ಶೀಲವಾಗಿರಲು, ನಾನು ಅವರ ಗುಪ್ತಚಾರನಾಗಿ ಬರಬಹುದೋ? ವಿಚಾರಿಸಿ ನೋಡು. ವಿಷ್ಣುಶರ್ಮನ ಈ ಉದ್ಧಟನತದ ಮಾತುಗಳು ರಾಜಸಭೆಯನ್ನೆಲ್ಲ ದಂಗುಬಡಿಸಿದವು. ಆತನು ನಿಷ್ಕಪಟಿಯಾದ್ದರಿಂದ ಕ್ರೋಧಸಂತಪ್ತನಾಗಿರುವನೆಂದು ಅರಸನೇ ಮೊದಲಾದವರು ತಿಳಕೊಂಡರು. ಧನಾನಂದನು ತನ್ನ ಅಪರಾಧಕ್ಕಾಗಿ ಕ್ಷಮೆಯನ್ನು ಬೇಡಿ ಬ್ರಾಹ್ಮಣನನ್ನು ತನ್ನ

ಬಳಿಯಲ್ಲಿ ಕುಳ್ಳಿರಿಸಿಕೊಳ್ಳುವ ಹವಣಿಕೆಯಲ್ಲಿರಲು, ಪಂಡಿತಮಂಡಲಾ ಗ್ರೇಸರನು ಇದು ಹಿತಕರವಲ್ಲೆಂದು ಬಗೆದು ಎದ್ದುನಿಂತು ಅರಸನನ್ನು ಕುರಿತು–ಪ್ರಭುಗಳೇ, ಗುಪ್ತಚಾರನಾಗಿ ಬಂದವನು ತಾನು ಗುಪ್ತಚಾರನೆಂದು ಎಂದಾದರೂ ಹೇಳಬಹುದೋ? ಅದರಂತೆ ಗ್ರೀಕರಿಂದ ಗುಪ್ತವಾಗಿ ಕಳಿಸಲ್ಪಟ್ಟವನು, ತಾನು ಗ್ರೀಕರ ಗುಪ್ತಚಾರನು, ಗ್ರೀಕರಾಜನ ಪ್ರೇಮವು ನನ್ನಮೇಲೆ ವಿಶೇಷವಾಗಿದೆ ಎಂದು ಸರ್ವಥಾ ಹೇಳಲಾರನು. ಅದಕ್ಕೆ ಬದಲಾಗಿ ಆತನು ಗ್ರೀಕರ ಸ್ಮರಣದಿಂದ ನನ್ನ ಸರ್ವಾಂಗವು ತಪ್ತವಾಗುತ್ತದೆ, ಅವರನ್ನು ದ್ವೇಷಿಸುವದೇ ನನ್ನ ಶೀಲವು, ಎಂದು ಸ್ವಾಭಾವಿಕ ವಾಗಿಯೇ ಹೇಳುವನು; ಮತ್ತು ಯಾರಾದರೂ ಗುಪ್ತಚಾರನೆಂಬ ಸಂಶಯದಿಂದ ಸ್ವಲ್ಪ ಮಾತಾಡಿದರೆ ಸಾಕು, ಅವನು ಸಿಟ್ಟಿನಿಂದ ಕೃಷ್ಣಾಜಿನವನ್ನು ಅಪ್ಪಳಿಸುವನು; ಆದರೆ ದೂರದರ್ಶಿಗಳು ಅದಕ್ಕಾಗಿ ಮೋಸಹೋಗತಕ್ಕದ್ದಲ್ಲ. ಈಗ ಈ ಬ್ರಾಹ್ಮಣರ ಅಪಮಾನವಾಗಿ ಅವರ ಮನಸ್ಸು ನೊಯ್ಯಬಹುದು, ಉಪಾಯವಿಲ್ಲ. ಮುಂದೆ ರಾಜ್ಯಕ್ಕೆ ಕೇಡು ಒದಗಿದಲ್ಲಿ ಆಗಬಹುದಾದ ಪಶ್ಚಾತ್ತಾಪಕ್ಕಿಂತ ಇದೇನು ಹೆಚ್ಚಿನದಲ್ಲ; ಪ್ರಭುಗಳೇ, ನಾವು ತಮ್ಮ ಉಪ್ಪು ಉಣ್ಣುವವರಾದ್ದರಿಂದ ತಮಗೆ ಒದಗಬಹುದಾಗಿದ್ದ ಸಂಕಟದ್ದೆಸೆಯಿಂದ ಎಚ್ಚರಗೊಳಿಸುವದು ನಮ್ಮ ಕರ್ತವ್ಯವು. ಇನ್ನು ಒದಗಿದ ಆ ಸಂಕಟದೊಳಗಿಂದ ತಮ್ಮನ್ನು ಹಾಗೂ ಪ್ರಜೆಗಳಾದ ನಮ್ಮನ್ನು ಸಂರಕ್ಷಿಸುವಲ್ಲಿ ಪ್ರಭುಗಳು ಸರ್ವಥಾ ಸಮರ್ಥರು ಇರುವಿರೆಂದು ಸರ್ವವೇದ್ಯ ವಾಗಿರುವದು.

ಕಡೆಯ ಸ್ತುತಿಯ ವಾಕ್ಯದಿಂದ ಧನಾನಂದನು ವಿಶೇಷವಾಗಿ ಉಬ್ಬಿದನು. ಆ ಮಾತು ಗಳಿಂದ ಆತನು ಆ ಬ್ರಾಹ್ಮಣನ ವಿಷಯವಾಗಿ ಹೆಚ್ಚು ಸಂಶಯವನ್ನು ತಾಳಿ, ಆತನನ್ನು ಕುರಿತು– ಬ್ರಹ್ಮನ್, ದೂರದರ್ಶಿತ್ವವು ಸಿಕ್ಕವರಲ್ಲಿರುವದಿಲ್ಲ, ನನಗೆ ನಂಬಿಗೆಯು ಉತ್ಪನ್ನವಾಗುವವರೆಗೆ ತಾವು ಈ ಸಭೆಯಿಂದ ಹೊರಟುಹೋಗುವದು ನೆಟ್ಟಗೆ. ನಂಬಿಗೆಗೆ ಪಾತ್ರರಾದ ಬಳಿಕ ನಿಮ್ಮ ಯೋಗ್ಯತೆಗೆ ತಕ್ಕ ಮರ್ಯಾದೆಯೂ, ಸಂಭಾವನೆಯೂ ಆಗಬಹುದು; ಆದರೆ ಅಲ್ಲಿಯವರೆಗೆ ತಾವು ಈ ಆಸನವನ್ನು ಬಿಡಬೇಕು, ಎಂದು ನುಡಿಯಲು, ದೂರ್ವಾಸ ಋಷಿಯಂತೆ ಕೋಪಿಷ್ಠನಾದ ಆ ಬ್ರಾಹ್ಮಣನು ಅಂಗಾಲನಿಂದ ನಡನೆತ್ತಿಯವರೆಗೆ ಸಿಟ್ಟಿನಿಂದ ಉರಿಯ ಹತ್ತಿದನು. ಆತನು ತಟ್ಟನೇ ಆಸನದಿಂದ ಎದ್ದು, ಹೋಗಹೋಗುತ್ತ ಪ್ರತಿಜ್ಞೆ ಮಾಡದ ನೇನಂದರೆ–ನಾನು ನಿಜವಾಗಿಯೇ ಬ್ರಾಹ್ಮಣನಾಗಿದ್ದರೆ, ಈ ನಂದವಂಶ ವೃಕ್ಷವನ್ನು ಬೇರಿಸಹಿತವಾಗಿ ಕಿತ್ತು ಒಗೆದು, ಅದರ ಸ್ಥಳದಲ್ಲಿ ನನ್ನ ಹಸ್ತಕನನ್ನು ಸ್ಥಾಪಿಸುವೆನು. ಅವನ ಕೈಯಿಂದಲೇ ಗ್ರೀಕರ ಪಾರಿಪತ್ಯವನ್ನು ಮಾಡಿಸುವೆನು. ಇಗೋ, ಈ ನೆರೆದ ಸಭೆಯಲ್ಲಿ ಚಂಡಿಕೆಯನ್ನು ಬಿಚ್ಚುತ್ತೇನೆ, ನನ್ನ ಪ್ರತಿಜ್ಞೆಯು ಪೂರ್ಣವಾಗುವವರೆಗೆ ಇವನ್ನು ಕಟ್ಟಲಿಕ್ಕಿಲ್ಲ!

ಕುಮಾರಪ್ರಾಪ್ತಿ

ಸಾರ್ವಭೌಮನ ಸಭೆಯಲ್ಲಿ ದರಿದ್ರ ಬ್ರಾಹ್ಮಣನ ಪ್ರತಿಜ್ಞೆಯನ್ನು ಯಾರು ಕೇಳಬೇಕು? ಮನಸ್ಸಿನಂತೆ ಸಂಭಾವನೆಯು ದೊರೆಯದ್ದರಿಂದಲೂ, ಎಣಿಕೆ ಹಾಕಿದಂತೆ ಪ್ರತಿಷ್ಠೆಯು ಆಗದ್ದರಿಂದಲೂ ಸಂತಾಪದ ಭರದಲ್ಲಿ ಬ್ರಾಹ್ಮಣನು ಏನೋ ಒಟಗುಟ್ಟುತ್ತಾನೆಂದು ಎಲ್ಲರು ತಿಳಕೊಂಡರು. ಅವನ ಬಡಬಡಿಕೆಗೆ ಯಾರೂ ಮಹತ್ವಕೊಡದೆ ನಕ್ಕುಬಿಟ್ಟರು. ಇತ್ತ ಆ ತೇಜಸ್ವಿಯಾದ ಬ್ರಾಹ್ಮಣನು, ಇನ್ನುಮೇಲೆ ಪಾಟಲೀಪುತ್ರದಲ್ಲಿ ಒಂದು ಕ್ಷಣವಾದರೂ ನಿಲ್ಲಲಿಕ್ಕಿಲ್ಲೆಂದು ನಿಶ್ಚಯಿಸಿ, ಊರಹೊರಗೆ ಬಂದನು. ಆತನು ಬಹುದೂರ ಮಾರ್ಗವನ್ನು ಕ್ರಮಿಸಿ ಹೋಗಲು, ಸೂರ್ಯನು ಮುಣುಗುವ ಹವಣಿಕೆಯಲ್ಲಿರುವಾಗ ಅತ್ತೊತ್ತಟ್ಟಿಗೆ ಗೌಳಿಗರ ಹುಡುಗರು ಒಟ್ಟುಗೂಡಿ ಆಡುತ್ತಿದ್ದರು. ಅವರ ಆಟವು ನೋಡುವವರಲ್ಲಿ ಕೌತುಕ ವನ್ನುಂಟುಮಾಡುತ್ತಿತ್ತು. ಹುಡುಗರು ದನಕಾಯುವವರಾಗಿದ್ದರೂ, ಅವರ ಆಟವು ಆರಸೊತ್ತಿಗೆಗೆ ಸಂಬಂಧಿಸಿದ್ದಿತು. ಅವರಲ್ಲಿ ಕೆಲವರು ಗ್ರೀಕರಾಗಿದ್ದರು, ಕೆಲವರು ಆರ್ಯರಾಗಿದ್ದರು. ಅವರಲ್ಲಿ ಒಬ್ಬ ಹದಿನೈದು ವರ್ಷದ ತೇಜಸ್ವಿಯಾದ ಹುಡುಗನು ಆರ್ಯರ ಅರಸನಾಗಿ ತನ್ನ ಸೈನಿಕರಿಗೂ, ಅಧಿಕಾರಿಗಳಿಗೂ ಗಾಂಭೀರ್ಯದಿಂದ ಅಪ್ಪಣೆ ಮಾಡುತ್ತಿದ್ದನು. ಆರ್ಯಸೈನಿಕರು ಗ್ರೀಕರನ್ನು ಹಣ್ಣೆಗೆ ತಂದು ಒಬ್ಬೊಬ್ಬರನ್ನೇ ಸೆರೆ ಹಿಡಿಯುತ್ತಿದ್ದರು. ಇದನ್ನು ನೋಡಿ ಆ ಬಾಲರಾಜನು ತನ್ನ ಸೈನಿಕರನ್ನು ಕುರಿತು – ನನ್ನ ಶೂರರಾದ ಸೈನಿಕರೇ, ಹೀಗೆ ನೀವು ಜೀವದ ಹಂಗುದೊರೆದು ಕಾದಿದಹೊರತು, ಪಂಜಾಬವನ್ನು ಗೆದ್ದು, ಸೊಕ್ಕಿನಿಂದ ಮೈಮರೆತು ಮುಂದಕ್ಕೆ ಸಾಗಿಬರುತ್ತಿದ್ದ ಗ್ರೀಕರು ಹಿಂದಕ್ಕೆ ಸರಿಯಲಾರರು, ಎಂದು ನುಡಿದು ಅವರನ್ನು ಪ್ರೋತ್ಸಾಹಿಸುತ್ತಿದ್ದನು. ಆ ಹುಡುಗನ ಈ ಚಾರಿತ್ರ್ಯವನ್ನು ನೋಡಿ ನಮ್ಮ ವಿಷ್ಣುಶರ್ಮನು ಸೋಜಿಗಪಟ್ಟನು. ಆ ವಿಚಿತ್ರ ಚಾರಿತ್ರ್ಯದ ಬಾಲಕನ ಜನ್ಮವು ಗೌಳಿಗರಲ್ಲಿ ಸರ್ವಥಾ ಆಗಿರಲಿಕ್ಕಿಲ್ಲೆಂದು ಭಾವಿಸಿ, ಆತನ ಜನ್ಮದ ನಿಜವಾದ ವೃತ್ತಾಂತವನ್ನು ಅರಿತುಕೊಳ್ಳಬೇಕೆಂದು ವಿಷ್ಣುಶರ್ಮನು ನಿಶ್ಚಿಯಿಸಿದನು.

ಹುಡುಗರ ಆಟವು ನಡೆದಿರುವಾಗ ಬ್ರಾಹ್ಮಣನು ಬಾಲರಾಜನನ್ನು ಹಲವು ಬಗೆಯಾಗಿ ಪರೀಕ್ಷಿಸಿದನು. ಕಡೆಗೆ ಹುಡುಗರು ದಣಿದು ಒತ್ತಟ್ಟಿಗೆ ಕೂಡಲು, ಬ್ರಾಹ್ಮಣನು ಅವರ ಬಳಿಗೆ ಹೋಗಿ ಬಾಲರಾಜನನ್ನು ಕುರಿತು–ತಮ್ಮಾ ಒಮ್ಮೆ ನಿನ್ನ ಕೈಯ್ಯನ್ನು ನೋಡಬೇಕೆಂದು ಇಚ್ಛಿಸುತ್ತೇನೆ, ತೋರಿಸುವೆಯಾ? ಎಂದು ಕೇಳಲು, ಆ ಹುಡುಗನು ವಿನಯದಿಂದ ಬ್ರಾಹ್ಮಣನನ್ನು ನಮಸ್ಕರಿಸಿ, ಕೈಯನ್ನು ಮುಂದಕ್ಕೆ ಚಾಚಿದನು. ಅದರಲ್ಲಿ ಚಕ್ರವರ್ತಿ ರಾಜನ ಲಕ್ಷಣಗಳೆಲ್ಲ ಸ್ಪಷ್ಟವಾಗಿ ಇರುವದನ್ನು ನೋಡಿ ಬ್ರಾಹ್ಮಣನಿಗೆ ಬಹಳ ಆನಂದವಾಯಿತು. ಇಂಥ ಸುಲಕ್ಷಣದ ಹುಡುಗನು ಗೌಳಿಗರ ಹೊಟ್ಟೆಯಲ್ಲಿ ಹುಟ್ಟಲಾರನೆಂತಲೂ, ಈತನ ಪಾಲಕರಿಂದ ಜನ್ಮವೃತ್ತಾಂತವನ್ನು ತಿಳಿದು, ಈ ಹುಡುಗನನ್ನು ಹ್ಯಾಗಾದರೂ ಮಾಡಿ ಸಂಪಾದಿಸ ಬೇಕೆಂತಲೂ ಆ ಧೂರ್ತ ಬ್ರಾಹ್ಮಣನು ನಿಶ್ಚಯಿಸಿದನು. ಆ ಉದ್ದೇಶದಿಂದ ವಿಷ್ಣುಶರ್ಮನು ಆ ಹುಡುಗನನ್ನು ಕುರಿತು–ತಮ್ಮಾ ನೀನು ನನ್ನ ಸಂಗಡ ಬರುವೆಯಾ? ಬಂದರೆ ನಾನು ನಿನಗೆ

ಎಲ್ಲ ವಿದ್ಯೆಗಳನ್ನು ಕಲಿಸುತ್ತೇನೆ; ಶಸ್ತ್ರಾಸ್ತ್ರ ವಿದ್ಯೆಯ ಅಭ್ಯಾಸವನ್ನು ನಾನು ಮಾಡಿರುವದರಿಂದ ಅದನ್ನೂ ನಿನಗೆ ಕಲಿಸುವೆನು, ಅನ್ನಲು, ಶಸ್ತ್ರಾಸ್ತ್ರಗಳ ಹೆಸರು ಕಿವಿಗೆ ಬಿದ್ದಕೂಡಲೆ ಆ ಹುಡುಗನು ಅತ್ಯಾನಂದಪಟ್ಟು ಬ್ರಾಹ್ಮಣನನ್ನು ಕುರಿತು – ಸ್ವಾಮಿ, ತಾವು ನನಗೆ ಶಸ್ತ್ರಾಸ್ತ್ರ ವಿದ್ಯೆಯನ್ನು ಕಲಿಸಿದರೆ, ನಾನು ತಮ್ಮ ದಾಸಾನುದಾಸನಾಗುವೆನು, ಎಂದು ಹೇಳಿದನು. ಮುಂದೆ ಸ್ವಲ್ಪಹೊತ್ತಿನಲ್ಲಿ ಹುಡುಗರು ತಮ್ಮ ದನಗಳನ್ನು ಒಟ್ಟುಗೂಡಿಸಿ ಊರಕಡೆಗೆ ತಿರುಗಿ ತಮ್ಮ ತಮ್ಮ ಮನೆಗಳಿಗೆ ಹೋಗತೊಡಗಿದರು. ಇತ್ತ ವಿಷ್ಣುಶರ್ಮನು ತನ್ನ ಚಿತ್ತವನ್ನು ಆಕರ್ಷಿಸಿ ಕೊಂಡಿದ್ದ ಹುಡುಗನ ಬೆನ್ನುಹತ್ತಿ ಆತನ ಮನೆಯನ್ನು ಸೇರಿದನು. ಒಬ್ಬ ತೇಜಃಪುಂಜನಾದ ಬ್ರಾಹ್ಮಣನು ಆಕಸ್ಮಿಕವಾಗಿ ತನ್ನ ಮನೆಗೆ ಬಂದದ್ದನ್ನು ನೋಡಿ ಆ ಹುಡುಗನ ಮುಪ್ಪಿನ ತಂದೆಯು ನಮ್ರನಾಗಿ, ಎದ್ದುನಿಂತು ಸಾಷ್ಟಾಂಗವಾಗಿ ವಂದಿಸಿ ಆಸನವಿತ್ತು ಕೈಮುಗಿದು ನಿಂತುಕೊಂಡನು. ತನ್ನ ಮಗನ ಗುಣಗಳಿಗೆ ಲುಬ್ಧನಾಗಿ ಬ್ರಾಹ್ಮಣನು ತನ್ನ ಮನೆಗೆ ಬಂದಿರುವನೆಂಬದನ್ನು ಕೇಳಿದ ಬಳಿಕಂತು ಆ ಮುದುಕನ ಕಣ್ಣುಗಳು ಆನಂದಬಾಷ್ಪಗಳಿಂದ ತುಂಬಿ ತುಳುಕ ಹತ್ತಿದವು. ಈ ದಿನ ರಾತ್ರಿ ತನ್ನ ಮನೆಯಲ್ಲಿಯೇ ಇರುವ ಕೃಪೆಮಾಡ ಬೇಕೆಂದು ಆ ಸಜ್ಜನನು ಬ್ರಾಹ್ಮಣನನ್ನು ಪ್ರಾರ್ಥಿಸಲು, ವಿಷ್ಣುಶರ್ಮನು ಒಡಂಬಟ್ಟು, ನಿತ್ಯಕರ್ಮಗಳನ್ನು ತೀರಿಸಿಕೊಂಡು, ಗೌಳಿಗನು ಕೊಟ್ಟ ಗೋಕ್ಷೀರವನ್ನು ಸ್ವೀಕರಿಸಿ ವಿಶ್ರಮಿಸಿದನು.

ಊಟ–ಉಡಿಗೆಗಳಾದ ಮೇಲೆ ಆ ವೃದ್ಧ ಗೌಳಿಗನು ವಿನಯದಿಂದ ತನ್ನ ಬಳಿಯಲ್ಲಿ ಬಂದು ಕುಳಿತುಕೊಳ್ಳಲು, ಬ್ರಾಹ್ಮಣನು ಆತನನ್ನು ಕುರಿತು–ಎಲೈ ವೃದ್ಧ ಗೋಪನೇ, ಈ ನಿನ್ನ ಮಗನು ವಿಲಕ್ಷಣ ಬುದ್ಧಿಶಾಲಿಯೂ, ತೇಜಸ್ವಿಯೂ ಇರುತ್ತಾನೆ. ಈತನ ವಿಷಯವಾಗಿ ಕೆಲವು ಮಾತುಗಳನ್ನು ಕೇಳಬೆಕೆನ್ನುತ್ತೇನೆ. ಅದಕ್ಕೆ ನಿನ್ನ ಒಪ್ಪಿಗೆಯಿರುವದೋ? ನೀನು ಸಿಟ್ಟಾಗಲಿಕ್ಕಿಲ್ಲವಷ್ಟೇ? ಅನ್ನಲು, ಆ ಮುದಕನು–ಸ್ವಾಮಿ, ತಾವು ಬ್ರಾಹ್ಮಣರು, ತಮ್ಮ ಮಾತು ಗಳಿಂದ ನನಗೆ ಸಿಟ್ಟು ಹ್ಯಾಗೆ ಬಂದೀತು? ಕೇಳಬೇಕಾಗಿರುವದನ್ನು ಅಗತ್ಯವಾಗಿ ಕೇಳಬೇಕು, ನಿಜವಾದದ್ದನ್ನು ಬಚ್ಚಿಡದೆ ಸನ್ನಿಧಿಗೆ ಅರಿಕೆ ಮಾಡಿಕೊಳ್ಳುವೆನು, ಎಂದು ಹೇಳಿದನು. ಅದನ್ನು ಕೇಳಿ ಬ್ರಾಹ್ಮಣನು ಬಹು ಸಮಾಧಾನಪಟ್ಟು – ನೀನು ಇಷ್ಟು ಅಭಯವನ್ನು ಕೊಟ್ಟ ಬಳಿಕ ನಾನಾದರೂ ಹುದುಗದೆ ಸ್ಪಷ್ಟವಾಗಿ ಕೇಳುತ್ತೇನೆ, ಸಂಕೋಚಪಡುವದಿಲ್ಲ. ಈ ಹುಡುಗನು ನಿನ್ನ ಮಗನೆಂದು ಹೇಳುತ್ತೀ; ಆದರೆ ನಿಶ್ಚಯವಾಗಿ ಇವನು ನಿನ್ನ ಹೊಟ್ಟೆಯಿಂದ ಹುಟ್ಟಿದಂತೆ ತೋರುವದಿಲ್ಲ. ಇವನ ನಿಜವಾದ ವೃತ್ತಾಂತವು ಬೇರೆ ಏನಾದರೂ ಇದ್ದರೆ, ಬಚ್ಚಿಡದೆ ಹೇಳು. ನನ್ನ ತರ್ಕದಂತೆ ಇವನ ವೃತ್ತಾಂತವು ಬೇರೆ ತರದ್ದೇ ಇದ್ದದ್ದಾದರೆ, ಈತನು ಮುಂದೆ ಬಹು ಭಾಗ್ಯಶಾಲಿಯಾಗುವನೆಂಬದರಲ್ಲಿ ಸಂಶಯವಿಲ್ಲ; ಇವನು ಸಾರ್ವಭೌಮರಾಜನಾಗುವನು!

ಬ್ರಾಹ್ಮಣನ ಮಾತುಗಳನ್ನು ಕೇಳಿ ಗೌಳಿಗನು ಸ್ವಲ್ಪ ಯೋಚನೆಗೊಳಗಾದನು; ಆದರೆ ತಾನು ಬ್ರಾಹ್ಮಣನಿಗೆ ಕೊಟ್ಟ ವಚನದ ಸ್ಮರಣವಾದಕೂಡಲೆ ಆತನು ಒಮ್ಮೆಲೆ ಎಚ್ಚತ್ತವನಂತೆ ನಿಶ್ಚಿಂತೆಯನ್ನು ತಾಳಿ, ಬ್ರಾಹ್ಮಣನನ್ನು ಕುರಿತು – ಸ್ವಾಮಿ, ನಾನು ತಮ್ಮ ಬಳಿಯಲ್ಲಿ ಅಸತ್ಯವನ್ನು

ನುಡಿಯಲಿಕ್ಕಿಲ್ಲೆಂದು ನಿಶ್ಚಯಿಸಿರುವೆನಾದ್ದರಿಂದ ಒಂದೂ ಮಾಜದೆ ಹೇಳುತ್ತೇನೆ, ಚಿತ್ತಯಿಸ ಬೇಕು. ಈ ಹುಡುಗನು ನನ್ನ ಹೊಟ್ಟೆಯ ಮಗನಲ್ಲ. ನಮ್ಮಂತ ಗೌಳಿಗರ ಹೊಟ್ಟೆಯಲ್ಲಿ ಇಂಥ ರತ್ನವು ಹ್ಯಾಗೆ ಹುಟ್ಟಬೇಕು? ಹಿಮಾಲಯದ ಕಟ್ಟಡಿವಿಯಲ್ಲಿ ಆಕಳ ಕರುವನ್ನು ಹುಡುಕುತ್ತ ಹೋಗಿದ್ದ ನನಗೆ ಈತನು ಒಂದು ಆಲದ ಮರದ ಬುಡದಲ್ಲಿ ಸಿಕ್ಕನು. ಆಗ ಈತನ ಹೊಕ್ಕಳ ಹುರಿಯು ಕೂಡ ಉಚ್ಚಿದ್ದಿಲ್ಲ. ಒಂದು ಬಾಳೆಯ ಎಲೆಯ ಮೇಲೆ ಈತನನ್ನು ಮಲಗಿಸಿದ್ದರು. ಈತನು ಒಂದೇ ಸವನೆ ಅಳುತ್ತಿದ್ದನು. ಆಗ ಸ್ವಚ್ಛವಾದ ಬೆಳದಿಂಗಳು ಬಿದ್ದಿತ್ತು. ಅಲ್ಲಿ ಮನುಷ್ಯರ ಸುಳುವು ಕೂಡ ಇದ್ದಿಲ್ಲ. ಮಾಂಸಾಹಾರಿಗಳಾದ ಶ್ವಾಪದಗಳು ತಿನ್ನದೇ ಇದ್ದದ್ದನ್ನು ನೋಡಿ, ನನಗೆ ಬಹಳ ಆಶ್ಚರ್ಯವಾಯಿತು. ಆಕಾಶದಲ್ಲಿ ಚಂದ್ರಮನೊಬ್ಬನು ಮಾತ್ರ ಆ ಶಿಶುವಿಗೆ ನಿರ್ಭಯ ದಿಂದ ಇರುವ ಬಗ್ಗೆ ಹೇಳುತ್ತಿರುವಂತೆ ತೋರುತ್ತಿತ್ತು. ಕೂಡಲೆ ನಾನು ಆ ಶಿಶುವನ್ನು ಎತ್ತಿಕೊಂಡು ಮನೆಗೆ ಬಂದೆನು. ಅದರ ಮೈಮೇಲೆ ವಸ್ತ್ರಗಳು ವಿಶೇಷವಾಗಿ ಇದ್ದಿಲ್ಲ. ಬಾಲದೊಡವೆಯೆಂದರೆ, ಒಂದು ರಕ್ಷಾಬಂಧನವು ಮಾತ್ರ ಶಿಶುವಿನ ಮಣಿಕಟ್ಟಿನಲ್ಲಿ ಒಪ್ಪುತ್ತಿತ್ತು, ಅದನ್ನು ಜತನದಿಂದ ಕಾದಿಟ್ಟಿದ್ದೇನೆ. ಕೂಸಿನ ತಾಯಿ–ತಂದೆಗಳು ಯಾರಿರಬಹುದೆಂಬ ಬಗ್ಗೆ ಬಹಳ ಶೋಧ ಮಾಡಿದೆನು, ಗೊತ್ತು ಹತ್ತಲಿಲ್ಲ; ಆದ್ದರಿಂದ ಕೂಸು ನನ್ನದೇ ಎಂದು ತಿಳಿದು ರಕ್ಷಿಸುತ್ತ ಬಂದಿದ್ದೇನೆ. ಈತನಿಗೆ ಈಗ ಹದಿನೈದು ವರ್ಷಗಳು ತುಂಬಿದವು, ಎಂದು ಹೇಳಿದನು.

ಈ ಮಾತುಗಳನ್ನು ಕೇಳಿ ವಿಷ್ಣುಶರ್ಮನು ಕೆಲಹೊತ್ತು ಸುಮ್ಮನೆ ಕುಳಿತುಕೊಂಡು, ಆ ಮೇಲೆ ಗೌಳಿಗನನ್ನು ಕುರಿತು – ಆ ರಕ್ಷಾಬಂದನವೆಲ್ಲಿ? ತಂದುತೋರಿಸು ನೋಡೋಣ, ಅನ್ನಲು ಗೌಳಿಗನು ಅರಿವೆಯಮೇಲೆ ಅರಿವೆಯನ್ನು ಕಟ್ಟಿ ಭದ್ರವಾದ ಸ್ಥಳದಲ್ಲಿ ಸೇರಿಸಿ ಇಟ್ಟಿದ್ದ ಆ ರಕ್ಷಾಬಂಧನವನ್ನು ಪ್ರಯಾಸದಿಂದ ತೆಗೆದು ಬ್ರಾಹ್ಮಣನ ಕೈಯಲ್ಲಿ ಕೊಟ್ಟನು. ವಿಷ್ಣುಶರ್ಮನು ಅತ್ತಕಡೆಗಿಟ್ಟಿದ್ದ ದೀಪದಬಳಿಗೆ ಹೋಗಿ ಆ ರಕ್ಷಾಬಂಧನವನ್ನು ಪರೀಕ್ಷಿಸಿ ನೋಡಲು, ಅದರ ಮೇಲಿನ ಮುದ್ರೆಯಿಂದ ಅವನಿಗೆ ಬಹಳ ಆಶ್ಚರ್ಯವಾಯಿತು. ಕೂಡಲೇ ಆತನು ಗೌಳಿಗನಿಗೆ – ಅಪ್ಪಾ, ಈ ಹುಡುಗನನ್ನು ನನಗೆ ಒಪ್ಪಿಸು; ಕೆಲವು ದಿನಗಳವರೆಗಾದರೂ ಈತನನ್ನು ನನ್ನ ಸಂಗಡ ಕಳಿಸಿಕೊಡು. ಈತನು ಮುಂದೆ ಭಾಗ್ಯಶಾಲಿಯಾಗುವದರಲ್ಲಿ ಸಂಶಯವಿಲ್ಲ, ಹಾಗಾಗಲಿಕ್ಕೆ ಈತನಿಗೆ ತಕ್ಕ ಆಶ್ರಯವು ಬೇಕಾಗಿದೆ. ನಾನು ಎಲ್ಲ ವಿದ್ಯೆಗಳನ್ನು ಅರಿತವನಿರುತ್ತೇನೆ. ಈ ಹುಡುಗನ ಮೇಲೆ ನನ್ನ ಮನಸ್ಸು ಬಹಳ ಕುಳಿತದೆ. ಎರಡನೆಯ ವಿಚಾರ ಮಾಡದೆ ನನ್ನ ಸಂಗಡ ಈತನನ್ನು ಕಳಿಸಿಕೊಡು ಇಲ್ಲೆನ್ನಬೇಡ, ಎಂದನು. ಬ್ರಾಹ್ಮಣನ ಈ ಮಾತುಗಳನ್ನು ಕೇಳಿ ಗೌಳಿಗನು ಚಿಂತಾಮಗ್ನನಾಗಲು, ಬ್ರಾಹ್ಮಣನು ಮತ್ತೆ ಅವನನ್ನು ಕುರಿತು – ಸಜ್ಜನನೇ, ಸುಮ್ಮನೇ ಚಿಂತೆಗೊಳಗಾಗಬೇಡ. ಹಿಂದಕ್ಕೆ ದಶರಥ ಮಹಾರಾಜನು ಹೊಟ್ಟೆಯ ಮಕ್ಕಳಾದ ರಾಮ–ಲಕ್ಷ್ಮಣರನ್ನು ವಿಶ್ವಾಮಿತ್ರ ಋಷಿಗಳಿಗೆ ಒಪ್ಪಿಸಿ ಅಭ್ಯುದಯ ಪಡೆದದ್ದನ್ನು ನೆನಪಿಗೆ ತಂದುಕೋ. ನಾನು ಈತನಿಗೆ ಎಲ್ಲ ವಿದ್ಯೆಗಳನ್ನು ಕಲಿಸುತ್ತೇನೆ. ಈತನು ರಾಜಪುತ್ರನಿರುತ್ತಾನೆ, ಎಂದು ಹೇಳಿದನು.

ಬ್ರಾಹ್ಮಣನ ಈ ಬೇಡಿಕೆಯಿಂದ ಗೌಳಿಗನಿಗೆ ಬಹಳ ವ್ಯಸನವಾಯಿತು. ತಾನು ಇಲ್ಲಿಯವರೆಗೆ ಪ್ರೀತಿಯಿಂದ ಬೆಳಿಸಿದ ಹುಡುಗನನ್ನು ಬ್ರಾಹ್ಮಣನಿಗೆ ಹ್ಯಾಗೆ ಒಪ್ಪಿಸಲೆಂದು

ವಿಚಾರಮಾಡುತ್ತ ಸುಮ್ಮನೆ ಕುಳಿತುಕೊಂಡನು. ಏನು ಉತ್ತರ ಕೊಡಬೇಕೆಂಬದು ಆತನಿಗೆ ತೋಚದಾಯಿತು. ಹೀಗೆ ಆ ವೃದ್ಧ ಗೋಪನು ಉತ್ತರಕೊಡಲಾರದೆ ಸುಮ್ಮನೆ ಕುಳಿತಿರಲು, ಆ ಉತ್ತರವನ್ನು ಆ ಹುಡುಗನೇ ಕೊಟ್ಟನು. ತನ್ನ ತಂದೆಯ ಹಾಗು ಬ್ರಾಹ್ಮಣನ ಆರಂಭದ ಸಂಭಾಷಣವನ್ನು ಆ ಹುಡುಗನು ಕೇಳಿದ್ದಿಲ್ಲ; ಆದರೆ ''ಈ ಹುಡುಗನನ್ನು ನನಗೆ ಒಪ್ಪಿಸು'' ಎಂದು ಬ್ರಾಹ್ಮಣನು ತನ್ನ ತಂದೆಯನ್ನು ಕೇಳಲು, ಆ ಮಾತುಗಳನ್ನು ಕಿವಿಗೆ ಬಿದ್ದ ಕೂಡಲೇ ಆ ಹುಡುಗನು ಓಡುತ್ತ ತನ್ನ ತಂದೆಯ ಬಳಿಗೆ ಬಂದು – ಅಪ್ಪಾ, ನನ್ನನ್ನು ಈ ಬ್ರಾಹ್ಮಣನ ಸಂಗಡ ಅಗತ್ಯವಾಗಿ ಕಳಿಸಿಕೊಡು. ನೀನು ಎಷ್ಟು ಮಾತ್ರವೂ ಚಿಂತೆಮಾಡಬೇಡ. ಈ ಯವನರನ್ನು ಯಾರಾದರೂ ಮುರಿಬಡಿದರೆ ನೆಟ್ಟಗಾಗುವದೆಂದು ನೀನು ಯಾವಾಗಲೂ ಅನ್ನುತ್ತಿರುವಿಯಲ್ಲವೆ? ನಾನೇ ಅವರನ್ನು ಮುರಿದರೆ ತಪ್ಪೇನು? ನೀನು ಆ ಯವನರ ಅರಸನನ್ನು ನೋಡಿರುವಿಯಷ್ಟೇ? ಯವನರು ಇಷ್ಟು ಕೆಂಪಗಿದ್ದರು, ಇಂಥ ಕಸವುಳ್ಳವರಿದ್ದರು, ಅವರ ಉಡಿಗೆ–ತೊಡಿಗೆಗಳು ಹೀಗೆ ಇದ್ದವು, ಅವರ ಕುದುರೆಗಳು ಹಾಗೆ ಇದ್ದವು, ಎಂದು ಯಾವಾಗಲೂ ಹೇಳುತ್ತಿರುತ್ತೀ. ಅಪ್ಪಾ, ನಿನ್ನ ಆಶೀರ್ವಾದದಿಂದಲೂ, ಈ ಋಷಿವರ್ಯರ ಕೃಪೆಯಿಂದಲೂ ನಾನು ನಿಶ್ಚಯವಾಗಿ ಪರಾಕ್ರಮಶಾಲಿಯಾಗುವೆನು. ಆ ಯವನರು ಕೈವಶಮಾಡಿಕೊಂಡಿದ್ದ ದೇಶಗಳನ್ನು ಸೆಳಕೊಂಡು ಒಂದು ಸ್ವತಂತ್ರ ರಾಜ್ಯವನ್ನು ಸ್ಥಾಪಿಸುವೆನು. ಆಮೇಲೆ ನೀನು ಈ ಗೌಳಿಗರ ಹೋರೆಯನ್ನು ಬಿಟ್ಟು ಐಶ್ವರ್ಯವನ್ನು ಉಪಭೋಗಿಸುತ್ತ ಸ್ವಸ್ಥವಾಗಿ ಇರು. ನಿಶ್ಚಯವಾಗಿ ಹೇಳುತ್ತೇನೆ, ನಾನು ಯವನರನ್ನು ಹೊಡೆದೋಡಿಸಿ, ಮಗಧ ಭೂಪತಿಗಳ ರಾಜ್ಯದಂಥ ಸ್ವತಂತ್ರ ರಾಜ್ಯವನ್ನು ಇತ್ತಕಡೆಯಲ್ಲಿ ಸ್ಥಾಪಿಸುವೆನು.

ಈ ಮೇರೆಗೆ ಆ ಹುಡುಗನ ಮುಖದಿಂದ ಮಗಧ ದೇಶದ, ಹಾಗೂ ಆ ದೇಶದ ಅರಸರ ಹೆಸರು ಹೊರಟದ್ದನ್ನು ಕೇಳಿದಕೂಡಲೆ ಈವರೆಗೆ ಗುಪ್ತವಾಗಿದ್ದ ಬ್ರಾಹ್ಮಣನ ಸಂತಾಪವು ಹೊರಬಿದ್ದು, ಆತನು ಹುಡುಗನನ್ನು ಕುರಿತು – ಎಲೈ ಕುಮಾರಾ, ನಿನ್ನಂತ ಪ್ರತಾಪಿಯು ಪ್ರಾಪ್ತವಾಗಿರಲು, ಮಗಧರಾಜ್ಯದಂಥ ರಾಜ್ಯವೆಂದು ಯಾಕೆ ಅನ್ನುತ್ತೀ? ನಿನ್ನನ್ನು ಆ ಮಗಧ ರಾಜ್ಯ ಸಿಂಹಾಸನದ ಮೇಲೆಯೇ ಕೂಡ್ರಿಸಿ ಚಕ್ರವರ್ತಿಯನ್ನಾಗಿ ಮಾಡುವೆನು, ಎಂದು ತಟ್ಟನೇ ನುಡಿದನು. ಈ ಗಂಭೀರ ಸಂಭಾಷಣವನ್ನು ಕೇಳುತ್ತಿದ್ದ ಮುದಿಗೌಳಿಗನು ಹುಚ್ಚಾದನು. ಆತನು ಬ್ರಾಹ್ಮಣನಿಗೆ ಸಾಷ್ಟಾಂಗವಾಗಿ ವಂದಿಸಿ – ಸ್ವಾಮಿ, ನಾನು ಮೂಢನು. ನನಗೇನು ತಿಳಿಯುತ್ತದೆ? ನಿಮ್ಮಂತ ಮಹರ್ಷಿಗಳ ಪುಣ್ಯದಿಂದ ನಮ್ಮ ಕುಮಾರನ ಅಭ್ಯುದಯವಾಗುವದಿದ್ದರೆ, ತರುಬುವದಕ್ಕೆ ನಾನು ಸಮರ್ಥನಾಗುವೆನೇ? ನನ್ನ ಮಗನೇ ತಮ್ಮ ಸಂಗಡ ಬರಲಿಕ್ಕೆ ಸಂತೋಷದಿಂದ ಒಪ್ಪಿಕೊಳ್ಳುವದರಿಂದ ಕಷ್ಟದಿಂದಲೇ ಆಗಲೊಲ್ಲದೇಕೆ, ನಾನೂ ತಮ್ಮ ಮಾತಿಗೆ ಒಪ್ಪಿಕೊಳ್ಳುವೆನು. ಅವಶ್ಯವಾಗಿ ಕುಮಾರನನ್ನು ಕರಕೊಂಡು ಹೋಗಬೇಕು. ಎಲ್ಲ ಬಗೆಯಿಂದ ಆತನನ್ನು ಸಂರಕ್ಷಿಸುವ ಭಾರವು ತಮ್ಮನ್ನೇ ಕೂಡಿದೆ, ಎಂದು ಹೇಳಿ ಮಗನನ್ನು ವಿಷ್ಣುಶರ್ಮನಿಗೆ ಒಪ್ಪಿಸಿದನು.

ಈ ಮೇರೆಗೆ ಅಕಲ್ಪಿತವಾಗಿ ತೇಜಸ್ವಿಯಾದ ಕುಮಾರನು ಪ್ರಾಪ್ತವಾದದ್ದರಿಂದ ವಿಷ್ಣುಶರ್ಮನ ಆಶೆಗೆ ಅಂಕುರವು ಉತ್ಪನ್ನವಾಯಿತು. ಈ ಅಂಕುರವು ಸಸಿಯಾಗಿ–ಗಿಡವಾಗಿ–

ಮರವಾಗಿ–ಫಲಭರಿತವಾಗುವದು ಪರಮ ದುಸ್ತರವೆಂಬದನ್ನು ಮರೆಯುವ ಕಾರಣವಿಲ್ಲ. ಕಾರ್ಯವು ಸಾಮಾನ್ಯವಾದದ್ದೇ? ನಂದನ ವಂಶವನ್ನು ನಿರ್ಮೂಲ ಮಾಡುವದು!! ಒಬ್ಬ ದರಿದ್ರ ಬ್ರಾಹ್ಮಣನು ರಾಜ ಸಭೆಯಲ್ಲಿ ತನಗಾದ ಅಪಮಾನದಿಂದ ಕ್ಷೋಭಿಸಿ ಬಡಬಡಿಸಿ, ಆ ಬಡಬಡಿಕೆ ಯನ್ನು ಪೂರ್ಣಮಾಡುವದಕ್ಕಾಗಿ ಒಬ್ಬ ಗೌಳಿಗರ ಹುಡುಗನನ್ನು ಬೆನ್ನಿಗೆ ಹಾಕಿಕೊಂಡು ಹೆಣಗುವದು ಕೇವಲ ಹುಚ್ಚುತನವೆಂದು ಯಾರಿಗಾದರೂ ಕಾಣುವಹಾಗಿದೆ; ಆದರೆ ವಿಷ್ಣು ಶರ್ಮನಂಥ ಕಲ್ಲೆದೆಯ ಸ್ವಾವಲಂಬಿಯಾದ ತಪೋನಿಷ್ಠ ಬ್ರಾಹ್ಮಣನು ತನ್ನ ಸತ್ವದಲ್ಲಿಯೂ, ವಿದ್ಯೆಯಲ್ಲಿಯೂ, ಕರ್ತೃತ್ವಶಕ್ತಿಯಲ್ಲಿಯೂ ನಂಬಿಗೆಯನ್ನಿಟ್ಟು ಎಳ್ಳಷ್ಟಾದರೂ ನಿರಾಶೆಪಡದೆ ಉತ್ಸಾಹದಿಂದ ಸ್ವೀಕೃತ ಕಾರ್ಯಸಾಧನದಲ್ಲಿ ಮುಂದಕ್ಕೆ ಹೆಜ್ಜೆಯನ್ನು ಇಡಹತ್ತಿದ ಬಳಿಕ ಯಾವದು ತಾನೇ ಅಸಾಧ್ಯವಾದೀತು?

ಕುಮಾರನನ್ನು ಕರಕೊಂಡು ಮಾರ್ಗವನ್ನು ಕ್ರಮಿಸುವಾಗ ಹಲವು ಕಲ್ಪನಾತರಂಗಗಳು ಬ್ರಾಹ್ಮಣನ ಮನ್ಸಿನಲ್ಲಿ ಉತ್ಪನ್ನವಾಗಿ ಆತನ ಚಿತ್ತಸಾಗರವು ಕ್ಷಣಮಾತ್ರ ಕ್ಷುಬ್ಧವಾಯಿತು; ಆದರೆ ಆತನ ಚಿತ್ತಕ್ಷೋಭದಿಂದ ಬಹುಕಾಲ ಹಣ್ಣಾಗಲಿಲ್ಲ. ಅವನ ವಿಶಾಲವಾದ ಬುದ್ಧಿಗೆ ಸರಳವಾದ ಮಾರ್ಗವು ತೋಚಲು, ಕೂಡಲೆ ಅವನ ಚಿತ್ತವು ಶಾಂತವಾಯಿತು. ಆತನು ಉಲ್ಲಾಸದಿಂದ— ಕುಮಾರಾ, ನಿನ್ನನ್ನು ನಾನು ಇನ್ನು ಚಂದ್ರಗುಪ್ತನೆಂದು ಕರೆಯುತ್ತೇನೆ. ನಿನ್ನ ಮೊದಲಿನ ಹೆಸರು ಏನಿದ್ದರೂ ಅದನ್ನು ಮರೆತುಬಿಡು. ನಾವು ಇನ್ನು ಹಿಮಾಲಯದ ಗಹನವಾದ ಅರಣ್ಯವನ್ನು ಪ್ರವೇಶಿಸಬೇಕಾಗಿರುವದು. ರಾಜ್ಯವನ್ನು ಸಂಪಾದಿಸಬೇಕೆನ್ನುವವನ ಮಾರ್ಗವು ಬಹು ಕಷ್ಟದಾಯಕವೆಂಬದನ್ನು ಮರೆಯಬೇಡ. ನೀನು ಗೌಳಿಗರ ಮನೆಯಲ್ಲಿ ಕುಡಿಯುತ್ತಿದ್ದ ಆಕಳ ಹಾಲನ್ನು ಮರೆತು, ಇನ್ನು ಗಡ್ಡೆ–ಗೆಣಸುಗಳನ್ನು ತಿನ್ನಬೇಕಾದೀತು. ಪಾಟಲೀಪುತ್ರದಂಥ ಪಟ್ಟಣದಲ್ಲಿ ಇಷ್ಟ–ಮಿತ್ರರ ನೆರೆಯೊಳಗೆ ನಿರ್ಭಯದಿಂದ ಇರುತ್ತಿದ್ದ ನೀನು, ಸಿಂಹ ವ್ಯಾಘ್ರಾದಿ ಕ್ರೂರ ಮೃಗಗಳ ಮಧ್ಯದಲ್ಲಿ ಹುಲ್ಲುಗುಡಿಸಿಲದಲ್ಲಿ ವಾಸಿಸಬೇಕಾದೀತು. ಕುಮಾರಾ, ಚಂದ್ರಗುಪ್ತಾ ಇನ್ನು ಮುಂದೆ ಒದಗಬೇಕಾಗಿರುವ ಕಷ್ಟಗಳನ್ನು ವರ್ಣಿಸಿದರೆ, ನಿನ್ನ ಎದೆಯೊಡೆದು ನೀರಾಗಬಹುದು, ಎಂದು ನುಡಿಯಲು, ಚಂದ್ರಗುಪ್ತನು—ಸ್ವಾಮೀ, ಎದೆಯೊಡೆಯೋಣವೆಂದರೇನು? ತಮ್ಮಂಥ ಮಹಾತ್ಮರು ನನ್ನನ್ನು ಗೌಳಿಗರ ಮನೆಯಿಂದ ಹೊರಡಿಸಿ ಧನುರ್ವಿದ್ಯೆಯ ವ್ಯಾಸಂಗ ಮಾಡಿಸುವೆನೆಂದು ಕರೆದೊಯ್ಯುತ್ತಿರಲು, ಕ್ರೂರಮೃಗಗಳ ಭಯವು ನನಗೇಕೆ? ಹುಲ್ಲುಗುಡಿಸಲವು ಅರಮನೆಗಿಂತ ನನಗೆ ಸುಖಕರವಾದೀತು! ತಾವು ಅನುಗ್ರಹಿಸಿ ಅಪ್ಪಣೆಕೊಡಿಸಿದಂತೆ ನನ್ನನ್ನು ಚಕ್ರವರ್ತಿಯಾಗಿ ಮಾಡುವಾಗ ನಾನು ತಮ್ಮ ಅಪ್ಪಣೆಯಂತೆ ದುರ್ಘಟಪ್ರಸಂಗಕ್ಕಾದರೂ ಎದೆಗೊಟ್ಟು ನಿಂತು ಅದನ್ನು ನೀಗುವೆನು. ನಾನು ತಮ್ಮ ಆಜ್ಞಾಧಾರಕನಾದ ಸೇವಕನು! ಆಜ್ಞಾಪಾಲನದಲ್ಲಲ್ಲದೆ ನನ್ನ ಮನಸ್ಸು ಅನ್ಯತ್ರ ರಮಿಸಲಾರದು. ಅನ್ನಲು, ವಿಷ್ಣುಶರ್ಮನು ಬಹು ಸಮಾಧಾನಪಟ್ಟನು. ಬಳಿಕ ಆ ಗುರು– ಶಿಷ್ಯರು ಪಿಟ್ಟೆಂದು ಮಾತಾಡದೆ ಹಿಮಾಲಯದ ಅರಣ್ಯದಲ್ಲಿ ಮಾರ್ಗವನ್ನು ಕ್ರಮಿಸ ತೊಡಗಿದರು.

ಹಿಮಾಲಯದ ಗಹನವಾದ ಅರಣ್ಯವು. ಬಗೆಬಗೆಯ ವೃಕ್ಷಗಳು ಸಂದಟಿತವಾಗಿ ಬೆಳದಿವೆ. ವಿಷ್ಣುಶರ್ಮನು ಪ್ರಿಯಶಿಷ್ಯನೊಡನೆ ಅರಣ್ಯದಲ್ಲಿ ಮಾರ್ಗವನ್ನು ಕ್ರಮಿಸುತ್ತಿರುವಾಗ ಭಿಲ್ಲರು, ಚಾಂಡಾಲರು, ಗುಡ್ಡಗಾಡ ಜನರು ವಿಶ್ವಾಸಪೂರ್ವಕವಾಗಿ ಅವರನ್ನು ಆದರಿಸತೊಡಗಿದರು. ಬ್ರಹ್ಮಪುತ್ರಾನದಿಗೆ ಹೋಗಿ ಕೂಡುವ ಮರುತ್ವತಿಯೆಂಬ ಹೆಸರಿನ ರಮಣೀಯವಾದ ಒಂದು ಸಣ್ಣ ಹೊಳೆಯ ದಂಡೆಯಲ್ಲಿ ವಿಷ್ಣುಶರ್ಮನು ಒಂದು ಸುಂದರವಾದ ಆಶ್ರಮವನ್ನು ರಚಿಸಿದನು. ತನ್ನ ಪ್ರತಿಜ್ಞೆಯು ಪೂರ್ಣವಾಗುವವರೆಗೆ ಆ ತೇಜಸ್ವಿಯು ತನಗೆ ವಿಷ್ಣುಶರ್ಮನೆಂಬ ಹೆಸರಿನ ಬದಲು ಚಾಣಕ್ಯನೆಂಬ ಹೆಸರನ್ನು ಇಟ್ಟುಕೊಂಡನು. ಆದ್ದರಿಂದ ಇನ್ನುಮುಂದೆ ಚಾಣಕ್ಯನೆಂಬ ಹೆಸರನ್ನೇ ನಾವು ಉಪಯೋಗಿಸೋಣ. ಬರಬರುತ್ತ ಅನೇಕ ಜನ ಬ್ರಾಹ್ಮಣರೂ, ವಿದ್ಯಾಭ್ಯಾಸೇಚ್ಛುಗಳಾದ ಬ್ರಾಹ್ಮಣ ಪುತ್ರರೂ ಚಾಣಕ್ಯನ ಆಶ್ರಮದಲ್ಲಿ ವಾಸಿಸತೊಡಗಿದರು. ಹಿಮಾಲಯದೊಳಗಿನ ಭಿಲ್ಲಾಧಿಪತಿಗಳು ಚಾಣಕ್ಯನೊಡನೆ ಬಹು ವಿನಯದಿಂದ ವರ್ತಿಸುತ್ತಿದ್ದರು. ಬರಬರುತ್ತ ನೂರಾರು ಜನ ವಿದ್ಯಾರ್ಥಿಗಳು ಚಾಣಕ್ಯನಲ್ಲಿ ಅಧ್ಯಯನ ಮಾಡತೊಡಗಿದರು. ಈ ವಿದ್ಯಾರ್ಥಿಗಳ ಬಳಿಯಲ್ಲಿ ಅಧ್ಯಯನ ಮಾಡುವ ಬೇರೆ ಹಲವು ವಿದ್ಯಾರ್ಥಿಗಳು ಇದ್ದರು. ವಿದ್ಯಾರ್ಥಿಗಳೆಲ್ಲರೂ ಕೇವಲ ಬ್ರಹ್ಮವಿದ್ಯೆಯನ್ನೇ ಅಭ್ಯಾಸಿಸುವವರಿದ್ದಿಲ್ಲ. ಅಸ್ತ್ರವಿದ್ಯೆ, ಧನುರ್ವೇದ, ಆಯುರ್ವೇದ, ಕಾಶ್ಯಪಸಂಹಿತೆ ಮೊದಲಾದವನ್ನು ಕಲಿಯುವ ಬ್ರಾಹ್ಮಣರ ಹಾಗು ಕ್ಷತ್ರಿಯರ ಕುಮಾರರರೂ, ಭಿಲ್ಲ, ಮತಂಗ, ಚಾಂಡಾಲ ಮೊದಲಾದ ಹೀನಜಾತಿಯ ಕುಮಾರರೂ ಆ ಆಶ್ರಮದಲ್ಲಿ ಇದ್ದರು. ಸಾರಾಂಶ ಪುರಾಣಗಳೊಳಗಿನ ವಸಿಷ್ಠ, ವಾಲ್ಮೀಕಿ, ವಿಶ್ವಾಮಿತ್ರ ಮೊದಲಾದ ಮಹರ್ಷಿಗಳ ಆಶ್ರಮಗಳನ್ನು ಚಾಣಕ್ಯನ ಆಶ್ರಮವು ಅಚ್ಚಳಿಯದೆ ಹೋಲುತ್ತಿತ್ತೆಂದು ಹೇಳಬಹುದು. ಹೀನ ಜನರನ್ನು ತನ್ನ ತಪಃಪ್ರಭಾವದಿಂದ ಪುನೀತರನ್ನಾಗಿ ಮಾಡಿ ಸ್ವೀಕರಿಸಿದಂತೆ ತನ್ನ ಆಶ್ರಮದಲ್ಲಿ ಅಧ್ಯಯನಕ್ಕಾಗಿ ಹೀನಜಾತಿಯವರನ್ನು ಸೇರಿಸಿಕೊಂಡದ್ದೊಂದು ಚಾಣಕ್ಯನಲ್ಲಿಯ ವಿಶೇಷ ಸಂಗತಿಯು. ಬರಬರುತ್ತ ವಿದ್ಯಾರ್ಥಿಗಳು ಉತ್ಸಾಹದಿಂದ ಅಧ್ಯಯನ ಮಾಡಿ ಚಾಣಕ್ಯನ ಮನಸ್ಸು ಮೆಚ್ಚುವಂತೆ ತಮ್ಮ ತಮ್ಮ ವಿದ್ಯೆಗಳಲ್ಲಿ ಪ್ರಾವೀಣ್ಯವನ್ನು ಸಂಪಾದಿಸಿದರು.

ತನ್ನ ಶಿಷ್ಯರು ಎಷ್ಟು ಪ್ರವೀಣರಾದರೂ, ಅಲ್ಪಸಂಖ್ಯಾಕರಾದದ್ದರಿಂದ ಅವರು ಆರ್ಯಾವರ್ತದ ಪೂರ್ವೋತ್ತರ ಭಾಗವನ್ನೆಲ್ಲ ವ್ಯಾಪಿಸಿರುವ ಧನಾನಂದನಂಥ ಸಾರ್ವಭೌಮನೊಡನೆ ಎದೆಗೊಟ್ಟು ನಿಲ್ಲಲಿಕ್ಕೆ ಎಷ್ಟು ಮಾತ್ರವೂ ಈಡಾಗಲಿಕ್ಕಿಲ್ಲೆಂದು ಚಾಣಕ್ಯನು ತಿಳಕೊಂಡಿದ್ದನು. ಈ ವಿಚಾರದಿಂದ ಪೀಡಿತನಾಗಿ ಆತನು ಒಂದು ದಿನ ಮಧ್ಯಾಹ್ನದ ಸಮಯದಲ್ಲಿ ಮರುದ್ವತೀ ನದಿಗೆ ಸಾಗಿದ್ದನು. ನದಿಯಲ್ಲಿ ಚಾಣಕ್ಯನ ಅನುಷ್ಠಾನದ ಸ್ಥಳವು ಏಂಗಡವಾಗಿ ಗೊತ್ತುಮಾಡಲ್ಪಟ್ಟಿತ್ತು. ಆ ಏಕಾಂತ ಸ್ಥಾನದಲ್ಲಿ ಆ ತೀಕ್ಷ್ಣಸ್ವಭಾವದ ಬ್ರಾಹ್ಮಣನು ಅನುಷ್ಠಾನಮಾಡುತ್ತಿರುವಾಗ ಅವನನ್ನು ಹೋಗಿ ಮಾತಾಡಿಸುವ ಧೈರ್ಯವು ಯಾರಿಗೂ ಆಗುತ್ತಿದ್ದಿಲ್ಲ. ಒಬ್ಬ ಚಂದ್ರಗುಪ್ತನು ಮಾತ್ರ ನಿಶ್ಶಂಕೆಯಿಂದ ಬೇಕಾದಲ್ಲಿ ಹೋಗಿ, ತನ್ನ ಗುರುವಾದ ಚಾಣಕ್ಯನ ಸಮಾಧಿಯ ಭಂಗವನ್ನು ಸಹ ಮಾಡುತ್ತಿದ್ದನು. ಅನುಷ್ಠಾನವನ್ನು

ಮಾಡುತ್ತಿದ್ದ ಚಾಣಕ್ಯನ ಮುಖದಿಂದ ಮಂತ್ರೋಚ್ಚಾರವು ಅಸ್ಖಲಿತವಾಗಿ ಆಗುತ್ತಿದ್ದರೂ ಈದಿನ ಆತನ ಮನಸ್ಸು ಅನುಷ್ಠಾನದಲ್ಲಿದ್ದಿಲ್ಲ. ತಾನು ತನ್ನ ಅಲ್ಪಸೈನ್ಯದ ಸಹಾಯದಿಂದ ನಂದರ ವಂಶವನ್ನು ಬೇರುಸಹಿತ ಹೇಗೆ ಕಿತ್ತೇನೆಂಬ ಚಿಂತೆಯಲ್ಲಿ ಆತನು ಮುಣುಗಿಹೋಗಿದ್ದನು. ಸುಮ್ಮನೆ ಚಿಂತೆಮಾಡುತ್ತ ಕುಳಿತುಕೊಳ್ಳುವದರಲ್ಲಿ ಅರ್ಥವಿಲ್ಲವೆಂತಲೂ, ಪ್ರತಿಜ್ಞೆಯನ್ನು ಈಡೇರಿಸುವದಿದ್ದರೆ ಬೇಗನೆ ಯಾವ ಬಗೆಯಿಂದಾದರೂ ಉದ್ಯೋಗವನ್ನು ಆರಂಭಿಸವದು ಅವಶ್ಯವೆಂತಲೂ ಆತನು ಅಂದು ನಿರ್ಧರಿಸಿದನು. ಏನು ಉದ್ಯೋಗಮಾಡಬೇಕು? ಹ್ಯಾಗೆ ಉದ್ಯೋಗವನ್ನು ಆರಂಭಿಸಬೇಕು? ಎಂಬ ವಿಚಾರಗಳು ಅವನ ಮನಸ್ಸಿನಲ್ಲಿ ಉತ್ಪನ್ನವಾಗಿ ಪೀಡಿಸತೊಡಗಿದ್ದವು. ಚಂದ್ರಗುಪ್ತನು ನಸುಕಿನಲ್ಲಿಯೇ ಬೇಟೆಗಾಗಿ ಅರಣ್ಯದಲ್ಲಿ ಎತ್ತೋ ಹೋಗಿದ್ದನು. ಪಕ್ಷಿಗಳೂ ಕೂಡ ಮಿಸಿಕಾಡದಂಥ ಮಧ್ಯಾಹ್ನದಲ್ಲಿ ಚಾಣಕ್ಯನು ಈ ಮೇರೆಗೆ ಚಿಂತಿಸುತ್ತ ಕುಳಿತಿರಲು, ಪಕ್ಕನೆ ಒಂದು ಕಲ್ಪನೆಯು ಆತನ ಮನಸ್ಸಿನಲ್ಲಿ ಹೊಳೆದು ಅವನಿಗೆ ಅತ್ಯಾನಂದವಾಯಿತು. ಆ ಆನಂದದ ಭರದಲ್ಲಿ ಆತನು ಚಪ್ಪಾಳೆ ಬಾರಿಸಿದನು. ಒಂದೆರಡು ಸಾರೆ ತಲೆಯಲ್ಲಾಡಿಸಿ ತನ್ನೊಳಗೆ ಒಟಗುಟ್ಟುತ್ತ—ಸರಿ ಸರಿ, ಹೀಗೆ ಮಾಡಿದಹೊರತು ಈಗ ಬೇರೆ ಹಾದಿಯೇ ಇಲ್ಲ, ನಾನು ಹೋಗದಿದ್ದರೆ ಅವ್ಯವಸ್ಥೆಯಾಗುವದು ಅಶಕ್ಯವು. ಹಾಗೆ ವ್ಯವಸ್ಥೆಯಾದ ಹೊರತು ಮುಂದಿನ ಕೆಲಸಕ್ಕೆ ಕೈಹಾಕುವದು ಆಗದ ಮಾತು. ಸುಮ್ಮನೆ ಇಲ್ಲಿ ಕುಳಿತರೆ ಆಗುವದೇನು! ಚಂದ್ರಗುಪ್ತನು ಒಂದೇ ವರ್ಷದಲ್ಲಿ ಶಸ್ತ್ರಾಸ್ತ್ರ ವಿದ್ಯೆಯಲ್ಲಿ ಅಸಾಧಾರಣ ನೈಪುಣ್ಯವನ್ನು ಸಂಪಾದಿಸಿರುವನು. ದೊಡ್ಡ ಕಾರ್ಯಕ್ಕೆ ಕೈ ಹಾಕಿದ ನಾನು ಆರಂಭದಲ್ಲಿಯೇ ಇಲ್ಲದ ವಿಘ್ನಗಳನ್ನು ಕಲ್ಪಿಸುತ್ತ ಕುಳಿತರೆ ಗತಿಯೇನು? ನನ್ನ ರಾಜನೀತಿಯ ನೈಪುಣ್ಯದಿಂದ ಬೇಕಾದಂಥ ವಿಘ್ನವನ್ನು ನೀಗಿಸಬಹುದು. ಮನಸ್ಸಿನಲ್ಲಿ ಬಂದದ್ದನ್ನು ಮಾಡದಿದ್ದರೆ ಇಷ್ಟಸಿದ್ಧಿಯು ಎಂದೂ ಆಗಲ್ಲಿಕ್ಕಿಲ.

ಈಮೇರೆಗೆ ಚಾಣಕ್ಯನು ಸುಸಂಗತವಾದ ಕಲ್ಪನೆಯಿಂದ ಸಮಾಧಾನಪಟ್ಟು ಕುಳಿತಿರಲು, ಕುಮಾರರು ಬೇಟೆಯಾಡಿ ಉತ್ಸಾಹದಿಂದ ಆತನ ಬಳಿಗೆ ಬಂದರು. ಎಲ್ಲರ ಮುಂದೆ ಇದ್ದ ಪ್ರಿಯಶಿಷ್ಯನಾದ ಚಂದ್ರಗುಪ್ತನು ಓಡುತ್ತ ಬಂದು ಗುರುವಿಗೆ ನಮಸ್ಕರಿಸಲು, ಉಳಿದ ಕುಮಾರರೂ ನಮಸ್ಕರಿಸಿದರು. ಅವರ ಉತ್ಸಾಹವನ್ನು ನೋಡಿ ಚಾಣಕ್ಯನಿಗೆ ಬಹು ಸಮಾಧಾನವಾಯಿತು. ಆ ದಿನದ ಬೇಟೆಯಲ್ಲಿ ಚಂದ್ರಗುಪ್ತನು ಒಬ್ಬನೇ ಬೆನ್ನಟ್ಟಿ ಒಂದು ಭಯಂಕರವಾದ ಕಾಡಹಂದಿಯನ್ನು ಕೊಂದಿದ್ದನು. ಅವನ ಪರಾಕ್ರಮವನ್ನು ಚಂದ್ರಗುಪ್ತನ ಮಿತ್ರರು ಆವೇಶದಿಂದ ಹೇಳುವದನ್ನು ಕೇಳಿ, ಚಾಣಕ್ಯನ ಕಣ್ಣುಗಳು ಬಾಷ್ಪಗಳಿಂದ ತುಂಬಿದವು. ಅವರೆಲ್ಲರೂ ಆನಂದದಿಂದ ತಮ್ಮ ಆಶ್ರಮದ ಕಡೆಗೆ ತೆರಳಿದರು. ಸ್ನಾನ—ಸಂಧ್ಯಾದಿ ನಿತ್ಯಕರ್ಮಗಳನ್ನು ನೆರವೇರಿಸಿ ಪ್ರಿಯಶಿಷ್ಯನ ಪರಾಕ್ರಮದ ಕೃತಿಯನ್ನು ಕೇಳಿ ಉದುರುವ ಆನಂದ ಬಾಷ್ಪಗಳನ್ನು ಒರಿಸುತ್ತ ಸಾಗಿದ್ದ ಋಷಿವರ್ಯನಾದ ಚಾಣಕ್ಯನನ್ನು, ಬೇಟೆಯಾಡಿ ಆನಂದ ಭರಿತರಾದ ಕುಮಾರರ ತಂಡವು ಕೃತಕೃತ್ಯತೆಯಿಂದ ಹಿಂಬಾಲಿಸಿಹೋಗುತ್ತಿರುವ ಶೋಭೆಯು, ಪಾಪಿಗಳ ಕಣ್ಣಿಗೆ ಬೀಳುವದು ದುರ್ಲಭವೇಸರಿ! ಚಾಣಕ್ಯನು ಆಶ್ರಮಕ್ಕೆ ತಲುಪಿದ ಬಳಿಕ

ಚಂದ್ರಗುಪ್ತನೊಬ್ಬನನ್ನೇ ಏಕಾಂತದಲ್ಲಿ ಕರೆದು—ಕುಮಾರಾ, ನಿನ್ನ ಹಿತಕ್ಕಾಗಿಯೇ, ನನ್ನ ಆಶ್ರಮದ ವ್ಯವಸ್ಥೆಯ ಭಾರವನ್ನು ನಿನ್ನ ಮೇಲೆ ಹೊರಿಸಿ, ಕಾರ್ಯಸಾಧನೆಗಾಗಿ ನಾನು ನಾಲ್ಕು ತಿಂಗಳು ಮಗಧ ದೇಶಕ್ಕೆ ಹೋಗಬೇಕೆಂದು ಮಾಡಿದ್ದೇನೆ. ಉಳಿದ ಕುಮಾರರಿಗೆ ಹೇಳತಕ್ಕದ್ದನ್ನೆಲ್ಲ ನಾನು ಹೇಳುವೆನು. ಅವರೆಲ್ಲರ ಮೇಲೆ ನಿನ್ನ ದೃಷ್ಟಿಯು ಇರಬೇಕು. ಮುಂದೆ ಸಾರ್ವಭೌಮ ನಾಗತಕ್ಕ ನೀನು, ಒಂದು ಆಶ್ರಮದ ವ್ಯವಸ್ಥೆಯನ್ನು ನಾಲ್ಕು ತಿಂಗಳ ಮಟ್ಟಿಗೆ ಮಾಡದಿದ್ದರೆ ಹ್ಯಾಗೆ?

ಗುರುವಿನ ಈ ಮಾತುಗಳನ್ನು ಕೇಳಿ ಚಂದ್ರಗುಪ್ತನಿಗೆ ಅಸಮಾಧಾನವಾಯಿತು. ಚಾಣಕ್ಯನ ಮೇಲೆ ಆತನ ಭಕ್ತಿ–ವಿಶ್ವಾಸಗಳು ಬಹಳ. ತನ್ನ ಗುರುವನ್ನು ನೆರಳಿನಂತೆ ಅನುಸರಿಸಿ ಇದ್ದ ಆತನ ಕೋಮಲ ಮನಸ್ಸು ಗುರುವಿನ ವಿಯೋಗದ ಕಲ್ಪನೆಯಿಂದ ನೋಯಲು, ಅವನ ಕಣ್ಣೊಳಗಿಂದ ನೀರುಗಳು ಬಂದವು. ಇದನ್ನು ನೋಡಿ ಚಾಣಕ್ಯನು ಅಸಮಾಧಾನಪಟ್ಟರೂ, ಆ ನಿಶ್ಚಯದ ಮನಸ್ಸಿನ ಬ್ರಾಹ್ಮಣನು ಚಂದ್ರಗುಪ್ತನನ್ನು ಕುರಿತು ನುಡಿದನೇನಂದರೆ—ಕುಮಾರಾ, ಇದೇನು? ಕಣ್ಣೀರು ಸುರಿಸುವದೇಕೆ? ಹೀಗೆ ಮೋಹಪರವಶನಾಗಹತ್ತಿದರೆ, ನೀನು ಮುಂದೆ ಒದಗಬಹುದಾಗಿದ್ದ ದೊಡ್ಡ ದೊಡ್ಡ ಸಂಕಟಗಳಿಗೆ ಹ್ಯಾಗೆ ಎದೆಗೊಟ್ಟು ನಿಂತೀ? ನಿನ್ನ ಗುರು ತನ್ನ ನಿಶ್ಚಯವನ್ನು ತಿರುಗಿಸುವವನಲ್ಲವೆಂಬದನ್ನು ನೆನಪಿನಲ್ಲಿಡು. ಬಾಲ್ಯದಲ್ಲಾದ ಗೌಳಿಗನ ಸಹವಾಸದಿಂದ ನಿನ್ನ ಮನಸ್ಸು ಅತ್ಯಂತ ಕೋಮಲವಾಗಿರುವದು. ಕ್ಷತ್ರಿಯನಾದ ನೀನು ಅದನ್ನು ಕೆಲಮಟ್ಟಿಗೆ ಕಲ್ಲುಮಾಡಲಿಕ್ಕೆಬೇಕು. ನಾವೆಲ್ಲರು ಆಶ್ರಮವನ್ನು ಹಿಡಿದು ಕುಳಿತರೆ ಆಗುವದೇನು? ಕಣ್ಣು ಒರಿಸು. ನಿನ್ನ ಪ್ರತಾಪಕ್ಕೆ ಈ ಕೋಮಲ ಮನಸ್ಸು ಒಪ್ಪುತ್ತಿದ್ದರೂ, ಪ್ರಸಂಗವಿಶೇಷದಲ್ಲಿ ಪ್ರತಾಪಿಯು ವಜ್ರಹೃದಯಿಯಾಗಬೇಕಾಗುವದೆಂಬದನ್ನು ಮರೆಯಬೇಡ! ನಿನ್ನಂಥ ಕುಮಾರನ ಪ್ರಾಪ್ತಿಯ ಅಸ್ತಿವಾರದಿಂದ ಏಳಂತಸ್ತಿನ ಭವ್ಯವಾದ ಮಂದಿರವನ್ನು ಕಟ್ಟಬೇಕೆಂದು ಯತ್ನಿಸುತ್ತಿರುವ ನನ್ನೆದುರಿಗೆ ಮೋಹದಿಂದ ನೀನು ಕಣ್ಣೀರು ಸುರಿಸುವದು ಯೋಗ್ಯವೇ? ಇದರಿಂದ ನನ್ನ ಮನಸ್ಸು ಮೆಚ್ಚಲಾರದು. ಈಗಿನ ಮಹತ್ವದ ಪ್ರಸಂಗದಲ್ಲಿ ಕರ್ತವ್ಯ ಧುರಂಧರನಾಗಿ ನೀನು ನನ್ನ ಆಶಾಂಕುರವನ್ನು ಫಲದ್ರೂಪವಾಗಿಮಾಡಬೇಕಲ್ಲದೆ, ಹೇಡಿತನದಿಂದ ಅದನ್ನು ಕಮರಿಸಿ ಕಾರ್ಯಹಾನಿ ಮಾಡುವದು ಸರಿಯಲ್ಲ!

ಗೃಹಕಲಹಾಗ್ನಿ

ಆರ್ಯಚಾಣಕ್ಯನು ಮಾರ್ಗವನ್ನು ಕ್ರಮಿಸುತ್ತ ಮಗಧದೇಶದ ರಾಜಧಾನಿಯಾದ ಪಾಟಲಿಪುತ್ರಕ್ಕೆ ತಲುಪಿದನು. ಆಗ ಪಾಟಲಿಪುತ್ರವು ಆರ್ಯಾವರ್ತದಲ್ಲಿ ಅತಿ ವಿಖ್ಯಾತವಾದ ರಾಜಧಾನಿ ಯಾಗಿತ್ತು, ಅದನ್ನು ಸರಿಗಟ್ಟುವ ಪಟ್ಟಣಗಳು ಇಡೀ ಹಿಂದುಸ್ತಾನದಲ್ಲಿ ಯಾವವೂ ಇದ್ದಿಲ್ಲೆಂದು ಹೇಳಿದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ, ಇದೇ ಪಟ್ಟಣವು ರಾಮಾಯಣ ಕಾಲದಲ್ಲಿ

ಪುಷ್ಪಪುರೀ ಅಥವಾ ಕೌಶಾಂಬೀ ಎಂಬ ಹೆಸರಿನಿಂದ ಪ್ರಸಿದ್ಧವಾಗಿತ್ತಂತೆ. ಈ ಇತಿಹಾಸ ಪ್ರಸಿದ್ಧ ಪಟ್ಟಣವು ಐದು ಹರದಾರಿ ಉದ್ದವಾಗಿಯೂ, ಎರಡು ಹರದಾರಿ ಅಗಲವಾಗಿಯೂ ಗಂಗಾ–ಶೋಣಾ ನದಿಗಳ ಸಂಗಮಸ್ಥಾನದಲ್ಲಿ ಅವಾಢವ್ಯವಾಗಿ ಪಸರಿಸಿತ್ತು. ಗ್ರೀಕರು ಬರೆದಿರುವ ಈ ಪಟ್ಟಣದ ವರ್ಣನದಿಂದ ಈ ಪಟ್ಟಣದ ಸುತ್ತುಮುತ್ತು ಒಂದು ಭಯಂಕರವಾದ ಅಗಳತವಿದ್ದು, ಅದರ ಒಳಮೈಯಲ್ಲಿ ಪಟ್ಟಣವನ್ನೆಲ್ಲ ಸುತ್ತುಗಟ್ಟುವಂಥ ಒಂದು ಭದ್ರವಾದ ಕಟ್ಟಿಗೆಯ ಗೋಡೆಯು ಇತ್ತೆಂದು ತಿಳಿಯುತ್ತದೆ. ಈ ಗೋಡೆಯ ಒಳಮಗ್ಗಲಿಗೆ ಅದರಂತೆ ಪಟ್ಟಣವನ್ನೆಲ್ಲ ಸುತ್ತುಗಟ್ಟುವಂಥ ಮತ್ತೊಂದು ದೊಡ್ಡಗೋಡೆಯು ಇತ್ತಂತೆ. ಪಾಟಲೀಪುತ್ರವು ವ್ಯಾಪಾರದ ಮುಖ್ಯಸ್ಥಾನವೂ, ಎಲ್ಲ ಬಗೆಯ ಕಲಾ–ಕೌಶಲ್ಯಗಳ ತವರಮನೆಯೂ ಆಗಿತ್ತು. ಈ ಸುಪ್ರಸಿದ್ಧ ರಾಜಧಾನಿಯಲ್ಲಿ ಭಂಗಾರದ ಹೊಗೆಯು ಹಾಯುತ್ತಿತ್ತು; ಅಲ್ಲಿಯ ಸುಂದರವಾದ ಮಂದಿರಗಳು ಮುಗಿಲು ಮುಟ್ಟಿದ್ದವು; ಉಪವನಗಳು ರಾಜಧಾನಿಯ ಸೌಂದರ್ಯವನ್ನು ಹೆಚ್ಚಿಸುತ್ತಿದ್ದವು. ಪಟ್ಟಣದ ಬೀದಿಗಳೆಲ್ಲ ವಿಸ್ತೀರ್ಣಪ್ರಾಸಾದಿಗಳಿಂದ ಎರಡೂ ಮಗ್ಗಲು ಶೃಂಗರಿಸಲ್ಪಟ್ಟಿದ್ದರಿಂದ ಪಟ್ಟಣದ ಶೋಭೆಯು ಅಪೂರ್ವವಾಗಿತ್ತು. ''ಶ್ರೀವಿಹಾರ''ವೆಂಬ ಅರಮನೆಯ ಸೌಂದರ್ಯವನ್ನಂತೂ ವರ್ಣಿಸುವದು ಅಸಾಧ್ಯವು. ಉತ್ತಮೋತ್ತಮವಾದ ಕಲಾಕೌಶಲ್ಯಗಳ ಪ್ರದರ್ಶನವಾಗಿದ್ದ ಆ ಭವ್ಯಮಂದಿರವು ಲಕ್ಷ್ಮಿಯ ನಿವಾಸಸ್ಥಾನವಾಗಿತ್ತು. ವೇದಧರ್ಮದ ನಂದವಂಶದ ಅರಸರು ಬಹು ದಿವಸಗಳಿಂದ ಪ್ರತಾಪಶಾಲಿಗಳಾಗಿ ಆ ಪಟ್ಟಣದಲ್ಲಿ ಆಳುತ್ತ ಬಂದದ್ದರಿಂದ, ಅಲ್ಲಿ ಯಜ್ಞಯಾಗಾದಿ ವೈದಿಕಕಾರ್ಯಗಳು ಯಾವಾಗಲೂ ನಡೆದಿರುತ್ತಿದ್ದವು. ಯಜ್ಞದಲ್ಲಿ ಆಗುತ್ತಿದ್ದ ಪಶುವಧೆಗೆ ಹೇಸಿಕೊಂಡು, ಭಗವಾನ್ ಬುದ್ಧನು ಸ್ಥಾಪಿಸಿದ ಬೌದ್ಧಧರ್ಮದ ಅನುಯಾಯಿಗಳೂ ಅಪರೂಪವಾಗಿ ಆ ಪಟ್ಟಣದಲ್ಲಿ ಇದ್ದರು. ಇವರಲ್ಲದೆ ಯವನ, ಮ್ಲೇಂಛ, ಬರ್ಬರ, ಹೂಣ, ಕಿರಾತ, ಶಕ, ಚೀನ, ಗಾಂಧಾರ, ಖಾಸ, ಪಾರಸಿಕ, ಕಾಬೋಲ ಮೊದಲಾದ ದೇಶಗಳ ಜನರು ವ್ಯಾಪಾರದ ನೆವದಿಂದಾಗಲಿ, ರಾಜಕಾರಣದ ನೆವದಿಂದಾಗಲಿ ಆ ಪಟ್ಟಣದಲ್ಲಿ ವಾಸಿಸುತ್ತಿದ್ದರು.

ಸದ್ಯದ ಮಗಧರಾಜನಾದ ಧನಾನಂದನ ಕೀರ್ತಿಯು ದಿಕ್ಕುದಿಕ್ಕಿಗೆ ಪಸರಿಸಿ, ವೈರಿರಾಜರ ಪ್ರತಾಪವನ್ನು ಕುಕ್ಕರಬಡೆದಿತ್ತು. ಮಗಧ ರಾಜ್ಯವನ್ನು ದುರ್ಭಾವದಿಂದ ನೋಡುವ ಧೈರ್ಯವು ಕೂಡ ಪರರಾಜರಿಗೆ ಆಗುತ್ತಿದ್ದಿಲ್ಲ. ಬಹುಜನ ಮಾಂಡಲಿಕ ರಾಜರು ಕೈಕಟ್ಟಿಕೊಂಡು 'ಜೀಯಾ' ಎಂದು ನಂದಭೂಪತಿಯನ್ನು ಓಲಯಿಸುತ್ತಿದ್ದರು. ಧನಾನಂದನು ದೂರದ ಜನರಿಗೆ ಬಹು ದಾನಶೂರನೂ, ವೀರನೂ, ಗುಣಗ್ರಾಹಿಯೂ ಆಗಿ ತೋರುತ್ತಿದ್ದನು. ಅವನ ಸಚ್ಚರಿತ್ರ ಶ್ರವಣದಿಂದ ದೂರದ ಜನರ ಭಯ–ಕೌತುಕಗಳು ದಿನದಿನಕ್ಕೆ ಹೆಚ್ಚುತ್ತಿದ್ದವು. ಆದರೆ ''ದೂರದ ಗುಡ್ಡ ಕಣ್ಣಿಗೆ ನುಣ್ಣಗೆ'' ಎಂಬ ನಾಣ್ಣುಡಿಯು ಧನಾನಂದನಿಗಾದರೂ ಹತ್ತುತ್ತಿತ್ತೆಂಬದನ್ನು ವಾಚಕರು ಮರೆಯತಕ್ಕದ್ದಲ್ಲ. ರಾಜಮುಕುಟದ ಉಜ್ವಲ ಕಾಂತಿಗೆ ಮೋಹಿತರಾದದ್ದರಿಂದ, ಧನಾನಂದನ ದೋಷಗಳು ದೂರದ ಜನರ ಕಣ್ಣಿಗೆ ಕಾಣದಿದ್ದರೂ, ಸಮೀಪದ ಜನರು ಧನಾನಂದನ ನಿಜವಾದ ಗುಣಗಳನ್ನು ಅರಿತಿದ್ದರು. ಆತನು ಕ್ಷುದ್ರಮನಸ್ಸಿನವನೂ, ಚಂಚಲ

ಸ್ವಭಾವದವನೂ, ದುರ್ವ್ಯಸನಿಯೂ ಆಗಿದ್ದನು. ಇಂಥ ಕ್ಷೀಣಮನಸ್ಸಿನ ಅರಸನನ್ನು ದುರ್ವ್ಯಸನಿಗಳು ಸುತ್ತಿಗಟ್ಟುವದು ಸ್ವಾಭಾವಿಕವಾದದ್ದರಿಂದ, ಧನಾನಂದನು ಪ್ರಜೆಗಳ ಆದರಕ್ಕೆ ಪಾತ್ರನಿದ್ದಿಲ್ಲ. ಅರಸನು ಈಶ್ವರಾಂಶನೆಂಬ ಭಾವನೆಯಿಂದಲೂ, ದೇಶಾಭಿಮಾನದ ನೆವದಿಂದಲೂ ಪ್ರಜೆಗಳು ಆತನನ್ನು ಓಲಯಿಸುತ್ತಿದ್ದರು. ಸುವ್ಯವಸ್ಥಿತವಾದ ಮಂತ್ರಿಮಂಡಲವೂ, ಬಲಿಷ್ಠವಾದ ಸೈನ್ಯವೂ ಧನಾನಂದನಿಗೆ ಒದಗದಿದ್ದರೆ, ಇಷ್ಟೊತ್ತಿಗೆ ನಂದಸಾಮ್ರಾಜ್ಯವು ನಾಮಶೇಷ ವಾಗುತ್ತಿತ್ತೆಂದು ಹೇಳಬಹುದಾಗಿತ್ತು.

ರಾಜ್ಯಕಾರಭಾರವನ್ನು ಸಾಗಿಸಲಿಕ್ಕೆ ಧನಾನಂದನ ಈ ದುರ್ಗುಣಗಳಿಂದ ಮಂತ್ರಿಗಳಿಗೆ ತೊಂದರೆಯಾಗುತ್ತಿದ್ದರೂ, ಅವರು ರಾಜಕುಲದಮೇಲಿನ ನಿಷ್ಠೆಯಿಂದ ಆ ತೊಂದರೆಗಳನ್ನೆಲ್ಲ ತಾಳಿಕೊಂಡು, ದಕ್ಷತೆಯಿಂದ ರಾಜ್ಯಕಾರಭಾರವನ್ನು ನಡೆಸುತ್ತಿದ್ದರು. ನಂದವಂಶದಲ್ಲಿ ಅಕೃತ್ರಿಮ ನಿಷ್ಠೆಯೂ, ಅಭಿಮಾನವೂ ಉಳ್ಳ ಅಮಾತ್ಯರಾಕ್ಷಸನೆಂಬ ಘನವಂತನು ಈ ಮಂತ್ರಿಮಂಡಲದ ಮುಖ್ಯಸ್ಥನಾಗಿದ್ದರು. ರಾಕ್ಷಸನು ತನ್ನ ಹೆಸರಿಗೆ ಕೇವಲ ವಿರುದ್ಧವಾದ ಸ್ವಭಾವದವನಿದ್ದನು. ಅರಸನ ಮೇಲೆ ಆತನ ವರ್ಚಸ್ಸು ಪೂರ್ಣವಾಗಿತ್ತು. ಆ ವಿಶಾಲದೇಹದ ಬ್ರಾಹ್ಮಣನು ರಾಜಕಾರಣ ಧುರಂಧರನಿದ್ದನಲ್ಲದೆ, ಯುದ್ಧ ವಿಶಾರದನೂ ಆಗಿದ್ದನು. ಪರಾಕ್ರಮದಲ್ಲಿ ಆತನನ್ನು ಸರಿಗಟ್ಟು ವವರು ಆಗ ಮಗಧದಂಥ ವಿಶಾಲವಾದ ಬಲಿಷ್ಠ ರಾಜ್ಯದಲ್ಲಿ ಸಹ ಯಾರೂ ಇದ್ದಿಲ್ಲ. ಉಳಿದ ಮಾತುಗಳಲ್ಲಿ ಧನಾನಂದನ ನಡತೆಯು ಹ್ಯಾಗಿದ್ದರೂ, ರಾಕ್ಷಸನ ವಿಷಯದಲ್ಲಿ ಆ ವಿಲಾಸಮಗ್ನ ಚಕ್ರವರ್ತಿಯ ನಡತೆಯು ಅಭಿನಂದನೀಯವಾಗಿತ್ತು. ಅರಸನು ತನ್ನ ಅಮಾತ್ಯಶ್ರೇಷ್ಠನ ಉಜ್ವಲಗುಣಗಳಿಗೂ, ಅಕೃತ್ರಿಮ ಸ್ವಾಮಿನಿಷ್ಠೆಗೂ ಲುಬ್ಧನಾದದ್ದರಿಂದ ಆತನ ಮಾತನ್ನು ಉಗುಳುಹಾಕಿ ದಾಟುತ್ತಿದ್ದಿಲ್ಲ. ಬೇಕಾದವರು ಬೇಕಾದಪ್ರಸಂಗದಲ್ಲಿ ಬೇಕಾದದ್ದು ಹೇಳಲಿ, ಕಡೆಗೆ ಅಮಾತ್ಯರಾಕ್ಷಸನ ಮಾತನ್ನೇ ಅರಸನು ತಪ್ಪದೆ ನಡಿಸುತ್ತಿದ್ದನು. ಹಲವು ಮಾಂಡಲೀಕ ರಾಜರು ಧನಾನಂದನ ಅಧಿಕಾರವನ್ನು ಬದಿಗೊತ್ತಿ ಸ್ವತಂತ್ರರಾಗಿ, ಪ್ರಸಂಗಒದಗಿದರೆ ಧನಾನಂದನ ರಾಜ್ಯವನ್ನು ಮುಕ್ಕಾ ಬಟ್ಟೆಯಾಗಮಾಡಬೇಕೆಂಬ ಮಹತ್ವಾಕಾಂಕ್ಷೆಯನ್ನು ತಾಳಿದ್ದರು; ಆದರೆ ರಾಕ್ಷಸನು ಮಗಧದ ಮುಖ್ಯಮಂತ್ರಿಯಾಗಿ ರುವವರೆಗೆ ಈ ವಿಚಾರದಲ್ಲಿ ಸೇರಿದರೆ, ತಾವು ಇದ್ದ ರಾಜ್ಯವನ್ನು ಕಳಕೊಂಡು ಭಿಕ್ಷೆಗೆ ಪಾತ್ರರಾಗಬಹುದೆಂಬದರ ಭಯವು ಅವರ ಎದೆಯನ್ನು ನಡಿಗಿಸುತ್ತಿತ್ತು! ರಾಕ್ಷಸನಂಥ ಗುಣಪೂರ್ಣನಾದ ಮಂತ್ರಿಯ ಸಹಾಯವಿಲ್ಲದಿದ್ದರೆ ಧನಾನಂದನ ರಾಜ್ಯವು ಎಂದೋ ಹಾಳಾಗಿ, ವಂಗದೇಶದ ರಾಜನಾಗಲಿ, ಕಲಿಂಗದೇಶದ ರಾಜನಾಗಲಿ ಮಗಧ ರಾಜ್ಯವನ್ನು ಆಳುತ್ತಿದ್ದರೆಂದು ಇನ್ನೊಮ್ಮೆ ಹೇಳಬಹುದು.

ಮಂತ್ರಿಮಂಡಲದಂತೆ ಮಗಧರಾಜನ ಸೈನ್ಯದ ವ್ಯವಸ್ಥೆಯಾದರೂ ಅತ್ಯುತ್ತಮವಾಗಿತ್ತು. ಭಾಗುರಾಯಣನೆಂಬ ಶೂರನಾದ ಸೇನಾಪತಿಯು ತನ್ನ ಪ್ರತಾಪದಿಂದ ಮಗಧರಾಜ್ಯವನ್ನು ಸ್ವ-ಪರಚಕ್ರಗಳ ಬಾಧೆಯಿಂದ ಮುಕ್ತವಾಗಮಾಡಿದ್ದನು. ಅಮಾತ್ಯರಾಕ್ಷಸರಂತೆ ಭಾಗು ರಾಯಣನಿಗೂ ಧನಾನಂದನು ಸೈನ್ಯದ ವ್ಯವಸ್ಥೆಯಲ್ಲಿ ಪೂರ್ಣ ಸ್ವಾತಂತ್ರ್ಯ ಕೊಟ್ಟಿದ್ದನೆಂದು ಹೇಳಬಹುದು. ಭಾಗುರಾಯಣನ ಯುದ್ಧಚಾತುರ್ಯಕ್ಕೆ, ಅಮಾತ್ಯರಾಕ್ಷಸನ ರಾಜಕಾರಣ

ಪಟುತ್ವದ, ಹಾಗು ಮಗಧರ ದೇಶಾಭಿಮಾನದ ಸಹಾಯವು ಇದ್ದದ್ದರಿಂದ, ಮಗಧರಾಜ್ಯವು ನಿಷ್ಕಂಟಕವಾಗಿ ದಿನದಿನಕ್ಕೆ ಅಭ್ಯುದಯವನ್ನು ಹೊಂದುತ್ತಿತ್ತು. ಇಂದು ವಂಗದೇಶದ ಅರಸನು ಸೋತನು, ನಾಳೆ ಕಳಿಂಗನು ತಲೆಯನ್ನು ಬಾಗಿಸುವನು, ನಿನ್ನೆ ಪರ್ವತೇಶ್ವರನು ಕಪ್ಪವನ್ನಿತ್ತನು, ಈ ಮೊದಲೇ ಗ್ರೀಕರು ಹಿಂದಕ್ಕೆ ಸರಿದರು ಎಂಬಿವೇ ಮೊದಲಾದ ಹರ್ಷೋಕ್ತಿಗಳು ಮಗಧ ದೇಶದ ಪ್ರಜೆಗಳ ಮುಖದಿಂದ ಹೊರಡುತ್ತಿದ್ದವು. ಅಂದಬಳಿಕ ಧನಾನಂದನು ನಿಶ್ಚಿಂತೆಯಿಂದ ವಿಲಾಸಮಗ್ನನಾಗಿ ಮಗಧ ರಾಜ್ಯವೆಂಬ ಭದ್ರವಾದ ಮಂದಿರದ ಕಳಸದಂತೆ ಅಲಂಕಾರ ಭೂತನಾಗಿ ಒಪ್ಪುತ್ತಿದ್ದದ್ದೇನಾಶ್ಚರ್ಯವು?

ಈ ಜಗತ್ತಿನಲ್ಲಿ ಯಾವದೂ ಸ್ಥಿರವಲ್ಲ, ಎಲ್ಲ ವಸ್ತುಗಳಿಗೂ, ಸಂಗತಿಗಳಿಗೂ ಉದಯದಂತೆ ಅಸ್ತವು ಇದ್ದೇ ಇರುತ್ತದೆ. ಅಂದಬಳಿಕ ನಂದರ ಈ ಕಸುವಿನ ಆಳಿಕೆಗಾದರೂ ಪರಿಸಮಾಪ್ತಿಯು ಒದಗದೆ ಹ್ಯಾಗಿದ್ದೀತು? ಅರಸೊತ್ತಿಗೆಯ ಅಂತಸ್ಥ ಮರ್ಮಸ್ಥಾನಗಳನ್ನು ಸದ್ದಿಲ್ಲದೆ ಭೇದಿಸುವಂಥ ಗೃಹಕಲಹದ ಬೀಜಾರೋಪಣವು ನಂದರಾಜವಂಶದಲ್ಲಿ ಈ ಮೊದಲೇ ಉತ್ಪನ್ನವಾಗಿತ್ತು. ಧನಾನಂದನಂಥ ವಿಲಾಸಿಯಾದ ಸಾರ್ವಭೌಮನಿಗೆ ಸುಂದರಿಯರಾದ ಹಲವರು ಹೆಂಡಿರಿದ್ದರೆಂದು ಬರೆಯುವ ಕಾರಣವಿಲ್ಲ. ಅವರಲ್ಲಿ ಮೌರ್ಯವಂಶದ ಕಿರಾತರಾಜನ ಮಗಳಾದ ಮುರಾದೇವಿಯೆಂಬವಳು ಅತ್ಯಂತ ಸುಂದರಿಯಾಗಿದ್ದಳು. ಭಾಗುರಾಯಣನು ಕಿರಾತರಾಜನನ್ನು ಗೆದ್ದು ಮುರಾದೇವಿಯನ್ನು ಹರಣಮಾಡಿಕೊಂಡು ಬಂದು ತನ್ನ ಒಡೆಯನಿಗೆ ಲಗ್ನಮಾಡಿದ್ದನು. ಆಕೆಯ ಸೌಂದರ್ಯಕ್ಕೆ ಧನಾನಂದನು ಮೋಹಿತನಾಗಿದ್ದನು. ಆತನು ಮುರೆಯನ್ನು ಅರಗಳಿಗೆಯಾದರೂ ಅಗಲುತ್ತಿದ್ದಿಲ್ಲ. ಇದರಿಂದ ಸುನಂದಾದೇವಿಯೆಂಬ ಪಟ್ಟದರಿಸಿಯೇ ಮೊದಲಾದ ರಾಜಪತ್ನಿಯರು ಮುರೆಯಲ್ಲಿ ಮಾತ್ಸರ್ಯವನ್ನು ತಾಳಿದರು. ಮುರೆಯು ದಾಸಿಯ ಪುತ್ರಿಯೆಂತಲೂ, ಆಕೆಯ ನಡತೆಯು ಶುದ್ಧವಾದದ್ದಲ್ಲೆಂತಲೂ ಅವರು ಅರಸನ ಕಿವಿಯನ್ನು ಊದಿದರು. ಧನಾನಂದನು ಚಂಚಲಸ್ವಭಾವದವನೆಂದು ಹಿಂದೆ ಹೇಳಿರುತ್ತದಷ್ಟೇ? ಅವನು ತನ್ನ ಸ್ವಭಾವಕ್ಕನುಸರಿಸಿ ಮುರೆಯನ್ನು ತಿರಸ್ಕರಿಸಿ ಆಕೆಯನ್ನು ಪ್ರತಿಬಂಧದಲ್ಲಿರಿಸಿದನು. ಮುರೆಯು ಸೆರೆಮನೆಯ ಕಷ್ಟಗಳನ್ನು ಭೋಗಿಸುತ್ತಿರುವಾಗ ಆಕೆಗೆ ಪುತ್ರೋತ್ಸವವಾಯಿತು. ಅದನ್ನು ಕೇಳಿ ಧನಾನಂದನಿಗೆ ಸಂತೋಷವಾಗದೆ ಆತನ ಸಿಟ್ಟು ತಲೆಗೇರಿ, ಆತನು ಆ ಶಿಶುವನ್ನು ಅರಣ್ಯಕ್ಕೆ ಒಯ್ದು ಕೊಲ್ಲಲು ಕೊಲೆಗಡಕರಿಗೆ ಅಪ್ಪಣೆ ಮಾಡಿದನು. ಈ ಅಪ್ಪಣೆಗೆ ಅಮಾತ್ಯರಾಕ್ಷಸನಂಥ ಉದಾರಮಂತ್ರಿಯ ಅನುಮತಿಯು ದೊರೆತದ್ದು ಕೇವಲ ದುರ್ದೈವವೆಂದು ಹೇಳಬಹುದು! ಶೂದ್ರ ದಾಸೀಪುತ್ರಿಯ ಪುತ್ರನು ಪಟ್ಟಕ್ಕೆ ಯೋಗ್ಯನಲ್ಲೆಂದು ಆ ಮಂತ್ರಿವರನು ಭಾವಿಸಿದ್ದನು. ಶುದ್ಧ ಕ್ಷತ್ರಿಯರಾದ ನಂದರಾಜರ ವಂಶದಲ್ಲಿ ಆತನ ನಿಷ್ಠೆ ಬಹಳ. ಆ ಶುದ್ಧಕ್ಷತ್ರಿಯವಂಶವನ್ನು ಕಾಯುವದಕ್ಕಾಗಿಯೇ ರಾಕ್ಷಸನು ಶೂದ್ರಶಿಶುವಿನ ಹತ್ಯಕ್ಕೆ ಮನಸ್ಸು ಮಾಡಿ, ತನ್ನ ರಾಕ್ಷಸನ ನಾಮಕ್ಕೆ ಸಾರ್ಥಕತೆಯನ್ನುಂಟು ಮಾಡಿ ಕೊಂಡನು. ಪಾಪ! ಭವಿತವ್ಯವನ್ನು ತಪ್ಪಿಸಲಿಕ್ಕೆ ರಾಕ್ಷಸನಾದರೂ ಹ್ಯಾಗೆ ಸಮರ್ಥನಾದಾನು?

ಮುರೆಯ ಪುತ್ರನ ಕೊಲೆಯಾದ ಕೆಲವು ದಿನಗಳಮೇಲೆ ಸುನಂದಾದೇವಿಯ ಹೊಟ್ಟೆಯಲ್ಲಿ ಸುಮಾಲ್ಯನೆಂಬ ಕುವರನು ಜನಿಸಿದನು. ಆತನು ಸದ್ಯಕ್ಕೆ ಹದಿನೈದು ವರ್ಷದವನಾಗಿದ್ದನು.

ಬಾಗುರಾಯಣನ ಸೇನಾಪತಿಯು ಆ ಯುವರಾಜನನ್ನು ಕೂಡಿಕೊಂಡು ದೂರದ ಒಬ್ಬ ಬಲಿಷ್ಠರಾಜನ ಸಂಗಡ ಯುದ್ಧಕ್ಕೆ ಹೋಗಿದ್ದನು. ಆಗ ಜಯಲಕ್ಷ್ಮಿಯು ವಾಡಿಕೆಯಂತೆ ಭಾಗುರಾಯಣನ ಕೊರಳಲ್ಲಿ ಮಾಲೆಹಾಕಲು, ಆ ಸೋತ ಅರಸನು ತನ್ನ ಮಗಳನ್ನು ಯುವರಾಜನಿಗೆ ಕೊಟ್ಟು ಲಗ್ನಮಾಡಿದನು. ಇದರಿಂದ ಭಾಗುರಾಯಣ ಸೇನಾಪತಿಗಷ್ಟೇ ಅಲ್ಲ, ಈಡೀ ನಂದರಾಜ್ಯದ ಪ್ರಜೆಗಳಿಗೆಲ್ಲ ಸಂತೋಷವಾಯಿತು. ಜಯಶಾಲಿಯಾಗಿ ಪತ್ನಿಯೊಡನೆ ಬರುವ ಯುವರಾಜನನ್ನು ಎದುರುಗೊಳ್ಳುವಾಗ ಉತ್ಸವಪ್ರಿಯರಾದ ಪ್ರಜೆಗಳು ಮಾಡಿದ ಸಮಾರಂಭವನ್ನು ಯಾರು ವರ್ಣಿಸುವರು?

ಒಂದುದಿನ ಮರೂಸಂಜೆಯಾಗಿದೆ, ಪಟ್ಟಣವೆಲ್ಲ ತೋರಣ–ಧ್ವಜ–ಪತಾಕಾದಿಗಳಿಂದ ಶೃಂಗರಿಸಲ್ಪಟ್ಟಿದೆ, ಬಗೆ ಬಗೆಯ ವಾದ್ಯಧ್ವನಿಗಳು ದಿಕ್ತಟಗಳನ್ನು ವ್ಯಾಪಿಸಿವೆ; ರಾಜ್ಯಮಾರ್ಗವು ಜನರಿಂದ ಸಂದಟಿತವಾದ್ದರಿಂದ ಇರುವೆ ನುಸಿಯಲಿಕ್ಕೂ ಬಾರದಾಗಿದೆ, ಜನರ ಮುಖದಲ್ಲಿ ಆನಂದದ ಕಳೆಯು ಉಕ್ಕುತ್ತಲಿದೆ, ಅಭಿನಂದಗನ ಪರಧ್ವನಿಗಳೂ, ಆನಂದೋದ್ಗಾರಗಳೂ ಗಜಬಜಿಸತೊಡಗಿವೆ. ಚತುರಂಗಬಲದ ಜಯಘೋಷವು ಜನರ ಕರ್ಣರಂಧ್ರವನ್ನು ಪ್ರವೇಶಿಸಿ ಸ್ವಾಭಿಮಾನಜನಕವಾದ ಆವೇಶವನ್ನು ವ್ಯಕ್ತಮಾಡಹತ್ತಿದೆ. ಇಂಥ ಉತ್ಸಾಹಪೂರ್ಣವಾದ ಪ್ರಸಂಗದಲ್ಲಿ ಯುವರಾಜನಾದ ಸುಮಾಲ್ಯನು ನವವಧುವಿನೊಡನೆ ಗಜಾರೂಢನಾಗಿ ಬರುವಾಗ, ಪ್ರಜೆಗಳ ಆನಂದಬಾಷ್ಪ ಪೂರ್ಣನೇತ್ರಗಳು ಸಾಫಲ್ಯವನ್ನು ಹೊಂದಿ, ಅವನ ಅಂತಃಕರುಣಗಳು ಉಕ್ಕಿಬಂದದ್ದನ್ನು ವರ್ಣಿಸುವದು ಸುಲಭವಲ್ಲ. ಅಂದು ಪಾಟಲೀಪುತ್ರವೇ ಆನಂದ ಸಾಗರದಲ್ಲಿ ಮುಳುಗಿತ್ತೆಂದು ಹೇಳಿದರೆ ಅತಿಶಯೋಕ್ತಿಯಾಗದು. ಯುವ ರಾಜನ ಮೆರವಣಿಗೆಯು ರಾಜಮಾರ್ಗವನ್ನು ಹಿಡಿದು ಅರಮನೆಯ ಕಡೆಗೆ ಸಾಗಿರುವಾಗ ಸುಂದರಿಯರು ಮಾಡಿದ ಪುಷ್ಪವೃಷ್ಟಿಯು ಚಿತ್ತಾಕರ್ಷಕವಾಗಿತ್ತು. ಯಾವ ಮಾತಿಗಾದರೂ ಅಪವಾದಗಳು ಇದ್ದೇ ಇರುತ್ತವಷ್ಟೇ. ಅಂಥ ಆನಂದಮಯ ಪ್ರಸಂಗದಲ್ಲಿಯೂ ಪಾಟಲೀಪುತ್ರ ದೊಳಗಿನದೊಂದು ಪ್ರಮುಖ ವ್ಯಕ್ತಿಯು, ಈ ಸಮಾರಂಭವನ್ನು ನೋಡಿ ದುಃಖ–ಸಂತಾಪ ಗಳಿಂದ ಕಣ್ಣೀರುದುರಿಸುತ್ತಿತ್ತೆಂದು ಹೇಳಿದರೆ, ವಾಚಕರು ಆಶ್ಚರ್ಯಪಡಬಹುದು; ಆದರೆ ಮುರಾದೇವಿಯನ್ನು ಸ್ಮರಣ ಮಾಡಿಕೊಂಡರೆ, ಅವರ ಆಶ್ಚರ್ಯಕ್ಕೆ ಇಂಬು ದೊರೆಯಲಿಕ್ಕಿಲ್ಲ.

ಸುಮಾಲ್ಯನು ಹುಟ್ಟಿದಾಗ ಪುತ್ರೋತ್ಸವದ ಆನಂದದಿಂದ ಧನಾನಂದನು ಸೆರೆಯವರನ್ನೆಲ್ಲ ಬಿಡುವಾಗ ಮುರಾದೇವಿಯನ್ನು ಬಂಧಮುಕ್ತಳನ್ನು ಮಾಡಿದ್ದನು. ಅವಳಿಗೆ ಇರುವದಕ್ಕೆ ಒಂದು ಸಾಧಾರಣತರದ ಅರಮನೆಯನ್ನು ಆತನು ಕೊಟ್ಟಿದ್ದನು. ಆಕೆಯ ಗೌರವದ ದಿನಚರ್ಯಕ್ಕೆ ಯಾವ ಬಗೆಯ ಕೊರತೆಯೂ ಬಾರದಂತೆ ವ್ಯವಸ್ಥೆಯಾಗಿತ್ತು, ಆದರೂ ಪತಿಯ ಕ್ಷೋಭ ದಿಂದಲೂ, ಪುತ್ರವಿಯೋಗದಿಂದಲೂ ನೊಂದುಕೊಂಡಿದ್ದ ಮುರೆಯು ಸುಖವನ್ನು ಇಚ್ಛಿಸದೆ, ಹ್ಯಾಗಾದರೂ ಕಾಲಹರಣಮಾಡುತ್ತಿದ್ದಳು. ಅವಳ ದೇಹವು ಕೃಶವಾಗಿತ್ತು, ಮುಖವು ಕಳೆಗುಂದಿತ್ತು, ಸೌಂದರ್ಯವನ್ನು ಮಾಲಿನ್ಯವು ಆವರಿಸಿತ್ತು, ಅವಳ ಮೈಮೇಲೆ ಅಲಂಕಾರಗಳ ಸುದ್ದಿಯಿದ್ದಿಲ್ಲ. ಸುಮಾಲ್ಯನ ಮೆರವಣಿಗೆಯು ಸಾಗಿರುವಾಗ ಮುರಾದೇವಿಯು ಒಂದು ಶುಭ್ರ

ವಸ್ತ್ರವನ್ನು ಉಟ್ಟಿದ್ದಳು, ತೀರ ಸಾಧಾರಣವಾದ ಕುಪ್ಪಸವನ್ನು ತೊಟ್ಟಿದ್ದಳು, ಅತ್ತತ್ತು ಅವಳ ಕಣ್ಣುಗಳು ಉಬ್ಬಿ ಕೆಂಪಾಗಿದ್ದವು, ಮುಖಕಮಲವು ಕಣ್ಣೀರುಗಳಿಂದ ತೊಯ್ದಿತ್ತು, ತಲೆಗೂದಲಗಳು ಬೆನ್ನಮೇಲೆ–ಹೆಗಲಮೇಲೆ–ವಕ್ಷಸ್ಥಳದಲ್ಲಿ ಅಸ್ತವ್ಯಸ್ತವಾಗಿ ಪಸರಿಸಿದ್ದವು; ದುಃಖವೇಗದಿಂದ ಆಕೆಯು ಹಲವು ಸಾರೆ ತಲೆಯನ್ನು ನೆಲಕ್ಕೆ ಅಪ್ಪಳಿಸಿ ಭೂಮಿಯಲ್ಲಿ ಉರುಳಾಡಿದ್ದರಿಂದ, ಆಕೆಯ ಮುಖಕ್ಕೂ, ಉಟ್ಟ ವಸ್ತ್ರಕ್ಕೂ ಧೂಳಿಹತ್ತಿತ್ತು.

ಇಂಥ ಶೋಚನೀಯ ಸ್ಥಿತಿಯಲ್ಲಿ ತನ್ನನ್ನು ಸಮಾಧಾನಗೊಳಿಸುತ್ತಿದ್ದ ತನ್ನ ದಾಸಿಯಾದ ವೃಂದಮಾಲೆಯನ್ನು ಕುರಿತು ಮುರೆಯು—ವೃಂದ ಮಾಲೇ, ಎಂಥ ಹುಚ್ಚಿಯು ನೀನು! ಈ ಜಗತ್ತಿನಲ್ಲಿ ನನ್ನ ಆಶೆಗೆ ಆಧಾರವಾಗಿ ಏನು ಉಳಿದದೆ ಹೇಳು? ಅಂದಬಳಿಕ ನಾನು ದುಃಖದಿಂದ ಕೊರಗಿ ಸತ್ತರೇನು, ನಕ್ಕುನಕ್ಕು ಉಬ್ಬಿ ನಿರ್ಲಜ್ಜಳಾಗಿ ಮೆರದರೇನು? ನಾನು ಭೂಮಿಯಲ್ಲಿ ಹುಟ್ಟಿ ವ್ಯರ್ಥವಾಗಲಿಲ್ಲವೇ? ತಟ್ಟನೆ ನನ್ನ ಪ್ರಾಣವು ಹಾರಿಹೋದರೆ ನೆಟ್ಟಗಾದೀತು. ನನ್ನ ಕೂಸು ಜೀವದಿಂದಿದ್ದರೆ, ಈ ಸವತಿಯ ಮಗನು ಯುವರಾಜನಾಗು ತ್ತಿದ್ದನೇ? ಎಲ್ಲ ರಾಣಿಯರಲ್ಲಿ ನನಗೇ ಮೊದಲು ಪುತ್ರೋತ್ಸವವಾಗಿದ್ದು, ಹೊಟ್ಟೇಯಕಿಚ್ಚಿನ ಜನರ ನೀಚತನಕ್ಕೆ ಗುರಿಯಾಗಿ ನಾನು ಪತಿಸಮಾಗಮಕ್ಕೂ, ಪುತ್ರೋತ್ಸವದ ಆನಂದಕ್ಕೂ ಎರವಾಗಬೇಕಾಯಿತು! ನನ್ನ ಬೆಲೆಯು ಈ ಜಗತ್ತಿನಲ್ಲಿ ಏನು ಉಳಿದಿದೆ? ವೃಂದಮಾಲೇ, ಹೀಗೆ ತೇಜೋಹೀನಳಾಗಿ ನಾನು ಬಾಳಲಾರೆನು, ದುಃಖವೇಗವನ್ನು ತಡೆಯಲಾರೆನು, ಸಂತಾಪದ ವೇಗವನ್ನು ಸಹಿಸಲಾರೆನು. ನನಗೆ ಇನ್ನೇನು ಆಗಬೇಕಾಗಿದೆ? ಯುವರಾಜನ ಉತ್ಸವದ ಪ್ರಸಂಗದಲ್ಲಿ ಹೀಗೆ ದುಃಖಿಸುತ್ತ ಕುಳಿತದ್ದು ಅರಸನಿಗೆ ತಿಳಿದರೆ, ನಾನು ಮತ್ತೆ ಸೆರೆಮನೆಯ ಕಷ್ಟಕ್ಕೆ ಗುರಿಯಾಗಬೇಕಾದೀತೆಂದು ನೀನು ನನ್ನನ್ನು ಬೆದರಿಸುತ್ತೀಯಾ! ವೃಂದಮಾಲೇ, ನೆನಪಿನಲ್ಲಿಡು, ಮಾತ್ಸರ್ಯದಿಂದ ನನ್ನ ವೈರಿಗಳು ನನ್ನನ್ನು ಶೂದ್ರದಾಸಿಯ ಪುತ್ರಿಯೆಂದು ತಿರಸ್ಕರಿಸುತ್ತಿದ್ದರೂ, ನಾನು ನಿಜವಾಗಿ ಕ್ಷತ್ರಿಯ ರಾಜಪುತ್ರಿಯ ಹೊಟ್ಟೆಯಲ್ಲಿ ಹುಟ್ಟಿರುತ್ತೇನೆ, ಮೌರ್ಯವಂಶಕ್ಕೆ ಸಂಬಂಧಪಟ್ಟಿದ್ದೇನೆ, ಕ್ಷತ್ರಿಯ ವೀರನಾದ ಕಿರಾತರಾಜನು ತನ್ನ ಜನಕನಾಗಿ ದ್ದಾನೆ; ಅಂದಬಳಿಕ ಇಂಥ ಕ್ಷುದ್ರ ಬೆದರಿಕೆಗೆ ನಾನು ಸೊಪ್ಪುಹಾಕುವೆನೆ? ಅರಸನು ಈಗಲೇ ನನ್ನ ತಲೆಹೊಡಿಸಲಿ! ನಾನಂತೂ ನೀಚರ ಅನ್ಯಾಯದ ಕೃತಿಯ ಸಂತಾಪದಿಂದ ಕಂಗೆಟ್ಟು, ಸವತಿಮತ್ಸರಪ್ರೇರಿತಳಾಗಿ ಯುವರಾಜನ ವೈಭವವನ್ನು ನೋಡಿ, ಮಾತ್ಸರ್ಯಪಡುವೆನು–ಕೈ ಹೊಸೆಯುವೆನು–ಲಟಕುಮುರಿಯುವೆನು–ದುಃಖನಿಶ್ವಾಸದಿಂದ ಸಂತಪ್ತವಾದ ಅಕ್ಷರಗಳಿಂದ–ಶಬ್ದಗಳಿಂದ–ವಾಕ್ಯಗಳಿಂದ ಶಪಿಸುವೆನು!!! ವೃಂದಮಾಲೇ, ನಿನಗೆ ಅರಸನ ಭಯವಿದ್ದರೆ–ಆತನ ಒಲಿಮೆಯನ್ನು ಸಂಪಾದಿಸುವ ಇಚ್ಛೆಯಿದ್ದರೆ ಇಲ್ಲಿಂದ ಹೊರಟು ಹೋಗು. ಬೇಕಾದರೆ ನನ್ನ ಮಾತ್ಸರ್ಯಾಗ್ನಿಯ ತಾಪದ ವರ್ಣನವನ್ನು ಬೇಕಾದಹಾಗೆ ಅರಸನ ಮುಂದೆ ಮಾಡು; ಆದರೆ ನನ್ನನ್ನು ಸಮಾಧಾನಗೊಳಿಸುವ ಗೊಡವಿಗೆ ಮಾತ್ರ ಬರಬೇಡ.

ಮುರೆಯ ಈ ಉಗ್ರತರವಾದ ಭಾಷಣದಿಂದ ವೃಂದಮಾಲೆಯು ಬೆದರಿಬಿದ್ದಳು. ಆಕೆಯ ಕಣ್ಣುಗಳು ಕತ್ತಲಗೂಡಿಸಿದವು, ಮೈಯು ನಡುಗಹತ್ತಿತು, ಬುದ್ಧಿಗೆ ಏನೂ ತೋಚದಾಯಿತು. ಪಾಪ! ವೃಂದಮಾಲೆಯು ಸರಳಸ್ವಭಾವದವಳು. ತನ್ನ ಒಡತಿಯ ಮೇಲೆ

ಆಕೆಯ ಪ್ರೇಮ ಬಹಳ. ಈ ದಿನ ಆಕೆಯು ಮುರೆಯಸಂಗಡ ಅತ್ತು ಅತ್ತು ಯಾತಕ್ಕೂ ಬಾರದಾಗಿದ್ದಳು. ತನ್ನ ಒಡತಿಯ ದುಃಖ ನೋಡಿ ಕನಿಕರ ಹುಟ್ಟಲು, ಆಕೆಯು ಎರಡು ಸಮಾಧಾನದ ಮಾತುಗಳನ್ನು ಹೇಳಿದಳು. ಅದರ ಪರಿಣಾಮವು ಈ ಮನೆಗೆ ಬರಲು, ವೃಂದ ಮಾಲೆಯು ತಲೆಬಾಗಿಸಿ ನೆಲವನ್ನು ನೋಡುತ್ತ ಸುಮ್ಮನೆ ಕುಳಿತುಬಿಟ್ಟಳು. ಅತ್ತ ಮುರೆಯಾದರೂ ಕಣ್ಣೀರು ಸುರಿಸುತ್ತ ನೆಲದ ಮೇಲೆ ಸುಮ್ಮನೆ ಬಿದ್ದುಕೊಂಡಿದ್ದಳು. ಈ ಸ್ಥಿತಿಯಲ್ಲಿ ಏನಿಲ್ಲೆಂದರೂ ಅರ್ಧತಾಸಾದರೂ ಕಳೆದುಹೋಗಿರಬಹುದು. ಅಷ್ಟರಲ್ಲಿ ಮುರೆಯು ಒಮ್ಮಿಂದೊಮ್ಮೆ ಎದ್ದು ಕುಳಿತು, ವೃಂದಮಾಲೆಯನ್ನು ಕುರಿತು–ವೃಂದಮಾಲೇ, ಹೀಗೆ ಅಳುತ್ತ ಬಿದ್ದುಕೊಂಡರೆ ಆಗುವದೇನು? ಇಗೋ ನೋಡು, ಅಳುವದನ್ನು ಬಿಟ್ಟುಬಿಟ್ಟೆನು. ಇನ್ನುಮೇಲೆ ಕಣ್ಣೀರ ಒಂದು ಹನಿಯನ್ನು ಉದುರಿಸಿದರೆ ಹೇಳು! ಮುರೆಯ ಕೆಚ್ಚೆದೆಯ ಗುರುತು ಇನ್ನಮೇಲೆ ನಿನಗಾಗಬಹುದು. ವೃಂದಮಾಲೇ, ನನ್ನ ವೈರಿಗಳ ಸೇಡುತೀರಿಸಿಕೊಳ್ಳುವ ಗೊಡವಿಗೆ ಹೋಗದೆ, ಇಲ್ಲಿಯವರೆಗೆ ಸುಮ್ಮನೆ ಕುಳಿತದ್ದೇ ನನ್ನ ಹುಚ್ಚತನವು. ಇನ್ನುಮೇಲೆ ನಾನು ಹಾಗೆ ಸುಮ್ಮನೆ ಕೂಡ್ರುವವಳಲ್ಲ. ಈದಿನ ಇಂಥ ಮಹೋತ್ಸವದಿಂದ ಯುವರಾಜನಾಗಿ ಮೆರೆದ ಸುಮಾಲ್ಯನಿಗೆ ರಾಜ್ಯೋಪಭೋಗದ ಸುಖವನ್ನು ದಕ್ಕಗೊಡಲಿಕ್ಕಿಲ್ಲೆಂದು ನಿಶ್ಚಯಿಸಿದೆನು. ನಾನು ನಿಜವಾಗಿಯೇ ರಾಜಪುತ್ರಿಯಿದ್ದರೆ, ಸುಮಾಲ್ಯನ ರಾಜ್ಯಕಾರಭಾರದಲ್ಲಿ ಹಲವು ವಿಘ್ನಗಳನ್ನುಂಟುಮಾಡುವೆನು, ಹೊತ್ತುಬಿದ್ದರೆ ಅವನನ್ನು ಕೊಲ್ಲಲಿಕ್ಕೆ ಸಹ ಹಿಂದೆ ಮುಂದೆ ನೋಡುವದಿಲ್ಲ. ವೃಂದಮಾಲೇ, ಕಿರಾತರಾಜ ಪುತ್ರಿಯಾದ ನಾನು, ನನ್ನ ಮೇಲಿನ ನಷ್ಟವಾಗಿದ್ದ ಆರ್ಯಪುತ್ರರ ಪ್ರೇಮವನ್ನು ಪುನಃ ಸಜೀವಗೊಳಿಸಿ, ಅವರ ಮನಸ್ಸನ್ನು ಎಳಕೊಂಡು, ಇನ್ನು ನಾಲ್ಕು ತಿಂಗಳಲ್ಲಿ ಅವರನ್ನು ನನ್ನ ಕೈಸೂತ್ರದಿಂದ ಕುಣಿಸದಿದ್ದರೆ, ನಿನ್ನೊಡನೆ ಹಿಮಾಲಯಕ್ಕೆ ಹೋಗಿ, ನಿನ್ನ ಸಮಕ್ಷಮ ಅಗ್ನಿಪ್ರವೇಶ ಮಾಡುವೆನು; ಆದರೆ ಇಂಥ ಪ್ರಸಂಗವು ಬರಲಿಕ್ಕಿಲ್ಲೆಂಬ ದನ್ನು ನೆನಪಿನಲ್ಲಿಡು. ಈಗಿರುವ ರಾಣಿಯರಲ್ಲಿ ಯಾರ ಮಗನಿಗೂ ರಾಜ್ಯವನ್ನು ಆಗಗೊಡದೆ, ಪತಿಯ ಸುಮ್ಮತಿಯಿಂದಲೇ ಕಿರಾತವಂಶದ ಒಬ್ಬ ಧನುರ್ಧರನನ್ನು ಕರಿಸಿಕೊಂಡು, ಆತನನ್ನು ಮಗಧದ ಸಿಂಹಾಸನದ ಮೇಲೆ ಕುಳ್ಳಿರಿಸುವೆನು. ಶೂದ್ರದಾಸಿಯ ಪುತ್ರಿಯೆಂಬ ಆರೋಪಕ್ಕೆ ನನ್ನನ್ನು ಗುರಿಮಾಡಿದ ರಾಣಿಯರನ್ನು ದಾಸಿಯರಿಗಿಂತಲೂ ಕಡೆಮಾಡಿದಿದ್ದರೆ, ನಾನು ಮುರೆಯೇ? ಇನ್ನು ಹೆಚ್ಚಿಗೆ ಮಾತಾಡುವದಿಲ್ಲ; ನಡೆ, ಉತ್ಸವವನ್ನು ನೋಡೋಣ, ಸರಳಸ್ವಭಾವದ ವೃಂದಮಾಲೆಯೇ, ಬಹಳ ಹೇಳುವದರಿಂದೇನು ಪ್ರಯೋಜನವು? ಮೊದಲು ಗೃಹ ಕಲಹದ ಬೀಜವನ್ನು ಬಿತ್ತಿರುವ ಆ ನೀಚರಿಗೆ ಅವರ ಬೀಜಕ್ಕೆ ಅಂಕುರವನ್ನು ಒಡಿಸಿ, ಆ ಅಂಕುರವನ್ನು ಗಿಡವಾಗಿ, ಗಿಡವನ್ನು ಮರವಾಗಿ ಮಾಡಿ, ಅದರ ಜಾಜ್ವಲ್ಯ ವಿಷರೂಪವಾದ ಫಲಗಳನ್ನು ಒದಗಿಸಿಕೊಟ್ಟು, ಅವನ್ನು ಅವರಿಂದ ತಿನಿಸದೆಬಿಡೆನು. ಇನ್ನು ಈ ಗೃಹಕಲಹಾಗ್ನಿ ಯಿಂದ ನಂದ ವಂಶವು ದಗ್ಧವಾಯಿತೆಂದು ತಿಳಿ!!

ಬುದ್ಧಭಿಕ್ಷು

ತನ್ನ ಆಶ್ರಮದಿಂದ ಹೊರಟ ಚಾಣಕ್ಯನು ಕೆಲವು ದಿನಗಳಮೇಲೆ ಪಾಟಲಿಪುತ್ರಕ್ಕೆ ಮುಟ್ಟಿದನು. ಅಲ್ಲಿ ಆತನ ಗುರುತಿನವರಿದ್ದಿಲ್ಲ–ಪರಿಚಯದವರಿದ್ದಿಲ್ಲ. ಮೊದಲು ಎಲ್ಲಿ ಇಳಕೊಳ್ಳಬೇಕೆಂಬದರ ನಿರ್ಧಾರವು ಆತನಿಗೆ ಆಗಲೊಲ್ಲದು. ತನ್ನ ಶಿಷ್ಯರ ಸಣ್ಣಸೈನ್ಯವು ನಂದರ ಪ್ರಚಂಡ ಸೈನ್ಯದ ಎದುರಿಗೆ ನಿಂತು ಯುದ್ಧ ಮಾಡಲು ಅಸಮರ್ಥವಾದದ್ದರಿಂದ, ನಂದರ ಮರ್ಮಸ್ಥಾನಗಳನ್ನು ಅರಿತು, ಯುಕ್ತಿಯಿಂದ ಅವರನ್ನು ನಾಶಗೊಳಿಸಬೇಕೆಂದು ಬಗೆದು, ನಂದರ ಹುಳುಕು ಆರಿಸುವದಕ್ಕಾಗಿ ಆ ಧೂರ್ತ ಬ್ರಾಹ್ಮಣನು ಪಾಟಲೀಪುತ್ರಕ್ಕೆ ಬಂದಿದ್ದನು. ಕೆಲಸ ನೋಡಿದರೆ ಗುಡ್ಡದಂಥಾದ್ದು, ಅನುಕೂಲಸ್ಥಿತಿಯ ಕಡೆಗೆ ಲಕ್ಷಕೊಟ್ಟರೆ, ಇಳಕೊಳ್ಳಲಿಕ್ಕೆ ಸ್ಥಳಕೂಡ ಗೊತ್ತಿನದಿದ್ದಿಲ್ಲ. ಈ ಸ್ಥಿತಿಯಲ್ಲಿ ಚಾಣಕ್ಯನು ಚಿಂತೆಗೊಳಗಾದದ್ದು ಆಶ್ಚರ್ಯವೇನು? ಆ ಬ್ರಾಹ್ಮಣನು ಎಲ್ಲಿ ಇಳಿಯಬೇಕೆಂಬದರ ನಿಶ್ಚಯವಿಲ್ಲದೆ ಸೋಣಾನದಿಯ ದಂಡೆಹಿಡಿದು ಸಾಗಿರಲು, ಒಬ್ಬ ಬೌದ್ಧ ಸನ್ಯಾಸಿಯು ಆತನಿಗೆ ಎದುರಾದನು. ಆಗ ಬೌದ್ಧಧರ್ಮವು ಮಗಧ ರಾಜ್ಯದಲ್ಲಿ ವಿಶೇಷವಾಗಿ ಹಬ್ಬುಗೊಂಡಿದ್ದಿಲ್ಲ. ಅಪರೂಪದ ಹಾಗೆ ಎಲ್ಲಿಯಾದರೂ ಒಬ್ಬ ಬ್ರಾಹ್ಮಣನು, ಅಲ್ಪಸ್ವಲ್ಪ ಜನ ಕ್ಷತ್ರಿಯರು, ಕ್ಷತ್ರಿಯರ ಮಾನದಂತೆ ವೈಶ್ಯರು, ಅವರಿಗಿಂತ ಸ್ವಲ್ಪ ಹೆಚ್ಚುಜನ ಶೂದ್ರರು ಬೌದ್ಧ ಧರ್ಮವನ್ನು ಸ್ವೀಕರಿಸುತ್ತಿದ್ದರು. ಅದರ ಈ ಬಾಲ್ಯಾವಸ್ಥೆ ಯಲ್ಲಿ ವೇದ ಧರ್ಮದ ಸಾಮಾನ್ಯ ಜನರು ಅದೊಂದು ಕ್ಷುಲ್ಲಕಧರ್ಮವೆಂದು ತಿರಸ್ಕರಿಸುತ್ತಿದ್ದರೂ, ಚಾಣಕ್ಯನಂಥ ಧರ್ಮಾಭಿಯಾನಿಗಳಾದ ಬ್ರಾಹ್ಮಣರು, ಬುದ್ಧಭಿಕ್ಷುಗಳನ್ನು ಕಂಡರೆ ಹುಬ್ಬುಗಂಟಿಕ್ಕಿ ಮೋರೆ ಕಿವುಚುತ್ತಿದ್ದರು. ಪಟ್ಟಣದಲ್ಲಿ ಕಾಲಿಟ್ಟಕೂಡಲೆ ಬುದ್ಧಭಿಕ್ಷುವು ತನ್ನ ಎದುರಿಗೆ ಬಂದದ್ದೊಂದು ದುರ್ಲಕ್ಷಣವೆಂದು ಚಾಣಕ್ಯನು ತಿಳಕೊಂಡು ಮೋರೆ ಕಿವುಚಿದನು. ಅದನ್ನು ನೋಡಿ ಬುದ್ಧಭಿಕ್ಷುವಿಗೆ ಸ್ವಲ್ಪ ನಗೆಬಂತು. ಚಾಣಕ್ಯನು ಪಾಟಲಿಪುತ್ರಕ್ಕೆ ಕೇವಲ ಹೊಸಬನೆಂಬದನ್ನು ಆ ವೃದ್ಧ ಭಿಕ್ಷುವು ಕೂಡಲೆ ತಿಳಿಕೊಂಡು, ಆತನ ಯೋಗ ಕ್ಷೇಮವನ್ನು ಕೇಳಿಕೊಳ್ಳುವ ಉದ್ದೇಶದಿಂದ 'ನಮೋಅರಿಹಂತಾಣಂ' ಎಂದು ನಮಸ್ಕಾರಮಾಡಿ ಹತ್ತರ ಬಂದನು. ಆಗಂತು ಚಾಣಕ್ಯನ ಮನಸ್ಸಿಗೆ ಬಹಳ ಅಸಹ್ಯವಾಯಿತು. ಅದನ್ನು ನೋಡಿ ಆ ವೃದ್ಧಭಿಕ್ಷುವು ಮತ್ತಿಷ್ಟು ನಕ್ಕು ಚಾಣಕ್ಯನನ್ನು ಕುರಿತು–ಬ್ರಾಹ್ಮಣಶ್ರೇಷ್ಠಾ, ನೀನು ನನ್ನನ್ನು ತಿರಸ್ಕರಿಸುತ್ತಿರುವೆಯೆಂಬದನ್ನು ನಾನು ಬಲ್ಲೆನು; ಆದರೆ ನನ್ನನ್ನು ತಿರಸ್ಕರಿಸುವರಿಗೇ ನೆರವಾಗಬೇಕೆಂದು ನಮಗೆ ಭಗವಾನ್ ಬುದ್ಧದೇವನ ಅಪ್ಪಣೆಯಿರುವದು. ನೀನು ಈ ಪಟ್ಟಣಕ್ಕೆ ಹೊಸದಾಗಿ ಬಂದಿರುತ್ತೀಯೆಂಬದು ನಿನ್ನ ಮುಖಚರ್ಯದಿಂದ ಗೊತ್ತಾಗುತ್ತದೆ; ಆದ್ದರಿಂದ ನೀನು ನನ್ನ ಸಂಗಡ ಬಂದರೆ, ನನ್ನ ವಿಹಾರದ ಬಳಿಯಲ್ಲಿರುವ ಕೈಲಾಸನಾಥನ ಗುಡಿಯಲ್ಲಿ ನಿನಗೆ ಯೋಗ್ಯ ವ್ಯವಸ್ಥೆ ಮಾಡಿಕೊಡುವೆನು. ಹೀಗೆ ಕರೆಯುವಲ್ಲಿ ನನ್ನ ಮನಸ್ಸಿನೊಳಗೆ ಯಾವ ಪಾಪವಾಸನೆಯೂ ಇರುವದಿಲ್ಲ.

ಬುದ್ಧಬಿಕ್ಷುವಿನ ಈ ಮಮತೆಯ ಮಾತುಗಳನ್ನು ಕೇಳಿ ಚಾಣಕ್ಯನು ಸ್ವಲ್ಪ ಶಾಂತನಾದನು. ಹ್ಯಾಗೂ ಇಳಿದುಕೊಳ್ಳುವದಕ್ಕೆ ಆತನಿಗೆ ಒಂದು ಸ್ಥಳವು ಬೇಕೇಬೇಕಾಗಿತ್ತು, ಅದನ್ನು ಭಿಕ್ಷುವು

ತಾನಾಗಿ ತೋರಿಸುವೆನೆಂದು ತಿಳಿದು, ಅಷ್ಟರಮಟ್ಟಿಗೆ ಆತನ ವಿಷಯದ ತಿರಸ್ಕಾರವನ್ನು ಮರೆತು ಆ ತೀಕ್ಷ್ಣ ಸ್ವಭಾವದ ಬ್ರಾಹ್ಮಣನು ಕೈಲಾಸನಾಥನ ಮಂದಿರಕ್ಕೆ ಹೋದನು. ಆ ಮಂದಿರವು ಭವ್ಯವಾದದ್ದಿದ್ದು, ಅದರ ಸುತ್ತಲು ಸುಂದರವಾದ ಉಪವನವಿತ್ತು, ಉಪವನದಲ್ಲಿ ಮುಖ್ಯ ದೇವಾಲಯದ ಸುತ್ತುಮುತ್ತು ಬೇರೆ ಸಣ್ಣಸಣ್ಣ ದೇವಾಲಯಗಳಿದ್ದವು. ಪ್ರತಿಒಂದು ದೇವಾಲಯದ ಎದುರಿಗೆ ಒಂದು ಪುಷ್ಕರಣಿಯೂ, ಆ ಪುಷ್ಕರಣಿಯ ನೆರೆಯಲ್ಲಿ ಬ್ರಾಹ್ಮಣರ ಅನುಷ್ಠಾನಯೋಗ್ಯವಾದ ಸ್ಥಳಗಳೂ ರಚಿಸಲ್ಪಟ್ಟಿದ್ದವು. ಈ ವ್ಯವಸ್ಥೆಯಿಂದ ಚಾಣಕ್ಯನು ಸಮಾಧಾನಪಟ್ಟು, ಪುಷ್ಕರಣಿಯಲ್ಲಿ ಸ್ನಾನಮಾಡಿ ನಿತ್ಯಕರ್ಮಗಳನ್ನು ಮುಗಿಸಿಕೊಂಡನು. ಅಷ್ಟರಲ್ಲಿ ಬುದ್ಧಭಿಕ್ಷುವಿನ ಒಬ್ಬ ಶಿಷ್ಯನು ಚಾಣಕ್ಯನ ಬಳಿಗೆ ಬಂದು – ಸ್ವಾಮಿ, ತಮಗೆ ಭೋಜನ ಸಾಮಗ್ರಿಗಳನ್ನು ಕಳಿಸಿಕೊಡಬೇಕೋ, ಹಣ್ಣು–ಹಂಪಲಗಳನ್ನು ಕಳಿಸಿಕೊಡಬೇಕೋ, ಕೇಳಿ ಬರಲಿಕ್ಕೆ ನಮ್ಮ ಗುರುಗಳು ಕಳಿಸಿದ್ದಾರೆಂದು ನುಡಿದನು. ಈಗಾಗಿದ್ದ ಸಹಾಯವೇ ಚಾಣಕ್ಯನಿಗೆ ಭಾರವಾಗಿ, ಅದಕ್ಕಾಗಿ ಆತನು ಪಶ್ಚಾತ್ತಾಪಪಡುತ್ತಿರಲು, ಈ ಮಾತುಗಳಿಂದ ಆತನಿಗೆ ಮತ್ತಿಷ್ಟು ಸಂಕೋಚವಾಯಿತು. ಚಾಣಕ್ಯನು ನಾನೇ ವಿಹಾರಕ್ಕೆ ಬರುತ್ತೇನೆಂದು ಹೇಳಿ ಭಿಕ್ಷುವಿದ್ದೆಡೆಗೆ ಹೋದನು. ಆತನನ್ನು ನೋಡಿ ಭಿಕ್ಷುವು ಎದ್ದುನಿಂತು ನಮಸ್ಕಾರ ಪೂರ್ವಕವಾಗಿ ಉಪಚರಿಸಿ, ಉಪಹಾರದ ವಿಷಯವಾಗಿ ಮತ್ತೆ ಪ್ರಶ್ನೆಮಾಡಿದನು. ಅದಕ್ಕೆ ಚಾಣಕ್ಯನು– ಭಿಕ್ಷೋ, ನೀನು ನನಗೆ ಧಾನ್ಯಾದಿಪದಾರ್ಥಗಳು ಸಿಗುವ ಸ್ಥಳವನ್ನು ತೋರಿಸಲಿಕ್ಕೆ ಯಾರನ್ನಾದರೂ ಸಂಗಡ ಕಳಿಸಿಕೊಡಿರಿ, ನಾನು ಪದಾರ್ಥಗಳನ್ನು ಕೊಂಡುಕೊಂಡು ಬಂದು ಊಟಮಾಡುವೆನು. ಕಾರಣವಿಲ್ಲದೆ ತಾವು ಶ್ರಮಪಡಬಾರದು. ಈಗಾಗಿರುವ ನಿಮ್ಮ ಉಪಕಾರ ವನ್ನೇ ನಾನು ತೀರಿಸುವಹಾಗಿಲ್ಲ, ನಿಮ್ಮ ಋಣವು ಎಂದೂ ತೀರದಂಥಾದ್ದು; ಯಾಕಂದರೆ ನಿಮ್ಮಂಥವರಿಗೆ ಪ್ರತ್ಯುಪಕಾರದ ಅವಶ್ಯಕತೆಯಿರುವದಿಲ್ಲ, ಪ್ರತ್ಯುಪಕಾರಕ್ಕೆ ಆಸ್ಪದವಿರುವವ ರಿಂದ ಉಪಕಾರಮಾಡಿಸಿಕೊಳ್ಳಲಿಕ್ಕೆ ಬಾಧೆಯಿಲ್ಲ.

ಚಾಣಕ್ಯನ ಈ ಮಾತುಗಳನ್ನು ಕೇಳಿ ಬುದ್ಧಭಿಕ್ಷುವು ಮುಗುಳು ನಗೆ ನಕ್ಕು–ಬ್ರಾಹ್ಮಣ ಶ್ರೇಷ್ಠನೇ, ನಿನ್ನ ಮಾತನ್ನು ನಾನು ಅಲ್ಲಗಳೆಯುವದಿಲ್ಲ; ಆದರೆ ಅನ್ನದಾನ ಮಾಡುವವರ ಕಡೆಗೆ ಬೆನ್ನುಮಾಡಬಾರದಲ್ಲವೆ? ನಾನೇನು ನಿನಗೆ ಮಾಡಿದ ಅಡಿಗೆಯನ್ನು ಬಡಿಸುವದಿಲ್ಲ, ಅತಿಥಿಗಳ ಸ್ವಾಗತವು ಶ್ರೇಷ್ಠವಾದ ಧರ್ಮವೆಂದು ಭಗವಾನ ಬುದ್ಧನು ನಮಗೆ ಉಪದೇಶಮಾಡಿದ್ದಾನೆ. ನೀನು ಹೊಸಬನು, ಇಂದೇ ಈ ಪಟ್ಟಣಕ್ಕೆ ಬಂದಿರುತ್ತೀ ಮಧ್ಯಾಹ್ನವಾಗಿದೆ. ಫಲಮೂಲಾದಿ ಗಳನ್ನು ಸ್ವೀಕರಿಸಿ, ಕ್ಷುದೆಯನ್ನು ಶಾಂತಗೊಳಿಸು. ನಾಳೆ ನಿನ್ನ ಮನಸ್ಸಿಗೆ ಸರಿದೋರಿದಂತೆ ಮಾಡಲಿಕ್ಕೆ ನನ್ನಿಂದ ಪ್ರತಿಬಂಧವಾಗಲಿಕ್ಕಿಲ್ಲ. ಈ ಊರಲ್ಲಿರುವವರೆಗೆ ನನ್ನಿಂದಾಗಬಹುದಾದ ಸಹಾಯವನ್ನು ನೀನು ಸಂಕೋಚಪಡದೆ ಮಾಡಿಸಿಕೊಳ್ಳಬೇಕೆಂದು ನಾನು ಪ್ರಾರ್ಥಿಸುವೆನು. ಭಗವಾನ ಬುದ್ಧನ ಧರ್ಮವನ್ನು ಸ್ವೀಕರಿಸಿದ್ದರಿಂದ ನಮ್ಮ ಗಣನೆಯು ಅಧಮವರ್ಗದಲ್ಲಿ ಆಗುವದೋ ಏನು?

ಭಿಕ್ಷುವಿನ ಈ ಮಾತುಗಳನ್ನು ಕೇಳಿ ಚಾಣಕ್ಯನು ಸುಮ್ಮನಾದನು. ಭಿಕ್ಷುವು ತಂದಿಟ್ಟ ಹಣ್ಣುಹಂಪಲಗಳಲ್ಲಿ ತನಗೆ ಬೇಕಾದವನ್ನು ತೆಗೆದುಕೊಂಡು ದೇವಾಲಯಕ್ಕೆ ಹೋಗಿ

ಫಲಾಹಾರಮಾಡಿ ವಿಶ್ರಮಿಸಿದನು. ಆತನ ದೇಹವು ವಿಶ್ರಮಿಸಿದರೂ ಮನಸ್ಸು ವಿಶ್ರಮಿಸಲಿಲ್ಲ, ಆತನು ಮನಸ್ಸಿನಲ್ಲಿ – ಕಾರ್ಯಾರ್ಥಿಯಾದ ನಾನು ಇವನು ಬೌದ್ಧಧರ್ಮದವನು, ಇವನು ಶೂದ್ರನು, ಇವರಿಂದ ಹ್ಯಾಗೆ ಸಹಾಯವನ್ನು ಪಡಿಯಬೇಕು, ಎಂದು ವಿಧಿ ನಿಷೇಧಗಳನ್ನು ಎಣಿಸುತ್ತ ಕೂಡ್ರುವದು ಹಿತಕರವಲ್ಲ, ನನ್ನ ಕಾರ್ಯಕ್ಕೆ ಸಹಾಯಮಾಡತಕ್ಕವರೆಲ್ಲರ ಸಹಾಯವನ್ನು ಸಂಪಾದಿಸಬೇಕು. ಪಟ್ಟಣದಲ್ಲಿ ಕಾಲಿಟ್ಟಕೂಡಲೇ ತಾನಾಗಿ ಸಹಾಯಮಾಡಲು ಸಿದ್ಧನಾಗಿ ನಿಂತಿರುವ ಬುದ್ಧಭಿಕ್ಷುವಿನ ಸ್ನೇಹವನ್ನು ಸಂಪಾದಿಸುವದು ಜಾಣತನವು. ಈ ಪಟ್ಟಣದೊಳಗಿನ ಜನರಲ್ಲಿ ನಾನು ಕೂಡಿ ವ್ಯವಹರಿಸಿದ ಹೊರತು ಕಾರ್ಯವಾಗದು. ಬುದ್ಧ ಭಿಕ್ಷುವಿನ ಮನಸಿನಲ್ಲಿ ತನ್ನ ಧರ್ಮದ ಪ್ರಸಾರವು ರಾಜಕುಲದಲ್ಲಿಯೂ ಆಗಬೇಕೆಂದು ಇರಬಹುದು; ಅಂದಬಳಿಕ ರಾಜಕುಲದ ಸ್ಥಿತಿಯು ಹ್ಯಾಗಿರುತ್ತದೆಂಬದನ್ನು ಆತನು ಅರಿತುಕೊಂಡಿರಲಿಕ್ಕೇಬೇಕು; ಕಾರಣ ಮೊದಲು ನಾನು ಭೇದೋಪಾಯವನ್ನು ಆರಂಭಿಸುವ ದಾದರೆ, ಬುದ್ಧಭಿಕ್ಷುವಿನ ಮುಖಾಂತರವೇ ಆರಂಭಿಸತಕ್ಕದ್ದು; ಮತ್ತು ನನ್ನ ಪ್ರತಿಜ್ಞೆಯು ಪೂರ್ಣವಾಗುವವರಿಗೆ ಕರ್ಮಕಾಂಡವನ್ನು ಸಂಕ್ಷೇಪಮಾಡಿ ಕ್ಷಾತ್ರಧರ್ಮವನ್ನು ಸ್ವೀಕರಿಸತಕ್ಕದ್ದು

ಈ ಮೇರೆಗೆ ಚಾಣಕ್ಯನು ಹಲವು ವಿಚಾರಗಳಲ್ಲಿ ಮಗ್ನನಾಗಿರಲು, ಹೊತ್ತು ಮುಣುಗಿತ್ತು, ದೇವಾಲಯದಲ್ಲಿ ಪೂಜಾದಿ ದೇವಕಾರ್ಯಗಳು ನಡೆಯಹತ್ತಿದವು. ಚಾಣಕ್ಯನು ಎದ್ದು, ಸಂಧ್ಯಾವಂದನವನ್ನು ಮಾಡಿ, ಬುದ್ಧಭಿಕ್ಷುವಿನೊಡನೆ ಹರಟೆಕೊಚ್ಚುವದಕ್ಕಾಗಿ ವಿಹಾರಕ್ಕೆ ಹೋದನು. ಭಿಕ್ಷುವು ಬ್ರಾಹ್ಮಣನನ್ನು ವಿನಯದಿಂದ ಸತ್ಕರಿಸಿದನು. ಆ ಮಾತು ಈ ಮಾತು ಹೊರಟು ಚಾಣಕ್ಯನು ರಾಜಕುಲದ ಸುದ್ದಿಯನ್ನು ತೆಗೆದನು. ಬ್ರಾಹ್ಮಣನು ತನಗೆ ಯೋಗ್ಯ ಸಂಭಾವನೆಯು ಹ್ಯಾಗಾದೀತೆಂಬ ಎಣಿಕೆಯಿಂದ ಅರಸನ ಸುದ್ದಿಯನ್ನು ಕೇಳುತ್ತಾನೆಂದು ತಿಳಿದು, ಭಿಕ್ಷುವು ಅದಕ್ಕನುಸರಿಸಿ ಸುದ್ದಿಯನ್ನು ಹೇಳಿದನು. ಇದಲ್ಲದೆ ಮಂತ್ರಿಮಂಡಲದೊಳಗಿನ ಎಷ್ಟೋ ಮಂತ್ರಿಗಳ ಸ್ನೇಹಿತರು ಗುಪ್ತರೀತಿಯಿಂದ ತನ್ನ ಶಿಷ್ಯರಾಗಿರುವದರಿಂದ ಅವರ ಮುಖಾಂತರ ನಿಮಗೆ ವಿಪುಲವಾದ ಸಂಭಾವನೆಯು ದೊರೆಯುವಂತೆ ಮಾಡುವೆನೆಂದು ಆ ಬುದ್ಧಸನ್ಯಾಸಿಯು ಹೇಳಿದನು. ತನ್ನ ಮರ್ಮಸ್ಥಾನವು ಹೊರಬೀಳಬಾರದೆಂದು ತಿಳಿದು, ಚಾಣಕ್ಯನು ಭಿಕ್ಷುವಿನ ಮಾತಿಗೆ ಒಡಂಬಟ್ಟು, ರಾತ್ರಿಯಾದದ್ದರಿಂದ ದೇವಾಲಯಕ್ಕೆ ಹೋಗುವದಕ್ಕಾಗಿ ಎದ್ದನು. ಆಗ ಭಿಕ್ಷುವು ಇಷ್ಟು ಅವಸರವೇಕೆ, ಕುಳಿತುಕೊಳ್ಳಿರಿ, ಎಂದು ಚಾಣಕ್ಯನನ್ನು ಕುಳ್ಳಿರಿಸಿಕೊಳ್ಳಲು, ಒಬ್ಬ ಸ್ತ್ರೀಯು ಭಿಕ್ಷುವಿನ ಬಳಿಗೆ ಬಂದು – ಭಗವಾನ ವಸುಭೂತಿಗೆ ಅಭಿನಂದನವು, ಎಂದು ನಮಸ್ಕರಿಸಿ ವಿನಯದಿಂದ ಕುಳಿತುಕೊಂಡಳು. ಆ ಸ್ತ್ರೀಯ ಹೆಸರು ವೃಂದಮಾಲೆಯು.

ನಮ್ಮ ಸರಳಮನಸ್ಸಿನ ವೃಂದಮಾಲೆಯನ್ನು ವಾಚಕರು ಗೊತ್ತುಹಿಡಿದಿರಬಹುದು. ಆದರೂ ಆಕೆಯು ಮುರಾದೇವಿಯ ದಾಸಿಯೆಂಬದನ್ನು ನಾವು ಅವರಿಗೆ ನೆನಪು ಮಾಡಿಕೊಡುತ್ತೇವೆ. ವೃಂದಮಾಲೆಯು ಬೌದ್ಧ ಧರ್ಮವನ್ನು ಸ್ವೀಕರಿಸಿದಳು. ಎಲ್ಲಿಯಾದರೂ ಅನರ್ಥಗಳು ಒದಗುವ ಪ್ರಸಂಗವಿದ್ದಲ್ಲಿ ನನಗೆ ತಿಳಿಸತಕ್ಕದ್ದೆಂದು ವಸುಭೂತಿಯ ವೃಂದಮಾಲೆಗೆ ಬೋಧಿಸಿದ್ದನು; ಅದರಿಂದ ತನ್ನ ಗುರುವಿನ ಬಳಿಗೆ ಬಂದು, ಚಾಣಕ್ಯನನ್ನು ಯಾವನೋ ಗುಪ್ತ ಶಿಷ್ಯನೆಂದು

ಭಾವಿಸಿ, ಸರಳತನದಿಂದ ತನ್ನ ಬಾಯಿ ಹರಿಬಿಟ್ಟಳು. ಆಕೆಯು, ಸುಮಾಲ್ಯನ ಮೆರವಣಿಗೆಯ ದಿವಸ ಮುರಾದೇವಿಯು ಕ್ರೋಧಸಂತಪ್ತಳಾಗಿ ಆಡಿದ ಮಾತುಗಳನ್ನು ಒಂದುಳಿಯದಂತೆ ಆಕೆಯು ತನ್ನ ಗುರುವಾದ ವಸುಭೂತಿಯ ಮುಂದೆ ಹೇಳಿಬಿಟ್ಟಳು. ಹೀಗೆ ಗೃಹಕಲಹವನ್ನು ಅಪರಿಚಿತನಾದ ಬ್ರಾಹ್ಮಣನ ಮುಂದೆ ಹೇಳುವದು ವಸುಭೂತಿಯ ಮನಸ್ಸಿಗೆ ಬರಲಿಲ್ಲ. ಆದರೂ ಆ ಭಿಡೆಯ ಸ್ವಭಾವದ ಭಿಕ್ಷುವು ವೃಂದಮಾಲೆಯನ್ನು ತಡೆಯಲಾರದೆ ಸುಮ್ಮನೆ ಇದ್ದನು. ಈ ಗೃಹಕಲಹವನ್ನು ಕೇಳಿ, ಚಾಣಕ್ಯನಿಗೆ ಬಹಳ ಸಮಾಧಾನವಾಯಿತು. ವೃಂದಮಾಲೆಯ ಮಾತು ಮುಗಿದ ಮೇಲೆ ವಸುಭೂತಿಯು–ವತ್ಸೇ ವೃಂದಮಾಲೇ, ತನ್ನ ಮಗನನ್ನು ಕೊಲ್ಲಿಸಿದ ರೊಚ್ಚಿನಿಂದ ಮುರಾದೇವಿಯು ಆಡಬಾರದ್ದನ್ನು ಆಡಿರಬಹುದು; ಆದರೆ ಅದನ್ನು ನೀನು ಹೀಗೆ ಮಂದಿಯಮುಂದೆ ಹೇಳತಕ್ಕದ್ದಲ್ಲ, ಆದದ್ದಾಯಿತು, ಇನ್ನು ಮೇಲೆ ಈ ಸುದ್ದಿಯನ್ನು ಯಾರಮುಂದೆಯೂ ಹೇಳಬೇಡ. ತನ್ನ ಮಗನ ಕೊಲೆಯಾಗಿ ಈವೊತ್ತಿಗೆ ಹದಿನೈದು–ಹದಿನಾರು ವರ್ಷಗಳಾಗಿದ್ದರೂ ಸುಮಾಲ್ಯನ ಉತ್ಕರ್ಷದ ಅವಲೋಕನದಿಂದ ಮುರಾದೇವಿಯ ದುಃಖವು ಪುಟಿದೆದ್ದದ್ದು ಆಶ್ಚರ್ಯವಲ್ಲ! ವೃಂದಮಾಲೆ, ನಾಳೆ ನೀನು ಮುರಾದೇವಿಯನ್ನು ನನ್ನ ಬಳಿಗೆ ಕರಕೊಂಡು ಬಾ, ಇಲ್ಲವೆ ನಾನು ನಿನಗೆ ಬೋಧಿಸಿದ ಭಗವಾನ ಬುದ್ಧನ ಉಪದೇಶ ವಚನಗಳನ್ನು ಆಕೆಗೆ ನೀನು ಬೋಧಿಸಿ, ಆಕೆಯನ್ನು ಸಮಾಧಾನಗೊಳಿಸು.

ಈ ಮೇರೆಗೆ ನುಡಿದು ವಸುಭೂತಿಯು ಚಾಣಕ್ಯನನ್ನು ಕುರಿತು–ಬ್ರಾಹ್ಮಣ ಶ್ರೇಷ್ಠನೇ, ರಾಜಗೃಹದಲ್ಲಿ ಹುಟ್ಟಿರುವ ಈ ಕಲಹವನ್ನು ವಿಚಾರಿಸಿದರೆ, ನಮ್ಮ ಗುರುವಾದ ಭಗವಾನ ಬೋಧಿಸತ್ವನು ನಮ್ಮ ''ಮಹಾಪರಿನಿ ಬ್ಬಾಣಸುತ''ದಲ್ಲಿ ಹೇಳಿದ ಭವಿಷ್ಯವು ನಿಜವಾಗುವ ಪ್ರಸಂಗವು ಒದಗುವದೋ ಏನೋ, ಎಂಬ ಸಂಶಯವು ಉತ್ಪನ್ನವಾಗುತ್ತದೆ. ನಮ್ಮ ಗುರುವಿನ ಭವಿಷ್ಯವಾಣಿಯು ನಿನಗೆ ಸತ್ಯವಾಗಿ ತೋರಲಿಕ್ಕಿಲ್ಲ; ಆದರೂ ಆ ಭವಿಷ್ಯವನ್ನು ಹೇಳುತ್ತೇನೆ ಕೇಳು. ಪಾಟಲಿಪುತ್ರದ ಮೇಲೆ ಅಗ್ನಿಪ್ರಳಯ, ಜಲಪ್ರಳಯ, ಗೃಹಕಲಹ ಎಂಬ ಮೂರು ಅರಿಷ್ಟಗಳು ಬರುವವೆಂದು ನಮ್ಮ ಗುರುವು ಹೇಳಿದ್ದಾನೆ. ಅವುಗಳಲ್ಲಿ ಈಗ ಗೃಹಕಲಹವೆಂಬ ಅರಿಷ್ಟವು ಒದಗಲಿಕ್ಕೆ ಹಣಿಕಿಹಾಕುತ್ತಿರಬಹುದೇನು? ಭಗವಾನ ತಥಾಗತ ಇಚ್ಛೆಗೆ ಬಂದಂತೆ ಆಗಲಿ, ಯಾರು ಮಾಡುವದೇನು, ಎಂದು ನುಡಿದು, ಒಮ್ಮೆ ಉಸುರ್ಗರೆದು ವಸುಭೂತಿಯು ಸುಮ್ಮನಾದನು. ಆದರೆ ಚಾಣಕ್ಯನು ಹಾಗೆ ಸುಮ್ಮನಿರದೆ ವಿಷಾದವನ್ನು ಪ್ರಕಟಿಸುತ್ತ–ಮುರಾದೇವಿಯು ಯಾರು? ಆಕೆಯ ಮಗನನ್ನು ಕೊಲ್ಲಿಸಿದ ಕಾರಣವೇನು? ಎಂಬಿವೇ ಮೊದಲಾದ ವೃತ್ತಾಂತಗಳನ್ನು ವಸುಭೂತಿಯ ಮುಖದಿಂದ ಕೇಳಿಕೊಂಡನು. ಬಳಿಕ ರಾತ್ರಿಯು ಬಹಳ ಆದದ್ದರಿಂದ ಚಾಣಕ್ಯನೂ, ವೃಂದಮಾಲೆಯೂ ವಸುಭೂತಿಯ ಅನುಮತಿಯನ್ನು ಪಡೆದು ತಮ್ಮ ತಮ್ಮ ಸ್ಥಳಗಳಿಗೆ ಹೋದರು.

ಚಾಣಕ್ಯನು ಶಿವಾಲಯಕ್ಕೆ ಹೋಗಿ ಹರಿಣಾಜಿನದ ಮೇಲೆ ಮಲಗಿಕೊಂಡನು; ಆದರೆ ಆತನಿಗೆ ಏನು ಮಾಡಿದರೂ ನಿದ್ರೆಬರಲೊಲ್ಲದು. ಮುರಾದೇವಿಯ ವೃತ್ತಾಂತವನ್ನು ಕೇಳಿ, ವಿಶೇಷವಾಗಿ ಆಕೆಯ ಮಗನ ಕೊಲೆಯಾಗಿ ಹದಿನಾರು – ಹದಿನೇಳು ವರ್ಷಗಳಾಗಿರ

ಬಹುದೆಂಬದನ್ನು ಕೇಳಿ, ಆತನಿಗೆ ಬಹಳ ಸಮಾಧಾನವಾಗಿತ್ತು. ಮುರಾದೇವಿಯನ್ನು ಪ್ರತ್ಯಕ್ಷವಾಗಿ ಕಂಡು, ಆಕೆಯ ದ್ವೇಷಾಗ್ನಿಗೆ ಉರುವಲಹಾಕಿ ಹೊತ್ತಿಸಿ, ಅದರಿಂದ ನಂದ ವಂಶವನ್ನೇ ಸುಟ್ಟು ಬಿಡಬಹುದೆಂದು ಆ ಬ್ರಾಹ್ಮಣನು ಕಲ್ಪಿಸಿದನು. ಆ ಕಲ್ಪನೆಯನ್ನು ಸಫಲವಾಗಿ ಮಾಡಲಿಕ್ಕೆ ಚಂದ್ರಗುಪ್ತನು ಅತ್ಯುತ್ತಮ ಸಾಧನವಾಗಿ ಆತನಿಗೆ ತೋರಿದನು; ಯಾಕಂದರೆ, ಮುರೆಯ ಮಗನ ವಯಸ್ಸೂ, ಚಂದ್ರಗುಪ್ತನ ವಯಸ್ಸೂ ಒಂದೇ ಆದದ್ದರಿಂದ ಚಂದ್ರಗುಪ್ತನೇ ಮುರೆಯ ಮಗನೆಂದು ಸಿದ್ಧಮಾಡಲಿಕ್ಕೆ ಚಾಣಕ್ಯನಿಗೆ ಬರುವಹಾಗಿತ್ತು. ಒಮ್ಮೆ ಹ್ಯಾಗಾದರೂ ಮಾಡಿ ಚಂದ್ರಗುಪ್ತನು ತನ್ನ ಮಗನೆಂಬ ನಂಬಿಗೆಯನ್ನು ಮುರೆಯಲ್ಲಿ ಹುಟ್ಟಿಸಿಬಿಟ್ಟರೆ, ಮುಂದಿನ ಕೆಲಸಗಳು ಬಹು ಸುಲಭವಾಗಿ ಆಗುವವೆಂದು ಆ ಧೂರ್ತ ಬ್ರಾಹ್ಮಣನು ತಿಳಕೊಂಡನು. ಹೀಗೆ ಒಂದಲ್ಲ ಎರಡಲ್ಲ ಹಲವು ವಿಚಾರಗಳನ್ನು ಮಾಡುತ್ತಿರುವಾಗಲೇ ಮೂಡಲು ಹರಿಯಿತು. ಚಾಣಕ್ಯನು ಎದ್ದು ಪ್ರಾತರ್ವಿಧಿಗಳನ್ನು ತೀರಿಸಿಕೊಂಡು, ನಿತ್ಯಕರ್ಮಗಳು ತೀರಿದ ಮೇಲೆ ಮಧ್ಯಾಹ್ನದ ಭೋಜನಾನಂತರ ವಸುಭೂತಿಯ ವಿಹಾರಕ್ಕೆ ಹೋದನು.

ಚಾಣಕ್ಯನು ಹೋದಾಗ ವಸುಭೂತಿಯು ಪತ್ರಬರೆಯುತ್ತಿದ್ದನು. ಆತನು ಚಾಣಕ್ಯನನ್ನು ಆದರದಿಂದ ಬರಮಾಡಿಕೊಳ್ಳಲು, ಚಾಣಕ್ಯನು ಮನಸ್ಸಿನಲ್ಲಿ ಏನೋ ವಿಚಾರಿಸುತ್ತ ಆಸನದ ಮೇಲೆ ಕುಳಿತುಕೊಂಡನು. ಆತನು ಮುರಾದೇವಿಯನ್ನು ಕಾಣುವ ಹವಣಿಕೆಯಲ್ಲಿದ್ದನು. ಆ ಕಾರ್ಯಕ್ಕೆ ವೃಂದಮಾಲೆಯ ಸಹಾಯವು ಅವಶ್ಯವಾಗಿತ್ತು. ವಸುಭೂತಿಯು ಪತ್ರಬರೆಯುವ ದಾದಮೇಲೆ ಸಿದ್ಧಾರ್ಥಕನೆಂಬ ಶಿಷ್ಯನನ್ನು ಕರೆದು, ಈ ಪತ್ರವನ್ನು ಗುಪ್ತರೀತಿಯಿಂದ ವೃಂದಮಾಲೆಗೆ ಮುಟ್ಟಿಸೆಂದು ಹೇಳಿ, ಅವನ ಕೈಯಲ್ಲಿ ಕೊಟ್ಟನು. ಅಷ್ಟರಲ್ಲಿ ತೀಕ್ಷ್ಣ ಬುದ್ಧಿಯ ಚಾಣಕ್ಯನು ಮನಸ್ಸಿನಲ್ಲಿ ಏನೋಯೋಚಿಸಿ ವಸುಭೂತಿಯನ್ನು ಕುರಿತು–ಭಿಕ್ಷುಶ್ರೇಷ್ಠನೇ, ನಾನು ತೀರಾಹೊಸಬನು. ಇನ್ನೂ ಈ ಪಟ್ಟಣವನ್ನು ನೋಡಿಲ್ಲ. ನಿನ್ನ ಅಪ್ಪಣೆಯಾದರೆ, ನಾನೂ ಈ ಸಿದ್ಧಾರ್ಥಕನ ಸಂಗಡ ಹೋಗುವೆನು; ಅನಾಯಾಸವಾಗಿ ಪಟ್ಟಣವನ್ನು ನೋಡಿದ ಹಾಗೆ ಆಗುತ್ತದೆ, ಅನ್ನಲು ವಸುಭೂತಿಯು ಕ್ಷಣ ಮಾತ್ರ ಯೋಚಿಸಿ–ಬ್ರಾಹ್ಮಣಶ್ರೇಷ್ಠಾ, ಹೋಗು, ಹೋಗಲಿಕ್ಕೇನು ಪ್ರತಿ ಬಂಧವಿಲ್ಲ; ಆದರೆ ಈತನು ಒಂದು ಗುಪ್ತಕಾರ್ಯದ ಸಲುವಾಗಿ ಹೋಗುವನಾದ್ದರಿಂದ ನೀನು ಸಂಗಡ ಇದ್ದರೆ ತೊಂದರೆಯಾದೀತು. ಎಂದು ಸಂಕೋಚಪಡಹತ್ತಿದನು. ಆಗ ಚಾಣಕ್ಯನು–ನನ್ನಿಂದ ನಿಮ್ಮ ಕಾರ್ಯಕ್ಕೆ ತೊಂದರೆಯೆ? ಸರ್ವಥಾ ಆಗಲಾರದು. ಈ ಪಟ್ಟಣಕ್ಕೆ ಬಂದಕೂಡಲೆ ನಿಮ್ಮಿಂದ ನನಗೆ ಪ್ರೇಮಪೂರ್ವಕವಾದ ಸಹಾಯವು ದೊರೆತಿರಲು, ನಿಮಗೆ ಪ್ರತಿಕೂಲವಾಗಿ ನಾನು ವರ್ತಿಸಬಹುದೋ? ಒಂದು ಪಕ್ಷದಲ್ಲಿ ನನ್ನಿಂದ ಆದರೆ ನಿಮ್ಮ ಕಾರ್ಯಕ್ಕೆ ಸಹಾಯವೇ ಆದೀತು.

ಈ ಮೇರೆಗೆ ಚಾಣಕ್ಯನು ಆತುರದಿಂದ ಆಡಿದ ಮಾತುಗಳನ್ನು ಕೇಳಿ ವಸುಭೂತಿಯ ಮನಸ್ಸಿನ ಸಂಶಯವು ದೂರಾಯಿತು. ಸರಳಮನಸ್ಸಿನ ಆ ಬುದ್ಧ ಭಿಕ್ಷುವು, ಚಾಣಕ್ಯನನ್ನು ಸಂಗಡ ಕರಕೊಂಡು ಹೋಗೆಂದು ಸಿದ್ಧಾರ್ಥಕನಿಗೆ ಹೇಳಿದನು. ಸಿದ್ಧಾರ್ಥಕನು ಒಳ್ಳೇ ತರುಣನಿದ್ದನು. ಅವನು ಯಾವದೋ ಒಂದು ಕಾರಣದಿಂದ ರಾಜದಂಡಕ್ಕೆ ಗುರಿಯಾಗಿ ಕೆಟ್ಟ

ಹಾದಿಯನ್ನು ಹಿಡಿಯುತ್ತಿರಲು, ವಸಭೂತಿಯು ಅವನಿಗೆ ಬೌದ್ಧ ಧರ್ಮದ ದೀಕ್ಷೆಯನ್ನು ಕೊಟ್ಟು ಸನ್ಮಾರ್ಗಕ್ಕೆ ಹಚ್ಚಿದ್ದನು. ಸಿದ್ಧಾರ್ಥಕನನ್ನು ನೋಡಿದ ಕೂಡಲೇ, ಇವನು ತನ್ನ ಕಾರ್ಯಕ್ಕೆ ಸಹಾಯ ಮಾಡಬಹುದೆಂದು ಧೂರ್ತನಾದ ಚಾಣಕ್ಯನು ತರ್ಕಿಸಿ, ಅವನ ಮನಸ್ಸನ್ನು ಒಲಿಸಿಕೊಳ್ಳುವ ಹವಣಿಕೆಯಲ್ಲಿದ್ದನು. ಹಾದಿಯಲ್ಲಿ ಹೋಗ ಹೋಗುತ್ತ ಹತ್ತಿದ ಹಲವು ಸ್ಥಳಗಳನ್ನೂ, ಮಂದಿರಗಳನ್ನೂ, ದೇವಾಲಯಗಳನ್ನೂ, ಉಪವನಗಳನ್ನೂ, ಧನಾಢ್ಯ ವ್ಯಾಪಾರಸ್ಥರ ಅಂಗಡಿಗಳನ್ನೂ, ಸಿದ್ಧಾರ್ಥಕನು ಚಾಣಕ್ಯನಿಗೆ ತೋರಿಸಿ, ಅವುಗಳನ್ನೂ ಸಂಕ್ಷಿಪ್ತವಾಗಿ ವರ್ಣಿಸಿದನು. ಹೀಗೆ ಅವರು ಹೋಗುತ್ತಿರಲು, ಒಂದು ಜಲಮಂದಿರದ ಬಳಿಯಲ್ಲಿ ಧನಾನಂದರಾಜನ ಹೆಸರು ಹೊರಟಿತು. ಕೂಡಲೇ ಸಿದ್ಧಾರ್ಥಕನ ಪಿತ್ತವು ತಲೆಗೇರಿ ಅವನು ಅರಸನನ್ನು ಮನಬಂದಂತೆ ನಿಂದಿಸತೊಡಗಿದನು. ಚಾಣಕ್ಯನು ಈ ಸಂಧಿಯನ್ನು ಸಾಧಿಸಿ, ಸಿದ್ಧಾರ್ಥಕನಿಗೆ ಉತ್ತೇಜನ ಕೊಡುತ್ತ ರಾಜಕಾರಣಕ್ಕೆ ಸಂಬಂಧಿಸಿದ ಎಷ್ಟೋ ಸಂಗತಿಗಳನ್ನು ತಿಳಕೊಂಡದ್ದಲ್ಲದೆ, ಸಿದ್ಧಾರ್ಥನ ಮನಸ್ಸನ್ನು ತನ್ನ ಕಡೆಗೆ ಎಳಕೊಂಡನು. ಸಿದ್ಧಾರ್ಥಕನು ಚಾಣಕ್ಯನ ಮಾತು ಮೀರಲಾರದೆ ಅವನೊಡನೆ ಮುರಾದೇವಿಯ ಮಂದಿರಕ್ಕೆ ಹೋಗಿ, ಸಂಕೇತದ ಸ್ಥಳದಲ್ಲಿ ನಿಂತುಕೊಳ್ಳಲು, ಸ್ವಲ್ಪ ವೇಳೆಯಲ್ಲಿ ವೃಂದಮಾಲೆಯು ಅಲ್ಲಿಗೆ ಬಂದಳು. ಆಕೆಯು ಚಾಣಕ್ಯನನ್ನು ನೋಡಿ, ಈತನು ತನ್ನ ಗುರುವಿನ ಸದ್ಬೋಧ ಶ್ರವಣದಿಂದ ಶಿಷ್ಯನಾಗಿರಬಹುದೆಂದು ಭಾವಿಸಿ ಸಂತೋಷಬಟ್ಟಳು. ಸಿದ್ಧಾರ್ಥಕನು ವೃಂದಮಾಲೆಗೆ ಪತ್ರವನ್ನು ಕೊಟ್ಟು ಮನೆಯ ಹಾದಿಯನ್ನು ಹಿಡಿಯಲು, ಮನಸ್ಸಿಲ್ಲದಿದ್ದರೂ ಚಾಣಕ್ಯನು ಅವನನ್ನು ಹಿಂಬಾಲಿಸಬೇಕಾಯಿತು.

ಸಿದ್ಧಾರ್ಥಕನ ಮನಸ್ಸನ್ನು ಎಳಕೊಂಡಂತೆ ವೃಂದಮಾಲೆಯ ಮನಸ್ಸನ್ನೂ ಎಳಕೊಳ್ಳಬೇಕೆಂದು ಚಾಣಕ್ಯನು ಯೋಚಿಸಿದ್ದನು. ವೃಂದಮಾಲೆಯು ಮುರಾದೇವಿಯ ಜೀವದ ಗೆಳತಿಯಾದ್ದರಿಂದ ಅವಳಿಂದ ವಿಶೇಷ ತರದ ಸಹಾಯವು ಒದಗಬಹುದೆಂದು ಆ ತಂತ್ರಗಾರನು ತರ್ಕಿಸಿದ್ದನು. ಪಟ್ಟಣವನ್ನು ನೋಡಲಿಕ್ಕೆಂದು ಸಿದ್ಧಾರ್ಥಕನ ಸಂಗಡ ಬಂದವನು, ವೃಂದಮಾಲೆಯ ಸಲುವಾಗಿ ಹಿಂದೆ ನಿಂತುಕೊಳ್ಳುವದಾದರೂ ಹ್ಯಾಗೆ? ಆತನು ಸಿದ್ಧಾರ್ಥಕನನ್ನು ಮೋಸಗೊಳಿಸಿ ಹಿಂದೆ ಉಳಿಯುವ ಹಂಚಿಕೆಯನ್ನು ಹುಡುಕುತ್ತಿದ್ದನು. ಅಷ್ಟರಲ್ಲಿ ಒಂದು ಚಂಡಿಯ ದೇವಸ್ಥಾನವು ಬಂದಿತು. ಆಗ ಚಾಣಕ್ಯನು ಸಿದ್ಧಾರ್ಥಕನಿಗೆ–ಸಿದ್ಧಾರ್ಥಕಾ, ಇದು ಯಾವ ದೇವರ ಗುಡಿಯೆಂದು ಕೇಳಲು, ಹೊಸದಾಗಿ ಬೌದ್ಧ ಧರ್ಮವನ್ನು ಸ್ವೀಕರಿಸಿದ ಆ ತರುಣನು ತಿರಸ್ಕಾರದಿಂದ– ಬ್ರಾಹ್ಮಣಶ್ರೇಷ್ಠಾ, ಆ ದೇವರ ಹೆಸರನ್ನು ನಾನು ಹೇಳಲಾರೆನು. ಅದನ್ನು ವಾಮ ಮಾರ್ಗಿಗಳಾದ ಶಾಕ್ತರು ಚಂಡಿಯೆಂದು ಕರೆಯುವರು. ಪ್ರತಿಮಂಗಳವಾರ ಜನರು ಚಂಡಿಯ ಮುಂದೆ ಅಸಂಖ್ಯ ಕುರಿ – ಕೋಳಿಗಳನ್ನು ಬಲಿ ಕೊಡುವದನ್ನು ನೆನಿಸಿದರೆ, ದೇವಿಯ ದರ್ಶನವಂತು ಇರಲಿ, ಗುಡಿಯ ದರ್ಶನವು ಕೂಡ ನನಗೆ ಬೇಡಾಗಿದೆ, ಎಂದು ಹೇಳಿ ಒತ್ತರದಿಂದ ಮುಂದಕ್ಕೆ ಸಾಗಹತ್ತಿದನು. ಆಗ ಚಾಣಕ್ಯನು – ಸಿದ್ಧಾರ್ಥಕಾ, ಬಲಿಯ ನೆವದಿಂದ ಪ್ರಾಣಿಗಳ ಸಂಹಾರ ಮಾಡುವದು ಅಯೋಗ್ಯವೆನಿಸಬಹುದು; ಆದರೆ ಚಂಡಿಕೇಶ್ವರಿಯ ಆರಾಧನಕ್ಕೆ ಆಂತಕವಿಲ್ಲ,

ನಾನು ಈಗ ದೇವಿಯ ದರ್ಶನ ಮಾಡಿಕೊಂಡು ಬರುತ್ತೇನೆ. ಇಲ್ಲಿಯೇ ಇರು, ಎಂದು ಹೇಳಿದವನೇ, ಗುಡಿಯನ್ನು ಹೊಕ್ಕನು; ಸಿದ್ಧಾರ್ಥಕನ ಒಪ್ಪಿಗೆಯ ಹಾದಿಯನ್ನು ಆತನು ಎಷ್ಟು ಮಾತ್ರವೂ ನೋಡಲಿಲ್ಲ. ಇತ್ತ ಸಿದ್ಧಾರ್ಥಕನು ಚಾಣಕ್ಯನ ಹಾದಿಯನ್ನು ನೋಡುತ್ತ ಹೊರಗೆ ನಿಂತುಕೊಳ್ಳಬೇಕಾಯಿತು.

ಸಿದ್ಧಾರ್ಥಕನು ಗುಡಿಯೊಳಗೆ ಎಂದಿಗೂ ಬರಲಾರನೆಂದು ಚಾಣಕ್ಯನು ನಿರ್ಧರಿಸಿದ್ದನು. ಚಾಣಕ್ಯನ ಈ ನಿರ್ಧಾರವು ವ್ಯರ್ಥವಾಗಿದ್ದಿಲ್ಲ. ಸಿದ್ಧಾರ್ಥಕನು ತಿರಸ್ಕಾರದಿಂದ ಒಳಗೆ ಹೋಗಲಾರದೆ ಹೊರಗೇ ನಿಂತುಕೊಂಡು, ಚಾಣಕ್ಯನ ಹಾದಿಯನ್ನು ನೋಡಿ ನೋಡಿ ಬೇಸತ್ತನು. ಆತನು ನಾಲ್ಕಾರುಸಾರೆ ಗುಡಿಯನ್ನು ಸುತ್ತವರಿದು ಬಂದು ದಣಿದನು; ಒಳಗೆ ಹೋಗುವವರಿಗೆ—''ದಯಮಾಡಿ ನಮ್ಮ ಚಾಣಕ್ಯನನ್ನು ಬೇಗನೆ ಕಳಿಸಿಕೊಡಿರೆ''ಂದು ಹೇಳಿ ಹೇಳಿ ನಾಚಿದನು. ಚಾಣಕ್ಯನು ಹೊರಗೆ ಬರಲಿಕ್ಕೆ ಹೋಗಿದ್ದರೆ ಬಂದಾನು, ಆತನು ದೇವಿಯ ದರ್ಶನಕ್ಕಾಗಿ ಸಹ ಹೋಗಿರದೆ, ಸಿದ್ಧಾರ್ಥಕನ ಕೈಯಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ಹೋಗಿದ್ದನು. ಅಂದಬಳಿಕ ಆತನು ಹೊರಗೆ ಯಾಕೆ ಬರುತ್ತಾನೆ? ಕೈಲಾಸನಾಥನ ಗುಡಿಯಲ್ಲಿದ್ದಂತೆ ಕಾಲಿಕಾಮಾತೆಯ ಗುಡಿಯಲ್ಲಿಯೂ ಅನುಷ್ಠಾನದ ಯೋಗ್ಯ ಸ್ಥಳಗಳೂ, ಅನಕೂಲತೆಗಳೂ ಇದ್ದದ್ದರಿಂದ ಸಂಧ್ಯಾದಿಕರ್ಮಗಳನ್ನು ಅಲ್ಲಿಯೇ ತೀರಿಸಿಕೊಂಡು ಹೊತ್ತು ಮುಣುಗಿದ ಬಳಿಕ ಹೊರಬೀಳಬೇಕೆಂದು ಯೋಚಿಸಿ, ಆ ಬ್ರಾಹ್ಮಣನು ಗುಡಿಯೊಳಗೆ ಒತ್ತಟ್ಟಿಗೆ ಕುಳಿತುಬಿಟ್ಟನು. ಇತ್ತ ಸಿದ್ಧಾರ್ಥಕನು ಹಾದಿಯನ್ನು ನೋಡಿ ನೋಡಿ ಬೇಸತ್ತು ''ಪಾಪ ಬ್ರಾಹ್ಮಣರು ಯಾವ ಬಾಗಿಲಿನಿಂದ ಹೊರಬಿದ್ದು ಎತ್ತ ತಪ್ಪಿಸಿಕೊಂಡು ಹೋದನೋ'' ಎಂದು ಮಿಡುಕುತ್ತ ತನ್ನ ಗುರುವಿನ ವಿಹಾರದ ಹಾದಿಯನ್ನು ಹಿಡಿದನು.

ಚಾಣಕ್ಯನು ಸಂಧ್ಯಾದಿ ಕರ್ಮಗಳನ್ನು ಸಮಾಧಾನದಿಂದ ತೀರಿಸಿಕೊಂಡು ಸುಮಾರು ತಾಸು ರಾತ್ರಿಯಾಗಿರಲು, ಆತನು ಕಾಳಿಯ ಗುಡಿಯಿಂದ ಹೊರಬಿದ್ದನು. ಸಿದ್ಧಾರ್ಥಕನು ಈ ಮೊದಲೇ ಹೊರಟು ಹೋಗಿರುವನೆಂಬ ನಿಶ್ಚಯದಿಂದ ಅವನು ನಿರಾತಂಕವಾಗಿ ರಾಜ ಮಾರ್ಗವನ್ನು ಹಿಡಿದು ಸಾಗಿದನು. ವೃಂದಮಾಲೆಯು ಈ ದಿನ ಸಂಜೆಗೆ ವಸುಭೂತಿಯ ದರ್ಶನಕ್ಕೆ ಬಂದೇಬರುವಳೆಂದು ಆ ಧೂರ್ತ ಬ್ರಾಹ್ಮಣನು ತರ್ಕಿಸಿ, ಅವಳು ಬರುವ ಹಾದಿಯನ್ನು ಹಿಡಿದು ಆಕೆಯ ಎದುರಿಗೆ ಸಾಗಿದನು. ಸ್ವಲ್ಪ ಹೊತ್ತಿನಲ್ಲಿಯೇ ವೃಂದಮಾಲೆಯು ದೂರ ಬರುವದು ಅವನ ಕಣ್ಣಿಗೆ ಬಿತ್ತು, ಆಗ ಚಾಣಕ್ಯನು ಹಾದಿಯನ್ನು ತಪ್ಪಿಸಿಕೊಂಡವನಂತೆ ಗಾಬರಿಯಾಗಿ ಇತ್ತ ಅತ್ತ ನೋಡುತ್ತ ಆ ಬೀದಿಯ ಕಡೆಗೊಮ್ಮೆ – ಈ ಬೀದಿಯ ಕಡೆಗೊಮ್ಮೆ ಹೊರಳುತ್ತ ಬರುತ್ತಿದ್ದನು. ವೃಂದಮಾಲೆಯು ಅವನ ಗುರುತು ಹಿಡಿದು ಆತುರದಿಂದ – ಬ್ರಾಹ್ಮಣ ಶ್ರೇಷ್ಠಾ, ಇದೇನು? ಎತ್ತ ಹೊರಟೆ? ಹಾದಿಯನ್ನು ತಪ್ಪಿರುವೆಯೋ ಏನು? ಎಂದು ಕೇಳಿದಳು. ಆಗ ಚಾಣಕ್ಯನು ಎಚ್ಚತ್ತವನಂತೆ ನಟಿಸಿ, ವೃಂದಮಾಲೆಯ ಬಳಿಗೆ ಬಂದು – ವೃಂದಮಾಲೆ, ನೀನು ಒಳ್ಳೆಯ ಹೊತ್ತಿಗೆ ಭೆಟ್ಟಿಯಾದೆ. ಇಲ್ಲದಿದ್ದರೆ ನಾನು ಬೆಳತನಕ ಹುಚ್ಚನ ಹಾಗೆ ತಿರುಗುತ್ತಿದ್ದೆನು. ನಾನು ಕಾಳಿಯ ದರ್ಶನಕ್ಕೆಂದು ಗುಡಿಯೊಳಗೆ ಹೋದವನು, ತಿರುಗಿ ಬರುವಾಗ ಬೇರೆ ಬಾಗಿಲಿನಿಂದ ಹೊರಬಿದ್ದು ಹಾದಿಯನ್ನು ತಪ್ಪಿದೆನು. ಸಿದ್ಧಾರ್ಥಕನ ಭೆಟ್ಟಿಯೇ

ನನಗಾಗಲಿಲ್ಲ. ಶ್ರೀ ಕೈಲಾಸನಾಥನೇ ನಿನ್ನನ್ನು ಕೂಡಿಸಿಕೊಟ್ಟನು. ಬಹಳ ಸಮಾಧಾನವಾಯಿತು. ನಿನಗೆ ದೇವರು ಕಲ್ಯಾಣಮಾಡಲಿ, ಎನ್ನಲು, ವೃಂದಮಾಲೆಯು– ಬ್ರಾಹ್ಮಣೋತ್ತಮನೇ, ನೀನು ಈ ಬೀದಿಯನ್ನು ಹಿಡಿದು ಹೋಗಿದ್ದರೆ, ಬೆಳತನಕ ತಿರುಗಿದರೂ ನಿನಗೆ ಕೈಲಾಸನಾಥನ ಗುಡಿಯು ಸಿಗುತ್ತಿದ್ದಿಲ್ಲ. ಗುಡಿಯ ಇರುವದೊಂದು ದಿಕ್ಕಿಗೆ, ನೀನು ಹೊರಟಿರುವದೊಂದು ದಿಕ್ಕಿಗೆ! ನಾನು ನಿನ್ನನ್ನು ಕಂಡದ್ದು ಬಹಳ ನೆಟ್ಟಗಾಯಿತು. ಇನ್ನು ನನ್ನ ಸಂಗಡ ನಡೆ, ಕೈಲಾಸನಾಥನ ಗುಡಿಗೆ ನಿನ್ನನ್ನು ಕಳಿಸುವೆನು, ಎಂದಳು.

ಚಾಣಕ್ಯನು ವೃಂದಮಾಲೆಯನ್ನನುಸರಿಸಿ ಸಾಗಿದನು. ಹಾದಿಯಲ್ಲಿ ಹೋಗ ಹೋಗುತ್ತ ಅವರ ಮಾತುಗಳು ನಡೆದವು. ವೃಂದಮಾಲೆಯು ಸರಳ ಸ್ವಭಾವದ ಕೋಮಲ ಹೃದಯ ಸ್ತ್ರೀಯು, ಚಾಣಕ್ಯನು ಕುಟಿಲ ಸ್ವಭಾವದ ಕಠಿಣ ಹೃದಯದ ಪುರುಷನು. ಅಂದಬಳಿಕ ಕೇಳುವದೇನು? ವೃಂದಮಾಲೆಯು ಚಾಣಕ್ಯನ ಬೆಲ್ಲದ ಅಚ್ಚಿನಂಥ ಸವಿ ಮಾತಿಗೆ ಮರುಳಾಗಿ, ಆತನ ಸ್ತೋತ್ರದಿಂದ ಉಬ್ಬಿ ಮುರಾದೇವಿಯ ಸಂಬಂಧದ ಎಲ್ಲ ವೃತ್ತಾಂತವನ್ನು ಆತನ ಮುಂದೆ ಹೇಳಿದಳು. ಚಾಣಕ್ಯನೂ ಬಣ್ಣದ ಮಾತು ಸುರಿಸಿ ತನಗೆ ಬೇಕಾಗಿದ್ದ ಸಂಗತಿಗಳನ್ನು ಕೆದರಿ ಕೆದರಿ ಕೇಳಿಕೊಂಡನು. ಅವನು ವೃಂದಮಾಲೆಯನ್ನು ಕುರಿತು–ವೃಂದಮಾಲೆ, ನಿನ್ನ ಸ್ವಾಮಿನಿಷ್ಠೆಯನ್ನು ನೋಡಿ ನನಗೆ ಬಹಳ ಸಂತೋಷವಾಗುತ್ತದೆ. ಅರಸನ ಅವಕೃಪೆಗೆ ಪಾತ್ರಳಾದ ಅರಸಿಯನ್ನು ಇಷ್ಟು ಏಕನಿಷ್ಠೆಯಿಂದ ಸೇವಿಸುವವರನ್ನು ಕಾಣುವದು ದುರ್ಲಭವು. ನಿನ್ನ ಸ್ವಾಮಿನಿಷ್ಠೆಯನ್ನು ನೋಡಿದರೆ, ನೀನು ನಿನ್ನ ಒಡತಿಯ ಹಿತಕ್ಕಾಗಿ ಬೇಕಾದ ಸಾಹಸವನ್ನು ಮಾಡಲಿಕ್ಕೆ ಹಿಂದೆ ಮುಂದೆ ನೋಡುವಂತೆ ತೋರುವದಿಲ್ಲ. ಶಾಬಾಸ! ಇದಕ್ಕೇ ಸ್ವಾಮಿನಿಷ್ಠೆಯನ್ನಬೇಕು, ಎಂದು ಸ್ತೋತ್ರ ಮಾಡಲು, ವೃಂದ ಮಾಲೆಯು ಉಬ್ಬಿ–ನನ್ನ ಒಡತಿಯ ಹಿತಕ್ಕಾಗಿ ಹೆಣಗುವದಕ್ಕಿಂತ ಹೆಚ್ಚಿನ ಕೆಲಸವು ನನಗೆ ಅದಾವದಿರುವದು? ನಮ್ಮ ಮುರಾದೇವಿಯು ಹುಚ್ಚುಹಿಡಿದ ಹಾಗೆ ಆಡುತ್ತಿರುವ ಮಾತುಗಳು, ಶಕ್ಯವಿದ್ದರೆ, ಅವುಗಳ ಸಲುವಾಗಿ ಪ್ರಾಣವನ್ನಾದರೂ ಕೊಡುತ್ತಿದ್ದೆನು! ಆದರೆ ಮಾಡಲೇನು? ನನ್ನ ಒಡತಿಯ ತಲೆತಿರುಗಿಹೋಗಿದೆ; ಆಕೆಯು ನಂದವಂಶವನ್ನೇ ನಿರ್ಮೂಲವಾಡುವಳಂತೆ, ನಂದಸಿಂಹಾಸನದ ಮೇಲೆ ತನ್ನ ತವರಮನೆಯ ಯಾವನೊಬ್ಬ ಆಪ್ತನನ್ನು ಕೂಡಿಸುವಳಂತೆ!! ಬ್ರಾಹ್ಮಣಶ್ರೇಷ್ಠಾ, ಈ ಮಾತುಗಳಲ್ಲಿ ಏನು ಅರ್ಥವದೆ ಹೇಳು. ತನ್ನ ಹೊಟ್ಟೆಯ ಮಗನಾದರೂ ಇದ್ದರೆ, ಆಕೆಯ ಮಾತಿನಲ್ಲಿ ಸ್ವಲ್ಪ ಅರ್ಥವಿರುತ್ತದೆಂದು ತಿಳಿಯಬಹುದಾಗಿತ್ತು, ಅನ್ನಲು ಚಾಣಕ್ಯನು– ವೃಂದಮಾಲೇ, ಒಟ್ಟಿಗೆ ನಿನ್ನ ಒಡತಿಯ ಮಗನು ಜೀವದಿಂದಿದ್ದು, ಅವನ ಸಲುವಾಗಿ ನಿನ್ನ ಒಡತಿಯು ಯತ್ನಮಾಡಿದರೆ, ನೀನು ಎಲ್ಲ ಬಗೆಯಿಂದ ಆಕೆಗೆ ಸಹಾಯಮಾಡತಕ್ಕವಳು? ಶಾಬಾಸ! ವೃಂದಮಾಲೆ, ನೀನು ನಿಜವಾಗಿ ಸ್ವಾಮಿನಿಷ್ಠಳಿರುತ್ತೀ. ನಿನ್ನನ್ನು ದಿನಾಲು ನಮಸ್ಕರಿಸತಕ್ಕದ್ದು, ಎಂದನು. ನಮಸ್ಕಾರ ಶಬ್ದವು ಕಿವಿಗೆ ಬಿದ್ದಕೂಡಲೇ ವೃಂದಮಾಲೆಗೆ ಪರಮಾನಂದವಾಯಿತು. ಆಕೆಯು ಚಾಣಕ್ಯನಲ್ಲಿ ಪರಮಾವಧಿ ವಿಶ್ವಾಸವನ್ನಿಟ್ಟಳು. ಈ ಮೇರೆಗೆ ಚಾಣಕ್ಯನು ಪಾಟಲೀಪುತ್ರಕ್ಕೆ ಬಂದು ಸಕೃದ್ದರ್ಶನಕ್ಕೆ ಬುದ್ಧಭಿಕ್ಷುವನ್ನು ಕಂಡು, ಆತನ ಸಹವಾಸದಿಂದ ಅಲ್ಪಕಾಲದಲ್ಲಿ ಕಾರ್ಯಸಾಧನದ ಹಾದಿಯನ್ನು ಹಿಡಿದು ದೂರಸಾಗಿದನು.

ವಿಷಪೂರ್ಣಹೃದಯ

ಇತ್ತ ಮುರಾದೇವಿಯು ತನ್ನ ಘೋರ ಪ್ರತಿಜ್ಞೆಯು ಹ್ಯಾಗೆ ಪೂರ್ಣವಾದೀತೆಂದು ಯಾವಾಗಲೂ ಚಿಂತಿಸುತ್ತಿದ್ದಳು. ಆಕೆಯ ಒಂದು ಯೋಚನೆಯು ಬಗೆಹರಿಯಲೊಲ್ಲದು. ಮೊಟ್ಟಮೊದಲು ಆಕೆಯು ತನ್ನ ಪತಿಯಾದ ಧನಾನಂದನನ್ನು ಕಂಡು, ಅವನೊಡನೆ ಎರಡು ಮಾತುಗಳನ್ನು ಆಡುವದು ಅವಶ್ಯವಾಗಿತ್ತು ಆದರೆ ಈ ಕಾರ್ಯವು ಸಾಧಿಸುವ ಬಗೆಯೇನು? ಹದಿನೈದು ವರ್ಷ ಆಕೆಯನ್ನು ಸೆರೆಯಲ್ಲಿಟ್ಟಿದ್ದ ಅರಸನು ಈಗ ತಾನಾಗಿ ಆಕೆಯ ಬಳಿಗೆ ಹ್ಯಾಗೆ ಬರಬೇಕು? ತನ್ನನ್ನು ಕಂಡರೆ ಸೇರದ ಪತಿಯ ಬಳಿಗೆ ಆಕೆಯಾದರೂ ಹ್ಯಾಗೆ ಹೋಗಬೇಕು? ಹೀಗಾಗಿ ಮುರೆಯು ಬಹಳ ಚಡಪಡಿಸಿದಳು. ಆಕೆಗೆ ಏನೂ ತೋಚದಾಯಿತು. ಚಿಂತಾಮಗ್ನಳಾಗಿ ಆಕೆಯು ಕುಳಿತಿರಲು, ಪಕ್ಕನೆ ಒಂದು ಉಪಾಯವು ಅವಳಿಗೆ ತೋಚಿತು. ತಾನು ತನ್ನ ಸ್ಥಾನವನ್ನು ಬಿಟ್ಟು ಪತಿಯಿದ್ದೆಡೆಗೆ ಹೋದರೆ, ಕಾರ್ಯವಾಗದೆ, ಪತಿಯಿಂದಾಗಲಿ–ತನ್ನ ಸವತಿಯರಿಂದಾಗಲಿ ಅಪಮಾನಮಾತ್ರ ಆದೀತೆಂದು ತಿಳಿದು ಆಕೆಯು ಆ ಗೊಡವಿಗೆ ಹೋಗಲಿಲ್ಲ. ತನ್ನ ಪತಿಗೆ ಒಂದು ಪತ್ರ ಬರೆದು ಅದನ್ನು ವೃಂದಮಾಲೆಯ ಕೈಯಲ್ಲಿ ಕೊಟ್ಟು, ಅದು ಪತಿಯ ಕೈಯ್ಯಲ್ಲಿಯೇ ಬೀಳುವಂತೆ ಮಾಡಬೇಕೆಂದು ಆಕೆಯು ಯೋಚಿಸಿದಳು. ಮುರೆಯು ಮೊದಲೇ ರಸಿಕಳು, ಅದರಲ್ಲಿ ಆಕೆಯ ಅಂತಃಕರುಣವು ಚಿಂತಾಗ್ನಿಯಿಂದ ಕಾದು ಹದವಾಗಿತ್ತು ಕೇಳುವದೇನು? ಓದಿದಕೂಡಲೇ ಧನಾನಂದನು ಮರುಳಾಗುವಂಥ ಸುಂದರ ಪತ್ರವು ಅಲ್ಪಾವಕಾಶದಲ್ಲಿ ಬರೆದು ಸಿದ್ಧವಾಯಿತು. ತಕ್ಕ ಉಡಪು–ತೊಡಪುಗಳನ್ನು ಧರಿಸಿದ ವೃಂದಮಾಲೆಯು ಅದನ್ನು ತಕ್ಕೊಂಡು ಧನಾನಂದನ ಬಳಿಗೆ ಹೋದಳು.

ಆಗ ಧನಾನಂದನು ಅರಮನೆಯ ಉಪ್ಪರಿಗೆಯ ಮೇಲೆ ಕುಳಿತು ಪಟ್ಟಣದ ಶೋಭೆಯನ್ನು ನೋಡುತ್ತಿದ್ದನು. ಬಳಿಯಲ್ಲಿ ದಾಸದಾಸಿಯರ ಗದ್ದಲವಿದ್ದಿಲ್ಲ, ಬಾಗಿಲಲ್ಲಿ ಒಬ್ಬ ಪ್ರತಿಹಾರಿ, ಬಾಗಿಲೊಳಗೆ ಒಬ್ಬ ವೇತ್ರವತಿ ಇವರಿಬ್ಬರೇ ಇದ್ದರು. ಧನಾನಂದನು ಪಟ್ಟಣದ ಶೋಭೆಯನ್ನು ನೋಡುತ್ತಿದ್ದರೂ, ಆತನ ಮನಸ್ಸು ಅದರಲ್ಲಿ ತೊಡಗಿದ್ದಿಲ್ಲ, ಕಳೆದ ರಾತ್ರಿಯಲ್ಲಿ ಬಿದ್ದಿದ್ದ ಒಂದು ದುಷ್ಟಸ್ವಪ್ನದಿಂದ ತನಗೆ ಬೇಗನೆ ಮಹತ್ಸಂಕಟವು ಪ್ರಾಪ್ತವಾಗುವದೆಂದು ಅರಸನ ಕಲ್ಪನೆಯಾದದ್ದರಿಂದ ಆತನ ಮನಸ್ಸು ಅಸಮಾಧಾನಪಟ್ಟಿತ್ತು, ಪ್ರತ್ಯಕ್ಷ ಸಂಕಟಕ್ಕೂ ಬೆದರದ ಧನಾನಂದನು, ಈ ದಿನ ಸ್ವಪ್ನದಲ್ಲಿಯ ಅನಿಷ್ಟಸಂಗತಿಯ ಕಲ್ಪನೆಯಿಂದ ಉದಾಸೀನನಾಗಿದ್ದನು. ಆ ಔದಾಸೀನ್ಯವನ್ನು ಕಳಕೊಳ್ಳುವದಕ್ಕಾಗಿಯೇ ಆತನು ಉಪ್ಪರಿಗೆಯನ್ನೇರಿ ಪಟ್ಟಣದ ಶೋಭೆಯನ್ನು ನೋಡುತ್ತಿದ್ದನು; ಆದರೆ ಆತನ ಯತ್ನವು ನಿಷ್ಫಲವಾಗಿ ಮನಸ್ಸಿನ ಅಸಮಾಧಾನವು ಮತ್ತಷ್ಟು ಹೆಚ್ಚಿತು. ಅಷ್ಟರಲ್ಲಿ ವೇತ್ರವತಿಯು ಮೆಲ್ಲನೆ ಬಳಿಯಲ್ಲಿ ಬಂದು, ಅತ್ಯಂತ ನಮ್ರತೆಯಿಂದ ಕೈಜೋಡಿಸಿ, ಭೂಮಿಯಲ್ಲಿ ಮೊಣಕಾಲೂರಿ – ದೇವನೇ, ಅಂತಃಪುರದೊಳಗಿನ ಯಾವಳೋ ಒಬ್ಬ ದಾಸಿಯು ಪತ್ರವನ್ನು ತಂದಿದ್ದಾಳೆ. ಪತ್ರವನ್ನು ಕೈಮುಟ್ಟ ಚರಣಕ್ಕರ್ಪಿಸಬೇಕೆಂದು ದೇವಿಯವರ ಅಪ್ಪಣೆಯಾಗಿದೆಯಂತೆ. ಸನ್ನಿಧಿಯ ಅಪ್ಪಣೆಯನ್ನು ಕೇಳಿ ಒಳಗೆ ಬಿಡಬೇಕೆಂದು ವಿನಯಂಧರಕಂಚುಕಿಯು ಆಕೆಯನ್ನು ಹೊರಗೆ ನಿಲ್ಲಿಸಿದ್ದಾನೆ.

ವೇತ್ರವತಿಯ ಮಾತುಗಳಿಂದ ಧನಾನಂದನು ಸ್ವಲ್ಪ ಎಚ್ಚತ್ತುವನಂತೆ ಆಗಿ–ವೇತ್ರವತಿ, ಏನಂದಿ? ದೇವಿಯಕಡೆಯಿಂದ ದಾಸಿಯು ಬಂದಿರುವಳೇ? ಪತ್ರವನ್ನು ಕೈಮುಟ್ಟಮುಟ್ಟಿಸೆಂದು ದೇವಿಯು ಹೇಳಿರುವಳೇ? ದೇವಿಯಕಡೆಯ ದಾಸಿಯು, ಮೇಲೆ ಇಂಥ ಹೊತ್ತಿನಲ್ಲಿ ಪತ್ರತರುವದು! ಆ ಪತ್ರದಲ್ಲಿ ಏನಿರಬಹುದು? ಎಂದು ಅರ್ಧ ತನ್ನೊಳಗೆ, ಅರ್ಧ ದಾಸಿಯ ಮುಂದೆ ಮಾತಾಡಿದಂತೆ ಮಾತಾಡಿ, ಧನಾನಂದನು ಸುಮ್ಮನೆ ಕುಳಿತನು. ವೇತ್ರವತಿಯು ನಿಂತ ಸ್ಥಳದಲ್ಲಿ ಸ್ತಬ್ಧವಾಗಿ ನಿಂತುಬಿಟ್ಟಿದ್ದಳು. ಧನಾನಂದನು ಮನಸ್ಸಿನಲ್ಲಿ–ನಾನು ಹೀಗೆ ಸುಮ್ಮನೆ ಚಿಂತೆಗೆ ಒಳಗಾಗುವದರಲ್ಲಿ ಅರ್ಥವಿಲ್ಲ; ದೇವಿಯ ಪತ್ರದಿಂದ ಮನಸ್ಸು ಅನ್ಯವಿಚಾರದಲ್ಲಿ ಸೇರಿದರೆ ನೆಟ್ಟಗಾದೀತು, ಎಂದು ಯೋಚಿಸಿ ವೇತ್ರವತಿಯನ್ನು ಕುರಿತು–ವೇತ್ರವತೀ, ಹೋಗು, ವಿನಯಂಧರನಿಗೆ ಹೇಳಿ, ಆ ದಾಸಿಯನ್ನು ಒಳಗೆ ಕರಕೊಂಡು ಬಾ, ಎಂದು ಆಜ್ಞಾಪಿಸಿದನು.

ಅಪ್ಪಣೆಯಾದದ್ದೊಂದೇ ತಡ, ವೃಂದಮಾಲೆಯು ಅರಸನ ಬಳಿಗೆ ಬಂದು ಮೊಣ ಕಾಲೂರಿ, ತಲೆಯಮೇಲೆ ಬೊಗಸೆಯನ್ನು ಹಿಡಿದು ಅತ್ಯಂತ ವಿನಯದಿಂದ–ದೇವನೇ, ದೇವಿಯವರು ಈ ಪತ್ರವನ್ನು ಕೊಟ್ಟಿರುವರು. ಇದನ್ನು ಓದಿ ಪ್ರಭುಗಳು ಏನು ಅಪ್ಪಣೆಮಾಡು ವರೆಂಬದನ್ನು ಬೇಗನೆ ಬಂದು ಹೇಳೆಂದು ಅವರು ಆಜ್ಞಾಪಿಸಿದ್ದಾರೆ. ದೊರೆಗಳವರು ಪತ್ರವನ್ನು ಓದಿ ದಾಸಿಯನ್ನು ಆಜ್ಞಾಪಿಸುವ ಕೃಪೆಮಾಡಬೇಕು, ಎಂದು ಬೇಡಿಕೊಂಡಳು. ಅರಸನು ದಾಸಿಯನ್ನು ದಿಟ್ಟಿಸಿ ನೋಡಿದನು; ಆದರೆ ಆಕೆಯು ದಿನದ ಪರಿಚಯದವಳಿದ್ದಿಲ್ಲ. ಆಕೆಯನ್ನು ಎಂದೋ ನೋಡಿದಂತೆ ಅರಸನಿಗೆ ಮಸಮಸಕಾದ ಗುರುತು ಹತ್ತುತ್ತಿತ್ತು. ಆತನು ದಾಸಿಯನ್ನು ಕುರಿತು ಹೆಚ್ಚಿಗೆ ವಿಚಾರಿಸದೆ, ಪತ್ರವನ್ನು ಒಡೆದು ತನ್ನೊಳಗೆ ಈ ಮೇರೆಗೆ ಓದಿಕೊಳ್ಳ ಹತ್ತಿದನು—''ಸ್ವಸ್ತಿ, ನಾನು ಹೀಗೆ ಪತ್ರ ಬರೆದಿರುವದನ್ನು ನೋಡಿ ಪ್ರಭುಗಳಿಗೆ ಸಿಟ್ಟು ಬರಬಹುದು. ಇಲ್ಲಿಯವರೆಗೆ ಇಟ್ಟಿದ್ದ ಸ್ಥಿತಿಯಲ್ಲಿಯೇ ಇನ್ನು ಮೇಲಾದರೂ ಈ ದಾಸಿಯನ್ನು ಇಡಬೇಕೆಂದು ಪ್ರಭುಗಳು ಯೋಚಿಸಬಹುದು; ಆದರೆ ಒಮ್ಮೆ ದರ್ಶನಕೊಟ್ಟು ದಾಸಿಯ ವಿಜ್ಞಾಪನೆಯನ್ನು ಕೇಳಿಕೊಳ್ಳುವ ಕೃಪೆಮಾಡಬೇಕು. ಕುಮಾರ ಸುಮಾಲ್ಯನ ಯೌವರಾಜ್ಯಾಭಿ ಷೇಕದಂಥ ಆನಂದದ ಪ್ರಸಂಗದಲ್ಲಿಯೂ ಈ ದಾಸಿಯ ನೆನಪಾಗಿ, ಆಕೆಯ ಬಂಧವಿಮೋಚನೆ ಮಾಡಿರುವದರಿಂದ, ಆರ್ಯಪುತ್ರರು ದಾಸಿಯನ್ನು ಮರೆತಿರುವದಿಲ್ಲೆಂಬುದು ಸ್ಪಷ್ಟವಾಗುತ್ತದೆ. ಕೆಲಮಟ್ಟಿಗಾದರೂ ದಾಸಿಯಲ್ಲಿ ಅಭಿಮಾನವಿರುತ್ತದೆಂದು ತಿಳಿದು ಈ ಪತ್ರ ಬರೆಯುವ ಮಹಾ ಸಾಹಸವನ್ನು ಮಾಡಿದ್ದೇನೆ. ಚಕೋರಿಯು ಪತಿಯ ಪುನರ್ದರ್ಶನಕ್ಕಾಗಿ ಉತ್ಸುಕವಾಗಿರುವಂತೆ, ಈ ಮುರೆಯು ಪ್ರಭುಗಳ ಚರಣದರ್ಶನೋತ್ಸುಕಳಾಗಿರುವಳು. ಇದರ ಮೇಲೆ ಬೇಕಾದದ್ದನ್ನು ಮಾಡಲು, ಆರ್ಯಪುತ್ರರು ಸಮರ್ಥರು.''

ಈ ಪತ್ರವನ್ನು ಓದಿ ಧನಾನಂದನಿಗೆ ಬಹಳ ಆಶ್ಚರ್ಯವಾಯಿತು. ಮೊದಲು ಯಾರು ಪತ್ರ ಬರೆದಿರುವರೆಂಬದೇ ಅವನಿಗೆ ತಿಳಿಯಲಿಲ್ಲ. ಅರ್ಧ ಪತ್ರದಲ್ಲಿ ಬಂಧವಿಮೋಚನವೆಂದು ಬರೆದದ್ದನ್ನು ಓದಿ ಅವನ ಮನಸ್ಸು ಮುರೆಯ ಕಡಗೆ ಹೊರಳಿ, ಪತ್ರಾಂತದಲ್ಲಿ ಆ ಮನಸ್ಸು ನಿಸ್ಸಂಶಯವಾಯಿತು. ಧನಾನಂದನು ಒಮ್ಮೆ ವೃಂದಮಾಲೆಯನ್ನು ನೋಡಿ, ಮತ್ತೊಮ್ಮೆ ಪತ್ರವನ್ನು ಓದಿದನು. ಆಮೇಲೆ ಸ್ವಲ್ಪ ಹೊತ್ತು ಸುಮ್ಮನೆ ಕುಳಿತು, ವೃಂದಮಾಲೆಯನ್ನು ಕುರಿತು–

ಪರಿಚಾರಿಕೆಯೇ, ಹೋಗು, ನಿನ್ನ ಒಡೆಯಳಿಗೆ ನಾನು ಈಗ ಬಂದೆವೆಂದು ಹೇಳು. ವೇತ್ರವತೀ, ನಡೆ, ಮುರೆಯ ಅಂತಃಪುರಕ್ಕೆ ಹೋಗುವ ಹಾದಿಯನ್ನು ತೋರಿಸು, ಎಂದನು. ಧನಾನಂದನ ಈ ಮಾತುಗಳನ್ನು ಕೇಳಿ ವೃಂದಮಾಲೆಯೂ, ವೇತ್ರವತಿಯೂ ಆಶ್ಚರ್ಯದಿಂದ ಚಿತ್ರದೊಳಗಿನ ಗೊಂಬೆಗಳಂತೆ ನಿಂತುಬಿಟ್ಟರು. ಅವರಿಗೆ ಅರಸನ ಮಾತುಗಳು ತೀರ ಅಶಕ್ಯವಾಗಿ ತೋರಿದವು. ತಾವು ಸ್ವಪ್ನದಲ್ಲಿರುವೆವೋ, ಎಂಬ ಸಂಶಯವು ಅವರಲ್ಲಿ ಉತ್ಪನ್ನವಾಯಿತು. ವೃಂದಮಾಲೆಯು ಬೇಗನೆ ಎಚ್ಚತ್ತು ಓಡುತ್ತ ತನ್ನ ಒಡತಿಯ ಬಳಿಗೆ ಹೋಗಿ —"ದೇವೀ, ಪ್ರಭುಗಳು ಬಂದರು." ಎಂದು ಹೇಳಿದಳು. ಈ ಮಾತು ಮುರೆಗೆ ಮೊದಲು ಶಕ್ಯವಾಗಿ ತೋರಲಿಲ್ಲ. ಆದರೆ ವೃಂದಮಾಲೆಯ ಮುಖಮುದ್ರೆಯಿಂದ ಆ ಧೂರ್ತಳು ಅದನ್ನು ಸತ್ಯವೆಂದು ತಿಳಿದು ಅರಸನ ಸತ್ಕಾರದ ಸೌರಣೆಯಲ್ಲಿ ತೊಡಗಿದಳು.

ಮುರೆಯ ಮೈಮೇಲೆ ಹೆಚ್ಚಿನ ಅಲಂಕಾರಗಳಿದ್ದಿಲ್ಲ. ಇದ್ದ ನಾಲ್ಕು ಅಲಂಕಾರಗಳನ್ನು ಸಹ ತೆಗೆದಿಟ್ಟು ಆಕೆಯು ಕೊರಳಲ್ಲಿ ಮುತ್ತಿನದೊಂದು ಸರವನ್ನು ಹಾಕಿಕೊಂಡಳು; ಮೈಮೇಲೆ ಹೊದ್ದುಕೊಂಡಿದ್ದ ರೇಶಿಮೆಯ ವಸ್ತ್ರವನ್ನು ತೆಗೆದಿಟ್ಟು, ಶುಭ್ರವಾದ ನೂಲಿನ ವಸ್ತ್ರವನ್ನು ಹೊದ್ದುಕೊಂಡಳು. ಸರ್ವಸಾಧಾರಣವಾಗಿ ತಲೆ ಉಗುರಿಸಿಕೊಂಡು ತುರುಬಿನಲ್ಲಿ ಒಂದೆಂದರೆ ಒಂದೇ ಮದನಬಾಣದ ಹೂವನ್ನು ಮುಡಕೊಂಡಳು. ಆಗ ಎಂಟು–ಹತ್ತು ದಿನಗಳಿಂದ ಆಕೆಯ ಮೋರೆಯ ಮೇಲೆ ಉಕ್ಕುತ್ತಿದ್ದ ಕ್ರೋಧ ಮಾತ್ಸರ್ಯಾದಿಗಳ ದುಷ್ಟಕಳೆಗಳು ಒಮ್ಮೆಲೆ ಅಡಗಿದವು. ವಿರಹವ್ಯಥೆಯ ಸ್ತ್ರೀಯಕಳೆಯು, ಕೂಡಲೆ ಆಕೆಯು ಮೋರೆಯ ಮೇಲೆ ಬಂದಿತು. ತನ್ನ ಮನಸ್ಸಿನಲ್ಲಿದ್ದಂತೆ ತನ್ನ ವೇಷವು ಸಿದ್ಧವಾದದ್ದನ್ನು ಮನಗಾಣುವದಕ್ಕಾಗಿ ಆ ಸಾಹಸಿಯು ನಿಲುವುಗನ್ನಡಿಯ ಮುಂದೆ ನಿಂತು ನೋಡಿ ಅಭಿಮಾನಪಟ್ಟು, ಅರಸನು ಬಂದನೆಂದರೆ ತಾನು ಹ್ಯಾಗೆ ನಿಲ್ಲಬೇಕು, ಹ್ಯಾಗೆ ಮಾತಾಡಬೇಕು, ಹ್ಯಾಗೆ ನಗಬೇಕು, ಎಷ್ಟು ನಗಬೇಕು, ಇವೇ ಮೊದಲಾದ ಮೋಹಪಾಶಗಳನ್ನು ಹುಡಿಕಿ ಇಟ್ಟುಕೊಳ್ಳುತ್ತ ಬೇಟೆಯನ್ನು ಬಲೆಯಲ್ಲಿ ಕೆಡವುವ ಬೇಡನಂತೆ ಹೊಂಚುಹಾಕಿಕೊಂಡು ತಕ್ಕ ಸ್ಥಳದಲ್ಲಿ ನಿಂತುಕೊಂಡಳು.

ಈ ಮೇರೆಗೆ ಮುರಾದೇವಿಯು ಅವಸರದಿಂದ ಎಲ್ಲ ವ್ಯವಸ್ಥೆಯನ್ನು ಮಾಡುತ್ತಿರಲು ಧನಾನಂದನು ಅಲ್ಲಿಗೆ ಬಂದು ಮುಟ್ಟಿದನು. ಪದ್ಧತಿಯಂತೆ ವೇತ್ರವತಿಯು – ದೇವರು ಇತ್ತಕಡೆಗೆ ದಯಮಾಡಿಸಬೇಕು, ಈ ಮುರಾದೇವಿಯವರು ತಮ್ಮ ಹಾದಿಯನ್ನು ನೋಡುತ್ತಿರುವರು, ಎಂದು ಹೇಳಿ ತಾನು ಮರೆಗೆ ಹೋದಳು. ಕೂಡಲೆ ಮುರಾದೇವಿಯು ಅತ್ಯಂತ ಉದ್ವೇಗಜನಕ ಸ್ವರದಿಂದ – ಆರ್ಯಪುತ್ರರೇ, ನಾನು ಮಹಾಪರಾಧಿಯೆಂದು ತಾವು ಇಲ್ಲಿಯವರೆಗೆ ನನ್ನ ಉಪೇಕ್ಷೆ ಮಾಡಿದ್ದು ಮಾಡಿ ಹೋಯಿತು, ಇನ್ನು ಮೇಲಾದರೂ ನನ್ನ ಮೇಲೆ ಕೃಪಾದೃಷ್ಟಿಯನ್ನು ಇರಿಸಬೇಕು, ಎಂದು ನುಡಿದು, ಅರಸನ ಚರಣಗಳ ಮೇಲೆ ಮಸ್ತಕವನ್ನಿಟ್ಟು, ಅವನ್ನು ಅಶ್ರುಗಳಿಂದ ತೋಯಿಸಿದಳು. ಆಕೆಯು ಗದ್ಗದಕಂಠೆಯಾಗಿ, ಆರ್ತಸ್ವರದಿಂದ ಶೋಕ ಮಾಡುವದನ್ನು ಕೇಳಿ ಅರಸನ ಮನಸ್ಸು ಕರಗಿತು. ಆತನು ಮುರಾದೇವಿಯನ್ನು ಹಿಡಿದೆತ್ತಿ ಏನೂ ಮಾತಾಡದೆ ತೊಡೆಯಮೇಲೆ ಕುಳ್ಳಿರಿಸಿಕೊಂಡನು. ಶುಭ್ರವಸ್ತ್ರವನ್ನು ಹೊದ್ದುಕೊಂಡಿದ್ದ,

ವಿರಹಿಗಳಿಗೆ ಯೋಗ್ಯವಾದ ಒಂದೇ ಹೂವನ್ನು ಮುಡಕೊಂಡಿದ್ದ, ನಿಸರ್ಗಸುಂದರಿಯೂ – ಕರುಣಾಮೂರ್ತಿಯೂ ಆದ ಮುರೆಯ ಮುಖವನ್ನು ನೋಡಿ ಅರಸನು ಮರುಳಾದನು. ಆತನು ತನ್ನ ಮನೋಹರೆಯನ್ನು ಕುರಿತು–ಪ್ರಿಯಳೇ, ಇನ್ನು ಶೋಕವನ್ನು ಬಿಡು; ಮಿಂಚಿಹೋದ ಮಾತಿಗೆ ಚಿಂತಿಸಿ ಫಲವೇನು? ಆಗಿನ ಕಾಲವೇ ಹಾಗಿತ್ತು, ಅದನ್ನು ಈಗ ನೆನಸಿದರೆ ಆಗುವದೇನು? ನನ್ನ ತಪ್ಪನ್ನು ನೀನು ಎಣಿಸಬೇಡ, ನಿನ್ನ ತಪ್ಪನ್ನು ನಾನು ಎಣಿಸುವದಿಲ್ಲ, ನಮ್ಮ ನಮ್ಮ ತಪ್ಪುಗಳಿಗಾಗಿ ಇಬ್ಬರಿಗೂ ಶಿಕ್ಷೆಯಾಗಿದೆ. ಮುರೆ, ಇನ್ನು ಶಾಂತಳಾಗು. ನಾನು ಇಂದು ನಿನ್ನ ಮಂದಿರದಲ್ಲಿಯೇ ಇರುವೆನು. ಉಪಹಾರವನ್ನು ನಿನ್ನ ಮಂದಿರದಲ್ಲಿ ನಿನ್ನೊಡನೆ ಮಾಡುವೆನು.

ಪತಿಯ ಈ ಮಾತುಗಳನ್ನು ಕೇಳಿ ಮುರೆಯು ತನ್ನ ಅರ್ಧ ಕೆಲಸವಾಯಿತೆಂದು ಮನಸ್ಸಿನಲ್ಲಿ ಸಮಾಧಾನಪಟ್ಟಳು. ಬಹಿರಂಗದಲ್ಲಿ ಆಕೆಯು ಶೃಂಗಾರಚೇಷ್ಟೆಗಳಿಂದ ಅರಸನನ್ನು ಹಣ್ಣುಮಾಡಿ ಗಾಂಭೀರ್ಯದಿಂದ–ಪ್ರಭುಗಳು ಆಗಿಹೋಗಿದ್ದ ಸಂಗತಿಗಾಗಿ ಅಸಮಾಧಾನ ಪಡಬಾರದೆಂದು ಬೇಡಿಕೊಳ್ಳುತ್ತೇನೆ. ಅದರಲ್ಲಿ ಎಳ್ಳಷ್ಟಾದರೂ ತಮ್ಮ ಅಪರಾಧವಿಲ್ಲ, ದುರ್ದೈವದಿಂದ ನನ್ನ ನಿಜವಾದ ಸಂಗತಿಯೇ ಆರ್ಯಪುತ್ರರಿಗೆ ಅರಿಕೆಯಾಗಲಿಲ್ಲ, ಕಿರಾತ ರಾಜಪುತ್ರಿಯಾದ ನನ್ನನ್ನು ಭಾಗುರಾಯಣಸೇನಾಪತಿಯು ಯುದ್ಧದಲ್ಲಿ ಹರಣಮಾಡಿ ತಂದು ಲಗ್ನಮಾಡಿರಲು, ನಾನು ದಾಸೀಪುತ್ರಿಯೆಂದು ಕುಹಕರು ಹೂಲಿಯ ಎಬ್ಬಿಸಿದರು. ಸತಿಧರ್ಮದಿಂದ ವರ್ತಿಸುತ್ತಿದ್ದ ನನಗೆ, ಮೊಟ್ಟಮೊದಲು ಪುತ್ರೋತ್ಸವವಾದ ತಪ್ಪಿಗಾಗಿ ಹೊಟ್ಟೇಕಿಚ್ಚುಪಟ್ಟು ದುಷ್ಟರು ಇಲ್ಲದ ಹೊಲಸು ಆರೋಪವನ್ನು ನನ್ನ ಮೇಲೆ ಹೊರಿಸಿದರು. ಶಿವ ಶಿವ !! ಅದರ ಸ್ಮರಣೆಬೇಡ. ದುಃಖಭೋಗವು ನನ್ನ ಪ್ರಾರಬ್ಧದಲ್ಲಿದ್ದದ್ದರಿಂದ ಹೀಗಾಯಿತು. ಪ್ರಾರಬ್ಧಭೋಗವು ತೀರಿದ ಕೂಡಲೇ ಪ್ರಭುಗಳ ಚರಣಗಳು ನಾನಿದ್ದಲ್ಲಿ ಪ್ರಾಪ್ತವಾದವು. ಇಲ್ಲದಿದ್ದರೆ, ಹದಿನೇಳು ವರ್ಷಗಳಿಂದ ಮರೆಯಾಗಿದ್ದ ಈ ಚರಣಗಳ ದರ್ಶನವು ಒಂದು ಕ್ಷುಲ್ಲಕಪತ್ರದ ಯೋಗದಿಂದ ಈಗ ನನಗೆ ಹ್ಯಾಗಾಗುತ್ತಿತ್ತು? ಎಂದು ನುಡಿಯುತ್ತಿರಲು, ಧನಾನಂದನು–ಸುಂದರಿ, ಹ್ಯಾಗೇ ಇರಲಿ, ಈಗ ಹದಿನೇಳು ವರ್ಷ ಬೆಂದು ಬೆಂಡಾಗಿರುವ ನಿನ್ನ ಮನಸ್ಸನ್ನು ಈಗ ಸಮಾಧಾನಗೊಳಿಸುವದು ನನ್ನ ಕರ್ತವ್ಯವಾಗಿರುವದು. ಹ್ಯಾಗೂ ಕುಮಾರ ಸುಮಾಲ್ಯನಿಗೆ ಯೌವ ರಾಜ್ಯಾಭಿಷೇಕವಾಗಿದೆ. ಆತನನ್ನು ತಮ್ಮ ತಂತ್ರಕ್ಕೆ ಒಳಪಡಿಸಿಕೊಂಡು, ಅಮಾತ್ಯರಾಕ್ಷಸನೂ, ಭಾಗುರಾಯಣಸೇನಾಪತಿಯೂ ಕೂಡಿ ರಾಜ್ಯ ಕಾರಭಾರವನ್ನು ಸಾಗಿಸುವಂತೆ ನಿಯಮಿಸಿ ನಿನ್ನ ಸಂತೋಷಕ್ಕಾಗಿ ಕೆಲವು ದಿನ ನಿನ್ನ ಮಂದಿರದಲ್ಲಿಯೇ ಇರುವೆನು, ಈಗಾದರೂ ಆಯಿತೇ? ಎನ್ನಲು, ತನ್ನ ತಂತ್ರವು ಮುಕ್ಕಾಲುಪಾಲು ಕೈಗೂಡಿತೆಂದು ಮುರೆಯು ಮನಸ್ಸಿನಲ್ಲಿ ಹಿಗ್ಗಿದಳು.

ಇತ್ತ ತನ್ನ ಪ್ರತಿಜ್ಞೆಯನ್ನು ಪೂರ್ಣಮಾಡಿಕೊಳ್ಳಲಿಕ್ಕೆ ಹವಣಿಸುತ್ತಿದ್ದ ಚಾಣಕ್ಯನು, ರಾಜಗೃಹದಲ್ಲಿ ಕಲಹವನ್ನು ಹುಟ್ಟಿಸಲು ಯತ್ನಿಸುತ್ತಿದ್ದನು. ವಸುಭೂತಿಯ ವಿಹಾರದಲ್ಲಿ ವೃಂದಮಾಲೆಯ ಮುಖಾಂತರವಾಗಿ ಮುರಾದೇವಿಯ ಸಂಬಂಧದಿಂದ ದಿನದಿನಕ್ಕೆ

ತಿಳಿಯುತ್ತಿರುವ ಹೊಸ ಹೊಸ ಸುದ್ದಿಗಳಿಂದ ಆತನಿಗೆ ಬಹಳ ಸಮಾಧಾನವಾಗಹತ್ತಿತು. ತನ್ನ ಪ್ರತಿಜ್ಞೆಯೇ ಮುರಾದೇವಿಯ ಪ್ರತಿಜ್ಞೆಯಾಗಿದ್ದು, ಆಕೆಯು ಅರಸನನ್ನು ಇಷ್ಟು ಬೇಗನೇ ತನ್ನ ಮನೆಗೆ ಬರಮಾಡಿಕೊಂಡು, ಮರುಳು ಮಾಡಿದ್ದನ್ನು ಕೇಳಿ ಆತನಿಗೆ ಸಾನಂದಾಶ್ಚರ್ಯವಾಯಿತು. ಹ್ಯಾಗಾದರೂ ಮಾಡಿ ಮುರಾದೇವಿಯನ್ನು ಕಾಣಬೇಕೆಂದು ಆತನು ಹಾತೊರೆಯಹತ್ತಿದನು; ಆದರೆ ಅಂತಃಪುರದಲ್ಲಿ ಅರಸನನ್ನು ಅರಗಳಿಗೆ ಅಗಲದೆ ಸೇವಿಸುತ್ತಿರುವ ಮುರೆಯ ದರ್ಶನವು ಬಡಬ್ರಾಹ್ಮಣನಿಗೆ ಹ್ಯಾಗಾಗಬೇಕು? ಬ್ರಾಹ್ಮಣನು ಬಡವನಾಗಿದ್ದರೂ ಅವನ ಬುದ್ಧಿಯು ಬಡವವಾಗಿದ್ದಿಲ್ಲ. ರಾಜ ಮಹಿಷಿಯನ್ನು ಕಾಣುವ ಉಪಾಯವು ಕೂಡಲೇ ಆತನ ವಿಶಾಲ ಬುದ್ಧಿಯಲ್ಲಿ ಹೊಳೆಯಿತು. ಈ ಕಾರ್ಯದಲ್ಲಿ ವೃಂದಮಾಲೆಯಿಂದ ತನಗೆ ಸಹಾಯವಾಗ ಬಹುದೆಂದು ಆತನು ತಿಳಿದನು. ಒಂದುದಿನ ಚಾಣಕ್ಯನು ಸಂಜೆಯ ಮುಂದೆ ವಸುಭೂತಿಯ ಮಠಕ್ಕೆ ಹೋಗಿರಲು, ಅಲ್ಲಿ ವೃಂದಮಾಲೆಯು ಮುರಾದೇವಿಯ ವೃತ್ತಾಂತವನ್ನೇ ಹೇಳುತ್ತ ಕುಳಿತಿದ್ದಳು. ವಸುಭೂತಿಯು ಚಾಣಕ್ಯನನ್ನು ಆದರದಿಂದ ಬರಮಾಡಿಕೊಂಡನು. ವೃಂದಮಾಲೆ ಗಾಗಲಿ, ವಸುಭೂತಿಗಾಗಲಿ ಚಾಣಕ್ಯನು ಹೊರಗಿನವನಂತೆ ಇದ್ದಿಲ್ಲ. ಆ ಧೂರ್ತ ಬ್ರಾಹ್ಮಣನು ಕೇವಲ ಮನೆಯವನಾಗಿದ್ದನು. ಮಾತಿಗೆ ಮಾತು ಹೊರಟು ರಾತ್ರಿಯು ಬಹಳವಾಗಲು, ವೃಂದಮಾಲೆಯೂ, ಚಾಣಕ್ಯನೂ ತಮ್ಮ ತಮ್ಮ ಸ್ಥಳಗಳಿಗೆ ಹೋಗುವದಕ್ಕಾಗಿ ಎದ್ದರು.

ವೃಂದಮಾಲೆಯ ಸಂಗಡ ಮಾತಾಡುತ್ತಾಡುತ್ತ ಚಾಣಕ್ಯನು ಬಹುದೂರ ಹೋದನು. ಕೈಲಾಸನಾಥನ ಗುಡಿಗೆ ಹೋಗುವ ದಾರಿಯು ಹಿಂದೆ ಉಳಿಯಲು, ವೃಂದಮಾಲೆಯು ಆತನನ್ನು ಕುರಿತು – ಬ್ರಾಹ್ಮಣ ಶ್ರೇಷ್ಠಾ, ಪರಿಚಾರಕನು ನನ್ನ ಸಂಗಡ ಇರುತ್ತಾನೆ. ರಾತ್ರಿಯು ಬಹಳವಾಗಿರುವದರಿಂದ ನೀನು ಇನ್ನು ನಿಲ್ಲಬೇಕು, ಎನ್ನಲು ಚಾಣಕ್ಯನು–ಏನೂ ಚಿಂತೆಯಿಲ್ಲ, ದಿನಾಲು ನಾನು ಇಷ್ಟು ಬೇಗ ಮಲಗುವದಿಲ್ಲ, ನಾನು ಕೆಲವು ಮಾತುಗಳನ್ನು ನಿನ್ನ ಮುಂದೆ ಹೇಳಬೇಕಾಗಿದೆ, ಅತ್ತತ್ತ ಬರುವೆನು ಎಂದನು. ಈ ಬ್ರಾಹ್ಮಣನು ತನಗೆ ಮತ್ತೆ ಯಾವ ಮಾತು ಹೇಳುವನೋ, ಎಂದು ವೃಂದಮಾಲೆಯು ತನ್ನೊಳಗೆ ಆಶ್ಚರ್ಯಪಡುತ್ತಿರಲು, ಚಾಣಕ್ಯನು ಅವಳನ್ನು ಕುರಿತು – ವೃಂದಮಾಲೇ, ನಾನು ಯಾರು? ಎಲ್ಲಿಯವನು? ಯಾತಕ್ಕೋಸ್ಕರ ಇಲ್ಲಿಗೆ ಬಂದೆನು? ಎಂಬದನ್ನು ಇಲ್ಲಿಯವರೆಗೆ ನಾನು ನಿನ್ನ ಮುಂದೆ ಹೇಳಿರುವದಿಲ್ಲ; ಆದರೆ ಇಂದು ಹೇಳುತ್ತೇನೆ ಕೇಳು. ಕಿರಾತರಾಜನಾದ ಪ್ರದ್ಯುಮ್ನದೇವನ ಕಡೆಯಿಂದ ನಾನು ಬಂದಿದ್ದೇನೆ. ತನ್ನ ತಂಗಿಯಾದ ಮುರಾದೇವಿಯ ಕಾರಾಗೃಹವಾಸದ ದುಃಖವನ್ನು ಕೇಳಿ ಪ್ರದ್ಯುಮ್ನದೇವನಿಗೂ, ಮುರಾದೇವಿಯ ತಾಯಿಯಾದ ಮಾಯಾದೇವಿಗೂ ಬಹಳ ದುಃಖವಾಗಿರುತ್ತದೆಂದು ನಾನು ಹೇಳುವ ಕಾರಣವಿಲ್ಲ. ಪ್ರದ್ಯುಮ್ನದೇವನು ತಂಗಿಯ ಬಂಧವಿಮೋಚನೆಗಾಗಿ ಇಷ್ಟು ಹೊತ್ತಿಗೇ ಯತ್ನಿಸತಕ್ಕವನು; ಆದರೆ ಧನಾನಂದನಂಥ ಬಲಾಢ್ಯ ಸಾರ್ವಭೌಮನ ಮೇಲೆ ಅವನ ಆಟವು ಹ್ಯಾಗೆ ಸಾಗಬೇಕು? ಮೊನ್ನೆ ಸುಮಾಲ್ಯನ ಪಟ್ಟಾಭಿಷೇಕವಾದಂದಿನಿಂದಂತು, ಮಾಯಾದೇವಿಯ ಶೋಕವು ಅನಿವಾರ್ಯವಾಗಿದೆ. ತಾಯಿಯ ಶೋಕವನ್ನು ನೋಡಲಾರದೆ ಪ್ರದ್ಯುಮ್ನದೇವನು ಮಗಧರಾಜ್ಯದ ಸ್ಥಿತಿಯನ್ನು ತಿಳಕೊಂಡು ಬರುವದಕ್ಕಾಗಿ ನನ್ನನ್ನು ಗುಪ್ತರೀತಿಯಿಂದ

ಕಳಿಸಿರುವನು. ಈಗ ಮುರಾದೇವಿಯೊಡನೆ ಧನಾನಂದರಾಜನು ಪ್ರೀತಿಯಿಂದ ಇರುವದರಿಂದ ನಾನು ಬಂದ ಕೆಲಸವು ಆದಂತಾಯಿತು. ಈ ಸುದ್ದಿಯನ್ನು ಹೇಳಿದರೆ, ಮಾಯಾದೇವಿಗೂ, ಪ್ರದ್ಯುಮ್ನದೇವನಿಗೂ ಬಹಳ ಸಂತೋಷವಾಗುವದು. ಇಲ್ಲಿಯವರೆಗೆ ಬಂದು ನಾನು ಮುರಾದೇವಿಗೆ ಭೆಟ್ಟಿಯಾಗಿ ಯೋಗಕ್ಷೇಮವನ್ನು ಕೇಳಿಕೊಂಡು ಹೋಗದಿರುವದು ಯೋಗ್ಯವಲ್ಲ; ಆದ್ದರಿಂದ ನಾನೊಂದು ಪತ್ರವನ್ನು ನಿನ್ನ ಕೈಯಲ್ಲಿ ಕೊಡುತ್ತೇನೆ, ಅದನ್ನು ನೀನು ಮುರಾದೇವಿಗೆ ಮುಟ್ಟಿಸಬೇಕು.

ಚಾಣಕ್ಯನ ಈ ಮಾರುದ್ದ ಮಾತುಗಳನ್ನು ಕೇಳುತ್ತ ವೃಂದಮಾಲೆಯು ಸುಮ್ಮನೇ ನಿಂತುಕೊಳ್ಳಬೇಕಾಯಿತು. ಇಷ್ಟು ದಿನ ಈ ಬ್ರಾಹ್ಮಣನು ಈ ಮಾತುಗಳನ್ನು ನನ್ನ ಮುಂದೆ ಯಾಕೆ ಹೇಳಿರಲಿಕ್ಕಿಲ್ಲೆಂದು ವೃಂದಮಾಲೆಯು ಆಶ್ಚರ್ಯಪಟ್ಟಳಲ್ಲದೆ, ತಾನು ವಸುಭೂತಿಯ ಮುಂದೆ ಹೇಳುತ್ತ ಬಂದಿದ್ದ ಸುದ್ದಿಗಳೊಳಗಿನ ಸಂಗತಿಗಳನ್ನು ಒಟ್ಟುಗೂಡಿಸಿ ಈತನು ಹೀಗೆ ಕೈಗಂಟಿನಿಂದ ಹುಟ್ಟಿಸಿ ಹೇಳಿರಬಹುದೆಂಬ ಸಂಶಯವು ಆಕೆಯಲ್ಲಿ ಎಷ್ಟುಮಾತ್ರವೂ ಉತ್ಪನ್ನವಾಗಲ್ಲ. ಇಷ್ಟುದಿನ ನನ್ನ ಮುಂದೆ ಯಾಕೆ ಹೇಳಲಿಲ್ಲೆಂದು ವೃಂದಮಾಲೆಯು ಕೇಳುವಷ್ಟರಲ್ಲಿ ಆ ಧೂರ್ತನು – ವೃಂದಮಾಲೇ, ನಾನು ಈಗ ಹೇಳಿದ ಸುದ್ದಿಯನ್ನು ವಸುಭೂತಿಯ ಮುಂದೆ ಹೇಳಬೇಡ ಕೆಂಡೆಯಾ! ''ನಾನು ಕೇಳು ನೀನು ಕೇಳು'' ಅನ್ನುತ್ತ ಸುದ್ದಿಯು ಅರಸನ ಕಿವಿಯವರೆಗೆ ಮುಟ್ಟಿದರೆ, ಕೆಲಸವು ಕೆಟ್ಟುಹೋದೀತು. ನೀನು ಪರಮ ಸ್ವಾಮಿನಿಷ್ಠಳಾದ್ದರಿಂದ ಸುದ್ದಿಯು ಯಾರ ಕಿವಿಗೂ ಹೋಗಲಿಕ್ಕಿಲ್ಲೆಂದು ನಿನ್ನ ಮುಂದೆ ಹೇಳಿದ್ದೇನೆ. ನಿನ್ನಂಥ ಸ್ವಾಮಿನಿಷ್ಠಳಿಂದಲ್ಲದೆ ಮತ್ತೆ ಯಾರಿಂದ ಈ ಗುಪ್ತಕಾರ್ಯವು ಸಾಧಿಸಬೇಕು? ವೃಂದಮಾಲೇ, ಮುರಾದೇವಿಯ ಮೇಲಿರುವ ನಿನ್ನ ನಿಜವಾದ ಪ್ರೇಮವನ್ನು ನೋಡಿ ನನಗೆ ಬಹಳ ಆನಂದವಾಗುತ್ತದೆ. ಇದ್ದರೆ ನಿನ್ನಂಥ ಸಖಿಯು ಇರಬೇಕು. ದೇವರು ನಿನಗೆ ದೀರ್ಘಾಯುಷ್ಯವನ್ನು ಕೊಡಲಿ. ಕಡೆಯತನಕ ಸ್ವಾಮಿ ಕಾರ್ಯವು ನಿನ್ನಿಂದ ಹೀಗೆಯೇ ಸಾಧಿಸಲಿ. ಇನ್ನು ನಾನು ಹೋಗುತ್ತೇನೆ; ಇಗೋ, ಈ ಪತ್ರವನ್ನು ತೆಗೆದುಕೋ, ಎಂದು ಹೇಳಿ ಚಾಣಕ್ಯನು ಪತ್ರವನ್ನು ಕೊಡಹೋದನು.

ಪಾಪ! ವೃಂದಮಾಲೆಯು ಏಕೋಭಾವದ ಹೆಣ್ಣುಮಗಳು. ಚಾಣಕ್ಯನ ಈ ಮಾತುಗಳನ್ನು ನಿಜವೆಂದು ನಂಬಿ, ತನ್ನ ಒಡೆಯಳು ತವರಮನೆಯ ಸುದ್ದಿಯನ್ನು ಕೇಳಿ ಆನಂದಪಟ್ಟಾಳೆಂಬ ಉಬ್ಬಿನಿಂದ ಚಾಣಕ್ಯನನ್ನು ಕುರಿತು–ಬ್ರಾಹ್ಮಣಶ್ರೇಷ್ಠಾ, ನೀನು ಕೊಡುವ ಪತ್ರವನ್ನು ಮುರಾದೇವಿಯ ಕೈಯಲ್ಲಿ ಕೊಟ್ಟೇನು, ಅದರಲ್ಲಿ ಮಹತ್ವವಿಲ್ಲ; ಆದರೆ ಪತ್ರವೇತಕ್ಕೆ? ನೀನು ಹೇಳಿರುವ ಮಾತುಗಳನ್ನೆಲ್ಲ ದೇವಿಯ ಮುಂದೆ ಹೇಳುವೆನು. ಅಷ್ಟರಿಂದಲೇ ಸಂತುಷ್ಟಳಾಗಿ ನಿನ್ನನ್ನು ಆಕೆಯು ಕಾಣಬಹುದು. ಬಾಯಿಂದ ಕೆಲಸವಾಗದಿದ್ದರೆ ಪತ್ರವು; ಎನ್ನಲು, ಚಾಣಕ್ಯನು ಗಹಗಹಿಸಿ ನಕ್ಕು–ವೃಂದಮಾಲೇ, ತವರಮನೆಯ ಸುದ್ದಿಯನ್ನು ಕೇಳಿ ಯಾವ ಹೆಂಗಸು ಬಾಯಿ ತೆರೆಯಲಿಕ್ಕಿಲ್ಲ? ನಿನ್ನಂಥ ಸ್ವಾಮಿನಿಷ್ಠಳಿಗೆ ಯಾವ ಕಾರ್ಯವು ಅಸಾಧ್ಯವು? ಇನ್ನು ನೀನು ನಡೆ. ನಾನೂ ಶಿವಾಲಯಕ್ಕೆ ಹೋಗುವೆನು; ಆದರೆ ವೃಂದಮಾಲೇ, ನಾನು ಹೇಳಿದ ಮಾತುಗಳ

ಸಂಬಂಧದಿಂದ ಮಂದಿಯ ಮುಂದೆ ಪಿಟ್ಟೆಂದು ಮಾತಾಡಬೇಡ ಕಂಡೆಯಾ? ಮುರಾದೇವಿಗೆ ಸೇರದವರು ಎಷ್ಟೋ ಜನರಿರುವರು. ಅವರಿಗೆ ಇಷ್ಟೇ ನೆವವು ದೇವಿಯ ಸುಖದಲ್ಲಿ ಮಣ್ಣು ಗೂಡಿಸಲಿಕ್ಕೆ ಸಾಕಾದೀತು, ಎಂದು ನುಡಿದು ಚಾಣಕ್ಯನು ಹೊರಟುಹೋದನು.

ಇತ್ತ ವೃಂದಮಾಲೆಯು ಮನಸ್ಸಿನಲ್ಲಿ ಹಲವು ವಿಚಾರಗಳನ್ನು ಮಾಡುತ್ತ ದಿನದಂತೆ ತನ್ನ ಒಡೆಯಳ ಮಂದಿರವನ್ನು ಪ್ರವೇಶಿಸಿದಾಗ, ಮುರಾದೇವಿಯು ಅರಸನ ಸೇವೆಯಲ್ಲಿ ತತ್ಪರಳಾಗಿದ್ದಳು. ಆಕೆಯು ಅರಕ್ಷಣವಾದರೂ ಪತಿಯನ್ನು ಅಗಲುತ್ತಿದ್ದಿಲ್ಲ. ಚಂಚಲ ಸ್ವಭಾವದ ಧನಾನಂದನ ಮನಸ್ಸನ್ನು ಸಂಪೂರ್ಣವಾಗಿ ಎಳಕೊಳ್ಳುವದೊಂದೇ ಆಕೆಯ ಕೆಲಸವಾಗಿತ್ತು. ಆಕೆಯು ಪತಿಯನ್ನು ಅಗಲಿ ಬರಲೊಲ್ಲಳು, ಸುದ್ದಿಯನ್ನು ಹೇಳಲಿಕ್ಕೆ ವೃಂದಮಾಲೆಗೆ ಆಸ್ಪದವು ದೊರೆಯಲೊಲ್ಲದು. ಹೀಗಾಗಿ ವೃಂದಮಾಲೆಯು ಉತ್ಕಂಠೆಯಿಂದ ಒಡೆಯಳ ಹಾದಿಯನ್ನು ನೋಡಿ ನೋಡಿ ಬೇಸತ್ತಳು; ಆದರೂ ಆ ಸ್ವಾಮಿನಿಷ್ಠ ದಾಸಿಯು ಹೊತ್ತು ಸಾಧಿಸಿ ತನ್ನ ಒಡೆಯಳಿಗೆ ಚಾಣಕ್ಯನ ವೃತ್ತಾಂತವನ್ನು ಹೇಳಿದಳು; ಆ ಸುದ್ದಿಯಿಂದ ಪರಿಣಾಮವೇನೂ ಆಗಲಿಲ್ಲ. ಮುರೆಯು ಸಂತೋಷಪಟ್ಟು ಚಾಣಕ್ಯನನ್ನು ಕರೆಸಿಕೊಳ್ಳುವದಂತು ಒತ್ತಟ್ಟಿಗಿರಲಿ, ಆಕೆಯು ತಿರಸ್ಕಾರವನ್ನು ಪ್ರಕಟಿಸಿ ಹುಬ್ಬು ಗಂಟಿಕ್ಕಿ ವೃಂದಮಾಲೆಯನ್ನು ಕುರಿತು– ಅಣ್ಣನಿಗೂ, ಅಪ್ಪನಿಗೂ ಇಷ್ಟು ಬೇಗನೇ ನನ್ನ ನೆನಪು ಆಯಿತೇ? ಹೋಗು, ನಾನು ನೆಟ್ಟಗಿದ್ದೇನೆಂದು ಆ ಬ್ರಾಹ್ಮಣನ ಮುಂದೆ ಹೇಳು, ಪ್ರತ್ಯಕ್ಷ ಭೆಟ್ಟಿಯಾಗಲಿಕ್ಕೆ ನನಗೆ ಕೂಡುವ ಹಾಗಿಲ್ಲ, ಎನ್ನಲು, ವೃಂದಮಾಲೆಗೆ ಪರಮಾಶ್ಚರ್ಯವಾಯಿತು. ಮರುದಿವಸ ಆಕೆಯು ಚಾಣಕ್ಯನಿಗೆ ಈ ಸುದ್ದಿಯನ್ನು ಹೇಳಿದಾಗ, ಅವನು ಬಹುಮಟ್ಟಿಗೆ ಆಶ್ಚರ್ಯಬಟ್ಟನು; ಆದರೆ ಆ ನಿರ್ಧಾರದ ಬ್ರಾಹ್ಮಣನು ಅಷ್ಟಕ್ಕೇ ಸುಮ್ಮನಾಗದೆ, ವೃಂದಮಾಲೆಯನ್ನು ಕುರಿತು – ಸ್ವಾಮಿನಿಷ್ಠ ದಾಸಿಯೇ, ಏನೂ ಚಿಂತೆಯಿಲ್ಲ, ಇಗೋ, ಈ ಪತ್ರವನ್ನಷ್ಟು ದಯಮಾಡಿ ದೇವಿಗೆ ಮುಟ್ಟಿಸು; ನನ್ನ ಪತ್ರವು ವ್ಯರ್ಥವಾಗಲಿಕ್ಕಿಲ್ಲ, ಎಂದು ಹೇಳಿದನು. ವೃಂದಮಾಲೆಗೆ ಚಾಣಕ್ಯನ ಮಾತು ವಿಶ್ವಸನೀಯವಾಗಿ ತೋರದ್ದರಿಂದ ಇದರಲ್ಲಿ ಅರ್ಥವಿಲ್ಲೆಂದು ಆಕೆಯು ಚಾಣಕ್ಯನಿಗೆ ಮೊದಲು ಹೇಳಿದಳು. ಆದರೆ ಚಾಣಕ್ಯನ ಮಾತನ್ನು ಮೀರಲಾರದೆ ಆಕೆಯು ಆತನ ತಾಡಾಲೆಯ ಪತ್ರವನ್ನು ತಕ್ಕೊಂಡು ಹೋದಳು. ಮರುದಿವಸ ಆ ಪತ್ರವನ್ನು ಹೊತ್ತು ಸಾಧಿಸಿ ಮುರಾದೇವಿಯ ಕೈಯಲ್ಲಿ ಕೊಡಲು, ಮುರೆಯು ಕವಕ್ಕನೆ ಮೈಮೇಲೆ ಹೋಗಿ–ಎಲ್ಲಿಯ ಹಾಳು ಪತ್ರವನ್ನು ತಂದಿರುತ್ತೀಯೇ? ಎಂದು ಒಟಗುಟ್ಟಿದಳು; ಆದರೆ ಪತ್ರ ಓದಿದಮೇಲೆ ಅವಳ ಮುಖ ಮುದ್ರೆಯು ಪ್ರಫುಲ್ಲಿತವಾಯಿತು. ಆಕೆಯು ಆದರದಿಂದ ವೃಂದಮಾಲೆಯನ್ನು ನೋಡಿ, ಪತ್ರ ಕೊಟ್ಟ ಬ್ರಾಹ್ಮಣನನ್ನು ಬೇಗನೇ ಕರಕೊಂಡು ಬಾರೆಂದು ಆಜ್ಞಾಪಿಸಿದಳು. ಪ್ರಿಯವಾಚಕರೇ, ಅಂಥ ಬಂಗಾಲಿಯ ವಿದ್ಯೆಯು ಚಾಣಕ್ಯನ ಆ ಪತ್ರದಲ್ಲಿ ಏನು ಇರಬಹುದು?

ಒಡೆಯಳ ಮಾತುಗಳನ್ನು ಕೇಳಿ ವೃಂದಮಾಲೆಗೆ ಪರಮಾಶ್ಚರ್ಯವಾಯಿತು. ಆಕೆಯು ತನ್ನ ಒಡೆಯಳನ್ನು ಕುರಿತು– ದೇವೀ, ಬ್ರಾಹ್ಮಣನನ್ನು ಕರೆತರೆಂದು ಅಪ್ಪಣೆಕೊಡಿಸೋಣ ವಾಯಿತು; ಆದರೆ ಕರತರುವದು ಎಲ್ಲಿಗೆ? ಎಷ್ಟು ಹೊತ್ತಿಗೆ ಕರೆತರಬೇಕು, ಎಂದು ಕೇಳಲು,

ಮುರೆಯು – ವೃಂದಮಾಲೇ, ಈ ಪತ್ರವನ್ನು ಕೊಟ್ಟ ಬ್ರಾಹ್ಮಣನನ್ನು ನೀನೆಲ್ಲಿ ಕಂಡೆ? ನೀನು ನನ್ನ ಸಖಿಯೆಂಬದು ಆತನಿಗೆ ಹ್ಯಾಗೆ ಗೊತ್ತಾಯಿತು? ಆತನು ನಿನಗೆ ಏನು ಹೇಳಿದನು? ಆತನು ಈಗ ಎಲ್ಲಿ ಇರುತ್ತಾನೆ? ಆತನು ಪಾಟಲಿಪುತ್ರಕ್ಕೆ ಬಂದು ಎಷ್ಟು ದಿವಸವಾಯಿತು? ಇತ್ಯಾದಿ ಪ್ರಶ್ನೆಗಳ ಸರವನ್ನೇ ವೃಂದಮಾಲೆಯ ಮುಂದೆ ಇಡುತ್ತಿರಲು, ವೃಂದಮಾಲೆಯು ನಡುವೇ ಬಾಯಿಹಾಕಿ, ತನಗೆ ಗೊತ್ತಿದ್ದ ಚಾಣಕ್ಯನ ಯಾವತ್ತು ವೃತ್ತಾಂತವನ್ನು ಹೇಳಿ, ಆ ಬ್ರಾಹ್ಮಣನು ಹೇಳಿದ ದೇವಿಯ ತವರಮನೆಯ ಸುದ್ದಿಯನ್ನು ಮತ್ತೊಮ್ಮೆ ಹೇಳಿದಳು. ಅದನ್ನು ಕೇಳಿ ಮುರೆಯು ಸಮಾಧಾನವನ್ನು ಪ್ರಕಟಿಸುತ್ತ —"ನಾನು ಬ್ರಾಹ್ಮಣನನ್ನಂತು ಕಾಣಲೇಬೇಕು; ಆದರೆ ಯಾವಾಗ ಕಾಣಬೇಕು? ಪತಿಯ ಅರಕ್ಷಣವಾದರೂ ನನ್ನನ್ನು ಅತ್ತಿತ್ತ ಆಗಗೊಡುವದಿಲ್ಲ" ಎಂದು ಹೇಳಿ ವೃಂದಮಾಲೆಯನ್ನು ಕುರಿತು–ಸಖೀ, ಇಂದು ಬ್ರಾಹ್ಮಣನನ್ನು ಇಲ್ಲಿಗೇ ಊಟಕ್ಕೆ ಕರಕೊಂಡು, ಬಾ; ಅಥವಾ ಹಾಗೆ ಮಾಡಬೇಡ, ಇಲ್ಲಿಯೇ ಇರಲಿಕ್ಕೆ ಕರೆದಿದ್ದೇನೆಂದು ಬ್ರಾಹ್ಮಣನಿಗೆ ಹೇಳು. ಆತನು ಯಜ್ಞಶಾಲೆಯಲ್ಲಿ ಇರಹತ್ತಿದನೆಂದರೆ, ಹೊತ್ತು ಸಾಧಿಸಿ ಬೇಕಾದಾಗ ಭೆಟ್ಟಿಯಾಗಲಿಕ್ಕೆ ಬರುವದು, ಎಂದು ನುಡಿಯುತ್ತಿರಲು, ಧನಾನಂದನಿಂದ ನಿಜವಾಗಿಯೇ ಆಕೆಗೆ ಆಮಂತ್ರಣವು ಬಂದಿತು. ಪ್ರಭುಗಳು ಕರೆಯುತ್ತಾರೆಂದು ಕಂಚುಕಿಯು ಹೇಳಿದಳು. ಆಗ ಮುರಾದೇವಿಯು ಅವಸರದಿಂದ ಹೋಗ ಹೋಗುತ್ತ ವೃಂದಮಾಲೆಯನ್ನು ಕುರಿತು–ಸಖೀ, ನಾನು ಹೇಳಿದಂತೆ ಆ ಬ್ರಾಹ್ಮಣನಿಗೆ ಯಜ್ಞಶಾಲೆಯಲ್ಲಿ ಬಂದು ಇರೆಂದು ಹೇಳು, ಎಂದು ಸ್ಪಷ್ಟವಾಗಿ ಆಜ್ಞಾಪಿಸಿ, ಪತಿಯಬಳಿಗೆ ಹೊರಟುಹೋದಳು.

ದೇವಿಯ ಮಾತುಗಳನ್ನು ಕೇಳಿ ವೃಂದಮಾಲೆಯು ಸಮಾಧಾನಪಟ್ಟು, ಚಾಣಕ್ಯನನ್ನು ಕರೆಯುವದಕ್ಕಾಗಿ ಕೈಲಾಸನಾಥನ ಮಂದಿರಕ್ಕೆ ಹೋದಳು. ಆಗ ಆತನು ಪ್ರಾತಃಕರ್ಮಗಳನ್ನು ಅದೇ ಮುಗಿಸಿಕೊಂಡು ವಿಚಾರಮಾಡುತ್ತ ಕುಳಿತಿದ್ದನು. ವೃಂದಮಾಲೆಯು ಬ್ರಾಹ್ಮಣನನ್ನು ನಮಿಸಿ ವಿನಯದಿಂದ —"ಬ್ರಾಹ್ಮಣಶ್ರೇಷ್ಠರೇ, ನಿಮ್ಮ ಯಾವತ್ತು ಸಾಮಾನುಗಳನ್ನು ತಕ್ಕೊಂಡು ತಮ್ಮ ಮಂದಿರಕ್ಕೇ ಬರಬೇಕೆಂದು ದೇವಿಯವರು ಹೇಳಿರುತ್ತಾರೆ. ತಮಗೆ ಇರುವದಕ್ಕಾಗಿ ಯಜ್ಞಶಾಲೆಯಲ್ಲಿ ಎಲ್ಲ ವ್ಯಸವ್ಥೆಯನ್ನು ಮಾಡಿರುತ್ತದೆ. ನೀವು ಅಲ್ಲಿಯೇ ಇದ್ದರೆ, ಅನುಕೂಲ ನೋಡಿ ಬೇಕಾದಾಗ ಮಾತಾಡಲಿಕ್ಕೂ, ತವರಮನೆಯ ಸುದ್ದಿಯನ್ನು ಕೇಳುವದಕ್ಕೂ ದೇವಿಯವರಿಗೆ ನೆಟ್ಟಗಾಗುತ್ತದಂತೆ" ಎಂದು ಹೇಳಲು, ಆರ್ಯ ಚಾಣಕ್ಯನು ಆಶ್ಚರ್ಯಚಕಿತ ನಾದಂತೆ ತೋರಿಸಿದನು. ವಸ್ತುತಃ ಆತನಿಗೆ ಅಷ್ಟು ಆಶ್ಚರ್ಯವಾಗಿದ್ದಿಲ್ಲ. ಮುರೆಯು ತನ್ನನ್ನು ಅಲ್ಲಿಯೇ ಇರಲಿಕ್ಕೆ ಕರೆಸಿದ್ದಕ್ಕಾಗಿ ಆತನಿಗೆ ಸ್ವಲ್ಪ ಆಶ್ಚರ್ಯವಾಗಿತ್ತು. ತನ್ನ ಪತ್ರ ಓದಿದ ಮೇಲೆ ಮುರಾದೇವಿಯು ತನ್ನ ದರ್ಶನವನ್ನು ತಕ್ಕೊಳ್ಳಲಿಕ್ಕೇಬೇಕೆಂದು ಆತನು ನಿಶ್ಚಯಿಸಿದ್ದನು. ಧನಾನಂದನ ವಂಶವನ್ನು ಬೇರುಸಹಿತ ಕಿತ್ತಬೇಕೆಂದು ಪ್ರತಿಜ್ಞೆ ಮಾಡಿದ ತಾನು, ಧನಾನಂದನ ಯಜ್ಞಶಾಲೆಯಲ್ಲಿದ್ದು, ಅವನ ಅನ್ನವನ್ನುಂಡು, ಅವನ ಮೇಲೆಯೇ ತಿರುಗಿ ಬೀಳಬೇಕಾ ಗುವದೆಂಬ ವಿಚಾರವು ಮನಸ್ಸಿನಲ್ಲಿ ಬಂದಕೂಡಲೇ, ಮುರೆಯ ಮಂದಿರದಲ್ಲಿರುವದಕ್ಕೆ ಅವನ ಮನಸ್ಸು ಹಿಂಜರಿಯಹತ್ತಿತು. ಇದಲ್ಲದೆ ಯಾರಾದರೂ ತನ್ನ ಗುರುತು ಹಿಡಿಯಬಹುದೆಂಬ

ಸಂಶಯವೂ ಅವನನ್ನು ಬಾಧಿಸಹತ್ತಿತು. ಆಗ ಆತನು ವೃಂದಮಾಲೆಗೆ–ಈಗ ನಾನು ನಿನ್ನ ಸಂಗಡ ಬರುವದಿಲ್ಲ. ಸಂಜೆಯಮುಂದೆ ಬರುವೆನು. ಆಗ ಮುರಾದೇವಿಯ ಭೆಟ್ಟಿಯಾದರೆ, ಮಾತಾಡಿಕೊಂಡು ಮತ್ತೆ ದೊಡ್ಡಹೊತ್ತಿನಲ್ಲಿ ಗುಡಿಗೆ ಬರುತ್ತೇನೆ. ಕೈಲಾಸನಾಥನ ಆಶ್ರಯವನ್ನು ಬಿಟ್ಟು ಅನ್ಯರ ಆಶ್ರಯವನ್ನು ಯಾರು ಮಾಡಬೇಕು? ಸಂಧ್ಯಾದಿ ಕರ್ಮಗಳನ್ನು ತೀರಿಸಿಕೊಂಡು ಮೂರು ತಾಸು ರಾತ್ರಿಯ ಸುಮಾರಕ್ಕೆ ನಾನು ಅಲ್ಲಿಗೆ ಬಂದಾಗ, ನೀನು ಮಂದಿರದ ಬಾಗಿಲಲ್ಲಿ ಕಾದಿದ್ದು, ನನ್ನನ್ನು ಎಲ್ಲಿಗೆ ಕರಕೊಂಡು ಹೋಗಬೇಕೋ, ಅಲ್ಲಿಗೆ ಕರಕೊಂಡು ಹೋಗು.

ಚಾಣಕ್ಯನ ಈ ಮಾತುಗಳನ್ನು ಕೇಳಿ ವೃಂದಮಾಲೆಯು ಬೆರಗಾದಳು. ಬ್ರಾಹ್ಮಣನು ಕರೆದಕೂಡಲೆ ಬಂದಾನೆಂದು ಆಕೆಯು ಭಾವಿಸಿದ್ದಳು. ಆಕೆಯು ಚಾಣಕ್ಯನ ಸಂಗಡ ಹೆಚ್ಚಿಗೇನೂ ಮಾತಾಡದೆ ''ಹಾಗೇ ಆಗಲೆ''ಂದು ಹೇಳಿ ಮನೆಗೆ ಹೋಗಲು, ಸಂಜೆಯಾದರೂ ಆಕೆಗೆ ಮುರಾದೇವಿಯ ದರ್ಶನವಾಗಲಿಲ್ಲ. ವೃಂದಮಾಲೆಯೇ ಮಂದಿರದ ಬಾಗಿಲಲ್ಲಿ ಕಾದಿದ್ದು ಕೊಂಡು, ಹೊತ್ತಿಗೆ ಸರಿಯಾಗಿ ಬಂದ ಚಾಣಕ್ಯನನ್ನು ಹೋಮಶಾಲೆಗೆ ಕರೆದೊಯ್ದು, ಆತನನ್ನು ಆಸನಾದ್ಯುಪಚಾರಗಳಿಂದ ಸತ್ಕರಿಸಿದಳು. ಧನಾನಂದನಿಗೆ ನಿದ್ದೆ ಹತ್ತಿದಬಳಿಕ ಮಧ್ಯರಾತ್ರಿಯ ಸುಮಾರಕ್ಕೆ ಮುರೆಯು ಚಾಣಕ್ಯನಿದ್ದೆಡೆಗೆ ಹೋದಳು. ಏಕಾಂತದಲ್ಲಿ ಬಹಳ ಹೊತ್ತಿನವರೆಗೆ ಅವರ ಸಂಭಾಷಣೆವು ಆಯಿತು. ಏನು ಮಾತಾಡಿದರೆಂಬದು ಅವರದು ಅವರಿಗೇ ಗೊತ್ತು. ಕಡೆಗೆ ಮುರಾದೇವಿಯು ಪತಿಯಬಳಿಗೆ ಹೋಗಹೋಗುತ್ತ–ನನಗೆ ನಿಮ್ಮಿಂದ ಸಹಾಯ ದೊರೆತರಂತೂ ನೆಟ್ಟಗೇ ಆಯಿತು. ದೊರೆಯದಿದ್ದರೂ ನನ್ನ ಪ್ರತಿಜ್ಞೆಯನ್ನು ಪೂರ್ಣಮಾಡಿಕೊಳ್ಳುವೆನು. ನನ್ನ ಕಾರ್ಯವನ್ನು ಈ ಮೊದಲೇ ನಾನು ಆರಂಭಿಸಿದ್ದೇನೆ. ನನ್ನ ಕಾರ್ಯವು ಸಫಲವಾಗದ್ದು ಸ್ವಲ್ಪ ದಿನಗಳಲ್ಲಿ ಕಣ್ಣಿಗೆ ಬೀಳಬಹುದು. ನೀವು ಹೇಳಿದ ಮಾತು ನಿಜವಾದರೆ ಮತ್ತೇನುಬೇಕು? ಇರಲಿ, ಇನ್ನು ರಾತ್ರಿ ನಾನು ಇಲ್ಲಿಗೆ ಬರುವದಿಲ್ಲ. ನೀವು ಬೆಳಗಾದ ಬಳಿಕ ಬರಬೇಕು, ಮತ್ತೆ ಮಾತಾಡೋಣವಂತೆ, ಎಂದು ಹೇಳಿ ಆಕೆಯು ಪತಿಯ ಬಳಿಗೆ ಹೊರಟುಹೋದಳು. ಈ ಮಾತುಗಳನ್ನು ಕೇಳಿ ವೃಂದಮಾಲೆಯು ಮುರೆಯ ವಿಷಪೂರ್ಣ ಹೃದಯಕ್ಕಾಗಿ ಗಡಗಡನೆ ನಡುಗಿದಳು!

ಚಾಣಕ್ಯನ ಕಾರಸ್ಥಾನ

ಮೇಲೆ ಹೇಳಿದಂತೆ ಚಾಣಕ್ಯ–ಮುರಾದೇವಿಯವರ ಸಂಭಾಷಣವಾದ ಬಳಿಕ, ಚಾಣಕ್ಯನು ಹೋಮಶಾಲೆಯಿಂದ ಹೊರಬಿದ್ದು, ಕೈಲಾಸನಾಥನ ಮಂದಿರದ ಕಡೆಗೆ ಸಾಗಿದನು. ಹಾದಿಯಲ್ಲಿ ಹೋಗಹೋಗುತ್ತ ಅವನ ಮನಸ್ಸಿನಲ್ಲಿ ಹಲವು ವಿಚಾರಗಳು ಉತ್ಪನ್ನವಾದವು. ಅವನು ಆನಂದದಿಂದ ತನ್ನೊಳಗೆ–ನಾನು ಬಂದ ಅಲ್ಪಾವಕಾಶದಲ್ಲಿಯೇ ನನ್ನ ಮನಸ್ಸಿನಲ್ಲಿ ಯೋಚಿಸಿದ್ದಕ್ಕಿಂತ ಹೆಚ್ಚು ಕಾರ್ಯಗಳು ಸಾಧಿಸಿದವು. ಇದಕ್ಕೆ ದೈವಾನುಕೂಲವೇ ಕಾರಣವೆಂದು

ಹೇಳಬಹುದು. ಇರಲಿ, ನಾನು ಇನ್ನು ಮುಂದೆ ಏನು ಮಾಡಬೇಕು? ನನ್ನೊಬ್ಬನಿಂದ ಮುಂದೆ ಕಾರ್ಯವು ಸಾಗದು; ಚಂದ್ರಗುಪ್ತನನ್ನು ಇಲ್ಲಿಗೆ ಕರತರಲಿಕ್ಕೇಬೇಕು; ಆದರೆ ಆತನನ್ನು ಇಡುವದೆಲ್ಲಿ? ಒಬ್ಬರಿದ್ದಲ್ಲಿ ಇಬ್ಬರಾದ ಬಳಿಕ ಲಂಗೋಟಿಯ ಸಂಸಾರದಂತೆ ಎಲ್ಲ ಸಂಗತಿಗಳ ವಿಸ್ತಾರವಾಗತಕ್ಕದ್ದೇ. ನಾನಂತು ಪ್ರತಿಜ್ಞಾಪೂರ್ತಿಗಾಗಿ ರಾಜ್ಯಕ್ರಾಂತಿಯನ್ನುಂಟುಮಾಡಿ, ಚಂದ್ರಗುಪ್ತನನ್ನು ಮಗಧರಾಜ್ಯದ ಸಿಂಹಾಸನದಮೇಲೆ ಕುಳ್ಳಿರಿಸಲಿಕ್ಕೆ ಮುಂದುವರಿದವನು. ಅಂದಬಳಿಕ ನನಗೆ ವಿಪುಲವಾದ ಧನಸಹಾಯಬೇಕು, ಜನಸಹಾಯವುಬೇಕು; ಆದರೆ ನನ್ನಂಥ ದರಿದ್ರ ಬ್ರಾಹ್ಮಣನಿಗೆ ಧನವೆಲ್ಲಿಂದ ಬರಬೇಕು? ಧನವೇ ಇಲ್ಲದೆ ಬಳಿಕ ತ್ರಿವಿದ ಜನರ ಸಂಪಾದನವು ಹ್ಯಾಗಾಗಬೇಕು? ಇಲ್ಲಿಗೆ ಬಂದಕೂಡಲೆ ವಸುಭೂತಿಯ ಪರಿಚಯವಾಗಿ, ಆತನಿಂದ ನನಗೆ ಬಹುದೊಡ್ಡ ಸಹಾಯವು ಆಗಿದೆ. ಮುಂದಾದರೂ ಆ ಸತ್ಯನಿಷ್ಠನಾದ ಬುದ್ಧ ಭಿಕ್ಷುವಿನ ಸಹಾಯದ ಅವಶ್ಯಕತೆಯು ಇರುವದು. ಸಿದ್ಧಾರ್ಥಕನಂತು ಬಿದ್ದ ಕೆಲಸಮಾಡಲಿಕ್ಕೆ ಹಿಂದೆಮುಂದೆ ನೋಡದವನು. ವೃಂದಮಾಲೆಯ ಪ್ರಸನ್ನತೆಯಂತು ಅತ್ಯಾವಶ್ಯಕವಾದದ್ದು. ವಸುಭೂತಿಯ ಮನಸ್ಸನ್ನೊಂದು ನನ್ನ ಕಡೆಗೆ ಎಳಕೊಂಡಿದ್ದರೆ, ಆತನಾಧೀನರಾದ ಸಿದ್ಧಾರ್ಥಕ – ವೃಂದಮಾಲೆಯರ ಚಿಂತೆಯನ್ನು ನಾನು ಮಾಡುವ ಕಾರಣವಿಲ್ಲ; ಆದ್ದರಿಂದ ವಸುಭೂತಿ ಯನ್ನು ಮರುಳು ಮಾಡತಕ್ಕದ್ದು.

ಈ ಮೇರೆಗೆ ಯೋಚಿಸುತ್ತ ಚಾಣಕ್ಯನು ವಸುಭೂತಿಯ ವಿಹಾರಕ್ಕೆ ಹೋದನು. ಆದರೋಪಚಾರಗಳು ಆದಬಳಿಕ ಚಾಣಕ್ಯನು ವಸುಭೂತಿಗೆ ಬುದ್ಧಭಿಕ್ಷೋ, ನಿನ್ನೊಡನೆ ಗುಪ್ತವಾಗಿ ಕೆಲವು ಮಾತುಗಳನ್ನು ಆಡತಕ್ಕದ್ದದೆ, ಎಂದು ಹೇಳಲು, ವಸುಭೂತಿಯು ಚಾಣಕ್ಯ ನನ್ನು ಏಕಾಂತ ಸ್ಥಳಕ್ಕೆ ಕರೆದೊಯ್ದನು. ಆಗ ಚಾಣಕ್ಯನು ಆ ಬುದ್ಧಭಿಕ್ಷುವನ್ನು ಕುರಿತು– ಸಾಧುವರ್ಯನೇ, ನಿನ್ನಂಥ ಧರ್ಮಶೀಲನ ಮುಂದೆ ಈವೊತ್ತಿನವರೆಗೆ ನನ್ನ ನಿಜವಾದ ವೃಂತ್ತಾಂತವನ್ನು ಹೇಳದೆ ಇದ್ದದ್ದಕ್ಕಾಗಿ ಬಹಳ ಪಶ್ಚಾತ್ತಾಪವಾಗಿದೆ. ಪರಸ್ಥಳಕ್ಕೆ ಹೋದವನು ಒಮ್ಮೆಲೆ ತನ್ನ ವೃತ್ತಾಂತವನ್ನು ಹೇಳಬಾರದೆಂದು ನೀತಿಯು ಇರುವದನ್ನು ನೀನು ಬಲ್ಲಿಯಷ್ಟೇ? ಈ ಅಪರಾಧಕ್ಕಾಗಿ ನನ್ನನ್ನು ಕ್ಷಮಿಸು. ನಾನು ಕಿರಾತರಾಜನಾದ ಪ್ರದ್ಯುಮ್ನದೇವನಿಂದ ಕಳಿಸಲ್ಪಟ್ಟ ಬ್ರಾಹ್ಮಣನು. ಧನಾನಂದರಾಜನು ಮುರಾದೇವಿಯ ಮಗನನ್ನು ಕೊಲ್ಲಿಸಿ, ಆಕೆಯನ್ನು ಸೆರೆಯಲ್ಲಿಟ್ಟು ಇಂದಿಗೆ ಹದಿನಾರು–ಹದಿನೇಳು ವರ್ಷಗಳಾಗಿದ್ದು ಯಾವ ವರ್ತಮಾನವೂ ತಿಳಿಯಲಿಲ್ಲ. ಆದ್ದರಿಂದ ಮುರಾದೇವಿಯ ತಾಯಿಯಾದ ಮಾಯಾದೇವಿಯೂ, ಅಣ್ಣನಾದ ಪ್ರದ್ಯುಮ್ನದೇವನೂ ಚಡಪಡಿಸಿ ದೇವಿಯ ವೃತ್ತಾಂತವನ್ನು ತಿಳಿದುಬಾರೆಂದು ನನ್ನನ್ನು ಕಳಿಸಿದರು. ನಿನ್ನಂಥ ಧರ್ಮನಿಷ್ಠನಾದ ಪವಿತ್ರಭಿಕ್ಷುವನ್ನು ವಂಚಿಸಿದ್ದಕ್ಕಾಗಿ ನನಗೆ ಬಹಳ ಪಶ್ಚಾತ್ತಾಪ ವಾಗಿದೆ, ಅನ್ನಲು, ಒಂದೂ ಪಾಪವನ್ನರಿಯದ ವಸುಭೂತಿಯು–ಬ್ರಾಹ್ಮಣಶ್ರೇಷ್ಠಾ, ಏನೂ ಚಿಂತೆಯಿಲ್ಲ. ನೀನು ನೀತಿಗೆ ವಿರುದ್ಧವಾಗಿ ಆಚರಿಸಿರುವದಿಲ್ಲ. ಜಾಣನಾದವನು ಅಪರಿಚಿತರ ಮುಂದೆ ತಾನು ಯಾರು, ಏನು, ಯಾತಕ್ಕೆ ಬಂದಿರುವೆನು ಮುಂತಾದವನ್ನು ಒಮ್ಮೆಲೆ ಹೇಳತಕ್ಕದ್ದಲ್ಲ, ಎಂದು ಹೇಳಿ ಚಾಣಕ್ಯನನ್ನು ಸಮಾಧಾನಗೊಳಿಸುತ್ತಿರಲು, ವೃಂದಮಾಲೆಯು

ಅಲ್ಲಿಗೆ ಬಂದಳು. ಆಕೆಯನ್ನು ನೋಡಿ ಚಾಣಕ್ಯನು ವಸುಭೂತಿಗೆ – ಭಿಕ್ಷೋ, ಈ ನಿನ್ನ ಪ್ರಿಯಶಿಷ್ಯಳಿಂದ ನನಗಾದ ಸಹಾಯವನ್ನು ಎಂದೂ ಮರೆಯುವಹಾಗಿಲ್ಲ, ನಾನು ನನ್ನ ನಿಜವಾದ ವೃತ್ತಾಂತವನ್ನು ಈಕೆಗೆ ತಿಳಿಸಲು, ಈಕೆಯು ನನಗೆ ಮುರಾದೇವಿಯ ದರ್ಶನವನ್ನು ಮಾಡಿಸಿ ನನ್ನ ಯಾವತ್ತು ಕೆಲಸವನ್ನು ಮಾಡಿಸಿಕೊಟ್ಟಳು. ಈಕೆಯನ್ನು ಎಷ್ಟು ಶ್ಲಾಘಿಸಿದರೂ ಸ್ವಲ್ಪವೇ ಇರುತ್ತದೆ. ನಿಮ್ಮಂಥ ಸಾಧುಸ್ವಭಾವದ ಧರ್ಮಶೀಲರ ಬಳಿಯಲ್ಲಿ ವೃಂದಮಾಲೆ ಯಂಥ ಪರೋಪಕಾರಿಗಳಿರುವದು ಅತ್ಯವಶ್ಯವು. ಕಿರಾತರಾಜನಿಂದ ಕಳಿಸಲ್ಪಟ್ಟ ನಾನು ನಿಮ್ಮ ಈ ಶಿಷ್ಯಳ ಪುಣ್ಯದಿಂದ ಒಳ್ಳೆಯ ಸುದ್ದಿಯನ್ನು ತಿಳಕೊಂಡು ಊರಿಗೆ ಹೋಗುತ್ತೇನೆ, ಎಂದು ನೆಲೆಯಿಲ್ಲದೆ ವೃಂದಮಾಲೆಯನ್ನು ಹೊಗಳಿದನು. ಅದನ್ನು ಕೇಳಿ ಆಕೆಯು ಮಬ್ಬಿಗೆ ಬಿದ್ದು ಉಬ್ಬಿ ತಾನು ಯಾತಕ್ಕೆ ಬಂದೇನೆಂಬದನ್ನೇ ಮರೆತು ಬಿಟ್ಟಳು. ಇತ್ತ ಚಾಣಕ್ಯನು ವಸುಭೂತಿಗೆ – ಭಿಕ್ಷುಶ್ರೇಷ್ಠನೇ, ನಾನು ಆಶ್ರಮವನ್ನು ಬಿಟ್ಟುಬಂದು ಬಹಳ ದಿವಸವಾದದ್ದರಿಂದ ಕುಲಪತಿಗಳು ಸಿಟ್ಟು ಮಾಡಬಹುದು. ಹ್ಯಾಗೂ ಕೆಲಸವಾಗಿದೆ, ಇಂದೇ ಹೊರಡುವೆನು, ಮತ್ತೆ ಬೇಗನೇ ತಮ್ಮ ದರ್ಶನವಾಗುವ ಯೋಗವಿದ್ದಂತೆ ತೋರುತ್ತದೆ; ಯಾಕಂದರೆ, ಪ್ರದ್ಯುಮ್ನ ದೇವನು ತನ್ನ ಮಗನಾದ ಚಂದ್ರಗುಪ್ತನನ್ನು ರಾಜ ಧರ್ಮದ ಅಭ್ಯಾಸಕ್ಕಾಗಿ ಪಾಟಲಿಪುತ್ರಕ್ಕೆ ಕಳಿಸಬೇಕೆನ್ನುತ್ತಿದ್ದನು. ಚಂದ್ರಗುಪ್ತನ ವಿದ್ಯಾಭ್ಯಾಸವು ಮುಗಿದಿರುವದರಿಂದ ದೇಶಪರ್ಯ ಟನಕ್ಕಾಗಿ ಆತನನ್ನು ಬೇಗನೆ ಕಳಿಸುವ ಸಂಭವವು ವಿಶೇಷವಾಗಿರುತ್ತದೆ. ಒಂದು ಪಕ್ಷದಲ್ಲಿ ರಾಜಪುತ್ರನ ಸಂಗಡ ಹೋಗಲಿಕ್ಕೆ ನನ್ನನ್ನೇ ನಿಯಮಿಸಿದರೆ, ರಾಜಪುತ್ರನೊಡನೆ ಇಲ್ಲಿಗೆ ಬಂದಾಗ ನಿಮ್ಮನ್ನು ನಾನು ಕಂಡೇಕಾಣುವೆನು.

ಈ ಮೇರೆಗೆ ನುಡಿದ ಚಾಣಕ್ಯನು ವಸುಭೂತಿಯ ಅನುಮತಿಯಿಂದ ಕೈಲಾಸನಾಥನ ಮಂದಿರಕ್ಕೆ ಹೋಗುವದಕ್ಕಾಗಿ ಚಟ್ಟನೆ ಎದ್ದನು; ಮುರಾದೇವಿಯ ವಿಷಪೂರ್ಣಹೃದಯದ ಬಗ್ಗೆ ಸಂಶಯಪಡುತ್ತಿದ್ದ ವೃಂದಮಾಲೆಯು, ಚಾಣಕ್ಯನನ್ನು ಕೇಳಿ ತನ್ನ ಸಂಶಯದ ನಿವಾರಣ ಮಾಡಿಕೊಳ್ಳಬೇಕೆಂದು ಯೋಚಿಸುತ್ತ ಸುಮ್ಮನೆ ಕುಳಿತುಕೊಳ್ಳಬೇಕಾಯಿತು. ಆಕೆಗೆ ಮಾತಾಡಲಿಕ್ಕೆ ಆಸ್ಪದವೇ ದೊರೆಯಲಿಲ್ಲ, ಕಡೆಗೆ ವೃಂದಮಾಲೆಯು – ಇಂಥ ಪವಿತ್ರ ಬ್ರಾಹ್ಮಣನು ರಾಜ್ಯ ಕುಲದ ಘಾತಕ್ಕೆ ಮನಸ್ಸು ಮಾಡಬಹುದೇ? ಇದು ತೀರಾ ಅಸಂಭವವು. ನಾನೇ ಏನಾದರೂ ರಾತ್ರಿ ನಿದ್ದೆಗಣ್ಣಿನಲ್ಲಿ ಕೇಳಿದ್ದೇನು, ಎಂದು ತನ್ನ ಮನಸ್ಸಿನ ಸಮಾಧಾನವನ್ನು ಮಾಡಿಕೊಂಡಳು. ಚಾಣಕ್ಯನು ಶಿವಾಲಯಕ್ಕೆ ಹೋಗಿ ನಿತ್ಯಕರ್ಮಗಳನ್ನು ತೀರಿಸಿಕೊಂಡು, ಭೋಜನೋತ್ತರ ಪ್ರಯಾಣವನ್ನು ಬೆಳಿಸಿದನು. ಹಾದಿಯಲ್ಲಿ ಹೋಗ ಹೋಗುತ್ತ ಅವನ ಮನಸ್ಸಿನಲ್ಲಿ ಹಲವು ವಿಚಾರಗಳು ಉತ್ಪನ್ನವಾದವು. ಚಂದ್ರಗುಪ್ತನನ್ನು ಕರತಂದು, ನಿನ್ನ ಅಣ್ಣನ ಮಗನೆಂದು ಹೇಳಿ ಆತನನ್ನು ಮುರಾದೇವಿಯ ಬಳಿಯಲ್ಲಿಯೇ ಇಡಬೇಕೆಂದು ಆತನು ಯೋಚಿಸಿದನು. ಆದರೆ ರಾಜರೀತಿಗೆ ತಕ್ಕ ಪೋಷಾಕುಗಳೂ, ಅರಸೊತ್ತಿಗೆಗೆ ಒಪ್ಪಬಹುದಾದ ದಾಸದಾಸಿಯರೇ ಮೊದಲಾದ ವೈಭವದರ್ಶಕ ಸಂಗತಿಗಳ ಅಟ್ಟಹಾಸವೂ ಮನಸ್ಸಿನಲ್ಲಿ ಬಂದಕೂಡಲೆ ಆ ದರಿದ್ರ ಬ್ರಾಹ್ಮಣನು ತನ್ನ ದಾರಿದ್ರ್ಯವನ್ನು ನೆನಸಿ ಅಸಮಾಧಾನಪಟ್ಟನು. ತನ್ನಂಥ ದರಿದ್ರನು,

ಚಿಕ್ಕಂದಿನಲ್ಲಿ ಗೌಳಿಗರ ಮನೆಯಲ್ಲಿ ಬೆಳೆದ ಚಂದ್ರಗುಪ್ತನನ್ನು ಮುರಾದೇವಿಯ ಬಳಿಯಲ್ಲಿ ಡುವದು ಹ್ಯಾಗೆ ಶಕ್ಯವಾದೀತೆಂದು ಆತನು ಚಿಂತಿಸಿದನು. ಚಂದ್ರಗುಪ್ತನು ತನ್ನ ಆಶ್ರಮದಲ್ಲಿರುವ ಕ್ಷತ್ರಿಯ, ಭಿಲ್ಲ, ಖಾಸ, ಗೊಂಡ, ಖೋಂಡ ಮೊದಲಾದವರ ಮನಸ್ಸನ್ನೆಳೆದುಕೊಂಡು, ವೀರ ಸಮುದಾಯವನ್ನು ಬೆಳೆಸಿರುವನೋ, ಇಲ್ಲವೆ ಅವರೊಡನೆ ಜಗಳಾಡಿ ಆಶ್ರಮವನ್ನು ಹಾಳಗೆಡವಿರುವನೋ ಎಂಬ ಚಿಂತೆಯು ಅವನ ಮನಸ್ಸಿನಲ್ಲಿ ಉತ್ಪನ್ನವಾಯಿತು. ಈ ಬಗೆಯ ಹಲವು ಚಿಂತೆಗಳಿಂದ ಪೀಡಿತನಾದ ಆರ್ಯ ಚಾಣಕ್ಯನು ಸಾವಕಾಶ ಹೆಜ್ಜೆಗಳನ್ನಿಡುತ್ತ ಸಾಗಿದ್ದನು. ತಿರುಗಿ ಕೇಳಿದರೆ, ಚಾಣಕ್ಯನಂಥ ನಿಸ್ಪೃಹಿಗೆ ಜಗತ್ತೇ ತೃಣಪ್ರಾಯವಾಗಿತ್ತು ಅವನಷ್ಟು ನಿಸ್ಪೃಹಿಯೂ, ನಿರಾಕಾಂಕ್ಷಿಯೂ ಆದ ಬ್ರಾಹ್ಮಣನು ಆ ಕಾಲದಲ್ಲಿ ಮತ್ತೊಬ್ಬನಿದ್ದಿಲ್ಲ; ಆದರೆ ಸ್ವೀಕೃತ ಕಾರ್ಯವನ್ನು ಕೊನೆಗಾಣಿಸುವದಕ್ಕಾಗಿ ಆತನಿಗೆ ಧನ ಸಹಾಯದ ಹಾಗು ಜನ ಸಹಾಯದ ಅವಶ್ಯಕತೆಯಿತ್ತು ಆಶ್ರಮಸ್ಥ ಚಾಣಕ್ಯನಿಗೆ ತನ್ನ ಯೋಗಕ್ಷೇಮದ ಚಿಂತೆಯಿದ್ದಿಲ್ಲ. ಶಿಷ್ಯರು ತಂದುಕೊಟ್ಟ ಗಡ್ಡೆ-ಗೆಣಸುಗಳಿಂದ ಆತನ ಉದರ ಪೋಷಣವಾಗುತ್ತಿತ್ತು, ಶಿಷ್ಯರು ಬೇಟೆಯಾಡಿ ತಮ್ಮ ಉದರ ಪೋಷಣವನ್ನು ಮಾಡಿಕೊಳ್ಳುತ್ತಿದ್ದರು. ಇದಲ್ಲದೆ ಭಿಲ್ಲ, ಕರಾತಾದಿಕರ ಅರಸರು ಈ ನಿಸ್ಪೃಹ ಬ್ರಾಹ್ಮಣನು ತಮ್ಮ ಮಕ್ಕಳಿಗೆ ವಿದ್ಯೆ ಕಲಿಸುತ್ತಾನೆಂದು ತಿಳಿದು ಯಥಾಶಕ್ತಿ ಸಹಾಯವನ್ನು ಮಾಡುತ್ತಿದ್ದರು. ಆದರೆ ಈಗ ರಾಜ್ಯ ಕಾರಸ್ಥಾನದಲ್ಲಿ ಸೇರಿದ್ದ ಚಾಣಕ್ಯನಿಗೆ ಇಂಥ ಹರಕಬರಕ ಸಹಾಯದಿಂದೇನು ಪ್ರಯೋಜನವಾಗಬೇಕು? ಆ ಬ್ರಾಹ್ಮಣನಿಗೆ ಸದ್ಯಕ್ಕೆ ಧನದ ರಾಶಿಗೆ ರಾಶಿಯೇ ಬೇಕಾಗಿತ್ತು, ಕಡೆಗೆ ಚಿಂತಾಮಗ್ನನಾದ ಚಾಣಕ್ಯನಿಗೆ ಒಂದು ವಿಚಾರವು ಹೊಳೆಯಿತು; ಪರಾಕ್ರಮಿಗಳಾದ ತನ್ನ ಶಿಷ್ಯರಿಂದ ಗ್ರೀಕರನ್ನು ಸುಲಿದು ಧನವನ್ನು ಸಂಪಾದಿಸಬೇಕೆಂದು ಆತನು ನಿಶ್ಚಯಿಸಿದನು.

ಚಾಣಕ್ಯನು ಆಶ್ರಮದ ಪ್ರದೇಶವನ್ನು ಹೊಕ್ಕಕೂಡಲೇ ಒಮ್ಮಿಂದೊಮ್ಮೆ ಅವನ ಮನಸ್ಸು ಆನಂದಿತವಾಯಿತು. ಈ ಶುಭ ಚಿನ್ನವು ಯಾಕೆ ತೋರಿರಬಹುದೆಂದು ಆ ತೇಜಸ್ವಿಯಾದ ಬ್ರಾಹ್ಮಣನು ವಿಚಾರಮಾಡುತ್ತ ಮುಂದಕ್ಕೆ ಸಾಗಿರಲು, ದೂರ ಆನಂದ ದರ್ಶಕವಾದ ಕಲಕಲಾಟವು ಕೇಳಿಸಹತ್ತಿತ್ತು, ಬ್ರಾಹ್ಮಣನು ಈ ಗದ್ದಲವು ಯಾತರದಿರ ಬಹುದೆಂದು ಶಂಕಿಸುತ್ತ ತನ್ನ ಶಿಷ್ಯರು ಕಾಡ ಹಂದಿಯನ್ನಾಗಲಿ, ಹುಲಿಯನ್ನಾಗಲಿ, ಸಿಂಹವನ್ನಾಗಲಿ ಹೊಡೆದುಕೊಂಡು ಬಂದಿರಬಹುದೆಂದು ಕಲ್ಪಿಸುತ್ತ, ತನ್ನ ತಪೋವನವನ್ನು ಹೊಕ್ಕನು. ಈ ಆನಂದದ ಪ್ರಸಂಗದಲ್ಲಿಯೇ ತಾನು ತನ್ನ ಶಿಷ್ಯರನ್ನು ಕಂಡು ಅವರ ಆನಂದವನ್ನು ಇನ್ನಿಷ್ಟು ಹೆಚ್ಚಿಸಬೇಕೆಂದು ಆತನು ಬಗೆದನು. ಚಾಣಕ್ಯನು ಶಿಷ್ಯರ ಸಮೀಪಕ್ಕೆ ಹೋಗಿ ನೋಡುತ್ತಾನೆ, ನಡುವೆ ಚಂದ್ರಗುಪ್ತನು ಕುಳಿತಿದ್ದು, ಉಳಿದವರು ಅವನನ್ನು ಸುತ್ತುಗಟ್ಟಿದ್ದರು. ನಾಲ್ವರು ಗ್ರೀಕರನ್ನು ಹೆಡೆಮುರಿಗೆ ಕಟ್ಟಿ ಒತ್ತಟ್ಟಿಗೆ ನಿಲ್ಲಿಸಿದ್ದರು. ಚಂದ್ರಗುಪ್ತನ ಮುಂದೆ ಇದ್ದ ಸುವರ್ಣ ನಾಣ್ಯಗಳ ರಾಶಿಯಿಂದ ನೋಡುವವರ ಕಣ್ಣುಗಳು ಕುಕ್ಕುತ್ತಿದ್ದವು. ಈ ಕಾಲದಲ್ಲಿ ತಮ್ಮ ಗುರುಗಳು ಇದ್ದರೆ, ತಮ್ಮ ಪರಾಕ್ರಮವನ್ನು ನೋಡಿ ಆನಂದ ಪರವಶರಾಗುತ್ತಿದ್ದರು.

ಈ ದ್ರವ್ಯವು ಗುರುದಕ್ಷಿಣೆಗಾಗಿ ಕಟ್ಟಿಟ್ಟ ಮುಡುಪೆಂತಲೂ ಆ ಶಿಷ್ಯವರ್ಯರು ತಮ್ಮ ತಮ್ಮೊಳಗೆ ಮಾತಾಡಿಕೊಳ್ಳುತ್ತಿದ್ದರು. ಇದೆಲ್ಲ ಏಕಸಮಯಾವಚ್ಛೇದದಿಂದ ಅನುಭವಕ್ಕೆ

ಬಂದಕೂಡಲೇ ಚಾಣಕ್ಯನು ಆನಂದಭರಿತನಾಗಿ ಭರದಿಂದ ಮುಂದಕ್ಕೆ ಸಾಗಿ–ಶಿಷ್ಯೋತ್ತಮರೇ, ದೀರ್ಘಾಯುಷಿಗಳಾಗಿರಿ. ನನ್ನ ಮೇಲಿನ ನಿಮ್ಮ ಈ ಅನಿವಾರ್ಯ ಭಕ್ತಿಯನ್ನು ನೋಡಿ ಸಂತುಷ್ಟನಾದೆನು, ಎಂದು ನುಡಿದನು. ಗುರುಗಳ ಮಾತು ಹೊರಟಿರಲು, ಅವರೇ ಪ್ರತ್ಯಕ್ಷ ಬಂದದ್ದನ್ನು ನೋಡಿ ಆ ಶಿಷ್ಯಶಿಖಾಮಣಿಗಳು ಆಶ್ಚರ್ಯಮಗ್ನರಾದರು. ಆನಂದಭರಿತವಾಗಿದ್ದ ಶಿಷ್ಯಮಂಡಲವು, ಆಶ್ಚರ್ಯದ ಭರವು ಕೆಲಮಟ್ಟಿಗೆ ತಗ್ಗಿದಮೇಲೆ ಅತ್ಯಂತ ಭಕ್ತಿಯಿಂದ ಗುರುಚರಣಕ್ಕೆರಗಿತು. ಚಾಣಕ್ಯನು ಸುಖಾಸನದಲ್ಲಿ ಮಂಡಿಸಿದ ಕೂಡಲೇ ವೀರವ್ರತನೆಂಬುವನು ತನ್ನ ಗುರುವನ್ನು ಕುರಿತು–ಗುರುವರ್ಯರೇ, ಇಂದು ಚಂದ್ರಗುಪ್ತನು ಐದುನೂರು – ಆರುನೂರು ಜನ ಗ್ರೀಕರ ಮೇಲೆ ಸಾಗಿ ಹೋಗಿ ಅವರನ್ನು ಸೋಲಿಸಿದನು. ಎಷ್ಟೋಜನರು ಯುದ್ಧದಲ್ಲಿ ಮರಣ ಹೊಂದಿದರು. ಎಷ್ಟೋ ಜನರು ಓಡಿಹೋದರು. ಈ ನಾಲ್ವರನ್ನು ಹೆಡ ಮುರಿಗೆ ಕಟ್ಟಿಕೊಂಡು ತಂದಿರುತ್ತೇವೆ. ಈ ಗ್ರೀಕರು ಯಾವದೋ ರಾಜ್ಯವನ್ನು ಒಳನುಗ್ಗಿ, ದೀನರಾದ ಪ್ರಜೆಗಳನ್ನು ಸುಲಿದು ಸುಲಿಗೆಯನ್ನು ತಮ್ಮ ಒಡೆಯನಾದ ಸುಲಕ್ಷನಿಕತ್ತರನಿಗೆ ಮುಟ್ಟಿಸುವದಕ್ಕಾಗಿ ಒಯ್ಯುತ್ತಿದ್ದರು. ಅದನ್ನು ಸುಲಿದು ತಂದಿರುತ್ತೇವೆ. ಇಂದಿನ ಚಂದ್ರಗುಪ್ತನು ಪರಾಕ್ರಮವನ್ನೇನು ವರ್ಣಿಸಲಿ, ಎಂದು ನುಡಿಯುತ್ತಿರಲು, ಚಂದ್ರಗುಪ್ತನು ನಡುವೇ ಬಾಯಿಹಾಕಿ–ಗುರುವರ್ಯರೇ, ಸುಮ್ಮನೇ ಇವರು ನನ್ನ ಒಬ್ಬನ ಹೆಸರನ್ನೇ ತಕ್ಕೊಳ್ಳುತ್ತಾರೆ; ಆದರೆ ಈದಿನ ಇವರೆಲ್ಲರೂ ಅದ್ಭುತ ಪರಾಕ್ರಮವನ್ನು ಪ್ರಕಟಿಸಿರುತ್ತಾರೆ. ಅದು ಹೇಗೇ ಇರಲಿ. ಈ ದ್ರವ್ಯವನ್ನೆಲ್ಲ ಗುರುದಕ್ಷಿಣೆಯಾಗಿಯೂ, ಈ ಗ್ರೀಕರನ್ನು ದಾಸರಾಗಿಯೂ ಗುರುಚರಣಕ್ಕೆ ಅರ್ಪಿಸಬೇಕೆಂದು ನಾವು ನಿಶ್ಚಯಿಸಿರುತ್ತೇವೆ. ನಾವು ಬಹು ಪುಣ್ಯಶಾಲಿ ಗಳಾದ್ದರಿಂದ ಅನಾಯಾಸವಾಗಿ ತಮ್ಮ ಆಗಮನವಾಗಿದೆ. ದಯವಿಟ್ಟು ಈ ದ್ರವ್ಯವನ್ನು ಸ್ವೀಕರಿಸಿ ನಮ್ಮನ್ನು ಅನುಗ್ರಹಿಸಬೇಕು, ಎಂದು ಪ್ರಾರ್ಥಿಸಿದನು. ಚಂದ್ರಗುಪ್ತನ ಈ ಮಾತುಗಳು ಮುಗಿಮುಗಿಯುವದರೊಳಗೆ ಯಾವತ್ತು ಶಿಷ್ಯರು "ಗುರುವರ್ಯರ ಜಯ ಜಯಕಾರವಿರಲಿ," "ಆರ್ಯಚಾಣಕ್ಯರ ಜಯ ಜಯಕಾರವಿರಲಿ" ಎಂದು ಗಂಭೀರ ಧ್ವನಿಯಿಂದ ಜಯಘೋಷ ಮಾಡಿದರು.

ಶಿಷ್ಯರ ಈ ಜಯಕಾರ ಧ್ವನಿಯಿಂದ ಚಾಣಕ್ಯನ ಕಣ್ಣೊಳಗಿಂದ ಪ್ರೇಮಾಶ್ರುಗಳು ಉದುರಿದವು. ಕಂಠವು ಸದ್ಗದಿತವಾಯಿತು. ಆತನ ಮುಖದಿಂದ ಶಬ್ದಗಳೇ ಹೊರಡಲೊಲ್ಲವು. ಆ ಶಿಷ್ಯ ವತ್ಸಲನು ಚಂದ್ರಗುಪ್ತ–ವೀರವ್ರತರೇ ಮೊದಲಾದ ಸಮೀಪದಲ್ಲಿದ್ದ ಶಿಷ್ಯರನ್ನು ತಬ್ಬಿಕೊಂಡು ಮೈಮೇಲೆ ಕೈಯಾಡಿಸಿದನು. ಆನಂದದ ಆವೇಶವು ಕುಗ್ಗಿದ ಮೇಲೆ ಆತನು ಶಿಷ್ಯರನ್ನು ಕುರಿತು–ತಮ್ಮಗಳಿರಾ, ಈ ದ್ರವ್ಯರಾಶಿಯನ್ನು ಸಂಪಾದಿಸಿ, ನೀವು ಎಂಥ ದೊಡ್ಡ ಕೆಲಸವನ್ನು ಮಾಡಿದಿರೆಂಬದರ ಕಲ್ಪನೆಯು ಸಹ ನಿಮಗಾಗುವ ಹಾಗಿಲ್ಲ ಕಂಡಿರಾ! ಎಂದು ನುಡಿಯುತ್ತಿರಲು, ಮತ್ತೆ ಆತನ ಕಂಠವು ಸದ್ಗದಿತವಾಗಿ ಅಕ್ಷರಗಳು ಹೊರಡದಾದವು. ಆ ಆನಂದದ ಭರದಲ್ಲಿಯೇ ಚಾಣಕ್ಯನು ತನ್ನ ಶಿಷ್ಯರೊಡನೆ ತನ್ನ ಆಶ್ರಮವನ್ನು ಹೊಕ್ಕನು. ಆಶ್ರಮದಲ್ಲಿಯ ಅತ್ಯುತ್ತಮ ವ್ಯವಸ್ಥೆಯನ್ನು ನೋಡಿ ಆ ಕಾರ್ಯದಕ್ಷ ಬ್ರಾಹ್ಮಣನಿಗೆ ಬಹಳ

ಸಮಾಧಾನವಾಯಿತು. ಮುಂದೆ ಒಂದೆರಡು ದಿನಗಳು ಕಳೆಯಲು, ಚಾಣಕ್ಯನು ಚಂದ್ರಗುಪ್ತ-ವೀರವ್ರತರೇ ಮೊದಲಾದ ಸಚ್ಛಿಷ್ಯರನ್ನು ಒತ್ತೊಟ್ಟಿಗೆ ಕರೆದೊಯ್ದು ಅವರಿಗೆ ಹೇಳತಕ್ಕದ್ದನ್ನು ಹೇಳಿದನು. ವೀರವ್ರತನು ಆಶ್ರಮದ ವ್ಯವಸ್ಥೆಗಾಗಿ ನಿಯಮಿಸಲ್ಪಟ್ಟನು. ಈಗಿನಂತೆ ಆಶ್ರಮದ ಎಲ್ಲ ವ್ಯವಸ್ಥೆಯನ್ನು ಕಾಯ್ದುಕೊಳ್ಳಬೇಕೆಂತಲೂ, ತನ್ನ ಕಡೆಯಿಂದ ಆಗಾಗ್ಗೆ ಬರುವ ಆಜ್ಞಾಪತ್ರಗಳಂತೆ ನಡಕೊಳ್ಳಬೇಕೆಂತಲೂ ಚಾಣಕ್ಯನು ಆತನನ್ನು ಆಜ್ಞಾಪಿಸಿದನು. ಬಳಿಕ ಚಂದ್ರಗುಪ್ತನನ್ನು ರಾಜಪುತ್ರರಿಗೆ ಯೋಗ್ಯವಾದ ವಸ್ತ್ರಾಭರಣಗಳಿಂದ ಅಲಂಕರಿಸಿ, ರಾಜಪುತ್ರರಿಗೆ ಒಪ್ಪಬಹುದಾದ ಪರಿವಾರವನ್ನು ಕರಕೊಂಡು, ಶಿಷ್ಯರಿಂದ ಸಂಪಾದಿಸಲ್ಪಟ್ಟ ಧನರಾಶಿಯೊಡನೆ ಚಾಣಕ್ಯನು ಪಾಟಲೀಪುತ್ರಕ್ಕೆ ಸಾಗಿದನು.

ಚಾಣಕ್ಯನು ಈಗ ಪಾಟಲೀಪುತ್ರದಲ್ಲಿ ಅಪರಿಚಿತನಾಗಿದ್ದಿಲ್ಲ. ಆತನು ಇಳಿದುಕೊಳ್ಳಲಿಕ್ಕೆ ಎರಡನೆಯ ಕಡೆಗೆಲ್ಲಿಗೂ ಹೋಗದೆ, ಚಂದ್ರಗುಪ್ತನೊಡನೆ ನೆಟ್ಟಗೆ ಮುರಾದೇವಿಯ ಮಂದಿರಕ್ಕೆ ಸಾಗಿದನು. ಆ ದಿಟ್ಟ ಬ್ರಾಹ್ಮಣನು ಚಂದ್ರಗುಪ್ತನನ್ನು ಮುರಾದೇವಿಯ ಎದರಿಗೆ ನಿಲ್ಲಿಸಿ – ದೇವೀ, ನಿನ್ನ ಅಣ್ಣನಾದ ಪ್ರದ್ಯುಮ್ನದೇವನು, ತಾಯಿಯಾದ ಮಾಯಾದೇವಿಯೂ ಆಶೀರ್ವಾದ ಪೂರ್ವಕವಾಗಿ ನಿನ್ನ ಕ್ಷೇಮವನ್ನು ಕೇಳಿದ್ದಾರೆ. ಅವರು ಹೇಳಿರುವದೇನಂದರೆ —"ನಿನ್ನ ಇಚ್ಛೆಯಂತೆ ನಾವು ನಿನ್ನ ಬಳಿಗೆ ಬರಲಿಕ್ಕೆ ಬರುವದಿಲ್ಲಾದ್ದರಿಂದ ಅಸಮಾಧಾನ ಪಟ್ಟು, ನಿನ್ನ ಸಂತೋಷಕ್ಕಾಗಿ ನಿನ್ನ ಸೋದರಳಿಯನಾದ ಈ ಚಂದ್ರಗುಪ್ತ ರಾಜಕುಮಾರನನ್ನು ನಿನ್ನ ಬಳಿಗೆ ಕಳಿಸಿದ್ದೇವೆ. ಏಕಪುತ್ರ ವಿಷಯವಾದ್ದರಿಂದ ಈತನನ್ನು ಅರಗಳಿಗೆಯಾದರೂ ನಾವು ಅಗಲತಕ್ಕವರಲ್ಲ, ಆದರೆ ನಿನ್ನ ಸಮಾಧಾನಕ್ಕಾಗಿ ಈತನನ್ನು ನಿನ್ನ ಬಳಿಗೆ ಕಳಿಸಿದ್ದೇವೆ. ಈತನನ್ನು ಕೆಲವು ದಿನ ನಿನ್ನ ಬಳಿಯಲ್ಲಿ ಇಟ್ಟುಕೋ. ನಿನ್ನ ಗುರುತು ಈತನಿಗಿಲ್ಲ, ಈತನ ಗುರುತು ನಿನಗಿಲ್ಲ, ಈತನು ಎಂದೂ ಹೊರಗೆ ಹೋದವನಲ್ಲ, ಆತನಿಗೆ ನಮ್ಮ ನೆನಪು ಆಗಗೊಡದಿದ್ದರೆ, ಈತನು ಸಂತೋಷದಿಂದ ನಿನ್ನ ಬಳಿಯಲ್ಲಿರುವನು. ನಮ್ಮ ನೆನಪು ಆತನಿಗಾಗಬಾರದೆಂಬದಕ್ಕೆ ಎರಡು ಉಪಾಯಗಳನ್ನು ನೀನು ಮಾಡಬೇಕು. ನಮ್ಮ ಸಂಬಂಧದ ಯಾವ ಸಂಗತಿಯನ್ನೂ ನೀನು ಆತನಿಗೆ ಕೇಳದಿರುವದು ಮುಖ್ಯವಾದ ಒಂದನೆಯ ಉಪಾಯವು, ಆತನ ಇಚ್ಛೆಯಂತೆ ಎಲ್ಲಿಗಾದರೂ ಹೋಗಲಿಕ್ಕೂ, ಬರಲಿಕ್ಕೂ ಪ್ರತಿಬಂಧ ಮಾಡದಿರುವದು ಎರಡನೆಯ ಉಪಾಯವು" ದೇವೀ, ನಿನಗೆ ಕೊಡುವದಕ್ಕಾಗಿ ಪ್ರದ್ಯುಮ್ನ ದೇವನು ಒಂದು ಪತ್ರವನ್ನು ಕೊಟ್ಟಿರುವನು, ಎಂದು ಹೇಳಿ ಚಾಣಕ್ಯನು ಮುರಾದೇವಿಯ ಕೈಯಲ್ಲಿ ಒಂದು ಪತ್ರವನ್ನು ಕೊಟ್ಟನು.

ಚಂದ್ರಗುಪ್ತನನ್ನು ನೋಡಿ ಮುರಾದೇವಿಯ ಮುಖಚರ್ಯದಲ್ಲಿ ಚಮತ್ಕಾರದ ಸ್ಥಿತ್ಯಂತರವಾಯಿತು. ಆಕೆಯು ಒಮ್ಮೆಲೇ ಏನೂ ಮಾತಾಡಲಿಲ್ಲ, ಬಹಳಹೊತ್ತು ಸುಮ್ಮನೆ ನಿಂತುಕೊಂಡಮೇಲೆ ಸುಮ್ಮನೆ ಪತ್ರವನ್ನು ಓದಿಕೊಂಡು ಚಾಣಕ್ಯನನ್ನು ಕುರಿತು – ಆರ್ಯ ಚಾಣಕ್ಯಾ, ಈ ಹುಡುಗನನ್ನು ನೋಡಿ ನನಗೆ ಬಹಳ ಸಂತೋಷವಾಯಿತು. ಇನ್ನು ಈತನಿಗೆ ನಾನು ಮಹಾರಾಜರ ದರ್ಶನ ಮಾಡಿಸುತ್ತೇನೆ. ನೀವೂ ಮಹಾರಾಜರ ದರ್ಶನಕ್ಕೆ ನಡೆಯಬೇಕು,

ಅನ್ನಲು, ಅರಸನ ಹೆಸರು ಕೇಳಿದ ಕೂಡಲೇ ಚಾಣಕ್ಯನ ಹುಬ್ಬುಗಳು ಗಂಟಿಕ್ಕಿದವು. ಆದರೂ ಆತನು ಕ್ಷಣಮಾತ್ರದಲ್ಲಿ ಸುಹ್ಯಾಸವದನನಾಗಿ ಮುರಾದೇವಿಯನ್ನು ಕುರಿತು–ದೇವೀ, ಸರ್ವದಾ ನಿರಿಚ್ಛನಾದ ನನ್ನಂತ ದರಿದ್ರ ಬ್ರಾಹ್ಮಣನಿಗೆ ರಾಜ ದರ್ಶನದಿಂದ ಪ್ರಯೋಜನವೇನು? ಚಂದ್ರಗುಪ್ತನನ್ನು ಅರಸನಬಳಿಗೆ ಅವಶ್ಯವಾಗಿ ಕರಕೊಂಡು ಹೋಗು. ನಾನು ಇನ್ನು ಆಶ್ರಮಕ್ಕೆ ಹೋಗುವೆನು. ಹ್ಯಾಗೂ ಚಂದ್ರಗುಪ್ತನು ಪಾಟಲೀಪುತ್ರದಲ್ಲಿರುವವರೆಗೆ ನಾನು ಪಾಟಲೀ ಪುತ್ರದಲ್ಲಿಯೇ ಇರಬೇಕಾಗಿರುವದು. ನಿನ್ನ ಹಾಗೂ ಚಂದ್ರಗುಪ್ತನ ದರ್ಶನಕ್ಕಾಗಿ ಆಗಾಗ್ಗೆ ಬಂದೇ ಬರುವೆನು. ಎಂದು ಹೇಳಿದನು. ಅದಕ್ಕೆ ಮುರಾದೇವಿಯು–ಬ್ರಾಹ್ಮಣ ಶ್ರೇಷ್ಠರೇ, ಪಾಟಲೀ ಪುತ್ರದಲ್ಲಿ ನಿಮ್ಮ ಆಶ್ರಮವೆಲ್ಲಿಯದು? ಹೊಸದಾಗಿ ಸ್ಥಾನವನ್ನು ಹುಡುಕುವ ಕಾರಣವಿಲ್ಲ, ನಮ್ಮ ಹೋಮ ಶಾಲೆಯಲ್ಲಿ ಸ್ವಸ್ಥವಾಗಿ ಇದ್ದುಬಿಡಬೇಕು. ಅಲ್ಲಿ ಯಾವ ಮಾತಿನ ಕೊರತೆಯೂ ಉಂಟಾಗಲಿಕ್ಕಿಲ್ಲ, ಚಂದ್ರಗುಪ್ತನು ನನಗೆ ಅಪರಿಚಿತನಾದದ್ದರಿಂದ ನೀವು ಇಲ್ಲಿಯೇ ಇದ್ದರೆ ಅವನಿಗೂ ಸಮಾಧಾನವಾಗುವದು.

ಮುರಾದೇವಿಯ ಈ ಮಾತುಗಳನ್ನು ಕೇಳಿದಕೂಡಲೇ ಚಾಣಕ್ಯನು ದೇವೀ, ನೀನು ನನ್ನ ಮೇಲೆ ಈಪರಿ ಲೋಭಮಾಡುವದನ್ನು ನೋಡಿ ನನಗೆ ಬಹಳ ಸಂತೋಷವಾಗಿದೆ; ಆದರೆ ನಾನು ಇಲ್ಲಿ ನಿಲ್ಲುವಹಾಗಿಲ್ಲ, ಗಂಗಾತೀರದಲ್ಲಿ ಒಂದು ಸಣ್ಣ ಪರ್ಣಕುಟಿಯನ್ನು ಈಗ ನಾಲ್ಕೆಂಟು ದಿನಗಳ ಹಿಂದೆಯೇ ನನ್ನ ಶಿಷ್ಯರು ಸಿದ್ಧಪಡಿಸಿರುತ್ತಾರೆ. ಅಲ್ಲಿಗೆ ನಾನು ಹೋಗುವೆನು. ನನ್ನಂಥ ನಿರಿಚ್ಛ ಬ್ರಾಹ್ಮಣನು ನಿನ್ನ ಅರಮನೆಯ ಸೌಖ್ಯವನ್ನು ತಕ್ಕೊಂಡು ಮಾಡುವದೇನು? ಪ್ರದ್ಯುಮ್ನ ದೇವನು ಆಗ್ರಹ ಮಾಡಿದ್ದರಿಂದಲೂ, ಚಿಕ್ಕಂದಿನಿಂದಲೂ ಅಭ್ಯಾಸವಾಗಿದ್ದ ಚಂದ್ರಗುಪ್ತನನ್ನು ಅಗಲಿ ಇರಲಿಕ್ಕೆ ನನಗೆ ಚಡಪಡಿಕೆಯಾದ್ದರಿಂದಲೂ ನಿರ್ವಾಹವಿಲ್ಲದೆ ನಾನು ಇಲ್ಲಿಗೆ ಬಂದಿದ್ದೇನೆ. ದೇವೀ, ಕುಮಾರನ ಒಂದೊಂದು ಗುಣಗಳನ್ನು ನೀನು ನೋಡಿದೆಯೆಂದರೆ, ಹಿರಿಹಿರಿ ಹಿಗ್ಗೀ. ಇನ್ನೊಂದು ಗುಟ್ಟಿನಮಾತು ನಿನಗೆ ಹೇಳುತ್ತೇನೆ, ಕೇಳು; ಈತನ ಹಸ್ತದಲ್ಲಿ ಚಕ್ರವರ್ತಿಯ ಚಿನ್ಹಗಳೆಲ್ಲ ಇರುತ್ತವೆ! ಭಗವಾನ್ ಕೈಲಸನಾಥನು ಇವನನ್ನು ದೀರ್ಘಾಯುಷಿ ಯನ್ನಾಗಿ ಮಾತ್ರ ಮಾಡಬೇಕು. ತಮ್ಮಾ ಚಂದ್ರಗುಪ್ತಾ ನಾನು ಹೋಗಿ ಬರುತ್ತೇನೆ. ಈ ನಿನ್ನ ಸೋದರತ್ತೆಯಾದ ಮುರಾದೇವಿಯು ಸರ್ವದಾ ನಿನ್ನ ಕಲ್ಯಾಣ ಮಾಡುವಳು. ನಾನು ಬಹುಶಃ ದಿನಾಲು ನಿನ್ನ ಕಾಣುವೆನು, ನಿಶ್ಚಿಂತೆಯಿಂದ ಇರು, ಎಂದು ಹೇಳಿ, ಚಾಣಕ್ಯನು ಎದ್ದುಬಿಟ್ಟನು. ಮುರಾದೇವಿಯ ಆಗ್ರಹದಿಂದ ಪ್ರಯೋಜನವೇನು ಆಗಲಿಲ್ಲ, ತಾನು ಇಷ್ಟು ಆಗ್ರಹ ಮಾಡಿದ್ದೂ ಬ್ರಾಹ್ಮಣನು ತನ್ನ ಮಾತು ಮೀರಿ ಹೊರಟದ್ದನ್ನು ನೋಡಿ ಆಕೆಗೆ ಸ್ವಲ್ಪ ಸಿಟ್ಟು ಬಂದಿತು; ಆದರೆ ಅರಸನ ಪ್ರೀತಿಗೆ ಪಾತ್ರಳಾದ ತನ್ನಂಥ ಮಹಿಷಿಯ ಆಗ್ರಹದ ಆದರಾತಿಥ್ಯ ವನ್ನು ನಿರಾಕರಿಸುವ ಬ್ರಾಹ್ಮಣನು ನಿಜವಾಗಿ ನಿರ್ಲೋಭಿಯೂ, ನಿರಿಚ್ಛನೂ ಇರಲಿಕ್ಕೆ ಬೇಕೆಂದು ತಿಳಿದು ಆಕೆಯು ಚಾಣಕ್ಯನ ವಿಷಯವಾಗಿ ಪರಮಾದರವನ್ನು ತಾಳಿದಳು. ಚಾಣಕ್ಯನು ಮುರೆಯ ಮಂದಿರದಿಂದ ಹೊರಟವನು, ನೆಟ್ಟಗೆ ಗಂಗಾತೀರದ ತನ್ನ ಹೊಸ ಪರ್ಣ ಕುಟಿಕೆಗೆ ಹೋದನು.

ಶ್ವೇತಾಂಬರಿಯ ಮೃತ್ಯು

ಚಂದ್ರಗುಪ್ತನನ್ನು ನೋಡಿದಾಗಿನಿಂದ ಮುರೆಯ ಮನಸ್ಸಿನ ಸ್ಥಿತಿಯು ವಿಚಿತ್ರವಾಗಿತ್ತು. ತನ್ನ ಅಣ್ಣನ ಮಗನು ಇಷ್ಟು ಸುಂದರನೂ, ಸುಗುಣಿಯೂ, ಶೂರನೂ ಇದ್ದದ್ದನ್ನು ನೋಡಿ ಆಕೆಯು ಒಮ್ಮೆ ಆನಂದ ಪಡುವಳು; ತನ್ನ ಮಗನು ಇದ್ದರೆ ಇಷ್ಟು ಹೊತ್ತಿಗೆ ಇವನ ಹಾಗೆಯೇ ಇರುತ್ತಿದ್ದನೆಂದು ನೆನಸಿ ಮತ್ತೊಮ್ಮೆ ದುಃಖಪಡವಳು. ಆಕೆಯು ಚಂದ್ರಗುಪ್ತನನ್ನು ಅರಸನ ಬಳಿಗೆ ಕರಕೊಂಡು ಹೋಗಿ–ಪ್ರಭುಗಳೇ, ಈತನು ನನ್ನ ಅಣ್ಣನಾದ ಪ್ರದ್ಯುಮ್ನದೇವನ ಮಗನು. ಈತನ ಹೆಸರು ಚಂದ್ರಗುಪ್ತ, ಅಣ್ಣನೂ, ಅವ್ವನೂ ನಾಲ್ಕುದಿನ ಇದ್ದುಬಾರೆಂದು ಈತನನ್ನು ನನ್ನ ಬಳಿಗೆ ಕಳಿಸಿದ್ದಾರೆ. ಪ್ರಭುಗಳ ಅನುಮತಿಯು ದೊರೆತರೆ ಇಟ್ಟುಕೊಳ್ಳುವೆನು, ಎಂದು ದುಃಖದಿಂದ ಕಣ್ಣೀರು ಸುರಿಸಹತ್ತಿದಳು. ಆಗ ಧನಾನಂದನು ಆಕೆಯನ್ನು ತಬ್ಬಿಕೊಂಡು–ಪ್ರೀಯೇ, ನಿನ್ನ ಸೋದರಳಿಯನನ್ನು ಇಟ್ಟುಕೊಳ್ಳಲಿಕ್ಕೆ ನನ್ನ ಅನುಮತಿಯೇ? ಆದರೆ ನೀನು ಕಣ್ಣೀರು ಸುರಿಸುವದೇಕೆ? ಆದ ಮಾತನ್ನು ನೆನಸಿ ದುಃಖಿಸಬೇಡೆಂದು ಈ ಮೊದಲೇ ನಾನು ನಿನಗೆ ಹೇಳಿಲ್ಲವೆ? ಇನ್ನು ಅತ್ತು ಮಾಡುವದೇನು? ನಾನು ಕುಹಕರ ಮಾತುಗಳಿಗೆ ಕಿವಿಗೊಡದೆ ನಿನ್ನ ಮಗನನ್ನು ಕೊಲ್ಲಿಸದಿದ್ದರೆ, ಆತನು ಇಷ್ಟು ಹೊತ್ತಿಗೆ ಈ ಚಂದ್ರಗುಪ್ತನಷ್ಟು ಆಗುತ್ತಿದ್ದನೆಂಬದು ನಿಜವು. ಈ ಚಂದ್ರಗುಪ್ತನ ಮೋರೆಯು ಅಚ್ಚಳಿಯದೆ ನಿನ್ನ ಮೋರೆಯಂತೆ ಇದ್ದದ್ದರಿಂದ ನನ್ನ ಮನಸ್ಸೂ ವ್ಯಾಕುಲವಾಗಿದೆ. ಪಿತೃ ಮುಖಿಯಾದ ಈತನನ್ನು ನೋಡಿದ ಕೂಡಲೆ ಯಾವ ಕಾರಣದಿಂದಲೋ ನನ್ನ ಮನಸ್ಸು ಸುಪ್ರಸನ್ನವಾಯಿತು. ಪ್ರಾಣಪ್ರಿಯೇ, ಮುರೆ, ಬಿಡು, ಇನ್ನು ಕಣ್ಣೀರು ಹಾಕಬೇಡ. ಹೀಗೆ ನೀನು ಚಂದ್ರಗುಪ್ತನನ್ನು ನೋಡಿ ದಿನಾಲು ಕಣ್ಣೀರು ಹಾಕುವ ಹಾಗಿದ್ದರೆ, ಈತನನ್ನು ಇಟ್ಟುಕೊಳ್ಳುವದಕ್ಕೆ ನಾನು ಎಂದಿಗೂ ಸಮ್ಮತಿಸುವದಿಲ್ಲ, ನಿನ್ನ ಮನಸ್ಸನ್ನು ಎಳ್ಳಷ್ಟಾದರೂ ನೋಯಿಸಲಿಕ್ಕಿಲ್ಲೆಂದು ನಾನು ನಿಶ್ಚಯಿಸಿದ್ದೇನೆ. ಈತನನ್ನು ನೋಡಿ ನೀನು ಪುತ್ರಶೋಕವನ್ನು ಮರೆಯುವ ಹಾಗಿದ್ದರೆ, ನಾಲ್ಕು ದಿನವೇಕೆ ಕಡೆತನಕ ಇಲ್ಲಿಯೇ ಇಟ್ಟುಕೊ. ಈತನಿಗೊಂದು ಅಧಿಕಾರನ್ನು ಕೊಟ್ಟರಾಯಿತು, ನಮ್ಮ ಕುಮಾರ ಸುಮಾಲ್ಯನ ಗೆಳೆಯನಾಗಿ ಇರುವನು. ಆದರೆ ನೀನು ಹೀಗೆ ಕಣ್ಣೀರು ಸುರಿಸುವ ಹಾಗಿದ್ದರೆ ಮಾತ್ರ ನಿನ್ನ ಮಾತಿಗೆ ನಾನು ಸಮ್ಮತಿಸುವದಿಲ್ಲ, ಒಂದೆರಡು ದಿನಗಳ ಮೇಲೆ ಈತನನ್ನು ಊರಿಗೆ ಕಳಿಸಿಬಿಡು.

ಪತಿಯ ಈ ಮಾತುಗಳನ್ನು ಕೇಳಿದ ಕೂಡಲೆ ಮುರೆಯು ಅರಸನ ಹೆಗಲ ಮೇಲಿದ್ದ ತನ್ನ ಮುಖವನ್ನು ಎತ್ತಿ ಕಣ್ಣು ಒರಸಿಕೊಂಡು – ಆರ್ಯಪುತ್ರಾ, ಇಲ್ಲ ಇನ್ನು ಎಂದೂ ಕಣ್ಣೀರು ಹಾಕುವದಿಲ್ಲ, ಚಂದ್ರಗುಪ್ತನ ಪ್ರಥಮ ದರ್ಶನದಲ್ಲಿ ನನ್ನ ಕೈಮೀರಿ ದುಃಖವು ಒತ್ತರಿಸಿದ್ದರಿಂದ ಹೀಗಾಯಿತು. ಅಣ್ಣನು ಕಳಿಸಿಕೊಟ್ಟಂತೆ ಈತನನ್ನು ನಾಲ್ಕುದಿನ ಇಟ್ಟುಕೊಳ್ಳಲಿಕ್ಕೆ ಅಪ್ಪಣೆ ದೊರೆಯಬೇಕೆಂದು ಬೇಡಿಕೊಳ್ಳುವೆನು, ಅನ್ನಲು, ಧನಾನಂದನು–ಹೀಗಿದ್ದರೆ ಚಿಂತೆಯಿಲ್ಲ; ಚಂದ್ರಗುಪ್ತನು ಬೇಕಾದಷ್ಟು ದಿನ ನಿನ್ನ ಬಳಿಯಲ್ಲಿರಲಿ. ನಮ್ಮ ಸುಮಾಲ್ಯನ ಗೆಳೆತನದಿಂದ

ಈತನೂ ರಾಜಕಾರಣದ ಅಭ್ಯಾಸವನ್ನು ಮಾಡಬಹುದು. ಯಾಕೋ ಚಂದ್ರಗುಪ್ತಾ, ಮಾಡುವಿಯೋ ಇಲ್ಲವೋ? ಎಂದು ಕೇಳಿದನು. ಅದಕ್ಕೆ ಚಂದ್ರಗುಪ್ತನು–ಪ್ರಭುಗಳ ಅನುಗ್ರಹವಾದದ್ದಕ್ಕಾಗಿ ತನ್ನನ್ನು ಧನ್ಯನೆಂದು ತಿಳಿಯದ ಹತಭಾಗ್ಯನು ಈ ಆರ್ಯಾವರ್ತದಲ್ಲಿ ಯಾವನಿರುವನು! ಎಂದು ನುಡಿಯುವಾಗ ತೋರಿಬಂದ ಆತನ ರೀವಿಯನ್ನು ನೋಡಿ ಧನಾನಂದನು ಕೌತುಕಪಟ್ಟು–ಶಾಬಾಸ! ಚಂದ್ರಗುಪ್ತಾ, ನೀನು ಒಳ್ಳೇ ವಾಕ್ಚತುರನೂ ಇರುತ್ತೀ. ನಮ್ಮ ಸುಮಾಲ್ಯನ ಗೆಳೆತನಕ್ಕೆ ತಕ್ಕವನಾಗಿರುವೆ. ದಿನಾಲು ಬೆಳಗಿನಲ್ಲಿ ನನ್ನ ದರ್ಶನಕ್ಕಾಗಿ ಸುಮಾಲ್ಯನು ಬರುವನು. ನಾಳಿಗೇ ಆತನ ಪರಿಚಯವನ್ನು ನಿನಗೆ ಮಾಡಿಕೊಡುವೆನು. ಹೋಗು. ನಿನ್ನ ಅತ್ತೆಯ ಬಳಿಯಲ್ಲಿ ನಿಶ್ಚಿಂತೆಯಿಂದ ಇರು, ಎಂದು ಹೇಳಿದನು. ಪ್ರಥಮ ದರ್ಶನದಲ್ಲಿ ತನ್ನ ಕೆಲಸವು ಸಾಧಿಸಬೇಕಾಗಿದ್ದಷ್ಟಕ್ಕಿಂತ ಹೆಚ್ಚು ಉತ್ತಮವಾಗಿ ಸಾಧಿಸಿದ್ದರಿಂದ ಮುರೆಗೆ ಬಹಳ ಸಮಾಧಾನವಾಯಿತು. ಆಕೆಯು ಚಂದ್ರಗುಪ್ತನ ಊಟ–ಉಡುಗೆಗಳ ಸಂಬಂಧದ ವ್ಯವಸ್ಥೆಯನ್ನು ಸ್ವತಃ ಕೈಮುಟ್ಟಿ ಮಾಡುತ್ತಿದ್ದಳು. ಯಾವದಕ್ಕೂ ಕೊರತೆ ಬಾರದಂತೆ ಆತನನ್ನು ತನ್ನ ಮಂದಿರದಲ್ಲಿಯೇ ಇಟ್ಟುಕೊಂಡಿದ್ದಳು. ಸದ್ಯಕ್ಕೆ ಪಾಟಲಿಪುತ್ರದ ಸ್ಥಿತಿಯು ವಿಚಿತ್ರವಿರುವದರಿಂದ ಎರಡನೆಯವರು ಏನು ಕೊಟ್ಟರೂ ತಿನ್ನಬೇಡೆಂತಲೂ, ಗುಟುಕು ನೀರು ಕುಡಿಯುವಾಗಾದರೂ ನನಗೆ ತೋರಿಸದೆ ಕುಡಿಯ ಬೇಡೆಂತಲೂ ಗಟ್ಟಿಮುಟ್ಟಿಯಾಗಿ ಆಕೆಯು ಚಂದ್ರಗುಪ್ತನಿಗೆ ಹೇಳಿದ್ದಳು. ಚಾಣಕ್ಯನ ಕೈಯಲ್ಲಿ ಆಜ್ಞಾಪಾಲನದ ಪಾಠವನ್ನು ಚನ್ನಾಗಿ ಕಲಿತಿದ್ದ ಚಂದ್ರಗುಪ್ತನು, ಇಲ್ಲದ ಚಿಕಿತ್ಸೆಯನ್ನು ಮಾಡುವ ಗೊಡವಿಗೆ ಹೋಗದೆ, ಮುರಾದೇವಿಯ ಅಪ್ಪಣೆಯಂತೆ ನಡಕೊಳ್ಳಲು ಮನಃಪೂರ್ವಕವಾಗಿ ಒಡಂಬಟ್ಟನು.

ಮುಂದೆ ನಾಲ್ಕೈದು ದಿನಗಳಾದ ಮೇಲೆ ಒಂದುದಿನ ಮುರೆಯು ಅರಸನ ಹತ್ತರ ಕುಳಿತಿರಲು, ಆಕೆಯ ದಾಸಿಯು ಬಂದು–ದೇವೀ, ಪಟ್ಟ ಮಹಿಷಿಯವರಾದ ಸುನಂದಾದೇವಿ ಯವರ ಕಡೆಯಿಂದ ಒಬ್ಬ ದಾಸಿಯು, ಒಂದು ಬಂಗಾರದ ಡಬ್ಬಿಯನ್ನೂ ಒಂದು ಪತ್ರವನ್ನೂ ತಕ್ಕೊಂಡು ಬಂದು ಬಾಗಿಲಲ್ಲಿ ನಿಂತಿದ್ದಾಳೆ. ನಾವು ಮುಟ್ಟಿಸುತ್ತೇವೆಂದರೆ ಅವನ್ನು ನಮ್ಮ ಕೈಯಲ್ಲಿ ಕೊಡಲೊಲ್ಲಳು. ಅವನ್ನು ಕೈಮುಟ್ಟಿ ಪ್ರಭುಗಳಿಗೆ ಕೊಡಬೇಕೆಂದು ಪಟ್ಟಮಹಿಷಿ ಯವರ ಅಪ್ಪಣೆಯಾಗಿದೆಯಂತೆ. ದೇವಿಯವರ ಅಪ್ಪಣೆಯಾದಂತೆ ನಡಕೊಳ್ಳುವೆನು, ಅನ್ನಲು, ಮುರಾದೇವಿಯು ಕವಕ್ಕನೆ ದಾಸಿಯ ಮೈಮೇಲೆ ಹೋಗಿ – ಛೀ, ತಿಳಿಗೇಡಿ, ಆ ದಾಸಿಯನ್ನು ಒಳಗೆ ಬಿಡಬೇಡೆಂದು ನಿನಗೆ ಯಾರು ಹೇಳಿದರು? ಬೇರೆ ರಾಜಪತ್ನಿಯರ ದಾಸಿಯರು ಯಾರಾದರೂ ಬಂದರೆ ಕೂಡಲೆ ಒಳಗೆ ಬಿಡಿರೆಂದು ನಿಮಗೆ ಸಾವಿರ ಸಾರೆ ಹೇಳಿರಬಹುದು. ನಾನು ಹ್ಯಾಗೆ ರಾಜಪತ್ನಿಯೋ, ಅವರೂ ಹಾಗೇ ರಾಜಪತ್ನಿಯರಲ್ಲವೇನು? ಹೋಗು, ದಾಸಿಯನ್ನು ಒಳಗೆ ಬಿಡು, ಮೋರೆಯನ್ನೇನು ನೋಡುತ್ತೀ?

ಮುರಾದೇವಿಯ ಈ ಕಪಟದ ಗದ್ದರಿಕೆಯ ಇಂಗಿತವನ್ನು ಅರಿಯದೆ ಧನಾನಂದನು– ದಾಸಿಯಾತಕ್ಕೆ ಒಳಗೆ ಬರಬೇಕು? ತಂದ ಜೀನಸನ್ನು ಇಸುಕೊಂಡು ಬಾರೆಂದರಾಯಿತು; ಅನ್ನಲು, ಮುರಾದೇವಿಯು ಕೇಳದೆ, ಅರಸನನ್ನು ಇಲ್ಲದ ನಿಸ್ಪೃಹತೆಯ ಸೋಗಿನಿಂದ ಮರುಳ

ಮಾಡಿ ದಾಸಿಯನ್ನು ಒಳಗೆ ಕರಿಸಿಕೊಂಡಳು. ದಾಸಿಯು ಅರಸನನ್ನು ವಿನಯದಿಂದ ನಮಸ್ಕರಿಸಿ, ಸುವರ್ಣದ ಡಬ್ಬಿಯನ್ನೂ, ಪತ್ರವನ್ನೂ ಚರಣ ಸನ್ನಿಧಿಯಲ್ಲಿಟ್ಟು–ದೊರೆಗಳೇ, ಮಹಾದೇವಿಯವರಾದ ಸುನಂದಾ ರಾಣಿಯವರು ಅನೇಕ ಪ್ರಣತಿಪೂರ್ವಕವಾಗಿ ವಿಜ್ಞಾಪಿಸಿರುವರೇನಂದರೆ, ದೊರೆಗಳು ಈ ಪತ್ರಿಕೆಯನ್ನು ಓದಿ ಈ ಬಂಗಾರದ ಡಬ್ಬಿಯೊಳಗಿನ ಅಪೂಪಗಳನ್ನು ಸ್ವೀಕರಿಸುವ ಕೃಪೆ ಮಾಡಬೇಕು. ಏನಾದರೂ ಉತ್ತರವನ್ನು ದಯಪಾಲಿಸುವದಿದ್ದರೆ ನನ್ನನ್ನು ನಿಲ್ಲಲು ಆಜ್ಞಾಪಿಸಿದ್ದಾರೆ. ಪ್ರಭುಗಳ ಚಿತ್ತ ಎಂದು ಕೈಜೋಡಿಸಿ ನುಡಿದು, ತಲೆವಾಗಿ ಸುಮ್ಮನೆ ನಿಂತುಕೊಂಡಳು. ಆಗ ಅರಸನು ತಿರಸ್ಕಾರದಿಂದ–ಪರಿಚಾರಿಕೇ, ಆ ಡಬ್ಬಿಯನ್ನೂ, ಪತ್ರವನ್ನೂ ತಿರುಗಿತಕ್ಕೊಂಡು ಹೋಗು. ನಾಲ್ಕುದಿನ ಭೆಟ್ಟಿಗೆ ಬಾರದಿರಲು, ಪತ್ರವಂತೆ–ಅಪೂಪವಂತೆ! ಹೋಗು, ಕ್ಷಣವಾದರೂ ಇಲ್ಲಿ ನಿಲ್ಲಬೇಡ. ನಿಮಗೆ ದಾನಿಯರಿಗೂ ಉದ್ಯೋಗವಿದ್ದಂತೆ ತೋರುವುದಿಲ್ಲ, ನಾನು ಆಕೆಯ ಭೆಟ್ಟಿಗೆ ಬಂದಾಗ ಈ ಪತ್ರವನ್ನೂ, ಉಪಾಯನಗಳನ್ನೂ ಕೊಡೆಂದು ಹೇಳು, ಎಂದು ನುಡಿಯುತ್ತಿರಲು, ಮುರೆಯು ನಡುವೇ ಬಾಯಿಹಾಕಿ–ಆರ್ಯಪುತ್ರರೇ, ಹೀಗೆ ಪಟ್ಟ ಮಹಿಷಿಯಾದ ಸುನಂದಾ ಮಹಾದೇವಿಯ ಅಪಮಾನ ಮಾಡುವದು ಯೋಗ್ಯವಲ್ಲ. ಮಹಾದೇವಿಯು ತಾನು ಪ್ರೀತಿಯಿಂದ ಕಳಿಸಿದ ಪದಾರ್ಥಗಳು ಪ್ರಭುಗಳಿಂದ ಸ್ವೀಕರಿಸಲ್ಪಡದೆ ತಿರುಗಿ ಬಂದದ್ದನ್ನು ನೋಡಿದರೆ ನೊಂದುಕೊಂಡಾಳು. ಕಾರಣವಿಲ್ಲದೆ ಆ ಸಾಧ್ವಿಯ ಮನಸ್ಸನ್ನು ನೋಯಿಸುವದು ಸರಿಯಲ್ಲ. ಪ್ರಭುಗಳಿಗೆ ಕೈ ಜೋಡಿಸಿ ಬೇಡಿಕೊಳ್ಳುತ್ತೇನೆ, ಪತ್ರವನ್ನೂ, ಉಪಾಯನದ ಡಬ್ಬಿಯನ್ನೂ ತಿರುಗಿ ಕಳಿಸಿಕೊಡಬಾರದು.

ಮುರಾದೇವಿಯ ಈ ಕಪಟದ ಸೌಜನ್ಯವನ್ನು ಅರಸನು ನಿಜವೆಂದು ತಿಳಿದು, ಆಕೆಯನ್ನು ಬಹಳವಾಗಿ ಹೊಗಳಿ ಪರಿಚಾರಿಕೆಗೆ–ಪರಿಚಾರಿಕೇ, ಮುರಾದೇವಿಯು ಮಧ್ಯಸ್ಥಳಾಗದಿದ್ದರೆ ಈ ಪತ್ರವನ್ನೂ, ಡಬ್ಬಿಯನ್ನೂ ತಿರುಗಿ ಕಳಿಸಿಕೊಡುತ್ತಿದ್ದೆವು. ನೀವೆಲ್ಲರೂ ಮುರಾದೇವಿಯನ್ನು ಈ ಪರಿಯಾಗಿ ದ್ವೇಷಿಸಿದರೂ ಆಕೆಯು ನಿಮ್ಮ ಹಿತವನ್ನೇ ಚಿಂತಿಸುತ್ತಿರುವಳೆಂದು ನಿನ್ನ ಒಡೆಯಳಿಗೆ ಹೇಳು. ಹೋಗು, ಪತ್ರದ ಉತ್ತರವು ಇಷ್ಟೇ. ಇನ್ನು ನಿಲ್ಲಬೇಡ, ಎಂದು ಹೇಳಿದನು. ಆ ಮಾತುಗಳನ್ನು ಕೇಳಿ ಪರಿಚಾರಿಕೆಯು ಅರಸನನ್ನು ವಂದಿಸಿ ಅಲ್ಲಿಂದ ಹೊರಟು ಹೋದಳು. ಹೋಗುವಾಗ ಆಕೆಯು ಮುರಾದೇವಿಯನ್ನು ಬಹು ಚಮತ್ಕಾರಿಕವಾದ ದೃಷ್ಟಿಯಿಂದ ನೋಡಿದಳು. ಇತ್ತ ಮುರೆಯು ಕೈಯಲ್ಲಿ ಪತ್ರವನ್ನು ತಕ್ಕೊಂಡು ಅರಸನನ್ನು ನೋಡುತ್ತ— "ಆರ್ಯಪುತ್ರರೇ, ಈ ಪತ್ರವನ್ನು ನೀವೇ ಓದುವಿರೋ, ನಾನು ಓದಿ ತೋರಿಸಲೋ? ನನ್ನ ಪತ್ರವನ್ನು ಓದದೇ ತಾವು ಹಾಗೇ ಕಳಿಸಿದ್ದರೆ, ನನಗೆ ಎಷ್ಟು ದುಃಖವಾಗುತ್ತಿತ್ತೋ, ಅಷ್ಟೇ ದುಃಖವು ಸುನಂದಾದೇವಿಗೂ ಆಗಬಹುದು. ಆದ್ದರಿಂದ ಪತ್ರವನ್ನು ಉದಾಸೀನ ಮಾಡಬಾರದೆಂದು ನಾನು ಬೇಡಿಕೊಳ್ಳುವೆನು. ಪ್ರಭುಗಳು ಸುಮ್ಮನೆ ಕುಳಿತುಕೇಳಬೇಕು, ನಾನು ಓದುವೆನು, ಎಂದು ಪತ್ರವನ್ನು ಒಡೆಯ ಹೋಗಲು, ಅರಸನು ಆಕೆಯ ಕೈ ಹಿಡಿದು – ಪ್ರಿಯೇ, ಬೇಡ, ನೀನು ಓದಬೇಡ. ಅದರಲ್ಲಿ ಏನಾದರೂ ನಿನ್ನ ಮನಸ್ಸಿಗೆ ಹತ್ತುವಹಾಗೆ ಬರೆದಿದ್ದರೆ, ನಿನಗೆ ಅಸಮಾಧಾನವಾದೀತು. ತಾ, ನಾನೇ ಓದುತ್ತೇನೆ, ಎಂದು ಪತ್ರವನ್ನು ಇಸಕೊಂಡನು. ಆಗ

ಮುರೆಯು – ಒಳ್ಳೇದು, ನೀವು ಪತ್ರ ಓದುವವರೆಗೆ ನಾನು ಈ ಸುವರ್ಣ ಕರಂಡಕವನ್ನು ತೆಗೆದು, ಒಳಗೆ ಏನು ಇರುತ್ತವೆಯೋ ನೋಡುತ್ತೇನೆ, ಎಂದು ಆಕೆಯು ಡಬ್ಬಿಯ ಬಾಯಿ ತೆರೆದಳು. ಸುಂದರವಾದ ಅಪೂಪಗಳಿಂದ ಆ ಕರಂಡಕವು ತುಂಬಿತ್ತು ಅತ್ತ ಅರಸನು ಪತ್ರವನ್ನು ಓದಿ ಮುರೆಗೆ – ಪ್ರಿಯೇ, ಪತ್ರದಲ್ಲಿ ವಿಶೇಷವೇನೂ ಇಲ್ಲ, ನಿನ್ನೆ ದೇವಿಯು ಕೈಲಾಸನಾಥನ ಯಾವದೋ ಒಂದು ವ್ರತದ ಉದ್ಯಾಪನೆಯನ್ನು ಮಾಡಿದ್ದಳಂತೆ. ಅದರ ಪ್ರಸಾದವೆಂದು ನಾಲ್ಕು ಅಪೂಪಗಳನ್ನು ಕಳಿಸಿರುವಳಂತೆ. ಅವನ್ನು ತಾನೇ ಕೈಮುಟ್ಟ ಮಾಡಿರುವದರಿಂದ ನಾನು ಒಂದು ಚೂರಾದರೂ ಬಾಯಲ್ಲಿ ಹಾಕಿಕೊಳ್ಳಬೇಕೆಂದು ದೇವಿಯು ಪ್ರಾರ್ಥಿಸಿರುತ್ತಾಳೆ.

ಈ ಮೇರೆಗೆ ನುಡಿದು ಅರಸನು ಡಬ್ಬಿಯಲ್ಲಿ ಕೈಹಾಕಿ ಒಂದು ಅಪೂಪವನ್ನು ತಕ್ಕೊಂಡು ಒಂದು ಚೂರನ್ನು ಮುರೆಗೆ ಕೊಟ್ಟನು. ಇನ್ನೊಂದು ಚೂರನ್ನು ಆತನು ಬಾಯಲ್ಲಿ ಹಾಕಿಕೊಳ್ಳ ತಕ್ಕವನು, ಅಷ್ಟರಲ್ಲಿ ಮುರೆಯು ಗಾಬರಿಯಾಗಿ–ಒಡೆಯರೇ, ಘಾತವು–ಘಾತವು, ತಾವು ಅಪೂಪವನ್ನು ಬಾಯಲ್ಲಿ ಹಾಕಿಕೊಂಡರೆ ತಮ್ಮ ಜೀವಕ್ಕೆ ಅಪಾಯ ತಪ್ಪದು. ಈ ಅಪೂಪದಲ್ಲಿ ವಿಷವಿರುತ್ತದೆ. ನನ್ನ ಮಾತಿನ ಸತ್ಯತೆಯನ್ನು ಈಗಲೇ ತೋರಿಸುವೆನು, ಎಂದು ತನ್ನ ಒಬ್ಬ ದಾಸಿಯನ್ನು ಕುರಿತ – ಹೋಗೇ, ನನ್ನ ಆ ಶ್ವೇತಾಂಬರಿಯೆಂಬ ಬೆಕ್ಕನ್ನು ಬೇಗನೇ ತಕ್ಕೊಂಡು ಬಾ, ಎಂದು ಆಜ್ಞಾಪಿಸಿದಳು. ಆಗಿನ ಮುರಾದೇವಿಯ ಮುಖಮುದ್ರೆಯು ನೋಡುವ ಹಾಗಿತ್ತು, ಪ್ರೇಮಳ ಸ್ವಭಾವದ ತಾಯಿಯು ಬಹು ಜಾಗ್ರತೆಯಿಂದ ತನ್ನ ಮಗನ ಸಂಗೋಪನ ಮಾಡುತ್ತಿರಲು, ಆಕಸ್ಮಿಕವಾಗಿ ತನ್ನ ಕೂಸಿಗೆ ಗಂಡಾಂತರ ಬಂದಾಗ ಅದರ ಸಂರಕ್ಷಣಕ್ಕಾಗಿ ಆಕೆಯು ಏನು ಮಾಡಲಿ, ಏನು ಬಿಡಲಿ, ಎಂದು ಚಡಪಡಿಸುವಹಾಗೆ ಮುರಾದೇವಿಯು ಸೋಗು ಮಾಡಿದ್ದಳು. ಅವಳ ಆ ಸ್ವರೂಪವನ್ನು ನೋಡಿ ಅರಸನು ಬೆರಗಾದನು. ಆಕೆಯ ''ಘಾತವು–ಘಾತವು'' ಎಂಬ ಶಬ್ದ ಅರ್ಥವೂ, ಆಕೆಯು ದಾಸಿಗೆ ತನ್ನ ಬೆಕ್ಕನ್ನು ತರಹೇಳಿದ ಅರ್ಥವೂ ಅರಸನಿಗೆ ಎಷ್ಟುಮಾತ್ರವೂ ತಿಳಿಯಲಿಲ್ಲ, ಆತನು ಆತುರದಿಂದ—''ಏನು? ಏನಾಯಿತು?'' ಎಂದು ಮುರೆಯನ್ನು ಹಲವು ಸಾರೆ ಕೇಳಿದನು. ಆದರೆ ಆಕೆಯು ಏನೂ ಉತ್ತರಕೊಡದೆ ಕಣ್ಣುಕ್ಕೆಕ್ಕರಿಸಿ ಅಪೂಪಗಳನ್ನು ನೋಡುತ್ತ ಕುಳಿತಿದ್ದಳು. ಅಷ್ಟರಲ್ಲಿ ದಾಸಿಯು ಶ್ವೇತಾಂಬರಿಯನ್ನು ತರಲು, ಮುರೆಯು—''ಹಾ! ಒಳ್ಳೆಯ ಕೆಲಸ ಮಾಡಿದೆ, ಇತ್ತ ತಾ'' ಎಂದು ದಾಸಿಯ ಕೈಯಿಂದ ಬೆಕ್ಕನ್ನು ಇಸಕೊಂಡು – ಶ್ವೇತಾಂಬರೀ, ಇಲ್ಲಿಯವರೆಗೆ ಈ ಕೈಯಿಂದ ನಿನಗೆ ಹಾಲು ಕುಡಿಸಿದ ಮುರೆಯು, ಅದೇ ಕೈಯಿಂದ ಈಗ ನಿನಗೆ ವಿಷವನ್ನು ಹಾಕುತ್ತಾಳೆ! ಉಪಾಯವಿಲ್ಲ, ನಿನ್ನ ಹೊರತು ವಿಷಪರೀಕ್ಷೆಯು ಆಗುವಹಾಗಿಲ್ಲ, ಎಂದು ಅಪೂಪದ ಒಂದು ತುಣಕನ್ನು ಅದರಮುಂದೆ ಚಲ್ಲಿದಳು. ಶ್ವೇತಾಂಬರಿಯು ಆ ತುಣಕನ್ನು ಮೂಸಿನೋಡಿ ಸುಮ್ಮನೆ ಹಿಂದಕ್ಕೆ ಸರಿಯಿತು. ಎಷ್ಟು ಯತ್ನಿಸಿದರೂ ತುಣಕನ್ನು ತಿರುಗಿ ಮೂಸಿ ಸಹ ನೋಡಲಿಲ್ಲ, ಆಗಮುರೆಯು– ಹಾ ಹಾ! ಶ್ವೇತಾಂಬರೀ, ಇದರಲ್ಲಿ ವಿಷವಿರುತ್ತದೆಂಬದು ನಿನಗೂ ಗೊತ್ತಾಯಿತೇ? ಹೀಗೆ ನೀನು ಹಿಂದಕ್ಕೆ ಸರಿದರೆ ನಾನು ಬಿಡುವವಳಲ್ಲ, ಎಂದು ಒಂದು ತುಣಕನ್ನು ಜುಲುಮೆಯಿಂದ ಬೆಕ್ಕಿನ ಬಾಯಲ್ಲಿ ಹಾಕಿ ಅದರ ಮೂಗು–ಬಾಯಿಗಳನ್ನು

ಗಟ್ಟಿಯಾಗಿ ಹಿಡಿದಳು. ಬೆಕ್ಕು ಸಂತಾಪದಿಂದ ಪಂಜರಗಳನ್ನು ತೆಗೆದು ಬೆನ್ನು ಉಬ್ಬಿಸಿ ಬಾಲವನ್ನು ಕೊಡವುತ್ತ ಕೊಸರಿ ಹೋಗಲು ಪ್ರಯತ್ನಮಾಡಿತು; ಆದರೆ ಮುರೆಯು ಕೈಬಿಟ್ಟರಷ್ಟೇ ಕೊಸರಿ ಹೋಗುವದು! ಬೆಕ್ಕು ಚಿವುರಿಕೊಂಡದ್ದರಿಂದ ಮುರೆಯ ಕೋಮಲವಾದ ಕೈಯು ಮುಂಗೈಯಿಂದ ಮೊಣಕೈಯುವರೆಗೆ ರಕ್ತಮಯವಾಯಿತು! ಆದರೂ ಆ ನಿರ್ಧಾರದ ಹೆಣ್ಣುಮಗಳು ಬೆಕ್ಕಿನ ಬಾಯನ್ನು ಬಿಟ್ಟಿದ್ದಿಲ್ಲ. ''ಮುರೇ, ಯಾಕೆ ಅದರ ಜೀವ ತಿನ್ನುತ್ತೀ'' ಎಂದು ಅರಸನು ಸಿಟ್ಟು ಮಾಡಿ ಹೇಳಿದರೂ ಆಕೆಯು ಕೈ ಬಿಡಲಿಲ್ಲ! ಶ್ವೇತಾಂಬರಿಯು ಉಸುರು ಕಟ್ಟಿದ್ದರಿಂದ ವಿಷಕುಡಿದ ತನ್ನ ಜೊಲ್ಲನ್ನು ಒಂದೆರಡುಸಾರೆ ಗುಟುಕರಿಸಿದ ಬಳಿಕ ಮುರೆಯು ಕೈಬಿಟ್ಟಳು.

ಕೈ ಬಿಟ್ಟದ್ದೊಂದೇ ತಡ, ಬೆಕ್ಕು ಓಡಹತ್ತಿತು; ಆದರೆ ಅದು ಹತ್ತಿಪ್ಪತ್ತು ಮೊಳ ಹೋಗುವದರೊಳಗೆ ಜೋಲೀ ಹೊಡೆಯಹತ್ತಿತು. ಬರಬರುತ್ತ ಅದು ಮುಂದಕ್ಕೆ ಹೆಜ್ಜೆಯನ್ನು ಇಡಲಾರದೆ, ನಿಂತಲ್ಲಿಯೇ ಸತ್ತುತ್ತವರಿಯಹತ್ತಿತು. ಅದನ್ನು ನೋಡಿ ಮುರೆಯು ಅರಸನಿಗೆ – ನೋಡಿದಿರೇನು ಅಪೂಪದ ಪ್ರಭಾವವನ್ನು! ತಿಂದಿದ್ದರೆ ಪ್ರಭುಗಳ ಅವಸ್ಥೆಯು ಏನಾಗಬೇಕು! ನೆಲವೇ ಎದ್ದು ಮೇಯಹತ್ತಿದರೆ ಕಾಯುವವರಾರು? ಪ್ರತ್ಯಕ್ಷ ಪಟ್ಟಮಹಿಷಿಯೇ ವಿಷಪ್ರಯೋಗಕ್ಕೆ ಉದ್ಯುಕ್ತಳಾದಬಳಿಕ ಯಾವ ಮಾತು ಆಡಬೇಕು? ಹೀಗಾಗುವದೆಂದು ಮೊದಲೇ ನನಗೆ ಗೊತ್ತಾದ್ದರಿಂದ ನಾನು ಬಹು ಎಚ್ಚರದಿಂದಿದ್ದೆನು. ಈ ಮುರೆಯು ಕಣ್ಣಲ್ಲಿ ಎಣ್ಣೆಹಾಕಿಕೊಂಡು ಕುಳಿತಿರಲು, ಪ್ರಭುಗಳ ಜೀವಕ್ಕೆ ಅದಾರು ಕೇಡು ಬಗೆಯುವರು? ಎಂದು ನುಡಿಯುತ್ತಿರಲು, ಬೆಕ್ಕು ನೆಲಕ್ಕೆ ಬಿದ್ದು ಒದ್ದಾಡಿ ಪ್ರಾಣಬಿಟ್ಟಿತು. ಅದರ ಮೋರೆ ತುಟಿಗಳು ಕಪ್ಪಾಗಿದ್ದವು. ಕಣ್ಣು ಕೆಕ್ಕರಿಸಿದ್ದವು. ಇದನ್ನು ನೋಡಿ ಅರಸನು ಸಂತಾಪದ ಭರದಿಂದ – ಎಲೈ ನೀಚಳೇ, ಸುನಂದೇ, ಪ್ರತ್ಯಕ್ಷ ಪತಿಯ ಪ್ರಾಣವನ್ನು ನೋಡಲಿಲ್ಲವೇ? ಈ ಘೋರ ಕೃತ್ಯಕ್ಕಾಗಿ ನಿನಗೆ ಉಗ್ರಶಾಸನವನ್ನು ಮಾಡಲಿಕ್ಕೆ ಅರಕ್ಷಣವಾದರೂ ಅವಕಾಶ ಕೊಡತಕ್ಕದ್ದಲ್ಲ. ನಿನ್ನನ್ನು ಕತ್ತೆಯ ಮೇಲೆ ಕೂಡ್ರಿಸಿ ಮೆರಿಸಿ, ನಿನಗೆ ದೇಹಾಂತ ಪ್ರಾಯಶ್ಚಿತ್ತವನ್ನು ಕೊಡಿಸುವೆನು. ನನ್ನ ಯುವರಾಜನಾದ ಸುಮಾಲ್ಯನ ಹಡದಾಕೆಯಾದ್ದರಿಂದ ಇಷ್ಟು ಭಯಂಕರ ಶಿಕ್ಷೆಯನ್ನು ಕೊಡಬಾರದೆಂಬ ವಿಚಾರವು ಮನಸ್ಸಿನಲ್ಲಿ ಬರುತ್ತದೆ; ಆದರೆ ಪತಿಯ ಪ್ರಾಣಹರಣಕ್ಕೆ ಮುಂದುವರಿಯುವವರ ಸಂಹಾರಕ್ಕಾಗಿ ವಿಚಾರವೇ? ಚಾಂಡಾಲಳೇ, ಬಾಗಿಣದ ನೆವದಿಂದ ನನ್ನ ಪ್ರಾಣವನ್ನು ಹೀರಬೇಕೆಂದು ಯೋಚಿಸಿದೆಯಾ?'' ಎಂದು ನುಡಿಯುತ್ತಿರಲು, ಸಾಹಸಿಯಾದ ಮುರೆಯು ಪಟ್ಟಮಹಿಷಿಯ ಪಕ್ಷವನ್ನು ಕಟ್ಟಿದಂತೆ ನಟಿಸಿ – ಆರ್ಯಪುತ್ರರೇ, ವಿಚಾರಮಾಡಬೇಕು; ಹಿಂದೆಮುಂದೆ ನೋಡದೆ ಪಟ್ಟಮಹಿಷಿಯಮೇಲೆ ತಪ್ಪುಹೊರಿಸುವ ಸಾಹಸ ಮಾಡಬಾರದು. ಈ ಕೆಲಸವು ಸುನಂದಾದೇವಿಯಿಂದ ಸರ್ವಥಾ ಆಗಿರುವದಿಲ್ಲೆಂದು ನನಗಂತು ತೋರುತ್ತದೆ. ಹೀಗೆಯೇ ಹಿಂದಕ್ಕೆ ಅವಸರ ಮಾಡಿದ್ದರಿಂದ ಹೊಟ್ಟೆಯ ಮಗನ ನಾಶವಾದದ್ದನ್ನು ಮರೆಯಬಾರದು. ಅದಕ್ಕಾಗಿ ಈಗ ಪಶ್ಚಾತ್ತಾಪ ಪಟ್ಟು ಮಾಡುವದೇನು? ಯಾರಾದರೂ ನೀಚರು ಪಟ್ಟಮಹಿಷಿಯಮೇಲಿನ ದ್ವೇಷದಿಂದ ಈ ನೀಚಕಾರ್ಯವನ್ನು ಮಾಡಿರಬಹುದು, ಎಂದು ಸಮಾಧಾನ ಹೇಳಿದಳು.

ಮುರೆಯ ಈ ಮಾತುಗಳನ್ನು ಕೇಳಿ ಅರಸನು–ಪ್ರಿಯೇ, ನೀನು ಹುಚ್ಚಿಯಲ್ಲವೇ? ಪಟ್ಟಮಹಿಷಿಯ ದಾಸಿಯು, ಪಟ್ಟಮಹಿಷಿಯ ಹಸ್ತಾಕ್ಷರದ ಪತ್ರವು; ಅಂದಬಳಿಕ ಸಂಶಯವೇನು? ಅದರಲ್ಲಿ ವಿಚಾರವೇನು ಮಾಡಬೇಕು? ಅಪರಾಧಿಗಳನ್ನು ಶಿಕ್ಷಿಸುವಲ್ಲಿ ಪಕ್ಷಪಾತವು ಕೆಲಸದ್ದಲ್ಲ. ಪ್ರತ್ಯಕ್ಷ ಯುವರಾಜನ ತಾಯಿಯನ್ನಾದರೂ ಶಿಕ್ಷಸಲಿಕ್ಕೆ ಹಿಂದೆಮುಂದೆ ನೋಡುದಷ್ಟು, ನಾನು ನ್ಯಾಯನಿಷ್ಠುರನಿರುತ್ತೇನೆಂಬದನ್ನು ನನ್ನ ಪ್ರಜೆಗಳು ಅರಿತಿರಲಿಕ್ಕೆ ಬೇಕು? ಕೈಯಲ್ಲಿ ಕನ್ನಡಿಯನ್ನು ಕೊಟ್ಟಂತೆ ಆಗಿರಲು, ಸಂಶಯವೇಕೆ? ಹಾಲು ಕುಡಿಯುವಾಗ ಬಾಯಿ ಸುಟ್ಟುಕೊಂಡವನು, ಮಜ್ಜಿಗೆಯನ್ನು ಊದಿ ಕುಡಿಯವಂತೆ, ನನ್ನ ಅವಿಚಾರದಿಂದ ಒಮ್ಮೆ ಪೆಟ್ಟುತಿಂದ ನೀನು ಈಗ ಬೆದರಿ ವಿಚಾರಮಾಡಬೇಕೆಂದು ಹೇಳುವದು ಅಸ್ವಾಭಾವಿಕ ವಲ್ಲ. ನಿನ್ನ ಮನಸ್ಸು ಬಹು ಕೋಮಲವು; ನಿನ್ನ ಹೃದಯವು ಬಹು ಸರಳವು. ಪ್ರೀಯೇ, ಇನ್ನು ನಾನು ನಿನ್ನನ್ನು ಅಗಲೇನೆಂಬ ಸಂಶಯವನ್ನು ಬಿಡು. ನನ್ನ ನಿಜವಾದ ಹಿತಕರ್ತಳೆಂದರೆ ನೀನೊಬ್ಬಳಿರುತ್ತೀ. ನಿನ್ನ ಜಾಗರೂಕತೆಯಿಂದಲೇ ಇಂದು ನನ್ನ ಪ್ರಾಣರಕ್ಷಣವಾಯಿತು. ನಿನ್ನನ್ನು ಅರಕ್ಷಣವಾದರೂ ನಾನು ಅಗಲಿ ಇರಲಾರೆನು. ನಿನ್ನ ಕೂದಲು ಕೊಂಕಿಸಲಿಕ್ಕಾದರೂ ಯಾರು ಸಮರ್ಥರಾಗುವರೆಂಬದನ್ನು ನಾನು ನೋಡುತ್ತೇನೆ. ದುಷ್ಟಳೂ, ಚಾಂಡಾಲಳೂ ಆದ ಆ ಸುನಂದೆಯನ್ನು ಶಿಕ್ಷಿಸಲು ಈಗಲೇ ಅಪ್ಪಣೆಕೊಡವೆನು. ಈ ಕೆಲಸದಲ್ಲಿ ವಿಳಂಬವು ಕೆಲಸದ್ದಲ್ಲ.

ಧನಾನಂದನ ಈ ಮಾತುಗಳನ್ನು ಕೇಳಿ ಮುರಾದೇವಿಯು ದೀನಮುದ್ರೆಯಿಂದ ಕೈಜೋಡಿಸಿ–ಆರ್ಯಪುತ್ರರೇ, ಬೇಡಿರಿ, ಪಟ್ಟಮಹಿಷಿಯನ್ನು ಒಮ್ಮೆಲೆ ಶಿಕ್ಷಿಸುವ ಸಾಹಸಕ್ಕೆ ಹೋಗಬೇಡಿರಿ. ಇಲ್ಲಿಯವರೆಗೆ ನಡೆಸುತ್ತ ಬಂದಂತೆ ಈಗಿನ ಕಾಲಕ್ಕಾದರೂ ನನ್ನ ಮಾತನ್ನು ನಡಿಸಿರಿ. ಮಹಾದೇವಿಯು ಈ ಘೋರಕೃತ್ಯಕ್ಕೆ ಕಾರಣಳಲ್ಲ. ಯಾರಿರುವರೆಂಬುದು ಸ್ವಲ್ಪ ದಿನಗಳಲ್ಲಿ ತಮಗೆ ಗೊತ್ತಾಗಬಹುದು, ಅನ್ನಲು, ಧನಾನಂದನು ಆತುರತೆಯಿಂದ — 'ಯಾರವನು?' ಎಂದು ಕೇಳಿದನು. ಅದಕ್ಕೆ ಮುರೆಯು–ಅವರು ಯಾರೆಂಬದನ್ನು ನಾನಾದರೂ ಈಗ ನಿಶ್ಚಯದಿಂದ ಹ್ಯಾಗೆ ಹೇಳಲಿ? ಈಗೊದಗಿದ ಪ್ರಸಂಗವನ್ನು ಕುರಿತು ಏನೂ ಮಾತಾಡದೆ ಸುಮ್ಮನೆಯಿದ್ದರೆ, ಏನಿದ್ದದ್ದು ಬೇಗನೆ ಹೊರಬೀಳುವ ಸಂಭವವಿರುತ್ತದೆ. ನನ್ನನ್ನು ಕಂಡರೆ ಸೇರದವರೇ ಈ ಆಟವನ್ನು ಹೂಡಿರುವರು. ನನ್ನ ಮಂದಿರದಲ್ಲಿದ್ದ ತಾವು, ಈ ಅಪೂಪಗಳನ್ನು ತಿಂದು ಏನಾದರೂ ಅಪಾಯವನ್ನು ಹೊಂದಿದ್ದರೆ, ನಾನೇ ಅಪರಾಧಿಯೆಂದು ನಿರ್ಧರಿಸಿ ನನ್ನನ್ನು ಗಾಳಿಗೆ ಹಿಡಿದು, ಘೋರಶಾಸನಕ್ಕೆ ಗುರಿಮಾಡಲಿಕ್ಕೆ ಅವರಿಗೇನು ತಡವಾಗುವದು? ''ನಾನು ಅಲ್ಲ ನಾನು ಅಲ್ಲ ನಾನು ನಿರಪರಾಧಿಯಿದ್ದೇನೆ'' ಎಂದು ಎಷ್ಟು ಅಂಗಲಾಚಿ ಬೇಡಿಕೊಂಡರೂ ನನ್ನ ಮಾತನ್ನು ಯಾರು ನಂಬುವರು? ನಿಮ್ಮ ಪ್ರಕೃತಿಯು ಹ್ಯಾಗಿರುವದೆಂಬದರ ಸುಳುವು ಹಿಡಿಯುವದಕ್ಕಾಗಿ ಯಾರಾದರೂ ಈ ಮಂದಿರದ ನೆರೆಯಲ್ಲಿ ಸುಳಿದಾಡುತ್ತಿರಬಹುದು. ತಾವು ಸ್ವಲ್ಪ ಜಡ್ಡಿನ ಸೋಗು ಹಾಕಿಕೊಳ್ಳಿರಿ. ಅಪೂಪವನ್ನು ತಿಂದಾಗಿನಿಂದ ಹೊಟ್ಟೆಯಲ್ಲಿ ಬೆಂಕಿಬಿದ್ದಹಾಗೆ ಆಗಿರುತ್ತದೆಂದು ನಾನು ಸುದ್ದಿಯನ್ನು ಹುಟ್ಟಿಸುವೆನು. ಅದನ್ನು ಕೇಳಿ ಆ ಕೊಲೆಗಡಕರು ಅಂತರಂಗದಲ್ಲಿ ಸಮಾಧಾನವನ್ನು ತಾಳಿ

ದಿಟ್ಟತನದಿಂದ ನಿಮ್ಮ ಸಮಾಚಾರಕ್ಕಾಗಿ ಬರುವರು. ಆಗ ಅಪರಾಧಿಗಳನ್ನು ಗೊತ್ತು ಹಚ್ಚುವ ಕೆಲಸವು ಮೋಜಿನ ದಾಗುವದು. ಪ್ರಭುಗಳೇ, ಈ ನನ್ನ ಪ್ರೀತಿಯ ಶ್ವೇತಾಂಬರಿಯನ್ನು ಉಪವನದಲ್ಲಿಯೇ ಹುದುಗಿಸಿಬರುವೆನು, ಎಂದು ಹೇಳಿ, ಸತ್ತ ಬೆಕ್ಕನ್ನು ತಕ್ಕೊಂಡಿದ್ದ ದಾಸಿಯೊಡನೆ ಮುರೆಯು ಉಪವನಕ್ಕೆ ಹೋದಳು. ಹೋಗುವಾಗ ಅಪೂಪದ ಡಬ್ಬಿಯನ್ನು, ಅಪೂಪಗಳನ್ನೂ ತಕ್ಕೊಂಡಿದ್ದಳು. ಮಹಾದೇವಿಯ ಪತ್ರವನ್ನಂತು ಆಕೆಯು ಯಾವಾಗೋ ತಕ್ಕೊಂಡಿದ್ದಳು. ಮುರೆಯು ಸತ್ತಬೆಕ್ಕನ್ನು ನೋಡಿ – ಶ್ವೇತಾಂಬರಿ, ಇಂದು ನೀನು ನನ್ನ ಎಂಥ ದೊಡ್ಡ ಕೆಲಸವನ್ನು ಮಾಡಿದೆಯಲ್ಲ ಎಂದು ನುಡಿದಳು. ತಾನೇ ಎಲ್ಲ ವ್ಯೂಹವನ್ನು ರಚಿಸಿದ ಮುರೆಗೆ ವ್ಯೂಹವು ಸಫಲವಾದದ್ದರಿಂದ ಬಹಳ ಸಂತೋಷವಾಯಿತು.

ಭಾಗುರಾಯಣನು

ಚಾಣಕ್ಯನು ಅಭುಕ್ತ ಸುಳ್ಳುಹೇಳಿ ಚಂದ್ರಗುಪ್ತನನ್ನು ಮುರೆಯ ಮನೆಯಲ್ಲಿ ಇಟ್ಟ ಬಳಿಕ, ಧನಾನಂದನ ದರ್ಬಾರದೊಳಗಿನ ಯಾವ ಯಾವ ಅಧಿಕಾರಿಗಳಲ್ಲಿ ವೈಮನಸ್ಸು ಇರುತ್ತದೆಂಬದನ್ನು ವಿಚಾರಿಸಹತ್ತಿದನು. ದರ್ಬಾರದೊಳಗಿನ ಮುಖ್ಯ ಅಧಿಕಾರಿಗಳೆಂದರೆ, ಅಮಾತ್ಯರಾಕ್ಷಸನು, ಭಾಗುರಾಯಣ ಸೇನಾಪತಿಯು. ಅಮಾತ್ಯರಾಕ್ಷಸನಮೇಲೆ ಧನಾನಂದನ ವಿಶ್ವಾಸ ಬಹಳ. ರಾಕ್ಷಸನ ಮೇಲೆ ನಂಬಿಗೆಯಿಂದ ಧನಾನಂದನು ರಾಜ್ಯಕಾರಭಾರದಲ್ಲಿ ಎಳ್ಳಷ್ಟಾದರೂ ಮನಸ್ಸು ಹಾಕದೆ ವಿಷಯ ಸುಖೋಪಭೋಗದಲ್ಲಿ ಹೊತ್ತುಗಳೆಯುತ್ತಿದ್ದನು. ರಾಕ್ಷಸನಾದರೂ ಎಲ್ಲ ಬಗೆಯಿಂದಲೂ ವಿಶ್ವಾಸಕ್ಕೆ ಪಾತ್ರನಾಗಿದ್ದನು. ನಂದರಾಜರ ಹಿತಕ್ಕಾಗಿ ಕಣ್ಣಲ್ಲಿ ಎಣ್ಣೆಹಾಕಿಕೊಂಡು ಜಾಗರೂಕನಾಗಿ ಕಾಯುತ್ತಿರುವ ಅಕೃತ್ರಿಮ ಸ್ವಾಮಿನಿಷ್ಠನಾದ ಅಧಿಕಾರಿಯೆಂದರೆ, ರಾಕ್ಷಸನೊಬ್ಬನೇ ಆಗಿದ್ದನು. ಸ್ವಪರರಾಷ್ಟ್ರಗಳಲ್ಲಿ ರಾಕ್ಷಸನ ವರ್ಚಸ್ಸು ಬಹಳ. ಆವನ ಪ್ರತಾಪಯುಕ್ತ ಕಾರ್ಯದಕ್ಷತೆಯಲ್ಲಿ, ಪರಾಕ್ರಮದಲ್ಲಿ, ರಾಜಕಾರ್ಯ ಧುರೀಣತೆಯಲ್ಲಿ ಆಬಾಲವೃದ್ಧರ ನಂಬಿಗೆ ಹೆಚ್ಚು. ಧನಾನಂದನು ಮುರೆಯ ಮಂದಿರವನ್ನು ಹೊಕ್ಕಂದಿನಿಂದ ಪ್ರಜೆಗಳಿಗೆ ಅವನ ದರ್ಶನ ಕೂಡ ದುರ್ಲಬವಾದದ್ದರಿಂದ ರಾಕ್ಷಸನೇ ಪ್ರತ್ಯಕ್ಷ ಅರಸನಂತೆ ಅಧಿಕಾರಿಗಳಿಗೆ ಅಪ್ಪಣೆಯನ್ನು ಮಾಡಬೇಕಾಯಿತು. ಈ ಸಂಗತಿಯು ಸ್ವಾಮಿನಿಷ್ಠ ರಾಕ್ಷಸನಿಗೆ ಇಷ್ಟವಾಗಿದ್ದಿಲ್ಲ. ಇದರಿಂದ ಬೇರೆ ಅಧಿಕಾರಿಗಳು ತನ್ನ ವಿಷಯವಾಗಿ ಮಾತ್ಸರ್ಯವನ್ನು ತಾಳಿ, ರಾಜ್ಯದ ಒಗರು ಕಡಿಮೆಮಾಡಬಹುದೆಂದು ಆತನು ಶಂಕಿಸುತ್ತಿದ್ದನು; ಆದರೂ ನಿಸ್ಪೃಹನಾದ ರಾಕ್ಷಸನು ಸ್ವಾಮಿಕಾರ್ಯಕ್ಕಾಗಿ ಮಾಡಬೇಕಾದ ಅಪ್ಪಣೆಗಳನ್ನು ಅಧಿಕಾರಗಳ ತಾರತಮ್ಯವಿಲ್ಲದೆ ನಿಃಶಂಕೆಯಿಂದಲೂ, ನಿರ್ಭಿಡೆಯಿಂದಲೂ ಮಾಡಬೇಕಾದ್ದರಿಂದ ಹಲಕೆಲವು ದೊಡ್ಡ ಅಧಿಕಾರಿಗಳ ಮಾತ್ಸರ್ಯಕ್ಕೆ ಆತನು ಗುರಿಯಾಗಬೇಕಾಯಿತು. ಅಂಥ ಅಧಿಕಾರಿಗಳಲ್ಲಿ ಭಾಗುರಾಯಣ ಸೇನಾಪತಿಯು ಒಬ್ಬನಾಗಿದ್ದನು.

ಭಾಗುರಾಯಣನು ಒಳ್ಳೇ ಶೂರನಿದ್ದನು. ಸೈನ್ಯದಲ್ಲಿ ಆತನ ವರ್ಚಸ್ಸು ವಿಚಿತ್ರವಾಗಿ ಇತ್ತು. ಆತನ ಅಪ್ಪಣೆಯ ಹೊರತು ಸೈನ್ಯದೊಳಗಿನ ಒಂದು ಕಡ್ಡಿ ಸಹ ಉಲುಕುವಂತೆ ಇದ್ದಿಲ್ಲ. ರಾಕ್ಷಸನ ವಿಷಯವಾಗಿ ಅವನು ಆದರವುಳ್ಳವನಾಗಿದ್ದನು; ಆದರೆ ತಾನು ಕಿರಾತರಾಜನನ್ನು ಗೆದ್ದು ಸಂಪಾದಿಸಿಕೊಂಡು ಬಂದಿದ್ದ ಮುರೆಯನ್ನು ಧನಾನಂದನಿಗೆ ಮದುವೆ ಮಾಡಿರಲು, ರಾಕ್ಷಸನು ಆಕೆಯನ್ನು ದಾಸೀ ಪುತ್ರಿಯೆಂದು ಸ್ಥಾಪಿಸಿ ಆಕೆಯ ಮಗನನ್ನು ಕೊಲ್ಲಿಸಿ, ಆಕೆಯನ್ನು ಪ್ರತಿಬಂಧದಲ್ಲಿಡಿಸಿದ್ದರಿಂದ ಭಾಗುರಾಯಣನ ಮನಸ್ಸು ಕಿಂಕರವಾಗಿತ್ತು. ಇದಲ್ಲದೆ ರಾಕ್ಷಸನು ಆಗಾಗ್ಗೆ ಅಧಿಕಾರದಿಂದ ತನಗೆ ಮಾಡುತ್ತಿದ್ದ ಅಪ್ಪಣೆಗಳಿಂದಲೂ ಆ ಸೇನಾಪತಿಯ ಮನಸ್ಸು ನೊಯ್ಯುಹತ್ತಿತ್ತು. ಈ ಸಂಗತಿಗಳನ್ನೆಲ್ಲ ಗೊತ್ತುಹಚ್ಚಿದ್ದ ಚಾಣಕ್ಯನು, ತಾನು ಪ್ರದ್ಯುಮ್ನದೇವನ ಕಡೆಯಿಂದ ಬಂದಿದ್ದ ಬ್ರಾಹ್ಮಣನೆಂಬ ನೆವದಿಂದ ಒಂದುದಿನ ಭಾಗುರಾಯಣನ ಬಳಿಗೆ ಹೋದನು. ಭಾಗುರಾಯಣನು ಚಾಣಕ್ಯನ ವರ್ಚಸ್ಸನ್ನೂ, ಪಾಂಡಿತ್ಯವನ್ನೂ, ವಾಕ್ ಚಾಪಲ್ಯ ವನ್ನೂ ನೋಡಿ ಸಂತುಷ್ಟನಾದನು. ಮಾತುಕತೆಗಳಾದ ಬಳಿಕ ಚಾಣಕ್ಯನು ತನ್ನ ಆಶ್ರಮಕ್ಕೆ ಹೋಗುವದಕ್ಕಾಗಿ ಏಳಲು, ಬ್ರಾಹ್ಮಣನ ಗುಣಗಳಿಗೆ ಲುಬ್ಧನಾಗಿದ್ದ ಭಾಗುರಾಯಣನು ಆತನನ್ನು ಕಳಿಸುತ್ತ ಗಂಗಾತೀರದ ಆಶ್ರಮದವರೆಗೆ ಹೋದನು. ಅಲ್ಲಿ ಬ್ರಾಹ್ಮಣನ ಕ್ಷುದ್ರ ಗುಡಿಸಲವನ್ನೂ, ದಾರಿದ್ರ್ಯವನ್ನೂ ನೋಡಿ ಭಾಗುರಾಯಣನು ಏನಾದರೂ ಸಹಾಯ ಮಾಡಬೇಕೆಂಬ ವಿಚಾರವನ್ನು ಹೊರಗೆಡವಲು, ಚಾಣಕ್ಯನು ಸ್ಪಷ್ಟವಾಗಿ ಸೇನಾಪತಿಯ ಸಹಾಯವನ್ನು ನಿರಾಕರಿಸಿದನು. ಬ್ರಾಹ್ಮಣನ ಈ ನಿಸ್ಪೃಹತೆಯಿಂದಂತು ಭಾಗುರಾಯಣನ ಮನಸ್ಸು ಮತ್ತಿಷ್ಟು ಪ್ರಸನ್ನವಾಯಿತು. ಬ್ರಾಹ್ಮಣನ ಯೋಗ್ಯತೆಯು ಬಹು ದೊಡ್ಡದೆಂದು ತಿಳಿದು, ಆತನು ದಿನಾಲು ಚಾಣಕ್ಯನ ಬಳಿಗೆ ಬರಹತ್ತಿದನು.

ಒಂದು ದಿನ ಸಂಜೆಯ ಮುಂದೆ ನದೀತೀರದಲ್ಲಿ ಭಾಗುರಾಯಣನು ಚಾಣಕ್ಯನ ಸಂಗಡ ಮಾತಾಡುತ್ತ ಕುಳಿತಿರಲು, ಮಾತಿಗೆ – ಮಾತು ಹೊರಟು ಭಾಗುರಾಯಣನು ಮುರಾದೇವಿಯ ವೃತ್ತಾಂತವನ್ನೆಲ್ಲ ಮೊದಲಿನಿಂದ ಕಡೆಯತನಕ ಚಾಣಕ್ಯನ ಮುಂದೆ ಹೇಳಿದನು. ಇದನ್ನು ಕೇಳಿ ಚಾಣಕ್ಯನು ಸ್ವಲ್ಪಹೊತ್ತು ಸುಮ್ಮನೆ ಕುಳಿತು, ಈಗ ಮಾತಾಡಲಿಕ್ಕೆ ತನಗೆ ಉತ್ತಮವಾದ ಸಂಧಿಯು ಪ್ರಾಪ್ತವಾಗಿರುತ್ತದೆಂದು ಭಾವಿಸಿ, ಭಾಗುರಾಯಣನನ್ನು ಕುರಿತು– ಸೇನಾಪತೀ, ಭಾಗುರಾಯಣಾ, ಸತ್ಯದ ಬಗ್ಗೆ ನಿನ್ನಲ್ಲಿರುವ ನಿಷ್ಠೆಯನ್ನು ನೋಡಿ ನನಗೆ ಬಹಳ ಸಂತೋಷವಾಗಿದೆ. ರಾಕ್ಷಸನು ಸ್ವಾಮಿನಿಷ್ಠನೆಂದು ನಾಲ್ಕೂಕಡೆಗೆ ಪ್ರಸಿದ್ಧವಾಗಿರುವದು ನಿಜವು; ಆದರೆ ಆತನಲ್ಲಿ ಸತ್ಯನಿಷ್ಠೆಯು ಇದ್ದಂತೆ ತೋರುವದಿಲ್ಲ. ಕ್ಷತ್ರಿಯ ರಾಜಪುತ್ರಿಯನ್ನು ದಾಸೀಪುತ್ರಿಯೆಂದು, ಸುಳ್ಳೇ ಇಲ್ಲದ ಕೆಟ್ಟ ಆರೋಪಗಳನ್ನು ಆಕೆಯ ಮೇಲೆ ಹೊರಿಸಿ, ಧನಾನಂದನಿಂದ ಆಕೆಯ ಮಗನನ್ನು ಕೊಲ್ಲಿಸಿ, ನಿರಪರಾಧಿಯಾದ ಮುರೆಯನ್ನು ಸೆರೆಯಲ್ಲಿಡಿಸಿದ ರಾಕ್ಷಸನಲ್ಲಿ ಸತ್ಯನಿಷ್ಠೆಯು ಎಷ್ಟರ ಮಟ್ಟಿಗೆ ಇರುತ್ತದೆಂಬದನ್ನು ಯಾರು ಹೇಳಬೇಕು? ನಿನ್ನ ಸತ್ಯನಿಷ್ಠೆಯ ಬಗ್ಗೆ ಯೋಗ್ಯ ಫಲವು ನಿನಗೆ ಬೇಗನೆ ದೊರೆಯಬಹುದು, ಹೆದರಬೇಡ. ನೀನು ವಿಶ್ವಾಸದಿಂದ ಹಿಂದೆ ಎಲ್ಲ ಸಂಗತಿಗಳನ್ನು ನನ್ನ ಮುಂದೆ ಹೇಳಿದ್ದರಿಂದ ನಾನೂ ಒಂದೆರಡು

ಮಾತುಗಳನ್ನು ನಿನ್ನ ಮುಂದೆ ಹೇಳುತ್ತೇನೆ; ಆದರೆ ಆ ಮಾತುಗಳನ್ನು ಹೇಳುವಮೊದಲು ನಿನಗೊಂದು ಪ್ರಶ್ನೆ ಮಾಡುವೆನು. ಆ ಪ್ರಶ್ನದ ಉತ್ತರವನ್ನು ಕೊಡು, ಯಾರಾದರೂ ಆ ಮುರೆಯ ಮಗನು ಸತ್ತಿಲ್ಲೆಂದು ನಂಬಿಗೆ ಮಾಡಿಕೊಟ್ಟರೆ, ಬರಿಯ ನಂಬಿಗೆಯೇ ಏಕೆ, ಆ ಹುಡುಗನನ್ನೇ ಪ್ರತ್ಯಕ್ಷ ನಿನ್ನ ಮುಂದೆತಂದು ನಿಲ್ಲಿಸಿದರೆ, ನೀನು ಆತನ ಸಲುವಾಗಿ ಏನು ಮಾಡೀ? ಭಾಗುರಾಯಣಾ, ನನ್ನ ಈ ಮಾತು ನಿಜವೆಂದು ತಿಳಿಯಬೇಡ ಕಂಡಿಯಾ? ಸುಮ್ಮನೆ ಮೋಜಿಗಾಗಿ ನಿನ್ನನ್ನು ಕೇಳುತ್ತೇನೆ, ಏನು ಮಾಡೀಯೆಂಬದನ್ನು ಮಾಜದೇ ಹೇಳು.

ಬ್ರಾಹ್ಮಣನ ಈ ಮಾತುಗಳನ್ನು ಕೇಳಿ ಭಾಗುರಾಯಣನು – ಬ್ರಾಹ್ಮಣಶ್ರೇಷ್ಠಾ, ನೀನು ಮೋಜಿಗಾಗಿ ಕೇಳುವದರಿಂದ ನಾನೂ ಮೋಜಿಗಾಗಿಯೇ ಹೇಳುತ್ತೇನೆ ಕೇಳು. ಆ ಹುಡುಗನು ನನ್ನ ಕಣ್ಣಿಗೆ ಬಿದ್ದರೆ, ಆತನಿಗೆ ಯೌವರಾಜ್ಯಾಭಿಷೇಕವನ್ನು ಮಾಡಿಸುವೆನು. ಹಾಗೆ ಮಾಡಿಸುವಾಗ ಹೊತ್ತುಬಿದ್ದರೆ ಸಂಪೂರ್ಣ ರಾಜ್ಯವನ್ನಾದರೂ ಆತನಿಗೆ ಕೊಡಿಸುವೆನು. ಏನು ಮಾಡಬೇಕು, ಆ ಹುಡುಗನು ಜೀವದಿಂದಿದ್ದರೆ, ದೊಡ್ಡ ಸಾಮ್ರಾಜ್ಯವನ್ನು ಸ್ಥಾಪಿಸುತ್ತಿದ್ದನು. ಆತನ ಜನ್ಮಸ್ಥ ಗ್ರಹಗಳೇ ಹಾಗೆ ಇದ್ದವು. ಸಾಮುದ್ರಿಕ ಲಕ್ಷಣದಿಂದಾದರೂ ಅದೇ ಮಾತು ಸಿದ್ಧವಾಗುತ್ತಿತ್ತು ಗ್ರಹ ದೆಶೆಯಲ್ಲಿ ಏನು ಅಂತರವಾಯಿತೋ ತಿಳಿಯದು, ಆತನು ಸಂಪೂರ್ಣ ನಾಶವಾಗಿ ಹೋದನು, ಎಂದು ನುಡಿಯಲು, ಚಾಣಕ್ಯನು–ಸೇನಾಪತೀ, ನಿಜವದೆ. ನಿನ್ನಂಥ ಸರಳ ಗತಿಯ ಶೂರನಿಗೆ ವಕ್ರಗತಿಯು ಸೇರದು. ಮುರೆಯು ನಿಜವಾಗಿ ಕ್ಷತ್ರಿಯ ರಾಜಪುತ್ರಿಯಿದ್ದು, ಆಕೆಯ ಮಗನು ಹಕ್ಕಿನಿಂದ ಯೌವರಾಜ್ಯಾಭಿಷೇಕಕ್ಕೆ ಪಾತ್ರನಿರಲು, ಆತನ ನಾಶವಾಗಿ ಸುಮಾಲ್ಯನಿಗೆ ಯೌವರಾಜ್ಯಾಭಿಷೇಕವಾದದ್ದು ನಿನಗೆ ಸರಿದೋರಿರಲಿಕ್ಕಿಲ್ಲ. ನೀನು ಒಳ್ಳೇ ಸತ್ಯನಿಷ್ಠನು; ಆದರೆ ಭಾಗುರಾಯಣಾ, ಸತ್ಯದ ಸಂರಕ್ಷಣವು ವ್ಯವಹಾರದಲ್ಲಿ ಬರಿಯ ಸತ್ಯದಿಂದಲೇ ಆಗದು. ಅದಕ್ಕಾಗಿ ಅಲ್ಪ–ಸ್ವಲ್ಪ ದಂಡ ನೀತಿಯನ್ನು ಉಪಯೋಗಿಸಬೇಕಾಗುತ್ತದೆ. ನೀತಿಶಾಸ್ತ್ರದ ಮಹಾ ಗುರುವಾದ ಕಣಿಕನು ಸಹ–ಶತ್ರುವನ್ನು ಅಪ್ಪಳಿಸಿ ಕೊಲ್ಲುವ ಸಂಧಿಯು ಒದಗುವವರೆಗೆ ಅವನನ್ನು ಹೆಗಲ ಮೇಲೆ ಕುಳ್ಳಿರಿಸಿಕೊಂಡು ಓಡಾಡಿದರೂ ಚಿಂತೆಯಿಲ್ಲೆಂದು ಹೇಳಿದ್ದಾನೆ. ನೀನಾದರೂ ಪ್ರಸಂಗ ಬರುವವರೆಗೆ ಸತ್ಯವನ್ನು ಬಚ್ಚಿಟ್ಟು ಅಸತ್ಯವನ್ನು ಆಚರಿಸಿ ತೋರಿಸ ಬೇಕಾಗುವದು. ಹಾಗೆ ಮಾಡದಿದ್ದರೆ ನಿನ್ನ ಸತ್ಯನಿಷ್ಠೆಯಿಂದ ಪ್ರಯೋಜನವೇನೂ ಆಗಲಿಕ್ಕಿಲ್ಲ ನನ್ನ ಮಾತನ್ನು ದುರ್ಲಕ್ಷಿಸದೆ ಚನ್ನಾಗಿ ವಿಚಾರಮಾಡು, ಎಂದು ಹೇಳಿದನು. ಅದಕ್ಕೆ ಭಾಗುರಾಯಣನು–ಬ್ರಹ್ಮನ್, ನಿಮ್ಮ ಮಾತು ನಿಜವಿರುತ್ತದೆ. ಪ್ರಸಂಗಬಂದಾಗ ನಾನಾದರೂ ಹಾಗೆ ಮಾಡಲಿಕ್ಕಿಲ್ಲೆನ್ನುವಹಾಗಿಲ್ಲ; ಆದರೆ ಈ ಆಗದ ಮಾತುಗಳನ್ನಾಡುತ್ತ ಕುಳಿತುಕೊಳ್ಳುವದರಿಂದ ಪ್ರಯೋಜನವೇನು? ಮೂಲತಃ ಕೂಸಿರುವಾಗಲೇ ಮುರಾದೇವಿಯ ಮಗನು ಮರಣ ಹೊಂದಿದ್ದಾನೆ. ಇನ್ನು ಆ ಮಾತಿನ ಪ್ರಸಕ್ತಿಯನ್ನು ತೆಗೆಯದಿರುವದೇ ನೆಟ್ಟಗೆ. ಆ ಹುಡುಗನು ಹುಟ್ಟಿಬರುವ ಹಾಗಿಲ್ಲ, ನಾವು ಪ್ರಯತ್ನ ಮಾಡುವಹಾಗಿಲ್ಲ.

ಈ ಮೇರೆಗೆ ಭಾಗುರಾಯಣ–ಚಾಣಕ್ಯರು ಮಾತಾಡುತ್ತಿರಲು, ರಾತ್ರಿಯು ಬಹಳ ವಾಯಿತು. ಚಾಣಕ್ಯನು ತನ್ನ ಆಶ್ರಮಕ್ಕೆ ಹೊರಟನು. ಭಾಗುರಾಯಣನು ತನ್ನ ಮನೆಗೆ

ಹೊರಟನು. ಹಾದಿಯಲ್ಲಿ ಹೋಗ ಹೋಗತ್ತ ಭಾಗುರಾಯಣನಿಗೆ, ತನ್ನ ಹುಳುಕು ಹುಡುಕುವದಕ್ಕಾಗಿ ಯಾವನೋ ಗುಪ್ತಚಾರನು ತನ್ನ ಮೇಲೆ ಇರುವನೆಂಬ ಸಂಶಯವು ಉತ್ಪನ್ನವಾಯಿತು. ಆತನು ಮನಃಪೂರ್ವಕವಾಗಿ ಅವಲೋಕಿಸಲು, ಅವನ ಸಂಶಯವು ನಿಶ್ಚಯವಾಗಿ, ಆ ಅಭಿಮಾನಿಯಾದ ಸೇನಾಪತಿಯ ಮನಸ್ಸಿಗೆ ಸ್ವಲ್ಪ ಹತ್ತಿತು. ಆತನು ರಾಕ್ಷಸನ ಮೇಲೆ ಸ್ವಲ್ಪ ಸಿಟ್ಟು ಆದನು. 'ನೀತಿ ಶಾಸ್ತ್ರದ ಮಾತು ಹೀಗೆಯೇ ಸರಿ' ಎಂದು ಸಮಾಧಾನ ಮಾಡಿಕೊಳ್ಳುತ್ತ ಆತನು ಮನೆಗೆ ಹೋದನು. ಸಾಯಂಸಂಧ್ಯಾದಿ ಕರ್ಮಗಳನ್ನು ತೀರಿಸಿಕೊಂಡು ಊಟಕ್ಕೆ ಕುಳಿತುಕೊಳ್ಳುತ್ತಿರಲು, ನಿಜವಾಗಿಯೇ ರಾಕ್ಷಸನ ಒಬ್ಬ ಸೇವಕನು ಭಾಗುರಾಯಣನ ಬಳಿಗೆ ಬಂದು – ದೇವರೂ, ಬಿಟ್ಟ ಕೆಲಸ ಬಿಟ್ಟು ಈಗಿಂದೀಗಲೇ ಬರಬೇಕೆಂದು ಅಮಾತ್ಯರು ಹೇಳಿದ್ದಾರೆ, ಎಂದು ನುಡಿದನು. ಅದನ್ನು ಕೇಳಿ ಸೇನಾಪತಿಗೆ ಸ್ವಲ್ಪ ಹೆಚ್ಚು ಸಿಟ್ಟು ಬಂದಿತು; ಆದರೂ ಆತನು ಸಿಟ್ಟನ್ನು ನುಂಗಿಕೊಂಡು ಊಟವನ್ನು ಮಾಡದೆ ರಾಕ್ಷಸನ ಬಳಿಗೆ ಹೋದನು. ರಾಕ್ಷಸನು ಭಾಗುರಾಯಣನನ್ನು ನೋಡಿದ ಕೂಡಲೇ – ನೀವು ಇತ್ತಿತ್ತ ಒಬ್ಬ ಬ್ರಾಹ್ಮಣನ ಬಳಿಗೆ ಹೋಗಿ ಬಹಳ ಹೊತ್ತು ಮಾತಾಡುತ್ತ ಕುಳಿತುಕೊಳ್ಳುತ್ತಿರುತ್ತೀರಲ್ಲ, ಆ ಬ್ರಾಹ್ಮಣನು ಯಾರೆಂಬದನ್ನು ಹೇಳಬಲ್ಲಿರೋ? ಎಂದು ಕೇಳಿದನು. ಈ ಪ್ರಶ್ನವನ್ನು ಕೇಳಿದಕೂಡಲೇ ಭಾಗುರಾಯಣನ ಹುಬ್ಬುಗಳು ಗಂಟಿಕ್ಕಿದವು. ಆತನು ಸಂತಾಪಗೊಂಡನು. ಸೇನಾಪತಿಯ ಸಿಟ್ಟು ಹೊಟ್ಟೆಯಲ್ಲಿ ನಿಲ್ಲದಾಯಿತು; ಆದರೂ ಆತನು ತನ್ನಿಂದಾದಷ್ಟು ಯತ್ನಿಸಿ ಸಿಟ್ಟನ್ನು ನುಂಗಿಕೊಂಡು ರಾಕ್ಷಸನಿಗೆ—''ಅಮಾತ್ಯರಾಜನೇ, ನನ್ನನ್ನು ಬುದ್ಧಿಪೂರ್ವಕವಾಗಿ ಕರಿಸಿಕೊಂಡು ಹೀಗೆ ಕೇಳುವದರ ಉದ್ದೇಶವೇನೆಂಬುದು ತಿಳಿಯಬಹುದೇನು!'' ಎಂದು ತಿರುಗಿ ಕೇಳಿದನು. ತನ್ನ ಪ್ರಶ್ನೆಯಿಂದ ಸೇನಾಪತಿಗೆ ಸಿಟ್ಟು ಬಂದಿತೆಂಬದನ್ನು ರಾಕ್ಷಸನು ಕೂಡಲೆ ಕಂಡುಹಿಡಿದನು; ಆದರೂ ಅರಿಯದವನಂತೆ ನಟಿಸಿ ಆತನು ಸಮಾಧಾನದಿಂದ– ಸೇನಾಪತಿಯೇ, ಆ ಬ್ರಾಹ್ಮಣನ ವಿಷಯವಾಗಿ ನನಗೆ ಸಂಶಯ ಬಂದದ್ದರಿಂದ ಅವನ ಮೇಲೆ ಒಬ್ಬ ಗುಪ್ತಚಾರನನ್ನು ಇಟ್ಟಿರುವೆನು. ಚಾರನ ಮುಖದಿಂದ ಸುದ್ದಿಯನ್ನು ಕೇಳಿದ್ದರಿಂದ ನನ್ನ ಸಂಶಯವು ದೃಢವಾಗಿದೆ. ನೀವು ಆ ಬ್ರಾಹ್ಮಣನ ಬಳಿಗೆ ಹೋಗುತ್ತಿರುತ್ತೀರೆಂಬದನ್ನು ಅದೇ ಚಾರನ ಮುಖದಿಂದ ಕೇಳಿದೆನು. ವಿಶೇಷ ಪರಿಚಯವಿದ್ದ ಬಳಿಕ ಬ್ರಾಹ್ಮಣನ ವಿಶೇಷ ವರ್ತಮಾನವು ಗೊತ್ತಿರಬಹುದೆಂದು ತಿಳಿದು ನಿಮ್ಮನ್ನೇ ಕೇಳಬೇಕೆಂದು ಮಾಡಿದ್ದೆನು. ಮೂರು–ನಾಲ್ಕು ಸಾರೆ ನಿಮ್ಮ ಭೆಟ್ಟಿಯಾದರೂ ಕೇಳಲಿಕ್ಕೆ ನೆನಪೇ ಆಗಿದ್ದಿಲ್ಲ, ಈದಿನ ಅಕಸ್ಮಾತ್ ನೆನಪಾಗಲು, ಕೂಡಲೆ ಕರಿಸಿ ಕೇಳಿದನು. ಕೇಳುವದರಲ್ಲಿ ಬೇರೆ ಯಾವ ಉದ್ದೇಶವೂ ಇರುವದಿಲ್ಲ. ಸೇನಾಪತೀ, ಬೇರೆ ಉದ್ದೇಶವಾದರೂ ಏನು ಇರಬೇಕು ಹೇಳು, ಎಂದು ನುಡಿದು ಭಾಗುರಾಯಣನ ಮುಖಚರ್ಯವನ್ನು ದಿಟ್ಟಿಸಿ ನೋಡಹತ್ತಿದನು.

ಭಾಗುರಾಯಣನಿಗೆ ರಾಕ್ಷಸನ ಮಾತುಗಳು ವಿಶ್ವಸನೀಯವಾಗಿ ತೋರಲಿಲ್ಲ. ಬುದ್ಧಿಪೂರ್ವಕವಾಗಿ ತನ್ನನ್ನು ಕರೆಸಿ, ಅಕಸ್ಮಾತ್ ನೆನಪಾದದ್ದರಿಂದ ಕರೆಸಿದನೆಂದು ಮಂತ್ರಿಯು ಸುಳ್ಳೇ ಹೇಳುತ್ತಾನೆಂದು ಆತನು ತಿಳಿದನು; ಆದರೂ ಆತನು ರಾಕ್ಷಸನನ್ನು ಆ ವಿಷಯವಾಗಿ ಏನೂ ಕೇಳಲಾರದೆ – ಅಮಾತ್ಯ ರಾಜನೇ, ಬ್ರಾಹ್ಮಣನ ವಿಷಯವಾಗಿ ನನಗೆ ಹೆಚ್ಚಿಗೆಯೇನೂ

ಗೊತ್ತಿಲ್ಲ. ಒಂದು ದಿನ ಬ್ರಾಹ್ಮಣನು ನನ್ನ ಬಳಿಗೆ ಬಂದು "ನಾನು ಪರದೇಶದ ಬ್ರಾಹ್ಮಣನು. ಗಂಗಾತೀರದಲ್ಲಿ ನಾಲ್ಕುದಿನ ವಾಸಮಾಡಬೇಕೆಂದು ಬಂದಿದ್ದೇನೆ. ತಮ್ಮಂಥವರ ಭೆಟ್ಟಿಯಾಗ ಬೇಕೆಂದು ಬಂದೆನು." ಎಂದು ಹೇಳಿದನು. ಬ್ರಾಹ್ಮಣನು ಒಳ್ಳೇ ವಿದ್ವಾಂಸನು, ಅದರಂತೆ ನಿಸ್ಪೃಹನೂ ಇರುತ್ತಾನೆ. ಆತನಿಗೆ ಯಾತರದೂ ಆಶೆಯಿರುವದಿಲ್ಲ, ಬ್ರಾಹ್ಮಣನು ವಿಶೇಷವಾಗಿ ಆದರಣೀಯನಾಗಿ ತೋರಿದ್ದರಿಂದ ನಾನು ಯಾವಾಗಾದರೂ ಆತನ ಬಳಿಗೆ ಹೋಗುತ್ತಿರುತ್ತೇನೆ, ಇಷ್ಟೇ, ಎಂದು ನುಡಿದು ಭಾಗುರಾಯಣನು ರಾಕ್ಷಸನ ಮೋರೆಯನ್ನು ನೋಡಿದನು. ತನ್ನ ಈ ಉತ್ತರದಿಂದ ಅಮಾತ್ಯನ ಸಮಾಧಾನವಾಗಲಿಲ್ಲೆಂಬದು ಅವನಿಗೆ ಸಹಜವಾಗಿ ಗೊತ್ತಾಯಿತು; ಆದರೂ ಅಮಾತ್ಯನು ಮತ್ತೇನು ಕೇಳುತ್ತಾನೋ ನೋಡಬೇಕೆಂದು ಸೇನಾಪತಿಯು ಅವನ ಮುಖವನ್ನು ನೋಡುತ್ತ ಕುಳಿತುಕೊಂಡನು. ಅಮಾತ್ಯನು ಕೆಲಹೊತ್ತು ಸುಮ್ಮನೆ ಕುಳಿತು ಭಾಗುರಾಯಣನಿಗೆ–ಸೇನಾಪತೀ, ಆ ಬ್ರಾಹ್ಮಣನು ಮುರಾದೇವಿಯ ಅಣ್ಣನ ಮಗನ ಸಂಗಡ ಇಲ್ಲಿಗೆ ಬಂದಿರುತ್ತಾನೆಂಬದು ತಮಗೆ ಗೊತ್ತಿಲ್ಲೆಂಬಂತೆ ತಮ್ಮ ಮಾತಿನ ಮೇಲಿಂದ ಗೊತ್ತಾಗುತ್ತದೆ, ಅನ್ನಲು ಭಾಗುರಾಯಣನು "ತಾನು ಬ್ರಾಹ್ಮಣನ ಸಂಬಂಧವನ್ನು ಹೇಳದ್ದರಿಂದ ಅಮಾತ್ಯನು ಈ ಮರ್ಮದ ಮಾತುಗಳನ್ನಾಡಿದನೆಂ"ದು ತಿಳಿದು ಅಮಾತ್ಯನಿಗೆ–ಹೌದು, ಹಾಗೆ ನಾನು ಕೇಳಿದ್ದೇನೆ, ಎಂದನು. ಅದಕ್ಕೆ ರಾಕ್ಷಸನು–ಅಂತು ನಿಮಗೆ ನಿಶ್ಚಯವಾಗಿ ಗೊತ್ತಿಲ್ಲ ಹಾಗಾದರೆ, ಅನ್ನಲು, ಭಾಗುರಾಯಣನು–ನಿಶ್ಚಯವಾಗಿ ಹ್ಯಾಗೆ ಗೊತ್ತಾಗಬೇಕು? ನಾನೇನು ಗುಪ್ತಚಾರರನ್ನಿಟ್ಟು ಎರಡನೆಯವರ ಸುದ್ದಿಯನ್ನು ತಿಳಕೊಳ್ಳುವದಿಲ್ಲ; ಆದ್ದರಿಂದ ಯಾವ ಮಾತೂ ನನಗೆ ನಿಶ್ಚಯವಾಗಿ ಗೊತ್ತಿರುವದಿಲ್ಲ, ಎಂದು ಹೇಳಿದನು.

ತನಗೆ ಈ ಮರ್ಮದ ಉತ್ತರವು ಗೊತ್ತೇ ಆಗಿಲ್ಲೆಂಬಂತೆ ನಟಿಸಿ ರಾಕ್ಷಸನು ಭಾಗುರಾಯಣನಿಗೆ–ಸೇನಾಪತೀ, ನಾನು ಗುಪ್ತಚಾರರ ದ್ವಾರದಿಂದ ಬ್ರಾಹ್ಮಣನ ನಿಜವಾದ ಸಂಗತಿಯನ್ನು ತಿಳಕೊಂಡಿರುತ್ತೇನೆ. ಅವನು ವಿಶ್ವಾಸಕ್ಕೆ ಪಾತ್ರನಿರುವದಿಲ್ಲ, ಆತನು ಪ್ರದ್ಯುಮ್ನದೇವನ ಕಡೆಯಿಂದ ಬಂದದ್ದೇ ನನಗೆ ವಿಶ್ವಸನೀಯವಾಗಿ ತೋರುವದಿಲ್ಲ, ಚಂದ್ರಗುಪ್ತನು ಪ್ರದ್ಯುಮ್ನದೇವನ ಮಗನೇ ಎಂಬ ವಿಶ್ವಾಸವೂ ನನಗಿರುವದಿಲ್ಲ, ನಿಜವಾದದ್ದನ್ನು ಬೈಲಿಗೆಳೆಯುವ ಹವಣಿಕೆಯಲ್ಲಿರುತ್ತೇನೆ. ನೀವಾದರೂ ಅದೇ ಯತ್ನದಲ್ಲಿರುವದು ನೆಟ್ಟಗೆ ಕಾಣುತ್ತದೆ. ಗ್ರೀಕರು ಪಾಟಲೀಪುತ್ರದ ಮೇಲೆ ಕಣ್ಣು ಇಟ್ಟಿರುವರೆಂದು ನಿಮಗೆ ಹೇಳುವ ಕಾರಣವಿಲ್ಲ. ಅವರ ಕಡೆಯ ಗುಪ್ತಚಾರನಾಗಿ ಬ್ರಾಹ್ಮಣನು ಬಂದಿರಲಿಕ್ಕಿಲ್ಲೆಂದು ಯಾರು ಹೇಳಬೇಕು? ಇನ್ನು ಒಂದೆರಡು ದಿನಗಳಲ್ಲಿ ಈ ಬ್ರಾಹ್ಮಣನನ್ನು ನಮ್ಮ ರಾಜ್ಯದ ಗಡಿಬಿಟ್ಟು ದಾಟಿಸಬೇಕೆಂದು ಮಾಡಿರುತ್ತೇನೆ ಇಲ್ಲದಿದ್ದರೆ ಆತನನ್ನು ಪ್ರತಿಬಂಧದಲ್ಲಾದರೂ ಇಡಬೇಕು. ಹ್ಯಾಗೆ? ನಿಮಗೆ ಯಾವದು ಯೋಗ್ಯವಾಗಿ ತೋರುತ್ತದೆ? ನಿಮಗೂ ಬ್ರಾಹ್ಮಣನಿಗೂ ವಿಶೇಷ ಸ್ನೇಹವಿರುವದರಿಂದ ಕೇಳುತ್ತೇನೆ, ಎಂದನು. ಅಮಾತ್ಯನ ಕಡೆಯ ಮಾತುಗಳಿಂದ ಭಾಗುರಾಯಣನಿಗೆ ಬಹಳ ಸಿಟ್ಟು ಬಂದಿತು. ತಾನೊಬ್ಬನೇ ಚತುರನು, ತನ್ನ ಹೊರತು ಸ್ವಾಮಿಯ ನಿಜವಾದ ಹಿತವನ್ನು ಸಾಧಿಸುವವನು ಮತ್ತೊಬ್ಬನಿಲ್ಲ, ಎಂಬ ಹೆಮ್ಮೆಯು ರಾಕ್ಷಸನಿಗೆ

ಇರುವದೆಂದು ಆತನು ತಿಳಿದನು. ಆತನು ಕೂಡಲೆ ರಾಕ್ಷಸನಿಗೆ – ಅಮಾತ್ಯ, ಈ ಪಾಟಲಿ ಪುತ್ರದಲ್ಲಿ ಬೇಕಾದದ್ದು ಮಾಡಲಿಕ್ಕೆ ನೀವು ಸಮರ್ಥರಿರುತ್ತೀರಿ; ಆದರೆ ಬರಿಯ ಸಂಶಯದಿಂದ ಒಬ್ಬ ಪವಿತ್ರ ಬ್ರಾಹ್ಮಣನ ಅಪಮಾನವಾಗಬಾರದೆಂದು ಸೂಚಿಸುವೆನು. ತಾವು ಎಲ್ಲ ಬಗೆಯ ನೀತಿ ಶಾಸ್ತ್ರದಲ್ಲಿ ವಿಶಾರದರು, ಬಹು ಶಾಂತ ಸ್ವಭಾವದವರು, ವಿಚಾರವಂತರು, ತಮಗೆ ನಾನು ಹೆಚ್ಚಿಗೆ ಹೇಳುವದೇನದೆ? ಮುರಾದೇವಿಯು ತನ್ನ ಹೋಮಶಾಲೆಯಲ್ಲಿಯೇ ಇರೆಂದು ಬ್ರಾಹ್ಮಣನಿಗೆ ಆಗ್ರಹ ಮಾಡಿದರೂ ನಿಸ್ಪೃಹಿಯು ಒಪ್ಪಿಕೊಳ್ಳದೆ ಗಂಗಾತೀರದ ಗುಡಿಸಿಲಿನಲ್ಲಿರುತ್ತಾನೆ. ಚಾರರ ಮುಖದಿಂದ ತಿಳಕೊಳ್ಳತಕ್ಕದ್ದನ್ನು ನಿಸ್ಸಂಶಯವಾಗಿ ತಿಳಕೊಂಡು ಮಾಡತಕ್ಕದ್ದನ್ನು ಮಾಡಬೇಕು. ಬ್ರಾಹ್ಮಣನು ಒಳ್ಳೇ ಬ್ರಹ್ಮನಿಷ್ಠನೂ, ವಿದ್ವಾಂಸನೂ ಇರುತ್ತಾನೆ.

ಈ ಮೇರೆಗೆ ಭಾಗುರಾಯಣ – ರಾಕ್ಷಸರ ಸಂಭಾಷಣವಾದ ಬಳಿಕ ಭಾಗುರಾಯಣನು ಮನೆಗೆ ಹೊರಟನು. ಈ ದಿನ ಅಮಾತ್ಯನ ವಿಷಯವಾಗಿ ಅವನ ಮನಸ್ಸಿನಲ್ಲಿ ವಿಕಲ್ಪವು ಉತ್ಪನ್ನವಾಯಿತು. ಅಮಾತ್ಯನೂ, ಸೇನಾಪತಿಯೂ ಸಮಾನ ಯೋಗ್ಯತೆಯ ಅಧಿಕಾರಿಗಳು; ಹಾಗೆ ಇರದಿದ್ದರೂ, ಅಮಾತ್ಯನು ಸೇನಾಪತಿಯ ವಿಷಯವಾಗಿ ಹೀಗೆ ಸಂಶಯಪಡುವದಾದರೂ ಯೋಗ್ಯವಲ್ಲ. ನನ್ನ ಮೇಲೆಯೂ ಗುಪ್ತಚಾರನನ್ನು ಇಟ್ಟಬಳಿಕ, ಆ ಚಾರನ ಮುಂದೆ ನನ್ನ ಬೆಲೆಯೇನು ಉಳಿಯಿತು? ಈ ಊರೊಳಗಿನ ಒಬ್ಬ ಕಳ್ಳನೂ ನಾನೂ ಒಂದೇ ಯೋಗ್ಯತೆಯವರಾದೆವಲ್ಲ! ಮುರಾದೇವಿಯ ಪ್ರಕರಣವು ಉಂಟಾದಾಗಿನಿಂದಲೇ ನನ್ನ ವಿಷಯವಾಗಿ ರಾಕ್ಷಸನ ಮನಸ್ಸು ಶುದ್ಧವಿದ್ದಂತೆ ತೋರುವದಿಲ್ಲ. ಧನಾನಂದ ಮಹಾರಾಜರು ರಾಜ್ಯ ಕಾರಭಾರದಲ್ಲಿ ಕೈ ಹಾಕದೆ ಇರುವದರಿಂದ, ಪ್ರತಿ ರಾಜನಾಗಿರುವ ರಾಕ್ಷಸನು ಯಾವಕಾಲದಲ್ಲಿ ಏನು ಮಾಡುವನೋ ತಿಳಿಯದು. ಇವನು ಇರುವವರೆಗೆ ಪಾಟಲೀಪುತ್ರದಲ್ಲಿರುವದು ನೆಟ್ಟಗಲ್ಲ. ಪಾಪ! ಚಾಣಕ್ಯನು ಎಂಥ ಸುಶೀಲ ಬ್ರಾಹ್ಮಣನು, ಎಂಥ ವಿದ್ವಾಂಸನು, ಎಷ್ಟು ಚತುರನು. ಅವನ ಮೇಲೆಯೂ ಸಂಶಯವಂತೆ. ಅಮಾತ್ಯಾ, ಹೀಗೆ ಕಂಡವರ ಮೇಲೆ ಸಂಶಯಪಡಹತ್ತಿದರೆ, ನನ್ನಂಥ ಮಾನೀಪುರುಷರು ಪಾಟಲೀಪುತ್ರದಲ್ಲಿ ನಿಲ್ಲಲಾರರು. ಆರ್ಯ ಚಾಣಕ್ಯನು ಈ ದಿನ ಮಾತಾಡುತ್ತಾಡುತ್ತ ಮೋಜಿಗಾಗಿ ಮಾಡಿದ ಪ್ರಶ್ನೆದಂತೆ, ಆ ಮುರೆಯ ಪುತ್ರನು ಜೀವದಿಂದಿದ್ದರೆ, ಏನು ಹೇಳಲಿ? ಈ ದುರಭಿಮಾನಿಯಾದ ರಾಕ್ಷಸನಿಗೆ ತನ್ನ ಕೈಯನ್ನು ತೋರಿಸುತ್ತಿದ್ದನು. ಉಪಾಯವಿಲ್ಲ, ಕೂಸಿರುವಾಗಲೇ ಆತನನ್ನು ಹಿಮಾಲಯದ ಅಡವಿಯಲ್ಲಿ ದುಷ್ಟರು ಕೊಲ್ಲಿಸಿ ಬಿಟ್ಟರು. ನಾಳಿಗೇ ಚಾಣಕ್ಯನ ಒಳಗೆ ಹೋಗಿ ನಡೆದ ಸಂಗತಿಯನ್ನೆಲ್ಲ ಹೇಳಿ, ಆತನನ್ನು ಎಚ್ಚರಗೊಳಿಸತಕ್ಕದ್ದು.

ಈ ಪ್ರಕಾರ ವಿಚಾರ ಮಾಡುತ್ತ ಭಾಗುರಾಯಣನು ಮನೆಗೆ ಹೋಗಿ ಉಂಡು ಮಲಗಿಕೊಂಡನು; ಆದರೆ ಆತನಿಗೆ ನಿದ್ರೆಯೇ ಹತ್ತಲಿಲ್ಲ. ಮರುದಿನ ಬೆಳಗಾಯಿತು, ಸಂಜೆಯೂ ಆಯಿತು. ಭಾಗುರಾಯಣನು ಚಾಣಕ್ಯಾಶ್ರಮಕ್ಕೆ ಹೋದನು. ಚಾಣಕ್ಯನು, ಈ ದಿನ ಬಹಳ ಮಾಡಿ ಭಾಗುರಾಯಣನು ಬರಲೇಬೇಕೆಂದು ತರ್ಕಿಸಿ ಹಾದಿಯನ್ನು ನೋಡುತ್ತಿದ್ದನು; ಆದರೆ ಭಾಗುರಾಯಣನು ಕಣ್ಣಿಗೆ ಬಿದ್ದ ಕೂಡಲೇ ಆ ಬ್ರಾಹ್ಮಣನು

ಆಶ್ಚರ್ಯಪಟ್ಟಂತೆ ತೋರಿಸಿ – ಇದೇನು ಸೇನಾಪತೀ, ಇಂದು ನೀವು ಬಂದೀರೆಂದು ನನಗೆ ತೋರಿದ್ದಿಲ್ಲ. ನಿನ್ನೆ ಬಂದವರು, ಮತ್ತೆ ಈವೊತ್ತೇ ಬಂದಿರಲ್ಲ! ನಿಮ್ಮ ಆಗಮನದಿಂದ ನನಗೆ ಒಂದು ಬಗೆಯ ಸಮಾಧಾನವಾಗಿ ಮನಸ್ಸು ಉತ್ಸಾಹಪೂರ್ಣವಾಗುತ್ತದೆ, ಅನ್ನಲು, ಭಾಗುರಾಯಣನು–ಬ್ರಾಹ್ಮಣಶ್ರೇಷ್ಠಾ, ನಿನ್ನ ದರ್ಶನದಿಂದಲೂ, ಸಂಭಾಷಣದಿಂದಲೂ ನನಗಾಗುವ ಆನಂದವನ್ನು ಬಾಯಿಂದ ಹೇಳಲಾರೆನು. ಇಂದಿನಿಂದ ನನ್ನನ್ನು ತಮ್ಮ ಶಿಷ್ಯನೆಂದು ಭಾವಿಸಬೇಕು. ಈದಿನ ನಾನು ತಮಗೆ ಕೆಲವು ಮಾತುಗಳನ್ನು ಹೇಳಬೇಕೆಂತಲೂ, ಕೆಲವು ಮಾತುಗಳನ್ನು ಕೇಳಬೇಕೆಂತಲೂ ಬಂದಿದ್ದೇನೆ. ಅದಕ್ಕಾಗಿ ತಾವು ಸಿಟ್ಟಾಗಬಾರದು, ವಿಷಾದಪಡಬಾರದು, ಎಂದು ಹೇಳಿದನು. ಅದಕ್ಕೆ ಚಾಣಕ್ಯನಾ – ನನಗೆ ಸಿಟ್ಟೇ? ವಿಷಾದವೇ? ಸೇನಾಪತೀ ದರಿದ್ರ ಬ್ರಾಹ್ಮಣರು ನಾಚಿಕೆ, ಸಿಟ್ಟು, ಖೇದ ಈ ಮೂರನ್ನೂ ಯಾವಾಗೋ ಬಿಟ್ಟುಬಿಟ್ಟಿರುತ್ತಾರೆ. ಅಂದಬಳಿಕ ಅವು ನನಗೆ ಎಲ್ಲಿಂದ ಬರಬೇಕು? ಕೇಳತಕ್ಕದ್ದನ್ನು ಚಿಂತೆಯಿಲ್ಲದೆ ಕೇಳು. ಹೇಳತಕ್ಕದ್ದನ್ನು ತಡೆಯಿಲ್ಲದೆ ಹೇಳು, ಅನ್ನಲು, ಭಾಗುರಾಯಣನು ಸ್ವಲ್ಪಹೊತ್ತು ಸುಮ್ಮನೆ ಕುಳಿತು – ಬ್ರಾಹ್ಮಣ ಶ್ರೇಷ್ಠಾ, ನೀನು ನನ್ನ ಮುಂದೆ ನಿನ್ನ ಚರಿತ್ರವನ್ನು ಹೇಳಿರುವೆಯಲ್ಲ? ಅದು ನಿಜವೋ, ನಿನ್ನ ಚರಿತ್ರವು ಬೇರೆಯಾಗಿರುವದೋ? ಇದರ ಉತ್ತರವನ್ನು ಮೊದಲು ಕೊಡು. ಆ ಮೇಲೆ ನಿನಗೆ ಹೇಳತಕ್ಕ ಮಾತುಗಳನ್ನು ಹೇಳುವೆನು.

ಭಾಗುರಾಯಣನ ಈ ಮಾತುಗಳನ್ನು ಕೇಳಿ ಚಾಣಕ್ಯನು–ಭಾಗುರಾಯಣಾ, ನಿನ್ನೆ ರಾತ್ರಿ ಯಾರೋ ನಿನಗೆ ಈ ಪ್ರಶ್ನೆ ಮಾಡುವ ಬುದ್ಧಿಯನ್ನು ಹುಟ್ಟಿಸಿದ್ದಾರೆ. ಹಾಗಲ್ಲದಿದ್ದರೆ ನೀನು ಹೀಗೆ ಕೇಳತಕ್ಕವನಲ್ಲ. ಬಡಬ್ರಾಹ್ಮಣನ ವೃತ್ತಾಂತವು ಇನ್ನು ಬೇರೆ ಏನಿರಬೇಕು? ಇದ್ದದ್ದನ್ನು ನಿನ್ನ ಮುಂದೆ ಹೇಳಿಬಿಟ್ಟಿದ್ದೇನೆ, ಆ ಆಟವು ಬಹಳಮಾಡಿ ಅಮಾತ್ಯ ರಾಕ್ಷಸನದಿರಬಹುದು. ನಾನು ಹೊಸಬನಾದ್ದರಿಂದ ನನ್ನ ನಡೆ–ನುಡಿಗಳನ್ನು ಅರಿತುಕೊಳ್ಳುವದಕ್ಕಾಗಿ ಆತನು ಗುಪ್ತಚಾರರನ್ನು ಇಟ್ಟಿರಬಹುದು. ನೀನು ಮೇಲೆ ಮೇಲೆ ನನ್ನ ಬಳಿಗೆ ಬರುವದನ್ನು ಗುಪ್ತಚಾರರಿಂದ ತಿಳಿದು ನಿನ್ನನ್ನು ಕರಿಸಿ ಆತನು ಇಲ್ಲದ್ದೊಂದು ಕೇಳಿರಬಹುದು. ನಾನನ್ನುವದು ಸಟೆಯೋ ದಿಟವೋ? ನನ್ನ ತರ್ಕವು ಸುಳ್ಳಲ್ಲವಷ್ಟೇ? ಅನ್ನಲು, ಭಾಗುರಾಯಣನು ಚಾಣಕ್ಯನ ತರ್ಕಶಕ್ತಿಗಾಗಿ ಆಶ್ಚರ್ಯಪಟ್ಟು, ಬೆರಗಾಗಿ ಕುಳಿತುಕೊಂಡನು. ಆಗ ಚಾಣಕ್ಯನು ನಗುತ್ತ– ಸೇನಾಪತೀ, ಕೇಳುವದಾಯಿತಷ್ಟೇ? ಇನ್ನು ಹೇಳತಕ್ಕದ್ದನ್ನು ಹೇಳು, ಕೇಳಲಿಕ್ಕೆ ಸಿದ್ಧನಿದ್ದೇನೆ, ಅಂದನು. ಆಗ ಭಾಗುರಾಯಣನು ಮುನ್ನಾದಿನ ರಾತ್ರಿ ನಡೆದ ಸಂಗತಿಯನ್ನೆಲ್ಲ ಚಾಣಕ್ಯನ ಮುಂದೆ ಹೇಳಿದನು. ಅದನ್ನು ಕೇಳಿ ಚಾಣಕ್ಯನು ಬಹಳ ಸಂತಾಪಗೊಂಡನು. ಆದರೆ ಆ ಸಂತಾಪವನ್ನು ಅಣುರೇಣುಮಾತ್ರವಾದರೂ ಹೊರಗೆ ತೋರಿಸಲಿಲ್ಲ; ಮನಸ್ಸಿನಲ್ಲಿ ಮಾತ್ರ— "ಎಲಾ ಅಮಾತ್ಯಾ, ಇನ್ನು ನನ್ನ ನಿನ್ನ ಯುದ್ಧವೇ ಆಗತಕ್ಕದ್ದದೆ. ನೋಡೋಣ, ನೀನು ಗಡಿ ಬಿಟ್ಟು ಹೋಗುವೆಯೋ–ನನ್ನನ್ನು ಗಡಿಬಿಟ್ಟು ದಾಟಿಸುವೆಯೋ?" ಎಂದು ಅಂದುಕೊಂಡು, ಭಾಗುರಾಯಣನಿಗೆ – ಸೇನಾಪತೀ, ನೀನು ನನ್ನ ಮುಂದೆ ಹ್ಯಾಗೆ ಕೆಲವು ಮಾತುಗಳನ್ನು ಹೇಳಿದೆಯೋ, ಹಾಗೆ ನಾನೂ ನಿನ್ನ ಮುಂದೆ ಕೆಲವು ಮಾತುಗಳನ್ನು ಹೇಳುತ್ತೇನೆ,

ಆದರೆ ಆ ಮಾತುಗಳನ್ನು ಬಹು ಗುಪ್ತವಾದವುಗಳಾದದ್ದರಿಂದ ನದಿಯ ಆಚೆಯ ದಂಡೆಯ ಕಡೆಗೆ ಹೋಗೋಣ, ಎನ್ನಲು, ಅವರಿಬ್ಬರು ನದಿಯನ್ನು ದಾಟಿ ಹೋಗಿ ಮಾತಾಡುತ್ತ ಕುಳಿತುಕೊಂಡರು.

ಅಮಾತ್ಯ ರಾಕ್ಷಸನು

ಮೇಲಿನ ಸಂಗತಿಯು ವರ್ತಿಸಿದ ಮರುದಿವಸ ಮಧ್ಯಾಹ್ನದಲ್ಲಿ ರಾಕ್ಷಸನು ತನ್ನ ಅಂತ ಗೃಹದಲ್ಲಿ ವಿಚಾರಮಾಡುತ್ತ ಒಬ್ಬನೇ ಕುಳಿತುಕೊಂಡಿದ್ದನು. ಏಕಾಂತದ ಅವಶ್ಯಕತೆಯಿದ್ದಾಗೆಲ್ಲ ಆತನು ಇಲ್ಲಿಯೇ ಕುಳಿತುಕೊಳ್ಳುತ್ತಿದ್ದನು. ನೋಡಲಿಕ್ಕೆ ರಾಕ್ಷಸನು ಮಹಾ ತೇಜಸ್ವಿಯಾಗಿದ್ದನು. ಅವನ ನಿಲುವಿಕೆ ಎತ್ತರ, ಮೈಕಟ್ಟು ದಷ್ಟ–ಪುಷ್ಟವಾದದ್ದು, ಕಣ್ಣುಗಳು ತೇಜಃಪುಂಜ, ಹಣೆ ವಿಶಾಲವಾದದ್ದು– ಉನ್ನತವಾದದ್ದು, ಎದೆಯ ಅಗಲ, ಪೋಷಾಕು ಸಾಮಾನ್ಯತರದ್ದಾಗಿದ್ದರೂ ಪರಿಣಾಮಕರ, ಒಟ್ಟಿಗೆ ರಾಕ್ಷಸನ ಮುಖಚರ್ಯೆಯೂ–ಮೈಕಟ್ಟೂ ನೋಡುವವರನ್ನು ಕೂಡಲೇ ಅಂಕಿತರನ್ನಾಗಿ ಮಾಡಿಕೊಳ್ಳುವಂತೆ ಇದ್ದವು. ಆ ಬ್ರಾಹ್ಮಣನ ನಿರ್ಧಾರದ ಸರಳ ನಡತೆಯ ಮೂಲಕ ಎಲ್ಲರ ಮೇಲೆ ಅವನ ವರ್ಚಸ್ಸು ಕುಳಿತಿತ್ತು. ಯೋಗ್ಯ ರಾಜ• ಪ್ರತಿನಿಧಿಯು–ನಿಜವಾದ ಸ್ವಾಮಿ ಹಿತದರ್ಶಿಯು–ಒಳ್ಳೇ ನ್ಯಾಯನಿಷ್ಠನು–ಸ್ವಹಿತ ನಿರಪೇಕ್ಷನು ಎಂದು ರಾಕ್ಷಸನು ಲೋಕಪ್ರಸಿದ್ಧನಾಗಿದ್ದನು. ರಾಜ್ಯದಾಡಳಿತದ ಉತ್ತಮ ಪದ್ಧತಿಯಿಂದ ಆತನು ಪ್ರಜೆಗಳಿಗೆ ಪ್ರಿಯನಾಗಿದ್ದನು; ಆದರೆ ತನ್ನ ವರ್ಚಸ್ಸನ್ನು ಒಬ್ಬ ಕಾರಕೂನನ ಮೇಲೆಯೂ, ತನ್ನ ಸಮಾನಸ್ಕಂದರಾದ ಉಳಿದ ಮಂತ್ರಿಗಳ ಮೇಲೆಯೂ ಸರಿಯಾಗಿ ಕೂಡ್ರಿಸುವದರ ಕಡೆಗೆ ಅವನ ಪ್ರವೃತ್ತಿಯಿದ್ದದ್ದರಿಂದ ಆ ಮಂತ್ರಿಗಳು ರಾಕ್ಷಸನನ್ನು ಅಷ್ಟು ಅಂತಃಕರುಣಪೂರ್ವಕ ಮನ್ನಿಸುತ್ತಿದ್ದಿಲ್ಲ. ರಾಜ್ಯದಲ್ಲಿ ಏನೇನು ನಡೆದಿರುವದೆಂಬದನ್ನು ಚಾರರಮುಖದಿಂದ ತಿಳಕೊಳ್ಳುವಲ್ಲಿ ರಾಕ್ಷಸನನ್ನು ಸರಿಗಟ್ಟುವವರು ಯಾರೂ ಇದ್ದಿಲ್ಲ. ವೈರಿಗಳಾದ ಪರರಾಜರು ಕೂಡ ರಾಕ್ಷಸನ ಗುಣಗಳನ್ನು ಒಪ್ಪಿಕೊಂಡು ಆತನನ್ನು ಮನ್ನಿಸುತ್ತಿದ್ದರು. ಇಂಥ ಘನತರವಾದ ಯೋಗ್ಯತೆಯ ರಾಕ್ಷಸನು ಇಂದು ಅಂತಗೃಹದಲ್ಲಿ ಯಾವ ವಿಚಾರದಲ್ಲಿ ಮಗ್ನನಾಗಿರಬಹುದು?

ರಾಕ್ಷಸನ ಗೂಢವಿಚಾರದ ವಿಷಯವು ಸದ್ಯದ ರಾಜ್ಯಸ್ಥಿತಿಯಾಗಿತ್ತು. ಮುರಾದೇವಿಯು–ಚಾಣಕ್ಯನು–ಚಂದ್ರಗುಪ್ತನು ಈ ಮೂರು ವ್ಯಕ್ತಿಗಳು ರಾಕ್ಷಸನ ಚಿತ್ತವನ್ನು ಆಕರ್ಷಿಸಿದ್ದವು. ಮುರೆಯು ಸದ್ದಿಲ್ಲದೆ ಧನಾನಂದನನ್ನು ಕೈಸೇರಿಸಿಕೊಂಡದ್ದಕ್ಕಾಗಿ ರಾಕ್ಷಸನಿಗೆ ಆಗಾಗ್ಗೆ ಬಹಳ ಆಶ್ಚರ್ಯವಾಗುತ್ತಿತ್ತು. ರಾಜ ದರ್ಶನವು ತನಗೂ ಕೂಡ ದುರ್ಲಬವಾದದ್ದು ಕೇವಲ ಅನಿಷ್ಟವೆಂದು ಆತನು ಚಿಂತಿಸಿದನು. ಧನಾನಂದನು ಹೀಗೆಯೇ ಮುರೆಯ ಹಸ್ತಕನಾಗಿರಹತ್ತಿದರೆ, ಪರಿಣಾಮವು ನೆಟ್ಟಗಾಗದೆಂತಲೂ, ಬಿಟ್ಟಿದ್ದು ಬಿಟ್ಟು ಅರಸನನ್ನು ಮುರೆಯ ಬಲೆಯೊಳಗಿಂದ ಬಿಡಿಸಬೇಕೆಂತಲೂ ಆತನು ನಿರ್ಧರಿಸಿದನು; ಆದರೆ ಕಾರ್ಯವು ಸಾಧಿಸುವ ಬಗೆಯೇನು?

ಮುರೆಯು ಅರಕ್ಷಣವಾದರೂ ಅರಸನನ್ನು ಅಗಲುತ್ತಿದ್ದಿಲ್ಲ. ಮುರೆಯ ಪ್ರೀತಿಗೆ ಪಾತ್ರಳಾದ ಒಬ್ಬ ದಾಸಿಯನ್ನು ಒಡಕೊಂಡು ಈ ಕಾರ್ಯವನ್ನು ಸಾಧಿಸಬೇಕೆಂದು ರಾಕ್ಷಸನು ನಿರ್ಧರಿಸಿದನು. ಆ ಚಾರಚಕ್ಷುವಾದ ಅಮಾತ್ಯನಿಗೆ ಆ ಮಾತು ಅಶಕ್ಯವಾಗಿ ತೋರದ್ದರಿಂದ ಆತನು ಮುರೆಯ ಪ್ರಕರಣವನ್ನು ಸದ್ಯಕ್ಕೆ ಬದಿಗಿಟ್ಟನು.

ಚಂದ್ರಗುಪ್ತನನ್ನು ನೋಡಿದಾಗಿನಿಂದ ರಾಕ್ಷಸನ ಜೀವಕ್ಕೆ ಬಹಳ ಚಡಪಡಿಕೆಯಾಗಿತ್ತು. ಚಂದ್ರಗುಪ್ತನ ಮುಖಚರ್ಯವು ಅಚ್ಚಳಿಯದೆ ಮುರೆಯ ಮುಖಚರ್ಯವನ್ನು ಹೋಲುತ್ತಿರುವದನ್ನು ನೋಡಿ ಆತನು ಹೊಯ್ಕು ಹೋಳಿಗೆಯಾದನು. ಶಿಶುವಿರುವಾಗಲೇ ತಾನು ಮುರೆಯ ಮಗನನ್ನು ಕೊಲ್ಲಲಿಕ್ಕೆ ಹಿಮಾಲಯ ಅಡವಿಗೆ ಕಳಿಸಿರಲು, ಕೊಲೆಗಡಕರು ಮೋಸಮಾಡಿರಲಿಕ್ಕಿಲ್ಲವಷ್ಟೆ? ಎಂದು ಆತನು ಚಿಂತಿಸಿದನು. ಸುದ್ದಿ ಸುಳಿದಾಟಗಳಿಲ್ಲದೆ ಪ್ರದ್ಯುಮ್ನದೇವನು ತನ್ನ ಮಗನನ್ನು ಒಮ್ಮೆಲೆ ಇಲ್ಲಿಗೆ ಕಳಿಸಿದನಾದರೂ ಹೇಗೆ? ಮುರೆಯ ಬಂಧವಿಮೋಚನವಾದ ಸುದ್ದಿಯು ಸಹ ಆತನಿಗೆ ತಿಳಿದು ಬಹಳ ದಿವಸಗಳಾಗಿಲ್ಲ; ಅಂದಬಳಿಕ ಅರಸನು ಆಕೆಯ ಕೈ ಸೇರಿದ ಸುದ್ದಿಯು ಇಷ್ಟರಲ್ಲಿಯೇ ಅವನಿಗೆ ಗೊತ್ತಾಗಿರಬಹುದೇ? ಏನು ಗೂಢವಿರಬಹುದು! ಚಾಣಕ್ಯನನ್ನು ನೋಡಿದರೆ, ಅವನು ಮಹಾ ಧೂರ್ತನಾಗಿ ತೋರುತ್ತಾನೆ. ಚಂದ್ರಗುಪ್ತನು ಅರಮನೆಯಲ್ಲಿ! ಅವನ ಬೆಂಗಾವಲಾಗಿ ಬಂದ ಚಾಣಕ್ಯನು ಗಂಗಾತೀರದ ಪರ್ಣಕುಟಿಯಲ್ಲಿ! ಎಲ್ಲವೂ ವಿಚಿತ್ರವೇ! ಚಂದ್ರಗುಪ್ತನು ಮುರೆಯ ಸೋದರಳಿಯನಾದ ಬಳಿಕ ತಾನು ಈ ಹೆಚ್ಚು-ಕಡಿಮೆ ಮಾತಾಡುವದಾದರೂ ಕಷ್ಟ. ಸ್ವಲ್ಪ ನೆವಸಿಕ್ಕರೆ, ಆ ಸಾಹಸಿಯಾದ ಮುರೆಯು ನನ್ನ ಮೇಲಿಂದ ಅರಸನ ನಂಬಿಗೆಯನ್ನು ಹಾರಿಸಲಿಕ್ಕೆ ಹಿಂದೆ-ಮುಂದೆ ನೋಡುವಹಾಗಿಲ್ಲ. ಮೊದಲು ಕಿರಾತ ರಾಜ್ಯಕ್ಕೆ ಒಬ್ಬ ಚಾರನನ್ನು ಕಳಿಸಿ, ಪ್ರದ್ಯುಮ್ನದೇವನಿಗೆ ಮಗನಾದರೂ ಇರುವನೋ ಹೇಗೆ ಎಂಬುದನ್ನು ತಿಳಿದುಕೊಳ್ಳೋಣ. ಒಬ್ಬ ಚತುರ ಚಾರನನ್ನು ಕಳಿಸಿದರೆ, ಏನಿದ್ದದ್ದೂ ಬೈಲಿಗೆ ಬರುತ್ತದೆ. ನನಗಂತು ಚಂದ್ರಗುಪ್ತನು ಪ್ರದ್ಯುಮ್ನದೇವನ ಮಗನೆಂಬ ನಂಬಿಗೆಯಾಗಲೊಲ್ಲದು. ''ಯಾರವರು? ಪ್ರತಿಹಾರೀ, ಹೋಗು ಹಿರಣ್ಯ ಗುಪ್ತನನ್ನು ಕರಕೊಂಡು ಬಾ'' ಎಂದು ಹೇಳಲು, ಪ್ರತಿಹಾರಿಯು ''ದೊರೆಗಳ ಅಪ್ಪಣೆ'' ಎಂದು ಸುಮ್ಮನೆ ನಿಂತುಕೊಂಡನು. ಆಗ ರಾಕ್ಷಸನು-ಹೇಳಿದ ಕೆಲಸವನ್ನು ಕೂಡಲೇ ಮಾಡದೆ, ಅಪ್ಪಣೆಯೆಂದು ಸುಮ್ಮನೆ ನಿಂತುಕೊಂಡೆಯಾಕೆ? ಎಂದು ಕೇಳಲು, ಪ್ರತಿಹಾರಿಯು-ಸಚಿವವರನೇ, ಕಿರಾತ ರಾಜ್ಯದಿಂದ ಒಬ್ಬ ಭಿಲ್ಲನು ಬಂದು ತಮ್ಮ ದರ್ಶನೋತ್ಕಂಠಿತನಾಗಿ ಬಾಗಿಲಲ್ಲಿ ನಿಂತುಕೊಂಡಿದ್ದಾನೆ, ಎಂದು ಹೇಳಿದನು.

ಇದನ್ನು ಕೇಳಿ ರಾಕ್ಷಸನಿಗೆ ಬಹಳ ಆಶ್ಚರ್ಯವಾಯಿತು. ಆತನು ಮನಸ್ಸಿನಲ್ಲಿ ತಾನು ಕಿರಾತ ರಾಜ್ಯಕ್ಕೆ ಗುಪ್ತಚಾರರನ್ನು ಕಳಿಸಬೇಕೆಂದು ಯೋಚಿಸುವದರೊಳಗೆ ಭಿಲ್ಲನು ಯಾವ ಕಡೆಯಿಂದ ಬಂದನು? ಒಳ್ಳೇದು, ಪ್ರತ್ಯಕ್ಷ ಬಂದಿರಲು ವಿಚಾರವೇಕೆ? ಎಂದು ಯೋಚಿಸಿ, ಪ್ರತಿಹಾರಿಗೆ ಭಿಲ್ಲನನ್ನು ಒಳಗೆ ಬಿಡಲಪ್ಪಣೆ ಮಾಡಿದನು. ಕೂಡಲೆ ಭಿಲ್ಲನು ಒಳಗೆ ಬಂದು, ರಾಕ್ಷಸನಿಗೆ ಸಾಷ್ಟಾಂಗವಾಗಿ ವಂದಿಸಿ, ಒಂದು ಮೋಹರು ಮಾಡಿದ ಚೀಲವನ್ನು ರಾಕ್ಷಸನ

ಎದುರಿಗೆ ಇಟ್ಟು–ದೊರೆಗಳೇ, ನಮ್ಮ ಒಡೆಯನು ಈ ಪತ್ರವನ್ನು ಸನ್ನಿಧಿಗೆ ಒಪ್ಪಿಸೆಂದು ಹೇಳಿ, ಏನಾದರೂ ಉತ್ತರಕೊಟ್ಟರೆ ತಕ್ಕೊಂಡು ಬಾ, ಎಂದು ಹೇಳಿದ್ದಾನೆ, ಎಂದನು. ಭಿಲ್ಲನು ಕಪ್ಪಿನಲ್ಲಿ ಇದ್ದಲಿಯನ್ನು ಹಿಂದಕ್ಕೆ ಸರಿಸಿದ್ದನೆಂದು ಹೇಳಬಹುದು. ಬಹುದೂರದಿಂದ ಬಂದದ್ದರಿಂದ ಅವನ ಸರ್ವಾಂಗವೆಲ್ಲ ಧೂಲಿಯಾಗಿತ್ತು. ರಾಕ್ಷಸನು ಚೀಲವನ್ನು ಕೆಳಗೆ ಮೇಲೆ ಮಾಡಿ ನೋಡಿ, ಅದನ್ನು ಒಡೆದು ಒಳಗಿನಿಂದ ಒಂದು ಭೂರ್ಜಪತ್ರದ ಮೇಲೆ ಬರೆದ ಪತ್ರವನ್ನು ಕಡೆಗೆ ತೆಗೆದು ಉಚ್ಚೆ ಓದಹತ್ತಿದನು. ಅದರಲ್ಲಿ ಬರೆದ ಸುದ್ದಿಯೇನಂದರೆ – ಶ್ರೀ ಮತ್ಸಕಲಸಾಮಂತ ಮುಕಟಮಣಿರಂಜಿತ ಚರಣ ನಖರಾದ ಧನಾನಂದಾಮಾತ್ಯವರ ರಾಕ್ಷಸ ಶರ್ಮರಿಗೆ–ಹಿಮಾಲಯಾಂತರ್ಗತ–ನಿಷಾಧ–ಖಾಸ–ಪ್ರಜಾಧಿಪತಿಯಾದ ಪ್ರದ್ಯುಮ್ನದೇವ ರವರ ಅನೇಕ ಕುಶಲ ಪ್ರಶ್ನೆಗಳು! ಉಪರಿ ಲೇಖನ ಕಾರಣಗಳು! ಸಾಂಪ್ರತ, ಮಹಾರಾಜರ ಪ್ರದ್ಯುಮ್ನ ದೇವರವರ ತಂಗಿಯಾದ ಶ್ರೀಮನ್ಮಹಾದೇವಿ ಮುರಾದೇವಿಯವರ ವಿಜ್ಞಪ್ತಿಯಿಂದ ನನ್ನ ಮಗನಾದ ಚಂದ್ರಗುಪ್ತ ರಾಜಕುಮಾರನನ್ನು ಪಾಟಲೀಪುತ್ರದಲ್ಲಿ ನಾಲ್ಕು ದಿವಸ ಇರಲಿಕ್ಕೂ, ರಾಜ್ಯ ವ್ಯವಸ್ಥೆಯನ್ನು ಅರಿತುಕೊಳ್ಳುವದಕ್ಕೂ ಕಳಿಸಿರುವೆನು. ಕುಮಾರನ ಸಂಗಡಲೇ ಕಳಿಸಬೇಕೆಂದು ನಿಮಗೆ ಬರೆದ ಪತ್ರವು ಪ್ರಮಾದದಿಂದ ಇಲ್ಲಿಯೇ ಉಳಿಯಿತು! ಆದ್ದರಿಂದ ಶೀಘ್ರ ಗಾಮಿಯಾದ ದೂತನೊಡನೆ ಈ ಪತ್ರವನ್ನು ಕಳಿಸಿದ್ದೇನೆ. ನಮ್ಮ ತಂಗಿಯಾದ ಮುರಾದೇವಿಯ ಮೇಲೆ ಧನಾನಂದ ಮಹಾರಾಜರು ಮತ್ತೆ ಲೋಭ ಮಾಡುತ್ತಿರುವ ರೆಂಬದನ್ನೂ, ಆ ದೇವಿಯ ವಿಷಯವಾಗಿ ತಮ್ಮ ಮನಸ್ಸೂ ಈಗ ಸರಳವಾಗಿರುತ್ತದೆಂಬದನ್ನೂ ಕೇಳಿ ನನಗೆ ಬಹಳ ಸಂತೋಷವಾಗಿರುತ್ತದೆ. ಚಂದ್ರಗುಪ್ತನು ಪಾಟಲೀಪುತ್ರದಲ್ಲಿರುವವರೆಗೆ ತಮ್ಮ ಪದರಿನಲ್ಲಿರುತ್ತಾನೆಂದು ತಿಳಿದಿದ್ದೇನೆ. ಅಂತೇ ನನಗೆ ಯಾವ ಚಿಂತೆಯೂ ಇಲ್ಲ. ತಮ್ಮಂತ ಅಮಾತ್ಯರು ಎಲ್ಲ ಅರಸರಿಗೂ ಹ್ಯಾಗೆ ದೊರೆಯಬೇಕು? ತಮ್ಮಂಥವರ ದರ್ಶನ ಯೋಗವೂ, ತಮ್ಮಂಥವರಿಂದ ಶಿಕ್ಷಣವೂ ಎಲ್ಲರಿಗೂ ಹ್ಯಾಗೆ ಒದಗಬೇಕು, ಅವು ಕುಮಾರ ಚಂದ್ರ ಗುಪ್ತನಿಗೆ ಲಭಿಸಬೇಕೆಂದು ನಿಮ್ಮ ಬಳಿಗೆ ಆತನನ್ನು ಕಳಿಸಿದ್ದೇನೆ. ಕುಮಾರನೊಡನೆ ಬಂದಿದ್ದ ಋಷಿಸಮಾನನಾದ ಆರ್ಯ ಚಾಣಕ್ಯನು ಸರ್ವಥಾ ನಿಸ್ಪ್ರಹನಾದ್ದರಿಂದ ಆತನು ತಾನಾಗಿ ಸಹಸಾ ಎರಡನೆಯವರ ಬಳಿಗೆ ಹೋಗತಕ್ಕವನಲ್ಲ. ಆದ್ದರಿಂದ ಆತನು ಚಂದ್ರಗುಪ್ತನನ್ನು ಕರಕೊಂಡು ತಮ್ಮ ಬಳಿಗೆ ಬರಲಾರನು. ಅಂತೇ ಈ ಪತ್ರವನ್ನು ಬರೆದು ಕಳಿಸಿದ್ದೇನೆ, ಚಂದ್ರಗುಪ್ತನು ನಿಮ್ಮವನೆಂದು ತಿಳಿದು ಆತನ ಮೇಲೆ ದೃಷಿಯನ್ನಿಡಬೇಕು. ಇತಿಶಮ್ ಲೇಖನ ಮರ್ಯಾದಾ.

ಈ ಪತ್ರವನ್ನು ಓದಿ ರಾಕ್ಷಸನು ಬಹಳ ಆಶ್ಚರ್ಯಪಟ್ಟನು. ಪದ್ಯುಮ್ನದೇವನು ತನಗೆ ಇಷ್ಟು ಆದರದಿಂದ ಪತ್ರ ಬರೆದಾನೆಂದು ಆತನು ಕನಸಿನಲ್ಲಾದರೂ ಎಣಿಸಿದ್ದಿಲ್ಲ. ಚಂದ್ರಗುಪ್ತನ ನಿಜವಾದ ವೃತ್ತಾಂತವು ತಿಳಿದದ್ದರಿಂದ ಅವನಿಗೆ ಸಮಾಧಾನವಾಯಿತು. ತಂದೆಯ ಮುಖದಂತೆ ಚಂದ್ರಗುಪ್ತನ ಮುಖವಿರುವದರಿಂದ ಅದು ಮುರೆಯ ಮುಖವನ್ನು ಹೋಲುವದರಲ್ಲಿ ಆಶ್ಚರ್ಯವಿಲ್ಲೆಂದು ಆತನು ಸಮಾಧಾನ ಮಾಡಿಕೊಂಡನು. ಪ್ರದ್ಯುಮ್ನದೇವನು ತನಗೆ ಇಷ್ಟು ಆದರದಿಂದ ಪತ್ರ ಬರೆದಿರುವ ಕಾರಣ, ತಾನಾದರೂ ಆತನಿಗೆ ವಿನಯದಿಂದ ಪತ್ರ ಬರೆಯಬೇಕೆಂತಲೂ, ಎಷ್ಟಾದರೂ ಆತನು ಅರಸನಿರುವದರಿಂದ ಮಾನಕ್ಕೆ ಪಾತ್ರನಿರುತ್ತಾ

ನೆಂತಲೂ ಭಾವಿಸಿ, ರಾಕ್ಷಸನು ವಿನಯದಿಂದ ಉತ್ತರವನ್ನು ಬರೆದು, ಊಟ-ಉಡಿಗೆಯ ವ್ಯವಸ್ಥೆಮಾಡಿ ಭಿಲ್ಲನನ್ನು ಕಳಿಸಿ ಕೊಡಬೇಕೆಂದು ಸೇವಕರಿಗೆ ಆಜ್ಞಾಪಿಸಿ, ಭಿಲ್ಲನ ಕೈಯಲ್ಲಿ ಪತ್ರವನ್ನು ಕೊಟ್ಟನು. ಭಿಲ್ಲನು ಅತ್ತ ಹೊರಟುಹೋಗಲು, ಸ್ವಲ್ಪ ಹೊತ್ತಿನಲ್ಲಿ ಹಿರಣ್ಯಗುಪ್ತನು ರಾಕ್ಷಸನ ಬಳಿಗೆ ಬಂದನು. ಹಿರಣ್ಯಗುಪ್ತನು ರಾಕ್ಷಸನ ಅತ್ಯಂತ ವಿಶ್ವಾಸನ ಸೇವಕರಲ್ಲಿ ಒಬ್ಬನಾಗಿದ್ದನು. ರಾಕ್ಷಸನ ಅಪ್ಪಣೆಯಿಂದ ಕೆಲಸ ಮಾಡುತ್ತಿರುವ ಎಲ್ಲ ಗುಪ್ತಚಾರರನ್ನು ಹಿರಣ್ಯಗುಪ್ತನು ಅರಿತವನಾಗಿದ್ದನೆಂದು ಹೇಳಬಹುದು. ಹಿರಣ್ಯಗುಪ್ತನು ಒಳಗೆ ಬಂದಕೂಡಲೇ, ರಾಕ್ಷಸನು ಆತನಿಗೆ ಬಾಗಿಲು ಇಕ್ಕಿಕೊಳ್ಳೆಂದು ಹೇಳಿ, ವೃಂದವಮಾಲೆಯ ಸುದ್ದಿಯೇನೆಂದು ಆತನನ್ನು ಕೇಳಿದನು.

ವೃಂದಮಾಲೆಯನ್ನು ಒಡಕೊಂಡು ಮುರೆಯ ಮಂದಿರದೊಳಗಿನ ಸುದ್ದಿಯನ್ನು ತಿಳಿದು ಧನಾನಂದನ ಮನಸ್ಸನ್ನು ತಿರುಗಿಸುವ ಉಪಾಯಮಾಡಬೇಕೆಂದು ರಾಕ್ಷಸನು ಯೋಚಿಸಿದ್ದನ್ನು ವಾಚಕರು ಮರೆತಿರಲಿಕ್ಕಿಲ್ಲ. ಆ ವೃಂದವಮಾಲೆಯನ್ನು ಒಡೆಯುವ ಕೆಲಸಕ್ಕೆ ಅಮಾತ್ಯನು ಹಿರಣ್ಯಗುಪ್ತನನ್ನು ನಿಯಮಿಸಿದ್ದನು. ಪಾಪ! ಈ ಮೊದಲೇ ಚಾಣಕ್ಯನು ಈ ವಿಷಯವಾಗಿ ನಡೆಸಿದ ಕಾರಸ್ಥಾನಗಳನ್ನು ಆ ಅಮಾತ್ಯನೇನು ಬಲ್ಲನು? ಚಾಣಕ್ಯನು ಏನೇನೋ ತಂತ್ರವನ್ನು ಮಾಡಿ, ರಾಕ್ಷಸನ ಈ ಯುಕ್ತಿಯು ತನಗೆ ಅನಕೂಲವಾಗುವಂತೆ ಮಾಡಿಕೊಂಡನು. ಇತ್ತ ಹಿರಣ್ಯಗುಪ್ತನು ರಾಕ್ಷಸನಿಗೆ-ಮಂತ್ರಿವರರೇ, ನಾನು ವೃಂದಮಾಲೆಯನ್ನು ಕಂಡಿದ್ದೆನು. ಆಕೆಯು ತಮ್ಮನ್ನು ಕಾಣಲಿಕ್ಕೆ ಮೊದಲು ಬಹಳ ಹೆದರಿದಳು; ಆದರೆ ನಾನು ಹೇಳುವ ಹಾಗೆ ಹೇಳಿದಬಳಿಕ ತಮ್ಮ ಬಳಿಗೆ ಬರಲಿಕ್ಕೆ ಒಡಂಬಟ್ಟಿರುತ್ತಾಳೆ. ಬಹಳ ಮಾಡಿ ಇಂದೇ ಆಕೆಯು ಬರಬಹುದು, ಎಂದು ಹೇಳಿದನು. ಅದಕ್ಕೆ ರಾಕ್ಷಸನು – ಹಿರಣ್ಯಗುಪ್ತಾ ಇಷ್ಟುದಿವಸ ನನ್ನ ಬಳಯಲ್ಲಿದ್ದರೂ ನಿನಗೆ ಬುದ್ಧಿ ಬರಲಿಲ್ಲ, ನೀನೇ ಹೋಗಿ ವೃಂದವಮಾಲೆಯನ್ನು ಕಾಣಬಹುದೇ? ಈ ಸುದ್ದಿಯು ಮುರೆಗೆ ತಿಳಿದು ಆಕೆಯು ವೃಂದವಮಾಲೆಯ ಮೇಲಿನ ಮನಸ್ಸು ತೆಗೆದರೆ, ಆಮೇಲೆ ವೃಂದಮಾಲೆಯನ್ನು ತಕ್ಕೊಂಡು ಮಾಡುವದೇನು? ಆದದ್ದಾಯಿತು. ಇಂದು ವೃಂದಮಾಲೆಯು ಬರದಿದ್ದರೆ, ನಾಳೆ ನಿನ್ನ ಹೆಂಡತಿಯ ಮುಖಾಂತರವಾಗಿ ಆಕೆಯನ್ನು ಬರಮಾಡು, ಎಂದು ನುಡಿಯುತ್ತಿರಲು, ಪ್ರತಿಹಾರಿಯು ರಾಕ್ಷಸನನ್ನು ಕುರಿತು-ಅಮಾತ್ಯವರಾ, ಯಾವಳೋ ಒಬ್ಬ ದಾಸಿಯು ತಮ್ಮನ್ನು ಕಾಣಬೇಕೆಂದು ಬಾಗಿಲಲ್ಲಿ ಒಂದು ನಿಂತಿರುವಳು. ಯಾರೆಂದು ಕೇಳಿದರೆ ಹೇಳದೇ, ಅಮಾತ್ಯರೇ ಕರಿಸಿದ್ದರಿಂದ ಬಂದಿದ್ದೇನೆ; ಅವರಿಗೆಲ್ಲ ಗೊತ್ತಿದೆ ಹೋಗು, ಎಂದು ಹೇಳಿದಳು. ಅಪ್ಪಣೆಯಾದರೆ ಒಳಗೆ ಬಿಡುವೆನು, ಎಂದು ಹೇಳಿದನು. ಆಗ ರಾಕ್ಷಸನು ಹಿರಣ್ಯಗುಪ್ತನಿಗೆ-ನೋಡಿದೆಯಾ, ಆಕೆಯು ಬಂದುಬಿಟ್ಟಳು. ದಾಸಿಯು ಜಾಣಳಿದ್ದಂತೆ ತೋರುತ್ತದೆ. ಇಲ್ಲದಿದ್ದರೆ ತನ್ನ ಹೆಸರುದೆಸೆಗಳನ್ನೆಲ್ಲ ಹೇಳಿ ಕೆಲಸವನ್ನು ಕೆಡಿಸಿ ಬಿಡುತ್ತಿದ್ದಳು, ಎಂದು ಹೇಳಿ, ದಾಸಿಯನ್ನು ಒಳಗೆ ಬಿಡಲಿಕ್ಕೆ ಪ್ರತಿಹಾರಿಗೆ ಆಜ್ಞಾಪಿಸಿದನು.

ದಾಸಿಯು ಒಳಗೆ ಬಂದ ಕೂಡಲೆ ರಾಕ್ಷಸನು ಆಸನಬಿಟ್ಟು ಏಳತೊಡಗಿ ಬಹುಮಾನ ಪೂರ್ವಕವಾಗಿ-ಬರ್ರಿ, ವೃಂದವಮಾಲಮ್ಮನವರೇ, ಒಳಿತಾಗಿರುವಿರೋ, ಎನ್ನಲು, ದಾಸಿಯು

ಸ್ವಲ್ಪ ನಕ್ಕು–ಅಮಾತ್ಯರಾಜರೇ, ದಾಸಿಯಾದ ನನಗೆ ಇಷ್ಟೇಕೆ ಮಾನವು? ಆಜ್ಞಾಪಿಸತಕ್ಕದ್ದೇ ನಿರುವದೆಂಬದನ್ನು ದಾಸಿಗೆ ಹೇಳಿದರಾಯಿತು, ಎಂದು, ಅದಕ್ಕೆ ರಾಕ್ಷಸನು–ವೃಂದಮಾಲಮ್ಮಾ ದಾಸಿಯಾದರೇನಾಯಿತು? ನಮ್ಮ ಕೆಲಸಕ್ಕಾಗಿ ಕರಿಸಿ ಯೋಗ್ಯಮರ್ಯಾದೆ ಮಾಡದಿರುವದು ಸರಿಯಲ್ಲ. ಒಳ್ಳೇದು ಅದರಿಲಿ, ನಿಮ್ಮ ಒಡತಿಯರಿಗೆ ಕುಶಲವೇ? ನಾನೇನು ನೀನೇನು, ನಮ್ಮ ನಿಮ್ಮ ಯಜಮಾನ–ಯಜಮಾನತಿಯರು ನೆಟ್ಟಗಿದ್ದರೆ ನಮಗೆ ನೆಟ್ಟಗೆ; ಇಲ್ಲದಿದ್ದರೆ ನಾವು ನೆಟ್ಟಗಿದ್ದು ಮಾಡುವದೇನು? ಸದ್ಯಕ್ಕೆ ಮಹಾರಾಜರು ನಿಮ್ಮ ಮಂದಿರದಲ್ಲಿರುತ್ತಾರೆ. ನಮಗೆ ಅಲ್ಲಿಯ ವರ್ತಮಾನವೇನೂ ತಿಳಿಯುವದಿಲ್ಲ. ವಿಶೇಷವೇನಾದರೂ ಇದ್ದರೆ ಕೇಳಬೇಕೆಂದು ನಿಮ್ಮನ್ನು ಕರೆಸಿದೆನು. ನೀವು ಒಳ್ಳೇ ಸ್ವಾಮಿನಿಷ್ಠರೆಂದು ನಾನು ಕೇಳಿದ್ದೇನೆ. ಸ್ವಾಮಿನಿಷ್ಠರು ನನಗೆ ಬಹಳ ಸೇರುವರೆಂಬ ಮಾತು ನಿಮಗೂ ಗೊತ್ತಿರಬಹುದು. ಆ ಸದ್ಗುಣಕ್ಕಾಗಿ ನಾನು ಕೊಡುವ ಈ ಇನಾಮನ್ನು ಸ್ವೀಕರಿಸಬೇಕು, ಎಂದು ತನ್ನ ಆಸನದ ಬುಡದಿಂದ ಎರಡು ಸುವರ್ಣದ ಕಂಕಣಗಳನ್ನು ತೆಗೆದು ದಾಸಿಗೆ ಕೊಡಹೋದನು. ಆಕೆಯು–ಬಡದಾಸಿಯಾದ ನನಗೇಕೆ ಇನಾಮು! ನಮಗೆ ಹೊಟ್ಟೆತುಂಬ ಅನ್ನ, ಮೈ ತುಂಬ ಬಟ್ಟೆ ಸಿಕ್ಕರಾಯಿತು, ಎಂದು ಗುಣಗುಟ್ಟುತ್ತ ದೇಶಾವರಿಯ ನಗಿಯನ್ನು ನಗುತ್ತ ಕಂಕಣವನ್ನು ತಕ್ಕೊಂಡಳು. ಆಗ ರಾಕ್ಷಸನು–ವೃಂದಮಾಲಮ್ಮಾ ಸಂಕೋಚಪಡುವ ಕಾರಣವಿಲ್ಲ. ನನ್ನ ವಿನಂತಿಯೇನಂದರೆ–ನಿನ್ನ ಒಡೆಯಳ ಮಂದಿರದಲ್ಲಿ ನಡೆಯುವ ಸಂಗತಿಗಳನ್ನು ಈ ಹಿರಣ್ಯಗುಪ್ತನ ಮುಖಾಂತರ ನನಗೆ ತಿಳಿಸುತ್ತ ಹೋಗಬೇಕು. ನೀವು ಇಲ್ಲಿಗೆ ಬರುವ ಕಾರಣವಿಲ್ಲ. ಅವಶ್ಯವಿದ್ದರೆ ನಾನೇ ಕರಿಸಿಕೊಳ್ಳುವೆನು. ವೃಂದಮಾಲಮ್ಮಾ ನಾವು ಹೀಗೆ ನಿಮ್ಮನ್ನು ಕರಿಸಿ ಹೇಳುವೆನೆಂದು ಯಾರ ಮುಂದೆಯೂ ಹೇಳಲಾಗದು, ಎನ್ನಲು ದಾಸಿಯು ಅಮಾತ್ಯವರರೇ, ತಮ್ಮ ಅಪ್ಪಣೆಯನ್ನು ನಾನು ಮೀರುವವಳಲ್ಲ. ಆದರೆ ಒಂದು ಮಾತನ್ನು ಬಂದಕೂಡಲೇ ನಿಮ್ಮ ಮುಂದೆ ತಿಳಿಸತಕ್ಕದ್ದನ್ನು ಮರೆತೆನು ಹೇಳಲಿಕ್ಕೆ ಅವಕಾಶವೂ ದೊರೆಯಲಿಲ್ಲ ಈಗ ಹೇಳುತ್ತೇನೆ. ನಾನು ವೃಂದಮಾಲೆಯಲ್ಲ, ವೃಂದಮಾಲೆಯ ಜೀವದ ಗೆಳತಿಯಾದ ಸುಮತಿಕೆಯು. ವೃಂದಮಾಲೆಗೆ ಬರಲಿಕ್ಕೆ ಕೊಡುವಹಾಗೆ ಇಲ್ಲದ್ದರಿಂದ ಆಕೆಯು ನನ್ನನ್ನು ಕಳಿಸಿದಳು. ನಮ್ಮಿಬ್ಬರಲ್ಲಿ ಭೇಧವಿಲ್ಲ ಎಂದು ಹೇಳಿದಳು. ಇದನ್ನು ಕೇಳಿ ರಾಕ್ಷಸನು ವಿಚಿತ್ರವಾದ ದೃಷ್ಟಿಯಿಂದ ಹಿರಣ್ಯಗುಪ್ತನನ್ನು ನೋಡಿದನು. ಆತನು ಹೆಚ್ಚಿಗೇನು ಮಾತಾಡದೆ ದಾಸಿಗೆ–ಏನೂ ಚಿಂತೆಯಿಲ್ಲ. ನೀನೇನು, ವೃಂದಮಾಲೆಯೇನು? ನನಗೆ ಸರಿಯೇ. ಅಂತಃಪುರದಲ್ಲಿ ನಡೆಯುವ ಸಂಗತಿಗಳನ್ನು ಮಾತ್ರ ತಿಳಿಸುತ್ತ ಹೋಗಿರೆಂದರಾಯಿತು, ಎಂದು ಹೇಳಿ, ದಾಸಿಗೆ ಹೋಗಲು ಅಪ್ಪಣೆಕೊಟ್ಟನು. ದಾಸಿಯು ಮುರಾದೇವಿಯ ಮಂದಿರಕ್ಕೆ ಹೋಗದೆ ನೆಟ್ಟಗೆ ಚಾಣಕ್ಯಾಶ್ರಮಕ್ಕೆ ಹೋದಳು.

ಈ ಮೇರೆಗೆ ಎರಡೂ ಕಡೆಯಲ್ಲಿ ತನ್ನ ಮನಸ್ಸಿನಂತೆ ವ್ಯವಸ್ಥೆಯಾದದ್ದನ್ನು ನೋಡಿ ರಾಕ್ಷಸನು ಬಹು ಸಮಾಧಾನಪಟ್ಟನು. ಮುರಾದೇವಿಯ ಮಂದಿರದಲ್ಲಿಯ ವರ್ತಮಾನವು ಅಕ್ಷರಶಃ ತಿಳಿಯಲಿಕ್ಕೆ ಮಾರ್ಗವಾಯಿತು; ಚಂದ್ರಗುಪ್ತನ ವಿಷಯವಾಗಿ ಉತ್ಪನ್ನವಾಗಿದ್ದ ಸಂಶಯದ ನಿವಾರಣವೂ ಆಯಿತು. ಪ್ರದ್ಯುಮ್ನದೇವನು ಇಷ್ಟು ಸೌಜನ್ಯದಿಂದ ಪತ್ರ

ಬರೆದಿರುವದರಿಂದ ತಾನಾದರೂ ಆತನ ಮಗನಾದ ಚಂದ್ರಗುಪ್ತನ ಯೋಗಕ್ಷೇಮವನ್ನು ಯೋಗ್ಯರೀತಿಯಿಂದ ವಿಚಾರಿಸುವದು ಯುಕ್ತವೆಂದು ರಾಕ್ಷಸನು ತಿಳಿದನು. ಈ ಮೇರೆಗೆ ರಾಕ್ಷಸನು ಸಮಾಧಾನಪಡುತ್ತಿರಲು, ಪ್ರತಿಹಾರಿಯು ಬಂದು–ಸ್ವಾಮಿನ್, ಹೊರಗೆ ಯಾವನೋ ಒಬ್ಬ ರಾಜಪುತ್ರನು ಬಂದಿರುತ್ತಾನೆ. ಆತನ ಒಬ್ಬ ಪ್ರತಿಹಾರಿಯು—'' ಕಿರಾತರಾಜನಾದ ಪ್ರದ್ಯುಮ್ನದೇವನ ಪುತ್ರ ಕುಮಾರ ಚಂದ್ರಗುಪ್ತ ಮಹಾರಾಜರು ದರ್ಶನಕ್ಕಾಗಿ ಬಂದಿರುತ್ತಾರೆ''ಂದು ಹೇಳಿದ್ದರಿಂದ ನಾನು ವಿಜ್ಞಾಪಿಸಲು ಬಂದೆನು, ಎಂದು ಹೇಳಿದನು. ಅದನ್ನು ಕೇಳಿದಕೂಡಲೇ ರಾಕ್ಷಸನು ಅವಸರದಿಂದ ಎದ್ದು, ಚಂದ್ರಗುಪ್ತನನ್ನು ಇದಿರ್ಗೊಂಡು ಮರ್ಯಾದೆಯಿಂದ ಆತನನ್ನು ಕರತಂದು ಉಚ್ಚಾಸನದಲ್ಲಿ ಕುಳ್ಳಿರಿಸಿ–ಇದೇನು? ರಾಜಪುತ್ರರ ಆಗಮನವು ಅಪರೂಪವಾಗಿ ಆಯಿತಲ್ಲ? ಎಂದು ಪ್ರಶ್ನೆಮಾಡಿದನು. ಅದಕ್ಕೆ ಚಂದ್ರಗುಪ್ತನು – ಅಮಾತ್ಯರಾಜರೇ, ಇಂದು ನಮ್ಮ ತಂದೆಯಾದ ಪ್ರದ್ಯುಮ್ನ ದೇವರಿಂದ ಪತ್ರಬಂದಿರುತ್ತದೆ. ಅದರಲ್ಲಿ ತಮ್ಮನ್ನು ಕಂಡು ತಮ್ಮ ಅನುಮತಿಯಂತೆ ಇರಬೇಕೆಂದು ಅಪ್ಪಣೆಮಾಡಿದ್ದರಿಂದ ತಮ್ಮನ್ನು ಕಾಣಲಿಕ್ಕೆ ಬಂದೆನು, ಎಂದು ಹೇಳಿದನು. ಅದನ್ನು ಕೇಳಿ ರಾಕ್ಷಸನು ಸಂತುಷ್ಟನಾಗಿ –ಕುಮಾರಾ, ನನಗಾದರೂ ಪ್ರದ್ಯುಮ್ನದೇವರ ಆಜ್ಞಾಪತ್ರವು ಬಂದಿರುತ್ತದೆ. ತಾವು ಇಲ್ಲಿ ಇರುವವರೆಗೆ ನನ್ನಿಂದ ಆಗತಕ್ಕ ಸೇವೆಯನ್ನು ಅವಶ್ಯವಾಗಿ ತಿಳಿಸಬೇಕು. ನಾನು ಮಾಡಲು ಸಿದ್ಧನಿದ್ದೇನೆ. ಪ್ರದ್ಯುಮ್ನದೇವರ ಪತ್ರದ ಹಾದಿಯನ್ನಾದರೂ ತಾವು ಯಾಕೆ ನೋಡಬೇಕಾಗಿತ್ತು? ಯಾವಾಗ ತಾವು ಆಜ್ಞಾಪಿಸಿದ್ದರೂ ನಾನು ಸಿದ್ಧನೇ ಇದ್ದೆನು, ಇರಲಿ, ತಮ್ಮ ಮನೆಯಲ್ಲಿ ಎಲ್ಲರೂ ನೆಟ್ಟಗಿರುವರಷ್ಟೇ, ಎಂದು ಕೇಳಲು, ಚಂದ್ರಗುಪ್ತನು–ನೆಟ್ಟಗಿದ್ದಾರೆ. ಅಪ್ಪನು ಪತ್ರದಲ್ಲಿ ಎಲ್ಲರ ಕ್ಷೇಮವನ್ನು ಬರೆದಿದ್ದಾನೆ, ಎಂದು ಹೇಳಿ, ಸ್ವಲ್ಪ ಹೊತ್ತಿನಮೇಲೆ ರಾಕ್ಷಸನ ಅನುಮತಿಯಿಂದ ಮನೆಗೆ ಹೊರಟುಹೋದನು.

ಇದೆಲ್ಲ ಕಾರಸ್ಥಾನವು ಚಾಣಕ್ಯನದೆಂದು ನಮ್ಮ ಜಾಣರಾದ ವಾಚಕರು ತರ್ಕಿಸಿರಬಹುದು. ಇಷ್ಟರಿಂದ ಚಾಣಕ್ಯನಿಗೆ ಸಮಾಧಾನವಾಗಲಿಲ್ಲ, ರಾಕ್ಷಸನನ್ನು ಸಂಶಯಾಸ್ಪದವಾದ ಗಹನ ವಿಚಾರದಲ್ಲಿ ಕೆಡವಿ, ಅವನ ಬುದ್ಧಿಯು ಅತ್ತಿತ್ತ ಹರಿಯದಂತೆ ಮಾಡಬೇಕೆಂದು ಆತನು ಯೋಚಿಸಿದನು. ಅದಕ್ಕಾಗಿ ಆತನು ಸುಮತಿಕೆಗೆ ಕಲಿಸತಕ್ಕದ್ದನ್ನು ಕಲಿಸಿದನು. ಒಂದುದಿನ ಸುಮತಿಕೆಯು ರಾಕ್ಷಸನನ್ನು ಕಂಡು–ಅಮಾತ್ಯವರನೇ, ಮುರಾದೇವಿಯು ಮನಸ್ಸಿನಲ್ಲಿ ಯಾವದೋ ಒಂದು ಭಯಂಕರ ಕೃತ್ಯ ಮಾಡಬೇಕೆಂದು ಎಣಿಸಿದಂತೆ ತೋರುತ್ತದೆ. ಸಂಶಯ ಬಂದದ್ದರಿಂದ ಬಿಟ್ಟದ್ದು ಬಿಟ್ಟು ಬಂದು ತಿಳಿಸಿದ್ದೇನೆ. ಆ ಕೃತ್ಯವು ಇಂಥಾದ್ದೇ ಎಂದು ನಾನು ಈಗಲೇ ಹೇಳಲಾರೆನು. ವಿಶೇಷ ಸಂಗತಿಯು ಗೊತ್ತಾದಂತೆ ಬಂದು ತಿಳಿಸುವೆನು, ಅಲ್ಲಿಯವರೆಗೆ ಈ ಮಾತನ್ನು ಹೊರಗೆ ಎಲ್ಲಿಯೂ ಒಡೆಯಬಾರದು, ಎಂದು ಹೇಳಿದಳು. ರಾಕ್ಷಸನು ಎಷ್ಟು ಕೆದರಿ ಕೆದರಿ ಕೇಳಿದರೂ ಆಕೆಯು–ಸಂಶಯ ಬಂದದೆ, ಇಂಥಾದ್ದೇ ಕೃತ್ಯವೆಂಬದನ್ನು ಈಗ ನಾನು ಹೇಳಲಾರೆನು, ಗೊತ್ತಾದ ಕೂಡಲೇ ಬಂದು ತಿಳಿಸುವೆನು, ಎಂಬ ಉತ್ತರಕ್ಕಿಂತ ಹೆಚ್ಚಿನ ಒಂದು ಅಕ್ಷರವನ್ನಾದರೂ ನುಡಿಯಲಿಲ್ಲ, ಕಡೆಗೆ ಉಪಾಯಗಾಣದೆ, ಹಾಗೇ ಮಾಡೆಂದು

ಹೇಳಿ ರಾಕ್ಷಸನು ಸುಮತಿಕೆಗೆ ಹೋಗಲು ಅಪ್ಪಣೆ ಕೊಟ್ಟನು. ಇನ್ನೊಬ್ಬ ಚಾರನು ಹೀಗೆ ಸಂಶಯಾ ಸ್ಪದವಾದ ಸುದ್ದಿಯನ್ನು ಹೇಳಿದ್ದರೆ, ರಾಕ್ಷಸನು ಕೂಡಲೇ ಅವನನ್ನು ಶಿಕ್ಷಿಸುತ್ತಿದ್ದನು; ಆದರೆ ಆತನಿಗೆ ಸುಮತಿಕೆಯ ಹೆಸರು ತೆಗೆಯಲಿಕ್ಕ ಬರುವಹಾಗಿದ್ದಿಲ್ಲ; ಶಿಕ್ಷಿಸುವದಂತು ಒತ್ತಟ್ಟಿಗಿರಲಿ, ಅವಳೊಡನೆ ಸಿಟ್ಟಿನಿಂದ ಮಾತು ಸಹ ಆಡುವಂತೆ ಇದ್ದಿಲ್ಲ.

ಸುಮತಿಕೆಯ ಮಾತುಗಳಿಂದ ರಾಕ್ಷಸನ ಮನಸ್ಸು ನಿಜವಾಗಿಯೇ ಸಂಶಯಗ್ರಸ್ತವಾಯಿತು. ಮುರೆಯು ಭಯಂಕರ ಕೃತ್ಯವನ್ನೇನು ಮಾಡಬಹುದೆಂಬ ವಿಚಾರದಲ್ಲಿ ಆತನು ಮುಣುಗಿ ಹೋದನು. ಪರಾಧೀನೆಯಾದ ಅಬಲೆಯ ಭಯಂಕರ ಕೃತ್ಯವೆಂದರೆ ವಿಷಪ್ರಯೋಗವು. ಇದಕ್ಕೂ ಹೆಚ್ಚಿನ ಕೃತ್ಯವು ಆಕೆಯಿಂದೇನು ಆಗಬೇಕು? ವಿಷಪ್ರಯೋಗವನ್ನಾದರೂ ಯಾರಿಗೆ ಮಾಡುವಳು? ಧನಾನಂದ ಮಹಾರಾಜರಿಗೇ ಏನು? ಈ ವಿಚಾರವು ಮನಸ್ಸಿನಲ್ಲಿ ಬಂದಕೂಡಲೇ ಆ ಸ್ವಾಮಿನಿಷ್ಠ ಸಚಿವನು ಚಿಂತಾಮಗ್ನನಾದನು. ತನ್ನ ಸ್ವಾಮಿಯನ್ನು ಈ ಸಂಕಟದಿಂದ ಹ್ಯಾಗೆ ಪಾರುಮಾಡಬೇಕೆಂದು ವಿಚಾರಿಸಹತ್ತಿದನು. ಧನಾನಂದನ ದರ್ಶನವೇ ಅವನಿಗೆ ದುರ್ಲಭ ವಾಗಿತ್ತು. ರಾಜ್ಯಕಾರಭಾರವನ್ನೆಲ್ಲ ರಾಕ್ಷಸನಿಗೆ ಒಪ್ಪಿಸಿ, ಧನಾನಂದನು ನಿಶ್ಚಿಂತೆಯಿಂದ ಮುರೆಯ ಮಂದಿರದಲ್ಲಿ ಇದ್ದು ಬಿಟ್ಟಿದ್ದನು. ಯಾವದಾದರೂ ರಾಜಕಾರಣದ ಮಹತ್ವದ ಸಂಗತಿಗಳಿಗಾಗಿ ರಾಕ್ಷಸನು ದರ್ಶನವನ್ನು ಇಚ್ಛಿಸಿದರೆ, ನೀವು ಇದ್ದೀರಲ್ಲ, ನಿಮ್ಮ ಮನಸ್ಸಿಗೆ ಬಂದಂತೆ ಮಾಡಿದರೆ ಆಯಿತು, ಅದಕ್ಕೆ ನಮ್ಮ ಸಂಪೂರ್ಣ ಒಪ್ಪಿಗೆಯಿರುವದು, ಎಂದು ಅರಸನು ಹೇಳಿಕಳಿಸುತ್ತಿದ್ದನು. ಹೀಗಾಗಿ ಧನಾನಂದನ ದರ್ಶನಕ್ಕೆ ಯೋಗ್ಯ ಕಾರಣವೇ ದೊರೆಯದಾಗಿತ್ತು. ವಿಷಪ್ರಯೋಗದ ಸಂಶಯದಿಂದ ಪೀಡಿತನಾಗಿದ್ದ ರಾಕ್ಷಸನು, ಪರರಾಜರು ಪಾಟಲೀಪುತ್ರದ ಮೇಲೆ ದಂಡೆತ್ತಿ ಬರುವವರಿರುವದರಿಂದ ಪ್ರತ್ಯಕ್ಷ ಕಂಡು ಕೆಲವು ಮಾತುಗಳನ್ನಾಡಬೇಕಾಗಿದೆಯೆಂದು ಪತ್ರವನ್ನು ಬರೆದು, ಗುಪ್ತವಾಗಿ ಸುಮತಿಕೆಯ ಕೈಯಲ್ಲಿ ಕೊಟ್ಟು ಕಳಿಸಿ, ದರ್ಶನಕ್ಕಾಗಿ ಬರುವ ಪರವಾನಿಗೆಯನ್ನು ಪಡೆದು ಅರಸನನ್ನು ಕಂಡನು.

ಪರಚಕ್ರದ ಆಗಮನದ ಸಂಬಂಧದಿಂದ ಧನಾನಂದನು ತಿರಸ್ಕಾರದ ಹಾಸ್ಯೋಕ್ತಿಗಳನ್ನು ನುಡಿದಬಳಿಕ ರಾಕ್ಷಸನು–ಪ್ರಭುವೇ, ಪಾಟಲೀಪುತ್ರವನ್ನು ವಕ್ರ ದೃಷ್ಟಿಯಿಂದ ನೋಡುವ ಧೈರ್ಯಶಾಲಿಗಳು ಈ ಭರತ ಖಂಡದಲ್ಲಿ ಯಾರಿರುವರೆಂದು ತಾವು ನುಡಿದದ್ದು ಸತ್ಯವದೆ; ಯವನಾಧಿಪನಾದ ಪರ್ವತೇಶ್ವರನು ಮಗಧದ ಮೇಲೆ ದಂಡೆತ್ತಿ ಬರಬೇಕೆಂದೇನೋ ಬಡಬಡಿಸು ವನಂತೆ. ಇತ್ತಿತ್ತ ಅವನ ಬಡಬಡಿಕೆಯು ಹೆಚ್ಚಾಗಿದೆ. ಇರಲಿ, ಪ್ರಸಂಗೆ ಬಂದಾಗ ನೋಡ ಬಹುದು; ಆದರೆ ಪ್ರಭುವೇ, ನಾನು ತಮ್ಮನ್ನು ಕಾಣಲಿಕ್ಕೆ ಬಂದದ್ದರ ನಿಜವಾದ ಕಾರಣವು ಪರಚಕ್ರವಲ್ಲ, ಅಂತಃಶತ್ರುವಿನ ಸಲುವಾಗಿ ಎಚ್ಚತ್ತಿರಬೇಕೆಂದು ತಮಗೆ ಸೂಚಿಸುವದಕ್ಕಾಗಿ ಬಂದಿರುವೆನು, ಎಂದು ಹೇಳಿದನು. ಪಾಪ! ವಿಷಹಾಕಿದ ಅಪೂಪದ ಸುದ್ದಿಯು ರಾಕ್ಷಸನಿಗೇನು ಗೊತ್ತು? ಈ ಅಂತಃಶತ್ರುವಿನ ನೆನಪಾದ ಕೂಡಲೇ, ಧನಾನಂದನು ವಿಷದ ಅಪೂಪವನ್ನು ನೆನಪಿಗೆ ತಂದುಕೊಂಡು, ರಾಕ್ಷಸನಿಗೆ ಅಮಾತ್ಯಶ್ರೇಷ್ಠರೇ, ಅಂತಃಶತ್ರುವಿನ ಬಗ್ಗೆ ನಾನೊಬ್ಬನೇ ಏಕೆ, ನನ್ನ ಪ್ರಿಯಳಾದ ಮುರೆಯೂ ಎಚ್ಚತ್ತಿರುವಳು. ನನ್ನಂತೆ ನಿಮಗೂ ಅಂತಃಶತ್ರುವಿನ ಸಂಶಯ ಬಂದಿರುವದನ್ನು ಕೇಳಿದರೆ ಮುರೆಯು ಬಹಳ ಸಂತೋಷಪಟ್ಟಾಳು. ಮುರೆಯ ಮೇಲೆ

ಇಲ್ಲದ ಆರೋಪವನ್ನು ಹೊರಿಸಿ ಆಕೆಯ ಮಗನನ್ನು ಕೊಲ್ಲಿಸಿ, ಆಕೆಯನ್ನು ಸೆರೆಯಲ್ಲಿಟ್ಟು ನಾನು ದೋಷಕ್ಕೆ ಗುರಿಯಾದೆನು. ಮುರೆಯಂಥ ಪ್ರೇಮಲಾಂತಃಕರಣದ ರಾಣಿಯರಿಲ್ಲ. ನಾವು ರತ್ನಗಳೆಂದು ತಿಳಿದಿದ್ದೆವು ಕಾಡುಗಲ್ಲಿಗಿಂತಲೂ ಕಡೆಯಾಗಿ, ಕಾಡುಗಲ್ಲೆಂದು ತಿಳಿದದ್ದು ಶ್ರೇಷ್ಠ ರತ್ನವಾಯಿತು! ಪತಿಯ ಪ್ರಾಣವನ್ನು ತಕ್ಕೊಳ್ಳಲಿಕ್ಕೆ ಹೇಸದ ನೀಚ ಸ್ತ್ರೀಯರಿಗೆ ಯಾವ ಶಿಕ್ಷೆಯನ್ನು ಮಾಡಬೇಕು? ಇರಲಿ, ಅಪರಾಧಿಯ ಗೊತ್ತು ಹತ್ತುವತನಕ ಯಾವ ಹೆಚ್ಚಿನ ಮಾತೂ ಬೇಡ. ಮಂತ್ರಿ ಶ್ರೇಷ್ಠಾ, ನೀನೂ ಅಪರಾಧಿಗಳ ಶೋಧದಲ್ಲಿರು. ನಾನು ಮುರೆಯನ್ನು ಅಗಲಿ ಬಹಳಹೊತ್ತು ಇದ್ದದ್ದರಿಂದ ಜೀವವು ಚಡಪಡಿಸುತ್ತದೆ. ವಿಶೇಷ ಕೆಲಸವಿಲ್ಲದಿದ್ದರೆ ಇನ್ನು ಅಪ್ಪಣೆಯನ್ನು ತಕ್ಕೊಳ್ಳಬೇಕು, ಎಂದು ಹೇಳಿದನು. ಇದನ್ನು ಕೇಳಿ ರಾಕ್ಷಸನು ಮುಂದುಗಾಣದೆ, ಚಿತ್ರದ ಗೊಂಬೆಯಂತೆ ಅರಸನ ಮುಖವನ್ನು ನೋಡಹತ್ತಿದನು.

ನಂದಘಾತೋಪಕ್ರಮ

ಚಾಣಕ್ಯನು ಭಾಗುರಾಯಣನನ್ನು ನದಿಯ ಆಚೆಯ ದಂಡೆಗೆ ಕರಕೊಂಡು ಹೋಗಿದ್ದನೆಂದು ಹಿಂದೆ ಹೇಳಿದೆಯಷ್ಟೇ? ಅಲ್ಲಿ ಅವರಿಬ್ಬರ ಗುಪ್ತ ಸಂಭಾಷಣವಾಯಿತು. ಚಾಣಕ್ಯನು ಸೇನಾಪತಿಯನ್ನು ವಶಮಾಡಿಕೊಳ್ಳುವದಕ್ಕಾಗಿ ಚಂದ್ರಗುಪ್ತನ ನಿಜವಾದ ವೃತಾಂತವನ್ನು ಹೇಳಿ, ರಕ್ಷಾ ಬಂಧನದ ಗುರುತನ್ನು ಅವನಿಗೆ ತೋರಿಸಿದನು. ಮಂತ್ರಿ–ಸೇನಾಪತಿಗಳಲ್ಲಿ ಒಬ್ಬರಾದರೂ ತನಗೆ ಅನುಕೂಲರಾಗಿರದಿದ್ದರೆ, ಕಾರ್ಯ ಸಾಧಿಸದೆಂದು ಚಾಣಕ್ಯನು ತಿಳಿದಿದ್ದನು. ರಾಕ್ಷಸನು ಅಕೃತ್ರಿಮ ಸ್ವಾಮಿನಿಷ್ಠೆಯುಳ್ಳವನಾದ್ದರಿಂದ ನಂದರ ವಿರುದ್ಧವಾದ ಆಚರಣೆಗೆ ಆತನು ಎಂದೂ ಮನಸ್ಸು ಮಾಡನೆಂದು ತಿಳಿದು, ಆ ಧೂರ್ತ ಬ್ರಾಹ್ಮಣನು ಭಾಗುರಾಯಣನಿಗೆ ಬಲೆಯೊಡ್ಡಿದನು. ಚಾಣಕ್ಯನ ಬಲೆಯು ವ್ಯರ್ಥವಾಗಲಿಲ್ಲ. ಚಂದ್ರಗುಪ್ತನ ವೃತ್ತಾಂತದಿಂದ ಭಾಗುರಾಯಣನ ಮನಸ್ಸು ತಿರುಗಿ, ಆತನು ಚಾಣಕ್ಯನ ಅಧೀನನಾದನು. ಚಂದ್ರಗುಪ್ತನೇ ಹಕ್ಕಿನಿಂದ ಪಾಟಲೀಪುತ್ರದ ಪಟ್ಟಕ್ಕೆ ಬಾಧ್ಯಸ್ಥನೆಂತಲೂ, ರಾಕ್ಷಸನು ಸ್ವಾಮಿನಿಷ್ಠನಾದರೂ ಸತ್ಯದ ಬಗ್ಗೆ ಆತನಲ್ಲಿ ನಿಷ್ಠೆಯಿಲ್ಲೆಂತಲೂ, ಸತ್ಯವನ್ನು ಸ್ಥಾಪಿಸುವುದಕ್ಕಾಗಿ ತಾನು ಹೆಣಗಿದರೆ, ಅನ್ಯಾಯವಲ್ಲೆಂತಲೂ ಕಟ್ಟಿಯ ಕಲ್ಲನ್ನು ಕಟ್ಟಿಗೆ ಹೊಂದಿಸುವಲ್ಲಿ ರಾಜದ್ರೋಹವಾಗದೆಂತಲೂ ಸೇನಾಪತಿಯು ಭಾವಿಸಿದನು; ಆದರೂ ಚಾಣಕ್ಯನ ಹೇಳಿಕೆಯಂತೆ ಧನಾನಂದನ ವಿರುದ್ಧವಾಗಿ ಪ್ರತ್ಯಕ್ಷ ಕಾರ್ಯವನ್ನು ಕೈಕೊಳ್ಳುವ ಧೈರ್ಯವು ಅವನಿಗಾಗಲೊಲ್ಲದು.

ಸಧ್ಯಕ್ಕೆ ಮಗಧ ರಾಜ್ಯದ ಮೇಲೆ ದಂಡೆತ್ತಿ ಬರುವ ಧೈರ್ಯವು ಭರತಖಂಡದೊಳಗಿನ ಯಾವ ಅರಸರಿಗೂ ಇದ್ದಿಲ್ಲವಾದರೂ, ಪರ್ವತೇಶ್ವರನು ಗ್ರೀಕರ ಒತ್ತಾಸೆಯಿಂದ ಮಗಧವನ್ನು ಹಣಿಕಿ ನೋಡಲು ಯತ್ನಿಸುತ್ತಿದ್ದನು. ರಾಕ್ಷಸನು ಅನುಕೂಲವಾದಂತೆ ಆತನಿಗೆ ಮೋಸದಿಂದ

ಪತ್ರಬರೆಸಿ, ಆತನು ಅಲ್ಪ ಸೈನ್ಯದೊಡನೆ ಮಗಧದ ಮೇಲೆ ದಂಡೆತ್ತಿ ಬರುವಂತೆ ಮಾಡಬೇಕೆಂದಲೂ, ಹಾಗೆ ದಂಡೆತ್ತಿಬಂದ ಪೌರಸನನ್ನು ಚಂದ್ರಗುಪ್ತನು ಭಾಗುರಾಯಣನ ಸಹಾಯದಿಂದ ಸೋಲಿಸಿ ಸೆರೆಹಿಡಿದು, ರಾಕ್ಷಸನ ದುರ್ಬುದ್ಧಿಯನ್ನು ಬೈಲಿಗೆಳೆದಂತೆ ಮಾಡಿ, ಅವನಬಗ್ಗೆ ಜನಸಮೂಹದಲ್ಲಿ ತಿರಸ್ಕಾರವನ್ನುಂಟುಮಾಡಬೇಕೆಂತಲೂ ಚಾಣಕ್ಯನು ಯೋಚಿಸಿದ್ದನು. ಈ ಯೋಚನೆಯು ಭಾಗುರಾಯಣನಿಗೆ ಸಮ್ಮತವಾಯಿತು; ಆದರೆ ಮೋಸದಿಂದೇ ಆಗಲೊಲ್ಲದೇಕೆ, ಪರದೇಶದ ಶತ್ರುಗಳನ್ನು ತನ್ನ ದೇಶದಲ್ಲಿ ಕರೆಸಿಕೊಳ್ಳಲಿಕ್ಕೆ ಅವನ ಮನಸ್ಸು ಮೆಚ್ಚದಾಯಿತು. ಮೇಲಾಗಿ ಬಹು ದಿವಸ ಧನಾನಂದನ ಸೇವೆಯನ್ನು ಮಾಡಿ, ಆತನನ್ನು ಸ್ವಾಮಿಯೆಂದು ಭಾವಿಸಿದ್ದ ಭಾಗುರಾಯಣನಿಗೆ, ಧನಾನಂದನ ಸ್ಥಳದಲ್ಲಿ ಚಂದ್ರಗುಪ್ತನನ್ನು ಕುಳ್ಳಿರಿಸುವದೆಂದರೆ, ಮನಸ್ಸಿಗೆ ಹುಳ ಕಡಿದ ಹಾಗಾಯಿತು. ಹೀಗಾಗಿ ಭಾಗುರಾಯಣನು, ಇತ್ತ ಸ್ವಾಮಿನಿಷ್ಠೆಯನ್ನು ಬಿಡದಾದನು, ಅತ್ತ ಚಾಣಕ್ಯನ ಮಾತನ್ನೂ ಮೀರದಾದನು. ಚಾಣಕ್ಯನಂತು ಬೇಗನೆ ಕಾರ್ಯವನ್ನು ಆರಂಭಿಸಬೇಕೆಂದು ಹಾತೊರೆ ಯುತ್ತಿದ್ದನು. ತಾನು ಅಲ್ಲಲ್ಲಿ ಒಡ್ಡಿದ ಬಲೆಗಳ ಹಗ್ಗಗಳು ಹರಿದು ತನ್ನ ಹೂರಣವೆಲ್ಲ ಹೊರಬಿದ್ದರೆ, ಮುಂದೆ ತಲೆ ಎತ್ತಲಿಕ್ಕೆ ಮಾರ್ಗವೇ ಇಲ್ಲದಾಗುವದೆಂತಲೂ, ಮೋಸವು ಬಹುದಿವಸ ಗುಪ್ತವಾಗಿರುವದಿಲ್ಲಾದ್ದರಿಂದ ರಾಜನೀತಿಗನುಸರಿಸಿ ಒಂದು ಕಡತ, ಎರಡು ತುಂಡು ಎನ್ನುವಂತೆ ಕಾರ್ಯವನ್ನು ಬೇಗನೆ ಸಾಧಿಸಬೇಕೆಂತಲೂ ಆತನು ಭಾಗುರಾಯಣನಿಗೆ ಹೇಳಿ ಹೇಳಿ ಬೇಸತ್ತನು. ಬರಿಯ ಚಂದ್ರಗುಪ್ತನನ್ನಷ್ಟು ಸಿಂಹಾಸನದ ಮೇಲೆ ಕೂಡ್ರಿಸಿದರೆ, ಚಾಣಕ್ಯನ ಕೆಲಸವಾಗುವಂತೆ ಇದ್ದಿಲ್ಲ. ಧನಾನಂದನಿಂದ ಸಹಿತವಾದ ನಂದವಂಶವನ್ನೇ ಅವನು ಹುರಿಯಬೇಕಾಗಿತ್ತು. ಆದ್ದರಿಂದ ಯಾವ ಘೋರಕೃತ್ಯ ಮಾಡಲಿಕ್ಕೂ ಅವನ ಮನಸ್ಸು ಹೇಸುವಂತೆ ಇದ್ದಿಲ್ಲ. ಚಾಣಕ್ಯನು ಭಾಗುರಾಯಣನಿಗೆ ಚಂದ್ರಗುಪ್ತನ ವೃತ್ತಾಂತವನ್ನಷ್ಟೇ ಹೇಳಿದ್ದನಲ್ಲದೆ, ತನ್ನ ಹಾಗು ಮುರೆಯ ಘೋರಪ್ರತಿಜ್ಞೆಯ ಸುಳುವು ಆತನಿಗೆ ಹತ್ತಗೊಟ್ಟಿದ್ದಿಲ್ಲ. ಅದರ ಸುದ್ದಿ ಹತ್ತಿದ್ದರೆ, ಭಾಗುರಾಯಣನ ಮನಸ್ಸು ಹ್ಯಾಗಾಗುತ್ತಿತ್ತೋ?

ಈ ಮೇರೆಗೆ ತನ್ನ ಸ್ವಾಮಿಯು ಅಹಿತ ಚಿಂತನದ ಸಲುವಾಗಿಯೂ, ಪರದೇಶದ ಶತ್ರುಗಳನ್ನು ತನ್ನ ದೇಶದಲ್ಲಿ ಕರೆಸಿಕೊಳ್ಳುವದರ ಸಲುವಾಗಿಯೂ ಭಾಗುರಾಯಣನು ಆದೇಶಪಡುತ್ತಿರಲು, ಅವನ ಮನಸ್ಸಿನಲ್ಲಿ ಹೊಸದೊಂದು ವಿಚಾರವು ಉತ್ಪನ್ನವಾಯಿತು. ಆತನು ಚ್ಯಾಣಕ್ಯನ ಬಳಿಗೆ ಹೋಗಿ ಉತ್ಸಾಹದಿಂದ – ಚಾಣಕ್ಯಮುನೇ, ಈ ದಿನ ನನ್ನ ಮನಸ್ಸಿನಲ್ಲಿ ಒಂದು ವಿಚಾರವು ಬಂದದೆ. ನಿಮ್ಮ ಮನಸ್ಸಿಗೆ ಬಂದರೆ ಹಾಗೆ ಮಾಡಬಹುದು, ಎಂದು ನುಡಿಯಲು, ಚಾಣಕ್ಯನು–ಸೇನಾಪತೇ, ನಿಮ್ಮ ಮನಸ್ಸಿನಲ್ಲಿ ಬರುವ ವಿಚಾರಗಳು ಅಮೋಘವಾಗಿಯೇ ಇರತಕ್ಕವು; ಅವಶ್ಯವಾಗಿ ಹೇಳಬೇಕು, ಕೇಳಲು ನಾನು ಸಿದ್ಧನಿರುತ್ತೇನೆ, ಎಂದನು. ಆಗ ಭಾಗುರಾಯಣನು – ನನ್ನ ವಿಚಾರವಿಷ್ಟೇ; ಹೀಗೆ ಗುಡ್ಡಕ್ಕೆ ಹಗ್ಗ ಹಾಕುವದಕ್ಕಿಂತ ನೀವು ನನ್ನ ಮುಂದೆ ಹೇಳಿದ ಚಂದ್ರಗುಪ್ತನ ವೃತ್ತಾಂತವನ್ನೆಲ್ಲ ಧನಾನಂದನಿಗೆ ತಿಳಿಸಿದರೆ, ಎಲ್ಲ ಕೆಲಸವಾಗುವಹಾಗಿದೆ. ಉಗುರಿನಿಂದ ಹೋಗುವದಕ್ಕೆ ಕೊಡಲಿಯನ್ನು ಯಾಕೆ

ತಕ್ಕೊಳ್ಳಬೇಕು? ಹ್ಯಾಗೂ ಮುರಾದೇವಿಯು ಈಗ ಅರಸನ ಮನಸ್ಸನ್ನು ಸಂಪೂರ್ಣವಾಗಿ ಆಕ್ರಮಿಸಿರುತ್ತಾಳೆ. ಆಕೆಯ ಮಗನಿಗೆ ಪಟ್ಟಾಭಿಷೇಕ ಮಾಡಲಿಕ್ಕೆ ಮಹಾರಾಜರು ಸಂತೋಷದಿಂದ ಒಪ್ಪಿಕೊಳ್ಳುವ ಹಾಗಿದೆ. ನಿಮ್ಮ ಮನಸ್ಸಿಗೆ ಬಂದರೆ ಈ ಉಪಾಯವನ್ನು ಮಾಡಬಹುದು, ಎಂದನು. ಹೀಗೆ ಮಾತಾಡುವಾಗ ಚಾಣಕ್ಯನ ಹುಬ್ಬುಗಳು ಗಂಟಿಕ್ಕಿದ್ದವು. ಸಂತಾಪದದಿಂದ ಅವನು ಮೋರೆ ಕಿವುಚಿ ಒತ್ತಟ್ಟಿಗೆ ನೋಡಿದನು. ಮಿಂಚಿನಂತೆ ಅಲ್ಪಾವ ಕಾಶದಲ್ಲಿ ಹೊಳೆದುಹೋದ ಚಾಣಕ್ಯನ ಈ ವಿಕಾರ ಸ್ಥಿತಿಯು ಮಾತಿನ ಭರದಲ್ಲಿದ್ದ ಭಾಗುರಾಯಣನ ದೃಷ್ಟಿಗೆ ಬೀಳಲಿಲ್ಲ.

ಭಾಗುರಾಯಣನ ಮಾತು ಮುಗಿಯುವದಕ್ಕಿಂತ ಮೊದಲೇ ಚಾಣಕ್ಯನು ನಗೆಮೊಗದಿಂದ ಆನಂದ ಪ್ರದರ್ಶಕ ಚಪ್ಪಾಳೆಯನ್ನು ಬಾರಿಸಿ–ಶಾಬಾಸ್! ಸೇನಾಪತೀ, ನೀನು ಒಳ್ಳೇ ನೀತಿವಿಶಾರದನೆಂಬದರಲ್ಲಿ ಸಂಶಯವಿಲ್ಲ. ಅದಕ್ಕಂತೇ ರಾಕ್ಷಸನ ಸ್ಥಳದಲ್ಲಿ ನೀವು ಮಂತ್ರಿಗಳಾಗಿರ ತಕ್ಕದ್ದೆಂದು ನಾನು ಎಷ್ಟೋಸಾರೆ ಆಡಿ ತೋರಿಸಿದ್ದೇನೆ. ನೀವು ಹೇಳಿದ ಉಪಾಯವು ಬಹು ಯೋಗ್ಯವಾದದ್ದು; ಆದರೆ ಸಾಧಿಸುವದು ಮಾತ್ರ ಕಠಿಣ. ರಾಕ್ಷಸನು ಮುರೆಯ ಮಗನನ್ನು ದಾಸಿಯ ಪುತ್ರನೆಂದು ಹಿಮಾಲಯದ ಅಡವಿಯಲ್ಲಿ ನಾಶಗೊಳಿಸಿದನು. ಅಂಥವನು ಚಂದ್ರಗುಪ್ತನ ಅರಸೊತ್ತಿಗೆಯನ್ನು ಒಪ್ಪಿಸಿಕೊಳ್ಳಬಹುದೋ? ರಾಕ್ಷಸನೇನು ಅಸಮರ್ಥನೇ, ಬುದ್ಧಿಹೀನನೇ? ಇಲ್ಲದ ತಂತ್ರಗಳನ್ನು ಒಡ್ಡಿ ನಿಮ್ಮ ಉಪಾಯವನ್ನು ನಿರರ್ಥಕವಾಗಿ ಮಾಡಬಹುದು. ಅರಸನ ನಂಬಿಗೆಯು ರಾಕ್ಷಸನದಲ್ಲಿರುವದರಿಂದ ಅವನ ಮಾತೇ ನಡೆದೀತಲ್ಲದೆ, ನಿಮ್ಮ ಮಾತು ನಡೆಯಲಾರದು. ನಾನು ಹೇಳುವ ಯುಕ್ತಿಯಂತೆ ಪರ್ವತ ರಾಜನಿಗೆ ಪತ್ರನನ್ನು ಬರೆಸಿ ಅವನನ್ನು ಕರೆತಂದು, ಸೇರಿಗೆ ಸವ್ವಾಸೇರು ಮಾಡಿ ರಾಕ್ಷಸನಿಗೆ ತೋರಿಸಿದರೆ, ತನ್ನಂತೆ ಭಾಗುರಾಯಣನಾದರೂ ತಂತ್ರಕೋವಿದನೆಂದು ಅವನ ಮನವರಿಕೆ ಯಾದೀತು. ಭಾಗುರಾಯಣಾ, ನಿನ್ನ ನೀತಿವಿಶಾರದತ್ವದ ಗುರುತು ರಾಕ್ಷಸನಿಗೆ ಸ್ವಲ್ಪ ಆಗಲಿ, ಎಂದು ನುಡಿದನು.

ಚಾಣಕ್ಯನ ಈ ಮಾತುಗಳನ್ನು ಭಾಗುರಾಣನು ಸ್ವಸ್ಥ ಮನಸ್ಸಿನಿಂದ ಕೇಳುತ್ತಿದ್ದನು. ರಾಕ್ಷಸನು ತನ್ನ ಉಪಾಯವನ್ನು ನಡೆಯಗೊಡಲಿಕ್ಕಿಲ್ಲೆಂಬ ವಿಚಾರವು ಕೂಡಲೇ ಅವನ ಮನಸ್ಸಿನಲ್ಲಿ ಬಂದಿತು. ರಾಕ್ಷಸನ ವರ್ಚಸ್ಸೇ ಅಂಥಾದ್ದಿತ್ತು. ಭಾಗುರಾಯಣನು ಚಾಣಕ್ಯನಿಗೆ – ಬ್ರಾಹ್ಮಣ ಶ್ರೇಷ್ಠಾ, ನಿನ್ನ ವಿಚಾರವು ಸರ್ವಥಾ ನನಗೆ ಮಾನ್ಯವದೆ. ರಾಕ್ಷಸನು ಅಂಥ ಸಮರ್ಥನೇ ಸರಿ. ನಿನ್ನ ವಿಚಾರದಂತೆ ನಡೆದುಕೊಳ್ಳಲಿಕ್ಕೆ ಮನಃಪೂರ್ವಕವಾಗಿ ನಾನು ಒಪ್ಪಿಕೊಳ್ಳುತ್ತೇನೆ. ಹ್ಯಾಗಾದರೂ ಮಾಡಿ ರಾಕ್ಷಸನ ಮೂಗಿಗೆ ಕಪ್ಪು ಹಚ್ಚಲಿಕ್ಕೆ ಬೇಕು, ಅನ್ನಲು ಚಾಣಕ್ಯನು–ಸೇನಾಪತೇ, ನನ್ನ ವಿಚಾರಕ್ಕೆ ಬರೇ ಒಪ್ಪಿಕೊಂಡರೆ ಆಗುವದೇನು? ಕೆಲಸವನ್ನು ಆರಂಭಿಸಲಿಕ್ಕೆ ಬೇಕು. ಹೋಗುವ ದಿನಗಳು ಒಂದೊಂದೇ ಹೋಗುತ್ತವೆ; ಆದರೆ ಹೋದ ದಿನಗಳನ್ನು ಮನಸ್ಸಿನಲ್ಲಿ ತಂದರೆ, ತಮ್ಮ ಆಲಸ್ಯದ ಬಗ್ಗೆ ಎದೆಯೊಡೆದು ನೀರಾಗದೇ ಇರದು. ರಾಕ್ಷಸನು ಕಣ್ಣುಮುಚ್ಚಿಕೊಂಡಿರುವವರೆಗೇ ನಮ್ಮ ಆಟವು. ಅವನು ಕಣ್ಣುತೆರೆದು, ಯಾರೋ ತನ್ನನ್ನು ಮೋಸಗೊಳಿಸಹತ್ತಿದ್ದಾರೆಂಬ ವಿಚಾರವು ಅವನ ಮನಸ್ಸಿನಲ್ಲಿ ಹೊಳೆಯುವದೊಂದೇ

ತಡ. ನಮ್ಮ ಮಾಯಾಬಾಜಾರವೆಲ್ಲ ಒಟ್ಟು ಬಯಲಾಗಬಹುದು. ಅಮಾತ್ಯನ ಅತ್ಯಂತಾತ್ಯಂತ ವಿಶ್ವಾಸದೊಳಗಿನ ಹಿರಣ್ಯಗುಪ್ತನು ಸಹ ಈಗ ಗುಪ್ತರೀತಿಯಿಂದ ನಮ್ಮ ಕಡೆಗೆ ಆಗಿದ್ದಾನೆ. ರಾಕ್ಷಸನ ಪತ್ರಗಳನ್ನೆಲ್ಲ ಆತನೇ ಬರೆಯುತ್ತಿರುವನು. ರಾಕ್ಷಸನ ಮುದ್ರೆಯೂ ಅವನ ಕಡೆಗೇ ಇರುತ್ತದೆ. ಧೂರ್ತನಾದ ರಾಕ್ಷಸನು ಸುಮತಿಕೆಯನ್ನು ಒಡಕೊಳ್ಳಬೇಕೆನ್ನುವದರೊಳಗೆ, ಸುಮತಿಕೆಯೇ ಹಿರಣ್ಯಗುಪ್ತನನ್ನು ಒಡಕೊಂಡಳು. ಕನಕ–ಕಾಮಿನಿಯರಿಗೆ ಮರುಳಾಗದವರು ಈ ಜಗತ್ತಿನಲ್ಲಿ ಯಾರಿರುವರು? ಹಿರಣ್ಯಗುಪ್ತನು ಸುಮತಿಕೆಗೆ ಅಂಕಿತನಾಗಿ ಹೋಗಿರುವನು. ನನ್ನಿಂದ ಸುಮತಿಕೆಯು, ಸುಮತಿಕೆಯಿಂದ ಹಿರಣ್ಯಗುಪ್ತನು ನಿನ್ನ ಕಾರ್ಯಕ್ಕೆ ಅನುಕೂಲ ವಾಗಿರುತ್ತಾರೆ. ಇವರ ಅನುಕೂಲತೆಯಿರುವವರೆಗೇ ನಮ್ಮ ಆಟವು. ಅಸತ್ಯ ವ್ಯಾಪಾರಿಗಳು ಬಹು ದಿವಸ ಗುಪ್ತವಾಗಿರಲಾರವೆಂದು ನಿನಗೆ ಹೇಳುವ ಕಾರಣವಿಲ್ಲ. ರಾಕ್ಷಸನು ಪರ್ವತೇಶ್ವರನಿಗೆ ಪತ್ರ ಬರೆದಂತೆ ಹಿರಣ್ಯಗುಪ್ತನ ಕೈಯಿಂದ ಪತ್ರ ಬರೆಸಿ, ಅದರ ಕೆಳಗೆ ರಾಕ್ಷಸನ ಮುದ್ರೆಯನ್ನು ಮಾಡಿಸುವ ಕೆಲಸವು ನನಗೆ ಕೂಡಿತು. ನಿನ್ನ ಒಪ್ಪಿಗೆಯ ಹಾದಿಯನ್ನಷ್ಟೇ ನೋಡುತ್ತೇನೆ. ಸೇನಾಪತಿಯೇ, ಇನ್ನು ವಿಳಂಬವು ಕೆಲಸದ್ದಲ್ಲ ನಿಮ್ಮ ಮತವನ್ನು ಸ್ಪಷ್ಟವಾಗಿ ತಿಳಿಸಬೇಕು. ನೀವು ಸತ್ಪಕ್ಷಪಾತಿಗಳಾದ್ದರಿಂದ ನಿಮಗೆ ಯಶಸ್ಸು ಬರಬೇಕೆಂತಲೇ ನಾನು ಇಷ್ಟು ದೀರ್ಘ ಪ್ರಯತ್ನವನ್ನು ಮಾಡತೊಡಗಿರುತ್ತೇನೆ. ಇಲ್ಲದಿದ್ದರೆ, ನನ್ನಂಥ ನಿರಿಚ್ಛ ಬ್ರಾಹ್ಮಣನಿಗೆ ಈ ಹಾಳು ಉಸಾಬರಿಯಿಂದ ಪ್ರಯೋಜನವೇನು? ''ಹರಹರ'' ಅನ್ನುತ್ತ ನನ್ನ ಆಶ್ರಮದಲ್ಲಿ ಸ್ವಸ್ಥವಾಗಿ ಕುಳಿತುಕೊಳ್ಳುವೆನು. ಸತ್ಯನಿಷ್ಠೆಯನ್ನೂ, ಸತ್ಪಕ್ಷಪಾತವನ್ನೂ ಜಗತ್ತಿಗೆ ತೋರಿಸುವ ಪ್ರಸಂಗವನ್ನು ವ್ಯರ್ಥವಾಗಿ ಕಳಕೊಳ್ಳಬಾರದೆಂದು ನನ್ನ ಮನಸ್ಸಿನಲ್ಲಿರುತ್ತದೆ.

ಈ ಮೇರೆಗೆ ಚಾಣಕ್ಯನು ಅಸ್ಖಲಿತವಾಗಿ ನುಡಿಯುತ್ತಿರಲು, ಭಾಗುರಾಯಣನು ನಡುವೇ ಬಾಯಿಹಾಕಿ – ಚಾಣಕ್ಯಮುನೇ, ನಿಮ್ಮ ಮನಸ್ಸಿನಲ್ಲಿದ್ದ ಬಳಿಕೆ ನನ್ನ ಮನಸ್ಸಿನಲ್ಲಿದ್ದ ಹಾಗೆಯೇ ಸರಿ. ನಿಮ್ಮ ಒಂದೊಂದು ಅಗಾಧ ಕೃತ್ಯಗಳನ್ನು ಕೇಳಿ ನಾನು ಭ್ರಮಿಷ್ಟನಂತೆ ಆಗಿದ್ದೇನೆ. ಸಮರಾಂ ಗಣದಲ್ಲಿ ಶತ್ರುವು ಎದುರಾದಾಗ ಮಾತ್ರ ಭಾಗುರಾಯಣನ ಕೆಲಸವು. ಆರ್ಯ ಚಾಣಕ್ಯಾ, ಹಿರಣ್ಯಗುಪ್ತನನ್ನ ಒಡಕೊಂಡಿಯೆಂದಬಳಿಕ ನಿನ್ನ ತಂತ್ರಕ್ಕೆ ಯಾರು ಈಡಾಗಬೇಕು! ನಾನು ನಿನ್ನ ಶಿಷ್ಯನೆಂದು ಈ ಮೊದಲೇ ಹೇಳಿಬಿಟ್ಟಿದ್ದೇನೆ. ನಿನ್ನ ಅಪ್ಪಣೆಯನ್ನು ಮೀರತಕ್ಕವನಲ್ಲ ಎಂದನು. ಭಾಗುರಾಯಣನ ಒಪ್ಪಿಗೆಯು ದೊರೆತದ್ದೊಂದೇ ತಡ; ಚಾಣಕ್ಯನು ಹಿರಣ್ಯಗುಪ್ತನಿಂದ ಪರ್ವತೇಶ್ವರನಿಗೆ ರಾಕ್ಷಸನ ಹೆಸರು ಹಾಕಿ ಪತ್ರವನ್ನು ಬರೆಸಿ, ಕೆಳಗೆ ರಾಕ್ಷಸನ ಮುದ್ರೆಯನ್ನು ಮಾಡಿಸಿ, ಸಿದ್ಧಾರ್ಥಕನ ಕೈಯಿಂದ ಅದನ್ನು ಪರ್ವತೇಶ್ವರನ ಕಡೆಗೆ ಕಳಿಸಿಬಿಟ್ಟನು. ಈ ಪತ್ರದ ಉತ್ತರವನ್ನು ಈಗ ಬಂದಿರುವ ಚಾರನ ಕೈಯಲ್ಲಿಯೇ ಕೊಡಬೇಕಲ್ಲದೆ, ಬೇರೆ ಚಾರನನ್ನು ಕಳಿಸಬಾರದೆಂದಲೂ, ಪರ್ವತೇಶ್ವರನ ಚಾರರು ರಾಕ್ಷಸನ ಕಡೆಗೆ ಬರುತ್ತಿರುತ್ತಾರೆಂಬ ಸಂಗತಿಯು ಕೂಡ ಜನರಿಗೆ ತಿಳಿಯುವದು ಇಷ್ಟವಲ್ಲೆಂತಲೂ, ಬೇರೆ ಚಾರರನ್ನು ಕಳಿಸಿದರೆ, ಸಂಶಯಕ್ಕೆ ಕಾರಣವಾಗಬಹುದೆಂದು, ಬೇಕೆಂತ ಬುದ್ಧ ಭಿಕ್ಷುವಿನ ಸಂಗಡ ಪತ್ರವನ್ನು ಕಳಿಸಿರುತ್ತೇವೆಂತಲೂ ರಾಕ್ಷಸನು ಬುದ್ಧಿಪೂರ್ವಕವಾಗಿ ಪರ್ವತ ರಾಜನಿಗೆ ಬರೆದು

ತಿಳಿಸಿದಂತೆ, ತಾಜಾಕಲಮು ಹಾಕಿ ಚಾಣಕ್ಯನು ಪತ್ರದಲ್ಲಿ ಬರಿಸಿದ್ದನು. ಪರ್ವತೇಶ್ವರನ ಕಡೆಗೆ ಪತ್ರವು ಹೋದದಿವಸದಿಂದ ಭಾಗುರಾಯಣನ ಅಂಗವು ಚಾಣಕ್ಯನ ಕಾರ್ಯದಲ್ಲಿ ತೊಡಗಿದಂತಾಯಿತು. ಆತನು ಪರ್ವತೇಶ್ವರನಿಂದ ಉತ್ತರವೇನು ಬರುತ್ತದೋ, ಎಂದು ಆತುರದಿಂದ ಹಾದಿಯನ್ನು ನೋಡುತ್ತ ಚಾಣಕ್ಯನ ಬಳಿಗೆ ಆಗಾಗ್ಗೆ ಬಂದು ಅದರ ವಿಷಯವಾಗಿ ವಿಚಾರಿಸತೊಡಗಿದನು.

ತನ್ನ ವಿರುದ್ಧವಾಗಿ ಇಂಥ ಭಯಂಕರ ಕಾರಸ್ಥಾನವನ್ನು ಚಾಣಕ್ಯನು ರಚಿಸುತ್ತಿರಲು, ಅದರ ಗಂಧವು ಕೂಡ ರಾಕ್ಷಸನಿಗೆ ಗೊತ್ತಾಗಿದ್ದಿಲ್ಲ. ಅಮಾತ್ಯನು ಅತ್ಯಂತ ಚತುರನೆಂಬದರಲ್ಲಿ ಸಂಶಯವಿಲ್ಲ; ಅವನ ಜಾಗರೂಕತೆಯಾದರೂ ಹೊಗಳತಕ್ಕಂಥಾದ್ದೇ ಸರಿ; ಆದರೆ ಬಹುದಿವಸ ಸಂಕಟಗಳು ಬಾರದಿರಲು, ಮನುಷ್ಯನು ಸ್ವಾಭಾವಿಕವಾಗಿಯೇ ಸ್ವಲ್ಪ ಮಂದನಾಗುವಂತೆ, ನಿಷ್ಕಂಟಕ ಮಗಧ ರಾಜ್ಯದಲ್ಲಿ ಸುಖ-ಸಮಾಧಾನಗಳಿಂದ ವೈಭವವನ್ನು ಅನುಭವಿಸುತ್ತಿದ್ದ ರಾಕ್ಷಸನನ್ನು ಅಲ್ಪ-ಸ್ವಲ್ಪ ಮಂದತ್ವವು ಅವನಿಗೆ ಗೊತ್ತಾಗದಂತೆ ಆವರಿಸಿತ್ತು. ಸದ್ಯಕ್ಕೆ ಅವನಿಗೊದಗಿದ ಚಿಂತೆಯೆಂದರೆ ಧನಾನಂದನದು. ಧನಾನಂದನು ರಾಜ್ಯ ಕಾರಭಾರದಲ್ಲಿ ಮನಸ್ಸು ಹಾಕದೆ ಇದ್ದದ್ದರ ಚಿಂತೆಯೂ ರಾಕ್ಷಸನಿಗಿದ್ದಿಲ್ಲ; ಆದರೆ ಆತನು ತೀರ ವಿಷಯಾಸಕ್ತನಾಗಿ ಮುರೆಯ ಮನೆಹಿಡಕೊಂಡು ಕುಳಿತದ್ದು ಅಮಾತ್ಯನ ಅಸಮಾಧಾನಕ್ಕೆ ಕಾರಣವಾಗಿತ್ತು. ಸುಮತಿಕೆಯು ಬೆದರಿಕೆ ಹಾಕಿದಾಗಿನಿಂದಂತು ರಾಕ್ಷಸನಿಗೆ ಸಮಾಧಾನವೇ ಇದ್ದಿಲ್ಲ. ಮುರೆಯು ಯಾವಕಾಲಕ್ಕೆ ಅರಸನ ಜೀವಕ್ಕೆ ಏನು ಮಾಡುವಳೋ, ಎಂದು ಆತನು ಚಿಂತಿಸುತ್ತಿದ್ದನು. ರಾಕ್ಷಸನು ಕುಸುಮ ಪುರಿಯಲ್ಲಿರುವವರೆಗೆ ಮಗಧ ರಾಜ್ಯವನ್ನು ಪರಶತ್ರುಗಳು ಹಣಿಕಿನೋಡ ಬಹುದೆಂಬ ಕಲ್ಪನೆಯು ಸ್ವಪ್ನದಲ್ಲಿ ಸಹ ಬರಲಾರದೆಂದು ಆತನು ನಂಬಿದ್ದನು; ಆದರೂ ಸುಮತಿಕೆಯ ಬೆದರಿಕೆಯಿಂದ ಆ ಸ್ವಾಮಿನಿಷ್ಠನು ಚಿಂತಾಮಗ್ನನಾದನು. ಎದ್ದರೆ ಮುರೆಯ ವಿಚಾರ, ಕೂತರೆ ಮುರೆಯ ವಿಚಾರ; ಹೀಗಾಗಿ ರಾಕ್ಷಸನಿಗೆ ಅನ್ಯ ವಿಚಾರಗಳಲ್ಲಿ ತೊಡಗಲಿಕ್ಕೆ ಅವಕಾಶವೇ ಇಲ್ಲದಾಯಿತು. ಈ ಸಂಬಂಧದಿಂದ ಚಾಣಕ್ಯನ ಯುಕ್ತಿಯು ಕಸರಿಲ್ಲದೆ ಕೈಗೂಡಿ ಅವನ ಚಲ್ಲಾಟಕ್ಕೆ ಅನುವು ದೊರೆಯಿತೆಂದು ಹೇಳಬಹುದು. ಒಂದು ದಿನ ರಾಕ್ಷಸನು ವಿಚಾರಮಗ್ನನಾಗಿ ಕುಳಿತಿರಲು, ಸುಮತಿಕೆಯು ಆತನ ಬಳಿಗೆ ಬಂದು, ನಮಸ್ಕಾರ-ಚಮತ್ಕಾರ ಗಳನ್ನೇನೂ ಮಾಡದೆ ಬರಿಯ ದನಿಯಿಂದ —''ಅಮಾತ್ಯಶ್ರೇಷ್ಠಾ, ನನ್ನನ್ನು ರಕ್ಷಿಸು-ರಕ್ಷಿಸು, ಇನ್ನು ನನ್ನ ಪರಿಣಾಮವು ನೆಟ್ಟಗೆ ಕಾಣುವದಿಲ್ಲ'' ಎಂದು ಬೇಡಿಕೊಂಡಳು.

ಸುಮತಿಕೆಯ ಬೆದರಿಕೆಯ ಕಾರಣವು ರಾಕ್ಷಸನಿಗೆ ತಿಳಿಯಲೊಲ್ಲದು. ಆತನು ಸುಮತಿಕೆಯನ್ನು ಕುರಿತು-ಸುಮತಿಕಮ್ಮಾ ಇಷ್ಟೇಕೆ ಅಂಜಿರುತ್ತೀರಿ? ಏನಾಯಿತೆಂಬದನ್ನು ಹೇಳಿರಿ. ರಾಕ್ಷಸನ ಮನೆಯಲ್ಲಿ ನೀವು ಸುರಕ್ಷಿತವಾಗಿರುತ್ತೀರಿ, ಎಂದು ಧೈರ್ಯ ಹೇಳಿ ಮಾತಾಡಿಸಿದರೂ, ಸುಮತಿಕೆಯ ಬಾಯಿಂದ ಅಕ್ಷರಗಳೇ ಹೊರಡದಾದವು ಆಕೆಯು ಥರಥರ ನಡಗುತ್ತಿದ್ದಳು. ರಾಕ್ಷಸನು ಆಕೆಯನ್ನು ಕೆಲಹೊತ್ತು ಸುಮ್ಮನೇ ಕೂಡ್ರಗೊಟ್ಟು, ಸ್ವಲ್ಪ ಸಮಾಧಾನವಾದ ಬಳಿಕ ಕೇಳಬೇಕೆಂದು ತಿಳಿದು ಸುಮತಿಕೆಯನ್ನು ನೋಡುತ್ತ ತಾನೂ ಸುಮ್ಮನೆ

ಕುಳಿತುಕೊಂಡನು. ಕೆಲವು ಹೊತ್ತಿನ ಮೇಲೆ ಸುಮತಿಕೆಯು ಸ್ವಲ್ಪ ಸಮಾಧಾನವನ್ನು ತಾಳಿ ರಾಕ್ಷಸನನ್ನು ಕುರಿತು – ಅಮಾತ್ಯವರ್ಯಾ, ಎಲ್ಲ ಘಾತವಾಯಿತು. ನಾನು ನಿಮ್ಮ ಬಳಿಗೆ ಬಂದು ಚಾಡಿಯನ್ನು ಹೇಳುತ್ತೇನೆಂದು ಮುರಾದೇವಿಗೆ ಯಾರು ಹೇಳಿದರೋ ತಿಳಿಯದು; ಆಕೆಯು ನನ್ನ ಮೇಲೆ ಸಿಟ್ಟು ಬೆಂಕಿಯಾಗಿದ್ದಾಳೆ. ಉಂಡಮನೆಯ ಗಳ ಎಣಿಸಿದ್ದರ ಪರಿಣಾಮವು ನೆಟ್ಟಗಾಗಲ್ಲ, ಆಕೆಯು ಎಲ್ಲಿ ಹೋದರೂ ನನ್ನನ್ನು ಬಿಡುವಹಾಗಿಲ್ಲ. ಇನ್ನು ಒಂದೆರಡು ದಿನಗಳಲ್ಲಿ ನಾನು ಆಕೆಯ ಹೊಟ್ಟೆಯಲ್ಲಿ ಹೊಕ್ಕು ಬೆನ್ನಲ್ಲಿಬಿರಿದು ಘೋರಕೃತ್ಯವನ್ನು ಅರಿತು ತಮ್ಮ ಮುಂದೆ ಹೇಳುತ್ತಿದ್ದೆನು. ಅಷ್ಟರಲ್ಲಿ ಯಾರೋ ಕೆಲಸವನ್ನು ಕೆಡಿಸಿಬಿಟ್ಟರು. ಹಿರಣ್ಯಗುಪ್ತನ ಹೊರತು ಉಳಿದವರಿಗಾಗಿರೂ ಸುದ್ದಿಯು ಗೊತ್ತಿಲ್ಲ. ಹೀಗಿದ್ದು ಮುರಾದೇವಿಗೆ ಯಾರು ಹೇಳಿದರೋ ತಿಳಿಯದು. ದೇವಿಯ ವಿರುದ್ಧವಾಗಿ ತಮ್ಮ ಸೇವೆಯನ್ನು ಮಾಡಹತ್ತಿರುವದರಿಂದ ತಮ್ಮ ಹೊರತು ನನಗೆ ರಕ್ಷಕರು ಯಾರೂ ಇಲ್ಲೆಂದು ಮೊರೆಬಿದ್ದಿದ್ದೇನೆ.

ಈ ಮಾತುಗಳನ್ನು ಕೇಳಿ ರಾಕ್ಷಸನು – ಸುಮತಿಕೇ, ನಿನ್ನ ಜೀವದ ಚಿಂತೆಯನ್ನು ಬಿಡು, ಎಳ್ಳಷ್ಟಾದರೂ ಹೆದರಬೇಡ; ಆದರೆ ಅರಸನ ಪ್ರಾಣಭಯದ ಬಗ್ಗೆ ನಿನಗೆ ಗೊತ್ತಿದ್ದಷ್ಟು ಹೇಳು. ಅರಸನಿಗೊದಗಿದ ಸಂಕಟವನ್ನು ದೂರಮಾಡದೆ ಹ್ಯಾಗೆ ಸುಮ್ಮನಿರಬೇಕು? ಅರ್ಥವೇ ಗೊತ್ತಾಗಿರಲೊಲ್ಲದೇಕೆ, ಅಷ್ಟೇ ಹೇಳು.

ಸುಮತಿಕೆ—''ಅಮಾತ್ಯಶ್ರೇಷ್ಠಾ, ಅರಸನ ಜೀವಕ್ಕಿಂತ ನನ್ನ ಜೀವವೇನು ಹೆಚ್ಚಿನದಲ್ಲ. ಪ್ರಭುವು ಜೀವದಿಂದಿದ್ದರೆ, ಪ್ರಜೆಗಳಾದ ನಮ್ಮೆಲ್ಲರ ಹಾರಾಟವು. ಈಗಾದರೂ ನಾನು ಮತ್ತೆ ಮುರಾದೇವಿಯ ಸಿಟ್ಟನ್ನು ಇಳಿಸಿ ಆಕೆಯ ಹೊಟ್ಟೆಯೊಳಗಿನ ಮಾತನ್ನು ಹೊರಗೆಡವೇನು; ಆದರೆ ನಡುವೆ ಇಂಥ ವಿಘ್ನಗಳು ಬಂದರೆ ನಾನೇನು ಮಾಡಲಿ? ಎರಡನೆಯ ಉಪಾಯ ವನ್ನೇನಾದರೂ ಮಾಡೆಂದು ನೀವು ಹೇಳುವಿರಿ; ಆದರೆ ಅವಕಾಶವು ದೊರೆತಷ್ಟೇ ಉಪಾಯ ಮಾಡುವದು! ನನಗಂತು ಸ್ಪಷ್ಟವಾಗಿ ಕಾಣುತ್ತದೆ, ಒಂದೆರಡು ದಿನಗಳಲ್ಲಿ ಅರಸನ.....'' ಎಂದು ಅರ್ಧ ಮಾತಾಡಿ ರಾಕ್ಷಸನು ನೋಡುತ್ತಿರಲು, ತನ್ನ ಮೈಕೂದಲು ನೆಟ್ಟಗಾದಂತೆ ಸುಮತಿಕೆಯು ಸೋಗುಮಾಡಿದಳು. ಇದನ್ನು ನೋಡಿ ರಾಕ್ಷಸನು ಚಿಂತಾಯುಕ್ತವಾದ ಔತ್ಸುಕ್ಯದಿಂದ –

ರಾಕ್ಷಸ —ಏನು, ಏನು? ಒಂದೆರಡು ದಿನಗಳಲ್ಲಿ ಏನು ಆಗುವದು?

ಸುಮತಿಕೆ—ಏನು ಹೇಳಲಿ ಅಮಾತ್ಯಶ್ರೇಷ್ಠರೇ, ಈ ಮುರಾದೇವಿಯು ವೈಧವ್ಯದ ಹಾದಿಯನ್ನು ಉತ್ಸುಕತೆಯಿಂದ ನೋಡುವಂತೆ ತೋರುತ್ತದೆ. ಒಬ್ಬ ಉಪವರಳಾದ ಕುಮಾರಿಕೆಯು ಲಗ್ನಕ್ಕಾಗಿ ಉತ್ಸುಕಳಾಗಿರುವಷ್ಟಕ್ಕಿಂತ ಮುರೆಯು ವೈಧವ್ಯಕ್ಕೆ ಹೆಚ್ಚು ಉತ್ಸುಕಳಾಗಿರುವಳು.

ರಾಕ್ಷಸ–ಸಮುತಿಕೇ, ನೀನು ಅನ್ನುತ್ತಿಯಾದರೂ ಏನು? ಹೀಗೆ ಅರಮಾತುಗಳನ್ನು ಆಡಬೇಡ, ಸ್ಪಷ್ಟವಾಗಿ ಮಾತಾಡು.

ಸುಮತಿಕೆ–ಏನು ಸ್ಪಷ್ಟ ಮಾತಾಡಲಿ? ಸ್ಪಷ್ಟ ಮಾತಾಡುವ ಸ್ಥಿತಿಯು ಒದಗುವದಕ್ಕಿಂತ ಮೊದಲೇ ವಿಘ್ನಗಳು ಬಂದರೆ ಹ್ಯಾಗೆ ಸ್ಪಷ್ಟ ಮಾತಾಡಬೇಕು?

ರಾಕ್ಷಸ—ಸುಮತಿಕೇ, ಮಹಾರಾಜರಲ್ಲಿ ನಿನ್ನ ನಿಜವಾದ ನಿಷ್ಠೆಯಿದ್ದರೆ, ಈಗಲೇ ತಿರುಗಿ ನಿನ್ನ ಒಡೆಯಳ ಬಳಿಗೆ ಹೋಗು; ಹ್ಯಾಗಾದರೂ ಮಾಡಿ ಆಕೆಯ ಸಿಟ್ಟು ಇಳಿಸಿ, ನಿಜವಾದ ಸಂಗತಿಯನ್ನು ತಿಳಿದು ನನಗೆ ಬಂದು ಹೇಳು.

ಸುಮತಿಕೆ—ಅಮಾತ್ಯಶ್ರೇಷ್ಠಾ, ಇನ್ನು ನಾನು ಹೋಗಿ ಮಾಡುವದೇನು? ಭಯಂಕರ ಕೃತ್ಯವು ಇನ್ನು ಬಹಳವಾದರೆ ಎರಡೂ-ಮೂರು ದಿನಗಳಲ್ಲಿ ಒದಗತಕ್ಕದ್ದದೆ. ಅಷ್ಟರಲ್ಲೇ ಏನಾದರೂ ಉಪಾಯವನ್ನು ಮಾಡುವಹಾಗಿದ್ದರೆ ಮಾಡತಕ್ಕದ್ದು. ನಾನು ತಿರುಗಿ ಹೋದರೆ, ಈಕೆಯು ಚಾಡಿಹೇಳುವವಳೆಂದು ತಿಳಿದು, ದೇವಿಯು ನನ್ನನ್ನು ಪ್ರತಿಬಂಧದಲ್ಲಿಡಬಹುದು. ಭಯಂಕರ ಪ್ರಸಂಗವು ಒದಗತಕ್ಕದದೆಯೆಂದು ಈ ಮೊದಲೇ ತಮ್ಮ ಮುಂದೆ ಹೇಳಿದ್ದೆನು. ಅದು ಬೇಗನೆ ಒದಗತಕ್ಕದ್ದೆಂಬದನ್ನು ತಿಳಿಸುವದಕ್ಕಾಗಿ ನಾನು ಈಗ ಬಂದದ್ದೇ ಸುದೈವವು. ಅಮಾತ್ಯವರ್ಯಾ, ಸ್ಪಷ್ಟವಾಗಿ ಹೇಳುತ್ತೇನೆ. ಏನಾದರೂ ಉಪಾಯ ಮಾಡುವ ಹಾಗಿದ್ದರೆ ಈವೊತ್ತು ಬಹಳವಾದರೆ ನಾಳೆ ಸಂಜೆಯ ಒಳಗಾಗಿ ಮಾಡಬೇಕು. ನನ್ನಂಥ ಯಃಕಶ್ಚಿತ ದಾಸಿಯು ನಿಮ್ಮಂಥ ರಾಜಕಾರಣಪಟುಗಳಿಗೆ ಉಪಾಯವನ್ನು ಸೂಚಿಸುವದೆಂದರೆ, ಸಾಹಸವೇ ಸರಿ; ಆದರೂ ನನಗೆ ತಿಳಿದದ್ದನ್ನು ಹೇಳುತ್ತೇನೆ. ನಾಳೆ ಸಂಜೆಯ ಒಳಗಾಗಿ ಮಹಾರಾಜರನ್ನು ಮುರೆಯ ಮಂದಿರದಿಂದ ಕರೆದೊಯ್ಯತಕ್ಕದ್ದು. ಅದು ಸಾಧಿಸದಿದ್ದರೆ, ಪಾಟಲೀಪುತ್ರವು ನಿಶ್ಚಯವಾಗಿ ಅನಾಥವಾಯಿತೆಂದು ತಿಳಿಯಿರಿ. ಇದಕ್ಕೂ ಹೆಚ್ಚು ನಾನು ಇನ್ನೇನು ಹೇಳಲಿ? ಇಷ್ಟಾಗಿಯೂ ನಿಮ್ಮ ಮಾತಿನಂತೆ ನಾನು ನನ್ನ ಒಡೆಯಳ ಬಳಿಗೆ ಹೋಗುತ್ತೇನೆ. ವಿಶೇಷ ಸಂಗತಿಯು ತಿಳಿದರೆ ಕೂಡಲೇ ಬಂದು ಹೇಳುವೆನು, ಎಂದು ನುಡಿದು, ಸುಮತಿಕೆಯು ರಾಕ್ಷಸನ ಆಜ್ಞೆಯ ಹಾದಿಯನ್ನು ನೋಡದೆ ಹೊರಟು ಹೋದಳು.

ಸುಮತಿಕೆಯ ಮಾತಿನಕಡೆಗೆ ರಾಕ್ಷಸನ ಲಕ್ಷವು ಪೂರ್ಣವಾಗಿ ಇದ್ದಂತೆ ತೋರಲಿಲ್ಲ. ಆಕೆಯಂತು ಮೇಲೆ ಹೇಳಿದಂತೆ ಮಾತಾಡಿ ಹೇಳದೆ-ಕೇಳದೆ ಹೊರಟು ಹೋದಳು. ಆಕೆಯು ಹೋದದ್ದು ತಿಳಿಯಲಿಕ್ಕೇ ರಾಕ್ಷಸನಿಗೆ ಬಹಳ ಹೊತ್ತು ಬೇಕಾಯಿತು. ದಾಸಿಯು ಅಪ್ಪಣೆಯ ಹೊರತು ಹೋದದ್ದನ್ನು ಪ್ರತಿಹಾರಿಯಿಂದ ತಿಳಿದು, ಆತನು ಯಾವ ಮಾತೂ ಆಡದೆ ವಿಚಾರಮಗ್ನನಾಗಿ ಕುಳಿತುಕೊಂಡನು. ಈವೊತ್ತಿನವರೆಗೆ ನಿಷ್ಕಂಟಕವೆಂದು ತಿಳಿದಿದ್ದ ಮಗಧ ರಾಜ್ಯದ ಮೇಲೆ ಏನೋ ಅರಿಷ್ಟವು ಪ್ರಾಪ್ತವಾಯಿತೆಂದು ಆತನಿಗೆ ತೋರಹತ್ತಿತು. ನಂದ ವಂಶವು ಪರಿಶುದ್ಧವಾಗಿ ಉಳಿಯಬೇಕೆಂದು ತಾನು ಶೂದ್ರಸ್ತ್ರೀಯನ್ನು ರಾಜಮಹಿಷಿಯಾಗ ಗೊಡಲಿಲ್ಲ! ಸಿಂಹಾಸನದ ಮೇಲೆ ಶುದ್ಧವಂಶವೇ ಉಳಿಬೇಕೆಂದು ಆಕೆಯ ಹೊಟ್ಟೆಯಲ್ಲಿ ಹುಟ್ಟಿದ್ದ ಕೂಸನ್ನು ನಾಶಗೊಳಿಸುವ ವ್ಯವಸ್ಥೆಯನ್ನು ಮಾಡಿದೆನು; ಅದರೆ ಈಗ ಅದೇ ವೃಷಲಿಯೇ, ಮುರೆಯೇ, ಅರಸನ ಅತ್ಯಂತ ಪ್ರೀತಿಗೆ ಪಾತ್ರಳಾಗಿ ನನಗೂ ಮಣೆಯ ದಾಗಿದ್ದಾಳೆ. ರಾಜನೊಡನೆ ಭಾಷಣವಂತು ಇರಲಿ, ರಾಜನ ದರ್ಶನವೂ ನನಗೆ ದುರ್ಲಭ ವಾಯಿತು. ಮುಖ್ಯಾಮಾತ್ಯನ ಹಾಗು ಅರಸನ ದರ್ಶನಕ್ಕೂ ಕೂಡ ತೊಂದರೆಗಳು ಬರಹತ್ತಿದ ರಾಜ್ಯಕ್ಕೆ ನಾಶಕಾಲವು ಒದಗಿತೆಂದು ತಿಳಿಯಬೇಕಾಗುವದು. ಹ್ಯಾಗಾದರೂ ಮಾಡಿ ಅರಸನನ್ನು

ಮುರೆಯ ಮಂದಿರದಿಂದ ಕರೆತರತಕ್ಕದ್ದು. ಆದರೆ ಅದಕ್ಕೆ ಏನು ಉಪಾಯಮಾಡಬೇಕಾದೀತು? ಹಿಂದಕ್ಕೆ ರಾಜದರ್ಶನಕ್ಕಾಗಿ ಪರಚಕ್ರದ ಆಗಮನದ ನೆವವನ್ನು ಮುಂದೆ ಮಾಡಿದ್ದೆನು. ಈಗ ಯಾವ ನೆವವನ್ನು ಮುಂದೆ ಮಾಡಬೇಕು? ಎಂದು ಯೋಚಿಸಿ, ಸಂಶಯ ಪಿಶಾಚವು ಪೂರಾ ಬಡಕೊಂಡಿದ್ದ ರಾಕ್ಷಸನು ಒಂದು ಪತ್ರವನ್ನು ಬರೆದು, ತನ್ನ ಒಬ್ಬ ನಂಬಿಗೆಯ ಸೇವಕನ ಸಂಗಡ ಅದನ್ನು ಧನಾನಂದನ ಕಡೆಗೆ ಕಳಿಸಿದನು.

ಏನು ಚಮತ್ಕಾರವೋ ತಿಳಿಯದು. ಈದಿನ ರಾಕ್ಷಸನ ಪತ್ರವು ಯಾವತೊಂದರೆಯೂ ಇಲ್ಲದೆ ಮೊದಲೇ ಗೊತ್ತುಮಾಡಿದಂತೆ ನೆಟ್ಟಗೆ ಧನಾನಂದನ ಕೈಗೆ ಸೇರಿತು. ಅರಸನು ಅದನ್ನು ಒಡೆದು ಓದುತ್ತಿರಲು, ಮುರೆಯು ಆರ್ಯಪುತ್ರಾ, ಯಾರ ಪತ್ರವಿದು? ಒಳ್ಳೇಯ ಜರೂರಿಯ ದಿದ್ದಂತೆ ತೋರುತ್ತದೆ, ಎಂದು ಕೇಳಲು, ಅರಸನು–ಪ್ರೀಯೇ, ಅಂಥ ಜರೂರಿಯ ಪ್ರಸಂಗವೇನೂ ಇಲ್ಲ, ಅಮಾತ್ಯರಾಕ್ಷಸನು ಪತ್ರವನ್ನು ಬರೆದಿದ್ದಾನೆ. ಪ್ರತ್ಯಕ್ಷ ಬಂದರೆ, ದರ್ಶನಕ್ಕೆ ತೊಂದರೆಯಾಗುವದೆಂತಲೂ, ಮನಬಿಚ್ಚಿ ಮಾತಾಡಲಿಕ್ಕೆ ಅನುಕೂಲವಾಗುವ ದಿಲ್ಲೆಂತಲೂ ಆತನ ತಿಳವಳಿಕೆಯಾಗಿರುವಂತೆ ತೋರುತ್ತದೆ. ಅಗತ್ಯವಾಗಿ ವಿಚಾರಿಸುವ ಕೆಲಸಗಳಿವೆಯಂತೆ. ದಿನಕ್ಕೊಮ್ಮೆ ತಾಸೆರಡು–ತಾಸಾದರೂ ಸಭೆಗೆಬಂದು ಜನರಿಗೆ ದರ್ಶನವನ್ನಾದರೂ ಕೊಡದಿದ್ದರೆ, ರಾಜಕಾರ್ಯದಲ್ಲಿ ತೊಂದರೆಗಳು ಉದ್ಭವಿಸುವವೆಂತಲೂ, ಪರರಾಜರ ದುರಾಲೋಚನೆಗಳಿಗೆ ಅನುವು ದೊರೆಯುವದೆಂತಲೂ ಅಮಾತ್ಯನು ಬರೆದಿರುತ್ತಾನೆ. ರಾಜ್ಯಕಾರಭಾರವನ್ನು ಸುಮಾಲ್ಯನ ಸಹಾಯದಿಂದ ನಿಮ್ಮ ಮನಸ್ಸಿಗೆ ಬಂದಂತೆ ನಡಿಸಿರೆಂದು ಎಷ್ಟುಸಾರೆ ನಾನು ಹೇಳಿದರೂ, ಅಮಾತ್ಯನು ಕೇಳುವದಿಲ್ಲ; ಮತ್ತೂ ನನಗೆ ದುಂಬಾಲು ಬೀಳುತ್ತಾನೆ ನಾನಂತು ಅರಗಳಿಗೆಯಾದರೂ ನಿನ್ನನ್ನು ಅಗಲಿ ಇರಲಾರೆನು. ಹೋಗಲಿ, ಏನು ಹಾಳು ಪತ್ರ! ಈಗ ಬರುವದಕ್ಕೆ ಕೂಡುವದಿಲ್ಲೆಂದು ಅಮಾತ್ಯನಿಗೆ ಪತ್ರಮುಖದಿಂದ ತಿಳಿಸಿಬಿಡುವೆನು, ಎಂದನು. ಅದಕ್ಕೆ ಮುರೆಯು–ಆರ್ಯಪುತ್ರರೇ, ಇತ್ತಿತ್ತ ಅಮಾತ್ಯರಾಕ್ಷಸರ ಪತ್ರಗಳು ಮೇಲೆ ಮೇಲೆ ಬರಹತ್ತಿವೆ. ಮಹಾರಾಜರು ನಾಲ್ಕುದಿನ ನನ್ನ ಬಳಿಯಲ್ಲಿದ್ದದ್ದು ಅವರಿಗೆ ಸೇರಿಕೆಯಿಲ್ಲವೆಂಬಂತೆ ತೋರುತ್ತದೆ. ಪ್ರಭುಗಳ ದರ್ಶನಕ್ಕೆ ಅಮಾತ್ಯನಿಗೂ ನನ್ನಿಂದ ಪ್ರತಿಬಂಧವಾಗುತ್ತಿದೆಯೋ? ಬರುವದು ಮನಸ್ಸಿನಲ್ಲಿರದಿದ್ದರೆ ಏನಾದರೂ ನೆವಹೇಳುವದು! ನನ್ನ ಮನೆಯಲ್ಲಿ ಮಾತಾಡಲಿಕ್ಕೆ ಅಮಾತ್ಯರಾಜರ ಮನಸ್ಸಿಗೆ ಹ್ಯಾಗೆ ಪ್ರಶಸ್ತವಾದೀತು? ಅದು ಹೇಗೇ ಇರಲಿ, ತಾವು ರಾಜ್ಯಕಾರಭಾರದಲ್ಲಿ ದುರ್ಲಕ್ಷ ಮಾಡುವದು ಸರಿಯಲ್ಲೆಂತಲೂ, ಆಗಾಗ್ಗೆ ದರ್ಬಾರಕ್ಕೆ ಹೋಗುತ್ತಿರಬೇಕೆಂತಲೂ ನಾನು ಎಷ್ಟೋಸಾರೆ ಪ್ರಭುಗಳಿಗೆ ಅರಿಕೆಮಾಡಿಕೊಂಡಿರುತ್ತೇನೆ. ಈಗಾದರೂ ಅದಕ್ಕೆ ನನ್ನ ಪ್ರತಿಬಂಧವಿಲ್ಲ, ಅಮಾತ್ಯರ ಪತ್ರದಂತೆ ರಾಜಸಭೆಗೆ ಅವಶ್ಯವಾಗಿ ಹೋಗಬಹುದು; ಆದರೆ ಅಪೂಪದಲ್ಲಿ ವಿಷಹಾಕಿ ಪ್ರಭುಗಳ ಪ್ರಾಣವನ್ನು ಹಿಂಡಲಿಕ್ಕೆ ಹೊಂಚುಹಾಕಿದ್ದ ನೀಚರು ಸದ್ಯಕ್ಕೆ ಉತ್ಪನ್ನವಾಗಿರುವದರಿಂದ ಪ್ರಭುಗಳನ್ನು ಅಗಲಿ ಇರಲಿಕ್ಕೆ ನನ್ನ ಮನಸ್ಸು ಮಾತ್ರ ಧೈರ್ಯಗೊಳ್ಳುವದಿಲ್ಲ, ತಾವು ಸುಖದಿಂದಿದ್ದರೇ ನನ್ನ ಬಾಳು. ಇಂಥ ದುರಾಲೋಚನೆಗಳು

ಅಮಾತ್ಯರಾಕ್ಷಸರಲ್ಲಿ ಉತ್ಪನ್ನವಾಗುವವೆಂದು ನಾನು ಹೇಳುವದಿಲ್ಲ; ಆದರೂ ಈಗಿನ ಕಾಲದಲ್ಲಿ ಪ್ರಭುಗಳ ಸಂರಕ್ಷಣವನ್ನು ಹೆಚ್ಚು ಜಾಗ್ರತೆಯಿಂದ ಮಾಡಬೇಕಾಗುತ್ತದೆ. ಪ್ರಜೆಗಳಿಗೆ ದರ್ಶನವನ್ನೂ ಕೊಡದೆ, ಮಹಾರಾಜರು ಸದಾ ರಾಣೀವಾಸದಲ್ಲಿರುವದೂ ಹಿತಕರವಲ್ಲ. ಮುರಾದೇವಿಯು ಅರಸನನ್ನು ಮರುಳುಮಾಡಿ ನಮಗೆ ಆತನ ದರ್ಶನವೂ ಆಗದಂತೆ ಮಾಡಿದಳೆಂದು ಎಲ್ಲರೂ ನನ್ನನ್ನು ದ್ವೇಷಿಸಬಹುದು. ಒಟ್ಟಿಗೆ ಪ್ರಸಂಗವು ಇಕ್ಕಟ್ಟಿನದು; ಇತ್ತ ಬಿದ್ದರೆ ಕೆರೆ, ಅತ್ತಬಿದ್ದರೆ ಭಾವಿ ಎಂಬಂತಾಗಿದೆ.

ಧನಾನಂದ—ಪ್ರಿಯೇ, ಇದರಲ್ಲಿ ಇಕ್ಕಟ್ಟಿನ ಪ್ರಸಂಗವೇನು? ಏನಾದರೂ ಇದ್ದೀತು ಕೆಲಸ; ಅಂತ ಮಹತ್ವದ ಕೆಲಸವಿದ್ದರೆ ಪತ್ರಮುಖದಿಂದ ತಿಳಿಸಲಿಕ್ಕೆ ನನಗೆ ಬರುವದಿಲ್ಲೇನು? ಅದಕ್ಕೆ ಸಮಕ್ಷ ಬರುವದೇಕೆ?

ಮುರಾದೇವಿ—ಛೇ. ಛೇ. ಛೇ. ಆರ್ಯಪುತ್ರಾ, ತಾವು ಹಾಗೆ ಮಾಡತಕ್ಕದ್ದಲ್ಲ. ತಮ್ಮ ಮನಸ್ಸಿನಲ್ಲಿ ಇಲ್ಲದಿದ್ದರೂ ನನ್ನ ಪ್ರಾರ್ಥನೆಯನ್ನು ನಡಿಸಿ ತಾವು ರಾಕ್ಷಸನಿಗೆ ದರ್ಶನ ಕೊಡತಕ್ಕದ್ದು. ಶಾಂತಮನಸ್ಸಿನಿಂದ ರಾಕ್ಷಸನ ವಿಚಾರಗಳನ್ನು ಕೇಳಿಕೊಳ್ಳುವದರಲ್ಲಿ ಬೇಸರ ಮಾಡಬಾರದು. ತಾವು ದರ್ಬಾರಕ್ಕೆ ಹೋಗದಿದ್ದರೂ ಚಿಂತೆಯಿಲ್ಲ ಇಲ್ಲಿಯೇ ಇದ್ದು ರಾಕ್ಷಸನನ್ನು ಮೇಲೆ ಮೇಲೆ ಕರಿಸಿ ರಾಜಕಾರಣಗಳ ವ್ಯವಸ್ಥೆ ಮಾಡಲಿಕ್ಕೆ ಪ್ರತಿಬಂಧವೇನಿದೆ? ತಾವು ಇಲ್ಲಿಂದ ಬೇರೆಕಡೆಗೆ ಹೋಗಬಾರದೆಂಬದೇ ನನ್ನ ಆಗ್ರಹದ ವಿನಂತಿಯು. ತಮ್ಮ ಪ್ರಾಣ ರಕ್ಷಣೆಯ ಚಿಂತೆಯು ನನಗೆ ವಿಶೇಷವಾಗಿರುತ್ತದೆ. ಹೊರಗೆ ಶತ್ರುಗಳು ಬಹು ಜನರಿರುವರು. ಅಪೂಪದ ವೃತ್ತಾಂತವು ತಮಗೆ ಗೊತ್ತೇ ಇರುವದು. ಅಮಾತ್ಯ ರಾಕ್ಷಸನು ತಮ್ಮನ್ನು ಈ ಸ್ಥಾನದಿಂದ ಹೊರಡಿಸಿಕೊಂಡು ಹೋಗಲು ಯತ್ನಿಸುವಲ್ಲಿ ಸಂಶಯವಿಲ್ಲ. ಅಂಥ ಪ್ರಸಂಗದಲ್ಲಿ ತಾವು ಎಚ್ಚರದಿಂದ ಇರತಕ್ಕದ್ದು. ತಮ್ಮ ಪ್ರಾಣ ರಕ್ಷಣಕ್ಕಾಗಿ ನನ್ನ ಜೀವದ ಹಂಗು ಇಡೆನು. ಆರ್ಯಪುತ್ರರೇ, ತಾವು ಸುರಕ್ಷಿತವಾಗಿರುವವರೆಗೇ ನನ್ನ ವೈಭವವು. ತಮ್ಮ ಜೀವಕ್ಕೆ ಅಪಾಯ ಒದಗಿದಲ್ಲಿ, ನನ್ನ ಶತ್ರುಗಳು ನನ್ನನ್ನು ಜೀವದರಿಸಿ ಸುಡುವರೋ, ಹದ್ದು-ಕಾಗೆಗಳಿಂದ ಹರಿಸಿ ತಿನಿಸುವರೋ ಏನು ಮಾಡುವರೆಂಬದನ್ನು ನಾನು ಹೇಳಲಾರೆನು.

ಧನಾನಂದ—ದೇವೀ, ಮುರೇ, ಇದೇನು ನಿನ್ನ ಹೇಳೋಣವು! ಪ್ರತ್ಯಕ್ಷ ಅಪೂಪದಲ್ಲಿ ವಿಷಕೂಡಿಸಿ ಕಳಿಸಿದ್ದನ್ನು ನೋಡಿರಲು, ನಾನು ಎಚ್ಚರಗೇಡಿಯಾಗಿ ನಡೆಯಬಹುದೇ? ಅಪರಾಧಿಗಳನ್ನು ಇಷ್ಟು ಹೊತ್ತಿಗೆ ತಲೆಹೊಡಿಸುತ್ತಿದ್ದೆನು; ಆದರೆ ನಿನ್ನ ಕೋಮಲ ಮನಸ್ಸು ನೊಂದೀತೆಂದು ಕೈ ಕಾದಿದ್ದೇನೆ. ಒಳ್ಳೇದು, ಈಗ ನೀನು ಅನ್ನುವದೇನು? ಅಮಾತ್ಯನನ್ನು ಕರಿಸಿಕೊಂಡು ರಾಜಕಾರಣಗಳನ್ನು ವಿಚಾರಿಸಬೇಕೆನ್ನುತ್ತೀಯಾ? ಆಗಲಿ, ಯಾರವರಲ್ಲಿ? ಅಮಾತ್ಯನ ಸೇವಕನಿಗೆ ಹೇಳಿರಿ, ಅಮಾತ್ಯರು ದರ್ಶನಕ್ಕಾಗಿ ಬರಲಿ; ಅವರನ್ನು ಕಾಣಲು ನಾವು ಸಿದ್ಧರಿರುತ್ತೇವೆ.

ಸೇವಕನು ಅಮಾತ್ಯನ ಮನೆಗೆ ಹೋಗಿ ಮಹಾರಾಜರು ಹೇಳಿದ ಈ ಬಾಯಿಮಾತನ್ನು ಹೇಳಲು, ಅಮಾತ್ಯನು ತಡಮಾಡದೆ ರಾಜ ದರ್ಶನಕ್ಕೆ ಹೋದನು. ತಕ್ಕ ಆದರೋಪಚಾರಗಳೂ,

ಯೋಗಕ್ಷೇಮ ವಿಚಾರಣೆಯೂ ಆದಬಳಿಕ ರಾಕ್ಷಸನು ಅರಸನಿಗೆ–ಮಹಾರಾಜರೇ, ಒಂದು ವಿಜ್ಞಾಪನೆಯನ್ನು ಮಾಡಿಕೊಳ್ಳಬೇಕೆನ್ನುತ್ತೇನೆ. ದಯವಿಟ್ಟು ಅದನ್ನು ಕೇಳಿಕೊಂಡರೆ... ಎಂದು ನುಡಿಯುತ್ತಿರಲು, ಧನಾನಂದನು ನಡುವೇ ಬಾಯಿಹಾಕಿ–ಹೋ, ಹೋ, ಹೇಳತಕ್ಕದ್ದನ್ನು ತಡೆಯಿಲ್ಲದೇ ಹೇಳಿರಿ, ಸಂಕೋಚವೇಕೆ? ನನ್ನ ಅವಶ್ಯಕತೆಯಿರುವ ರಾಜಕಾರಣಗಳನ್ನು ಕೇಳಿಕೊಳ್ಳುವದಕ್ಕೆ ನಾನೆಂದೂ ಉದಾಸೀನ ಮಾಡುವವನಲ್ಲ; ಆದರೆ ನಾನಿಲ್ಲದಿದ್ದರೂ ನಡೆಯ ಬಹುದಾದ ಕೆಲಸವನ್ನು ಮಾತ್ರ ನನ್ನ ತನಕ ತರಬಾರದು. ಹೂ, ಹೇಳಿರಿ, ನೀವು ಹೇಳತಕ್ಕ ರಾಜಕಾರಣವಾವುದು?

ರಾಕ್ಷಸ—ಪ್ರಭುಗಳೇ, ನನ್ನ ವಿಜ್ಞಾಪನೆಯಿಷ್ಟೇ, ತಾವು ರಾಜಸಭೆಗೆ ಬರುವದಿಲ್ಲ, ರಾಜ್ಯಭಾರದ ಕಡೆಗೆ ಲಕ್ಷವನ್ನು ಪೂರಯಿಸುವದಿಲ್ಲ. ಇದನ್ನು ಮಗಧ ರಾಜ್ಯದ ಶತ್ರುಗಳು ತಿಳಿದು, ಈಗ ಮಗಧದೇಶದಲ್ಲಿ ಅರಾಜಕವು ಉಂಟಾಗಿದೆಯೆಂದು ಭಾವಿಸಿರುವರು. ಪ್ರಜೆಗಳು ಕಲ್ಪನೆಯಾದರೂ ಹಾಗೆಯೇ ಆಗಹತ್ತಿದೆ. ಕಾರಣ ಪ್ರಭುಗಳು ದಿನಾಲು ಒಮ್ಮೆಯಾದರೂ ರಾಜ ಸಭೆಗೆ ಬಂದು ಪ್ರಜೆಗಳ ದೂರುಗಳಿಗೂ, ಬೇಡಿಕೆಗಳಿಗೂ ಕಿವಿಗೊಡಬೇಕೆಂದು ಪ್ರಾರ್ಥಿಸುತ್ತೇನೆ. ಇಂದು ಮತ್ತು ನಾಳೆ ಮುಹುರ್ತವು ನೆಟ್ಟಗಿರುವದರಿಂದ ಚಿತ್ತಕ್ಕೆ ಬಂದಾಗ ದರ್ಬಾರಕ್ಕೆ ದಯಮಾಡಿಸಬೇಕು.

ರಾಕ್ಷಸನ ಈ ಮಾತಗಳನ್ನು ಕೇಳಿ ಅರಸನು ಗಹಗಹಸಿ ನಕ್ಕು—''ಅಮಾತ್ಯ ಶ್ರೇಷ್ಠಾ, ನಾನು ರಾಜ್ಯಕಾರಭಾರವನ್ನು ನಿಮಗೂ ಸುಮಾಲ್ಯನಿಗೂ ಒಪ್ಪಿಸಿ ವಿಶ್ರಾಂತಿಯನ್ನು ಹೊಂದಿತ್ತಿರಲು, ಸುಮ್ಮನೆ ನಡನಡುವೆ ತ್ರಾಸ ಕೊಡುತ್ತೀರಿ. ಮಹತ್ವದ ಕಾರ್ಯವಿದ್ದಾಗ ಮಾತ್ರ ನನ್ನನ್ನು ಕೇಳಿರೆಂದು ಈ ಮೊದಲೇ ಹೇಳಿದ್ದೇನೆ. ನಿಮ್ಮ ಮಾತಿನಂತೆ ದಿನಾಲು ರಾಜಸಭೆಗೆ ಬರುವದು ನನ್ನಿಂದಾಗುವುದಿಲ್ಲ, ನನಗೆ ವಿಶ್ರಾಂತಿಯು ಬೇಕಾಗಿದೆ, ಎನ್ನಲು ರಾಕ್ಷಸನು–ದೊರೆಗಳೇ, ತಮಗೆ ವಿಶ್ರಾಂತಿಯು ಬೇಕೆನ್ನುವದನ್ನು ಸೇವಕನಾದ ನಾನು ಅರಿತಿದ್ದೇನೆ. ದಿನಾಲು ಒಂದೆರಡು ಗಳಿಗೆಯಾದರೂ ರಾಜಸಭೆಗೆ ಬಂದರೆ, ದೊಡ್ಡ ಕಾರ್ಯವಾಗುವದೆಂದು ವಿಜ್ಞಾಪನೆ ಮಾಡಿಕೊಂಡೆನು. ದಯಮಾಡಿ ನಾಳೆ ಬೆಳಗಿನಲ್ಲಾದರೂ ದರ್ಬಾರಕ್ಕೆ ಬರುವ ಕೃಪೆಮಾಡಬೇಕು, ಎಂದನು. ಅದಕ್ಕೆ ಅರಸನು–ಅಮಾತ್ಯಶ್ರೇಷ್ಠಾ, ನಿಮ್ಮ ಆಗ್ರಹವೇ ಇದ್ದರೆ, ನಾಳೆ ಬೆಳಗಿನಲ್ಲಿ ದರ್ಬಾರಕ್ಕೆ ಬರುವ ವಿಚಾರ ಮಾಡುವೆನು. ದಿನಾಲು, ಅಥವಾ ಆಗಾಗ್ಗೆ ದರ್ಬಾರಕ್ಕೆ ಬರುವ ತಾಪವು ನನಗೆ ಬೇಡ. ನಾನು ಪ್ರೀಯಳಾದ ಮುರಾದೇವಿಯನ್ನು ಕೇಳಿ, ಏನೆನ್ನುವದನ್ನು ಹೇಳಿ ಕಳಿಸುವೆನು.

ಧನಾನಂದನು ಈ ಮೇರೆಗೆ ನುಡಿಯುತ್ತಿರಲು, ಅಲ್ಲೇ ಮರೆಗೆ ಕುಳಿತಿದ್ದ ಮುರೆಯು ಗಟ್ಟಿಯಾಗಿ– ರಾಜಕಾರ್ಯಕ್ಕೆ ನಾನು ಅಡ್ಡ ಹ್ಯಾಗೆ ಬಂದೇನು? ತಾವು ನಾಳಿಗೇಯಾಕೆ? ದಿನಾಲು ದರ್ಬಾರಕ್ಕೆ ಹೋಗಿ ರಾಜಕಾರಣಗಳನ್ನು ವಿಚಾರಿಸಬೇಕೆಂದು ಎಷ್ಟೋಸಾರೆ ಹೇಳಿಕೊಂಡಿದ್ದೇನೆ, ಎಂದು ನುಡಿದಳು. ಅದನ್ನು ಕೇಳಿ ಅರಸನು – ಅಹಾ! ಇರುವದೈ ಒಪ್ಪಿಗೆ! ಮಂತ್ರಿವರಾ, ನಾನು ನಿಶ್ಚಯವಾಗಿ ನಾಳೆ ಮುಂಜಾವಿನಲ್ಲಿ ರಾಜಸಭೆಗೆ ಬರುವೆನು, ಎಂದು

ನುಡಿದನು. ಅದನ್ನು ಕೇಳಿ ರಾಕ್ಷಸನಿಗೆ ಪರಮಾನಂದವಾಯಿತು. ಅರಸನು ತಿರುಗಿ ಮುರೆಯು ಮಂದಿರಕ್ಕೆ ಹೋಗದಂತೆ ಮಾಡಬೇಕೆಂದು ರಾಕ್ಷಸನು ಹವಣಿಸುತ್ತಿದ್ದನು. ಒಮ್ಮೆ ಧನಾನಂದನು ಮುರೆಯ ಬಲೆಯೊಳಗಿಂದ ಪಾರಾಗಿ ತನ್ನಬಳಿಗೆ ಬಂದರೆ ಸಾಕು, ಅಲ್ಪ ಕಾಲದಲ್ಲಿ ತನ್ನ ವಕ್ತೃತ್ವ ಶಕ್ತಿಯಿಂದ, ಅಥವಾ ಮಹತ್ವದ ಕೆಲಸಗಳನ್ನು ಒಂದರಹಿಂದೊಂದು ಅರಸನ ಮುಂದೆ ಇಟ್ಟು ಆತನ ಮನಸ್ಸನ್ನು ತಿರುಗಿಸಬಹುದೆಂದು ಆತನು ನಂಬಿದ್ದನು. ಅರಸನು ಒಂದೆರಡು ದಿನ ತನ್ನ ಬಳಿಯಲ್ಲಿದ್ದರೆ ಸಾಕು, ಅಷ್ಟರಲ್ಲಿ ಮುರೆಯ ವಿರುದ್ಧವಾದ ಮಾತುಗಳು ಆತನ ಕಿವಿಗೆ ಮುಟ್ಟುವಂತೆ ಮಾಡಿ, ಮುರೆಯ ಬಗ್ಗೆ ಆತನಲ್ಲಿ ಅನಾದರವನ್ನು ಉಂಟು ಮಾಡುವೆನೆಂದು ಆ ಮುತ್ಸದ್ದಿಯು ಭಾವಿಸಿದ್ದನು. ಆದರೆ ಆ ಅಕೃತಿಮ ಸ್ವಾಮಿನಿಷ್ಠೆಯ ಶುದ್ಧಾಂತಃಕರಣದ ರಾಕ್ಷಸನಿಗೆ, ಕುಟಿಲಹೃದಯದ ಚಾಣಕ್ಯ–ಮುರೆಯರು ಕೂಡಿ ನಂದವಂಶದವರ ಕೊರಳಿಗೆಲ್ಲ ಒಡ್ಡಿದ ಉರುಲಿನ ಗೊತ್ತು ಹ್ಯಾಗೆ ಹತ್ತಬೇಕು? ಕಾರ್ಯವು ಅರ್ಧ ಸಾಧಿಸಿತೆಂದು ರಾಕ್ಷಸನು ಆನಂದಪಟ್ಟದ್ದು ಭ್ರಮೆಯೆಂಬದನ್ನು ವಾಚಕರು ಮುಂದೆ ಕಂಡುಕೊಳ್ಳಬಹುದು; ಯಾಕಂದರೆ, ಈ ಆನಂದದಿಂದ ರಾಕ್ಷಸನು ಮಾಡುವ ಕಾರ್ಯವೇ ನಂದಘಾತೋಪಕ್ರಮವಾಗಿ ಪರಿಣಮಿಸಿದ್ದು ಮುಂದೆ ಗೊತ್ತಾಗಬಹುದು.

ಮನಸ್ಸಿನ ಚಾಂಚಲ್ಯ

ರಾಕ್ಷಸನು ಹೋದಕೂಡಲೇ ಮುರೆಯು ಬಹು ಪ್ರೇಮದಿಂದ ನಗುತ್ತನಗುತ್ತ, ಕಣ್ಣು ಹೊರಳಿಸುತ್ತ ಅರಸನ ಬಳಿಗೆ ಬಂದು – ಏನು ಚಮತ್ಕಾರವಪ್ಪಾ ಇದು! ನೋಡುವವರಿಗೆ ನಾನೇ ಇಲ್ಲಿಂದ ತಮ್ಮನ್ನು ಹೊರಗೆ ಹೋಗಗೊಡುವದಿಲ್ಲೆಂಬಂತೆ ಕಾಣಬೇಕು, ರಾಜಕಾರ್ಯ ಗಳನ್ನು ಮಾಡುವದಕ್ಕೂ ತಮಗೆ ನಾನು ಬೇಡೆನ್ನುವೆನೆ? ಜನರ ತಿಳುವಳಿಕೆಯು ಹೀಗೆಯೇ ಆಗಿರುವದೆಂದು ನಾನು ಕೇಳಿರುತ್ತೇನೆ, ಅನ್ನಲು, ಅರಸನು ಒಳ್ಳೆಯ ಪ್ರೇಮದಿಂದ ಆಕೆಯ. ಸುಂದರವಾದ ಕೇದಗಿಯ ಬಣ್ಣದ ಗಲ್ಲಕ್ಕೆ ಬಟ್ಟಿನಿಂದ ಹೊಡೆದು ನಗುತ್ತ– ಜನರೇನು ಸುಳ್ಳೇ ಅನ್ನುವರೇ? ಎಂದು ಕೇಳಿದೆನು. ಆಗ ಮುರಾದೇವಿಯು ಅರಸನ ಪ್ರೇಮದ ತಾಡಣದಿಂದ ಆನಂದಭರಿತಳಾಗಿ ಸಿಟ್ಟಿನ ಸೋಗಿನಿಂದ –ನೀವೂ ಹೀಗೆ ಅನ್ನಹತ್ತಿದ ಬಳಿಕ ಜನರು ಅನ್ನುವಲ್ಲಿ ಆಶ್ಚರ್ಯವೇನು? ಏನು, ತಮಗೆ ನಾನು ರಾಜಸಭೆಗೆ ಹೋಗಬೇಡಿ ರೆನ್ನುವೆನೆ? ರಾಜಕಾರಭಾರವನ್ನು ನೋಡಬೇಡಿರೆನ್ನುವೆನೆ? ನಾನು ಹಾಗೆ ಎಂದು ಅಂದೆನು? ಎಂದು ಕೇಳಿದಳು. ಆಗ ಅರಸನು – ಒಮ್ಮೆ ಯಾಕೆ? ಹತ್ತುಸಾರೆ ಬೇಡೆಂದು ಹೇಳಿರುತ್ತೀ. ಒಮ್ಮೆ ಹೇಳಿದ್ದರೆ, ಇಂಥ ದಿವಸವೇ ಹೇಳಿದೆಯೆಂದು ಹೇಳಬಹುದಾಗಿತ್ತು; ಆದರೆ ಒಮ್ಮೆಯಲ್ಲ, ಹತ್ತುಸಾರೆಯಲ್ಲ, ಅಸಂಖ್ಯಸಾರೆ ಬೇಡೆಂದು ಹೇಳಿರಲು, ಇಂಥ ದಿವಸವೇ ಅಂದೆಯೆಂದು ಹ್ಯಾಗೆ ಹೇಳಬೇಕು?

ಅರಸನ ಈ ಮಾತುಗಳನ್ನು ಕೇಳಿ ಮುರೆಯು ಮತ್ತಿಷ್ಟು ಸಿಟ್ಟಾದಂತೆ ಸೋಗುಮಾಡಿದಳು. ಕೂಡಲೇ ಆಕೆಯ ಎರಡೂ ಕಣ್ಣುಗಳೊಳಗಿಂದ ಗಂಗಾ–ಯಮುನೆಗಳ ಪ್ರವಾಹಗಳು ಹೊರಸೂಸಿ ಹರಿಯಹತ್ತಿದವು. ಆಗ ಆಕೆಯು ಅರಸನಿಗೆ–ಹೌದು, ತಮ್ಮ ಪ್ರಾಣಕ್ಕೆ ಅಪಾಯ ಒದಗೀತೆಂದು ನಾನು ಬೇಡೆಂದು ಹೇಳಿದೆನು. ನನ್ನ ಶ್ವೇತಾಂಬರಿಯ ಮೃತ್ಯುವಿನ ಕಾರಣವು ತಿಳಿಯುವವರೆಗೆ ನನಗೆ ಹೀಗಾಗುವದೇ ಸರಿ. ಅಮಾತ್ಯರಾಕ್ಷಸನ ಮನಸ್ಸಿನಲ್ಲಿ ಇಂಥ ದುರ್ವಿಚಾರಗಳು ಇರಲಿಕ್ಕಿಲ್ಲ; ಆದರೆ ಬೇರೆ ಜನರು ನಿಶ್ಚಯವಾಗಿ ತಮ್ಮ ಪ್ರಾಣಘಾತಕ್ಕೆ ಹೊಂಚು ಹಾಕಿರುವರೆಂದು ನನ್ನ ಮನಸ್ಸಿಗೆ ಹೊಳೆಯುತ್ತಿದೆ. ಇಂಥ ಸ್ಥಿತಿಯಲ್ಲಿ ನಿಮ್ಮನ್ನು..... ಹೀಗೆ ಮಾತಾಡುವಾಗ ಮುರೆಯ ಕಂಠವು ಬಿಗಿದು, ಮಾತುಗಳು ಹೊರಡದಾದವು. ಕಣ್ಣುಗಳು ನೀರಿನಿಂದ ತುಂಬಿದವು. ಇದನ್ನು ನೋಡಿ ಅಲ್ಲಿಯೇ ಹತ್ತರ ನಿಂತಿದ್ದ ಸುಮತಿಕೆಯು ಒಮ್ಮೆಲೆ – ದೇವೀ, ಹೀಗೆ ಶೋಕಮಾಡುವರೇ? ಗರ್ಭವತಿಯರು ಕಣ್ಣೀರು ಹಾಕಬಾರದು, ಸಿಟ್ಟಾಗ ಬಾರದು, ಯಾವಾಗಲೂ ಆನಂದದಿಂದಿರಬೇಕು, ಎಂದು ನಿನ್ನೆಯೇ ಧಾತ್ರೇಯಿಕೆಯು ಹೇಳಲಿಲ್ಲವೇ? ಇಂದು ಈ ಆನಂದದ ಸುದ್ದಿಯನ್ನು ನೀವೇ ಬಾಯಿಬಿಚ್ಚಿ ಮಹಾರಾಜರಿಗೆ ಹೇಳುವವರಿದ್ದಿರಲ್ಲ? ಅದು ನಿಮ್ಮ ಬಾಯಿಂದ ಹೇಳಿದರೆ ಮಹಾರಾಜರು ಆನಂದಸಾಗರದಲ್ಲಿ ಮುಣುಗಬಹುದು! ಎಂದು ನುಡಿದಳು. ಆಗ ಮುರೆಯು ಕವಕ್ಕನೆ ದಾಸಿಯ ಮೈಮೇಲೆ ಹೋಗಿ – ಸುಮತಿಕೇ, ನಡುವೆ ಹಿರಿಯತನ ಮಾಡಲಿಕ್ಕೆ ನಿನಗೆ ಯಾರು ಹೇಳಿದರು? ಏನಾದರೂ ಇಲ್ಲದ್ದೊಂದು ಹುಟ್ಟಿಸಿಕೊಂಡು ಹೇಳುವದು! ಹೋಗು ಅತ್ತಕಡೆ, ನನ್ನೆದುರಿಗೆ ನಿಲ್ಲಬೇಡ, ಎಂದು ಗದ್ದರಿಸಿದಳು. ಆಗ ಸುಮತಿಕೆಯು ದೇವೀ, ಹುಟ್ಟಿಸಿಕೊಂಡು ಯಾಕೆ ಹೇಳಲಿ? ಕ್ಷಣಕ್ಷಣಕ್ಕೆ ಬಿಳುಪಾಗುತ್ತ ನಡೆದಿರುವ ತಮ್ಮ ಗಲ್ಲಗಳೂ, ಇತ್ತಿತ್ತ ತಮ್ಮಲ್ಲಿ ಸೇರಿರುವ ಆಲಸ್ಯವೂ, ತಮ್ಮಲ್ಲಿ ಕಾಣುತ್ತಿರುವ ಇನ್ನೂ ಯಾವುವೋ ಸುಲಕ್ಷಣಗಳೂ ನನ್ನ ಮಾತಿಗೆ ಸಾಕ್ಷಿಗಳಾಗಿವೆ. ಈ ಆನಂದದ ಸುದ್ದಿಯನ್ನು ಹೇಳಿದ್ದರಿಂದ ಬಡವಿಗೆ ಮಹಾರಾಜರಿಂದ ಸಿಗಬಹುದಾಗಿದ್ದ ಪಾರಿತೋಷಕಕ್ಕೆ ಯಾಕೆ ಅಡ್ಡಾಗುತ್ತೀರಿ, ಎಂದಳು.

ವಾಚಕರು ಸುಮತಿಕೆಯ ಗುರುತನ್ನು ಮರೆತಿರಲಿಕ್ಕಿಲ್ಲ. ಸರಳ ಸ್ವಭಾವದ ವೃಂದ ಮಾಲೆಯು ತನ್ನ ಭಯಂಕರ ಪ್ರತಿಜ್ಞೆಯನ್ನು ಈಡೇರಿಸಲಿಕ್ಕೆ ತಕ್ಕವಳಲ್ಲೆಂದು ಮುರಾದೇವಿಯು ಸುಮತಿಕೆಯನ್ನು ವಿಶ್ವಾಸದ ದಾಸಿಯನ್ನಾಗಿ ಮಾಡಿಕೊಂಡದ್ದನ್ನು ನಾವು ಹಿಂದೆ ಹೇಳಿರಬಹುದು. ಇದೇ ಸುಮತಿಕೆಯೇ ಚಾಣಕ್ಯನ ಉಪದೇಶದಂತೆ ರಾಕ್ಷಸನಿಗೆ ಸಂಶಯ ಪಿಶಾಚವು ಬಡಕೊಳ್ಳುವಂತೆ ಮಾಡಿದಳು. ಒಟ್ಟಿಗೆ ಮುರಾದೇವಿ, ಚಾಣಕ್ಯ, ಸುಮತಿಕೆ ಈ ಮೂವರ ಗುಟ್ಟು ಒಂದಾಗಿತ್ತು. ನಂದವಂಶವೃಕ್ಷವನ್ನು ಸಮೂಲವಾಗಿ ಕಿತ್ತು ಒಗಿಯಲಿಕ್ಕೆ ಈ ಮೂವರು, ಮುಪ್ಪುರಿಯ ಹಗ್ಗವಾಗಿದ್ದರು. ಧನಾನಂದನನ್ನು ಮುರುಳು ಮಾಡುವದಕ್ಕಾಗಿಯೇ ಅವರು ಬಸರಿನ ಮೋಹಿನೀ ಮಂತ್ರವನ್ನು ಮುಂದೆ ಮಾಡಿದ್ದು. ಇರಲಿ, ಧನಾನಂದನು ಸುಮತಿಕೆಯ ಮಾತು ಕೇಳಿ ಆನಂದಭರಿತನಾದನು. ಹೆಂಡತಿಯ ಬಸಿರು, ಸೋಸಿನ ಗಂಡಸರಿಗೆ ಬಹು ಉತ್ತೇಜನಕರ; ಬಹು ಅಭಿಮಾನಕರ. ಧನಾನಂದನು ಸುಮತಿಕೆಗೆ–ಏನಂದೀ ಸುಮತೀಕೇ?

ದೇವಿಯು ಗರ್ಭಿಣಿಯಿರುವಳೇ? ಬಹಳ ಸಂತೋಷದ ಸುದ್ದಿಯನ್ನು ಹೇಳಿದೆ. ನಿನಗೆ ಬಹು ದೊಡ್ಡ ಇನಾಮು ಕೊಡತಕ್ಕದ್ದು, ಎಂದು ನುಡಿದು ಮುರೆಯ ಕಡೆಗೆ ನೋಡಲು, ಆಕೆಯು ಒಂದೇಸವನೆ ಬಿಕ್ಕಿಬಿಕ್ಕಿ ಅಳುತ್ತಿದ್ದಳು. ಆಗ ಅರಸನು ಆಕೆಗೆ–ದೇವೀ, ಇದೇನು? ನೀನು ವೀರಮಾತೆಯಾಗುವೆಯೆಂಬದನ್ನು ಕೇಳಿ ನಾನು ಆನಂದಭರಿತನಾಗಿರಲು, ಕಣ್ಣೀರು ಸುರಿಸುವಿಯಲ್ಲ? ಇದು ಉತ್ಸವದ ಪ್ರಸಂಗವೋ, ಶೋಕದ ಪ್ರಸಂಗವೋ? ನಿನ್ನ ಶೋಕಕ್ಕೆ ಕಾರಣವೇನು?

ಅರಸನ ಈ ಪ್ರಶ್ನೆಗಳಿಗೆ ಉತ್ತರವನ್ನು ಕೊಡದೆ ಮುರೆಯು ಒಂದೇ ಸವನೆ ಅಳುತ್ತ ಕುಳಿತಿದ್ದಳು. ಅಷ್ಟರಲ್ಲಿ ಸುಮತಿಕೆಯು ಮುಂದೆ ಬಂದು ಕೈಜೋಡಿಸಿ–ದೊರೆಯೇ, ದೇವಿಯು ಶೋಕಮಾಡದೇನು ಮಾಡುವಳು? ಈ ಮೊದಲೆ ಹುಟ್ಟಿದ ಆಕೆಯ ಕೂಸಿನ ಸಂಹಾರವಾಗಿರಲು, ಈಗಿನ ಗರ್ಭದ ಪರಿಣಾಮವನ್ನು ನೆನಿಸಿ ಆಕೆಯು ಕಣ್ಣೀರು ಸುರಿಸುವಲ್ಲಿ ಆಶ್ಚರ್ಯವೇನು? ಮೊದಲೆ ಸ್ತ್ರೀಜಾತಿಯು, ಮೇಲೆ ಕರಳಿನ ಮಾತು, ಅನ್ನಲು, ಮುರೆಯ ದುಃಖವು ಮತ್ತಿಷ್ಟು ಒತ್ತರಿಸಿತು. ಆಕೆಯು ದೊಡ್ಡ ದನಿ ತೆಗೆದು ಅಳಹತ್ತಿದಳು. ಅದನ್ನು ನೋಡಿ ಧನಾನಂದನ ಜೀವವು ತಳಮಳಿಸಿ, ಆತನು ಮುರೆಯನ್ನು ತಬ್ಬಿಕೊಂಡು ಅತ್ಯಂತ ಪ್ರೇಮದಿಂದ – ಪ್ರಿಯೇ, ಮುರೇ, ಇದೇನು? ಆದಮಾತನ್ನು ಮರೆತು ಬಿಡಬೇಕೆಂದು ಈ ಮೊದಲೇ ಗೊತ್ತಾಗಿರುವದಲ್ಲವೇ? ಅಂದಬಳಿಕ ಕಾರಣವಿಲ್ಲದೆ ಶೋಕಮಾಡುವದೇಕೆ? ಅನ್ನಲು, ಮುರೆಯು – ಆರ್ಯಪುತ್ರಾ, ಕಾರಣವಿಲ್ಲದೆ ಶೋಕಮಾಡುವೆನೆಂದು ಅನ್ನಬೇಡಿರಿ. ಹಿಂದಕ್ಕೆ ಅಮಾತ್ಯನು ಏನೇನೋ ತಂತ್ರವನ್ನು ಮಾಡಿ ಕೂಸನ್ನು ಕೊಲ್ಲಿಸಲಿಲ್ಲವೇ? ನಾಳೆ ತಾವು ಹ್ಯಾಗೂ ದರ್ಬಾರಕ್ಕೆ ಹೋಗುವಿರಿ; ಅದೇ ಅಮಾತ್ಯನೇ ಈಗಾದರೂ ಇದ್ದಾನೆ. ನನ್ನನ್ನು ಕಂಡರೆ ಹಲ್ಲು ಕಡಿಯುತ್ತಿದ್ದ ಆ ಮಂತ್ರಿಯು, ಇನ್ನು ಹುಟ್ಟುವ ಕೂಸನ್ನಾರೂ ಹ್ಯಾಗೆ ಜೀವದಿಂದಿರ ಗೊಡುವನು? ಆರ್ಯಪುತ್ರಾ, ಅಂಥ ಪ್ರಸಂಗ ಬಂದರೆ ನನ್ನ ಕೂಸಿನ ಸಂಗಡ ನನ್ನನ್ನೂ ಕೊಲ್ಲಿಸಿಬಿಡಿರಿ ಕಂಡಿರಾ! ಎಂದು ಮುರೆಯು ಅರಸನ ಪಾದಗಳಮೇಲೆ ಹೊರಳಾಡುವಂತೆ ತೋರಿಸಿ, ಆಕ್ರೋಶ ಮಾಡತೊಡಗಿದಳು. ಅರಸನಿಗೆ ಏನೂ ತೋಚದಾಯಿತು. ಆತನು ಮುರೆಗೆ – ಪ್ರಿಯೇ, ಹಾಗಿದ್ದರೆ ನಾಳೆ ನಾನು ದರ್ಬಾರಕ್ಕೆ ಹೋಗುವದೇ ಇಲ್ಲ, ಇನ್ನಾದರೂ ಆಯಿತೋ ಇಲ್ಲವೋ? ನಿನ್ನ ಸಮಾಧಾನಕ್ಕಿಂತಲೂ ನನಗೆ ದರ್ಬಾರವೇನು ಹೆಚ್ಚಿನದಲ್ಲ, ಬೇಕಾದರೆ ಇಲ್ಲಿಗೇ ರಾಕ್ಷಸನನ್ನು ಕರೆಸಿ, ದರ್ಬಾರನೆರಿಸಿ ರಾಜಕಾರಣವನ್ನು ವಿಚಾರಿಸುವೆನು.

ಇದನ್ನು ಕೇಳಿ ಮುರೆಯು ಕಣ್ಣೀರು ಒರೆಸಿಕೊಂಡು ಒಮ್ಮೆಲೇ ಮೋರೆಯನ್ನು ಮೇಲಕ್ಕೆತ್ತಿ ಅರಸನಿಗೆ – ಛೇ, ಛೇ, ಛೇ, ಹಾಗೆ ಮಾಡುವದರಲ್ಲಿ ಏನು ಅರ್ಥವಿದೆ? ಅಮಾತ್ಯನ ಮುಂದೆ ಒಡಂಬಟ್ಟಂತೆ ದರ್ಬಾರಕ್ಕೆ ಹೋಗದಿದ್ದರೆ, ಅದರ ಅಪಕೀರ್ತಿಯು ನನ್ನ ತಲೆಯ ಮೇಲೆಯೇ ಹೊರವದು. ನಾನು ಅಮಾತ್ಯನ ಸಮಕ್ಷ ತಾವು ದರ್ಬಾರಕ್ಕೆ ಹೋಗಬಹುದೆಂದು ಹೇಳಿರುವೆನು. ಈಗ ತಾವು ಹೋಗದಿದ್ದರೆ ನಾನೇ ತಮ್ಮ ಮನಸ್ಸು ಕೆಡಿಸಿದೆನೆಂದು ರಾಕ್ಷಸನು ದೂರಿಕೊಳ್ಳುವಲ್ಲಿ ಸಂಶಯವಿಲ್ಲ; ಆದ್ದರಿಂದ ತಾವು ನಾಳಿನ ದಿವಸದಮಟ್ಟಿಗಾದರೂ ಸಭಾಗೃಹಕ್ಕೆ ಹೋಗಲೇ

ಬೇಕು. ನನ್ನ ಮೇಲಿದ್ದ ಪ್ರೇಮದಲ್ಲಿ ಅಂತರವಾಗಲಿಕ್ಕಿಲ್ಲೆಂದು ವಚನ ಕೊಟ್ಟರೆ ಸಾಕು. ನನ್ನ ಜೀವದ ಪರಿವೆ ನನಗಿಲ್ಲ, ತಮ್ಮ ಸುರಕ್ಷತೆಯ ವಿಷಯವಾಗಿ.... ಎಂದು ಮುರೆಯು ಅರಸನ ಹೃದಯವು ಕರಗಿ ಹೋಗುವಂತೆ ಸೋಗುಮಾಡಿ ಮಾತಾಡಲು, ಧನಾನಂದನ ಅಂತಃಕರಣದಲ್ಲಿ ಪ್ರೇಮದ ಉಕ್ಕು ಬಂದು, ಆತನು ಮುರೆಯನ್ನು ಗಟ್ಟಿಯಾಗಿ ಅಪ್ಪಿಕೊಂಡು ನಿರ್ಧಾರದಿಂದ ಹೇಳಿದನೇನಂದರೆ – ದೇವೀ, ನೀನು ಎಳ್ಳಷ್ಟಾದರೂ ಚಿಂತೆಮಾಡಬೇಡ, ನೀನು ಹೋಗೆಂದು ಹೇಳುವದರಿಂದ ನಿರುಪಾಯನಾಗಿ ಹೋಗಿ, ಒಂದುಗಳಿಗೆ ಸಿಂಹಾಸನದಮೇಲೆ ಕುಳಿತೆನೋ, ಇಲ್ಲವೋ ಅದೇ ಕಾಲಲ್ಲಿ ನಿನ್ನ ಮಂದಿರಕ್ಕೆ ಬರುವೆನು.

ಈ ಮೇರೆಗೆ ಮಾತು–ಕತೆಗಳು ನಡೆದಿರಲು, ಧನಾನಂದನಿಗೆ ನಿದ್ರೆ ಬಂದು ಆತನು ಕಣ್ಣು ಮುಚ್ಚಿದನು. ಅರಸನಿಗೆ ಸ್ವಾಭಾವಿಕವಾಗಿಯೇ ನಿದ್ರೆ ಹತ್ತಿತ್ತೋ, ಘಾತಕರು ಏನಾದರೂ ಮಾದಕ ಪದಾರ್ಥವನ್ನು ಹಾಕಿದ್ದರಿಂದ ಅವನು ಕಣ್ಣು ಮುಚ್ಚಿದನೋ ತಿಳಿಯದು. ಆತನು ಕಣ್ಣು ಮುಚ್ಚಿದ ಕೂಡಲೇ ಮುರೆಯೂ, ಸುಮತಿಕೆಯೂ ನಗೆ ಮೊಗದಿಂದ ಒಬ್ಬರನ್ನೊಬ್ಬರು ನೋಡಹತ್ತಿದರು. ಮುರೆಯು ಸುಮತಿಕೆಗೆ–ಸಖೀ, ನೀನು ಸಹಾಯ ಮಾಡದಿದ್ದರೆ, ನನ್ನ ವ್ಯೂಹವೆಲ್ಲ ಕುಸಿಬಿದ್ದು ಹೋಗುತ್ತಿತ್ತು, ಪಾಪ! ವೃಂದಮಾಲೆಯು ಮುಗ್ಧ ಸ್ವಭಾವದವಳು. ಆಕೆಯಿಂದ ಹೀಗೆ ಕಾರ್ಯವು ಸಾಧಿಸುತ್ತಿದ್ದಿಲ್ಲ, ಇರಲಿ, ಸುಮತಿಕೇ, ಆರ್ಯ ಚಾಣಕ್ಯನು ಯಾವಾಗ ಬರುವನು? ಎಂದು ಕೇಳುತ್ತಿರಲು, ನೆನಸಿದವರ ಮನಸ್ಸಿನಲ್ಲಿಯೇ ಅನ್ನುವಂತೆ, ಚಾಣಕ್ಯನು ಬಾಗಿಲಲ್ಲಿ ಬಂದು ನಿಂತಿದ್ದ ಸುದ್ದಿಯನ್ನು ದಾಸಿಯು ಹೇಳಿದಳು. ಅದನ್ನು ಕೇಳಿ ಸುಮತಿಕೆಗೂ, ಮುರೆಗೂ ಪರಮಾನಂದವಾಯಿತು. ಇವರಿಬ್ಬರು ಕೇವಲ ಚಾಣಕ್ಯನ ಭಕ್ತರಾಗಿದ್ದ ರೆಂದು ಹೇಳಬಹುದು. ಸಾಂಕೇತಿಕ ಸ್ಥಳದಲ್ಲಿ ಕುಳಿತಿದ್ದ ಚಾಣಕ್ಯನ ಬಳಿಗೆ ಅವರಿಬ್ಬರು ಹೋಗಲು, ಮುರೆಯು–ಆರ್ಯಶ್ರೇಷ್ಠಾ, ನಾವು ನಿನ್ನ ಹಾದಿಯನ್ನು ನೋಡುತ್ತ ಕುಳಿತು ಕೊಂಡಿದ್ದೆವು. ತಾವು ಬಂದದ್ದು ಬಹಳ ನೆಟ್ಟಗಾಯಿತು. ಸುಮತಿಕೆಯ ಚಾತುರ್ಯದಿಂದ ಅಮಾತ್ಯರಾಕ್ಷಸನು ಇಂದು ಇಲ್ಲಿಗೆ ಬಂದಿದ್ದನು. ನಾಳಿನದಿವಸ ಮಹಾರಾಜರು ದರ್ಬಾರಕ್ಕೆ ಹೋಗಬೇಕೆಂದು ಗೊತ್ತಾಗಿದೆ. ನನ್ನ ಮಾತಿನಿಂದಲೇ ಮಹಾರಾಜರು ರಾಕ್ಷಸನಿಗೆ ದರ್ಬಾರಕ್ಕೆ ಬರಲು, ವಚನ ಕೊಟ್ಟಿದ್ದಾರೆ. ನಿಮ್ಮ ಸಿದ್ಧತೆಯು ಇರುವದಷ್ಟೇ, ಎಂದು ಕೇಳಲು, ಚಾಣಕ್ಯನು–ವತ್ಸೇ, ಎಲ್ಲ ಸಿದ್ಧತೆಯಾಗಿದೆ. ದರ್ಬಾರದ ಬಳಿಯಲ್ಲಿರುವ ರಾಕ್ಷಸನ ಮಿತ್ರನಾದ ಚಂದನ ದಾಸನ ಮನೆಯೊಳಗಿಂದ ರಾಜದರ್ಬಾರದ ಬಾಗಿಲವರೆಗೆ ಗವಿಯನ್ನು ತೋಡಿಸಿ, ದರ್ಬಾರದ ಬಾಗಿಲಲ್ಲಿ ದಾರುಕರ್ಮನೆಂಬ ಕುಶಲನಾದ ಕಸಬುದಾರನಿಂದ ಕೃತ್ರಿಮ ತೋರಣವನ್ನು ಕಟ್ಟಿಸಿದ್ದೇನೆ. ಚಂದನದಾಸನ ಮಿತ್ರನಾದ ಭೂರಿವಸುವು ನನಗೆ ಕೇವಲ ಅಂಕಿತನಾಗಿದ್ದಾನೆ. ಆ ಬೂರಿವಸುವಿನ ಮುಖಾಂತರ ಚಂದನದಾಸನ ಒಪ್ಪಿಗೆಯನ್ನು ಪಡೆದು, ಗವಿಯನ್ನು ತೋಡಿಸಿದ್ದೇನೆ; ಆದರೆ ತೋರಣದ ಬುಡದಲ್ಲಿ ಮಾಡಿರುವ ಭಯಂಕರ ರಚನೆಯ ಸುದ್ದಿಯನ್ನು ಚಂದನದಾಸನಿಗೆ ಹತ್ತಗೊಟ್ಟಿಲ್ಲ, ಒಟ್ಟಿಗೆ, ಕಸರಿಲ್ಲದಂತೆ ಎಲ್ಲ ಸಿದ್ಧತೆಯಾಗಿದೆ. ನಂದವಂಶವೇ ನಾಶವಾಗುವಂತೆ ವ್ಯವಸ್ಥೆ ಮಾಡಿದ್ದೇನೆ. ಧನಾನಂದನ ಸಂಹಾರವಂತು ನಾಳಿಗೆ ಆಗೇ

ಆಗುವದು. ಉಳಿದವರ ಸಂಹಾರವಾಗದಿದ್ದರೆ ಬೇರೆ ಯುಕ್ತಿಯನ್ನು ಯೋಚಿಸಿರುವೆನು, ಎಂದು ಹೇಳಿದನು, ಅದಕ್ಕೆ ಮುರೆಯು ಸ್ವಲ್ಪ ಚಿಂತಾತುರಳಾಗಿ ಚಾಣಕ್ಯನಿಗೆ–ಗುರುವರ್ಯಾ, ಮಹಾರಾಜರ ನಾಶವಾಗದೆ, ಉಳಿದವರ ನಾಶವಾಗುವಂತೆ ಯುಕ್ತಿಯನ್ನು ಮಾಡಲಿಕ್ಕೆ ಬರಲಿಕ್ಕಿಲ್ಲವೇನು? ಮಹಾರಾಜರು ಮರಣಹೊಂದಿ, ಆ ಚಾಂಡಾಲ ಸುಮಾಲ್ಯನು ಜೀವದಿಂದ ಉಳಿದರೆ, ರಾಕ್ಷಸನು ಆತನನ್ನು ಪಟ್ಟಕ್ಕೆ ಕೂಡ್ರಿಸಿ, ರಾಜ್ಯಕಾರಭಾರ ಸಾಗಿಸಿ ನಮ್ಮೆಲ್ಲರನ್ನು ಕಲ್ಲಿನ ಗಾಣಕ್ಕೆ ಹಾಕಿಸಬಹುದು, ಅದಕ್ಕೆ ಉಪಾಯವೇನು?

ಮುರೆಯ ಈ ಮಾತುಗಳನ್ನು ಕೇಳಿ ಚಾಣಕ್ಯನು ಗಹಗಹಿಸಿ ನಕ್ಕು–ದೇವೀ, ಮುರೇ, ನಿನ್ನನ್ನು ನಾನು ಒಳ್ಳೇ ಕಾರ್ಯದಕ್ಷಳೆಂದೂ, ನೀತಿಜ್ಞಳೆಂದೂ ತಿಳಿದಿದ್ದೆನು; ಆದರೆ ನೋಡು ತ್ತಿರಲು, ಉಳಿದ ಹೆಂಗಸರಂತೆ ನೀನಾದರೂ ಚಂಚಲಳಾಗಿಯೇ ತೋರುತ್ತೀ. ವತ್ಸೇ, ಧನಾನಂದನ ನಾಶವಾದರೆ, ಅದನ್ನು ರಾಕ್ಷಸನೇ ಮಾಡಿಸಿದನೆಂಬಂತೆ ಜನರಿಗೆ ತೋರುವ ಹಾಗೆ ಮಾಡಿದ್ದೇನೆ. ರಾಕ್ಷಸನ ಮಿತ್ರನ ಮನೆಯೊಳಗಿಂದ ನೆಲಮನೆಯನ್ನು ತೋಡಿಸಿರುತ್ತದೆ, ರಾಕ್ಷಸನೇ ಆಗ್ರಹದಿಂದ ಅರಸನನ್ನು ದರ್ಬಾರಕ್ಕೆ ಕರೆದೊಯ್ಯುತ್ತಾನೆ. ಇದಕ್ಕೂ ಹೆಚ್ಚಿಗೆ ಏನು ಬೇಕು? ಬರುವ ಅರಿಷ್ಟವೆಲ್ಲ ರಾಕ್ಷಸನ ಮೇಲೆಯೇ ಬರುವದು. ಹೊತ್ತು ಸಿಕ್ಕಕೂಡಲೇ ನಿನ್ನ ಅಳಿಯನಾದ ಚಂದ್ರಗುಪ್ತನನ್ನು ಪಟ್ಟಕೆ ಕೂಡ್ರಿಸಿ, ನಿನ್ನ ಪ್ರತಿಜ್ಞೆಯನ್ನು ಈಡೇರಿಸಿದೆನೆಂದು ತಿಳಿ. ಇಲ್ಲದ ಹಾಳು ಚಿಂತೆಗೆ ನೀನು ಒಳಗಾಗುವದೇಕೆ? ಎಂದನು. ಇದನ್ನು ಕೇಳಿ ಮುರೆಗೆ ಅರ್ಧ ಸಮಾಧಾನವಾಯಿತು. ನಾಳಿಗೆ ನನ್ನ ಪ್ರತಿಜ್ಞೆಯು ಈಡೇರುವದೆಂದು ತಿಳಿದು ಆಕೆಯು ಸಂತೋಷಪಟ್ಟು ಚಾಣಕ್ಯನಿಗೆ ನಿರೂಪಕೊಟ್ಟಳು; ಆದರೆ ಹೊತ್ತು ಮುಣುಗುತ್ತಲೇ ಆಕೆಯ ಮನಸ್ಸಿನ ವಿಚಾರವೇ ಬದಲಾಯಿತು. ಎಷ್ಟಾದರೂ ಸ್ತ್ರೀ ಜಾತಿಯು!

ತನ್ನ ದುಷ್ಟ ಪ್ರತಿಜ್ಞೆಯು ನೆರವೇರುವ ಕಾಲವು ಸಮೀಪಿಸಿದ್ದರಿಂದ ಮುರೆಗೆ ಮೊದಲು ಕೆಲವು ವೇಳೆಯವರೆಗೆ ಸಮಾಧಾನವಾಯಿತು. ಚಾಣಕ್ಯನು ತನ್ನ ಪ್ರತಿಜ್ಞೆಯಂತೆ ಮುರೆಯ ಪ್ರತಿಜ್ಞೆಯು ಇರುವದನ್ನು ತಿಳಿದು, ಆಕೆಯನ್ನು ವಶಮಾಡಿಕೊಳ್ಳುವ ಉದ್ಯೋಗಕ್ಕೆ ತೊಡಗಿದನು. ತನ್ನ ಪ್ರತಿಜ್ಞೆಯು ಈಡೇರಲಿಕ್ಕೆ ಚಾಣಕ್ಯನಂಥ ಅತ್ಯುತ್ಕೃಷ್ಟ ವ್ಯಕ್ತಿಯ ಸಹಾಯವು ಒದಗಿದ್ದಕ್ಕಾಗಿ ಮುರೆಯು ಸಂತೋಷಪಟ್ಟು, ಚಾಣಕ್ಯನ ಬಲೆಯಲ್ಲಿ ಸಂಪೂರ್ಣವಾಗಿ ಸಿಕ್ಕಕೊಂಡಿದ್ದಳು; ಇದೆಲ್ಲ ಸರಿಯಾಯಿತು; ಆದರೆ ನಾಳಿಗೇ ಪತಿಯ ಸಂಹಾರವು ಒದಗುವ ದೆಂಬ ವಿಚಾರವು ಮನಸ್ಸಿನಲ್ಲಿ ಬಂದ ಕೂಡಲೇ ಆಕೆಯ ಮನಸ್ಸಿಗೆ ಹ್ಯಾಗೆ ಹ್ಯಾಗೋ ಅನಿಸಹತ್ತಿತು. ಚಾಣಕ್ಯನು ಆಶ್ರಮಕ್ಕೆ ಹೋದಬಳಿಕ, ಮುರೆಯು ಅಲ್ಲಿಷ್ಟು ಇಲ್ಲಿಷ್ಟು ಹೊತ್ತುಗಳೆದು, ತಿರುಗಿ ತನ್ನ ಶಯನಗೃಹಕ್ಕೆ ಹೋದಳು. ಅರಸನು ಸ್ವಸ್ಥವಾಗಿ ಮಲಗಿ ಕೊಂಡಿದ್ದನು. ಮುರೆಯು ಆತನ ಮಗ್ಗಲಲ್ಲಿ ಮಲಗಿಕೊಂಡು, ಚಾಣಕ್ಯನ ವ್ಯೂಹವನ್ನು ಆರಂಭದಿಂದ ನೆನಪಿಗೆ ತಂದುಕೊಂಡಳು. ಆಕೆಯ ಜೀವಕ್ಕೆ ಸೊಗಸಾಗಲೊಲ್ಲದು. ತನ್ನ ಮಗನನ್ನು ಕೊಲ್ಲಿಸದೆ, ತನ್ನನ್ನು ಸೆರೆಯಲ್ಲಿಡದೆ ಇದ್ದರೆ, ತನ್ನ ಮಗನೇ ಸುಮಾಲ್ಯನ ಸ್ಥಳದಲ್ಲಿ ಯುವರಾಜನಾಗಿರುತ್ತಿದ್ದನು, ಇಂಥ ಘೋರ ಪ್ರಸಂಗವೇ ಬರುತ್ತಿದ್ದಿಲ್ಲ ಎಂದು ಆಕೆಯು

ಚಿಂತಿಸಿದಳು. ಅಷ್ಟರಲ್ಲಿ ಧನಾನಂದನು ಕನಸಿನಲ್ಲಿ–ಪ್ರಿಯೇ, ಮುರೇ, ಹಿಂದೆ ಆದದ್ದನ್ನು ಮರೆತು ಬಿಡು. ನಾನು ಇನ್ನು ನಿನ್ನ ಮಾತು ಮೀರಿ ನಡೆಯುವದಿಲ್ಲ, ನನ್ನಿಂದಾದ ಅಪರಾಧಕ್ಕಾಗಿ ನನ್ನನ್ನು ಕ್ಷಮಿಸು, ಎಂದು ಕನಕರಿಸುವದು ಸ್ಪಷ್ಟವಾಗಿ ಕಿವಿಗೆ ಬಿದ್ದಕೂಡಲೇ, ಮುರೆಯ ಮನಸ್ಸು ಕರಗಿತು. ಆಕೆಯು ಮಲಗಿದವಳು ಒಮ್ಮೆಲೆ ಎದ್ದು ಕುಳಿತಳು. ಅರಸನು ಹೀಗೆ ಕನಕರಿಸು ತ್ತಿರುವದನ್ನು ಆಕೆಯು ಎಷ್ಟೋಸಾರೆ ಕೇಳಿದ್ದಳು; ಆದರೆ ಮೊದಲಿಗೇ ಮಿದುವಾಗಿದ್ದ ಆಕೆಯ ಹೃದಯವು, ಈದಿನ ಅರಸನು ಕನಕರಿಸಿದ್ದನ್ನು ಕೇಳಿ, ಕರಗಿ ನೀರಾಯಿತು. ಆಕೆಯು ಮನಸ್ಸಿನಲ್ಲಿ– ಆಹಾ! ಎಂಥ ಘೋರ ಕೃತ್ಯಕ್ಕೆ ನಾನು ತೊಡಗಿದೆನಲ್ಲ? ನನ್ನ ಬುದ್ಧಿಯು ಎಲ್ಲಿ ಹೋಗಿರ ಬಹುದು? ಕನಸಿನಲ್ಲಿಯೂ ಕ್ಷಮೆ ಬೇಡುವ ಪತಿಯ ಪ್ರಾಣಘಾತ ಮಾಡುವಷ್ಟು ನಾನು ಕ್ರೂರಳಾಗಬೇಕಾಯಿತೇ? ಆಹಾ! ನಾನು ಎಂಥ ಕಠಿಣಹೃದಯಳು!! ಪತಿಘ್ನೆಯೆಂದು ಈ ಲೋಕದಲ್ಲಿ ಪ್ರಸಿದ್ಧವಾಗಿ, ಪರಲೋಕದಲ್ಲಿ ಚಿರಕಾಲ ನರಕಕುಂಡವನ್ನು ಸೇರುವ ಪ್ರಸಂಗವು ಒದಗಿದಂತಾಯಿತು! ಇಂಥ ಘೋರ ಕೃತ್ಯಮಾಡಿ ನಾನು ಕಟ್ಟಿಕೊಳ್ಳುವದೇನು? ನನ್ನ ಮಗನಾದರೂ ಜೀವದಿಂದಿದ್ದರೆ ಆ ಮಾತು ಬೇರೆಯಾಗಿತ್ತು, ಪತಿಗಿಂತಲೂ ಸೋದರಳಿಯನು ಹೆಚ್ಚಿನವನೇ? ಅಂತೂ ನಾಳಿಗೇ ನನ್ನ ಸೌಭಾಗ್ಯದ ಪರಿಸಮಾಪ್ತಿಯಾಗಿ ವೈಧವ್ಯವು ನನ್ನ ಪಾಲಿಗೆ ಬರುವದು!! ಹಾಯ್ ಹಾಯ್ ! ಮುರೇ, ಆರ್ಯಸ್ತ್ರೀಯರ ಶೀಲಕ್ಕೆ ನಿನ್ನ ನಡತೆಯು ಒಪ್ಪುವದೇ? ಸೀತೆಯನ್ನು ನೆನಿಸು, ದ್ರೌಪದಿಯನ್ನು ಮರೆಯಬೇಡ; ಅರುಂಧತಿ – ಲೋಪಾ ಮುದ್ರೆ–ಸಾವಿತ್ರಿ ಮೊದಲಾದ ಪತಿವ್ರತಾ ಶಿಖಾಮಣಿಗಳ ಸಚ್ಚರಿತ್ರಗಳ ಚಿಂತನಮಾಡು. ಪತಿಗೆ ಅಮಲು ಬರಬೇಕೆಂದು ಕೈಮುಟ್ಟಿ ಮಾದಕಪದಾರ್ಥವನ್ನು ಹಾಕಿದೆಯಲ್ಲ! ನೀನು ಯಾತಕ್ಕೆ ಹೇಸೀ, ಎಂದು ಮುರೆಯು ಪಶ್ಚಾತ್ತಾಪದಿಂದ ಹಲವು ವಿಧವಾಗಿ ತನ್ನನ್ನು ಹಳಿದುಕೊಳ್ಳುತ್ತ ತಳಮಳಿಸ ತೊಡಗಿದಳು. ಆಕೆಗೆ ಕೂತರೆ ಸಮಾಧಾನವಾಗಲೊಲ್ಲದು, ನಿಂತರೆ ಸಮಾಧಾನ ವಾಗಲೊಲ್ಲದು, ಮಲಗಿದರೆ ಸಮಾಧಾನವಾಗಲೊಲ್ಲದು. ಸಂತಾಪದ ಭರದಲ್ಲಿ ಮನುಷ್ಯರು ಘೋರಕೃತ್ಯದ ಬಗ್ಗೆ ಪ್ರತಿಜ್ಞೆಮಾಡುತ್ತಾರೆ; ಆದರೆ ಆ ಕೃತ್ಯವನ್ನು ಪ್ರತ್ಯಕ್ಷಮಾಡುವ ಪ್ರಸಂಗ ಒದಗಿದಾಗ ಎಷ್ಟೋ ಜನರು ಹೆದರಿ ದುಷ್ಕೃತ್ಯದಿಂದ ದೂರಸರಿಯುವರು. ಮುರೆಯ ಸ್ಥಿತಿಯಾದರೂ ಹೀಗೆ ಆಯಿತು. ಪತಿಯ ನಾಶಕ್ಕಾಗಿ ಪ್ರತಿಜ್ಞೆಮಾಡಿದ್ದ ಆ ರಾಜಮಹಿಷಿಯು, ಪ್ರತಿಜ್ಞೆಯನ್ನು ಈಡೇರಿಸುವಾಗ ಹಿಂದಕ್ಕೆ ಸರಿದಳು. ಈ ಅರಿಷ್ಟದ ನಿವಾರಣೋಪಾಯಗಳು ಆಕೆಯ ಮನಸ್ಸಿನಲ್ಲಿ ಒಂದರಹಿಂದೊಂದು ಹುಟ್ಟಿನಾಶವಾಗತೊಡಗಿದವು. ಒಂದರಿಂದಲೂ ಆಕೆಗೆ ಸಮಾಧಾನವಾಗಲೊಲ್ಲದು. ಆಕೆಯು, ಈಗಲೇ ಅರಸನನ್ನು ಎಬ್ಬಿಸಿ ನಡೆದ ಸಂಗತಿ ಯನ್ನೆಲ್ಲ ಹೇಳಿಬಿಡಬೇಕೆಂದು ಮೊದಲು ಯೋಚಿಸಿದಳು; ಆದರೆ ಹೀಗೆಮಾಡಿದರೆ ತನ್ನ ಪರಿಣಾಮವು ಎಂದಿಗೂ ನೆಟ್ಟಗಾಗಲಿಕ್ಕಿಲ್ಲೆಂದು ತಿಳಿದು ಆಕೆಯು ಆ ಹಾದಿಯನ್ನು ಬಿಟ್ಟಳು. ನಾಳಿಗೆ ಅರಸನನ್ನು ದರ್ಬಾರಕ್ಕೆ ಹೋಗಗೊಡದಿದ್ದರೆ, ಅನಾಯಾಸವಾಗಿ ಅರಿಷ್ಟನಿವಾರಣ ವಾಗುವದೆಂದು ಆಕೆಯು ಸಮಾಧಾನಪಟ್ಟಳು; ಆದರೆ ಅರಸನ ಬದಲು ಮತ್ತೆ ಯಾರಾದರೂ ಸಮಾರಂಭದಿಂದ ಹೋಗುವಾಗ ದಾರುಕರ್ಮನು ತಿಳಿಯದೆ ತನ್ನ ಘೋರಕೃತ್ಯವನ್ನು

ಮಾಡಿದರೆ, ನನ್ನ ಹೊರಣವೆಲ್ಲ ಹೊರಬಿದ್ದು ನನ್ನ ಬಾಳು ಯಾತಕ್ಕೂ ಬಾರದ್ದಾಗುವದೆಂದು ಅಸಮಾಧಾನಪಟ್ಟಳು. ಕಡೆಗೆ ಆಕೆಯು ಚಾಣಕ್ಯನನ್ನು ಕರಿಸಿಕೊಂಡು ದಾರುಕರ್ಮನ ಕೈಯಿಂದಾಗಬೇಕಾಗಿದ್ದ ಘೋರಕೃತ್ಯವನ್ನು ನಿಲ್ಲಿಸಿಬಿಟ್ಟರೆ, ಅನಾಯಾಸವಾಗಿ ಅರಿಷ್ಟವು ಹಿಂಗುವದೆಂದು ಹಿಗ್ಗಿದಳು; ಆದರೆ, ಚಾಣಕ್ಯನು ತನ್ನ ಮಾತು ಕೇಳಬಹುದೋ? ಆತನು ಒಡ್ಡಿರುವ ತನ್ನ ಬಲೆಯನ್ನು ಸುತ್ತಿಕ್ಕೊಳ್ಳಬಹುದೋ? ತನ್ನ ಕುಟಿಲ ನೀತಿಯಿಂದ ಆತನು ಹಿಂದಕ್ಕೆ ಸರಿಯಬಹುದೋ? ಎಂಬ ಪ್ರಶ್ನೆಗಳು ಉತ್ಪನ್ನವಾಗಲು, ಚಾಣಕ್ಯನ ಕಠಿಣ ಹೃದಯದ ಸ್ಮರಣವಾಗಿ ಈ ಉಪಾಯವೂ ಆಕೆಗೆ ಸಮಾಧಾನಕರವಾಗಿ ಪರಿಣಮಿಸಲಿಲ್ಲ. ಕಡೆಗೆ ಒಂದರದೂ ನಿರ್ಧಾರವಾಗದೆ ಆಕೆಯ ಮನಸ್ಸು ಚಂಚಲವಾಯಿತು. ಜೀವವು ತಳಮಳಿಸ ತೊಡಗಿತು. ಅಷ್ಟರಲ್ಲಿ ಐದು ತಾಸು ರಾತ್ರಿಯ ಹೊತ್ತಿಗೆ ಅರಸನು ಎಚ್ಚತ್ತು ಮುರೆಯನ್ನು ಕರೆದನು. ಒಂದೇ ಸಾರೆ ಕರೆದದ್ದಕ್ಕೆ ಮುರೆಯು ಓ, ಎಂದು ಉತ್ತರಕೊಟ್ಟು ಕೂಡಲೇ ಬಂದು ಅರಸನ ಕಾಲು ಒತ್ತಹತ್ತಿದಳು. ಆಗ ಧನಾನಂದನು—''ಪ್ರಿಯೇ, ನೀನು ಇಷ್ಟು ಹೊತ್ತು ಎಚ್ಚತ್ತಿರುವದೇಕೆ'' ಎಂದು ಕೇಳಲು, ಮುರೆಯು, ಎಲ್ಲ ಸಂಗತಿಯನ್ನು ಈಗ ತಿಳಿಸಿಬಿಡ ಬೇಕೆಂದು ಯೋಚಿಸಿ, ಕೂಡಲೆ ತನ್ನ ದುಸ್ಥಿತಿಯ ಕಲ್ಪನೆಯಿಂದ ಹಿಂದಕ್ಕೆ ಸರಿದು ನುಡಿದ ಳೇನಂದರೆ – ಏನು ಮಾಡಲಿ, ಇಂದು ಯಾಕೋ ನಿದ್ದೆಯೇ ಬರಲೊಲ್ಲದು. ಮನಸ್ಸಿಗೆ ಯಾಕೋ ಒಂದು ತರವಾಗಿದೆ. ಮನಸ್ಸು ಚಡಪಡಿಸುತ್ತದೆ, ಇಂದು ಏನಾದರೂ ಭಯಂಕರ ಪರಿಣಾಮವು ಒದಗುವದೆಂಬ ವಿಚಾರವು ಮನಸ್ಸಿನಲ್ಲಿ ಬರಹತ್ತಿದೆ.

ಮುರೆಯ ಮಾತುಗಳನ್ನು ಕೇಳಿ ಅರಸನು – ಪ್ರಿಯೇ, ನನ್ನ ಮನಸ್ಸಿಗೂ ಸಮಾಧಾನವಿಲ್ಲ. ಇದೇ ಈಗ ಬಿದ್ದಿರುವ ಭಯಂಕರ ಸ್ವಪ್ನದಿಂದ ನನ್ನ ಜೀವವು ಭಯಗ್ರಸ್ತವಾಗಿದೆ, ಅನ್ನಲು, ಮುರೆಯು ಸ್ವಪ್ನವೇನು ಬಿದ್ದದೆ; ಹೇಳಬೇಕೆಂದು ಆಗ್ರಹ ಮಾಡಿದಳು ಅದಕ್ಕೆ ದನಾನಂದನು– ಪ್ರೀಯೆ, ಬೇಡ; ಸ್ವಪ್ನದ ಸಂಗತಿಯನ್ನು ಕೇಳಿದರೆ ನಿನಗೆ ಅಸಮಾಧಾನವಾದೀತು, ಎಂದು ಎಷ್ಟು ಹೇಳಿದರೂ ಆಕೆಯು ಕೇಳಲಿಲ್ಲ, ಆಗ ಅರಸನು ಉಪಾಯಗಾಣದೆ ಸ್ವಪ್ನದ ಸಂಗತಿ ಯನ್ನು ಹೇಳತೊಡಗಿದನು—''ಪ್ರಿಯೇ ಸ್ವಪ್ನದಲ್ಲಿ ನಾವಿಬ್ಬರೇ ಒಂದು ಘೋರವಾದ ಅರಣ್ಯಕ್ಕೆ ಹೋಗಿದ್ದೆವು. ಅಲ್ಲಿ ಒಂದೂ ನರಪ್ರಾಣಿಯಿದ್ದಿಲ್ಲ, ಕಗ್ಗತ್ತಲೆಯು ಮುಸುಗಿತ್ತು, ನೀನು ಲೀಲೆಯಿಂದ ನನ್ನ ಧನುಷ್ಯಬಾಣಗಳನ್ನೂ, ಖಡ್ಗವನ್ನೂ ನನ್ನ ಕೈಯಿಂದ ಇಸುಕೊಂಡಿ. ಅಷ್ಟರಲ್ಲಿ ಅಕ್ರಾಳ–ವಿಕ್ರಾಳವಾದ ಒಂದು ಹುಲಿಯು ಬಾಲವನ್ನು ಅಪ್ಪಳಿಸುತ್ತ, ಭ್ರಯಂಕರವಗಿ ಗರ್ಜಿಸುತ್ತ ನನ್ನ ಮೈಮೇಲೆ ಬಂದಿತು, ಏನು ಭಯಂಕರ ಸ್ವರೂಪವದು? ಮುರೇ, ಮುಂದಿನ ಸ್ವಪ್ನವನ್ನು ಹೇಳುವದಿಲ್ಲೆಂದರೂ ನೀನೂ ಕೇಳಲೊಲ್ಲೆ, ಸ್ವಪ್ನವನ್ನು ಕೇಳಿ ಸಿಟ್ಟಾಗಬೇಡ ಕಂಡೆಯಾ? ಮುಂದೆ ಹೇಳುತ್ತೇನೆ ಕೇಳು. ಹುಲಿಯು ನನ್ನ ಮೈಮೇಲೆ ಬರಲು, ನಾನು ಖಡ್ಗವನ್ನೂ, ಬಿಲ್ಲು– ಬಾಣಗಳನ್ನೂ ಕೊಡೆಂದು ನಿನ್ನನ್ನು ಕೇಳಿದೆನು. ನೀನು ಕೊಡದೆ ದೂರ ಓಡಿಹೋಗಹತ್ತಿದೆ. ಆಗ ನಾನು – ಪ್ರಿಯೇ, ಮುರೇ, ದಯಮಾಡಿ ಖಡ್ಗವನ್ನು ಕೊಡು, ಕೊಡದಿದ್ದರೆ ಹುಲಿಯು ನನ್ನನ್ನು ತಿಂದುಬಿಡುವದು, ಎಂದು ಹೇಳಿಕೊಂಡೆನು; ಆದರೆ ನೀನು ಖಡ್ಗವನ್ನು ಕೊಡದೇ ನನಗೆ ತಿರುಗಿ–

ತಿನ್ನಲೊಲ್ಲದು! ನನ್ನ ಕೂಸನನ್ನು ಹುಲಿಯು ಹ್ಯಾಗೆ ತಿಂದಿರಬಹುದೆಂಬದರ ಅನುಭವವು ನಿಮಗಾಗಲಿ. ಹುಲಿಯು ನಿಮ್ಮನ್ನು ತಿನ್ನಬೇಕೆಂತಲೇ ನನ್ನ ಮನಸ್ಸಿನಲ್ಲಿದೆ. ಎಂದು ಅಂದದ್ದರಿಂದ ನಾನು ಚಕಿತನಾದೆನು. ಪ್ರಿಯೇ, ಇದು ಕನಸು; ನೀನು ಮನಸ್ಸಿಗೆ ಹಚ್ಚಿಕೊಳ್ಳಬೇಡ ಕಂಡೆಯಾ,'' ಅನ್ನಲು, ಮುರೆಯು ಬೆರಗಾದಳಲ್ಲದೆ, ಅವಳ ಮೋರೆಯು ಕಪ್ಪಿಟ್ಟಿತು.

ದೈವದುರ್ವಿಪಾಕ

ಅರಸನ ಕನಸನ್ನು ಕೇಳಿ ಮುರಾದೇವಿಯ ಮೈಯು ಝೋರೆಂದು ಬೆವತಿತು. ತನ್ನ ಘೋರ ಕೃತ್ಯದ ಸುದ್ದಿಯು ಅರಸನಿಗೆ ಹತ್ತಿರುವದರಿಂದ ಆತನು ತನ್ನ ಮನಸ್ಸನ್ನು ನೋಡುವದಕ್ಕಾಗಿ ಕನಸನ್ನು ಹುಟ್ಟಿಸಿಕೊಂಡು ಹೇಳಿರುವನೋ ಏನೋ ಎಂದು ಆಕೆಯು ಬೆದರಿದಳು. ಅವಳ ಎದೆಯು ಹಾರಹತ್ತಿತ್ತು, ಮೋರೆಯು ಸಪ್ಪಗಾಯಿತು. ಕಣ್ಣು ಕತ್ತಲುಗೂಡಿಸಹತ್ತಿದವು. ಅರಸನು ಇದನ್ನೆಲ್ಲ ನೋಡಿ ಮುರೆಯ ಕುಟಿಲ ಹೃದಯವನ್ನು ತಿಳಿಯದೆ, ಆಕೆಯು ಬಹು ಅಂತಃಕರಣ ದವಳೆಂದು ಭಾವಿಸಿ ಕನಿಕರದಿಂದ–ಪ್ರಿಯೇ, ಎಂಥ ಪುಕ್ಕಿಯು ನೀನು! ಕನಸಿನೊಳಗಿನ ಹುಲಿಯ ಸುದ್ದಿಯನ್ನು ಕೇಳಿ ಇಷ್ಟು ಅಂಜಿದಬಳಿಕ, ನಿಜವಾದ ಹುಲಿಯು ನನ್ನ ಮೈಮೇಲೆ ಬಂದದ್ದನ್ನು ನೋಡಿದ್ದರೆ ಏನು ಮಾಡುತ್ತಿದ್ದೆಯೋ ತಿಳಿಯದು, ಅನ್ನಲು, ಮುರೆಯು ಸ್ವಲ್ಪ ಸಮಾಧಾನವನ್ನು ತಾಳಿ–ಆರ್ಯಪುತ್ರಾ, ಮಾಡುವದೇನು? ಅಂಥ ಪ್ರಸಂಗದಲ್ಲಿ ನನ್ನ ಪ್ರಾಣವು ನೆತ್ತಿಯಿಂದ ಹೋಗುವದೇ ಸರಿ; ಆದರೆ ಕನಸಿನಲ್ಲೇ ಆಗಲೊಲ್ಲದೇಕೆ, ನಾನು ಅಂಥ ಕಠಿಣ ಪ್ರಸಂಗದಲ್ಲಿ ತಮಗೆ ಖಡ್ಗವನ್ನು ಕೊಡಲಿಲ್ಲೆಂಬ ಸಿಟ್ಟಿನಿಂದ ತಾವು ನನ್ನನ್ನು ಬಿಡುವ ದಿಲ್ಲವಷ್ಟೇ? ಕನಸು ಕೇಳಿದಾಗಿನಿಂದ ನನಗೆ ಅಂಜಿಕೆ ಬರಹತ್ತಿದೆ. ಒಂದು ಸಾರೆ ನಾನು ಪೆಟ್ಟು ತಿಂದದ್ದರಿಂದ ಹೀಗೆ ಕೇಳಿಕೊಳ್ಳುತ್ತೇನೆ. ತಮ್ಮ ಹೊರತು ನನಗೆ ಯಾರೂ ಗತಿಯಿಲ್ಲ, ದೇವರೇ, ಯಾಕೆ ಇಂಥ ದುಷ್ಟ ಸ್ವಪ್ನವನ್ನು ಕೆಡವಿಸಿ ಆರ್ಯಪುತ್ರರಿಗೆ ಅಸಮಾಧಾನವನ್ನುಂಟುಮಾಡಿದೆ, ಎಂದು ಅರಸನನ್ನು ಬಿಗಿಯಾಗಿ ಅಪ್ಪಿಕೊಂಡಳು. ಆಗ ಧನಾನಂದನು ಆಕೆಯನ್ನು ಸಂತಯಿಸಿ–ಪ್ರಿಯೇ, ನನ್ನ ಹೃದಯದಲ್ಲಿ ನಿನ್ನ ವಿಷಯದ ಗಾಢಪ್ರೇಮದ ಹೊರತು ಮತ್ತೊಂದಿಲ್ಲ, ಸುಮ್ಮನೇ ಶೋಕಮಾಡುವದೇಕೆ? ನಾನು ಸಮಾಧಾನದಿಂದಿರಬೇಕೆಂದು ನಿನ್ನ ಮನಸ್ಸಿನಲ್ಲಿರುವ ದಿಲ್ಲವೋ? ನಾನು ಏನು ಮಾಡಿದರೆ ನಿನಗೆ ನಂಬಿಗೆಯಾಗುವದು ಹೇಳು, ಮಾಡುತ್ತೇನೆ, ಅನ್ನಲು, ಮುರೆಯು – ಆರ್ಯಪುತ್ರರೇ, ನಾಳೆ ತಾವು ದರ್ಬಾರಕ್ಕೆ ಹೋಗಬಹುದೆಂದು ನಾನು ಹೇಳಿದ್ದು ನಿಜವು; ಆದರೆ ಈಗ ನನ್ನ ಮನಸ್ಸಿಗೆ ಯಾಕೋ ನೆಟ್ಟಗಾಗಲೊಲ್ಲದು. ಕೆಟ್ಟ ಕೆಟ್ಟ ಕನಸುಗಳು ಬೀಳುವದರಿಂದ ನನ್ನ ಮನಸ್ಸಿಗೆ ಬಹಳ ಅಸಮಾಧಾನವಾಗಿದೆ; ನಾಳೆ ತಾವು ದರ್ಬಾರಕ್ಕೆ ಹೋಗಬಾರದು; ಅಂದರೆ ನನ್ನ ಮನಸ್ಸಿಗೆ ನೆಟ್ಟಗಾಗುತ್ತದೆ, ಎಂದಳು. ಅದಕ್ಕೆ ಅರಸನು ಒಪ್ಪಲಿಲ್ಲ ''ವಿನಾಶಕಾಲೇ ವಿಪರೀತ ಬುದ್ಧಿಃ'' ಎಂದು ಮಾತು ಸುಳ್ಳಲ್ಲ, ಆಕಸ್ಮಿಕವಾಗಿ

ಮುರೆಯ ಮನಸ್ಸು ತಿರುಗಿ, ಆಕೆಯು ಪತಿಯ ಪ್ರಾಣಹಾನಿಯನ್ನು ತಪ್ಪಿಸಬೇಕೆಂದು ಯತ್ನಿಸಿದರೂ, ಪ್ರಯೋಜನವಾಗಲಿಲ್ಲ. ಅರಸನು ಹಟವನ್ನೇ ಹಿಡಿದು ಮುರೆಗೆ–ಪ್ರಿಯೇ, ಇಲ್ಲಿಂದ ಹೋದರೆ ಅತ್ತೇ ಹೋಗುವೆನೆಂಬ ಭಯವು ನಿನಗೆ ಬಹಳವಾಗಿರುತ್ತದೆ. ಈ ಭಯವನ್ನು ದೂರಮಾಡುವದಕ್ಕಾಗಿಯೇ ನಾನು ನಾಳೆ ದರ್ಬಾರಕ್ಕೆ ಹೋಗಿಯೇ ತೀರುವೆನು. ನೀನು ಬೇಡೆಂದರೂ ಕೇಳುವದಿಲ್ಲ. ಹೀಗೆ ಮಾಡಿದರೆ ನಿನ್ನ ಅಂಜಿಕೆಯಾದರೂ ಕಡಿಮೆಯಾದೀತು. ಹೋಗುವದೇ ನಿಶ್ಚಯವು. ಇನ್ನು ನೀನು ಏನು ಹೇಳಿದರೂ ಕೇಳುವದಿಲ್ಲ. ನಡೆ, ಇನ್ನು ಹೆಚ್ಚಿಗೆ ಮಾತಾಡಬೇಡ. ಬೆಳಗಿನ ಸಕ್ಕರೆಯ ಜಂಪು ತಕ್ಕೊಳ್ಳುವೆನು. ನೀನೂ ಮಲಗಿಕೋ, ಇನ್ನು ಪಿಟ್ಟೆಂದು ಮಾತಾಡಬೇಡ, ಎಂದು ನುಡಿದು ಎರಡನೇಯ ಮಗ್ಗಲಾಗಿ ಮಲಗಿಕೊಂಡು ಆತನು ಸ್ವಲ್ಪ ಹೊತ್ತಿನಲ್ಲಿ ಗುರು ಗುರು ನಿದ್ದೆ ಮಾಡಹತ್ತಿದನು.

ಆಗ ಬೆಳಗಾಗಲಿಕ್ಕೆ ಇನ್ನು ಮೂರುತಾಸು ರಾತ್ರಿಯಿತ್ತು, ಮುರೆಯು ಚಡಪಡಿಸಹತ್ತಿದಳು. ಏನುಮಾಡಿದರೂ ಆಕೆಗೆ ನಿದ್ದೆಯ ಬರಲೊಲ್ಲದು. ಅರಸನ ಪ್ರಾಣವನ್ನು ಉಳಿಸಿಕೊಳ್ಳುವದಕ್ಕೆ ಏನು ಉಪಾಯ ಮಾಡಬೇಕು? ಈ ಕಾರ್ಯದಲ್ಲಿ ತನಗೆ ಯಾರು ಸಹಾಯ ಮಾಡಬಹುದು? ಎಂದು ಆಕೆಯ ಚಿಂತಿಸತೊಡಗಿದಳು. ಕ್ಷಣಕ್ಷಣಕ್ಕೆ ಆಕೆಯ ಮನಸ್ಸು ಬದಲಾಗುತ್ತಿತ್ತು ಒಂದೂ ದೃಢವಾಗದೆ ಆಕೆಯು ಬೇಸತ್ತು ಕಡೆಗೆ ಸುಮತಿಕೆಯ ಬಳಿಗೆ ಹೋಗಿ ಮಲಗಿದಾಕೆಯನ್ನು ಎಬ್ಬಿಸಿ – ಸುಮತಿಕೇ, ನನ್ನ ಪ್ರತಿಜ್ಞೆಯು ಪೂರ್ಣವಾಗಲಿಕ್ಕೆ ಇನ್ನು ಕೆಲವು ತಾಸುಗಳ ಅವಧಿಮಾತ್ರ ಉಳಿದದೆ. ಈ ಕಾರ್ಯದಲ್ಲಿ ನೀನು ಮಾಡಿದ ಸಹಾಯವನ್ನು ನಾನು ಮರೆಯುವಹಾಗಿಲ್ಲ; ಇದೆಲ್ಲ ಸರಿಯಾಯಿತು; ಆದರೆ ಇಷ್ಟು ಸಾಹಸಮಾಡಿ, ನನ್ನ ಸೋದರಳಿಯನಿಗೆ ರಾಜ್ಯವನ್ನು ಸಂಪಾದಿಸಿಕೊಟ್ಟರೆ ನನಗೆ ಬರುವದೇನು? ಮಹಾರಾಜರೇ ಚಿರಾಯುವಾಗಿದ್ದು ನಾನು ಹೀಗೆಯೇ ಸುಖವನ್ನು ಭೋಗಿಸಹತ್ತಿದರೆ ಕೆಟ್ಟದ್ದೇನು? ಪತಿಘ್ನಳೆಂದು ಲೋಕದಲ್ಲಿ ಅಪಕೀರ್ತಿಯನ್ನು ಹೊಂದಿ ಚಿರಕಾಲ ನರಕದಲ್ಲಿ ತೊಳಲಾಡಲಿಕ್ಕೆ ನಾನು ಒಲ್ಲೆನು. ಅರಸನು ನಿಷ್ಕಾರಣ ನನ್ನ ಮಗನನ್ನು ಕೊಲ್ಲಿಸಿ, ನನ್ನನ್ನು ಸೆರೆಯಲ್ಲಿಟ್ಟು, ಪೀಡಿಸಿದನೆಂಬ ರೊಚ್ಚಿನಿಂದ ವಿಚಾರಿಗೇಡಿಯಾಗಿ ಪ್ರತಿಜ್ಞೆ ಮಾಡಿದೆನು. ಆ ಹಾಳು ಪ್ರತಿಜ್ಞೆಯಿಂದ ಪರಿಣಾಮದಲ್ಲಿ ಹಿತವಾಗದು. ದರ್ಬಾರಕ್ಕೆ ಹೋಗದಂತೆ ಯುಕ್ತಿ–ಪ್ರಯುಕ್ತಿಗಳಿಂದ ಮಹಾರಾಜರನ್ನು ನಾನು ತಡೆಯುವೆನು. ಅದು ಸಾಧಿಸದಿದ್ದರೆ, ಇದ್ದ ಸಂಗತಿಯನ್ನು ಮಹಾರಾಜರಿಗೆ ತಿಳಿಸಿ ಅವರ ಕಾಲುಬಿದ್ದು ಕ್ಷಮೆಯನ್ನು ಬೇಡಿಕೊಳ್ಳುವೆನು. ಅದರ ಮೇಲೆ ಅವರು ನನ್ನನ್ನು ಕ್ಷಮಿಸಿದರೂ ಸರಿಯೇ, ಶೂಲಕ್ಕೇರಿಸಿದರೂ ಸರಿಯೆ. ಆದರೆ ಕಾರಣವಿಲ್ಲದೆ ಅವರ ಪ್ರಾಣಘಾತವನ್ನು ಮಾತ್ರ ನಾನು ಆಗಗೊಡಲಿಕ್ಕಿಲ್ಲ, ನೀನು ಚಾಣಕ್ಯನಲ್ಲಿಗೆ ಹೋಗಿ ಇದನ್ನೆಲ್ಲ ತಿಳಿಸಿ, ಚಂದ್ರಗುಪ್ತನನ್ನು ಕಟ್ಟಿಕೊಂಡು ತಡಮಾಡದೆ ಎಲ್ಲಿಗಾದರೂ ಹೊರಟುಹೋಗೆಂದು ಆತನಿಗೆ ತಿಳಿಸು, ಸುಮತಿಕೇ, ನಮ್ಮ ಘೋರ ನಾಟಕವು ಬೈಲಿಗೆ ಬೀಳದೆ, ಅರಸನ ಪ್ರಾಣವು ಉಳಿಯುವಂತೆ ನೀನು ಯುಕ್ತಿಯನ್ನೇನಾದರೂ ಹೇಳುವೆಯೇನು? ಇಲ್ಲದಿದ್ದರೆ ನಾನಂತು ಈಗ ನುಡಿದಂತೆ ಮಾಡುವದು ನಿಶ್ಚಯವು.

ಈ ಮೇರೆಗೆ ಮುರಾದೇವಿಯು ಹೊಟ್ಟೆಯಲ್ಲಿದ್ದದ್ದನ್ನೆಲ್ಲ ಬಡಬಡಕಾರಿಕೊಂಡಂತೆ ಮಾಡಿ, ಎಲ್ಲವನ್ನು ಸುಮತಿಕೆಯ ಮುಂದೆ ಒಮ್ಮೆ ಹೇಳಿಬಿಟ್ಟಳು. ಅದನ್ನು ಕೇಳಿ ಸುಮತಿಕೆಗೆ ಬಹಳ ಆಶ್ಚರ್ಯವಾಯಿತು. ತಾನು ಈ ಕೇಳುವದು ಕನಸೋ, ಎಚ್ಚರವೋ ಎಂಬದೇ ಆಕೆಗೆ ತಿಳಿಯಲೊಲ್ಲದು. ಆಕೆಯು ತಟ್ಟನೆ ತನ್ನ ಒಡೆಯಳಿಗೆ – ದೇವೀ, ನಿಮ್ಮ ಮನಸ್ಸು ಒಮ್ಮೆಲೆ ಹೀಗೆ ತಿರುಗಲಿಕ್ಕೆ ಕಾರಣವೇನು? ನಾವೇನು, ತಮ್ಮ ಅಪ್ಪಣೆಯಂತೆ ನಡಕೊಳ್ಳತಕ್ಕವರು. ಚಾಣಕ್ಯನನ್ನು ಕರಕೊಂಡು ಬಾರೆಂದು ಹೇಳಿದರೆ, ಈಗಲೇ ಕರಕೊಂಡು ಬರುವೆನು, ಅನ್ನಲು, ಮುರೆಯು–ಹೋಗು, ಕರಕೊಂಡು ಬಂದುಬಿಡು. ನಾನು ಗಟ್ಟಿಮಾಡಿದ್ದೇನೆ, ಇನ್ನು ನನ್ನ ವಿಚಾರವು ತಿರುಗುವ ಹಾಗಿಲ್ಲ. ಮಹಾರಾಜರ ಮುಂದೆ ನಿಜವಾದ ಸಂಗತಿಯನ್ನೆಲ್ಲ ಹೇಳಿ ಬಿಟ್ಟರೆ, ಪಾಪ! ಆ ಬ್ರಾಹ್ಮಣನು ಪ್ರಾಣಕ್ಕೆ ಎರವಾದಾನು; ಆದ್ದರಿಂದ ಆತನನ್ನು ಮೊದಲೇ ಎಚ್ಚರಗೊಳಿಸಿ ಆತನು ಓಡಿಹೋಗುವಂತೆ ಮಾಡುವದು ಯೋಗ್ಯವು. ಹೋಗು–ಹೋಗು, ಸುಮತಿಕೇ, ಇನ್ನು ಕ್ಷಣವಾದರೂ ನಿಲ್ಲಬೇಡ. ಇನ್ನೊಂದು ಕ್ಷಣಕ್ಕೆ ನನ್ನ ಮನಸ್ಸು ಏನಾಗುವದೋ ತಿಳಿಯದು, ಎಂದು ಹೇಳಿದಳು. ಈ ಪ್ರಸಂಗದಲ್ಲಿ ಆರ್ಯ ಚಾಣಕ್ಯನೇ ಬಂದರೆ ನೆಟ್ಟಗೆಂದು ದಾಸಿಯು ತಿಳಿದು, ಚಾಣಕ್ಯನ ಬಳಿಗೆ ಹೋಗಿ ಸ್ವಲ್ಪಹೊತ್ತಿನಲ್ಲಿಯೇ ಆತನನ್ನು ಕರಕೊಂಡು ಬಂದಳು.

ಮುರೆಯು ತನ್ನನ್ನು ಕರೆಸಿದ ಕಾರಣವೇನೆಂಬದನ್ನು ಚಾಣಕ್ಯನು ಮಾರ್ಗದಲ್ಲಿ ಸುಮತಿಕೆಯ ಮುಖದಿಂದ ಕೇಳಿಕೊಂಡಿದ್ದನು. ಇಂಥ ಪ್ರಸಂಗವು ಬರಬಹುದೆಂದು ಆ ಧೂರ್ತನು ಮೊದಲೇ ಯೋಚಿಸಿ ಎಚ್ಚರದಿಂದ ಇದ್ದನು. ದಾಯಾದಿಗಳೊಡನೆ ಯುದ್ಧಕ್ಕೆ ನಿಂತಿದ್ದ ಅರ್ಜುನನಂತವನೂ ಮೋಹಕ್ಕೆ ಸಿಲುಕಿ, ತನ್ನ ಧನುಸ್ಸನ್ನು ಕೆಳಗಿಟ್ಟಿರಲು, ಹೆಂಗಸು ಪ್ರತ್ಯಕ್ಷ ತನ್ನ ಪತಿಯ ಕೊಲೆಯ ಪ್ರಸಂಗದಲ್ಲಿ ಮನಸ್ಸು ತಿರುಗಿಸದೆ ಇರುವದು, ಅಶಕ್ಯವೆಂದು ಆತನು ಭಾವಿಸಿದ್ದನು. ಅಂಥ ಪ್ರಸಂಗವು ಒದಗಿದಾಗ ಮಾಡಬಹುದಾದ ಉಪಾಯವನ್ನು ಆತನು ಮೊದಲೇ ಯೋಚಿಸಿದ್ದನು. ಸುಮತಿಕೆಯು ಚಾಣಕ್ಯನನ್ನು ಹೋಮಶಾಲೆಯಲ್ಲಿ ಕುಳ್ಳಿರಿಸಿ, ಆತನು ಬಂದ ಸುದ್ದಿಯನ್ನು ಮುರೆಗೆ ಹೇಳಿದಳು. ಮುರೆಯು ಕೂಡಲೇ ಸಾಂಕೇತಿಕ ಸ್ಥಾನಕ್ಕೆ ಬರಲು, ಚಾಣಕ್ಯನು ಆಕೆಯ ಎದುರಿಗೆ ಹೋಗಿ ನಿಂತುಕೊಂಡು–ದೇವೀ, ಇಷ್ಟು ಅವಸರದಿಂದ ನನ್ನನ್ನು ಕರೆಸಿದ ಕಾರಣವೇನು? ನಿನ್ನ ಪ್ರತಿಜ್ಞೆಗೆ ವಿಘ್ನವೇನಾದರೂ ಒದಗಿದ್ದರೆ ಹೇಳು, ದೂರಮಾಡುವೆನು, ಅನ್ನಲು, ಮುರೆಯು–ಬಾಹ್ಮಣಶ್ರೇಷ್ಠಾ, ನಾವು ಕೈಕೊಂಡ ಕೆಲಸವನ್ನು ಕೊನೆಗಾಣಿಸಬೇಕೆಂದರೆ ವಿಘ್ನಗಳೇನೂ ಬರುವಹಾಗಿಲ್ಲ; ಆದರೆ ಆ ಪ್ರಾಣಹಿಂಸೆಯ ಕಾರ್ಯವನ್ನು ಮಾಡಲಿಕ್ಕೆ ನನ್ನ ಮನಸ್ಸು ಒಪ್ಪಲೊಲ್ಲದು. ಅದಕ್ಕಾಗಿ ನಿಮ್ಮನ್ನು ಕರೆಸಿದ್ದೇನೆ; ನೀವು ರಚಿಸಿದ ವ್ಯೂಹವನ್ನು ಮುರಿದು ಬಿಡಿರಿ. ಅದು ಶಕ್ಯವಲ್ಲದಿದ್ದರೆ, ಈ ದಿನ ಮಹಾರಾಜರನ್ನು ದರ್ಬಾರಕ್ಕೆ ಹೋಗದಂತೆಯೇ ಮಾಡುವೆನು; ಅವರು, ಹೋಗಿಯೇ ತೀರುವೆನೆಂದು ಹಟಹಿಡಿದರೆ, ನಿಜವಾದ ಸಂಗತಿಯನ್ನು ಅವರಿಗೆ ತಿಳಿಸಿ ಕ್ಷಮೆಯನ್ನು ಬೇಡುವೆನು. ತಾವು ಚಂದ್ರಗುಪ್ತನನ್ನು ಕರಕೊಂಡು ಈಗಲೇ ಹೊರಟು ಹೋಗಬೇಕು. ಇಲ್ಲದಿದ್ದರೆ ತಮ್ಮ ಜೀವದಸುತ್ತ ಬಂದೀತು.

ಮುರೆಯ ಈ ಮಾತುಗಳನ್ನು ಕೇಳಿ ಚಾಣಕ್ಯನು ನಕ್ಕು–ದೇವೀ, ಮುರೇ, ಮನಸ್ಸಿನ ವಿಚಾರವನ್ನು ತಿರುಗಿಸಲಿಕ್ಕೆ ಹೊತ್ತನ್ನು ಮಾತ್ರ ಬಹುಯೋಗ್ಯವಾಗಿ ಆರಿಸಿದೆ! ನಾನು ಬ್ರಾಹ್ಮಣನು, ಕೇವಲ ಯಜನ–ಯಾಜನ, ಪಠನ–ಪಾಠನಗಳನ್ನು ಮಾಡಿಕೊಂಡು ಇರುವವನು. ಇಂಥ ನನ್ನನ್ನು ಸುಮ್ಮನೆ ಸಂಕಟದಲ್ಲಿ ಕೆಡವಿದೆ. ನಿನ್ನ ಪ್ರತಿಜ್ಞೆಯನ್ನು ಪೂರ್ಣಮಾಡುವದಕ್ಕಾಗಿ ಚಂದ್ರಗುಪ್ತನನ್ನು ಇಲ್ಲಿಗೆ ಕರಕೊಂಡು ಬಂದೆನು. ಆತನಿಗೆ ರಾಜ್ಯ ಪದವು ಪ್ರಾಪ್ತವಾಗುವ ಸಂಧಿಯಲ್ಲಿ ಹೀಗೆ ಮಾತಾಡ ಹತ್ತಿದ ಬಳಿಕ ನಿನಗೆ ಏನನ್ನಬೇಕೆ? ಅಲ್ಲೇ ಹುಚ್ಚೀ, ಈಗ ನೀನು ನಿನ್ನ ವಿಚಾರಗಳನ್ನು ತಿರುಗಿಸಿದ..... ಹೀಗೆ ಚಾಣಕ್ಯನು ಒತ್ತಿ ಮಾತಾಡುತ್ತಿರಲು, ಮುರೆಯು ನಡುವೇ ಬಾಯಿಹಾಕಿ–ವಿಪ್ರಶ್ರೇಷ್ಠಾ, ಹೀಗೆ ಒದರಿ ಮಾತಾಡಬೇಡ. ಈ ಗದ್ದಲಕ್ಕೆ ಮಹಾರಾಜರು ಎದ್ದರೆ, ನಾಳೆ ಬರುವ ಸಂಕಟವನ್ನು ಇಂದೇ ತಂದುಕೊಂಡ ಹಾಗಾದೀತು. ಇನ್ನು ನೀನು ಮಾತುಗೀತು ಆಡುವ ಗೋಜಿಗೆ ಹೋಗದೆ, ಮೊದಲು ಚಂದ್ರಗುಪ್ತನನ್ನು ಕರಕೊಂಡು ಹಾದಿಯನ್ನು ಹಿಡಿ; ಇನ್ನು ನನ್ನ ಮನಸ್ಸು ತಿರುಗುವಹಾಗಿಲ್ಲ, ನಾನು ಪತಿಯ ಸಂಹಾರವನ್ನು ಎಂದಿಗೂ ಆಗಗೊಡುವದಿಲ್ಲ.

ಚಾಣಕ್ಯ—ಆಗಗೊಡಬೇಡ; ಆದರೆ ನಿನ್ನ ಮಗನ ಸಂಹಾರವನ್ನು ನಿನ್ನ ಕೈಯಿಂದ ಮಾಡುವೆಯೋ ಏನು?

ಮುರೆ—ಮಗನ ಸಂಹಾರವು? ನನಗೆ ಮಗನೆಲ್ಲಿ ಇರುವನು?

ಚಾಣಕ್ಯ ಎಲ್ಲಿ ಇರುವನೆಂದು ಯಾಕೆ ಕೇಳುತ್ತೀ? ನಿನ್ನ ಮಗನು ನಿನ್ನ ಬಳಿಯಲ್ಲಿಯೇ ಇರುತ್ತಾನೆ. ಹಡೆದ ತಾಯಿಯಾದ ನೀನು ಇಷ್ಟು ಹೊತ್ತಿಗೆ ನಿನ್ನ ಮಗನ ಗುರುತು ಹಿಡಿದೀಯೆಂದು ಮಾಡಿದ್ದೆನು; ಆದರೆ ನೀನು ಹಿಡಿಯಲಿಲ್ಲ. ಎಂದಾದರೂ ಈ ಮಾತು ನಾನು ನಿನಗೆ ಹೇಳುವವನೇ ಇದ್ದೆನು; ಆದರೆ ಇಂದೇ ಅದನ್ನು ಹೇಳಬೇಕಾಯಿತು.

ಮುರೆ—ವಿಪ್ರಶ್ರೇಷ್ಠಾ, ನನ್ನೊಡನೆ ನೀನು ವಿನೋದ ಮಾಡುವಿಯೋ ಏನು? ನನ್ನ ಮಗನನ್ನು ಕೂಸಿರುವಾಗಲೇ ಕೊಲ್ಲಿಸಿಬಿಟ್ಟದ್ದಾರೆ. ಇನ್ನೆಲ್ಲಿಯ ಮಗನು?

ಚಾಣಕ್ಯ—ದೇವೀ, ನಾನು ಯಾವಜ್ಜನ್ಮ ಯಾರೊಡನೆಯೂ ವಿನೋದ ಮಾಡಿಲ್ಲ. ಅಂದಬಳಿಕ ಇಂಥ ಪ್ರಸಂಗದಲ್ಲಿ ವಿನೋದದ ಮಾತೇಕೆ? ಅರಸನು ನಿನ್ನ ಮಗನನ್ನು ಕೊಲ್ಲಲಿಕ್ಕೆ ಕಳಿಸಿದ್ದು ನಿಜವು; ಆದರೆ ಕೊಲೆಗಡಕರು ಆತನನ್ನು ಕೊಲ್ಲದೆ ಹಿಮಾಲಯದ ಅಡವಿಯಲ್ಲಿ ಸ್ವಚ್ಛ ಬೆಳದಿಂಗಳೊಳಗೆ ಒಂದು ಆಲದ ಮರದ ಬುಡದಲ್ಲಿ ಮಲಗಿಸಿ ಹೋಗಿ ಬಿಟ್ಟರು. ಆ ಕೂಸು ಒಬ್ಬ ಗವಳಿಗನಿಗೆ ಸಿಗಲು, ಆತನು ಅದರ ಸಂರಕ್ಷಣ ಮಾಡಿ, ಚಂದ್ರನಿಂದ ರಕ್ಷಿಸಲ್ಪಟ್ಟನೆಂದು ತಿಳಿದು ಆ ಕೂಸಿಗೆ ಚಂದ್ರಗುಪ್ತನೆಂದು ಹೆಸರಿಟ್ಟನು. ನಿನ್ನ ಬಳಿಯಲ್ಲಿರುವ ಚಂದ್ರಗುಪ್ತನೇ ನಿನ್ನ ಮಗನು.

ಮುರೆ—ಬ್ರಾಹ್ಮಣಶ್ರೇಷ್ಠಾ, ನಿನ್ನ ಮಾತಿಗೆ ನಾನು ಅನುಕೂಲವಾಗಬೇಕೆಂದು ನೀನು ನನ್ನನ್ನು ಮೋಸಗೊಳಿಸುವದಿಲ್ಲವಷ್ಟೇ? ಈ ಚಂದ್ರಗುಪ್ತನು ನನ್ನ ಮಗನೇ ಅನ್ನುವದಕ್ಕೆ ಆಧಾರವೇನು?

ಚಾಣಕ್ಯ—ಬೇರೆ ಆಧಾರವೇತಕ್ಕೆ? ನಿನ್ನ ಮುಖದಂತೆ ಆತನ ಮುಖವಿರುವದೇ ಆಧಾರವು.

ಮುರೆ—ಅಷ್ಟರಿಂದ ಈಗ ನನ್ನ ಮನಸ್ಸು ಸಮಾಧಾನವಾಗುವಂತೆಯಿಲ್ಲ, ಇದಕ್ಕೂ ವಿಶೇಷವೇನಾದರೂ ಇದ್ದರೆ ಹೇಳಿರಿ.

ಚಾಣಕ್ಯ—ದೇವೀ, ಇದು ವಿಶೇಷ ಸಂಗತಿಯನ್ನು ಹೇಳುವ ಹೊತ್ತೇ?

ಮುರೆ — ಹೊತ್ತು ಎಂಥದೇ ಯಾಕೆ ಇರಲೊಲ್ಲದು. ಸದ್ಯಕ್ಕೆ ನನ್ನ ಮನಸ್ಸಿನ ಸ್ಥಿತಿಯು ವಿಚಿತ್ರವಾಗಿರುವದು; ಆಧಾರ ಕೇಳದೆಯೇನು ಮಾಡಲಿ?

ಚಾಣಕ್ಯ—ನಿನಗೆ ಇನ್ನೂ ಆಧಾರ ಬೇಕಾಗಿದೆಯೋ? ಹಾಗಾದರೆ ಇದು ಏನಿದೆ ನೋಡು. ಕೂಸು ಮರದ ಬುಡದಲ್ಲಿ ಅಳುತ್ತ ಮಲಗಿರುವಾಗ ಅದರ ಮಣಿಕಟ್ಟಿನಲ್ಲಿ ಇದನ್ನು ಕಟ್ಟಿದ್ದರಂತೆ.

ಈ ಮೇರೆಗೆ ನುಡಿದು ಚಾಣಕ್ಯನು ರಕ್ಷಾಬಂಧವನ್ನು ಮುರೆಯ ಕೈಯಲ್ಲಿ ಕೊಟ್ಟನು. ಅದನ್ನು ನೋಡಿದ ಕೂಡಲೇ ಮುರೆಗೆ ಹೊಡೆದು ಎಬ್ಬಿಸಿದಂತೆ ಆಗಿ, ಆಕೆಯು ಆಶ್ಚರ್ಯ–ಆನಂದ–ಕಿಂಚಿತ್ಖೇದ ಈ ಮೂರು ವಿಕಾರಗಳ ಉದ್ವೇಗದಿಂದ ಸುಮ್ಮನೆ ಕುಳಿತುಕೊಂಡಳು. ಹೀಗೆ ಸುಮ್ಮನೇ ಕೂಡಗೊಡುವದೇ ಹಿತಕರವೆಂದು ತಿಳಿದು ಚಾಣಕ್ಯನೂ ಸ್ವಸ್ಥವಾಗಿ ಕುಳಿತು ಬಿಟ್ಟನು. ಕೆಲಹೊತ್ತಿನ ಮೇಲೆ ಮುರೆಯು ಚಾಣಕ್ಯನಿಗೆ – ವಿಪ್ರೋತ್ತಮಾ, ನೀನು ರಕ್ಷಾ ಬಂಧನವನ್ನು ತೋರಿಸಿದಾಗಿನಿಂದ ನನ್ನ ಮನಸ್ಸಿಗೆ ಏನೂ ತೋಚದಾಗಿದೆ. ನಾನು ಮಹಾರಾಜರನ್ನು ನಾಳೆ ದರ್ಬಾರಕ್ಕೆ ಹೋಗಗೊಡಲಾ? ಅವರ ಸಂಹಾರವನ್ನು ಮಾಡಿಸಲಾ? ಮಾಡಲಾದರೂ ಏನು? ಹಾ! ಅಪ್ಪಾ ನನಗೆ ಏನೂ ತೋಚಲೊಲ್ಲದು, ಅನ್ನಲು, ಚಾಣಕ್ಯನು–ದೇವೀ, ಇದರಲ್ಲಿ ತೋಚುವದೇನು? ನಿನ್ನ ಮಗನಿಗೆ ರಾಜ್ಯವು ದೊರೆಯಬೇಕೆಂದು ನಿನ್ನ ಮನಸ್ಸಿನಲ್ಲಿ ಇದ್ದರೆ, ಸುಮ್ಮನೆ ಕೊಡು. ಹಿಂದಕ್ಕೆ ಅರಸನಿಂದ ನಿನ್ನ ಮಗನ ನಾಶವಾಗಿಲ್ಲಾದ್ದರಿಂದ ಈಗ ನೀನು ಅರಸನ ಕೈಯಿಂದ ಅದನ್ನು ಮಾಡಿಸಿಕೊಳ್ಳಬೇಕೆಂದು ಇಚ್ಛಿಸುತ್ತಿದ್ದರೆ, ಎಲ್ಲ ಸಂಗತಿಯನ್ನು ಅರಸನಿಗೆ ತಿಳಿಸಿಬಿಡು. ಚಂದ್ರಗುಪ್ತನನ್ನು ಕರಕೊಂಡು ಓಡಿಹೋಗೆಂದು ನೀನು ನನಗೆ ಹೇಳುತ್ತೀ; ಆದರೆ ದೇವೀ, ನಾನು ಹಾಗೆಮಾಡತಕ್ಕವನಲ್ಲ, ಆತನನ್ನು ನಂದರ ಸಿಂಹಾಸನದ ಮೇಲೆ ಕೂಡ್ರಿಸದಿದ್ದರೆ ಪ್ರಾಣತ್ಯಾಗ ಮಾಡುವೆನೆಂದು ಪ್ರತಿಜ್ಞೆಯನ್ನು ಮಾಡಿದ್ದೇನೆ. ನನ್ನ ವ್ಯೂಹವು ಸಿದ್ಧಿಸಿದರೆ, ನನ್ನ ಪ್ರತಿಜ್ಞೆಯೂ ಸಿದ್ಧಿಸುವದು. ನಿನ್ನ ಮರಳತನದಿಂದ ನನ್ನ ವ್ಯೂಹಭಂಗವಾದರೆ, ನನ್ನ ಪ್ರತಿಜ್ಞೆಯ ಭಂಗವೂ ಆಗಿ ಅರಸನು ನನ್ನನ್ನೂ, ಚಂದ್ರ ಗುಪ್ತನನ್ನೂ ಕೂಡಿಯೇ ಕೊಲ್ಲಿಸುವನು. ನನಗೆ ಎರಡೂ ಸಮಾನವೆ. ಪ್ರತಿಜ್ಞೆಯು ಸಿದ್ಧಿಸದ ಪಕ್ಷದಲ್ಲಿ ನನ್ನ ಪ್ರಾಣವನ್ನು ನಾನು ಕಳಕೊಂಡರೇನು, ಅರಸನು ಕಳೆದರೇನು? ನಿನ್ನ ಮಗನ ಪ್ರಾಣದ ಚಿಂತೆಯಾದರೂ ನಿನಗೆ ಇರಬೇಕಷ್ಟೇ? ದೇವೀ, ಎಷ್ಟು ಮಾತಾಡಿಸಿದರೂ ಅಷ್ಟೇ; ಸುಮ್ಮನಿದ್ದು ನೀನು ಮಗನಿಗೆ ರಾಜ್ಯವನ್ನಾದರೂ ಕೊಡಿಸು, ಸುದ್ದಿಯನ್ನು ಬೈಲಿಗೆಳೆದು ಮಗನ ಜೀವವನ್ನಾದರೂ ಹಿಂಡು ಇನ್ನು ನಾನು ಹೊರಟೆನು. ಮಾತಾಡುತ್ತ ನಿಲ್ಲುವಹಾಗಿಲ್ಲ, ಮಾಡತಕ್ಕದ್ದನ್ನು ಸ್ವಸ್ಥ ಮನಸ್ಸಿನಿಂದ ಮಾಡು. ನನ್ನ ಕಾಲಾತಿಕ್ರಮವಾಯಿತು, ಎಂದು ನುಡಿದು

ಚಾಣಕ್ಯನು ನಿಜವಾಗಿಯೇ ಅಲ್ಲಿಂದ ಹೊರಟುಹೋದನು. ರಾಜ್ಯಲೋಭದಿಂದಲ್ಲದಿದ್ದರೂ ಮಗನ ಪ್ರಾಣದ ಲೋಭದಿಂದಾದರೂ ಈಕೆಯು ಸುಮ್ಮನೆ ಕುಳಿತುಕೊಳ್ಳುವಳೆಂದು ಆ ಧೂರ್ತ ಬ್ರಾಹ್ಮಣನು ಭಾವಿಸಿದ್ದನು.

ಇತ್ತ ಮುರೆಯ ಮನಸ್ಸು ಚಿಂತಾಮಗ್ನವಾಯಿತು. ತನ್ನ ಮಗನಾದ ಚಂದ್ರಗುಪ್ತನಿಗೆ ಇನ್ನು ಕೆಲವು ತಾಸುಗಳಲ್ಲಿ ರಾಜ್ಯವು ಪ್ರಾಪ್ತವಾಗುತ್ತಿದ್ದರೂ, ಪತಿಯ ಸಂಹಾರವಾಗುತ್ತದೆಯಲ್ಲ! ಪತಿಯ ಪ್ರಾಣವನ್ನು ಉಳಿಸುವದಕ್ಕಾಗಿ ಯತ್ನಿಸಿದರೆ, ಮಗನ ಜೀವವು ಹ್ಯಾಗೆ ಉಳಿಯಬೇಕು? ಹಾಯ್ ಹಾಯ್! ಎಂಥ ಪ್ರಸಂಗವಿದು! ಹ್ಯಾಗಾದರೂ ಮಾಡಿ ಮಹಾರಾಜರು ನಾಳೆ ದರ್ಬಾರಕ್ಕೆ ಹೋಗದಂತೆ ಮಾಡಬೇಕು; ಅದು ಸಾಧಿಸದಿದ್ದರೆ ಗತಿಯೇನು? ಈ ಮೇರೆಗೆ ಹುಚ್ಚುಹಿಡಿದವರ ಚಿತ್ತವು ಭ್ರಮಿಸುವಂತೆ ಮುರೆಯ ಚಿತ್ತವು ಭ್ರಮಿಸತೊಡಗಿತು. ತ್ರಿವಿಧ ವಿಚಾರಗಳು ಆಕೆಯ ಮನಸ್ಸಿನಲ್ಲಿ ಬಂದು, ಒಂದೊಂದು ವಿಧದ ವಿಚಾರಗಳು ಒಂದೊಂದು ವಿಧವಾಗಿ ಆಕೆಯನ್ನು ಭೋಧಿಸುತ್ತಿದ್ದವು. ಈ ಸ್ಥಿತಿಯಲ್ಲಿದ್ದ ಮುರೆಯು, ಕೈಕಾಲುಗೆಟ್ಟು-ದೇವರೇ, ಈಗ ಹ್ಯಾಗೆ ಮಾಡಲಿ, ಎಂದು ಚಿಂತಿಸುತ್ತಿರಲು, ಧನಾನಂದನು ಎಚ್ಚತ್ತು ಆಕೆಯನ್ನು ಕರೆದನು. ಧನಾನಂದನು ನೆಟ್ಟಗೆ ಮೂರು ತಾಸು ಹೊತ್ತು ಏರುವವರೆಗೆ ಮಲಗಿದ್ದನು. ರಾತ್ರಿ ನಿದ್ದೆಗೆಟ್ಟಿದ್ದ ಮುರೆಯು ಇಷ್ಟು ಬೇಗನೇ ಎದ್ದು ಹೋದದ್ದನ್ನು ನೋಡಿ ಆತನಿಗೆ ಬಹಳ ಆಶ್ಚರ್ಯವಾಯಿತು. ಆತನು ಪ್ರೇಮದಿಂದ ಮುರೆಗೆ-ಪ್ರಿಯೇ, ನಾನು ಇಂದು ದರ್ಬಾರಕ್ಕೆ ಹೋಗುವೆನೆಂದು ತಿಳಿದು ನಿನಗೆ ನಿದ್ದೆ ಬರಲಿಲ್ಲೆಂಬಂತೆ ಕಾಣುತ್ತದೆ. ನಾನು ಇಲ್ಲಿಂದ ಹೋದಬಳಿಕ ತಿರುಗಿ ಬರುವ ದಿಲ್ಲೆಂಬ ಭ್ರಾಂತಿಯನ್ನು ಇನ್ನೂ ನೀನು ಬಿಟ್ಟಹಾಗೆ ಕಾಣುವದಿಲ್ಲ, ನಾಳೆ ಅದನ್ನು ಬಿಡಿಸಿ ಎರಡನೆಯ ಕೆಲಸಮಾಡುವೆನು, ಅನ್ನಲು, ಮುರೆಯು-ಪ್ರಭುಗಳೇ, ತಾವು ಇಂದು ದರ್ಬಾರಕ್ಕೆ ಹೋಗಬೇಡಿರಿ ಬೇಕಾದರೆ ನಾಳೆ ಹೋಗಿರಿ.

ಧನಾನಂದ—ನಾಳೆ ಹೆಚ್ಚೇನು, ಇಂದು ಕಡಿಮೆಯೇನು? ಅದೇನೂ ಇಲ್ಲ, ಇಂದೇ ನಾನು ಹೋಗತಕ್ಕವನು. ರಾಕ್ಷಸನು ಎಲ್ಲವನ್ನು ಸಿದ್ಧಮಾಡಿರಬಹುದು. ಈಗ ಆತನು ಕರೆಯಲಿಕ್ಕೂ ಬಂದಾನು.

ಮುರೆ—ದೊರೆಗಳೇ, ನನ್ನ ಬಲಗಣ್ಣು ಹಾರುತ್ತದೆ, ನನಗೆ ಬಹಳ ಅಂಜಿಕೆಯು ಬರುತ್ತದೆ.

ಧನಾನಂದ—ಸಂಜೆಗೆ ನಿನ್ನ ಅಂಜಿಕೆಯು ಹೋಗುವದು. ನಾನು ತಿರುಗಿ ಬಂದೆನೆಂದರೆ ಹೋಯಿತು ನಿನ್ನ ಅಂಜಿಕೆ!

ಪತಿಯ ಮನಸ್ಸನ್ನು ತಿರುಗಿಸುವದಕ್ಕಾಗಿ ಮುರೆಯು ಎಷ್ಟು ಯತ್ನಿಸಿದರೂ ಯಶಸ್ಸು ಬರಲಿಲ್ಲ. ಧನಾನಂದನು ಒಂದೇ ಹಟಹಿಡಿದನು-ನಾನು ಹೋದವನು ತಿರುಗಿ ಬರಲಿಕ್ಕಿಲ್ಲೆಂಬ ಅಂಜಿಕೆಯು ನಿನಗೆ ಬಹಳವಾಗಿರುತ್ತದೆ. ಅದನ್ನು ಇಂದು ದೂರಮಾಡುವೆನು, ಎಂದು ಆತನು ಹೇಳಹತ್ತಿದನು. ಮುರೆಯು ಪತಿಯ ಪಾದಸೇವೆಯನ್ನು ಮಾಡುತ್ತ ಕುಳಿತಿದ್ದರೂ, ನಾನಾ ವಿಧವಾದ ವಿಚಾರಗಳ ಗಲಿಬಿಲಿಯಿಂದ ಅವಳಿಗೆ ಸೇವೆಯ ಪರಿವೆಯೇ ಇಲ್ಲದಾಗಿತ್ತು. ಇದನ್ನು ಧನಾನಂದನು ತಿಳಿದರೂ ಮನಸ್ಸಿನಲ್ಲಿ ಎಳ್ಳಷ್ಟು ವಿಕಲ್ಪವನ್ನು ಎಣಿಸಲಿಲ್ಲ. ಮುರೆಯು ಬಹು

ಕೋಮಲ ಮನಸ್ಸಿನವಳಾದ್ದರಿಂದ ತನ್ನ ಪ್ರಮಾಣದ ಬಗ್ಗೆ ಇಷ್ಟು ಚಿಂತೆಮಾಡುವಳು, ಇಂದು ಸಂಜೆಗೆ ನಾನು ತಿರುಗಿ ಬಂದೆನೆಂದರೆ, ಈಕೆಯ ಚಿಂತೆಯು ದೂರವಾಗಿ ಆನಂದವು ದ್ವಿಗುಣಿತ ವಾಗುವದು, ಸದ್ಯಕ್ಕೆ ಕೆಲವು ತಾಸು ಈಕೆಯ ಮನಸ್ಸು ನೊಂದರೂ ಚಿಂತೆಯಿಲ್ಲ, ಈಗ ಯಾವ ಮಾತನ್ನೂ ಆಡಬಾರದು, ಎಂದು ತಿಳಿದು ಆತನು ಸುಮ್ಮನೇ ಇದ್ದನು. ಇತ್ತ ಮುರೆಗೆ ಪತಿಗಿಂತ ಪುತ್ರನೂ, ಪುತ್ರನಿಗಿಂತ ಪತಿಯೂ ಹೆಚ್ಚಾಗಿ ತೋರಿ, ಇಬ್ಬರೂ ಹ್ಯಾಗೆ ಉಳಿದಾರೆಂಬ ಗಹನ ವಿಚಾರದಲ್ಲಿ ಆಕೆಯು ಮುಳುಗಿಹೋಗಿದ್ದಳು. ''ಪತಿಯೋ ಪುತ್ರನೋ? ಪತಿಯೋ–ಪುತ್ರನೋ'' ಎಂದು ಮನಸ್ಸಿನಲ್ಲಿ ಜಪ ಮಾಡುತ್ತ ದುಷ್ಟ ಚಾಣಕ್ಯನು ಯಾವ ಮೂಲೆಯಲ್ಲಿ ಕುಳಿತಿದ್ದನೋ, ನಾನು ಆತನ ಹರಿಗೆ ಯಾಕೆ ಬಿದ್ದೆನೋ, ಎಂದು ಪಶ್ಚಾತ್ತಾಪಪಡುತ್ತ ಆಕೆಯು ಒಳಗಿಂದೊಳಗೇ ಸಣ್ಣಾಗುತ್ತಿದ್ದಳು. ಮುರೆಯ ಮನಸ್ಸಿನಲ್ಲಿ ಹಲವು ವಿಚಾರಗಳು ಒಂದರ ಹಿಂದೊಂದು ಹುಟ್ಟಿ ಬೆಳೆದವು, ಅಳಿದವು. ಕಡೆಗೆ ಆಕೆಯು ತೀರಾ ಜರ್ಜರಳಾಗಿ – ದರ್ಬಾರಕ್ಕೆ ಹೋಗದಂತೆ ಇನ್ನೊಂದುಸಾರೆ ಪತಿಯನ್ನು ಪ್ರಾರ್ಥಿಸಿ, ಆತನು ಕೇಳದಿದ್ದರೆ ನಡೆದ ಸಂಗತಿಯನ್ನು ಆತನಿಗೆ ಹೇಳಿ ದೇವರ ಮೇಲೆ ಭಾರಹಾಕಿ ಸುಮ್ಮನೇ ಕುಳಿತುಕೊಳ್ಳಬೇಕು. ನನ್ನನ್ನೂ, ನನ್ನ ಮಗನನ್ನೂ, ಆ ಬ್ರಾಹ್ಮಣನನ್ನೂ ಸಹ ಕ್ಷಮಿಸಬೇಕೆಂದು ಪ್ರಾರ್ಥಿಸಬೇಕು. ಇದರ ಮೇಲೆ ಪತಿಯು ಕೇಳಿದರೂ ಸರಿಯೇ, ಕೇಳಿದಿದ್ದರೂ ಸರಿಯೇ, ಎಂದು ಕಣ್ಣೀರು ಸುರಿಸುತ್ತ ಪತಿಗೆ— ''ಆರ್ಯಪುತ್ರರೇ, ಏನೇ ಆಗಲಿ, ತಾವು ದರ್ಬಾರಕ್ಕೆ ದಯಮಾಡಿ ಇಂದು ಹೋಗಲಾಗದು'' ಎಂದು ಹೇಳಿಕೊಳ್ಳಲು, ಅರಸನು ಆಕೆಗೆ —''ನೀನು ಈ ಸಂಬಂಧವಾಗಿ ಚಕಾರಶಬ್ದ ವಾಡಬೇಡೆ''ಂದು ಸ್ಪಷ್ಟವಾಗಿ ಹೇಳಿ, ದರ್ಬಾರಕ್ಕೆ ಹೊರಡುವದಕ್ಕಾಗಿ ವಸ್ತ್ರಾಲಂಕಾರಗಳನ್ನು ಧರಿಸಹತ್ತಿದನು. ಇಷ್ಟಾಗುವದರೊಳಗೆ ಐದುತಾಸು ಹೊತ್ತು ಏರಿತು. ಆಗ ಮುರೆಯು ತೀರಾ ನಿರಾಶೆಪಟ್ಟು, ನಡೆದ ಸಂಗತಿಯನ್ನೆಲ್ಲ ಅರಸನಿಗೆ ಹೇಳಿ ಬಿಡಬೇಕೆಂದು, ಬಾಳೆಯ ಗಿಡವು ಗಾಳಿಯಿಂದ ಇಳಿಗೆರಗುವಂತೆ ಆಕೆಯು ಅರಸನ ಎದುರಿಗೆ ಅಡ್ಡಬಿದ್ದು–ಪ್ರಭುಗಳೇ, ನನ್ನ ಮಾತನ್ನು ತಾವು ಕೇಳದಿದ್ದರೆ, ನನ್ನನ್ನು ಇನ್ನೊಂದುಸಾರೆ....... ಎಂದು ನುಡಿಯುತ್ತಿರಲು, ''ಮಹಾರಾಜರಿಗೆ ಜಯವಾಗಲಿ'' ಎಂದು ಸುಮಾರು ಹತ್ತು ಜನರು ಒಂದೇ ಧ್ವನಿಯಿಂದ ಉಚ್ಚರಿಸಿದ ಉಚ್ಚಸ್ವರವು ಆಕೆಯ ಕಿವಿಗೆ ಬಿದ್ದಿತು. ದೈವದುರ್ವಿಪಾಕವು ಬಲವತ್ತರವಾದದ್ದು!

ನಂದರ ಸಂಹಾರ

ಮುರೆಯ ನಿಶ್ಚಯವು ಸಿದ್ಧಿಗೆ ಹೋಗುವ ಯೋಗವಿದ್ದಿಲ್ಲ. ಆಕೆಯು ನಿಜವಾದ ಸಂಗತಿಯನ್ನೆಲ್ಲ ಅರಸನ ಮುಂದೆ ಹೇಳುವಷ್ಟರಲ್ಲಿ ಮೇಲೆ ಹೇಳಿದಂತೆ ಜಯಜಯಕಾರ ಧ್ವನಿಯು ಆಕೆಯ ಕಿವಿಗೆ ಬೀಳಲು, ಅಭಿಮಾನಿಯಾದ ಆ ರಾಜ ಮಹಿಷಿಯು ಇದೆಲ್ಲಿಯ ಧ್ವನಿಯೆಂದು ಮುಖವೆತ್ತಿ ಹಿಂದಿರುಗಿ ನೋಡಿದಳು. ಒಬ್ಬರಿಗಿಂತ ಒಬ್ಬರು ಚಿಕ್ಕವರಾಗಿರುವ

ಒಂಬತ್ತು ಜನ ರಾಜಕುಮಾರರೊಡನೆ ರಾಕ್ಷಸನು ಅರಸನ ಮುಂದೆ ಬಂದು ನಿಂತಿದ್ದನು. ಈ ಒಂಬತ್ತು ಜನರಲ್ಲಿ ಸುಮಾಲ್ಯನೂ ಇದ್ದು, ಆತನ ಬಳಿಯಲ್ಲಿ ತನ್ನ ಮಗನಾದ ಚಂದ್ರಗುಪ್ತನೂ ನಿಂತಿದ್ದನು. ಚಂದ್ರಗುಪ್ತನು ತನ್ನ ಮಗನೆಂದು ತಿಳಿದಬಳಿಕ ಆತನನ್ನು ಮುರೆಯು ನೋಡಿದ್ದು ಇದೇ ಮೊದಲು; ಆದ್ದರಿಂದ ಆತನನ್ನು ನೋಡಿದ ಕೂಡಲೆ ಆಕೆಯು ಮೋಹಕ್ಕೆ ಒಳಗಾದಳು. ತನಗೆ ಆಗದವರ ಮುಂದೆ ತಾನು ಹೀಗೆ ಅರಸನಿಗೆ ಸಾಷ್ಟಾಂಗವಾಗಿ ಎರಗಿದ್ದೇ ಆಕೆಯ ಮಾನಕ್ಕೆ ಸಾಲಲಿಲ್ಲ ಆಕೆಯು ಚಟ್ಟನೆ ಎದ್ದುನಿಂತಳು. ಸಂತಾಪದಿಂದ ಆಕೆಯ ಮುಖಚರ್ಯವು ಕ್ರೂರವಾಯಿತು. ಚಂದ್ರಗುಪ್ತನ ರಾಜತೇಜವನ್ನೂ, ತನ್ನ ರೂಪವನ್ನೂ ಅಚ್ಚಳಿಯದೆ ಹೋಲುವ ಆತನ ಸುಂದರ ರೂಪವನ್ನೂ ನೋಡಿ ಸುಮಾಲ್ಯನ ಮೇಲೆ ಹಲ್ಲುಕಡಿಯುತ್ತ ಮುರೆಯು ಮನಸ್ಸಿನಲ್ಲಿ– ನನಗೆ ಆಗದವರ ಮಾತು ಕೇಳಿ ಅರಸನು ತನ್ನ ಮಗನ ಅಹಿತವನ್ನು ಚಿಂತಿಸದಿದ್ದರೆ, ಈ ಪ್ರಸಂಗವೆಲ್ಲಿ ಬರುತ್ತಿತ್ತು? ಪರಮೇಶ್ವರನು ಅಂಥ ಮಹಾ ಸಂಕಟದಲ್ಲಿ ನನ್ನ ಕೂಸಿನ ಪ್ರಾಣವನ್ನು ರಕ್ಷಿಸಿ, ನಂದರ ಸಿಂಹಾಸನವೇರುವದಕ್ಕಾಗಿ ಆತನನ್ನು ಈಗ ಕಳಿಸಿರಲು, ಈಶ್ವರೀ ಸಂಕೇತಕ್ಕೆ ನಾನು ಯಾಕೆ ಅಡ್ಡಾಗಬೇಕು? ಆಗುವದು ಆಗಲೊಲ್ಲದೇಕೆ, ಸುಮ್ಮನಿದ್ದರಾಯಿತು.

ಈ ಮೇರೆಗೆ ಯೋಚಿಸಿ ಮುರೆಯು ಅರಸನಿಗೆ—ಆರ್ಯಪುತ್ರರೇ, ಇವರು ನಿಮ್ಮನ್ನು ಕರಕೊಂಡು ಹೋಗಲಿಕ್ಕೆ ಬಂದಿದ್ದಾರೆ; ಇನ್ನು ನಾನು ಹೋಗುವೆನು. ತಾವು ಸುರಕ್ಷಿತವಾಗಿ ರಾಜಕಾರ್ಯಗಳನ್ನು ಮುಗಿಸಿಕೊಂಡು ಬರಬೇಕು, ಎಂದು ಹೇಳಿ ಅಲ್ಲಿಂದ ಹೊರಟು, ಹೋಗ ಹೋಗುತ್ತ ಆಕೆಯು ಒಮ್ಮೆ ಮಗನನ್ನು ಪ್ರೇಮದೃಷ್ಟಿಯಿಂದ ನೋಡಿದಳು. ಇತ್ತ ಅರಸನು ಹೊರಡಲು ಸಿದ್ಧನಾದನು. ಆತನ ಪ್ರಯಾಣ ಸಮಾರಂಭದ ಸರ್ವಸಿದ್ಧತೆಯು ಮಂದಿರದ ಮುಂದೆ ಆಗಿತ್ತು. ಧನಾನಂದನು ತನಗಾಗಿ ಶೃಂಗರಿಸಿದ ಆನೆಯನ್ನು ಏರಿದನು. ಕೂಡಲೆ ಢಕ್ಕಾ ಪಣಹಾದಿ ರಣವಾದ್ಯಗಳೂ, ಭೇರಿ, ಮೃದಂಗಾದಿ ಸಮಾರಂಭವಾದ್ಯಗಳೂ, ಮೊಳಗಿದವು. ಯುವರಾಜನಾದ ಸುಮಾಲ್ಯನು ಅರಸನ ಬಲಭಾಗದಲ್ಲಿಯೂ, ಅಮಾತ್ಯ ರಾಕ್ಷಸನು ಎಡಭಾಗದಲ್ಲಿಯೂ ಒಂದೊಂದು ಆನೆಯನ್ನು ಏರಿ ಸಾಗಿದರು. ಧನಾನಂದನ ಉಳಿದ ಏಳು ಜನ ರಾಜಕುಮಾರರು ಅಶ್ವಾರೂಢರಾಗಿ ಅರಸನ ಹಿಂದೆ ನಡೆದರು. ಚಂದ್ರಗುಪ್ತನು ಅಶ್ವಾರೂಢನಾಗಿ ಅರಸನಿಗೂ ವಾದ್ಯಗಳಿಗೂ ನಡುವೆ ಸಾಗಿದ್ದನು. ಅಮಾತ್ಯ ರಾಕ್ಷಸನಿಗೆ ಬಹಳ ಸಂತೋಷವಾದಂತೆ ತೋರುತ್ತಿತ್ತು. ಜನರ ದಟ್ಟಣೆಯಾಗಬಾರದೆಂದು ಕೆಲವು ಸೈನಿಕರು ಈ ರಾಜಪರಿವಾರದವರ ಸುತ್ತುಮುತ್ತು ಇರುಬಿ ನುಸಿಯಲಿಕ್ಕೆ ಬಾರದಂತೆ ವ್ಯವಸ್ಥೆಯಿಂದ ಸಾಗಿದ್ದರು. ಈ ಚಂದದಿಂದ ಅರಸನ ಮೆರವಣಿಗೆಯು ರಾಜಗೃಹದ ಕಡೆಗೆ ಸಾಗಿತು. ಪ್ರಜೆಗಳು ಅಲ್ಲಲ್ಲಿ ಸುಂದರವಾದ ತೋರಣಗಳನ್ನು ಕಟ್ಟಿದ್ದರು. ಮಾರ್ಗದ ಎಡ–ಬಲಗಳಲ್ಲಿಯ ಉಪ್ಪರಿಗೆಗಳಲ್ಲಿಂದ ಯುವತಿಯರು ರಾಜನ ಮೇಲೆಯೂ, ರಾಜಪುತ್ರರ ಮೇಲೆಯೂ ಪುಷ್ಪವೃಷ್ಟಿಯನ್ನು ಸುರಿಸುತ್ತಿದ್ದರು.

ಈ ಮೇರೆಗೆ ಸಮಾರಂಭದಿಂದ ಅರಸನ ಸವಾರಿಯು ಸಾಗಿರಲು, ಒಬ್ಬ ರಾವುತನು ಕುದುರೆಯನ್ನು ಓಡಿಸುತ್ತ ಬರುತ್ತಿದ್ದನು. ಇವನು ಯಾರು? ಕುದುರೆಯನ್ನು ಇಷ್ಟು ವೇಗದಿಂದ

ಓಡಿಸುತ್ತ ಯಾಕೆ ಬರುವನು, ಎಂದು ಜನರು ವಿಚಾರಿಸುತ್ತಿರುವಾಗ, ರಾವತನು ಅಮಾತ್ಯನ ಆನೆಯ ಹತ್ತರ ಹೋಗಿ ತನ್ನ ಭಾಲೆಯ ತುದಿಗೆ ಒಂದು ಪತ್ರವನ್ನು ಚುಚ್ಚಿ ಅದನ್ನು ರಾಕ್ಷಸನ ಎದುರಿಗೆ ಹಿಡಿದನು. ಈ ಪತ್ರವೆಲ್ಲಿಯದೆಂದು ರಾಕ್ಷಸನು ಅದನ್ನು ತಕ್ಕೊಂಡು ಓದಿ ನೋಡಿದ ಕೂಡಲೇ ಆತನ ಮುಖವು ಬಾಡಿತು. ರಾಕ್ಷಸನು ತನ್ನ ಆನೆಯನ್ನು ಧನಾನಂದನ ಆನೆಯ ಹತ್ತರಕ್ಕೆ ಒಯ್ದು ವಿನಯದಿಂದ–ಪ್ರಭುಗಳೇ, ನಾನು ಇಲ್ಲಿಯವರೆಗೆ ತಮ್ಮ ಸಂಗಡ ಬಂದೆನು; ಆದರೆ ಇನ್ನು ಬೇರೆ ಹಾದಿಯಿಂದ ದರ್ಬಾರಕ್ಕೆ ಹೋಗಲು ನನಗೆ ಅಪ್ಪಣೆ ದೊರೆಯಬೇಕು. ಅಲ್ಲಿ ಕೆಲವು ವ್ಯವಸ್ಥೆ ಮಾಡುವದದೆ, ಎಂದು ಹೇಳಿ, ಅರಸನ ಒಪ್ಪಿಗೆಯ ಹಾದಿಯನ್ನು ನೋಡದೆ, ಆತನು ತಟ್ಟನೇ ತನ್ನ ಆನೆಯನ್ನು ತಿರುಗಿಸಿ ಬೇರೆ ಮಾರ್ಗದಿಂದ ಸಾಗಿದನು. ಈ ಕಾಲದಲ್ಲಿ ಸೌಧಾಗ್ರದ ಯುವತಿಯರ ಕಡೆಗಿದ್ದ ಅರಸನ ಲಕ್ಷಣವು ರಾಕ್ಷಸನ ಕಡೆಗೆ ಹೋಗಲಿಲ್ಲೆಂದರೂ ಅನ್ನಬಹುದು. ಅರಸನ ಮೆರವಣಿಗೆಯು ಮುಂದಕ್ಕೆ ಸಾಗುತ್ತ ಸಾಗುತ್ತ ಚಾಣಕ್ಯನು ದರ್ಬಾರದ ಸಮೀಪದಲ್ಲಿ ನಿಲ್ಲಿಸಿದ್ದ ಗಾತಕವಾದ ತೋರಣದ ಸಮೀಪಕ್ಕೆ ಬಂದಿತು. ಆಗ ಚಂದ್ರಗುಪ್ತನು ತನ್ನ ಕುದುರೆಯನ್ನು ನಿಲ್ಲಿಸಿ ತನಗೆ ಅಪಾಯ ತಟ್ಟದಂತೆ ಪೂರ್ವ ಸಂಕೇತಕ್ಕನುಸರಿಸಿ ಕುದುರೆಯನ್ನು ಹೊರಳಿಸಿ ಮುಂದಕ್ಕೆ ಸಾಗಿಹೋದನು.

ಇತ್ತ ಮುರೆಯ ಮನಸ್ಸು ಮತ್ತೆ ಚಂಚಲವಾಯಿತು. ಆಕೆಯು ''ಪತಿಯೋ, ಪುತ್ರನೋ'' ಎಂದು ಮತ್ತೆ ಚಡಪಡಿಸಹತ್ತಿದಳು. ಪತಿಯನ್ನು ಕೊಲ್ಲಿಸಿ ಮಗನಿಗೆ ಸಿಂಹಾಸನವನ್ನು ಸಂಪಾದಿಸಿಕೊಡುವ ಮಾತು ಆಕೆಗೆ ಒಪ್ಪಿಗೆಯಾಗಲೊಲ್ಲದು. ಆಕೆಯು ಮನಸ್ಸಿನಲ್ಲಿ–ಅಯ್ಯೋ, ನಾನು ಎಂಥ ನೀಚಳು! ನನ್ನ ಕೈಯಿಂದ ನನ್ನ ಸೌಭಾಗ್ಯವನ್ನು ನಷ್ಟಪಡಿಸಿಕೊಂಡು ಮಗನ ತಲೆಗೆ ಕಿರೀಟ ಹಾಕುವ ವಿಚಾರವನ್ನು ಮಾಡಿದೆನಲ್ಲ! ನನ್ನಂಥ ದುಷ್ಟಳು ಈ ಆರ್ಯಾವರ್ತದಲ್ಲಿ ಹಿಂದಕ್ಕೆ ಆಗಿರಲಿಕ್ಕಿಲ್ಲ, ಮುಂದಕ್ಕೂ ಆಗಲಿಕ್ಕಿಲ್ಲ. ನಾನು ಪಲ್ಲಕ್ಕಿಯಲ್ಲಿ ಕುಳಿತು ವೇಗದಿಂದ ಹೋಗಿ ಈಗಾದರೂ ಅರಸನ ಪ್ರಾಣವನ್ನು ಉಳಿಸಿಕೊಳ್ಳಬಹುದು; ವಿಳಂಬವು ಕೆಲಸದ್ದಲ್ಲ, ಎಂದು ಯೋಚಿಸಿ ಮುರೆಯು ವೃಂದಮಾಲೆಯನ್ನು ಕರೆದು–ವೃಂದಮಾಲೆ, ಹೋಗು, ತಡಮಾಡದೆ ಪಲ್ಲಕ್ಕಿಯನ್ನು ಸಿದ್ಧಪಡಿಸು, ಎಂದು ಹೇಳಿದಳು. ತನ್ನ ಒಡೆಯಳು ಪಲ್ಲಕ್ಕಿಯಲ್ಲಿ ಕುಳಿತು ಹೋಗುವದೆಲ್ಲಿಗೆಂಬದು ತಿಳಿಯದ್ದರಿಂದ ವೃಂದಮಾಲೆಯು ಸುಮ್ಮನೆ ಮೋರೆಯನ್ನು ನೋಡುತ್ತ ನಿಂತುಕೊಳ್ಳಲು, ಮುರೆಯು ಕವಕ್ಕನೆ ಆಕೆಯ ಮೈಮೇಲೆ ಹೋಗಿ–ಏನಿದು! ನನ್ನ ಪತಿಯನ್ನು ಕೊಲ್ಲಿಸಬೇಕೆಂದು ನೀವೆಲ್ಲರೂ ಒಳಸಂಚು ಮಾಡಿರುವಿರೋ ಏನು? ವೃಂದಮಾಲೇ, ಮೋರೆಯನ್ನೇನು ನೋಡುತ್ತೀ? ಒಂದು ಕ್ಷಣ ತಡೆದರೆ ಎಲ್ಲ ಘಾತವಾಗಿ ಹೋಗುವದು. ನಡೆ, ಬೇಗನೇ ಪಲ್ಲಕ್ಕಿಯನ್ನು ಸಿದ್ಧಪಡಿಸು, ಎಂದು ಗದ್ದರಿಸಿದಳು. ತನ್ನ ಒಡೆಯಳ ಈ ಭಯಂಕರವಾದ ಮಾತುಗಳನ್ನು ಕೇಳಿ ವೃಂದಮಾಲೆಯು ಬಾಯಲ್ಲಿ ಎಸರು ಇಲ್ಲದೆ ಓಡಿ ತನ್ನಿಂದಾದಷ್ಟು ತ್ವರೆಮಾಡಿ ಪಲ್ಲಕ್ಕಿಯನ್ನು ತಂದು ನಿಲ್ಲಿಸಿದಳು. ''ನನ್ನನ್ನು ಮಹಾರಾಜರ ಬಳಿಗೆ ತೀವ್ರ ಕರಕೊಂಡು ಹೋಗಿರಿ'' ಎಂದು ಹೇಳಿ ಮುರೆಯು ಪಲ್ಲಕ್ಕಿಯಲ್ಲಿ ಕುಳಿತುಕೊಂಡಳು. ಒಡೆಯಳ ಈ ಆತುರವನ್ನು ನೋಡಿ ಬೋವಿಗಳು ಎಷ್ಟು ತೀವ್ರತವಾಗಿ ನಡೆದರೂ ಮುರೆಯು—''ಹ!

ಬೇಗ ನಡಿಯಿರಿ, ಓಡಿರಿ'' ಎಂದು ಒಂದೇಸವನೆ ಅವರಿಗೆ ದುಂಬಾಲು ಬಿದ್ದಳು; ಬೋವಿಗಳಾದರೂ ತಮ್ಮ ದಣಿವು-ಬಾಯಾರಿಕೆಗಳನ್ನು ನೋಡದೆ ಒತ್ತರದಿಂದ ಸಾಗಿದ್ದರು; ಆದರೆ ಅಷ್ಟರಲ್ಲಿ ಭಯಂಕರವಾದ ಹಾಹಾಕಾರ ಧ್ವನಿಯು ಮುರೆಯ ಕಿವಿಗೆ ಬಿದ್ದಿತು. ಅದನ್ನು ಕೇಳಿ ಮುರೆಯ ಕೈಕಾಲೇ ಹೋದವು. ಆಕೆಯು ಹಣೆಹಣೆಗಟ್ಟಿಸಿಕೊಂಡಳು. ದುಃಖದಿಂದ ಅವಳ ಕಣ್ಣೀರು ಸುರಿಯಹತ್ತಿದವು. ಪತಿಯ ಪ್ರಾಣವನ್ನು ಉಳಿಸುವದು ನನ್ನ ಕೈಯಲ್ಲಿದ್ದರೂ ನೀಚಳಾದ ನಾನು ಉದಾಸೀನ ಮಾಡಿ ನನ್ನ ಕೈಯಿಂದಲೇ ನನ್ನ ಸೌಭಾಗ್ಯಕ್ಕೆ ಬೆಂಕಿಯನ್ನು ಹೆಚ್ಚಿಕೊಂಡಂತಾಯಿತು. ನೀರಡಿಕೆ ಯಾದಾಗ ಬಾವಿಯ ತೋಡಹತ್ತಿದರೆ ಆಗುವದೇನು? ಆಗುವದು ಆಗಿಹೋಯಿತು. ಭಯಂಕರ ಪ್ರಾಣಹಾನಿಯಾದ ಹೊರತು ಇಂಥ ಭಯಂಕರ ಧ್ವನಿಯು ಹ್ಯಾಗೆ ಉಂಟಾದೀತು? ಇನ್ನು ನಾನು ಮುಂದಕ್ಕೆ ಹೋಗಲೋ, ಹಿಂದಿರುಗಲೋ, ಇಲ್ಲಿಯೇ ತಲೆಯೊಡಕೊಂಡು ಪ್ರಾಣಕೊಡಲೋ, ಹಾಯ್ ಹಾಯ್! ಏನು ಮಾಡಲಿ!!

ಈ ಮೇರೆಗೆ ಮುರೆಯು ಭ್ರಮಿಷ್ಟಳಂತೆ ತನ್ನಲ್ಲಿಯೇ ಯೋಚಿಸತ್ತಿರಲು, ಪಲ್ಲಕ್ಕಿಯು ಮತ್ತಿಷ್ಟು ಮುಂದಕ್ಕೆ ಹೋಯಿತು. ಆಗ ಆಕೆಯ ಕಿವಿಗೆ—''ಅಮಾತ್ಯ ರಾಕ್ಷಸನ ಜಯಜಯ ಕಾರವು'' ಎಂದು ಧ್ವನಿಯು ಬೀಳಲು, ಅದನ್ನು ಕೇಳಿ ಆಕೆಗೆ ಆಶ್ಚರ್ಯವಾಯಿತು. ಆ ದುಃಖಿತೆಯು ಇನ್ನೂ ಇಷ್ಟು ಮುಂದಕ್ಕೆ ಹೋದಳು. ಆ ಧ್ವನಿಯು ಮತ್ತಿಷ್ಟು ಸ್ಪಷ್ಟವಾಗಿ ಕೇಳತೊಡಗಿತು. ಆಗ ಮುರೆಯು ಆನಂದಪಟ್ಟು-ಶಾಬಾಸ! ರಾಕ್ಷಸಾ, ನೀನು ಕಡೆಗೆ ದುಷ್ಟ ಚಾಣಕ್ಯನ ಕೃಷ್ಣ ಕಾರಸ್ಥಾನವನ್ನು ಬೈಲಿಗೆಳೆದು, ಮಹಾರಾಜರ ಪ್ರಾಣವನ್ನು ಉಳಿಸಿ ಜಯವನ್ನು ಸಂಪಾದಿಸಿದಿ ಆ! ಧನ್ಯನು! ಧನ್ಯನು!! ಅಮಾತ್ಯವರಾ, ನಿನ್ನ ಸ್ವಾಮಿನಿಷ್ಠೆಯು ಧನ್ಯವಾದದ್ದು!!! ಇನ್ನು ಮಹಾರಾಜರು ಆ ದುಷ್ಟಬ್ರಾಹ್ಮಣನಿಗೆ ದೇಹಾಂತಪ್ರಾಯಶ್ಚಿತ್ತವನ್ನು ಕೊಡಬಹುದು, ಕೊಡಲಿ, ಇದರಿಂದ ಅವರಿಗೆ ಬ್ರಹ್ಮಹತ್ಯೆಯ ದೋಷವು ಬಾರದೆ, ಬ್ರಾಹ್ಮಣ ರೂಪಧಾರಿಯಾದ ಒಬ್ಬ ದುಷ್ಟ ದೈತ್ಯನ ಸಂಹಾರಮಾಡಿದ ಶ್ರೇಯಸ್ಸು ಬರುವದು. ನಾನಂತೂ ಜೀವದ ಆಶೆಯನ್ನು ಬಿಟ್ಟೇ ಇದ್ದೇನೆ, ಎಂದು ತನ್ನೊಳಗೆ ಅಂದುಕೊಳ್ಳುತ್ತಿರಲು, ಹಾಹಾಕಾರವನ್ನು ಮಾಡುತ್ತ ಜನಸಮೂಹವು ಓಡಿಬರಹತ್ತಿತು. ಒಂದು ಗುಂಪು ಮೈಮೇಲೆ ಎಚ್ಚರಿಲ್ಲದೆ ಮುರೆಯ ಪಲ್ಲಕ್ಕಿಯನ್ನು ತಡೆಹಾಯಿದು ಹೋಯಿತು. ಪಲ್ಲಕ್ಕಿಯು ಬೀಳತಕ್ಕದ್ದೇ, ಆದರೆ ಬೋವಿಗಳು ಸಮರ್ಥರಿದ್ದದ್ದರಿಂದ ಬೀಳಗೊಡದೆ, ಇನ್ನು ಮುಂದಕ್ಕೆ ಹೋಗುವದು ಅಶಕ್ಯವೆಂದು ಪಲ್ಲಕ್ಕಿಯನ್ನು ಕೆಳಗೆ ಇಳಿಸಿದರು. ವಿಚಾರ ಮಗ್ನಳಾದ ಮುರೆಯು ಜನರ ಧಕ್ಕೆಯಿಂದ ಎಚ್ಚತ್ತು ಬೋವಿಗಳಿಗೆ - ಪಲ್ಲಕ್ಕಿಯನ್ನು ಯಾಕೆ ಇಳಿಸಿದಿರೆಂದು ಕೇಳಲು, ಅವರಲ್ಲಿ ಒಬ್ಬನು-ದೇವೀ, ಏನು ಮಾಡೋಣ, ಪಲ್ಲಕ್ಕಿಯು ಎಷ್ಟುಮಾತ್ರವೂ ಮುಂದಕ್ಕೆ ಹೋಗುವ ಹಾಗಿಲ್ಲ, ಜನರ ಸಮೂಹವೂ ಸಮುದ್ರದಂತೆ ಕ್ಷೋಭಿಸಿ, ಅದರ ಗುಂಪುಗಳು ಸಮುದ್ರದ ತೆರೆಗಳಂತೆ ಒಂದರಮೇಲೊಂದು ಬಂದು ಅಪ್ಪಳಿಸಹತ್ತಿವೆ. ಯಾರು ರಾಕ್ಷಸನಿಗೆ ಬೈಯ್ಯುತ್ತಾರೆ, ಯಾರು ''ಏನು ಭಯಂಕರ ಪ್ರಾಣಹಾನಿ''ಯೆಂದು ಒದರುತ್ತಾರೆ. ಏನೆಂದು ಕೇಳಿದರೆ ಯಾರೂ ಉತ್ತರಕೊಡಲೊಲ್ಲರು. ಏನಾಗಿರುವದೆಂಬದನ್ನು ದೇವರೇ ಬಲ್ಲನು. ನನಗೆ ಅಪ್ಪಣೆಯಾದರೆ, ಇದ್ದದ್ದನ್ನು ತಿಳಿದು ಬಂದು ಹೇಳುವೆನು.

"ರಾಕ್ಷಸನನ್ನು ಬೈಯ್ಯುತ್ತಾರೆ" ಏನು ಭಯಂಕರ ಪ್ರಾಣಹಾನಿಯೆಂದು ಕೂಗುತ್ತಾರೆ" ಎಂಬವೆರಡು ಉದ್ಗಾರಗಳನ್ನು ಕೇಳಿದಕೂಡಲೆ ಮುರೆಯು ಮತ್ತೆ ಚಿಂತೆಗೊಳಗಾದಳು. ಈ ಉದ್ಗಾರಗಳ ಮೇಲಿಂದ ಚಾಣಕ್ಯನ ಭಯಂಕರವಾದ ವ್ಯೂಹವು ಯಶಸ್ವಿಯಾಯಿತೆಂದು ಆಕೆಯು ತಿಳಕೊಂಡಳು; ಆದರೆ, ಅಮಾತ್ಯರಾಕ್ಷಸನ ಜಯಜಯಕಾರಕ್ಕೂ ಭಯಂಕರ ಪ್ರಾಣಹಾನಿಗೂ ಸಂಬಂಧವಾಗದ್ದರಿಂದ ಆಕೆಗೆ ಏನೂ ತೋಚದಾಯಿತು. ಆಗ ಮುರೆಯು ಆ ಬೋವಿಗೆ – ಹೋಗು; ನೀನೇ ಪ್ರತ್ಯಕ್ಷ ಹೋಗಿ ನೋಡಿ, ಏನು ಆಗಿರುತ್ತದೆಂಬದನ್ನು ಬೇಗನೆ ಬಂದು ತಿಳಿಸು. ನಡೆ ನಿಲ್ಲಬೇಡ ಓಡು ನೀನು ಬರುವವರೆಗೆ ನಿನ್ನ ಈ ಸಂಗಡಿಗರು ನನ್ನ ಸಂರಕ್ಷಣ ಮಾಡುವರು, ಎಂದಳು. ಆ ಬೋವಿಯು ಒಂದು ನೂರು ಹೆಜ್ಜೆ ಹೋಗಿದ್ದನೋ ಇಲ್ಲವೋ, ಅಷ್ಟರಲ್ಲಿ ಮುರೆಯು ಅಲ್ಲಿದ್ದವರಿಗೆ–ಯಾಕೆ? ಅವನು ಬಂದನೇನು? ಹೊತ್ತಾಯಿತಲ್ಲ? ಹೋಗು, ನೀನು ಹೋಗಿ ನೋಡಿಕೊಂಡು ಬಾರೆಂದು ಮತ್ತೊಬ್ಬ ಬೋವಿಗೆ ಹೇಳಿದಳು. ಅದಕ್ಕೆ ಅವನು–ದೇವೀ, ಆತನು ಕಾಲಲ್ಲಿ ಬಲು ಹಗುರು. ಈಗ ಬರುವನು, ಎಂದು ಹೇಳಿದರೂ ಮುರೆಯು ಕೇಳದೆ – ಆತನು ಬರಲೊಲ್ಲನೇಕೆ, ನೀನೂ ಹೋಗಿ ಬಾ, ಎಂದು ಹೇಳಿದಳು. ಆಗ ಆತನು ಉಪಾಯಗಾಣದೆ ಶೋಧಾರ್ಥವಾಗಿ ಹೊರಟುಹೋದನು. ಇತ್ತ ಮುರೆಗೆ ಸಮಾಧಾನವೇ ಇಲ್ಲ, ಎರಡನೇಯವನು ಹೋಗಿ ಸ್ವಲ್ಪ ಹೊತ್ತು ಆಗುವದರೊಳಗೆ ಆಕೆಯು ಉಳಿದ ಇಬ್ಬರು ಬೋಯಿಗಳಿಗೆ – ಯಾಕೆ? ಯಾರಾದರೂ ಬಂದರೋ? ನೋಡಿರಿ, ಇಲ್ಲದಿದ್ದರೆ ನೀವು ನನ್ನ ಎಡ–ಬಲದಲ್ಲಿ ಬರುತ್ತ ನನಗೆ ಹಾದಿಯನ್ನು ಬಿಡಿಸಿರಿ, ನಾನೇ ನಡೆಯುತ್ತ ಬರುತ್ತೇನೆ, ಅನ್ನಲು ಬೋಯಿಗಳು ದೇವೀ, ತಾವು ಅಂತ ಸಾಹಸಕ್ಕೆ ಹೋಗಬಾರದು. ಅಂತರ್ಗೃಹದೊಳಗಿನ ರತ್ನಗಂಬಳಿಯ ಮೇಲೆ ನಡೆಯುತ್ತ ಒಂದು ಕೋಣೆಯಿಂದ ಮತ್ತೊಂದು ಕೋಣೆಗೆ ಹೋಗುವದು ಮಾತ್ರ ನಿಮಗೆ ಗೊತ್ತು, ಒಳ್ಳೇ ಸಮರ್ಥರಾದ ಪುರುಷರೂ ಪಾರಾಗಿ ಹೋಗುವದು ಈಗ ದುಸ್ತರವಾಗಿರಲು, ನಿಮ್ಮಂತವರ ಪಾಡೇನು? ಎಂದು ಹೇಳಿದರೂ, ಮುರೆಯು ಕೇಳಲಿಲ್ಲ. ದುಃಖಾತಿಶಯದಿಂದ ಆಕೆಯು ವಿವೇಕಭ್ರಷ್ಟಳಾಗಿದ್ದಳು. ತಾನು ಮಹಾಪರಾಧಿಯೆಂದು ತಿಳಕೊಂಡದ್ದರಿಂದ ಆಕೆಯು ಎಲ್ಲ ಆಶೆಯನ್ನು ತೊರೆದಿದ್ದಳು. ಆಕೆಯು ಬೋವಿಗೆ–ನಾನು ಇದಕ್ಕೂ ಭಯಂಕರವಾದ ಜನರ ಗದ್ದಲದೊಳಗಿಂದ ಪಾರಾಗಿ ಹೋದೇನು, ನೀವು ಸುಮ್ಮನೇ ನನ್ನ ಸಂಗಡಮಾತ್ರ ಬರ್ರಿ, ಎಂದು ಹೇಳಿ ಆಕೆಯು ಪಲ್ಲಕ್ಕಿಯೊಳಗಿಂದ ಇಳಿದು ಮುಂದಕ್ಕೆ ಸಾಗಿದಳು.

ಧನಾನಂದ ಮಹಾರಾಜರ ಪ್ರೀತಿಪಾತ್ರಳಾದ ರಾಣಿಯು ಪಾದಚಾರಿಯಾಗಿ ಹೋಗುವಾಗ ಅದಾವನು ಆಕೆಯ ಸಮೀಪಕ್ಕೆ ಸುಳಿದಾನು? ಅದಾವನು ಆಕೆಯನ್ನು ದಿಟ್ಟಿಸಿ ನೋಡಿಯಾನು? ಅದಾವನು ಆಕೆಗೆ ಭಕ್ತಿಯನ್ನು ತೋರಿಸದೆ ಇದ್ದಾನು? ಆದರೆ ಅದೆಲ್ಲ ಸ್ಥಿತಿಯು ಬದಲಾಗಿ ಮುರೆಯು ಈಗ ಜನರ ಸಂದಿಯಲ್ಲಿ ಸಿಕ್ಕು, ಮಾನಾಪಮಾನಗಳನ್ನೂ ಲಜ್ಜಾ ಭಯಗಳನ್ನೂ ಬದಿಗಿಟ್ಟು, ಮೈಮೇಲೆ ಎಚ್ಚರವಿಲ್ಲದೆ ಸಾಗಿದ್ದಳು. ಆಕೆಯ ಅಂಗರಕ್ಷಕರು ಸ್ವಾಮಿನಿಷ್ಠೆಯಿಂದಲೂ, ಆಕೆಯು ಕೊಡಲೊಪ್ಪಿದ ಪಾರಿತೋಷಕದ ಆಶೆಯಿಂದಲೂ ಕಸರಿಲ್ಲದೆ

ಸಾಹಸ ಮಾಡಿದರು. ಹೀಗೆ ಅವರೆಲ್ಲರು ಕಷ್ಟಪಡುತ್ತ ಜನಸಮ್ಮರ್ದವು ವಿಶೇಷವಾಗಿದ್ದ ಒಂದು ಸ್ಥಳಕ್ಕೆ ಬಂದು ಮುಟ್ಟಿದರು. ಆ ಜನರ ಸಂದಣಿಯೊಳಗಿಂದ ಮುರೆಯನ್ನು ಕರಕೊಂಡು ಹೋಗುವಾಗ ಬೋಯಿಗಳಿಗೆ ಬಹಳ ಶ್ರಮವಾಯಿತು. ಮುರೆಯ ಗತಿಯನ್ನಂತು ವರ್ಣಿಸುವ ಹಾಗಿದ್ದಿಲ್ಲ. ಆಕೆಯು ಶ್ರಮದಿಂದ ತೀರ ಕಸುವುಗೆಟ್ಟಿದ್ದಳು. ಅವರೆಲ್ಲ ಒಂದು ಭಯಂಕರವಾದ ತಗ್ಗಿನ ದಂಡೆಯಮೇಲೆ ನಿಂತುಕೊಂಡರು. ಅಹಹಾ! ಆ ಭಯಪ್ರದವಾದ ತಗ್ಗನ್ನು ಏನು ವರ್ಣಿಸುವದದೆ? ಅದರಲ್ಲಿ ಎಷ್ಟೋ ಹೆಣಗಳು ಬಿದ್ದಿದ್ದವು, ಅಲ್ಲಿ ರಕ್ತಪ್ರವಾಹವು ಹರಿಯುತ್ತಿತ್ತು. ಮೇಲಿಂದ ತಗ್ಗಿನಲ್ಲಿ ಬಿದ್ದವರನ್ನು ಕೆಳಗಿದ್ದ ಭಿಲ್ಲರು ಕೂಡಲೇ ತುಂಡರಿಸಿ ಚಲ್ಲುತ್ತಿದ್ದರು. ತಗ್ಗಿನ ಸುತ್ತಲು ಸೈನಿಕರು ನಿಂತಿದ್ದು, ಅವರು ಜನರನ್ನು ಹೊಡೆದು ಹಿಂದಕ್ಕೆ ಸರಿಸುತ್ತಿದ್ದರು. ಇದನ್ನೆಲ್ಲ ನೋಡಿ ಮುರೆಯ ಕಣ್ಣುಗಳು ಕತ್ತಲುಗೂಡಿಸಿದವು; ಸರ್ವಾಂಗವು ಥರಥರ ನಡುಗಹತ್ತಿತು; ನಿಲ್ಲುವ ತ್ರಾಣವು ಆಕೆಯಲ್ಲಿ ಉಳಿಯಲಿಲ್ಲ. ಅಷ್ಟರಲ್ಲಿ ಯಾರೋ ಒಬ್ಬರು ಆಕೆಯ ಕಿವಿಯ ಹತ್ತರ ಬಾಯಿ ಒಯ್ದು—''ಇಂಥ ಭಯಂಕರ ನೋಟವನ್ನು ನೋಡಲಿಕ್ಕೆ ಹೆಂಗಸರು ಬರಬಾರದು. ದೇವೀ, ನೀನು ಒಳ್ಳೇ ಧೈರ್ಯಶಾಲಿಯು. ಇಂಥ ಭಯಂಕರ ವ್ಯೂಹವನ್ನು ರಚಿಸುವದರಿಂದಷ್ಟೇ ನಿನಗೆ ಸಮಾಧಾನವಾದಂತೆ ತೋರಲಿಲ್ಲ; ಅದರಿಂದ, ಮಾಡಿದ ಕೆಲಸವು ಸರಿಯಾಗಿ ಆಯಿತೋ ಇಲ್ಲವೋ ಎಂಬದನ್ನು ಕಣ್ಣುಮುಟ್ಟ ನೋಡುವದಕ್ಕಾಗಿಯೇ ನೀನು ಇಲ್ಲಿಗೆ ಬಂದಿರುವಂತೆ ತೋರುತ್ತದೆ! ಏನೂ ಚಿಂತೆಯಿಲ್ಲ; ನೋಡು; ನಿನ್ನ ಇಚ್ಛೆಯಂತೆ ಎಲ್ಲ ಕಾರ್ಯವಾಗಿರುತ್ತದೆ. ಅದರಲ್ಲಿಯ ಒಂದು ಚಮತ್ಕಾರವೇನಂದರೆ, ಈ ಭಯಂಕರ ಕೃತ್ಯವನ್ನು ರಾಕ್ಷಸನೇ ಮಾಡಿಸಿರುವನೆಂದು ಜನರ ನಂಬಿಗೆಯಾಗಿದೆ. ತೋರಣದ ಸಮೀಪಕ್ಕೆ ಮಹಾರಾಜರು ಬರುವ ಸಂಧಿಯಲ್ಲಿ ಆತನು ಎರಡನೆಯ ಕಡೆಗೆ ಹೋದದ್ದು ಬಹಳ ಅನುಕೂಲ ವಾಯಿತು. ದೇವೀ, ಇನ್ನು ನೀನು ಇಲ್ಲಿ ನಿಲ್ಲಬೇಡ, ನಾನೂ ನಿಲ್ಲುವದಿಲ್ಲ.''

ಈ ಮೇರೆಗೆ ಮಾತಾಡಿದವನು ಕಪಟಪಟುವಾದ ಕಾರ್ಯದಕ್ಷ ಚಾಣಕ್ಯನೇ ಎಂಬದನ್ನು ವಾಚಕರು ತರ್ಕಿಸಿರಬಹುದು. ಚಾಣಕ್ಯನು ಮೆಲ್ಲನೆ ಮಾತಾಡಿದರೂ ಮುರೆಯು ಆತನ ಗುರುತು ಹಿಡಿದಳು. ಆಕೆಯು ಸಂತಾಪದಿಂದ ಉರಿಯುತ್ತ ಚಾಣಕ್ಯನ ಮೈಮೇಲೆ ಹೋಗಿ—ದುಷ್ಟಾ, ಬ್ರಾಹ್ಮಣಾಧಮಾ, ಇಲ್ಲಿಯವರೆಗೆ ಆರ್ಯಸ್ತ್ರೀಯರಾರೂ ಮನಸ್ಸಿನಲ್ಲಿ ಸಹ ತಾರದೆ ಇದ್ದ ಮಹಾ ಪಾತಕವನ್ನು ನನ್ನ ಕೈಯಿಂದ ಮಾಡಿಸಿದೆ. ಇನ್ನು ನನ್ನ ಹಾಗು ನನ್ನ ಮಗನ ಗತಿಯು ಏನಾದರೂ ಅಷ್ಟೇ. ಈಗ ನಾನು ಇದ್ದ ಸಂಗತಿಯನ್ನು ಎಲ್ಲರಿಗೂ ಹೇಳಿಬಿಟ್ಟು, ನಾನೂ ಈ ತಗ್ಗಿನಲ್ಲಿ ಹಾರಿಕೊಳ್ಳುವೆನು. ದುಷ್ಟಾ, ಚಾಣಕ್ಯಾ, ಈ ಪಾಪದಿಂದ ನೀನು ಜನ್ಮ ಜನ್ಮಾಂತರದಲ್ಲಿ ದೈತ್ಯನಾಗಿ ಹುಟ್ಟುವಿ, ಎಂದು ನುಡಿದು ಮುರೆಯು ತನ್ನ ಮೋರೆಯ ಮೇಲಿನ ಮುಸುಕನ್ನು ತೆಗೆದಳು. ಆಗ ಆಕೆಯು ಲೋಕಭಕ್ಷಕಳಾದ ಮಹಾಮಾರಿಯಂತೆ ಭಯಂಕರವಾಗಿ ತೋರಿದಳು. ಮುರೆಯು ದೊಡ್ಡ ದನಿಯಿಂದ – ಎಲೈ ಜನರುಗಳಿರಾ, ಕೇಳಿರಿ. ಈ ಭಯಂಕರ ಕೃತ್ಯವು ಅಮಾತ್ಯ ರಾಕ್ಷಸನಿಂದ ಆಗಿರು...... ಈ ಮೇರೆಗೆ ನುಡಿಯುತ್ತಿರಲು, ಚಾಣಕ್ಯನ ಸನ್ನೆಯಿಂದ ನಾಲ್ವರು ಭಿಲ್ಲರು ಆಕೆಯನ್ನು ಅಲ್ಲಿಂದ ಎತ್ತಿಕೊಂಡು ಹೋಗಲಿಕ್ಕೆ ಬಂದರು. ಅದನ್ನು ನೋಡಿ ಮುರೆಯು, ಈ ದುಷ್ಟನ ನೆರಳಿನಿಂದ ನಾನು ಮತ್ತೆ ಮೋಹಕ್ಕೆ

ಒಳಗಾದೇನೆಂದು ಭಯಪಟ್ಟು, ತಟ್ಟನೆ ತಗ್ಗಿನಲ್ಲಿ ಹಾರಿಕೊಂಡಳು. ತಗ್ಗು ಆಳವಾಗಿದ್ದದ್ದರಿಂದ ಕೆಳಗೆ ಬೀಳುತ್ತಲೇ ಆಕೆಯ ಪ್ರಾಣವು ಹಾರಿತು.

ಇತ್ತ ರಾಕ್ಷಸನು ಯಾವ ಪಾಪವನ್ನೂ ಅರಿಯದವನಾಗಿದ್ದನು. ಆತನು ಅರಸನ ಸಂಗಡ ಸಾಗಿರುವಾಗ ತನ್ನ ಕೈಗೆ ಆಕಸ್ಮಿಕವಾಗಿ ಬಂದು ಹತ್ತಿದ ಪತ್ರ ಓದಿದ್ದನ್ನು ವಾಚಕರು ಮರೆತಿರಲಿಕ್ಕಿಲ್ಲ. ಆ ಪತ್ರದಲ್ಲಿ ಹೆಚ್ಚಿಗೇನು ಬರೆದಿದ್ದಿಲ್ಲ. ''ತಾವು ಈ ಸಮಾರಂಭದಲ್ಲಿ ತೊಡಗಿದಿರಿ; ಆದರೆ ಪರ್ವತೇಶ್ವರನು ಪಟ್ಟಣವನ್ನು ಮುತ್ತಿರುವನಲ್ಲ, ಅದರ ಗತಿಯೇನು?'' ಎಂದು ಇಷ್ಟೇ ಬರೆದಿತ್ತು. ರಾಕ್ಷಸನು ಅದನ್ನು ಓದಿ ಇದರ ನಿಜತ್ವವನ್ನು ತಿಳಿದು ಈಗಲೇ ಬರಬೇಕೆಂದು ಆತನು ಅರಸನ ಬಳಿಯಿಂದ ಹೋಗಿದ್ದನು. ಇತ್ತ ಅರಸನು ಪುತ್ರರೊಡನೆ ರಾಜದ್ವಾರದ ತೋರಣದ ಬಳಿಯಲ್ಲಿ ಬಂದ ಕೂಡಲೇ ಭೂಮಿಯು ಕುಸಿಬಿದ್ದು ಪುತ್ರರೊಡನೆ ಆತನು ತಗ್ಗಿನಲ್ಲಿ ಬಿದ್ದನು. ಚಂದ್ರಗುಪ್ತನು ಮೊದಲೇ ಎಚ್ಚರದಿಂದ ತನ್ನ ಕುದುರೆಯನ್ನು ದಾಟಿಸಿದ್ದನೆಂಬದನ್ನು ವಾಚಕರು ಮರೆತಿರಲಿಕ್ಕಿಲ್ಲ. ಒಳಗೆ ಬಿದ್ದವರನ್ನು ಕೂಡಲೆ ಸಂಹರಿಸುವದಕ್ಕಾಗಿ ಚಾಣಕ್ಯನು ಭಿಲ್ಲರನ್ನು ಮೊದಲೇ ನಿಯಮಿಸಿದ್ದರಿಂದ ಅವರು ನಂದಕುಲವನ್ನೆಲ್ಲ ಖಡ್ಗಗಳಿಂದ ತುಂಡರಿಸಿ ಚಲ್ಲಿದರು. ನಂದರ ಸಂಹಾರವಾದಕೂಡಲೇ ''ಅಮಾತ್ಯ ರಾಕ್ಷಸನ ಜಯಜಯಕಾರವು'' ಎಂದು ಕೂಗುವದಕ್ಕೆ ಭಿಲ್ಲರಿಗೆ ಮೊದಲೇ ಆ ಬ್ರಾಹ್ಮಣನು ಕಲಿಸಿ ಇಟ್ಟಿದ್ದನು. ಅದರಂತೆ ಅವರು ಮಾಡಲು, ರಾಕ್ಷಸನೇ ಈ ನೀಚ ಕೃತ್ಯವನ್ನು ಮಾಡಿಸಿರಬಹುದೆಂಬ ಸಂಶಯವು ಜನರಲ್ಲಿ ಉತ್ಪನ್ನವಾಯಿತು. ಸಂಹಾರಪ್ರಸಂಗದಲ್ಲಿ ತಾನಿರದೆ ರಾಕ್ಷಸನು ಹೊರಟು ಹೋದದ್ದೂ, ಆತನು ಅರಸನನ್ನು ಜುಲುಮೆಯಿಂದ ಈದಿನ ದರ್ಬಾರಕ್ಕೆ ಕರಕೊಂಡು ಬಂದದ್ದೂ ಅಮಾತ್ಯನ ಮೇಲಿಂದ ಆರೋಪವನ್ನು ದೃಢಪಡಿಸಲಿಕ್ಕೆ ಕಾರಣವಾದವು; ರಾಕ್ಷಸನನ್ನು ರಾಜ ಘಾತದ ಅಪವಾದಕ್ಕೆ ಗುರಿಮಾಡಿದಷ್ಟಕ್ಕೆ ಚಾಣಕ್ಯನ ಕೆಲಸವಾಗುವಂತೆ ಇದ್ದಿಲ್ಲ. ರಾಕ್ಷಸನು ಪರ್ವತೇಶ್ವರ ನೊಡನೆ ಒಳಸಂಚು ಮಾಡಿ, ನಂದರಾಜ್ಯವನ್ನು ಆ ಯವನ ಭೂಪತಿಗೆ ಒಪ್ಪಿಸಿ ತಾನು ಆ ಪೌರಸನಿಂದ ಲಾಭಹೊಂದಲು ಇಚ್ಛಿಸಿದ್ದನೆಂತಲೂ, ಆ ಅರಿಷ್ಟವನ್ನು ಚಂದ್ರಗುಪ್ತನು ನಿವಾರಣಮಾಡಿದನೆಂತಲೂ ಸಿದ್ಧಮಾಡಬೇಕಾಗಿತ್ತು. ಅದಕ್ಕಾಗಿ ಚಾಣಕ್ಯನು ಬೇರೊಂದು ಭಿಲ್ಲರ ಗುಂಪನ್ನು ಒತ್ತಟ್ಟಿಗೆ ನಿಲ್ಲಿಸಿದ್ದರು. ಅವರಿಗೆ ಪೂರ್ವಸಂಕೇತದಂತೆ ಸನ್ನೆಮಾಡಲು, ಅವರು ತಗ್ಗಿನಲ್ಲಿ ಹಾರಿಕೊಂಡು ಅಲ್ಲಿಯ ಬಿಲ್ಲರಲ್ಲಿ ಕೆಲವರನ್ನು ಗಾಯಗೊಳಿಸಿ, ಕೆಲವರನ್ನು ಓಡಿಸಿದಂತೆ ಮಾಡಿ ಚಂದ್ರಗುಪ್ತನು ರಾಕ್ಷಸನ ಪ್ರಯತ್ನಕ್ಕೆ ಅಡ್ಡಬಂದಂತೆ ತೋರಿಸಿದರು. ಕೂಡಲೆ ''ಚಂದ್ರಗುಪ್ತನ ಜಯಜಯಕಾರವು'' ಎಂಬ ಧ್ವನಿಯು ದಿಕ್ತಟವನ್ನು ತುಂಬಿತು. ಈ ಉಪಾಯ ದಿಂದ ಜನರು ಚಂದ್ರಗುಪ್ತನ ವಿಷಯವಾಗಿ ಸಹಾನುಭೂತಿಯುಳ್ಳವರಾಗುವರೆಂದು ಚಾಣಕ್ಯನು ತಿಳಿದಿದ್ದನು. ಅದು ಎಷ್ಟರಮಟ್ಟಿಗೆ ಸಫಲವಾಯಿತೆಂಬದು ಮುಂದಿನ ಪ್ರಕರಣದಿಂದ ತಿಳಿಯುವದು.

ಪಶ್ಚಾತ್ತಾಪ

ಪರ್ವತೇಶ್ವರನಿಗೆ ರಾಕ್ಷಸನ, ಅಂದರೆ ರಾಕ್ಷಸನ ಮುದ್ರೆಯ ಪತ್ರವು ಮುಟ್ಟಿದಂದಿನಿಂದ ಆತನು ಆನಂದಭರಿತನಾಗಿದ್ದನು. ಗ್ರೀಕರ ಬಾದಶಹನಾದ ಶಿಕಂದರನು ಹಿಂದುಸ್ತಾನದ ಮೇಲೆ ದಂಡೆತ್ತಿಬಂದು, ಇಲ್ಲಿಯ ಕೆಲವು ರಾಜ್ಯಗಳನ್ನು ಗೆದ್ದು, ಆ ರಾಜ್ಯಗಳ ಅರಸರಿಗೆ ಅವರವರ ರಾಜ್ಯಗಳನ್ನು ತಿರುಗಿಕೊಟ್ಟು ಅವರನ್ನು ತನ್ನ ಮಾಂಡಲೀಕರನ್ನಾಗಿ ಮಾಡಿಕೊಂಡಿದ್ದನು. ಅಂಥ ಮಾಂಡಲಿಕರಲ್ಲಿ ಪರ್ವತೇಶ್ವರನು ಒಬ್ಬನಾಗಿದ್ದನು. ಪರ್ವತೇಶ್ವರನ ದಂಡಿನಲ್ಲಿಯೂ, ದರ್ಬಾರದಲ್ಲಿಯೂ ಗ್ರೀಕರೂ, ಯುವನರೂ ತುಂಬಿಕೊಂಡಿದ್ದರಿಂದ ಮಗಧ ದೇಶಾಧಿಪತಿಗಳು ಆತನನ್ನು ಗ್ರೀಕರಾಜನೆಂತಲೇ ಕರೆದು ದ್ವೇಷಿಸುತ್ತಿದ್ದರು. ಬಹುಜನ ಹಿಂದೂ ರಾಜರು ಗ್ರೀಕರ ಮಾಂಡಲಿಕರಾಗಿ ತಮ್ಮ ಸ್ವಾತಂತ್ರ್ಯವನ್ನು ಕಳಕೊಂಡರೂ, ತಾವು ಹಾಗೆ ಮಾಡದೆ ತಮ್ಮ ಆರ್ಯತ್ವವನ್ನು ಕಾಯ್ದುಕೊಂಡಿರುತ್ತೇವೆಂಬ ಅಭಿಮಾನವು ನಂದರಿಗೆ ವಿಶೇಷವಾಗಿತ್ತು. ಈ ಅಭಿಮಾನವನ್ನು ನಷ್ಟಪಡಿಸಲು ಪರ್ವತೇಶ್ವರನು ಹೊಂಚುಹಾಕಿದ್ದನು. ಇಂಥ ಪ್ರಸಂಗದಲ್ಲಿ ನಂದರ ಅತ್ಯಂತ ಸ್ವಾಮಿನಿಷ್ಠನಾದ ರಾಕ್ಷಸನಂತ ದುರ್ಲಭ ಮಂತ್ರಿಯು ತಾನಾಗಿ ಪತ್ರಬರೆದು ತನಗೆ ಅನುಕೂಲವಾದದ್ದರಿಂದ ಪರ್ವತರಾಜನು ಉಬ್ಬಿದ್ದರಲ್ಲಿ ಆಶ್ಚರ್ಯವೇನು?

ಪರ್ವತೇಶ್ವರನು ರಾಕ್ಷಸನ ಮೊದಲನೆಯ ಪತ್ರಕ್ಕೆ ಏನೋ ಉತ್ತರವನ್ನು ಬರೆದನು. ರಾಕ್ಷಸನ ಎರಡನೆಯ ಪತ್ರ ಬರಲು, ಅದಕ್ಕೂ ಉತ್ತರವನ್ನು ಬರೆದು ಕಳಿಸಿದನು. ಮೂರನೆಯ ಪತ್ರದಲ್ಲಿ ರಾಕ್ಷಸನು ಪರ್ವತೇಶ್ವರನಿಗೆ–ನೀನು ಇಂಥದಿವಸ ಇಷ್ಟುಹೊತ್ತಿನಲ್ಲಿ ಅಲ್ಪ ಸೈನ್ಯದೊಡನೆ ಬಂದು ಪಾಟಲಿಪುತ್ರವನ್ನು ಮುತ್ತಬೇಕೆಂದು ಸ್ಪಷ್ಟವಾಗಿ ಬರೆದಿದ್ದನು. ಬರುವಾಗ ಹಾದಿಯಲ್ಲಿ ಮಗಧದೇಶದ ಪ್ರಜೆಗಳು ಕೇಳಿದರೆ, ನಂದರೊಡನೆ ಸ್ನೇಹ ಭಾವವನ್ನು ಬೆಳಿಸುವದಕ್ಕಾಗಿ ಅವರ ಪತ್ರದ ಪ್ರಕಾರ ನಾಲ್ಕುದಿನ ಹೋಗಿ ಬರುವೆನೆಂದು ಹೇಳಬೇಕಂತಲೂ, ಪ್ರಜೆಗಳಿಗೆ ಉಪದ್ರವ ಕೊಡಬಾರದೆಂತಲೂ ರಾಕ್ಷಸನು ಆ ಪತ್ರದಲ್ಲಿ ಬರೆದಿದ್ದನು. ಅಲ್ಪ ಸೈನ್ಯದೊಡನೆ ಪ್ರಜೆಗಳ ಗೊಡವಿಗೆ ಹೋಗದೆ ನೀನು ಬರುತ್ತಿರುವದನ್ನು ನೋಡಿ ಯಾರಿಗೂ ಸಂಶಯ ಬರುವ ಸಂಭವವಿಲ್ಲೆಂಬ ಅಭಿಪ್ರಾಯವು ಪತ್ರದಿಂದ ವ್ಯಕ್ತವಾಗುತ್ತಿತ್ತು. ನಂದವಂಶ ವನ್ನು ಸಮೂಲ–ಸಶಾಖ–ಸಾಂಕುರವಾಗಿ ಕ್ಷಣಮಾತ್ರದಲ್ಲಿ ನಾಶಗೊಳಿಸುವಂತೆ ಅತ್ಯುತ್ತಮ ಉಪಾಯಮಾಡಿರುತ್ತದೆಂದು ಪತ್ರದಲ್ಲಿ ಸ್ಪಷ್ಟವಾಗಿ ಬರೆದಿತ್ತು. ನಂದರ ಸಿಂಹಾಸನದ ಮೇಲೆ ನಿನ್ನನ್ನು ಕೂಡ್ರಿಸಿ, ನಾನು ಸಂತೋಷದಿಂದ ನಿನ್ನ ಮಂತ್ರಿಯಾಗುವೆನೆಂದು ರಾಕ್ಷಸನು ಸ್ಪಷ್ಟವಾಗಿ ತಿಳಿಸಿದ್ದನು. ರಾಕ್ಷಸನಿಗೆ ಪತ್ರಗಳ ಗಂಧವಿಲ್ಲದೆ, ಅವನ್ನೆಲ್ಲ ಚಾಣಕ್ಯನೇ ಬರೆದು ಕಳಿಸುತ್ತಿದ್ದನೆಂಬದನ್ನು ವಾಚಕರಿಗೆ ನೆನಪುಮಾಡಿಕೊಡುವ ಕಾರಣವಿಲ್ಲ. ಇತ್ತ ಪರ್ವತೇಶ್ವರನು ನಂದರ ಸೊಕ್ಕು ಮುರಿಯುವ ಉಬ್ಬಿನೊಳಗೆ ಹೆಚ್ಚಿಗೆ ವಿಚಾರಮಾಡದೆ, ವೃದ್ಧ ಮಂತ್ರಿಗಳ ಆಲೋಚನೆಗೆ ಕಿವಿಗೊಡದೆ ಸ್ವಲ್ಪ ದಂಡಿನೊಡನೆ ತಾನೇ ಬಂದು, ಮೇಲೆ ಹೇಳಿದಂತೆ ಧನಾನಂದನು ದರ್ಬಾರಕ್ಕೆ ಹೊರಟ ದಿವಸವೇ ಪಾಟಲೀಪುತ್ರವನ್ನು ಮುತ್ತಿದ್ದನು.

ವಿಚಾರಮಾಡುತ್ತ ಕುಳಿತುಕೊಳ್ಳಲಿಕ್ಕೆ ಹೊತ್ತು ಸಿಗದಂತೆಯೇ ಚಾಣಕ್ಯನು ಪತ್ರಬರೆದು ಕಳಿಸಿದ್ದನು. ಈಮೇರೆಗೆ ಪರ್ವತೇಶ್ವರನು ಮುತ್ತಿಗೆ ಹಾಕಿ ಭಾಗುರಾಯಣನ ಸಹಾಯದ ಹಾದಿಯನ್ನು ನೋಡುತ್ತಿದ್ದನು. ಈಗ ತನ್ನನ್ನು ಎದುರ್ಗೊಂಡು ಕೋಟೆಯೊಳಗೆ ಕರಕೊಂಡು ಹೋಗಿ ತನ್ನನ್ನು ನಂದರ ಸಿಂಹಾಸನದಮೇಲೆ ಕುಳ್ಳಿರುಸುವರೆಂದು ಆಶೆಬುರುಕನಾದ ಆ ಮೂಢ ಪರ್ವತೇಶ್ವರನು ಬಾಯಿತಕ್ಕೊಂಡು ಕುಳಿತಿದ್ದನು; ಅಷ್ಟರಲ್ಲಿ ಕೋಟೆಯ ಗೋಡೆಗಳ ಮೇಲಿಂದ ಬಾಣ, ಶತಘ್ನಿ, ಭ್ರುಶುಂಡಿಗಳ ಪೆಟ್ಟುಗಳು ಬೀಳಹತ್ತಿದವು. ಅದರಂತೆ ಯಂತ್ರ, ಮಹಾಯಂತ್ರಗಳಿಂದ ಹೊರಡುವ ಕಲ್ಲುಗಳ ಮಳೆಯು ಪಾರ್ವತೇಯ ಸೈನ್ಯದಮೇಲೆ ಸುರಿಯ ಹತ್ತಿತು. ಇದನ್ನು ನೋಡಿ ಪರ್ವತೇಶ್ವರನೂ, ಅವನ ಸೈನಿಕರೂ ಬೆದರಿಹೋದರು. ಪರ್ವತೇಶ್ವರನಿಗೆ ತನ್ನ ಮೂರ್ಖತನಕ್ಕಾಗಿ ಬಹಳ ಪಶ್ಚಾತ್ತಾಪವಾಯಿತು. ರಾಕ್ಷಸನಂಥ ಅಕೃತ್ರಿಮ ಸ್ವಾಮಿನಿಷ್ಠೆಯ ಮಂತ್ರಿಯು, ರಾಜದ್ರೋಹದಂಥ ಮಹಾಪರಾಧಕ್ಕೆ ಮನಸ್ಸು ಮಾಡುವದು ತೀರ ಅಸಂಭವವೆಂಬ ವಿಚಾರವನ್ನು ನಾನು ಮನಸ್ಸಿನಲ್ಲಿ ತಾರದೆಯಿದ್ದದ್ದು ತಪ್ಪಾಯಿತೆಂದು ಆತನು ಮಿಡುಕಿದನು. ಅರ್ಧತಾಸು ನೋಡಿದನು, ತಾಸು ನೋಡಿದನು; ಆದರೆ ತನ್ನನ್ನು ಕರಕೊಂಡು ಹೋಗುವದು ಒತ್ತಟ್ಟಿಗುಳಿದು, ತನ್ನ ಸೈನ್ಯದ ಸಂಹಾರಮಾತ್ರ ಆಗಹತ್ತಿತು. ಪರ್ವತೇಶ್ವರನ ಸೈನ್ಯವು ದೊಡ್ಡದಿದ್ದಿಲ್ಲ, ಮಗಧವನ್ನು ಕೈವಶಮಾಡಿಕೊಳ್ಳಬೇಕೆಂಬ ಬುದ್ಧಿಯಿಂದ ಬಂದಿದ್ದರೆ, ಆತನು ಬೇರೆ ವಿಧವಾಗಿ ಬರುತ್ತಿದ್ದನು. ಇರಲಿ, ಬರಬರುತ್ತ ಪಾರ್ವತೇಯ ಸೈನ್ಯವು ದಾರಿಸಿಕ್ಕತ್ತ ಓಡತೊಡಗಿತು. ಪರ್ವತೇಶ್ವರನೂ ಉಪಾಯಗಾಣದೆ ಮುತ್ತಿಗೆಯನ್ನು ಎಬ್ಬಿಸಿ ಪಲಾಯನ ಮಂತ್ರವನ್ನು ಜಪಿಸಿದನು.

ಇತ್ತ ಚಾಣಕ್ಯನು ಚಂದ್ರಗುಪ್ತನನ್ನು ಕರೆದು – ಕುಮಾರಾ, ನಿನ್ನಲ್ಲಿ ಪಾತ್ರತೆಯಿದ್ದ ಹೊರತು ಪಾಟಲೀಪುತ್ರದ ಸಿಂಹಾಸನವು ನಿನಗೆ ದಕ್ಕದು. ನೀನು ನಂದರ ಸಿಂಹಾಸನವನ್ನು ಏರಲಿಕ್ಕೆ ತಕ್ಕವನೆಂಬದು ನನಗಷ್ಟೇ ಅಲ್ಲ, ಮಗಧದ ಪ್ರಜೆಗಳಿಗೂ ಗೊತ್ತಾಗಲಿಕ್ಕೆ ಬೇಕು. ಅರಸೊತ್ತಿಗೆಯನ್ನು ಸತ್ವಾತಿಶಯದಿಂದ ತಾನೇ ಸಂಪಾದಿಸುವದು ಉತ್ತಮ ಪಕ್ಷವು, ಅನ್ಯರ ಸಹಾಯದಿಂದ ಸಂಪಾದಿಸುವದು ಮಧ್ಯಮ ಪಕ್ಷವು. ತನ್ನಲ್ಲಿ ಯೋಗ್ಯತೆಯೇನೂ ಇಲ್ಲದೆ ಕೇವಲ ಪರದತ್ತವಾಗಿ ಸಂಪಾದಿಸುವದು ಅಧಮ ಪಕ್ಷವು. ಅಧಮನನ್ನು ರಾಜಲಕ್ಷ್ಮಿಯು ಒಲ್ಲೈಸಳು. ನೀನು ಮಧ್ಯಮ ಪಕ್ಷದವನೆಂದಾದರೂ ಅನಿಸಿಕೊಳ್ಳಲಿಚ್ಛಿಸುತ್ತಿದ್ದರೆ, ಪರ್ವತೇಶ್ವರನನ್ನು ಬೆನ್ನಟ್ಟಿ ಹೋಗಿ ಆತನನ್ನು ಕೈಸೆರೆ ಹಿಡುಕೊಂಡು ಬಾ; ಅಂದರೆ ಮಗಧರಾಜ್ಯದ ಮರ್ಯಾದೆ ಯುಳಿಸಿದವನೆಂದು ಎಲ್ಲರ ಆದರಕ್ಕೆ ನೀನು ಪಾತ್ರನಾಗುವೆ. ಹಾಗೆ ಮಾಡದೆ ನನಗೆ ಮೋರೆಯನ್ನೇ ತೋರಿಸಬೇಡ, ಎನ್ನಲು, ಚಂದ್ರಗುಪ್ತನು ಗುರುಚರಣಕ್ಕೆರಗಿ ವೀರವ್ರತನೇ ಮೊದಲಾದ ತನ್ನ ಮಿತ್ರರಿಂದ ಕೂಡಿ, ಶೂರ ಸೈನಿಕರೊಡನೆ ಹೊರಟನು. ಭಾಗುರಾಯಣನ ಸೈನ್ಯವು ಸಿದ್ಧವಾಗಿಯೇ ಇತ್ತು. ಚಂದ್ರಗುಪ್ತ– ಭಾಗುರಾಯಣರಿಬ್ಬರೂ ತಮ್ಮ ತಮ್ಮ ಸೈನ್ಯದೊಡನೆ ಪಾರ್ವತೇಯ ಸೈನ್ಯವನ್ನು ಬೆನ್ನಟ್ಟಿದರು. ಬರಬರುತ್ತ ಪರ್ವತೇಶ್ವರನ ಸೈನಿಕರು ಸೆರೆಯಾಳಾಗಹತ್ತಿದರು. ಚಂದ್ರಗುಪ್ತನು ಭಾಗುರಾಯಣನಿಗೆ ಪೌರಸನ ಸೈನ್ಯದ ಸಮಾಚಾರ

ವನ್ನು ತಕ್ಕೊಳ್ಳಹೇಳಿ, ತಾನು ಪೌರಸನ ಬೆನ್ನಟ್ಟಿ ಹೋದನು. ಮಗಧ ರಾಜ್ಯದ ಗಡಿಯಲ್ಲಿಯೇ ಪರ್ವತೇಶ್ವರನು ಚಂದ್ರಗುಪ್ತನ ಅಳವಿನೊಳಗೆ ಬಂದನು. ಅವರಿಬ್ಬರಿಗೂ ಭಯಂಕರವಾದ ಯುದ್ಧವಾಯಿತು. ಚಂದ್ರಗುಪ್ತನು ಅಗಾಧವಾದ ಪರಾಕ್ರಮವನ್ನು ಪ್ರಕಟಿಸಿ, ಪರ್ವತೇಶ್ವರನನ್ನು ಸೆರೆಹಿಡಿದನು. ಪರ್ವತೇಶ್ವರನು ಬೇಕಾದಷ್ಟು ಕಪ್ಪಕೊಡಲಿಕ್ಕೆ ಒಪ್ಪಿದರೂ, ಚಂದ್ರಗುಪ್ತನು ಕೇಳಲಿಲ್ಲ, ಗುರುವಿನ ಅಪ್ಪಣೆಯಂತೆ ಅವನನ್ನು ಸೆರೆಹಿಡಿಕೊಂಡು ಪಾಟಲಿಪುತ್ರಕ್ಕೆ ಬಂದನು.

ಚಂದ್ರಗುಪ್ತನು ಪರ್ವತೇಶ್ವರನನ್ನು ಸೆರೆಹಿಡಕೊಂಡು ಬರುವನೋ ಇಲ್ಲವೋ ಎಂದು ಚಾಣಕ್ಯನು ಒಂದೇಸವನೇ ಹಾದಿಯನ್ನು ನೋಡುತ್ತಿದ್ದನು. ಅವನ ಚಾರರು ಆ ಶುಭವಾರ್ತೆಯನ್ನು ಹೇಳಲು, ಆ ತೇಜೋ ಮೂರ್ತಿಯ ಆನಂದವು ಹೊಟ್ಟೆಯಲ್ಲಿ ಹಿಡಿಸದಾಯಿತು. ಆತನು ಧನ್ಯತೆಯನ್ನು ಪ್ರಕಟಿಸಿದನು. ಚಂದ್ರಗುಪ್ತನನ್ನು ಸಮಾರಂಭದಿಂದ ಎದುರ್ಗೊಂಡು ಹ್ಯಾಗೆ ಕರಕೊಂಡು ಬರಬೇಕೆಂಬದನ್ನೂ, ಡಂಗುರವನ್ನು ಹ್ಯಾಗೆ ಸಾರಿಸಬೇಕೆಂಬದನ್ನೂ ಕುರಿತು ಆತನು ವಿಚಾರಿಸಹತ್ತಿದನು. ಚಂದ್ರಗುಪ್ತನನ್ನು ಒಳ್ಳೇ ಸಮಾರಂಭದಿಂದ ಪಾಟಲೀಪುತ್ರದಲ್ಲಿ ಕರಕೊಂಡು ಬರುವಾಗ, ಸೆರೆಯಾಳಾದ ಪರ್ವತ ರಾಜನನ್ನು ಅವನ ಮುಂದೆ ಮೆರಿಸುತ್ತ ಕರಕೊಂಡು ಬರಬೇಕೆಂದು ಆ ಧೂರ್ತ ಬ್ರಾಹ್ಮಣನು ನಿಶ್ಚಯಿಸಿದನು. ಅದರಂತೆ ಸೇವಕರಿಂದ ಪಾಟಲೀಪುತ್ರದಲ್ಲೆಲ್ಲ ಆತನು ಡಂಗುರವ ಸಾರಿಸಿದನೇನಂದರೆ – ಧನಾನಂದ ಮಹಾರಾಜರನ್ನು ಮಕ್ಕಳಿಂದ ಸಹಿತವಾಗಿ ಯಾವನೋ ದುಷ್ಟನು ಸಂಹರಿಸಿದನು. ಈ ಸಂಧಿಯನ್ನು ಸಾಧಿಸಿ ಪರ್ವತೇಶ್ವರನು ಪಾಟಲಿಪುತ್ರವನ್ನು ಮುತ್ತಿ ಪಟ್ಟಣವನ್ನು ಕೈವಶಮಾಡಿಕೊಳ್ಳುವ ಹವಣಿಕೆಯಲ್ಲಿದ್ದನು. ಅಷ್ಟರಲ್ಲಿ ಚಂದ್ರಗುಪ್ತನು ತನ್ನ ತಂದೆಯ ಹಾಗೂ ಬಂಧುಗಳ ಮರಣದ ಸೇಡು ತೀರಿಸಿಕೊಳ್ಳುವ ಪ್ರತಿಜ್ಞೆಯನ್ನು ಮಾಡಿ, ಭಾಗುರಾಯಣನ ಸಹಾಯವನ್ನು ಪಡೆಯದೆ, ತಾನೊಬ್ಬನೇ ಪರ್ವತೇಶ್ವರನ ಮೇಲೆ ಬಿದ್ದು ಆತನನ್ನು ಸೋಲಿಸಿ ಇಂದು ಸೆರೆಹಿಡಕೊಂಡು ಬರುವವನಿದ್ದಾನೆ. ಪರ್ವತೇಶ್ವರನು ಗ್ರೀಕರ ಮಾಂಡಲೀಕರನ್ನು. ಆತನು ಮೂಲತಃ ಆರ್ಯನಿದ್ದು, ತಾನು ಗ್ರೀಕರ ಮಾಂಡಲಿಕ ನಾಗಿರುವದಲ್ಲದೆ, ನಂದರನ್ನು ತನ್ನ ಮಾಂಡಲಿಕರನ್ನಾಗಿ ಮಾಡಿಕೊಂಡರೆ, ಅವರು ಗ್ರೀಕರ ಗುಲಾಮನ ಗುಲಾಮರಾದಂತಾಗುವದೆಂಬ ದುಷ್ಟವಾಸನೆಯಿಂದ ಕುಸುಮಪುರದಲ್ಲಿ ಯಾರನ್ನೋ ಒಡಕೊಂಡು ರಾಜಘಾತವನ್ನು ಮಾಡಿಸಿ ಪಟ್ಟಣವನ್ನು ಮುತ್ತಿದನು. ಈ ಅಪರಾಧಕ್ಕಾಗಿ ಪರ್ವತೇಶ್ವರನಿಗೆ ಯಾವ ಶಿಕ್ಷೆಯನ್ನು ಮಾಡಬೇಕೆಂಬದನ್ನು ಕುರಿತು ರಾಜಾಧಿರಾಜ ಚಂದ್ರಗುಪ್ತ ಮಹಾರಾಜರು ವಿಚಾರ ಮಾಡೇ ಮಾಡುವರು. ಇದಲ್ಲದೆ, ಅವರು ಕುಸುಮಪುರದಲ್ಲಿ ಆದ ಒಳಸಂಚನ್ನು ಗೊತ್ತು ಹಚ್ಚಿ, ಸಂಚಿನಲ್ಲಿ ಸೇರಿದವರಿಗೆ ದೇಹಾಂತ ಶಾಸನವನ್ನು ವಿಧಿಸುವ ನಿಶ್ಚಯ ಮಾಡಿದ್ದಾರೆ. ಹೀಗೆ ಅಗಾಧವಾದ ಪರಾಕ್ರಮದಿಂದ, ನಂದರನ್ನು ಘಾತಗೊಳಿಸಿದವನ ಸೇಡುತೀರಿಸಿ ಬಂದಿರುವ ರಾಜಪುತ್ರನ, ಈಗ ಮಹಾರಾಜರಾಗಿರುವವನ ಆದರ ಸತ್ಕಾರಗಳನ್ನು ಎಲ್ಲರೂ ಮಾಡಬೇಕು.

ಈ ಮೇರೆಗೆ ಡಂಗುರ ಸಾರಿದಬಳಿಕ ಚಾಣಕ್ಯನು ಕಲಾಕುಶಲರಿಂದ ಪಟ್ಟಣದೊಳಗೆ ಅಲ್ಲಲ್ಲಿ ಗುಡಿತೋರಣಗಳನ್ನು ಕಟ್ಟಿಸಿದನು. ಸ್ವಾಗತಮಂಟಪಗಳನ್ನು ಅಲ್ಲಲ್ಲಿ ನಿಲ್ಲಿಸಿದನು.

ಇದಲ್ಲದೆ ಪ್ರಜೆಗಳೂ ಪಟ್ಟಣವನ್ನು ಶೃಂಗರಿಸುವಂತೆ ಮಾಡಿದನು. ''ಗತಾನುಗತಿಕೋಲೋಕಃ'' ಎಂಬ ನ್ಯಾಯದಂತೆ ಒಬ್ಬನನ್ನು ಕಂಡು ಇನ್ನೊಬ್ಬನು, ಇನ್ನೊಬ್ಬನನ್ನು ಕಂಡು ಮತ್ತೊಬ್ಬನು ಹೀಗೆ ಇಡೀ ಪಾಟಲಿಪುತ್ರವೆಲ್ಲ ಶೃಂಗರಿಸಲ್ಪಡತೊಡಗಿತು. ಪ್ರಿಯವಾಚಕರೇ ಇರಲಿ, ಪಾಟಲೀಪುತ್ರವನ್ನು ಶೃಂಗರಿಸಿ, ಚಂದ್ರಗುಪ್ತನನ್ನು ಪಟ್ಟಣದಲ್ಲಿ ಸಮಾರಂಭದಿಂದ ಕರಕೊಂಡು ಬರಲಿಕ್ಕೆ ಸ್ವಲ್ಪ ಅವಕಾಶಬೇಕಾಗುವದರಿಂದ, ಅಷ್ಟರಲ್ಲಿ ನಾವು ರಾಕ್ಷಸನ ಸಮಾಚಾರವನ್ನು ತಕ್ಕೊಳ್ಳುವಾ ನಡೆಯಿರಿ.

ಪತ್ರವನ್ನು ಓದಿಕೊಂಡು, ರಾಕ್ಷಸನು ಅರಸನ ಬಳಿಯಿಂದ ಹೊರಟು ಹೋದದ್ದನ್ನು ವಾಚಕರು ಮರೆತಿರಲಿಕ್ಕಿಲ್ಲ. ರಾಕ್ಷಸನು ಪರ್ವತೇಶ್ವರನ ಆಕಸ್ಮಿಕ ಮುತ್ತಿಗೆಯನ್ನು ಕೇಳಿ ಚಕಿತನಾಗಿ ಆದಷ್ಟು ವೇಗದಿಂದ ಸಾಗಿನೋಡಲು, ವೈರಿಗಳನ್ನು ಹೊಡೆದೋಡಿಸುವದಕ್ಕಾಗಿಯೋ ಅನ್ನುವಂತೆ ತನ್ನ ಸೈನ್ಯವು ಶಾಸ್ತ್ರಾಸ್ತ್ರಗಳಿಂದ ಸಜ್ಜಾಗಿ ನಿಂತಿರುವದು ಕಣ್ಣಿಗೆ ಬಿತ್ತು. ಆದರಿಂದ ರಾಕ್ಷಸನಿಗೆ ಸಮಾಧಾನವಾಯಿತು. ತಾನು ಮೈಮರೆತು ಕುಳಿತಿದ್ದರೂ ಭಾಗುರಾಯಣನು ಜಾಗರೂಕನಾಗಿರುವನೆಂದು ತಿಳಿದು ಅಮಾತ್ಯನು ಬಹು ಸಮಾಧಾನಪಟ್ಟನು. ಸೇನಾ ಸ್ಥಾನದಲ್ಲಿ ಭಾಗುರಾಯಣ ಸೇನಾಪತಿಯು ಇಲ್ಲದ್ದರಿಂದ ಆತನ ಕೈಕೆಳಗಿನ ಅಧಿಕಾರಿಯನ್ನು ರಾಕ್ಷಸನು ಕರೆಸಿದನು; ಆದರೆ—''ಯಾವ ಕಾಲದಲ್ಲಿ ಭಾಗುರಾಯಣ ಸೇನಾಪತಿಯ ಅಪ್ಪಣೆಯು ಏನಾಗುವದೋ ಎಂಬದರ ನಿಯಮವಿಲ್ಲದ್ದರಿಂದ ನಾನು ಬರುವಹಾಗಿಲ್ಲೆ''ಂದು ಆ ಅಧಿಕಾರಿಯು ಉತ್ತರವನ್ನು ಹೇಳಿಕಳಿಸಿದನು. ಅದನ್ನು ಕೇಳಿ ಅಮಾತ್ಯನಿಗೆ ಬಹಳ ಆಶ್ಚರ್ಯವಾಯಿತು. ಯಾರು ಹೇಳಿ ಕಳಿಸಿದ್ದಾರೆಂಬದು ನೆಟ್ಟಗೆ ತಿಳಿಯದ್ದರಿಂದ ಹೀಗೆ ಆಗಿರಬಹುದೆಂದು ಆತನು ಮತ್ತೊಮ್ಮೆ ಹೇಳಿಕಳಿಸಿದನು. ಆಗಲಾದರೂ ಅದೇ ಉತ್ತರವು ದೊರೆತಿದ್ದರಿಂದ ಅಮಾತ್ಯನು ಸಂತಾಪಗೊಂಡನು. ಪಾಟಲೀಪುತ್ರದಲ್ಲಿ ತನ್ನ ಅಪ್ಪಣೆಯನ್ನು ಹೀಗೆ ಯಾರಾದರೂ ಉಲ್ಲಂಘಿಸಬಹುದೆಂದು ರಾಕ್ಷಸನು ಸ್ವಪ್ನದಲ್ಲಿ ಕೂಡ ಎಣಿಸಿದ್ದಿಲ್ಲ; ಆದರೆ ಪ್ರತ್ಯಕ್ಷ ಅನುಭವವೇ ಬಂದಬಳಿಕ ಕೇಳುವದೇನು? ಆತನು ಕೂಡಲೇ ಅಧಿಕಾರಿಯಿದ್ದೆಡೆಗೆ ಹೋಗಿ —''ನೀನು ನನ್ನ ಅಪ್ಪಣೆಯನ್ನು ಮೀರಿದೆ; ಆದರೆ ಈ ಸಂಬಂಧದಿಂದ ಈಗ ನಿನಗೇನೂ ಅನ್ನುವದಿಲ್ಲ, ಪರ್ವತೇಶ್ವರನು ಪಾಟಲೀಪುತ್ರವನ್ನು ಮುತ್ತಿದ್ದಾನೆ. ಆತನನ್ನು ಹಿಂದಕ್ಕಟ್ಟುವದಕ್ಕಾಗಿ ಈ ಕ್ಷಣದಲ್ಲಿ ನೀನು ಸೈನ್ಯದೊಡನೆ ಹೊರಡು'' ಎಂದು ನಿರ್ಧಾರದಿಂದ ಆಜ್ಞಾಪಿಸಿದನು. ಅದಕ್ಕೆ ಆ ಅಧಿಕಾರಿಯು ಬಹು ಸಮಾಧಾನದಿಂದ ಭಾಗುರಾಯಣರವರು ಸೇನಾಪತಿಗಳಿದ್ದಾರೆ. ತಮ್ಮ ಅಪ್ಪಣೆಯಿಲ್ಲದೆ ಬೇರೆಯವರ ಅಪ್ಪಣೆಯನ್ನು ಕೇಳಬಾರದೆಂದು ಅವರು ಆಜ್ಞಾಪಿಸಿರುವರು. ಅವರ ಅಪ್ಪಣೆಯ ಹೊರತು ಒಬ್ಬ ಸೈನಿಕರೂ ಉಲುಕನು. ಸೈನ್ಯವಂತು ಶಾಸ್ತ್ರಾಸ್ತ್ರಗಳಿಂದ ಸಜ್ಜಾಗಿರುತ್ತದೆ.'' ಎಂದು ಹೇಳಲು, ಅಮಾತ್ಯನು ಬಹಳ ಆಶ್ಚರ್ಯಪಟ್ಟನು. ಅವನ ನೇತ್ರಗಳು ವಿಸ್ತ್ರಿತವಾದವು. ಅವನು ಸಂತಾಪದಿಂದ—''ಆದರೆ ನಾನು ಭಾಗುರಾಯಣನಿಗಿಂತಲೂ ಶ್ರೇಷ್ಠ ಅಧಿಕಾರಿಯಿರುವೆನಲ್ಲವೆ'' ಎಂದು ಗದ್ದರಿಸಿ ಕೇಳಿದನು.

ರಾಕ್ಷಸನ ಈ ಪ್ರಶ್ನೆಗೆ ಉತ್ತರವೆಂದು ಆ ಅಧಿಕಾರಿಯು ಸುಮ್ಮನೆ ನಕ್ಕುಬಿಟ್ಟನು. ಅದರಿಂದ ರಾಕ್ಷಸನ ಸಂತಾಪವು ಮುತ್ತಿಷ್ಟು ಹೆಚ್ಚಿತು. ಆತನು ಸಂತಾಪದ ಭರದಲ್ಲಿ ಏನೋ ಮಾತಾಡಬೇಕೆನ್ನುತ್ತಿರಲು, ದೂರ ಭಯಂಕರವಾದ ಗೊಂದಲವು ಕೇಳಿಸತೊಡಗಿತು. ಆ ಗೊಂದಲವು ಪರ್ವತೇಶ್ವರನು ಪಾಟಲೀಪುತ್ರವನ್ನು ಪ್ರವೇಶಿಸಿದ್ದರಿಂದುಟಾಗಿರುವದೆಂದು ತಿಳಿದು ರಾಕ್ಷಸನು ಆ ಅಧಿಕಾರಿಗೆ–ಏನು? ಪರ್ವತೇಶ್ವರನು ಪಟ್ಟಣವನ್ನು ಹೊಕ್ಕು ಪ್ರಜೆಗಳನ್ನು ಪೀಡಿಸತೊಡಗಿದ್ದರೂ ನೀನು ಸೈನ್ಯದೊಡನೆ ಸ್ಥಳ ಬಿಟ್ಟು ಕದಲುವದಿಲ್ಲವೋ? ಎಂದು ನುಡಿದು ಸಂತಪ್ತನಾಗಿ ಕೆಂಪಡರಿದ ಕಣ್ಣುಗಳಿಂದ ಆತನನ್ನು ನೋಡಹತ್ತಿದನು. ಈತನನ್ನು ಈಗ ಏನು ಮಾಡಲಿ, ಅನ್ನುವಷ್ಟು ಸಿಟ್ಟು ರಾಕ್ಷಸನಿಗೆ ಬಂದಿತ್ತು; ಆದರೂ ಆ ಅಧಿಕಾರಿಯು ಶಾಂತಮನಸ್ಸಿನಿಂದ– ನೀವು ಬೇಕಾದದ್ದು ಹೇಳಿರಿ, ಸೇನಾಪತಿಯಾದ ಭಾಗುರಾಯಣನ ಅಪ್ಪಣೆಯ ಹೊರತು ಯಾವನೂ ಬಿಲ್ಲಿಗೆ ಹೆದೆಯನ್ನು ಏರಿಸನು, ಬತ್ತಳಿಕೆಯೊಳಗಿನ ಬಾಣಕ್ಕೆ ಕೈ ಹಚ್ಚನು, ಒರೆಯೊಳಗಿಂದ ಕತ್ತಿಯನ್ನು ಹಿರಿಯನು; ಯಾವದಕ್ಕೂ ಸೇನಾಪತಿಯ ಅಪ್ಪಣೆಬೇಕು, ಅನ್ನಲು, ಕೂಡಲೆ ರಾಕ್ಷಸನು – ಹೀಗಿದ್ದಬಳಿಕ ಭಾಗುರಾಯಣ ಸೇನಾಪತಿಯೇ ಪರ್ವತೇಶ್ವರನೊಡನೆ ಒಳಸಂಚು ನಡಿಸಿ ಈ ಅನರ್ಥವನ್ನು ತಂದನೆಂದು ಅನ್ನಬೇಕಾಗುತ್ತದೆ. ಅ! ಸೇನಾಪತಿ ನೀನು ರಾಜಘಾತಕ್ಕೂ, ಈ ಪಾಟಲಿಪುತ್ರದ ನಾಶಕ್ಕೂ ಕಾರಣನಾಗುತ್ತೀಯೇನು?

ಈ ಪ್ರಶ್ನವು ರಾಕ್ಷಸನ ಮುಖದಿಂದ ಹೊರಡುವದರೊಳಗೆ ಆತನಿಗೆ–ಅಮಾತ್ಯಾ–ಆದರೆ ಈಗ ನಿನಗೆ ಅಮಾತ್ಯನೆಂದಾದರೂ ಯಾಕೆ ಕರೆಯಬೇಕು?–ರಾಜಘಾತಕ್ಕೂ, ಪಾಟಲಿಪುತ್ರದ ನಾಶಕ್ಕೂ ಯಾರು ಕಾರಣರಾಗಿರುತ್ತಾರೆಂಬದು ಈಗ ಜಗತ್ತಿಗೆಲ್ಲ ಚನ್ನಾಗಿ ಗೊತ್ತಾಗಿರುತ್ತದೆ. ನೀನು ಈಗ ಮಾಡಿರುವ ರಾಜಘಾತಕ್ಕೆ ಪ್ರತಿಕಾರಮಾಡುವದು ತೀರಅಶಕ್ಯವಾಗಿರುತ್ತದೆ, ಆದರೆ ಪಾಟಲಿಪುತ್ರದ ನಾಶವನ್ನು ಮಾತ್ರ ನಾನು ನಿಶ್ಚಯವಾಗಿ ಮಾಡಗೊಡುವದಿಲ್ಲ, ನಿನ್ನ ನೀಚ ಕೃತ್ಯಕ್ಕಾಗಿ ತಕ್ಕ ಶಿಕ್ಷೆಯನ್ನು ಯೋಗ್ಯಕಾಲದಲ್ಲಿ ಮಾಡತಕ್ಕವರು ಮಾಡಬಹುದು. ಆದರೆ ಈಗ ಅಧಿಕಾರದ ಹೆಮ್ಮೆಯನ್ನು ಯಾಕೆ ತೋರಿಸುವಿ? ಎಂದು ಧೀರ ಗಂಭೀರ ವಾಣಿಯಿಂದ ಕೊಟ್ಟ ಉತ್ತರವು ದೊರೆಯಲು, ಉತ್ತರ ಕೊಟ್ಟವರು ಯಾರೆಂಬದನ್ನು ನೋಡಿದಾಗ ರಾಕ್ಷಸನಿಗೆ ಭಾಗುರಾಯಣನು ಕಣ್ಣಿಗೆ ಬಿದ್ದನು. ಈಗ ಉತ್ತರವನ್ನು ಭಾಗುರಾಯಣನೇ ಕೊಟ್ಟಿರಬಹುದೆಂದು ಅಮಾತ್ಯನಿಗೆ ಎಷ್ಟುಮಾತ್ರವೂ ತೋರಲಿಲ್ಲ. ಬಾಗುರಾಯಣನು ಈ ಮೇರೆಗೆ ಉತ್ತರಕೊಟ್ಟು ತಿರುಗಿ ರಾಕ್ಷಸನ ಕಡೆಗೆ ನೋಡದೆ, ತನ್ನ ಕೈಕೆಳಗಿನ ಅಧಿಕಾರಿಯನ್ನು ಕುರಿತು–ಪರ್ವತೇಶ್ವರನು ಪಟ್ಟಣವನ್ನು ಮುತ್ತಿದ್ದಾನೆ, ಕೋಟೆಯ ಗೋಡೆಗಳ ಮೇಲಿಂದ ಶಸ್ತ್ರಾಸ್ತ್ರಗಳನ್ನು ಪ್ರಯೋಗಿಸಿರಿ, ಎಂದು ಆಜ್ಞಾಪಿಸಿದನು. ಅಮಾತ್ಯನನ್ನು ಆತನು ಎಳ್ಳಷ್ಟಾದರೂ ಲಕ್ಷಿಸಲಿಲ್ಲ.

ಭಾಗುರಾಯಣನು ಹೀಗೆ ಯಾಕೆ ಮಾಡುತ್ತಾನೆಂಬದರ ನಿರ್ಣಯವೇ ರಾಕ್ಷಸನಿಗಾಗಲೊಲ್ಲದು. ಇಷ್ಟರಲ್ಲಿ ಜನರ ಭಯಂಕರವಾದ ಕೋಲಾಹಲವು ಕಿವಿಗಳು ಗಡಚಿಕ್ಕುವಂತೆ ಆಗಹತ್ತಿತು. ಆಗ ರಾಕ್ಷಸನು – ಇನ್ನು ಇಲ್ಲಿ ನಿಲ್ಲುವಲ್ಲಿ ಅರ್ಥವಿಲ್ಲ, ಸದ್ಯಕ್ಕೆ ಭಾಗುರಾಯಣನು ವೈರಿಗಳ ಸಮಾಚಾರವನ್ನು ತಕ್ಕೊಳ್ಳುತ್ತಿದ್ದಾನೆ. ಈಗ ನಾನು ವಾದಿಸುತ್ತ ಯಾಕೆ ನಿಲ್ಲಬೇಕು? ಏನು

ಇದ್ದದ್ದು ಹಿಂದುಗಡೆ ನೋಡಲಿಕ್ಕೆ ಬಂದೀತು, ಸದ್ಯಕ್ಕೆ ಮಹಾರಾಜರ ಸಮಾಚಾರವನ್ನು ತಕ್ಕೊಳ್ಳೋಣ. ಅವರು ಇಷ್ಟು ಹೊತ್ತಿಗೆ ದರ್ಬಾರಕ್ಕೆ ಹೋಗಿರಬಹುದು, ಎಂದು ಯೋಚಿಸಿ, ಆತನು ವರ್ಣಿಸಿದ ಸಂಗತಿಯನ್ನು ಕುರಿತು ವಿಚಾರಿಸುತ್ತ ಸೇನಾಸ್ಥಾನದಿಂದ ಹೊರಟು ಹೋದನು. ಭಾಗುರಾಯಣನ ಮಾತಿನಿಂದಲೂ, ಕೃತಿಯಿಂದಲೂ ಅಮಾತ್ಯನು ಕಳೆಗುಂದಿದ್ದನು. ಆತನು ಮುಂದಕ್ಕೆ ಬಂದಹಾಗೆ ಜನರ ಬಾಯಲ್ಲಿ ಎಸರಿಲ್ಲದೆ ಓಡುತ್ತಿರುವದು ಕಣ್ಣಿಗೆ ಬಿತ್ತು ಕಲಕಲಾಟದಲ್ಲಿ ಯಾವ ಮಾತುಗಳೂ ಸ್ಪಷ್ಟವಾಗಿ ಕೇಳುತ್ತಿದ್ದಿಲ್ಲ. ನಡುನಡುವೆ ಜನರು ತನ್ನ ಹೆಸರು ಉಚ್ಚರಿಸುವದನ್ನು ರಾಕ್ಷಸನು ಕೇಳುತ್ತಿದ್ದನು. ಅಷ್ಟರಲ್ಲಿ ಯಾರೋ ಹಿಂದಿನಿಂದ ಬಂದು ರಾಕ್ಷಸನ ಬಾಹುಸ್ಪರ್ಶ ಮಾಡಿದರು. ಆದ್ದರಿಂದ ರಾಕ್ಷಸನು ಹಿಂದಿರುಗಿ ನೋಡಲು, ತನ್ನ ಪ್ರತೀಹಾರಿಯು ಕಣ್ಣಿಗೆ ಬಿದ್ದನು. ಪ್ರತೀಹಾರಿಯು ಕೂಡಲೇ ರಾಕ್ಷಸನಿಗೆ ವಿಜ್ಞಾಪಿಸಿದನೇನಂದರೆ–ಅಮಾತ್ಯರಾಜರೇ, ತಾವು ಈಗಿನ ಕಾಲದಲ್ಲಿ ಎಲ್ಲಿಯಾದರೂ ಅಡಗಿಕೊಂಡು ಕುಳಿತರೆ ಬಹಳ ನೆಟ್ಟಗಾದೀತು. ಮಹಾರಾಜರ ಪ್ರಯಾಣ ಸಮಾರಂಭವನ್ನು ನೋಡುವದಕ್ಕಾಗಿ ನೆರೆದ ಜನಸಮೂಹವು, ಒದಗಿದ ದುಃಖದಾಯಕವಾದ ಭಯಂಕರ ಪ್ರಸಂಗದಿಂದ ಮಿತಿಮೀರಿ ಸಂತಪ್ತವಾಗಿರುವದು. ತಮ್ಮ ಹೆಸರಿನಿಂದ ಬಾಯಿಗೆ ಬಂದಂತೆ ಬೊಗಳುತ್ತಿರುವರು. ಇನ್ನೂವರೆಗೆ ನೀವು ಯಾರಕಣ್ಣಿಗೆ ಬಿದ್ದಿರುವದಿಲ್ಲಾದ್ದರಿಂದ ಜೀವಧಿಂದ ಪಾರಾಗುವದು ಶಕ್ಯವಾಗಿರುತ್ತದೆ. ಇಲ್ಲದಿದ್ದರೆ ಕ್ಷೋಭಿಸಿದ ಆ ಜನಸಂಘವು ಏನು ಮಾಡೀತು ಏನು ಮಾಡಲಿಕ್ಕಿಲ್ಲೆಂಬದರ ನಿಯಮವಿಲ್ಲ, ನಡೆಯಿರಿ ಬೇಗನೆ.

ಪ್ರತೀಹಾರಿಯ ಈ ಮಾತುಗಳಿಗೆ ರಾಕ್ಷಸನು ಉತ್ತರವನ್ನೇನೂ ಕೊಡದೆ – ಪ್ರಭುಗಳ ಸವಾರಿಯು ಎಲ್ಲಿಯವರೆಗೆ ಬಂದದೆ? ಇನ್ನೂ ಸಭಾಮಂದಿರಕ್ಕೆ ಮುಟ್ಟಲಿಲ್ಲವೇನು? ಎಂದು ಕೇಳಿದನು. ಅದಕ್ಕೆ ಪ್ರತೀಹಾರಿಯು ಯಾವ ಉತ್ತರವನೂ ಕೊಡದೆ ಸುಮ್ಮನೆ ನಿಂತುಬಿಟ್ಟನು. ರಾಕ್ಷಸನು ಪುನಃ ಅದೇ ಪ್ರಶ್ನವನ್ನು ಮಾಡಲು, ಪ್ರತೀಹಾರಿಯು ಮೆಲ್ಲಗೆ–ಅಮಾತ್ಯಶ್ರೇಷ್ಠರೇ, ಪ್ರಭುಗಳನ್ನು ತಾವು ಎಲ್ಲಿಗೆ ಕಳಿಸಬೇಕೆಂದು ಯೋಚಿಸಿದ್ದಿರೋ, ಅಲ್ಲಿಗೆ ಅವರು ಪುತ್ರರಿಂದ ಸಹಿತವಾಗಿ ಹೋಗಿ ಮುಟ್ಟಿದರು. ಅದರಿಂದಲೇ ಬಡವನಾದ ನನ್ನ ಮಾತನ್ನು ಕೇಳಿ ಸದ್ಯಕ್ಕೆ ಎಲ್ಲಿಯಾದರೂ ಅಡಗಿಕೊಳ್ಳಬೇಕು.

ರಾಕ್ಷಸ—ಪ್ರತೀಹಾರೀ, ನಿನ್ನ ಮಾತಿನ ಅರ್ಥವೇ ನನಗಾಗಲೊಲ್ಲದು ಏನಂದಿ? ಕ್ಷುಬ್ಧ ಜನಸಮೂಹವು ನನ್ನ ಹೆಸರಿನಿಂದ ಒದರುತ್ತ ತಿರುಗುತ್ತಿರುವದೇ? ಅದೇಕೆ? ಒದಗಿದ ದುಃಖದಾಯಕ ಭಯಂಕರ ಪ್ರಸಂಗವಾವುದು? ನಾನು ಅಡಗಿಕೊಳ್ಳುವಂಥ ಪ್ರಸಂಗವೇನು?

ಪ್ರತೀಹಾರಿ—ಅಮಾತ್ಯ ರಾಜನೇ, ನಿಮ್ಮ ಸುರಕ್ಷತೆಗಾಗಿ ನಾನು ಅಡಗಿಕೊಳ್ಳಿರೆಂದು ಹೇಳುತ್ತೇನೆ. ನನ್ನ ಮಾತು ಕೇಳಿ ನೀವು ಎಲ್ಲಿಯಾದರೂ ಅಡಗಿಕೊಳ್ಳಬೇಕು. ಹಿಂದಿನಿಂದ ನಾನೆಲ್ಲ ನಿಮಗೆ ಹೇಳುವೆನು. ತಾವು ಏನು ಮಾಡಿದರೂ ತಮ್ಮ ಮೇಲಿದ್ದ ನನ್ನ ಭಕ್ತಿಯು ಕಡಿಮೆಯಾಗುವ ಹಾಗಿಲ್ಲ, ಇದನ್ನು ಮನಸ್ಸಿನಲ್ಲಿ ತಂದು ನನ್ನ ವಿಜ್ಞಾಪನೆಯಂತೆ ಎಲ್ಲಿಯಾದರೂ ಅಡಗಿಕೊಂಡು ಕುಳಿತುಕೊಳ್ಳಿರಿ. ನಡೆಯಿರಿ, ಇಲ್ಲದಿದ್ದರೆ ಮಹಾರಾಜರ ಆಕಸ್ಮಿಕ ಘಾತದಿಂದ ಕ್ಷೋಭಿಸಿದ ಜನರು ನಿಮ್ಮ ಮೇಲೆ ತಿರುಗಿಬಿದ್ದಾರು.

ರಾಕ್ಷಸ—ಏನು? ಮಹಾರಾಜರ ಆಕಸ್ಮಿಕ ಘಾತವೇ? ಎಂಥ ಘಾತವು? ಯಾವ ಮಹಾರಾಜರದು? ಇದೇನು ಗೌಡಬಂಗಾಲಿಯು? ನೋಡಿದತ್ತ ವಿಚಿತ್ರವೇ ಕಾಣುತ್ತದಲ್ಲ! ಪ್ರತೀಹಾರೀ, ಭ್ರಮಿಷ್ಟನು ನೀನೋ ನಾನೋ?

ಪ್ರತೀಹಾರಿ—ಯಾರೇ ಭ್ರಮಿಷ್ಟರಿರಲಿ, ತಾವು ತಮ್ಮ ಮನೆಗೆ ಹೋಗದೆ ನನ್ನ ಸಂಗಡ ಬಂದು ಎಲ್ಲಿಯಾದರೂ ಅಡಗಿಕೊಳ್ಳಿರಿ. ಆಮೇಲೆ ಎಲ್ಲ ನಿಮಗೆ ಹೇಳುವೆನು.

ರಾಕ್ಷಸ—ಮನೆಗೆ ಹೋಗಬೇಡ? ಅದೇಕೆ? ನಾನೇನು ಕಳ್ಳನೋ? ನನಗೆ ಹುಚ್ಚು ಹಿಡಿಸಬೇಕೆಂದು ನೀನು ಮಾಡುತ್ತೀಯೇನು? ಪ್ರತೀಹಾರೀ, ನೀನು ಬಹುದಿವಸದ ಸೇವಕನಾದ್ದರಿಂದಲೇ ಈಗ ನಿನಗೆ ಹೆಚ್ಚು ಕಡಿಮೆ ಮಾತಾಡುವದಿಲ್ಲ; ನಿನ್ನನ್ನು ನೋಡಿ ನನಗೆ ಬಹಳ ಸಿಟ್ಟುಬಂದದೆ.

ಪ್ರತೀಹಾರಿ—ಸಿಟ್ಟು ಬರಲಿ–ಬೇಕಾದದ್ದು ಬರಲಿ, ಇದು ಮಾತಾಡುವ ಸ್ಥಳವಲ್ಲ ಸುಮ್ಮನೇ ನನ್ನ ಸಂಗಡ ಬರ್‍ರಿ, ಎಲ್ಲ ಹೇಳುವೆನು.

ಪ್ರತೀಹಾರಿಯ ನಿರ್ಧಾರದ ಮಾತುಗಳನ್ನು ಕೇಳಿ ರಾಕ್ಷಸನು ಏನೋ ಭಯಂಕರ ಪ್ರಸಂಗವು ಒದಗಿರುವದೆಂದು ತಿಳಿದು, ಮೊದಲು ಅದನ್ನು ತಿಳಕೊಳ್ಳಬೇಕೆಂದು ಪ್ರತೀಹಾರಿಯ ಬೆನ್ನುಹತ್ತಿ ಸಾಗಿದನು. ಪ್ರತೀಹಾರಿಯು ಪುಷ್ಪಪುರಿಯ ಒಂದು ಮೂಲೆಯಲ್ಲಿರುವ ತನ್ನ ಮಿತ್ರನ ಮನೆಗೆ ರಾಕ್ಷಸನನ್ನು ಕರೆದೊಯ್ದು, ಆತನಿಗೆ ನಡೆದ ಸಂಗತಿಯನ್ನೆಲ್ಲ ಹೇಳಿದನು. ಅದನ್ನು ಕೇಳಿ ರಾಕ್ಷಸನು ದುಃಖಸಾಗರದಲ್ಲಿ ಮುಳುಗಿದನೆಂದು ಯಾಕೆ ಹೇಳಬೇಕು? ಇಷ್ಟುದಿನ ಏಕನಿಷ್ಠೆಯಿಂದ ಸೇವನೆ ಮಾಡಿದ ನನ್ನ ಪ್ರತ್ಯಕ್ಷ ಸ್ವಾಮಿಯ ಘಾತವು ಒದಗಿರಲು, ಅದರ ಸುದ್ದಿಯೂ ನನಗೆ ಇರಬಾರದೇ? ಎಂಥ ನನ್ನ ದುರ್ಲಕ್ಷವು? ಎಂಥ ನನ್ನ ದಡ್ಡತನವು? ರಾಕ್ಷಸಾ, ಇದೇಯೇನು ನಿನ್ನ ಸಾಚಿವ್ಯದ ಬೆಳಕು? ಹಾಯ್ ಹಾಯ್! ನಂದಭೂಪತೇ, ಏನು ನಿನ್ನ ಅವಸ್ಥೆಯು! ಅಧಮನಾದ ನನ್ನನ್ನು ನಂಬಿ ನೀನು ಎಂಥ ಅಪಘಾತಕ್ಕೆ ಗುರಿಯಾದೆಯಲ್ಲ! ನನ್ನ ಜಾಣತನ, ನನ್ನ ದೂರದರ್ಶಿತ್ವ, ನನ್ನ ನೀತಿ ವಿಶಾರದತೆ ಇವೆಲ್ಲ ಎತ್ತ ನಷ್ಟವಾಗಿ ಹೋದವು? ಚಾರುಮುಖ ದಿಂದ ತ್ರಿಲೋಕಗಳಲ್ಲಿ ನಡೆಯುವ ಸುದ್ದಿಗಳನ್ನು ತಿಳಕೊಳ್ಳಲು, ರಾಕ್ಷಸನು ಸಮರ್ಥನೆಂಬ ಪ್ರಸಿದ್ಧಿಯು ನಿರರ್ಥಕವಾಯಿತಲ್ಲ! ಈ ಘೋರ ಪ್ರಸಂಗವು ಯಾವನೋ ಪ್ರಬಲ ಶತ್ರುವಿನಿಂದ ಒದಗಿರಬೇಕು. ಆ ಶತ್ರುವು ಭಾಗುರಾಯಣನೇ ಆಗಿರಬಹುದೇನು? ಆ! ಭಾಗುರಾಯಣಾ, ದೇಶದ್ರೋಹದ ಕೆಲಸಕ್ಕೆ ನೀನು ಮನಸ್ಸು ಮಾಡಿದೆಯಾ? ಪರ್ವತೇಶ್ವರನೊಡನೆ ಒಳಸಂಚು ಮಾಡಿ ನೀನು ಈ ಪ್ರಸಂಗವನ್ನು ತಂದಿದ್ದರೆ, ನಿನ್ನ ಕ್ಷಾತ್ರಧರ್ಮಕ್ಕೆ ಧಿಕ್ಕಾರ ವಿರಲಿ! ನಿನಗೆ ಅಮಾತ್ಯಪದವಿಯು ಬೇಕಾಗಿದ್ದರೆ ಹೇಳಬೇಕಾಗಿತ್ತು ನಿನಗೆ ನಾನು ಬಿಟ್ಟುಕೊಡುತ್ತಿದ್ದೆನು. ನೀನು ಹೀಗೆ ಸ್ವಾಮಿದ್ರೋಹವನ್ನು ಬಗೆಯಬಹುದೆ? ಇರಲಿ, ಏನೂ ಚಿಂತೆಯಿಲ್ಲ, ಈ ಸಂಕಟ ದಿಂದಲೂ ಪಾರಾಗಿ ನಾನು ನಂದವಂಶದ ಸೇವೆಯನ್ನು ಮಾಡುವೆನು. ಆಮೇಲೆ ನಿನ್ನ ಸಮಾಚಾರವನ್ನು ತಕ್ಕೊಳ್ಳುತ್ತೇನೆ. ಇದೇ ನನ್ನ ಪ್ರತಿಜ್ಞೆಯು, ಇದೇ ನನ್ನ ನಿಶ್ಚಯವು, ಈಗ ಇದೇ ನನ್ನ ವ್ರತವು!

ಚಾಣಕ್ಯನ ಚಪ್ಪಾಳೆ

ನಂದರ ಸಂಹಾರದಿಂದ ಕ್ಷುಬ್ಧವಾದ ಜನರ ಮನಸ್ಸು ಶಾಂತವಾಗಬೇಕೆಂದು ಚಾಣಕ್ಯನು ಚಂದ್ರಗುಪ್ತನ ಪರಾಕ್ರಮದ ಬಗ್ಗೆ ಉಪ್ಪು ಖಾರಹಚ್ಚಿ ಮೊದಲೇ ಡಂಗುರ ಹೊಡಿಸಿದ್ದನು; ಭಾಗುರಾಯಣನ ಪರಾಕ್ರಮದ ಬಗ್ಗೆಯೂ ಅಲ್ಲಲ್ಲಿ ಮಾತುಕಥೆಗಳು ನಡೆಯುವಂತೆ ಆತನು ವ್ಯವಸ್ಥೆಮಾಡಿದ್ದನು. ಅದರಿಂದ ಜನರ ಮನಸ್ಸು ಬಹುಮಟ್ಟಿಗೆ ಶಾಂತವಾಯಿತು. ಚಂದ್ರಗುಪ್ತನನ್ನು ಸಮಾರಂಭದಿಂದ ಪಟ್ಟಣದಲ್ಲಿ ಮೆರೆಸುವಾಗ ಆತನ ಮುಂದುಗಡೆಯಲ್ಲಿ, ಸೆರೆಸಿಕ್ಕ ಪರ್ವತೇಶ್ವರನನ್ನು ಮೆರಸಬೇಕೆಂಬ ಮಹತ್ವಾಕಾಂಕ್ಷೆಯನ್ನು ಆ ಧೂರ್ತ ಬ್ರಾಹ್ಮಣನು ತಾಳಿದ್ದನು. ಯುದ್ಧದ ಉಡುಪುತೊಡಪುಗಳಿಂದ ಚಂದ್ರಗುಪ್ತನ ಸವಾರಿಯು ಕುದುರೆಯ ಮೇಲೆ ಕುಳಿತು ಹೊರಟಿತು. ಆದರೆ ಮುಂದುಗಡೆಯಲ್ಲಿ ಪರ್ವತೇಶ್ವರನು ಕೈಜೋಡಿಸಿಕೊಂಡು ಕುದುರೆಯ ಮೇಲೆ ಕುಳಿತು ಸಾಗಿದನು. ನಂದರ ಸಂಹಾರದಿಂದ ಪ್ರಜೆಗಳ ಮನಸ್ಸು ಶೋಕಮಗ್ನ ವಾಗಿರಲು, ಆಡಂಬರದ ಮೆರವಣಿಗೆಯು ಸಮಾಧಾನಕರವಾಗದೆಂದು ತಿಳಿದು ಚಾಣಕ್ಯನು ಕೆಲಸದ ಪುರತೆಗಾಗಿ ಸಮಾರಂಭದ ಕಾರ್ಯವನ್ನು ನೆರವೇರಿಸಿದನು. ಬಳಿಕ ಆತನು ಭಾಗುರಾಯಣನ ಮುಖಾಂತರವಾಗಿ ಪಟ್ಟಣದೊಳಗಿನ ಪ್ರಮುಖ ಜನರನ್ನೂ, ಮಂತ್ರಿ ಗಳನ್ನೂ, ಸೈನ್ಯದೊಳಗಿನ ಅಧಿಕಾರಿಗಳನ್ನೂ ಕರೆಸಿ ದರ್ಬಾರು ನೆರಿಸಿ, ಅವರ ಒಪ್ಪಿಗೆಯನ್ನು ಸಂಪಾದಿಸಿದಂತೆ ಮಾಡಿ ಚಂದ್ರಗುಪ್ತನನ್ನು ಪಾಟಲಿಪುತ್ರದ ಸಿಂಹಾಸನದ ಮೇಲೆ ಕುಳ್ಳಿರಿಸಿದನು. ಪರ್ವತೇಶ್ವರನು ಸಾಧಾರಣ ಪ್ರತಿಬಂಧದಲ್ಲಿರಿಸಲ್ಪಟ್ಟನು.

ಚಾಣಕ್ಯನಿಗೆ ರಾಕ್ಷಸನ ಭಯವು ಎಳ್ಳಷ್ಟು ಕಡಿಮೆಯಾಗಿದ್ದಿಲ್ಲ. ರಾಕ್ಷಸನ ಘನತರವಾದ ಯೋಗ್ಯತೆಯನ್ನು ಆ ರಾಜನೀತಿಜ್ಞ ಬ್ರಾಹ್ಮಣನು ಚನ್ನಾಗಿ ಅರಿತಿದ್ದನು. ಭಾಗರಾಯಣನಂತು ಬಹುದಿವಸ ರಾಕ್ಷಸನ ಕೈಯಲ್ಲಿ ಆಟುಂಡವನು. ರಾಕ್ಷಸನ ಸಾಮರ್ಥ್ಯದ ನೆನಪಾದಕೂಡಲೇ ಸೇನಾಪತಿಯ ಹೃದಯವು ತಲ್ಲಣಿಸುತ್ತಿತ್ತು, ರಾಕ್ಷಸನು ಬರಿಯ ರಾಜನೀತಿಯನ್ನಷ್ಟೇ ಬಲ್ಲವನಾಗಿದ್ದಿಲ್ಲ, ಬೃಹಸ್ಪತಿಯಂತೆ ಆತನು ನೀತಿಜ್ಞನಿದ್ದನಲ್ಲದೆ ಪರುಶುರಾಮನಂತೆ ಉಗ್ರತರವಾದ ಕ್ಷಾತ್ರತೇಜಸ್ಸುಳ್ಳವನೂ ಆಗಿದ್ದನು. ಹೀಗೆ ರಾಜಕಾರಣ ಪಟುತ್ವವೂ, ಯುದ್ಧಕೌಶಲ್ಯವೂ ಒಬ್ಬ ವ್ಯಕ್ತಿಯಲ್ಲಿ ತೋರಿಬರುವದು ಪರಮ ದುರ್ಲಭವು. ಇವೆರಡೂ ಗುಣಗಳಿದ್ದವನು ಸಾಮಿನಿಷ್ಠನಾಗಿರುವದಂತು ಅತ್ಯಂತ ದುರ್ಲಭವು; ಆದರೆ ಈ ಮೂರೂ ಗುಣಗಳು ರಾಕ್ಷಸನಲ್ಲಿ ನಾನು ಹೆಚ್ಚು ನೀನು ಹೆಚ್ಚು ಎಂದು ಮೇಲಾಟದಿಂದ ವಾಸಿಸುತ್ತಿದ್ದವು! ಮುಖ್ಯವಾಗಿ ಬ್ರಹ್ಮತೇಜಸ್ಸಿನಿಂದೊಪ್ಪುವ ಚಾಣಕ್ಯನೂ, ಕೇವಲ ಕ್ಷಾತ್ರತೇಜಸ್ಸಿನಿಂದೊಪ್ಪುವ ಭಾಗುರಾಯಣನೂ ಅವೆರಡೂ ತೇಜಸ್ಸುಗಳಿಂದೊಪ್ಪುವ ರಾಕ್ಷಸನ ವಿಷಯವಾಗಿ ಭಯ ಪಟ್ಟಿದ್ದರು. ಗುಣಜ್ಞನಾದ ಚಾಣಕ್ಯನಂತು ರಾಕ್ಷಸನಲ್ಲಿ ಪರಮಾವದಿ ಪೂಜ್ಯ ಬುದ್ಧಿಯುಳ್ಳವ ನಾಗಿದ್ದನು. ಚಂದ್ರಗುಪ್ತನ ಮಂತ್ರಿಪದಕ್ಕೆ ರಾಕ್ಷಸನೇ ಯೋಗ್ಯನೆಂದು ಆತನು ನಿರ್ಧರಿಸಿದ್ದನು. ರಾಕ್ಷಸನು ಚಂದ್ರಗುಪ್ತನ ಮಂತ್ರಿಯಾಗಲಿಕ್ಕೆ ಒಪ್ಪಿಕೊಳ್ಳುವಹಾಗೆ ಮಾಡುವಲ್ಲಿ ಚಾಣಕ್ಯನ ಪುಣ್ಯವೆಲ್ಲ ವೆಚ್ಚವಾಯಿತೆಂಬದನ್ನು ವಾಚಕರು ಮುಂದೆ ಕಂಡುಕೊಳ್ಳಬಹುದು.

ರಾಕ್ಷಸನ ಮಹತ್ವವನ್ನು ಅರಿತಿದ್ದ ಭಾಗುರಾಯಣನು ಚಾಣಕ್ಯನಿಗೆ-ಬ್ರಾಹ್ಮಣ ಶ್ರೇಷ್ಠಾ, ರಾಕ್ಷಸನನ್ನು ಮಾತ್ರ ದುರ್ಲಕ್ಷಿಸಲಾಗದು ಕಂಡಿಯಾ, ಅನ್ನಲು, ಚಾಣಕ್ಯನು- ಇಂಥ ಹೊತ್ತಿನಲ್ಲಿ ಒಂದು ಅರಕ್ಷಣವಾದರೂ ನಾನು ರಾಕ್ಷಸನನ್ನು ದುರ್ಲಕ್ಷಿಸುವೆನೇ? ಆತನ ಬೆನ್ನಮೇಲೆ ಒಬ್ಬ ಗುಪ್ತಚಾರನನ್ನು ಇಟ್ಟಿರುತ್ತೇನೆ. ಎಚ್ಚರಪಡುವದಾದರೆ, ಇನ್ನು ಮೇಲೆಯೇ ರಾಕ್ಷಸನ ಸಲುವಾಗಿ ಹೆಚ್ಚು ಎಚ್ಚರಪಡತಕ್ಕದ್ದು. ರಾಕ್ಷಸನು ಸಾಮಾನ್ಯ ಪುರುಷನಲ್ಲ ಈಗೊದಗಿದ ಅಪಘಾತದಿಂದ ಆತನು ನಿರಾಶೆಪಟ್ಟು ಸುಮ್ಮನೆ ಕುಳಿತುಕೊಳ್ಳತಕ್ಕ ಮನುಷ್ಯನಲ್ಲ. ಆತನನ್ನು ಪಾಟಲಿಪುತ್ರದಿಂದ ಹೊರಗೆ ಹೋಗಗೊಡಲಾಗದು. ಒಮ್ಮೆ ಕೈಮೀರಿ ಹೋದ ನೆಂದರೆ ಆತನು ಏನು ಮಾಡ್ಯಾನು ಏನು ಮಾಡಲಿಕ್ಕಿಲ್ಲೆಂಬ ನಿಯಮವಿಲ್ಲ; ಆದ್ದರಿಂದ ಆತನು ಮತ್ತೆ ಮಂತ್ರಿಪದವನ್ನು ಸ್ವೀಕರಿಸುವಹಾಗೆ ಮಾಡಲಿಕ್ಕೆ ನನ್ನ ಪುಣ್ಯವೆಲ್ಲ ವೆಚ್ಚವಾಗ ಬೇಕಾಗಿದೆ. ಇದರಲ್ಲಿ ನಿನ್ನ ಕೆಲಸವೂ ಇರುವದು. ಸೇನಾಪತೀ, ನೀನು ಮೊದಲು ಯುಕ್ತಿಯಿಂದ ರಾಕ್ಷಸನನ್ನು ಕಂಡು, ಪುನಃ ಮಂತ್ರಿಪದವನ್ನು ಸ್ವೀಕರಿಸೆಂದು ಆತನನ್ನು ಬೇಡಿಕೋ ಅದಕ್ಕೆ ಆತನು ಏನು ಅನ್ನುವನೆಂಬದನ್ನು ನನಗೆ ಬಂದು ಹೇಳು. ಆದದ್ದಾಯಿತು, ರಾಜ ಘಾತಮಾಡಿದವರ ಶೋಧವನ್ನು ಎಲ್ಲರೂ ಕೂಡಿಮಾಡಿ, ಅವರ ಪಾರಿಪತ್ಯ ಮಾಡೋಣವೆಂದು ರಾಕ್ಷಸನಿಗೆ ಹೇಳು. ಒಟ್ಟಿಗೆ ರಾಕ್ಷಸನು ನಮ್ಮ ಪಕ್ಷಕ್ಕೆ ಒಲಿಯುವ ಹಾಗೆ ಬೇಕಾದದ್ದು ಮಾಡು, ಎಂದು ಹೇಳಿದನು. ಭಾಗುರಾಯಣನು ಇದನ್ನೆಲ್ಲ ಕೇಳಿಕೊಂಡನು ಮಾತ್ರ; ಆದರೆ ಈ ಕಾರ್ಯವು ತನ್ನಿಂದ ಸಾಧಿಸಲಾರದೆಂದು ಆತನು ನಿಶ್ಚಯಿಸಿದ್ದನು. ಭಾಗುರಾಯಣನಿಂದ ಈ ಕಾರ್ಯವು ಆದೀತೆಂದು ಚಾಣಕ್ಯನೂ ತಿಳಿದಿದ್ದಿಲ್ಲ; ಆದರೆ ಬೇರೆ ತಕ್ಕ ಉಪಾಯಗಳನ್ನು ಯೋಚಿಸುವದಕ್ಕೆ ಅನಕೂಲವಾಗುವದಕ್ಕಾಗಿ ರಾಕ್ಷಸನ ಮನಸ್ಸಿನ ಒಲವನ್ನು ತಿಳಕೊಳ್ಳಬೇಕೆಂದು ಆತನು ಈ ಹಂಚಿಕೆಯನ್ನು ತೆಗೆದಿದ್ದನು.

ಇತ್ತ ರಾಕ್ಷಸನು ತಾನು ಇನ್ನು ಏನುಮಾಡಬೇಕೆಂಬ ವಿಚಾರದಲ್ಲಿ ಮುಣುಗಿಹೋಗಿದ್ದನು. ಈಗ ತನ್ನವರೆಂದು ಯಾರನ್ನು ನಂಬಬೇಕೆಂಬ ಬಗ್ಗೆ ಆತನಿಗೆ ಸಂಶಯವು ಬರತೊಡಗಿತ್ತು; ಯಾಕಂದರೆ, ಫಿತೂರಿಯ ಹೊರತು ಈ ಕಾರ್ಯವು ಆಗಿರುವದಿಲ್ಲೆಂದು ಆತನು ಸ್ಪಷ್ಟವಾಗಿ ಕಂಡು ಹಿಡಿದನು. ಒಳಸಂಚಿನ ಸುಳುವು ಆತನಿಗೆ ಹತ್ತದ್ದರಿಂದ ಎಲ್ಲರಮೇಲೆ ಆತನು ಸಂಶಯ ಪಡಹತ್ತಿದ್ದು ಆಶ್ಚರ್ಯವಲ್ಲ. ಪ್ರತೀಹಾರಿಯೊಬ್ಬನು ಮಾತ್ರ ಆತನ ನಂಬಿಗೆಗೆ ಪಾತ್ರನಾಗಿದ್ದನು. ಈಗ ಅಮಾತ್ಯನಿಗೆ ಏನೂ ತೋಚದಾಗಿತ್ತು, ತಾನು ಪ್ರತೀಹಾರಿಯ ಮಿತ್ರನ ಮನೆಯೊಳ ಗಿಂದಾದರೂ ಹ್ಯಾಗೆ ಹೊರಬೀಳಬೇಕೆಂದು ಆತನು ಚಿಂತಿಸತೊಡಗಿದನು. ರಾಜಘಾತವು ತನ್ನಿಂದಲೇ ಆಗಿರುವದೆಂದು ಜನರ ಗ್ರಹಿಕೆಯಾಗಿರುವದನ್ನು ಪ್ರತಿಹಾರಿಯು ಹೇಳಿದ್ದರಿಂದ ರಾಕ್ಷಸನು ಅಂಜಿದ್ದನು. ತಾನು ನಂದವಂಶಕ್ಷಯಕ್ಕೆ ಕಾರಣನೆಂಬ ಭಾವನೆಯುಳ್ಳ ಜನರು ತನ್ನನ್ನು ನೋಡಿದರೆ, ನಿಲ್ಲಿಸಿ ಸುಡಬಹುದೆಂದು ಆತನು ಭಾವಿಸಿದ್ದನು. ರಾಕ್ಷಸನು ಅಂಜುಬುರುಕನಿದ್ದಿಲ್ಲ, ಕೈಲಾಗದ ಹೇಡಿಯೂ ಇದ್ದಿಲ್ಲ. ಆತನು ಮಹಾ ಧೈರ್ಯಶಾಲಿಯೂ, ವೀರಾಗ್ರಣಿಯೂ ಆಗಿದ್ದನು; ಆದರೆ ಸಧ್ಯದ ಪ್ರಸಂಗವೇ ವಿಲಕ್ಷಣವಾದದ್ದಿದ್ದದ್ದರಿಂದ ಬರಿಯ

ಧೈರ್ಯ–ವೀರ್ಯಗಳಿಂದ ಕಾರ್ಯವಾಗುವಂತೆಯಿದ್ದಿಲ್ಲ. ತಾನು ಇಲ್ಲಿಯವರೆಗೆ ನಂದರನ್ನು ಏಕನಿಷ್ಠೆಯಿಂದ ಸೇವಿಸಿ, ಅವರ ಯಶೋದುಂದುಬಿಯು ಪೃಥ್ವಿಯಲ್ಲೆಲ್ಲ ದಿಮಿಗುಟ್ಟುವಂತೆ ಮಾಡಿದ್ದಕ್ಕೆ ಇಂಥ ಫಲವು ಸಿಕ್ಕಿತೇ? ಸಣ್ಣ ಅಧಿಕಾರಸ್ಥರಿಂದ ದೊಡ್ಡ ಅಧಿಕಾರಸ್ಥರವರೆಗೆ ಎಲ್ಲರೂ ನನಗೆ ಅಂಕಿತರಾಗಿರುವರೆಂದು ತಿಳಿದು ವಿಶ್ವಾಸದಿಂದ ನಡೆದ ನನ್ನ ಪರಿಣಾಮವು ಹೀಗಾಯಿತೇ? ಎಂಬಿವೇ ಮೊದಲಾದ ವಿಚಾರಗಳಿಂದ ರಾಕ್ಷಸನು ಚಿಂತಾಮಗ್ನನಾಗಿರಲು, ಚಾಣಕ್ಯನು ಚಾರನನ್ನು ಹಿಂಬಾಲಿಸಿ ಬಂದಿದ್ದ ಭಾಗುರಾಯಣನು ರಾಕ್ಷಸನಿದ್ದ ಮನೆಗೆ ಬಂದನು.

ಭಾಗುರಾಯಣನು ಬಂದದ್ದನ್ನು ನೋಡಿ ಮನೆಯವರು ಹೆದರಿ ಏನು ಮಾಡಿದರೂ ಬಾಗಿಲು ತೆರೆಯದಾದರು. ಆಗ ಸೇನಾಪತಿಯ ಕಡೆಯುವರು ಮನೆಯವರಿಗೆ–ಭಾಗುರಾಯಣ ಸೇನಾಪತಿಗಳು ಬಂದಿದ್ದಾರೆ. ಅಮಾತ್ಯರಾಕ್ಷಸರು ಇಲ್ಲಿ ಇರುತ್ತಾರೆಂಬದು ಅವರಿಗೆ ನಿಸ್ಸಂಶಯ ವಾಗಿ ಗೊತ್ತಾಗಿರುತ್ತದೆ. ಅವರನ್ನು ಕಾಣುವದಕ್ಕಾಗಿಯೇ ಸೇನಾಪತಿಗಳು ಬಂದಿರುವರು. ಸುಮ್ಮನೆ ಬಾಗಿಲು ತೆರೆಯಿರಿ, ಇಲ್ಲದಿದ್ದರೆ ಬಾಗಿಲು ತೆರೆದು ಒಳಗೆ ಬರಬೇಕಾಗುವದು, ಎಂದು ಸ್ವಲ್ಪ ಗದ್ದರಿಸಿ ಹೇಳಲು, ಮನೆಯವರು ರಾಕ್ಷಸನ ಬಳಿಗೆ ಹೋಗಿ ಎಲ್ಲವನ್ನೂ ತಿಳಿಸಿದರು. ಆಗ ರಾಕ್ಷಸನು ರೇಗಿಗೆದ್ದು–ಅವಶ್ಯವಾಗಿ ಬಾಗಿಲು ತೆರೆಯಿರಿ; ಅವನು ಮಾಡುವದೇನು? ಸ್ವತಃ ಒಳಸಂಚಿನಲ್ಲಿ ಸೇರಿ, ಮಂದಿಯಮೇಲೆ ಅಪವಾದ ಹೊರಿಸಲಿಚ್ಛಿಸುವ ನೀಚನಿಗೆ ನಾನು ಹೆದರುವದಿಲ್ಲ. ಇದೆಲ್ಲ ಕೃತ್ಯವು ಭಾಗುರಾಯಣನದೇ ಇರುತ್ತದೆ. ಈ ನಂದವಂಶದ ಮಂತ್ರಿಪದವು ತನಗೆ ದೊರೆಯಬೇಕೆಂಬದೇ ಅವನ ಮಹತ್ವಾಕಾಂಕ್ಷೆಯು. ಅದನ್ನು ಪೂರ್ಣಮಾಡಿಕೊಳ್ಳುವದಕ್ಕಾಗಿ ಆ ನೀಚನು ರಾಜಕುಲದ ಘಾತವನ್ನು ಮಾಡಿದನು. ಅವನನ್ನು ಕರೆತರ್ರಿ–ಕರೆತರ್ರಿ ಮುಂದೆ ನನಗಾಗುವದನ್ನು ನೋಡಿಕೊಳ್ಳುತ್ತೇನೆ, ಎಂದು ಹೇಳಿದನು. ಆಗ ಮನೆಯ ಯಜಮಾನನು ಬಾಗಿಲು ತೆರೆದು ಭಾಗುರಾಯಣನನ್ನು ರಾಕ್ಷಸನ ಬಳಿಗೆ ಕರೆದೊಯ್ದನು. ಭಾಗುರಾಯಣನು ಅತ್ಯುತ್ತಮ ಶೂರನು ಮಾತ್ರ; ರಾಜನೀತಿಜ್ಞನಲ್ಲ. ಕಪಟವನ್ನಂತು ಆತನು ಅರಿಯೇ ಅರಿಯನು. ರಾಕ್ಷಸನನ್ನು ಕಾಣುವವರೆಗೆ, ''ನಾನು ಹಾಗೆ ಮಾತಾಡುವನು, ಹೀಗೆ ಮಾತಾಡುವೆನು,'' ಎಂದು ನಂಬಿದ್ದ ಸೇನಾಪತಿಯ ಅರ್ಥಕ್ಕರ್ಥ ಮಾತುಗಳು, ರಾಕ್ಷಸನನ್ನು ಕಂಡಕೂಡಲೇ ಮರೆತು ಹೋದವು.

ಇತ್ತ ಭಾಗುರಾಯಣನನ್ನು ಕಂಡಕೂಡಲೆ ರಾಕ್ಷಸನ ಸರ್ವಾಂಗವು ಉರಿಯಹತ್ತಿತು. ಆತನು ಒಮ್ಮೆಲೆ ಸೇನಾಪತಿಗೆ —''ಭಾಗುರಾಯಣಾ, ರಾಜಕುಲವನ್ನು ನಾಶಗೊಳಿಸಿ, ಈ ಕೆಟ್ಟ ಮೋರೆಯನ್ನು ನನಗೆ ತೋರಿಸುತ್ತೀಯಾ? ನಾನು ಕಣ್ಣುಮುಚ್ಚಿಕೊಂಡು ನಡೆದಿರಲು, ಲೋಕದೃಷ್ಟಿಯಿಂದ ನೀನು ಮಗಧದೇಶದ ಸಂರಕ್ಷಕನಾಗಿದ್ದರೂ, ನಿನ್ನ ಸ್ವಂತದ ದೃಷ್ಟಿ ಯಿಂದಲೂ, ನನ್ನ ದೃಷ್ಟಿಯಿಂದಲೂ ನೀನು ರಾಜಕುಲ ಘಾತಕನೇ ಇರುತ್ತೀ. ನನ್ನ ಮುಂದೆ ನಿನ್ನ ಹೆಮ್ಮೆಯನ್ನು ತೋರಿಸಲಿಕ್ಕೆ ಬಂದೆಯೋ ಏನು? ನೀಚಾ, ನೀನು ಎಲ್ಲರ ಕಣ್ಣಲ್ಲಿ ಮಣ್ಣುತೂರಿ ಕುರುಡರನ್ನು ಮಾಡಬಹುದು.'' ಎಂದು ಹಂಗಿಸಿ, ತಿರಸ್ಕಾರವನ್ನು ಪ್ರಕಟಿಸಬೇಕೆಂದು ಇಚ್ಛಿಸಿದನು. ಆದರೆ, ಆತನು ವಿವೇಕದಿಂದ ತನ್ನ ಸಿಟ್ಟನ್ನು ಕ್ಷಣಮಾತ್ರ ನುಂಗಿ ಭಾಗು

ರಾಯಣನಿಗೆ – ಏನು ಸೇನಾಪತೇ, ಮಹಾರಾಜನನ್ನು ಸುರಕ್ಷಿತವಾಗಿ ಮುಟ್ಟಿಸಿದರಷ್ಟೇ? ಎಂದು ಕೇಳಿದನು. ಈ ಕೇಳುವದರ ಅರ್ಥವು ಭಾಗುರಾಯಣನಿಗೆ ಸ್ಪಷ್ಟವಾಗಿ ಹೊಳೆದರೂ ಅದಕ್ಕೆ ತಕ್ಕ ಉತ್ತರವನ್ನು ಕೊಡುವದು ಅವನಿಂದಾಗಲಿಲ್ಲ. ಪ್ರಸಂಗಕ್ಕೆ ತಕ್ಕ ಉತ್ತರವನ್ನು ಕೊಟ್ಟು ಮಂದಿಯನ್ನು ತೆಪ್ಪಗೆ ಮಾಡುವ ಯೋಗ್ಯತೆಯು ಭಾಗುರಾಯಣನದಲ್ಲ. ಕೂಡಲೆ ಸಮರ್ಪಕ ಉತ್ತರವನ್ನು ಕೊಡಲಾರದೆ ಭಾಗುರಾಯಣನು ಮೆಲ್ಲಗೆ ರಾಕ್ಷಸನಿಗೆ–ಅಮಾತ್ಯರಾಜನೇ, ಪರ್ವತೇಶ್ವರನನ್ನು ಚಂದ್ರಗುಪ್ತನೂ, ನಾನೂ ಸೋಲಿಸಿ ಸೆರೆಹಿಡಕೊಂಡು ತಂದಿದ್ದೇವೆ. ಇನ್ನು ರಾಜ್ಯದ ವ್ಯವಸ್ಥೆಯನ್ನು ಹ್ಯಾಗೆ ಮಾಡಬೇಕೆಂಬ ಮುಖ್ಯ ಪ್ರಶ್ನದ ನಿರ್ಣಯವು ಆಗತಕ್ಕದ್ದಿರುತ್ತದೆ. ತಮ್ಮನ್ನು ಕಂಡಹೊರತು ಆ ಪ್ರಶ್ನದ ನಿರ್ಣಯವು ಆಗುವ ಹಾಗಿಲ್ಲೆಂತಲೇ ತಮ್ಮನ್ನು ಹುಡುಕುತ್ತ ನಾನು ಇಲ್ಲಿಗೆ ಬರಬೇಕಾಯಿತು. ನಮಗೆ ಯಾರಿಗೂ ಏನೂ ಗೊತ್ತಾಗಲಿಲ್ಲಾದ್ದರಿಂದ ಪರ್ವತೇಶ್ವರನು ಘಾತಮಾಡತಕ್ಕದ್ದನ್ನು ಪೂರ್ಣವಾಗಿ ಮಾಡಿಬಿಟ್ಟನು. ಇನ್ನು ಆದದ್ದನ್ನು ತಿರುಗಿಸುವ ಹಾಗಿಲ್ಲ. ಮುಂದಿನ ವ್ಯವಸ್ಥೆಯ ಬಗ್ಗೆ ವಿಚಾರ ಮಾಡಬೇಕಾಗಿದೆ; ಆದ್ದರಿಂದ ತಾವು ದಯಮಾಡಿ ದರ್ಬಾರಕ್ಕೆ ಬರಬೇಕು, ಸೈನ್ಯದ ಕೆಲಸವು ಮುಗಿದಿರುತ್ತದೆ. ತಮ್ಮ ಕೆಲಸವು ಮಾತ್ರ ಉಳಿದಿರುವದು. ಚಾಣ.... (ನಾಲಿಗೆ ಕಚ್ಚಿ) ಚಂದ್ರಗುಪ್ತ ಮಹಾರಾಜರು ಬುದ್ಧಿ ಪೂರ್ವಕವಾಗಿ ನನ್ನನ್ನು ತಮ್ಮ ಶೋಧಕ್ಕಾಗಿ ಕಳಿಸಿರುವರು.

ಚಂದ್ರಗುಪ್ತನಿಗೆ ಮಹಾರಾಜ ಪದವಿಯನ್ನು ಜೋಡಿಸಿದ್ದರಿಂದ ರಾಕ್ಷಸನ ಸಂತಾಪವು ಮತ್ತಿಷ್ಟು ಹೆಚ್ಚಿತು. ಭಾಗುರಾಯಣನು ಚಾಣ..... ಎಂದು ಅರ್ಧ ನುಡಿದು ನಾಲಿಗೆ ಕಚ್ಚಿದ್ದು ಸ್ಪಷ್ಟವಾಗಿ ರಾಕ್ಷಸನ ಲಕ್ಷಕ್ಕೆ ಬರಲಿಲ್ಲ. ಆಗ ರಾಕ್ಷಸನು ಭಾಗುರಾಯಣನಿಗೆ ಕಪಟದಿಂದ – ಚಂದ್ರಗುಪ್ತ ಮಹಾರಾಜರು! ನಾನಂತು ಚಂದ್ರಗುಪ್ತ ಮಹಾರಾಜರನ್ನು ಎಂದೂ ಕೇಳಿಲ್ಲ! ಅಂತೂ, ಆ ದಾಸಿಯ ಸೋದರಳಿಯನನ್ನು ಸಿಂಹಾಸನದ ಮೇಲೆ ಕುಳ್ಳಿರಿಸುವದಕ್ಕಾಗಿ ನೀನು ಇಂಥ ನೀಚತನವನ್ನು ಮಾಡಿದೆಯೇನು? ಹಾ! ಈಗ ಎಲ್ಲ ಸಂಗತಿಯು ನನ್ನ ಮನಸ್ಸಿನಲ್ಲಿ ಬಂದಿತು. ಆ ದಾಸಿಯು ಕಡೆಗೆ ತನ್ನ ಸಂಕಲ್ಪದಂತೆ ನಂದವಂಶವನ್ನು ನಾಶಗೊಳಿಸಿ, ತನ್ನ ಸೋದರಳಿಯನನ್ನು ಮಗಧದ ಸಿಂಹಾಸನದ ಮೇಲೆ ಕುಳ್ಳಿರಿಸಿದಳು. ಶಾಬಾಸ! ಶಾಬಾಸ! ಮುರೇ, ಶಾಬಾಸ!'' ಅನೃತಂ, ಸಾಹಸಂ, ಮಾಯಾ'' ಮೊದಲಾದ ಗುಣಗಳಿಂದ ಯುಕ್ತವಾದ ಈ ಸ್ತ್ರೀರೂಪಯಂತ್ರವು ತ್ರಿಭುವನದ ನಾಶಕ್ಕಾಗಿಯೇ ಉತ್ಪನ್ನವಾಗಿರುತ್ತದೆಂದು ಅನ್ನುವದೇನು ಸುಳ್ಳಲ್ಲ! ಸೇನಾಪತೇ, ನಿನ್ನಂಥ ಪುರುಷನು ಆಕೆಯ ಪಾಶಕ್ಕೆ ಸಿಕ್ಕು ಮಹಾರಾಜರ ಸರ್ವಸ್ವದ ನಾಶವನ್ನು ಮಾಡಬಹುದೇ? ನಿನಗೆ ಅಮಾತ್ಯಪದವಿಯು ಬೇಕಾಗಿದ್ದರೆ, ಕೇಳಬೇಕಾಗಿತ್ತು, ಸಂತೋಷದಿಂದ ಕೊಟ್ಟು, ನಾನು ಮನೆಯಲ್ಲಿ ''ರಾಮ ರಾಮ'' ಎಂದು ಸ್ವಸ್ಥವಾಗಿ ಕುಳಿತು ಕೊಳ್ಳುತ್ತಿದ್ದೆನು; ಆದರೆ ಭಾಗುರಾಯಣಾ, ಸ್ವಾಮಿಯ ದ್ರೋಹವನ್ನು ಮಾಡಿದವನಿಗೆ ಎಂದಿಗೂ ಕಲ್ಯಾಣವಾಗಲಾರದು.

ರಾಕ್ಷಸನ ಈ ಮಾತುಗಳನ್ನೆಲ್ಲ ಭಾಗುರಾಯಣನು ತೆಪ್ಪಗೆ ಕುಳಿತು ಕೇಳಿಕೊಂಡನು. ಆ ಮೇಲೆ ಸ್ವಲ್ಪ ಹೊತ್ತು ಸುಮ್ಮನೆ ಇದ್ದು ಆತನು ರಾಕ್ಷಸನಿಗೆ ಅಮಾತ್ಯವರಾ, ಸ್ವಾಮಿದ್ರೋಹಿಗಳಿಗೆ

ಕಲ್ಯಾಣವಾಗಬೇಕೆಂದು ಯಾರು ಹೇಳುವರು? ಆದರೆ ಈಗ ಸ್ವಾಮಿದ್ರೋಹವನ್ನು ಮಾತ್ರ ಯಾರೂ ಮಾಡಿದಂತೆ ತೋರುವದಿಲ್ಲ, ನೀವು ಪರರಾಜರ ಭಯವನ್ನು ಲೆಕ್ಕಿಸದೆ, ಮೈಮರೆತು ಕುಳಿತದ್ದರಿಂದ ಪರ್ವತೇಶ್ವರನು ಸಂಧಿಯನ್ನು ಸಾಧಿಸಿ ಫಿತೂರಿಯನ್ನುಂಟುಮಾಡಿ ಘಾತ ಮಾಡಿದನು. ಕುಮಾರ ಚಂದ್ರಗುಪ್ತನು ಆತನ ಪಾರಪತ್ಯಮಾಡಿ ಸೆರೆಹಿಡಿಕೊಂಡು ಬಂದದ್ದಕ್ಕಾಗಿ ಅವನನ್ನು ಶ್ಲಾಘಿಸಿದೆ, ಆತನಿಗೆ ದೋಷಾರೋಪಣ ಮಾಡುವಿರಿ, ನನ್ನನ್ನೂ ದೂಷಿಸುವಿರಿ, ಇದಕ್ಕೇನನ್ನಬೇಕು? ತಾವು ಹೀಗೆ ಅಜ್ಞಾತವಾಸದಲ್ಲಿ ಎಷ್ಟುದಿವಸ ಇರುವವರು? ತಮ್ಮ ದುರ್ಲಕ್ಷದಿಂದ ಈಗ ಅನರ್ಥವು ಒದಗಿದ್ದರೂ, ಮುಂದೆ ರಾಜ್ಯಕಾರಾಭಾರವು ತಮ್ಮ ಅನುಮತಿಯಿಂದಲೇ ಸಾಗಬೇಕೆಂದು ಆರ್ಯ ಚಾಣಕ್ಯ–ಚಂದ್ರಗುಪ್ತ ಮಹಾರಾಜರು ಮನಮುಟ್ಟಿ ಬಯಸುತ್ತಾರೆ, ಅನ್ನಲು, ಕೂಡಲೆ ರಾಕ್ಷಸನು – ಭಾಗುರಾಯಣಾ, ಏನು ನಿಮ್ಮ ಕಪಟನಾಟಕವಿದು? ನಿಮ್ಮ ದೃಷ್ಟಿಯಿಂದ ಆ ದಾಸಿಯ ಸೋದರಳಿಯನು ಮಹಾರಾಜನಿರ ಬಹುದು, ಆದರೆ ನನ್ನ ದೃಷ್ಟಿಯಿಂದಲ್ಲ, ನಾನು ಜೀವದಿಂದಿರುವವರೆಗೆ ಮಾಡಬಾರದ್ದನ್ನು ಮಾಡಿ ಆತನನ್ನು ಮಗಧ ರಾಜ್ಯದೊಳಗಿಂದ ಓಡಿಸುವೆನು. ಸೇನಾಪತಿ, ನಂದರ ರಕ್ತಮುಣುಗಿದ ಕೈಗಳಿಂದ ನೀನು ನನ್ನನ್ನು ಬಗಲಲ್ಲಿ ಹಾಕಿಕೊಳ್ಳಲು ಹವಣಿಸುತ್ತೀಯೇನು? ಅದು ಆಗದ ಮಾತು. ನಾನು ನಂದರ ಋಣೆಯಾಗಿರುತ್ತೇನೆ. ರಾಕ್ಷಸನು ನಂದರ ಸೇವಕನಿರುತ್ತಾನೆ. ನಂದರ ಹೆಸರು ಪೃಥ್ವಿಯಲ್ಲಿರುವವರೆಗೆ ಆತನು ಎರಡನೆಯ ಯಾರ ಸೇವೆಯನ್ನೂ ಮಾಡಲಾರನು. ಆರ್ಯಚಾಣಕ್ಯನ ಬೆಂಬಲವು ನಿನಗೆ ಇದ್ದಂತೆ ನಿನ್ನ ಮಾತಿನಮೇಲೆ ಗೊತ್ತಾಗುತ್ತದೆ. ಇರಲಿ, ನೀವು ಮೂರು ನಾಲ್ಕು ಜನರು ಕೂಡಿ ಏನೇನೋ ಮಾಡಿ ಹೊಸ ಅರಸನನ್ನು ಮಾಡಿ ಕೊಂಡಿರುತ್ತೀರಿ; ಹೊಸ ಮಾರ್ಗವನ್ನು ಹಿಡಿದಿರುತ್ತೀರಿ. ನಾನು ಹಳೆಯ ಅರಸನ ಪಕ್ಷದವನು, ಹಳೆಯ ಮಾರ್ಗದವನು. ಭಾಗುರಾಯಣಾ, ನಿಮ್ಮ ಕಪಟನಾಟಕವೆಲ್ಲ ಹೊರಬಿದ್ದಿಲ್ಲ, ಒಮ್ಮೆ ಹೊರಬೀಳಲಿ; ನಿಮಗಿಂತಲೂ ಹೆಚ್ಚಿನ ಕಪಟನಾಟಕವನ್ನು ನಾನು ಮಾಡಬಲ್ಲೆನು. ಇನ್ನು ಮೇಲೆ ನನ್ನ ಸಂಗಡ ಮಾತಾಡಬೇಡ, ತಿರುಗಿ ನನಗೆ ನಿನ್ನ ಮೋರೆಯನ್ನು ತೋರಿಸಬೇಡ, ಎಂದು ನುಡಿದು ಆತನು ಭಾಗುರಾಯಣನ ಕಡೆಗೆ ಬೆನ್ನುಮಾಡಿ ಕುಳಿತುಕೊಂಡನು.

ಈ ಮೇರೆಗೆ ರಾಕ್ಷಸನು ಒಂದೂ ಮಾತಾಡದೆ ಸುಮ್ಮನೇ ಕುಳಿತದ್ದನ್ನು ನೋಡಿ, ಮುಂದೆ ಏನು ಮಾತಾಡಬೇಕೆಂಬದು ಭಾಗುರಾಯಣನಿಗೆ ತಿಳಿಯದಾಯಿತು. ಹೀಗೆ ಬಹಳ ಹೊತ್ತು ಕುಳಿತುಕೊಳ್ಳುವಲ್ಲಿ ಅರ್ಥವಿಲ್ಲೆಂದು ತಿಳಿದು ಆತನು ಅಮಾತ್ಯನಿಗೆ —''ತಮ್ಮ ಇಚ್ಛೆಯಿದ್ದಂತೆ ಮಾಡಲು, ಸಮರ್ಥರಿದ್ದೀರೆ''ಂದು ಹೇಳಿ ಅಲ್ಲಿಂದ ಹೊರಟುಹೋದನು. ಭಯಂಕರ ಕೃತ್ಯವು ಎರಡನೆಯವರಿಂದ ಆದ್ದದ್ದು ತನಗೆ ಗೊತ್ತಿದ್ದೂ, ಅದನ್ನು ನೀನೇ ಮಾಡಿದೆಯೆಂದು ರಾಕ್ಷಸನ ಮೇಲೆ ಅಪವಾದ ಹೊರಿಸುವ ಧೈರ್ಯವು ಭಾಗುರಾಯಣನಿಗಾಗಲಿಲ್ಲ, ಎಷ್ಟಾದರೂ ಆತನು ರಾಕ್ಷಸನ ಕೈಕೆಳಗೆ ಬಹುದಿವಸ ನಡಕೊಂಡವನು. ರಾಕ್ಷಸನ ಬಳಿಯಿಂದ ಹೊರಗೆ ಬಂದಾಗ ತಾನು ಒಂದು ಸಂಕಟದಿಂದ ಪಾರಾದೆನೆಂಬಂತೆ ಆ ಸೇನಾಪತಿಗೆ ಸಮಾಧಾನವಾಯಿತು. ಆತನು ನೆಟ್ಟಗೆ ಚಾಣಕ್ಯನ ಬಳಿಗೆ ಹೋಗಿ ನಡೆದ ಸಂಗತಿಯನ್ನು ನಡೆದ ಹಾಗೆ ಹೇಳಿಬಿಟ್ಟನು.

ರಾಕ್ಷಸನು ಇಷ್ಟು ಸುಲಭ ರೀತಿಯಿಂದ ವಶವಾದಾನೆಂದು ಚಾಣಕ್ಯನಿಗೆ ಎಷ್ಟುಮಾತ್ರವೂ ತೋರಿದ್ದಿಲ್ಲ. ಏನೋ ಹರಳು ಒಗೆದು ನೋಡಬೇಕೆಂದು ಆತನು ಭಾಗುರಾಯಣನನ್ನು ಕಳಿಸಿ ನೋಡಿದನು. ಆ ದೂರ್ತನು ರಾಕ್ಷಸನನು, ಹಿಡತರಲಿಕ್ಕೆ ಎರಡನೆಯದೊಂದು ಉಪಾಯವನ್ನು ಯೋಚಿಸಿಟ್ಟಿದ್ದನು. ಆ ಉಪಾಯವು ಸಾಧಿಸುವದಕ್ಕಾಗಿ ಚಂದ್ರಗುಪ್ತನ ಕೈಯಿಂದ ರಾಕ್ಷಸನಿಗೆ ಒಂದು ಪತ್ರವನ್ನು ಬರೆಸಿದನು. ಆ ಪತ್ರದ ಅಭಿಪ್ರಾಯವೇನಂದರೆ–ಪರ್ವತೇಶ್ವರನನ್ನು ಸೆರೆಹಿಡಿದು ತಂದಿರುವ ವರ್ತಮಾನವು ಸೇನಾಪತಿಯ ಮುಖದಿಂದ ತಮಗೆ ತಿಳದೇ ಇರುತ್ತದೆ. ಈಗ ಪರ್ವತೇಶ್ವರನಿಂದ ಆಗಿರುವ ಭಯಂಕರವಾದ ಅಪರಾಧದ ವಿಚಾರಣೆಯನ್ನು ಮಾಡಿ, ಆತನನ್ನು ಶಿಕ್ಷಿಸಬೇಕೋ, ಆತನ ಮಗನಿಂದ ಕಪ್ಪವನ್ನು ತಕ್ಕೊಂಡು ಆತನನ್ನು ಬಿಟ್ಟು ಬಿಡಬೇಕೋ, ಎಂಬದನ್ನು ನಿರ್ಣಯಿಸುವದಕ್ಕಾಗಿ ನ್ಯಾಯಾಧೀಶರನ್ನು ನಿಯಮಿಸಬೇಕಾಗಿದೆ. ನೀವು ನಂದರ ನಿಷ್ಠಾವಂತರಾದ ಸೇವಕರು. ನಂದರನ್ನು ನಾಶಗೊಳಿಸಿದ ಅಪರಾಧಿಗಳನ್ನು ಶಿಕ್ಷಿಸುವ ಅಧಿಕಾರವು ನಿಮಗೇ ಇರುತ್ತದೆ, ಆದ್ದರಿಂದ ನೀವೇ ನ್ಯಾಯಾಧೀಶರಾಗಿ ನ್ಯಾಯ ವಿಚಾರಣೆಯನ್ನು ಮಾಡಬೇಕು; ಹೀಗಾದರೆ, ಜನರ ಕಲುಷಿತ ಮನಸ್ಸುಗಳು ಶುದ್ಧವಾಗ ಬಹುದಲ್ಲದೆ ತಪ್ಪುಗಾರನಾರು? ಯಾವನು ಫಿತೂರಮಾಡಿದನು? ಮೊದಲಾದ ಸಂಗತಿಗಳ ಶೋಧವು ಅತ್ಯುತ್ತಮ ರೀತಿಯಿಂದ ಆಗುವದು; ಆದ್ದರಿಂದ ಈ ಮಹತ್ವದ ಕಾರ್ಯವನ್ನಷ್ಟು ಉದಾಸೀನ ಮಾಡಬಾರದೆಂದು ವಿಜ್ಞಾಪಿಸುವೆನು, ಈ ವಿಜ್ಞಾಪನೆಯ ಅನಾದರಣೆಯಾದರೆ, ಸ್ವಾಮಿಕಾರ್ಯದ್ದೇ ಅನಾದರಣೆಯಾದಂತಾಗುವದು.

ಪತ್ರವು ಬೇಗನೆ ರಾಕ್ಷಸನಿಗೆ ಮುಟ್ಟುವಂತೆ ವ್ಯವಸ್ಥೆಯು ಮಾಡಲ್ಪಟ್ಟಿತು. ಚಂದ್ರಗುಪ್ತನ ಪತ್ರವೆಂದು ಕೇಳಿದಕೂಡಲೆ ರಾಕ್ಷಸನು ಅದನ್ನು ಹರಿದು ಚಲ್ಲಬೇಕೆಂದು ಮಾಡಿದನು; ಆದರೆ ಏನು ಬರೆದಿರುವನೆಂಬದನ್ನು ಓದಿನೋಡಿ ಹರಿಯಬೇಕೆಂದು ಆತನು ಪತ್ರವನ್ನು ಒಡೆದು ಓದಿದನು. ಪತ್ರಾಭಿಪ್ರಾಯದಿಂದ ಅವನಿಗೆ ಬಹಳ ಆಶ್ಚರ್ಯವಾಯಿತು. ಆಶ್ಚರ್ಯವಾದದ್ದಷ್ಟೇ ಅಲ್ಲ, ಮುಂದೆ ಏನು ಮಾಡಬೇಕೆಂಬದೇ ಆತನಿಗೆ ತಿಳಿಯದಾಯಿತು. ಪತ್ರವನ್ನು ಮನ್ನಿಸಿ ನ್ಯಾಯಾಧಿಕಾರವನ್ನು ಕೈಕೊಂಡರೆ, ಚಂದ್ರಗುಪ್ತನ ಸ್ವಾಮಿತ್ವಕ್ಕೆ ಸಮ್ಮತಿಸಿದ ಅಪಕೀರ್ತಿಯು ಬರುವದು. ಅಧಿಕಾರವನ್ನು ಕೈಕೊಳ್ಳದಿದ್ದರೆ, ಈಗ ಜನರಲ್ಲಿ ಹಬ್ಬಿದ ಅಪವಾದಕ್ಕೆ ನಾನು ಪಾತ್ರ ನಾಗಿರುತ್ತೇನೆಂದು ಸಿದ್ಧವಾಗುವದು. ಏನೇ ಆಗಲಿ, ಅಧಿಕಾರವನ್ನು ಕೈಕೊಳ್ಳುವದೇ ಯೋಗ್ಯವು. ಪರ್ವತೇಶ್ವರನಿಗೆ ಬೇಕಾದ ಹಾಗೆ ಅಡ್ಡತಿಡ್ಡ ಪ್ರಶ್ನೆಗಳನ್ನು ಕೇಳಿ ಅಪರಾಧಿಗಳನ್ನೆಲ್ಲ ಬೈಲಿಗೆಳೆಯಲಿಕ್ಕೆ ಅನುಕೂಲವಾಗುತ್ತದೆ, ಎಂದು ಯೋಚಿಸಿ ರಾಕ್ಷಸನು ಚಂದ್ರಗುಪ್ತನಿಗೆ ಹೀಗೆ ಪತ್ರ ಬರೆದನು:–ವ್ಯಾಧಪತಿ ಪ್ರದ್ಯುಮ್ನದೇವಾತ್ಮಜಕುಮಾರ ಚಂದ್ರಗುಪ್ತನಿಗೆ–ಅಮಾತ್ಯ ರಾಕ್ಷಸನು ಮಾಡುವ ಅನೇಕ ಆಶೀರ್ವಾದಗಳು. ವಿ. ತಮ್ಮ ಪತ್ರಮುಟ್ಟಿತು. ಅದರಂತೆ ಪರ್ವತೇಶ್ವರನ ನೀಚಕೃತ್ಯಗಳನ್ನು ಬೈಲಿಗೆಳೆಯುವದಕ್ಕಾಗಿ ನ್ಯಾಯಾಧಿಕಾರವನ್ನು ಅಂಗೀಕರಿಸಲು ನಾನು ಸಿದ್ಧನಿರುತ್ತೇನೆ; ಆದರೆ ಶೋಧಾಂತ್ಯದಲ್ಲಿ ಅಪರಾಧಿಗಳೆಂದು ಸಿದ್ಧವಾದವರಿಗೆ ನನ್ನ ಮನೋದಯದಂತೆ ಶಿಕ್ಷಿಸುವ ವ್ಯವಸ್ಥೆಯಾಗಬೇಕು; ಅಂದರೆ, ಯಾವತರದ ಅನುಮಾನವೂ

ಇಲ್ಲದೆ ಅಧಿಕಾರವನ್ನು ಕೈಕೊಳ್ಳುವೆನು. ನಂದವಂಶವನ್ನು ನಾಶಗೊಳಿಸಿದವರಿಗೆ ಯೋಗ್ಯ ಶಿಕ್ಷೆಯನ್ನು ವಿಧಿಸುವದೇ, ನಾಶಹೊಂದಿದ ಆ ವಂಶದ ನನ್ನ ಕಟ್ಟಕಡೆಯ ಸೇವೆಯಾಗಿರುತ್ತದೆ!

ಈ ಪತ್ರವನ್ನು ಓದಿದಕೂಡಲೇ ಚಾಣಕ್ಯನಿಗೆ ಅತ್ಯಾನಂದವಾಯಿತು. ತನ್ನ ನೀತಿ ನೈಪುಣ್ಯದ ಪರಮಾವಧಿಯಾಯಿತೆಂದು ಭಾವಿಸಿ ಆತನು ಮನಸ್ಸಿನಲ್ಲಿ – ಅಮಾತ್ಯಾ, ಇನ್ನು ನೀನು ಪೂರ್ಣವಾಗಿ ನನ್ನ ಕೈಯಲ್ಲಿ ಸಿಕ್ಕಿ ಎಂದುಕೊಂಡು ಒಮ್ಮೆಲೆ ಚಪ್ಪಾಳೆಯನ್ನು ಬಾರಿಸಿದನು.

ಚಮತ್ಕಾರದ ಪ್ರಸಂಗ

ರಾಕ್ಷಸನು ನ್ಯಾಯಾಧೀಶನಾಗಲು ಒಪ್ಪಿಕೊಂಡ ಮರುದಿವಸವೇ ನ್ಯಾಯ ವಿಚಾರಣೆ ಯಾಗಬೇಕೆಂದು ಗೊತ್ತಾಯಿತು. ತಾನು ನ್ಯಾಯವಿಚಾರಣೆ ಮಾಡುವಾಗ ತಾನೇ ಅಪರಾಧಿ ಯಾದೇನೆಂದು ರಾಕ್ಷಸನ ಕನಸು ಮನಸುಗಳಲ್ಲಿ ಬಂದಿದ್ದಿಲ್ಲ. ಆತನು ನ್ಯಾಯಾಧೀಶನಾಗುವದಕ ್ಕಾಗಿ ಶುದ್ಧಮನಸ್ಸಿನಿಂದ ಹೋದನು. ಚಂದ್ರಗುಪ್ತನ ದರ್ಶನವಾದಕೂಡಲೆ ಆ ನೂತನ ರಾಜನು ರಾಕ್ಷಸನಿಗೆ–ಅಮಾತ್ಯಶ್ರೇಷ್ಠಾ, ಮೊದಲು ನ್ಯಾಯವಿಚಾರಣೆಯನ್ನು ಗುಪ್ತರೀತಿಯಿಂದಲೇ ಮಾಡಬೇಕು. ಯಾರಿಗೆ ಗೊತ್ತು ನೀವು ನ್ಯಾಯವಿಚಾರಣೆ ಮಾಡುತ್ತೀರೆಂಬದು ಗೊತ್ತಾದ ಕೂಡಲೇ ಫಿತೂರಾದ ಜನರು ಓಡಿಹೋಗಬಹುದು. ಹಿಂದುಗಡೆ ಅವರನ್ನು ಹಿಡತರಲಿಕ್ಕೆ ಪ್ರಯಾಸವಾದೀತು. ಯವನರಂತು ಹೊಂಚುಹಾಕಿಕೊಂಡೇ ಕುಳಿತಿರುವರು; ಅವರನ್ನು ಆ ಸಂಚುಗಾರರು ಕೂಡಿಕೊಂಡು ತೊಂದರೆ ಕೊಟ್ಟಾರು. ಇಷ್ಟಕ್ಕಾಗಿಯೇ ನಾವು ಪರ್ವತೇಶ್ವರ ನನ್ನು ಕರಿಸಿಕೊಂಡು ಗುಪ್ತವಾಗಿ ವಿಚಾರಿಸೋಣ. ವಿಚಾರಾಂತದಲ್ಲಿ ತಪ್ಪುಗಾರರೆಂದು ಸಿದ್ಧವಾದವರನ್ನು ಒಮ್ಮೆಲೇ ಹಿಡಿದು, ಅವರಿಗೆ ತಾವು ಹೇಳಿದಂತೆ ಶಾಸನವನ್ನು ಮಾಡಲಿಕ್ಕೆ ನೆಟ್ಟಗಾಗುವದು. ತಪ್ಪುಗಾರನು ಘನವಿದ್ವಾಂಸನಾದ ಶ್ರೋತ್ರೀಯ ಬ್ರಾಹ್ಮಣನಿರಲಿ, ಚಾಂಡಾಲನಿರಲಿ ಶಿಕ್ಷಿಸುವಲ್ಲಿ ಹಿಂದೆ ಮುಂದೆ ನೋಡುವಕಾರಣವಿಲ್ಲ ಎಂದು ಹೇಳಿದನು. ಅದಕ್ಕೆ ರಾಕ್ಷಸನು ಸಮಾಧಾನಪಟ್ಟು, ಹಾಗಿಯೇ ಆಗಲೆಂದು ಒಪ್ಪಿಕೊಂಡನು. ಮಧ್ಯಾಹ್ನದ ಆರುತಾಸಿಗೆ ನ್ಯಾಯವಿಚಾರಣೆ ನಡೆಯಬೇಕೆಂಬದು ಗೊತ್ತಾಯಿತು. ಅಮಾತ್ಯವರನು ಹೊತ್ತಿಗೆ ಸರಿಯಾಗಿ ನ್ಯಾಯಸ್ಥಾನವನ್ನು ಕುರಿತು ತೆರಳಿದನು.

ನ್ಯಾಯಮಂದಿರದಲ್ಲಿ ಇಬ್ಬರೇ ಕುಳಿತಿದ್ದ ಚಂದ್ರಗುಪ್ತ–ಭಾಗುರಾಯಣರು, ರಾಕ್ಷಸನು ಬಂದಕೂಡಲೇ ಎದ್ದುನಿಂತು ಸತ್ಕರಿಸಿ ಆತನಿಗೆ ಉಚ್ಚಾಸನವನ್ನು ಕೊಟ್ಟು, ತಾವು ಆತನು ಎಡಬಲಗಳಲ್ಲಿ ಕುಳಿತುಕೊಂಡರು; ಇವರಿಬ್ಬರು ಮಹಾ ಠಕ್ಕರಿರುತ್ತಾರೆಂದು ರಾಕ್ಷಸನು ಮನಸ್ಸಿನಲ್ಲಿ ತಿಳಕೊಂಡನು; ಮತ್ತು ಇವರು ಈಗ ಅಧಿಕಾರಸಂಪನ್ನರಾಗಿರುವದರಿಂದ ಇವರಿಗೆ ವಿರುದ್ಧವಾದ ನ್ಯಾಯನಿರ್ಣಯವನ್ನು ಮಾಡಿದರೆ ತನ್ನ ಮಾತು ನಡಿಸರೆಂತಲೂ ಆತನು ತರ್ಕಿಸಿದನು; ಅದರಿಂದ ನಿರರ್ಥಕವಾದ ನ್ಯಾಯವಿಚಾರಣೆಯ ಶ್ರಮವನ್ನು ಭೋಗಿಸಲಿಕ್ಕೆ ಅವನ

ಮನಸ್ಸು ಮೆಚ್ಚದಾಯಿತು; ಆದರೆ ಮೊದಲು ಒಡಂಬಟ್ಟು ಇಲ್ಲಿಯವರೆಗೆ ಬಂದು ನ್ಯಾಯವಿಚಾರಣೆ ಮಾಡದೆ ಹಾಗೇ ತಿರುಗಿ ಹೋದರೆ ಸಂಶಯಕ್ಕೆ ಕಾರಣವಾಗುತ್ತದೆಂದು ತಿಳಿದು ಆತನು ಚಂದ್ರಗುಪ್ತನನ್ನು ಕರಿತು–ಕಿರಾತರಾಜಕುಮಾರಾ ಚಂದ್ರಗುಪ್ತಾ, ನಂದವಂಶವು ನಷ್ಟವಾಗಿ ಇನ್ನು ಆ ವಂಶದ ಸಿಂಹಾಸನವನ್ನು ವ್ಯವಸ್ಥಗೊಲಿಸಲಿಕ್ಕೆ ನೀನು ನಿಂತುಕೊಳ್ಳಬೇಕೇನು? ಎಂಥ ಘಾತವು! ಎಂಥ ಭಯಂಕರ ಕೊಲೆಯು! ಈ ಘೋರಕರ್ಮವನ್ನು ಮಾಡಿದ ಮನುಷ್ಯನ ಹೃದಯವಾದರೂ ಎಂಥದಿರಬಹುದು! ಇರಲಿ; ಏನಾಗುತ್ತದೋ ನೋಡೋಣ. ನ್ಯಾಯವನ್ನು ವಿಚಾರಿಸಲಿಕ್ಕೆ ನಾನು ಸಿದ್ಧನಿರುತ್ತೇನೆ. ಆ ದುಷ್ಟ ಪರ್ವತೇಶ್ವರನು ಏನೆಂಬದನ್ನು ಮೊದಲು ತಿಳಿದುಕೊಳ್ಳವೆನು. ಆತನನ್ನು ಮೊದಲು ಕರಿಸು, ಎನ್ನಲು, ಭಾಗುರಾಯಣ–ಚಂದ್ರಗುಪ್ತರು ಒಬ್ಬರ ಮೋರೆಯನ್ನೊಬ್ಬರು ನೋಡತೊಡಗಿದರು.

ಸ್ವಲ್ಪ ಹೊತ್ತಿನಲ್ಲಿಯೇ ಪರ್ವತೇಶ್ವರನು ನ್ಯಾಯಸ್ಥಾನಕ್ಕೆ ಬಂದನು. ನ್ಯಾಯಮಂದಿರದ ಬಾಗಿಲಲ್ಲಿ ಕಾಲಿಟ್ಟ ಕೂಡಲೆ ರಾಕ್ಷಸನು ಅವನ ಕಣ್ಣಿಗೆ ಬೀಳಲು, ಆ ಯವನ ಭೂಪತಿಯ ಸಂತಾಪವು ಹೊಟ್ಟೆಯಲ್ಲಿ ಹಿಡಿಸದಾಯಿತು. ಸ್ವತಂತ್ರನಿದ್ದರೆ ಆತನು ತನ್ನ ಖಡ್ಗದಿಂದ ರಾಕ್ಷಸನನ್ನು ತುಂಡರಿಸಿ ಚಲ್ಲುತ್ತಿದ್ದನು. ಅವನು ರಾಕ್ಷಸನನ್ನು ಕುರಿತು ಗದ್ದರಿಸಿ–ಅಮಾತ್ಯರಾಕ್ಷಸಾ, ನೀನು ಹೆಸರಿನಿಂದಲೇ ಅಲ್ಲ, ಕೃತಿಯಿಂದಲೂ ನಿಜವಾಗಿ ರಾಕ್ಷಸನೇ ಇರತ್ತೀ! ನೀಚಾ, ನೀನು ನಿನ್ನ ಸ್ವಾಮಿಯ ಕುಲವನ್ನು ನಾಶಗೊಳಿಸುವದಿದ್ದರೆ ನಡುವೆ ನನ್ನನ್ನು ಯಾಕೆ ಸೇರಿಸಿಕೊಂಡು ಮೋಸಗೊಳಿಸಿದೆ? ನಾನು ನೀತಿಯ ಹಲವು ಪ್ರಕಾರಗಳನ್ನು ನೋಡಿದ್ದೇನೆ; ಆದರೆ ಇಂಥ ವಿಶ್ವಾಸಘಾತದ ನೀತಿಯನ್ನು ಯಾರೂ ಎಲ್ಲಿಯೂ ಎಂದೂ ನೋಡಿರಲಿಕ್ಕಿಲ್ಲ; ನಿನ್ನ ಮುದ್ರೆಗಳಿಲ್ಲದಿದ್ದರೆ ನಾನೆಂದೂ ಇಂಥ ಪತ್ರಗಳ ಮೇಲೆ ನಂಬಿಗೆಯನ್ನಿಡುತ್ತಿದ್ದಿಲ್ಲ. ಆದರೆ ನನ್ನ ದುರ್ದೈವವು ಬಂದು ನಿಂತಬಳಿಕ ಮಾಡುವದೇನು? ನೀನು ಅಧಮಾಧಮನೆಂಬದರಲ್ಲಿ ಎಳ್ಳಷ್ಟು ಸಂಶಯವಿಲ್ಲ. ಇಂಥ ನೀನು ನ್ಯಾಯಾಧೀಶನಾಗಿ ನನ್ನ ಅಪರಾಧವನ್ನು ನಿರ್ಣಯಿಸಲಿಕ್ಕೆ ಕುಳಿತಿರುವೆಯಾ? ಎಂದು ಬಾಯಿಗೆ ಬಂದಂತೆ ಮಾತಾಡಿದನು. ಕಡೆಗೆ ಸಂತಾಪದ ಭರದಿಂದ ಆತನ ಬಾಯಿಂದ ಶಬ್ದಗಳೇ ಹೊರಡದಾದವು. ಇಲ್ಲದಿದ್ದರೆ, ಇನ್ನೂ ಆತನು ರಾಕ್ಷಸನನ್ನು ತೆರೆಯುತ್ತಿದ್ದನು. ರಾಕ್ಷಸನು ಪರ್ವತೇಶ್ವರನ ಈ ಮಾತುಗಳನ್ನು ಕೇಳಿ ಬೆರಗಾದನು. ತನ್ನ ಮುದ್ರೆಗಳ ಪತ್ರಗಳು ಈತನಿಗೆ ಹ್ಯಾಗೆ ಹೋದವೆಂದು ಯೋಚಿಸತೊಡಗಿದನು. ಪರ್ವತೇಶ್ವರನಿಗೆ ಏನು ಉತ್ತರ ಕೊಡಬೇಕೆಂಬದೇ ಆತನಿಗೆ ತಿಳಿಯದಾಯಿತು. ಇದನ್ನು ತಿಳಿದು ಮನಸ್ಸಿನಲ್ಲಿ ಸಂತೋಷ ಪಡುತ್ತಿದ್ದ ಚಂದ್ರಗುಪ್ತನು ಪರ್ವತರಾಜನಿಗೆ–ಪರ್ವತೇಶ್ವರಾ, ಸುಮ್ಮನೇ ಯಾರ ಹೆಸರನ್ನಾದರೂ ಹೇಳಿ ಬಾಯಿಗೆ ಬಂದಂತೆ ಮಾತಾಡುವದರಲ್ಲಿ ಅರ್ಥವಿಲ್ಲ. ಅಮಾತ್ಯರಾಕ್ಷಸರು ಈಗ ನ್ಯಾಯಸ್ಥಾನದಲ್ಲಿ ಕುಳಿತಿರುವರು. ನ್ಯಾಯವಿಚಾರಣೆಯ ಸಂಪೂರ್ಣ ಅಧಿಕಾರವು ಅವರಿಗಿರುತ್ತದೆ. ಅಪರಾಧಿಗಳಿಗೆ ಶಿಕ್ಷೆಯನ್ನಾದರೂ ಅವರೇ ವಿಧಿಸುವರು. ನೀನು ದೊಡ್ಡ ಅರಸನಿರುತ್ತೀ. ಸ್ವಲ್ಪ ಕಪ್ಪನ್ನು ತಕ್ಕೊಂಡು ನಿನ್ನ ರಾಜ್ಯಕ್ಕೆ ನಿನ್ನನ್ನು ಹೋಗಗೊಡುವ ವಿಚಾರವದೆ; ಅದನ್ನು ಸಫಲಗೊಳಿಸುವದು ನಿನ್ನ ಕೈಯಲ್ಲಿಯೇ ಇರುತ್ತದೆ. ನೀನು ನಿಜವಾದ

ಅಪರಾಧಿಗಳ ಗೊತ್ತುಹಚ್ಚಿಕೊಟ್ಟರೆ, ಅಲ್ಪ ಸ್ವಲ್ಪ ಕಪ್ಪವನ್ನು ತಕ್ಕೊಂಡು ನಿನ್ನನ್ನು ಬಿಟ್ಟು ಬಿಡುವೆವು. ಇಲ್ಲದಿದ್ದರೆ ಈ ಅಮಾತ್ಯರಾಕ್ಷಸ.......

ಈ ಮೇರೆಗೆ ನುಡಿಯುತ್ತಿರಲು, ಪರ್ವತೇಶ್ವರನು ಗಹಗಹಿಸಿ ನಕ್ಕು–ಶಾಬಾಸ! ಅಮಾತ್ಯ ರಾಕ್ಷಸ ನ್ಯಾಯಾಧೀಶರೇ ಶಾಬಾಸ! ಒಟ್ಟಿಗೆ ಈ ಮಗಧ ರಾಜ್ಯದಲ್ಲಿ ಅಪರಾಧಿಗಳನ್ನೇ ನ್ಯಾಯಾಧೀಶರನ್ನಾಗಿ ನಿಯಮಿಸುತ್ತಾರೆಂಬಂತೆ ಕಾಣತ್ತದೆ! ಇದೇ ಮಹಾಪುರುಷರೇ ನನಗೆ ಪಾಟಲಿಪುತ್ರದ ಮೇಲೆ ಸಲ್ಪ ಸೈನ್ಯದೊಡನೆ ಬಂದು ಇಂಥ ದಿವಸ ಮುತ್ತಿಗೆಯನ್ನು ಹಾಕ ಬೇಕೆಂದು ಬರೆದಿರುವರು. ರಾಜಘಾತದ ಬಗ್ಗೆ ಉತ್ತಮವಾದ ಉಪಾಯವನ್ನು ಯೋಜಿಸಿರುವೆ ವೆಂದು ಇದೇ ಮಹಾರಾಯರೇ, ಒಂದು ಪತ್ರದಲ್ಲಿ ಕಾಣಿಸಿರುವರು. ಚಂದ್ರಗುಪ್ತಾ, ಪ್ರತ್ಯಕ್ಷ ಪತ್ರಗಳಿರುತ್ತಿರಲು, ಬಾಯಿಮಾತುಗಳೇಕೆ? ನೀನು ಮಾತ್ರ ಎಚ್ಚರದಿಂದ ಇರು. ಈ ರಾಕ್ಷಸನನ್ನು ಸರ್ವಥಾ ನಂಬಬೇಡ. ಪರಾಕ್ರಮಶಾಲಿಯಾದ ನೀನು ಇನ್ನು ಅರಸನಾಗತಕ್ಕವನು. ಈ ದುಷ್ಟನು ಈಗಿನಂತೆಯೇ ಎಂದಾದರೂ ನಿನ್ನ ಘಾತವನ್ನೂ ಮಾಡ್ಯಾನು, ಎಂದು ನುಡಿಯು ತ್ತಿರಲು, ಭಾಗುರಾಯಣ–ಚಂದ್ರಗುಪ್ತರು ಅರಿಯದವರಂತೆ ಒಬ್ಬರ ಮೋರೆಯನ್ನೊಬ್ಬರು ಆಶ್ಚರ್ಯದಿಂದ ನೋಡತೊಡಗಿದರು. ರಾಕ್ಷಸನು ಕೆಲವು ಹೊತ್ತು ಮಾತಾಡದೆ ಸುಮ್ಮನೆ ಕುಳಿತು, ಏನೋ ವಿಚಾರವು ಹೊಳೆಯಲು, ಆತನು ಒಮ್ಮೆಲೆ ಎದ್ದುನಿಂತು —''ಪರ್ವತೇಶ್ವರಾ, ನಿನ್ನ ಮೈ ಮೇಲೆ ಎಚ್ಚರಿರುವದೋ, ವೈರಿಗಳ ಕೈಯಲ್ಲಿ ಸಿಕ್ಕದ್ದರಿಂದ ಭ್ರಮಿಷ್ಟನಾಗಿರುವಿಯೋ? ಎಲ್ಲಿ ಅವೆ ತೆಗೆ ಆ ಪತ್ರಗಳನ್ನು?'' ಅನ್ನಲು, ''ತಕ್ಕೋ, ಇವನ್ನು! ಅಧಮಾ, ನೀಚಾ, ನಾನು ಆ ಪತ್ರಗಳನ್ನು ಇಟ್ಟಿರುವದಿಲ್ಲೆಂದು ನೀನು ತಿಳಿದಿರುತ್ತೀಯೇನು? ನೋಡಿರಿ, ನೀವೆಲ್ಲರೂ ಈ ಪತ್ರಗಳನ್ನು ನೋಡಿರಿ. ಇವುಗಳಲ್ಲಿ ರಾಕ್ಷಸನ ಘಾತಕ ವಿಚಾರಗಳೆಲ್ಲ ಇರುತ್ತವೆ. ಎಲ್ಲ ಪತ್ರಗಳ ಬುಡದಲ್ಲಿ ರಾಕ್ಷಸನ ಮುದ್ರೆಗಳು ಇರುವವು. ಎಲಾ ನೀಚಾ ರಾಕ್ಷಸಾ, ಇನ್ನಾದರೂ ಸುಳ್ಳುಮಾತುಗಳನ್ನಾಡಿ ನ್ಯಾಯಾಸನವನ್ನು ಮೈಲಿಗೆಮಾಡಬೇಡ. ಇಳಿ ಕೆಳಗೆ. ಎಲಾ ದುಷ್ಟಾ, ನ್ಯಾಯಾಸನದಮೇಲೆ ಕುಳಿತುಕೊಳ್ಳುವ ಯೋಗ್ಯತೆಯು ನಿನ್ನದಲ್ಲ, ನೀನು ಮಹಾಚಾಂಡಾಲನು!

ಪರ್ವತೇಶ್ವರನ ಈ ಮಾತುಗಳನ್ನು ಕೇಳಿ ರಾಕ್ಷಸನು ಸಿಟ್ಟುಬೆಂಕಿಯಾಗಿ ಆ ಯವನಪತಿ ಯನ್ನು ಕೆಕ್ಕರಿಸಿ ನೋಡಹತ್ತಿದನು. ಸಂತಾಪದಿಂದ ಮಾತಾಡಲಾರದಾಗಿದ್ದ ಆ ಮಂತ್ರಿಯು ವಿವೇಕದಿಂದ ಸಂತಾಪವನ್ನು ನುಂಗಿಕೊಂಡು ನುಡಿದನೇನಂದರೆ – ಅಸತ್ಯವು! ಅಸತ್ಯವು! ಪಾರ್ವತೇಶ್ವರಾ, ಇಂಥ ಪತ್ರಗಳನ್ನು ನಾನು ನಿನಗೆ ಬರದೇ ಇಲ್ಲ. ಯಾರೋ ನಿನ್ನನ್ನು ಮೋಸಗೊಳಿಸಿದ್ದಾರೆ; ಆದರೆ ಈಗ ಹೀಗೆ ಅಂದರೆ ನಾನು ದೋಷಮುಕ್ತನಾಗುವೆನೆ? ಇವು ನನ್ನ ಮುದ್ರೆಯ ಪತ್ರಗಳಿರುವದರಿಂದ ನಾನು ಅಪರಾಧಿಯಾಗಿರುತ್ತೇನೆ. ನಿನ್ನೊಡನೆ ನನ್ನ ಅಪರಾಧದ ವಿಚಾರವಾದರೂ ಆಗತಕ್ಕದ್ದು. ಕುಮಾರಾ, ಚಂದ್ರಗುಪ್ತಾ, ಇಗೋ, ನಾನು ರಾಜಘಾತಕ್ಕೆ ಎಳಸಿದ ಮಹಾಪರಾಧಿಯಿದ್ದೇನೆ, ಪ್ರಸಿದ್ಧವಾಗಿ ನನ್ನ ಅಪರಾಧದ ವಿಚಾರವನ್ನು ಮಾಡಿ ತಕ್ಕ ಶಿಕ್ಷೆಯನ್ನು ವಿಧಿಸು, ಎಂದು ಹೇಳಿ ಆತನು ನ್ಯಾಯಾಸನದಿಂದ ಕೆಳಗಿಳಿದು, ಪರ್ವತೇಶ್ವರನು ನಿಂತಿದ್ದ ಸ್ಥಳದಿಂದಾಚೆಯ ಕಡೆಗೆ ಹೋಗಿ ನಿಂತುಕೊಂಡನು. ರಾಕ್ಷಸನ ಈ

ವಿಚಿತ್ರವಾದ ಧೈರ್ಯವನ್ನು ನೋಡಿ ಚಂದ್ರಗುಪ್ತನೂ, ಭಾಗುರಾಯಣನೂ ಬೆರಗಾದರು. ಪರ್ವತೇಶ್ವರನು ತನ್ನ ಮೇಲೆ ಅಪವಾದ ಹೊರಿಸಿದಕೂಡಲೆ ರಾಕ್ಷಸನು ಅಂಜಿ—''ನನ್ನನ್ನು ಈ ಸಂಕಟದಿಂದ ಮುಕ್ತಮಾಡಿರಿ; ಪರ್ವತೇಶ್ವರನು ಹೇಳುವದೆಲ್ಲ ಸುಳ್ಳು ಇರುತ್ತದೆ'' ಎಂದು ಹೇಳಿಕೊಂಡಾನು, ಇಲ್ಲವೆ, ವಿಚಾರಗೆಟ್ಟು ಬಾಯಿಗೆ ಬಂದಹಾಗೆ ಮಾತಾಡಿಯಾನು, ಎಂದು ಅವರು ತಿಳಿದಿದ್ದರು; ಆದರೆ ರಾಕ್ಷಸನು ಮೂರ್ತಿಗೊಂಡ ಧೈರ್ಯದಂತೆ ನ್ಯಾಯಾಸನದ ಮುಂದೆ ನಿಂತು —''ನನ್ನನ್ನು ನ್ಯಾಯಾಸನದ ಮುಂದೆ ನಿಲ್ಲಿಸಿ, ಅಪರಾಧವನ್ನು ವಿಚಾರಿಸಿರಿ'' ಎಂದು ನುಡಿದದ್ದನ್ನು ಕೇಳಿ, ಯಾರಿಗೆ ಆಶ್ಚರ್ಯವಾಗಲಿಕ್ಕಿಲ್ಲ?

ರಾಕ್ಷಸನ ಅಪರಾಧದ ವಿಚಾರವನ್ನು ಪ್ರಸಿದ್ಧರೀತಿಯಿಂದ ಮಾಡಿದರೆ, ಆತನು ನಿರಪರಾಧಿಯೆಂದು ನಿರ್ಣಯಿಸಲ್ಪಡುವನೆಂದು ಚಾಣಕ್ಯನು ತಿಳಿದಿದ್ದನು. ತನ್ನ ಅಲ್ಪವಾದ್ದೊಂದು ಯುಕ್ತಿಗೆ ರಾಕ್ಷಸನು ಸಿಗುವನೋ ಹೇಗೆಂದು ನೋಡುವದಕ್ಕಾಗಿ ಆತನು ಈ ನ್ಯಾಯವಿಚಾರಣೆಯ ನಾಟಕವನ್ನು ಹೂಡಿದ್ದನು. ರಾಕ್ಷಸನಂಥ ಯೋಗ್ಯತೆಯ ಮನುಷ್ಯನನ್ನು ಒಲಿಸಿಕೊಳ್ಳಲಿಕ್ಕೆ ಇಂಥ ಕ್ಷುದ್ರವಾದ ಉಪಾಯವು ಸಾಗದೆಂದು ತಿಳಿದು ಆತನು ಬೇರೊಂದು ಉಪಾಯವನ್ನು ಯೋಚಿಸಿಯೇ ಇಟ್ಟಿದ್ದನು; ಆದರೆ ರಾಕ್ಷಸನ ಒಲವು ಆತನಿಗೆ ತಿಳಿಯಬೇಕಾಗಿತ್ತು, ಅದಕ್ಕಾಗಿ ಹ್ಯಾಗೆ ಮಾಡಬೇಕೆಂಬದನ್ನು ಚಂದ್ರಗುಪ್ತನಿಗೂ, ಭಾಗುರಾಯಣನಿಗೂ ಮೊದಲೇ ಆತನು ಕಲಿಸಿ ಇಟ್ಟಿದ್ದನು. ಅದರಂತೆ ಚಂದ್ರಗುಪ್ತನು ಈ ಪ್ರಸಂಗದಲ್ಲಿ ರಾಕ್ಷಸನನ್ನು ಕುರಿತು ನುಡಿದನೇನೆಂದರೆ —''ಅಮಾತ್ಯರಾಕ್ಷಸಾ, ಪರ್ವತೇಶ್ವರನು ಏನು ಬೊಗಳುತ್ತಾನೆಂಬದನ್ನು ನಾನೂ ಕೇಳಿದ್ದೇನೆ, ನೀವು ಕೇಳಿರುತ್ತೀರಿ; ಆದರೆ ತಮ್ಮಂಥ ಸ್ವಾಮಿನಿಷ್ಠ ನಂದವಂಶಪಕ್ಷಪಾತಿ ಪುರುಷಶ್ರೇಷ್ಠರು ಇಂಥ ಅನುಚಿತಕಾರ್ಯಕ್ಕೆ ಕೈ ಹಾಕುವದು ನಮಗೆ ಎಷ್ಟುಮಾತ್ರವೂ ಶಕ್ಯವಾಗಿ ತೋರುವದಿಲ್ಲ; ಆದ್ದರಿಂದ ಆತನು ಏನು ಮಾತಾಡಿದರೂ ತಾವು ವಿಷಾದಪಡಬಾರದು; ಮತ್ತು ಆತನ ಮಾತುಗಳನ್ನು ನಾವು ನಿಜವೆಂದು ತಿಳಿಯುತ್ತೇವೆಂದು ತಾವು ಸರ್ವಥಾ ಭಾವಿಸಬಾರದು. ಪರ್ವತೇಶ್ವರನು ಹೇಳಿ ಕೇಳಿ ಮಗಧರಾಜ್ಯವನ್ನು ನುಂಗಿ ನೀರು ಹಿಡಿಯಲಿಕ್ಕೆ ನಿಂತವನು! ಅಂಥವನ ಪಕ್ಷವನ್ನು ತಾವು ವಹಿಸುವರೆಂದು ನಾವು ಜಾಗ್ರದಾವಸ್ಥೆಯಲ್ಲಿಯಂತು ಇರಲಿ, ಸ್ವಪ್ನದಲ್ಲಿಕೂಡ ಎಣಿಸಲಾರೆವು.

ಚಂದ್ರಗುಪ್ತನ ಈ ಮಾತುಗಳನ್ನು ಕೇಳಿ ರಾಕ್ಷಸನು–ಕುಮಾರಾ, ನಿನ್ನ ಮನಸ್ಸಿನಲ್ಲಿ ಏನೇ ಇರಲಿ, ಹೊರಗಾದರೂ ನನ್ನ ವಿಷಯವಾಗಿ ನೀನು ಉದಾತ್ತಭಾವವನ್ನು ವಹಿಸಿರುತ್ತೀ, ಇದೊಂದು ದೊಡ್ಡ ಮಾತೇಸರಿ; ಆದರೆ ನಿಮ್ಮಂಥವರ ಮನಸ್ಸಿನ ಶುದ್ಧತೆಯಿಂದಾಗುವ ಪ್ರಯೋಜನವೇನು? ನನ್ನ ಮುದ್ರೆಯ ಪತ್ರಗಳು ಈತನ ಬಳಿಯಲ್ಲಿ ಸಿಕ್ಕವೆಂಬವಿಷ್ಟೇ ಸಂಗತಿಯು ಲೋಕಾಪವಾದಕ್ಕೆ ಸಾಕಾಗಿರುವದು. ಆ ಲೋಕಾಪವಾದವು ಪ್ರಸಿದ್ಧ ರೀತಿಯಿಂದ ಅಳಿಸಿ ಹೋಗಲಿಕ್ಕೆಬೇಕು. ಅದನ್ನು ನ್ಯಾಯಾಸ್ಥಾನದ ಮುಂದೆ ಪ್ರಸಿದ್ಧವಾಗಿ ವಿಚಾರಿಸಿ ನಿಶ್ಶೇಷವಾಗಿ ಅಳಿಸಿ ಹೋಗುವಂತೆ ಮಾಡಿದರೆ ಮಾತ್ರ ನನ್ನ ಮೇಲೆ ನಿಮ್ಮ ವಿಶ್ವಾಸವಿರುತ್ತದೆಂದು ತಿಳಿಯುತ್ತೇನೆ, ಅನ್ನಲು, ಭಾಗುರಾಯಣನು ನಡುವೆ ಬಾಯಿಹಾಕಿ–ಅಮಾತ್ಯಾ, ಈ

ಮಾತಿನ ವಿಚಾರಣೆಯನ್ನು ಪ್ರಸಿದ್ಧ ರೀತಿಯಿಂದ ಮಾಡಿದರೆ ಕೆಲಸವು ಮೈಮೇಲೆ ಬರಬಹುದು; ಆದ್ದರಿಂದ ಈ ಚಮತ್ಕಾರದ ಪ್ರಕರಣವನ್ನು ಹಾಗೇ ಗಡಪ್ಪುಮಾಡಿ, ಪರ್ವತೇಶ್ವರನಿಂದ ಕಪ್ಪವನ್ನು ತಕ್ಕೊಂಡು ಅವನನ್ನು ಅವನ ರಾಜ್ಯಕ್ಕೆ ಕಳಿಸೋಣ; ಮತ್ತು ಚಂದ್ರಗುಪ್ತನನ್ನು ಮಗಧದ ಸಿಂಹಾಸನದ ಮೇಲೆ ಕುಳ್ಳಿರಿಸಿ ನಾವು ಮೊದಲಿನಂತೆ ರಾಜ್ಯಕಾರಭಾರವನ್ನು ಸಾಗಿಸೋಣ, ನೀನು ಮಂತ್ರಿಯು, ನಾನು ಸೇನಾಪತಿಯು........ ಎಂದು ನುಡಿಯುತ್ತಿರಲು ರಾಕ್ಷಸನು ಗದ್ದರಿಸಿ ನುಡಿದನೇನಂದರೆ – ಛೇ. ಛೇ. ಛೇ. ಛೇ. ಭಾಗುರಾಯಣಾ, ಈ ನಂದವಂಶದ ಪಕ್ಷ ಪಾತಿಯಾದ ರಾಕ್ಷಸನ ಮುಂದೆ ಇಂಥ ಅಭದ್ರ ಮಾತುಗಳನ್ನು ಆಡಬೇಡ. ನಂದರನ್ನು ಸಂಹರಿಸಿ, ಅವರ ಸಿಂಹಾಸನವನ್ನು ಸೆಳಕೊಂಡಿದ್ದ ವೃಷಲನ ಸಾಚಿವ್ಯವನ್ನು ಮಾಡೆಂದು ನನಗೆ ಹೇಳುವ ನಿನ್ನ ನಾಲಿಗೆಯು ನೂರುಹೋಳಾಗಿ ಯಾಕೆ ಸೀಳಿ ಹೋಗ ಲೊಲ್ಲದು! ನೀಚರಿರಾ, ನಿಮ್ಮ ಕಪಟನಾಟಕವೆಲ್ಲ ನನಗೆ ತಿಳಿದಿರುವ ದಿಲ್ಲೇನು? ಹಾಯ್! ಹಾಯ್! ಮಾಡುವದೇನು? ಅದು ಬಹಳ ತಡೆದು ಗೊತ್ತಾಯಿತು. ಅಂತೇ ನಿಮಗೆ ಹೀಗೆ ಮಾತಾಡಲಿಕ್ಕೆ ಆಸ್ಪದವಾಗಿರುತ್ತದೆ.

ರಾಕ್ಷಸನ ನಿಶ್ಚಯವು

ಈ ಮೇರೆಗೆ ಸಂಭಾಷಣವು ನಡೆದಿರಲು, ಒಬ್ಬ ದೂತನು ಬಂದು, ಭಾಗುರಾಯಣನ ಕಿವಿಯಲ್ಲಿ ಏನೋ ಗುಣುಗುಟ್ಟಿದನು. ಆಗ ಭಾಗುರಾಯಣನು, ಒಮ್ಮೆಲೆ ಆ ದೂತನಿಗೆ— ''ಏನಂದೀ? ರಾಜಗೃಹದ ಮುಖ್ಯ ಮಂಟಪದ ಬುಡದಲ್ಲಿ ತಗ್ಗು ತೋಡುವದಕ್ಕಾಗಿ ತನ್ನ ಮನೆಯೊಳಗಿಂದ ಹಾದಿಯನ್ನು ಮಾಡಗೊಟ್ಟಿದ್ದ ಮನುಷ್ಯನು ಸಿಕ್ಕಿರುವನೇ? ರಾಕ್ಷಸನ ಪರಮ ಮಿತ್ರನಾದ ಚಂದನದಾಸನು ಈ ರಾಜದ್ರೋಹದ ಕೆಲಸವನ್ನು ಮಾಡಿರುವನೆಂದು ಹೇಳುವೆಯಲ್ಲ! ಇದು ಅಸಂಭವವು. ಈ ಮಾತು ಎಂದಿಗೂ ಸತ್ಯವಾಗಲಾರದು. ಚಂದನ ದಾಸನು ರಾಜದ್ರೋಹಕ್ಕೆ ಸರ್ವಥಾ ಮನಸ್ಸು ಮಾಡತಕ್ಕವನಲ್ಲ, ಅಹಿಂಸಾಧರ್ಮದ ಆ ಸಜ್ಜನನು ರಾಜಘಾತದ ಕೆಲಸಕ್ಕೆ ಕೈಹಾಕಬಹುದೇ? ಅನ್ನಲು, ದೂತನು–ಸ್ವಾಮಿ, ಚಂದನದಾಸನೇ, ತನ್ನ ಮುಖದಿಂದ ಒಡಂಬಟ್ಟಿರುತ್ತಾನೆ, ಇದರಲ್ಲಿ ಅಸತ್ಯವಿಲ್ಲ; ಅಮಾತ್ಯನು ಪತ್ರ ಬರೆದದ್ದರಿಂದ ಮಿತ್ರನ ವಚನವನ್ನು ಮೀರಲಾರದೆ, ನಾನು ಈ ರಾಜಘಾತದ ಕಾರ್ಯಕ್ಕೆ ಸಹಾಯಮಾಡಿದ್ದು ನಿಜವೆಂದು ಆತನು ಹೇಳಿದನು, ಎಂದು ಉತ್ತರ ಕೊಟ್ಟನು. ಈ ಪ್ರಶ್ನೋತ್ತರಗಳು ರಾಕ್ಷಸನ ಎದುರಿಗೆ ಆತನಿಗೆ ಸ್ಪಷ್ಟವಾಗಿ ಕೇಳುವಂತೆ ಆದವೆಂದು ಹೇಳುವ ಕಾರಣವಿಲ್ಲ, ಅದನ್ನು ಕೇಳಿ ರಾಕ್ಷಸನು ಸಂತಾಪಗೊಂಡನು. ತನ್ನ ಪರಮ ವಿಶ್ವಾಸಕ್ಕೆ ಪಾತ್ರನಾದ ಮಿತ್ರಚಂದನದಾಸನು ಇಂಥ ರಾಜಘಾತದ ಕೆಲಸಕ್ಕೆ ಎಂದಿಗೂ ಸಹಾಯಮಾಡಲಾರನೆಂದು ಆ ಸ್ವಾಮಿನಿಷ್ಠ ಅಮಾತ್ಯನು ನಂಬಿದ್ದನು; ಆದರೆ ಈಗಿನ ಪ್ರಸಂಗದಲ್ಲಿ ಯಾರ ನಂಬಿಗೆಯನ್ನೂ ಹಿಡಿಯುವಂತೆ

ಇಲ್ಲೆಂಬದು ಆತನ ಮನಸ್ಸಿಗೆ ಹೊಳೆಯಲು, ಆತನು ಚಿಂತಾಕ್ರಾಂತನಾಗಿ ''ಈ ದುಷ್ಟ ಚಾಣಕ್ಯನ ಬಲೆಗೆ ಚಂದನದಾಸನೂ ಸಿಕ್ಕಿದ್ದರೆ, ಜಗತ್ತೇ ಆತನ ಬಲೆಗೆ ಸಿಕ್ಕಂತಾಗಿ, ನಂದರ ವಿನಾಶಕಾಲವು ಒದಗಿತೆ''ಂದು ತಿಳಿದು, ಅಮಾತ್ಯನು ಭಾಗುರಾಯಣನನ್ನು ಕಣ್ಣೆತ್ತಿ ಸಹ ನೋಡದೆ ಸುಮ್ಮನೆ ಕುಳಿತುಕೊಂಡನು. ಇತ್ತ ಭಾಗುರಾಯಣನು ದೂತನೊಡನೆ ಸಂಭಾಷಣ ವನ್ನು ನಡಿಸಿಯೇ ಇದ್ದನು. ಪರ್ವತರಾಜನ ನ್ಯಾಯವಿಚಾರಣೆಯು ಅಲ್ಲಿಗೇ ನಿಂತಿತು. ಚಂದ್ರಗುಪ್ತನ ಅಪ್ಪಣೆಯಂತೆ ಆ ಯವನ ಭೂಪತಿಯನ್ನು ಅಲ್ಲಿಂದ ಕರೆದೊಯ್ದರು. ಆಮೇಲೆ ಭಾಗುರಾಯಣನು ರಾಕ್ಷಸನಿಗೆ–ಅಮಾತ್ಯರಾಜರೇ, ಸದ್ಯಕ್ಕೆ ತಮ್ಮ ಚಿತ್ತವು ಕ್ಷೋಭಿಸಿರುವದು; ಆದ್ದರಿಂದ ಈಗ ನಾನು ತಮಗೆ ಹೆಚ್ಚಿಗೆಯೇನು ಹೇಳುವದಿಲ್ಲ. ಇದ್ದ ಸಂಗತಿಯನ್ನೆಲ್ಲ ತಮ್ಮೆದುರಿಗೆ ಬಿಚ್ಚಿ ಇಟ್ಟಂತಾಗಿರುವದು. ಇನ್ನು ತಾವು ಬೇಕಾದ ಕಡೆಗೆ ಹೋಗಬೇಕು. ನಡೆದುಹೋಗಿರುವ ಸಂಗತಿಯ ಬಗ್ಗೆ ವಿಚಾರಮಾಡಿ, ನನ್ನ ವಿನಂತಿಯಲ್ಲಿ ವಿಕಲ್ಪವನ್ನೆಣಿಸದೆ, ಚಂದ್ರಗುಪ್ತನ ಮಂತ್ರಿಪದವನ್ನು ಸ್ವೀಕರಿಸಿದರೆ ಅನ್ಯಾಯವಾಗದು; ಆದರೆ ತಮ್ಮ ವಿಚಾರಕ್ಕೆ ಒಪ್ಪಿಗೆಮಾತ್ರ ಆಗಬೇಕು.

ರಾಕ್ಷಸನು ಭಾಗುರಾಯಣನಿಗೆ ಏನೂ ಉತ್ತರ ಕೊಡದೆ, ಆತನನ್ನು ಒಮ್ಮೆ ತಿರಸ್ಕಾರ ದಿಂದ ನೋಡಿ ನ್ಯಾಯಗೃಹದಿಂದ ಹೊರಹೊರಟನು. ಈ ಅದಮನ ಸಂಗಡ ಮಾತಾಡುವದು ಕೂಡ ಪಾಪವೆಂದು ಆತನು ನಿಶ್ಚಯಿಸಿದನು. ಇನ್ನು ತಾನು ಎಲ್ಲಿಗೆ ಹೋಗಬೇಕೆಂಬದೇ ಆತನಿಗೆ ತೋಚದಾಯಿತು. ಆತನು ತನ್ನ ಪ್ರತೀಹಾರಿಯ ಮಿತ್ರನ ಮನೆಯಲ್ಲಿದ್ದಾಗ ತನ್ನ ಹೆಂಡಿರು– ಮಕ್ಕಳನ್ನು ಕರಕೊಂಡು ಬರಬೇಕೆಂದು ಚಂದನದಾಸನಿಗೆ ಹೇಳಿ ಕಳಿಸಿದನು. ಅದಕ್ಕೆ ಚಂದನ ದಾಸನು ಯಾಕಾಗಲೊಲ್ಲದೆಂದು ಹೇಳಿಕಳಿಸಿದನಲ್ಲದೆ, ತಾನೇ ಬಂದು ರಾಕ್ಷಸನನ್ನು ಕಾಣಲಿಲ್ಲ. ಇದರಿಂದಂತು ರಾಕ್ಷಸನ ಸಂಶಯವನ್ನು ಮತ್ತಿಷ್ಟು ಹೆಚ್ಚಿತು. ರಾಜಘಾತಕ್ಕೆ ಸಹಾಯ ಮಾಡಿದ್ದರಿಂದಲೇ ಚಂದನದಾಸನು ತನ್ನನ್ನು ಕಾಣಲಿಕ್ಕೆ ಹಿಂದೆ–ಮುಂದೆ ನೋಡುತ್ತಾನೆಂದು ಆತನು ತರ್ಕಿಸಿದನು. ರಾಜದ್ರೋಹಿಯಾದ ಚಂದನದಾಸನ ದರ್ಶನಕ್ಕೂ ಆ ಸ್ವಾಮಿನಿಷ್ಠನು ಹೇಸತೊಡಗಿದನು. ಆತನ ಮನೆಯಲ್ಲಿದ್ದ ತನ್ನ ಹೆಂಡಿರು–ಮಕ್ಕಳನ್ನು ಕರೆಸಿಕೊಂಡು ಅವರೊಡನೆ ಇನ್ನು ಪಾಟಲಿಪುತ್ರದಿಂದ ಹೊರಬಿದ್ದು, ಯಾವನೊಬ್ಬ ಬಲಾಢ್ಯ ರಾಜನ ಆಶ್ರಯವನ್ನು ಸಂಪಾದಿಸಬೇಕೆಂತಲೂ, ತಪೋವನದಲ್ಲಿ ಇನ್ನೂ ತಪಸ್ಸನ್ನಾಚರಿಸುತ್ತಿದ್ದ ಧನಾನಂದನ ತಂದೆಯಾದ ಸರ್ವಾರ್ಥಸಿದ್ಧಿಯನ್ನು ಕರೆತಂದು, ದೊಡ್ಡ ಸೈನ್ಯದೊಡನೆ ಪಾಟಲಿಪುತ್ರದ ಮೇಲೆ ದಂಡೆತ್ತಿಹೋಗಿ ಚಾಣಕ್ಯ–ಚಂದ್ರಗುಪ್ತ–ಭಾಗುರಾಯಣರೆಂಬ ತ್ರಿದೋಷಗಳನ್ನು ನಾಶಮಾಡಿ, ನಂದವಂಶವನ್ನು ಪುನಃ ಸ್ಥಾಪಿಸಬೇಕೆಂತಲೂ ಆ ಸ್ವಾಮಿನಿಷ್ಠನು ನಿರ್ಧರಿಸಿದನು. ಹೀಗೆ ಗಹನ ವಿಚಾರದಲ್ಲಿ ಮಗ್ನನಾಗಿದ್ದ ರಾಕ್ಷಸನು ಜನರಹಿತವಾದದ್ದೊಂದು ಸೀಳಹಾದಿಯಿಂದ ತನ್ನ ಪ್ರತೀಹಾರಿಯ ಮಿತ್ರನ ಮನೆಗೆ ಸಾಗಿದನು. ಆತನು ಮಾರ್ಗವನ್ನು ಕ್ರಮಿಸುತ್ತ– ಕ್ರಮಿಸುತ್ತ, ಪಾಟಲಿಪುತ್ರದ ನದಿಯ ದಂಡೆಯ ಒಂದು ನಿರ್ಜನವಾದ ಅರಣ್ಯವನ್ನು ಹೊಕ್ಕನು. ಅಲ್ಲಿ ಒಂದು ದೊಡ್ಡ ಆಲದ ಮರಕ್ಕೆ ಒಬ್ಬ ಮನುಷ್ಯನು ಉರಲು ಹಾಕಿಕೊಳ್ಳುತ್ತಿರುವದು ಅವನ

ಕಣ್ಣಿಗೆಬಿತ್ತು. ಆ ಆತ್ಮಘಾತಕಿಯು, ತನ್ನನ್ನು ಯಾರಾದರೂ ನೋಡಿಯಾರೆಂಬ ಭಯ ದಿಂದಲೋ ಅನ್ನುವಂತೆ ಸತ್ತುಮುತ್ತು ನೋಡುತ್ತಿದ್ದನು. ಅವನನ್ನು ನೋಡಿ ರಾಕ್ಷಸನಿಗೆ ದಯೆಯು ಉತ್ಪನ್ನವಾಯಿತು. ಆತ್ಮಘಾತಮಾಡಿಕೊಳ್ಳುವಂಥ ಪ್ರಸಂಗವೇನು ಈತನಿಗೆ ಬಂದಿರುವದೆಂಬದನ್ನು ವಿಚಾರಿಸಲಿಕ್ಕೆ ಆ ಉದಾರ ಮನಸ್ಸಿನ ಅಮಾತ್ಯನು ಉರುಲು ಹಾಕಿಕೊಳ್ಳುತ್ತಿರುವವನ ಬಳಿಗೆ ಹೋಗಿ–ಏನಯ್ಯಾ, ನೀನು ಯಾರು? ಆತ್ಮಘಾತದಂಥ ಮಹಾಪಾತಕಕ್ಕೆ ಯಾಕೆ ಗುರಿಯಾಗುತ್ತಿರುವೆ? ಎಂದು ಹೇಳಿದನು.

ಈ ಮೇರೆಗೆ ತನ್ನ ಮರಣಕ್ಕೆ ರಾಕ್ಷಸನು ಅಡ್ಡಾದದ್ದನ್ನು ನೋಡಿ, ಆ ಗೃಹಸ್ಥನು ರಾಕ್ಷಸನಿಗೆ–ಮಹಾರಾಯಾ, ನನ್ನ ವೃತ್ತಾಂತವನ್ನು ತಕ್ಕೊಂಡು ನೀನೇನು ಮಾಡುತ್ತೀ? ನನ್ನನ್ನು ಪ್ರಾಣಸಂಕಟದಿಂದ ಮುಕ್ತನಾಗಮಾಡಬೇಕೆಂದು ನೀನು ಇಚ್ಛಿಸುತ್ತಿದ್ದರೆ. ಆ ನಿನ್ನ ಇಚ್ಛೆಯು ಸಫಲವಾಗಲಾರದು. ಇಷ್ಟುಹೊತ್ತಿಗೆ ಪರಲೋಕಕ್ಕೆ ತೆರಳಿರಬಹುದಾದ ನನ್ನ ಮಿತ್ರನ ಸಲುವಾಗಿ ನಾನು ಪ್ರಾಣವನ್ನು ಕೊಡುತ್ತಿರುವೆನು. ಮಿತ್ರನನ್ನು ಕಳಿಸಿ ನಾನು ಕ್ಷಣವಾದರೂ ಜೀವಿಸ ಲಾರೆನು. ನನ್ನ ಪರಲೋಕಗಮನಕ್ಕೆ ಬೇಗನೇ ನೀನು ಅನುಕೂಲವಾಗಬೇಕೆಂದು ಯಾವತ್ತು ಸಂಗತಿಯನ್ನು ಬಿಚ್ಚಿ ಹೇಳುವೆನು ಕೇಳು. ಚಂದನದಾಸನೆಂಬುವನು ನನ್ನ ಪರಮಮಿತ್ರನು. ಆತನು ತನ್ನ ಮಿತ್ರನಾದ ಅಮಾತ್ಯರಾಕ್ಷಸನ ಅಪ್ಪಣೆಯನ್ನು ಮೀರಲಾರದೆ ಮಾಡಿದ ಕೆಲಸವೇ ಆತನ ಪ್ರಾಣನಾಶಕ್ಕೆ ಕಾರಣವಾಯಿತು. ಚಂದನದಾಸನು ತನ್ನ ಮನೆಯೊಳಗಿಂದ ರಾಜ ದ್ವಾರದ ಮುಖಮಂಟಪದವರೆಗೆ ಸುರಂಗವನ್ನು ತೋಡಿಸಿ ರಾಜಘಾತವನ್ನು ಮಾಡಿಸಿದ ನಂತೆ! ಅಮಾತ್ಯರಾಕ್ಷಸನು ಆ ಶುದ್ಧಾಂತಃಕರಣದ ಅಹಿಂಸಾಧರ್ಮದ ಚಂದನದಾಸನ ಮನೆಯಲ್ಲಿ ತನ್ನ ಹೆಂಡಿರು–ಮಕ್ಕಳನ್ನು ಗುಪ್ತವಾಗಿ ಇಟ್ಟು ತಾನು ಎಲ್ಲಿಯೋ ಹೋಗಿರುವನಂತೆ. ರಾಕ್ಷಸನ ಹೆಂಡಿರು–ಮಕ್ಕಳನ್ನು ಒಪ್ಪಿಸಿದರೆ, ಎಲ್ಲ ಅಪರಾಧಗಳನ್ನು ಕ್ಷಮಿಸುವೆವೆಂದು ಚಾಣಕ್ಯ–ಚಂದ್ರಗುಪ್ತ–ಭಾಗುರಾಯಣರು ಹೇಳಿದರೂ, ಮಿತ್ರನಿಗೆ ಕೇಡುಬಗೆಯಲಾರದೆ ಆ ಮಿತ್ರ ವತ್ಸಲನು ರಾಕ್ಷಸನ ಹೆಂಡಿರುಮಕ್ಕಳನ್ನು ಒಪ್ಪಿಸದಾದನು. ಇದಕ್ಕಾಗಿ ನನ್ನ ಪ್ರಿಯಮಿತ್ರನನ್ನು ರಾಜಾಜ್ಞೆಯಿಂದ ಶೂಲಕ್ಕೆ ಏರಿಸುವದಕ್ಕಾಗಿ ವಧಸ್ತಂಭದ ಕಡೆಗೆ ಒಯ್ಯುತ್ತಿರುವರು. ಇಷ್ಟು ಹೊತ್ತಿಗೆ ಶೂಲಕ್ಕೆ ಏರಿಸಿರುವರೋ ಏನೋ ಯಾರಿಗೆ ಗೊತ್ತು! ಮಹಾರಾಯಾ, ಇನ್ನು ನೀನು ನಿನ್ನ ಹಾದಿಯ ಹಿಡಿದು ಹೋಗು, ನಾನು ನನ್ನ ಮಿತ್ರನನ್ನು ಹಿಂಬಾಲಿಸುವೆನು. ಇಂಥ ಕಠಿಣ ಪ್ರಸಂಗದಲ್ಲಿ ರಾಕ್ಷಸನ ಹೆಂಡಿರು–ಮಕ್ಕಳ ಸುದ್ದಿಯು ನನಗೆ ಗೊತ್ತಾಗಿದ್ದರೆ, ಎಲ್ಲ ವೃತ್ತಾಂತವನ್ನು ಚಂದ್ರಗುಪ್ತ ಮಹಾರಾಜರ ಮುಂದೆ ಹೇಳಿ ಮಿತ್ರನನ್ನು ಉಳಿಸಿಕೊಳ್ಳುತ್ತಿದ್ದೆನು; ಆದರೆ, ರಾಕ್ಷಸನ ಮೇಲಿನ ಭಕ್ತಿಯಿಂದ ನನ್ನ ಪ್ರಿಯಮಿತ್ರನು, ಆತನ ಹೆಂಡಿರು–ಮಕ್ಕಳ ಸುದ್ದಿಯನ್ನು ನನ್ನ ಮುಂದೆಯೂ ಹೇಳಿರುವದಿಲ್ಲ. ಹಾ! ಮಿತ್ರಾ, ಚಂದನದಾಸಾ, ನಿನ್ನ ಮಿತ್ರವಾತ್ಸಲ್ಯಕ್ಕಾಗಿ ಕೊರಗುತ್ತ ಹತಭಾಗ್ಯನಾದ ಈ ಶಕಟದಾಸನು, ಇನ್ನೂ ಎಷ್ಟು ಹೊತ್ತು ಜೀವದಿಂದ ಇರಬೇಕು! ಎಲೈ ಗೃಹಸ್ಥನೇ, ಮಿತ್ರನನ್ನು ಪ್ರಾಣಸಂಕಟಕ್ಕೆ ಗುರಿಮಾಡಿ ರಾಕ್ಷಸನು ಎತ್ತ ಹೋಗಿರುವನೋ ಗೊತ್ತೇ ಇಲ್ಲ, ಇಂಥ ಮಿತ್ರಘಾತಕಿಯ ಮೇಲೆ ಯಾಕೆ ವಿಶ್ವಾಸವಿಡಬೇಕೋ ನಾನರಿಯೆ; ಆದರೆ ಚಂದ್ರನದಾಸನು ಅಂಥ ಮನುಷ್ಯನಲ್ಲ.

ಶಕಟದಾಸನ ಈ ಮರ್ಮಭೇದಕ ಮಾತುಗಳನ್ನು ಕೇಳಿ ರಾಕ್ಷಸನು ಬಹಳ ಅಸಮಾಧಾನ ಪಟ್ಟನು. ಕೆಲಹೊತ್ತು ಆತನು ಸುಮ್ಮನೆ ಇದ್ದು, ಶಕಟದಾಸನಿಗೆ–ಮಿತ್ರನೇ, ನೀನು ವ್ಯರ್ಥವಾಗಿ ಪ್ರಾಣವನ್ನು ತ್ಯಜಿಸಬೇಡ. ನನ್ನನ್ನು ವಧಾಸ್ಥಾನಕ್ಕೆ ಕರಕೊಂಡು ಹೋಗು, ನಿನ್ನ ಮಿತ್ರನನ್ನು ಬಿಡಿಸುತ್ತೇನೆ. ದೈವಹೀನನಾದ ಯಾವ ರಾಕ್ಷಸನ ಹೆಂಡಿರು–ಮಕ್ಕಳ ಸಲುವಾಗಿ ಚಂದನದಾಸನು ತನ್ನ ಪ್ರಾಣವನ್ನು ಕೊಡಲು ಸಿದ್ಧನಾಗಿರುವನೋ, ಆ ರಾಕ್ಷಸನು ನಾನೇ, ಎಂದು ಹೇಳಿದನು. ಅದನ್ನು ಕೇಳಿ ಶಕಟದಾಸನು ಆಶ್ಚರ್ಯವನ್ನಷ್ಟೇ ಅಲ್ಲ, ಅವಿಶ್ವಾಸವನ್ನೂ ವ್ಯಕ್ತಮಾಡಿದನು. ತಾನು ರಾಕ್ಷಸನೇ ಎಂದು ನಂಬಿಗೆಯನ್ನು ಮಾಡಿಕೊಡುವಾಗ ರಾಕ್ಷಸನಿಗೆ ಸಾಕುಬೇಕಾಯಿತು. ಆಗ ಶಕಟದಾಸನು ರಾಕ್ಷಸನನ್ನು ಗಂಗಾತೀರದ ಸ್ಮಶಾನಕ್ಕೆ ಕರೆದೊಯ್ದನು. ಅಲ್ಲಿ ಹೇಳಿದಂತೆ ಚಂದನದಾಸನು ನಿಜವಾಗಿಯೇ ಯಾವತ್ತು ವಧ್ಯಚಿನ್ನಗಳಿಂದ ಯುಕ್ತವಾಗಿ ನಿಲ್ಲಿಸಲ್ಪಟ್ಟಿದ್ದನು. ಆತನಿಗೆ ಕೆಂಪು ವಸ್ತ್ರವನ್ನು ಉಡಿಸಿದ್ದರು. ಕೆಂಪು ಹೂಗಳ ಮಾಲೆಗಳನ್ನು ಆತನ ಕೊರಳಲ್ಲಿ ಹಾಕಿದ್ದರು. ಮೈಗೆಲ್ಲ ಕುಂಕುಮಾದಿ ರಕ್ತವರ್ಣದ ಪದಾರ್ಥಗಳನ್ನು ಹಚ್ಚಿದ್ದರು. ಆತನ ಹೆಂಡತಿಯೂ, ಹತ್ತು ವರ್ಷದ ಒಬ್ಬ ಮಗನೂ ಅಲ್ಲಿಗೆ ಬಂದಿದ್ದರು. ಆತನ ಹೆಂಡತಿಯು ಪತಿಯೊಡನೆ ಸಹಗಮನ ಮಾಡಲು ಸಿದ್ಧಳಾಗಿ ನಿಂತಿದ್ದಳು. ಮಗನು ತಾಯಿಯನ್ನು ಅಪ್ಪಿಕೊಂಡು ನೀವು ಈವೊತ್ತು ಹೀಗೇಕೆ ಕಾಣುತ್ತೀರೆಂದು, ತಾಯಿ–ತಂದೆಗಳನ್ನು ದೀನವಾಣೆಯಿಂದ ಕೇಳುತ್ತಿದ್ದನು. ಅವನು ಏನು ಮಾಡಿದರೂ ಅಳುವದನ್ನು ಬಿಡಲೊಲ್ಲನು. ಇದನ್ನೆಲ್ಲ ನೋಡಿ ರಾಕ್ಷಸನ ಹೃದಯವು ಕಂಪಿಸಿತು. ಆತನು ಚಂದನದಾಸನ ಮಿತ್ರವಾತ್ಸಲ್ಯಕ್ಕೆ ಬೆರಗಾಗಿ, ಚಂಡಾಲರ ಸಂಗಡ ಏನೋ ಮಾತಾಡಹೋಗಲು, ಒಬ್ಬ ಚಾಂಡಾಲನು ಚಂದನದಾಸನನ್ನು ಕುರಿತು–ಶೆಟ್ಟರೇ, ನೀವು ಪ್ರಾಣವನ್ನು ವ್ಯರ್ಥವಾಗಿ ಯಾಕೆ ಕಳಕೊಳ್ಳುತ್ತೀರಿ? ಅಮಾತ್ಯರಾಕ್ಷಸನ ಹೆಂಡಿರು–ಮಕ್ಕಳು ಎಲ್ಲಿ ಇರುತ್ತಾರೆಂಬದನ್ನು ಹೇಳಿಬಿಡಿರಿ. ಚಂದ್ರಗುಪ್ತ ಮಹಾರಾಜರು ಬಹಳ ದಯಾಳುಗಳಾದ್ದರಿಂದ ಅವರ ಕೂದಲು ಕೊಂಕಗೊಡರು. ರಾಕ್ಷಸನನ್ನು ತಮ್ಮ ಪಕ್ಷಕ್ಕೆ ಒಲಿಸಿ ಕೊಳ್ಳುವದಕ್ಕಾಗಿ ರಾಕ್ಷಸನ ಪರಿವಾರವು ಅವರಿಗೆ ಬೇಕಾಗಿರುತ್ತದೆ, ಅನ್ನಲು ಚಂದನದಾಸನು–ಚಾಂಡಾಲರೇ, ರಾಕ್ಷಸನು ತನ್ನ ಹೆಂಡಿರು–ಮಕ್ಕಳನ್ನು ನನ್ನ ಬಳಿಯಲ್ಲಿ ನಂಬಿ ಇಟ್ಟಿರುತ್ತಾನೆ. ನಾನು ಜೀವದಿಂದ ಇರುವವರೆಗೆ ಅವರನ್ನು ಅನ್ಯರಿಗಾರಿಗೂ ಒಪ್ಪಿಸಲಾರೆನು. ಮಿತ್ರನಲ್ಲಿ ಇಷ್ಟು ನಿಷ್ಠೆಯು ಇಲ್ಲದ ಬಳಿಕ ನಾನು ಜೀವದಿಂದಿದ್ದು ಮಾಡುವದೇನು? ಬಿಸಿಲು ಬಂದತ್ತ ಕೊಡೆ ಹಿಡಿಯುವದಕ್ಕೆ ನನ್ನ ಮನಸ್ಸು ಸರ್ವಥಾ ಒಪ್ಪಲಾರದು.

ಇದನ್ನು ಕೇಳಿ ರಾಕ್ಷಸನು ಬಹು ವ್ಯಸನಪಟ್ಟು, ಚಾಂಡಾಲರಿಗೆ–ಎಲೈ ಚಾಂಡಾಲರು ಗಳಿರಾ, ಯಾವ ರಾಕ್ಷಸನ ಹೆಂಡಿರು–ಮಕ್ಕಳ ಸಲುವಾಗಿ ಸಜ್ಜನನಾದ ಈ ಶೆಟ್ಟಿಯನ್ನು ಶೂಲಕ್ಕೆ ಏರಿಸುತ್ತಿದ್ದಿರೋ, ಆ ರಾಕ್ಷಸನು ನಿಮ್ಮ ಮುಂದೆ ಬಂದು ನಿಂತಿರುತ್ತೇನೆ; ಬೇಗನೆ ಈ ಶೆಟ್ಟಿಯನ್ನು ಬಿಟ್ಟು, ಬೇಕಾದರೆ ನನ್ನನ್ನು ಶೂಲಕ್ಕೆ ಏರಿಸಿರಿ. ದುಷ್ಟರಾದ ಚಾಣಕ್ಯ ಚಂದ್ರಗುಪ್ತರ ಬಲೆಯಲ್ಲಿ ಜಗತ್ತೇ ಸಿಕ್ಕಂತೆ ಈ ಶೆಟ್ಟಿಯೂ ಸಿಕ್ಕಿರುವನು. ಈತನಲ್ಲಿ ಎಳ್ಳಷ್ಟು ಅಪರಾಧವಿಲ್ಲ, ಎಂದನು. ಇದನ್ನು ಕೇಳಿ ಚಾಂಡಾಲರು ರಾಕ್ಷಸನನ್ನು ಆಶ್ಚರ್ಯದಿಂದ ನೋಡತೊಡಗಿದರು. ಚಂದನ

ದಾಸನ ಹೆಂಡತಿಯು ಚಕಿತಳಾಗಿ ಆಶಾಪೂರ್ಣವಾದ ದೃಷ್ಟಿಯಿಂದ ರಾಕ್ಷಸನನ್ನು ನೋಡ ಹತ್ತಿದಳು. ಈತನು ಇಲ್ಲಿಗೆ ಯಾಕೆ ಬಂದನೆಂದು ಅಸಮಾಧಾನದಿಂದ ಚಂದನದಾಸನು ರಾಕ್ಷಸನನ್ನು ನೋಡತೊಡಗಿದನು. ಆ ಆಶ್ಚರ್ಯದ ಭರವು ತಗ್ಗಿದ ಮೇಲೆ ಚಾಂಡಾಲರು ರಾಕ್ಷಸನಿಗೆ–ಆರ್ಯಶ್ರೇಷ್ಠಾ, ಈ ಶೆಟ್ಟಿಯು ನಿಮ್ಮ ಹೆಂಡಿರು–ಮಕ್ಕಳನ್ನು ಒಪ್ಪಿಸುತ್ತೇನೆಂದು ಹೇಳಿ, ಅವರು ಇದ್ದ ಸ್ಥಳವನ್ನು ತೋರಿಸಿದರೆ ಮಾತ್ರ ಈತನನ್ನು ಬಿಡಿರೆಂದು, ಚಂದ್ರಗುಪ್ತ ಮಹಾರಾಜರು ಅಪ್ಪಣೆ ಮಾಡಿದ್ದಾರೆ. ಆದ್ದರಿಂದ ಶೆಟ್ಟಿಯು ಹಾಗೆ ಮಾಡುವವರಿಗೆ ಆತನನ್ನು ಬಿಡುವಹಾಗಿಲ್ಲ. ಅಮಾತ್ಯರಾಕ್ಷಸರು ಬಂದು ನಮ್ಮ ಅಧೀನವಾದರೆ, ಈತನನ್ನು ಬಿಡಿರೆಂದು ಮಹಾರಾಜರು ಆಜ್ಞಾಪಿಸಿರುವದಿಲ್ಲ, ನಾವಾದರೂ ಏನುಮಾಡೋಣ? ಏ ಶೆಟ್ಟೀ, ನಿನಗೆ ಜೀವವು ಬೇಕಾಗಿದ್ದರೆ, ಬೇಗನೆ ಅಮಾತ್ಯರ ಹೆಂಡಿರು–ಮಕ್ಕಳನ್ನು ತೋರಿಸು, ಎಂದರು. ಚಂದನದಾಸನು ಚಾಂಡಾಲರ ಮಾತಿಗೆ ಕಿವಿಗೊಡದೆ ರಾಕ್ಷಸನಿಗೆ–ಅಮಾತ್ಯರಾಜನೇ, ನನ್ನಿಂದ ಮಹಾಪರಾಧವಾಗಿದೆ. ನೀವು ನನಗೆ ಪರಮ ಮಿತ್ರರಾದದ್ದರಿಂದ ನಿಮ್ಮ ಮಾತನ್ನು ಕೇಳುವದು ಅವಶ್ಯವೆಂದು ತಿಳಿದು, ನಿಮ್ಮ ಪತ್ರವನ್ನು ನಂಬಿ, ನನ್ನ ಮನೆಯೊಳಗಿಂದ ಸುರಂಗವನ್ನು ತೋಡಗೊಟ್ಟು, ರಾಜಘಾತಕ್ಕೆ ಸಹಾಯ ಮಾಡಿದೆನು. ಈ ಅಪರಾಧಕ್ಕಾಗಿ ನನಗೆ ಈಗ ವಿಧಿಸಲ್ಪಟ್ಟಿರುವ ದೇಹಾಂತ ಪ್ರಾಯಶ್ಚಿತ್ತವು ಬಹು ಯೋಗ್ಯವಾಗಿರುತ್ತದೆ. ನಾನು ಮನೆಮುಟ್ಟ ಬಂದು ನಿಜವಾದ ಸಂಗತಿಯನ್ನು ನಿಮ್ಮಿಂದ ತಿಳಕೊಳ್ಳುವದು ಅವಶ್ಯವಾಗಿತ್ತು; ಆದರೆ ಮೂಢನಾದ ನನಗೆ ಅಷ್ಟು ತಿಳಿಯಲಿಲ್ಲ, ನನ್ನನ್ನು ಉಳಸಿಕೊಳ್ಳುವ ಗೊಡವಿಗೆ ನೀವು ಹೋಗಬಾರದು. ಇತ್ತ ಬರ್ರಿ, ನಿಮ್ಮ ಹೆಂಡಿರು–ಮಕ್ಕಳು ಎಲ್ಲಿ ಇರುತ್ತಾರೆಂಬದನ್ನು ನಿಮ್ಮ ಕಿವಿಯಲ್ಲಿ ಹೇಳುತ್ತೇನೆ. ಈ ಪಟ್ಟಣದಲ್ಲಿ ಕ್ಷಣಮಾತ್ರವಾದರೂ ನಿಲ್ಲದೆ, ಹೆಂಡಿರು–ಮಕ್ಕಳೊಡನೆ ನೀವು ಸರಿದೋರಿದತ್ತ ಹೊರಟುಹೋಗಿರಿ. ಇಲ್ಲದಿದ್ದರೆ ಈ ದುಷ್ಟರು ನಿಮಗೂ, ನಿಮ್ಮ ಕುಟುಂಬದವರಿಗೂ ನಿಶ್ಚಯವಾಗಿ ಕೇಡು ಬಗೆಯುವರು. ನನ್ನ ಅಂಧತನಕ್ಕಾಗಿ ನಾನು ಮರಣಶಿಕ್ಷೆಯನ್ನು ಅನುಭವಿಸುವೆನು, ಎಂದನು. ಇದನ್ನು ಕೇಳಿ ರಾಕ್ಷಸನಿಗೆ ಬಹಳ ಆಶ್ಚರ್ಯವಾಯಿತು. ಆತನು ಚಂದನದಾಸನಿಗೆ–ಮಿತ್ರಾ, ನಾನೇ ಪ್ರತ್ಯಕ್ಷ ಸಿಕ್ಕಿರಲು, ಚಂದ್ರಗುಪ್ತನು ನನಗೆ ಯಾವಬಗೆಯ ಕೇಡನ್ನು ಬಗೆದಿರುವದಿಲ್ಲ; ಅಂದಬಳಿಕ ನನ್ನ ಹೆಂಡಿರು–ಮಕ್ಕಳಿಗೆ ಯಾಕೆ ಕೇಡು ಬಗೆದಾನು? ನನ್ನನ್ನು ತಮ್ಮ ಪಕ್ಷಕ್ಕೆ ಒಲಿಸಿಕೊಳ್ಳುವದಕ್ಕಾಗಿ ಚಾಣಕ್ಯಾದಿಗಳ ಪ್ರಯತ್ನವು ನಡೆದದೆ. ನಿನ್ನ ಪ್ರಾಣರಕ್ಷಣೆಗಾಗಿ ನನ್ನ ಪ್ರಾಣವನ್ನೂ, ನನ್ನ ಹೆಂಡಿರು–ಮಕ್ಕಳ ಪ್ರಾಣಗಳನ್ನೂ ಕೊಡಲಿಕ್ಕೆ ನಾನು ಸಿದ್ಧನಿರುತ್ತೇನೆ; ಅಂದ ಬಳಿಕ ಚಂದ್ರ ಗುಪ್ತನು ನಿನ್ನನ್ನು ಶೂಲಕ್ಕೆ ಯಾಕೆ ಏರಿಸುವನು? ಎಂದು ನುಡಿದು, ಚಾಂಡಾಲರಿಗೆ–ಎಲೈ ಚಾಂಡಾಲರೇ, ನನ್ನ ಹೆಂಡಿರು–ಮಕ್ಕಳು ಎಲ್ಲಿ ಇರುತ್ತಾರೆಂಬದನ್ನು ಹೇಳುತ್ತೇನೆ, ಈ ಶೆಟ್ಟಿಯನ್ನು ಬಿಡಿರಿ, ಅನ್ನಲು ಚಾಂಡಾಲರು–ಅಮಾತ್ಯರಾಜರೇ, ಪ್ರಭುಗಳ ಅಪ್ಪಣೆಯು ಹಾಗೆ ಆಗಿಲ್ಲ, ರಾಜಾಜ್ಞೆಯನ್ನು ಉಲ್ಲಂಘಿಸುವದು ನಮ್ಮಿಂದಾಗದು. ಈಗ ಬಿಡೆಂದು ರಾಜಾಜ್ಞೆಯಾದರೆ ಬಿಡುವೆವು ಅಂದರು. ಅದಕ್ಕೆ ರಾಕ್ಷಸನು–ಚಂದ್ರಗುಪ್ತನು ಎಲ್ಲಿ ಇದ್ದಾನೆ? ಈಗ ನಾನು ಆತನಿಗೆ ಹೇಳಿಕೊಂಡು ಅಪ್ಪಣೆಯನ್ನು ಕೊಡಿಸುವೆನು, ಆಗಾದರೂ ಬಿಡುವಿರಷ್ಟೇ? ಅನ್ನಲು

ಚಾಂಡಾಲರು–ಬಿಡದೇನು ಮಾಡುವೆವು ಅಮಾತ್ಯರಾಜರೇ, ಎಂದು ಉತ್ತರಕೊಟ್ಟರು. ಅದಕ್ಕೆ ರಾಕ್ಷಸನು – ಚಾಂಡಾಲರೇ, ಈಗೆಲ್ಲಿಯ ಅಮಾತ್ಯರಾಜನು ನಾನು! ಕಣ್ಣುಮುಚ್ಚಿಕೊಂಡು ನಡೆದದ್ದರಿಂದ ನನ್ನ ಗತಿಯು ನಿಮಗಿಂತಲೂ ಕಡೆಯಾಗಿದೆ. ಹಾ! ಕೈಲಾಸನಾಥನೇ, ಎಂಥ ಪ್ರಸಂಗವನ್ನು ತಂದೆ!

ರಾಕ್ಷಸನು ಈಮೇರೆಗೆ ಪಶ್ಚಾತ್ತಾಪಪಡುತ್ತಿರಲು, ''ಚಂದ್ರಗುಪ್ತಮಹಾರಾಜರ ಜಯಜಯಕಾರವು'' ಎಂಬ ಧ್ವನಿಯು ಕೇಳಿಸತೊಡಗಿತು. ಆಗ ಚಂದ್ರಗುಪ್ತ–ಭಾಗು ರಾಯಣರು ರಾಕ್ಷಸನನ್ನು ನೋಡದವರಂತೆ ಚಾಂಡಾಲರ ಸಮೀಪಕ್ಕೆ ಬಂದು–ಎಲಾ, ನೀವು ಇನ್ನೂ ಈ ರಾಜಘಾತಕಿಯನ್ನು ಶೂಲಕ್ಕೆ ಏರಿಸಿರುವದಿಲ್ಲವೇ? ನಿಮ್ಮನ್ನು ಯಾಕೆ ಶಿಕ್ಷಿಸ ಬಾರದು? ಈಗ ನಮ್ಮ ಕಣ್ಣೆದುರಿಗೆ ಶೂಲಕ್ಕೆ ಏರಿಸಿರಿ, ಅನ್ನಲು, ಚಾಂಡಾಲರು–ಪ್ರಭುಗಳೇ ಇಷ್ಟು ಹೊತ್ತಿಗೆ ಈತನನ್ನು ಶೂಲಕ್ಕೆ ಏರಿಸಿಬಿಡುತ್ತಿದ್ದವು; ಆದರೆ ಅಮಾತ್ಯರಾಕ್ಷಸರು ಬಂದು, ಈತನ ಸಲುವಾಗಿ ನಾನು ಸಕುಟುಂಬ ಮರಣಕ್ಕೆ ಸಿದ್ಧನಾಗಿರುತ್ತೇನೆ. ಶೂಲಕ್ಕೆ ಏರಿಸಬೇಡಿರಿ; ನಿಮ್ಮ ಹೇಳಿಕೆಯಂತೆ ಈಗ ಚಂದ್ರಗುಪ್ತನ ಅನುಮತಿಯನ್ನು ಸಂಪಾದಿಸಿಕೊಂಡು ಬರುವೆನು, ಎಂದು ಅಪ್ಪಣೆಮಾಡಿದ್ದರಿಂದ ಕೈ ಕಾಯಬೇಕಾಯಿತು. ಈ ಅಪರಾಧಕ್ಕಾಗಿ ಗುಲಾಮರನ್ನು ಪ್ರಭುಗಳು ಕ್ಷಮಿಸಬೇಕೆಂದು ಬೇಡಿಕೊಳ್ಳುವೆವು, ಅನ್ನಲು, ಚಂದ್ರಗುಪ್ತನು ಅರಿಯದವ ನಂತೆ–ಏನು! ಅಮಾತ್ಯರಾಕ್ಷಸರು ಆಜ್ಞಾಪಿಸಿದರೇ? ಬಹಳ ಒಳಿತಾಯಿತು. ಅವರು ಇಲ್ಲಿ ಇರುತ್ತಾರೇನು, ಅನ್ನಲು, ರಾಕ್ಷಸನು ಮುಂದಕ್ಕೆ ಬಂದು–ಚಂದ್ರಗುಪ್ತಾ, ಹೌದು, ಇಲ್ಲಿ ಇರುತ್ತೇನೆ. ನನ್ನ ಹೆಂಡಿರು–ಮಕ್ಕಳನ್ನು ನಿನಗೆ ಒಪ್ಪಿಸುತ್ತೇನೆ, ಬೇಕಾದರೆ ನಾನೂ ನಿನ್ನ ಅಧೀನನಾಗುತ್ತೇನೆ; ಈ ಚಂದನದಾಸನನ್ನು ಬಿಟ್ಟುಬಿಡು.

ಇಂಥ ವಿಪನ್ನಸ್ಥಿತಿಯಲ್ಲಿಯೂ ರಾಕ್ಷಸನು ತನ್ನನ್ನು ಮಹಾರಾಜನೆಂದು ಕರೆಯದೆ, ಏಕವಚನದಿಂದಲೇ ಕರೆಯುವದನ್ನು ಕೇಳಿ ಚಂದ್ರಗುಪ್ತನಿಗೆ ಬಹಳ ಆಶ್ಚರ್ಯವಾಯಿತು. ನಂದರ ಮೇಲಿನ ರಾಕ್ಷಸನ ದೃಢತರವಾದ ವಿಶ್ವಾಸಕ್ಕಾಗಿಯೂ, ಆತನ ಅಚಲವಾದ ಧೈರ್ಯಕ್ಕಾಗಿಯೂ ಮನಸ್ಸಿನಲ್ಲಿ ಆತನನ್ನು ಕೊಂಡಾಡುತ್ತ–ಏನು! ಅಮಾತ್ಯಶ್ರೇಷ್ಠರೇ, ಈ ರಾಜಘಾತಕಿಯನ್ನು ಬಿಟ್ಟುಬಿಡೆಂದು ಹೇಳುವಿರಾ? ಈ ಸೆಟ್ಟಿಯು ವ್ಯಾಪಾರಕ್ಕಾಗಿ ದೇಶಾಂತರಕ್ಕೆ ಹೋಗಿ, ಪರರಾಜ ರೊಡನೆ ಒಳಸಂಚುಗಳನ್ನು ನಡೆಸುವ ಸಂಭವವಿದೆ. ಈತನು ಯವನರಾಜನಾದ ಪರ್ವತೇಶ್ವರ ನೊಡನೆ ಒಳಸಂಚು ನಡೆಸಿರುವಂತೆ ನಮಗೆ ಸಂಶಯ ಬರುತ್ತದೆ. ಈತನು ರಾಜಘಾತದ ಒಳಸಂಚಿನಲ್ಲಿ ತಾನು ಸೇರಿ, ಪರ್ವತರಾಜನಂತೆ ನಿಮ್ಮನ್ನೂ ದೂರುತ್ತಾನೆ! ನೀವು ಇಂಥ ರಾಜದ್ರೋಹಕ್ಕೆ ಮನಸ್ಸು ಮಾಡೀರೆಂದು ನಮಗೆ ಎಷ್ಟು ಮಾತ್ರವೂ ತೋರುವದಿಲ್ಲ. ಇದರ ಮೇಲೆಯೂ ನೀವು ಬಿಡೆಂದು ಹೇಳಿದರೆ, ಅದು ತಮ್ಮ ಅಪ್ಪಣೆಯೆಂದು ತಿಳಿದು ಬಿಟ್ಟು ಬಿಡುತ್ತೇವೆ; ಆದರೆ......

ಚಂದ್ರಗುಪ್ತನು ಇಷ್ಟು ನುಡಿದು ಸುಮ್ಮನಾಗಲು, ಭಾಗುರಾಯಣನು ಮುಂದಿನ ಮಾತನ್ನು ಕುರಿತು–ಆದರೆ ನೀವು ನಂದನ ಪಕ್ಷವನ್ನು ಬಿಟ್ಟು ನಮ್ಮ ಪಕ್ಷವನ್ನು ಹಿಡಿದು,

ಮೊದಲಿನಂತೆ ಅಮಾತ್ಯಪದವನ್ನು ಕೈಕೊಂಡು ರಾಜ್ಯಕಾರಭಾರವನ್ನು ನಡಿಸಬೇಕು, ಅನ್ನಲು, ರಾಕ್ಷಸನು–ಭಾಗುರಾಯಣಾ, ನಾನು ಒಮ್ಮೆ ಹೇಳಿಬಿಟ್ಟಿರುತ್ತೇನೆ, ತಿರುತಿರುಗಿ ಅದನ್ನೇ ಹೇಳುವದರಲ್ಲಿ ಅರ್ಥವೇನು? ನಿಮ್ಮಂಥ ರಾಜಘಾತಕಿಗಳ ಪಕ್ಷವನ್ನು ಸ್ವೀಕರಿಸುವೆನೆಂದು ನಿಮಗೆ ತೋರುತ್ತದೇನು? ನಾನು ಏನು ಪ್ರತಿಜ್ಞೆ ಮಾಡಿರುತ್ತೇನೆಂಬದನ್ನು ನೆನಪು ಮಾಡಿಕೋ. ನನ್ನ ಪ್ರತಿಜ್ಞೆಯು ಭಂಗವು ಎಂದೂ ಆಗಲಿಕ್ಕಿಲ್ಲ, ಎಂದು ಹೇಳಿದನು. ಅದಕ್ಕೆ ಕೂಡಲೇ ಭಾಗು ರಾಯಣನು –ಹಾಗಿದ್ದ ಬಳಿಕ ಚಂದನದಾಸನನ್ನು ಶೂಲಕ್ಕೇರಿಸುವ ಬಗ್ಗೆ ಆಗಿರುವ ಆಜ್ಞೆಯ ಭಂಗವಾದರೂ ಹ್ಯಾಗಾಗುವದು, ಎಂದು ಹೇಳುತ್ತಿರಲು, ಇತ್ತ ಶಕಟದಾಸನು–ಅಮಾತ್ಯಾ, ಅಂದಬಳಿಕ ನನ್ನ ಮಿತ್ರನನ್ನು ನೀನು ಹ್ಯಾಗೆ ಉಳಿಸಿದ ಹಾಗಾಗುವದು? ನನ್ನ ಪರಲೋಕದ ಪ್ರಯಾಣಕ್ಕೆ ಸುಮ್ಮನೆ ವಿಘ್ನಮಾಡಿದೆಯಲ್ಲ; ಇನ್ನುಮೇಲೆ ನಾನು ಮತ್ತೆ ಆ ದೊಡ್ಡ ಆಲದ ಗಿಡಕ್ಕೆ ಹೋಗಿ ಉರಲು ಹಾಕಿಕೊಂಡು ಪ್ರಾಣ ಬಿಡುವೆನು. ಸುಮ್ಮನೆ ಇಷ್ಟು ಹೊತ್ತಿನ ತನಕ ನನಗೂ, ಪಾಪ! ಚಂದನದಾಸನ ಹೆಂಡತಿಗೂ ಸುಮ್ಮನೆ ಯಾಕೆ ಆಶೆಯನ್ನು ತೋರಿಸಿದೆ? ಎಂದು ಹಂಗಿಸಿದನು. ಇದನ್ನು ಕೇಳಿದ ಕೂಡಲೇ ರಾಕ್ಷಸನು ಸ್ತಬ್ಧನಾದನು. ಇನ್ನು ಏನು ಮಾತಾಡ ಬೇಕೆಂಬದೇ ಆತನಿಗೆ ತೋಚದಾಯಿತು. ಪ್ರತಿಜ್ಞಾಭಂಗ, ಮಿತ್ರವಧೆಗಳೆರಡೂ ಅವನಿಗೆ ಬೇಡಾಗಿದ್ದವು. ಇವುಗಳಲ್ಲಿ ಯಾವದನ್ನು ಮಾಡಬೇಕು, ಯಾವದನ್ನು ಮಾಡಬಾರದು, ಎಂಬದೇ ಆತನಿಗೆ ತಿಳಿಯದಾಯಿತು. ಒತ್ತಟ್ಟಿಗೆ ಭಾವಿ, ಒತ್ತಟ್ಟಿಗೆ ಕೆರೆ ಎಂಬಂತೆ ಅವನ ಸ್ಥಿತಿಯಾಯಿತು. ಅವನ ಮನಸ್ಸಿನಲ್ಲಿ ವಿಚಾರಪರಂಪರೆಯು ಉತ್ಪನ್ನವಾಯಿತು. ಕಡೆಗೆ ಆತನು ನಿರ್ಧರಿಸಿ ದ್ದೇನೆಂದರೆ, ಮಿತ್ರನ ಸಲುವಾಗಿ ನನ್ನ ಒಬ್ಬನ ಪ್ರಾಣವನ್ನು ಏಕೆ, ನನ್ನ ಕುಟುಂಬದವರ ಪ್ರಾಣಗಳನ್ನೂ ಒಪ್ಪಿಸುವೆನು; ಆದರೆ ಪ್ರತ್ಯಕ್ಷ ನನ್ನ ಸ್ವಾಮಿಯ ವಂಶವೃಕ್ಷವನ್ನೇ ಕ್ಷಣಮಾತ್ರದಲ್ಲಿ ತುಂಡರಿಸಿ ಚಲ್ಲಿದವರ ಸೇವೆಯನ್ನು ಮಾತ್ರ ನಾನು ಮಾಡಲಾರೆನು.

ಈ ಮೇರೆಗೆ ಯೋಚಿಸಿ ಅಮಾತ್ಯನು ಭಾಗುರಾಯಣನನ್ನು ಕುರಿತು–ಭಾಗುರಾಯಣಾ, ನನ್ನ ಸ್ವಾಮಿ ಘಾತಮಾಡಿದ ವ್ಯಾಧಪುತ್ರನ ಸೇವೆಯನ್ನು ಕಾಲತ್ರಯದಲ್ಲಿಯೂ ಮಾಡಲಾರೆ ನೆಂಬದನ್ನು ಮತ್ತೆಮತ್ತೆ ನುಡಿಯಲಾರೆನು. ನನ್ನ ನಿಶ್ಚಯವನ್ನು ಚನ್ನಾಗಿ ಕೇಳು. ನನ್ನ ಮಿತ್ರಚಂದನ ದಾಸನ ಸಲುವಾಗಿ ಸಕುಟುಂಬವಾಗಿ ನಾನು ನಿಮ್ಮ ಕೈಸೇರುವೆನು, ಬೇಕಾದರೆ ನಮ್ಮೆಲ್ಲರನ್ನೂ ನೀವು ಸಂಹರಿಸಬಹುದು. ನಾನು ನಂದವಂಶದ ಹೊರತು ಅನ್ಯರ ಸೇವೆಯನ್ನು ಸರ್ವಥಾ ಮಾಡಲಾರೆನು, ಎಂದು ಹೇಳಿ, ಚಂದನದಾಸನಿಗೆ– ಎಲೈ ಮಿತ್ರನೇ, ನಿನ್ನನ್ನು ಉಳಿಸಿಕೊಳ್ಳು ವದಕ್ಕಾಗಿಬೇಕಾದ ಸಂಕಟಕ್ಕೆ ಗುರಿಯಾಗಲು ನಾನು ಸಿದ್ಧನಾಗುತ್ತಿದ್ದೆನು; ಆದರೆ ರಾಜ ದ್ರೋಹಿಗಳೂ, ರಾಜಘಾತಕರೂ ಆದವರ ಸೇವೆಯನ್ನು ಮಾಡಿದ ಹೊರತು ನಿನ್ನ ಮರಣವು ತಪ್ಪುವಹಾಗಿಲ್ಲ; ಅಂದಬಳಿಕ ನಾನು ಮಾಡಲೇನು? ಇನ್ನು ನೀನು ಕೈಲಾಸನಾಥನನ್ನು ಸ್ಮರಿಸಿ ಮರಣಕ್ಕೆ ಸಿದ್ಧನಾಗು. ಎರಡನೆಯದನ್ನೇನೂ ನಾನು ನಿನಗೆ ಹೇಳಲಾರೆನು; ಮೋಸದಿಂದಲೇ ಆಗಲೊಲ್ಲದೇಕೆ, ನೀನು ರಾಜಘಾತದ ಒಳಸಂಚಿನಲ್ಲಿ ಸೇರಿ, ನಿನ್ನ ಮನೆಯೊಳಗಿಂದ ನೆಲಮನೆಯನ್ನು ತೋಡುವದಕ್ಕೆ ಒಪ್ಪಿಗೆಯನ್ನು ಕೊಟ್ಟದ್ದರಿಂದ ನಿನಗೆ ಸ್ವಲ್ಪ ಪ್ರಾಯಶ್ಚಿತ್ತವು ಈಗ

ಆಗುತ್ತದೆಂತಲೇ ತಿಳಿಯಬೇಕಾಗುವದು, ಎಂದು ನುಡಿದು ಸುಮ್ಮನಾದನು. ರಾಕ್ಷಸನ ಈ ಮಾತುಗಳನ್ನು ಕೇಳಿ ಚಂದ್ರಗುಪ್ತ-ಭಾಗುರಾಯಣರಿಬ್ಬರೂ ಆಶ್ಚರ್ಯಪಟ್ಟರು. ತನ್ನ ಹೆಂಡಿರು ಮಕ್ಕಳ ಸಲುವಾಗಿ ತನ್ನ ಮಿತ್ರನು ಸಾಯಬೇಕಾಗುವದೆಂದು ತಿಳಿದು ಪಶ್ಚಾತ್ತಾಪಪಟ್ಟು ರಾಕ್ಷಸನು ತಾವು ಹೇಳಿದಂತೆ ಕೇಳಬಹುದೆಂದು ಅವರು ತಿಳಿದಿದ್ದರು; ಆದರೆ ಅನುಭವದಲ್ಲಿ ತಮ್ಮ ತಿಳುವಳಿಕೆಯು ನಿರರ್ಥಕವಾದದ್ದನ್ನು ನೋಡಿ, ಅವರು ರಾಕ್ಷಸನನ್ನು ತಮ್ಮ ಪಕ್ಷಕ್ಕೆ ಎಳಕೊಳ್ಳುವ ಎರಡನೆಯ ಉಪಾಯವನ್ನು ಕಾಣದಾದರು. ಆರ್ಯಚಾಣಕ್ಯನು ರಾಕ್ಷಸನನ್ನು ತನ್ನ ಪಕ್ಷಕ್ಕೆ ಎಳಕೊಳ್ಳುವದಕ್ಕಾಗಿ ಮಾಡಿದ ಪ್ರಯತ್ನಗಳೆಲ್ಲ ನಿಷ್ಫಲವಾದದ್ದನ್ನು ಸ್ಮರಿಸಿ, ಅವರಿಗೆ ಬಹಳ ಅಸಮಾಧಾನವಾಯಿತು. ಇನ್ನು ಮುಂದೆ ಏನು ಮಾಡಬೇಕೆಂಬ ಅರ್ಥದಿಂದ ಅವರು ಒಬ್ಬರು ಮೋರೆಯನೊಬ್ಬರು ನೋಡತೊಡಗಿದರು. ಅವರು ಹೀಗೆ ಯಾಕೆ ನೋಡುತ್ತಾರೆಂಬದು ರಾಕ್ಷಸನಿಗೆ ತಿಳಿಯಲೊಲ್ಲದು. ಸ್ವಲ್ಪ ಹೊತ್ತಿನ ಮೇಲೆ ಚಂದ್ರಗುಪ್ತನು ಚಾಂಡಾಲರಿಗೆ ಸುಮ್ಮನಿರಲಿಕ್ಕೆ ಸನ್ನೆಮಾಡಿ – ಎಲೈ ಚಾಂಡಾಲರೇ, ಪ್ರತ್ಯಕ್ಷ ರಾಕ್ಷಸನು ನಮ್ಮ ಬಳಿಯಲ್ಲಿರಲು, ಆತನ ಹೆಂಡಿರು-ಮಕ್ಕಳ ಸಲುವಾಗಿ, ಪಾಪ! ಈ ಗಾಳಕನಲ್ಲದ ಶೆಟ್ಟಿಯನ್ನು ಕೊಲ್ಲುವದು ನಮಗೇ ಉಚಿತವಾಗಿ ತೋರಲೊಲ್ಲದು. ಈಗಿನ ಮಟ್ಟಿಗಾದರೂ ಚಂದನದಾಸನನ್ನು ಶೂಲಕ್ಕೇರಿಸದೆ, ಸೆರೆಯಲ್ಲಿಡಿರಿ, ಅಥವಾ ಸೆರೆಮನೆಯಲ್ಲಿಡುವದಾದರೂ ಯಾಕೆ? ಆತನನ್ನು ಬಿಟ್ಟುಬಿಡಿರಿ. ಎಂದು ನುಡಿದು ಚಂದ್ರಗುಪ್ತನು ಚಂದನದಾಸನ ಕಡೆಗೆ ತಿರುಗಿ ಚಂದನದಾಸಾ, ಇನ್ನು ನೀನು ಸಂತೋಷದಿಂದ ಹೋಗು; ಆದರೆ ಪಾಟಲಿಪುತ್ರವನ್ನು ಬಿಟ್ಟು ಮಾತ್ರ ನೀನು ಹೋಗಲಾಗದು. ನಿನ್ನನ್ನು ಯಾವಾಗ ಕರೆಸಬೇಕಾದೀತೆಂಬದರ ನಿಯಮವನ್ನು ಹೇಳಲಿಕ್ಕೆ ಬರುವದಿಲ್ಲ, ನಾವು ಕರೆಸಿದಾಗ ನೀನು ಬರುತ್ತ ಹೋಗು.

ಈ ಮೇರೆಗೆ ನುಡಿದು, ಚಂದ್ರಗುಪ್ತನು ಭಾಗುರಾಯಣನನ್ನು ಕರಕೊಂಡು ರಾಕ್ಷಸನ ಕಡಗೆ ಹೊರಳಿ ಸಹ ನೋಡದೆ, ಹೊರಟುಹೋದನು. ರಾಕ್ಷಸನ ಮೇಲೆ ಗುಪ್ತಚಾರರು ಇದ್ದೇ ಇದ್ದರು. ಅತ್ತ ಚಾಂಡಾಲರು ಚಂದನದಾಸನನ್ನು ರಾಜಾಜ್ಞೆಯಂತೆ ಬಿಟ್ಟು ಬಿಡಲು, ಆತನು ರಾಕ್ಷಸನ ಕಾಲುಗಳನ್ನು ಗಟ್ಟಿಯಾಗಿ ಹಿಡಕೊಂಡು-ಅಮಾತ್ಯಶ್ರೇಷ್ಠರೇ, ನೀವು ಬಂದದ್ದರಿಂದ ನನ್ನ ಪ್ರಾಣವು ಉಳಿಯಿತು. ನನ್ನಿಂದ ದೊಡ್ಡ ತಪ್ಪಾಗಿದೆ. ತಮ್ಮ ಪತ್ರದ ಮೇಲೆ ಕೈ ಉರಿಕೊಂಡು ಕುಳಿತುಕೊಳ್ಳದೆ, ನಾನು ಪ್ರತ್ಯಕ್ಷ ತಮ್ಮನ್ನು ಕಾಣಬೇಕಾಗಿತ್ತು, ದಯಮಾಡಿ ನನ್ನ ತಪ್ಪನ್ನು ಹೊಟ್ಟೆಯಲ್ಲಿ ಹಾಕಿಕೊಂಡು ತಾವು ನನ್ನ ಮನೆಗೆ ನಡೆಯಬೇಕು. ಅಮಾತ್ಯ ಪತ್ನಿಯವರು ಬಹಳ ಚಡಪಡಿಸುತ್ತಿರುವರು. ಅವರನ್ನೂ, ತಮ್ಮ ಚಿರಂಜೀವನನ್ನೂ ಬೇರೆ ಕುಟುಂಬದವರನ್ನೂ ಅಲ್ಲಿಗೆ ಕರಕೊಂಡು ಬರುತ್ತೇನೆ, ಎಂದು ಹೇಳಿದನು. ಚಂದನದಾಸನ ಈ ಮಾತುಗಳನ್ನು ಕೇಳಿ ರಾಕ್ಷಸನಿಗೆ ಹ್ಯಾಗೆ ಹ್ಯಾಗೋ ಎನಿಸಹತ್ತಿತು; ಆದರೆ ಈಗ ಕೇಳಿದರೆ, ಈತನು ಎಚ್ಚತ್ತಾನೆಂದು ತಿಳಿದು, ಹೆಚ್ಚಿಗೆ ಏನೂ ಮಾತಾಡದೆ ಆತನು ಚಂದನದಾಸನ ಮನೆಗೆ ಹೊರಟನು. ಚಾಣಕ್ಯ-ಚಂದ್ರಗುಪ್ತಾದಿ ನೀಚರು ಎಷ್ಟೇ ತನ್ನ ಹರಿಲಿಯನ್ನು ಮಾಡಿದರೂ, ತನ್ನನ್ನು ಸೆರೆಯಲ್ಲಿಡುವ, ಅಥವಾ ಪ್ರಸಿದ್ಧವಾಗಿ ತನ್ನ ನ್ಯಾಯವಿಚಾರವನ್ನು ಮಾಡಿ ಶಿಕ್ಷಿಸುವ ಧೈರ್ಯವು ಅವರಿಗೆ ಇಲ್ಲೆಂದು

ರಾಕ್ಷಸನು ನಿಶ್ಚಯಿಸಿದನು; ಆದ್ದರಿಂದ ಆತನು ಪಾಟಲಿಪುತ್ರದಲ್ಲಿಯೇ ಇದ್ದು, ಎಲ್ಲ ಒಳಸಂಚನ್ನು ಬೈಲಿಗೆಳೆದು, ಮುಂದಿನ ಕಾರ್ಯವನ್ನು ಸಾಧಿಸಬೇಕೆಂತಲೂ, ಈವರೆಗೆ ಚಲಿಸದೆಯಿದ್ದ ತನ್ನ ನಿಶ್ಚಯವನ್ನು ಮುಂದಾದರೂ ಚಲಿಸಗೊಡಬಾರದೆಂತಲೂ ಆತನು ನಿರ್ಧರಿಸಿ, ತನ್ನ ವಿಶಾಲವಾದ ಬುದ್ಧಿ ಸಾಮರ್ಥ್ಯದ ಸಹಾಯದಿಂದ ಒಂದೊಂದೇ ಒಳಸಂಚಿನ ನಿಜವಾದ ಕಾರಣವನ್ನು ಹುಡುಕಿ ಬೈಲಿಗೆಳೆಯಹತ್ತಿದನು.

ಸಂವಾಹಕನು

ಇತ್ತ ಚಾಣಕ್ಯನು ರಾಕ್ಷಸನ ನಿಶ್ಚಯವನ್ನು ಕೇಳಿ ಬೆರಗಾದನು. ಆತನು ರಾಕ್ಷಸನ ಯೋಗ್ಯತೆಯನ್ನು ಪೂರ್ಣವಾಗಿ ಅರಿತಿದ್ದನು. ಆ ಸ್ವಾಮಿನಿಷ್ಠ ಅಮಾತ್ಯನು ಹಿಂದಿನದನ್ನೆಲ್ಲ ಮರೆತು, ಚಂದ್ರಗುಪ್ತನು ಮಗಧೇಶ್ವರನೆಂದು ಒಮ್ಮೆ ಒಪ್ಪಿಕೊಂಡು ಸಾಚವ್ಯವನ್ನು ಕೈಕೊಂಡರೆ, ಚಂದ್ರಗುಪ್ತನ ವಿಷಯದ ತನ್ನ ಚಿಂತೆಯೇ ಕಡಿಯಿತೆಂದು ಆ ಗುಣಜ್ಞ ಚಾಣಕ್ಯನು ಅರಿತಿದ್ದನು. ಈಗೊದಗಿದ ಅಪಘಾತದಿಂದ ರಾಕ್ಷಸನು ಮುಂದೆ ಎಚ್ಚರಿಕೆಯಿಂದ ನಡೆಯುವನಾದದ್ದರಿಂದ, ಆತನು ಅಮಾತ್ಯನಾದರೆ ಮಗಧ ರಾಜ್ಯದ ವಿಸ್ತಾರವು ಗ್ರೀಕರ ರಾಜ್ಯದವರೆಗೆ ಆಗಿ, ಗ್ರೀಕರಿಂದ ಹಿಂದೂ ಜನರಿಗಾಗುತ್ತಿದ್ದ ಉಪದ್ರವವು ಇಲ್ಲದಂತಾಗುವದೆಂತಲೂ ಅವನು ಭಾವಿಸಿದ್ದನು. ಸಚಿವನಲ್ಲಿರತಕ್ಕ ಗುಣಗಳೆಲ್ಲ ರಾಕ್ಷಸನಲ್ಲಿರುತ್ತವೆಂಬದನ್ನು ಆ ಧೂರ್ತ ಬ್ರಾಹ್ಮಣನು ಮನಗಂಡಿದ್ದನು. ರಾಕ್ಷಸನನ್ನು ಹೊರಗೆ ಬಿಟ್ಟರೆ, ಆತನು ಪರರಾಜರ ಆಶ್ರಯವನ್ನು ಪಡೆದು, ಮಗಧದ ಮೇಲೆ ದಂಡೆತ್ತಿ ಬಂದು, ಯಾವನೊಬ್ಬ ನಂದವಂಶದ ಕುಮಾರನನ್ನು ಇಲ್ಲವೆ ವೃದ್ಧಪುರುಷನನ್ನು ಹುಡುಕಿ ಚಂದ್ರಗುಪ್ತನಿಗೆ ಉಚ್ಚಾಟನೆಯನ್ನು ಕೊಡದೆ ಬಿಡುವದಿಲ್ಲೆಂಬದು ಆತನ ಮನಸ್ಸಿನಲ್ಲಿ ಕಟೆಯುತ್ತಿತ್ತು; ತಾನು ಇನ್ನು ಪಾಟಲಿಪುತ್ರದಲ್ಲಿ ಬಹಳದಿವಸ ಇರದೆ, ತಪಶ್ಚರ್ಯಕ್ಕಾಗಿ ಹಿಮಾಲಯಕ್ಕೆ ಹೋಗಬೇಕಾದದ್ದರಿಂದ, ತನ್ನ ಪಶ್ಚಾತ ರಾಕ್ಷಸನಂಥ ಅಮಾತ್ಯನಿರುವದು ಅವಶ್ಯವೆಂದು ತಿಳಿದು, ರಾಕ್ಷಸನಿಗೆ ಕೇಡು ಬಗೆಯಲಿಕ್ಕೆ ಆ ಕಾರ್ಯದಕ್ಷ ಬ್ರಾಹ್ಮಣನು ಮನಸ್ಸು ಮಾಡಲಿಲ್ಲ. ಒಟ್ಟಿಗೆ ಚಾಣಕ್ಯನಿಗೆ ರಾಕ್ಷಸನು ಬೇಕಾಗಿತ್ತು; ಆದರೆ ಆತನನ್ನು ಒಲಿಸಿಕೊಳ್ಳುವ ಬಗೆಯೇನೆಂದು ಚಾಣಕ್ಯನು ಚಿಂತಿಸತೊಡಗಿದನು. ಇಲ್ಲಿಯವರೆಗೆ ಮಾಡುತ್ತ ಬಂದಿದ್ದ ಅವನ ಪ್ರಯತ್ನಗಳೆಲ್ಲ ನಿಷ್ಫಲವಾಗಿದ್ದವು. ಪರ್ವತರಾಜನ ನ್ಯಾಯ ವಿಚಾರಣೆಯಲ್ಲಿ ತಾನೇ ಅಪರಾಧಿಯೆಂದು ನಿರ್ಧರಿಸಲ್ಪಟ್ಟರೂ, ಆ ಧೀರನಾದ ಅಮಾತ್ಯನು ಅದಕ್ಕೆ ಸೊಪ್ಪುಹಾಕಲಿಲ್ಲ, ಮಿತ್ರನ ಮರಣದ ಸಲುವಾಗಿ ಆ ಸ್ವಾಮಿನಿಷ್ಠನು ತನ್ನ ಪ್ರತಿಜ್ಞೆಯ ಭಂಗವನ್ನು ಮಾಡಿಕೊಳ್ಳಲಿಲ್ಲ. ಇದನ್ನೆಲ್ಲ ಮನಸ್ಸಿನಲ್ಲಿ ತಂದು, ಚಾಣಕ್ಯನು ಶಾಬಾಸ! ರಾಕ್ಷಸಾ, ಶಾಬಾಸ!! ನೀನು ಒಳ್ಳೇ ನೀತಿನಿಪುಣನಲ್ಲದಿದ್ದರೂ, ನಿನ್ನಲ್ಲಿ ಸತ್ಯನಿಷ್ಠೆಯೂ, ಸನ್ನಿಷ್ಠೆಯೂ ಸಂಪೂರ್ಣವಾಗಿ ವಾಸಿಸುತ್ತವೆ. ಮಿತ್ರನ ಮರಣದ ಪ್ರಸಂಗವನ್ನೂ, ಆತನ ಹೆಂಡತಿಯ

ಸಹಗಮನ ಮಾಡುವ ಪ್ರಸಂಗವನ್ನೂ ಕಣ್ಣುಮುಟ್ಟಿ ನೋಡಿದರೂ ನೀನು ನಿನ್ನ ಸ್ವಾಮಿನಿಷ್ಠೆಯನ್ನು ಬಿಡಲಿಲ್ಲ, ಸ್ವಾಮಿಘಾತಕರ ಸೇವೆಯನ್ನು ಕೈಕೊಳ್ಳಲಿಲ್ಲ. ಮತ್ತೊಬ್ಬನಾಗಿದ್ದರೆ, ಇಷ್ಟು ಹೊತ್ತಿಗೆ ಸ್ವಪಕ್ಷವನ್ನು ಬಿಟ್ಟು ಅನ್ಯಪಕ್ಷವನ್ನು ಸ್ವೀಕರಿಸುತ್ತಿದ್ದನು. ಈ ಹೇಡಿತನವು ನಿನ್ನ ಶೀಲವಲ್ಲದ್ದರಿಂದಲೇ ನಾನು ನಿನ್ನನ್ನು ಚಂದ್ರಗುಪ್ತನ ಸಚಿವನನ್ನಾಗಿ ಮಾಡಬೇಕೆಂದು ಹೆಣಗುತ್ತೇನೆ. ನಿನ್ನಂಥ ಗುಣಪರಿಪೂರ್ಣನಾದ ಮಂತ್ರಿಯು ಪರ್ವತರಾಜ್ಯಕ್ಕೆ ಹೋದರೆ, ತನ್ನ ತಂದೆಯನ್ನು ಸೆರೆಯಲ್ಲಿಟ್ಟಿದ್ದ ರೊಚ್ಚಿನಿಂದ ಸೇಡು ತೀರಿಸಿಕೊಳ್ಳಲು ಹಾತೊರೆಯುತ್ತಿದ್ದ ಮಲಯಕೇತುವು,. ತನ್ನ ಸ್ವಾಮಿಯಾದ ಸಲುಕ್ಷಸನಿಕತ್ತರನ ಸಹಾಯದಿಂದ ನಾಳೆಗೇ ಪಾಟಲಿಪುತ್ರದ ಮೇಲೆ ದಂಡೆತ್ತಿ ಬರುವನು. ಅಮಾತ್ಯ ಶ್ರೇಷ್ಠಾ, ರಾಕ್ಷಸಾ, ಸಾಧ್ಯದಲ್ಲಿ ಅಲ್ಲದೆ ಸಾಧನದಲ್ಲಿ ದೃಷ್ಟಿಯನ್ನಿಡದ ಈ ಚಾಣಕ್ಯನು, ಹೊತ್ತು ಬಂದಹಾಗೆ ಕುಟಿಲ ನೀತಿಯಿಂದ ನಡೆದು ಬೇಕಾದಂಥ ದುರ್ಘಟ ಕಾರ್ಯವನ್ನು ಸಾಧಿಸಿದರೂ, ಕಡೆಗೆ ನಿನ್ನ ಸ್ವಾಮಿನಿಷ್ಠೆಯ ಮುಂದೆ ಕೈ ಊರುವ ಪ್ರಸಂಗ ಬಂದಿತು, ಎಂದು ಮನಸ್ಸಿನಲ್ಲಿ ರಾಕ್ಷಸನನ್ನು ಕೊಂಡಾಡಿ, ಆತನನ್ನು ಒಲಿಸಿಕೊಳ್ಳುವದಕ್ಕಾಗಿ ನಾನೇ ಹೋಗಲೋ, ಚಂದ್ರಗುಪ್ತನನ್ನು ಕಳಿಸಲೋ, ಚಂದ್ರಗುಪ್ತನೊಡನೆ ಜಗಳಾಡಿದಂತೆ ಸೋಗುಮಾಡಿ ಚಂದ್ರಗುಪ್ತನನ್ನು ಹೊರಗೆ ಹಾಕಲೋ, ಎಂದು ಚಾಣಕ್ಯನು ಹಲವು ವಿಧವಾಗಿ ಆಲೋಚಿಸುತ್ತಿರಲು, ಆ ಧೂರ್ತ ಬ್ರಾಹ್ಮಣನಿಗೆ ಅನಾಯಾಸವಾಗಿಯೇ ರಾಕ್ಷಸನ ಗುಣಪರೀಕ್ಷೆಯನ್ನು ಸ್ಪಷ್ಟವಾಗಿ ಮಾಡುವ ಒಂದು ಮಹತ್ವದ ಪ್ರಸಂಗವು ತಾನಾಗಿ ಒದಗಿತು.

ಮೇಲೆ ಚಾಣಕ್ಯನು ಆಲೋಚಿಸಿದಂತೆ, ಪರ್ವತರಾಜನ ಮಗನಾದ ಮಲಯಕೇತುವು ತನ್ನ ಸಾರ್ವಭೌಮನಾದ ಸುಲಕ್ಷಸನಿಕತ್ತರನ ಸಹಾಯದಿಂದ ಮಗಧ ರಾಜ್ಯದಮೇಲೆ ದಂಡೆತ್ತಿ ಬರುವದನ್ನು ನಿರ್ಧರಿಸಿದನು. ಒಮ್ಮೆಲೆ ದಂಡೆತ್ತಿ ಹೋಗುವದರಿಂದ ವೈರಿಗಳು ತನ್ನ ತಂದೆಯ ಜೀವಕ್ಕೆ ಕೇಡುಬಗೆಯ ಬಹುದೆಂದು ಯೋಚಿಸಿ, ಆತನು ಸಂಧಾನಕ್ಕಾಗಿ ಶಾಕಾಲಾಯನನೆಂಬ ಚತುರನಾದ ಒಬ್ಬ ಬ್ರಾಹ್ಮಣನನ್ನು ಚಂದ್ರಗುಪ್ತನಲ್ಲಿಗೆ ಕಳಿಸಿದನು. ಶಾಕಲಾಯನನು ಮಾರ್ಗದಲ್ಲಿ ವಿಲಂಬ ಮಾಡದೆ ಪಯಣದಮೇಲೆ ಪಯಣವನ್ನು ಬೆಳಿಸಿ ಪಾಟಲಿಪುತ್ರವನ್ನು ತಲುಪಿದನು. ಹೊಸಬನಾದ್ದರಿಂದ ಆತನ ಪುರಪ್ರವೇಶಕ್ಕೆ ತೊಂದರೆಯಾಯಿತು; ಶಾಕಲಾಯನನು ಪರ್ವತ ರಾಜ್ಯದಿಂದ ಸಂಧಾನಕ್ಕಾಗಿ ಚಂದ್ರಗುಪ್ತ ಮಹಾರಾಜರ ಕಡೆಗೆ ಬಂದಿರುವೆನೆಂದು ಹೇಳಿದ ಬಳಿಕ ಸುಲಭವಾಗಿ ಪುರಪ್ರವೇಶವಾಯಿತು. ಚಂದ್ರಗುಪ್ತನು ಶಾಕಲಾಯನನ ಯೋಗಕ್ಷೇಮದ ವ್ಯವಸ್ಥೆಯನ್ನು ತಕ್ಕಂತೆ ಇಡಿಸಿದನು. ಶಾಕಲಾಯನನು ಒಳ್ಳೇ ಚತುರನಿದ್ದನು. ಸಂಧಾನದ ಒಂದೇ ಕೆಲಸವನ್ನು ಮಾಡಿಕೊಂಡು ಹೋಗದೆ, ಪಾಟಲಿಪುತ್ರದ ಅಂತಸ್ಥ ಸ್ಥಿತಿಯು ಹೇಗಿದೆ, ತಮ್ಮ ದಂಡಯಾತ್ರಗೆ ಯಾರು ಯಾರು ಸಹಾಯ ಮಾಡುವ ಹಾಗಿದ್ದಾರೆ? ಮುಂತಾದ ಸಂಗತಿಗಳನ್ನು ತಿಳಕೊಂಡು ಹೋಗಬೇಕೆಂದು ಯೋಚಿಸಿ, ಆತನು ಕೂಡಲೆ ರಾಜದರ್ಶನಕ್ಕೆ ಹೋಗಲು ಮನಸ್ಸು ಮಾಡಲಿಲ್ಲ. ನಾಲ್ಕುದಿನ ಪಾಟಲಿ ಪುತ್ರದಲ್ಲಿದ್ದರೆ, ಎಲ್ಲ ಸಂಗತಿಗಳು ತಿಳಿಯುವವೆಂದು ಯೋಚಿಸಿ, ಮಾರ್ಗಯಾಸದ ವಿಶ್ರಾಂತಿಗಾಗಿ ನಾಲ್ಕು

ದಿನ ಅವಧಿಯನ್ನು ಕೊಡುವ ಕೃಪೆಮಾಡಬೇಕೆಂದು ಆತನು ಚಂದ್ರಗುಪ್ತನಿಗೆ ಹೇಳಿಕಳಿಸಿದನು. ಶಾಕಲಾಯನನ ಈ ಗತ್ತನ್ನು ಚಾಣಕ್ಯನು ತಿಳಿಯದೇ ಇರಲಿಲ್ಲ. ಆತನು ಆ ಬ್ರಾಹ್ಮಣನ ಗುಪ್ತ ವಿಚಾರಗಳನ್ನು ತಿಳಕೊಳ್ಳುವದಕ್ಕಾಗಿ ಒಬ್ಬ ಚತುರನಾದ ಸಂವಾಹಕನನ್ನು ಆತನ ಬಳಿಗೆ ಕಳಿಸಿ, ಶಾಕಲಾಯನನ ಸಂಗಡ ಬಂದಿರುವ ಜನರ ಮೇಲೆ ಚನ್ನಾಗಿ ಲಕ್ಷವಿಡುವದಕ್ಕಾಗಿ ಗುಪ್ತಚಾರರನ್ನು ನಿಯಮಿಸಿದನು. ಸಂವಾಹಕನು ಶಾಕಲಾಯನನ ಬಳಿಗೆ ಬಂದು–ಸ್ವಾಮಿ, ತಾವು ಮಾರ್ಗಾಯಾಸದ ಮೂಲಕವಾಗಿ ನಿನ್ನಿನದಿನ ಕೋಣೆಯನ್ನು ಬಿಟ್ಟು ಹೊರಗೆ ಸಹ ಬಂದಿರುವದಿಲ್ಲೆಂಬದನ್ನು ಕೇಳಿ, ಮಹಾರಾಜರು ತಮ್ಮ ಶ್ರಮವನ್ನು ಪರಿಹರಿಸುವದಕ್ಕಾಗಿ ನನ್ನನ್ನು ಕಳಿಸಿದ್ದಾರೆ. ಅರಮನೆಯಲ್ಲಿ ವಂಶಪರಂಪರೆಯಿಂದ ಸಂವಾಹಕ ಕೆಲಸವನ್ನು ನಾವು ಮಾಡುತ್ತ ಬಂದಿರುತ್ತೇವೆ. ನಾನು ಧನಾನಂದ ಮಹಾರಾಜನ ಪ್ರೀತಿಗೆ ಪಾತ್ರನಾದ ಸಮ್ಮರ್ದಕ ನೆಂಬವನು. ದಯವಿಟ್ಟು ನಾನು ಮಾಡುವ ಉಪಚಾರವನ್ನು ಸ್ವೀಕರಿಸಬೇಕೆಂದು ಬೇಡಿ ಕೊಳ್ಳುತ್ತೇನೆ, ಎಂದನು.

ಸಂವಾಹಕನ ಈ ಮಾತುಗಳನ್ನು ಕೇಳಿ ಶಾಕಲಾಯನನು ಮನಸ್ಸಿನಲ್ಲಿ– ಈ ಸಂವಾಹಕರು ಹರಟೆಕೊಚ್ಚುವವಲ್ಲಿ ಶೂರರು. ಇವರ ಹರಟೆಯಿಂದ ಎಷ್ಟೋ ಉಪಯುಕ್ತ ಸಂಗತಿಗಳು ನನಗೆ ತಿಳಿಯುವ ಸಂಭವವಿರುತ್ತದೆ. ಈ ಜನರನ್ನು ಸ್ವಲ್ಪ ಉಬ್ಬಿಸಿಬಿಟ್ಟರೆ ತೀರಿತು, ಮೈಮೇಲೆ ಅರಿವು ಇಲ್ಲದೆ ಬೇಕಾದದ್ದನ್ನು ಹೇಳುವರು, ಎಂದು ಶಾಕಲಾಯನನು ಸಂವಾಹಕನಿಂದ ಮೈ–ಕೈಗಳನ್ನು ಒತ್ತಿಸಿಕೊಳ್ಳಲಿಕ್ಕೂ, ತಿಕ್ಕಿಸಕೊಳ್ಳಲಿಕ್ಕೂ ಆರಂಭಿಸಿದನು. ಅದರ ಸಂಗಡ ಹರಟೆಗೂ ಆರಂಭ ವಾಯಿತು. ಆ ಹರಟೆಯಲ್ಲಿ ಮುರೆಯ ಕಾರಸ್ಥಾನ, ಚಾಣಕ್ಯಾಯನ ಕುಟಿಲನೀತಿ ಹಾಗು ಕ್ರೂರತನ, ಧನಾನಂದನ ಮರಣಕ್ಕಾಗಿ ಜನರ ಅಸುಂತುಷ್ಟತೆ, ರಾಕ್ಷಸನ ದೊಡ್ಡಿಸ್ತನ ಮೊದಲಾದವುಗಳು ಉಪ್ಪು ಕಾರಹಚ್ಚಿ ವರ್ಣಿಸಲ್ಪಟ್ಟವೆಂದು ಬೇರೆ ಹೇಳುವ ಕಾರಣವಿಲ್ಲ. ಶಾಕಲಾಯನನು ಸಂವಾಹಕನನ್ನು ಉಬ್ಬಿಸುವದಕ್ಕಾಗಿ ಎರಡು ಬಂಗಾರದ ಸಿಂಹಮುಖದ ಕಡೆಗಳನ್ನು ಉಚಿತವಾಗಿ ಕೊಟ್ಟನು. ಮಾತಾಡುತ್ತಾಡುತ್ತ ಶಾಕಲಾಯನನು ಸಮ್ಮರ್ದಕನನ್ನು ಕುರಿತು–ಸಮ್ಮರ್ದಕಾ, ನೀನು ಬಹು ಚತುರನೂ, ಜಾಗರೂಕನೂ ಎಂಬದರಲ್ಲಿ ಸಂಶಯವಿಲ್ಲ. ನಮ್ಮ ಸಂಭಾಷಣವನ್ನು ಯಾರಾದರೂ ಕೇಳಿಯಾರೆಂದು ನೀನು ಎಚ್ಚರ ಪಡುವದನ್ನು ನೋಡಿ, ನನಗೆ ಬಹಳ ಸಮಾಧಾನವಾಗುತ್ತದೆ. ಇಲ್ಲಿ ನಾನು ನೀನು ಇಬ್ಬರ ಹೊರತು ಬೇರೆ ಯಾರೂ ಇರುವದಿಲ್ಲ. ನಮ್ಮ ಮಾತನ್ನು ಬೇರೆ ಯಾರೂ ಕೇಳದಂತೆ ವ್ಯವಸ್ಥೆಯನ್ನಿಡಿಸಿರುತ್ತೇನೆ; ಆದರೆ ನನ್ನ ಪ್ರಶ್ನೆಗೆ ಸ್ಪಷ್ಟವಾಗಿ ಉತ್ತರವನ್ನು ಕೊಡು. ಸಮ್ಮರ್ದಕಾ. ಪ್ರಜೆಗಳು ಚಾಣಕ್ಯ ಚಂದ್ರಗುಪ್ತರ ವಿಷಯವಾಗಿ ಅಸಂತುಷ್ಟರಾಗಿರುವರೆಂದು ಹೇಳುವೆಯಲ್ಲ; ಆದರೆ ಪ್ರಜೆಗಳ ಪಕ್ಷದಿಂದ ಯಾರಾದರೂ ಬಡಿದಾಡಿದರೆ ಅವರಿಗೆ ಸಹಾಯಮಾಡಲಿಕ್ಕೆ ಪ್ರಜೆಗಳಲ್ಲಾಗಲಿ, ನಂದ ಪಕ್ಷಪಾತಿಗಳಾದ ಅಧಿಕಾರಿಗಳಲ್ಲಾಗಲಿ ಯೋಗ್ಯರಾದವರು ಯಾರಾದರೂ ಇರುವರೋ? ಸಂಕೋಚಪಡಬೇಡ ಸ್ಪಷ್ಟವಾಗಿ ಹೇಳು. ನೀನು ಇದನ್ನು ಹೇಳಿದೆಯೆಂಬದು ಯಾರಿಗೂ ತಿಳಿಯಲಾರದು. ಈವೊತ್ತಿಗೆ ನಿಮ್ಮ ಮಗಧರ ಮನಸ್ಸಿನ ಸ್ಥಿತಿಯಾದರೂ ಹ್ಯಾಗಿರುತ್ತದೆಂಬದನ್ನು ನಾನು ತಿಳಕೊಳ್ಳಬೇಕಾಗಿರುವದು.

ಶಾಕಲಾಯನನ ಈ ಮಾತುಗಳನ್ನು ಕೇಳಿ, ಸಮ್ಮರ್ದಕನು ಅಂಜಿಕೆಯನ್ನು ಪ್ರಕಟಿಸುತ್ತ– ಸ್ವಾಮಿ, ತಮ್ಮ ಅಭಯವು ಇದ್ದಬಳಿಕ ಹೇಳುತ್ತೇನೆ, ಕೇಳಿರಿ. ಅಮಾತ್ಯರಾಕ್ಷಸನು ನಿಮ್ಮ ಕಡೆಗಾದರೆ ಏನಾದರೂ ಉಪಯೋಗವಾದೀತು. ರಾಕ್ಷಸನು ಈಗ ಬಹಳ ಸಂಕಟದಲ್ಲಿದ್ದಾನೆ. ಹತ್ತುಪಾಲಿಗೆ ಆತನು ನಿಮಗೆ ಅನುಕೂಲವಾಗಬಹುದು. ರಾಕ್ಷಸನು ಸರಳ ಸ್ವಭಾವದವನು. ಚಾಣಕ್ಯ–ಚಂದ್ರಗುಪ್ತ–ಭಾಗುರಾಯಣರು ಆತನ ಹೆಸರಿನ ಸುಳ್ಳು ಪತ್ರಗಳನ್ನು ಪರ್ವತೇಶ್ವರ ಮಹಾರಾಜರ ಕಡೆಗೆ ಕಳಿಸಿ, ಅವರನ್ನು ಕರೆಸಿಕೊಂಡು ಅಪಮಾನ ಮಾಡಿದರು. ಪತ್ರಗಳೊಳಗಿನ ಒಂದು ಅಕ್ಷರ ಕೂಡಾ ರಾಕ್ಷಸನಿಗೆ ಗೊತ್ತಿಲ್ಲ. ತಿರುಗಿ ರಾಕ್ಷಸನೇ ರಾಜದ್ರೋಹದ ಭಯಂಕರ ಅಪರಾಧಕ್ಕೆ ಮೂಲ ಕಾರಣನೆಂದು ಜನರಲ್ಲಿ ಪ್ರಸಿದ್ಧ ಮಾಡಿದರು. ಇದರಿಂದ ರಾಕ್ಷಸನು ಪರ್ವತೇಶ್ವರ ಮಹಾರಾಜರ, ಹಾಗು ಪ್ರಜೆಗಳ ತಿರಸ್ಕಾರಕ್ಕೆ ಪಾತ್ರನಾಗಿರುತ್ತಾನೆ. ಇಂಥ ಪ್ರಸಂಗ ದಲ್ಲಿ ನೀವು ಚಾತುರ್ಯವನ್ನು ಪ್ರಕಟಿಸಿದರೆ, ರಾಕ್ಷಸನು ನಿಮ್ಮ ಪಕ್ಷಕ್ಕೆ ಒಲಿದರೂ ಒಲಿಯ ಬಹುದು. ಮೊದಮೊದಲು ರಾಕ್ಷಸನ ಮೇಲೆ ಜನರು ಸಿಟ್ಟಾಗಿದ್ದರೂ, ಈಗ ಚಾಣಕ್ಯನ ಕುಟಿಲ ನೀತಿಗಳು ಒಂದೊಂದೇ ಬೈಲಿಗೆ ಬೀಳಹತ್ತಿದ್ದರಿಂದ ಪ್ರಜೆಗಳ ಮನಸ್ಸು ರಾಕ್ಷಸನಿಗೆ ಅನುಕೂಲ ವಾಗಹತ್ತಿದೆ. ಒಟ್ಟಿಗೆ, ನೀವು ರಾಕ್ಷಸನನ್ನು ಒಲಿಸಿಕೊಂಡರೆ ಒಂದು ಪಕ್ಷದಲ್ಲಿ ನಿಮಗೆ ಯಶಸ್ಸು ಬರಬಹುದು.

ಈ ಮೇರೆಗೆ ಸಮ್ಮರ್ದಕನು ದೊಡ್ಡ ಮುತ್ಸದ್ದಿಯಂತೆ ಮಾತಾಡುವದನ್ನು ಕೇಳಿ, ಶಾಕಲಾಯನನು ಮನಸ್ಸಿನಲ್ಲಿ ಬೆದರಿಬಿದ್ದು, ಈತನು ನಿಜವಾದ ಸಂವಾಹಕನಾಗಿರಬಹುದೋ, ಚಾಣಕ್ಯನಿಂದ ಕಳಿಸಲ್ಪಟ್ಟ ಗುಪ್ತಾಚರನಾಗಿರಬಹುದೋ, ಎಂದು ಶಂಕಿಸಿದನು. ಈತನು ತನ್ನ ಬಳಿಯಿಂದ ಅತ್ತಿತ್ತ ಹೋಗದಂತೆ ಕಾವಲುಗಾರರನ್ನು ನಿಯಮಿಸಬೇಕೆಂತಲೂ ನಿರ್ಧರಿಸಿದನು. ಆ ಮೇಲೆ ಶಾಕಲಾಯನನು ಸಮ್ಮರ್ದಕನಿಗೆ–ಸಮ್ಮರ್ದಕಾ, ನಿನ್ನ ಮಾತು ನನಗೆ ಬಹು ಸಮರ್ಪಕವಾಗಿ ತೋರುತ್ತದೆ; ಆದರೆ ರಾಕ್ಷಸನನ್ನು ಕಾಣುವ ಬಗೆಯೇನು? ಆತನ ಸಂಗಡ ಎಲ್ಲಿ ಮಾತಾಡಬೇಕು? ಎಂದು ಕೇಳಲು, ಸಮ್ಮರ್ದಕರು – ಯಾಕೆ, ಅದರೊಳಗೇನು ಮಹತ್ವವಿದೆ? ರಾಕ್ಷಸನು ಪಾಟಲಿಪುತ್ರದಲ್ಲಿಯೇ ಇರುತ್ತಾನೆ. ತನ್ನ ಮೇಲೆ ಚಾಣಕ್ಯನ ಗುಪ್ತಚಾರರ ಕಣ್ಣು ಇರುತ್ತದೆಂದು ತಿಳಿದು, ಅವನು ಬೇಕಾದಲ್ಲಿಗೆ ಹೋಗವನು ಬರುವನು. ಅಂದಬಳಿಕ ನೀವು ಆತನನ್ನು ಕಂಡರೆ, ಕಾರ್ಯವು ಸಾಧಿಸಬಹುದು. ಬೇಕಾದರೆ ನಿಮಗೆ ರಾಕ್ಷಸನ ಭೆಟ್ಟಿಯನ್ನು ನಾನು ಮಾಡಿಸಿಕೊಡುತ್ತೇನೆ. ಆ ಕೆಲಸವು ನನ್ನ ಕಡೆಗೆ ಕೂಡಿತು, ಎಂದು ಹೇಳಿದನು. ಅದನ್ನು ಕೇಳಿ ಶಾಕಲಾಯನನು ಸ್ವಲ್ಪಹೊತ್ತು ಸುಮ್ಮನೆ ಕುಳಿತುಕೊಂಡು, ಆಮೇಲೆ ಸಮ್ಮರ್ದಕನಿಗೆ–ಸರಿ, ಸರಿ; ನೀನು ನನಗೆ ರಾಕ್ಷಸನ ಭೆಟ್ಟಿಯನ್ನಂತು ಮಾಡಿಸು; ಮುಂದೆ ಆಗುವದನ್ನು ಬಿಡುವದನ್ನು ನಾನು ನೋಡಿಕೊಳ್ಳುತ್ತೇನೆ, ಎಂದು ಹೇಳಿ, ನಿನ್ನಿಂದ ನನಗೆ ಇನ್ನೂ ಸಹಾಯವಾಗ ಬೇಕಾಗಿರುವದರಿಂದ ನೀನು ಅನಕಾ ನನ್ನ ಮನೆಯಲ್ಲಿಯೇ ಇರಬೇಕೆಂದು ಹೇಳಿದನು.

ರಾಕ್ಷಸನೂ – ಶಾಕಲಾಯನನೂ

ರಾಕ್ಷಸನು ಇನ್ನೂ ಪಾಟಲಿಪುತ್ರವನ್ನು ಬಿಟ್ಟಿದ್ದಿಲ್ಲೆಂಬದಿಷ್ಟೇ ಅಲ್ಲ, ಆತನು ತನ್ನ ಮೊದಲಿನ ಮಂದಿರದಲ್ಲಿಯೇ ಧೈರ್ಯದಿಂದ ತನ್ನ ಹೆಂಡಿರುಮಕ್ಕಳೊಡನೆ ಇರಹತ್ತಿದ್ದನು. ಆದರೆ ತನ್ನ ಪರಿವಾರದವರ ಹೃದಯವು ಹ್ಯಾಗಿದೆ, ಅವರ ನಡತೆಯು ಹ್ಯಾಗಿದೆ ಎಂಬದನ್ನು ಈಗ ಸೂಕ್ಷ್ಮರೀತಿಯಿಂದ ಪರೀಕ್ಷಿಸುತ್ತಿದ್ದನು. ಹಿರಣ್ಯಗುಪ್ತನು ಈಗ ಆತನ ಪರಿವಾರದಲ್ಲಿದ್ದಿಲ್ಲ. ಆತನನನ್ನು ಕಂಡು ಎಲ್ಲ ನಿಜವಾದ ವರ್ತಮಾನವನ್ನು ತಿಳಕೊಳ್ಳಬೇಕೆಂದು ರಾಕ್ಷಸನು ಹವಣಿಸುತ್ತಿದ್ದನು; ಆದರೆ ಆತನನ್ನು ಎಲ್ಲಿ ಓಡಿಸಿದ್ದರೋ ಓಡಿಸಿಬಿಟ್ಟಿದ್ದರು. ಇತ್ತ ಸಮ್ಮರ್ದಕನೆಂಬ ಸಂವಾಹಕನು ಶಾಕಲಾಯನನನ್ನು ಕರಕೊಂಡು ರಾಕ್ಷಸನ ಮನೆಯ ಹತ್ತರಕ್ಕೆ ಬಂದನು. ಸಮ್ಮರ್ದಕನು ಶಾಕಲಾಯನನಿಗೂ ಸಂವಾಹಕನ ವೇಷವನ್ನು ಹಾಕಿಸಿದ್ದನು. ಕರ್ಮಠ ಬ್ರಾಹ್ಮಣನಾದ ಆ ಶಾಕಲಾಯನನಿಗೆ ಸಂವಾಹಕನ ವೇಷವನ್ನು ಹಾಕಿಕೊಳ್ಳಲಿಕ್ಕೆ ಜೀವದಸುತ್ತ ಬಂದಿತ್ತು; ಆದರೆ ಮಾಡುತ್ತಾನೇನು? ರಾಜಕಾರ್ಯದಲ್ಲಿ ಬಿದ್ದದ್ದಕ್ಕಾಗಿ ಆ ಪವಿತ್ರ ಬ್ರಾಹ್ಮಣನು ಒಬ್ಬ ಸಂವಾಹಕನ ಹಳೇ ಉಡುಪು–ತೊಡಪುಗಳನ್ನು ಹಾಕಿಕೊಳ್ಳಬೇಕಾಯಿತು. ರಾಕ್ಷಸನ ಮನೆಯ ಬಳಿಯಲ್ಲಿ ನಿಂತಾಗ ಸಮ್ಮರ್ದಕನು ಶಾಕಲಾಯನನನ್ನು ಕುರಿತು–ಸ್ವಾಮಿ, ಒಂದು ಮಹತ್ವದ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಅದನ್ನು ಮರೆಯಲಾಗದು. ನನ್ನನ್ನು ಚಾಣಕ್ಯ–ಚಂದ್ರಗುಪ್ತರು ನಿಮ್ಮ ಬಳಿಗೆ ಕಳಿಸಿರುತ್ತಾರೆಂದು ಮಾತ್ರ ರಾಕ್ಷಸನ ಮುಂದೆ ಹೇಳಬೇಡಿರಿ. ಹೇಳಿದರೆ ಎಲ್ಲ ಕೆಲಸವು ಕೆಟ್ಟುಹೋದಿತು. ಧೂರ್ತನಾದ ರಾಕ್ಷಸನು, ಚಾಣಕ್ಯನ ಹೇಳಿಕೆಯಂತೆ ಈ ಸಂವಾಹಕನೇ ನಿಮ್ಮನ್ನು ತನ್ನ ಬಳಿಗೆ ಕರಕೊಂಡು ಬಂದಿರುತ್ತಾನೆಂದು ತಿಳಕೊಳ್ಳಬಹುದು, ಎಂದು ಹೇಳಿದನು. ಶಾಕಲಾಯನನಿಗೆ ಸಂವಾಹಕನ ಮಾತು ಸಂಯುಕ್ತಿಕವಾಗಿ ತೋರಿದ್ದರಿಂದ ಹಾಗೆಯೇ ಆಗಲೆಂದು ಆತನು ಒಪ್ಪಿಗೆಯನ್ನಿತ್ತನು.

ಇಬ್ಬರು ಸಂವಾಹಕರು ದರ್ಶನಾಪೇಕ್ಷಿಗಳಾಗಿ ಬಂದಿರುತ್ತಾರೆಂಬದನ್ನು ಕೇಳಿ ರಾಕ್ಷಸನು ಕ್ಷಣಮಾತ್ರ ಯೋಚಿಸಿದನು. ಆಮೇಲೆ ಮುಗುಳುನಗೆ ನಕ್ಕು ಅವರನ್ನು ಕರಕೊಂಡು ಬರುವದಕ್ಕಾಗಿ ಆತನು ಪ್ರತಿಹಾರಿಗೆ ಆಜ್ಞಾಪಿಸಲು, ಪ್ರತಿಹಾರಿಯು ಸಂವಾಹಕರೊಡನೆ ಒಳಗೆ ಬಂದನು. ರಾಕ್ಷಸನು ಸಂವಾಹಕರನ್ನು ನೋಡಿ, ತನ್ನ ಮನಸ್ಸಿನಲ್ಲಿ ಬಂದಿದ್ದ ಸಂಶಯವು ನಿಜವಾಗಿರುತ್ತದೆಂದು ತಿಳಿದು, ತಲೆಯಲ್ಲಾಡಿಸಿ ಸಂವಾಹಕರನ್ನು ಕುರಿತು–ನೀವು ನಿಜವಾಗಿಯೇ ಸಂವಾಹಕರಿದ್ದರೆ, ಬರ್ರಿ, ಕುಳಿತುಕೊಳ್ಳಿರಿ, ಎಂದು ಮರ್ಯಾದೆಮಾಡುವದು ಅಪ್ರಶಸ್ತವಾಗ ಬಹುದಾಗಿತ್ತು; ಆದರೆ ನೀವು ಸಂವಾಹಕರಲ್ಲ, ವೇಷಧಾರಿಗಳಿದ್ದು ಯಾವದೋ ಉದ್ದೇಶದಿಂದ ನನ್ನ ಬಳಿಗೆ ಬಂದಿರುತ್ತೀರೆಂದು ನಾನು ಅರಿತಿರುತ್ತೇನೆ; ಆದ್ದರಿಂದ ಬರ್ರಿ, ಕುಳಿತುಕೊಳ್ಳಿರಿ; ನಿಮ್ಮ ಕೆಲಸವೇನಿರುತ್ತದೆಂಬದನ್ನು ಸ್ಪಷ್ಟವಾಗಿ ಹೇಳಿರಿ. ನನ್ನಿಂದ ಯಾವ ಕೆಲಸವೂ ಈಗ ಆಗುವಂತೆ ಇಲ್ಲ; ಆದರೆ ನೀವು ಯಾವದೋ ಉದ್ದೇಶದಿಂದ ಇಲ್ಲಿಯವರೆಗೆ ಬಂದಿರುವದರಿಂದ, ಅದನ್ನು ಕೇಳಿಕೊಳ್ಳುವದು ನನ್ನ ಧರ್ಮವಾಗಿರುತ್ತದೆ.

ರಾಕ್ಷಸನ ಈ ಮಾತುಗಳನ್ನು ಕೇಳಿ, ಇಬ್ಬರು ಸಂವಾಹಕರೂ ಒಬ್ಬರ ಮೋರೆಯ ನ್ನೊಬ್ಬರು ನೋಡಹತ್ತಿದರು. ಈತನು ತಮ್ಮ ವೇಷವನ್ನು ಗೊತ್ತು ಹಿಡಿದನೆಂದು ಶಾಕಲಾಯನನು ಆಶ್ಚರ್ಯಪಟ್ಟನು; ಆದರೆ ಆತನು ಆ ಸಂಬಂಧದಿಂದ ಏನೂ ಮಾತಾಡದೆ, ರಾಕ್ಷಸನನ್ನು ಕುರಿತು —"ತಾವು ನಮ್ಮ ವೇಷವನ್ನು ಗೊತ್ತುಹಿಡಿದದ್ದರಲ್ಲಿ ಆಶ್ಚರ್ಯವೇನು? ಯಾವನೊಬ್ಬನ ಮೋಸವನ್ನು ಬೈಲಿಗೆಳೆದು, ಆತನ ಮೇಲೆ ವರ್ಚಸ್ಸು ಕೂಡ್ರಿಸುವದು ನಿಮ್ಮ ಶೀಲವೇ ಆಗಿರುವದು. ಇರಲಿ, ನಾನೂ ಇನ್ನು ಹೆಚ್ಚು ಕಡಿಮೆ ಮಾತಾಡುವದಿಲ್ಲ, ಪ್ರಸಿದ್ಧರೀತಿಯಿಂದ ತಮ್ಮನ್ನು ಕಾಣುವದು ಅಪಾಯಕರವಾಗಿ ತೋರಿದ್ದರಿಂದ ವೇಷಾಂತರದಿಂದ ದರ್ಶನಕ್ಕೆ ಬಂದೆನು, ನಾನು ಯಾರೆಂಬದನ್ನು ಹೇಳುವ ಮೊದಲು, ಈ ಸ್ಥಳದಲ್ಲಿ ಮನಬಿಚ್ಚಿ ಮಾತಾಡಲಿಕ್ಕೆ ತೊಂದರೆಯಿಲ್ಲೆಂಬದು ತಿಳಿದರೆ ನೆಟ್ಟಗಾಗುವದು."

ರಾಕ್ಷಸ – ಏನೂ ಸಂಕೋಚಪಡದೆ ಮಾತಾಡಿರಿ; ನೀವು ಯಾವದೇಶದಿಂದ ಬಂದಿರಿ? ಯಾಕೆ ಬಂದಿರಿ? ನೀವು ಸಂವಾಹಕರಲ್ಲ, ಯಾರೋ ರಾಜಪುರುಷರಿರುತ್ತೀರಿ.

ಶಾಕಲಾಯನ—ಅಮಾತ್ಯಶ್ರೇಷ್ಠಾ, ಹೌದು. ನಾನು ರಾಜಪುರುಷನಿರುವದು ನಿಜವು, ನಾನು ಸ್ವಾಮಿಕಾರ್ಯಕ್ಕಾಗಿಯೇ ಬಂದಿರುತ್ತೇನೆ.

ರಾಕ್ಷಸನ—ಅದೇನು ಕೆಲಸ? ನಿಮ್ಮ ಸ್ವಾಮಿ ಯಾರು? ಹೇಳತಕ್ಕದ್ದನ್ನು ವಿಶ್ವಾಸ ಪೂರ್ವಕವಾಗಿ ಹೇಳಿರಿ.

ಶಾಕಲಾಯನ—ನಾನು ವಿಶ್ವಾಸಪೂರ್ವಕವಾಗಿಯೇ ಹೇಳುತ್ತೇನೆ. ನಾನು ಪರ್ವತೇಶ್ವರನ ಮಗನಾದ ಮಲಯಕೇತುವಿನ ಕಡೆಯಿಂದ ಬಂದಿರುವೆನು.

ರಾಕ್ಷಸ—ಶಾಕಲಾಯನನೆಂಬ ಹೆಸರಿನ ಯಾವನೋ ಮಂತ್ರಿಶ್ರೇಷ್ಠನು ಇತ್ತಕಡೆಗೆ ಬಂದಿರುತ್ತಾನೆಂದು ನಮ್ಮ ಚಾರನು ಹೇಳಿದ್ದು ನಿಜವು. ಆತನ ತಂದೆಯನ್ನು ಮೋಸಗೊಳಿಸಿ ಇಲ್ಲಿಗೆ ಕರೆತಂದು ಸೆರೆಯಲ್ಲಿಡಿಸಲಿಕ್ಕೆ ನಾನೇ ಕಾರಣನೆಂದು, ಮಲಯಕೇತುವು ನನ್ನ ಮೇಲೆ ಸಂತಾಪಗೊಂಡಿವನೇನು? ಏನು ನನ್ನನ್ನು ಹಿಡಕೊಂಡು ಬರುವದಕ್ಕಾಗಿ ನಿಮ್ಮನ್ನು ಕಳಿಸಿರುವನೋ?

ಶಾಕಲಾಯನ—ಛೇ, ಛೇ, ಅಮಾತ್ಯರಾಜರೇ, ನೀವು ಹೀಗೆ ಮಾತಾಡಬೇಡಿರಿ, ಮಲಯಕೇತುವು ತಮ್ಮ ಮೇಲೆ ಸಿಟ್ಟಾಗಿರುವದು ನಿಜವು; ಹಾಗೆ ಸಿಟ್ಟಾಗುವದರಲ್ಲಿ ಆಶ್ಚರ್ಯವೇನೂ ಇಲ್ಲ; ಆದರೆ ಇಲ್ಲಿಗೆ ಬಂದ ಬಳಿಕ ನನಗೆ ಗೊತ್ತಾಗಿರುವ ಸಂಗತಿಯಿಂದ, ಆ ನಮ್ಮ ಮಹಾರಾಜರನ್ನು ಮೋಸಗೊಳಿಸಿದ ನೀಚಕೃತ್ಯದಲ್ಲಿ ನಿಮ್ಮ ಅಂಗವು ಎಷ್ಟು ಮಾತ್ರವೂ ಇಲ್ಲೆಂಬದು ನನಗೆ ಗೊತ್ತಾಗಿದೆ. ಅಂತೇ ನಾನು ನಿಮ್ಮ ಬಳಿಗೆ ಬಂದಿದ್ದೇನೆ.

ರಾಕ್ಷಸ—ಈ ಮಾತು ನಿಮಗೆ ಹ್ಯಾಗೆ ಗೊತ್ತಾಯಿತು? ಈ ಪಾಟಲಿಪುತ್ರದ ಜನರು ನಾನೇ ಸ್ವಾಮಿದ್ರೋಹಿಯೆಂತಲೂ, ದೇಶದ್ರೋಹಿಯೆಂತಲೂ ತಿಳಿದಿರುತ್ತಾರೆ. ಚಾಣಕ್ಯ–ಚಂದ್ರಗುಪ್ತರು ಇದ್ದರೆಂತಲೇ ತಮ್ಮ ಪರಿಣಾಮವಾಯಿತೆಂದು ಅವರ ನಂಬಿಗೆಯಾಗಿದೆ. ಹೀಗಿರಲು ಬೇರೆ ವಿಧವಾಗಿ ನಿಮಗೆ ಯಾರು ಹೇಳಿದರು?

ಶಾಕಲಾಯನ—ಒಬ್ಬರೇಕೆ? ನೀವು ಅಪರಾಧಿಗಳೆಲ್ಲಂತಲೂ, ನಿಮ್ಮಿಂದ ಇಂಥ ಕೃತ್ಯವಾಗಲಾರದೆಂತಲೂ ಹೇಳುವವರು ಬಹುಜನರು ಈ ಪಾಟಲಿಪುತ್ರದಲ್ಲಿ ಸದ್ಯಕ್ಕೆ ಇದ್ದಾರೆ. ಅವರ ದೃಢತರವಾದ ವಿಶ್ವಾಸವು ಇನ್ನೂ ನಿಮ್ಮ ಮೇಲೆ ಇರುತ್ತದೆ.

ರಾಕ್ಷಸ—ಏನು? ಅಂತು ಇನ್ನೂ ಕೆಲವು ವಿಚಾರವಂತರು ಮಗಧರಾಜ್ಯದಲ್ಲಿ ಇದ್ದಾರೆಂದ ಹಾಗಾಯಿತು. ಒಳ್ಳೇದು ಮುಂದೆ?

ಶಾಕಲಾಯನ—ಕಾರಣವಿಲ್ಲದೆ ನಿಮ್ಮ ಮೇಲೆ ಅಪವಾದ ಹೊರಿಸಿದ್ದಕ್ಕಾಗಿ ನೀವು ಸಿಟ್ಟಾಗಿರಬಹುದೆಂತಲೂ, ಅಪವಾದವನ್ನು ದೂರಮಾಡಿಕೊಳ್ಳಲು ನೀವು ಉತ್ಸುಕರಾಗಿರ ಬಹುದೆಂತಲೂ ತಿಳಿದು ನಾನು ತಮ್ಮ ಬಳಿಗೆ ಬಂದಿದ್ದೇನೆ.

ರಾಕ್ಷಸ—ಮನಸ್ಸಿನಲ್ಲಿರುವದಕ್ಕೂ ಕೈಯಿಂದಾಗುವದಕ್ಕೂ ಎಷ್ಟು ಅಂತರವಿರುತ್ತದೆಂಬದು ತಮಗೆ ಗೊತ್ತೇ ಇರುವದು.

ಶಾಕಲಾಯನ—ಆ ಮಾತು ಸಾಧಾರಣ ಜನರದಾಯಿತು, ತಮ್ಮಂಥ ಅಸಾಧಾರಣ ಮನುಷ್ಯರಿಗೆ ಯಾವದು ತಾನೇ ಅಶಕ್ಯವಾಗಿರುವದು?

ರಾಕ್ಷಸ—ನಾನೆಂಥ ಅಸಾಧಾರಣ ಪುರುಷನು? ನಾನು ಸಾಧಾರಣರಲ್ಲಿ ಸಾಧಾರಣ ನಾಗಿದ್ದೇನೆ. ಈಗೊದಗಿದ್ದ ಪ್ರಸಂಗವೇ ಅದಕ್ಕೆ ಸಾಕ್ಷಿಯಾಗಿರುತ್ತದೆ. ಇರಲಿ, ನೀವು ಇಲ್ಲಿಗೆ ಬಂದ ಕಾರಣವೇ ತಿಳಿಯಲಿಲ್ಲವಲ್ಲ; ಪ್ರತಿಬಂಧವಿಲ್ಲದಿದ್ದರೆ, ಕೇಳುವ ಇಚ್ಛೆಯದೆ.

ಶಾಕಲಾಯನ—ನಾನು ಮಲಯಕೇತುವಿನ ಸಂದೇಶವನ್ನು ಚಂದ್ರಗುಪ್ತನಿಗೆ ತಿಳಿಸು ವದಕ್ಕಾಗಿ ಬಂದಿದ್ದೇನೆ. ತನ್ನ ತಂದೆಯನ್ನು ಕೂಡಲೇ ಬಿಟ್ಟುಕೊಟ್ಟು ಒಂದು ಕೋಟ ಹೊನ್ನನ್ನು ಕಾಣಿಕೆಯಾಗಿ ಕೊಡಬೇಕು. ಇಲ್ಲವೆ ಯುದ್ಧಕ್ಕೆ ಸಿದ್ಧವಾಗಬೇಕೆಂಬದು ಮಲಯಕೇತುವಿನ ಸಂದೇಶದ ತಾತ್ಪರ್ಯವಾಗಿರುತ್ತದೆ.

ರಾಕ್ಷಸ—ಏನು? ಈ ನಿರೂಪವನ್ನು ಮಲಯಕೇತುವು ಚಂದ್ರಗುಪ್ತನಿಗೆ ಕಳಿಸಿರುವನೆ?

ಶಾಕಲಾಯನ—ಹೌದು, ಮಲಯಕೇತುವೇ ಹೀಗೆ ಹೇಳಿಕಳಿಸಿದ್ದಾನೆ. ಅದನ್ನು ಹೇಳು ವದಕ್ಕಾಗಿಯೇ ನನ್ನನ್ನು ದೂತನನ್ನಾಗಿ ಕಳಿಸಿರುವನು. ಯಾಕೆ? ಇದರಲ್ಲಿ ತಮಗೆ ಆಶ್ಚರ್ಯವೇನು ತೋರಿತು?

ರಾಕ್ಷಸ—ಪತಂಗವು ದೀಪದಮೇಲೆ ಬೀಳುವದೆಂದರೆ, ಯಾರಿಗೆ ಆಶ್ಚರ್ಯವಾಗಲಿಕ್ಕಿಲ್ಲ?

ಶಾಕಲಾಯನ—ಮಲಯಕೇತುವಿಗೆ ಶಲಭವನ್ನು ಹೋಲಿಸುವಿರಿ; ಆದರೆ ಅವನು ಹಾಗೆ ಅವಿಚಾರಿಯಿರುವದಿಲ್ಲ.

ರಾಕ್ಷಸ—ಅವನು ಹಾಗೆ ಅವಿಚಾರಿಯಲ್ಲದಿದ್ದರೆ, ತನ್ನೊಬ್ಬನ ಸಾಮರ್ಥ್ಯವನ್ನು ನಂಬಿ ಆತನು ಚಂದ್ರಗುಪ್ತನಿಗೆ ಹೀಗೆ ಹೇಳಿ ಕಳಿಸಿಕೊಡುತ್ತಿದ್ದಿಲ್ಲ. ಆತನಿಗೆ ಬೇರೆ ಯಾವನೊಬ್ಬ ಬಲಾಢ್ಯರಾಜನ ಸಹಾಯವಿದ್ದರೆ, ಒಂದು ಪಕ್ಷದಲ್ಲಿ ನಿಮ್ಮ ಮಾತು ಶಕ್ಯವಾದರೂ ಆಗಬಹುದು.

ಶಾಕಲಾಯನ—ಅಂಥ ಸಹಾಯವು ಬೇಕಾಗಿರುವದರಿಂದಲೇ ಈಗ ತಮ್ಮ ಕಡೆಗೆ ಬಂದಿದ್ದೇನೆ. ತಮ್ಮ ಸಹಾಯವು ದೊರೆತರೆ ಎಲ್ಲ ಕೆಲಸವು ಯಥಾಸಾಂಗವಾಗುವಹಾಗಿದೆ.

ರಾಕ್ಷಸ—ನನ್ನ ಕಡೆಗೆ ಬಂದರೆ ನನ್ನಿಂದ ನಿಮಗೆ ಆಗುವ ಸಹಾಯವೇನು?

ಶಾಕಲಾಯನ—ಬೇಕಾದದ್ದು ಆಗುವದು. ಸದ್ಯಕ್ಕೆ ತಾವು ಲೋಕಾಪವಾದಕ್ಕೆ ಗುರಿಯಾಗಿದ್ದರೂ, ತಮ್ಮಿಂದಾಗಬಹುದಾದ ಕಾರ್ಯವು ಬೇರೆಯಾರಿಂದಲೂ ಆಗುವಹಾಗಿಲ್ಲ.

ರಾಕ್ಷಸ—ಒಳ್ಳೇದು, ಅದು ಹ್ಯಾಗಾದರೂ ಇರಲಿ, ಮಲಯಕೇತುವಿನ ಬೆನ್ನಮೇಲೆ ಮತ್ತೆ ಯಾರಿರುವರು?

ಶಾಕಲಾಯನ—ಇನ್ನು ಯಾರು ಇರಬೇಕು? (ಹೀಗೆಂದು ಶಾಕಲಾಯನನು ರಾಕ್ಷಸನನ್ನು ಆಶ್ಚರ್ಯದಿಂದ ನೋಡತೊಡಗಿದನು.)

ರಾಕ್ಷಸ—ಇತ್ತ ನನ್ನ ಮಾತು ಕೇಳಿರಿ, ವಿಶ್ವಾಸಪೂರ್ವಕವಾಗಿ ಹೇಳುವೆನೆಂದು ನುಡಿದಂತೆ ಈಗ ನೀವು ಹೇಳುವಹಾಗಿದ್ದರೆ ಇದ್ದದ್ದನ್ನು ಮುಚ್ಚದೆ ಹೇಳಿರಿ. ಅನ್ಯರ ಸಹಾಯವಿದ್ದ ಹೊರತು ಮಲಯಕೇತು ಮಗಧದ ಮೇಲೆ ದಂಡೆತ್ತಿಬರುವದು ಶಕ್ಯವೇ ಇರುವದಿಲ್ಲ, ಸದ್ಯಕ್ಕೆ ಮಗಧದ ವಿರುದ್ಧ ಸಹಾಯಮಾಡುವ ಸಾಮರ್ಥ್ಯವು ಗ್ರೀಕರಾಜನಾದ ಸಲುಕ್ಷಸನಿಕತ್ತರನ ಹೊರತು ಬೇರೆಯವರಿಗೆ ಇರುವದಿಲ್ಲ, ಹೇಳಿರಿ, ಅವನೇ ಸಹಾಯ ಮಾಡಲು ಒಡಂಬಟ್ಟಿರುವನೋ ಇಲ್ಲವೋ?

ಶಾಕಲಾಯನ (ತಪ್ಪಿಸಾಡುವದರಲ್ಲಿ ಅರ್ಥವಿಲ್ಲೆಂದು ತಿಳಿದು)—ಹೌದು, ನೀವಾಡುವ ಮಾತು ನಿಜವಿರುತ್ತದೆ. ಮಲಯಕೇತುವಿಗೆ ಸಲುಕ್ಷಸನಿಕತ್ತರನ ಸಹಾಯವು ಪೂರ್ಣವಾಗಿರುತ್ತದೆ. ಹೊರಗಿನಿಂದ ಆತನ ಸಹಾಯವಿದ್ದಂತೆ, ಒಳಗಿನಿಂದ ನಿಮ್ಮ ಸಹಾಯವಿರಬೇಕೆಂದು ನಾನು ಹೇಳಿಕೊಳ್ಳುತ್ತೇನೆ. ಈವೊತ್ತಿಗೆ ತಮಗೆ ಪಾಟಲಿಪುತ್ರದಲ್ಲಿ ಬಹು ಸ್ವಲ್ಪ ಜನರು ಅನುಕೂಲ ವಾಗಿದ್ದರೂ, ಮುಂದೆ ಹೆಚ್ಚು ಜನರ ಅನುಕೂಲ್ಯವು ನಿಶ್ಚಯವಾಗಿ ದೊರೆಯುವ ಸಂಭವವಿದೆ. ನೋಡಿರಿ, ನೀವು ಸಹಾಯಮಾಡಿದರೆ, ನಿಮ್ಮ ಕಾರ್ಯವೂ ಆಗುವದು, ಚಾಣಕ್ಯ-ಚಂದ್ರಗುಪ್ತರ ಸೇಡು ತೀರಿಸಿಕೊಂಡ ಹಾಗೂ ಆಗುವದು; ಅವರ ಪರಾಭವವಾದರೆ, ಪರ್ವತೇಶ್ವರನು ಬಂಧಮುಕ್ತನಾಗಿ ಮಲಯಕೇತುವಿಗೂ ಸಮಾಧಾನವಾಗುವದು.

ಇದನ್ನು ಕೇಳಿ ರಾಕ್ಷಸನು ಹುಬ್ಬು ಗಂಟಿಕ್ಕಿ ತಲೆತಿಕ್ಕಿಕೊಳ್ಳುತ್ತ ಶಾಕಲಾಯನನ ಕಡೆಗೆ ಚಮತ್ಕಾರದ ದೃಷ್ಟಿಯಿಂದ ನೋಡುತ್ತ–ಮಂತ್ರಿವರರೇ, ಮುಚ್ಚಿ ಇಡುವದೇಕೆ? ಯವನ ಕ್ಷತ್ರಪನಾದ ಸಲುಕ್ಷಸನಿಕತ್ತರನಿಗೆ ಏನು ಲಾಭವಾಗುತ್ತದೆಂಬದನ್ನಷ್ಟೆ ಹೇಳಿಬಿಡಿರಿ, ಎಂದು ಕರ್ಕಶಸ್ವರದಿಂದ ನುಡಿಯಲು, ಶಾಕಲಾಯನನು ಕೆಲವು ಹೊತ್ತುಸುಮ್ಮನೆ ಕುಳಿತುಕೊಂಡನು. ಆಗ ರಾಕ್ಷಸನು–ಯಾಕರೀ? ಸುಮ್ಮನೆ ಕುಳಿತಕೊಂಡಿರಿ? ಸಲುಕ್ಷಸನಿಕತ್ತರನು ಮಲಯಕೇತುವಿಗೆ ಈಪರಿ ಸಹಾಯಮಾಡುವದರಲ್ಲಿ ಅವನದೇನಾದರೂ ಹೇತುವು ಇದ್ದಿತೋ ಇರಲಿಕ್ಕಿಲ್ಲವೋ? ಇದರಿಂದ ಅವನಿಗೆ ಲಾಭವೇನು? ಎಂದು ಕೇಳಲು, ಶಾಕಲಾಯನನು – ಹೆಚ್ಚಿನ ಲಾಭವೇನಿರ ಬೇಕು? ಕೇವಲ ಮಿತ್ರತ್ವವನ್ನು ಸ್ಮರಿಸಿ ಆತನು ಸಹಾಯ ಮಾಡುತ್ತಿರುವನು, ಎಂದು ಹೇಳಿದನು.

ಇದನ್ನು ಕೇಳಿ ರಾಕ್ಷಸನು ನಕ್ಕು, ಶಾಕಲಾಯನನನ್ನು ನೋಡಿ ನುಡಿದನೇನಂದರೆ–ತಮ್ಮನ್ನು ಮಲಯಕೇತು–ಸಲುಕ್ಷಸರಿಬ್ಬರೂ ಆರಿಸಿ ದೌತ್ಯಕರ್ಮಕ್ಕಾಗಿ ಕಳಿಸಿರುವದರಿಂದ, ತಾವು

ಮಂತ್ರಿಶ್ರೇಷ್ಠರಿರುವಿರೆಂಬದರಲ್ಲಿ ಸಂಶಯವಿಲ್ಲ; ಅಂದಬಳಿಕ ಮಿತ್ರತ್ವದ ಹೊರತು ಸಲುಕ್ಷಸನ ಬೇರೆ ಯಾವ ಹೇತುವೂ ಇಲ್ಲೆಂದು ನಿಮಗಾದರೂ ಹ್ಯಾಗೆ ತೋರಿತು? ನಮಗೆ ಹಾಗೇ ತೋರುತ್ತದೆಂದು ನೀವು ಹೇಳುತ್ತಿದ್ದರೆ, ಅದರಲ್ಲೇನು ಅರ್ಥರ್ಜ್ಞವಿಲ್ಲ, ಸಲುಕ್ಷಸನು ಬಹು ಮಹಾತ್ವಾಕಾಂಕ್ಷಿಯು, ಮಗಧವನ್ನು ಗೆಲ್ಲಬೇಕೆಂದು ಆತನು ಎದುರುನೋಡುತ್ತಿರುವನು. ಅಂದ ಬಳಿಕ ಆತನು ಮಲಯಕೇತುವಿಗೆ ಸಹಾಯಮಾಡುವಲ್ಲಿ ಆಶ್ಚರ್ಯವೇನು?

ಶಾಕಲಾಯನ—ಒಳ್ಳೇದು, ನಿಮ್ಮಂತೆಯೇ ಆಗಲಿ ಸಲುಕ್ಷಸನ ಮನಸ್ಸಿನಲ್ಲಿ ಹಾಗೆ ಇದ್ದರೆ ಏನಾಯಿತು?

ರಾಕ್ಷಸ—ಏನಾಯಿತೆಂದು ಕೇಳುವಿರೋ? ಆಗಬೇಕಾಗಿದ್ದಷ್ಟಕ್ಕಿಂತ ಹೆಚ್ಚು ಆಯಿತೆಂದು ತಿಳಿಯಿರಿ. ಇನ್ನೇನಾಗತಕ್ಕದ್ದು ಉಳಿಯಿತು, ನೀವೇ ವಿಚಾರಮಾಡಿ ಹೇಳಿರಿ. ಮಂತ್ರಿಶ್ರೇಷ್ಠರೇ, ಯವನರ ಮನಸ್ಸಿನಲ್ಲಿ ಯಾವತ್ತು ಆರ್ಯಾವರ್ತವನ್ನೂ, ಆರ್ಯರ ಎಲ್ಲ ರಾಜ್ಯಗಳನ್ನೂ ತಕ್ಕೊಳ್ಳುವದಿರುತ್ತದೆಂಬದನ್ನು ನೀವು ಮರೆಯುತ್ತೀರೇನು? ಹಾಗಿಲ್ಲದೆ, ಗ್ರೀಕರಾಜನಾದ ಶಿಕಂದರ ಬಾದಶಹನು ಪರ್ವತರಾಜನನ್ನು ಒಮ್ಮೆ ಗೆದ್ದು ತಿರುಗಿ ಆತನನ್ನು ಮಾಡಲೀಕನನ್ನಾಗಿ ಮಾಡಿ ರಾಜ್ಯವಾಳಗೊಟ್ಟಿರುವನೇನು? ಹಾಗಿಲ್ಲದೆ ಆತನು ಪರ್ವತ ರಾಜ್ಯದಲ್ಲಿ ಯವನ ಸೈನಿಕರನ್ನೂ-ಮ್ಲೇಂಛ ಸೈನಿಕರನ್ನೂ ಇಟ್ಟಿರುವನೇನು? ಆ ಗ್ರೀಕರ ಮಾಂಡಲಿಕನಾಗಿರುವಲ್ಲಿ ಪರ್ವತೇಶ್ವರನಿಗೆ ಏನು ಹಿತತೋರಿರುವದೋ ತೋರಿರಲೊಲ್ಲದೇಕೆ, ನನಗಂತು ಹಾಗೆಮಾಡಿದ್ದು ಇಷ್ಟವಾಗಿ ತೋರುವದಿಲ್ಲ, ಈಗ ಮಲಯಕೇತುವು ಸಲುಕ್ಷಸನ ಸಹಾಯಪಡೆದದ್ದಂತು ತೀರ ಅಯೋಗ್ಯವು.

ಶಾಕಲಾಯನ—ಅದೇಕೆ ಅನಿಷ್ಟಕರವು? ತಮ್ಮ ಕೈಯಿಂದಾಗದ ಹಾಗಿದ್ದರೆ.....

ರಾಕ್ಷಸ—ಶಾಂತಂಪಾಪಂ!-ಮಂತ್ರಿಶ್ರೇಷ್ಠರೇ, ನೀವು ಹೀಗೆ ಮಾತಾಡಬಹುದೇ? ನಿಮಗೆ ಸಹಾಯವು ಬೇಕಾಗಿದ್ದರೆ ಸಜಾತಿಯ ರಾಜರ ಸಹಾಯವನ್ನು ಪಡೆಯಬಹುದಾಗಿತ್ತು, ಅಲೇಕ್ಸಂದರನು ಇಟ್ಟಂಥ ಕ್ಷತ್ರಪನ ಸಹಾಯದಿಂದ ಶತ್ರುಗಳ ನಾಶಮಾಡಬೇಕೆಂದು ಹವಣಿಸುವರೇ?

ಶಾಕಲಾಯನ —ಹಾಗೆ ಮಾಡದಿದ್ದರೆ ಎರಡನೆಯ ಗತಿಯೇನು?

ರಾಕ್ಷಸ—ಎರಡನೆಯ ಗತಿಯು ಸ್ವಸ್ಥ ಕುಳಿತುಕೊಳ್ಳುವದು!

ಶಾಕಲಾಯನ—ಒಟ್ಟಿಗೆ ತಮ್ಮ ಸಹಾಯವು ನಮಗೆ ದೊರೆಯುವ ಹಾಗಿಲ್ಲ?

ರಾಕ್ಷಸ—ಎಂದಿಗೂ ದೊರೆಯದು! ಈ ದುಷ್ಟರು ರಾಜಕುಲವನ್ನು ನಷ್ಟಪಡಿಸಿ, ನನ್ನನ್ನು ದುರ್ಲೌಕಿಕಕ್ಕೆ ಗುರಿಮಾಡಿದ್ದರ ಸೇಡು ತೀರಿಸಿಕೊಳ್ಳುವ ಇಚ್ಛೆ ನನಗಿದ್ದರೂ, ಆ ಇಚ್ಛಾಪೂರ್ತಿಗಾಗಿ ನಾನು ಸಲುಕ್ಷಸನ ನೆರವನ್ನು ಕೇಳಲಾರೆನು. ಆತನು ತಾನಾಗಿ ಸಹಾಯ ಮಾಡುತ್ತೇನೆಂದು ಬಂದರೂ, ಅದಕ್ಕೆ ನಾನು ಒಪ್ಪಲಾರೆನು. ಶಿವ! ಶಿವ! ಅಂಥ ಬುದ್ಧಿಯು ಹುಟ್ಟುವದು ಸರ್ವನಾಶದ ಚಿನ್ಹವಾಗಿರುತ್ತದೆಂಬದನ್ನು ಮರೆಯಲಾಗದು. ಮಂತ್ರಿಶ್ರೇಷ್ಠಾ, ರಾಕ್ಷಸನು ನಂದವಂಶದ ಸೇವಕನಾಗಿರುವಂತೆ ಮಗಧದೇಶದ ಸೇವಕನೂ ಆಗಿರುವನು;

ಅಂದಬಳಿಕ ನಂದವಂಶದ ಉಚ್ಛೇದವಾಯಿತೆಂದು, ಆತನು ಮಗಧದೇಶದ ಉಚ್ಛೇದವನ್ನೂ, ಹ್ಯಾಗೆ ಮಾಡಿಕೊಂಡಾನು? ಈ ರಾಕ್ಷಸನು ಚಾಣಕ್ಯ-ಚಂದ್ರಗುಪ್ತ ಭಾಗುರಾಯಣನನ್ನು ಎಷ್ಟು ದ್ವೇಷಿಸುತ್ತಿದ್ದರೂ, ಆತನು ಮಗಧವನ್ನು ಮ್ಲೇಂಛರ ಕೈಸೇರಿಸುವ ಪ್ರಸಂಗದಲ್ಲಿ ಎಷ್ಟುಮಾತ್ರವೂ ಸಹಾಯ ಮಾಡನು. ಇಬ್ಬರ ಜಗಳದಲ್ಲಿ ಮೂರನೇಯವನೊಬ್ಬ ಕಳ್ಳನು ಬಂದು, ಇಬ್ಬರನ್ನೂ ಸುಲಿಯುವಂತೆ ಮಾಡುವದು ಸರ್ವಥಾ ಯೋಗ್ಯವಲ್ಲ. ನನ್ನಿಂದ ಏನಾದರೂ ಆದರೆ, ನಾನು ಚಂದ್ರಗುಪ್ತನಿಗೆ ಸಹಾಯವನ್ನೇ ಮಾಡೇನು? ಇಲ್ಲದಿದ್ದರೆ ಸುಮ್ಮನೆ ಕುಳಿತುಕೊಂಡೇನು; ಆದರೆ, ಮಗದದೇಶವನ್ನು ಮ್ಲೇಂಛಾಧಿಪತಿಯಾದ ಪರ್ವತೇಶ್ವರನ ಹಾಗು ಯವನ ಕ್ಷತ್ರಪನಾದ ಸಲುಕ್ಷಸನಿಕತ್ತರನ ಕೈಸೇರಗೊಡಲಿಕ್ಕಿಲ್ಲ. ತಿರುಗಿ ನಿಮ್ಮ ಈ ಆರ್ಯಜಿವ್ಹೆಯಿಂದ ಇಂಥ ಅಯೋಗ್ಯ ಸಹಾಯವನ್ನು ಯೋಚಿಸಬೇಡಿರಿ. ಬಂದಹಾದಿಯಿಂದ ತಿರುಗಿಹೋಗಿರಿ. ಏಳಿರಿಲ್ಲಿಂದ! ಅನ್ನಲು, ಶಾಕಲಾಯನನು ರಾಕ್ಷಸನ ಈ ಮಾತುಗಳನ್ನು ಕೇಳಿ, ದಂಗುಬಡೆದು ಕುಳಿತುಕೊಂಡನು. ಆತನಿಗೆ ಹೆಚ್ಚಗೆ ಮಾತಾಡುವ ಧೈರ್ಯವಾಗದ್ದರಿಂದ ಸ್ವಲ್ಪಹೊತ್ತು ಕುಳಿತಂತೆ ಮಾಡಿ ತನ್ನ ಸಂಗಡಿಗನೊಡನೆ ಹೊರಟು ಹೋದನು.

ರಾಕ್ಷಸನೂ – ಚಾಣಕ್ಯನೂ

ಶಾಕಲಾಯನನ ಹೃದ್ಗತವನ್ನು ತಿಳಕೊಳ್ಳುವದಕ್ಕಾಗಿ ಚಾಣಕ್ಯನು ಸಮ್ಮರ್ದಕನೆಂಬ ಹೆಸರಿನ ಸಂವಾಹಕನನ್ನು ಅಲ್ಲಿಗೆ ಕಳಿಸಿದ್ದನೆಂಬದನ್ನು ವಾಚಕರಿಗೆ ನೆನಪು ಮಾಡಿಕೊಡುವ ಕಾರಣವಿಲ್ಲ. ಚಾಣಕ್ಯನ ಮುಖ್ಯ ಸಹಾಯಕನಾದ ಸಿದ್ಧಾರ್ಥಕನು ಸಂವಾಹಕನ ವೇಷದಿಂದ ಶಾಕಲಾಯನನ ಬಳಿಗೆ ಹೋಗಿದ್ದನೆಂಬದನ್ನು ಮಾತ್ರ ವಾಚಕರು ಈಗ ಕೇಳಿಕೊಳ್ಳಬೇಕು. ಸಿದ್ಧಾರ್ಥಕನು ಚಾಣಕ್ಯನ ಪರ್ಣಕುಟಕೆಗೆ ಬಂದು, ತಾನು ಶಾಕಲಾಯನನೊಡನೆ ರಾಕ್ಷಸನ ಬಳಿಗೆ ಹೋದಾಗ ನಡೆದ ಸಂಗತಿಯನ್ನೆಲ್ಲ ಕ್ರಮವಾಗಿ ಹೇಳತೊಡಗಿದನು. ಸಂವಾಹಕ ವೇಷಧಾರಿಯಾದ ತನ್ನ ಗುರುತು, ರಾಕ್ಷಸನಿಗೆ ಎಷ್ಟುಮಾತ್ರವೂ ಹತ್ತಲಿಲ್ಲೆಂದು ಸಿದ್ಧಾರ್ಥಕನು ಮೊದಲೇ ಚಾಣಕ್ಯನಿಗೆ ಹೇಳಿದ್ದನು. ಸಿದ್ಧಾರ್ಥಕನ ಮಾತುಗಳನ್ನು ಕೇಳುತ್ತ ಹೋದಂತೆ ಚಾಣಕ್ಯನ ಮನಸ್ಸಿನ ಸ್ಥಿತಿಯು ಬದಲಿಸಹತ್ತಿತ್ತು. ಆತನು ರಾಕ್ಷಸನ ವಿಷಯವಾಗಿ ಅತ್ಯಂತ ಪೂಜ್ಯಬುದ್ಧಿಯುಳ್ಳವನಾದನು. ವಿಚಾರದ ಭಾರದಲ್ಲಿ ಚಾಣಕ್ಯನು ಒಮ್ಮೆಲೆ ಎದ್ದುನಿಂತು ಉಚ್ಚಸ್ವರದಿಂದ-ಶಾಬಾಸ, ರಾಕ್ಷಸಾ! ನಿನ್ನ ಸರಳತ್ವದಮುಂದೆ ನನ್ನ ಕೌಟಿಲ್ಯದ ಆಟವು ನಡೆಯಲಿಲ್ಲೆಂಬದೇ ನಿಜವು. ನಿನ್ನ ಸ್ಥಿತಿಯಲ್ಲಿ ನಾನಿದ್ದರೆ, ನಾನು ನಿನ್ನನ್ನು ಹೊಂದಿಸಿದ ಗತಿಗೆ ನೀನು ನನ್ನನ್ನು ಹೊಂದಿಸಿದ್ದರೆ, ನಾನು ನಿಶ್ಚಯವಾಗಿ ಮಲಯಕೇತುವನ್ನು ಕೂಡಿಕೊಂಡು, ಮಗಧರಾಜ್ಯವನ್ನು ಯವನರಿಗೆ ಒಪ್ಪಿಸಲಿಕ್ಕೆ ಹಿಂದೆ ಮುಂದೆ ನೋಡುತ್ತಿದ್ದಿಲ್ಲ. ರಾಕ್ಷಸಾ, ಉಪಚಾರಕ್ಕಾಗಿ ನಾನು ಈ ಮಾತುಗಳನ್ನು ಆಡುವದಿಲ್ಲ ನನ್ನ ಕೃತಿಯೇ ಇದಕ್ಕೆ ಸಾಕ್ಷಿಯಾಗಿರು

ವದು. ಪ್ರತಿಜ್ಞೆಯನ್ನು ಪೂರಯಿಸುವ ಭರದಲ್ಲಿ ನಾನು ಧನಾನಂದನನ್ನು ಕೊಲ್ಲಿಸಿ ರಾಜಹತ್ಯ ಮಾಡಿದೆನು, ಸುಮಾಲ್ಯಾದಿ ಕುಮಾರರನ್ನು ಕೊಲ್ಲಿಸಿ ಬಾಲಹತ್ಯ ಮಾಡಿದೆನು, ಮುರೆಯನ್ನು ಕೊಲ್ಲಿಸಿ ಸ್ತ್ರೀಹತ್ಯ ಮಾಡಿದೆನು. ಅಸತ್ಯಬಾಷಣವಂತು ನನ್ನ ನಿತ್ಯದ ವ್ಯವಹಾರವಾಗಿದೆ; ಅನ್ಯರನ್ನು ಮೋಸಗೊಳಿಸುವಲ್ಲಿ ನನ್ನ ಕೈಯು-ಕೂತುಹೋಗಿದೆ. ಬ್ರಾಹ್ಮಣನಿದ್ದು ಯಾವ ಬಗೆಯ ಕ್ರೂರಕರ್ಮ ಮಾಡಲಿಕ್ಕೂ ನಾನು ಹೇಸಲಿಲ್ಲ; ಅಂದಬಳಿಕ ಹೊತ್ತುಬಿದ್ದದ್ದರೆ, ಯವನರಿಗೆ ಮಗಧವನ್ನು ಒಪ್ಪಿಸಲಿಕ್ಕೆ ನಾನು ನಾಚುತ್ತಿದ್ದೆನೆಂದು ಹ್ಯಾಗೆ ಹೇಳಲಿ? ಆದ್ದರಿಂದ ರಾಕ್ಷಸಾ, ನೀನು ಅಕೃತ್ರಿಮ ಸ್ವಾಮಿನಿಷ್ಠನೂ, ನಿರ್ದುಷ್ಟ ದೇಶಭಕ್ತನೂ ಆಗಿರುತ್ತೀ. ಆ ನಿಷ್ಠಾ-ಭಕ್ತಿಗಳಿಂದಲೇ ನೀನು ನನ್ನನ್ನು ಗೆದ್ದಿ, ನಿಶ್ಚಯವಾಗಿ ಗೆದ್ದಿ; ನಾನು ನಿನ್ನ ಮುಂದೆ ಕೈ ಊರಿದೆನು! ಏನೂ ಚಿಂತೆಯಿಲ್ಲ, ನೀನು ಕುಟಿಲತನದಿಂದ ವಶವಾಗದಿದ್ರೆ, ನಾನು ಸರಳತನದಿಂದ ನಿನ್ನ ಬಳಿಗೆ ಬಂದು ನಿನ್ನನ್ನು ಪ್ರಾರ್ಥಿಸಿ, ನೀನು ಚಂದ್ರಗುಪ್ತನ ಮಂತ್ರಿಯಾಗುವಂತೆ ಮಾಡುವೆನು. ಚಂದ್ರಗುಪ್ತನಿಗೆ ನಿನ್ನಂಥ ದೃಢನಿಶ್ಚಯದ ಮಂತ್ರಿಯೇ ಬೇಕಾಗಿರುವನು. ಭಾಗುರಾಯಣನಂಥ ಚಂಚಲಸ್ವಭಾವದ ಮಂತ್ರಿಯಿಂದ ಪ್ರಯೋಜನವೇನು?

ಈ ಮೇರೆಗೆ ನುಡಿದು ಚಾಣಕ್ಯನು ಸಿದ್ಧಾರ್ಥಕನನ್ನು ಮನೆಗೆ ಕಳಿಸಿ, ಪರ್ಣಕುಟೀರದಿಂದ ಹೊರಟುಚಂದ್ರಗುಪ್ತನ ಅರಮನೆಗೆ ಹೋದನು. ಅಲ್ಲಿ ಬಹಳಹೊತ್ತು ಅವರಿಬ್ಬರ ಸಂಭಾಷಣವಾದ ಬಳಿಕ ಚಾಣಕ್ಯನು ಒಬ್ಬ ಶಿಷ್ಯನನ್ನು ಸಂಗಡ ಕರಕೊಂಡು, ರಾಕ್ಷಸನ ಮನೆಗೆ ಹೊರಟನು. ಇತ್ತ ರಾಕ್ಷಸನು ತನ್ನ ಮನೆಯಲ್ಲಿ ಚಿಂತಾಕ್ರಾಂತನಾಗಿ ಕುಳಿತಿದ್ದನು. ಆಗಿಹೋಗಿದ್ದ ಸಂಗತಿಗಳು ಒಂದೊಂದೇ ನೆನಪಾಗಿ ಅವನನ್ನು ಹಣ್ಣುಮಾಡುತ್ತಿದ್ದವು. ಇಂತ ಸಾಹಸವನ್ನು ನನ್ನ ಕಣ್ಣೆದುರಿಗೆ ಸದ್ದಿಲ್ಲದೆ ಮಾಡಿದ ಮನುಷ್ಯನ ಬುದ್ಧಿಯ ಮುಂದೆ ನನ್ನ ಬುದ್ಧಿಯು ಎಷ್ಟು ಹೀನತರದ್ದಾಯಿತಲ್ಲ ಎಂದು ಆತನು ಅಸಮಾಧಾನಪಡುತ್ತಿದ್ದನು. ತಾನು ಇಷ್ಟುದಿನ ಪ್ರಯತ್ನಪಟ್ಟು ಮಗಧರಾಜ್ಯದಲ್ಲಿ ಯವನರ ಕಾಲು ಹಾಕಗೊಡದೆ ಸ್ವಾತಂತ್ರ್ಯವನ್ನು ಕಾಯ್ದುಕೊಂಡಿರಲು, ಈಗ ಆ ಸ್ವಾತಂತ್ರ್ಯವು ಎಲ್ಲಿ ನಷ್ಟವಾಗುತ್ತದೋ, ಎಂದು ಆತನು ಭಯಪಡತೊಡಗಿದನು. ಸಲುಕ್ಷಸನ ಸಹಾಯದಿಂದ ದಂಡೆತ್ತಿಬರುವ ಮಲಯಕೇತುವನ್ನು ಹಿಂದಕ್ಕಟ್ಟುವಷ್ಟು ಸೇನಾಬಲವು ಪಾಟಲಿಪುತ್ರದಲ್ಲಿ ಇದ್ದರೂ ಈಗಿನ ವಿಚಿತ್ರ ಸ್ಥಿತಿಯಲ್ಲಿ ಒಬ್ಬ ಭಾಗುರಾಯಣನಿಂದ ಎಲ್ಲ ವ್ಯವಸ್ಥೆಯು ಸರಿಯಾಗಿ ಮಾಡಲ್ಪಡುವದೋ ಇಲ್ಲವೋ, ಎಂದು ಆತನು ಶಂಕಿಸುತ್ತಿದ್ದನು. ಹೀಗೆ ಅಸಮಾಧಾನ, ಭಯ, ಶಂಕೆ ಮೊದಲಾದ ಮನೋವಿಕಾರ ಗಳಿಂದ ರಾಕ್ಷಸನು ಪೀಡಿತನಾಗಿರಲು, ಯಾವನೋ ಒಬ್ಬ ಬ್ರಾಹ್ಮಣನು ಶಿಷ್ಯನಿಂದೊಡಗೂಡಿ, ದರ್ಶನಕ್ಕಾಗಿ ಬಂದಿರುವನೆಂದು ಪ್ರತೀಹಾರಿಯು ಆತನಿಗೆ ಹೇಳಿದನು. ರಾಕ್ಷಸನು ಕ್ಷಣಮಾತ್ರ ವಿಚಾರಿಸಿ, ಯಾವ ಬ್ರಾಹ್ಮಣನು ಬಂದಿರಬಹುದೆಂಬದನ್ನು ತರ್ಕಿಸಲಾರದೆ, ಯಾವನಾದರೂ ಅತಿಥಿಯು ಬಂದಿರಬಹುದೆಂದು ಸಮಾಧಾನಮಾಡಿಕೊಂಡು, ಅವರನ್ನು ಒಳಗೆ ಬಿಡಲು ಅಪ್ಪಣೆಮಾಡಿದನು.

ಪ್ರತೀಹಾರಿಯು ಬ್ರಾಹ್ಮಣನನ್ನು ಒಳಗೆ ಕರಕೊಂಡು ಬಂದನು. ರಾಕ್ಷಸನು ಎದ್ದುನಿಂತು ಒಂದು ಉಚ್ಚಾಸನವನ್ನು ಬ್ರಾಹ್ಮಣನಿಗೆ ತೋರಿಸಿದನು. ಅದರ ಮೇಲೆ ಶಿಷ್ಯನು ಕೃಷ್ಣಾಜಿನವನ್ನು

ಹಾಸಲು, ಬ್ರಾಹ್ಮಣನು ಅದರ ಮೇಲೆ ಕುಳಿತು, ಹೊರಗೆ ನಿಲ್ಲೆಂದು ಶಿಷ್ಯನಿಗೆ ಸನ್ನೆಯಿಂದ ತಿಳಿಸಿದನು. ಗುರುವಿನ ಆಜ್ಞೆಯಂತೆ ಶಿಷ್ಯನು ಹೊರಗೆ ಹೋಗಿ ನಿಂತುಕೊಂಡನು. ಬ್ರಾಹ್ಮಣನು ಒಳ್ಳೇ ತೇಜಸ್ವಿಯಿದ್ದನು. ಚಾಣಕ್ಯನ ಸ್ವರೂಪದ ಲಕ್ಷಣಗಳನ್ನು ರಾಕ್ಷಸನು ಕೇಳಿದ್ದನು; ಆದ್ದರಿಂದ ಚಾಣಕ್ಯನೇ ಈತನಿರಬಹುದೋ, ಎಂಬ ಪ್ರಶ್ನೆಯು ಕ್ಷಣಮಾತ್ರ ರಾಕ್ಷಸನ ಮನಸ್ಸಿನಲ್ಲಿ ಉತ್ಪನ್ನವಾಯಿತು; ಆದರೆ ಚಾಣಕ್ಯನು ತನ್ನ ಬಳಿಗೆ ಯಾಕೆ ಬಂದಾನೆಂಬ ವಿಚಾರವು ಉತ್ಪನ್ನವಾದ ಕೂಡಲೇ ಅಮಾತ್ಯನು ಆ ಗೊಡವೆಯನ್ನು ಬಿಟ್ಟನು. ಬ್ರಾಹ್ಮಣನು ಆಸನದಲ್ಲಿ ಕುಳಿತದ್ದನ್ನು ನೋಡಿ, ರಾಕ್ಷಸನು ಆತನಿಗೆ ಮತ್ತೆ ನಮಸ್ಕಾರಮಾಡಿ ವಿನಯದಿಂದ–ಬ್ರಾಹ್ಮಣ ಶ್ರೇಷ್ಠರೇ, ತಮ್ಮ ಯಾವಸೇವೆಯನ್ನು ಮಾಡಿದರೆ ತಮಗೆ ಸಂತೋಷವಾಗಬಹುದು? ಯಾವ ಕಾರ್ಯದ ಸಲುವಾಗಿ ತಾವು ರಾಕ್ಷಸನ ಮನೆಯಲ್ಲಿ ಪಾದಧೂಲಿಯನ್ನು ಕೆಡವಿದಿರಿ? ಎಂದು ಕೇಳಲು, ಕೂಡಲೇ ಆ ಬ್ರಾಹ್ಮಣನು–ಅಮಾತ್ಯಶ್ರೇಷ್ಠಾ, ಎಂದು ಮಾತಾಡುತ್ತಿರುವಾಗ ರಾಕ್ಷಸನು ನಡುವೇ ಬಾಯಿಹಾಕಿ–ಬ್ರಹ್ಮನ, ನಾನು ಈ ಅಮಾತ್ಯನಿಲ್ಲ, ಈ ಪುಷ್ಪಪುರಿಯಲ್ಲಿ ಕೆಲವು ದಿನಗಳ ಹಿಂದೆ ಆದ ಹಾಹಾಕಾರವನ್ನು ನೀವು ಕೇಳಿರಬಹುದು; ಅಂದಬಳಿಕ ನನ್ನನ್ನು ಅಮಾತ್ಯನೆಂದು ಯಾಕೆ ಕರೆಯುತ್ತೀರಿ?

ಬ್ರಾಹ್ಮಣ–ಅದೇಕೆ? ಆ ಹಾಹಾಕಾರವಾದದ್ದರಿಂದ ನಿನ್ನ ಅಮಾತ್ಯತ್ವಕ್ಕೇನು ಬಾಧೆ ಬಂದಿತು? ನೀನು ಪುಷ್ಪಪುರಿಯ ಸಿಂಹಾಸನದ ಅಮಾತ್ಯನು. ಇದಲ್ಲದೆ ಅಮಾತ್ಯನಲ್ಲಿರ ಬಹುದಾದ ಗುಣಗಳೆಲ್ಲ ನಿನ್ನಲ್ಲಿ ಸ್ಥಿರವಾಗಿರುವವೆಂದಬಳಿಕ, ನೀನು ಆಮಾತ್ಯನು ಯಾಕೆ ಅಲ್ಲ? ನನಗಂತು ನೀನು ಅಮಾತ್ಯನಾಗಿಯೇ ಇರುತ್ತೀ, ನಾನು ಅಮಾತ್ಯನೆಂದೇ ನಿನ್ನನ್ನು ಕರೆಯುವೆನು.

ಈ ಮೇರೆಗೆ ನುಡಿದು, ಬ್ರಾಹ್ಮಣನು ಸುಮ್ಮನಾದನು. ಅಸ್ಖಲಿತವೂ, ಯಾವಾಗಲೂ ಅಪ್ಪಣೆ ಕೊಡುವದರಲ್ಲಿಯೇ ಉಪಯೋಗವಾಗಬಹುದಾದದ್ದೂ ಆದ ಆ ವಾಣಿಯು, ಕಿವಿಗೆ ಬಿದ್ದಕೂಡಲೇ ರಾಕ್ಷಸನು ಕಿಂಚಿತ್ ಸ್ತಂಭೀಭೂತನಾದನು. ಅಷ್ಟರಲ್ಲಿ ಆ ಬ್ರಾಹ್ಮಣನು ರಾಕ್ಷಸನನ್ನು ಕುರಿತು–ಅಮಾತ್ಯಶ್ರೇಷ್ಠಾ, ನಾನು ಕುಟಿಲನೆಂದು ಪ್ರಸಿದ್ಧಿಯು ಇರುವದು; ಆದರೆ ಕುಟಿಲತನದಿಂದ ಸಾಧಿಸಬಹುದಾದದ್ದನ್ನು ಕೌಟಿಲ್ಯದಿಂದಲೂ, ಸರಳತನದಿಂದ ಸಾಧಿಸಬಹು ದಾದದ್ದನ್ನು ಸರಳತನದಿಂದಲೂ ಸಾಧಿಸುವದು ನನ್ನ ನೀತಿಯಾಗಿರುತ್ತದೆ. ನಿನ್ನನ್ನು ಒಲಿಸಿಕೊಳ್ಳಲಿಕ್ಕೆ ಸರಳತನದ ಹೊರತು ಎರಡನೆಯ ಸಾಧನವಿಲ್ಲ, ಈ ಮಗಧ ರಾಜ್ಯವು ನೀನಿಲ್ಲದೆ ನಡೆಯ ಲಾರದು. ಅದರ ಧುರೀಣತ್ವಕ್ಕೆ ನಿನ್ನಂಥ ಪುರುಷಪುಂಗವನು ಬೇಕಾಗಿರುವನು. ಇದನ್ನರಿತೇ ನಾನು ಸರಳತನದಿಂದ ನಿನ್ನನ್ನು ಕರೆಯಲಿಕ್ಕೆ ಬಂದಿದ್ದೇನೆ.

ಮಾತಾಡುವ ಬ್ರಾಹ್ಮಣನು ಯಾರೆಂಬ ಬಗ್ಗೆ ರಾಕ್ಷಸನಿಗೆ ಎಳ್ಳಷ್ಟು ಸಂಶಯವು ಉಳಿಯಲಿಲ್ಲ, ಆ ಸ್ವಾಮಿನಿಷ್ಠ ಅಮಾತ್ಯನು ಕೂಡಲೇ ಎದ್ದು ನಿಂತು, ಈ ರಾಜಘಾತಕಿಯನ್ನು ಚಂಡುಹಿಡಿದು ಹೊರಗೆ ದೂಡಬೇಕೆಂದು ಮಾಡಿದನು, ಈ ನೀಚನ ಸಂಗಡ ಮಾತಾಡುವದೂ ಪಾಪವೆಂದು ಆತನಿಗೆ ತೋಚಿತು; ಆದರೆ ಮನೆಗೆ ಬಂದವರನ್ನು ಹೀಗೆ ಅವಮಾನಗೊಳಿಸುವದು ಯೋಗ್ಯವಲ್ಲೆಂದು ಆತನ ದಾಕ್ಷಿಣ್ಯಪೂರ್ಣವಾದ ಮನಸ್ಸಿಗೆ ಹೊಳೆದದ್ದರಿಂದ ಆತನು ಏನೂ ಮಾತಾಡದೆ ಬ್ರಾಹ್ಮಣನನ್ನು ನೋಡುತ್ತ ಕುಳಿತುಕೊಂಡನು.

ತನ್ನ ಚೂಣೆಯ ಮಾತಿನ ಪರಿಣಾಮವು ಚನ್ನಾಗಿ ಆದ್ದದ್ದನ್ನು ನೋಡಿ ಚಾಣಕ್ಯನು— ಅಮಾತ್ಯಶ್ರೇಷ್ಠನೇ, ನೀನು ಸರಳನೆಂದ ಬಳಿಕ ನಾನೂ ಸರಳತನದಿಂದಲೇ ನಿನ್ನನ್ನು ಕರೆಯಲಿಕ್ಕೆ ಬಂದಿದ್ದೇನೆ. ನಂದರು ನನ್ನನ್ನು ಅಪಮಾನಗೊಳಿಸಿದರೆಂದು ಅವರನ್ನು ಸಮೂಲ ನಾಶ ಗೊಳಿಸಿದೆನು. ಅವರಲ್ಲಿ ನಿನ್ನ ನಿಷ್ಠೆಯು ಸಂಪೂರ್ಣವಾಗಿರುವದು; ಆದರೆ ಇನ್ನು ಆ ನಿಷ್ಠೆಯನ್ನು ಚಂದ್ರಗುಪ್ತನಲ್ಲಿ ಇಡು, ಆತನು ನಿಜವಾಗಿ ಅದರ ಸಾರ್ಥಕತೆಯನ್ನು ಮಾಡುವನು...............

ಬ್ರಾಹ್ಮಣನ ಈ ಮಾತುಗಳನ್ನು ಕೇಳಿ ರಾಕ್ಷಸನು ಹುಬ್ಬುಗಂಟಿಕ್ಕಿದನು. ಈತನು ಚಾಣಕ್ಯನೇ ಇರುತ್ತಾನೆಂದು ನಿಃಸ್ಸಂಶಯವಾಗಿ ಅಮಾತ್ಯನಿಗೆ ಗೊತ್ತಾದ್ದರಿಂದ, ಆತನು ಚಾಣಕ್ಯನಿಗೆ—ಏನು? ರಾಜವಂಶವನ್ನು ನಾಶಗೊಳಿಸಿ ವ್ಯಾಧಪುತ್ರನನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿರುವ ಆ ದುಷ್ಟ ಚಾಣಕ್ಯನು ನೀನೇಯೋ? ಸಂಶಯಾವಾದರೂ ಯಾಕೆ? ನನ್ನ ಮನೆಗೆ ಬಂದು ಇಷ್ಟು ಔದ್ಧತ್ಯದಿಂದ ಮಾತಾಡುವ ಧೈರ್ಯಮಾಡುವ ಬ್ರಾಹ್ಮಣನು, ಚಾಣಕ್ಯನಲ್ಲದೆ ಬೇರೆ ಯಾವನು ಇರಬೇಕು? ಯಾವಾಗಲೂ ಕುಟಿಲತನದಿಂದ ನಡೆಯುವವನು, ಪ್ರಸಂಗ ವಿಶೇಷದಿಂದ ಸರಳತನದಿಂದ ನಡೆಯುವದಾದರೂ, ಒಂದು ಬಗೆಯ ಕುಟಿಲನೀತಿಯೇ ಆಗಿರುತ್ತದೆ. ನನ್ನ ಸರಳತನದ ಪ್ರಶಂಸೆಯನ್ನು ಇಷ್ಟೇಕೆ ಮಾಡುತ್ತೀ? ನನ್ನ ಅಂದತ್ವದ ಫಲವು ದೊರೆಯಿತೆಂದು ನನ್ನ ಮೋರೆಯ ಮುಂದೆ ಹೇಳುವದಕ್ಕಾಗಿ ನೀನು ನನ್ನ ಮನೆಗೆ ಬಂದೆಯೇನು? ನನ್ನ ಕುರುಡತನವು ಜಗತ್ತಿಗೆ ಸ್ಪಷ್ಟವಾಗಿ ಕಂಡಿರಲು, ನನ್ನಂತ ಕುರುಡನಿಗೆ ಅಮಾತ್ಯ ಪದವಿಯನ್ನು ಕೊಡುವದಕ್ಕೆ ನೀನು ಬಂದಿರುತ್ತೀಯೆಂದು ತಿಳಕೊಳ್ಳುವಷ್ಟು ಕುರುಡನು ನಾನಿರುವದಿಲ್ಲ, ನೀನು ಯಾಕೆ ಬಂದಿರುತ್ತೀಯೆಂಬದನ್ನು ನಾನು ತಿಳಿದಿರುವೆನು, ನಿನ್ನ ಪೌರುಷವನ್ನು ನಿನ್ನ ಬಾಯಿಂದ ಹೇಳುವ ಕಾರಣವಿಲ್ಲ, ಅದೆಲ್ಲ ನನಗೆ ತಿಳಿದದೆ, ಹೇಳುತ್ತೇನೆ ಕೇಳು. ಇದರಿಂದ ನಿನಗೆ ಹೆಚ್ಚು ಸಮಾಧಾನವಾದೀತು. ಮುರಾದೇವಿಯ ಮಂದಿರದಲ್ಲಿ ನನ್ನ ಗುಪ್ತಚಾರಳನ್ನಾಗಿ ಮಾಡಿದ್ದ ಸಮತಿಕೆಯನ್ನು ನೀನು ಒಡಕೊಂಡು ಅವಳನ್ನೇ ನನ್ನ ಮನೆಯಲ್ಲಿ ಗುಪ್ತಚಾರಳನ್ನು ಮಾಡಿದೆ. ಆಕೆಯಿಂದಲೇ ನನ್ನ ಹಿರಣ್ಯಗುಪ್ತನನ್ನು ಒಡಕೊಂಡು ನನ್ನದೊಂದು ಕಣ್ಣನ್ನೇ ಒಡೆದಿ; ಮತ್ತು ಆತನ ಕೈಯಿಂದ ನನ್ನ ಮುದ್ರೆಯನ್ನು ಇಸಕೊಂಡು............

ಈ ಮೇರೆಗೆ ರಾಕ್ಷಸನು ನುಡಿಯುತ್ತಿರಲು, ಚಾಣಕ್ಯನು ನಡುವೇ ಆತನನ್ನು ಸುಮ್ಮನಿರಿಸಿ— ಅಮಾತ್ಯಾ, ಈ ಎಲ್ಲ ಸಂಗತಿಗಳನ್ನು ಉಚ್ಚರಿಸಿ ಸುಮ್ಮನೆ ಮನಸ್ಸಿಗೆ ಯಾಕೆ ನೋವು ಮಾಡಿಕೊಳ್ಳುತ್ತೀ? ನಿಜವಾಗಿ ನಾನು ಆ ಉದ್ದೇಶದಿಂದ ಬಂದಿರುವದಿಲ್ಲ,

ರಾಕ್ಷಸ—ಹಾಗಾದರೆ ತಾವು ಯಾತಕ್ಕೋಸ್ಕರ ಇಷ್ಟು ಶ್ರಮಬಟ್ಟು ಬಂದಿರಿ?

ಚಾಣಕ್ಯ—ನೀನು ಚಂದ್ರಗುಪ್ತನ ಮಂತ್ರಿಯಾಗಿ ಮಗಧರಾಜ್ಯವನ್ನು ಮೊದಲಿನಂತೆ, ಅದೇಕೆ ಮೊದಲಿಗಿಂತಲೂ ಹೆಚ್ಚು ಧೌರೀಣ್ಯದಿಂದ ಆಳಬೇಕೆಂದು?

ರಾಕ್ಷಸ—ಹಾಗಾದರೆ ಕಾಲತ್ರಯದಲ್ಲಿಯೂ ಅಶಕ್ಯವಾಗಿದ್ದ ಕಾರ್ಯವನ್ನು ಸಾಧಿಸುವದಕ್ಕಾಗಿ ನೀವು ಬಂದಿರುತ್ತೀರೆಂದಹಾಗಾಯಿತು.

ಚಾಣಕ್ಯ—ಅದೇಕೆ ಕಾಲತ್ರಯದಲ್ಲಿಯೂ ಸಾಧಿಸುವದಿಲ್ಲ?

ರಾಕ್ಷಸ—ರಾಕ್ಷಸನ ಬಳಿಯಲ್ಲಿದ್ದ ಹಿರಣ್ಯಗುಪ್ತನನ್ನು ಒಡಕೊಳ್ಳುವದರಲ್ಲಿಯೂ, ಪ್ರತ್ಯಕ್ಷ ರಾಕ್ಷಸನನ್ನು ಒಡಕೊಳ್ಳುವದರಲ್ಲಿಯೂ ಬಹಳ ಅಂತರವಿರುತ್ತದೆ.

ಚಾಣಕ್ಯ—ಆದನ್ನು ನಾನು ಬಲ್ಲೆನು; ಆದರೆ ಮಗಧದ ರಾಜ್ಯವು ಯವನರ ಕೈಸೇರ ಬಾರದೆಂದು ನಿಮ್ಮ ಮನಸ್ಸಿನಲ್ಲಿ ಇರುತ್ತದೆ; ಯವನರಂತು ಮಗಧದ ಮೇಲೆ ದಂಡೆತ್ತಿಬರಲು ಸಿದ್ಧರಾಗಿದ್ದಾರೆ.

ರಾಕ್ಷಸ—ಸದ್ಯಕ್ಕೆ ಮಗಧವನ್ನು ರಕ್ಷಿಸಿಕೊಳ್ಳಲು ಬದ್ಧರಾಗಿರುವವರು ಯವನರ ಪಾರಪತ್ಯ ಮಾಡಲು ಸಮರ್ಥರಿದ್ದಾರೆ.

ಚಾಣಕ್ಯ—ಅವರು ಸಮರ್ಥರಿರುವರೋ ಇಲ್ಲವೋ ಎಂಬದಂತು ಒತ್ತಟ್ಟಿಗಿರಲು; ಅವರಿಗೆ ನಿನ್ನ ಸಹಾಯ ಅವಶ್ಯಕತೆಯಿರುವದರಿಂದ ನಾನು ನಿನ್ನ ಬಳಿಗೆ ಬಂದಿದ್ದೇನೆ.

ರಾಕ್ಷಸ—ನಂದರ ಹೊರತು ಬೇರೆಯವರನ್ನು ಸೇವಿಸಲಿಕ್ಕಿಲ್ಲೆಂದು ನಾನು ಪ್ರತಿಜ್ಞೆ ಮಾಡಿರುವೆನು.

ಚಾಣಕ್ಯ—ಮಗಧರಾಜ್ಯದ, ಅದೂ ಇರಲಿ, ಪಾಟಲೀಪುತ್ರದ ಸೇವೆಯನ್ನೂ ನೀನು ಮಾಡುವದಿಲ್ಲೇನು?

ರಾಕ್ಷಸ— ಒಂದು ಪಕ್ಷದಲ್ಲಿ ಮಾಡಲಿಕ್ಕಿಲ್ಲ! ಹೊತ್ತುಬಿದ್ದರೆ ಯವನರನ್ನು ಕೂಡಿದರೂ ಕೂಡೇನು? ಹೀಗೆಯೇ ಮಾಡುವೆನೆಂದು ಈಗ ಹ್ಯಾಗೆ ಹೇಳಲಿ?

ಚಾಣಕ್ಯ—ಆ ಮಾತು ನಿನ್ನಿಂದ ಕಾಲತ್ರಯದಲ್ಲಿಯೂ ಆಗುವದಿಲ್ಲೆಂಬ ಬಗ್ಗೆ ನನ್ನ ನಂಬಿಗೆಯಾಗಿದೆ; ಅಂದ ಬಳಿಕ ನಿನ್ನ ಈ ಹಾರಿಕೆಯ ಮಾತಿನಿಂದ ಯಾರು ಮೋಸ ಹೋದಾರು?

ರಾಕ್ಷಸ—ನಿನಗೆ ನಂಬಿಗೆ ಯಾತರಿಂದಾಯಿತು? ನಂಬಿಗೆಗೆ ಅಂಥ ದೊಡ್ಡ ಕಾರಣವೇ ಇರಲಿಕ್ಕೇ ಬೇಕು.

ಚಾಣಕ್ಯ—ಕಾರಣವೇನೆಂದು ಕೇಳುವೆಯಾ, ನೀನು ಈ ಸಂಬಂಧದಿಂದ ಬಾಯಿಬಿಟ್ಟಿ ಆಡಿದ ಮಾತುಗಳೇ ಕಾರಣವು, ಇದಕ್ಕೂ ಹೆಚ್ಚಿನ ಬೇರೆ ಕಾರಣವೇನು ಬೇಕು?

ರಾಕ್ಷಸ—ನಾನು ಮಾತಾಡಿದೆನೆ ನಾನೆಂದು ಮಂದಿಯ ಮುಂದೆ ಹೀಗೆ ಮಾತಾಡಿದ್ದೇನೆ?

ಚಾಣಕ್ಯ—ಶಾಕಲಾಯನನ ಬಳಿಯಲ್ಲಿ.

ರಾಕ್ಷಸ—ಏನಂದಿರಿ! ಶಾಕಲಾಯನನು ನಾನಾಡಿದ ಮಾತುಗಳನ್ನು ನಿನ್ನ ಮುಂದೆ ಹೇಳಿದನೋ? ನಮ್ಮಿಬ್ಬರಲ್ಲಾದ ಸಂಭಾಷಣವನ್ನೆಲ್ಲ ಆತನು ನಿನ್ನ ಮುಂದೆ ತಾನು ಹೇಳಿದನೇ?

ಚಾಣಕ್ಯ—ಅವನೇ ಯಾಕೆ ಹೇಳಬೇಕು?

ರಾಕ್ಷಸ—ಅಂದಬಳಿಕ ನಿಮ್ಮ ಗುಪ್ತಚಾರರು ನನ್ನ ಅಂತರ್ಗೃಹದವರೆಗೂ ಇರುತ್ತಾರೆನ್ನ ಬೇಕಾಯಿತು! ಇನ್ನು ವಿಶ್ವಾಸವನ್ನಾದರೂ ಯಾರದು ಹಿಡಿಯಬೇಕು? ನನ್ನ ಸುತ್ತಲಿನ ಜನರೆಲ್ಲರು ನಿನ್ನ ಕಡೆಗಾಗಿರುತ್ತಾರಲ್ಲವೆ? ಶಾಬಾಸ! ಚಾಣಕ್ಯಾ, ನೀನು ತಂತ್ರಗಾರನೆಂಬದರಲ್ಲಿ ಸಂಶಯವಿಲ್ಲ!

ಚಾಣಕ್ಯ—ನಿನ್ನ ಮನೆಯವರಾದರೂ ಹೇಳಿರುವದಿಲ್ಲ, ಸುಮ್ಮನೆ ಕಂಡವರ ವಿಷಯ ವಾಗಿ ಸಂಶಯಪಡಬೇಡ. ಶಾಕಲಾಯನನ ಸಂಗಡ ಬಂದ ಸಂವಾಹಕನು ತಮ್ಮ ಮಂದಿಯೊಳಗಿ

ನವನೊಬ್ಬನಿದ್ದನು. ಅವನು ಎಲ್ಲ ಸಂಭಾಷಣವನ್ನೂ ಹೇಳಿದನು. ಇನ್ನು ನಿನ್ನ ಮನಸ್ಸಿಗೆ ಬಂದಹಾಗೆಮಾಡು.

ಚಾಣಕ್ಯನ ಈ ಮಾತುಗಳನ್ನು ಕೇಳಿ ರಾಕ್ಷಸನು ಸ್ತಂಭಿತನಾದನು. ಶಾಕಲಾಯನನ ಸಂಗಡ ಬಂದವನು ಚಾಣಕ್ಯನ ಗುಪ್ತಚಾರನಿದ್ದು, ಅದರ ಗಂಧವು ಕೂಡ ಶಾಕಲಾಯನನಿಗೆ ಹತ್ತಲಿಲ್ಲ! ಶಾಬಾಸ! ಶಾಬಾಸ!! ಗುಪ್ತಚಾರರನ್ನು ಕಳಿಸುವ ವಿಷಯದಲ್ಲಿಯ ಚಾಣಕ್ಯನ ಚಾತುರ್ಯದ ಪರಮಾವಧಿಯಾಯಿತು, ಎಂದು ರಾಕ್ಷಸನು ಮನಸ್ಸಿನಲ್ಲಿ ಆಶ್ಚರ್ಯಪಟ್ಟು ಚಾಣಕ್ಯನನ್ನು ಕುರಿತು –

ರಾಕ್ಷಸ—ನಾನು ಶಾಕಲಾಯನನನ್ನು ಮೋಸಗೊಳಿಸುವದಕ್ಕಾಗಿ ಹೀಗೆ ಸಂಭಾಷಣ ಮಾಡಿರಬಹುದು.

ಚಾಣಕ್ಯ—ಅಮಾತ್ಯಶ್ರೇಷ್ಠಾ, ನಿನ್ನ ಮಾತುಗಳು ಮೋಸದವಲ್ಲವೆಂಬ ಬಗ್ಗೆ ನನಗೆ ನಂಬಿಗೆಯದೆ. ಅದು ಹ್ಯಾಗೇ ಇರಲಿ, ನೀನು ಹಿಂದಿನದನ್ನೆಲ್ಲ ಮರೆತು ಚಂದ್ರಗುಪ್ತನ ಸಾಚಿವ್ಯವನ್ನು ಸ್ವೀಕರಿಸು. ನಂದರ ಕಾಲದಲ್ಲಿದ್ದ ನಿನ್ನ ಅಧಿಕಾರದಲ್ಲಿಯೂ, ಈಗ ಪ್ರಾಪ್ತವಾಗುವ ಅಧಿಕಾರದಲ್ಲಿಯೂ ಸ್ವಲ್ಪವೂ ಅಂತರವಿರಲಾರದು. ಕುಟಿಲ ನೀತಿಯು ಯಾವಾಗಲೂ ಉಪಯೋಗಿಸುವದೆಂದು ಹೇಳಲಿಕ್ಕಾಗುವದಿಲ್ಲ, ನಿನ್ನ ವಿಷಯವಾಗಿ ದೂಷಿತವಾಗಿದ್ದ ಲೋಕ ಮತವು ಸ್ವಲ್ಪ ದಿನಗಳಲ್ಲಿ ಶುದ್ಧವಾಗುವದು. ನಿನ್ನ ವಿಷಯವಾಗಿ ಯಾರಲ್ಲಿಯೂ ವೈಷಮ್ಯವಿಲ್ಲ, ನನ್ನ ಸಿಟ್ಟು ನಂದರಮೇಲೆ. ನನ್ನ ಪ್ರತಿಜ್ಞೆಯು ಪೂರ್ಣವಾದಬಳಿಕ ರಾಜಕಾರಣದಲ್ಲಿ ನನ್ನ ಕರ್ತವ್ಯವೇನೂ ಉಳಿದಿರುವದಿಲ್ಲ, ''ನಾನು ಸಾಚಿವ್ಯವನ್ನು ಸ್ವೀಕರಿಸಿದೆನು,'' ಎಂದು ಈಗ ನೀನು ಹೇಳಿಬಿಡು, ನಾನು ತಪಶ್ಚರ್ಯಕ್ಕಾಗಿ ಹಿಮಾಲಯದ ಯಾವದೊಂದು ಕಂದರವನ್ನು ಸೇರಿದನೆಂದು ತಿಳಿ; ಆದರೆ ನನ್ನದಿನ್ನೊಂದು ಇಚ್ಛೆಯನ್ನು ನೀನು ಪೂರ್ಣಮಾಡಲಿಕ್ಕೆ ಬೇಕು. ಯವನರನ್ನು ಗಾಂಧಾರದಿಂದಾಚೆಗೆ ನೀನು ಅಟ್ಟಬೇಕು. ಚಂದ್ರಗುಪ್ತನು ಒಳ್ಳೇ ಶೂರ ನಿರುತ್ತಾನೆ. ಆತನಿಗೆ ನಿನ್ನ ಸಹಾಯವು ದೊರೆತರೆ ಕೆಲಸವಾಯಿತೆಂದು ತಿಳಿ.

ರಾಕ್ಷಸ—ಚಾಣಕ್ಯಾ, ನಾನು ಒಮ್ಮೆ ಹೇಳಿರುವೆನಲ್ಲವೇ? ಈ ರಾಕ್ಷಸನು ನಂದರ ಹೊರತು ಅನ್ಯರ ಸೇವೆಯನ್ನು ಮಾಡಲಾರನು. ಅಂದ ಬಳಿಕ ಸುಮ್ಮನೆ ನನಗೆ ಯಾಕೆ ಆಗ್ರಹ ಮಾಡುತ್ತೀ? ಪ್ರತಿಜ್ಞೆಗಿಂತ ನನಗೆ ಹೆಚ್ಚು ಪ್ರಿಯವಾದದ್ದು ಯಾವದೂ ಇರುವದಿಲ್ಲ, ಸದ್ಯಕ್ಕೆ ನನ್ನ ಕೈಯಲ್ಲಿ ಏನೂ ಇರುವದಿಲ್ಲೆಂಬದಂತು ನಿಜವೇ; ಆದರೆ ನೀವು ಯವನರೊಡನೆ ಯುದ್ಧ ಮಾಡುವತನಕ ನಾನು ಯಾವ ಗೊಡವಿಗೆ ಹೋಗದೆ ಸುಮ್ಮನೆ ಕುಳಿತುಕೊಳ್ಳುವೆನು. ನಿಮಗೆ ಯಾವಬಗೆಯ ವಿಘ್ನವನ್ನೂ ಮಾಡುವದಿಲ್ಲ.

ಚಾಣಕ್ಯ—ರಾಕ್ಷಸಾ, ಯಾವನಾದರೂ ನಂದವಂಶಜನು ಸಿಂಹಾಸನವೇರಿದರಾದರೂ ಮಂತ್ರಿಪದವನ್ನು ಕೈಕೊಳ್ಳುವೆಯಾ? ಇದಕ್ಕಾದರೂ ತಪ್ಪುವದಿಲ್ಲವೇ?

ರಾಕ್ಷಸ—ಇಲ್ಲ, ತಪ್ಪುವದಿಲ್ಲ, ನಿಶ್ಚಯವಾಗಿ ತಪ್ಪುವದಿಲ್ಲ, ಯಾವದೊಂದು ನಂದಾಂಕುರವು ದೊರಕಿದರೆ, ತ್ರಿಕರಣಪೂರ್ವಕವಾಗಿ ಅದನ್ನು ನಾನು ಸೇವಿಸುವೆನು. ನೀನು

ಬೇಕಾದಷ್ಟು ಕುಟಿಲನೀತಿಯಲ್ಲಿ ನಿಪುಣನಿರು. ನಿನ್ನ ಭಯವನ್ನು ಎಳ್ಳಷ್ಟಾದರೂ ಹಿಡಿಯದೆ, ಪ್ರಯತ್ನಪೂರ್ವಕವಾಗಿ ಆ ನಂದವಂಶಜನನ್ನು ಪಾಟಲಿಪುತ್ರದ ಸಿಂಹಾಸನದ ಮೇಲೆ ಕೂಡ್ರಿಸಿ ಆತನ ಸಾಚಿವ್ಯವನ್ನು ಕೈಕೊಳ್ಳುವೆನು.

ಚಾಣಕ್ಯ—ನಿನ್ನಂತೆಯೇ ಆಗಲಿ, ಚಂದ್ರಗುಪ್ತನು ಬೇಡ. ನಂದ ವಂಶಜನ ಸಾಚಿವ್ಯವನ್ನೇ ಸ್ವೀಕರಿಸು.

ಈ ಮೇರೆಗೆ ನುಡಿದು, ಚಾಣಕ್ಯನು ಹೊರಗೆ ನಿಂತಿದ್ದ ತನ್ನ ಶಿಷ್ಯನನ್ನು "ಶಾರದ್ವತಾ, ಬಾ," ಎಂದು ಕರೆದನು. ಶಾರದ್ವತನು ಒಳಗೆ ಬರಲು, ಚಾಣಕ್ಯನು ಅವರ ಬಲ ಅಂಗೈಯನ್ನು ರಾಕ್ಷಸನ ಮುಂದೆ ಹಿಡಿದು, ಈ ಚಕ್ರವರ್ತಿಯ ಚಿಹ್ನಗಳನ್ನು ನೋಡೆಂದು ಹೇಳಿದನು. ಸಾಮುದ್ರಿಕವನ್ನು ಅರಿತವನಾದ ರಾಕ್ಷಸನು ಆ ಚಿಹ್ನಗಳನ್ನು ನೋಡಿ ಆಶ್ಚರ್ಯಪಡುತ್ತಿರಲು, ಚಾಣೇಕ್ಯನು ರಕ್ಷಾಬಂಧನವನ್ನು ರಾಕ್ಷಸನ ಕೈಯಲ್ಲಿ ಕೊಟ್ಟನು. ಅದನ್ನು ನೋಡಿದಬಳಿಕಂತೂ ರಾಕ್ಷಸನು ಮುಂದುಗಾಣದೆ ಕುಳಿತನು. ನಂದವಂಶದ ಚೊಚ್ಚಲಮಗನಿಗೆ ಕಟ್ಟತಕ್ಕ ರಕ್ಷಾ ಬಂಧನವೂ, ಚಕ್ರವರ್ತಿಯ ಚಿಹ್ನಗಳುಳ್ಳ ಒಬ್ಬ ಕುಮಾರನೂ ಕಣ್ಣಿಗೆ ಕಟ್ಟಿದ್ದನ್ನು ನೋಡಿ ರಾಕ್ಷಸನು ಮೌನದಿಂದ ವಿಚಾರಮಗ್ನನಾಗಿ ಕುಳಿತಿರಲು, ಚಾಣಕ್ಯನು–ಅಮಾತ್ಯಶ್ರೇಷ್ಠಾ, ವ್ಯರ್ಥವಾಗಿ ಯಾಕೆ ವಿಚಾರಮಗ್ನನಾಗುತ್ತೀ, ಈ ಕುಮಾರನ ಸಾದ್ಯಂತ ವೃತ್ತಾಂತವನ್ನು ನಾನು ಹೇಳುತ್ತೇನೆ ಕೇಳು. ಈತನು ಕಿರಾತರಾಜಪುತ್ರಿಯಾದ ಮುರೆಯಲ್ಲಿ ಧನಾನಂದನಿಂದ ಹುಟ್ಟಿದನು. ಈತನ ಜನ್ಮಕಾಲದ ಉಚ್ಚಗ್ರಹಗಳ ಯೋಗದಿಂದ ಈತನು ಚಕ್ರವರ್ತಿಯ ಪದವಿಯನ್ನು ಹೊಂದತಕ್ಕವನಿದ್ದನು; ಕೆಲವು ಗ್ರಹಗಳ ವಕ್ರದೃಷ್ಟಿಯಿಂದ ಈತನು ಬಾಲ್ಯದ ಹನ್ನೆರಡು ವರ್ಷಗಳನ್ನು ಬಡತನದಲ್ಲಿ ಕಳೆಯಬೇಕಾಯಿತು. ದುಷ್ಟಗ್ರಹಗಳ ಪ್ರೇರಣೆಯಿಂದ ನೀನು ಈತನನ್ನು ತಲೆಹೊಡೆಯಲಿಕ್ಕೆ ಕೊಲೆಗಡಕರಿಗೆ ಒಪ್ಪಿಸಿದಿ; ಆದರೆ ಉಚ್ಚಗ್ರಹಗಳು ಈತನನ್ನು ಕೊಲ್ಲಗೊಡದೆ ಕೊಲೆಗಡಕರ ದಯೆಗೆ ಪಾತ್ರನನ್ನಾಗಿ ಮಾಡಿದವು. ಕೊಲೆಗಡಕರು ಈತನನ್ನು ಹಿಮಾಲಯದ ಅಡವಿಯಲ್ಲಿ ಒಂದು ವಟವೃಕ್ಷದ ಬುಡದಲ್ಲಿ ಮಲಗಿಸಿ ಹೋಗಿರಲು, ಒಬ್ಬ ಗೌಳಿಗನು ಈತನನ್ನು ಮನೆಗೆ ಕರೆದೊಯ್ದು ಹನ್ನೆರಡು ವರ್ಷ ಸಂರಕ್ಷಣಮಾಡಿದನು. ಆ ಗೌಳಿಗನು ಇದೇ ಊರಲ್ಲಿರುತ್ತಾನೆ, ಬೇಕಾದರೆ ಆತನನ್ನು ಕರಿಸಿ ಕೇಳು. ಕೊಟ್ಟ ವಚನದಂತೆ ನೀನು ಈಗ ಈತನ ಸಾಚಿವ್ಯವನ್ನಾದರೂ ಸ್ವೀಕರಿಸು, ಎಂದು ಹೇಳಿದನು. ಪ್ರತ್ಯಕ್ಷ ಪತಿಯನ್ನು ಕೊಂದ ಮುರೆಯ ಮಗನ ಮಂತ್ರಿಯಾಗುವದೆಂದರೆ ರಾಕ್ಷಸನ ಮನಸ್ಸಿಗೆ ಹುಳಕಡಿದ ಹಾಗಾಯಿತು; ಆದರೆ ಆತನ ಹೊರತು ನಂದಾಕುರವೇ ಇಲ್ಲವೆಂದು ತಿಳಿದು, ಆತನು ಚಾಣಕ್ಯನಿಗೆ– ಬ್ರಾಹ್ಮಣ ಶ್ರೇಷ್ಠಾ, ನನ್ನ ಪ್ರತಿಜ್ಞೆಯಂತೆ ಈತನನ್ನು ಸ್ವೀಕರಿಸುವೆನು; ಆದರೆ ಬಲಹೀನನಾದ ನಾನು ಚಂದ್ರಗುಪ್ತನನ್ನು ಓಡಿಸಿ ಈತನನ್ನು ಪಾಟಲಿಪುತ್ರದ ಸಿಂಹಾಸನದ ಮೇಲೆ ಕೂಡ್ರಿಸುವ ಬಗೆಯೇನು? ಈ ದುರ್ಘಟ ಕಾರ್ಯಕ್ಕಾಗಿ ನನಗೆ ಯಾರು ಸಹಾಯ ಮಾಡುವರು?

ಚಾಣಕ್ಯ—ನಾನು ಸಹಾಯ ಮಾಡುವೆನು.

ರಾಕ್ಷಸ—ಅದೇಕೆ? ಚಂದ್ರಗುಪ್ತನಿಗೂ ನಿಮಗೂ ಜಗಳವಾಯಿತೇನು? ಅವನನ್ನು ನೀವು ಹೊರದೂಡಿಬಿಡುವಿರೋ?

ಚಾಣಕ್ಯ—ಛೇ. ಛೇ. ಹಾಗೇನೂ ಇಲ್ಲ. ಈತನನ್ನೂ ಆತನನ್ನೂ ಕೂಡಿಯೇ ಸಿಂಹಾಸನದ ಮೇಲೆ ಕೂಡ್ರಿಸೋಣ, ಇನ್ನಾದರೂ ಆಯಿತೋ ಇಲ್ಲವೋ?

ರಾಕ್ಷಸ—ಅಂದರೆ?

ಚಾಣಕ್ಯ—ಅಂದರೇನು? ಇವನು ಚಂದ್ರಗುಪ್ತನೇ ಇರುತ್ತಾನೆ.

ಚಾಣಕ್ಯನು ಚಂದ್ರಗುಪ್ತನಿಗೆ ಬುದ್ಧಿಪೂರ್ವಕವಾಗಿಯೇ ಶಿಷ್ಯನ ವೇಷವನ್ನು ಹಾಕಿಕೊಂಡು ಹೋಗಿದ್ದನು. ಶಿಷ್ಯನ ಸಂಬಂಧದ ಹೇಳಿದ ವೃತ್ತಾಂತವೆಲ್ಲ ಚಂದ್ರಗುಪ್ತನ ವೃತ್ತಾಂತವೇ ಆಗಿತ್ತೆಂದು ಬೇರೆ ಹೇಳುವ ಕಾರಣವಿಲ್ಲ. ರಾಕ್ಷಸನು ಆಶ್ಚರ್ಯಚಕಿತನಾಗಿ ಮೊದಲು ಒಪ್ಪಿಕೊಂಡಂತೆ "ನಂದಾಂಕುರ"ವಾದ ಚಂದ್ರಗುಪ್ತನ ಸಾಚಿವ್ಯವನ್ನು ಕೈಕೊಂಡನು. ರಾಕ್ಷಸನು ಮತ್ತೆ ಮಂತ್ರಿಯಾದದ್ದನ್ನು ನೋಡಿ ಭಾಗುರಾಯಣನಿಗೆ ಹಿಡಿದು ಬಿಟ್ಟಿದ ಹಾಗೆ ಆಯಿತು; ಆದರೂ ಚಾಣಕ್ಯನು ಬೇಗನೆ ಆತನನ್ನು ಸಮಾಧಾನಗೊಳಿಸಿದನು. ರಾಕ್ಷಸನೂ ಚಾಣಕ್ಯನೂ ಒಂದಾದಬಳಿಕ ಕೇಳುವದೇನು? ಅವರು ಸುಲಕ್ಷಸ–ಮಲಯಕೇತುಗಳಿಬ್ಬರ ಸೈನ್ಯಗಳು ಬರುವದಕ್ಕಿಂತ ಮೊದಲೇ ಒಂದು ಪ್ರಚಂಡವಾದ ಸೈನ್ಯವನ್ನು ಕೂಡಿಸಿದರು. ಅದರಲ್ಲಿ 6,00,000 ಕಾಲಾಳೂ, 30,000 ಕುದುರೆಯ ಸವಾರರೂ, 1,000 ಆನೆಗಳೂ ಇದ್ದವು. ಇಂಥ ಪ್ರಚಂಡ ಸೇನೆಗೆ ಚಂದ್ರಗುಪ್ತನಂಥ ತರುಣ ಮಹತ್ವಾಕಾಂಕ್ಷಿಯಾದ ವೀರನು ಮುಖ್ಯನಾದ ಬಳಿಕ ಕೇಳುವದೇನು? ಮೊದಲಿನ ಉಸಲಿಗೇ ಸಲುಕ್ಷಸ–ಮಲಯಕೇತುಗಳ ಸೈನ್ಯಗಳು ಚದರಿಹೋದವು. ಮುಂದೆ ಸುಮಾರು ಒಂದು–ಒಂದುವರೆ ವರ್ಷಗಳೊಳಗೇ ಚಂದ್ರಗುಪ್ತನು ಸಲುಕ್ಷಸನನ್ನು ಕಾಶ್ಮೀರದಿಂದಾಚೆಗೆ ಓಡಿಸಿದನು. ಕಡೆಗೆ ಸಲುಕ್ಷಸನು ಚಂದ್ರಗುಪ್ತನೊಡನೆ ಒಪ್ಪಂದವನ್ನು ಮಾಡಿಕೊಂಡು, ಸಿಂಧೂ ನದಿಯ ಪಶ್ಚಿಮದ ಸೀಮೆಯನ್ನು ಗಾಂಧಾರದೇಶಸಹಿತವಾಗಿ ಚಂದ್ರಗುಪ್ತನಿಗೆ ಕೊಟ್ಟು ತನ್ನ ಮಗಳನ್ನು ಆ ನಂದವೀರನಿಗೆ ಲಗ್ನಮಾಡಿಕೊಟ್ಟನು. ಸಲುಕ್ಷಸನ ಮೇಗಾಸ್ಥಿನೀಸನೆಂಬ ವಕೀಲನು ಚಂದ್ರಗುಪ್ತನ ಬಳಿಯಲ್ಲಿರ ಹತ್ತಿದನು. ಪರ್ವತೇಶ್ವರನು ಬಂಧವಿಮೋಚನವನ್ನು ಹೊಂದಿ ಚಂದ್ರಗುಪ್ತನ ಮಾಂಡಲಿಕನಾಗಿ ತನ್ನ ರಾಜ್ಯವನ್ನು ಆಳಹತ್ತಿದನು. ರಾಕ್ಷಸನು ಒಂದೆರಡುಸಾರೆ ಯವನರನ್ನು ಸೋಲಿಸಿದ್ದನು. ನೋಡಿ ಚಾಣಕ್ಯನು ಹಿಮಾಚಲಕ್ಕೆ ಹೋಗಿ ತಪಶ್ಚರ್ಯವಾಡುತ್ತ ಕುಳಿತುಕೊಂಡನು. ಚಂದ್ರಗುಪ್ತನು ಹಿಮಾಲಯದೊಳಗಿನ ತನ್ನ ಮಿತ್ರರನ್ನೆಲ್ಲ ಸೈನ್ಯದಲ್ಲಿ ದೊಡ್ಡದೊಡ್ಡ ಅಧಿಕಾರಗಳ ಮೇಲೆ ನಿಯಮಿಸಿಕೊಂಡನು. ರಾಜಕುಲದೊಳಗಿನ ಯಾವತ್ತು ಗೋಧನದ ಮೇಲೆ ತನ್ನ ಸಾಕು ತಂದೆಯಾದ ಗೌಳಿಗನನ್ನು ನಿಯಮಿಸಿದನು. ಚಂದ್ರಗುಪ್ತನು ತನ್ನ ಸಾಪತ್ನ ಮಾತೃವರ್ಗವನ್ನು ಬಹಳ ಆದರದಿಂದ ನಡಿಸಿಕೊಂಡನು. ತನ್ನ ತಾಯಿಯಾದ ಮುರೆಯು ತನ್ನ ಸಲುವಾಗಿ ಇಷ್ಟು ಸಾಹಸ ಮಾಡಿದಳೆಂದು ಚಂದ್ರಗುಪ್ತನು ತನ್ನನ್ನು ಮೌರ್ಯನೆಂದು

ಕರೆಸಿಕೊಳ್ಳಹತ್ತಿದನು. ಆತನು ನಂದನೆಂಬ ಹೆಸರನ್ನು ಬಿಟ್ಟುಕೊಟ್ಟನು. ವೃಂದಮಾಲೆಯೂ, ಸುಮತಿಕೆಯೂ ಬೌದ್ಧಜೋಗಿನಿಯರಾದರು. ವಸುಭೂತಿಯ ಪಶ್ಚಾತ ಸಿದ್ಧಾರ್ಥಕನು ವಿಹಾರಾಧಿಪತಿಯಾದನು. ಆತನು ತನ್ನ ವಿಹಾರಗಳ ಸಂಖ್ಯೆಗಳನ್ನು ಬಹಳ ಬೆಳಿಸಿದನು. ಅದರಿಂದ ಬೌದ್ಧಧರ್ಮದ ಪ್ರಾಬಲ್ಯವೂ ಹೆಚ್ಚುತ್ತ ಹೋಯಿತು.

ಸಮಾಪ್ತ

ಧರ್ಮರಹಸ್ಯ

ಪ್ರಸ್ತಾವನೆ

ಶ್ರೀಗುರು ಕೃಪೆಯಿಂದ ''ಧರ್ಮರಹಸ್ಯ''ವೆಂಬ ಹೆಸರಿನ ಈ ಕಾದಂಬರಿಯು ಮುಗಿಯಿತು! ಈ ಕಾದಂಬರಿಗೆ ಮೂಲಧನವಾಗಿರುವ ಎರಡು ಪುಸ್ತಕಗಳನ್ನು, ಅಂದರೆ ''ಸಾಮ್ರಾಟ್ ಅಶೋಕ'' ಮತ್ತು ''ಅಶೋಕ ಅಥವಾ ಆರ್ಯಾವೃತ್ತಾಂತಲಾ ಪಹಿಲಾ ಚಕ್ರವರ್ತಿ ರಾಜಾ'' ಎಂಬ ಎರಡು ಮರಾಠೀ ಪುಸ್ತಕಗಳನ್ನು ಓದಿದ ಬಳಿಕ, ಎಲ್ಲ ಧರ್ಮಗಳ ರಹಸ್ಯವು ಒಂದೇ ಇರುತ್ತದೆಂಬ ನನ್ನ ಭಾವನೆಗೆ ಬಲವಾದ ಸಾಕ್ಷಿಯು ದೊರೆತಂತಾಯಿತು; ಆದ್ದರಿಂದ ಅವೆರಡು ಪುಸ್ತಕಗಳ ಆಧಾರದಿಂದ ಬರೆಯಲ್ಪಟ್ಟಿರುವ ಈ ಪುಸ್ತಕಕ್ಕೆ ''ಧರ್ಮರಹಸ್ಯ'' ವೆಂಬ ಹೆಸರು ಕೊಡಲ್ಪಟ್ಟಿರುತ್ತದೆ. ಅದರಂತೆ, ಸತ್ಸಮಾಗಮವಿಲ್ಲದೆ ಧರ್ಮದ ನಿಜವಾದ ರಹಸ್ಯವು ತಿಳಿಯುವದಿಲ್ಲವಾದುದರಿಂದ ಇದಕ್ಕೆ ''ಸತ್ಸಮಾಗಮಪ್ರಭಾವ''ವೆಂಬ ಮತ್ತೊಂದು ಹೆಸರೂ ಬಂದಿರುವದು. ಎಲ್ಲ ಧರ್ಮಗಳ ಅಂತಿಮಫಲವು ಆತ್ಮಕ್ಕೆ ಶಾಶ್ವತ ಶಾಂತಿಯು ದೊರೆಯಬೇಕೆಂಬದೇ ಆಗಿರುತ್ತದೆಂದು ಹೇಳಬಹುದು. ಈ ಶಾಂತಿಯು ದೊರೆಯಬೇಕಾದರೆ, ಸ್ವತಃ ಶಾಂತರಾಗಿದ್ದ ಸತ್ಪುರುಷರ ಸಮಾಗಮದಿಂದ ಅವರ ಕೃಪೆಯನ್ನು ಸಂಪಾದಿಸುವದು, ಅಂದರೆ ಕ್ಷಮಾ—ಶಾಂತಿ—ದಯೆ ಮೊದಲಾದ ಸದ್ಗುಣಗಳುಳ್ಳವರಾಗುವದು ಅವಶ್ಯವಾಗಿರುತ್ತದೆಂದು ಎಲ್ಲ ಧರ್ಮಗಳು ಹೇಳುತ್ತಿರಬಹುದು. ಈ ಮಾತಿಗೆ ಈ ಕಾದಂಬರಿಯೊಳಗಿನ ಅಶೋಕನ ವೃತ್ತಿ ಪರಿವರ್ತನವು ಉತ್ತಮ ಸಾಕ್ಷಿಯಾಗಿರುತ್ತದೆ.

ಪ್ರತಿ ಒಂದು ಧರ್ಮದ ಸ್ವರೂಪದಲ್ಲಿ ಬಾಹ್ಯಾಂಗ ಅಂತರಂಗ ಎಂಬ ಎರಡು ಮುಖ್ಯ ಭಾಗಗಳಿರುತ್ತವೆಯೆಂದು ಹೇಳಲೇಬೇಕಾಗುವದು. ಇವುಗಳಲ್ಲಿ ಅಂತರಂಗವು, ಅಂದರೆ ಆತ್ಮಜ್ಞಾನಪ್ರಾಪ್ತಿಯ ಸಾಧನವು ಅವಿನಾಶಿಯೂ, ಸತ್ಯವೂ ಅಂತೇ ಸನಾತನವು ಆಗಿದ್ದು, ಈ ಮಹತ್ವದ ಭಾಗವನ್ನು, ದೇಶ–ಕಾಲ–ಪರಿಸ್ಥಿತಿಗಳ ಬಾಧೆಯಿಂದ ರಕ್ಷಿಸುವದಕ್ಕಾಗಿ, ಹಾಗು ಆಯಾ ಧರ್ಮಗಳ ವೈಲಕ್ಷಣ್ಯವನ್ನು ಕಾಯ್ದುಕೊಳ್ಳುವದಕ್ಕಾಗಿ ಬಹಿರಂಗದ ರಚನೆಯಿರುತ್ತದೆ; ಅದರಿಂದಲೇ ಬೇರೆ ಬೇರೆ ಧರ್ಮಗಳ ಬಾಹ್ಯಾಂಗಗಳು ಭಿನ್ನ ಭಿನ್ನವಾಗಿರುವದು ಆಶ್ಚರ್ಯವಲ್ಲ–ಅಸ್ವಾಭಾವಿಕವೂ ಅಲ್ಲ. ಮುಸಲ್ಮಾನರ ಶಿಖಾನಷ್ಟತೆ–ಬ್ರಾಹ್ಮಣರ ಶಿಖಾ ಸಂಪನ್ನತೆ, ಸ್ಮಾರ್ತರ ಭಸ್ಮಧಾರಣ–ವೈಷ್ಣವರ ಮುದ್ರಾಧಾರಣ, ಬ್ರಾಹ್ಮಣರ ಯಜ್ಞೋಪವೀತ–ಲಿಂಗಾಯತರ ಲಿಂಗ ಹಿಂದೂಜನರ ಮೂರ್ತಿಪೂಜೆ–ಮುಸಲ್ಮಾನರ ನಮಾಜು ಇವೇ ಮೊದಲಾದವು, ಅಂದರೆ ಜ್ಞಾನೇಂದ್ರಿಯಗಳಿಂದ ತಿಳಿಯಬಹುದಾದ ಧರ್ಮದ ಸ್ವರೂಪವು

ಧರ್ಮದ ಬಾಹ್ಯಾಂಗವೆನಿಸುವದು. ವೇಷಧಾರಿಗಳಂತೆ ಈ ಬಾಹ್ಯಾಂಗದ ಸಂಬಂಧದಿಂದ ಸ್ಮಾರ್ತನು ಕ್ಷಣದಲ್ಲಿ ವೈಷ್ಣವನೂ, ಬ್ರಾಹ್ಮಣ ಯತಿಯು ಕ್ಷಣದಲ್ಲಿ ಬೌದ್ಧಭಿಕ್ಷುವೂ, ಹಿಂದುವು ಕ್ಷಣದಲ್ಲಿ ಮುಸಲ್ಮಾನನೂ ಆಗಬಹುದು; ಆದರೆ ಧರ್ಮದ ಅಂತರಂಗದ ಸಂಬಂಧದಿಂದ ರೂಪಾಂತರವಾಗಲಿಕ್ಕೆ ಸರ್ವಥಾ ಬರುವದಿಲ್ಲ; ಯಾಕಂದರೆ, ಅಂತರಂಗದಿಂದ ಯಾವ ಧರ್ಮಗಳೂ ಪರಸ್ಪರ ತತ್ವತಃ ಭಿನ್ನವಾಗಿರುವದಿಲ್ಲ. ನಿಜವಾದ ಬ್ರಾಹ್ಮಣ್ಯವು, ನಿಜವಾದ ಇಸ್ಲಾಮಮತನವು, ನಿಜವಾದ ಕ್ರೈಸ್ತತ್ವವು, ನಿಜವಾದ ಅದ್ವೈತವು, ನಿಜವಾದ ದ್ವೈತವು ಶಾಂತಿಗೆ ಬಾಧಕವಿಲ್ಲ.

ಮನುಷ್ಯರ ಲಕ್ಷವು ಬಹುತರ ಧರ್ಮದ ಬಾಹ್ಯಾಂಗದ ಕಡೆಗೇ ಹೋಗುವದರಿಂದ, ಅವರಿಗೆ ಅಂತರಂಗದ ವಿಸ್ಮೃತಿಯಾಗಲು, ದುರಭಿಮಾನ ಬೆಳೆದು ಮಾತ್ಸರ್ಯದಿಂದ ಧಾರ್ಮಿಕ ಕಲಹಗಳು ಉತ್ಪನ್ನವಾಗಿ ರಕ್ತದ ಕಾಲಿವೆಗಳು ಸಹ ಹರಿಯುತ್ತ ಬಂದವು! ಇದು ಬಹು ದುಃಖದ ಸಂಗತಿಯು! ಗುರು ಕೃಪೆಯಿಂದ ತನ್ನ ಧರ್ಮದ ಅಂತರಂಗ—ಬಹಿರಂಗಗಳ ಸ್ವರೂಪವನ್ನು ಅರಿತುಕೊಂಡು, ಅವುಗಳಂತೆ ನಿಷ್ಠೆಯಿಂದ ಆಚರಿಸುವದಕ್ಕೆ ಸ್ವಧರ್ಮನಿಷ್ಠೆಯೆನ್ನ ಬಹುದು. ಅದರಂತೆ ಎಲ್ಲ ಧರ್ಮಗಳ ರಹಸ್ಯವು, ಅಂದರೆ ಧರ್ಮದ ಅಂತರಂಗವು ಒಂದೇ ಇರುವದರಿಂದ, ಅವುಗಳ ಬಾಹ್ಯಾಂಗದ ಭಿನ್ನತ್ವದಿಂದುಂಟಾಗಬಹುದಾದ ಅಸೂಯಕ್ಕೆ ಒಳಗಾಗದೆ, ಪರ ಧರ್ಮದವರಲ್ಲಿ ಪ್ರೇಮವನ್ನು ಕಾಯ್ದುಕೊಳ್ಳುವದಕ್ಕೆ ಪರಧರ್ಮಸಹಿಷ್ಣುತೆಯೆನ್ನ ಬಹುದು. ಕೇವಲ ಧರ್ಮದ ಬಾಹ್ಯಾಂಗದಲ್ಲಿ ನಿಷ್ಠೆಯನ್ನು ತೋರಿಸುವದು ಡಾಂಭಿಕತನವೇ ಸರಿ. ಇದರಿಂದ ಶಾಂತಿಯು ಎಂದಿಗೂ ದೊರೆಯಲಾರದು. ಈ ಕಾದಂಬರಿಯನ್ನು ಓದಿದವರಲ್ಲಿ ಒಬ್ಬರಾದರೂ ಸ್ವಧರ್ಮನಿಷ್ಠೆಯನ್ನೂ, ಪರಧರ್ಮಸಹಿಷ್ಣುತೆಯನ್ನೂ ತಾಳಿ, ಎಲ್ಲ ಧರ್ಮದವ ರೊಡನೆ ನಿಜವಾದ ಪ್ರೇಮದಿಂದಲೂ, ಗೌರವದಿಂದಲೂ ನಡ ಕೊಂಡರೆ, ಲೇಖಕನ ಶ್ರಮವು ಸಾರ್ಥಕವಾಯಿತೆಂದು ತಿಳಿಯಲಾಗುವದು. ಪರಧರ್ಮದಲ್ಲಿ ಆದರವೂ, ಪರಧರ್ಮದ ಗುರುಗಳಲ್ಲಿ, ಸತ್ಪುರುಷರಲ್ಲಿ, ದೇವರಲ್ಲಿ ಭಕ್ತಿಯೂ ಯಾವನ ಅಂತರಂಗದಲ್ಲಿ ಉತ್ಪನ್ನ ವಾಗುವವೋ, ಆ ಭಾಗ್ಯಶಾಲಿಯಲ್ಲಿಯೇ ಸ್ವಧರ್ಮನಿಷ್ಠೆಯಿರುತ್ತದೆಂದು ತಿಳಿಯತಕ್ಕದ್ದು! ಅವನೇ ಧನ್ಯನು!!

ಹಾವೇರಿ	ಕನ್ನಡಿಗರ ಸೇವಕ
ತಾ॥ ೨೫.೪.೧೯೧೪	ಗಳಗನಾಥ

ತಪೋಧನನು

ಶ್ರೀವಿಷ್ಣು—ಪಾದೋದಕವೆನಿಸುವ ಭಾಗೀರಥಿಗೆ ಆರ್ಯಾವರ್ತವನ್ನು ಪ್ರವೇಶಿಸುವದಕ್ಕಾಗಿ ಹಿಮಾಚಲನು ಮಾರ್ಗವನ್ನು ಮಾಡಿಕೊಟ್ಟಿರುವನೋ, ಅನ್ನುವಂತೆ, ಹರಿದ್ವಾರದ ಗಂಗಾಪ್ರವಾಹದ ಎರಡು ದಂಡೆಗಳನ್ನು ಹಿಡಿದು ಸಣ್ಣ ಸಣ್ಣ ಪರ್ವತಗಳ ಶ್ರೇಣಿಗಳು ಹಬ್ಬಿಗೊಂಡಿರುವವು. ಈ ಪರ್ವತ ಶ್ರೇಣಿಗಳೂ, ಅವುಗಳ ನಡುವಿನ ಕಂದರವೂ ಕೂಡಿ ಗಂಗೆಯ ದ್ವಾರದಂತೆ ಕಾಣುವದರಿಂದಲೇ ಈ ಮಹಾಕ್ಷೇತ್ರಕ್ಕೆ ಗಂಗಾದ್ವಾರವೆಂಬ ಮತ್ತೊಂದು ಹೆಸರು ಬಿದ್ದಿರುತ್ತದೆ. ಈ ಚಿಕ್ಕಪರ್ವತಗಳ ಹಿಂದೆ ಹಿಂದೆ ಪರ್ವತಗಳು ಎತ್ತರವಾಗುತ್ತಾಗುತ್ತ ಹೋಗಿ, ಕಡೆಗೆ ಆಕಾಶವನ್ನು ಭೇಧಿಸುವಂಥ ಕಾಂಚನಗಡ, ಗೌರೀಶಂಕರ, ಧವಲಗಿರಿ ಮೊದಲಾದ ಶಿಖರಗಳು ಉತ್ಪನ್ನವಾಗಿರುತ್ತವೆ. ಆ ಶಿಖರಗಳಲ್ಲಿ ಕೆಲವು ಎರಡು ಹರದಾರಿಗಳಿಗಿಂತ ಹೆಚ್ಚು ಎತ್ತರವಾಗಿರುವವು! ಈ ಅಗಾಧವಾದ ಸೃಷ್ಟಿರಚನೆಯನ್ನು ನೋಡಿದ ಮನುಷ್ಯನು ಮುಂದುಗಾಣದೆ ನಿಂತುಕೊಳ್ಳುವನು. ಈ ಮಹಾಕ್ಷೇತ್ರದಲ್ಲಿರುವ ಕನಖಲವೆಂಬ ತೀರ್ಥವು ಪರಮ ಪವಿತ್ರವೂ, ಚಿತ್ತಾಕರ್ಷಕವೂ ಆಗಿರುವದು. ಭಾಗೀರಥಿಯದೊಂದು ಭಾಗವು ಈ ತೀರ್ಥವಾಗಿರುತ್ತದೆ. ಈ ತೀರ್ಥದಲ್ಲಿ ಸ್ನಾನ ಮಾಡುವದಕ್ಕಾಗಿ ಒಂದು ಚಿಕ್ಕ ಘಾಟು ಕಟ್ಟಲ್ಪಟ್ಟಿರುವದು. ಘಾಟಿನ ಮೇಲೆ ದೊಡ್ಡ ದೊಡ್ಡ ಆಲದ ಮರಗಳು ಇರುವವು. ಘಾಟಿಗೆ ಹೊಂದಿ ಗಂಗಾಪ್ರವಾಹವು ಕಸುವಿನಿಂದ ಹರಿಯುತ್ತಿರುವದು. ಆಗ ಶುಭ್ರವಾದ ಬುರುಗು ಉತ್ಪನ್ನವಾಗುತ್ತಿರುತ್ತದೆ. ಮೊದಲೇ ಭಾಗೀರಥಿಯ ಉದಕವು ಶುಭ್ರ, ಅದರಲ್ಲಿ ಬಿಳಿಯ ನೊರೆ, ದಂಡೆಯಮೇಲಿನ ಬಂಡೆಗಳೂ ಕಲ್ಲುಗಳೂ ಬಿಳಿಯವು. ಎದುರಿಗೆ ಕಾಣುವದೊಂದು ದಿನ್ನೆಯೆಲ್ಲ ಬಿಳಿಯ ಬಂಡೆಕಲ್ಲುಗಳಿಂದ ತುಂಬಿಹೋಗಿದ್ದು, ಆ ದಿನ್ನೆಯೊಳಗಿಂದ ಸಾವಿರಾರು ಶುಭ್ರ ಪ್ರವಾಹಗಳು ಹರಿದುಬಂದು ಕೆಳಗೆ ಕನಖಲತೀರ್ಥವನ್ನು ಸೇರುತ್ತವೆ. ಇದನ್ನೆಲ್ಲ ನೋಡಿ ಯಾವನ ಮನಸ್ಸು ಆಶ್ಚರ್ಯಮಗ್ನವಾಗಲಿಕ್ಕಿಲ್ಲ! ಈ ಕ್ಷೇತ್ರದ ನೆರೆಯ ಪ್ರದೇಶವು ಬಹು ಶಾಂತವಾದದ್ದು, ಅಲ್ಲಿ ಮನುಷ್ಯವಸತಿಯ ಗಂಧವು ಕೂಡ ಇರುವದಿಲ್ಲ, ಈ ಸ್ಥಾನವು ಸಮಾಧಿಗೂ, ಮನಸ್ಸಿನ ಏಕಾಗ್ರತೆಗೂ, ಶಾಂತಿಯ ಸಂಪಾದನೆಗೂ ಯೋಗ್ಯವಾದದ್ದು. ಇಂಥ ಅನಂತ ರಮ್ಯಕ್ಷೇತ್ರ–ತೀರ್ಥಗಳು ಹಿಮವಂತನನ್ನು ಆಶ್ರಯಿಸಿರುವದರಿಂದಲೂ, ಔನ್ನತ್ಯದಿಂದ ಆತನು ಇಡಿಯ ಪೃಥ್ವಿಯಲ್ಲಿ ಅಗ್ರೇಸರನಾಗಿರುವದರಿಂದಲೂ, ಆತನ ವಶದಲ್ಲಿ ಬಗೆ ಬಗೆಯ ಅಪರೂಪದ ಗಗನಚುಂಬಿತ ವೃಕ್ಷಗಳೂ, ವನಸ್ಪತಿಗಳೂ, ಓಷಧಿಗಳೂ

ಇರುವದರಿಂದಲೂ, ಆತನು ಪುರಾಣಪ್ರಸಿದ್ಧನಾಗಿರುವದರಿಂದಲೂ ಆತನ ಕೀರ್ತಿಯ ಸ್ಮರಣವು ಹಿಂದೂ ಜನರ ಹೃತ್ಪಟಲದಲ್ಲಿ ಸ್ಥಿರವಾಗಿ ಉಳಿಯುತ್ತಿರುವದು ಆಶ್ಚರ್ಯವಲ್ಲ.

ಪ್ರಿಯವಾಚಕರೇ, ಇಂಥ ಗೌರವಶಾಲಿಯಾದ ಹಿಮವಂತನೊಳಗಿನ ಹರಿದ್ವಾರವೆಂಬ ಕ್ಷೇತ್ರದಲ್ಲಿಯೂ, ಪರಮ ಗೌರವಶಾಲಿಯಾದ ಭರತ ಭೂಮಿಯಲ್ಲಿಯೂ ನಾವು ಎರಡುವರೆ ಸಾವಿರ ವರ್ಷಗಳ ಹಿಂದೆ ವ್ಯವಹರಿಸುತ್ತಿದ್ದೆವೆಂದು ತಿಳಿಯುವಾ. ಆಗ ಭಗವಾನ್ ಬುದ್ಧದೇವನು ತನ್ನ ತಪೋಬಲದಿಂದ ಆಕಸ್ಮಿಕವಾಗಿ ಅಗಾಧಜ್ಞಾನವನ್ನು ಪಡೆದು ದಯಾಪರನಾಗಿ, ಕಾಶಿಯ ನೆರೆಯ ಪ್ರಾಂತದಲ್ಲಿ ಬೌದ್ಧಧರ್ಮವನ್ನು ಉಪದೇಶಿಸುತ್ತ ಸಂಚರಿಸುತ್ತಿದ್ದನು; ಸನಾತನವಾದ ವೇದಧರ್ಮವು ಹೀನಸ್ಥಿತಿಯನ್ನು ಹೊಂದುತ್ತಲಿತ್ತು; ದ್ವಿಜರೆನಿಸಿಕೊಳ್ಳುವ ಬಹುಜನರು ಯಜ್ಞ ಯಾಗಾದಿಗಳ ನೆವದಿಂದ ಪ್ರಾಣಿಗಳ ಸಂಹಾರವನ್ನು ಮಿತಿಮೀರಿ ಮಾಡತೊಡಗಿದ್ದರು; ಮಹಾತ್ಮರಾದ ಬ್ರಹ್ಮನಿಷ್ಠರ ಸಾನ್ನಿಧ್ಯದಿಂದ ದೇವತೆಗಳಿಗೆ ಹವಿರ್ಭಾಗವನ್ನು ಸಮರ್ಪಿಸಿ ಸ್ವಪರಹಿತವನ್ನು ಸಾಧಿಸುವ ಯಜ್ಞದ ಸದುದ್ದೇಶದ ಸದ್ದು ಅಡಗಿ, ಡಾಂಭಿಕತನದಿಂದ ಮಂದಿಯ ಕಣ್ಣುಗಳಲ್ಲಿ ಮಣ್ಣುತುಂಬಿ ವಿಷಯವಾಸನೆಯನ್ನು ಪೂರ್ಣಮಾಡಿಕೊಳ್ಳುವ ನೀಚತನವು ನೋಡಿದತ್ತೆಲ್ಲ ಕಣ್ಣಿಗೆ ಬೀಳಹತ್ತಿತ್ತು; ನಿಸ್ಪೃಹತೆಯ ತೇಜಸ್ಸಿನಿಂದಲೂ, ದಿವ್ಯಜ್ಞಾನದ ಮಹಿಮೆಯಿಂದಲೂ ಲೋಕಪೂಜ್ಯತೆಯನ್ನು ಪಡೆಯುವ ಋಷಿಗಳ ಮಂಡಲವು ಅದೃಶ್ಯವಾಗಿ, ಅದರ ಸ್ಥಳದಲ್ಲಿ ಐಹಿಕ ಸುಖದ ಆಶೆಯಿಂದ ಅಂಧತ್ವವನ್ನು ಪಡೆದು, ಮಿಥ್ಯಾಜ್ಞಾನದ ಮಾಲಿನ್ಯದಿಂದ ತಿರಸ್ಕರಣೀಯವಾಗಿದ್ದ ನಾಮಧಾರಿ ಬ್ರಾಹ್ಮಣವರ್ಗವು ತಲೆದೋರಹತ್ತಿತ್ತು. ''ಸರ್ವಂ ವಿಷ್ಣುಮಯಂಜಗತ್'' ಎಂಬ ಭಗವದ್ಭಕ್ತರ ಉಕ್ತಿಯಂತೆ, ಜಗತ್ತು ಈಶ್ವರ ಸ್ವರೂಪವೆಂದು ತಿಳಿದು ಅತ್ಯಂತ ಲೀನತೆಯಿಂದ ವರ್ತಿಸುವ ಸಾತ್ವಿಕ ದ್ವಿಜರ ಲೀನಭಾವವು ಅಳಿದು ಹೋಗಿ, ಅದರ ಸ್ಥಳವನ್ನು, ಜಗತ್ತು ತನ್ನ ಸುಖಕ್ಕಾಗಿಯೇ ಇರುತ್ತದೆಂಬ ನಾಸ್ತಿಕರ ಅಹಂಭಾವವು ಆಕ್ರಮಿಸತೊಡಗಿತ್ತು. ಜನರ ಹೃದಯದಲ್ಲಿ ಭೂತದಯೆಯ ಗಂಧವಿದ್ದಿಲ್ಲ. ನೋಡಿದತ್ತೆಲ್ಲ ಲೋಭ–ಮಾತ್ಸರ್ಯ–ಕ್ರೌರ್ಯ–ಸಂತಾಪಗಳಿಂದ ಜನರು ಪೀಡಿತರಾಗಿದ್ದರು. ಈ ವಿಪನ್ನಸ್ಥಿತಿಯನ್ನು ನೋಡಿ ಮಹಾತ್ಮನಾದ ಬುದ್ಧದೇವನ ಹೃದಯವು ಕರಗಿ ಹೋಗಿ, ಆತನಿಂದ ಅಹಿಂಸಾ ಧರ್ಮವು ಸ್ಥಾಪಿಸಲ್ಪಟ್ಟಿತು. ಅದನ್ನೇ ಬೌದ್ಧಧರ್ಮವೆಂದು ಕರೆಯುವರು. ಬುದ್ಧನು ಜಾತಿಭೇದವನ್ನು ತೆಗೆದುಹಾಕಿದ್ದರಿಂದ ಬೌದ್ಧ ಧರ್ಮವು ದಿನದಿನಕ್ಕೆ ಹಬ್ಬಹತ್ತಿತು. ಬರಬರುತ್ತ ಬ್ರಾಹ್ಮಣಧರ್ಮವು ಕಳೆಗುಂದಹತ್ತಿ ಸತ್ವಸ್ಥ ಬೌದ್ಧ ಭಿಕ್ಷುಗಳ ಮುಂದೆ ಕರ್ಮಠರಾದ ಡಾಂಭಿಕ ಬ್ರಾಹ್ಮಣರು ತೇಜೋಹೀನರಾಗಿ ತೋರಹತ್ತಿದರು; ಆದರೆ ಸೃಷ್ಟಿಯ ಸಾಮಾನ್ಯ ನಿಯಮನ್ನನುಸರಿಸಿ ಬರಬರುತ್ತ ಬೌದ್ಧಧರ್ಮವೂ ಹೀನತೆಯನ್ನು ಹೊಂದತೊಡಗಲು, ಬುದ್ಧನು ಅವತರಿಸಿ ಇನ್ನೂರಾಐವತ್ತು ವರ್ಷಗಳಾಗುವಷ್ಟರಲ್ಲಿ ಧರ್ಮಮೂಢರಾದ ಬ್ರಾಹ್ಮಣರೂ, ಧರ್ಮಮೂಢರಾದ ಬೌದ್ಧರೂ ತಮ್ಮ ತಮ್ಮ ಧರ್ಮಗಳ ನಿಜವಾದ ತತ್ವಗಳಂತೆ ನಡೆಯಲಾರದೆ, ದುರಭಿಮಾನದಿಂದ ಬಡಿದಾಡಹತ್ತಿದರು. ಬೌದ್ಧಧರ್ಮದಲ್ಲಿಯೂ ಮತಭೇದಗಳುಂಟಾಗಿ ಪರಸ್ಪರ ಕಲಹಗಳು ಬೆಳೆಯಹತ್ತಿದವು. ಬೌದ್ಧಧರ್ಮದ ತತ್ವಗಳಂತೆ

ಆಚರಣೆಯು ತೋರದಾಯಿತು. ಎಷ್ಟೋಜನ ಬ್ರಾಹ್ಮಣರು ಬೌದ್ಧಭಿಕ್ಷುಗಳ ವೇಷದಿಂದ ಪ್ರತಿಷ್ಠೆಯನ್ನು ಪಡೆದು ಜೀವಿಸಹತ್ತಿದರು.

ಇಂಥ ಧರ್ಮಸಂಕರಕಾಲದಲ್ಲಿಯೂ, ಚಿದಾನಂದಸ್ವಾಮಿಗಳಂಥ ತಪೋಧನರು ಅರಣ್ಯಮಧ್ಯದೊಳಗಿನ ಆಶ್ರಮಗಳಲ್ಲಿ ವೇದಧರ್ಮದ ಆಧಾರ ಸ್ತಂಭಗಳಂತೆ ಶಿಷ್ಯವೃಂದ ದೊಡನೆ ಅಪರೂಪವಾಗಿ ವಾಸಿಸುತ್ತಿದ್ದರು. ಚಿದಾನಂದ ಸ್ವಾಮಿಗಳ ಆಶ್ರಮವು ಹರಿದ್ವಾರ ದೊಳಗಿನ ಕನಖಲತೀರ್ಥದ ನೆರೆಯಲ್ಲಿತ್ತು. ಬೌದ್ಧಧರ್ಮದ ಸಂರಕ್ಷಕನೂ, ಪ್ರಚಾರಕನೂ, ಪ್ರತಿಪಾಲಕನೂ ಆದ ಸಾಮ್ರಾಟ್ ಅಶೋಕನೂ, ಬೇರೆ ಧರ್ಮನಿರತ ಬೌದ್ಧರೂ ಕೂಡ ಚಿದಾನಂದ ಸ್ವಾಮಿಗಳಲ್ಲಿ ಪೂಜ್ಯ ಬುದ್ಧಿಯುಳ್ಳವರಾಗಿದ್ದರೆಂದ ಬಳಿಕ, ಸ್ವಾಮಿಗಳ ಯೋಗ್ಯತೆಯನ್ನೇನು ವರ್ಣಿಸುವದದೆ? ಸ್ವಾಮಿಗಳು ದಯಾಪರರೂ ಸತ್ವಶೀಲರೂ, ನಿಸ್ಪೃಹರೂ, ಪರಧರ್ಮಸಹಿಷ್ಣುಗಳೂ ಆಗಿದ್ದರು. ಅವರಲ್ಲಿ ಶಾಂತಿಯು ತುಂಬಿ ತುಳುಕುತ್ತಿತ್ತು. ಕ್ಷಮಾಗುಣವು ಅವರ ಅಲಂಕಾರವಾಗಿತ್ತು. ಅವರು ಮೂರ್ತಿಮಂತ ಧರ್ಮವಾಗಿದ್ದರು. ಅವರ ತೇಜಃಪುಂಜವಾದ ಮುಖವನ್ನು ನೋಡಿದ ಮಾತ್ರದಿಂದ, ಮನುಷ್ಯ ಮಾತ್ರರಲ್ಲಿ ಪೂಜ್ಯಬುದ್ಧಿಯು ಉತ್ಪನ್ನವಾಗುತ್ತಿತ್ತು. ಇಂಥ ಮಹಾಪುರುಷರಿಂದಲೇ ವೇದಧರ್ಮದ ಗೌರವವು ಬೌದ್ಧರ ದೃಷ್ಟಿಯಿಂದಲೂ ಪ್ರಸ್ಥಾಪಿತವಾಗಿತ್ತೆಂದು ಹೇಳಬಹುದು. ಆ ಕಾಲದ ಬ್ರಾಹ್ಮಣ–ಕ್ಷತ್ರಿಯ ಕುಮಾರರು ಚಿದಾನಂದರ ಆಶ್ರಮವನ್ನು ಹೊಂದಿ ಸತ್ಸಮಾಗಮದ ಲಾಭವನ್ನು ಪಡೆಯುತ್ತಿದ್ದರಲ್ಲದೆ, ಪವಿತ್ರ ಬ್ರಹ್ಮಚರ್ಯವ್ರತದ ಪಾಲನದಿಂದಲೂ, ಸ್ವಾಮಿಗಳ ಸಚ್ಛಿಕ್ಷಣ ದಿಂದಲೂ ಸತ್ವಶೀಲರೂ, ಬಲಶಾಲಿಗಳೂ ಆಗುತ್ತಿದ್ದರು. ಆಗಿನ ಕಾಲದಲ್ಲಿ ವಿದ್ಯಾರ್ಥಿಗಳ ಸತ್ವಪೋಷಣವಾಗುವ ಶ್ರೇಷ್ಠತಮ ಗುರುಕುಲವು ಚಿದಾನಂದರ ಆಶ್ರಮವೇ ಆಗಿತ್ತೆಂದು ಹೇಳಬಹುದು. ಕಲಿಂಗಾದಿ ದೇಶಗಳ ಪ್ರಸಿದ್ಧ ಹಿಂದೂರಾಜರ, ಹಾಗು ಸಣ್ಣ ದೊಡ್ಡ ಹಿಂದೂ ಸಂಸ್ಥಾನಿಕರ ಭಕ್ತಿಗೂ, ಅಭಿಮಾನಕ್ಕೂ ಚಿದಾನಂದರು ಪಾತ್ರರಾಗಿದ್ದರು. ಸ್ವಾಮಿಗಳ ಇಚ್ಛೆಯನ್ನು ಪೂರ್ಣಮಾಡಿ ಧನ್ಯರಾಗುವ ವಿಷಯದಲ್ಲಿ ಹಿಂದೂ ರಾಜರು ತತ್ಪರರಾಗಿ ರುತ್ತಿದ್ದರು; ಆದರೆ ಸ್ವಾಮಿಗಳ ನಿಸ್ಪೃಹತೆಯ ಮೂಲಕ ಅಂಥ ಸುಯೋಗವು ಬಹು ಸ್ವಲ್ಪ ಜನರ ಪಾಲಿಗೆ ಮಹದ್ಭಾಗ್ಯ ರೂಪದಿಂದ ಒದಗುತ್ತಿತ್ತು! ಪ್ರಸಿದ್ಧ ಕಲಿಂಗದೇಶದ ರಾಜನಾದ ಮೃಗೇಂದ್ರನು ಸ್ವಾಮಿಗಳ ಪಟ್ಟಶಿಷ್ಯನೆನಿಸುತ್ತಿದ್ದನು. ಮೃಗೇಂದ್ರನ ಮಗನಾದ ಜಿತೇಂದ್ರ–ರಾಜಕುಮಾರನು ಉಪನಯನವಾದಂದಿನಿಂದಲೇ ಚಿದಾನಂದ ಸ್ವಾಮಿಗಳ ಆಶ್ರಮದಲ್ಲಿರುತ್ತಿದ್ದನು. ಮಹತ್ವದ ರಾಜಕಾರಣವು ಒದಗಿದಾಗ, ಇಲ್ಲವೆ ಗುರುದರ್ಶನೇಚ್ಛೆಯು ಉತ್ಪನ್ನ ವಾದಾಗ ಸ್ವತಃ ಮೃಗೇಂದ್ರನು ಹರಿದ್ವಾರಕ್ಕೆ ಬರುತ್ತಿದ್ದನು.

ಒಂದುದಿನ ಚಿದಾನಂದ ಸ್ವಾಮಿಗಳ ಪರ್ಣಕುಟೀರದ ಮುಂದಿನ ವಿಶಾಲವಾದ ಪಟಾಂಗಣದಲ್ಲಿ ಶಿಷ್ಯವೃಂದವು ನೆರೆದದೆ; ಸೂರ್ಯನ ಮುಂಜಾವಿನ ಹೊಂಬಣ್ಣದ ಕಿರಣಗಳು, ದಟ್ಟವಾದ ಗಿಡಗಳಲ್ಲಿಯ ಸದುವು ನೋಡಿ ನುಗ್ಗಿ ಪಟಾಂಗಣವನ್ನು ಚಿತ್ರಿತವಾಗಿ ಮಾಡ ತೊಡಗಿವೆ; ಹೋಮಧೂಮದ ಸುಗಂಧವೂ, ಗುಗ್ಗುಳಾದಿ ಧೂಪಗಳ ಸುವಾಸನೆಯೂ ಆಶ್ರಮ–ಪ್ರದೇಶದಲ್ಲಿ ನಾಲ್ಕೂ ಕಡೆಗೆ ಪಸರಿಸಿವೆ; ಮಾನ್ಯರಿಗೆ ಕುಳಿತುಕೊಳ್ಳುವದಕ್ಕಾಗಿ ಅಲ್ಲಲ್ಲಿ

ಆಸನಗಳನ್ನು ಹಾಕಿದೆ; ಸುಂದರವಾದ ರಂಗವಲ್ಲಿಗಳಿಂದಲೂ, ಹರಿದ್ರಾ ಕುಂಕುಮಾದಿಗಳ ಅನುಲೇಪನದಿಂದಲೂ ಪಟಾಂಗಣವು ಮಂಗಲಕರವಾಗಿ ಒಪ್ಪುತ್ತಲಿದೆ; ಆಶ್ರಮಸ್ಥಳದಲ್ಲಿದ್ದ ಉನ್ನತವೃಕ್ಷಗಳು ಮಂದ ಮಾರುತನಿಂದ ಮೆಲ್ಲ ಮೆಲ್ಲನೆ ಅಲ್ಲಾಡುತ್ತಲಿವೆ; ಅದೇ ನೀರು ಹಾಕಿದ್ದರಿಂದ ಹೂವಿನ ಗಿಡಬಳ್ಳಿಗಳು ಮಲಮಲ ಅನ್ನುತ್ತ, ವಿರಲವಾದ ಹೂಬಿಸಿಲಿನಿಂದ ಮಿರಿಮಿರಿ ಮಿಂಚುತ್ತ, ಮಮತೆಯುಳ್ಳ ತಾಯಿಯಿಂದ ಉಣಿಸಲ್ಪಟ್ಟ ಹಸುಮಕ್ಕಳಂತೆ ಉಲ್ಲಾಸವನ್ನು ಬೀರುತ್ತಲಿವೆ; ಆಕಳು, ಚಿಗರಿ, ನವಿಲು, ಸಾರಂಗ ಮೊದಲಾದ ಸಾತ್ವಿಕ ಪ್ರಾಣಿಗಳು ಸ್ವೇಚ್ಛೆಯಿಂದ ಅಲ್ಲಲ್ಲಿ ಸಂಚರಿಸುತ್ತ, ಇದು ಕೇವಲ ನಿರುಪದ್ರವಸ್ಥಾನವೆಂಬ ಭಾವವನ್ನು ವ್ಯಕ್ತಮಾಡುತ್ತಲಿವೆ; ವನರಾಜನೆನಿಸುವ ಸಿಂಹವು ತನ್ನ ಕ್ರೂರಸ್ವಭಾವವನ್ನು ಬಿಟ್ಟು, ಗಾಂಭೀರ್ಯದಿಂದ ನಿಂತುಕೊಂಡು, ಜಿತೇಂದ್ರನೆಂಬ ಕಲಿಂಗರಾಜಪುತ್ರನು ತನ್ನ ಬೆನ್ನಮೇಲೆ ಕಯ್ಯಾಡಿಸುತ್ತ, ಹೆಗಲಮೇಲಿನ ಕೂದಲುಗಳ ತೊಡಕುಬಿಡಿಸುತ್ತಿರಲು, ಬಾಲವನ್ನು ಅಲ್ಲಾಡಿಸುತ್ತ ಪ್ರೇಮವನ್ನು ವ್ಯಕ್ತಮಾಡುತ್ತಲಿದೆ; ತಪೋಧನರಾದ ಬ್ರಾಹ್ಮಣರು ಒಬ್ಬೊಬ್ಬರೇ ಬಂದು ಆಸನಗಳ ಮೇಲೆ ಕುಳಿತುಕೊಳ್ಳಹತ್ತಿದ್ದಾರೆ; ಅಷ್ಟರಲ್ಲಿ ಕಲಿಂಗಾಧಿಪತಿಯಾದ ಮೃಗೇಂದ್ರನು, ಅತ್ಯಂತ ಲೀನತೆಯಿಂದ ತಮ್ಮನ್ನು ಹಿಂಬಾಲಿಸಿ ಬರುತ್ತಿರಲು, ಕೇವಲ ಶಾಂತಿಯ ರಾಶಿಯೋ, ಸತ್ವದ ನಿಧಿಯೋ, ಭೂತದಯೆಯ ಭಾಂಡಾರವೋ ಅನ್ನುವಂತೆ, ಶಿಷ್ಯರಿಂದ ಸುತ್ತಿದವರಾಗಿ ಚಿದಾನಂದ ಸ್ವಾಮಿಗಳು ಆ ಪಟಾಂಗಣದ ಕಡೆಗೆ ಬರತೊಡಗಿದರು. ಅವರ ಆವುಗೆಗಳ ಸಪ್ಪಳವಾಗಲು, ಪಟಾಂಗಣದಲ್ಲಿದ್ದವರೆಲ್ಲರು ಅತ್ಯಂತ ಭಕ್ತಿಯಿಂದ ಅವರನ್ನು ನೋಡ ತೊಡಗಿದರು. ಸ್ವಾಮಿಗಳು ಅದೇ ಪ್ರಾತಃಕಾಲದ ನಿತ್ಯಕರ್ಮಗಳನ್ನು ತೀರಿಸಿಕೊಂಡು ಬಂದವರಾದ್ದರಿಂದ, ಅವರ ಕಣ್ಣುಗಳು ಹೋಮ ಧೂಮದಿಂದ ಸ್ವಲ್ಪ ಕೆಂಪಾಗಿದ್ದವು. ಅವರು ಮೈಗೆ ಹಚ್ಚಿಕೊಂಡಿದ್ದ ವಿಭೂತಿಯು ಅಲ್ಲಲ್ಲಿ ಸ್ವಲ್ಪ ಸ್ವಲ್ಪ ಅಳಿಸಿದಂತೆ ಆಗಿತ್ತು. ಪ್ರಾತಸ್ಸಂಧ್ಯೋ ಪಾಸನಾದಿಗಳಿಂದ ಅವರ ಮುಖಮಂಡಲವು, ಷೋಡಶಕಲಾಯುಕ್ತನಾದ ಚಂದ್ರಮನಂತೆ ಪ್ರಕಾಶಮಾನವಾಗಿಯೂ, ಆಲ್ಹಾದಕರವಾಗಿಯೂ ಒಪ್ಪುತ್ತಿತ್ತು. ಆ ದಿನ ಕಲಿಂಗಾಧಿಪತಿಯು ಬಂದದ್ದರಿಂದ, ಸ್ವಾಮಿಗಳ ಮುಖಚಂದ್ರಮನಿಗೆ ವಸಂತೋದಯ ವಾದಂತಾಗಿತ್ತು. ಪಟಾಂಗಣದಲ್ಲಿದ್ದವರೆಲ್ಲರು ಪ್ರತ್ಯುತ್ಥಾನಾದಿಗಳಿಂದ ಸತ್ಕರಿಸುತ್ತಿರಲು, ಚಿದಾನಂದಸ್ವಾಮಿಗಳು ಬ್ರಹ್ಮಭಾವನೆಯಿಂದ ಎಲ್ಲರನ್ನು ವಿನಯದಿಂದ ನಮಿಸುತ್ತ ಮುಖದಲ್ಲಿ ಮೃದುಹಾಸವು ಒಪ್ಪುತ್ತಿರಲು, ಶಿಷ್ಯಮಂಡಲವನ್ನು ವಾತ್ಸಲ್ಯದಿಂದ ನೋಡುತ್ತ, ಮೃಗೇಂದ್ರನಿಗೆ ಯೋಗ್ಯವಾದ ಪೀಠವನ್ನು ತೋರಿಸುತ್ತ, ಎಲ್ಲ ಬ್ರಾಹ್ಮಣ ಸಮೂಹಕ್ಕೆ ಕುಳಿತುಕೊಳ್ಳಲು ವಿಜ್ಞಾಪಿಸುತ್ತ ತಮ್ಮ ಆಸನದ ಮೇಲೆ ಕುಳಿತುಕೊಂಡರು. ಆಗ ಆ ಪಟಾಂಗಣವು, ದೇವೇಂದ್ರನು ಬಂದಿರಲು, ಬ್ರಹ್ಮ ಋಷಿಮಂಡಲದಿಂದೊಪ್ಪುವ ಬ್ರಹ್ಮದೇವನ ಸಭಾಸ್ಥಾನದ ಸ್ಮರಣವನ್ನು ಮಾಡಿಕೊಡುತ್ತಿತ್ತು.

ಸಭೆಯು ನಿಶ್ಶಬ್ದವಾಗಿರಲು, ಭಾಸ್ಕರಪಂಡಿತನೆಂಬ ಒಬ್ಬ ಬ್ರಾಹ್ಮಣನು ಸ್ವಾಮಿಗಳನ್ನು ಕುರಿತು—ಮಹಾತ್ಮರೆ, ವೇದಧರ್ಮಾಭಿಮಾನಿಯಾದ ಪ್ರಸಿದ್ಧ ಚಂದ್ರಗುಪ್ತನ ಮೊಮ್ಮಗನೆನಿಸಿದ

ಅಶೋಕರಾಜನು ಬೌದ್ಧ ಧರ್ಮವನ್ನು ಸ್ವೀಕರಿಸಿದ್ದರಿಂದ, ವೇದಧರ್ಮವು ಕಳೆಗುಂದಲಿಕ್ಕೆ ಕಾರಣವಾಯಿತು. ಮೊದಲೇ ದುಷ್ಟ ಬೌದ್ಧರ ಕಾಟವು ಬಹಳವಾಗಿದೆ. ಅದರಲ್ಲಿ ಅಶೋಕನಂಥ ಪರಾಕ್ರಮಿಯಾದ ವೈದಿಕ ಅರಸನು ಧರ್ಮಾಂತರಮಾಡಿ ಅವರನ್ನು ಕೂಡಿದ ಬಳಿಕ ಕೇಳುವದೇನು? ಬ್ರಾಹ್ಮಣ್ಯವು ಭರದಿಂದ ನಷ್ಟವಾಗಹತ್ತಿರುವದು. ನೀಚರಾದ ಬೌದ್ಧಶ್ರವಣರ ಮಾತು ಕೇಳಿ ಬೌದ್ಧಧರ್ಮವನ್ನು ಹಬ್ಬಿಸುವ ಉದ್ದೇಶದಿಂದ ಅಶೋಕನು ವೇದಧರ್ಮದ ಅರಸರ ರಾಜ್ಯಗಳನ್ನು ಒಂದರ ಹಿಂದೊಂದು ಕೈಸೇರಿಸಿಕೊಂಡು, ಆ ರಾಜ್ಯದೊಳಗಿನ ಪ್ರಜೆಗಳನ್ನು ಒತ್ತಾಯದಿಂದ ಬೌದ್ಧರನ್ನು ಮಾಡತೊಡಗಿರುವನು. ಈಗ ಈ ಸಭಾಸ್ಥಾನವನ್ನು ತನ್ನ ಕ್ಷಾತ್ರತೇಜಸ್ಸಿನಿಂದ ಅಲಂಕರಿಸುತ್ತಿರುವ ಕಲಿಂಗಾಧಿಪತಿಯಾದ ಮೃಗೇಂದ್ರರಾಜನ ಹೊರತು, ಅಶೋಕನನ್ನು ತಡೆಯುವ ರಾಜರು ಈ ಭರತಭೂಮಿಯಲ್ಲಿ ಮತ್ತೊಬ್ಬರು ಉಳಿಯಲಿಲ್ಲ. ಅಶೋಕನ ಪಾಲಿಗೆ ಕಲಿಂಗ ವಿಜಯವು ಕಡೆಯ ವಿಜಯವಾಗಿ ಉಳಿದಂತಾಗಿರುತ್ತದೆ. ಆತನು ಆ ರಾಜ್ಯವನ್ನಷ್ಟು ಗೆದ್ದುಬಿಟ್ಟನೆಂದರೆ, ಚಕ್ರವರ್ತಿಯ ಪದವಿಯನ್ನು ಹೊಂದುವನು. ಈ ಕಲಿಂಗ ದೇಶಾಧಿಪತಿಯೊಬ್ಬನೇ ಅಶೋಕನ ಆ ಘನತರವಾದ ಚಕ್ರವರ್ತಿ ಪದವಿಗೆ ಅಡ್ಡಾಗಿದ್ದಾನೆ. ಅಶೋಕನು ಮೊದಲು ಸುತ್ತಲಿನ ಸಣ್ಣಸಣ್ಣ ರಾಜ್ಯಗಳನ್ನು ಗೆದ್ದು, ಈಗ ಬಲಾಢ್ಯ ಹಿಂದೂರಾಜ್ಯವಾದ ಕಲಿಂಗಕ್ಕೆ ಕೈಹಾಕಬೇಕೆಂದು ಹವಣಿಸಹತ್ತಿದ್ದಾನೆ. ಆದರೆ ಮಹಾತ್ಮರಾದ ತಪೋಧನರೆ, ತಮ್ಮಂಥವರ ಕೃಪೆಗೆ ಪಾತ್ರನಾಗಿರುವ ಈ ಮೃಗೇಂದ್ರನಿಗೆ ಸೋಲು ಬರಲಾರದೆಂಬ ನಂಬುಗೆಯು ನಮ್ಮೆಲ್ಲರಿಗಿದ್ದರೂ, ಅಶೋಕನ ಈ ನಿಷ್ಕಂಟಕವಾದ ವಿಜಯ ವೈಭವವನ್ನು ನೋಡಿ ನಮ್ಮೆಲ್ಲರ ಹೃದಯಗಳು ತಲ್ಲಣಿಸಹತ್ತಿವೆ. ಕಲಿಂಗವೊಂದನ್ನು ಅಶೋಕನು ಗೆದ್ದುಬಿಟ್ಟನೆಂದರೆ, ಬ್ರಾಹ್ಮಣ್ಯವು ತೀರ ನಿರಾಧಾರವಾದಂತಾಗಿ, ಭರತಭೂಮಿಯು ಬೌದ್ಧಮಯವಾಗುವದು. ಬುದ್ಧನು ಜಾತಿಭೇದವಿಲ್ಲದೆ ಎಲ್ಲರಿಗೂ ಸರಿಯಾಗಿ ತನ್ನ ಧರ್ಮವನ್ನು ಬೋಧಿಸಿದ್ದರಿಂದ ಅತಿ ವೇಗದಿಂದ ಹಬ್ಬಿದ ಆ ಧರ್ಮಕ್ಕೆ, ಅಶೋಕನಂಥ ಚಕ್ರವರ್ತಿಯು ಆಶ್ರಯಕೊಟ್ಟ ಬಳಿಕ ಕೇಳುವದೇನು? ಕಥೆಯೇ ಮುಗಿಯುವದು. ಬ್ರಾಹ್ಮಣ್ಯವು ತೀರ ನಷ್ಟವಾಗಬೇಕೆಂತಲೂ, ಸನಾತನವಾದ ವೈದಿಕಧರ್ಮವು ಲುಪ್ತವಾಗಬೇಕೆಂತಲೂ ಈಶ್ವರನ ಸಂಕೇತವಿರಬಹುದೋ? ಅಂತೇ ಈವೊತ್ತಿನವರೆಗೆ ಯಾವ ಬಲಾಢ್ಯ ರಾಜನಿಗೂ ದೊರೆಯದ ಚಕ್ರವರ್ತಿಯ ಪದವಿಯು ಅಶೋಕನ ಕೊರಳಿಗೆ ಬೀಳುವದಕ್ಕಾಗಿ ಹಾದಿಯನ್ನು ನೋಡುತ್ತಲಿದೆ! ಅಶೋಕನ ಅಜ್ಜನಾದ ಚಂದ್ರಗುಪ್ತನು ದುರ್ಬಲನೆ? ಆತನ ಮಂತ್ರಿಗಳೆನಿಸಿದ ಚಾಣಕ್ಯ–ರಾಕ್ಷಸರು ಬುದ್ಧಿಹೀನರೇ? ಈಗ ಸನ್ನಿಧಿಯಲ್ಲಿ ಕುಳಿತಿರುವ ಮೃಗೇಂದ್ರನು ಪೌರುಷಹೀನನೇ? ಚಂದ್ರಗುಪ್ತನು ಎಷ್ಟು ಯತ್ನಿಸಿದರೂ, ಚಕ್ರವರ್ತಿಯ ಪದವಿಯನ್ನು ಪಡೆಯಲಿಲ್ಲ. ಅಂಥ ದುರ್ಮಿಳವಾದ ಪದವಿಯು ಬೌದ್ಧ ಭೂಪತಿಯೆನಿಸುವ ಅಶೋಕನಿಗೆ ದೊರೆಯುವದೆಂದ ಬಳಿಕ, ಭರತಖಂಡವು ಬೌದ್ಧಮಯವಾಗುವ ಯೋಗವು ಸಮೀಪಿಸಿರುವದೆಂದು ತಿಳಿಯಬೇಕಾಗಿರುವದು.

ಭಾಸ್ಕರಪಂಡಿತನ ಈ ಮಾತುಗಳನ್ನು ಕೇಳಿ ಚಿದಾನಂದಸ್ವಾಮಿಗಳು ಮುಗಳುನಗೆ ನಕ್ಕು ಒಮ್ಮೆ ಮೃಗೇಂದ್ರನನ್ನೂ, ಒಮ್ಮೆ ಬ್ರಹ್ಮವೃಂದವನ್ನೂ ನೋಡಿ ಭಾಸ್ಕರಪಂಡಿತನನ್ನು ಕುರಿತು

ಗಾಂಭೀರ್ಯದಿಂದ ನುಡಿದರೇನಂದರೆ—ಪಂಡಿತರೆ, ನಿಮ್ಮ ಮಾತಿನಲ್ಲಿ ಸತ್ಯಾಂಶವು ಬಹಳವಿರುವದೆಂದು ನಾನು ತಿಳಿಯುವೆನು. ಬೌದ್ಧಧರ್ಮವು, ಒಂದು ಭರತಖಂಡದಲ್ಲಿಯೇ ಏಕೆ, ಅನ್ಯ ದೇಶಗಳಲ್ಲಿಯೂ, ದ್ವೀಪಾಂತರಗಳಲ್ಲಿಯೂ ಪಸರಿಸುವ ಯೋಗವಿರುತ್ತದೆಂದು ನನಗೆ ತೋರುತ್ತದೆ. ಆದರೆ ನಿಮ್ಮ ಕೆಲವು ವಿಚಾರಗಳನ್ನು ಕುರಿತು ಎರಡು ಮಾತುಗಳನ್ನು ಆಡದೆ ಮಾತ್ರ ನಾನು ಇರಲಾರೆನು. ಅಶೋಕನು ಬೌದ್ಧಧರ್ಮವನ್ನು ಸ್ವೀಕರಿಸಿದ್ದರಿಂದ ವೇದಧರ್ಮವು ಕಳೆಗುಂದುವದೆಂಬ ಮಾತೂ, ಬುದ್ಧನು ನಾಸ್ತಿಕನೆಂಬ ಮಾತೂ, ಬೌದ್ಧಶ್ರವಣರು ನೀಚರೆಂಬ ಮಾತೂ, ನನ್ನ ಶಿಷ್ಯನೆನಿಸಿದ ಮಾತ್ರದಿಂದ ಮೃಗೇಂದ್ರನು ಜಯಶಾಲಿಯೇ ಆಗಬೇಕೆಂಬ ಮಾತೂ ಒಪ್ಪತಕ್ಕವಲ್ಲ. ಒಬ್ಬನ ಧರ್ಮಬುದ್ಧಿಯನ್ನು ಮತ್ತೊಬ್ಬನು ಸರ್ವಥಾ ಕೆಡಿಸಲಾರನು. ನಮ್ಮಲ್ಲಿ ನಮ್ಮ ಧರ್ಮದ ಭ್ರಷ್ಟಾಕಾರವಾದರೆ ಮಾತ್ರ, ಅನ್ಯರು ನಮ್ಮನ್ನು ಧರ್ಮಭ್ರಷ್ಟರನ್ನಾಗಿ ಮಾಡಬಹುದು. ನನ್ನ ಮಾತು ಕೆಲವರಿಗೆ ವ್ಯತ್ಯಾಸವಾಗಿ ತೋರಿದರೂ, ನೀವೆಲ್ಲರೂ ಶಾಂತಚಿತ್ತದಿಂದ ಅದನ್ನು ಕೇಳಿಕೊಂಡು ಮನನಮಾಡಿರಿ; ಅಂದರೆ ಅವುಗಳಲ್ಲಿಯ ಸತ್ಯತೆಯು ನಿಮ್ಮ ಅನುಭವಕ್ಕಾದರೂ ಬರಬಹುದು. ಭೂತದಯೆ, ಪರೋಪಕಾರ, ಅಹಿಂಸೆ, ಶಾಂತಿ, ಕ್ಷಮೆ ಮೊದಲಾದ ನೈತಿಕತತ್ವಗಳನ್ನು ಪ್ರತ್ಯಕ್ಷಾಚರಣೆಯಿಂದ ಇಡಿಯ ಮನುಷ್ಯ ಜಾತಿಗೇ ಬೋಧಿಸಿ, ಮನುಷ್ಯಮಾತ್ರರನ್ನು ದುರ್ಮಾರ್ಗದಿಂದ ತಿರುಗಿಸುವ ಬುದ್ಧದೇವನು ಸಾಮಾನ್ಯನಲ್ಲ. ಜಾತಿಗೆ ಭೇದವಾದರೂ ನೀತಿಗೆ ಭೇದವಿಲ್ಲವಷ್ಟೆ? ನೀತಿಯು ಯಾವ ಧರ್ಮಕ್ಕೆ ಬೇಡ? ನೀತಿಭ್ರಷ್ಟರು ಯಾವ ಧರ್ಮದ ಮಾತನ್ನು ತಕ್ಕೊಂಡು ಏನು ಮಾಡಬೇಕು? ನೀತಿಯು ಎಲ್ಲ ಧರ್ಮಗಳ ಜೀವನವಾಗಿರುತ್ತದೆ. ಅದನ್ನು ಬೋಧಿಸುವ ಬುದ್ಧನು ನಾಸ್ತಿಕನು ಹೇಗೆ? ಇನ್ನು, ದೇವರ ಅಸ್ತಿತ್ವವನ್ನೂ, ದೇವರ ಮಹಿಮೆಯನ್ನೂ ಬುದ್ಧನು ಬೋಧಿಸದ್ದರಿಂದ ಆತನನ್ನು ನಾಸ್ತಿಕನೆಂದು ನೀವು ಕರೆಯುತ್ತಿರಬಹುದು; ಆದರೆ ದೇವರನ್ನು ಕಾಣದ ನಾವು ವೇದಧರ್ಮದವರೆನಿಸಿಕೊಂಡ ಮಾತ್ರದಿಂದ ದೇವರಿದ್ದಾನೆಂದು ಬಾಯಿಂದ ಹೇಳಿ, ವೇದ ಪುರಾಣಾದಿಗಳ ಆಧಾರದಿಂದ ಸಿದ್ಧಮಾಡಿಕೊಟ್ಟರೆ ಆಗುವ ಪ್ರಯೋಜನವೇನು? ಅದರಿಂದ ನಾವು ದೇವರನ್ನು ಕಂಡ ಹಾಗಾಯಿತೇ? ದೇವರನ್ನು ಕಾಣದೆ ಕೇಳಿಕೆಯ ಮಾತಿನಿಂದ ದೇವರು ಇದ್ದಾನೆಂದು ಹೇಳುವವನೊಬ್ಬನು ಮೂರ್ಖನು; ಅದರಂತೆ, ದೇವರನ್ನು ಕಂಡ ಮಹಾತ್ಮರೂ, ವೇದಾದಿ ಅಪೌರುಷೇಯ ಗ್ರಂಥಗಳೂ ದೇವರಿದ್ದಾನೆಂದು ಹೇಳುತ್ತಿರಲು, ಅದನ್ನು ಲೆಕ್ಕಿಸದೆ, ದೇವರಿಲ್ಲೆಂದು ಹೇಳುವವನೊಬ್ಬನೂ ಮೂರ್ಖನೇ; ಆದರೆ ಸತ್ಸಮಾಗಮದಿಂದ ತಮ್ಮ ತಮ್ಮ ಧರ್ಮಮಾರ್ಗಗಳಂತೆ ಭಾವನಾಯುಕ್ತರಾಗಿ ನಡೆದು ದೇವರನ್ನು ಕಾಣುವವರು ಮಾತ್ರ ಜಾಣರು. ದೇವರನ್ನು ಕಾಣದೆ ಆತನು ಇದ್ದಾನೆಂದು ಹೇಳುವದೂ, ತಮಗೆ ಕಾಣದ್ದರಿಂದ ಇಲ್ಲೆಂದು ಹೇಳುವದೂ ಮೂರ್ಖತನವೆಂದಬಳಿಕ, ದೇವರನ್ನು ಕಾಣದ ಪಾಮರರನ್ನು ಕುರಿತು ಬುದ್ಧನು ದೇವರಿದ್ದಾನೆಂದೂ, ಆತನನ್ನು ಶರಣುಹೋಗಿರೆಂದೂ, ಆತನೇ ಸೃಷ್ಟಿಸ್ಥಿತಿಲಯಗಳಿಗೆ ಕಾರಣನೆಂದೂ ಬೋಧಿಸಿದರೆ ಆಗುವ ಪ್ರಯೋಜನವೇನು? ಅಂತೇ ಬುದ್ಧದೇವನು ಮೊದಲಿಗೆ ದೇವರ ಉಸಾಬರಿಗೆ ಹೋಗದೆ ''ಭೂತದಯೆಯುಳ್ಳವರಾಗಿರಿ''

"ಪರೋಪಕಾರಿಗಳಾಗಿರಿ" "ಶಾಂತರಾಗಿರಿ" "ಬಂಧುಪ್ರೇಮವುಳ್ಳವರಾಗಿರಿ" "ಸದಾಚಾರಿಗಳಾಗಿರಿ" ಎಂದು ಬೋಧಿಸಿದ್ದರಲ್ಲಿ ನಾಸ್ತಿಕತ್ವವೇನಿರುವದು? ಬುದ್ಧನ ಉಪದೇಶದಂತೆ ನಡೆದ ಹೊರತು ಮನುಷ್ಯನಿಗೆ ದೇವರ ದರ್ಶನವೇ ಆಗುವಹಾಗಿಲ್ಲ, ಅದರಿಂದಲೇ ಬುದ್ಧನು ದೇವರನ್ನು ಕಾಣುವ ಮಾರ್ಗವನ್ನು ಮಾತ್ರ ಹೇಳಿದನು. ಜ್ಞಾನಿಗಳ ಸಹಾಯವನ್ನು ಪಡೆದು ಆ ಮಾರ್ಗದಿಂದ ಹೋಗಿ ದೇವರನ್ನು ಕಂಡಬಳಿಕ ದೇವರು ಇದ್ದಾನೆಂದು ಹೇಳಬಹುದು. ಇನ್ನು ಬುದ್ಧನು ಯಜ್ಞಯಾಗಾದಿ ಕರ್ಮಗಳನ್ನು ಹಳಿಯುವದೊಂದು ನಾಸ್ತಿಕತ್ವದ ಲಕ್ಷಣವೆಂದು ನೀವು ಹೇಳಬಹುದು; ಆದರೆ ಸದ್ಭಾವನೆಯಿಲ್ಲದೆ ಕೇವಲ ಡಾಂಭಿಕತನದಿಂದ ಯಜ್ಞಯಾಗಾದಿ ಕರ್ಮಗಳನ್ನು ಮಾಡಿ ಪ್ರಾಣಹಿಂಸಾ ಪಾಪಕ್ಕೆ ಗುರಿಯಾಗುವದಕ್ಕಿಂತ, ಅದನ್ನು ಮಾಡದಿರುವದು ಹಿತಕರವು. ತಿರುಗಿ ಕೇಳಿದರೆ, ವೇದಧರ್ಮದ ತತ್ವಗಳನ್ನು ಬುದ್ಧನು ಕಾಲಕ್ಕನುಸರಿಸಿ ಭಿನ್ನ ರೂಪದಿಂದ ಬೋಧಿಸಿದನೆಂದು ತಿಳಿಯಬೇಕು. ಜಗತ್ತು ಈಶ್ವರ ಸ್ವರೂಪವೆಂದು ಬೋಧಿಸುವ, ಹಾಗು "ತತ್ವಮಸಿ" "ಸೋಹಮಸ್ಮಿ" "ಅಹಂಬ್ರಹ್ಮಾಸ್ಮಿ" ಇತ್ಯಾದಿ ಮಹಾವಾಕ್ಯಗಳಿಂದ, ತಾನು ಮೊದಲುಗೊಂಡು ಸರ್ವಜಗತ್ತು ಬ್ರಹ್ಮಸ್ವರೂಪವೆಂದು ಬೋಧಿಸುವ ಉದಾತ್ತವಾದ ವೇದಧರ್ಮಕ್ಕೆ "ಅಹಿಂಸಾ" "ಭೂತದಯೆ" ಮೊದಲಾದ ನೈತಿಕ ತತ್ವಗಳು ಹೊಸವೋ? ಆದರೆ ವೇದಧರ್ಮಿಗಳು ವಿವೇಕಭ್ರಷ್ಟರಾಗಿ, ಆಸ್ತಿಕಧರ್ಮಕ್ಕೆ ನಾಸ್ತಿಕ ಸ್ವರೂಪವನ್ನು ಕೊಡುತ್ತಿರುವಾಗ, "ಯದಾಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ॥ ಅಭ್ಯುತ್ಥಾನ ಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ॥" ಎಂಬ ಭಗವದುಕ್ತಿಯಂತೆ, ಭಗವಂತನೇ ದೇಶಕಾಲ ಪರಿಸ್ಥಿತಿಗನುಸರಿಸಿ ವೈದಿಕಧರ್ಮದ ಸುಲಭ ತತ್ವಗಳನ್ನು ಸಾರ್ವತ್ರಿಕವಾಗಿ ಬೋಧಿಸಲು ಬುದ್ಧರೂಪದಿಂದ ಅವತರಿಸಬೇಕಾಯಿತು. ಅದರಿಂದಲೇ ವಿಷ್ಣುವಿನ ದಶಾವತಾರಗಳಲ್ಲಿ ಬುದ್ಧಾವತಾರವು ಒಂಬತ್ತನೆಯ ಸ್ಥಾನವನ್ನು ಹೊಂದಿರುವದು.

ಇನ್ನು, ಅಶೋಕನು ಚಕ್ರವರ್ತಿಯಾಗಿ ಭರತಖಂಡವನ್ನು ಬೌದ್ಧಮಯವಾಗಿ ಮಾಡುವನೆಂದು ಭಾಸ್ಕರಪಂಡಿತರು ಹೇಳುವರು; ಆದರೆ ಇದಕ್ಕಾಗಿ ನಾವು ಅಸೂಯೆ ಪಡುವ ಕಾರಣವಿಲ್ಲ. ದ್ವಾಪರದಲ್ಲಿ ಶ್ರೀಕೃಷ್ಣನು ಉಪದೇಶಿಸಿದ ಭಾಗವತ ಧರ್ಮವನ್ನು ಧರ್ಮರಾಜನು ಪ್ರಚುರಗೊಳಿಸಿದನು. ಧರ್ಮ ಪ್ರಸಾರವು ಸಾತ್ವಿಕರಿಂದಲೇ ಆಗುವದೆಂದ ಬಳಿಕ, ಪರಮ ಸತ್ವಶಾಲಿಯಾದ ಅಶೋಕನು ಭಗವಾನ್ ಬುದ್ಧನಿಂದ ಸ್ಥಾಪಿಸಲ್ಪಟ್ಟ ಬೌದ್ಧಧರ್ಮವನ್ನು ಭರತಭೂಮಿಯಲ್ಲಿಯೇ ಏಕೆ, ಜಗತ್ತಿನ ತುಂಬ ಹಬ್ಬಿಸಿದರೆ ಆಶ್ಚರ್ಯವೇನು? ಧರ್ಮಭ್ರಷ್ಟತೆಯ ಈಗಿನ ಕಾಲದಲ್ಲಿ ಬೌದ್ಧಧರ್ಮವು ಹೀಗೆ ಪ್ರಸರಣ ಹೊಂದುವದು ದೇವರಿಗೆ ಬೇಕಾಗಿಯೇ ಇರುವದು. ನಿಜವಾದ ಬೌದ್ಧರು ಬ್ರಾಹ್ಮಣರನ್ನೂ, ನಿಜವಾದ ಬ್ರಾಹ್ಮಣರು ಬೌದ್ಧರನ್ನೂ ಸರ್ವಥಾ ತಿರಸ್ಕರಿಸಲಾರರು. ಈ ಮಾತು ಅಶೋಕನ ಆಳಿಕೆಯಲ್ಲಿ ನಿಮ್ಮ ಅನುಭವಕ್ಕೆ ಬರುವದೆಂಬ ಭವಿಷ್ಯವಾಣಿಯನ್ನು ಈಶ್ವರನು ನನ್ನ ಮುಖದಿಂದ ಈಗ ನುಡಿಸುವನು; ಅದರ ಅನುಭವವನ್ನು ತಕ್ಕೊಳ್ಳಬಹುದು. ಅಂದಬಳಿಕ ಬೌದ್ಧಶ್ರವಣರನ್ನು ನಾವು ನೀಚರೆಂದು ಯಾಕೆ ಹಳಿಯಬೇಕು? ಪ್ರತಿ ಒಂದು ಧರ್ಮದಲ್ಲಿ ನೀಚರೂ, ಉಚ್ಚರೂ ಕೂಡಿಯೇ ಇರುವರು. ಉಚ್ಚರ ಸಂಖ್ಯೆಯು ಹೆಚ್ಚಿದ ಮಾನದಿಂದ ಧರ್ಮವು ತೇಜಸ್ವಿತೆಯನ್ನು

ಪಡೆಯುವದು; ನೀಚರ ಸಂಖ್ಯೆಯು ಹೆಚ್ಚಿದ ಮಾನದಿಂದ ಧರ್ಮವು ಗ್ಲಾನಿಯನ್ನು ಹೊಂದುವದು; ಆದರೆ ಧರ್ಮದ ನಿಜವಾದ ತತ್ವಗಳು ಎಂದೂ ನಾಶವನ್ನು ಹೊಂದಲಾರವು. ಎಲ್ಲ ಧರ್ಮಗಳಲ್ಲಿ ಒಂದೇ ರಹಸ್ಯವನ್ನು ಕಾಣುವವನೇ ಧರ್ಮನಿರತನು. ಧರ್ಮಗ್ಲಾನಿಯಾದಾಗೆಲ್ಲ ಭಗವದವತಾರಗಳು ಆಗುತ್ತ ಬಂದಿರುವವು; ಆದರಿಂದಲೇ ಸ್ವಧರ್ಮನಿಷ್ಠೆಯೂ, ಪರಧರ್ಮ ಸಹಿಷ್ಣುತೆಯೂ ಶ್ರೇಷ್ಠಗುಣಗಳೆಂದು ಎಣಿಸಲ್ಪಡುವವು. ಈ ಗುಣಗಳು ಮನುಷ್ಯನಲ್ಲಿ ಇದ್ದರೆ ಜೋಡಾಗಿಯೇ ಇರುತ್ತವೆ. ಇಲ್ಲದಿದ್ದರೆ ಒಂದೂ ಇರುವದಿಲ್ಲ. ಸ್ವಧರ್ಮನಿಷ್ಠೆಯಿಲ್ಲದ ಪರಧರ್ಮಸಹಿಷ್ಣುತೆಯೂ, ಪರಧರ್ಮಸಹಿಷ್ಣುತೆಯಿಲ್ಲದ ಸ್ವಧರ್ಮನಿಷ್ಠೆಯೂ ವ್ಯರ್ಥವು. ಅನುಭವದಿಂದ ಇವೆರಡು ಗುಣಗಳು ಭಿನ್ನವಾದವುಗಳಲ್ಲವೆಂದು ಹೇಳಬಹುದು. ನಮ್ಮ ಶಿಷ್ಯನೆನಿಸುವ ಕಲಿಂಗ ಭೂಪತಿಯು ವೇದಧರ್ಮಾಭಿಮಾನಿಯೆಂದು ಯಾರಾದರೂ ಒಪ್ಪಿಕೊಳ್ಳಬಹುದು; ಆದರೆ ಆತನು ಅಶೋಕನಿಂದ ಪರಧರ್ಮಸಹಿಷ್ಣುತೆಯ ಬೋಧವನ್ನು ಪಡೆದ ಹೊರತು, ನಿಜವಾದ ವೇದಧರ್ಮನಿಷ್ಠೆಯು ಆತನಲ್ಲಿ ಉಂಟಾಗದು. ಈ ಮಾತು ಇಲ್ಲಿ ಕೂಡಿರುವ ತಪೋಧನರಿಗೆ ಅಯೋಗ್ಯವಾಗಿ ತೋರದು; ಆದ್ದರಿಂದ, ಭಾಸ್ಕರಪಂಡಿತರಾಗಲಿ, ಕಲಿಂಗಾಧಿಪತಿಯಾಗಲಿ, ನಾನಾಗಲಿ, ನೀವಾಗಲಿ, ಯಾರೇ ಆಗಲಿ ಧರ್ಮದ ನಿಜವಾದ ರಹಸ್ಯಗಳನ್ನು ತಿಳಕೊಂಡರೆ ಮಾತ್ರ ಶಾಂತಿಯನ್ನು ಪಡೆಯಬಹುದು. ಇಲ್ಲದಿದ್ದರೆ ಧರ್ಮಗಳ ಬಾಹ್ಯ ಚಿಹ್ನಗಳ ಭಿನ್ನತ್ವಕ್ಕಾಗಿ ದುರಭಿಮಾನದಿಂದ ಬಡಿದಾಡಿ, ಧರ್ಮಹೀನರಂತೆ ತಾಪಕ್ಕೆ ಗುರಿಯಾಗಬೇಕಾಗುವದು.

ದಯೆಯ ಅಂಕುರ

ಗುರುಗಳ ಈ ಉಪದೇಶದಿಂದ ಮೃಗೇಂದ್ರನಿಗೆ ಸಮಾಧಾನವಾಗಲಿಲ್ಲ. ವೇದಧರ್ಮದ ವಿಷಯವಾಗಿ ಆತನಲ್ಲಿ ಅಭಿಮಾನವು ಸಂಪೂರ್ಣವಾಗಿ ವಾಸಿಸುತ್ತಿದ್ದದ್ದರಿಂದ, ಆತನು ಬೌದ್ಧದರ್ಮವನ್ನೂ, ಬೌದ್ಧರನ್ನೂ ಬಹಳವಾಗಿ ತಿರಸ್ಕರಿಸುತ್ತಿದ್ದನು. ದಿನದಿನಕ್ಕೆ ಬೌದ್ಧಧರ್ಮವು ಹಬ್ಬುತ್ತ ನಡೆದದ್ದರಿಂದಲೂ, ವೇದಧರ್ಮದ ಪ್ರಸಿದ್ಧ ಅಶೋಕರಾಜನು ಬೌದ್ಧ ಧರ್ಮವನ್ನು ಸ್ವೀಕರಿಸಿ, ವೇದಧರ್ಮದವರ ರಾಜ್ಯಗಳನ್ನು ಒಂದರಹಿಂದೊಂದು ವಶಮಾಡಿಕೊಂಡು ಅಲ್ಲಿಯ ಜನರನ್ನು ಒತ್ತಾಯದಿಂದ ಬೌದ್ಧರನ್ನು ಮಾಡಹತ್ತಿದ್ದರಿಂದಲೂ ಬೌದ್ಧರ ವಿಷಯದ ಮೃಗೇಂದ್ರನ ದ್ವೇಷಾಗ್ನಿಯು ಭರದಿಂದ ಹೊತ್ತತೊಡಗಿತ್ತು. ಇಂಥ ಪ್ರಸಂಗದಲ್ಲಿ ಗುರುಗಳ ಸಮತೆಯ ಉಪದೇಶವು ಆತನಿಗೆ ಹೇಗೆ ಸೇರಬೇಕು? ಗುರುಗಳು ಬುದ್ಧದೇವನನ್ನೂ, ಆತನ ಧರ್ಮವನ್ನೂ, ಅಶೋಕನನ್ನೂ ಮೇಲುಗಟ್ಟಿ ಮಾತಾಡಿದ್ದು ಆತನ ಮನಸ್ಸಿಗೆ ಬರಲಿಲ್ಲ. ಗುರುಗಳ ಮೇಲಿನ ಶ್ರದ್ಧೆಯ ಮೂಲಕ ಅವರ ಮಾತಿನ ವಿರುದ್ಧ ಮಾತಾಡುವ ಧೈರ್ಯವು ಆತನಿಗಾಗಲಿಲ್ಲ. ದುರಾಚಾರಿಗಳಾದ ಬೌದ್ಧರನ್ನು ತಿರಸ್ಕರಿಸಿ, ಸ್ವಧರ್ಮವಾದ ವೇದಧರ್ಮವನ್ನು

ರಕ್ಷಿಸುವ ವಿಷಯವಾಗಿ ತನ್ನನ್ನು ಯಾವಾಗಲೂ ಉತ್ತೇಜನಗೊಳಿಸುತ್ತಿದ್ದ ಗುರುಗಳು, ಈ ದಿನ ಹೀಗೆ ಬೌದ್ಧರನ್ನು ಮೇಲುಗಟ್ಟಿ ಯಾಕೆ ಮಾತಾಡಿದರೆಂಬದರ ರಹಸ್ಯವು ಆತನಿಗೆ ತಿಳಿಯದಾಯಿತು. ರಾಜ್ಯಸುಖದಲ್ಲಿ ಮುಳುಗಿ, ಗುರುಸೇವೆಯಲ್ಲಿ ದೇಹವನ್ನು ಸವಿಸದೆ ಉಪಚಾರಕ್ಕಾಗಿ ಶಿಷ್ಯತ್ವವನ್ನು ಸ್ವೀಕರಿಸಿದ್ದ ಅಭಿಮಾನಿಯಾದ ಆ ಮೃಗೇಂದ್ರನಿಗೆ, ಧರ್ಮದ ರಹಸ್ಯವು ಹೇಗೆ ತಿಳಿಯಬೇಕು? ಆತನು ಔದಾಸೀನ್ಯದಿಂದ ಗುರುಗಳ ಅಪ್ಪಣೆಯನ್ನು ಪಡೆದು ತನ್ನ ರಾಜಧಾನಿಯಾದ ಇಂದ್ರಪುರಕ್ಕೆ ಹೋಗುವದಕ್ಕಾಗಿ ಹೊರಟನು. ಆತನ ಔದಾಸೀನ್ಯದ ಕಾರಣವನ್ನು ಚಿದಾನಂದ ಸ್ವಾಮಿಗಳು ಅರಿತಿದ್ದರೂ, ಅವರು ಬಾಯಿಬಿಚ್ಚಿ ಮಾತಾಡದೆ ಶಿಷ್ಯನನ್ನು ರಾಜಧಾನಿಗೆ ಹೋಗಗೊಟ್ಟರು. ಸತ್ಸಂಗವು ದೂರವಾದಂತೆ ಮಾರ್ಗದಲ್ಲಿ ಮೃಗೇಂದ್ರನ ಮನಸ್ಸು ವಿಕಾರವಶವಾಗುತ್ತ ನಡೆಯಿತು. ಬೌದ್ಧ ಧರ್ಮದ ಹೆಚ್ಚಳದ ಸ್ಮರಣದಿಂದ ಆತನು ಬೌದ್ಧರ ಮೇಲೆ ಬೆಂಕಿಯನ್ನು ಕಾರಹತ್ತಿದನು. ಸ್ವಧರ್ಮ ರಕ್ಷಣದಲ್ಲಿ ಪ್ರಾಣಹಾನಿಯಾದರೂ ಶ್ರೇಯಸ್ಕರವೆಂತಲೂ, ಬೌದ್ಧ ಧರ್ಮವನ್ನು ನಾಶಗೊಳಿಸುವದು ತನ್ನ ಕರ್ತವ್ಯವೆಂತಲೂ, ಇದರ ವಿರುದ್ಧವಾಗಿ ಪ್ರತ್ಯಕ್ಷ ಗುರುಗಳು ಬೋಧಿಸಿದರೂ ಕೇಳಲಿಕ್ಕಿಲ್ಲವೆಂತಲೂ ಆತನು ನಿಶ್ಚಯಿಸಿಕೊಂಡನು. ಅಶೋಕನನ್ನು ಹಣಿದು ಬೌದ್ಧರನ್ನು ನಾಶಗೊಳಿಸಿ, ಈ ನಾಸ್ತಿಕರ ಸೇಡು ಯಾವಾಗ ತೀರಿಸಿಕೊಂಡೇನೆಂದು ಆತನು ಆತುರಪಡಹತ್ತಿದನು. ಮೃಗೇಂದ್ರನ ಈ ಆತುರವು ವ್ಯರ್ಥವಾದದಿದ್ದಿಲ್ಲ. ಆ ಪ್ರಬುದ್ಧ ಕ್ಷತ್ರಿಯವೀರನ ಬಾಹುಬಲದ ಭಯವು ಅಶೋಕನಂಥ ಅಪ್ರತಿಮ ವೀರನಿಗೂ ಇತ್ತು. ಕಲಿಂಗದೇಶವು ಯಾವತ್ತು ವೇದಧರ್ಮಿಗಳ ರಾಜ್ಯಗಳಲ್ಲಿ ಬಲಿಷ್ಠವಾದದ್ದಿದ್ದು, ಅದು ವಿಶಾಖಾನಂದನಂಥ ಚತುರಮಂತ್ರಿಯ ಮಂತ್ರಾಲೋಚನೆಯಿಂದ ವೈರಿಗಳಿಗೆ ದುರ್ಗಮವಾಗಿತ್ತು. ಸುತ್ತುಮುತ್ತಲಿನ ಸಣ್ಣಪುಟ್ಟ ಮಾಂಡಲಿಕ ರಾಜ್ಯಗಳನ್ನು ಕೈಸೇರಿಸಿಕೊಂಡಬಳಿಕ, ಮುಖ್ಯವಾದ ಕಲಿಂಗ ದೇಶವನ್ನು ಕೈವಶಮಾಡಿಕೊಳ್ಳಬೇಕೆಂದು ಅಶೋಕನು ಯೋಚಿಸಿ, ಮೃಗೇಂದ್ರನೊಡನೆ ಯುದ್ಧ ಹೂಡಲಿಕ್ಕೆ ಕಾರಣವನ್ನು ಹುಡುಕುತ್ತಿದ್ದನು.

ಅಶೋಕನ ಯೋಗ್ಯತೆಯಾದರೂ ಸಾಮಾನ್ಯವಾದದ್ದಲ್ಲ. ಆತನು ಪ್ರಸಿದ್ಧನಾಗಿದ್ದ ಮೌರ್ಯವಂಶದ ಚಂದ್ರಗುಪ್ತನ ಮೊಮ್ಮಗನೆಂದು ಹಿಂದೆ ಹೇಳಿದೆ. ಅಶೋಕನ ತಂದೆಯ ಹೆಸರು ಬಿಂದುಸಾರ; ಬಿಂದುಸಾರನಿಗೆ ಇಬ್ಬರು ಹೆಂಡಿರಿದ್ದರು. ಹಿರಿಯಳಾದ ಇಂದುಮತಿಯ ಮಗನ ಹೆಸರು ವೀತಾಶೋಕನು. ಚಿಕ್ಕವಳಾದ ಸುಭದ್ರಾಂಗಿಯ ಮಗನೇ ಅಶೋಕನು. ತಂದೆಯ ತರುವಾಯ ಅಶೋಕನೇ ರಾಜ್ಯಪದವನ್ನು ಹೊಂದಿದನು. ಚಂದ್ರಗುಪ್ತನ ಕಾಲಕ್ಕೆ ಆತನ ಅರಮನೆಯನ್ನು ಅಂಜುತ್ತಂಜುತ್ತ ಪ್ರವೇಶಿಸತೊಡಗಿದ್ದ ಬೌದ್ಧಧರ್ಮವು, ಅಶೋಕನ ಕಾಲದಲ್ಲಿ ಅರಮನೆಯಲ್ಲೆಲ್ಲ ಕಾಲುಚಾಚಿ ಕುಳಿತುಕೊಂಡಂತಾಗಿತ್ತು. ಇಂದುಮತಿ—ಸುಭದ್ರಾಂಗಿಯರೇ ಮೊದಲಾದ ರಾಜಸ್ತ್ರೀಯರು ಮೊದಲು ಬೌದ್ಧಧರ್ಮವನ್ನು ಸ್ವೀಕರಿಸಿದರು. ಅಶೋಕನು ಬೌದ್ಧನಾದ ಬಳಿಕ ಯಾವತ್ತು ರಾಜಪರಿವಾರವೇ ಬೌದ್ಧ ಧರ್ಮವನ್ನು ಸ್ವೀಕರಿಸಿತು. ಆದರೂ ಬೌದ್ಧಮತದ ನಿಜವಾದ ರಹಸ್ಯವು ಯಾರಿಗೂ

ಗೊತ್ತಾಗಿದ್ದಿಲ್ಲ. ಪ್ರಬಲವಾಗುತ್ತ ನಡೆದಿದ್ದ ಬೌದ್ಧ ಶ್ರವಣರ (ಸನ್ಯಾಸಿಗಳ) ದುರಭಿಮಾನದ ಉಪದೇಶವೂ, ನಡತೆಯೂ ಬೌದ್ಧಧರ್ಮದ ರಹಸ್ಯವೆಂದು ತಿಳಿದು, ಅಶೋಕನೇ ಮೊದ ಲಾದವರು ಧರ್ಮಮೂಢತನದಿಂದ ನಡೆಯುತ್ತಿದ್ದರು. ಸಾತ್ವಿಕವಾದ ಬೌದ್ಧಧರ್ಮದ ಪರಿಣಾಮವು ಅಶೋಕನ ಕ್ರೂರಸ್ವಭಾವದ ಮೇಲೆ ಹೇಳಿಕೊಳ್ಳುವಹಾಗೆ ಆಗಿದ್ದಿಲ್ಲ. ಪೂರ್ವ ವಯಸ್ಸಿನಲ್ಲಿ ಅಶೋಕನು ಅತ್ಯಂತ ಕ್ರೂರನಾಗಿದ್ದನು. ಆಗ ಆತನಿಗೆ ಕ್ಷಮಾಗುಣಗಳ ಪರಿಚಯವೇ ಇದ್ದಿಲ್ಲ. ಸಣ್ಣ ತಪ್ಪಿಗಾದರೂ ಆತನು ಅಪರಾಧಿಗಳಿಗೆ ಮರಣ ಶಿಕ್ಷೆಯನ್ನು ವಿಧಿಸುತ್ತಿದ್ದನು. ಪ್ರತ್ಯಕ್ಷ ತನ್ನ ರಾಣಿಯರನ್ನು ಕೂಡ ಕ್ರೂರತನದಿಂದ ಶಿಕ್ಷಿಸಲಿಕ್ಕೆ ಆತನು ಹಿಂದೆ ಮುಂದೆ ನೋಡಲಿಲ್ಲ. ತನ್ನ ಕುರೂಪವನ್ನು ಆಡಿಕೊಂಡಿದ್ದಕ್ಕಾಗಿ ತನ್ನ ಹೆಂಡಿರನ್ನು ಆತನು ಅಗ್ನಿಕುಂಡದಲ್ಲಿ ಹಾಕಿಸಿ ಸುಡಿಸಿದನು. ಈತನ ಕ್ರೂರತನಕ್ಕೆ ಅಲೌಕಿಕ ಪರಾಕ್ರಮದ ಜೋಡೂ, ದೃಢನಿಶ್ಚಯದ ಸಹಾಯವೂ, ಸಾಹಸದ ಸಂಪತ್ತೂ, ಸ್ವಚ್ಛಂದದ ಬಲವೂ, ಧನದ ಮದವೂ, ಹೊಸ ಧರ್ಮದ ದುರಭಿಮಾನವೂ ಜೋಡಾದದ್ದರಿಂದ, ಮಾಂಡಲಿಕರಾಜರು ಕೂಡ ಆತನನ್ನು ಕಂಡು ಗದಗುಟ್ಟಿ ನಡಗುತ್ತಿದ್ದರು. ಬೌದ್ಧಧರ್ಮವನ್ನು ಹಬ್ಬಿಸುವ ನೆವದಿಂದ ದಿನದಿನಕ್ಕೆ ಹೊಸ ಹೊಸ ರಾಜ್ಯಗಳನ್ನು ಗೆಲ್ಲುತ್ತಾ, ಅನಂತ ಪ್ರಾಣಿಗಳ ಸಂಹಾರವನ್ನು ಮಾಡುತ್ತಾ ಅಶೋಕನು ಗರ್ವದ ಶಿಖರವನ್ನು ಹತ್ತಿ ಕುಳಿತುಕೊಂಡಿದ್ದನು. ಬರಬರುತ್ತ ಆತನ ಗರ್ವವು ನೆಲೆಗೆಟ್ಟು, ಆತನು ತನ್ನ ಅಧಿಕಾರವನ್ನು ದೇವತೆಗಳ ಅಧಿಕಾರಕ್ಕೆ ಸಮಾನವೆಂದು ಭಾವಿಸಹತ್ತಿದನು. ತಾನು ಇಂದ್ರನಿಗೆ ಸಮಾನನೆಂತಲೂ, ತನ್ನ ಐಶ್ವರ್ಯ–ಅಧಿಕಾರ–ಸಾಮರ್ಥ್ಯಗಳು ಇಂದ್ರನ ಐಶ್ವರ್ಯ– ಅಧಿಕಾರ–ಸಾಮರ್ಥ್ಯಗಳಿಗಿಂತ ಕಡಿಮೆಯವಲ್ಲೆಂತಲೂ, ತನ್ನ ರಾಜಧಾನಿಯಾದ ಪಾಟಲೀಪುತ್ರವು ಇಂದ್ರನ ರಾಜಧಾನಿಯಾದ ಅಮರಾವತಿಯನ್ನು ಹೋಲುವದೆಂತಲೂ ಆತನು ತಿಳಿಯಹತ್ತಿದನು; ಆದರೆ ದೇವಲೋಕದಲ್ಲಿ ಅಪರಾಧಿಗಳ ಶಾಸನಕ್ಕಾಗಿ ನರಕವನ್ನು ಸ್ಥಾಪಿಸಿರುವಂತೆ, ತನ್ನ ರಾಜ್ಯದಲ್ಲಿ ಸ್ಥಾಪಿಸಿಲ್ಲೆಂಬದೊಂದೇ ಕೊರತೆಯು ಆತನಿಗೆ ತೋರಿ, ಅದನ್ನು ದೂರ ಮಾಡಬೇಕೆಂದು ಆತನು ಶಾಸ್ತ್ರೋಕ್ತವಾಗಿ ತನ್ನ ರಾಜಧಾನಿಯಲ್ಲಿ ಒಂದು ನರಕವನ್ನೂ ಸ್ಥಾಪಿಸಿದನು. ಒಂದು ವಿಸ್ತಾರವಾದ ಬಯಲಿನ ಸುತ್ತಲು ಭದ್ರವಾದ ಗೋಡೆಯನ್ನು ಕಟ್ಟಿಸಿ, ಅದರೊಳಗೆ ಘೋರಯಾತನೆಯ ಯಾವತ್ತು ಸಾಧನಗಳನ್ನು, ಅಂದರೆ ಶಸ್ತ್ರಗಳು–ಚಕ್ರಗಳು–ಕಾದಎಣ್ಣೆಯ ಕೊಪ್ಪರಿಗೆ–ಲೋಹದ ಶೂಲ ಮೊದಲಾದ ವಸ್ತುಗಳನ್ನು ಸಂಗ್ರಹಿಸಿದ್ದನು. ಮೊದಮೊದಲಿಗೆ ಅಪರಾಧಿಗಳನ್ನು ಮಾತ್ರ ನರಕಕ್ಕೆ ಕಳಿಸಿ ಶಿಕ್ಷಿಸುತ್ತಿದ್ದರು; ಬರಬರುತ್ತ ನರಕಸ್ಥಾನಕ್ಕೆ ಬಂದವರನ್ನು ಎತ್ತಿ ನರಕದಲ್ಲಿ ಒಗೆದು, ಪ್ರಾಣಹರಣ ಮಾಡುವ ಕ್ರಮಕ್ಕೆ ಆರಂಭವಾಯಿತು. ಅಶೋಕನ ಪಾಕಶಾಲೆಯಲ್ಲಿ ಪ್ರತಿನಿತ್ಯ ಸಹಸ್ರಾವಧಿ ಪ್ರಾಣಿಗಳ ಸಂಹಾರವಾಗುತ್ತಿತ್ತು. ಪರಧರ್ಮ ದ್ವೇಷಕ್ಕಾದರೂ, ಅಶೋಕನಲ್ಲಿ ಕೊರತೆಯಿದ್ದಿಲ್ಲ. ಆತನು ಬೌದ್ಧಧರ್ಮವನ್ನು ಸ್ವೀಕರಿಸುವ ಮೊದಲು ಬೌದ್ಧರನ್ನು ಬಹಳವಾಗಿ ಪೀಡಿಸಿದನು. ಬುದ್ಧನ ಜ್ಞಾನೋದಯ ಸ್ಥಾನವಾದ ಬೋಧಿವೃಕ್ಷವನ್ನು ಈತನೇ ಕಡಿಸಿದನಂತೆ!

ಇಂಥ ಅಶೋಕನು, ಮುಂದೆ ಬೌದ್ಧಧರ್ಮವನ್ನು ಸ್ವೀಕರಿಸಿದ ಬಳಿಕ ಕೆಲಮಟ್ಟಿಗೆ ಸೌಮ್ಯನಾದರೂ, ಮೇಲೆ ಹೇಳಿದಂತೆ ಧರ್ಮವನ್ನು ಹಬ್ಬಿಸುವ ನೆವದಿಂದ ಮಿತಿಮೀರಿ ಮನುಷ್ಯ

ಸಂಹಾರವನ್ನು ಮಾಡಲಿಕ್ಕೆ ಆತನು ಹೇಸಲಿಲ್ಲ; ಮತ್ತು ತಾನು ಸ್ಥಾಪಿಸಿದ ನರಕವನ್ನಾದರೂ ಆತನು ತೆಗೆದು ಹಾಕಲಿಲ್ಲ. ವಿಜಯವೈಭವದಿಂದ ಮತ್ತನಾಗಿದ್ದ ಆ ಪ್ರತಾಪಿಯು, ಕಲಿಂಗದೇಶದ ಮೃಗೇಂದ್ರರಾಜನೊಡನೆ ಕಾಲುಕೆದರಿ ಜಗಳ ತೆಗೆಯುವದಕ್ಕಾಗಿ, ಆತನ ಮಗಳಾದ ಪ್ರಣಯಿನಿಯೆಂಬ ಸುಂದರಿಯನ್ನು ತನ್ನ ತಮ್ಮನಾದ ವೀತಾಶೋಕನಿಗೆ ಕೊಡಬೇಕೆಂದು ಪತ್ರ ಬರೆದು ಕಳಿಸಿದನು. ಪತ್ರವನ್ನು ತಂದ ಅಧಿಕಾರಿಯು ಇಂದ್ರಪುರವನ್ನು ಪ್ರವೇಶಿಸಿದ ಸ್ವಲ್ಪ ಹೊತ್ತಿನಲ್ಲಿಯೇ, ಮೃಗೇಂದ್ರನು ಹರಿದ್ವಾರದಿಂದ ಬಂದು ಅರಮನೆಯನ್ನು ಪ್ರವೇಶಿಸಿದನು. ಮೃಗೇಂದ್ರನು ಸಿಂಹಾಸನದಲ್ಲಿ ಕುಳಿತುಕೊಂಡಿರಲು, ಅಶೋಕನ ಅಧಿಕಾರಿಯು ವಂದಿಸಿ ಪತ್ರವನ್ನು ಆತನಿಗೆ ಒಪ್ಪಿಸಿದನು. ಮೃಗೇಂದ್ರನು ಅದನ್ನು ಓದುತ್ತ ಹೋದಂತೆ ಆತನ ಕಣ್ಣುಗಳು ಕೆಂಪಾಗುತ್ತ ಹೋದವು. ಸಂತಾಪದಿಂದ ಆತನ ಸರ್ವಾಂಗದಲ್ಲಿ ಕಂಪವು ಉತ್ಪನ್ನವಾಯಿತು. ಕೂಡಲೆ ಆತನು ಅದೇ ಪತ್ರದ ಕೆಳಗೆ ಅಶೋಕನನ್ನು ಕುರಿತು—"ಮಗಧ ಭೂಪತಿಯೇ, ನೀನು ನಾಸ್ತಿಕನಿರುತ್ತೀ; ಸನಾತನವಾದ ವೈದಿಕ ಧರ್ಮದಿಂದ ಭ್ರಷ್ಟನಾಗಿರುತ್ತೀ; ಪರಮ ಪೂಜ್ಯವಾದ ಭರತಭೂಮಿಯನ್ನು ನಿನ್ನ ವಾಸ್ತವ್ಯದಿಂದ ದೂಷಿತವಾಗಿ ಮಾಡಿರುತ್ತೀ; ಹೀಗೆ ಬಹಿಷ್ಕಾರದಿಂದ ದೂಷಿತನಾಗಿರುವ ನೀನು, ಪರಮಪೂಜ್ಯವಾದ ಇಂದ್ರಪುರದ ಅರಸುಮನೆತನದೊಡನೆ ಶರೀರಸಂಬಂಧ ಮಾಡುವ ಕಲ್ಪನೆಯೇ ನನಗೆ ಅಪಮಾನಕಾರಕವಾಗಿ ತೋರುತ್ತಿರಲು, ನೀನು ನನ್ನ ಕುಮಾರಿಯನ್ನು ಪ್ರತ್ಯಕ್ಷ ಕೇಳಲಿಕ್ಕೆ ಅಧಿಕಾರಿಯನ್ನು ಕಳಿಸಿರುತ್ತೀಯಲ್ಲ! ನರಿಯು ಸಿಂಹದ ಹೆಣ್ಣುಮರಿಯನ್ನು ಸಂಪಾದಿಸುವ ಗೊಡವಿಗೆ ಹೋಗದಿರುವದು ಜಾಣತನವು" ಎಂಬರ್ಥದ ಪತ್ರವನ್ನು ಬರೆದು ಕಳುಹಿದನು. ಈ ಪತ್ರವು ಅಶೋಕನ ಕೈಗೆ ಸೇರಿದ ಕೂಡಲೆ, ಆತನ ಪ್ರಚಂಡ ಸೈನ್ಯವು ಇಂದ್ರಪುರವನ್ನು ಮುತ್ತುವದಕ್ಕಾಗಿ ಹೊರಟಿತು. ಕಲಿಂಗ ಭೂಪತಿಯೊಡನೆ ಯುದ್ಧ ಪ್ರಸಂಗವಿದ್ದದ್ದರಿಂದ, ಸೇನಾಪತಿಯ ಮೇಲೆ ಯಾವತ್ತು ಭಾರವನ್ನು ಹಾಕಿ, ರಾಜಧಾನಿಯಲ್ಲಿ ತಾನು ಕುಳಿತುಕೊಳ್ಳುವದು ಅಶೋಕನಿಗೆ ಇಷ್ಟವಾಗಿ ತೋರಲಿಲ್ಲ. ರಾಜಮಾತೆಯಾದ ಕಠೋರ ಹೃದಯದ ಬುದ್ಧಿಮತಿಯು, ಅಶೋಕನೇ ಪ್ರತ್ಯಕ್ಷವಾಗಿ ಯುದ್ಧಕ್ಕೆ ಹೋಗಬೇಕೆಂತಲೂ, ತನ್ನ ಮಗನಾದ ವೀತಾಶೋಕನು ಆತನ ಸಹಾಯಕ್ಕಾಗಿ ಹೋಗಬೇಕೆಂತಲೂ ಅಧಿಕಾರಯುಕ್ತವಾದ ಇಚ್ಛೆಯನ್ನು ವ್ಯಕ್ತಮಾಡಿದಳು. ಮಾರ್ಗದಲ್ಲಿ ಯಾವ ಪ್ರಕಾರದ ತೊಂದರೆಯೂ ತಟ್ಟದೆ, ಅಶೋಕನ ಸೈನ್ಯವು ಇಂದ್ರಪುರಕ್ಕೆ ಮುತ್ತಿಗೆಯನ್ನು ಹಾಕಲು, ಮೃಗೇಂದ್ರನ ಕಣ್ಣುಗಳು ತೆರೆದವು. ಹೀಗೆ ಏನಾದರೂ ಸಂಕಟ ಬಂದೀತೆಂದು ವಿಶಾಖಾನಂದನು ಮೃಗೇಂದ್ರನಿಗೆ ಮೊದಲೇ ಸೂಚಿಸಿದ್ದನು. ನಿಮ್ಮ ಅಪಮಾನಕಾರಕವಾದ ಉತ್ತರವನ್ನು ಅಶೋಕನು ಸಮಾಧಾನದಿಂದ ಕೇಳಿಕೊಳ್ಳಲಾರನೆಂತಲೂ, ಆತನು ತನಗಾದ ಅಪಮಾನದ ಪರಿಮಾರ್ಜನವನ್ನು ಮಾಡಿಕೊಳ್ಳದೆ ಎಂದೂ ಬಿಡನೆಂತಲೂ ಆ ವೃದ್ಧಮಂತ್ರಿಯು ಸ್ಪಷ್ಟವಾಗಿ ಹೇಳಿದ್ದನು; ಆದರೆ ಮೃಗೇಂದ್ರನು ಅದಕ್ಕೆ ನಕ್ಕು—"ಅಂಥ ಪ್ರಸಂಗ ಒದಗಿದರೆ, ತೋಳಿನ ಸಾಮರ್ಥ್ಯವನ್ನು ತೂಗಿ ನೋಡಲಿಕ್ಕೆ ಅನುಕೂಲವಾಗುವದೆ"ಂದು ಉತ್ತರಕೊಟ್ಟಿದ್ದನು. ಆದರೂ ವಿಶಾಖಾನಂದನು ಮೈಮರೆತು ಕುಳಿತುಕೊಂಡಿದ್ದಿಲ್ಲ. ಆತನು ಕೋಟೆ–ಕೊತ್ತಳಗಳನ್ನು ಭದ್ರಪಡಿಸಿ, ಯುದ್ಧಕ್ಕಾಗಿ ಸೈನ್ಯವನ್ನು

ಸಜ್ಜುಗೊಳಿಸಿ, ಶಸ್ತ್ರಾಸ್ತ್ರಗಳ ಸಂಗ್ರಹವನ್ನು ಸಮೃದ್ಧವಾಗಿ ಮಾಡಿದನು. ತನ್ನ ಮಂತ್ರಿಯ ಭವಿಷ್ಯವು ನಿಜವಾಗಿ, ತನ್ನ ಹೆಮ್ಮೆಯ ಮಾತಿನ ಸತ್ಯತೆಯನ್ನು ತೋರಿಸುವ ಪ್ರಸಂಗ ಒದಗಿದ್ದರಿಂದ, ಶೂರ ಮೃಗೇಂದ್ರನು ಅತ್ಯಂತವಾದ ಉತ್ಸಾಹದಿಂದ ಶತ್ರುವಿನೊಡನೆ ಯುದ್ಧ ಮಾಡಲು ಸಿದ್ಧನಾದನು.

ಅಶೋಕನು ಇಂದ್ರಪುರವನ್ನು ಮುತ್ತಿ ನಾಲ್ಕು ತಿಂಗಳಾದರೂ ಆತನಿಗೆ ಜಯದ ಆಶೆಯು ತೋರದಾಯಿತು. ಪ್ರತಿದಿನ ತನ್ನ ಸೈನ್ಯದ ಸಂಹಾರವು ಮಿತಿಮೀರಿ ಆಗಹತ್ತಿ ಶತ್ರುವಿನ ಸೈನ್ಯವು ವಿಶೇಷ ನಾಶಹೊಂದದೆ ಸುರಕ್ಷಿತವಾಗಿರುವದನ್ನು ಆತನು ಕಣ್ಮುಟ್ಟಿ ನೋಡುತ್ತಿದ್ದನು. ಆದರೂ ಅಭಿಮಾನದಿಂದ ಧರ್ಮಪ್ರಸಾರ ಮಾಡುವದರಲ್ಲಿ ಮಗ್ನನಾಗಿದ್ದ ಆ ಬೌದ್ಧನೃಪತಿಯು, ಅದನ್ನು ಲೆಕ್ಕಿಸಲಿಲ್ಲ. ಧರ್ಮದ ದುರಭಿಮಾನದಿಂದ ಮೈಮರೆತಿದ್ದ ಆತನ ಬೌದ್ಧ ಸೈನ್ಯವು, ಕೋಟೆಯ ಮೇಲಿಂದಾಗುವ ಅಗ್ನಿವೃಷ್ಟಿಗೆ ಅಸುಗೊಳ್ಳದೆ, ಕೋಟೆಯನ್ನು ಕೈಸೇರಿಸಿಕೊಳ್ಳ ಬೇಕೆಂದು ಮುಂದಮುಂದಕ್ಕೆ ಸಾಗುತ್ತಿತ್ತು; ಆದರೆ ಮೃಗೇಂದ್ರನ ಶೂರಸೈನಿಕರು ಅವರನ್ನು ಮುಂದಕ್ಕೆ ಬರಗೊಡದೆ ಶಸ್ತ್ರಾಸ್ತ್ರಗಳಿಂದ ಹಣಿದು ಹಿಂದಹಿಂದಕ್ಕೆ ಅಟ್ಟುತ್ತಲಿದ್ದರು. ಪ್ರತಿಕ್ಷಣ ದಲ್ಲಿ ಅಶೋಕನ ಸೈನ್ಯವು ಒಂದೊಂದು ಹೆಜ್ಜೆ ಹಿಂದಕ್ಕೆ ಸರಿಯುತ್ತಲಿತ್ತು. ತನ್ನ ಸೈನಿಕರನ್ನು ಪ್ರೋತ್ಸಾಹಿಸುತ್ತ ವಿದ್ಯುದ್ವೇಗದಿಂದ ಕೋಟೆಯ ಗೋಡೆಯ ಮೇಲೆ ಸಂಚರಿಸುತ್ತಿದ್ದ ಮೃಗೇಂದ್ರನು, ಕೋಟೆಯ ಕೆಳಗಿದ್ದವರಿಗೆ ಕ್ಷಣಮಾತ್ರ ಇಲ್ಲಿ ಕಂಡರೆ ಮತ್ತೊಂದು ಕ್ಷಣದಲ್ಲಿ ಮತ್ತೊಂದು ಕಡೆಯಲ್ಲಿ ಕಾಣುತ್ತಿದ್ದನು; ಆದರೆ ಗುರಿಯಿಟ್ಟು ಹೊಡೆಯಬೇಕೆನ್ನುವಷ್ಟರಲ್ಲಿ ಆತನು ತಟ್ಟನೆ ಸರಿದು ಹೋಗುವನು. ಅಶೋಕನ ಸೈನ್ಯದ ಸಂಹಾರವಾಗುತ್ತ ಹೋದಂತೆ, ಇಂದ್ರಪುರದ ಆರ್ಯರ ಮನಸ್ಸು ಪ್ರಫುಲ್ಲಿತವಾಗಹತ್ತಿತು. ಎರಡು ನಿಟ್ಟಿನ ಜನರೂ ಧರ್ಮ ಮೂಢರಾಗಿ ಜೀವಿತವನ್ನು ತೃಣಕ್ಕೆ ಸರಿ ಮಾಡಿ ಆವೇಶದಿಂದ ಕಾದುತ್ತಲಿದ್ದರು; ಆದರೆ ಜಯಲಕ್ಷ್ಮಿಯು ಮೃಗೇಂದ್ರನ ಕೊರಳಿಗೆ ಮಾಲೆಹಾಕುವ ಲಕ್ಷಣವು ತಟಸ್ಥ ವೃತ್ತಿಯವರಿಗೆ ಸ್ಪಷ್ಟವಾಗಿ ತೋರಹತ್ತಿತು.

ಈವೊತ್ತಿನವರೆಗೆ ಅಂಜಿಕ್ಯವೆಂದು ಪ್ರಸಿದ್ಧವಾಗಿದ್ದ ಅಶೋಕನ ಸೈನ್ಯವು, ಇಂದ್ರಪುರದ ಮುತ್ತಿಗೆಯಲ್ಲಿ ತೇಜೋಹೀನವಾಗುವ ಶಂಕೆಯು ವಿಚಾರವಂತರಾದ ಬೌದ್ಧರಲ್ಲಿ ಉತ್ಪನ್ನವಾಯಿತು. ಪ್ರತಿನಿತ್ಯ ಸಾವಿರಗಟ್ಟಲೆ ಅಶೋಕನ ಸೈನಿಕರು ರಣಭೂಮಿಯಲ್ಲಿ ಬೀಳಹತ್ತಿದರು. ಗಾಯಪಟ್ಟ ಸೈನಿಕರ ಆರೈಕೆಯು ಸರಿಯಾಗಿ ಆಗದಂತಾಯಿತು. ಹೆಣಗಳ ವ್ಯವಸ್ಥೆಯಾಗದೆ ಅವು ಬಿದ್ದಲ್ಲಿ ಬಿದ್ದು ಕೊಳೆಯಹತ್ತಿದ್ದರಿಂದ, ಹವೆ ಕೆಟ್ಟು ಅಶೋಕನ ಸೈನ್ಯದಲ್ಲಿ ಭಯಂಕರ ರೋಗವು ಉತ್ಪನ್ನವಾಯಿತು. ಒಂದು ಕಡೆಯಿಂದ ಮೃಗೇಂದ್ರನ ಸೈನಿಕರ ಭಯಂಕರ ವಾದ ಹೊಡತ, ಮತ್ತೊಂದು ಕಡೆಯಿಂದ ಭಯಂಕರ ರೋಗದ ಕಾಟ; ಹೀಗೆ ಎರಡು ಬಗೆಯ ಸಂಕಟಗಳ ಇರುಕಿನಲ್ಲಿ ಅಶೋಕನ ಸೈನ್ಯವು ಸಿಕ್ಕು ನುಗ್ಗಾಗಹತ್ತಿತು. ಇದೇ ಸ್ಥಿತಿಯು ಬಹು ದಿವಸ ನಡೆದರೆ ತನ್ನ ಸೈನ್ಯವು ಸಂಪೂರ್ಣ ನಷ್ಟವಾಗುವದೆಂಬ ಭಯವು ಅಶೋಕನ ಮನಸ್ಸಿನಲ್ಲಿ

ಉತ್ಪನ್ನವಾಯಿತು. ಒಡಂಬಡಿಕೆಯನ್ನು ಮಾಡಿಕೊಂಡು ಹಿಂದಕ್ಕೆ ಸರಿಯುವದು ಅಶೋಕನಂಥ ಬಹುಮಾನದ ಪುರುಷನಿಗೆ ಮಾನ್ಯವಾಗುವಹಾಗಿದ್ದಿಲ್ಲ. ಜಯವನ್ನು ಸಂಪಾದಿಸದೆ ಒಡಂಬಡಿಕೆಯನ್ನು ಮಾಡಿಕೊಂಡು ಪಾಟಲೀಪುತ್ರಕ್ಕೆ ತಿರುಗಿ ಹೋಗಬೇಕೆಂಬ ಕಲ್ಪನೆಯು ಮನಸ್ಸಿನಲ್ಲಿ ಉತ್ಪನ್ನವಾದ ಕೂಡಲೆ, ಅಶೋಕನ ಮನಸ್ಸು ವ್ಯಥಿತವಾಗುತ್ತಿತ್ತು. ಒಡಂಬಡಿಕೆ ಮಾಡಿಕೊಳ್ಳದಿದ್ದರೆ ತನ್ನ ಸೈನ್ಯದ ಗತಿಯೇನಾದೀತೆಂಬದು ಅಶೋಕನ ಕಣ್ಣಿಗೆ ಕಟ್ಟಿದಂತಾಗಿತ್ತು. ಹೀಗೆ ಬಹು ಕಠಿಣ ಪ್ರಸಂಗ ಒದಗಿದ್ದರಿಂದ ಆತನಿಗೆ ಏನೂ ತೋಚದಾಯಿತು.

ಮಧ್ಯರಾತ್ರಿಯಾಗಿತ್ತು. ಗಾಯಪಟ್ಟ ಸೈನಿಕರು ನರಳುವ ಹೃದಯದ್ರಾವಕ ಧ್ವನಿಯ, ಹಾಗು ಹೆಣವನ್ನು ಹರಿದು ತಿನ್ನುವ ಕ್ರೂರಪಕ್ಷಿಗಳ ಭಯಂಕರ ಧ್ವನಿಯ ಹೊರತು ಬೇರೆ ಧ್ವನಿಗಳು ಕೇಳಬರುತ್ತಿದ್ದಿಲ್ಲ. ಹೆಣಗಳ ದುರ್ಗಂಧವನ್ನು ಸಹಿಸಲಾರದೆ ಕಾವಲುಗಾರರು ಮೂಗುಕಟ್ಟಿಕೊಂಡು, ರಕ್ತದಿಂದ ನೆನೆದು ಜಾರಿಕೆಯಾದ ರಣಭೂಮಿಯಲ್ಲಿ ಜೋಲಿಯನ್ನು ಹಿಡಿದು ತಿರುಗುತ್ತಲಿದ್ದರು. ಅಶೋಕನ ಡೇರೆಯಲ್ಲಿ ಇನ್ನೂ ದೀಪವು ಉಜ್ವಲವಾಗಿ ಉರಿಯುತ್ತಿತ್ತು. ಈವೊತ್ತಿನವರೆಗೆ ಅಶೋಕನು ಹಲವು ಯುದ್ಧಗಳನ್ನು ಮಾಡಿದ್ದರೂ, ಇಂದಿನಂತೆ ಆತನ ಪ್ರಸನ್ನ ಮುಖವು ಎಂದೂ ಖಿನ್ನವಾಗಿದ್ದಿಲ್ಲ. ಸ್ವಲ್ಪ ಹೊತ್ತಿನ ಮೇಲೆ ಅಶೋಕನ ಚಿಂತೆಯ ಮುಖಮುದ್ರೆಯಲ್ಲಿ ನಿಶ್ಚಯದ, ಅಥವಾ ಅಲ್ಪ ಶಾಂತತೆಯ ಚಿಹ್ನವು ತೋರುತ್ತಿರಲು, ಹೊರಗೆ ಏನೋ ಬಿದ್ದ ಸಪ್ಪಳವಾಯಿತು. ಅಶೋಕನು ಹೊರಗೆ ಬಂದು ನೋಡುವಾಗ, ಕಾವಲುಗಾರನು ರಕ್ತದ ಜಾರಿಕೆಯಲ್ಲಿ ಕಾಲುಜಾರಿ ಬಿದ್ದಿದ್ದನು. ಆಗ ಅಶೋಕನು ಕಾವಲುಗಾರನನ್ನು ಕುರಿತು—

ಅಶೋಕ—ಮೋಹನನೇ, ಏನೂ ಪೆಟ್ಟು ಹತ್ತಲಿಲ್ಲವಷ್ಟೇ?

ಮೋಹನ—ಭಗವನ್, ಇಲ್ಲ. ಪೆಟ್ಟುಗಿಟ್ಟು ಹತ್ತಲಿಲ್ಲ, ಬರೇ ಕಾಲು ಜಾರಿತು!

ಅಶೋಕ—ಕಕ್ಕಂದಿರ ಡೇರೆಯಲ್ಲಿ ಇನ್ನೂ ಬೆಳಕು ಕಾಣುತ್ತದಲ್ಲವೆ?

ಮೋಹನ—ಅಹುದು, ಬೆಳಕು ಕಾಣುತ್ತದೆ. ಪ್ರಧಾನರು ಇನ್ನೂ ಎಚ್ಚತ್ತಿರುತ್ತಾರೆ; ದಂಡಿನೊಳಗಿನ ಮುಖ್ಯ ಮುಖ್ಯ ಅಧಿಕಾರಿಗಳು ಇದೇ ಈಗ ಪ್ರಧಾನರವರ ಡೇರೆಯೊಳಗಿಂದ ಹೋದರು. ಪ್ರಭುಗಳ ಇಚ್ಛೆಯಿದ್ದರೆ,

ಅಶೋಕ—ಅಹುದು, ಹೋಗು, ಅವರನ್ನು ನನ್ನ ಡೇರೆಗೆ ಕರಕೊಂಡು ಬಾ—

ಮೋಹನನು ಬಹು ವಿನಯದಿಂದ ಅಶೋಕನನ್ನು ನಮಿಸಿ, ರಾಧಾಗುಪ್ತನನ್ನು ಕರಕೊಂಡು ಬರುವದಕ್ಕಾಗಿ ಆತನ ಡೇರೆಗೆ ಹೋದನು. ಕಾಲು ಗಳಿಗೆಯೊಳಗಾಗಿ ರಾಧಾಗುಪ್ತನು ಅಶೋಕನ ಬಳಿಗೆ ಬಂದನು. ರಾಧಾಗುಪ್ತನಂಥ ರಾಜನಿಷ್ಠ ಮಂತ್ರಿಯು ಆ ಕಾಲದಲ್ಲಿ ಅಶೋಕನ ರಾಜ್ಯದೊಳಗೆ ಮತ್ತೊಬ್ಬನಿದ್ದಿಲ್ಲ. ಬೌದ್ಧರ ಪಾಟಲೀಪುತ್ರ ರಾಜಧಾನಿಯಲ್ಲಿ, ಬೌದ್ಧರ ಸಾಮ್ರಾಜ್ಯದಲ್ಲಿ, ಅಶೋಕನಂಥ ಬೌದ್ಧಭೂಪತಿಯು ಸಿಂಹಾಸನವೇರಿರುವಾಗ ರಾಧಾಗುಪ್ತನಂಥ ವೇದಧರ್ಮಿಯು ಮುಖ್ಯ ಪ್ರಧಾನನಾಗಿದ್ದದ್ದು ಪರಮಾಶ್ಚರ್ಯವೇ ಸರಿ. ಅಶೋಕನ ಹೊರತಾಗಿ ಯಾವತ್ತು ಬೌದ್ಧರು ಆತನನ್ನು ತಿರಸ್ಕರಿಸುತ್ತಿದ್ದರು. ರಾಜಮಾತೆಯಾದ ಬುದ್ಧಿಮತಿಯು ಆತನನ್ನು ನಾಶಗೊಳಿಸಲಿಕ್ಕೆ ಒಂದೆರಡು

ಉಪಾಯಗಳನ್ನು ಮಾಡಲಿಲ್ಲ; ರಾಜಗುರುವೆನಿಸುವ ಸಂಪುಷ್ಪಾಚಾರ್ಯನೆಂಬ ಬೌದ್ಧಭಿಕ್ಷುವು, ಆ ವೃದ್ಧಮಂತ್ರಿಯ ನಾಶಕ್ಕಾಗಿ ತನ್ನಿಂದಾದಷ್ಟು ಯತ್ನಿಸಿದನು; ಆದರೆ ರಾಧಾಗುಪ್ತನು ಕಂಟಕ ಯುಕ್ತವಾದ ಈ ಮಾರ್ಗದೊಳಗಿಂದ ತನ್ನ ಆಯುಷ್ಯದ ಬಹು ದೊಡ್ಡ ಭಾಗವನ್ನು ಸುರಕ್ಷಿತವಾಗಿ ಕ್ರಮಿಸಿದ್ದನು. ಆತನ ಅರವತ್ತು ವರ್ಷದ ಆಯುಷ್ಯದಲ್ಲಿ ವೇದಧರ್ಮದ ಅಭಿಮಾನದ ಮೂಲಕ ಆತನಿಂದ ಒಂದಾದರೂ ರಾಜದ್ರೋಹದ ಕಾರ್ಯವು ಒದಗಿದ್ದದ್ದು ಶತ್ರುಗಳ ಕಣ್ಣಿಗೆ ಸಹ ಬೀಳಲಿಲ್ಲ. ಇಂಥ ಘನತರವಾದ ಯೋಗ್ಯತೆಯ ವೃದ್ಧಮಂತ್ರಿಯು, ಡೇರೆಯಲ್ಲಿ ತೀರ ಅಶೋಕನ ಹತ್ತರ ಹೋಗಿ—ಭಗವನ್, ಇಷ್ಟು ರಾತ್ರಿ ತಾವು ನಿದ್ದೆಗೆಟ್ಟು ಕುಳಿತಿರಬಹುದೆಂಬ ಕಲ್ಪನೆ ಕೂಡ ನನ್ನ ಮನಸ್ಸಿನಲ್ಲಿ ಬಂದಿದ್ದಿಲ್ಲ, ಎಂದು ನುಡಿದನು. ಅದಕ್ಕೆ—

ಅಶೋಕ—ಕಕ್ಕಾ, ಮುಪ್ಪಿನ ಕಾಲದಲ್ಲಿ ಇಂಥ ಅಪರಾತ್ರಿಯಲ್ಲಿ ನಿಮಗೆ ತ್ರಾಸ ಕೊಡುವದು ಅಪರಾಧವೇ ಸರಿ; ಆದರೆ ಮಾಡಲೇನು? ನಾನು ಬಂದ ಉದ್ದೇಶವು ಒತ್ತಟ್ಟಿಗೆ ಉಳಿದು, ಶತ್ರುಗಳ ಹೊಡತದಿಂದಲೂ, ರೋಗಬಾಧೆಯಿಂದಲೂ ಸೈನ್ಯದ ಸಂಹಾರವು ಮಿತಿಮೀರಿ ಆಗತೊಡಗಿದೆ. ಇದನ್ನು ನೋಡುತ್ತ ನಾವು ಎಷ್ಟುದಿವಸ ಕುಳಿತುಕೊಳ್ಳಬೇಕು? ಈ ನೆಲೆಯಿಲ್ಲದ ಪ್ರಾಣಹಿಂಸೆಯನ್ನು ನೋಡಿ ನನ್ನ ಕಠಿಣಹೃದಯವೂ ಕರಗಿ ನೀರಾಗಿದೆ. ಪ್ರಾಣಕ್ಕಿಂತಲೂ ಪ್ರಿಯವಾಗಿರುವ ನಮ್ಮ ಜನರ ಸಂಹಾರಮಾಡಿ, ಹಲವು ವೀರರ ರಕ್ತವನ್ನು ಪ್ರತಿಯಾಗಿ ಕೊಟ್ಟು ಒತ್ತಾಯದಿಂದ ಇಂದ್ರಪುರದವರನ್ನು ಬೌದ್ಧರನ್ನಾಗಿ ಮಾಡುವದು ಯಾವ ನಿಜವಾದ ಬೌದ್ಧನಿಗೆ, ಅಥವಾ ಭಗವಾನ್ ಗೌತಮಬುದ್ಧನ ಅನುಯಾಯಿಯೆನಿಸುವ ಯಾವನಿಗೆ ಸಮ್ಮತವಾದೀತು?

ರಾಧಾಗುಪ್ತ—ಭಗವನ್, ತಮಗೆ ಕಠಿಣಪ್ರಸಂಗವೊದಗಿರುವದು ನಿಜವು. ಸಾವಿರಾರು ಜನರ ಸಂಹಾರವನ್ನು ನೋಡುವ ನನ್ನ ಕಣ್ಣುಗಳು ಈ ಮುಪ್ಪಿನಲ್ಲಿ ಯಾಕೆ ಕುರುಡವಾಗ ಲೊಲ್ಲವೆನ್ನುವಹಾಗೆ ನನಗೆ ಆಗಿದೆ. ನನ್ನ ಮೈಯಲ್ಲಿ ತ್ರಾಣವಿದ್ದರೆ, ಈಗಲೇ ಇಂದ್ರಪುರದ ಕೋಟೆಗೆ ಲಗ್ಗೆಹತ್ತಿ ಅರಕ್ಷಣದಲ್ಲಿ ಶತ್ರುಗಳ ಮೇಲೆ ದುಮುಕುತ್ತಿದ್ದೆನು.

ಅಶೋಕ—ಕಕ್ಕಾ, ಅದು ಸರಿ; ತಮ್ಮತನಕ ಯಾಕೆ? ನಮ್ಮ ಸೈನ್ಯದಲ್ಲಿ ವೈರಿಗಳಿಗೆ ಬೆನ್ನು ತೋರಿಸದ ರಣಶೂರರು ಸ್ವಲ್ಪ ಜನರಿರುವರೆಯೇ? ಈವೊತ್ತಿನವರೆಗೆ ಅಂಜಿಕ್ಯರೆನಿಸಿ ಕೊಂಡಿರುವ ನನ್ನ ಸೈನಿಕರು ಜೀವದ ಪರಿವೆಯಿಲ್ಲದೆ ಕಾದುತ್ತಲಿದ್ದಾರೆ; ಆದರೆ ನಮಗೆ ಬಲವಾದ ಕೋಟೆಯ ಆಶ್ರಯವಿಲ್ಲದ್ದರಿಂದಲೂ, ನಮಗೆ ಅನ್ನ ನೀರಿನ ಪೂರಯಿಕೆಯಿಲ್ಲದ್ದರಿಂದಲೂ, ನಾವು ರೋಗಪೀಡಿತರಾಗಿದ್ದದ್ದರಿಂದಲೂ ಈವೊತ್ತಿಗೆ ಮೃಗೇಂದ್ರನ ಕೈಯು ಮೇಲಾಗಿರುತ್ತದೆ.

ರಾಧಾಗುಪ್ತ—ಇಂದು ಆತನ ಕೈಯು ಮೇಲಾಗಿದ್ದರೆ, ನಾಳೆ ತಮ್ಮ ಕೈಯು ಮೇಲಾದೀತು. ಅದಕ್ಕಾಗಿ ಚಿಂತೆಮಾಡಬಾರದು.

ಅಶೋಕ—ಕಕ್ಕಾ, ಏನಾದರೂ ಸಮಾಧಾನದ ಮಾತು ಹೇಳಿ ಕಾಲಹರಣ ಮಾಡುವದು ನಿಮಗೆ ಒಪ್ಪುವದಿಲ್ಲ. ಅದಕ್ಕಾಗಿ ನಾನು ನಿಮ್ಮನ್ನು ಕರೆಸಿರುವದಿಲ್ಲ. ಈ ಧರ್ಮಯುದ್ಧವನ್ನು ಹೇಗೆ

ಮುಗಿಸಬೇಕೆಂಬ ಬಗ್ಗೆ ನೀವು ಸ್ಪಷ್ಟವಾಗಿ ಹೇಳಿರಿ. ನೀವು ಒಡಂಬಡಿಕೆಮಾಡಿಕೊಳ್ಳೆಂದು ಹೇಳಿದರೆ, ನಾಳಿಗೇ ಮಾಡಿಕೊಳ್ಳುವೆನು.

ರಾಧಾಗುಪ್ತ—ಭಗವನ್, ನನ್ನ ಮೇಲಿರುವ ನಿಮ್ಮ ವಿಶ್ವಾಸಕ್ಕಾಗಿ ನಾನು ತಮ್ಮ ಋಣಿಯಾಗಿದ್ದೇನೆ. ತಾವು ನನ್ನಂಥ ವೇದಧರ್ಮದವನಿಗೆ–ಬೌದ್ಧಧರ್ಮದ ಶತ್ರುವಿಗೆ ನಮ್ಮ ಧರ್ಮದ ಪ್ರಸಿದ್ಧ ಅರಸನೊಡನೆ ನಡೆದಿರುವ ಯುದ್ಧವನ್ನು ಮುಗಿಸುವ ಬಗ್ಗೆ ಅಭಿಪ್ರಾಯ ವನ್ನು ಕೇಳುತ್ತೀರಿ! ಸ್ವಾಮಿಯ ಕಾರ್ಯವನ್ನು ಏಕನಿಷ್ಠೆಯಿಂದ ಮಾಡುವದರ ಹೊರತು ನನಗೆ ಅನ್ಯಧರ್ಮವಿಲ್ಲ ಸ್ವಾಮಿಯ ಕಲ್ಯಾಣವನ್ನು ಚಿಂತಿಸುವದಕ್ಕಿಂತ ನನಗೆ ಹೆಚ್ಚಿನ ಸುಖವಿಲ್ಲ; ಆದರೆ ಪ್ರಭುಗಳ ಬಳಿಯಲ್ಲಿ ನಾನು ಬೇಡಿಕೊಳ್ಳುವದೇನಂದರೆ, ಯುದ್ಧಮಾಡುವದೊಂದೇ ನಮ್ಮ ಕೈಯಲ್ಲಿರುವದಲ್ಲದೆ, ಒಡಂಬಡಿಕೆ ಮಾಡುವದು ನಮ್ಮ ಕೈಯಲ್ಲಿರುವದಿಲ್ಲ. ರಾಜ್ಯಕಾರಭಾರದ ಸೂತ್ರಗಳು ರಾಜಮಾತೆಯವರ ಕೈಯಲ್ಲಿಯೂ, ಕ್ಷುದ್ರರಾದ ಬೌದ್ಧಭಿಕ್ಷುಗಳ ಕೈಯಲ್ಲಿಯೂ ಇದ್ದಂತಾಗಿರುತ್ತವೆ. ರಾಜಕಾರಣದ ಆಜ್ಞೆಗಳು ಅವರಿಂದ ಹೊರಡುತ್ತಲಿವೆ. ಆದರಿಂದ ರಾಜ್ಯಕಾರ ಭಾರದಲ್ಲಿ ಹಲವು ಅನ್ಯಾಯಗಳು ಆಗುತ್ತವೆ. ಅದು ಹೇಗೇ ಇರಲಿ, ನಾಳಿಗೇ ಒಡಂಬಡಿಕೆ ಯನ್ನು ಮಾಡಿಕೊಳ್ಳಬಾರದು.

ಅಶೋಕ—ಅದೇಕೆ? ಹೀಗೆಯೇ ಮನುಷ್ಯ ಸಂಹಾರವನ್ನು ಮಾಡಿಸೆಂದು ನೀವು ನನಗೆ ಹೇಳುತ್ತೀರೋ?

ರಾಧಾಗುಪ್ತ—ಹೇಗಿದ್ದರೂ ನಾಳೆ ಒಂದು ದಿನ ಪ್ರಭುಗಳು ತಡೆಯಲೇಬೇಕು. ರಾಜ ಮಾತೆಯಾದ ಬುದ್ಧಿಮತಿಯವರನ್ನೂ, ಅವರ ಮಂತ್ರಾಲೋಚಕರಾದ ಬೌದ್ಧಶ್ರವಣರನ್ನೂ, ನಾಳಿಗೆ ಇಂದ್ರಭುವನದ ಚೈತ್ಯಾಲಯಕ್ಕೆ ಕರೆಸಿಕೊಳ್ಳಬೇಕು. ಅವರ ಮುಂದೆ ಯುದ್ಧದ ಪ್ರಸಕ್ತಿಯನ್ನು ತೆಗೆಯೋಣ. ಅವರು ಒಡಂಬಡಿಕೆಗೆ ಒಪ್ಪಿಕೊಂಡರೆ ನೆಟ್ಟಗೇ ಆಯಿತು.

ಅಶೋಕ—ಕಕ್ಕಾ, ಅವರ ಒಪ್ಪಿಗೆಯ ಅವಶ್ಯವು ನನಗಿರುವದಿಲ್ಲ, ತಮ್ಮ ಸೂಚನೆಯಂತೆ ನಾಳಿಗೆ ಅವರನ್ನು ಅವಶ್ಯವಾಗಿ ಕರೆಸಿಕೊಳ್ಳುವೆನು; ಆದರೆ ಯುದ್ಧವನ್ನು ಯಾವ ರೀತಿಯಿಂದ ಮುಗಿಸತಕ್ಕದ್ದೆಂಬ ಬಗ್ಗೆ ಸ್ಪಷ್ಟವಾಗಿ ಹೇಳಿರಿ. ಈ ಕಲಿಂಗ ಯುದ್ಧದಿಂದ ನನ್ನ ಕಠಿಣ ಹೃದಯದಲ್ಲಿ ದಯೆಯ ಅಂಕುರವು ಉತ್ಪನ್ನವಾಯಿತು.

ರಾಧಾಗುಪ್ತ—ಪ್ರಭುಗಳೇ, ಒಡಂಬಡಿಕೆ ಮಾಡಿಕೊಂಡ ಹೊರತು ಅನ್ಯಮಾರ್ಗವಿಲ್ಲ,

ಈ ಮೇರೆಗೆ ನಿಶ್ಚಿತವಾದ ಮಾತನ್ನು ರಾಧಾಗುಪ್ತನು ಹೇಳಿದ್ದರಿಂದ ಅಶೋಕನಿಗೆ ಸಮಾಧಾನವಾಯಿತು. ಸ್ವಲ್ಪಹೊತ್ತಿನಲ್ಲಿ ಒಂಟೆಯ ಸವಾರರು ಪಾಟಲೀಪುತ್ರಕ್ಕೆ ಸಾಗಿದರು. ರಾಧಾಗುಪ್ತನು ಅಶೋಕನ ಅಪ್ಪಣೆಯಿಂದ ತನ್ನ ಡೇರೆಗೆ ಹೋದನು. ಅಶೋಕನ ಚಿತ್ತವೃತ್ತಿಯು ಬಹುಮಟ್ಟಿಗೆ ಶಾಂತವಾದದ್ದರಿಂದ, ಆತನಿಗೆ ಸ್ವಲ್ಪಹೊತ್ತಿನಲ್ಲಿ ನಿದ್ರೆಯು ಹತ್ತಿತು.

ಅಸಂಗತಕಾರ್ಯ

ಮರುದಿವಸ ಎರಡುತಾಸು ರಾತ್ರಿಯ ಸುಮಾರಕ್ಕೆ ಅಶೋಕನು ಇಂದ್ರಭುವನದ ಬಳಿಯ ಗುಡ್ಡದಲ್ಲಿದ್ದ ಚೈತ್ಯಾಲಯದ ಸಭಾಮಂಟಪದಲ್ಲಿ ತಾನು, ವೀತಾಶೋಕನು, ರಾಧಾಗುಪ್ತ ಮಂತ್ರಿಯು, ಹೀಗೆ ಮೂವರು ಪೀಠಗಳ ಮೇಲೆ ಕುಳಿತುಕೊಂಡು, ಮಾತೆಯಾದ ಬುದ್ಧಿಮತಿಯ, ಹಾಗು ಗುರುಗಳಾದ ಸಂಪುಷ್ಪಾಚಾರ್ಯರ ಹಾದಿಯನ್ನು ನೋಡುತ್ತಲಿದ್ದರು. ಚೈತ್ಯಾಲಯದ ಬಾಗಿಲಲ್ಲಿ ಶಸ್ತ್ರಾಸ್ತ್ರಗಳಿಂದ ಸಜ್ಜಾಗಿ ಕಾವಲುಗಾರರು ಇತ್ತಿಂದ–ಅತ್ತ ಅತ್ತಿಂದ–ಇತ್ತ ತಿರುಗುತ್ತಲಿದ್ದರು. ಅಂದು ಆ ಚೈತ್ಯಾಲಯದ ಸಭಾಮಂಟಪವು ಉತ್ತಮ ರೀತಿಯಿಂದ ಪ್ರಕಾಶಿಸಲ್ಪಟ್ಟಿತ್ತು. ಅಶೋಕನ ನಂಬಿಗೆಯ ನಾಲ್ಕೈದು ಜನ ಅಂಗರಕ್ಷಕರು ಆತನ ಬಳಿಯಲ್ಲಿ ವ್ಯಾಸಪೀಠದ ಹತ್ತರ ಕುಳಿತುಕೊಂಡಿದ್ದರು. ಉಳಿದ ಸಭಾಮಂಟಪದಲ್ಲಿ ಮನುಷ್ಯರು ಇಲ್ಲದ್ದರಿಂದ, ಅದು ಶೂನ್ಯವಾಗಿ ತೋರುತ್ತಿತ್ತು. ವ್ಯಾಸಪೀಠದ ಮೇಲೆ ಇನ್ನೂ ಕೆಲವು ಪೀಠಗಳು ತೆರವಾಗಿದ್ದವು. ಎಲ್ಲರ ಲಕ್ಷವು ಸಭಾದ್ವಾರದ ಕಡೆಗೆ ಇತ್ತು. ಹತ್ತು ಗಳಿಗೆ ರಾತ್ರಿಯಾಗಲು, ಸಭೆಯಹೊರಗಿನಿಂದ ''ರಾಜಮಾತೆಯವರ ಜಯ ಜಯಕಾರವು'' ಎಂದು ಕಾವಲುಗಾರರು ಉಚ್ಚರಿಸಿದ ಗಂಭೀರ ಧ್ವನಿಯು ಸಭಾಸ್ಥಾನವನ್ನು ತುಂಬಿ ಅಶೋಕಾದಿಗಳ ಕರ್ಣರಂಧ್ರವನ್ನು ಪ್ರವೇಶಿಸಿತು. ಅಷ್ಟರಲ್ಲಿ ಶುಭ್ರವಸ್ತ್ರವನ್ನು ಉಟ್ಟುಕೊಂಡಿದ್ದ ಒಬ್ಬ ಪ್ರೌಢಸ್ತ್ರೀಯು ತನ್ನ ತೀಕ್ಷ್ಣವಾದ ದೃಷ್ಟಿಯಿಂದ ನಾಲ್ಕೂಕಡೆಗೆ ನೋಡುತ್ತ ಮೃದುಹಾಸದೊಡನೆ ಮಂದಗಮನದಿಂದ ವ್ಯಾಸಪೀಠದ ಕಡೆಗೆ ಬರತೊಡಗಿದಳು. ಆಕೆಯ ಗಾಂಭೀರ್ಯಪೂರ್ಣವಾಗಿದ್ದ ಮುಖ ಮುದ್ರೆಯು ಅತ್ಯಂತ ಹೃದಯಭೇದಕವಾಗಿತ್ತು. ಆಕೆಯ ಮುಖದಲ್ಲಿ ಒಪ್ಪುತ್ತಿದ್ದ ಶಾಂತತೆಯಲ್ಲಿ ಮರ್ಮಭೇದಕತನವು ತೋರುತ್ತಿತ್ತು. ಆಕೆಯ ಕೆಳದುಟಿಯಲ್ಲಿ ವ್ಯಕ್ತವಾಗುವ ಮೃದುಹಾಸವು ಅತ್ಯಂತ ಕಠೋರವಾಗಿತ್ತು. ಆಕೆಯ ಅಧಿಕಾರಯುಕ್ತ ಮುದ್ರೆಯು, ಆಕೆಯ ಶುಭ್ರದಂತ ಪಂಕ್ತಿಗಳಿಂದಲೂ–ಶುಭ್ರಕೇಶಕಲಾಪದಿಂದಲೂ–ಶುಭ್ರವಸ್ತ್ರಪರಿಧಾನದಿಂದಲೂ ಬಹು ಭೂಷಿತವಾಗಿ ಒಪ್ಪುತ್ತಿತ್ತು. ಆಕೆಯ ವೃದ್ಧಾಪ್ಯವನ್ನು ಸಿದ್ಧಮಾಡಲಿಕ್ಕೆ ಆಕೆಯ ಶುಭ್ರಕೇಶಕಲಾಪದ ಹೊರತು ಎರಡನೆಯ ಸಾಧನಗಳಿದ್ದಿಲ್ಲ. ರಾಜಮಾತೆಯಾದ ಬುದ್ಧಿಮತಿಗೆ ಅಷ್ಟೇನು ದಿನಗಳಾಗಿದ್ದಿಲ್ಲ. ಪತಿಯಾದ ಬಿಂದುಸಾರನು ದೇಹತ್ಯಾಗಮಾಡಿದಂದಿನಿಂದ ಆಕೆಯು ಅಲಂಕಾರಗಳನ್ನು ಮುಟ್ಟಿದ್ದಿಲ್ಲ. ಆಕೆಯು ಸನ್ಯಸ್ತವೇಷದಿಂದ ಕಾಲಹರಣ ಮಾಡುತ್ತಿದ್ದಳು. ಆದರೂ ಸ್ತ್ರೀಯರ ಕೋಮಲತ್ವಕ್ಕೆ ಒಪ್ಪದ ತೇಜೋವಿಶೇಷದಿಂದ ಆಕೆಯು ಅಸಾಮಾನ್ಯ ಸ್ತ್ರೀಯೆಂದು ನೋಡುವವರಿಗೆ ಸ್ಪಷ್ಟವಾಗಿ ಕಾಣುತ್ತಿತ್ತು. ರಾಜಮಾತೆಯಾದ ಬುದ್ಧಿಮತಿಯೊಡನೆ ನಾಲ್ವರು ತರುಣ ಭಿಲ್ಲ ದಾಸಿಯರು ಶಸ್ತ್ರಗಳನ್ನು ಧರಿಸಿ, ಶುಭ್ರವಸ್ತ್ರಗಳನ್ನುಟ್ಟುಕೊಂಡು ಸಭಾಮಂಟಪವನ್ನು ಪ್ರವೇಶಿಸಿದರು. ಅವರಲ್ಲಿ ಒಬ್ಬಳ ಹೆಗಲಮೇಲೆ ಕೈಯನ್ನಿಟ್ಟು, ಒಬ್ಬಳ ಕೈಯನ್ನು ಹಿಡಕೊಂಡು ರಾಜಮಾತೆಯು ಮಂದಗಮನದಿಂದ ಬರುತ್ತಿರಲು, ಅಶೋಕನೂ, ವೀತಾಶೋಕನೂ, ರಾಧಾಗುಪ್ತ ಮಂತ್ರಿಯೂ ಎದ್ದು ನಿಂತು ಆಕೆಯನ್ನು ವಂದಿಸಿದರು. ಆಗ

ಬುದ್ಧಿಮತಿಯು ಆಢ್ಯತೆಯಿಂದ ತಲೆಬಾಗಿಸಿ ಅವರ ನಮಸ್ಕಾರಗಳನ್ನು ಸ್ವೀಕರಿಸುತ್ತ ತನ್ನ ಪೀಠದ ಮೇಲೆ ಕುಳಿತುಕೊಂಡಳು. ಆಮೇಲೆ ಆಕೆಯು ತನ್ನ ದಾಸಿಯರಿಗೆ ಎರಡು ಗಳಿಗೆಯ ವರೆಗೆ ಹೊರಗೆ ಹೋಗಲಪ್ಪಣೆಕೊಟ್ಟು, ಅಂತಃಕರಣದಲ್ಲಿ ಪ್ರೇಮವಿಲ್ಲದೆ ಹೊರಗೆ ಪ್ರೇಮ ತೋರಿಸುವ ಸೋಗಿನಿಂದ ಅಶೋಕನನ್ನು ಕುರಿತು—

ಬುದ್ಧಿಮತಿ—ಬಾಳಾ, ಅಶೋಕಾ, ನೀನು ಬಹಳ ಸೊರಗಿದ ಹಾಗೆ ಕಾಣುತ್ತೀ? ಯುದ್ಧದ ದುಷ್ಪರಿಣಾಮವು ನಿನ್ನ ಮೇಲೆ ಆದಂತೆ ತೋರುತ್ತದೆ.

ಅಶೋಕ—ಅಪ್ಪಾ, ಯುದ್ಧದಿಂದ ನನ್ನ ಶರೀರದ ಮೇಲೆ ಯಾವಾಗಲೂ ಸತ್ಪರಿಣಾಮವೇ ಆಗುತ್ತದೆ. ಯುದ್ಧವು ನನಗೆ ಸೇರುವದು.

ರಾಧಾಗುಪ್ತ—ಭಗವಾನರವರ ಶರೀರದ ಮೇಲೆ ಆಗಿರುವ ದುಷ್ಪರಿಣಾಮವು ಯುದ್ಧದ್ದಲ್ಲ, ಚಿಂತೆಯದು.

ಬುದ್ಧಿಮತಿ (ರಾಧಾಗುಪ್ತನನ್ನು ತ್ವೇಷದಿಂದ ನೋಡುತ್ತ)—ಏನು? ಚಿಂತೆಯ ಪರಿಣಾಮವೇ? ಅಶೋಕನಂಥ ಬಾಲಕನ ಮೇಲೆ ಯಾವ ಚಿಂತೆಯ ಪರಿಣಾಮವಾಗಬೇಕು? ಗುಡ್ಡದಂಥ ಹಿರಿಯರು ನಾವು ಇರುತ್ತಿರಲು, ಆತನಿಗೇನು ಬಂದಿದೆ? ಮಂತ್ರಿಗಳೇ, ಯುದ್ಧವು ನಡೆದಿರಲು, ಪಕ್ವಾನ್ನಗಳ ಮೇಲೆ ಪಕ್ವಾನ್ನಗಳನ್ನು ಹೊಡೆಯುತ್ತ ಚಕ್ಕಂದದಿಂದ ಡೇರೆಯಲ್ಲಿ ಹೊರಳಾಡುತ್ತಿರುವ ನೀವು, ಚಿಂತೆಮಾಡುವ ಗುತ್ತಿಗೆಯನ್ನು ಹಿಡಿದರೆ ನೆಟ್ಟಗಾಗಲಿಕ್ಕಿಲ್ಲವೆ?

ಈ ಮೇರೆಗೆ ರಾಧಾಗುಪ್ತಮಂತ್ರಿಯ ಮೇಲೆ ರಾಜಮಾತೆಯು ಆಕ್ಕಸದಿಂದ ಹರಿಹಾಯುತ್ತಿರಲು, ''ಭಿಕ್ಷುಶ್ರೇಷ್ಠ ಸಂಪುಷ್ಪಾಚಾರ್ಯರಿಗೆ ಜಯ ಜಯಕಾರವು'' ಎಂಬ ಕೋಲಾಹಲವು ಸಭಾಮಂಟಪದ ದ್ವಾರದಲ್ಲಿ ಆಗಹತ್ತಿತು. ಅದರಿಂದ ರಾಧಾಗುಪ್ತ ಮಂತ್ರಿಯ ಮೇಲೆ ರಾಜಮಾತೆಯು ಸುರಿಸುತ್ತಲಿದ್ದ ಪುಷ್ಪವೃಷ್ಟಿಯು ಅಷ್ಟಕ್ಕೆ ನಿಂತು, ಒಬ್ಬರ ಹಿಂದೊಬ್ಬರಂತೆ ಎಡೆಬಿಡದೆ ಬೌದ್ಧಭಿಕ್ಷುಗಳು ಸಭಾಸ್ಥಾನವನ್ನು ಪ್ರವೇಶಿಸತೊಡಗಿದರು. ಅವರ ಆವುಗೆಗಳ ಖಣಖಟಲೆಂಬ ಧ್ವನಿ ಪ್ರತಿಧ್ವನಿಗಳಿಂದ ಸಭಾಸ್ಥಾನವು ತುಂಬಿಹೋಯಿತು. ಸರ್ವಾಂಗಕ್ಷೌರವನ್ನು ಮಾಡಿಸಿಕೊಂಡಿದ್ದ ಬೌದ್ಧಭಿಕ್ಷುಗಳೆಲ್ಲರು ಪೀತವಸ್ತ್ರಗಳನ್ನು ಧರಿಸಿ, ಕೈಯಲ್ಲಿ ಕಮಂಡಲುಗಳನ್ನು ಹಿಡಿದಿದ್ದರು. ಸಂಪುಷ್ಪಾಚಾರ್ಯರ ಪ್ರೀತಿಯ ಈ ಶಿಷ್ಯ ಪರಿವಾರವು, ಅರ್ಧತಾಸುಗಳವರೆಗೆ ಸಭಾಸ್ಥಾನವನ್ನು ಪ್ರವೇಶಿಸಿತು. ಶಿಷ್ಯರು ಒಬ್ಬೊಬ್ಬರೇ ಅಶೋಕನ ಬಳಿಗೆ ಹೋಗಿ ''ಭಗವಾನ್ ಅಶೋಕನಿಗೆ ಧರ್ಮವೃದ್ಧಿಯ ಸಲುವಾಗಿ ಯಶಃಪ್ರಾಪ್ತಿಯಾಗಲಿ'' ಎಂದು ಆಶೀರ್ವದಿಸುತ್ತ ಸಭಾಮಂಟಪದಲ್ಲಿ ಕುಳಿತುಕೊಳ್ಳುತ್ತಿದ್ದರು. ಈ ವಿಧಿಯು ಒಂದೇಸವನೆ ಅರ್ಧ ತಾಸು ನಡೆದು ಮುಗಿದಮೇಲೆ, ಸಂಪುಷ್ಪಾಚಾರ್ಯರು ಕೈಯಲ್ಲಿ ಸುವರ್ಣದಂಡವನ್ನು ಹಿಡಕೊಂಡು, ಭಿಕ್ಷು ಕುಲಪತಿಯ ಅಧಿಕಾರವನ್ನು ವ್ಯಕ್ತಪಡಿಸುತ್ತ ಆಢ್ಯತೆಯಿಂದ ಸಭಾಸ್ಥಾನವನ್ನು ಪ್ರವೇಶಿಸಿದರು. ಬುರುಕೆಯನ್ನು ಹಾಕಿಕೊಂಡಿದ್ದ ಒಬ್ಬ ತರುಣೆಯು ಅವರನ್ನನುಸರಿಸಿ ಸಾಗಿದ್ದಳು. ಸಂಪುಷ್ಪಾಚಾರ್ಯರ, ಹಾಗು ಕೋಮಲಾಂಗಿ ಯಾದ ತರುಣೆಯ ಈ ಯೋಗವನ್ನು ನೋಡಿ, ಎಲ್ಲರೂ ಆಶ್ಚರ್ಯಮಗ್ನರಾದರು. ಈ

ಕೋಮಲಾಂಗಿಯಾದ ಸ್ತ್ರೀಯು ಯಾರು? ಇಲ್ಲಿಗೆ ಈಕೆಯು ಯಾಕೆ ಬಂದಿರುವಳು? ಸಂಪುಷ್ಪಾಚಾರ್ಯರು ಈಕೆಯನ್ನು ಯಾಕೆ ಬೆನ್ನ ಹತ್ತಿಸಿಕೊಂಡಿರುವರು? ಎಂದು ಕೇಳುವ ಧೈರ್ಯವು ಯಾರಿಗೂ ಇದ್ದಂತೆ ತೋರಲಿಲ್ಲ. ಸಂಪುಷ್ಪಾಚಾರ್ಯರು ವ್ಯಾಸಪೀಠದ ಹತ್ತರ ಬಂದಕೂಡಲೆ ಅವರು ಅಶೋಕನ ಮೇಲೆ ಆಶೀರ್ವಚನಗಳ ಮಳೆಸುರಿಸುತ್ತ ತಮ್ಮ ಪೀಠದಲ್ಲಿ ಕುಳಿತುಕೊಳ್ಳುತ್ತಿರಲು, ಹತ್ತರ ಕುಳಿತುಕೊಂಡಿದ್ದ ರಾಧಾಗುಪ್ತ ಮಂತ್ರಿಯು ಅವರ ಕಣ್ಣಿಗೆ ಬಿದ್ದನು. ಕೂಡಲೆ ಆಚಾರ್ಯರು ಪೀಠದಿಂದ ಕೆಳಗೆ ದುಮುಕಿ ಆಶ್ಚರ್ಯದಿಂದ ಅಶೋಕನನ್ನು ಕುರಿತು—''ಭಗವನ್, ನಮ್ಮಂಥ ಸಂಸಾರ ವಿರಕ್ತರನ್ನು ಇಂಥ ಸಬ್ ಗೋಲಂಕಾರದ ಸಭೆಗೆ ಕರಿಸದಿರುವದು ನೆಟ್ಟಗೆ. ಅಧರ್ಮದಿಂದ ನಡೆಯುವ ನರಪಶುಗಳ ನೆರಳಿನ ಮೈಲಿಗೆ ಸಹ ಆಗಬಾರದೆಂದು, ಮನುಷ್ಯ ವಸತಿಯನ್ನು ಬಿಟ್ಟು ದೂರ ಅರಣ್ಯದಲ್ಲಿ ನಾವು ವಾಸಿಸುತ್ತೇವೆ; ಆದರೆ ನೀವು ಇಂಥ ಧರ್ಮಹೀನ ಮನುಷ್ಯರ ಸಂಸರ್ಗಮಾಡುವದಕ್ಕಾಗಿ ಮೋಸ ಮಾಡುತ್ತೀರಿ'' ಎಂದು ನುಡಿದರು. ಅವರ ಮಾತಿಗೆ ಅಶೋಕನು ಉತ್ತರ ಕೊಡುವದರೊಳಗೆ ರಾಜಮಾತೆಯು ಸಂಪುಷ್ಪಾಚಾರ್ಯರನ್ನು ಕುರಿತು—ಗುರುಮಹಾರಾಜರೇ, ನಮ್ಮಿಂದ ಅಪರಾಧವಾದದ್ದೇನು, ಅಪ್ಪಣೆ ಕೊಡಿಸಬೇಕು; ಅಂದರೆ ಕೂಡಲೆ ಅದರ ಪ್ರತೀಕಾರ ಮಾಡುವೆವು.

ಸಂಪುಷ್ಪಾಚಾರ್ಯ—ರಾಜಮಾತೆಯೇ, ಭಗವಾನ್ ಬುದ್ಧದೇವನು ತಿರಸ್ಕರಿಸಿದ್ದ ವೈದಿಕಧರ್ಮದ ಅಧ್ಯಯನ ಮಾಡುವ, ನಮ್ಮ ನಿರ್ವಾಣಪ್ರಾಪ್ತಿಯ ಮಾರ್ಗವನ್ನು ಹಳಿಯುವ, ಪಾಟಲಿಪುತ್ರ ರಾಜಧಾನಿಗೆ ಲಾಂಛನನಾದ, ಮಗಧದೇಶದ ರಾಜಸಿಂಹಾಸನಕ್ಕೆ ಹತ್ತಿದ ಹುಳದಂತೆ ಇದ್ದ, ನಮ್ಮ ಧರ್ಮಪ್ರಸಾರಕ್ಕೆ ಅಡ್ಡಾಗಿದ್ದ ರಾಹುವೆನಿಸುವ ಈ ನಿಮ್ಮ ಮಂತ್ರಿ ರಾಧಾಗುಪ್ತನು ಮಗ್ಗಲಲ್ಲಿ ನನ್ನ ಭುಜಕ್ಕೆ ಭುಜವನ್ನು ಆನಿಸಿ ಕುಳಿತುಕೊಂಡಿರಲು, ನಾನು ಪೀಠದ ಮೇಲೆ ಕುಳಿತುಕೊಳ್ಳುವದು ಹೇಗೆ?

ರಾಧಾಗುಪ್ತ (ಅಶೋಕನು ಬೇಡವೆನ್ನುತ್ತಿರಲು,)—ಗುರುಮಹಾರಾಜರೇ, ತಮ್ಮಂಥ ಷಡ್ರಿಪುಗಳ ದಮನ ಮಾಡಿದವರಿಗೆ ಇಂಥ ವ್ಯರ್ಥವಾದ ಕೋಪವು ಒಪ್ಪುವದಿಲ್ಲ.

ಬುದ್ಧಿಮತಿ(ಕರ್ಕಶಸ್ವರದಿಂದ)—ಮಂತ್ರಿಗಳೇ, ಬೌದ್ಧರ ಸಭೆಗೆ ಬಂದು ಬುದ್ಧದೇವನ ಪ್ರತಿ ಅವತಾರವೆನಿಸುವ ಸಂಪುಷ್ಪಾಚಾರ್ಯರನ್ನು ಹಳಿಯುವ ನೀವು, ಜೀವವನ್ನು ತೃಣಕ್ಕೆ ಸರಿಮಾಡಿಕೊಂಡಂತೆ ಕಾಣುತ್ತದೆ.

ಸಂಪುಷ್ಪಾಚಾರ್ಯ—ನಿಮ್ಮಲ್ಲಿ ಜಾಣತನವೂ, ರಾಜಕಾರಣದ ಪರಿಚಯವೂ ಸ್ವಲ್ಪ ವಾದರೂ ಇರುತ್ತಿದ್ದರೆ, ಈಗಲೇ ನೀವು ಪೀಠದಿಂದಿಳಿದು ಸಭಾಮಂಟಪದಲ್ಲಿ ಕುಳಿತುಕೊಳ್ಳಿರಿ.

ಅಶೋಕ (ಜಗಳವನ್ನು ನಿಲ್ಲಿಸುವದಕ್ಕಾಗಿ)—ಗುರುವರ್ಯರೇ, ಹೀಗೆ ಅನ್ಯಾಯವನ್ನು ಮಾಡಬೇಡಿರಿ, ಕಕ್ಕಂದಿರ ಮಾನಹಾನಿಯನ್ನು ಮಾಡಬೇಡಿರಿ. ಅವರು ನಿಜವಾಗಿ ಈ ಸ್ಥಳದಲ್ಲಿ ಕುಳಿತುಕೊಳ್ಳಲಿಕ್ಕೆ ಯೋಗ್ಯರಾದ್ದರಿಂದ, ನಾನೇ ಅವರನ್ನು ಕುಳ್ಳಿರಿಸಿದ್ದೇನೆ.

ಬುದ್ಧಿಮತಿ—ಅಶೋಕಾ, ನಿನಗೆ ಇದೆಲ್ಲಿಯ ಭ್ರಮವು ಉತ್ಪನ್ನವಾಯಿತು? ಪ್ರತ್ಯಕ್ಷ

ಬುದ್ಧಾವತಾರವಾದ ಗುರುಮಹಾರಾಜರು, ಪೀಠವನ್ನು ಬಿಟ್ಟು ಇಳಿಯುವದಕ್ಕಾಗಿ ರಾಧಾಗುಪ್ತನನ್ನು ಆಜ್ಞಾಪಿಸುತ್ತಿರಲು, ನೀನು ಗುರುಗಳ ಆಜ್ಞೆಗೆ ವಿರುದ್ಧವಾಗಿ ಮಂತ್ರಿಯನ್ನು ಮೇಲುಗಟ್ಟಿ ಮಾತಾಡುತ್ತೀಯಾ?

ಅಶೋಕ—ಅವ್ವಾ, ಭಿಕ್ಷುಗಳು ಇಂಥ ದುರಭಿಮಾನದ ಅಪ್ಪಣೆಯನ್ನು ಎಂದೂ ಮಾಡಲಾರರು. ಸಮತ್ವ–ಬಂಧುಪ್ರೀತಿ–ಭೂತದಯೆ ಮೊದಲಾದ ಉಚ್ಚತಮ ತತ್ವಗಳನ್ನು ಪ್ರತಿಪಾದಿಸುವ ಯಾವ ನಿಸ್ಸೀಮ ಬುದ್ಧ ಭಕ್ತನಿಗೇ ಆಗಲಿ, ಕಕ್ಕಂದಿರಂಥ ಪವಿತ್ರಾಚರಣೆಯ ಮನುಷ್ಯರು ತಿರಸ್ಕರಣೀಯರಾಗಿ ತೋರಲಿಕ್ಕಿಲ್ಲ. ಸರ್ವತ್ರ ಸಮದರ್ಶಿಗಳಾದ ನಮ್ಮಂಥ ಬೌದ್ಧರಿಗೆ, ದುರ್ವ್ಯಸನದ ಹರಿಗೆಬಿದ್ದ ದುರ್ಗಂಧಯುಕ್ತ ಶರೀರದ ಮನುಷ್ಯನೂ ಅತ್ಯಂತ ಪ್ರಿಯನಾಗಿರುವನು. ಅಂದಬಳಿಕ ಕಕ್ಕನಂಥ ಸತ್ವಶೀಲ ಮನುಷ್ಯನ ಮಾತೇಕೆ?

ಸಂಪುಷ್ಪಾಚಾರ್ಯ—(ಅಧಿಕಾರಯುಕ್ತ ವಾಣಿಯಿಂದ) ಭಗವಾನ್, ನಿನಗಿಂತ ನಾವು ಬಹಳ ವರ್ಷ ಪೃಥ್ವಿಯಲ್ಲಿ ಬಾಳಿರುತ್ತೇವೆ. ಬೌದ್ಧಧರ್ಮದ ತತ್ವಗಳು ನಿನಗಿಂತ ನಮಗೆ ಚನ್ನಾಗಿ ತಿಳಿಯುತ್ತವೆ. ಅವನ್ನು ನಿನ್ನ ಬಳಿಯಲ್ಲಿ ನಾವು ಕಲಿಯಬೇಕೆನ್ನುವಹಾಗಿಲ್ಲ. ಧರ್ಮಗುರುವಿನ ಆಜ್ಞೆಯನ್ನು ಪಾಲಿಸುವ ಮನಸ್ಸು ನಿನಗಿದ್ದರೆ, ರಾಧಾಗುಪ್ತನನ್ನು ಪೀಠದಿಂದ ಇಳಿಸಿ ಸಭಾಮಂಟಪದಲ್ಲಿ ಕುಳ್ಳಿರಿಸು. ಬೌದ್ಧ ಸಮಾಜದ ಅಗ್ರಸ್ಥಾನದಲ್ಲಿ ಕುಳಿತುಕೊಳ್ಳುವ ಮಾನವು ನಮ್ಮಂಥ ಸನ್ಯಾಸಿಗಳಿಗೆ, ಅಥವಾ ಆ ಸನ್ಯಾಸಿಗಳ ಮತದಂತೆ ರಾಜ್ಯಕಾರಭಾರವನ್ನು ಸಾಗಿಸುವ ನಿಮ್ಮಂಥ ರಾಜಕುಲೋತ್ಪನ್ನರಿಗೆ ಮಾತ್ರ ಇರುತ್ತದೆಂಬ ಮಾತು ಈದಿನ ರಾಧಾಗುಪ್ತನಿಗೆ ಚನ್ನಾಗಿ ಗೊತ್ತಾಗಲಿ.

ಬುದ್ಧಿಮತಿ (ಸಂತಾಪದಿಂದ)—ರಾಧಾಗುಪ್ತ ಗುರುಗಳ ಆಜ್ಞೆಯು ನಿಮಗೆ ಕೇಳುವದಿಲ್ಲವೆ? ತಟ್ಟನೆ ಕೆಳಗಿಳಿದು ಸಭಾಮಂಟಪದಲ್ಲಿ ಕುಳಿತುಕೊಳ್ಳಿರಿ.

ರಾಧಾಗುಪ್ತ(ಸಮಾಧಾನದಿಂದ)—ಮಾತೃಶ್ರೀ, ಮಗಧದ ರಾಜ್ಯವು ಬೌದ್ಧಭಿಕ್ಷುಗಳ ಸ್ವಾಧೀನವಾಗುವವರೆಗೆ, ಮಗಧ ದೇಶದ ರಾಜಮುಕುಟವು ಮೌರ್ಯವಂಶದ ಶಿರಸ್ಸಿನಿಂದ ಅಪಹರಿಸಲ್ಪಟ್ಟದ್ದಾಗಿ ಬೌದ್ಧಭಿಕ್ಷುಗಳ ಮುಂಡನಮಾಡಿದ ಶಿರಸ್ಸಿನಲ್ಲಿ ಸ್ಥಾಪಿತವಾಗುವವರೆಗೆ, ಮಗಧರಾಜ್ಯದ ಸಿಂಹಾಸನವು ಬೌದ್ಧಭಿಕ್ಷುಗಳ ಆವುಗೆಗಳಿಂದ ಮುದ್ರಿತವಾಗುವವರೆಗೆ ರಾಧಾಗುಪ್ತನು ಯಾವ ಬೌದ್ಧ ಭಿಕ್ಷುವಿನ ಆಜ್ಞೆಯ ಮುಂದೆಯೂ ಶಿರಸ್ಸನ್ನು ಬಾಗಿಸಲಾರನು. ಪ್ರಭುಗಳವರ ಅಪ್ಪಣೆಯಾಗುವವರೆಗೆ ಪೀಠದಿಂದಿಳಿಯುವ ಕಾರಣವಿಲ್ಲೆಂದು ನನಗೆ ತೋರುತ್ತದೆ.

ಈ ಮೇರೆಗೆ ರಾಧಾಗುಪ್ತನು ನುಡಿಯಲು, ಸಭಾಮಂಟಪದೊಳಗಿನ ಭಿಕ್ಷುಗಳ ಹಿಂಡು "ರಾಧಾಗುಪ್ತನನ್ನು ಕೆಳಗಿಳಿಸಿರಿ, ರಾಧಾಗುಪ್ತನನ್ನು ಕೆಳಗಿಳಿಸಿರಿ" ಎಂದು ಗದ್ದಲ ಮಾಡಹತ್ತಿತ್ತು. ನಾಲ್ಕೈ ಜನ ಭಿಕ್ಷುಗಳು ರಾಧಾಗುಪ್ತನನ್ನು ಒತ್ತಾಯದಿಂದ ಕೆಳಗಿಳಿಸುವದಕ್ಕಾಗಿ ಮುಂದುವರಿದರು. ಆಗ ಅಶೋಕನು ಸಿಟ್ಟಿನಿಂದ—ಎಚ್ಚರಿಕೆ! ಮುಂದಕ್ಕೆ ಒಂದು ಹೆಜ್ಜೆಯನ್ನಿಟ್ಟರೆ ಪರಿಣಾಮವಾಗಲಿಕ್ಕಿಲ್ಲ. ನನ್ನ ಆಜ್ಞೆಯಂತೆ ಪೀಠದಲ್ಲಿ ಕುಳಿತುಕೊಂಡಿರುವ ಕಕ್ಕಂದಿರು ಕೆಳಗಿಳಿಯಲಾರರು. ಆಚಾರ್ಯಮಹಾರಾಜರೇ, ಕಕ್ಕಂದಿರೊಡನೆ ವ್ಯಾಸಪೀಠದಲ್ಲಿ ಕುಳಿತು

ಕೊಳ್ಳುವ ಇಚ್ಛೆಯು ನಿಮಗಿರದಿದ್ದರೆ, ನಿಮ್ಮ ಸಲುವಾಗಿ ಬೇರೆಯೊಂದು ಉಚ್ಚಪೀಠವನ್ನು ಸಿದ್ಧಪಡಿಸುವೆನು, ಕುಳಿತುಕೊಳ್ಳಬೇಕು. ಇನ್ನುಮೇಲೆ ಅಸಭ್ಯತನದ ಗದ್ದಲವನ್ನು ನಿಲ್ಲಿಸಲಿಕ್ಕೆ ನಾನು ಆಜ್ಞಾಪಿಸುತ್ತೇನೆ, ಅನ್ನಲು, ಇನ್ನು ಹೆಚ್ಚು ಬಿಗಿಹಿಡಿದರೆ ಪರಿಣಾಮವಾಗದೆಂದು ತಿಳಿದು, ಸಂಪುಷ್ಪಾಚಾರ್ಯರು ತಮಗಾಗಿ ಸಿದ್ಧಪಡಿಸಿದ ಉಚ್ಚಾಸನದ ಮೇಲೆ ಕುಳಿತುಕೊಂಡರು. ಸಭಾಮಂಟಪವೆಲ್ಲ ನಿಶ್ಶಬ್ದವಾಯಿತು. ಆಗ ಅಶೋಕನು ಆಚಾರ್ಯರನ್ನು ಕುರಿತು—ಸ್ವಾಮೀ, ಆಚಾರ್ಯರೇ, ತಮ್ಮ ಸಂಗಡ ಬಂದಿರುವ ಈ ಭಿಕ್ಷುಮಂಡಲವೂ, ಈ ತರುಣ ಸ್ತ್ರೀಯೂ ವಿಶ್ವಾಸಕ್ಕೆ ಪಾತ್ರರಿರುವರಲ್ಲವೇ? ನಾವು ಇಲ್ಲಿ ಒಂದು ಮಹತ್ವದ ರಾಜಕಾರಣವನ್ನು ಕುರಿತು ಆಲೋಚಿಸಬೇಕಾಗಿದೆ, ಆ ಸಂಗತಿಯು ಅತ್ಯಂತ ಗುಪ್ತವಾಗಿರಬೇಕೆಂದು ನಾನು ಇಚ್ಛಿಸುವೆನು. ಎಂದನು. ಅದಕ್ಕೆ ಸಂಪುಷ್ಪಾಚಾರ್ಯರು ಸ್ವಲ್ಪ ತಲೆಯಲ್ಲಾಡಿಸಿ—ಏನೂ ಚಿಂತೆಯಿಲ್ಲ, ಅವಶ್ಯವಾಗಿ ಆಲೋಚಿಸಬಹುದು, ಎಂದು ಹೇಳಲು, ಅಶೋಕನು ರಾಜಮಾತೆಯನ್ನೂ, ಆಚಾರ್ಯರನ್ನೂ ಕುರಿತು—ಪೂಜ್ಯರೇ, ಕಲಿಂಗದೇಶವನ್ನು ಗೆದ್ದು, ಅಲ್ಲಿಯ ಪ್ರಜೆಗಳನ್ನು ಬೌದ್ಧರನ್ನು ಮಾಡಬೇಕೆಂದು ಆ ದೇಶದೊಡನೆ ಯುದ್ಧವನ್ನು ಆರಂಭಿಸಿ, ಮೂರುವರ್ಷಗಳಾದವು. ಮೊದಲು ಸುತ್ತುಮುತ್ತಲಿನ ಸಣ್ಣ ಸಣ್ಣ ರಾಜ್ಯಗಳನ್ನು ಗೆದ್ದೆವು. ಕಲಿಂಗರಾಜನು ನಮ್ಮೊಡನೆ ಶರೀರ ಸಂಬಂಧ ಮಾಡಲು ಒಪ್ಪಿಕೊಳ್ಳದ್ದರಿಂದ, ಇಂದ್ರಪುರವನ್ನು ಮುತ್ತಿ ಈವೊತ್ತಿಗೆ ನಾಲ್ಕು ತಿಂಗಳಾಯಿತು. ಇಂದ್ರಪುರವೊಂದು ಸ್ವಾಧೀನವಾದರೆ ದಿಗ್ವಿಜಯವು ಮುಗಿದಂತಾಗುವದು; ಆದರೆ ಈ ಯುದ್ಧದಲ್ಲಿ ನಮಗೆ ಜಯಪ್ರಾಪ್ತಿಯಾಗುವ ಲಕ್ಷಣವು ತೋರುವದಿಲ್ಲ. ಶತ್ರುಗಳ ಹೊಡತದಿಂದಲೂ, ರೋಗಬಾಧೆಯಿಂದಲೂ ನಮ್ಮ ಸೈನ್ಯದ ಸಂಹಾರವು ಮಿತಿಮೀರಿ ಆಯಿತು. ಮುತ್ತಿಗೆ ಹಾಕುವಾಗ ಇದ್ದ ಸೈನ್ಯದ ಕಾಲುಪಾಲು ಸೈನ್ಯವು ಈಗ ಉಳಿದಿರುವದಿಲ್ಲ. ಈಗ ಉಳಿದಿರುವ ಸೈನ್ಯವೂ ಮುಖ್ಯವಾಗಿ ರೋಗಬಾಧೆಯಿಂದ ಸ್ವಲ್ಪ ದಿನಗಳಲ್ಲಿ ನಾಶಹೊಂದಬಹುದಾಗಿದೆ; ಆದ್ದರಿಂದ ಇನ್ನು ಮುಂದೆ ಯುದ್ಧವನ್ನು ಸಾಗಿಸಬೇಕೋ, ಒಡಂಬಡಿಕೆಯನ್ನು ಮಾಡಿಕೊಂಡು ತಿರುಗಿ ಪಾಟಲೀಪುತ್ರಕ್ಕೆ ಹೋಗಬೇಕೋ ಎಂದು ಕೇಳುವದಕ್ಕಾಗಿ ನಿಮ್ಮನ್ನು ಕರೆಯಿಸಿರುತ್ತದೆ. ಎಂದು ನುಡಿದು ರಾಜಮಾತೆಯ ಹಾಗು ಸಂಪುಷ್ಪಾಚಾರ್ಯರ ಮುಖದಿಂದ ಏನು ಉತ್ತರ ಬರುತ್ತದೆಂಬದರ ಹಾದಿಯನ್ನು ನೋಡುತ್ತ ಕುಳಿತುಕೊಂಡನು. ಆಗ

ಬುದ್ಧಿಮತಿ—ಶತ್ರುಗಳ ವರ್ಚಸ್ಸನ್ನು ಒಪ್ಪಿಕೊಂಡು ಅವರ ಅಪ್ಪಣೆಗೆ ತಲೆಹಾಕುವ ಅಪಮಾನದ ಪ್ರಸಂಗವು ಬೌದ್ಧ ಸಾಮ್ರಾಟನಿಗೆ ಇನ್ನೂ ಬಂದಿರುವದಿಲ್ಲ.

ಸಂಪುಷ್ಪಾಚಾರ್ಯ—ಧರ್ಮಪ್ರಸಾರದ ಸಲುವಾಗಿ ಮಾಡುವ ಯುದ್ಧಗಳಲ್ಲಿ ಬೌದ್ಧ ಭೂಪತಿಗೆ ಇಂದಿನವರೆಗೆ ಅಪಯಶಸ್ಸು ಬಂದಿರುವದಿಲ್ಲ.

ಅಶೋಕ—ರಕ್ತಪಾತಮಾಡಿ ಒತ್ತಾಯದಿಂದ ಧರ್ಮವನ್ನು ಹಬ್ಬಿಸುವದು ಬುದ್ಧದೇವನಿಗೆ ಸಮ್ಮತವಲ್ಲ, ಬ್ರಾಹ್ಮಣರ ಯಜ್ಞಯಾಗಾದಿಗಳಲ್ಲಿ ಆಗುವ ಪ್ರಾಣಹಿಂಸೆಯನ್ನು ನೋಡಿ ಕನಿಕರಪಟ್ಟು ಬೌದ್ಧಧರ್ಮವನ್ನು ಸ್ಥಾಪಿಸಿದ ಆ ತಥಾಗತನು, ಜನರನ್ನು ಹಿಂಸೆ ಪಡಿಸಿ ಧರ್ಮವನ್ನು

ಹಬ್ಬಿಸಲು ಆಜ್ಞಾಪಿಸಬಹುದೋ?

ರಾಜಮಾತೆ—(ಸಿಟ್ಟಿನಿಂದ) ಹೀಗೆ ಧರ್ಮದ ನೆವದಿಂದ ಯುದ್ಧವನ್ನು ನಿಲ್ಲಿಸಿ ಒಡಂಬಡಿಕೆ ಮಾಡಿಕೊಳ್ಳುವದು ನಿನ್ನಂಥ ಶೂರನಿಗೆ ಒಪ್ಪುವದಿಲ್ಲ. ಮೃಗೇಂದ್ರನು ಮಾಡಿದ ಅಪಮಾನವನ್ನು ನೀನು ಮರೆತೆಯೋ? ಸೇಡು ತೀರಿಸಿಕೊಳ್ಳುವ ವಿಷಯವಲ್ಲಿ ಮೌರ್ಯಕುಲವು ಪ್ರಸಿದ್ಧವಾದದ್ದು. ಕ್ಷುಲ್ಲಕ ತಪ್ಪಿಗಾಗಿ ನಂದಕುಲವನ್ನೇ ನಾಶಮಾಡಿ ನಿನ್ನ ಅಜ್ಜನಾದ ಚಂದ್ರಗುಪ್ತನನ್ನು ಮಗಧ ರಾಜ್ಯದ ಪಟ್ಟಕ್ಕೆ ಕುಳ್ಳಿರಿಸಿದ ಚಾಣಕ್ಯನ ನೀತಿಯನ್ನು, ಮೌರ್ಯರು ಮೂರೇ ತಲೆಗಳಲ್ಲಿ ಮರೆಯುವದು ಅಸಂಭವವಾಗಿರುವದು. ಅಶೋಕರಾಜನೇ, ಯುದ್ಧವನ್ನು ಮುಂದಕ್ಕೆ ಸಾಗಿಸಲೇಬೇಕು.

ಸಂಪುಷ್ಪಾಚಾರ್ಯ—ಪ್ರಭುಗಳು ಯುದ್ಧವನ್ನು ನಡಿಸಲೇಬೇಕು.

ಅಶೋಕ—ಯುದ್ಧದ ವಿಷಯವಾಗಿ ಮತವನ್ನು ಕೇಳುವದಕ್ಕಾಗಿ ನಿಮ್ಮನ್ನು ಕರೆಸಿರುವೆ ನಲ್ಲದೆ, ನಿಮ್ಮ ಅಪ್ಪಣೆಯನ್ನು ಕೇಳುವದಕ್ಕಾಗಿ ನಾನು ಕರೆಸಿರುವದಿಲ್ಲ. ರಾಜಕಾರಣಕ್ಕೆ ಸಂಬಂಧಿಸಿದ ನಿಮ್ಮ ಅಯೋಗ್ಯ ಅಪ್ಪಣೆಯನ್ನಂತು ನಾನು ಸರ್ವಥಾ ನಡಿಸಲಾರೆನು. ಮೃಗೇಂದ್ರನು ಅಪರಾಧಿಯಲ್ಲ. ನಮ್ಮ ಧರ್ಮಪ್ರಸಾರಕ್ಕೆ ಆತನು ಪ್ರತಿಬಂಧ ಮಾಡಿರುವದಿಲ್ಲ. ತನ್ನ ಮಗಳನ್ನು ತನ್ನ ಮನಸ್ಸಿಗೆ ಬಂದವರಿಗೆ ಕೊಡಲು ಆತನು ಸ್ವತಂತ್ರನಾದದ್ದರಿಂದ, ನಮ್ಮೊಡನೆ ಶರೀರ ಸಂಬಂಧವನ್ನು ಮಾಡಲಿಕ್ಕೆ ನಿರಾಕರಿಸುವದರಿಂದ ಆತನು ನಮ್ಮ ಅಪಮಾನಮಾಡಿದ ಹಾಗೂ ಆಗುವದಿಲ್ಲ.

ಬುದ್ಧಿಮತಿ—ನಿನ್ನ ಅಪಮಾನವಾಗದಿದ್ದರೆ, ಹಾಗೂ ಯುದ್ಧದಿಂದ ಧರ್ಮಪ್ರಸಾರ ಮಾಡುವದು ಅಯೋಗ್ಯವಾಗಿದ್ದರೆ ನೀನು ಮೃಗೇಂದ್ರನೊಡನೆ ಯುದ್ಧವನ್ನು ಯಾಕೆ ಆರಂಭಿಸಿದೆ?

ಅಶೋಕ—ಯುದ್ಧವನ್ನು ಆರಂಭಿಸುವಾಗ ಅಶೋಕನು ಅಂಧನಾಗಿದ್ದನು. ಆಗ ಆತನು ಸ್ವತಂತ್ರ ವಿಚಾರದಿಂದ ನಡೆಯುತ್ತಿದ್ದಿಲ್ಲ. ರಾಜಮಾತೆಯ ವಿಚಾರದಂತೆ, ಉಪಾಧ್ಯಾಪಿಗಳಾದ ಭಿಕ್ಷುಗಳ ವಿಚಾರದಂತೆ, ಸಂಪುಷ್ಪಾಚಾರ್ಯರ ವಿಚಾರದಂತೆ ನಡೆಯುತ್ತಿದ್ದನು. ಆದ್ದರಿಂದ ಬುದ್ಧದೇವನ ಅತ್ಯಂತ ಪವಿತ್ರವಾದ ಧರ್ಮತತ್ವಗಳಿಗೆ ಕುಂದನ್ನುಂಟು ಮಾಡುವಂಥ, ಮನುಷ್ಯತ್ವಕ್ಕೆ ಲಾಂಛನಾಸ್ಪದವಾದಂಥ, ಪಾಷಾಣವೂ ಕರಗಿ ನೀರಾಗುವಂಥ ಕ್ರೂರಕೃತ್ಯಗಳು ಆತನಿಂದ ಘಟಿಸಿದವು; ಅದಕ್ಕಾಗಿ ಆತನಿಗೆ ಈಗ ಪೂರ್ಣ ಪಶ್ಚಾತ್ತಾಪವಾಗಿದೆ. ಮಾತೃಶ್ರೀ, ನಿನ್ನ ಮಹತ್ವಾಕಾಂಕ್ಷೆಯ ಬಲೆಗೆಬಿದ್ದು, ಆಚಾರ್ಯರೇ, ಸ್ವತತ್ವವಿಘಾತಕಗಳಾದ ನಿಮ್ಮ ಮತಗಳ ಮೇಲೆ ಅಂಧಶ್ರದ್ಧೆಯನ್ನಿಟ್ಟು, ನಿಜವಾದ ಬೌದ್ಧರಿಗೆ ಲಾಂಛನಾಸ್ಪದವಾದ ಕ್ರೂರಕೃತ್ಯಗಳನ್ನು ನಾನು ಮಾಡಿದೆನು. ಈಗ ನಾನು ಜಾಗರೂಕನಾಗಿದ್ದೇನೆ. ಧರ್ಮಪ್ರಸಾರದ ಸಲುವಾಗಿ ಇಂದಿನಿಂದ ನನ್ನ ಖಡ್ಗವು ಒರೆಯಿಂದ ಹೊರಬೀಳದು. ಇದು ನನ್ನ ಪೂರ್ಣ ನಿಶ್ಚಯವು. ನಾಳಿಗೇ ಮೃಗೇಂದ್ರನೊಡನೆ ಒಡಂಬಡಿಕೆಯನ್ನು ಮಾಡಿ, ಪಾಟಲೀಪುತ್ರಕ್ಕೆ ಹೋಗುವೆನು.

ಅಶೋಕನ ಇಂದಿನ ವಿಚಾರಗಳನ್ನೂ, ಆತನ ಸ್ವಾತಂತ್ರ್ಯದ ವಿಲಕ್ಷಣ ತೇಜಸ್ಸನ್ನೂ

ನೋಡಿ ಎಲ್ಲರೂ ದಂಗಾಗಿ ಕುಳಿತುಕೊಂಡರು. ಎಷ್ಟು ಹೊತ್ತಾದರೂ ಒಬ್ಬರ ಮುಖದಿಂದಲೂ ಮಾತುಗಳು ಹೊರಡದಾದವು. ಆಗ ಅಶೋಕ—ನಿಮ್ಮೆಲ್ಲರ ಮೌನದಿಂದ ಒಡಂಬಡಿಕೆಯ ವಿಚಾರಕ್ಕೆ ನಿಮ್ಮ ಒಪ್ಪಿಗೆಯಿರುವದೆಂದು ತಿಳಿಯುವೆನು, ಎಂದು ನುಡಿಯಲು, ಸಂಪುಷ್ಪಾಚಾರ್ಯರು—

ಸಂಪುಷ್ಪಾಚಾರ್ಯ—ಭಗವನ್, ಏನೇ ಆಗಲಿ, ಈವರೆಗೆ ಯುದ್ಧ ಮಾಡಿದಂತೆ ಇನ್ನು ಎರಡು ದಿನ ಯುದ್ಧಮಾಡಿರಿ. ಅಷ್ಟರಲ್ಲಿ ತಮಗೆ ಯಶಸ್ಸು ದೊರೆಯದಿದ್ದರೆ ಒಡಂಬಡಿಕೆಯನ್ನು ಮಾಡಿಕೊಳ್ಳಬಹುದು.

ಅಶೋಕ—ಧರ್ಮಪ್ರಸಾರಕ್ಕಾಗಿ ಯುದ್ಧಮಾಡಲಿಕ್ಕಿಲ್ಲೆಂದು ನಾನು ಆಡಿದ ನಿರ್ಧಾರದ ಮಾತಿನಲ್ಲಿ ನಿಮ್ಮ ವಿಶ್ವಾಸವಿಲ್ಲದಿದ್ದರೆ, ಬುದ್ಧದೇವನ ನಿರ್ಮಲಕೀರ್ತಿಯನ್ನು ಸ್ಮರಿಸಿ ಪ್ರತಿಜ್ಞೆಮಾಡಿ ಹೇಳುತ್ತೇನೆ, ಕೇಳಿರಿ. ಧರ್ಮ ಪ್ರಸಾರಕ್ಕಾಗಿ ಇನ್ನು ಎಂದೂ ಅಶೋಕನು ಯುದ್ಧವನ್ನು ಮಾಡಲಾರನು.

ಸಂಪುಷ್ಪಾಚಾರ್ಯ(ದೈನ್ಯದಿಂದ)—ಭಗವನ್, ಎರಡೇ ದಿನಗಳ ಅವಕಾಶವನ್ನು ಬೇಡಿಕೊಳ್ಳುತ್ತೇನೆ.

ರಾಧಾಗುಪ್ತ—ಪ್ರಭುಗಳೇ, ಆಚಾರ್ಯರ ಮಾತನ್ನು ತಾವು ನಡಿಸಬೇಕು. ತಾವು ಯುದ್ಧವನ್ನು ಮಾಡದಿದ್ದರೆ, ಆಚಾರ್ಯರು ಸೇನಾಪತಿಯ ಅಧಿಕಾರವನ್ನು ಬೇರೆ ಯಾರಿಗಾದರೂ ಕೊಡುವರು, ಇಲ್ಲವೆ ಸ್ವತಃ ತಾವಾದರೂ ಸ್ವೀಕರಿಸುವರು. ಭಿಕ್ಷುಗಳಿಗೆ ಒಮ್ಮೆ ಯುದ್ಧದ ಶಿಕ್ಷಣವು ದೊರೆತರೆ ನೆಟ್ಟಗಾಗುವದು.

ಅಶೋಕ—ನಾಳಿನ ಬೆಳಗಿನಿಂದ ನಾಡದು ಸಾಯಂಕಾಲದವರೆಗೆ ನನ್ನ ಯಾವತ್ತು ಸೈನ್ಯವು ಸಂಪುಷ್ಪಾಚಾರ್ಯರ ಅಪ್ಪಣೆಯಲ್ಲಿ ನಡಕೊಳ್ಳುವದು. ನಾಡದು ಸೂರ್ಯಾಸ್ತಕ್ಕೆ ಯುದ್ಧವು ಮುಗಿಯಲೇ ಬೇಕು.

ಸಂಪುಷ್ಪಾಚಾರ್ಯ—ಬರೇ ಮುಗಿಯುವದೇ ಏಕೆ, ಇಂದ್ರಪುರದ ಕೋಟೆಯ ಮೇಲೆ ಪಾಟಲೀಪುತ್ರದ ಶುಭ್ರಪತಾಕೆಯು ನಟ್ಟು ಯುದ್ಧವು ಮುಗಿಯುವದು.

ಅಶೋಕ—ನಾಲ್ಕು ತಿಂಗಳಲ್ಲಿ ನಮ್ಮಿಂದಾಗದ ಕಾರ್ಯವನ್ನು, ಎರಡು ದಿನಗಳಲ್ಲಿ ಮಾಡುವೆನೆಂದು ಹೇಳುವ ಮಾತು ಶೂರರಿಗೆ ಒಪ್ಪುವದಿಲ್ಲ, ನಿಮ್ಮಂಥ ಭಿಕ್ಷುಗಳಿಗೆ ಒಪ್ಪುವದು.

ಸಂಪುಷ್ಪಾಚಾರ್ಯ—ಅಶೋಕನಿಂದ ಮೂರುವರ್ಷ ನಾಲ್ಕು ತಿಂಗಳಲ್ಲಿ ಆಗದ ಕಾರ್ಯವನ್ನೇ ಸಂಪುಷ್ಪಾಚಾರ್ಯನು ಎರಡು ದಿನಗಳಲ್ಲಿ ಮಾಡಿ ತೋರಿಸುವನು. ಬಹಳ ಮಾತಾಡುವದರಲ್ಲಿ ಅರ್ಥವಿಲ್ಲ, ನನ್ನ ಮಾತಿನ ಸತ್ಯತೆಯ ಅನುಭವವು ಪ್ರಭುಗಳಿಗೆ ಆಗಬಹುದು.

ಸಂಪುಷ್ಪಾಚಾರ್ಯರು ಕೈಕೊಂಡಿದ್ದ ಕಾರ್ಯವು ತೀರ ಅಸಂಗತವಾದದ್ದರಿಂದ, ಅವರ ಮಾತು ಉತ್ತರಕೊಡಲಿಕ್ಕೆ ಯೋಗ್ಯವಲ್ಲದಷ್ಟು ಲಘುತ್ವವುಳ್ಳದ್ದೆಂದು ತಿಳಿದು, ಅಶೋಕನು ತಿರುಗಿ ಮಾತಾಡದೆ, ರಾಧಾಗುಪ್ತನ ಕೈಯನ್ನು ಹಿಡಕೊಂಡು ತನ್ನ ಡೇರೆಗೆ ಹೊರಟುಹೋದನು.

ಸ್ತ್ರೀಚಾರಿತ್ರ್ಯ

ಮರುದಿನ ಬೆಳಗಾಯಿತು. ಎಳಿಯಬಿಸಿಲು ಮೃಗೇಂದ್ರನ ಅರಮನೆಯ ಶಿಖರಗಳನ್ನು ಅಲಂಕರಿಸತೊಡಗಿತು. ಮೃಗೇಂದ್ರನ ಸೈನಿಕರು ಬೌದ್ಧ ಸೇನೆಯ ಚಲನವಲನವನ್ನು ನೋಡುವದಕ್ಕಾಗಿ ಇಂದ್ರಪುರದ ಕೋಟೆಯ ಗೋಡೆಯ ಮೇಲೆ ತಿರುಗಹತ್ತಿದರು. ಆದರೆ ಪ್ರತಿನಿತ್ಯದಂತೆ ಸೈನ್ಯದಲ್ಲಿ ಲಕಲಕಿಸುತ್ತಿದ್ದ ಅಶೋಕನ ಸುವರ್ಣಮುಕುಟವು ಕಾಣದಾಯಿತು. ಮತ್ತು ಸೈನಿಕರು ಯುದ್ಧಕ್ಕೆ ಸನ್ನದ್ಧರಾಗದೆ ಸ್ವಸ್ಥವಾಗಿ ಕುಳಿತಿದ್ದರು. ಮಗಧ ದೇಶದ ಶುಭ್ರಯ ಶೋಧ್ವಜವು ಇಂದ್ರಪುರದ ಸಮರಾಂಗಣದಲ್ಲಿ ನರ್ತಿಸದೆ, ಅದು ಇನ್ನೂ ಅಶೋಕನ ಡೇರೆಯ ಹೊರಮಗ್ಗಲಲ್ಲಿ ಒಪ್ಪುತ್ತಿತ್ತು. ಇದನ್ನೆಲ್ಲ ನೋಡಿ ಆಶ್ಚರ್ಯಮಗ್ನನಾದ ಮೃಗೇಂದ್ರನಿಗೆ ಅಶೋಕನ ವಿಚಾರವು ತಿಳಿಯದಾಯಿತು. ಮೆಲ್ಲಮೆಲ್ಲನೆ ನಾಲ್ಕು ಗಳಿಗೆ ಹೊತ್ತು ಏರಿದರೂ ಅಶೋಕನ ಸೈನ್ಯವು ಸ್ಥಳಬಿಟ್ಟು ಕದಲಲಿಲ್ಲ. ಅಶೋಕನು ಯುದ್ಧವನ್ನು ನಿಲ್ಲಿಸಿ ಸೈನ್ಯದೊಡನೆ ತನ್ನ ರಾಜಧಾನಿಗೆ ಹೋಗುವ ವಿಚಾರ ಮಾಡಿರಬಹುದೆಂದು ಮೃಗೇಂದ್ರನು ಮೊದಲು ತರ್ಕಿಸಿದನು; ಆದರೆ ಅಶೋಕನು ಯಶಸ್ಸನ್ನು, ಇಲ್ಲವೆ ಮರಣವನ್ನು ಅಲ್ಲದೆ ಬೇರೊಂದನ್ನು ಆರಿಸಿಕೊಳ್ಳ ನೆಂತಲೂ, ಹಟವಾದಿಗಳಾದ ಬೌದ್ಧರು ಎಂದಿಗೂ ಯುದ್ಧವನ್ನು ನಿಲ್ಲಿಸರೆಂತಲೂ ಆತನ ಮನಸ್ಸಿಗೆ ತೋರಿದ್ದರಿಂದ, ಏನೆಂಬದನ್ನು ನಿಶ್ಚಯಿಸಲು ಆತನು ಅಸಮರ್ಥನಾದನು. ಮಂತ್ರಿಯಾದ ವಿಶಾಖಾನಂದನನ್ನು ಕರೆಸಿಕೊಂಡು ಕೇಳುವವರೆಗೆ ಮನಸ್ಸು ನಿಲ್ಲದ್ದರಿಂದ, ಆತನು ಕುದುರೆಯನ್ನು ಸರಕ್ಕನೆ ತಿರುಗಿಸಿ ವಿದ್ಯುದ್ವೇಗದಿಂದ ಮಂತ್ರಿಯ ಮನೆಗೆ ಹೋದನು. ಬೌದ್ಧರು ತನ್ನ ರಾಜಧಾನಿಗೆ ಮುತ್ತಿಗೆ ಹಾಕಿದಂದಿನಿಂದ, ತನ್ನ ವೃದ್ಧಮಂತ್ರಿಗೆ ಆಯಾಸವಾಗಬಾರದೆಂದು ಮೃಗೇಂದ್ರನು ಮೇಲಿಂದಮೇಲೆ ಮಂತ್ರಿಯ ಮನೆಗೆ ತಾನಾಗಿ ಹೋಗುತ್ತಿದ್ದನು. ಆದ್ದರಿಂದ ಅರಸನು ಈಗ ಆಕಸ್ಮಿಕವಾಗಿ ಬಂದದ್ದಕ್ಕಾಗಿ ಮಂತ್ರಿಯ ಸೇವಕರಿಗೆ ಆಶ್ಚರ್ಯವಾಗಲಿಲ್ಲ. ಅವರಲ್ಲಿ ಒಬ್ಬನು ಕುದುರೆಯನ್ನು ಹಿಡಕೊಂಡು ನಿಂತನು; ಮತ್ತೊಬ್ಬನು ವಿಶಾಖಾನಂದನ ಬಳಿಗೆ ಆತನನ್ನು ಕರಕೊಂಡು ಹೋದನು. ಆಗ ವಿಶಾಖಾನಂದನು ಗುಪ್ತಚಾರರ ಮುಖದಿಂದ ಯುದ್ಧವಾರ್ತೆಯನ್ನು ಕೇಳುತ್ತ ಕುಳಿತುಕೊಂಡಿದ್ದನು. ಆತನು ಮೃಗೇಂದ್ರನನ್ನು ನೋಡಿದ ಕೂಡಲೆ ಸ್ವಲ್ಪ ಎದ್ದುನಿಂತು ನಗೆಮೊಗದ ಸ್ವಾಗತಮಾಡಿದನು. ಆಗ ಮೃಗೇಂದ್ರನು ವಿಶಾಖಾನಂದನನ್ನು ಕುರಿತು ಆತುರದಿಂದ—

ಮೃಗೇಂದ್ರ—ಮಂತ್ರಿವರರೆ, ಇಂದು ಬೌದ್ಧರು ಶಾಂತರಾಗಿರುತ್ತಾರೆ. ಅವರು ತಮ್ಮ ಪಾಳಯದಲ್ಲಿ ಸ್ವಸ್ಥವಾಗಿ ಕುಳಿತುಕೊಂಡಿರುವರು. ಇದಕ್ಕೆ ಕಾರಣವೇನಿರಬಹುದು!

ವಿಶಾಖಾನಂದ—ಪ್ರಭುಗಳೇ, ಈ ಶಾಂತತೆಯ ಲಕ್ಷಣವು ನೆಟ್ಟಗೆ ಕಾಣುವದಿಲ್ಲ. ಅಶೋಕರಾಜನು ಒಡಂಬಡಿಕೆ ಮಾಡಿಕೊಳ್ಳಬೇಕೆನ್ನುತ್ತಾನಂತೆ, ಅದಕ್ಕಾಗಿ ಆತನು ಯುದ್ಧವನ್ನು ನಿಲ್ಲಿಸಿರುವನೆಂದು ಸುದ್ದಿಯು ಬಂದದೆ.

ಮೃಗೇಂದ್ರ—ಏನು! ಅಶೋಕರಾಜನು ಒಡಂಬಡಿಕೆ ಮಾಡಿಕೊಳ್ಳಲು ಒಪ್ಪಿದನೊ!!! ಈ ಆನಂದದ ಸುದ್ದಿಯನ್ನು ಯಾರು ತಂದರು?

ವಿಶಾಖಾನಂದ—ಪ್ರಭುಗಳೇ, ಸ್ವಲ್ಪ ತಡೆಯಬೇಕು. ಈಗಲೆ ಇನಾಮು ಕೊಡಹೋಗ ಬಾರದು. ಈ ಸುದ್ದಿಯನ್ನು ಒಬ್ಬನೇ ಚಾರನು ತಂದಿರದೆ, ಬೇರೆ ಬೇರೆ ವೇಷಗಳನ್ನು ಹಾಕಿಕೊಂಡು ಹೋಗಿದ್ದ ನನ್ನ ಎಂಟು–ಹತ್ತು ಜನ ಚಾರರು ತಂದಿರುವರು.

ಮೃಗೇಂದ್ರ—ಹೀಗಿದ್ದರೆ, ಸುದ್ದಿಯು ಮತ್ತಿಷ್ಟು ವಿಶ್ವಾಸನೀಯವಾಯಿತು, ಎಲ್ಲರೂ ಇನಾಮು ಪಡೆಯಲಿ.

ವಿಶಾಖಾನಂದ—ಆದರೆ ಈ ಸುದ್ದಿಯು ನನಗೆ ವಿಶ್ವಾಸನೀಯವಾಗಿ ತೋರುವದಿಲ್ಲ; ಎಂಟು ಹತ್ತುಜನರು ಒಂದೇ ಸುದ್ದಿಯನ್ನು ಹೇಳಿದ್ದರಿಂದಂತು, ಅದರಲ್ಲಿ ಏನಾದರೂ ಮೋಸವಿರಬೇಕೆಂದು ನಾನು ತರ್ಕಿಸುತ್ತೇನೆ. ಒಡಂಬಡಿಕೆಯನ್ನು ಮಾಡಿಕೊಳ್ಳುವದು ಅಪಮಾನಕರವಾಗಿದ್ದು, ಬೌದ್ಧರು ''ನಾವು ಒಪ್ಪಂದ ಮಾಡಿಕೊಳ್ಳುತ್ತೇವೆ'' ಎಂದು ಆನಂದದಿಂದ ಅನ್ನಹತ್ತಿದ್ದಾರೆ. ಆದ್ದರಿಂದ ಈ ಸುದ್ದಿಯು ಸುಳ್ಳು. ಬೇಗನೆ ನಮ್ಮ ಮೇಲೆ ಭಯಂಕರ ಸಂಕಟವು ಒದಗುವದೆಂದು ನಾನು ತರ್ಕಿಸುತ್ತೇನೆ.

ಮೃಗೇಂದ್ರ—ಮಂತ್ರಿವರ್ಯರೇ, ಸುದ್ದಿಯು ಸುಳ್ಳೆಂದು ಹೇಳುವ ಹಾಗಿಲ್ಲ, ಈವರೆಗೆ ಬೌದ್ಧರ ಅಸಂಖ್ಯ ಸೈನ್ಯವು ನಾಶವಾಗಿರುತ್ತದೆ. ದಿನಾಲು ಸಾವಿರಾರು ಜನರು ಸಾವಿಗೆ ಈಡಾಗುತ್ತಲಿದ್ದಾರೆ. ಇಂಥ ಹೊತ್ತಿನಲ್ಲಿ ಎಲ್ಲರನ್ನು ಮೃತ್ಯುವಿಗೆ ಆಹುತಿ ಕೊಡುವದಕ್ಕಿಂತ, ಸದ್ಯಕ್ಕೆ ಒಡಂಬಡಿಕೆ ಮಾಡಿಕೊಂಡು ಹೋಗುವದೇ ಅಶೋಕನಿಗೆ ಹಿತಕರವಾಗಿರುತ್ತದೆ.

ವಿಶಾಖಾನಂದ—ಕಲಿಂಗಭೂಪತಿಯೇ, ಈವರೆಗೆ ಅಶೋಕನು ಎಂದಾದರೂ ಯುದ್ಧದಲ್ಲಿ ಹಿಂದಕ್ಕೆ ಸರಿದಿರುವನೇ? ವಿಜಯವನ್ನು ಸಂಪಾದಿಸದೆ ಮೌರ್ಯ ಸಾಮ್ರಾಟನು ಎಂದಾದರೂ ವೈರಿಗಳಿಗೆ ಬೆನ್ನು ತೋರಿಸಿರುವನೇ? ಒಡಂಬಡಿಕೆಯ ವಿಚಾರವು ಮಗಧ ಭೂಪತಿಗೆ ಸ್ವಪ್ನದಲ್ಲಿ ಕೂಡ ಎಂದಾದರೂ ಬಂದಿರುವದೇ?

ಮೃಗೇಂದ್ರ(ಅಭಿಮಾನದಿಂದ)—ಕಲಿಂಗ ಭೂಪತಿಯ ಸ್ಥಿತಿಯಾದರೂ ಹಾಗೆಯೇ ಇರುತ್ತದೆ. ಅಶೋಕನು ಈ ಯುದ್ಧದಲ್ಲಿ ಹಿಂದಕ್ಕೆ ಸರಿಯಲೇಬೇಕಾಗುವದು; ಆತನು ಜಯವನ್ನು ಸಂಪಾದಿಸದೆ ನಮಗೆ ಬೆನ್ನು ತೋರಿಸಿ ಪಾಟಲೀಪುತ್ರಕ್ಕೆ ಹೋಗಲೇಬೇಕಾಗುವದು. ಈ ಅಭಿಮಾನಿಯಾದ ಮೃಗೇಂದ್ರನ ಮುಂದೆ ಅಶೋಕನು ಒಡಂಬಡಿಕೆಯ ಮಾತನ್ನು ತೆಗೆಯಲೇ ಬೇಕಾಗುವದು. ಮುತ್ಸದ್ದಿಗಳೆನಿಸುವ ನಿಮ್ಮಂಥವರ ಜನ್ಮವು ಇಲ್ಲದ ಸಂಶಯವನ್ನು ಕಲ್ಪಿಸು ವದರಲ್ಲಿಯೇ ಹೋಗುವದು.

ವಿಶಾಖಾನಂದ—ಹಿಂದಕ್ಕೆ ಇದೇ ಯುದ್ಧ ಪ್ರಸಂಗದಲ್ಲಿ ಪ್ರಭುಗಳು ನನ್ನ ಮಾತಿಗೆ ನಕ್ಕದ್ದು ನೆನಪಿನಲ್ಲಿರಬಹುದು.

ಮಗೇಂದ್ರ—ಹೌದು, ನೆನಪಿನಲ್ಲಿರುತ್ತದೆ. ಅಂತೇ, ಯಾವತ್ತು ಸೈನ್ಯದವರಿಗೆ ಆನಂದೋತ್ಸವವನ್ನು ಮಾಡಲಿಕ್ಕೆ ಅಪ್ಪಣೆಕೊಡಬೇಕೆಂದು ಯೋಚಿಸಿದ್ದನ್ನು ಬಿಟ್ಟು ಬಿಟ್ಟೆನು. ಯುದ್ಧ ಮುಗಿಯುವವರೆಗೆ ನಿಮ್ಮ ಮಾತಿನಂತೆ ನಡಕೊಳ್ಳುವೆನು.

ವಿಶಾಖಾನಂದ—ಈ ಮಾತು ನಿಜವಷ್ಟೇ?

ಮೃಗೇಂದ್ರ—ಮೃಗೇಂದ್ರರಾಜನು ಒಂದೇ ಮಾತನ್ನು ಎರಡುಸಾರೆ ನುಡಿಯುತ್ತಿರುವದಿಲ್ಲ.

ವಿಶಾಖಾನಂದ—ಹಾಗಾದರೆ, ರಾಣಿಯವರನ್ನೂ, ಪ್ರಣಯಿನೀ ರಾಜಕುಮಾರಿಯನ್ನೂ ವೇಷಾಂತರದಿಂದ ಈಗಲೇ ಚಿದಾನಂದಸ್ವಾಮಿಗಳ ಆಶ್ರಮಕ್ಕೆ ಕಳಿಸಿರಿ ಅವರು ಸುರಕ್ಷಿತ ಸ್ಥಳದಲ್ಲಿರುವದು ಇಷ್ಟವಾಗಿದೆ.

ಮೃಗೇಂದ್ರ—ಮಂತ್ರಿಗಳೇ, ನಿಗ್ಗರದಿಂದ ಯುದ್ಧವ್ಯಾಪಾರವು ಸಾಗಿ, ಒಬ್ಬರಿಗೂ ಒಂದು ಕ್ಷಣದ ನಂಬಿಗೆಯಿಲ್ಲದಾಗ ಯಾರನ್ನೂ ಸುರಕ್ಷಿತ ಸ್ಥಳಕ್ಕೆ ಕಳಿಸಲಿಲ್ಲ; ಈಗ ಎಲ್ಲ ಕಡೆಯಲ್ಲಿ ಶಾಂತತೆಯು ತೋರುತ್ತಿದ್ದು, ಒಡಂಬಡಿಕೆಯಾಗುವದೆಂಬ ಸುದ್ದಿಯು ಎಲ್ಲ ಕಡೆಗೆ ಹಬ್ಬಿರುತ್ತದೆ. ಅಂದಬಳಿಕ ಮನೆಯವರನ್ನು ಹರಿದ್ವಾರಕ್ಕೆ ಕಳಿಸುವದೇಕೆ? ಪ್ರತ್ಯಕ್ಷ ಯುದ್ಧಪ್ರಸಂಗಕ್ಕಿಂತ ನಿಮಗೆ ಒಡಂಬಡಿಕೆಯ ಸುದ್ದಿಯು ಭಯಂಕರವಾಗಿ ತೋರುತ್ತದೆಯೇನು?

ವಿಶಾಖಾನಂದ—ಅಶೋಕರಾಜನು ನಮ್ಮೊಡನೆ ಒಡಂಬಡಿಕೆ ಮಾಡುವನೆಂಬ ಸುದ್ದಿಯು, ಆತನೊಡನೆ ಪ್ರತ್ಯಕ್ಷ ನಡೆದ ಯುದ್ಧಕ್ಕಿಂತ ಹಲವು ಪಟ್ಟು ಭಯಂಕರವಾದದ್ದು. ಈವೊತ್ತಿನವರೆಗೆ ಎರಡೂ ಪಕ್ಷದವರು ಸರಳ ಮಾರ್ಗದ ಅವಲಂಬನ ಮಾಡಿದ್ದರಿಂದ ಅಷ್ಟು ಭಯಪಡುವ ಕಾರಣವಿದ್ದಿಲ್ಲ. ತಮಗೆ ಯುದ್ಧದಲ್ಲಿ ಯಶಸ್ಸು ದೊರೆಯುವದಿಲ್ಲವೆಂದು ತಿಳಿದು ಬೌದ್ಧರು ಸರಳಮಾರ್ಗವನ್ನು ಬಿಟ್ಟುಕೊಟ್ಟಿರುವರು. ಈಗ ಅವರು ಫಿತೂರಿಯ ಅಡ್ಡ ಮಾರ್ಗವನ್ನು ಹಿಡಿದಿರುವರು. ಇನ್ನು ಮೇಲೆ ಅವರು ಧರ್ಮಯುದ್ಧವನ್ನು ಕಾಲಿನಿಂದ ತುಳಿದು, ಯುದ್ಧದ ನಿಯಮಗಳನ್ನು ಮೀರುವರು; ಹಗಲು ಹಾಡೇ ಅನೀತಿಯಿಂದ ನಡೆಯುವರು; ಆದ್ದರಿಂದ ಈಗ ಕಾಣುವ ಶಾಂತತೆಯು ನಿಜವಾದದ್ದಲ್ಲ; ಭಯಂಕರ ಪ್ರಸಂಗವು ಒದಗುವ ಲಕ್ಷಣವನ್ನು ಸೂಚಿಸುತ್ತದೆ. ಕಾರಣ ರಾಣಿಯವರನ್ನೂ, ರಾಜಪುತ್ರಿಯವರನ್ನೂ ವೇಷಾಂತರ ದಿಂದ ಹರಿದ್ವಾರಕ್ಕೆ ಬೇಗನೆ ಕಳಿಸಬೇಕು.

ಮೃಗೇಂದ್ರ—ಈ ಸಂಗತಿಯನ್ನು ದೇವಿಗೆ ತಿಳಿಸಿ, ಆಕೆಯ ಒಪ್ಪಿಗೆಯು ದೊರೆತರೆ ನಿಮ್ಮ ಮಾತನ್ನು ನಡಿಸುವೆನು.

ಈ ಮೇರೆಗೆ ನುಡಿದು ಮೃಗೇಂದ್ರನು ಹೊರಟುಹೋದನು. ಆತನು ಮಂತ್ರಿಯ ಮನೆಯನ್ನು ಬಿಟ್ಟು ಹೊರಡುತ್ತಿರಲು, ಓರ್ವ ತರುಣಿಯು ಬಂದು ಆತನನ್ನು ನಮಿಸಿ—ಪ್ರಭುಗಳೇ, ಈ ದಿನ ಮಧ್ಯರಾತ್ರಿಯಲ್ಲಿ ಪ್ರಮೀಳಾದೇವಿಯವರು ತಮ್ಮನ್ನು ಕಾಣಬೇಕೆಂದು ಇಚ್ಛಿಸುತ್ತಾರೆ. ಅತ್ಯಂತ ಮಹತ್ವದ ಕಾರ್ಯವಿರುವದರಿಂದ ಅವರಿದ್ದಲ್ಲಿಗೆ ತಾವು ಬರಬೇಕಂತೆ, ಅನ್ನಲು, ಮೃಗೇಂದ್ರನು—ಕುರಂಗೀ, ಮಧ್ಯರಾತ್ರಿಯಲ್ಲಿ ನಾನು ಪ್ರಮೀಲೆಯ ಬಳಿಗೆ ಬರುವಂಥ ಮಹತ್ವದ ಕೆಲಸವೇನಿರುವದು? ಮತ್ತೊಬ್ಬ ಅಳ್ಳದೆಯವನಾಗಿದ್ದರೆ, ಪ್ರಮೀಳೆಯ ಮಾತಿನಲ್ಲಿ ಏನಾದರೂ ಕಪಟವಿರುವದೆಂದು ಅಂಜಬಹುದಾಗಿತ್ತು; ಆದರೆ ನನ್ನ ಹೊಟ್ಟೆಯಮಗಳಾದ ಪ್ರಣಯಿನಿಯಂತೆ ಇದ್ದ ಪ್ರಮೀಳೆಯು, ಏನಾದರೂ ಮಹತ್ವದ ಕೆಲಸವಿದ್ದದ್ದರಿಂದಲೇ ನನ್ನನ್ನು ಕರೆದಿರಬಹುದು; ಆದ್ದರಿಂದ ಆಕೆಗೆ ಬರುತ್ತೇನೆಂದು ಹೇಳು, ಎಂದವನೇ ಅರಮನೆಯ ಕಡೆಗೆ ಸಾಗಿದನು.

ಈ ಪ್ರಸಂಗದಲ್ಲಿ ವಾಚಕರಿಗೆ ಪ್ರಮೀಳೆಯ ಪರಿಚಯವನ್ನು ಮಾಡಿಕೊಡುವದು ಅವಶ್ಯವಾಗಿದೆ. ಪ್ರಮೀಳೆಯು ಮೃಗೇಂದ್ರನ ಒಬ್ಬ ಪ್ರಸಿದ್ಧ ಸರದಾರನ ಮಗಳು. ಆಕೆಯ ತಂದೆಯು ಅಶೋಕನೊಡನೆ ನಡೆದ ಯುದ್ಧದ ಆರಂಭದಲ್ಲಿಯೇ ಮರಣಹೊಂದಿದ್ದರಿಂದ, ಮೃಗೇಂದ್ರನು ಪ್ರಮೀಳೆಯನ್ನು ಯಾವ ಕೊರತೆಯೂ ಬಾರದಹಾಗೆ ತನ್ನ ಹೊಟ್ಟೆಯ ಮಗಳಂತೆ ಸಂರಕ್ಷಣ ಮಾಡಿದ್ದನು. ರಾಜಪುತ್ರಿಯಾದ ಪ್ರಣಯಿನಿಯೂ, ಪ್ರಮೀಳೆಯೂ ಕೂಡಿ ಆಡಿದವರಾಗಿದ್ದರು. ಪ್ರಮೀಳೆಯ ಅಪ್ರತಿಮ ಸೌಂದರ್ಯಕ್ಕೆ ತಕ್ಕ ಸದ್ಗುಣಗಳು ಆಕೆಯಲ್ಲಿ ಇದ್ದಿಲ್ಲ. ಆಕೆಯು ಬಹುಚಂಚಲಳು, ಮಹತ್ವಾಕಾಂಕ್ಷಿಯು. ಮೃಗೇಂದ್ರನ ಮಗನಾದ ಜಿತೇಂದ್ರನನ್ನು ಲಗ್ನವಾಗಿ, ತಾನು ಕಲಿಂಗದೇಶದ ರಾಣಿಯಾಗಬೇಕೆಂದು ಆಕೆಯು ಬಯಸಹತ್ತಿದಳು. ಜಿತೇಂದ್ರನು ಹರಿದ್ವಾರದ ಗುರುಕುಲದಲ್ಲಿದ್ದದ್ದರಿಂದ, ತನ್ನ ಮನೋಗತವನ್ನು ಆತನಿಗೆ ತಿಳಿಸಲಿಕ್ಕೆ ಪ್ರಮೀಳೆಗೆ ಅನೂಕೂಲವಾಗಲಿಲ್ಲ. ತಾನೇ ಗುರುಕುಲಕ್ಕೆ ಹೋಗಿ ಜಿತೇಂದ್ರನನ್ನು ಕೇಳಬೇಕೆಂದು ಆ ಸಾಹಸಿಯು ಒಮ್ಮೆ ನಿಶ್ಚಯಿಸಿದಳು; ಆದರೆ ಚಿದಾನಂದರ ಗುರುಕುಲದಲ್ಲಿ ಸ್ತ್ರೀಯರ ಪ್ರವೇಶಕ್ಕೆ ಲೇಶವಾದರೂ ಆಸ್ಪದವಿಲ್ಲದ್ದನ್ನು ನೆನಪಿಗೆ ತಂದುಕೊಂಡು, ಆಕೆಯು ಆ ಉಸಾಬರಿಯನ್ನು ಬಿಟ್ಟಳು. ವಿದ್ಯಾಭ್ಯಾಸವು ಮುಗಿದಹೊರತು ಜಿತೇಂದ್ರನು ರಾಜಧಾನಿಯ ಮೋರೆಯನ್ನು ಕಾಣುವಹಾಗಿದ್ದಿಲ್ಲ. ಇದನ್ನರಿತು ಉತ್ಪಾತ ಸ್ವಭಾವದ ಪ್ರಮೀಳೆಯು, ಒಮ್ಮೆ ತನ್ನ ಲಗ್ನದ ಪ್ರಸಕ್ತಿಯನ್ನು ಕುರಿತು ಮೃಗೇಂದ್ರನನ್ನು ಕೇಳಿದಳು. ಆಗ ಮೃಗೇಂದ್ರನು ಅಲ್ಲಿ ಇದ್ದ ಪ್ರಮೀಳೆಯ ಸಖಿಯರ ಮುಂದೆ ಚೇಷ್ಟೆಮಾಡಿ ನಕ್ಕನು. ಸಮಾನಸ್ಕಂಧತ್ವವಿಲ್ಲದ್ದರಿಂದ ಪ್ರಮೀಳೆಯ ಲಗ್ನವು ಜಿತೇಂದ್ರ ರಾಜಕುಮಾರನೊಡನೆ ಆಗುವ ಹಾಗಿದ್ದಿಲ್ಲ. ಹೀಗೆ ಮೃಗೇಂದ್ರನು ಒಮ್ಮೆ ತಿರಸ್ಕರಿಸಿ ಪ್ರಮೀಳೆಯ ಮಾತಿಗೆ ನಕ್ಕದ್ದಲ್ಲದೆ, ಪ್ರಸಂಗ ಬಂದಾಗ ಸಲಿಗೆಯಿಂದ ಪ್ರಮೀಳೆಯ ಸಂಗಡ ಈ ಮಾತನ್ನು ಕುರಿತು ವಿನೋದ ಮಾಡುತ್ತಿದ್ದನು. ಇದು ಅಭಿಮಾನಸ್ವಭಾವದ ಪ್ರಮೀಳೆಗೆ ಸಹನವಾಗದೆ, ಒಮ್ಮೆ ಆಕೆಯು ಮೃಗೇಂದ್ರನನ್ನು ಕುರಿತು—ನಾನು ಹೇಗಾದರೂ ಕಲಿಂಗದೇಶದ ರಾಣಿಯಾಗಿಯೇ ತೀರುವೆನು, ಎಂದು ನುಡಿದಳು. ಈ ಅಸಂಭವ ಮಾತನ್ನು ಕೇಳಿ, ಹುಡುಗೆಯ ಅಪ್ರಬುದ್ಧತನದ ಮಾತೆಂದು ತಿಳಿದು ಮೃಗೇಂದ್ರನು ನಕ್ಕುಬಿಟ್ಟನು. ಆಗ ಆಕೆಯ ಮಾತಿಗೆ ಅಷ್ಟು ಮಹತ್ವಕೊಡುವ ಕಾರಣವಿದ್ದಿಲ್ಲ, ಪ್ರಸಂಗವೂ ಇದ್ದಿಲ್ಲ; ಆದರೆ ಸಾಹಸಿಯಾದ ಪ್ರಮೀಳೆಯು ಮಾತ್ರ ಆ ಮಾತನ್ನು ಹೃದಯದಲ್ಲಿಟ್ಟುಕೊಂಡು ಕಾರ್ಯವನ್ನು ಸಾಧಿಸುವ ಹಂಚಿಕೆಯನ್ನು ಹಾಕಹತ್ತಿದಳು. ಯಾವದೊಂದು ಉಪಾಯದಿಂದ ತಾನು ಕಲಿಂಗದೇಶದ ರಾಣಿಯಾಗಿಯೇ ತೀರಬೇಕೆಂದು ಆಕೆಯು ನಿಶ್ಚಯಿಸಿಕೊಂಡಳು.

ಹೀಗಿರುವಾಗ ವಿಶಾಖಾನಂದ ಮಂತ್ರಿಯ 6ನೇ ಹೆಂಡತಿಯು ತೀರಿಕೊಂಡಳು. ಶಾಸ್ತ್ರದಂತೆ ಮಂತ್ರಿಯು 7ನೆಯ ಲಗ್ನವನ್ನು ಮಾಡಿಕೊಳ್ಳಬೇಕಾಯಿತು. ಕಲಿಂಗದೇಶದಲ್ಲಿಯೂ, ಭರತಖಂಡದೊಳಗಿನ ಬೇರೆ ದೇಶಗಳಲ್ಲಿಯೂ ವಿಶಾಖಾನಂದನ ವರ್ಚಸ್ಸು ಬಹಳ. ಕಲಿಂಗನ ರಾಜ್ಯಕಾರಭಾರವೆಲ್ಲ ವಿಶಾಖಾನಂದನ ಕೈಯಲ್ಲಿದ್ದಂತೆ ಇತ್ತು. ಮೃಗೇಂದ್ರನು ವಿಶಾಖಾನಂದನ

ಮಾತನ್ನು ಮೀರುತ್ತಿದ್ದಿಲ್ಲೆಂದು ಹೇಳಬಹುದು. ಇಂಥ ಪ್ರತಿಷ್ಠಿತ ಮಂತ್ರಿಯ ಹೆಂಡತಿಯಾದರೆ, ಪ್ರಸಂಗವಶಾತ್ ತಾನು ಕಲಿಂಗದೇಶದ ರಾಣಿಯಾಗಬಹುದೆಂದು ಭಾವಿಸಿ, ಪ್ರಮೀಳೆಯು ವಿಶಾಖಾನಂದನನ್ನು ಮದುವೆಯಾಗುವೆನೆಂದು ತಾನಾಗಿ ಹೇಳಿದಳು. ಅದಕ್ಕೆ ಮೃಗೇಂದ್ರನು ಒಪ್ಪಲಿಲ್ಲ, ಬಾಲಸಖಿಯಾದ ಪ್ರಣಯಿನೀ ರಾಜಕುಮಾರಿಯು, ಇಂಥ ಅನುಚಿತ ಕಾರ್ಯವನ್ನು ಮಾಡಬೇಡೆಂದು ಪ್ರಮೀಳೆಗೆ ಹೇಳಿದಳು. ಸ್ವತಃ ವಿಶಾಖಾನಂದನು, ವೃದ್ಧಾಪ್ಯದ ಮೂಲಕ ಪ್ರಮೀಳೆಯನ್ನು ಲಗ್ನವಾಗಲು ಒಪ್ಪಿಕೊಳ್ಳಲಿಲ್ಲ. ಆತನಿಗೆ ಎಪ್ಪತ್ತು ವರ್ಷಗಳು ತುಂಬಿಹೋಗಿದ್ದವು. ಹೀಗೆ ಯಾರ ಮನಸ್ಸಿಗೂ ಬಾರದ ಕೆಲಸವನ್ನು ಮಾಡಿಯೇ ತೀರುವೆನೆಂದು ಸಾಹಸಿಯಾದ ಪ್ರಮೀಳೆಯು ಹಟಹಿಡಿದಳು. ಕಡೆಗೆ ಮೃಗೇಂದ್ರನು—''ಬ್ರಹ್ಮಸಂಕಲ್ಪವು ತಪ್ಪುವದಿಲ್ಲ ಆಕೆಯ ಪ್ರಾರಬ್ಧವು,'' ಎಂದು ವಿಶಾಖಾನಂದನೊಡನೆ ಪ್ರಮೀಲೆಯ ಲಗ್ನವನ್ನು ಮಾಡಿದನು. ಈ ವೃದ್ಧ–ತರುಣೀ ವಿವಾಹದಿಂದ ದಂಪತಿಗಳಿಬ್ಬರಿಗೂ ಸುಖವಾಗಲಿಲ್ಲೆಂದು ಹೇಳುವ ಕಾರಣವಿಲ್ಲ. ಸುಖಾಪೇಕ್ಷೆಯಿಲ್ಲದೆ ಕೇವಲ ಪ್ರತಿಜ್ಞಾಪೂರ್ತಿಗಾಗಿ ವೃದ್ಧಪತಿಯ ಕೊರಳಲ್ಲಿ ಮಾಲೆ ಹಾಕಿದ್ದರಿಂದ, ಪ್ರಮೀಲೆಯು ಕಲ್ಲುಮನಸ್ಸುಮಾಡಿ ಕಲಿಂಗದ ರಾಣಿಯಾಗುವ ಹಾದಿಯನ್ನು ನೋಡಹತ್ತಿದಳು.

ಹೀಗಿರುವಾಗ ಅಶೋಕನು ಕಲಿಂಗಭೂಪತಿಯೊಡನೆ ಯುದ್ಧವನ್ನು ಹೂಡಿದನು. ಈ ಯುದ್ಧವು ಮೂರು ವರ್ಷಗಳವರೆಗೆ ನಡೆದು, ಕಡೆಗೆ ಪ್ರತ್ಯಕ್ಷ ಅಶೋಕನು ನಾಲ್ಕು ತಿಂಗಳವರೆಗೆ ಇಂದ್ರಪುರವನ್ನು ಮುತ್ತಿದರೂ, ಆ ಬೌದ್ಧ ಸಾಮ್ರಾಟನಿಗೆ ಜಯದೊರೆಯುವ ಆಶೆ ಉಳಿಯಲಿಲ್ಲ. ಈ ಸಂಧಿಯು ಪ್ರಮೀಳೆಗೆ ತನ್ನ ಕಾರ್ಯಸಾಧನಕ್ಕೆ ಅನುಕೂಲವಾಗಿ ತೋರಿತು. ಆಕೆಯು ರಾಜಮಾತೆಯಾದ ಬುದ್ಧಿಮತಿಯ ಸಂಗಡ ಒಳಸಂಚುಗಳನ್ನು ನಡಿಸಿದಳು. ಗಂಡನ ಭಯವು ಲೇಶವಾದರೂ ಪ್ರಮೀಲೆಗೆ ಇದ್ದಿಲ್ಲ. ವೃದ್ಧ ವಿಶಾಖಾನಂದನಿಗೆ ತನ್ನ ಹೆಂಡತಿಯ ಕಾಟತಪ್ಪಿದರೆ ಸಾಕಾಗಿತ್ತು. ಆತನ ಕಣ್ಣುಗಳು ಹೆಂಡತಿಯ ನಗೆಮೊಗವನ್ನು ನೋಡಿ ಒಂದು ದಿನವಾದರೂ ಸಫಲವಾಗಲಿಲ್ಲ. ಪತಿಯ ಮುಂದೆ ಪ್ರಮೀಳೆಯ ಮೋರೆಯು ಯಾವಾಗಲೂ ದುಮುಗುಟ್ಟಿ ಉರಿಯುತ್ತಿತ್ತು. ಅದರಂತೆ ಹೆಂಡತಿಯ ಕಠೋರ ಮಾತುಗಳಿಂದ ವಿಶಾಖಾನಂದನ ಕಿವಿಗಳು ಗಡಿಚಿಕ್ಕಿ ಹೋಗಿದ್ದವು. ಒಟ್ಟಿಗೆ, ವಿಶಾಖಾನಂದನ ಪಾಲಿಗೆ ಪ್ರಮೀಳೆಯು ಕ್ರೂರ ರಾಕ್ಷಸಿಯಾಗಿದ್ದಳು. ಈ ಸ್ಥಿತಿಯಲ್ಲಿ ಹೆಂಡತಿಯ ಉಸಾಬರಿಗೆ ಹೋಗದಿರುವದೇ ವಿಶಾಖಾನಂದನಿಗೆ ಸಮಾಧಾನಕರವಾಗಿತ್ತು. ಆದ್ದರಿಂದ ಆಕೆಗೆ, ರಾಜಮಾತೆಯಾದ ಬುದ್ಧಿಮತಿಯೊಡನೆ ಬೇಕಾದಹಾಗೆ ಗುಪ್ತಾಲೋಚನೆಗಳನ್ನು ಮಾಡಲಿಕ್ಕೆ ಅನುಕೂಲವಾಯಿತು. ಅದರಲ್ಲಿ ಸಂಪುಷ್ಪಾಚಾರ್ಯನಂಥ ಉಪದ್ವ್ಯಾಪಿಯಾದ ಬೌದ್ಧ ಭಿಕ್ಷುವಿನ ಆಲೋಚನೆಯ ನೆರವು ದೊರೆತ ಬಳಿಕ ಕೇಳುವದೇನು? ''ಸ್ತ್ರೀ ಬುದ್ಧಿಃ ಪ್ರಲಯಾಂತಕಾ'' ಎಂಬಂತೆ, ಉತ್ಪಾತಸ್ವಭಾವದ ಪ್ರಮೀಳೆಯು, ಪ್ರಸಂಗ ನೋಡಿ ಗಂಡನ ಕೈಯಿಂದ ಮದ್ದಿನ ಸಂಗ್ರಹಾಲಯದ ಕೀಲಿಯ ಕೈಯನ್ನು ಇಸಕೊಂಡು ಅದಕ್ಕೆ ಬೆಂಕಿಹಚ್ಚುವೆನೆಂತಲೂ, ಶಸ್ತ್ರಾಗಾರದ ಕೀಲಿಯ ಕೈಯನ್ನು ಇಸಕೊಂಡು ಒಳಗಿನ ಶಸ್ತ್ರಾಸ್ತ್ರಗಳನ್ನು ಕೋಟೆಯೊಳಗಿನ ಆಳವಾದ ಹೊಂಡದಲ್ಲಿ ಚಲ್ಲಿಸುವೆನೆಂತಲೂ, ಗುಪ್ತದ್ವಾರದ ಕೀಲಿಯ ಕೈಗಳನ್ನು ಇಸಕೊಂಡು ದ್ವಾರಗಳನ್ನು ತೆರೆದಿಡಿಸುವೆ

ನೆಂತಲೂ ಬುದ್ಧಿಮತಿಗೂ–ಸಂಪುಷ್ಪಾಚಾರ್ಯನಿಗೂ ವಚನಕೊಟ್ಟಿದ್ದಳು. ಹೀಗಾದ ಪಕ್ಷದಲ್ಲಿ ನಿನ್ನ ಗಂಡನಾದ ವಿಶಾಖಾನಂದನನ್ನೇ ಕಲಿಂಗದೇಶದ ಪಟ್ಟಕ್ಕೆ ಕುಳ್ಳಿರಿಸುವೆನೆಂದು ರಾಜಮಾತೆಯು ಪ್ರಮೀಲೆಗೆ ವಚನಕೊಟ್ಟಿದ್ದಳು; ಆದ್ದರಿಂದ ಪ್ರಮೀಳೆಯು ತಾನು ಕಲಿಂಗದ ರಾಣಿಯಾದೆನೆಂಬ ಸಂತೋಷದಿಂದ ಉಬ್ಬಿ, ಗಂಡನ ಕೈಯಿಂದ ಕೀಲಿಯ ಕೈಗಳನ್ನು ಇಸಕೊಳ್ಳುವ ಹಂಚಿಕೆಯನ್ನು ಹುಡುಕಹತ್ತಿದಳು. ಇಂದ್ರಭುವನದ ಬೌದ್ಧಸಭೆಯಲ್ಲಿ ಸಂಪುಷ್ಪಾಚಾರ್ಯರ ಸಂಗಡ ಬಂದಿದ್ದ ತರುಣ ಸ್ತ್ರೀಯು ಪ್ರಮೀಳೆಯೇ ಆಗಿದ್ದಳು. ಆಕೆಯ ಬಲದಿಂದಲೇ ಸಂಪುಷ್ಪಾಚಾರ್ಯನು ಕಲಿಂಗವನ್ನು ಎರಡು ದಿವಸಗಳಲ್ಲಿ ಗೆಲ್ಲುವೆನೆಂದು ಅಶೋಕನ ಮುಂದೆ ನಂಬಿಗೆಯಿಂದ ನುಡಿದು, ಸೈನ್ಯದ ಆಧಿಪತ್ಯವನ್ನು ಪಡೆದನು.

ಮಧ್ಯರಾತ್ರಿಯಲ್ಲಿ ತನ್ನನ್ನು ಕಾಣಲಿಕ್ಕೆ ಬರುವೆನೆಂದು ಮೃಗೇಂದ್ರನು ಒಪ್ಪಿಕೊಂಡದ್ದನ್ನು ದಾಸಿಯ ಮುಖದಿಂದ ಕೇಳಿ, ಪ್ರಮೀಳೆಯು ಸಮಾಧಾನಪಟ್ಟಳು. ಆಕೆಯು ಪತಿಯನ್ನು ವಂಚಿಸುವದಕ್ಕಾಗಿ ಆತನ ಬಳಿಗೆ ಹೋಗಲು, ಆಗ ವಿಶಾಖಾನಂದನು, ಚಾರರು ಹೇಳಿದ ಸುದ್ದಿಗಳನ್ನು ಕುರಿತು ಆಲೋಚಿಸುತ್ತ ಒಬ್ಬನೇ ಕುಳಿತುಕೊಂಡಿದ್ದನು. ವಿಚಾರಮಗ್ನನಾದ ಆ ಜರಠಮಂತ್ರಿಯು, ಇನ್ನೂ ಚಾರರು ತನ್ನ ಮುಂದೆ ನಿಂತಿರುವರೆಂದು ತಿಳಿದು ''ಹ, ಮುಂದೇನಾಯಿತು?'' ಎಂದು ನುಡಿದು ಮೇಲಕ್ಕೆ ಮೋರೆಯೆತ್ತಿ ನೋಡಿದನು. ಆಗ ಗೌರಿಯಂತೆ ಸಿಂಗಾರಾದ ತನ್ನ ಹೊಸ ಹೆಂಡತಿಯು ಕಣ್ಣಿಗೆಬಿದ್ದಳು. ಹಾವಿಗೆ ಗರುಡನ ಗೆರೆಯನ್ನು ತೋರಿಸಿದ ಹಾಗಾಗಿ, ವಿಶಾಖಾನಂದನು ಮೋರೆಯನ್ನು ತಗ್ಗಿಸಿ ಹೆಂಡತಿಯ ಚರಣದಲ್ಲಿ ದೃಷ್ಟಿಯನ್ನಿಟ್ಟು ಸುಮ್ಮನೆ ಕುಳಿತುಕೊಂಡನು. ಆಗ ಪ್ರಮೀಳೆಯು ಮಾಯಾವಿಯಾದ ಮೃದುಹಾಸದಿಂದ ತನ್ನ ಗಂಡನನ್ನು ಕುರಿತು— ''ಪ್ರಿಯಕರಾ'' ಎಂದು ಕರೆದಳು. ಎಷ್ಟೋ ವರ್ಷಗಳಿಂದ ಈ ಮನೋಹರ ಶಬ್ದವು ವಿಶಾಖಾನಂದನ ಕಿವಿಗೆ ಬಿದ್ದಿದ್ದಿಲ್ಲ. ಈ ಶಬ್ದವನ್ನು ವಿಶಾಖಾನಂದನು ತನ್ನ ಮೊದಲನೆಯ ಹೆಂಡತಿಯ ಮುಖದಿಂದ ಕೇಳಿದ್ದರೆ ಕೇಳಿರಬಹುದು. ಇಂಥ ಅಪರೂಪದ ಶಬ್ದವು ಕಿವಿಗೆ ಬಿದ್ದದ್ದರಿಂದ, ಆ ವೃದ್ಧಮಂತ್ರಿಯು ತನ್ನ ಬಚ್ಚಬಾಯನ್ನು ತೆರೆದು ಆನಂದದಿಂದ ತನ್ನ ಹೆಂಡತಿಯನ್ನು ''ಕಾಂತೇ'' ಎಂದು ಕರೆದು ಆಕೆಯ ಮುಖವನ್ನು ನೋಡಹತ್ತಿದನು. ಪ್ರಮೀಳೆಯ ಈ ದಿನದ ನಗೆಮೊಗವು ಅಪರೂಪದ್ದಾದ್ದರಿಂದ, ವಿಶಾಖಾನಂದನು ಕೃತಜ್ಞನಾಗಿ ಹೆಂಡತಿಯನ್ನು ಲೀನಭಾವದಿಂದ ನೋಡತೊಡಗಿದ್ದನು. ಇತ್ತ ತೇಜಃಪುಂಜಳಾದ ತರುಣ ಪ್ರಮೀಳೆಯು, ತನ್ನ ಅಪೂರ್ವವಾದ ಸೌಂದರ್ಯದಿಂದ ಮತ್ತಳಾಗಿ, ಗರ್ವದೊಡನೆ ಪತಿಯನ್ನು ನೋಡುತ್ತಿದ್ದಳು. ಆಗ ಅವರಿಬ್ಬರ ಸಂಭಾಷಣವು ಕೆಳಗೆ ಬರೆದಂತೆ ಆಯಿತು.

ಪ್ರಮೀಳೆ—ಪ್ರಿಯಾ, ನನ್ನ ಮಾನಭಂಗವಾಗುತ್ತಿರುವದನ್ನು ಯಾರು ಕೇಳಬೇಕು?

ವಿಶಾಖಾನಂದ—ನನ್ನ ಹೆಂಡತಿಯ ಮಾನಭಂಗವನ್ನು ಮಾಡಲಿಕ್ಕೆ ಅದಾವನಿಗೆ ಧೈರ್ಯವಾಗುವದು?

ಪ್ರಮೀಳೆ ಆತನ ಹೆಸರು ಹೇಳಿ ಮಾಡುವದೇನು? ತಮ್ಮಂಥ ವೃದ್ಧ ಪ್ರಧಾನರ ಹೆಂಡತಿಯಾಗುವದಕ್ಕಿಂತ, ಒಬ್ಬ ಸೈನಿಕನನ್ನು ಲಗ್ನಮಾಡಿಕೊಂಡಿದ್ದರೆ, ಆತನು ಜೀವದ ಹಂಗುದೊರೆದು ನನ್ನ ಮರ್ಯಾದೆಯನ್ನು ಉಳಿಸುತ್ತಿದ್ದನು.

ವಿಶಾಖಾನಂದ—ಪ್ರಿಯೇ, ಇದೇನು ನಿನ್ನ ಮಾತು! ನನ್ನ ಯೋಗ್ಯತೆಯು ಒಬ್ಬ ಸೈನಿಕನ ಯೋಗ್ಯತೆಗೆ ಕಡೆಯಾದದ್ದೇನು? ಕಲಿಂಗದ ಯಾವತ್ತು ರಾಜ್ಯಸೂತ್ರಗಳು ನನ್ನ ಕೈಯಲ್ಲಿರುತ್ತವೆ, ಮೃಗೇಂದ್ರನಿಗಿಂತ ಹೆಚ್ಚು ಸಾಮರ್ಥ್ಯವು ನನ್ನಲ್ಲಿರುವದು. ಹೇಳು, ನಿನ್ನ ಮಾನಭಂಗವನ್ನು ಯಾವನು ಮಾಡುವನು? ಕೂಡಲೆ ಅವನನ್ನು ನಾಶಗೊಳಿಸುತ್ತೇನೆ.

ಪ್ರಮೀಳೆ—ಪ್ರಿಯಕರಾ, ಸುಮ್ಮನೆ ಹೆಸರು ಹೇಳಿ ಮಾಡುವದೇನು? ಆತನನ್ನು ನಾಶಗೊಳಿಸುವದು ನಿಮ್ಮಿಂದಾಗಲಿಕ್ಕಿಲ್ಲ. ಸುಮ್ಮನೆ ಚಿಂತೆಗೆ ಮಾತ್ರ ಒಳಗಾದೀರಿ. ಹೀಗೆ ಮಾನಭಂಗ ಮಾಡಿಸಿಕೊಳ್ಳುವದಕ್ಕಿಂತ ತಟ್ಟನೆ ಬಾವಿಯನ್ನು ಹಾರಿಕೊಳ್ಳುವದು ನೆಟ್ಟಗೆ. ನಾನು ಒಬ್ಬಳೇ ಇದ್ದಾಗ್ಗೆ ಆತ್ಮಹತ್ಯಮಾಡಿಕೊಳ್ಳಬೇಕೆನ್ನುತ್ತೇನೆ; ಆದರೆ ಚರಣದರ್ಶನವಾದ ಕೂಡಲೆ ನನ್ನ ಆತ್ಮಹತ್ಯದ ವಿಚಾರವು ನಷ್ಟವಾಗಿ, ಈ ಸುಂದರ ದೇಹವನ್ನು ಅಪ್ಪಿಕೊಳ್ಳುವಹಾಗೆ ಆಗುತ್ತದೆ.

ಹೀಗೆಂದು ಪ್ರಮೀಳೆಯು ಪತಿಯ ಕೊರಳಿಗೆ ತನ್ನ ಮೃದು ಶೀತಲ ಭುಜಲತೆಗಳನ್ನು ಸುತ್ತಿ ಇಲ್ಲದ ಅಚ್ಚೆಯನ್ನು ಸುರಿಸಹತ್ತಿದಳು. ಆಗ ವಿಶಾಖಾನಂದನು ತನ್ನ ಅಸ್ಥಿಮಯವಾದ ಹುರಬರಕ ಕೈಯಿಂದ ಪ್ರಮೀಳೆಯ ಸುಂದರ ಮುಖದಮೇಲೆ ಕೈಯಾಡಿಸಿ ಕುರುಳುಗಳನ್ನು ತೀಡಿ—ಪ್ರೀಯೇ, ನಿನ್ನ ಮಾನಭಂಗಮಾಡಿದ ನರಾಧಮನ ಹೆಸರನ್ನು ಹೇಳು, ಕೂಡಲೆ ಅವನ ಶಾಸನಮಾಡುವೆನು.

ಪ್ರಮೀಳೆ—ಪ್ರಿಯಕರಾ, ಆಗದು, ಅವನ ಶಾಸನಮಾಡುವದು ನಿಮ್ಮಿಂದಾಗದು. ನಿಶ್ಚಯವಾಗಿ ಹೇಳುತ್ತೇನೆ, ಆ ಕೆಲಸವು ನಿಮ್ಮಿಂದಾಗುವದಿಲ್ಲ. ಅದು ನಿಮ್ಮ ಶಕ್ತಿಯನ್ನು ಮೀರಿದ್ದಿರುತ್ತದೆ.

ವಿಶಾಖಾನಂದ—ಅವನ ಹೆಸರನ್ನಾದರೂ ಹೇಳಿ ನೋಡಬಾರದೆ?

ಪ್ರಮೀಳೆ—ನಿಮ್ಮ ಕೈಯಿಂದಾಗದಿದ್ದರೆ, ಮಂದಿಯ ಸಹಾಯದಿಂದಾದರೂ ಶಾಸನ ಮಾಡುವೆನೆಂದು ವಚನಕೊಟ್ಟರೆ, ಹೆಸರು ಹೇಳುತ್ತೇನೆ. ಕೊಡಿರಿ, ಮೊದಲು ವಚನಕೊಡಿರಿ, ಸೇಡುತೀರಿಸಿಕೊಳ್ಳುವೆನೆಂದು ಕುಲದೇವತೆಯ ಸಾಕ್ಷಿಯಿಂದ ವಚನಕೊಡಿರಿ.

ವಿಶಾಖಾನಂದ—ನನ್ನ ಮನಸ್ಸು ಒಪ್ಪುವಂತೆ ಅವನ ಅಪರಾಧವನ್ನು ಸಿದ್ಧಮಾಡಿಕೊಳ್ಳದೆ, ಶಪಥಮಾಡುವದಿಲ್ಲ.

ಪ್ರಮೀಳೆ—ನನ್ನ ಈ ಮಾತುಗಳಿಂದ ಅಪರಾಧವು ಸಿದ್ಧವಾಗುವದಿಲ್ಲವೋ?

ವಿಶಾಖಾನಂದ—ಇಲ್ಲ, ಇಷ್ಟರಿಂದ ಸಿದ್ಧವಾಗುವದಿಲ್ಲ. ಪ್ರತ್ಯಕ್ಷಾನುಭವದಿಂದ ಸಿದ್ಧವಾಗಲಿಕ್ಕೆ ಬೇಕು.

ಪ್ರಮೀಳೆ—ಒಳ್ಳೇದು, ಸಿದ್ಧಮಾಡಿಕೊಡುತ್ತೇನೆ. ಪ್ರತಿಜ್ಞೆ ಮಾಡಿರಿ.

ವಿಶಾಖಾನಂದ—ಈಶ್ವರಸಾಕ್ಷಿಯಿಂದ ಅವನ ನಾಶಮಾಡುತ್ತೇನೆ, ಹೆಸರು ಹೇಳು.

ಪ್ರಮೀಳೆ—ಮೃಗೇಂದ್ರ.

ವಿಶಾಖಾನಂದ—ಏನು? ಮೃಗೇಂದ್ರನೆಂದು ಹೇಳುವೆಯಾ? ಯಾವ ಮೃಗೇಂದ್ರನು?

ಪ್ರಮೀಳೆ—ಮತ್ತೆ ಯಾವ ಮೃಗೇಂದ್ರನಿರುವನು? ಕಲಿಂಗಾಧಿಪತಿಯಾದ ಮೃಗೇಂದ್ರನು.

ವಿಶಾಖಾನಂದ (ಅತ್ಯಂತ ಭಯದಿಂದ ಹಾಗು ಆಶ್ಚರ್ಯದಿಂದ)—ಮೃಗೇಂದ್ರ ರಾಜನೆ!! ಸುಳ್ಳು, ತೀರಾ ಸುಳ್ಳು, ಈ ಮಾತು ಎಷ್ಟು ಮಾತ್ರವೂ ನಂಬತಕ್ಕದ್ದಲ್ಲ.

ಪ್ರಮೀಳೆ—ನೀವು ಹೀಗೆ ಅನ್ನುವಿರೆಂದು ನನಗೆ ಮೊದಲೇ ಗೊತ್ತಿದ್ದದ್ದರಿಂದ ನಾನು ಹೆಸರು ಹೇಳಲಿಕ್ಕೆ ಹಿಂದುಮುಂದು ನೋಡಿದೆನು. ಅಂತು ಪ್ರತಿಜ್ಞೆಯನ್ನು ಮುರಿದ ಹಾಗಾಯಿತಷ್ಟೆ? ಸರಿಯಿರಿ ಹಿಂದಕ್ಕೆ. ನನಗೆ ಒಂದು ಆಳವಾದ ಬಾವಿಯಹೊರತು ಬೇರೆ ಆಧಾರವು ದೊರೆಯುವಹಾಗಿಲ್ಲ. ಈ ಮೇರೆಗೆ ನುಡಿದು ಪ್ರಮೀಳೆಯು ವಿಶಾಖಾನಂದನ ಕೈಗಳನ್ನು ಕೊಸರಿ ಹೊರಗೆಹೋಗುವ ಡೌಲು ತೋರಿಸಿದಳು. ಆಗ ವೃದ್ಧನಾದ ವಿಶಾಖಾನಂದನು ಆಕೆಯ ಬೆನ್ನಹತ್ತಿ ಓಡುತ್ತಹೋಗಿ—ಪ್ರಿಯೇ, ಹೀಗೆ ಅನ್ಯಾಯಮಾಡಬೇಡ, ವಿಚಾರ ಗೇಡಿಯಾಗಬೇಡ. ಏನೇನಾಯಿತೆಂಬದನ್ನು ಸಮಾಧಾನದಿಂದ ಹೇಳು, ನಾನು ಮೃಗೇಂದ್ರ ರಾಜನ ಹಂಗನ್ನೂ ಇಡುವದಿಲ್ಲ, ಎಂದು ಹೇಳಿ ಪ್ರಮೀಳೆಯ ಕೋಮಲವಾದ ಹಸ್ತವನ್ನು ಹಿಡಕೊಂಡು ಆಕೆಯೊಡನೆ ದಿವಾಣಖಾನೆಗೆ ಬಂದನು. ಇನ್ನು ಹೆಚ್ಚು ಬಿಗಿಹಿಡಿಯುವದು ಯೋಗ್ಯವಲ್ಲೆಂದು ತಿಳಿದು, ಪ್ರಮೀಳೆಯು ತನ್ನ ಕಪಟದ ಕಥೆಯನ್ನು ಹೊಂದಿಸಿಕೊಂಡು ಪತಿಯನ್ನು ಕುರಿತು—"ಪ್ರಿಯರೇ, ನನ್ನ ತಂದೆಯು ಯುದ್ಧದಲ್ಲಿ ಮರಣಹೊಂದಿದ ಬಳಿಕ, ಆಶ್ರಯಕೊಡುವ ನೆವದಿಂದ ನನ್ನನ್ನು ಮೃಗೇಂದ್ರನು ತನ್ನ ಮಗಳ ಮಂದಿರದಲ್ಲಿ ಇಟ್ಟುಕೊಂಡನಷ್ಟೆ? ಮುಂದೆ ಕೆಲವು ದಿನಗಳಮೇಲೆ ಆತನು ನನ್ನನ್ನು ಪಾಪದೃಷ್ಟಿಯಿಂದ ನೋಡಹತ್ತಿದನು. ಆ ಲಕ್ಷಣವನ್ನು ಅರಿತು ನಾನು ಆತನನ್ನು ನಿರಾಕರಿಸಿದಂತೆ, ಆತನು ನನ್ನಲ್ಲಿ ಹೆಚ್ಚು ಹೆಚ್ಚು ಆಸಕ್ತನಾದನು. ಈ ಸಂಕಟದಿಂದ ನಾನು ಪಾರಾಗಬೇಕೆಂದು ನಾನು ನಿಮ್ಮನ್ನು ಲಗ್ನವಾದೆನು. ಆದರೂ ನನಗೆ ಮೃಗೇಂದ್ರನ ಕಾಟ ತಪ್ಪಲಿಲ್ಲ. ಏನಾದರೂ ನೆವದಿಂದ ಮೇಲಿಂದಮೇಲೆ ನಿಮ್ಮ ಭೆಟ್ಟಿಗೆ ಬಂದಂತೆಮಾಡಿ, ಆತನು ತನ್ನ ಪಾಪವಾಸನೆಯನ್ನು ತೃಪ್ತಮಾಡಿಕೊಳ್ಳಲು ಹವಣಿಸುವನು," ಎಂದು ಅಸತ್ಯವನ್ನು ನುಡಿಯುವಾಗ ಪ್ರಮೀಳೆಯ ನಾಲಿಗೆಯು ತಡೆಯಹತ್ತಿತು; ಯಾಕಂದರೆ, ಪರನಾರೀ ಸೋದರನಾದ ಸುಶೀಲ ಮೃಗೇಂದ್ರನು, ತನ್ನನ್ನು ಹೊಟ್ಟೆಯ ಮಗಳಂತೆ ನಡೆಸಿಕೊಳ್ಳುತ್ತಿರುವದನ್ನು ಪ್ರಮೀಳೆಯು ಮನಗಂಡಿದ್ದಳು; ಆದರೆ ಸ್ತ್ರೀ ವಿಷಯವು ಕೆಟ್ಟದು. ಹೆಂಡತಿಯ ಇಷ್ಟೇ ಮಾತುಗಳಿಂದ ವಿಶಾಖಾನಂದನ ಮನಸ್ಸು ಕೆಟ್ಟಿತು. ದೊಡ್ಡ ಮನಸ್ಸಿನ ಮೃಗೇಂದ್ರನು, ತನ್ನ ವೃದ್ಧ ಮಂತ್ರಿಗೆ ಆಯಾಸವಾಗಬಾರದೆಂದು ತಾನೇ ಆತನ ಮನೆಗೆ ಮೇಲೆ ಮೇಲೆ ಹೋಗುವದು, ವಿಶಾಖಾನಂದನ ವಿಕಲ್ಪಕ್ಕೆ ಕಾರಣ ವಾಯಿತು. ಆ ವೃದ್ಧಮಂತ್ರಿಯು ಹೆಂಡತಿಗೆ—ಪ್ರಿಯೇ, ಈಗ ನನ್ನ ಮನಸ್ಸಿಗೆ ಹೊಳೆಯಿತು; ಆದರೆ ಮೃಗೇಂದ್ರನು ಅನೀತಿಯಿಂದ ನಡೆದದ್ದು ಈವೊತ್ತಿನವರೆಗೆ ನನ್ನ ಕಣ್ಣಿಗೆ ಬೀಳದ್ದರಿಂದ, ನನ್ನ ಮನಸ್ಸು ಮೃಗೇಂದ್ರನ ವಿಷಯವಾಗಿ ಸಂಶಯಗ್ರಸ್ತವಾಯಿತು. ಪ್ರಿಯೇ, ನೀನು ಈ ಸಂಶಯವನ್ನು ದೂರಮಾಡಿ, ಮೃಗೇಂದ್ರನು ದುರ್ಮಾರ್ಗದಿಂದ ನಡೆಯುವದನ್ನು ಸಿದ್ಧಮಾಡಿ ಕೊಟ್ಟರೆ, ಆತನ ನಾಶವನ್ನು ಮಾಡದೆ ಬಿಡುವದಿಲ್ಲ, ಎಂದು ಹೇಳಿದನು. ಅದಕ್ಕೆ ಪ್ರಮೀಳೆಯು—ಪ್ರಿಯರೇ, ಹಾಗೇ ಆಗಲಿ. ಇಂದು ಮಧ್ಯರಾತ್ರಿಯಲ್ಲಿ ಮೃಗೇಂದ್ರನು ನನ್ನ

ಮಂದಿರಕ್ಕೆ ಬರುತ್ತೇನೆಂದು ಹೇಳಿದ್ದಾನೆ. ಆಗ ಆತನ ನಡತೆಯನ್ನು ನೋಡುವದಕ್ಕಾಗಿ, ಅಗೋ, ಆ ದೂರದ ಕಿಡಿಕೆಯ ಮರೆಗೆ ನೀವು ನಿಂತುಕೊಳ್ಳಿರಿ. ನಾನು ಇದೇ ದಿವಾಣ ಖಾನೆಯಲ್ಲಿ ಮೃಗೇಂದ್ರನನ್ನು ಕರಕೊಂಡು ಬರುತ್ತೇನೆ, ಎಂದು ಹೇಳಿದಳು. ತರುಣಿಯಾದ ತನ್ನ ಸುಂದರ ಪತ್ನಿಯ ಬಳಿಗೆ, ಮಧ್ಯರಾತ್ರಿಯಲ್ಲಿ ಮೃಗೇಂದ್ರನು ಬರುವದೇ, ಮೊದಲು ವಿಶಾಖಾನಂದನ ವಿಕಲ್ಪಕ್ಕೆ ಕಾರಣವಾಯಿತು.

ಹೀಗೆ ವಿಕಲ್ಪದ ಬಾಧೆಯಿಂದ ಹಲವು ಕಲ್ಪನೆಗಳನ್ನು ಕಲ್ಪಿಸುತ್ತ ಮಂತ್ರಿಯು ಚಿಂತಾಮಗ್ನನಾಗಿ ಮಧ್ಯರಾತ್ರಿಯು ಯಾವಾಗ ಬಂದೀತೆಂದು ಎದುರುನೋಡುತ್ತಿರಲು, ಹೊತ್ತು ಮುಣುಗಿತು. ಸಂಶಯ ಪಿಶಾಚದ ಬಾಧೆಯಿಂದ ಪೀಡಿತನಾಗಿದ್ದ ಆತನಿಗೆ ಊಟ ಉಡಿಗೆಗಳು ಬೇಡಾದವು. ಆತನು ಮಧ್ಯರಾತ್ರಿಯ ಸುಮಾರಕ್ಕೆ ಆ ಕಿಡಿಕೆಯ ಮರೆಗೆ ನಿಂತುಕೊಂಡು ಮೃಗೇಂದ್ರನ ಬರವನ್ನು ಎದುರು ನೋಡಹತ್ತಿದನು. ಅತ್ತ ಮೃಗೇಂದ್ರನು, ತನ್ನ ಹೊಟ್ಟೆಯಮಗಳಂತೆ ಇದ್ದ ಪ್ರಮೀಳೆಯು ತನ್ನನ್ನು ಯಾಕೆ ಕರೆಸಿದಳೋ, ಎಂದು ಆಲೋಚಿಸುತ್ತ ಮಧ್ಯರಾತ್ರಿಯಾಗಲು, ದಕ್ಷಿಣದಿಕ್ಕಿನ ಗುಪ್ತದ್ವಾರದಿಂದ ಮಂತ್ರಿಯ ಮಂದಿರವನ್ನು ಪ್ರವೇಶಿಸಿ, ದಿವಾಣಖಾನೆಗೆ ಬಂದನು. ಆ ಸರಳ ಹೃದಯದ ಭೂಪತಿಯು ಬರಬರುತ್ತ ಸ್ವಾಭಾವಿಕವಾಗಿ ಪ್ರಮೀಳೆಯ ದಾಸಿಯಾದ ಕುರಂಗಿಯನ್ನು ಕುರಿತು—ಕುರಂಗೀ, ಮಂತ್ರಿಗಳು ಮಲಗಿಕೊಂಡಿರುವರೇನು, ಎಂದು ಕೇಳಲು, ಅದನ್ನು ಕೇಳಿ, ವಿಶಾಖಾನಂದನು ಸಂತಾಪಗೊಂಡನು. ಮೃಗೇಂದ್ರನು ದಿವಾಣಖಾನೆಗೆ ಹೋಗಿ, ತನ್ನ ಹೊಟ್ಟೆಯ ಮಗಳ ಬಳಿಯಲ್ಲಿ ಕುಳಿತುಕೊಳ್ಳುವಂತೆ ಪ್ರಮೀಳೆಯ ಬಳಿಯಲ್ಲಿ ಸಲಿಗೆಯಿಂದ ಕುಳಿತುಕೊಂಡನು. ದಿವಾಣಖಾನೆಗೂ, ಮಂತ್ರಿಯು ನೋಡುತ್ತ ನಿಂತಿದ್ದ ಕಿಡಿಕೆಗೂ ಬಹಳ ದೂರವಿದ್ದದ್ದರಿಂದ, ಮೃಗೇಂದ್ರ–ಪ್ರಮೀಳೆಯರು ಆಡುವ ಮಾತುಗಳು ವೃದ್ಧಮಂತ್ರಿಗೆ ಕೇಳದೆ, ಅವರ ಕೃತಿಗಳು ಮಾತ್ರ ಆತನ ಕಣ್ಣಿಗೆ ಕಾಣುತ್ತಿದ್ದವು. ಈ ಸ್ಥಿತಿಯು ಅನರ್ಥಕ್ಕೆ ಕಾರಣವಾಗಿ, ಪ್ರಮೀಳೆಯ ದುಷ್ಟಬಯಕೆಯು ಕೈಗೂಡಿತು. ಪ್ರಮೀಳೆಯು ಮೃಗೇಂದ್ರನನ್ನು ವಂಚಿಸಿದ ಚಾತುರ್ಯವನ್ನು ವರ್ಣಿಸುವ ಗೊಡವಿಗೆ ನಾವು ಹೋಗುವದಿಲ್ಲ. ಆ ಹೊಯ್‌ಮಾಲೆಯು ಮಾತಾಡುತ್ತಾಡುತ್ತ ಕಣ್ಣೀರು ಸುರಿಸಲು, ಮೃಗೇಂದ್ರನು ಆಕೆಯನ್ನು ರಮಿಸಿ ಸಮಾಧಾನಪಡಿಸುವದಕ್ಕಾಗಿ ಆಕೆಯನ್ನು ತಬ್ಬಿಕೊಂಡು ಆಲಿಂಗಿಸಿ ಗಲ್ಲವನ್ನು ಹಿಡಿದು ಕುರುಳುಗಳನ್ನು ತೀಡಿ ಸದುಪದೇಶ ಮಾಡಿದನು. ಅದನ್ನು ನೋಡಿ ಸಂಶಯಗ್ರಸ್ತ ವಿಶಾಖಾನಂದನು ದುಃಖ–ಸಂತಾಪಗಳಿಂದ ಮೈಮರೆತು ಒಮ್ಮೆಲೆ ಹಿಂದಕ್ಕೆ ಬಿದ್ದನು.

ವಿಶಾಖಾನಂದನು ಎಚ್ಚತ್ತು ನೋಡುವಷ್ಟರಲ್ಲಿ ಮೃಗೇಂದ್ರನು ಹೊರಟುಹೋಗಿದ್ದನು. ಪ್ರಮೀಳೆಯು ಗಾಳಿಯನ್ನು ಹಾಕುತ್ತ ಪತಿಯ ಬಳಿಯಲ್ಲಿ ಕುಳಿತಿದ್ದಳು. ಆಕೆಯು ಪತಿಯನ್ನು ಕುರಿತು—ನೋಡಿದಿರಾ, ಮೃಗೇಂದ್ರನ ನೀಚತನವನ್ನು! ನಾಳೆ ನಾನು ಸಂಪೂರ್ಣ ವಶವಾಗುತ್ತೇನೆಂದು ಹೇಳಿದ್ದರಿಂದ ಆ ಅಧಮನು ಹೊರಟುಹೋದನು. ಬಹಳ ಹೇಳುವದರಿಂದೇನು? ನೀವು ನಾಳೆ ಸಂಜೆಯ ಒಳಗಾಗಿ ಮೃಗೇಂದ್ರನನ್ನು ನಾಶಗೊಳಿಸದಿದ್ದರೆ, ನಾನು ಪ್ರಾಣವನ್ನು ಇಡುವದಿಲ್ಲ, ಎಂದು ಹೇಳಿದಳು. ಅಷ್ಟರಲ್ಲಿ ಒಬ್ಬ ತರುಣಿಯು ಅಲ್ಲಿಗೆ ಬಂದು, ಮಂತ್ರಿಯನ್ನು

ನಮಿಸಿ, ಮುದ್ರೆ ಮಾಡಿದ ಒಂದು ಪತ್ರವನ್ನು ಆತನ ಕೈಯಲ್ಲಿ ಕೊಟ್ಟಳು. ಅದನ್ನು ಒಡೆದು ನೋಡಲು, ವಿಶಾಖಾನಂದನ ಮುಖವು ಪ್ರಫುಲ್ಲಿತವಾಯಿತು. ಇದನ್ನು ನೋಡಿ ಪ್ರಮೀಳೆಯು ತನ್ನ ಯುಕ್ತಿಯು ನಾಟಿತೆಂದು ಮನಸ್ಸಿನಲ್ಲಿ ಹಿಗ್ಗಿ, ಅರಿಯದವಳಂತೆ ಪತಿಯನ್ನು ಕುರಿತು—ಪ್ರಾಣಪ್ರಿಯಾ, ಪತ್ರವನ್ನು ನೋಡಿ ನಿಮಗೆ ಸಂತೋಷವಾದ ಕಾರಣವೇನು? ಅದರಲ್ಲಿ ಏನು ಬರೆದದೆ? ಪತ್ರವನ್ನು ಯಾರು ಕಳಿಸಿದ್ದಾರೆ? ಎಂದು ಕೇಳಿದಳು. ಆದಕ್ಕೆ ವಿಶಾಖಾನಂದನು–ಪ್ರಿಯೇ, ಮೃಗೇಂದ್ರನ ನಾಶಕ್ಕೆ ಅನುಕೂಲವಾದ ಸಂಗತಿಯು ಒದಗಿದ್ದರಿಂದ ನನಗೆ ಸಂತೋಷ ವಾಯಿತು. ಈ ಪತ್ರವನ್ನು ಅಶೋಕನ ತಾಯಿಯಾದ ಬುದ್ಧಿಮತಿಯೂ, ಗುರುವಾದ ಸಂಪುಷ್ಪಾಚಾರ್ಯನೂ ಕೂಡಿ ಕಳಿಸಿರುವರು. ನಾಳಿನ ಸಂಜೆಯವರೆಗೆ ಅಶೋಕನ ಸೈನ್ಯವು ಸಂಪುಷ್ಪಾಚಾರ್ಯನ ಅಂಕಿತದಲ್ಲಿರುವದಂತೆ. ಕಲಿಂಗ ವಿಜಯಕ್ಕೆ ಸಹಾಯಮಾಡಿದರೆ, ಕಲಿಂಗದ ಪಟ್ಟವನ್ನು ನನಗೆ ಕೊಡಲು ಆಚಾರ್ಯನು ಒಪ್ಪಿಕೊಂಡಿದ್ದಾನೆ. ಇನ್ನು ನೀನು ಕಲಿಂಗದೇಶದ ರಾಣಿಯಾಗುವೆ, ಅನ್ನಲು, ಪ್ರಮೀಳೆಯು ಆಶ್ಚರ್ಯಪಟ್ಟಂತೆ ತೋರಿಸಿ—ಅಪ್ಪಯ್ಯಾ! ಬದುಕಿದೆನು. ಆ ನೀಚ ಮೃಗೇಂದ್ರನ ನಾಶವಾದರೆ ನನ್ನ ಪಾತಿವ್ರತ್ಯದ ರಕ್ಷಣ ವಾದಂತಾಗುವದು; ಪಾತಿವ್ರತ್ಯಕ್ಕಿಂತ ಕಲಿಂಗದೇಶದ ರಾಣಿಯ ಪದವಿಯೇನು ನನಗೆ ಹೆಚ್ಚಿನದಲ್ಲ. ಆದರೆ ಪ್ರಿಯರೇ, ಈ ಕಾರ್ಯಕ್ಕೆ ವಿಲಂಬವು ಬೇಡ. ಮದ್ದಿನ, ಹಾಗು ಶಸ್ತ್ರಾಗಾರದ, ಅದರಂತೆ ಗುಪ್ತದ್ವಾರಗಳ ಕೀಲಿಯ ಕೈಗಳನ್ನು ನನಗೆ ಕೊಡಿರಿ, ಅಂದರೆ ನಿಮ್ಮ ಪ್ರೇಮವು ನನ್ನ ಮೇಲೆ ಇರುವದೆಂದು ತಿಳಿಯುವೆನು. ಅನ್ನಲು, ವಿಶಾಖಾನಂದನು ದೇಶದ್ರೋಹದ ಆ ಕಾರ್ಯವನ್ನು ಮಾಡಲಿಕ್ಕೆ ಹಿಂದೆಮುಂದೆ ನೋಡಹತ್ತಿದನು; ಆದರೆ ದುಷ್ಟ ಪ್ರಮೀಳೆಯು ಆತನನ್ನು ತನ್ನ ಬಲೆಯಲ್ಲಿ ಪೂರಾಹಿಡಿದು ಬಿಟ್ಟಿದ್ದರಿಂದ, ಡೋಕಾರಿತನ ಮಾಡಿ ಆಕೆಯು ಪತಿಯ ಬಳಿಯಲ್ಲಿದ್ದ ಮೂರೂ ಕೀಲಿಯಕೈಗಳನ್ನು ಇಸಕೊಂಡಳು. ಕೀಲಿಗಳು ತನ್ನ ಕೈಯಲ್ಲಿ ಬಿದ್ದದ್ದೊಂದೇ ತಡ, ಆಕೆಯು ಕ್ಷಣವಾದರೂ ಅಲ್ಲಿ ನಿಲ್ಲದೆ, ವಾಯುವೇಗದಿಂದ ಎಲ್ಲಿಗೋ ಹೊರಟುಹೋದಳು!

ಕಲಿಂಗವಿಜಯ

ರಾಜಪತ್ನಿಯನ್ನೂ, ರಾಜಪುತ್ರಿಯಾದ ಪ್ರಣಯಿನಿಯನ್ನೂ ಕೂಡಲೆ ಹರಿದ್ವಾರಕ್ಕೆ ಕಳಿಸಿಕೊಡಬೇಕೆಂದು ವಿಶಾಖಾನಂದನು ಹೇಳಿದ್ದು ಮೃಗೇಂದ್ರನಿಗೆ ಆಶ್ಚರ್ಯಕರವಾಗಿ ತೋರಿದಂತೆ, ಅಶೋಕನು ತನ್ನನ್ನು ಮೋಸಗೊಳಿಸುತ್ತಿರಬಹುದೆಂಬ ಮಾತೂ ಆತನಿಗೆ ಸಂಭವವಾಗಿ ತೋರಿತು. ಆದ್ದರಿಂದ ಆತನು ಅರಮನೆಗೆ ಹೋದಕೂಡಲೆ ಅಂತಃಪುರಕ್ಕೆ ಹೋಗಿ, ಈ ಮಾತಿನ ವಿಷಯವಾಗಿ ತನ್ನ ಹೆಂಡತಿಯಾದ ಇಂದುಮತಿಯನ್ನು ಕೇಳಿದನು. ಇಂದುಮತಿಯು ಬಹು ವಿಚಾರಿಯು ಆಕೆಯು ವಿಶಾಖಾನಂದನ ತರ್ಕಕ್ಕೆ ಒಪ್ಪಿಕೊಂಡು, ತನ್ನ

ಪುತ್ರಿಯಾದ ಪ್ರಣಯಿನಿಯೊಡನೆ ವೇಷಾಂತರದಿಂದ ಹರಿದ್ವಾರಕ್ಕೆ ಹೊರಟಳು. ಘನಶ್ಯಾಮನೆಂಬವನೊಬ್ಬ ನಂಬಿಗೆಯ ಸೇವಕನು ಅವರ ಅಂಗರಕ್ಷಕನಾಗಿ ಹೊರಟಿದ್ದನು. ಈ ಮೇರೆಗೆ ಅತ್ಯಂತ ಪ್ರೀತಿಪಾತ್ರಳಾದ ಹೆಂಡತಿಯನ್ನೂ, ಅತ್ಯಂತ ವಾತ್ಸಲ್ಯದ ಮಗಳನ್ನೂ ಕಳಿಸಿದ ಮೃಗೇಂದ್ರನು ಆ ದಿನ ರಾತ್ರಿ ಅಸಮಾಧಾನದಿಂದ ಮಲಗಿಕೊಂಡಿದ್ದನು. ರಾತ್ರಿ ಆರು ತಾಸು ಮೀರಿ ಏಳರ ಅಮಲು ಆಗಿದೆ, ಮೃಗೇಂದ್ರನಿಗೆ ಸ್ವಲ್ಪ ಕಣ್ಣಿಗೆ ಕಣ್ಣು ಹತ್ತಿದಂತೆ ಆಗಿ ಸ್ವಪ್ನವು ಬಿದ್ದಿದೆ, ಅಶೋಕನು ಒಪ್ಪಂದಕ್ಕೆ ಒಪ್ಪಿಕೊಂಡದ್ದಕ್ಕಾಗಿ ಸ್ವಪ್ನದಲ್ಲಿಯೂ ಮೃಗೇಂದ್ರನಿಗೆ ಆಶ್ಚರ್ಯವಾಗತೊಡಗಿದೆ. ''ಒತ್ತಾಯದಿಂದ ಬೌದ್ಧಧರ್ಮವನ್ನು ಹಬ್ಬಿಸಲಿಕ್ಕಿಲ್ಲೆಂ''ಬದಿಷ್ಟೇ ಕರಾರಿನಿಂದ ಅಶೋಕನೊಡನೆ ಒಪ್ಪಂದ ಮಾಡಿಕೊಳ್ಳಬೇಕೆಂದು ಅಭಿಮಾನಿಯಾದ ಮೃಗೇಂದ್ರನು ಸ್ವಪ್ನದಲ್ಲಿಯೇ ನಿಶ್ಚಯಿಸತೊಡಗಿದ್ದಾನೆ. ಅಷ್ಟರಲ್ಲಿ ದುಷ್ಟಳಾದ ಪ್ರಮೀಳೆಯು ಮೋಸದಿಂದ ಗಂಡನ ಕೈಯೊಳಗಿಂದ ಇಸಕೊಂಡಿದ್ದ ಕೀಲಿಯಕೈಗಳಿಂದ ಇಂದ್ರಪುರದ ಕೋಟೆಯೊಳಗಿನ ಮದ್ದಿನ ಸಂಗ್ರಹಾಲಯಗಳಿಗೆ ಬೆಂಕಿಹಚ್ಚಿಸಿ, ಶಸ್ತ್ರಾಸ್ತ್ರಗಳನ್ನು ಕೋಟೆಯೊಳಗಿನ ಹೊಂಡದಲ್ಲಿ ಚಲ್ಲಿಸಿ, ಕೋಟೆಯ ಗುಪ್ತದ್ವಾರಗಳನ್ನು ತೆರೆದಿಡಿಸಿದಳು. ಒಳಸಂಚಿನಂತೆ ಮೊದಲೇ ಕಾದುಕೊಂಡಿದ್ದ ಬುದ್ಧಿಮತಿಯೂ, ಸಂಪುಷ್ಟಾಚಾರ್ಯನೇ ಮೊದಲಾದ ಬೌದ್ಧಶ್ರಮಣರೂ ಭಯವಿಲ್ಲದೆ ಬಡಬಡ ಕೋಟೆಯನ್ನು ಪ್ರವೇಶಿಸಿ ಕೈಗೆಸಿಕ್ಕವರನ್ನು ತುಂಡರಿಸುತ್ತ ಮೃಗೇಂದ್ರನನ್ನು ಸಂಹರಿಸುವದಕ್ಕಾಗಿ ಆತನ ಶಯನಮಂದಿರದ ಕಡೆಗೆ ಹೊರಟರು. ತಾನು ಕಲಿಂಗದ ರಾಣಿಯಾಗಬೇಕೆಂಬ ದುಷ್ಟ ಮಹಾತ್ವಾಕಾಂಕ್ಷೆಯ ಬಲೆಗೆ ಬಿದ್ದು ವಿವೇಕಭ್ರಷ್ಟಳಾಗಿದ್ದ ಪ್ರಮೀಳೆಯೂ, ರಣರಕ್ಕಸಿಯಂತೆ ಖಡ್ಗಪಾಣಿಯಾಗಿ ಹಾದಿಯನ್ನು ತೋರಿಸುತ್ತ ಎಲ್ಲರ ಮುಂದೆ ಸಾಗಿದ್ದಳು. ಇತ್ತ ಮೃಗೇಂದ್ರನು, ಸ್ವಪ್ನದಲ್ಲಿ ಒಡಂಬಡಿಕೆಗಾಗಿ ತನ್ನ ಬಳಿಗೆ ಬಂದಿದ್ದ ಅಶೋಕನನ್ನು ಪ್ರೇಮದಿಂದ ಅಪ್ಪಿಕೊಳ್ಳುವದಕ್ಕಾಗಿ ದಿಗ್ಗನೆ ಎದ್ದು ಕೈಗಳನ್ನು ಭರದಿಂದ ಮುಂದಕ್ಕೆ ಚಾಚಲು, ಒಬ್ಬ ತಪೋಧನನು ಆತನ ಕೈಗಳನ್ನು ಹಿಡಿದು—ಅರಸನೇ, ಇದು ಅಶೋಕನನ್ನು ಅಪ್ಪಿಕೊಳ್ಳುವ ಸಮಯವಲ್ಲ, ಆ ಬೌದ್ಧಭೂಪತಿಯ ಸೈನಿಕರು ಅರಮನೆಯಲ್ಲೆಲ್ಲ ನಿನ್ನನ್ನು ಹುಡುಕುತ್ತ ಗೊಂದಲಹಾಕಹತ್ತಿದ್ದಾರೆ, ಅನ್ನಲು, ಮೃಗೇಂದ್ರನು ಕಣ್ಣುಗಳನ್ನು ತೆರೆದು—''ಗುರುವರ್ಯರೇ'' ಎಂದು ಕರೆಯಲು, ತಪೋಧನನು—ಅಹುದು, ಅವನೇ ನಾನು ಇರುತ್ತೇನೆ; ಆದರೆ ಆಶ್ಚರ್ಯಪಡುವದಕ್ಕೆ, ಅಥವಾ ಶಿಷ್ಟಾಚಾರದ ಕುಶಲಪ್ರಶ್ನೆಗಳನ್ನು ಮಾಡುವದಕ್ಕೆ ಈಗ ಅವಕಾಶವಿಲ್ಲ, ನಿನಗೆ ಕಠಿಣ ಕಾಲವು ಬಂದೊದಗಿದೆ. ನಾನು ತಂದಿರುವ ಬೌದ್ಧಭಿಕ್ಷುವಿನ ಈ ವಸ್ತ್ರಗಳನ್ನು ಒಂದು ಕ್ಷಣವಾದರೂ ತಡಮಾಡದೆ ಧರಿಸಿ, ಪೂರ್ವದಿಕ್ಕಿನ ಗುಪ್ತದ್ವಾರದಿಂದ ಪಾರಾಗಿಹೋಗು. ವಿಶ್ವಾಸಘಾತಕಿಗಳು ಸರ್ವಸ್ವದ ಘಾತಮಾಡಿದ್ದಾರೆ. ಎಂದು ನುಡಿದು, ಚಿದಾನಂದಸ್ವಾಮಿಗಳು ತಾವು ತಂದಿದ್ದ ವಸ್ತ್ರಗಳನ್ನು ಮುಂದೆ ಮಾಡಿದರು. ಆಗ

ಮೃಗೇಂದ್ರ—ಗುರುವರ್ಯರೇ, ಅಂಜುಬುರಕನಂತೆ ಈಗ ನಾನು ಯಾಕೆ ಓಡಿ ಹೋಗಬೇಕು?

ಚಿದಾನಂದ—ಯಾಕೆಂದು ಪ್ರಶ್ನೆ ಮಾಡುತ್ತ ಕಾಲಹರಣ ಮಾಡಬೇಡ. ಅಶೋಕನ ಸೈನಿಕರಿಂದಲೂ, ಬೌದ್ಧಭಿಕ್ಷುಗಳಿಂದಲೂ ಇಂದ್ರಭುವನವು ತುಂಬಿಹೋಗಿದೆ. ವಿಶ್ವಾಸ ಘಾತಕಿಗಳು ನಿನ್ನ ಮದ್ದಿನ ಸಂಗ್ರಹಾಲಯಗಳಿಗೆ ಬೆಂಕಿಯನ್ನು ಹಚ್ಚಿ ಶಸ್ತ್ರಾಸ್ತ್ರಗಳನ್ನು ಹೊಂಡದಲ್ಲಿ ಚಲ್ಲಿಕೊಟ್ಟು, ಕೋಟೆಯ ಗುಪ್ತದ್ವಾರಗಳನ್ನು ತೆರೆದುಬಿಟ್ಟಿದ್ದಾರೆ. ಕ್ರೂರರಾದ ಬೌದ್ಧ ಭಿಕ್ಷುಗಳು ಮದ್ದಿನ ಜ್ಯೋತಿಯ ಭಯಂಕರ ಪ್ರಕಾಶದಲ್ಲಿ ವೇದಧರ್ಮಿಗಳ ಚಂಡುಗಳನ್ನು ತುಂಡರಿಸಹತ್ತಿರುವರು.

ಮೃಗೇಂದ್ರ—ಇಂಥ ಹೊತ್ತಿನಲ್ಲಿ ನಾನು ಓಡಿಹೋಗಬೇಕೇ?

ಚಿದಾನಂದ—ವೇಧದರ್ಮವು ನಾಮಶೇಷವಾಗಬಾರದೆಂದು ನೀನು ಇಚ್ಛಿಸುತ್ತಿದ್ದರೆ ಓಡಿಹೋಗಲೇಬೇಕು.

ಮೃಗೇಂದ್ರ—ಈ ಅಭಿಮಾನಿಯಾದ ಮೃಗೇಂದ್ರನಿಗೆ ಸಮರಭೂಮಿಯಿಂದ ಓಡಿಹೋಗಿ ಗೊತ್ತಿಲ್ಲ.

ಚಿದಾನಂದ—ಈಗ ನಡೆದದ್ದು ಸಮರವಲ್ಲ, ಕುತ್ತಿಗೆಗೊಯ್ಯತನವು, ಇದರೊಳಗಿಂದ ನೀನು ಪಾರಾಗಲೇಬೇಕು. ಮೃಗೇಂದ್ರರಾಜನು ಮೃತನಾದರೆ ವೇದಧರ್ಮವು ನಾಶವಾಯಿತೆಂದು ತಿಳಿಯಬೇಕು. ಧರ್ಮರಕ್ಷಣಕ್ಕಾಗಿ ನೀನು ಓಡಿಹೋಗದಿದ್ದರೆ ನಿರ್ವಾಹವಿಲ್ಲ.

ಈ ಮೇರೆಗೆ ನುಡಿದು ಚಿದಾನಂದಸ್ವಾಮಿಗಳು ಒತ್ತಾಯದಿಂದ ಮೃಗೇಂದ್ರನಿಗೆ ಬೌದ್ಧ ಭಿಕ್ಷುಗಳ ವಸ್ತ್ರಗಳನ್ನು ತೊಡಿಸಿದರು. ಮೃಗೇಂದ್ರನು ಮತ್ತೆ ಏನೋ ಮಾತಾಡಬೇಕೆನ್ನುತ್ತಿರಲು, ಚಿದಾನಂದರು—ಅರಸಾ, ಬಹಳ ಮಾತಾಡಬೇಡ. ಯಾವ ವಿಚಾರಕ್ಕೂ ಬೀಳಬೇಡ. ಪೂರ್ವದಿಕ್ಕಿನ ಗುಪ್ತದ್ವಾರಕ್ಕೆ ಹೋಗಿ, ಇಂದಿನ ಬೌದ್ಧಸೈನಿಕರ ಗುರುತಿನ "ಪ್ರಮೀಳೆ" ಎಂಬ ಶಬ್ದವನ್ನು ನುಡಿದು ಪಾರಾಗಿ ಹೋಗು, ಅನ್ನಲು, ಮೃಗೇಂದ್ರನು ಗುರುವನ್ನು ಬಿಟ್ಟು ಹೋಗಲಾರದೆ ಅಲ್ಲಿಯೇ ನಿಂತುಕೊಂಡಿದ್ದನು. ಅಷ್ಟರಲ್ಲಿ ಶಯನಮಂದಿರದ ಬಾಗಿಲನ್ನು ತೆರೆದು ಬೌದ್ಧಭಿಕ್ಷುಗಳು ಕೈಯಲ್ಲಿ ಪ್ರಾಣವಿಘಾತಕವಾದ ಶಸ್ತ್ರಗಳನ್ನು ಧರಿಸಿ ಒಬ್ಬೊಬ್ಬರೇ ಒಳಗೆಬಂದು ತುಂಬಿಕೊಂಡರು! ಅವರು ಚಿದಾನಂದನನ್ನು ಮುತ್ತುತ್ತಿರಲು, ಪ್ರಮೀಳೆಯು ಕ್ರೂರರೂಪದಿಂದ ಅಲ್ಲಿಗೆ ಬಂದಳು. ಮೃಗೇಂದ್ರನ ಬೌದ್ಧವೇಷವು ಆಕೆಯನ್ನು ಮೋಸಗೊಳಿಸಿತು. ಎರಡು ಪಳ ಮುಂಚೆ ಬಂದಿದ್ದರೆ, ಮೃಗೇಂದ್ರನು ಆಕೆಯ ಕೈಯಲ್ಲಿ ಸಿಕ್ಕುಹೋಗುತ್ತಿದ್ದನು. ಪ್ರಮೀಳೆಯನ್ನು ನೋಡಿ ಮೃಗೇಂದ್ರನಿಗೆ ಪರಮಾಶ್ಚರ್ಯವಾಯಿತು. ಮೃಗೇಂದ್ರನು ಶಯನಮಂದಿರದಲ್ಲಿ ಸಿಕ್ಕೇಸಿಗುವನೆಂದು ಆಕೆಯು ಬಂದಿರಲು, ಮೃಗೇಂದ್ರನ ಬದಲು ಒಬ್ಬ ಗೋಸಾವಿಯು ಆಕೆಯ ಕಣ್ಣಿಗೆ ಬಿದ್ದನು. ಅಷ್ಟರಲ್ಲಿ ಇಂದುಮತಿಯೂ, ಪ್ರಣಯಿನಿಯೂ ಇಂದೇ ಇಂದ್ರಭುವನದಿಂದ ಹೊರಟು ಹೋಗಿರುವರೆಂಬ ಸುದ್ದಿಯು ಪ್ರಮೀಲೆಯ ಕಿವಿಗೆ ಮುಟ್ಟಿತು. ಅದರಿಂದ ಪ್ರಮೀಳೆಯು ನಿರಾಶೆಪಟ್ಟು, ಸಂತಾಪದಿಂದ ಗೋಸಾವಿಯನ್ನು ಕುರಿತು—ಗೋಸಾವ್ಯಾ, ಮೃಗೇಂದ್ರನು ಎಲ್ಲಿದ್ದಾನೆ ಎಂದು ಕೇಳಲು, ಚಿದಾನಂದಸ್ವಾಮಿಗಳು ಶಾಂತಚಿತ್ತದಿಂದ ಸುಮ್ಮನೆ ನಿಂತುಕೊಂಡಿದ್ದರು. ಆಗ ಪ್ರಮೀಳೆಯು—

ನೀನು ಹೀಗೆ ಬರಿಯಬಾಯಿಂದ ಕೇಳಿದರೆ ಮಾತಾಡಲಿಕ್ಕಿಲ್ಲ, ಎಂದು ನುಡಿದು ಒರೆಯಿಂದ ಖಡ್ಗವನ್ನು ಹಿರಿದಳು. ಆದರೂ ಚಿದಾನಂದರ ಶಾಂತಿಯ ಮೌನಕ್ಕೆ ಭಂಗಬರಲಿಲ್ಲ. ಆಗ ಪ್ರಮೀಳೆಯು ಚಿದಾನಂದರ ಮೈಮೇಲೆ ಏರಿಹೋಗಿ—ನಿನಗೆ ಜೀವದ ಆಶೆಯಿದ್ದರೆ, ಮೃಗೇಂದ್ರನು ಎಲ್ಲಿದ್ದಾನೆಂಬದನ್ನು ಹೇಳು, ಎಂದು ನುಡಿಯಲು, ಅತ್ತ ಭಿಕ್ಷುವೇಷದ ಮೃಗೇಂದ್ರನು ಪ್ರಮೀಳೆಯ ಮೇಲೆ ಹಲ್ಲುಕಡಿಯಹತ್ತಿದನು. ಅಷ್ಟರಲ್ಲಿ ಚಿದಾನಂದರು ಪ್ರಮೀಳೆಯನ್ನು ಕುರಿತು—ಎಲೈ ದುಷ್ಟಸ್ತ್ರೀಯೇ, ಒಂದು ಹೆಜ್ಜೆಯನ್ನು ಕೂಡ ಮುಂದಕ್ಕೆ ಇಡಬೇಡ, ಎಂದು ನುಡಿದು, ಮೃಗೇಂದ್ರನಿಗೆ ಹೊರಟು ಹೋಗಲು ಕಣ್ಣಸನ್ನೆ ಮಾಡಿದರು. ಆದರೆ ಮೃಗೇಂದ್ರನು ಅಲ್ಲಿಂದ ಉಲುಕಲಿಲ್ಲ. ಮುಂದೆ ಏನು ಮಾಡಬೇಕೆಂಬದನ್ನರಿಯದೆ ಭಿಕ್ಷುಗಳ ಗುಂಪಿನಲ್ಲಿ ಆತನು ಸುಮ್ಮನೆ ನಿಂತುಕೊಂಡಿದ್ದನು. ಇತ್ತ ಪ್ರಮೀಳೆಯು ಚಿದಾನಂದ ನನ್ನು ಕುರಿತು—ಎಲಾ ಗೋಸಾವ್ಯಾ, ಮುಂದಕ್ಕೆ ಹೆಜ್ಜೆಯನ್ನಿಡ ಬೇಡೆಂದು ಯಾರನ್ನು ಆಜ್ಞಾಪಿಸುತ್ತೀ, ಎಂದು ಖಡ್ಗವನ್ನೆತ್ತಿ ಹೊಡೆಯಹೋಗಲು, ಚಿದಾನಂದನು ನಿಂತ ಸ್ಥಳದಿಂದ ಉಲುಕದೆ ಅಧಿಕಾರಯುಕ್ತ ಸ್ವರದಿಂದ ಎಲೈ ಡಾಕಿನಿಯೇ, ಹಿಂದಕ್ಕೆ ಸರಿ. ಚಿದಾನಂದರ ಅಂಗಸ್ಪರ್ಶಮಾಡುವ ಸಾಹಸಕ್ಕೆ ನೀನು ಹೋಗಬೇಡ. ಈಪೊತ್ತಿನವರೆಗೆ ಯಾವ ಸ್ತ್ರೀಯ ನೆರಳೂ ಈ ದೇಹದ ಮೈ ಮೇಲೆ ಬಿದ್ದಿರುವದಿಲ್ಲ! ಖಡತರವಾದ ಬ್ರಹ್ಮಚರ್ಯವ್ರತದ ಬ್ರಹ್ಮಚಾರಿಯ ಅಂಗಸ್ಪರ್ಶವು ಎಷ್ಟು ಕಠೋರವಾಗಿರುತ್ತದೆಂಬದನ್ನು ನೀನು ಅರಿಯೆ. ಈ ಚಿದಾನಂದನ ಅಂಗಸ್ಪರ್ಶಮಾಡಿ, ಆತನ ಸಿಟ್ಟಿಗೆ ಕಾರಣಳಾಗುವದು ಹಿತಕರವಲ್ಲ ಎಂದು ನುಡಿದನು.

''ಚಿದಾನಂದ'' ಎಂಬ ಶಬ್ದವು ಕಿವಿಗೆ ಬಿದ್ದಕೂಡಲೆ ಪ್ರಮೀಳೆಯ ಸಿಟ್ಟು, ಹಿಟ್ಟು ಮುಕ್ಕಿತು! ಹರಿದ್ವಾರದ ಚಿದಾನಂದ ಸ್ವಾಮಿಗಳ ಅಧಿಕಾರವೇ ಅಂತಹದಿತ್ತು, ಅವರ ಬ್ರಹ್ಮ ತೇಜಸ್ಸು ಅಂಥ ಅದ್ಭುತವಾಗಿತ್ತು ವೇದ ಧರ್ಮಿಗಳು ಅವರನ್ನು ದೇವರಂತೆ ಮನ್ನಿಸುತ್ತಿದ್ದರು. ಬೌದ್ಧರು ಚಿದಾನಂದರ ಸತ್ವಕ್ಕೂ, ಅವರ ಬ್ರಹ್ಮತೇಜಸ್ಸಿಗೂ, ಅವರ ಅಧಿಕಾರಕ್ಕೂ ಬಹಳವಾಗಿ ಹೆದರುತ್ತಿದ್ದರು. 'ಚಿದಾನಂದ' ಎಂಬ ಶಬ್ದವನ್ನು ಕೇಳಿದ ಕೂಡಲೆ ಬೌದ್ಧ ಭಿಕ್ಷುಗಳು ಒಂದೊಂದೇ ಹೆಜ್ಜೆಯನ್ನು ಹಿಂದಕ್ಕೆ ಸರಿಯಹತ್ತಿದರು. ಆಗ ಪ್ರಮೀಳೆಯ ಕೈಕಾಲುಗಳೇ ಹೋದಂತಾಗಿ ಆಕೆಯು ತನ್ನ ಬಳಿಯಲ್ಲಿ ನಿಂತಿದ್ದ ಬೌದ್ಧಸೈನಿಕರಿಗೆ, ಚಿದಾನಂದರನ್ನು ಅಶೋಕನ ಪಾಳಯಕ್ಕೆ ಹಿಡಿದೊಯ್ಯಲು ಆಜ್ಞಾಪಿಸಿ, ಮೃಗೇಂದ್ರನನ್ನು ಹುಡುಕುವದಕ್ಕಾಗಿ ತಾನು ಬೇರೊಂದು ಕಡೆಗೆ ಹೋಗಹತ್ತಿದಳು. ಆಗ ಚಿದಾನಂದರು ಆಕೆಯನ್ನು ಕುರಿತು—ದುಷ್ಟ ಪ್ರಮೀಳೆಯೇ, ನಿನ್ನ ಕರ್ಮದ ಫಲವನ್ನು ನೀನು ಅನುಭವಿಸು ವೆಯೆಂದು ನಾನು ಹೇಳುವ ಕಾರಣವಿಲ್ಲ; ಆದರೆ ಕಲಿಂಗ ದೇಶದ ರಾಣಿಯಾದೆನೆಂಬ ಮದದಿಂದ ನೀಚಕರ್ಮಗಳನ್ನು ಮಾಡುವ ಗೊಡವಿಗೆ ಇನ್ನು ಹೋಗಬೇಡ; ಯಾಕಂದರೆ ಇಂದು ಮತಿದೇವಿಯೂ, ಪ್ರಣಯಿನಿಯೂ ನಿನ್ನ ಕೈಗೆ ಸಿಗಲಾರರು. ಮೃಗೇಂದ್ರನು ಸುರಕ್ಷಿತವಾಗಿ ಇರುತ್ತಾನೆ. ಆತನು ಈ ಕಪಟ ಪ್ರಬಂಧದಿಂದ ಪಾರಾಗಿ, ಪುನಃ ಸದ್ಧರ್ಮದ ಪ್ರಭಾವವನ್ನು ಆರ್ಯಾವರ್ತದಲ್ಲಿ ಕೆಡವುವನು–ಕೆಲಕಾಲ ಬೌದ್ಧಧರ್ಮವು ಪ್ರಬಲವಾಗುವ ಯೋಗವಿರುತ್ತದೆ. ವೇದಧರ್ಮವು ಪುನಃ ಪ್ರಕಾಶಿಸುವ ಯೋಗವನ್ನು ಈಶ್ವರನು ಬೇಗನೆ ತರುವನು. ಧರ್ಮಪ್ರಭಾವದ

ಕಾರ್ಯದಲ್ಲಿ ನಾವು ಜೀವವನ್ನು ಹುಲ್ಲಿಗೆ ಸರಿಮಾಡುವೆವು. ಅಪ್ರಬುದ್ಧ ಪ್ರಮೀಳೆಯೇ, ನಿನ್ನ ವಿಶ್ವಾಸಘಾತದ ನಡತೆಗಳೆಲ್ಲ ನಮಗೆ ತಿಳಿದಿವೆ. ನೀನು ಧರ್ಮದ್ರೋಹಿಯು, ದೇಶ ದ್ರೋಹಿಯು, ಸ್ವಾಮಿದ್ರೋಹಿಯು, ಪತಿದ್ರೋಹಿಯು ಇರುತ್ತೀ. ನಿನ್ನೊಬ್ಬಳ ಅವಿಚಾರದ ಫಲವನ್ನು ಕಲಿಂಗದೇಶವೊಂದೇ ಅಲ್ಲ, ವೇದಧರ್ಮಿಗಳೆಲ್ಲರೂ ಕೆಲವು ದಿನ ಅನುಭವಿಸ ಬೇಕಾಯಿತು. ನಡೆ, ನಿನ್ನ ಅಮಂಗಲ ಮುಖವನ್ನು ನನಗೆ ತೋರಿಸಬೇಡ; ಎಂದು ನುಡಿಯುತ್ತಿರಲು, ಪ್ರಮೀಳೆಯು ಚಿದಾನಂದರ ಎದುರಿಗೆ ನಿಲ್ಲಲಾರದೆ ಹೊರಟುಹೋದಳು. ಇತ್ತ ಚಿದಾನಂದರು ತಾವಾಗಿ ಬೌದ್ಧ ಸೈನಿಕರ ಸ್ವಾಧೀನವಾದರು.

ಹೀಗೆ ಬುದ್ಧಿಮತಿರಾಣಿಯೂ, ಸಂಪುಷ್ಪಾಚಾರ್ಯನೂ ಪ್ರಮೀಳೆಯನ್ನು ಒಡಕೊಂಡು ಇಂದ್ರಭುವನವನ್ನು ಮೋಸದಿಂದ ಕೈಸೇರಿಸಿಕೊಂಡ ಸುದ್ದಿಯು ಅಶೋಕನಿಗೆ ಗೊತ್ತಿದ್ದಿಲ್ಲ. ತನ್ನ ಮಂತ್ರಿಯಾದ ರಾಧಾಗುಪ್ತನೊಡನೆ ಆ ರಾತ್ರಿ ಆಲೋಚಿಸಿ ಒಪ್ಪಂದದ ಕರಾರುಗಳನ್ನು ಬರೆಸುವದರೊಳಗೆ ರಾತ್ರಿಯು ಬಹಳವಾದದ್ದರಿಂದ, ಮರುದಿನ ಬೆಳಗಾದ ಬಳಿಕ ಆತನು ಎದ್ದನು. ಆಗ ಜಗತ್ತು ಆತನಿಗೆ ಹೊಸದಾಗಿ ತೋರಿತು. ಮೋಸದಿಂದ ಇಂದ್ರಭುವನವು ಕೈಸೇರಿದ ಸುದ್ದಿಯನ್ನು ಮೋಹನನು ಹೇಳಲು, ಅಶೋಕನಿಗೆ ಪರಮಾಶ್ಚರ್ಯವಾಯಿತು. ಮೋಸದ ಗೆಲವು ಆತನ ಆನಂದಕ್ಕೆ ಕಾರಣವಾಗಲಿಲ್ಲ. ಆದರೂ ಆತನು ತನ್ನ ಸೇವಕನಾದ ಮೋಹನನನ್ನು ಕುರಿತು—ಮೋಹನ, ಆ ಹಸರು ಬಣ್ಣದ ಡೇರೆಯಲ್ಲಿ ದರ್ಬಾರು ನೆರೆಯುವ ವ್ಯವಸ್ಥೆ ಮಾಡಿ, ಕಲಿಂಗ ವಿಜಯದಿಂದ ಸಂತೋಷಭರಿತರಾಗಿ ನನ್ನ ದರ್ಶನಕ್ಕೆ ಬರುತ್ತಿರುವ ಆ ಜನಸಮೂಹ ದೊಳಗಿನ ಮುಖ್ಯರನ್ನು ಅಲ್ಲಿ ಕುಳ್ಳಿರಿಸುವಹಾಗೆ ಮಾಡು; ಮತ್ತು ರಾಧಾಗುಪ್ತ ಮಂತ್ರಿಯೂ, ಸರದಾರಮಂಡಲವೂ ದರ್ಬಾರಕ್ಕೆ ಬರುವಂತೆ ಹೇಳಿಕಳಿಸು. ನಾನು ಈಗಲೇ ಡೇರೆಗೆ ಹೋಗಿ ಬರುವೆನು; ಹೇಗೇ ಆಗಲಿ, ಮಗಧದೇಶಕ್ಕೆ ಜಯವನ್ನು ಸಂಪಾದಿಸಿಕೊಟ್ಟವರ ಅಭಿನಂದನವನ್ನು ಶಿಷ್ಟಾಚಾರದಂತೆ ಮಾಡತಕ್ಕದ್ದು. ಈವರೆಗೆ ಅಶೋಕನು ಸಂಪಾದಿಸಿದ ಜಯಕ್ಕೆ ಮೋಸದ ಈ ಕಲಿಂಗವಿಜಯವು ಕಲಂಕಪ್ರಾಯವಾಯಿತು, ಎಂದು ನುಡಿದು, ತನ್ನ ಡೇರೆಗೆ ಹೋದನು. ಸ್ವಲ್ಪ ಹೊತ್ತಿನಲ್ಲಿ ದರ್ಬಾರವು ಕೂಡಹತ್ತಿತು. ರಾಧಾಗುಪ್ತಮಂತ್ರಿಯೂ, ಕಲಿಂಗದೇಶದ ಯುದ್ಧದಲ್ಲಿ ಸೇರಿದ ಯಾವತ್ತು ಸರದಾರರರೂ ದರ್ಬಾರಕ್ಕೆ ಬಂದಿದ್ದರು. ನೆರೆದಿದ್ದ ಸರದಾರರನ್ನೂ, ವೀರರನ್ನೂ ಮುಖ್ಯವಾಗಿ ರಾಧಾಗುಪ್ತ ಮಂತ್ರಿಯನ್ನೂ ತಿರಸ್ಕಾರದಿಂದ ನೋಡುತ್ತ ಸಂಪುಷ್ಪಾಚಾರ್ಯರ ಸವಾರಿಯು, ಒಮ್ಮೆ ಬುದ್ಧಿಮತಿರಾಣಿಯೊಡನೆ, ಒಮ್ಮೆ ಪ್ರಮೀಳೆಯೊಡನೆ ಮಾತಾಡುತ್ತ ಒಂದು ಉಚ್ಚಾಸನದಲ್ಲಿ ಕುಳಿತುಕೊಂಡಿತು. ಅಷ್ಟರಲ್ಲಿ ಡೇರೆಯ ಬಾಗಿಲೊಳಗೆ ''ಮೌರ್ಯ ಕುಲೋತ್ಪನ್ನ ಮಗಧಾಧಿಪತಿ ಸಾಮ್ರಾಟ್ ಅಶೋಕನಿಗೆ ಜಯವಾಗಲಿ'' ಎಂದು ಸ್ತುತಿಪಾಠಕರು ಉಚ್ಚರಿಸಿದರು. ಅಶೋಕನು ಡೇರೆಯಲ್ಲಿ ಬಂದಕೂಡಲೆ ಯಾವತ್ತು ಸರದಾರರು ಎದ್ದುನಿಂತು, ಸ್ತುತಿಪಾಠಕರ ಜಯಶಬ್ದದ ಸಂಗಡಲೇ ಜಯಘೋಷವನ್ನು ಮಾಡಿದರು. ರಾಜಮಾತೆಯೂ, ಸಂಪುಷ್ಪಾಚಾರ್ಯನೂ ಪ್ರಸಂಗಕ್ಕೆ ಒಪ್ಪುವಂತೆ ಅಶೋಕನನ್ನು ಆಢ್ಯತೆಯಿಂದ ಆಶೀರ್ವದಿಸಿದರು. ಇಂದುಮತಿಯ ಮಗನಾದ ವೀತಾಶೋಕನು ಅಶೋಕನ

ಮಲತಮ್ಮನಾಗಿದ್ದನು. ಅಣ್ಣನಮೇಲೆ ಆತನ ಭಕ್ತಿ ಬಹಳ. ಅಶೋಕನ ಶುಭ್ರವಾದ ಸರ್ವಸಾಧಾರಣ ಉಡಿಗೆತೊಡಿಗೆಗಳನ್ನೂ, ಆತನ ಗಂಭೀರವಾದ ಮುಖಮುದ್ರೆಯನ್ನೂ, ಕಲಿಂಗವಿಜಯದಿಂದ ಆತನಿಗೆ ಪ್ರಾಪ್ತವಾದ ಚಕ್ರವರ್ತಿ ಪದವಿಯನ್ನೂ ನೋಡಿ, ವೀತಾಶೋಕನ ಕಣ್ಣುಗಳೊಳಗಿಂದ ಆನಂದಬಾಷ್ಪಗಳು ಉದುರುತ್ತಲಿದ್ದವು; ಆದರೆ ಇಂದುಮತಿಗೆ ಮಗನ ಈ ಸ್ಥಿತಿಯು ಅಸಹ್ಯವಾಗಿತ್ತು. ತನ್ನ ಮಗನು ಅಶೋಕನೊಡನೆ ದ್ವೇಷ ಮಾಡಬೇಕೆಂದು ಆಕೆಯು ಇಚ್ಛಿಸುತ್ತಿದ್ದಳು. ತಾನು ಬಿಂದುಸಾರನ ಹಿರಿಯ ಹೆಂಡತಿಯಿದ್ದು, ತನ್ನ ಮಗನಾದ ವೀತಾಶೋಕನಿಗೆ ಪಟ್ಟವಾಗದೆ, ಕೆಲವು ತಾಸು ಮೊದಲು ಹುಟ್ಟಿದನೆಂಬ ನೆವದಿಂದ ಅಶೋಕನಿಗೆ ಪಟ್ಟವಾದದ್ದು ಆಕೆಯ ಮತ್ಸರಕ್ಕೆ ಕಾರಣವಾಗಿತ್ತು. ಆಕೆಯು ಹೊರಗೆ ಅಶೋಕನನ್ನು ಪ್ರೀತಿಸುವಂತೆ ತೋರಿಸುತ್ತಿದ್ದರೂ, ಅಂತರಂಗದಲ್ಲಿ ಅಶೋಕನ ಮೇಲೆ ಹಲ್ಲುಕಡಿಯುತ್ತಿದ್ದಳು. ಹೊತ್ತು ಸಾಧಿಸಿ ಅಶೋಕನನ್ನು ಪಟ್ಟದಿಂದ ದೂಡಿ ತನ್ನ ಮಗನನ್ನು ಮಗಧದ ಸಿಂಹಾಸನದ ಮೇಲೆ ಕುಳ್ಳಿರಿಸಬೇಕೆಂದು ಆಕೆಯು ಎಣಿಕೆ ಹಾಕುತ್ತಲಿದ್ದಳು. ತಾನೂ ಸಂಪುಷ್ಪಾಚಾರ್ಯನೂ ಕಪಟ ಕೃತಿಯಿಂದ ಕಲಿಂಗವನ್ನು ಜಯಿಸಿರಲು, ಅಶೋಕನು ಚಕ್ರವರ್ತಿಯಾಗುವದು ಆಕೆಯ ಮನಸ್ಸಿನ ಅಸಮಾಧಾನಕ್ಕೆ ಕಾರಣವಾಯಿತು.

ಈ ಮೇರೆಗೆ ದರ್ಬಾರವು ನೆರೆದ ಬಳಿಕ ರಾಧಾಗುಪ್ತಮಂತ್ರಿಯು ಎದ್ದುನಿಂತು ಅಶೋಕನ ಮಹತ್ವವನ್ನು ವರ್ಣಿಸಿ, ಆತನ ಶೌರ್ಯಾದಿ ಗುಣಗಳನ್ನು ಹೊಗಳಿ, ಈ ಮೊದಲು ಯಾರಿಗೂ ದೊರೆಯದೆಯಿದ್ದ ಚಕ್ರವರ್ತಿ ಪದವಿಯು ದೊರೆತ ಬಗ್ಗೆ ಆತನನ್ನು ಹಲವು ವಿಧವಾಗಿ ಅಭಿನಂದಿಸಿದನು. ಮಂತ್ರಿಯ ಸ್ತುತಿಪಾಠವು ಇಂದುಮತಿಗೆ ಸೇರದಿದ್ದರೂ, ಆಕೆಯು ದರ್ಬಾರದಲ್ಲಿ ಮಾತಾಡದೆ ಬಾಯಿಮುಚ್ಚಿಕೊಂಡು ಸುಮ್ಮನೆ ಇರಬೇಕಾಯಿತು. ಸರದಾರರೂ, ಮಾಂಡಲಿಕರೂ ಅಶೋಕನನ್ನು ಮನಃಪೂರ್ವಕವಾಗಿ ಸ್ತುತಿಸಿದರು. ತಮ್ಮ ಪ್ರಯತ್ನದಿಂದ ಜಯವಾಗಿದ್ದು, ದರ್ಬಾರದ ಜನರು ತಮ್ಮ ಹೆಸರನ್ನು ಉಚ್ಚರಿಸದೆ, ಬರಿಯ ಅಶೋಕನ ಪುಣ್ಯ ಪ್ರತಾಪವನ್ನೇ ವರ್ಣಿಸಿದ್ದರಿಂದ ಇಂದುಮತಿಯೂ, ಸಂಪುಷ್ಪಾಚಾರ್ಯನೂ ಮನಸ್ಸಿನಲ್ಲಿ ನೊಂದುಕೊಂಡರು. ಅವರ ಮುಖಗಳು ನಿಸ್ತೇಜವಾದವು ಅವರು ಒಬ್ಬರಮುಖವನ್ನೊಬ್ಬರು ನೋಡಿ ಮನಸ್ಸಿನಲ್ಲಿ ಸಂತಾಪಗೊಳ್ಳುತ್ತಿರಲು, ದರ್ಬಾರದವರು ಅಶೋಕನ ಹೆಸರಿನಿಂದ ಮಾಡಿದ ಜಯಘೋಷದಿಂದ ಸಭಾಸ್ಥಾನವು ತುಂಬಿಹೋಗಿ ಸಭಿಕರ ಕಿವಿಗಳು ಗಡಚಿಕ್ಕಿದವು. ಸಭೆಯು ನಿಶ್ಶಬ್ದವಾದಮೇಲೆ ಅಶೋಕನು—ಆಚಾರ್ಯರೇ, ಮಾತೃಶ್ರೀಯವರೇ, ನೀವು ನಿಮ್ಮ ಯುಕ್ತಿಯಿಂದಲೂ, ಕುಮಾರ ವೀತಾಶೋಕನು ತನ್ನ ಪರಾಕ್ರಮದಿಂದಲೂ ಕಲಿಂಗ ದೇಶವನ್ನು ಜಯಿಸಿದಿರಿ. ಇದಕ್ಕಾಗಿ ಮಗಧ ಸಾಮ್ರಾಜ್ಯವು ನಿಮಗೆ ಋಣಿಯಾಗಿರುತ್ತದೆ. ನೀವು ಮಾಡಿದ ಯುಕ್ತಿಯನ್ನೂ, ವೀತಾಶೋಕನ ಪರಾಕ್ರಮವನ್ನೂ ನಿಮ್ಮ ಮುಖದಿಂದ ಕೇಳಬೇಕೆಂದು ಇಚ್ಛಿಸುತ್ತೇನೆ; ಆದರೆ ಸದ್ಯಕ್ಕೆ ಅದು ಬೇಡ. ಈಗ ಕಲಿಂಗದ ರಾಜ್ಯವ್ಯವಸ್ಥೆಯನ್ನು ಮಾಡಿ ಮೊದಲು ಪಾಟಲೀಪುತ್ರಕ್ಕೆ ತೆರಳುವದು ಹಿತಕರವಾಗಿ ತೋರುತ್ತದೆ. ರೋಗಬಾಧೆಯಿಂದ ನಮ್ಮ ಜನರ ಪ್ರಾಣಹಾನಿಯಾಗುತ್ತಿರುವದನ್ನು ನೀವು ಬಲ್ಲಿರಿ. ಮೃಗೇಂದ್ರನು ಎಲ್ಲಿ ಇರುತ್ತಾನೆ?

ಆತನು ಒಡಂಬಡಿಕೆಯನ್ನು ಮಾಡಿಕೊಳ್ಳಲಿಕ್ಕೆ ಸಿದ್ಧನಿರುವನೋ? ಎಂದು ನುಡಿಯಲು, ಸಂಪುಷ್ಪಾಚಾರ್ಯನು—ಭಗವನ್, ನಮ್ಮ ಈ ಕಾರ್ಯಕ್ಕಾಗಿ ನೀವು ಸಂತೋಷಪಟ್ಟದ್ದರಿಂದ ನಮಗೆ ಸಂತೋಷವಾಯಿತು. ಕಲಿಂಗ ರಾಜ್ಯವ್ಯವಸ್ಥೆಯನ್ನು ಮಾಡಿ ಪಾಟಲೀಪುತ್ರಕ್ಕೆ ಬೇಗನೆ ಹೋಗುವದು ನಮಗೂ ಇಷ್ಟವಾಗಿಯೇ ಇದೆ; ಆದರೆ ಮೃಗೇಂದ್ರನ ಸುದ್ದಿಯಿಲ್ಲ ಆತನು ಬದುಕಿರುವನೋ, ಸತ್ತಿರುವನೋ ಎಂಬದರ ನಿಶ್ಚಯವೂ ನಮಗಿರುವದಿಲ್ಲ. ಅಂದ ಬಳಿಕ ಆತನು ಒಡಂಬಡಿಕೆಗೆ ಒಪ್ಪಿಕೊಳ್ಳುವನೋ ಇಲ್ಲವೋ, ಎಂಬದನ್ನು ನಾವು ಹೇಗೆ ಹೇಳೋಣ? ಆತನು ಸತ್ತಿರಲಿ—ಬದುಕಿರಲಿ, ಒಡಂಬಡಿಕೆಗೆ ಆತನೂ ಒಪ್ಪಿಕೊಳ್ಳಲಿ–ಒಪ್ಪಿಕೊಳ್ಳದಿರಲಿ, ಕಲಿಂಗದ ರಾಜ್ಯವನ್ನು ಮೃಗೇಂದ್ರನಿಗೆ ಕೊಡಲಾಗದು. ಕಲಿಂಗವಿಜಯದಲ್ಲಿ ಈ ತರುಣಿಯು—ವಿಶಾಖಾನಂದ ಮಂತ್ರಿಯ ಪತ್ನಿಯಾದ ಪ್ರಮೀಳೆಯು ಮುಖ್ಯ ಸಹಾಯಕಳಾದ್ದರಿಂದ ಕಲಿಂಗದ ಪಟ್ಟವನ್ನು ಈಕೆಗೆ ಕೊಡತಕ್ಕದ್ದು. ''ನಿನಗೆ ಕಲಿಂಗದ ಪಟ್ಟವನ್ನು ಕೊಡುವೆವೆಂದು'' ಪ್ರಮೀಳೆಗೆ ವಚನವನ್ನು ಕೊಟ್ಟು, ನಾವು ಈಕೆಯ ಸಹಾಯವನ್ನು ಪಡೆದಿರುತ್ತೇವೆ. ನಮ್ಮ ವಚನವನ್ನು ಈಗ ಮಗಧಭೂಪತಿಯು ನಡಿಸತಕ್ಕದ್ದು ಎಂದು ನುಡಿದು ಸಂಪುಷ್ಪಾಚಾರ್ಯರು ಸುಮ್ಮನಾಗಿ ಇಂದುಮತಿಯ ಮುಖವನ್ನು ನೋಡಲು, ಆ ರಾಜಮಾತೆಯು ಅಶೋಕನನ್ನು ಕುರಿತು—ಕುಮಾರಾ, ಮಗಧಚಕ್ರವರ್ತಿಯೇ, ನೀನು ಗುರುಗಳ ಮಾತನ್ನು ನಡಿಸಲೇಬೇಕು. ಮೃಗೇಂದ್ರನು ಈಗ ರಾಜ್ಯ ಭ್ರಷ್ಟನಾಗಿರುವದರಿಂದ, ಆತನ ಮಗಳಾದ ಪ್ರಣಯಿನಿಯೊಡನೆ ಕುಮಾರ ವೀತಾಶೋಕನ ಲಗ್ನವಾಗುವಹಾಗಿಲ್ಲ. ಇನ್ನುಮೇಲೆ ಕಲಿಂಗದ ಪ್ರಜೆಗಳನ್ನು ಒತ್ತಾಯದಿಂದ ಬೌದ್ಧರನ್ನು ಮಾಡಬಹುದಾದ್ದರಿಂದ, ಧರ್ಮಯುದ್ಧದ ಉದ್ದೇಶವೂ ಸಫಲವಾದಂತಾಯಿತು. ಕಲಿಂಗದ ಪಟ್ಟವನ್ನು ಕೊಡುವದರಿಂದ ಈ ಪ್ರಮೀಳೆಯೂ, ಆಕೆಯ ಪತಿಯಾದ ವಿಶಾಖಾನಂದನೂ ಬೌದ್ಧರಾಗುವರು. ಅಂದಬಳಿಕ ವೇದಧರ್ಮಿಗಳ ಆಧಾರಸ್ತಂಭದಂತೆ ಇದ್ದ ಕಲಿಂಗದೇಶವು ಅನಾಯಾಸವಾಗಿ ಬೌದ್ಧ ರಾಜ್ಯವಾಗಿ, ಪಾಟಲಿಪುತ್ರದ ಮಾಂಡಲಿಕತ್ವವನ್ನು ಒಪ್ಪಿಕೊಳ್ಳುವದು.

ಈ ಮೇರೆಗೆ, ಗುರುಗಳು ಹಾಗೂ ತಾಯಿಯು ಆಡಿದ ಮಾತುಗಳನ್ನು ಕೇಳಿ ಅಶೋಕನು ಅವರನ್ನು ಕುರಿತು—ಪೂಜ್ಯರೇ, ನೀವಾಡುವದು ನಿಜವು; ಆದರೆ ಮೃಗೇಂದ್ರನಂಥ ಬಲಿಷ್ಠ ರಾಜನು ಕಪಟಕೃತಿಯಿಂದ ಸೋತಿರಲು, ಆತನ ರಾಜ್ಯವನ್ನು ಕಸಿದು ಅನ್ಯರಿಗೆ ಕೊಡುವದು ನ್ಯಾಯವಲ್ಲ. ಮೃಗೇಂದ್ರನು ಬದುಕಿ ಇದ್ದು ಆತನು ಮಗಧದೇಶದ ಮಾಂಡಲಿ ಕತ್ವವನ್ನು ಕೈಕೊಂಡರೆ, ಆತನ ರಾಜ್ಯವನ್ನು ಆತನಿಗೆ ತಿರುಗಿ ಕೊಡಬೇಕಾಗುವದು. ಒಂದು ಪಕ್ಷದಲ್ಲಿ ಮೃಗೇಂದ್ರನು ಸತ್ತಿದ್ದರೆ, ಆತನ ಮಗನಾದ ಜಿತೇಂದ್ರನು ಬೌದ್ಧಧರ್ಮವನ್ನು ಸ್ವೀಕರಿಸಿ ಮಗಧದ ಮಾಂಡಲಿಕನಾಗಲು ಒಪ್ಪಿದರೆ, ಆತನ ತಂದೆಯ ರಾಜ್ಯವನ್ನು ಆತನಿಗೆ ಕೊಡಬೇಕಾಗುವದು. ಇನ್ನು ಪ್ರಮೀಳಾದೇವಿಯು ಮಾಡಿದ ಸಹಾಯಕ್ಕಾಗಿ ಆಕೆಗೆ ಬೇರೊಂದು ರಾಜ್ಯವನ್ನು ಕೊಡೋಣ. ಒಂದು ಪಕ್ಷದಲ್ಲಿ ಮೃಗೇಂದ್ರನ ಮಗನಿಗೆ ಕಲಿಂಗದ ರಾಜ್ಯ ಕೊಡುವದರ ಬದಲು ಪ್ರಮೀಳೆಗೆ ಕೊಡಬಹುದು; ಆದರೆ ಮೃಗೇಂದ್ರನು ಮರಣ

ಹೊಂದಿರುವನೆಂಬದರ ನಿಶ್ಚಯವಾಗುವವರೆಗೆ, ಅಥವಾ ಮೃಗೇಂದ್ರನು ನಮ್ಮ ಕರಾರುಗಳಿಗೆ ಒಪ್ಪಿಕೊಳ್ಳುವದಿಲ್ಲೆಂಬದು ಗೊತ್ತಾಗುವವರೆಗೆ ಕಲಿಂಗದ ರಾಜ್ಯವು ಶಾಶ್ವತವಾಗಿ ಪ್ರಮೀಳೆಗೆ ದೊರೆಯಲಾರದು. ಬೇಕಾದರೆ ಇವೆರಡು ಮಾತುಗಳ ನಿರ್ಣಯವಾಗುವತನಕ ಪ್ರಮೀಳಾದೇವಿಗೆ ಕಲಿಂಗದ ರಾಜ್ಯವನ್ನು ಒಪ್ಪಿಸಬಹುದು, ಎಂದು ನುಡಿದನು. ಈ ಮಾತುಗಳನ್ನು ಕೇಳಿ ಅಸಮಾಧಾನಪಟ್ಟ ಪ್ರಮೀಳೆಯು, ಎದ್ದು ನಿಂತು ಅಶೋಕನನ್ನು ಕುರಿತು—ಬೌದ್ಧ ಚಕ್ರವರ್ತಿಗಳೇ, ನನ್ನ ಬಿನ್ನಹವನ್ನು ಲಾಲಿಸಬೇಕು. ಕಲಿಂಗದ ರಾಣಿಯಾಗಬೇಕೆಂಬ ಮಹತ್ವಾಕಾಂಕ್ಷೆಯಿಂದಲೇ ನಾನು ಇಂಥ ದ್ರೋಹದ ಕಾರ್ಯಕ್ಕೆ ಮನಸ್ಸು ಮಾಡಿದೆನು. ಜಿತೇಂದ್ರನಿಗೆ ಕಲಿಂಗದ ಪಟ್ಟ ಕೊಡುವ ವಿಚಾರವನ್ನು ಚಕ್ರವರ್ತಿಗಳು ರಹಿತಮಾಡಿಯೇ ಇರುವಿರಿ; ಆದರೆ ಮೃಗೇಂದ್ರನು ಮರಣ ಹೊಂದಿರುವನೆಂಬದರ ನಿಶ್ಚಯವನ್ನು ಈಗಲೇ ನಾನು ಮಾಡಿಕೊಡುವೆನು. ಆಮೇಲೆ ಕಲಿಂಗದ ಸಿಂಹಾಸನವನ್ನು ನನಗೆ ಕೊಡಲಿಕ್ಕೆ ಆತಂಕವೇನು? ಎಂದು ಹೇಳಿ ಯುದ್ಧದಲ್ಲಿ ಮರಣಹೊಂದಿದ ಒಬ್ಬನ ಹೆಣವನ್ನೂ, ಮೃಗೇಂದ್ರನ ಭಾವಪಟವನ್ನೂ ಅಶೋಕನ ಮುಂದೆ ಇಡಿಸಿದಳು. ಇದನ್ನು ನೋಡಿ ಸಭಿಕರು ಬೆರಗಾದರು. ಮೃಗೇಂದ್ರನ ಭಾವಪಟವನ್ನು ಶವವು ಅಚ್ಚಳಿಯದೆ ಹೋಲುತ್ತಿತ್ತು. ಶವದ ಮೈಮೇಲಿನ ವಸ್ತ್ರಾಭರಣಗಳು ಶವದ ಅರಸುತನವನ್ನು ವ್ಯಕ್ತಗೊಳಿಸುತ್ತಿದ್ದವು. ಇದನ್ನು ನೋಡಿ ಅಶೋಕನು ವಿಚಾರ ಮಗ್ನನಾಗಿರಲು, ದರ್ಬಾರದೊಳಗೆ ಬೌದ್ಧಸೈನಿಕರ ಕಾವಲಿನಲ್ಲಿ ಕುಳಿತುಕೊಂಡಿದ್ದ ಚಿದಾನಂದ ಸ್ವಾಮಿಗಳು ಎದ್ದುನಿಂತು ಅಶೋಕನನ್ನು ಕುರಿತು—ಸತ್ಯಪ್ರಿಯ ನಾದ ಬೌದ್ಧಭೂಪತಿಯೇ, ನನ್ನ ಮಾತನ್ನು ಲಾಲಿಸಬೇಕು, ಈ ಶವವು ಮೃಗೇಂದ್ರನದಲ್ಲ, ಮೃಗೇಂದ್ರನ ತಂದೆಯ ಹಲವು ಜನ ಹೆಂಡಿರಲ್ಲಿ ಹುಟ್ಟಿದ ಇವನೊಬ್ಬ ರಾಜಪುತ್ರನು. ಮೃಗೇಂದ್ರನನ್ನು ಅಚ್ಚಳಿಯದೆ ಹೋಲುವದು ಆಶ್ಚರ್ಯವಲ್ಲ, ಮೃಗೇಂದ್ರನ ಗುರುವೆನಿಸುವ ಈ ಚಿದಾನಂದನು ಸರ್ವಥಾ ಅಸತ್ಯವನ್ನು ನುಡಿಯಲಾರನು. ಉದಾರರಾಜನೀತಿಗೂ, ನ್ಯಾಯಕ್ಕೂ ಸಮ್ಮತವಾಗಿ ಆಡಿದ ನಿನ್ನ ಮಾತುಗಳನ್ನು ಕೇಳಿ ನಾನು ಸತ್ಯವನ್ನು ನುಡಿದಿದ್ದೇನೆ. ಇದರ ಮೇಲೆ ಪ್ರಭುಚಿತ್ತವು! ಎಂದು ನುಡಿದು ಕುಳಿತುಕೊಂಡರು.

ಮೊದಲೇ ಚಿದಾನಂದರ ತೇಜಸ್ಸನ್ನು ನೋಡಿ ಪೂಜ್ಯಬುದ್ಧಿಯುಳ್ಳವರಾಗಿದ್ದ ಅಶೋಕನೇ ಮೊದಲಾಗಿದ್ದ ಸಭಿಕರು ''ಚಿದಾನಂದ'' ಎಂಬ ಶಬ್ದವು ಕಿವಿಗೆ ಬಿದ್ದಕೂಡಲೆ ಪರಮಾಶ್ಚರ್ಯಪಟ್ಟು, ಸುಮ್ಮನೆ ಚಿದಾನಂದಸ್ವಾಮಿಗಳ ಕಡೆಗೆ ನೋಡುತ್ತ ಕುಳಿತುಕೊಂಡರು. ಆಮೇಲೆ ಅಶೋಕನು ಅತ್ಯಂತವಾದ ಆದರದಿಂದ ಚಿದಾನಂದರನ್ನು ಕುರಿತು—ಮಹಾತ್ಮರೇ, ಸಿಂಹಾಸನಸ್ಥ ಅಶೋಕನು ಅತ್ಯಂತ ಲೀನತೆಯಿಂದ ವಂದಿಸುತ್ತಾನೆ. ನನ್ನ ನಡತೆಯಲ್ಲಿ ತೋರಬರುವ ಅತಿಕ್ರಮಕ್ಕಾಗಿ ಕ್ಷಮೆಯಿರಬೇಕು. ಸದ್ಯಕ್ಕೆ ಈ ದರ್ಬಾರದಲ್ಲಿ ಒದಗಿರುವ ಸಾಕ್ಷಿಗಳಿಂದ ನಾನು ಕಲಿಂಗದೇಶವನ್ನು ಪ್ರಮೀಳಾದೇವಿಗೆ ಒಪ್ಪಿಸುವೆನು. ಮೃಗೇಂದ್ರನು ಜೀವದಿಂದಿದ್ದು ನನ್ನ ಕರಾರುಗಳಿಗೆ ಆತನು ಒಪ್ಪಿಕೊಂಡ ಪಕ್ಷದಲ್ಲಿ ಆತನ ರಾಜ್ಯವು ಆತನಿಗೆ ದೊರೆಯುವದು. ಸ್ವಾಮಿಗಳು ಈ ದಾಸನ ಆತಿಥ್ಯವನ್ನು ಕೈಕೊಳ್ಳುವದಕ್ಕಾಗಿ ಪಾಟಲಿಪುತ್ರಕ್ಕೆ

ಬರಬಹುದು, ಇಲ್ಲವೆ ಚಿತ್ತಕ್ಕೆ ಬಂದಂತೆ ವರ್ತಿಸಬಹುದು. ಅನ್ನಲು, ಚಿದಾನಂದಸ್ವಾಮಿಗಳು— ಬೌದ್ಧಭೂಪತಿಯೇ, ಸದ್ಯಕ್ಕೆ ಕಲಿಂಗವನ್ನು ನೀನು ಜಯಸಿರುವದರಿಂದ ಭರತಖಂಡದ ಚಕ್ರವರ್ತಿಯಾಗಿರುವ ನಿನ್ನ ಆಡಳಿತಕ್ಕೆ ನಾವೆಲ್ಲರೂ ಒಳಪಟ್ಟಂತೆಯೇ ಆಗಿರುವದಲ್ಲವೇ? ವಿನಯಶೀಲನಾದ ನಿನ್ನಂಥ ಚಕ್ರವರ್ತಿಯ ನಿಷ್ಕಂಟಕವಾದ ಆಳ್ವಿಕೆಯಲ್ಲಿ ನಾವು ಸ್ನಾನ ಸಂಧ್ಯಾದಿ ಕರ್ಮಗಳನ್ನು ಮಾಡುತ್ತ ಎಲ್ಲಿ ಇದ್ದರೇನು? ನಿನ್ನ ರಾಜ್ಯದಲ್ಲಿಯೇ ಇದ್ದಹಾಗಲ್ಲವೇ? ಶಿಷ್ಯನಾದ ಮೃಗೇಂದ್ರನು ರಾಜ್ಯಭ್ರಷ್ಟನಾಗಿರಲು, ಪಾಟಲಿಪುತ್ರದಲ್ಲಿ ನಾನು ಸ್ವಸ್ಥವಾಗಿರುವದು ಹೇಗೆ? ನಿನ್ನ ಆತಿಥ್ಯಕ್ಕೆ ನಮ್ಮಂಥ ಪರಾಧೀನರು ಸದಾ ಪಾತ್ರರಾಗಿರುವೆವು. ಎಲ್ಲಿದ್ದರೂ ವರ್ಣಾಶ್ರಮ ಧರ್ಮಗಳನ್ನು ರಕ್ಷಿಸುವವನು ನೀನೇಯಲ್ಲವೆ? ಅನ್ನಲು, ಅಶೋಕನು ಸಿಂಹಾಸನದಿಂದಿಳಿದು ತಲೆಬಾಗಿಸಿ ವಂದಿಸಿದನು. ಚಿದಾನಂದಸ್ವಾಮಿಗಳು ಅಶೋಕನ ಸೌಜನ್ಯಕ್ಕೆ ಮೆಚ್ಚಿ, ಆತನನ್ನು ಆಶೀರ್ವದಿಸಿ ದರ್ಬಾರದಿಂದ ಹೊರಟುಹೋಗಲು, ರಾಧಾಗುಪ್ತನೊಡನೆ ಅಶೋಕನು ತನ್ನ ಡೇರೆಗೆ, ಉಳಿದವರು ತಮ್ಮ ತಮ್ಮ ಸ್ಥಳಗಳಿಗೆ ಹೊರಟುಹೋದರು.

ಜಿತೇಂದ್ರನು

ಮೃಗೇಂದ್ರನ ಮಗನಾದ ಜಿತೇಂದ್ರನು ಹರಿದ್ವಾರದಲ್ಲಿಯ ಚಿದಾನಂದ ಸ್ವಾಮಿಗಳ ಆಶ್ರಮದಲ್ಲಿದ್ದದ್ದನ್ನು ವಾಚಕರು ಬಲ್ಲಿರಷ್ಟೆ? ಆ ತರುಣನು ಒಂದು ದಿನ ಇಳಿಹೊತ್ತಿನಲ್ಲಿ ಆಶ್ರಮದಿಂದ ಹೊರಟು ಗಂಗಾತೀರದಲ್ಲಿ ಸಂಚರಿಸುತ್ತ ಸಂಚರಿಸುತ್ತ ಒಂದು ಕಲ್ಲುಬಂಡೆಯ ಮೇಲೆ ಕುಳಿತುಕೊಂಡು, ಒಮ್ಮೆ ಗಂಗಾಪ್ರವಾಹದ ಶೋಭೆಯನ್ನೂ, ಮತ್ತೊಮ್ಮೆ ಪಶ್ಚಿಮದಿಕ್ಕಿನ ಸಂಧ್ಯಾರಾಗದ ಸೊಬಗನ್ನೂ ನೋಡುತ್ತಲಿದ್ದನು. ಆತನ ಮುಖದಲ್ಲಿ ಮೀಸೆಗಳು ಅದೇ ಒಡೆಯುತ್ತಿದ್ದು, ಅದ್ವಿತೀಯವಾದ ಬ್ರಹ್ಮಚರ್ಯದ ತೇಜಸ್ಸು ಉಕ್ಕುತ್ತಿತ್ತು, ಆತನ ಮನೋಹರ ವಾದ ನೇತ್ರಗಳು ನಿಜವಾದ ಕ್ಷಾತ್ರತೇಜಸ್ಸಿನಿಂದ ಹೊಳೆಯುತ್ತಿದ್ದವು. ಆ ಕ್ಷತ್ರಿಯವೀರನ ವಿಶಾಲವಾದ ಹಣೆಯೂ, ಬಲಿಷ್ಠವಾದ ಸುಂದರದೇಹವೂ ಆತನು ಪುಣ್ಯಶಾಲಿಯಾದ ರಾಜಪುತ್ರನೆಂದು ಸ್ಪಷ್ಟವಾಗಿ ಹೇಳುತ್ತಿದ್ದವು; ಆದರೂ ಆತನ ಉಡಿಗೆ—ತೊಡಿಗೆಗಳು ಮಾತ್ರ ಋಷಿಪುತ್ರನ ನೆನಪುಮಾಡಿಕೊಡುತ್ತಿದ್ದವು. ಆತನು ಒಂದು ಶುಭ್ರವಸ್ತ್ರವನ್ನುಟ್ಟುಕೊಂಡು, ಅದರ ಅರ್ಧಭಾಗವನ್ನು ಎದೆಗೆ ಸುತ್ತಿಕೊಂಡಿದ್ದನು. ತಲೆಯ ಮೇಲೆ ಕರಿಗೂದಲುಗಳ ಹೊರತು ಬೇರೆ ಆಚ್ಛಾದನವಿದ್ದಿಲ್ಲ. ಆತನ ಮುಂಡೆದಿರುಗಿದ ತೋಳುಗಳು ಆತನ ಶರೀರಸಾಮರ್ಥ್ಯವನ್ನು ವ್ಯಕ್ತಮಾಡುತ್ತಿದ್ದವು. ಆತನ ಕಾಲೊಳಗಿನ ಕಟ್ಟಿಗೆಯ ಅವುಗೆಗಳು ಬಂಡೆಯಮುಂದೆ ಬಿದ್ದಿದ್ದವು. ಬಂಡೆಯಮೇಲೆ ಸಮೀಪದಲ್ಲಿ ಆತನ ದೀರ್ಘವಾದ ಧನುಸ್ಸು ಬಿದ್ದಿತ್ತು. ಪ್ರಸನ್ನ ವದನನಾದ ಆ ತರುಣ ಜಿತೇಂದ್ರನು, ಸಮಾಧಾನದಿಂದ ಸೃಷ್ಟಿಸೌಂದರ್ಯವನ್ನು ನೋಡಬೇಕೆಂದು ಆದಿನ

ಆಶ್ರಮವನ್ನು ಬಿಟ್ಟು ಬಹುದೂರ ಬಂದಿದ್ದನು. ಪಕ್ಷಿಗಳ ಮಂಜುಳಗಾನ, ಸುತ್ತುಮುತ್ತು ಸುಳಿದಾಡುವ ಸುಗಂಧಯುಕ್ತ ಶೀತಲವಾಯು, ಆ ಸ್ಥಳದ ವಿಲಕ್ಷಣವಾದ ಶಾಂತಿ, ಇಳಿಹೊತ್ತಿನ ಮನೋಹರ ಪ್ರಸಂಗ, ಪವಿತ್ರವಾದ ಗಂಗಾಪ್ರವಾಹದ ಸಾನ್ನಿಧ್ಯ, ಆ ಸ್ಥಳದ ಅದ್ವಿತೀಯವಾದ ಶೋಭೆ ಇವುಗಳ ಯೋಗದಿಂದ ಆ ತರುಣನ ಸುಸಂಸ್ಕೃತವಾದ ಉತ್ಸಾಹಪೂರ್ಣಮನಸ್ಸು, ಸುಖಶೈಲದಮೇಲೆ ಆನಂದದಿಂದ ಕ್ರೀಡಿಸುತ್ತಿತ್ತು; ಆತನ ಕೆಳದುಟಿಯಲ್ಲಿ ಎಳೆನಗೆಯು ಮಿನುಗುತ್ತಿದ್ದು, ಕಣ್ಣುಗಳು ಕುತೂಹಲಪೂರ್ಣವಾಗಿದ್ದವು. ಸೂರ್ಯಾಸ್ತ ಸಮಯವು ಒದಗಿದ್ದರೂ ಆ ತರುಣನ ಸೃಷ್ಟಿನಿರೀಕ್ಷಣವು ಮುಗಿದಿದ್ದಿಲ್ಲ. ಅಷ್ಟರಲ್ಲಿ ಒಂದು ಬೆದರಿದ ಚಿಗರೆಯು ಓಡುತ್ತೋಡುತ್ತ ಆ ತರುಣನ ಬಳಿಗೆ ಬಂದು ತೇಕುತ್ತ ನಿಂತುಕೊಂಡಿತು. ಆ ಪುಕ್ಕಪ್ರಾಣಿಯು ಇಷ್ಟು ದಿಟ್ಟತನದಿಂದ ತನ್ನ ಬಳಿಯಲ್ಲಿ ನಿಂತುಕೊಂಡದ್ದನ್ನು ನೋಡಿ ಆ ತರುಣನು ಆಶ್ಚರ್ಯಪಟ್ಟನು. ಆತನು ಕಲ್ಲುಬಿಟ್ಟು ಕೆಳಗೆ ಇಳಿದು ಆ ಚಿಗರೆಯ ಬೆನ್ನಮೇಲೆ ಪ್ರೀತಿಯಿಂದ ಕೈಯಾಡಿಸಿದನು. ಆಗ ಚಿಗರೆಯು ಬಾಲವನ್ನಾಡಿಸುತ್ತ, ಮೆಲಕಾಡಿಸಿದಂತೆ ಮಾಡಿ ದಮ್ಮು ಆರಿಸಿಕೊಳ್ಳುತ್ತಿರಲು, ಅದರ ಬೆನ್ನುಹತ್ತಿ ಒಬ್ಬ ಸುಂದರ ತರುಣಿಯು ಕುದುರೆಯನ್ನು ಓಡಿಸುತ್ತ ಚಿಗರೆಯ ಬಳಿಗೆ ಬರತೊಡಗಿದಳು.

ತರುಣಿಯ ದಟ್ಟವಾದ ಕೇಶಕಲಾಪಗಳು ಆಕೆಯ ಮುಖದ ಮೇಲೆಯೂ, ಹೆಗಲ ಮೇಲೆಯೂ ಅಸ್ತವ್ಯಸ್ತವಾಗಿ ಅಲ್ಲಾಡುತ್ತಿದ್ದವು. ಕುದುರೆಯನ್ನು ಓಡಿಸುತ್ತ ಬಂದದ್ದರಿಂದ ಆಕೆಯ ಬೆಲೆಯುಳ್ಳ ರೇಶಿಮೆಯ ಸೀರೆಯು ಅಸ್ತವ್ಯಸ್ತವಾಗಿತ್ತು. ವಿಶೇಷ ಶ್ರಮವಾದದ್ದರಿಂದ ಆಕೆಯ ಗಲ್ಲಗಳ ನಸುಗೆಂಪು ಆಕೆಯ ಮುಖದ ಚಲ್ವಿಕೆಯನ್ನು ಮತ್ತಿಷ್ಟು ಹೆಚ್ಚಿಸುತ್ತಿತ್ತು. ಬೆವರಹನಿಗಳು ಆಕೆಯ ಮುಖದಲ್ಲಿ ಅಲ್ಲಲ್ಲಿ ಮುತ್ತುಗಳಂತೆ ಮಿನುಗುತ್ತಿದ್ದವು. ಆಕೆಯ ಹೆಗಲಿಗೆ ಬಿಲ್ಲುಬತ್ತಳಿಕೆಗಳಿದ್ದವು. ತನ್ನ ಶ್ವಾಸದಿಂದ ವಾಯುವನ್ನು ಸುಗಂಧಯುಕ್ತವಾಗಿ ಮಾಡುತ್ತ ಆ ಬಾಲೆಯು, ಚಿಗರೆಯು ಬಂದ ಕಡೆಯಿಂದ ಧಾವಿಸಿ ಬರುವದನ್ನು ನೋಡಿ, ಜಿತೇಂದ್ರನು ಬೆರಗಾದನು. ಇಂಥ ಭಯಂಕರವಾದ ಅರಣ್ಯದಲ್ಲಿ ಒಬ್ಬಳೇ ಒಬ್ಬ ತರುಣಿಯು, ಬೆಟ್ಟದಂಥ ಕುದುರೆಯನ್ನೇರಿ ಚಿಗರೆಯ ಬೆನ್ನಟ್ಟಿ ಬಂದದ್ದನ್ನು ಜಿತೇಂದ್ರನು ನೋಡಿದ್ದು, ಇದೇ ಮೊದಲು. ಚಿದಾನಂದರ ಆಶ್ರಮದಲ್ಲಿ ಸ್ತ್ರೀಯರ ಪ್ರವೇಶವೇ ಇಲ್ಲದಿರುವಾಗ, ಅರಣ್ಯಮಧ್ಯದ ಏಕಾಂತದಲ್ಲಾದ ಸುಂದರ ತರುಣಿಯ ಸಂದರ್ಶನವು, ಜಿತೇಂದ್ರನ ಕೌತುಕಕ್ಕೆ ಕಾರಣವಾದದ್ದೇನು ಆಶ್ಚರ್ಯವಲ್ಲ. ತನ್ನ ಚಿಗರೆಯು ಒಬ್ಬ ತರುಣವೀರನ ಬಳಿಯಲ್ಲಿ ಸುರಕ್ಷಿತವಾಗಿ ನಿಂತದ್ದನ್ನು ನೋಡಿ, ಬಾಲೆಯು ಸ್ವಲ್ಪ ಸಾವಕಾಶವಾಗಿ ಕುದುರೆಯನ್ನು ನಡೆಸಿದಳು; ಆದರೂ ಆಕೆಯ ಚಟುವಟಿಕೆಯು ಕಡಿಮೆಯಾಗಿದ್ದಿಲ್ಲ. ಜಿತೇಂದ್ರನು ಚಿಗರೆಯಮೇಲೆ ಕೈಯಾಡಿಸುತ್ತ ತನ್ನ ಬಳಿಗೆ ಬರುತ್ತಿರುವ ತರುಣಿಯ ಸುಂದರ ರೂಪವನ್ನು ಎವೆಯಿಕ್ಕದೆ ನೋಡುತ್ತಿರುವಾಗ, ಆತನಿಗೆ ಕ್ಷಣಹೊತ್ತು ಇಹಲೋಕದ ವಿಸ್ಮರಣವಾದಂತಾಯಿತು. ಆ ರಮ್ಯಪ್ರದೇಶವು ಸ್ವರ್ಗದಂತೆಯೂ, ಆ ಸುಂದರಬಾಲೆಯು ಸ್ವರ್ಗಾಂಗನೆಯಂತೆಯೂ ಆತನಿಗೆ ತೋರಿದರು; ಆದರೆ ಮತ್ತೊಂದು ಕ್ಷಣದಲ್ಲಿ ಹರಿದ್ವಾರವೆಂಬ ಗ್ರಾಮವು ತನ್ನ ಬೆನ್ನ ಹಿಂದೆ ಒಂದು

ಹರದಾರಿಯಮೇಲೆ ಗಂಗಾತೀರದಲ್ಲಿರುತ್ತಿದ್ದು, ತಮ್ಮ ಆಶ್ರಮವು ಆ ಗ್ರಾಮದಿಂದ ಸ್ವಲ್ಪದೂರದಲ್ಲಿರುತ್ತದೆಂಬದು ಅವನ ನೆನಪಿಗೆ ಬಂದದ್ದರಿಂದ, ತಾನು ಕುಳಿತದ್ದು ಭೂಪ್ರದೇಶವೆಂತಲೂ, ಸುಂದರ ತರುಣಿಯು ಮನುಷ್ಯಳೇ ಎಂತಲೂ ಆತನು ತಿಳಕೊಂಡನು; ಮತ್ತು ಚಿದಾನಂದರ ಆಶ್ರಮದಲ್ಲಿರುವ ಅನೇಕಜನ ಶಿಷ್ಯರಲ್ಲಿ ತಾನೊಬ್ಬನಿರುತ್ತೇನೆಂಬ ಎಚ್ಚರವೂ ಆತನಿಗುಂಟಾಯಿತು; ಆದರೆ ಈ ಸುಂದರ ತರುಣಿಯು ಚಿಗರೆಯ ಬೆನ್ನಹಿಂದೆ ಯಾಕೆ ಬಂದಿರಬಹುದೆಂಬದರ ಕಾರಣವು ಆತನಿಗೆ ಗೊತ್ತಾಗಲಿಲ್ಲ. ತನ್ನ ಮಾತು ಕೇಳುವಷ್ಟು ಸನಿಯಕ್ಕೆ ಆ ತರುಣಿಯು ಬರಲು, ಜಿತೇಂದ್ರನು ಆಕೆಯನ್ನು ಕುರಿತು—ತರುಣೀ, ಇದೇನು? ಇಷ್ಟು ಧಾವಿಸಿ ಚಿಗರೆಯ ಬೆನ್ನುಹತ್ತಿ ಬರುವದೇಕೆ? ಈ ಬಡಪ್ರಾಣಿಯು ಅಂಥ ತಪ್ಪು ಏನು ಮಾಡಿದೆ? ಇದರ ದೊಡ್ಡ ಕಣ್ಣುಗ್ಗಳನ್ನು ನೋಡಿ ಹೊಟ್ಟೇಕಿಚ್ಚುಪಟ್ಟು ಸಿಟ್ಟಿನಿಂದ ನೀನು ಇದರ ಬೆನ್ನುಹತ್ತಿ ಬಂದೆಯೆಂದು ಅನ್ನಬೇಕಾದರೆ, ನಿನ್ನ ಕಣ್ಣುಗ್ಗಳು ಈ ಚಿಗರೆಯ ಕಣ್ಣುಗ್ಗಳಿಗಿಂತ ದೊಡ್ಡವಿರುತ್ತವಲ್ಲ!

ಈ ಮೇರೆಗೆ ಜಿತೇಂದ್ರನು ಆಡಿದ ಮಾತುಗಳನ್ನು ಕೇಳಿ ತರುಣಿಯು ಎಚ್ಚತ್ತು, ಆತನ ಮನೋಹರಾಕಾರವನ್ನು ಎವೆಯಿಕ್ಕದೆ ನೋಡುತ್ತ, ಮೊದಲು ಕುದುರೆಯಿಂದಿಳಿದು ತನ್ನ ಚಿಗರೆಯ ಮೈಮೇಲೆ ಕೈಯಾಡಿಸಿ ಅದನ್ನು ರಮಿಸಿದಳು. ಆಕೆಯು ಹಿಂದಿರುಗಿ ಮತ್ತೊಮ್ಮೆ ಜಿತೇಂದ್ರನನ್ನು ನೋಡಲು, ಆತನು—ತರುಣಿ, ನನ್ನ ಮಾತಿಗೆ ಉತ್ತರ ಕೊಡದಿರುವದೇಕೆ? ಈ ಅಪರಿಚಿತವಾದ ಅರಣ್ಯದಲ್ಲಿ ಅಶ್ವಾರೂಢಳಾಗಿ ಚಿಗರೆಯ ಬೆನ್ನಹತ್ತಿ ನೀನು ಬಂದಿರುವದನ್ನು ನೋಡಿ ನನಗೆ ಬಹಳ ಆಶ್ಚರ್ಯವಾಗಿದೆ. ನೀನು ರಾಜಪುತ್ರಿಯೆಂಬದನ್ನು ನಾನು ಕಂಡು ಹಿಡಿದಿದ್ದೇನೆ. ಕೌತುಕದಿಂದ ಪ್ರೇರಿತನಾದ ನನ್ನಿಂದ ಅವಿನಯದ ಅಪರಾಧವು ಘಟಿಸುತ್ತಿದ್ದರೂ, ನೀನು ಅದನ್ನು ಎಣಿಸದೆ, ನನ್ನ ಮಾತಿಗೆ ಉತ್ತರಕೊಟ್ಟು, ನನ್ನ ಕೌತುಕವನ್ನು ಪೂರ್ಣಮಾಡಲೇ ಬೇಕು, ಅನ್ನಲು, ತರುಣಿಯು ಜಿತೇಂದ್ರನನ್ನು ಕುರಿತು—ವೀರಪುರುಷನೆ, ನನ್ನ ವೃತ್ತಾಂತ ಶ್ರವಣದಿಂದ ನಿನಗೆ ಆಗುವ ಪ್ರಯೋಜನವೇನು? ನನ್ನ ಈ ಚಿಗರೆಯನ್ನು, ಅದೇ ಆ ಸಿಂಹವು ಬೆನ್ನಟ್ಟಿದ್ದರಿಂದ ಇದನ್ನು ರಕ್ಷಿಸುವದಕ್ಕೋಸ್ಕರ ನಾನು ಇದರ ಬೆನ್ನಟ್ಟಿಬಂದೆನು. ನೀನು ಇದಕ್ಕೆ ಆಶ್ರಯಕೊಟ್ಟು ಸಮಾಧಾನಗೊಳಿಸಿದ್ದಕ್ಕಾಗಿ ನಾನು ಕೃತಜ್ಞಳಾಗಿದ್ದೇನೆ, ಎಂದು ನುಡಿದು ಜಿತೇಂದ್ರನನ್ನು ಆದರದಿಂದ ನೋಡಹತ್ತಿದಳು. ಅಷ್ಟರಲ್ಲಿ ಆ ಸಿಂಹವು ಚಿಗರೆಯ ಸನಿಯಕ್ಕೆ ಬರತೊಡಗಿತು. ಆಗ ಜಿತೇಂದ್ರನು—ತರುಣೀ, ಸಿಂಹದ ದವಡೆಯೊಳಗಿಂದ ಈ ಚಿಗರೆಯನ್ನು ನೀನು ಬಿಡಿಸುವೆಯಾ, ಎಂದು ನುಡಿದು, ಕೂಡಲೆ ಬಳಿಯಲ್ಲಿ ಬಿದ್ದಿದ್ದ ತನ್ನ ಧನುಸ್ಸನ್ನು ತಕ್ಕೊಂಡು ಹೆದೆ ಏರಿಸಿ, ಅದಕ್ಕೆ ಒಂದು ತೀಕ್ಷ್ಣವಾದ ಬಾಣವನ್ನು ಹೂಡಿ, ಸಿಂಹಕ್ಕೆ ಗುರಿಯಿಟ್ಟು ಹೆದೆಯನ್ನು ಕಿವಿಯವರೆಗೆ ಜಗ್ಗಿದನು. ಇನ್ನು ಆತನು ಸಿಂಹದ ಮೇಲೆ ಬಾಣಬಿಡತಕ್ಕವನು, ಅಷ್ಟರಲ್ಲಿ ಆತನು ಮೆಟ್ಟಿಬಿದ್ದು ಬಾಣವನ್ನು ಹಿಂದಕ್ಕೆ ತಕ್ಕೊಂಡು ಧನುಸ್ಸನ್ನು ದೂರ ಚಲ್ಲಿಕೊಟ್ಟನು. ಜಿತೇಂದ್ರನ ಈ ಚಮತ್ಕಾರದ ನಡತೆಯನ್ನು ನೋಡಿ ತರುಣಿಯು ಆಶ್ಚರ್ಯಪಟ್ಟಳು. ಈ ಮೊದಲು ತರುಣಿಯು ಜಿತೇಂದ್ರನ ಕಸುವಿನ ಮೈಕಟ್ಟನ್ನೂ, ಗಂಭೀರ

ಮುಖಮುದ್ರೆಯನ್ನೂ, ದಿವ್ಯತೇಜಸ್ಸನ್ನೂ, ಆತನು ಧನುಸ್ಸು ಹಿಡಿಯುವ ಬಗೆಯನ್ನೂ, ಆತನ ಬಾಣವೇರಿಸುವ ಕ್ರಮವನ್ನೂ, ಹೆದೆ ಜಗ್ಗುವ ರೀತಿಯನ್ನೂ ನೋಡಿ, ಇವನು ಯಾವನೋ ಋಷ್ಯಾಶ್ರಮಸ್ಥ ಕ್ಷತ್ರಿಯ ವೀರಪುರುಷನಿರಬಹುದೆಂದು ತಿಳಿದು ಆತನ ವಿಷಯವಾಗಿ ಆದರಭಾವವನ್ನು ತಾಳಿದ್ದಳು; ಆದರೆ ಸಿಂಹವು ಸನಿಯಕ್ಕೆ ಬಂದಕೂಡಲೆ ಧನುಸ್ಸು ಚಲ್ಲಿಕೊಟ್ಟದ್ದನ್ನು ನೋಡಿ, ಆಕೆಯ ಮನಸ್ಸಿನಲ್ಲಿ ತರುಣನ ವಿಷಯವಾಗಿ ತಿರಸ್ಕಾರವು ಉತ್ಪನ್ನವಾಯಿತು. ಆಕೆಯು ತನ್ನ ಧನುಸ್ಸನ್ನು ತಕ್ಕೊಂಡು ಹೆದೆಯೇರಿಸಿ ಬಾಣಹೂಡಿ ಗುರಿನೋಡಿ ಕೂಡಲೆ ಸಿಂಹಕ್ಕೆ ಎಸೆಯಹೋದಳು. ಆಗ ಜಿತೇಂದ್ರನು ಹೆದೆಬಾಣಗಳೊಡನೆ ಆಕೆಯ ಕೋಮಲವಾದ ಹಸ್ತವನ್ನು ಹಿಡಿದು ಗಾಂಭೀರ್ಯದಿಂದ—ತರುಣಿಯೇ, ನಿಲ್ಲುನಿಲ್ಲು, ನಿನ್ನ ಸ್ವಾಭಾವಿಕವಾದ ಮಾರ್ದವಕ್ಕೆ ಲಾಂಛನವೆನಿಸುವ ಈ ಕ್ರೂರಕೃತ್ಯವನ್ನು ಮಾಡಬೇಡ, ಅನ್ನಲು ತರುಣಿಯು—

ತರುಣಿ—ವೀರರೆನಿಸುವ ನಿಮ್ಮಂಥವರೇ ಧನುಸ್ಸನ್ನು ಚಲ್ಲಿಕೊಟ್ಟ ಬಳಿಕ, ನಿಮ್ಮ ರಕ್ಷಣವನ್ನು ಅನ್ಯರು ಮಾಡಬೇಕಾಗಲು, ಆಗ ನಾವು ಕ್ಷತ್ರಿಯ ಕನ್ಯೆಯರು, ನಮ್ಮ ಮಾರ್ದವವನ್ನು ಬಿಟ್ಟುಬಿಡುವೆವು.

ಜಿತೇಂದ್ರ—ಕ್ಷತ್ರಿಯ ಕನ್ಯೆಯೇ, ಎಲೈ ಪರಾಕ್ರಮಿಯಾದ ಕನ್ಯೆಯೇ, ನಾನು ಧನುಸ್ಸು ಚಲ್ಲಿಕೊಟ್ಟಿದ್ದರ ನಿಜವಾದ ಕಾರಣವನ್ನು ನೀನು ಅರಿಯೇ ಅರಿಯೆ. ನನ್ನ ಸಂರಕ್ಷಣದ ಭಾರವನ್ನು ಮಂದಿಯಮೇಲೆ, ವಿಶೇಷವಾಗಿ ನಿನ್ನಂಥ ಕೋಮಲಾಂಗಿಯಮೇಲೆ ಹಾಕುವಷ್ಟು ಹೇಡಿಯೂ, ನಿರ್ಬಲನೂ ನಾನಿರುವದಿಲ್ಲ,

ತರುಣಿ—ಹಾಗಾದರೆ ಧನುಸ್ಸನ್ನು ಯಾಕೆ ಚಲ್ಲಿಕೊಡಬೇಕು?

ಜಿತೇಂದ್ರ—ತರುಣಿಯೇ, ನಿನ್ನ ಈ ಪ್ರಶ್ನದ ಉತ್ತರವನ್ನು ಆ ಸಿಂಹವೇ ಕೊಡುವದು.

ಹೀಗೆಂದು ನುಡಿದು ಜಿತೇಂದ್ರನು ತನ್ನ ಬಳಿಗೆ ಬರುತ್ತಿರುವ ಸಿಂಹವನ್ನು ರಮಿಸುತ್ತ ಕರೆದು, ಅದರ ಕುತ್ತಿಗೆಯ ಮೇಲಿನ ಕೂದಲುಗಳ ತೊಡಕು ಬಿಡಿಸುತ್ತ ಅದನ್ನು ತನ್ನ ಹತ್ತರ ಕರೆದುಕೊಂಡನು. ಇದನ್ನು ನೋಡಿ ತರುಣಿಯು ಬೆರಗಾಗಿ ಕಲ್ಲಿನಂತೆ ನಿಂತುಬಿಟ್ಟಳು. ಆಗಿನ ಪ್ರಸಂಗವು ಪ್ರೇಕ್ಷಣೀಯವಾಗಿತ್ತು, ಅಹಹ! ತರುಣನಾದ ಜಿತೇಂದ್ರನು ಎಡಗೈಯಿಂದ ಸಿಂಹದ ಮೈಮೇಲೆ ಕೈಯಾಡಿಸುತ್ತ, ಬಲಗೈಯಿಂದ ತರುಣಿಯ ಕೋಮಲಕರವನ್ನು ಹಿಡಿದು ಆಕೆಯ ಸುಂದರಮುಖವನ್ನು ಮುಗುಳು ನಗೆಯಿಂದ ನೋಡುತ್ತಲಿದ್ದಾನೆ; ತರುಣಿಯು ತನ್ನ ಹಸ್ತವನ್ನು ತರುಣನ ಹಸ್ತದಿಂದ ಕೊಸರಿಕೊಳ್ಳಲಿಚ್ಛಿಸದೆ, ತರುಣನ ವಿಚಿತ್ರವಾದ ಪ್ರತಾಪಕ್ಕೆ ಬೆರಗಾಗಿ ಅತ್ಯಂತ ಲೀನತೆಯಿಂದ ಆತನ ನಗೆಮೊಗವನ್ನು ಎವೆಯಿಕ್ಕದೆ ನೋಡುತ್ತ, ವಿಚಿತ್ರವಾದ ಮನೋವಿಕಾರಕ್ಕೆ ಒಳಗಾಗಿದ್ದಾಳೆ; ಆಗ ಅವರಿಬ್ಬರಿಗೂ ಸ್ವರ್ಗಸುಖವು ಪ್ರಾಪ್ತವಾಗಿ ಆ ಸುಖಕ್ಕೆ ಎಲ್ಲಿ ವಿಘ್ನ ಒದಗುವದೋ ಎಂದು ಅವರಿಬ್ಬರು ಭಯಗ್ರಸ್ತರಾಗಿದ್ದಾರೆ; ಅವರಿಬ್ಬರ ಹಸ್ತಗಳು ಬೆವತು ಕಂಪಿಸತೊಡಗಿವೆ; ಅಷ್ಟರಲ್ಲಿ ದೂರ ಕುದುರೆಗಳ ಖುರಪುಟಗಳ ಧ್ವನಿಯು ಕೇಳಿಸಹತ್ತಿತು. ಆಗ ತರುಣಿಯು ಜಿತೇಂದ್ರನ ಕೈಯಿಂದ ತನ್ನ ಕೈಯನ್ನು ಮೆಲ್ಲಗೆ ಕೊಸರಿಕೊಂಡು ಮೃದುಸ್ಮಿತೆಯಾಗಿ—

ತರುಣೆ—ನಾನು ಮಹಾಪರಾಧಿಯು, ಅವಿಚಾರದಿಂದ ತಮಗೆ ಇಲ್ಲದ ದೋಷವನ್ನು ಆರೋಪಿಸಿದೆನು. ನನ್ನನ್ನು ಕ್ಷಮಿಸಬೇಕು.

ಜಿತೇಂದ್ರ—ಛೆ! ಅಷ್ಟೊಂದು ಅಸಮಾಧಾನಪಡುವ ಕಾರಣವಿಲ್ಲ, ಕ್ಷಮೆಯ ಮಾತೇಕೆ? ನೋಡು, ವನರಾಜನು ನಿನ್ನ ಹರಿಣೆಯಸಂಗಡ ಹೇಗೆ ಚಿನ್ನಾಟವಾಡುತ್ತಲಿದ್ದಾನೆ! ಈತನು ಚಿದಾನಂದರ ಆಶ್ರಮದಲ್ಲಿ ಬೆಳೆದವನು. ಇಂಥ ದುರ್ಬಲ ಪ್ರಾಣಿಗಳನ್ನು ಈತನು ಎಂದೂ ಹಿಂಸಿಸನು. ಯಾರಾದರೂ ಈತನ ಗೊಡವೆಗೆ ಹೋದರೆ ಮಾತ್ರ ಇವನು ಪ್ರಳಯಕಾಲದ ಅಂತಕನೇ ಸರಿ. ಉಳಿದವರ ಸಂಗಡ ಈತನು ಪ್ರೇಮದಿಂದ ವರ್ತಿಸುವನು. ಇಂಥವನ ಮೇಲೆ ನಾನು ಈದಿನ ಪ್ರಮಾದದಿಂದ ಬಾಣವನ್ನು ಪ್ರಯೋಗಿಸುತ್ತಿದ್ದೆನು!

ತರುಣೆ—ಹಿಂಸ್ರಪಶುಗಳನ್ನು ಮಿತ್ರರಾಗಿ ಮಾಡಿಕೊಳ್ಳುವ ತಮ್ಮ ಪ್ರತಾಪವನ್ನು ನಾನೇನು ವರ್ಣಿಸಲಿ? ಹೇಳಿಕೇಳಿ ನಾನು ಅಬಲೆಯು! ಅಗೋ, ನನ್ನ ಅಂಗರಕ್ಷಕರು ಸನಿಯಕ್ಕೆ ಬಂದರು. ಗಂಭೀರವಾದ ಈ ಸುಂದರ ಪ್ರಸಂಗದ ಸ್ಮರಣವೆಂದು ನನ್ನ ಬೆರಳೊಳಗಿನ ಈ ರತ್ನದ ಉಂಗುರವನ್ನು ನಿಮ್ಮ ಬೆರಳಿನಲ್ಲಿಡುತ್ತೇನೆ. ಈ ಅಬಲೆಯ ಗುರುತು ಮರೆಯಬಾರದು.

ಈ ಮೇರೆಗೆ ನುಡಿದು ತರುಣೆಯು ತನ್ನ ಬೆರಳೊಳಗಿನ ರತ್ನದ ಉಂಗುರವನ್ನು ಜಿತೇಂದ್ರನ ಬೆರಳಿಗಿಟ್ಟಳು. ಆಗ ಜಿತೇಂದ್ರನು—ತರುಣೆಯೇ, ನಿನ್ನ ಈ ಪರಮಾದರಕ್ಕಾಗಿ ನಾನು ಕೃತಜ್ಞನಾಗಿದ್ದೇನೆ. ಉಂಗುರವಿಲ್ಲದ್ದರಿಂದ ನಿನ್ನ ಈ ಸುಂದರವಾದ ಬೆರಳು ಭಣಗುಟ್ಟುತ್ತಲಿದೆ; ಆದ್ದರಿಂದ ನನ್ನ ಬೆರಳಲ್ಲಿರುವ ಈ ಪಚ್ಚದ ಉಂಗುರವನ್ನು ನಿನ್ನ ಬೆರಳಿಗಿಡುತ್ತೇನೆ. ಎಂದು ತನ್ನ ಉಂಗುರವನ್ನು ತರುಣೆಯ ಬೆರಳಿಗಿಟ್ಟನು. ಅವರಿಬ್ಬರು ತರುಣರು ಪ್ರೇಮದಿಂದ ಒಬ್ಬರನ್ನೊಬ್ಬರು ನೋಡುತ್ತ ಸ್ವಸ್ಥವಾಗಿ ನಿಂತುಕೊಂಡರು. ಸಿಂಹವು ಚಿಗರೆಯ ಸಂಗಡ ಆಡುತ್ತಲಿತ್ತು, ಭಗವಾನ್ ಸೂರ್ಯನಾರಾಯಣನು ಪಶ್ಚಿಮದಿಗ್ವಧುವನ್ನು ಪ್ರೇಮದಿಂದ ಆಲಿಂಗಿಸುವ ಹವಣಿಕೆಯಲ್ಲಿದ್ದನು. ಅಷ್ಟರಲ್ಲಿ ತರುಣೆಯ ಅಂಗರಕ್ಷರು ತಮ್ಮ ಕುದುರೆಗಳನ್ನು ಓಡಿಸುತ್ತ ಅಲ್ಲಿಗೆ ಬಂದು ಕುದುರೆಗಳನ್ನಿಳಿದು ತರುಣೆಯನ್ನು ವಂದಿಸಿದರು. ಅಷ್ಟರಲ್ಲಿ ಒಬ್ಬನು ಕೈಜೋಡಿಸಿ—ರಾಜಪುತ್ರಿ, ಇಂದಿರಾದೇವಿ, ಹೀಗೆ ಚಿಗರೆಯ ಬೆನ್ನಹತ್ತಿ ಇಷ್ಟು ದೂರ ಬರುವರೇ! ಇಗೋ, ಸುಭದ್ರಾಂಗಿಮಾತೆಯವರು ಈಗ ಈ ರಾವುತನ ಮುಂದೆ ಹೇಳಿಕಳಿಸಿದ್ದಾರೆ. ನಿಮ್ಮ ಅಣ್ಣಂದಿರಾದ ಅಶೋಕಭೂಪತಿಗಳವರು ಕಲಿಂಗದೇಶವನ್ನು ಗೆದ್ದು ಅದ್ವಿತೀಯವಾದ ಚಕ್ರವರ್ತಿಯ ಪದವಿಯನ್ನು ಹೊಂದಿದರಂತೆ; ಶೂರ ಮೃಗೇಂದ್ರನು ಯುದ್ಧದಲ್ಲಿ ಮರಣಹೊಂದಿದನಂತೆ; ಸುಭದ್ರಾಂಗಿಮಾತೆಯವರು ಚಕ್ರವರ್ತಿಯೆನಿಸಿದ ಮಗನ ಮುಖವನ್ನು ಯಾವಾಗ ನೋಡೇವೆಂದು ಆತುರಪಡಹತ್ತಿದ್ದಾರಂತೆ; ಜ್ಞಾನಿಗಳ ಭವಿಷ್ಯದಂತೆ ಮಗನು ಚಕ್ರವರ್ತಿಯಾದದ್ದಕ್ಕಾಗಿ ಅವರು ಮಂಗಲೋತ್ಸವಮಾಡುವವರಿದ್ದಾರಂತೆ; ಆದ್ದರಿಂದ ಅವರು ಹಿಮಾಲಯದೊಳಗಿನ ಬುದ್ಧದೇವನ ಪಾದುಕೆಗಳ ದರ್ಶನಕ್ಕೆ ಹೋಗುವದನ್ನು ಸದ್ಯಕ್ಕೆ ರಹಿತಮಾಡಿ, ನಾಳೆ ಬೆಳಗಾಗುತ್ತಲೇ ಇಲ್ಲಿಂದ ಹಿಂದಿರುಗಿ ಪಾಟಲಿಪುತ್ರಕ್ಕೆ ಹೊರಡುವರಂತೆ; ದೇವಿಯವರು ನಿಮ್ಮನ್ನು ಬೇಗನೆ ಕರತರಲು ಆಜ್ಞಾಪಿಸಿರುವರಂತೆ; ಆದ್ದರಿಂದ ರಾಜಪುತ್ರಿಯವರು ಬೇಗನೆ ಕುದುರೆಯನ್ನು ಹತ್ತುವ ಕೃಪೆಮಾಡಬೇಕೆಂದು ಸೇವಕನು ಪ್ರಾರ್ಥಿಸುವೆನು.

ಅಂಗರಕ್ಷಕನ ಈ ಮಾತುಗಳನ್ನು ಕೇಳಿ ಜಿತೇಂದ್ರನ ಆನಂದವು ಒಮ್ಮೆಲೆ ನಷ್ಟವಾಗಿ, ಆತನ ಮುಖಚರ್ಯವು ಸರ್ರನೆ ಇಳಿಯಿತು. ಪ್ರತ್ಯಕ್ಷ ಅಶೋಕನ ತಂಗಿಯು ತನ್ನನ್ನು ಪ್ರೀತಿಸುವ ಯೋಗವನ್ನು ನೆನಿಸಿ ಆತನು ಆಶ್ಚರ್ಯಗೊಳ್ಳುವದರೊಳಗೆ, ಕಲಿಂಗಾಧಿಪತಿಯಾದ ತನ್ನ ತಂದೆಯ ಸೋಲಿನ ಸುದ್ದಿಯೂ, ಮರಣದ ಸುದ್ದಿಯೂ ಕಿವಿಗೆಬಿದ್ದು, ಆತನನ್ನು ವ್ಯಥೆಗೊಳಿಸ ಹತ್ತಿದವು. ಇತ್ತ ಅಂಗರಕ್ಷಕರು ಚಿಗರೆಯ ಸಂಗಡ ಸಿಂಹವು ಆಡುತ್ತಿರುವದನ್ನೂ, ಜಿತೇಂದ್ರನ ಅಲೌಕಿಕ ತೇಜಸ್ಸನ್ನೂ ನೋಡಿ ಬೆರಗಾಗಿ ಸುಮ್ಮನೆ ನಿಂತಿರಲು, ಜಿತೇಂದ್ರನು ತರುಣಿಯನ್ನು ಕುರಿತು—''ಅಂತು, ಇಂದಿರಾದೇವಿಯೇ, ನೀನು ಅಶೋಕರಾಜನ ತಂಗಿಯು!'' ಎಂದು ಕೇಳಲು, ಇಂದಿರೆಯು ತಲೆಯಲ್ಲಾಡಿಸಿ ಒಪ್ಪಿಗೆಯನ್ನಿತ್ತಳು. ಜಿತೇಂದ್ರನ ಮುಖಚರ್ಯವು ಒಮ್ಮೆಲೆ ಇಳಿದದ್ದನ್ನು ನೋಡಿ, ಈ ತರುಣನು ಮೃಗೇಂದ್ರರಾಜನ ಸಂಬಂಧಿಕನಿರಬಹುದೆಂದು ಇಂದಿರೆಯು ತರ್ಕಿಸಿ, ಅತ್ಯಂತ ವಿನಯದಿಂದ ಆತನನ್ನು ಕುರಿತು—

ಇಂದಿರೆ—ವೀರಶಿರೋಮಣಿಯೇ, ನಿನ್ನ ಹೆಸರೇನು?

ಜಿತೇಂದ್ರ—ಇಂದಿರಾದೇವಿ, ನನ್ನ ಹೆಸರನ್ನು ಕೇಳಿ ನಿನಗೇನು ಲಾಭವಾಗುವಹಾಗಿಲ್ಲ. ತಿರುಗಿ ಕೇಳಿದರೆ ಅದರಿಂದ ನಿನಗೆ ದುಃಖವು ಮಾತ್ರ ಆದೀತು. ಇರಲಿ, ಈಶ್ವರೇಚ್ಛೆಯಿಂದ ನನ್ನ ಹೆಸರನ್ನು ಕೇಳುವಯೋಗವು ನಿನಗೆ ಎಂದಾದರೂ ಬಂದರೆ, ನಾನು ಅದನ್ನು ಸಂತೋಷ ದಿಂದ ಹೇಳುವೆನು. ನನ್ನ ಗುರುತನ್ನು ಮರೆಯಬೇಡ. ಇಲ್ಲಿಯೇ ಸಮೀಪದಲ್ಲಿರುವ ಚಿದಾನಂದ ಸ್ವಾಮಿಗಳ ಆಶ್ರಮದಲ್ಲಿರುವ ನಾನೊಬ್ಬ ಬಡವಿದ್ಯಾರ್ಥಿಯಿದ್ದೇನೆ.

ಈ ಮೇರೆಗೆ ನುಡಿಯುವಾಗ ಜಿತೇಂದ್ರನ ಕುತ್ತಿಗೆಯ ಶಿರಗಳು ಬಿಗಿದು, ಕಣ್ಣೀರುಗಳು ಉದುರಿದವು. ಆ ನೀರುಗಳು ಕೇವಲ ದುಃಖದಿಂದ ಸುರಿದವೆಂದು ಹೇಳುವಹಾಗಿದ್ದಿಲ್ಲ. ಅಶೋಕನಂಥ ಬಲಾಢ್ಯ ರಾಜನ ತಂಗಿಯ ಚಿತ್ತಾಕರ್ಷಣವು ಅಕಸ್ಮಾತ್ತಾಗಿ ಆದದ್ದರಿಂದ ಆತನಿಗೆ ಆನಂದವೂ ಆಗಿತ್ತು; ತನ್ನ ಭವಿಷ್ಯಕಾಲದ ವೈಭವ ಮಂದಿರವು ಒಮ್ಮಿಂದೊಮ್ಮೆ ನೆಲಸಮ ವಾದದ್ದರಿಂದ ಆತನಿಗೆ ಪರಮಾವಧಿದುಃಖವೂ ಆಗಿತ್ತು; ಆದರೆ ಆ ಸತ್ವಶಾಲಿಯು ಕ್ಷುದ್ರ ಮನಸ್ಸಿನವರಂತೆ ಸ್ತ್ರೀ ವ್ಯಾಮೋಹಕ್ಕೆ ಒಳಗಾಗುವವನೂ, ಹೇಡಿಗಳಂತೆ ರಾಜ್ಯ ಭ್ರಷ್ಟತೆಗಾಗಿ ಕಣ್ಣೀರು ಸುರಿಸುತ್ತ ಕುಳಿತುಕೊಳ್ಳುವವನೂ ಇದ್ದಿಲ್ಲ. ತನ್ನ ಗುರುವಾದ ಚಿದಾನಂದ ಸ್ವಾಮಿಗಳ ಭವಿಷ್ಯದಲ್ಲಿ ಆತನ ವಿಶ್ವಾಸವು ಪೂರ್ಣವಾಗಿ ಇತ್ತು; ''ಅಶೋಕನು ಸದ್ಯಕ್ಕೆ ಕಲಿಂಗದೇಶವನ್ನು ಗೆದ್ದರೂ, ಕಡೆಗೆ ಅಶೋಕ—ಮೃಗೇಂದ್ರರಲ್ಲಿ ಅಕೃತ್ರಿಮಸಖ್ಯವು ಉಂಟಾಗಿ ಹಿಂದೂಧರ್ಮದ ಪುನರುಜ್ಜೀವನಕ್ಕೆ ಆಸ್ಪದವಾಗುವದೆ''ಂದು ತನ್ನ ಗುರುವು ಹೇಳಿದ ಭವಿಷ್ಯವನ್ನು ಸ್ಮರಿಸಿ, ಆತನು ತಂದೆಯ ಮರಣವಾರ್ತೆಯನ್ನು ಅವಿಶ್ವಾಸನೀಯವೆಂದು ಭಾವಿಸಿದನು. ಕಳೆದುಹೋಗಿದ್ದ ಕಲಿಂಗದ ಸಾಮ್ರಾಜ್ಯವನ್ನು ತಿರುಗಿ ಸಂಪಾದಿಸುವದು ಆ ತರುಣವೀರನಿಗೆ ಎಷ್ಟು ಮಾತ್ರವೂ ಅಸಂಭವವಾಗಿ ತೋರಲಿಲ್ಲ; ತನ್ನ ತಾಯಿಯಾದ ಇಂದುಮತಿಯ, ಹಾಗು ತಂಗಿಯಾದ ಪ್ರಣಯಿನಿಯ, ಅದರಂತೆ ಬೇರೆ ಆಪ್ತೇಷ್ಟರ ಗತಿಯೇನಾಯಿತೋ, ಎಂದು ಆತನು ಸ್ವಲ್ಪ ಚಿಂತಿಸಿದನು. ಚಿದಾನಂದರಂಥ ಸತ್ಪುರುಷರ ಸಮಾಗಮದಲ್ಲಿದ್ದ ಜಿತೇಂದ್ರನ ಮನಸ್ಸಿನಮೇಲೆ,

ಚಿಂತೆಯ ಪರಿಣಾಮವು ಬಹಳಹೊತ್ತು ಆಗುತ್ತಿದ್ದಿಲ್ಲ. ಮನುಷ್ಯನನ್ನು ಕರ್ತವ್ಯಭ್ರಷ್ಟನನ್ನಾಗ ಮಾಡುವ ಕೆಟ್ಟ ಚಿಂತೆಗೆ ಅಧೀನವಾಗುವದು ಹಾನಿಕರವೆಂಬ ತತ್ವವನ್ನೂ, ಆತನು ಸದ್ಗುರುವಿನ ಬಳಿಯಲ್ಲಿ ಚನ್ನಾಗಿ ಅಭ್ಯಾಸಿಸಿದ್ದನು, ''ಏನು ಮಾಡಲಿ, ಹೇಗೆ ಮಾಡಲಿ'' ಎಂಬ ದಶಾಕ್ಷರೀ ಮಂತ್ರವನ್ನು ಜಪಿಸುತ್ತ ಉಸುರುಹಾಕುತ್ತ ಕುಳಿತುಕೊಳ್ಳುವ ನಿರರ್ಥಕ ಜನರಲ್ಲಿ ಜಿತೇಂದ್ರನು ಎಣಿಸತಕ್ಕವನಿದ್ದಿಲ್ಲ, ಆತನು ಮಹಾ ಧೀರನು, ಉದ್ಯೋಗತತ್ಪರನು. ಈ ಪ್ರಸಂಗದಲ್ಲಿ ತಾನು ಆಶ್ರಮದಲ್ಲಿ ಸ್ವಸ್ಥವಾಗಿ ಕುಳಿತುಕೊಳ್ಳುವದಕ್ಕಿಂತ, ಪಾಟಲಿಪುತ್ರ ರಾಜಧಾನಿಗೆ, ಇಲ್ಲವೆ ತನ್ನ ರಾಜಧಾನಿಯಾದ ಇಂದ್ರಪುರಕ್ಕೆ ಹೋಗಿ ಏನಾದರೂ ಯತ್ನಮಾಡಬೇಕೆಂದು ಆತನು ನಿಶ್ಚಯಿಸಿದನು. ತಾನು ಹೀಗೆ ಬ್ರಹ್ಮಚಾರಿಯ ವೇಷದಿಂದ ಹೋಗುವದು ಘಾತಕ ವಾದದ್ದರಿಂದ, ಬುದ್ಧಭಿಕ್ಷುವಿನ ವೇಷವನ್ನು ಹಾಕಿಕೊಳ್ಳಬೇಕೆಂದು ಯೋಚಿಸಿ, ಆತನು ಆಶ್ರಮಕ್ಕೆ ಹೋದನು. ಮರುದಿನ ಕ್ಷೌರಮಾಡಿಸಿ ಕೌಪೀನವನ್ನೂ, ಹಳದಿಯ ಬಣ್ಣದ ಕಪನಿಯನ್ನೂ ಹಾಕಿಕೊಂಡು, ಕೈಯ್ಯಲ್ಲಿ ಕಮಂಡಲುವನ್ನು ಹಿಡಕೊಂಡು, ಆವುಗೆಗಳ ''ಖಟಖಟ್ಟೆ''ಂಬ ಶಬ್ದವು ಉತ್ಪನ್ನವಾಗುತ್ತಿರಲು, ''ನಮೋಬುದ್ಧಾಯ'' ಎಂದು ನುಡಿಯುತ್ತ ಹರಿದ್ವಾರದ ಆಶ್ರಮದಿಂದ ಹೊರಟು, ಮೊದಲು ಇಂದ್ರಪುರದ ಕಡೆಗೆ ಸಾಗಿದನು. ಆ ಕಾಲದಲ್ಲಿ ಬೌದ್ಧ ಧರ್ಮವು ಪ್ರಬಲವಾದದ್ದರಿಂದಲೂ, ಬೌದ್ಧನೃಪತಿಯಾದ ಅಶೋಕನು ತನ್ನ ಪ್ರತಾಪದಿಂದ ಸರ್ವತ್ರ ವಿಜಯವನ್ನು ಸಂಪಾದಿಸಿದ್ದರಿಂದಲೂ ಬೌದ್ಧಭಿಕ್ಷುಗಳಿಗೆ ಬಹುಮಾನ ವಿತ್ತು. ಅವರಿಗೆ ಆಗ ಯಾವ ಬಗೆಯ ಉಪದ್ರವವೂ ತಟ್ಟುತ್ತಿದ್ದಿಲ್ಲವೆಂದು ಹೇಳಬಹುದು. ಅದರಿಂದಲೇ ಕಾರ್ಯಸಾಧಕನಾದ ಜಿತೇಂದ್ರನು ಬೌದ್ಧಭಿಕ್ಷುವಿನ ವೇಷವನ್ನು ಹಾಕಿಕೊಂಡಿದ್ದನು.

ಆತನು ಕೆಲವು ದಿನ ಮಾರ್ಗವನ್ನು ಕ್ರಮಿಸುತ್ತ ಮಥುರಾಪಟ್ಟಣದ ಸಮೀಪಕ್ಕೆ ಬರಲು, ಅಲ್ಲಿಯ ಬುದ್ಧನ ದೇವಾಲಯದ ಉತ್ತುಂಗ ಶಿಖರಗಳು ಕಾಣಹತ್ತಿದವು. ಆ ಶಿಖರಗಳ ಕೆತ್ತಿಗೆಯ ಕೆಲಸವು ಪ್ರೇಕ್ಷಣೀಯವಾಗಿತ್ತು, ದೇವಾಲಯಗಳಲ್ಲಿ ಬಾರಿಸುತ್ತಿದ್ದ ಘಂಟೆಗಳ ನಾದದಿಂದ ಹಾದಿಕಾರರ ಕಿವಿಗಳು ಗಡಚಿಕ್ಕುತ್ತಿದ್ದವು. ಅವುಗಳ ನಾದದಲ್ಲಿ ಪಟ್ಟಣದ ಜನರ ಗದ್ದಲವು ಲೇಶವಾದರೂ ಕೇಳುತ್ತಿದ್ದಿಲ್ಲ. ಧನಿಕರ ಎತ್ತರವಾದ ಮನೆಗಳೂ, ದೊಡ್ಡ ದೊಡ್ಡ ಸರದಾರರ ಭವ್ಯವಾದ ಪ್ರಾಸಾದಗಳೂ ಪಟ್ಟಣವನ್ನೆಲ್ಲ ತುಂಬಿಕೊಂಡಿದ್ದವು. ಜಿತೇಂದ್ರನು ಇಂಥ ಭವ್ಯವಾದ ಪಟ್ಟಣವನ್ನು ಪ್ರವೇಶಿಸುತ್ತಿರಲು, ಒಬ್ಬ ರಜಪೂತವೀರನು ಆತನಿಗೆ ಎದುರಾದನು. ಅವರಿಬ್ಬರ ದೃಷ್ಟಿಗಳು ಒಂದಾದಕೂಡಲೆ ಆ ವೀರನು ಜಿತೇಂದ್ರನನ್ನು ವಿನಯದಿಂದ ನಮಿಸಿದನು. ಜಿತೇಂದ್ರನಾದರೂ ಕೂಡಲೆ ಆ ವೀರನ ಗುರುತು ಹಿಡಿದನು. ಆಗ ಅವರಿಬ್ಬರು ಮಾತಾಡದೆ ಒಬ್ಬರನ್ನೊಬ್ಬರು ನೋಡುತ್ತ ಸ್ವಲ್ಪಹೊತ್ತು ನಿಂತುಕೊಂಡರು. ಬಳಿಕ ಜಿತೇಂದ್ರನು ತನ್ನನ್ನು ಹಿಂಬಾಲಿಸಿ ಬರಬೇಕೆಂದು ಸನ್ನೆ ಮಾಡಲು, ಆ ತರುಣನು ಅಪ್ಪಣೆಯಂತೆ ಜಿತೇಂದ್ರನ ಬೆನ್ನುಹತ್ತಿದನು. ಅವರಿಬ್ಬರು ಗದ್ದಲವಿಲ್ಲದ ಒಂದು ಧರ್ಮಶಾಲೆಗೆ ಹೋದರು. ಆಗ ಆ ರಜಪೂತವೀರನು ಜಿತೇಂದ್ರನನ್ನು ಕುರಿತು—ರಾಜಪುತ್ರನೇ, ನನ್ನನ್ನು

ಚಿದಾನಂದಸ್ವಾಮಿಗಳು ನಿನ್ನ ಬಳಿಗೆ ಕಳುಹಿದ್ದಾರೆ. ನಿನ್ನನ್ನು ಶೋಧಿಸಿ ಹಿಡತರಲು ಅಶೋಕನು ನಾಲ್ಕೂ ಕಡೆಗೆ ಸೇವಕರನ್ನು ಕಳಿಸಿರುವನಂತೆ. ನಿನ್ನನ್ನು ಹುಡುಕಿಕೊಟ್ಟವರಿಗೆ ಹತ್ತುಸಾವಿರ ಹೊನ್ನುಗಳು ಇನಾಮಾಗಿ ದೊರೆಯುವವು. ಅಶೋಕನ ಸೇವಕರು ಹರಿದ್ವಾರದ ಆಶ್ರಮಕ್ಕೆ ಹೋಗಿರಬಹುದು. ನೀನು ಆಶ್ರಮದಲ್ಲಿರದೆ ಬೌದ್ಧಭಿಕ್ಷುವಿನ ವೇಷದಿಂದ ದೇಶಾಂತರಕ್ಕೆ ತೆರಳ ಬೇಕೆಂದು ಗುರುಗಳು ಆಜ್ಞಾಪಿಸಿರುವರು. ಮೃಗೇಂದ್ರ ಮಹಾರಾಜರ ಚಿಂತೆಯನ್ನು ಮಾಡ ಬಾರದೆಂತಲೂ, ಅನುಕೂಲಕಾಲವು ಒದಗುವವರೆಗೆ ಸತ್ವವನ್ನು ಕಾಯ್ದುಕೊಂಡು ಮಾರ್ಗವನ್ನು ನಿರೀಕ್ಷಿಸುತ್ತ ಗುಪ್ತರೀತಿಯಿಂದ ವಾಸಮಾಡಬೇಕೆಂತಲೂ, ಯಾವ ಬಗೆಯ ಚಿಂತೆಗೂ ಅನುವು ಕೊಡಬಾರದೆಂತಲೂ ಆಗ್ರಹದಿಂದ ಗುರುಗಳು ಹೇಳಿರುವರು. ಅಪರಿಹಾರ್ಯ ಕಾರಣದಿಂದ ನಾನು ಬರಲಿಕ್ಕೆ ತಡವಾದರೂ ಗುರುಗಳ ಇಚ್ಛೆಯಂತೆ ವ್ಯವಸ್ಥೆಯಾಗಿರುವದನ್ನು ನೋಡಿ ನನಗೆ ಬಹಳ ಸಮಾಧಾನವಾಗಿದೆ! ನಾನು ಇನ್ನು ಹರಿದ್ವಾರಕ್ಕೆ ಹೋಗದೆ, ಈಗ ನಿಂತಕಾಲಮೇಲೆ ಗುರುಗಳ ಬಳಿಗೆ ಹೋಗಿ ಈ ಸಂಗತಿಯನ್ನು ತಿಳಿಸುವೆನು, ಎಂದು ಹೇಳಿ ಆ ರಜಪೂತನು ಹೋಗಲು, ಇತ್ತ ಮಥುರಾಪಟ್ಟಣದಲ್ಲಿ ಅಶೋಕನ ಸೇವಕರು, ಭೇರಿಯ ನಾದದೊಡನೆ ಡಂಗುರ ಸಾರುತ್ತ ಬರುತ್ತಿದ್ದರು. ಜಿತೇಂದ್ರನು ಕಿವಿಗೊಟ್ಟು ಆ ಡಂಗುರವನ್ನು ಕೇಳುತ್ತಿರಲು—''ಎಲೈ ಪೌರರೇ, ಲಕ್ಷಗೊಟ್ಟು ಕೇಳಿರಿ. ಅಶೋಕರಾಜನು ಕಲಿಂಗದೇಶವನ್ನು ಗೆದ್ದನು. ಕಲಿಂಗದ ಯುವರಾಜನಾದ ಜಿತೇಂದ್ರನನ್ನು ಹಿಡತರಲು ಆ ಬೌದ್ಧ ಚಕ್ರವರ್ತಿಯು ಆಜ್ಞಾಪಿಸಿರುತ್ತಾನೆ. ಜಿತೇಂದ್ರನು ಹರಿದ್ವಾರದಿಂದ ಎಲ್ಲಿಯೋ ಹೊರಟು ಹೋಗಿರುವನು. ಆತನನ್ನು ಹಿಡಕೊಟ್ಟ ವರಿಗೆ ಹತ್ತುಸಾವಿರ ಹೊನ್ನುಗಳು ಉಚಿತವಾಗಿ ದೊರೆಯುವವು'' ಎಂಬ ಶಬ್ದಗಳು, ಭಿಕ್ಷುವೇಷ ಧಾರಿಯಾದ ಆ ಜಿತೇಂದ್ರನ ಕಿವಿಗೆ ಬಿದ್ದವು.

ಉಪಗುಪ್ತನು

ಮೃಗೇಂದ್ರರಾಜನ ಹೆಂಡತಿಯಾದ ಇಂದುಮತಿಯೂ, ಮಗಳಾದ ಪ್ರಣಯಿನಿಯೂ ವೇಷಾಂತರಮಾಡಿ ಘನಶ್ಯಾಮನೆಂಬ ಸರದಾರನ ಬೆಂಗಾವಲಿನಿಂದ ಹರಿದ್ವಾರಕ್ಕೆ ಹೊರಟದ್ದನ್ನು ವಾಚಕರು ಬಲ್ಲರಷ್ಟೇ? ಆ ಮೂವರು ಎಡೆಬಿಡದೆ ಪ್ರವಾಸಮಾಡಿ ಮಥುರಾಪಟ್ಟಣಕ್ಕೆ ಬಂದರು. ಅವರ ಕುದುರೆಗಳು ದಣಿದದ್ದರಿಂದ ನಾಲ್ಕುದಿನ ಆ ಪಟ್ಟಣದಲ್ಲಿ ವಾಸಮಾಡ ಬೇಕೆಂದು ಅವರು ಯೋಚಿಸಿದರು. ಆದರೆ ಆ ಪಟ್ಟಣದಲ್ಲಿ ಅವರಿಗೆ ಯಾರ ಗುರುತೂ ಇದ್ದಿಲ್ಲ. ಘನಶ್ಯಾಮನಿಗೆ ನಂದಿಗುಪ್ತನೆಂಬ ಒಬ್ಬ ಬೌದ್ಧಧರ್ಮದ ವ್ಯಾಪಾರಸ್ಥನ ಚಿಕ್ಕಂದಿನ ಪರಿಚಯ ಮಾತ್ರ ಇತ್ತು. ನಂದಿಗುಪ್ತನು ಪ್ರಸಿದ್ಧ ಶ್ರೀಮಂತನು. ಔದಾರ್ಯದಲ್ಲಿ ಆತನನ್ನು ಸರಿಗಟ್ಟುವವರು ಇಡಿಯ ಮಥುರಾಪಟ್ಟಣದಲ್ಲಿ ಮತ್ತೊಬ್ಬನಿದ್ದಿಲ್ಲ. ಘನಶ್ಯಾಮನು ನಂದಿ ಗುಪ್ತನನ್ನು ಕಾಣದೆ ನಾಲ್ವತ್ತು ವರ್ಷಗಳಾಗಿದ್ದವು; ಆದರೂ ಆಶ್ರಯಕ್ಕೆ ತಕ್ಕ ಸ್ಥಾನವೆಂದು

ತಿಳಿದು ಘನಶ್ಯಾಮನು ನಂದಿಗುಪ್ತನ ಮನೆಯನ್ನು ಹುಡುಕುತ್ತ ಹೊರಟನು. ಅಷ್ಟು ಹೊತ್ತಿಗೆ ನಂದಿಗುಪ್ತನು ಸತ್ತು ಹತ್ತುವರ್ಷಗಳಾಗಿದ್ದವು. ಆತನ ಮಗನಾದ ಉಪಗುಪ್ತನು, ಔದಾರ್ಯದಿಂದ ತನ್ನ ತಂದೆಯ ಸಂಪತ್ತನ್ನೂ, ಮನೆಮಾರುಗಳನ್ನೂ ಕಳಕೊಂಡು, ಕೇವಲ ಬಡವನಂತೆ ಒಂದು ಸಣ್ಣ ಮನೆಯಲ್ಲಿರುತ್ತಿದ್ದನು. ಘನಶ್ಯಾಮನು ಆತನ ಮನೆಗೆ ಹೋಗಿ ಆತನ ತಂದೆಯ ಗುರುತು ಪರಿಚಯವನ್ನು ಹೇಳಲು, ಉಪಗುಪ್ತನು ಸಂತೋಷಬಟ್ಟು ಆ ಮೂವರನ್ನು ತನ್ನ ಮನೆಯಲ್ಲಿ ಆದರದಿಂದ ಇಳಿಸಿಕೊಂಡನು. ಉಪಗುಪ್ತನು ಬಡವನಾದರೂ ಅತಿಥಿಸತ್ಕಾರದಲ್ಲಿ ಹೆಸರಾಗಿದ್ದನು. ಆತನ ಹೆಂಡತಿಯಾದ ಬಕುಲಾದೇವಿಯು ಪತಿಭಕ್ತಿಪರಾಯಣಳಾಗಿದ್ದಳು. ಒಟ್ಟಿಗೆ, ದಂಪತಿಗಳು ತೀರ ಚಿಕ್ಕವರಾದರೂ ಸಜ್ಜನರಿದ್ದರು. ಘನಶ್ಯಾಮನು ನಂದಿಗುಪ್ತನ ಸದ್ಗುಣಗಳನ್ನೂ, ಐಶ್ವರ್ಯವನ್ನೂ ವರ್ಣಿಸಲು, ಉಪಗುಪ್ತನು ಆತನನ್ನು ಕುರಿತು—ಸಜ್ಜನನೇ, ನೀನು ನನ್ನ ತಂದೆಯ ಸದ್ಗುಣಗಳ ನೆನಪು ಮಾಡಿಕೊಟ್ಟಿದ್ದಕ್ಕಾಗಿ ನಿನ್ನ ಉಪಕಾರವೆಣಿಸುವೆನು. ತಂದೆಯಕಾಲದ ಶ್ರೀಮಂತಗಿರಿಯು ನನ್ನ ಕಾಲದಲ್ಲಿ ಉಳಿದಿರುವದಿಲ್ಲ. ತಂದೆ ಸಂಪಾದಿಸಿದ ಅಪಾರವಾದ ಸಂಪತ್ತೂ, ಮನೆಮಾರುಗಳೂ ನನ್ನ ಕೈಬಿಟ್ಟು ಹೋದವು; ಆದ್ದರಿಂದ ನಿಮ್ಮ ಮರ್ಯಾದೆಗೆ ತಕ್ಕಂತೆ ನಿಮಗೆ ಪ್ರಶಸ್ತ ಸ್ಥಳವನ್ನು ಇಳಕೊಳ್ಳಲಿಕ್ಕೆ ಕೊಡುವದು ನನ್ನಿಂದಾಗುವ ಹಾಗಿಲ್ಲ; ಸೇವೆಗಾಗಿ ದಾಸದಾಸಿಯರನ್ನು ಕಳಿಸುವದೂ ಆಗುವದಿಲ್ಲ. ಇದಕ್ಕಾಗಿ ಕ್ಷಮಿಸಬೇಕು. ನಾನು ನಿಮ್ಮ ನಮ್ರ ಸೇವಕನಿರುತ್ತೇನೆ, ನನ್ನ ಪ್ರಿಯಪತ್ನಿಯು ತಮ್ಮ ದಾಸಿಯಾಗಿರುತ್ತಾಳೆ, ನಮ್ಮಿಂದ ಸೇವೆಯನ್ನು ಗ್ರಹಿಸಬೇಕು. ಸದ್ಗೃಹಸ್ಥನೇ, ಆ ದ್ರವ್ಯವೂ, ಆ ಸಂಪತ್ತೂ ಆ ದೊಡ್ಡ ಮನೆಯೂ ಹೋದದ್ದಕ್ಕಾಗಿ ನಾನು ದುಃಖಪಡುವದಿಲ್ಲ; ತಮ್ಮಂಥ ಯೋಗ್ಯರಾದ ಅತಿಥಿಗಳ ಸತ್ಕಾರವನ್ನು ಕೈಮುಟ್ಟಿ ಮಾಡುವ ಯೋಗವು ನನಗೂ ನನ್ನ ಹೆಂಡತಿಗೂ ಒದಗಿದ್ದಕ್ಕಾಗಿ ನನಗೆ ಪರಮಾನಂದವಾಗಿದೆ.

ಉಪಗುಪ್ತನ ಈ ವಿನಯದ ಮಾತುಗಳಿಗೂ, ಸಾತ್ವಿಕಸ್ವಭಾವಕ್ಕೂ ಇಂದುಮತಿಯು ಸಂತೋಷಪಟ್ಟು, ಆತನನ್ನು ಕುರಿತು—ಉಪಗುಪ್ತಶ್ರೇಷ್ಠಿಗಳೇ, ನಿಮ್ಮ ನಮ್ರಸ್ವಭಾವವನ್ನೂ, ಅತಿಥಿಗಳ ಮೇಲಿನ ನಿಮ್ಮ ಶ್ರದ್ಧೆಯನ್ನೂ, ಇದ್ದದ್ದರಲ್ಲಿ ಸಂತೋಷಪಡುವ ನಿಮ್ಮ ದೊಡ್ಡ ಮನಸ್ಸನ್ನೂ, ನಿಮ್ಮ ಸಾತ್ವಿಕಸ್ವಭಾವವನ್ನೂ ನೋಡಿ ನನಗೆ ಬಹಳ ಸಂತೋಷವಾಗಿದೆ. ನಿಮ್ಮ ಈ ಸದ್ಗುಣಗಳ ಮೇಲೆಯೂ, ಸುಸ್ವಭಾವದಮೇಲೆಯೂ ಇಡಿಯ ಜಗತ್ತಿನ ಸಂಪತ್ತನ್ನು ಅದೇಕೆ, ಪ್ರತ್ಯಕ್ಷ ಕುಬೇರನ ಸಂಪತ್ತನ್ನು ಕೂಡ ನಿವಾಳಿಸಿ ಚಲ್ಲಬಹುದು. ನೀವು ತಾಯಿ–ತಂದೆಗಳ ಹೆಸರನ್ನು ನಿಜವಾಗಿ ಕಾದಿರಿ ಎಂದು ನುಡಿದಳು. ಇಂದುಮತಿಯ ಈ ವರ್ಣನವು ನಿರರ್ಥಕವಾದದ್ದಿದ್ದಿಲ್ಲ, ಉಪಗುಪ್ತನು ಅಂಥ ಸತ್ಪುರುಷನೇ ಆಗಿದ್ದನು. ಉಪಗುಪ್ತನನ್ನು ಲಕ್ಷ್ಮಿಯು ತೊಲಗಿದಳು; ಆತನ ಪರಿವಾರವು ಕರಗಿತು; ಎಲ್ಲ ಕೆಲಸಗಳನ್ನು ಕೈಮುಟ್ಟಿ ಮಾಡುವ ಪ್ರಸಂಗವು ಆತನಿಗೆ ಒದಗಿತು. ಬಹಳ ಹೇಳುವದೇನು? ಮಧ್ಯಾಹ್ನಕ್ಕೆ ಅಭಾವವಾಗಿ ಸಾವುಕಾರರು ಆತನನ್ನು ಪರಿಪರಿಯಾಗಿ ಪೀಡಿಸಿದರು; ಆದರೂ ಆ ಸಜ್ಜನನ ಸದ್ಗುಣಗಳು ಲೇಶವಾದರೂ ಕಡಿಮೆಯಾಗಲಿಲ್ಲ. ಐಶ್ವರ್ಯ ಕಾಲದಲ್ಲಿದ್ದ ನಮ್ರಸ್ವಭಾವವೂ, ಉದಾರ

ಬುದ್ಧಿಯೂ ಈಗಾದರೂ ಆತನಲ್ಲಿ ಅಚ್ಚಳಿಯದೆ ಇದ್ದವು. ದೊಡ್ಡ ಮನಸ್ಸೂ, ಸಾತ್ವಿಕ ಸ್ವಭಾವವೂ, ಸ್ವಧರ್ಮ ನಿಷ್ಠೆಯೂ ಉಪಗುಪ್ತನ ಹುಟ್ಟುಗುಣಗಳಾಗಿದ್ದವು. ಬಡತನದ ಮೂಲಕ ಆತನ ಮನಸ್ಸಿನ ಸ್ಥಿರತ್ವಕ್ಕೆ ಎಂದೂ ಭಂಗಬರಲಿಲ್ಲ, ತೃಪ್ತಿಗೆ ಎಂದೂ ಕೊರತೆ ಬರಲಿಲ್ಲ. ಆತನು ಬೌದ್ಧಧರ್ಮದ ಉಪಾಸಕನಾಗಿದ್ದನು. ಬೌದ್ಧಧರ್ಮದ ಮಹತ್ವಗಳನ್ನು ಆತನು ಉತ್ತಮ ರೀತಿಯಿಂದ ತಿಳಕೊಂಡು, ಅದರಂತೆ ಪ್ರತ್ಯಕ್ಷವಾಗಿ ಆಚರಿಸುತ್ತಿದ್ದನು. ತಂದೆಯ ಅಂಥ ಅಪಾರವಾದ ಸಂಪತ್ತು ಉಪಗುಪ್ತನ ದಾನಶೂರತ್ವಕ್ಕೆ ಈಡಾಗಲಿಲ್ಲ. ಉಪಗುಪ್ತನ ದಾನ ಶೂರತ್ವದ ಫಲವೆಂದು ತಿಳಿದು ಎಷ್ಟೋ ಜನರು ಆತನ ಅನ್ನಸತ್ರದಲ್ಲಿ ಸುಗ್ರಾಸಭೋಜನ ಮಾಡುತ್ತಿದ್ದರು; ಆದರೆ ಉಪಗುಪ್ತನಿಗೂ, ಆತನ ಹೆಂಡತಿಗೂ ಮಧ್ಯಾಹ್ನಕ್ಕೆ ಒಮ್ಮೊಮ್ಮೆ ಹಿಂಡಿರೊಟ್ಟಿ ಹೊಟ್ಟೆತುಂಬ ಸಿಗುತ್ತಿದ್ದಿಲ್ಲ! ಉಪಗುಪ್ತನು ಮಾರ್ಗಸ್ಥರ ಅನುಕೂಲತೆಗಾಗಿ ಕಟ್ಟಿಸಿದ ವಿಶಾಲವಾದ ಧರ್ಮಶಾಲೆಯನ್ನು, ಆತನ ಮುರುಕಮನೆಯು ಎಂದೂ ಸರಿಗಟ್ಟುವ ಹಾಗಿದ್ದಿಲ್ಲ. ಇವೆಲ್ಲವುಗಳಿಗಿಂತ ಉಪಗುಪ್ತನಲ್ಲಿ ಒಂದು ಅತ್ಯಂತ ಶ್ರೇಷ್ಠಗುಣವು ವಾಸಿಸುತ್ತಿತ್ತು. ಆ ಸುಸ್ವರೂಪಿಯಾದ ತರುಣನು ಪರನಾರೀ ಸೋದರನಾಗಿದ್ದನು. ಏಕಪತ್ನೀ ವ್ರತದಲ್ಲಿ ಶ್ರೀರಾಮಚಂದ್ರನಿಗೆ ಹೋಲಿಸುವದಾದರೆ ಉಪಗುಪ್ತನನ್ನೇ ಹೋಲಿಸಬಹುದಾಗಿತ್ತು. ಒಟ್ಟಿಗೆ, ಉಪಗುಪ್ತನ ಇಂದ್ರಿಯನಿಗ್ರಹವು, ಮಹಾ—ಮಹಾ ತಪಸ್ವಿಗಳನ್ನು ನಾಚಿಸಬಹುದಾಗಿತ್ತು! ಅರಣ್ಯದಲ್ಲಿ ವಾಸಿಸುವ, ಸ್ತ್ರೀಯರ ನೆರಳಿನ ದರ್ಶನವೂ ಇಲ್ಲದ, ಕಂದಮೂಲಾದಿ ನಿಸ್ಸತ್ವಾಹಾರಗಳನ್ನೇ ಸೇವಿಸುವ, ಚತುರ್ಥಾಶ್ರಮವನ್ನು ಸ್ವೀಕರಿಸಿರುವ ವೃದ್ಧಮುನಿಗಳಿಂದಾಗದ ಇಂದ್ರಿಯ ನಿಗ್ರಹವನ್ನು, ನಗರದಲ್ಲಿ ವಾಸಿಸುವ ರೂಪಮತಿಯರಾದ ಸ್ತ್ರೀಯರ ಸಂಸರ್ಗದಲ್ಲಿ ಕಾಲಕ್ರಮಣಮಾಡುವ ತರುಣನಾದ ಉಪಗುಪ್ತನು ಲೀಲಾಮಾತ್ರದಿಂದ ಮಾಡುತ್ತಿದ್ದನೆಂದಬಳಿಕ, ಆ ಮಹಾತ್ಮನ ಯೋಗ್ಯತೆಯನ್ನೇನು ವರ್ಣಿಸಬೇಕು!

ಮಥುರಾ ಪಟ್ಟಣದಲ್ಲಿದ್ದ ವಾಸವದತ್ತೆಯೆಂಬ ಗಣಿಕಾಸ್ತ್ರೀಯ ವೃತ್ತಾಂತವು ಉಪಗುಪ್ತನ ಇಂದ್ರಿಯ ನಿಗ್ರಹದ ಅತ್ಯುತ್ತಮ ಉದಾಹರಣವಾಗಿದೆ. ವಾಸವದತ್ತೆಯು ಪ್ರಸಿದ್ಧ ವೇಶ್ಯೆಯು. ಆಕೆಯ ಅದ್ವಿತೀಯ ರೂಪವನ್ನು ನೋಡುವದಕ್ಕಾಗಿ ದೂರ ದೂರ ದೇಶಗಳ ತರುಣರು ಮಥುರಾಪಟ್ಟಣಕ್ಕೆ ಎಡತಾಕುತ್ತಿದ್ದರು. ವಿಲಾಸಿಗಳಾದ ರಾಜರೂ, ಸರದಾರರೂ ವಾಸವದತ್ತೆಯ ನಿತ್ಯದ ಯಜಮಾನರಾಗಿರುತ್ತಿದ್ದರು. ದೊಡ್ಡ—ದೊಡ್ಡ ಶ್ರೀಮಂತರು ನೀರಿನಂತೆ ದ್ರವ್ಯವನ್ನು ವೆಚ್ಚಮಾಡಿದರೂ, ಅವರಿಗೆ ವಾಸವದತ್ತೆಯ ದರ್ಶನವು ಕ್ವಚಿತ್ತಾಗಿ ಆಗುತ್ತಿತ್ತು. ವಾಸವದತ್ತೆಯು ಬೀದಿಯನ್ನು ಹಿಡಿದು ಸಾಗಿದಳೆಂದರೆ, ತರುಣರು ಪರವಶರಾಗಿ ಬಾಯಿತೆರೆದು ಮರುಳರಂತೆ ನೋಡುತ್ತ ನಿಂತುಕೊಳ್ಳುತ್ತಿದ್ದರು. ಒಂದು ದಿನ ವಾಸವದತ್ತೆಯು ಉಪಗುಪ್ತನ ಚಿಕ್ಕ ಅಂಗಡಿಯ ಮುಂದೆ ಹಾದು ಹೋಗುವಾಗ, ಉಪಗುಪ್ತನ ಸುಂದರ ರೂಪವು ಆಕೆಯ ಕಣ್ಣಿಗೆ ಬಿದ್ದಿತು. ಆಕೆಯು ಉಪಗುಪ್ತನನ್ನು ಕಣ್ಣುತುಂಬ ನೋಡುವ ಉದ್ದೇಶದಿಂದ ಆತನ ಆ ಸುಗಂಧ ದ್ರವ್ಯದ ಅಂಗಡಿಯಲ್ಲಿ ವ್ಯಾಪಾರ ಮಾಡುವ ನೆವದಿಂದ ಕುಳಿತುಕೊಂಡಳು. ಆಗ ನೆರೆಹೊರೆಯ ತರುಣರಾದ ಅಂಗಡಿಕಾರರು, ಇಂದು ಉಪಗುಪ್ತನ ಭಾಗ್ಯೋದಯವಾಯಿತೆಂದು ಮನಸ್ಸಿನಲ್ಲಿ

ಅಂದುಕೊಳ್ಳುತ್ತಿದ್ದರು. ಉಪಗುಪ್ತನ ಔದಾರ್ಯದ ಸ್ವಭಾವವನ್ನೂ, ಮೋಹಕ ಸ್ವರೂಪವನ್ನೂ, ತಾರುಣ್ಯವನ್ನೂ ನೋಡಿ ಆ ಗಣಿಕೆಯು ಆತನ ಮೇಲೆ ಲುಬ್ಧಳಾದಳು; ಆದರೆ ಉಪಗುಪ್ತನ ಸದೃಢ ಮನಸ್ಸಿನ ಮೇಲೆ ಆಕೆಯ ಸೌಂದರ್ಯದ ಪರಿಣಾಮವು ಎಷ್ಟುಮಾತ್ರವೂ ಆಗಲಿಲ್ಲ. ವಾಸವದತ್ತೆಯು ಮನೆಗೆ ಹೋಗಿ, ತನ್ನ ದಾಸಿಯ ಮುಖಾಂತರ ಒಂದು ಪ್ರಣಯಪತ್ರಿಕೆಯನ್ನು ಕಳಿಸಿ, ''ಇಂದು ತಮ್ಮ ಸಹವಾಸದ ಲಾಭವು ದೊರೆಯಬೇಕೆ''ಂದು ಪ್ರಾರ್ಥಿಸಿದಳು. ಅದಕ್ಕೆ ಉಪಗುಪ್ತನು—''ನಾನು ಬಡವನು; ಪುನಃ ನನ್ನನ್ನು ಕಾಣುವದರಿಂದ ನಿನಗಾಗತಕ್ಕ ಪ್ರಯೋಜನವೇನು? ನನ್ನನ್ನು ನೋಡುವ ಪ್ರಸಂಗವು ನಿನಗೆ ಮುಂದೆ ಬರಬಹುದು'' ಎಂದು ದಾಸಿಗೆ ಸ್ಪಷ್ಟವಾದ ಉತ್ತರವನ್ನು ಕೊಟ್ಟು ಕಳಿಸಿದನು. ಈ ಉತ್ತರವನ್ನು ಕೇಳಿ, ವಾಸವದತ್ತೆಯು ಪರಮಾಶ್ಚರ್ಯಪಟ್ಟು—ನಾನು ನಿಮ್ಮಿಂದ ಒಂದು ಕಾಸನ್ನಾದರೂ ಇಚ್ಛಿಸುವದಿಲ್ಲ. ಕೇವಲ ದರ್ಶನಾಪೇಕ್ಷೆಯಿಂದಲೂ, ಸಹವಾಸದ ಇಚ್ಛೆಯಿಂದಲೂ ನಿಮ್ಮ ಬರವನ್ನು ಎದುರು ನೋಡುವೆನು, ಎಂದು ಉಪಗುಪ್ತನಿಗೆ ಮತ್ತೆ ಹೇಳಿಕಳಿಸಿಕೊಟ್ಟು, ದಾರಿದ್ರ್ಯವನ್ನು ದೂರ ಮಾಡುವೆನೆಂಬ ಆಶೆಯನ್ನು ಹಚ್ಚಿದಳು; ಆದರೆ ಉಪಗುಪ್ತನು ತನ್ನ ಶೀಲದಿಂದ ರತಿಮಾತ್ರ ವಾದರೂ ಭ್ರಷ್ಟನಾಗಲಿಲ್ಲ. ಮುಂದೆ ಕೆಲವು ದಿವಸಗಳ ಮೇಲೆ ಅರಸನು ಆ ಸೌಂದರ್ಯ ಶಾಲಿನಿಯಾದ ಗಣಿಕೆಯ ಮೇಲೆ ಕೋಪಿಸಿ, ಆಕೆಯ ಕಿವಿ-ಮೂಗುಗಳನ್ನು ಕೊಯಿಸಿ, ಆಕೆಯನ್ನು ಸ್ಮಶಾನದಲ್ಲಿ ಚಲ್ಲಿಸಿದನು. ಆಗ ಉಪಗುಪ್ತನು ಆಕೆಯ ದರ್ಶನಕ್ಕೆ ಹೋಗಿ, ಆಕೆಯ ಬಳಿಯಲ್ಲಿ ಕುಳಿತುಕೊಂಡನು. ಆತನನ್ನು ನೋಡಿ ಗಣಿಕೆಯು ನಾಚಿದಳು. ಆಕೆಯು ಉಪಗುಪ್ತನಿಗೆ—ಘನವಂತನೆ, ಈ ದೇಹವು ತಾರುಣ್ಯ ಭರದಿಂದ ಪ್ರಕಾಶಿತವಾಗಿ, ಉತ್ತಮ ವಸ್ತ್ರಾಭರಣಗಳಿಂದ ಅಲಂಕೃತವಾಗಿರುವಾಗ, ಕಾಮಿಜನರ ಆದರಕ್ಕೆ ಪಾತ್ರವಾಗಿತ್ತು. ಆಗ ನಾನು ನಿನ್ನ ದರ್ಶನಲಾಭವನ್ನು ಇಚ್ಛಿಸಲು ನೀನು ಪೂರ್ಣ ಮಾಡಲಿಲ್ಲ; ಸಹವಾಸದ ಸುಖವನ್ನು ಒದಗಿಸಿಕೊಡಲಿಲ್ಲ; ಆದರೆ ಈಗ ಇಂಥ ಕಷ್ಟಮಯಸ್ಥಿತಿಯು ಪ್ರಾಪ್ತವಾಗಿರಲು, ನನ್ನ ಆನಂದ-ಸುಖ-ಸೌಂದರ್ಯಗಳು ನಷ್ಟವಾಗಿ ಹೋಗಿರಲು, ಇಂಥ ವಿಪನ್ನಸ್ಥಿತಿಯಲ್ಲಿ ನೀನು ನನ್ನ ಬಳಿಗೆ ಬಂದ ಕಾರಣವೇನು?

ವಾಸವದತ್ತೆಯ ಈ ಮರ್ಮಭೇದಕ ಮಾತುಗಳನ್ನು ಕೇಳಿ ಉಪಗುಪ್ತನು ಆಕೆಯನ್ನು ಕುರಿತು—ವಾಸವದತ್ತೆಯೇ, ನಿನ್ನ ದರ್ಶನಕ್ಕೆ ಯೋಗ್ಯವಾದ ಕಾಲವು ಇದೇ ಎಂದು ನಾನು ತಿಳಿಯುವೆನು. ಮನುಷ್ಯನ ಐಹಿಕಸುಖವು ನಾಶಹೊಂದತಕ್ಕದ್ದೆಂಬದನ್ನು ನೋಡುವದಕ್ಕಾಗಿ ನಾನು ಬುದ್ಧಿಪೂರ್ವಕವಾಗಿ ನಿನ್ನ ಬಳಿಗೆ ಬಂದಿರುತ್ತೇನೆ, ಎಂದು ನುಡಿದು, ಮರಣೋನ್ಮುಖಳಾಗಿ ಬಿದ್ದುಕೊಂಡಿದ್ದ ಆಕೆಗೆ ಧರ್ಮೋಪದೇಶವನ್ನು ಮಾಡಿದನು. ದುಃಖವೇಗದಿಂದ ಅಸ್ವಸ್ಥವಾಗಿದ್ದ ಆಕೆಯ ಮನಸ್ಸಿಗೆ ಆ ಉಪದೇಶದಿಂದ ಶಾಂತಿಯು ಪ್ರಾಪ್ತವಾಯಿತು. ಆಕೆಯು ಬುದ್ಧ, ಧರ್ಮ, ಹಾಗು ಸಂಘ ಎಂಬ ತ್ರಯಿಯನ್ನು ಆಶ್ರಯಿಸಿ ದೇಹವನ್ನು ಬಿಟ್ಟಳು. ಪ್ರಿಯವಾಚಕರೆ, ಉಪಗುಪ್ತಶ್ರೇಷ್ಠಿಯು ಇಂಥ ಸತ್ಪುರುಷನಿದ್ದನು; ಅವನು ಸಂಸಾರದಲ್ಲಿದ್ದೂ ಇಲ್ಲದಂತೆ ಇದ್ದನು. ಇಂದ್ರಿಯ ಜನ್ಯಸುಖದ ಮೇಲಿನ ಆಸಕ್ತಿಯನ್ನೂ,

ಸಂಸಾರದ ಸುಖದುಃಖಗಳನ್ನೂ ಆತನು ಪೂರ್ಣವಾಗಿ ಮರೆತುಬಿಟ್ಟಿದ್ದನು. ಇಂಥ ಪುಣ್ಯ ಪುರುಷನು ವಾಸಿಸುವ ಪವಿತ್ರ ಸ್ಥಳವು ತಮ್ಮ ವಾಸಕ್ಕಾಗಿ ದೊರೆತದ್ದರಿಂದ ಇಂದುಮತಿರಾಣಿಗೆ ಬಹಳ ಸಂತೋಷವಾಯಿತು. ಬೌದ್ಧರು ಅತ್ಯಂತ ದುಷ್ಟರಿರುತ್ತಾರೆಂತಲೂ, ಅವರು ನೀತಿಯನ್ನು ಕಾಲಿನಿಂದೊದ್ದು, ಮನಬಂದಂತೆ ಆಚರಣೆ ಮಾಡುವರೆಂತಲೂ ಪ್ರಣಯಿನಿಯು ತಿಳಕೊಂಡಿದ್ದಳು; ಆದರೆ ಉಪಗುಪ್ತನ ಚರಿತ್ರ ಶ್ರವಣದಿಂದ ಆಕೆಯ ತಪ್ಪುತಿಳುವಳಿಕೆಯು ದೂರವಾಯಿತು. ಧನಿಕರ ಭವ್ಯಮಂದಿರದಲ್ಲಿ ದೊರೆಯದೆ ಇದ್ದ ಸುಖ-ಸನ್ಮಾನಗಳು ಉಪಗುಪ್ತನ ಆ ಮುರುಕು ಮನೆಯಲ್ಲಿ ಅವರಿಗೆ ದೊರೆತವು.

ಇಂದುಮತಿಯೇ ಮೊದಲಾದವರು ಆ ದಿನ ಉಪಗುಪ್ತನ ಆತಿಥ್ಯದಿಂದ ಸಂತುಷ್ಟರಾಗಿ ರಾತ್ರಿ ಮಲಗಿಕೊಂಡರು. ಒಂದೇಸವನೆ ಹಲವು ದಿನ ಮಾರ್ಗವನ್ನು ಕ್ರಮಿಸಿದ್ದರಿಂದ ಅವರಿಗೆ ಗಾಢವಾದ ನಿದ್ರೆಯು ಹತ್ತಿತು. ಅವರು ಮಲಗಿಕೊಂಡಿದ್ದ ಒಂದೇ ಮಗ್ಗಲಿಗೆ ಬೆಳಗಾಯಿತು. ಎಲ್ಲರೂ ಪ್ರಾತರ್ವಿಧಿಗಳನ್ನು ತೀರಿಸಿಕೊಂಡು ತಮ್ಮ ತಮ್ಮ ಉದ್ಯೋಗಗಳನ್ನು ಕೈಕೊಳ್ಳತಕ್ಕ ವರಿದ್ದರು. ಅಷ್ಟರಲ್ಲಿ ಒಂದು ಅಸಮಾಧಾನದ ಸಂಗತಿಯು ಒದಗಿತು. ಉಪಗುಪ್ತನು ತನ್ನ ಅಂಗಡಿಯನ್ನು ತೆರೆದು ಸಾಮಾನುಗಳನ್ನು ವ್ಯವಸ್ಥೆಗೊಳಿಸುತ್ತಿರಲು, ಆತನ ಹಳೆಯ ಸಾವುಕಾರ ನೊಬ್ಬನು, ಇಬ್ಬರು ಸರಕಾರಿಯ ಅಧಿಕಾರಿಗಳನ್ನು ಕರಕೊಂಡು ಬಂದು ಉಪಗುಪ್ತನನ್ನು ಬಂಧಿಸಿ ಒಯ್ಯುವದಕ್ಕಾಗಿ ಅಂಗಡಿಯ ಬಾಗಿಲಲ್ಲಿ ಕುಳಿತುಕೊಂಡಿದ್ದನು. ಈ ಲಕ್ಷಣವನ್ನು ತಿಳಿದು, ಉಪಗುಪ್ತನು ಸಾವುಕಾರನನ್ನೂ, ಅಧಿಕಾರಿಗಳನ್ನೂ ವಿನಯದಿಂದ ನಮಸ್ಕರಿಸಿ, "ಸ್ವಲ್ಪ ಕುಳಿತುಕೊಳ್ಳಿರಿ, ಈಗ ಬರುವೆನು" ಎಂದು ಹೇಳಿ, ಒಳಗೆ ಹೆಂಡತಿಯ ಬಳಿಗೆ ಹೋದನು. ತನಗೆ ಬಂದಿದ್ದ ಸಂಕಟವಾರ್ತೆಯು ಅತಿಥಿಗಳ ಕಿವಿಗೆ ಬೀಳಬಾರದೆಂದು ಆತನು ಬಹಳವಾಗಿ ಯತ್ನಿಸಿದನು; ಆದರೆ ಆತನ ಯತ್ನವು ಸಫಲವಾಗಲಿಲ್ಲ. ಸಾವುಕಾರನಿಗೆ ಉಪಗುಪ್ತನು ಎರಡು ಸಾವಿರ ಹೊನ್ನುಗಳನ್ನು ಕೊಡಬೇಕಾಗಿದ್ದು, ಅದಕ್ಕಾಗಿ ಉಪಗುಪ್ತನನ್ನು ಹಿಡಕೊಂಡು ಹೋಗಲಿಕ್ಕೆ ಸರಕಾರಿಯ ಅಧಿಕಾರಿಗಳೊಡನೆ ಸಾವುಕಾರನು ಬಂದಿರುತ್ತಾನೆಂಬ ಸುದ್ದಿಯು ಇಂದುಮತಿಗೂ, ಪ್ರಣಯಿನಿಗೂ, ಘನಶ್ಯಾಮನಿಗೂ ಗೊತ್ತಾಯಿತು. ಅವರು ಬಹಳವಾಗಿ ನೊಂದುಕೊಂಡರು. ಕೂಡಲೆ ಎರಡು ಸಾವಿರ ಹೊನ್ನುಗಳನ್ನು ಕೊಟ್ಟು, ಉಪಗುಪ್ತನನ್ನು ಬಿಡಿಸಿಕೊಳ್ಳಲಿಕ್ಕೆ ಅವರಿಗೆ ಧನಾನುಕೂಲವಿದ್ದಿಲ್ಲ. ಇಂದ್ರಪುರದಿಂದ ಧನವನ್ನು ತರಿಸಿಕೊಳ್ಳಲಿಕ್ಕೆ ತಿಂಗಳೊಪ್ಪತ್ತು ಬೇಕಾಗುತ್ತಿತ್ತು. ಅಲ್ಲಿಯವರೆಗೆ ತಡೆಯಬೇಕೆಂದು ಸಾವುಕಾರನಿಗೆ ಹೇಳಿಕೊಳ್ಳಲಿಕ್ಕೆ ಪ್ರಣಯಿನಿಯೂ, ಘನಶ್ಯಾಮನೂ ಹೊರಗೆ ಬಂದರು. ಸಾವುಕಾರನು ಏನು ಅನ್ನುವನೋ ಕೇಳಬೇಕೆಂಬ ಉದ್ದೇಶದಿಂದ ಇಂದುಮತಿಯು ಬಾಗಿಲ ಹಿಂದೆ ಕುಳಿತುಕೊಂಡಿದ್ದಳು. ಘನಶ್ಯಾಮನು ಸಾವುಕಾರನ ಸಂಗಡ ಇನ್ನು ಮಾತಾಡತಕ್ಕವನು, ಅಷ್ಟರೊಳಗೆ ಬೀದಿಯಲ್ಲಿ ಭೇರಿಯ ನಾದದೊಡನೆ ರಾಜದೂತರು ಡಂಗುರವನ್ನು ಸಾರುತ್ತಲಿದ್ದರು. ಡಂಗುರದೊಳಗಿನ ಕೆಲವು ಶಬ್ದಗಳು ಪ್ರಣಯಿನಿಯ ಹಾಗೂ ಘನಶ್ಯಾಮನ ಕಿವಿಗೆ ಬೀಳಲು, ಅವರು ಅಸಮಾಧಾನದಿಂದ ಡಂಗುರವನ್ನು ಕಿವಿಗೊಟ್ಟು ಕೇಳತೊಡಗಿದರು. ಆಗ ರಾಜದೂತರು, ಎಲೈ

ವೀರರೇ, ಲಕ್ಷಗೊಟ್ಟು ಕೇಳಿರಿ. ಅಶೋಕನು ಕಲಿಂಗದೇಶವನ್ನು ಗೆದ್ದನು. ಕಲಿಂಗದ ಯುವರಾಜನಾದ ಜಿತೇಂದ್ರನನ್ನು ಹಿಡತರಲು, ಆ ಬೌದ್ಧಚಕ್ರವರ್ತಿಯು ಆಜ್ಞಾಪಿಸಿರುತ್ತಾನೆ. ಜಿತೇಂದ್ರನು ಹರಿದ್ವಾರದಿಂದ ಎಲ್ಲಿಯೋ ಹೊರಟು ಹೋಗಿರುವನು. ಆತನನ್ನು ಹಿಡಕೊಟ್ಟವರಿಗೆ ಹತ್ತು ಸಾವಿರ ಹೊನ್ನುಗಳು ಉಚಿತವಾಗಿ ದೊರೆಯುವವು.'' ಎಂದು ಉಚ್ಚಸ್ವರದಿಂದ ನುಡಿದರು.

ಈ ದುಷ್ಟವಾರ್ತೆಯನ್ನು ಕೇಳಿ, ಘನಶ್ಯಾಮನೂ, ಪ್ರಣಯಿನಿಯೂ ಸಾವುಕಾರನೊಡನೆ ಮಾತಾಡುವದನ್ನು ಬಿಟ್ಟು, ಅಸಮಾಧಾನದಿಂದ ಒಳಗೆ ಬಂದರು. ಪ್ರಣಯಿನಿಯ ಕಣ್ಣೊಳಗಿಂದ ನೀರುಗಳು ಒಂದೇಸವನೆ ಸುರಿಯುತ್ತಿದ್ದವು. ಇಂದುಮತಿಯು ಒಳಗಿನಿಂದಲೇ ಡಂಗುರದ ಧ್ವನಿಯನ್ನು ಸ್ಪಷ್ಟವಾಗಿ ಕೇಳಿದ್ದಳು. ಆ ವೀರಪತ್ನಿಯು ಅಂತರಂಗದಲ್ಲಿ ಅತ್ಯಂತ ವ್ಯಥೆಪಟ್ಟರೂ ಹೊರಗೆ ಅಷ್ಟು ಅಸಮಾಧಾನವನ್ನು ಪ್ರಕಟಿಸದೆ ಮಗಳನ್ನು ಕುರಿತು—ಪ್ರಣಯಿನಿ, ಕಣ್ಣೀರು ಒರಿಸು; ದುಃಖಪಡುವದಕ್ಕೆ ಇದು ಸಮಯವಲ್ಲ. ಇಂಥ ಪ್ರಸಂಗವು ಬರಬಹುದೆಂತಲೇ ಧೂರ್ತನಾದ ವಿಶಾಖಾನಂದ ಮಂತ್ರಿಯು ನಮ್ಮನ್ನು ರಾಜಧಾನಿಯಿಂದ ಮೊದಲೇ ದಾಟಹಾಕಿದ್ದಾನೆ. ಪರಿಣಾಮದಲ್ಲಿ ಕಲಿಂಗದೇಶಕ್ಕೆ ಅಹಿತವಾಗದಿದ್ದರೂ, ಗುರುಗಳ ಅಪ್ಪಣೆಯಂತೆ ನಾವು ವಿಚಾರಪೂರ್ವಕವಾಗಿ ನಡಕೊಳ್ಳಬೇಕಾಗುತ್ತದೆ. ರಾಜದೂತರ ಡಂಗುರವನ್ನು ಕೇಳಿದರೆ ಜಿತೇಂದ್ರಕುಮಾರನ ಗತಿಯು ನೆಟ್ಟಗೆ ಕಾಣುವದಿಲ್ಲ. ಬೌದ್ಧರು ಅಪ್ರಬುದ್ಧನಾದ ನನ್ನ ಆ ಕೂಸನ್ನು ಹುಡುಕದೆ ಬಿಡರು! ತಂಗೀ, ಯುದ್ಧದಲ್ಲಿ ಎಂದೂ ಹಿಂದಕ್ಕೆ ಸರಿಯದ ನಿನ್ನ ಹಡೆದವರ ಪರಿಣಾಮವೇನಾಗಿದೆಯೋ ದೇವರೇಬಲ್ಲ. ಒಟ್ಟಿಗೆ, ನಮ್ಮ ಮೇಲೆ ಆಕಾಶವೇ ಹರಿದು ಬಿದ್ದಂತಾಗಿರುತ್ತದೆ. ಈ ಪ್ರಸಂಗದಲ್ಲಿ ದುಃಖಕ್ಕೆ ಅನುವು ಕೊಟ್ಟು ನಾವು ಹುಚ್ಚರಂತೆ ವರ್ತಿಸಿದರೆ, ಮತ್ತಿಷ್ಟು ಅನರ್ಥವು ಒದಗಬಹುದು. ವೈರಿಗಳು ನಮ್ಮ ಗುರುತು ಹಿಡಿಯದಂತೆ ಎಚ್ಚರಪಡತಕ್ಕದ್ದು. ತನ್ನ ತಮ್ಮನಾದ ವೀತಾಶೋಕನೊಡನೆ ನಿನ್ನ ಲಗ್ನ ಮಾಡಬೇಕೆಂದು ಯೋಚಿಸುತ್ತಿದ್ದ ಅಶೋಕರಾಜನ ಕೈಯಲ್ಲಿ ನಾವು ಸಿಕ್ಕರೆ, ಎಷ್ಟು ಅನರ್ಥವಾದೀತೆಂಬದನ್ನು ತಿಳಿದುನೋಡು. ಹಾಗಾದರೆ ನಿನ್ನ ಹಡೆದವರ ಅಭಿಮಾನೋಕ್ತಿಯ ಗೌರವವೇನು ಉಳಿದಂತಾಗುವದು? ನಿಜವಾದ ಕ್ಷತ್ರಿಯ ವೀರರು ಸತ್ಯಪ್ರತಿಜ್ಞರಾಗಲು, ಪ್ರಾಣಕೊಡುವರಲ್ಲದೆ, ರಾಜ್ಯಭೋಗಕ್ಕೆ ಜೋತು ಭ್ರಷ್ಟಪ್ರತಿಜ್ಞರಾಗತಕ್ಕವರಲ್ಲ. ಕಲಿಂಗ ಭೂಪತಿಯು ರಾಜ್ಯಭ್ರಷ್ಟನಾದರೆ, ಪ್ರಯತ್ನದಿಂದ ತಿರುಗಿ ಆತನು ರಾಜ್ಯವನ್ನು ಸಂಪಾದಿಸಬಹುದು; ಆದರೆ ಬೌದ್ಧರೊಡನೆ ಶರೀರಸಂಬಂಧ ಮಾಡಲಿಕ್ಕಿಲ್ಲೆಂಬ ಪ್ರತಿಜ್ಞಾಭಂಗದಿಂದಾಗುವ ಅಪಮಾನವನ್ನು ಆತನು ತುಂಬಿಕೊಳ್ಳಲಾರನು; ಆದ್ದರಿಂದ, ನೀನು ಬಹಳ ಜಾಗರೂಕಳಾಗಿರತಕ್ಕದ್ದು. ಇನ್ನು ಮೇಲೆ ನೀನು ಸ್ತ್ರೀವೇಷವನ್ನು ತ್ಯಜಿಸಿ ಪುರುಷವೇಷವನ್ನು ಧರಿಸತಕ್ಕದ್ದು. ನಿನ್ನನ್ನು ನಾನು ಇನ್ನು ಪ್ರಣಯಿನಿಯೆಂದು ಕರೆಯದೆ, ಪ್ರತೋದನೆಂದು ಕರೆಯುವೆನು. ಇಳಿಯೆ ಮುಳುಗಿದವರಿಗೆ ಚಳಿಯೇನು ಮಳೆಯೇನು? ದುಃಖೋದಧಿಯಲ್ಲಿ ಮುಳುಗಿಹೋದ ನಾವು, ಕಣ್ಣೀರುಹಾಕಿ ಮಾಡುವದೇನು?—ಚಿಂತೆಯಿಂದ ಕೊರಗಿ ಗಳಿಸುವದೇನು?—ಅಸಮಾಧಾನದಿಂದ ಉಸುರ್ಗಳೆದು ಕಟ್ಟಿ ಕೊಳ್ಳುವದೇನು? ಬಿಡು, ಮನಸ್ಸನ್ನು ಕಲ್ಲುಮಾಡು. ದುಃಖದ ಚಿಹ್ನವು

ಲೇಶವಾದರೂ ಮುಖದಲ್ಲಿ ತೋರಲಾಗದು. ಪಾಟಲಿಪುತ್ರಕ್ಕೆ ಹೋದ ಹೊರತು ನಿನ್ನ ಹಡೆದವರ ಸುದ್ದಿಯು ಗೊತ್ತಾಗುವದಿಲ್ಲವಾದುದರಿಂದ, ನಾವು ಇನ್ನು ಹರಿದ್ವಾರಕ್ಕೆ ಹೋಗದೆ ಪಾಟಲಿ ಪುತ್ರಕ್ಕೆ ಹೋಗೋಣ. ಘನಶ್ಯಾಮ, ಕಣ್ಣು ಒರಿಸು. ಇದೇ ಏನು ನಿನ್ನ ಪ್ರಸಂಗಾವಧಾನವು! ಹೀಗೆ ಕಣ್ಣೀರು ಹಾಕುತ್ತ ಕಾಲಕಳೆಯುವದಕ್ಕಿಂತ, ಸಾಧು ಪುರುಷನಾದ ಉಪಗುಪ್ತನಿಗೆ ಈಗ ಬಂದಿರುವ ವಿಪತ್ತನ್ನು ದೂರಮಾಡಲು ಯತ್ನಿಸುವದು ಭೂಷಣವಲ್ಲವೆ! ದೇವರು ಪರೋಪ ಕಾರಿಗಳ ಪಕ್ಷಪಾತಿಯು. ಪ್ರತೋದ, ಘನಶ್ಯಾಮ, ಏಳಿರಿ. ಸಜ್ಜನರ ಸೇವೆಮಾಡಿ, ಈಶ್ವರ ಕೃಪೆಗೆ ಪಾತ್ರರಾಗೋಣ!

ಈ ಮೇರೆಗೆ ತಾಯಿಯು ಆಡಿದ ಮಾತುಗಳನ್ನು ಕೇಳಿ, ಪ್ರಣಯಿನಿಯು ಉತ್ಸಾಹ ಗೊಂಡಳು. ಉಪಗುಪ್ತನನ್ನು ಬಂಧಮುಕ್ತಮಾಡುವ ಮಾರ್ಗವು ಆಕೆಗೆ ಗೊತ್ತಾಯಿತು. ಆಕೆಯು ತನ್ನ ಬಳಿಯಲ್ಲಿ ಗುಪ್ತವಾಗಿ ಇಟ್ಟುಕೊಂಡಿದ್ದ ಪ್ರೀತಿಯ ರತ್ನಹಾರವನ್ನು ಉಪಗುಪ್ತನ ಕೈಯಲ್ಲಿ ಕೊಟ್ಟು—ಸಜ್ಜನನೇ, ಇದನ್ನು ನಿನ್ನ ಸಾವುಕಾರನಿಗೆ ಕೊಟ್ಟು ಋಣಮುಕ್ತನಾಗು, ಅನ್ನಲು, ಉಪಗುಪ್ತನು ಆಶ್ಚರ್ಯಪಟ್ಟು ಅತ್ಯಂತ ವಿನಯದಿಂದ—ತಂಗೀ, ದೇವರು ನಿನ್ನ ಕಲ್ಯಾಣ ಮಾಡಲಿ, ನೀನು ಚಕ್ರವರ್ತಿಯ ಹೆಂಡತಿಯಾಗು. ಬೇಡಮ್ಮಾ, ಕೂಸಾದ ನೀನು ಅತಿಥಿಯಾಗಿ ಬಂದು ನಿನ್ನ ನೆಲೆಯಿಲ್ಲದ ಔದಾರ್ಯದಿಂದ ನನ್ನ ಸತ್ವಹರಣಮಾಡಬೇಡ. ನನ್ನ ದೇಹವನ್ನು ಮಾರಿಯಾದರೂ ಋಣವನ್ನು ತೀರಿಸುವೆನು; ಅದು ಆಗದಿದ್ದರೆ ಋಣ ಮುಕ್ತತೆಗಾಗಿ ಪುನರ್ಜನ್ಮವನ್ನು ತಾಳುವೆನು. ನಿನ್ನ ಉಜ್ವಲವಾದ ಪರೋಪಕಾರ ಗುಣವನ್ನು ನೋಡಿ, ನಾನು ಧನ್ಯನಾದೆನು. ಹಿರಿಯರ ಪುಣ್ಯದಿಂದಲೇ ನಿನ್ನಂಥ ಸಜ್ಜನಳ ಸಂದರ್ಶನವು ನನಗೆ ಆಯಿತು, ಎಂದು ನುಡಿದು, ತನ್ನ ಹೆಂಡತಿಗೆ ಹೇಳತಕ್ಕ ಮಾತುಗಳನ್ನು ಹೇಳಿ, ಅತಿಥಿಗಳ ಯೋಗಕ್ಷೇಮಕ್ಕಾಗಿ ಆಕೆಯನ್ನು ಎಚ್ಚರಗೊಳಿಸಿ, ತಾನು ಸರಕಾರಿಯ ಅಧಿಕಾರಿಗಳ ಸ್ವಾಧೀನವಾಗಿ ಹೊರಟು ಹೋದನು. ಇತ್ತ ಸತ್ವಶೀಲಳಾದ ಉಪಗುಪ್ತನ ಹೆಂಡತಿಯು, ಪತಿಯ ವಿಯೋಗಕ್ಕಾಗಿ ಮನಸ್ಸಿನಲ್ಲಿ ಅಸಮಾಧಾನಪಟ್ಟರೂ, ಪತಿಯ ಆಜ್ಞೆಯಂತೆ ಹೊರಗೆ ಸಮಾಧಾನವನ್ನು ಪ್ರಕಟಿಸುತ್ತ ಅತಿಥಿಗಳಾದ ಇಂದುಮತಿಯೇ ಮೊದಲಾದವರ ಆದರ-ಸತ್ಕಾರದಲ್ಲಿ ತೊಡಗಿದಳು. ಬಕುಲೆಯ ಈ ತಾಳ್ಮೆಯನ್ನೂ, ದೊಡ್ಡ ಮನಸ್ಸನ್ನೂ ನೋಡಿ ಇಂದುಮತಿಯೂ, ಪ್ರಣಯಿನಿಯೂ ಆಶ್ಚರ್ಯಪಟ್ಟರು. ಆಗ ಚಿಕ್ಕವಳಾದ ಪ್ರಣಯಿನಿಯು ಮನಸ್ಸಿನೊಳಗೆ—''ಅತಿಥಿಗಳ ಸತ್ಕಾರದಲ್ಲಿ ಇಷ್ಟು ಜಾಗರೂಕರಾಗಿದ್ದ ಈ ದಂಪತಿಗಳ ಪವಿತ್ರಾನ್ನವನ್ನು ಎರಡು ದಿನ ಉಂಡ ನನಗೆ, ನನ್ನ ಅಣ್ಣನಾದ ಜಿತೇಂದ್ರನನ್ನು ಉಳಿಸಿಕೊಳ್ಳುವ ಹಂಚಿಕೆಯು ಗೊತ್ತಾಗಬಾರದೆ? ನಾನು ಎಂಥ ಪಾಪಿಯು! ನನ್ನ ಕಾಲಲ್ಲಿ ಅಪ್ಪನು ರಾಜ್ಯಭ್ರಷ್ಟನಾದನು. ಆತನು ಯುದ್ಧದಲ್ಲಿ ಮರಣ ಹೊಂದಿದ್ದರಂತೂ ಅನರ್ಥವೇ ಆಯಿತು. ಆತನು ಅಶೋಕನ ಸೆರೆಯಾಳಾಗಿದ್ದರೆ, ಕಾರಾಗೃಹದಲ್ಲಿ ಕೊಳೆಯಬೇಕಾಗುವದು. ಈ ಸ್ಥಿತಿಯಲ್ಲಿ ಅಣ್ಣನಾದ ಜಿತೇಂದ್ರನೂ ಸೆರೆಯಾಳಾದರೆ ತೀರಿಯೇ ಹೋಯಿತು. ಈ ಪ್ರಸಂಗದಲ್ಲಿ ನಾನು ಅಣ್ಣನನ್ನು ಉಳಿಸದಿದ್ದರೆ, ನಾನು ತಂದೆಯ ಕುಲಕ್ಕೆ ಕಂಟಕಳಾಗಿ ಜನಿಸಿದಂತಾಗುವದು. ಅಪ್ಪಯ್ಯಾ! ಏನು

ನನ್ನ ಕೆಟ್ಟಬಾಳು, ಎಂದು ಚಿಂತಿಸುವಾಗ ಆಕೆಯ ಕಣ್ಣುಗಳು ನೀರಿನಿಂದ ತುಂಬಿ, ಕುತ್ತಿಗೆಯ ನರಗಳು ಬಿಗಿದವು; ಆದರೆ ಮಾತ್ರಾಜ್ಞಾಪಾಲಕಳಾದ ಆ ಸುಶೀಲೆಯು ಕಣ್ಣೀರ ಒಂದು ಹನಿಯನ್ನು ಕೂಡ ತಟಕಿಕ್ಕಗೊಡದೆ, ದುಃಖವನ್ನು ಕಷ್ಟದಿಂದ ನುಂಗಿಕೊಂಡಳು. ಹೀಗೆ ಆಕೆಯು ದುಃಖಪೀಡಿತಳಾಗಿ, ಸುಮ್ಮನೆ ಕುಳಿತು ಯೋಚಿಸುತ್ತಿರಲು, ಒಮ್ಮಿಂದೊಮ್ಮೆ ಆಕೆಗೆ ಒಂದು ಯುಕ್ತಿಯು ತೋಚಿ, ಆಕೆಯ ಮುಖವು ಪ್ರಫುಲ್ಲಿತವಾಯಿತು. ಆನಂದದ ಭರದಲ್ಲಿ ಆಕೆಯು ತನ್ನ ಯುಕ್ತಿಯನ್ನು ಕುರಿತು ಆಲೋಚಿಸಿ ಬಹು ಸಮಾಧಾನಪಟ್ಟು, ಕೂಡಲೆ ಎದ್ದು ಹೋಗಿ ಪುರುಷವೇಷದಿಂದ ತಾಯಿಯ ಮುಂದೆ ತಟ್ಟನೆ ಬಂದು ನಿಂತುಕೊಂಡಳು. ವಿಚಾರಮಗ್ನಳಾದ ಇಂದುಮತಿಯು ಪುರುಷವೇಷಧಾರಿಯಾದ ಪ್ರಣಯಿನಿಯನ್ನು ಒಮ್ಮೆಲೆ ನೋಡಿ, ಜಿತೇಂದ್ರನೇ ಬಂದನೆಂಬ ಭ್ರಾಂತಿಯಿಂದ—"ಬಾಳಾ, ಜಿತೇಂದ್ರಾ, ಬಾ ಇತ್ತ ಬಾ; ನನಗೆ ದೃಢವಾದ ಆಲಿಂಗನವನ್ನು ಕೊಡು. ದುಷ್ಟ ಬೌದ್ಧರ ಕಣ್ಣುತಪ್ಪಿಸಿ, ಈ ಹತಭಾಗ್ಯಳನ್ನು ಸಮಾಧಾನಪಡಿಸುವದಕ್ಕಾಗಿ, ನನ್ನ ಪೂರ್ವಜರ ಪುಣ್ಯದಿಂದಲೇ ನೀನು ಪ್ರಾಪ್ತನಾಗಿರುತ್ತಿ" ಎಂದು ನುಡಿದು, ಪ್ರಣಯಿನಿಯನ್ನು ಗಟ್ಟಿಯಾಗಿ ಅಪ್ಪಿಕೊಂಡು ಚುಂಬಿಸಿದಳು. ಅತ್ತ ಘನಶ್ಯಾಮನು, ಜಿತೇಂದ್ರನ ಅಕಲ್ಪಿತ ಆಗಮನವಾಯಿತೆಂದು ಸಂತೋಷಬಟ್ಟನು.

ಬಕುಲೆಯ ನಿಶ್ಚಯ

ಈ ಮೇರೆಗೆ ಇಂದುಮತಿಯು ಮಗನನ್ನು ಅಪ್ಪಿಕೊಳ್ಳಲು, ಜಿತೇಂದ್ರನ ಶರೀರ ಕಾಠಿಣ್ಯವೂ, ಆತನ ಮಾತೃಸಂದರ್ಶನಾನಂದ ಬಾಷ್ಪಗಳ ಸ್ರಾವವೂ ಆಕೆಯ ಅನುಭವಕ್ಕೆ ಬಾರದ್ದರಿಂದ, ಆ ವೀರಮಾತೆಯು ಶಂಕಿತಳಾದಳು. ಅಷ್ಟರಲ್ಲಿ ಪ್ರಣಯಿನಿಯು ಮುಗುಳು ನಗೆಯಿಂದ ನಗುತ್ತ ತಾಯಿಯನ್ನು ಕುರಿತು—ಅವ್ವಾ, ಶಂಕಿಸಬೇಡ; ಅಣ್ಣನಾದ ಜಿತೇಂದ್ರನ ಭೆಟ್ಟಿಯಾಗಲಿಲ್ಲೆಂದು ಅಸಮಾಧಾನಪಡಲೂ ಬೇಡ. ನಾನು ಇನ್ನು ಸ್ವಲ್ಪ ದಿನಗಳಲ್ಲಿ ನಿನಗೆ ಅಣ್ಣನ ಭೆಟ್ಟಿಯನ್ನು ಮಾಡಿಸುವೆನು. ಕಲಿಂಗರಾಜವಂಶದ ಅದೊಂದೇ ಅಂಕುರವು ಉಳಿದಿರುವದರಿಂದ, ಅದನ್ನು ನಾವೆಲ್ಲರೂ ಬಹು ಜಾಗರೂಕತೆಯಿಂದ ರಕ್ಷಿಸತಕ್ಕದ್ದು. ನನ್ನ ರೂಪವು ಅಣ್ಣನ ರೂಪವನ್ನು ಅಚ್ಚಳಿಯದೆ ಹೋಲುತ್ತದೆಂಬದನ್ನು ನೀನು ಮನಗಂಡೆಯಷ್ಟೇ? ನೀನು ಈಗಲೆ ನನ್ನನ್ನು ರಾಜದೂತರಿಗೆ ಒಪ್ಪಿಸಿಬಿಡು, ಅಂದರೆ ಅಣ್ಣನ ಶೋಧದ ಕಾರ್ಯವು ನಿಂತುಹೋಗಿ, ಪರಿಪಕ್ವಕಾಲವು ಒದಗುವವರೆಗೆ ಆತನು ಎಲ್ಲಿಯಾದರೂ ಸುರಕ್ಷಿತವಾಗಿ ಇರುವನು. ಜನನಿ, ಇದರಿಂದ ಸ್ವಾರ್ಥವು ಸಾಧಿಸುವದಲ್ಲದೆ, ನನ್ನನ್ನು ಹುಡುಕಿಕೊಟ್ಟದ್ದಕ್ಕಾಗಿ ಅಶೋಕರಾಜನಿಂದ ನಿನಗೆ ಉಚಿತವಾಗಿ ದೊರೆಯುವ ಹತ್ತುಸಾವಿರ ಹೊನ್ನುಗಳನ್ನು ಈ ಸಾಧ್ವಿಗೆ ಕೊಟ್ಟರೆ ಪರಾರ್ಥವೂ ಸಾಧಿಸುವದು. ಹೀಗೆ ಸ್ವಾರ್ಥಪರಾರ್ಥಸಾಧನಕ್ಕೆ ಕಾರಣ ವಾಗುವ ಈ ನನ್ನ ದೇಹವು ಹುಟ್ಟ ಸಾರ್ಥಕವಾದಂತಾಗುವದಲ್ಲವೆ? ಇಂಥ ಪವಿತ್ರ ದೇಹವು

ಉತ್ಪನ್ನವಾದ ನಿನ್ನ ಹೊಟ್ಟೆಯು ತಣ್ಣಗಾಗಿ, ನೀನೂ ಧನ್ಯಳಾಗಬಹುದು. ವೀರಪತ್ನಿಯೇ, ಶಂಕಿಸಬೇಡ. ತಂದೆಯಾದ ಮೃಗೇಂದ್ರನ ಇಚ್ಛೆಗೆ ವಿರುದ್ಧವಾಗಿ ಅಶೋಕನು ವರ್ತಿಸುವ ಪ್ರಸಂಗವೊದಗಿದಲ್ಲಿ, ಇಗೋ, ಈ ಕಠಾರಿಯ ಸಹಾಯವು ನನಗಿರುತ್ತದೆಂಬದನ್ನು ನೆನಿಸಿ ಸಮಾಧಾನಪಡು. ನಾನು ಹೀಗೆ ಮಾಡಿದ್ದನ್ನು ಕೇಳಿ ತಂದೆಯಾದ ಮೃಗೇಂದ್ರನು—''ನನ್ನ ಮಗಳು ಕಲಿಂಗರಾಜವಂಶವನ್ನು ರಕ್ಷಿಸಿ, ಸತ್ಪುರುಷನ ಬಂಧವಿಮೋಚನೆ ಮಾಡಿ, ವೀರಕ್ಷತ್ರಿಯ ರಾಜಪುತ್ರಿಯ ಶೀಲಕ್ಕೆ ಒಪ್ಪಬಹುದಾದ ಕೃತಿಯಿಂದ ಕಲಿಂಗರಾಜವಂಶದ ಮಾನಕಾಯ್ದ ಳೆಂಬದನ್ನು ಸ್ಮರಿಸಿ ಸಂತೋಷಪಡುವನು'' ಎಂದು ನುಡಿದು, ಪುರುಷವೇಷಧಾರಿಯಾದ ಪ್ರಣಯಿನಿಯು ತಾಯಿಯ ಮೋರೆಯನ್ನು ಆತುರದಿಂದ ನೋಡುತ್ತ ಎಲ್ಲಿ ತನ್ನ ಮಾತಿಗೆ ಪ್ರತಿ ಕೂಲವಾಗಿ ತಾಯಿಯು ನುಡಿಯುವಳೋ ಎಂದು ತಳಮಳಿಸುತ್ತ ನಿಂತುಕೊಂಡಳು. ಮೊದಲೇ ಸಾಧ್ವಿಯಾದ ಇಂದುಮತಿಯ ವೃತ್ತಿಯು ಉಜ್ವಲವಾದದ್ದು, ಅದರ ಮೇಲೆ ಉಪಗುಪ್ತನಂಥ ಸತ್ಪುರುಷನ ನಿಸ್ಪೃಹತೆಯ ತೇಜಸ್ಸು ಬಿದ್ದಬಳಿಕ ಕೇಳುವದೇನು? ಆಕೆಯು ಆವೇಶದಿಂದ ಮಗಳನ್ನು ಕುರಿತು—ತಂಗೀ, ನನ್ನ ಹೊಟ್ಟೆಯಲ್ಲಿ ಹುಟ್ಟಿದವಳಲ್ಲಿಯಲ್ಲದೆ ಅನ್ಯರಲ್ಲಿ ಇಂಥ ಸತ್ವವು ಹೇಗೆ ಕಂಡುಬಂದೀತು! ನಡೆ, ಈಗಲೆ ಘನಶ್ಯಾಮನು ನಿನ್ನನ್ನು ರಾಜದೂತರಿಗೆ ಒಪ್ಪಿಸಿ ಉಚಿತವನ್ನು ಪಡೆಯುವನು, ಎಂದು ನುಡಿದು, ಮಗಳನ್ನು ಆಲಿಂಗಿಸಿ ಆಕೆಯನ್ನು ಘನಶ್ಯಾಮ ನೊಡನೆ ರಾಜದೂತರಕಡೆಗೆ ಕಳುಹಿದಳು. ಜಿತೇಂದ್ರನ ಗುರುತು ಹಿಡಿಯುವವನೊಬ್ಬನು ರಾಜದೂತರ ಬಳಿಯಲ್ಲಿದ್ದನು. ಆತನು ಪ್ರಣಯಿನಿಯನ್ನು ಜಿತೇಂದ್ರನೆಂದು ಒಪ್ಪಿಕೊಳ್ಳಲು, ಘನಶ್ಯಾಮನಿಗೆ ಹತ್ತುಸಾವಿರ ಹೊನ್ನುಗಳು ದೊರೆತು, ಪ್ರಣಯಿನಿಯು ರಾಜದೂತರ ಕೈಸೇರಿದಳು.

ಇಂದುಮತಿಯು ಎಂಥ ಸತ್ವಸ್ಥಳಾದರೂ, ಮಗಳ ವಿಯೋಗದಿಂದ ಆಕೆಯ ಮನಸ್ಸು ಅಸಮಾಧಾನಪಡದೆ ಇರಲಿಲ್ಲ. ಆಕೆಯು ತನ್ನ ಅಸಮಾಧಾನವನ್ನು ಹೊರಗೆ ತೋರಗೊಡದೆ ಬಕುಲಾದೇವಿಯ ಬಳಿಗೆ ಹೋಗಿ ವಿನಯದಿಂದ—ಅಮ್ಮಾ ಸಾಧ್ವಿಯೇ, ಸತ್ಪುರುಷನಾದ ನಿನ್ನ ಪತಿಯನ್ನು ಈ ಧನಕೊಟ್ಟು ಬಿಡಿಸಿಕೊಂಡುಬಂದು ನಮ್ಮನ್ನು ಕೃತಾರ್ಥರನ್ನಾಗಿ ಮಾಡು. ದುಡ್ಡಿನ ಆಶೆಯಿಂದಲ್ಲ, ಪತಿಯಮೇಲಿನ ಭಕ್ತಿಯಿಂದ ಈ ಧನವನ್ನು ನೀನು ಸ್ವೀಕರಿಸು ಎಂದು ಹೇಳಿಕೊಂಡಳು. ಆಗ ಬಕುಲೆಯು ಸಂತೋಷಪಡುತ್ತ ಧನವನ್ನು ಸ್ವೀಕರಿಸಿ ಅವುಗಳೊಳಗಿನ ಎರಡುಸಾವಿರ ಹೊನ್ನನ್ನು ಸಾವುಕಾರನಿಗೆ ಕೊಟ್ಟು ಪತಿಯನ್ನು ಬಿಡಿಸಿಕೊಂಡು ಬಂದಳು. ತನ್ನ ಮೇಲೆ ಇಂಥ ಉಪಕಾರಮಾಡಿದ ಪುಣ್ಯವಂತನು ಯಾವನಿರಬಹುದೆಂಬದರ ಗೂಢವು ಉಪಗುಪ್ತನಿಗೆ ತಿಳಿಯದಾಯಿತು. ಮನೆಗೆ ಬಂದಬಳಿಕ ಆತನು ಹೆಂಡತಿಯನ್ನು ಕೇಳಲು, ಆಕೆಯು ಯಾವತ್ತು ವೃತ್ತಾಂತವನ್ನು ಹೇಳಿ, ಉಳಿದಿದ್ದ ಎಂಟು ಸಾವಿರ ಹೊನ್ನಿನ ಚೀಲವನ್ನು ಪತಿಗೆ ತೋರಿಸಿದಳು. ಆಗ ಉಪಗುಪ್ತನು ತನ್ನ ಹೆಂಡತಿಯನ್ನು ಸಿಟ್ಟಿನಿಂದ ಒಮ್ಮೆ ನೋಡಿದನು. ಆತನು ತನ್ನ ಆಯುಷ್ಯದಲ್ಲಿ ಹೆಂಡತಿಯನ್ನು ಸಿಟ್ಟಿನಿಂದ ನೋಡಿದ್ದು ಇದೇ ಮೊದಲು. ಆ ಸಿಟ್ಟಿನ ನೋಟವು ಇನ್ನು ಮೇಲೆ ಕಡೆಯದೆಂತಲೇ ಹೇಳಬಹುದು; ಯಾಕಂದರೆ,

ಅಕ್ರೋಧನಾದ ಆ ಪುಣ್ಯವಂತನು, ಮುಂದೆ ಮರಣಪರ್ಯಂತವಾಗಿ ಹೆಂಡತಿಯನ್ನು ಕ್ರೋಧದಿಂದ ನೋಡುವ ಪ್ರಸಂಗವನ್ನೇ ತಪ್ಪಿಸಿಕೊಂಡು ಬಿಟ್ಟನು. ಉಪಗುಪ್ತನು ಈ ಮೇರೆಗೆ ಹೆಂಡತಿಯನ್ನು ಕ್ರೋಧಪೂರ್ಣದೃಷ್ಟಿಯಿಂದ ಒಮ್ಮೆ ನೋಡಿ, ಅದಕ್ಕೂ ಹೆಚ್ಚಿನ ಕ್ರೋಧದಿಂದ ಹೊನ್ನಿನಚೀಲವನ್ನು ನೋಡಿ, ಅದನ್ನು ಹುಲ್ಲಿಗೆ ಸರಿಮಾಡಿ ಕಾಲಿನಿಂದ ಒದ್ದು ಹೆಂಡತಿಗೆ— ಬಕುಲ, ನೀನು ಇಂದು ಬಹಳ ಅಯೋಗ್ಯ ಕಾರ್ಯವನ್ನು ಮಾಡಿದೆ. ಇಷ್ಟು ದಿನ ನನ್ನ ಸಹವಾಸ ದಲ್ಲಿದ್ದರೂ, ನನ್ನ ಸ್ವಭಾವದ ಗುರುತು ನಿನಗೆ ಆಗಲಿಲ್ಲ. ನನ್ನ ಚರಿತ್ರಕ್ಕೆ ಕಲಂಕವನ್ನುಂಟು ಮಾಡುವಂಥ ಕಾರ್ಯವು ನಿನ್ನಿಂದಾಯಿತು. ಈ ಪಾಪದ ಪರಿಮಾರ್ಜನವನ್ನು ನನಗೆ ಸಂಸಾರ ದಲ್ಲಿದ್ದು ಮಾಡಿಕೊಳ್ಳಲಿಕ್ಕೆ ಬರುವಹಾಗಿಲ್ಲ. ಸಂಪತ್ತಿನಮೇಲೆ ಅಷ್ಟು ಲೋಭವಿದ್ದರೆ, ತಂದೆಯ ಅಪಾರವಾದ ಸಂಪತ್ತನ್ನು ದಾನಧರ್ಮದಲ್ಲಿ ನೀರಿನಂತೆ ಯಾಕೆ ವೆಚ್ಚಮಾಡುತ್ತಿದ್ದೆನು? ವಾಸದತ್ತೆಯು ಮರಣಕಾಲದಲ್ಲಿ ತನ್ನ ಸಂಪತ್ತನ್ನೆಲ್ಲ ಕೊಡಲಿಚ್ಛಿಸಿದರೂ ನಾನು ಅದನ್ನು ಯಾಕೆ ನಿರಾಕರಿಸಿದ್ದೇನು? ನಿನ್ನ ಸಮಕ್ಷ ಪ್ರಣಯಿನೀದೇವಿಯು ತನ್ನ ಹಾರವನ್ನು ಸ್ವೀಕರಿಸಲು ಪ್ರಾರ್ಥಿಸುವಾಗ ಅದಕ್ಕೆ ನಾನು ಒಪ್ಪದೆ ಸಾವುಕಾರನ ಸ್ವಾಧೀನಕ್ಕೆ ಯಾಕೆ ಹೋದೆನು? ಈ ಸಂಗತಿಗಳನ್ನು ಕುರಿತು ಸ್ವಲ್ಪವಾದರೂ ವಿಚಾರಿಸಿದ್ದರೆ, ಇಂಥ ನಿಂದ್ಯಕಾರ್ಯವನ್ನು ಮಾಡಲಿಕ್ಕೆ ನೀನು ಪ್ರವೃತ್ತಳಾಗುತ್ತಿದ್ದಿಲ್ಲ. ಎಂಥ ಅವಿವೇಕತನವಿದು!

ಪತಿಯ ಈ ಮಾತನ್ನು ಕೇಳಿ ಬಕುಲೆಯು ಬಿಕ್ಕಿಬಿಕ್ಕಿ ಅಳುತ್ತ—ಸ್ವಾಮೀ, ನಾನು ಸಂಪತ್ತಿನ ಆಶೆಯಿಂದ ಈ ಕಾರ್ಯವನ್ನು ಮಾಡಿದವಳಲ್ಲ, ತಮ್ಮ ಮೇಲಿನ ಪ್ರೇಮದ ಮೂಲಕವಾಗಿ ಇಂಥ ನಿಂದ್ಯಪಾದ ಕಾರ್ಯವು ನನ್ನ ಕೈಯಿಂದಾಯಿತು.

ಉಪಗುಪ್ತ—ಮನೆಗೆ ಬಂದ ಅತಿಥಿಗಳ ದುಡ್ಡನ್ನು ಸ್ವೀಕರಿಸಲಿಕ್ಕೆ ಆಸ್ಪದಕೊಡುವ ನಿನ್ನ ಪ್ರೇಮವು ತಿರಸ್ಕರಿಸತಕ್ಕದ್ದೇ ಸರಿ. ಬಕುಲೆ, ಮಗಧದ ಅರಸುಮನೆತನದವರು ಕಲಿಂಗದ ಅರಸುಮನೆತನದವರನ್ನು ಎಷ್ಟು ದ್ವೇಷಿಸುತ್ತಾರೆಂಬದನ್ನು ನೀನು ಅರಿಯೆ. ಮಗಧಾಧಿಪತಿಗಳು ಭಗವಾನ್ ಬುದ್ಧನ ಅನುಯಾಯಿಗಳೆನಿಸಿಕೊಳ್ಳುತ್ತಾರೆ; ಆದರೆ ಅವರ ಕೃತಿಗಳು ಮಾತ್ರ ರಾಕ್ಷಸ ಕೃತಿಗಳಾಗಿರುವವು. "ಅಹಿಂಸಾಪರಮೋಧರ್ಮಃ" ಎಂಬ ಅಂತಿಮಸಾಧ್ಯದ ಪ್ರಸಾರವನ್ನು ಈ ಮಗದಾಧಿಪತಿಗಳು, ಲಕ್ಷಾವಧಿ ಮನುಷ್ಯಸಂಹಾರವನ್ನು ಮಾಡಿ ಜಗತ್ತಿನಲ್ಲಿ ಮಾಡುತ್ತಿರುವರು! ಹಾಯ್ ಹಾಯ್! ಬೌದ್ಧಧರ್ಮದ ತತ್ವಗಳಲ್ಲಿ ಇಷ್ಟರಮಟ್ಟಿಗೆ ಅವರ ನಿಷ್ಠೆಯಿರುತ್ತದೆ!! ಕಪಟಪ್ರಬಂಧದಲ್ಲಂತು ಜಗತ್ತಿನೊಳಗಿನ ಯಾವತ್ತು ರಾಷ್ಟ್ರಗಳಲ್ಲಿ ಮಗಧವು ಮುಂದಾಗಿರುತ್ತದೆ. ಸಂಪುಷ್ಪಾಚಾರ್ಯನಂಥ ದುಷ್ಟಭಿಕ್ಷುವು, ತನ್ನಂಥ ನೀಚ ಭಿಕ್ಷುಗಳ ಗುಂಪನ್ನು ಕೂಡಿಕೊಂಡು ಮಗಧದ ರಾಜ್ಯಕಾರಭಾರವನ್ನು ನಡಿಸುತ್ತಿರುವನು. ಇಂಥವರ ಕೈಯಲ್ಲಿ ಯುವರಾಜನಾದ ಜಿತೇಂದ್ರನು ಸಿಕ್ಕರೆ, ಆತನ ಮೇಲೆ ಏನಾದರೂ ತಪ್ಪು ಹೊರಿಸಿ ಹಗಲುಹಾಡೇ ಆತನ ತಲೆ ಹೊಡಿಸಲಿಕ್ಕೆ ಆ ದುಷ್ಟರು ಹಿಂದುಮುಂದು ನೋಡುವಹಾಗಿಲ್ಲ! ಆದರೆ ಬಕುಲ, ನೀನು ಇದೇನು ಕೆಲಸವನ್ನು ಮಾಡಿ ಇಟ್ಟೆ! ರಾಜಪುತ್ರನ ಕೊಲೆಗೆ ಕಾರಣವಾದ ಈ ದುಡ್ಡನ್ನು ನೀನು ಸ್ವೀಕರಿಸಬಹುದೆ!!

ಬಕುಲ—ಸ್ವಾಮೀ, ಹೀಗೆ ನನ್ನ ಮೇಲೆ ರುಷ್ಟರಾಗಬಾರದು, ಈ ಅಪರಾಧವು ನನ್ನ ಕೈಯಿಂದ ಅಜ್ಞಾನಮೂಲವಾಗಿ ಘಟಿಸಿರುತ್ತದೆ. ಯುವರಾಜನು ಇಂಥ ಆಪತ್ತಿಗೆ ಗುರಿಯಾದಾನೆಂಬದು ನನಗೆ ಆಗ ಗೊತ್ತಾಗಲಿಲ್ಲ, ಗೊತ್ತಾಗಿದ್ದರೆ ಧನವನ್ನು ನಾನು ಎಂದೂ ಸ್ವೀಕರಿಸುತ್ತಿದ್ದಿಲ್ಲ.

ಇಂದುಮತಿ—ಶ್ರೇಷ್ಠಿಯೇ, ಇದರಲ್ಲಿ ಬಕುಲಾದೇವಿಯ ಅಪರಾಧವೇನೂ ಇರುವದಿಲ್ಲ. ಯುವರಾಜನು ತಾನಾಗಿಯೇ ಶತ್ರುಗಳ ವಶವಾಗುವವನಿದ್ದನು; ಆದ್ದರಿಂದ ನಾವು ಆತನನ್ನು ಶತ್ರುಗಳಿಗೆ ಒಪ್ಪಿಸಿ ಉಚಿತವನ್ನು ಪಡೆದು, ಆಪತ್ಸಹಾಯವೆಂದು ಅದನ್ನು ಬಕುಲಾದೇವಿಗೆ ಆಗ್ರಹದಿಂದ ಕೊಟ್ಟೆವು.

ಉಪಗುಪ್ತ—ನೀವು ಯುವರಾಜನೊಡನೆ ಗುಪ್ತರೀತಿಯಿಂದ ಪ್ರವಾಸಮಾಡುತ್ತಿರುವದರಿಂದ, ಹಲವು ಬಗೆಯಾಗಿ ಯುವರಾಜನನ್ನು ರಕ್ಷಿಸುವದು ನಿಮ್ಮ ಕರ್ತವ್ಯವಾಗಿತ್ತು. ಹೀಗಿದ್ದು ಯುವರಾಜನನ್ನು ಶತ್ರುಗಳ ಸ್ವಾಧೀನವಾಗಗೊಟ್ಟರೆಂದ ಬಳಿಕ, ನಿಮ್ಮ ಹೃದಯವು ರಕ್ತಮಾಂಸಗಳಿಂದ ರಚಿಸಲ್ಪಟ್ಟಿರದೆ, ಕಲ್ಲಿನಿಂದ, ಇಲ್ಲವೆ ಉಕ್ಕಿನಿಂದ ರಚಿಸಲ್ಪಟ್ಟಿರುವದೆಂದು ನನಗೆ ತೋರುವದು. ಯುವರಾಜನು ಪ್ರಬುದ್ಧನಲ್ಲ, ತರುಣನು. ಬುದ್ಧಿವಾದ ಹೇಳಿ ಆತನ ಮನಸ್ಸನ್ನು ನೀವು ತಿರುಗಿಸಬೇಕಾಗಿತ್ತು, ಹಾಗೆ ಮಾಡದೆಯಿದ್ದದ್ದು ನಿಮ್ಮ ಅಪರಾಧವು.

ಈ ಮೇರೆಗೆ ನುಡಿದ ಉಪಗುಪ್ತನ ಮಾತುಗಳನ್ನು ಕೇಳಿ ಇಂದುಮತಿಗೆ ಬಹಳ ಅಸಮಾಧಾನವಾಯಿತು. ಉಪಗುಪ್ತನಿಗೆ ನಿಜವಾದ ಸಂಗತಿಯು ತಿಳಿಯದ್ದರಿಂದ ಹೀಗೆ ಮಾತಾಡುವನೆಂದು ಆಕೆಯು ತಿಳಿದರೂ, ದುಷ್ಟಬೌದ್ಧರ ಕೈಯಲ್ಲಿ ಸಿಕ್ಕ ಮಗಳ ಗತಿಯು ಏನಾಗುವದೋ ಎಂದು ಆಕೆಯು ಚಿಂತಿಸತೊಡಗಿದಳು. ತಾನು ಹಿಂದುಮುಂದು ವಿಚಾರ ಮಾಡದೆ ತಟ್ಟನೆ ಮಗಳನ್ನು ಕಳಿಸಿದ್ದು ನೆಟ್ಟಗಾಗಲಿಲ್ಲೆಂದು ಆಕೆಯು ಪಶ್ಚಾತ್ತಾಪ ಪಡಹತ್ತಿದಳು. ಅತ್ತ ಬಕುಲೆಯ ಹೃದಯವೂ ಪಶ್ಚಾತ್ತಾಪದಿಂದ ದಗ್ಧವಾಗತೊಡಗಿತ್ತು, ಒಂದು ಕಡೆಯಲ್ಲಿ ಘನಶ್ಯಾಮನೂ ಪಶ್ಚಾತ್ತಾಪದಿಂದ ತಳಮಳಿಸಹತ್ತಿದನು. ಆಗ ಉಪಗುಪ್ತನು ಕ್ಷಣಮಾತ್ರ ವಿಚಾರಮಾಡಿ ಅವರೆಲ್ಲರನ್ನು ಕುರಿತು—ಆಗಲಿ, ಹೀಗೆಯೇ ನಿಮ್ಮ ಅಂತಃಕರಣಗಳು ಪಶ್ಚಾತ್ತಾಪದಿಂದ ದಗ್ಧವಾಗಲಿ. ನಿಮ್ಮಿಂದಾದ ಪಾಪವು ಭಯಂಕರವಾಗಿರುತ್ತದೆ. ಅದು ಸುಟ್ಟು ಭಸ್ಮವಾಗಬೇಕಾದರೆ ನಿಮಗೆ ಅತ್ಯಂತ ತೀವ್ರ ಪಶ್ಚಾತ್ತಾಪವಾಗುವದು ಅವಶ್ಯವಾಗಿರುತ್ತದೆ. ಬಕುಲ, ಪರಿಭ್ರಮಣರೂಪವಾದ ಈ ಸಂಸಾರವನ್ನು ಕಾಲಿನಿಂದ ಒದೆಯಲಿಕ್ಕೆ ಇದು ತಕ್ಕ ಸಮಯವಾಗಿದೆ. ನಾನು ಇಂದಿಲ್ಲ ಇನ್ನು ನಾಲ್ಕು ತಿಂಗಳಲ್ಲಿ ಸಾವುಕಾರನಿಂದ ಬಿಡುಗಡೆ ಹೊಂದಿ ಬರುತ್ತಿದ್ದೆನು; ಆದರೆ ಸಾಂಸಾರಿಕ ಪ್ರೇಮದಲ್ಲಿ ಮುಳುಗಿಹೋಗಿದ್ದ ನಿನ್ನ ದುರ್ಬಲ ಮನಸ್ಸು, ಅಷ್ಟು ವಿರಹವನ್ನು ಸಹಿಸಲಿಕ್ಕೂ ಸಮರ್ಥವಾಗಲಿಲ್ಲ. ಸಂಸಾರದ ವ್ಯಾಪವು ಬೆಳೆದಂತೆ ಮನಸ್ಸು ಹೆಚ್ಚು ಹೆಚ್ಚು ಬಲಹೀನವಾಗುತ್ತ ಹೋಗುವದು; ಆದ್ದರಿಂದ ಬಕುಲ ಬೇಗನೆ ಜಾಗರೂಕಳಾಗು.

ಪತಿಯ ಈ ಮಾತುಗಳನ್ನು ಕೇಳಿ ಬಕುಲೆಯು ಕಣ್ಣು ಒರಿಸಿಕೊಂಡು ಪ್ರೇಮ ದೃಷ್ಟಿಯಿಂದ ಪತಿಯನ್ನು ನಖಶಿಖಾಂತವಾಗಿ ನೋಡಿದಳು. ಆಕೆಯ ಬಾಡಿದ ಮೋರೆಯಲ್ಲಿ

ನಿಶ್ಚಯದ ಚಿಹ್ನವು ತೋರಹತ್ತಿತು. ಆಕೆಯ ದೇಹದಲ್ಲಿ ಒಂದು ಅದ್ಭುತವಾದ ಶಕ್ತಿಯು ಪ್ರವೇಶಿಸಿತು. ಈವೊತ್ತಿನವರೆಗೆ ಉಪಗುಪ್ತಶ್ರೇಷ್ಠಿಯು ಆಕೆಗೆ ಮಾಡುತ್ತ ಬಂದಿದ್ದ ಉಪದೇಶವು, ಇಂದು ಫಲಿಸುವದಾಯಿತು. ಆಕೆಯು ಕೂಡಲೆ ಮಧುರವಾದ ಶಬ್ದಗಳಿಂದ ಪತಿಯನ್ನು ಕುರಿತು ನಿಶ್ಚಯಪೂರ್ವಕವಾಗಿ—

ಬಕುಲ—ಸ್ವಾಮಿ, ಹೌದು, ನಾನು ಎಚ್ಚತ್ತೆನು.

ಉಪಗುಪ್ತ—ನೆಟ್ಟಗೆ ವಿಚಾರಮಾಡಿ ನೋಡು. ನೀನು ಪೂರ್ಣವಾಗಿ ಎಚ್ಚತ್ತಿರುವೆಯಾ?

ಬಕುಲ—ಬಹುದಿವಸಗಳಿಂದ ನಾನು ವಿಚಾರಮಾಡುತ್ತಲಿದ್ದೆನು. ಇಂದು ನನ್ನ ಮನಸ್ಸಿನ ನಿಶ್ಚಯವಾಯಿತು. ಈಗೊದಗಿದ ಆಕಸ್ಮಿಕ ಪ್ರಸಂಗದಿಂದ ನನ್ನ ಕಣ್ಣುಗಳು ಚೆನ್ನಾಗಿ ತೆರೆದಿರುತ್ತವೆ. ಸಂಸಾರ ಪರಿಭ್ರಮಣವು ದುಃಖದಾಯಕವೆಂತಲೂ, ನಿರ್ವಾಣಪ್ರಾಪ್ತಿಯ ಸುಖವು ಶಾಶ್ವತವೆಂತಲೂ ನನ್ನ ಮನಸ್ಸು ನಿಶ್ಚಯಿಸಿರುತ್ತದೆ. ನಾಥಾ, ಹೇಳಿರಿ; ನಾನು ಇನ್ನು ಏನು ಮಾಡಲಿ?

ಉಪಗುಪ್ತ—ಸಂಸಾರದಿಂದ ನಿನ್ನ ಮನಸ್ಸು ತಿರುಗಿತಷ್ಟೇ?

ಬಕುಲ—ತಿರುಗಿತು.

ಹೆಂಡತಿಯ ಈ ಮಾತುಗಳನ್ನು ಕೇಳಿ ಉಪಗುಪ್ತನಿಗೆ ಅತ್ಯಾನಂದವಾಯಿತು. ಆ ಆನಂದದ ಭರದಲ್ಲಿ ಆತನ ಮುಖದಿಂದ ''ನಮೋಬುದ್ಧಾಯ'' ಎಂಬ ಶಬ್ದಗಳು ಹೊರಟುಹೋದವು. ಆತನು ಸಾನಂದಾಶ್ಚರ್ಯದಿಂದ ಬಕುಲೆಯನ್ನು ನೋಡುತ್ತಿದ್ದನು. ಆಗ ಕ್ಷಣಕ್ಷಣಕ್ಕೆ ಹೆಚ್ಚುತ್ತಿದ್ದ ವೈರಾಗ್ಯದಿಂದ ಬಕುಲೆಯು ಪತಿಯನ್ನು ಕುರಿತು—

ಬಕುಲೆ—ಶ್ರೇಷ್ಠೀ, ನಾನು ಈಗ ಈ ಸಂಸಾರದ ಪಾಶವನ್ನು ಹರಿದು ಚಲ್ಲಿಕೊಟ್ಟು ಬಿಟ್ಟಿರುತ್ತೇನೆ. ಕೆಲಕಾಲದವರೆಗೆ ನನಗೂ ನಿಮಗೂ ಪತಿಪತ್ನೀಸಂಬಂಧವು ಇತ್ತು, ಅದು ನನ್ನ ಸಂಸಾರಪರಿತ್ಯಾಗದೊಡನೆ ಮರೆತುಹೋಗಹತ್ತಿದೆ. ನೀವು ಈವೊತ್ತಿನವರೆಗೆ ಯೋಗ್ಯ ಉಪದೇಶ ಮಾಡಿ ನನ್ನನ್ನು ಈ ಉಚ್ಚಪದವಿಗೆ ಏರಿಸಿದಿರಿ. ನಿಮ್ಮ ಅನಂತವಾದ ಉಪಕಾರವನ್ನು ಸ್ಮರಿಸುವ ಯೋಗ್ಯತೆಯು ನನ್ನದಲ್ಲ. ಇನ್ನು ಒಂದೇ ಮಾತನ್ನು ನಾನು ಬೇಡಿಕೊಳ್ಳುವೆನು.

ಈಗ ಉಪಗುಪ್ತನ ಕಣ್ಣುಗಳೊಳಗಿಂದ ಆನಂದಾಶ್ರುಗಳು ಒಂದೇಸವನೆ ಸುರಿಯುತ್ತಿದ್ದವು. ಆತನು ಸದ್ಗದಿತ ಕಂಠದಿಂದ ಹೆಂಡತಿಯನ್ನು ಕುರಿತು—

ಉಪಗುಪ್ತ—ಬಕುಲ, ಅಥವಾ ಎಲೈ ತರುಣಸ್ತ್ರೀಯೇ, ಇಂದಿಗೆ ನನ್ನ ಉಪದೇಶದ ಸಾರ್ಥಕತೆಯಾಯಿತು. ನಿನ್ನೊಡನೆ ನನ್ನ ಲಗ್ನವನ್ನು ಚಿಕ್ಕಂದಿನಲ್ಲಿಯೇ ನಮ್ಮ ತಂದೆಯು ಮಾಡಿದ್ದನು. ಇಲ್ಲದಿದ್ದರೆ ನಾನು ಲಗ್ನದ ಗೊಂದಲಕ್ಕೇ ಬೀಳುತ್ತಿದ್ದಿಲ್ಲ, ಎಂದೋ ಸಂಸಾರವನ್ನು ತ್ಯಜಿಸಿ ಅಂತಿಮಸಾಧ್ಯದ ಕಡೆಗೆ ಧಾವಿಸುತ್ತಿದ್ದೆನು; ಆದರೆ ಈವೊತ್ತಿನವರೆಗೆ ಕೇವಲ ನಿನ್ನ ಸಲುವಾಗಿ ನಾನು ಸಂಸಾರದಲ್ಲಿ ಇರಬೇಕಾಯಿತು. ನನ್ನ ಆಶ್ರಯವನ್ನು ಹೊಂದಿ ಬಂದಿದ್ದ ನಿನ್ನೊಬ್ಬಳನ್ನೇ ಅಜ್ಞಾನದಲ್ಲಿ ಮುಣುಗಿಸಿ ಹೋಗುವದು ನನಗೆ ಅನ್ಯಾಯವಾಗಿ ತೋರಿ, ಇಲ್ಲಿಯವರೆಗೆ ನಿನಗೆ ಉಪದೇಶಮಾಡುತ್ತ ಸಂಸಾರದಲ್ಲಿದ್ದೆನು. ನನ್ನ ಉಪದೇಶವು ಸಾರ್ಥಕವಾದದ್ದನ್ನು ನೋಡಿ ನನಗೆ ಬಹಳ ಸಂತೋಷವಾಗಿದೆ. ಅಂತಿಮಸಾಧ್ಯವಾದ ನಿರ್ವಾಣಪ್ರಾಪ್ತಿಯ

ಮಾರ್ಗವನ್ನು ನೀನೇ ನನಗೆ ನಿಷ್ಕಂಟಕವಾಗಿ ಮಾಡಿಕೊಟ್ಟೆ. ಇಂದಿಗೆ ನಾನು ಧನ್ಯನಾದೆನು! ಬಕುಲ, ಕಂಠವು ಬಿಗಿದುಬಂದಿತು. ಮಾತಾಡಲಾರೆನು!

ಬಕುಲೆ—ಉಪಗುಪ್ತಶ್ರೇಷ್ಠೀ, ಇನ್ನು ಮೇಲೆ ನಾನು ನಿಮ್ಮ ಹೆಂಡತಿಯಲ್ಲ, ನಿಮ್ಮ ಒಬ್ಬ ಶಿಷ್ಯಳಿರುತ್ತೇನೆ. ಇನ್ನು ಮೇಲೆ ನಾನು ಏನು ಮಾಡಬೇಕೆಂಬ ಬಗ್ಗೆ ನನ್ನನ್ನು ನೀವು ಬೋಧಿಸಲೇಬೇಕು.

ಉಪಗುಪ್ತ—ನೀನು ಉಪದೇಶವನ್ನು, ನನಗಿಂತ ಯೋಗ್ಯನಾದ ಗುರುವಿನಿಂದ ಪಡೆಯಬೇಕೆಂದು ನನಗೆ ತೋರುತ್ತದೆ. ಯಾವತ್ತು ಬೌದ್ಧ ಭಿಕ್ಷುಗಳಲ್ಲಿ ಅಗ್ರೇಸರನಾಗಿದ್ದ ಮೊಗ್ಗಲೀಪುತ್ರನಾದ ತಿಷ್ಯನೆಂಬ ಮಹಾತ್ಮನು ನಿನಗೆ ಉಪದೇಶಮಾಡಲಿಕ್ಕೆ ಯೋಗ್ಯನು. ನೀನು ಆತನ ಕಡೆಗೆ ಹೋಗಿ ಭಿಕ್ಷುಣಿಯಾಗಿ ಜನ್ಮದ ಸಾರ್ಥಕ್ಯವನ್ನು ಮಾಡಿಕೋ. ಯುವರಾಜನಾದ ಜಿತೇಂದ್ರನ ಬಿಡುಗಡೆಯಾದ ಹೊರತು ನಾನು ಭಿಕ್ಷುವಾಗಲಾರೆನು. ಆ ರಾಜಪುತ್ರನ ಬಂಧವಿಮೋಚನೆಗಾಗಿ ನಾನು ತನುಮನೋಧನಗಳಿಂದ ಯತ್ನಿಸುವೆನು. ಸಂಘಟಿಸಿದ ಈ ಪಾಪಕ್ಕಾಗಿ ನೀನಾದರೂ ಪಶ್ಚಾತ್ತಾಪಪಡುತ್ತಿರು, ಜಿತೇಂದ್ರನನ್ನು ಎಂದೂ ಮರೆಯಬೇಡ.

ಬಕುಲೆ—ಶ್ರೇಷ್ಠೀ, ಯುವರಾಜನು ಅಶೋಕನ ಕೈಯಿಂದ ಸುರಕ್ಷಿತವಾಗಿ ಬಿಡುಗಡೆ ಹೊಂದುವವರೆಗೆ ನನ್ನ ಮನಸ್ಸಿಗೆ ಶಾಂತಿಯು ದೊರೆಯಲಾರದು.

ಉಪಗುಪ್ತ—ಯುವರಾಜನ ಬಂಧವಿಮೋಚನವನ್ನು ಮಾಡಿಸುವದಕ್ಕಾಗಿ ನಾನು ಈಗಲೆ ಪಾಟಲಿಪುತ್ರಕ್ಕೆ ಹೊರಟೆನು ನೋಡು; ಇನ್ನು ನಿನ್ನ ಮಾರ್ಗವನ್ನು ನೀನು ಕಂಡುಕೋ.

ಈ ಮೇರೆಗೆ ನುಡಿದು, ಉಪಗುಪ್ತನು ಮನೆಯಿಂದ ಹೊರಬಿದ್ದನು. ಕೂಡಲೆ ಬಕುಲೆಯೂ, ಇಂದುಮತಿಯೂ, ಘನಶ್ಯಾಮನೂ ಆತನನ್ನು ಹಿಂಬಾಲಿಸಿದರು. ಉಪಗುಪ್ತನು ಆ ಎಂಟುಸಾವಿರ ಹೊನ್ನನ್ನೂ, ತನ್ನ ಮನೆಮಾರುಗಳನ್ನೂ ದಾನಧರ್ಮಮಾಡಬೇಕೆಂದು, ಸಜ್ಜನನಾದ ತನ್ನ ನೆರೆಯವನೊಬ್ಬನ ಮುಂದೆ ಹೇಳಿದನು. ಆಮೇಲೆ ಆ ಸಜ್ಜನಶ್ರೇಷ್ಠಿಯು ಇಂದುಮತಿ—ಘನಶ್ಯಾಮರನ್ನು ಕುರಿತು—''ಅತಿಥಿಮಹಾರಾಜರೇ, ಇನ್ನು ನನಗೆ ಅಪ್ಪಣೆಯನ್ನು ಕೊಡಬೇಕು'' ಎಂದು ಪ್ರಾರ್ಥಿಸಲು, ಅವರು–ನಾವೂ ನಿಮ್ಮ ಸಂಗಡ ಪಾಟಲಿಪುತ್ರಕ್ಕೆ ಬರುತ್ತೇವೆಂದು ಹೇಳಿದರು. ಅದಕ್ಕೆ ಉಪಗುಪ್ತನು ಒಪ್ಪಿಕೊಂಡದ್ದರಿಂದ, ಅವರೆಲ್ಲರು ಪಾಟಲಿಪುತ್ರದ ಹಾದಿಯನ್ನು ಹಿಡಿದರು. ಇತ್ತ ಬಕುಲೆಯು ಉಪಗುಪ್ತ ಶ್ರೇಷ್ಠಿಯ ಚರಣಗಳ ಮೇಲೆ ಮಸ್ತಕವನ್ನಿಟ್ಟು—ಗುರುವರ್ಯರೇ, ನಿಮಗೆ ನಾನು ಕಡೆಯ ನಮಸ್ಕಾರವನ್ನು ಮಾಡುತ್ತೇನೆ. ತಾವು ಈ ಜನ್ಮದಲ್ಲಿ ಪತಿಯಾಗದೆ ಗುರುಗಳಾದಿರಿ; ಅನ್ನಲು, ಉಪಗುಪ್ತನು ''ಧರ್ಮದ ಅಭಿವೃದ್ಧಿಯಾಗಲಿ'' ಎಂದು ಶ್ರೇಷ್ಠಗುರುವಿಗೆ ಒಪ್ಪುವಂತೆ ಆಶೀರ್ವದಿಸಿ, ಇಂದುಮತಿ—ಘನಶ್ಯಾಮರ ಆಗ್ರಹದಿಂದ ಪ್ರಣಯಿನಿಯ ಕುದುರೆಯನ್ನು ಹತ್ತಿಕೊಂಡು ಅವರೊಡನೆ ಪಾಟಲಿಪುತ್ರಕ್ಕೆ ಸಾಗಿದನು. ಇತ್ತ ಬಕುಲೆಯು ಅವರ ವಿರುದ್ಧ ದಿಕ್ಕಿಗೆ ಹಾದಿಸಿಕ್ಕತ್ತ ಹೊರಟುಹೋದಳು!!

ವೇಷಧಾರಿ ಪ್ರಣಯಿನಿಯು

ಈ ಮೇರೆಗೆ ಕಲಿಂಗರಾಜ ಕುಟುಂಬವು ದೆಸೆಗೆಟ್ಟು ತಿರುಗುತ್ತಿರಲು, ಇತ್ತ ಜಯಶಾಲಿಯಾದ ಅಶೋಕನು, ವೈಭವದಿಂದ ಪಾಟಲಿಪುತ್ರವನ್ನು ಪ್ರವೇಶಿಸಿದನು. ಆತನ ಪ್ರಜೆಗಳೂ, ಮಾಂಡಲಿಕರೂ ಪ್ರಚಂಡವಾದ ದರ್ಬಾರು ನೆರೆಸಿ, ದುರ್ಲಭವಾದ ಚಕ್ರವರ್ತಿಯ ಪದವಿಯನ್ನು ಹೊಂದಿದ್ದಕ್ಕಾಗಿ ಅಶೋಕನನ್ನು ಅಭಿನಂದಿಸಿದರು. ಆಗ ಅಶೋಕನ ವೈಭವ—ಸಾಮರ್ಥ್ಯಗಳಿಗೆ ಎಣೆಯಿದ್ದಿಲ್ಲ; ಆತನು ಏರಿಕೆಯ ಪ್ರಾಯದ ಕೆಚ್ಚೆದೆಯ ವೀರನಾಗಿದ್ದನು. ಚಿಕ್ಕಂದಿನಿಂದ ಆ ವೀರಾಗ್ರಣಿಯು ದಿಗ್ವಿಜಯದಲ್ಲಿ ಕಾಲಹರಣ ಮಾಡಿದ್ದರಿಂದ, ವಿಷಯೋಪಭೋಗದ ನೆರಳು ಸಹ ಆತನ ಮೇಲೆ ಬಿದ್ದಿಲ್ಲವೆಂದು ಹೇಳಬಹುದು. ಆತನು ಪವಿತ್ರ ಬ್ರಹ್ಮಚರ್ಯವ್ರತಸ್ಥನಾಗಿದ್ದನು. ದರಿಕಂದರ—ಗಿರಿಗಹ್ವರಗಳನ್ನು ಅಲೆದಾಡುತ್ತ ವೈರಿಗಳನ್ನು ಸದೆಬಡೆಯುವದರಲ್ಲಿಯೇ ಕೃತಕೃತ್ಯತೆಯನ್ನು ಭಾವಿಸುತ್ತ ಬಂದಿದ್ದ ಆ ಪ್ರತಾಪಿಯ ಹೃದಯಕ್ಕೆ ಮಾರ್ದವದ ಗುರುತು ಸಹ ಇದ್ದಿಲ್ಲ. ಅಶೋಕನು ಮೊದಲೇ ಕ್ರೂರನು, ಅದರಲ್ಲಿ ಚಕ್ರವರ್ತಿಯಾಗಬೇಕೆಂಬ ಮಹತ್ವಾಕಾಂಕ್ಷೆಯ ಹುಚ್ಚು ಆತನ ತಲೆಗೇರಿತು. ಅಂದಬಳಿಕ ಕೇಳುವದೇನು? ಭರತಭೂಮಾತೆಯ ಅಸಂಖ್ಯ ಪುತ್ರರು ಅಶೋಕನ ಚಕ್ರವರ್ತಿಪದವಿಗೆ ಬಲಿಯಾದರು! ಪರಿಪಕ್ವಕಾಲವು ಒದಗಲು, ಮನುಷ್ಯನ ವೃತ್ತಿಯು ಯಾವದೊಂದು ಕಾರಣದಿಂದ ತಟ್ಟನೆ ಬದಲಾಗುವದೆಂಬ ಮಾತು ಸುಳ್ಳಲ್ಲ. ಕಲಿಂಗವಿಜಯದಲ್ಲಾದ ಅಸಂಖ್ಯ ಪ್ರಾಣಸಂಹಾರವನ್ನು ನೋಡಿ ಅಶೋಕನ ಪಾಷಾಣ ಹೃದಯವೂ ಕರಗಿ ನೀರಾಯಿತು. "ಅಹಿಂಸಾ ಪರಮೋ ಧರ್ಮಃ" ಎಂಬ ಶ್ರೇಷ್ಠತಮ ತತ್ವವನ್ನು ಪ್ರತಿಪಾದಿಸುವ ಬೌದ್ಧ ಧರ್ಮವನ್ನು, ಅಸಂಖ್ಯ ಪ್ರಾಣಹಿಂಸೆಯಿಂದ ತಾನು ಹಬ್ಬಿಸಿದ್ದು ಅನ್ಯಾಯವೆಂದು ಆತನ ಮನಸ್ಸಿಗೆ ಪಶ್ಚಾತ್ತಾಪವಾಯಿತು. ಆತನು ಬೌದ್ಧ ಧರ್ಮವನ್ನು ಸ್ವೀಕರಿಸಿದ್ದರೂ, ಅಂಧಶ್ರದ್ಧೆಯ ಮೂಲಕ ಸಂಪುಷ್ಪಾಚಾರ್ಯರಂಥ ದುಷ್ಟ ಭಿಕ್ಷುಗಳ ಮಾತಿಗೆ ಕಿವಿಗೊಟ್ಟು, ದಿಗ್ವಿಜಯಮಾಡಿ ಧರ್ಮವನ್ನು ಹಬ್ಬಿಸಿದ್ದರಿಂದ, ಬೌದ್ಧಧರ್ಮಕ್ಕೆ ತೀರ ನಿಷೇಧವಾಗಿದ್ದ ಪ್ರಾಣಹಿಂಸಾ ಪಾಪದ ಉರಲು ಆತನ ಕೊರಳಿಗೆ ಬಿದ್ದಿತು. ಪಶ್ಚಾತ್ತಾಪದಿಂದ ತಪ್ತವಾಗತೊಡಗಿದ್ದ ಅಶೋಕನ ಮನಸ್ಸು ಯುದ್ಧದ ಗೊಂದಲವು ತಪ್ಪಿದ್ದರಿಂದ ಸುವಿಚಾರದ ಕಡೆಗೆ ಹೊರಳಿದ್ದು ಅಸ್ವಾಭಾವಿಕವಲ್ಲ. ಧರ್ಮಪ್ರಸಾರಕ್ಕಾಗಿ ಇನ್ನು ಕೈಯಲ್ಲಿ ಶಸ್ತ್ರಹಿಡಿಯಲಿಕ್ಕಿಲ್ಲವೆಂದು ಆತನು ಕಲಿಂಗ ಯುದ್ಧದ ಕೊನೆಯಲ್ಲಿ ಪ್ರತಿಜ್ಞೆಯನ್ನೇ ಮಾಡಿದನು. ತರುಣನಾದ ಅಶೋಕನಿಗೆ ಹೆಂಡಿರುಮಕ್ಕಳಿದ್ದಿಲ್ಲ, ಯುದ್ಧವನ್ನಂತು ಆತನು ಮಾಡುವಹಾಗಿದ್ದಿಲ್ಲ, ಈ ಸ್ಥಿತಿಯಲ್ಲಿ ಆತನು ಔದಾಸೀನ್ಯದಿಂದ ಯಾವಾಗಲೂ ವಿಚಾರಮಗ್ನನಾಗಿರುತ್ತಿದ್ದದ್ದು ಆಶ್ಚರ್ಯವೇನು?

ಒಂದು ದಿನ ಅಶೋಕನು ಮೇಲುಪ್ಪರಿಗೆಯಲ್ಲಿ ಏಕಾಂತವಾಗಿ ಒಬ್ಬನೇ ಆಲೋಚಿಸುತ್ತ ಕುಳಿತುಕೊಂಡಿದ್ದನು. ಆಗ ಹೊರಗೆ ಎರಡುತಾಸು ಹೊತ್ತು ಇರಬಹುದು.

ವೈಶಾಖಮಾಸವು, ದೂರ ಕಪ್ಪುಮೋಡವು ಇಳಿದು, ಗುಡುಗಿನ ಗಂಭೀರಧ್ವನಿಯು ಕೇಳಿಸ ತೊಡಗಿದೆ; ತುದಿಯ ವಿರಲ ಮೋಡಗಳು ಸೂರ್ಯಮಂಡಲವನ್ನು ಮುಸುಕಿ ಮಳೆಯ ಒಂದೊಂದೇ ಹನಿಗಳು ಉದರಹತ್ತಿ ತಂಗಾಳಿಯು ಬೀಸತೊಡಗಿದ್ದರಿಂದ ದಿಕ್ಕುಗಳು ಪ್ರಸನ್ನವಾಗಹತ್ತಿವೆ. ಈ ಸ್ಥಿತಿಯಲ್ಲಿ ಅಶೋಕನ ಕಣ್ಣಿಗೆ ಎರಡು ನವಿಲುಗಳ ಕ್ರೀಡೆಯು ಬಿದ್ದಿತು. ಅಶೋಕನು ಕುಳಿತ ಸ್ಥಳದಿಂದ ನವಿಲುಗಳು ದೂರವಿದ್ದಿಲ್ಲ. ಅವುಗಳಲ್ಲಿ ಗಂಡುನವಿಲು ಹೆಣ್ಣು ನವಿಲನ್ನು ತನ್ನ ಚಂಚುವಿನಿಂದ ಮೆಲ್ಲಗೆ ಚುಚ್ಚಲು, ಅದರ ಈ ಅತಿಪ್ರಸಂಗಕ್ಕಾಗಿ ಹೆಣ್ಣುನವಿಲು ಸಿಟ್ಟಾದಂತೆ ತೋರಿಸಿ ಒನಪಿನಿಂದ ಕುಣಿಯುತ್ತ ಪತಿಯನ್ನು ಗಣನೆಗೆ ತಾರದೆ ದೂರ ಹೋಗುತ್ತಲಿತ್ತು, ಆಗ ಗಂಡುನವಿಲು ಲೀನತೆಯಿಂದ ಅದರ ಬೆನ್ನುಹತ್ತಿ ಹೋಗಿ ಹೆಂಡತಿಯ ಮನಸ್ಸನ್ನು ಒಲಿಸಿಕೊಳ್ಳುತ್ತಿರಲು, ಹೆಣ್ಣುನವಿಲು ಮುಂದಕ್ಕೆ ಹೋಗದೆ ತನ್ನ ಪತಿಯನ್ನು ಪ್ರೇಮಕಟಾಕ್ಷದಿಂದ ನೋಡುತ್ತ ನಿಂತುಕೊಳ್ಳುತ್ತಿತ್ತು, ಇನ್ನು ಇದು ನನ್ನ ಮೇಲೆ ಪ್ರಸನ್ನವಾಯಿತೆಂದು ತಿಳಿದು, ಅಂಜುತ್ತಂಜುತ್ತ ಗಂಡುನವಿಲು ಹೆಂಡತಿಯನ್ನು ಮೆಲ್ಲನೆ ತನ್ನ ಚಂಚುವಿನಿಂದ ಚುಚ್ಚಲು, ಹೆಣ್ಣುನವಿಲು ಮತ್ತೆ ಮೊದಲಿನಂತೆ ಸುಳ್ಳೇ ಸಿಟ್ಟಾದಹಾಗೆ ತೋರಿಸಿ ದೂರಹೋಗುವದು. ಹೀಗೆ ಕೆಲವು ಕಾಲವು ಕ್ರಮಿಸುವದರೊಳಗೆ ಹೆಣ್ಣುನವಿಲಿನ ಸುಳ್ಳುಸಿಟ್ಟು ಕಡಿಮೆಯಾಗಹತ್ತಿ ದಂಪತಿಗಳ ಪ್ರೇಮಕಲಹಕ್ಕೆ ಕಳೆಯೇರಿತು. ಮುಂದೆ ಪತಿಯು ಚಂಚುವಿನಿಂದ ಎಷ್ಟುಸಾರೆ ಚುಚ್ಚಿದರೂ, ಹೆಣ್ಣುನವಿಲು ಸ್ಥಳಬಿಟ್ಟು ಕದಲದಂತಾಯಿತು. ಹೀಗೆ ಮೊದಮೊದಲು ಶಾಂತಮನಸ್ಸಿನಿಂದ ಪತಿಯ ಚಂಚುವಿನ ಆಘಾತವನ್ನು ಸಹಿಸುತ್ತಿದ್ದ ಮಯೂರಿಯು, ಬರಬರುತ್ತ ಪ್ರೇಮದಿಂದ ಮತ್ತಳಾಗಿ ತಿರುಗಿ ಪತಿಯನ್ನು ತನ್ನ ಕೋಮಲವಾದ ಚಂಚುವಿನಿಂದ ಮೆಲ್ಲಮೆಲ್ಲನೆ ಕುಕ್ಕಹತ್ತಿದಳು. ಅಶೋಕನು ಆ ಪಕ್ಷಿದಂಪತಿಗಳ ಈ ಪ್ರೇಮಕಲಹವನ್ನು ಎವೆಯಿಕ್ಕದೆ ನೋಡುತ್ತಿದ್ದನು. ಆತನಿಗೆ ತಲ್ಲೀನಸ್ಥಿತಿಯು ಪ್ರಾಪ್ತ ವಾಗಿತ್ತು. ಪರಸ್ಪರ ಚಂಚುವಿನಿಂದ ಕುಕ್ಕುತ್ತಿದ್ದ ಆ ನವಿಲುಗಳ ಚಂಚುಗಳು ಕಡೆಗೆ ಒಂದಕ್ಕೊಂದು ಕೂಡಿದವು. ಪ್ರೇಮಭರದಿಂದ ಕಣ್ಣುಮುಚ್ಚಿ ಅವು ಒಂದಕ್ಕೊಂದು ಗುಟುಕು ಕೊಡಹತ್ತಿದವು. ಅವು ಕೆಲವು ಹೊತ್ತು ಏಕಜೀವವಾಗಿದ್ದವು. ಆ ಚುಂಬನಸುಖದಿಂದ ಆನಂದಿತವಾಗಿದ್ದ ಗಂಡುನವಿಲು, ಪ್ರೇಮಭರದಿಂದ ತನ್ನ ದಿವ್ಯವಾದ ಗರಿಗಳನ್ನು ಪಸರಿಸಿ, ಹೆಂಡತಿಯ ಸುತ್ತುವರಿದು ಕುಣಿಯಹತ್ತಿತು. ಅದರ ಕಣ್ಣೊಳಗಿಂದ ಆನಂದಭಾಷ್ಪಗಳ ಹನಿಗಳು ಸುರಿಯುತ್ತಿದ್ದವು. ಆಗ ಪ್ರೇಮಾತಿಶಯದಿಂದ ಮತ್ತವಾಗಿದ್ದ ಹೆಣ್ಣುನವಿಲು ಆ ಹನಿಗಳನ್ನು ಗುಟುಕರಿಸಿ ಆನಂದಪಡುತ್ತಿತ್ತು, ಇದನ್ನು ನೋಡಿಯಂತೂ ಅಶೋಕನ ವಿಸ್ಮಯಕೌತುಕಗಳಿಗೆ ಮೇರೆಯಿಲ್ಲದಾಯಿತು. ಆತನು ಇಷ್ಟುಹೊತ್ತಿಗೆ ಹಲವು ದೇಶಗಳನ್ನೂ, ಎಷ್ಟೋ ಸುಂದರ ಕಲಾಕೌಶಲ್ಯಗಳನ್ನೂ, ಅನ್ಯರ ದೃಷ್ಟಿಗೆ ಬೀಳಲಸಾಧ್ಯವಾದ ಹಲವು ರಮ್ಯ ವನಪ್ರದೇಶ ಗಳನ್ನೂ ನೋಡಿದ್ದನು; ಚಕ್ರವರ್ತಿಯ ಪದವಿಯನ್ನಂತು ಆತನು ಸದ್ಯಕ್ಕೆ ಅನುಭವಿಸುತ್ತ ಲಿದ್ದನು; ಆದರೆ ಇಂದಿನ ಪ್ರಸಂಗದಿಂದ ಆದಷ್ಟು ಆಶ್ಚರ್ಯ- ಕೌತುಕಗಳು ಆತನಿಗೆ ಎಂದೂ ಆಗಿದ್ದಿಲ್ಲ.

ಮಯೂರದಂಪತಿಗಳ ಈ ವಿಚಿತ್ರ ಪ್ರೇಮವನ್ನು ನೋಡಿ, ಆನಂದಪರವಶನಾಗಿದ್ದ ಸರಳ ಹೃದಯದ ಅಶೋಕನು, ಗಂಡುನವಿಲನ್ನು ಕುರಿತು—ಮಯೂರಾ, ನೀನು ನಿಜವಾಗಿ ಧನ್ಯನಾಗಿರುತ್ತೀ. ನಿನ್ನ ಪ್ರಿಯಳ ಸಹವಾಸದಿಂದ ನಿನಗಾಗುವ ಸುಖವನ್ನು ನೋಡಿಯೇ ನನಗೆ ಇಷ್ಟು ಆನಂದವಾಗಿರಲು, ಪ್ರತ್ಯಕ್ಷ ಆ ಸುಖವನ್ನು ಅನುಭವಿಸುವ ನಿನಗೆ ಎಷ್ಟು ಆನಂದವಾಗಿರ ಬಹುದು! ನೀನು ನಿಜವಾದ ಸುಖದ ಆಗರವನ್ನು ಸಂಪಾದಿಸಿರುವೆ. ಈ ಜಗತ್ತಿನಲ್ಲಿ ದುಡ್ಡು ಕೂಡಿಸುವದರಲ್ಲಿ ಆನಂದಪಡುವವರೂ, ಅಧಿಕಾರ ಸಂಪಾದನೆಯಲ್ಲಿ ಆನಂದಪಡುವವರೂ, ಬಹುಮಾನ ದೊರಕಿಸುವಲ್ಲಿ ಆನಂದಪಡುವವರೂ ಬಹು ಜನರಿರುವರು; ಆದರೆ ನಿನ್ನ ಆನಂದವನ್ನು ಅವರ ಆನಂದಗಳು ಎಷ್ಟು ಮಾತ್ರವೂ ಸರಿಗಟ್ಟಲಾರವು. ಎಲೈ ಮಯೂರನೇ, ಕುಣಿ, ಜಗತ್ಪ್ರಳಯವಾಗುವವರೆಗೆ ಹೀಗೆಯೇ ಕುಣಿ; ಮತ್ತು ನಿನ್ನ ಬಂಧುವರ್ಗವಾದ ಯಾವತ್ತು ಪಕ್ಷಿಗಣಕ್ಕೆ ಈ ಪ್ರೇಮದ ಪಾಠವನ್ನು ಕಲಿಸು. ಆ ಪಕ್ಷಿವರ್ಗವು ನಿನ್ನಂತೆ ಪ್ರೇಮಮಯವಾಗಿದ್ದರೆ, ಸಂಸಾರದ ತಾಪದಿಂದ ಕಂಗೆಟ್ಟು ಬಳಲುತ್ತಿರುವ ನಮ್ಮ ಮನುಷ್ಯ ಜಾತಿಗೆ ಪ್ರೇಮದ ಪಾಠವನ್ನು ಕಲಿಸು. ಯಾಕಂದರೆ, ನಿನ್ನಿಂದ ಪ್ರೇಮದ ಪಾಠವನ್ನು ಕಲಿತವರು ಸಂಸಾರಕ್ಕೆ ಎಷ್ಟುಮಾತ್ರವೂ ಹೆದರುವ ಕಾರಣವಿಲ್ಲ, ಎಂದು ನುಡಿದು, ತನ್ನೊಳಗೆ—ಈ ಮಯೂರ ದಂಪತಿಗಳಂಥ ಪ್ರೇಮವು ಮನುಷ್ಯ ಜಾತಿಯಲ್ಲಿರಬಹುದೋ? ತನ್ನ ಸಹಚಾರಿಣಿಯ ವಿಷಯದ ಅತ್ಯಂತ ಕೋಮಲವಾದ ಮನೋವಿಕಾರವು ಮಯೂರನಲ್ಲಿರು ವಂತೆ, ತನ್ನ ಪತ್ನಿಯ ವಿಷಯದ ಪ್ರೇಮವು ಪುರುಷನಲ್ಲಿ ವಾಸಿಸುತ್ತಿರಬಹುದೋ! ಮನುಷ್ಯ ಪ್ರಾಣಿಯು ಯಾವತ್ತು ಪ್ರಾಣಿಕೋಟಿಯಲ್ಲಿ ಅತ್ಯಂತವಾಗಿ ಸುಧಾರಿಸಿದವನಲ್ಲವೆ? ಆತನಲ್ಲಿ ದಿವ್ಯವಾದ ಜ್ಞಾನದೃಷ್ಟಿಯಿರುವದಲ್ಲವೆ? ಅಂದಬಳಿಕ ಈ ಮಯೂರ ದಂಪತಿಗಳಲ್ಲಿಯ ಪ್ರೇಮಕ್ಕಿಂತ ಮನುಷ್ಯ ದಂಪತಿಗಳಲ್ಲಿಯ ಪ್ರೇಮವು ಉಚ್ಚತಮವಾಗಿರಬಹುದು! ನಾನು ಇಂಥ ದೊಡ್ಡ ಚಕ್ರವರ್ತಿಯೆನಿಸಿಕೊಳ್ಳುತ್ತಿದ್ದರೂ, ಈ ಪವಿತ್ರ ಪ್ರೇಮಕ್ಕೆ ಪಾತ್ರನಾಗಿಲ್ಲವಲ್ಲ! ಈ ಮಯೂರನಿಗೆ ಪ್ರೇಮಲಸ್ವಭಾವದ ಈ ಮಯೂರಿಯು ದೊರೆತಿರುವಂತೆ, ಯಾವತ್ತು ಮಯೂರಗಳಿಗೆ ದೊರೆತಿರಬಹುದೋ? ಮನುಷ್ಯರಲ್ಲಿಯಂತು ಪಿಂಡಗಳಷ್ಟು ಪ್ರಕೃತಿಗಳೆಂದು ಹೇಳುವ ವಾಡಿಕೆಯಿಂದೆ. ಅಂದಬಳಿಕ ಪ್ರತಿಯೊಬ್ಬ ಹೆಂಡತಿಯು, ಈ ಮಯೂರಿಯಂತೆ ತನ್ನ ಗಂಡನ ವಿಷಯವಾಗಿ ಅಕೃತ್ರಿಮ ಪ್ರೇಮವನ್ನು ತಾಳಿರಬಹುದೋ? ಹಾಗಿದ್ದರೆ ಸಂಸಾರವು ದುಃಖಮಯವೆಂಬ ಸಿದ್ಧಾಂತವು ಎಲ್ಲರ ಮುಖದಿಂದ ಯಾಕೆ ಹೊರಡುತ್ತಿರಬಹುದು? ಇದರ ಮೇಲಿಂದ ಈ ಮಯೂರದಂಪತಿಗಳಂಥ ಪ್ರೇಮಲಸ್ವಭಾವದ ದಂಪತಿಗಳು, ಮನುಷ್ಯರಲ್ಲಿ ಅತಿ ವಿರಲವಾಗಿರಬಹುದು. ಹೇಗೇ ಇರಲಿ, ಈ ಪವಿತ್ರ ಪ್ರೇಮದ ಸಂಬಂಧದಿಂದ ನಾನು ಜಗತ್ತಿನಲ್ಲಿ ತೀರ ಹಿಂದೆ ಉಳಿದಿರುವೆನು! ಎಲ್ಲ ಪ್ರಾಣಿಗಳು ಪ್ರಣಯದ ಅಧೀನವಾಗಿರಲು, ಆ ಪ್ರಣಯದ ವಿಷಯವಾಗಿ ನನ್ನಲ್ಲಿ ಅಜ್ಞಾನವು ಹೇಗೆ ಉಳಿದಿರಬಹುದು! ಒಬ್ಬ ಪ್ರಣಯಿನಿ ಯಾದರೂ ಈವೊತ್ತಿನವರೆಗೆ ಪ್ರಣಯವೃಷ್ಟಿಯನ್ನು ನನ್ನಮೇಲೆ ಸುರಿಸಿರುವದಿಲ್ಲವಲ್ಲ!

ಈ ಮೇರೆಗೆ ಯೋಚಿಸುತ್ತ, ಅಶೋಕನು ಒಬ್ಬ ಕಾಲ್ಪನಿಕ ಪ್ರಣಯಿನಿಯ ಮೂರ್ತಿಯನ್ನು ಮನಸ್ಸಿನಲ್ಲಿ ಕಲ್ಪಿಸತೊಡಗಿದನು. ಈ ಕೆಲಸದಲ್ಲಿ ಆತನು ನುರಿತವನಲ್ಲದ್ದರಿಂದ

ಮೂರ್ತಿಯ ರಚನೆಯು ಬೇಗನೆ ಆಗಲೊಲ್ಲದು. ಅಶೋಕನು ಕಲಿಂಗರಾಜ ಪುತ್ರಿಯನ್ನು ತನ್ನ ತಮ್ಮನ ಸಲುವಾಗಿ ಕೇಳಲಿಕ್ಕೆ ಕಳಿಸುವ ಪ್ರಸಂಗದಲ್ಲಿ, ಆ ಲೋಕಸುಂದರಿಯ ಮೋಹಕ ಸ್ವರೂಪವನ್ನೊಮ್ಮೆ ಆಕೆಯ ಭಾವಪಟದಲ್ಲಿ ನೋಡಿದ್ದನು. ಅದೇ ಸ್ವರೂಪವೇ ಅಶೋಕನ ಮನಸ್ಸಿನಲ್ಲಿ ಬರತೊಡಗಿತು; ಆದರೆ ಅಶೋಕನಿಗೆ ಈ ರೂಪದ ಚಿಂತನವು ಪಾಪಮೂಲವಾಗಿ ತೋರಿತು. ಆತನು ಎಷ್ಟು ಯತ್ನಿಸಿದರೂ ಆ ಸುಂದರಿಯ ರೂಪವು ಆತನ ಹೃತ್ಪಟಲದೊಳಗಿಂದ ಅಳಿಸಿ ಹೋಗಲೊಲ್ಲದು, ಆತನು ಅಳಿಸುವದನ್ನು ಬಿಡಲೊಲ್ಲನು. ಹೀಗಿರುವಾಗ ಮೋಹನನೆಂಬ ಸೇವಕನು ಅಲ್ಲಿಗೆ ಬಂದು—''ಕಲಿಂಗದೇಶದ ರಾಜಕುಮಾರನನ್ನು ಸೇವಕನು ಸೆರೆಹಿಡಿದು ತಂದಿರುವರೆ''ಂದು ಅಶೋಕನ ಮುಂದೆ ಹೇಳಿದನು. ತನ್ನ ದನಿಯನ್ನು ಕೇಳಿದ ಕೂಡಲೆ ಮಯೂರದಂಪತಿಗಳು ಹಾರಿಹೋದವು. ಆಗ ಅಶೋಕನು ರಾಜಪುತ್ರನನ್ನು ತನ್ನ ಬಳಿಗೆ ಕರತರಲು ಆಜ್ಞಾಪಿಸಿ, ಮತ್ತೆ ತನ್ನ ಮೂರ್ತಿ ಚಿಂತನದಲ್ಲಿ ತೊಡಗಿದನು. ಅಷ್ಟರಲ್ಲಿ ದೂತರು ಪುರುಷವೇಷಧಾರಿಯಾದ ಪ್ರಣಯಿನಿಯನ್ನು ಅಶೋಕನ ಎದುರಿಗೆ ನಿಲ್ಲಿಸಿದರು. ಪ್ರಣಯಿನಿಯು ಅಶೋಕನನ್ನು ನೋಡಿದ್ದು ಇದೇ ಮೊದಲು. ಆಕೆಯು ಅಶೋಕನ ಕ್ರೂರ ಚರಿತ್ರವನ್ನೂ, ಬೌದ್ಧರ ಕಠೋರ ಹೃದಯದ ನಡತೆಯನ್ನೂ ಕೇಳಿದವಳಾದುದರಿಂದ, ಆಕೆಯ ಮನಸ್ಸಿನಲ್ಲಿ ಅಶೋಕನ, ಹಾಗು ಬೌದ್ಧ ವಿಷಯವಾಗಿ ತಿರಸ್ಕಾರವು ವಾಸಿಸುತ್ತಿತ್ತು. ತನ್ನ ತಂದೆಯನ್ನು ಸೋಲಿಸಿ, ಕಲಿಂಗದೇಶವನ್ನು ಕೈಸೇರಿಸಿಕೊಂಡು, ಅಣ್ಣನಾದ ಜಿತೇಂದ್ರನನ್ನು ಸೆರೆಹಿಡತರಲು ಡಂಗುರಸಾರಿಸಿದ ಅಶೋಕನ ವಿಷಯವಾಗಿ ಆ ಸ್ವಾಭಿಮಾನದ ಕ್ಷತ್ರಿಯ ರಾಜಪುತ್ರಿಯು, ಸಹಾನುಭೂತಿಯನ್ನಾದರೂ ಹೇಗೆ ತಾಳಬೇಕು? ಅಶೋಕನು ತನ್ನ ಕ್ರೂರ ಸ್ವಭಾವಕ್ಕನುಸರಿಸಿ, ಉಗ್ರಸ್ವರೂಪಿಯಾಗಿರಬಹುದೆಂದು ಆಕೆಯು ಭಾವಿಸಿದ್ದಳು; ಆದರೆ ಸುಪ್ರಸನ್ನ ಮುಖಮುದ್ರೆಯ ಅಶೋಕನ ಮನೋಹರ ಮೂರ್ತಿಯು ಕಣ್ಣಿಗೆ ಬಿದ್ದಕೂಡಲೆ, ಆಕೆಯ ಭಾವನೆಯು ಸ್ವಲ್ಪ ಬದಲಾಯಿತು. ಆ ಬೌದ್ಧ ಚಕ್ರವರ್ತಿಯ ತೇಜಃಪುಂಜ ಸ್ವರೂಪವನ್ನೂ, ಶಾಂತಮುದ್ರೆಯನ್ನೂ, ಸೌಜನ್ಯದ ನಡತೆಯನ್ನೂ ನೋಡಿ ಆಕೆಯು ಮೊದಲು ಆಶ್ಚರ್ಯಪಟ್ಟರೂ, ಆತನ ಹಲವು ಕ್ರೂರ ಕೃತ್ಯಗಳು ಆಕೆಯ ಕಣ್ಣಿಗೆ ಕಟ್ಟಿದ್ದರಿಂದ, ಆ ಕಲಿಂಗ ರಾಜಪುತ್ರಿಯು ಅಶೋಕನನ್ನು ವಿಷತುಂಬಿದ ಸುವರ್ಣಕಲಶವೆಂದು ಭಾವಿಸಿದಳು! ಪಾಪ! ಕಲಿಂಗ ಯುದ್ಧದಿಂದ ಅಶೋಕನ ಚಿತ್ತವೃತ್ತಿಯು ಬದಲಾದದ್ದನ್ನು ಆಕೆಯೇನು ಬಲ್ಲಳು? ತಾನು ಬಂದು ಬಹಳ ಹೊತ್ತಾದರೂ ಅಶೋಕನು ತನಗೆ ಅವಮಾನಕರವಾದ ಉದ್ಧಟತನದ ಮಾತುಗಳನ್ನಾಡಿ ಕಾರಾಗೃಹಕ್ಕೆ ಕಳಿಸದೆ, ತನ್ನನ್ನು ಪ್ರೀತಿಪೂರ್ವಕವಾಗಿ ನೋಡುತ್ತಿರುವದನ್ನು ಸ್ಮರಿಸಿ ಪ್ರಣಯಿನಿಯು ಕೌತುಕಪಟ್ಟಳು. ಆತನು ಮಾತಾಡದಿದ್ದರೂ ಶಿಷ್ಟಾಚಾರಕ್ಕನುಸರಿಸಿ ತಾನು ಮಾತಾಡಬೇಕೆಂದು ಭಾವಿಸಿ ಆಕೆಯು ಅಶೋಕನನ್ನು ವಂದಿಸಿ—''ಚಕ್ರವರ್ತಿಯು ಜಯಶೀಲನಾಗಲಿ'' ಎಂದು ನುಡಿದಳು.

ಜಿತೇಂದ್ರ ವೇಷಧಾರಿಯಾದ ಪ್ರಣಯಿನಿಯನ್ನು ನೋಡಿ ಅಶೋಕನು ಚಕಿತನಾದನು! ತನ್ನ ಹೃತ್ಪಟಲದಲ್ಲಿ ಮೂಡಿರುವ ಕಲಿಂಗರಾಜಪುತ್ರಿಯಾದ ಪ್ರಣಯಿನಿಯ ರೂಪವನ್ನು

ಜಿತೇಂದ್ರನ ರೂಪವು ಅಚ್ಚಳಿಯದೆ ಹೋಲುತ್ತಿದ್ದದ್ದನ್ನು ನೋಡಿ, ಆತನಿಗೆ ಮೊದಲು ಆಶ್ಚರ್ಯವಾಯಿತು; ಆದರೆ ಜಿತೇಂದ್ರನು ಪ್ರಣಯಿನಿಯ ಅಣ್ಣನಾದ್ದರಿಂದ, ಅಣ್ಣತಂಗಿಯರಲ್ಲಿ ಸಾದೃಶ್ಯವಿರುವದು ಸ್ವಾಭಾವಿಕವೆಂಬ ಮಾತು ಹೊಳೆದ ಕೂಡಲೆ ಆತನು ಸಮಾಧಾನಪಟ್ಟನು. ಪ್ರಣಯಿನಿಯ ಸಲುವಾಗಿ ಆತನಲ್ಲಿ ಅತ್ಯಂತವಾದ ಆದರವು ಉತ್ಪನ್ನವಾಯಿತು. ಅಷ್ಟರಲ್ಲಿ ಪ್ರಣಯಿನಿಯು ಸ್ವರ್ಗೀಯವಾದ ಮಂಜುಲ ನಾದದಿಂದ ಮೇಲೆ ಹೇಳಿದಂತೆ "ಚಕ್ರವರ್ತಿಯು ಜಯಶೀಲನಾಗಲಿ" ಎಂದು ನುಡಿಯಲು, ಅಶೋಕನು—ಕಲಿಂಗರಾಜಪುತ್ರನೇ, ನಿನ್ನ ಉತ್ಕರ್ಷವಾಗಲಿ, ಪ್ರೇಮಪೂರ್ವಕವಾಗಿ ನಾನು ನಿನ್ನ ಸ್ವಾಗತ ಮಾಡುವೆನು" ಎಂದು ನುಡಿದು, ತನ್ನ ಸಿಂಹಾಸನದಿಂದಿಳಿದು ಜಿತೇಂದ್ರನನ್ನು ತನ್ನ ಹತ್ತಿರ ಸಿಂಹಾಸನದಮೇಲೆ ಕುಳ್ಳಿರಿಸಿ ಕೊಳ್ಳಬೇಕೆಂದು ಆತನು ಕೈಹಿಡಿಯ ಹೋಗಲು, ತಂದೆಯ ಪ್ರತಿಜ್ಞೆಯನ್ನು ಚನ್ನಾಗಿ ನೆನಪಿನಲ್ಲಿಟ್ಟಿದ್ದ ಪ್ರಣಯಿನಿಯು, ಸ್ತ್ರೀಸ್ವಭಾವಕ್ಕನುಸರಿಸಿ ತಟ್ಟನೆ ಹಿಂದಕ್ಕೆ ಸರಿದು,—ಚಕ್ರವರ್ತಿಯೇ, ನನ್ನನ್ನು ಮುಟ್ಟಲಾಗದು. ನನ್ನ ತಂದೆಯು ಮರಣಹೊಂದಿರುವನೆಂಬ ಸುದ್ದಿಯು ಜನರಲ್ಲಿ ಹಬ್ಬಿರುವದು; ಆದರೆ ಗುರುವರ್ಯರಾದ ಚಿದಾನಂದಸ್ವಾಮಿಗಳು, ಆತನು ಮರಣಹೊಂದಿರುವದಿಲ್ಲೆಂದು ನಿಶ್ಚಯಬುದ್ಧಿಯಿಂದ ಪ್ರತಿಪಾದಿಸುತ್ತಾರೆಂತಲೂ ನಾನು ಜನರ ಬಾಯಿಂದ ಕೇಳಿದ್ದೇನೆ. ಅಂದಬಳಿಕ ತಂದೆಯ ಮರಣದ ವಿಷಯವಾಗಿ ಸಂಶಯಗ್ರಸ್ತನಾಗಿರುವ ನಾನು, ವೈದಿಕ ಧರ್ಮಾಜ್ಞೆಯಂತೆ ತಂದೆಯ ಔರ್ಧ್ವದೈಹಿಕ ಕರ್ಮಗಳನ್ನು ಮಾಡುವದು ಹೇಗೆ? ಉದಾರಾಂತಃಕರಣದ ಚಕ್ರವರ್ತಿಯೇ, ಮೃತಪಿತೃವಿನ ಔರ್ಧ್ವದೈಹಿಕ ಕರ್ಮಗಳನ್ನು ಮಾಡುವವರೆಗೆ ಪುತ್ರನು ಸೂತಕದಿಂದಿರಬೇಕಾಗುವದು; ಆದ್ದರಿಂದ ನನ್ನ ಸ್ಪರ್ಶದಿಂದ ನೀನೂ ಅಪವಿತ್ರನಾಗಬೇಡ, ನಿನ್ನ ಪವಿತ್ರಸಿಂಹಾಸನವನ್ನೂ ಅಪವಿತ್ರವಾಗಿ ಮಾಡಬೇಡ. ನಿನ್ನ ಈ ಸೌಜನ್ಯದ ನಡತೆಯಿಂದ ನಾನು ಅತ್ಯಂತ ಸಂತುಷ್ಟನಾಗಿ, ನಿನ್ನ ಔದಾರ್ಯಕ್ಕಾಗಿ ಕೃತಜ್ಞನಾಗಿದ್ದೇನೆ. ಅಶೋಕ ಸಾರ್ವಭೌಮನೇ, ಸೆರೆಯಾಳಾದ ವೈರಿಗಳನ್ನು ಈ ಪರಿ ಆದರಿಸುವ ಧೀರೋದಾತ್ತ ಭೂಪತಿಗಳು ಜಗತ್ತಿನಲ್ಲಿ ಅತ್ಯಂತ ವಿರಲ! ನಿನ್ನ ಅಪ್ಪಣೆಯನ್ನು ಮೀರುವೆನೆಂದು ವಿಕಲ್ಪ ತಾಳಬೇಡೆಂದು ತಲೆಬಾಗಿ ಬೇಡಿಕೊಳ್ಳುವೆನು. ಚಕ್ರವರ್ತಿಯ ಕರಸ್ಪರ್ಶದ ಅಲಭ್ಯ ಲಾಭಪಡೆಯುವ ಪ್ರಾಣಿಯು ಧನ್ಯನಲ್ಲವೇ? ನಿನ್ನ ಅಪ್ಪಣೆಯಾದರೆ, ಈ ಆಸನದಲ್ಲಿ ನಾನು ಕುಳಿತುಕೊಳ್ಳುವೆನು; ಚಕ್ರವರ್ತಿಗಳವರು ತಮ್ಮ ಪವಿತ್ರ ಸಿಂಹಾಸನವನ್ನು ಅಲಂಕರಿಸತಕ್ಕದ್ದು.

ಪ್ರಣಯಿನಿಯ ಈ ಮಾತುಗಳನ್ನು ಕೇಳಿ, ಅಶೋಕನಿಗೆ ಅಸಮಾಧಾನವಾಯಿತು. ತನ್ನ ಚಿತ್ತಹರಣಮಾಡಿಬಿಟ್ಟಿದ್ದ ಜಿತೇಂದ್ರನನ್ನು, ಬಹುಮಾನದಿಂದ ಮನ್ನಿಸಬೇಕೆಂಬ ಆ ಚಕ್ರವರ್ತಿಯ ಸದಿಚ್ಛೆಯು ನಿಷ್ಫಲವಾಯಿತು. ಆತನು ನಿರುಪಾಯನಾಗಿ ಜಿತೇಂದ್ರನನ್ನು ಕುರಿತು—ಕಲಿಂಗ ರಾಜಪುತ್ರಾ, ನಿನ್ನ ಈ ವಿನಯವನ್ನೂ, ಸೌಜನ್ಯವನ್ನೂ ನೋಡಿ ನನಗೆ ಬಹಳ ಸಂತೋಷವಾಗಿದೆ. ನಿನ್ನ ಸೂಚನೆಯನ್ನು ನಾನು ತಿರಸ್ಕರಿಸುವದಿಲ್ಲ. ನಿನಗೆ ಕುಳಿತುಕೊಳ್ಳಲಿಕ್ಕೆ ಬಾರದ ಸಿಂಹಾಸನವು, ಈ ಪ್ರಸಂಗದಲ್ಲಿ ನನಗಾದರೂ ಬೇಡ. ನೀನು

ಆ ಆಸನದಲ್ಲಿ ವಿಶ್ರಮಿಸು, ನಾನು ಈ ಆಸನದಲ್ಲಿ ಕುಳಿತುಕೊಳ್ಳುತ್ತೇನೆ, ಎಂದು ನುಡಿದು, ಅಶೋಕನು ಸಿಂಹಾಸನದ ಬದಿಯಲ್ಲಿದ್ದ ಒಂದು ಆಸನದ ಮೇಲೆ ಕುಳಿತುಕೊಂಡನು. ಅತ್ತ ಪ್ರಣಯಿನಿಯೂ ಆಸನದಲ್ಲಿ ಕುಳಿತುಕೊಂಡಳು. ತಾನು ಇನ್ನು ಸ್ವಲ್ಪ ಹೊತ್ತಿನಲ್ಲಿ ಸೆರೆಮನೆಯ ಸೋಬತಿಯಾಗುವೆನೆಂದು ತಿಳಿದಿದ್ದ ಪ್ರಣಯಿನಿಯು, ತನ್ನನ್ನು ಅಶೋಕನು ಈ ಪರಿ ಆದರಿಸುವದರ ಗೂಢವನ್ನು ತಿಳಿಯದಾದಳು. ಅಷ್ಟರಲ್ಲಿ ಅಶೋಕನು—

ಅಶೋಕ—ರಾಜಪುತ್ರಾ, ನನ್ನ ಸೈನಿಕರು ಮಾರ್ಗದಲ್ಲಿ ನಿನ್ನೊಡನೆ ಸರಿಯಾಗಿ ನಡೆದು ಕೊಂಡರಷ್ಟೇ? ನೀನು ಯಾವ ಮಾತಿಗೂ ಸಂಕೋಚಪಡಬೇಡ. ಕಲಿಂಗ ಯುದ್ಧದಿಂದ ನನ್ನ ಕ್ರೂರಸ್ವಭಾವವು ಅಳಿದುಹೋಗಿರುತ್ತದೆ. ತನ್ನ ಶತ್ರುವಿನ ಮಗನೊಡನೆಯೂ ಅಶೋಕನು ಎಷ್ಟು ಪ್ರೇಮದಿಂದ ನಡೆದುಕೊಳ್ಳುವನೆಂಬದನ್ನು ಈಗ ಜಗತ್ತಿನ ಅನುಭವಕ್ಕೆ ತಂದು ಕೊಡಬೇಕಾಗಿದೆ. ಜಿತೇಂದ್ರ—ರಾಜಕುಮಾರಾ, ಕಲಿಂಗಯುದ್ಧದಲ್ಲಾದ ಭಯಂಕರ ಪ್ರಾಣ ಹಾನಿಯಿಂದ ನನ್ನ ಶತ್ರುಭಾವವು ಸಂಪೂರ್ಣ ನಷ್ಟವಾಗಿರುತ್ತದೆಂಬ ಮಾತನ್ನು ಚೆನ್ನಾಗಿ ನೆನಪಿನಲ್ಲಿಡು.

ಪ್ರಣಯಿನಿ—ಭಗವನ್, ಕಲಿಂಗ ದೇಶದ ರಾಜಪುತ್ರನನ್ನು ಹೇಗೆ ನಡೆಸಿಕೊಳ್ಳ ಬೇಕೆಂಬದನ್ನು ನಿಮ್ಮ ಸೈನಿಕರು ಚೆನ್ನಾಗಿ ಅರಿತಿದ್ದರು. ಅವರಿಂದ ಯಾವ ಬಗೆಯ ತೊಂದರೆಯೂ ನನಗೆ ತಟ್ಟಲಿಲ್ಲ. ಇಲ್ಲಿಗೆ ಬಂದ ಬಳಿಕ ನಿಮ್ಮ ಪ್ರೇಮಲ ಹೃದಯವನ್ನೂ, ಔದಾರ್ಯವನ್ನೂ ನೋಡಿ ನನಗೆ ಬಹಳ ಸಮಾಧಾನವಾಗಿದೆ.

ಅಶೋಕ—ಜಿತೇಂದ್ರ ರಾಜಪುತ್ರಾ, ನಿನ್ನನ್ನು ನೋಡಿದ ಕೂಡಲೆ ನನ್ನ ಮನಸ್ಸು ಪ್ರಸನ್ನವಾಯಿತು. ಇದಕ್ಕೆ ನೀನು, ಪೂರ್ವಜನ್ಮದ ಋಣಾನುಬಂಧವೆನ್ನು, ಅಥವಾ ಚಿತ್ರಯೋಗವೆನ್ನು, ಬೇಕಾದದ್ದು ಅನ್ನು. ನಿನ್ನ ದೃಢವಾದ ಸಹವಾಸವನ್ನು ಪಡೆಯುವ ಇಚ್ಛೆಯು ನನಗೆ ಆಗಿರುತ್ತದೆ. ಕಲಿಂಗ ರಾಜಮನೆತನದೊಡನೆ ಸಖ್ಯ ಬೆಳಿಸಬೇಕೆಂದು ನಾನು ಈ ಮೊದಲೇ ನಿಶ್ಚಯಿಸಿರುತ್ತೇನೆ; ಆದರೆ ನನ್ನ ಸಖನಾದ ನೀನು ಆಜನ್ಮ ನನ್ನನ್ನಗಲದೆ ಪರಮಮಿತ್ರನಾಗಿ ನನ್ನೊಡನೆ ವ್ಯವಹರಿಸತಕ್ಕದ್ದು. ನನ್ನ ಈ ಮಾತನ್ನು ನಡಿಸುವ ಅನುಗ್ರಹ ಮಾಡುವೆನೆಂದು ನೀನು ವಚನವನ್ನು ಕೊಡು.

ಈ ಮಾತನ್ನು ಕೇಳಿ ಪ್ರಣಯಿನಿಯು ಶಂಕಿಸಿದಳು. ಯಾವ ಮಾತು ತನಗೆ ಬೇಡಾಗಿರುವದೋ, ಅದೇ ಮಾತನ್ನು ನಡಿಸುವ ಬಗ್ಗೆ ಅಶೋಕನು ಆಗ್ರಹಮಾಡುವದನ್ನು ನೋಡಿ, ಆಕೆಯು ಅಸಮಾಧಾನಪಟ್ಟಳು. ಚಕ್ರವರ್ತಿಯು ತನ್ನ ದೃಢಮೈತ್ರಿಯನ್ನು ಇಚ್ಛಿಸು ತ್ತಿರಲು, ಅದನ್ನು ನಿರಾಕರಿಸುವದೂ ಕಷ್ಟ, ಸ್ತ್ರೀಯಾದ ತಾನು ತಂದೆಯ ಪ್ರತಿಜ್ಞಾಭಂಗಕ್ಕೆ ಕಾರಣವಾದ ಚಕ್ರವರ್ತಿಯ ಮಾತನ್ನು ನಡಿಸುವದೂ ಕಷ್ಟ; ಹೀಗಾಗಿ ಪ್ರಣಯಿನಿಗೆ ಇತ್ತ ಬಿದ್ದರೆ ಕೆರೆ, ಅತ್ತಬಿದ್ದರೆ ಬಾವಿ ಎಂಬಂತಾಯಿತು; ಆದರೂ ಚತುರೆಯಾದ ಆ ರಾಜಪುತ್ರಿಯು ಅಶೋಕನನ್ನು ಕುರಿತು—

ಪ್ರಣಯಿನಿ—ಚಕ್ರವರ್ತಿಯೇ, ನನ್ನ ಮೇಲೆ ಈಗ ನೀನು ಮಾಡಿರುವ ಪರಮಾನು ಗ್ರಹದಿಂದ ನಾನು ಧನ್ಯನಾದೆನು. ವಚನಕೊಡುವ ಮಾತು ಈಗ ಇರಲಿ. ಅದಕ್ಕೆ ಇಷ್ಟು

ಅವಸರವು ನೆಟ್ಟಗಲ್ಲೆಂದು ನನಗೆ ತೋರುತ್ತದೆ. ಸಾರ್ವಭೌಮನಾದ ನಿನ್ನೊಡನೆ ಇಂಥ ದೃಢಮೈತ್ರಿಯನ್ನು ಬೆಳಿಸುವ ಯೋಗ್ಯತೆಯು ನನ್ನಲ್ಲಿರುವದೊ, ಇಲ್ಲವೋ ಎಂಬ ಬಗ್ಗೆ ನಾನು ಶಾಂತಚಿತ್ತದಿಂದ ವಿಚಾರಮಾಡುವೆನು. ತಂದೆಯ ಮರಣವಾರ್ತೆಯಿಂದ ನನ್ನ ಮನಸಿಗೆ ಸಮಾಧಾನವಿಲ್ಲ. ಗುರುಮುಖದಿಂದ ಅದರ ನಿಷ್ಕರ್ಷವಾಗಲಿ. ಉದಾರಮನಸ್ಸಿನ ಚಕ್ರವರ್ತಿಯೇ, ನೀನು ಪ್ರಸನ್ನನಾದರೆ, ನಾನು ಪ್ರತಿ ಚಕ್ರವರ್ತಿಯಾಗಬಹುದು; ಆದರೆ ಆ ಪದವಿಗೆ ನಾನು ಯೋಗ್ಯನಿರುವೆನೋ ಎಂಬ ಬಗ್ಗೆ ನಾನು ವಿಚಾರಮಾಡುವದು ಹಿತಕರವಲ್ಲವೇ?

ಅಶೋಕ—ರಾಜಪುತ್ರಾ, ಆಗಲಿ, ಹಾಗೆಯೇ ಆಗಲಿ; ಸಮಾಧಾನದಿಂದ ವಿಚಾರ ಮಾಡು. ನಾನೂ ಅಷ್ಟರಲ್ಲಿ ಕಲಿಂಗರಾಜ್ಯದ ವ್ಯವಸ್ಥೆಯನ್ನು ಮಾಡುವೆನು; ನಿನ್ನ ತಂದೆಯ ವೃತ್ತಾಂತವೂ ಗೊತ್ತಾಗುವದು. ನಿನ್ನ ವಿಚಾರವು ನಿಶ್ಚಿತವಾಗುವವರೆಗೆ ನೀನು ಇದೇ ಮಂದಿರದಲ್ಲಿ ವಾಸಿಸುವಂತೆ ಮಾಡಬೇಕು. ದಿನಾಲು ನನಗೆ ನಿನ್ನ ದರ್ಶನಲಾಭವು ಅನಾಯಾಸವಾಗಿ ಘಟಿಸಿದರೂ ನನಗೆ ಸಮಾಧಾನವಾಗುವದು. ನನ್ನ ಈ ಆಜ್ಞಾಪಾಲನವು ನಿನಗೆ ಮಹಾಶಿಕ್ಷೆಯಂತೆ ಕಾಣಬಹುದು; ಆದರೆ ನನ್ನ ಸಮಾಧಾನಕ್ಕಾಗಿ ಇಷ್ಟು ಮಾತನ್ನು ನೀನು ನಡಿಸಲೇಬೇಕು.

ಅಶೋಕನ ಈ ಮಾತುಗಳನ್ನು ಕೇಳಿ, ಪ್ರಣಯಿನಿಯು ಮನಸ್ಸಿನಲ್ಲಿ ಬೆದರಿದಳು. ತಾನು ವೇಷಧಾರಿಯೆಂಬದನ್ನು ಅಶೋಕನು ಕಂಡುಹಿಡಿದನೋ ಏನೋ ಎಂದು ಶಂಕಿಸಹತ್ತಿದಳು. ಆತನು ಈಗ ಕಂಡುಹಿಡಿಯದಿದ್ದರೂ, ತಾನು ದೃಢಸಹವಾಸದಲ್ಲಿ ಚಕ್ರವರ್ತಿಯ ಮುಂದೆ ತನ್ನ ನಿಜಸ್ವರೂಪವನ್ನು ಬಚ್ಚಿಡುವದು ಆಕೆಗೆ ಅಸಂಭವವಾಗಿ ತೋರಿತು. ಹೀಗಿರುವಾಗ ರಾಜಮಾತೆಯಾದ ಬುದ್ಧಿಮತಿಯು ಅಲ್ಲಿಗೆ ಬಂದಳು. ಬುದ್ಧಿಮತಿಯ ಗುರುತು ವಾಚಕರಿಗೆ ಚೆನ್ನಾಗಿ ಇರುವದು. ಕಲಿಂಗರಾಜ ಮನೆತನವನ್ನು ಮಣ್ಣುಗೂಡಿಸಿ, ಆ ರಾಜ್ಯವನ್ನು ತನ್ನ ಹಸ್ತಕನಾದ ವಿಶಾಖಾನಂದಮಂತ್ರಿಗೆ ಒಪ್ಪಿಸಬೇಕೆಂದು ಆಕೆಯು ನಿಶ್ಚಯಿಸಿದ್ದಳು. ರಾಜಮಾತೆಯು ಹೀಗೆ ನಿಶ್ಚಯಿಸಲಿಕ್ಕೆ ಆ ವೃದ್ಧಮಂತ್ರಿಯ ಪತ್ನಿಯಾದ ಪ್ರಮೀಳೆಯು ಮಾಡಿದ ರಾಜದ್ರೋಹದ ಸಾಹಸವೇ ಕಾರಣವು. ಅಶೋಕನು ಸಮಾನಸ್ಕಂಧನಂತೆ ಪ್ರಣಯಿನಿಯೊಡನೆ ಮಾತಾಡುತ್ತ ಕುಳಿತದ್ದನ್ನು ಸಹಿಸದೆ, ರಾಜಮಾತೆಯು ಅಶೋಕನನ್ನು ಕುರಿತು—

ಬುದ್ಧಿಮತಿ—ಕುಮಾರಾ, ಕಲಿಂಗದ ರಾಜಪುತ್ರನು ಈತನೇ ಏನು?

ಅಶೋಕ—ಹೌದು, ಇವನೇ ರಾಜಪುತ್ರನಾದ ಜಿತೇಂದ್ರನು. ಜಿತೇಂದ್ರಾ, ಇವರು ನಮ್ಮ ಮಾತೃಶ್ರೀಯವರು.

ಪ್ರಣಯಿನಿ—ರಾಜಮಾತೆಯೇ, ಈ ಕಲಿಂಗದೇಶದ ಯುವರಾಜನಾದ ಜಿತೇಂದ್ರನು ಅತ್ಯಂತವಾದ ಆದರದಿಂದ ನಮಸ್ಕರಿಸುವೆನು.

ಬುದ್ಧಿಮತಿ—ಜಿತೇಂದ್ರಾ, ನೀನು ನಮ್ಮ ಸೆರೆಯಾಳು! ಹೀಗೆ ನನಗೆ ನಮಸ್ಕರಿಸಲಿಕ್ಕೆ ನಿನಗೆ ಅಧಿಕಾರವಿಲ್ಲ. ಇಂದಿಗೆ ಕಲಿಂಗದೇಶವು ವಿಶಾಖಾನಂದನ ಆಧೀನದಲ್ಲಿರುತ್ತದೆ. ವಿಶಾಖಾನಂದನ ಜ್ಯೇಷ್ಠಪುತ್ರನ ಹೊರತು ಮತ್ತೊಬ್ಬನು ಕಲಿಂಗದ ಯುವರಾಜಪದವಿಯನ್ನು

ಧರಿಸಲಾಗದು. ನೀನು ಬರೇ ಜಿತೇಂದ್ರನೆಂತಲೇ ಕರೆದುಕೊಂಡು, ಮುಂದಿಗೆ ನಿನ್ನ ಗುರುತುಮಾಡಿ ಕೊಡತಕ್ಕದ್ದು!

ಅಶೋಕ—ವಿಶಾಖಾನಂದನು ಕಲಿಂಗದೇಶದ ರಾಜ್ಯಾಧಿಕಾರಿಯಾಗಲಿಕ್ಕೆ, ಒಂದು ಮಾತಿನ ಪ್ರತಿಬಂಧವಿರುತ್ತದೆಂಬದನ್ನು ರಾಜಮಾತೆಯು ಮರೆತಿರಲಿಕ್ಕಿಲ್ಲ. ಮೃಗೇಂದ್ರನು ಬದುಕಿ ಇದ್ದು, ಆತನು ಮಗಧದ ಸಾರ್ವಭೌಮತ್ವವನ್ನು ಒಪ್ಪಿಕೊಂಡರೆ, ಯಾವ ಪ್ರತಿ ಬಂಧವೂ ಇಲ್ಲದೆ ಆತನ ರಾಜ್ಯವನ್ನು ಆತನಿಗೆ ಕೊಡಬೇಕಾಗುವದು. ಆತನು ಮರಣ ಹೊಂದಿದ್ದ ಪಕ್ಷದಲ್ಲಿ ಈ ಜಿತೇಂದ್ರ ರಾಜಕುಮಾರನು ಬೌದ್ಧಧರ್ಮವನ್ನು ಸ್ವೀಕರಿಸಲು ಒಪ್ಪಿದರೆ, ಕಲಿಂಗದ ಪಟ್ಟವನ್ನು ಈತನಿಗೆ ಕೊಡಬೇಕಾಗುವದು. ಅಂದಬಳಿಕ ಯಾವ ಮಾತಿನದೂ ಪೂರ್ಣ ನಿರ್ಣಯವಾಗದ ಈಗಿನ ಸ್ಥಿತಿಯಲ್ಲಿ, ಜಿತೇಂದ್ರನನ್ನು ಕಲಿಂಗದ ಯುವರಾಜನೆಂದು ಕರೆಯುವದೂ, ಆತನು ತನ್ನನ್ನು ಯುವರಾಜನೆಂದು ಕರೆದುಕೊಳ್ಳುವದೂ ಅನ್ಯಾಯವಲ್ಲ.

ರಾಜಮಾತೆ—ನನಗೆ ಅನ್ಯಾಯವಾಗಿ ತೋರುತ್ತದೆ. ಮೃಗೇಂದ್ರನ ಕಥೆಯಂತು ಮುಗಿದೇ ಹೋಗಿರುವದು. ಜಿತೇಂದ್ರನು ಈಗ ಬೌದ್ಧಧರ್ಮವನ್ನು ಸ್ವೀಕರಿಸಲಿಕ್ಕೆ ಒಪ್ಪಿಕೊಳ್ಳದ ಪಕ್ಷದಲ್ಲಿ ತನ್ನ ಯುವರಾಜ ಪದವಿಯನ್ನೇ ಏಕೆ, ಕಲಿಂಗದ ಮೇಲಿನ ತನ್ನ ಹಕ್ಕನ್ನೂ ಬಿಟ್ಟು ಕೊಡಬೇಕಾಗುವದು.

ಅಶೋಕ—ಮಾತೆಯೇ, ಈ ಕೆಲಸದಲ್ಲಿ ಇಷ್ಟು ಅವಸರಮಾಡುವದು ಸರಿಯಲ್ಲ. ಪೂರ್ಣ ನಿರ್ಣಯವಾಗುವವರೆಗೆ ಈ ಜಿತೇಂದ್ರ ಯುವರಾಜನನ್ನು ನನ್ನ ಈ ಪ್ರಾಸಾದ ದಲ್ಲಿಯೇ ಇಟ್ಟುಕೊಳ್ಳಬೇಕೆಂದು ಮಾಡಿರುವೆನು.

ಅಶೋಕನ ವೃತ್ತಿಯು ದಿನದಿನಕ್ಕೆ ಸೌಮ್ಯವಾಗುತ್ತ ನಡೆದಿರುವದನ್ನು ಬುದ್ಧಿಮತಿಯು ನೋಡುತ್ತಲಿದ್ದಳು. ಈ ಪ್ರಸಂಗದಲ್ಲಿ ತನ್ನ ಆಗ್ರಹವು ನಡೆಯದೆಂದು ತಿಳಿದು, ಆಕೆಯು ಅಶೋಕನಿಗೆ—ಆಗಲಿ, ನೀನು ಸಾವಕಾಶವಾಗಿ ಈ ಮಾತಿನ ನಿರ್ಣಯವನ್ನು ಮಾಡು; ಆದರೆ ಈ ಜಿತೇಂದ್ರನನ್ನು ಬಹಳವಾದರೆ ತುರಂಗದರ್ಬಾರದಲ್ಲಿರಿಸು. ಇದಕ್ಕೂ ಹೆಚ್ಚಿನ ಮಾನವನ್ನು ಕೊಡುವದು ನನ್ನ ಮನಸ್ಸಿಗೆ ಬರುವದಿಲ್ಲ. ಈ ಪ್ರಾಸಾದದಲ್ಲಿರಲಿಕ್ಕೆ ಸೆರೆಯಾಳಾದ ಜಿತೇಂದ್ರನು ಸರ್ವಥಾ ಪಾತ್ರನಲ್ಲ, ಎಂದು ನುಡಿಯುತ್ತಿರಲು, ಈ ಸಂಧಿಯನ್ನು ಸಾಧಿಸಿ ಪ್ರಣಯಿನಿಯು ಅಶೋಕನನ್ನು ಕುರಿತು—ಚಕ್ರವರ್ತಿಯೇ, ಮಾತೆಯವರ ವಿಚಾರವು ಸಮರ್ಪಕವಾಗಿದೆ. ನಾನು ತುರಂಗದರ್ಬಾರಕ್ಕೆ ಸಂತೋಷದಿಂದ ಹೋಗುವೆನು, ಎಂದು ಹೇಳಿದನು. ತಾಯಿಯ ಈ ಅತಿ ಪ್ರಸಂಗಕ್ಕೂ, ಜಿತೇಂದ್ರನ ಅದೂರದರ್ಶಿತನಕ್ಕೂ ಅಸಮಾಧಾನಪಟ್ಟು, ಹೆಚ್ಚು ಆಗ್ರಹ ಮಾಡಲಾರದೆ, ಒಂದು ರಥವನ್ನು ತರಿಸಿ ಅದರಲ್ಲಿ ಜಿತೇಂದ್ರನೊಡನೆ ಕುಳಿತು, ಆ ಉದಾರಾಂತಃಕರಣದ ಸಾರ್ವಭೌಮನು ತುರಂಗದರ್ಬಾರದ ಕಡೆಗೆ ಸಾಗಿದನು.

ವಿಚಿತ್ರ ಮನೋನಿಗ್ರಹ

ಈ ಮೇರೆಗೆ ಪ್ರಣಯಿನಿಯು ತನ್ನ ಅಣ್ಣನಾದ ಜಿತೇಂದ್ರನ ಕಷ್ಟವನ್ನು ದೂರ ಮಾಡುವದಕ್ಕಾಗಿ ಪುರುಷವೇಷದಿಂದ ಪಾಟಲಿಪುತ್ರ ರಾಜಧಾನಿಯಲ್ಲಿ ಅಶೋಕನ ತುರಂಗದ ಬರ್ಾರವೆಂಬ ಸೆರೆಮನೆಯೊಳಗೆ ವಾಸಿಸುತ್ತಿದ್ದಳು. ಇತ್ತ ಮಥುರಾಪಟ್ಟಣದಿಂದ ಹೊರಟ ಬೌದ್ಧ ಭಿಕ್ಷುವೇಷಧಾರಿಯಾದ ಜಿತೇಂದ್ರನು, ಪಾಟಲಿಪುತ್ರಕ್ಕೆ ಹೋಗಬೇಕೆಂದು ಹೊರಟು ಮಾರ್ಗವನ್ನು ಕ್ರಮಿಸುತ್ತ ಕಪಿಲವಸ್ತು ನಗರದ ಪೂರ್ವದಿಕ್ಕಿನ ಸರೋವರದ ತೀರದಲ್ಲಿದ್ದ ಧರ್ಮಶಾಲೆಯಲ್ಲಿ ಇಳಿದುಕೊಂಡನು. ವೇಷಕ್ಕೊಪ್ಪುವಂತೆ ಆತನು ಅಂದು ಆ ಪಟ್ಟಣದಲ್ಲಿ ಭಿಕ್ಷೆಬೇಡಿ ಕ್ಷುಧಾಶಾಂತಿಯನ್ನು ಮಾಡಿಕೊಂಡನು. ಹರಿದ್ವಾರದ ಗುರುಕುಲದಲ್ಲಿ ಚಿದಾನಂದ ಸ್ವಾಮಿಗಳ ಶಿಕ್ಷಣದಿಂದ ಬಾಲ್ಯವನ್ನು ಕಳೆದ ಆ ಸುಂದರ ತರುಣನಿಗೆ, ಸೃಷ್ಟಿಸೌಂದರ್ಯವನ್ನು ನೋಡುವ ಲವಲವಿಕೆ ಬಹಳ. ಅದರಲ್ಲಿ ತನ್ನ ತಂದೆತಾಯಿಗಳೂ, ತಂಗಿಯೂ ದೇಶಭ್ರಷ್ಟರಾಗಿ ಯಾವ ದುರ್ದಶೆಯನ್ನು ಹೊಂದಿದರೋ ಎಂಬ ಚಿಂತೆಯಿಂದ ಅವನ ಮನಸ್ಸು ಉದಾಸೀನ ವಾದಾಗ, ಅದನ್ನು ಸಮಾಧಾನಗೊಳಿಸಲಿಕ್ಕೆ ಸೃಷ್ಟಿಯ ಅವಲೋಕನದ ಹೊರತು ಆತನಿಗೆ ಬೇರೆ ಸಾಧನವೇ ಈಗ ಉಳಿದಿದ್ದಿಲ್ಲ. ಆತನು ಧರ್ಮಶಾಲೆಯಲ್ಲಿ ಚಿಂತೆಮಾಡುತ್ತ ಒತ್ತಟ್ಟಿಗೆ ಸುಮ್ಮನೆ ಬಿದ್ದುಕೊಂಡಿದ್ದನು. ಹೊತ್ತು ಮುಣುಗಿತು. ಅಂದು ಹುಣ್ಣಿಮೆಯಾದದ್ದರಿಂದ ನಿರಭ್ರವಾದ ಆಕಾಶದಲ್ಲಿ ಚಂದ್ರನು ತನ್ನ ಶೀತಲ ಕರಗಳನ್ನು ಪಸರಿಸುತ್ತ ಉದಯಹೊಂದಿ ಮೇಲಕ್ಕೇರ ಹತ್ತಿದನು. ತಾಸು ರಾತ್ರಿಯಾಯಿತು, ಎರಡು ತಾಸು ರಾತ್ರಿಯಾಯಿತು, ಮೂರುತಾಸು ರಾತ್ರಿಯಾಯಿತು; ಆದರೂ ಜಿತೇಂದ್ರನು ಮೇಲಕ್ಕೇಳಲಿಲ್ಲ. ರಾತ್ರಿಯು ಕ್ರಮಿಸುತ್ತ ಕ್ರಮಿಸುತ್ತ ಆರು ತಾಸಿಗೆ ಬಂದರೂ ಜಿತೇಂದ್ರನ ಕಣ್ಣಿಗೆ ಕಣ್ಣು ಹತ್ತಲಿಲ್ಲ. ಮುಂದೆಯಾದರೂ ಬೇಗನೆ ನಿದ್ದೆಹತ್ತುವ ಲಕ್ಷಣವು ಆತನಿಗೆ ತೋರಲಿಲ್ಲ. ಆತನು ಉಸುರ್ಗಳೆಯುತ್ತ ಮಲಗಿದಲ್ಲಿಂದಲೇ ಸರೋವರದ ಕಡೆಗೆ ದೃಷ್ಟಿಯನ್ನು ಹೊರಳಿಸಿದನು. ಸರೋವರದ ಸ್ವಚ್ಛೋದಕದಮೇಲೆ ಚಂದ್ರ ಪ್ರಕಾಶವು ಬಿದ್ದು ನೋಡುವವರ ಮನಸ್ಸನ್ನು ಆಕರ್ಷಿಸುತ್ತಿತ್ತು. ಆಗ ಜಿತೇಂದ್ರನು ಚಟ್ಟನೆ ಎದ್ದು ನೆಟ್ಟಗೆ ಸರೋವರಕ್ಕೆ ಹೋಗಿ ದಡದಡ ಪಾವಟಿಗೆಗಳನ್ನು ಇಳಿದು, ನೀರೊಳಗೆ ಕಾಲು ಇಳಿಬಿಟ್ಟು ಕೊಂಡು, ಕಡೆಯ ಪಾವಟಿಗೆಯ ಮೇಲೆ ಕುಳಿತುಕೊಂಡನು. ಮಧ್ಯರಾತ್ರಿಯು, ಸದ್ದು ಅಡಗಿದೆ, ಸುಳಿಗಾಳಿಯು ಕೂಡ ಸುಳಿಯದ್ದರಿಂದ ಸರೋವರದ ನೀರು ಸ್ತಬ್ಧವಾಗಿದೆ, ಚಂದ್ರಪ್ರಕಾಶದಿಂದ ನೈದಿಲೆಗಳು ಕುಲುಕುಲು ನಗುತ್ತಿರುವಂತೆ ತೋರುತ್ತಿರಲು, ಸೂರ್ಯನಿಲ್ಲದ್ದರಿಂದ ಕಮಲಗಳು ಬಾಡಿ ಕಲಾಹೀನವಾಗಿ ತೋರುತ್ತಲಿವೆ. ಒಬ್ಬ ತಾಯಿಯ ಹೊಟ್ಟೆಯಲ್ಲಿ ಹುಟ್ಟಿದ್ದ ಆ ಇಬ್ಬರು ಬಾಲಿಕೆಯರ ಈ ಭಿನ್ನ ಸ್ವಭಾವಗಳನ್ನು ಸ್ಮರಿಸಿ ಜಿತೇಂದ್ರನು ಕೌತುಕಪಟ್ಟನು. ಆತನು ಸರೋವರದ ಸೌಂದರ್ಯವನ್ನೂ, ಸ್ವಚ್ಛವಾದ ಆಕಾಶದಲ್ಲಿ ಕಳಪಿಲ್ಲದೆ ಲಕಲಕಿಸುವ ನಿಶಾಕರನನ್ನೂ ಕಣ್ಣುತುಂಬ ನೋಡುತ್ತ, ಮುಖಪ್ರಕ್ಷಾಲನ ಮಾಡಿಕೊಂಡು ಆಗಾಗ್ಗೆ ಬಾಯಿ ಮುಕ್ಕಳಿಸಿ ಉಗುಳುತ್ತಿರಲು, ಆತನ ಚಿತ್ತವೃತ್ತಿಯು ಸ್ವಲ್ಪ ಶಾಂತವಾಯಿತು. ಋಷ್ಯಾಶ್ರಮ ವಾಸಿಯಾದ ಆ ಪುಣ್ಯವಂತನಿಗೆ, ಚಿಂತೆಯ ಗುರುತೇ ಇದ್ದಿಲ್ಲೆಂದು ಹೇಳಬಹುದು. ಅಂತೇ

ಆತನು ತನ್ನ ಕುಟುಂಬದ ದುರವಸ್ಥೆಯ ಚಿಂತೆಯನ್ನು ಕಾರಣಾಂತರದಿಂದ ಆಗಾಗ್ಗೆ ಮರೆತು, ಉಲ್ಲಾಸವೃತ್ತಿಯಿಂದ ಕಾಲಹರಣ ಮಾಡುತ್ತಿದ್ದನು.

ಈ ಮೇರೆಗೆ ಜಿತೇಂದ್ರನು, ಸರೋವರದ ಸೌಂದರ್ಯಾವಲೋಕನದಿಂದ ಸಮಾಧಾನವನ್ನು ತಾಳಿ, ಸುಸ್ವರದಿಂದ ಗಾಯನ ಮಾಡತೊಡಗಿದನು. ಬರಬರುತ್ತ ಆತನು ಗಾಯನದಲ್ಲಿ ತಲ್ಲೀನವಾಗಿರಲು, ಒಬ್ಬ ಸುಂದರಿಯು ಆತನ ಬಳಿಯಲ್ಲಿ ಬಂದು ನಿಂತುಕೊಂಡಳು. ಪಟ್ಟಣದಿಂದ ಬಹು ದೂರದಲ್ಲಿದ್ದ ಸರೋವರದಲ್ಲಿ, ಇಷ್ಟು ಮಧ್ಯರಾತ್ರಿಯಲ್ಲಿ ಮನುಷ್ಯ ಸಂಚಾರವಾಗುವ ಸಂಭವವೇ ಇದ್ದಿಲ್ಲ. ಸರೋವರದಲ್ಲಿ ತಾನೇ ತಾನೆಂದು ತಿಳಿದು ಜಿತೇಂದ್ರನು ನಿಶ್ಶಂಕೆಯಿಂದ ಗಾಯನಮಾಡುತ್ತ ಕುಳಿತುಕೊಂಡಿದ್ದನು. ಅಷ್ಟರಲ್ಲಿ ತನ್ನ ಎದುರಿಗೆ ನೀರಲ್ಲಿ ಒಬ್ಬ ಸ್ತ್ರೀಯ ಪ್ರತಿಬಿಂಬವು ಬಿದ್ದದ್ದನ್ನು ನೋಡಿ, ತನ್ನ ಹಿಂದೆ ಯಾವಳೋ ಒಬ್ಬ ಸ್ತ್ರೀಯು ನಿಂತುಕೊಂಡಿರುವಳೆಂದು ಆತನು ತಿಳಿದು, ಹಿಂದಕ್ಕೆ ಹೊರಳಿನೋಡಿದನು. ಕೂಡಲೆ ಆತನು ಆ ಸ್ತ್ರೀಯನ್ನು ಕುರಿತು—ಇಷ್ಟು ರಾತ್ರಿಯಲ್ಲಿ ಈ ನಿರ್ಜನವಾದ ವನದಲ್ಲಿ ತಿರುಗುವ ನೀನು ಯಾರು? ಎಂದು ಪ್ರಶ್ನಮಾಡಿದನು. ಅದಕ್ಕೆ ಆ ಸ್ತ್ರೀಯು ಉತ್ತರಕೊಡದೆ, ತನ್ನ ಮೋರೆಯ ಮೇಲಿನ ಮುಸುಕನ್ನು ತೆರೆದು, ಮುಗುಳುನಗೆಯಿಂದ ಜಿತೇಂದ್ರನನ್ನು ನೋಡುತ್ತ ನಿಂತುಕೊಂಡಳು. ಮತ್ತೊಬ್ಬ ಅಳ್ಳೆದೆಯವನಾಗಿದ್ದರೆ, ಇದೇನು ಭೂತವೋ, ಪಿಶಾಚವೋ ಎಂದು ಅಂಜಬಹುದಾಗಿತ್ತು; ಆದರೆ ಜಿತೇಂದ್ರನು ಕೆಚ್ಚೆದೆಯ ವೀರನಾಗಿದ್ದನು. ಆತನ ಮನಸ್ಸನ್ನು ಈ ಭೂತಪಿಶಾಚಗಳ ಕಲ್ಪನೆಯು ಪ್ರವೇಶಿಸಲೇ ಇಲ್ಲ. ಆ ತರುಣ ರಾಜಪುತ್ರನು ಅಂಜುವದೊತ್ತಟ್ಟಿಗುಳಿದು, ಆ ಸುಂದರಿಯ ಸೌಂದರ್ಯಕ್ಕಾಗಿ ಆಶ್ಚರ್ಯಪಟ್ಟನು. ಆಕೆಯು ಹದಿನಾರುವರ್ಷದ ಪ್ರಾಯದವಳಾಗಿದ್ದಳು. ಆಕೆಯ ಮೈಬಣ್ಣವು ಕಾದ ಬಂಗಾರದಂತಿದ್ದು, ಎಲ್ಲ ಅವಯವಗಳು ಭರಯೌವನದ ಯೋಗದಿಂದ ತುಂಬಿಬಂದು ಮನೋಹರವಾಗಿ ಒಪ್ಪುತ್ತಿದ್ದವು. ಸರ್ವಾಲಂಕಾರ ಭೂಷಿತೆಯಾಗಿದ್ದ ಆ ಸುಂದರಿಯನ್ನು ನೋಡಿದವರು, ಈಕೆಯು ಯಾವಳೋ ಒಬ್ಬ ಮಹಾ ತೇಜಸ್ವಿಯಾದ ಕುಲೀನ ಯುವತಿಯೆಂದು ತರ್ಕಿಸಬಹುದಾಗಿತ್ತು, ಜಿತೇಂದ್ರನಂತು ಹಾಗೆಯೇ ತರ್ಕಿಸಿದನು. ಇಂಥ ಕುಲೀನಳಾದ ಸುಂದರ ತರುಣಿಯು ಸರ್ವಾಲಂಕಾರಭೂಷಿತೆಯಾಗಿ, ಮಧ್ಯರಾತ್ರಿಯಲ್ಲಿ ವನದೊಳಗಿನ ಸರೋವರದಲ್ಲಿ ನನ್ನ ಬಳಿಗೆ ಬರುವ ಕಾರಣವೇನಿರಬಹುದೆಂಬದು ಆತನ ಮನಸ್ಸಿಗೆ ಹೊಳೆಯದಾಯಿತು. ಆ ತೇಜಸ್ವಿಯು ಬ್ರಹ್ಮಚರ್ಯವ್ರತಸ್ಥನು, ಸರಳ ಹೃದಯದವನು, ಮಹಾಸತ್ವಶಾಲಿಯು ಅಂತೇ ನಿರ್ವಿಕಾರಮನಸ್ಕನಾಗಿ ಆ ತರುಣಿಯನ್ನು ಕುರಿತು—

ಜಿತೇಂದ್ರ—ತಂಗೀ, ನಿನ್ನನ್ನು ನೋಡಿದರೆ ನನ್ನ ತಂಗಿಯ ನೆನಪು ಆಗುತ್ತದೆ. ನೀನು ಯಾರವ್ವಾ ಇಷ್ಟು ರಾತ್ರಿಯಲ್ಲಿ ಇಲ್ಲಿಗೆ ಒಬ್ಬಳೇ ಬಂದ ಕಾರಣವೇನು?

ತರುಣಿ—ಭಿಕ್ಷುಶ್ರೇಷ್ಠನೇ, ತರುಣನಾದ ನೀನು ಏಕಾಂತದಲ್ಲಿ ಈ ಸರೋವರದೊಳಗೆ ಒಬ್ಬನೇ ಕುಳಿತಿರುವದನ್ನು ನೋಡಿ ನಾನು ಬಂದೆನು. ಇಲ್ಲಿಗೆ ಬಂದ ಬಳಿಕಂತು ನಾನು ಒಬ್ಬಳೇ ಇದ್ದ ಹಾಗಾಗುವದಿಲ್ಲವಷ್ಟೇ? ನಿನ್ನಂಥ ಸುಂದರ ತರುಣನು ಒಬ್ಬನೆಯಿರುವದನ್ನು ನೋಡಿ, ಯಾವ ಸುಂದರಿಯು ನಿನ್ನ ಯೋಗಕ್ಷೇಮವನ್ನು ಕೇಳಲಿಕ್ಕೆ ಬಾರದೆಯಿದ್ದಾಳು?

ಜಿತೇಂದ್ರ—ವಿರಕ್ತನಾದ ನನ್ನ ಯೋಗಕ್ಷೇಮವನ್ನು ಕೇಳಿ ಯಾರಿಗೇನು ಪ್ರಯೋಜನವಾದೀತು?

ತರುಣಿ—ತರುಣಭಿಕ್ಷುವೇ, ಭರಯೌವನದಲ್ಲಿ ನೀನು ವೈರಾಗ್ಯವನ್ನು ತಾಳಲಿಕ್ಕೆ ಕಾರಣವೇನು? ಸಂಸಾರಸುಖದ ಆಸ್ವಾದವನ್ನು ಅನುಭವಿಸುವ ಮೊದಲೇ ನೀನು ವೈರಾಗ್ಯವನ್ನು ತಾಳಿದೆಯಾ! ನಿನ್ನ ಪೂರ್ವವೃತ್ತಾಂತವನ್ನು ನಾನು ಕೇಳಬೇಕಾಗಿದೆ.

ತರುಣಿಯ ಈ ಪ್ರಶ್ನವನ್ನು ಕೇಳಿ, ಜಿತೇಂದ್ರನು ಬೆದರಿದನು. ನನ್ನ ಗುರುತನ್ನು ಈಕೆಯು ಹಿಡಿದಳೋ, ಎಂಬ ಸಂಶಯವು ಆತನ ಮನಸ್ಸಿನಲ್ಲಿ ಉತ್ಪನ್ನವಾಯಿತು. ಆದರೆ ನನ್ನ ಗುರುತು ಹಿಡಿದಿದ್ದರೆ, ಇಂಥ ಮಧ್ಯರಾತ್ರಿಯಲ್ಲಿ ಒಬ್ಬಳೇ ಅದನ್ನು ಕೇಳಲಿಕ್ಕೆ ಬರುವ ಸಂಭವವಿಲ್ಲ; ಮೇಲಾಗಿ ಈಕೆಯ ಅಂಗವಿಕ್ಷೇಪಗಳನ್ನು ನೋಡಿದರೆ, ಶುದ್ಧಮನಸ್ಸಿನ ಹೆಣ್ಣುಮಗಳಂತೆ ಕಾಣುವದಿಲ್ಲ, ಒಳ್ಳೇದು, ಏನಾಗುತ್ತದೆ ನೋಡೋಣ, ಎಂದು ಆ ತರುಣಿಯನ್ನು ಕುರಿತು—

ಜಿತೇಂದ್ರ—ಅಮ್ಮಾ, ನಮ್ಮಂಥ ಪಾಂಥಸ್ಥರ ಇತಿಹಾಸದಲ್ಲಿ ಮಹತ್ವವೇನಿರುವದು? ನಾನು ತಂದೆತಾಯಿಗಳ ಹೊಟ್ಟೆಯಲ್ಲಿ ಹುಟ್ಟಿ ದೊಡ್ಡವನಾದ ಮೇಲೆ ಗುರುಕುಲವಾಸದಿಂದ ಅಲ್ಪ ಸ್ವಲ್ಪ ವಿದ್ಯೆಯನ್ನು ಕಲಿತೆನು. ಅಷ್ಟರಲ್ಲಿ ನನ್ನ ಕುಟುಂಬದಮೇಲೆ ಭಯಂಕರ ಪ್ರಸಂಗ ಒದಗಿದ್ದರಿಂದ, ನಾನು ದುಃಖಪಟ್ಟು, ಈ ಭಿಕ್ಷುವಿನ ವೇಷವನ್ನು ಹಾಕಿಕೊಂಡು ತಿರುಗಹತ್ತಿರುತ್ತೇನೆ.

ತರುಣಿ—ಹಾಗಾದರೆ ಇದು ವೇಷವೋ? ನೀನು ನಿಜವಾಗಿ ಸಂಸಾರ ವಿರಕ್ತನಲ್ಲವಷ್ಟೇ?

ಜಿತೇಂದ್ರ—ನನಗೆ ಸಂಸಾರಸುಖದ ಕಲ್ಪನೆಯೇ ಇಲ್ಲದ್ದರಿಂದ, ವೈರಾಗ್ಯದ ಮಹತ್ವವು ನನಗೆ ತೋರುವದಿಲ್ಲ.

ತರುಣಿ—ತರುಣಭಿಕ್ಷುಶ್ರೇಷ್ಠನೇ, ನಿನ್ನ ಮಾತನ್ನು ಕೇಳಿ ನನಗೆ ಬಹಳ ಸಂತೋಷವಾಯಿತು. ಇದು ಮಾತಿನಲ್ಲಿ ಹೊತ್ತು ಗಳೆಯುವ ಪ್ರಸಂಗವಲ್ಲ. ನಿನ್ನ ಸೌಂದರ್ಯಕ್ಕೆ ಮರುಳಾಗಿದ್ದ ವಿಶಾಖಾನಂದನ ಮಂತ್ರಿಯ ಹೆಂಡತಿಯಾದ ಈ ಪ್ರಮೀಳೆಯು, ನಿನ್ನ ಸಹವಾಸವನ್ನು ಇಚ್ಛಿಸಿ ದೀನಳಾಗಿ ಬಂದಿದ್ದಾಳೆ. ನನ್ನನ್ನು ಮಂತ್ರಿಯ ಹೆಂಡತಿಯೆಂದೂ ತಿಳಿಯಬೇಡ. ಸದ್ಯಕ್ಕೆ ವಿಶಾಖಾನಂದನೇ ಕಲಿಂಗದೇಶದ ರಾಜನಾಗಿರುವದರಿಂದ, ಈ ಪ್ರಮೀಳೆಯು ಕಲಿಂಗದೇಶದ ರಾಣಿಯಾಗಿದ್ದಾಳೆ! ಈ ದಿನ ನಾನು ಇಂದ್ರಭುವನದಿಂದ ಹೊರಟು ಪಾಟಲಿಪುತ್ರ ರಾಜಧಾನಿಗೆ ಹೋಗುತ್ತಿರಲು, ಊರಲ್ಲಿ ಭಿಕ್ಷೆಬೇಡುತ್ತಿದ್ದ ನಿನ್ನನ್ನು ನೋಡಿ ಮೋಹಿತಳಾಗಿ ಇಲ್ಲಿಗೆ ಬಂದಿದ್ದೇನೆ. ಎಂಥವರಿಗೂ ಅಲಭ್ಯಳಾದ ನಾನು, ನಿನ್ನ ಸೇವಕಳಾಗ ಬಂದಿರುವೆನು; ದುರ್ಲಕ್ಷಿಸದೆ ನನ್ನನ್ನು ಅಂಗೀಕರಿಸು. ವಿಶಾಖಾನಂದನು ವೃದ್ಧನು; ಹೆಸರಿಗೆ ಮಾತ್ರ ನನ್ನ ಪತಿಯು!

ಈ ಮೇರೆಗೆ ನುಡಿದು, ಪ್ರಮೀಳೆಯು ಇಲ್ಲದ ಸಲಿಗೆಯಿಂದ ಜಿತೇಂದ್ರನ ತೀರ ಸಮೀಪಕ್ಕೆ ಹೋದಳು. ಆಗ ಜಿತೇಂದ್ರನು ಸಂತಪ್ತನಾಗಿ ಹಿಂದಕ್ಕೆ ಸರಿದು, ಪ್ರಮೀಳೆಯನ್ನು ಕುರಿತು—

ಜಿತೇಂದ್ರ—ಸರಿ, ಪ್ರಮೀಳಾರಾಣಿಯೇ, ಹಿಂದಕ್ಕೆ ಸರಿದು ನಿಲ್ಲು. ಕಲಿಂಗದೇಶದ ರಾಣಿಯೆನಿಸಿಕೊಳ್ಳುವ ನೀನು, ಇಂಥ ಪಾಪವಾಸನೆಗೆ ಒಳಗಾಗತಕ್ಕದ್ದಲ್ಲ. ಶೌರ್ಯವೂ, ಪ್ರಜಾಪಾಲನದಕ್ಷತೆಯೂ ಅರಸನಲ್ಲಿ ಅವಶ್ಯವಾಗಿ ಇರುವಂತೆ, ಯಾವತ್ತೂ ಸ್ತ್ರೀಯರು ಅನುಕರಿಸುವಂಥ ಪರಿಶುದ್ಧವಾದ ಪಾತಿವ್ರತ್ಯವು ಆತನ ಹೆಂಡತಿಯಲ್ಲಿ ಇರಬೇಕಾಗುವದು.

ಪ್ರಮೀಳೆ—ತರುಣನೇ, ನೀನು ಬೇಕಾದದ್ದು ಹೇಳು. ನನ್ನ ಮನೋವಿಕಾರವನ್ನು ನಾನು ಸಹಿಸಲಾರೆನು. ನಿನ್ನ ಮೇಲೆ ಪ್ರೇಮವನ್ನಿಡಲಿಕ್ಕೆ ಕಲಿಂಗದ ರಾಣಿಯ ಪದವಿಯಿಂದ ಬಾಧೆಬರುತ್ತಿದ್ದರೆ, ಆ ರಾಣಿಯ ಪದವಿಯನ್ನು ತ್ಯಜಿಸಲಿಕ್ಕೆ ನಾನು ಸಿದ್ಧಳಿರುತ್ತೇನೆ! ಪ್ರಿಯಕರನೇ, ನನ್ನ ನಿರ್ಮಲವಾದ ಪ್ರೇಮವನ್ನು ವ್ಯಕ್ತಮಾಡುವದಕ್ಕಾಗಿ ನೀನು ಏನು ಮಾಡೆಂದರೂ ಮಾಡುವೆನು.

ಜಿತೇಂದ್ರ—ಆ! ಪವಿತ್ರ ಪ್ರೇಮವೆನ್ನುವೆಯಾ? ಪ್ರಮೀಳಾರಾಣಿಯೇ, ಹೀಗೆ ನೀನು ಪ್ರೇಮದ ವಿಡಂಬನೆ ಮಾಡುವದು ಸರಿಯಲ್ಲ. ವ್ಯಭಿಚಾರಿಯ ಕಾಮವಾಸನೆಗೆ ನಿರ್ಮಲ ಪ್ರೇಮವೆನ್ನಬಹುದಾದ ಬಳಿಕ, ಬಂಧು ಹತ್ಯಕ್ಕೆ ಬಂಧುಪ್ರೇಮವೆಂತಲೂ, ರಾಜದ್ರೋಹಕ್ಕೆ ರಾಜನಿಷ್ಠೆಯೆಂತಲೂ ಅನ್ನಲಿಕ್ಕೆ ಪ್ರತಿಬಂಧವೇನು? ಆ ಪವಿತ್ರಪ್ರೇಮವೆಂಬ ಶಬ್ದವನ್ನು ಉಚ್ಚರಿಸುವಾಗ ನೀನು, ವಿಶಾಖಾನಂದನ ಧರ್ಮಪತ್ನಿಯಿರುವೆಯೆಂಬ ಮಾತನ್ನು ಮರೆತು ಬಿಡುತ್ತೀಯಲ್ಲ! ಧರ್ಮಬಂಧನಬದ್ಧವಾದ ಆ ವಿವಾಹಿತ ಪತ್ನೀತ್ವವನ್ನು ನೀನು ಹೀಗೆ ಧಿಕ್ಕರಿಸಿ ಪಾಪಿಯಾಗಬಹುದೆ?

ಪ್ರಮೀಳೆ(ತಾಪದಿಂದ)— ಅಂಥ ಧರ್ಮಬಂಧನದ ಮೇಲೆಯೂ, ವಿವಾಹಬಂಧನದ ಮೇಲೆಯೂ ಪ್ರಮೀಳಾರಾಣಿಯು ಈಗ ಉಗುಳುವಳು! ಇಂದ್ರಿಯಗಳು ಶಿಥಿಲವಾಗಿರುವ, ಬುದ್ಧಿಯು ಭ್ರಂಶವಾಗಿರುವ, ಒಂದು ಕಾಲು ಸ್ಮಶಾನದಲ್ಲಿದ್ದು ಮತ್ತೊಂದನ್ನು ಸ್ಮಶಾನ ದಲ್ಲಿಡುವದಕ್ಕಾಗಿ ಮೇಲಕ್ಕೆತ್ತುತ್ತಿರುವ, ಪ್ರೇತಸ್ವರೂಪನಾದ ವೃದ್ಧ ವಿಶಾಖಾನಂದನೊಡನೆ ಆದ ವಿವಾಹಬಂಧನಕ್ಕೆ ವಿವಾಹ ಬಂಧನವೆನ್ನಬಹುದೆ? ನಾನು ಕಲಿಂಗದ ರಾಣಿಯಾಗಬೇಕೆಂಬ ಹಟದಿಂದ ವಿಶಾಖಾನಂದನೊಡನೆ ಉಪಚಾರಕ್ಕಾಗಿ ಲಗ್ನವಾದದ್ದೇನೋ ನಿಜ. ಇಷ್ಟರ ಹೊರತು ವಿಶಾಖಾನಂದನೊಡನೆ ಬೇರೆ ಯಾವ ಬಗೆಯಿಂದಲೂ ನನ್ನ ಸಂಬಂಧವಾಗಿರುವದಿಲ್ಲ. ನಿನ್ನನ್ನು ನೋಡುವದಕ್ಕಿಂತ ಮೊದಲು, ನನ್ನ ಮನಸ್ಸಿನಲ್ಲಿ ಪ್ರೇಮದ ಸೆಲೆಯು ಉತ್ಪನ್ನ ವಾಗಿದ್ದರಷ್ಟೇ ಆ ಜರಠನನ್ನು ಪ್ರೀತಿಸುವದು?

ಜಿತೇಂದ್ರ—ಹೋಗು, ಪ್ರಮೀಳಾರಾಣಿಯೇ, ತಟ್ಟನೆ ಇಲ್ಲಿಂದ ಹೊರಟು ಹೋಗು. ಬೇಕಾದಾಗ ವಿವಾಹ ಬಂಧನಕ್ಕೊಳಗಾಗಿ, ಬೇಡಾದಾಗ ಅದನ್ನು ಹರಿದು ಚಲ್ಲುವ ನಿನ್ನಂಥ ಧರ್ಮಲಂಡಳು, ಇನ್ನು ಮೇಲೆ ನನ್ನೆದುರಿಗೆ ನಿಂತುಕೊಳ್ಳುವದು ಸರಿಯಲ್ಲ. ನಿನ್ನಲ್ಲಿ ಪ್ರೇಮದ ಸೆಲೆಯು ಉತ್ಪನ್ನವಾಗಿದ್ದರೆ, ಅದರಿಂದ ನಿನ್ನ ಮನಸ್ಸಿನೊಳಗಿನ ಹೊಲಸನ್ನು ತೊಳೆದು ಬಿಡು. ಪ್ರತ್ಯಕ್ಷ ಅಪ್ಸರೆಯು ಬಂದರೂ ಆಕೆಯ ಸ್ವರ್ಗೀಯ ಪ್ರೇಮಕ್ಕೂ, ನನ್ನ ಹೃದಯದಲ್ಲಿ ಸ್ಥಳ

ದೊರೆಯಲಾರದು! ಅಂದಬಳಿಕ ನಿನ್ನಂಥ ಹೇಸಿ ಹೆಂಗಸಿನ ಮಾತೇಕೆ? ನನ್ನ ಅಂತಃಕರುಣವು ಈ ಮೊದಲೇ ಒಬ್ಬ ಸುಂದರಿಯ ಪವಿತ್ರಪ್ರೇಮದಿಂದ ತುಂಬಿಹೋಗಿರುತ್ತದೆ. ನಿನ್ನಂಥ ಪಾಪಿಷ್ಠೆಯು ನನ್ನ ಹೃದಯವನ್ನು ಪ್ರವೇಶಿಸತೊಡಗಿದರೆ, ಅಲ್ಲಿದ್ದ ಆ ಪವಿತ್ರ ಮೂರ್ತಿಯ ತೇಜಸ್ಸಿನಿಂದ ನೀನು ಸುಟ್ಟು ಭಸ್ಮವಾದೀ.

ಜಿತೇಂದ್ರನ ಈ ಮಾತುಗಳನ್ನು ಕೇಳಿದಕೂಡಲೆ, ಪ್ರಮೀಳೆಯ ಎದೆಯೊಡೆದು ನೀರಾಯಿತು. ಆಕೆಯು ಮಹಾ ಅಭಿಮಾನಿಯು, ಗರ್ವಿಷ್ಠಳು, ಕಠೋರಹೃದಯದವಳು, ಉದ್ಧಟಸ್ವಭಾವದವಳು ಎಂಬದನ್ನು ವಾಚಕರು ಬಲ್ಲರು; ಆದರೆ ಪ್ರಣಯದ ಆಧೀನಳಾದ ಆ ಪ್ರಮದೆಯು, ಕೇವಲ ಮಾನವಂತೆಯೂ ಸಾಧ್ವಿಯಂತೆ ಜಿತೇಂದ್ರನ ತಿರಸ್ಕಾರದ ಮಾತನ್ನು ಮನಸ್ಸಿಗೆ ಹಚ್ಚಿಕೊಳ್ಳದೆ, ತಲೆಬಾಗಿಸಿಕೊಂಡು ಆತನ ಎದುರಿಗೆ ವಿನಯದಿಂದ ನಿಂತುಕೊಂಡಳು. ಜಿತೇಂದ್ರನ ವಿಷಯವಾಗಿ ಆಕೆಯ ಹೃದಯದಲ್ಲಿ ವಾಸಿಸುತ್ತಿದ್ದ ಪ್ರೇಮವು ಅಣುಮಾತ್ರವೂ ಕಡಿಮೆಯಾಗಿದ್ದಿಲ್ಲ. ಪ್ರಮೀಳೆಗೆ ಜಿತೇಂದ್ರನ ಗುರುತು ಹತ್ತದಿದ್ದರೂ, ಜಿತೇಂದ್ರನಿಗೆ ಪ್ರಮೀಳೆಯೇ ತನ್ನ ಗುರುತುಮಾಡಿಕೊಟ್ಟಿದ್ದಳು. ಚಿಕ್ಕಂದಿನಲ್ಲಿ ಅವರಿಬ್ಬರು ಕೂಡಿ ಆಡಿದವರೆಂಬ ಮಾತನ್ನು ವಾಚಕರು ಮರೆತಿರಲಿಕ್ಕಿಲ್ಲ. ಜಿತೇಂದ್ರನೊಡನೆ ಆಗುವ ಆಕೆಯ ವಿವಾಹಕ್ಕೆ, ಮೃಗೇಂದ್ರನು ವಿಘ್ನವನ್ನುಂಟುಮಾಡಿದ್ದರಿಂದಲೇ ಇಷ್ಟು ಅನರ್ಥವಾಯಿತೆಂಬದನ್ನಾದರೂ ವಾಚಕರಿಗೆ ಮತ್ತೆ ಹೇಳುವ ಕಾರಣವಿಲ್ಲ. ಮಾನಧನಳಾದ ಪ್ರಮೀಳೆಯ ಈ ಪತಿತಸ್ಥಿತಿಯನ್ನು ನೋಡಿ ಜಿತೇಂದ್ರನು ಮರುಗಿದನು. ಆತನು ಆ ಸತ್ವಹೀನಳನ್ನು ಕುರಿತು—

ಜಿತೇಂದ್ರ—ಪ್ರಮೀಳಾರಾಣಿಯೇ, ಹೋಗು; ಇನ್ನು ಆ ಅವಿಚಾರವನ್ನು ಬಿಟ್ಟುಬಿಡು. ಮನಸ್ಸನ್ನು ಚಂಚಲವಾಗಗೊಡಬೇಡ! ಕಲಿಂಗದ ರಾಣೀವಾಸಕ್ಕೆ ತಕ್ಕ ಯೋಗ್ಯತೆಯನ್ನು ಸಂಪಾದಿಸಿಕೋ. ಭಾರತೀಯ ಸಾಧ್ವಿಯರ ಕೀರ್ತಿಗೆ ಕಲಂಕವನ್ನುಂಟುಮಾಡಬೇಡ ಹೋಗು, ಇಂದಿನ ಪ್ರಸಂಗವನ್ನು ಮರೆತುಬಿಡು. ತಿರುಗಿ ಅದನ್ನು ನೆನಪಿಗೆ ತಂದುಕೊಳ್ಳಬೇಡ ಹೋಗು.

ಪ್ರಮೀಳೆ—ಪ್ರಿಯಕರನೇ, ಹೋಗುವೆನು; ಆದರೆ ನಿನ್ನ ಮೇಲೆ ಕುಳಿತಿದ್ದ ನನ್ನ ಪ್ರೇಮವು ಇನ್ನು ಚಲಿಸದು. ನೀನು ಬೇಕಾದರೆ ನನ್ನನ್ನು ಪ್ರೀತಿಸು ಬೇಡಾದರೆ ಬಿಡು. ನನ್ನ ಮೇಲೆ ಸಿಟ್ಟು ಮಾತ್ರ ಆಗಬೇಡ ಕಂಡೆಯಾ! ತರುಣ ಭಿಕ್ಷುವೇ, ಪ್ರೇಮಪ್ರವಾಹಕ್ಕೆ ಒಡ್ಡುಹಾಕಿ, ಅದನ್ನು ಮತ್ತೊಂದು ಕಡೆಗೆ ತಿರುಗಿಸಲಿಕ್ಕೆ ಅದಾವ ಸ್ತ್ರೀ—ಪುರುಷರು ಸಮರ್ಥರಾಗುವರು? ಕಡೆತನಕ ನಾನು ನಿನ್ನನ್ನು ಪತಿಯೆಂತಲೇ ಭಾವಿಸಿ, ನಿನ್ನ ಮೂರ್ತಿಯನ್ನು ಹೃದಯದಲ್ಲಿಟ್ಟು ಕೊಳ್ಳುವೆನು; ಆದರೆ ತರಣಭಿಕ್ಷೂ, ನಿನಗೆ ಅಂತಃಕರಣ ಹುಟ್ಟುವದಿಲ್ಲವೇ?

ಜಿತೇಂದ್ರ—ನಿರ್ಲಜ್ಜಸ್ತ್ರೀಯೇ, ಈ ಭಿಕ್ಷುವಿನ ದೃಢಮನಸ್ಸಿನ ಕಲ್ಪನೆಯು ಇನ್ನೂ ನಿನಗೆ ಆಗಲೊಲ್ಲದೆಯೇ? ನಿನ್ನಂಥ ಪಾಪಿಷ್ಠಸ್ತ್ರೀಯ ಮುಖಾವಲೋಕನ ಮಾಡಿದ್ದಕ್ಕಾಗಿ ನಾನು ಸಚೇಲಸ್ನಾನ ಮಾಡತಕ್ಕದ್ದು. ಹೋಗು, ಇಲ್ಲಿಂದ ಹೋಗು; ನೀನು ಹೋದದ್ದನ್ನು ನೋಡಿ ನಾನು ಸ್ನಾನಮಾಡಿ ಗುರುಧ್ಯಾನದಿಂದ ಶಾಂತಿಯನ್ನು ಪಡೆಯುವೆನು. ಈವರೆಗೂ ಕ್ಷುಬ್ಧವಾಗದೆ ಇದ್ದ ನನ್ನ ಚಿತ್ತವನ್ನು ಇನ್ನು ಕ್ಷುಬ್ಧಗೊಳಿಸಬೇಡ.

ಜಿತೇಂದ್ರನ ಈ ನಿರ್ಧಾರದ ಮಾತುಗಳನ್ನು ಕೇಳಿ, ಪ್ರಮೀಳೆಯು ಒಂದು ನಿಟ್ಟುಸುರು ಬಿಟ್ಟು, ಅಲ್ಲಿಂದ ಹೋಗಲಾರದೆ ಜಿತೇಂದ್ರನನ್ನು ದೈನ್ಯದಿಂದ ನೋಡುತ್ತ ಹೃದಯದಲ್ಲಿ ಆ ಮೂರ್ತಿಯು ಸ್ಥಿರವಾಗುವವರೆಗೆ ನಿಂತುಕೊಂಡು, ಜಿತೇಂದ್ರನನ್ನು ಕುರಿತು—ಒಳ್ಳೆಯದು, ಪ್ರಿಯಕರಾ, ಹೋಗುತ್ತೇನೆ. ಈ ನಿರ್ಧಾರದ ಪ್ರಮೀಳೆಯು ಇಷ್ಟರಿಂದ ಹತಾಶಳಾಗಲಾರಳು. ಜನ್ಮವಿರುವ ತನಕ ಆಕೆಯು ನಿನ್ನ ಪ್ರೇಮಸಂಪಾದನೆಗಾಗಿ ಯತ್ನಿಸುವಳು. ಆ ಯತ್ನದಲ್ಲಿ ಬರುವ ವಿಘ್ನಗಳನ್ನು ಆಕೆಯು ನಿವಾರಿಸದೆಬಿಡಳು, ಎಂದು ನುಡಿದವಳೇ ಕ್ಷಣದಲ್ಲಿ ಅಲ್ಲಿಂದ ಗುಪ್ತಳಾದಳು. ಆಕೆಯ ಸದ್ದು ಅಡಗುವವರೆಗೆ ತಲೆಬಾಗಿಸಿಕೊಂಡು ಕುಳಿತಿದ್ದ ಜಿತೇಂದ್ರನು ಆಕೆಯ ಹೋದದನ್ನು ನೋಡಿ ಸರೋವರದಲ್ಲಿ ದುಡುಮ್ಮನೆ ಹಾರಿದನು. ಆ ಉಲ್ಲಾಸವೃತ್ತಿಯ ತರುಣನು, ತಾನು ವಿಚಿತ್ರಮನೋನಿಗ್ರಹ ಮಾಡಿದೆನೆಂಬ ಆನಂದದಿಂದ ಸರೋವರದಲ್ಲಿ ಯಥೇಚ್ಛ ರಮಿಸತೊಡಗಿದನು!

ಮಹಾತ್ಮರ ದರ್ಶನ

ಪ್ರಮೀಳೆಯು ಹೋಗಿ ಬಹಳ ಹೊತ್ತು ಆಗಿದ್ದಿಲ್ಲ, ಅಷ್ಟರಲ್ಲಿ ಹತ್ತರದ ಗಿಡಗಳ ಗುಂಪಿನೊಳಗಿಂದ ಒಬ್ಬ ದೈದೀಪ್ಯಮಾನನಾದ ಪುರುಷನೊಬ್ಬನು ಬರತೊಡಗಿದನು. ಜಲಾನಂದ—ಮಗ್ನನಾದ ಜಿತೇಂದ್ರನು ಆತನನ್ನು ನೋಡಿ ಸರೋವರದ ತೀರಕ್ಕೆ ಬಂದು, ತನ್ನ ತೊಟ್ಟ ಕಪನಿಯನ್ನು ಕಳೆದು ಹಿಂಡಿಕೊಳ್ಳಹತ್ತಿದನು. ಅಷ್ಟರಲ್ಲಿ ಆ ದಿವ್ಯಪುರುಷನು ತೀರ ಸಮೀಪಕ್ಕೆ ಬಂದನು. ಆತನ ಹೆಗಲಮೇಲೆ ಒಂದು ಹಳದಿಯ ಬಣ್ಣದ ಕಪನಿಯು ಜೋಲಾಡುತ್ತಿತ್ತು, ಜಿತೇಂದ್ರನು ಚಿದಾನಂದರ ಪಟ್ಟಶಿಷ್ಯನು, ಹಿಂದೂ ಧರ್ಮದ ಪೂರ್ಣ ಅಭಿಮಾನಿಯು; ಆದರೂ ಆತನ ಮನಸ್ಸಿನಲ್ಲಿ ಕೂಡ ಎದುರಿಗೆ ಬರುವ ಆ ಬೌದ್ಧಭಿಕ್ಷುವನ್ನು ನೋಡಿ ಭಕ್ತಿಯು ಉತ್ಪನ್ನವಾಯಿತು. ಸರ್ವಸಾಧಾರಣ ಭಿಕ್ಷುಗಳಲ್ಲಿಲ್ಲದ ಮಹತ್ವವೇನೋ ಈ ಪುರುಷನಲ್ಲಿರುತ್ತದೆಂಬ ಭಾವನೆಯು ಜಿತೇಂದ್ರನಿಗೆ ಹುಟ್ಟಿತು. ಚಿದಾನಂದರ ಬ್ರಹ್ಮ ತೇಜಸ್ಸೂ, ಶಾಂತಮುದ್ರೆಯೂ, ಪ್ರೇಮಲದೃಷ್ಟಿಪಾತವೂ, ಸುಹಾಸ್ಯವದನವೂ ಆ ದಿವ್ಯ ಪುರುಷನಲ್ಲಿ ತೋರಿದವು. ಬೌದ್ಧಧರ್ಮದಲ್ಲಿಯೂ ಅಧಿಕಾರಸಂಪನ್ನರಾದ ಯೋಗ್ಯ ಆಚಾರ್ಯರು ಇರುತ್ತಾರೆಂಬ ತನ್ನ ಗುರುವಿನ ಉದಾರಮತವು ಇಂದು ಜಿತೇಂದ್ರನಿಗೆ ನೆನಪಾಯಿತು. ಆತನು ಕೆಲಸದ ಪೂರತೆಗಾಗಿ ಸದ್ಯಕ್ಕೆ ಬೌದ್ಧಭಿಕ್ಷುವಿನ ವೇಷವನ್ನು ಹಾಕಿಕೊಂಡಿದ್ದರೂ, ತನ್ನ ಆಯುಷ್ಯದಲ್ಲಿ ಆತನು ಬೌದ್ಧ ಭಿಕ್ಷುಗಳನ್ನು ನಮ್ರತಾಪೂರ್ವಕವಾಗಿ ಎಂದೂ ನಮಸ್ಕರಿಸಿದ್ದಿಲ್ಲ, ಅಂಥವನು ಇಂದು ತನ್ನೆದುರಿಗೆ ಬಂದು ನಿಂತ ಬೌದ್ಧ ಭಿಕ್ಷುವನ್ನು ಭಕ್ತಿಯಿಂದ ಸಾಷ್ಟಾಂಗವಾಗಿ ವಂದಿಸಿ, ಎದ್ದುನಿಂತು ಆತನನ್ನು ಕುರಿತು—

ಜಿತೇಂದ್ರ—ಆಚಾರ್ಯ, ತಮ್ಮ ದರ್ಶನದಿಂದ ನನ್ನನ್ನು ಕೃತಕೃತ್ಯನಾಗಮಾಡಿದಿರಿ. ನಾನು ತಮ್ಮನ್ನು ಭಕ್ತಿಪೂರ್ವಕವಾಗಿ ವಂದಿಸುತ್ತೇನೆ.

ಭಿಕ್ಷು—ಸಚ್ಛೀಲ ತರುಣನೇ, ಏಳು. ನಿನ್ನಂಥ ಸದ್ಗುಣಿಯಾದ ತರುಣನ ಭೆಟ್ಟಿಯು ನನಗೆ ಅತ್ಯಂತ ಆಹ್ಲಾದಜನಕವಾಗಿರುತ್ತದೆ. ನಾನು ಇಲ್ಲಿಯೇ ಸಮೀಪದಲ್ಲಿ ಭಗವಾನ್ ಗೌತಮಬುದ್ಧನ ಸದ್ಗುಣಗಳ ಚಿಂತನ ಮಾಡುತ್ತ ಧ್ಯಾನಸ್ಥನಾಗಿ ಕುಳಿತಿದ್ದೆನು. ಅಷ್ಟರಲ್ಲಿ ನಿನಗೂ, ಮಹತ್ವಾಕಾಂಕ್ಷಿಯಾದ ಪ್ರಮಿಳೆಗೂ ಆದ ಸಂವಾದದ ಧ್ವನಿಯು ನನ್ನ ಕಿವಿಗೆ ಬಿದ್ದು, ನನ್ನ ಧ್ಯಾನಕ್ಕೆ ವಿಘ್ನವೊದಗಿತು. ಇಂಥ ಶಾಂತಸಮಯದಲ್ಲಿ ಧ್ಯಾನಕ್ಕೆ ವಿಘ್ನವೊದಗಿದ್ದಕ್ಕಾಗಿ ನನಗೆ ಮೊದಲು ಅಸಮಾಧಾನವೂ ಆಯಿತು; ಆದರೆ ಪ್ರಮೀಳೆಯ ಮೇಲಿನ ಪ್ರೇಮಪ್ರವಾಹದ ಭಯಂಕರವಾದ ಮಹಾಪೂರದಿಂದ ನಿನ್ನ ಮನೋನಿಗ್ರಹದ ಒಡ್ಡು ಲೇಶವಾದರೂ ಕುಸಿಯದಿರುವದನ್ನು ನೋಡಿ ನನಗೆ ಪರಮಾನಂದವಾಯಿತು. ಧರ್ಮಧ್ಯಾನಕ್ಕೆ ಆದ ವ್ಯತ್ಯಯವನ್ನು ನಾನು ಪೂರಾ ಮರೆತುಬಿಟ್ಟೆನು. ಯೋಗಿಗಳಲ್ಲಿ ಕ್ವಚಿತ್ತಾಗಿ ತೋರಬಹುದಾದ ಮನೋನಿಗ್ರಹವು, ನಿನ್ನಂಥ ತರುಣ ರಾಜಪುತ್ರನಲ್ಲಿ ಪ್ರಕಟವಾದದ್ದನ್ನು ನೋಡಿ ನನ್ನ ಆನಂದದೋದಧಿಯು ಉಕ್ಕೇರಿತು. ಸಚ್ಛೀಲನಾದ ತರುಣವೀರನೇ, ನೀನು ಇಂದಿನ ಯುದ್ಧದಲ್ಲಿ ಸಂಪಾದಿಸಿದ ಜಯವನ್ನು, ನೀನು ಪರಾಕ್ರಮದಿಂದ ಮಾಡಿದ ದಿಗ್ವಿಜಯವು ಲೇಶವಾದರೂ ಸರಿಗಟ್ಟಲಾರದು! ಈ ಅತರ್ಕ್ಯ ಜಯಸಂಪಾದನೆಗಾಗಿ ನಿನ್ನನ್ನು ಅಭಿನಂದಿಸಬೇಕೆಂದು ರಾಜಪುತ್ರನೇ, ನಾನು ಇಲ್ಲಿಗೆ ಬಂದೆನು! ಹಿಡಿ, ಸಚೇಲಸ್ನಾನದಿಂದ ತೊಯ್ದ ನಿನ್ನ ಕಪನಿಯನ್ನು ಬಿಟ್ಟು, ಈ ಒಣ ಕಪನಿಯನ್ನು ಹಾಕಿಕೋ!

ಜಿತೇಂದ್ರ—(ಸದ್ಗದಿತ ಕಂಠನಾಗಿ)—ನನ್ನ ಮೇಲೆ ಆಚಾರ್ಯರ ಮಹದುಪಕಾರ ವಾಯಿತು! ಮಹಾತ್ಮರೆ, ನಾನು ರಾಜಪುತ್ರನೆಂಬದನ್ನು ತಾವು ಗೊತ್ತುಹಿಡಿದೇ ಇರುತ್ತೀರಿ; ಆದರೆ ಈ ವೇಷವನ್ನು ನಾನು ಬೌದ್ಧ ಭಿಕ್ಷುಗಳ ಅಪಮಾನಮಾಡುವದಕ್ಕಾಗಿ ಹಾಕಿಕೊಂಡಿರುವದಿಲ್ಲ. ವಿಪತ್ತಿನಿಂದ ರಕ್ಷಣವಾಗಬೇಕೆಂದು ಹಾಕಿಕೊಂಡಿರುತ್ತೇನೆ. ಇದಕ್ಕಾಗಿ ನನ್ನನ್ನು ಕ್ಷಮಿಸಬೇಕೆಂದು ಪ್ರಾರ್ಥಿಸುವೆನು.

ಭಿಕ್ಷು—ಕಲಿಂಗದೇಶದ ಯುವರಾಜನೇ,

ಜಿತೇಂದ್ರ—(ಆಚಾರ್ಯರನ್ನು ವೃದ್ಧಿಂಗತವಾದ ಆಶ್ಚರ್ಯದಿಂದ ನೋಡುತ್ತ) ಮಹಾತ್ಮರಾದ ತಮ್ಮ ಅಗಾಧಜ್ಞಾನಕ್ಕೆ ಯಾವದು ತಾನೆ ಅಗೋಚರವು?

ಭಿಕ್ಷು—ನನಗೆ ಎಲ್ಲ ವೃತ್ತಾಂತವೂ ಗೊತ್ತಿರುತ್ತದೆ. ನಿನ್ನ ಈ ವೇಷಕ್ಕಾಗಿ ನಾನು ಎಷ್ಟು ಮಾತ್ರವೂ ನಿನಗೆ ದೋಷವನ್ನು ಇಡಲಾರೆನು. ಧರ್ಮದ ರಹಸ್ಯವನ್ನು ಬಲ್ಲವರು. ಧಾರ್ಮಿಕ ವೃತ್ತಿಯನ್ನು ನೋಡುವರಲ್ಲದೆ, ಧರ್ಮದ ಬಾಹ್ಯಚಿಹ್ನೆಗಳನ್ನು ನೋಡುವದಿಲ್ಲ. ಆತ್ಮಸಂಯಮನ, ಭೂತದಯೆ, ಪರೋಪಕಾರ ಮೊದಲಾದ ಸದ್ಗುಣಗಳಿಂದ ಶಾಂತರಾದವರನ್ನು ಬೌದ್ಧರೆಂತಲೇ ನಾನು ತಿಳಿಯುವೆನು. ಶ್ರೀಭಗವಾನ್ ಬುದ್ಧದೇವನ ಪವಿತ್ರ ಬೋಧದಂತೆ ನಡೆದು ತೋರಿಸುವವರೇ ನಿಜವಾದ ಬೌದ್ಧರು. ಅವರು ಯಾವ ವೇಷದಿಂದಿದ್ದರೇನು? ಯಾವ ಧರ್ಮ ದವರೆನಿಸಿಕೊಂಡರೇನು? ಬೌದ್ಧರೆನಿಸುವವರು ತಮ್ಮ ಧರ್ಮವನ್ನು ಹಬ್ಬಿಸುವದಕ್ಕಾಗಿ ಈವೊತ್ತಿನವರೆಗೆ ಮಾಡುತ್ತ ಬಂದಿರುವ ಅನಾಚಾರಗಳನ್ನು ನೋಡಿದರೆ, ನಿನ್ನಂಥ ರಾಜಪುತ್ರನು

ಬೌದ್ಧಭಿಕ್ಷುಗಳ ವೇಷದಿಂದ ಅಡಗಿಕೊಂಡಿರುವದು ಆಶ್ಚರ್ಯವಲ್ಲ. ಈ ಪವಿತ್ರವಾದ ಭಿಕ್ಷುವಿನ ವೇಷವನ್ನು ಧಾರಣಮಾಡಿರುವವರೂ, ಧರ್ಮಗುರುವಿನ ದಂಡವನ್ನು ಕೈಯಲ್ಲಿ ಹಿಡಿದವರೂ, ತಾವು ಕೇವಲ ಬುದ್ಧನ ಹೃದಯಬಲ್ಲವರೆಂದು ಅಭಿಮಾನಪಡುವವರೂ ಆದ ಎಷ್ಟೋ ಭಿಕ್ಷುಗಳು, ದುರಾಚರಣೆಯಲ್ಲಿಯೂ, ದುರ್ವ್ಯಸನದಲ್ಲಿಯೂ, ಬೌದ್ಧ ಧರ್ಮದ ತತ್ವಗಳನ್ನು ಹಾಳುಮಾಡುವದರಲ್ಲಿಯೂ ಕಾಲಕ್ರಮಣಮಾಡಹತ್ತಿದ್ದಾರೆ. ಈವೊತ್ತಿಗೆ ಭಿಕ್ಷುಗಳ, ಹಾಗು ಭಿಕ್ಷುಣಿಗಳ ಸಮೂಹವು ಬೆಳೆದಿರುವದನ್ನು ವರ್ಣಿಸುವದು ಶಕ್ಯವಲ್ಲ; ಸ್ವಲ್ಪ ದಿವಸಗಳಲ್ಲಿ ಯಾವತ್ತು ಭರತಖಂಡವು ಭಿಕ್ಷು-ಭಿಕ್ಷುಣೀಮಯವಾಗುವಂತೆ ತೋರಹತ್ತಿದೆ. ಅವರಲ್ಲಿ ನಿಜವಾದ ಭಿಕ್ಷು-ಭಿಕ್ಷುಣಿಗಳು ಎಷ್ಟು ಜನರಿರುವರೋ ಭಗವಾನ್ ಬುದ್ಧದೇವನೇ ಬಲ್ಲನು. ಕೆಲವರು ಹೊಟ್ಟೆಯನ್ನು ತುಂಬಿಕೊಳ್ಳುವದಕ್ಕಾಗಿ, ಕೆಲವರು ವ್ಯಸನಮಗ್ನರಾಗುವದಕ್ಕಾಗಿ, ಕೆಲವರು ಆಲಸ್ಯದಲ್ಲಿ ಹೊರಳಾಡುವದಕ್ಕಾಗಿ, ಕೆಲವರು ಅಧಿಕಾರವನ್ನು ಸಂಪಾದಿಸುವುದಕ್ಕಾಗಿ, ಕೆಲವರು ದ್ರವ್ಯವನ್ನು ಗಳಿಸುವದಕ್ಕಾಗಿ, ಕೆಲವರು ತಮ್ಮ ಕ್ರೂರತನವನ್ನು ಸಾಧಿಸುವದಕ್ಕಾಗಿ ಭಿಕ್ಷುಗಳ ವೇಷವನ್ನು ಧರಿಸಿ ಭರತಖಂಡದ ತುಂಬ ಗೊಂದಲಹಾಕುತ್ತಿರುವರು. ಅವರಿಗೆ ಮೊನ್ನಿನತನಕ ಅಶೋಕನ ಜಯಶಾಲಿಯಾದ ಖಡ್ಗವು, ಅಂಜಿಕ್ಯ ಸೇನೆಯೊಡನೆ ಸಹಾಯ ಮಾಡುತ್ತಲಿತ್ತು! ಜಿತೇಂದ್ರಾ, ಇಂಥ ನಾಮಧಾರಿಗಳಾದ ಆ ಬೌದ್ಧ ಭಿಕ್ಷುಗಳಿಗೆ ನಿನ್ನನ್ನು ಹೋಲಿಸಿ ನೋಡಿದರೆ, ನೀನು ಅವರಿಗಿಂತ ಎಷ್ಟೋಪಟ್ಟು ಶ್ರೇಷ್ಠನಾಗಿರುತ್ತೀಯೆಂದು ನಿನ್ನ ಮೋರೆಯ ಎದುರಿಗೆ ಹೇಳುವದು, ನಿನ್ನ ಯೋಗ್ಯತೆಗೆ ಕುಂದುತರುವ ಮಾತಾಗಿದೆ. ನಿನ್ನಂಥ ಸದ್ಗುಣಿಯಾದ ತರುಣನು, ಬೌದ್ಧ ಧರ್ಮವನ್ನು ಸ್ವೀಕರಿಸಿದರೇನು, ಸ್ವೀಕರಿಸದಿದ್ದರೇನು? ಹಳದಿಯ ಬಣ್ಣದ ಕಫನಿಯನ್ನು ಕೊರಳಲ್ಲಿ ಸಿಗಹಾಕಿಕೊಂಡರೇನು, ಹಾಕಿಕೊಳ್ಳದಿದ್ದರೇನು? ಬೌದ್ಧಧರ್ಮವೇ ಏಕೆ, ಜಗತ್ತಿನೊಳಗಿನ ಯಾವತ್ತು ಧರ್ಮಗಳು, ತಮ್ಮ ನಿಜವಾದ ತತ್ವಗಳನ್ನು ಪಾಲಿಸುವವನೆಂದು ಕಂಠರವದಿಂದ ಆತನನ್ನು ಕರೆಯಬಹುದು! ಸದ್ಗುಣ, ಸಚ್ಛೀಲ, ವಿಮಲ ವರ್ತನ, ವಿನಯ, ಸ್ವಧರ್ಮತತ್ಪರತೆ ಎಂಬ ಈ ಗುಣಗಳು ಯಾವ ವ್ಯಕ್ತಿಯಲ್ಲಿ ಏಕೀಕೃತ ವಾಗಿರುವವೋ, ಆ ವ್ಯಕ್ತಿಯು ನಿಜವಾದ ಬೌದ್ಧರ ಮತದಿಂದ ಶ್ರೇಷ್ಠ ಭಿಕ್ಷುವಾಗಿರುವನು; ವೇದಧರ್ಮಿಗಳ ಮತದಂತೆ ಶ್ರೇಷ್ಠ ಸನ್ಯಾಸಿಯಾಗಿರುವನು; ಜೈನರ ಮತದಿಂದ ಉತ್ತಮ ಮುನಿಯಾಗಿರುವನು. ಬಹಳವೇಕೆ, ಜಗತ್ತಿನೊಳಗಿನ ಪ್ರತಿಯೊಂದು ಮತವೂ ಆತನಿಗೆ ತನ್ನೊಳಗಿನ ಶ್ರೇಷ್ಠಪದವನ್ನು ಕೊಡಬಹುದು! ನಿನ್ನಂಥ ನಿಷ್ಕಲಂಕಾಚರಣೆಯ ತರುಣ ರಾಜಪುತ್ರನು ಯಾವ ಧರ್ಮದಲ್ಲಿ ಉದಯವಾದರೂ, ಆ ಧರ್ಮದ ಪ್ರಸಾರವಾಗುವದು ಆಶ್ಚರ್ಯವಲ್ಲ. ಈವೊತ್ತಿನ ಬೌದ್ಧಧರ್ಮ ಪ್ರಸಾರವು, ಕೇವಲ ಅಲಂಕಾರಿಕವಾಗಿರುವದು! ಖಡ್ಗಗಳ ಖಣಖಟಲ್ಲೆಂಬ ಶಬ್ದದ ಕಡೆಗೆ ಜನರ ಲಕ್ಷವಿರುವದರಿಂದ, ಧರ್ಮವನ್ನು ಸ್ವೀಕರಿಸುವಾಗ ಧರ್ಮದೊಳಗಿನ ಉಜ್ವಲ ತತ್ವಗಳ ಪ್ರವೇಶವು ಬಹು ಸ್ವಲ್ಪ ಜನರ ಹೃದಯದಲ್ಲಿ ಆಗಿರುವದು. ಖಡ್ಗಗಳ ಕಾಂತಿಯು ಕಣ್ಣೆದುರಿಗೆ ಹೊಳೆಯುತ್ತಿರುವವರೆಗೆ, ಧರ್ಮದ ಗುಣಾವಗುಣಗಳ ಪರೀಕ್ಷೆಗೆ ಅವಕಾಶವು ದೊರೆಯುವದಿಲ್ಲ; ಆದರೂ ಆ ಭಯಂಕರ ಕಾಲವು ಬದಲಾಗುತ್ತ ನಡೆದಿರುವದು. ಅಶೋಕನಿಗೆ ಚಕ್ರವರ್ತಿಯ ಪದವಿಯು ಪ್ರಾಪ್ತವಾದಂದಿನಿಂದ,

ಆತನ ಸ್ವಭಾವದಲ್ಲಿ ಮಹದಂತರವಾಗುತ್ತ ನಡೆದಿದೆ. ಆತನ ಮನಸ್ಸಿನ ಮೇಲೆ ಸದ್ಧರ್ಮದ ಪ್ರಕಾಶವು ಬೀಳುತ್ತಲಿದೆ. ಜಿತೇಂದ್ರಾ, ನೀನು ಪಾಟಲಿಪುತ್ರ ರಾಜಧಾನಿಗೆ ಹೊರಟೇ ಇರುತ್ತೀ. ಅಲ್ಲಿಗೆ ಹೋದಕೂಡಲೆ ಅಶೋಕರಾಜನನ್ನು ಕಾಣು. ಆತನಿಗೆ ಈ ತಾಡವಾಲಿಯ ಪತ್ರವನ್ನು ಕೊಡು.

ಈ ಮೇರೆಗೆ ಮಾತಾಡಿ, ಮಹಾತ್ಮನಾದ ಆ ಬೌದ್ಧಭಿಕ್ಷುವು ಜಿತೇಂದ್ರನ ಕೈಯಲ್ಲಿ ಒಂದು ತಾಡವಾಲಿಯ ಪತ್ರವನ್ನು ಕೊಟ್ಟನು. ಆಗ ಜಿತೇಂದ್ರನು—

ಜಿತೇಂದ್ರ—ಆಚಾರ್ಯ, ಪತ್ರಕೊಡುವ ಮಹಾತ್ಮನ ಹೆಸರನ್ನು ಅಶೋಕನಿಗೆ ನಾನು ಏನೆಂದು ಹೇಳಲಿ? ತಮ್ಮ ಹೆಸರು ನನಗೆ ಗೊತ್ತಾದರೆ, ದರ್ಶನದಿಂದ ನನ್ನನ್ನು ಧನ್ಯನಾಗ ಮಾಡಿದ್ದಕ್ಕಾಗಿ ನಾನು ಯಾವಾಗಲೂ ತಮ್ಮ ನಾಮಸ್ಮರಣದಿಂದ ಆನಂದಪಡುವೆನು.

ಭಿಕ್ಷು—ನನ್ನ ಹೆಸರು ನಿನಗೆ ಗೊತ್ತಾಗಬೇಕೆಂತಲೇ ನಾನು ಇಚ್ಛಿಸುತ್ತೇನೆ. ನನ್ನನ್ನು ಮೊಗ್ಗಲೀಪುತ್ರ ತಿಷ್ಯನೆಂದು ಕರೆಯುವರು.

ಜಿತೇಂದ್ರ—(ಭಕ್ತಿ ಭರದಿಂದ)—''ಭಗವನ್ ಮೊಗ್ಗಲೀಪುತ್ರ—ತಿಷ್ಯರವರಿಗೆ ಜಯವಿರಲಿ!!'' ಭಗವಾನ್, ತಮ್ಮ ದರ್ಶನಲಾಭವು ಪ್ರಾಪ್ತವಾದಕ್ಕಾಗಿ ನಾನು ಧನ್ಯನಾದೆನು. ಚಿದಾನಂದ ಸ್ವಾಮಿಗಳವರು ಭಗವಾನರವರ ಯೋಗ್ಯತೆಯ ಗುರುತನ್ನು ನನಗೆ ಚನ್ನಾಗಿ ಮಾಡಿಕೊಟ್ಟಿರುವರು. ತಮ್ಮ ಧೂಲಿದರ್ಶನವಾಗಬೇಕೆಂದು ತಮ್ಮ ಎಷ್ಟೋ ಪ್ರೇಮಲಭಕ್ತರು ವರ್ಷಗಟ್ಟಲೆ ಪ್ರಯತ್ನ ಮಾಡುತ್ತಿರುವರು; ಆದರೆ ಅವರಿಗೆ ದರ್ಶನವಾಗುವದಿಲ್ಲ. ಅಂಥ ದುರ್ಲಭವಾದ ಚರಣದರ್ಶನವು ಇಂದು ಸುದೈವದಿಂದ ನನಗೆ ಅನಾಯಾಸವಾಗಿ ಆಯಿತು.

ತಿಷ್ಯ—ಜಿತೇಂದ್ರ, ನನ್ನನ್ನು ನಿನ್ನ ಸದ್ಗುಣಗಳು ಇಲ್ಲಿಗೆ ಎಳೆದು ತಂದಿರುತ್ತವೆ. ನಾನು ಬೈಲಿಗೆಬರುವ ಪ್ರಸಂಗವು ಇನ್ನೂ ಒದಗಿರುವದಿಲ್ಲ. ಸಂಪುಷ್ಪಾಚಾರ್ಯರಂಥ ಉಪದ್ವ್ಯಾಪಿ ಭಿಕ್ಷುವಿನ ಬೆನ್ನನ್ನು ಜನರು ಹತ್ತಿರುವರು; ಆದ್ದರಿಂದ ನಾನು ಅಜ್ಞಾತವಾಸದಲ್ಲಿ ನನ್ನ ಆತ್ಮದ ಕಲ್ಯಾಣವನ್ನು ಮಾಡುತ್ತ ಕಾಲಹರಣ ಮಾಡುತ್ತಿರುವೆನು. ತನ್ನ ಕಲ್ಯಾಣಕ್ಕಿಂತ ಜನರ ಕಲ್ಯಾಣವು ಅನಂತಪಟ್ಟಿನಿಂದ ಶ್ರೇಷ್ಠವಾದದ್ದೆಂಬದನ್ನು ನಾನು ಬಲ್ಲೆನು; ಆದರೆ ಇಷ್ಟು ದಿವಸ ವಿಷವನ್ನೇ ಅಮೃತವೆಂದು ಪ್ರಾಶನ ಮಾಡುವ ಕಾಲವಿತ್ತು, ವಿಷದಿಂದ ಮತ್ತವಾಗಿದ್ದ ಕಣ್ಣುಗಳಿಗೆ ಅಮೃತವು ವಿಷರೂಪವಾಗಿ ಕಾಣುತ್ತಿತ್ತು, ಈಗ ಮೆಲ್ಲಮೆಲ್ಲನೆ ಎಲ್ಲರ ಕಣ್ಣುಗಳು ವಿಷದ ಅಂಶವು ಕಡಿಮೆಯಾಗಹತ್ತಿದೆ. ನಾನು ಬೇಗನೆ ಯಾವತ್ತು ಭರತಖಂಡದ ಸಮ್ಮುಖದಲ್ಲಿ ಬರುವ ಯೋಗವು ಒದಗುವದದೆ.

ಜಿತೇಂದ್ರ—ಭಗವನ್, ತಮ್ಮ ಈ ಮಹದುಪಕಾರಕ್ಕಾಗಿ ಯಾವತ್ತು ಭರತಖಂಡವು ಋಣಿಯಾಗುವದು.

ತಿಷ್ಯ—ಜಿತೇಂದ್ರ, ನಾನು ನನ್ನ ಹೆಸರನ್ನು ಬುದ್ಧಿಪೂರ್ವಕವಾಗಿ ನಿನಗೆ ತಿಳಿಸಿರುತ್ತೇನೆ. ಪ್ರಸಂಗ ಒದಗುವವರೆಗೆ ಅದನ್ನು ಹೊರಗೆ ಒಡೆಯಬೇಡ. ನೀನು ಬೌದ್ಧಧರ್ಮದ ಮೇಲಿನದೊಂದು ಮಹಾ ವಿಘ್ನವನ್ನು ದೂರಮಾಡಬೇಕಾಗಿರುತ್ತದೆ.

ಜಿತೇಂದ್ರ—ಏನು? ನಾನು ಬೌದ್ಧಧರ್ಮಕ್ಕೊದಗುವದೊಂದು ವಿಘ್ನವನ್ನು ದೂರಮಾಡುವೆನೆ? ಆಚಾರ್ಯ, ತಮ್ಮ ಮಾತಿನಲ್ಲಿ ಅವಿಶ್ವಾಸಪಡುವದು ಅಪ್ರಬುದ್ಧತನವು; ಆದರೆ ನಾನು ಎಂದಾದರೂ ಹಿಂದೂ ಧರ್ಮವನ್ನು ತ್ಯಜಿಸಿ ಬೌದ್ಧನಾದೇನೆಂದು ನನಗೆ ತೋರುವದಿಲ್ಲ.

ಶಿಷ್ಯ—ಬೌದ್ಧಧರ್ಮದ ಮೇಲಿನ ಅಪಘಾತವನ್ನು ದೂರಮಾಡುವದಕ್ಕಾಗಿ ನೀನು ಬೌದ್ಧಧರ್ಮವನ್ನು ಸ್ವೀಕರಿಸಬೇಕಾಗುವದೆಂದು ನಾನು ಹೇಳುವದಿಲ್ಲ.

ಜಿತೇಂದ್ರ—ಇದು ಬಹು ವಿಲಕ್ಷಣವು!

ಶಿಷ್ಯ—ಹೌದು, ಅಂಥ ವಿಲಕ್ಷಣ ಪ್ರಸಂಗವೊದಗುವ ಯೋಗವೇ ಇರುತ್ತದೆ.

ಜಿತೇಂದ್ರ—ಭಗವನ್, ಆಗಲಿ; ಇದರಂತೆ ಕಲಿಂಗದೇಶಕ್ಕೊದಗಿದ ಸಂಕಟವು ದೂರವಾಗುವದೋ? ವೈದಿಕಧರ್ಮವು ಬೌದ್ಧಧರ್ಮದ ಅಬ್ಬರದಲ್ಲಿ ಪಾರಾಗುವದೋ? ಚಿದಾನಂದ ಸ್ವಾಮಿಗಳು ಅಪವಾದದಿಂದ ಮುಕ್ತರಾಗುವರೋ?

ಶಿಷ್ಯ—ರಾಜಪುತ್ರಾ, ಬೌದ್ಧಧರ್ಮಕ್ಕೊದಗಿದ ಅಪಘಾತವು ನಿನ್ನಿಂದ ದೂರವಾದ ಮೇಲೆ, ಸ್ವಲ್ಪ ದಿನಗಳಲ್ಲಿ ಕಲಿಂಗದೇಶವು ಪುನಃ ವೇದಧರ್ಮಿಗಳ ಕೇಂದ್ರಸ್ಥಾನವಾಗುವದು. ಕಲಿಂಗದೇಶದ ಯುವರಾಜನಾದ ನಿನ್ನ ಪ್ರಯತ್ನದಿಂದ ವೇದಧರ್ಮವು ಜಗತ್ಪ್ರಳಯದವರೆಗೆ ಸ್ಥಿರವಾಗಿ ಉಳಿಯುವದು! ಸಚ್ಛೀಲತರುಣ ರಾಜಪುತ್ರಾ, ನಿನ್ನ ಗುರುಗಳಾದ ಚಿದಾನಂದ ಸ್ವಾಮಿಗಳು ಅಪವಾದಕ್ಕೆ ಗುರಿಯಾಗಬಹುದೆ? ಈಗೊದಗಿದ ಸುಳ್ಳು ಅಪವಾದದಿಂದ ಅವರು ಬೇಗನೆ ಮುಕ್ತರಾಗುವರು. ಕೇವಲ ಅವರ ಸಾಮರ್ಥ್ಯದಿಂದಲೇ ವೇದಧರ್ಮವು ಬೌದ್ಧಧರ್ಮಕ್ಕೆ ಎದೆಗೊಟ್ಟುನಿಂತು, ತನ್ನ ಗೌರವವನ್ನು ಕಾಯ್ದುಕೊಳ್ಳುವದು. ಜಿತೇಂದ್ರಾ, ಬೌದ್ಧಧರ್ಮವು ಕೆಲಕಾಲದವರೆಗೆ ಮಾತ್ರ ಭರತಭೂಮಿಯಲ್ಲಿರಬೇಕೆಂದು ಈಶ್ವರೀಸಂಕೇತವದೆ. ಸನಾತನವಾದ ವೈದಿಕ ಧರ್ಮದಲ್ಲಿ ಕಾಲಮಹಿಮೆಯಿಂದ ಉಂಟಾಗಿರುವ ಕೊರತೆಯನ್ನು ಪೂರಯಿಸುವದಕ್ಕಾಗಿ, ಬೌದ್ಧಧರ್ಮದ ಅವತಾರವಾಗಿರುತ್ತದೆ. ವೈದಿಕ ಬೌದ್ಧಧರ್ಮಗಳಲ್ಲಿ ಅಂತರವಿಲ್ಲ. ಭರತ ಭೂಮಿಯು ಯಾವತ್ತು ಜಗತ್ತಿನ ಗುರುಭೂಮಿಯಾಗಿರಬೇಕೆಂದು ಈಶ್ವರೀಸಂಕೇತವಿರುವಂತೆ ತೋರುತ್ತದೆ. ಜಗತ್ತಿನ ಜನರೆಲ್ಲರು ಧರ್ಮದ ಉದಾತ್ತ-ತತ್ವಗಳನ್ನು ವೈದಿಕಧರ್ಮದಿಂದಲೇ ಸ್ವೀಕರಿಸಬೇಕೆಂದು ಈಶ್ವರನ ನಿಯಮವಿರುವದರಿಂದಲೇ, ವೈದಿಕಧರ್ಮದಲ್ಲಿ ಯಾವ ಪ್ರಕಾರದ ವೈಗುಣ್ಯವೂ ಉಂಟಾಗಬಾರದೆಂದು ಭಗವಾನ್ ಬುದ್ಧದೇವನು ಬೌದ್ಧಧರ್ಮದ ಯೋಜನೆಯನ್ನು ಕೆಲದಿನಗಳವುಟ್ಟಿಗೆ ಮಾಡಿದನು. ಅಹಿಂಸೆಯ ತತ್ವವು ಭಾರತೀಯರ ಹೃದಯದಲ್ಲಿ ನೆಲಿಯೂರಿದ ಕೂಡಲೆ, ಮತ್ತು ಬಂಧುಪ್ರೇಮ, ಸಮತೆ ಮೊದಲಾದ ಉಜ್ವಲತತ್ವಗಳು ಬೌದ್ಧಧರ್ಮದ ಯೋಗದಿಂದ ಉಜ್ವಲಿತವಾದ ಕೂಡಲೆ, ಇಂದಿಗೆ ಭರತ ಭೂಮಿಯ ತುಂಬ ವ್ಯಾಪಿಸಿರುವ ಬೌದ್ಧಧರ್ಮವು ನಷ್ಟವಾಗಿ, ಭಾರತೀಯ ತೇಜದಿಂದ ಉಜ್ವಲಿತವಾದ ವೈದಿಕಧರ್ಮವು ಮತ್ತೆ ಜಗತ್ತಿನಲ್ಲಿ ಪ್ರಕಾಶಿಸುವದು. ನಿಜವಾದ ಬೌದ್ಧಧರ್ಮವು ನಷ್ಟವಾದ ಮೇಲೆಯೂ ಆ ಧರ್ಮದ ಉದಾತ್ತತತ್ವಗಳ ಅವಹೇಳನ ಮಾಡುವದಕ್ಕಾಗಿಯೋ ಅನ್ನುವಂತೆ, ಕೆಲವು ಮ್ಲೇಂಛದೇಶಗಳು ಸ್ವತಃ ಬುದ್ಧಾನುಯಾಯಿಗಳೆಂದು ಹೇಳಿಕೊಳ್ಳಬಹುದು!

ಮೊಗ್ಗಲೀಪುತ್ರ ತಿಷ್ಯರವರ ಈ ಭವಿಷ್ಯವನ್ನು ಕೇಳಿ ಜಿತೇಂದ್ರನಿಗೆ ಅತ್ಯಾನಂದವಾಗಿ ಆತನ ಕಣ್ಣುಗಳು ಅಶ್ರುಪೂರ್ಣವಾದವು; ಆತನು ಮತ್ತೆ ತಿಷ್ಯರವರನ್ನು ಕುರಿತು—

ಜಿತೇಂದ್ರ—ಭಗವನ್, ತಾವು ಈಗ ಹೇಳಿದ ಭವಿಷ್ಯವು ಸತ್ಯವಾಗಬಹುದಲ್ಲವೆ?

ತಿಷ್ಯ—ಅದರ ಸತ್ಯತೆಯ ಅನುಭವವು ಬೇಗನೆ ನಿನಗೆ ಆಗುವದು. ಜಿತೇಂದ್ರಾ, ಇನ್ನೊಮ್ಮೆ ನನ್ನ ದರ್ಶನದ ಯೋಗವು ನಿನಗೆ ಇರುತ್ತದೆ. ಆಗ ನೀನು ಇದೇ ಸ್ಥಳಕ್ಕೆ ಬಂದು ಇದೇ ಹೊತ್ತಿನಲ್ಲಿ ನನ್ನನ್ನು ಕಾಣು. ಬೇರೆ ಕಡೆಯಲ್ಲಿ ಹುಡುಕಿದರೆ ನನ್ನ ಗೊತ್ತಾಹತ್ತದು.

ಜಿತೇಂದ್ರ—ಭಗವಾನರವರ ದರ್ಶನವು ಇದೇ ಜನ್ಮದಲ್ಲಿ ಇನ್ನೊಮ್ಮೆ ನನಗೆ ಆಗುವ ಸುಯೋಗವು ಇರುತ್ತದೋ? ನಾನು ಪರಮಧನ್ಯನು!!

ತಿಷ್ಯ—ನಿನ್ನ ಸದ್ಗುಣಗಳು ದೇವಾದಿಕರನ್ನು ಎಳಕೊಂಡು ಬರುತ್ತಿರಲು, ನಮ್ಮ ಪಾಡೇನು?

ಈ ಮೇರೆಗೆ ನುಡಿದು, ತಿಷ್ಯರವರು ಜಿತೇಂದ್ರನ ಬೆನ್ನ ಮೇಲೆ ಕೈಯಾಡಿಸುತ್ತ

ತಿಷ್ಯ—ಕಂದಾ, ಕಲಿಂಗದೇಶದ ಗೌರವವನ್ನು ಕಾಯುವ ನಿನಗೆ ಜಿತೇಂದ್ರನೆಂಬ ಹೆಸರು ಒಪ್ಪುತ್ತದೆ; ಯಾಕಂದರೆ, ಇಂದ್ರನಿಗೂ ಅಸಾಧ್ಯವಾದ ಮನೋನಿಗ್ರಹದಿಂದ, ನೀನು ಇಂದು ನಿಶ್ಚಯವಾಗಿ ಇಂದ್ರನನ್ನು ಜಯಸಿರುತ್ತೀ. ಇಂದ್ರಿಯಗಳನ್ನು ಸ್ವಾಧೀನದಲ್ಲಿಟ್ಟುಕೊಂಡದ್ದರಿಂದ, ಜಿತೇಂದ್ರಿಯನೆಂತಲೂ ನಿನ್ನನ್ನು ಕರೆಯಬಹುದು. ಸಚ್ಛೀಲನಾದ ತರುಣವೀರಾ, ನೀನು ಜಿತೇಂದ್ರನಾಗಿರುವೆಯೆಲ್ಲದೆ, ಜಿತೇಂದ್ರಿಯನೂ ಆಗಿರುತ್ತೀ.

ಈ ಪ್ರಸಂಗದಲ್ಲಿ ಜಿತೇಂದ್ರನ ಕಣ್ಣುಗಳೊಳಗಿಂದ ಆನಂದಬಾಷ್ಪಗಳು ಸುರಿಯುತ್ತಲಿದ್ದವು. ಕೆಲಕಾಲದ ಮೇಲೆ ಆತನು ಮುಖವನ್ನೆತ್ತಿ ನೋಡಲು, ಆಗ ಆಚಾರ್ಯ– ಮೊಗ್ಗಲೀಪುತ್ರ– ತಿಷ್ಯರು ಎಲ್ಲಿಯೂ ಕಣ್ಣಿಗೆ ಬೀಳಲಿಲ್ಲ, ಅವರು ಯಾವಾಗೋ ಅದೃಶ್ಯರಾಗಿ ಹೋಗಿದ್ದರು! ಜಿತೇಂದ್ರನು ಕ್ಷಣಮಾತ್ರ ಸರೋವರದ ತೀರದಲ್ಲಿ ಆಶ್ಚರ್ಯದಿಂದ ಯೋಚಿಸುತ್ತ ಕುಳಿತುಕೊಂಡು, ತನ್ನ ಮನೋನಿಗ್ರಹದಿಂದ ಇಂಥ ಉತ್ತಮ ಫಲಪ್ರಾಪ್ತಿಯಾದದ್ದಕ್ಕಾಗಿ ಮನಸ್ಸಿನಲ್ಲಿ ಅಭಿಮಾನಪಡುತ್ತ ಕಲಿಂಗದೇಶದ, ಹಾಗು ವೈದಿಕ ಧರ್ಮದ ಉತ್ಕರ್ಷವಾಗುವ ಭವಿಷ್ಯವನ್ನು ಪುನಃ ಪುನಃ ಸ್ಮರಿಸಿ ಆನಂದಪಡುತ್ತ ಪ್ರಾತಃಸ್ನಾನಮಾಡಿ ಸಂಧ್ಯಾವಂದನವನ್ನು ತೀರಿಸಿ, ಉಲ್ಲಸಿತಚಿತ್ತನಾಗಿ, ತಾನು ಇಳಕೊಂಡಿದ್ದ ಧರ್ಮಶಾಲೆಗೆ ಹೊರಟುಹೋದನು.

ಅದ್ಭುತಪ್ರಸಂಗ

ಈ ಮೇರೆಗೆ ಮಹತ್ವಾಕಾಂಕ್ಷಿಯಾದ ಪ್ರಮೀಳೆಯು ಭಗ್ನಮನೋರಥಳಾಗಿ ಮರುದಿನ ಪಾಟಲೀಪುತ್ರದ ಕಡೆಗೆ ಸಾಗಿದಳು. ತನ್ನ ಮನಸ್ಸನ್ನು ಆಕರ್ಷಿಸಿಕೊಂಡಿದ್ದ ಬೌದ್ಧಭಿಕ್ಷುವು ಜಿತೇಂದ್ರನೆಂಬದು ಆಕೆಗೆ ಗೊತ್ತಾಗಲಿಲ್ಲ. ಆಕೆಯು ಪಾಟಲೀಪುತ್ರಕ್ಕೆ ಹೋದಬಳಿಕ ರಾಜಮಾತೆಯಾದ ಬುದ್ಧಿಮತಿಯನ್ನೂ, ಸಂಪುಷ್ಪಾಚಾರ್ಯರನ್ನೂ ಕಂಡಳು. ಜಿತೇಂದ್ರ ರಾಜಕುಮಾರನು ಅಶೋಕನ ಬಳಿಗೆ ಬಂದದ್ದರಿಂದ, ತನಗೆ ಕಲಿಂಗದ ಸಿಂಹಾಸನವು

ದೊರೆಯುವದಕ್ಕೆ ತೊಂದರೆಯಾಯಿತೆಂಬ ಸಂಗತಿಯು ಪ್ರಮೀಳೆಗೆ ಗೊತ್ತಾಯಿತು. ಜಿತೇಂದ್ರನು ಬೌದ್ಧಧರ್ಮವನ್ನು ಸ್ವೀಕರಿಸುವದಕ್ಕೆ ಒಡಂಬಟ್ಟರೆ ಕಲಿಂಗದ ಸಿಂಹಾಸನವು ತನ್ನ ಗಂಡನಾದ ವಿಶಾಖಾನಂದನಿಗೆ ದೊರೆಯದಂತಾಗಿ, ಕಲಿಂಗದ ರಾಣಿಯಾಗುವದಕ್ಕಾಗಿ ತಾನು ಮಾಡಿದ ಸಾಹಸವೆಲ್ಲ ವ್ಯರ್ಥವಾಗುವದೆಂದು ಆಕೆಯು ಚಿಂತಿಸಿದಳು. ಇತ್ತ ರಾಜಮಾತೆಯಾದ ಬುದ್ಧಿಮತಿಯು ತನ್ನ ಸವತಿಯ ಮಗನಾದ ಅಶೋಕನನ್ನು ಹೇಗಾದರೂ ಮಾಡಿ ನಾಶಗೊಳಿಸಿ, ತನ್ನ ಮಗನಾದ ವೀತಾಶೋಕನನ್ನು ಪಾಟಲಿಪುತ್ರದ ಸಿಂಹಾಸನದ ಮೇಲೆ ಕುಳ್ಳಿರಿಸಬೇಕೆಂದು ಹೊಂಚುಹಾಕಿದ್ದಳು. ಸಂಪುಷ್ಪಾಚಾರ್ಯನು ಬುದ್ಧಿಮತಿಯ ಪಕ್ಷದವನೆಂಬದನ್ನು ವಾಚಕರು ಬಲ್ಲರು. ಈ ಮೂವರು ದುಷ್ಟರು ಏಕಾಂತದಲ್ಲಿ ಕುಳಿತು, ತಮ್ಮ ದುರಾಲೋಚನೆಗಳು ಕೈಗೂಡುವದಕ್ಕಾಗಿ ಆಲೋಚಿಸತೊಡಗಿದರು. ಅಶೋಕನನ್ನು ನಾಶಗೊಳಿಸಿಬಿಟ್ಟರೆ, ತಮ್ಮ ಯಾವತ್ತು ಆಲೋಚನೆಗಳು ಕೈಗೂಡುವವೆಂದು ಅವರು ನಿರ್ಧರಿಸಿದರು; ಆದರೆ ಲೋಕ ಪ್ರಿಯನಾದ ಅಶೋಕನಂಥ ಪ್ರತಾಪಿಯನ್ನು ನಾಶಗೊಳಿಸುವದು ಅವರಿಗೆ ಸುಸಾಧ್ಯವಿದ್ದಿಲ್ಲ; ಆದರೆ ಮತ್ಸರ ಸ್ವಭಾವದವರಿಗೆ ವಿಚಾರವೆಲ್ಲಿಂದ ಬರಬೇಕು?

ಇವರು ಹೀಗೆ ಆಲೋಚಿಸುತ್ತಿರಲು, ವೀತಾಶೋಕನು ಅಲ್ಲಿಗೆ ಬಂದು ತನ್ನ ತಾಯಿಯಾದ ಬುದ್ಧಿಮತಿಯನ್ನು ಕುರಿತು—ಅವ್ವಾ, ಈ ದಿನ ಭಗವಾನರವರು ಬೇಟೆಗೆ ಹೊರಡುವವರಿದ್ದಾರೆ. ರಾಜಧಾನಿಯಿಂದ ಎರಡು ಹರದಾರಿಗಳ ಮೇಲೆ ಒಂದು ಭಯಂಕರವಾದ ಸಿಂಹವು ವನಪಾಲನ ಕಣ್ಣಿಗೆ ಬಿದ್ದಿತಂತೆ; ಮನುಷ್ಯರ ವಸತಿಗೆ ಇಷ್ಟು ಸಮೀಪದಲ್ಲಿ ಸಿಂಹವು ಇರಲಾಗದು. ಈಗ ಮೂರು ದಿನಗಳಿಂದ ಸಿಂಹವು ಕಣ್ಣಿಗೆ ಬಿದ್ದಿಲ್ಲವೆಂದು ಹೇಳಿದನು; ಆದ್ದರಿಂದ ನಾನು ನಾಳೆ ನನ್ನ ಕೆಲವು ಸೈನಿಕರನ್ನು ಕೂಡಿಕೊಂಡು ಬೇಟೆಗೆ ಹೊರಡುವೆನು. ಅಣ್ಣನಾದ ಭಗವಾನ್ ಅಶೋಕನೂ ಬರುವನು. ಆ ಸಿಂಹವು ಕಣ್ಣಿಗೆ ಬಿದ್ದ ಸ್ಥಳದಲ್ಲಿ ಕೆಲವು ಚೈತ್ಯಾಲಯಗಳೂ ಇರುತ್ತವೆ, ಅಲ್ಲಿ ಭಗವಾನ್ ಬುದ್ಧದೇವನು ಬಹುದಿವಸ ಧ್ಯಾನದಲ್ಲಿ ಹೊತ್ತುಗಳೆದಿರುವದರಿಂದ, ಆ ಪವಿತ್ರ ಸ್ಥಳಗಳ ದರ್ಶನಕ್ಕಾಗಿ ಯಾರಾದರೂ ಬರುತ್ತಿದ್ದರೆ, ಕೇಳೆಂದು ಅಣ್ಣನು ಹೇಳಿದನು. ನಾನು ಸುಭದ್ರಾಂಗಿ ಮಾತೆಯನ್ನೂ, ಇಂದಿರಾದೇವಿಯನ್ನೂ ಕೇಳಿದೆನು; ಅವರು ಮತ್ತೊಮ್ಮೆ ಯಾವಾಗಾದರೂ ಆ ಪವಿತ್ರ ಸ್ಥಳಗಳ ದರ್ಶನಕ್ಕೆ ಹೋಗೋಣ, ಇಂಥ ಬೇಟೆಯ ಪ್ರಸಂಗದಲ್ಲಿ ಬೇಡ ಎಂದು ಹೇಳಿದರು. ಕಲಿಂಗದ ಯುವರಾಜನನ್ನು ಕರೆಯುವದಕ್ಕಾಗಿ ಅಣ್ಣನು ತುರಂಗ ದರ್ಬಾರಕ್ಕೆ ಹೋಗಿದ್ದಾನೆ. ನೀವು ಬರುತ್ತಿದ್ದರೆ, ಬರಬಹುದು. ಅನ್ನಲು, ಬುದ್ಧಿಮತಿಯು—ಕುಮಾರಾ, ಸುಭದ್ರಾಂಗಿಯೇ ಮೊದಲಾದವರು ಬಾರದಿದ್ದರೆ ನಾವೂ ಸದ್ಯಕ್ಕೆ ಬರುವದಿಲ್ಲ; ಮತ್ತೆ ಯಾವಾಗಾದರೂ ಹೋಗೋಣವಂತೆ ಎಂದು ಹೇಳಿದಳು.

ತಾಯಿಯ ಈ ಮಾತುಗಳನ್ನು ಕೇಳಿ ವೀತಾಶೋಕನು ಹಾಗೆಯೇ ಆಗಲೆಂದು ಹೊರಟು ಹೋದನು. ಕುಮಾರ ು ಅತ್ತಹೋಗಲು, ಇತ್ತ ಪ್ರಮೀಳೆಯು ಮನಸ್ಸಿನಲ್ಲಿ ಏನೋ ಯೋಚಿಸಿ, ಆನಂದದಿಂದ ಬುದ್ಧಿಮತಿಯನ್ನು ಕುರಿತು—ರಾಜಮಾತೆಯವರೇ, ಇಂದು ನೀವು ಬೇಟೆಗೆ ಬರುತ್ತೇವೆಂದು ಹೇಳಿರಿ. ಇಂದಿನ ಬೇಟೆಯೇ ಅಶೋಕನ ನಾಶಕ್ಕೆ ಕಾರಣವಾಗುವಂತೆ ನಾನು

ಯುಕ್ತಿಯನ್ನು ಯೋಚಿಸಿರುವೆನು. ಕರೆಯಿರಿ, ಕುಮಾರನನ್ನು ಕರೆದು ನಾವು ಬೇಟೆಗೆ ಬರುತ್ತೇವೆಂದು ಹೇಳಿರಿ. ನಾನೂ, ನೀವೂ, ಸಂಪುಷ್ಪಾಚಾರ್ಯರೂ ಚೈತ್ಯಾಲಯಗಳನ್ನು ನೋಡುವ ನೆವದಿಂದ ಬೇಟೆಗೆ ಹೋಗೋಣ, ಎಂದು ಹೇಳಿ, ತಾನೇ ವೀತಾಶೋಕನನ್ನು ಕರೆದು "ರಾಜಮಾತೆಯೂ ನಾವೂ ಚೈತಾಲಯಗಳನ್ನು ನೋಡಲಿಕ್ಕೆ ಬರುವೆ"ವೆಂದು ಹೇಳಿದಳು. ಅದಕ್ಕೆ ವೀತಾಶೋಕನೂ ಸಂತೋಷದಿಂದ ಒಡಂಬಟ್ಟು ಹೊರಟುಹೋದನು. ಪ್ರಮೀಳೆಯ ಈ ಉತಾವಳಿಯನ್ನು ನೋಡಿ, ರಾಜಮಾತೆಯು– ಪ್ರಮೀಳೆ, ಅಶೋಕನ ನಾಶವನ್ನು ಕುರಿತು ನೀನು ಅಂಥ ಯುಕ್ತಿಯನ್ನೇನು ಯೋಚಿಸಿರುತ್ತೀ? ಬಹುದಿವಸಗಳಿಂದ ಹೊಂಚುಹಾಕಿದ್ದ ನಮಗೆ ಹೊಳೆಯದ ಯುಕ್ತಿಯು, ಒಮ್ಮೆಲೆ ನಿನ್ನ ಮನಸ್ಸಿಗೆ ಹೇಗೆ ಹೊಳೆಯಿತು? ಹೇಳು, ಮೊದಲು ನಮಗೆ ನಿನ್ನ ಯುಕ್ತಿಯನ್ನು ಹೇಳು, ಎಂದು ಆತುರಪಡಹತ್ತಿದಳು. ಅದಕ್ಕೆ ಪ್ರಮೀಳೆಯು—ಮಾತಾಜಿಯವರೇ, ಸಿಂಹದ ಬೇಟೆಯೆಂದ ಕೂಡಲೆ ನನಗೆ ಯುಕ್ತಿಯು ತೋಚಿತು. ಮೂರು ದಿನ ಸಿಂಹವು ಎಲ್ಲಿಯೂ ಕಣ್ಣಿಗೆ ಬಿದ್ದಿಲ್ಲೆಂಬ ಸಂಗತಿಯನ್ನು ಕೇಳಿದ ಬಳಿಕಂತು, ಅಶೋಕನ ನಾಶದ ಉಪಾಯವನ್ನು ದೇವರೇ ಒದಗಿಸಿ ಕೊಟ್ಟನೆಂದು ನಾನು ತಿಳಿದೆನು. ನಾನು ಮೊನ್ನೆ ಪಾಟಲೀಪುತ್ರಕ್ಕೆ ಬರುವಾಗ ಆ ಚೈತ್ಯಾಲಯಗಳಲ್ಲಿ ವಿಶ್ರಾಂತಿಯನ್ನು ತಕ್ಕೊಳ್ಳುವದಕ್ಕಾಗಿ ಹೋಗಿದ್ದೆನು. ಚೈತ್ಯಾಲಯಗಳ ಬಳಿಯಲ್ಲಿ ಕೆಲವು ಗವಿಗಳಿರುತ್ತವೆ. ಅವನ್ನು ನೋಡುತ್ತ ನಾನು ಒಂದು ಗವಿಯ ಬಳಿಯಲ್ಲಿ ಹೋಗಿ, ಹಣಿಕಿ ನೋಡಲು, ಒಂದು ಭಯಂಕರವಾದ ಸಿಂಹವು ಮಲಗಿಕೊಂಡದ್ದು ನನ್ನ ಕಣ್ಣಿಗೆ ಬಿದ್ದಿತು. ಕೂಡಲೆ ನಾನು ಭಯದಿಂದ ಹಿಂದಕ್ಕೆ ಸರಿದು, ಗವಿಯ ಮೇಲುಗಡೆಯಿಂದ ಅದರ ಬಾಗಿಲವನ್ನು ಮುಚ್ಚಿದೆನು. ಸಿಂಹವು ಒಳಗೆ ಸಿಕ್ಕಿದ್ದರಿಂದ ಭಯಂಕರವಾಗಿ ಗರ್ಜಿಸತೊಡಗಿತು. ಏನು ಮಾಡಿದರೂ ಒಳಗಿನ ಸಿಂಹಕ್ಕೆ ಬಾಗಿಲು ತೆರೆಯಲಿಕ್ಕೆ ಬರುವಹಾಗಿದ್ದಿಲ್ಲ. ಆ ಸಿಂಹವು ಈಗ ಮೂರು ದಿನ ಗವಿಯಲ್ಲಿ ಉಪವಾಸವಿರ ಬಹುದಾದ್ದರಿಂದ, ನೀವು ಗವಿಯನ್ನು ನೋಡುವ ನೆವಮಾಡಿ ಅಶೋಕನ ಕೈಯಿಂದ ಅದರ ಬಾಗಿಲು ತೆರೆಸಿದರೆ, ಅನಾಯಾಸವಾಗಿ ಅಶೋಕನು ಆ ಹಸಿದ ಸಿಂಹದ ಬಾಯಿಗೆ ತುತ್ತಾಗುವನು. ಈ ಅಕಲ್ಪಿತ ಯೋಗವನ್ನು ನೋಡಿ ನನ್ನ ಮನಸ್ಸಿಗೆ ಬಹಳ ಸಂತೋಷವಾಗಿದೆ, ಎಂದು ಹೇಳಿದಳು.

ಪ್ರಮೀಳೆಯ ಈ ಮಾತುಗಳನ್ನು ಕೇಳಿ, ಬುದ್ಧಿಮತಿಗೂ, ಸಂಪುಷ್ಪಾಚಾರ್ಯನಿಗೂ ಬಹಳ ಸಂತೋಷವಾಯಿತು. ಮರುದಿನ ಬೆಳಗಾಯಿತು. ಸೂರ್ಯನು ತನ್ನ ಹೊಂಬಣ್ಣದ ಕರಗಳನ್ನು ಪಸರಿಸುತ್ತ ಮೇಲಕ್ಕೇರುವ ಹವಣಿಕೆಯಲ್ಲಿದ್ದನು. ಆಗ ಅಶೋಕನು ಪರಿಮಿತ ಪರಿವಾರದೊಡನೆ ಬೇಟೆಯಾಡಲಿಕ್ಕೆ ಹೊರಟು ಗಂಗಾತೀರದ ವನಶೋಭೆಯನ್ನು ಅವಲೋಕಿಸುತ್ತ ಸಾಗಿದ್ದನು. ಒಮ್ಮೆ ಆತನು ವೀತಾಶೋಕನ ಸಂಗಡಲೂ, ಮತ್ತೊಮ್ಮೆ ಕಲಿಂಗದ ಯುವರಾಜನೆನಿಸುವ ಪ್ರಣಯಿನಿಯ ಸಂಗಡಲೂ ಮಾತಾಡುತ್ತ ಆನೆಯನ್ನು ಹತ್ತಿ ಉಲ್ಲಾಸದಿಂದ ನಡೆದಿದ್ದನು. ಈ ಮೂವರೂ ಹತ್ತಿದ್ದ ಬಿಳಿಯ ಆನೆಯು ಬಹುಗಾಂಭೀರ್ಯದಿಂದ ಹೆಜ್ಜೆಗಳನ್ನಿಡುತ್ತಲಿತ್ತು. ಅದರ ಹಿಂದೆ ಬುದ್ಧಿಮತಿ, ಸಂಪುಷ್ಪಾಚಾರ್ಯ, ಪ್ರಮೀಳೆ ಈ ಮೂವರು ಆನೆಯನ್ನೇರಿ ತೀರ್ಥದರ್ಶನಕ್ಕಾಗಿ ಹೊರಟಿದ್ದರು. ವೀತಾಶೋಕನ ಪರಿವಾರದವರು ತಮಗೆ ಬೇಕಾದ

ಶಸ್ತ್ರಾಸ್ತ್ರಗಳನ್ನು ತಕ್ಕೊಂಡು ಕುದುರೆಗಳನ್ನು ಮುಂದಕ್ಕೆ ನೂಕುತ್ತಲಿದ್ದರು. ಎಲ್ಲ ಪರಿವಾರವು ಸಿಂಹವಿರುವ ವನವನ್ನು ಸೇರಿತು. ತೀರ್ಥದರ್ಶನಕ್ಕಾಗಿ ಬಂದವರು ಚೈತ್ಯಾಲಯಗಳ ಕಡೆಗೆ ಸಾಗಿದರು. ಪ್ರಮೀಳೆಯು ಚೈತ್ಯಾಲಯಗಳನ್ನು ಮುಟ್ಟಿದ ಕೂಡಲೆ ಮೊದಲು ತನ್ನ ಗವಿಯನ್ನು ನೋಡಿದಳು. ಅದರ ಬಾಯಿಯು ಮುಚ್ಚಿದ್ದು ಮುಚ್ಚಿದಹಾಗೆಯೇ ಇದ್ದದ್ದನ್ನು ನೋಡಿ, ಆಕೆಯು ಸಂತೋಷಪಟ್ಟು, ಆ ವರ್ತಮಾನವನ್ನು ರಾಜಮಾತೆಗೆ ತಿಳಿಸಿದಳು. ಇತ್ತ ಬೇಟೆಗಾರರು ಸಿಂಹವನ್ನು ಹುಡುಕಹತ್ತಿದರು.

ಬರಬರುತ್ತ ಎರಡು ಪ್ರಹರ ಹೊತ್ತು ಏರಿತು; ಆದರೂ ಸಿಂಹದ ಗೊತ್ತು ಹತ್ತಲೊಲ್ಲದು. ಅದು ಇಂಥ ಸ್ಥಳದಲ್ಲಿ ಇರಬಹುದೆಂಬ ತರ್ಕವೂ ಆಗಲೊಲ್ಲದು; ಆದ್ದರಿಂದ ಕೆಲವು ಹೊತ್ತು ಬೇಟೆಯಾಡುವದನ್ನು ನಿಲ್ಲಿಸಿ, ಅಶೋಕನೂ, ವೀತಾಶೋಕನೂ, ಪ್ರಣಯಿನಿಯೂ ಚೈತ್ಯಾಲಯಗಳ ಕಡೆಗೆ ಬರತೊಡಗಿದರು. ರಾಜಮಾತೆಯಾದ ಬುದ್ಧಿಮತಿಯು ಅಶೋಕನ ಮರಣವು ಯಾವಾಗ ಒದಗುವದೆಂಬದನ್ನು ಎದುರುನೋಡುತ್ತಲಿದ್ದಳು. ಕುಮಾರ ವೀತಾಶೋಕನು ಅವಸರದಿಂದ ಊಟಮಾಡಿ ತನ್ನ ಜನರೊಡನೆ ಬೇಟೆಗೆ ಹೊರಟು, ಸಿಂಹವನ್ನು ಹುಡುಕುತ್ತಿದ್ದನು. ರಾಜಮಾತೆಯೂ, ಪ್ರಣಯಿನಿಯೂ ಅಶೋಕನೊಡನೆ ಮಾತಾಡುತ್ತ ಕುಳಿತದ್ದರಿಂದ, ಅಶೋಕನ ಅಂಗರಕ್ಷಕರು ಸ್ವಲ್ಪದೂರ ಒಂದು ಮರದಬುಡದಲ್ಲಿ ಹರಟೆ ಕೊಚ್ಚುತ್ತ ಕುಳಿತುಕೊಂಡಿದ್ದರು. ಪುರುಷವೇಷಧಾರಿಯಾದ ಪ್ರಣಯಿನಿಯನ್ನು ನೋಡಿದ ಕೂಡಲೆ ಪ್ರಮೀಳೆಗೆ, ತಾನು ಸರೋವರದಲ್ಲಿ ನೋಡಿದ್ದ ಭಿಕ್ಷುವಿನ ಸ್ಮರಣವಾಯಿತು. ತನ್ನ ಪ್ರಿಯಭಿಕ್ಷುವಿನ ರೂಪವನ್ನು ಪ್ರಣಯಿನಿಯ ರೂಪವು ಅಚ್ಚಳಿಯದೆ ಹೋಲುತ್ತಿರುವದನ್ನು ನೋಡಿ, ಆ ದುಷ್ಟ ಪ್ರಮೀಳೆಯು ಆಶ್ಚರ್ಯಪಡುತ್ತಿದ್ದಳು. ಆಕೆಯು ಪ್ರಣಯಿನಿಯನ್ನು ಎವೆಯಿಕ್ಕದೆ ನೋಡಹತ್ತಿದಳು. ತನ್ನ ಬಾಲಮಿತ್ರಳಾದ ಪ್ರಮೀಳೆಯು ಈ ರೀತಿಯಾಗಿ ತನ್ನನ್ನು ನೋಡುತ್ತಿರುವದರ ನಿಜವಾದ ಕಾರಣವು ಪ್ರಣಯಿನಿಗೆ ಗೊತ್ತಾಗಲಿಲ್ಲ. ಪ್ರಮೀಳೆಯ ಗೊತ್ತು ಪ್ರಣಯಿನಿಗೆ ಹತ್ತಿತು; ಆದರೆ ಪ್ರಣಯಿನಿಯ ಗುರುತು ಪ್ರಮೀಳೆಗೆ ಹತ್ತಲಿಲ್ಲ. ಕಲಿಂಗದೇಶದ ರಾಜಪುತ್ರಿಯು ಅಶೋಕನ ಬಳಿಗೆ ಪುರುಷವೇಷದಿಂದ ಬರುವದು ಪ್ರಮೀಳೆಗೆ ಸಂಭವವಾಗಿ ತೋರುವಂತೆ ಇದ್ದಿಲ್ಲ. ಪ್ರಮೀಳೆಯು ತನ್ನನ್ನು ಹೀಗೆ ದಿಟ್ಟಿಸಿ ನೋಡಿ, ತನ್ನ ಗುರುತು ಎಲ್ಲಿ ಹಿಡಿಯುವಳೋ ಎಂದು ಪ್ರಣಯಿನಿಯು ಮನಸ್ಸಿನಲ್ಲಿ ಹೆದರಿದ್ದಳು; ಆದರೆ ಸುದೈವದಿಂದ ಅಂಥ ಪ್ರಸಂಗವೇನೂ ಒದಗಲಿಲ್ಲ.

ರಾಜಮಾತೆಯು ಅಶೋಕನ ಸಂಗಡ ಮಾತಾಡುತ್ತ ತಕ್ಕ ಕಾಲವನ್ನು ನಿರೀಕ್ಷಿಸಹತ್ತಿದಳು. ಬಳಿಯಲ್ಲಿ ಅಶೋಕನ ಹಿತಚಿಂತಕರು ಯಾರೂ ಇಲ್ಲದ್ದನ್ನು ನೋಡಿ, ಆಕೆಯು ಅಶೋಕನನ್ನು ಚೈತ್ಯಾಲಯ ನೋಡಲಿಕ್ಕೆಂದು ಎಬ್ಬಿಸಿಕೊಂಡು ಹೊರಟಳು. ಅಂಥ ಕಠೋರ ಹೃದಯದ ಬುದ್ಧಿಮತಿಗಾದರೂ ಸದ್ಗುಣಮಂಡಿತನಾದ ಅಶೋಕನನ್ನು ಗುಹೆಯ ಕಡೆಗೆ ಕರೆದೊಯ್ಯುವಾಗ ಅಸಮಾಧಾನವಾಯಿತು; ಆದರೆ ಧರ್ಮಗುರುವೆನಿಸುವ ಸಂಪುಷ್ಪಾಚಾರ್ಯನ ಕಠೋರ ಹೃದಯಕ್ಕೆ ಮಾತ್ರ ದ್ರವವೊಡೆಯದೆ, ಆ ದುಷ್ಟನು ರಾಜಮಾತೆಯ ಕಾರ್ಯಕ್ಕೆ ಹಾಸ್ಯಮುಖ

ದಿಂದ ಉತ್ತೇಜನ ಕೊಡಹತ್ತಿದನು. ಆಗ ಆಕೆಯು ಅಶೋಕನನ್ನು ಕುರಿತು—ಭಗವನ್, ಈ ಚೈತ್ಯಾಲಯದ ಬಳಿಯಲ್ಲಿ ಬೇರೆ ಕೆಲವು ಚೈತ್ಯಾಲಯಗಳಿರುತ್ತವೆಂದು ಕೇಳಿದ್ದೇನೆ. ಅವನ್ನು ನೋಡುವ ಇಚ್ಛೆಯು ನನಗಾಗಿದೆ, ಅನ್ನಲು, ಆಜ್ಞಾಧಾರಕ ನಮ್ರಪುತ್ರನಾದ ಅಶೋಕನು, ಕಲಿಂಗದ ಯುವರಾಜನಿಗೆ ಸ್ವಲ್ಪ ವಿಶ್ರಮಿಸುವದಕೆ ಹೇಳಿ, ತಾನು ಚೈತ್ಯಾಲಯಗಳನ್ನು ತೋರಿಸಲಿಕ್ಕೆ ತಾಯಿಯ ಸಂಗಡ ಹೊರಟನು. ಪುತ್ರವಧಕ್ಕಾಗಿ ಉದ್ಯುಕ್ತಳಾಗಿದ್ದ ಬುದ್ಧಿಮತಿಯು ಚೈತ್ಯಾಲಯಗಳನ್ನು ನೋಡುತ್ತ ನೋಡುತ್ತ ಪಶ್ಚಿಮದಿಕ್ಕಿನ ಚೈತ್ಯಾಲಯದ ಕಡೆಗೆ ಹೊರಳಿದಳು. ಆಗ ಆಕೆಯು ಗವಿಯ ಬಾಗಿಲಿಗೆ ಮುಚ್ಚಿದ್ದ ಕಲ್ಲಿನ ಕಡೆಗೆ ಬೆರಳುಮಾಡಿ ಅಶೋಕನನ್ನು ಕುರಿತು—

ಬುದ್ಧಿಮತಿ—ಭಗವನ್, ಇದೇನು?

ಅಶೋಕ—ಇದು ಒಂದು ಗವಿಯಿರಬಹುದಾಗಿ ತೋರುತ್ತದೆ; ಈ ಕಲ್ಲು ಗವಿಯನ್ನು ಮುಚ್ಚಲಿಕ್ಕೆ ಬಾಗಿಲಿನಂತೆ ಉಪಯೋಗಿಸಲ್ಪಟ್ಟಿರುವದು.

ಬುದ್ಧಿಮತಿ—ಈ ಗವಿಯನ್ನು ಹೊಕ್ಕು ನೋಡಬೇಕೆಂದು ನನ್ನ ಮನಸ್ಸು ಹರಿಯುತ್ತದೆ. ಶ್ರೀಬುದ್ಧನು ಇಲ್ಲಿಯೂ ಧರ್ಮಧ್ಯಾನದಲ್ಲಿ ಕಾಲವನ್ನು ಕಳೆದಿರಬಹುದು.

ಅಶೋಕ—ಕಳೆದಿರಬಹುದು, ಆದರೆ ಈ ಗವಿಯಲ್ಲಿ ನೆನಪಿನಲ್ಲಿಡತಕ್ಕಂತಹ ದೇನಿರುವದು?

ಬುದ್ಧಿಮತಿ—ಎರಡನೆಯದೇನಿರಬೇಕು? ಆ ಸ್ಥಳದ ಪವಿತ್ರತೆಯು! ಭಗವನ್, ನಿನ್ನಂಥ ಬಲಿಷ್ಠನಿಗೆ ಈ ಕಲ್ಲನ್ನು ತೆಗೆಯುವದು ಅಸಾಧ್ಯವಲ್ಲ.

ಅಶೋಕ—ಮಾತೃಶ್ರೀ, ಈ ಗವಿಯನ್ನು ನೋಡುವ ಇಚ್ಛೆಯು ನಿನಗಿದ್ದರೆ, ನಾನು ಕಲ್ಲನ್ನು ತೆಗೆಯುತ್ತೇನೆ. ಸಂತೋಷದಿಂದ ನೋಡಬೇಕು.

ಈ ಮೇರೆಗೆ ನುಡಿದು, ಅಶೋಕನು ಆ ಕಲ್ಲನ್ನು ತೆಗೆಯುವದಕ್ಕಾಗಿ, ಕೆಳಗೆ ಬಗ್ಗಿದನು; ಈ ಸಂಧಿಯನ್ನು ಸಾಧಿಸಿ ರಾಜಮಾತೆಯು, ತನ್ನ ಜೀವವನ್ನು ಉಳಿಸಿಕೊಳ್ಳುವದಕ್ಕಾಗಿ ಅಲ್ಲಿಂದ ಕಾಲ್ತೆಗೆದಳು. ಆಕೆಯು ಚೈತ್ಯಾಲಯದ ಬಾಗಿಲವನ್ನು ದಾಟಿ ಹೋಗುವಷ್ಟರಲ್ಲಿ, ಗವಿಯ ಬಾಗಿಲನ್ನು ತೆರೆದದ್ದರಿಂದ ಆ ಭಯಂಕರವಾದ ಸಿಂಹವು ಗರ್ಜಿಸುತ್ತ, ಅಶೋಕನ ಮೈಮೇಲೆ ಹಾರುವದಕ್ಕಾಗಿ ಜಪ್ಪುಹಾಕಿತು. ಇದನ್ನು ನೋಡಿ ಬುದ್ಧಿಮತಿಯು ಸಂತೋಷದಿಂದ ಉಬ್ಬುತ್ತ ಪ್ರಮೀಳೆ ಹಾಗು ಸಂಪುಷ್ಪಾಚಾರ್ಯರೊಡನೆ ದೂರ ಓಡಿಹೋಗಿ ನೋಡುತ್ತ ನಿಂತುಕೊಂಡಳು. ಅಶೋಕನು ಬಾರದೆ ರಾಜಮಾತೆಯೊಬ್ಬಳೇ ಓಡಿಬಂದದ್ದನ್ನು ನೋಡಿ, ಪುರುಷ ವೇಷಧಾರಿಯಾದ ಪ್ರಣಯಿನಿಯು ಗಾಬರಿಯಾಗಿ, ಇದು ಏನೋ ಘಾತಕಪ್ರಸಂಗ ಕಾಣುತ್ತದೆಂದು ಅಶೋಕನ ಬಳಿಗೆ ಓಡುತ್ತ ಬಂದಳು. ಚೈತ್ಯಾಲಯದ ಬಾಗಿಲಿಗೆ ಹೋಗುವದರೊಳಗಾಗಿ, ಒಂದು ಭಯಂಕರ ನೋಟವು ಆಕೆಯ ಕಣ್ಣಿಗೆ ಬಿದ್ದಿತು. ಅಶೋಕನು ಅಂಗಾತ ಬಿದ್ದಿದ್ದು, ಒಂದು ಭಯಂಕರವಾದ ಸಿಂಹವು ಆತನ ಎದೆಯಮೇಲೆ ಒಂದು ಕಾಲನ್ನು ಇಟ್ಟು, ಮತ್ತೊಂದು ಕಾಲಿನಿಂದ ಅಶೋಕನ ಹೃದಯವನ್ನು ಸೀಳುವದಕ್ಕಾಗಿ ಹವಣಿಸಿ, ಅತ್ಯಂತ

ಕ್ರುದ್ಧವಾದ ದೃಷ್ಟಿಯಿಂದ ಅಶೋಕನನ್ನು ನೋಡುತ್ತಲಿತ್ತು. ಮೃಗರಾಜನೆನಿಸುವ ಸಿಂಹವು, ಇಷ್ಟುಹೊತ್ತಿಗೆ ಅಶೋಕನನ್ನು ಸಂಹರಿಸಿ, ತನ್ನ ಕ್ಷುಧಾಶಾಂತಿಯನ್ನು ಮಾಡಿಕೊಳ್ಳಬಹುದಾಗಿತ್ತು; ಆದರೆ ಅಂಥ ಕ್ರೂರಪ್ರಾಣಿಯು ಕೂಡ, ಅಶೋಕನ ಪುಣ್ಯಪ್ರತಾಪದಿಂದಲೇ ಸ್ವಲ್ಪ ತಡೆದಿತ್ತು. ಅದು ಇನ್ನು ಮೇಲೆ ತನ್ನ ನಖಪಂಜರದಿಂದ ಅಶೋಕನ ವಕ್ಷಸ್ಥಳವನ್ನು ಸೀಳತಕ್ಕದ್ದು; ಅಷ್ಟರಲ್ಲಿ ಪ್ರಣಯಿನಿಯು—"ಹಾಯ್ ಹಾಯ್! ಭಗವನ್, ಇದೇನು ಅನರ್ಥವು?" ಎಂದು ಕೂಗುತ್ತ ಸಿಂಹದ ಬಳಿಗೆ ಬಂದಳು. ಆಗ ಅಶೋಕನು ಪ್ರಣಯಿನಿಯನ್ನು ಕುರಿತು—

ಅಶೋಕ—ನಿಲ್ಲು ಯುವರಾಜಾ ನಿಲ್ಲು! ಹೀಗೆ ಜೀವದ ಹಂಗುದೊರೆದು ಮುಂದಕ್ಕೆ ಬರಬೇಡ; ನೀನು ಒಂದು ಹೆಜ್ಜೆಯನ್ನು ಸಹ ಮುಂದಕ್ಕೆ ಇಡಲಾಗದು! ಹೋಗು, ಹಿಂದಿರುಗು; ನನ್ನ ಮೇಲೆ ನಿನ್ನ ನಿಸ್ಸೀಮ ಭಕ್ತಿಯಿರುವದೆಂಬದನ್ನು ನಾನು ಬಲ್ಲೆನು. ಸುಮ್ಮನೆ ಮುಂದಕ್ಕೆ ಬಂದು ಜೀವವನ್ನು ಕಳಕೊಳ್ಳಬೇಡ. ಯಾವ ಉಪಾಯದಿಂದಲೂ ನಾನು ಪಾರಾಗುವಂತೆ ಇಲ್ಲ, ಸರಿ ಹಿಂದಕ್ಕೆ, ನಿನ್ನಂಥ ಸುಕುಮಾರ ರಾಜಪುತ್ರನು ಶಸ್ತ್ರಹೀನನಾಗಿ ಬಂದು ಮಾಡುವದೇನು?

ಪ್ರಣಯಿನಿ—ಭಗವನ್, ತನ್ನ ಶತ್ರುವನ್ನು ಮಿತ್ರನಂತೆ ನಡೆಸಿಕೊಳ್ಳುವ ಉದಾರ ಚಕ್ರವರ್ತಿಯ ವಿಪತ್ತನ್ನು ಕಣ್ಣಿನಿಂದ ನೋಡುತ್ತ ನಿಂತುಕೊಳ್ಳುವದು ಕಲಿಂಗರಾಜಪುತ್ರರ ಶೀಲವಲ್ಲ. ವಿಪನ್ನಿವಾರಣವು ಅವರ ಕುಲಪರಂಪರಾಗತ ಸಾಂಪ್ರದಾಯವಾಗಿರುತ್ತದೆ. ನಾನು ಶಸ್ತ್ರಹೀನನಾಗಿದ್ದರೆ, ಕೇಸರಿಗೆ ಮೊದಲಿನ ತುತ್ತಾಗುವದಕ್ಕಾಗಿ ನನ್ನ ದೇಹವನ್ನು ಅದರ ಬಾಯಿಗೆ ಒಡ್ಡುತ್ತೇನೆ! ಅಷ್ಟರಲ್ಲಿ ಯಾರಾದರೂ ಬಂದು ತಮ್ಮನ್ನು ಬಿಡಿಸಿಕೊಳ್ಳಲಿ!

ಈ ಮೇರೆಗೆ ನುಡಿದು, ಪ್ರಣಯಿನಿಯು ಅಶೋಕನ ಮೈಮೇಲೆ ಬಿದ್ದು, ಸಿಂಹವನ್ನು ಕುರಿತು—ವನರಾಜಾ, ನೀನು ಕ್ಷುಧೆಯನ್ನು ಶಾಂತಮಾಡಿಕೊಳ್ಳಬೇಕಾಗಿದ್ದರೆ, ನಿನ್ನ ನಖ ಪಂಜರದ ಅಘಾತವನ್ನು ನನ್ನ ಮೇಲೆ ಮಾಡು. ಈವೊತ್ತಿಗೆ ಭರತಖಂಡಕ್ಕೆಲ್ಲ ದೇವರಂತೆ ಪೂಜ್ಯನಾಗಿರುವ ಭಗವಾನ್ ಅಶೋಕ ಚಕ್ರವರ್ತಿಯಿಂದ ಲೋಕಹಿತದ ಹಲವು ಕಾರ್ಯಗಳು ಆಗಬೇಕಾಗಿವೆ. ಆತನನ್ನು ಸಂಕಟದಿಂದ ಮುಕ್ತನಾಗಮಾಡು. (ಅಶೋಕನನ್ನುದ್ದೇಶಿಸಿ,) ಭಗವನ್, ಈ ವನರಾಜನು ಮೊದಲ ತುತ್ತಿಗೆ ನನ್ನನ್ನು ತಿನ್ನುವನು. ಅಷ್ಟರಲ್ಲಿ ಯಾರಾದರೂ ಬಂದು ನಿಮ್ಮನ್ನು ಬಿಡಿಸಿದರೆ, ನಿಮ್ಮ ಈ ಮಿತ್ರನ ಈ ಜನ್ಮವು ಸಾರ್ಥಕವಾಗುವದು. ಭಗವಾನರವರಿಗೆ ಈ ಮಿತ್ರನ ಸ್ಮರಣವಿರಲಿ; ಕಲಿಂಗದೇಶದ ಪುರಾತನವಾದ ಅರಸುಮನೆತನದ ಮೇಲೆ ಚಕ್ರವರ್ತಿಯ ನ್ಯಾಯದ ದೃಷ್ಟಿಯಿರಲಿ; ಇದೇ ನನ್ನ ಕಡೆಯ ಪ್ರಾರ್ಥನೆಯು!!

ಈ ಮೇರೆಗೆ ನುಡಿದು, ಪ್ರಣಯಿನಿಯು ಅಶೋಕನ ಮೈಮೇಲೆ ಬಿದ್ದುಕೊಳ್ಳಲು, ಸಿಂಹದ ಸಿಟ್ಟು ಕಡಿಮೆಯಾಗಹತ್ತಿತು. ಅದರ ಮುಖಮುದ್ರೆಯು ಸೌಮ್ಯವಾಗಹತ್ತಿತು. ಅದು ತನ್ನ ನಖಪಂಜರವನ್ನು ಹಿಂದಕ್ಕೆ ಜಗ್ಗಿಕೊಂಡು ಅಶೋಕನನ್ನೂ, ಪ್ರಣಯಿನಿಯನ್ನೂ ಬಿಟ್ಟು ಹಿಂದಕ್ಕೆ ಸರಿದು ಕಣ್ಣೀರು ಸುರಿಸಹತ್ತಿತು. ಸಿಂಹವು ತನ್ನ ಜಾತಿಸ್ವಭಾವವನ್ನು ಮರೆತು ಆಕಳಂತೆ ಸೌಮ್ಯ ಮುದ್ರೆಯನ್ನು ತಾಳಿ, ಕಣ್ಣೀರು ಸುರಿಸುವದನ್ನು ನೋಡಿ ಅಶೋಕನು ಆಶ್ಚರ್ಯಪಟ್ಟನು. ಆತನು ಸಿಂಹದ ಕುತ್ತಿಗೆಯನ್ನು ಆಲಿಂಗಿಸಿ, ತನ್ನ ಉತ್ತರೀಯದಿಂದ ಸಿಂಹದ ಕಣ್ಣುಗಳನ್ನು

ಒರಿಸಹತ್ತಿದನು. ಪ್ರಣಯಿನಿಯು ಸಿಂಹದ ಬೆನ್ನಮೇಲೆ ಕೈಯಾಡಿಸುತ್ತ ಅದನ್ನು ರಮಿಸಹತ್ತಿದಳು. ಇದನ್ನು ನೋಡುವವರಿಗೆಲ್ಲ ಪರಮಾಶ್ಚರ್ಯವಾಯಿತು. ಎಲ್ಲರ ಕಣ್ಣುಗಳೊಳಗಿಂದ ಆನಂದಾಶ್ರುಗಳು ಸುರಿಯಹತ್ತಿದವು. ರಾಜಮಾತೆಯೂ, ಸಂಪುಷ್ಟಾಚಾರ್ಯನೂ, ಪ್ರಮೀಳೆಯೂ ತಮ್ಮ ದುರಾಲೋಚನೆಯು ಕೈಗೂಡಲಿಲ್ಲೆಂಬ ದುಃಖದಿಂದ ಕಣ್ಣೀರುಸುರಿಸಹತ್ತಿದರು. ಒಬ್ಬೊಬ್ಬರೇ ಜನರು ಕೂಡಹತ್ತಿದರು. ಜನಸಮೂಹವನ್ನು ನೋಡಿ, ಅಶೋಕನು ಎಚ್ಚತ್ತು ಅವರೆಲ್ಲರನ್ನು ಕುರಿತು—ನಮ್ಮನ್ನು ಕೊಲ್ಲಬೇಕೆಂದು ಮಾಡಿದ ದುಷ್ಟರ ಯೋಚನೆಯು ಕೈಗೂಡಲಿಲ್ಲ. ಆ ದುಷ್ಟರ ಶಾಸನಮಾಡಲಿಕ್ಕೆ ಈಗ ವಿಲಂಬವೂ ಆಗುವಹಾಗಿಲ್ಲ. ಆದರೆ ಹಿಂಸ್ರಪಶುವಾದ ಈ ಸಿಂಹವು ಕೂಡ ಕ್ಷಮಿಸಿ ನನಗೆ ಪ್ರಾಣದಾನ ಮಾಡಿರುತ್ತದೆ. ಈ ವನರಾಜನ ಔದಾರ್ಯವನ್ನು ನೋಡಿ ನಾನಾದರೂ ಈಗ ಅಪರಾಧಿಗಳನ್ನು ಕ್ಷಮಿಸುತ್ತೇನೆ. ಅವರು ಪಶ್ಚಾತ್ತಾಪಪಟ್ಟು, ತಮ್ಮ ದುಷ್ಟಸ್ವಭಾವವನ್ನು ಬಿಡತಕ್ಕದ್ದು, ಎಂದು ಬುದ್ಧಿಮತಿಯನ್ನೂ, ಸಂಪುಷ್ಟಾಚಾರ್ಯನನ್ನೂ, ಪ್ರಮೀಳೆಯನ್ನೂ ಭೇದಕ ದೃಷ್ಟಿಯಿಂದ ನೋಡಿದನು.

ಬಳಿಕ ಆ ಬೌದ್ಧಚಕ್ರವರ್ತಿಯು ಮಿಕ್ಕ ಜನರನ್ನು ಕುರಿತು—ಬಂಧುಗಳೇ, ಈ ಸಿಂಹವು ವ್ಯಕ್ತಮಾಡಿದ ಕ್ಷಮಾಗುಣವನ್ನೂ, ಅಹಿಂಸೆಯ ಅಂತಿಮ ತತ್ವವನ್ನೂ ಮುಂದಿಟ್ಟುಕೊಂಡು, ನಮ್ಮ ಪ್ರಜಾಜನರು ನಡೆಯುವಂತೆ ಬೇಗನೆ ವ್ಯವಸ್ಥೆ ಮಾಡುವೆನು. ಕ್ರೂರಮೃಗವೇ ಮನುಷ್ಯರನ್ನು ಕ್ಷಮಿಸುತ್ತಿರಲು, ಜ್ಞಾನಿಗಳೆನಿಸಿಕೊಳ್ಳುವ ಮನುಷ್ಯರು ಮೃಗಗಳ ಬೇಟೆ ಯಾಡುವದು ಅನ್ಯಾಯವಲ್ಲವೆ? ಇಂದಿನಿಂದ ಬೇಟೆಯಾಡುವದನ್ನು ನಿಲ್ಲಿಸಿಬಿಡುವೆನು. ನನ್ನ ರಾಜ್ಯದಲ್ಲಾಗಲಿ, ನನ್ನ ಮಾಂಡಲಿಕರ ರಾಜ್ಯದಲ್ಲಾಗಲಿ, ಯಾರಾದರೂ ಬೇಟೆಯಾಡಿದರೆ, ಮನುಷ್ಯವಧೆ ಮಾಡಿದ ಶಿಕ್ಷೆಗೆ ಪಾತ್ರರಾಗುವರೆಂದು ಪ್ರಸಿದ್ಧಗೊಳಿಸುವೆನು. ವನರಾಜಾ, ಇಂದು ನೀನು ನನಗೆ ಗುರುವಾದೆ! ಎಂದು ನುಡಿದು, ಪ್ರಣಯಿನಿಯನ್ನು ಕುರಿತು—ಜಿತೇಂದ್ರ ರಾಜಪುತ್ರಾ, ನೀನು ಅದ್ವಿತೀಯ ಪುರುಷನಿರುತ್ತೀ. ನಿನ್ನನ್ನು ನೋಡಿದ್ದರಿಂದಲೇ ಈ ಸಿಂಹವು ನನಗೆ ಜೀವದಾನ ಮಾಡಿತು. ಇಂಥ ಮಹದುಪಕಾರ ಮಾಡಿಸಿಕೊಳ್ಳಲಿಕ್ಕೆ, ಈ ಅಶೋಕನು ಪಾತ್ರನಲ್ಲದಿರಲು ನೀನು ಔದಾರ್ಯದಿಂದ ನನಗೆ ಪ್ರಾಣದಾನಮಾಡಿ, ನನ್ನನ್ನು ಕೃತಜ್ಞನಾಗಮಾಡಿದೆ! ನನ್ನಿಂದ ಕಲಿಂಗದೇಶದ ಸರ್ವಸ್ವವು ನಾಶವಾಗಿರಲು, ಹಾಗು ನಾನು ಕಲಿಂಗದೇಶದ ಎಷ್ಟೋ ಪ್ರಜೆಗಳನ್ನು ಜುಲುಮೆಯಿಂದ ಬೌದ್ಧರನ್ನಾಗಮಾಡಿರಲು, ವೈದಿಕಧರ್ಮದ ಜಿತೇಂದ್ರನು ನೀನು ನನ್ನ ಪ್ರಾಣಕ್ಕೆ ಪ್ರತಿಯಾಗಿ, ನಿನ್ನ ಪ್ರಾಣವನ್ನು ಕೊಟ್ಟು, ನನ್ನನ್ನು ಬದುಕಿಸಿದೆಯಲ್ಲ! ಶಾಬಾಸ!! ಇಂಥ ಉದಾತ್ತ ಭಾವನೆಯನ್ನು ಉಂಟುಮಾಡುವ ಧರ್ಮವು ಶ್ರೇಷ್ಠವಾದದ್ದು; ಅಂಥ ಧರ್ಮಗುರುಗಳು ಶ್ರೇಷ್ಠರಾದವರು! ಎಲೈ ಚಿದಾನಂದಾಶ್ರಮಸ್ಥ–ಬ್ರಹ್ಮಚಾರಿಯೇ, ಈಗ ನಾನು ನಿನಗೆ ಏನು ಉಪಕಾರ ಮಾಡಲಿ ಹೇಳು!

ಅಶೋಕನ ಈ ಮಾತುಗಳನ್ನು ಕೇಳಿ, ದುಷ್ಟಪ್ರಮೀಳೆಯು ತನ್ನ ಕಲಿಂಗದ ರಾಜ್ಯವು ಕೈಬಿಟ್ಟಿತೆಂದು ಚಿಂತಿಸತೊಡಗಿದಳು. ಅಷ್ಟರಲ್ಲಿ ಪ್ರಣಯಿನಿಯು ಅಶೋಕನನ್ನು ಕುರಿತು—

ಭಗವನ್, ನನ್ನಿಂದಾದ ಅಂಥ ಉಪಕೃತಿಯೇನು? ಮಿತ್ರಧರ್ಮಕ್ಕನುಸರಿಸಿ ನಾನು ಮಾಡತಕ್ಕದ್ದನ್ನೇ ಮಾಡಿರುವೆನು. ಉಪಕಾರ ಮಾಡಿದ್ದರೆ, ಈ ವನರಾಜನು ಮಾತ್ರ ನಮ್ಮಿಬ್ಬರ ಮೇಲೆಯೂ ಉಪಕಾರ ಮಾಡಿದ್ದಾನೆ. ಉದಾರ ಚಕ್ರವರ್ತಿಯೇ, ಏನು ಉಪಕಾರ ಮಾಡಲೆಂದು ನನ್ನನ್ನು ನೀನು ಕೇಳುವೆಯಷ್ಟೇ; ಉಪಕಾರ ಮಾಡುವದೇ ನಿನ್ನ ಮನಸ್ಸಿನಲ್ಲಿ ಇದ್ದರೆ, ನನ್ನ ವಿಷಯದ ಮೈತ್ರೀಭಾವವು ನಿನ್ನ ಹೃದಯದಲ್ಲಿ ಸ್ಥಿರವಾಗಿರಲಿ! ಸಿಂಹದ ಕೃಪೆಯಿಂದ ಬದುಕಿ ಉಳಿದ ನಾವಿಬ್ಬರೂ ಮರಣಪರ್ಯಂತವಾಗಿ ಮಿತ್ರರಾಗಿ ಇರೋಣ. ಸಖಿತ್ವಕ್ಕಿಂತ ಉನ್ನತವಾದದ್ದು ಜಗತ್ತಿನಲ್ಲಿ ಮತ್ತೊಂದಿಲ್ಲೆಂದು ದೊಡ್ಡವರು ಹೇಳುತ್ತಿರುವರು. ನೀನು ನಿನ್ನ ಪ್ರಜೆಗಳಲ್ಲಿ ಕ್ಷಮೆ; ಅಹಿಂಸೆ, ಬಂಧುಪ್ರೇಮ ಮೊದಲಾದ ಸದ್ಗುಣಗಳನ್ನು ಬೆಳಿಸಿದರೆ, ನನಗೆ ಅನಂತ ವರಪ್ರದಾನ ಮಾಡಿದ ಹಾಗಾಯಿತೆಂದು ತಿಳಿಯುವೆನು. ಉದಾರಾಂತಃಕರಣದ ಚಕ್ರವರ್ತಿಯೇ, ನಿನ್ನ ಉದಾರ ಚರಿತ್ರವನ್ನು ನೋಡಿ, ಕಲಿಂಗದ ಯುವರಾಜನು ಧನ್ಯನಾಗಿರಲು, ಮಿತ್ರತ್ವದ ಅಭಿವೃದ್ಧಿಯ ಹೊರತು ಆತನು ಬೇರೆ ಯಾವದನ್ನು ಯಾಚಿಸುವನು? ಎಂದು ನುಡಿಯಲು, ಕಂಠಬಿಗಿದು ಕಣ್ಣೀರು ಸುರಿಸುತ್ತ ನಿಂತುಕೊಂಡಿದ್ದ ಕೋಮಲಾಂತಃಕರಣದ ಅಶೋಕನು, ಮಾತಾಡಲಾರದೆ ಪ್ರಣಯಿನಿಯನ್ನು ದೃಢವಾಗಿ ಆಲಿಂಗಿಸಿದನು. ಅಕಲ್ಪಿತವಾಗಿ ಒದಗಿದ್ದ ಈ ಆಲಿಂಗನವು ಪ್ರಣಯಿನಿಗೆ ಬೇಡವಾಗಿದ್ದರೂ, ಇದು ಕೇವಲ ಮಿತ್ರತ್ವದ ಭಾವನೆಯಿಂದಾದ ಆಲಿಂಗನವೆಂದು ಆಕೆಯು ಸಮಾಧಾನ ಮಾಡಿಕೊಂಡು ಸುಮ್ಮನಿರಬೇಕಾಯಿತು. ಅಷ್ಟರಲ್ಲಿ ವೀತಾಶೋಕನು ಅಣ್ಣನ ಗಂಡಾಂತರದ ಸುದ್ದಿಯನ್ನು ಕೇಳಿ, ಓಡುತ್ತ ಬರಲು, ಅಶೋಕನು ಪ್ರಣಯಿನಿಯನ್ನು ಬಿಟ್ಟು ಬಂಧುಪ್ರೇಮ ದಿಂದ ವೀತಾಶೋಕನನ್ನು ಆಲಿಂಗಿಸಿದನು. ವೀತಾಶೋಕನಿಗೆ ಪ್ರಣಯಿನಿಯು ದೇವರಂತೆ ಕಂಡಳು. ತನ್ನ ಪ್ರಿಯ ಬಂಧುವು ಪ್ರಾಣಸಂಕಟದಿಂದ ಪಾರಾದದ್ದನ್ನು ನೋಡಿ, ಸಾತ್ವಿಕಸ್ವಭಾವದ ಪ್ರೇಮಲಮೂರ್ತಿಯಾದ ವೀತಾಶೋಕನಿಗೆ ಪರಮಾನಂದವಾಯಿತು.

ಈ ಮೇರೆಗೆ ಉದಾರಚರಿತ್ರದ ವ್ಯಕ್ತಿಗಳ ಔದಾರ್ಯದಿಂದ ಆ ಬೌದ್ಧ ಚೈತ್ಯಾಲಯದ ಪ್ರದೇಶದಲ್ಲಿ ಕೆಳಗೆ–ಮೇಲೆ–ಹೊರಗೆ–ಒಳಗೆ ಎಲ್ಲ ಕಡೆಯಲ್ಲಿ ಆನಂದವು ತುಂಬಿ ತುಳುಕುತ್ತಿರಲು, ಚಕ್ರವರ್ತಿಯು ಪರಿವಾರದೊಡನೆ ರಾಜಧಾನಿಗೆ ತಿರುಗಿದನು. ಸಿಂಹವು ಪ್ರಣಯಿನಿಯನ್ನು ಹಿಂಬಾಲಿಸಿ ಹೊರಟಿತು. ಸಿಂಹದ ಈ ಸ್ಥಿತಿಯನ್ನು ನೋಡಿ ವಾಚಕರು ಆಶ್ಚರ್ಯಪಡುತ್ತಿರಬಹುದು; ಆದರೆ ಅವರನ್ನು ಬಹಳ ಹೊತ್ತು ಆಶ್ಚರ್ಯಮಗ್ನಮಾಡುವದು ಯೋಗ್ಯವಲ್ಲ. ಹರಿದ್ವಾರದಲ್ಲಿ ಜಿತೇಂದ್ರನಿಗೆ ಒಲಿದ ಒಂದು ಸಿಂಹವಿದ್ದದ್ದನ್ನು ವಾಚಕರು ಬಲ್ಲರಷ್ಟೇ? ಅಶೋಕನ ತಂಗಿಯಾದ ಇಂದಿರೆಯ ಚಿಗರೆಯನ್ನು ಆ ಸಿಂಹವು ಬೆನ್ನಹತ್ತಿದಾಗ ನಡೆದ ವೃತ್ತಾಂತವನ್ನಾದರೂ ವಾಚಕರು ಮರೆತಿರಲಿಕ್ಕಿಲ್ಲ. ಆ ಸಿಂಹವು ಜಿತೇಂದ್ರನನ್ನು ಬಿಟ್ಟು ಇರುತ್ತಿದ್ದಿಲ್ಲ. ಜಿತೇಂದ್ರನು ಅದನ್ನು ಬಿಟ್ಟು ಪಾಟಲಿಪುತ್ರಕ್ಕೆ ಹೊರಟಾಗ, ಅದು ಆತನನ್ನು ಹುಡುಕುತ್ತ ತಾನೂ ಪಾಟಲಿಪುತ್ರಕ್ಕೆ ಬಂದಿತ್ತು; ಆದರೆ ಅದಕ್ಕೆ ಜಿತೇಂದ್ರನ ಭೆಟ್ಟಿಯಾಗದ್ದರಿಂದ ಅದು ರಾಜಧಾನಿಯ ಸಮೀಪದ ಅರಣ್ಯದಲ್ಲಿ ಸಂಚರಿಸುತ್ತಿತ್ತು. ಅದು ಒಂದು ದಿನ ಗವಿಯಲ್ಲಿ

ಮಲಗಿರಲು, ಪ್ರಮೀಳೆಯು ಅದನ್ನು ಆಕಸ್ಮಿಕವಾಗಿ ಹಿಂದೆ ಹೇಳಿದಂತೆ ಸೆರೆಯಲ್ಲಿರಿಸಿದಳು. ಮುಂದೆ ಅದು ಅಶೋಕನ ಮೇಲೆ ಸಿಟ್ಟಿನಿಂದ ದುಮುಕಿದಾಗ ಪ್ರಣಯಿನಿಯು ಅಡ್ಡ ಬಂದದ್ದರಿಂದ ಪುರುಷವೇಷಧಾರಿಯಾದ ಆ ಕಲಿಂಗರಾಜಪುತ್ರಿಯನ್ನು ಜಿತೇಂದ್ರನೆಂಬ ಭ್ರಾಂತಿಯಿಂದ ತನ್ನ ಕ್ರೂರತನವನ್ನು ಬಿಟ್ಟು, ಆ ಸಿಂಹವು ಕಣ್ಣೀರು ಸುರಿಸಹತ್ತಿತ್ತು. ಈಗಲಾದರೂ ಅದು ಪ್ರಣಯಿನಿಯನ್ನು ಜಿತೇಂದ್ರನೆಂತಲೇ ತಿಳಿದು ಆತನನ್ನು ಹಿಂಬಾಲಿಸ ಹತ್ತಿತ್ತು. ಇದನ್ನರಿಯದೆ ಪ್ರಣಯಿನಿಯು ರಾಜಧಾನಿಯ ಜನರಿಗೆ ಉಪದ್ರವವಾದೀತೆಂದು ತಿಳಿದು, ತಿರುಗಿ ಹೋಗಲು ಸಿಂಹಕ್ಕೆ ಸನ್ನೆ ಮಾಡುತ್ತ ದುಂಬಾಲಬಿದ್ದಳು. ಆಗ ಆ ಸಿಂಹವು ಅಸಮಾಧಾನದಿಂದ ಅರಣ್ಯಕ್ಕೆ ತಿರುಗಿ ಹೋಯಿತು. ಅಶೋಕನಂತೂ ಅದರ ಗೊಡವಿಗೆ ಯಾರೂ ಹೋಗಲಾಗದೆಂದು ಆಜ್ಞಾಪಿಸಿದನು. ಆಶ್ರಮಸ್ಥ ಆ ಸಾತ್ವಿಕ ಸಿಂಹವು ನಿಷ್ಕಾರಣವಾಗಿ ಯಾರಿಗೂ ಉಪದ್ರವ ಕೊಡುತ್ತಿದ್ದಿಲ್ಲ. ಸಿಂಹವು ಇತ್ತ ಅರಣ್ಯಕ್ಕೆ ಹೋಗಲು, ಅತ್ತ ಅಶೋಕನು ಪ್ರಣಯಿನಿಯೊಡನೆ ರಾಜಧಾನಿಯನ್ನು ಪ್ರವೇಶಿಸಿದನು. ಆತನು ಇನ್ನು ತುರಂಗ ದರ್ಬಾರದಲ್ಲಿರದೆ ಸ್ವತಂತ್ರವಾದ ರಾಜಮಂದಿರದಲ್ಲಿ ಇರಬೇಕೆಂದು ಯುವರಾಜನಿಗೆ ಎಷ್ಟು ಆಗ್ರಹ ಮಾಡಿದರೂ, ಆ ವೇಷಧಾರಿಯಾದ ಪ್ರಣಯಿನಿಯು ಒಪ್ಪದೆ, ಚಕ್ರವರ್ತಿಗೆ ವಿನಯ ದಿಂದ ಹೇಳಿಕೊಂಡು ತುರಂಗದರ್ಬಾರಕ್ಕೇ ಹೋದಳು. ಈ ಅದ್ಭುತಪ್ರಸಂಗವನ್ನು ಕುರಿತು ಹಲವು ಚರ್ಚೆಗಳು ಪಾಟಲೀಪುತ್ರದ ಪ್ರಜೆಗಳಲ್ಲಿ ನಡೆದದ್ದು ಆಶ್ಚರ್ಯವಲ್ಲ.

ಸದ್ವೃತ್ತಿಪ್ರಭಾವ

ಹಾವಿಗೆ ಹಾಲೆರದರೆ ಅದು ತನ್ನ ವಿಷವನ್ನು ಬಿಡಬಹುದೇ? ಅದರಂತೆ ದುಷ್ಟರೂ ದುರಭಿಮಾನಿಗಳೂ ಆದವರನ್ನು, ಸುಷ್ಟರನ್ನೂ ಸದಭಿಮಾನಿಗಳನ್ನೂ ಮಾಡಬೇಕೆಂದು ಸಜ್ಜನರು ಸೌಮ್ಯವಾದ ಉಪಾಯಗಳನ್ನು ಎಷ್ಟು ಕೈಕೊಂಡರೂ ವ್ಯರ್ಥವಾಗುವದೇ ಸರಿ. ಆ ಅಧಮರು ಸಜ್ಜನರ ಸೌಜನ್ಯವನ್ನು ಜರಿದಾಡಿ, ತಮ್ಮ ನೀಚಗುಣಗಳನ್ನು ಅಭಿವೃದ್ಧಿ ಮಾಡಿಕೊಳ್ಳುವರು. ಅಶೋಕನು ಸೌಜನ್ಯದಿಂದ ಅಪರಾಧಿಗಳ ಅಪರಾಧವನ್ನು ಕ್ಷಮಿಸಿದ್ದು, ಬುದ್ಧಿಮತಿಯೇ ಮೊದಲಾದವರ ದುರಾಲೋಚನೆಯ ಅಭಿವೃದ್ಧಿಗೆ ಕಾರಣವಾಯಿತು. ಆ ಮೂವರೂ ಒಟ್ಟು ಗೂಡಿ, ಅಶೋಕನ ನಾಶದ ಉಪಾಯವನ್ನು ಕುರಿತು ಮತ್ತೆ ಆಲೋಚಿಸತೊಡಗಿದರು. ದುಷ್ಟರಾದ ಆ ಮೂವರ ಕಣ್ಣೊಳಗೆ ಕ್ರಮವಾಗಿ ಮೂವರು ಒತ್ತುತ್ತಿದ್ದರು. ಬುದ್ಧಿಮತಿಯ ಕಣ್ಣೊಳಗೆ ಆಕೆಯ ಸವತಿಯ ಮಗನಾದ ಅಶೋಕನೂ, ಸಂಪುಷ್ಪಾಚಾರ್ಯನ ಕಣ್ಣೊಳಗೆ ಅಶೋಕನ ವೃದ್ಧಮಂತ್ರಿಯಾದ ರಾಧಾಗುಪ್ತನೂ, ಪ್ರಮೀಳೆಯ ಕಣ್ಣೊಳಗೆ ಕಲಿಂಗದ ಯುವ ರಾಜನಾದ ಜಿತೇಂದ್ರನೂ ವಿಶೇಷವಾಗಿ ಒತ್ತುತ್ತಿದ್ದರು. ಬೇಟೆಯ ನೆವದಿಂದ ಅಶೋಕನ ಪ್ರಾಣಹರಣಮಾಡುವ ಉಪಾಯವು ವ್ಯರ್ಥವಾದದ್ದರಿಂದ ಆ ಮೂವರೂ ನಿರಾಶೆಪಟ್ಟಿದ್ದರು.

ಅವರು ಬಹಳಹೊತ್ತು ಏಕಾಂತದಲ್ಲಿ ಆಲೋಚಿಸಿದ ಮೇಲೆ ಪ್ರಮೀಳೆಯು ರಾಜಮಾತೆಯನ್ನು ಕುರಿತು—"ಮಾತಾಜಿಯವರೇ, ಕೈಕೊಂಡಕಾರ್ಯದಲ್ಲಿ ಎಷ್ಟು ವಿಘ್ನಗಳೊದಗಿದರೂ, ಹತಾಶರಾಗಬಾರದು. ನಮ್ಮ ಪ್ರಯತ್ನವು ಒಮ್ಮೆ ವ್ಯರ್ಥವಾದರೇನಾಯಿತು? ಒಂದೇ ಕಲ್ಲಿಗೆ ಕಾಯಿ ಬೀಳಬೇಕೆಂಬ ನಿಯಮವಿರುವದೋ? ನಮ್ಮ ಕಾರ್ಯಕ್ಕೆ ಪ್ರಬಲವಾದ ಮೂರು ವಿಘ್ನಗಳಿರುತ್ತವೆ. ಅವುಗಳಲ್ಲಿ ಪ್ರಧಾನ ವಿಘ್ನವಾದ ಅಶೋಕನನ್ನು ರಾಜಮಾತೆಯವರೇ, ನೀವು ನಾಶಪಡಿಸತಕ್ಕದ್ದು; ರಾಧಾಗುಪ್ತಮಂತ್ರಿಯನ್ನು ಸಂಪುಷ್ಪಾಚಾರ್ಯರು ನಾಶಮಾಡಲಿ; ನಾನು ಜಿತೇಂದ್ರನನ್ನು ನಾಶಗೊಳಿಸುತ್ತೇನೆ. ಈ ಕಾರ್ಯದಲ್ಲಿ ವಿಲಂಬವು ಕೆಲಸದ್ದಲ್ಲ. ಕಾರ್ಯವನ್ನು ಸಾಧಿಸುವದಕ್ಕಾಗಿ, ನಾನೇ ಮೊದಲು ಮುಂದುವರಿಯುತ್ತೇನೆ. ಇನ್ನು ಎಂಟು ದಿನಗಳೊಳಗಾಗಿ ಜಿತೇಂದ್ರನ ಪ್ರಾಣಹರಣ ಮಾಡುವೆನು. ಅಶೋಕನ ನಾಶಕ್ಕೆ ವಿಘ್ನವು ಯುವರಾಜನಿಂದಲೇ ಒದಗಿರುವದರಿಂದ, ಮೊದಲು ಅವನ ಜೀವವನ್ನು ಹಿಂಡಬೇಕಾಗಿದೆ. ಸದ್ಯಕ್ಕಂತೂ ಕಲಿಂಗದ ಭಾಂಡಾರವೇ ನನ್ನ ಕೈಯಲ್ಲಿರುವದರಿಂದ ದುಡ್ಡಿನ ಕೊರತೆಯಿಲ್ಲ. ಮಾಡಬಾರದ್ದನ್ನು ಮಾಡಿ ನಾನು ಜಿತೇಂದ್ರನ ನಾಶವನ್ನು ಮಾಡುವೆನು. ರಾಜಮಾತೆಯೇ, ಸಂಪುಷ್ಪಾಚಾರ್ಯರೇ, ಹತಾಶರಾಗಬೇಡಿರಿ. ನಿಮ್ಮ ನಿಮ್ಮ ಪಾಲಿಗೆ ಬಂದವರ ಪ್ರಾಣ ನಾಶಕ್ಕಾಗಿ, ಉಪಾಯಗಳನ್ನು ಯೋಚಿಸಿರಿ." ಈ ಮೇರೆಗೆ ನುಡಿದ ಬಳಿಕ ಆ ಮೂವರು ತಮ್ಮ ತಮ್ಮ ಪಾಲಿಗೆ ಬಂದವರ ನಾಶಮಾಡುವದನ್ನು ನಿಶ್ಚಯಿಸಿ, ತಮ್ಮ ತಮ್ಮ ಸ್ಥಳಗಳಿಗೆ ಹೊರಟು ಹೋದರು.

ಮುಂದೆ ನಾಲ್ಕು ದಿನಗಳು ಕಳೆದು ಹೋದವು. ಐದನೆಯ ದಿವಸ ಸೂರ್ಯೋದಯ ವಾಗುವ ಸಂಧಿಯಲ್ಲಿ ವೇಷಧಾರಿಯಾದ ಜಿತೇಂದ್ರನು ರಥದಲ್ಲಿ ಕುಳಿತು, ತುರಂಗದರ್ಬಾರ ದಿಂದ ಹೊರಟಿದ್ದನು. ರಥವು ದಕ್ಷಿಣ ದಿಕ್ಕಿಗೆ ವೇಗದಿಂದ ಸಾಗಿತ್ತು. ರಥವನ್ನು ಒತ್ತರದಿಂದ ನಡಿಸುವದಕ್ಕಾಗಿ ಯುವರಾಜನು ಸಾರಥಿಯನ್ನು ಆಜ್ಞಾಪಿಸುತ್ತಿದ್ದನು; ಆದರೆ ಸಾರಥಿಯು ಬರಬರುತ್ತ ಯುವರಾಜನ ಅಪ್ಪಣೆಯನ್ನು ದುರ್ಲಕ್ಷಿಸಿ, ತನ್ನ ಮನಸ್ಸಿಗೆ ಬಂದಂತೆ ರಥವನ್ನು ನಡೆಸಹತ್ತಿದನು. ಬರಬರುತ್ತ ಸಾರಥಿಯ ಉದ್ಧಟತನವು ಹೆಚ್ಚಾಯಿತು. ಆತನು ಕಡೆಗೆ ಯುವರಾಜನ ಅಪ್ಪಣೆಯನ್ನು ಲಕ್ಷಿಸದೆ, ನಡುವೆ ರಥವನ್ನು ನಿಲ್ಲಿಸಿಬಿಟ್ಟನು. ಅಷ್ಟರಲ್ಲಿ ಒಬ್ಬ ತರುಣ ಸ್ತ್ರೀಯು ಉದ್ಧಟತನದಿಂದ ಓಡುತ್ತ ಅಲ್ಲಿಗೆ ಬಂದು, ಸಾರಥಿಯ ಸಂಗಡ ಏನೋ ಒಟಗುಟ್ಟಿ, ಒಂದು ತಾಡವಾಲಿಯ ತುಣುಕನ್ನು ಆತನ ಕೈಯಲ್ಲಿ ಕೊಟ್ಟು, ಪ್ರಣಯಿನಿಯನ್ನು ಸಂತಾಪದಿಂದ ನೋಡುತ್ತ—ಹೊರಟು ಹೋದಳು. ಮೊದಲಿಗೆ ಆ ಸ್ತ್ರೀಯ ಗುರುತು ಯುವರಾಜನಿಗೆ ಹತ್ತದಿದ್ದರೂ, ಕಡೆಗೆ ಆಕೆಯನ್ನು ಪ್ರಮೀಳೆಯೆಂದು ಆತನು ಗುರುತು ಹಿಡಿದನು. ಪ್ರಮೀಳೆಯು ಸಾರಥಿಯ ಸಂಗಡ ಏನು ಮಾತಾಡಿರಬಹುದು? ತಾಡವಾಲಿಯ ತುಣುಕನ್ನು ಯಾಕೆ ಕೊಟ್ಟಿರಬಹುದು? ಎಂಬ ವಿಚಾರವು ಯುವರಾಜನ ಮನಸ್ಸಿನಲ್ಲಿ ಉತ್ಪನ್ನವಾದವು; ಆದರೆ ಚಕ್ರವರ್ತಿಯ ಬಳಿಗೆ ಹೋಗುವ ಉಬ್ಬಿನಲ್ಲಿ ಅವು ಬಹಳ ಹೊತ್ತು ಆತನ ಮನಸ್ಸಿನಲ್ಲಿ ಉಳಿಯಲಿಲ್ಲ. ಆತನು ಸಾರಥಿಯನ್ನು ಕುರಿತು—

ಯುವರಾಜ—ಸೂತಾ, ಚಕ್ರವರ್ತಿಯು ನನ್ನ ಹಾದಿಯನ್ನು ನೋಡುತ್ತ ಕುಳಿತಿರಲು, ನೀನು ಸಾವಕಾಶವಾಗಿ ರಥವನ್ನು ನಡೆಸುವೆಯಲ್ಲ! ಈ ಉದ್ಧಟತನಕ್ಕಾಗಿ ನಿನಗೆ ಯೋಗ್ಯ ಶಾಸನವನ್ನು ಮಾಡಿಸುವೆನು.

ಪ್ರಣಯಿನಿಯ ಮಾತುಗಳಿಗೆ ಉತ್ತರಕೊಡದೆ, ಸಾರಥಿಯು ಗಟ್ಟಿಯಾಗಿ ನಕ್ಕನು! ಅಷ್ಟರಲ್ಲಿ ಮುಂದುಗಡೆ ಒಂದು ಮನೋಹರವಾದ ಉದ್ಯಾನವು ಕಾಣಹತ್ತಿ ಮುಂದೆ ಸ್ವಲ್ಪ ಹೊತ್ತಿನಲ್ಲಿಯೇ ರಥವು ಆ ಉದ್ಯಾನದ ಆವಾರ ಗೋಡೆಯ ಬಳಿಗೆ ಬಂದಿತು. ಸಾರಥಿಯು ರಥವನ್ನು ಉದ್ಯಾನದ ಬಾಗಿಲಲ್ಲಿ ನಿಲ್ಲಿಸಲು, ಪ್ರಣಯಿನಿಯು ಅವಸರದಿಂದ ರಥವನ್ನು ಇಳಿದು ಉದ್ಯಾನವನ್ನು ಪ್ರವೇಶಿಸಹೋದಳು. ಆಗ ಸಾರಥಿಯು ಆಕೆಯನ್ನು ತಡೆದು—

ಸಾರಥಿ—ನಿಲ್ಲಿರಿ, ಇಷ್ಟು ಅವಸರದಿಂದ ತೋಟದೊಳಗೆ ಹೋಗಲಾಗದು. ಮೊದಲು ನೀವು ಬಂದಿರುವಿರೆಂದು ಹೇಳಿ ಬರದಿದ್ದರೆ, ನಿಮ್ಮ ಆದರ ಸತ್ಕಾರಗಳು ನೆಟ್ಟಗೆ ಆಗಲಿಕ್ಕಿಲ್ಲ.

ಯುವರಾಜ—ಛೇ, ಹೇಳುವ ಕಾರಣವಿಲ್ಲ. ಈ ಕಲಿಂಗದೇಶದ ಯುವರಾಜನಿಗೆ ಚಕ್ರವರ್ತಿಯ ಬಳಿಗೆ ಹೋಗಲಿಕ್ಕೆ ಎಲ್ಲಿಯೂ ಪ್ರತಿಬಂಧವಾಗುವಂತೆ ಇಲ್ಲ.

ಸಾರಥಿ—ನೀವು ಕಲಿಂಗದೇಶದ ಯುವರಾಜರಿರಲಿ; ವಂಗದೇಶದ ರಾಜರಿರಲಿ, ಈ ಸ್ಥಳದಲ್ಲಿ ಭೇದಭಾವವಿಲ್ಲ. ಅರಸರಿಂದ ಭಿಕ್ಷುಕರವರೆಗೆ, ಹುಡುಗರಿಂದ ದೊಡ್ಡವರವರೆಗೆ, ದಡ್ಡರಿಂದ ಪಂಡಿತರವರೆಗೆ, ಅಂಜುಬುರುಕರಿಂದ ಶೂರರವರೆಗೆ, ಎಲ್ಲರಿಗೂ ಸರಿಯಾಗಿಯೇ ಇಲ್ಲಿ ಸತ್ಕಾರವಾಗುವದು. ನೀವು ಇಷ್ಟು ಚಿಕ್ಕವಯಸ್ಸಿನಲ್ಲಿ ಈ ಸ್ಥಾನದಲ್ಲಿಯ ಸತ್ಕಾರಕ್ಕೆ ಪಾತ್ರರಾದದ್ದನ್ನು ನೋಡಿ, ನನಗೆ ಬಹಳ ಸಂತೋಷವಾಗುತ್ತದೆ.

ಈ ಮೇರೆಗೆ ನುಡಿದು, ಸಾರಥಿಯು ಉದ್ಯಾನದ ಬಾಗಿಲಬಳಿಗೆ ಹೋಗಿ, ದ್ವಾರಪಾಲಕನ ಕೈಯಲ್ಲಿ ತಾಡಪತ್ರದ ಒಂದು ತುಣುಕನ್ನು ಕೊಟ್ಟನು. ಆಗ ದ್ವಾರಪಾಲಕನು ರಥಿಕನನ್ನೂ, ಸಾರಥಿಯನ್ನೂ ಆಶ್ಚರ್ಯದಿಂದ ನೋಡುತ್ತಿರಲು, ಸಾರಥಿಯು ರಥವನ್ನು ತಿರುಗಿಸಿಕೊಂಡು ಹೊರಟುಹೋದನು. ಯುವರಾಜನು ಅಶೋಕನನ್ನು ಕಾಣುವ ಆತುರದಿಂದ ಉದ್ಯಾನವನ್ನು ಪ್ರವೇಶಿಸಿದನು. ಉದ್ಯಾನದ ಅನುಪಮೇಯವಾದ ಶೋಭೆಯನ್ನು ನೋಡಿ, ಯುವರಾಜನಿಗೆ ಪರಮಾಶ್ಚರ್ಯವಾಯಿತು. ಅಲ್ಲಿರುವ ಕಾರಂಜಿಗಳು, ಸ್ವಚ್ಛೋದಕಗಳ ಪುಷ್ಕರಣಿಗಳು, ಲತಾ ಮಂಟಪಗಳು ಇವೇ ಮೊದಲಾದ ವಿಶ್ರಾಂತಿಯ ಸಾಧನಗಳು ಯುವರಾಜನ ಮನಸ್ಸನ್ನು ಎಳಕೊಂಡವು. ಅಂಥ ವಿಸ್ತಾರವಾದ ಕಲಿಂಗದೇಶದ ರಾಜಪುತ್ರನಿಗೆ ಸಹ ಆ ಉದ್ಯಾನವು ಅತ್ಯಂತ ಮನೋಹರವಾಗಿ ತೋರಿತೆಂದ ಬಳಿಕ, ಆ ಉದ್ಯಾನದ ಗೌರವವನ್ನೇನು ವರ್ಣಿಸ ಬೇಕು? ಆ ಮನೋರಮ ಸ್ಥಾನದಲ್ಲಿ ಯುವರಾಜನಿಗೆ ವಿಶ್ರಮಿಸುವ ಮನಸ್ಸಾಯಿತು. ಆತನು ಒಂದು ಲತಾಮಂಟಪದ ಬಳಿಯ ಆಸನದಮೇಲೆ ಕುಳಿತುಕೊಂಡು ದ್ವಾರಪಾಲಕನನ್ನು ಕುರಿತು—

ಯುವರಾಜ—ಈ ರಮ್ಯಸ್ಥಾನದ ಹೆಸರೇನು?

ದ್ವಾರಪಾಲಕ—ಇದಕ್ಕೆ ನರಕೋದ್ಯಾನವೆನ್ನುವರು.

ಯುವರಾಜ—ಏನಂದಿ? ಇದರ ಹೆಸರು ನರಕೋದ್ಯಾನವೆ? ಎಂಥ ಕೆಟ್ಟ ಹೆಸರಿದು? ಈ ವನಕ್ಕೆ ನಂದನವನವೆಂಬ ಹೆಸರು ಇಟ್ಟಿದ್ದರೆ, ಬಹಳ ಒಪ್ಪುತ್ತಿತ್ತು. ಇರಲಿ, ಇದರ ಹೆಸರು ತಕ್ಕೊಂಡು ಮಾಡುವದೇನು? ಸ್ಥಳಮಾತ್ರ ಬಹಳ ರಮಣೀಯವಾಗಿದೆ! ಈವೊತ್ತಿನವರೆಗೆ ಚಕ್ರವರ್ತಿಯು ನನ್ನನ್ನು ಈ ವನಕ್ಕೆ ಕರಕೊಂಡು ಬಾರದೆಯಿದ್ದದ್ದು ಪರಮಾಶ್ಚರ್ಯವು! ಎಲ್ಲಿರುವರು ಚಕ್ರವರ್ತಿಗಳು? ಇಷ್ಟು ಅವಸರದಿಂದ ಕರೆಸುವಷ್ಟು ಮನೋರಮತೆಯು ಈ ಉದ್ಯಾನದಲ್ಲಿ ಇರುತ್ತದೆಂದು ನಿರ್ವಿವಾದವಾಗಿ ಹೇಳಬಹುದು.

ದ್ವಾರಪಾಲಕ—ಈ ಉದ್ಯಾನವನ್ನು ನರಕಕ್ಕೆ ಜೋಡಿಸುವದಕ್ಕಿಂತ ಮೊದಲು ಇದು ಚಕ್ರವರ್ತಿಗಳಿಗೆ ಬಹು ಪ್ರಿಯವಾಗಿತ್ತು; ಆದರೆ ಇದನ್ನು ನರಕಕ್ಕೆ ಜೋಡಿಸಿದ ಬಳಿಕ ಅವರು ಇದರ ಕಡೆಗೆ ಸುಳಿದಿರುವದಿಲ್ಲ. ಮುಂದೆಯಾದರೂ ಅವರು ಇಲ್ಲಿಗೆ ಬರುವ ಸಂಭವವಿರುವದಿಲ್ಲ.

ಯುವರಾಜ—ಏನಂದಿ? ಚಕ್ರವರ್ತಿಯು ಎಂದೂ ಇಲ್ಲಿಗೆ ಬರುವದಿಲ್ಲವೋ? ಈಗ ಆತನು ಇಲ್ಲಿಗೆ ಬಂದಿರುವದಿಲ್ಲವೋ? ಸಾರಥಿಯು ಎಲ್ಲಿಗೆ ರಥವನ್ನು ತಂದುಬಿಟ್ಟನಲ್ಲ! ನಾನು ಚಕ್ರವರ್ತಿಯ ಬಳಿಗೆ ಬೇಗನೆ ಹೋಗಬೇಕಾಗಿತ್ತು. ದರ್ಬಾರತುರಂಗವನ್ನು ಬಿಟ್ಟ ಬಳಿಕ ಸಾರಥಿಯು ನನ್ನ ಮಾತನ್ನು ಕೇಳದೆ, ಉದ್ಧಟತನದಿಂದ ನಡೆಯುತ್ತ ಬಂದು, ಕಡೆಗೆ ಕೆಲಸ ಕೆಡಿಸಿಬಿಟ್ಟನು. ದ್ವಾರಪಾಲಕಾ, ನಾನು ಚಕ್ರವರ್ತಿಯ ಬಳಿಗೆ ಹೋಗುವೆನು. ಮತ್ತೆ ಎಂದಾದರೂ ಚಕ್ರವರ್ತಿಯೊಡನೆ ಈ ಉದ್ಯಾನವನ್ನು ನೋಡಲಿಕ್ಕೆ ಬರುವೆನು.

ದ್ವಾರಪಾಲಕ—ನೀವು ನರಕೋದ್ಯಾನವನ್ನು ಬಿಟ್ಟು ಹೋಗಲಾಗದು. ನೀವು ಅಪರಾಧಿಗಳಾದುದರಿಂದ ಚಕ್ರವರ್ತಿಗಳೇ ಶಿಕ್ಷೆಯನ್ನು ಭೋಗಿಸುವದಕ್ಕಾಗಿ ನಿಮ್ಮನ್ನು ಇಲ್ಲಿಗೆ ಕಳಿಸಿದ್ದಾರೆ.

ಯುವರಾಜ—ಏನು? ಚಕ್ರವರ್ತಿಗಳು ನನ್ನನ್ನು ಇಲ್ಲಿಗೆ ಕಳಿಸಿದ್ದಾರೆಯೇ? ಈ ಮಾತು ಒಪ್ಪಿಕೊಳ್ಳತಕ್ಕದಲ್ಲ, ಅಸಂಭವವಾದದ್ದು. ನಾನಂತು ಈ ಉದ್ಯಾನವನ್ನು ಬಿಟ್ಟು ಹೊರಗೆ ಹೋಗುತ್ತೇನೆ, ಪ್ರತಿಬಂಧಮಾಡುವವನು ಮುಂದಕ್ಕೆ ಬರಲಿ.

ಈ ಮೇರೆಗೆ ನುಡಿದು, ಯುವರಾಜನು ಹೊರಗೆ ಹೋಗಬೇಕೆಂದು ಆವೇಶದಿಂದ ಹೆಜ್ಜೆಗಳನ್ನು ಇಡಹತ್ತಿದನು. ಆತನು ನಾಲ್ಕು ಹೆಜ್ಜೆಗಳನ್ನು ಹೋಗಿರಬಹುದು; ಅಷ್ಟರಲ್ಲಿ— "ನಿಲ್ಲು, ಒಂದು ಹೆಜ್ಜೆಯನ್ನು ಕೂಡ ಮುಂದಕ್ಕೆ ಇಡಬೇಡ. ನಿನ್ನ ದುರ್ಬಲ ಪ್ರಯತ್ನವು ಎಂದಿಗೂ ಸಫಲವಾಗಲಿಕ್ಕಿಲ್ಲ. ಈ ನರಕಾಧಿಪತಿಯ ಕೈಯಲ್ಲಿ ಸಿಕ್ಕ ಮನುಷ್ಯನು ಜೀವದ ಆಶೆಯನ್ನು ಬಿಡಲೇಬೇಕಾಗುವದು. ಈ ನರಕದ ಅವಾರದಲ್ಲಿ ಬಂದ ಮನುಷ್ಯನು, ಮೃತ್ಯುಲೋಕದ ಸಂಬಂಧದ ವಿಚಾರಗಳನ್ನು ಮರೆತುಬಿಟ್ಟು, ಪರಲೋಕದ ಕಾಲ್ಪನಿಕ ಸುಖವನ್ನು ಕಣ್ಣಿಗೆ ಕಟ್ಟಿಕೊಳ್ಳಬೇಕಾಗುವದು. ದೇವಲೋಕದೊಳಗಿನ ನರಕಾಧಿಪತಿಯಾದ ಯಮನು, ಒಂದು ಪ್ರಸಂಗದಲ್ಲಿ ಕರ್ತವ್ಯಭ್ರಷ್ಟನಾಗಿ ಅಪರಾಧಿಗಳನ್ನು ದುರ್ಲಕ್ಷಿಸಿ ಬಿಡಬಹುದು; ಆದರೆ ಮೃತ್ಯುಲೋಕದ ಯಮನಾದ ನಾನು ಎಂದಿಗೂ ಕರ್ತವ್ಯಭ್ರಷ್ಟನಾಗಲಿಕ್ಕಿಲ್ಲ. ದ್ವಾರಪಾಲಕಾ, ಹೋಗು ನಿನ್ನ ಸ್ಥಳಕ್ಕೆ; ನಿನ್ನ ಕೆಲಸವಾಯಿತು. ನನ್ನ ದೂತರು ಅಲ್ಲಲ್ಲಿ ಗುಪ್ತರೀತಿಯಿಂದ

ವಾಸಮಾಡಿರುವರು. ಅವರು ಇವನ ಡೌಲು ನಡೆಯಗೊಡಲಾರರು. ಎಲೈ ಅಪರಾಧಿಯೇ, ಕೇಳು; ನೀನು ಯಾವದೋ ಘೋರವಾದ ಅಪರಾಧ ಮಾಡಿದ್ದರಿಂದ, ಭಗವಾನ್ ಚಕ್ರವರ್ತಿಯು ಶಿಕ್ಷೆಯನ್ನು ಭೋಗಿಸುವದಕ್ಕಾಗಿ ನಿನ್ನನ್ನು ನನ್ನ ಕಡೆಗೆ ಕಳಿಸಿದ್ದಾನೆ. ಕಾದ ಎಣ್ಣೆಯ ಕೊಪ್ಪರಿಗೆಯಲ್ಲಿ ನಿನ್ನನ್ನು ಒಗೆದು, ಕರಿದು ಕೊಲ್ಲಬೇಕೆಂದು ಚಕ್ರವರ್ತಿಯು ಆಜ್ಞಾಪಿಸಿರುತ್ತಾನೆ. ಇನ್ನು ನಾಲ್ಕು ಗಳಿಗೆಯಮೇಲೆ ಆ ಶಿಕ್ಷೆಯನ್ನು ನೀನು ಭೋಗಿಸಬೇಕಾಗುವದು. ಅಲ್ಲಿಯವರೆಗೆ ಈ ರಮ್ಯವಾದ ಉಪವನದಲ್ಲಿ ಸಂಚರಿಸಲಿಕ್ಕೆ ನಿನಗೆ ಪ್ರತಿಬಂಧವಿಲ್ಲ. ಅಲ್ಲಿಯವರೆಗೆ ಈಶ್ವರ ಧ್ಯಾನಮಾಡು. ನಾಲ್ಕು ಗಳಿಗೆಯಾದ ಕೂಡಲೆ ನನ್ನ ದೂತರು ನಿನ್ನನ್ನು ನರಕಸ್ಥಾನಕ್ಕೆ ಎಳೆದೊಯ್ದು, ಕಾದಎಣ್ಣೆಯ ಕೊಪ್ಪರಿಗೆಯಲ್ಲಿ ನಿನ್ನನ್ನು ಕೆಡವುವರು.

ನರಕಾಧಿಪತಿಯ ಉಗ್ರರೂಪವನ್ನು ನೋಡಿ, ಭಯಗ್ರಸ್ತನಾಗಿದ್ದ ವೇಷಧಾರಿಯಾದ ಯುವರಾಜನು, ಆ ಅಧಿಕಾರಿಯ ಮಾತುಗಳನ್ನು ಕೇಳಿ ಮತ್ತಿಷ್ಟು ಕೈಕಾಲುಗೆಟ್ಟನು. ಆ ಸುಕುಮಾರನ ಮೈಯಲ್ಲಿ ನಿಂತುಕೊಳ್ಳುವ ಸಾಮರ್ಥ್ಯವು ಉಳಿಯದ್ದರಿಂದ, ಆತನು ಅಲ್ಲಿಯೇ ಒಂದು ಕಡೆಗಿದ್ದ ಪೀಠದ ಮೇಲೆ ಕುಳಿತುಕೊಂಡು, ಮೃತ್ಯುಲೋಕದ ಯಮನ ಕಠೋರವಚನಗಳನ್ನು ಕೇಳುತ್ತಲಿದ್ದನು. ಕಡೆಗೆ ನರಕಾಧಿಪತಿಯ ಮಾತು ಮುಗಿಯಲು, ಯುವರಾಜನು ಆತನನ್ನು ಕುರಿತು—

ಯುವರಾಜ—ಏನು? ನಾನು ಭಗವಾನರವರ ಅಪ್ಪಣೆಯಂತೆ ತಪ್ತತೈಲದ ಕಟಾಹದಲ್ಲಿ ಕೆಡವಲ್ಪಡುವೆನೋ? ಎಲ್ಲಿಯದೆ ಆ ಚಕ್ರವರ್ತಿಯ ಅಪ್ಪಣೆಯು?

ನರಕಾಧಿಪತಿ—ಇದು ನೋಡು ಅಪ್ಪಣೆಯನ್ನು; ಈ ತಾಡವಾಲಿಯ ತುಣುಕನ್ನು ಓದಿಕೋ; ಅಂದರೆ ಚಕ್ರವರ್ತಿಯು ಆಜ್ಞಾಪಿಸಿರುವನೋ ಇಲ್ಲವೋ ಎಂಬದು ನಿನಗೆ ತಿಳಿಯುವದು.

ಯುವರಾಜ—ಇದರಲ್ಲಿ ನನ್ನ ಹೆಸರು ಇಲ್ಲ; ಶಿಕ್ಷೆಯನ್ನು ಅನುಭೋಗಿಸುವವನ ಸ್ವರೂಪವನ್ನು ಇದರಲ್ಲಿ ವರ್ಣಿಸಿರುವದಿಲ್ಲ; ಅಂದಬಳಿಕ ನನಗೆ ಶಿಕ್ಷೆಯನ್ನು ವಿಧಿಸುವದು ಹೇಗೆ?

ನರಕಾಧಿಪತಿ—ಇಂಥ ಸಣ್ಣಪುಟ್ಟ ಸಂಶಯಗಳನ್ನು ಮುಂದೆಮಾಡಿ ನೀನು ಪಾರಾಗಲಾರೆ. ಆಜ್ಞಾ ಪತ್ರವು ಸರಿಯಾಗಿ ಬರೆಯಲ್ಪಟ್ಟಿದೆಯೋ ಇಲ್ಲವೋ ಎಂಬದನ್ನು ನೋಡುವ ಕೆಲಸವು ನನ್ನದಲ್ಲ. ಶಿಕ್ಷೆಗೆ ಪಾತ್ರನಾದ ಮನುಷ್ಯನ ಸಂಗಡ ಚಕ್ರವರ್ತಿಯ ರುಜುವಿದ್ದ ಒಂದು ಚೀಟಿಯಿದ್ದರಾಯಿತು. ಎಂಥ ಶಿಕ್ಷೆ ಕೊಡತಕ್ಕದ್ದೆಂಬದನ್ನು ಮಾತ್ರ ಅದರಲ್ಲಿ ಸ್ಪಷ್ಟವಾಗಿ ಬರೆದಿರಲಿಕ್ಕೆ ಬೇಕು. ಈಗ ಶಿಕ್ಷೆಗೆ ಪಾತ್ರನಾದ ನಿನ್ನ ಸಂಗಡ ಚಕ್ರವರ್ತಿಯ ರುಜುವಿದ್ದ ಒಂದು ಚೀಟಿಯು ಬಂದಿರುತ್ತದೆ; ಅದರಲ್ಲಿ ಇಂಥ ಶಿಕ್ಷೆಯನ್ನೇ ಕೊಡಬೇಕೆಂದು ಸ್ಪಷ್ಟವಾಗಿ ಬರೆದಿರುತ್ತದೆ; ಅಂದ ಬಳಿಕ ಇದಕ್ಕೂ ಹೆಚ್ಚಿಗೆ ಮತ್ತೇನು ಬೇಕಾಗಿರುವದು?

ಪುರುಷವೇಷಧಾರಿಯಾದ ಪ್ರಣಯಿನಿಯು, ಅಕಸ್ಮಾತ್ತಾಗಿ ಒದಗಿದ ಈ ಸಂಕಟದಿಂದ ಬಹಳ ಹೈರಾಣಾದಳು. ಆಕೆಯು ಏನೂ ತಿಳಿಯದೆ ಮೂಢಳಾಗಿ, ಕಣ್ಣುಮುಚ್ಚಿಕೊಂಡು ಸುಮ್ಮನೆ ಬಿದ್ದುಕೊಂಡುಬಿಟ್ಟಳು. ಆಕೆಯ ಕೋಮಲವಾದ ಶರೀರವು ಬಾಡಿಹೋಗಿತ್ತು. ಅದಕ್ಕೆ ಉಲುಕಾಡುವ ಸಾಮರ್ಥ್ಯವಿದ್ದಿಲ್ಲ. ಆಕೆಯ ಪ್ರಫುಲ್ಲಿತ ಮನಸ್ಸು ಮ್ಲಾನವಾದದ್ದರಿಂದ,

ಅದರಲ್ಲಿಯ ವಿಚಾರಶಕ್ತಿಯು ನಷ್ಟವಾಗಿತ್ತು. ನರಕಾಧಿಪತಿಯು ಹೋದ ಎರಡು ಗಳಿಗೆಯ ಮೇಲೆ, ಸಮೀಪದ ಒಂದು ಲತಾ ಮಂಟಪದೊಳಗಿಂದ ಒಬ್ಬ ಪುರುಷನು ಹೊರಬಿದ್ದನು. ಆತನು ಸುತ್ತುಮುತ್ತು ನೋಡುತ್ತ ಅಡಗುತ್ತ ನೆಲಕ್ಕೆ ರಾವುತ್ತ ಪ್ರಣಯಿನಿಯು ಬಿದ್ದುಕೊಂಡಿದ್ದ ಆಸನದ ಬಳಿಗೆ ಬಂದನು. ಪ್ರಣಯಿನಿಯ ಶೋಚನೀಯ ಸ್ಥಿತಿಯನ್ನು ನೋಡಿ, ಆ ಪುರುಷನ ಕಣ್ಣೊಳಗಿಂದ ಅಶ್ರುಗಳು ಧಾರೆಯಿಟ್ಟು ಸುರಿಯಹತ್ತಿದ್ದವು. ಅವುಗಳಲ್ಲಿ ಒಂದು ಅಶ್ರು ಬಿಂದುವು ಪ್ರಣಯಿನಿಯ ಗಲ್ಲದಮೇಲೆ ಬೀಳಲು, ಆಕೆಯು ಬೆಚ್ಚಿಬಿದ್ದು, ಯಮದೂತರೇ ಬಂದರೆಂಬ ಭಯದಿಂಧ ಆ ಪುರುಷನನ್ನು ಕಣ್ದೆರೆದು ನೋಡಿದಳು; ಆಗ ಆಕೆಯು ಸಖೇದಾಶ್ಚರ್ಯದಿಂದ ಆ ಪುರುಷನನ್ನು ಕುರಿತು—

ಯುವರಾಜ—ಉಪಗುಪ್ತ ಶ್ರೇಷ್ಠಿಯೇ, ಮರಣದ ತೆಕ್ಕೆಯಲ್ಲಿ ನೀನು ಹೇಗೆ ಸಿಕ್ಕೆ?

ಉಪಗುಪ್ತ—ನಾನು ಬೇಕೆಂತಲೇ ದ್ವಾರಪಾಲಕನ ಕಣ್ಣುತಪ್ಪಿಸಿ, ಇಲ್ಲಿಗೆ ಬಂದೆನು.

ಯುವರಾಜ—ಈ ಮನೋಹರವಾದ ಉದ್ಯಾನದ ಶೋಭೆಗೆ ಮರುಳಾಗಿ ಬಂದೆಯೆಂಬಂತೆ ಕಾಣುತ್ತದೆ; ಇಲ್ಲದಿದ್ದರೆ ಈ ಆವಾರದಲ್ಲಿ ಕಾಲಿಡುವ ಧೈರ್ಯವು ಯಾರಿಗೂ ಆಗುವಹಾಗಿಲ್ಲ.

ಉಪಗುಪ್ತ—ಯುವರಾಜನೇ, ಇದರ ಅಂತರಂಗವು ಎಷ್ಟು ಭಯಂಕರವಿರುತ್ತ ದೆಂಬದನ್ನು ನಾನು ಪೂರ್ಣವಾಗಿ ಅರಿತಿರುವೆನು; ಆದರೆ ನಿನ್ನಂಥ ಸುಕುಮಾರ ರಾಜಪುತ್ರನನ್ನು ಹತ್ತುಸಾವಿರ ಹೊನ್ನಿಗೆ ಮಾರಿ, ಅದರೊಳಗಿನ ಸ್ವಲ್ಪ ಹಣದಿಂದ ನನ್ನನ್ನು ಬಂಧಮುಕ್ತಮಾಡಿದ ಬಕುಲೆಯ ಮಹಾಪಾತಕವನ್ನು ತೊಳಕೊಳ್ಳುವದಕ್ಕಾಗಿ ಇಲ್ಲಿಗೆ ನಾನು ಬಂದಿದ್ದೇನೆ. ಮೃತ್ಯುವಿನ ದವಡೆಯೊಳಗಿಂದ ನಿನ್ನನ್ನು ಬಿಡಿಸಿದಹೊರತು, ಆ ಮಹಾ ಪಾತಕದ ಕ್ಷಾಲನವಾಗುವಂತೆಯಿಲ್ಲ. ನಿನ್ನ ಬಂಧವಿಮೋಚನಕ್ಕಾಗಿ ಈಗ ಬಹು ದಿವಸಗಳಿಂದ ಯತ್ನಿಸುತ್ತಿದ್ದ ನನಗೆ, ಇಂದು ಆ ಸುಯೋಗವು ಒದಗಿರುತ್ತದೆ. ನಾನು ಇಂದು ನಿನ್ನನ್ನು ನರಕಯಾತನೆಯಿಂದ ಮುಕ್ತನಾಗಮಾಡಿ, ನನ್ನ ಹೆಂಡತಿಯಿಂದಾದ ಅಪರಾಧವನ್ನು ತಿದ್ದಿಕೊಳ್ಳುತ್ತೇನೆ.

ಯುವರಾಜ—(ಶ್ರೇಷ್ಠಿಯನ್ನು ನಿಷ್ಠೆಯಿಂದ ನೋಡುತ್ತ)—ಉಪಗುಪ್ತ ಶ್ರೇಷ್ಠೀ, ಈ ಸ್ಥಳದಿಂದ ನನ್ನನ್ನು ನೀವು ಹೇಗೆ ಬಿಡಿಸುವಿರಿ?

ಉಪಗುಪ್ತ—ಸದ್ಗುಣಿಯಾದ ಯುವರಾಜನೇ, ನನ್ನ ದೇಹವನ್ನು ನರಕಭೋಗಕ್ಕಾಗಿ ಒಪ್ಪಿಸಿ ನಿನ್ನ ಬಿಡುಗಡೆ ಮಾಡುವೆನು. ನೀನು ಈ ಸಮೀಪದ ಲತಾಮಂಟಪದಲ್ಲಿ ಸಂಜೆಯವರೆಗೆ ಅಡಗಿಕೊಂಡು ಕುಳಿತುಕೋ; ನಾನು ನಿನ್ನ ಆಸನದಮೇಲೆ ಕುಳಿತುಕೊಳ್ಳುವೆನು. ನರಕಾಧಿಪತಿಯು ನಿನ್ನನ್ನು ಒಯ್ಯುವದಕ್ಕಾಗಿ ಬಂದರೆ, ನಾನೇ ಅವನ ಸಂಗಡ ಹೋಗುತ್ತೇನೆ. ನರಕದಲ್ಲಿ ಬಂದವರನ್ನೆಲ್ಲ ಶಿಕ್ಷೆಗೆ ಗುರಿಮಾಡಿದ ಲೆಖ್ಖವು ಸಾಯಂಕಾಲಕ್ಕೆ ಹೋದಬಳಿಕ, ಯಮದೂತರು ನಿನ್ನನ್ನು ಹುಡುಕಲಾರರು. ರಾತ್ರಿಯಾದಮೇಲೆ ಆ ಆಮ್ರವೃಕ್ಷದ ಆಶ್ರಯದಿಂದ ಕೋಟೆಯ ಗೋಡೆಯ ಮೇಲೆ ಇಳಿ; ನಿನಗೆ ಈಸಲಿಕ್ಕೆ ಬರುತ್ತಿದ್ದರೆ, ಅಲ್ಲಿಂದ ಗಂಗಾಪ್ರವಾಹದ ಮಡುವಿನೊಳಗೆ ಹಾರಿಕೊಂಡು ಈಸಿ ಪಾರಾಗು; ಈಸಲಿಕ್ಕೆ ಬರದಿದ್ದರೆ, ಹಾಗೇ

ಗೋಡೆಯಮೇಲಿಂದ ಉದ್ಯಾನದ ಬಾಗಿಲತನಕ ಹೋಗಿ ಇಳಿದು ಪಾರಾಗಿಹೋಗು. ರಾತ್ರಿ ಕಾವಲುಗಾರರು ನರಕಸ್ಥಾನವನ್ನು ಅಷ್ಟು ದಕ್ಷತೆಯಿಂದ ಕಾಯುವದಿಲ್ಲ. ನೀನು ಈ ಸಂಕಟದಿಂದ ಸುರಕ್ಷಿತ ಪಾರಾಗುತ್ತೀಯೆಂದು ನನ್ನ ಮನೋದೇವತೆಯು ಹೇಳುತ್ತದೆ.

ಯುವರಾಜ—ಉಪಗುಪ್ತಶ್ರೇಷ್ಠೀ, ನನ್ನನ್ನು ನೀವು ಇಷ್ಟು ನೀಚನೆಂದು ಭಾವಿಸುವಿರೋ? ನಿಮ್ಮಂಥ ಸತ್ಪುರುಷರನ್ನು ಮರಣಕ್ಕೆ ಗುರಿಮಾಡಿ ಬದುಕುವಂಥ ಹೀನಸ್ಥಿತಿಯ ಮನುಷ್ಯನು ನಾನಿರುವದಿಲ್ಲ. ನನ್ನನ್ನು ರಕ್ಷಿಸುವ ವಿಚಾರದಿಂದ ನಿಮ್ಮ ಜೀವವನ್ನು ವ್ಯರ್ಥವಾಗಿ ಸಂಕಟದಲ್ಲಿ ಕೆಡವಿಕೊಂಡಿರಿ!

ಉಪಗುಪ್ತ—ರಾಜಪುತ್ರಾ, ನೀನು ಹೀಗೆ ಹಟಮಾರಿಯಾಗುವದು ಯೋಗ್ಯವಲ್ಲ. ನನ್ನ ಹೆಂಡತಿಯು ನಿನ್ನನ್ನು ಆಪತ್ತಿಗೆ ಗುರಿಮಾಡಿದ್ದರಿಂದ ನನ್ನ ಮನಸ್ಸಿಗಾಗಿರುವ ಅಸಮಾಧಾನವು, ಹೀಗೆ ನಾನು ಸ್ವಾರ್ಥತ್ಯಾಗ ಮಾಡಿದಹೊರತು ಎಂದಿಗೂ ಕಡಿಮೆಯಾಗಲಾರದು. ನಾನು ಧರ್ಮಧ್ಯಾನದಲ್ಲಿ ಕಾಲವನ್ನು ಕಳೆಯುತ್ತಿದ್ದರೂ, ನಿನಗೊದಗಿದ ಆಪತ್ತಿನ ಸ್ಮರಣದಿಂದ ನನಗೆ ಶಾಂತಿಯು ದೊರೆಯಲೊಲ್ಲದು; ಆದ್ದರಿಂದ ಸದ್ಗುಣಿಯಾದ ರಾಜಪುತ್ರನೇ, ನನ್ನ ಮೇಲೆ ಇಷ್ಟು ಅನುಗ್ರಹಮಾಡು.

ಯುವರಾಜ—ಉಪಗುಪ್ತಶ್ರೇಷ್ಠೀ, ನಿಮ್ಮ ಆಗ್ರಹವು ವ್ಯರ್ಥವಾದದ್ದು. ಬಕುಲಾದೇವಿಯ ಮಾಂಗಲ್ಯವನ್ನು ಮಣ್ಣುಗೂಡಿಸಿ ನನ್ನ ಜೀವವನ್ನು ಉಳಿಸಿಕೊಳ್ಳುವದೆಂದರೆ, ಅಮಾನುಷವಾದ ಸ್ವಾರ್ಥಬುದ್ಧಿಯನ್ನು ವ್ಯಕ್ತಮಾಡುವದಾಗಿರುತ್ತದೆ. ಆಗದು, ನನ್ನಿಂದ ಆ ಕೆಲಸವು ಸರ್ವಥಾ ಆಗದು!

ಉಪಗುಪ್ತ—ಯುವರಾಜಾ, ಬಕುಲಾದೇವಿಯ ಚಿಂತೆಯನ್ನು ಬಿಡು. ನಮ್ಮಿಬ್ಬರಲ್ಲಿ ಈಗ ಪತಿ-ಪತ್ನೀಭಾವವು ಉಳಿದಿರುವದಿಲ್ಲ. ಬಕುಲೆಯು ನನ್ನನ್ನು ಈಗ ಧರ್ಮಗುರುವೆಂದು ಭಾವಿಸುವಳು, ಪತಿಯೆಂದು ಭಾವಿಸುವದಿಲ್ಲ. ಆಕೆಯು ಸಂಸಾರವನ್ನು ಕಾಲಿನಿಂದ ಒದ್ದು, ಆತ್ಮೋದ್ಧಾರವನ್ನು ಮಾಡಿಕೊಳ್ಳುತ್ತ, ಎಲ್ಲಿಯಾದರೂ ಆನಂದದಿಂದ ಇರಬಹುದು. ನನ್ನ ಮರಣದಿಂದ ಆಕೆಗೆ ಲೇಶವಾದರೂ ದುಃಖವಾಗಲಾರದು. ಆಕೆಯ ಮನಸ್ಸಿನ ಸ್ಥಿತಿಯು, ಸಾಂಸಾರಿಕ ದುಃಖಗಳಿಂದ ದುಃಖಿತವಾಗುವಷ್ಟು ದುರ್ಬಲವಾಗಿರುವದಿಲ್ಲ. ಯುವರಾಜನೇ, ವ್ಯರ್ಥ ಕಾಲಹರಣಮಾಡಬೇಡ. ಇನ್ನು ಒಂದು ಗಳಿಗೆಯೊಳಗಾಗಿ ದೂತರು ಇಲ್ಲಿಗೆ ಬರುವರು. ಅಷ್ಟು ಹೊತ್ತನ್ನಾದರೂ ಶಾಂತತೆಯಿಂದ ಕಳೆಯುವ ಸಂಧಿಯನ್ನು ನನಗೆ ಒದಗಿಸಿಕೊಡು. ನೀನು ಎಷ್ಟು ಹಟಮಾಡಿದರೂ ನನ್ನ ನಿಶ್ಚಯವು ಶಿಥಿಲವಾಗದು.

ಯುವರಾಜ—ನಿಮ್ಮ ಜೀವವನ್ನು ನನ್ನ ಸಲುವಾಗಿ ಬಲಿಕೊಡಲಿಕ್ಕಿಲ್ಲೆಂದು ನಾನು ನಿಶ್ಚಯಿಸಿರುವೆನು. ಉಪಗುಪ್ತಶ್ರೇಷ್ಠಿಯೇ, ಕ್ಷತ್ರಿಯರ ನಿಶ್ಚಯದ ದೃಢತ್ವವನ್ನು ನೀನು ಬಲ್ಲೆಯಷ್ಟೆ?

ಉಪಗುಪ್ತ—ಯುವರಾಜಾ, ನಿನ್ನ ದೃಢನಿಶ್ಚಯಕ್ಕಾಗಿ ನಾನು ನಿನ್ನನ್ನು ಪೂಜ್ಯನೆಂದು ಭಾವಿಸುತ್ತೇನೆ; ಆದರೆ ನನ್ನ ಪ್ರಾಣಹಾನಿಯಾಗದೆ, ನಿನ್ನ ಪ್ರಾಣರಕ್ಷಣವಾದರೆ ನನ್ನ ಮಾತನ್ನು ಕೇಳುವೆಯಷ್ಟೇ?

ಯುವರಾಜ—ಅವಶ್ಯವಾಗಿ ಕೇಳುವೆನು; ಆದರೆ ನಿನ್ನ ಮಾತಿನ ನಂಬಿಗೆಯು ನನಗೆ ಹೇಗಾಗಬೇಕು?

ಉಪಗುಪ್ತ—ಯುವರಾಜಾ, ನನ್ನ ಮಾತಿನ ಹೊರತು ಹೆಚ್ಚಿನ ನಂಬಿಗೆಯ ಆಶೆಯನ್ನು ನೀನು ಯಾಕೆ ಮಾಡುತ್ತೀ? ಉಪಗುಪ್ತನ ಮುಖದಿಂದ ಅಸತ್ಯವಾಣಿಯು ಎಂದಿಗೂ ಹೊರಡದು. ತಪ್ತತೈಲದಿಂದ ನನಗೆ ಸರ್ವಥಾ ವ್ಯಥೆಯಾಗಲಾರದೆಂಬ ನನ್ನ ಮಾತನ್ನು ನಂಬು. ಆತ್ಮವನ್ನು ಪರಮಾತ್ಮನಲ್ಲಿ ತಲ್ಲೀನಗೊಳಿಸುವವನ ಮೇಲೆ, ಪೃಥಿವ್ಯಾಧಿ ಪಂಚಮಹಾ ಭೂತಗಳ ಆಟವು ನಡೆಯದು. ಭಗವದ್ಭಕ್ತನಾದ ಸುಧನ್ವನ ಕಥೆಯನ್ನು ನೀನು ಕೇಳಿರುವದಿಲ್ಲವೇ? ನೀನು ನನ್ನ ಚಿಂತೆಯನ್ನು ಬಿಡು. ಒಂದು ಪ್ರಸಂಗದಲ್ಲಿ ನಾನು ದೇಹವನ್ನು ತ್ಯಜಿಸಲೇಬೇಕಾದರೆ, ಪರಲೋಕದ ಎಲ್ಲ ಸಿದ್ಧತೆಯನ್ನು ಮಾಡಿಕೊಂಡು ಗಂಟುಕಟ್ಟಿ ಕುಳಿತವನಂತೆ, ಸಿದ್ಧನಾಗಿ ಕುಳಿತಿರುವ ನನ್ನ ಸಲುವಾಗಿ ನಿನ್ನಂಥ ಸುವಿಚಾರಿಯು ಅಸಮಾಧಾನ ಪಡಲಾಗದು; ನಿನ್ನಿಂದ ಜಗತ್ತಿನ ಕಲ್ಯಾಣವಾಗಬೇಕಾಗಿರುವದರಿಂದ, ನಿನ್ನ ಜೀವವನ್ನು ತುಚ್ಛವೆಂದು ಎಣಿಸಬೇಡ; ನೀನು ಚಕ್ರವರ್ತಿಯ ಪ್ರೇಮವನ್ನು ಸಂಪಾದಿಸಿ, ಆತನ ವಿಮಲಕೀರ್ತಿಗೆ ಕಲಂಕಪ್ರಾಯವಾಗಿರುವ ಈ ನರಕವನ್ನು ಸಮೂಲವಾಗಿ ನಾಶಗೊಳಿಸಿಬಿಡು. ಪರೋಪಕಾರಕ್ಕಾಗಿ ದೇಹವನ್ನು ತ್ಯಜಿಸಿ, ಕೀರ್ತಿಶಾಲಿಗಳಾದವರ ಚರಿತ್ರವನ್ನು ನೀನು ಅರಿಯೆಯಾ? ರಾಜಪುತ್ರಾ, ನೀನು ಒಪ್ಪಿಕೊಳ್ಳದ ಪಕ್ಷದಲ್ಲಿ ನನ್ನ ಈ ಜಡ ದೇಹವನ್ನು ಯೋಗಸಾಮರ್ಥ್ಯದಿಂದ ನಿನ್ನ ಎದುರಿಗೆ ಈ ಕ್ಷಣದಲ್ಲಿ ತ್ಯಜಿಸಿ, ನಿನ್ನ ಋಣಮುಕ್ತತೆಗಾಗಿ ಪುನರ್ಜನ್ಮದ ಆಯಾಸವನ್ನು ಹೊಂದುವೆನು; ಹೇಳು, ಏನನ್ನುವೆ?

ಯುವರಾಜ—(ಅತ್ಯಂತ ಭಕ್ತಿಯಿಂದ)—ಮಹಾತ್ಮನೇ, ಕ್ಷುದ್ರಜೀವಿಯಾದ ನಾನು ನಿನ್ನ ಅಪ್ಪಣೆಯನ್ನು ಮೀರಲು ಸಮರ್ಥನಲ್ಲ, ಹೋಗುವೆನು, ನಿನ್ನ ಅಪ್ಪಣೆಯಂತೆ ಲತಾಮಂಟಪದ ಮರೆಗೆ ಹೋಗುವೆನು.

ಈ ಮೇರೆಗೆ ನುಡಿದು, ಯುವರಾಜನು ಲತಾಮಂಟಪವನ್ನು ಪ್ರವೇಶಿಸಿ, ನೋಡುತ್ತ ಮರೆಗೆ ಕುಳಿತುಕೊಳ್ಳಲು, ಉಪಗುಪ್ತನು ಆತನ ಸ್ಥಳದಲ್ಲಿ ಕುಳಿತುಕೊಂಡನು. ಈಶ್ವರಧ್ಯಾನಕ್ಕಾಗಿ ಕೊಟ್ಟಿದ್ದ ನಾಲ್ಕು ಗಳಿಗೆಗಳ ಅವಕಾಶವು ತೀರಿದಕೂಡಲೆ, ನರಕಾಧಿಪತಿಯ ದೂತರು ಯುವರಾಜನನ್ನು ಹುಡುಕುತ್ತ ಉಪಗುಪ್ತನು ಧರ್ಮಧ್ಯಾನಮಗ್ನನಾಗಿ ಕುಳಿತಿರುವಲ್ಲಿಗೆ ಬಂದರು. ಅವರು ಇವನೇ ಅಪರಾಧಿಯೆಂದು ತಿಳಿದು ಉಪಗುಪ್ತನನ್ನು ಬಂಧಿಸಿ, ನರಕಕ್ಕೆ ಎಳೆದುಕೊಂಡು ಹೋದರು. ನರಕದ ಬಾಹ್ಯಾಂಗವು ಮನೋವೇಧಕವಿದ್ದಷ್ಟೇ, ಅದರ ಅಂತರಂಗವು ಭಯಪ್ರದವಾಗಿತ್ತು. ಅಂತರಂಗದ ರಚನೆಯನ್ನು ತೀರ ಶಾಸ್ತ್ರೋಕ್ತವಾಗಿ ಮಾಡಿದ್ದರು. ಅಲ್ಲಿ ಘೋರಯಾತನೆಯ ಎಲ್ಲ ಸಾಧನಗಳು, ಅಂದರೆ, ಶಸ್ತ್ರಗಳು–ಚಕ್ರಗಳು–ಕಾದ ಎಣ್ಣೆಯ ಕೊಪ್ಪರಿಗೆಗಳು, ಲೋಹಶೂಲಗಳು ಇವೇ ಮೊದಲಾದ ಪದಾರ್ಥಗಳು ಸಿದ್ಧವಾಗಿದ್ದವು. ಉಪಗುಪ್ತನನ್ನು ನರಕದ ಮುಖ್ಯದ್ವಾರದೊಳಗೆ ದೂತರು ಕರಕೊಂಡು ಹೋದಾಗ, ಅಲ್ಲಿ ನರಕಾಧಿಪತಿಯು ಒಬ್ಬ ಅಪರಾಧಿಯ ತಲೆಯನ್ನು ಚಕ್ರದ ಬಾಯಲ್ಲಿ ಕೊಟ್ಟು, ಹಿಚಕಿಸುವ ಕೆಲಸವನ್ನು ದೂತರ ಕೈಯಿಂದ ಮಾಡಿಸುತ್ತಿದ್ದನು! ಚಕ್ರವು ತಿರುಗಹತ್ತಿದ

ಕೂಡಲೆ ಅಪರಾಧಿಯ ತಲೆಯಿಂದ ರಕ್ತವು ಚಿಲ್ಲೆಂದು ನಾಲ್ಕೂ ಕಡೆಗೆ ಚಿಮ್ಮುಹತ್ತಿತ್ತು; ಅಪರಾಧಿಯು ಮರಣಕಾಲದಲ್ಲಿ ಕೆಟ್ಟದನಿಯಿಂದ ಕೂಗಿದನು. ಇದನ್ನೆಲ್ಲ ನೋಡಿ ಉಪಗುಪ್ತನ ಅಂತಃಕರುಣವು ವ್ಯಥಿತವಾಯಿತು. ಈವೊತ್ತಿನವರೆಗೆ ಆತನ ಹೃತ್ಪಟಲದಲ್ಲಿ ಮಾನವೀಜೀವಿತದ ಕ್ಷಣಭಂಗುರತೆಯೂ, ಜಡದೇಹದ ನಶ್ವರತ್ವವೂ ಚೆನ್ನಾಗಿ ಬಿಂಬಿಸಿದ್ದವು; ಆದರೆ ಪ್ರಕೃತಕ್ಕೊದಗಿದ ಅತ್ಯಂತ ಹೃದಯದ್ರಾವಕ ಪ್ರಸಂಗದಿಂದ ಆತನ ಮನಸ್ಸಿನಮೇಲೆ ಉಜ್ವಲ ಪರಿಣಾಮವಾಗಿ, ಮುಮುಕ್ಷುವಾದ ಆ ಉಪಗುಪ್ತನು, ಒಮ್ಮೆಲೆ ''ಅರ್ಹತ್'' ಎಂಬ ಶ್ರೇಷ್ಠ ಪದವಿಗೇರಿದನು. ಆತನ ಮುಖದಿಂದ ''ನಮೋ ಬುದ್ಧಾಯ'' ಎಂಬ ಮಂತ್ರದ ಘೋಷವು ಒಂದೇಸವನೆ ನಡೆದಿತ್ತು; ಆತನ ಆತ್ಮವು ಪರಮಾತ್ಮನಲ್ಲಿ ಲೀನವಾಗಿತ್ತು; ಆತನ ಕಣ್ಣುಗಳೊಳಗಿಂದ ಅಶ್ರುರೂಪವಾಗಿ ಶುದ್ಧಪ್ರೇಮೌಘವು ಹರಿಯಹತ್ತಿತ್ತು; ಆತನ ಇಹಲೋಕದ, ಹಾಗು ಶರೀರದ ಭಾವನೆಯು ನಷ್ಟವಾಯಿತು. ಇಂಥ ಸ್ಥಿತಿಯಲ್ಲಿ ನರಕಾಧಿಪತಿಯ ಅಪ್ಪಣೆಯಿಂದ ದೂತರು ಮಹಾತ್ಮನಾದ ಉಪಗುಪ್ತನನ್ನು ತಪ್ತತೈಲಕಟಾಹದಲ್ಲಿ ಕೆಡವಿದರು. ಆ ಪ್ರಸಂಗದಲ್ಲಿ ಉಪಗುಪ್ತನ ಆನಂದಕ್ಕೆ ನೆಲೆಯಿಲ್ಲದಾಯಿತು. ತಾನು ಬಕುಲೆಯ ವಿಮಲಚರಿತ್ರಕ್ಕೆ ಉಂಟಾಗಿದ್ದ ಕಲಂಕವನ್ನು ದೂರ ಮಾಡಿದ ಕಲ್ಪನೆಯಿಂದ, ಆತನ ಮುಖದಲ್ಲಿ ಮೃದುಹಾಸವು ಉತ್ಪನ್ನ ವಾಯಿತು. ಕೃತ್ರಿಮ ನರಕಸ್ಥಾನದ ತಪ್ತತೈಲ ಕಟಾಹದಿಂದ ಉಪಗುಪ್ತನಂಥ ಪರಿಶುದ್ಧ ವಸ್ತುವಿಗೆ ಏನು ವ್ಯಥೆಯಾಗಬೇಕು? ಉಪಗುಪ್ತನಿಗೆ ತಪ್ತತೈಲವು ಶೀತಲ ಜಲವಾಯಿತು! ಇದನ್ನು ನೋಡಿ ನರಕಾಧಿಪತಿಯು ಆಶ್ಚರ್ಯಪಟ್ಟು, ಕೊಪ್ಪರಿಗೆಯ ಬುಡದಲ್ಲಿ ಮತ್ತಿಷ್ಟು ಉರಿಯನ್ನು ಹಚ್ಚಿಸಿದನು; ಆದರೆ ಅದರಿಂದ ಉಪಗುಪ್ತನ ಕೂದಲು ಕೂಡ ಕೊಂಕಲಿಲ್ಲ! ಇದನ್ನು ನೋಡಿದ ಕೂಡಲೆ ನರಕಾಧಿಪತಿಯು ರಾಜಮಂದಿರಕ್ಕೆ ಹೋಗಿ ಈ ಅದ್ಭುತ ವರ್ತಮಾನವನ್ನು ಅಶೋಕ—ಚಕ್ರವರ್ತಿಯ ಮುಂದೆ ಹೇಳಿದನು.

ವಿಚಿತ್ರ ಗೂಢ

ನರಕಾಧಿಪತಿಯ ಮಾತು ಚಕ್ರವರ್ತಿಗೆ ವಿಶ್ವಾಸನೀಯವಾಗಿ ತೋರಲಿಲ್ಲ. ಆತನು ನರಕ ಸ್ಥಾನಕ್ಕೆ ಬಂದು, ತಪ್ತತೈಲಕಟಾಹದಲ್ಲಿ ಉಪಗುಪ್ತನು ಆನಂದದಿಂದಿರುವದನ್ನು ನೋಡಿ ಪರಮಾಶ್ಚರ್ಯಪಟ್ಟನು. ಈ ಅದ್ಭುತಕೃತಿಯ ದರ್ಶನದಿಂದ ಚಕ್ರವರ್ತಿಯ ಹೃದಯದಲ್ಲಿ ಭಕ್ತಿರಸವು ಉತ್ಪನ್ನವಾಗಿ, ಅದು ಆನಂದಾಶ್ರುರೂಪವನ್ನು ಹೊಂದಿ ಕಣ್ಣುಗಳಿಂದ ಹೊರ ಬೀಳಹತ್ತಿತ್ತು. ಚಕ್ರವರ್ತಿಯು ಉಪಗುಪ್ತನನ್ನು ಹೊರಗೆ ತೆಗಿಸಿ ನರಕಾಧಿಪತಿಯನ್ನು ನೋಡಿ—ಈ ಮಹಾತ್ಮನನ್ನು ಯಾರ ಅಪ್ಪಣೆಯಿಂದ ಈ ತಪ್ತತೈಲಕಟಾಹದಲ್ಲಿ ಕೆಡವಿಸಿದೆ? ಎಂದು ಕೇಳಲು, ನರಕಾಧಿಪತಿಯು ಒಂದು ತಾಡವಾಲೆಯ ತುಣುಕನ್ನು ಚಕ್ರವರ್ತಿಯ ಕೈಯಲ್ಲಿ ಕೊಟ್ಟನು. ಆ ಚೀಟಿಯೊಳಗೆ ''ಈ ಅಪರಾಧಿಯನ್ನು ತಪ್ತ ತೈಲಕಟಾಹದಲ್ಲಿ ಕೆಡವಿ

ನಾಶಗೊಳಿಸಬೇಕು.'' ಎಂಬದೊಂದೇ ವಾಕ್ಯವನ್ನು ಬರೆದಿತ್ತು, ಅಪರಾಧದ ವಿವರಣವಿಲ್ಲದ, ಹಾಗು ಅಪರಾಧಿಯ ನಾಮನಿರ್ದೇಶವಿಲ್ಲದ ಇಂಥ ಆಜ್ಞಾಪತ್ರವನ್ನು ತಾನು ಎಂದೂ ಬರಕೊಟ್ಟಿಲ್ಲೆಂಬ ವಿಚಾರವು ಚಕ್ರವರ್ತಿಯ ಮನಸ್ಸಿನಲ್ಲಿ ಉತ್ಪನ್ನವಾಯಿತು. ಆತನು ಸ್ವಲ್ಪ ಹೊತ್ತು ತನ್ನೊಳಗೆ ವಿಚಾರಮಾಡಿ ನರಕಾಧಿಪತಿಗೆ—ಮೂರ್ಖಾ, ಇಂಥ ಆಜ್ಞಾಪತ್ರದ ಮೇಲೆ ವಿಶ್ವಾಸವಿಟ್ಟು, ವಿಚಾರವಿಲ್ಲದೆ ಇಂಥ ಘೋರಶಿಕ್ಷೆಯನ್ನು ಈ ಮಹಾತ್ಮನಿಗೆ ನೀನು ಕೊಡಬಹುದೇ? ಇದು ನನ್ನ ಆಜ್ಞಾಪತ್ರವಲ್ಲ; ಯಾವ ಪ್ರಸಂಗದಲ್ಲಿಯೋ ನಾನು ಅಪರಾಧಿಗಳ ಶಾಸನಕ್ಕಾಗಿ ಬರಕೊಟ್ಟಿದ್ದ ಆಜ್ಞಾಪತ್ರದ ಕಟ್ಟಕಡೆಯದೊಂದು ವಾಕ್ಯವಿರುತ್ತದೆ. ಯಾವ ದುಷ್ಟರೋ ಇದನ್ನು ಉಪಯೋಗಿಸಿ, ಇಂಥ ಮಹಾತ್ಮನ ಪ್ರಾಣಹರಣ ಮಾಡಿದ ಮಹಾ ಪಾತಕಕ್ಕೆ, ನನ್ನನ್ನು ಗುರಿಮಾಡಬೇಕೆಂದು ಮಾಡಿದ್ದರು! ಎಂದು ನುಡಿದು ಉಪಗುಪ್ತನನ್ನು ಸಾಷ್ಟಾಂಗವಾಗಿ ವಂದಿಸಿ—ಮಹಾತ್ಮರೇ, ಈ ಚಾಂಡಾಲನ ಅಪರಾಧವನ್ನು ಕ್ಷಮಿಸಬೇಕು. ತಮ್ಮಂಥ ಸತ್ಪುರುಷರ ಮುಖಾವಲೋಕನ ಮಾಡಿದ ಕೂಡಲೆ, ಭಕ್ತಿಯು ಉತ್ಪನ್ನವಾಗ ಬಹುದಾಗಿರಲು, ಈ ದುಷ್ಟನರಕಾಧಿಪತಿಯು ಯಾವ ವಿಚಾರವನ್ನೂ ಮಾಡದೆ, ತಮ್ಮನ್ನು ಘೋರಯಾತನೆಗೆ ಗುರಿಮಾಡಿದ್ದನ್ನು ನೋಡಿದರೆ, ನನ್ನ ವಿನಾಶಕಾಲವು ಸಮೀಪಿಸಿರುವಂತೆ ತೋರುತ್ತದೆ! ಪೂಜ್ಯರೇ, ತಮ್ಮನ್ನು ಈ ನರಕಸ್ಥಾನಕ್ಕೆ ತಂದು ಒಪ್ಪಿಸಿದವರು ಯಾರು? ಯಾವ ದುಷ್ಟರ ದುರಾಲೋಚನೆಯಿಂದ ತಮಗೆ ಇಂಥ ಪ್ರಸಂಗವು ಒದಗಿತು? ಇದನ್ನು ಹೇಳಿದರೆ, ಅಪರಾಧಿಗಳಿಗೆ ಯೋಗ್ಯಶಾಸನ ಮಾಡುವೆನು; ಆ ಮೇಲೆ ತಾವು ಮಹಾಪರಾಧಿಯಾದ ನನ್ನ ಅಪರಾಧವನ್ನು ಕ್ಷಮಿಸಿ, ನನ್ನನ್ನು ಸನ್ಮಾರ್ಗಕ್ಕೆ ಹಚ್ಚಬಹುದು; ಇಲ್ಲವೆ ನನಗೆ ಯೋಗ್ಯಶಾಸನ ಮಾಡಿ ನನ್ನನ್ನು ಪವಿತ್ರನಾಗಮಾಡಬಹುದು.

ಚಕ್ರವರ್ತಿಯ ಈ ಮಾತುಗಳನ್ನು ಕೇಳಿ, ಉಪಗುಪ್ತನು—ಭಗವನ್, ನಿನ್ನ ಆಜ್ಞಾ ಪತ್ರಕ್ಕೂ ನನಗಾದ ಶಿಕ್ಷೆಗೂ ಏನೂ ಸಂಬಂಧವಿಲ್ಲ, ಕಲಿಂಗದೇಶದ ಯುವರಾಜನನ್ನು ದುಷ್ಟರು ಈ ಶಿಕ್ಷೆಗೆ ಗುರಿಮಾಡಿದ ಸುದ್ದಿಯು ನನಗೆ ಗೊತ್ತಾಗಲು, ಆ ಸುಕುಮಾರ ರಾಜ ಪುತ್ರನನ್ನು ಈ ಭಯಂಕರ ಶಿಕ್ಷೆಯಿಂದ ಮುಕ್ತಮಾಡುವದಕ್ಕಾಗಿ, ನಾನಾಗಿಯೇ ನರಕ ಸ್ಥಾನಕ್ಕೆ ಬಂದು ಯುವರಾಜನನ್ನು ಮುಕ್ತಮಾಡಿ, ನಾನು ಈ ಶಿಕ್ಷೆಯನ್ನು ಅನುಭವಿಸತೊಡಗಿದೆನು; ಆದರೆ ಭಗವಾನ್ ಶ್ರೀಬುದ್ಧದೇವನ ಕೃಪೆಯಿಂದಲೂ, ನಿನ್ನ ಪುಣ್ಯವಿಶೇಷದಿಂದಲೂ ತಪ್ತತೈಲವು ನನಗೆ ಶೀತಲಜಲವಾಗಿ, ನಾನು ಮರಣ ಹೊಂದದೆ ಉಳಿದಿರುತ್ತೇನೆ. ಚಕ್ರವರ್ತಿಯೇ, ನಡೆ, ನಿನಗೆ ಯುವರಾಜನ ಭೆಟ್ಟಿಯನ್ನು ಮಾಡಿಸುತ್ತೇನೆ, ಎಂದು ಅಶೋಕನನ್ನು ಲತಾಮಂಟಪದ ಬಳಿಗೆ ಕರಕೊಂಡು ಹೋದನು. ಅಲ್ಲಿ ಯುವರಾಜ—ವೇಷಧಾರಿಯಾದ ಪ್ರಣಯಿನಿಯು, ತಾನು ಒಬ್ಬ ಸತ್ಪುರುಷನನ್ನು ಭಯಂಕರವಾದ ಮರಣಶಿಕ್ಷೆಗೆ ಗುರಿಮಾಡಿ, ತನ್ನ ಪ್ರಾಣವನ್ನು ಉಳಿಸಿಕೊಂಡೆನೆಂಬ ಪಶ್ಚಾತ್ತಾಪದಿಂದ ಕಣ್ಣೀರು ಹಾಕಿ ಹಾಕಿ, ನಿರ್ವಿಣ್ಣಳಾಗಿ ನೆಲದಮೇಲೆ ಬಿದ್ದುಕೊಂಡಿದ್ದಳು. ಅಶೋಕನು ಈ ವಿಚಿತ್ರ ಸಂಗತಿಯನ್ನು ಕೇಳಿ, ಮೂಢನಾಗಿ ಯಾವ ಮಾತನ್ನೂ ಆಡದೆ, ಉಪಗುಪ್ತನ ಬಳಿಯಲ್ಲಿ

ನಿಂತುಕೊಂಡಿದ್ದನು. ಆಗ ಉಪಗುಪ್ತನು ಪ್ರಣಯಿನಿಯನ್ನು ಕುರಿತು—ಯುವರಾಜಾ, ಹೀಗೆ ನೀನು ಶೋಕಕ್ಕೆ ಅನುವು ಕೊಡುವದು ಸರಿಯಲ್ಲ. ಇತ್ತನೋಡು, ಭಗವಾನ್ ಚಕ್ರವರ್ತಿಗಳವರು ನಿನ್ನ ಯೋಗಕ್ಷೇಮಕ್ಕಾಗಿ ಬಂದಿದ್ದಾರೆ. ಎಂದು ಹೇಳಲು, ಯುವರಾಜನು ಮೇಲಕ್ಕೆದ್ದು ತನಗೆ ಪ್ರಾಣದಾನ ಮಾಡಿದ ಉಪಗುಪ್ತನಿಗೆ ಸಾಷ್ಟಾಂಗವಾಗಿ ನಮಸ್ಕರಿಸಿ, ಅಶೋಕನನ್ನು ವಿನಯದಿಂದ ವಂದಿಸಿದನು. ಆಗ ಅಶೋಕನು, ಸಿಂಹನ ಬಾಯೊಳಗಿಂದ ತನ್ನನ್ನು ಬಿಡಿಸಿದ ಕಲಿಂಗದೇಶದ ಯುವರಾಜನಿಗೊದಗಿದ ಭಯಂಕರ ಪ್ರಸಂಗವನ್ನು ಸ್ಮರಿಸಿ, ಅತ್ಯಂತ ದುಃಖದಿಂದ ಉಪಗುಪ್ತಶ್ರೇಷ್ಠಿಯನ್ನು ಕುರಿತು—ಉಪಗುಪ್ತಾಚಾರ್ಯರೇ, ನೀವು ನನ್ನ ಪ್ರಾಣದಾತೃವನ್ನು ನನಗೆ ತಿರುಗಿ ಕೊಟ್ಟಿರಿ; ನನ್ನ ಪ್ರಾಣದಾತೃವಿಗೆ ನಿಮ್ಮ ಯೋಗದಿಂದ ಪುನರ್ಜನ್ಮವಾಯಿತು! ಈ ನರಕದ ದುಷ್ಟತನವು ನನ್ನ ಮನಸ್ಸಿಗೆ ಬಹಳವಾಗಿ ಹತ್ತಿರುತ್ತದೆ. ಮಹಾತ್ಮರೇ, ನೀವು ಘೋರವಾದ ಪಾತಕದಿಂದ ನನ್ನನ್ನು ಉದ್ಧಾರಮಾಡಿದಿರಿ. ನನ್ನ ಚರಿತ್ರಕ್ಕೆ ತಗಲುವ ಕಲಂಕವನ್ನು ದೂರಮಾಡಿದಿರಿ. ನೀವೇ ನನ್ನ ಆಚಾರ್ಯರು! ನೀವೇ ನನ್ನ ಗುರುಗಳು! ಈ ಶಿಷ್ಯನು ಪ್ರಥಮತಃ ಮಾಡುವ ನಮಸ್ಕಾರವನ್ನು ಸ್ವೀಕರಿಸಬೇಕು. ಇಂದಿನವರೆಗೆ ನಾನು ಅಂಧಶ್ರದ್ಧೆಯಿಂದ ಬೌದ್ಧನಾಗಿದ್ದೆನು; ದುರಭಿಮಾನದ ನೀಚ ಭಿಕ್ಷುಗಳು ನನ್ನ ಗುರುಗಳಾಗಿದ್ದರು; ಆದರೆ ಈಗಾಗಿರುವ ಸತ್ವಮೂರ್ತಿಯ ದರ್ಶನದಿಂದ ಇನ್ನು ಮೇಲೆ ನಿಜವಾದ ಧರ್ಮಜ್ಞಾನ ವಾಗುವದೆಂಬ ಆಶೆಯು ನನ್ನಲ್ಲಿ ಮೊಳೆದೋರಿರುತ್ತದೆ. ಮಹಾತ್ಮರೇ, ಇಂದೇ ಈ ನರಕವನ್ನು ಸಮೂಲ ನಾಶಗೊಳಿಸುವೆನು. ಎಂದು ಹೇಳಿ, ಉಪಗುಪ್ತಾಚಾರ್ಯರನ್ನೂ, ಯುವ ರಾಜನನ್ನೂ ಕರೆದುಕೊಂಡು ರಾಜಮಂದಿರವನ್ನು ಪ್ರವೇಶಿಸಿದನು. ಆ ದಿನ ಸಂಜೆಯ ಒಳಗಾಗಿ ನರಕವು ಸಮೂಲ ನಾಶವಾಯಿತು. ಉಪಗುಪ್ತನಂಥ ಯೋಗ್ಯಗುರುವು ಚಕ್ರವರ್ತಿಗೆ ದೊರೆತದ್ದರಿಂದ ಆದ ಈ ಪ್ರಥಮ ಫಲವು ಸಾಮಾನ್ಯವಾದದ್ದಲ್ಲ!

ಯುವರಾಜನನ್ನು ನಾಶಗೊಳಿಸುವದಕ್ಕಾಗಿ ತಾನು ಮಾಡಿದ ಸಾಹಸವು ವ್ಯರ್ಥವಾದದ್ದನ್ನು ಕೇಳಿ, ಪ್ರಮೀಳೆಗೆ ಬಹಳ ಅಸಮಾಧಾನವಾಯಿತು. ಅಶೋಕನು ತರ್ಕಿಸಿದಂತೆ ಆಕೆಯು ಒಂದು ಆಜ್ಞಾಪತ್ರದ ಕಟ್ಟಕಡೆಯ ಭಾಗವನ್ನು ಬಹುಪ್ರಯಾಸದಿಂದ ಸಂಪಾದಿಸಿದ್ದಳು; ಅದರಂತೆ, ಅಶೋಕನ ಸಾರಥಿಯೊಬ್ಬನನ್ನು ಲಂಚಕೊಟ್ಟು ಒಡಕೊಂಡು, "ಅಶೋಕನು ನಿನ್ನನ್ನು ಉದ್ಯಾನ ನೋಡುವದಕ್ಕಾಗಿ ಕರೆಸಿರುವನೆ"ಂದು ಆ ಸಾರಥಿಯಿಂದ ಹೇಳಿಸಿ, ಯುವರಾಜನನ್ನು ಮೋಸಮಾಡಿ ತುರಂಗದರ್ಬಾರದಿಂದ ಹೊರಡಿಸಿ, ನರಕೋದ್ಯಾನಕ್ಕೆ ಕಳಿಸಿದ್ದಳು; ಇಷ್ಟು ಮಾಡಿದರೂ ಯುವರಾಜನ ನಾಶವಾಗದೆ, ತನ್ನ ದುರಾಲೋಚನೆಯು ಹೊರಬೀಳುವ ಪ್ರಸಂಗ ಬಂತೆಂದು, ಆ ಸಾಹಸಿಯಾದ ದುಷ್ಟ ಪ್ರಮೀಳೆಯು ಚಿಂತಿಸಿದ್ದು ಆಶ್ಚರ್ಯವಲ್ಲ. ಇದೆಲ್ಲ ಪ್ರಮೀಳೆಯ ಕೃತಿಯೆಂಬ ಸಂಗತಿಯು ಯುವರಾಜನ ಮುಖದಿಂದ ಚಕ್ರವರ್ತಿಗೆ ಗೊತ್ತಾಯಿತು. ಪ್ರಮೀಳೆಯ ಈ ಮಹಾಪರಾಧಕ್ಕಾಗಿ ಕಠಿಣ ಶಾಸನಮಾಡ ಬೇಕೆಂದು ಚಕ್ರವರ್ತಿಯು ಯೋಚಿಸಲು, ಉಪಗುಪ್ತಾಚಾರ್ಯರು—ಭಗವನ್, ಪ್ರಮೀಳೆಯನ್ನು ಇದೊಂದುಸಾರೆ ಕ್ಷಮಿಸುವದು ಯೋಗ್ಯವಾಗಿ ಕಾಣುತ್ತದೆ. ನರಕದ

ಮೂಲೋತ್ಪಾಟನಕ್ಕೆ ಪ್ರಮೀಲೆಯ ದುಷ್ಟಕೃತಿಯೇ ಕಾರಣವಾದುದರಿಂದ, ಆಕೆಯಿಂದೊಂದು ಲೋಕೋಪಕಾರವೇ ಆಯಿತೆಂದು ತಿಳಿಯಬೇಕಾಗುವದು; ಯಾಕಂದರೆ, ಭಯಂಕರವಾದ ನರಕಯಾತನೆಯಿಂದ ಆಗುತ್ತಿದ್ದ ಮನುಷ್ಯಸಂಹಾರವು, ಆಕೆಯಿಂದ ಕಟ್ಟಾದಂತಾಯಿತು. ಈ ಮಹಾನಂದದ ಪ್ರಸಂಗದಲ್ಲಿ ಪ್ರಮೀಳೆಯನ್ನು ಎಚ್ಚರಗೊಳಿಸಿ, ಆಕೆಯ ಅಪರಾಧವನ್ನು ಕ್ಷಮಿಸುವದು, ಭೂತದಯದ ದೃಷ್ಟಿಯಿಂದ ಯೋಗ್ಯವಾಗಿ ತೋರುತ್ತದೆ. ಅನ್ನಲು, ಅಶೋಕನು ಆಚಾರ್ಯರ ಮಾತನ್ನು ನಡಿಸುವಕ್ಕಾಗಿ, ನಡತೆಯನ್ನು ತಿದ್ದಿಕೊಳ್ಳುವಂತೆ ಪ್ರಮೀಳೆಯನ್ನು ನಿರ್ಧಾರದಿಂದ ಎಚ್ಚರಗೊಳಿಸಿ, ಆಕೆಯ ಅಪರಾಧವನ್ನು ಈ ಸಾರೆಯೂ ಕ್ಷಮಿಸಿದನು. ಯುವರಾಜನನ್ನು ತುರಂಗದರ್ಬಾರಕ್ಕೆ ಕಳಿಸುವದು ಚಕ್ರವರ್ತಿಗೆ ಪ್ರಶಸ್ತವಾಗಿ ತೋರಲಿಲ್ಲ; ಆದರೆ, ಸ್ತ್ರೀಯಾದ ತಾನು ಅಶೋಕನ ನಿಕಟ ಸಹವಾಸದಲ್ಲಿರಲು ಸಂಕೋಚಪಟ್ಟು, ಪ್ರಣಯಿನಿಯು ಅಶೋಕನಿಗೆ ಹೇಳಿಕೊಂಡು ಮತ್ತೆ ತುರಂಗದರ್ಬಾರಕ್ಕೆ ಹೋದಳು.

ಪ್ರಿಯವಾಚಕರೇ, ಪ್ರಮೀಳೆಯನ್ನು ಹೋಲುವ ದುಷ್ಟಸ್ತ್ರೀಯರು ಜಗತ್ತಿನಲ್ಲಿ ವಿರಲವೆಂದು ಹೇಳಬಹುದು. ಅಶೋಕನು ಎರಡುಸಾರೆ ತನ್ನ ಅಪರಾಧಗಳನ್ನು ಕ್ಷಮಿಸಿರುವ ನೆಂಬ ಪಶ್ಚಾತ್ತಾಪದಿಂದ ಬುದ್ಧಿಗಲಿತು, ಆ ಸ್ತ್ರೀಯು ತನ್ನ ದುಷ್ಟಗುಣಗಳನ್ನು ಬಿಡಲಿಲ್ಲ. ಯುವರಾಜನಲ್ಲಿ ತುಂಬಾ ಪ್ರೇಮವುಳ್ಳ ಚಕ್ರವರ್ತಿಯು, ಕಲಿಂಗದೇಶವನ್ನು ಹೇಗೂ ಆತನಿಗೆ ಕೊಡುವನಾದ್ದರಿಂದ, ನಾನು ಕಲಿಂಗದ ರಾಣಿಯಾಗಲಿಕ್ಕೆ ಈವರೆಗೆ ಮಾಡಿದ ಸಾಹಸವೆಲ್ಲ ವ್ಯರ್ಥವಾಗುವದೆಂದು ತಿಳಿದು, ತನ್ನ ಪ್ರಾಣ ಹೋದರೂ ಚಿಂತೆಯಿಲ್ಲ, ಯುವರಾಜನನ್ನು ನಾಶಗೊಳಿಸಿಯೇ ತೀರಬೇಕೆಂದು ಆಕೆಯು ನಿಶ್ಚಯಿಸಿದಳು! ಮಂದಿಗೆ ಹೇಳಿದರೆ ಕೆಲಸವು ನೆಟ್ಟಗಾಗುವದಿಲ್ಲೆಂದು ತಿಳಿದು, ಯುವರಾಜನ ಕೊಲೆಯನ್ನು ಕೈಮುಟ್ಟ ಮಾಡಬೇಕೆಂದು ಆಕೆಯು ಯೋಚಿಸಿದಳು. ತುರಂಗದರ್ಬಾರದ ಕಾವಲುಗಾರರನ್ನು ಒಡಕೊಂಡು, ಒಳಗಿನ ಗುಪ್ತದ್ವಾರಗಳನ್ನು ಅರಿತುಕೊಂಡು ತಾನೇ ಖಡ್ಗಪಾಣಿಯಾಗಿ ಮಧ್ಯರಾತ್ರಿಯಲ್ಲಿ ಯುವರಾಜನ ಬಳಿಗೆ ಹೋಗಿ, ಆತನನ್ನು ಖಡ್ಗದಿಂದ ತುಂಡರಿಸಬೇಕೆಂದು ಮಾಡಿದಳು! ಇತ್ತ ಈಕೆಯು ತನ್ನ ಕಾರ್ಯಕ್ಕೆ ಕೈಹಾಕಿದ ದಿವಸವೇ ಅತ್ತ ಸಂಪುಷ್ಪಾಚಾರ್ಯನು, ತನ್ನ ಶಿಷ್ಯವರ್ಗವನ್ನು ಕೂಡಿಕೊಂಡು ಒಮ್ಮೆಲೆ ರಾಧಾಗುಪ್ತನ ಮನೆಯಮೇಲೆ ಬಿದ್ದು, ಆ ವೃದ್ಧ ಮಂತ್ರಿಯನ್ನು ಕೊಲ್ಲಬೇಕೆಂದು ನಿಶ್ಚಯಿಸಿದನು. ಇವರಿಬ್ಬರು ಗಂಗಾತೀರದ ಒಂದು ಗುಹೆಯಲ್ಲಿ ಏಕಾಂತವಾಗಿ ಆಲೋಚಿಸುತ್ತಿರುವಾಗ, ಆ ಗುಹೆಯ ಒಂದು ಮೂಲೆಯಲ್ಲಿ ಕತ್ತಲೊಳಗೆ ಕುಳಿತುಕೊಂಡಿದ್ದ ಒಬ್ಬ ತರುಣ ಬೌದ್ಧ ಭಿಕ್ಷುವು, ಅವರ ಆಲೋಚನೆಗಳನ್ನೆಲ್ಲ ಕೇಳಿದನು. ಈ ಭಿಕ್ಷುವು ಯಾರೆಂಬದನ್ನು ವಾಚಕರು ಗೊತ್ತುಹಿಡಿದಿರಬಹುದು. ಕಲಿಂಗದೇಶದ ಯುವರಾಜನಾದ ಜಿತೇಂದ್ರನು, ಮೊಗ್ಗಲೀಪುತ್ರ—ತಿಷ್ಯರವರ ಕೈಯಿಂದ ಒಂದು ಪತ್ರವನ್ನು ಇಸಕೊಂಡು, ಪಾಟಲಿಪುತ್ರಕ್ಕೆ ಅಶೋಕನ ಬಳಿಗೆ ಬರುತ್ತಿದ್ದದ್ದನ್ನು ವಾಚಕರು ಮರೆತಿರಲಿಕ್ಕಿಲ್ಲ. ಆ ತರುಣ ಭಿಕ್ಷುವು ಸಾವಕಾಶವಾಗಿ ಮಾರ್ಗವನ್ನು ಕ್ರಮಿಸುತ್ತ ಬಂದು, ಗಂಗಾತೀರದ ಆ ಗುಹೆಯನ್ನು ನೋಡುವದಕ್ಕಾಗಿ ಒಳಗೆ ಪ್ರವೇಶಿಸಿದ್ದನು. ಅಷ್ಟರಲ್ಲಿ ಹೊರಗೆ ಎರಡು ತಾಸು ಹೊತ್ತು ಇರುವಾಗ

ಪ್ರಮೀಳೆಯೂ, ಸಂಪುಷ್ಪಾಚಾರ್ಯನೂ ಆ ಗುಹೆಯನ್ನು ಪ್ರವೇಶಿಸಿದರು. ತರುಣ ಬೌದ್ಧ ಭಿಕ್ಷುವು ಕೂಡಲೆ ಪ್ರಮೀಳೆಯ ಗುರುತು ಹಿಡಿದು, ಈ ಸಾಹಸಿಯಾದ ಸ್ತ್ರೀಯು ಏನು ಒಳಸಂಚು ನಡಿಸುವಳೋ ಕೇಳಬೇಕೆಂದು, ಗುಹೆಯ ಒಳಗೇ ಒತ್ತಟ್ಟಿಗೆ ಸುಮ್ಮನೆ ಕುಳಿತು ಕೊಂಡನು. ಆಗ ಪ್ರಮೀಳೆಯೂ, ಸಂಪುಷ್ಪಾಚಾರ್ಯರೂ ಮಾಡಿದ ಮೇಲೆ ಹೇಳಿದ ಆ ಸಂಕಲ್ಪಗಳು ಆ ತರುಣ ಬೌದ್ಧ ಭಿಕ್ಷುವಿನ ಕಿವಿಗೆಬಿದ್ದವು. ಗುಪ್ತಾಲೋಚನೆಯು ತೀರಿದ ಕೂಡಲೆ, ಅವರಿಬ್ಬರೂ ಹೊರಟುಹೋಗಲು, ಅತ್ತ ಆ ತರುಣ ಭಿಕ್ಷುವಾದರೂ ಈ ಒಳ ಸಂಚನ್ನು ಅಶೋಕನಿಗೆ ತಿಳಿಸಿ, ಇಬ್ಬರು ನಿರಪರಾಧಿಗಳ ಪ್ರಾಣವನ್ನು ಉಳಿಸಬೇಕೆಂದು ಯೋಚಿಸಿ ಪಾಟಲಿಪುತ್ರವನ್ನು ಪ್ರವೇಶಿಸಿದನು.

ತನ್ನ ವೇಷವನ್ನು ಹಾಕಿಕೊಂಡು ಯಾವನೊ ಒಬ್ಬನು, ಯುವರಾಜನಾದ ಜಿತೇಂದ್ರನೆಂಬ ಹೆಸರಿನಿಂದ ಅಶೋಕನ ಬಳಿಯಲ್ಲಿರುತ್ತಾನೆಂಬ ಸುದ್ದಿಯು ಜಿತೇಂದ್ರನ ಕಿವಿಗೆ ಮುಟ್ಟಿತ್ತು; ಆದರೆ ತನ್ನ ತಂಗಿಯಾದ ಪ್ರಣಯಿನಿಯೇ ತನ್ನ ಸಂಕಟವನ್ನು ದೂರಮಾಡುವದಕ್ಕಾಗಿ, ಪುರುಷವೇಷದಿಂದ ಅಶೋಕನ ಬಳಿಯಲ್ಲಿರುತ್ತಾಳೆಂಬದು ಆತನಿಗೆ ಗೊತ್ತಿದ್ದಿಲ್ಲ. ಹಾಗೆ ಗೊತ್ತಾಗಿದ್ದರೆ, ಆ ಅಭಿಮಾನಿಯಾದ ತರುಣ ಕ್ಷತ್ರಿಯನು ಇಷ್ಟು ಸಮಾಧಾನದಿಂದ ಕಾಲಕ್ರಮಣ ಮಾಡದೆ, ತನ್ನ ತಂಗಿಯ ಬಂಧವಿಮೋಚನಕ್ಕಾಗಿ ಏನಾದರೂ ಉಪಾಯವನ್ನು ಯೋಚಿಸುತ್ತಿದ್ದನು. ಸದ್ಯಕ್ಕೆ ಆ ತರುಣ ಬೌದ್ಧಭಿಕ್ಷುವಿಗೆ ವೇಷಧಾರಿಯಾದ ಯುವರಾಜನನ್ನೂ, ವೃದ್ಧ ರಾಧಾಗುಪ್ತ ಮಂತ್ರಿಯನ್ನೂ ಸಂಕಟದಿಂದ ಪಾರಮಾಡುವದು ಅವಶ್ಯವಾಗಿತ್ತು. ಆತನು ಅಶೋಕನನ್ನು ಅಂದು ಸಂಜೆಯೊಳಗಾಗಿ ಕಾಣಬೇಕಾಗಿತ್ತು; ಯಾಕಂದರೆ, ಅಂದು ಮಧ್ಯ ರಾತ್ರಿಯಲ್ಲಿ ಪ್ರಮೀಳೆಯೂ, ಸಂಪುಷ್ಪಾಚಾರ್ಯನೂ, ತಮ್ಮ ದುರಾಲೋಚನೆಗಳನ್ನು ಪೂರ್ಣಮಾಡಿಕೊಳ್ಳುವವರಿದ್ದರು. ಆ ಭಿಕ್ಷುವು ಅಶೋಕನ ದರ್ಶನವು ಹೇಗಾದೀತೆಂಬ ವಿಚಾರದಲ್ಲಿ ಮಗ್ನನಾಗಿ ಮಾರ್ಗವನ್ನು ಕ್ರಮಿಸುತ್ತಿದ್ದನು. ಅಷ್ಟರಲ್ಲಿ ಅರಮನೆಯ ಉಪವನವು ಅವನ ಕಣ್ಣಿಗೆಬಿದ್ದಿತು. ಆತನು ಮನೋಹರವಾದ ಆ ಉಪವನವನ್ನು ನೋಡುತ್ತ ಸಾಗಿರಲು, ಒಬ್ಬ ಸುಂದರಿಯು ಸಖಿಯರೊಡನೆ ಉಪವನದಲ್ಲಿ ಅರಳುಮೊಗ್ಗೆಗಳನ್ನು ಎತ್ತುತ್ತಿದ್ದಳು. ಆ ಸುಂದರಿಯ ಗುರುತು ತಮ್ಮ ತರುಣ ಬೌದ್ಧ ಭಿಕ್ಷುವಿಗೆ ಕೂಡಲೆ ಹತ್ತಿ ಆತನಿಗೆ ಚಕ್ರವರ್ತಿಯ ದರ್ಶನಮಾರ್ಗವು ಸಿಕ್ಕ ಹಾಗಾಯಿತು. ಬೌದ್ಧ ಭಿಕ್ಷುವಿನ ವೇಷವನ್ನು ಹಾಕಿ ಕೊಂಡವರು, ಬೇಕಾದಲ್ಲಿ ನಿರಾತಂಕವಾಗಿ ಪ್ರವೇಶಿಸಬಹುದಾಗಿತ್ತು. ಭಿಕ್ಷುವು ಉಪವನವನ್ನು ಪ್ರವೇಶಿಸಿ, ಆ ತರುಣ ಸುಂದರಿಯ ಸಮೀಪಕ್ಕೆ ಹೋಗಲು, ಆ ಮನೋಹರಿಯ ದೃಷ್ಟಿಯು ಭಿಕ್ಷುವಿನ ಮೇಲೆಬಿದ್ದು, ಅವರಿಬ್ಬರ ದೃಷ್ಟಿಗಳು ಕೂಡಿದವು. ಆಕೆಗೂ ಭಿಕ್ಷುವಿನ ಗುರುತು ಹತ್ತಿದಹಾಗಾಯಿತು. ತಾನು ಹರಿದ್ವಾರಕ್ಕೆ ಹೋದಾಗ ತನ್ನ ಚಿಗರೆಯನ್ನು ಸಿಂಹನ ದವಡೆಯೊಳಗಿಂದ ಬಿಡಿಸಿದ ಸುಂದರ ತರುಣನು, ಈತನೇ ಎಂದು ಆಕೆಗೆ ಮತ್ತೆ ಮತ್ತೆ ಗುರುತುಹತ್ತಿದ ಹಾಗಾಗುತ್ತಿತ್ತು; ಆದರೆ ತನಗೆ ಅಲ್ಲಿ ಭೆಟ್ಟಿಯಾದವನು ಚಿದಾನಂದರ ಆಶ್ರಮಸ್ಥ ಒಬ್ಬ ಬ್ರಹ್ಮಚಾರಿಯಿದ್ದು, ಈತನು ಬೌದ್ಧ ಭಿಕ್ಷುವಿರುತ್ತಾನೆಂಬ ಸಂಶಯವು ಆಕೆಯನ್ನು ಬಾಧಿಸಹತ್ತಿತು. ಈ ಸಂಗಶಿಯಮೇಲಿಂದ ಆ ತರುಣಿಯು ಅಶೋಕನ

ತಂಗಿಯಾದ ಇಂದಿರೆಯೆಂಬದು ನಮ್ಮ ವಾಚಕರ ಮನಸ್ಸಿಗೆ ಹೊಳೆದಿರಬಹುದು. ಇಂದಿರೆಯು ಈ ಮೇರೆಗೆ ಸಂಶಯಗ್ರಸ್ತಳಾಗಿ ಬೌದ್ಧ ಭಿಕ್ಷುವನ್ನು ನೋಡುತ್ತ ಸುಮ್ಮನೆ ನಿಂತುಕೊಂಡಿದ್ದಳು.

ತನ್ನ ಬೌದ್ಧಭಿಕ್ಷುವಿನ ವೇಷವು ಇಂದಿರೆಯನ್ನು ಬಾಧಿಸುತ್ತದೆಂಬ ಮಾತು ಜಿತೇಂದ್ರನ ಮನಸ್ಸಿಗೆ ಹೊಳೆಯಿತು. ಆತನು ಇಂದಿರೆಯ ಸಂಶಯವನ್ನು ದೂರಮಾಡುವದಕ್ಕಾಗಿ— ''ನಮೋಬುದ್ಧಾಯ, ನಮೋಬುದ್ಧಾಯ! ಎಲೈ ಚಿದಾನಂದಾಶ್ರಮಸ್ಥ ಸಿಂಹವೇ, ನಿನ್ನ ಯೋಗದಿಂದ ನನ್ನ ಹೃದಯದಲ್ಲಿ ಸ್ಥಿರವಾಗಿ ನೆಲೆಸಿರುವ ಒಂದು ಸುಂದರ ರೂಪವು, ಅಂದಿನಿಂದ ಇಂದಿನವರೆಗೆ ಅಚ್ಚಳಿಯದೆ ಸ್ಥಿರವಾಗಿರುತ್ತದೆ,'' ಎಂದು ನುಡಿದು, ಇಂದಿರೆಯನ್ನು ಮೃದುಹಾಸದಿಂದ ನೋಡಿದನು. ಇಂದಿರೆಗೆ ಇಷ್ಟು ಸಂಕೇತವು ಸಾಕಾಯಿತು. ಆ ಸರಳ ಹೃದಯದ ಸುಂದರಿಯು ಲಗಬಗೆಯಿಂದ ಆ ತರುಣ ಭಿಕ್ಷುವಿನ ಬಳಿಗೆ ಬಂದು ಪ್ರೇಮಯುಕ್ತ ಭಕ್ತಿಯಿಂದ ನಮಸ್ಕರಿಸಿ—ಸುಂದರ ತರುಣನೇ, ಇದೇನು ವಿಚಿತ್ರವು! ಇಂದಿರೆಯ ಚಿತ್ತವನ್ನು ಹರಣಮಾಡಿದ ನೀನು ಭಿಕ್ಷುವಾಗಬಹುದೆ? ತರುಣನೇ, ನೀನು ಭಿಕ್ಷುವಾದ ಬಳಿಕ ಇಂದಿರೆಯೂ ಭಿಕ್ಷುಣಿಯಾಗಲಿಕ್ಕೆ ಯಾವ ಪ್ರತಿಬಂಧವೂ ಇಲ್ಲದಾಯಿತು. ಅನ್ನಲು ಆ ತರುಣನು—''ದೇವೀ, ಇಂದಿರೇ, ನನ್ನನ್ನು ಭಿಕ್ಷುವೇಷಧಾರಿಯೆಂದು ತಿಳಿಯಲ್ಲದೆ, ನಿಜವಾದ ಭಿಕ್ಷುವೆಂದು ತಿಳಿಯಬೇಡ! ನಿನ್ನ ಮೂರ್ತಿಯು ಹೃದಯದಲ್ಲಿ ಸ್ಥಿರವಾಗಿರುವವರೆಗೆ ನಾನು ಭಿಕ್ಷುವಾಗುವ ಬಗೆಯೇನು? ಇಗೋ, ನೀನು ಪ್ರೇಮದಿಂದ ನನ್ನ ಬೆರಳಲ್ಲಿ ಇಟ್ಟಿದ್ದ ಉಂಗುರವು ನೀನು ಇಟ್ಟ ಹಾಗೆಯೇ ಇರುತ್ತದೆ ನೋಡು! ಉದಾರಾಂತಃಕರಣದ ಸುಂದರ ತರುಣಿಯೇ, ಚಕ್ರವರ್ತಿಯ ತಂಗಿಯಾದ ನಿನ್ನ ಸೌಜನ್ಯವನ್ನು ನೋಡಿ ನಾನು ನಿನ್ನ ದಾಸನಾಗಿದ್ದೇನೆ. ಅದಿರಲಿ, ಸದ್ಯಕ್ಕೆ ಈ ಪ್ರಣಯಪ್ರಸಂಗವು ಬೇಡ; ಅದಕ್ಕೆ ತಕ್ಕ ಕಾಲವು ಇನ್ನೂ ಒದಗಿರುವದಿಲ್ಲ. ನಾನು ಈಗಲೇ ಚಕ್ರವರ್ತಿಯನ್ನು ಕಂಡು, ಒಂದು ಮಹತ್ವದ ಸಂಗತಿಯನ್ನು ಆತನಿಗೆ ತಿಳಿಸಬೇಕಾಗಿದೆ; ನನಗೆ ಆತನ ದರ್ಶನವನ್ನು ಮಾಡಿಸು, ಎಂದು ಹೇಳಿದನು. ಅದಕ್ಕೆ ಇಂದಿರೆಯು—ಪ್ರತಾಪಿಯಾದ ತರುಣನೇ, ಚಕ್ರವರ್ತಿಯ ದರ್ಶನಕ್ಕೆ ಇದು ಸಮಯವಲ್ಲ. ಆ ಭಗವಂತನು ಈಗ ಬೋಧಿವೃಕ್ಷದ ಬುಡದಲ್ಲಿ ಧ್ಯಾನಸ್ಥನಾಗಿ ಕುಳಿತಿರುವನು. ನನ್ನ ಹೊರತು ಬೇರೆ ಯಾರಿಗೂ ಹೋಗಲಿಕ್ಕೆ ಬರುವ ಹಾಗಿಲ್ಲ. ಮೂರು ತಾಸು ರಾತ್ರಿಯ ಮೇಲೆ ನಿನಗೆ ಆತನ ದರ್ಶನವಾಗಬಹುದು.

ಇಂದಿರೆಯ ಈ ಮಾತುಗಳನ್ನು ಕೇಳಿ, ಭಿಕ್ಷುವೇಷಧಾರಿಯಾದ ಜಿತೇಂದ್ರನು ಮನಸ್ಸಿನಲ್ಲಿ ವಿಚಾರ ಮಾಡಿ ಇಂದಿರೆಯನ್ನು ಕುರಿತು—ಸರಳ ಹೃದಯದ ಪ್ರಮದೆಯೇ, ಅಷ್ಟು ರಾತ್ರಿಯಲ್ಲಿ ಚಕ್ರವರ್ತಿಯನ್ನು ಕಾಣುವದು ನನಗೆ ಪ್ರಶಸ್ತವಾಗಿ ತೋರುವದಿಲ್ಲ. ನಾನು ಹೇಳುವ ಸಂಗತಿಯನ್ನು ಈಗಿಂದೀಗಲೇ ಚಕ್ರವರ್ತಿಗೆ ತಿಳಿಸಿ ಬಿಡು. ನಾನು ಮತ್ತೆ ಸಾವಕಾಶವಾಗಿ ನಿನ್ನ ಅನುಮತಿಯಂತೆ ಚಕ್ರವರ್ತಿಯನ್ನು ಕಾಣುವೆನು. ಈಗ ಮಾತಿನಲ್ಲಿ ಹೊತ್ತುಗಳೆಯುವದರಿಂದ ಹಿತವಾಗದು, ಎಂದು ನುಡಿದು, ತಾನು ಗಂಗಾತೀರದ ಗುಹೆಯಲ್ಲಿ ಕೇಳಿದ ಒಳಸಂಚಿನ ಸಂಗತಿಯನ್ನು ಸಾದ್ಯಂತವಾಗಿ ಇಂದಿರೆಯ ಮುಂದೆ ಹೇಳಿದನು. ಅದನ್ನು ಕೇಳಿ ಇಂದಿರೆಯು

ಆಶ್ಚರ್ಯಪಟ್ಟು, ಆ ತರುಣ ಭಿಕ್ಷುವನ್ನು ಪ್ರೇಮಲದೃಷ್ಟಿಯಿಂದ ನೋಡುತ್ತ ನಮಸ್ಕರಿಸಿ, ಬೇಗನೆ ಇನ್ನೊಮ್ಮೆ ದರ್ಶನ ಕೊಡಬೇಕೆಂದು ಪ್ರಾರ್ಥಿಸಿ, ಸಖಿಯರ ಬಳಿಗೆ ಹೋಗಿ ಅವರೊಡನೆ ಅವಸರದಿಂದ ಚಕ್ರವರ್ತಿಯ ಬಳಿಗೆ ಹೊರಟುಹೋದಳು. ಇತ್ತ ತರುಣಭಿಕ್ಷುವು ಉದ್ಯಾನದಿಂದ ಹೊರಹೊರಡುತ್ತಿರಲು, ವನಪಾಲಕನು, ಇಂದಿರೆಯ ಅಪ್ಪಣೆಯಿಂದ ಬಗೆ ಬಗೆಯ ರಸಾಲಫಲಗಳನ್ನು ಭಿಕ್ಷುವಿಗೆ ಅರ್ಪಿಸಿದನು. ಬಳಿಕ ಜಿತೇಂದ್ರನು ಒಂದು ಧರ್ಮ ಶಾಲೆಗೆ ಹೋಗಿ ಸಾಯಂ ಸಂಧ್ಯಾದಿಗಳನ್ನೂ, ಉಪಾಹಾರವನ್ನೂ ತೀರಿಸಿಕೊಂಡು ವಿಶ್ರಮಿಸಿದನು. ಅಷ್ಟರಲ್ಲಿ ನಾಲ್ಕು ತಾಸು ರಾತ್ರಿಯಾಯಿತು. ಇಂದಿರೆಯು ತನ್ನ ಅಣ್ಣನಾದ ಚಕ್ರವರ್ತಿಯ ಮುಂದೆ ಒಳಸಂಚಿನ ಸಂಗತಿಯನ್ನು ಹೇಳಿರಬಹುದಾದ್ದರಿಂದ ತಾನು ಮಾಡತಕ್ಕದ್ದೇನೂ ಉಳಿಯದಿದ್ದರೂ, ಬ್ರಾಹ್ಮಣನಾದ ವೃದ್ಧ ರಾಧಾಗುಪ್ತನ ಸಂಕಟವನ್ನು ದೂರವಾಡುವದೂ, ಹೊತ್ತುಬಿದ್ದರೆ ಆತನ ಸಂರಕ್ಷಣಕ್ಕಾಗಿ ಪ್ರಾಣವನ್ನರ್ಪಿಸುವದೂ ಅವಶ್ಯವೆಂದು ಆತನು ಬಗೆದನು. ರಾಧಾಗುಪ್ತನು ಪ್ರಸಿದ್ಧ ಮುತ್ಸದ್ದಿಯು; ರಾಜನಿಷ್ಠನು; ಧರ್ಮಪಾರಾಯಣನು; ಕರ್ತವ್ಯದಕ್ಷನು; ಅಂತೇ ಬೌದ್ಧಚಕ್ರವರ್ತಿಯ ಸಂಪೂರ್ಣ ಪ್ರೇಮಕ್ಕೆ ಪಾತ್ರನಾಗಿ, ಸಂಪುಷ್ಟಾಚಾರ್ಯನಂಥ ದುಷ್ಟಭಿಕ್ಷುವಿನ ಗಂಟಲಲ್ಲಿಳಿಯದೆ, ಬುದ್ಧಿಮತಿಯಂಥ ಕುಹಕವೃದ್ಧ ರಾಜಮಾತೆಗೆ ಸೊಪ್ಪುಹಾಕದೆ ತನ್ನ ಕಾರಭಾರವನ್ನು ದಕ್ಷತೆಯಿಂದ ಸಾಗಿಸುತ್ತಿದ್ದನು. ವೈರಿಗಳು ಕೂಡ ರಾಧಾಗುಪ್ತನನ್ನು ಮನ್ನಿಸುತ್ತಿದ್ದರೆಂದ ಬಳಿಕ, ತರುಣಕ್ಷತ್ರಿಯ ವೀರನಾದ ವೇದ ಧರ್ಮಾಭಿಮಾನಿ ಜಿತೇಂದ್ರನು ಆ ಬ್ರಾಹ್ಮಣ ಮಂತ್ರಿಯ ವಿಷಯವಾಗಿ ಅಭಿಮಾನ ತಾಳಿದ್ದೇನಾಶ್ಚರ್ಯವು? ಮಧ್ಯರಾತ್ರಿಯಾಗಲಿಕ್ಕೆ ಇನ್ನು ಎರಡು ಗಳಿಗೆಯ ಅವಕಾಶವಿತ್ತು; ಅಷ್ಟರಲ್ಲಿ ಅಶೋಕನು ತನಗೆ ಅತ್ಯಂತ ಪ್ರಿಯನಾಗಿರುವ ಯುವರಾಜನನ್ನು ಬಿಡಿಸುವದಕ್ಕಾಗಿ ಖಡ್ಗಪಾಣಿಯಾಗಿ, ಒಬ್ಬನೇ ತುರಂಗದರ್ಬಾರದ ಕಡೆಗೆ ಹೊರಟನು. ರಾಧಾಗುಪ್ತನ ಸಂರಕ್ಷಣಕ್ಕಾಗಿ ಚಕ್ರವರ್ತಿಯು ತನ್ನ ತಮ್ಮನಾದ ವೀತಾಶೋಕನನ್ನು ನಿಯಮಿಸಿದನು. ಚಕ್ರವರ್ತಿಯು ತುರಂಗದರ್ಬಾರವನ್ನು ಹೊಕ್ಕು, ಪ್ರಣಯಿನಿಯು ಮಲಗಿರುವ ಕೋಣೆಯನ್ನು ಗುಪ್ತದ್ವಾರದಿಂದ ಪ್ರವೇಶಿಸಿದಾಗ, ಆ ಕಲಿಂಗ ರಾಜಪುತ್ರಿಗೆ ಗಾಢವಾದ ನಿದ್ರೆಯು ಹತ್ತಿತ್ತು. ಚಕ್ರವರ್ತಿಯು ಒಳಗೆ ಬಂದಕೂಡಲೆ ಕೋಣೆಯ ಆ ಗುಪ್ತದ್ವಾರವು ಮುಚ್ಚಿತು.

''ಪಾಪ ತನಗೊದಗಿದ ಸಂಕಟದ ಕಲ್ಪನೆಯು ಏನಾದರೂ ಇರುತ್ತದೋ? ಹೇಗೆ ಸುಖದಿಂದ ನಿದ್ದೆಮಾಡುತ್ತಾನೆ'' ಎಂದು ಮನಸ್ಸಿನಲ್ಲಿ ಅಂದುಕೊಳ್ಳುತ್ತ ಚಕ್ರವರ್ತಿಯು ತನ್ನ ಮಿತ್ರನ ಸುಖಶಯ್ಯೆಯ ಬಳಿಗೆ ಹೋಗಿ, ಆತನ ಕೈಯನ್ನು ಹಿಡಿದು ಎಬ್ಬಿಸತಕ್ಕವನು. ಅಷ್ಟರಲ್ಲಿ ಪ್ರಣಯಿನಿಯ ಅದ್ವಿತೀಯ ಸೌಂದರ್ಯದ ಕಡೆಗೆ ಆತನ ಲಕ್ಷವು ಹೋಗಲು, ಆ ಮನೋಹರ ಮೂರ್ತಿಯನ್ನು ಆತನು ಕ್ಷಣಹೊತ್ತು ದಿಟ್ಟಿಸಿನೋಡುತ್ತ ಕುಳಿತುಕೊಂಡನು. ಆ ತೇಜಃಪುಂಜ ಲಾವಣ್ಯವನ್ನು ನಿರೀಕ್ಷಿಸುತ್ತಿರುವಾಗ, ತಾನು ಒಬ್ಬ ಸುಂದರ ತರುಣಿಯನ್ನು ನೋಡುತ್ತೇನೆಂಬ ಮಾತು ಕೂಡಲೆ ಚಕ್ರವರ್ತಿಯ ಲಕ್ಷದಲ್ಲಿ ಬಂದಿತು. ನಿದ್ದೆಹತ್ತಿ ಪರವಶಳಾಗಿ ಮಲಗಿದ ಸುಂದರತರುಣಿಯ ಸುಂದರಾವಯವಗಳು, ತಮ್ಮ ಗೂಢಸ್ಥಿತಿಯನ್ನು ಬಿಟ್ಟು, ಹೊರಬಿದ್ದಿರುವಾಗ,

ಏಕಾಂತದಲ್ಲಿ ಆಕೆಯನ್ನು ಕಾಣುವದು ಅನೀತಿಯೆಂದು ತಿಳಿದು, ಪಾಪಭೀರುವಾದ ಆ ಚಕ್ರವರ್ತಿಯು, ಕೂಡಲೆ ಎರಡು ಹೆಜ್ಜೆ ಹಿಂದಕ್ಕೆ ಸರಿದನು. ಆದರೆ ಆತನ ತೇಜಃಪುಂಜವಾದ ವಿಶಾಲನೇತ್ರಗಳು ಪ್ರಣಯಿನಿಯ ಮುಖಚಂದ್ರನನ್ನು ಬಿಟ್ಟು ಬರಲೊಲ್ಲವು. ಆಗ ಅಶೋಕನು ಮನಸ್ಸಿನಲ್ಲಿ—ಏನು ಚಮತ್ಕಾರವಿದು! ಈ ಲೋಕೋತ್ತರ ಸುಂದರಿಯು ಈ ಕೋಣೆಯಲ್ಲಿ ಹೇಗೆ ಬಂದಳು! ನಾನು ತಪ್ಪಿ ಮತ್ತೊಂದು ಕೋಣೆಗೆ ಹೋಗಿರುವದಿಲ್ಲವಷ್ಟೇ? ಛೆ! ಅದೇ ಈ ತುರಂಗದ ಕೋಣೆಯು. ಪ್ರತ್ಯಕ್ಷ ರಾಜಮಂದಿರದಲ್ಲಿರಲು ಅಶಕ್ಯವಾದ ಈ ವಿಲಾಸದ ಒಡವೆಗಳು ಯುವರಾಜನ ಕೋಣೆಯಲ್ಲಲ್ಲದೆ ಮತ್ತೆ ಎಲ್ಲಿ ಕಣ್ಣಿಗೆಬೀಳಬಹುದು? ಯುವರಾಜನು ನಿನ್ನೆ ಹಾಕಿಕೊಂಡಿದ್ದ ಉಡುಪು ತೊಡಪುಗಳು ಇಲ್ಲಿಯೇ ಇರುತ್ತವೆ; ಮತ್ತು ನಿನ್ನೆ ಬಲುಮೆಯಿಂದ ನಾನು ಆತನಿಗೆ ಕೊಟ್ಟಿದ್ದ ಹೂವಿನ ಸುಂದರ ತುರಾಯವು ಇಲ್ಲಿಯೇ ಬಿದ್ದಿದೆ! ಇಲ್ಲಿ ಯುವರಾಜನಂತು ಕಾಣುವದಿಲ್ಲ. ಯುವರಾಜನನ್ನು ಅಚ್ಚಳಿಯದೆ ಹೋಲುತ್ತಿರುವ ಈ ಸುಂದರ ತರುಣಿಯು ಆತನ ಹಾಸಿಗೆಯಮೇಲೆ ಹೇಗೆ ಮಲಗಿರಬಹುದು? ಇದರಲ್ಲಿ ದುಷ್ಟ ಪ್ರಮೀಳೆಯ ಕಾರಸ್ಥಾನವೇನು ಇರಲಿಕ್ಕಿಲ್ಲವಷ್ಟೆ? ಛೆ! ಹಾಗಿದ್ದರೆ ಈ ಸುಂದರ ತರುಣಿಯು ಇಷ್ಟು ನಿಶ್ಚಿಂತೆಯಿಂದ ನಿದ್ರೆ ಮಾಡಬಹುದೆ? ನೋಡೋಣ, ಇನ್ನೊಮ್ಮೆ ಹತ್ತರಹೋಗಿ ನೋಡೋಣ. ಗುರುತುಹತ್ತಿದರೆ ಹತ್ತಬಹುದು, ಎಂದು ಚಕ್ರವರ್ತಿಯು ಹತ್ತರಹೋಗಿ ಪ್ರಣಯಿನಿಯ ಸೌಂದರ್ಯವನ್ನು ಎವೆಯಿಕ್ಕದೆ ನೋಡಹತ್ತಿದನು.

ಈ ಮೇರೆಗೆ ನೋಡುತ್ತ ಅಶೋಕನು ಮತ್ತೆ ಮನಸ್ಸಿನಲ್ಲಿ—ಜಿತೇಂದ್ರನೆಂಬ ಹೆಸರಿನಿಂದ ನನ್ನಲ್ಲಿರುವ ಯುವರಾಜನು ಪುರುಷನಾಗಿರಲಿಕ್ಕಿಲ್ಲ. ಪುರುಷನಾಗಿದ್ದರೆ, ಆತನ ಆಲಿಂಗನವು ಅಷ್ಟು ಮೃದುವಾಗಿ ನನಗೆ ಹತ್ತುತ್ತಿದ್ದಿಲ್ಲ. ಎಲ್ಲಕ್ಕೂ ದೊಡ್ಡ ಸಾಕ್ಷಿಯೆಂದರೆ, ಯುವರಾಜನ ಮಂಜುಲಧ್ವನಿಯು ಪುರುಷರ ಧ್ವನಿಯು ಅಷ್ಟು ಮಂಜುಲವಾಗಿರುವ ಸಂಭವವಿಲ್ಲ. ಮೊದಲಿಗೆ ನನ್ನ ಬಳಿಗೆಬಂದಾಗ ಯುವರಾಜನು ನನ್ನೊಡನೆ ಸಿಂಹಾಸನದಮೇಲೆ ಕುಳಿತು ಕೊಳ್ಳಲಿಕ್ಕೆ ಸಂಕೋಚಪಡಲಿಕ್ಕೂ, ಆತನು ಅರಮನೆಯಲ್ಲಿ ಇರಲಿಕ್ಕೆ ಒಪ್ಪದೆ ಇರುವದಕ್ಕೂ ಕಾರಣವು ಈಗ ಗೊತ್ತಾಯಿತು. ತನ್ನ ನಿಜವಾದ ಸ್ವರೂಪವು ಹೊರಬಿದ್ದೀತೆಂಬ ಭಯದಿಂದಲೇ ಆತನು ನನ್ನ ನಿಕಟ ಸಹವಾಸಕ್ಕೆ ಒಪ್ಪಿಕೊಳ್ಳಲಿಲ್ಲ. ಇಷ್ಟು ದಿವಸವಾದರೂ ನನಗೆ ನಿಜವಾದ ಸ್ಥಿತಿಯು ಗೊತ್ತಾಗಲಿಲ್ಲವಲ್ಲ! ಯುವರಾಜನ ಸ್ಪರ್ಶವು ಇಷ್ಟು ಕೋಮಲವೇಕೆ? ಆತನ ಆಲಿಂಗನದಲ್ಲಿ ಇಷ್ಟು ಸುಖವು ಯಾಕೆ? ಎಂಬದರ ಕಾರಣವು ಇಂದು ನನಗೆ ಗೊತ್ತಾಯಿತು; ಆದರೆ ಇಂಥ ಸುಂದರ ತರುಣಿಯು ಯಾರಾಗಿದ್ದಾಳು? ಆಕೆಯು ಜಿತೇಂದ್ರನ ವೇಷದಿಂದ ನನ್ನಲ್ಲಿ ಯಾಕೆ ಇರಬಹುದು? ಈ ತರುಣಿಯಲ್ಲಿ ನನ್ನ ಮನಸ್ಸು ನಟ್ಟುಹೋಗಿರುವದರಿಂದ, ಈಕೆಯು ನನ್ನ ಅರ್ಧಾಂಗಿಯಾಗುವ ಯೋಗವಿರಬಹುದೋ?'' ಹೀಗೆಂದು ಯೋಚಿಸುತ್ತ ಪ್ರಣಯಿನಿಯ ಸುಂದರ ರೂಪವನ್ನು ಚಕ್ರವರ್ತಿಯು ಎವೆಯಿಕ್ಕದೆ ನೋಡಹತ್ತಿದನು. ನೋಡನೋಡುತ್ತ ಆತನ ಕಣ್ಣೊಳಗಿಂದ ಪ್ರೇಮಾಶ್ರುಗಳು ಉದುರತೊಡಗಿದವು. ಪ್ರೇಮ ಭರದಲ್ಲಿ ಆತನು ಪ್ರಣಯಿನಿಯನ್ನು ಚುಂಬಿಸಬೇಕೆಂದು ತನ್ನ ಮುಖವನ್ನು ಮುಂದೆ ಮಾಡಿದನು;

ಆದರೆ ಹೀಗೆ ಮಾಡುವದು ನೀತಿಗೆ ಸಮ್ಮತವಲ್ಲವೆಂತಲೂ, ಚಂಚಲಮನಸ್ಕನಾಗುವದು ಧೀರತನವಲ್ಲವೆಂತಲೂ ಯೋಚಿಸಿ, ಆತನು ಹಿಂದಕ್ಕೆ ಸರಿದು ದೂರದಿಂದಲೇ—ಯುವರಾಜಾ, ಯುವರಾಜಾ, ಎಂದು ಕೂಗುತ್ತ ಕಿಡಿಕಿಯಿಂದ ಹೊರಗೆ ನೋಡುತ್ತ ನಿಂತುಕೊಂಡನು. ನಿದ್ರೆ ಹತ್ತಿದಾಗ ತನ್ನ ನಿಜವಾದ ಸ್ವರೂಪವನ್ನು ಚಕ್ರವರ್ತಿಯು ಕಂಡು ಹಿಡಿದನೆಂದು, ಆ ವೇಷಧಾರಿ ಜಿತೇಂದ್ರನು ನೊಂದುಕೊಳ್ಳಬಾರದೆಂಬ ಸೌಜನ್ಯದಿಂದ ಚಕ್ರವರ್ತಿಯು ಹೀಗೆ ಮಾಡಿದನು. ಆತನ ಧ್ವನಿಯನ್ನು ಕೇಳಿದ ಕೂಡಲೆ ಪ್ರಣಯಿನಿಯು ಎಚ್ಚತ್ತು ಅವಸರದಿಂದ ಪುರುಷ ವೇಷವನ್ನು ಹಾಕಿಕೊಂಡು ಚಕ್ರವರ್ತಿಯ ಎದುರಿಗೆ ನಿಂತು, "ಏನು ಅಪ್ಪಣೆ" ಎಂದು ಕೇಳಿದಳು. ಅದಕ್ಕೆ ಚಕ್ರವರ್ತಿಯು—ಯುವರಾಜಾ, ಇನ್ನು ನೀನು ಈ ತುರಂಗದರ್ಬಾರ ದಲ್ಲಿರುವದು ಘಾತಕವು. ಈಗಲೇ ನೀನು ನನ್ನ ಸಂಗಡ ಅರಮನೆಗೆ ಬರತಕ್ಕದ್ದು. ಅಲ್ಲಿ ನಿನಗೆ ಎಲ್ಲದರ ಅನುಕೂಲತೆಗಳನ್ನು ಮಾಡಿಕೊಡುವೆನು; ಎಂದು ಹೇಳಿ, ಯುವರಾಜ ವೇಷಧಾರಿ ಯಾದ ಪ್ರಣಯಿನಿಯನ್ನು ಕರಕೊಂಡು ಅರಮನೆಗೆ ಹೋದನು.

ಧರ್ಮಜಾಗೃತಿ

ಚಕ್ರವರ್ತಿಯು ಪ್ರಣಯಿನಿಯನ್ನು ಕರಕೊಂಡು ಅರಮನೆಗೆ ಹೋಗುವದರೊಳಗಾಗಿ ವೀತಾಶೋಕನು ರಾಧಾಗುಪ್ತಮಂತ್ರಿಯ ಸಂಕಟವನ್ನು ದೂರಮಾಡಿ ಅಲ್ಲಿಗೆ ಬಂದಿದ್ದು, ಇಂದಿರೆಯ ಅಣ್ಣನಾದ ಅಶೋಕಚಕ್ರವರ್ತಿಯ ಹಾದಿಯನ್ನು ನೋಡುತ್ತ ಅಲ್ಲಿ ಕುಳಿತು ಕೊಂಡಿದ್ದನು. ಚಕ್ರವರ್ತಿಯು ಯುವರಾಜನೊಡನೆ ಬಂದದ್ದನ್ನು ನೋಡಿ, ವೀತಾಶೋಕನು—ಭಗವನ್, ರಾಧಾಗುಪ್ತಮಂತ್ರಿಗಳು ಸುರಕ್ಷಿತವಾಗಿರುವರು. ಸಂಪುಷ್ಪಾಚಾರ್ಯನ ಶಿಷ್ಯರಾದ ಆ ದುಷ್ಟ ಭಿಕ್ಷುಗಳ ಕ್ರೂರತನವನ್ನು ಮನಸ್ಸಿನಲ್ಲಿ ತಂದರೆ, ಅವರನ್ನು ಬೌದ್ಧಭಿಕ್ಷುಗಳೆಂದು ಕರೆಯುವದಕ್ಕಿಂತ, ಕಟಕರೆಂದು ಕರೆಯುವದು ಯೋಗ್ಯವಾಗಿ ತೋರುತ್ತದೆ. ಆ ದುಷ್ಟರು, ನಾನು ಸೈನಿಕರನ್ನು ಕರಕೊಂಡು ಹೋಗುವದರೊಳಗಾಗಿ ಆಕಸ್ಮಿಕವಾಗಿ ಮಂತ್ರಿಯ ಮನೆಯನ್ನು ಮುತ್ತಿ, ಕಾವಲುಗಾರರನ್ನು ತುಂಡರಿಸಿ, ಮಂತ್ರಿಯ ಅಂತರ್ಗೃಹವನ್ನು ಪ್ರವೇಶಿದ್ದರು. ಅಲ್ಲಿ ಭಿಕ್ಷುಗಳು ನಡಿಸಿದ ಅನಾಚಾರವನ್ನೂ, ಕ್ರೂರತನವನ್ನೂ ನೋಡಿದರೆ, ಎಂಥ ಸಾತ್ವಿಕರಾದರೂ ಸಂತಾಪಗೊಳ್ಳಬಹುದು! ಯಾವನೋ ಒಬ್ಬ ತರುಣ ಭಿಕ್ಷುವು ಇಂದು ಸಾಹಸಮಾಡದಿದ್ದರೆ, ನಿಶ್ಚಯವಾಗಿ ನಿಮ್ಮ ವೃದ್ಧಮಂತ್ರಿಯ ಪ್ರಾಣವು ಉಳಿಯುತ್ತಿದ್ದಿಲ್ಲ. ದುಷ್ಟ ಭಿಕ್ಷುಗಳು ನಾನು ಹೋಗುವದರೊಳಗಾಗಿ ಮಂತ್ರಿಯನ್ನು ಮುತ್ತಿದ್ದರು. ಧರ್ಮಶ್ರದ್ಧೆಯ ಮೂಲಕ ನಮ್ಮ ಬೌದ್ಧಸೈನಿಕರು ಭಿಕ್ಷುಗಳಮೇಲೆ ಕೈಮಾಡಲೊಲ್ಲರು. ಆಗ ಆ ತರುಣ ಭಿಕ್ಷುವು ಯಾವತ್ತು ಭಿಕ್ಷು ಮಂಡಲವನ್ನು ಹೊರಗೆ ದೂಡುವದಕ್ಕಾಗಿ, ಅವರನ್ನು ಕುರಿತು—ಭಿಕ್ಷುಗಳೇ, ಒಬ್ಬ ವೃದ್ಧ ಮಂತ್ರಿಯನ್ನು ಸಂಹರಿಸುವದಕ್ಕಾಗಿ ಇಷ್ಟೊಂದು ಅಟ್ಟಹಾಸವೇಕೆ? ವೈದಿಕ ಧರ್ಮದ ಈ

ಮಂತ್ರಿಯ ಸಮಾಚಾರವನ್ನು ನಾನು ತಕ್ಕೊಳ್ಳುವೆನು. ಈತನನ್ನು ಗೊತ್ತಿಗೆಹಚ್ಚುವ ಪ್ರತಿಜ್ಞೆಯನ್ನು ನಾನು ಮಾಡಿದ್ದೇನೆ. ನನ್ನ ಪ್ರತಿಜ್ಞೆಗೆ ನೀವು ಭಂಗವನ್ನುಂಟುಮಾಡಬೇಡಿರಿ. ಬಹುದಿವಸ ಕಾದಿದ್ದ ನನಗೆ, ಇಂದು ಅನಾಯಾಸವಾಗಿ ಸುಯೋಗವು ಒದಗಿರುತ್ತದೆ. ನನ್ನ ಪ್ರತಿಜ್ಞೆಗೆ ಭಂಗತರುವವರನ್ನು ನಾನು ಸಂಹರಿಸದೆ ಬಿಡೆನು. ಸರಿಯಿರಿ ಹಿಂದಕ್ಕೆ; ಎಲ್ಲರೂ ಮಂತ್ರಿಯ ಶಯನಗೃಹದಿಂದ ಹೊರಗೆ ಹೋಗಿರಿ, ಎಂದು ತನ್ನ ಖಡ್ಗವನ್ನು ಒರೆಯಿಂದ ಹಿರಿದನು. ಅವನ ವೀರಶ್ರೀಯನ್ನು ನೋಡಿ ಬೌದ್ಧಭಿಕ್ಷುಗಳು ''ತಮ್ಮೊಳಗಿನವನೊಬ್ಬನು ಅನಾಯಾಸವಾಗಿ ಮಂತ್ರಿಯನ್ನು ಕೊಲ್ಲುತ್ತಿರಲು, ನಾವು ಸುಮ್ಮನೆ ಕಷ್ಟಪಡುವದು ಯಾಕೆ'' ಎಂದು ಎಲ್ಲರೂ ಶಯ್ಯಾಗೃಹದಿಂದ ಹೊರಗೆ ಬಂದರು. ಆಗ ಆ ತರುಣ ಭಿಕ್ಷುವು ಮಂತ್ರಿಯನ್ನು ಕುರಿತು— ಪೂಜ್ಯನಾದ ರಾಧಾಗುಪ್ತನೇ, ಇನ್ನು ಏಳು; ಇಲ್ಲಿಂದ ಆ ನೀಚ ಭಿಕ್ಷುಗಳ ಕಣ್ಣುತಪ್ಪಿಸಿ ಹೊರಟು ಹೋಗು, ಎಂದು ಮಂತ್ರಿಯನ್ನು ಎರಡನೆಯ ಕಡೆಗೆ ಹೋಗಗೊಟ್ಟು, ಭಿಕ್ಷುಮಂಡಲವನ್ನು ಕುರಿತು—ಎಲೈ ಅಧಮಭಿಕ್ಷುಗಳೇ, ಪ್ರಾಣಹಿಂಸೆಯು ಭಿಕ್ಷುಗಳ ವೇಷಕ್ಕಾದರೂ ಒಪ್ಪುವದೇ? ಅಹಿಂಸಾ ತತ್ವವನ್ನು ಜಗತ್ತಿಗೆ ಬೋಧಿಸುವ ನಿಮ್ಮ ಅಮಂಗಲ ಮುಖವು ಇದೇ ಏನು? ಮುಂದಕ್ಕೆ ಬರ್ರಿ, ಮಂತ್ರಿಯ ನಾಶಕ್ಕಾಗಿ ಬಂದಿರುವ ಪುಂಡಭಿಕ್ಷುಗಳಲ್ಲಿ ಎದೆಗಾರರಾದವರು ಮುಂದಕ್ಕೆ ಒಂದು ಹೆಜ್ಜೆಯನ್ನು ಇಡಿರಿ ನೋಡೋಣ, ನನ್ನ ಈ ಖಡ್ಗವು ಒಬ್ಬೊಬ್ಬರನ್ನೇ ತುಂಡರಿಸಿ ಚಲ್ಲುವದು.

ಭಗವನ್, ಈ ಮೇರೆಗೆ ಆ ತರುಣಭಿಕ್ಷುವು ನುಡಿದು, ಮಂತ್ರಿಯ ಶಯನಗೃಹದ ಬಾಗಿಲಲ್ಲಿ ನಿಂತುಕೊಂಡು ಖಡ್ಗವನ್ನು ಝಳಪಿಸಲು, ಭಿಕ್ಷುಮಂಡಲದ ಸೊಂಡೆಗಳು ಒಣಗಿದವು. ಅವರು ಮುಂದೆ ಏನು ಮಾಡಬೇಕೆಂದು ಯೋಚಿಸುತ್ತಿರಲು, ನಾನು ಸೈನಿಕರೊಡನೆ ಅಲ್ಲಿಗೆ ಹೋದೆನು. ನಮ್ಮನ್ನು ನೋಡಿದ ಕೂಡಲೆ ಭಿಕ್ಷುಗಳು ಬೆದರಿ ಹಿಂದಕ್ಕೆ ಸರಿಯಹತ್ತಿದರು. ಭಿಕ್ಷುಗಳ ಈ ಕೃತ್ಯವನ್ನು ನೋಡಿ ನನಗೆ ಸಂತಾಪವಾದರೂ, ಭಿಕ್ಷುಗಳ ಕೊಲೆಯು ಮಹಾಪಾಪ ಮೂಲವೆಂಬ ಮೂಢಶ್ರದ್ಧೆಯಿಂದ ನಾನಾಗಲಿ, ನನ್ನ ಸೈನಿಕರಾಗಲಿ ಅವರ ಮೇಲೆ ಕೈಮಾಡಲಿಲ್ಲ, ಆದರೂ ಭಿಕ್ಷುಗಳು ನಮ್ಮನ್ನು ನೋಡಿ ಓಡಿಹೋದರು. ಆ ತರುಣ ಭಿಕ್ಷುವನ್ನು ನೋಡು ವಷ್ಟರಲ್ಲಿ, ಆತನು ಎತ್ತೋ ಜಾರಿಹೋಗಿದ್ದನು. ಈಗ ಬಹುಜನ ಭಿಕ್ಷುಗಳನ್ನು ಸೆರೆಹಿಡಿದು ತಂದಿರುತ್ತೇನೆ. ರಾಧಾಗುಪ್ತಮಂತ್ರಿಗಳು ಸುರಕ್ಷಿತವಾಗಿರುವರು. ಮಂತ್ರಿಯ ಮನೆಗೆ ಬಿಗಿಯಾದ ಕಾವಲಿಟ್ಟು, ಸನ್ನಿಧಿಗೆ ಸುದ್ದಿಯನ್ನು ಹೇಳಲಿಕ್ಕೆ ಬಂದೆನು. ಭಗವನ್, ಆ ತರುಣ ಭಿಕ್ಷುವಿನ ಸ್ವರೂಪವನ್ನು ಮನಸ್ಸಿನಲ್ಲಿ ತಂದರೆ, ಈಗಲೂ ನನಗೆ ಆತನ ವಿಷಯವಾಗಿ ಆದರಭಾವವು ಉತ್ಪನ್ನವಾಗುತ್ತದೆ. ವೀರಾಗ್ರಣಿಗಳಲ್ಲಿ ಕೂಡ ಅಪರೂಪವಾಗಿರುವ ಧೈರ್ಯ–ಪ್ರತಾಪಗಳನ್ನು ನಾನು ಆ ತರುಣ ಭಿಕ್ಷುವಿನಲ್ಲಿ ಕಂಡೆನು, ಎಂದು ಹೇಳಿದನು. ಇದನ್ನೆಲ್ಲ ಕೇಳುತ್ತಿದ್ದ ಇಂದಿರೆಯು ಸಮಾಧಾನಪಟ್ಟು, ತನ್ನ ಮನಸ್ಸಿನಲ್ಲಿ—ಆ ತರುಣ ಭಿಕ್ಷುವು ಚಿದಾನಂದಾಶ್ರಮಸ್ಥ ತರುಣ ಬ್ರಹ್ಮಚಾರಿಯೇ ಇರಬಹುದೋ? ಇಂದು ಈ ಒಳಸಂಚಿನ ಸುದ್ದಿಯನ್ನು ನನ್ನ ದ್ವಾರದಿಂದ ಅಣ್ಣನಿಗೆ ತಿಳಿಸಿದ್ದಲ್ಲದೆ, ತಾನೂ ರಾಧಾಗುಪ್ತನ ಕಷ್ಟನಿವಾರಣಕ್ಕಾಗಿ ಆತನು

ಹೋಗಿರಬಹುದೋ? ರಾಧಾಗುಪ್ತನು ಬ್ರಾಹ್ಮಣನಾದುದರಿಂದ, ವೈದಿಕ ಧರ್ಮಾಭಿಮಾನಿಯಾದ ನಮ್ಮ ಆ ತರುಣ ಬ್ರಹ್ಮಚಾರಿಯು, ಮಂತ್ರಿಯ ಪ್ರಾಣವನ್ನು ಉಳಿಸಲಿಕ್ಕೆ ಯತ್ನಿಸಿರಬಹುದು, ಎಂದು ಯೋಚಿಸಿ, ಅಶೋಕನನ್ನು ಕುರಿತು—ಭಗವನ್, ಈ ಚಿಕ್ಕ ಅಣ್ಣನು ವರ್ಣಿಸುವ ಭಿಕ್ಷುವು ಬಹಳಮಾಡಿ ಇಂದು ನನಗೆ ಭೆಟ್ಟಿಯಾದ ತರುಣ ಭಿಕ್ಷುವೇ ಇರಬಹುದು. ಇರಲಿ, ರಾಧಾಗುಪ್ತಮಂತ್ರಿಯು ಸುರಕ್ಷಿತ ಪಾರಾದದ್ದರಿಂದ ಸಾಮ್ರಾಜ್ಯದ ಒಂದು ಅರಿಷ್ಟವು ಹಿಂಗಿದಹಾಗಾಯಿತು.

ತನ್ನ ವೃದ್ಧಮಂತ್ರಿಯು ಸುರಕ್ಷಿತವಿದ್ದದ್ದನ್ನು ಕೇಳಿ, ಸಾಮ್ರಾಟ್ ಅಶೋಕನಿಗಾದ ಆನಂದಕ್ಕಿಂತ, ಎಷ್ಟೋಪಟ್ಟು ಹೆಚ್ಚು ವ್ಯಸನವು, ಅಘೋರ ಕೃತ್ಯವನ್ನು ಮಾಡುವದಕ್ಕಾಗಿ ಭಿಕ್ಷುಗಳು ಒಟ್ಟುಗೂಡಿರುವದನ್ನು ನೋಡಿ ಚಕ್ರವರ್ತಿಗೆ ಆಯಿತು. ಅಹಿಂಸಾತತ್ವದ ಪ್ರಸಾರಮಾಡುವವರ ಮುಂದಾಳುಗಳಾದ ಧರ್ಮಗುರುಗಳೇ ಸಂಘಶಕ್ತಿಯಿಂದ ಒಟ್ಟುಗೂಡಿ, ನಿರಪರಾಧಿಯಾದ ರಾಧಾಗುಪ್ತಮಂತ್ರಿಯನ್ನು ಕೊಲ್ಲುವದಕ್ಕಾಗಿ ಯತ್ನಿಸಿದಬಳಿಕ, ಬೌದ್ಧ ಧರ್ಮದ ಉದಾತ್ತತತ್ವಗಳ ಆಚರಣವು ಪ್ರಜೆಗಳಲ್ಲಿ ರೂಢವಾಗಿ ಅವರು ನೀತಿವಂತರಾಗಲಿಕ್ಕೆ ಮಾರ್ಗವೇ ಇಲ್ಲದಾಯಿತೆಂದು ಚಕ್ರವರ್ತಿಯು ವ್ಯಸನಪಟ್ಟನು. ಆತನ ಮನಸ್ಸು ಕಲಿಂಗದೇಶದ ಸಮರವಹ್ನಿಯಲ್ಲಿ ಕಾದು ಮೆತ್ತಗಾಗಿತ್ತು; ನರಕವನ್ನು ನಾಶಮಾಡಿದಬಳಿಕ ಉಪಗುಪ್ತಾಚಾರ್ಯನಂಥ ಪ್ರೇಮಲಗುರುವಿನ ಸಮಾಗಮವು ಆತನಿಗೆ ಪ್ರಾಪ್ತವಾದದ್ದರಿಂದ, ಆ ಮನಸ್ಸು ದಿನದಿನಕ್ಕೆ ಶುದ್ಧವಾಗುತ್ತ ನಡೆದಿತ್ತು. ತಾನು ಜನರಿಗೆ ಧರ್ಮದ ನಿಜವಾದ ತತ್ವಗಳ ತಿಳಿಸಲಿಕ್ಕೆ ಯತ್ನಿಸುತ್ತಿರಲು, ಧರ್ಮಗುರುಗಳು ದಿನದಿನಕ್ಕೆ ಪಾಪರೂಪವಾದ ಕೆಸರಿನಲ್ಲಿ ಮುಳುಗುತ್ತ ನಡೆದಿರುವದನ್ನು ನೋಡಿ, ಆತನು ಚಿಂತೆಗೊಳಗಾದನು. ಸೊಸೆಗೆ ಆಚಾರವನ್ನು ಹೇಳುವ ಮುದುಕಿಯಾದ ಅತ್ತೆಯೇ ಜಾರಕರ್ಮದಲ್ಲಿ ಕಾಲಹರಣಮಾಡುವಂತೆಯೂ, ಔಷಧಕೊಟ್ಟು ರೋಗಿಗಳ ಬೇನೆಯನ್ನು ಕಳೆಯುವ ವೈದ್ಯರಾಜನೇ ರೋಗಿಗಳಿಗೆ ವಿಷಪಾನಮಾಡಿಸುವಂತೆಯೂ ಇರುವ, ಧರ್ಮಗುರುಗಳ ವಿಪರೀತವಾದ ಆಚರಣೆಯು ಚಕ್ರವರ್ತಿಗೆ ತಿರಸ್ಕರಣೀಯವಾಗಿ ತೋರಿತು. ಆತನು ಸೆರೆಯಾಳಾಗಿ ನಿಂತುಕೊಂಡಿದ್ದ ಭಿಕ್ಷುಗಳನ್ನು ಕುರಿತು—ಭಿಕ್ಷುಗಳಿರಾ, ಈವೊತ್ತಿನವರೆಗೆ ನಿಮ್ಮ ಅನಾಚಾರಗಳನ್ನು ಕಿವಿಯಿಂದ ಕೇಳುತ್ತ ಬಂದಿದ್ದೆನು; ಆದರೆ ಇಂದು ಕಣ್ಣುಮುಟ್ಟಿ ನೋಡಿದಹಾಗಾಯಿತು. ಸಂಸಾರ ವಿರಕ್ತರಾದ ಭಿಕ್ಷುಗಳು, ಎಂದೂ ಅನಾಚಾರ ಮಾಡರೆಂದು ನಾನು ನಂಬಿದ್ದೆನು; ಆದ್ದರಿಂದ ನಿಮ್ಮ ಲೀಲೆಗಳು ನನ್ನ ಕಿವಿಗೆ ಬಿದ್ದಾಗೆಲ್ಲ ನಾನು ಅವನ್ನು ಅವಿಶ್ವಾಸನೀಯವೆಂದು ಕಿವಿಯಮೇಲೆ ಹಾಕಿಕೊಳ್ಳಲಿಲ್ಲ, ಹೀಗೆ ನಿಮ್ಮಿಂದ ನನ್ನ ಪ್ರಜೆಗಳಿಗಾಗುತ್ತಿದ್ದ ಪೀಡೆಯನ್ನು ಕೇಳುವವರೇ ಇಲ್ಲದಾಗಲು, ಅವರು ನನ್ನ ಮುಂದೆ ಹೇಳುವದನ್ನೇ ಬಿಟ್ಟುಬಿಟ್ಟರು. ಆಗ ನಾನು ನಮ್ಮ ಭಿಕ್ಷುಗಳು ಬಹು ಸದಾಚಾರಸಂಪನ್ನರೆಂದು ಭಾವಿಸಹತ್ತಿದೆನು. ಇಲ್ಲಿಯವರೆಗೆ ನೀವು ದುರಭಿಮಾನದ ಅಹಂಕಾರದಿಂದ ನನ್ನ ಪ್ರಜೆಗಳನ್ನು ಬಹಳ ಪೀಡಿಸಿದಿರಿ; ನಿಮ್ಮ ಹಟವನ್ನು ನಡಿಸುವದಕ್ಕಾಗಿ ಬಹುಜನರಿಗೆ ತಾಪವನ್ನುಂಟು ಮಾಡಿದಿರಿ; ಭಿಕ್ಷುವೇಷದ ಸಹಾಯದಿಂದ ನಿರ್ಭಯರಾಗಿ ಮನಸ್ಸಿಗೆ ಬಂದಂತೆ, ಅನಾಚಾರ

ಗಳನ್ನು ಮಾಡಿದಿರಿ. ಜನರನ್ನು ನೀತಿಸಂಪನ್ನರಾಗ ಮಾಡುವದಕ್ಕಾಗಿ ಭಗವಾನ್ ಶ್ರೀಬುದ್ಧದೇವನು ಸ್ಥಾಪಿಸಿದ ಭಿಕ್ಷು—ಭಿಕ್ಷುಣಿಗಳ ಪಂಥವು, ನಿಮ್ಮ ಯೋಗದಿಂದ ಸ್ವತಃ ಕೆಸರಿನಲ್ಲಿ ಮುಳುಗಿದಂತಾಗಿದೆ. ನಿಮಗೆ ಪ್ರಾಣಹಿಂಸೆಯು ಕಃಪದಾರ್ಥವಾಗಿ ತೋರಹತ್ತಿದೆ. ನೀವು ಸರ್ವತಂತ್ರಸ್ವತಂತ್ರ ಜಗದೀಶ್ವರನಂತೆ ವರ್ತಿಸಿ, ಜಗತ್ತನ್ನು ತೃಣಕ್ಕೆ ಸಮಾನವಾಗಿ ಭಾವಿಸುವಿರಿ. ಸ್ವೇಚ್ಛಾಚಾರಕ್ಕೆ ಆಸ್ಪದವು ದೊರೆತದ್ದರಿಂದಲೇ, ಕುಳಿತವರು–ನಿಂತವರೆಲ್ಲ ಭಿಕ್ಷುಗಳಾಗಹತ್ತಿದ್ದಾರೆ. ಒಬ್ಬ ಶಿಷ್ಯನಿಗೆ ಐವರು ಗುರುಗಳಂತೆ ಪ್ರಮಾಣವು ಬೀಳಹತ್ತಿದೆ. ಭರದಿಂದ ಬೆಳೆಯುವ ಈ ಗುರುಗಳ ಸಂಖ್ಯೆಯನ್ನು ಕಡಿಮೆಮಾಡದಿದ್ದರೆ, ಅನರ್ಥವು ತಪ್ಪದು. ಧರ್ಮೋನ್ನತಿಯಾಗಬೇಕೆಂತಲೂ, ಸದ್ಧರ್ಮದ ಪ್ರಸಾರವಾಗಬೇಕೆಂತಲೂ ಈವೊತ್ತಿನ ವರೆಗೆ ನಾನು ಭಿಕ್ಷು—ಭಿಕ್ಷುಣಿಯರಿಗೆ ಮಾಡಿದ ಸಹಾಯವೆಲ್ಲ ವ್ಯರ್ಥವಾಯಿತು. ಅವರ ಅನುಕೂಲತೆಗಾಗಿ ನಾನು ಕೈಗೆಬಂದಂತೆ ಹಣವನ್ನು ವೆಚ್ಚ ಮಾಡಿದೆನು; ಮನಸ್ಸಿಗೆ ಬಂದಂತೆ ವಿಹಾರಗಳನ್ನು (ಬೌದ್ಧಮಠಗಳನ್ನು) ಕಟ್ಟಿಸಿದೆನು; ನಿಮ್ಮ ಸಂಗಡ ವಿಚಿತ್ರಪೂಜ್ಯಬುದ್ಧಿಯಿಂದ ನಡಕೊಂಡೆನು. ಇಷ್ಟು ಪೌಷ್ಟಿಕಾಹಾರವನ್ನು ನಿಮಗೆ ಒದಗಿಸಿಕೊಡುತ್ತಿದ್ದರೂ, ನಿಮ್ಮ ಮನಸ್ಸು ದುರ್ಬಲವಾಗಿರುವದರ ಕಾರಣವು ನನಗೆ ಗೊತ್ತಾಗದಾಗಿದೆ. ಅನ್ಯ ಕಾರಣವೇನಿರಬೇಕು? ಮನಸ್ಸಿಗೆ ಬಂದಹಾಗೆ ತಿಂದು, ಮನಸ್ಸಿಗೆ ಬಂದಂತೆ ನಡೆದು, ಆಲಸ್ಯಕ್ಕೆ ಮೆಚ್ಚಿದ್ದರಿಂದಲೇ ನಿಮ್ಮ ಮನಸ್ಸು ದುರ್ಬಲವಾಗಿರುತ್ತದೆ. ಹಾಯ್ ಹಾಯ್! ಇಷ್ಟು ದಿವಸ ಜನರಹಿತಕ್ಕಾಗಿಯೂ, ಸದ್ಧರ್ಮದ ಪ್ರಸಾರಕ್ಕಾಗಿಯೂ ನಾನು ಮಾಡಿದ ಪ್ರಯತ್ನಗಳೆಲ್ಲ ವ್ಯರ್ಥವಾದವಲ್ಲವೆ!!

ಈ ಮೇರೆಗೆ ನುಡಿಯುವಾಗ ಅಶೋಕನ ಹೃದಯವು ಕರಗಿ, ಕರುಣಾರಸವು ಆತನ ಕಣ್ಣುಗಳ ಮಾರ್ಗವಾಗಿ ಹೊರಬೀಳಹತ್ತಿತು. ಅದನ್ನು ನೋಡಿ ವೀತಾಶೋಕನು—''ಭಗವನ್, ಕರುಣಾಳುವೆ, ನೀನು ಇಷ್ಟು ಅಸಮಾಧಾನಪಡಬಾರದು. ಸಂಪುಷ್ಟಾಚಾರ್ಯನೂ, ಆತನ ಶಿಷ್ಯರೂ ನೀಚವೃತ್ತಿಯಲ್ಲಿ ಕಾಲಕ್ರಮಣಮಾಡುತ್ತಿದ್ದರೂ, ಎಲ್ಲ ಭಿಕ್ಷು–ಭಿಕ್ಷುಣಿಗಳು ಧರ್ಮ ಬಾಹಿರರಾಗಿಯೇ ನಡೆಯುತ್ತಾರೆಂದು ತಿಳಿಯಲಾಗದು. ತಮ್ಮ ಧರ್ಮಪ್ರಭಾವದಿಂದ ಪಂಚ ಮಹಾಭೂತಗಳನ್ನು ವಶಮಾಡಿಕೊಳ್ಳುವ ಉಪಗುಪ್ತಾಚಾರ್ಯರೂ, ತ್ರಿಕಾಲಜ್ಞಾನಿಗಳಾದ ಮೊಗ್ಗಲೀ ಪುತ್ರ—ತಿಷ್ಯರವರೂ ಭಿಕ್ಷುಗಳೇ ಆಗಿರುತ್ತಾರೆ. ಇಂಥ ಭಿಕ್ಷುಶ್ರೇಷ್ಠರು ರತ್ನಗಳಂತೆ ಅಲ್ಲಲ್ಲಿ ಹೊಳೆಯುತ್ತಿರಬಹುದು; ಅಂಥವರಿಂದ ನಿನ್ನ ಪ್ರಜೆಗಳ ಹೃದಯದಲ್ಲಿ ನಿಜವಾದ ಧರ್ಮಪ್ರಕಾಶವೂ ಮಿನುಗುತ್ತಿರಬಹುದು'' ಅನ್ನಲು, ಅಶೋಕನು—''ಕುಮಾರಾ, ಇಂಥ ರತ್ನಗಳನ್ನು ಆರಿಸಿ ಅವುಗಳದೊಂದು ಹಾರವನ್ನು ರಚಿಸಿ, ಅದನ್ನು ನನ್ನ ಪ್ರಜೆಗಳಿಗೆ ಅರ್ಪಿಸದಿದ್ದರೆ, ಅವರ ಕಲ್ಯಾಣವಾಗದು; ಆದರೆ ಇಂಥ ರತ್ನಗಳನ್ನು ಹೇಗೆ ಹುಡುಕಬೇಕು? ಕಲ್ಲಿದ್ದಲಿಯ ಖನಿಯಲ್ಲಿ ರತ್ನಗಳು ಹುಗಿದಿರುವಂತೆ, ಹಿಂಡಾನುಹಿಂಡು ಬೌದ್ಧಭಿಕ್ಷುಗಳಲ್ಲಿ ಮಹಾತ್ಮರಾದ ಭಿಕ್ಷುಗಳು ಎಲ್ಲಿ ಅಡಗಿರುವರೋ ಯಾರಿಗೆ ಗೊತ್ತು!'' ಎಂದು ನುಡಿದು, ಅಶೋಕನು ಕ್ಷಣಮಾತ್ರ ಯೋಚಿಸಿ, ಬಹು ಸಮಾಧಾನದಿಂದ—ಕುಮಾರಾ, ಉಪಗುಪ್ತಾ ಚಾರ್ಯರಂಥ ಯೋಗ್ಯಮಾರ್ಗದರ್ಶಕರು ಬಳಿಯಲ್ಲಿ ಇರುತ್ತಿರಲು, ವ್ಯರ್ಥ ಚಿಂತೆಮಾಡು

ವದೇಕೆ? ಇನ್ನು ರಾತ್ರಿಯೂ ಬಹಳ ಇಲ್ಲ; ಮಲಗಿದ್ದರೆ ನಿದ್ದೆಯೂ ಬರುವಹಾಗಿಲ್ಲ; ಆದ್ದರಿಂದ ಆಚಾರ್ಯರ ದರ್ಶನಕ್ಕಾಗಿ ಈಗಲೇ ವೇಣುವನಕ್ಕೆ ಹೋಗಿಬರುವೆನು; ನೀವೆಲ್ಲರು ವಿಶ್ರಮಿಸ ಬಹುದು, ಎಂದು ಹೇಳಿ, ಭಿಕ್ಷುಗಳನ್ನು ನ್ಯಾಯಾಸನದ ಮುಂದೆ ನಿಲ್ಲಿಸುವವರೆಗೆ ಸೆರೆಯಲ್ಲಿರಿಸುವಂತೆ ಆಜ್ಞಾಪಿಸಿ, ಗುರುಗಳ ದರ್ಶನಕ್ಕೆ ಹೊರಟನು. ಆಗ ಕುಮಾರ ವೀತಾಶೋಕನೂ, ಯುವರಾಜನೂ ಚಕ್ರವರ್ತಿಯನ್ನು ಹಿಂಬಾಲಿಸಿದರು. ಅಷ್ಟರಲ್ಲಿ ರಾಧಾಗುಪ್ತ ಮಂತ್ರಿಯು ಚಕ್ರವರ್ತಿಯ ದರ್ಶನಕ್ಕಾಗಿ ಬರಲು, ಅವರೆಲ್ಲರೂ ವೇಣುವನಕ್ಕೆ ಸಾಗಿದರು.

ವೇಣುವನವು ಗಂಗಾತೀರದಲ್ಲಿತ್ತು. ಉಪಗುಪ್ತಾಚಾರ್ಯರು ಅರಮನೆಯಲ್ಲಿರುವದಕ್ಕೆ ಒಪ್ಪಿಕೊಳ್ಳದ್ದರಿಂದ, ಚಕ್ರವರ್ತಿಯು ಗಂಗಾತೀರದಲ್ಲಿ ಅವರ ಸಲುವಾಗಿ ಹೊಸದಾಗಿಯೇ ಒಂದು ವಿಹಾರವನ್ನು ಕಟ್ಟಿಸಿ, ವೇಣುವನವೆಂಬ ಹೆಸರಿನ ಉಪವನವನ್ನು ಅದಕ್ಕೆ ಜೋಡಿಸಿದನು. ವೇಣುವನದ ಪ್ರದೇಶವು ಬಹು ರಮ್ಯವಾಗಿತ್ತು. ತಪಸ್ವಿಗಳ ವಾಸಕ್ಕೆ ಆ ವನವು ಬಹುಯೋಗ್ಯ ವಾದದ್ದು. ಅಶೋಕನು ಪರಿವಾರದೊಡನೆ ಉಪಗುಪ್ತಾಚಾರ್ಯರ ಬಳಿಗೆ ಹೋಗಿ ನಮಸ್ಕರಿಸಲು, ಆಚಾರ್ಯರು ಆತನನ್ನು ಆಶೀರ್ವದಿಸಿ—ಚಕ್ರವರ್ತಿಯೇ, ನಿಮ್ಮ ಈ ವಿಶ್ರಾಂತಿಯ ಕಾಲದಲ್ಲಿ ನೀವೆಲ್ಲರೂ ನನ್ನ ಬಳಿಗೆ ಬಂದ ಕಾರಣವೇನು? ಎಂದು ಕೇಳಲು, ಚಕ್ರವರ್ತಿಯು ನಡೆದ ಸಂಗತಿಯನ್ನೆಲ್ಲ ಹೇಳಿದನು. ಅದನ್ನು ಕೇಳಿ ಉಪಗುಪ್ತಾಚಾರ್ಯರು ಆನಂದದಿಂದ—ಭಗವನ್, ನೀನೂ ಧನ್ಯನು; ನಿನ್ನ ಸ್ವಧರ್ಮನಿಷ್ಠೆಯೂ ಧನ್ಯವಾದದ್ದು. ಪ್ರಜೆಗಳಲ್ಲಿ ಸದ್ಧರ್ಮದ ಪ್ರಸಾರವಾಗಿ, ಅವರು ನೀತಿವಂತರಾಗಬೇಕೆಂದು ಮನಃಪೂರ್ವಕವಾಗಿ ಮಾಡುವ ನಿನ್ನ ಪ್ರಯತ್ನವು ಸ್ತುತ್ಯವಾದದ್ದಿರುತ್ತದೆ! ಭರತಖಂಡದ ಚಕ್ರವರ್ತಿಯಾದದ್ದನ್ನು ನಿಜವಾಗಿ ನೀನು ಸಾರ್ಥಕಮಾಡಿದೆ. ನೀನು ಬೌದ್ಧಧರ್ಮದ ಪ್ರಬಲಪುರಸ್ಕರ್ತೃವೆಂದು ಈ ವೊತ್ತಿನವರೆಗೆ ಪ್ರಸಿದ್ಧನಾಗಿದ್ದೆ; ಇನ್ನುಮೇಲೆ ನೀನು ಬೌದ್ಧಧರ್ಮದ ಪ್ರತಿಪಾಲಕನೆಂತಲೂ, ಪ್ರಸಾರಕನೆಂತಲೂ ಪ್ರಸಿದ್ಧನಾಗುವೆ! ಮಗಧದೇಶದ ಪ್ರಬಲ ರಾಜಮನೆತನದವರು ಸಂಪುಷ್ಪಾ ಚಾರ್ಯರಂಥ ಧರ್ಮವಿಹೀನ ಭಿಕ್ಷುಗಳಿಗೆ ವ್ಯರ್ಥವಾಗಿ ಮಹತ್ವಕೊಟ್ಟದ್ದರಿಂದ, ಆ ದುರಭಿ ಮಾನಿಗಳ ಅಹಂಕಾರವು ತಲೆಗೇರಿ ಅವರು ಮನಸ್ಸಿಗೆ ಬಂದಂತೆ ಅನಾಚಾರಗಳನ್ನು ಮಾಡತೊಡಗಿದರು. ಆಗ ಶ್ರೀ ಬುದ್ಧದೇವನ ಅಮೂಲ್ಯವಾದ ತತ್ವಗಳ ಅರ್ಥವು ಮನಸ್ಸಿಗೆ ಬಂದಂತೆ ಆಗತೊಡಗಿತು. ಭಿಕ್ಷುಗಳ ಅನಾಚಾರಕ್ಕಾಗಿ ಬೇಸತ್ತು ಮೊಗ್ಗಲೀ ಪುತ್ರ-ತಿಷ್ಯರವರು ಅರಣ್ಯ ವಾಸಮಾಡಲು, ಅವರ ತೆರವಾದ ಸಭಾಪತಿಯ ಸ್ಥಾನವನ್ನು ಸಂಪುಷ್ಪಾಚಾರ್ಯರು ಆಕ್ರಮಿಸಿದರು; ಅಂದಿನಿಂದ ಭಿಕ್ಷುಮಂಡಲದಲ್ಲಿ ನೋಡಿದತ್ತೆಲ್ಲ ಆಲಸ್ಯ, ಧರ್ಮ ಪರಾಙ್ಮುಖತೆ, ದುರಾಚಾರಣೆ ಇವು ಹಬ್ಬಹತ್ತಿವೆ! ಇದನ್ನು ಪ್ರತಿಬಂಧಿಸಲಿಕ್ಕೆ ಮೊಗ್ಗಲೀಪುತ್ರ- ತಿಷ್ಯರಂಥ ಮಹಾತ್ಮರ ಅವಶ್ಯಕತೆಯಿರುವದು.

ಉಪಗುಪ್ತಾಚಾರ್ಯರವರ ಈ ಮಾತುಗಳನ್ನು ಕೇಳಿ ಚಕ್ರವರ್ತಿಯು—ಆಚಾರ್ಯರೇ, ಮೊಗ್ಗಲೀಪುತ್ರ-ತಿಷ್ಯರವರ ದರ್ಶನವಾಗುವದೇ ಅಶಕ್ಯವಾಗಿರಲು, ಅವರ ಪ್ರಾಪ್ತಿಯಾಗುವ ಬಗೆಯೇನು? ಇಂಥ ಪ್ರತಿಕೂಲ ಸ್ಥಿತಿಯಲ್ಲಿ ಸರ್ವತ್ರ ಸದ್ಧರ್ಮ-ಪ್ರಸಾರವಾಗಿ ಜನರ

ಕಲ್ಯಾಣವು ಹೇಗಾದೀತು, ಎಂದು ಅಸಮಾಧಾನದಿಂದ ನುಡಿಯುತ್ತಿರಲು, ಒಬ್ಬ ತರುಣ ಬೌದ್ಧಭಿಕ್ಷುವು ಅಲ್ಲಿಗೆ ಬಂದು ಉಪಗುಪ್ತಾಚಾರ್ಯರನ್ನು ವಂದಿಸಿ ಅಶೋಕನನ್ನು ಆಶೀರ್ವದಿಸಿ, ಒಂದು ತಾಡವಾಲಿಯ ಪತ್ರವನ್ನು ಚಕ್ರವರ್ತಿಯ ಕೈಯಲ್ಲಿ ಕೊಟ್ಟನು. ಆ ತರುಣ ಭಿಕ್ಷುವನ್ನು ನೋಡಿ ಇಂದಿರೆಗೆ ಸಂತೋಷವಾಯಿತು. ಆಗ ವೀತಾಶೋಕನು ಚಕ್ರವರ್ತಿಯನ್ನು ಕುರಿತು—ಭಗವನ್, ರಾಧಾಗುಪ್ತ-ಮಂತ್ರಿಯನ್ನು ಬಂಧಮುಕ್ತಮಾಡಿದ ತರುಣಭಿಕ್ಷುವು ಈತನೇ, ಎಂದು ಹೇಳಿದನು. ರಾಧಾಗುಪ್ತನಾದರೂ ಈ ಮಾತಿಗೆ ಒಪ್ಪಿಕೊಂಡು, ಈ ಭಿಕ್ಷುವು ಇಲ್ಲದಿದ್ದರೆ ನಾನು ಪ್ರಾಣಕ್ಕೆ ಎರವಾಗುತ್ತಿದ್ದೆನೆಂದು ಚಕ್ರವರ್ತಿಯ ಮುಂದೆ ಹೇಳಿದನು. ಆ ತರುಣ ಭಿಕ್ಷುವಿನ ರೂಪವು ತನ್ನಲ್ಲಿರುವ ವೇಷಧಾರಿ ಯುವರಾಜನ ರೂಪವನ್ನು ಅಚ್ಚಳಿಯದೆ ಹೋಲುತ್ತಿರುವದನ್ನು ನೋಡಿ ಚಕ್ರವರ್ತಿಗೆ ಆಶ್ಚರ್ಯವಾಯಿತು. ಆತನು ಆ ತರುಣಭಿಕ್ಷುವನ್ನು ಕುರಿತು—ಭಿಕ್ಷುಶ್ರೇಷ್ಠನೇ, ಈ ತಾಡವಾಲಿಯ ಪತ್ರವನ್ನು ಯಾರು ಕೊಟ್ಟರು? ಎಂದು ಕೇಳಲು, ಅದಕ್ಕೆ ಭಿಕ್ಷುವು—ಭಗವನ್, ಮಹಾತ್ಮರಾದ ಮೊಗ್ಗಲೀಪುತ್ರ—ತಿಷ್ಯರವರು ಈ ಪತ್ರವನ್ನು ಸನ್ನಿಧಿಗೆ ಮುಟ್ಟಿಸೆಂದು ನನ್ನ ಕೈಯಲ್ಲಿ ಕೊಟ್ಟಿರುತ್ತಾರೆ. ಎಂದು ಹೇಳಿ, ಒಮ್ಮೆ ಇಂದಿರೆಯ ಮೋರೆಯನ್ನೂ, ಒಮ್ಮೆ ಅಶೋಕನ ಮೋರೆಯನ್ನೂ, ಒಮ್ಮೆ ಉಪಗುಪ್ತಾಚಾರ್ಯರ ಮೋರೆಯನ್ನೂ ನೋಡುತ್ತ ನಿಂತುಕೊಂಡನು. ಮೊಗ್ಗಲೀ ಪುತ್ರ-ತಿಷ್ಯರವರ ಪತ್ರವೆಂದಕೂಡಲೆ, ಚಕ್ರವರ್ತಿಗೂ ಅಲ್ಲಿ ಕೂಡಿದವರಿಗೂ ಪರಮಾಶ್ಚರ್ಯವಾಯಿತು. ಚಕ್ರವರ್ತಿಯು ಆ ಪತ್ರವನ್ನು ಭಕ್ತಿಯಿಂದ ತಲೆಯಮೇಲೆ ಇಟ್ಟುಕೊಂಡು, ಅದನ್ನು ಜಾಗರೂಕತೆಯಿಂದ ಉಚ್ಚಿ ಓದಹತ್ತಿದನು–

ಸಕಲಗುಣಾಲಂಕೃತರಾದ ರಾಜರಾಜೇಶ್ವರ ಅಶೋಕ ಸಾರ್ವಭೌಮರವರಿಗೆ—ಅನಂತ ಆಶೀರ್ವಾದಗಳು. ನಾವು ಭರತಖಂಡದೊಳಗಿನ ದೇಶ-ದೇಶಗಳಲ್ಲಿ ವಿಹಾರಗಳನ್ನು ಕಟ್ಟಿಸುತ್ತ ಧರ್ಮರತರಾಗಿರುವೆವು. ನಮ್ಮ ಧಾರ್ಮಿಕ ವ್ಯವಹಾರಗಳು ಸುಸೂತ್ರವಾಗಿ ನಡೆದಿರುತ್ತವೆ; ಆದರೆ ಜನರ ನೀತಿಯು ಅಭಿವೃದ್ಧವಾಗಬೇಕೆಂತಲೂ, ಅವರು ಧರ್ಮಪರಾಯಣರಾಗಬೇಕೆಂತಲೂ, ಅಹಿಂಸಾತತ್ವವು ಅವರ ಹೃದಯದಲ್ಲಿ ಮೂಡಿ, ಭಗವಾನ್ ಬುದ್ಧದೇವನ ತ್ರಿಕಾಲಾಬಾಧಿತ ಸತ್ಯವು ಜಗತ್ತಿನ ನಿದರ್ಶನಕ್ಕೆ ಬರಬೇಕೆಂತಲೂ ಭಗವಾನರವರು ನಡೆಸಿರುವ ಅವಾಢವ್ಯ ಪ್ರಯತ್ನವನ್ನು ನೋಡಿದರೆ, ಶ್ರಮದ ಮಾನದಿಂದ ಫಲಪ್ರಾಪ್ತಿಯು ಬಹು ಸ್ವಲ್ಪವಾಗುತ್ತದೆಂದು ದುಃಖದಿಂದ ಅನ್ನಬೇಕಾಗುತ್ತದೆ. ಅಹಿಂಸಾ ಧರ್ಮದ ದಯಾಮಯವಾದ ಸಸಿಗಳನ್ನು ಆರ್ಯಖಂಡದಲ್ಲಿಯೇ ಅಲ್ಲದೆ, ಮ್ಲೇಂಛದೇಶಗಳಲ್ಲಿಯೂ ಊರಬೇಕೆಂದು ಭಗವಾನರವರು ಮಾಡುವ ಪ್ರಯತ್ನವು ಅತ್ಯಂತ ಸ್ತುತ್ಯವಾದದ್ದು; ಆದರೆ ಆ ಸಸಿಗಳನ್ನು ರಕ್ಷಿಸುವವರು ಕಾರ್ಯದಕ್ಷರೂ, ಸತ್ವಶಾಲಿಗಳೂ, ಕಲಾಕುಶಲರೂ ಅಲ್ಲದ್ದರಿಂದ, ಆ ಸಸಿಗಳಿಗೆ ಪ್ರಾಪ್ತವಾಗಬೇಕಾಗಿದ್ದಷ್ಟು ಮನೋಹರಸ್ವರೂಪವು ಈಗ ಪ್ರಾಪ್ತವಾಗಿರುವದಿಲ್ಲ. ಈ ತಪ್ಪು ಚಕ್ರವರ್ತಿಗಳದೂ ಅಲ್ಲ, ಅನಾಚಾರದಲ್ಲಿ ಕಾಲಕ್ರಮಣ ಮಾಡುವ ಭಿಕ್ಷುಗಳದೂ ಅಲ್ಲ, ಕಾಲಮಹಿಮೆಯಿಂದಲೇ ಈ ದೋಷವು ಪ್ರಾಪ್ತವಾಗಿರುತ್ತದೆಂದು ತಿಳಿಯಬೇಕಾಗುವದು! ಭವಿಷ್ಯಕಾಲವನ್ನು

ನಿರೀಕ್ಷಿಸಿದರೆ ಇನ್ನುಮುಂದೆ ಭರತಖಂಡವು ಭಗವಾನ್ ಬುದ್ಧದೇವನ ದಯಾಮಯ ತತ್ವಗಳಿಂದ ಪ್ರಕಾಶಿತವಾಗಬಹುದಾಗಿ ತೋರುತ್ತದೆ!

ಭಗವನ್, ಶ್ರೀ ಗೌತಮಬುದ್ಧನು ಧರ್ಮಪ್ರಸಾರಕ್ಕಾಗಿ ಭಿಕ್ಷು—ಭಿಕ್ಷುಣಿಗಳ ಪಂಥವನ್ನು ನಿರ್ಮಾಣ ಮಾಡಿದನು; ಆದರೆ ಆ ಕಾಲದಲ್ಲಿ ಸಭೆಗಳನ್ನು ನೆರೆಸಿ, ಭಿಕ್ಷುಗಳನ್ನು ಪರೀಕ್ಷಿಸಿ, ಅವರ ಯೋಗ್ಯತೆಯು ಗೊತ್ತುಮಾಡಲ್ಪಡುತ್ತಿತ್ತು, ಯೋಗ್ಯತೆಯಿಲ್ಲದವರಿಗೆ ಆ ಕಾಲದಲ್ಲಿ ಭಿಕ್ಷು–ಭಿಕ್ಷುಣಿಗಳ ದೀಕ್ಷೆಯನ್ನು ಕೊಡುತ್ತಿದ್ದಿಲ್ಲ; ಮತ್ತು ಭಿಕ್ಷುಮಂಡಲದ ಮೇಲೆ ಯೋಗ್ಯ ಸಭಾಪತಿಯು ನೇಮಿಸಲ್ಪಟ್ಟು, ಆತನ ಅನುರೋಧದಿಂದ ಧರ್ಮಪ್ರಸಾರದ ಕೆಲಸವು ಉತ್ತಮ ರೀತಿಯಿಂದ ನಡೆಯುತ್ತಿತ್ತು, ಈ ಧರ್ಮಗುರುಗಳು ರಾಜ್ಯಕಾರಭಾರದಲ್ಲಿ ಮನಸ್ಸು ಹಾಕದೆಯಿರುವವರೆಗೆ ಧರ್ಮಪ್ರಸಾರದ ಕಾರ್ಯವು ತಕ್ಕಂತೆ ನಡೆಯುತ್ತಿತ್ತು; ಭಿಕ್ಷುಗಳೂ ಹಾದಿಯನ್ನು ಬಿಟ್ಟು ನಡೆಯುತ್ತಿದ್ದಿಲ್ಲ; ಆದರೆ ರಾಜ್ಯಕಾರಭಾರದಲ್ಲಿ ಭಿಕ್ಷುಗಳ ಕೈಸೇರಿದ ಕೂಡಲೆ ಅನರ್ಥಕ್ಕೆ ಆರಂಭವಾಯಿತು. ಸ್ವತಃ ಅರಸರೂ, ಮಂತ್ರಿಗಳೂ, ಸೇನಾಪತಿಗಳೂ, ಸರದಾರರೂ, ಧನಿಕರೂ ಭಿಕ್ಷುಗಳ ಮೇಲೆ ಸುವರ್ಣವೃಷ್ಟಿಗರೆದು ನಿರ್ವಾಣವನ್ನಾಗಲಿ, ಸ್ವರ್ಗ ಸುಖವನ್ನಾಗಲಿ, ಇಹಲೋಕದ ಬಯಕೆಗಳನ್ನಾಗಲಿ ಕೊಂಡುಕೊಳ್ಳಹತ್ತಿದರು. ದುಡ್ಡುಕೊಟ್ಟು ಧರ್ಮವನ್ನು ಕೊಂಡುಕೊಳ್ಳಲಿಕ್ಕೆ ಬರುವದೆಂಬ ಸಿದ್ಧಾಂತವನ್ನು ವೇಷಧಾರಿಗಳಾದ ಭಿಕ್ಷುಗಳು ಎಲ್ಲ ಕಡೆಯಲ್ಲಿ ಹಬ್ಬಿಸತೊಡಗಿದರು. ಸೈನ್ಯದಲ್ಲಿ ದಂಡಾಳುಗಳಾಗುವದಕ್ಕಿಂತ, ರಾಜ ದರ್ಬಾರದಲ್ಲಿ ಮುತ್ಸದ್ದಿಗಳಾಗುವದಕ್ಕಿಂತ, ವ್ಯಾಪಾರೋದ್ಯೋಗಗಳಲ್ಲಿ ಮೈಮುರಿದು ದುಡಿಯುವದಕ್ಕಿಂತ ಧರ್ಮದ ಕ್ರಯವಿಕ್ರಯ ಮಾಡುವದರಲ್ಲಿ ಹೆಚ್ಚು ಲಾಭವಿರುತ್ತದೆಂದು ತಿಳಿದು, ಎಷ್ಟೋ ಧೂರ್ತರು, ತಲೆಬೋಳಿಸಿಕೊಂಡು ಭಿಕ್ಷುವೇಷದಿಂದ ಪುಷ್ಟರಾಗಹತ್ತಿದರು. ಭಿಕ್ಷುಗಳಿಗೆ ಯಥೇಚ್ಛ ದ್ರವ್ಯದಾನಮಾಡಿ, ತಮ್ಮ ಪಾಪಗಳನ್ನು ತೊಳಕೊಳ್ಳಬಹುದೆಂಬ ಭ್ರಮೆಯು, ಜನರ ತಲೆಯಲ್ಲಿ ಸೇರಹತ್ತಿದ್ದರಿಂದ ಅನಾಚಾರವು ಹೆಚ್ಚಾಗಹತ್ತಿತು.

ಚಕ್ರವರ್ತಿಯೇ, ನಿನ್ನ ಪ್ರಯತ್ನಕ್ಕೆ ಪೂರ್ಣಯಶಸ್ಸು ಬಾರದಿರುವದಕ್ಕೆ ಧರ್ಮಗುರುಗಳ ಅನಧಿಕಾರ ಸ್ಥಿತಿಯು ಮುಖ್ಯ ಕಾರಣವಾಗಿರುತ್ತದೆ. ಈ ಧರ್ಮಗುರುಗಳು, ಹಾಗು ಭಿಕ್ಷು ಭಿಕ್ಷುಣಿಗಳ ಸಂಶೋಧನದ ಕಾರ್ಯವು ಬೇಗನೆ ಆಗತಕ್ಕದ್ದು; ಆದ್ದರಿಂದ ಬೇಗನೆ ಮಹಾ ಸಭೆಯನ್ನು ನೆರೆಸುವ ವ್ಯವಸ್ಥೆಯನ್ನು ಮಾಡು. ಇನ್ನುಮೇಲೆ ಭಿಕ್ಷು–ಭಿಕ್ಷುಣಿಗಳಾಗಿ ಕಾಲಕ್ರಮಣ ಮಾಡತಕ್ಕವರೆಲ್ಲರೂ ಮಹಾಸಭೆಗೆ ಬಂದೇ ತೀರಬೇಕೆಂದು ಆಜ್ಞಾಪಿಸು. ಆ ಸಭೆಯ ಯೋಗ್ಯತಾಪತ್ರವಿಲ್ಲದ ಭಿಕ್ಷುಗಳು ಧರ್ಮದ್ರೋಹಿಗಳೂ, ನಾಸ್ತಿಕರೂ ಎಂದು ತಿಳಿದು, ಅವರಿಗೆ ಯೋಗ್ಯ ಶಾಸನ ಮಾಡಲಾದೀತೆಂದು ಪ್ರಸಿದ್ಧಗೊಳಿಸು. ಯೋಗ್ಯರಾದ ಸಭಾಪತಿಗಳನ್ನೂ, ಯೋಗ್ಯ ಪರೀಕ್ಷಕರನ್ನೂ ನಿಯಮಿಸಿ, ಅವರ ಸಹಾಯದಿಂದ ನಿಜವಾದ ಧರ್ಮಗುರುಗಳನ್ನು ಆರಿಸಿ ಧರ್ಮಗ್ರಂಥಗಳ ಸಂಶೋಧನವನ್ನು ಮಾಡಿಸು. ಸಭೆಯು ಇಂಥ ದಿವಸ ನೆರೆಯುವ ದೆಂದು ಪ್ರಸಿದ್ಧವಾದರೆ, ಆ ದಿವಸ ನಾನೂ ಸಭೆಗೆ ಬರುವೆನು. ಭಗವಾನರವರು ಆರಂಭಿಸಿರುವ ಸತ್ಕಾರ್ಯಕ್ಕೆ ಮನಮುಟ್ಟಿ ಸಹಾಯಮಾಡಬೇಕೆಂಬ ಇಚ್ಛೆಯು ನನಗಿರುತ್ತದೆ. ಸಭೆಗೆ

ಬರುವದಕ್ಕಾಗಿ ನನ್ನನ್ನು ಕರೆಸುವ ಕಾರಣವಿಲ್ಲ, ನಿನ್ನ ಸೇವಕರಿಗೆ ನನ್ನ ಸ್ಥಾನವು ಗೊತ್ತೂ ಆಗಲಿಕ್ಕಿಲ್ಲ, ಭಗವನ್, ಮಹಾಸಭೆಯು ಬೇಗನೆ ನೆರೆದು, ಪ್ರಕೃತಕ್ಕೆ ಧರ್ಮ ಪ್ರಸಾರದ ಮಾರ್ಗದಲ್ಲಿರುವ ಪ್ರತಿಬಂಧಗಳು ದೂರವಾಗಲೆಂದು ಈ ಮೊಗ್ಗಲೀಪುತ್ರ–ತಿಷ್ಯನು ಇಚ್ಛಿಸುವನು.

ಈ ಪತ್ರವನ್ನು ಓದಿ ಚಕ್ರವರ್ತಿಗೆ ಪರಮಾನಂದವಾಯಿತು. ಆತನು ಉಪಗುಪ್ತಾಚಾರ್ಯರನ್ನು ಕುರಿತು ಆಚಾರ್ಯರೇ, ಭಿಕ್ಷುಗಳ ಅನಾಚಾರವನ್ನು ಹೇಗೆ ಕಡಿಮೆ ಮಾಡಬೇಕೆಂದು ನಾನು ಯೋಚಿಸುತ್ತಿರಲು, ಮಹಾತ್ಮರಿಂದ ಯೋಗ್ಯಮಾರ್ಗವು ದೊರೆತಂತಾಯಿತು. ಇದೆಲ್ಲ ತಮ್ಮ ಕೃಪೆಯ ಫಲವು! ತಮ್ಮ ದರ್ಶನವಾದಂದಿನಿಂದ ಅಶೋಕನ ಆತ್ಮೋನ್ನತಿಗೆ ಆರಂಭವಾದಂತಾಗಿದೆ, ಅನ್ನಲು, ಉಪಗುಪ್ತಾಚಾರ್ಯರು—ಭಗವನ್, ಪುಣ್ಯಪ್ರತಾಪದಿಂದ ನಿನ್ನ ಆತ್ಮವೊಂದೇ ಉನ್ನತಿಯನ್ನು ಪಡೆಯುವದೆಂತಲ್ಲ; ಜಗತ್ತೇ ನಿನ್ನ ಯೋಗದಿಂದ ಆತ್ಮೋನ್ನತಿಯ ಮಾರ್ಗವನ್ನು ಹಿಡಿಯುವದೆಂದು ಹೇಳಿದರೆ ಅತಿಶಯೋಕ್ತಿಯಾಗುವಹಾಗಿಲ್ಲ, ಇರಲಿ, ಬೇಗನೆ ಮಹಾಸಭೆಯನ್ನು ನೆರೆಸುವ ವ್ಯವಸ್ಥೆ ಮಾಡು. ಮಹಾತ್ಮರಾದ ಮೊಗ್ಗಲೀಪುತ್ರ–ತಿಷ್ಯರು ಸಭೆಗೆ ಬರುತ್ತೇವೆಂದು ಹೇಳಿರುವದರಿಂದ, ಸಭಾಪತಿಯ ಚಿಂತೆಯೂ ಕಡಿದಹಾಗಾಯಿತು. ''ಶುಭಸ್ಯ ಶೀಘ್ರಂ'' ಎನ್ನುವಂತೆ, ಈ ಕಾರ್ಯದಲ್ಲಿ ವಿಲಂಬ ಮಾಡಲಾಗದು, ಎಂದು ನುಡಿಯುತ್ತಿರಲು, ಸೂರ್ಯೋದಯ ಸಮಯವು ಪ್ರಾಪ್ತವಾಯಿತು. ವೇಷಧಾರಿ ಜಿತೇಂದ್ರನು ವೇಣುವನದಲ್ಲಿ ಉಪಗುಪ್ತಾಚಾರ್ಯರ ಸನ್ನಿಧಿಯಲ್ಲಿರುವೆನೆಂದು ಚಕ್ರವರ್ತಿಯನ್ನು ಬೇಡಿಕೊಂಡಿದ್ದರಿಂದ, ಆತನು ಒಡಂಬಟ್ಟು, ಯುವರಾಜನ ಸಂರಕ್ಷಣಕ್ಕಾಗಿ ಅಂಗರಕ್ಷಕರನ್ನು ನಿಯಮಿಸಿದನು. ಚಕ್ರವರ್ತಿಯು ಆಚಾರ್ಯರ ಅನುಮತಿಯನ್ನು ಪಡೆದು ಹೊರಡಲು, ಎಲ್ಲರೂ ಆತನನ್ನು ಹಿಂಬಾಲಿಸಿದರು. ಮಹಾಸಭೆಯ ಗದ್ದಲದಲ್ಲಿ ನಮ್ಮ ತರುಣ ಭಿಕ್ಷುವಿನ ಕಡೆಗೆ ಇಂದಿರೆಯ ಹೊರತು ಬೇರೆ ಯಾರ ಲಕ್ಷವೂ ಹೋಗಿದ್ದಿಲ್ಲ. ಎಲ್ಲರೂ ಹೋದ ಬಳಿಕ ಭಿಕ್ಷುವೂ ತನ್ನ ಮನಬಂದತ್ತ ಹೊರಟುಹೋದನು. ಹೇಗೂ ಮಹಾಸಭೆಯು ಕೂಡತಕ್ಕದ್ದಿದ್ದುದರಿಂದ ಸೆರೆಯಲ್ಲಿರುವ ಭಿಕ್ಷುಗಳ ವಿಚಾರವನ್ನು ಆಗೇ ಮಾಡಬೇಕೆಂದು ಉಪಗುಪ್ತಾಚಾರ್ಯರು ಹೇಳಲು, ಅವರ ಸೂಚನೆಯಂತೆ ಯಾವತ್ತು ಭಿಕ್ಷುಗಳನ್ನು ಚಕ್ರವರ್ತಿಯು ಬಂಧಮುಕ್ತವಾಗ ಮಾಡಿದನು.

ಮಹಾಸಭೆಯು

ಪಾಟಲೀಪುತ್ರದಲ್ಲಿ ಮಹಾಸಭೆಯ ಸಿದ್ಧತೆಯು ಒತ್ತರದಿಂದ ಆಗಹತ್ತಿತು. ಅಶೋಕನು ಗಂಗಾತೀರದಲ್ಲಿ ಅತ್ಯಂತ ವಿಸ್ತೀರ್ಣವಾದ ಸಭಾಮಂಟಪವನ್ನು ಹಾಕಿಸಹತ್ತಿದನು. ಸಭೆಗೆ ಹದಿನೈದೇ ದಿನಗಳ ಅವಕಾಶವಿದ್ದದ್ದರಿಂದ, ತನ್ನ ಯಾವತ್ತು ರಾಜ್ಯದೊಳಗಿನ ಎಲ್ಲ ಭಿಕ್ಷುಗಳು ಅಷ್ಟರೊಳಗೆ ಕೂಡಬೇಕೆಂದು ಚಕ್ರವರ್ತಿಯು ತನ್ನ ಆಜ್ಞಾಪತ್ರದ ಪ್ರಸಿದ್ಧೀಕರಣವನ್ನು

ದಕ್ಷತೆಯಿಂದ ಮಾಡಿಸುತ್ತಲಿದ್ದನು. ಚಕ್ರವರ್ತಿಯ ಈ ಮನೋದಯವನ್ನು ಅರಿತು ಬೇರೆ ಬೇರೆ ಅಧಿಕಾರಿಗಳೂ, ಮಾಂಡಲಿಕರೂ ತಮ್ಮ ತಮ್ಮ ರಾಜ್ಯದೊಳಗಿನ ಭಿಕ್ಷುಗಳನ್ನೆಲ್ಲ ಪಾಟಲಿಪುತ್ರಕ್ಕೆ ಕಳಿಸುವದಕ್ಕಾಗಿ ತಮ್ಮ ಬುದ್ಧಿಗೆ ತೋಚಿದಂತೆ ಬೇರೆ ಬೇರೆ ಉಪಾಯಗಳನ್ನು ಯೋಚಿಸ ತೊಡಗಿದರು. ಕೆಲವರು, ಮಹಾಸಭೆಯಲ್ಲಿ ಭಿಕ್ಷುಮಂಡಲವನ್ನು ಕೂಡಿಸಿ ಚಕ್ರವರ್ತಿಯು ವಿಶೇಷ ದಕ್ಷಿಣೆ ಕೊಡುವನೆಂದು ಹುಟ್ಟಿಸಿದರು; ಕೆಲವರು ಮಹಾಸಭೆಯ ಮಂಟಪದ ಸುತ್ತು ಮುತ್ತು ಭಿಕ್ಷುಗಳಿಗಾಗಿ ಅನ್ನ ಸಂತರ್ಪಣವಾಗುವದೆಂದು ಹೇಳಿದರು; ಬೇರೆ ಕೆಲವರು, ಏಕಸಮಯಾಚ್ಛೇದದಿಂದ ಯಾವತ್ತು ಧರ್ಮಗುರುಗಳ ದರ್ಶನಮಾಡಿಕೊಳ್ಳಬೇಕೆಂದು ಚಕ್ರವರ್ತಿಯು ಕರೆಸಿರುವನೆಂದು ಪ್ರಸಿದ್ಧಗೊಳಿಸಿದರು. ಹೀಗೆ ಬೇರೆ ಬೇರೆ ಕಡೆಯಲ್ಲಿ ಬೇರೆ ಬೇರೆ ಉಪಾಯಗಳನ್ನು ಯೋಚಿಸಿ, ಭಿಕ್ಷುಗಳನ್ನು ಹೊರಡಿಸುತ್ತಿರಲು, ಒಬ್ಬ ಅಧಿಕಾರಿಯು, ಮಹಾಸಭೆಗೆ ಹೋಗದ ಭಿಕ್ಷುಗಳ ಶಿರಚ್ಛೇದ ಮಾಡಲಿಕ್ಕೆ ನನಗೆ ಚಕ್ರವರ್ತಿಯ ಆಜ್ಞೆಯಾಗಿರುತ್ತದೆಂದು ಸುಳ್ಳೇ ಭಿಕ್ಷುಗಳನ್ನು ಬೆದರಿಸಿ ಹೊರಡಿಸಹತ್ತಿದನು. ಎರಡು ದಿನಗಳವರೆಗೆ ಆತನ ಕೆಲಸವು ಒತ್ತರದಿಂದ ನಡೆಯಿತು. ಭಿಕ್ಷುಗಳ ಸಮೂಹವು ಪಾಟಲಿಪುತ್ರದಲ್ಲಿ ನೆರೆಯಹತ್ತಿತು. ತನ್ನ ಯುಕ್ತಿಯು ಬಹು ಯೋಗ್ಯವಾದದ್ದೆಂದು ತಿಳಿದು, ಆ ಅಧಿಕಾರಿಯು ಭಿಕ್ಷುಗಳನ್ನು ಬಹಳವಾಗಿ ಬೆದರಿಸಹತ್ತಿದನು. ಸಂಪುಷ್ಪಾಚಾರ್ಯರೂ, ಅವರ ಶಿಷ್ಯರೂ ರಾಧಾಗುಪ್ತಮಂತ್ರಿಯ ಪ್ರಕರಣದಲ್ಲಿ ಚಕ್ರವರ್ತಿಯಿಂದ ಅವಮಾನಿತರಾಗಿ ಮೊನ್ನೆಮೊನ್ನೆ ಸೆರೆಯಿಂದ ಬಿಡುಗಡೆ ಹೊಂದಿದ್ದರಷ್ಟೇ? ಆ ಅಹಂಕಾರದ ದುಷ್ಟ ಭಿಕ್ಷುಗಳಿಗೆ ಮಹಾಸಭೆಯು ಮೊದಲೇ ಬೇಡಾಗಿತ್ತು ಅದರಲ್ಲಿ ಅಧಿಕಾರಿಯು ಮೇಲೆ ಹೇಳಿದಂತೆ ''ನೀವು ಸಭೆಗೆ ಹೋಗದಿದ್ದರೆ ನಿಮ್ಮ ಶಿರಚ್ಛೇದ ಮಾಡುವೆನು'' ಎಂದು ಬೆದರಿಕೆ ಹಾಕಿದನು. ಅಂದಬಳಿಕ ಕೇಳುವದೇನು? ರಾಜಗುರುವೆನಿಸುವ ಸಂಪುಷ್ಪಾಚಾರ್ಯನಿಗೆ, ಅಧಿಕಾರಿಯ ಈ ಉದ್ಧಟತನಕ್ಕಾಗಿ ಬಹಳ ಸಿಟ್ಟು ಬಂದಿತು. ಆತನ ಶಿಷ್ಯರೂ, ಅಧಿಕಾರಿಯೂ ವಾದಿಸಾಡ ಹತ್ತಿದರು. ಕಡೆಗೆ ಮಾತಿಗೆ ಮಾತು ಬೆಳೆದು, ಸಂಪುಷ್ಪಾಚಾರ್ಯನ ಪಟ್ಟ ಶಿಷ್ಯನು ಅಧಿಕಾರಿಗೆ ಬಾಯಿಗೆ ಬಂದಂತೆ ಮಾತಾಡಲು, ಅಧಿಕಾರಿಯು ಸಂತಾಪಗೊಂಡು, ಮೈಮೇಲೆ ಎಚ್ಚರವಿಲ್ಲದೆ ಆ ಭಿಕ್ಷುವಿನ ಶಿರಚ್ಛೇದಮಾಡಿದನು. ಇದನ್ನೆಲ್ಲ ನೋಡುತ್ತಿದ್ದ ಸಂಪುಷ್ಪಾಚಾರ್ಯನ ಬಾಯಿಯು ಮತ್ತಿಷ್ಟು ಎದ್ದಿತು. ಆತನಿಗೆ ತನ್ನ ಶಿಷ್ಯನು ಸತ್ತದ್ದಕ್ಕಾಗಿ ವ್ಯಸನವಾಗಲಿಲ್ಲ; ಚಕ್ರವರ್ತಿಯ ಮೇಲೆ ಭಿಕ್ಷುಹತ್ಯೆಯ ದೋಷವನ್ನು ಹೊರಿಸಿ, ಅದರ ಸಹಾಯದಿಂದ ಮಹಾ ಸಭೆಯನ್ನೂ, ಪ್ರಸಂಗ ಒದಗಿದರೆ ಚಕ್ರವರ್ತಿಯನ್ನೂ ನಾಶಗೊಳಿಸಲಿಕ್ಕೆ ಅನುಕೂಲ ವಾಗುವದೆಂದು ಆತನು ಸಮಾಧಾನಪಟ್ಟನು.

ಸಿಟ್ಟಿನ ಭರದಲ್ಲಿ ಆಗಬಾರದ ಕೆಲಸವು ತನ್ನ ಕೈಯಿಂದಾದದ್ದಕ್ಕಾಗಿ ಅಧಿಕಾರಿಗೆ ಪಶ್ಚಾತ್ತಾಪವಾಯಿತು. ಚಕ್ರವರ್ತಿಯ ಆಜ್ಞೆಯಂತೆ ಒಬ್ಬ ಭಿಕ್ಷುವಿನ ಸಂಹಾರವಾಯಿತೆಂಬ ಸುದ್ದಿಯು ಎಲ್ಲ ಕಡೆಯಲ್ಲಿ ಹಬ್ಬಿತು. ವೈದಿಕಧರ್ಮದಲ್ಲಿಯ ಬ್ರಹ್ಮಹತ್ಯದಂತೆ, ಬೌದ್ಧರಲ್ಲಿ ಭಿಕ್ಷುಹತ್ಯವು ಮಹಾಪಾತಕವಾ।ರುವದು. ಆ ಭಿಕ್ಷುವಧೆಯ ಸುದ್ದಿಯು ಹಬ್ಬುತ್ತ ಹಬ್ಬುತ್ತ

ಕಡೆಗೆ ಅದು ಅತಿಶಯೋಕ್ತಿಯನ್ನು ಹೊಂದಿತು. ಚಕ್ರವರ್ತಿಯು ಮಹಾಸಭೆಯ ನೆವದಿಂದ ಎಲ್ಲ ಭಿಕ್ಷುಗಳನ್ನು ಕರೆಸಿ, ಅವರ ಸಂಹಾರಮಾಡಿಸುವನೆಂದು ಮಹಾಸಭೆಯ ದ್ವೇಷಿಗಳು ಅನ್ನಹತ್ತಿದರು. ಪಾಟಲಿಪುತ್ರದಲ್ಲಿ ನೆರೆದಿದ್ದ ಭಿಕ್ಷುಗಳ ಸಮೂಹದಲ್ಲಿ ಬಹು ಜನರಿಗೆ ಮಹಾಸಭೆಯು ಸೇರುತ್ತಿದ್ದಿಲ್ಲ. ಮಹಾಸಭೆಯ ಕಾರ್ಯಕ್ರಮದೊಳಗಿನ ಮೊದಲನೆಯ ವಿಷಯವಾದ "ಭಿಕ್ಷುಗಳ ಪರೀಕ್ಷೆ" ಎಂಬ ವಿಷಯವಂತು ಅವರಿಗೆ ಸರ್ವಥಾ ಬೇಡಾಗಿತ್ತು. ಧರ್ಮರಹಸ್ಯದ ಗಂಧವನ್ನರಿಯದ ಆ ಹುಂಬ ಭಿಕ್ಷುಗಳು, ಕೋಣನಂತೆ ಹಚ್ಚಗಿದ್ದಲ್ಲಿ ಮೇದು ಬೆಚ್ಚಗಿದ್ದಲ್ಲಿ ಮಲಗಿ ಪುಷ್ಟರಾಗಿ, ಧರ್ಮಗುರುಗಳಾದ ತಮ್ಮ ಪರೀಕ್ಷೆಯನ್ನು ತಕ್ಕೊಳ್ಳುವವರಾರೆಂದು ಹರಟಹತ್ತಿದರು. ಅವರಿಗೆ ಮಹಾಸಭೆಯ ವಿರುದ್ಧವಾಗಿ ಗದ್ದಲವನ್ನೆಬ್ಬಿಸಲಿಕ್ಕೆ ಆ ಭಿಕ್ಷುವಿನ ಮರಣವು ಅನುಕೂಲವಾಯಿತು. ಸಂಪುಷ್ಪಾಚಾರ್ಯನು ಈ ಸಂಧಿಯನ್ನು ಸಾಧಿಸಿ ಮಹಾಸಭೆಗೆ ವಿರುದ್ಧವಾಗಿದ್ದ ಭಿಕ್ಷುಗಳನ್ನು ಒಟ್ಟುಗೂಡಿಸಿ, ಮಹಾಸಭೆಯ, ಹಾಗು ಚಕ್ರವರ್ತಿಯ ವಿರುದ್ಧವಾಗಿ ಅವರ ಮನಸ್ಸಿನಲ್ಲಿ ಇಲ್ಲದ್ದೊಂದು ತುಂಬಿ, ಚಕ್ರವರ್ತಿಗೆ ಪ್ರಾಯಶ್ಚಿತ್ತವನ್ನು ಹೇಳುವ ಅಧಿಕಾರವನ್ನು ನೀವೆಲ್ಲರೂ ಕೂಡಿ ನನ್ನ ಕಡೆಗೆ ಕೊಡಿರೆಂದು ಹೇಳಿದನು. ಚಕ್ರವರ್ತಿಯ ಮೇಲೆ ಬಹುತರ ಯಾವತ್ತು ಭಿಕ್ಷುಗಳ ಪ್ರೇಮವಿದ್ದರೂ, ಮಹಾಸಭೆಯು ಎಲ್ಲರಿಗೂ ಬೇಡಾಗಿತ್ತು. ಸಭೆ ಕೂಡಿಸುವದಕ್ಕೆ ಉಪಕ್ರಮಿಸಿದ ಕೂಡಲೆ ಭಿಕ್ಷುವಿನ ಸಂಹಾರವಾದದ್ದರಿಂದ, ಇಂಥ ಲೌಕಿಕಸಭೆಯನ್ನು ಕೂಡಿಸಲೇಬಾರದೆಂತಲೂ, ಇಂಥ ವಿಚಾರಕ್ಕೆ ಇನ್ನು ಹೋಗದಿರುವಂತೆ ಚಕ್ರವರ್ತಿಯನ್ನು ನಿರ್ಬಂಧಿಸುವದೇ ಆತನಿಗೆ ಪ್ರಾಯಶ್ಚಿತ್ತಕೊಟ್ಟ ಹಾಗೆಂತಲೂ ತಿಳಿದು, ಸಂಪುಷ್ಪಾಚಾರ್ಯನ ಮುಖದಿಂದ ಚಕ್ರವರ್ತಿಗೆ ಇಷ್ಟು ಪ್ರಾಯಶ್ಚಿತ್ತ ಕೊಡಿಸಬೇಕೆಂದು ಅವರೆಲ್ಲರೂ ಕೂಡಿ ಆತನ ಕಡೆಗೆ ಅಧಿಕಾರವನ್ನು ಕೊಟ್ಟರು. ಇದರಿಂದ ಸಂಪುಷ್ಪಾಚಾರ್ಯನಿಗಾದ ಆನಂದವು ಆತನ ಹೊಟ್ಟೆಯಲ್ಲಿ ಹಿಡಿಸದಾಯಿತು. ಮಹಾಸಭೆಯು ನೆರೆಯುವದರೊಳಗಾಗಿ ಚಕ್ರವರ್ತಿಗೆ ದೇಹಾಂತ ಪ್ರಾಯಶ್ಚಿತ್ತವನ್ನು ಕೊಟ್ಟುಬಿಟ್ಟರೆ, ಆತನ ಸಂಗಡ ಮಹಾಸಭೆಯೂ ನಷ್ಟವಾಗುವದೆಂದು ಯೋಚಿಸಿ, ಸಂಪುಷ್ಪಾಚಾರ್ಯನು ಭಿಕ್ಷುಗಳ ಸಮೂಹವನ್ನು ಕೂಡಿಕೊಂಡು ಚಕ್ರವರ್ತಿಗೆ ಪ್ರಾಯಶ್ಚಿತ್ತ ಕೊಡುವದಕ್ಕಾಗಿ ಅರಮನೆಗೆ ಹೋದನು.

ಇತ್ತ ಚಕ್ರವರ್ತಿಯು ಭಿಕ್ಷುವಿನ ಮರಣವಾರ್ತೆಯನ್ನು ಕೇಳಿ, ವ್ಯಸನಾಕ್ರಾಂತನಾಗಿದ್ದನು. ಸದುದ್ದೇಶದಿಂದ ಸಭೆಯನ್ನು ನೆರೆಸಲುಪಕ್ರಮಿಸಿದ ತನಗೆ ಇದೊಂದು ಅಪಕೀರ್ತಿಯು ಬಂತೆಂತಲೂ, ಲೋಕಹಿತದ ಕಾರ್ಯಕ್ಕೆ ಮಹಾವಿಘ್ನವು ಒದಗಿದಹಾಗಾಯಿತೆಂತಲೂ ಆತನು ತಳಮಳಿಸಹತ್ತಿದನು. ಆತನಿಗೆ ಅನ್ನ ನೀರುಗಳು ಬೇಡಾದವು. ಮಾತುಕಥೆಗಳು ಸೇರದಾದವು. ಕುಳಿತರೆ ಸಮಾಧಾನವಿಲ್ಲ, ನಿಂತರೆ ಸಮಾಧಾನವಿಲ್ಲ, ಮಲಗಿದರೆ ಸಮಾಧಾನವಿಲ್ಲೆಂಬಂತಾದದ್ದರಿಂದ, ಆತನು ಅರಮನೆಯಿಂದ ಹೊರಟು, ಉಪವನದಲ್ಲಿ ಒತ್ತಟ್ಟಿಗೆ ಚಿಂತೆಯಿಂದ ಉಸುರ್ಗಳೆಯುತ್ತ ಕುಳಿತುಕೊಂಡನು. ಅಶೋಕನ ಪ್ರತಾಪವನ್ನೂ ಅಧಿಕಾರವನ್ನೂ, ಸಾಮರ್ಥ್ಯವನ್ನೂ ಮನಸ್ಸಿನಲ್ಲಿ ತಂದರೆ, ಆತನು ಒಬ್ಬ ಸೊಟ್ಟ ಭಿಕ್ಷುವಿನ ಮರಣಕ್ಕಾಗಿ,

ಇಷ್ಟು ವ್ಯಸನಪಡುವದು ಲೌಕಿಕವಾಚಕರಿಗೆ ಆಶ್ಚರ್ಯಕರವಾಗಿ ತೋರಬಹುದು; ಆದರೆ ಧಾರ್ಮಿಕಭಾವನೆಯ ಮಹಿಮೆಯೇ ಅಂಥಾದ್ದು. ಒಂದು ಸೊಟ್ಟ ಆಕಳನ್ನು ಕೊಂದ ಅಪರಾಧಕ್ಕಾಗಿ, ಬಲರಾಮನು ಕುರುಕ್ಷೇತ್ರದ ಮಹಾಯುದ್ಧದಲ್ಲಿ ತನ್ನ ಪಕ್ಷದವನಾದ ದುರ್ಯೋಧನನಿಗೆ ಸಹಾಯಮಾಡುವದನ್ನು ಬಿಟ್ಟು, ಭೂಪ್ರದಕ್ಷಿಣೆಗಾಗಿ ಹೊರಟದ್ದು ಭಾರತದಲ್ಲಿ ಪ್ರಸಿದ್ಧವಾಗಿರುವದು; ಅದರಂತೆ ಒಬ್ಬ ಬ್ರಾಹ್ಮಣಪುತ್ರನ ಅಕಾಲ ಮರಣಕ್ಕಾಗಿ ಶ್ರೀರಾಮನು ಪೇಚಾಡಿದ್ದು ರಾಮಾಯಣದಲ್ಲಿ ಪ್ರಸಿದ್ಧವಿರುವದು. ಎಂಥ ಪ್ರತಾಪಿಯೇ ಇರಲಿ, ಎಂಥ ಬಲಿಷ್ಠನೇ ಇರಲಿ ಪಾಪಪುಣ್ಯಗಳ, ಹಾಗು ಕೀರ್ತ್ಯಪಕೀರ್ತಿಗಳ ವಿಚಾರಕ್ಕೆ ಬಿದ್ದರೆ, ಪಾಪದ, ಹಾಗು ಅಪಕೀರ್ತಿಯ ಪ್ರಸಂಗದಲ್ಲಿ ಆತನು ಹಣ್ಣಾಗುವದೇ ಸರಿ. ಅಶೋಕನ ಸ್ಥಿತಿಯಾದರೂ ಹೀಗೆಯೇ ಆಯಿತು. ಆತನು ದುಷ್ಟ ಭಿಕ್ಷುಗಳಿಗೆ ಬೆದರುವಷ್ಟು ಹೇಡಿಯಿದ್ದಿಲ್ಲ; ಆತನ ಪ್ರತಾಪಕ್ಕೆ ಇಡಿಯ ಭರತಖಂಡವು ಗದಗುಟ್ಟಿ ನಡಗುತ್ತಿತ್ತು; ಆದರೆ ಭಿಕ್ಷುವಧೆಯ ದೋಷವು ತನಗೆ ತಟ್ಟಿತೆಂತಲೂ, ಧಾರ್ಮಿಕವ್ಯಕ್ತಿಯ ವಧೆಯ ಅಪಕೀರ್ತಿಗೆ ತಾನು ಗುರಿಯಾದೆನೆಂತಲೂ ಆ ಮಹಾತ್ಮನು ಚಿಂತಿಸಿದನು. ಉಪವನದಲ್ಲಿ ಸಮಾಧಾನವಾಗದ್ದರಿಂದ ಆತನು ವೇಣುವನಕ್ಕೆ ಹೋಗಿ ಉಪಗುಪ್ತಾಚಾರ್ಯರ ದರ್ಶನವನ್ನು ತಕ್ಕೊಂಡನು. ಅವರು, ನಿನ್ನ ಅಪ್ಪಣೆಗೂ ಭಿಕ್ಷುವಿನ ವಧೆಗೂ ಏನೂ ಸಂಬಂಧವಿಲ್ಲೆಂದು ಚಕ್ರವರ್ತಿಗೆ ಹೇಳಿದರೂ, ಆತನಿಗೆ ಸಮಾಧಾನವಾಗಲಿಲ್ಲ, ಅಧಿಕಾರಿಯ ಅವಿಚಾರದಿಂದ ಆದ ಭಿಕ್ಷುವಿನ ಸಂಹಾರದ ಪಾಪವು ನಿನಗೆ ತಟ್ಟದೆಂತಲೂ, ಅಜ್ಞಾನಿಗಳ ಅಪಕೀರ್ತಿಗೆ ನೀನು ಮಹತ್ವಕೊಡಲಾಗದೆಂತಲೂ ಉಪಗುಪ್ತಾಚಾರ್ಯರು ಬೇಕಾದಷ್ಟು ತಿಳಿಸಿ ಹೇಳಿದರು; ಆದರೆ ಅಶೋಕನಿಗೆ ಅದರಿಂದ ಸ್ಥಿರವಾದ ಶಾಂತಿಯು ದೊರೆಯಲಿಲ್ಲ. ಆತನು ಗುರುಗಳ ಬೋಧವನ್ನು ಕೇಳುತ್ತ ಕೆಲವು ಹೊತ್ತು ಕುಳಿತುಕೊಂಡು, ಆಮೇಲೆ ಮತ್ತೆ ಅರಮನೆಗೆ ಬಂದನು. ಅಷ್ಟರಲ್ಲಿ ಸಂಪುಷ್ಪಾಚಾರ್ಯನೂ ಭಿಕ್ಷುಗಳ ಸಮೂಹವನ್ನು ನೆರಿಸಿಕೊಂಡು ಅರಮನೆಯ ಬಾಗಿಲಲ್ಲಿ ನಿಂತುಕೊಂಡಿದ್ದನು.

ಭಿಕ್ಷುಗಳ ಆವೇಶವನ್ನು ನೋಡಿ ದ್ವಾರರಕ್ಷಕರು ಅವರನ್ನು ಅರಮನೆಯ ಒಳಗೆ ಬಿಟ್ಟಿದ್ದಿಲ್ಲ. ತನ್ನನ್ನು ಹೀಗೆ ಪ್ರತಿಬಂಧಿಸಿದ್ದಕ್ಕಾಗಿ ಸಂಪುಷ್ಪಾಚಾರ್ಯನ ಪಿತ್ತವು ತಲೆಗೇರಿತ್ತು. ಭಿಕ್ಷುಗಳ ಈ ಗದ್ದಲವನ್ನು ಕೇಳಿ ಚಕ್ರವರ್ತಿಯು ಹೊರಗೆಬರಲು, ಸಂಪುಷ್ಪಾಚಾರ್ಯನು ತನ್ನ ಪರಿವಾರದೊಡನೆ ''ನಮೋಬುದ್ಧಾಯ, ನಮೋಬುದ್ಧಾಯ'' ಎಂಬ ಪವಿತ್ರಶಬ್ದದ ಭೀಷಣನಾದಮಾಡಿ, ಚಕ್ರವರ್ತಿಗೆ—''ಭಗವನ್, ನೀನು ಭಿಕ್ಷುವನ್ನು ಕೊಲ್ಲಿಸಿದ್ದಕ್ಕಾಗಿ ಪ್ರಾಯಶ್ಚಿತ್ತವನ್ನು ತಕ್ಕೊಳ್ಳಬೇಕೆಂ''ದು ಆಜ್ಞಾಪಿಸಿದನು. ಭಿಕ್ಷುಗಳ ಸಮೂಹವನ್ನೂ, ಅವರ ತ್ವೇಷವನ್ನೂ ಅವಲೋಕಿಸಿ, ಚಕ್ರವರ್ತಿಯು ಅವರನ್ನು ಕುರಿತು—ಪೂಜ್ಯರೇ, ಭಿಕ್ಷುವಿನ ಶಿರಚ್ಛೇದವಾದದ್ದಕ್ಕಾಗಿ ನನಗೆ ಬಹಳ ದುಃಖವಾಗಿದೆ. ಭಿಕ್ಷುವಧಕ್ಕೆ ನಾನು ಕೊಟ್ಟ ಅಪ್ಪಣೆಯ ಸಂಬಂಧವಿಲ್ಲ; ಆದ್ದರಿಂದ ನಾನು ಪ್ರಾಯಶ್ಚಿತ್ತಕ್ಕೆ ಪಾತ್ರನಲ್ಲ; ನಿಮ್ಮ ಸಮದುಃಖಿಯಿರುತ್ತೇನೆ. ಇದರ ಮೇಲೆಯೂ ಧರ್ಮದ ತತ್ವದಂತೆ ನಾನು ಅಪರಾಧಿಯೆಂದು ನಿರ್ಧರಿಸಲ್ಪಟ್ಟರೆ, ಪ್ರಾಯಶ್ಚಿತ್ತವನ್ನು ತಕ್ಕೊಳ್ಳಲಿಕ್ಕೆ ನಾನು ಸಿದ್ಧನಿರುವೆನು. ಮೃತಭಿಕ್ಷುವಿನ ಔರ್ಧ್ವದೇಹಿಕ

ಕ್ರಿಯೆಗಳು ತೀರಿದಕೂಡಲೆ, ಯಾವತ್ತು ಧರ್ಮಗುರುಗಳ ಸಭೆಯನ್ನು ಕೂಡಿಸಿರಿ; ಬಹು ಮತದಿಂದ ಆದ ನಿರ್ಣಯವು ನನಗೆ ಮಾನ್ಯವಾಗಿರುತ್ತದೆ, ಎಂದು ಹೇಳಿದನು. ಚಕ್ರವರ್ತಿಗೆ ಪ್ರಾಯಶ್ಚಿತ್ತವನ್ನು ಕೊಡಲಿಕ್ಕೆ ತಡಮಾಡುವದು, ಸಂಪುಷ್ಪಾಚಾರ್ಯನ ಮನಸ್ಸಿಗೆ ಬರಲಿಲ್ಲ, ಮಹಾಸಭೆಯು ನೆರೆಯುವದಕ್ಕಿಂತ ಮೊದಲೇ, ಅಥವಾ ಸಭಾಪತಿಯು ಪಾಟಲಿಪುತ್ರಕ್ಕೆ ಬರುವದಕ್ಕಿಂತ ಮೊದಲೇ ಚಕ್ರವರ್ತಿಗೆ ಪ್ರಾಯಶ್ಚಿತ್ತವನ್ನು ಕೊಟ್ಟು, ಚಕ್ರವರ್ತಿಯನ್ನೂ, ಮಹಾಸಭೆಯನ್ನೂ ಕೂಡಿಯೇ ನಾಶಗೊಳಿಸಬೇಕೆಂದು ಆತನು ಮಾಡಿದನು. ಆ ದುಷ್ಟ ಸಭಾಪತಿಯು, ಚಕ್ರವರ್ತಿಯನ್ನು ಕುರಿತು—ಭಗವನ್, ಭಿಕ್ಷುವಿನ ಔರ್ಧ್ವದೇಹಿಕ ಕ್ರಿಯೆಗಳು ತೀರಲಿಕ್ಕೆ ಇನ್ನು ಮೂರುದಿನಗಳು ಬೇಕು. ನಾಲ್ಕನೆಯದಿವಸ ಯಾವ ನೆವವನ್ನೂ ಹೇಳದೆ, ನೀನು ಪ್ರಾಯಶ್ಚಿತ್ತವನ್ನು ಕೇಳಲಿಕ್ಕೆ ಸಿದ್ಧನಾಗಲಿಕ್ಕೆ ಬೇಕು, ಎಂದು ನುಡಿದು, ಆತನು ದೊಡ್ಡ ಜಯವನ್ನು ಸಂಪಾದಿಸಿದವನಂತೆ ಚಕ್ರವರ್ತಿಯನ್ನು ನೋಡುತ್ತ ತನ್ನ ಭಿಕ್ಷುಮಂಡಲದೊಡನೆ ಹೊರಟುಹೋದನು.

ಈ ಪ್ರಾಯಶ್ಚಿತ್ತದ ಪ್ರಕರಣದಿಂದ ಚಕ್ರವರ್ತಿಯ ಮನಸ್ಸು ಮತ್ತಿಷ್ಟು ಸಮಾಧಾನ ವಾಯಿತು. ಆತನು ಉಪವನಕ್ಕೆ ಹೋಗಿ, ಆಲೋಚಿಸುತ್ತ ಕುಳಿತುಕೊಂಡನು. ಇಂದಿರೆಯು ಅಣ್ಣನ ಈ ಅಸಮಾಧಾನದ ಸ್ಥಿತಿಯನ್ನು ಕೇಳಿ ವ್ಯಸನಪಟ್ಟು, ಆತನ ಬಳಿಗೆ ಹೋದಳು. ಚಿಂತಾಮಗ್ನನಾದ ಚಕ್ರವರ್ತಿಗೆ ತನ್ನ ತಂಗಿಯು ಬಂದದ್ದು ಗೊತ್ತೇ ಆಗಲಿಲ್ಲ. ಆಗ ಇಂದಿರೆಯು ದುಃಖದಿಂದ ಉಸುರ್ಗರೆದು—ಭಗವನ್, ದುಃಖವನ್ನಾದರೂ ಎಷ್ಟು ಮಾಡಬೇಕಿದು! ನೀನು ದುಃಖಪಟ್ಟರೆ, ಸತ್ತ ಭಿಕ್ಷುವು ತಿರುಗಿ ಬರುವನೋ? ಭಿಕ್ಷುವಿನ ಶಿರಚ್ಛೇದಕ್ಕೂ ನಿನ್ನ ಅಪ್ಪಣೆಗೂ ಏನೂ ಸಂಬಂಧವಿಲ್ಲೆಂದು ಉಪಗುಪ್ತಾಚಾರ್ಯರು ಹೇಳಿರುತ್ತಾರೆ; ಅಂದಬಳಿಕ ಚಿಂತಿಸುವದೇಕೆ? ಎಂದು ನುಡಿಯಲು, ಚಕ್ರವರ್ತಿಯು ಎಚ್ಚತ್ತು ಇಂದಿರೆಯನ್ನು ಕುರಿತು—ತಂಗೀ, ಮನುಷ್ಯಪ್ರಾಣಿಯು ಮರಣಾಧೀನನಾಗಿರುತ್ತಾನೆ; ಒಂದಿಲ್ಲೊಂದು ದಿನ ಆತನ ಅಂತವು ಯಾವದೊಂದು ಕಾರಣದಿಂದ ಆಗೇ ಆಗುವದು; ಅದಕ್ಕಾಗಿ ದುಃಖಿಸುವದು ವ್ಯರ್ಥವೆಂಬದನ್ನು ನಾನು ಬಲ್ಲೆನು; ಆದರೆ ಭಿಕ್ಷುವಿನ ಮರಣವು, ನನ್ನ ಆಜ್ಞೆಯನ್ನು ನಡಿಸುವಾಗ ಒಬ್ಬ ಅಧಿಕಾರಿಯ ಕೈಯಿಂದಾಗಿರುತ್ತದೆಂಬದು ನನ್ನ ಚಿಂತೆಯ ಮೂಲ ವಾಗಿರುತ್ತದೆ. ಭಿಕ್ಷುವಿನ ಶಿರಚ್ಛೇದಕ್ಕೂ, ನನ್ನ ಅಪ್ಪಣೆಗೂ ಸಂಬಂಧವಿಲ್ಲದಿದ್ದರೂ, ಎಷ್ಟೋ ತಿಳಿಗೇಡಿ ಭಿಕ್ಷುಗಳ ದ್ವೇಷಮೂಲಕ ನನ್ನ ಅಪ್ಪಣೆಯಿಂದಲೇ ಭಿಕ್ಷುವಿನ ಶಿರಚ್ಛೇದವಾಯಿ ತೆಂದು ಪ್ರತಿಪಾದಿಸುವದರಿಂದ, ಬಹುಜನ ಸಮಾಜದ ತಿಳುವಳಿಕೆಯೂ ಅವರಂತೆಯೇ ಆಗಿರುತ್ತದೆ. ಹೀಗೆ ಲೋಕಮತದಂತೆ ತಿರಸ್ಕರಣೀಯವಾದ ಕಾರ್ಯವನ್ನು ಮಾಡಿದ ಅಪವಾದಕ್ಕೆ ಗುರಿಯಾದ ನಾನು, ಹೇಗೆ ಸಮಾಧಾನದಿಂದ ಇರಲಿ!

ಇಂದಿರೆ—ಭಗವನ್, ಕೆಲವರು ದುಷ್ಟರು ಹೊರಿಸಿದ ಅಪವಾದಕ್ಕಾಗಿ ನೀನು ಇಷ್ಟು ಚಿಂತಿಸಬಹುದೆ? ಸುಳ್ಳು ಅಪವಾದ ಹೊರಿಸುವ ದುಷ್ಟರ ಶಾಸನ ಮಾಡುವದು ನಿನ್ನ ಕರ್ತವ್ಯ ವಾಗಿರುತ್ತದೆ! ದುಷ್ಟಶಾಸನ, ಶಿಷ್ಟಪರಿಪಾಲನ ಮಾಡಲು ಬದ್ಧನಾಗಿರುವ ನೀನು, ಹೀಗೆ ಚಿಂತಾಕ್ರಾಂತನಾಗುವದು ಸರಿಯಲ್ಲ, ಸುಳ್ಳು ಅಪವಾದ ಹೊರಿಸುವ ಭಿಕ್ಷುಗಳು ನಮ್ಮ

ಗುರುಗಳೇ ಅಲ್ಲ. ಅಂಥವರ ಅಪ್ಪಣೆಯಂತೆ ನಡೆದರೆ ಧರ್ಮಹಾನಿಯಾಗುವದರಲ್ಲಿ ಸಂಶಯವಿಲ್ಲ. ಸಂಪುಷ್ಪಾಚಾರ್ಯನ ದುಷ್ಟತನದ ಅನುಭವವುಳ್ಳ ನೀನು, ಆತನ ಕೈಯಲ್ಲಿ ನಿನ್ನ ಪ್ರಾಣಗಳನ್ನು ಕೊಡುವದು ಯೋಗ್ಯವಲ್ಲ. ಆ ದುಷ್ಟನು ಪ್ರಾಯಶ್ಚಿತ್ತದ ನೆವದಿಂದ ನಿನ್ನ ಪ್ರಾಣಹರಣ ಮಾಡಲಿಕ್ಕೆ ಸಹ ಹೇಸಲಿಕ್ಕಿಲ್ಲ!

ಅಶೋಕ—ತಂಗೀ, ನಿನ್ನ ಮಾತನ್ನು ನಾನು ಅಲ್ಲಗಳೆಯುವದಿಲ್ಲ. ಸಂಪುಷ್ಪಾಚಾರ್ಯರು ಅಂಥ ಇಂಥ ಬಿಡಿಭಿಕ್ಷುವಲ್ಲ; ನಮ್ಮ ಧರ್ಮಗುರುಗಳಾಗಿದ್ದಾರೆ. ಇಲ್ಲಿಯವರೆಗೆ ಪ್ರಾಯಶ್ಚಿತ್ತದ ಸಂಬಂಧದಿಂದ ಅವರ ಆಜ್ಞೆಯನ್ನು ಪಾಲಿಸುತ್ತ ಬಂದ ನಾನು, ಸ್ವತಃ ಪ್ರಾಯಶ್ಚಿತ್ತವನ್ನು ತಕ್ಕೊಳ್ಳುವ ಪ್ರಸಂಗದಲ್ಲಿ ಬಹುಮತದಿಂದ ಗೊತ್ತಾದ ಪ್ರಾಯಶ್ಚಿತ್ತವನ್ನು ಸಂಪುಷ್ಪಾಚಾರ್ಯರ ಮುಖದಿಂದ ಕೇಳಲಿಕ್ಕೆ ಒಡಂಬಡದಿದ್ದರೆ, ನನ್ನ ಪ್ರಜೆಗಳು ನನ್ನ ನ್ಯಾಯಬುದ್ಧಿಗೆ ಹೆಸರನ್ನಿಡ ಬಹುದು. ಇಂದಿನಿಂದ ನಾಲ್ಕನೆಯ ದಿನ ಭಿಕ್ಷುಮಂಡಲವು ಬಹುಮತದಿಂದ ನಿರ್ಣಯಿಸಿದ ಪ್ರಾಯಶ್ಚಿತ್ತವನ್ನು ಸ್ವೀಕರಿಸುವೆನೆಂದು ನಾನು ವಚನಕೊಟ್ಟಿದ್ದೇನೆ; ಆದ್ದರಿಂದ ನಾನು ವಚನವನ್ನು ಪಾಲಿಸುವದಕ್ಕಾಗಿ, ಪ್ರಾಯಶ್ಚಿತ್ತವನ್ನು ಕೇಳಲಿಕ್ಕೆ ಸಿದ್ಧನಾಗಿರಬೇಕಾಗುವದು. ಪ್ರಜಾರಂಜಕ ನಾಗುವದಕ್ಕಾಗಿ ಶ್ರೀರಾಮನು ಒಬ್ಬ ಅಗಸನ ಸುಳ್ಳು ಅಪವಾದಕ್ಕೆ ಲೋಕಮಾತೆಯಾದ ಜಾನಕಿಯನ್ನು ಅಡವಿಗೆ ಅಟ್ಟಲಿಲ್ಲವೆ?

ಇಂದಿರೆ—ಹಾಗಾದರೆ, ಈ ಸಂಕಟದಿಂದ ಪಾರಾಗಲಿಕ್ಕೆ ಮಾರ್ಗವೇ ಇಲ್ಲವೇನು?

ಅಶೋಕ—ಮಾರ್ಗವಿದೆ. ತಂಗೀ, ತಮ್ಮ ಅಕುಂಠಿತವಾದ ತೇಜಸ್ಸಿನಿಂದ ಲೋಕ ಪೂಜ್ಯತೆಯನ್ನು ಪಡೆದಿದ್ದ ಮೊಗ್ಗಲೀಪುತ್ರ-ತಿಷ್ಯರಂಥ ಮಹಾತ್ಮರು ಭಿಕ್ಷುಗಳ ಸಭೆಗೆ ಬಂದು, ನಾನು ನಿರಪರಾಧಿಯೆಂದು ನಿರ್ಣಯಿಸಿದರೆ, ನಾನು ಅಪವಾದದಿಂದ ಮುಕ್ತನಾಗುವೆನು. ಉಪಗುಪ್ತಾಚಾರ್ಯರು ನಾನು ನಿರಪರಾಧಿಯೆಂದು ಹೇಳುತ್ತಿದ್ದರೂ, ಈಗ ಪಾಟಲಿಪುತ್ರದಲ್ಲಿ ಕೂಡಿರುವ ಭಿಕ್ಷುಸ್ತೋಮದ ಮುಂದೆ ಅವರ ವರ್ಚಸ್ಸು ಬೀಳದು. ಈ ಪ್ರಸಂಗದಲ್ಲಿ ಮಹಾತ್ಮರಾದ ಮೊಗ್ಗಲೀಪುತ್ರ ತಿಷ್ಯರ ಹೊರತು ಅನ್ಯರ ಆಟವು ನಡೆಯುವಹಾಗಿಲ್ಲ. ಆ ತಪೋಧನರು "ಮಹಾಸಭೆಗೆ ಬರುವೆನೆಂ"ದು ತಮ್ಮ ಪತ್ರದ ಕಡೆಯಲ್ಲಿ ಬರೆದಿರುವರು; ಆದರೆ ಅವರು ಇರುವ ಸ್ಥಳವು ಯಾರಿಗೆ ಗೊತ್ತಿರುವದು? ಗೊತ್ತಿದ್ದರೆ ನಾಳಿನ ಸಭೆಗೆ ಅವರನ್ನು ಕರಕೊಂಡು ಬರಬಹುದಾಗಿತ್ತು. ತಂಗೀ, ಇಂದಿರೇ, ಯಾಕೆ ವ್ಯಸನಪಡುತ್ತೀ? ಪ್ರೇಮಲ ಮೂರ್ತಿಯಾದ ನೀನು ವ್ಯರ್ಥವಾಗಿ ವ್ಯಸನದಿಂದ ಕ್ಷೀಣವಾಗಬೇಡಮ್ಮಾ! ದುಷ್ಟ ಭಿಕ್ಷುಗಳು ನಾಳಿನ ಸಭೆಯಲ್ಲಿ ನನಗೆ ದೇಹಾಂತ ಪ್ರಾಯಶ್ಚಿತ್ತವನ್ನು ಕೊಟ್ಟರೂ ಕೊಡಲಿ. ನನ್ನ ಪ್ರಜೆಗಳಲ್ಲಿ ಸದ್ಧರ್ಮದ ಪ್ರಸಾರಮಾಡಿ, ಅವರನ್ನು ನೀತಿವಂತರನ್ನಾಗಿ ಮಾಡುವೆನೆಂದು ಯಾರಾದರೂ ಹೇಳಿದರೆ, ನಾನು ಸಮಾಧಾನದಿಂದ ದೇಹಾಂತ ಪ್ರಾಯಶ್ಚಿತ್ತವನ್ನು ಭೋಗಿಸುವೆನು.

ಅಣ್ಣನ ಈ ಹೃದಯದ್ರಾವಕ ಮಾತುಗಳನ್ನೂ, ಆತನ ಸೌಜನ್ಯವನ್ನೂ ನೋಡಿ, ಇಂದಿರೆಯು ವ್ಯಸನಪಟ್ಟಳು. ಅಷ್ಟರಲ್ಲಿ ಆಕೆಯ ಮನಸ್ಸಿಗೆ ಏನೋ ಹೊಳೆದಂತಾಗಿ, ಆಕೆಯ ಮನಸ್ಸು ಸಮಾಧಾನಪಟ್ಟಿತು. ಆಕೆಯು ಅಶೋಕನನ್ನು ಕುರಿತು—ಅಣ್ಣಾ ಮೊಗ್ಗಲೀಪುತ್ರ—

ಶಿಷ್ಯರವರನ್ನು ಕರೆಸುವ ಚಿಂತೆಯನ್ನು ಬಿಡು. ಅಗೋ ನೋಡು, ಆ ತರುಣ ಭಿಕ್ಷುವು ಇತ್ತಕಡೆಗೆ ಬರುತ್ತಾನೆ. ಆತನಿಂದ ಆ ಕಾರ್ಯವು ನಿಶ್ಚಯವಾಗಿ ಸಾಧಿಸುತ್ತದೆ, ಅನ್ನಲು, ಅಶೋಕನಿಗೆ ಆಶಾಂಕುರವು ಉತ್ಪನ್ನವಾಗಿ, ಆತನು ಇಂದಿರೆಯ ಕೈಯನ್ನು ಹಿಡಕೊಂಡು ಭಿಕ್ಷುವಿನ ಎದುರಿಗೆ ಹೊರಟನು. ಆಗ ಭಿಕ್ಷುವು ಅಶೋಕನನ್ನು ವಂದಿಸಲು ''ಈತನು ನಮ್ಮ ಯುವರಾಜನಲ್ಲವೆ?'' ಎಂಬ ಭ್ರಾಂತಿಯು ಚಕ್ರವರ್ತಿಯ ಮನಸ್ಸಿನಲ್ಲಿ ಉತ್ಪನ್ನವಾಯಿತು. ಆದರೆ ಆ ತರುಣನ ಭಿಕ್ಷುವೇಷವನ್ನೂ, ಆತನು ರಾಧಾಗುಪ್ತಮಂತ್ರಿಯ ಪ್ರಾಣಸಂಕಟ ದೂರ ಮಾಡುವಾಗ ಮಾಡಿದ ಸಾಹಸವನ್ನೂ ಸ್ಮರಿಸಿ, ಚಕ್ರವರ್ತಿಯು ಆ ತರುಣನನ್ನು ಕುರಿತು—ಭಿಕ್ಷುಶ್ರೇಷ್ಠನೇ, ನಿನಗೆ ಮೊಗ್ಗಲೀಪುತ್ರ-ಶಿಷ್ಯರವರ ವಾಸಸ್ಥಳವು ಗೊತ್ತಿರುವದೋ? ಎಂದು ಕೇಳಲು, ಭಿಕ್ಷುವು—ಭಗವನ್, ನನಗೆ ಆಚಾರ್ಯರವರ ನಿವಾಸ ಸ್ಥಾನವು ಗೊತ್ತಿರುವದಿಲ್ಲ; ಆದರೆ ಆ ಮಹಾತ್ಮರು ತಮ್ಮ ದಿವ್ಯಜ್ಞಾನದಿಂದ ನಾನು ಮತ್ತೊಮ್ಮೆ ತಮ್ಮನ್ನು ಕಾಣಬೇಕಾಗುವದೆಂದು ತಿಳಿದು, ತಮ್ಮನ್ನು ಕಾಣುವ ಸ್ಥಾನವನ್ನು ನನಗೆ ಹೇಳಿರುವರು, ಎಂದು ನುಡಿದನು. ಅದನ್ನು ಕೇಳಿ ಅಶೋಕನಿಗೆ ಬಹಳ ಸಂತೋಷವಾಯಿತು. ಆತನು ಸ್ವಲ್ಪದರಲ್ಲಿ ಪ್ರಾಯಶ್ಚಿತ್ತದ ಸಂಗತಿಯನ್ನು ಆ ತರುಣ ಭಿಕ್ಷುವಿಗೆ ಹೇಳಿ, ಆಚಾರ್ಯರನ್ನು ಕರಕೊಂಡು ಬರುವ ಕೆಲಸವನ್ನು ಆತನಿಗೆ ಒಪ್ಪಿಸಿದನು. ತರುಣ ಭಿಕ್ಷುವಾದರೂ ಈ ಕೆಲಸಮಾಡುವದು ನನ್ನನ್ನು ಕೂಡಿತೆಂದು ಚಕ್ರವರ್ತಿಗೆ ಉಲ್ಲಾಸದಿಂದ ಹೇಳಿದನು. ''ಬೌದ್ಧಧರ್ಮಕ್ಕೊದಗುವ ಒಂದು ಸಂಕಟವು ನಿನ್ನಿಂದ ದೂರವಾಗ ಬೇಕಾಗಿದೆ''ಯೆಂದು ಮಹಾತ್ಮರು ತನ್ನ ಮುಂದೆ ಹೇಳಿದ್ದರ ಸತ್ಯತೆಯು, ಈಗ ಆ ತರುಣ ಭಿಕ್ಷುವಿನ ಮನಸ್ಸಿಗೆ ಹೊಳೆಯಿತು. ಆತನು ಚಕ್ರವರ್ತಿಗೆ ವಂದಿಸಿ, ಇಂದಿರೆಯನ್ನು ಪ್ರೇಮಲದೃಷ್ಟಿಯಿಂದ ನೋಡುತ್ತ, ಹೊರಡಲು ಸಿದ್ಧನಾಗಲು, ಅಶೋಕನು ಆತನನ್ನು ಕುರಿತು—ತರುಣನೇ, ಈಗ ನಾನು ಹೇಳಿದ ಸಂಗತಿಯನ್ನೆಲ್ಲ ಆಚಾರ್ಯರಿಗೆ ತಿಳಿಸು; ನಾನು ಒಂದು ಪತ್ರವನ್ನು ಕೊಡುತ್ತೇನೆ, ಅದನ್ನು ಆಚಾರ್ಯರಿಗೆ ಮುಟ್ಟಿಸು. ಹೇಗಾದರೂ ಮಾಡಿ ಸಭೆಯ ದಿವಸ ಆಚಾರ್ಯರನ್ನು ಇಲ್ಲಿಗೆ ಕರೆದುಕೊಂಡು ಬರುವಂತೆ ಮಾಡು, ಎಂದು ಹೇಳಿ, ಅಲ್ಲಿಯೇ ಕುಳಿತು, ಒಂದು ಪತ್ರವನ್ನು ಬರೆದು ಭಿಕ್ಷುವಿನ ಕೈಯಲ್ಲಿ ಕೊಟ್ಟನು. ಕೂಡಲೆ ಭಿಕ್ಷುವು ಅಶೋಕನನ್ನು ವಂದಿಸಿ, ಇಂದಿರೆಯನ್ನು ಪ್ರೀತಿಪೂರ್ವಕವಾಗಿ ನೋಡುತ್ತ, ಅಲ್ಲಿಂದ ಹೊರಟುಹೋದನು.

ಇತ್ತ ಮೃತಭಿಕ್ಷುವಿನ ಔರ್ಧ್ವದೇಹಿಕ ಕರ್ಮಗಳು ತೀರಿ, ನಾಲ್ಕನೆಯ ದಿವಸ ಭಿಕ್ಷುಗಳ ಸಭೆಯು ನೆರೆಯಿತು. ಭಿಕ್ಷುಗಳ ಅಗ್ರಸ್ಥಾನದಲ್ಲಿ ಸಂಪುಷ್ಪಾಚಾರ್ಯನು ತಾನಾಗಿಹೋಗಿ ಕುಳಿತುಕೊಂಡಿದ್ದನು. ಇನ್ನು ಸಂಪುಷ್ಪಾಚಾರ್ಯನು ಚಕ್ರವರ್ತಿಗೆ ಪ್ರಾಯಶ್ಚಿತ್ತವನ್ನು ಹೇಳಿ, ಮಹಾಸಭೆಯನ್ನು ಹೇಗೆ ಮುರಿಯುವನೆಂಬದನ್ನು ನೋಡುವದಕ್ಕಾಗಿ ಭಿಕ್ಷುಮಂಡಲವು ಸಿದ್ಧವಾಗಿ ಕುಳಿತುಕೊಂಡಿತ್ತು. ಕುಮಾರನಾದ ವೀತಾಶೋಕನು, ಅಣ್ಣನಿಗೊದಗಿದ ಸಂಕಟದಿಂದ ಶೋಕಾಕುಲನಾಗಿ, ಅಣ್ಣನ ಬಳಿಯಲ್ಲಿ ಕುಳಿತುಕೊಂಡಿದ್ದನು. ಸಭೆಯು ಸ್ತಬ್ಧವಾಗಿತ್ತು. ಪುಣ್ಯ ಶಾಲಿಯೂ, ಧರ್ಮಾತ್ಮನೂ ಆದ ಅಶೋಕನ ಪ್ರಖರವಾದ ಧರ್ಮತೇಜಸ್ಸಿನಿಂದ ಸಂಪುಷ್ಪಾ

ಚಾರ್ಯನ ಕಣ್ಣುಗಳು ಕುಕ್ಕಿ, ಆತನಿಗೆ ಏನೂ ತೋಚದಾಯಿತು. ಬಹಳ ಹೊತ್ತು ಶ್ರಮಪಟ್ಟು, ಸಭೆಯಲ್ಲಿ ಮಾತಾಡಬೇಕೆಂದು ಗಟ್ಟಿಮಾಡಿದ್ದ ಆತನ ಮಾತುಗಳೆಲ್ಲ ಮರೆತುಹೋದವು. ''ಇನ್ನೂ ಧರ್ಮಗುರುಗಳು ಬರುವವರಿದ್ದಾರೆ, ಬರಲಿ'' ಎಂಬ ನೆವವನ್ನು ಮುಂದೆಮಾಡುತ್ತ ಆತನು ಹೊತ್ತು ಹಾಕಹತ್ತಿದನು. ಹೀಗೆ ಸಭೆಯು ನೆರೆದು ಬಹಳ ಹೊತ್ತಾದರೂ, ಸಂಪುಷ್ಪಾಚಾರ್ಯನು ಮಾತಾಡದೆ ಸುಮ್ಮನೆ ಕುಳಿತಿರುವದನ್ನು ನೋಡಿ, ಜನರು ಆತುರಪಟ್ಟರು. ಅಷ್ಟರಲ್ಲಿ ಸಂಪುಷ್ಪಾಚಾರ್ಯನು ಚಂಚಲವಾಗಿದ್ದ ತನ್ನ ಮನಸ್ಸನ್ನು ಸ್ಥಿರವಾಗಿ ಮಾಡಿಕೊಂಡು, ವ್ಯಾಸಪೀಠದಲ್ಲಿ ಎದ್ದುನಿಂತು ಮಾತಾಡತೊಡಗಿದನು.—ಸನ್ಮಾನನೀಯವಾದ ಪ್ರಿಯಭಿಕ್ಷುವೃಂದವೇ, ನಾವು ಇಂದು ನಮ್ಮ ಆಶ್ರಮದ ಅತ್ಯಂತ ಕಟುವಾದ ಕರ್ತವ್ಯವನ್ನು ನೆರವೇರಿಸುವದಕ್ಕಾಗಿ ಇಲ್ಲಿ ನೆರೆದಿರುತ್ತೇವೆ. ಈ ಸ್ಥಾನವು ಧಾರ್ಮಿಕ ವಿಷಯಗಳ ವಿವರಣೆ ಮಾಡುವದಕ್ಕಾಗಿ ಸಿದ್ಧಪಡಿಸಲ್ಪಟ್ಟಿರುವದೆಂದು ಮೊದಮೊದಲಿಗೆ ನಮ್ಮ ತಿಳುವಳಿಕೆಯಾಗಿತ್ತು; ಆದರೆ ಅದು ಕೇವಲ ಭ್ರಮವಾಯಿತು. ಈ ಸ್ಥಾನವು ಸತ್ಯಧರ್ಮದ ನಾಶಕ್ಕಾಗಿ ರಚಿಸಲ್ಪಟ್ಟಿರುವದೆಂದು ನಾನು ತಿಳಿಯುವೆನು. ವಿಚಾರಮಾಡಿ ನೋಡಿದರೆ ನಾವು ಪ್ರತ್ಯಕ್ಷ ಧರ್ಮಗುರುಗಳು; ಪರಮಪೂಜ್ಯ ಶ್ರೀ ಗೌತಮಬುದ್ಧನ ಪ್ರತಿನಿಧಿಗಳು. ನಮ್ಮ ಬಾಯಿಂದ ಹೊರಟ ಶಬ್ದಗಳೇ ಧರ್ಮಸೂತ್ರಗಳು, ನಮ್ಮ ಆಜ್ಞೆಗಳೇ ಧರ್ಮಾಜ್ಞೆಗಳು, ನಾವು ಯೋಗ್ಯವೆಂದು ಹೇಳುವ ಆಚರಣೆಗಳೇ ಧರ್ಮಾಚರಣೆಗಳು, ನಾವು ಸ್ವೀಕರಿಸುವ ಮಾರ್ಗವೇ ನಿರ್ವಾಣಪ್ರಾಪ್ತಿಯ ಮಾರ್ಗವು. ಹೀಗಿದ್ದು ನಮ್ಮನ್ನು ವ್ಯರ್ಥ ಅವಮಾನಗೊಳಿಸುವದಕ್ಕಾಗಿಯೂ, ನಮ್ಮ ಅಧಿಕಾರದ ಬಗ್ಗೆ ಅಸೂಯಪಟ್ಟು ಸುಮ್ಮನೆ ನಮ್ಮನ್ನು ಛಲಿಸುವದಕ್ಕಾಗಿಯೂ, ಇಷ್ಟರಿಂದಲೇ ತೃಪ್ತವಾಗದೆ ಧರ್ಮಗುರುಗಳಾದ ನಮ್ಮ ಮೇಲೆಯೂ ಪ್ರಜೆಗಳಂತೆ ಅನಿಯಂತ್ರಿತ ಅಧಿಕಾರವನ್ನು ಕೂಡಿಸುವದಕ್ಕಾಗಿಯೂ ಚಕ್ರವರ್ತಿಯು ಮಹಾಸಭೆಯನ್ನು ನೆರೆಸುವವನಿರುವನು; ಆದರೆ ತಥಾಗತನ ಕೃಪೆಯಿರುವತನಕ ಚಕ್ರವರ್ತಿಯ ಅಪವಿತ್ರವಾದ ಉದ್ದೇಶವೂ, ನಾಸ್ತಿಕತ್ವವೂ ಹೇಗೆ ಜಯಶಾಲಿಯಾಗಬೇಕು? ಮಹಾಸಭೆಯ ಅಧಿನಿವೇಶವಾಗುವದರೊಳಗೆ ಚಕ್ರವರ್ತಿಯ ದುರುದ್ದೇಶವು ನಮಗೆ ಗೊತ್ತಾದ್ದರಿಂದ, ನಾವು ಸ್ವಲ್ಪದರಲ್ಲಿ ಉಳಕೊಂಡ ಹಾಗಾಯಿತು; ಚಕ್ರವರ್ತಿಯ ಘಾತಕವಾದ ಉದ್ದೇಶಕ್ಕೆ ಒಬ್ಬ ಧರ್ಮಗುರುವೇ ಬಲಿಯಾದನು; ಇಲ್ಲದಿದ್ದರೆ ಮಹಾಸಭೆಯ ಅಧಿನಿವೇಶದ ಡಾಂಭಿಕತನದ ಬುಡದಲ್ಲಿ ಎಲ್ಲ ಭಿಕ್ಷುಸಮಾಜವು ಸಿಕ್ಕು ಜಿಬ್ಬಿಯಾಗಿ ಹೋಗುತ್ತಿತ್ತು!

ಭಿಕ್ಷುಶ್ರೇಷ್ಠರೇ, ಚಕ್ರವರ್ತಿಯು ಮಾಡಿರುವ ಅಪರಾಧವು ನಿಮಗೆ ಗೊತ್ತೇ ಇರುತ್ತದೆ. ಈ ಅಪರಾಧಕ್ಕಾಗಿ ಪ್ರಾಯಶ್ಚಿತ್ತವನ್ನು ಹೇಳುವಾಗ ನಾನು, ಎಲ್ಲ ಗೂಢಸಂಗತಿಗಳ ಪೂರ್ಣ ವಿಚಾರಮಾಡಿರುತ್ತೇನೆ. ಮಹಾಸಭೆಯು ಸದುದ್ದೇಶದಿಂದ ನೆರೆಸಲ್ಪಟ್ಟಿರುವದಿಲ್ಲ, ಉಪಗುಪ್ತಾಚಾರ್ಯನ ಸಹವಾಸವಾದಂದಿನಿಂದ ಧರ್ಮದ ಮೇಲಿನ ಚಕ್ರವರ್ತಿಯ ವಿಶ್ವಾಸವೂ, ಧರ್ಮಗುರುಗಳ ಮೇಲಿನ ಆತನ ಪ್ರೇಮವೂ ನಷ್ಟವಾಗಿ ಹೋಗಿರುತ್ತವೆ. ಮಹಾಸಭೆಯ ನೆವದಿಂದ ನಮ್ಮೆಲ್ಲರನ್ನು ಒಟ್ಟುಗೂಡಿಸಿ ನಮ್ಮನ್ನು ಸಂಹರಿಸಿ, ಉಪಗುಪ್ತಾಚಾರ್ಯನ ಕೈಯಲ್ಲಿ

ಧರ್ಮಸೂತ್ರಗಳನ್ನು ಕೊಟ್ಟು, ರಾಜಮತದಂತೆ ಧರ್ಮವು ನಡೆಯುವ ಹಾಗೆ ಮಾಡಬೇಕೆಂದು ಚಕ್ರವರ್ತಿಯ, ಹಾಗು ಉಪಗುಪ್ತಾಚಾರ್ಯನ ಸಂಕಲ್ಪವಿದ್ದಂತೆ ತೋರುತ್ತದೆ. ಇಲ್ಲದಿದ್ದರೆ, ಈಗ ಮಹಾಸಭೆಯು ಯಾತಕ್ಕೆ ಬೇಕಾಗಿತ್ತು! ನಮ್ಮಲ್ಲಿ ಯಾರಾದರೂ ಸ್ನಾನ—ಜಪ—ತಪ—ವ್ರತೋಪೋಷಣಗಳನ್ನು ಬಿಟ್ಟಿರುವರೋ? ಧರ್ಮಪರಾಙ್ಮುಖತೆಯು ಯಾರಲ್ಲಾದರೂ ತೋರುತ್ತಿರುವದೋ? ಹಾಗೇನು ಇಲ್ಲ, ದಿನದಿನಕ್ಕೆ ಧರ್ಮಕಾರ್ಯಗಳ ಅಭಿವೃದ್ಧಿಯಾಗಹತ್ತಿದೆ; ಧರ್ಮಗುರುಗಳು ದಿನದಿನಕ್ಕೆ ಹೆಚ್ಚುತ್ತಲಿದ್ದಾರೆ; ಅನ್ನಸಂತರ್ಪಣವು ಹೆಚ್ಚುತ್ತಲಿದೆ; ದೊಡ್ಡ ದೊಡ್ಡ ವಿಹಾರಗಳು ಊರೂರಿಗೆ ಆಗಹತ್ತಿವೆ. ಇದೆಲ್ಲ ಧರ್ಮಗ್ಲಾನಿಯ ಲಕ್ಷಣವೇನು? ಹೀಗಿದ್ದು ಮಹಾಸಭೆಯನ್ನು ನೆರಿಸಿ ಧರ್ಮಗುರುಗಳನ್ನು ಪರೀಕ್ಷಿಸುವದರ ಗೂಢವೇನಿರಬಹುದೆಂಬದನ್ನು ನೀವು ವಿಚಾರಿಸಿರಿ; ಅಂದರೆ ಚಕ್ರವರ್ತಿಗೆ ಯಾವ ಪ್ರಾಯಶ್ಚಿತ್ತ ಕೊಡಬೇಕೆಂಬದು ನಿಮ್ಮ ಲಕ್ಷದಲ್ಲಿ ಬರಬಹುದು.

ಸಂಪುಷ್ಪಾಚಾರ್ಯನ ಈ ಮಾತುಗಳನ್ನು ಕೇಳಿ, ಉಪಗುಪ್ತಾಚಾರ್ಯರಿಗೆ ವಿಷಾದವಾಗಿತ್ತು; ಆದರೆ ಪುಣ್ಯಪ್ರತಾಪಿಯಾದ ಚಕ್ರವರ್ತಿಯ ಧರ್ಮತೇಜಸ್ಸಿನ ಮೇಲೆ, ಸಂಪುಷ್ಪಾಚಾರ್ಯರಂಥ ಅಧಮಭಿಕ್ಷುಗಳ ಕಾಟವು ನಡೆಯದೆಂಬ ನಿಶ್ಚಯವಿದ್ದದ್ದರಿಂದ, ಅವರು ಅನುಕೂಲ ಕಾಲವನ್ನು ನಿರೀಕ್ಷಿಸುತ್ತ ಸಮಾಧಾನದಿಂದ ತಮ್ಮ ಸ್ಥಳದಲ್ಲಿ ಕುಳಿತುಕೊಂಡಿದ್ದರು. ಅಣ್ಣನಾದ ಚಕ್ರವರ್ತಿಯಮೇಲೆ ಪೂರ್ಣಭಕ್ತಿಯುಳ್ಳ ವೀತಾಶೋಕನು, ದುಷ್ಟ ಸಂಪುಷ್ಪಾಚಾರ್ಯರಿಗೆ ಪ್ರಾಯಶ್ಚಿತ್ತ ಹೇಳುವ ಅಧಿಕಾರ ಕೊಡುವದು ಹಿತವಲ್ಲೆಂದು ಚಕ್ರವರ್ತಿಗೆ ಹೇಳಿದನು; ಆದರೆ ಏಕಮತದಿಂದ, ಇಲ್ಲವೆ ಬಹುಮತದಿಂದ ಸಭೆಯಲ್ಲಿ ನಿರ್ಣಯವಾದದ್ದನ್ನು ನಡಿಸುವೆನೆಂದು ವಚನಕೊಟ್ಟಿರುವೆನಾದುದರಿಂದ, ಸಂಪುಷ್ಪಾಚಾರ್ಯರಿಗೆ ಮಹತ್ವಕೊಡುವ ಕಾರಣವಿಲ್ಲೆಂದು ಚಕ್ರವರ್ತಿಯು ಸ್ಪಷ್ಟವಾಗಿ ಹೇಳಿದನು. ಹೀಗಾಗಿ ಸಭೆಯಲ್ಲಿ ಮಾತಾಡುವ ಧೈರ್ಯವು ಯಾರಿಗೂ ಆಗದೆ, ಅಶೋಕನ ಹಿತಚಿಂತಕ ರಾದವರೆಲ್ಲರೂ, ಭಿಕ್ಷುಗಳು ಏನು ಅನರ್ಥಮಾಡುವರೋ, ಎಂದು ಚಿಂತಿಸುತ್ತ ಸುಮ್ಮನೆ ಕುಳಿತುಕೊಂಡರು. ಸಂಪುಷ್ಪಾಚಾರ್ಯನು ಇನ್ನು ಆದಷ್ಟು ಬೇಗನೆ ಚಕ್ರವರ್ತಿಗೆ ಪ್ರಾಯಶ್ಚಿತ್ತವನ್ನು ಹೇಳಿಬಿಡಬೇಕೆಂದು ಆತುರಪಡುತ್ತಿದ್ದನು. ಉಳಿದ ಭಿಕ್ಷುಗಳು, ಸಂಪುಷ್ಪಾಚಾರ್ಯನ ಮುಖವನ್ನು ನೋಡುತ್ತ ಸುಮ್ಮನೆ ಕುಳಿತುಕೊಂಡಿದ್ದರು. ಸ್ವತಃ ಚಕ್ರವರ್ತಿಯು ತನ್ನ ನಿರ್ಮಲ ಮನಸ್ಸನ್ನೂ, ಸದುದ್ದೇಶವನ್ನೂ ನಂಬಿ, ಆತ್ಮವಿಶ್ವಾಸದಿಂದ ಯಾತರ ಲಕ್ಷವೂ ಇಲ್ಲದೆ ಗಾಂಭೀರ್ಯದಿಂದ ಕುಳಿತುಕೊಂಡಿದ್ದನು. ಆತನ ದಿವ್ಯವಾದ ಧಾರ್ಮಿಕ ತೇಜಸ್ಸನ್ನು ನೋಡಿ ಭಿಕ್ಷುಮಂಡಲವು ಪೂಜ್ಯಬುದ್ಧಿಯುಳ್ಳದ್ದಾಗಿ, ಸಂಪುಷ್ಪಾಚಾರ್ಯನು ಎಲ್ಲಿ ಅಯೋಗ್ಯ ಪ್ರಾಯಶ್ಚಿತ್ತವನ್ನು ಕೊಟ್ಟು ಭಿಕ್ಷುಮಂಡಲವನ್ನು ದೋಷಕ್ಕೆ ಪಾತ್ರವಾಗಮಾಡುವನೋ, ಎಂದು ಅಸಮಾಧಾನಪಡುತ್ತಲಿತ್ತು. ಹೀಗೆ ಎಲ್ಲರೂ ಕುಳಿತಿರುವಾಗ, ಸಂಪುಷ್ಪಾಚಾರ್ಯನು ಮಹಾ ಧೈರ್ಯದಿಂದಲೂ, ನೀಚತನದಿಂದಲೂ ಚಕ್ರವರ್ತಿಯನ್ನು ಕುರಿತು—ಎಲೈ ಮೌರ್ಯಕುಲೋತ್ಪನ್ನ ಸಾರ್ವಭೌಮನೇ, ನಿನ್ನಂಥ ಪಾತಕಿಯು ಇನ್ನು ಮೇಲೆ ಜಗತ್ತಿನಲ್ಲಿರಬಾರದೆಂದು ನಾವು ನಿರ್ಧರಿಸಿರುತ್ತೇವೆ. ನೀನು

ನಿನ್ನ ಪ್ರತ್ಯಕ್ಷ ಗುರುವಿನ ಶಿರಚ್ಛೇದ ಮಾಡಿದೆ. ಧರ್ಮಪಾಲಕ—ಸಾರ್ವಭೌಮನೆನಿಸುವ ನಿನ್ನಂಥವನಿಗೆ, ಈ ಮಹಾಪರಾಧವು ಅಕ್ಷಮ್ಯವಾಗಿದೆ; ಆದ್ದರಿಂದ ಭಿಕ್ಷುವಿನ ಶಿರಚ್ಛೇದ ಮಾಡಿದ ಖಡ್ಗದಿಂದಲೇ ನಿನ್ನ ಶಿರಚ್ಛೇದವನ್ನು ಮಾಡಬೇಕೆಂದು ನಿನಗೆ ಪ್ರಾಯಶ್ಚಿತ್ತವನ್ನು ವಿಧಿಸುತ್ತೇವೆ. ನೀನು ಅಧಿಕಾರ ಸಂಪನ್ನನಿರುವದರಿಂದ, ಅಧಿಕಾರದ ದುರುಪಯೋಗಮಾಡಿ ನಮ್ಮ ಪ್ರಾಯಶ್ಚಿತ್ತವನ್ನು ಧಿಕ್ಕರಿಸಿದರೆ, ಬುದ್ಧನ ಯಾವತ್ತು ನಿಸ್ಸೀಮ ಭಕ್ತರು, ಸಂಘಶಕ್ತಿಯಿಂದ ಅದನ್ನು ನಡಿಸದೆ ಬಿಡಲಿಕ್ಕಿಲ್ಲ

ಈ ಮೇರೆಗೆ ನುಡಿದ ಸಂಪುಷ್ಪಾಚಾರ್ಯನ ಪ್ರಾಯಶ್ಚಿತ್ತ ನಿರೂಪಣದ ಪ್ರತಿಧ್ವನಿಯು ಉತ್ಪನ್ನವಾಗುವದರೊಳಗೆ, ದೇದೀಪ್ಯಮಾನವಾದದ್ದೊಂದು ಮೂರ್ತಿಯು ಸಭಾಮಂಟಪವನ್ನು ಪ್ರವೇಶಿಸಿತು. ಆಗ ಸಭೆಯಲ್ಲಿ ನೆರೆದಿದ್ದ ಜನಸಮುದಾಯವು ಒಂದೇ ಧ್ವನಿಯಿಂದ ''ಆಚಾರ್ಯ ಮೊಗ್ಗಲೀಪುತ್ರ—ತಿಷ್ಯರ ಜಯಜಯಕಾರವು'' ಎಂದು ಉಚ್ಚರಿಸಿತು. ಕ್ಷಣದಲ್ಲಿ ಮೊಗ್ಗಲೀಪುತ್ರ—ತಿಷ್ಯರವರು ವ್ಯಾಸನಪೀಠದಮೇಲೆ ಬಂದು ಕುಳಿತು, ಭಕ್ತಿಯಿಂದ ತಮ್ಮ ಚರಣಗಳ ಮೇಲೆ ಮಸ್ತಕವನ್ನಿಟ್ಟಿದ್ದ ಚಕ್ರವರ್ತಿಯ ಮಸ್ತಕದಮೇಲೆ ತಮ್ಮ ವರದಹಸ್ತವನ್ನಿಟ್ಟು—''ಭಗವನ್, ಆಯುಷ್ಮಂತನಾಗು! ಸದ್ಧರ್ಮವನ್ನು ಅಭಿವೃದ್ಧಿಗೊಳಿಸಿ ನಿರ್ವಾಣಪದವಿಗೆ ಅಧಿಕಾರಿಯಾಗು'' ಎಂದು ಗಂಭೀರಧ್ವನಿಯಿಂದ ಆಶೀರ್ವದಿಸಿದರು. ಸಂಪುಷ್ಪಾಚಾರ್ಯರ ಪ್ರಾಯಶ್ಚಿತ್ತ ಕತನದಲ್ಲಿಯೂ, ಮೊಗ್ಗಲೀಪುತ್ರ—ತಿಷ್ಯರವರ ಆಶೀರ್ವಾದದಲ್ಲಿಯೂ ಇರುವ ಭಿನ್ನತ್ವವನ್ನು ನೋಡಿ ಎಲ್ಲರಿಗೆ ಆಶ್ಚರ್ಯವಾಯಿತು. ಒಬ್ಬರು ಪ್ರಾಯಶ್ಚಿತ್ತ ಕಥನದಿಂದ ಚಕ್ರವರ್ತಿಯನ್ನು ಕ್ಷೀಣಾಯುಷಿಯಾಗಮಾಡುತ್ತಿರಲು, ಮತ್ತೊಬ್ಬರು ಅದೇ ಚಕ್ರವರ್ತಿಯನ್ನು ಆಶೀರ್ವಚನದಿಂದ ದೀರ್ಘಾಯುಷಿಯಾಗಮಾಡುವದು ಎಲ್ಲರಿಗೂ ವಿಚಿತ್ರವಾಗಿ ತೋರಿತು. ಮಹಾಸಭೆಯು ಬಹು ಜನ ಭಿಕ್ಷುಗಳಿಗೆ ಬೇಡಾಗಿದ್ದರೂ, ಸದ್ಗುಣಮಂಡಿತನಾದ ತಮ್ಮ ಪ್ರಿಯ ಚಕ್ರವರ್ತಿಯು ಯಾವ ಭಿಕ್ಷುವಿಗೂ ಬೇಡಾಗಿದ್ದಿಲ್ಲ. ಪ್ರತ್ಯಕ್ಷ, ಸಂಪುಷ್ಪಾಚಾರ್ಯರ ಶಿಷ್ಯರಿಗೂ ಕೂಡ ತಮ್ಮ ಗುರುಗಳ ಪ್ರಾಯಶ್ಚಿತ್ತ ಕಥನವು ಮನಸ್ಸಿಗೆ ಬರಲಿಲ್ಲ. ಒಟ್ಟಿಗೆ, ಚಕ್ರವರ್ತಿಯ ಶಿರಚ್ಛೇದವು ಯಾವ ಭಿಕ್ಷುವಿನ ಮನಸ್ಸಿಗೂ ಬರಲಿಲ್ಲ. ತಾವು ಬಿಳಿಯ ವಸ್ತ್ರಗಳನ್ನುಟ್ಟು, ಗೃಹಸ್ಥಾಶ್ರಮಿಗಳಾದರೂ ಚಿಂತೆಯಿಲ್ಲ, ಸುಚರಿತ್ರನಾದ ಅಶೋಕನು ಬದುಕಿರಲೆಂತಲೂ, ಮಹಾಸಭೆಯು ನೆರೆಯಲೆಂತಲೂ ಎಷ್ಟೋ ಭಿಕ್ಷುಗಳು ಮನಸ್ಸಿನಲ್ಲಿ ಅನ್ನಹತ್ತಿದರು. ಇಷ್ಟರಲ್ಲಿ ಮೊಗ್ಗಲೀಪುತ್ರ—ತಿಷ್ಯರವರು ಮಧುರವಾದ ಗಂಭೀರಧ್ವನಿಯಿಂದ ಸಭೆಯನ್ನುದ್ದೇಶಿಸಿ—ಸಜ್ಜನರೇ, ಇಂದು ನಿಮ್ಮಿಂದ ಭಯಂಕರವಾದ ಪಾತಕವು ಘಟಿಸುತ್ತಿತ್ತು. ನಿಮ್ಮ ಪರಮಪ್ರಿಯ ಚಕ್ರವರ್ತಿಯು—ಭರತಭೂಮಿಯ ಸೌಭಾಗ್ಯಾಲಂಕಾರವು—ಬೌದ್ಧಧರ್ಮಕ್ಕೆ ಅತ್ಯಂತ ಪವಿತ್ರಸ್ವರೂಪವನ್ನು ಕೊಟ್ಟು, ಅದನ್ನು ಪ್ರತಿಪಾಲಿಸುವವನು—ಭರತಭೂಮಿಯ ಯಾವತ್ತು ಪ್ರಜೆಗಳ ಪಂಚಪ್ರಾಣವು—ಮ್ಲೇಂಛರಾಷ್ಟ್ರದೊಳಗಿನ ಮ್ಲೇಂಛತ್ವವನ್ನು ಸಮೂಲಸಾತಗೊಳಿಸುವ ಪ್ರತಾಪವಾನ್ ಸೂರ್ಯನು, ಇಂದು ವೃತಾರೋಪದಿಂದ ಕಲಂಕಿತನಾಗುತ್ತಿದ್ದನು. ಸಂಪುಷ್ಪಾಚಾರ್ಯನೇ ಮೊದಲಾದ ಡಾಂಭಿಕ ಭಿಕ್ಷುಗಳಿಂದ ಎಂದಾದರೊಂದು ದಿನ ಇಂಥ

ಭಯಂಕರ ಪ್ರಸಂಗ ಬರತಕ್ಕದ್ದೇ ಎಂದು ನಾನು ಮೊದಲೇ ತರ್ಕಿಸಿದ್ದೆನು. ಸಂಸಾರದೊಳಗಿನ ವಿಷಯಸುಖದ ವಾಸನೆಯು ಕಡಿಯುವದ ಕ್ಕಿಂತಲೂ, ವ್ಯಾವಹಾರಿಕ ಮಹತ್ವಾಕಾಂಕ್ಷೆಗಳು ಪೂರ್ಣವಾಗುವದಕ್ಕಿಂತಲೂ ಮೊದಲೇ, ಧರ್ಮಗುರುಗಳಾಗಲಿಕ್ಕೆ ಅವಸರ ಮಾಡುವವರ ಕೈಯಿಂದ ಇಂಥ ಅನರ್ಥಗಳಾಗುವದು ಅಸ್ವಾಭಾವಿಕವಲ್ಲ; ಆದ್ದರಿಂದಲೇ ಮಹಾಸಭೆಯನ್ನು ಕೂಡಿಸಿ, ಯೋಗ್ಯ ಗುರುವನ್ನು ಆರಿಸುವದಕ್ಕಾಗಿ ನಾನೇ ಚಕ್ರವರ್ತಿಯನ್ನು ಕುರಿತು ಸೂಚಿಸಿದ್ದೆನು. ನನ್ನ ಸೂಚನೆಯಂತೆ ಮಹಾಸಭೆಯ ಪ್ರಾಣಪ್ರತಿಷ್ಠಾಪನವಾಗಿರುತ್ತದೆ. ಆ ಸಭೆಯಿಂದ ಹಿತಕರ ಪರಿಣಾಮಗಳಾಗುವದನ್ನು ಸ್ಮರಿಸದೆ, ನೀವು ಸ್ವಾರ್ಥಾಭಿಲಾಷೆಯಿಂದ ಮಹಾಸಭೆಗೆ ದೋಷಕೊಡುತ್ತಿರುವಿರಿ. ನಿಜವಾದ ಧರ್ಮಗುರುವು ಧಾರ್ಮಿಕವಾದ—ವಿವಾದಕ್ಕೆ ಬೇಸರಿಯಬೇಕೆ? ಅನ್ಯರು ತಮ್ಮನ್ನು ಪರೀಕ್ಷಿಸಹತ್ತಿದರೆ ಧರ್ಮಾತ್ಮನು ಸಿಟ್ಟಿಗೆದ್ದು ಬಾಯಿಗೆ ಬಂದಂತೆ ಬಡಬಡಿಸಬೇಕೇ? ಸಜ್ಜನರೇ, ಇಲ್ಲಿ ಕೂಡಿದ ಭಿಕ್ಷುಗಳಲ್ಲಿ ಅನಧಿಕಾರಿಗಳು ಬಹು ಜನರಿರುವರು. ವಿಷಯ ವಾಸನೆಯು ಕಡಿಯದ, ಅಥವಾ ಅದನ್ನು ವಿವೇಕದಿಂದ ಕುಗ್ಗಿಸದ, ಮತ್ಸರಭಾವವು ಅಳಿಯದ, ಮಾನಾಪಮಾನಗಳ ಅಭಿಮಾನವನ್ನು ನೀಗದ, ಸಿಟ್ಟನ್ನು ಬಿಡದೆ ಇರುವ, ಕನಕಕಾಮಿನಿಯರ ಮೋಹವಡಗದ ಹಾಳು ಭಿಕ್ಷುಗಳಿಂದ ಜನರ ಧಾರ್ಮಿಕ ಕಲ್ಯಾಣವು ಹೇಗಾಗಬೇಕು? ಯೋಗ್ಯ ಗುರುಗಳಿಲ್ಲದ್ದರಿಂದ ಪ್ರಜೆಗಳು, ಧಾರ್ಮಿಕಕಾರ್ಯಗಳನ್ನು ಮುಂದೆಮಾಡಿ, ಪ್ರಾಣಹಿಂಸೆ ಯನ್ನು ಮಾಡಹತ್ತಿದರು. ಜಾತಿಮತ್ಸರವು ಹೆಚ್ಚುತ್ತ ಹೋಗಿ, ತಮ್ಮ ತಮ್ಮೊಳಗಿನ ದ್ವೈತಭಾವದಿಂದ ಬಂಧುಪ್ರೇಮವು ನಷ್ಟವಾಯಿತು. ಪ್ರತಿ ಒಬ್ಬನು ತನ್ನ ಕಲ್ಯಾಣವನ್ನು ಮಾತ್ರ ನೋಡಹತ್ತಿದ್ದರಿಂದ, ಪರಸ್ಪರರ ವಿಷಯವಾಗಿ ಅನುಕಂಪವು ಉತ್ಪನ್ನವಾಗದಂತಾಯಿತು, ತನ್ನ ಪ್ರಜೆಗಳ ವೃದ್ಧಿಂಗತವಾದ ಈ ಅವನತಿಯನ್ನು ನೋಡಿ, ಚಕ್ರವರ್ತಿಯು ಹಿತಬುದ್ಧಿಯಿಂದ ಮಹಾಸಭೆಯನ್ನು ನೆರಿಸತೊಡಗಿದ್ದಾನೆ. ಇದನ್ನೆಲ್ಲ ಮನಸ್ಸಿನಲ್ಲಿ ತಂದು, ಚಕ್ರವರ್ತಿಯ ಪ್ರಾಯಶ್ಚಿತ್ತದ ಬಗ್ಗೆ ನಿಮ್ಮ ಅಭಿಪ್ರಾಯವನ್ನು ಪ್ರಕಟಮಾಡತಕ್ಕದ್ದು ಅನ್ನಲು, ''ಚಕ್ರವರ್ತಿಯು ನಿರ್ದೋಷಿಯಾದದ್ದರಿಂದ ಆತನು ಪ್ರಾಯಶ್ಚಿತ್ತಕ್ಕೇ ಅರ್ಹನಲ್ಲವೆಂ''ದು ಸರ್ವಾನುಮತದಿಂದ ಸಿದ್ಧವಾಯಿತು! ಆಗ ಮೊಗ್ಗಲೀಪುತ್ರ—ತಿಷ್ಯರವರು ಸಭಾಕಾರ್ಯವನ್ನು ಮುಗಿಸಿ, ಉಪಗುಪ್ತಾಚಾರ್ಯರೂ, ಚಕ್ರವರ್ತಿಯೂ ತಮ್ಮನ್ನು ಹಿಂಬಾಲಿಸಲು, ವೇಣುವನದ ಕಡೆಗೆ ಸಾಗಿದರು.

ಅಶೋಕನ ಶಾಸನಗಳು

ಈ ಮೇರೆಗೆ ಚಕ್ರವರ್ತಿಯ ಪ್ರಾಯಶ್ಚಿತ್ತದ ಸಭೆಯು ಮುಗಿದ ಏಳು ದಿವಸಗಳ ಮೇಲೆ ಮಹಾಸಭೆಯ ಕಾರ್ಯವು ಮೊಗ್ಗಲೀಪುತ್ರ—ತಿಷ್ಯರವರ ಅಧ್ಯಕ್ಷತೆಯಲ್ಲಿ ನಿರ್ವಿಘ್ನದಿಂದ ನೆರವೇರಿತು. ಅಯೋಗ್ಯರು ಗೃಹಸ್ಥಾಶ್ರಮಿಗಳಾದರು. ಯೋಗ್ಯ ಗುರುಗಳು ಆರಿಸಲ್ಪಟ್ಟರು.

ಧರ್ಮಗ್ರಂಥಗಳ ಸಂಶೋಧನವಾಯಿತು. ಪಾಟಲಿಪುತ್ರಕ್ಕೆ ಬಂದಿದ್ದವರೆಲ್ಲರು ತಮ್ಮ ತಮ್ಮ ಸ್ಥಾನಗಳಿಗೆ ಹೊರಟುಹೋಗಹತ್ತಿದರು. ಸಂಪುಷ್ಪಾಚಾರ್ಯರಿಂದ ಅಪವಿತ್ರವಾಗಿದ್ದ ಸಭಾಪತಿಯ ಸ್ಥಾನವನ್ನು ಮೊಗ್ಗಲೀಪುತ್ರ—ತಿಷ್ಯರವರು ಪುನಃ ಅಂಗೀಕರಿಸಿ ಪವಿತ್ರವಾಗ ಮಾಡಿದರು. ಅವರ ಅಧಿಕಾರದಲ್ಲಿ ಧಾರ್ಮಿಕ ಕಾರ್ಯಗಳು ಸುವ್ಯವಸ್ಥಿತವಾಗಿ ನಡೆಯಹತ್ತಿದವು. ಸಂಪುಷ್ಪಾಚಾರ್ಯನೂ, ಆತನ ಶಿಷ್ಯಮಾಲಿಕೆಯೂ ಅಧಿಕಾರವಿಹೀನಗಳಾದುದರಿಂದ ಅಶೋಕನ ಪ್ರಜೆಗಳು ಸಮಾಧಾನದಿಂದ ಸೌಖ್ಯವನ್ನು ಭೋಗಿಸಹತ್ತಿದರು. ದೇಶ ದೇಶಗಳಿಗೆ ಉಪದೇಶಕರನ್ನು ಕಳಿಸಿ, ಸಾಮ್ರಾಟ್ ಅಶೋಕನು ಜನರ ಅಂತಃಕರಣದಲ್ಲಿ ಸದ್ಧರ್ಮದ ಪ್ರಕಾಶವನ್ನು ಕೆಡವಹತ್ತಿದನು. ಮಹಾಸಭೆಯ ಕಾರ್ಯವು ಉತ್ತಮರೀತಿಯಿಂದ ನೆರವೇರಿದ್ದರಿಂದ, ಸ್ವಲ್ಪದಿನಗಳಲ್ಲಿ ಪ್ರಜೆಗಳು ನೀತಿವಂತರಾಗಿ, ಧರ್ಮಪ್ರವೃತ್ತಿಯು ಅವರ ಹೃದಯದಲ್ಲಿ ಚೆನ್ನಾಗಿ ಆಯಿತು. ಸುಖ—ಶಾಂತಿಗಳು ಅವರಲ್ಲಿ ನೆಲೆಗೊಂಡವು. ಇದನ್ನು ನೋಡಿ ಅಶೋಕನು ಆನಂದಭರಿತನಾದನು. ಒಂದು ದಿನ ವೇಣುವನದಲ್ಲಿ ಮೊಗ್ಗಲೀಪುತ್ರ—ತಿಷ್ಯರು, ಉಪಗುಪ್ತಾಚಾರ್ಯರ ಮುಂದೆ ಸದ್ಧರ್ಮವನ್ನು ಕುರಿತು ನಿರೂಪಿಸುತ್ತಿರಲು, ಚಕ್ರವರ್ತಿಯು ಅಲ್ಲಿಗೆ ಹೋದನು. ಉಭಯ ಗುರುಗಳ ಧಾರ್ಮಿಕ ಚರ್ಚೆಯಿಂದಲೂ, ಅವರ ಕೃಪಾಪ್ರಸಾದದಿಂದಲೂ ಚಕ್ರವರ್ತಿಯ ಮನಸ್ಸಿನಲ್ಲಿ ಸರ್ವತ್ರಸಮಭಾವದ ಉದಯ ವಾಯಿತು. ಆಗ ಆತನ ಕಣ್ಣುಗಳೊಳಗಿಂದ ಆನಂದಭಾಷ್ಪಗಳು ಉದುರುತ್ತಿರಲು, ಆತನು ಉಭಯ ಗುರುಗಳನ್ನು ವಂದಿಸಿ—ಮಹಾತ್ಮರೇ, ಧರ್ಮಗಳ ನಿಜವಾದ ರಹಸ್ಯವು ತಿಳಿಯದ್ದರಿಂದ, ಬೇರೆ ಬೇರೆ ಧರ್ಮದವರು ತಮ್ಮ ತಮ್ಮ ಧರ್ಮಗಳೇ ಶ್ರೇಷ್ಠವೆಂಬ ದುರಭಿಮಾನದಿಂದ ಬಡಿದಾಡಿ, ಧರ್ಮದ ಅಂತಿಮಫಲವಾದ ಶಾಂತಿಸೌಖ್ಯಕ್ಕೆ ಎರವಾಗುವರು! ಸ್ವತಃ ನಾನೇ ಬೌದ್ಧಧರ್ಮವನ್ನು ಹಬ್ಬಿಸುವ ನೆವದಿಂದ ನೆಲೆಯಿಲ್ಲದೆ ಮನುಷ್ಯಸಂಹಾರವನ್ನು ಮಾಡಿದೆನು. ನಾನು ಬೌದ್ಧನಾಗುವ ಮೊದಲು, ವೈದಿಕಧರ್ಮವೇ ಶ್ರೇಷ್ಠವಾದದ್ದೆಂಬ ದುರಭಿಮಾನದಿಂದ ಬೌದ್ಧರನ್ನು ಮಿತಿಮೀರಿ ಪೀಡಿಸಿದೆನು. ಹೀಗೆ ಧಾರ್ಮಿಕವೃತ್ತಿಯ ಅಭಿವೃದ್ಧಿಯಿಂದ ಹೃದಯಕ್ಕೆ ಶಾಂತಿಯು ದೊರೆಯುವದೊತ್ತಟ್ಟಿಗುಳಿದು, ಧರ್ಮದ ದುರಭಿ ಮಾನದಿಂದುಂಟಾದ ಮಾತ್ಸರ್ಯಾದಿ ದುರ್ಗುಣಗಳ ತಾಪದಿಂದ ಮನುಷ್ಯಮಾತ್ರರ ಹೃದಯಗಳು ದಗ್ಧವಾಗಹತುತ್ತವೆ! ಪೂಜ್ಯರೇ, ಈ ಅನರ್ಥವು ತಪ್ಪಬೇಕಾದರೆ ಯಾವ ಉಪಾಯಗಳನ್ನು ಮಾಡಬೇಕು? ಧರ್ಮಯುದ್ಧಗಳು ಕಟ್ಟಾಗಿ ಭರತಖಂಡದಲ್ಲಿಯೂ, ಬೇರೆ ಮ್ಲೇಂಛದೇಶಗಳಲ್ಲಿಯೂ ಜನರು ಶಾಂತಿಸೌಖ್ಯವನ್ನು ಯಾವ ಉಪಾಯದಿಂದ ಪಡೆಯ ಬಹುದು? ಧರ್ಮದ ಬಹಿರಂಗಕ್ಕಿಂತ ಅಂತರಂಗದ ಕಡೆಗೆ, ಜನರ ಮನಸ್ಸು ಯಾವ ಉಪಾಯದಿಂದ ತಿರುಗಬಹುದು? ಬೌದ್ಧಭಿಕ್ಷುಗಳನ್ನು ನೋಡಿ ಬ್ರಾಹ್ಮಣಯತಿಗಳೂ, ಬ್ರಾಹ್ಮಣಯತಿಗಳನ್ನು ನೋಡಿ, ಬೌದ್ಧಭಿಕ್ಷುಗಳೂ ಮತ್ಸರಿಸುವದು ಯಾತರಿಂದ ಕಟ್ಟಾಗ ಬಹುದು? ಎಂಬುದನ್ನು ದಯಮಾಡಿ ಹೇಳಿದರೆ, ಕೃತಾರ್ಥನಾಗುವೆನು, ಎಂದು ಪ್ರಶ್ನಮಾಡಿ, ಗುರುಗಳನ್ನು ಭಕ್ತಿಯಿಂದ ವಂದಿಸಿ, ಕೈಜೋಡಿಸಿಕೊಂಡು ಅತ್ಯಂತ ಲೀನವೃತ್ತಿಯಿಂದ ಕುಳಿತುಕೊಂಡನು.

ಅಶೋಕನ ಈ ಮಾತುಗಳನ್ನು ಕೇಳಿ, ಮೊಗ್ಗಲೀಪುತ್ರ—ತಿಷ್ಯರವರು ಕೆಲಹೊತ್ತು ಮೌನದಿಂದ ಆಲೋಚಿಸಿ, ಮಂದಹಾಸದಿಂದ ಚಕ್ರವರ್ತಿಯನ್ನು ಕುರಿತು—ಭಗವನ್, ನಿನ್ನ ಪ್ರಜಾಹಿತ ದಕ್ಷತೆಯನ್ನೂ, ಶಾಂತತಾಭಿವೃದ್ಧಿಯ ಆತುರತೆಯನ್ನೂ ನೋಡಿ, ನನಗೆ ಬಹಳ ಸಂತೋಷವಾಗುತ್ತದೆ! ನಿನ್ನ ಉದಾತ್ತ ಹೇತುವು ಸಿದ್ಧಿಸಲಿಕ್ಕೆ ಮುಖ್ಯವಾದ ಒಂದೇ ಉಪಾಯ ವಿರುವದು. ಮನುಷ್ಯಮಾತ್ರರ ಲಕ್ಷ್ಯವನ್ನು ಧರ್ಮಗಳ ಬಾಹ್ಯಚಿಹ್ನಗಳ ಅನೇಕತ್ವದ ಅವಲೋಕನ ದಿಂದ ಹೊರಳಿಸಿ, ಯಾವತ್ತು ಧರ್ಮಗಳ ರಹಸ್ಯದ ಏಕತ್ವದ ಕಡೆಗೆ ಎಳೆದೊಯ್ಯಬೇಕು. ಕಣ್ಣಿಗೆ ಕಾಣುವ ಧರ್ಮಗಳ ಬಾಹ್ಯಚಿಹ್ನಗಳ ಕಡೆಗೆ ಮನುಷ್ಯನ ಮನಸ್ಸು ಸ್ವಾಭಾವಿಕವಾಗಿ ಹರಿದಷ್ಟು, ಧರ್ಮಗಳ ಗುಪ್ತವಾದ ರಹಸ್ಯದ ಕಡೆಗೆ ಹರಿಯುವದಿಲ್ಲ. ಈ ದೋಷವು ದೂರವಾಗಬೇಕಾದರೆ ಯಾವತ್ತು ಧರ್ಮಗಳಿಗೆ ಮಾನ್ಯವಾದ ಕೆಲವು ಧರ್ಮಾಜ್ಞೆಗಳನ್ನು ನಿನ್ನ ಶಾಸನಗಳ ರೂಪದಿಂದ ಶಿಲಾಸ್ತಂಭಗಳ ಮೇಲೆಯೂ, ಬಂಡೆಗಳ ಮೇಲೆಯೂ ಕೊರಿಸಿ, ಜನರ ಕಣ್ಣಿಗೆ ಬೀಳುವಂಥ ಸ್ಥಳದಲ್ಲಿ ಅವನ್ನು ನಿಲ್ಲಿಸಬೇಕು. ಆ ನಿಯಮಗಳಂತೆ ಪ್ರಜೆಗಳು ನಡೆಯುವರೋ, ಇಲ್ಲವೋ, ಎಂಬದನ್ನು ನೋಡುವದಕ್ಕಾಗಿ ಅಧಿಕಾರಿಗಳನ್ನು ನಿಯಮಿಸಬೇಕು. ಸದಯಾಂತಃಕರಣದ ಚಕ್ರವರ್ತಿಯೇ, ಈ ಮಹಾ ಕಾರ್ಯವನ್ನು ಮಾಡಲಿಕ್ಕೆ ನೀನು ಯೋಗ್ಯನಾದದ್ದರಿಂದಲೇ, ಚಕ್ರವರ್ತಿಯ ಪದವಿಯು ನಿನಗೆ ಪ್ರಾಪ್ತವಾಗಿರುತ್ತದೆ. ಎಲ್ಲ ಧರ್ಮಗಳಿಗೂ ಸಾಧಾರಣವಾದ ನಿಯಮಗಳನ್ನು ಒಟ್ಟು ಗೂಡಿಸಲಿಕ್ಕೆ ಶಾಂತಸ್ಥಾನದ, ಹಾಗು ಸಜ್ಜನರ ಸಮಾಗಮದ ಅವಶ್ಯಕತೆಯಿರುತ್ತದೆ. ರಾಜಧಾನಿಯಿಂದ ಎರಡು ಹರದಾರಿಗಳ ಮೇಲಿರುವ ಚೈತ್ಯಾಲಯಗಳಿಗೆ ನಾಳೆ ಹೋಗೋಣ. ನಿನ್ನ ಪುಣ್ಯಪ್ರತಾಪದಿಂದ ಸಜ್ಜನರ ಯೋಗವು ಅಲ್ಲಿ ಆಗುವದು. ಅರಸೊತ್ತಿಗೆಯ ಯಾವ ಆಡಂಬರವೂ ಇಲ್ಲದೆ, ಕೇವಲ ಸಾಧುವೃತ್ತಿಯಿಂದ ನೀನು ಈ ಕಾರ್ಯದಲ್ಲಿ ವರ್ತಿಸತಕ್ಕದ್ದು, ಎಂದು ಹೇಳಲು, ಚಕ್ರವರ್ತಿಗೆ ಪರಮಾನಂದವಾಯಿತು. ಆತನು ಮರುದಿವಸ ನಿಯಮಿತ ಪರಿವಾರದೊಡನೆ ಗುರುಗಳ ಬಳಿಗೆ ಹೋದನು. ಜನರ ಕಲ್ಯಾಣ ಕಾರಕಗಳಾದ ಶಾಸನಗಳು ತನ್ನ ಕೈಸೇರುವವರೆಗೆ ಉಪೋಷಣವ್ರತವನ್ನು ಕೈಕೊಳ್ಳಬೇಕೆಂದು, ಭಾವಿಕನಾದ ಚಕ್ರವರ್ತಿಯು ನಿಶ್ಚಯಿಸಿದನು. ಮೊಗ್ಗಲೀಪುತ್ರ—ತಿಷ್ಯರು ಉಪಗುಪ್ತಾಚಾರ್ಯ ರೊಡನೆ ಚೈತ್ಯಾಲಯಗಳಿಗೆ ಹೋಗುವದಕ್ಕಾಗಿ ಹೊರಡಲು, ಅಶೋಕನು ತನ್ನ ನಿಯಮಿತ ಪರಿವಾರದೊಡನೆ ಅವರನ್ನು ಹಿಂಬಾಲಿಸಿದನು. ಚೈತ್ಯಾಲಯಗಳಿಗೆ ಹೋದ ಬಳಿಕ ಬೇರೆ ಬೇರೆ ಕಡೆಯಿಂದ ಸತ್ಪುರುಷರು ಅಲ್ಲಿಗೆ ಬರಹತ್ತಿದರು. ಅವರನ್ನು ನೋಡಿ ಅಶೋಕನಿಗಾದ ಆನಂದವು, ಆತನ ಹೊಟ್ಟೆಯಲ್ಲಿ ಹಿಡಿಸದಾಯಿತು. ಆತನ ಕಣ್ಣೊಳಗಿಂದ ಆನಂದಬಾಷ್ಪಗಳು ಉದುರ ಹತ್ತಿದವು. ಶರೀರದಲ್ಲಿ ರೋಮಾಂಚನಗಳುಂಟಾದವು. ಅತ್ತ ಸಜ್ಜನರಲ್ಲಿ ಶಾಸನಗಳ ಸಂಶೋಧನದ ಕಾರ್ಯವು ಎಡೆಬಿಡದೆ ನಡೆಯಿತು. ಮರುದಿನ ಮೊಗ್ಗಲೀಪುತ್ರ—ತಿಷ್ಯರವರು ಚಕ್ರವರ್ತಿಯನ್ನು ಕುರಿತು—ಪುಣ್ಯಪುರುಷನೇ, ನಿನ್ನಲ್ಲಿರುವ ಭೂತದಯೆಯ ಯೋಗದಿಂದ ಮಹಾತ್ಮನಾದ ಶ್ರೀಗೌತಮಬುದ್ಧನು, ಸತ್ಪುರುಷರ ಮುಖದಿಂದ ಕೆಲವು ಶಾಸನಗಳನ್ನು ಹೊರಡಿಸಿರುವನು. ಅವನ್ನು ವೈಭವಶಾಲಿಯಾದ ನೀನು ಸ್ವೀಕರಿಸಿ, ನಿನ್ನ ಶಾಸನಗಳೆಂದು

ಪ್ರಜೆಗಳಲ್ಲಿ ಅವನ್ನು ಪ್ರಸಾರಗೊಳಿಸು, ಎಂದು ಹೇಳಿ, ಶಾಸನಗಳನ್ನು ಬರಕೊಳ್ಳುವಂತೆ ಚಕ್ರವರ್ತಿಯನ್ನು ಆಜ್ಞಾಪಿಸಿದರು. ಆಗ ಅಶೋಕನು ಕೈಮುಟ್ಟಿ ಅವುಗಳನ್ನು ಬರಕೊಂಡು, ಅವು ಬೇರೆ ಬೇರೆ ಕಡೆಯಲ್ಲಿ ಶಾಶ್ವತವಾಗಿ ನಿಲ್ಲುವಂತೆ, ಶಿಲಾಸ್ತಂಭಗಳ ಮೇಲೆಯೂ, ಶಿಲೆಗಳ ಮೇಲೆಯೂ ಅವನ್ನು ಕೊರೆಸಿದನು. ಅಶೋಕನ ಆ ಪ್ರಸಿದ್ಧ ಹದಿನಾಲ್ಕು ಆ ದೇಶಗಳನ್ನು ಸಾರಾಂಶರೂಪದಿಂದ ವಾಚಕರ ಸಲುವಾಗಿ ಇಲ್ಲಿ ಕೊಡುವೆವು. ಅಶೋಕನಿಗೆ ''ಪ್ರಿಯದರ್ಶಿ'' ಅಂದರೆ ''ದೇವರಿಗೆ ಪ್ರಿಯನಾದವನು'' ಎಂಬ ಹೆಸರು ಇತ್ತು, ಆ ಆದೇಶಗಳ ವಿವರವು ಹೇಗೆಂದರೆ—

(೧) ಪ್ರಿಯದರ್ಶಿಯು ಪ್ರಾಣಿಗಳ ಹಿಂಸೆಯನ್ನು ಪೂರಾ ನಿಲ್ಲಿಸಿಬಿಟ್ಟಿರುತ್ತಾನೆ. ಇನ್ನು (ಮಾಂಸಾಹಾರದ) ಮೇಜವಾನೆಗಳು ಆಗಲಾರವು; ಯಾಕಂದರೆ, ಅದರಿಂದ ಬಹು ಪಾಪ ಘಟನೆಯಾಗುತ್ತದೆಂದು ಪ್ರಿಯದರ್ಶಿ ರಾಜನಿಗೆ ತೋರುತ್ತದೆ. ಪ್ರಿಯದರ್ಶಿರಾಜನ ಪಾಕಶಾಲೆ ಯಲ್ಲಿ ದಿನಾಲು ಲಕ್ಷಾವಧಿ ಪ್ರಾಣಿಗಳ ಸಂಹಾರವಾಗುತ್ತಿತ್ತು; ಆದರೆ ಇನ್ನು ಸತ್ಕಾರ್ಯದ ಸಲುವಾಗಿಯೂ ಹಿಂಸೆಯನ್ನು ಮಾಡಲಾಗದೆಂದು ಆತನು ನಿರ್ಧರಿಸಿ ಬಿಟ್ಟಿದ್ದಾನೆ.

(೨) ಮನುಷ್ಯರ, ಹಾಗು ಇತರ ಪ್ರಾಣಿಗಳ ಸಂಬಂಧದಿಂದ ಪ್ರಿಯದರ್ಶಿಯು ಬೇರೆ ಬೇರೆ ವ್ಯವಸ್ಥೆ ಮಾಡಿರುವನು. ಮನುಷ್ಯರಿಗೂ, ಪಶುಪಕ್ಷ್ಯಾದಿ ಇತರ ಪ್ರಾಣಿಗಳಿಗೂ ಬೇಕಾಗುವ ಗಿಡಗಳು, ವನಸ್ಪತಿಗಳೇ ಮೊದಲಾದ ಪದಾರ್ಥಗಳು, ಇವು ಇಲ್ಲದ ಸ್ಥಳದಲ್ಲಿ ಅವನ್ನು ಬೇರೆ ಸ್ಥಳದಿಂದ ತರಿಸಿ ಪ್ರಿಯದರ್ಶಿಯು ಹಚ್ಚಿಸಿರುವನು. ಅದರಂತೆ ಭಾವಿಗಳನ್ನು ಅಗಿಸಿರುವನು; [ಮಾರ್ಗದ ಎಡಬಲಗಳಲ್ಲಿ] ಗಿಡಗಳನ್ನು ಹಚ್ಚಿಸಿರುವನು.

(೩) ಔದಾರ್ಯ, ಅಹಿಂಸೆ, ಅಪರಿಮಿತತೆ, ಹಾಗು ಪರನಿಂದೆಗಳ ಪರಾಙ್ಮುಖತೆ ಇವು ಸದ್ಗುಣಗಳು. ಈ ಸದ್ಗುಣಗಳನ್ನು ಸ್ವಂತದ ನಡಾವಳಿಯ ಉದಾಹರಣದಿಂದ ಜನರ ಮನಸ್ಸಿನಲ್ಲಿ ಬಿಂಬಿಸಲಾಗುವದು.

(೪) ಈಗ ಎಷ್ಟೋ ಶತಕಗಳಿಂದ ಪ್ರಾಣಿಹತ್ಯೆ, ಸಜೀವಪ್ರಾಣಿಗಳ ಉಪದ್ರವ, ಸಮಾನಸ್ಕಂಧರ ವಿಷಯವಾಗಿ ಅನಾದರ, ಬ್ರಾಹ್ಮಣರ, ಹಾಗು ಶ್ರವಣರ ಮಾನಖಂಡನ ಇವು ನಡೆಯುತ್ತ ಬಂದಿರುತ್ತವೆ. ಇನ್ನು ಮುಂದೆ ಇವು ನಡೆಯದೆ ಧರ್ಮವೃದ್ಧಿಯಾಗುವದು. ಪ್ರಿಯದರ್ಶಿರಾಜನ ಈ ಆದೇಶವನ್ನು ಆತನ ಮಕ್ಕಳೂ, ಮೊಮ್ಮಕ್ಕಳೂ ನಡಿಸತಕದ್ದು, ಪ್ರತಿ ಒಬ್ಬ ದುರಾಚಾರಿಯು ಈ ಆದೇಶದ ಕಡೆಗೆ ಲಕ್ಷ್ಯವನ್ನು ಪೂರಯಿಸಿದರೆ ನೆಟ್ಟಗಾಗಬಹುದು.

(೫)ಒಳ್ಳೆಯ ಸಂಗತಿಗಳ ಉಪಯೋಗವನ್ನು ಕೆಟ್ಟ ಕೆಲಸಗಳ ಕಡೆಗೆ ಮಾಡಿದರೆ, ಆ ಒಳ್ಳೆ ಸಂಗತಿಗಳ ಫಲವು ಕಡೆಗೆ ಕೆಡಕೇ ಆಗುವದು; ಆದ್ದರಿಂದಲೇ ನಾನು (ಜನರ) ಹಿತಕ್ಕಾಗಿ ಮನಮುಟ್ಟಿ ಯತ್ನಿಸುವೆನು; ಅದರಂತೆ ನನ್ನ ಮಕ್ಕಳೂ ಮೊಮ್ಮಕ್ಕಳೂ ಯತ್ನಿಸತಕ್ಕದ್ದು. ಪ್ರತಿಯೊಬ್ಬನಿಗೆ ತನ್ನ ಕರ್ಮದಂತೆ ಫಲದೊರೆಯುವದು. ಈವೊತ್ತಿನವರೆಗೆ ಅಧಿಕಾರಿಗಳು ಅನೀತಿಯ ಆಚರಣೆಗಳನ್ನು ಬಹಳವಾಗಿ ನಡೆಯಗೊಟ್ಟರು; ಆದ್ದರಿಂದ ಪ್ರಿಯದರ್ಶಿಯು ಜನರ ನೀತಿಯನ್ನು ತಿದ್ದುವದಕ್ಕಾಗಿ ''ಧರ್ಮಮಹಾಮಾತ್ರಾ'' ಎಂಬ ಅಧಿಕಾರಿಗಳನ್ನು

ನಿಯಮಿಸಿರುವನು. ಜನರನ್ನು ಧರ್ಮಮಾರ್ಗದಲ್ಲಿ ತೊಡಕಿಸುವದು ಆ ಅಧಿಕಾರಿಗಳ ಕರ್ತವ್ಯವಾಗಿರುವದು. ಅವರು ಯೋನ, ಕಾಂಬೋಜ, ಗಾಂಧಾರ, ನಾರಿಸ್ತಿಕ, ಪೇತೇನಿಕ ಮೊದಲಾದ ದೇಶಗಳೊಳಗಿನ ಜನರ ಧರ್ಮವೃದ್ಧಿಯನ್ನು ಮಾಡುವರು. ಕ್ಷತ್ರಿಯ, ಬ್ರಾಹ್ಮಣ, ಭಿಕ್ಷು ಮೊದಲಾದ ಯಾವತ್ತು ಪ್ರಕಾರದ ಜನರಲ್ಲಿ ಅವರು ಪ್ರವೇಶಿಸಿ ಜನರ ಕಲ್ಯಾಣವನ್ನು ಮಾಡುವರು. ಭಾವಿಕ ಜನರಿಗೆ ಷಡ್ರಿಪುಗಳ ದಮನಮಾಡುವ ಮಾರ್ಗವನ್ನು ಅವರು ತೋರಿಸುವರು. ಪಾಪಶೃಂಖಲೆಯಿಂದ ಕಟ್ಟಲ್ಪಟ್ಟಿದ್ದ ಜನರನ್ನು, ಆ ಶೃಂಖಲೆಯಿಂದ ಮುಕ್ತಮಾಡಲಿಕ್ಕೆ ಅವರು ಯತ್ನಿಸುವರು. ಧಾರ್ಮಿಕ ಕೃತ್ಯಗಳಿಗೆ ಅವರು ಉತ್ತೇಜನಕೊಡುವರು.

(೬) ಹಿಂದಿನಕಾಲದಲ್ಲಿ ಚಟುವಟಿಕೆಯಿಂದ ಕೆಲಸಮಾಡುವ ಪ್ರಚಾರವೂ, ಗುಪ್ತಚಾರರಿಂದ ಸುದ್ದಿಗಳನ್ನು ಕೇಳಿಕೊಳ್ಳುವ ಪ್ರಚಾರವೂ ಇದ್ದಿಲ್ಲ; ಆದರೆ ಈಗ ಅವನ್ನು ಹೊಸದಾಗಿ ಪ್ರಚಾರದಲ್ಲಿ ತಂದಿರುತ್ತದೆ. ಊಟಕ್ಕೆ ಕುಳಿತಿರಲಿ, ವಿಶ್ರಾಂತಿಯನ್ನು ಹೊಂದುತ್ತಿರಲಿ, ಏಕಾಂತದಲ್ಲಿ ಕುಳಿತಿರಲಿ, ಉಪವನದಲ್ಲಿ ತಿರುಗಾಡುತ್ತಿರಲಿ, ಬೇಕಾದಾಗ ಬೇಕಾದಲ್ಲಿ, ಸುದ್ದಿಗಳನ್ನು ಹೇಳುವವರು ನನ್ನ ಮುಂದೆ ಸುದ್ದಿಯನ್ನು ನಿರ್ಬಾಧವಾಗಿ ಹೇಳಬಹುದು. ಜನರ ಸಂಬಂಧದಿಂದ ಮಾಡತಕ್ಕ ಕೆಲಸಗಳನ್ನು ನಾನು ಕೂಡಲೆ ಮಾಡುವೆನು. ಈ ಸಂಬಂಧದಿಂದ ನನ್ನ ಅಧಿಕಾರಿಗಳ ಮುಂದೆ ನಾನು ಬಾಯಿಂದ ಹೇಳಿದ್ದನ್ನು, ಅವರು ಜನರಲ್ಲಿ ಪ್ರಸಿದ್ಧಗೊಳಿಸಬೇಕು. ಎಲ್ಲಿಯಾದರೂ ಧರ್ಮಗುರುಗಳ ಸಮಾಜದಲ್ಲಿ, ಜಗಳ, ವಾದ, ಮತಭೇದಗಳು ಆದರೆ ಅದರ ಸುದ್ದಿಯನ್ನು ಚಾರರು ಕೂಡಲೆ ನನಗೆ ಹೇಳಬೇಕು; ಯಾಕಂದರೆ, ನ್ಯಾಯದ ಕೆಲಸವು ಆದಷ್ಟು ತೀವ್ರವಾಗಿ, ಆದಷ್ಟು ಉತ್ತಮರೀತಿಯಿಂದ ಆಗುವದು ನೆಟ್ಟಗೆ. ಉಪದೇಶದ ದ್ವಾರದಿಂದ ಜನರ ಕಲ್ಯಾಣಮಾಡುವದು ನನ್ನ ಕರ್ತವ್ಯವಾಗಿರುತ್ತದೆ. ಆ ಕರ್ತವ್ಯವನ್ನು ಮಾಡಲಿಕ್ಕೆ ಉತ್ಕೃಷ್ಟ ನ್ಯಾಯಪದ್ಧತಿಯನ್ನಿಡುವದು ಅವಶ್ಯವಾಗಿದೆ. ನನ್ನ ರಾಜ್ಯದಲ್ಲಿರುವ ಯಾವತ್ತು ಜನರ ಐಹಿಕ—ಪಾರಮಾರ್ಥಿಕ ಕಲ್ಯಾಣವನ್ನು ನಾನು ಮಾಡಲೇಬೇಕು; ಇದರಿಂದ ಈ ಆದೇಶವನ್ನು ಪ್ರಸಿದ್ಧಗೊಳಿಸಿರುತ್ತೇನೆ. ಇದನ್ನು ನನ್ನ ಪುತ್ರ—ಪೌತ್ರಾದಿವಂಶಜರು ನಡಿಸಲಿ; ಪ್ರಜೆಗಳು ತಮ್ಮ ಹಿತಕ್ಕಾಗಿ ಯತ್ನಿಸಲಿ.

(೭) ನಾಸ್ತಿಕನಿಗೆ ಕೂಡ ಸದ್ವರ್ತನವೂ, ನೀತಿಯೂ ಬೇಕಾಗಿರುವದರಿಂದ ನನ್ನ ರಾಜ್ಯದಲ್ಲಿ ನಾಸ್ತಿಕರಿದ್ದರೂ, ಅವರಿಗೆ ಯಾರೂ ಉಪದ್ರವ ಕೊಡಲಾಗದು; ಯಾಕಂದರೆ, ಮನುಷ್ಯರ ಮತಗಳೂ, ವಿಚಾರಗಳೂ ಭಿನ್ನವಾಗಿದ್ದರೂ, ಅವರ ಉದ್ದೇಶವು ಒಂದೇ ಇರುತ್ತದೆ. ಸದ್ವರ್ತನವೂ, ನೀತಿಯೂ ಬೇಡಾಗಿದ್ದ ಮನುಷ್ಯನ ಸಂಗಡಲೂ ಉದಾರತನದಿಂದ ನಡಕೊಳ್ಳಬೇಕು; ಯಾಕಂದರೆ, ಮನುಷ್ಯನು ಎಂಥ ನೀಚವೃತ್ತಿಯವನಿದ್ದರೂ, ಅವನ ಹುಟ್ಟುಗುಣವಾದ ಕೃತಜ್ಞತಾಬುದ್ಧಿಯು ಬೆಳಕಿಗೆ ಬಾರದೆ ಇರುವದಿಲ್ಲ.

(೮) ಮೊದಲಿನ ಅರಸರು ಬೇಟೆಗಾಗಿಯೂ, ಮೋಜಿಗಾಗಿಯೂ ಪ್ರವಾಸಕ್ಕೆ ಹೊರಡುತ್ತಿದ್ದರು; ಆದರೆ ದೇವರ ಪ್ರಿಯದರ್ಶಿಗೆ ತನ್ನ ಆಳಿಕೆಯ 10ನೇ ವರ್ಷದಿಂದ ಪ್ರವಾಸವನ್ನು ಮುಂದೆ ಹೇಳಿದ ಉದ್ದೇಶಗಳಿಂದ ಮಾಡಬೇಕೆಂದು ತೋರಹತ್ತಿದೆ.—

ಬ್ರಾಹ್ಮಣರಿಗೂ ಶ್ರವಣರಿಗೂ (ಬೌದ್ಧಸನ್ಯಾಸಿಗಳಿಗೂ) ಅಲ್ಲಲ್ಲಿ ದಕ್ಷಿಣೆಗಳು ಮುಟ್ಟುವವೋ ಇಲ್ಲವೋ, ಗುರುಜನರಿಗೆ ದ್ರವ್ಯಸಹಾಯವು ದೊರೆಯುತ್ತಿರುವದೋ ಇಲ್ಲವೋ, ಜನರು ಹೇಗೆ ನಡೆಯುವರು, ಅವರನ್ನು ನೀತಿವಂತರನ್ನಾಗಿ ಮಾಡಲಿಕ್ಕೆ ಮತ್ತೆ ಯಾವ ಕಾಯದೆ ಕಾನೂನುಗಳ ಆವಶ್ಯಕತೆಯಿರುತ್ತದೆ, ಇತ್ಯಾದಿ ಸಂಗತಿಗಳನ್ನು ಕಣ್ಣುಮುಟ್ಟನೋಡಲಿಕ್ಕೆ ಪ್ರವಾಸಮಾಡುವದು ಹಿತಕರವು.

(೯) ಪ್ರತಿ ಒಬ್ಬ ಮನುಷ್ಯನು ಲಗ್ನಕಾರ್ಯ, ಪುತ್ರಜನ್ಮ, ಶಿಷ್ಯಾಗಮನ, ಮೊದಲಾದ ಪ್ರಸಂಗಗಳಲ್ಲಿ ಉತ್ಸವಗಳನ್ನು ಮಾಡುವನು. ಈ ಎರಡನೆಯ ಪ್ರಕಾರದ ಉತ್ಸವಗಳನ್ನು ಎಲ್ಲರೂ ಮಾಡಬೇಕು. ಕರ್ತವ್ಯ ಸಮಾಪ್ತಿಯಾದ ದಿವಸವು, ನಿಜವಾದ ಉತ್ಸವದ ದಿವಸ ವಾಗಿರುತ್ತದೆ. ಸೇವಕನು ಸ್ವಾಮಿಯ ಆಜ್ಞೆಯನ್ನು ಪಾಲಿಸುವದು, ಸಣ್ಣವರು ದೊಡ್ಡವರ ಸನ್ಮಾನ ಮಾಡುವದು, ಸಜೀವ ಪ್ರಾಣಿಗಳ ವಿಷಯವಾಗಿ ದಯಾಪರರಾಗಿರುವದು, ಬ್ರಾಹ್ಮಣರಿಗೂ, ಶ್ರವಣರಿಗೂ ದಾನಧರ್ಮಮಾಡುವದು ಇವೇ ಮೊದಲಾದ ಸತ್ಕೃತ್ಯಗಳು ಒದಗಿದ ದಿವಸವು ನಿಜವಾದ ಉತ್ಸವದ ದಿವಸವಾಗಿರುತ್ತದೆಂದು ತಿಳಯತಕ್ಕದ್ದು. ಇಂಥ ದಿವಸ ಪಿತಾ—ಪುತ್ರ, ಸ್ವಾಮಿ—ಸೇವಕ ಇವರೇ ಮೊದಲಾದವರಿಗೆ ಆನಂದವಾಗದೆಯಿರಲಿಕ್ಕಿಲ್ಲ. ಉತ್ಸವದ ದಿವಸವನ್ನು ಅವಶ್ಯವಾಗಿ ಪಾಲಿಸತಕ್ಕದ್ದು.

(೧೦) ದೇವರ ಪ್ರಿಯದರ್ಶಿಯು ಕೀರ್ತಿಯನ್ನೂ, ಪ್ರತಿಷ್ಠೆಯನ್ನೂ ಕ್ಷುಲ್ಲಕವೆಂದು ಭಾವಿಸುವನು. ತನ್ನ ಜನರು ಸದಾಚಾರಿಗಳಾಗಿರುವಂತೆ ವ್ಯವಸ್ಥೆ ಮಾಡಿರುವದೊಂದೇ ಕೀರ್ತಿಯನ್ನು, ಆತನು ಕೀರ್ತಿಯೆಂದು ತಿಳಿಯುವನು. ಅದೊಂದೇ ಕೀರ್ತಿಯು ಅವನಿಗೆ ಬೇಕಾಗಿರುವದು. ಇದರ ಹೊರತು ಬೇರೆ ಕಾರಣದಿಂದ ಪ್ರಾಪ್ತವಾದ ಕೀರ್ತಿಯು ಒಂದು ಕಾಸು ಸಹ ಬಾಳದೆಂದು ಆತನು ತಿಳಿಯುವನು. ಧೂರ್ತರೂ ಕ್ಷುಲ್ಲಕರೂ ಆದವರು, ಬೇಕಾದರೆ ಈ ಎರಡನೆಯ ಪ್ರಕಾರದ ಕೀರ್ತಿಯನ್ನು ಸಂಪಾದಿಸಬಹುದು.

(೧೧) ಧರ್ಮದಾನದಂಥ ದಾನವಿಲ್ಲ; ಧರ್ಮದಾನದಲ್ಲಿ ಹಲವು ಸಂಗತಿಗಳ ಸಮಾವೇಶ ವಾಗುತ್ತದೆ; ಸೇವಕರ ವಿಷಯವಾಗಿ ಮಮತೆ, ತಾಯಿತಂದೆಗಳ ವಿಷಯವಾಗಿ ಆದರ ಪೂರ್ವಕ ವಾದ ಪ್ರೇಮ, ಇಷ್ಟಮಿತ್ರರಿಗೆ ಔದಾರ್ಯದಿಂದ ಸಹಾಯಮಾಡುವದು, ಜೀವಂತಪ್ರಾಣಿಗಳ ಅಹಿಂಸೆ ಇವು ಧರ್ಮದಾನದಲ್ಲಿ ಬರುವವು. ಇವುಗಳ ಯೋಗದಿಂದ ಇಹಪರಗಳಲ್ಲಿ ಕೂಡಿಯೇ ಸುಖಪ್ರಾಪ್ತಿಯಾಗುವದು.

(೧೨) ಗೃಹಸ್ಥಾಶ್ರಮಿಗಳು, ಯತಿಗಳು, ಸನ್ಯಾಸಿಗಳು ಇವರೆಲ್ಲರ ಧರ್ಮಗಳನ್ನು ದೇವರ ಪ್ರಿಯದರ್ಶಿರಾಜನು ಆದರಿಸುವನು; ಮತ್ತು ಧನಾಶ್ರಯವೇ ಮೊದಲಾದ ಬಗೆಗಳಿಂದ ಅವರ ವಿಷಯವಾಗಿ ಪೂಜ್ಯ ಬುದ್ಧಿಯನ್ನು ಆತನು ವ್ಯಕ್ತಮಾಡುವನು; ಆದರೆ ಧರ್ಮವೃದ್ಧಿಯಲ್ಲಿ ಯಷ್ಟು ಪುಣ್ಯವು ಬೇರೆ ಯಾತರಲ್ಲಿಯೂ ಇರುವದಿಲ್ಲೆಂದು ಆತನ ತಿಳುವಳಿಕೆಯಾಗಿರುತ್ತದೆ. ಆತನು ಎಲ್ಲರಿಗೂ ಉತ್ತೇಜನಕೊಡುತ್ತಿದ್ದರೂ, ಆ ಉತ್ತೇಜನದ ಬಡ್ಡಿಯಲ್ಲಿ ಸ್ವಧರ್ಮನಿಷ್ಠೆಯೂ, ಪರಧರ್ಮ ಸಹಿಷ್ಣುತೆಯೂ ಇರುತ್ತವೆ; ಯಾಕಂದರೆ ಎರಡನೆಯವರ ಧರ್ಮಕ್ಕೆ ಸಹಾಯ

ಮಾಡುವದರಲ್ಲಿಯೂ ಧರ್ಮವೃದ್ಧಿಯಾಗುತ್ತದೆ. ಇದಕ್ಕೆ ವಿರುದ್ಧವಾಗಿ ನಡೆಯುವವನು, ಸ್ವಧರ್ಮದಹಾನಿಯನ್ನೂ, ಪರಧರ್ಮದ ಹಾನಿಯನ್ನೂ ಕೂಡಿಯೇ ಮಾಡುವನು. ಅದರಂತೆ, ಯಾವನು ಸ್ವಧರ್ಮಾಭಿಮಾನಿಯಾಗಿ ತನ್ನ ಧರ್ಮವನ್ನು ಹಬ್ಬಿಸುವ ಉದ್ದೇಶದಿಂದ ಪರಧರ್ಮಗಳನ್ನು ನಿಂದಿಸುವನೋ, ಅವನು ಸ್ವಧರ್ಮವೃದ್ಧಿಯ ಮಾರ್ಗದಲ್ಲಿ ವಿಘ್ನವನ್ನುಂಟು ಮಾಡುವನು; ಆತನ ಈ ನಡತೆಯು ಸರಿಯಾದದ್ದಲ್ಲ. ಎರಡನೆಯವರನ್ನು ಸನ್ಮಾನಿಸುವದೂ, ಅವರ ಹೊತ್ತಿಗೆ ಆಗುವದೂ ಇವಂತೂ ಪ್ರತಿ ಒಬ್ಬನ ಕರ್ತವ್ಯಗಳಾಗಿರುತ್ತವೆ. ದೇವರ ಪ್ರಿಯದರ್ಶಿಯ ಇಚ್ಛೆಯು ಹೀಗೆ ಮಾಡಬೇಕೆಂತಲೇ ಇರುತ್ತದೆ; ಆದ್ದರಿಂದ ಆತನ ಆಶ್ರಯದಲ್ಲಿ ಪ್ರತಿಯೊಬ್ಬ ಮನುಷ್ಯನು ತನ್ನ ಧರ್ಮದಂತೆ ನಡೆಯಬೇಕು. ಧರ್ಮತತ್ವಗಳ ಪ್ರಸಾರ ಮಾಡುವಂಥ ಪುಣ್ಯಕರವಾದ ಕಾರ್ಯವು ಮತ್ತೆ ಯಾವದೂ ಇಲ್ಲೆಂದು ಪ್ರಿಯದರ್ಶಿಯು ತಿಳಿಯುವನು. ಎಲ್ಲ ಧರ್ಮಗಳ ಹೇತುವು ಇದೇ ಇರುತ್ತದೆ; ಆದ್ದರಿಂದ ಧರ್ಮ ಪ್ರಸಾರಕ್ಕಾಗಿಯೂ, ನೀತಿಯ ಅಭಿವೃದ್ಧಿಗಾಗಿಯೂ ಸ್ತ್ರೀಪುರುಷರ ನಡಾವಳಿಯ ಮೇಲೆ ಕಣ್ಣು ಇಡಬೇಕೆಂದು ಅಧಿಕಾರಿಗಳನ್ನು ನಿಯಮಿಸುವದೇ ಮೊದಲಾದ ಉಪಾಯಗಳನ್ನು ಮಾಡತಕ್ಕದ್ದು. ಇದರಿಂದ ಧರ್ಮವೃದ್ಧಿಯೂ, ನೀತಿಯ ಉತ್ಕರ್ಷವೂ ಆಗುವವು.

(೧೩) ದೇವರ ಪ್ರಿಯದರ್ಶಿರಾಜನು ವಿಸ್ತಾರವಾದ ಕಲಿಂಗದೇಶವನ್ನು ಪಾದಾಕ್ರಾಂತವಾಗಿ ಮಾಡಿದನು. ಆಗ ಗುಲಾಮರೆಂದು ಲಕ್ಷಾವಧಿ ಜನರನ್ನು ಸೆರೆ ಹಿಡಿದನು. ಒಂದು ಲಕ್ಷ ಜನರ ಸಂಹಾರವು ಈ ಪ್ರಸಂಗದಲ್ಲಿ ಆಯಿತು; ಆದರೆ ಈ ಕಲಿಂಗವಿಜಯದಿಂದ ಅರಸನ ವೃತ್ತಿಯು ಧರ್ಮದಕಡೆಗೆ ಒಲಿಯಿತು. ಈ ಕಲಿಂಗವಿಜಯದಿಂದ ಅರಸನ ಮನಸ್ಸಿನಲ್ಲಿ ಉಪರತಿಯು ಉತ್ಪನ್ನವಾದದ್ದರಿಂದ, ಇನ್ನುಮೇಲೆ ಧರ್ಮಪ್ರಸಾರಾರ್ಥವಾಗಿಯೇ ತನ್ನ ತನುಮನೋಧನಗಳನ್ನರ್ಪಿಸುವೆನೆಂದು ಆತನು ಸಂಕಲ್ಪ ಮಾಡಿದನು.

ಹೊಸದೇಶಗಳನ್ನು ಗೆಲ್ಲುವಾಗ ಆಗುವ ಪ್ರಾಣಹಾನಿಯ ಬಗ್ಗೆ ನನಗೆ ದುಃಖವಾಗುತ್ತದೆ. ಅದರಲ್ಲಿ ಸ್ವಧರ್ಮನಿಷ್ಠರೂ, ಸದಾಚಾರಿಗಳೂ, ನೀತಿವಂತರೂ, ಆಜ್ಞಾಧಾರಕರೂ, ಸಚ್ಛೀಲ ಬ್ರಾಹ್ಮಣರೂ—ಶ್ರವಣರೂ—ಇತರರೂ ಇಂಥ ಪ್ರಸಂಗದಲ್ಲಿ ಕಷ್ಟವನ್ನು ಸೋಸಬೇಕಾಗುವದರಿಂದಂತು ನನಗೆ ಬಹಳ ದುಃಖವಾಗುತ್ತದೆ. ಅವರ ಆಪ್ತರೂ, ಪ್ರೀತಿಯ ಜನರೂ ಯುದ್ಧದಲ್ಲಿ ಮರಣ ಹೊಂದುವದರಿಂದ ಅವರ ವಿಯೋಗಜನ್ಯ ದುಃಖವನ್ನು ಸಹಿಸಬೇಕಾಗುತ್ತದೆ. ಅವರು ಸ್ವತಃ ಬಹು ಕಷ್ಟದಿಂದ ಜೀವ ಉಳಿಸಿಕೊಂಡು ಓಡಿ ಹೋದರೂ, ಅವರ ಮನೆಮಾರು, ಇಷ್ಟಮಿತ್ರರು, ನೆರೆಹೊರೆಯವರು ಇವರ ನಾಶವಾದದ್ದನ್ನು ಅವರು ಕಣ್ಣುಮುಟ್ಟ ನೋಡಬೇಕಾಗುವದು. ಕಲಿಂಗವಿಜಯದಲ್ಲಿ ಲಕ್ಷಾವಧಿ ಜನರೊಳಗೆ ಕೆಲವರು ನೀರಲ್ಲಿ ಮುಳುಗಿ ಸತ್ತರು; ಕೆಲವರು ತುಂಡರಿಸಲ್ಪಟ್ಟು ಸತ್ತರು; ಲಕ್ಷಾವಧಿ ಜನರು ಸೆರೆಯಲ್ಲಿ ಸಿಕ್ಕರು. ಇದನ್ನು ನೋಡಿ, ಪ್ರಿಯದರ್ಶಿರಾಜನಿಗೆ ಸಾವಿರಪಟ್ಟು ಹೆಚ್ಚು ದುಃಖವಾಗುತ್ತಿರುವದು. ಪ್ರಾಣಿಮಾತ್ರಗಳ ನಿರ್ಭಯತೆ, ಮನುಷ್ಯನ ನಡತೆಯೊಳಗಿನ ಸದಯತೆ, ಇವೆರಡು ಸಂಗತಿಗಳು ಧರ್ಮವಿಜಯದ ಪತಾಕೆಗಳಾಗಿರುತ್ತವೆ! ಪ್ರಿಯದರ್ಶಿ ರಾಜನಿಗೆ ತನ್ನ ವಿಸ್ತಾರವಾದ

ರಾಜ್ಯದ ಯೋಗದಿಂದ ಅಭಿಮಾನವು ತೋರುತ್ತಿದ್ದರೆ, ಇವೆರಡು ಸಂಗತಿಗಳಿಂದಲೇ ತೋರುತ್ತಿರುವದು. ನನ್ನ ಉಪದೇಶಕರು ದೇಶದೇಶಗಳಲ್ಲಿ ಉಪದೇಶದಿಂದ ಧರ್ಮಪ್ರಸಾರ ಮಾಡುವದನ್ನು ನೋಡಿ, ನನಗೆ ಬಹಳ ಆನಂದವಾಗುತ್ತದೆ. ಧರ್ಮವಿಜಯದ ಆನಂದವು ಹೀಗೆ ವಿಲಕ್ಷಣವಾಗಿರುವದು; ಆದರೆ ಈ ವಿಜಯಕ್ಕಾಗಿ ಪರಲೋಕದಲ್ಲಿ ದೊರೆಯುವ ಆನಂದವನ್ನು ಮನಸ್ಸಿನಲ್ಲಿ ತಂದರೆ, ಈ ಐಹಿಕಾನಂದವೂ ತುಚ್ಛವಾಗಿ ತೋರುವದು; ಆದ್ದರಿಂದ ನನ್ನ ಪುತ್ರಪೌತ್ರಾದಿಗಳು ಖಡ್ಗದ ಬಲದಿಂದ ವಿಜಯವನ್ನು ಸಂಪಾದಿಸುವ ಉಬ್ಬಿಗೆ ಬಿದ್ದು, ಜನರಮೇಲೆ ಒತ್ತಾಯ ಮಾಡಬಾರದು. ಅಥವಾ ಅವರ ನಾಶಕ್ಕೆ ಕಾರಣವಾಗಬಾರದು. ಧರ್ಮವಿಜಯದಂಥ ವಿಜಯವಿಲ್ಲೆಂಬದನ್ನು ಅವರು ಚನ್ನಾಗಿ ಲಕ್ಷದಲ್ಲಿಡಬೇಕು. ಇದಕ್ಕಾಗಿಯೇ ಈ ಆದೇಶವನ್ನು ಕೊರಿಸಿ ಇಟ್ಟಿರುತ್ತದೆ. ಇಹಪರಗಳಲ್ಲಿ ಕೂಡಿಯೇ ಮಹತ್ವವಾದದ್ದೆಂದರೆ ಧರ್ಮವಿಜಯವು.

(೧೪) (ಇದರಲ್ಲಿ ಮೇಲಿನ ಆದೇಶಗಳಲ್ಲಿಯ ವಾಕ್ಯಗಳೂ, ವಿಚಾರಗಳೂ ಪುನಃ ಪುನಃ ಬಂದಿರುವದರಿಂದ ಅವುಗಳ ಭಾಷಾಂತರವನ್ನು ಕೊಟ್ಟಿರುವದಿಲ್ಲ.)

ಹದಿನಾಲ್ಕು ರತ್ನಗಳಂತೆ ಇದ್ದ, ಈ ಆದೇಶಗಳನ್ನು ಬರಕೊಂಡು ಚಕ್ರವರ್ತಿಯು ಪರಮಾನಂದಭರಿತನಾದನು. ಆತನ ಕಣ್ಣುಗಳೊಳಗಿಂದ ಆನಂದಬಾಷ್ಪಗಳು ಸುರಿಯುತ್ತಲಿದ್ದವು. ಆನಂದದಿಂದ ಗದ್ಗದಿತ ಕಂಠನಾಗಿದ್ದ ಆತನ ಮುಖದಿಂದ ಅಕ್ಷರಗಳು ಹೊರಡಲೊಲ್ಲವು. ಚಕ್ರವರ್ತಿಯ ಈ ಆನಂದವನ್ನು ನೋಡಿ, ಗುರುಜನರಿಗೆ ಬಹಳ ಸಂತೋಷವಾಯಿತು. ಹೀಗೆ ಎಲ್ಲರೂ ಆನಂದಪರವಶರಾಗಿ ಕುಳಿತಿರುವಾಗ, ಸಹಸ್ರಾವಧಿ ಜನಸಮೂಹವು ಅವರು ಕುಳಿತಿರುವ ಚೈತ್ಯಾಲಯವನ್ನು ಮುತ್ತಿತು. ಆಗ ಅಶೋಕನ ಬಳಿಯಲ್ಲಿ ವೀತಾಶೋಕನು ಆನಂದಭಾಷ್ಪಗಳನ್ನು ಸುರಿಸುತ್ತ ಕುಳಿತುಕೊಂಡಿದ್ದನು. ಅಶೋಕನ ತಂಗಿಯಾದ ಇಂದಿರೆಯು ಅಣ್ಣನ ಈ ಆನಂದಪರವಶತೆಯನ್ನು ಕೌತುಕದಿಂದ ನೋಡುತ್ತ ಕುಳಿತುಕೊಂಡಿದ್ದಳು. ಅಷ್ಟರಲ್ಲಿ ರಾಜಮಾತೆಯಾದ ಬುದ್ಧಿಮತಿಯೂ, ಸಂಪುಷ್ಪಾಚಾರ್ಯನೂ, ಪ್ರಮಿಳೆಯೂ ಖಡ್ಗಪಾಣಿಗಳಾಗಿ ಭಯಂಕರ ರೂಪಗಳಿಂದ ಅಲ್ಲಿಗೆ ಬಂದರು. ಅವರು ಚಕ್ರವರ್ತಿಯ ನಿಯಮಿತ ಸೈನ್ಯವನ್ನು ಸಂಹರಿಸಿ, ಒಳಗೆ ಬಂದದ್ದರಿಂದ ಅವರ ಸರ್ವಾಂಗವು ರಕ್ತಮಯವಾಗಿತ್ತು. ಮನುಷ್ಯಕೊಲೆಯ ಆವೇಶದಿಂದ ಅವರ ಮೈಮೇಲಿನ ಎಚ್ಚರವು ತಪ್ಪಿತ್ತು. ಅವರು ವೀತಾಶೋಕನೊಬ್ಬನನ್ನು ಬಿಟ್ಟು, ಉಳಿದವರೆಲ್ಲರ ಮೇಲೆ ಏರಿಹೋದರು. ಚಕ್ರವರ್ತಿಯ ಆನಂದದ ಆವೇಶವು ಇನ್ನೂ ಕಡಿಮೆಯಾಗದ್ದರಿಂದ, ಆತನು ಆನಂದದಿಂದ ತಲೆದೂಗುತ್ತ ಕುಳಿತುಕೊಂಡಿದ್ದನು. ಇಂದಿರೆಯು ಈ ಭಯಂಕರ ಪ್ರಸಂಗವನ್ನು ನೋಡಿ ಬೆದರಿ, ಚಕ್ರವರ್ತಿಯ ಮಗ್ಗಲಲ್ಲಿ ಹೋಗಿ ಕುಳಿತುಕೊಂಡಿದ್ದಳು. ಗುರುಜನವು ವಿಸ್ಮಯದಿಂದ ನೋಡುತ್ತ ಕುಳಿತುಕೊಂಡಿತ್ತು. ಆಗ ಪ್ರಮಿಳೆಯು ಇಂದಿರೆಯ ಮೇಲೆಯೂ, ರಾಜಮಾತೆಯಾದ ಬುದ್ಧಿಮತಿಯೂ ಅಶೋಕನ ಮೇಲೆಯೂ, ಸಂಪುಷ್ಪಾಚಾರ್ಯನೂ, ಆತನ ಪರಿವಾರವೂ ಭಿಕ್ಷುಮಂಡಲದಮೇಲೆಯೂ ದುಮುಕಿ ಅವರನ್ನು ಸಂಹರಿಸತಕ್ಕವರು; ಅಷ್ಟರಲ್ಲಿ ಕಲಿಂಗದ ಯುವರಾಜನಾದ ಜಿತೇಂದ್ರನೂ,

ಯುವರಾಜವೇಷಧಾರಿಯಾದ ಪ್ರಣಯಿನಿಯೂ, ಕಲಿಂಗಾಧಿಪತಿಯಾದ ಮೃಗೇಂದ್ರನೂ, ಚಿದಾನಂದಸ್ವಾಮಿಗಳೂ ನಿಯಮಿತ ಶೂರಪರಿವಾರ ದೊಡನೆ ಚೈತ್ಯಾಲಯವನ್ನು ಪ್ರವೇಶಿಸಿ, ರಾಜಮಾತೆಯೇ ಮೊದಲಾದವರನ್ನು ಸೆರೆಹಿಡಿದರು. ಈ ಪ್ರಸಂಗದಲ್ಲಿ ಹಲವರ ಪ್ರಾಣಹಾನಿಯಾಯಿತು. ಹೀಗೆ ಕಲಿಂಗರಾಜಮನೆತನದವರಿಂದ, ಚಕ್ರವರ್ತಿಯೇ ಮೊದಲಾದವರ ಪ್ರಾಣನಾಶಕ್ಕಾಗಿ ಬಂದಿದ್ದ ಜನರ ಸದ್ದು ಅಡಗುತ್ತಿರಲು, ಚಿದಾನಂದಸ್ವಾಮಿಗಳನ್ನು ಮೊಗ್ಗಲೀಪುತ್ರ—ತಿಷ್ಯರವರು ಆಲಿಂಗಿಸಿ ಸತ್ಕರಿಸಿದರು. ಆಗ ಚಕ್ರವರ್ತಿಯು ಕಣ್ದೆರೆದು ನೋಡಲು, ಈ ಆಕಸ್ಮಿಕ ಭಯಂಕರ ಪ್ರಸಂಗವು ಆತನ ಕಣ್ಣಿಗೆ ಬಿದ್ದಿತು.

ಪರಮ ಶಾಂತಮೂರ್ತಿಯಾಗಿದ್ದ ಅಶೋಕನ ಚಿತ್ತವು ಈ ಭಯಂಕರ ಪ್ರಸಂಗದಿಂದ ಕ್ಷೋಭಿಸಲಿಲ್ಲ. ಆತನು ತನ್ನ ಬಳಿಯಲ್ಲಿ ನಿಂತಿರುವ ವೇಷಧಾರಿಯಾದ ಜಿತೇಂದ್ರನ ಕೈಹಿಡಿದುಕೊಂಡು ಕೃತಜ್ಞತೆಯಿಂದ ಆತನನ್ನು ಅಭಿನಂದಿಸಿ, ಆತನ ಕೈಗಳನ್ನು ಹಿಡಿದುಕೊಂಡೇ ಚಿದಾನಂದಸ್ವಾಮಿಗಳನ್ನು ನಮಸ್ಕರಿಸಿದನು. ಆಗ ಸ್ವಾಮಿಗಳು ಸದ್ಗದಿತಕಂಠರಾಗಿ—''ಆಯುಷ್ಮಾನ್‌ಭವ, ಕೀರ್ತಿಮಾನ್‌ಭವ'' ಎಂದು ಆಶೀರ್ವದಿಸಲು, ಅಶೋಕನು—ಮಹಾತ್ಮರೇ, ಕಲಿಂಗಾಧಿಪತಿಯಾದ ಮೃಗೇಂದ್ರನನ್ನು ತಾವು ಕೊಂದಿರೆಂದು ಪ್ರಮೀಳಾದೇವಿಯು ಪ್ರತಿಪಾದಿಸಿದ್ದಳಷ್ಟೇ? ಅಂಥ ಅಪರಾಧವು ತಮ್ಮಿಂದ ಘಟಿಸದೆಂದು ತಮ್ಮನ್ನು ನಾನು ಸುಮ್ಮನೆ ಹೋಗಗೊಟ್ಟೆನಲ್ಲದೆ, ಮಹಾತ್ಮರಾದ ತಮ್ಮ ಚರಣವನ್ನು ಸೇವಿಸಿ ಧನ್ಯನಾಗಲಿಲ್ಲ. ಪರಮ ಕೃಪಾಳುಗಳಾದ ತಾವು, ಸದ್ಗುರುಕೃಪೆಯಿಂದ ಪುನಃ ನನಗೆ ದರ್ಶನಕೊಟ್ಟದ್ದರಿಂದ ನಾನು ಕೃತಾರ್ಥನಾದೆನು; ಈ ದಿನವೇ ಸುದಿನವು. ಮಹಾತ್ಮರ ಸಮುಚ್ಚಯದಿಂದ ಅಲಂಕೃತವಾದ ಈ ದಿನವೇ ಚಿರಸ್ಮರಣೀಯವಾದದ್ದು. ಮಹಾತ್ಮರೇ, ವೈದಿಕ ಹಾಗು ಬೌದ್ಧ ಧರ್ಮಗಳ ನಿಜವಾದ ರಹಸ್ಯವನ್ನು ಬಲ್ಲ ತಮ್ಮ ಇಬ್ಬರು ಮಹಾತ್ಮರ ಇಂದಿನ ಆಲಿಂಗನವನ್ನು ನೋಡಿ, ಅವೆರಡು ಧರ್ಮಗಳ ರಹಸ್ಯೈಕ್ಯವು ನನ್ನ ಹೃದಯದಲ್ಲಿ ಚೆನ್ನಾಗಿ ಬಿಂಬಿಸಿತು. ಇಂದು ನಮ್ಮ ಗುರುವೃಂದವು ದಯಪಾಲಿಸಿರುವ 14 ಆದೇಶರತ್ನಗಳಿಂದ ಆ ರಹಸ್ಯೈಕ್ಯಕ್ಕೆ ಪುಷ್ಟಿಯು ದೊರೆಯಿತು! ಇಂದಿಗೆ ಅಶೋಕನು ಧನ್ಯನಾದನು, ಎಂದು ನುಡಿಯುತ್ತಿರುವಾಗ, ಆ ಪ್ರೇಮಲಮೂರ್ತಿಯ ಎರಡೂ ಕಣ್ಣುಗಳು ಆನಂದಬಾಷ್ಪ ಪೂರ್ಣವಾಗಲು, ಚಿದಾನಂದಸ್ವಾಮಿಗಳು—ಗುರುಪುತ್ರನಾದ ಅಶೋಕನೇ, ನೀನು ಧನ್ಯನು ಧನ್ಯನು! ನಿನ್ನ ಸಚ್ಛಿಷ್ಯ ಧರ್ಮವನ್ನು ನೋಡಿ, ನಾನೂ ಧನ್ಯನೇ ಆದೆನು; ಆದರೆ ಲೋಕಹಿತತತ್ಪರನಾದ ಚಕ್ರವರ್ತಿಯೇ, ನಿನ್ನ ಹಸ್ತದಲ್ಲಿ ತನ್ನ ಹಸ್ತವನ್ನು ಕೊಟ್ಟು, ತನ್ನ ಸಚ್ಛೀಲದಿಂದ ಸ್ತುತ್ಯಳಾದವಳು ಕಲಿಂಗರಾಜಪುತ್ರಿಯಾದ ಪ್ರಣಯಿನಿಯೆಂದು ತಿಳಿ. ತನ್ನ ಅಣ್ಣನನ್ನು ಉಳಿಸುವದಕ್ಕಾಗಿ ಆ ವೀರಪುತ್ರಿಯು ಪುರುಷವೇಷದಿಂದ ನಿನ್ನಲ್ಲಿ ಬಂದು ಇದ್ದಳು. ನಿನ್ನ ಸದ್ಗುಣಗಳು ಆಕೆಯ ಮನಸ್ಸನ್ನು ದಿನ ದಿನಕ್ಕೆ ಹರಣಮಾಡುತ್ತಿದ್ದರೂ, ಆ ಅಭಿಮಾನಿಯಾದ ಕ್ಷತ್ರಿಯರಾಜಪುತ್ರಿಯು, ತಂದೆಯ ಇಚ್ಛೆಯನ್ನು ತಿಳಿದು, ನಿನ್ನ ನಿಕಟ ಸಹವಾಸವನ್ನು ಮಾಡಲೊಪ್ಪದೆ, ತುರಂಗದರ್ಬಾರದಲ್ಲಿ ಕಾಲವನ್ನು ಕಳೆದಳು. ನೀನು ಸ್ವಲ್ಪ ದಿನಗಳ ಹಿಂದೆ ಆಕೆಯನ್ನು ಸ್ತ್ರೀಯೆಂದು ಕಂಡುಹಿಡಿದು, ಆಕೆಗೆ ನಿನ್ನ ಹೃದಯವನ್ನು

ಒಪ್ಪಿಸಿದರೂ, ಬಹಿರಂಗದಲ್ಲಿ ನೀತಿಗೆ ವಿರುದ್ಧವಾಗಿ ನೀನೂ ಆಚರಿಸಲಿಲ್ಲ; ಆದ್ದರಿಂದ ಆತ್ಮ ಸಂಯಮನ ಧುರೀಣರಾದ, ಹಾಗು ಅಂತರಂಗದಿಂದ ಪರಸ್ಪರರನ್ನು ಪ್ರೀತಿಸುತ್ತಿರುವ ನಿಮ್ಮಿಬ್ಬರ ವಿವಾಹವಾಗಿ, ವೈದಿಕ ಬೌದ್ಧ ಧರ್ಮಗಳಲ್ಲಿ ಸಖ್ಯವುಂಟಾಗುವದು ನನಗೆ ಉಕ್ತವಾಗಿ ತೋರುತ್ತದೆ. ಇದಕ್ಕೆ ಮಹಾತ್ಮರಾದ ಮೊಗ್ಗಲೀಪುತ್ರ–ತಿಷ್ಯರವರೂ, ಬೇರೆ ಭಿಕ್ಷು–ಮಂಡಲವೂ ಒಪ್ಪಿಕೊಳ್ಳಬಹುದಾಗಿ ತೋರುತ್ತದೆ, ಅನ್ನಲು, ಮೊಗ್ಗಲೀಪುತ್ರ—ತಿಷ್ಯರು ಚಕ್ರವರ್ತಿಯನ್ನು ಕುರಿತು—ಭಗವನ್, ಸತ್ಪುರುಷರ ಪರವಮಾನುಗ್ರಹದ ಅಪ್ಪಣೆಯು ನಿನಗೆ ಸಮ್ಮತವಷ್ಟೇ? ಎಂದು ನುಡಿಯುತ್ತಿರಲು, ಅಲ್ಲಿಯೇ ಅಣ್ಣನ ಬಳಿಯಲ್ಲಿ ಕುಳಿತಿದ್ದ ವೀತಾಶೋಕನು ಎದ್ದುನಿಂತು, ತನ್ನ ತಾಯಿಯಾದ ಬುದ್ಧಿಮತಿಯನ್ನು ಕುರಿತು—''ತಾಯಿಯೇ, ನಿನ್ನ ಈ ಅಧಮಕೃತಿಯನ್ನು ನೋಡಿ ನನ್ನ ಸಂಸಾರದ ಮೇಲಿನ ಪ್ರೇಮವು, ಸಂಪೂರ್ಣ ನಷ್ಟವಾಗಿ ಹೋಯಿತು. ಸಂಸಾರಪರಿತ್ಯಾಗದ ಸಂಗಡ ನಿನ್ನ ನನ್ನ ಮಾತಾ—ಪುತ್ರ ಸಂಬಂಧವೂ ನಷ್ಟವಾಗುವದನ್ನು ನೋಡಿ ನನಗೆ ಬಹಳ ಸಂತೋಷವಾಗುತ್ತದೆ! ನನಗೆ ಪಟ್ಟವಾಗಬೇಕೆಂಬ ದುರಾಲೋಚನೆಯಿಂದ ಪುಣ್ಯಶ್ಲೋಕನಾದ ಅಣ್ಣನ ಪ್ರಾಣಕ್ಕೂ ಹಲವು ಸಾರೆ ನೀನು ಕೈಹಾಕಿದೆಯಲ್ಲ! ನಾನು ಸಂಸಾರದಲ್ಲಿದ್ದರೆ, ಎಂದಿಲ್ಲೊಂದು ದಿನ ನೀನು ಭಗವಂತನ ಪ್ರಾಣಹರಣ ಮಾಡುವವಳೇ ಸರಿ. ಇಷ್ಟು ಸುಲಭವಾಗಿ ಪ್ರಾಪ್ತವಾಗಿರುವ ಆತ್ಮೋದ್ಧಾರದ ಪ್ರಸಂಗವನ್ನು, ನಾನಾದರೂ ಯಾಕೆ ಕಳಕೊಳ್ಳಬೇಕು? ನಾನು ವಿರಕ್ತನಾಗಿ ಭಿಕ್ಷುದೀಕ್ಷೆಯನ್ನು ಹೊಂದಿದರೆ, ನಿನ್ನ ದುರಾಲೋಚನೆಗಳು ನಷ್ಟವಾಗಿ, ನಿನ್ನ ಪಾತಕಗಳನ್ನು ಪಶ್ಚಾತ್ತಾಪದಿಂದ ಸುಟ್ಟುಕೊಳ್ಳಲಿಕ್ಕೆ ನಿನಗೆ ಅನುಕೂಲ ವಾದೀತು. ''ನಮೋಬುದ್ಧಾಯ'' ಎಂದು ನುಡಿದು, ಕುಮಾರನು ಭಿಕ್ಷುವೃಂದಕ್ಕೆ ಸಾಷ್ಟಾಂಗ ವಾಗಿ ವಂದಿಸಿ, ಭಿಕ್ಷುದೀಕ್ಷೆಯನ್ನು ಕೊಡಲು ಅವರನ್ನು ಪ್ರಾರ್ಥಿಸಿದನು. ಆಗ ಅಶೋಕನು ಕಣ್ಣುತುಂಬ ನೀರುತಂದು ವೀತಾಶೋಕನನ್ನು ಕುರಿತು—ಕುಮಾರಾ, ಭಿಕ್ಷುವಾಗಲಿಕ್ಕೆ ಇಷ್ಟು ಅವಸರ ಮಾಡಬೇಡ. ನೀನು ಇನ್ನೂ ಸಂಸಾರದ ಆಸ್ವಾದವನ್ನು ಅನುಭವಿಸಿರುವದಿಲ್ಲ, ಅನ್ನಲು, ಬುದ್ಧಿಮತಿಯು ಬಿಕ್ಕಿಬಿಕ್ಕಿ ಅಳುತ್ತ ಮಗನನ್ನು ಕುರಿತು—ಕುಮಾರಾ, ಬೇಕಾದರೆ ನನ್ನನ್ನು ಸೆರೆಯಲ್ಲಿರಿಸು, ಇಲ್ಲವೆ ನನಗೆ ದೇಹಾಂತ ಪ್ರಾಯಶ್ಚಿತ್ತವನ್ನಾದರೂ ಕೊಡಿಸು; ಆದರೆ ನೀನು ಸಂಸಾರವನ್ನು ಮಾತ್ರ ಬಿಡಬೇಡ, ಎಂದು ಹೇಳಿಕೊಂಡಳು.

ಅಣ್ಣನ, ಹಾಗು ತಾಯಿಯ ಈ ಮಾತುಗಳನ್ನು ಕೇಳಿ, ವೀತಾಶೋಕನು ನಗುತ್ತ—ಎಂಥ ನಿಮ್ಮ ಚಮತ್ಕಾರದ ಆಗ್ರಹವಿದು! ಈ ಶುಭಪ್ರಸಂಗದಲ್ಲಿ ಆನಂದವನ್ನು ವ್ಯಕ್ತಮಾಡದೆ, ನೀವು ದುಃಖಪಡುತ್ತಿರುವಿರಲ್ಲ! ಭಗವನ್, ನೀನು ಇಂಥ ಜ್ಞಾನಿಯೂ, ಇಂಥ ಧರ್ಮಾತ್ಮನೂ ಇದ್ದು ನನ್ನ ಕಾರ್ಯಕ್ಕೆ ಸಹಾಯಮಾಡದೆ ನೀನೂ ದುಃಖಪಡುವೆಯಾ! ಇದು ಸರಿಯಲ್ಲ, ಸರಿಯಿರಿ, ರಾಜಪ್ರಾಸಾದವೂ, ಅಲ್ಲಿಯ ವಿಲಾಸಗಳೂ ನನಗೆ ದುಸ್ಸಹವಾಗಹತ್ತಿರುವದರಿಂದ, ಶ್ರೀಗುರು ಚರಣಕ್ಕೆ ಶರಣು ಹೋಗುವದಕ್ಕಾಗಿ ನನಗೆ ಮಾರ್ಗಕೊಡಿರಿ, ಎಂದು ನುಡಿದು, ಸತ್ವಮೂರ್ತಿ ಯಾದ ಆ ವೀತಾಶೋಕನು ಮಹಾತ್ಮರಾದ ಮೊಗ್ಗಲೀಪುತ್ರ—ತಿಷ್ಯರವರ ಚರಣಗಳ ಮೇಲೆ ಮಸ್ತಕವನ್ನಿಟ್ಟು, ಭಿಕ್ಷುದೀಕ್ಷೆ ಕೊಡುವದಕ್ಕಾಗಿ ಪ್ರಾರ್ಥಿಸಿದನು. ತಿಷ್ಯರವರು ಆ ತರುಣನ ಅಧಿಕಾರಸಂಪನ್ನತೆಯನ್ನರಿತು, ಕೂಡಲೆ ಅವನಿಗೆ ಭಿಕ್ಷುದೀಕ್ಷೆಯನ್ನು ಕೊಟ್ಟರು. ಈ ವಿಚಿತ್ರ

ಪ್ರಸಂಗವನ್ನು ನೋಡಿ, ಎಲ್ಲರೂ ಸುಮ್ಮನೆ ಕುಳಿತುಕೊಂಡಿರಲು, ಮೊಗ್ಗಲೀಪುತ್ರ—ತಿಷ್ಯರವರು ಅಶೋಕನನ್ನು ಕುರಿತು—ಭಗವನ್, ನಿನ್ನ ಬಂಧುವು ನಿರ್ವಾಣದ ಮಾರ್ಗವನ್ನು ಕ್ರಮಿಸ ಹತ್ತಿದ್ದು ಬಹು ಆನಂದದ ಸಂಗತಿಯು. ನಿನ್ನ ಆ ಬಂಧುವಿನೊಡನೆ ಈ ಪ್ರಣಯಿನಿಯ ಲಗ್ನಮಾಡಬೇಕೆಂಬ ಪ್ರಸಕ್ತಿಯಿಂದಲೇ ಹಲವು ಇಷ್ಟಾ—ನಿಷ್ಟ ಪರಿಣಾಮಗಳು ಘಟಿಸಿದವು. ಈಗ ನೀನು ಲೋಕಕಲ್ಯಾಣಾರ್ಥವಾಗಿ ಈ ಪ್ರಣಯಿನಿಯನ್ನು ಲಗ್ನವಾಗು; ಅದರಂತೆ ನಿನ್ನ ತಂಗಿಯಾದ ಈ ಇಂದಿರೆಯು, ಹರಿದ್ವಾರದ ಆಶ್ರಮದ ನೆರೆಯಲ್ಲಿ ಸಿಂಹನಿಗೆ ಬಾಣ ಹೂಡುತ್ತಿರುವಾಗ, ಈ ಕಲಿಂಗರಾಜಪುತ್ರನಾದ ಜಿತೇಂದ್ರನು ''ಬೇಡ ಬೇಡೆಂ''ದು ಈಕೆಯ ಕೈಹಿಡಿಯಲು, ಆಗಲೇ ಈಕೆಯು ತನ್ನ ಹೃದಯವನ್ನು ಜಿತೇಂದ್ರನಿಗೆ ಒಪ್ಪಿಸಿದ್ದಾಳೆ; ಆದ್ದರಿಂದ ನಿನ್ನ ತಂಗಿಯನ್ನು ಜಿತೇಂದ್ರನಿಗೆ ಕೊಟ್ಟು ಲಗ್ನಮಾಡು, ಅನ್ನಲು, ಚಿದಾನಂದರು ಪರಮಾನಂದ ದಿಂದ ಅಲ್ಲಿ ನೆರೆದವರನ್ನು ಕುರಿತು—ಸಜ್ಜನರೇ, ಭಿಕ್ಷುಶ್ರೇಷ್ಠರು ಚಕ್ರವರ್ತಿಗೆ ಮಾಡುವ ಈ ಆಜ್ಞೆಗಳು ಲೋಕಕಲ್ಯಾಣಕಾರಕಗಳಾಗಿರುತ್ತವೆ. ಇಂಥ ಕಲ್ಯಾಣಪ್ರಸಂಗವಿರುವದರಿಂದಲೇ ಚಕ್ರವರ್ತಿಯನ್ನು ಸಂಕಟದಿಂದ ದೂರಮಾಡುವ ಸುಯೋಗವು ಕಲಿಂಗಾಧಿಪತಿಯಾದ ಮೃಗೇಂದ್ರನಿಗೆ ಇಂದು ಒದಗಿಬಂದಿತು. ಉಪಗುಪ್ತಾಚಾರ್ಯರ ಪೂರ್ವಾಶ್ರಮದ ಕುಟುಂಬ ವಾದ ಭಗವತೀ ಬಕುಲಾದೇವಿಯು, ಸಂಪುಷ್ಪಾಚಾರ್ಯರ ಈ ದುಷ್ಟ ಒಳಸಂಚನ್ನು, ಗಂಗಾನದಿಯ ಪಾತ್ರದಲ್ಲಿ ಧ್ಯಾನಮುಗಿಸಿಕೊಂಡು ಕುಳಿತಾಗ ಕೇಳಿ, ಪ್ರಣಯಿನಿಗೆ ಹೇಳಿದಳು; ಆ ಪ್ರಣಯಿನಿಯು ಜಿತೇಂದ್ರನಿಗೆ ಹೇಳಿದಳು. ಜಿತೇಂದ್ರನು ಕೂಡಲೆ ತನ್ನ ತಂದೆಯ ಬಳಿಗೆ ಹೋಗಿ, ಸೈನ್ಯದೊಡನೆ ಆತನನ್ನು ಕರಕೊಂಡು ಇಲ್ಲಿಗೆ ಬಂದನು. ಈ ವಿಚಿತ್ರ ಯೋಗವು ಜಗತ್ತಿನ ಹಿತಕ್ಕಾಗಿಯೇ ಒದಗಿರುತ್ತದೆಂದು ನಾನು ತಿಳಿಯುವೆನು. ಇಂಥ ಹಿತದ ಕಾರ್ಯಕ್ಕೆ ಮೃಗೇಂದ್ರ ರಾಜನೂ ಒಪ್ಪಿಕೊಳ್ಳಬಹುದು, ಅನ್ನಲು, ಉಪಗುಪ್ತಾಚಾರ್ಯರೇ ಮೊದಲಾದ ಭಿಕ್ಷು ಮಂಡಲಕ್ಕೆ ಗಾಳಿಯನ್ನು ಬೀಸುತ್ತ ನಿಂತಿದ್ದ ಮೃಗೇಂದ್ರನು—ತ್ರಿಕಾಲಜ್ಞಾನಿಗಳಾದ ಮಹಾಮಹಿಮರೇ ಒಪ್ಪಿಕೊಳ್ಳುತ್ತಿರುವ ಮಾತಿಗೆ, ಪಾಮರನಾದ ನಾನು ಒಪ್ಪಿಕೊಳ್ಳದಿರುವದು ಹೇಗೆ? ಎಂದು ನುಡಿದನು. ಆಗ ಅಲ್ಲಿ ನೆರೆದವರಿಗೆಲ್ಲ ಪರಮಾನಂದವಾಯಿತು. ಪ್ರಣಯಿನಿಯೂ, ಇಂದಿರೆಯೂ ತಮ್ಮ ಜನ್ಮಗಳು ಸಫಲವಾದವೆಂದು ತಿಳಿದರು. ಅಶೋಕ—ಜಿತೇಂದ್ರರೂ ಯೋಗ್ಯ ಪತ್ನೀಪ್ರಾಪ್ತಿಗಾಗಿ ತಮ್ಮನ್ನು ಧನ್ಯರೆಂದು ಭಾವಿಸಿದರು!!

ನಿರ್ವಾಣಸ್ಥಿತಿ

ಅಶೋಕನು ಈ ಮೇರೆಗೆ, ಗಂಡಾಂತರದಿಂದ ಪಾರಾಗಿ ಪ್ರಣಯಿನಿಯನ್ನು ಲಗ್ನ ಮಾಡಿಕೊಂಡು ಸಂಸಾರಸುಖವನ್ನು ಭೋಗಿಸಹತ್ತಿದನು. ಪ್ರಣಯಿನಿಯ ಹೊರತು ಅಶೋಕನಿಗೆ ಕೆಲವು ಜನ ಹೆಂಡಿರಿದ್ದರು. ಅವರಲ್ಲಿ ಕೆಲವರ ಹೊಟ್ಟೆಯಲ್ಲಿ ಮಕ್ಕಳೂ ಆಗಿದ್ದವು; ಆದರೆ

ಪ್ರಣಯಿನಿಯಿಂದ ಆತನಿಗೆ ನಿಜವಾದ ಸಂಸಾರಸುಖವು ಪ್ರಾಪ್ತವಾದಂತೆ, ಬೇರೆ ಯಾರಿಂದಲೂ ಆಗಲಿಲ್ಲ. ಯಾಕಂದರೆ, ಕಲಿಂಗವಿಜಯದಿಂದ ಆತನಲ್ಲಿ ಪಶ್ಚಾತ್ತಾಪವು ಉತ್ಪನ್ನವಾಗುವವರೆಗೆ ಆತನ ಕ್ರೂರಸ್ವಭಾವವು ಅಳಿದಿದ್ದಿಲ್ಲ. ಕೋಮಲಾಂತಃಕರಣವೇ ನಿಜವಾದ ಪ್ರೇಮದ ವಾಸಸ್ಥಾನವಾಗಿರುವದು; ಅದರಿಂದ ಪ್ರಣಯಿನಿಯ ಸಹವಾಸವಾದಂದಿನಿಂದಲೇ ಆತನ ಹೃದಯದಲ್ಲಿ ನಿಜವಾದ ಪ್ರೇಮೋದವಾಯಿತೆಂದು ಹೇಳಬಹುದು. ಇತ್ತ ಕಲಿಂಗದ ರಾಜನಾದ ಮೃಗೇಂದ್ರನಿಗೆ ಆತನ ರಾಜ್ಯವು ಪ್ರೇಮಪೂರ್ವಕವಾಗಿ ಕೊಡಲ್ಪಟ್ಟು, ದೃಢಮೈತ್ರಿಯು ಸಂಪಾದಿಸಲ್ಪಟ್ಟಿತು. ಜಿತೇಂದ್ರನೊಡನೆ ಇಂದಿರೆಯ ವಿವಾಹವಾಯಿತು. ಕಲಿಂಗದ ರಾಜ್ಯವು ಪುನಃ ವೈದಿಕ ಧರ್ಮದವರ ಕೇಂದ್ರಸ್ಥಾನವಾಗಿ, ಜಿತೇಂದ್ರನ ಆಳಿಕೆಯಿಂದ ಅದು ಪುರೋವೃದ್ಧಿಯನ್ನು ಹೊಂದಿತು. ಇವೆರಡು ರಾಜ್ಯಗಳ ನಡುವೆ ಆದ ಶರೀರಸಂಬಂಧದಿಂದ ಬೌದ್ಧರಿಗೂ ಆರ್ಯರಿಗೂ ಪ್ರೇಮದ ಬಳಿಕೆಯಾಗಿ, ಉಭಯ ಧರ್ಮದವರಲ್ಲಿಯೂ ಸ್ನೇಹಭಾವವು ಬೆಳೆಯಹತ್ತಿತು. ಅಶೋಕನು ಮಹಾಸಭೆಯ ಯೋಗದಿಂದ ನಿಜವಾದ ಧರ್ಮಗುರುಗಳನ್ನು ಆರಿಸಿದ್ದಲ್ಲದೆ, ''ತ್ರಿಪಿತಿಕ'' ಎಂಬ ಹೆಸರಿನ ಶಾಸ್ತ್ರಗ್ರಂಥದ ಸಂಶೋಧನವನ್ನು ಮಾಡಿಸಿದನು. ತ್ರಿಪಿತಿಕವೆಂದರೆ, ಮೂರು ಗ್ರಂಥಗಳ ಸಮುದಾಯವು. ಇದರಲ್ಲಿ ಬುದ್ಧನ ಮರಣನಂತರ ಮಹಾಕಾಶ್ಯಪನೆಂಬವನು ಸಭೆಗೂಡಿಸಿ ಗೊತ್ತುಮಾಡಿದ ಧರ್ಮಸೂತ್ರಗಳು, ವಿನಯ, ಅಭಿಧರ್ಮ ಎಂಬ ಮೂರು ಗ್ರಂಥಗಳ ಸಮಾವೇಶವಾಗುತ್ತದೆ. ಅಶೋಕನ ಧರ್ಮಬುದ್ಧಿಯು ದಿನದಿನಕ್ಕೆ ಅಭಿವೃದ್ಧವಾಗುತ್ತ ಹೋಯಿತು. ಆತನ ಕ್ರೂರಸ್ವಭಾವವು ತೀರ ಅಳಿದುಹೋಗಿ, ಆತನು ಶಾಂತಮೂರ್ತಿಯಾದನು. ತನ್ನ ಕುರೂಪವನ್ನು ಆಡಿಕೊಂಡದ್ದಕ್ಕಾಗಿ ತನ್ನ ಹೆಂಡಿರನ್ನು ದರದರ ಎಳಿಸಿ ಬೆಂಕಿಯಲ್ಲಿ ಕೆಡವಿಸಿ ಸುಟ್ಟಿದ್ದ ಅಶೋಕನು, ಮುಂದೆ ಶಾಂತನಾದ ಬಳಿಕ ತನ್ನ ತಿಷ್ಯರಕ್ಷಿತೆಯೆಂಬ ಹೆಂಡತಿಯು, ತಾನು ಧ್ಯಾನಸ್ಥನಾಗಿ ಕುಳಿತುಕೊಳ್ಳುತ್ತಿದ್ದ ಬೋಧಿವೃಕ್ಷವನ್ನು ಕಡಿಸಿದಾಗ ಹೆಂಡತಿಯ ಹೆಸರು ತೆಗೆಯಲಿಲ್ಲ! ಅಶೋಕನು ಬೌದ್ಧಧರ್ಮದ ಅಭಿವೃದ್ಧ್ಯರ್ಥವಾಗಿ ಹಲವು ಪ್ರಯತ್ನಗಳನ್ನು ಮಾಡಿದನು. ಆತನ ಧರ್ಮೋಪದೇಶಕರು ಭರತಖಂಡದ ಹೊರಗಿನ ದೂರದೂರದ ದೇಶಗಳಿಗೂ ಹೋಗಿದ್ದರು.

ಅಶೋಕನಿಗೆ ಸಂಸಾರಸುಖವು ಪ್ರಾಪ್ತವಾಗಲಿಲ್ಲೆಂದು ಹೇಳಬಹುದು. ಆತನಿಗೆ ಬೇರೆಬೇರೆ ಹೆಂಡಿರಲ್ಲಿ ಕೆಲವು ಗಂಡುಮಕ್ಕಳೂ, ಹೆಣ್ಣುಮಕ್ಕಳೂ ಇದ್ದರು. ಅವರಲ್ಲಿ ಮಹಿಂದ, ಕುನಾಲರೆಂಬ ಗಂಡುಮಕ್ಕಳೂ, ಸಂಗಮಿತ್ರಾಯೆಂಬ ಹೆಣ್ಣುಮಗಳೂ ಪ್ರಸಿದ್ಧರಾದವರು, ಮಹೀಂದನೂ, ಸಂಗಮಿತ್ರೆಯೂ ತಾರುಣ್ಯದಲ್ಲಿಯೇ ಭಿಕ್ಷು—ಭಿಕ್ಷುಣಿಯರಾಗಿ, ಸಿಂಹಲ ದ್ವೀಪದಲ್ಲಿ ಬೌದ್ಧಧರ್ಮವನ್ನು ಬೆಳಿಸಿ ಶಾಶ್ವತಕೀರ್ತಿಯನ್ನು ಸಂಪಾದಿಸಿದರು. ಆಗಿನ ಸಿಂಹಲ ದ್ವೀಪದ ಅರಸನು ತಿಷ್ಯನೆಂಬವನು ಇದ್ದನು. ಆತನು ಅಶೋಕನ ಕೀರ್ತಿಯನ್ನು ಕೇಳಿ, ತಾನೂ ಅವನಂತೆ ಆಗಬೇಕೆಂಬ ಈರ್ಷೆಯಿಂದ, ತನ್ನನ್ನು ''ದೇವನಾಂಪ್ರಿಯ'' ಅಥವಾ ''ಪ್ರಿಯದರ್ಶಿ'' ಎಂದು ಅನ್ನಿಸಿಕೊಳ್ಳುತ್ತಿದ್ದನು. ಅಶೋಕನು ಸಿಂಹಲದ್ವೀಪದಲ್ಲಿ ಬೌದ್ಧ ಧರ್ಮವನ್ನು ಹಬ್ಬಿಸುವದಕ್ಕಾಗಿ ಮಹಿಂದನನ್ನು ಕಳಿಸಿದನೆಂದು ಹೇಳಿದೆಯಷ್ಟೇ? ಅಶೋಕನ

ವಿಷಯವಾಗಿಯೂ, ಬೌದ್ಧಧರ್ಮದ ವಿಷಯವಾಗಿಯೂ ತುಂಬಾ ಭಕ್ತಿಯುಳ್ಳ ತಿಷ್ಯನು, ಮಹಿಂದನನ್ನು ತುಂಬಾ ಪ್ರೀತಿಸಿ, ಆತನಿಂದ ಬೌದ್ಧಧರ್ಮದ ದೀಕ್ಷೆಯನ್ನು ಹೊಂದಿದನು. ಆಗ ಆತನ ಹೆಂಡತಿಯಾದ ಅನುಲೆಯೂ, ಆಕೆಯ ಸಖಿಯೂ ತಮಗೆ ಬೌದ್ಧಧರ್ಮದ ದೀಕ್ಷೆಯನ್ನು ಕೊಡಿರೆಂದು ಕೇಳಿದರು. ಅದಕ್ಕೆ ಮಹಿಂದನು ಸ್ತ್ರೀಯರಿಗೆ ದೀಕ್ಷೆಕೊಡುವ ಅಧಿಕಾರವು ತನಗಿಲ್ಲೆಂದು ಹೇಳಿ, ತನ್ನ ತಂಗಿಯಾದ ಸಂಗಮಿತ್ರೆಯನ್ನು ಕರಿಸಿಕೊಂಡು, ಆಕೆಯಿಂದ ಅವರಿಬ್ಬರು ಸ್ತ್ರೀಯರಿಗೆ ಭಿಕ್ಷುಣಿಯರ ದೀಕ್ಷೆಯನ್ನು ಕೊಡಿಸಿದನು. ಬರಬರುತ್ತ ಸಿಂಹಲ ದ್ವೀಪದಲ್ಲಿ ಬೌದ್ಧ ಧರ್ಮವು ಭರದಿಂದ ಹಬ್ಬಹತ್ತಿತು. ಮಹಿಂದನ ಪ್ರಯತ್ನದಿಂದ ಸಿಂಹಲ ದ್ವೀಪದಲ್ಲಿ ಇಷ್ಟು ಯಶಸ್ಸು ಪ್ರಾಪ್ತವಾಗಲಿಕ್ಕೆ, ಸಿಂಹಲದ್ವೀಪದ ರಾಜನಾದ ತಿಷ್ಯನ ಪ್ರೀತಿಯು ಅಶೋಕನ ಮೇಲೆ ಇದ್ದದ್ದೇ ಕಾರಣವೆಂದು ತಿಳಿಯಲಾಗದು. ಮಹಿಂದನು ತಾನು ರಾಜ ಪುತ್ರನಿದ್ದು ಧರ್ಮದ ವಿಷಯವಾಗಿ ವ್ಯಕ್ತಮಾಡಿದ ಪೂಜ್ಯಬುದ್ಧಿಯೂ, ಸ್ವಾರ್ಥತ್ಯಾಗವೂ, ಆತನ ಶಾಂತವೂ, ಗಂಭೀರವೂ ಆದ ವೃತ್ತಿಯೂ, ವಿಲಕ್ಷಣವಾದ ಬುದ್ಧಿಸಾಮರ್ಥ್ಯವೂ, ಅಲೌಕಿಕ ಸ್ಮರಣಶಕ್ತಿಯೂ, ಜ್ಞಾನಲಾಲಸೆಯೂ, ಸದಾಚರಣ ತತ್ಪರತೆಯೂ ಜನರ ಹೃದಯ ದಲ್ಲಿ ಬೌದ್ಧ ಧರ್ಮದ ತತ್ವಗಳನ್ನು ಸ್ಥಿರವಾಗಿ ಬಿಂಬಿಸಲಿಕ್ಕೆ ಕಾರಣವಾದವು. ಅನುಕ್ರಮವಾಗಿ ಇಪ್ಪತ್ತು ಹತ್ತೊಂಬತ್ತು ವರ್ಷದ ವಯಸ್ಸುಳ್ಳ ಆ ಅಣ್ಣತಂಗಿಯರಿಬ್ಬರ ಮುಖದಿಂದ ಹೊರಡುವ ಶೀತಲವೂ, ಮಧುರವೂ, ಭಕ್ತಿರಸಪರಿಪ್ಲುತವೂ ಆದ ಉಪದೇಶಾಮೃತವನ್ನು ಆ ಕಂಠಪಾನ ಮಾಡಿ ತೃಪ್ತರಾಗಬೇಕೆಂದು ಯಾರು ಇಚ್ಛಿಸಲಿಕ್ಕಿಲ್ಲ? ಈ ಇಬ್ಬರು ಅಣ್ಣತಂಗಿಯರನ್ನು ನೋಡಿ, ಜನರು ಸಾಕ್ಷಾತ್ ಪರಮೇಶ್ವರನು ಮನುಷ್ಯಜಾತಿಯ ಉದ್ಧಾರಕ್ಕಾಗಿ ತನ್ನ ದೂತರನ್ನು ಕಳುಸಿರಬಹುದೋ, ಎಂದು ಭಾವಿಸಿದ್ದು ಆಶ್ಚರ್ಯವಲ್ಲ.

ಈಮೇರೆಗೆ ಅಶೋಕನ ಇಬ್ಬರು ಸದ್ಗುಣಿಗಳಾದ ಮಕ್ಕಳು, ಭಿಕ್ಷು—ಭಿಕ್ಷುಣಿಯರಾಗಿ ಧರ್ಮೋಪದೇಶಮಾಡಹತ್ತಿದ್ದಲ್ಲದೆ, ಕುನಾಲನೆಂಬ ಮತ್ತೊಬ್ಬ ಚಲುವ ಮಗನು ಸಂಸಾರ ಸುಖವನ್ನು ಭೋಗಿಸದೆ, ಭಯಂಕರ ದುಃಖಭೋಗಿಸಿದ್ದನ್ನು ಅಶೋಕನು ಕಣ್ಣುಮುಟ್ಟಿ ನೋಡಬೇಕಾಯಿತು. ಕುನಾಲನು ಬಹು ರೂಪಸಂಪನ್ನನಾದದ್ದರಿಂದ, ಅಶೋಕನ ಹೆಂಡತಿ ಯಾದ ತಿಷ್ಯರಕ್ಷಿತೆಯ ದೃಷ್ಟಿಯು ಆತನ ಮೇಲೆ ಕೂತಿತು; ಆದರೆ ಕುನಾಲನು ಮಹಾ ಪಾಪ ಭೀರುವೂ, ಸದಾಚಾರಿಯೂ ಇದ್ದನು. ಆತನು ತಿಷ್ಯರಕ್ಷಿತೆಯ ದುರಾಲೋಚನೆಗೆ ಕಿವಿಗೊಡಲಿಲ್ಲ. ಅದರಿಂದ ಆ ದುಷ್ಟರಾಣಿಯು ಗಂಡನ ಮುಂದೆ ಇಲ್ಲದ್ದೊಂದು ಹೇಳಿ, ಕುಲಾನನನ್ನು ತಕ್ಷಶಿಲೆಯ ಸುಬೇದಾರಿಕೆಯ ಮೇಲೆ ಕಳಿಸಿಕೊಟ್ಟಳು. ಮುಂದೆ ಆ ಮತ್ಸರ ಸ್ವಭಾವದ ರಾಣಿಯು ಯುಕ್ತಿಯಿಂದ ಚಕ್ರವರ್ತಿಯ ಮುದ್ರೆಯನ್ನು ಸಂಪಾದಿಸಿ, ಕುನಾಲದ ಕಣ್ಣುಕಿತ್ತಿಸಿ ಹೊರ ಹೊರಡಿಸಲಿಕ್ಕೆ ಚಕ್ರವರ್ತಿಯೇ ಜ್ಞಾಪಿಸಿದಂತೆ ತಕ್ಷಶಿಲೆಯ ಒಬ್ಬ ಅಧಿಕಾರಿಗೆ ಆಜ್ಞಾಪತ್ರವನ್ನು ಕಳಿಸಿದಳು. ಕುನಾಲನು ಮಹಾಸದ್ಗುಣಿಯೂ, ಲೋಕಪ್ರಿಯನು. ಆತನ ಕಣ್ಣುಕಿತ್ತಲಿಕ್ಕೆ ಯಾರೂ ಒಪ್ಪದಾದರು. ಆಗ ಪಿತೃಭಕ್ತನಾದ ಕುನಾಲನು ತನ್ನ ಕಣ್ಣುಕಿತ್ತಿದವರಿಗೆ ಇಂತಿಷ್ಟು ಇನಾಮು ಕೊಡುವೆನೆಂದು ಪ್ರಸಿದ್ಧಮಾಡಿದನು. ಇದನ್ನರಿತು ಒಬ್ಬ ಚಾಂಡಾಲನು ಕುನಾಲನ ಒಂದು ಕಣ್ಣುಕಿತ್ತಿ ಕುನಾಲನ ಕೈಯಲ್ಲಿ ಕೊಡಲು, ಆ ರಾಜಪುತ್ರನು ಅದನ್ನು ಕೈಯಲ್ಲಿ ಹಿಡಕೊಂಡು—

ಎಲೈ ಹತಭಾಗ್ಯವಾದ ಮಾಂಸಪಿಂಡವೇ, ನೀನು ಇಲ್ಲಿಯವರೆಗೆ, ಸುಂದರಮೂರ್ತಿಗಳನ್ನು ನೋಡುತ್ತಿದ್ದೆಯಲ್ಲ, ಇನ್ನು ಅವು ನಿನಗೆ ಕಾಣುವವೋ? ನಿನ್ನನ್ನು ನಾನು ''ನನ್ನದು ನನ್ನದು'' ಎಂದು ತಿಳಿಯುತ್ತಿದ್ದೆನು, ಹಾಯ್ ಹಾಯ್! ಎಂಥ ತಪ್ಪು ತಿವಳಿಕೆಯಿದು! ಎಂದು ನುಡಿಯುತ್ತಿರಲು, ಎರಡನೆಯ ಕಣ್ಣನ್ನೂ ಚಾಂಡಾಲನು ಕಿತ್ತಿದನು. ಆಗ ಕುನಾಲನು—ಎಲ್ಲ ಪಾಪಗಳು ಕಣ್ಣಿನಿಂದಲೇ ಆಗುತ್ತಿದ್ದದ್ದರಿಂದ, ಅವು ಹೋದದ್ದಕ್ಕಾಗಿ ನಾನು ಸಮಾಧಾನವನ್ನು ಪಡತಕ್ಕದ್ದು. ಚರ್ಮಚಕ್ಷುಗಳು ಹೋಗಿ ಜ್ಞಾನಚಕ್ಷುಗಳು ಪ್ರಾಪ್ತವಾದದ್ದೇನು ಸಾಮಾನ್ಯ ಲಾಭವೇ? ರಾಜನು ನನ್ನ ತ್ಯಾಗಮಾಡಿದರೂ, ಧರ್ಮರಾಜನು ನನ್ನನ್ನು ಮಗನೆಂದು ಅಪ್ಪಿಕೊಂಡಿರುವನು. ಈ ಕಷ್ಟಮಯ ರಾಜ್ಯದೊಳಗಿನ ಉಚ್ಚ ಪದವಿಯಿಂದ ನಾನು ಭ್ರಷ್ಟನಾದದ್ದು ನಿಜವು; ಆದರೆ ಆನಂದಮಯವಾದ ಧರ್ಮರಾಜ್ಯದಲ್ಲಿ ನನ್ನ ಪ್ರವೇಶವಾಗಿರುತ್ತದೆ.

ಆಮೇಲೆ ಕುನಾಲನು ಹೆಂಡತಿಯೊಡನೆ ಮನೆಯಿಂದ ಹೊರಟು ಭಿಕ್ಷೆಬೇಡುತ್ತ ಪಾಟಲಿಪುತ್ರರಾಜಧಾನಿಗೆ ಬಂದನು. ವೀಣಾನಾದದೊಡನೆ ಮಿಲಿತವಾದ ಆತನ ಕಂಠಧ್ವನಿಯನ್ನು ಕೇಳಿ, ಅಶೋಕನು ಆತನನ್ನು ತಾನಿದ್ದಲ್ಲಿಗೆ ಕರಿಸಿಕೊಂಡು ಆತನ ವೃತ್ತಾಂತವನ್ನು ಕೇಳಿದನು. ಆಗ ಸತ್ಯವಾದಿಯಾದ ಕುನಾಲನು ಎಲ್ಲ ವೃತ್ತಾಂತವನ್ನು ಹೇಳಲು, ಅರಸನು ದುಃಖಪಟ್ಟು ರಾಣಿಯ ಮೇಲೆ ಸಿಟ್ಟಾಗಿ ಆಕೆಯ ತಲೆಹೊಡಿಸಬೇಕೆಂದು ಮಾಡಿದನು. ಆಗ ಕುನಾಲನು ತಂದೆಗೆ ಸಾಷ್ಟಾಂಗ ನಮಸ್ಕಾರವನ್ನು ಮಾಡಿ ಆತನನ್ನು ಕುರಿತು—ಮಹಾರಾಜ, ಸ್ತ್ರೀವಧವು ಎಂದಿಗೂ ನ್ಯಾಯವಾಗದು. ಸ್ತ್ರೀಹತ್ಯವು ಮಹತ್ಪಾಪದಲ್ಲಿ ಗಣಿಸಲ್ಪಟ್ಟಿರುವದು. ಅಪರಾಧಿಗಳ ಮೇಲೆ ದಯಮಾಡುವದಕ್ಕಿಂತ ಹೆಚ್ಚಿನ ಔದಾರ್ಯವಿಲ್ಲೆಂದು ತಥಾಗತವರ್ಯನ ವಚನವಿರುವದು, ಎಂದು ತಂದೆಯ ಚರಣಗಳ ಮೇಲೆ ಪುನಃ ಮಸ್ತಕವನ್ನಿಟ್ಟು—ಪ್ರಭುಗಳೇ, ಕಣ್ಣುಗಳು ಹೋದ ಬಗ್ಗೆ ನನಗೆ ಸ್ವಲ್ಪವಾದರೂ ವಿಷಾದವಾಗುವದಿಲ್ಲ; ಅದರ ಯೋಗದಿಂದ ನನಗೆ ಯಾತನೆಯೂ ಆಗುವದಿಲ್ಲ; ಆದ್ದರಿಂದ ಕೃಪೆಮಾಡಿ ಮಾತುಃಶ್ರೀಯವರ ಮೇಲೆ ನನ್ನ ಸಲುವಾಗಿ ಸಿಟ್ಟಾಗಬಾರದು. ಈ ಭೋಗವು ನನ್ನ ಪ್ರಾರಬ್ಧದಲ್ಲಿತ್ತು, ಅದು ನನ್ನ ಪ್ರಾಕ್ತನದ ದೋಷವು. ಪೂರ್ವಜನ್ಮದಲ್ಲಿ ಪಾಪಮಾಡಿದ್ದರಿಂದ ಈ ಜನ್ಮದಲ್ಲಿ ಅದನ್ನು ನಾನು ಭೋಗಿಸುತ್ತೇನೆ. ನಾನು ಸತ್ಯವನ್ನು ನುಡಿಯುವೆನು. ನನ್ನ ಮಾತಿನಮೇಲೆ ನಿಮ್ಮ ವಿಶ್ವಾಸವಾಗದಿದ್ದರೆ, ಎಲೈ ಕಣ್ಣುಗಳೇ, ನೀವು ಮೊದಲಿನ ಹಾಗೆ ಆಗಿರಿ, ಎಂದು ನುಡಿದಕೂಡಲೆ ಕಣ್ಣುಗಳು ಮೊದಲಿನಂತೆ ಆದವು!

ಈ ಮೇರೆಗೆ ಅಶೋಕನು ಮಕ್ಕಳಿಂದ ದುಃಖಪಟ್ಟದ್ದಲ್ಲದೆ, ತನ್ನ ಪ್ರೀತಿಯ ತಮ್ಮನಾದ ವೀತಾಶೋಕನಿಂದಾಗಲೂ ಅಗಾಧವಾದ ದುಃಖವನ್ನು ಭೋಗಿಸಿದನು. ವೀತಾಶೋಕನು ಭಿಕ್ಷುವಾದದ್ದನ್ನು ವಾಚಕರು ಬಲ್ಲರಷ್ಟೇ? ಈ ಕಾಲದಲ್ಲಿ ನಿಗ್ರಂಥ ಎಂಬ ಬೇರೊಂದು ಧರ್ಮಪಂಥವು ಪ್ರಚಾರದಲ್ಲಿತ್ತು, ಆ ಧರ್ಮದೊಳಗಿನವನೊಬ್ಬನು ಬೌದ್ಧಧರ್ಮವನ್ನು ನಿಂದಿಸಹತ್ತಿದನು. ಆತನು ತಾನು ಒಂದು ಉಚ್ಚಾಸನದ ಮೇಲೆ ಕುಳಿತುಕೊಂಡು, ತನ್ನ ಚರಣಗಳ ಮೇಲೆ ಬುದ್ಧನು. ಉರುಳಾಡುವಂತೆ ಚಿತ್ರಗಳನ್ನು ಬರೆಸಿ ಪಂಡುವರ್ಧನ ಪ್ರಾಂತದಲ್ಲಿ ಅವನ್ನು ಹಂಚಿಸಿದ್ದನು. ಇದರಿಂದ ಅಶೋಕನಿಗೆ ದ್ವೇಷವು ಉತ್ಪನ್ನವಾಗಿ, ಆತನು

ಆ ದುಷ್ಟನಿಂದಕನ ಶಿರಚ್ಛೇದಮಾಡಲಿಕ್ಕೆ ದೊಡ್ಡ ಇನಾಮು ಇಟ್ಟನು. ಆಗ ಒಬ್ಬ ಅಮೀರನು ಇನಾಮಿನ ಆಸೆಯಿಂದ ವೀತಾಶೋಕನನ್ನೇ ನಿಗ್ರಂಥಿಯೆಂದು ತಿಳಿದು ಆತನ ಕುತ್ತಿಗೆಯನ್ನು ಕೊಯ್ದು ಚಕ್ರವರ್ತಿಗೆ ಒಪ್ಪಿಸಿದನು. ಅದನ್ನು ನೋಡಿ ಅಶೋಕನಿಗೆ ಪರಮಾವಧಿ ದುಃಖವಾಯಿತು. ಆತನು ಹೃದ್ರೋಗವನ್ನು ಹಚ್ಚಿಕೊಂಡಂತೆ ಮಾಡಲು, ಉಪ ಗುಪ್ತಾಚಾರ್ಯರು ಬೋಧದಿಂದ ಆತನನ್ನು ಶಾಂತಗೊಳಿಸಿದರು.

ಅಶೋಕನಿಗೆ ವೃದ್ಧಾಪ್ಯಕಾಲವು ಪ್ರಾಪ್ತವಾಯಿತು. ಮೇಲೆ ಹೇಳಿದ ಅನಂತ ದುಃಖಗಳ ಯೋಗದಿಂದ ಆತನ ಶರೀರವು ಕ್ಷೀಣವಾಯಿತು. ಆತನಿಗೆ ಪಟ್ಟರಾಣಿಯ ಹೊಟ್ಟೆಯಲ್ಲಿ ಮಕ್ಕಳಿದ್ದಿಲ್ಲ. ಕುನಾಲನ ಮಗನಾದ ಸಂಪದಿಯೆಂಬವನೊಬ್ಬನು ಉಳಿದಿದ್ದನು. ಮುಪ್ಪಿನ ಕಾಲದಲ್ಲಿ ತನ್ನವರೆನ್ನುವವರು ಚಕ್ರವರ್ತಿಗೆ ಯಾರೂ ಇಲ್ಲದಂತಾಗಿತ್ತು. ಇಂಥ ದೊಡ್ಡ ಚಕ್ರವರ್ತಿಯು ಅವಸಾನಗೆಟ್ಟನು. ಆತನಲ್ಲಿ ಸಂಸಾರಸಂಬಂಧದ ವೈರಾಗ್ಯವು ಉತ್ಪನ್ನವಾಯಿತು. ಕಡೆಗೆ ಆತನು ಭಿಕ್ಷುವ್ರತವನ್ನು ಸ್ವೀಕರಿಸಿದನು. ಒಂದು ದಿನ ಉಪಗುಪ್ತಾಚಾರ್ಯರನ್ನು ಕುರಿತು—ಸ್ವಾಮೀ, ಈವರೆಗೆ ಬೌದ್ಧರಲ್ಲಿ ಎಲ್ಲಕ್ಕೂ ಹೆಚ್ಚಿಗೆ ದಾನಧರ್ಮವನ್ನು ಯಾರು ಮಾಡಿದರು, ಎಂದು ಕೇಳಲು, ಉಪಗುಪ್ತನು—ಭಗವನ್, ಅನಾಥ ಪಿಂಡಿಕನೆಂಬ ಹೆಸರಿನ ಗೃಹಸ್ಥನು ಹೆಚ್ಚುದಾನ ಮಾಡಿದ್ದಾನೆ. ಈತನು ಸ್ರವಸ್ತಿ ಎಂಬ ನಗರದಲ್ಲಿರುತ್ತಿರುವಾಗ, ಅಲ್ಲಿಗೆ ಶ್ರೀಬುದ್ಧದೇವನು ದಯಮಾಡಿಸಿದನು. ಆತನಿಗೆ ಇರುವದಕ್ಕಾಗಿ ಅನಾಥಪಿಂಡಿಕನು ಜೇವವನ ವೆಂಬ ಹೆಸರಿನ ತನ್ನ ವಿಸ್ತಾರವಾದ ಸುಂದರ ಉದ್ಯಾನವನ್ನೇ ಕೊಟ್ಟನು. ಬುದ್ಧದೇವನು ಚಾತು ರ್ಮಾಸದಲ್ಲಿ ಇದೇ ಉದ್ಯಾನದೊಳಗೆ ತನ್ನ ಶಿಷ್ಯಪರಿವಾರದೊಡನೆ ಇರುತ್ತಿದ್ದನು. ಅನಾಥ ಪಿಂಡಿಕನು ಒಟ್ಟಿಗೆ ಇಂದಿಗೆ ನೂರುಕೋಟಿ ಸುವರ್ಣಮುದ್ರಿಕೆಗಳನ್ನು ದಾನಮಾಡಿದ್ದಾನೆ, ಎಂದು ಹೇಳಿದನು. ಅದನ್ನು ಕೇಳಿ ಅಶೋಕನು ಗುರುಗಳನ್ನು ಕುರಿತು—ಸರಿಸರಿ ನಾನಾದರೂ ನೂರು ಕೋಟಿ ಸುವರ್ಣಮುದ್ರಿಕೆಗಳ ದಾನಮಾಡುತ್ತೇನೆ, ಸ್ವೀಕರಿಸಬೇಕು. ನಾನು ಈವೊತ್ತಿನ ವರೆಗೆ 84000 ಸ್ತೂಪಗಳನ್ನೂ, ವಿಹಾರಗಳನ್ನೂ ಕಟ್ಟಿಸಿದೆನು. ಆ ಪ್ರತಿ ಒಂದು ಸ್ತೂಪದ ಪ್ರೀತ್ಯರ್ಥವಾಗಿ ಒಂದೊಂದು ಲಕ್ಷ ಸುವರ್ಣಮುದ್ರಿಕೆಗಳನ್ನು ನಾನು ಕೊಡುವೆನು. ಅದರಂತೆ, ಶಾಕ್ಯಗೌತಮನು ಹುಟ್ಟಿದ ಸ್ಥಳದ ಸಲುವಾಗಿಯೂ, ಆತನು ಬುದ್ಧನಾದ ಸ್ಥಳದ ಸಲುವಾಗಿಯೂ, ಆತನು ಧರ್ಮೋಪದೇಶಮಾಡಿದ ಸ್ಥಳದ ಸಲುವಾಗಿಯೂ, ಕಡೆಗೆ ಆತನು ನಿರ್ವಾಣವನ್ನು ಹೊಂದಿದ ಸ್ಥಳದ ಸಲುವಾಗಿಯೂ, ಒಂದೊಂದು ಲಕ್ಷ ಸುವರ್ಣ ಮುದ್ರಿಕೆ ಗಳನ್ನು ಕೊಡುವೆನು. ಯಾವತ್ತು ಭಿಕ್ಷು—ಭಿಕ್ಷುಣಿಗಳು ಚಾತುರ್ಮಾಸದಲ್ಲಿ ನನ್ನ ಬಳಿಗೆಬಂದು, ನನ್ನ ಅತಿಥ್ಯವನ್ನು ಸ್ವೀಕರಿಸಬೇಕೆಂದು ನಾನು ಪ್ರಾರ್ಥಿಸುವೆನು. ಅದರ ವೆಚ್ಚಕ್ಕಾಗಿ ನಾನು ನಾಲ್ಕುಲಕ್ಷ ಮುದ್ರಿಕೆಗಳನ್ನು ತೆಗೆದಿಡುವೆನು. ಅದರಂತೆ ಮೂರು ಸಾವಿರ ಭಿಕ್ಷುಗಳ ಪರಿಪಾಲನವು ಯಾವಾಗಲೂ ಆಗುವಂತೆ ವ್ಯವಸ್ಥೆಮಾಡಿ ಇಡುವೆನು ಮತ್ತು ನನ್ನ ಹಾಗು ನನ್ನ ಹೆಂಡಿರುಮಕ್ಕಳ ಸ್ವಂತದ ಭೂಮಿಯ ಆಸ್ತಿಯನ್ನೆಲ್ಲ ನಾನು ದಾನಮಾಡಿರುವೆನೆಂದು ತಿಳಿಯಬೇಕು; ಯಾಕಂದರೆ, ರೋಖಮುದ್ರಿಕೆಗಳ ಮೇಲೆ ಮಾತ್ರ ನನ್ನ ಹಕ್ಕು ಇರುವದು. ಆ

ದಾನಮಾಡಿದ ಭೂಮಿಯನ್ನು ನಾಲ್ಕುಲಕ್ಷ ರೂಪಾಯಿಕೊಟ್ಟು ಪುನಃ ಕೊಂಡುಕೊಂಡಿದ್ದೇನೆ. ಒಟ್ಟಿಗೆ, ಇಲ್ಲಿಯವರೆಗೆ ನಾನು 96 ಕೋಟಿ ಸುವರ್ಣಮುದ್ರಿಕೆಗಳ ದಾನವಮಾಡಿರುವೆನು.

ಈ ಮೇರೆಗೆ ಅಶೋಕನು ತಾನು ದಾನವಮಾಡಿದ್ದನ್ನೆಲ್ಲ ವರ್ಣಿಸಿ ಹೇಳುವಾಗ ಅವಸಾನ ಗೆಟ್ಟಂತಾಗಿ ಆತನಿಗೆ ಗ್ಲಾನಿಯು ಬಂದಿತು. ಆತನು ಕೆಲವು ಹೊತ್ತು ಸುಮ್ಮನೆ ಕುಳಿತುಕೊಂಡನು. ಇನ್ನು ನಾನು ಬಹಳ ದಿವಸ ಬದುಕುವದಿಲ್ಲೆಂದು ಆಗಲೇ ಆತನು ಉಪಗುಪ್ತಾಚಾರ್ಯರಿಗೆ ಹೇಳಿದನು. ಈ ವರ್ತಮಾನವನ್ನು ಕೇಳಿದಕೂಡಲೆ ರಾಧಾಗುಪ್ತ ಮಂತ್ರಿಯು ಅವಸರದಿಂದ ಚಕ್ರವರ್ತಿಯ ಬಳಿಗೆ ಬಂದನು. ಆಗ ಚಕ್ರವರ್ತಿಯ ಕಣ್ಣೊಳಗಿಂದ ನೀರುಗಳು ಧಾರೆಯಿಟ್ಟು ಸುರಿಯುತ್ತಿದ್ದವು. ಅದನ್ನು ನೋಡಿ ರಾಧಾಗುಪ್ತನು ಸಾಷ್ಟಾಂಗವಾಗಿ ವಂದಿಸಿ ಇದೇನೆಂದು ಚಕ್ರವರ್ತಿಯನ್ನು ಕೇಳಿದನು. ಅದಕ್ಕೆ ಚಕ್ರವರ್ತಿಯು—ರಾಧಾಗುಪ್ತ ಧನ—ರಾಜ್ಯ—ಸಂಸಾರಗಳನ್ನು ಬಿಟ್ಟು ಹೋಗಬೇಕಾಗುವದೆಂದು ಈಗ ನನಗೆ ವ್ಯಸನವಾಗುವದಿಲ್ಲ. ನಾನು ಸ್ಥಾಪಿಸಿರುವ ಆರ್ಯಸಂಘದ ಚಿರಕಾಲವಿಯೋಗವಾಗುತ್ತದೆಂಬದಕ್ಕಾಗಿ ನನಗೆ ವ್ಯಸನವಾಗುತ್ತದೆ. ಆ ಸಂಘಕ್ಕೆ ಸಲ್ಲುತ್ತಿದ್ದ ಜೀವನಾಂಶವು ಇನ್ನು ಮೇಲೆ ನನ್ನ ಕೈಯಿಂದ ಸಲ್ಲುವಹಾಗಿಲ್ಲ. ರಾಧಾಗುಪ್ತ ಬುದ್ಧ ಪ್ರಭುವಿನ ಧರ್ಮಪ್ರಸಾರಾರ್ಥವಾಗಿ ನೂರುಕೋಟಿ ಸುವರ್ಣಮುದ್ರಿಕೆಗಳ ದಾನಮಾಡುವೆನೆಂದು ನಾನು ಸಂಕಲ್ಪಮಾಡಿದ್ದನ್ನು ನೀವು ಬಲ್ಲಿರಷ್ಟೇ? ಆದರೆ ಆ ಸಂಕಲ್ಪವನ್ನು ಪೂರ್ಣಮಾಡುವದು ಇನ್ನೂ ನನ್ನ ಕೈಯಿಂದಾಗಿರುವದಿಲ್ಲೆಂಬ ಬಗ್ಗೆ ನನಗೆ ಬಹಳ ಅಸಮಾಧಾನ ವಾಗುತ್ತದೆ. 96 ಕೋಟಿ ಸುವರ್ಣ ಮುದ್ರಿಕೆಗಳ ದಾನವನ್ನಂತು ನಾನು ಮಾಡಿಯೇ ಇರುವೆನು. ಇನ್ನು ನಾಲ್ಕು ಕೋಟಿ ಮುದ್ರಿಕೆಗಳು ಬೇಕಾಗಿರುವವು.

ಚಕ್ರವರ್ತಿಯ ಈ ಮಾತುಗಳನ್ನು ಕೇಳಿ, ರಾಧಾಗುಪ್ತನು ಬೆದರಿದನು. ಚಕ್ರವರ್ತಿಯ ತರುವಾಯ ಪಾಟಲಿಪುತ್ರದ ಸಿಂಹಾಸನಕ್ಕೆ ಕುನಾಲಪುತ್ರನಾದ ಸಂಪದಿಯು ಹಕ್ಕುದಾರ ನಾಗಿದ್ದನು. ಸಿಂಹಾಸನದ ಅಭಿಮಾನಿಯಾದ ರಾಧಾಗುಪ್ತನು ಅವಸರದಿಂದ ಸಂಪದಿಯ ಬಳಿಗೆ ಹೋಗಿ—ಧರ್ಮಾವತಾರವಾದ ಭಗವಾನ್ ಚಕ್ರವರ್ತಿಗಳವರು ಇನ್ನು ಬಾಳಲಾರರು. ಅವರ ತರುವಾಯ ತಾವು ಬಹುಕಾಲ ರಾಜ್ಯವಾಳತಕ್ಕವರು. ಈಗ ಚಕ್ರವರ್ತಿಗಳವರು ಯಾವತ್ತು ಭಾಂಡಾರವನ್ನು ಉಪಗುಪ್ತಾಚಾರ್ಯರಿಗೆ ದಾನಮಾಡಿ ತೆರವು ಮಾಡುವದರಿಂದ, ನಿಮ್ಮ ರಾಜ್ಯದಾಡಳಿತಕ್ಕೆ ತೊಂದರೆಯಾಗಬಹುದು; ಆದ್ದರಿಂದ ನೀವು ಬೇಗನೆ ಎಚ್ಚತ್ತು ಚಕ್ರವರ್ತಿ ಗಳವರ ದಾನಕ್ಕೆ ವಿಘ್ನವನ್ನುಂಟುಮಾಡುವದು ಉಚಿತವಾಗಿ ತೋರುತ್ತದೆ, ಎಂದು ಹೇಳಿದನು. ಇದನ್ನು ಕೇಳಿ ಸಂಪದಿಯ ಮನಸ್ಸು ತಿರುಗಿತು. ಇನ್ನು ಚಕ್ರವರ್ತಿಗೆ ದ್ರವ್ಯವನ್ನು ಕೊಡಲಾಗ ದೆಂದು ಆತನು ಮಂತ್ರಿಗಳಿಗೆ ಆಜ್ಞಾಪಿಸಿದನು. ಅಶೋಕನು ದಿನಾಲು ಸುವರ್ಣದ ಪಾತ್ರದಲ್ಲಿ ಊಟಮಾಡುತ್ತಿದ್ದನು. ಊಟವಾದ ಬಳಿಕ ಆ ಪಾತ್ರವು ಉಪಗುಪ್ತಾಚಾರ್ಯರ ಕಡೆಗೆ ವೇಣುವನಕ್ಕೆ ಕಳಿಸಲ್ಪಡುತ್ತಿತ್ತು, ಮುಂದೆ ಬರಬರುತ್ತ ಚಕ್ರವರ್ತಿಯ ಊಟಕ್ಕೆ ಬಂಗಾರದ ಪಾತ್ರದ ಬದಲು ಬೆಳ್ಳಿಯಪಾತ್ರವು ಬರತೊಡಗಿತು. ಚಕ್ರವರ್ತಿಯು ಭೋಜನೋತ್ತರ ಅದನ್ನೇ ಗುರುಗಳ ಕಡೆಗೆ ಕಳಿಸಹತ್ತಿದನು. ಮುಂದೆ ಬೆಳ್ಳಿಯ ಪಾತ್ರಗಳೂ ಕಟ್ಟಾಗಿ ಚಕ್ರವರ್ತಿಯು ಮಣ್ಣಿನ

ಹರಿವಾಣದಲ್ಲಿ ಉಣ್ಣಬೇಕಾಯಿತು. ಒಂದು ದಿನ ಮಂತ್ರಿಜನರು ಆತನ ಸಮಾಚಾರಕ್ಕಾಗಿ ಬಂದಿರಲು, ಚಕ್ರವರ್ತಿಯು ನೆಲ್ಲಿಯಕಾಯಿಯ ಅರ್ಧಚೂರನ್ನು ಕೈಯಲ್ಲಿ ಹಿಡಕೊಂಡು ಅವರನ್ನು ಕುರಿತು—''ಮಂತ್ರಿಗಳೇ, ಈ ದೇಶದ ಅರಸನು ಯಾರು'' ಎಂದು ಕೇಳಲು, ಅದಕ್ಕೆ ಮಂತ್ರಿಗಳು ವಿಸ್ಮಿತರಾಗಿ ಚಕ್ರವರ್ತಿಗೆ—'ಮಹಾರಾಜ, ಎಂಥ ಪ್ರಶ್ನವಿದು? ಈ ರಾಜ್ಯವು ತಮ್ಮದೇ ಇರುವದು'' ಎಂದು ಉತ್ತರ ಕೊಟ್ಟರು. ಅದನ್ನು ಕೇಳಿ ಚಕ್ರವರ್ತಿಯ ನೇತ್ರಗಳು ಅಶ್ರುಪೂರ್ಣವಾದವು. ಆತನು ಮಂತ್ರಿಗಳನ್ನು ಕುರಿತು—ನೀವು ಸತ್ಯವನ್ನೇ ನುಡಿಯುವಿರೋ? ನಾನು ರಾಜ್ಯಭ್ರಷ್ಟನಾಗಿರುವದಿಲ್ಲವೆ? ಇಲ್ಲಿ ನೋಡಿರಿ, ನೆಲ್ಲಿಯಕಾಯಿಯ ಈ ಅರ್ಧಹೋಳಿನ ಹೊರತು ನನ್ನದೆಂಬ ಅಭಿಮಾನಕ್ಕೆ ಪಾತ್ರವಾದ ಒಂದೂ ವಸ್ತುವು ಈಗ ನನ್ನ ಬಳಿಯಲ್ಲಿ ಉಳಿದಿರುವದಿಲ್ಲ, ಸಾರ್ವಭೌಮನೆನಿಸುವ ನನ್ನ ಕೈಯಲ್ಲಿ ಮಂದಿಗೆ ಕೊಡಬೇಕೆಂದರೆ ಏನಿರುತ್ತದೆ? ಈ ಐಹಿಕಸಾಮ್ರಾಜ್ಯಕ್ಕೆ ಧಿಕ್ಕಾರವಿರಲಿ! ನೀರಿನ ಮೇಲಿನ ತರಂಗದಂತೆ ಅಸ್ಥಿರವಾಗಿದ್ದ ಈ ಪ್ರಭುತ್ವಕ್ಕೂ ಧಿಕ್ಕಾರವಿರಲಿ! ನಾನು ಜನರ ಚಕ್ರವರ್ತಿಯು; ಆದರೆ ದುಃಖವು ನನ್ನ ಮೇಲೆಯೂ ತನ್ನ ಸಾಮ್ರಾಜ್ಯವನ್ನು ನಡಿಸಿತು. ಪೃಥ್ವಿಯ ಏಕಛತ್ರ ಪ್ರಭುತ್ವವನ್ನು ಸಂಪಾದಿಸಿದವನೂ, ಹಲವು ಯುದ್ಧಗಳಲ್ಲಿ ಜಯವನ್ನು ದೊರಕಿಸಿದವನೂ, ಹಲವು ಪುಂಡಾಟಿಕೆಗಳನ್ನು ಮುರಿದವನೂ, ನಾನು ನಾನೆಂದು ಎದೆತಟ್ಟಿಕೊಳ್ಳುವ ಸಾವಿರಾರು ಜನ ಶೂರರನ್ನು ಜಯಿಸಿದವನೂ, ಬಡವರ ಸಂರಕ್ಷಣ ಮಾಡಿದವನೂ ಆದ ಅಶೋಕಸಾರ್ವ ಭೌಮನು ರಾಜ್ಯಭ್ರಷ್ಟನಾಗಿ ದುಃಖದಿಂದ ಕಾಲಹರಣ ಮಾಡುತ್ತಿರುವನೆಂದಬಳಿಕ, ಇದಕ್ಕೂ ಹೆಚ್ಚಿನ ದೈವದುರ್ವಿಪಾಕದ ಒಡೆದುಕಾಣುವ ಉದಾಹರಣವು ಎರಡನೆಯದೆಲ್ಲಿ ದೊರೆಯಬಹುದು? ಗಿಡದ ಎಲೆಗಳೂ, ಹೂಗಳೂ ಗಿಡವನ್ನು ಹೊಂದಿರುವವರೆಗೆ ತೇಜಸ್ವಿತೆಯನ್ನು ಪಡೆದಿರುತ್ತವೆ; ಅವೇ ನೆಲಕ್ಕೆ ಬಿದ್ದರೆ ಬಾಡಿ ಅವುಗಳ ಶೋಭೆಯು ನಷ್ಟವಾಗಿ ಹೋಗುವದು. ಅದರಂತೆಯೇ ನಮ್ಮಂಥ ಅರಸರ ಸ್ಥಿತಿಯು ಇರುತ್ತದೆಂದು ತಿಳಿಯಬೇಕು. ಗಿಡದಿಂದ ಉದುರಿಬಿದ್ದ ಪುಷ್ಪವು ಸುಗಂಧಹೀನವೂ, ಸೌಂದರ್ಯಹೀನವೂ ಆಗಿರುವಂತೆ, ರಾಜ್ಯಭ್ರಷ್ಟನಾದ ನಾನು ಶುಷ್ಕನೂ, ತೇಜೋಹೀನನೂ ಆಗಿ, ಕಾಲಹರಣ ಮಾಡುತ್ತಿರುವೆನು.''

ಈ ಮೇರೆಗೆ ನುಡಿದು ಅಶೋಕನು ಬಳಿಯಲ್ಲಿದ್ದ ಮತ್ತೊಬ್ಬನನ್ನು ಕರೆದು—ಎಲೈ ಬಂಧುವೆ, ನಿನ್ನನ್ನು ಆಜ್ಞಾಪಿಸುವ ಅಧಿಕಾರವು ನನ್ನ ಕೈಯಲ್ಲಿರದಿದ್ದರೂ, ವಿಜ್ಞಾಪಿಸುವದಕ್ಕೆ ಪ್ರತಿಬಂಧವಿಲ್ಲ, ನನ್ನ ಈ ಕಟ್ಟಕಡೆಯ ವಿಜ್ಞಾಪನೆಯನ್ನು ಮನ್ನಿಸು. ನೀನು ವೇಣುವನಕ್ಕೆ ಹೋಗಿ ನನ್ನ ಹೆಸರಿನಿಂದ ಗುರುಗಳನ್ನು ವಂದಿಸಿ, ಈ ನೆಲ್ಲಿಯಕಾಯಿಯ ಹೋಳನ್ನು ಕೊಟ್ಟು, ಅವರ ಮುಂದೆ—''ರಾಜಾಧಿರಾಜನಾದ ಅಶೋಕನ ಸಂಪತ್ತಿಯ ಇಷ್ಟೇ ಭಾಗವು ಉಳಿದಿರುತ್ತದೆ; ಅದನ್ನು ಈಗ ಆತನು ಚರಣಕ್ಕೆ ಅರ್ಪಿಸುತ್ತಾನೆ. ಈ ಹೋಳಿನ ಅಂಶವು ಸಂಘದೊಳಗಿನ ಯಾವತ್ತು ಜನರಿಗೆ ಮುಟ್ಟುವಂತೆ ಮಾಡುವ ಭಾರವು ತಮ್ಮನ್ನೇ ಕೂಡಿದೆ'' ಎಂದು ವಿಜ್ಞಾಪಿಸು, ಎಂದು ನುಡಿದು, ಚಕ್ರವರ್ತಿಯು ರಾಧಾಗುಪ್ತನನ್ನು ಕುರಿತು—ಮಂತ್ರಿಶ್ರೇಷ್ಠನೇ, ಈ ರಾಜ್ಯದ ಸಿಂಹಾಸನದಮೇಲೆ ಈಗ ಅರಸರು ಯಾರು ಇರುವರು? ಎಂದು ಪ್ರಶ್ನೆ ಮಾಡಲು, ರಾಧಾಗುಪ್ತನು ಮೊದಲಿನಂತೆ—ಭಗವನ್, ತಾವೇ ನಮ್ಮ ಸ್ವಾಮಿಯಾಗಿದ್ದೀರಿ, ಎಂದು

ಉತ್ತರಕೊಟ್ಟನು. ಅದನ್ನ ಕೇಳಿದಕೂಡಲೆ ಅಶೋಕನು ತನ್ನ ಆಸನದಿಂದ ಚಟ್ಟನೆ ಎದ್ದುನಿಂತು ಆಕಾಶವನ್ನು ನಾಲ್ಕೂದಿಕ್ಕಿಗೆ ನೋಡಿ ಉಚ್ಚಸ್ವರದಿಂದ—ಇಂದು ನಾನು ದ್ರವ್ಯಭಾಂಡಾರ ವೊಂದನ್ನುಳಿದು, ಉಳಿದ ಬಹುರತ್ನಾವಸುಂಧರೆಯನ್ನು ಬುದ್ಧಸಂಘಕ್ಕೆ ಅರ್ಪಿಸಿದ್ದೇನೆ. ಈ ಪುಣ್ಯಕರ್ಮದ ಫಲವು ನನಗೆ ಪ್ರಾಪ್ತವಾಗಬೇಕೆಂದಾಗಲಿ, ಮುಂದಿನ ಜನ್ಮಕ್ಕೆ ರಾಜ್ಯಸುಖವು ದೊರೆಯಬೇಕೆಂದಾಗಲಿ, ಇಂದ್ರಪದವಿಯು ಸಿಗಬೇಕೆಂದಾಗಲಿ, ಬ್ರಹ್ಮಲೋಕವು ಕೈಸೇರ ಬೇಕೆಂದಾಗಲಿ ನಾನು ಇಚ್ಛಿಸುವದಿಲ್ಲ. ಇವೆಲ್ಲ ಸಂಗತಿಗಳು ನೀರಮೇಲಿನ ಗುಳ್ಳೆಯಂತೆ, ಕ್ಷಣಮಾತ್ರತೋರಿ ಅಡಗುವಂಥವು, ಅರ್ಥಾತ್ ನಶ್ವರವಾಗಿರುತ್ತವೆ. ನನ್ನಲ್ಲಿರುವ ಧರ್ಮಶ್ರದ್ಧೆಗೆ ಪ್ರತಿಫಲವು ದೊರೆಯಬೇಕಾಗಿದ್ದರೆ, ಆತ್ಮಸಂಯಮನ ಮಾಡುವ ಸಾಮರ್ಥ್ಯವು ಮಾತ್ರ ನನಗೆ ಬರಲಿ. ಪೃಥ್ವಿಯ ಸಾಮ್ರಾಜ್ಯವು ಕ್ಷಣಭಂಗುರವು; ಆದರೆ ಆತ್ಮನ ಮೇಲಿನ ಸಾಮ್ರಾಜ್ಯವು ಸ್ಥಿರವಾಗಿರುತ್ತದೆ, ಎಂದು ನುಡಿದು, ಯಾವತ್ತು ಪೃಥ್ವಿಯ ದಾನಪತ್ರವನ್ನು ಬರಕೊಂಡು ಬಾರೆಂದು ರಾಧಾಗುಪ್ತನಿಗೆ ಹೇಳಿದನು. ಮರುದಿನ ರಾಧಾಗುಪ್ತನು ದಾನಪತ್ರವನ್ನು ಬರಕ್ಕೊಂಡು ಬಂದನಂತರ, ಚಕ್ರವರ್ತಿಯು ತನ್ನ ಕೈಮುಟ್ಟಿ ಅದಕ್ಕೆ ಮುದ್ರೆಯನ್ನೊತ್ತಿ ಲೇಖನಪತ್ರವನ್ನು ವೇಣುವನಕ್ಕೆ (ಕುಕ್ಕುಟಾರಾಮಕ್ಕೆ) ಕಳಿಸಿದನು. ಆ ಪತ್ರವು ಉಪಗುಪ್ತಾ ಚಾರ್ಯರ ಕೈಯಲ್ಲಿ ಬಿದ್ದಕೂಡಲೆ, ಇತ್ತ ಅಶೋಕನ ಪ್ರಾಣೋತ್ಕ್ರಮಣವಾಯಿತು.

ಅಶೋಕನ ಉತ್ತರಕ್ರಿಯೆಗಳು ಮುಗಿದಮೇಲೆ ರಾಧಾಗುಪ್ತನು ಮಂತ್ರಿವರ್ಗವನ್ನು ಒಟ್ಟುಗೂಡಿಸಿ ಅವರನ್ನು ಕುರಿತು—ಅಶೋಕಮಹಾರಾಜರು ನೂರು ಕೋಟಿ ಸುವರ್ಣ ಮುದ್ರಿಕೆಗಳನ್ನು ದಾನಮಾಡಲು ಸಂಕಲ್ಪಮಾಡಿದ್ದರು. ಆ ಮುದ್ರಿಕೆಗಳಲ್ಲಿ 96ಕೋಟಿ ಮುದ್ರಿಕೆಗಳು ದಾನಮಾಡಲ್ಪಟ್ಟವು; ಇನ್ನು ನಾಲ್ಕು ಕೋಟಿ ಮುದ್ರಿಕೆಗಳು ದಾನಮಾಡಲ್ಪಡ ಬೇಕಾಗಿವೆ; ಆದರೆ ಯುವರಾಜರಿಂದ ತಮ್ಮ ಸಂಕಲ್ಪವು ಪೂರ್ಣವಾದೀತೆಂದು ತೋರದ್ದರಿಂದ, ಚಕ್ರವರ್ತಿಗಳವರು ಸಂಪೂರ್ಣಪೃಥ್ವಿಯನ್ನು ಗುರುಗಳಿಗೆ ದಾನಮಾಡಿಬಿಟ್ಟರು. ಈಗ ನಾವು ಸಂಘಕ್ಕೆ ನಾಲ್ಕು ಕೋಟಿ ರೂಪಾಯಿಗಳನ್ನು ಕೊಟ್ಟು ಪುನಃ ರಾಜ್ಯವನ್ನು ಕೊಂಡುಕೊಳ್ಳಬೇಕು, ಎಂದು ಹೇಳಲು, ರಾಧಾಗುಪ್ತನ ಈ ಮಾತನ್ನು ಎಲ್ಲರೂ ಒಪ್ಪಿಕೊಂಡು, ರಾಜ್ಯವನ್ನು ಬಿಡಿಸಿ ಕೊಂಡರು. ಅದನ್ನು ಸಂಪದಿಯು ಆಳಹತ್ತಿದನು.

ಸಮಾಪ್ತ

ಸಂಸಾರ–ಸುಖ

ಪ್ರಸ್ತಾವನೆ

ಕಾದಂಬರಿಗಳು ಸುಖಪರ್ಯವಸಾಯಿಗಳೆಂತಲೂ, ದುಃಖಪರ್ಯವ ಸಾಯಿಗಳೆಂತಲೂ ಎರಡು ವಿಧಗಳಾಗಿರುವವು. ಕಾದಂಬರಿಯ ಕಡೆಯಲ್ಲಿ ಅದರೊಳಗಿನ ಮುಖ್ಯ ಪಾತ್ರಕ್ಕೆ ಸುಖ ಉಂಟಾಗಿದ್ದರೆ ಆ ಕಾದಂಬರಿಯು ಸುಖ ಪರ್ಯವಸಾಯಿಯೆನಿಸಿಕೊಳ್ಳುವದು; ದುಃಖ ಉಂಟಾಗಿದ್ದರೆ ದುಃಖ ಪರ್ಯವಸಾಯಿಯೆನಿಸುವದು. ಈ ದೃಷ್ಟಿಯಿಂದ ನೋಡಿದರೆ ಈ ಕಾದಂಬರಿಯ ಪ್ರಧಾನಪಾತ್ರವಾದ ಖುಸರುವು ಬಾದಶಹನಾಗುವದರ ಬದಲು, ತನ್ನ ದುಷ್ಕರ್ಮದಿಂದ ಅಂಧನಾದದ್ದರಿಂದ ಈ ಕಾದಂಬರಿಯು ದುಃಖ ಪರ್ಯವಸಾಯಿಯೆಂತಲೇ ಹೇಳಬೇಕಾಗುವದು; ಒಟ್ಟಿನ ಮೇಲೆ ಅಕಬರನೇ ಮೊದಲಾದ ಈ ಕಾದಂಬರಿಯೊಳಗಿನ ಎಲ್ಲ ಪಾತ್ರಗಳು ಒಂದಿಲ್ಲೊಂದು ಬಗೆಯ ದುಃಖವನ್ನೂ, ತಾಪವನ್ನೂ ಪಟ್ಟಿರುವವು. ಮಾನ ಸಿಂಹ–ಅಜಿಮಖಾನರಿಗೆ ಖುಸರುವಿನ ಪಟ್ಟದ ಸಲುವಾಗಿ ಕೃಷ್ಣ ಕಾರಸ್ಥಾನ ಮಾಡುವಾಗ ತಾಪವಾಗಿದ್ದರೆ, ಖುಸರುವಿನ ಹೆಂಡತಿಯಾದ ಪ್ಯಾರಿಬಾನುವಿಗೆ ಗಂಡನ ದುರ್ವ್ಯಸನಕ್ಕಾಗಿಯೂ, ಖುಸರುವಿನ ತಾಯಿಯಾದ ಜೋಧಬಾಯಿಗೆ ಮಗನ ಭಾವೀ ದುಸ್ಥಿತಿಯ ವಿಷಯವಾಗಿಯೂ, ಸೇಲೀಮನಿಗೆ ತನಗೆ ದಿಲ್ಲಿಯ ಸಿಂಹಾಸನವು ಎಲ್ಲಿ ದೊರೆಯದೆ ಹೋಗುವದೊ ಎಂಬದರ ವಿಷಯವಾಗಿಯೂ, ತಾಪವಾಗಿತ್ತು, ಒಟ್ಟಿಗೆ ಈ ಕಾದಂಬರಿಯ ಸಂಸಾರವು ದುಃಖಮಯ ವೆಂಬದನ್ನು ಚನ್ನಾಗಿ ತೋರಿಸುತ್ತದೆ. ಹೀಗಿದ್ದರೂ ಈ ಕಾದಂಬರಿಯ ಪಾತ್ರಗಳೆಲ್ಲ ಸುಖ ಲೋಲುಪವಾಗಿರುವಂತೆ ಲೋಕಕ್ಕೆ ತೋರುತ್ತಿದ್ದದ್ದರಿಂದ ಸಂಸಾರಸುಖವು ಲೋಕಭ್ರಮಕಾರಕ ವಿರುತ್ತದೆಂದು ಹೇಳಬೇಕಾಗುವದು. ಮನುಷ್ಯನಿಗೆ ಪ್ರಕೃತಕ್ಕೊದಗಿರುವ ಸುಖವು ಭಾವೀ ಸುಖಾಭಿವೃದ್ಧಿಯ ಕಲ್ಪನೆಯ ಮೂಲಕ ಅತೃಪ್ತಿಕರವು, ಆತ ಏವ ಅಶಾಂತಿಕರವು ಆಗುವದರಿಂದ ''ಅಶಾಂತಸ್ಯ ಕುತಃಸುಖಂ'' ಎಂಬಂತೆ ಅದು ಅನುಭವದಲ್ಲಿ ತತ್ವತಃ ದುಃಖರೂಪವೇ ಆಗಿರುವದು. ಇನ್ನು ಪ್ರತ್ಯಕ್ಷ ದುಃಖವಂತೂ ಅನುಭವದಲ್ಲಿ ಸುಖರೂಪವಾಗಲಾರದು; ಆದ್ದರಿಂದಲೇ ಜ್ಞಾನಿಗಳೂ, ತತ್ವಜ್ಞರೂ, ಸಾಧುಸಂತರೂ ಸಂಸಾರವನ್ನು ಅಶಾಂತಿ ಕರವಾದದ್ದರಿಂದ ದುಃಖರೂಪವೆಂತಲೇ ಹೇಳಿರುವರು.

ಈ ಕಾದಂಬರಿಯು ಬಂಗಾಲದ ಪ್ರಸಿದ್ಧ ಕಾದಂಬರಿಕಾರರಾದ ಶ್ರೀಯುತ ಬಾಬುಹರಿ ಸಧನ ಮುಕರ್ಜಿ ಇವರ ''ಖುಸರು'' ಎಂಬ ಉತ್ಕೃಷ್ಟ ಕಾದಂಬರಿಯ ಭಾಷಾಂತರದ ಆಧಾರ ದಿಂದ ಬರೆದದ್ದಾಗಿದ್ದರೂ ಅಲ್ಲಲ್ಲಿ ಮಾಡಿರುವ ನೀತಿಬೋಧವನ್ನು ವಾಚಕರ ಸಲುವಾಗಿ

ಹೊಸದಾಗಿ ಸೇರಿಸಿರುತ್ತವೆ. ಇದರಲ್ಲಿ ಶಹಾಜಾದಾ ಖುಸರುವಿನ ಯೋಗದಿಂದ ವಿಷಯ ಲಂಪಟತೆಯ ದುಷ್ಪರಿಣಾಮವೂ, ಅಕಬರ ಬಾದಶಹನ ಯೋಗದಿಂದ ಕ್ಷಮಾಶೀಲನಾದ ಉದಾರ ಹೃದಯದ ತಂದೆಯ ಪುತ್ರವಾತ್ಸಲ್ಯವೂ, ಜೋಧಬಾಯಿಯ ಯೋಗದಿಂದ ಆರ್ಯ ಸ್ತ್ರೀಯರ ಪತಿಭಕ್ತಿಯ ಪ್ರಭಾವವೂ, ಮಾನಸಿಂಹ-ಅಮೀರಖಾನರ ಪರಸ್ಪರ ಸ್ನೇಹದ ರೀತಿಯಿಂದ ರಾಜತಂತ್ರದ ಕೌಟಿಲ್ಯದ ಪಡಿಕಟ್ಟೂ, ಮಂದಾಕಿನಿಯ ಯೋಗದಿಂದ ರಜಪೂತ ಸ್ತ್ರೀಯರ ಕೆಚ್ಚೆದೆಯ, ಹಾಗು ಆತ್ಮವಿಶ್ವಾಸ-ಪತಿನಿಷ್ಠೆಗಳ ಪ್ರಭಾವವೂ ಚನ್ನಾಗಿ ವ್ಯಕ್ತವಾಗುವವು.

ಈ ಕಾದಂಬರಿಯ ವಾಚನದಿಂದ ವಾಚಕರಲ್ಲಿ ಒಬ್ಬರಾದರೂ, ಸಂಸಾರದ ಯೋಗ್ಯ ಮಾರ್ಗವನ್ನು ಕಂಡುಹಿಡಿದು ನಡೆಯಲು ಯತ್ನಿಸಿದರೆ, ನನ್ನ ಶ್ರಮವು ಸಾರ್ಥಕವಾಯಿತೆಂದು ತಿಳಿಯುವೆನು.

ಹಾವೇರಿ
ತಾ. ೧೧-೧-೧೯೨೬

ಕನ್ನಡಿಗರ ಸೇವಕ
ಗಳಗನಾಥ

ತಾರುಣ್ಯದ ತೀವ್ರತೆ!

ಅಮಾವಾಸ್ಯೆಯ ಕಗ್ಗತ್ತಲೆಯು. ನಿರ್ಮಾನುಷವಾದ ಅಡವಿಯೊಳಗಿನದೊಂದು ಗುಹೆಯಲ್ಲಿ ಒಬ್ಬ ಸುಂದರ ತರುಣನು ಯಾರದೋ ಹಾದಿಯನ್ನು ನೋಡುತ್ತ ದೀವಿಗೆಯ ಮಂದಪ್ರಕಾಶದಲ್ಲಿ ಕುಳಿತುಕೊಂಡಿದ್ದನು. ಆ ತರುಣನು ಸರ್ವಸಾಮಾನ್ಯ ಮನುಷ್ಯನಲ್ಲ; ಜಗದ್ವಿಖ್ಯಾತನಾದ ಅಕಬರ ಬಾದಶಹನ ಮೊಮ್ಮಗನು, ಜಹಂಗೀರ ಬಾದಶಹನೆಂದು ಪ್ರಸಿದ್ಧನಾಗಿರುವ ಸೇಲೀಮನ ಹಿರಿಯ ಮಗನು; ಅದರಂತೆ ಆತನು, ಅಕಬರ ಬಾದಶಹನ ವಿಜಯಶಾಲಿತ್ವದ ಕೀರ್ತಿಯ ಅರ್ಧಕ್ಕರ್ಧ ಪಾಲಿಗೆ ಕಾರಣನಾದ ವೀರ ಶ್ರೇಷ್ಠ ಮಾರವಾಡಾಧಿಪತಿ, ಮಾನಸಿಂಗನ ತಂಗಿಯಾದ ಲೋಕಸುಂದರಿಯೆನಿಸಿದ ಜೋಧಬಾಯಿಗೆ ಅಕ್ಕರೆಯ ಒಬ್ಬನೇ ಒಬ್ಬ ಮಗನಾಗಿದ್ದನು. ಹೀಗೆ ತಂದೆಯ ವಂಶದಿಂದಲೂ, ತಾಯಿಯ ವಂಶದಿಂದಲೂ ಅತ್ಯಂತ ಘನವಂತನಾಗಿದ್ದ ಆ ತರುಣನ ಹೆಸರು ಖುಸ್ರು. ಇಂಥ ಕಗ್ಗತ್ತಲೆಯ ರಾತ್ರಿಯಲ್ಲಿ ಗುಹೆಯೊಳಗೆ ಆ ಘನವಂತ–ತರುಣನು ಯಾರ ಹಾದಿಯನ್ನು ನೋಡುತ್ತಿರ ಬಹುದು? ಆತನು ಯಾವ ಗುಪ್ತ ಒಳಸಂಚಿನಲ್ಲಿ ತೊಡಗಿರಬಹುದು? ಖುಸ್ರುವು ಅತ್ಯಂತ ಚಂಚಲ ಸ್ವಭಾವದವನಿದ್ದನು; ಅದರಲ್ಲಿ ಅಕಬರ ಬಾದಶಹನ ಮಿತಿಮೀರಿದ ಅಚ್ಚೆಯಿಂದ ಆತನ ಚಂಚಲ ಸ್ವಭಾವಕ್ಕೆ ಉದ್ಧಟತನವು ಜೋಡಾಗಿದ್ದದ್ದರಿಂದ, ಆತನಿಗೆ ಯಾರ ಹಂಗೂ ಇದ್ದಿಲ್ಲ. ಪ್ರಾಯದ ಚೂಣಿ, ವಿಪುಲ ಸಂಪತ್ತಿನ ಮದ, ಬಾದಶಾಹೀ ಮನೆತನದ ಅಧಿಕಾರ, ಅವಿವೇಕತನ ಇವೆಲ್ಲ ಒಟ್ಟು ಗೂಡಿದ ಬಳಿಕ ಕೇಳುವದೇನು? ಇವೆಲ್ಲವುಗಳ ಒತ್ತುವಿಕೆಯಲ್ಲಿ ಕುಲೀನತೆಯ ಯೋಗದಿಂದ ಖುಸ್ರುವಿನಲ್ಲಿದ್ದ ಹಲಕೆಲವು ಸದ್ಗುಣಗಳು ಕುಸಿಬಿದ್ದು ಕಾಣದಹಾಗಾಗಿ ಹೋಗಿದ್ದವು. ಖುಸ್ರುವು ಅತ್ಯಂತ ಅಸಹಿಷ್ಣುವು. ತನ್ನ ಮನಸ್ಸಿನಂತೆ ಕಾರ್ಯವಾಗದಿದ್ದ ಮಾತ್ರದಿಂದ ಅವನ ಚಿತ್ತವು ಕೂಡಲೆ ಕ್ಷೋಭಿಸುತ್ತಿತ್ತು. ತಾನು ಬಂದು ಇಷ್ಟು ಹೊತ್ತಾಗಿದ್ದರೂ ದುರ್ಜಯಸಿಂಹನು ಇನ್ನೂ ಬಾರದ್ದರಿಂದ ಖುಸ್ರುವು ಅಧೀರನಾಗಿ ಚಡಪಡಿಸುತ್ತ, ದುರ್ಜಯ ಸಿಂಹನ ವಿಷಯವಾಗಿ ಕ್ಷುಬ್ಧನಾಗಿದ್ದನು. ''ನನ್ನ ಲಕ್ಷವಿಲ್ಲದೆ ಇವನು ಇಷ್ಟುಹೊತ್ತು ತಡೆದನಲ್ಲ'' ಎಂದು ನುಡಿದು, ತನ್ನ ಟೊಂಕದೊಳಗಿನ ಖಡ್ಗಕ್ಕೆ ಕೈ ಹಾಕಲಿಕ್ಕೆ ಆತನು ಹಿಂದೆ ಮುಂದೆ ನೋಡಲಿಲ್ಲ. ಯಾವ ಕೆಲಸದಲ್ಲಿ ಯಾದರೂ ಆ ಚಂಚಲ ಸ್ವಭಾವದ ಖುಸ್ರುವಿಗೆ ಅವಸರ ಬಹಳ. ಅನುಕೂಲ ಪರಿಸ್ಥಿತಿಯೊದಗಿದ ಕ್ಷಣದಲ್ಲಿ ಅವನು ಹಿಗ್ಗುವನು, ಪ್ರತಿಕೂಲ ಪರಿಸ್ಥಿತಿ ಯೊದಗಿದ ಕ್ಷಣದಲ್ಲಿ ಅವನು ಕುಗ್ಗಿ ಕ್ಷೋಭಿಸುವನು. ಅದರಂತೆಯೇ ಆತನು ಈಗ ದುರ್ಜಯಸಿಂಹನ ಮೇಲೆ

ಕ್ಷೋಭಿಸಿರುವಾಗ ತರುಣ ದುರ್ಜಯಸಿಂಹನು ಗುಹೆಯನ್ನು ಪ್ರವೇಶಿಸಿ—''ಯುವ ರಾಜ! ತಡವಾದದ್ದಕ್ಕಾಗಿ ಕ್ಷಮಿಸಬೇಕು'' ಎಂದು ಬೇಡಿಕೊಂಡು, ವಿನಯದಿಂದ ಸಲಾಮು ಮಾಡಿದನು.

ಖುಸ್ರುವು ಚಂಚಲ ಸ್ವಭಾವದವನಾಗಿದ್ದರೂ ಅತ್ಯಂತ ಸರಳಹೃದಯದವನಿದ್ದನು. ಆತನ ಹೊಟ್ಟೆಯಲ್ಲಿದ್ದದ್ದು ಕೂಡಲೆ ಹೊರಬಿದ್ದು ಹೋಗುತ್ತಿತ್ತು, ಹೊರಗೊಂದು ಒಳಗೊಂದು ಆತನಿಗೆ ಗೊತ್ತೇ ಇದ್ದಿಲ್ಲ. ದುರ್ಜಯ ಸಿಂಹನು ಬಂದಮಾತ್ರದಿಂದ ಆ ಶಹಾಜಾದಾನ ಕ್ಷುಬ್ಧ ಚಿತ್ತವು ಶಾಂತವಾಗಿ ಆತನು ದುರ್ಜಯ ಸಿಂಹನನ್ನು ಕುರಿತು—

ಖುಸ್ರು—ಚುಪ್ ಚುಪ್! ದುರ್ಜಯ, ಮೆಲ್ಲಗೆ ಮಾತಾಡು. ಈ ಭಯಂಕರ ಗುಹೆಯನ್ನು ಮುಚ್ಚು ಹಾಕಿರುವ ಮೂಕ ಕಲ್ಲುಗಳಿಗೂ ಕಿವಿಗಳಿರುತ್ತವೆ. ನೀನು ಬರುವದು ತಡವಾದದ್ದರಿಂದ ನನಗೆ ಬಹಳ ಸಿಟ್ಟು ಬಂದು, ಏನಿಲ್ಲೆಂದರೂ ನಾಲ್ಕಾರು ಸಾರೆಯಾದರೂ ನನ್ನ ಖಡ್ಗದ ಕಡೆಗೆ ನನ್ನ ಕೈಗಳು ಹೋಗಿರಬಹುದು; ಇರಲಿ, ಆದರೆ ದುರ್ಜಯ, ಏನು ಮಾತಾಡುವದಾದರೂ ಮೆಲ್ಲಗೆ ಮಾತಾಡು. ಅಡಗಿರುವ ಗುಪ್ತಶತ್ರುಗಳ ಶ್ರವಣಶಕ್ತಿಯು ಬಹು ತೀಕ್ಷ್ಣವಾಗಿರುತ್ತದೆಂಬದನ್ನು ಮರೆಯಬೇಡ. ಈ ಗುಹೆಯಲ್ಲಿ ನಮ್ಮ ಶತ್ರುವು ಅಡಗಿ ಕೊಂಡಿರುವದಿಲ್ಲೆಂದು ನಂಬಿಗೆಯಿಂದ ಯಾರು ಹೇಳಬೇಕು?

ದುರ್ಜಯ—ಸರಿಸರಿ; ಆದರೆ ಸರಕಾರ! ಅಪ್ಪಣೆಯೇನಾಗುವದು?

ಖುಸ್ರು—ದುರ್ಜಯಸಿಂಹ, ನಿನ್ನ ಒರೆಯೊಳಗಿಂದ ಕತ್ತಿಯನ್ನು ಹಿರಿದು ಅದರ ತೀಕ್ಷ್ಣಧಾರೆಯ ಮೇಲೆ ಕೈಯಿಟ್ಟು ಮೊದಲು ಪ್ರತಿಜ್ಞೆಮಾಡು.

ದುರ್ಜಯ—ಸರಕಾರ, ನಾನು ಏನೆಂದು ಪ್ರತಿಜ್ಞೆಮಾಡಬೇಕೆಂಬುದು ನನಗೆ ತಿಳಿಯಬೇಕಷ್ಟೇ?

ಖುಸ್ರು—''ಯಾವ ಪ್ರಶ್ನವನ್ನೂ ಮಾಡದೆ ತಮ್ಮ ಅಪ್ಪಣೆಯನ್ನು ಮನ್ನಿಸುವೆ''ನೆಂದು ನೀನು ಈ ಮೊದಲೇ ನನ್ನೊಡನೆ ಪ್ರತಿಜ್ಞಾಬದ್ಧನಾಗಿರುವೆಯಲ್ಲವೆ? ಅಂದ ಬಳಿಕ ಈಗ ನಿನಗೆ ಪ್ರತಿಜ್ಞೆಯ ಸಂಬಂಧದಿಂದ ನಾನು ತಿಳಿಸಬೇಕೇಕೆ? ಹಿಂದೆ ಮಾಡಿರುವ ಆ ಪ್ರತಿಜ್ಞೆಯನ್ನು ಇನ್ನೊಮ್ಮೆ ಖಡ್ಗಮುಟ್ಟಿ ಮಾಡು.

ದುರ್ಜಯ—ಸರಕಾರ! ತಮ್ಮ ಮೊದಲಿನ ವಿಚಾರವು ಈಗ ಬದಲಾಗಿರುವದೆಂದು ನನಗೆ ಗೊತ್ತಾಗಿರುವದರಿಂದ, ಮೊದಲಿನ ನನ್ನ ಆ ವಚನ ಬದ್ಧತೆಯೂ ಈಗ ಶಿಥಿಲವಾಗಿರುವದೆಂದು ತಿಳಿಯಿರಿ; ಮೊದಲು ತಾವು ನಿಮ್ಮ ತಂದೆಯಾದ ಸೇಲೀಮರವರ ಕೊಲೆ ಮಾಡಬೇಕೆಂದು ಮನಸ್ಸಿನಲ್ಲಿ ಮಾಡಿದ್ದಿರಿ; ಆದರೆ ಈಗ ನೀವು ಆ ವಿಚಾರವನ್ನು ಬಿಟ್ಟು ನಿಮ್ಮ ಸೋದರ ಮಾವಂದಿರಾದ ಮಾನಸಿಂಹರವರ ಕೊಲೆ ಮಾಡಬೇಕೆಂದು ಯೋಚಿಸಿರುತ್ತೀರಿ; ಆದರೆ ಹೀಗೆ ವಿಚಾರದಲ್ಲಿ ಬದಲು ಆಗಲಿಕ್ಕೆ ಕಾರಣವೇನು?

ಖುಸ್ರು—ದುರ್ಜಯ, ನಿನ್ನ ಮಾತು ಸುಳ್ಳೆಂದು ನಾನು ಹೇಳುವದಿಲ್ಲ; ಮೊದಲು ನಾನು ನನ್ನ ತಂದೆಯ ಕೊಲೆ ಮಾಡಬೇಕೆಂದು ನಿಶ್ಚಯಿಸಿದ್ದು ನಿಜವು; ಆದರೆ ನನ್ನ ಪೂಜ್ಯ ತಾಯಿಯವರಾದ ಜೋಧಬಾಯಿಯವರು ಅತ್ಯಂತ ಕನಿಕರದಿಂದ ನನಗೆ—''ವತ್ಸಾ, ತಂದೆಗೆ

ಮಗನು ಸ್ವರ್ಗದೊಳಗಿನ ದೇವತೆಯಂತೆ ಅತ್ಯಂತ ಪೂಜ್ಯನಾಗಿರುವನು; ಆದ್ದರಿಂದ ಆತನ ರಕ್ತದಿಂದ ಕೈಯನ್ನು ಅಪವಿತ್ರ ಮಾಡಿಕೊಂಡು ಪಾಪಿಯಾಗುವದು ಸರಿಯಲ್ಲ; ಪಿತೃಘಾತಕಿಯು ನರಕಕ್ಕೆ ಇಳಿಯುವನಲ್ಲದೆ, ಅವನು ಈ ಲೋಕದಲ್ಲಿ ಅಕ್ಷಯ ಅಪಕೀರ್ತಿಗೆ ಗುರಿಯಾಗ ಬೇಕಾಗುವದು'' ಎಂದು ಹೇಳಿದ್ದರಿಂದ ನಾನು ತಂದೆಯ ಖೂನು ಮಾಡುವದನ್ನು ಬಿಟ್ಟು ಕೊಟ್ಟೆನು.

ದುರ್ಜಯ—ಹಾಗಾದರೆ ಸೋದರ ಮಾವನನ್ನು ಕೊಂದ ಕಲಂಕವು ತೊಳೆದು ಹೋಗುತ್ತದೆಂದಹಾಗಾಯಿತಲ್ಲ! ರಾಜಕುಮಾರ, ಮಾನಸಿಂಹರವರು ನಿಮ್ಮ ಪೂಜ್ಯ ತಾಯಿಯ ಅಣ್ಣಂದಿರಾಗಿರುವದರಿಂದ, ಆ ನಿಮ್ಮ ತಾಯಿಗೂ ಅವರು ಪೂಜ್ಯರಾಗಿರಲು, ನಿಮಗೆ ಅವರು ಅತ್ಯಂತ ಪೂಜ್ಯರಾಗಲಿಲ್ಲವೆ? ಮುಂದೆ ಮೊಗಲ ಸಾರ್ವಭೌಮ ಸಿಂಹಾಸನವನ್ನೇರುವ ನಿಮಗೆ ಈ ಕ್ರೂರತನವು ಒಪ್ಪುವದಿಲ್ಲ; ನಿಮ್ಮನ್ನು ಮನಃಪೂರ್ವಕವಾಗಿ ಪ್ರೀತಿಸುವ ಮಾನಸಿಂಹರವರನ್ನು ಕೊಲ್ಲಿಸಲಿಕ್ಕೆ ಸೋದರಳಿಯಂದಿರಾದ ನಿಮ್ಮ ಮನಸ್ಸಾದರೂ ಹೇಗೆ ಒಪ್ಪುವದು! ಶಿವ ಶಿವ! ಎಂಥ ಕ್ರೂರತನವಿದು! ಸರಕಾರ! ನಿಮ್ಮ ವಿಚಾರವು ಏನೇ ಇರಲಿ, ನೀವು ಯಾರ ಕೊಲೆಯನ್ನೇ ಮಾಡಿಸಲಿಚ್ಛಿಸಿರಿ; ಆದರೆ ಮಾನಸಿಂಹರವರ ಸೇವಕನಾದ ನಾನು ಅವರ ಕೊಲೆಯನ್ನು ಸರ್ವಥಾ ಮಾಡಲಾರೆನು! ಮಹಾರಾಜರ ಅಂಗರಕ್ಷಕನಾದ ನಾನು ಅವರ ಪ್ರಾಣಹರಣ ಮಾಡಲಾ? ಇದಲ್ಲದೆ ಗುಪ್ತರೀತಿಯಿಂದ ಒಬ್ಬರ ಕೊಲೆ ಮಾಡುವದು ತೀರಾ ಮುಡದಾರತನದ ಕೆಲಸವು! ಅಂಥ ನೀಚ ಕೆಲಸವನ್ನು ಅಚ್ಚ ರಜಪೂತರು ಸರ್ವಥಾ ಮಾಡಲಾರರು!

ಖುಸ್ರು—ಆದರೆ ರಾಜಪುತ್ರರಾದ ನನ್ನ ತಂದೆ ಸೇಲೀಮರ ಕೊಲೆ ಮಾಡಲು ನೀನು ಈ ಮೊದಲೆ ಒಪ್ಪಿಕೊಂಡಿದ್ದಿಲ್ಲವೆ?

ದುರ್ಜಯ—ಅಹುದು, ಒಪ್ಪಿಕೊಂಡದ್ದು ನಿಜವು. ಒಂದು ದಿನ ಆಗ್ರಾ ಶಹರದಲ್ಲಿ ಯುವರಾಜ ಸೇಲೀಮಸಾಹೇಬರು ಒಂದು ಕ್ಷುಲ್ಲಕ ತಪ್ಪಿಗಾಗಿ ನನ್ನನ್ನು ಬಹಳವಾಗಿ ಅವಮಾನ ಗೊಳಿಸಿದರು. ರಜಪೂತ ವೀರರು ತಮಗಾದ ಅವಮಾನದ ಸೇಡನ್ನು ತೀರಿಸಿಕೊಳ್ಳದೆ ಸರ್ವಥಾ ಬಿಡರು; ಆದ್ದರಿಂದ ನಾನು ಸೇಲೀಮಸಾಹೇಬರ ಸೇಡು ತೀರಿಸಿಕೊಳ್ಳುವದಕ್ಕಾಗಿ ಅವರ ಕೊಲೆ ಮಾಡಲು ಒಪ್ಪಿಕೊಂಡಿದ್ದೆನು; ಆದರೆ ಯುವರಾಜ, ನಿಮ್ಮ ತಂದೆಯ ಕೊಲೆಯನ್ನು ನಾನು ಮೋಸದಿಂದ ಮಾಡುತ್ತಿದ್ದೆನೆಂದು ತಿಳಿಯಬೇಡಿರಿ; ಶಸ್ತ್ರವಿಲ್ಲದಿದ್ದರೆ ಅವರಿಗೂ ಶಸ್ತ್ರಕೊಟ್ಟು, ಅದು ಸಾಧಿಸದಿದ್ದರೆ ಅವರೊಡನೆ ದ್ವಂದ್ವ ಯುದ್ಧಮಾಡಿ ಅವರನ್ನು ಕೊಲ್ಲುತ್ತಿದ್ದೆನು; ಆದರೆ ನಾನು ವೀರವರರಾದ ಮಾನಸಿಂಹರವರ ಅಂಗರಕ್ಷಕನಾಗಿರಲು, ಆ ನನ್ನ ಸ್ವಾಮಿಯ ಕೊಲೆಯನ್ನು ನಾನು ಸರ್ವಥಾ ಮಾಡಲಾರೆನು; ಈ ಮಾತನ್ನಾದರೂ ತಾವು ನನ್ನ ಪ್ರತಿಜ್ಞೆ ಯೆಂದೇ ತಿಳಿಯಿರಿ.

ಈ ಮೇರೆಗೆ ದುರ್ಜಯನು ನುಡಿಯಲು ಖುಸ್ರುವು ಸಂತಾಪಗೊಂಡನು. ಆತನು ತನ್ನ ಖಡ್ಗವನ್ನು ಹಿರಿದು ದುರ್ಜಯನನ್ನು ಕುರಿತು—''ದುರ್ಜಯ, ಸಾಕು ತೆಪ್ಪಗಾಗು, ಇನ್ನು ಪಿಟ್ಟೆಂದು ಮಾತಾಡಬೇಡ. ನಿನ್ನ ಮಾತನ್ನು ನಾನು ಕಿವಿಯಿಂದ ಕೇಳಲಾರೆನು. ನಿನಗೆ ನನ್ನ

ಅಪ್ಪಣೆಯು ಮಾನ್ಯವಿಲ್ಲ, ನನ್ನ ಉದ್ದೇಶವಂತು ನಿನಗೆ ಗೊತ್ತಾಗಿ ಹೋಯಿತು; ಅಂದಬಳಿಕ ನಿನ್ನನ್ನು ಇನ್ನು ಜೀವದಿಂದಿರಗೊಡುವ ಬಗೆ ಹೇಗೆ? ನಿನ್ನನ್ನು ಮೊದಲು ಪರಲೋಕಕ್ಕೆ ಅಟ್ಟಿ ಆಮೇಲೆ ಮುಂದಿನ ದುರ್ಘಟ ಕಾರ್ಯಕ್ಕೆ ನಾನು ಕೈಹಾಕುವೆನು. ದುರ್ಜಯ, ಯುದ್ಧ ಮಾಡಲು ನೀನು ಸಿದ್ಧವಾಗಿರದಿದ್ದರೆ, ಶಸ್ತ್ರತ್ಯಾಗ ಮಾಡಿ ಸುಮ್ಮನೆ ನನ್ನ ಅಧೀನನಾಗು, ಅಂದರೆ ಗುಪ್ತ ಸ್ಥಳದಲ್ಲಿ ನಿನ್ನನ್ನು ಸೆರೆಯಲ್ಲಿರಿಸಿಬಿಡುವೆನು. ಅದಕ್ಕೆ ನಿನ್ನ ಒಪ್ಪಿಗೆಯಿಲ್ಲದಿದ್ದರೆ ನೀನು ಮರಣಕ್ಕೆ ಸಿದ್ಧನಾಗು'' ಅನ್ನಲು, ದುರ್ಜಯಸಿಂಹನು ನಗುತ್ತ—''ಯುವರಾಜ, ಮರಣ ವೆಂಬುದು, ಯುದ್ಧಕ್ಕಾಗಿ ಯಾವಾಗಲೂ ಹಸಿದಿರುವ ರಜಪೂತವೀರರ ಕಟ್ಟಿಟ್ಟ ರುಚಿಕರವಾದ ಬುತ್ತಿಯಾಗಿರುವದು. ಅಂದಬಳಿಕ ಅದಕ್ಕಾಗಿ ಈ ದುರ್ಜಯನು ಯಾಕೆ ಅಂಜುವನು? ಆದರೆ ಯುದ್ಧಮಾಡದೆ ಸೆರೆಯಲ್ಲಿ ಬೀಳುವದಕ್ಕಾಗಲಿ, ಕುರಿಯಂತೆ ಕರಕರ ಕುತ್ತಿಗೆಯನ್ನು ಕೊಯಿಸಿ ಕೊಂಡು ಸಾಯುವದಕ್ಕಾಗಲಿ ರಜಪೂತರು ಒಪ್ಪಲಾರರು; ಆದ್ದರಿಂದ ರಾಜಪುತ್ರಾ, ನಾನು ಯುದ್ಧಕ್ಕೆ ಸಿದ್ಧವಾಗಿರುವೆನು; ನಾನು ಬದುಕಿರುವವರೆಗೆ ಈ ತೀಕ್ಷ್ಣ ಖಡ್ಗವು ಅನ್ಯರ ಕೈಗೆ ಹತ್ತಲಾರದು. ಆಗಲಿ, ಇನ್ನು ಒಮ್ಮೆ ನಮ್ಮಿಬ್ಬರ ಸಾಮರ್ಥ್ಯದ, ಹಾಗು ರಣಪಾಂಡಿತ್ಯದ ಪರೀಕ್ಷೆಯು ಆಗಿಹೋಗಲಿ?

ಈ ಮೇರೆಗೆ ನುಡಿದ ದುರ್ಜಯಸಿಂಹನ ನಿರ್ಧಾರದ ಮಾತುಗಳನ್ನು ಕೇಳಿ ಶೂರನಾದ ಖುಸ್ರುವು ಶಾಂತವೃತ್ತಿಯಿಂದ—''ದುರ್ಜಯಾ, ಇಂಥ ಸಾಹಸಕ್ಕೆ ನೀನು ಹೋಗಬೇಡ; ಇನ್ನೊಮ್ಮೆ ವಿಚಾರಮಾಡು. ಇನ್ನು ನೀನು ಬದುಕಲಾರೆ—ಅಲ್ಲಾನ ಆಣೆಯೆಂದರೂ ನೀನು ಬದುಕಲಾರೆ; ಆದ್ದರಿಂದ ಕಡದಿಗೆ ಬೀಳದೆ ಖಡ್ಗವಿಟ್ಟು ನನ್ನಧೀನನಾಗಿ ಬದುಕು!'' ಎಂದು ಹೇಳುತ್ತಿರಲು, ದುರ್ಜಯನು—''ರಾಜಪುತ್ರಾ, ಇಂಥ ಅಮಂಗಲ ಮಾತುಗಳನ್ನಾಡುವದು ನಿನಗೆ ಭೂಷಣವಲ್ಲ, ಇದರಿಂದ ನಮ್ಮಂಥ ವೀರ ರಜಪೂತರ ಸ್ವರೂಪಜ್ಞಾನವೇ ನಿನಗೆ ಆಗಿರುವದಿಲ್ಲವೆಂದು ಅನ್ನಬೇಕಾಗುತ್ತದೆ; ಇಲ್ಲವೆ ನನ್ನೊಡನೆ ಯುದ್ಧಮಾಡಲು ಹಿಂಜರಿಯು ತ್ತಿರುವ ನಿನ್ನ ಪುಕ್ಕತನವನ್ನು ಮುಚ್ಚಿಕೊಳ್ಳುವದಕ್ಕಾಗಿ ಅಕಬರ ಬಾದಶಹರವರ ಅಚ್ಚೆಯ ಮೊಮ್ಮಗನು ನೀನು ಹೀಗೆ ದೊಡ್ಡಿಸ್ತನದ ಸೋಗಿನ ಮಾತುಗಳನ್ನಾಡುವೆಯೆಂದಾದರೂ ಅನ್ನಬೇಕಾಗುತ್ತದೆ.'' ಎಂದು ನುಡಿದು ಕೂಡಲೆ ತನ್ನ ಖಡ್ಗವನ್ನು ಹಿರಿದು ಶಹಾಜಾದಾನ ಮೇಲೆ ಧುಮುಕಲು ಅವರಿಬ್ಬರ ದ್ವಂದ್ವಯುದ್ಧ ಆರಂಭವಾಯಿತು. ಆ ಮಂದ ಪ್ರಕಾಶದ ಗುಹೆಯಲ್ಲಿ ಅವರಿಬ್ಬರ ತರುಣ ವೀರರ ಖಡ್ಗಗಳು ಹೊಳೆಯಹತ್ತಿದವು. ಅವರಿಬ್ಬರು ಯುದ್ಧ ಕೌಶಲ್ಯದಿಂದ ಕಾದುತ್ತಿರಲು, ಅಕಸ್ಮಾತ್ ದುರ್ಜಯನ ಖಡ್ಗವು ಖುಸ್ರುವಿನ ಖಡ್ಗದಿಂದ ಖಂಡಿತವಾಗಿ ಅದರ ಎರಡು ತುಂಡುಗಳು ಝಣಗುಟ್ಟುತ್ತ ಗುಹೆಯೊಳಗಿನ ಕಲ್ಲಿಗೆ ಅಪ್ಪಳಿಸಿದವು! ಆಗ ನಿಶ್ಶಸ್ತ್ರನಾದ ದುರ್ಜಯನನ್ನು ನೋಡಿ ಖುಸ್ರುವು ಉಪಹಾಸದಿಂದ ಗರ್ಜಿಸಿದನು; ಆದರೆ ವೀರನಾದ ದುರ್ಜಯನು ಬೆದರಲಿಲ್ಲ; ತಾನು ನಿಶ್ಶಸ್ತ್ರನಾದರೂ ಒಂದು ಹೆಜ್ಜೆಯಾದರೂ ಹಿಂದಕ್ಕೆ ಸರಿಯಲಿಲ್ಲ; ಮಹಾ ಧೈರ್ಯದಿಂದ ಖುಸ್ರುವಿನ ಮುಂದೆ ನಿಂತುಬಿಟ್ಟನು! ಆತನ ಆ ಮಹಾ ಧೈರ್ಯಕ್ಕಾಗಿ ಖುಸ್ರುವು ''ಶಸ್ತ್ರರಹಿತನ ಮೇಲೆ ಶಸ್ತ್ರವೆತ್ತುವದು ಧರ್ಮವಲ್ಲವೆಂ''ದು ತನ್ನ

ಖಡ್ಗವನ್ನು ಒರೆಗಾಣಿಸಬೇಕಾಗಿತ್ತು; ಆದರೆ ಸಿಟ್ಟಿನಿಂದ ಮೈಮರೆತಿದ್ದ ಖುಸ್ರುವು ಹಾಗೆ ಮಾಡದೆ, ದುರ್ಜಯನ ಮೇಲೆ ಧುಮುಕಿದನು; ಆದರೂ ದುರ್ಜಯನು ನಿಂತ ಸ್ಥಳಬಿಟ್ಟು ಕದಲದೆ ತಿರಸ್ಕಾರದಿಂದ ನಕ್ಕು ಖುಸ್ರುವನ್ನು ಕುರಿತು—''ಖುಸ್ರು, ನಾವು ರಜಪೂತರು ಮರಣವನ್ನು ಆಟಿಗೆಯೆಂದು ತಿಳಿಯುತ್ತಿರುವೆವು ಕಂಡೆಯಾ? ಆದರೆ,''

ಈ ಮೇರೆಗೆ ದುರ್ಜಯನು ನುಡಿದು ಸುಮ್ಮನಾಗಲು, ಖುಸ್ರುವು ನಾಚಿ ತನ್ನ ಖಡ್ಗವನ್ನು ಹಿಂದಕ್ಕೆ ತಕ್ಕೊಂಡು ಗಾಂಭೀರ್ಯದಿಂದ—''ದುರ್ಜಯ, ''ಆದರೆ'' ಎಂದು ನುಡಿದು ಸುಮ್ಮನಾದೆಯಲ್ಲ? ನಿಶ್ಯಸ್ತ್ರನಾದ ನೀನು ಏನಾದರೂ ಹೇಳಿಕೊಳ್ಳುವದಿದ್ದರೆ ಹೇಳಿಕೊಳ್ಳು! ನಿನಗೆ ಖಡ್ಗವು ಬೇಕಾಗಿದ್ದರೆ ಬೇರೆ ಖಡ್ಗವು ಇಲ್ಲಿ ದೊರೆಯುವಹಾಗಿಲ್ಲ, ಅಂದಬಳಿಕ ನನ್ನ ಖಡ್ಗವನ್ನೂ ನಾನು ಚಲ್ಲಿಕೊಟ್ಟು ನಿನ್ನೊಡನೆ ಮಲ್ಲಯುದ್ಧಕ್ಕೆ ಬರುವೆನು, ಮುಂದಕ್ಕೆ ಬಾ; ಇಲ್ಲದಿದ್ದರೆ ಸುಮ್ಮನೆ ವ್ಯರ್ಥ ಹೇವವಾದರೂ ಯಾತಕ್ಕೆ? ಶರಣು ಬಾ, ನಿನಗೆ ಜೀವದಾನ ಕೊಟ್ಟು ಪ್ರತಿಬಂಧದಲ್ಲಿರಿಸುವೆನು,'' ಎಂದು ಹೇಳಿದನು. ಅದಕ್ಕೆ ದುರ್ಜಯನು ತಿರಸ್ಕಾರದಿಂದ ನಕ್ಕು—''ರಾಜಪುತ್ರಾ, ಖುಸ್ರೂ, ನಾನು ''ಆದರೆ'' ಎಂದು ನುಡಿದು ಸುಮ್ಮನಾದದ್ದು ನಿನ್ನನ್ನು ಏನಾದರೂ ಪ್ರಾರ್ಥಿಸುವದಕ್ಕಾಗಿಯಲ್ಲ; ನೀನು ಕ್ಷುದ್ರನೆಂದು ನಿನ್ನ ಮುಂದೆ ಹೇಳಲಿಕ್ಕೆ ನನಗೆ ಸಂಕೋಚ ಉಂಟಾದದ್ದಕ್ಕಾಗಿಯೆಂದು ತಿಳಿದುಕೋ! ಅಲ್ಲೋ, ನಾಳೆ ನೀನು ದಿಲ್ಲಿಯ ಪಟ್ಟಕ್ಕೆ ಕುಳಿತು ಭರತಖಂಡದ ಬಾದಶಹನೆನಿಸಿಕೊಳ್ಳತಕ್ಕವನು, ಅಂಥವನು ನೀನು ನಿಶ್ಯಸ್ತ್ರನಾದ ನನ್ನನ್ನು ವಧಿಸಲು ಮುಂದುವರಿದೆಯಲ್ಲ? ಇದು ನಿನ್ನ ಕ್ಷುದ್ರತನವಲ್ಲದಿದ್ದರೆ ಮತ್ತೇನು? ನಿನ್ನ ತಾಯಿಯಾದ ಜೋಧಬಾಯಿಯ ದ್ವಾರದಿಂದ ನಿನ್ನ ದೇಹದಲ್ಲಿ ರಜಪೂತರ ರಕ್ತವು ಆಡುತ್ತಿರಲು, ನಿಶ್ಯಸ್ತ್ರ ಪ್ರತಿಸ್ಪರ್ಧಿಯ ಮೇಲೆ ಶಸ್ತ್ರವೆತ್ತುವದು ಧರ್ಮವೆ? ಎತ್ತು ಎತ್ತು ನಿನ್ನ ಖಡ್ಗವನ್ನೆತ್ತಿ ನನ್ನನ್ನು ಎಥೇಚ್ಛವಾಗಿ ಸಂಹರಿಸು! ನಿನ್ನಂಥ ಕ್ಷುದ್ರನಲ್ಲಿ ಏನಾದರೂ ಕೇಳಿಕೊಳ್ಳುವಷ್ಟು ಕ್ಷುದ್ರನು ನಾನಿರುವದಿಲ್ಲ,

ಒಬ್ಬ ಸಾಮಾನ್ಯ ರಜಪೂತನು ಈ ಮೇರೆಗೆ ತನ್ನನ್ನು ತಿರಸ್ಕರಿಸಿ ಮಾತಾಡುವದನ್ನು ಕೇಳಿ ಅಸಹಿಷ್ಣುವಾದ ಖುಸ್ರುವು ಕ್ರೋಧಸಂತಪ್ತನಾಗಿ ತನ್ನ ಖಡ್ಗವನ್ನು ಎತ್ತಿ—''ಎಲೈ ವಂಚಕನೇ. ನಿನ್ನ ಹೇಡಿತನವನ್ನು ಇಂಥ ಹುರುಳಿಲ್ಲದ ಪೌರುಷದ ಮಾತುಗಳನ್ನಾಡಿ ಮುಚ್ಚಿಕೊಳ್ಳುವೆಯಾ? ನನ್ನ ಕ್ಷುದ್ರತನವನ್ನು ತೋರಿಸುವದಕ್ಕಿಂತ ನಿನ್ನ ಹೇಡಿತನವನ್ನು ಬೈಲಿಗಿಟ್ಟಿದ್ದರೆ, ಅದಕ್ಕಾಗಿ ನಿನ್ನನ್ನು ನಾನು ಕ್ಷಮಿಸಿ ಬಿಡಬಹುದಾಗಿತ್ತು; ಆದರೆ ಮೋಸಗಾರನಾದ ನೀನು ಸರ್ವಥಾ ಕ್ಷಮೆಗೆ ಪಾತ್ರನಲ್ಲ, ನಿನ್ನನ್ನು ಜೀವದಿಂದರಗೊಟ್ಟರೆ ನನ್ನ ಘಾತವಾಗುವದು ನಿಶ್ಚಯವು. ನಾನು ವಿಚಾರಮಾಡದೆ ನಿನ್ನಂಥ ಹೇಡಿಯ ಮೇಲೆ ವಿಶ್ವಾಸವಿಟ್ಟು, ನನ್ನ ಮನಸ್ಸಿನೊಳಗಿನ ಮಾತನ್ನು ನಿನ್ನಮುಂದೆ ಹೇಳಿದೆನು; ಆದರೆ ನೀನು ವಿಶ್ವಾಸಕ್ಕೆ ಯೋಗ್ಯನಲ್ಲದ್ದರಿಂದ ನಿನ್ನ ಶಿರಸ್ಸನ್ನು ತುಂಡರಿಸುವದೇ ಯೋಗ್ಯವು'' ಎಂದು ನುಡಿದು ಖುಸ್ರುವು ತನ್ನ ತೀಕ್ಷ್ಣ ಖಡ್ಗವನ್ನು ಎತ್ತಿ ದುರ್ಜಯನನ್ನು ತುಂಡರಿಸತಕ್ಕವನು, ಅಷ್ಟರಲ್ಲಿ ಯಾವಳೋ ಒಬ್ಬ ತರುಣ ಸುಂದರಿಯು ಖುಸ್ರುವಿನ ಖಡ್ಗವೆತ್ತಿದ ಕೈಯನ್ನು ತನ್ನ ಎರಡೂ ಕೈಗಳಿಂದ ಗಟ್ಟಿಯಾಗಿ ಹಿಡಿದಳು! ಆ

ಸುಂದರಿಯ ಧೈರ್ಯ–ಸಾಹಸಗಳನ್ನು ನೋಡಿ ಖುಸ್ರುವು ಬೆರಗಾಗಿ ಆಕೆಯ ಅತ್ಯಂತ ಮನೋಹರವಾದ ರೂಪವನ್ನು ನೋಡುತ್ತ—''ಇವಳಾರು ಸೌಂದರ್ಯ ದೇವತೆಯು! ಈಕೆಯ ಕೋಮಲ ಹಸ್ತಗಳಲ್ಲಿ ಇಷ್ಟು ವಿಲಕ್ಷಣ ಸಾಮರ್ಥ್ಯವೇ! ರಜಪೂತ ವೀರರಿಗಿಂತ ರಜಪೂತ ಸ್ತ್ರೀಯರು ಹೆಚ್ಚು ಶೂರರಿರುವರೆಂಬದು ನಿಜವು!''

ಈ ಮೇರೆಗೆ ಖುಸ್ರುವು ಮನಸ್ಸಿನಲ್ಲಿ ಯೋಚಿಸುತ್ತಿರುವಾಗ, ಆತನ ತಾಯಿಯಾದ ಜೋಧಬಾಯಿಯ ಮೂರ್ತಿಯು ಆತನ ಕಣ್ಣಿಗೆ ಕಟ್ಟಿತು. ಮಾರವಾಡದ ವೀರ ರಜಪೂತನಾದ ಮಾನಸಿಂಹನ ತಂಗಿ ಆ ಜೋಧಬಾಯಿಯನ್ನು ಅಕಬರನ ಮಗ ಸೇಲೀಮನಿಗೆ ಕೊಟ್ಟಿತ್ತೆಂದು ಇತಿಹಾಸ ಬಲ್ಲವರಿಗೆ ಹೇಳಲವಶ್ಯವಿಲ್ಲ. ಖುಸ್ರುವು ಹೀಗೆ ಮನಸ್ಸಿನಲ್ಲಿ ಯೋಚಿಸುತ್ತ ಸುಮ್ಮನೆ ನಿಂತಿರುವ ಸಂಧಿಯನ್ನು ಸಾಧಿಸಿ ಆ ತರುಣಿಯು ತನ್ನ ಟೊಂಕದಲ್ಲಿ ಅಲೆದಾಡುತ್ತಿರುವ ಖಡ್ಗವನ್ನು ಮುಂದಕ್ಕೆ ಚಾಚಿ ದುರ್ಜಯನನ್ನು ಕುರಿತು—''ಹಾ! ದುರ್ಜಯ, ಇನ್ನು ತಡಮಾಡಬೇಡ; ಇನ್ನು ನಿನ್ನ ಸರತಿಯು ಬಂದಿರುವದು. ಈಗ ನೀನು ಈ ಖಡ್ಗವನ್ನು ತಕ್ಕೊಂಡು ರಾಜಕುಲಕಲಂಕನಾದ ಈ ಶಹಾಜಾದಾನನ್ನು ತುಂಡರಿಸು. ಇಂಥ ಸಂಧಿಯು ಪುನಃ ಒದಗಿ ಬರಲಿಕ್ಕಿಲ್ಲ. ಇದರಿಂದ ಮೊಗಲ ಸಾಮ್ರಾಜ್ಯದಲ್ಲಿ ಉಂಟಾಗಿರುವ ಎರಡಿಟ್ಟು ನಷ್ಟವಾಗಿ ಹೋಗುವದು.'' ಎಂದು ನುಡಿದಳು; ಆದರೆ ಅದರಿಂದ ಖುಸ್ರುವಿನ ಚಿತ್ತವೃತ್ತಿಯು ಆ ಸುಂದರಿಯಿಂದೆತ್ತಲೂ ಚಲಿಸಲಿಲ್ಲ. ಆತನು ಆ ಮನಮೋಹಿನಿಯ ರೂಪವನ್ನು ಕಣ್ಣುಗಳಿಂದ ಹೀರಹತ್ತಿದನು. ಅಕಬರ ಬಾದಶಹನಂಥ ಘನವಂತನ ಮೊಮ್ಮೊಗನಾದರೂ ಆತನು ಈವರೆಗೆ ಅಂಥ ಮೋಹಕ ರೂಪವನ್ನು ನೋಡಿದ್ದಿಲ್ಲ. ಆ ತರುಣಿಯ ವಿಶಾಲ ನೇತ್ರಗಳನ್ನೂ, ಆಕೆಯ ಪೃಷ್ಠಭಾಗದ ಮೇಲೆ ಅಸ್ತವ್ಯಸ್ತವಾಗಿ ಪಸರಿಸಿರುವ ಕುಂತಲ ಭಾರವನ್ನೂ, ಭಾಲ ಪ್ರದೇಶದಲ್ಲಿ ಮುತ್ತುಗಳಂತೆ ಹೊಳೆಯುತ್ತಿರುವ ಬೆವರಹನಿಗಳನ್ನೂ, ವಿಜಯಶ್ರೀಯಿಂದ ಮಿನಗುತ್ತಿರುವ ಆಕೆಯ ಮುಖಚಂದ್ರವನ್ನೂ ನೋಡಿ ಆ ತರುಣ ರಾಜಪುತ್ರನು ಹುಚ್ಚಾಗಿ, ಆತುರದಿಂದ ಆ ತರುಣಿಯನ್ನು ಕುರಿತು—''ಸುಂದರೀ, ನೀನು ಯಾರು'' ಎಂದು ಪ್ರಶ್ನಮಾಡಿದನು.

ಶಹಾಜಾದಾನ ಮೇಲೆ ತನ್ನ ರೂಪದ ಪರಿಣಾಮವು ಈ ಪರಿ ಆದದ್ದಕ್ಕಾಗಿ ಆ ರಮಣಿಗೆ ಬಹಳ ಸಮಾಧಾನವಾಯಿತು. ಆಕೆಯು ತನ್ನ ತೇಜಃಪುಂಜ ನೇತ್ರಗಳಿಂದ ಕೆಲಹೊತ್ತು ಆತನನ್ನು ನೋಡುತ್ತ ನಿಂತು, ಆಮೇಲೆ ಮುಗುಳುನಗೆ ನಗುತ್ತ ಗಂಭೀರ ಸ್ವರದಿಂದ—''ನಾನು ಯಾರೆಂದು ಕೇಳುವಿರೋ, ರಾಜಪುತ್ರರೇ, ರಜಪೂತ ರಮಣಿಯರ ಗುರುತು ಅವರ ಕೃತಿಯಿಂದಲೇ ಆಗುತ್ತಿರುವದು. ಅವರು ತಮ್ಮ ಪ್ರೇಮ ಸರ್ವಸ್ವದ ಸಲುವಾಗಿ ಏನು ಮಾಡಿಯಾರೆಂಬದನ್ನು ಹೇಳಲಾಗುವದಿಲ್ಲ. ನಾನು ಈ ದುರ್ಜಯಸಿಂಹನ ವಾಗ್ದತ್ತ ವಧುವಾಗಿರುವೆನು. ಈತನೊಡನೆ ನನ್ನ ಲಗ್ನವಾಗಿರದಿದ್ದರೂ, ಈತನೇ ನನ್ನ ಪತಿಯಾಗತಕ್ಕವನೆಂದು ನಿಶ್ಚಯವಾಗಿರುವದರಿಂದ, ಇಂಥ ಪ್ರಸಂಗದಲ್ಲಿ ನನ್ನ ಪ್ರೇಮಸ್ಥಾನದ ರಕ್ಷಣ ಮಾಡುವದು ನನ್ನ ಕರ್ತವ್ಯವಲ್ಲವೋ? ಆದ್ದರಿಂದ ಮಹಾರಾಜ, ನಾನು ತಮಗೆ ಇದಕ್ಕೂ ಹೆಚ್ಚಿಗೆ ಏನು ಹೇಳಲಿ? ನನ್ನ ಈ ವಾಗ್ದತ್ತ ಪತಿಯ ರಕ್ಷಣಕ್ಕಾಗಿ ನಾನು ನಿಮ್ಮೊಡನೆ ಕಾದಲು ಸಿದ್ಧಳಾಗಿದ್ದೇನೆ. ಅವರು

ಮಾಡಿರುವ ಅಪರಾಧವು ನನ್ನದೆಂದು ತಿಳಿಯಿರಿ. ನಾನು ವೀರಪುತ್ರಿಯಾಗಿದ್ದು, ಮುಂದೆ ವೀರ ಪತ್ನಿಯಾಗತಕ್ಕವಳು. ನನ್ನ ಈ ಕಠಾರಿಯು ನನ್ನ ಹಾಗು ನನ್ನ ಪತಿಯ ಸಂರಕ್ಷಣದ ಸಾಧನವಾಗಿರುತ್ತದೆ, ಎಂದು ನುಡಿದು ಆ ತರುಣಿಯು ತನ್ನ ಕಠಾರಿಯನ್ನು ತಕ್ಕೊಂಡು ಖುಸ್ರುವಿನೊಡನೆ ಕಾದಲು ಸಿದ್ಧಳಾಗಲು, ಆಕೆಯ ಕಣ್ಣುಗಳು ಕೆಂಪಡರಿದವು! ಅದನ್ನು ನೋಡಿ ಖುಸ್ರುವು ಆಶ್ಚರ್ಯದಿಂದ ಚೆಪ್ಪಾಗಿ ತನ್ನ ಮನಸ್ಸಿನಲ್ಲಿ—"ಧನ್ಯನು ಧನ್ಯನು! ಈ ದುರ್ಜಯ ಸಿಂಹನು ಪರಮ ಧನ್ಯನು! ದೇವ ದುರ್ಲಭಳಾದ ಇಂಥ ಸುಂದರ ತರುಣಿಯು ಈತನ ಸಲುವಾಗಿ ಹೀಗೆ ತನ್ನ ಪ್ರಾಣವನ್ನರ್ಪಿಸಲಿಕ್ಕೂ ಸಿದ್ಧಳಾಗಿರುವದರಿಂದ, ಈತನು ಪರಮ ಧನ್ಯನೇ ಸರಿ! ಆದರೆ ಈಗ ನಾನು ಮಾಡಲೇನು? ಸ್ತ್ರೀಯ ಮೇಲೆ ಶಸ್ತ್ರಹಿಡಿಯುವದೂ ಕಷ್ಟ; ನನ್ನ ಪ್ರಾಣ ರಕ್ಷಣದ ದೃಷ್ಟಿಯಿಂದ ಶಸ್ತ್ರಹಿಡಿಯದಿರುವದೂ ಕಷ್ಟ" ಎಂದು ಯೋಚಿಸುತ್ತಿರಲು, ಆತನಿಗೊಂದು ಯುಕ್ತಿಯು ಹೊಳೆದು, ಆತನು ತನ್ನ ಖಡ್ಗವನ್ನು ಒರೆಗಾಣಿಸುತ್ತ ಆ ತರುಣಿಯನ್ನು ಕುರಿತು—"ಸುಂದರೀ, ನೀನು ನನ್ನನ್ನು ಸೋಲಿಸಿದೆಯೆಂದೇ ತಿಳಿದುಕೊಳ್ಳುವೆನು. ನಿನ್ನೊಡನೆ ಯುದ್ಧಮಾಡಿ ಜಯಶಾಲಿಯಾಗುವ ಇಚ್ಛೆಯು ನನಗಿರುವದಿಲ್ಲ; ಇಗೋ ನೋಡು, ಹೊರಟೆನು" ಎಂದು ನುಡಿದು ಗುಹೆಯ ದ್ವಾರದ ಕಡೆಗೆ ಸಾಗುತ್ತಿರಲು, ದುರ್ಜಯಸಿಂಹನು ಆತನನ್ನು ಅಡ್ಡಗಟ್ಟಿ ಕರ್ಕಶ ಧ್ವನಿಯಿಂದ—"ಖುಸ್ರೂ, ಎತ್ತ ಹೊರಟೆ? ಈ ನಿರ್ಜನ ಗುಹೆಯೊಳಗಿನ ಪ್ರಶಸ್ತ ಪ್ರದೇಶವು ರಕ್ತಪಾನಕ್ಕಾಗಿ ಆತುರಪಡುತ್ತಿರಲು, ನೀನು ಹೊರಟೆಯೆತ್ತ? ನನ್ನ ಈ ಮುರುಕ ಖಡ್ಗವೇ ನನಗೆ ಕಾದಲಿಕ್ಕೆ ಸಾಕಾಗಿರುವದು. ನನ್ನ ಆಯುಷ್ಯವಿದ್ದರೆ ಈ ಮುರುಕ ಕತ್ತಿಯೇ ನನ್ನ ಪ್ರಾಣವನ್ನು ರಕ್ಷಿಸುವದು. ಹೋಗು, ರಜಪೂತ ಕನ್ಯೆ ಮಂದಾಕಿನೀ, ಹೋಗು; ರಜಪೂತ ವೀರನ ಹೆಸರಿಗೆ ಕುಂದು ತರಬೇಡ. ಸ್ತ್ರೀಯ ಸಹಾಯದಿಂದ ಪ್ರಾಣರಕ್ಷಣ ಮಾಡಿಕೊಳ್ಳಲಿಕ್ಕೆ ಈ ದುರ್ಜಯನು ಇಚ್ಛಿಸುವದಿಲ್ಲ. ನನ್ನ ವಿಷಯದ ನಿನ್ನ ಉತ್ಕಟ ಪ್ರೇಮವು ಈ ದಿನ ಚನ್ನಾಗಿ ಪ್ರಕಟವಾಯಿತು. ಹೋಗು, ನನ್ನ ಹೃದಯ ದೇವತೆಯೇ ಹೋಗು! ಎಂದಾದರೂ ನಾನು ನಿನ್ನನ್ನು ಅನಾದರದಿಂದ ನೋಡಿದ್ದರೆ ಅದಕ್ಕಾಗಿ ನನ್ನನ್ನು ಕ್ಷಮಿಸು. ನಿನ್ನ ಸಂಬಂಧದಿಂದ ನಾನು ಪರಮ ಭಾಗ್ಯಶಾಲಿಯು, ಇಂದು ನಾನು ಕುಮಾರ ಖುಸ್ರುವಿನ ಖಡ್ಗಕ್ಕೆ ತುತ್ತಾಗದೆ ಉಳಿದರೆ, ನನ್ನ ಈ ಹೃದಯವು ಮೊದಲು ನಿನ್ನ ಆಲಿಂಗನದಿಂದಲೇ ಪವಿತ್ರವಾದೀತು. ನನ್ನ ಮೇಲೆ ನಿನ್ನ ಭಕ್ತಿ ವಿಶ್ವಾಸಗಳಿದ್ದರೆ, ನಾನು ನಿನಗೆ ಪೂಜ್ಯನಾಗಿ ತೋರುತ್ತಿದ್ದರೆ ಇಲ್ಲಿಂದ ನೀನು ಈಗ ತಟ್ಟನೆ ಹೊರಟು ಹೋಗು ನೋಡೋಣ!"

ದುರ್ಜಯನ ಶೌರ್ಯವನ್ನು ಮಂದಾಕಿನಿಯು ಅರಿಯದವಳಿದ್ದಿಲ್ಲ; ಆದ್ದರಿಂದ ಆಕೆಯು ಪಿಟ್ಟೆಂದು ಮಾತಾಡದೆ ಮುಗುಳುನಗೆಯಿಂದ ದುರ್ಜಯನ ಕಡೆಗೆ ನೋಡುತ್ತ ಅಲ್ಲಿಂದ ಹೊರಟುಹೋದಳು. ಇತ್ತ ಖುಸ್ರುವಿನ ಕಣ್ಣುಗಳು ಆ ಸುಂದರಿಯಲ್ಲಿ ನಿಟ್ಟು ಹೋಗಿದ್ದವು; ಮೊಗಲ ಬಾದಶಹನ ಜನಾನಖಾನೆಯಲ್ಲಿ ಸುಂದರ ತರುಣಿಯರಿಗೆ ಕೊರತೆಯಿದ್ದಿಲ್ಲ; ಆದರೆ ಅಲ್ಲಿಯ ಅತ್ಯಂತ ಸೌಂದರ್ಯಶಾಲಿನಿಯರಾದ ತರುಣಿಯರು ಮಂದಾಕಿನಿಯ ತೊತ್ತಾಗಲಿಕ್ಕೆ ತಕ್ಕವರೆಂದು ಖುಸ್ರುವು ತರ್ಕಿಸಿದನು. ಇನ್ನು ತನ್ನ ತಾಯಿಯಾದ ಜೋಧಬಾಯಿಯು

ಮಂದಾಕಿನಿಗಿಂತಲೂ ಹೆಚ್ಚು ಸೌಂದರ್ಯಶಾಲಿನಿಯಾಗಿದ್ದದ್ದು ಖುಸ್ರುವಿನ ಮನಸ್ಸಿಗೆ ಹೊಳೆಯಿತು; ಮತ್ತು ತನ್ನ ತಾಯಿಯ ಮೇಲೆ ಖುಸ್ರುವಿನ ಶ್ರದ್ಧೆಯೂ ಉತ್ಕಟವಾದದ್ದಿತ್ತು; ಆದರೆ ಮಂದಾಕಿನಿಯನ್ನು ತಾಯಿಯೆಂದು ಭಾವಿಸುವ ಇಚ್ಛೆಯು ಖುಸ್ರುವಿಗೆ ಇದ್ದಿಲ್ಲ. ಆತನು ಮಂದಾಕಿನಿಯ ವಿಷಯವಾಗಿ ಬೇರೆ ಭಾವನೆಯನ್ನು ತಾಳಿದ್ದನು. ಈ ಸ್ಥಿತಿಯಲ್ಲಿ ಆ ಇಬ್ಬರು ವೀರರು ಸ್ತಬ್ಧವಾಗಿದ್ದರು. ಯಾರ ಮುಖದಿಂದಲೂ ಶಬ್ದಗಳು ಹೊರಡಲೊಲ್ಲವು. ಮೊದಲು ಯಾರು ಮಾತಾಡಬೇಕೆಂಬ ಎಣಿಕೆಯಲ್ಲಿ ಅವರು ಇದ್ದರು. ಆಗ ಎಂಟುತಾಸು ರಾತ್ರಿಯಾಗಿತ್ತು. ಹಚ್ಚಿ ಇಟ್ಟಿದ್ದ ದೀವಟಿಗೆಯು ಮೆಲ್ಲಮೆಲ್ಲನೆ ಆರುವಹಾದಿಯನ್ನು ಹಿಡಿದಿತ್ತು. ಮರಣೋನ್ಮುಖನಾದ ರೋಗಿಯು ಕ್ರಮವಾಗಿ ಕಾಂತಿಹೀನವಾಗುವಂತೆ ಆ ದೀವಟಿಗೆಯು ಮಂದ ಪ್ರಕಾಶವನ್ನು ಹೊಂದತೊಡಗಿತ್ತು. ಈ ಸ್ಥಿತಿಯಲ್ಲಿ ದುರ್ಜಯನು ಶಾಂತತೆಯ ಭಂಗ ಮಾಡಿ ಖುಸ್ರುವನ್ನು ಕುರಿತು—

ದುರ್ಜಯ—ಖುಸ್ರೂ, ಪರಾಭವಪಟ್ಟಿದ್ದ ಈ ರಜಪೂತನು ಇನ್ನು ತನಗಾದ ಅವಮಾನವನ್ನು ಸಹಿಸಲಾರನು.

ಖುಸ್ರು—ದುರ್ಜಯಾ, ನಿನ್ನ ಪರಾಭವವೆಲ್ಲಿ ಆಗಿದೆ?

ದುರ್ಜಯ—ನನ್ನ ಪರಾಭವವಾಗಿರದಿದ್ದರೂ, ಖಡ್ಗವನ್ನು ಖಂಡಿಸಿದವರಿಗೆ ರಜಪೂತ ವೀರರು ಯಾವ ಪ್ರಾಯಶ್ಚಿತ್ತ ಕೊಡುವರೆಂಬದರಗೊತ್ತು ನಿನಗೆ ಆಗಬೇಕಾಗಿರುವದು. ಮೊಗಲ ವಂಶದವರಿಂದಾದ ಅಲ್ಪ ಅಪಮಾನವನ್ನೂ ನಾನು ಸಹಿಸಲಾರೆನು.

ಖುಸ್ರು—(ನಕ್ಕು) ಎಲಾ, ನೀನೊಬ್ಬನು ಸಹಿಸಲಿಕ್ಕಿಲ್ಲ; ಆದರೆ ಎಷ್ಟಾದರೂ ನೀವು ರಜಪೂತರು ನಮ್ಮ ಮಾಂಡಲಿಕರಿರುತ್ತೀರಿ. ನಿಮ್ಮ ಸರ್ವಶ್ರೇಷ್ಠನಾದ ರಾಣಾ ಪ್ರತಾಪಸಿಂಹನ ಖಡ್ಗದ ದೊಡ್ಡಿಸ್ತಿಕೆಯನ್ನು ನಮ್ಮ ಅಜ್ಜನಾದ ಅಕಬರ ಬಾದಶಹನೇ ಇಲ್ಲದಂತೆ ಮಾಡಿದನು. ನಾನು ನನ್ನ ತಂದೆಯ ಕೊಲೆಮಾಡಲು ಒಮ್ಮೆ ಅವಿಚಾರದಿಂದ ಸಿದ್ಧನಾಗಿದ್ದರೂ, ನನ್ನ ಆ ಪೂಜ್ಯ ತಂದೆಯ ಶೌರ್ಯ–ಧೈರ್ಯಗಳನ್ನು ಮರೆಯಲಾರೆನು. ನಿಮ್ಮ ಕೀರ್ತಿ–ದುಂದುಭಿಯ ಧ್ವನಿಯನ್ನು ಅಡಗಿಸಿಬಿಟ್ಟಿದ್ದ ನನ್ನ ಅಜ್ಜನಾದ ಅಕಬರ ಬಾದಶಹನೂ, ನನ್ನ ತಂದೆಯಾದ ಶಹಾಜಾದಾ ಸೇಲೀಮನೂ ಇನ್ನೂ ಜೀವದಿಂದಿರುವರು! ಆದ್ದರಿಂದ ರಜಪೂತರು ನೀವು ಇಲ್ಲದ ಪೌರುಷ ತೋರಿಸುವದು ಭೂಷಣವಲ್ಲ.

ದುಜರ್ಯ—ಕುಮಾರ, ಈ ದುರ್ಜಯನ ಮುಂದೆ ನಿಮ್ಮ ಮೊಗಲರ ದೊಡ್ಡಿಸ್ತನವನ್ನು ತೋರಿಸುವ ಗೊಡವಿಗೆ ಹೋಗಬೇಡ. ನಮ್ಮ ಪೂಜ್ಯ ರಾಣಾರವರಂಥ ರಜಪೂತ ವೀರವರರ ಕೀರ್ತಿ ಧ್ವನಿಯನ್ನು ಅಡಗಿಸುವದು ನಿಮ್ಮ ಅಜ್ಜನ ಅಥವಾ ತಂದೆಯ ಯೋಗ್ಯತೆಯಲ್ಲ. ನಮ್ಮ ಒಡೆಯರಾದ ಮಾನಸಿಂಹರವರ ಪುಣ್ಯದಿಂದಲೇ ಮೊದಲು ನೀವು ಈಗಿನ ಉತ್ಕರ್ಷ ಹೊಂದಿರುವಿರೆಂಬದನ್ನು ಮರೆಯಬೇಡಿರಿ. ನಾನು ಮಾನಸಿಂಹರವರ ಅಂಗರಕ್ಷಕನಾಗಿದ್ದರೂ, ಅದರಂತೆ ಅವರ ಅತುಲ ಪರಾಕ್ರಮದ ವಿಷಯವಾಗಿ ಪೂಜ್ಯ ಬುದ್ಧಿಯುಳ್ಳವನಾಗಿದ್ದರೂ

ಅವರ ಸ್ವದೇಶದ್ರೋಹದ ಪಾತಕವನ್ನು ಈಗ ಬಾಯಿಂದ ಉಚ್ಚರಿಸದೆ ಇರಲಾರೆನು. ನಮ್ಮ ಆ ಮಾನಸಿಂಹರವರ ಪ್ರತಾಪದ ದರ್ಪದಿಂದಲೇ ನಿಮ್ಮ ಅಜ್ಜನೂ-ತಂದೆಯೂ ಈಗಿನ ಸ್ಥಿತಿಯಲ್ಲಿ ಬದುಕಿ ಉಳಿದಿರುವರೆಂದು ತಿಳಿದುಕೋ.'' ಎಂದು ನುಡಿಯಲು, ಅದನ್ನು ಕೇಳಿ ಖುಸ್ರುವು ಅತ್ಯಂತ ಕ್ರುದ್ಧನಾದನು. ತನ್ನ ಗುರು ಜನರ ನಿಂದೆಯ ನುಡಿಗಳಿಂದ ಅವನ ಮೈಮೇಲಿನ ಎಚ್ಚರ ತಪ್ಪುತ್ತಿರಲು, ಆತನು ದುರ್ಜಯನನ್ನು ಕುರಿತು—''ದುರ್ಜಯಾ, ಬಾಯಿಮುಚ್ಚು, ನಮ್ಮ ಹಿರಿಯರನ್ನು ಅವಮಾನಗೊಳಿಸಿದ ನೀನು ಇನ್ನು ಸತ್ತೆಯೆಂದು ತಿಳಿ.'' ಎಂದು ದುರ್ಜಯನ ಮೇಲೆ ದುಮುಕಿ ಹೋಗುತ್ತಿರಲು, ಅತ್ತ ದುರ್ಜಯನೂ ಖುಸ್ರುವನ್ನು ಕುರಿತು—''ತಂದೆಯ ಕೊಲೆಮಾಡಹೋದ ನಿನ್ನ ಪಿತೃಭಕ್ತಿಯು ನಾನು ಅರಿಯದ್ದಲ್ಲವೆ''ಂದು ನುಡಿಯುತ್ತ ಸಮರ ಸನ್ನದ್ಧನಾದನು. ಆದರೆ ಅಷ್ಟರಲ್ಲಿ ಯಾರೋ ಗಂಭೀರ ಧ್ವನಿಯಿಂದ— ''ದುರ್ಜಯಾ, ನಿನ್ನ ಉದ್ಧಟತನವನ್ನು ಸಾಕುಮಾಡು!'' ''ರಾಜಕುಮಾರಾ, ನೀನು ಎಂಥ ದುರ್ದೈವಿಯೋ'' ಎಂದು ಉಚ್ಚರಿಸಲು, ಆ ಇಬ್ಬರು ತರುಣ ವೀರರು ಬೆಪ್ಪಾಗಿ ಅತ್ತಿತ್ತ ನೋಡ ತೊಡಗಿದರು!

ನಮಾತುಃಪರದೈವತಂ

ಹೀಗೆ ನುಡಿದು ಕರ್ಕಶ ಧ್ವನಿಯು ಗುಹೆಯನ್ನು ತುಂಬಿ ಹೊರಸೂಸುತ್ತಿರಲು ಅದರ ಗುರುತು ಆ ಇಬ್ಬರೂ ತರುಣರಿಗೂ ಹತ್ತಿ ಅವರು ಭಯದಿಂದ ಮುಂದುಗಾಣದಾದರು. ಆ ಗಂಭೀರ ಧ್ವನಿಯ ಪ್ರತಿಧ್ವನಿಗಳು ಆ ಗುಹೆಯಲ್ಲಿ ಉಂಟಾದದ್ದರಿಂದ ಹಲವು ಜನರು ಅದೇ ಮಾತನ್ನು ಮತ್ತೆ ಮತ್ತೆ ಅಂದಂತಾಗಿ, ಆ ತರುಣರ ಮಸ್ತಕಗಳು ಭ್ರಮಿಸತೊಡಗಿದವು. ಅವರಲ್ಲಿ ಖುಸ್ರುವಿನ ದುರವಸ್ಥೆಯನ್ನಂತು ವರ್ಣಿಸಲಾಸಲ್ಲ. ಆ ಭಯಂಕರವಾದ ಗುಹೆಯು ತನ್ನ ಕರಾಲವದನವನ್ನು ತೆರೆದು ನುಂಗಬರುವದೋ ಎನ್ನುವ ಹಾಗೆ ಆತನಿಗೆ ಆಯಿತು! ಅಲ್ಲಿ ಎಣ್ಣೆತೀರಿ ಶಾಂತವಾಗತೊಡಗಿದ್ದ ದೀವಟಿಗೆಯು ಒಮ್ಮೆಲೆ ದೊಡ್ಡದಾಗಿ ಗುಹೆಯ ಭಯಂಕರತೆಯನ್ನು ಮತ್ತಿಷ್ಟು ಹೆಚ್ಚಿಸಿ, ಮತ್ತೆ ಮಂದಪ್ರಕಾಶ ಉಳ್ಳದ್ದಾಯಿತು. ಆ ಮಂದಪ್ರಕಾಶದಲ್ಲಿ ಅಕಸ್ಮಾತ್ತಾಗಿ ಬಂದ ಆ ಭೀಮಕಾಯದ ವ್ಯಕ್ತಿಯೂ, ಅದರ ಮುಖದಿಂದ ಹೊರಟ ಗಂಭೀರ ಧ್ವನಿಯೂ ಕುಮಾರನನ್ನು ಗದಗುಟ್ಟಿ ನಡುಗಿಸಿದವು! ಆ ನುಡಿಯ ಪ್ರತಿಧ್ವನಿಗಳಿಂದ ತನ್ನ ಕಿವಿಗಳು ಗಡಚಿಕ್ಕಿ ಕಿವುಡಾಗುವವೋ ಅನ್ನುವ ಹಾಗೆ ಆ ಕುಮಾರನಿಗೆ ತೋರಿತು; ಆದ್ದರಿಂದ ಪಿತೃದ್ರೋಹಿಯೂ, ಭಾವೀ, ಮೊಗಲ ಬಾದಶಹನೂ, ಸದ್ಯಕ್ಕೆ ಅಂಬರಾಧೀಶ ಮಾನಸಿಂಹನ ಅಭ್ಯಾಗತನೂ ಆದ ಖುಸ್ರುವು ಮಂತ್ರಮುಗ್ಧನಂತೆ ಉಲುಕದೆ ಸುಮ್ಮನೆ ನಿಂತುಬಿಟ್ಟನು. ಆತನಿಗೆ ತನ್ನ ಜೀವನ ಶಕ್ತಿಗಳ ಲೋಪವಾಗುವಂತೆ ತೋರಿತು. ಆತನು ಉದ್ಭ್ರಾಂತ ನೇತ್ರಗಳಿಂದ ಆ ಬಂದ ವ್ಯಕ್ತಿಯನ್ನು ಎವೆಯಿಕ್ಕದೆ ನೋಡುತ್ತಿರುವಾಗ, ಆ ಸ್ವಭಾವ ಸುಂದರನಾದ ಖುಸ್ರುವಿನ

ಮುಖದಲ್ಲಿ ಪ್ರೇತಕಳೆಯು ಸುರಿಯುತ್ತಿರುವಂತೆ ಆ ಮಂದ ಪ್ರಕಾಶದಲ್ಲಿ ತೋರುತ್ತಿತ್ತು; ಆದರೆ ಆ ಖುಸ್ರುವಿನ ಆ ದುರವಸ್ಥೆಯಲ್ಲಿ ಬಂದ ಆ ವ್ಯಕ್ತಿಯು ಸುಮ್ಮನೆ ನಿಂತುಕೊಳ್ಳುವ ಬಗೆಯೆತ್ತ? ಆ ವ್ಯಕ್ತಿಯು ಖುಸ್ರುವಿನ ಎದುರಿಗೆ ಬಂದು ಗಂಭೀರ ಧ್ವನಿಯಿಂದ—''ಖುಸ್ರೂ, ಇದೇನು ಸಮಾಚಾರವು?'' ಎಂದು ಪ್ರಶ್ನೆ ಮಾಡಿದನು; ಆದರೂ ಖುಸ್ರುವಿನ ಮುಖದಿಂದ ಶಬ್ದಗಳು ಹೊರಡಲಿಲ್ಲ, ಆ ಪ್ರಶ್ನವು ಖುಸ್ರುವಿಗೆ ಪ್ರಲಯಕಾಲದ ಸಿಡಿಲಿನಂತೆ ತೋರಿ, ಅದರ ಆಘಾತದಿಂದ ಆತನ ವೀರ ಹೃದಯವು ಕಂಪಿಸತೊಡಗಿತು.

ಹೀಗೆ ಮಿಟ್ಟದೆ ಮಿಸುಕದೆ ಪಿಟ್ಟೆಂದು ಮಾತಾಡದೆ ಕಂಬದಂತೆ ನಿಂತುಬಿಟ್ಟಿರುವ ಖುಸ್ರುವನ್ನು ನೋಡಿ ಆ ವ್ಯಕ್ತಿಯು ಮತ್ತೆ ಗಂಭೀರ ಧ್ವನಿಯಿಂದ—''ಕುಮಾರಾ ಖುಸ್ರೂ! ಅಕಬರ ಬಾದಶಹನ ವಂಶವನ್ನು ಉಜ್ವಲವಾಗಿ ಮಾಡುವ ಕುಲದೀಪಕ ಖುಸ್ರುವು ನೀನೇಯೇನು? ನನ್ನ ಸಾವಿಗಾಗಿ ನೀನೇಕೆ ಇಷ್ಟು ಆತುರನಾದೆ? ನಿಜವಾಗಿ ನೀನು ದುರ್ದೈವಿಯಾಗಿದ್ದು, ಮನುಷ್ಯನ ಪರೀಕ್ಷೆಯು ನಿನಗೆ ಸರ್ವಥಾ ಆಗುವದಿಲ್ಲೆಂದು ಅನ್ನಬೇಕಾಗುತ್ತದೆ. ಅಲ್ಲೋ, ನಿನ್ನ ಹಿತಕ್ಕಾಗಿ ನಾನು ಸರ್ವಸ್ವದ ತ್ಯಾಗಮಾಡಲು ಸಿದ್ಧನಾಗಿರುವಾಗ, ನೀನು ನನ್ನನ್ನು ಕೊಲ್ಲಲು ಸಿದ್ಧನಾಗಿರುವೆಯೆಂದ ಬಳಿಕ ಮಾತಾಡುವದಾದರೂ ಏನು? ಐಶ್ವರ್ಯ, ಮಾನ ಮರ್ಯಾದೆ, ಸಾಮ್ರಾಜ್ಯದ ಸೂತ್ರಗಳು ಇವೆಲ್ಲ ನನ್ನ ಕೈ ಸೇರಿದ್ದು, ಕೇವಲ ನಿನ್ನ ಹಿತದ ಸಲುವಾಗಿಯೇ ಅವನ್ನೆಲ್ಲ ನಾನು ಬಿಟ್ಟುಬಿಡುತ್ತಿರುವಾಗ, ನೀನು ನನಗೆ ಕೃತಜ್ಞನಾಗುವದು ಒತ್ತಟ್ಟಿಗುಳಿದು, ನನ್ನ ಪ್ರಾಣ ಹಿಂಡಲು ಹೊಂಚುಹಾಕಿರುವೆಯಾ? ಕುಮಾರಾ, ನನ್ನ ಮರಣದಿಂದ ನಿನ್ನ ಇಚ್ಛೆಯು ಪೂರ್ಣವಾಗುವಹಾಗಿದ್ದರೆ, ನನ್ನನ್ನು ಕೊಲ್ಲುವದಕ್ಕೆ ಅನ್ಯರಿಗೆ ಹೇಳುವದೇಕೆ? ಇಗೋ ನಾನೇ ನಿನ್ನ ಮುಂದೆ ಈಗ ಬಂದು ನಿಂತಿದ್ದೇನೆ, ಯಥೇಚ್ಛವಾಗಿ ನಿನ್ನ ಖಡ್ಗದಿಂದ ನನ್ನನ್ನು ನುಚ್ಚು ನುಚ್ಚಾಗಿ ಕಡಿದು ಚಲ್ಲು.'' ಹೀಗೆ ನುಡಿದು ಆ ವ್ಯಕ್ತಿಯು ಕ್ಷಣಮಾತ್ರ ಸುಮ್ಮನಿದ್ದು ಮತ್ತೆ ಖುಸ್ರುವನ್ನು ಕುರಿತು—''ಖುಸ್ರೂ, ನಿನ್ನ ಕಲ್ಯಾಣದ ಸಲುವಾಗಿ ಯತ್ನಿಸುವದರಿಂದಲೇ ನಾನು ಅಕಬರ ಬಾದಶಹರ ರೋಷಕ್ಕೆ ಪಾತ್ರನಾಗಿರುವೆನು. ಅದೇ ಕಾರಣದಿಂದಲೇ ನಿನ್ನ ತಂದೆಯಾದ ಶಹಾಜಾದಾ ಸೇಲೀಮನು ನನ್ನನ್ನು ವಕ್ರದೃಷ್ಟಿಯಿಂದ ನೋಡುತ್ತಿರುವನು! ನೀನಂತು ನನ್ನ ರಕ್ತ ಹೀರುವದಕ್ಕಾಗಿ ಹಸಿದು ಕಕ್ರಾಂತನಾಗಿರುವೆ! ಆದರೆ ಕುಮಾರಾ, ನನ್ನ ರಕ್ತ ಹೀರದೆ ನಿನ್ನ ಕಾರ್ಯವು ಸಾಧಿಸದ ಹಾಗಿದ್ದರೆ, ಇಗೋ, ಆಗಲೇ ಹೇಳಿದಂತೆ ನಾನು ನಿನ್ನ ಮುಂದೆ ನಿಂತುಬಿಟ್ಟಿದ್ದೇನೆ. ನಿನ್ನ ಸೋದರಮಾವನಾದ ಈ ಮಾನಸಿಂಹನ ಕಂಠನಾಲದ ರಕ್ತವನ್ನು ಈ ಗುಹೆಯಲ್ಲಿ ಚಲ್ಲಾಡಿಬಿಡು!

ಇಷ್ಟಾದರೂ ಖುಸ್ರುವಿನ ಮುಖದಿಂದ ಶಬ್ದಗಳು ಹೊರಡಲಿಲ್ಲವು. ಮಾನಸಿಂಹನ ಒಂದೊಂದು ಮಾತಿನಿಂದ ಆ ರಾಜಕುಮಾರನ ಹೃದಯಕ್ಕೆ ಒಂದೊಂದು ಬರೆ ಕೊಟ್ಟಂತಾಗುತ್ತಿತ್ತು, ಆತನು ನಾಚಿಕೆಯಿಂದ ಮೃತಪ್ರಾಯನಾದನು. ಇಂಥ ಪ್ರಸಂಗವು ಆತನ ಆಯುರ್ಮಾನದಲ್ಲಿ ಎಂದೂ ಬಂದಿದ್ದಿಲ್ಲ! ಇಂಥ ಆಕಸ್ಮಿಕವಾದ ಘೋರ ಪ್ರಸಂಗವು ಒದಗಿದ್ದರಿಂದ ಏನು ಮಾಡಿದರೂ ಆತನ ಮುಖದಿಂದ ಶಬ್ದಗಳು ಹೊರಡದಾದವು. ಆಗ

ಮಾನಸಿಂಹನು ಮತ್ತೆ ಖುಸ್ರುವನ್ನು ಕುರಿತು—''ನನ್ನ ಅಕ್ಕರೆಯ ಖುಸ್ರೂ! ಬಾ, ಸುಮ್ಮನೆ ಯಾಕೆ ನಿಂತುಕೊಂಡೆ? ಮಾತಾಡು ಮಾತಾಡು! ನಿನ್ನ ಸೋದರಮಾವನಾದ ನನ್ನನ್ನು ಕೊಲ್ಲಲಿಕ್ಕೆ ಸಿದ್ಧನಾಗಿ ನಿಂತಿದ್ದ ನಿನಗೆ ಈ ಮೌನವೂ, ಕಾರ್ಯಹೀನತೆಯೂ ಒಪ್ಪುವದಿಲ್ಲ! ಇಂಥ ಸುಸಂಧಿಯು ನಿನಗೆ ಪುನಃ ಒದಗಿ ಬರಲಾರದು. ನಿನ್ನ ಹಿತಕ್ಕೆ ಅಡ್ಡಾಗಿರುವ ನನ್ನನ್ನು ಈ ಲೋಕದೊಳಗಿಂದ ಹೊರಡಿಸಿ ಬಿಡು! ನಿನ್ನ ಸಿಂಹಾಸನ ಪ್ರಾಪ್ತಿಯ ವಿಷಯದಲ್ಲಿ ನಾಲ್ಕೂ ಕಡೆಯಿಂದ ಉಂಟಾಗುತ್ತಿರುವ ಭಯಂಕರ ಸೊಂಟರಗಾಳಿಗಳ ಧೂಳಿಯು ನನ್ನ ರಕ್ತ ಸೇಚನದಿಂದ ನೆಲಕ್ಕೆ ಕೂಡುತ್ತಿದ್ದರೆ, ನನ್ನ ಸಂತೋಷದಿಂದಲೇ ನಾನು ನಿನಗೆ ನನ್ನ ರಕ್ತದಾನ ಮಾಡಲು ಸಿದ್ಧನಾಗಿ ರುವೆನು! ಖುಸ್ರೂ, ನಿನ್ನ ತಾಯಿಯನ್ನು ನಾನು ಇದೇ ದೇಹದಿಂದಲೇ ಎತ್ತಿ ಆಡಿಸಿರುವೆನು. ನೀನು ತೆಕ್ಕೆಬಿದ್ದು ಆಡಿ ಓಡಿ ದೊಡ್ಡವನಾದದ್ದಾದರೂ ಇದೇ ದೇಹದಿಂದಲೇ! ನಿನ್ನ ತಾಯಿಗೆ ನಾನು ಎದೆತಟ್ಟಿ—''ತಂಗೀ, ಜೋಧಾ, ಚಿಂತೆಮಾಡಬೇಡ. ನಿನ್ನ ಅಣ್ಣನು ನಾನು ಬದುಕಿರುವ ವರೆಗೆ ನಿನ್ನ ಮಗ ಖುಸ್ರುವಿನ ಕಲ್ಯಾಣಕ್ಕಾಗಿ ನನ್ನ ದೇಹದ ಪರವೆಯಿಲ್ಲದೆ ಯತ್ನಿಸುವೆನೆ''ಂದು ವಚನಕೊಟ್ಟಿರುವೆನು. ಅದರಂತೆ ನಿನ್ನ ಕಲ್ಯಾಣಮಾಡುವಾಗ ನನ್ನ ದೇಹಪಾತವಾದರೂ ಚಿಂತೆಯಿಲ್ಲ, ನನ್ನ ಅಕ್ಕರೆಯ ತಂಗಿಗೆ ಕೊಟ್ಟಿದ್ದ ವಚನವನ್ನು ಪಾಲಿಸಿ ಆಕೆಯ ಮನಸ್ಸನ್ನು ಸಂತೋಷಪಡಿಸುವೆನು; ಆದರೆ ಕೊಲೆಗಡಕನಾದ ನಿನ್ನ ಮುಂದೆ ಇವೆಲ್ಲ ಪುರಾಣ ಓದಿಕೊಳ್ಳುವದರಿಂದ ಪ್ರಯೋಜನವೇನು? ಖುಸ್ರೂ, ಹಿಡಿ, ನನ್ನ ಈ ವಜ್ರಮುಷ್ಟಿಯ ಖಡ್ಗವನ್ನು ನಿನ್ನ ಕೈಯಲ್ಲಿ ಕೊಡುವೆನು ತೆಗೆದುಕೋ! ಇಗೋ, ತಿವಿ ಇದರಿಂದ ನನ್ನ ಹೃದಯಕ್ಕೆ'' ಎಂದು ನುಡಿದು, ಆ ಗುಹೆಯನ್ನು ಪ್ರಕಾಶಿತವಾಗಿ ಮಾಡುವ ತನ್ನ ರತ್ನಖಚಿತ ಖಡ್ಗವನ್ನು ಒರೆಯಿಂದ ಹಿರಿದು ಖುಸ್ರುವಿನ ಮುಂದೆ ಹಿಡಿದು—''ಇಗೋ, ಇದೇ, ನೋಡು ಈ ಖಡ್ಗವು! ತನ್ನ ಪ್ರಖರ ತೇಜಸ್ಸಿನಿಂದ ಈ ಕ್ಷುದ್ರ ಗುಹೆಯನ್ನು ಪ್ರಕಾಶಿತವಾಗಿ ಮಾಡುವ ನನ್ನ ಈ ಅಸೀಲತೆಯನ್ನು ನಿನ್ನ ಅಜ್ಜ ಅಕಬರನು, ನಾನು ಚಿತ್ತೂರನ್ನು ಗೆದ್ದು, ನಿನ್ನ ಅಜ್ಜನ ಸಾರ್ವ ಭೌಮತ್ವವನ್ನು ಅಬಾಧಿತವಾಗಿ ಮಾಡಿದ್ದಕ್ಕಾಗಿ ನನಗೆ ಉಚಿತವಾಗಿ ಕೊಟ್ಟಿರುವನು! ಸ್ವಜನದ್ರೋಹ, ಸ್ವದೇಶ ದ್ರೋಹಗಳನ್ನು ಮಾಡಿ ಸಂಪಾದಿಸಿದ ಈ ಅಸಿ ಪತ್ರದಿಂದ ನಾನು ದೇಶದ್ರೋಹದ, ಹಾಗು ಸ್ವದೇಶಬಂಧು ದ್ರೋಹದ ಕಾರ್ಯಗಳನ್ನು ಒಂದೆರಡೆಂದು ಹೇಳಲಾಗುವದಿಲ್ಲ! ಸ್ವಾತಂತ್ರ್ಯಪ್ರಿಯರಾದ ನಮ್ಮ ರಜಪೂತ ವೀರರನ್ನು ಒಬ್ಬೊಬ್ಬರನ್ನಾಗಿ ನಿಮ್ಮ ಅಜ್ಜನಿಗೆ ಅಂಕಿತರಾಗಮಾಡಿದ್ದು ಇದೇ ಖಡ್ಗದ ದರ್ಪದಿಂದಲೇ; ನಿನ್ನ ತಂದೆ ಸೇಲೀಮನನ್ನು ಮುಂದೆಮಾಡಿ ವೀರವರ ಪೂಜ್ಯ ರಾಣಾ ಪ್ರತಾಪಸಿಂಹನನ್ನು ಸ್ವದೇಶ ಭ್ರಷ್ಟವಾಗಮಾಡಿದ್ದು ಈ ಖಡ್ಗದ ತೀಕ್ಷ್ಣಧಾರೆಯ ಬಲದಿಂದಲೇ; ಪ್ರಿಯ ಸೋದರಳಿಯಾ ಖುಸ್ರು, ಬಂಗಾಲ ಪ್ರಾಂತದ ವೀರಪಠಾಣರನ್ನು ಹೊಡೆದೋಡಿಸಿ ಆ ಪ್ರಾಂತವನ್ನು ನಿನ್ನ ಅಜ್ಜನ ಸಾರ್ವಭೌಮತ್ವಕ್ಕೆ ಒಳಪಡಿಸಿದ್ದು ಇದೇ ಖಡ್ಗದ ಪ್ರಖರ ಕಾಂತಿಯ ದರ್ಪದಿಂದಲೇ! ಆದರೆ ಆ ಹಿಂದಿನ ಸಂಗತಿಗಳನ್ನೆಲ್ಲ ತಕ್ಕೊಂಡು ಮಾಡುವದೇನೆಂದು ನೀನು ಅನ್ನುತ್ತಿದ್ದರೆ, ವಿಷಯಲಂಪಟನಾದ ನಿನ್ನ ತಂದೆ ಸೇಲೀಮನ—ನನ್ನ ಬೀಗ ಅಕಬರ ಪುತ್ರನ—ನನ್ನ

ತಂಗಿಯಗಂಡ ಶಹಾಜಾದನ ಪಕ್ಕು ಹಾರಿಸಿ ನಿನ್ನನ್ನು ದಿಲ್ಲಿಯ ಬಾದಶಾಹೀ ಸಿಂಹಾಸನದ ಮೇಲೆ ಏರಿಸಬೇಕೆಂದು ಈಗ ನಾನು ಯತ್ನಿಸುತ್ತಿರುವದಾದರೂ ಈ ತೀಕ್ಷ್ಣ ಖಡ್ಗದ ಬಲದಿಂದಲೇ; ಆದರೆ ನನ್ನ ಪ್ರಿಯಖುಸ್ರೂ, ಸ್ವದೇಶದ್ರೋಹಿಯೂ, ಸ್ವಜನದ್ರೋಹಿಯೂ ಆಗಿರುವ ನಾನು, ಸ್ವಜನರ ರಕ್ತದಿಂದ ದೂಷಿತವಾಗಿರುವ ಈ ಖಡ್ಗದಿಂದ ಯಾವ ಮಹತ್ಕಾರ್ಯ ಮಾಡಿದರೂ, ಅದರಿಂದ ನನಗೆ ಪಶ್ಚಾತ್ತಾಪವಾಗಿ ಈ ಖಡ್ಗವನ್ನೂ, ಅದರೊಡನೆ ನನ್ನ ಈ ಕಲಂಕಿತ ದೇಹವನ್ನೂ ತ್ಯಜಿಸಲು ಇಚ್ಛಿಸುವ ಪ್ರಸಂಗವು ಈಗ ನನಗೆ ಬಂದೊದಗಿದಂತಾಗಿರುತ್ತದೆ. ಇನ್ನು ಈ ಖಡ್ಗವನ್ನು ಕೈಯಲ್ಲಿ ಹಿಡಿಯಲಾರೆನು, ಭೂಮಿಗೆ ಭಾರಭೂತವಾದ ಈ ದೇಹವನ್ನು ಇನ್ನು ಇಡಲಾರೆನು! ಹಿಡಿ, ಈ ಖಡ್ಗವನ್ನು ಹಿಡಿ. ಸ್ವಜನದ್ರೋಹದಿಂದ ಈ ಖಡ್ಗಕ್ಕೆ ತಗಲಿದ ಕಲಂಕವನ್ನು ನನ್ನ ರಕ್ತದಿಂದ ಕೈಮುಟ್ಟಿ ತೊಳೆದುಬಿಡು; ಅಷ್ಟಕ್ಕಾಗಿ ನೀನು ದುರ್ಜಯಸಿಂಹನನ್ನು ಪ್ರಾರ್ಥಿಸುವದೇಕೆ?

ಮಾನಸಿಂಹನ ಅಂಗರಕ್ಷಕನಾದ ದುರ್ಜಯಸಿಂಹನು ಇಷ್ಟು ಹೊತ್ತಿನವರೆಗೆ ಮಾನಸಿಂಹನ ಮಾತುಗಳನ್ನು ಕೇಳುತ್ತ ಮೂಢನಂತೆ ಸುಮ್ಮನೆ ನಿಂತುಬಿಟ್ಟಿದ್ದನು; ಆದರೆ ಮಾನಸಿಂಹನು ತನ್ನ ಖಡ್ಗವು ತನ್ನ ಶತ್ರುವಾಗಿದ್ದ ಖುಸ್ರುವಿಗೆ ಕೊಡಹೋಗಿ ಗಂಡಾಂತರಕ್ಕೆ ಗುರಿಯಾಗುವದನ್ನು ನೋಡಿ ತನ್ನ ಕರ್ತವ್ಯವನ್ನು ಸ್ಮರಿಸಿ ಮುಂದಕ್ಕೆ ಬಂದು ಮಾನಸಿಂಹನನ್ನು ಕುರಿತು ಮಂದಸ್ವರದಿಂದ—''ಸ್ವಾಮಿನ್, ಇದೇನು ಮಾಡುವಿರಿ! ತಾವು ತಮ್ಮ ಖಡ್ಗದ ಪರಿತ್ಯಾಗವನ್ನು ತಮ್ಮ ಶತ್ರುವಿನ ಮುಂದೆ ಮಾಡಬಹುದೆ?'' ಎಂದು ನುಡಿಯುತ್ತಿರಲು, ಈ ಅಧಿಕ ಪ್ರಸಂಗಕ್ಕಾಗಿ ಮಾನಸಿಂಗನ ಕಣ್ಣುಗಳು ಕೆಂಡದಂತಾದವು. ಆತನು ಸಿಟ್ಟಿನಿಂದ ದುರ್ಜಯಸಿಂಹನನ್ನು ನೋಡುತ್ತ—''ದುರ್ಜಯ, ದೂರ ಸರಿದುನಿಲ್ಲು, ನೀನು ನಿನ್ನ ಯೋಗ್ಯತೆಯ ಅತಿಕ್ರಮಣ ಮಾಡಿದೆ. ನನ್ನ ಅಪ್ಪಣೆಯ ಹೊರತು ಮಾತಾಡುವ ಅಧಿಕಾರವು ನಿನಗಿಲ್ಲೆಂಬದನ್ನು ನೆನಪಿನಲ್ಲಿಡು. ಸ್ವಲ್ಪ ಹೊತ್ತಿನ ಹಿಂದೆ ನನ್ನ ಪ್ರಿಯ ಸೋದರಳಿಯನ ಮೇಲೆ ನೀನು ಶಸ್ತ್ರವನ್ನು ಎತ್ತಿದ್ದೆ! ಶಹಾಜಾದಾ ಖುಸ್ರುವನ್ನು ಕೊಲ್ಲಲು ನೀನು ನಿಶ್ಚಯಿಸಿದ್ದೆ. ಇದು ನಿನ್ನ ಯೋಗ್ಯತೆಯ ಅತಿಕ್ರಮಣವಲ್ಲದೆ ಮತ್ತೇನು? ನಡೆ, ಗುಹೆಯೊಳಗಿಂದ ಹೊರಟು ನಡೆ. ಇಲ್ಲಿ ನೀನು ನಿಲ್ಲುವ ಕಾರಣವಿಲ್ಲ. ಒಂದು ಕ್ಷಣ ನೀನು ಇಲ್ಲಿ ನಿಂತರೆ ನೀನು ನನ್ನ ಶತ್ರುವೆಂದು ತಿಳಿದು. ಕುಮಾರ ಖುಸ್ರುವಿನಿಂದಾಗದೆಯಿದ್ದ ಕಾರ್ಯವನ್ನು ನಾನು ಮಾಡಿಬಿಡುವೆನು! ನಾನು ಮರೆಗೆನಿಂತು ನಿಮ್ಮ ಎಲ್ಲ ಆಟವನ್ನು ನೋಡಿದ್ದೇನೆ.

ಈ ಮೇರೆಗೆ ನುಡಿದ ಮಾನಸಿಂಹನ ನುಡಿಗಳನ್ನು ಕೇಳಿ ದುರ್ಜಯಸಿಂಹನು ಅವಮಾನಿತನಾಗಿ ಬಾಡಿದ ಮೋರೆಯಿಂದ ಹೊರಟು ಹೋದನು. ಹೋಗುವಾಗ ಆತನು ಮಾನಸಿಂಹನನ್ನುದ್ದೇಶಿಸಿ ಮನಸ್ಸಿನಲ್ಲಿ—''ಮಹಾರಾಜ, ನನ್ನನ್ನು ಹೀಗೇಕೆ ತಿರಸ್ಕರಿಸುವಿರಿ? ನಾನು ತಮ್ಮ ದಾಸಾನುದಾಸನಿರುತ್ತೇನೆ. ನಾನು ಯಾವಾಗಲೂ ತಮ್ಮ ಕಲ್ಯಾಣವನ್ನೇ ಚಿಂತಿಸುತ್ತಿರುವೆನು. ಈವರೆಗೆ ನಾನು ತಮ್ಮ ಖಡ್ಗದ ಸಾಮರ್ಥ್ಯವನ್ನು ಮಾತ್ರ ನೋಡುತ್ತ ಬಂದಿದ್ದೆನು; ಆದರೆ ತಮ್ಮ ಕರ್ತವ್ಯ ಕಠೋರ ಹೃದಯದಲ್ಲಿ ವಾತ್ಸಲ್ಯ—ಪ್ರೇಮಗಳು ಸಂಪೂರ್ಣವಾಗಿ ವಾಸಿಸುತ್ತಿರುವವೆಂಬದಾಗಿ ಇಂದು ಮನಗಂಡೆನು. ಇಲ್ಲದಿದ್ದರೆ ಪ್ರತ್ಯಕ್ಷ

ನಿಮ್ಮ ಪ್ರಾಣಹರಣ ಮಾಡಲು ಸಿದ್ಧನಾಗಿದ್ದ ಖುಸ್ರುವಿನ ಅಪರಾಧವನ್ನು ಕ್ಷಮಿಸಿ ಆತನ ಮೇಲೆ ಈ ಪರಿ ವಾತ್ಸಲ್ಯ—ಪ್ರೇಮುಗಳನ್ನು ಹೇಗೆ ಮಾಡುತ್ತಿದ್ದಿರಿ? ಆದರೆ ಪ್ರಭುಗಳೇ, ನನ್ನ ಮೇಲೆ ಮಾತ್ರ ತಾವು ಕಾರಣವಿಲ್ಲದೆ ಸಿಟ್ಟಾದಿರಿ. ತಮ್ಮ ಸೇವಕನಾದ ಈ ದುರ್ಜಯ ಸಿಂಹನು ಅವಿಚಾರಿಯಲ್ಲ, ಆತನ ಸ್ವಾಮಿನಿಷ್ಠೆಯು ಶ್ರೇಷ್ಠತರದ್ದಾಗಿರುವದು. ತನ್ನ ಪ್ರಭುವಿನ ಪ್ರಾಣಹರಣ ಮಾಡುವವನ ಪ್ರಾಣವನ್ನು ಹಿಂಡಲು ದುರ್ಜಯನು ಹಿಂದೆ ಮುಂದೆ ನೋಡತಕ್ಕವನಲ್ಲ, ತನ್ನ ಪ್ರಭುವಿನ ಆಯುಷ್ಯವನ್ನು ಹೆಚ್ಚಿಸುವದಕ್ಕಾಗಿಯೇ ಆ ಏಕನಿಷ್ಠ ಸೇವಕನು ಹೆಣಗುತ್ತಿದ್ದನು. ಹಾಗಲ್ಲದಿದ್ದರೆ ಕುಮಾರನ ಮೇಲೆ ಶಸ್ತ್ರವೆತ್ತಲು ಆತನಿಗೆ ಕಾರಣವೇನು? ಆಗಲಿ, ಪ್ರಭುವಿನ ಕ್ರೋಧವು ಈ ದುರ್ಜಯನ ಕ್ಷೋಭಕ್ಕೆ ಎಂದೂ ಕಾರಣವಾಗದು.'' ಎಂದು ಅಂದುಕೊಳ್ಳುತ್ತ ಅಸಮಾಧಾನದಿಂದ ತಳಮಳಿಸುತ್ತ ಅಭಿಮಾನಿಯಾದ ದುರ್ಜಯಸಿಂಹನು ಗುಹೆಯಿಂದ ದೂರಕ್ಕೆ ಹೋದನು; ಆದರೆ ಆತನ ಮನಸ್ಸಿಗೆ ಏನೋ ಹೊಳೆದು ಮತ್ತೆ ಆತನು ಗುಹೆಯ ಬಾಗಿಲಿಗೆ ಬಂದು ಸುಮ್ಮನೆ ನಿಂತುಕೊಂಡನು.

ಇತ್ತ ಖುಸ್ರುವಿನ ಸ್ಥಿತಿಯು ವಿಲಕ್ಷಣವಾಗಿತ್ತು. ಮಾನಸಿಂಹನ ಮಾತುಗಳಿಂದ ಆ ರಾಜಪುತ್ರನ ಸ್ವಭಾವಸಿದ್ಧ ಕೋಮಲ ಹೃದಯವು ಕರಗಿಹೋಗಿ, ಆತನ ಮೊದಲಿನ ಘಾತಕ ವಿಚಾರಗಳೆಲ್ಲ ಅಳಿದು ಹೋಗಿದ್ದವು. ತನ್ನ ದುರಾಲೋಚನೆಯ ಕೃತಿಗಳೆಲ್ಲ ತನ್ನ ಮಾವನಾದ ಮಾನಸಿಂಹನಿಗೆ ಗೊತ್ತಾಗಿದ್ದು, ಅದಕ್ಕಾಗಿ ಆ ಕ್ಷತ್ರಿಯ ವೀರ ಶಿಖಾಮಣಿಯು ತನ್ನ ಕಠೋರ ಹೃದಯಕ್ಕನುಸರಿಸಿ ತನ್ನನ್ನು ದಂಡಿಸದೆ, ವಾತ್ಸಲ್ಯದಿಂದ ತನ್ನನ್ನು ಎಚ್ಚರಗೊಳಿಸುತ್ತಿರುವದನ್ನು ನೋಡಿ ಆ ಉದಾರ ಹೃದಯದ ಖುಸ್ರುವಿನ ನೇತ್ರಗಳು ಅಶ್ರುಪೂರ್ಣವಾಗಿ ಕಣ್ಣೀರ ಬಿಸಿ ಹನಿಗಳು ಭೂಮಿಯಮೇಲೆ ಉದುರಹತ್ತಿದವು. ಅದನ್ನು ನೋಡಿ ಮಾನಸಿಂಹನ ಮತ್ಸರ—ಕಠೋರ ಹೃದಯವು ವಾತ್ಸಲ್ಯಮಯವಾಯಿತು. ಶಹಾಜಾದಾನಿಗೆ ತನ್ನ ದುಷ್ಕರ್ಮದ ಪಶ್ಚಾತ್ತಾಪವಾಗಿರುವದು ಆ ರಜಪೂತ ವೀರನಿಗೆ ಸ್ಪಷ್ಟವಾಗಿ ತೋರಿತು. ಇನ್ನು ಉಪೇಕ್ಷಿಸುವದು ಯೋಗ್ಯವಲ್ಲವೆಂದು ತಿಳಿದು ಆತನು ಅಳಿಯನನ್ನು ತಬ್ಬಿಕೊಂಡು ಎದೆಗವಚಿ ಪ್ರೇಮಭರದಲ್ಲಿ ಆತನನ್ನು ಚುಂಬಿಸಿದನು. ಈಗಂತು ಖುಸ್ರುವಿನ ದುಃಖವು ಒತ್ತರಿಸಿ ಆತನು ಬಿಕ್ಕಿ ಬಿಕ್ಕಿ ಅಳುತ್ತ ಮಾವನ ಚರಣಗಳ ಮೇಲೆ ಮಸ್ತಕವಿಟ್ಟು—''ಮಾಮಾಸಾಹೇಬ, ನನ್ನನ್ನು ಕ್ಷಮಿಸಿರಿ. ನಾನು ಅತ್ಯಂತ ನೀಚನೂ, ಪಾಪಿಯೂ ಆಗಿರುವೆನು. ನಾನು ರಾಜಸ್ಥಾನದೊಳಗಿನ ಒಬ್ಬ ಪವಿತ್ರ ಸ್ತ್ರೀಯ ಹೊಟ್ಟೆಯಲ್ಲಿ ಹುಟ್ಟಿ, ಆಕೆಯನ್ನು ವ್ಯರ್ಥವಾಗಿ ದಣಿಸಿದೆನು! ಹಾಯ್! ನಾನು ಎಂಥ ಘೋರ ಪಾಪ ಮಾಡುತ್ತಿದ್ದೆನಲ್ಲ! ಮಾವಾ, ನನ್ನನ್ನು ತಾವು ಕ್ಷಮಿಸಿದಿರೇನು?

ಅಳಿಯನ ಈ ಪಶ್ಚಾತ್ತಪದ ಮಾತುಗಳನ್ನು ಕೇಳಿ ಮಾನಸಿಂಹನು ಆತನ ಎರಡೂ ಕೈಗಳನ್ನು ಹಿಡಿದು ಸ್ನೇಹಯುಕ್ತವಾದ ಗಂಭೀರ ಧ್ವನಿಯಿಂದ—''ಕುಮಾರಾ, ನಿಜವಾಗಿಯೇ ನೀನು ದುರ್ದೈವಿಯು! ನಿನ್ನ ಭವಿಷ್ಯಕಾಲದ ಭಯಂಕರ ಸ್ವರೂಪದ ನೆರಳೂ ನಿನ್ನ ಕಣ್ಣಿಗೆ ಇನ್ನೂ ಬಿದ್ದಿರುವದಿಲ್ಲ, ಖುಸ್ರೂ, ನಿನ್ನ ಅದೃಷ್ಟಾಕಾಶದಲ್ಲಿ ಸಂಚರಿಸುತ್ತಿರುವ ಭೀಕರ ಕರಿಯ ಮೋಡಗಳನ್ನು ನೀನು ಅರಿಯೇ ಅರಿಯೇ! ಪಾಪ! ನಿನಗೆ ಅವುಗಳ ಪರಿಜ್ಞಾನವಾಗುವದು

ಶಕ್ಯವೇ ಇಲ್ಲ. ನನ್ನ ಹೃದಯದಲ್ಲಿರುವ ನಿನ್ನ ವಿಷಯದ ಆಶಾ—ಸ್ನೇಹಗಳ ಪರಿಮಿತಿಯ ಕಲ್ಪನೆಯೂ ನಿನಗಿರುವದಿಲ್ಲ. ನಿನ್ನಂಥ ಉಲಕೋಚಿ ಸ್ವಭಾವದ ಸ್ವಚ್ಛಂದವೃತ್ತಿಯ ತರುಣನಿಗೆ ಅದರ ಕಲ್ಪನೆಯಾದರೂ ಹೇಗಾಗಬೇಕು? ಮೊಗಲ ರಾಜ್ಯದ ಸದ್ಯದ ದರ್ಬಾರವೆಂದರೆ ಚಕ್ರವ್ಯೂಹವೆಂದು ತಿಳಿ. ಆ ಚಕ್ರವ್ಯೂಹದೊಳಗಿಂದ ನಿನ್ನ ಸಂರಕ್ಷಣವನ್ನು ನಾನು ಯಥಾಶಕ್ತಿ ಮಾಡುತ್ತಿರುವೆನು; ಆದರೆ ನಿನ್ನ ದೈವದಲ್ಲೇನಿರುವದೋ ಯಾರಿಗೆ ಗೊತ್ತು! ನನ್ನ ತಂಗಿಯಾದ ಜೋಧಬಾಯಿಯ ದೀನವದನವನ್ನು ನೋಡಿ ನನಗೆ ಕನಿಕರ ಹುಟ್ಟಿ, ನಿನ್ನನ್ನು ನನ್ನ ಬೆನ್ನಿಗೆ ಹಾಕಿಕೊಂಡಿದ್ದೇನೆ. ಇದರ ಕಾಲಲ್ಲಿ ಸರ್ವಸ್ವವನ್ನೂ ಕಳೆದುಕೊಳ್ಳಲಿಕ್ಕೆ ನಾನು ಸಿದ್ಧನಾಗಿದ್ದೇನೆ; ಆದರೆ ಮೂಢಮನದ ಖುಸ್ರೂ, ಇದನ್ನಾವದನ್ನೂ ಮನಸ್ಸಿನಲ್ಲಿ ತಾರದೆ ನನ್ನ ಪ್ರಾಣಹರಣ ಮಾಡಲು ಸಿದ್ಧನಾಗಿರುವೆ! ಇಂದಿಲ್ಲ ನಾಳೆಯಾದರೂ ನನ್ನ ಪರೀಕ್ಷೆಯು ನಿನಗೆ ಆದೀತು; ನನ್ನ ಬೆಂಬಲವಿಲ್ಲದಿದ್ದರೆ ನಿನ್ನ ಗತಿಯೇನಾಗುತ್ತಿತ್ತೆಂದಾದರೂ ನಿನ್ನ ಮನಸ್ಸಿಗೆ ಹೊಳೆದೀತು; ಆದರೆ ಅಂಥ ಪರೀಕ್ಷೆಯ ಪ್ರಸಂಗವು ಬರಬೇಕೆಂದು ನಾನು ಇಚ್ಛಿಸುವದಿಲ್ಲ; ಯಾಕಂದರೆ ನನ್ನ ವಿಷಯವಾಗಿ ನಿನಗೆ ಸಂಶಯವು ಉತ್ಪನ್ನವಾಗುವಂತಹ ನಡತೆಯು ನನ್ನದಿರುವದೇ ಇಲ್ಲ. ಚಿತ್ತೂರ ಕೋಟೆಯನ್ನು ಕೈಸೇರಿಸಿಕೊಳ್ಳುವ, ಹಾಗು ಮಹಾರಾಣಾ ಪ್ರತಾಪಸಿಂಹನನ್ನು ದೇಶಭ್ರಷ್ಟವಾಗಮಾಡುವ ಕಾಲದಲ್ಲಿಯೇ ನಾನು ನನ್ನ ಪ್ರಾಮಾಣಿಕತನವನ್ನೂ, ಮಾನ—ಮರ್ಯಾದೆಗಳನ್ನೂ ಕಳೆದುಕೊಂಡು ಕುಳಿತಿದ್ದೇನೆ. ಆ ಕಳೆದುಹೋಗಿದ್ದ ನನ್ನ ಗೌರವವನ್ನು ನಾನು ಆಜನ್ಮ ಸಂಪಾದಿಸಲಾರೆನು. ಖುಸ್ರೂ, ಇಲ್ಲಪ್ಪಾ, ಇದರಲ್ಲಿ ನಿನ್ನ ಅಪರಾಧವೇನೂ ಇರುವದಿಲ್ಲ. ಇದೆಲ್ಲ ನನ್ನ ವೈಷಯಿಕ ಲಾಭೇಚ್ಛೆಯ ದೋಷವಾಗಿದೆ! ಅಂಥ ದೋಷದಿಂದ ಪರಿಪುಷ್ಟವಾಗಿ ತೋರುತ್ತಿರುವ ನನ್ನ ಐಶ್ವರ್ಯ—ಮಾನಗಳಿಂದ ಅಲಂಕೃತವಾದ ಹೇಯ ಸಂಸಾರದ ಸುಖವನ್ನು ನಾನು ಉಣ್ಣುತ್ತಿರುವೆನು. ತಮ್ಮಾ, ನೀನು ಇನ್ನೂ ಕೂಸು! ನನ್ನ ಹಾಗೆ ದ್ರೋಹಗಳ ಮಾಲಿಕೆಯಿಂದ ಸಂಸಾರದ ಸುಖವನ್ನು ಹೆಚ್ಚಿಸಹೋದ ಪಾಮರ ಜೀವಿಗಳು ಯಾರಿದ್ದರೂ ನನ್ನ ಹಾಗೆಯೇ ಸಂಸಾರಸುಖವನ್ನು ಎರಡೂ ಕೈಗಳಿಂದ ಉಣ್ಣುವರೆಂಬದನ್ನು ನೀನೇನು ಬಲ್ಲೆ? ಮಂದಿಯ ಕಣ್ಣು ಕುಕ್ಕಿ, ನೋಡಲಿಕ್ಕೆ ಮಾತ್ರ ಮನೋಹರವಾಗಿರುವ ನಮ್ಮಂಥವರ ಸಂಸಾರದ ಸುಖವು ದುಃಖರೂಪವಾಗಿದ್ದು, ಅದು ಅಂತಃಕರುಣವನ್ನು ಹೇಗೆ ಸುಡುತ್ತಿರುವದೆಂಬದು ನಿನಗೆ ಹೇಗೆ ಗೊತ್ತಾಗಬೇಕು? ನೋಡಿದೆಯಾ ಸೋದರಳಿಯನಾದ ನಿನ್ನಿಂದ ಮರಣ ಹೊಂದಲು ಯೋಗ್ಯನಾಗಿದ್ದ ನನ್ನ ಸಂಸಾರದ ಸುಖವನ್ನು! ಇರಲಿ, ಖುಸ್ರೂ, ನಿನ್ನ ಕೃತಿಯಿಂದ ನನ್ನ ಕಣ್ಣುಗಳು ಚನ್ನಾಗಿ ತೆರೆದು, ನನ್ನ ಖುಸ್ರೂ, ನಿನ್ನ ಕೃತಿಯಿಂದ ನನ್ನ ಕಣ್ಣುಗಳು ಚನ್ನಾಗಿ ತೆರೆದು, ನನ್ನ ಕೃತಿಯ ಭೀಷಣಸ್ವರೂಪವು ನನ್ನ ಕಣ್ಣಿಗೆ ಕಟ್ಟಿ, ನಾನು ಎಚ್ಚತ್ತಿರುವೆನು. ಈ ಉಪಕೃತಿಗಾಗಿ ನಾನು ನಿನ್ನ ಅಪರಾಧವನ್ನು ಸಂಪೂರ್ಣವಾಗಿ ಕ್ಷಮಿಸಿದ್ದೇನೆ; ಬಾ, ನನ್ನ ಸಂಗಡ ಬಾ! ನಿನ್ನ ಮಾವನು ಒಮ್ಮೆ ಮಾಡಿದ ಪ್ರತಿಜ್ಞೆಯನ್ನು ಏನಾದರೂ ಬಿಟ್ಟುಕೊಡಲಾರನು. ನಾನಿರುವತನಕ ನಿನ್ನ ಕೂದಲು ಕೊಂಕಲಾರದು, ಅದಾವ ವೀರನು ನಿನ್ನ ಮೇಲೆ ಕೈ ಮಾಡಲು ಸಮರ್ಥನಾದಾನು?

ತನ್ನ ಮಾವನ ಈ ಕರುಣಾಶಾಲಿತ್ವವನ್ನೂ, ವಾತ್ಸಲ್ಯವನ್ನೂ ನೋಡಿ ಖುಸ್ರುವು ಅತ್ಯಂತ ನಮ್ರನಾಗಿ ಮನಸ್ಸಿನಲ್ಲಿ—''ಅಹಹ! ಎಂಥ ಘನತರವಾದ ಔದಾರ್ಯವಿದು! ಅಭಿಮಾನಿಯೂ, ಪ್ರತಿಹಿಂಸಾಪರಾಯಣನೂ, ಮಮತಾಹೀನನೂ ಆದ ರಾಜಾ ಮಾನ ಸಿಂಹನಲ್ಲಿ ಈ ಪರಿ ಔದಾರ್ಯ—ಪ್ರೇಮಗಳು ಇದ್ದಾವೆಂದು ನನಗೆ ಸ್ವಪ್ನದಲ್ಲಿಯೂ ಕಂಡುಬಂದಿದ್ದಿಲ್ಲ! ಸ್ನೇಹಪೂರ್ಣ ಹೃದಯವು ಕ್ಷಮಾಶೀಲವಿರುತ್ತದೆಂಬದು ನಾನು ಬಲ್ಲೆನು; ಆದರೆ ಮಮತೆಗಾಗಲಿ, ಕ್ಷಮೆಗಾಗಲಿ ಏನಾದರೂ ಮರ್ಯಾದೆಯು ಇರಬಹುದೋ ಇರಲಿಕ್ಕಿಲ್ಲವೋ? ಮಾವನನ್ನು ಕೊಲ್ಲಲು ಸಿದ್ಧನಾಗಿದ್ದ ಸೋದರಳಿಯನ ವಿಷಯವಾಗಿ ದಯಾ—ಕ್ಷಮೆಗಳನ್ನು ತಾಳುವದೆಂದರೆ ಎಂಥ ಔದಾರ್ಯವು!'' ಎಂದು ವಿಚಾರಮಾಡುತ್ತ ಖುಸ್ರುವು ತನ್ನ ಮಾವನ ಕಡೆಗೆ ನೋಡುತ್ತ ದೀನ ಮುಖದಿಂದ—''ಮಹಾರಾಜ, ನಾನು ಇನ್ನು ತಮ್ಮ ಸಂಗಡ ಎಲ್ಲಿಗೆ ಬರಲಿ? ನನಗೆ ಬರಲಿಕ್ಕೆ ಇನ್ನು ಯಾವ ಸ್ಥಳವು ತೆರವಾಗಿರುವದು? ನನ್ನ ತಾಯಿಗೆ—ನಿಮ್ಮ ತಂಗಿಗೆ ಈ ಕರಿಯ ಮೋರೆಯನ್ನು ಹ್ಯಾಗೆ ತೋರಿಸಲಿ? ಬೇಡ, ಈ ನರಾಧಮನ ಮೇಲೆ ತಾವು ಇಷ್ಟು ಪ್ರೇಮಮಾಡುವದು ಸರ್ವಥಾ ಬೇಡ. ನಾನು ಆ ಪವಿತ್ರ ಪ್ರೇಮಕ್ಕೆ ಪಾತ್ರನಿಲ್ಲ, ನನಗೆ ಆ ಅರಮನೆಯೂ ಬೇಡ; ಬಾದಶಾಹೀ ಮೊಗಲ ಸಿಂಹಾಸನವೂ ಬೇಡ. ಮಹಾರಾಜ, ಈ ಅಧಮನ ಮಹಾಪರಾಧದ ಸೇಡು ತೀರಿಸಿಕೊಳ್ಳುವದನ್ನು ಬಿಟ್ಟು, ನನ್ನನ್ನು ಯಾಕೆ ಕ್ಷಮಿಸುವಿರಿ? ಕ್ಷತ್ರಿಯರು ತಮ್ಮ ಶತ್ರುವನ್ನು ಎಂದೂ ಕ್ಷಮಿಸುವದಿಲ್ಲ; ಅಂದ ಬಳಿಕ ತಾವು ನನ್ನನ್ನು ಈ ಪರಿ ಕ್ಷಮಿಸುವದೇಕೆ?'' ಎಂದು ನುಡಿದು, ಮಾವನ ಮುಖವನ್ನು ನೋಡಿದನು. ಆಗ ಖುಸ್ರುವಿನ ನೇತ್ರಗಳು ಮತ್ತೆ ಅಶ್ರುಪೂರ್ಣವಾಗಿದ್ದವು. ಅದನ್ನು ನೋಡಿ ಮಾನಸಿಂಹನು ನಕ್ಕು—''ಖುಸ್ರೂ, ನಿನ್ನನ್ನು ನಾನು ಯಾಕೆ ಕ್ಷಮಿಸುವೆನೆಂಬುದು ನಿನಗೆ ಹಿಂದುಗಡೆ ಗೊತ್ತಾದೀತು! ಆದರೆ ಈಗ ನೀನು ನನ್ನನ್ನು ಏನೂ ಕೇಳದೆ ನನ್ನ ಬೆನ್ನು ಹತ್ತಿ ಬಾ ನೋಡೋಣ.''

ಈ ಮೇರೆಗೆ ನುಡಿದು ಮಾನಸಿಂಹನು ಗುಹೆಯಿಂದ ಹೊರಬೀಳತೊಡಗಲು, ಖುಸ್ರುವು ನಿರ್ವಾಹವಿಲ್ಲದೆ ಆತನ ಬೆನ್ನುಹತ್ತಿದನು. ಗುಹೆಯಿಂದ ಹೊರಹೊರಟು ಬಂದಕೂಡಲೇ ಹತ್ತುವ ದೊಂದು ದಿನ್ನೆಯನ್ನು ಇಳಿದು ಆ ಅಳಿಯ—ಮಾವಂದಿರು ಕೋಟೆಯನ್ನು ಹೊಕ್ಕು ಅರಮನೆಯ ಕಡೆಗೆ ನಡೆದರು. ಈ ಕಾಲದಲ್ಲಿ ಆಕಾಶವು ನಿರ್ಮಲವಾಗಿದ್ದು ಹಿಟ್ಟು ಚಲ್ಲಿದಹಾಗೆ ಬೆಳದಿಂಗಳು ಬಿದ್ದಿತ್ತು. ಚಂದ್ರಮನ ಆ ಸ್ವಚ್ಛ ಪ್ರಕಾಶದಲ್ಲಿ ಹೊಳೆಯುವ ಅರಮನೆಯ ಶಿಖರವು ಖುಸ್ರುವಿನ ಕಣ್ಣಿಗೆ ಬೀಳಲು, ಅವನ ಎದೆಯು ದಸಕ್ಕೆಂದಿತು! ಕಣ್ಣುಗಳು ಕತ್ತಲು ಗೂಡಿಸಿದವು. ಇನ್ನು ಮೇಲೆ ತನ್ನ ಮುಂದೆ ಯಾವ ಎಲೆ ಬಡಿಸುವದೆಂಬದರ ಕಲ್ಪನೆಯಿಂದ ಅವನ ಚಿತ್ತವು ಅಸ್ವಸ್ಥವಾಯಿತು. ಪ್ರಾಸಾದದ ಬಾಗಿಲಿಗೆ ಬರುವತನಕ ಆ ಅಳಿಯ—ಮಾವಂದಿರು ಪಿಟ್ಟೆಂದು ಮಾತಾಡಿದ್ದಿಲ್ಲ. ಯಾಕಂದರೆ ಅವರಿಬ್ಬರೂ ತಮ್ಮ ತಮ್ಮ ವಿಚಾರದಲ್ಲಿ ಮಗ್ನರಾಗಿದ್ದರು. ಬಾಗಿಲಿಗೆ ಬಂದಕೂಡಲೆ ಮಹಾರಾಜರು ಶಹಾಜಾದಾನೊಡನೆ ಅಕಸ್ಮಾತ್ ಬಂದದ್ದನ್ನು ನೋಡಿ ಕಾವಲುಗಾರನು ಬೆರಗಾದನು; ಆದರೆ ಕೂಡಲೆ ಆತನು ತಲೆಬಾಗಿಸಿ

ಖಡ್ಗವನ್ನು ಕೆಳಗಿಟ್ಟು ಕಬ್ಬಿಣದ ಬಾಗಿಲವನ್ನು ತೆಗೆದನು. ಆಗ ಅವರಿಬ್ಬರು ಅಳಿಯ—ಮಾವಂದಿರು ಒಳಗೆ ಬಂದರು. ಮಾನಸಿಂಹನು ಒಂದು ವಿಶಿಷ್ಟ ಮಂದಿರದ ಬಳಿಗೆ ಬಂದ ಕೂಡಲೆ ಆತನು ಸ್ನೇಹಪೂರ್ಣ ಸ್ವರದಿಂದ—''ಕುಮಾರಾ, ಹೋಗು, ನಿನ್ನ ಪ್ರೇಮಲ ಸ್ವಭಾವದ ತಾಯಿಯು ತನ್ನ ಒಬ್ಬನೇ ಒಬ್ಬ ಅಚ್ಚೆಯ ಮಗನ ಹಾದಿಯನ್ನು ನೋಡುತ್ತ ಕುಳಿತಿರುವಳು ಹೋಗು; ಆಕೆಯನ್ನು ಕಂಡು ಸಮಾಧಾನಪಡಿಸು. ಮತ್ತೆನಾಳೆ ನಾನು ನಿನ್ನನ್ನು ಕಾಣುವೆನು.

ಮಾನಸಿಂಹನ ಈ ಮಾತುಗಳನ್ನು ಕೇಳಿ ಕುಮಾರನು ಏನೋ ಮಾತಾಡಬೇಕೆನ್ನುತ್ತಿರಲು, ಅದಕ್ಕೆ ಆಸ್ಪದ ಕೊಡದೆ ಅಮಾತ್ಯನು ತಟ್ಟನೆ ಹೊರಟು ಹೋಗಿಬಿಟ್ಟನು; ಆದ್ದರಿಂದ ಹತಾಶನೂ, ಶಂಕಿತನೂ, ನಿರುತ್ಸಾಹಿಯೂ ಆದ ಖುಸ್ರುವು ಏನೂ ಮಾತಾಡದೆ ಅಂತಃಪುರದ ಕಡೆಗೆ ಹೊರಳಬೇಕಾಯಿತು; ಆದರೆ ಆತನು ಅಂತಃಪುರದ ಬಾಗಿಲಿಗೆ ಹೋದಕೂಡಲೆ ಮುಂದಕ್ಕೆ ಹೆಜ್ಜೆಯಿಡದಾದನು; ಯಾಕಂದರೆ ಆತನ ಪ್ರೇಮಲಸ್ವಭಾವದ ತಾಯಿಯು, ಬಿಳಿಯ ಸ್ವಚ್ಛ ಹಾಸಿಗೆ ಹಾಸಿದ್ದ ಪಲ್ಲಂಗದ ಮೇಲೆ ಚಿಂತಾಗ್ನಳಾಗಿ ಹಸ್ತದಲ್ಲಿ ಗಲ್ಲವನ್ನಿಟ್ಟುಕೊಂಡು ಕಣ್ಣೀರು ಸುರಿಸುತ್ತ ಕುಳಿತುಕೊಂಡಿದ್ದಳು. ಅಂಥ ತನ್ನ ಪ್ರೇಮಲ ಮಾತೃ ಮೂರ್ತಿಯನ್ನು ನೋಡಿ ಖುಸ್ರುವಿನ ಮನಸ್ಸಿನ ಸ್ಥಿತಿಯು ಏನಾಗಿರಬಹುದೆಂಬದನ್ನು ವಾಚಕರೇ ತರ್ಕಿಸತಕ್ಕದ್ದು. ಸ್ವಚ್ಛ ಪ್ರಕಾಶವಿದ್ದದ್ದರಿಂದ ಜೋಧಬಾಯಿಯು ಮಗನನ್ನು ತಟ್ಟನೆ ಗುರುತಿಸಿದಳು. ಆಕೆಯು ತನ್ನ ಕಣ್ಣು ಒರಿಸಿಕೊಳ್ಳುತ್ತ ತೀವ್ರಸ್ವರದಿಂದ ಮಗನನ್ನು ಕುರಿತು—''ಖುಸ್ರೂ, ಬಾ, ಇನ್ನು ಸಾಕು ಬಾ'' ಎಂದು ಕರೆದಳು. ತನ್ನ ತಾಯಿಯ ಈ ಕರಿಯೋಣವು ಪ್ರೇಮದ್ದಾಗಿರದೆ, ಸಿಟ್ಟಿನಿಂದುಂಟಾದ ತಿರಸ್ಕಾರದ್ದೆಂದು ಕುಮಾರನು ತಿಳಿದುಕೊಂಡನು. ಅವ್ವನ ಕರಿಯೋಣದರ ಗುರುತು ಮಗನಿಗೆ ಹತ್ತಿದಷ್ಟು ಬೇರೆ ಯಾರಿಗೂ ಹತ್ತುವದಿಲ್ಲ. ತನ್ನ ತಾಯಿಯು ಕರೆದದ್ದರಿಂದ ಖುಸ್ರುವು ಒಳಗೆ ಹೋಗಲೇಬೇಕಾಯಿತು. ತತ್ತರಿಸುವ ಹೃದಯದೊಡನೆ ಆತನು ಅಂತಗೃಹವನ್ನು ಹೊಕ್ಕು, ತೀರ ಮಂದಸ್ವರದಿಂದ—''ಅವ್ವಾ, ಇನ್ನೂ ನೀನು ಎಚ್ಚತ್ತೇ ಇರುವಿಯೋ?'' ಎಂದು ಪ್ರಶ್ನೆ ಮಾಡಿದನು. ಆದಕ್ಕೆ ಜೋಧಬಾಯಿಯು ತಿರಸ್ಕಾರದಿಂದ—''ನಿನ್ನಂಥ ಸದ್ಗುಣಿಯಾದ ಮಗನ ತಾಯಿಗೆ ನಿದ್ರೆಯೂ, ಸ್ವಸ್ಥತೆಯೂ ಉಂಟಾಗುವವೆಂದು ತಿಳಿದಿರುವೆಯೇನು ಖುಸ್ರೂ! ಕುಮಾರಾ, ನಿನ್ನ ಜನ್ಮವು ರಾಜಕುಲದಲ್ಲಿ ಆಗತಕ್ಕದ್ದಿದ್ದಿಲ್ಲ. ನೀನು ಅತ್ಯಂತ ನೀಚವೃತ್ತಿಯ ಯಾವದೊಂದು ಹೀನ ಕುಲದಲ್ಲಿ ಹುಟ್ಟಿ ಬಂದಿದ್ದರೆ ನೆಟ್ಟಗಾಗುತ್ತಿತ್ತು! ನೀನು ಕಲ್ಪಿಸಲಶಕ್ಯವಾದ ನೀಚಕೃತ್ಯಗಳನ್ನು ಈ ವಯಸ್ಸಿನಲ್ಲಿ ನನ್ನ ಬಳಿಯಲ್ಲಿರುವಾಗ ಮಾಡಹತ್ತಿರುವೆಯಲ್ಲ! ಇದಕ್ಕಾಗಿ ನಿನಗೆ ಏನು ಅನ್ನಬೇಕು ಖುಸ್ರೂ!

ತಾಯಿಯ ಈ ತಿರಸ್ಕಾರದ ಮಾತುಗಳಿಂದ ಕುಮಾರನ ಅಂತಃಕರಣವು ಅತ್ಯಂತ ವ್ಯಥಿತವಾಗಿ ಮತ್ತೆ ಅವನ ಕಣ್ಣೊಳಗಿಂದ ಬಳಬಳ ನೀರುಗಳು ಸೋರಹತ್ತಿದವು. ಅವನು ಕೆಲಹೊತ್ತಿನ ಮೇಲೆ ಕಣ್ಣು ಒರಿಸಿಕೊಂಡು ಅನುತಾಪವಿದಗ್ಧ ಸ್ವರದಿಂದ ತನ್ನ ತಾಯಿಯನ್ನು ಕುರಿತು—''ಅವ್ವಾ, ನೀನೂ ನನ್ನನ್ನು ಹೀಗೆ ತಿರಸ್ಕರಿಸಿ ದೂರ ದೂಡತೊಡಗಿದೆಯಾ? ನನ್ನನ್ನು ನೋಡಿದ ಕೂಡಲೆ ಅಪ್ಪನು ಅಂಗಾಲಿನಿಂದ ನಡುನೆತ್ತಿಯವರೆಗೆ ಉರಿಯುವನು; ಮಾವನ

ಸಿಟ್ಟಿಗಂತು ನಾನು ಗುರಿಯಾಗಿಬಿಟ್ಟೆನು; ಆದರೆ ಅವ್ವಾ, ಈ ಹತಭಾಗ್ಯ ಖುಸ್ರುವನ್ನು ನೀನೂ ಹೀಗೆ ತಿರಸ್ಕರಿಸಿದ ಬಳಿಕ ನನ್ನವರೆನ್ನುವವರು ಯಾರೂ ಇಲ್ಲದಾಗಿ ನಾನು ಯಾರಿಗೂ ಬೇಡಾಗಿಹೋದೆನು! ಅವ್ವಾ, ನೀವೆಲ್ಲರೂ ಹೀಗೆ ಮಾಡಿದ ಬಳಿಕ ನಾನು ಇನ್ನು ಯಾರಬಳಿಗೆ ಹೋಗಲಿ? ರಾಜಕುಲದಲ್ಲಿ ಉತ್ಪನ್ನವಾದದ್ದೊಂದು ಮಹಾಪರಾಧವೇ ಆಯಿತೆಂದು ನನಗೆ ತೋರುವದು'' ಎಂದು ನುಡಿಯಲು, ಜೋಧಬಾಯಿಯು ಕಂಪಿತ ಸ್ವರದಿಂದ—''ಹತಭಾಗ್ಯನಾದ ಪೋರನೇ, ನನ್ನ ಹೊಟ್ಟೆಯಲ್ಲಿ ಹುಟ್ಟಿ ನೀನು ನನಗೆ ವೈಧವ್ಯವನ್ನುಂಟು ಮಾಡುವ ನೀಚತನಕ್ಕೆ ಹೋಗಬೇಕೇನು? ಪ್ರತ್ಯಕ್ಷ ಸೋದರಮಾವನ ಕೊಲೆಮಾಡಲಿಕ್ಕೂ ನಿನ್ನ ಕೈಗಳು ಏಳಬೇಕೇನು? ಅತ್ಯಂತ ದುಷ್ಟನೂ, ನೀಚನೂ ಆದ ನಿನ್ನ ಅಪರಾಧಗಳು ಕ್ಷಮಿಸಲು ನಿಶ್ಚಯವಾಗಿ ಯೋಗ್ಯವಾದವುಗಳಲ್ಲವು. ನೀನು ಇನ್ನೂ ಹುಡುಗನೆಂದು ನಾನು ಮೊದಲಿನ ಅಪರಾಧವನ್ನು ಕ್ಷಮಿಸಿದೆನೆಂದು ತಿಳಿದರೂ, ದುರ್ಜಯಸಿಂಹನೊಡನೆ ನೀನು ಈಗ ನಡೆಸಿದ್ದ ಘಾತಕವಾದ ಒಳಸಂಚಿನ ಅರ್ಥವೇನು?'' ಅನ್ನಲು, ಖುಸ್ರುವು ಪಶ್ಚಾತ್ತಾಪಯುಕ್ತ ಸ್ವರದಿಂದ—''ಅವ್ವಾ, ಕೈತಪ್ಪಿ ಆದ ಅಪರಾಧವನ್ನು ಹೊಟ್ಟೆಯಲ್ಲಿ ಹಾಕಿಕೊಂಡು ನನ್ನನ್ನು ಕ್ಷಮಿಸಬಾರದೇನು? ಅವ್ವಾ, ನನ್ನ ಮೊದಲಿನ ಅಪರಾಧವೂ ನನ್ನ ಉಲಕೋಚಿತನದ ಅವಿಚಾರ ದಿಂದಲೇ ಆಯಿತು; ಎರಡನೆಯ ಅಪರಾಧವೂ ನನ್ನ ಉಲಕೋಚಿತನದ ಅವಿಚಾರದಿಂದಲೇ ಆಯಿತು. ಈಗ ನನ್ನ ಕಣ್ಣುಗಳು ನಿಚ್ಚಳವಾಗಿ ತೆರೆದಿರುವವು, ಆದರೆ ಉತ್ತರ ಕೊಡಲಿಕ್ಕೆ ಬಾರದ ನನಗೆ ''ಯಾಕೆ ಮಾಡಿದೆ'' ''ಹೇಗೆ ಮಾಡಿದೆ'' ಇತ್ಯಾದಿ ಪ್ರಶ್ನೆಗಳನ್ನು ಮಾಡಬೇಡ! ಅದರಿಂದ ನನ್ನ ಅಂತಃಕರಣವು ಬಹಳ ವ್ಯಥಿತವಾಗುವದು. ನಾನು ಮಾಡಹೋದ ಎರಡೂ ಅಪರಾಧಗಳೂ ಈಗ ನನ್ನ ಹೃದಯವನ್ನು ಸುಡುತ್ತಿರುವವು; ಪ್ರತ್ಯಕ್ಷ ಜನ್ಮದಾತೃವಿನ, ಅದರಂತೆ ನನ್ನ ಹಿತಕ್ಕಾಗಿ ಸರ್ವಸ್ವದ ತ್ಯಾಗ ಮಾಡಿರುವವನ ಕೊಲೆ ಮಾಡಹೋಗುವ ನೀಚನು ನಾನು ಕಟಕನಲ್ಲದೆ ನಿನ್ನ ಮಗನು ಹ್ಯಾಗಾದೇನು? ಆದರೆ ಅವ್ವಾ, ಅವ್ವಾ! ನನ್ನ ಅಪರಾಧಗಳನ್ನು ಕ್ಷಮಿಸು. ನಾನು ನಿಜವಾಗಿಯೇ ದುರ್ದೈವಿಯು ನನ್ನಿಂದ ನಿನಗೆ, ಅಪ್ಪನಿಗೆ, ಮಾವನಿಗೆ ಮೂವರಿಗೂ ತ್ರಾಸವಾಗುತ್ತಿರುವದು. ಅವ್ವಾ, ನನಗೆ ಅಪ್ಪಣೆ ಕೊಡು, ನಾನು ಪುನಃ ದಿಲ್ಲಿಗೆ ಹೋಗುವೆನು. ನಾನು ಇಲ್ಲಿ ಇದ್ದು ನಿನಗೆ ಆನಂದವನ್ನುಂಟುಮಾಡುವದೊತ್ತಟ್ಟಿ ಗುಳಿದು, ನಿನಗೆ ದುಸ್ಸಹ ದುಃಖವನ್ನು ಮಾತ್ರ ಉಂಟುಮಾಡಿದೆನು! ಈ ಅಪರಾಧಕ್ಕಾಗಿ ನನ್ನನ್ನು ಕ್ಷಮಿಸು ಕ್ಷಮಿಸು. ನಾನು ಹೀಗೆಯೇ ಅಜ್ಜನ ಬಳಿಗೆ ಹೋಗಿ ಆತನ ಮುಂದೆ ಸ್ಪಷ್ಟವಾಗಿ—''ಅಜ್ಜಾ ನಾನು ಮಹಾ ನೀಚನು. ನಿನ್ನ ಮಗನಾದ ಸೇಲೀಮನನ್ನು ನನ್ನ ತಂದೆಯೆಂದು ನೋಡದೆ ಆತನ ಕೊಲೆ ಮಾಡಹೋದವನು; ಅದರಂತೆ ನಿನ್ನ ಮಿತ್ರನಾದ ಮಾನಸಿಂಗನನ್ನು ನನ್ನ ಸೋದರ ಮಾವನೆಂದು ನೋಡದೆ ಆತನನ್ನು ಕೊಲ್ಲಹೋದವನು. ಇವೆರಡೂ ನೀಚ ಕೃತ್ಯಗಳು ಯಾತರಸಲುವಾಗಿ? ಕೇವಲ ಸಿಂಹಾಸನಪ್ರಾಪ್ತಿಯ ಸಲುವಾಗಿ! ಇಂಥ ದುಷ್ಟನು ನಾನು. ನನ್ನ ಈ ಎರಡೂ ಘೋರ ಅಪರಾಧಗಳನ್ನು ನನ್ನ ಬಾಯಿಯಿಂದ ನಾನು ಒಪ್ಪಿಕೊಳ್ಳುವೆನು. ಇವುಗಳಿಗಾಗಿ ನನಗೆ ಘೋರ ಶಾಸನಮಾಡಿರಿ. ಎಂದು ಅವ್ವಾ, ಅಜ್ಜನ ಮುಂದೆ ಹೀಗೆ

ಸ್ಪಷ್ಟವಾಗಿ ಹೇಳಿಬಿಡುವೆನು. ನನಗೆ ನನ್ನ ಅಪರಾಧಗಳಿಗಾಗಿ ಪಶ್ಚಾತ್ತಾಪವಾಗಿದೆ. ಶಿಕ್ಷೆಯಾದ ಹೊರತು ಪಶ್ಚಾತ್ತಾಪವು ಶಾಂತವಾಗಲಾರದು. ಇನ್ನು ಮಂದಿಗೂ ಮನೆಯವರಿಗೂ ನಾನು ಮೋರೆಯನ್ನು ತೋರಿಸಲಾರೆನು. ನನಗೆ ಬಹಳ ನಾಚಿಗೆ ಬಂದಿದೆ. ಅವ್ವಾ! ನಿಜವಾಗಿ ನಾನು ಭೂಮಿಯಲ್ಲಿ ಹುಟ್ಟದಿದ್ದರೆ ನೆಟ್ಟಗಾಗುತ್ತಿತ್ತು.

ಹೀಗೆ ಮಾತಾಡುತ್ತಾಡುತ್ತ ಕುಮಾರನ ಕಣ್ಣೊಳಗಿಂದ ಅಶ್ರುಗಳು ಧಾರೆಯಿಟ್ಟು ಸುರಿಯಹತ್ತಿದವು. ಆತನು ಆಗಾಗ್ಗೆ ಬಿಕ್ಕಿಬಿಕ್ಕಿ ಅಳುತ್ತ, ತನಗೆ ಇನ್ನು ಯಾರೂ ಗತಿಯಿಲ್ಲೆಂಬ ಭಾವದಿಂದ ನಾಲ್ಕೂ ಕಡೆಗೆ ನೋಡಹತ್ತಿದನು. ಜೋಧಬಾಯಿಯು ಎಷ್ಟಾದರೂ ಹಡೆದ ಕರುಳು. ಮಗನ ಈ ದುರವಸ್ಥೆಯನ್ನು ನೋಡಿ ಆಕೆಯ ಅಂತಃಕರಣವು ಕರಗಿ ನೀರಾಯಿತು. ಇಂಥ ದುಷ್ಟ ಮಗನು ಹುಟ್ಟುವದಕ್ಕಿಂತ ಬಂಜೆಯಾಗಿದ್ದರೆ ನೆಟ್ಟಗಾಗುತ್ತಿತ್ತೆಂಬ ಆಕೆಯ ವಿಚಾರವು ಈಗ ನಷ್ಟವಾಗಿಹೋಯಿತು. ಅಂಗಾಲಿಗೆ ಹೇಸಿಗೆಯಿಲ್ಲ, ಕರಳಿಗೆ ನಾಚಿಕೆಯಿಲ್ಲೆಂಬ ಮಾತು ಸುಳ್ಳಲ್ಲ! ಮಗನ ಕಣ್ಣುಗಳೊಳಗಿಂದ ಸುರಿಯುವ ಅಶ್ರುಗಳನ್ನು ನೋಡಿ ಆಕೆಯ ಹೃದಯ ಕಾಠಿಣ್ಯವೂ, ವಿರಾಗವೂ, ತಿರಸ್ಕಾರವೂ ಎತ್ತೋ ಹೋಗಿಬಿಟ್ಟವು! ಕೂಡಲೆ ಆ ಸಾಧ್ವಿಯ ಕಣ್ಣುಗಳೊಳಗಿಂದ ನೀರುಗಳು ಸುರಿಯಹತ್ತಲು, ಆಕೆಯು ಮಗನನ್ನು ತಬ್ಬಿಕೊಂಡು—''ಬಾಳಾ, ಖುಸ್ರೂ, ಬೇಡಪ್ಪಾ, ಅಳಬೇಡ! ಸಾಕು, ಇನ್ನು ಕಣ್ಣು ಒರಿಸು. ನಿನ್ನ ಕಣ್ಣೀರು ಮುಂದೆ ನನಗೆ ಮೊಗಲ ಸಿಂಹಾಸನದ ಮಹತ್ವವು ತೋರದು; ನಿನ್ನ ಮುಂದೆ ನನಗೆ ಜಗತ್ತೇ ತುಚ್ಛವಾಗಿರುವಾಗ ಆ ಯಕಃಶ್ಚಿತ ಸಿಂಹಾಸನದ ಪಾಡೇನು? ಇಲ್ಲ, ಮುದ್ದು ಮಗುವೇ, ಇನ್ನು ನಾನು ನಿನ್ನನ್ನು ಎಂದೂ ತಿರಸ್ಕರಿಸುವದಿಲ್ಲ, ನಿನ್ನ ಯಾವತ್ತು ಅಪರಾಧಗಳನ್ನು ಕ್ಷಮಿಸಿದೆನು. ನೀನು ಉದ್ದಂಡಾಯುಷ್ಯವಂತನಾದರೆ ಸಾಕು. ಬಾಳಾ, ಬೇಡಪ್ಪಾ, ಇನ್ನು ಸರ್ವಥಾ ವ್ಯಥಿತನಾಗಬೇಡ'' ಎಂದ ಮೈಮೇಲೆ ಕೈಯಾಡಿಸಿ, ರಮಿಸಲು, ಖುಸ್ರುವು ಅತ್ಯಂತ ಸಮಾಧಾನ ತಾಳಿ ತಾಯಿಯ ಚರಣಗಳ ಮೇಲೆ ಮಸ್ತಕವಿಟ್ಟು, ಅವನ್ನು ಅಶ್ರುಗಳಿಂದ ತೊಳೆಯಹತ್ತಿದನು. ಆಗ ಜೋಧಬಾಯಿಯು ಮಗನನ್ನು ಎಬ್ಬಿಸಿ ಅವನ ಎರಡೂ ಕೈಗಳನ್ನು ಹಿಡಿದು—''ಬಾಳಾ, ನೀನು ನನ್ನ ಹೊಟ್ಟೆಯಲ್ಲಿ ಹುಟ್ಟಿ ಏನು ಸುಖವನ್ನು ಕಂಡೆ? ಹಾಯ್ ಹಾಯ್! ನಿನ್ನ ಜನ್ಮವೆಲ್ಲ ತ್ರಾಸದಲ್ಲಿಯೂ, ದುಃಖದಲ್ಲಿಯೂ ಕಳೆದು ಹೋಗಬೇಕೆಂದು ಈಶ್ವರೀ ಸಂಕೇತವಿರಬಹುದೇ? ಬಾಳಾ, ಖುಸ್ರೂ, ನಾನು ನಿನ್ನ ತಾಯಿಯು ಯಾಕಾಗಿದ್ದೇನು?'' ಎಂದು ಒಮ್ಮೆ ಮರ್ಮಭೇದಕವಾದ ನಿಟ್ಟುಸಿರುಬಿಟ್ಟು ಮಗನ ಮೋರೆಯನ್ನು ಕನಿಕರದಿಂದ ನೋಡ ತೊಡಗಿದಳು! ''ನಮಾತುಃಪರದೈವತಂ'' ಎಂಬ ಮಾತು ಸುಳ್ಳಲ್ಲ!!

ಕಠೋರ ಪ್ರತಿಜ್ಞೆ!

ಹೀಗೆ ಖುಸ್ರುವು ಅತ್ಯಂತ ವ್ಯಾಕುಲನಾಗಿರಲು, ಅತ್ತ ದುರ್ಜಯಸಿಂಹನೂ ಚಿಂತಾಮಗ್ನನಾಗಿದ್ದನು. ಕರ್ತವ್ಯನಿಷ್ಠುರನಾಗಿದ್ದ ಮಾನಸಿಂಹನು ದುರ್ಜಯಸಿಂಹನ ಉದ್ಧಟತನಕ್ಕಾಗಿ ಆತನನ್ನು ಹದ್ದುಪಾರಿನ ಶಿಕ್ಷೆಗೆ ಗುರಿಮಾಡಿದ್ದನು. ಇಪ್ಪತ್ತುನಾಲ್ಕು ತಾಸಿನಲ್ಲಿ ಅಂಬರ ರಾಜಧಾನಿಯನ್ನು ಬಿಟ್ಟು, ದುರ್ಜಯನು ಹೋಗಲೇಬೇಕೆಂತಲೂ, ಹಾಗೆ ಹೋಗದಿದ್ದರೆ ಆತನು ಆಜನ್ಮ ಕಾರಾಗೃಹವಾಸದ ಶಿಕ್ಷೆಗೆ ಗುರಿಯಾಗಬೇಕಾಗುವದೆಂತಲೂ ಮಾನಸಿಂಹನ ಕಟ್ಟಪ್ಪಣೆಯಾಗಿತ್ತು, ತಾನು ನಿರಪರಾಧಿಯೆಂದು ಭಾವಿಸಿದ್ದ ದುರ್ಜಯಸಿಂಹನು ತನಗಾದ ಶಿಕ್ಷೆಗಾಗಿ ಪಶ್ಚಾತ್ತಾಪಪಡುತ್ತ ತನ್ನ ಜನ್ಮಭೂಮಿಯನ್ನು ಬಿಟ್ಟು ಹೋಗಲಾರದೆ, ತಳಮಳಿಸುತ್ತಿದ್ದನು. ಪ್ರಸಂಗವಶಾತ್ ತಾನು ಮಾನಸಿಂಹನ ಮನಸ್ಸನ್ನು ಪುನಃ ಪ್ರಸನ್ನೀಕರಿಸಿ ಕೊಳ್ಳುವೆನೆಂಬ ನಂಬಿಗೆಯು ದುರ್ಜಯಸಿಂಹನಿಗೆ ಇದ್ದಿತು. ಮಂದಾಕಿನಿಯೊಡನೆ ಇನ್ನು ಸ್ವಲ್ಪದಿನಗಳಲ್ಲಿ ಲಗ್ನವಾಗಬೇಕಾಗಿರಲು, ಅಷ್ಟರಲ್ಲಿ ತನ್ನ ಆ ವಾಗ್ದತ್ತ ವಧುವನ್ನು ಅಗಲಿ ಹೋಗುವದೆಂದರೆ ಆತನ ಜೀವದ ಸುತ್ತು ಬಂದಹಾಗಾಗಿತ್ತು. ಅಂದಿನ ಫಾಲ್ಗುಣ ಪೌರ್ಣಿಮೆಯ ಉತ್ಸವದಲ್ಲಿ ಅಂಬರ ರಾಜಧಾನಿಯೊಳಗಿನ ಸ್ತ್ರೀ—ಪುರುಷರೆಲ್ಲ ತೊಡಗಿ ಹೋಗಿ, ರಾತ್ರಿ ನಾಲ್ಕೂ ಕಡೆಯಿಂದ ಜನಸಮೂಹವು ಶ್ರೀ ರಾಧಾಕೃಷ್ಣನ ಮಂದಿರದ ಕಡೆಗೆ ಸಾಗಿತ್ತು, ಬೆಳದಿಂಗಳ ಸ್ವಚ್ಛ ಪ್ರಕಾಶದಿಂದ ಉತ್ಸವಕ್ಕೆ ವಿಶೇಷವಾಗಿ ಕಳೆಯೇರಿತ್ತು, ಒಟ್ಟಿನಲ್ಲಿ ಅಂಬರ ರಾಜಧಾನಿಯು ಉತ್ಸವ ಮಗ್ನವಾಗಿರುವದೆಂದು ಹೇಳಬಹುದಾಗಿದ್ದರೂ, ಅದರಲ್ಲಿ ದುರ್ಜಯಸಿಂಹನಂಥ ಎಷ್ಟುಜನ ದುರ್ದೈವಿಗಳು ಒಂದಿಲ್ಲೊಂದು ಬಗೆಯ ಅಸಮಾಧಾನದಲ್ಲಿ ಮಗ್ನರಾಗಿದ್ದರೆಂಬದನ್ನು ಯಾರು ಹೇಳಬೇಕು? ದುರ್ಜಯಸಿಂಹನಂತು ತನಗೊದಗಿದ ಶಿಕ್ಷೆಯ ಮೂಲಕ ಅತ್ಯಂತ ಉತ್ಸಾಹಹೀನನಾಗಿದ್ದನು. ಅಂಬರ ರಾಜಧಾನಿಯಲ್ಲಿ ನಡೆದಿದ್ದ ಉತ್ಸವಗಳಿಂದ ಅವನ ಚಿತ್ತವೃತ್ತಿಯು ಸ್ವಲ್ಪವೂ ಉಲ್ಲಸಿತವಾಗುವಹಾಗಿದ್ದಿಲ್ಲ, ಮಧ್ಯರಾತ್ರಿ ಯವರೆಗೆ ಅಲ್ಲಿ ಉತ್ಸವವು ನಡೆದಿದ್ದರೂ ಆತನ ದೃಷ್ಟಿಯಿಂದ ಅದು ನಡೆಯದ ಹಾಗೆಯೇ ಸರಿ! ಆತನಿಗೆ ದೇವರೂ ಬೇಡ, ದಿಂಡರೂ ಬೇಡ; ನೋಡುವದೂ ಬೇಡ, ನಲಿಯುವದೂ ಬೇಡ; ಆತನ ಪಾಲಿಗೆ ನೋಡಿದತ್ತ ಅಸಮಾಧಾನದ ಸಾಮ್ರಾಜ್ಯವು ಪಸರಿಸಿದಂತಾಗಿತ್ತು, ಆತನಿಗೆ ಎಲ್ಲದರಲ್ಲಿಯೂ ಔದಾಸೀನ್ಯವು! ಎಲ್ಲದರಲ್ಲಿಯೂ ಬೇಸರವು! ಸುಂದರ ತರುಣೆಯರು ವಸ್ತ್ರಾಲಂಕಾರ ವಿಭೂಷಿತರಾಗಿ ಶ್ರೀ ರಾಧಾಕೃಷ್ಣನ ಮಂದಿರಕ್ಕೆ ಸಾಗಿರುವದನ್ನು ಆತನು ನೋಡಲೊಲ್ಲನು; ವೀರತರುಣ ರಜಪೂತ ತಂಡವು ಕ್ಷಾತ್ರತೇಜದ ಒಗರಿನಿಂದ ಆ ಮಂದಿರದತ್ತ ಸಾಗಿರುವದರಕಡೆಗೂ ಆತನ ಮನಸ್ಸು ಹರಿಯಲೊಲ್ಲದು; ಹೀಗೆ ಸ್ತ್ರೀ—ಪುರುಷ ತಂಡವು ದೇವಮಂದಿರವನ್ನು ಪ್ರವೇಶಿಸಿ ಶ್ರೀ ರಾಧಾಕೃಷ್ಣನಿಗೆ ಪನ್ನೀರಿನ ಅಭಿಷೇಕ ಮಾಡಿ, ಬುಕ್ಕಿಟ್ಟು—ಗುಲಾಲುಗಳನ್ನೂ, ಘಮಘಮಿಸುವ ಹೂಮಾಲೆಗಳನ್ನೂ ಸಮರ್ಪಿಸಿ, ಅರ್ಚಕನಿಂದ ತೀರ್ಥ ಪ್ರಸಾದಗಳನ್ನು ಸ್ವೀಕರಿಸಿ ಗುಡಿಯಿಂದ ಹೊರಬೀಳುತ್ತಲಿತ್ತು; ಹೊರಗಿನವರು ಭಗವಂತನನ್ನು ಅರ್ಚಿಸುವದಕ್ಕಾಗಿ ಆತುರದಿಂದ

ಗುಡಿಯೊಳಗೆ ಹೋಗುತ್ತಲಿದ್ದರು. ಹೀಗೆ ಜನರ ಹೋಗಿ ಬರುವ ಗದ್ದಲವು ತೆರಪಿಲ್ಲದೆ ನಡೆದಿರಲು, ದುರ್ಜಯಸಿಂಹನು ಎಲ್ಲಿಯೋ ಒಂದು ಮೂಲೆಯಲ್ಲಿ ಚಿಂತಾಮಗ್ನನಾಗಿ ಕುಳಿತಿದ್ದನು. ಆಗ ಆರುತಾಸು ರಾತ್ರಿಯಾಗಿತ್ತು; ದುರ್ಜಯನ ರಾಜಧಾನಿಯ ತ್ಯಾಗದ ಅವಧಿಯು ಇನ್ನು ಆರೆಂದರೆ ಆರೇ ತಾಸು ಉಳಿದಿತ್ತು.

ತನಗಾಗಿದ್ದ ಭಯಂಕರ ಶಿಕ್ಷೆಯ ಸುದ್ದಿಯನ್ನು ದುರ್ಜಯಸಿಂಹನು ತನ್ನ ವಾಗ್ದತ್ತ ವಧುವಾದ ಮಂದಾಕಿನಿಗೆ ತಿಳಿಸಬೇಕಾಗಿತ್ತು. ಮಂದಾಕಿನಿಯು ಎಲ್ಲ ಸ್ತ್ರೀ ಪರಿವಾರದೊಡನೆ ಶ್ರೀ ರಾಧಾಕೃಷ್ಣನ ಮಂದಿರಕ್ಕೆ ಬಂದಿದ್ದಳು. ತನ್ನ ಭಾವೀ ಪತಿಗೆ ಖುಸ್ರುವಿನ ಸಹವಾಸದಿಂದ ಏನಾದರೂ ಅನರ್ಥ ಪ್ರಸಂಗವು ಒದಗುವದೆಂಬ ಚಿಂತೆಯು ಆ ನವವಧುವಿನ ಮನಸ್ಸಿನಲ್ಲಿಯೂ ಕಟೆಯುತ್ತಿತ್ತು. ಆಕೆಯ ಮನಸ್ಸಾದರೂ ಶ್ರೀ ರಾಧಾಕೃಷ್ಣನ ಉತ್ಸವದಲ್ಲಿ ಸಂಪೂರ್ಣವಾಗಿ ತೊಡಗಿದ್ದಿಲ್ಲ. ತನ್ನ ಪತಿಗೆ ಯಾವ ಸಂಕಟವೂ ಒದಗದಂತೆ ಭಗವಂತನನ್ನು ಪ್ರಾರ್ಥಿಸುವದಕ್ಕಾಗಿಯೇ ಆ ಆರ್ಯ ವನಿತೆಯು ಉತ್ಸವದಲ್ಲಿ ತೊಡಗಿದ್ದಳು. ಆಕೆಯು ಜನರ ತಂಡದಲ್ಲಿ ತನ್ನ ವಲ್ಲಭನನ್ನು ನೋಡಿದಳು; ಆದರೆ ತಿರುಗಿ ಆತನು ಕಣ್ಣಿಗೆ ಬೀಳಲಿಲ್ಲ. ಮಂದಾಕಿನಿಯು ದೇವ ಮಂದಿರವನ್ನು ಪ್ರವೇಶಿಸಿ ಶ್ರೀ ರಾಧಾರಮಣನನ್ನು ಪೂಜಿಸಿ ಪ್ರಾರ್ಥಿಸಿ ಹೊರಗೆ ಬಂದು ಅಲ್ಲಿಯೇ ಮಂದಿರದಲ್ಲಿ ಒತ್ತಟ್ಟಿಗೆ ಕುಳಿತು, ದುರ್ಜಯಸಿಂಹನು ಬರುವ ಹಾದಿಯನ್ನು ನೋಡುತ್ತಲಿದ್ದಳು. ಆರುತಾಸು ರಾತ್ರಿಯಾಗಿ ಏಳರ ಅಮಲು ಆರಂಭ ವಾಯಿತು. ಬರಬರುತ್ತ ಜನರ ಗದ್ದಲವು ಕಡಿಮೆಯಾಗಹತ್ತಿ, ನಾಲ್ಕೂ ಕಡೆಯಲ್ಲಿ ಶಾಂತತೆಯ ಸಾಮ್ರಾಜ್ಯವು ಪ್ರಸ್ಥಾಪಿತವಾಗತೊಡಗಿತು. ಆಗ ಮಂದಾಕಿನಿಯು ನಿರುತ್ಸಾಹದಿಂದ ಉಸುರ್ಗಳೆದು ಮೇಲಕ್ಕೆದ್ದು, ಶ್ರೀ ರಾಧಾಕೃಷ್ಣನನ್ನು ವಂದಿಸಿ,—"ದೇವಾ, ಪತಿದರ್ಶನ ಯೋಗವಿಲ್ಲವೇ? ನಿನ್ನ ಮನಸ್ಸಿಗೆ ಹೀಗೆಯೇ ಬಂದಿತೇ" ಎಂದು ಭಗವಂತನಿಗೆ ಮೊರೆಯಿಟ್ಟು, ಮಂದಿರದಿಂದ ಹೊರ ಹೊರಟು ಮನೆಯಕಡೆಗೆ ಸಾಗತೊಡಗಿದಳು. ಆಗ ಆ ಜನರ ಗದ್ದಲವು ತೀರ ಕಡಿಮೆಯಾಗಿತ್ತು. ಮಂದಾಕಿನಿಯು ನಾಲ್ಕೂ ಕಡೆಗೆ ನೋಡುತ್ತ ಸಾಗಿರಲು, ಅತ್ತ ದೂರ ಯಾರೋ ಒಂದು ಮರದ ಬುಡದಲ್ಲಿ ಒಬ್ಬರೇ ಕುಳಿತಂತೆ ತೋರಿತು! ಉಡಿಗೆ ತೊಡಿಗೆಗಳಿಂದ ಗಂಡಸಿನಂತೆ ತೋರಿದ್ದರಿಂದ, ಆ ವೀರಪುತ್ರಿಯಾದ ಮಂದಾಕಿನಿಯು, ಆತನು ತನ್ನ ಮನೋವಲ್ಲಭನಾದ ದುರ್ಜಯಸಿಂಹ ನೆಂತಲೇ ಭಾವಿಸಿದಳು. ರಜಪೂತ ತರುಣೆಯರು ತೀರ ಕೆಚ್ಚೆದೆಯವರು. ತಮ್ಮ ಪಾವಿತ್ರ್ಯದ ವಿಷಯದ ಅವರ ಆತ್ಮವಿಶ್ವಾಸವು ಅನಿವಾರವಾದದ್ದು. ತನ್ನ ಮನೋವಲ್ಲಭನಾದ ದುರ್ಜಯ ಸಿಂಹನೇ ಆಗಿದ್ದನು. ಆತನು ತನ್ನ ಪ್ರಿಯಳು ದೇವಮಂದಿರವ ಪ್ರವೇಶಿಸುವದನ್ನು ನೋಡಿದರೂ, ಆಕೆಯನ್ನು ಕಂಡು ತನಗಾದ ಶಿಕ್ಷೆಯನ್ನು ಆಕೆಗೆ ಹೇಳಿ ಆಕೆಯನ್ನು ಸಮಾಧಾನಪಡಿಸುವದು ಯೋಗ್ಯವೋ ಎಂಬ ವಿಚಾರದಲ್ಲಿ ಮಗ್ನನಾಗಿ, ಅತ್ತ ದೂರದಲ್ಲಿರುವ ಗಿಡದ ಬುಡದಲ್ಲಿ ಕುಳಿತುಕೊಂಡಿದ್ದನು. ಉತ್ಸವ ಮಗ್ನವಾದ ಜನರ ತಂಡದ ಲಕ್ಷವು ಆತನ ಕಡೆಗೆ ಯಾಕೆ ಹೋಗುವದು? ಹೋದರೂ ಆತನನ್ನು ಯಾರು ಲಕ್ಷಿಸುವರು? ಆದರೆ ಮಂದಾಕಿನಿಯಂಥ ಆತನ ನಿಕಟ ಸಂಬಂಧದ ತರುಣೆಯ ದೃಷ್ಟಿಯಿಂದ ಆತನು

ತಪ್ಪಿಸಿಕೊಳ್ಳುವದು ಅಶಕ್ಯವಾಗಿತ್ತು, ತಾನಾಗಿ ಮಂದಾಕಿನಿಯ ದರ್ಶನವಾದರೆ ಆಗಲಿ, ಹಾಗೆ ದರ್ಶನವಾದಾಗ ತನಗಾಗಿದ್ದ ಶಿಕ್ಷೆಯ ಸುದ್ದಿಯು ಆಕಗೆ ತಿಳಿದರೆ ತಿಳಿಯಲಿ; ಆದರೆ ತಾನಾಗಿ ತನ್ನ ಆ ಪ್ರಿಯ ವಧುವನ್ನು ಶೋಕಮಗ್ನವಾಗಿ ಮಾಡುವದು ಯೋಗ್ಯವಲ್ಲೆಂದು ಆತನು ಆ ಗಿಡದ ಬುಡದಲ್ಲಿ ಕುಳಿತು ಬಿಟ್ಟಿದ್ದನು. ಹೀಗಿರುವಾಗ ಒಬ್ಬ ತರುಣಿಯು ತನ್ನ ಕಡೆಗೆ ಬರುವದು ನೂಪುರ ಧ್ವನಿಯಿಂದ ಗೊತ್ತಾಗಲು, ಬರುವವಳು ತನ್ನ ಪ್ರಿಯಳೇ ಎಂದು ತಿಳಿದು ದುರ್ಜಯನು ಕೌತುಕದಿಂದ—''ಯಾರು? ಮಂದಾಕಿನಿಯೇನು? ಪ್ರಿಯೇ, ಇಂಥ ಮಧ್ಯರಾತ್ರಿಯಲ್ಲಿ ಹೀಗೆ ಒಬ್ಬಳೇ ಬರುವ ಸಾಹಸಮಾಡಬಹುದೇ?'' ಎಂದು ನುಡಿದನು.

ತನ್ನ ವಲ್ಲಭನ ಧ್ವನಿಯನ್ನು ಕೇಳಿದ ಕೂಡಲೇ ಮಂದಾಕಿನಿಯು ಭಯ ರಹಿತಳಾಗಿ ಉತ್ಸಾಹಗೊಂಡಳು. ಆಕೆಯು ಆತುರದಿಂದ ದುರ್ಜಯನ ಬಳಿಗೆ ಹೋಗಿ—''ಕ್ಷತ್ರಿಯ ವೀರಾ, ಶ್ರೀ ರಾಧಾಕೃಷ್ಣನ ದರ್ಶನಕ್ಕೂ ಬಾರದಷ್ಟು ಔದಾಸೀನ್ಯವು ನಿನ್ನನ್ನು ಯಾಕೆ ಆವರಿಸಿತು? ಎಲ್ಲಕ್ಕೂ ಮೊದಲು ಬಂದು ಎಲ್ಲಕ್ಕೂ ಹಿಂದುಗಡೆಗೆ ಹೋಗುವ ನನಗೆ ನೀನು ಗುಡಿಯಲ್ಲೆಲ್ಲಿಯೂ ಕಣ್ಣಿಗೆ ಬೀಳದಿರುವದು ಆಶ್ಚರ್ಯವಲ್ಲವೆ? ಈ ಕೆಟ್ಟಸಂಸಾರದಲ್ಲಿ ಸ್ವಾರ್ಥಕ್ಕಾಗಿ ಬಡಿದಾಡುವ ಹೇಸಿ ಜನರು ಒಬ್ಬರನ್ನೊಬ್ಬರು ಒಮ್ಮೆ ತಿರಸ್ಕರಿಸಬಹುದು, ಒಮ್ಮೆ ಆದರಿಸಬಹುದು; ಆದರೆ ಸರ್ವತಂತ್ರಸ್ವತಂತ್ರನೂ, ಸರ್ವಾಧಾರನೂ, ಪೂರ್ಣಕಾಮನೂ ಆದ ಸಾಕ್ಷಾತ್ ಶ್ರೀರಾಧಾಕೃಷ್ಣನು ನಮ್ಮಂಥ ಸಂಸಾರದೊಳಗಿನ ಹುಳಗಳನ್ನು ಉದ್ಧರಿಸುವದಕ್ಕಾಗಿ ಶಿಲಾ ಪ್ರತಿಮೆಯ ರೂಪದಿಂದ ಅತ್ತಿತ್ತ ಉಲುಕಾಡದೆ ಸದಾ ಸಿದ್ಧನಾಗಿ ಜಗನ್ಮಾತೆಯೊಡನೆ ನಿಂತಿರಲು, ನೀನು ಆತನನ್ನು ನಮಸ್ಕರಿಸುವದಕ್ಕೂ ಒಳಗೆ ಬರಬಾರದೇನು? ಆದರೆ ಪ್ರಾಣಪ್ರಿಯಾ, ಈಗಲಾದರೂ ಇಲ್ಲಿಂದಲೇ ಆ ರಾಧಾರಮಣನನ್ನು ನಮಸ್ಕರಿಸು. ಆ ಅನಿಮಿತ್ತ ಬಂಧುವನ್ನಲ್ಲದೆ ಮತ್ತೆ ಯಾರನ್ನು ನಾವು ಶರಣು ಹೋಗತಕ್ಕದ್ದು? ವೀರವರನೇ, ಹೀಗೆ ಒಬ್ಬನೇ ಔದಾಸೀನ್ಯದಿಂದ ಕುಳಿತುಕೊಳ್ಳಲಿಕ್ಕೆ ನಿನಗೆ ಬಂದ ಅಂಥ ಪ್ರಸಂಗವೇನು? ಎಂಥ ಪ್ರಸಂಗಬಂದರೂ ಪ್ರಿಯಾ, ನಾನಂತು ನಿನ್ನನ್ನು ಅಗಲಿ ಹೋಗುವಹಾಗಿಲ್ಲವಷ್ಟೇ?'' ಎಂದು ನುಡಿಯಲು, ದುರ್ಜಯನ ಸರ್ವಾಂಗದಲ್ಲಿ ಹೊಸ ಉತ್ಸಾಹದ ಸಂಚಾರವಾಯಿತು! ಆಗ ಆತನು ಎದ್ದು ಆದರದಿಂದ ಮಂದಾಕಿನಿಯನ್ನು ಹತ್ತರ ಕರೆದು ಕುಳ್ಳಿರಿಸಿಕೊಂಡು—''ಪ್ರಿಯೇ, ಮಂದಾಕಿನೀ, ನಿನ್ನಂಥ ಧರ್ಮಾತ್ಮಳ ಪ್ರೇರಣೆಯಿಂದ ನಾನು ಇಲ್ಲಿಂದಲೇ ಶ್ರೀ ರಾಧಾರಮಣನನ್ನು ನಮಸ್ಕರಿಸಿ ನಾಸ್ತಿಕತ್ವದ ದೋಷದಿಂದ ಮುಕ್ತನಾಗುವೆನು. ನಿನ್ನ ಹೃದಯದಲ್ಲಿ ನನ್ನ ವಿಷಯದ ಪ್ರೇಮವು ಎಷ್ಟು ದಟ್ಟವಾಗಿ ತುಂಬಿರುವದೆಂಬದರ ಅನುಭವವು ನಿನ್ನೆ ಗುಹೆಯಲ್ಲಿಯೇ ನನಗೆ ಆಗಿಹೋಗಿದೆ. ನನ್ನ ವಾಗ್ದತ್ತ ವಧುವಾದ ನೀನು ಇಂಥ ಘನವಾದ ಯೋಗ್ಯತೆಯವಳೆಂಬದರ ಅನುಭವವು ನನಗೆ ನಿನ್ನಿನವರೆಗೆ ಆಗಿದ್ದಿಲ್ಲ; ಆದರೆ ಪ್ರಿಯೇ, ಪ್ರಸಂಗವಶಾತ್ ನನ್ನಿಂದ ನಿನ್ನ ಯೋಗ್ಯತೆಗೆ ಕೊರತೆ ಬರುವಂತಹ ಆಚರಣೆ ಯೇನಾದರೂ ಆಗಿದ್ದರೆ ಅದಕ್ಕಾಗಿ ನನ್ನನ್ನು ಕ್ಷಮಿಸು ಕಂಡೆಯಾ! ನಿನ್ನ ಪಾಣಿಗ್ರಹಣವಾಡಿ ಕೃತಾರ್ಥನಾಗುವ ಯೋಗವು ನನ್ನ ಲಭ್ಯದಲ್ಲಿದ್ದಂತೆ ತೋರುವದಿಲ್ಲ, ಮಾನಸಿಂಹ

ಮಹಾರಾಜರವರು ಇಪ್ಪತ್ತುನಾಲ್ಕು ತಾಸುಗಳಲ್ಲಿ ಈ ರಾಜಧಾನಿಯನ್ನು ಬಿಟ್ಟು ಹೋಗ ಬೇಕೆಂತಲೂ, ಹಾಗೆ ಮಾಡದಿದ್ದರೆ ಆಜನ್ಮ ಸೆರೆಮನೆಯಲ್ಲಿರಬೇಕಾಗುವದೆಂತಲೂ ಕಟ್ಟಪ್ಪಣೆ ಮಾಡಿರುವರು; ಆದ್ದರಿಂದ ನಾನು ಇನ್ನು ನಾಲ್ಕಾರು ತಾಸುಗಳಲ್ಲಿ ಈ ಪಟ್ಟಣದಿಂದ ಅದೃಶ್ಯವಾಗಬೇಕಾಗಿದೆ. ಹಾಗೆ ಅದೃಶ್ಯವಾಗುವಾಗ ನಿನ್ನನ್ನು ಕಂಡದ್ದೇ ಪರಮಲಾಭವು. ಮುಂದೆ ಯೋಗವು ಹೇಗಿರುವದೆಂಬದನ್ನು ಶ್ರೀ ರಾಧಾಕೃಷ್ಣನೇ ಬಲ್ಲನು.

ದುರ್ಜಯನ ಈ ಮಾತುಗಳನ್ನು ಕೇಳಿ ಮಂದಾಕಿನಿಗೆ ಅತ್ಯಂತ ವಿಷಾದವಾಯಿತು. ಆಕೆಯ ಮುಪ್ಪಿನ ತಂದೆಯಾದ ಅಮರಸಿಂಹನು ವ್ಯಾಧಿಪೀಡಿತನಾಗಿ ತೀರ ಮರಣೋನ್ಮುಖ ನಾಗಿದ್ದನು. ಬೇಗನೆ ದುರ್ಜಯನೊಡನೆ ತನ್ನ ಮಗಳ ಲಗ್ನವನ್ನು ಮಾಡಿಬಿಡಬೇಕೆಂದು ಆ ವೃದ್ಧವೀರನು ಯೋಚಿಸಿದ್ದನು. ಹೀಗಿರುವಾಗ ಅಕಲ್ಪಿತ ವಿಘ್ನವು ಒದಗಿದ್ದರಿಂದ ಮಂದಾಕಿನಿಗೆ ವಿಷಾದವಾದದ್ದು ಆಶ್ಚರ್ಯವಲ್ಲ. ಆಕೆಯು ತೀವ್ರ ಸ್ವರದಿಂದ ದುರ್ಜಯನನ್ನು ಕುರಿತು— ''ಏನಂದಿರಿ? ನನ್ನಿಂದ ನಿಮ್ಮನ್ನು ಅಗಲಿಸಲಿಕ್ಕೆ ಮಾನಸಿಂಹ ಮಹಾರಾಜರು ಕಾರಣರಾದರೇ? ಅಥವಾ ಆ ದೋಷವನ್ನು ಅವರ ಮೇಲೆ ಯಾಕೆ ಹೊರಿಸಬೇಕು? ಆ ಅಪರಾಧಕ್ಕೆ ಶಹಾಜಾದಾನಾದ ಖುಸ್ರುವೇ ಕಾರಣನು! ಖುಸ್ರುವಿನ ದುರಾಚಾರದ ಫಲವನ್ನು ನಾವು ಅನುಭವಿಸಬೇಕಾಯಿತು; ಆದರೆ ಪ್ರಿಯಾ, ಯಾರು ನಮ್ಮನ್ನು ಅಗಲಿಸಹೋದರೂ, ತಾವು ನನ್ನನ್ನು ಆದರಿಸುತ್ತಿರುವವರೆಗೆ ನಾನಂತು ತಮ್ಮನ್ನು ಅಗಲಿ ಹೋಗುವ ಸಂಭವವು ಇಲ್ಲವೇ ಇಲ್ಲ. ಇಂಥ ಅನ್ಯಾಯದ ವ್ಯವಹಾರಗಳು ನಡೆಯುತ್ತಿರುವ ಈ ರಾಜಧಾನಿಯಲ್ಲಿ ನಾವು ಇನ್ನು ಇರುವದು ಬೇಡವೇ ಬೇಡ! ನಡೆಯಿರಿ, ಎಲ್ಲಿಯಾದರೂ ನಾವು ದೇಶಾಂತರಕ್ಕೆ ಹೋಗಿ ಬಡವರಾಗಿ ನಾವಿಬ್ಬರು ಕಾಲಹರಣ ಮಾಡೋಣ ನಡೆಯಿರಿ ನಾಥನೇ, ಈ ದಾಸಿಯು ನಿಮ್ಮ ಬೆನ್ನಹತ್ತಿ ನೀವು ಹೋದಲ್ಲಿ ಬರಲು ಸಿದ್ಧವಾಗಿರುವಾಗ ಮಾನಸಿಂಹರ ಹದ್ದುಪಾರಿನ ಶಿಕ್ಷೆಗಾಗಿ ಇಷ್ಟು ದುಃಖಿಸುವದೇಕೆ? ಈ ಜಗತ್ತಿನಲ್ಲಿ ನಮ್ಮ ವಾಸಕ್ಕೆ ಎಲ್ಲಿಯೂ ಸ್ಥಳವು ದೊರೆಯಲಿಕ್ಕಿಲ್ಲವೆ? ಈ ಶಾಪಿತ ರಾಜಸ್ಥಾನವನ್ನು ಬಿಟ್ಟು ನಾವು ಎಲ್ಲಿಗಾದರೂ ಹೋಗಿ ಬಿಡೋಣ; ಅನ್ನಲು, ದುರ್ಜಯನು ನಿಶ್ಚಯದ ಸ್ವರದಿಂದ—''ಇಲ್ಲ, ನಾನು ನನ್ನ ಜನ್ಮಭೂಮಿಯನ್ನು ಬಿಟ್ಟು ಹೋಗುವದಿಲ್ಲ; ಮತ್ತು ಅಪರಾಧವಿಲ್ಲದೆ ಕೊಟ್ಟಿರುವ ಶಿಕ್ಷೆಯನ್ನು ನಾನು ಅನುಭವಿಸು ವದೂ ಇಲ್ಲ. ಏನಾಗತಕ್ಕದ್ದು ನನ್ನ ಜನ್ಮಭೂಮಿಯಲ್ಲಿಯೇ ಆಗಿಹೋಗಲಿ? ಪ್ರಿಯೇ, ಒಂದು ಪಕ್ಷದಲ್ಲಿ ನಾವು ದೇಶಾಂತರಕ್ಕೆ ಹೋದರೆ ಆಗುವದೇನು? ನಾವು ಎಲ್ಲಿಹೋದರೂ ಮಾನಸಿಂಹನ ತೀಕ್ಷ್ಣ ದೃಷ್ಟಿಯಿಂದ ತಪ್ಪಿಸಿಕೊಳ್ಳಲಾರೆವು. ಈಗ ಸಾಮ್ರಾಜ್ಯ ಸತ್ತೆಯು ಮಾನಸಿಂಹರವರ ಕೈಯಲ್ಲಿರುವದರಿಂದ ಅವರು ಬೇಕಾದದ್ದನ್ನು ಮಾಡಲಿಕ್ಕೆ ಸಮರ್ಥರಿರುವರು. ಅಂದಬಳಿಕ ನಾವು ದೇಶಾಂತರಕ್ಕೆ ಹೋಗುವದರಿಂದ ಪ್ರಯೋಜನವೇನು? ಮೇಲಾಗಿ ನಿನ್ನ ಮುಪ್ಪಿನ ಮರಣೋನ್ಮುಖ ತಂದೆಯನ್ನು ಕರಕೊಂಡು ಹೋಗುವದಾದರೂ ಹೇಗೆ? ಆದ್ದರಿಂದ ನಾನು ದೇಶಾಂತರಕ್ಕೆ ಹೋಗುವ ವಿಚಾರವನ್ನು ಬಿಟ್ಟುಕೊಟ್ಟು ಈ ರಾಜಧಾನಿಯಲ್ಲಿಯೇ ಎಲ್ಲಿಯಾದರೂ ಅಡಗಿಕೊಂಡಿದ್ದು ಪ್ರಸಂಗವಶಾತ್ ಮಾನಸಿಂಹ ಮಹಾರಾಜರವರ ಮನಸ್ಸನ್ನು ಪ್ರಸನ್ನೀಕರಿಸಿಕೊಳ್ಳುವದು ವಿಹಿತವಾಗಿ ನನಗೆ ತೋರುತ್ತದೆ.''

ದುರ್ಜಯನ ಈ ಮಾತುಗಳನ್ನು ಕೇಳಿ ಮಂದಾಕಿನಿಯು ವಿಚಾರಮಗ್ನಳಾದಳು. ಆಕೆಗೆ ತನ್ನ ವಾಗ್ದತ್ತ ಪತಿಯ ಮಾತು ಯೋಗ್ಯವಾಗಿ ತೋರಿತು. ಆಕೆಯು ತಟ್ಟನೆ ಪತಿಯ ಹಸ್ತವನ್ನು ಹಿಡಿದು—''ವೀರವರ ದುರ್ಜಯ, ಇಗೋ, ನಾನು ಈಗ ಪ್ರೇಮದಿಂದ ನಿಮ್ಮ ಪಾಣಿ ಗ್ರಹಣವನ್ನು ಮಾಡಿರುವದರಿಂದ ಗಾಂಧರ್ವ ವಿವಾಹದಿಂದ ನೀವು ನನ್ನನ್ನು ಪತ್ನೀತ್ವೇನ ಪರಿಗ್ರಹಿಸತಕ್ಕದ್ದು. ಈ ವಿಪತ್ತಿನ ಪ್ರಸಂಗದಲ್ಲಿ ಇಷ್ಟೇ ವಿವಾಹ ವಿಧಿಯು ನಮ್ಮಿಬ್ಬರ ದಾಂಪತ್ಯದ ಘಟನೆಗೆ ಸಾಕಾಗಿರುವದು! ನನ್ನ ಪೂಜ್ಯ ತಂದೆಯ ಮನೋರಥವನ್ನು ಈಡೇರಿಸುವದು ನನ್ನ ಕರ್ತವ್ಯವಾಗಿರುವದರಿಂದ, ತ್ರಿಕರಣ ಪೂರ್ವಕವಾಗಿ ನಾನು ತಮ್ಮವಳಾದೆನು. ತಾವು ಪತ್ನಿತ್ವೇನ ಪರಿಗ್ರಹಿಸಿ ನನ್ನನ್ನು ಕೃತಾರ್ಥಳನ್ನಾಗಿ ಮಾಡಬೇಕು,'' ಎಂದು ನುಡಿಯಲು, ದುರ್ಜಯಸಿಂಹನು ಆನಂದಪರವಶನಾಗಿ ಮಂದಾಕಿನಿಯನ್ನು ಕುರಿತು—''ಪ್ರಿಯೇ, ಇಲ್ಲಿ ರಾಧಾಕೃಷ್ಣನ ಸನ್ನಿಧಿಯಲ್ಲಿ ನೀನು ನನ್ನ ಪಾಣಿಗ್ರಹಣ ಮಾಡಿದ್ದರಿಂದ ನಿಜವಾಗಿಯೇ ನಾನು ಧನ್ಯನಾದೆನು! ನೀನು ನನ್ನ ಧರ್ಮಪತ್ನಿಯಾದದ್ದರಿಂದ ನಿನ್ನ ಹಿತಾಹಿತದ ಹೊಣೆಯು ನನ್ನ ಕೊರಳಿಗೆ ಬಿದ್ದಂತಾಯಿತು; ಆದರೆ ಪ್ರಿಯೇ, ಇನ್ನು ನಾವು ಇಲ್ಲಿ ಬಹಳ ಹೊತ್ತು ಮಾತಾಡುತ್ತ ನಿಲ್ಲಲಿಕ್ಕೆ ಬರುವಹಾಗಿಲ್ಲ. ಕಠೋರ ಹೃದಯದ ಮಾನಸಿಂಹನ ಶಾಸನವು ಅತ್ಯಂತ ತೀಕ್ಷ್ಣವೂ, ಅನುಲ್ಲಂಘನೀಯವೂ ಆಗಿರುವದು. ಆದ್ದರಿಂದ ನಮ್ಮಿಬ್ಬರ ದಾಂಪತ್ಯ ಸಂಬಂಧವು ಕೆಲದಿನದ ಮಟ್ಟಿಗಾದರೂ ಸುಖಕರವಾಗಬೇಕೆಂದು ನಾವು ಇಚ್ಛಿಸುತ್ತಿದ್ದರೆ, ನಾನು ಬೇಗನೆ ರಾಜಧಾನಿಯಿಂದ ಅದೃಶ್ಯವಾಗುವ ಹಾದಿಗೆ ಹತ್ತಬೇಕಾಗುವದು. ರೋಗಗ್ರಸ್ತನಾದ ನಿನ್ನ ಮುಪ್ಪಿನ ತಂದೆಯ ಯೋಗಕ್ಷೇಮವನ್ನು ನಿನ್ನ ಹೊರತು ಬೇರೆಯಾರೂ ನೋಡಿಕೊಳ್ಳುವವರು ಇಲ್ಲದ್ದರಿಂದ, ನೀನೂ ಬೇಗನೆ ನಿನ್ನ ತಂದೆಯ ಬಳಿಗೆ ಹೋಗು. ಪ್ರಿಯೇ, ಮುಂದೆ ಹಿತವಾಗ ಬೇಕೆಂಬ ಇಚ್ಛೆಯಿದ್ದರೆ ಈಗ ನಾವಿಬ್ಬರೂ ನಮ್ಮ ಮನಸ್ಸು ಕಲ್ಲುಮಾಡಿ ಒಬ್ಬರನ್ನೊಬ್ಬರು ಅಗಲತಕ್ಕದ್ದು; ಆದ್ದರಿಂದ ವಿಲಂಬವೇಕೆ ಮಾಡುವೆ? ನನ್ನ ಧರ್ಮಪತ್ನಿಯಾದ ನೀನು ನನ್ನ ಆಜ್ಞೆಯೆಂದು ತಿಳಿದು ನಿನ್ನ ಮನಸ್ಸಿನಲ್ಲಿಲ್ಲದಿದ್ದರೂ ತಟ್ಟನೆ ನಿನ್ನ ತಂದೆಯಬಳಿಗೆ ಹೊರಟುಹೋಗು.''

ಪತಿಯ ಈ ಕಠೋರವಾದ ಮಾತುಗಳನ್ನು ಕೇಳಿ ಮಂದಾಕಿನಿಯು ದುಃಖದಿಂದ—''ಪ್ರಾಣಪ್ರಿಯಾ, ನೀನು ಹೇಳುವದು ನಿಜವು; ಆದರೆ ನನ್ನ ಸರ್ವಸ್ವವಾದ ನೀವು ಹೊರಟು ಹೋದ ಬಳಿಕ ನನ್ನ ಗತಿಯು ಏನಾಗುವದೋ ಏನೋ? ತಮ್ಮ ಸುಂದರ ಮೂರ್ತಿಯ ಸಾನ್ನಿಧ್ಯವೂ—ಧ್ಯಾನವೂ ನನ್ನ ಜೀವವಾಗಿರುವದರಿಂದ ತಮ್ಮನ್ನು ಅಗಲಿ ನಾನು ಹೇಗೆ ಇರಲಿ? ಪ್ರಾಣವಿಲ್ಲದ ದೇಹಕ್ಕೆ ಗೌರವವೂ—ಶೋಭೆಯೂ ಉಂಟಾಗಬಹುದೋ? ನಮ್ಮಿಬ್ಬರನ್ನು ಅಗಲಿಸುವಲ್ಲಿ ಅಮಾತ್ಯನು ಯಾವ ಲಾಭವನ್ನು ಕಂಡುಕೊಂಡಿರಬಹುದು! ನಾಥ, ನೀವು ನನ್ನನ್ನು ಬಿಟ್ಟುಕೊಟ್ಟು ಸರ್ವಥಾ ಹೋಗಬಾರದು. ನಾನಿರುತ್ತಿರುವಾಗ ಯಾವನೂ ನಿಮಗೆ ಕೇಡು ಬಗೆಯಲಾರನು. ನಾನು ಹಸಿದ ಹೆಣ್ಣು ಹುಲಿಯಂತೆ ನಿಮ್ಮ ಶತ್ರುಗಳ ಮೈಮೇಲೆ ಬಿದ್ದು ರಕ್ತಹೀರುವೆನು. ಇದರ ಮೇಲೆಯೂ ಮಹಾರಾಜರ ಕ್ರೋಧಕ್ಕೆ

ಬಲಿಯಾಗಿ ನೀವು ಆಜನ್ಮ ಸೆರೆಯಾಳಾದರೆ, ನಾನೂ ತವೊಡನೆ ಕಾರಾಗೃಹವಾಸವನ್ನು ಭೋಗಿಸುವೆನು; ಆದರೆ ತಾವು ನನ್ನನ್ನು ಬಿಟ್ಟು ಹೋಗಬಾರದು,'' ಎಂದು ದೈನ್ಯದಿಂದ ಬೇಡಿಕೊಳ್ಳಲು, ದುರ್ಜಯಸಿಂಹನು ಅತ್ಯಂತ ಮೂಢನಾಗಿ ತನ್ನ ಪತ್ನಿಯ ಕಡೆಗೆ ನೋಡುತ್ತ ನಿಂತುಕೊಂಡನು. ಆಕೆಯ ಸೌಂದರ್ಯವು ಕ್ಷಣಕ್ಷಣಕ್ಕೆ ಹೆಚ್ಚುತ್ತಿರುವಂತೆ ಆತನಿಗೆ ತೋರಿತು. ತನ್ನ ಪ್ರಿಯ ಪತ್ನಿಯು ಇಷ್ಟು ಸುಂದರಳಿರುವ ಳೆಂಬದು ಈ ಮೊದಲು ಆತನಿಗೆ ಎಂದೂ ಗೊತ್ತಾಗಿದ್ದಿಲ್ಲ! ಆಕೆಯ ಸುಂದರ ಭಾಷಣ, ಮಧುರಸ್ವರ, ಮನೋಹರ ಹಾವಭಾವ ಇವೆಲ್ಲ ಆತನಿಗೆ ಹೊಸವಾಗಿ ತೋರಹತ್ತಿ, ಆತನು—''ಈಕೆಯನ್ನು ತನ್ನ ಸಂಗಡ ಕರಕೊಂಡು ಹೋಗಬೇಕು'' ಎಂದು ಮನಸ್ಸಿನಲ್ಲಿ ಮಾಡಿದನು; ಆದರೆ ಉತ್ತರ ಕ್ಷಣದಲ್ಲಿಯೇ ಆತನಿಗೆ ತನ್ನ ನಿಶ್ಚಯದ ಸ್ಮರಣವಾಯಿತು. ಆತನು ಅಂಬರ ರಾಜಧಾನಿಯಲ್ಲಿಯೇ ಗುಪ್ತವಾಗಿ ಇರಬೇಕೆಂದು ಮಾಡಿದನು. ಅಂದಬಳಿಕ ಆಕೆಯನ್ನು ಕರಕೊಂಡು ಹೋಗುವ ಬಗೆ ಹೇಗೆ? ಕರಕೊಂಡು ಹೋದರೆ ಆಕೆಯ ಮರಣೋನ್ಮುಖನಾದ ತಂದೆಯ ಗತಿಯೇನಾಗಬೇಕು? ಇವೆಲ್ಲ ವಿಚಾರಗಳು ಮನಸ್ಸಿನಲ್ಲಿ ಬಂದು ಅವನು ತನ್ನ ಮನಸ್ಸನ್ನು ಪುನಃ ಕಠೋರಮಾಡಿ ತನ್ನ ಪತ್ನಿಯನ್ನು ಕುರಿತು—''ಪ್ರಿಯೇ ಮಂದಾಕಿನೀ, ನೀನು ನನಗೆ ಇನ್ನು ಹೋಗಗೊಡು. ಭವಿಷ್ಯಕಾಲದ ಸುಖಕ್ಕೆ ಲಕ್ಷಗೊಟ್ಟರೆ ನನ್ನ ವಿಚಾರದಂತೆ ನೀನು ಶೋಕಾಕುಲಳಾದದ್ದನ್ನು ನೋಡಿ ನಾನು ಮೂಢನಾಗಿ ಮುಂದುಗಾಣದೆ ಹೋಗುವೆನು. ಕದಾಚಿತ್ ಮಹಾರಾಜರು ಪ್ರಸನ್ನರಾಗಿ ನನ್ನ ಅಪರಾಧವನ್ನು ಕ್ಷಮಿಸಿದರೆ, ಕೂಡಲೆ ನಾನು ನಿನ್ನನ್ನು ಕೂಡಿಕೊಳ್ಳುವೆನು. ನಿನ್ನ ದಿವ್ಯ ಪ್ರೇಮಕ್ಕೆ ಎರವಾಗಿ ಹೋಗಬೇಕಾದರೆ ನನಗೆ ಎಷ್ಟು ದುಃಖವಾಗುತ್ತಿರುವದೆಂಬದನ್ನು ನಾನೇನು ಹೇಳಲಿ? ಆದರೆ ಮಾಡುವದೇನು? ಭವಿತವ್ಯವನ್ನು ಯಾರು ತಪ್ಪಿಸುವರು? ನಿನ್ನ ಇದೇ ದರ್ಶನವೇ ಕಡೆಯದಾಗಬೇಕೆಂದು ದೇವರ ಸಂಕೇತವಿದ್ದರೆ, ಅದಕ್ಕಾಗಿ ನಾವು ಮರ್ತ್ಯರು ಮಾಡುವದೇನು? ಆದರೆ ಪ್ರಿಯೇ, ಇನ್ನು ಹೋಗು, ನನ್ನ ನಿಶ್ಚಯವು ಬದಲಾಗಲಾರದು,'' ಎಂದು ನುಡಿದು ತನ್ನ ಪ್ರಿಯ ಪತ್ನಿಯನ್ನು ತಬ್ಬಿಕೊಳ್ಳುವಾಗ ಆತನ ಕಣ್ಣೀರುಗಳು ಉದುರಿದವು!

ಎಂದೂ ಕಣ್ಣೀರು ಹಾಕದ ತನ್ನ ವೀರ ಪತಿಯು ಹೀಗೆ ಕಣ್ಣೀರು ಹಾಕುವದನ್ನು ನೋಡಿ ಮಂದಾಕಿನಿಯ ಮನಸ್ಸಿನ ಸ್ಥಿತಿಯು ಒಮ್ಮೆಲೇ ತಿರುಗಿತು. ಇಷ್ಟು ಅನರ್ಥಕ್ಕೆ ರಾಜಪುತ್ರನಾದ ಖುಸ್ರುವೂ, ಅಮಾತ್ಯನಾದ ಮಾನಸಿಂಹನೂ ಕಾರಣರಾದರೆಂದು ತಿಳಿದು ಅವರ ಮೇಲೆ ಆ ವೀರವನಿತೆಯು ಸಂತಾಪಗೊಂಡಳು. ಆಕೆಯು ತೀವ್ರ ಸ್ವರದಿಂದ ಪತಿಯನ್ನು ಕುರಿತು— ''ನಾಥ, ತಾವು ಹೋಗಬೇಕು, ಈ ಕಠೋರ ಹೃದಯದ ಮಂದಾಕಿನಿಯು ತಮ್ಮನ್ನು ಹೋಗಗೊಡುವಳು. ನಾನಾದರೂ ಇನ್ನು ಅತ್ಯಂತ ಸಾಹಸಿಯಾಗುವೆನು. ನನಗೆ ಪತಿವಿಯೋಗದ ದುಃಖವನ್ನೊದಗಿಸಿ ಕೊಟ್ಟ ಆ ಶಹಾಜಾದಾ ಖುಸ್ರುವಿನ, ಹಾಗೂ ಅಮಾತ್ಯ ಮಾನಸಿಂಹನ ಸೇಡು ತೀರಿಸಿಕೊಳ್ಳದಿದ್ದರೆ ನಾನು ವೀರ ಕ್ಷತ್ರಿಯನ ಹೊಟ್ಟೆಯಲ್ಲಿ ಹುಟ್ಟಿ ವೀರ ಕ್ಷತ್ರಿಯನ ಕೈಯನ್ನು ಹಿಡಿಯಬೇಕೇಕೆ? ನಾನು ಇಂದು ನನ್ನ ಹೃದಯವನ್ನು ಕಲ್ಲುಮಾಡಿದೆನು. ನನ್ನ ಈ ಕಠಿಣಹೃದಯವು ಖುಸ್ರುವಿನ ಸೇಡುತೀರಿ, ಪುನಃ ನಿಮ್ಮ ದರ್ಶನವಾದಾಗ ಮೃದುವಾದೀತು. ನಾಥ, ನನ್ನನ್ನು ತಾವು ಇಷ್ಟು ಆಶ್ಚರ್ಯಚಕಿತರಾಗಿ ನೋಡಬಾರದು. ಈ ಗಗನ ವಿಹಾರಿ

ಯಾಗಿರುವ ಚಂದ್ರನೂ, ನಮ್ಮ ಈ ದುಃಖದ ಸ್ಥಿತಿಯನ್ನು ನಿಶ್ಚಲ—ನಿಸ್ತಬ್ಧವಾಗಿ ನೋಡುತ್ತಿರುವಂತೆ ಶಾಂತವಾಗಿರುವ ಈ ದಿಗ್ದೇವತೆಗಳೂ, ನಮ್ಮೆದುರಿನಲ್ಲಿ ಸರ್ವಸಾಕ್ಷಿಯಾಗಿ ನಿಂತಿರುವ ಭಗವಾನ್ ಶ್ರೀರಾಧಾರಮಣನೂ ಸಾಕ್ಷಿಯಾಗಿರಲು, ನಿಮ್ಮ ಚರಣಸ್ಪರ್ಶಮಾಡಿ ಪ್ರತಿಜ್ಞೆ ಮಾಡುವೆನು ಕೇಳಿರಿ—ನನ್ನ ಆ ಇಬ್ಬರು ಶತ್ರುಗಳ ನಿಃಪಾತವಾಗುವವರೆಗೆ ನಾನು ಎಂದೂ ವಿಶ್ರಾಂತಿಯನ್ನು ಹೊಂದುವದಿಲ್ಲವು.''

ತನ್ನ ಪತ್ನಿಯ ಈ ಕಠೋರ ಪ್ರತಿಜ್ಞೆಯನ್ನು ಕೇಳಿ ದುರ್ಜಯನು ದಿಗಿಲು ಬಿದ್ದನು; ಆತನಿಗೆ ಇನ್ನು ಏನುಮಾತಾಡಬೇಕೆಂಬದು ತೋಚದಾಯಿತು. ಇನ್ನು ತನ್ನ ಪತ್ನಿಯ ಗತಿಯೇನಾಗುವದೆಂಬ ವಿಚಾರದಲ್ಲಿ ಮಗ್ನನಾಗಿ ಆತನು ಬೇರೆಯಾವದನ್ನೂ ಅರಿಯದಾದನು. ನಾನು ಎಲ್ಲಿರುವೆನು, ಯಾವ ಸ್ಥಿತಿಯಲ್ಲಿರುವೆನು ಎಂಬದರ ಎಚ್ಚರವೂ ಆತನಿಗೆ ಇಲ್ಲದಾಯಿತು. ಹೀಗೆ ಕೆಲಕಾಲವು ಕ್ರಮಿಸಿದ ಮೇಲೆ ಆತನು ಎಚ್ಚತ್ತು ತನ್ನ ಪ್ರಿಯಪತ್ನಿಯನ್ನು ಕುರಿತು—''ಪ್ರಿಯೇ ಮಂದಾಕಿನೀ,'' ಎಂದು ನುಡಿದು ತನ್ನ ಹೆಂಡತಿಯ ಕಡೆಗೆ ನೋಡುತ್ತಿರಲು, ಅವಳು ಅಲ್ಲಿಂದ ಯಾವಾಗೋ ಹೊರಟು ಹೋಗಿಬಿಟ್ಟಿದ್ದಳು. ಆಕೆಯು ನುಡಿದ ಶಬ್ದಗಳು ಮಾತ್ರ ಪುನಃ ಪುನಃ ಪ್ರತಿಧ್ವನಿತವಾಗುವಂತೆ ಆತನಿಗೆ ಭಾಸವಾಗುತ್ತಿತ್ತು! ಆತನು ನಾಲ್ಕೂ ಕಡೆಗೆ ನೋಡಿ ಮಂದಾಕಿನಿಯನ್ನು ಕಾಣದೆ ಮರುಗಿದನು. ಆತನು ತನ್ನ ಮನಸ್ಸಿನಲ್ಲಿ—''ಇನ್ನು ತನ್ನ ಪ್ರಿಯಳೊಡನೆ ಎಲ್ಲಿಗಾದರೂ ಹೋಗಿ ಬಿಡುವದೇ ಯೋಗ್ಯವೆಂದು'' ಯೋಚಿಸಿ, ಅದನ್ನು ತನ್ನ ಪ್ರಿಯಳ ಮುಂದೆ ಹೇಳಬೇಕೆಂದು ಮಾಡಿದ್ದನು; ಆದರೆ ಅವಳು ಹೋದವಳು ಹೋಗಿ ಬಿಟ್ಟಿದ್ದಳು. ತನ್ನ ಹೆಂಡತಿಯು ಹೇಳಿದಂತೆ ''ನಾವು ಎಲ್ಲಿಯಾದರೂ ಹೋಗಿ ಬಡತನದಿಂದ ಕಾಲಹರಣ ಮಾಡೋಣ''ವೆಂಬ ವಿಚಾರವು ಆತನಿಗೆ ಬಹಳ ತಡಮಾಡಿ ಹುಟ್ಟಿತು; ಆದರೆ ಇನ್ನು ಮೇಲೆ ಆ ವಿಚಾರದ ಉಪಯೋಗವೇನಾಗಬೇಕು? ರಜಪೂತ ವೀರರ ಪ್ರತಿಜ್ಞೆಯಂತೆ ರಜಪೂತ ವೀರಪತ್ನಿಯರ ಪ್ರತಿಜ್ಞೆಯೂ ದಾರುಣವಾದದ್ದೇ ಸರಿ! ಆದ್ದರಿಂದ ದೆಸೆಗೇಡಿಯಾದ ದುರ್ಜಯನು ಶೂನ್ಯಹೃದಯನಾಗಿ ತನ್ನ ಪ್ರೀಯಳನ್ನು ಸ್ಮರಿಸುತ್ತ, ಎದುರಿಗೆ ಸಮೀಪದಲ್ಲಿರುವ ಶ್ರೀರಾಧಾಕೃಷ್ಣನನ್ನು ನಮಸ್ಕರಿಸಿ—''ಪ್ರಭೋ, ನಿನ್ನ ಇಚ್ಛೆಯು'' ಎಂದು ನುಡಿದು ಎದುರಿಗಿನ ಪರ್ವತ ಶ್ರೇಣಿಯ ಕಡೆಗೆ ಹೊರಟು ಹೋದನು!

ಪ್ರಯಾಣ

ಈ ಲೋಕದಲ್ಲಿ ವ್ಯವಹಾರ ಮಗ್ನರು ನಿಜವಾಗಿ ಪರೋಪಕಾರಮಾಡುವದು ದುರ್ಲಭವೇ ಸರಿ; ಯಾಕಂದರೆ, ಪರೋಪಕಾರ ಮಾಡುವವರು ಪರಪೀಡೆಮಾಡುವ ಸಂಭವವಿಲ್ಲದಿದ್ದು, ವ್ಯವಹಾರದಲ್ಲಿ ಸ್ವಾರ್ಥಮೂಲಕ ಗುಪ್ತವಾಗಿಯಾಗಲಿ, ವ್ಯಕ್ತವಾಗಿಯಾಗಲಿ ಪರಪೀಡೆಯು ಆಗಾಗ್ಗೆ ಆಗುತ್ತಲೇ ಇರುತ್ತದೆ; ಆದ್ದರಿಂದ ಪರೋಪಕಾರ ಮಾಡುವವರೆಂದು ನಾವು

ಉಬ್ಬುವದಕ್ಕಿಂತ, ಸ್ವಾರ್ಥದ ಕಸುವು ಕಡಿಮೆಮಾಡುತ್ತ ನಮ್ಮಿಂದ ಪರಪೀಡೆಯು ಘಟಿಸದಂತೆ ಎಚ್ಚರ ಪಡುವದು ಈಶ್ವರ ಪ್ರೀತಿಯ ಸಂಬಂಧದಿಂದ ಹಿತಕರವಾಗಿರುವದು; ಆದರೆ ಸ್ವಾರ್ಥ ಪರಾಯಣರಾದ ನಾವು ಪರೋಪಕಾರದ ಸೋಗಿನಿಂದ ಸ್ವಾರ್ಥಸಾಧಿಸಿಕೊಳ್ಳುವದೇ ಹೆಚ್ಚು; ಉತ್ಕಟ ಸ್ವಾರ್ಥಬುದ್ಧಿಯು ಪರಪೀಡೆಯ ಮೂಲವಾಗಿರುತ್ತದೆಂಬದನ್ನು ಮರೆಯಲಾಗದು; ಆದ್ದರಿಂದ ಅಂಬರಾಧೀಶ್ವರನಾದ ರಾಜಾ ಮಾನಸಿಂಹನ ಸ್ವಾರ್ಥದ ಉತ್ಕಟತೆಯನ್ನು ಇಲ್ಲಿ ದುರ್ಲಕ್ಷಿಸತಕ್ಕದ್ದಲ್ಲ. ಅಕಬರನು ಮುಪ್ಪಿನಿಂದ ಜರ್ಜರನಾಗಿ ಅತ್ಯಂತ ವ್ಯಾಧಿಪೀಡಿತನಾಗಿರುವಾಗ ತನ್ನ ಅಧಿಕಾರವನ್ನು ಇಡಿಯ ಮೊಗಲ ಸಾಮ್ರಾಜ್ಯದ ಮೇಲೆ ಸ್ಥಾಪಿಸಬೇಕೆಂದು ಆ ಅಂಬರಾಧೀಶ್ವರನು ಹವಣಿಸುತ್ತಿದ್ದನೆಂದು ಹೇಳಬಹುದು; ಅಂತೇ ಆತನು ಅಕಬರ ಬಾದಶಹನ ತರುವಾಯ ಆತನ ಪಟ್ಟಕ್ಕೆ ಬಾಧ್ಯಸ್ಥನಾದ ಸೇಲೀಮನನ್ನು, ಆತನು ತನ್ನ ತಂಗಿಯ ಗಂಡನಿದ್ದರೂ ಆತನನ್ನು ಪಟ್ಟಕ್ಕೆ ಕೂಡ್ರಗೊಡದೆ ಆತನ ಮಗನಾದ ತನ್ನ ಹಸ್ತಕ ಖುಸ್ರುವನ್ನು ದಿಲ್ಲಿಯ ಪಟ್ಟಕ್ಕೆ ಕೂಡ್ರಿಸಬೇಕೆಂದು ಹವಣಿಸುತ್ತಿದ್ದನು. ಕೇವಲ ಸ್ವಾರ್ಥಕ್ಕಾಗಿ ಮೊಗಲರ ಪಕ್ಷವಹಿಸಿ ಸ್ವದೇಶ ದ್ರೋಹವನ್ನೂ, ಸ್ವದೇಶಬಾಂಧವರ ದ್ರೋಹವನ್ನೂ ಮಾಡಿದ ರಾಜಾ ಮಾನಸಿಂಹನಿಗೆ ಇದು ಅಸ್ವಾಭಾವಿಕವೂ ಅಲ್ಲವು. ಈ ನೀಚಸ್ವಾರ್ಥದ ಮೂಲಕ ಮಾನಸಿಂಹನಲ್ಲಿಯ ಉತ್ತಮೋತ್ತಮ ಗುಣಗಳೆಲ್ಲ ಸ್ವದೇಶೋದ್ಧಾರದ ದೃಷ್ಟಿಯಿಂದ ಮಣ್ಣುಗೂಡಿದವೆಂದು ಹೇಳಬಹುದು. ಮಾನಸಿಂಹನ ಘನವಂತಿಕೆಯೂ, ತೇಜಸ್ವಿತೆಯೂ, ಗುಣಗಳ ಉಜ್ವಲತೆಯೂ ಪೂಜ್ಯ ಪ್ರತಾಪಸಿಂಹನಂಥ ಭಾರತಭೂಮಾತೆಯ ಶ್ರೇಷ್ಠ ಸತ್ಪುತ್ರನ ಸತ್ವವನ್ನು ಕುಗ್ಗಿಸುವದಕ್ಕಾಗಿ ಉಪಯೋಗಿಸಿದ್ದು ಪರಮದುಃಖದ ಸಂಗತಿಯಲ್ಲದೆ ಮತ್ತೇನು? ಈಗಲಾದರೂ ಮಾನಸಿಂಹನು ತನ್ನ ತಂಗಿಯಾದ ಜೋಧಬಾಯಿಯ, ಹಾಗು ಸೋದರಳಿಯ ನಾದ ಖುಸ್ರುವಿನ ಹಿತವನ್ನು ಸಾಧಿಸುವ ಸೋಗಿನಿಂದ ಪ್ರಾಮುಖ್ಯವಾಗಿ ತನ್ನ ಉತ್ಕರ್ಷ—ಹಟಗಳನ್ನು ಸಾಧಿಸಿಕೊಳ್ಳಲು ಯತ್ನಿಸುತ್ತಿದ್ದನೆಂದು ಹೇಳಬಹುದು. ಈ ಯತ್ನದಲ್ಲಿ ಆತನು ತನ್ನ ತಂಗಿ—ಸೋದರಳಿಯರನ್ನು ತನ್ನ ಮನೆಯಲ್ಲಿಟ್ಟುಕೊಂಡು ತನ್ನ ತಂಗಿಯ ಪತಿಭಕ್ತಿಯನ್ನೂ, ಸೋದರಳಿಯನ ಪಿತೃಭಕ್ತಿಯನ್ನೂ ಕುಗ್ಗಿಸಲು ಪರಿಪರಿಯಿಂದ ಯತ್ನಿಸಿದನು; ಆದರೆ ಜೋಧಬಾಯಿಯ ಉತ್ಕಟ ಪತಿಭಕ್ತಿಯ, ಹಾಗು ಖುಸ್ರುವಿನ ಚಾಂಚಲ್ಯದ ಪಿತೃಭಕ್ತಿಯ ಮುಂದೆ ಮಾನಸಿಂಹನ ಆಟವು ನಡೆಯದೆ, ಆ ರಜಪೂತ ವೀರನ ಆ ಅಮಾರ್ಗ ಗಮನದ ಫಲವನ್ನು ಪಾಪ! ಜೋಧಬಾಯಿಯೂ, ಖುಸ್ರುವೂ ಅನುಭವಿಸಬೇಕಾಯಿತು! ಇರಲಿ.

ಆ ದಿನ ರಾತ್ರಿ ಮಾನಸಿಂಹನು ಖುಸ್ರುವನ್ನು ಆತನ ತಾಯಿಯ ಬಳಿಗೆ ಕಳಿಸಿ ಹೋದದ್ದು ವಾಚಕರ ಸ್ಮರಣದಲ್ಲಿರಬಹುದು; ಆದರೆ ತನ್ನ ಘೋರಕೃತಿಯ ಪಶ್ಚಾತ್ತಾಪದಿಂದ ಪರಿತಪ್ತನಾದ ಆ ಅಭಿಮಾನಿ ಖುಸ್ರುವು, ತಿರುಗಿ ತನ್ನ ಮಾವನನ್ನು ಕಾಣಲಿಚ್ಛಿಸಲಿಲ್ಲ. ಆತನು ಮರುದಿನವೇ ತನ್ನ ಮಾವನ ಅಂಬರ ರಾಜಧಾನಿಯನ್ನು ಬಿಟ್ಟು ಹೋಗಲು ನಿಶ್ಚಯಿಸಿ ತನ್ನ ತಾಯಿಯನ್ನು ಕುರಿತು—

ಖುಸ್ರು—ಅವ್ವಾ, ನಾನು ಹೋಗುವೆನು, ಅಪ್ಪಣೆಕೊಡು.

ಜೋಧಬಾಯಿ—ಅದೆಲ್ಲಿಗೆ ಹೋಗುವೆ ಕುಮಾರಾ? ಆದ ಮಾತಿನ ಸಲುವಾಗಿ ವ್ಯಸನ ಪಡುವದು ನೆಟ್ಟಗಲ್ಲ. ಮಹಾರಾಜರು ನಿನ್ನ ಅಪರಾಧಗಳನ್ನೆಲ್ಲ ಕ್ಷಮಿಸಿರುವರು.

ಖುಸ್ರು—ಅವ್ವಾ, ನಾನು ಕ್ಷಮೆಯನ್ನೆಲ್ಲಿ ಬೇಡಿಕೊಂಡಿರುವೆನು? ಕ್ಷಮೆ ಬೇಡಲಿಕ್ಕೆ ನಾನು ಯೋಗ್ಯನಲ್ಲ. ಅಂದಬಳಿಕ ಕೇಳಿಕೊಳ್ಳದೆ ದೊರೆತ ಕ್ಷಮೆಯು ನನಗೆ ಹೇಗೆ ಸಹ್ಯವಾದೀತು ನೀನೇ ಹೇಳು. ಇಂಥ ಕ್ಷಮೆಗಿಂತ ಶಿಕ್ಷೆಯೇ ಒಳ್ಳೆಯದು. ನಾನು ಇನ್ನು ತಾಸೆರಡು ತಾಸಿನಲ್ಲಿ ಅಂಬರ ರಾಜಧಾನಿಯನ್ನು ಬಿಡುವೆನು.

ಜೋಧಬಾಯಿ—ತಮ್ಮಾ, ನೀನು ಹೋಗುವದಾದರೂ ಎಲ್ಲಿಗೆ? ಆಗ್ರಾಕ್ಕೆ?

ಖುಸ್ರು—ಇಲ್ಲ.

ಜೋಧಬಾಯಿ—(ಅತ್ಯುತ್ಸಕತೆಯಿಂದ) ಹಾಗಾದರೆಲ್ಲಿಗೆ?

ಖುಸ್ರು—ನನ್ನ ಕಣ್ಣುಗಳೆರಡು ಹಾದಿಯ ತೋರಿಸಿದಲ್ಲಿಗೆ, ಹಾಗು ನನ್ನ ಕಾಲುಗಳೆರಡು ಕರೆದೊಯ್ದಲ್ಲಿಗೆ ಹೋಗುವೆನು. ಅವ್ವಾ, ನನಗೆ ಹೋಗಲಿಕ್ಕೆ, ಅಥವಾ ಕಾಲೂರಿ ನಿಲ್ಲಲಿಕ್ಕೆ ಸ್ಥಳವಾದರೂ ಎಲ್ಲಿದೆ ಹೇಳು? ನಾನು ಅಪ್ಪನಕಡೆಗೆ, ಛೇ ಛೇ! ಬೇಡ, ಅದರ ನೆನಪು ಸಹ ಬೇಡ. ಅವರು ನನ್ನನ್ನು ಶತ್ರುವಿನಂತೆ ನೋಡುವರು; ಆದ್ದರಿಂದ ಆಗ್ರಾಕ್ಕೆ ಹೋಗಿ ಅವರನ್ನು ತೊಂದರೆ ಪಡಿಸುವದರಲ್ಲಿ ಅರ್ಥವಿಲ್ಲ. ಅವರ ತಿರಸ್ಕಾರದ ನೋಟವು ನನಗೆ ಸಹನವೂ ಆಗಲಿಕ್ಕಿಲ್ಲ.

ಜೋಧಬಾಯಿ—ಬಾಳಾ, ನಾವು ಆಗ್ರಾಕ್ಕೆ ಹೋಗೋಣ ನಡೆ. ನಾನೂ ನಿನ್ನ ಸಂಗಡ ಬರುವೆನು. ನನ್ನ ಸ್ನೇಹಮಯ ಹೃದಯವು ದುರ್ಭೇದ್ಯವಾದ ದುರ್ಗದಂತೆ ನಿನ್ನನ್ನು ಶತ್ರುಗಳಿಂದ ರಕ್ಷಿಸಲು ಸಿದ್ಧವಾಗಿರುವದು. ನಿನ್ನ ಸಲುವಾಗಿ ನಾನು ಸಾವಿರಾರು ವಜ್ರಗಳ ಆಘಾತವನ್ನಾದರೂ ತಡೆಯುವೆನು. ಅತ್ಯಂತ ಕ್ಷುದ್ರ ಶಕ್ತಿಯ ಹೆಣ್ಣುಹಕ್ಕಿಯೂ ತನ್ನ ಮರಿಗಳನ್ನು ರಕ್ಷಿಸುತ್ತಿರಲು, ನನ್ನಂಥ ಉಚ್ಚಪದವಿಯ ಶ್ರೇಷ್ಠ ಅಧಿಕಾರವಿರುವ ಸ್ತ್ರೀಯು ನಿನ್ನನ್ನು ರಕ್ಷಿಸಲಿಕ್ಕಿಲ್ಲವೆ?

ಖುಸ್ರು—ಅವ್ವಾ, ನನ್ನ ಸಲುವಾಗಿ ನಿನಗೆ ಇಷ್ಟು ಶ್ರಮವೇಕೆ? ಏನಾಗುವದು ನನಗೇ ಆಗಲಿ, ನೀನು ಸುಖಕ್ಕೆ ಎರವಾಗಬೇಡ.

ಜೋಧಬಾಯಿ—ತಮ್ಮಾ ನನಗೆ ಇನ್ನೆಲ್ಲಿಯ ಸುಖವು? ನನ್ನನ್ನು ಸುಖಿಯಾಗ ಮಾಡುವವರು ಯಾರಿರುವರು? ಇನ್ನು ನನಗೆ ನಿಜವಾದ ಸುಖವಾಗುವದು ನಿನ್ನಿಂದಲೇ; ನನ್ನ ನಿಜವಾದ ಸುಖ—ದುಃಖವು ನೀನೇ ಆಗಿರುವೆ. ಈ ಆಯುಷ್ಯದಲ್ಲಿ ನನಗೆ ಇನ್ನು ಯಾತರ ಆಸೆಯೂ ಉಳಿದಿರುವದಿಲ್ಲ. ನಾನು ಅಂಬರ ಮಹಾರಾಜನ ಮಗಳಾಗಿದ್ದು, ಅಕಬರ ಬಾದಶಹನ ಸೊಸೆಯಾಗಿರುವೆನು. ನಾನು ಒಂದಾನೊಂದು ದಿನ ಸಾಮ್ರಾಜ್ಞೆಯಾದೇನೆಂದು ತಿಳಿದು ಅಪ್ಪನು ನನಗೆ ಅಲ್ಲಿ ಕೊಟ್ಟನು; ಆದರೆ ಆ ಸುಖಸ್ವಪ್ನವು ಮುಗಿದುಹೋಯಿತು; ಅದು ಸ್ವಪ್ನವೇ ಆಗಿ ಹೋಯಿತು.

ಹೀಗೆಂದು ನುಡಿಯುವಾಗ ಜೋಧಬಾಯಿಯ ಕಣ್ಣೊಳಗಿಂದ ಬಳ ಬಳ ನೀರು ಸುರಿಯಹತ್ತಿದವು. ಅದನ್ನು ನೋಡಿ ಕುಮಾರನಿಗೆ ಬಹಳ ವ್ಯಸನವಾಯಿತು. ಆತನು ತನ್ನ ತಾಯಿಯನ್ನು ಕುರಿತು—

ಖುಸ್ರು—ಅವ್ವಾ, ಇನ್ನು ಆ ಮಾತಿನ ವಿಚಾರಮಾಡುವಲ್ಲಿ ಅರ್ಥವೇನು? ಸುಮ್ಮನೆ ಮನಸ್ಸಿಗೆ ವ್ಯಥೆಯನ್ನುಂಟುಮಾಡಿಕೊಳ್ಳಬೇಡ, ಶಾಂತಳಾಗು. ಆದದ್ದು ತಿರುಗಿ ಬರುವಹಾಗಿಲ್ಲ, ಆಗುವದನ್ನು ತಪ್ಪಿಸಿಕೊಳ್ಳುವಹಾಗಿಲ್ಲ; ಆದರೆ ಅವ್ವಾ, ನಾನು ಸ್ಪಷ್ಟವಾಗಿ ಹೇಳುವೆನು, ಈ ಮೋರೆಯನ್ನು ನಾನು ಪುನಃ ಮಾನಸಿಂಹನಿಗೆ ತೋರಿಸುವಹಾಗಿಲ್ಲ. ಇನ್ನು ಬೆಳಗಾಗಲಿಕ್ಕೆ ತಾಸೆರಡು ತಾಸಿರಬಹುದು. ನಿನ್ನಿಂದ ನನಗೆ ನಿದ್ರೆಯಿಲ್ಲದ್ದರಿಂದ ಹೇಗೆ ಹೇಗೋ ಆಗುತ್ತಲಿದೆ. ಮಾನಸಿಂಹಮಹಾರಾಜರವರು ಬರುವದರೊಳಗಾಗಿಯೇ ನೀನು ನನಗೆ ಪ್ರಸನ್ನ ಮನಸ್ಸಿನಿಂದ ಅಪ್ಪಣೆಕೊಡು, ಎಲ್ಲಿಗಾದರೂ ಹೋಗುವೆನು.

ಜೋಧಬಾಯಿ—(ಸ್ವಲ್ಪಹೊತ್ತು ವಿಚಾರಮಾಡಿ ಸ್ನೇಹಪೂರ್ಣಸ್ವರದಿಂದ) ಕುಮಾರಾ, ನಿನ್ನ ಮನಸ್ಸಿನಲ್ಲಾದರೂ ಏನಿರುತ್ತದೆ? ನೀನು ನನ್ನ ಅಪ್ಪಣೆಯನ್ನು ಮನ್ನಿಸುತ್ತಿದ್ದರೆ, ಈಗ ನಿನ್ನನ್ನು ನಾನು ಆಜ್ಞಾಪಿಸುವೆನು, ಹೀಗೆ ಮಾಡು. ನೀನು ಅವಿಚಾರದಿಂದ ಮಾಡುತ್ತಲಿರುವ ಘಾತಕ ಕೃತ್ಯಗಳನ್ನು ಇನ್ನು ಬಿಡು. ನೀನು ಹೊಟ್ಟೆಯಲ್ಲಿ ಹುಟ್ಟಿದ ಮಗನಾಗಿರುವದರಿಂದ ನಿನ್ನ ಕೈಯಿಂದ ಎಷ್ಟು ಅಪರಾಧಗಳಾಗಿದ್ದರೂ ನಿನ್ನ ಹಡೆದವರು ಕ್ಷಮೆಯನ್ನೇ ಮಾಡುವರು. ಅವರಿಂದ ಕ್ಷಮೆಯನ್ನು ಸಂಪಾದಿಸುವ ಅಧಿಕಾರವು ನಿನಗೆ ಇದ್ದೇ ಇರುತ್ತದೆ. ಅಂತರಂಗದಿಂದ ನಿನ್ನ ಮೇಲೆ ಅವರ ಸಂಪೂರ್ಣ ಪ್ರೇಮವಿರುವದು. ಆದ್ದರಿಂದ ನೀನು ವಿನಯದಿಂದ ನಡೆದುಕೊಂಡು ನಿನ್ನ ನಡತೆಯನ್ನು ತಿದ್ದಿಕೊಂಡರೆ, ಅವರ ಸಿಟ್ಟಿಗೆ ನೀನು ಗುರಿಯಾಗಲಿಕ್ಕಿಲ್ಲ. ನಡೆ, ನಾನೂ ನಿನ್ನ ಸಂಗಡ ಅವರ ಬಳಿಗೆ ಬರುವೆನು.

ಖುಸ್ರು—ಏನಂದಿ? ಅವ್ವಾ! ನೀನು ಮತ್ತೆ ಅಪ್ಪನ ಬಳಿಗೆ ಹೋಗುವೆಯಾ? ''ನೀನು ಇನ್ನು ನನ್ನ ಎದುರಿಗೆ ಬರಬೇಡ'' ಎಂದು ಅಪ್ಪನು ನಿನ್ನನ್ನು ತಿರಸ್ಕರಿಸಿದ ಅಪಮಾನವನ್ನು ಇಷ್ಟರೊಳಗೆ ನೀನು ಮರೆತುಬಿಟ್ಟೆಯಾ? ಆ ಅಪಮಾನಕ್ಕಾಗಿಯೇ ನೀನು ಅಲ್ಲಿಂದ ಹೊರಟು ಬಂದು ಇಲ್ಲಿ ತವರುಮನೆಯಲ್ಲಿ ಇರುವದಿಲ್ಲವೆ? ಅವ್ವಾ, ರಜಪೂತಸ್ಥಾನದ ಸ್ತ್ರೀಯರು ಇಷ್ಟು ಅಳ್ಳೆದೆಯವರೂ, ಅಪಮಾನವನ್ನು ಸಹಿಸುವವರೂ ಇರುವದಿಲ್ಲ. ನೀನು ಅಲ್ಲಿಂದ ಬರುವಾಗ ಮಾಡಿದ ಪ್ರತಿಜ್ಞೆಯನ್ನು ಇಷ್ಟರಲ್ಲಿಯೇ ಮರೆತುಬಿಟ್ಟಿಯೇನು? ಬೇಡ, ನನ್ನ ಸಲುವಾಗಿ ನೀನು ಇಷ್ಟು ಹೀನತ್ವಕ್ಕೆ ಗುರಿಯಾಗಬೇಡ.

ಜೋಧಬಾಯಿ—ಕುಮಾರಾ, ನೀನು ಎಲ್ಲಿಯ ಅಪಮಾನವನ್ನು, ಎಲ್ಲಿಯ ಪ್ರತಿಜ್ಞೆಯನ್ನು ಕಟ್ಟಿಕೊಂಡು ಕುಳಿತಿರುವೆ? ಗಂಡ—ಹೆಂಡಿರಲ್ಲಿ ಎಂಥ ಪ್ರತಿಜ್ಞೆಯು, ಎಂಥ ಅಪಮಾನವು! ನನ್ನ ವಂಶಜಾತವಾದ ಅಭಿಮಾನವು ಜಾಗ್ರತವಾದದ್ದರಿಂದ ಆಗ ನಾನು ಹಾಗೆ ಮಾಡಿದೆನು. ಆದರೆ ಅದು ನನ್ನ ಅವಿಚಾರವಾಗಿರುವದು. ನಿನಗಾಗುತ್ತಿರುವ ಅಪಮಾನವನ್ನು ನೋಡಿ ನನಗೆ ಆಗ ಸಿಟ್ಟು ಬಂದದ್ದು ನಿಜವು. ಆದರೆ ಗಂಡನ ಮೇಲೆ ಹೆಂಡತಿಯು ಸಿಟ್ಟಾಗುವದು ಎಂದಾದರೂ ಉಚಿತವಾಗಬಹುದೆ? ಗಂಡಂದಿರ ಮೇಲಿನ ಹೆಂಡಿರ ಸಿಟ್ಟು ಮಂಜಿನಂತೆ ಇರುವದು. ಪತಿರೂಪ ಸೂರ್ಯನ ದರ್ಶನವಾದಕೂಡಲೆ ಆ ಮಂಜು ಮಾಯವಾಗಿ ಹೋಗುವದು. ಇನ್ನು ನಾನು ನನ್ನ ಪ್ರಿಯಕರ ಪತಿಯ ವಿಯೋಗವನ್ನು ಬಹುದಿವಸ ಸಹಿಸುವದು ಶಕ್ಯವಾಗಿರುವದಿಲ್ಲ.

ಖುಸ್ರು— ಅಪ್ಪನು ಅತ್ತಕಡೆಗೆ ಬರುವದಕ್ಕಾಗಿ ನಿನಗೆ ಹೇಳಿಕೊಂಡಿರುವನೋ?

ಜೋಧಬಾಯಿ— ಬಾಳಾ, ಹಾಗನ್ನಬಾರದು. ಗಂಡನು ಹೆಂಡತಿಗೆ ಅಪ್ಪಣೆ ಮಾಡತಕ್ಕವನು, ಹೇಳಿಕೊಳ್ಳತಕ್ಕವನಲ್ಲ. ಅದರಂತೆ ಹೊರಟು ಬರಲು ಈ ಪತ್ರದ ಮುಖಾಂತರವಾಗಿ ಅತ್ತ ಕಡೆಯಿಂದ ನನಗೆ ಅಪ್ಪಣೆಯಾಗಿರುವದು.

ಈ ಮೇರೆಗೆ ನುಡಿದು ಜೋಧಬಾಯಿಯು ತನ್ನ ಪತಿಯಾದ ಸೇಲೀಮನು ಬರೆದ ಪತ್ರವನ್ನು ಮಗನ ಕೈಯಲ್ಲಿ ಕೊಟ್ಟನು. ಪತ್ರದ ಮೇಲಿನ ಹಸ್ತಾಕ್ಷರಗಳನ್ನು ನೋಡಿ ಅದು ತನ್ನ ತಂದೆಯು ಬರೆದ ಪತ್ರವೆಂದು ಖುಸ್ರುವು ತಿಳಿದನು. ಆ ಪತ್ರವನ್ನು ಓದಿ ಕೆಲಹೊತ್ತು ಸ್ತಬ್ಧನಾಗಿ ವಿಚಾರಿಸಿ, ಆತನು ತನ್ನ ತಾಯಿಯನ್ನು ಕುರಿತು— ಅವ್ವಾ, ನಾನೂ ನನ್ನ ವಿಚಾರವನ್ನು ಈಗ ಬದಲುಮಾಡಿದೆನು. ನಾನು ಬೇರೆ ಕಡೆಗೆಲ್ಲಿಗೂ ಹೋಗುವದಿಲ್ಲ, ನಿನ್ನ ಸಂಗಡಲೇ ಅಪ್ಪನ ಬಳಿಗೆ ಬರುತ್ತೇನೆ. ನಾನು ಸ್ವತಃ ತಪ್ಪುಮಾಡಿ ಅಪ್ಪನಸಿಟ್ಟಿಗೆ ಗುರಿಯಾಗಿರುವದರಿಂದ ನಾನೇ ಸಮಕ್ಷಹೋಗಿ ಅಪ್ಪನ ಕ್ಷಮೆ ಬೇಡಿಕೊಂಡು ನನ್ನ ತಪ್ಪನ್ನು ತಿದ್ದಿಕೊಳ್ಳುವೆನು; ಹಾಗೆ ಮಾಡಿದರೆಯೇ ಅಪ್ಪನು ನನ್ನನ್ನು ಪ್ರೀತಿಸಬಹುದು. ಒಂದು ಪಕ್ಷದಲ್ಲಿ ಅಪ್ಪನು ನನಗೆ ದಯೆ ತೋರಿಸದಿದ್ದರೂ ಚಿಂತೆಯಿಲ್ಲ, ಏನಾಗುವದು ಅಲ್ಲಿಯೇ ಆಗಲಿ. ನಡೆ, ನಾನು ನಿನ್ನ ರಕ್ಷಕನಾಗಿ ನಿನ್ನ ಸಂಗಡ ಬರುವೆನು.'' ಅನ್ನಲು, ಇಷ್ಟು ಬೇಗನೆ ಮಗನ ಹೃದಯದಲ್ಲಿ ಸುವಿಚಾರವು ಉತ್ಪನ್ನವಾದದ್ದನ್ನು ನೋಡಿ ಜೋಧಬಾಯಿಗೆ ಸಮಾಧಾನವಾಯಿತು. ಆಕೆಯು ಗಂಭೀರ ಸ್ವರದಿಂದ ಮಗನನ್ನು ಕುರಿತು— ಬಾಳಾ, ಖುಸ್ರೂ, ಖುದಾನು ಹೀಗೆಯೇ ನಿನಗೆ ಸುವಿಚಾರವನ್ನು ಉಂಟು ಮಾಡುತ್ತ ಹೋಗಲಿ. ನನ್ನ ಸಂರಕ್ಷಣಕ್ಕಾಗಿ ಯುವರಾಜರವರು ನೂರು ಜನ ಮೊಗಲ ರಾವುತರನ್ನು ಕಳಿಸಿರುವರೆಂದು ಈ ಪತ್ರ ಕೊಟ್ಟ ದಾಸಿಯು ಹೇಳಿದಳು. ಆ ರಾವುತರು ಕೋಟೆಯಲ್ಲಿಯೇ ಇಳಿದುಕೊಂಡಿದ್ದು, ಅಣ್ಣನ ಅಪ್ಪಣೆಯ ಹಾದಿಯನ್ನು ನೋಡುತ್ತಿರುವರು. ಅಣ್ಣನ ಅಪ್ಪಣೆ ಪಡೆದು ನಾವಿಬ್ಬರೂ ಅತ್ತ ಕಡೆಗೆ ಹೋಗಿಬಿಡೋಣ.

ಈ ಮೇರೆಗೆ ತಾಯಿ— ಮಕ್ಕಳ ವಿಚಾರವು ಗಟ್ಟಿಮುಟ್ಟಿಯಾಗುತ್ತಿರಲು, ಬೆಳ್ಳಗೆ ಬೆಳಗಾಗಿ ರಾಜಾ ಮಾನಸಿಂಹನು ತಂಗಿಯನ್ನು ಕಾಣುವದಕ್ಕಾಗಿ ಬಂದನು. ಖುಸ್ರುವು ಮಾವನನ್ನು ಕಾಣಲಾರದೆ ಎತ್ತೋ ಮೋರೆ ತಪ್ಪಿಸಿಕೊಂಡನು. ಜೋಧಬಾಯಿಯು ಅಣ್ಣನಿಗೆ ತಕ್ಕ ಮಾನ— ಮರ್ಯಾದೆಗಳನ್ನು ಮಾಡಿದ ಬಳಿಕ ಮಾನಸಿಂಹನು ತಂಗಿಯನ್ನು ಕುರಿತು ಪ್ರೇಮಲ ಸ್ವರದಿಂದ— ''ತಂಗೀ, ಕುಮಾರನು ಎಲ್ಲಿರುವನು? ಆತನು ನನ್ನನ್ನು ಮುಂಜಾವಿನಲ್ಲಿಯೇ ಕಾಣಬೇಕಾಗಿದ್ದು, ಇನ್ನೂ ನನ್ನ ಬಳಿಗೆ ಬಂದಿರುವದಿಲ್ಲವಲ್ಲ? ಆತನು ನಿದ್ದೆಗೆಟ್ಟು, ಇನ್ನೂ ಮಲಗಿಕೊಂಡಿರುವನೋ ಏನು?'' ಎಂದು ಕೇಳಲು, ಜೋಧಬಾಯಿಯು ನಿಟ್ಟುಸಿರು ಬಿಟ್ಟು— ಅಣ್ಣಾ, ನಿನ್ನೆರಾತ್ರಿ ತನ್ನಿಂದಾದ ಘೋರ ಅಪರಾಧಕ್ಕಾಗಿ ಆತನು ಬಹಳ ಸಂಕೋಚ ಪಟ್ಟಿರುವದರಿಂದ, ನಿನಗೆ ತನ್ನ ಕಲಂಕಿತ ಮುಖವನ್ನು ಆತನು ಹೇಗೆ ತೋರಿಸಿಯಾನು ಹೇಳು? ಇಲ್ಲ, ನಿನ್ನನ್ನು ಕಾಣುವ ಹಾಗೆ ಆತನು ನಡೆದುಕೊಂಡಿರುವದಿಲ್ಲ, ಇನ್ನು ಆತನು ಇಲ್ಲಿ ಇರಲಿಕ್ಕೆ ಯೋಗ್ಯನಲ್ಲ; ಅಣ್ಣಾ, ಇನ್ನು ಮೇಲೆ ನಾನು ಆತನನ್ನು ನನ್ನ ಸಂಗಡಲೇ ಕರಕೊಂಡು

ಹೋಗುವೆನು. ಆ ಚಂಚಲ ಸ್ವಭಾವದ ನಿನ್ನ ಅಳಿಯನನ್ನು ಹೀಗೆಯೇ ಬಿಟ್ಟು ಉಪಯೋಗ ವಿಲ್ಲ, ಆತನಿಗೆ ಚನ್ನಾಗಿ ಬುದ್ಧಿಕಲಿಸಬೇಕಾಗಿರುವದರಿಂದ ನಾನು ಆತನನ್ನು ಕರೆದುಕೊಂಡೇ ಹೊಗಬೇಕೆಂದು ನಿಶ್ಚಯಿಸಿರುತ್ತೇನೆ, ಎಂದು ಹೇಳಿದಳು. ತಂಗಿಯ ಈ ಮಾತುಗಳನ್ನು ಕೇಳಿ ಮಾನಸಿಂಹನಿಗೆ ಬಹಳ ಅಸಮಾಧಾನವಾಯಿತು. ನೀವು ಇಲ್ಲಿಯೇ ಇರಬೇಕೆಂದು ತಂಗಿಗೆ ಬೇಕಾದಷ್ಟು ಯುಕ್ತಿವಾದದಿಂದ ಹೇಳಿದನು; ಆದರೆ ನಿರ್ಧಾರದ ಸ್ವಭಾವದ ಚತುರ ಜೋಧಬಾಯಿಯು ಆತನ ಯುಕ್ತಿವಾದಗಳನ್ನೆಲ್ಲ ಖಂಡಿಸಿ ಮಗನೊಡನೆ ಪತಿಯ ಬಳಿಗೆ ಹೋಗಿಯೇ ತೀರುವೆನೆಂದು ಹಟಹಿಡಿದಳು; ಆದ್ದರಿಂದ ಕುಮಾರನು ತನ್ನಲ್ಲಿರುವ ಆಶೆಯು ಮಾನಸಿಂಹನಿಗೆ ತೋರದಾಯಿತು.

ತಾನು ಮೊಗಲ ಸಾಮ್ರಾಜ್ಯದ ಆಧಾರ ಸ್ತಂಭವೆಂದು ತಿಳಿದಿರುವ ಮಾನಸಿಂಹನಿಗೆ ತಂಗಿಯು ಮಾಡಿದ ಈ ಅವಮಾನಕ್ಕಾಗಿ ಸಿಟ್ಟುಬಂದಿತು. ಆತನು ಮನಸ್ಸಿನಲ್ಲಿ ತಂಗಿಯ ಮೇಲೆ ಬಹಳ ಸಂತಾಪಗೊಂಡನು; ಆತನ ಸಿಟ್ಟಿನ ಲಕ್ಷಣವು ಆತನ ಮೋರೆಯ ಮೇಲೆ ಒಡೆದು ಕಾಣಿಸಿತು; ಆದರೂ ಆತನು ಅದನ್ನು ಶಬ್ದಗಳಿಂದ ಹೊರಗೆಡವದೆ, ಒಮ್ಮೆ ಒತ್ತಿ ಉಸುರ್ಗಳೆದು ಸಿಟ್ಟು ನುಂಗಿಕೊಂಡು ತಂಗಿಯನ್ನು ಕುರಿತು—''ಜೋಧಬಾಯಿ, ಇಂದಿನ ಹಾಗೆ ನೀನು ಎಂದೂ ಹಟವಾರಿತನವನ್ನು ತೋರಿಸಿದ್ದಿಲ್ಲ. ನಿನ್ನ ಗಂಡನಾದ ಸೇಲಿಮನಿಗೆ ತನ್ನ ಕರ್ತೃತ್ವದ ಅಬಿಮಾನವು ಬಹಳವಾಗಿರುತ್ತದೆ; ಆ ಅಭಿಮಾನದ ಒಗರಿನಿಂದ ಆತನು ಹೆಂಡತಿಯಾದ ನಿನ್ನನ್ನೂ, ಮಗನಾದ ಖುಸ್ರುವನ್ನು ತಿರಸ್ಕಾರದ ದೃಷ್ಟಿಯಿಂದ ನೋಡುತ್ತಿರುವನು. ಆತನ ತಿರಸ್ಕಾರದ ಮಾತಿಗಾಗಿಯೇ ನೀನು ಸಿಟ್ಟಾಗಿ ಇಲ್ಲಿಗೆ ಬಂದಿರುವಾಗ, ನಾನು ಈ ಮಾತನ್ನು ಹೆಚ್ಚಿಗೆ ಬಿಚ್ಚಿ ಯಾಕೆ ಹೇಳಬೇಕು? ನಿಮ್ಮಿಬ್ಬರ ಮೇಲೆ ಆತನ ಆದರವು ಸರ್ವಥಾ ಇರುವದಿಲ್ಲ. ಅಂತಃಪುರದೊಳಗಿನ ಬೇರೆ ವಿಲಾಸಿನಿಯರ, ಹಾಗು ದುಷ್ಟರಾದ ಕಾರ್ಯಸಾಧುಗಳ ಕೈಯಲ್ಲಿ ತಾನು ಪೂರಾ ಸಿಕ್ಕಿಕೊಂಡು ಹೋಗಿದ್ದರೂ, ತಾನು ಸ್ವತಂತ್ರನಿರುವೆನೆಂಬಂತೆ ಆತನಿಗೆ ತೋರುತ್ತಿರುವದು. ಇಂಥ ಸ್ಥಿತಿಯಲ್ಲಿ ಆತನಿಗೆ ನಿಮ್ಮ ಅಗತ್ಯವು ಎಷ್ಟರ ಮಟ್ಟಿಗೆ ಇರಬಹುದು? ನಿಮ್ಮ ಮೇಲೆ ಆ ಯುವರಾಜ ಸೇಲೀಮನು ಸಿಟ್ಟಾಗಲಿಕ್ಕೆ, ಅಕಬರ ಬಾದಶಹನು ನಿಮ್ಮಿಬ್ಬರನ್ನು ವಿಶೇಷವಾಗಿ ಪ್ರೀತಿಸುತ್ತಿರುವದೊಂದು ಕಾರಣವಿರುವದು. ನಿಮ್ಮ ಮೇಲಿನ ಬಾದಶಹನ ಈ ಪ್ರೇಮವು, ತನ್ನ ಪಟ್ಟದ ಬಾಧ್ಯತೆಗೆ ಬಾಧಕವಾಗಿ ಖುಸ್ರುವು ತನ್ನ ಸಿಂಹಾಸನವನ್ನು ಆಕ್ರಮಿಸಬಹುದೆಂದು ಆ ನಿನ್ನ ಪತಿಯು ಅಸೂಯ ಪಡುತ್ತಿರುವನು. ತಂಗೀ, ಜೋಧಾ, ನಿನ್ನ ಪತಿಯು ನಿನ್ನ ಮೇಲೆ ಬಹಳ ಸಿಟ್ಟಾಗಿರುವಾಗ ಹೀಗೆ ನೀನು ಮಗನನ್ನು ಕಟ್ಟಿಕೊಂಡು ಹೋದರೆ ಒಳಿತಾಗಬಹುದೆ? ಕುಮಾರ ಖುಸ್ರುವು ಅತ್ಯಂತ ಚಂಚಲ ಬುದ್ಧಿಯವನು; ಅವಿಚಾರಿಯು; ವಿಷಯಲೋಲುಪತನು. ಇಂಥವನನ್ನು ನಿನ್ನ ಪತಿಯ ಅನುಕೂಲತೆಯು ಇಲ್ಲದಾಗ ನೀನು ಹೇಗೆ ಹಾದಿಗೆ ಹಚ್ಚುವೆ? ಈಗ ನಿನ್ನ ಪತಿಯು ನಿನ್ನನ್ನು ಕರೆಕಳುಹಿದ್ದರಲ್ಲಿ ಮೋಸವಿರಲಿಕ್ಕಿಲ್ಲವೆಂದು ಯಾರು ಹೇಳಬೇಕು? ತಂಗೀ, ಪ್ರಾಚೀನ ಕರ್ಮಭೋಗವನ್ನು ತಪ್ಪಿಸುವದು ಯಾರಿಂದಾಗುವದು? ನೋಡು, ನಿನ್ನ ಮನಸ್ಸಿಗೆ ಬಂದಂತೆ ಮಾಡು!

ಪಲ್ಲಂಗದೊಂದು ಕಾಲಿಗೆ ಆತು ಕುಳಿತುಕೊಂಡು ಜೋಧಬಾಯಿಯು ಅಣ್ಣನ ಈ ಮಾತುಗಳನ್ನೆಲ್ಲ ಲಕ್ಷಪೂರ್ವಕವಾಗಿ ಕೇಳಿದಳು. ಮಗನ ಗುಣಗಳ ವರ್ಣನವನ್ನು ಕೇಳಿ ಆಕೆಯ ಕಣ್ಣೀರುಗಳು ಬಳಬಳ ಉದುರತೊಡಗಿದವು. ಆಕೆಯ ಮುಖವು ಖಿನ್ನವಾಗಿ ಅಣ್ಣನಿಗೆ ಏನು ಉತ್ತರ ಕೊಡಬೇಕೆಂಬುದು ಆಕೆಗೆ ತೋಚದಾಯಿತು; ಆದರೂ ಏನಾದರೂ ಮಾತಾಡಲೇ ಬೇಕಾದದ್ದರಿಂದ ಆಕೆಯು ತನ್ನ ಕಣ್ಣು ಒರಿಸಿಕೊಂಡು ಅಣ್ಣನನ್ನು ಕುರಿತು—''ಅಣ್ಣಾ, ನಿನ್ನಂಥ ಕರ್ಮವೀರನೂ ಪ್ರಾಚೀನ ಕರ್ಮಕ್ಕೆ ಮಹತ್ವಕೊಟ್ಟು, ಆ ಕರ್ಮ ಪ್ರವಾಹಕ್ಕೆ ಒಟ್ಟು ಹಾಕಲು ಅಶಕ್ಯವೆಂದು ತೋರಿಸುತ್ತಿರುವಾಗ, ನನ್ನಂಥ ಅಬಲೆಯು ಖುಸ್ರುವಿನ ಪ್ರಾಚೀನ ಕರ್ಮವನ್ನಾಗಲಿ, ನನ್ನ ಪ್ರಾಚೀನ ಕರ್ಮವನ್ನಾಗಲಿ ತಡೆಯಲು ಹೇಗೆ ಸಮರ್ಥಳಾಗುವೆನು? ನನ್ನ ಪ್ರಾಚೀನವಾದ ಸುಕರ್ಮದಿಂದಲೋ ದುಷ್ಕರ್ಮದಿಂದಲೋ ನಾನು ಮೊಗಲ ಚಕ್ರವರ್ತಿಯ ಸೊಸೆಯಾಗಿರುವೆನು. ಇದಕ್ಕಾದರೂ ನನ್ನ ಪೂಜ್ಯ ತಂದೆಯ, ಅಥವಾ ಅಣ್ಣನಾದ ನಿನ್ನ ಪ್ರಾಚೀನ ಕರ್ಮಭೋಗವು ಯಾಕೆ ಕಾರಣವಾಗಿರಬಾರದು? ಏನೇ ಇರಲಿ, ಆರ್ಯ ಸ್ತ್ರೀಯರು, ಅದರಲ್ಲಿಯೂ ರಾಜಸ್ಥಾನದ ರಮಣಿಯರು ಸರ್ವಶ್ರೇಷ್ಠವಾದ ಕರ್ತವ್ಯವನ್ನೊಂದು ಮಾಡುವರು; ಅದಾವದೆಂದರೆ ಶ್ರದ್ಧಾಪೂರ್ವಕವಾದ ಪತಿಸೇವೆಯು! ಪತಿಸೇವೆಯು ಸ್ತ್ರೀಯರ ಮಹಾ ಧರ್ಮವಾಗಿರುವದೆಂಬ ಶಿಕ್ಷಣವು ನಮ್ಮ ರಜಪೂತ ಸ್ತ್ರೀಯರಿಗೆ ಚಿಕ್ಕಂದಿನಿಂದಲೇ ದೊರೆತಿರುವದು. ಅದರಂತೆ ಮಕ್ಕಳ ಲಾಲನ ಪಾಲನಗಳನ್ನು ಮಾಡುವದೂ ತಾಯಿಯ ಕರ್ತವ್ಯವಾಗಿರುತ್ತದೆ. ನನಗೆ ಪ್ರಾಣಕ್ಕಿಂತಲೂ ಪ್ರಿಯನಾಗಿರುವ ಒಬ್ಬನೇ ಒಬ್ಬ ಮಗನಾದ ಖುಸ್ರುವು ಭ್ರಷ್ಟಮಾರ್ಗವನ್ನು ಹಿಡಿಯದಂತೆ, ಹಾಗು ಬುದ್ಧಿಪೂರ್ವಕವಾಗಿ ಸಂಕಟಕ್ಕೆ ಗುರಿಯಾಗದಂತೆ ನಾನು ಮೊದಲು ನೋಡಿಕೊಳ್ಳಬೇಕಾಗುವದು. ಆದ್ದರಿಂದ ಅಣ್ಣಾ, ನನಗೆ ನನ್ನ ಕರ್ತವ್ಯಗಳನ್ನು ಮಾಡಗೊಡಿಸು ಅನ್ನಲು, ಮಾನಸಿಂಹನು ಕನಿಕರದಿಂದ—''ನನ್ನ ಪ್ರಿಯ ಜೋಧಬಾಯೀ, ನಾನು ಸ್ಪಷ್ಟ ಮಾತಾಡಿದ್ದಕ್ಕಾಗಿ ನೊಂದುಕೊಳ್ಳಬೇಡ. ನನ್ನ ಸ್ವಭಾವವು ನಿನಗೆ ಗೊತ್ತೇ ಇರುತ್ತದೆ. ನನ್ನ ಜ್ಞಾತಿದ್ರೋಹದ ಹಾಗು ರಾಜದ್ರೋಹದ ಪ್ರಾಯಶ್ಚಿತ್ತವನ್ನು ನೀನು ಇಂದು ಈ ಬಗೆಯಾಗಿ ಭೋಗಿಸಬೇಕಾಗುವದನ್ನು ನೋಡಿ ನನಗೆ ಬಹಳ ದುಃಖ ವಾಗುವದು. ಸೇಲೀಮನ ಸಂಶಯವೃತ್ತಿಯು ಹೆಚ್ಚುತ್ತಲಿದ್ದು, ನನ್ನ ಕಡೆಗೂ ಆತನು ಸಾಶಂಕವೃತ್ತಿಯಿಂದ ನೋಡತೊಡಗಿರುವನು; ಖುಸ್ರುವಿನ ಮಾವನಾದ ಸೇನಾಪತಿ ಅಜಿಮಖಾನ ಸಾಹೇಬನೂ ನಾನೂ ಖುಸ್ರುವಿನ ಪಕ್ಷಕಟ್ಟಿ, ತನ್ನ ಸಿಂಹಾಸನದ ಪ್ರಾಪ್ತಿಗೆ ವಿಘ್ನವನ್ನುಂಟು ಮಾಡುವೆವೆಂದು ಸೇಲೀಮನು ತಿಳಿದಿರುವನು; ಆದರೆ ಜೋಧಾ, ನಾನು ನನ್ನ ತಂಗಿಯ ರಾಜ್ಯಪದವನ್ನು ಕಸಿದುಕೊಳ್ಳಬಹುದೋ? ಸೇಲೀಮನಿಗೂ ನನಗೂ ಹೇಳಿಕೊಳ್ಳುವಂಥ ಸಂಬಂಧವಿಲ್ಲದಿದ್ದರೂ, ನಾನು ನನ್ನ ತಂಗಿಯಾದ ನಿನ್ನ ಗಂಡನೆಂಬುದನ್ನಾದರೂ ಆತನು ಮರೆಯತಕ್ಕದ್ದಿದ್ದಿಲ್ಲ; ಆದರೆ ಆಗುವದು ಹೇಗೆ ತಪ್ಪುವದು? ಈ ಸ್ಥಿತಿಯಲ್ಲಿ ನೀನು ಖುಸ್ರುವನ್ನು ಸೇಲೀಮನಿಂದ ದೂರ ಇಡುವದು ನನಗೆ ನೆಟ್ಟಗೆ ಕಾಣಿಸುತ್ತದೆ. ನೀನಾದರೂ ಪತಿಯ ಬಳಿಗೆ ಹೋಗಲಿಕ್ಕೆ ಇಷ್ಟೇಕೆ ಆತುರಪಡೆವೆ? ಅಲ್ಲಿಗೆ ಹೋದರೆ ನಿನಗೆ ಸ್ವಲ್ಪವಾದರೂ ಮಾನವು ದೊರೆಯಬಹುದೆ?

ಅಣ್ಣನ ಈ ಮಾತುಗಳನ್ನು ಕೇಳಿ ಜೋಧಬಾಯಿಯು ಏನೋ ವಿಚಾರ ಮಾಡಿ ಮಂದ ಸ್ವರದಿಂದ ತನ್ನ ಅಣ್ಣನನ್ನು ಕುರಿತು—ಅಣ್ಣಾ, ಅವರು ನನ್ನನ್ನು ಕರೆಯುವದಕ್ಕಾಗಿ ಜನರನ್ನೂ, ಮೇಣೆಯನ್ನೂ ಕಳಿಸಿರುವರು; ಮತ್ತು ನನ್ನ ಹಾದಿಯನ್ನು ನೋಡುತ್ತ ಅಲಹಾಬಾದದ ಹತ್ತರ ರಾಹುಟಿ ಹೊಡೆದುಕೊಂಡು ಕುಳಿತಿರುವರು; ಆದ್ದರಿಂದ ನಾನು ಹೋಗಬೇಕು. ಇಂಥ ಸೂಕ್ಷ್ಮ ಕಾಲದಲ್ಲಿಯಂತು ನಾನು ನಿಲ್ಲುವದೇ ಇಲ್ಲ, ಹೋಗಿಬಿಡುವೆನು. ಮೊದಲೇ ಖುಸ್ರುವಿನ ಮೇಲೆ ಅವರ ಸಿಟ್ಟು ಬಹಳ. ಅದರಲ್ಲಿ ನಾನು ಈಗ ಕರೆಕಳುಹುವಾಗ ಹೋಗದೆ ಮಗನೊಡನೆ ಇಲ್ಲಿ ಇದ್ದರೆ, ಇನ್ನು ನಾನು ಬಾದಶಹರ ಅಂತಃಪುರದ ಮೋರೆಯನ್ನು ಕಾಣದೆ ಅದಕ್ಕೆ ನಿಶ್ಚಯವಾಗಿ ಎರವಾಗಬೇಕಾದೀತು.

ಮಾನಸಿಂಹ—ಹೀಗಿದ್ದರೆ ಎಲ್ಲರ ಮೇಲೆ ಸಿಟ್ಟಾಗಿ ಇಲ್ಲಿಗೆ ನೀನು ಯಾಕೆ ಬಂದೆ?

ಜೋಧಬಾಯಿ—ರಾಜಸ್ಥಾನದ ರಮಣಿಯರ ಸ್ವಭಾವ ಸುಲಭವಾದ ಅಭಿಮಾನವು ಜಾಗ್ರತವಾಗಲು, ನನ್ನ ಕೈಯಿಂದ ಆಗಬಾರದ ತಪ್ಪು ಆಗಿಹೋಯಿತು. ಸಿಟ್ಟಿನ ಭರದಲ್ಲಿ ನಾನು ಮಾಡಬಾರದ್ದನ್ನು ಮಾಡಿದೆನು; ಆದರೆ ಒಮ್ಮೆ ನನ್ನಿಂದಾದ ತಪ್ಪನ್ನು ನಾನು ತಿದ್ದಿಕೊಳ್ಳದೆ ಅದರ ತೀವ್ರತೆಯನ್ನು ಹೆಚ್ಚಿಸುತ್ತ ಹೋದರೆ, ಅಪರಾಧವು ಘೋರವಾಗಲಿಕ್ಕಿಲ್ಲವೆ?

ಮಾನಸಿಂಹ—ನಿನ್ನ ಮಾತು ನಿಜವು. ನೀನು ನಿನ್ನ ಗಂಡನ ಬಳಿಗೆ ಹೋಗು, ಅದಕ್ಕೆ ನಾನು ಬೇಡೆನ್ನುವದಿಲ್ಲ; ಆದರೆ ನಿನ್ನ ಮಾವನಾದ ಅಕಬರ ಬಾದಶಹನು ರೋಗಬಾಧೆಯಿಂದಾಗಲಿ—ಮಾನಸೀಕ ವ್ಯಥೆಯಿಂದಾಗಲಿ ಅತ್ಯಂತ ಕ್ಷೀಣನಾಗಿರುವದರಿಂದ ಯಾವ ಹೊತ್ತಿನಲ್ಲಿ ಎಂಥ ಪ್ರಸಂಗ ಒದಗೀತೆಂಬದನ್ನು ಹೇಳಲಾಗುವದಿಲ್ಲ. ಇಂಥ ಪ್ರಸಂಗದಲ್ಲಿ ಕುಮಾರ ಖುಸ್ರುವನ್ನು ಇಲ್ಲಿ ಇಡುವದೂ ಯೋಗ್ಯವಲ್ಲ; ಆತನನ್ನು ಅಕಬರ ಬಾದಶಹರ ಬಳಿಯಲ್ಲಿಯೇ ಇಡು.

ಜೋಧಬಾಯಿ—ಕುಮಾರ ಖುಸ್ರುವನ್ನು ಆತನ ಅಜ್ಜನ ಬಳಿಯಲ್ಲಿಟ್ಟರೆ ಅವರಿಗೆ (ತನ್ನ ಪತಿ ಸೇಲೀಮನಿಗೆ) ಸಂಶಯಬರಲಿಕ್ಕಿಲ್ಲವೆ?

ಮಾನಸಿಂಹ—ಅಕಬರ ಬಾದಶಹರು ಜೀವದಿಂದಿರುವವರೆಗೆ ಯುವರಾಜ ಸೇಲೀಮನು ಕುಮಾರನ ಕೂದಲವನ್ನೂ ಕೊಂಕಿಸಲಾರನು. ತಂದೆಯ ಬಳಿಯಲ್ಲಿದ್ದು ಅನಾದರವನ್ನೂ, ಸಿಟ್ಟನ್ನೂ ಸಹಿಸುವದಕ್ಕಿಂತ ಅಜ್ಜನ ಬಳಿಯಲ್ಲಿರುವದೇ ಕುಮಾರನಿಗೆ ಸುಖಕರವಾಗಬಹುದು. ಕುಮಾರನ ಮುಂದಿನ ಉತ್ಕರ್ಷವನ್ನೂ ಲಕ್ಷಿಸಿದರೆ, ಆತನು ತಂದೆಗಿಂತ ಅಜ್ಜನ ಪ್ರೇಮ ಸಂಪಾದಿಸುವದೇ ಇಷ್ಟವೂ, ಅತ್ಯಂತಾವಶ್ಯಕವೂ ಆಗಿರುವದು.

ಹೀಗೆ ತನ್ನ ಗಂಡನಾದ ಸೇಲೀಮನ ಪಟ್ಟದ ಬಾಧ್ಯತೆಯನ್ನು ಪರ್ಯಾಯದಿಂದ ಹಾರಿಸಿ ಮಾನಸಿಂಹನು ಮಾತಾಡಿದ್ದನ್ನು ಕೇಳಿ ಜೋಧಬಾಯಿಯು ಒಮ್ಮೆ ಮರ್ಮಭೇದಕ ದೃಷ್ಟಿಯಿಂದ ಅಣ್ಣನನ್ನು ನೋಡಿದಳು. ತನ್ನ ಅಣ್ಣನು ತನ್ನ ಗಂಡನನ್ನು ಸಿಂಹಾಸನದಿಂದ ತಳ್ಳಿ ತನ್ನ ಮಗ ಖುಸ್ರುವನ್ನು ದಿಲ್ಲಿಯ ಬಾದಶಾಹಿಯ ಪಟ್ಟಕ್ಕೆ ಕುಳ್ಳಿರಿಸಲು ಯತ್ನಿಸುತ್ತಿರಬಹುದೇ ಎಂದು

ಆಕೆಯು ಶಂಕಿಸಿದಳು. ಹೀಗೆ ತನ್ನ ತಂಗಿಯು ತನ್ನನ್ನು ಮರ್ಮಭೇದಕ ದೃಷ್ಟಿಯಿಂದ ನೋಡಿದ್ದರ ಮರ್ಮವನ್ನು ಮಾನಸಿಂಹನು ಕೂಡಲೆ ಅರಿತು—ತಂಗೀ, ಜೋಧಾ, ನೀನೂ ನನ್ನನ್ನು ಅವಿಶ್ವಾಸಿಯೆಂದು ತಿಳಿಯುವೆಯಾ? ಎಲೈ ಮಾನಸಿಂಹಾ, ಭೋಗಿಸಿನ್ನು ನಿನ್ನ ದ್ರೋಹ ಪರಂಪರೆಯ ಫಲವನ್ನು! ಮೊಗಲಬಾದಶಹನನ್ನು ಕೂಡಿ ಸ್ವದೇಶಬಾಂಧವರ ಸ್ವಾತಂತ್ರ್ಯಹರಣ ಮಾಡತೊಡಗಿರುವ ನಿನ್ನಂಥ ದ್ರೋಹಿಯ ಮೇಲೆ ನಿನ್ನ ತಂಗಿಯು ಸಂಶಯ ಪಟ್ಟಿದ್ದು ಆಶ್ಚರ್ಯವಲ್ಲ, ತಂಗೀ, ನಾನು ನಿನ್ನ ಗಂಡನನ್ನು ಪಟ್ಟದಿಂದ ತಳ್ಳಿ ನಿನ್ನ ಮಗನನ್ನು ಪಟ್ಟಕ್ಕೆ ಕುಳ್ಳಿರಿಸಬೇಕೆಂದು ಯತ್ನಿಸುವೆನೆಂದು ತಿಳಿಯಬೇಡ; ಆದರೆ ಬಾದಶಹರು ಮಗನಾದ ಸೇಲೀಮನ ಬಂಡುಗಾರಿಕೆಗೂ, ದುರ್ಗುಣಗಳಿಗೂ ಹೇಸಿ, ಸಾಮ್ರಾಜ್ಯದ ಹಿತಕ್ಕಾಗಿ ತಮ್ಮ ಮೊಮ್ಮಗ ಖುಸ್ರುವಿಗೆ ಪಟ್ಟಕೊಡಬಹುದೆಂಬ ತರ್ಕದಿಂದ ಹೀಗೆ ಮಾತಾಡಿದೆನು. ತಂಗೀ, ನನಗೆ ನಿನ್ನ ಗಂಡನು ಬಾದಶಹನಾದರೂ ಅಷ್ಟೇ, ನಿನ್ನ ಮಗನು ಬಾದಶಹನಾದರೂ ಅಷ್ಟೇ! ಬಾದಶಹ ರಾದವರನ್ನು ಏಕನಿಷ್ಠೆಯಿಂದ ಸೇವಿಸುವದೊಂದು ವಚನಬದ್ಧನಾದ ನನ್ನ ಕರ್ತವ್ಯವು.

ಅಣ್ಣನ ಈ ಕನಿಕರದ ಮಾತುಗಳನ್ನು ಕೇಳಿ ಜೋಧಬಾಯಿಯು ತನ್ನ ಸಂಶಯವೃತ್ತಿಗಾಗಿ ಮನಸ್ಸಿನಲ್ಲಿ ನಾಚಿದಳು. ಆಕೆಯು ಗಂಭೀರ ವೃತ್ತಿಯಿಂದ ಅಣ್ಣನನ್ನು ಕುರಿತು—''ಅಣ್ಣಾ, ಪತಿಯ ವಿಷಯದ ಅಪಾಯದ ಭಾವನೆಯಿಂದ ನಾನು ಹಾಗೆ ಸಂಶಯ ಪಟ್ಟದ್ದೂ ನಿಜವು, ಇಲ್ಲೆನ್ನುವದಿಲ್ಲ; ಆದರೆ ಈ ಪ್ರಸಂಗದಲ್ಲಿ ಖುಸ್ರುವಿನ ವಿಚಾರವೇನಿರುತ್ತದೆಂಬದನ್ನು ಕೇಳಿ ಕೊಳ್ಳೋಣ; ಅವನೇನು ಸಣ್ಣವನಲ್ಲ, ಅವನ ಹಿತಾಹಿತಗಳು ಅವನಿಗೆ ತಿಳಿಯುತ್ತಿರುವವು, ಅನ್ನಲು, ಮಾನಸಿಂಹನು ತಿರಸ್ಕಾರದ ಸ್ವರದಿಂದ—''ಅವನಂಥ ಅಕಾಲ ಪರಿಪಕ್ವಬುದ್ಧಿಯವನ ವಿಚಾರವನ್ನು ಕೇಳಿಕೊಂಡು ಮಾಡುವದೇನು? ಆತನಿಗೆ ನಮಗಿಂತ ಹೆಚ್ಚು ತಿಳಿಯುವದಾದರೂ ಏನು? ನಿನ್ನ ಮನಸ್ಸಿನಲ್ಲಿ ಅಲಹಾಬಾದಕ್ಕೆ ಹೋಗುವದು ಇಲ್ಲದಿದ್ದರೆ, ''ನನಗೆ ಜಡ್ಡು ಆಗಿರುವದು'' ಎಂದು ಪತ್ರವನ್ನು ಬರೆದುಕೊಂಡು, ಅದನ್ನು ಕೊಟ್ಟು ಕರೆಯ ಬಂದವರನ್ನು ತಿರುಗಿ ಕಳಿಸಿಬಿಡುವೆನು. ಹೀಗೆ ಮಾಡುವದು ನನ್ನ ಮನಸ್ಸಿಗೆ ಪೂರಾ ಬರುತ್ತದೆ.

ಹೀಗೆ ಪತಿಯನ್ನು ಮೋಸಗೊಳಿಸುವ ವಿಚಾರವ ಸೂಚಿಸಿದ್ದನ್ನು ಕೇಳಿ ಆ ಸಾಧ್ವೀ ಜೋಧಬಾಯಿಯು ನೊಂದುಕೊಂಡಳು. ಆಕೆಯು ಭಯಕಂಪಿತ ಸ್ವರದಿಂದ—ಬೇಡ, ಅಣ್ಣಾ ಹೀಗೆ ಮಾಡುವದು ಬೇಡ. ಹೀಗೆ ಮಾಡಿದರೆ ತನ್ನ ಕಲ್ಯಾಣವಾಗುವದು ಒತ್ತಟ್ಟಿಗುಳಿದು, ಇದ್ದ ಸ್ಥಿತಿಯೂ ಕೆಟ್ಟು ಹೋದೀತು. ಇಂಥ ಪತ್ರದಿಂದ ಅವರ ತಿಳುವಳಿಕೆಯು ವಿರುದ್ಧವಾಗುವದೇ ನಿಜವು;. ಆದ್ದರಿಂದ ಅಣ್ಣಾ, ನಾನು ನನ್ನ ವಿಚಾರವನ್ನು ತಿರುಗಿಸುವದಿಲ್ಲ, ಖುಸ್ರುವೂ ನನ್ನ ಸಂಗಡವೆ ಬರಲಿ; ನಾನು ಪತಿಯ ಬಳಿಗೆ ಹೋಗುವದಕ್ಕಾಗಿ ಅಲಹಾಬಾದಿಗೆ ನಾಳಿಗೇ ಹೊರಡುವೆನು. ಎಂದು ಹೇಳಿದಳು. ತಂಗಿಯ ಈ ನಿರ್ಧಾರದ ವಚನವು ತನ್ನ ಮನಸ್ಸಿಗೆ ಬಾರದಿದ್ದರೂ, ಅದನ್ನು ಧರ್ಮಸಮ್ಮತವೂ, ಯುಕ್ತಿಸಮ್ಮತವೂ ಆದ್ದರಿಂದ ಆ ಕ್ಷತ್ರಿಯ ವೀರವರನು ತಂಗಿಯನ್ನೂ, ಸೋದರಳಿಯನನ್ನೂ ಸೇಲೀಮನ ಬಳಿಗೆ ಕಳಿಸಿಕೊಡಲು ನಿಶ್ಚಯಿಸಿ ತಂಗಿಯನ್ನು ಕುರಿತು—''ತಂಗೀ, ನಿನ್ನ ವಿಚಾರವು ಯೋಗ್ಯವಾದದ್ದು, ಅದನ್ನು ನಾನು ಸರ್ವಥಾ

ಒಪ್ಪಿಕೊಳ್ಳುವೆನು. ಯುವರಾಜ ಸೇಲೀಮನ ಕಡೆಯಿಂದ ಬಂದಿರುವ ಸೈನಿಕರು ಉತ್ಸುಕತೆಯಿಂದ ನನ್ನ ಅಪ್ಪಣೆಯ ಹಾದಿಯನ್ನು ನೋಡುತ್ತ ಕುಳಿತುಕೊಂಡಿರುವರು; ನಾನು ಅವರ ಸಂಗಡ ನಿಮ್ಮನ್ನು ಕಳಿಸಿಕೊಡುವೆನಲ್ಲದೆ, ನಮ್ಮ ನೂರುಜನ ರಜಪೂತ ಶೂರ ಸೈನಿಕರನ್ನೂ ನಿನ್ನ ಸಂಗಡ ಕಳಿಸುವೆನು. ಅವರು ಖುಸ್ರುವಿನ ಅಪ್ಪಣೆಯಂತೆ ಕೆಲಸಮಾಡುವರು; ಇದಲ್ಲದೆ ಖುಸ್ರುವಿನ ಯೋಗ್ಯ ಸಂರಕ್ಷಣದ ಉಪಾಯವನ್ನು ಯೋಚಿಸುವದಕ್ಕಾಗಿ ನಾನು ಬೇಗನೆ ಬಾದಶಹರ ಬಳಿಗೆ ಫತ್ತೇಪುರಸಿಕ್ರಿಗೆ ಹೋಗುವೆನು. ಖುಸ್ರುವು ಉಚ್ಛೃಂಖಲನೂ, ಉದ್ಧಟನೂ, ಅಸಹಿಷ್ಣುವೂ ಇರುವದರಿಂದ ಅವನ ಮೇಲೆ ನೀನು ಯಾವಾಗಲೂ ಕಣ್ಣಿಡು. ಭಗವಾನ ಏಕಲಿಂಗಜಿಯು ನಿನ್ನ ಕಲ್ಯಾಣ ಮಾಡುವನು.''

ಈ ಮೇರೆಗೆ ಅಣ್ಣನ ಒಪ್ಪಿಗೆಯು ದೊರೆತ ಕೂಡಲೆ, ಇನ್ನು ಹೆಚ್ಚು ತರ್ಕವಿತರ್ಕಗಳು ಕೆಲಸದಲ್ಲವೆಂದು ತಿಳಿದು ಜೋಧಬಾಯಿಯು ತನ್ನ ಅಣ್ಣನಿಗೆ—ಅಣ್ಣಾ, ಹಾಗಾದರೆ ನಿನ್ನ ಸೈನಿಕರಿಗೆ ಬೇಗನೆ ಸಿದ್ಧರಾಗಲು ಆಜ್ಞಾಪಿಸು. ಇನ್ನು ಮೇಲೆ ನಾನು ಏನು ಮಾಡುವದಾದರೂ ನಿನ್ನನ್ನು ಕೇಳಿಯೇ ಮಾಡುವೆನು. ನಾನು ರಾಜಧಾನಿಗೆ ಹೋದಬಳಿಕ ಏನಾದರೂ ಹೆಚ್ಚು ಕಡಿಮೆ ಪ್ರಸಂಗವು ಒದಗಿದರೆ, ಅಥವಾ ಹಿತವಿಘಾತಕ ಸಂಗತಿಯೊದಗಿದರೆ ಕೂಡಲೆ ನಿನ್ನ ಕಡೆಗೆ ರಾವುತರನ್ನು ಕಳಿಸಿ ತಿಳಿಸುವೆನು. ಎಂದು ಹೇಳಿದಳು. ಬಳಿಕ ಹಿತಾಹಿತಗಳನ್ನು ಕುರಿತು ಹಲವು ಸಂಗತಿಗಳನ್ನು ಕುರಿತು ಆ ಅಣ್ಣ-ತಂಗಿಯರು ಮಾತನಾಡಿದರು. ಮರುದಿನ ಬೆಳಗಾಗುತ್ತಲೆ ಬಾದಶಾಹಿಯ ರೀವಿಗೆ ಒಪ್ಪುವ ಮುಖಮಲಿಯ ಸಿಬಿಕೆಯಲ್ಲಿ ಕುಳಿತು ಜೋಧಬಾಯಿಯು ತನ್ನ ಹೃದಯೇಶ್ವರನನ್ನು ಕಾಣುವದಕ್ಕಾಗಿ ಹೊರಟಳು; ಖುಸ್ರುವು ಮೊಗಲ-ರಜಪೂತ ಸೈನ್ಯಗಳ ಮುಖ್ಯನಾಗಿ ತನ್ನ ಬೆಟ್ಟದಂಥ ಕುದುರೆಯನ್ನೇರಿ ತಾಯಿಯ ಸಿಬಿಕೆಯನ್ನು ರಕ್ಷಿಸುತ್ತ ಸಾಗಿದನು.

ಸದ್ಗುಣ-ವಿಜಯ

ಈ ಮೇರೆಗೆ ಜೋಧಬಾಯಿಯು ತನ್ನ ಒಬ್ಬನೇ ಒಬ್ಬ ಮಗನಾದ ಖುಸ್ರುವಿನೊಡನೆ ಅಲಹಾಬಾದಕ್ಕೆ ಸಾಗಿದಳು. ಸೇಲೀಮನು ತನ್ನ ಹೆಂಡತಿಯನ್ನು ಕುರಿತು—''ನೀವಿಬ್ಬರೂ ಮೊದಲು ಅಜಮೀರಕ್ಕೆ ಹೋಗಿ ಅಲ್ಲಿ ಆರೇಳು ದಿನ ಇದ್ದು ಒಂದುವಾರ ವಿಶ್ರಾಂತಿಯನ್ನು ಪಡೆದು ಆಮೇಲೆ ಅಲಹಾಬಾದಕ್ಕೆ ತನ್ನ ಬಳಿಗೆ ಬರಬೇಕೆಂದು'' ಆಜ್ಞಾಪಿಸಿದ್ದನು; ಆದರೆ ಸಿಬಿಕೆಯಲ್ಲಿ ಕುಳಿತುಕೊಳ್ಳುವಾಗ ಜೋಧಬಾಯಿಯು ಮಗನನ್ನು ಒತ್ತಟ್ಟಿಗೆ ಕರೆದು—''ನೀನು ನನ್ನ ಸಂಗಡ ಅಜಮೀರಕ್ಕೆ ಬರುವ ಕಾರಣವಿಲ್ಲ, ನೀನು ಕೂಡಲೆ ಅಲಹಾಬಾದಕ್ಕೆ ಹೋದರೆ ನಿನ್ನ ಹಿರಿಯರಿಗೆ ಸಂತೋಷವಾಗುವದರಿಂದ ನೀನು ಈಗ ಅತ್ತಕಡೆಯ ಹಾದಿಯನ್ನು ಹಿಡಿ. ನಮ್ಮ ಸಂಗಡ ಬಂದಿರುವ ರಜಪೂತ ಸೈನ್ಯದ ಮುಖ್ಯನಾದ ಕೃಪಾಲಸಿಂಹನು ನನ್ನ ಸಂರಕ್ಷಕನಾಗಿ ಬರುವನು.'' ಎಂದು ಹೇಳಿದಳು; ಆದ್ದರಿಂದ ತಾಯಿಮಕ್ಕಳಿಬ್ಬರು ಅಂಬರ ರಾಜಧಾನಿಯಿಂದ

ಹೊರಟರೂ, ಕೆಲ ಹಾದಿಯನ್ನು ನಡೆದು ಹೋದಬಳಿಕ ಅವರಿಬ್ಬರ ಹಾದಿಗಳು ಬೇರೆ ಬೇರೆಯಾದವು. ಖುಸ್ರುವು ತಾಯಿಯ ಅಪ್ಪಣೆಯಂತೆ ತನ್ನ ಸಂಗಡ ಬಲಿಷ್ಠರಾದ ಐವತ್ತೇಜನ ರಜಪೂತ ಸಿಪಾಯಿಗಳನ್ನು ಕರಕೊಂಡು, ಅಲಹಾಬಾದದ ಹಾದಿಯನ್ನು ಹಿಡಿದನು. ಜೋಧಬಾಯಿಯು ಕೃಪಾಲಸಿಂಹನಿಂದ ಸಂರಕ್ಷಿತಳಾಗಿ ಅಜಮೀರದ ಹಾದಿಯನ್ನು ಹಿಡಿದಳು. ಹೀಗೆ ತಾಯಿ–ಮಕ್ಕಳಿಬ್ಬರೂ ಬೇರೆ ಬೇರೆಯಾಗಿ ಸಾಗಿದ್ದೇ ಅನರ್ಥಕ್ಕೆ ಕಾರಣವಾಯಿತೆಂದು ಹೇಳಬಹುದು. ಕಾಲಕ್ಕನುಸರಿಸಿ ಆಗುವದನ್ನು ತಪ್ಪಿಸುವದು ಯಾರಿಂದಲೂ ಆಗುವದಿಲ್ಲ.

ಖುಸ್ರುವು ಕೆಲವು ಹಾದಿಯನ್ನು ನಡೆದು ಹೋದ ಬಳಿಕ ಆತನಿಗೊಂದು ಗುಡ್ಡಗಾಡು ಪ್ರದೇಶವು ಹತ್ತಿತು. ಈ ಪ್ರದೇಶವು ಅರವಲೀ ಪರ್ವತದ ಸಾಲಿನಿಂದ ವ್ಯಾಪ್ತವಾಗಿದ್ದು, ಅದರಲ್ಲಿ ಗಿಡಗಳು ದಟ್ಟವಾಗಿ ಬೆಳೆದಿದ್ದವು. ಅಂಬರ ರಾಜಧಾನಿಯಿಂದ ಏಳು ಹರದಾರಿಯ ಮೇಲಿದ್ದ ಈ ಪರ್ವತದ ಪ್ರದೇಶವು ನಿರ್ಜನವಾಗಿದ್ದರೂ ಬಹು ರಮ್ಯವಾಗಿತ್ತು. ಮದ್ಯಾಹ್ನದ ತೀಕ್ಷ್ಣ ಬಿಸಿಲಿನ ಸಹನವಾಗದೆ ಖುಸ್ರುವು ತನ್ನ ಕೈಕೆಳಗಿನ ಒಬ್ಬ ರಾವುತನನ್ನು ಕುರಿತು—''ಹಿಮ್ಮತಸಿಂಹ, ನೀವು ಯಾವತ್ತು ಸೈನಿಕರೊಡನೆ ಇಲ್ಲಿ ಎರಡುಗಳಿಗೆ ವಿಶ್ರಾಂತಿ ಪಡೆಯಿರಿ. ಅಲ್ಲಿಯವರೆಗೆ ನಾನು ಅತ್ತಕಡೆಯ ಆ ಇಳಕಲ ಮೇಲೆ ಕುಳಿತು ಸತ್ತು ಮುತ್ತಲಿನ ಶೋಭೆಯನ್ನು ನೋಡುವೆನು.'' ಎಂದು ಹೇಳಿದನು. ಹಿಮ್ಮತಸಿಂಗನಿಗೂ ಅಷ್ಟೇ ಬೇಕಾಗಿತ್ತು, ಕೂಡಲೆ ಆತನು ಕುದುರೆಯಿಂದ ಕೆಳಗೆ ಜಿಗಿದು, ಉಳಿದವರಿಗೂ ಕುದುರೆಯಿಂದ ಇಳಿಯ ಹೇಳಿದನು. ಅತ್ತ ಖುಸ್ರುವು ಆ ದಟ್ಟವಾದ ಗಿಡಗಳ ಅಡವಿಯಕಡೆಗೆ ಹೊರಟುಹೋದನು. ಬಹಳವಾಗಿ ದಣಿದಿದ್ದ ಅವನ ಹಾಗು ಅವನ ಕುದುರೆಯ ಮೈಯೊಳಗಿಂದ ಒಂದೇಸವನೆ ಬೆವರು ಸುರಿಯುತ್ತಿತ್ತು. ಸೂರ್ಯನ ಪ್ರಖರ ಕಿರಣಗಳ ತಾಪದಿಂದ ಅವನ ಮೋರೆಯು ಕೆಂಪಾಗಿ ಆತನಿಗೆ ಅತ್ಯಂತ ತಾಪವಾಗಿತ್ತು; ಅದರಿಂದ ಆ ತರುಣ ರಾಜಪುತ್ರನಿಗೆ ವಿಶ್ರಾಂತಿಯು ಅವಶ್ಯವಾಗಿ ಬೇಕಾಗಿತ್ತು. ಖುಸ್ರುವು ಕುದುರೆಯನ್ನು ಒಂದು ಗಿಡಕ್ಕೆ ಕಟ್ಟಿ, ತಾನು ಅದೇ ಗಿಡದ ದಟ್ಟವಾದ ನೆಳಲಲ್ಲಿ ವಿಶ್ರಮಿಸತೊಡಗಿದನು. ಬರಿಯ ಹುಲ್ಲಿನ ಮೇಲೆ ಹೇಗೆ ಕುಳಿತುಕೊಳ್ಳಲೆಂಬ ವಿಚಾರವೂ ಆಗ ಆತನ ಮನಸ್ಸಿನಲ್ಲಿ ಬರಲಿಲ್ಲ. ಗಿರಿನದಿಯ ತಂಗಾಳಿಯ ಸುಳಿದಾಟದಿಂದ ಆತನ ಮೈಬೆವರು ಸ್ವಲ್ಪ ಹೊತ್ತಿನಲ್ಲಿಯೇ ಆರಿ ಬಹುಮಟ್ಟಿಗೆ ಆತನ ಶ್ರಮದ ಪರಿಹಾರವಾಯಿತು.

ಹೀಗೆ ಖುಸ್ರುವು ವಿಶ್ರಮಿಸುತ್ತಿರುವಾಗ ಬಹು ದೂರದಿಂದ ಗಾಯನದ ಮಂಜುಲ ಧ್ವನಿಯು ಆತನಿಗೆ ಕೇಳಿಸತೊಡಗಿತು. ಆ ಮನೋಹರ ಗಾಯನ ಧ್ವನಿಯ ಶ್ರವಣದಿಂದ ಖುಸ್ರುವಿನ ಮಾರ್ಗಾಯಾಸವು ಹೇಳ ಹೆಸರಿಲ್ಲದಾಯಿತು. ಆ ಗಾನ ಲುಬ್ಧನು ಒಂದೇಸವನೆ ಕಿವಿಗೊಟ್ಟು ಗಾಯನವನ್ನು ಕೇಳತೊಡಗಿದನು. ಆ ಗಾಯನದ ಮಧುರ ಧ್ವನಿಯು ಯಾವಳೋ ಒಬ್ಬ ರಮಣಿಯದೆಂದು ಆತನು ತರ್ಕಿಸಿದನು. ಗಾಯನವೇ ಇಷ್ಟು ಮನೋಹರವಿದ್ದ ಬಳಿಕ ಆ ಸ್ತ್ರೀಯ ಸೌಂದರ್ಯವು ಎಷ್ಟು ಮನೋಹರವಿರಬಹುದೋ ಎಂದು ಆ ರಾಜಪುತ್ರನು ಅನುಮಾನಿಸತೊಡಗಿದನು. ತನ್ನ ರಂಗಮಹಾಲಿನಲ್ಲಿ ಹಲವು ಗಾಯಕಿಯರ ಗಾಯನವನ್ನು ಖುಸ್ರುವು ಕೇಳಿದವನಾಗಿದ್ದರೂ, ಇಷ್ಟು ಸುಖನಾದವು ಆತನ ಕಿವಿಗೆ ಈವರೆಗೆ ಎಂದೂ

ಬಿದ್ದಿದ್ದಿಲ್ಲ. ಈ ಗಾಯನವು ಮನುಷ್ಯ ಪ್ರಾಣಿಯದಾಗಿರದೆ ವನದೇವತೆಯದಾಗಿರಬಹುದೆಂತಲೂ, ಇಂಥ ರಮ್ಯ ಗಾಯನದ ಸುಂದರ ಸ್ತ್ರೀಮೂರ್ತಿಯು ತನ್ನ ಕಣ್ಣಿಗೆ ಬೀಳುವದು ಮಹದ್ಭಾಗ್ಯವೆಂತಲೂ ಆತನು ನೆನೆಸತೊಡಗಿದನು. ಕುಳಿತಲ್ಲಿ ಕುಳಿತುಕೊಳ್ಳಲಾರದೆ ಆತನು ಗಾಯನ ಧ್ವನಿಯು ಕೇಳಬರುವ ದಿಕ್ಕಿನ ಕಡೆಗೆ ಸಾಗಿ, ಮಂತ್ರಾಕರ್ಷಿತವಾದ ಸರ್ಪದಂತೆ ಆನಂದದಿಂದ ತಲೆದೂಗುತ್ತ ಅರಣ್ಯದಲ್ಲಿ ತಿರುಗಾಡಹತ್ತಿದನು. ಬರಬರುತ್ತ ಆತನಿಗೆ ಗಾಯನವು ಸ್ಪಷ್ಟವಾಗಿ ಕೇಳಿಸತೊಡಗಿದ್ದರಿಂದ, ಯಾವಳೋ ಒಬ್ಬ ವಿರಹಿಣಿ ಸ್ತ್ರೀಯು ತನ್ನ ಪುರುಷನನ್ನುದ್ದೇಶಿಸಿ ಗಾಯನ ಮಾಡುವಳೆಂಬದು ಆತನಿಗೆ ಸ್ಪಷ್ಟ ಗೊತ್ತಾಯಿತು. ಗಾಯನದೊಳಗಿನ ಕರುಣಾರಸದಿಂದ ಖುಸ್ರುವಿನ ಹೃದಯವು ಕರಗಿ ಹೋಗಿ, ತಾನು ಆ ವಿರಹಿಣಿಯನ್ನು ಯಾವಾಗ ಕಂಡೇನೆಂದು ಆತನು ಆತುರ ಪಡಹತ್ತಿದನು. ಅಷ್ಟರಲ್ಲಿ ಗಾಯನ ಧ್ವನಿಯು ಅಕಸ್ಮಾತ್ತಾಗಿ ನಿಂತು ಹೋಗಿ, ಖುಸ್ರುವು ಬೆರಗಾಗಿ ಅತ್ತಿತ್ತ ನೋಡುತ್ತಿರಲು, ಗಿಡಗಳ ಗುಂಪಿನೊಳಗಿಂದ ಬರುತ್ತಿರುವ ಒಬ್ಬ ಅಲಂಕಾರ ರಹಿತಳಾದ ಸುಂದರ ತಪಸ್ವಿನಿಯು ಆತನ ಕಣ್ಣಿಗೆ ಬಿದ್ದಳು.

ಖುಸ್ರುವು ಆ ಸುಂದರ ತರುಣ ತಪಸ್ವಿನಿಯನ್ನು ಕೂಡಲೆ ಗುರುತಿಸಿದನು. ಈ ಮೊದಲೆ ಗುಹೆಯಲ್ಲಿ ಆತನನ್ನು ಮರುಳುಮಾಡಿದ್ದ ಮಂದಾಕಿನಿಯೇ ಆಕೆಯಾಗಿದ್ದಳು; ಆದರೆ ಮಂದಾಕಿನಿಯ ಆಗಿನ ಉಡಿಗೆ–ತೊಡಗೆಗಳು ಮಾತ್ರ ಈಗ ಇದ್ದಿಲ್ಲ. ಈಗ ಆಕೆಯು ಸರ್ವಾಂಗಕ್ಕೆ ಭಸ್ಮವನ್ನು ಹಚ್ಚಿಕೊಂಡಿದ್ದಳು. ಹಣೆಯ ಮೇಲಿನ ಕುಂಕುಮದಿಂದ ಆಕೆಯ ತಾಪಸೀ ಸೌಂದರ್ಯವು ಉಕ್ಕಿ ಬರುತ್ತಿತ್ತು; ಅದರಂತೆ ವೀರೋಚಿತವಾದ ಅಭಿಮಾನದ ತೇಜಸ್ಸು ಆಕೆಯ ಕಣ್ಣುಗಳಲ್ಲಿ ಹೊಳೆಯುತ್ತಿತ್ತು. ಆಕೆಯ ನೀಲಾಲಕಗಳು ಬೆನ್ನ ಮೇಲೆ ಹರವಿದ್ದು, ಅವುಗಳ ಒಂದೆರಡು ಎಸಳುಗಳು ಗಲ್ಲಗಳ ಮೇಲೆ ಅಲೆದಾಡುತ್ತಿದ್ದವು. ಆಕೆಯ ಗಲ್ಲಗಳ ನಸುಗೆಂಪು, ಮುಖದ ಸೌಂದರ್ಯವನ್ನು ಹಚ್ಚಿಸುತ್ತಲಿತ್ತು, ಆ ಸುಂದರ ಮಂದಾಕಿನಿಯ ಕುಡಿ ಹುಬ್ಬುಗಳ ಸೊಬಗನ್ನಂತು ಬಣ್ಣಿಸಲಳವಲ್ಲ, ನೋಡುವವರ ದೃಷ್ಟಿಗಳು ಆ ಕುಡಿ ಹುಬ್ಬುಗಳಲ್ಲಿ ನಟ್ಟು ಹೋಗುತ್ತಿದ್ದವು. ಖುಸ್ರುವಂತು ಆ ಮನೋಹರ ಮಂದಾಕಿನಿಯನ್ನು ಎವೆಯಿಕ್ಕದೆ ನೋಡುತ್ತ ನಿಂತುಬಿಟ್ಟನು. ಆ ಮಂದಾಕಿನಿಯು ಮುಗುಳು ನಗೆಯಿಂದ ಖುಸ್ರುವನ್ನು ಕುರಿತು –

ಮಂದಾಕಿನಿ—ನನ್ನನ್ನು ಹೀಗೆ ಎವೆಯಿಕ್ಕದೆ ಏಕೆ ನೋಡುವಿರಿ ಕುಮಾರ!

ಖುಸ್ರು—ಮಂದಾಕಿನಿ, ಏಕೆ ನೋಡುವೆಯೆಂದು ಕೇಳುವೆಯಾ? ನಿನ್ನ ಈ ವಿಶ್ವ ಮೋಹಿನೀ ಸೌಂದರ್ಯವನ್ನು ಎವೆಯಿಕ್ಕದೆ ಯಾರು ನೋಡಲಿಕ್ಕಿಲ್ಲ ಹೇಳು? ಅಚ್ಚ ಕರಿಗುಡ್ಡೆಯ ಈ ವಿಶಾಲನೇತ್ರಗಳು, ತೊಂಡೆಯ ಹಣ್ಣಿಂಥ ಸುಂದರವಾದ ಈ ಕೆಂದುಟಿಗಳು ಯಾರ ದೃಷ್ಟಿಗಳನ್ನಾದರೂ ಆಕರ್ಷಿಸಿಯೇ ಆಕರ್ಷಿಸುವವು. ಮಂದಾಕಿನಿ, ನೀನು ನಿನ್ನ ಈ ಅನಿಂದ್ಯವಾದ ರೂಪರಾಶಿಯಿಂದ ಆ ಗುಹೆಯಲ್ಲಿ ನನ್ನನ್ನು ಮೊದಲೇ ಮರುಳನಾಗಿ ಮಾಡಿರಲು, ಹೀಗೆ ಪ್ರಶ್ನಮಾಡುವದು ನಿನಗೆ ಶೋಭಿಸುವದೋ? ಆ ದಿನದ ನೆನಪು ಮರೆಯಲಿಕ್ಕೆ ಪ್ರಯತ್ನ ಮಾಡುತ್ತಿರುವ ನನ್ನ ಕಣ್ಣಿಗೆ ಈ ದಿನ ಪುನಃ ನೀನು ಬಿದ್ದು, ನನ್ನನ್ನು ಮತ್ತೆ ಹೀಗೆ ಮರುಳು ಮಾಡಿದೆಯಲ್ಲ! ನನಗೆ ಹೀಗೆ ತಾಪವನ್ನುಂಟುಮಾಡಿ ಪುನಃ ಪುನಃ ಹೀಗೆ ಕಠೋರ

ಪ್ರಶ್ನಮಾಡುವದು ನಿನಗೆ ಒಳ್ಳೇ ಚಕ್ಕಂದವಾಗಿರುವ ಹಾಗೆ ತೋರುತ್ತದೆ! ನಿನ್ನ ಸ್ವರ್ಗೀಯ ಸೌಂದರ್ಯವನ್ನು ನೋಡಿ, ನಿನ್ನ ಹೃದಯವು ಬಹು ಕೋಮಲವಾಗಿರಬಹುದೆಂದು ತರ್ಕಿಸಿದ್ದೆನು; ಆದರೆ ಸಾಮ್ರಾಟ ಅಕಬರನ ಮೊಮ್ಮಗನಾದ ನನ್ನನ್ನು ಹೀಗೆ ಕುಣಿಸುವದು ನಿನಗೆ ಆಟವಾಗಿ ಹೋಗಿದೆ!

ಖುಸ್ರುವಿನ ಈ ಮಾತುಗಳನ್ನು ಕೇಳಿ ಮಂದಾಕಿನಿಯು ಒಬ್ಬ ಉನ್ಮಾದಿನಿಯಂತೆ ಅಟ್ಟ ಹಾಸದಿಂದ ಗಹಗಹಿಸಿ ನಕ್ಕಳು. ಆಕೆಯ ಆ ವಿಚಿತ್ರವಾದ ನಗೆಯನ್ನು ನೋಡಿ ಖುಸ್ರುವು ಆಶ್ಚರ್ಯ ಪಟ್ಟು ಮನಸ್ಸಿನಲ್ಲಿ—''ಈ ಮಂದಾಕಿನಿಯು ಯಾರಾಗಿರಬಹುದು? ಆಕೆಯು ಒಬ್ಬ ಹುಚ್ಚಿಯಾಗಲಿ, ಮಾಯಾವೀ ಸ್ತ್ರೀಯಾಗಲಿ ಆಗಿರಲಿಕ್ಕಿಲ್ಲವಷ್ಟೇ? ನಾನು ಅತ್ಯಂತ ಕನಿಕರದಿಂದ ಮನಃಪೂರ್ವಕ ಮಾತಾಡುತ್ತಿರಲು, ಕಗ್ಗ ಸ್ತ್ರೀಯಂತೆ ಈಕೆ ಹೀಗೆ ಯಾಕೆ ನಕ್ಕಿರಬಹುದು?'' ಎಂದು ಯೋಚಿಸುವಾಗ ಆ ರಾಜಕುಮಾರನಿಗೆ ಆಕೆಯ ಕೃತಿಯ ವಿಷಯವಾಗಿ ಸ್ವಲ್ಪ ಸಿಟ್ಟು ಬಂದಿತು. ಆತನು ಕಿಂಚಿತ್ ತೀವ್ರವಾದ ಸ್ವರದಿಂದ ಮಂದಾಕಿನಿಯನ್ನು ಕುರಿತು–

ಖುಸ್ರು—ಮಂದಾಕಿನೀ, ನೀನು ಇಷ್ಟು ಗಟ್ಟಿಯಾಗಿ ಯಾಕೆ ನಕ್ಕೆ?

ಮಂದಾಕಿನಿ—ಜನಾಬ ಅಲ್ಲಿ! ತಮ್ಮ ಈ ಪರಿಸ್ಥಿತಿಯನ್ನು ನೋಡಿ ಯಾರಿಗೆ ನಗೆ ಬರಲಿಕ್ಕಿಲ್ಲ? ಒಬ್ಬ ಸಾಮಾನ್ಯಳಾದ ಹುಚ್ಚ ಭಿಕ್ಷುಕಿಯ ಸಲುವಾಗಿ ದಿಲ್ಲೀಶ್ವರನ ಮೊಮ್ಮಗನು, ಇಷ್ಟು ತನ್ಮಯನೂ, ಹುಚ್ಚನೂ ಆಗುವದು ನಿಜವಾಗಿ ನಗೆಗೇಡಲ್ಲವೆ?

ಖುಸ್ರು—ಮಂದಾಕಿನೀ, ನೀನು ಸಾಮಾನ್ಯ ಭಿಕ್ಷುಕಿಯಾಗಿದ್ದರೆ ನಾನು ನಿನಗೆ ಮರುಳೇ ಆಗುತ್ತಿದ್ದಿಲ್ಲ, ಮೊಗಲ ಬಾದಶಹನ ಜನಾನಖಾನೆಯಲ್ಲಿ ಸುಂದರ ಸ್ತ್ರೀಯರಿಗೆ ಕೊರತೆಯಿಲ್ಲದಿದ್ದು ಅಂಥ ಆ ಮೊಗಲ ರಾಜಕುಮಾರನು ನಿನಗೆ ಮರುಳಾಗಿರುವದನ್ನು ನೀನು ಮನಸ್ಸಿನಲ್ಲಿ ತಂದು ನಿನ್ನ ಘನವಾದ ಯೋಗ್ಯತೆಯನ್ನು ತರ್ಕಿಸಿಕೊಳ್ಳು! ನೀನು ಭಿಕ್ಷುಕಿಯಾಗಿಯೂ ಇಷ್ಟು ಘನವಾದ ಯೋಗ್ಯತೆಯನ್ನು ಪಡೆದಿರುವದು ಅಪೂರ್ವವಾಗಿರುವಲ್ಲಿ ಸಂಶಯವಿಲ್ಲ. ಎಲೈ ಕಠೋರ ಹೃದಯದ ತರುಣ ಸ್ತ್ರೀಯೇ, ನಾನು ಮರುಳಾದದ್ದರ ಕಾರಣವು ನಿನಗೆ ಗೊತ್ತಿದ್ದು ನೀನು ಹೀಗೆ ನನ್ನ ಅವಹೇಳನ ಮಾಡುವದು ಯೋಗ್ಯವಾಗಬಹುದೋ?

ಮಂದಾಕಿನಿ—ಕುಮಾರ, ವ್ಯರ್ಥಮಾತುಗಳಿಂದ ಪ್ರಯೋಜನವೇನು? ನಿಮ್ಮ ಮನಸ್ಸಿನಲ್ಲಿದ್ದದ್ದನ್ನು ಬಿಚ್ಚಿ ಹೇಳಿಬಿಡಿರಿ.

ಖುಸ್ರು—ನಿನ್ನ ಲಗ್ನವಾಗಬೇಕೆಂದು ನನ್ನ ಮನಸ್ಸಿನಲ್ಲಿರುತ್ತದೆ.

ಮಂದಾಕಿನಿ—ನಾನು ದುರ್ಜಯಸಿಂಹನ ಪತ್ನಿಯಿರುವೆನೆಂದು ಹಿಂದಕ್ಕೆ ಸೂಚಿಸಿದ್ದನ್ನು ನೀವು ಮರೆತಿರೋ? ಒಬ್ಬ ರಜಪೂತ ವೀರನ ಪತ್ನಿಯು ಬಾದಶಹನ ಮೊಮ್ಮಗನ ವಿಲಾಸಿನಿಯಾಗಿ ಆತನ ರಾಣೀವಾಸದಲ್ಲಿ ವಿಲಾಸವನ್ನು ಭೋಗಿಸುತ್ತ ತನ್ನ ವ್ಯಭಿಚಾರದ ಪಾತಕವನ್ನು ಜಗತ್ತಿನಲ್ಲಿ ಮೆರಿಸಬಹುದೆಂಬ ಮಾತು ತಮ್ಮ ಮನಸ್ಸಿನಲ್ಲಾದರೂ ಹೇಗೆ ಬರುತ್ತದೆ ಹುಜೂರ!

ಖುಸ್ರು—ಹಾಗಾದರೆ ಈ ಯೋಗಿನಿಯ ವೇಷದಿಂದ ನೀನು ಎತ್ತ ಹೊರಟಿದ್ದೆ?

ಮಂದಾಕಿನಿ—ನಿಮ್ಮನ್ನು ಹುಡುಕುತ್ತ ಈ ವನದಲ್ಲಿ ಸಂಚರಿಸುತ್ತಿದ್ದೆನು.

ಖುಸ್ರು—(ಆಶ್ಚರ್ಯದಿಂದ) ಏನಂದಿ? ನನ್ನನ್ನು ಹುಡುಕುತ್ತಿದ್ದೆಯಾ? ಹಾಗಾದರೆ ಆಗಲೇ ನೀನು ಅಂದ ಪದ್ಯವು ಯಾರಸಲುವಾಗಿ?

ಮಂದಾಕಿನಿ— ನಿಮ್ಮ ಸಲುವಾಗಿಯೇ. ನಾನು ಎಂದೂ ಸುಳ್ಳುಮಾತಾಡಿ ಒಬ್ಬರನ್ನು ಮೋಸಗೊಳಿಸುವವಳಲ್ಲ.

ಖುಸ್ರು—ನನ್ನ ಮೇಲೆ ನಿನ್ನ ಪ್ರೇಮವಿರುವುದೋ ಹೇಗೆ ಹೇಳು. ನನ್ನನ್ನು ವಿಚಾರದ ಗೊಂದಲಕ್ಕೆ ಈಡು ಮಾಡಬೇಡ.

ಮಂದಾಕಿನಿ—ಶತ್ರುವಿನ ಮೇಲೆ ಎಂದಾದರೂ ಯಾರಾದರೂ ಪ್ರೇಮ ಮಾಡುವರೆಯೆ? ಕುಮಾರ, ನೀವು ನನ್ನ ಶತ್ರುಗಳಿರುವಿರಿ.

ಖುಸ್ರು —ನಾನು ನಿನ್ನ ಶತ್ರುವು ಹೇಗೆ?

ಮಂದಾಕಿನಿ—ಶಹಾಜಾದೇ ಸಾಹೇಬ, ನಿಮ್ಮ ಯೋಗದಿಂದಲೇ ನನ್ನ ಹೃದಯೇಶ್ವರ ನಾದ ದುರ್ಜಯಸಿಂಹನು ಜನ್ಮಭೂಮಿಯನ್ನು ಬಿಟ್ಟು ಹೋಗಬೇಕಾಯಿತೆಂಬದು ನಿಮಗೆ ಗೊತ್ತಿಲ್ಲವೆ? ಕದಾಚಿತ್ ಈಗ ನನ್ನ ಪ್ರಾಣೇಶ್ವರನು ಕಾರಾಗೃಹದ ದುಃಖವನ್ನಾದರೂ ಭೋಗಿಸು ತ್ತಿರಬಹುದು. ನಿಮ್ಮನ್ನು ಕೊಲ್ಲಲು ಉದ್ಯೋಗಿಸಿದ ಅಪರಾಧಕ್ಕಾಗಿಯೇ ಮಾನಸಿಂಹ ಮಹಾ ರಾಜರು ನನ್ನ ಪತಿಗೆ ಈ ಶಿಕ್ಷೆಯನ್ನು ವಿಧಿಸಲಿಲ್ಲವೆ?

ಖುಸ್ರು—(ಖಿನ್ನ ಸ್ವರದಿಂದ) ಹೌದು, ಇದಕ್ಕಾಗಿ ನನಗೆ ಬಹಳ ವ್ಯಸನವಾಗುತ್ತದೆ. ಮಂದಾಕಿನೀ, ನಾನೇನು ಮಾಡಲಿ? ಮಾನಸಿಂಹರವರು ವಿಧಿಸಿದ ನ್ಯಾಯದಲ್ಲಿ ನಾನು ಕೈಹಾಕ ಲಾರೆನು. ಬೇರೆ ವಿಧದ ಸಹಾಯವು ನನ್ನಿಂದ ನಿನಗೆ ಆಗುವ ಹಾಗಿದ್ದರೆ ಹೇಳು, ನಾನು ಸಂತೋಷದಿಂದ ಮಾಡುವೆನು. ಮಂದಾಕಿನೀ, ಮಾನಸಿಂಹರಿಗೆ ಗೊತ್ತಾಗದಂತೆ ದುರ್ಜಯ ಸಿಂಹನು ಬಂಧಮುಕ್ತನಾಗುವದೊಂದು ಯುಕ್ತಿಯಿದ್ದರೆ ಹೇಳಬಾರದೇ?

ಖುಸ್ರುವಿನ ಈ ಮಾತುಗಳನ್ನು ಕೇಳಿ ಮಂದಾಕಿನಿಯು ಸ್ವಲ್ಪಹೊತ್ತು ವಿಚಾರಮಾಡಿ ಪುನಃ ಖುಸ್ರುವನ್ನು ಕುರಿತು –

ಮಂದಾಕಿನಿ—ಹೇಳುವೆನು, ಕುಮಾರ, ಅಂತಹದೊಂದು ಯುಕ್ತಿಯನ್ನು ಹೇಳುವೆನು. ನಿಮ್ಮ ಬೆರಳಿನೊಳಗಿನ ನಿಮ್ಮ ಹೆಸರಿನ ಉಂಗುರವನ್ನು ನನಗೆ ಕೊಡಿರಿ. ದುರ್ಜಯಸಿಂಹನು ಅಂಬರ ರಾಜಧಾನಿಯಿಂದ ಮೂರು ಹರದಾರಿಯ ಮೇಲಿರುವ ರತನಗಡದೊಳಗಿನ ಕಾರಾಗೃಹದಲ್ಲಿರುವನೆಂದು ನಾನು ಕೇಳಿದ್ದೇನೆ. ಇಲ್ಲಿಂದ ಆ ರತನಗಡವು ಒಂದೇ ಹರದಾರಿಯಿರುವದು. ನಿಮ್ಮ ಉಂಗುರದ ಸಹಾಯದಿಂದ ನನ್ನ ಸೌಭಾಗ್ಯದೇವತೆಯನ್ನು ಇಂದೇ ನಾನು ಕಾರಾಗೃಹದಿಂದ ಮುಕ್ತಮಾಡುವೆನು.

ಖುಸ್ರು—ಹಾ! ನಿನ್ನ ಉದ್ದೇಶವು ಈಗ ತಿಳಿಯಿತು. ಆದರೆ ಮಂದಾಕಿನೀ, ನಾನು ಇಲ್ಲಿಗೆ ಬರುವೆನೆಂಬದು ನಿನಗೆ ಹೇಗೆ ಗೊತ್ತಾಯಿತು? ಮತ್ತು ತರುಣಿಯಾದ ನೀನು ಏಕಾಂತದಲ್ಲಿ ಒಬ್ಬಳೇ ನನ್ನನ್ನು ಕಾಣಲಿಕ್ಕೆ ಹೇಗೆ ಧೈರ್ಯ ಮಾಡಿದೆ?

ಮಂದಾಕಿನಿ—ಶಹಾಜಾದೇ ಸಾಹೇಬ. ತಮ್ಮಿಂದ ಕಾರ್ಯವ ಸಾಧಿಸಲು ಹವಣಿಸುತ್ತಿದ್ದ ನಾನು ಏನಾದರೂ ಮಾಡಿ ಈಗ ತಮ್ಮ ಬಳಿಗೆ ಬಂದಿರುವೆನೆಂಬದಂತು ನಿಜವು; ಅದರಂತೆ ತಮ್ಮಂಥ ಉದಾರ ವೃತ್ತಿಯ ರಾಜಪುತ್ರರನ್ನು, ಅದರಲ್ಲಿ ಅಕಬರ ಬಾದಶಹರ ಮೊಮ್ಮಕ್ಕಳನ್ನು ಏಕಾಂತದಲ್ಲಿ ಕಾಣಲಿಕ್ಕೆ ಭಯವಾದರೂ ಏನು? ಕ್ಷುದ್ರ ವೃತ್ತಿಯ ನೀಚರ ನೆರಳಿಗೆ ನಿಲ್ಲುವಾಗ ಮಾತ್ರ ನಮ್ಮಂಥ ತರುಣಿಯರು ಭಯಗೊಳ್ಳಬೇಕಾಗುವದು. ಕುಮಾರ, ರಜಪೂತ ಸ್ತ್ರೀಯರು ತಮ್ಮ ಪಾತಿವ್ರತ್ಯ ರಕ್ಷಣದ ಉಪಾಯವನ್ನು ಮಾಡಿಕೊಳ್ಳದೆ ಹೊರಬೀಳರೆಂಬದು ತಮಗೆ ಗೊತ್ತಿರಬಹುದಲ್ಲವೆ?

ಖುಸ್ರು—ಅದು ಏನೇ ಇರಲಿ; ಮಂದಾಕಿನೀ, ನಾನು ನಿನಗೆ ಈ ಪರಿ ಉಪಕಾರ ಮಾಡಿದಾಗ ನೀನು ನನಗೆ ಮಾಡುವ ಪ್ರತ್ಯುಪಕಾರವೇನು?

ಮಂದಾಕಿನಿ—ಸಾಮ್ರಾಟರ ವಂಶಜರು ಪ್ರತ್ಯುಪಕಾರದ ಆಶೆಯಿಂದ ಉಪಕಾರ ಮಾಡುವರೆಂಬ ಮಾತು ನನಗೆ ಈವರೆಗೆ ಗೊತ್ತಿದ್ದಿಲ್ಲ; ಆದರೆ ಹುಜೂರ, ನನ್ನ ಪ್ರಾಣವನ್ನರ್ಪಿಸುವದರಿಂದ ನಿಮ್ಮ ಹಿತವಾಗುವಹಾಗಿದ್ದರೆ ನಾನು ಹಾಗೆ ಮಾಡಲಿಕ್ಕೂ ಹಿಂದೆ ಮುಂದೆ ನೋಡಲಿಕ್ಕಿಲ್ಲ. ನಿಮ್ಮನ್ನು ನಾನು—''ನನ್ನ ಪ್ರಾಣೇಶ್ವರನಿಗೆ ಸ್ವಾತಂತ್ರ್ಯದಾನ ಮಾಡಿದ ಮಹಾತ್ಮರೆಂ''ತಲೂ, ''ಜೀವದಾನ ಮಾಡಿದ ಪರಮೇಶ್ವರನೆ''ಂತಲೂ ಯಾವಾಗಲೂ ತಿಳಿಯುವೆನು. ನಿಮ್ಮ ಕಲ್ಯಾಣಕ್ಕಾಗಿ ನಾನು ಪರಮೇಶ್ವರನನ್ನು ಯಾವಾಗಲೂ ಪ್ರಾರ್ಥಿಸುವೆನು.

ಖುಸ್ರುವಿಗೆ ಮಂದಾಕಿನಿಯ ಈ ಮಾತುಗಳಿಂದ ಸಮಾಧಾನವಾಗಲಿಲ್ಲ. ಮಂದಾಕಿನಿಯ ವಿಷಯದ ಪಾಪಬುದ್ಧಿಯಿಂದ ಅವನ ಹೃದಯವು ಸಂಪೂರ್ಣ ದಗ್ಧವಾಗಿಹೋಗಿತ್ತು, ಆತನು ತೀರಾ ವಿವೇಕಭ್ರಷ್ಟನಾಗಿದ್ದನು. ಆಗ ಆತನು ಮಂದಾಕಿನಿಯನ್ನು ಕುರಿತು—

ಖುಸ್ರು—ಮಂದಾಕಿನೀ, ನೀನು ಏನೇ ಹೇಳು. ನೀನು ನನ್ನ ಹೆಂಡತಿಯಾದ ಹೊರತು ನನಗೆ ಸಮಾಧಾನವಾಗದು; ನನಗೆ ಸಮಾಧಾನವಾಗದ ಹೊರತು ನಿನಗೆ ನನ್ನ ಬೆರಳೊಳಗಿನ ಉಂಗುರವನ್ನು ನಾನು ಕೊಡಲಾರೆನು.

ಮಂದಾಕಿನಿ—ಛಿ ಛೀ! ಶಹಾಜಾದೇ ಸಾಹೇಬ, ನೀವು ದಿಲ್ಲಿಯ ಸಿಂಹಾಸನವನ್ನೇರಲು ಯೋಗ್ಯರಾಗಬಹುದೇ? ಪರಸ್ತ್ರೀಯರ ವಿಷಯವಾಗಿ ಪಾಪಬುದ್ಧಿಯುಳ್ಳವರು ಸಿಂಹಾಸನವೇರಲು ಎಂದೂ ಯೋಗ್ಯರಾಗಲಾರರು; ಆದ್ದರಿಂದ ದಿಲ್ಲಿಯ ಸಿಂಹಾಸನವು ನಿಮಗೆ ಸಿಗುವದು ಅಶಕ್ಯವಾಗಿರುವದು. ನನ್ನ ಈ ಮಾತು ಭವಿಷತ್‌ಕಾಲದಲ್ಲಿ ನಿಮ್ಮ ಅನುಭವಕ್ಕೆ ಬಾರದೆ ಇರಲಿಕ್ಕಿಲ್ಲ! ಅದಿರಲಿ, ಹುಜೂರ, ಪಾತಿವ್ರತ್ಯ ಭಂಗಕ್ಕೆ ನಾನು ಸಿದ್ಧಳಾದವಳಿದ್ದರೆ ನಿಮ್ಮಿಂದ ಉಂಗುರವನ್ನು ಪಡೆದು ಪತಿಯನ್ನು ಮುಕ್ತಮಾಡುವದಕ್ಕಾದರೂ ಏಕೆ ಹೋಗಬೇಕು? ಇಷ್ಟೂ ನಿಮಗೆ ತಿಳಿಯಬಾರದೇ? ದಿಲ್ಲಿಯ ಚಕ್ರವರ್ತಿಯ ಪದವನ್ನೇರಲಿಚ್ಛಿಸುವ ನಿಮ್ಮ ಹೃದಯದಲ್ಲಿ ಪತಿವ್ರತೆಯರ ವಿಷಯದ ಆದರದ ಬುದ್ಧಿಯು ಸ್ವಲ್ಪವೂ ವಾಸಿಸದಿರುವದು ಯೋಗ್ಯವಾಗಬಹುದೇನು? ಕುಮಾರ, ಸದಯಾಂತಃಕರಣದಿಂದ ನನ್ನ ಮಾತಿನ ವಿಚಾರಮಾಡಬೇಕೆಂದು ಪ್ರಾರ್ಥಿಸುವೆನು. ಈ ನಶ್ವರ–ಮಲಿನ ದೇಹದಲ್ಲಿ ಇಷ್ಟು ಆಸಕ್ತಿಯೇಕೆ? ಪ್ಯಾರಿಬಾನುವು ನಿಮ್ಮ ಧರ್ಮಪತ್ನಿಯಾಗಿದ್ದು, ಆಕೆಯು ನಿಮ್ಮ ವಿರಹವ್ಯಥೆಯಿಂದ ತಳಮಳಿಸುತ್ತಿರುವಾಗ ನೀವು

ಹೀಗೆ ಪರಸ್ತ್ರೀಲಂಪಟರಾಗುವದು ಧರ್ಮವಾಗಬಹುದೆ? ನಮ್ಮಂಥ ತರುಣೆಯರ ಸೌಂದರ್ಯ ವಾದರೂ ಎಷ್ಟು ದಿವಸ ನಿಲ್ಲುವದು? ಆ ಸೌಂದರ್ಯವು ನಷ್ಟವಾದಬಳಿಕ ಸೌಂದರ್ಯಾ ಸಕ್ತರಾದ ನಿಮ್ಮ ಪ್ರೇಮವು ನನ್ನ ಮೇಲೆ ಸ್ಥಿರವಾಗಿ ಉಳಿಯಬಹುದೇ? ಕ್ಷಣಿಕ ಸುಖಕ್ಕಾಗಿ ಮಾಡುವ ಪಾಪಕೃತ್ಯದಿಂದ ಸುಖವಾಗಬಹುದೆ? ಹುಜೂರ, ಪಾಪಜನಿತ ಮಹಾದುಃಖಕ್ಕೆ ತಾವು ಗುರಿಯಾಗಬಾರದು.

ಮಂದಾಕಿನಿಯ ಈ ಉಪದೇಶದ ಪರಿಣಾಮವು ಖುಸ್ರುವಿನ ಮೇಲೆ ಚನ್ನಾಗಿ ಆಯಿತು. ಆತನು ಎಷ್ಟು ಚಂಚಲ ವೃತ್ತಿಯ ಉದ್ಧತ ತರುಣನಿದ್ದರೂ, ವಂಶಪರಂಪರಾಗತ ಕುಲೀನತೆಯ ಕೆಲವು ಸದ್ಗುಣಗಳು ಆತನಲ್ಲಿ ಇದ್ದವು. ಆತನ ಹೃದಯದಲ್ಲಿ ಒಂದು ಪ್ರಕಾರದ ಔದಾರ್ಯವೂ, ಅಲ್ಪಸ್ವಲ್ಪ ಆತ್ಮಸಂಯಮವೂ, ಕೆಲಮಟ್ಟಿಗೆ ವಿಚಾರಶಕ್ತಿಯೂ ಇದ್ದವು. ಅವು ಒಂದು ಮೂಲೆಯಲ್ಲಿ ಬಿದ್ದಹಾಗಾದದ್ದರಿಂದ ಅವನ್ನು ಹುಡುಕಿ ಹೊರಗೆಡವಲಿಕ್ಕೆ ಪ್ರಯಾಸಪಡ ಬೇಕಾಗುತ್ತಿತ್ತು. ಅಂಥ ಪ್ರಯಾಸವನ್ನು ಈಗ ಮಂದಾಕಿನಿಯನ್ನು ಪಟ್ಟಿದ್ದರಿಂದ ಖುಸ್ರುವು ಒಬ್ಬ ದಿವ್ಯ ಪುರುಷನಾದನು. ಆತನು ಪಶ್ಚಾತ್ತಾಪದಿಂದ ಮಂದಾಕಿನಿಯನ್ನು ಕುರಿತು ''ಮಂದಾಕಿನೀ, ನಾನು ನಿಜವಾಗಿಯೇ ಭ್ರಷ್ಟ ಮಾರ್ಗವನ್ನು ಹಿಡಿದು ದೊಡ್ಡ ಅನರ್ಥಕ್ಕೆ ಗುರಿಯಾಗುತ್ತಿದ್ದೆನು; ಆದರೆ ನಿನ್ನ ಉಪದೇಶವು ನನ್ನನ್ನು ಪಾಪಮುಕ್ತಮಾಡಿತು. ನನ್ನಿಂದಾದ ನಿನ್ನ ಉಪಮರ್ದನಕ್ಕಾಗಿ ನನ್ನನ್ನು ನೀನು ಮನಃಪೂರ್ವಕವಾಗಿ ಕ್ಷಮಿಸಬೇಕು! ಈ ಕ್ಷಮೆಯ ಪ್ರತಿಫಲವಾಗಿಯೇ ನಾನು ನಿನಗೆ ನನ್ನ ಬೆರಳೊಳಗಿನ ಈ ನನ್ನ ಹೆಸರಿನ ಉಂಗುರವನ್ನು ಕೊಡುವೆನು. ನಿನ್ನ ಕೆಲಸವಾದಕೂಡಲೆ ಈ ಉಂಗುರವನ್ನು ನನಗೆ ತಿರುಗಿಕೊಡುವೆನೆಂದು ನೀನು ವಚನಕೊಡಬೇಕು.

ಖುಸ್ರುವಿನ ಈ ಮಾತುಗಳನ್ನು ಕೇಳಿ ಮಂದಾಕಿನಿಗೆ ಬಹಳ ಸಂತೋಷವಾಯಿತು. ಆ ರಾಜಪುತ್ರನ ವಿವೇಕ ಶಕ್ತಿಯು ನಿಜವಾಗಿಯೇ ಜಾಗ್ರತವಾಗಿ, ದೊಡ್ಡವರ ದೊಡ್ಡಿಸ್ತನವು ಆತನಲ್ಲಿ ವ್ಯಕ್ತವಾಗತೊಡಗಿತು. ಇದನ್ನು ನೋಡಿ ಮಂದಾಕಿನಿಯ ಸೇಡು ತೀರಿಸಿಕೊಳ್ಳುವ ಬುದ್ಧಿಯು ಆಗಿನ ಮಟ್ಟಿಗಾದರೂ ನಷ್ಟವಾಯಿತೆಂದು ಹೇಳಬಹುದು. ಆಕೆಯು ಕೆಲಹೊತ್ತು ಸುಮ್ಮನಿದ್ದು ಖುಸ್ರುವನ್ನು ಕುರಿತು – ಹುಜೂರ, ತಮ್ಮ ಅಪ್ಪಣೆಯನ್ನು ನಾನು ಶಿರಸಾ ಮನ್ನಿಸುವೆನು. ನಾನು ಯಾವದೊಂದು ಬಗೆಯಿಂದ ತಮ್ಮನ್ನು ಕಂಡು, ಈ ಉಂಗುರವನ್ನು ಕೈಮುಟ್ಟ ನಾನು ತಮಗೆ ಕೊಡುವೆನು, ಎಂದು ಹೇಳಿದಳು. ಅದನ್ನು ಕೇಳಿ ಖುಸ್ರುವು ಉಂಗುರವನ್ನು ತೆಗೆದು ಕೊಡುತ್ತ ಮಂದಾಕಿನಿಗೆ—''ಮಂದಾಕಿನೀ, ಮಾನಸಿಂಹ ಮಹಾರಾಜರು ನಿನ್ನ ಗಂಡನಿಗೆ ಶಿಕ್ಷೆಯನ್ನು ವಿಧಿಸಿರುವಾಗ ಅವರಿಗೆ ವಿರುದ್ಧವಾಗಿ ಹೀಗೆ ನಾನು ವ್ಯವಹರಿಸುವದು ಯೋಗ್ಯವಲ್ಲವು. ಅಕಸ್ಮಾತ್ ಕರ್ಮ–ಧರ್ಮ ಸಂಯೋಗದಿಂದ ನೀನು ಮಾನಸಿಂಹರ ಕೈಯಲ್ಲಿ ಸಿಕ್ಕರೆ, ಅವರು ನಿನ್ನನ್ನು ಈ ಉಂಗುರದ ವಿಷಯವಾಗಿ ಕೇಳಿದಾಗ ನೀನು ಏನು ಹೇಳುವೆ?'' ಎಂದು ಪ್ರಶ್ನಮಾಡಲು, ಮಂದಾಕಿನಿಯು—''ನಾನು ಇದನ್ನು ಯುವರಾಜರ ಕೋಣೆ ಯೊಳಗಿಂದ ಕದ್ದುಕೊಂಡು ಬಂದೆನೆಂದು ಹೇಳುವೆನೆಂ''ದು ತಟ್ಟನೆ ಉತ್ತರಕೊಟ್ಟಳು. ಅಷ್ಟರಲ್ಲಿ

ಖುಸ್ರುವಿನ ಒಬ್ಬ ರಾವುತನು ಖುಸ್ರುವನ್ನು ಹುಡುಕುತ್ತ ದೂರದಲ್ಲಿ ಬರುತ್ತಿರಲು, ಮಂದಾಕಿನಿಯು ಖುಸ್ರುವನ್ನು ಕುರಿತು—''ಅಗೋ, ಯಾವನೋ ಒಬ್ಬ ರಾವುತನು ಇತ್ತಕಡೆಗೆ ಬರುತ್ತಿರುವನು'' ಎಂದು ಹೇಳಿ, ತಟ್ಟನೆ ಗಿಡಗಳ ಗುಂಪಿನಲ್ಲಿ ಮರೆಯಾಗಿ ಹೋಗಿಬಿಟ್ಟಳು.

ದೈವಸಂಕಲ್ಪ

ಪರಸ್ತ್ರೀಯ ಅಭಿಲಾಷೆಗೆ ಒಳಪಟ್ಟ ಮನುಷ್ಯನ ಮನಸ್ಸು ಅತ್ಯಂತ ಕ್ಷುದ್ರವಾಗಿ ಹೋಗುವದು. ಆ ಕ್ಷುದ್ರ ಮನಸ್ಸಿನಲ್ಲಿ ಹಲಕೆಲವು ಸದ್ಗುಣಗಳಿದ್ದರೂ, ಗೆದ್ದಲಿ ತಿಂದ ಕಟ್ಟಿಗೆ ಯಂತೆ ಆ ಸದ್ಗುಣಗಳು ಕೆಲಸಕ್ಕೆ ಬಾರದವಾಗಿ, ಕಡೆಗೆ ಆ ಪರಸ್ತ್ರೀ ಲಂಪಟನು ಪಾಪಕೂಪದಲ್ಲಿ ಬಿದ್ದು ಪಶ್ಚಾತ್ತಾಪ ಪಡತೊಡಗುವನು! ಖುಸ್ರುವಿನ ಗತಿಯಾದರೂ ಹೀಗೆಯೇ ಆಯಿತು. ಆತನು ಮಂದಾಕಿನಿಯ ನಿರ್ಧಾರದ ಕಿವಿಹಿಂಡುವಿಕೆಯಿಂದ ಎಚ್ಚತ್ತು ವಿವೇಕಿಯಾಗಿ ಆಗಿನ ಮಟ್ಟಿಗೆ ದೊಡ್ಡ ಮನುಷ್ಯನೆನಿಸಿಕೊಂಡರೂ, ಮಂದಾಕಿನಿಯ ಮೇಲಿನ ಆತನ ಅಭಿಲಾಷೆಯು ಅಳಿದು ಹೋಗಲಿಲ್ಲ. ಏನಾದರೂ ಮಾಡಿ ತಾನು ಮಂದಾಕಿನಿಯ ಪ್ರೇಮಕ್ಕೆ ಪಾತ್ರನಾಗಿ ಆಕೆಯನ್ನು ತನ್ನ ಧರ್ಮಪತ್ನಿಯಾಗಿ ಮಾಡಿಕೊಂಡರೆ, ತನ್ನ ದುಃಖ ಪೂರ್ಣ ಆಯುಷ್ಯವು ಸುಖಮಯ ವಾಗುವದೆಂದು ಆತನು ಭಾವಿಸತೊಡಗಿದನು. ಹಾಗೆ ಮಂದಾಕಿನಿಯು ತನ್ನ ಕೈಸೇರಿದರೆ ತನ್ನ ನಿರುತ್ಸಾಹಿಯಾದ ಮನಸ್ಸು ಸದಾ ಪ್ರಫುಲ್ಲಿತವಾಗಿರ ಬಹುದೆಂತಲೂ ಆತನು ತರ್ಕಿಸಿದನು. ಆ ಅವಿವೇಕಿಯಾದ ಕ್ಷುದ್ರ ಹೃದಯದ ಖುಸ್ರುವಿಗೆ ಲಾವಣ್ಯನಿಧಿಯಾದ ತನ್ನ ಹೆಂಡತಿ ಪ್ಯಾರಿ ಬಾನುವಿನ ಮಹತ್ವವು ತೋರದಾಯಿತು. ನಿಜವಾಗಿ ಪ್ಯಾರಿಬಾನುವು ಎಲ್ಲ ಬಾಬುಗಳಿಂದಲೂ ಮಂದಾಕಿನಿಯನ್ನು ಹಿಂದೆ ದೂಡುವಂತೆ ಇದ್ದಳು. ಆಗಿನ ಮೊಗಲ ಜನಾನಖಾನೆಯಲ್ಲಿ ಪ್ಯಾರಿಬಾನುವನ್ನು ಸರಿಗಟ್ಟುವ ಸೌಂದರ್ಯಶಾಲಿನಿಯರು ಇದ್ದರೆ ಬಹು ಕ್ವಚಿತ್ತಾಗಿ ಇದ್ದರೆಂದು ಹೇಳಬಹುದು. ಅಂಥ ಚಲುವ ಹೆಂಡತಿಯ ಅರಿವಿಲ್ಲದೆ ಖುಸ್ರುವು ಮಂದಾಕಿನಿಯ ಹಂಬಲ ಹಿಡಿದದ್ದನ್ನು ನೋಡಿದರೆ, ಹೊರಚಾಳಿಯ ಹೇಸಿ ಜನರಿಗೆ ಮನೆಯ ಹೆಂಡತಿಯು ಕುರುಡೆಯಾಗಿ ತೋರುವದೇ ನಿಜವೆಂದು ಹೇಳಬೇಕಾಗುವದು! ಖುಸ್ರುವಿನ ಮೇಲೆ ಪಂಚ ಪ್ರಾಣ ಮಾಡುವ ಅಕಬರ ಬಾದಶಹನು ಆತನ ಸ್ವಚ್ಛಂದ ವೃತ್ತಿಯನ್ನರಿತು, ಆತನನ್ನು ಸಂಪೂರ್ಣ ಸ್ವಾಧೀನ ಪಡಿಸಿಕೊಳ್ಳಬೇಕೆಂತಲೇ ಪ್ಯಾರಿಬಾನುವಿನಂಥ ಲೋಕಸುಂದರಿಯನ್ನು ಹುಡುಕಿ ತನ್ನ ಆ ಮೊಮ್ಮಗನಿಗೆ ಲಗ್ನಮಾಡಿದ್ದನು. ಆದರೆ ನಾಯಿಯು ಏನುಮಾಡಿದರೂ ನಾಯಿಯೇ ಆಗಿರುವಂತೆ, ಪರಸ್ತ್ರೀಲಂಪಟನಾದ ಖುಸ್ರುವು ಪರಸ್ತ್ರೀಯರನ್ನು ಪಾಪದೃಷ್ಟಿಯಿಂದ ನೋಡುವವನೇ ಆದನು.

ತನ್ನ ರಾವುತನು ತನ್ನನ್ನು ಹುಡುಕುತ್ತ ಬಂದದ್ದನ್ನು ನೋಡಿ ಖುಸ್ರುವು ಎಚ್ಚತ್ತು ಆತನನ್ನು ಹಿಂಬಾಲಿಸಿ ನಡೆದನು; ಆದರೆ ಆತನ ಮನಸ್ಸು ಮಂದಾಕಿನಿಯ ಸೌಂದರ್ಯದಲ್ಲಿ ತೊಡಗಿ

ದೀನವಾಗಿತ್ತು ಆತನು ತನ್ನ ಮನಸ್ಸಿನಲ್ಲಿ—''ನಾನು ಮಂದಾಕಿನಿಯ ಪ್ರಾಪ್ತಿಗಾಗಿ ಯತ್ನಿಸುವಲ್ಲಿ ಅಪರಾಧವೇನು? ನಾನು ಸಾಮಾನ್ಯ ಮನುಷ್ಯನಲ್ಲ. ಚಕ್ರವರ್ತಿ ಅಕಬರಬಾದಶಹನ ಮೊಮ್ಮಗನು; ಮುಂದೆ ದಿಲ್ಲಿಯ ಬಾದಶಹನಾಗತಕ್ಕವನು; ಬೇಕಾದದ್ದನ್ನು ಮಾಡುವ ಸಾಮರ್ಥ್ಯವು ನನ್ನಲ್ಲಿದೆ. ನನ್ನ ಸಮರ್ಥನಾದ ತಂದೆ ಸುಲ್ತಾನ ಸೇಲೀಮರು ಮೇಹರ ಉನ್ನಸೆಯನ್ನು (ನೂರಜಹಾನಳನ್ನು) ಸ್ವಾಧೀನಪಡಿಸಿಕೊಳ್ಳುವದಕ್ಕಾಗಿ, ಆಕೆಯ ಗಂಡನಾದ ವೀರಾಗ್ರಣಿ ಶೇಕ ಅಫಘಾಣನನ್ನು ಕೊಲ್ಲಿಸಲು ಯತ್ನಿಸುತ್ತಿರುವರಲ್ಲವೆ? ಹಾಗೆ ನಾನು ಮಂದಾಕಿನಿಯ ಪ್ರಾಪ್ತಿಗಾಗಿ ದುರ್ಜಯಸಿಂಹನನ್ನು ಗೊತ್ತಿಗೆ ಹಚ್ಚಲು ಯಾಕೆ ಯತ್ನಿಸಬಾರದು? ಶೇರ ಅಫಘಾಣದ ಮುಂದೆ ದುರ್ಜಯಸಿಂಹನು ಯಾವ ಗಿಡದ ತೊಪ್ಪಲು? ನಾನು ಮಂದಾಕಿನಿಯ ಪ್ರಾಪ್ತಿಗಾಗಿ ಮಾಡುವ ಯತ್ನವು ಯಾಕೆ ಸಫಲವಾಗಲಿಕ್ಕಿಲ್ಲ??'' ಎಂದು ಯೋಚಿಸುತ್ತ ತನ್ನ ಸೈನಿಕರಿದ್ದಲ್ಲಿಗೆ ಬಂದು ಅವರೊಡನೆ ಅಲಹಾಬಾದದ ಹಾದಿಯನ್ನು ಹಿಡಿದು ಮುಂದಕ್ಕೆ ಸಾಗಹತ್ತಿದನು. ಅಷ್ಟರಲ್ಲಿ ಐದು ಜನ ಮೊಗಲ ರಾವುತರು ತಮ್ಮ ಕುದುರೆಗಳನ್ನು ಓಡಿಸುತ್ತ ತನ್ನ ಕಡೆಗೆ ಬರುವದು ಆತನ ಕಣ್ಣಿಗೆ ಬಿದ್ದಿತು. ಆಗ ಖುಸ್ರುವು ತನ್ನ ಸೈನಿಕರನ್ನು ನಿಲ್ಲಿಸಿ, ಆ ಮೊಗಲ ರಾವುತರ ಹಾದಿಯನ್ನು ನೋಡತೊಡಗಿದನು. ಆತನ ಹೃದಯದಲ್ಲಿ ಭಯಂಕರವಾದ ಶಂಕೆಯು ಉತ್ಪನ್ನವಾಗಿ, ಆತನ ಮನಸ್ಸು ಅಸ್ವಸ್ಥವಾಯಿತು. ಸಾಮ್ರಾಟ ಅಕಬರನು ಫತ್ತೇಪುರ ಸಿಕ್ರಿಗೆ ಬಂದಂದಿನಿಂದ ಆತನ ಪ್ರಕೃತಿಯು ವಿಶೇಷ ಅಸ್ವಸ್ಥವಾಗಿತ್ತು, ಈ ಸ್ಥಿತಿಯಲ್ಲಿ ಈ ಮೊಗಲ ರಾವುತರು ಯಾವ ಕೆಟ್ಟಸುದ್ದಿಯನ್ನು ಹೇಳುವರೋ ಎಂದು ಖುಸ್ರುವು ತಳಮಳಿಸತೊಡಗಿದ್ದನು. ಆ ರಾವುತರು ತೀರ ಸನಿಯಕ್ಕೆ ಬರಲು, ಅವರಲ್ಲಿ ಮುಖ್ಯನಾದ ಬಾದಶಹನ ಖಾಸ ಕಾರಭಾರ ಲತಿಫಖಾನನನ್ನು ಕುರಿತು ಖುಸ್ರುವು ಆತುರತೆಯಿಂದ — ''ಸುದ್ದಿಯೇನು ಲತೀಫ! ಜಹಾಪನ್ನಾಹರು ಸುಖರೂಪವಾಗಿ ಇರುವವರೆ'' ಎಂದು ಕೇಳಿದನು. ಆಗ ಲತೀಫನು ಕುದುರೆಯಿಂದ ಹಾರಿ ಬಹು ವಿನಯದಿಂದ ಸಲಾಮುಮಾಡಿ, ಏನೂ ಮಾತಾಡದೆ ತನ್ನ ಪಟ್ಟಿಗೆಯೊಳಗಿನದೊಂದು ಕೆಂಪು ಲಕೋಟಿಯನ್ನು ಖುಸ್ರುವಿನ ಕೈಯಲ್ಲಿ ಕೊಟ್ಟನು. ಖುಸ್ರುವು ನಡುಗುವ ಕೈಗಳಿಂದ ಆ ಲಕೋಟಿಯನ್ನು ಒಡೆದು ಅವಸರದಿಂದ ಅದನ್ನು ಓದಿ ಮುಗಿಸಿದನು. ಆ ಪತ್ರದ ಮುಖ್ಯ ಆಶಯವು—''ಸಾಮ್ರಾಟರ ಬೇನೆಯು ವಿಕೋಪಕ್ಕೆ ಹೋಗಿದ್ದು, ಅವರು ನಿಮ್ಮನ್ನು ನೋಡಲಿಚ್ಛಿಸುವದರಿಂದ ಕೂಡಲೆ ಹೊರಟು ಬರಬೇಕೆಂ''ಬದೇ ಆಗಿತ್ತು.

ಖುಸ್ರುವು ದೈವವಾದಿಯಾಗಿದ್ದನು. ತಾನು ತಾಯಿಯ ಅಪ್ಪಣೆಯಂತೆ ತಂದೆಯ ಕ್ಷಮೆ ಬೇಡಲು ಅಲಹಾಬಾದಕ್ಕೆ ಹೋಗುವದಕ್ಕಾಗಿ ಹೊರಟಿರಲು, ಮಧ್ಯದಲ್ಲಿಯೇ ಆಕಸ್ಮಾತ್ ಫತ್ತೇಪುರ ಸಿಕ್ರಿಗೆ ಹೋಗಬೇಕಾಗದದ್ದು ದೈವಗತಿಯೆಂತಲೇ ಆತನು ತಿಳಿದನು. ಆತನು ಲತೀಫನ ಮುಖದಿಂದ ಬಾದಶಹರ ಬೇನೆಯ ಎಲ್ಲ ಸುದ್ದಿಯನ್ನು ಕೇಳಿಕೊಂಡಬಳಿಕಂತು ಆತನು ತನ್ನ ಪ್ರೀತಿಯ ಅಜ್ಜನನ್ನು ಯಾವಾಗ ನೋಡೇನೆಂದು ಆತುರಪಡತೊಡಗಿದನು. ಆತನು ತನ್ನ ಕೈಕೆಳಗಿನ ರಾವುತನಾದ ಹಿಮ್ಮತ ಸಿಂಹನನ್ನು ಕುರಿತು ಖಿನ್ನತೆಯಿಂದ – ಹಿಮ್ಮತ,

ಬಾದಶಹರಿಗೆ ಜಡ್ಡು ಬಹಳ ಆಗಿರುವದರಿಂದ ನನ್ನ ಮೊದಲಿನ ವಿಚಾರಗಳನ್ನೆಲ್ಲ ಬದಲಿಸಿ ನಾನು ಈಗ ಪತ್ತೇಪುರ ಸಿಕ್ರಿಗೆ ಹೋಗಬೇಕಾಯಿತು; ಇನ್ನು ನಾನು ಅಜಮೀರಕ್ಕೆ ಹೋಗುವ ಅವಶ್ಯವಿಲ್ಲ, ಅಲಹಾಬಾದಕ್ಕೆ ಹೋಗುವದಂತು ದೂರೇ ಉಳಿಯಿತು. ಹಿಮ್ಮತ, ನೀವು ಹಿಂದಿನಿಂದ ಬರ್ರಿ. ನಾನು ಮುಂದೆ ಹೋಗುವೆನು'' ಎಂದು ಹೇಳಿ, ಮೊಗಲ ರಾವುತರೊಡನೆ ಕುದುರೆಯನ್ನು ವೇಗದಿಂದ ಸಾಗುತ್ತ ನಡೆದನು. ಇಲ್ಲಿಂದ ಪತ್ತೇಪುರಸಿಕ್ರಿಯು ಸುಮಾರು ಐದು ಹರದಾರಿಯಿತ್ತು, ಆದರೆ ಅವರು ಕುದುರೆಯನ್ನು ಓಡಿಸುತ್ತ ಹೋದದ್ದರಿಂದ, ಬೇಗನೆ ಸಿಕ್ರಿಗೆ ಮುಟ್ಟಿದರು. ಖುಸ್ರುವು ಕುದುರೆಯನ್ನು ಅಲ್ಲಿಯೇ ಬಿಟ್ಟು, ಬಹು ಒತ್ತರದಿಂದ ಬಾದಶಹನ ಮಹಾಲಿನ ಬಾಗಿಲಿಗೆ ಹೋದನು. ಆತನು ಅಲ್ಲಿ ಕಾವಲುಗಾರರ ಮುಖ್ಯನನ್ನು ಕುರಿತು — ''ಶಹಾನಶಹರ ಪ್ರಕೃತಿಯು ಈಗ ಹೇಗಿದೆ?'' ಎಂದು ಪ್ರಶ್ನೆ ಮಾಡಲು, ಆ ಕಾವಲುಗಾರನು ತನ್ನ ಖಡ್ಗವನ್ನು ತಗ್ಗಿಸಿ ಶಹಾಜಾದಾನನ್ನು ಸನ್ಮಾನಿಸಿ ಕುರ್ನಿಸಾತ ಮಾಡಿ ನಮ್ರ ಸ್ವರದಿಂದ ಆತನನ್ನು ಕುರಿತು—''ಜನಾಬ, ಸಾಮ್ರಾಟರ ಪ್ರಕೃತಿಯು ನಿನ್ನೆ ರಾತ್ರಿ ಬಹಳ ಕಠಿಣಾವಸ್ಥೆಯನ್ನು ಹೊಂದಿತ್ತು; ಆದರೆ ಇಂದು ಬೆಳಗಿನಿಂದ ಚನ್ನಾಗಿ ಗುಣವಾಗಿ ಈಗ ಖಾವಿಂದರು ಸುಖವಾಗಿರುವರು, ಎಂದು ಹೇಳಿದನು. ಅದನ್ನು ಕೇಳಿ ಖುಸ್ರುವಿಗೆ ಬಹಳ ಸಮಾಧಾನವಾಗಿ, ಆತನು ಮತ್ತೆ ಆ ಕಾವಲುಗಾರನನ್ನು ಕುರಿತು–

ಖುಸ್ರು—ಈಗ ಶಹಾನಶಹರು ಎಲ್ಲಿರುವರು?

ಕಾವಲುಗಾರ—ತಮ್ಮ ಖಾಸ ಮಹಾಲಿನಲ್ಲಿ ಕುಳಿತಿರುವರು.

ಖುಸ್ರು—ಅಲ್ಲೆ ಮತ್ತೆ ಯಾರು ಇರುವರು?

ಕಾವಲುಗಾರ—ಮಹಾರಾಜ ಬೀರಬಲ್ಲರೂ, ಬಾದಶಹರ ಅಭಿನ್ನ ಹೃದಯದ ಮಿತ್ರ ಅಬುಲಫಜಲರೂ ಇರುವರು.

ಈ ಮೇರೆಗೆ ಪ್ರಶ್ನೋತ್ತರಗಳಾದ ಕೂಡಲೆ ಖುಸ್ರುವು ಅಲ್ಲಿ ನಿಲ್ಲದೆ ಅವಸರದಿಂದ ಸಾಮ್ರಾಟರ ಖಾಸ ಮಹಲನ್ನು ಹೊಕ್ಕನು. ಅಲ್ಲಿ ಬಾದಶಹರು ಸುವರ್ಣ ಮಂಚದ ಮೇಲಿನ ಹಂಸತೂಲದ ಹಾಸಿಗೆಯ ಮೇಲೆ ಲೋಡಿಗೆ ಆತು ಕಾಲು ಚಾಚಿಕೊಂಡು ಬೀರಬಲ್ಲನೊಡನೆ ಮಾತಾಡುತ್ತ ಕುಳಿತುಕೊಂಡಿದ್ದರು. ಖುಸ್ರುವು ಒಮ್ಮೆಲೆ ಮಂಚದ ಬಳಿಗೆ ಹೋಗಿ ಮೊಣಕಾಲೂರಿ, ಬಾದಶಹರಿಗೆ ಕುರ್ನಿಸಾತ ಮಾಡಿ ಚರಣದೆಡೆಯಲ್ಲಿ ನಮ್ರನಾಗಿ ರುದ್ಧ ಸ್ವರದಿಂದ—''ದಾದಾ, ತಮ್ಮ ಪ್ರಕೃತಿಯು ಈಗ ಹೇಗಿರುವದು'' ಎಂದು ಕೇಳಿದನು. ಆಗ ಅಕಬರನು ಮೊಮ್ಮಗನ ಈ ಅಕೃತ್ರಿಮ ಪ್ರೇಮಕ್ಕಾಗಿ ತನ್ನನ್ನು ಧನ್ಯನೆಂದು ತಿಳಿಯುತ್ತ ಅತ್ಯಂತ ವಾತ್ಸಲ್ಯದಿಂದ ಖುಸ್ರುವನ್ನು ಹತ್ತರ ಕರೆದುಕೊಂಡು ಆತನ ಮೋರೆಯ ಮೇಲೆ ಕೈಯಾಡಿಸುತ್ತ—''ಭಲೆ! ಎಷ್ಟು ಬೇಗನೆ ಬಂದೆ ಖುಸ್ರೂ! ನಿನ್ನಿನ ಭಯಂಕರವಾದ ಬೇನೆಯಲ್ಲಿ ನನ್ನ ಅಂತವಾಗಿದ್ದರೆ, ಇಂದು ನೀನು ನನ್ನ ಕಬರಸ್ಥಾನದ ಮೇಲೆ ಕಣ್ಣೀರು ಸುರಿಸಬೇಕಾಗುತ್ತಿತ್ತು; ಆದರೆ ಈಗ ಅಂಜಿಕೆಯಿಲ್ಲ.'' ಎಂದು ನುಡಿಯಲು, ಕುಸ್ರುವಿನ ಎದೆಯು ದಸಕ್ಕೆಂದು ಆತನು ತನ್ನ ಅಜ್ಜನನ್ನು ಕುರಿತು–

ಖುಸ್ರು—ಇಂಥ ನಿಷ್ಠುರಗಳೂ, ಘಾತಕಗಳೂ ಆದ ಶಬ್ದಗಳ ಉಚ್ಚಾರವನ್ನು ಮಾಡ ಬಾರದು ಜಹಾಪನಾಹ! ತಮ್ಮ ಹೊರತು ಈ ಹತಭಾಗ್ಯನ ಸ್ಥಿತಿಯಕಡೆಗೆ ನೋಡುವವರು ಎರಡನೆಯವರಾರೂ ಇರುವದಿಲ್ಲವು.

ಅಕಬರ—ನೀನು ಅಂಬರದಿಂದ ನೆಟ್ಟಗೆ ಇಲ್ಲಿಗೇ ಬಂದೆಯೇನು?

ಖುಸ್ರು—ಹೌದು ಜಹಾಪನಾಹ!

ಅಕಬರ—ಹಾಗಾದರೆ ನಿಮ್ಮ ಅವ್ವನು ನಿನ್ನ ಸಂಗಡ ಯಾಕೆ ಬರಲಿಲ್ಲ?

ಖುಸ್ರು—ಆಕೆಯು ಅಲಹಾಬಾದಕ್ಕೆ ಸುಲ್ತಾನ ಸೇಲೀಮರ ಕಡೆಗೆ ಹೋದಳು.

ಅಕಬರ—ಅಲಹಾಬಾದಕ್ಕೆ? ಅದೇಕೆ? ಅಲ್ಲಿಗೆ ಹೋಗಲು ಆಕೆಗೆ ಯಾರು ಆಲೋಚನೆ ಹೇಳಿದರು?

ಖುಸ್ರು—ಯಾರೂ ಇಲ್ಲ. ಸ್ವಬುದ್ಧಿಯಿಂದಲೇ ಆಕೆಯು ಹೋದಳು.

ಅಕಬರ—ನನಗೆ ಇಷ್ಟು ಜಡ್ಡು ಆದದ್ದು ನಿನ್ನ ತಾಯಿಗೆ ಗೊತ್ತಿಲ್ಲವೋ?

ಖುಸ್ರು—ಇಲ್ಲ, ಆಕೆಗೆ ಗೊತ್ತಿಲ್ಲ. ಗೊತ್ತಿದ್ದರೆ ಆಕೆಯು ಅಲ್ಲಿಗೆ ಹೋಗುತ್ತಿದ್ದಿಲ್ಲ. ಅಲಹಾ ಬಾದದಿಂದ ಅಗತ್ಯದ ಅಪ್ಪಣೆಯಾದದ್ದರಿಂದ ಆಕೆಯು ಅಲ್ಲಿಗೆ ಹೋಗಬೇಕಾಯಿತು.

ಅಕಬರ—ಹ! ತಿಳಿಯಿತು. ಸೇಲೀಮನ ಹಲವು ಗೂಢ ರಹಸ್ಯಗಳಲ್ಲಿ ಇದೊಂದು ರಹಸ್ಯದ ತಂತುವಾಗಿರುವದು. ಒಮ್ಮೊಮ್ಮೆ ಆತನ ಈ ರಹಸ್ಯದ ಕಸುವು ತೀವ್ರವಾದಾಗ ನನ್ನ ಉಪದೇಶದ ಅಥವಾ ಅಪ್ಪಣೆಯ ಆಟವೂ ನಡೆಯುವದಿಲ್ಲ. ಒಳ್ಳೇದು ಅದಿರಲಿ, ನಿನ್ನ ಮಾವ ರಾಜಾಮಾನಸಿಂಹನು ಈಗ ಎಲ್ಲಿರುವನು?

ಖುಸ್ರು—ಅವರು ಅಂಬರ ರಾಜಧಾನಿಯಲ್ಲಿಯೇ ಇರುವರು; ಆದರೆ ಬೇಗನೇ ಇತ್ತ ಬರುವ ವಿಚಾರವು ಅವರದಿರುವದು.

ಖುಸ್ರುವಿನ ಈ ಕಡೆಯ ಮಾತುಗಳನ್ನು ಕೇಳಿ ಅಕಬರನ ಹುಬ್ಬುಗಳು ಕಿಂಚಿತ ವಕ್ರವಾದವು. ಖುಸ್ರುವು ಅದನ್ನು ನೋಡದಿದ್ದರೂ, ತೀಕ್ಷ್ಣದೃಷ್ಟಿಯ ಅಬುಲಫಜಲನ ಕಣ್ಣಿಗೆ ಅದು ಕಾಣದೆ ಇರಲಿಲ್ಲ. ಇತ್ತಿತ್ತ ಮಾನಸಿಂಹನು ಖುಸ್ರುವಿನ ಪಕ್ಷವಹಿಸಿ ಹೆಣಗುತ್ತಿರುವಾಗ ಬಾದಶಹನ ಅಪ್ಪಣೆಯನ್ನು ದುರ್ಲಕ್ಷಿಸತೊಡಗಿದ್ದನು. ಅದರಿಂದ ಅಕಬರನು ಮಾನಸಿಂಹನ ವಿಷಯವಾಗಿ ಮನಸ್ಸಿನಲ್ಲಿರುಷ್ಟನಾಗಿದ್ದನು. ಬಾದಶಹನ ಈ ಹುಬ್ಬು ಗಂಟಿಕ್ಕುವಿಕೆಯಲ್ಲಿ ಎಷ್ಟು ಸಾಮರ್ಥ್ಯವಿರುತ್ತದೆಂಬದನ್ನು ಅಬುಲಫಜಲನು ಅರಿತವನಾದದ್ದರಿಂದ, ಮಾನಸಿಂಹನ ವಿಷಯವಾಗಿ ಬಾದಶಹನು ಹುಬ್ಬುಗಂಟಿಕ್ಕಿದ್ದಕ್ಕಾಗಿ ಆ ತತ್ವಜ್ಞ ಅಬುಲಫಜಲನು ಚಕಿತ ನಾದನು; ಆದರೆ ಕ್ಷಣಮಾತ್ರದಲ್ಲಿ ಬಾದಶಹನ ಮುಖದಲ್ಲಿ ಪ್ರಸನ್ನತೆಯ ತೋರಹತ್ತಿತು. ಆತನು ಶಾಂತಸ್ವರದಿಂದ ಖುಸ್ರುವನ್ನು ಕುರಿತು–ಖುಸ್ರೂ, ನೀನು ಇಲ್ಲಿಗೆ ಬಾರದೆ ಮೊದಲು ನಿನ್ನ ಅಂತಗೃಹಕ್ಕೆ ಹೋಗಿ, ನಿನ್ನ ಹೆಂಡತಿಯನ್ನು ಕಂಡು ಬರಬೇಕಾಗಿತ್ತು. ಆ ನಿರಪರಾಧಿಯಾದ ಬಾಲಿಕೆಯು ನಿನ್ನ ಹಾದಿಯನ್ನು ನೋಡುತ್ತಿರಬಹುದು. ಹೋಗು ಹೋಗು, ಮೊದಲು ಹೋಗಿ ಆಕೆಯನ್ನು ಸಮಾಧಾನಪಡಿಸಿ ಬಾ. ಆಮೇಲೆ ಮಾತಾಡುತ್ತ ಕುಳಿತುಕೊಳ್ಳೋಣ.'' ಎಂದು

ಹೇಳಿದನು. ಅಜ್ಜನ ಈ ಮಾತಿನಿಂದ ಖುಸ್ರುವು ನಾಚಿದರೂ, ಬಾದಶಹನಾದ ಆತನ ಅಪ್ಪಣೆ ಮೀರುವದು ಹೇಗೆ ಶಕ್ಯವಾದೀತು? ಖುಸ್ರುವು ಕೂಡಲೇ ಅಜ್ಜನ ಅಪ್ಪಣೆಯಂತೆ ಹೆಂಡತಿಯ ಬಳಿಗೆ ಹೋಗಲು ಹೊರಟನು. ಖುಸ್ರುವು ತನ್ನ ಪ್ರಿಯತಮೆಯಾದ ಪ್ಯಾರಿಬಾನುವಿನ ಮಂದಿರಕ್ಕೆ ಹೋದಾಗ ಆ ಸುಂದರಿಯು ವೀಣಾನಾದದಲ್ಲಿ ತನ್ನ ಮಂಜುಲ ಸ್ವರವನ್ನು ಬೆರಿಸಿ ಗಾಯನ ಮಾಡುತ್ತಿದ್ದಳು. ಪ್ಯಾರಿಬಾನುವು ಗಾಯನ ಶಾಸ್ತ್ರದಲ್ಲಿ ನಿಷ್ಣಾತಳಿದ್ದು, ಆಕೆಯ ಕಂಠವು ಬಹುಸುಖಕರವಾಗಿತ್ತು. ಖುಸ್ರುವು ಹೆಂಡತಿಯ ಗಾಯನದಿಂದ ಮೋಹಿತನಾಗಿ ಅಲ್ಲಿಯೇ ಬಾಗಿಲುಮರೆಗೆ ನಿಂತು ಆಕೆಯ ಸಂಪೂರ್ಣ ಗಾಯನವನ್ನು ಕೇಳಿದನು. ಖುಸ್ರುವು ಪ್ಯಾರಿಬಾನುವನ್ನು ಅಗಲಿ ಅಂಬರಕ್ಕೆ ಹೋಗಿ ಎರಡು ತಿಂಗಳು ಆಗಿತ್ತು. ಆ ಸುಂದರಿಗೆ ಈವರೆಗೆ ಪತಿವಿಯೋಗದ ಅನುಭವವೇ ಇಲ್ಲದ್ದರಿಂದ, ಈ ಎರಡು ತಿಂಗಳ ವಿಯೋಗವು ಆಕೆಗೆ ದುಸ್ಸಹವಾಗಿತ್ತು. ಆಕೆಯು ತನ್ನ ವೀಣೆಯನ್ನು ಕೆಳಗೆ ಇಡ ಇಡುತ್ತ ವಿರಹ ವ್ಯಥೆಯಿಂದ ಉಸುರ್ಗಳೆದು—''ಹಾ ನಾಥ! ನೀವು ಇಷ್ಟು ನಿಷ್ಠುರರು ಹೇಗೆ ಆದಿರಿ?'' ಎಂದು ನುಡಿಯಲು, ಖುಸ್ರುವು ಆಕೆಯ ಬಳಿಗೆ ಹೋಗಿ–ಪ್ರಿಯೇ, ನೀನು ನೆನಿಸಿದ ಕೂಡಲೆ ನಿನ್ನ ಬಳಿಗೆ ಬಂದಿರುವ ನಾನು ನಿಷ್ಠುರನು ಹೇಗೆ? ಹೀಗೆ ನಿಷ್ಕಾರಣ ದೋಷವಿಡುವದು ನಿನಗೆ ಯೋಗ್ಯವೇ?'' ಎಂದು ಕೇಳಿದನು.

ಹೀಗೆ ಪತಿಯು ಅಕಸ್ಮಾತ್ತಾಗಿ ಬಂದದ್ದನ್ನು ನೋಡಿ ಪ್ಯಾರಿಬಾನುವು ಚಕಿತಳಾದಳು. ಪತಿ ದರ್ಶನದಿಂದಾದ ಆನಂದವು ಆಕೆಯ ಹೊಟ್ಟೆಯಲ್ಲಿ ಹಿಡಿಸದಾಯಿತು. ಆ ಆನಂದದ ಭರದಲ್ಲಿ ಆಕೆಯು ಪತಿಯನ್ನು ಕುರಿತು –

ಪ್ಯಾರಿ — ಅಂಬರದಿಂದ ತಾವು ಒಬ್ಬರೇ ಬಂದಿರೋ? ಮಾಸಾಹೇಬರು ಎಲ್ಲಿರುವರು? ಅವರೇಕೆ ಬರಲಿಲ್ಲ?

ಖುಸ್ರು—ಪ್ರಿಯೇ, ಶಹಾಜಾದೇಸಾಹೇಬರವರ ಅಪ್ಪಣೆಯಂತೆ ಅವರು ಅಲಹಾಬಾದಕ್ಕೆ ಹೋದರು.

ಪ್ಯಾರಿ —ಸಾಮ್ರಾಟರ ಪ್ರಕೃತಿಯು ಅಸ್ವಸ್ಥವಾದದ್ದು ಮಾಸಾಹೇಬರಿಗೆ ಗೊತ್ತಿಲ್ಲವೆಂಬದನ್ನು ಕಾಣುತ್ತದೆ.

ಖುಸ್ರು—ಇಲ್ಲ, ಅವರಿಗೆ ಗೊತ್ತಿಲ್ಲ, ಇಲ್ಲಿಂದ ಬಂದ ರಾವುತರು ನನಗೆ ಸಿಕ್ರಿಯ ಹಾದಿಯಲ್ಲಿ ಭೆಟ್ಟಿಯಾದರು. ಆ ಮೊದಲೇ ಮಾಸಾಹೇಬರು ಅಜಮೀರದ ಮಾರ್ಗವನ್ನು ಹಿಡಿದು ಹೋಗಿದ್ದರು.

ಪ್ಯಾರಿ—ಖುದಾನ ಮನಸ್ಸಿನಲ್ಲಿ ಏನಿರುವದೋ ಯಾರಿಗೆ ಗೊತ್ತು? ಶಹಾಜಾದೇ ಸಾಹೇಬರು ನಿಮಗೆ ಇಲ್ಲಿಗೆ ಹೋಗಲು ಆಜ್ಞಾಪಿಸಿದ್ದರೋ?

ಖುಸ್ರು—ಇಲ್ಲ, ಅವರು ನನಗೆ ಅಲಹಾಬಾದಕ್ಕೆ ಬರಲು ಅಜ್ಞಾಪಿಸಿದ್ದರು. ಆದರೆ ಹಾದಿಯಲ್ಲಿ ಇತ್ತಕಡೆಯಿಂದ ಬಂದ ರಾವುತರು ಕೊಟ್ಟ ಪತ್ರದಿಂದ ನನಗೆ ಬಾದಶಹರ ಪ್ರಕೃತಿಯ ಅಸ್ವಸ್ಥತೆಯು ತಿಳಿದು ಆ ಪತ್ರದಲ್ಲಿ ಬಾದಶಹರು ನನಗೆ ಬರಲು ಆಜ್ಞಾಪಿಸಿರುವದನ್ನು ನೋಡಿ ನಾನು ಇತ್ತಕಡೆಗೆ ಬಂದೆನು.

ಪ್ಯಾರಿ—ನಾಥ ನಾನು ಒಬ್ಬ ಸಾಮಾನ್ಯ ಸ್ತ್ರೀಯಿರುವದರಿಂದ ನನ್ನ ಬುದ್ಧಿಯು ಕ್ಷುದ್ರವಾಗಿಯೇ ಇರತಕ್ಕದ್ದು. ಅಂದಬಳಿಕ ನಿಮ್ಮ ಈ ಬರಹೋಗುವ ಸಂಬಂಧದಿಂದ ವಿಚಾರಮಾಡಲಿಕ್ಕೆ ನಾನು ಕೇವಲ ಅನಧಿಕಾರಿಯೆಂದು ಒಪ್ಪಿಕೊಳ್ಳುವೆನು; ಆದರೂ ತಾವು ಇಂದು ಇಲ್ಲಿಗೆ ಬಾರದೇ ಅಲಹಾಬಾದಕ್ಕೆ ಹೋಗಬೇಕಾಗಿತ್ತೆಂದು ನನಗೆ ತೋರುತ್ತದೆ. ನೀವು ಇಲ್ಲಿಗೆ ಬಂದದ್ದರ ಪರಿಣಾಮವು ವಿಪರೀತವಾಗದೆ ಹೋಗಲಿಕ್ಕಿಲ್ಲವೆಂದು ನನ್ನ ಮನಸ್ಸಿಗೆ ತೋರುವದು.

ಖುಸ್ರು—ಪ್ಯಾರೀ, ನಿನಗೇಕೆ ಹೀಗೆ ತೋರುವದು?

ಪ್ಯಾರಿ—ಅಕಬರ ಬಾದಶಹರ ಕ್ಷಮಾಶೀಲ ಹೃದಯವನ್ನು ನಾನು ಸ್ವಾಧೀನಪಡಿಸಿಕೊಂಡಿರುವೆನು; ಆದರೆ ನನ್ನ ಮಾವಂದಿರ ಕಠಿಣ ಹೃದಯವನ್ನು ಒಲಿಸಿಕೊಳ್ಳುವದು ನನ್ನಿಂದಾಗದು. ಅವರು ಬಹಳ ಅಭಿಮಾನ ಸ್ವಭಾವದವರು. ಸಣ್ಣ ಪುಟ್ಟ ಮಾತಿನ ಸಲುವಾಗಿಯೂ ಅವರಿಗೆ ಸಂಶಯವುಂಟಾಗುತ್ತದೆ. ಅವರು ಗಳಿಗೆ ಗಳಿಗೆಗೆ ಬಹಳ ಸಿಟ್ಟಾಗುತ್ತಿರುವರು. ನಮ್ಮಿಬ್ಬರ ದುರ್ದೈವದಿಂದಲೇ ಅನ್ನಲೊಲ್ಲೆರೇಕೆ, ಅವರು ನಮ್ಮನ್ನು ಒಳ್ಳೆಯ ದೃಷ್ಟಿಯಿಂದ ನೋಡುವದಿಲ್ಲ, ಆದ್ದರಿಂದ ನೀವು ಇಲ್ಲಿಗೆ ಬಂದ ಅಲ್ಪಕಾರಣದಿಂದಲೂ ಅನರ್ಥವುಂಟಾಗಬಹುದು.

ಹೆಂಡತಿಯ ಈ ಮಾತುಗಳು ಖುಸ್ರುವಿಗೆ ಸಯುಕ್ತಿಕವಾಗಿ ತೋರಿ ಆತನ ಮನಸ್ಸು ಖಿನ್ನವಾಯಿತು. ಆತನು ಹೆಂಡತಿಯನ್ನು ಕುರಿತು–

ಖುಸ್ರು—ಪ್ಯಾರೀ, ನಿನ್ನ ಮಾತು ನಿಜವಿರುವದು. ದೈವದಲ್ಲಿದ್ದದ್ದನ್ನು ತಪ್ಪಿಸುವ ಸಾಮರ್ಥ್ಯವು ನನ್ನಲ್ಲಿರುವದಿಲ್ಲ, ಆದ್ದರಿಂದ ನನ್ನ ದೈವಕ್ಕನುಸರಿಸಿ ಬಂದದ್ದನ್ನು ಉಣ್ಣಲೇಬೇಕು.

ಪ್ಯಾರಿ—ನಾಥ, ತಾವು ಆಡುವ ಮಾತು ಸತ್ಯವಿದ್ದರೂ ಅದಕ್ಕಾಗಿ ತಾವು ಇಷ್ಟು ಖಿನ್ನರಾಗುವ ಕಾರಣವಿಲ್ಲವು; ಯಾಕಂದರೆ ನಮ್ಮ ದೈವವು ಸದ್ಯಕ್ಕೆ ಪ್ರತಿಕೂಲವಾಗಿದ್ದರೂ, ಮುಂದೆಯೂ ಅದು ಹಾಗೆಯೇ ಇರುವದೆಂದು ಯಾಕೆ ತರ್ಕಿಸಬೇಕು? ಮನುಷ್ಯನ ಆಯುಷ್ಯದಲ್ಲಿ ಕೇವಲ ಸುಖವಾಗಲಿ, ಕೇವಲ ದುಃಖವಾಗಲಿ ಒದಗದೆ, ಸುಖ–ದುಃಖಗಳೆರಡೂ ಕಾಲಕ್ಕನುಸರಿಸಿ ಒದಗುತ್ತಿರುತ್ತವೆ. ಅದರಂತೆ ಸಧ್ಯಕ್ಕೆ ನಾವು ದುಃಖದ ಸ್ಥಿತಿಯಲ್ಲಿರುತ್ತಿದ್ದರೂ ಮುಂದೆ ನಮಗೆ ಸುಖದ ಸ್ಥಿತಿಯು ಉಂಟಾಗಬಹುದು; ಆದ್ದರಿಂದ ತಾವು ಉದಾಸೀನರಾಗಿ ಚಿಂತೆಯಿಂದ ಕಾಲಹರಣ ಮಾಡದೆ, ಉತ್ಸಾಹಶಾಲಿಗಳಾಗಿ ಉದ್ಯೋಗಮಾಡತಕ್ಕದ್ದು.

ಖುಸ್ರುವು ಹೆಂಡತಿಯ ಈ ಸಮಂಜಸ ಮಾತುಗಳಿಗಾಗಿ ಆಕೆಯನ್ನು ಹೊಗಳಿದನು. ಹೊರಗಿನಿಂದ ಶಾಂತವಾಗಿಯೂ, ವೈಭವಶಾಲಿಯಾಗಿಯೂ, ವಿಲಾಸಿಯಾಗಿಯೂ ತೋರುತ್ತಿದ್ದ ಮೊಗಲ ಸಿಂಹಾಸನವು ಅಂತರಂಗದಲ್ಲಿ ಹೇಗಿರುತ್ತದೆಂಬದರ ಕಲ್ಪನೆಯು ಆತನಿಗೆ ಚನ್ನಾಗಿ ಇರದಿದ್ದರೂ, ಸಿಂಹಾಸನ ಪ್ರಾಪ್ತಿಯ ಪ್ರಸಂಗದಲ್ಲಿ ರಾಜಕುಲದ ರಕ್ತಪಾತವಾಗದೆ ಹೋಗಲಿಕ್ಕಿಲ್ಲೆಂಬ ಸಂಗತಿಯು ಆತನ ಮನಸ್ಸಿನಲ್ಲಿ ಕಟಿಯುತ್ತಿತ್ತು, ತಂದೆಯ ಅಪ್ರೀತಿಗೆ ಪಾತ್ರನಾಗಿರುವ ತನ್ನ ಗತಿಯು ಏನಾಗುವದೋ ಎಂಬ ಚಿಂತೆಯೂ ಆತನನ್ನು ಬಾಧಿಸುತ್ತಿತ್ತು;

ಆದರೆ ಪ್ಯಾರಿಬಾನುವಿನ ದೈವವಾದದ ಉಪದೇಶದಂತೆ, ತನಗೆ ಇನ್ನು ಅನುಕೂಲ ಕಾಲವು ಒದಗಿದರೂ ಒದಗಬಹುದೆಂದು ತಿಳಿದು ಆತನು ಸಮಾಧಾನಪಟ್ಟನು. ತನ್ನ ಉದಾಸೀನ ವೃತ್ತಿಯನ್ನು ದೂರಮಾಡಿ ಬಹು ಮಟ್ಟಿಗೆ ತನ್ನನ್ನು ಸಮಾಧಾನಗೊಳಿಸಿದ ಚಾತುರ್ಯಕ್ಕಾಗಿ ಆತನು ತನ್ನ ಹೆಂಡತಿಯನ್ನು ಕುರಿತು —''ಪ್ರಿಯೇ, ನಿನ್ನ ಯೋಗ್ಯತೆಯು ಸಾಮಾನ್ಯವಾದದ್ದಲ್ಲ. ನನ್ನ ಪರಿತಪ್ತ ಹೃದಯವನ್ನು ಕ್ಷಣದಲ್ಲಿ ನೀನು ಶಾಂತಮಾಡಿದೆ. ನಿಜವಾದ ನನ್ನ ಹಿತ ಕರ್ತೃಗಳೆಂದರೆ ನೀವಿಬ್ಬರು. ಒಬ್ಬರು ನನ್ನ ಹಡೆದ ತಾಯಿಯಾದ ಮಾಸಾಹೇಬರು; ಇನ್ನೊಬ್ಬಳು ನನ್ನ ಪ್ರಿಯತಮೆಯಾದ ನೀನು. ನನ್ನ ಮೇಲಿನ ನಿನ್ನ ಉತ್ಕಟ ಪ್ರೇಮದಿಂದಲೇ ದುಃಖಮಯವಾದ ನನ್ನ ಬಾಳು ಸುಖಮಯವಾಗುತ್ತಿರುವದು! ಪ್ರಿಯೇ, ನೀನೇ ಹೇಳು, ನಾನು ಯಾವಾಗಲೂ ಸಮಾಧಾನದಿಂದಿರಬೇಕೆಂತಲೂ, ಉತ್ಸಾಹಿ ಯಾಗಿರಬೇಕೆಂತಲೂ ನಿನ್ನ ಹಾಗೆ ಮನಮುಟ್ಟಿ ಯಾರು ಯತ್ನಿಸುವರು? ಪತಿ–ಪತ್ನಿಯರ ಪರಸ್ಪರ ಹಿತ ಸಂಬಂಧವು ಪರಸ್ಪರರನ್ನವ ಲಂಬಿಸಿರುತ್ತಿದ್ದರೂ, ನಿನ್ನ ಹಾಗೆ ಸ್ವಹಿತವನ್ನು ಮರೆತು ನಿರಪೇಕ್ಷ ಬುದ್ಧಿಯಿಂದ ಪತಿಯ ಹಿತವನ್ನು ಚಿಂತಿಸುವ ಸತಿಯರು ಅತಿ ವಿರಲವೆಂದು ನಿಃಸಂಶಯದಿಂದ ಹೇಳಬಹುದು. ಇರಲಿ, ಪ್ರಿಯೇ, ನಿನ್ನ ಸಹವಾಸದಲ್ಲಿ ನಾನು ಎಂಥ ದುಃಖವನ್ನಾದರೂ ಮರೆತು ಸಮಾಧಾನದಿಂದ ಇರುವೆನು. ಎಂದು ಹೆಂಡತಿಯನ್ನು ಶ್ಲಾಘಿಸಿ, ಆಕೆಯ ಸುಖಕಾರಕ ಸಹವಾಸದಲ್ಲಿ ಸಮಾಧಾನದಿಂದ ಕಾಲಹರಣ ಮಾಡಹತ್ತಿದನು.

ನಿರಾಶೆ

ಪ್ರಿಯವಾಚಕರೇ, ಪತಿಭಕ್ತಿಪರಾಯಣಳಾದ ಸಾಧ್ವೀ ಪ್ಯಾರಿಬಾನುವಿನೊಡನೆ ಸುಖಸಮಾಧಾನದಿಂದ ಕಾಲಹರಣ ಮಾಡುತ್ತಿರುವ ಖುಸ್ರುವನ್ನು ಅನಕಾ ಅಲ್ಲಿ ಬಿಟ್ಟು, ಮಂದಾಕಿನಿಯ ಸಮಾಚಾರವನ್ನು ತಕ್ಕೊಳ್ಳುವಾ ನಡೆಯಿರಿ. ಆ ಪತಿವ್ರತೆಯು ಬಹು ಪ್ರಯಾಸದಿಂದ ಖುಸ್ರುವಿನ ಉಂಗುರವನ್ನು ಸಂಪಾದಿಸಿದ ಬಳಿಕ ಏನು ಮಾಡಿದಳೆಂಬದನ್ನು ಅರಿತುಕೊಳ್ಳುವ ಆತುರತೆಯು ನಿಮ್ಮಲ್ಲಿ ಉಂಟಾಗಿರಬಹುದು; ಆದ್ದರಿಂದ ಮಂದಾಕಿನಿಯ ಪೂರ್ವ ವೃತ್ತದೊಡನೆ ಅದನ್ನು ಈಗ ಹೇಳುವೆವು. ಮಂದಾಕಿನಿಯು ಒಬ್ಬ ಶೂರ ರಜಪೂತ ಸರದಾರನ ಮಗಳು. ಚಿಕ್ಕಂದಿನಲ್ಲಿ ಆಕೆಯ ತಾಯಿಯು ತೀರಿಕೊಂಡದ್ದರಿಂದ ಆಕೆಯ ತಂದೆಯೇ ಆಕೆಯನ್ನು ಮಮತೆಯಿಂದ ಬಹು ಕಷ್ಟಪಟ್ಟು ಸಂರಕ್ಷಣ ಮಾಡಿದನು; ಆದರೆ ಸ್ವಲ್ಪ ದಿನಗಳ ಹಿಂದೆ ಆಕೆಯ ತಂದೆಯೂ ತೀರಿಕೊಂಡದ್ದರಿಂದ ಮಂದಾಕಿನಿಯು ಕೇವಲ ಅನಾಥಳಾದಳು. ಹೀಗೆ ಆಕೆಯ ತಂದೆಯಂತು ತೀರಿಕೊಂಡನು, ಪತಿಯು ಕಾರಾಗೃಹವಾಸಿಯಾದನು. ಈ ಸ್ಥಿತಿಯಲ್ಲಿ ಕೇವಲ ಅನಾಥಳಾದ ಮಂದಾಕಿನಿಯು ಬಹು ಕಷ್ಟದಿಂದ ಕಾಲಹರಣ ಮಾಡಹತ್ತಿದ್ದರೆ ಆಶ್ಚರ್ಯವಲ್ಲ. ಮನುಷ್ಯನು ಎಂಥ ಸಜ್ಜನನೇ ಇರಲಿ, ಎಂಥ ದುರ್ಜನನೇ ಇರಲಿ ಏನಿಲ್ಲೆಂದರೂ

ಅವನಿಗೆ ಒಬ್ಬನಾದರೂ ಶತ್ರುವೂ, ಒಬ್ಬನಾದರೂ ಮಿತ್ರನೂ ಇದ್ದೇ ಇರುವರು. ಅದರಂತೆ ದುರ್ಜಯಸಿಂಹನಿಗೆ ಲಜಪತ ಸಿಂಹನೆಂಬವನೊಬ್ಬ ರಜಪೂತ ಸರದಾರನು ಶತ್ರುವಾಗಿದ್ದನು. ಮಂದಾಕಿನಿಯ ತಂದೆಯು ಮಂದಾಕಿನಿಯನ್ನು ಲಜಪತ ಸಿಂಹನಿಗೆ ಹೀನ ಕುಲದವನೆಂದು ತಿಳಿದು ಕೊಡದೆ, ದುರ್ಜಯಸಿಂಹನಿಗೆ ಕೊಟ್ಟದ್ದೇ ಈ ದ್ವೇಷದ ಕಾರಣವು. ಲಜಪತನೂ ಮಾನಸಿಂಹನ ಸೇವಕರಲ್ಲಿಯೇ ಒಬ್ಬನಾಗಿದ್ದನು. ಮಂದಾಕಿನಿಗೆ ಒದಗಿದ ವಿಪತ್ತಿನ ಪ್ರಸಂಗದ ಲಾಭವನ್ನು ಪಡೆಯಲು ಆ ದುಷ್ಟ ಲಜಪತನು ಹೊಂಚು ಹಾಕಿದ್ದನು. ಆತನ ಹೀನಕುಲಕ್ಕನುಸರಿಸಿ, ಆತನ ಹೃದಯವೂ ಕ್ಷುದ್ರವಾದದ್ದೇ ಇತ್ತು, ಮಂದಾಕಿನಿಯ ವಿಷಯವಾಗಿ ಆ ನೀಚನು ಅಚ್ಚ ರಜಪೂತರ ಶೀಲಕ್ಕೆ ವಿರುದ್ಧವಾಗಿ ಪಾಪವಾಸನೆಯನ್ನು ತಾಳಿದ್ದನು; ಆದರೆ ಮಂದಾಕಿನಿಯ ಉಜ್ವಲ ಪಾತಿವ್ರತ್ಯದ ಮುಂದೆ ಅವನ ಆಟ ನಡೆಯುವ ಹಾಗಿದ್ದಿಲ್ಲ. ಆ ದುಷ್ಟನು ಮಂದಾಕಿನಿಯನ್ನು ಸಂಕಟಕ್ಕೆ ಗುರಿಮಾಡಿ, ಆಕೆಯನ್ನು ಸ್ವಾಧೀನ ಪಡಿಸಿಕೊಳ್ಳಬೇಕೆಂದು ಇಚ್ಛಿಸಿ ಆ ಸಾಧ್ವಿಯ ಅಹಿತವನ್ನು ಬಗೆ ಬಗೆಯಾಗಿ ಮಾಡಹತ್ತಿದನು. ಮಾನಸಿಂಹನಿಂದ ತನಗೆ ಗಡಿದಾಟಿಸಿದ ಶಿಕ್ಷೆಯಾಗಿದ್ದರೂ ದುರ್ಜಯನು ಅಂಬರ ರಾಜಧಾನಿಯನ್ನು ಬಿಟ್ಟು ಹೋಗದೆ ಅಲ್ಲಿಯೇ ಗುಪ್ತಸ್ಥಳದಲ್ಲಿ ಇರುತ್ತಿದ್ದದ್ದನ್ನು ವಾಚಕರು ಮರೆತಿರಲಿಕ್ಕಿಲ್ಲ; ಆ ಗುಪ್ತಸ್ಥಳದ ಗೊತ್ತುಹಚ್ಚಿ ಲಜಪತನೇ ಅದನ್ನು ಮಾನಸಿಂಹನಿಗೆ ತಿಳಿಸಿದ್ದರಿಂದ, ಮಾನಸಿಂಹನು ತನ್ನ ಆಜ್ಞಾಭಂಗಕ್ಕಾಗಿ ಸಿಟ್ಟಾಗಿ ದುರ್ಜಯನನ್ನು ರತನಗಡದಲ್ಲಿ ಸೆರೆಯಲ್ಲಿಟ್ಟಿದ್ದನು. ರತನಗಡವು ಅಂಬರ ರಾಜಧಾನಿಯಿಂದ 2/3 ಹರದಾರಿಯಾಗಬಹುದೆಂದು ಹಿಂದೆಯೊಮ್ಮೆ ಹೇಳಿದೆ. ಇಂಥ ಹಲವು ತೊಂದರೆಗಳಿಗೆ ಮಂದಾಕಿನಿಯನ್ನು ಈಡು ಮಾಡಿದರೂ, ಲಜಪತನ ದುಷ್ಟವಾಸನೆಯು ಪೂರ್ಣವಾಗಲಿಲ್ಲ. ಮಂದಾಕಿನಿಯ ಯೋಗ್ಯತೆಯನ್ನು ವಾಚಕರಿಗೆ ತಿಳಿಸಲವಶ್ಯವಿಲ್ಲ. ಲಜಪತನಂಥ ಕ್ಷುದ್ರ ಪ್ರಾಣಿಯ ಗಂಟಲಲ್ಲಿ ಇಳಿಯತಕ್ಕಂಥ ಹೆಣ್ಣುಮಗಳು ಮಂದಾಕಿನಿಯಲ್ಲವೆಂಬ ಮಾತು ವಾಚಕರಿಗೆ ಗೊತ್ತಿರಬಹುದು. ತನ್ನ ಪತಿಯ ಕಾರಾಗೃಹ ವಾಸಕ್ಕೆ ಲಜಪತನೇ ಕಾರಣನಾದನೆಂಬ ಮಾತು ಮಂದಾಕಿನಿಗೆ ಗೊತ್ತಿದ್ದರಿಂದ ಲಜಪತನು ಮುಂದಾಕಿನಿಯ ತೀವ್ರವಾದ ಕೋಪಕ್ಕೆ ಪಾತ್ರನಾಗಿದ್ದನು. ಈ ಸ್ಥಿತಿಯಲ್ಲಿ ಪತಿ ಪ್ರಾಣಳಾದ ಮಂದಾಕಿನಿಯು ತನ್ನ ಜೀವದ ಹಂಗು ಇಲ್ಲದೆ, ಪತಿಯನ್ನು ಬಂಧಮುಕ್ತಮಾಡುವ ಆವೇಶದಿಂದ ರತನಗಡಕ್ಕೆ ಹೋದಳು. ಆ ಸಾಹಸಿಯಾದ ಸತಿಗೆ ಖುಸ್ರುವಿನ ಉಂಗರ ಸಿಕ್ಕದ್ದೊಂದು, ದೊಡ್ಡ ಬೆಂಬಲವೇ ದೊರೆತಂತೆ ಆಗಿತ್ತು.

ಹೀಗೆ ಮಂದಾಕಿನಿಯು ಅತ್ಯಂತ ಸಾಹಸದಿಂದ ರತನಗಡದ ಸಿಂಹದ್ವಾರಕ್ಕೆ ಹೋಗಿ ದ್ವಾರರಕ್ಷಕನಿಗೆ ಉಂಗುರವನ್ನು ತೋರಿಸಲು, ಆತನು ಸನ್ಮಾನಪೂರ್ವಕವಾಗಿ ಆಕೆಯನ್ನು ದುರ್ಗದೊಳಗೆ ಬಿಟ್ಟನು; ಆದರೆ ತನ್ನ ಪತಿ–ದುರ್ಜಯಸಿಂಹನಿರುವ ಕೋಣೆಯು ಆಕೆಗೆ ಹೇಗೆ ಗೊತ್ತಾಗಬೇಕು? ಆಕೆಯು ಹುಚ್ಚು ಹಿಡಿದವರಂತೆ ಅತ್ತಿತ್ತ ಅಲೆದಾಡುತ್ತಿರಲು, ಒಬ್ಬ ವೃದ್ಧ ಸೈನಿಕನು ಆಕೆಯ ಕಣ್ಣಿಗೆ ಬಿದ್ದನು. ಕೂಡಲೆ ಆಕೆಯು ತನ್ನ ಬಳಿಯಲ್ಲಿಯ ಮುದ್ರಿಕೆಯನ್ನು ಆತನಿಗೆ ತೋರಿಸಿ—''ದುರ್ಜಯಸಿಂಹನನ್ನು ಸೆರೆಯಲ್ಲಿಟ್ಟಿರುವ ಕೋಣೆಯು ಎತ್ತಕಡೆ

ಗಿರುವದು'' ಎಂದು ಪ್ರಶ್ನ ಮಾಡಿದಳು. ಕರ್ಮ ಧರ್ಮ ಸಂಯೋಗದಿಂದ ಆ ವೃದ್ಧ ವಯಸ್ಕಿಯು ಸೆರೆಮನೆಯ ಕಾವಲುಗಾರರ ಮುಖ್ಯನೇ ಆಗಿದ್ದನು. ಆತನ ಹೆಸರು ಕ್ಷೇಮಸಿಂಗ. ಕ್ಷೇಮಸಿಂಗನಿಗೆ ಆ ತಾಪಸಿಯಾದ ತರುಣ ರಮಣಿಯನ್ನು ನೋಡಿ ಸಮಾಧಾನವಾದದ್ದಲ್ಲದೆ, ಆಶ್ಚರ್ಯವೂ ಆಯಿತು; ಯಾಕಂದರೆ ಇಂಥ ಅತುಲನೀಯ ಸುಂದರ ಸ್ತ್ರೀಯು ತಾಪಸಿಯ ವೇಷ ತಾಳುವದು ಅಪೂರ್ವವೇ ಆಗಿತ್ತು. ಕ್ಷೇಮಸಿಂಗನು ಸ್ವಲ್ಪ ಹೊತ್ತು ಮೌನದಿಂದ ಆಲೋಚಿಸಿ ಆಕೆಯನ್ನು ಕುರಿತು—''ತಂಗೀ, ನೀನು ಯಾರು? ಎಲ್ಲಿಂದ ಬಂದೆ?'' ಎಂದು ಪ್ರಶ್ನಮಾಡಿದನು. ಆಗ ಮಂದಾಕಿನಿಯು ಮೊದಮೊದಲಿಗೆ ಸ್ವಲ್ಪ ಅಂಜಿದಳು; ಆದರೆ ಕೂಡಲೆ ಆ ದಿಟ್ಟೆಯು ತನ್ನ ಭಾವೀ ಸುಖವನ್ನು ಲಕ್ಷಿಸಿ ಕ್ಷೇಮಸಿಂಗನನ್ನು ಕುರಿತು—''ನಾನು ರಾಜಾ ಮಾನಸಿಂಹರ ಮಹಾಲಿನೊಳಗಿನವಳೊಬ್ಬ ದಾಸಿಯಿರುವೆನು. ಇಲ್ಲಿ ಸೆರೆಯಲ್ಲಿರುವ ದುರ್ಜಯಸಿಂಹನು ನನ್ನ ಸನಿಯದ ಹತ್ತಗಡೆಯವನಾದದ್ದರಿಂದ, ಮಹಾರಾಜರ ಅಪ್ಪಣೆಯನ್ನು ಪಡೆದು ಆತನನ್ನು ಕಾಣುವದಕ್ಕಾಗಿ ನಾನು ಬಂದಿರುವೆನು'' ಎಂದು ಹೇಳಿದನು. ಆಗ ಪುನಃ ಕ್ಷೇಮಸಿಂಗನು ಆಕೆಯನ್ನು ಕುರಿತು—''ಯಾಕೆ? ನೀನೇಕೆ ಆತನನ್ನು ಕಾಣಬೇಕಾಗಿದೆ?'' ಎಂದು ಪ್ರಶ್ನಮಾಡಿದನು. ಅದಕ್ಕೆ ಮಂದಾಕಿನಿಯು ಕೂಡಲೆ —''ದುರ್ಜಯಸಿಂಹನಿಗೆ ಮಹಾರಾಜರ ಒಂದು ಗುಪ್ತ ಹುಕುಮನ್ನು ಹೇಳುವ ಬಿಗಿಯಾದ ಕೆಲಸವನ್ನು ನಾನು ಮಾಡಬೇಕಾಗಿದೆ'' ಎಂದು ಉತ್ತರ ಕೊಟ್ಟಳು. ಅದನ್ನು ಕೇಳಿದ ಕೂಡಲೆ ಕ್ಷೇಮಸಿಂಗನು— ''ನಿಮಗೆ ದುರ್ಜಯನಿರುವ ಕೋಣೆಯನ್ನು ತರಿಸುವೆನು ಬಾ'' ಎಂದು ಹೇಳಿ ಮಂದಾಕಿನಿಯನ್ನು ಕರಕೊಂಡು ಹೋಗಿ ದುರ್ಜಯನಿರುವ ಕೋಣೆಗೆ ಆಕೆಯನ್ನು ಮುಟ್ಟಿಸಿ, ಅಲ್ಲಿಯ ಕಾವಲುಗಾರನಿಗೆ ಸಂಕೇತದಿಂದ ಅಪ್ಪಣೆ ಮಾಡುವದನ್ನು ಮಾಡಿ ತಾನು ಹೊರಟುಹೋದನು.

ಕಾವಲುಗಾರನು ಕೋಣೆಯ ಬಾಗಿಲವನ್ನು ತೆರೆದ ಕೂಡಲೆ ಮಂದಾಕಿನಿಯು ಆನಂದದಿಂದ ಕೋಣೆಯನ್ನು ಹೊಕ್ಕಳು. ತನ್ನ ಪತಿಯ ಮುಖಾವಲೋಕನವನ್ನು ಯಾವಾಗ ಮಾಡೇನೆಂಬ ಆತುರತೆಯಲ್ಲಿ ಅನ್ಯ ವಿಚಾರಗಳಾವವೂ ಆಕೆಯ ಮನಸ್ಸಿನಲ್ಲಿ ಬರಲಿಲ್ಲವು. ನೆಟ್ಟಗೆ ಆಕೆಯು ಪತಿಯು ಮಲಗಿದಲ್ಲಿಗೆ ಹೋದಳು. ಆಗ ಸಣ್ಣದೊಂದು ಹಾಸಿಗೆಯ ಮೇಲೆ ಗೋಡೆಯ ಕಡೆಗೆ ಮೋರೆಮಾಡಿ ಮಲಗಿದ್ದ ದುರ್ಜಯಸಿಂಹನಿಗೆ ಗಾಢವಾದ ನಿದ್ರೆಯು ಹತ್ತಿತ್ತು. ಆಗ ಪತಿದರ್ಶನೋತ್ಸುಕಳಾದ ಆ ತರುಣೆಯು ಅತ್ತಿತ್ತ ನೋಡಿ ಪತಿಯನ್ನು ಮೈದಡವಿ ಎಬ್ಬಿಸಿದಳು. ಹೀಗೆ ಅಕಸ್ಮಾತ್ ಎಬ್ಬಿಸಿದವರಾರೆಂದು ನಿದ್ರೆಗಣ್ಣಿನ ದುರ್ಜಯನು ಸಿಟ್ಟಿನಿಂದ ನೋಡಲು, ತಾಪಸ ವೇಷದ ಮಂದಾಕಿನಿಯ ಗುರುತು ಒಮ್ಮೆಲೆ ಆತನಿಗೆ ಹತ್ತಲೊಲ್ಲದು. ಇಂಥ ಸುಂದರಾಕಾರದ ತಾಪಸ ವೇಷದ ತರುಣೆಯು ಇಲ್ಲಿ ಯಾಕೆಂದು ದುರ್ಜಯನು ಆಶ್ಚರ್ಯದಿಂದ ಮಂದಾಕಿನಿಯನ್ನು ನೋಡತೊಡಗಿದನು. ಆಗ ಆ ತರುಣೆಯು ಮಂದಹಾಸದಿಂದ— ''ನಾಥ, ನನ್ನ ಗುರುತು ಹತ್ತಲೊಲ್ಲದೇನು?'' ಎಂದು ಪ್ರಶ್ನ ಮಾಡಲು, ದನಿಯ ಗುರುತು ಹಿಡಿದು ಮತ್ತಿಷ್ಟು ಆಶ್ಚರ್ಯಪಟ್ಟು, ದುರ್ಜಯನು ಅತ್ಯಾತುರದಿಂದ –

ದುರ್ಜಯ—ಸುಂದರೀ, ನೀನು ಇಲ್ಲಿಗೆ ಹೇಗೆ ಬಂದೆ? ಇಲ್ಲಿ ನಿನ್ನ ಕೆಲಸವಾದರೂ ಏನು?

ಮಂದಾಕಿನಿ—(ಮೂಗಿನ ಮೇಲೆ ಬೆರಳಿಟ್ಟುಕೊಂಡು) ಪ್ರಿಯಾ, ಮೆಲ್ಲನೆ ಮಾತಾಡಬೇಕು. ಕಾವಲುಗಾರನು ಬಾಗಿಲಲಿಲ್ಲಯೇ ನಿಂತಿರುವನು. ನಾನು ನಿಮ್ಮನ್ನು ಬಿಡಿಸುವದಕ್ಕಾಗಿ ಇಲ್ಲಿಗೆ ಬಂದಿರುವೆನು.

ದುರ್ಜಯ—ನೀನು ನನ್ನನ್ನು ಬಿಡಿಸುವ ಬಗೆಹೇಗೆ?

ಮಂದಾಕಿನಿ—(ಉಂಗುರವನ್ನು ಮುಂದೆಮಾಡಿ) ಇದು ನೊಡಿರಿ.

ದುರ್ಜಯ—(ಆಶ್ಚರ್ಯದಿಂದ) ಎಲ! ಖುಸ್ರುವಿನ ಹೆಸರಿನ ಈ ಉಂಗುರವು ನಿನ್ನ ಬಳಿಯಲ್ಲಿ ಹೇಗೆ ಬಂದಿತು?

ಮಂದಾಕಿನಿ—ಶಹಾಜಾದಾನೇ ನನಗೆ ಇದನ್ನು ಕೊಟ್ಟನು.

ದುರ್ಜಯ—ಅದೇಕೆ ಕೊಟ್ಟನು.

ಮಂದಾಕಿನಿ—ನಿಮ್ಮ ಬಿಡುಗಡೆಯಾಗಬೇಕೆಂದು.

ದುರ್ಜಯ—ಮಾನಸಿಂಹರ ರುಜುವಿನ ಆಜ್ಞಾಪತ್ರವೆಲ್ಲಿದೆ?

ಮಂದಾಕಿನಿ—ಈ ಉಂಗುರವೇ ನಿಮ್ಮ ಬಿಡುಗಡೆಯಾಗುವ ಸಾಧನವು. ಬೇರೆ ಆಜ್ಞಾಪತ್ರದ ಹಾದಿಯ ನೋಡುವ ಕಾರಣವಿಲ್ಲ.

ದುರ್ಜಯ—ಮಂದಾಕಿನೀ, ಅದೇನೆ ಇರಲಿ, ಈ ಉಂಗುರವನ್ನು ಖುಸ್ರುವು ತಾನಾಗಿ ನಿನಗೆ ಕೊಟ್ಟನೆಂಬ ಮಾತನ್ನು ನಾನು ನಂಬಲಾರೆನು. ನನ್ನ ಶತ್ರುವಾದ ಖುಸ್ರುವು ನನ್ನ ಬಿಡುಗಡೆಗಾಗಿ ತನ್ನ ಈ ಉಂಗುರವಕೊಟ್ಟು ತನ್ನ ಮಾವನಾದ ಮಾನಸಿಂಹನ ರೋಷಕ್ಕೆ ಗುರಿಯಾಗುವ ಸಾಹಸವನ್ನು ಮಾಡಬಹುದೇ? ನನ್ನ ಸೇಡು ತೀರಿಸಿಕೊಳ್ಳುವ ಹಟವನ್ನು ಖುಸ್ರುವು ಚನ್ನಾಗಿ ಅರಿತಿರುವನು. ತನ್ನ ತಂದೆಯನ್ನು ಕೊಲ್ಲಿಸಲು ಮಾಡಿದ ಯತ್ನವನ್ನು ನಾನು ಆತನ ತಂದೆಯಾದ ಸೇಲೀಮನ ಮುಂದೆ ಹೇಳುವೆನೆಂಬ ಭಯವು ಖುಸ್ರುವಿಗೆ ಪೂರಾ ಇರುತ್ತದೆ. ಇದೊಂದೇ ಮಾತನ್ನು ಸಪ್ರಮಾಣವಾಗಿ ನಾನು ಸೇಲೀಮನಿಗೆ ಸಿದ್ದಮಾಡಿ ಕೊಟ್ಟರೆ, ಸೇಲೀಮನು ನನ್ನ ನಂಬಿಗೆಯ ಪ್ರಭುವಾಗುವಲ್ಲಿ ಸಂಶಯವಿಲ್ಲ. ಒಟ್ಟಿಗೆ ಆ ಖುಸ್ರುವನ್ನು ನಾಶಮಾಡಲು ನಾನು ಮಾಡಿದ ಪ್ರತಿಜ್ಞೆಯನ್ನು ಖುಸ್ರುವು ಮರೆಯುವಂತೆ ಇಲ್ಲದ್ದರಿಂದ, ಆ ತರುಣ ಶಹಾಜಾದಾನು ನನ್ನ ಬಿಡುಗಡೆಗಾಗಿ ಹೀಗೆ ಉಂಗುರುವನ್ನು ತಾನಾಗಿ ಎಂದೂ ಕೊಡಲಾರನು; ಆದ್ದರಿಂದ ನೀನು ಉಂಗುರವನ್ನು ಹೇಗೆ ದೊರಕಿಸಿದೆಯೆಂಬದನ್ನು ನಿಜವಾಗಿ ಹೇಳುವತನಕ ನಿನ್ನ ಯಾವ ಮಾತನ್ನೂ ನಾನು ಕೇಳಿಕೊಳ್ಳಲಾರೆನು.

ದುರ್ಜಯಸಿಂಹನ ಈ ನಿಶ್ಚಯವನ್ನು ನೋಡಿ ಮಂದಾಕಿನಿಯು ವಿಚಾರಮಗ್ನಳಾದಳು. ಈ ಪ್ರಸಂಗದಲ್ಲಿ ತನ್ನ ಪರಿಯನ್ನು ವಂಚಿಸುವದು ಶಕ್ಯವಲ್ಲವೆಂತಲೂ, ವಂಚಿಸುವದು ಧರ್ಮವೂ ಅಲ್ಲವೆಂತಲೂ ತಿಳಿದು, ಉಂಗುರವನ್ನು ಸಂಪಾದಿಸುವಾಗ ನಡೆದ ಸಂಗತಿಯನ್ನೆಲ್ಲ ಆಕೆಯು ದುರ್ಜಯನ ಮುಂದೆ ಹೇಳಿದಳು. ಅದನ್ನೆಲ್ಲ ದುರ್ಜಯಸಿಂಹನು ಶಾಂತ ಮನಸ್ಸಿನಿಂದ ಕೇಳಿ

ಕೊಂಡು, ಗಂಭೀರ ಸ್ವರದಿಂದ ಹೆಂಡತಿಯನ್ನು ಕುರಿತು—''ಪ್ರಿಯೇ, ಈ ಕ್ಷಣಭಂಗುರ ದೇಹದ ಸಲುವಾಗಿ ನೀನೇಕೆ ಅವನ ಬಳಿಯಲ್ಲಿ ಬಿಕ್ಕೆ ಬೇಡುವದಕ್ಕೆ ಹೋದೆ? ನಿನ್ನಂಥ ತೇಜಸ್ವಿನಿಯಾದ ಸ್ತ್ರೀಗೆ ಈ ಬಗೆಯ ಹೀನತನವನ್ನು ಸ್ವೀಕರಿಸುವ ಹಾಗೆ ಯಾಕಾಯಿತು? ಪ್ರಿಯೇ, ಖುಸ್ರುವು ನನ್ನನ್ನು ಅವಮಾನಗೊಳಿಸಿದ ಶತ್ರುವು; ಅದರಂತೆ, ಮಾನಸಿಂಹ ಮಹಾರಾಜರು ನ್ಯಾಯಾ ನ್ಯಾಯಗಳನ್ನು ವಿಚಾರಿಸದೆ ನನ್ನನ್ನು ಪ್ರತಿಬಂಧದಲ್ಲಿರಿಸಿದ ಪ್ರಭುಗಳು; ಆದ್ದರಿಂದ ಇವರಿಬ್ಬರಲ್ಲಿ ನಾನು ಯಾರನ್ನೂ ಪ್ರಾರ್ಥಿಸಲಿಕ್ಕಿಲ್ಲ.

ಈ ಸ್ವಾಭಿಮಾನಿಯಾದ ದುರ್ಜಯನಿಗೆ ಯಾರ ದಯೆಯ ಅವಶ್ಯಕತೆಯೂ ಇರುವದಿಲ್ಲ. ಮಂದಾಕಿನೀ, ನನ್ನ ಸಲುವಾಗಿ ನೀನು ವ್ಯರ್ಥವಾಗಿ ಇಷ್ಟು ಕಷ್ಟಪಟ್ಟು ಯಾಕೆ ಹೀನವೃತ್ತಿಯನ್ನು ತಾಳಿದೆ?'' ಎಂದು ಕೇಳಲು, ಪತಿಯ ಈ ಮಾತುಗಳನ್ನು ಕೇಳಿ ಮಂದಾಕಿನಿಯು ಅಸಮಾಧಾನ ಪಟ್ಟು ಸದ್ಗದಿತ ಸ್ವರದಿಂದ ಪತಿಯನ್ನು ಕುರಿತು–ನಾಥನೇ, ನಾನು ಹೀಗೆ ಯಾಕೆ ಮಾಡಿದೆನೆಂಬದನ್ನು ನನ್ನ ಬಾಯಿಂದಲೇ ಕೇಳಬೇಕೆಂದು ತಾವು ಇಚ್ಛಿಸುತ್ತಿರುವಿರೋ? ತಮ್ಮ ಜೀವನ ಸರ್ವಸ್ವಕ್ಕಾಗಿ ನಾನು ಬೇಕಾದದ್ದು ಮಾಡೇನು! ನನ್ನ ಶ್ರೇಷ್ಠತ್ವ, ಕನಿಷ್ಠತ್ವಗಳು, ಇಷ್ಟ–ಅನಿಷ್ಟಗಳು, ಮಾನ–ಅಪಮಾನಗಳು, ಪುಣ್ಯ ಪಾಪಗಳು ಇವೆಲ್ಲ ತಮ್ಮನ್ನೇ ಅವಲಂಬಿಸಿ ಇರುವವು. ಪ್ರಿಯಕರಾ, ಇನ್ನು ನೀವು ವಿಲಂಬ ಮಾಡಬೇಡಿರಿ. ನಾನು ಇಲ್ಲಿಗೆ ಬಂದು ಬಹಳ ಹೊತ್ತಾಯಿತು. ಈಗ ಕಳೆದು ಹೋಗುತ್ತಿರುವ ಒಂದೊಂದು ಕ್ಷಣವು ಬಹಳ ಬೆಲೆಯುಳ್ಳ ದ್ದಾಗಿರುವದು. ನಿಮ್ಮ ಎಲ್ಲ ಉಡಿಗೆ–ತೊಡಿಗೆಗಳನ್ನು ನನಗೆ ಕೊಟ್ಟು, ನನ್ನ ಈ ಕಫನಿ ಮೊದ ಲಾದವುಗಳನ್ನು ನೀವು ಧರಿಸಿರಿ. ಈಗ ಸಂಧ್ಯಾಕಾಲವಾಗಿರುವದರಿಂದ ನಾಲ್ಕು ಕಡೆಗೆ ಕಗ್ಗತ್ತಲೆಯು ಮುಸುಕತೊಡಗಿದೆ. ಈ ಕತ್ತಲೆಯಲ್ಲಿ ನಿಮ್ಮನ್ನು ಯಾರೂ ಗುರುತಿಸಲಿಕ್ಕಿಲ್ಲ. ಕಾವಲುಗಾರರಿಗೆ ಈ ಉಂಗುರವನ್ನು ತೋರಿಸಿದರೆ, ಕೂಡಲೆ ಅವರು ಬಾಗಿಲು ತೆರೆದು ಕೊಡುವರು; ಅದರಿಂದ ನೀವು ಯಾವ ತೊಂದರೆಯೂ ಇಲ್ಲದೆ ರತನಗಡದಿಂದ ಹೊರ ಬೀಳುವಿರಿ.

ತನ್ನ ಹೆಂಡತಿಯ ತ್ಯಾಗವನ್ನೂ, ಪ್ರೇಮಲ ಸ್ವಭಾವವನ್ನೂ ನೋಡಿ ದುರ್ಜಯನು ಬಹಳ ಸಮಾಧಾನಪಟ್ಟನು; ಆದರೆ ಆ ಸಮಾಧಾನವನ್ನು ಆತನು ಮನಸ್ಸಿನಲ್ಲಿಯೇ ಇಟ್ಟುಕೊಂಡು ಕಂಪಿತಸ್ವರದಿಂದ–ಪ್ರಿಯ ಮಂದಾಕಿನೀ, ಹೀಗೆ ನಾನು ಹೊರಟುಹೋದರೆ ನಿನ್ನ ಗತಿ ಯೇನಾದೀತು?'' ಎಂದು ಕೇಳಲು, ಮಂದಾಕಿನಿಯು–ನಾಥ, ನನ್ನ ಗತಿಯೇನು, ಅದು ಆಗುವದೇನು? ನಾನು ಆಗುವದನ್ನೆಲ್ಲ ಮೊದಲೇ ಗೊತ್ತು ಮಾಡಿ ಇಟ್ಟುಕೊಂಡಿರುವೆನು. ಇಂದು ರಾತ್ರಿ ನಮ್ಮ ಈ ಅದಲು ಬದಲಿನ ಸುದ್ದಿಯು ಯಾರಿಗೂ ಗೊತ್ತಾಗುವದಿಲ್ಲ, ನಾಳೆ ಬೆಳಗಾದ ಬಳಿಕ ಜನರಿಗೆ ಗೊತ್ತಾಗುವದು; ಆಮೇಲೆ ಏನಾದದ್ದನ್ನು ನಾನು ಅನುಭವಿಸುವೆನು. ಪ್ರಿಯಕರಾ, ಮಾನಸಿಂಹರವರು ಸ್ತ್ರೀಹತ್ಯ ಮಾಡುವದಿಲ್ಲವಾದ್ದರಿಂದ ನನ್ನ ಸಲುವಾಗಿ ತಾವು ಅಷ್ಟು ಚಿಂತೆಯನ್ನು ಮಾಡಬಾರದು. ಎಂದು ನುಡಿಯಲು, ದುರ್ಜಯಸಿಂಹನು ಕೆಲವು ಹೊತ್ತು ಸ್ತಬ್ಧನಾಗಿದ್ದು ವಿಚಾರ ಮಾಡಿ ಪುನಃ ಮಂದಾಕಿನಿಯನ್ನು ಕುರಿತು – ಹೃದಯೇಶ್ವರೀ, ನೀನು

ಭ್ರಮೆಗೆ ಒಳಗಾಗಿರುವೆ. ವಿಧಾತೃವು ಈ ದುರ್ಜಯಸಿಂಹನ ಹೃದಯವನ್ನು ಎಷ್ಟು ಕಠೋರ ವಾಗಿ ಮಾಡಿರುವನೆಂಬದರ ವಿಚಾರವನ್ನು ನೀನು ಇನ್ನೂ ಮಾಡಿರುವದಿಲ್ಲವೆಂಬಂತೆ ತೋರುತ್ತದೆ. ನನ್ನ ಪರಿಚಯವು ನಿನಗೆ ಇನ್ನೂ ಚನ್ನಾಗಿ ಆಗಿರುವಂತೆ ತೋರುವದಿಲ್ಲ. ನನ್ನ ಶತ್ರುವಾದ ಖುಸ್ರುವು ದಯತೋರಿಸಿ ನಿನಗೆ ಉಂಗುರ ಕೊಡುವನು, ನಾನು ಸ್ತ್ರೀವೇಷವನ್ನು ಧರಿಸಿ ಉಂಗುರದ ಸಹಾಯದಿಂದ ಸೆರೆಮನೆಯಿಂದ ಪಾರಾಗಿ ಹೋಗಬೇಕೆಂದು ನೀನು ಹೇಳುತ್ತಿ; ಆದರೆ ಇಂತ ಹೀನತರದ ಕೃತಿಯು ದುರ್ಜಯಸಿಂಹನಿಂದ ಎಂದೂ ಆಗಲಿಕ್ಕಿಲ್ಲ. ರಜಪೂತ ವೀರರು ಹೀಗೆ ಓಡಿಹೋಗಿ ತಮ್ಮ ಜೀವವನ್ನು ಉಳಿಸಿಕೊಳ್ಳುತ್ತಿರುವದಿಲ್ಲ; ಆದ್ದರಿಂದ ಪ್ರಿಯ ಮಂದಾಕಿನೀ, ನಿನ್ನ ಈ ಪ್ರಯತ್ನವೂ ವ್ಯರ್ಥವಾಯಿತೆಂದು ತಿಳಿ. ನಾನು ಏಕಲಿಂಗಜಿಯ ಆಣೆಮಾಡಿ ಹೇಳುವೆನೇನಂದರೆ–ಇಂಥ ಹೀನೋಪಾಯದಿಂದ ನಾನು ಎಂದೂ ಪಾರಾಗಿ ಹೋಗುವದಿಲ್ಲ; ಆದ್ದರಿಂದ ನೀನು ಹೋಗು; ಬಂದಹಾಗೆ ತಿರುಗಿ ಹೋಗು, ನನ್ನ ಮೇಲೆ ನಿನ್ನ ನಿಜವಾದ ಪ್ರೇಮವಿರುತ್ತಿದ್ದರೆ, ಹಾಗು ನಿಜವಾಗಿಯೇ ನೀನು ನನ್ನನ್ನು ಪೂಜ್ಯನೆಂದು ಭಾವಿಸುತ್ತಿದ್ದರೆ ಅವಸರ ಮಾಡಬೇಡ. ಆಗುವದನ್ನೆಲ್ಲ ನೋಡುತ್ತಲಿರು, ಕೈಕಾಲುಗೆಡಬೇಡ. ನಾನು ನಿನ್ನವನಿರುವೆನು; ಮತ್ತು ಕಡೆಗೂ ನಿನ್ನವನಾಗಿಯೇ ಇರುವೆನು. ಪ್ರಾಚೀನ ಕರ್ಮದಿಂದ ಅಥವಾ ನನ್ನ ಮೂರ್ಖತನದಿಂದ ಒಂದು ಪಕ್ಷದಲ್ಲಿ ಈ ಲೋಕದೊಳಗೆ ನಿನ್ನ ಸಹವಾಸದ ಯೋಗವು ಒದಗಿಬಾರದಿದ್ದರೂ ಸ್ವರ್ಗಲೋಕವಿರುವದು,. ಸ್ವರ್ಗಲೋಕದೊಳಗಿನ ನಂದನವನ ವಿರುವದು, ಅಲ್ಲಿ ಪೂರ್ಣ ಸ್ವಾತಂತ್ರ್ಯವಿರುವದು; ಅಲ್ಲಿ ನಮ್ಮ ವಿಲಾಸಕ್ಕೆ ಯಾರೂ ಪ್ರತಿಬಂಧ ಮಾಡಲಾರರು; ಆದರೆ ಪ್ರಿಯೇ, ಆ ಸ್ವರ್ಗಪ್ರಾಪ್ತಿಗಾಗಿ ಧರ್ಮದಂತೆ ಆಚರಿಸುವದನ್ನು ಮಾತ್ರ ನಾವು ತಪ್ಪೋಣ ಬೇಡ. ನಮ್ಮ ಕ್ಷತ್ರಿಯ ಧರ್ಮಾಚರಣೆಯಲ್ಲಿ ದೇಹ ಪಾತವಾದರೂ ಚಿಂತೆಯಿಲ್ಲ. ಧಾರ್ಮಿಕ ದೇಹಪಾತವು ಬೇಗನೆ ಆದಷ್ಟು ನಮಗೆ ಸ್ವರ್ಗಪ್ರಾಪ್ತಿಯ ಕಾಲವು ಸಮೀಪಿಸುವದೆಂದು ತಿಳಿ; ಆದ್ದರಿಂದ ಉಜ್ವಲ ಪಾತ್ರ ಧರ್ಮಕ್ಕೆ ವಿರುದ್ಧವಾಗಿ ಈ ಕಳ್ಳತನದಿಂದ ಓಡಿ ಮಾತ್ರ ಹೋಗಲಾರೆನು. ರಜಪೂತ ವೀರರು ಮರಣದ ಹಂಗನ್ನು ಸರ್ವಥಾ ಇಡುವದಿಲ್ಲ. ಹೀಗೆ ಅಯೋಗ್ಯರೀತಿಯಿಂದ ಬದುಕುವದಕ್ಕಿಂತ ಗೌರವದಿಂದ ಸಾಯುವದೇ ಶ್ರೇಯಸ್ಕರ ವೆಂದು ನೀನು ತಿಳಿ. ನಿನ್ನ ದುರ್ಜಯಸಿಂಹನು ಹೇಗಾದರೂ ಬದುಕುವದಕ್ಕಿಂತ ನಿಜವಾದ ಕ್ಷತ್ರಿಯನೆನಿಸಿಕೊಳ್ಳಲಿಕ್ಕೆ ಬಹಳವಾಗಿ ಮೆಚ್ಚಿರುವನು. ಒಟ್ಟಿಗೆ, ಶತ್ರುವಿನಿಂದ ಅನುಗ್ರಹಿತನಾಗಿ ಹೆಂಗಸಿನಂತೆ ಓಡಿಹೋಗುವದಕ್ಕಿಂತ, ಶೌರ್ಯದಿಂದ ಪ್ರಾಪ್ತವಾದ ಮರಣವು ನನಗೆ ನೂರು ಪಟ್ಟು ಹೆಚ್ಚಿನದಾಗಿರುವದು.

ಹೀಗೆ ನುಡಿಯುವಾಗ ದುರ್ಜಯಸಿಂಹನ ಕಣ್ಣುಗಳು ಕೆಂಪಡರಿದವು. ಆತನ ಸ್ವರವು ತೀವ್ರವೂ, ಸ್ವಾಭಿಮಾನಪೂರ್ಣವೂ. ಆಯಿತು, ದುರ್ಜಯಸಿಂಹನ ಈ ಅಭಿಮಾನದ ಸ್ವಭಾವವನ್ನೂ, ಆತನ ಅಸಹಿಷ್ಣುತೆಯನ್ನೂ ಮಂದಾಕಿನಿಯು ಪೂರಾ ಅರಿತಿದ್ದರೂ, ಸ್ತ್ರೀಯರ ಹೃದಯದಲ್ಲಿರುವ ಪತಿಯ ಸಂಬಂಧದ ಸ್ವಾಭಾವಿಕವಾದ ಶ್ರದ್ಧೆಯ ಮೂಲಕ ಆಕೆಯು ಮಾಡತಕ್ಕದ್ದನ್ನು ಮಾಡಿದಳು. ತನ್ನ ಪ್ರಯತ್ನವು ವ್ಯರ್ಥವಾದದ್ದನ್ನು ನೋಡಿ ಕೋಮಲಹೃದಯದ

ಆಕೆಯ ಕಣ್ಣುಗಳೊಳಗಿಂದ ಬಳಬಳ ನೀರುಗಳು ಉದುರಿದವು. ಛಿನ್ನ ಮುಖಮುದ್ರೆಯಿಂದ ಆಕೆಯು ದೈನ್ಯಸ್ವರದಿಂದ ''ನಾಥ, ನನ್ನ ಶ್ರಮವು ವ್ಯರ್ಥವಾದದ್ದಕ್ಕಿಂತ, ತಮ್ಮ ಕಾರಾಗೃಹ ವಾಸದ ಕಷ್ಟವು ತಪ್ಪಲಿಲ್ಲೆಂಬ ವಿಚಾರದಿಂದ ನನಗೆ ಬಹಳ ದುಃಖವಾಗಿದ್ದರೂ, ತಮ್ಮ ಯೋಗದಿಂದ ವೀರಪತ್ನಿಯೆನಿಸುವ ನಾನು, ತಮ್ಮ ಕ್ಷಾತ್ರತೇಜಕ್ಕಾಗಿ ಸಮಾಧಾನಪಟ್ಟು ತಮ್ಮ ಅಪ್ಪಣೆಯಂತೆ ಹೊರಟು ಹೋಗುವೆನು; ಆದರೆ ನನ್ನ ಈ ಎಲ್ಲ ಕಷ್ಟಕ್ಕೆ ಮೂಲಕಾರಣನಾದ ಖುಸ್ರುವಿನ ಮೇಲಿನ ರೊಚ್ಚು ಮಾತ್ರ ನನ್ನಲ್ಲಿ ಹೆಚ್ಚತೊಡಗಿರುವದು. ಆ ನೀಚ ವೃತ್ತಿಯ ಶಹಾಜಾದಾನು ಪರಸ್ತ್ರೀಯರ ಅಭಿಲಾಷೆಯೆಂಬ ತನ್ನ ಪಾಪ ರೂಪ ಭಡಾಗ್ನಿಯಿಂದ ದಗ್ಧನಾಗುತ್ತಿರುವಾಗ ನಾನು ಆ ಅಗ್ನಿಗೆ ಗಾಳಿ ಬೀಸದೆ ಮಾತ್ರ ಇರಲಾರೆನು. ಪ್ರಾಣಪ್ರಿಯಾ, ವೀರಪತ್ನಿಗೆ ವಿರುದ್ಧವಾದ ಆಚರಣೆಯು ನಾನು ಇನ್ನು ಮೇಲೆ ಎಂದೂ ಆಚರಿಸಲಿಕ್ಕಿಲ್ಲ ವೆಂಬದನ್ನು ನೆನಪಿನಲ್ಲಿಡಿರಿ; ಅದರಂತೆ ತಮ್ಮ ಕೀರ್ತಿಗೆ ಕಲಂಕವುಂಟಾಗುವಂಥ ಆಚರಣೆಯು ಇನ್ನು ನನ್ನಿಂದ ಎಂದೂ ಆಗಲಾರದು. ಅಂಥ ಹೀನವೃತ್ತಿಯಿಂದ ಆಚರಿಸಲಿಕ್ಕೆಲತಮಗೂ ನಾನು ಇನ್ನು ಆಗ್ರಹ ಮಾಡಲಿಕ್ಕಿಲ್ಲ, ಎಂದು ನುಡಿದು, ಮಂದಾಕಿನಿಯು ನಿರಾಶೆಯಿಂದ ಒಬ್ಬಾನೊಬ್ಬ ಉನ್ಮಾದಿನಿಯಂತೆ ಆ ಕೋಣೆಯೊಳಗಿಂದ ತಟ್ಟನೆ ಹೊರಟು ಹೋಗಿಬಿಟ್ಟಳು.

ಮಾಡಿದ್ದೊಂದು ಆದದ್ದೊಂದು!

ಒಳ್ಳೆಯದನ್ನು ಮಾಡಬೇಕೆಂದು ಮನುಷ್ಯನು ಮಾಡುವ ಯತ್ನವು ಯಾವಾಗಲೂ ಸಫಲವೇ ಆಗುವದೆಂದು ಹೇಳಲಾಗುವದಿಲ್ಲ; ಒಳ್ಳೆಯದನ್ನು ಮಾಡಹೋದಾಗ ಒಮ್ಮೊಮ್ಮೆ ಕಡೆಕೂ ಆಗುವದುಂಟು. ನಮ್ಮ ಸಂಸಾರವು ಸುಖಮಯವಾಗಬೇಕೆಂತಲೂ, ನಾವು ಸುಸಂಪನ್ನ ರಾಗಬೇಕೆಂತಲೂ ಇಚ್ಛಿಸುತ್ತಿರುವೆವು; ಆ ಇಚ್ಛೆಯಂತೆ ಬಹಳವಿಲ್ಲ ಸ್ವಲ್ಪವಾದರೂ ನಾವು ನಮ್ಮತಿಳುವಳಿಕೆಯಂತೆ ಯತ್ನಿಸುತ್ತಲೂ ಇರುವೆವು; ಆದರೆ ನಮ್ಮ ದುರ್ದೈವದಿಂದಲೋ, ಅಥವಾ ದಿಕ್ಕು ತಪ್ಪಿದ ನಮ್ಮ ಆಚರಣೆಯಿಂದಲೋ ನಮ್ಮ ಅನುಭವಕ್ಕೆ ಒಟ್ಟಿನಿಂದ ಸಂಸಾರವು ದುಃಖಮಯವೆಂತಲೇ ತೋರುವದು. ಇದೇ ಸ್ಥಿತಿಯು ಈಗ ಮಂದಾಕಿನಿಯದಾಗಿತ್ತು. ಆಕೆಯು ತನ್ನ ಗಂಡನನ್ನು ಬಿಡಿಸಿಕೊಂಡು ಬಂದು ಆತನೊಡನೆ ಎಲ್ಲಿಗಾದರೂ ದೇಶಾಂತರಕ್ಕೆ ಹೋಗಿ ಅಲ್ಲಿ ಸುಖಸಮಾಧಾನಗಳಿಂದ ಸಂಸಾರ ಮಾಡಬೇಕೆಂದು ಮಾಡಿದ್ದಳು; ಆದರೆ ಆಕೆಗೆ ಸುಖದ ಹಾದಿಯು ನೀಗುವದರ ಬದಲು, ಆಕೆಯು ನಿರಾಶೆಯ ತಗ್ಗಿನಲ್ಲಿ ಹೆಚ್ಚು ದುಃಖಪಡುತ್ತ ಬಿದ್ದುಕೊಳ್ಳಬೇಕಾಯಿತು. ಈಗ ಪ್ರಸಂಗದಲ್ಲಿ ಮತ್ತೊಬ್ಬ ಸಾಮಾನ್ಯ ಸ್ತ್ರೀಯಾಗಿದ್ದರೆ ಕೈಕಾಲುಗೆಟ್ಟು ಹೊಟ್ಟೆಬೇನೆ ಹಚ್ಚಿಕೊಂಡು ಕೊರಗುತ್ತ ಸತ್ತುಹೊಗುವ ಪ್ರಸಂಗವೂ ಬರಬಹುದಾಗಿತ್ತು; ಆದರೆ ಮಂದಾಕಿನಿಯು ಕೆಚ್ಚೆದೆಯವಳು; ಅತ್ಯಂತ ಆಶಾವಾದಿಯೂ;

ದೃಢನಿಶ್ಚಯದವಳು; ಮಹಾ ಪೌರುಷಿಯು! ಅಂತೇ ತನ್ನ ಪತಿಯು ತನ್ನನ್ನು ನಿರಾಶೆಗೊಳಿಸಿದ್ದಕ್ಕಾಗಿ ಕೈಕಾಲು ಗೆಡದೆ ಹೆಚ್ಚು ಸತ್ವದಿಂದ ಕಾರ್ಯವನ್ನು ಸಿದ್ಧಿಗೆ ಒಯ್ಯಲು ನಿಶ್ಚಯಿಸಿದಳು. ನಮ್ಮಂಥ ಅಹಂಕಾರಿಗಳಾದ ಸಾಂಸಾರಿಕರಲ್ಲಿ ಇಂಥ ಮಂಡತನವಿಲ್ಲದಿದ್ದರೆ ನಡೆಯದು. ಹಿಂದೆ ಹೇಳಿದಂತೆ ಮಂದಾಕಿನಿಯು ಉದ್ದಿಷ್ಟ ಕಾರ್ಯದ ಸಿದ್ಧಿಯನ್ನು ಪಡೆಯದೆ ಪತಿಯಿಂದ ಹೆಸರಿಡಿಸಿಕೊಂಡದ್ದಕ್ಕಾಗಿ ಪಶ್ಚಾತ್ತಾಪ ಪಡುತ್ತ ರತನಗಡದ ಬಾಗಿಲಿಗೆ ಬರುತ್ತಿರಲು, ಆ ಬಿಳಿಯ ಗಡ್ಡದ ಕ್ಷೇಮಸಿಂಗನು ಆಕೆಯನ್ನು ಅಡ್ಡಗಟ್ಟಿ ನಿಂತು ಗಂಭೀರ ಸ್ವರದಿಂದ— ''ತಂಗೀ, ಮಾನಸಿಂಹ ಮಹಾರಾಜರವರು ನಿನ್ನನ್ನು ಕರೆದಿರುವರು! ಅವರು ಕೋಟೆಯ ಗೋಡೆಯ ಮೇಲಿನ ನಿರೀಕ್ಷಣ ಗೃಹದಲ್ಲಿರುತ್ತಾರೆ ನಡೆ.'' ಎಂದು ಹೇಳಿದನು. ಮಾನಸಿಂಹರ ಹೆಸರು ಕೇಳಿದ ಕೂಡಲೆ ಆ ದುರ್ದೈವಿಯಾದ ಮಂದಾಕಿನಿಯ ಹೃದಯವು ಕಂಪಿಸಿ, ಆಕೆಯ ಮುಖಕ್ಕೆ ಪ್ರೇತಕಳೆಯೇರಿತು. ತಾನು ಸುಳ್ಳೊಂದು ಸೊಟ್ಟೊಂದು ಹೇಳಿ, ದುರ್ಗದ ಕಾವಲುಗಾರನನ್ನು ಮೋಸಗೊಳಿಸಿದ್ದಕ್ಕಾಗಿಯೂ, ಪತಿಯನ್ನು ಬಿಡಿಸುವ ರಾಜದ್ರೋಹವನ್ನು ಮಾಡಹೋದದ್ದಕ್ಕಾಗಿಯೂ ಕಠಿಣ ಹೃದಯದ ಮಾನಸಿಂಹನು ತನಗೂ, ವಿಶೇಷವಾಗಿ ತನ್ನ ಪತಿಗೂ ಯಾವ ಶಿಕ್ಷೆ ವಿಧಿಸುವನೋ ಎಂದು ಆಕೆಯು ಘೋರವಾಗಿ ಚಿಂತಿಸತೊಡಗಿದಳು. ಮಾನಸಿಂಹನ ಬಳಿಗೆ ಹೋಗಲಿಕ್ಕೆ ಆಕೆಯ ಕಾಲುಗಳೇ ಏಳದಂತಾದವು. ಆಕೆಯು ನಡುಗುವ ಧ್ವನಿಯಿಂದ ಕ್ಷೇಮಸಿಂಗನನ್ನು ಕುರಿತು—''ದಾದಾ! ನೀನು ನನ್ನ ತಂದೆಗೆ ಸಮಾನನು. ನನ್ನಂತಹ ಗಂಡು ಹೆಣ್ಣುಮಕ್ಕಳೂ ನಿನಗೆ ಇರಬಹುದು; ಆದ್ದರಿಂದ ಮಾನಸಿಂಹ ಮಹಾರಾಜರ ಬಳಿಗೆ ನಾನು ಬಾರದಂತೆ ಏನಾದರೂ ಉಪಾಯವನ್ನು ಮಾಡಬಾರದೇ? ದಾದಾ ನನ್ನನ್ನು ಹೊಟ್ಟೆಯಲ್ಲಿ ಹಾಕಿಕೋ. ನನ್ನಂಥ ಒಬ್ಬ ಸಾಮಾನ್ಯ ರಮಣಿಯ ಬಳಿಯಲ್ಲಿ ಮಹಾರಾಜರ ಕೆಲಸವೇನಿರಬಹುದು? ನಾನೊಬ್ಬ ದುರ್ದೈವಿಯಾದ ಬಡಸ್ತ್ರೀಯಿರುವೆನು, ಸಿಕ್ಕಲ್ಲಿ ತಿರುಗುತ್ತಿರುವೆನು. ಪುಣ್ಯವಂತಾ, ಮಹಾರಾಜರಲ್ಲಿಗೆ ನಾನು ಬಾರದಿದ್ದರೆ ನಡೆಯಲಿಕ್ಕಿಲ್ಲವೆ? ಅವರಿಗೆ ಏನಾದರೂ ಸಮಾಧಾನ ಹೇಳಿ ಪುಣ್ಯ ಕಟ್ಟಿಕೊಳ್ಳಬಾರದೇ? ಆ ವೀರಾಗ್ರಣಿ ಅಂಬರಾಧೀಶನ ಬಳಿಗೆ ಬರಲಿಕ್ಕೆ ನನಗೆ ಅಂಜಿಕೆ ಬರುತ್ತದೆ.'' ಅನ್ನಲು, ಕ್ಷೇಮಸಿಂಗನು–ತಂಗೀ, ನಾನು ಮಹಾರಾಜರ ಅಪ್ಪಣೆಯಂತೆ ನಡೆಯುವವನೊಬ್ಬ ದಾಸನು. ದೊಡ್ಡವರ ಮುಂದೆ ಸೇವಕರು ಹೆಚ್ಚು ಮಾತಾಡಲಿಕ್ಕೆ ಬರುವದಿಲ್ಲ. ಬಾ, ನನ್ನ ಸಂಗಡ ಬಾ; ನಾನು ಅವರ ಬಳಿಗೆ ನಿನ್ನನ್ನು ಕರಕೊಂಡು ಹೋಗುತ್ತೇನೆ.'' ಎಂದು ಹೇಳಿ ಆತನು ಮುಂದಕ್ಕೆ ಸಾಗಹತ್ತಿದನು. ಮಂದಾಕಿನಿಯು ಗತ್ಯಂತರಗಾಣದೆ ಆತನ ಬೆನ್ನುಹತ್ತಿ ನಡೆದಳು. ಗೋಡೆಯ ಹಲವು ಪಾವಟಗೆಗಳನ್ನು ಏರಿ ಹೋದಬಳಿಕ ಅವರು ಸ್ವಚ್ಛ ಪ್ರಕಾಶಬಿದ್ದಿರುವದೊಂದು ಕೋಣೆಯಲ್ಲಿ ಬಂದರು. ಅಲ್ಲಿ ಏನೋ ವಿಚಾರಮಾಡುತ್ತ ಅತ್ತಿಂದಿತ್ತ ಇತ್ತಿಂದತ್ತ ತಿರುಗಾಡುತ್ತಿದ್ದ ಮಾನಸಿಂಹನನ್ನು ನೋಡಿದ ಕೂಡಲೆ ಮಂದಾಕಿನಿಯ ಹೃದಯವು ಪುನಃ ಕಂಪಿಸಿತು. ಆದರೂ ಆ ಸತಿಯು ಧೈರ್ಯತಾಳಿ ಆ ವೀರಶ್ರೇಷ್ಠನನ್ನು ಕುರಿತು ಮೃದು ಸ್ವರದಿಂದ—''ಭವಾನೀ ಮಾತೆಯು ತಮ್ಮ ಕಲ್ಯಾಣ ಮಾಡಲಿ'' ಎಂದು ಹರಿಸಿದಳು. ಆ ಮಾನಸಿಂಹನು ಒಮ್ಮೆ

ತೀಕ್ಷ್ಣದೃಷ್ಟಿಯಿಂದ ಮಂದಾಕಿನಿಯನ್ನು ನೋಡಿ ಗಂಭೀರ ಸ್ವರದಿಂದ—''ಮಂದಾಕಿನೀ, ನೀನು ದುರ್ಜಯಸಿಂಹನನ್ನು ಬಿಡಿಸಲಿಕ್ಕೆ ಬಂದಿದ್ದೆಯಲ್ಲವೆ? ಸುಳ್ಳಾಡಬೇಡ, ಸತ್ಯವಾಗಿ ಹೇಳು?

ಮಂದಾಕಿನಿ—(ಅಂಜುತ್ತಂಜುತ್ತ) ಹೌದು ಮಹಾರಾಜ,; ಆದರೆ ಇದಕ್ಕಾಗಿ ನನ್ನನ್ನು ಕ್ಷಮಿಸಬಹುದೆಂದು ಆಶಿಸುವೆನು.

ಮಾನಸಿಂಹ—(ನಗುತ್ತ) ಇದರಲ್ಲಿ ನಿನ್ನ ವಿಶೇಷ ಅಪರಾಧವೇನು ಕಾಣುವದಿಲ್ಲ; ನೀನು ಪತಿವ್ರತೆಯಾದ ಆರ್ಯ ಸ್ತ್ರೀಯಿರುತ್ತೀ; ಸಾಧ್ವಿಯಾದ ನೀನು ಪತಿಯ ಬಿಡುಗಡೆಗಾಗಿ ಹೀಗೆ ಯತ್ನಿಸತಕ್ಕದ್ದೇ ಸರಿ; ಈ ಸಂಬಂಧದಿಂದ ನೀನು ಅಪರಾಧಿಯಾಗಿರುವಂತೆ ನನಗೇನು ತೋರುವದಿಲ್ಲ; ಆದರೆ ನಿನ್ನ ಕಾರ್ಯವನ್ನು ಸಾಧಿಸುವ ಸರಳ ಮಾರ್ಗವಿರುತ್ತಿದ್ದು, ನೀನು ಅಡ್ಡಹಾದಿಯ ಹಿಡಿದದ್ದೊಂದು ತಪ್ಪು ನಿನ್ನದಾಗಿರುತ್ತದೆ. ನೀನು ನೆಟ್ಟಗೆ ನನ್ನ ಬಳಿಗೆ ಬಂದು ದುರ್ಜಯಸಿಂಹನ ಬಿಡುಗಡೆಗಾಗಿ ನನ್ನನ್ನು ಬೇಡಿಕೊಂಡಿದ್ದರೆ ನಿನ್ನ ಆ ಪ್ರಾರ್ಥನೆಯನ್ನು ನಾನು ಅಲ್ಲಗಳೆಯುತ್ತಿದ್ದಿಲ್ಲ. ಹಾಗೆ ಮಾಡದೆ ನೀನು ಅಯೋಗ್ಯರೀತಿಯಿಂದ ವರ್ತಿಸಿದ್ದರಿಂದ ನಿನ್ನ ಯತ್ನವು ನಿಷ್ಫಲವಾಯಿತು. ಮಾನಸಿಂಹನ ರಕ್ಷಕರೂ, ಗೂಢಚಾರರೂ ಎರಡು ಕಣ್ಣಿನವರಿರದೆ ನಾಲ್ಕು ಕಣ್ಣಿನವರಿರುತ್ತಾರೆಂಬದನ್ನು ನೀನು ಚನ್ನಾಗಿ ಲಕ್ಷದಲ್ಲಿಡು. ಇಂಥ ಪ್ರಸಂಗದಲ್ಲಿಯೂ ನಿನ್ನ ಅಪರಾಧವನ್ನು ನಾನು ಕ್ಷಮಿಸುವೆನು; ಆದರೆ ನನ್ನದೊಂದು ಮಾತನ್ನು ನೀನು ಕೇಳಬೇಕಾಗುವದು.

ಮಂದಾಕಿನಿ—(ಕೈಜೋಡಿಸಿ ಆಶಾಯುಕ್ತಸ್ವರದಿಂದ) ಯಾವಮಾತು, ಕೇಳಬೇಕು ಮಹಾರಾಜ!

ಮಾನಸಿಂಹ—ಶಹಾಜಾದಾ ಖುಸ್ರುವಿನ ಹೆಸರಿನ ಉಂಗುರವನ್ನು ನನ್ನ ಕೈಯಲ್ಲಿ ಕೊಟ್ಟರೆಯೇ ನಾನು ನಿನ್ನನ್ನು ಕ್ಷಮಿಸುವೆನು.

ಮಂದಾಕಿನಿ—ಮಹಾರಾಜ, ನಾನು ಹಾಗೆ ಮಾಡಿದರೆ ನನ್ನ ಸೌಭಾಗ್ಯದೇವತೆಯನ್ನು ಬಂಧಮುಕ್ತಮಾಡಿಸುವಿರಾ?

ಮಾನಸಿಂಹ—ಇಲ್ಲ, ನಾನು ನಿನ್ನ ಯಾವ ನಿರ್ಬಂಧಕ್ಕೂ ಒಳಗಾಗುವದಿಲ್ಲ. ನಿನ್ನ ಅಪರಾಧಕ್ಕಾಗಿ ನೀನು ಕ್ಷಮೆಯನ್ನು ಇಚ್ಛಿಸುತ್ತಿದ್ದರೆ, ಆ ಉಂಗುರವನ್ನು ನನ್ನ ಕಡೆಗೆ ಕೊಡು.

ಮಂದಾಕಿನಿ—(ನಿರಾಶೆ ದಿಟ್ಟತನದಿಂದ) ಅದನ್ನು ನಾನು ಕೊಡದಿದ್ದರೆ?

ಮಾನಸಿಂಹ—(ಗಂಭೀರ ಸ್ವರದಿಂದ) ಈ ದುರ್ಗದಲ್ಲಿ ಕಾವಲುಗಾರರಾದ ಎಷ್ಟೋ ತಾರ್ತರಿಯ ಹೆಂಗಸರಿರುವರು. ನನ್ನ ಅಪ್ಪಣೆಯಾದಕೂಡಲೆ ಅವರು ನಿನ್ನ ಶೋಧಮಾಡಿ ನಿನ್ನಲ್ಲಿಯ ಉಂಗುರವನ್ನು ತಕ್ಕೊಳ್ಳುವರು. ಆಮೇಲೆ ನೀನು ಸೆರೆಮನೆಯ ಸೋಬತಿಯಾಗ ಬೇಕಾಗುವದು. ರಾಜಕೀಯ ಕಾರಣದ ಸಲುವಾಗಿ ದುರ್ಜಯಸಿಂಹನನ್ನು ಸೆರೆಯಲ್ಲಿಡಲು ನಾನು ಸ್ವತಃ ಅಪ್ಪಣೆಮಾಡಿರುವೆನು. ಅಂಥ ಸೆರೆಯಾಳನ್ನು ಓಡಿಸಿಕೊಂಡು ಹೋಗುವ ಅಪರಾಧವು ಭಯಂಕರವಾದದ್ದಿದ್ದು, ಅಪರಾಧಿಗೆ ತಕ್ಕಶಿಕ್ಷೆಯು ಆಗಲೇಬೇಕಾಗುತ್ತದೆ ತಿಳಿಯಿತೇ?

ಮಂದಾಕಿನಿ—(ಸ್ವಾಭಿಮಾನವು ಜಾಗ್ರತವಾದದ್ದರಿಂದ ಸಿಟ್ಟಾಗಿ ಮಾನಸಿಂಹನನ್ನು ನೋಡುತ್ತ ತೀವ್ರಸ್ವರದಿಂದ) ರಾಜಕೀಯ ಕಾರಣಕ್ಕಾಗಿ? ಅದೆಂಥ ರಾಜಕೀಯ ಕಾರಣವದು? ರಜಪೂತ ಕೇಸರಿಯಾದ ರಾಜಾ ಮಾನಸಿಂಹನೇನು ಮೊಗಲನಲ್ಲ, ಮತ್ತು ಮೊಗಲರ ಪಕ್ಷಕಟ್ಟಿ ಅನ್ಯಾಯಮಾಡಹೋಗುವದು ಆತನಿಗೆ ಯೋಗ್ಯವಲ್ಲ. ನಾನು ರಜಪೂತ ಸ್ತ್ರೀಯಿರುವೆನು; ಧರ್ಮವನ್ನೂ, ಕರ್ತವ್ಯವನ್ನೂ ಅನುಸರಿಸಿಯೇ ನಾನು ಮಾಡತಕ್ಕದ್ದನ್ನು ಮಾಡಿರುವೆನು; ಅಂದಬಳಿಕ ನಾನು ಅಪರಾಧಿಯು ಹೇಗೆ? ನಾನು ಮಾಡಿದ್ದು ಅಪರಾಧವೇ ಅಲ್ಲ. ಈ ಕೆಲಸದಲ್ಲಿ ನಾನು ಪಾಪ ಮಾಡಿರುವದಿಲ್ಲ; ನಾನು ನ್ಯಾಯಾಸ್ಥಾನದ ಮುಂದೆ ತಪ್ಪುಗಾರಳೆಂದು ನಿರ್ಣಯಿಸಲ್ಪಡುವಹಾಗಿಲ್ಲ. ಅಂದಬಳಿಕ ನೀವು ನಿಮ್ಮ ಮನಸ್ಸಿಗೆ ಬಂದ ಶಿಕ್ಷೆಯನ್ನು ನನಗೆ ಮಾಡಿರಿ; ಆದರೆ ನಾನು ನಿರಪರಾಧಿಯಿರುವೆನೆಂಬದು ಮಾತ್ರ ಸತ್ಯವಾದದ್ದು. ಅಧಿಕಾರದ ಮುಂದೆ ಜಾಣತನವು ನಡೆಯದಿದ್ದರೂ, ಕಡೆಗೆ ಸತ್ಯವೇ ಸತ್ಯವಾದೀತಲ್ಲದೆ ಅಸತ್ಯವು ಸತ್ಯವಾಗಲಾರದು. ದುರ್ಜಯಸಿಂಹನಾದರೂ ನಿಜವಾಗಿ ಅಪರಾಧಿಯಿರುವನೋ ಇಲ್ಲವೋ ಎಂಬದರ ವಿಚಾರವು ತಮ್ಮ ಮನಸ್ಸಿಗೆ ಆಗಿರಬಹುದೆಂಬದನ್ನು ನಾನು ಈಗ ಆಡಿತೋರಿಸುವದರಿಂದ ಪ್ರಯೋಜನವಾಗದು; ಆದರೆ ಮಹಾರಾಜ, ರಜಪೂತ ಕುಲತಿಲಕರು ತಾವು ನನ್ನಂಥ ಅನಾಥ ತರುಣಿಯಕಡೆಗೆ ನಿಸ್ಪೃಹ ದೃಷ್ಟಿಯಿಂದ ನೋಡುವ ಕೃಪೆಯಾಗಬೇಕು.

ಮಂದಾಕಿನಿಯ ಈ ಮಾತುಗಳನ್ನು ಕೇಳಿ ಮಾನಸಿಂಹನು ಮನಸ್ಸಿನಲ್ಲಿ—''ಈ ಮಂದಾಕಿನಿಯು ಸರ್ವಸಾಮಾನ್ಯ ಆಬಲೆಯಾಗಿರದೆ ಸಬಲೆಯಾಗಿರುವಳು. ಅಂಜಿಕೆ ತೋರಿಸಿದರೆ ಕೆಲಸವಾಗಲಿಕ್ಕಿಲ್ಲ. ಎಂದು ಯೋಚಿಸಿ ಕಲ್ಪನೆಗಿಂತ ಹೆಚ್ಚು ಪ್ರಸನ್ನತೆಯಿಂದ ಆಕೆಯನ್ನು ಕುರಿತು—''ಮಂದಾಕಿನೀ, ಸುಮ್ಮನೆ ಸಿಟ್ಟಾಗಬೇಡ. ಖುಸ್ರುವಿನ ಈ ಉಂಗುರವು ನಿನಗೆ ಹೇಗೆ ಸಿಕ್ಕಿತೆಂಬದನ್ನು ನಿಜವಾಗಿ ಹೇಳಿಬಿಡು'' ಎನ್ನಲು, ಮಂದಾಕಿನಿಗೆ ಖುಸ್ರುವಿನ ಮುಂದೆ ಹಿಂದಕ್ಕೆ ಹೇಳಿದ ಕಾರಣದ ನೆನಪಾಗಿ ಆಕೆಯು ಮಾನಸಿಂಹನನ್ನು ಕುರಿತು—''ನಾನು ಖುಸ್ರುವಿನ ಕೋಣೆಯೊಳಗಿಂದ ಇದನ್ನು ಕದ್ದುಕೊಂಡು ಬಂದೆನು'' ಎಂದು ಸ್ಪಷ್ಟ ಸ್ವರದಿಂದ ಹೇಳಿದಳು. ಅದನ್ನು ಕೇಳಿ ಮಾನಸಿಂಹನಿಗೆ ಪುನಃ ಸಿಟ್ಟು ಬಂದಿತು. ಆತನು ಉತ್ತೇಜಿತ ಸ್ವರದಿಂದ—''ನೀನು ತೀರಾ ಸುಳ್ಳು ಹೇಳುತ್ತಿರುವೆ. ನೀನು ಅಲ್ಲಿಂದ ಕದ್ದುಕೊಂಡು ಬರುವದು ತೀರಾ ಅಸಂಭವವು. ಉಂಗುರದ ರಹಸ್ಯವನ್ನು ತಿಳಿದುಕೊಳ್ಳಬೇಕೆಂದು ನನ್ನ ಮನಸ್ಸಿನಲ್ಲಿರುವದರಿಂದ ಇದ್ದ ಸಂಗತಿಯನ್ನು ನಿಜವಾಗಿ ಹೇಳು. ಈಗ ನಾನು ನಿನ್ನನ್ನು ಅಂಥದೊಂದು ಮಹತ್ವದ ಕೆಲಸಕ್ಕಾಗಿಯೇ ಕರೆಸಿರುವೆನು; ಆದರೆ ಆ ಕೆಲಸವಾವುದೆಂದು ನನಗೆ ಪ್ರಶ್ನೆ ಮಾಡಬೇಡ. ನಿನ್ನ ವ್ಯವಹಾರದಿಂದ ಅಥವಾ ಕರ್ಮದಿಂದ ನನ್ನ ಕೆಲಸಕ್ಕೆ ತೊಂದರೆಯಾದರೆ, ನಿನ್ನ ವಿಪತ್ತುಗಳ ಪರಂಪರೆಯು ಹೆಚ್ಚುವದೆಂದು ತಿಳಿ; ಇದಲ್ಲದೆ ಅಂಥ ಪ್ರಸಂಗ ಒದಗಿದರೆ ಅಕಾಲದಲ್ಲಿ ನಿನ್ನನ್ನು ವಿಧವೆಯಾಗ ಮಾಡಲಿಕ್ಕೂ ನಾನು ಹಿಂದೆ ಮುಂದೆ ನೋಡಲಿಕ್ಕಿಲ್ಲ'' ಎಂದು ಹೇಳಿದನು. ಮಾನಸಿಂಹನ ಈ ಕಠೋರ ವಚನಗಳನ್ನು ಕೇಳಿ ಮಂದಾಕಿನಿಯ ಹೃದಯವು ಪುನಃ ಕಂಪಿಸಿತು. ಆಕೆಯು ಮಾನಸಿಂಹನ ಕಠೋರ ಸ್ವಭಾವವನ್ನು ಪೂರ್ಣವಾಗಿ ತಿಳಿದಿದ್ದಳು.

ಆತನ ಸ್ವಾರ್ಥಕ್ಕೆ ಅಡ್ಡಬರುವ ಮನುಷ್ಯನು ಯಾವನಿದ್ದರೂ ಅವನು ಜಗತ್ತಿನಲ್ಲಿ ಉಳಿಯಲಾರನೆಂಬದೂ, ಅವನು ಮಾನಸಿಂಹನ ಕಣ್ಣುತಪ್ಪಿಸಿ ಹೋಗಲಾರೆನೆಂಬದೂ ಆಕೆಗೆ ಗೊತ್ತಿತ್ತು, ಆದ್ದರಿಂದ ನಿಜವಾದ ಸಂಗತಿಯನ್ನು ಹೇಳದಿದ್ದರೆ ಆಕೆಯ ಪರಿಣಾಮವಾಗುವಹಾಗಿದ್ದಿಲ್ಲ. ಆಕೆಯು ಮಾನಸಿಂಹನ ಚರಣದೆಡೆಯಲ್ಲಿ ಕುಳಿತು ಕಣ್ಣೀರು ಸುರಿಸುತ್ತ—''ಮಹಾರಾಜ, ಶಾಂತರಾಗಿರಿ, ನನ್ನನ್ನು ನಾಶಗೊಳಿಸಬೇಡಿರಿ; ನನ್ನ ಸೌಭಾಗ್ಯ ತಿಲಕವನ್ನು ಅಳಿಸಬೇಡಿರಿ. ದುರ್ಜಯಸಿಂಹನ ಜೀವಕ್ಕಿಂತಲೂ ಶ್ರೇಷ್ಠವಾದದ್ದು ಈ ಜಗತ್ತಿನಲ್ಲಿ ನನಗೆ ಬೇರೆ ಯಾವದೂ ಇರುವದಿಲ್ಲ, ಆದ್ದರಿಂದ ನನಗೆ ನನ್ನ ಪತಿಯ ಜೀವನದ ಭಿಕ್ಷೆಯನ್ನು ಹಾಕಿರಿ. ನಾನು ಸುಳ್ಳು ಹೇಳುವದಿಲ್ಲ, ಈ ಉಂಗುರವನ್ನು ಖುಸ್ರುವು ತಾನಾಗಿಯೇ ನನಗೆ ಕೊಟ್ಟನು. ಎಂದು ಹೇಳಿ ತಾನು ಉಂಗುರವ ಸಂಪಾದಿಸಿದ ಬಗೆಯನ್ನೆಲ್ಲ ಒಂದೂ ಬಿಡದಂತೆ ಹೇಳಿದಳು. ಪತಿ ಪ್ರೇಮದ ಮೂಲಕ ಖುಸ್ರುವಿಗೆ ಕೊಟ್ಟಿರುವ ವಚನವನ್ನು ಆಕೆಯು ಮುರಿದಳು. ಪತಿಯ ಸಲುವಾಗಿ ಪ್ರಾಣವನ್ನೇ ಕೊಡಲು ಸಿದ್ಧರಾದವರಿಗೆ ನೀಚ ಸ್ವಾರ್ಥಪರಾಯಣರಿಗಾಗಿ ಕೊಟ್ಟ ವಚನದ ಮಹತ್ವವು ಹೇಗೆ ತೋರುವದು?

ಮಂದಾಕಿನಿಯು ಹೇಳಿದ ವೃತ್ತಾಂತವನ್ನು ಕೇಳಿ ಮಾನಸಿಂಹನಿಗೆ ಕೆಲಮಟ್ಟಿಗೆ ಆಶ್ಚರ್ಯವಾಯಿತು. ಖುಸ್ರುವು ಮಂದಾಕಿನಿಗೆ ಮೋಹಿಸಿರುವೆನೆಂದು ತಿಳಿದು, ಈಕೆಯನ್ನು ತನ್ನಲ್ಲಿಟ್ಟುಕೊಂಡರೆ ಈಕೆಯ ಮುಖಾಂತರವಾಗಿ ಖುಸ್ರುವನ್ನು ಯಂತ್ರದ ಗೊಂಬೆಯಂತೆ ಕುಣಿಸಬಹುದೆಂತಲೂ ಆ ರಜಪೂತ ವೀರನು ಒಮ್ಮೆ ಭಾವಿಸಿದನು. ಆತನು ಈ ಬಗೆಯ ಹಲವು ವಿಚಾರಮಾಡುತ್ತ ಮಂದಾಕಿನಿಯನ್ನು ಕುರಿತು—ಮಂದಾಕಿನೀ, ಖುಸ್ರುವಿನಿಂದ ನಿನಗೆ ದೊರೆತಿರುವ ಉಂಗುರವು ನನ್ನ ಬಳಿಯಲ್ಲಿಯೇ ಇರಲಿ; ಅದನ್ನು ನನಗೆ ಕೊಡುವ ಕಾರಣವಿಲ್ಲ, ಅದರಂತೆ ದುರ್ಜಯಸಿಂಹನ ಜೀವದ ವಿಷಯವಾಗಿಯೂ ನೀನು ಚಿಂತಿಸಬೇಡ. ಇನ್ನು ತಿಂಗಳೊಪ್ಪತ್ತಿನಲ್ಲಿ ನಾನು ನಿನ್ನ ಗಂಡನನ್ನು ಬಂಧಮುಕ್ತನಾಗಮಾಡಿ, ಮೊದಲಿನ ಕೆಲಸದ ಮೇಲೆಯೇ ಆತನನ್ನು ನಿಯಮಿಸಿಕೊಳ್ಳುವೆನು. ಅದರಂತೆಯೇ ನಿನ್ನನ್ನು ನನ್ನ ಹೊಟ್ಟೆಯ ಮಗಳೆಂದು ತಿಳಿದು, ನನ್ನ ಅರಮನೆಯಲ್ಲಿ ಆಶ್ರಯವನ್ನು ಕೊಟ್ಟು, ನಿನ್ನನ್ನು ಸುಖಿಯಾಗ ಮಾಡುವೆನು; ಆದರೆ ಈಗಿನ ಪ್ರಸಂಗದಲ್ಲಿ ನಾನು ಹೇಳಿದಂತೆ ಕೇಳುವೆನೆಂದು ನೀನು ನನಗೆ ವಚನಕೊಡಬೇಕು. ನಿನ್ನ ಸಹಾಯದಿಂದ ನಾನು ಸಣ್ಣದೊಂದು ಕಾರ್ಯವನ್ನು ಸಾಧಿಸಿಕೊಳ್ಳಬೇಕೆಂದಿದ್ದೇನೆ. ಆ ಕಾರ್ಯದಲ್ಲಿ ಯಾವ ಪ್ರಕಾರದ ಹೀನತ್ವವನ್ನೂ ನೀನು ವಹಿಸುವ ಕಾರಣವಿಲ್ಲ, ನಿನ್ನಂಥ ಸ್ವಾಭಿಮಾನದ ಪತಿವ್ರತೆಯಿಂದಲೇ ಅಂಥ ಕಾರ್ಯಗಳು ಆಗುತ್ತಿರುತ್ತವೆ. ಆದ್ದರಿಂದ ಈಗ ನೀನು ನನ್ನ ಸಂಗಡ ಮೊದಲು ಅಂಬರ ರಾಜಧಾನಿಗೆ ನಡೆ. ಅಲ್ಲಿಗೆ ಹೋದಬಳಿಕ ನೀನು ಏನು ಮಾಡಬೇಕೆಂಬದನ್ನು ನಾನು ಹೇಳುವೆನು. ಎಂದು ಹೇಳಿದನು. ಅದಕ್ಕೆ ಮಂದಾಕಿನಿಯು—ಮಹಾರಾಜ, ತಾವು ನನ್ನನ್ನು ಇಷ್ಟು ಗೌರವಿಸಿ ನನ್ನ ವಚನದಲ್ಲಿ ವಿಶ್ವಾಸವಿಡುತ್ತಿರುವಾಗ ''ನಾನು ತಮ್ಮ ಅಪ್ಪಣೆ ಪಾಲಿಸುವೆನೆಂ''ದು ನಾನು ವಚನ ಕೊಡುವದೇನು ಆಶ್ಚರ್ಯವು? ನನ್ನ ಗೌರವಕ್ಕೂ, ಮಾನ—ಮರ್ಯಾದೆಗಳಿಗೂ, ಪಾತಿವ್ರತ್ಯಕ್ಕೂ ಕೊರತೆಬಾರದಿರುವಂತೆ ಸ್ವತಃ ತಾವೇ ನೋಡಿಕೊಂಡಬಳಿಕ ನನಗೆ ಮತ್ತೇನು

ಬೇಕು? ಮಾನಸಿಂಹ ಮಹಾರಾಜರ ಮಗಳು ಮಾನಸಿಂಹರ ಮಾತನ್ನು ಮೀರುವಳೋ?'' ಎಂದು ನುಡಿದು ಮಾನಸಿಂಹನ ಅಪ್ಪಣೆಯಂತೆ ಮೇಣೆಯಲ್ಲಿ ಕುಳಿತು ಕ್ಷೇಮಸಿಂಹನ ಕಾವಲಿನಿಂದ ಅಂಬರ ರಾಜಧಾನಿಗೆ ಹೊರಟಳು! ಮಾನಸಿಂಹನು ಅಶ್ವಾರೂಢನಾಗಿ ಅಂಬರ ರಾಜಧಾನಿಗೆ ವೇಗದಿಂದ ಹೋಗಿ ಮುಟ್ಟಿದನು. ಹೀಗೆ ಪತಿಯನ್ನು ಬಂಧಮುಕ್ತ ಮಾಡ ಹೋದ ಮಂದಾಕಿನಿಯು ದೈವವಿಲಾಸದಿಂದ ತಾನೇ ಒಂದು ಬಗೆಯ ಸೆರೆಯಲ್ಲಿ ಸಿಕ್ಕು ಅಂಬರಾಧೀಶ್ವರನ ಅಧೀನಳಾದಳು; ಆದ್ದರಿಂದ ಭವಿತವ್ಯವೆನ್ನಬೇಕು ಇದಕ್ಕೇ? ಅದು ಮನುಷ್ಯನನ್ನು ಯಾವಾಗ ಎಲ್ಲಿಗೆ ಹೇಗೆ ಎಳೆದೊಯ್ಯುವದೆಂಬದನ್ನು ಹೇಳಲಾಗುವದಿಲ್ಲ. ಒಟ್ಟಿಗೆ ಮಂದಾಕಿನಿಯು ಮಾಡಿದ್ದೊಂದು ಅದು ಆದದ್ದೊಂದು ಆಯಿತು!

ಪ್ಯಾರಿಯ ಕುತೂಹಲ!

ಮರುದಿವಸವೇ ಮಾನಸಿಂಹನು ಮಂದಾಕಿನಿಗೆ ಹೇಳತಕ್ಕದ್ದನ್ನು ಹೇಳಿ, ಎಚ್ಚರಿಕೆಯಿಂದ ನಡೆದುಕೊಳ್ಳಲು ಎಚ್ಚರಕೊಟ್ಟು, ಯೋಗ್ಯ ವಾಹನದಲ್ಲಿ ಆಕೆಯನ್ನು ಕುಳ್ಳಿರಿಸಿ ಆಕೆಯ ಕೆಲಸಕ್ಕೆ ಬೇಕಾಗುವ ಸಾಮುಗ್ರಿಗಳನ್ನೂ, ಜನರನ್ನೂ ಸಂಗಡ ಕೊಟ್ಟು ಫತ್ತೇಪುರ ಸಿಕ್ರಿಯ ಬಳಿಯಲ್ಲಿಯ ವಿತಾಗ ಎಂಬ ಹೆಸರಿನ ಸಣ್ಣ ಹಳ್ಳಿಗೆ ಕಳಿಸಿದನು. ಈ ಹಳ್ಳಿಯಲ್ಲಿ ಮಾನಸಿಂಹ ಮಹಾರಾಜನು ಕಟ್ಟಿಸಿದ ಒಂದು ದೇವಾಲಯವೂ, ಒಂದು ಮಠವೂ ಇದ್ದವು. ಮಠದಲ್ಲಿ ಒಬ್ಬ ಶೈವ ಸನ್ಯಾಸಿಯು ವಾಸಿಸುತ್ತಿದ್ದನು. ಆತನಿಗೆ ಮಾನಸಿಂಹರವರಿಂದ ವರ್ಷಾಶನವು ದೊರೆಯುತ್ತಿತ್ತು, ಅಕಬರನ ಹೊಸ ರಾಜಧಾನಿಯಾದ ಫತ್ತೇಪುರ ಸಿಕ್ರಿಯಿಂದ ಒಂದು ಮೈಲಿನೊಳಗೆ ಇದ್ದ ಈ ಹಳ್ಳಿಯು ಸುತ್ತಲಿನ ಪರ್ವತಗಳ ಸಾಲಿನಿಂದ ಬಹು ಮನೋಹರವಾಗಿ ಒಪ್ಪುತ್ತಿತ್ತು. ಪರ್ವತ ಶ್ರೇಣಿಯಿಂದ ಹೊರಟು ಬರುತ್ತಿರುವ ಸಣ್ಣ ಪುಟ್ಟ ನದಿಗಳು ಮಂಜುಳ ನಾದದಿಂದ ಜುಳು ಜುಳು ಹರಿಯುತ್ತ ಆ ಶಾಂತ ಪ್ರದೇಶವನ್ನು ಜಾಗ್ರತಗೊಳಿಸುತ್ತಿದ್ದವು. ವನರಾಜಿಯ ಹಾಗೂ ಅದರಲ್ಲಿಯ ಲತಾ ಪುಷ್ಪಗಳ ಶೋಭೆಯಂತು ಅವರ್ಣನೀಯವಾಗಿತ್ತು. ಚಿಗರೆ, ಕಾಡಾಳು, ಕಾಡಹಂದಿ ಇವುಗಳ ಹಿಂಡುಗಳು ಅಲ್ಲಲ್ಲಿ ಕಣ್ಣಿಗೆ ಬೀಳುತ್ತಿದ್ದವು. ಆ ಪ್ರಾಣಿಗಳು ಅರಣ್ಯದ ಹೊರಗಿನ ಬೈಲು ಪ್ರದೇಶದಲ್ಲಿಯೂ ಸ್ವತಂತ್ರವಾಗಿ ಬಂದು ಆನಂದದಿಂದ ಸಂಚರಿಸುತ್ತಿದ್ದವು. ಅಲ್ಲಲ್ಲಿ ನವಿಲುಗಳ ಹಿಂಡುಗಳು ಕೇಕೆ ಹಾಕುತ್ತ ಆಕಾಶದ ಕಡೆಗೆ ನೋಡುತ್ತ ನರ್ತನ ಮಾಡುತ್ತಿದ್ದವು. ಈ ಮನೋಹರವಾದ ಅರಣ್ಯವು ಸಿಕ್ರಿಯಿಂದ ತೀರ ಸಮೀಪದಲ್ಲಿ ಇದ್ದದ್ದರಿಂದ ಅಕಬರನೂ, ಆತನ ಜನರೂ ಆಗಾಗ್ಗೆ ಅಲ್ಲಿಗೆ ಬೇಟೆಯಾಡಲಿಕ್ಕೆ ಬರುತ್ತಿದ್ದರು; ಯಾಕಂದರೆ ಆ ವನದಲ್ಲಿ ಬೇಟೆಯಾಡಲು ಯೋಗ್ಯವಾದ ಮೃಗ—ಪಕ್ಷಿಗಳು ವಿಪುಲವಾಗಿ ಇದ್ದವು.

ಮಾನಸಿಂಹನು ಮಂದಾಕಿನಿಯನ್ನು ಯಾವದೋ ಒಂದು ಗುಪ್ತಕಾರ್ಯದ ಸಲುವಾಗಿ ಈ ಹಳ್ಳಿಗೆ ಕಳಿಸಿದ್ದನು. ಆ ರಜಪೂತ ತರುಣಿಯು ಚಾರಿಣಿಯ ವೇಷದಿಂದ ಅಲ್ಲಿಯ ಮಠದಲ್ಲಿ

ಇರತೊಡಗಿದಳು. ಮಂದಾಕಿನಿಯು ಮೊದಲೇ ಲೋಕೋತ್ತರ ಸೌಂದರ್ಯಶಾಲಿನಿಯು; ಅದರಲ್ಲಿ ಈ ಹೊಸ ವೇಷದಿಂದ ಆಕೆಯ ಸೌಂದರ್ಯವು ಮತ್ತಿಷ್ಟು ಹೆಚ್ಚಾಯಿತು. ದಿಟ್ಟೆಯಾದ ಆ ಶೂರ ರಜಪೂತ ಸ್ತ್ರೀಯು ಹಳದಿಯ ಬಣ್ಣದ ವಸ್ತ್ರವನ್ನುಟ್ಟು, ಹಣೆಯಲ್ಲಿ ರಕ್ತಚಂದನದ ರೇಖೆಯನು ಧರಿಸಿ, ಕೊರಳಲ್ಲಿಯೂ, ಮುಂಗೈಗಳಲ್ಲಿಯೂ, ತೋಳುಗಳಲ್ಲಿಯೂ ರಕ್ತಚಂದನ ಹಚ್ಚಿದ ಅಕ್ಷಮಾಲೆಗಳನ್ನು ಹಾಕಿಕೊಂಡು ಕೈಯಲ್ಲಿ ಕೆಂಪು ಬಣ್ಣದ ತ್ರಿಶೂಲವನ್ನು ಧರಿಸಿ ಮಾನಸಿಂಹನ ಉದ್ದೇಶ ಸಿದ್ಧಿಗಾಗಿ ಸಮಯವನ್ನು ನಿರೀಕ್ಷಿಸುತ್ತ ಆಗಾಗ್ಗೆ ಆ ಅರಣ್ಯದಲ್ಲಿ ಸಂಚರಿಸುತ್ತಿದ್ದಳು. ಹೀಗಿರುವಾಗ ಕಾಲಚಕ್ರದ ಗತಿಯನ್ನನುಸರಿಸಿ ಒಮ್ಮೆ ಖುಸ್ರುವು ಬೇಟೆಯಾಡುವದಕ್ಕಾಗಿ ತನ್ನ ಹೆಂಡತಿಯಾದ ಪ್ಯಾರಿಬಾನುವಿನೊಡನೆ ಆ ಅರಣ್ಯಕ್ಕೆ ಬಂದನು. ಹೀಗೆ ಹೆಂಡಿರನ್ನು ಸಂಗಡ ಕರಕೊಂಡು ಬೇಟೆಗೆ ಹೋಗುವದು ಮೊಗಲ ವಂಶಜರ ಪದ್ಧತಿಯೇ ಆಗಿತ್ತು. ಆಗ ಖುಸ್ರುವಿನ ಸಂಗಡ ಬಹಳ ಜನರಿದ್ದಿಲ್ಲ; ಆತನೂ,ಆತನ ಹೆಂಡತಿಯಾದ ಪ್ಯಾರಿಬಾನುವು, ಆಕೆಯ ಸಖಿಯಾದ ಅಮೀರೆಯು, ನಾಲ್ಕುಜನ ತಾರ್ತರ ಸ್ತ್ರೀಯರು, ಸಹಾಯಕರಾದ ನಾಲ್ವರು ಸವಾರರು ಇಷ್ಟೇ ಜನರಿದ್ದರು. ಇವರೆಲ್ಲರು ಸಿಕ್ರಿಯಿಂದ ಹೊರಟು, ''ಹಿರಣ್ಮೆನಾರ ಮಂದಿರ''ಕ್ಕೆ ಬಂದರು. ಅಕಬರ ಬಾದಶಹನು ತನ್ನ ಪ್ರೀತಿಯ ಬೇಟೆಯ ಆನೆಯ ದೇಹವನ್ನು ಹುಗಿಸಿ ಅದರ ಮೇಲೆ ಈ ''ಹಿರಣ್ಮೆನಾರ''ವನ್ನು ಕಟ್ಟಿಸಿದನೆಂದು ಜನರು ಹೇಳುವರು. ಕೆಲವರು, ಈ ಪ್ರದೇಶದಲ್ಲಿ ಚಿಗರಿಯ ಹಿಂಡುಗಳು ಬಹಳ ಇದದ್ದರಿಂದ, ಅವುಗಳ ಬೇಟೆಗಾಗಿ ಈ ಮಂದಿರವನ್ನು ಕಟ್ಟಿಸಿದನೆಂತಲೂ ಹೇಳುವರು; ಈ ಲೋಕವಾರ್ತೆಯು ಹೇಗಿದ್ದರೂ ಆ ಮಂದಿರದ ಮೇಲೆ ಬೇಟೆಯ ಸಲುವಾಗಿ ಒಂದು ಪ್ರಶಸ್ತಸ್ಥಳವು ರಚಿಸಲ್ಪಟ್ಟಿರುವದು ನಿಜವು. ಅಕಬರ ಬಾದಶಹನು ಈ ಸ್ಥಳದಲ್ಲಿ ಕುಳಿತು, ದೂರದ ಅಡವಿಯೊಳಗಿಂದ ಬೇಟೆಗಾರರು ಎಬ್ಬಿಸಿದ ಚಿಗರೆಗಳು ಬೈಲಿಗೆ ಬರಲು ಆತನು ತನ್ನ ತಪ್ಪದ ತುಬಾಕಿಯ ಗುರಿಯಿಂದ ಅವುಗಳ ಬೇಟೆಯಾಡುತ್ತಿದ್ದನು. ''ಆ ಹಿರಣ್ಮೆನಾರವು'' ಕಾಲದ ಆಘಾತದಿಂದ ಈಗಲೂ ಬಾಗಿ ನಿಂತು ಗತಕಾಲದ ಸ್ಮರಣವನ್ನು ಜನರ ಮನಸ್ಸಿನಲ್ಲಿ ಜಾಗ್ರತಗೊಳಿಸುತ್ತಿರುವದು.

ಖುಸ್ರುವು ಈ ವಿತಾಗದ ಅರಣ್ಯದೊಂದು ಭಾಗದಲ್ಲಿ ಬೇಟೆಯಾಡುವದರಲ್ಲಿ ಮಗ್ನನಾಗಿರಲು, ಅದೇ ವೇಳೆಯಲ್ಲಿ ಪ್ಯಾರಿಬಾನುವು ತನ್ನ ಗೆಳತಿಯಾದ ಅಮೀರೆಯೊಡನೆ ಆ ಬೇಟೆಯ ಸ್ಥಳದಿಂದ ಸ್ವಲ್ಪ ದೂರದಲ್ಲಿರುವ ಒಂದು ಹೊಳೆಯ ದಂಡೆಯ ಮೇಲಿನ ಪ್ರಶಸ್ತವಾದ ಹಾಸುಗಲ್ಲಿನ ಮೇಲೆ ಆನಂದದಿಂದ ಕುಳಿತಿದ್ದಳು. ಅವರಿಬ್ಬರ ಸುಖಸಲ್ಲಾಪಗಳು ಭರದಿಂದ ಸಾಗಿದ್ದವು. ಆ ಪ್ರಮದೆಯರಿಗೆ ಯಾತರ ಚಿಂತೆಯಿರಬೇಕೆನ್ನುವ ಹಾಗೆ ಮೇಲೆ ಮೇಲೆ ನೋಡುವವರಿಗೆ ತೋರುತ್ತಿತ್ತು; ಆದರೆ ಬೂದಿಮುಚ್ಚಿದ ಕೆಂಡದಂತೆ ಕ್ಷಣಿಕ ಸುಖದ ಆವರಣದಲ್ಲಿ ಆಗಾಗ್ಗೆ ಮರೆಯಾಗುವ ಸಾಂಸಾರಿಕ ದುಃಖರೂಪ ಅಗ್ನಿಯ ತಾಪವು ಅನುಭವಿಸುವವರಿಗೆ ಮಾತ್ರ ಗೊತ್ತು. ಸಂಸಾರವು ನೋಡುವದಕ್ಕೆ ಚಂದವಲ್ಲದೆ ಮಾಡುವದಕ್ಕೆ ಚಂದವಲ್ಲ! ಅಂತೇ ಧನಿಕರ ಧನದ ಮಬ್ಬು, ವಿದ್ವಾಂಸರ ವಿದ್ಯೆಯ ಮಬ್ಬು, ವಿಲಾಸಿಗಳ ವಿಲಾಸದ ಮಬ್ಬು, ಇನ್ನೂ ಇಂತಹ ಹಲವು ಮನೋಹರ ಮಬ್ಬುಗಳು, ನೋಡುವವರಿಗೆ

ಆಯಾ ಮಬ್ಬಿನವರ ದುಃಖಗಳನ್ನು ನೋಡಗೊಡದೆ ಆ ನೋಡುವವರ ಕಣ್ಣುಗಳನ್ನು ಮುಚ್ಚುತ್ತಿದ್ದರೂ, ಅವರವರ ದುಃಖಗಳು ಅವರವರನ್ನು ತಾಪಗೊಳಿಸದೆ ಇರುವದಿಲ್ಲ. ಅಂತೇ ಬೇಕಾದವರನ್ನು ಕೇಳಿದರೂ "ಸಂಸಾರದಲ್ಲಿ ಸುಖವಿಲ್ಲರಿ" ಎಂಬದೊಂದೇ ಒಂದು ಉಕ್ತಿಯು ಸಾಧಾರಣವಾಗಿ ಎಲ್ಲರ ಮುಖದಿಂದ ಹೊರಡುವದು. ಸಂಸಾರಾಸಕ್ತರಲ್ಲದ ಜ್ಞಾನಿಗಳು, ಸಂಸಾರವು ದುಃಖ ದಾಯಕವೆಂದು ಹೇಳುವರು; ಆದರಂತೆ ಸಂಸಾರವನ್ನೇ ಅಧಿದೈವತವೆಂದು ತಿಳಿದು ಅದರ ಉಪಾಸನೆ ಮಾಡುವ ಸಂಸಾರಾಸಕ್ತರಾದ ಅಜ್ಞಾನಿಗಳೂ ಅದನ್ನು ದುಃಖಮಯ ವೆಂತಲೇ ಒಡನುಡಿಯುವರು; ಅಂದ ಬಳಿಕ ಸಂಸಾರವು ದುಃಖಮಯವೆಂದು ಸರ್ವಸಮ್ಮತ ಸಿದ್ಧವಾಗಿರಲು, ಅದನ್ನು ಸುಖಮಯವಾಗ ಮಾಡಬೇಕೆಂಬ ಔತ್ಸುಕ್ಯದಿಂದ ಮಾಡಬಾರದ್ದನ್ನು ಮಾಡಿ ಮತ್ತಿಷ್ಟು ದುಃಖಪಡುವ ಸಂಸಾರಸಕ್ತವಾದ ಲೋಕದ ಸಂಸಾರ ಸುಖದ ಕಲ್ಪನೆಯು ಭ್ರಮಮೂಲವಲ್ಲದೆ ಮತ್ತೇನು? ಅಂತೇ ಅಕಬರ ಬಾದಶಹನ ಮೊಮ್ಮಗನ ಹೆಂಡತಿಯಾದ ಪ್ಯಾರಿಬಾನುವಿನ ಬಾಳು ಪರಮ ಸುಖಕರವೆಂದು ನೋಡುವವರಿಗೆ ತೋರುತ್ತಿದ್ದರೂ, ಪ್ರತ್ಯಕ್ಷ ಪ್ಯಾರಿಬಾನುವನ್ನೇ ಈ ಬಗ್ಗೆ ಪ್ರಶ್ನ ಮಾಡಿದರೆ ನಿಜವಾದ ಉತ್ತರವು ಆಕೆಯ ಮುಖದಿಂದ ತಟ್ಟನೆ ಹೊರಡದೆ ಇರಲಿಕ್ಕಿಲ್ಲ. ಅಥವಾ ಈ ಕಾದಂಬರಿಯಲ್ಲಿ ಅದೇ ಮಾತನ್ನು ಬಿಚ್ಚಿ ಇಟ್ಟಿರು ವದರಿಂದ ಅದನ್ನು ಈಗಲೇ ಸ್ಪಷ್ಟೀಕರಿಸುವ ಅವಶ್ಯವೂ ಇಲ್ಲ. ಇರಲಿ.

ಹೀಗೆ ಅವರಿಬ್ಬರು ತರುಣಿಯರು ಸುಖ ಸಲ್ಲಾಪದಲ್ಲಿ ಕಾಲಹರಣ ಮಾಡುತ್ತ ಶಿಲಾತಲ ದಲ್ಲಿ ಕುಳಿತುಕೊಂಡಿರಲು, ಅತ್ತ ಸ್ವಲ್ಪ ದೂರದಲ್ಲಿ ಒಂದು ಮಾವಿನ ಮರದ ಬುಡದಲ್ಲಿ ಒಬ್ಬ ಸುಂದರ ಚಾರಿಣಿಯು ನಿಂತಿರುವದನ್ನು ಅಮೀರೆಯು ನೋಡಿದಳು. ಆಕೆಯು ಪ್ಯಾರಿಬಾನು ವನ್ನು ಕೈಹಿಡಿದು ಅಲ್ಲಾಡಿಸಿ—"ಅಲ್ಲಿ ನೋಡು ಆ ಗಿಡದ ಬುಡದಲ್ಲಿ ಮಿಂಚಿನಂತೆ ಚಲ್ವಿಕೆಯ ಹೊಳಪಿನಿಂದ ಕಣ್ಣು ಕುಕ್ಕುತ್ತಿರುವ ಆ ತರುಣಿಯನ್ನು!" ಅನ್ನಲು, ಪ್ಯಾರಿಯು ನೋಡಿ ನಿಜ ವಾಗಿಯೇ ಆಶ್ಚರ್ಯಪಟ್ಟು—"ಇವಳಾರೇ ಅಮೀರೇ, ಬಾದಶಹನ ಜನಾನಖಾನೆ ಯಲ್ಲಿಯೂ ಅಪರೂಪವಾಗಿರುವ ಈ ಸೌಂದರ್ಯ ಶಾಲಿನಿಯು ಇವಳು ಯಾರಿರಬಹುದು?" ಎಂದು ಕೇಳಿದಳು; ಆದರೆ ಅಮೀರೆಗೂ ಯಾವ ಸಂಗತಿಯೂ ಗೊತ್ತಿಲ್ಲದ್ದರಿಂದ, ಆಕೆಯು ತಲೆಯಲ್ಲಾಡಿ ಸುತ್ತ ಪ್ಯಾರಿಬಾನುವನ್ನು ಕುರಿತು—"ನನಗೆ ಗೊತ್ತಿಲ್ಲವ್ವಾ ಯಾರೆಂಬದು! ವೇಷದಿಂದಂತು ಆಕೆಯು ಹಿಂದೂ ತಾಪಸಿಯಾಗಿ ತೋರುವಳು! ಪ್ಯಾರೀ, ಏನು ಚಮತ್ಕಾರವು ನೋಡಿದೆಯಾ? ಇಂಥ ಚಿಕ್ಕವಯಸ್ಸಿನಲ್ಲಿ ಈ ಸುಂದರಿಗೆ ಈ ವೈರಾಗ್ಯದ ವೇಷವೇ? ಹಿಂದೂ ಜನರಲ್ಲಿ ಇಂಥ ಚಾರಿಣಿಯರು ಅಥವಾ ತಪಸ್ವಿಗಳು ಬಹು ಜನರು ಇರುವರು. ಇದಲ್ಲದೆ ಈ ನದಿಯ ಆಚೆಯ ಕಡೆಯಲ್ಲಿ ಮಾನಸಿಂಹ ಮಹಾರಾಜರವರ ಒಂದು ಮಠವಿರುವದೆಂದು ಕೇಳಿದ್ದೇನೆ. ಆ ಮಠದಲ್ಲಿ ಸನ್ಯಾಸಿಗಳು, ಸಾಧು—ಸಂತರು, ಬಾವಾ—ಬೈರಾಗಿಗಳು, ಭೈರವ—ಯೋಗಿನಿಯರು ಇರುತ್ತಿರುವರೆಂತಲೂ ಕೇಳಿದ್ದೇನೆ. ಅವರೊಳಗಿನವಳೇ ಈಕೆಯೊಬ್ಬಳು ಇರಬಹುದು. ಈ ಜನರು ಕೈನೋಡಿ ಭೂತ—ಭವಿಷ್ಯಕಾಲಗಳ ಸಂಗತಿಗಳನ್ನು ಹೇಳುವರು. ಇದಲ್ಲದೆ ರೋಗಿಗಳಿಗೆ ಔಷಧವನ್ನು ಕೊಟ್ಟು ರೋಗನಿವಾರಣವನ್ನು ಮಾಡುವರು. ಎಂದು ಹೇಳಲು,

ಪ್ಯಾರಿಬಾನೂವೂ ಅಮೀರೆಯ ಮಾತುಗಳಿಗೆ ತಲೆ ಹಾಕಿ ಸಮ್ಮತಿಸಿ—''ಹೌದು, ನಿಜವಾಗಿಯೇ ಈ ಸಂಗತಿಯನ್ನು ನಾನು ನಮ್ಮ ಅಪ್ಪನ ಬಾಯಿಂದ ಕೇಳಿದ್ದೇನೆ. ಒಬ್ಬ ಹಿಂದೂ ಸನ್ಯಾಸಿಯು ಬರಿಯ ಕೈಯನ್ನು ನೋಡಿ ತನಗೆ—''ನೀನು ಬಾದಶಹನ ಸೇನಾಪತಿಯಾಗುವೆ'' ಎಂದು ಹೇಳಿದಂತೆ ನಾನು ಸೇನಾಪತಿಯೇ ಆದೆನೆಂದು ಅಪ್ಪನು ಆಗಾಗ್ಗೆ ಹೇಳುತ್ತಿರುವನು. ಅಮೀರೇ, ಹೋಗು ಹೋಗು, ಆ ಚಾರಿಣಿಯನ್ನು ನಾನು ಒಂದುಮಾತು ಕೇಳಬೇಕಾಗಿದೆ; ''ಶಹಾಜಾದಿ ಬೇಗಮೆಯು ಕರೆಯುವಳೆಂ''ದು ಹೇಳಿ ಆಕೆಯನ್ನು ಕರಕೊಂಡು ಬಾ ಹೋಗು.'' ಎಂದು ಹೇಳಿದಳು.

ಪ್ಯಾರಿಯ ಈ ಅಪ್ಪಣೆಯನ್ನು ಕೇಳಿ ಅಮೀರೆಯು ನಿರಾಶೆಯಿಂದ—ಛೀ! ನಾನು ಕರೆಯುವದರಿಂದ ಏನು ಪ್ರಯೋಜನವಾಗುವದು? ಈ ಜನರು ಸಂಸಾರವಿರಾಗಿಗಳಾಗಿರುವರು. ಇವರು ಕೇವಲ ಖುದಾನ ಸೇವಕರು ಮಾತ್ರ ಇರುವರು. ಅಂದಬಳಿಕ ಇಂಥವರು ಎರಡನೆಯವರ ಅಪ್ಪಣೆಯನ್ನು ಯಾಕೆ ಪಾಲಿಸುವರು? ಸ್ವತಃ ಬಾದಶಹನು ಬಂದರೂ ಇವರಿಗೆ ಆತನ ಹಂಗು ಇರುವದಿಲ್ಲ. ಹರಿದಾಸ ಸ್ವಾಮಿಜಿಯವರನ್ನೂ, ಆಗ್ರಾದ ನಿರಾಹಾರ ಸ್ವಾಮಿಜಿ ಯವರನ್ನೂ ಆಗ್ರಾಕ್ಕೆ ಕರಕೊಂಡು ಬರಬೇಕೆಂದು ಅಕಬರ ಬಾದಶಹರು ಬೇಕಾದಷ್ಟು ಯತ್ನಿಸಿದರು; ಆದರೆ ಆ ಸತ್ಪುರುಷರು ಹೋಗಲಿಲ್ಲ, ಕಡೆಗೂ ಹೋಗಲೇ ಇಲ್ಲ. ಅಂದಬಳಿಕ ನನ್ನ ಕರೆಯುವಿಕೆಯಿಂದ ಆ ತಾಪಸಿಯು ಬಾರದಿದ್ದರೆ ಏನು ಮಾಡಬೇಕು? ಎಂದು ಕೇಳಲು, ಪ್ಯಾರಿಯು ಆಕೆಯ ಮಾತನ್ನು ಅಲ್ಲಗಳೆಯದೆ ಮನಸ್ಸಿನಲ್ಲಿ ಸ್ವಲ್ಪ ವಿಚಾರಮಾಡಿ ಉತ್ಸುಕತೆ ಯಿಂದ ಅಮೀರೆಯನ್ನು ಕುರಿತು—ಸಖೀ, ಹಾಗಾದರೆ ನಾವೇ ಆಕೆಯ ಬಳಿಗೆ ಹೋಗೋಣ ನಡೆ; ಈ ಹೊಳೆಯೇನೂ ಅಷ್ಟು ದೊಡ್ಡದಿರುವದಿಲ್ಲ. ಅದು ಅಷ್ಟು ಗುಂಡಿಯೂ ಇದ್ದಂತೆ ತೋರುವದಿಲ್ಲ. ಎಂದು ಹೇಳಿದಳು. ಪ್ಯಾರಿಯ ಈ ಮಾತುಗಳನ್ನು ಕೇಳಿ ಅಮೀರೆಯು ಆಶ್ಚರ್ಯಯುಕ್ತ ನೇತ್ರಗಳಿಂದ ಆಕೆಯನ್ನು ನೋಡುತ್ತ—ಏನಂಧಿ? ನಾವೇ ನದಿದಾಟಿ ಹೋಗೋಣವೆಂದೆಯಾ? ಛೀ ಹುಚ್ಚಿ! ದಿಲ್ಲೀಶ್ವರನ ಸೊಸೆಯು ಹೀಗೆ ಎಲ್ಲಿಯಾದರೂ ಬರಿಗಾಲಿನಿಂದ ಸಿಕ್ಕಲ್ಲಿ ತಿರುಗಾಡಬಹುದೇ? ಜನರಿಗೆ ಇದು ಗೊತ್ತಾದರೆ ಅವರು ಏನು ಅಂದಾರು? ಬಾದಶಹರಿಗೆ ಗೊತ್ತಾದರೆ ಅವರು ಏನು ಅಂದಾರು? ನೀನು ಇತ್ತ ಬರುವಾಗ ಶಹಾಜಾದಾ ಖುಸ್ರುರವರಿಗೆ—''ನಾವು ಈ ಹೊಳೆಯ ದಂಡೆಯ ಮೇಲೆಯೇ ತಮ್ಮ ಹಾದಿಯ ನೋಡುತ್ತ ಕುಳಿತಿರುವೆವು'' ಎಂದು ಹೇಳಿ ಬಂದಿರುವೆ; ಅಂದಬಳಿಕ ನಾವು ಈ ಸ್ಥಳಬಿಟ್ಟು ಸಿಕ್ಕಲ್ಲಿ ತಿರುಗುವದು ಅವರಿಗೆ ಗೊತ್ತಾದರೆ ಅವರು ಏನು ಅಂದಾರು? ನೀನು ಅವರನ್ನು ಹೇಗಾದರೂ ಸಮಾಧಾನಪಡಿಸೀ; ಆದರೆ ನಾನು ಮಾತ್ರ ಅವರಿಂದ ಸಿಟ್ಟುಮಾಡಿಸಿಕೊಳ್ಳ ಬೇಕಾದೀತು.'' ಎಂದು ಹೇಳಿದಳು; ಆದರೂ ಪ್ಯಾರಿಬಾನುವಿನ ಹೋಗುವ ಆತುರತೆಯು ಕಡಿಮೆಯಾಗಲಿಲ್ಲ. ಈ ಸಂಸಾರದಲ್ಲಿ ದೈವವೆಂಬದು ಯಾವಾಗಲೂ ಹೊಸ ಹೊಸ ಹಾದಿಗಳನ್ನು ಸಿದ್ಧಮಾಡುತ್ತಿರುತ್ತದೆ; ಮತ್ತು ಆ ಒಳ್ಳೆಯ ಅಥವಾ ಕೆಟ್ಟಹಾದಿಯನ್ನು ಹಿಡಿದು ಹೋಗುವಂತೆ ಅದೇ ದೈವರೂಪವಾದ ನಮ್ಮ ಪ್ರಾಚೀನ ಕರ್ಮವು ''ಬುದ್ಧಿಃ ಕರ್ಮಾನುಸಾರಣೀ'' ಎಂಬ

ಉಕ್ತಿಗನುಸರಿಸಿ ನಮ್ಮ ಬುದ್ಧಿಯನ್ನು ಪ್ರೇರಿಸುತ್ತದೆ. ಅದರಂತೆ ಈಗ ಪ್ಯಾರಿಬಾನುವು ಚಾರಿಣಿಯ ಕಡೆಗೆ ಹೋಗುವದನ್ನು ನಿಶ್ಚಯಿಸಿದಳು. ಆಕೆಯು ಈ ಪ್ರಸಂಗದಲ್ಲಿ ಸ್ವಲ್ಪ ಆತ್ಮಸಂಯಮನ ಮಾಡಿ ಹೋಗುವದನ್ನು ಬಿಟ್ಟಿದ್ದರೆ ನೆಟ್ಟಗಾಗುತ್ತಿತ್ತೆಂಬಂತೆ ತೋರುತ್ತದೆ; ಆದರೆ ''ಭವಿತವ್ಯಂ ಭವತ್ಯೇವ ನಾರಿಕೇಲ ಫಲಾಬುವತ್'' ಎಂಬಂತೆ ಆಗುವದು ಆಗಿಯೇ ತೀರುವದಲ್ಲದೆ, ಅದನ್ನು ತಪ್ಪಿಸುವವರಾದರೂ ಯಾರಿರುವರು? ಇದ್ದರೆ ಈಶ್ವರ ಕೃಪೆಗೆ ಪಾತ್ರರಾದ ಮಹಾತ್ಮರೊಬ್ಬರು ಇರಬಹುದು. ಇರಲಿ.

ತನ್ನನ್ನು ಹೋಗಗೊಡಬಾರದೆಂದು ಅಮೀರೆಯು ಹೀಗೆ ಏನೇನೋ ಹೇಳುತ್ತಿರುವದನ್ನು ನೋಡಿ ಪ್ಯಾರಿಬಾನುವು ಆಕೆಯನ್ನು ಕುರಿತು—ಅಮೀರೇ, ಬಾದಶಹರ ಬೇಟೆಗಾಗಿಯೇ ಕಾದಿಟ್ಟಿರುವ ಈ ಅರಣ್ಯದಲ್ಲಿ ಅಪ್ಪಣೆಯಿಲ್ಲದೆ ಯಾರು ಬರುವರು ಹೇಳು? ಇನ್ನು ಜಡ್ಡಿನ ಬಾದಶಹರಿಗೆ ಈ ಸುದ್ದಿಯು ತಿಳಿಯುವದಂತು ತೀರ ಅಶಕ್ಯವು. ಈಗ ಶಹಾಜಾದಾರವರು ಬೇಟೆಯಾಡುವದರಲ್ಲಿ ಮಗ್ನರಾಗಿ ಹೋಗಿರುವದರಿಂದ, ಅವರು ಯಾವಾಗ ಬರುವರೋ ಏನೋ, ಇದರ ಮೇಲೆಯೂ ಅವರು ಬಂದು ನಮ್ಮನ್ನು ಹುಡುಕಿ ಸಿಟ್ಟಾದರೆ, ಅವರನ್ನು ನಾನು ಸಮಾಧಾನ ಪಡಿಸುವೆನು; ನಿನ್ನ ಮೇಲೆ ಸಿಟ್ಟಾದರೆ ಆ ಸಿಟ್ಟನ್ನು ಇಳಿಸುವದು ನನಗೆ ಕೂಡಿತು; ಆದ್ದರಿಂದ ಅಮೀರೇ, ಇಲ್ಲದ ನೆಪ ಹೇಳಬೇಡ; ಏಳು ಬೇಗನೆ ಆ ಚಾರಿಣಿಯ ಬಳಿಗೆ ಹೋಗಿ ಬರೋಣ ಏಳು. ಮತ್ತೆ ಎಲ್ಲಿಯಾದರೂ ಆಕೆಯು ದೂರ ಹೋದಗೀದಾಳು! ಎಂದು ಹೇಳಿ ಅಮೀರೆಯನ್ನು ಕೈಹಿಡಿದು ಎಳೆಯಹತ್ತಿದಳು. ಆಗ ಅಮೀರೆಯು ನಿರ್ವಾಹವಿಲ್ಲದೆ ಪ್ಯಾರಿಯ ಕೈಹಿಡದುಕೊಂಡು ಹೊಳೆಯನ್ನು ದಾಟಹತ್ತಿದಳು. ತಳದ ಬೆಣಚಿಗಲ್ಲುಗಳು ಸ್ಪಷ್ಟವಾಗಿ ಕಾಣಿಸುತ್ತಿರುವ ಆ ಹೊಳೆಯ ನೀರು ಕೇವಲ ಮೊಣಕಾಲಮೊಟ್ಟ ಇದ್ದದ್ದರಿಂದ ಅವರ ಬೆಲೆಯುಳ್ಳ ಅರಿವೆಗಳು ತೋಯದೆ, ಅವರು ನದಿಯನ್ನು ದಾಟಿ ಚಾರಿಣಿಯು ನಿಂತಿದ್ದ ಗಿಡದಬುಡಕ್ಕೆ ಹೋದರು. ಅವರು ಸನ್ಮಾನದಿಂದ ಚಾರಿಣಿಗೆ ಸಲಾಮುಮಾಡಿ ಆಕೆಯನ್ನು ಕುರಿತು—''ಮಾಯೀ, ನೀವು ಯಾರಿರುವಿರಿ?'' ಎಂದು ಪ್ರಶ್ನಮಾಡಿದರು.

ಈ ಚಾರಿಣಿಯು ಅನ್ಯರಾರೂ ಆಗಿರದೆ, ಮಂದಾಕಿನಿಯೇ ಆಗಿದ್ದಳೆಂಬದು ವಾಚಕರಿಗೆ ತರ್ಕವಾಗಿರಬಹುದು. ಮಾನಸಿಂಹನ ಹೇಳಿಕೆಯಂತೆ ಮಂದಾಕಿನಿಯು ಪ್ಯಾರಿಬಾನುವೆಂಬ ಚಿಗರೆಯನ್ನು ಹೇಗೆ ಬಲೆಯಲ್ಲಿ ಕೆಡವಲೆಂದು ಯೋಚಿಸುತ್ತ ದಿನಾಲು ಆ ಅರಣ್ಯದಲ್ಲಿ ಸಂಚರಿಸುತ್ತಿದ್ದಳು. ಆಕೆಗೆ ಹಾಗೆ ಆ ಅರಣ್ಯದಲ್ಲಿ ಸಂಚರಿಸಲಿಕ್ಕೆ ಮಾನಸಿಂಹನ ತಂತ್ರದಿಂದ ಪರವಾನಿಗೆಯು ದೊರೆತಿದ್ದರೂ ದೊರೆತಿರಬಹುದು; ಅಥವಾ ಇಂಥ ತಪಸ್ವಿನಿಯರಿಗೆ ಆ ಬಾದಶಾಹಿಯ ಬೇಟೆಯ ಕಾದಿಟ್ಟ ಅರಣ್ಯದಲ್ಲಿ ತಿರುಗಾಡಲಿಕ್ಕೆ ಪ್ರತಿಬಂಧವಿರದಿದ್ದರೂ ಇರಬಹುದು. ಹೇಗೇ ಇರಲಿ ಮಂದಾಕಿನಿಯ ಇಚ್ಛೆಯಂತೆ ಇಂದು ಸಂಧಿಯು ಒದಿಗಿ ಬಂತೆಂಬದು ನಮಗೆ ಹೇಳಬೇಕಾದ ಮುಖ್ಯ ಮಾತಾಗಿರುವದು. ತನಗೆ ಮಾಡಿದ ಮೇಲಿನ ಪ್ರಶ್ನಕ್ಕೆ ಮಂದಾಕಿನಿಯು ಉತ್ತರ ಕೊಡುವ ಮೊದಲು ಬೆರಳುಮಾಡಿ ಅವರಿಗೆ ಒಂದು ಶಿಲಾತಲವನ್ನು ತೋರಿಸಿ—''ಇಲ್ಲಿ ಕುಳಿತುಕೊಳ್ಳಿರಿ; ನಾನು ಒಬ್ಬ ಚಾರಿಣಿಯಿರುವೆನು. ನನ್ನಿಂದ ನಿಮ್ಮ

ಕೆಲಸವೇನಾದರೂ ಆಗುವಹಾಗಿದ್ದರೆ ಹೇಳಿರಿ.'' ಎಂದು ಕೇಳಿದಳು. ಆಗ ಪ್ಯಾರಿಬಾನುವು ಸುಮ್ಮನೆ ಕುಳಿತುಕೊಳ್ಳಲಾರದೆ ಅಮೀರೆಯ ಕಿವಿಯಲ್ಲಿ ಮೆಲ್ಲಗೆ—'' ಅಲ್ಲೇ, ಚಾರಿಣಿ ಯಿದ್ದರೆ ನೆಟ್ಟಗಾಯಿತಲ್ಲ, ಇನ್ನು ನಮಗೆ ಬೇಕಾದದ್ದನ್ನು ಕೇಳಿಕೊಳ್ಳೋಣ.'' ಎಂದು ನುಡಿದಳು. ಈ ಕಿವಿಮಾತಿನ ಕಡೆಗೆ ತನ್ನ ಲಕ್ಷವೇ ಇಲ್ಲೆಂದು ನಟಿಸುತ್ತ ಚಾರಿಣಿಯು ಆ ಸುಂದರಿಯನ್ನು ಕುರಿತು—

ಚಾರಿಣಿ—(ಸ್ವಲ್ಪ ನಕ್ಕು) ನೀವು ಎಲ್ಲಿ ಇರುವಿರಿ? ನಿಮ್ಮ ಉಡಿಗೆ ತೊಡಿಗೆಗಳನ್ನೂ, ಲೋಪವಾಗದ ತೇಜಸ್ಸನ್ನೂ ನೋಡಿದರೆ ನೀವು ಒಳ್ಳೇ ಕುಲೀನರಾದ ಶ್ರೀಮಂತ ಮನೆತನ ದವರೆನ್ನುವ ಹಾಗೆ ನನಗೆ ತೋರುತ್ತದೆ ಯಾಕೆ? ನನ್ನ ಮಾತು ನಿಜವಷ್ಟೆ?

ಅಮೀರೆ—ಈಕೆಯು ಶಾಹಾಜಾದಾ ಖುಸ್ರುವಿನ ಹೆಂಡತಿಯಾದ ಪ್ಯಾರೀಬೇಗಮು ಳಿರುವಳು. ಅಕಬರಬಾದಶಹರ ಮೊಮ್ಮಗ ''ಖುಸ್ರು'' ಇವರ ಗೊತ್ತು ತಮಗಿರಬಹುದು. ಅವರ ಮೇಲೆ ಬಾದಶಹರ ಪ್ರೇಮವು ವಿಶೇಷವಾಗಿ ಇರುವದು.

ಚಾರಿಣಿ—(ಸ್ವಲ್ಪ ವಿಚಾರಮಾಡಿ) ಹಾಗಾದರೆ ಬೇಗಮ ಸಾಹೇಬರು ಇಲ್ಲಿಯವರೆಗೆ ಬರಲು ಯಾಕೆ ಆಯಾಸಪಟ್ಟರು? ನನ್ನಂಥ ಸನ್ಯಾಸಿನಿಯ ಕಡೆಗೆ ಇವರ ಕೆಲಸವೇನು? ಏನಾದರೂ ಕೆಲಸವಿದ್ದರೆ ಅವಶ್ಯವಾಗಿ ಹೇಳಿರಿ.

ಪ್ಯಾರಿಬಾನು—ಮಾಯೀ, ನೀವು ಭೂತ-ಭವಿಷ್ಯ-ವರ್ತಮಾನಗಳನ್ನು ಅರಿಯುವಿರೆಂದು ನನ್ನ ನಂಬಿಗೆಯಿರುವದು. ಆದ್ದರಿಂದ ನನ್ನ ದೈವದಲ್ಲಿ ಏನಿರುತ್ತದೆಂಬದನ್ನು ನನ್ನ ಕೈನೋಡಿ ನೀವು ಹೇಳುವಿರಾ? ಹೇಳಿರಿ, ಅದನ್ನು ಕೇಳಲು ನನಗೆ ಬಹಳ ಕುತೂಹಲವುಂಟಾಗಿದೆ.

ಚಾರಿಣಿ—ನಿಮ್ಮ ದೈವದಲ್ಲೇನಿರುತ್ತದೆಂಬದನ್ನು ಹೇಳಲಿಕ್ಕೆ ಪ್ರತಿಬಂಧವೇನೂ ಇಲ್ಲ; ಆದರೆ ನಾನು ಹೇಳುವದು ಭೀತಿಕಾರಕವಾಗಿಯಾಗಲೀ, ಶೋಚನೀಯವಾಗಿಯಾಗಲೀ ಇದ್ದರೆ ಅದನ್ನು ಕೇಳುವ ಧೈರ್ಯವು ನಿಮಗಿರುವದೋ? ಕೆಲವು ಗುಪ್ತ ಸಂಗತಿಗಳನ್ನೂ, ಮನಸ್ಸು ನೋಯಿಸುವ ಶಬ್ದಗಳನ್ನೂ ನಾನು ನಿಮಗೆ ಹೇಳಿದರೆ ನನ್ನ ಮೇಲೆ ನೀವು ಸಿಟ್ಟಾಗಲಿಕ್ಕಿಲ್ಲಷ್ಟೇ?

ಚಾರಿಣಿಯ ಈ ಮಾತುಗಳನ್ನು ಕೇಳಿ ಪ್ಯಾರಿಬೇಗಮೆಯ ಎದೆಯು ದಸಕ್ಕೆಂದಿತು; ''ಈಕೆಯು ನನ್ನ ಮನಸ್ಸಿನ ಶಾಂತಿಯ ಭಂಗವಾಗುವಂತಹ ಸಂಗತಿಯನ್ನೆಲ್ಲಿ ಹೇಳುವಳೋ'' ಎಂಬ ಅಂಜಿಕೆಯೂ ಆಕೆಯ ಮನಸ್ಸಿನಲ್ಲಿ ಉತ್ಪನ್ನವಾಯಿತು; ಆದರೆ ಭವಿಷ್ಯ ಕೇಳುವ ಆಕೆಯ ಕುತೂಹಲವು ಬಲವತ್ತರವಾದದ್ದರಿಂದ ಹೇಗಾದರೂ ಮನಸ್ಸಿನ ಸಮಾಧಾನ ಮಾಡಿಕೊಂಡು ಆಕೆಯು ಚಾರಿಣಿಯನ್ನು ಕುರಿತು—

ಪ್ಯಾರಿಬಾನು—ಮಾಯೀ, ಒಳಿತು ಕೆಡಕು ಏನಿದ್ದದ್ದನ್ನೂ ಕೇಳುವ ನಿಶ್ಚಯದಿಂದ ನಾನು ಇಲ್ಲಿಗೆ ಬಂದಿರುವಾಗ ಅಂಜುವೆನೇಕೆ? ನನ್ನ ಈಗಿನ ಸ್ಥಿತಿಯು ಅತ್ಯುತ್ತಮತರದ್ದಾಗ್ಗಿರುವದು. ಖುದಾನ ಕೃಪೆಯಿಂದ ಸ್ತ್ರೀ ಜನ್ಮದ ಶ್ರೇಷ್ಠ ಸುಖವು ನನಗೆ ಸಂಪೂರ್ಣವಾಗಿ ದೊರೆತಿರುವದು; ಆದರೆ ಈವರೆಗೆ ನನಗೆ ದೊರೆತಿರುವ, ಈಗ ದೊರೆಯುತ್ತಿರುವ, ಮುಂದೆ ದೊರೆಯ

ಬೇಕಾಗಿರುವ ಸುಖಗಳು ನನ್ನ ಪತಿಯ ದೈವವನ್ನೇ ಅವಲಂಬಿಸಿ ಇರುವದರಿಂದ, ನನ್ನ ಪತಿಯ ಕಲ್ಯಾಣಕ್ಕಾಗಿಯಾದರೂ ಮುಂದೆ ಏನಾಗುವದೆಂಬದನ್ನು ಕೇಳುವಾಗ ನನಗಾಗುವ ಸಮಾಧಾನವನ್ನು ನಾನು ಸಹಿಸುವೆನು; ಆದ್ದರಿಂದ ನನ್ನ ಈ ಕೈಯನ್ನು ನೋಡಿ ಇದ್ದದ್ದನ್ನು ಸ್ಪಷ್ಟವಾಗಿ ಹೇಳಿರಿ.

ಚಾರಿಣಿ—(ಕೈಯನ್ನು ವಿಚಾರಪೂರ್ವಕವಾಗಿ ನೋಡುತ್ತ) ಬೇಗಮ್ಮ ಸಾಹೇಬ, ನಿಮ್ಮ ಉಜ್ವಲ ದೈವದಲ್ಲಿ ರಾಜಯೋಗವು ಸ್ಪಷ್ಟವಾಗಿ ಕಾಣಿಸುತ್ತಿರುವದು. ನೀವು ಇನ್ನು ಬಹುಬೇಗನೆ ರಾಜರಾಜೇಶ್ವರಿಯಾಗುವಿರಿ. ಬಹಳ ಹೇಳುವದೇನು? ಹಿಂದುಸ್ಥಾನದ ವೈಭವಶಾಲಿಯಾದ ಸಾಮ್ರಾಜ್ಞಿಯಾಗುವ ಭಾಗ್ಯವು ನಿಮಗೇ ಪ್ರಾಪ್ತವಾಗುವದು.

ಚಾರಿಣಿಯ ಈ ಮಾತುಗಳನ್ನು ಕೇಳಿ ಪ್ಯಾರೀಬೇಗಮೆಯು ಖೊಳ್ಳೆಂದು ನಗತೊಡಗಿದಳು. ಆಕೆಯ ಈ ನಗೆಯು ಚಾರಿಣಿಗೆ ಸೇರಲಿಲ್ಲ. ಆಕೆಯು ಕೆಲಮಟ್ಟಿಗೆ ತೀವ್ರವಾದ ಸ್ವರದಿಂದ—''ಯಾಕೆ ನಕ್ಕಿರಿ ಬಿಬೀಸಾಹೇಬ,'' ಎಂದು ಕೇಳಿದಳು. ಅದಕ್ಕೆ ಪ್ಯಾರಿಬಾನುವು—

ಪ್ಯಾರಿಬಾನು—ನಿಮ್ಮ ಮಾತು ಕೇಳಿ ಯಾರಿಗೆ ನಗೆ ಬರಲಿಕ್ಕಿಲ್ಲ ಮಾಸಾಹೇಬ? ನಮ್ಮ ಮಾವಂದಿರಾದ ಸುಲ್ತಾನ ಸೇಲೀಮ ಸಾಹೇಬರು ಸಿಂಹಾಸನವೇರುವದು ಸ್ಪಷ್ಟವಾಗಿ ಕಾಣುತ್ತಿರುವದು; ಅಂದಬಳಿಕ ಮೊದಲು ನಮ್ಮ ಅತ್ತೆಯವರಾದ ಜೋಧಬಾಯಿ ಸಾಹೇಬರವರು ಸಾಮ್ರಾಜ್ಞಿಯಾಗತಕ್ಕವರು. ಹಾಗಾದರೆ ಬಹು ಬೇಗನೆ ನಾನು ಸಾಮ್ರಾಜ್ಞಿಯಾಗುವ ಬಗೆಯೆತ್ತ?

ಚಾರಿಣಿ—(ಗಂಭೀರ ಸ್ವರದಿಂದ) ಇಲ್ಲ, ಹಾಗಾಗುವದಿಲ್ಲ ಬೇಗಮುಸಾಹೇಬ! ನಿಮ್ಮ ಕೈಯೊಳಗಿನ ಸ್ಪಷ್ಟವಾದ ಗೆರೆಯನ್ನು ನೋಡಿ ನಾನು ಹೇಳಿದ್ದೇನೆ. ಆ ಗೆರೆಯ ಮೇಲಿಂದ ಈಗಲಾದರೂ ಸ್ಪಷ್ಟಾವಾಗಿ ಹೇಳುತ್ತೇನೆ, ಶಾಹಾಜಾದಾ ಖುಸ್ರು ಇವರೇ ಬಾದಶಹರಾಗುವರು! ನಿಮ್ಮ ಮಾವಂದಿರಾದ ಸೇಲೀಮರವರ ರೇಷೆಯು ಹಲವು ಸಂಕಟಗಳಿಂದ ವ್ಯಾಪ್ತವಾಗಿರುತ್ತದೆ. ನಿಮ್ಮ ಪ್ರಾಣೇಶ್ವರನಾದ ಖುಸ್ರುವಿಗೆ ಈ ಸಿಂಹಾಸನವು ಪ್ರಾಪ್ತವಾಗಬೇಕಾದರೆ ಅವರು ದೀರ್ಘ ಪ್ರಯತ್ನ ಮಾಡಬೇಕಾಗುವದು. ಅವರು ದೀರ್ಘಪ್ರಯತ್ನ ಮಾಡದಿದ್ದರೆ, ಅಥವಾ ನಡುವೇ ಪ್ರಯತ್ನ ಮಾಡುವದನ್ನು ಬಿಟ್ಟು ಕೊಟ್ಟರೆ ಅವರು ಶೋಚನೀಯ ರೀತಿಯಿಂದ ಮೃತ್ಯು ಮುಖದಲ್ಲಿ ಬೀಳಬೇಕಾಗುವದು. ನಿಮ್ಮ ಸೌಭಾಗ್ಯದೇವತೆಯಾದ ಶಹಾಜಾದಾ ಖುಸ್ರುವು ತನ್ನ ತಂದೆಯ ಕೈಯೊಳಗಿಂದ ರಾಜದಂಡವನ್ನು ಕಸಿದುಕೊಳ್ಳದಿದ್ದರೆ, ಹಾಗು ನೀವು ಆ ಮಹತ್ಕಾರ್ಯದ ಸಲುವಾಗಿ ನಿಮ್ಮ ಸ್ವಾಮಿಯ ಮನಸ್ಸನ್ನು ತಿರುಗಿಸದಿದ್ದರೆ ನಿಮಗೆ ಅಕಾಲದಲ್ಲಿ ವೈಧವ್ಯಪ್ರಾಪ್ತಿಯಾಗುವದೆಂದು ತಿಳಿದುಕೊಳ್ಳಿರಿ!

ಎಂದೂ ಕಿವಿಯಿಂದ ಕೇಳದೇಯಿದ್ದ ಈ ಭಯಂಕರ ಮಾತುಗಳನ್ನು ಕೇಳಿದಕೂಡಲೆ ಯಾವಾಗಲೂ ಹಿಗ್ಗಿರುವ ಪ್ಯಾರಿಬಾನುವಿನ ಮೋರೆಯು ಒಣಗಿ ಇಷ್ಟಾಯಿತು! ಆಕೆಯು ಮನಸ್ಸಿನಲ್ಲಿ—''ಹಾ! ನಾನು ಇಲ್ಲಿಗೆ ಯಾಕೆ ಬಂದಿದ್ದೇನು? ಸ್ತ್ರೀಯರ ಸ್ವಭಾವವು ಚಂಚಲವೆಂಬದೇನೂ ಸುಳ್ಳಲ್ಲ, ಇಂದು ನಾನು ಕೇಳಿದ ಸುದ್ದಿಯು ಬಹು ಭಯಂಕರವಾದದ್ದು. ಇದರಲ್ಲಿ ಒಳ್ಳೆಯದೇನೂ ಇರುವದಿಲ್ಲ; ಆದ್ದರಿಂದ ಇದನ್ನು ನಾನು ಕೇಳದೆಯಿದ್ದರೆ

ನೆಟ್ಟಗಾಗುತ್ತಿದ್ದಿಲ್ಲವೆ? ಈಕೆಯ ಮಾತು ನಿಜವಾಗಬಹುದೆ? ಅಥವಾ ನಮ್ಮಂಥ ರಾಣೀವಾಸದ ಜನರಿಂದ ದುಡ್ಡು ಎತ್ತುವದಕ್ಕಾಗಿ ಬಾದಶಾಹೀ ಜನಾನಖಾನೆಗೆ ಬಹುಜನ ಕೈನೋಡುವ ಹೆಂಗಸರು ಬರುತ್ತಿರುವರಲ್ಲ? ಅಂಥವರಲ್ಲಿ ಇವಳೊಬ್ಬಳು ಆಗಿರಬಹುದೇ? ಹಾಗಿದ್ದರೆ ಅಂಥ ದುಡ್ಡು ಎತ್ತುವವರ ಮಾತನ್ನು ನಿಜವೆಂದು ನಂಬಿ ನಾನಾದರೂ ಇಷ್ಟು ಯಾಕೆ ವ್ಯಸನ ಪಡಬೇಕು?'' ಎಂದು ಯೋಚಿಸಿ ಆಕೆಯು ಚಾರಿಣೆಯನ್ನು ಕುರಿತು—

ಪ್ಯಾರಿಬಾನು—ನೀವು ಯಾರಿರುವಿರಿ ಮಾಯೀ?

ಚಾರಿಣೆ—ನಾನು ನಾಲ್ಕೂಕಡೆಗೆ ಸಂಚರಿಸುತ್ತಿರುವ ಒಬ್ಬ ಚಾರಿಣೆಯಿರುತ್ತೇನೆ.

ಪ್ಯಾರಿಬಾನು—ನೀವು ಎಲ್ಲಿ ಇರುತ್ತೀರಿ?

ಚಾರಿಣೆ—ಗಿಡದ ನೆರಳೇ ನಾವಿರುವ ಸ್ಥಳವು; ಆದರೆ ಯಾವಾಗ ಯಾವ ಗಿಡದಬುಡ ದಲ್ಲಿರುವೆವೆಂಬದರ ನಿಯಮವಿಲ್ಲ. ಯಾಕಂದರೆ ವಿರಕ್ತ ಪ್ರಾಣಿಗಳಿಗೆ ಯಾವತ್ತೂ ಜಗತ್ತೇ ತಮ್ಮ ಮನೆಯಾಗಿ ತೋರುತ್ತದೆ. ಪ್ಯಾರಿಬಾನು—ನೀವು ನನ್ನ ಸಂಗಡ ನಮ್ಮ ಬಾದಶಾಹೀ ರಂಗಮಹಾಲಿಗೆ ಬರವಿರಾ?

ಚಾರಿಣೆ—ಇಲ್ಲ, ಅಲ್ಲಿ ಬರಲಿಕ್ಕೆ ನನಗೆ ಬಹಳ ಅಂಜಿಕೆ ಬರುತ್ತದೆ.

ಪ್ಯಾರಿಬಾನು—ಅದೇಕೆ? ನೀವು ಎಂದಾದರೂ ಬೇಗಮ ಮಹಾಲಿಗೆ ಹೋಗಿದ್ದಿರೆನ್ನುವ ಹಾಗೆ ತೋರುತ್ತದೆ.

ಚಾರಿಣೆ—ಹಗಲು ರಾತ್ರಿ ಐಶ್ವರ್ಯದ ವ್ಯಕ್ತವಾದ ಲೀಲೆಯು ನಡೆದಿರುವಲ್ಲಿಗೆ ಹೋಗುವದರಿಂದ ನನ್ನ ಈಶ್ವರಚಿಂತನಕ್ಕೆ ವ್ಯತ್ಯಯ ಬರುವ ಸಂಭವವಿರುವದು; ಆದ್ದರಿಂದ ನಾನು ಎಂದೂ ನಿಮ್ಮ ಬೇಗಮ ಮಹಾಲಿಗೆ ಹೋಗುವದಿಲ್ಲ.

ಚಾರಿಣೆಯ ಈ ನಿಸ್ಪೃಹತೆಯ ಮಾತುಗಳನ್ನು ಕೇಳಿ ಪ್ಯಾರಿಬಾನುವು ಆಶ್ಚರ್ಯಪಡುತ್ತ ಚಾರಿಣೆಯ ನಿಸ್ಪೃಹವೃತ್ತಿಯನ್ನು ಪೂರಾ ಪರೀಕ್ಷಿಸಿಯೇ ತೀರಬೇಕೆಂದು ತಿಳಿದು ತನ್ನ ಕೊರಳೊಳಗಿನ ಮುತ್ತಿನ ಹಾರವನ್ನು ಚಾರಿಣೆಗೆ ಉಚಿತವಾಗಿ ಕೊಡಹೋದಳು! ಆದರೆ ಚಾರಿಣೆಯು ಅದನ್ನು ತಕೊಳ್ಳದೆ ಸಿಟ್ಟಿನ ಮುದ್ರೆಯಿಂದ—ಇದೇನು ಬೇಗಮಸಾಹೇಬ, ನಾನು ಇದನ್ನು ತಕ್ಕೊಂಡು ಮಾಡುವದೇನು? ಈ ಚಾರಿಣೆಯು ಉಚಿತದ ಆಶೆಯಿಂದ ಏನಾದರೂ ಭವಿಷ್ಯವನ್ನು ಹೇಳುತ್ತಿರುವಳೆಂದು ನೀವು ತಿಳಿದಿರುವಿರೇನು? ನೀವು ಕೊಡುವ ಈ ಮುತ್ತಿನ ಹಾರವು ನನ್ನ ದೃಷ್ಟಿಯಿಂದ ಕಲ್ಲು ಮಣ್ಣುಗಳಿಗೆ ಸಮಾನವಾಗಿರುವದು. ನಾನು ಇನ್ನೊಮ್ಮೆ ನಿಮಗೆ ಸ್ಪಷ್ಟವಾಗಿ ಹೇಳುತ್ತೇನೆ, ನಿಮ್ಮಿಬ್ಬರ ಭವಿಷ್ಯಕಾಲವೂ ಅಂಧಃಕಾರಮಯವಾಗಿರುವದು. ನೀವಿಬ್ಬರು ಪತಿ—ಪತ್ನಿಯರು ಬಾದಶಾಹಿ ಸಿಂಹಾಸನದ ಪ್ರಾಪ್ತಿಗಾಗಿ ಮನಃಪೂರ್ವಕವಾಗಿ ಧೀರ್ಘಪ್ರಯತ್ನ ಮಾಡದಿದ್ದರೆ, ನಿಮ್ಮಿಬ್ಬರ ಘಾತವು ನಿಶ್ಚಯವಾಗಿ ಆಗುವದು. ಸ್ತ್ರೀಯರು ತಮ್ಮ ಸಾಮರ್ಥ್ಯವನ್ನು ಪ್ರಕಟಮಾಡಿದರೆ, ನೆಲವು ಸಮುದ್ರವಾದೀತು, ಸಮುದ್ರವು ನೆಲವಾದೀತು! ಬಹಳ ಹೇಳುವದೇನು? ನೀವಿಬ್ಬರೂ ಸಿಂಹಾಸನ—ಪ್ರಾಪ್ತಿಗಾಗಿ

ದೀರ್ಘಪ್ರಯತ್ನ ಮಾಡದಿದ್ದರೆ ನಿಮ್ಮ ಮಾವನ ಕೈಯಿಂದಲೇ ನಿನ್ನ ಗಂಡನ ಕೊಲೆಯಾಗುವದು! ನಾನು ಈ ಭವಿಷ್ಯವನ್ನು ಹೇಳತಕ್ಕದ್ದಲ್ಲ; ಆದರೆ ನೀವು ಹೇಳಲು ಒತ್ತಾಯ ಮಾಡಿದ್ದರಿಂದ ಹೇಳಿದೆನು.

ಯಾವಾಗಲೂ ವಿಲಾಸದಲ್ಲಿ ಮಗ್ನಳಾಗಿರುತ್ತಿದ್ದ ಪ್ಯಾರಿಬಾನುವಿನ ಅಂತಃಕರಣವು, ಚಾರಿಣಿಯ ಮುಖದಿಂದ ಹೊರಟ ಈ ಶಬ್ದಗಳನ್ನು ಕೇಳಿ ಗದಗುಟ್ಟಿ ನಡುಗಿತು. ಆಕೆಯು ಮನಸ್ಸಿನಲ್ಲಿ—''ಈಕೆಯು ಸರ್ವಸಾಮಾನ್ಯ ಚಾರಿಣಿಯಿದ್ದಂತೆ ತೋರುವದಿಲ್ಲ. ಇಂಥ ನಿಸ್ಪ್ರಹ ವೃತ್ತಿಯವಳ ಭವಿಷ್ಯವು ಸುಳ್ಳಾಗಬಹುದೇ? ಇದಕ್ಕಾಗಿ ಉಪಾಯವೇನು ಮಾಡಬೇಕಾದೀತು?'' ಎಂದು ಕೆಲಹೊತ್ತು ವಿಚಾರಮಾಡಿ ಚಾರಿಣಿಯ ಕಡೆಗೆ ನೋಡಲು, ಆಕೆಯು ಅಕಸ್ಮಾತ್ ಅದೃಶ್ಯಳಾದವಳಂತೆ ಎತ್ತೋ ಹೊರಟು ಹೋಗಿಬಿಟ್ಟಿದ್ದಳು. ತನ್ನ ಸಖಿಯಾದ ಪ್ಯಾರಿಬಾನುವಿನ ಈ ಭಯಂಕರ ಭವಿಷ್ಯ ಶ್ರವಣದಿಂದ ಬೆದರಿಬಿದ್ದು ತನ್ನ ಸಖಿಯನ್ನಂತು ಕನಿಕರದಿಂದ ನೋಡ ತೊಡಗಿದ್ದ ಅಮೀರೆಯು ಆ ಚಾರಿಣಿಯು ಹೋದದ್ದನ್ನು ನೋಡಿದ್ದಿಲ್ಲ. ಆಗ ಸೂರ್ಯಾಸ್ತ ವಾಗುವದಕ್ಕೆ ಬಹಳ ಅವಕಾಶವಿದ್ದಿಲ್ಲ. ''ಎಷ್ಟು ಹೊತ್ತಾಯಿತಲ್ಲ'' ಎಂದು ಗಾಬರಿಯಾಗಿ ಪ್ಯಾರಿಬಾನುವು ಅಮೀರೆಯನ್ನು ಕುರಿತು—''ಅಮೀರೇ, ಆ ಚಾರಿಣಿಯು ಎಂಥ ಭಯಂಕರ ಮಾತನ್ನು ಹೇಳಿದಳಲ್ಲೇ? ಅದನ್ನು ಹೇಳುವಾಗ ನನ್ನ ವಿಷಯದ ದಯೆಯು ಆಕೆಯ ಅಂತಃಕರಣದಲ್ಲಿ ಉತ್ಪನ್ನವಾಗಿರಲಿಕ್ಕಿಲ್ಲವೆ? ಇನ್ನು ನಮ್ಮಗತಿಯೇನಾದೀತು ಅಮೀರೇ ಎಂದು ಕನಿಕರಪಡುತ್ತ ಕೇಳಿದಳು. ಆಗ ಅಮೀರೆಯು ಪ್ಯಾರಿಯನ್ನು ಸಮಾಧಾನಪಡಿಸುವದಕ್ಕಾಗಿ ಆಕೆಯನ್ನು ಕುರಿತು—ಪ್ಯಾರೀ, ನೀನೇಕೆ ಇಷ್ಟು ಗಾಬರಿಯಾಗುವೆ? ಹೀಗೆ ಭವಿಷ್ಯ ಹೇಳುವವರನ್ನು ನಾನು ಬಹಳ ನೋಡಿದ್ದೇನೆ. ಅವರ ಭವಿಷ್ಯವು ಸುಳ್ಳಾಗುವದೇ ಬಹಳ. ನನಗೂ ಒಬ್ಬಳು ಹೀಗೆಯೇ ಭವಿಷ್ಯ ಹೇಳಿದ್ದಳು; ಆದರೆ ಒಂದೂ ನಿಜವಾಗಲಿಲ್ಲ. ಇಂಥವರು ಹೇಳುವ ಭವಿಷ್ಯವೆಲ್ಲ ನಿಜವಾಗುತ್ತ ಹೋದರೆ, ಇವರು ಹೀಗೆ ಊರೂರು ಯಾಕೆ ತಿರುಗುತ್ತಿದ್ದರು? ನಿನ್ನ ಇಚ್ಛೆಯಿದ್ದರೆ ಆ ಚಾರಿಣಿಯನ್ನು ಈ ಅಡವಿಯಲ್ಲಿ ಹುಡುಕೋಣ! ಎಲ್ಲಿ ಹೋಗುತ್ತಾಳೆ? ಈಗ ನಮ್ಮ ತಾರ್ತರಿ ದಾಸಿಯರನ್ನು ಕರೆದರೆ ಅವರು ಇದ್ದಲ್ಲಿ ಆಕೆಯನ್ನು ಎಳಕೊಂಡು ಬರುವರು.

ಅಮೀರೆಯ ಈ ಮಾತುಗಳನ್ನು ಕೇಳಿ ಪ್ಯಾರಿಬಾನುವು ಅಧೀರತೆಯಿಂದ—ಬೇಡ ಬೇಡ, ಅಮೀರಾ, ಆಕೆಯ ಶೋಧಮಾಡುವದು ಬೇಡ. ಆಕೆಯೊಬ್ಬ ಸೈತಾನಳಿರುವಳು. ಆಕೆಯು ನನ್ನ ಯಾವತ್ತು ಸುಖದ ಆಸೆಯನ್ನು, ಹಾಗೂ ನನ್ನ ಉತ್ಸಾಹವನ್ನು ಮಣ್ಣುಗೂಡಿಸಿ ಬಿಟ್ಟಳು. ಅಮೀರೇ, ಇನ್ನು ನನಗೆ ಮೊದಲಿನ ಆ ಉಲ್ಲಾಸವೃತ್ತಿಯು ಪ್ರಾಪ್ತವಾಗಬಹುದೇ? ಛೇ ಛೇ! ಇನ್ನು ಮುಂದೆ ಏನಾಗುವದೋ ಯಾರಿಗೆ ಗೊತ್ತು! ನಡೆ, ಅಮೀರೇ, ಇನ್ನು ನಾವು ನದಿಯ ಆಚೆಯ ಕಡೆಗೆ ಹೋಗೋಣ ನಡೆ. ನಾವು ಇಲ್ಲಿಗೆ ಬಂದು ಬಹಳ ಹೊತ್ತಾಯಿತು.'' ಎಂದು ನುಡಿಯಲು, ಅವರಿಬ್ಬರು ಹೊಳೆಯನ್ನು ದಾಟಿ ಸುರಕ್ಷಿತವಾಗಿ ಆಚೆಯ ದಂಡೆಗೆ ಹೋದರು. ಅಷ್ಟರಲ್ಲಿ ಖುಸ್ರುವು ಅವರನ್ನು ಹುಡುಕುತ್ತ ಅಲ್ಲಿಗೆ ಬಂದಿದ್ದನು. ಆತನು ಇಬ್ಬರೂ ನದಿದಾಟಿ

ಬಂದದ್ದನ್ನು ನೋಡಿ—''ಎಲ್ಲಿಗೆ ಹೋಗಿದ್ದಿರಿ ಬೇಗಮುಸಾಹೇಬ, ನಾನು ಸುಮ್ಮನೆ ನಿಮ್ಮನ್ನು ಹುಡುಕುತ್ತ ಹುಚ್ಚನಹಾಗೆ ತಿರುಗುತ್ತಿರುವೆನು.'' ಎಂದು ಕೇಳಲು, ಆತನ ಈ ವಿನೋದದ ಮಾತಿನಿಂದ ಪ್ರಫುಲ್ಲಿತಳಾಗಬೇಕಾಗಿದ್ದ ಪ್ಯಾರಿಬಾನುವು ಏನೂ ಉತ್ತರ ಕೊಡಲಾರದೆ ನಿರ್ವಾಹವಿಲ್ಲದೆ ಪತಿಯನ್ನು ಕುರಿತು—''ತಮಗೆ ಬರುವದಕ್ಕೆ ವಿಲಂಬವಾದದ್ದರಿಂದ ಬೇಸರಬಂದು ನಾವು ಈ ಹೊಳೆದಾಟಿ, ಅದೋ ಆ ಎದುರಿಗಿನ ದಿನ್ನೆಯ ಮೇಲೆ ಹೋಗಿದ್ದೆವು. ಶಹಾಜಾದೇ ಸಾಹೇಬ, ಯಾಕೋ ಈ ದಿನ ನನ್ನ ಮನಸ್ಸಿಗೆ ಬಹಳ ಚಡಪಡಿಕೆಯಾಗಿದೆ,'' ಅನ್ನುತ್ತಿರಲು, ಖುಸ್ರುವು—ಪ್ಯಾರೀ, ನನಗೂ ಇಂದು ಸಮಾಧಾನವಿಲ್ಲ, ಈದಿನ ಎಷ್ಟು ಪ್ರಯತ್ನಮಾಡಿದರೂ ಬೇಟೆಯಲ್ಲಿ ಒಂದಾದರೂ ಚಿಗರೆ ದೊರೆಯಲಿಲ್ಲ. ಇಂದಿನ ದಿನವೇ ದುರ್ದಿನವು. ನಡೆಯಿರಿ, ನಾವು ಇನ್ನು ಮನೆಗೆ ಹೋಗೋಣ, ಎಂದು ಹೇಳಿ, ಖುಸ್ರುವು ಯಾವತ್ತು ಪರಿವಾರದೊಡನೆ ಫತ್ತೆಪುರಸಿಕ್ರಿಯಲ್ಲಿರುವ ತನ್ನ ಪ್ರಾಸಾದಕ್ಕೆ ಹೋದನು.

ಸ್ವಾಭಿಮಾನದ ಸೊಬಗು

ಕಟ್ಟಿ ಕರೆಯುವ ಮುಂಗಾರಿಯ ಮಳೆಗಾಲವು. ಒಂದು ದಿನ ಕೃಷ್ಣಪಕ್ಷದ ರಾತ್ರಿಯಲ್ಲಿ ಒಂದೇಸವನೆ ಮಳೆಯು ಸುರಿಯುತ್ತಿತ್ತು, ಗುಡುಗು ಸಿಡಿಲುಗಳ ಅಬ್ಬರದಿಂದ ಜನರ ಹೃದಯಗಳು ಕಂಪಿಸತೊಡಗಿದವು. ಮಿಂಚಿದರೆ ಮಾತ್ರ ಕಾಣುವಷ್ಟು ಗಾಢವಾದ ಅಂಧಃಕಾರವು ಮುಸುಕಿರಲು, ಮಳೆ—ಬಿರುಗಾಳಿಗಳ ಹೊಯ್ತದಿಂದ ಮುಂದುಗಾಣದೆ ಜನರು ಮನೆಹಿಡಿದು ಕುಳಿತುಕೊಳ್ಳಬೇಕಾಯಿತು! ಮನೆ ಸೋರಿದರೆ ಮಾಳಿಗೆ ಹತ್ತುವಹಾಗಿಲ್ಲ, ಹರಿ–ಮೋರಿಗಳು ಕಟ್ಟಿ, ನೀರು ಮನೆಹೊಕ್ಕರೆ ಹಿತ್ತಲ–ಮುಂಚೆಗೆ ಹೋಗುವಹಾಗಿಲ್ಲ. ಮಳೆಯು ನಿಲ್ಲುವದೋ, ಹೀಗೆಯೇ ಮಳೆಯಾಗುತ್ತಾಗುತ್ತ ಮನೆ–ಮಾರು ತೇಲಿ ಹೋಗುವವೋ ಅನ್ನುವಹಾಗೆ ಜನರಿಗೆ ಆಗಿತ್ತು. ಇಂಥ ಭಯಂಕರ ರಾತ್ರಿಯಲ್ಲಿ ಅಂಬರಾಧೀಶ್ವರನಾದ ಮಾನಸಿಂಹನು ತನ್ನ ಆಲೋಚನಾ ಗೃಹದಲ್ಲಿ ದೀರ್ಘವಾದ ಆಲೋಚನೆಗೊಳಗಾಗಿ, ಹೊರಗಿನ ಇಂಥ ಮಳೆಯ ಕಡೆಗೆ ಲಕ್ಷವಿಲ್ಲದೆ, ಆಗೋಡೆಯಿಂದ ಈಗೋಡೆಗೆ ಈ ಗೋಡೆಯಿಂದ ಆ ಗೋಡೆಗೆ ಹೋಗುತ್ತ–ಬರುತ್ತಲಿದ್ದನು. ಬಿರುಗಾಳಿಯಿಂದ ಆ ಗೃಹದೊಳಗೆ ಹಚ್ಚಿದ ಸುಗಂಧ ತೈಲದ ಕೆಲವು ದೀಪಗಳು, ಸಿಟ್ಟಿನಿಂದ ಉರಿಯುತ್ತಿದ್ದ ಆ ವೀರಾಗ್ರಣಿಯ ಭಯದಿಂದ ಕಂಪಿಸತೊಡಗಿದ್ದವು; ಕೆಲವು ಆತನೆದುರಿಗೆ ನಿಲ್ಲಲಾರದೆ ಶಾಂತವಾಗತೊಡಗಿದ್ದವು. ಆದರೆ ಅವಾವುಗಳ ಕಡೆಗೂ ಆ ಅಂಬರಾಧೀಶ್ವರನ ಲಕ್ಷವಿದ್ದಿಲ್ಲ; ಅಷ್ಟರಲ್ಲಿ ಒಮ್ಮೆ ಬಿರುಗಾಳಿಯ ಕಸುವಿನ ಪ್ರವಾಹ ದೊಡನೆ ಮಳೆಯ ತುಷಾರದ ಹನಿಗಳು ಎಲ್ಲ ಕಿಡಿಕೆಗಳೊಳಗಿಂದ ಒಳನುಗ್ಗಿ ಆ ರಜಪೂತ ಶ್ರೇಷ್ಠನ ಮೈ—ಮೋರೆಗಳನ್ನು ಮುತ್ತಲು, ಆತನು ಎಚ್ಚತ್ತು ಸಿಟ್ಟಿನಿಂದ ದಡದಡ ಒಂದೊಂದೇ ಕಿಡಿಕಿಗಳನ್ನು ಇಕ್ಕಿ ಆ ಗೃಹವನ್ನು ಗಾಳಿಯಾಡದಂತೆ ಮಾಡಿಬಿಟ್ಟನು; ಆದರೆ ಅಷ್ಟರೊಳಗೇ

ಒಂದೆಂದರೆ ಒಂದೇ ದೀಪವು ಉಳಿದು ಮಿಕ್ಕ ದೀಪಗಳೆಲ್ಲ ಶಾಂತವಾಗಿ ಹೋಗಿದ್ದವು; ಆದರೂ ಆ ರಜಪೂತ ವೀರನು ದೀಪಗಳನ್ನು ಹಚ್ಚುವದಕ್ಕಾಗಿ ಸೇವಕರನ್ನು ಕರೆಯದೇ, ಒತ್ತಟ್ಟಿಗೆ ಒಗೆದುಬಿಟ್ಟಿದ್ದ ಒಂದು ಪತ್ರದ ಕಡೆಗೆ ನೋಡಿ ಸಂತಾಪಗೊಳ್ಳತೊಡಗಿದ್ದನು. ಆಗ ಆತನ ಮುಖಮುದ್ರೆಯು ಕ್ರೋಧಾವಿಷ್ಟವಾಗಿತ್ತು; ಆತನ ಕಣ್ಣುಗಳು ಕೆಂಡದಂತಾಗಿದ್ದವು; ಆತನ ಕೆಳದುಟಿಯು ಥರಥರ ನಡುಗುತ್ತಿತ್ತು, ಒಮ್ಮೊಮ್ಮೆ ಆತನ ಸಂತಾಪದ ಮಿತಿಯು ಮೀರಲು, ಆತನು ಸರಕ್ಕನೆ ತನ್ನ ಖಡ್ಗವನ್ನು ಒರೆಯೊಳಗಿಂದ ಹಿರಿಯುವನು; ಆದರೆ ಯಾವದೋ ವಿಚಾರವು ಮನಸ್ಸಿನಲ್ಲಿ ಬರಲು ಪುನಃ ಆತನು ಆ ಖಡ್ಗವನ್ನು ಒರೆಗಾಣಿಸುವನು.

ಪ್ರಿಯವಾಚಕರೇ, ರಾಜಾ ಮಾನಸಿಂಹನು ಇಷ್ಟು ಸಿಟ್ಟಾಗಲಿಕ್ಕೆ ಕಾರಣವೇನಿರ ಬಹುದೆಂಬ ವಿಚಾರವು ನಿಮ್ಮ ಮನಸ್ಸಿನಲ್ಲಿ ಬಂದಿರಬಹುದಲ್ಲವೆ? ಅತ್ತ ಒತ್ತಟ್ಟಿಗೆ ಒಗೆದು ಕೊಟ್ಟಿದ್ದ ಪತ್ರವು ಯಾರದಿರಬಹುದೆಂಬದನ್ನು ತಿಳಕೊಳ್ಳುವದಕ್ಕೂ ನೀವು ಆತುರ ಪಡುತ್ತಿರಬಹುದು. ಆದರೆ ಆ ಪತ್ರವು ಅಲಹಾಬಾದದಿಂದ ಸೇಲೀಮನು ಬರೆದು ಕಳಿಸಿದ್ದಾಗಿತ್ತೆಂಬದನ್ನು ನಿಮಗೆ ನಾವು ಹೇಳಿಬಿಡುವೆವು. ತನ್ನ ಬೀಗನು ಬರೆದಿರುವ ಆ ಪತ್ರವನ್ನು ನೋಡಿ ಮಾನಸಿಂಹನು ಇಷ್ಟು ಯಾಕೆ ಸಿಟ್ಟಾಗಿರಬಹುದು? ಮಾನಸಿಂಹನ ಪರಿಚಯವಂತು ನಿಮಗೆ ಬಹುಮಟ್ಟಿಗೆ ಆದಂತಾಗಿರುವದು; ಆ ರಜಪೂತ ವೀರಾಗ್ರಣಿಯ ಸಹಾಯವಿಲ್ಲದಿದ್ದರೆ ಅಕಬರ ಬಾದಶಹನು ಬಾದಶಾಹಿಯ ಪದವಿಯನ್ನು ಹೊಂದುತ್ತಿದ್ದನೋ ಇಲ್ಲವೋ ಎಂಬದು ಸಂಶಯಗ್ರಸ್ತವಾಗಿತ್ತೆನ್ನುವಷ್ಟು ಆ ಅಂಬರಾಧೀಶ್ವರನು ಕರ್ತೃತ್ವಶಾಲಿ ಯಾಗಿದ್ದನು. ಅಕಬರ ಬಾದಶಹನ ವಿಜಯಶಾಲಿತ್ವದ ಅರ್ಧಕ್ಕರ್ಧ ಪಾಲಿಗೆ ಮಾನಸಿಂಹನು ಕಾರಣನೆಂದು ಇತಿಹಾಸಕಾರರು ಒಪ್ಪಿಕೊಳ್ಳುತ್ತಿರುವರು. ಇಂಥ ಘನವಂತನಿಗೆ, ಆತನ ದೃಷ್ಟಿಯಿಂದ ಇನ್ನೂ ಪೋರನಾಗಿರುವ ಸೇಲಿಮನು ಉದ್ಧಟ ತನದಿಂದ ಪತ್ರ ಬರೆದಬಳಿಕ, ಆ ಅಭಿಮಾನಿಯಾದ ರಜಪೂತನಿಗೆ ಯಾಕೆ ಸಿಟ್ಟುಬರಬಾರದು? ಮೊದಲೇ ಮಾನಸಿಂಹನು ಅತ್ಯಂತ ಅಭಿಮಾನಿಯು, ಅದರಲ್ಲಿ ನಿಜವಾಗಿ ಮೊಗಲ ಬಾದಶಹರ ಕಲ್ಯಾಣವನ್ನು ಮನಮುಟ್ಟಿ ಮಾಡಿದವನು. ಅಂದಬಳಿಕ ತನ್ನ ಬೀಗ ಸೇಲೀಮನ ಆ ಅಪಮಾನಕಾರಕ ಪತ್ರದಿಂದ ಆತನಿಗೆ ಬರುವಷ್ಟಕ್ಕಿಂತ ಹೆಚ್ಚು ಸಿಟ್ಟು ಬಂದಿದ್ದರೆ ಆಶ್ಚರ್ಯವೇನು? ಅತ್ತ ಸೇಲೀಮನೂ ಮಾನಸಿಂಹನ ಮೇಲೆ ಬಹಳ ಸಿಟ್ಟಾಗಿದ್ದನು; ತನ್ನ ಹೆಂಡತಿಯಾದ ಜೋಧ 'ಬಾಯಿಯನ್ನೂ, ಮಗನಾದ ಖುಸ್ರುವನ್ನೂ ಮನೆಯಲ್ಲಿಟ್ಟುಕೊಂಡು, ತನಗೆ ಪಟ್ಟವು ದೊರೆಯದೆ ತನ್ನ ಮಗ ಖುಸ್ರುವಿಗೆ ದೊರೆಯುವಂತೆ ಮಾನಸಿಂಹನು ಯತ್ನಿಸುವನೆಂಬದರ ನಂಬಿಗೆಯಾದ ಬಳಿಕ ಸೇಲೀಮನು ತನ್ನ ಬೀಗನ ಮೇಲೆಯಾದರೂ ಯಾಕೆ ಸಿಟ್ಟಾಗಬಾರದು? ಹೀಗೆ ಆ ಬೀಗಬೀಗರು ಪರಸ್ಪರ ಕಲುಷಿತ ಮನಸ್ಕರಾಗಿರುವಾಗ ಸೇಲೀಮನು ಆ ಪತ್ರವನ್ನು ಬರೆದಿದ್ದನು. ಅದನ್ನು ಓದಿ ಮಾನಸಿಂಹನಿಗೆ ಅಪರಿ ಸಿಟ್ಟು ಬಂದಿತ್ತು; ಅಂಥ ಆ ಪತ್ರದಲ್ಲಿಯ ಸಂಗತಿಯೇನೆಂಬದನ್ನು ತಿಳಿಸುವದಕ್ಕಾಗಿ ಇದ್ದಕ್ಕಿದ್ದ ಹಾಗೆ ಅದನ್ನು ಇದರಡಿಯಲ್ಲಿ ಬರಿಯುವೆವು.

"ಅಂಬರೇಶ್ವರ, ನೀವು ನಮ್ಮ ಶೀರ ಹತ್ತರದ ಹತ್ತುಗಡೆದ ಆಪ್ತರಾಗಿರುವಿರಿ. ಈ ಆಪ್ತತ್ವದ ಬಳಿಕೆಯು ಅವಶ್ಯದ ಸರ್ವಸಾಧಾರಣ ಕೆಲಸದ ಮಟ್ಟಿಗೆ ಆಗದೆ, ಜನಾನಖಾನೆ ಯೊಳಗಿನ ರಂಗಮುಹಾಲಿನಲ್ಲಿಯೂ ಅದರ ಬಳಿಕೆಯಾಗಹತ್ತಿದೆ. ಆದರೆ ಇನ್ನುಮುಂದೆ ಆಗಬೇಕಾಗಿರುವ ಹಿಂದುಸ್ಥಾನದ ಬಾದಶಹನ ಹಿತವಿಘಾತಕ ಸಂಗತಿಗಳಿಗೆ ಹೀಗೆ ನಿಮ್ಮ ಸಂಬಂಧವಾಗುತ್ತಿರುವದು ಎಂಥ ಉದ್ಧಟತನವು! ಇದರ ವಿಚಾರವನ್ನು ನೀವು ಮಾಡಿರುವಂತೆ ತೋರುವದಿಲ್ಲ. ನನ್ನ ಹೆಂಡತಿಯೂ, ನನ್ನ ಮಗನೂ ನನ್ನಪ್ಪಣೆಯನ್ನು ಮೀರಲಿಕ್ಕೆ ಹವಣಿಸುತ್ತಿರುವದಕ್ಕೆ ನೀವೇ ಕಾರಣರು. ಚಿಕ್ಕಂದಿನಿಂದಲೂ ಮೊಗಲರ ದಾಸರಾಗುವದ ರಲ್ಲಿಯೇ ನೀವು ಮೈ ಉಂಡಿರುವಿರಿ; ಹಾಗೆ ದಾಸರಾಗದಿದ್ದರೆ ನಿರ್ವಾಹವೇ ಇಲ್ಲವೆಂದು ದೇವರು ನಿಮ್ಮ ಹಣೆಯಲ್ಲಿ ಸ್ಪಷ್ಟವಾಗಿ ಬರೆದಿಟ್ಟಿರುವನು. ಇಂಥ ನಿಮ್ಮ ಈ ಅಪರಾಧವು ಬೇರೆ ಬಗೆಯದಾಗಿದ್ದು, ಅದಕ್ಕಾಗಿ ಸದ್ಯದ ಬಾದಶಹರು ಕ್ಷಮೆ ಮಾಡಿದರೂ ಮುಂದೆ ಬರುವ ಬಾದಶಹನು ಅದನ್ನು ಎಂದೂ ಕ್ಷಮಿಸಲಾರನು. ಹಾವಿಗೆ ಹಾಲುಣಿಸಿದರೂ ಅದು ವಿಷವೇ ಆಗುವಂತೆ, ಮೊಗಲ ಬಾದಶಹರಿಂದಾದ ನಿಮ್ಮ ಕಲ್ಯಾಣವು ಮೊಗಲ ಬಾದಶಹರ ಹಿತವಿಘಾತವಾಗುವಲ್ಲಿಯೇ ಪರಿಣಮಿಸುತ್ತಿರುವದು! ಶಹಾಜಾದಾ ಖುಸ್ರುವನ್ನು, ಪ್ರತಿಬಂಧ ದಲ್ಲಿರಿಸಿದಂತೆ ನಿಮ್ಮ ಅಂಬರ ರಾಜಧಾನಿಯಲ್ಲಿ ಇಟ್ಟುಕೊಳ್ಳಲಿಕ್ಕೆ ನಿಮಗೆ ಯಾವ ಬಗೆಯ ಅಧಿಕಾರವೂ ಸರ್ವಥಾ ಇರುವದಿಲ್ಲ, ಇಂದಿನ ನನ್ನ ಈ ಪತ್ರದಿಂದ ಬುದ್ಧಿಪೂರ್ವಕವಾಗಿ ಮುಚ್ಚಿಕೊಂಡಿರುವ ನಿಮ್ಮ ಕಣ್ಣುಗಳು ಪಳಕ್ಕನೆ ತೆರೆದಾವೆಂದು ನಾನು ಬಹಳವಾಗಿ ಆಶಿಸುವೆನು. ನನ್ನ ಹೆಂಡತಿಯನ್ನೂ, ಮಗನನ್ನೂ ಕೂಡಲೆ ಕಳಿಸಿಕೊಡಿರಿ. ನನ್ನ ಅಪ್ಪಣೆಯಂತೆ ಕೂಡಲೆ ವ್ಯವಸ್ಥೆಯಾಗಲೇಬೇಕು. ಇತಿ–

ಶಹಾಜಾದಾ ಸುಲ್ತಾನ ನೂರ ಮುಹಮ್ಮದ ಸೇಲೀಮು.

ಮಾನಸಿಂಹನು ಒಮ್ಮೆ ಈ ಪತ್ರವನ್ನು ಓದಿದಾಗ, ಅದು ಯಾರಾದರೂ ಮೋಸದಿಂದ ಬರೆದದ್ದಾಗಿರಬಹುದೆಂದು ತರ್ಕಿಸಿ, ಅದನ್ನು ಮತ್ತೊಮ್ಮೆ ಓದಿದನು. ಅದರಿಂದಲೂ ಸಮಾಧಾನವಾಗದೆ ಮೂರನೆಯ ಸಾರೆ ಪತ್ರ ಓದಿ ನೋಡಿ ಸೂಕ್ಷ್ಮರೀತಿಯಿಂದ ಅದನ್ನು ಅವಲೋಕಿಸಿದನು; ಆಗ ಅಕ್ಷರಗಳು ಸೇಲೀಮನವು, ಭಾಷೆಯು ಸೇಲೀಮನದು, ಪತ್ರದ ಬುಡದಲ್ಲಿಯ ಸಹಿಯು ಸೇಲೀಮನದು, ಪತ್ರಕ್ಕೆ ಮಾಡಿದ ಮುದ್ರೆಯೂ ಸೇಲೀಮನದು! ಆದ್ದರಿಂದ ಈ ಪತ್ರವು ಸೇಲೀಮನು ಬರೆದದ್ದೇ ಎಂದು ಮಾನಸಿಂಹನು ನಿಶ್ಚಯಿಸಿದನು. ಆತನ ಹೃದಯವು ಪುನಃ ಪುನಃ ಕ್ರೋಧಸಂತಪ್ತವಾಗುತ್ತಲಿತ್ತು. ಇಂಥ ಅಪಮಾನವು ಆತನ ಆಯುಷ್ಯದಲ್ಲಿ ಎಂದೂ ಆಗಿದ್ದಿಲ್ಲ. ಆತನು ಸ್ವಾಭಿಮಾನಪೂರ್ಣ ದೃಷ್ಟಿಯಿಂದ ಎದುರಿಗೆ ನೋಡುತ್ತ ದಪ್ಪನೆ ನೆಲಕ್ಕೆ ಕಾಲು ಅಪ್ಪಳಿಸಿ ತೀವ್ರಸ್ವರದಿಂದ—"ಸೇಲೀಮ, ನೀನು ಇಷ್ಟು ಉದ್ಧಟನೂ, ಅಭಿ ಮಾನಿಯೂ ಆದೆಯೇನು? ರಾಜಾ ಮಾನಸಿಂಹನು ಮೊಗಲರ ದಾಸನೋ? ಈ ಮಾನಸಿಂಹನು ಇಲ್ಲದಿದ್ದರೆ ಮೊಗಲರು ನೀವು ಪಠಾಣರಂತೆ ಕಾಲದ ತೀವ್ರ ಪ್ರವಾಹದಲ್ಲಿ ಎತ್ತಿಂದೆತ್ತೋ ಹರಿದು ಹೋಗುತ್ತಿದ್ದಿರಿ!! ಮಹಾಪರಾಕ್ರಮಿಯೂ, ಈ ದೀನ ದುನಿಯೆಯ

ಮಾಲಕನೂ, ಆದ ಅಕಬರ ಬಾದಶಹನು ಕೂಡ ಆಡುವ ಸಾಹಸ ಮಾಡದಂತಹ ಮಾತುಗಳನ್ನು ಇಂದು ನೀನು ನನಗೆ ಬರೆದು ಕಳಿಸುವೆಯಾ? ಸೇಲೀಮಾ, ಬಂಗಾಲ–ಬಿಹಾರ–ಓಡಿಸಾ ಈ ಮೂರು ಪ್ರಾಂತಗಳಲ್ಲಿದ್ದು, ಮೊಗಲರಾದ ನಿಮ್ಮನ್ನು ಯಾವಾಗಲೂ ಪೀಡಿಸಿ ಸಾಕು ಸಾಕು ಮಾಡಿಬಿಟ್ಟಿದ್ದ ಪಠಾಣರ ರಾಜ ಸಿಂಹಾಸನವನ್ನು ಯಾರು ಇಲ್ಲದಂತೆ ಮಾಡಿದರು? ಸಿಂಹನಂತೆ ಶಕ್ತಿವಂತರಾಗಿರುವ ಅಫಗಾಣ ಜನರು ದುರ್ಭೇದ್ಯಗಳಾದ ಪರ್ವತಗಳ ಸಾಲುಗಳ ಗೋಡೆ ಯಿಂದ ತಮ್ಮ ಮಾತೃಭೂಮಿಯನ್ನು ಸುರಕ್ಷಿತವಾಗಿ ಮಾಡಿಕೊಂಡಿರಲು, ಆ ಅಫಗಾಣರ ಸಾಮರ್ಥ್ಯವನ್ನು ಬಗ್ಗು ಬಡಿದು ಅವರ ಸ್ವಾತಂತ್ರ್ಯವನ್ನು ಯಾರು ಕಸಿದು ಕೊಂಡರು ಸೇಲೀಮ! ನಿರ್ಮಲಾಕಾಶದೊಳಗಿನ ನಿಷ್ಕಲಂಕ ಚಂದ್ರನಂತೆ ಯಾವತ್ತು ರಾಜಸ್ಥಾನಕ್ಕೆ ಭೂಷಣ ಭೂತನಾಗಿರುವ ಮಹಾರಾಣಾ ಪ್ರತಾಪಸಿಂಹನು ಅರ್ಧಕ್ಕಿಂತ ಹೆಚ್ಚು ಹಿಂದುಸ್ಥಾನವನ್ನು ತನ್ನ ಪರಾಕ್ರಮದಿಂದ ಗದಗಮಿಸಿ ಬಿಟ್ಟಿರುವಾಗ, ನನ್ನ ಸಹಾಯವಿಲ್ಲದಿದ್ದರೆ ಬಾದಶಾಹಿಯ ಮಾನವು ಯಾರಿಗೆ ದೊರೆಯುತ್ತಿತ್ತು ಹೇಳು ನೋಡೋಣ! ಹಿಂದುಸ್ಥಾನದ ಹಾಗು ಹಿಂದುಗಳ ಗೌರವ ಸ್ವರೂಪನಾದ ಆ ರಾಣಾಪ್ರತಾಪಸಿಂಹನು ಭರದಿಂದ ಯಾವತ್ತು ಮೊಗಲರನ್ನು ಕುರಿಗಳಂತೆ ತುಂಡರಿಸುತ್ತಿರುವಾಗ, ಆ ವೀರಕೇಸರಿಯನ್ನು ಯಾರು ನಿಜಧಾಮಕ್ಕೆ ಕಳಿಸಿದರು? ಸೇಲೀಮಾ, ಆಗ ನೀನು ಅಸಂಖ್ಯ ಸೈನ್ಯವನ್ನು ತಕ್ಕೊಂಡು ಆ ನರಕೇಸರಿಯ ಮೇಲೆ ಏರಿಹೋದದ್ದರ ಉಪಯೋಗವು ಸ್ವಲ್ಪವಾದರೂ ಆಯಿತೇ? ಕೃತಘ್ನಾ, ಚಿತ್ತೂರ ವಿಜಯದ ನಂತರ ನನ್ನ ಮಸ್ತಕವನ್ನು ಅಲಂಕರಿಸುತ್ತಿದ್ದ ರಾಜಸ್ಥಾನದ ಮುಕುಟವನ್ನು ನಾನು ಎಷ್ಟು ಆನಂದದಿಂದ ನಿನ್ನ ತಲೆಗೆ ಹಾಕಿದೆನೆಂಬದನ್ನು ಮರೆತೆಯಾ? ಈ ದಂಡಯಾತ್ರೆಯ ಯಾವತ್ತು ಶ್ರೇಯಸ್ಸು ನಿನ್ನದೆಂದು ನಾನು ಅಕಬರಬಾದಶಹರ ಮುಂದೆ ಹೇಳಿದಾಗ ನೀನು ಅಲ್ಲಿ ಇದ್ದಿಲ್ಲವೆ? ಹಾಯ್! ಕಡೆಗೆ ನೀನು ಆ ಎಲ್ಲ ಉಪಕಾರಗಳಿಗಾಗಿ ಪ್ರತ್ಯುಪಕಾರವನ್ನು ಈ ಬಗೆಯಾಗಿ ಮಾಡಬಹುದೇ? ಸೇಲೀಮಾ, ರಜಪೂತರ ಉಜ್ವಲ ಕೀರ್ತಿಗೆ ಕಲಂಕವನ್ನುಂಟುಮಾಡಿಕೊಂಡು ಮೊಗಲರ ದಾಸ್ಯವನ್ನು ಒಪ್ಪಿಕೊಂಡ, ಹಾಗು ಕಾಬೂಲದಿಂದ ಓರಿಸಾ ಪ್ರಾಂತದವರೆಗೆ ಹಿಂದು ಸ್ಥಾನವನ್ನು ತನ್ನ ಬಾಹುಬಲದಿಂದ ಮೊಗಲರ ಕೈಸೇರಿಸಿಕೊಟ್ಟಿರುವ ಆ ಮಾನಸಿಂಹನು ನಾನು ಪ್ರಯತ್ನ ಮಾಡಿದರೆ ನಿಮ್ಮ ಸಿಂಹಾಸನವು ತತ್ತರಿಸಿ ಉರುಳಿ ಬಿದ್ದು ನಿಮಗೆ ನಿಲ್ಲಲಿಕ್ಕೂ ಸ್ಥಳವಿಲ್ಲದ ಹಾಗಾದೀತೆಂಬ ವಿಚಾರವು ಎಂದೂ ನಿನ್ನ ಮನಸ್ಸಿನಲ್ಲಿ ಬಂದಿಲ್ಲವೆ? ದ್ವೇಷ, ತಿರಸ್ಕಾರ, ಸೇಡು ಎಂಬೀ ಮೂರೂ ಶಸ್ತ್ರಗಳನ್ನು ಮಾನಸಿಂಹನು ಕುಶಲತೆಯಿಂದ ಪ್ರಯೋಗಿಸುವದನ್ನು ನೋಡಿದರೆ, ನೀವು ಬಾಯಿಬಾಯಿಬಿಟ್ಟೀರಿ! ನಿನ್ನ ಈ ಪತ್ರದಿಂದ ನನಗೆ ಆ ಶಸ್ತ್ರಗಳನ್ನು ಪ್ರಯೋಗಿಸುವ ಪ್ರಸಂಗವು ಬಂದುಬಿಟ್ಟಿದೆ; ಅಂದಬಳಿಕ ಅದರ ಅನುಭವವು ನಿನಗೆ ಬೇಗನೆ ಆದೀತು!

ಇಷ್ಟು ಮಾತಾಡಿದರೂ ಮಾನಸಿಂಹನಿಗೆ ಸಮಾಧಾನವಾಗಲಿಲ್ಲ. ಕೆಲಹೊತ್ತು ಸುಮ್ಮನಿದ್ದು ಆತನು ಮತ್ತೆ ದೃಢಸ್ವರದಿಂದ—''ಮೊಗಲರ ದಾಸನೆಂದು ಅವನು ನನಗೆ ಹೇಗೆ ಅಂದಿರ

ಬಹುದು! ಈ ಅಪಮಾನವನ್ನು ನಾನು ಹೇಗೆ ಸಹಿಸಲಿ? ಸೇಲೀಮಾ, ಇನ್ನು ನಾನು ವಿಶ್ವಪ್ರಯತ್ನ ಮಾಡಿ ನೀನು ದಿಲ್ಲಿಯ ಸಿಂಹಾಸನವೇರದಂತೆ ಮಾಡಿ, ಆ ಸಿಂಹಾಸನದ ಮೇಲೆ ಖುಸ್ರುವನ್ನು ಕೂಡಿಸುವೆನು. ಖುಸ್ರುವು ಆಜನ್ಮ ನನಗೆ ಅಂಕಿತನಾಗಿರುವ ಹಾಗೆ ನೀನು ಇರಲಾರೆ. ಸದ್ಯಕ್ಕೆ ಅಕಬರ ಬಾದಶಹನು ವೃದ್ಧನಾಗಿ ಬೇನೆಯಿಂದ ಜರ್ಜರನಾಗಿರುವನು. ಆತನಿಂದ ಯಾವ ಕೆಲಸವೂ ಆಗುವಹಾಗಿಲ್ಲ, ಆತನ ಶಕ್ತಿಶಾಲಿಗಳಾದ ದೋರ್ದಂಡಗಳು ಈಗ ಶಕ್ತಿಹೀನ ವಾಗಿರುವವು. ಆತನ ಮನಸ್ಸಿಗೆ ಉತ್ಸಾಹವಿಲ್ಲ, ಆತನ ಬುದ್ಧಿಯು ವಿಕಲವಾಗಿರುವದು; ಆತನ ಪ್ರತಿಜ್ಞೆಯು ಯಾವಾಗ ನಾಶವಾಯಿತೆಂಬದು ಆತನಿಗೇ ಗೊತ್ತಾಗಿರುವದಿಲ್ಲ. ಇಂಥವನಿಂದ ಪ್ರತಿಕಾರವೇನು ಆಗಬೇಕು? ನಾನು ಮಾಡಬಾರದ ಯತ್ನಮಾಡಿ ಅಕಬರ ಬಾದಶಹನ ತರುವಾಯ ಖುಸ್ರುವನ್ನೇ ಪಟ್ಟಕ್ಕೆ ಕುಳ್ಳಿರಿಸುವೆನು'' ಎಂದು ನುಡಿದು ಸೇಡು ತೀರಿಸುವ ವಿಕಾರ ದಿಂದ ಸೇಲೀಮನನ್ನುದ್ದೇಶಿಸಿ—ಸೇಲೀಮಾ, ಹೊತ್ತು ಬಂದರೆ ಈ ಖಡ್ಗವನ್ನೇ–ಚಿತೂರ್ತನ್ನು ಗೆದ್ದದ್ದಕ್ಕಾಗಿ ನಿನ್ನ ತಂದೆಯು ಕೊಟ್ಟಿದ್ದ ವಜ್ರದ ಹಿಡಿಕೆಯ ಈ ಖಡ್ಗವನ್ನೇ ನಿನ್ನ ಹೃದಯದಲ್ಲಿ ಚುಚ್ಚಿ ಹೂಳಿಡಲಿಕ್ಕೆ ನಾನು ಹಿಂದೆ ಮುಂದೆ ನೋಡಲಿಕ್ಕಿಲ್ಲ! ಇನ್ನು ನಿನ್ನ ಈ ಪತ್ರದ ಕಾಲಲ್ಲಿ ನಿನ್ನ ಶೋಚನೀಯ ಸ್ಥಿತಿಯು ಏನಾಗುವದೆಂಬದನ್ನು ಅನುಭವದಿಂದ ನೋಡು. ಸೇಲೀಮಾ, ನನ್ನ ತಂಗಿಯ ವೈದವ್ಯಕ್ಕಾಗಿ ಅಂಜಿ ನಾನು ನಿನ್ನ ಪ್ರಾಣಹರಣ ಮಾಡದಿದ್ದರೂ, ಇನ್ನು ಮೇಲೆ ಪ್ರತಿ ಒಂದು ಕೆಲಸದಲ್ಲಿ ನಿನಗೆ ವಿಘ್ನವನ್ನುಂಟು ಮಾಡುವೆನು; ನಿನ್ನ ಪ್ರತಿ ಒಂದು ಸಣ್ಣ–ಪುಟ್ಟ ತಪ್ಪನ್ನು ಬಾದಶಹರ ಕಿವಿಯಮೇಲೆ ಹಾಕಿ ನಿನ್ನ ವಿಷಯದ ಅಪ್ರೀತಿಯನ್ನು ಅವರಲ್ಲಿ ಹೆಚ್ಚಿಸುವೆನು. ನನ್ನ ಪ್ರಿಯ ಜೋಧೆಯು ರಾಜಪತ್ನಿಯೆನಿಸಿಕೊಳ್ಳುವದಕ್ಕಿಂತ ರಾಜಮಾತೆಯೆನಿಸಿ ಕೊಳ್ಳಬೇಕೆಂಬ ಯತ್ನವನ್ನು ನಾನು ಮನಃಪೂರ್ವಕವಾಗಿ ಮಾಡುವೆನು.

ಈ ಮೇರೆಗೆ ಮಾನಸಿಂಹನು ಮಾತಾಡುತ್ತಿರಲು, ಹೊರಗೆ ಯಾರೋ ಆತನನ್ನು ಕುರಿತು—''ಮಹಾರಾಜ, ತಾವು ಇಷ್ಟು ದೀರ್ಘ ಚಿಂತೆಮಾಡುವ ಕಾರಣವಿಲ್ಲ, ತಮ್ಮ ಮನೋದಯವನ್ನು ಖುದಾನು ಬೇಗನೆ ಸುಲಭವಾಗಿ ಕೈಗೂಡಿಸುವನು'' ಎಂದು ನುಡಿದರು; ಮಾನಸಿಂಹನು ಕೆಚ್ಚೆದೆಯವನಾದರೂ, ತನ್ನ ವಿಚಾರವನ್ನನುಲಕ್ಷಿಸಿ ಹೀಗೆ ಉತ್ತರ ಕೊಟ್ಟದ್ದಕ್ಕಾಗಿ ಅಸ್ವಸ್ಥನಾದನು. ಆತನಿಗೆ ಆಶ್ಚರ್ಯವೂ ಆಯಿತು. ಆ ಕ್ಷತ್ರಿಯ ವೀರನ ನಡಕಟ್ಟಿನಲ್ಲಿ ಯಾವಾಗಲೂ ತೀಕ್ಷ್ಣಧಾರೆಯದೊಂದು ಕಿರಿಗತ್ತಿಯು ಇರುತ್ತಿತ್ತು, ಮೇಲಿನ ಶಬ್ದಗಳು ಆತನ ಕಿವಿಗೆ ಬಿದ್ದಕೂಡಲೆ ಆತನು ಆ ಕಿರಿಗತ್ತಿಯನ್ನು ಬಲಗೈಯಲ್ಲಿ ಗಟ್ಟಿಯಾಗಿ ಹಿಡಿದು ಬಾಗಿಲ ಚಿಲಕಕ್ಕೆ ಕೈಹಾಕಿ ತೀವ್ರ ಸ್ವರದಿಂದ—''ಯಾರವರು'' ಎಂದು ನುಡಿದು ದಡಲ್ಲನೆ ಬಾಗಿಲು ತೆರೆದನು. ಕೂಡಲೆ ಸರ್ವಾಂಗವನ್ನು ಅಚ್ಚ ಕರಿಯ ವಸ್ತ್ರದಿಂದ ಮುಚ್ಚಿಕೊಂಡಿದ್ದ ಒಬ್ಬ ಭೀಮಕಾಯದ ಪುರುಷನು ಮಾನಸಿಂಹನ ಎದುರಿಗೆ ಬಂದು ನಿಂತು ಮೃದುಸ್ವರದಿಂದ—''ಅದಾಬ ಜನಾಬ! ನಾನು ತಮ್ಮ ಆಪ್ತನಿದ್ದು, ಪ್ಯಾರಿಬಾನುವಿನ ತಂದೆಯಿರುತ್ತೇನೆ. ನನ್ನ ಗುರುತು ಇನ್ನೂ ಸಿಗಲಿಲ್ಲವೋ?'' ಎಂದು ಕೇಳಲು, ಕೂಡಲೆ ಮಾನಸಿಂಹನಿಗೆ ಆ ಬಂದ ಮನುಷ್ಯನ ಗುರುತು ಹತ್ತಿತು. ಇಬ್ಬರೂ ಆನಂದದಿಂದ ಒಬ್ಬರನ್ನೊಬ್ಬರು ಆಲಿಂಗಿಸಿದರು. ಬಳಿಕ ಮಾನಸಿಂಹನು ಬಂದ ಗೃಹಸ್ಥನನ್ನು ಮೊದಲು ಮಂಚದ ಮೇಲೆ ಕುಳ್ಳಿರಿಸಿ, ಕೆಲಹೊತ್ತಿನ

ಮೇಲೆ ತಾನೂ ಕುಳಿತು ಆನಂದದಿಂದ ಆತನನ್ನು ಕುರಿತು—''ಖಾನಸಾಹೇಬ, ನೀವೇ ಏನು ನನ್ನ ಆ ಗುಪ್ತಭಾಷಣಕ್ಕೆ ಉತ್ತರ ಕೊಟ್ಟವರು?'' ಎಂದು ಕೇಳಲು, ಖಾನಸಾಹೇಬರು ನಕ್ಕು—''ಹೌದು, ನಾನೇ ಉತ್ತರ ಕೊಟ್ಟೆನು; ಆದರೆ ತಮ್ಮಂಥ ವೀರಪುರುಷರು, ಮೇಲೆ ಮುತ್ಸದ್ದಿಗಳು ಇಷ್ಟು ಮೈಮರವಿನಿಂದ ಇಷ್ಟು ಗಟ್ಟಿಯಾಗಿ ಮಾತಾಡುವದು ಯೋಗ್ಯವಲ್ಲ'' ಎಂದು ನಗನಗುತ್ತ ಮಾನಸಿಂಹನ ಹೃದಯಕ್ಕೆ ವಾಗ್ಬಾಣ ಪ್ರಯೋಗಮಾಡಲು, ಮಾನಸಿಂಹನು ಅದರಿಂದ ಸಿಟ್ಟಾಗದೆ, ತನ್ನ ಅಜಾಗರೂಕತೆಗಾಗಿ ನಾಚಿದನು. ಕೆಲಹೊತ್ತು ಇಬ್ಬರೂ ಸುಮ್ಮನೆ ಕುಳಿತುಕೊಂಡರು. ಬಳಿಕ ಮಾನಸಿಂಹನು ನಿಟ್ಟುಸಿರುಬಿಟ್ಟು ಸೇಲೀಮನ ಆ ಪತ್ರವನ್ನು ಖಾನಸಾಹೇಬನ ಕೈಯಲ್ಲಿ ಕೊಟ್ಟು ಪಶ್ಚಾತ್ತಾಪಪೂರ್ಣ ಸ್ವರದಿಂದ—''ನನಗೆ ಸಿಟ್ಟು ಬರುವಂಥ ಈ ಸ್ಪಷ್ಟ ಕಾರಣವು ನನ್ನ ಕಣ್ಣಮುಂದಿರಲು, ನಾನು ಮೈಮರೆತು ಹೆಚ್ಚು ಕಡಿಮೆ ನಾಲ್ಕು ಮಾತಾಡಿದ್ದರೆ ಅಪರಾಧಿಯಾಗುವೆನೇನು ಖಾನಸಾಹೇಬ?'' ಎಂದು ಕೇಳಲು, ಖಾನನು ಮಾನಸಿಂಹನಿಗೆ ಏನೂ ಉತ್ತರ ಕೊಡದೆ ಆ ಪತ್ರವನ್ನು ಮನಸ್ಸುಗೊಟ್ಟು ಓದಿ ನಿಟ್ಟುಸಿರು ಬಿಟ್ಟು ಆತನನ್ನು ಕುರಿತು—''ಹ! ಅಂತೇ ನೀವು ಹಾಗೆ ಮಾತಾಡಿದಿರಿ! ಸೇಲೀಮನು ಈಗ ದಿನದಿನಕ್ಕೆ ಹೆಚ್ಚು ಹೆಚ್ಚು ತಾಳ್ಮೆಗೆಡುತ್ತಲಿದ್ದಾನೆ. ಈ ಪತ್ರ ಬರೆಯುವಾಗ ಆತನು, ಅಕಬರ ಬಾದಶಹರು ಇನ್ನೂ ಬದುಕಿ ಇರುವರೆಂಬ ಮಾತನ್ನು ಲಕ್ಷಿಸುವದು ಉಚಿತವಾಗಿತ್ತು; ಅದರಂತೆ, ನೀವು ಬಾದಶಹರ ಬಲಗೈ ಎಂಬದನ್ನಾದರೂ ವಿಚಾರಿಸಬೇಕಾಗಿತ್ತು'' ಎಂದು ಹೇಳಿದನು. ಖಾನನು ಅರ್ಧಮರ್ಧ ಸಂಗತಿಯನ್ನು ಕೇಳಿದ್ದರಿಂದಲೇ ಮಾನಸಿಂಹನು ಆತನಿಗೆ ಆ ಪತ್ರವನ್ನು ತೋರಿಸಿದನು; ಇಲ್ಲದಿದ್ದರೆ ಆ ಪತ್ರವನ್ನು ಆತನು ಯಾರಿಗೂ ಎಂದಿಗೂ ತೋರಿಸುತ್ತಿದ್ದಿಲ್ಲ; ಯಾಕಂದರೆ ತನಗಾದ ಅಪಮಾನವನ್ನು ತೇಜಸ್ವಿಯಾದ ಯಾವ ವ್ಯವಹಾರ ಚತುರನು ಮಂದಿಯ ಮುಂದೆ ಹೇಳಬಹುದು? ಈಗಾದರೂ ಖಾನನು ಆ ಪತ್ರದ ಸಂಬಂಧದಿಂದ ಹೆಚ್ಚಿಗೆ ಚರ್ಚಿಸಬಾರದೆಂದು ತಿಳಿದು ಆತನು ಲಕ್ಷವನ್ನು ಎರಡನೆಯಕಡೆಗೆ ಒಯ್ಯುವದಕ್ಕಾಗಿ ಮಾನಸಿಂಹನು ಆತನನ್ನು ಕುರಿತು—

ಮಾನಸಿಂಹ—ಖಾನಸಾಹೇಬ, ಇದೇನು ಇಂದು ಹೊಸರೀತಿಯು ಇಷ್ಟು ರಾತ್ರಿಯಲ್ಲಿ ಇಂಥ ಮಳೆಯಲ್ಲಿ ಎತ್ತಕಡೆಗೆ ಹೊರಟಿರುವಿರಿ? ಪ್ರವಾಸಕ್ಕೆ ಇದು ಯೋಗ್ಯಕಾಲವೇ?

ಖಾನ—(ಗಂಭೀರ ಸ್ವರದಿಂದ) ರಾಜಾಜೀ, ಮಹತ್ವದ ಕೆಲಸವಿದ್ದದರಿಂದಲೇ ಇಷ್ಟು ರಾತ್ರಿಯಲ್ಲಿ ಇಂಥ ಮಳೆಯೊಳಗೆ ನಿಮ್ಮ ಕಡೆಗೆ ಬಂದೆನು. ಅಕಬರಬಾದಶಹರ ಬೇನೆಯು ಸ್ವಲ್ಪ ಗುಣವಾಗುತ್ತಿರುವಾಗ, ಶಹಾಜಾದಾ ದಾನಿಯಲನು ಮಿತಿಮೀರಿ ಸೆರೆಕುಡಿದು ಅಕಾಲದಲ್ಲಿ ದಕ್ಷಿಣದೊಳಗೆ ಮರಣ ಹೊಂದಿದ ಸುದ್ದಿಯು ಬಂದಿತು. ಈ ಪುತ್ರಶೋಕದ ವಾರ್ತೆಯಿಂದ ಬಾದಶಹರು ಮತ್ತೆ ಹಾಸಿಗೆ ಹಿಡಿದರು. ದಾನಿಯಲನ ಮೇಲೆ ಬಾದಶಹರ ಪ್ರೀತಿಯು ಎಷ್ಟು ಇತ್ತೆಂಬದನ್ನು ತಮಗೆ ಹೇಳುವ ಕಾರಣವಿಲ್ಲ.

ಮಾನಸಿಂಹ—(ಖಿನ್ನ ಮುದ್ರೆಯಿಂದ) ಖಾನಸಾಹೇಬ, ಈ ಜಗತ್ತಿನಲ್ಲಿ ಒಳ್ಳೆಯ ಜನರೇ ದೇವರಿಗೆ ಬೇಕಾಗುತ್ತಾರೆನ್ನುವಹಾಗೆ ನನಗೆ ತೋರುತ್ತದೆ. ಈ ಗರ್ವಿಷ್ಠ ಸೇಲೀಮನಿಗೆ ದಾನಿಯಲನನ್ನು ಹೋಲಿಸಿ ನೋಡಿದರೆ, ಶಾಹಾಜಾದಾ ದಾನಿಯಲನು ಎಷ್ಟು ಒಳ್ಳೆಯವನು!

ಆತನ ಶ್ರೇಷ್ಠತ್ವ, ಉದಾತ್ತತೆ, ನಿರ್ಮತ್ಸರವೃತ್ತಿ ಮೊದಲಾದವುಗಳನ್ನು ನೋಡಿ, ''ಈತನೇ ಮುಂದೆ ಬಾದಶಹನಾಗಲು ಯೋಗ್ಯನೆಂ''ದು ಬಹುಜನರು ಆಡಿದ್ದನ್ನು ನೀವು ಕೇಳಿಲ್ಲವೇ?

ಖಾನ—(ಔದಾಸೀನ್ಯದಿಂದ) ಇವೆಲ್ಲ ಸಂಗತಿಗಳನ್ನು ಲಕ್ಷಿಸಲಿಕ್ಕೆ ಸದ್ಯಕ್ಕೆ ಅವಕಾಶವಿಲ್ಲ ರಾಜಾಜಿ! ಇದಕ್ಕಿಂತಲೂ ತೀವ್ರಸ್ವರೂಪದ್ದೊಂದು ಸುದ್ದಿಯನ್ನು ತಕ್ಕೊಂಡು ನಾನು ಇಲ್ಲಿಗೆ ಬಂದಿದ್ದೇನೆ; ಸೇಲೀಮನು ಬಂಡುಮಾಡಿ ಆಗ್ರಾಪಟ್ಟಣವನ್ನು ಸ್ವಾಧೀನಪಡಿಸಿಕೊಳ್ಳಲು ಹೊರಟಿರುವನಂತೆ. ಈ ಸುದ್ದಿಯನ್ನು ಕೇಳಿ ಬಾದಶಹರು ಆಗ್ರಾಕ್ಕೆ ಹೊರಡಲು ಸಿದ್ಧರಾಗುತ್ತಲಿದ್ದರು. ಅವರಿಗೆ ಈ ಮುಪ್ಪಿನಕಾಲದಲ್ಲಿ ಚಿತ್ತಸ್ವಾಸ್ಥ್ಯವು ದೊರೆಯಬಾರದೆಂದು ದೇವರ ಸಂಕೇತವಿದ್ದಹಾಗೆ ತೋರುತ್ತದೆ; ಆದರೆ ರಾಜಾಜೀ, ಇನ್ನು ಮುಂದೆ ನಾವು ಏನುಮಾಡತಕ್ಕದ್ದು?

ಈ ಅಜೀಮಖಾನನ ಪರಿಚಯವನ್ನು ನಾವು ಇನ್ನೂ ವಾಚಕರಿಗೆ ಚನ್ನಾಗಿ ಮಾಡಿಕೊಟ್ಟಿರುವದಿಲ್ಲ. ಪ್ರಸಂಗವಶಾತ್ ಆತನ ಹೆಸರನ್ನು ಮಾತ್ರ ಹಿಂದೆಯೊಮ್ಮೆ ಹೇಳಿರುತ್ತದೆ. ಈತನೊಬ್ಬ ಐದುಸಾವಿರ ಸೈನಿಕರ ಮನಸಬದಾರನಿದ್ದು, ಬಾದಶಹರ ಮುಖ್ಯ ಸೇನಾಪತಿಯಾಗಿದ್ದನು. ಈತನು ಖುಸ್ರುವಿನ ಹೆಂಡತಿ–ಪ್ಯಾರಿಬಾನುವಿನ ತಂದೆಯಾದದ್ದರಿಂದ, ಮಾನಸಿಂಹನ ಬೀಗನಾದನೆಂದು ಬೇರೆ ಹೇಳುವಕಾರಣವಿಲ್ಲ. ಈತನಂಥ ಸಮರಕುಶಲರೂ, ಕಾರಸ್ಥಾನಿಗಳೂ, ಮಹಾವೀರರೂ ಆಗಿನ ಕಾಲದ ಅಮೀರ ಉಮರಾವರಲ್ಲಿ ಬಹು ಕ್ವಚಿತ್ತಾಗಿ ಇದ್ದರೆಂದು ಹೇಳಬಹುದು. ಈತನೂ, ಮಾನಸಿಂಹನೂ ಸ್ವಾರ್ಥಾಭಿಲಾಷೆಯಿಂದ ಸೇಲೀಮನ ಪಟ್ಟದ ಬಾಧ್ಯತೆಯನ್ನು ತಪ್ಪಿಸಿ, ಖುಸ್ರುವನ್ನು ದಿಲ್ಲಿಯ ಸಿಂಹಾಸನದ ಮೇಲೆ ಕುಳ್ಳಿರಿಸಬೇಕೆಂದು ಹವಣಿಸುತ್ತಿದ್ದರು. ಹೀಗೆ ಖುಸ್ರುವಿನ ಈ ಮಾವ—ಸೋದರಮಾವಂದಿರು ಮಾಡುವ ಪ್ರಯತ್ನವನ್ನು ನೋಡಿ ಸೇಲೀಮನು ಸ್ವಾಭಾವಿಕವಾಗಿಯೇ ಇವರಿಬ್ಬರ ಮೇಲೆ ಬೆಂಕಿ ಕಾರುತ್ತಿದ್ದನು. ಖುಸ್ರುವು ಬಾದಶಹನಾಗಬೇಕೆಂದು ಮಾನಸಿಂಹನು ಆತುರಪಡುವದಕ್ಕಿಂತ ಹೆಚ್ಚಾಗಿ ಅಜೀಮಖಾನನು ಆತುರಪಟ್ಟು, ಮೇಲೆ ಹೇಳಿದಂತೆ ಆತನು ಮಾನಸಿಂಹನನ್ನು ಕುರಿತು—''ನಾವು ಇನ್ನುಮುಂದೆ ಏನು ಮಾಡಬೇಕು?'' ಎಂದು ಪ್ರಶ್ನಮಾಡಿದನು. ಅದಕ್ಕೆ ಮಾನಸಿಂಹನು ''ಇದರ ವಿಚಾರವನ್ನು ನಾಳಿಗೆ ಮಾಡೋಣವೆಂ''ದು ಹೇಳಿದ್ದರಿಂದ ನಿದ್ದೆಗೆಟ್ಟು ಕಂಗಾಲಾಗಿದ್ದ ಅವರಿಬ್ಬರು ವೀರರು ಆ ಅಪರಾತ್ರಿಯಲ್ಲಿ ಸ್ವಸ್ಥ ನಿದ್ದೆಮಾಡಬೇಕೆಂದು ಮಲಗಿ ಕೊಂಡರು.

ಸೇಲೀಮನೂ, ಜೋಧಬಾಯಿಯೂ

ಇತ್ತ ಅಲಹಾಬಾದದ ಕೋಟೆಯೊಳಗಿನದೊಂದು ಗುಪ್ತ ದಿವಾಣಖಾನೆಯಲ್ಲಿ ಕುಳಿತು ಸುಲ್ತಾನ ಸೇಲೀಮನು ರಾತ್ರಿ ಯಾವದೋ ಒಂದು ದೀರ್ಘವಿಚಾರದಲ್ಲಿ ಮಗ್ನನಾಗಿದ್ದನು. ಆತನ ಚಿತ್ತವು ಅತ್ಯಂತ ಅಸ್ವಸ್ಥವಾಗಿತ್ತು. ಏನುಮಾಡಿದರೂ ಆತನಿಗೆ ವಿಚಾರದ ನೆಲೆಯು ಹತ್ತದೆ,

ಬರಬರುತ್ತ ಆತನ ಚಿತ್ತವು ಹೆಚ್ಚು ಹೆಚ್ಚು ಚಂಚಲವಾಗತೊಡಗಿತು. ಗಂಗಾಯಮುನೆಗಳ ಸಂಗಮದ ಸ್ಥಾನದಲ್ಲಿ ಕಟ್ಟಿದ್ದ ಆ ಪ್ರಯಾಗಕ್ಷೇತ್ರದ ಕೋಟೆಯ ಬೆಳದಿಂಗಳ ಸುರಮ್ಯ ನೋಟದಿಂದ ಆತನ ಮನಸ್ಸಿಗೆ ಸರ್ವಥಾ ಶಾಂತಿಯು ಉಂಟಾಗಲೊಲ್ಲದು. ಹೀಗೆ ಬಹಳಹೊತ್ತು ಅಸ್ವಸ್ಥ ಚಿತ್ತದಿಂದ ಕಳೆದ ಬಳಿಕ ಸೇಲೀಮನು ತನ್ನ ಪಲ್ಲಂಗದ ಮೇಲೆ ಎದ್ದು ಕುಳಿತು ತೀವ್ರ ಸ್ವರದಿಂದ ತನ್ನ ಗುಲಾಮನನ್ನು ಕರೆದನು; ಆದರೆ ಆಗಿನ ಕಾವಲಿನಲ್ಲಿ ಒಬ್ಬನೂ ಗುಲಾಮನಿದ್ದಿಲ್ಲ. ಪ್ರಭುವು ಕರೆದದ್ದನ್ನು ಕೇಳಿ ಒಬ್ಬ ತಾರ್ತರೀ ರಮಣಿಯು ಒಳಗೆ ಬಂದು ಥರಥರ ನಡಗುತ್ತ ಸುಲ್ತಾನ ಸೇಲೀಮನಿಗೆ ಕುರ್ನಿಸಾತ ಮಾಡಿ—''ಜನಾಬಾಲಿಹುಕುಂ'' ಎಂದು ನುಡಿಯಲು, ಸೇಲೀಮನು—''ಹೋಗು, ಇಸ್ಕಂದರೀ ಬೀಬಿಗೆ ಸಲಾಮು ಹೇಳು. ಆಕೆಯ ಸಂಗಡ ಸಾಕಿಯನ್ನೂ ಕಳಿಸಿಕೊಡು'' ಎಂದು ಹೇಳಿದನು. ಅಪ್ಪಣೆಯನ್ನು ಕೇಳಿದ ಕೂಡಲೆ ತಾರ್ತರೀ ರಮಣಿಯು ಹೊರಟುಹೋದಳು. ಸ್ವಲ್ಪ ಹೊತ್ತು ಆಗುವದರೊಳಗೆ ಸಾಕಿಯು ಬಂಗಾರದ ಸುರಯಿಯಲ್ಲಿ ಶಿರಾಜಿ ಎಂಬ ಮದ್ಯವನ್ನು ತುಂಬಿಕೊಂಡು ಬಂದಳು; ಮತ್ತು ಆಕೆಯ ಬೆನ್ನಹಿಂದೆಯೇ ಇಸ್ಕಂದರಿಯೂ ಬಂದಳು. ಇಸ್ಕಂದರಿಯು ಉತ್ತಮ ಗಾಯಕಿಯೂ, ನೃತ್ಯ ಕಲಾಕುಶಲಳೂ ಆದ ವೇಶ್ಯೆಯು. ಆಕೆಯು ಸುಲ್ತಾನ ಸೇಲೀಮನ ನಿರುತ್ಸಾಹಿ ಮನಸ್ಸನ್ನು ಉತ್ಸಾಹಗೊಳಿಸುವ ಆತನ ಮೈತ್ರಿಣಿಯಾಗಿದ್ದು, ಅದೇ ಕೆಲಸಕ್ಕಾಗಿ ಆಕೆಯನ್ನು ಆಗ್ರಾದಿಂದ ಬುದ್ಧಿಪೂರ್ವಕವಾಗಿ ಕರೆದುಕೊಂಡು ಬರುವದಾಗಿತ್ತು. ಆಕೆಯು ಸೇಲೀಮನ ಬಳಿಗೆ ಹೋಗಿ ಪದ್ಧತಿಯಂತೆ ತಸಲೀಮುಬಜಾಸಿದ ಬಳಿಕ ಕೋಮಲ ಸ್ವರದಿಂದ—''ಜಹಾಪನಾಹ! ಇಂದು ಖಾವಂದರಿಗೆ ದಾಸಿಯ ಸ್ಮರಣವು ಏಕೆ ಆಯಿತು? ಮೇಜಾಜ ಶರೀಫ್ ಹೈತೋ'' ಎಂದು ಕೇಳಿದಳು. ಆಗ ಸೇಲೀಮನು ಖಿನ್ನತೆಯಿಂದ ನಕ್ಕು—ನಿಜವಾಗಿಯೇ ಇಂದು ಯಾಕೋ ಮನಸ್ಸಿಗೆ ಸಮಾಧಾನವೇ ಆಗಲೊಲ್ಲದು; ಏನು ಮಾಡಿದರೂ ನಿದ್ದೆ ಬರಲೊಲ್ಲದು; ಆದ್ದರಿಂದ ನಿನ್ನನ್ನು ಕರೆಸಿದೆನು. ಎಂದು ಹೇಳಿದನು. ಸುಚತುರಳಾದ ಇಸ್ಕಂದರೀ ಬೀಬಿಯು ಸೇಲೀಮನ ಮನೋದಯವನ್ನರಿತು ಸಾಕಿಯ ಕೈಯೊಳಗಿನ ಮದ್ಯದ ಸುರಯಿಯನ್ನು ಇಸಕೊಂಡು, ಅದರಲ್ಲಿಯ ಸ್ವಲ್ಪ ಮದ್ಯವನ್ನು ಉತ್ಕೃಷ್ಟವಾದ ಪಾನಪಾತ್ರದಲ್ಲಿ ಸುರವಿ ಅದನ್ನು ನಗನಗುತ್ತ ಸೇಲೀಮನ ಮುಂದೆ ಹಿಡಿದಳು. ಸೇಲೀಮನು ಮದ್ಯಕ್ಕಾಗಿ ಚಡಪಡಿಸುತ್ತಲೇ ಇದ್ದನು. ಕೂಡಲೆ ಆತನು ಆ ಮದ್ಯವನ್ನು ಕುಡಿದು ಹಾಸ್ಯಪೂರ್ಣ ಸ್ವರದಿಂದ—''ಇಸ್ಕಂದರೀ, ಹೋಗು, ಹಿಂದಿನ ದಿವಾಣ ಖಾನೆಯಲ್ಲಿರುವ ಸುಂದರ ವೀಣೆಯನ್ನು ತಂದು ಸ್ವಲ್ಪ ಗಾಯನಮಾಡು, ನಿನ್ನ ಗಾಯನ ಕೇಳಬೇಕೆನ್ನುವಹಾಗೆ ನನಗೆ ಆಗಿದೆ. ಹೋಗು, ನನ್ನ ಪ್ರಿಯೇ ನಾಚಬೇಡ.''

ಈ ಮೇರೆಗೆ ಹೇಳಲು, ಇಸ್ಕಂದರಿಯು—''ಇಂದು ಸೇಲೀಮನನ್ನು ಸಂತೋಷಪಡಿಸಿ ದೊಡ್ಡ ಇನಾಮು ಪಡೆಯಬೇಕೆಂ''ಬ ಉಬ್ಬಿನಿಂದ ತಟ್ಟನೆ ವೀಣೆಯನ್ನು ತಂದು ಸ್ವರಕೂಡಿಸಿ ಗಾಯನ ಮಾಡತೊಡಗಿದಳು. ಆಕೆಯು ಒಂದು ಪಲ್ಲವಿಯನ್ನು ಅನ್ನ ಅನ್ನುವದರೊಳಗಾಗಿ ಒಬ್ಬ ತಾರ್ತರಿ ರಮಣಿಯು ಅವಸರದಿಂದ ಅಲ್ಲಿಗೆ ಬಂದು ''ಖಾವಿಂದ, ಶಹಾಜಾದೀ ಶಾಹಿಬೇಗಮ ರವರು ತಮಗೆ ಸಲಾಮು ಹೇಳಿರುವರು.'' ಎಂದು ಹೇಳಿದಳು. ಜೋಧಬಾಯಿಯನ್ನು

ಯಾವತ್ತು ರಂಗಮಹಾಲಿನಲ್ಲಿ "ಶಾಹೀ ಬೇಗಮೆ"ಯೆಂತಲೇ ಎಲ್ಲರೂ ಕರೆಯುತ್ತಿದ್ದರು. ಈ ಸನ್ಮಾನದ ಹೆಸರನ್ನು ಸೇಲೀಮನೇ ತನ್ನ ಆ ಪ್ರಿಯ ಪತ್ನಿಗೆ ಕೊಟ್ಟಿದ್ದನು. ಈ ವರ್ತಮಾನವನ್ನು ಕೇಳಿ ಸೇಲೀಮನು ಚಟ್ಟನೆ ತನ್ನ ಪಲ್ಲಂಗದ ಮೇಲೆ ಎದ್ದು ಕುಳಿತು ಅಸ್ಪಷ್ಟ ಸ್ವರದಿಂದ—"ಯಾರು? ಶಾಹೀ ಬೇಗಮಳೋ? ಜೋಧಬಾಯಿಯೋ? ಇಷ್ಟು ರಾತ್ರಿಯಲ್ಲಿ ಅಂಬರ ರಾಜಧಾನಿಯನ್ನು ಬಿಟ್ಟು ಯಾಕೆ ಬಂದಿರಬಹುದು?" ಎಂದು ಗುಣಗುಟ್ಟಿದನು. ಆದರೆ ಆತನ ಈ ಗುಣಗುಟ್ಟುವಿಕೆಗೆ ಉತ್ತರ ಕೊಡುವವರಾರು? ಆತನು ಅತ್ತಿತ್ತ ನೋಡಿ ಗಾಯಕಿಗೆ ತಟ್ಟನೆ ಎದ್ದು ಹೋಗುವದಕ್ಕೆ ಸನ್ನೆ ಮಾಡಿದನು. ಅದರಿಂದ ಇಸ್ಕಂದರಿ ಬೀಬಿಯು ಖಿನ್ನಳಾಗಿ, ತನ್ನ ದೊಡ್ಡ ಇನಾಮು ಮುಣುಗಿತೆಂದು ಮನಸ್ಸಿನಲ್ಲಿ ಜೋಧಬಾಯಿಯನ್ನು ಬೈಯುತ್ತ ಹೊರಟು ಹೋದಳು. ಅಷ್ಟರಲ್ಲಿ ಜೋಧಬಾಯಿಯು ಅಲ್ಲಿಗೆ ಬಂದು ಸನ್ಮಾನಪೂರ್ವಕವಾಗಿ ತನ್ನ ಪತಿದೈವತವನ್ನು ವಂದಿಸಿ—"ಜಹಾಪನಾಹರ ಪ್ರಕೃತಿಯು ಹೇಗಿರುವದು?" ಎಂದು ಕೇಳಿದಳು. ಆಗ ಸೇಲೀಮನು ಜೋಧಬಾಯಿಯ ಕೈಹಿಡಿದು ಆಕೆಯನ್ನು ಪಲ್ಲಂಗದ ಮೇಲೆ ಕುಳ್ಳಿರಿಸಿ ತಾನು ಆಕೆಯ ಬಳಿಯಲ್ಲಿ ಕುಳಿತು ಮರ್ಮಭೇದಕ ಉತ್ತರ ಕೊಡುವದಕ್ಕಾಗಿ ಆಕೆಯನ್ನು ಕುರಿತು—ಶಾಹೀ, ನೀನು ಇಟ್ಟುಹೋದಂತೆ ನಾನು ಇದ್ದೇನೆ; ಆದರೆ ಮಾನ ಸಿಂಹನಿಗೆ ನಾನು ಎರಡನೆಯ ಪತ್ರ ಕಳಿಸಿದರೂ ಆತನು ನಿನ್ನನ್ನು ಕಳಿಸಲಿಕ್ಕೆ ಇಷ್ಟು ತಡಮಾಡಬಹುದೆಂದು ನಾನು ತಿಳಿದಿದ್ದಿಲ್ಲ.

ಜೋಧಬಾಯಿ—(ಆಶ್ಚರ್ಯದಿಂದ) ಅಂದರೆ! ತಾವು ಅಣ್ಣನಿಗೆ ಮತ್ತೆ ಪತ್ರ ಕಳಿಸಿದ್ದಿರೇನು?

ಸೇಲೀಮ—ಅಹುದು; ಎರಡನೆಯದೊಂದು ಪತ್ರವನ್ನು ನಾನು ಆತನಿಗೆ ಬರೆದಿದ್ದೆನು. ಅದರಲ್ಲಿ ಪತಿತ್ವದ, ಹಾಗು ಪಿತೃತ್ವದ ಜವಾಬದಾರಿಯು ಎಷ್ಟು ಕಠಿಣವಾಗಿರುತ್ತದೆಂಬದನ್ನು ನಾನು ಸ್ಪಷ್ಟವಾಗಿ ಬರೆದಿದ್ದೆನು. ನೀನು ಆ ಪತ್ರವನ್ನು ನೋಡಲಿಲ್ಲವೇನು?

ಜೋಧಬಾಯಿ—ಇಲ್ಲ, ನಾನು ಅಂಬರ ರಾಜಧಾನಿಯನ್ನು ಬಿಟ್ಟು ಬಂದಬಳಿಕ ಅಣ್ಣನಿಗೆ ಆ ಪತ್ರವು ಮುಟ್ಟಿರಬಹುದು. ಅಂದಬಳಿಕ ನಾನು ಅದನ್ನು ನೋಡುವ ಬಗೆ ಹೇಗೆ?

ಸೇಲೀಮ—ಒಳ್ಳೇದು, ಜೋಧಾ, ನಾನು ನಿನ್ನನ್ನು ಒಂದೇಮಾತು ಕೇಳುವೆನು. ಇಷ್ಟು ಬೇಗನೆ ನಿನ್ನಂಥ ರಜಪೂತ ಸ್ತ್ರೀಯ ಸಿಟ್ಟು ಹೇಗೆ ಇಳಿಯಿತು?

ಜೋಧ—ಪ್ರೀಯಾ, ನಿಜವಾಗಿ ನೀವು ಮೊಗಲರೆ!! ರಜಪೂತರೊಡನೆ ಇಷ್ಟುದಿವಸ ಬಳಿಕೆ ಮಾಡಿಯೂ ನೀವು ಅವರ ಸ್ವಭಾವವನ್ನರಿಯದಿರುವದು ಬಹಳ ದುಃಖದ ಸಂಗತಿಯು! ಸ್ನೇಹ, ಮಾಯಾ, ಕರ್ತವ್ಯ, ಪತಿಸೇವೆ ಈ ಗುಣಗಳು ಜಗತ್ತಿನಲ್ಲಿ ಇಲ್ಲದಿದ್ದರೆ ಅದರಂತೆ ತಾಯಿಯ ಹಾಗು ಹೆಂಡತಿಯ ಕರ್ತವ್ಯಗಳನ್ನು ಆರ್ಯ ಸ್ತ್ರೀಯರು ಮರೆತಿದ್ದರೆ, ತಾವು ಕೇಳಿದಂತೆ ರಜಪೂತ ಸ್ತ್ರೀಯರ ಸಿಟ್ಟು ಇಷ್ಟು ಬೇಗನೆ ಇಳಿಯುತ್ತಿದ್ದಿಲ್ಲ! ಪ್ರಿಯಾ, ಪತಿದೇವತೆಯ ಪ್ರಸನ್ನತೆಯ ಮುಂದೆ ಆರ್ಯಸ್ತ್ರೀಯರು ಎಲ್ಲವನ್ನು ತುಚ್ಛವಾಗಿ ಎಣಿಸುವರು.

ಸೇಲೀಮ—ಇನ್ನು ಆದಮಾತನ್ನು ಮರೆತುಬಿಡು ಜೋಧಾ!! ನಾನು ಆಡಬಾರದ್ದನ್ನು ಆಡಿ ನಿನ್ನ ಅಪರಾಧಿಯಾಗಿರಬಹುದು. ನಿನ್ನ ಹೃದಯಕ್ಕೆ ನೋವಾಗುವಂತೆಯೂ ನಾನು

ನಡೆದಿರ ಬಹುದು; ಆದರೆ ನೀನು ಅದನ್ನೆಲ್ಲ ಮರೆತುಬಿಡುವೆಯೆಂದು ನಾನು ಆಶಿಸುವೆನು. ಶಾಹೀ! ನನ್ನ ಈಗಿನ ಪರಿಸ್ಥಿತಿಯು ಬಹು ಅಂಧಃಕಾರಮಯವಾಗಿರುವದು. ಭವಿಷ್ಯತ್ಕಾಲವಂತು ಇದಕ್ಕೂ ಹೆಚ್ಚು ಭೀಷಣವಾಗಿ ನನ್ನನ್ನು ಅಂಜಿಸುತ್ತಿರುವದು! ಅದಿರಲಿ ಶಾಹೀ, ಈಗ ನೀನೊಬ್ಬಳೇ ಯಾಕೆ ಬಂದೆ? ಖುಸ್ರುವು ಎಲ್ಲಿರುವನು?

ಜೋಧಬಾಯಿ—ಆತನು ಫತ್ತೇಪುರ ಸಿಕ್ರಿಗೆ ಹೋಗಿರುವನು.

ಸೇಲೀಮ—(ತಿರಸ್ಕಾರದಿಂದ ನೋಡುತ್ತ) ಯಾರು ಆತನನ್ನು ಅತ್ತಡೆಗೆ ಕಳಿಸಿದರು ಶಾಹೀಬೇಗಮ್? ಇದೊಂದು ನಿನ್ನ ಅಣ್ಣನ ತಂತ್ರವೇ ಇರಬಹುದೆಂದು ನನಗೆ ತೋರುತ್ತದೆ.

ಜೋಧ—ಇಲ್ಲ ನಾಥ, ತಾವು ನಿಷ್ಕಾರಣ ಸಂಶಯಗ್ರಸ್ತರಾಗಬಾರದು, ಸ್ವತಃ ಬಾದಶಹರೇ ಕರೆಕಳುಹಿದ್ದರಿಂದ ಆತನು ಅಲ್ಲಿಗೆ ಹೋಗಿರುವನು. ನಿಜವಾಗಿ ನಾನೂ ಆತನೂ ಇಲ್ಲಿಗೆ ಬರುವದಕ್ಕಾಗಿಯೇ ಅಂಬರ ರಾಜಧಾನಿಯಿಂದ ಹೊರಟೆವು; ನನಗಿಂತ ಮೊದಲೇ ಆತನನ್ನು ತಮ್ಮ ಕಡೆಗೆ ಕಳಿಸುವದಕ್ಕಾಗಿ ನಾನು ಅಜಮೀರದ ಕಡೆಗೆ ಸಾಗಿ, ಆತನನ್ನು ಇತ್ತಕಡೆಗೆ ಕಳಿಸಿದೆನು; ಆದರೆ ನಡುವೆ ಮೊಗಲ ರಾವುತರು ಆತನಿಗೆ ಬಾದಶಹರ ಪತ್ರ ಕೊಟ್ಟದ್ದರಿಂದ, ಅಜ್ಜನ ಅಂತ್ಯವಸ್ಥೆಯನ್ನರಿತು ಖುಸ್ರುವು ಸಿಕ್ರಿಗೆ ಹೋದನು. ಇಗೋ, ಈ ಪತ್ರದಲ್ಲಿ ಖುಸ್ರುವು ಈ ಮಾತನ್ನು ಸ್ಪಷ್ಟವಾಗಿ ಬರೆದಿರುವನು.

ಹೀಗೆಂದು ಹೇಳಿ ಜೋಧಬಾಯಿಯು ಸಿಕ್ರಿಯಿಂದ ಖುಸ್ರುವು ಬರೆದ ಪತ್ರವನ್ನು ಕೊಟ್ಟಳು. ಆಗ ಸೇಲೀಮನು ಪತ್ರವನ್ನು ಉತ್ಸುಕತೆಯಿಂದ ಓದಿದನು.

ಸೇಲೀಮ—ಜೋಧಾ, ಖುದಾನು ಕರುಣಿಸಿದನು! ಇಂಥ ಭಯಂಕರ ಬೇನೆಯಲ್ಲಿಯೂ ಆತನು ಶಹಾನಶಹಾರವರನ್ನು ಬದುಕಿಸಿದನು!! ಆದರೆ ಜೋಧಾ, ಈ ಪತ್ರಬರೆದನಂತರ ಖುಸ್ರುವು ಮತ್ತೆ ಪತ್ರ ಬರೆದಿರುವನೋ?

ಜೋಧ—ಇಲ್ಲ, ತಿರುಗಿ ಒಂದೂ ಪತ್ರಬರೆದಿಲ್ಲ.

ಸೇಲೀಮ—ಹಾಗಾದರೆ ಈಗ ಮಾನಸಿಂಹನು ಎಲ್ಲಿರುವನು?

ಜೋಧ—ಬಹಳಮಾಡಿ ಆತನು ಅಂಬರದ ಅರಮನೆಯಲ್ಲಿಯೇ ಇರಬಹುದಾಗಿ ನನಗೆ ತೋರುತ್ತದೆ.

ಸೇಲೀಮ—ಇಲ್ಲ, ಆತನು ಅಲ್ಲಿ ಇರುವದಿಲ್ಲ, ಇದು ನಿನ್ನ ತಪ್ಪು ತಿಳುವಳಿಕೆಯು. ರಜಪೂತ ವೀರರ ಕುದುರೆಯು ತನ್ನ ಒಡೆಯನ ಲಾಭವನ್ನು ಗೊತ್ತುಹಿಡಿದು ಬಹುವೇಗವಾಗಿ ನಡೆದು ಹೋಗುವದನ್ನು ನಾನು ಬಲ್ಲೆನು. ಸಾವಿರಾರು ಕೆಲಸಗಳಿದ್ದರೂ ಬಿಟ್ಟು ನಿನ್ನ ಅಣ್ಣನು ಬಾದಶಹರನ್ನು ಕಾಣುವದಕ್ಕಾಗಿ ಹೋಗಿರುವನು. ನಾನೂ ನೀನೂ ಇಲ್ಲಿ ಇರುವದು ಎಷ್ಟು ಸತ್ಯವಾದದ್ದೋ, ಅಷ್ಟೇ ಮಾನಸಿಂಹನು ಬಾದಶಹರ ಕಡೆಗೆ ಹೋದದ್ದು ಸತ್ಯವಾಗಿರುವದೆಂದು ತಿಳಿ.

ಜೋಧಬಾಯಿ—ಆದರೆ ಪ್ರಿಯಾ, ತಾವು ನನ್ನ ಅಣ್ಣನ ಮೇಲೆ ಇಷ್ಟು ಸಂಶಯಗ್ರಸ್ತರು ಯಾಕೆ? ತಮಗೆ ಎಲ್ಲವೂ ಸಂಶಯಗ್ರಸ್ತವಾಗಿರುವಂತೆ ನನಗೆ ತೋರುತ್ತಿದೆ. ತಮ್ಮ ಮೊದಲನೆಯ

ನಿಷ್ಕಾರಣ ಸಂಶಯವು ಮಾನಸಿಂಹನ ಮೇಲಿನದು, ಎರಡನೆಯದು ಖುಸ್ರುವಿನ ಮೇಲಿನದು, ಮೂರನೆಯದು ಶೇರ ಅಫಗಾನನ ಪತ್ನಿಯಾದ ಮೇಹರುನ್ನಸೆಯ ಮೇಲಿನದು.

ಸೇಲೀಮ—(ಗಂಭೀರ ಸ್ವರದಿಂದ) ಜೋಧಾ, ನೀನು ಮತ್ತೆ ಆ ಹಳೆಯ ಮಾತುಗಳನ್ನು ಬುದ್ಧಿಪೂರ್ವಕವಾಗಿ ಆಡತೊಡಗಿದೆ; ಆದರೆ ಈಗ ನೀನು ಸ್ಪಷ್ಟವಾಗಿ ಕೇಳುತ್ತಿರುವದರಿಂದ ನಾನೂ ಸ್ಪಷ್ಟವಾಗಿ ಹೇಳುತ್ತೇನೆ ಕೇಳು. ಮಾನಸಿಂಹನ ಮೇಲೆ ನನ್ನ ಇಷ್ಟು ಸಿಟ್ಟು ಯಾಕೆಂಬದನ್ನು ಕೇಳುವ ಇಚ್ಛೆಯು ನಿನಗೆ ಇರುವದೇನು? ಹೇಳುವೆನು ಕೇಳು. ಡಾಂಭಿಕನಾದ ಮಾನಸಿಂಹನು ಮೊಗಲ ಸಾಮ್ರಾಜ್ಯದ ಸ್ಥಾಪನೆಯಾದದ್ದು ತನ್ನ ಪರಾಕ್ರಮದಿಂದಲೇ ಎಂದು ತಿಳಿದು ಕೊಳ್ಳುವನು. ತಾನು ಕೇವಲ ಪ್ರಕಾಶ ಸ್ವರೂಪನು, ನಾವು ಆತನ ನೆರಳು!! ಆತನಿಗೆ ಇದೊಂದು ಭಯಂಕರ ಭ್ರಮೆಯುಂಟಾಗಿರುವದು. ಸ್ವಾಭಿಮಾನಿಗಳೂ, ಶೂರರೂ, ವಿಶ್ವಾಸವುಳ್ಳವರೂ ಆದ ಯಾವತ್ತೂ ಮೊಗಲ ಸೈನಿಕರ ಆಧಿಪತ್ಯವು ಆತನ ಕಡೆಗೆ ಇರುವದರಿಂದ, ಆತನು ಗರ್ವದ ಶಿಖರವನ್ನೇರಿ, ಎಲ್ಲವೂ ತನ್ನಿಂದಲೇ ಆಯಿತೆಂದು ತಿಳಿಯುತ್ತಿರುವನು. ಜೋಧಾ, ಎಲ್ಲ ಸಂಗತಿಯು ಆತನಿಗೆ ಗೊತ್ತಿದ್ದು, ಬುದ್ಧಿಪೂರ್ವಕವಾಗಿ ನನಗೆ ತೊಂದರೆಯನ್ನುಂಟು ಮಾಡುತ್ತಿರುವನೆಂದು ಹೇಳಲಿಕ್ಕೆ ನನಗೆ ದುಃಖವಾಗುತ್ತದೆ. ಪ್ರತ್ಯಕ್ಷ ನನ್ನ ಹೊಟ್ಟೆಯ ಮಗನ ಮನಸ್ಸು ಕೆಡಿಸುವ ಆ ಕಾರಸ್ಥಾನಿಯಾದ ವೀರ ರಜಪೂತನ ಮೇಲೆ ನಾನು ಯಾಕೆ ಸಿಟ್ಟಾಗಲಿಕ್ಕಿಲ್ಲ ನೀನೇ ಹೇಳು? ಜೋಧಾ, ನನ್ನ ಅತ್ಯಂತ ಪ್ರಿಯನಾದ ಖುಸ್ರುವನ್ನು ಇಲ್ಲದ ರಹಸ್ಯಗಳಲ್ಲಿ ತೊಡಗಿಸಿ ನನ್ನಿಂದ ದೂರ ಇರಿಸಿದವನು ನಿನ್ನ ಅಣ್ಣನೇ ಅಲ್ಲವೆ? ನನ್ನ ಪ್ರಿಯ ಖುಸ್ರುವಿನ ಕಾಲಲ್ಲಿಯೇ ನಾನು ಖುರಮು (ಮುಂದೆ ಈತನೇ ಶಹಾಜಹಾನ ಬಾದಶಹನಾದನು.) ನನ್ನ ಉದಾಸೀನ ಮಾಡಿ ಆತನ ತಾಯಿ ಜಗದ್ಬಾಯಿಯ ಪ್ರೇಮದಲ್ಲಿ ವಿರಸವನ್ನುಂಟುಮಾಡಿದನು. ಆ ಕೃಷ್ಣಕಾರಸ್ಥಾನದ ನಿನ್ನ ಅಣ್ಣನು ಬುದ್ಧಿಪೂರ್ವಕವಾಗಿ ನನ್ನ ಪ್ರಿಯ ಖುಸ್ರುವನ್ನು ಪಿತೃದ್ರೋಹಿಯಾಗಿ ಮಾಡುವನು. ಅಂದಬಳಿಕ ಇದಕ್ಕಿಂತ ಹೆಚ್ಚಿಗೆ ನನ್ನ ದ್ರೋಹವನ್ನೇನು ಆತನು ಚಿಂತಿಸಬೇಕು? ನಿನ್ನ ಅಣ್ಣನು ಖುಸ್ರುವಿನ ಸರ್ವಸ್ವದ ನಾಶಮಾಡಲು ನಿಂತಿರುವನು; ಆದರೆ ಜೋಧಾ, ಆತನು ಹೀಗೆ ಯಾಕೆ ಮಾಡುತ್ತಿರುವನೆಂಬದು ನಿನಗೆ ಗೊತ್ತಿರುವದೆಯೇ? ನಿನ್ನ ಕೋಮಲ ಹೃದಯವನ್ನು ನೋಯಿಸಬಾರದೆಂದು ಈವರೆಗೆ ಈ ಮಾತನ್ನು ನಿನ್ನ ಮುಂದೆ ನಾನು ಹೇಳಿದ್ದಿಲ್ಲ. ಇಂದು ಹೇಳುವ ಪ್ರಸಂಗವು ಬಂದದ್ದರಿಂದ ಹೇಳುವೆನು ಕೇಳು. ನೀನು ನನ್ನ ಧರ್ಮಪತ್ನಿಯಿರುವೆ; ಇಂದಿಲ್ಲ ಕೆಲವು ದಿನಗಳ ಮೇಲೆಯಾದರೂ ಯಾವತ್ತು ಹಿಂದುಸ್ಥಾನವು ನನ್ನ ಪಾದಗಳಿಗೆ ವಿನಮ್ರವಾಗುವದು; ಆಗ ನೀನು ರಾಜರಾಜೇಶ್ವರಿಯಾಗುವೆ; ಆದರೆ ಕೃಷ್ಣಕಾರ ಸ್ಥಾನದ ನಿನ್ನ ಅಣ್ಣನ ಮನಸ್ಸಿನಲ್ಲಿ ಪುನಃ ಈ ಹಿಂದುಸ್ಥಾನದಲ್ಲಿ ಹಿಂದುಪದ ಪಾತಶಾಹಿಯನ್ನುಂಟು ಮಾಡುವದಿರುವದರಿಂದ ಆತನು ಖುಸ್ರುವನ್ನು ಗೊಂಬೆಯಂತೆ ಕುಣಿಸುತ್ತ ದಿಲ್ಲಿಯ ಸಿಂಹಾಸನದ ಮೇಲೆ ತನ್ನ ಕಾಲು ಊರಬೇಕೆಂದು ಬಲೆಯನ್ನು ಒಡ್ಡುತ್ತಿರುವನು. ನೀನು ನಿನ್ನ ಅಣ್ಣನನ್ನು ಮೇಲುಗಟ್ಟಿ ಎಷ್ಟು ಮಾತಾಡಿದರೂ ನಾನು ಆತನ ಮಟ್ಟನ್ನು ಚನ್ನಾಗಿ ಅರಿತಿರುವೆನು. ಮೊಗಲರು ತಮ್ಮ ಬಾಹುಬಲದಿಂದ ಸಂಪಾದಿಸಿರುವ ಹಿಂದುಸ್ಥಾನವನ್ನು ತಾನು

ಕಸಕೊಳ್ಳಬೇಕೆಂದು ನಿನ್ನ ಅಣ್ಣನು ಯತ್ನಿಸುತ್ತಿರುವನು. ಆತನು ಖುಸ್ರುವಿನ ಪಕ್ಷಕಟ್ಟುವದು ಇದಕ್ಕಾಗಿಯೇ. ಆತನ ಈ ಫಿತೂರಿಯು ಈಗ ವಿಕೋಪಕ್ಕೆ ಬಂದಿರುವದರಿಂದ, ಇನ್ನು ಸಹಿಸುವಂತೆ ಇಲ್ಲ, ಮಾನಸಿಂಹನು ತನ್ನ ಈ ಉದ್ದೇಶವನ್ನು ಸಾಧಿಸಿಕೊಳ್ಳುವದಕ್ಕಾಗಿ ನನ್ನನ್ನು ಬಂಗಾಲದ ಸುಬೇದಾರನನ್ನಾಗಿ ನಿಯಮಿಸಿ ಕಳಿಸಬೇಕೆಂದು ಬಾದಶಹರಿಗೆ ದುಂಬಾಲು ಬಿದ್ದಿರುವನು. ಜೋಧಾ, ಈಗ ಉಪೇಕ್ಷೆ ಮಾಡುವದು ಶಕ್ಯವಾಗಿರುವದೋ? ಇಂಥ ಸ್ಪಷ್ಟ ಕಾರಣಗಳು ಕಣ್ಣಿಗೆ ಒಡೆದು ಕಾಣುತ್ತಿರಲು, ನಾನು ಸುಮ್ಮನೆ ಕುಳಿತುಕೊಳ್ಳಲಾ? ನಿನ್ನ ಅಣ್ಣನ ನೀಚತನವು ಇದಕ್ಕೂ ಮುಂದೆ ಹೋಗಿರುತ್ತದೆ. ಆತನು ನನ್ನನ್ನು ಕುರಿತು—"ಸೇಲೀಮಾ, ನೀನು ಸಿಂಹಾಸನದ ಹಾದಿಯನ್ನು ನೋಡುತ್ತ ಎಷ್ಟುದಿವಸ ಕುಳಿತುಕೊಳ್ಳತಕ್ಕವನು? ತಂದೆಯಾದ ರೇನಾಯಿತು? ಇಂದೇ ನಿನಗೆ ಸಿಂಹಾಸನವು ಸಿಗುವದು ಯೋಗ್ಯವಾಗಿರುವದು..........ಇತ್ಯಾದಿ ರೀತಿಯಿಂದ ನನಗೆ ಉಪದೇಶಮಾಡುವನು; ಆದರೆ ಜೋಧಾ, ನಾನು ಆತನ ಉದ್ದೇಶವನ್ನು ಅರಿತಿರುವೆನು. ನಾನು ಬಂಡುಗಾರನಾದದ್ದರಿಂದ ರಾಜ್ಯವಾಳಲಿಕ್ಕೆ ಅಯೋಗ್ಯನೆಂದು ಬಾದಶಹರಿಗೆ ಹೇಳಿ, ತನ್ನ ಕಾರ್ಯಸಾಧಿಸಿಕೊಳ್ಳಬೇಕೆಂದು ಆತನು ಯತ್ನಿಸುತ್ತಿರುವನು. ಆತನ ಈ ಎಲ್ಲಾ ಕಾರ್ಯಗಳಲ್ಲಿ ಖುಸ್ರುವಿನ ಮಾವನಾದ ಅಜೀಮ ಖಾನನು ಸಹಾಯಕನಾಗಿರುವನು. ಜೋಧಾ, ನನಗೆ ಈ ಹಿಡತ–ಪೇಚುಗಳ ಬೇಸರ ಬಂದಿದೆ. ನಿನ್ನ ಅಣ್ಣನು ಮನಸ್ಸಿನ ಕಿಲ್ಮಿಷವನ್ನೆಲ್ಲ ತೊಳೆದುಕೊಂಡು ನನ್ನ ಅಧೀನನಾಗಿ ನನಗೆ ಸಹಾಯಮಾಡತಕ್ಕದ್ದು; ಖುಸ್ರುವಿಗೆ ಪೂರ್ಣ ಸ್ವಾತಂತ್ರ್ಯವನ್ನೂ ಕೊಡತಕ್ಕದ್ದು; ಆತನೊಡನೆ ಯಾವ ಸಂಬಂಧವನ್ನು ಇಡಲಾಗದು. ಹೀಗೆ ಆತನು ಮಾಡದಿದ್ದರೆ ನನಗೆ ತೋರುವ ಸುಷ್ಟ–ದುಷ್ಟ ಉಪಾಯಗಳಲ್ಲಿ ಸಾಧಿಸಿದ ಉಪಾಯವನ್ನು ಯೋಚಿಸಿ ನನ್ನ ಅಭಿಷ್ಟವನ್ನು ಪೂರ್ಣಮಾಡಿ ಕೊಳ್ಳುವೆನು.

ತನ್ನ ಪತಿಯ ಈ ಮಾತುಗಳನ್ನು ಜೋಧಬಾಯಿಯು ಮನಃಪೂರ್ವಕವಾಗಿ ಕೇಳಿದಳು. ಆ ಮಾತುಗಳಲ್ಲಿ ಸತ್ಯಾಂಶವು ಬಹಳ ಇರುವದೆಂದು ಆಕೆಯು ತಿಳಿದಳು. ಇತ್ತ ಪತಿಯ ಹಿತವು, ಅತ್ತ ಮಗನ ಹಾಗು ಅಣ್ಣನ ಹಿತವು, ಹೀಗಾಗಿ ಆಕೆಯು ಸಂಕಟಕ್ಕೆ ಗುರಿಯಾದಳು; ಆದರೂ ಪತಿಯ ಹಿತಕ್ಕೇ ಮಹತ್ವಕೊಟ್ಟು ಆ ದ್ವಾರದಿಂದ ತನ್ನ ಮಗನ ಕಲ್ಯಾಣವಾದರೆ ಆಗಲೆಂದು ತಿಳಿದು ಆಕೆಯು ತನ್ನ ಪತಿಯನ್ನು ಕುರಿತು—ನಾಥ, ಖುಸ್ರುವನ್ನು ಮಾನಸಿಂಹನ ಬಲೆಯೊಳಗಿಂದ ಬಿಡಿಸಿ ಆತನನ್ನು ನಿಮ್ಮ ಸ್ವಾಧೀನಮಾಡಿದರೆ, ಮೊದಲಿನಂತೆ ನೀವು ಆತನನ್ನು ಪ್ರೀತಿಸುವಿರಾ? ಖುಸ್ರುವು ತಮ್ಮ ಪ್ರೇಮ ಸಂಪಾದನಕ್ಕಾಗಿಯೇ ತನ್ನ ಮಾವನಾದ ಮಾನಸಿಂಹನನ್ನು ಕೊಲ್ಲಲಿಕ್ಕೆ ಹೋಗಿದ್ದನು. ಮಾನಸಿಂಹನಿರುವವರೆಗೆ ನಿಮ್ಮ ಪ್ರೇಮವನ್ನು ಸಂಪಾದಿಸುವದು ಅಶಕ್ಯವೆಂದು ಆತನ ಹುಡುಗ ಬುದ್ಧಿಗೆ ತೋರಿತು. ಆದರೆ ಇಂಥ ಪಾಪಮೂಲಕವಾದ ಅವಿಚಾರದ ಕೊಲೆಗಡಕತನವು ಅಯೋಗ್ಯವೆಂದು ನಾನು ಖುಸ್ರುವಿಗೆ ಸಿಟ್ಟು ಮಾಡಿ ಬುದ್ಧಿಗಲಿಸಿದೆನು. ಆತನು, ಇನ್ನು ನಾನು ಮಾವನ ಕಣ್ಣಿಗೆ ಬೀಳಲಿಕ್ಕಿಲ್ಲವೆಂದು ಹೇಳಿ ಆತನು ನಿಮ್ಮ ಕಡೆಗೆ ಬರುತ್ತಿದ್ದನು. ಆದ್ದರಿಂದ ಇನ್ನು ಮೇಲಾದರೂ ಖುಸ್ರುವಿನ ಮೇಲಿನ ತಮ್ಮ ಎಲ್ಲ ಸಿಟ್ಟು ಇಲ್ಲದಂತಾಗಬಹುದೋ? ಎಂದು ಕೇಳಲು, ಸೇಲೀಮನು ಆಶ್ಚರ್ಯ

ದಿಂದ—''ಎಂಥ ಅಸಂಭವ ಮಾತನ್ನು ಹೇಳುವೆ ಜೋಧಾ? ಖುಸ್ರುವು ನನ್ನ ಪ್ರೇಮ ಸಂಪಾದನೆಗಾಗಿ ತನ್ನ ಸೋದರಮಾವನ ಕೊಲೆ ಮಾಡಲಿಕ್ಕೆ ಹೋಗಿದ್ದನೆ? ಆತನ ಉದ್ದೇಶವು ಸಾಧಿಸದೆ ಇದ್ದದ್ದು ಬಹಳ ನೆಟ್ಟಗಾಯಿತು. ಮಾನಸಿಂಹನ ಮೇಲೆ ನನ್ನ ಸಿಟ್ಟು ಎಷ್ಟು ಇದ್ದರೂ ಆತನನ್ನು ಕೊಲ್ಲಿಸಿ, ಅಕಬರ ಬಾದಶಹರ ಬಲಗೈ ಇಲ್ಲದಂತೆ ನಾನು ಮಾಡಲಾರೆನು. ಜೋಧಾ, ಪ್ರಿಯ ಖುಸ್ರುವಿನ ಮೇಲೆ ನನ್ನ ಸಿಟ್ಟು ಇಲ್ಲ; ಆತನ ದುಷ್ಟ ಗುಣಗಳ ಮೇಲೆ ನನ್ನ ಸಿಟ್ಟು ಇರುವದು. ಆತನು ಆ ಗುಣಗಳನ್ನು ಬಿಟ್ಟು ನನ್ನ ಆಜ್ಞಾಧಾರಕನಾದರೆ, ಆತನ ಎಲ್ಲ ಅಪರಾಧಗಳನ್ನು ನಾನು ಕ್ಷಮಿಸುವೆನು. ಜೋಧಾ, ಈ ರಾಜಕಾರಣದ ಸಂಕಟದ ಪ್ರಸಂಗಗಳಲ್ಲಿ ನನ್ನ ಚಿತ್ತವೃತ್ತಿಯು ಕ್ಷೋಭಿಸಿ, ನನ್ನಿಂದ ಎಲ್ಲಿ ಅಯೋಗ್ಯ ಕಾರ್ಯಗಳು ಘಟಿಸುವವೋ ಎಂದು ಚಿಂತಿಸುತ್ತಿರುವೆನು. ನಿನ್ನ ಅಣ್ಣ ಮಾನಸಿಂಹನ ಯೋಗ್ಯತೆಯನ್ನು ನಾನು ಅರಿತಿರುವದಿಲ್ಲ ವೆಂದು ತಿಳಿಯಬೇಡ. ಆತನು ನನ್ನ ವಿಷಯದ ಕುಭಾವವನ್ನು ತ್ಯಜಿಸಿ ನನಗೆ ಮನಃಪೂರ್ವಕ ಸಹಾಯ ಮಾಡಿದರೆ, ಆತನ ಅಪರಾಧಗಳನ್ನೂ ಕ್ಷಮಿಸುವೆನು.

ತನ್ನ ಪ್ರಾಣೇಶ್ವರನು ಮನಃಪೂರ್ವಕವಾಗಿ ಆಡಿದ ಈ ಮಾತಗಳನ್ನು ಕೇಳಿ ಜೋಧ ಬಾಯಿಗೆ ಬಹುಮಟ್ಟಿಗೆ ಸಮಾಧಾನವಾಗಿ ಆಕೆಯ ಎದೆಯ ಮೇಲಿನ ಭಾರವು ಹಗುರಾದಂತಾಯಿತು. ಸಂಶಯ ಸ್ವಭಾವದ ತನ್ನ ಪತಿಯು ಇಷ್ಟು ಸುಲಭ ರೀತಿಯಿಂದ ಖುಸ್ರುವನ್ನು ಕ್ಷಮಿಸುವನೆಂದು ಆಕೆಯು ತಿಳಿದಿದ್ದಿಲ್ಲ. ಆಕೆಯು ಆನಂದದಿಂದ ತನ್ನ ಪ್ರಿಯಕರನ ಹೃದಯದಲ್ಲಿ ಮಸ್ತಕವಿಟ್ಟು ಆತನ ಎರಡೂ ಹಸ್ತಗಳನ್ನು ತನ್ನ ನವನೀತ ಸದೃಶವಾದ ಸುಕುಮಾರ ಹೃದಯದಲ್ಲಿಟ್ಟುಕೊಂಡು ಮೃದುಸ್ವರದಿಂದ—ಪ್ರಿಯಕರಾ, ಹಾಗಾದರೆ ನಾಳೆ ಖುಸ್ರುವಿಗೆ ಒಂದು ಪತ್ರವನ್ನು ಬರೆದು ಕಳಿಸಲಾ? ಫತ್ತೇಪುರದಿಂದ ಒಮ್ಮೆ ಆತನು ಇಲ್ಲಿಗೆ ಬಂದನೆಂದರೆ ಸಮಾಧಾನವಾಗುವದು, ಎಂದು ಕೇಳಲು, ಸೇಲೀಮನು ಅಷ್ಟೇ ಪ್ರೇಮಲ ಭಾವದಿಂದ ತನ್ನ ಪ್ರಿಯ ಪತ್ನಿಯನ್ನು ಸಂತಯಿಸಿ—ಪ್ರಿಯೇ, ನಾನು ನಾಳೆ ಬೆಳಗಿನಲ್ಲಿಯೇ ಸಿಕ್ರಿಗೆ ರಾವುತರನ್ನು ಕಳಿಸುವೆನು. ನನ್ನ ಪ್ರಿಯ ಖುಸ್ರುವನ್ನು ನೋಡದೆ ಎಷ್ಟು ದಿನಗಳಾದವಲ್ಲ! ಆದ್ದರಿಂದ ಆತನನ್ನು ಯಾವಾಗ ನೋಡುವೆನೋ ಅನ್ನುವಹಾಗೆ ನನಗೆ ಆಗಿದೆ. ನನ್ನ ಈ ಸುಭೇಚ್ಛೆಯು ಎಂದು ಪೂರ್ಣವಾಗುವದೋ ಒಬ್ಬ ಖುದಾನಿಗೇ ಗೊತ್ತು! ಯಾಕಂದರೆ ಎಲ್ಲ ಕಾರ್ಯಗಳೂ ಖುದಾನ ಇಚ್ಛೆಯಿಂದಲೇ ಆಗುತ್ತಿರುತ್ತವೆ. ಎಂದು ಹೇಳಿದನು. ಸೇಲೀಮನು ಹೀಗೆ ಉದಾರ ಸ್ವಭಾವದವ ನಾಗಿದ್ದರೂ, ದುಷ್ಟ ಜನರ ಸಹವಾಸದಿಂದ ಸೆರೆಗುಡುಕನೂ, ವಿಷಯಾಸಕ್ತನೂ ಆಗಿ, ಆಗಾಗ್ಗೆ ತಂದೆಯ ವಿರುದ್ಧವಾಗಿ ಆಚರಿಸುತ್ತಿದ್ದನೆಂಬದಕ್ಕೆ ಇತಿಹಾಸವು ಸಾಕ್ಷಿಯಾಗಿರುವದು. ತಂದೆಯ ದೀರ್ಘಕಾಲದ ಆಳಿಕೆಗೆ ಬೇಸತ್ತು ಸಿಂಹಾಸನವು ತನಗೆ ಯಾವಾಗ ದೊರೆತೀತೆಂದು ಆತನು ಆತುರಪಡುತ್ತಲಿದ್ದನು. ಈ ಸಂಬಂಧದಿಂದ ಆತನ ಗುಪ್ತ ಕಾರಸ್ಥಾನಗಳು ನಡೆದೇ ಇದ್ದವು. ಮೇಲೆ ಹೇಳಿದಂತೆ ಆತನು ತನ್ನ ಹೆಂಡತಿಯ ಮುಂದೆ ''ತಾನು ಮಾನಸಿಂಹನ ದುರಾಲೋಚನೆಯಂತೆ ತಂದೆಯ ಮೇಲೆ ತಿರುಗಿ ಬೀಳಲಿಕ್ಕೆ ಒಪ್ಪಲಿಲ್ಲವೆಂ''ದು ತನ್ನ ದೊಡ್ಡಿಸ್ತಿಕೆಯನ್ನು ಆಡಿ ತೋರಿಸಿ ದರೂ, ಈ ಮೊದಲೆಯೇ ತಂದೆಯ ಮೇಲೆ ಆತನು ಒಂದೆರಡು ಸಾರೆ ತಿರುಗಿಬಿದ್ದಿದ್ದನಲ್ಲದೆ,

ಸದ್ಯಕ್ಕೆ ಅಲಹಾಬಾದದಿಂದ ಬಿಹಾರ ಪ್ರಾಂತದವರೆಗೆ ಯಾವತ್ತು ಪ್ರದೇಶವನ್ನು ಸ್ವಾಧೀನಪಡಿಸಿಕೊಂಡು ಅಲ್ಲಿ ತನ್ನ ಅಧಿಕಾರವನ್ನು ನಡಿಸಹತ್ತಿ ಆಗ್ರಾ ಪಟ್ಟಣವನ್ನು ಸ್ವಾಧೀನ ಪಡಿಸಿಕೊಳ್ಳುವದಕ್ಕಾಗಿ ತನ್ನ ಎಪ್ಪತ್ತು ಸಾವಿರ ಸೈನ್ಯ ಸಹಾಯದಿಂದ ಹೆಣಗತೊಡಗಿದ್ದನು. ಈ ಸಂಗತಿಯನ್ನು ಗುಪ್ತ ಪ್ರತಿನಿಧಿಯ ದ್ವಾರದಿಂದ ತಿಳಿದುಕೊಂಡೇ ಅಂಥ ಬೇನೆಯ ಸ್ಥಿತಿಯಲ್ಲಿಯೂ ಅಕಬರ ಬಾದಶಹನು ಸಿಕ್ರಿಯಿಂದ ಹೊರಟು ವಸತಿಯ ಮೇಲೆ ವಸತಿಯನ್ನು ಮಾಡುತ್ತ ಹಿಂದಕ್ಕೆ ಅಜೀಮು ಖಾನನು ಮಾನಸಿಂಹನ ಮುಂದೆ ಹೇಳಿದಂತೆ ಆಗ್ರಾ ಪಟ್ಟಣಕ್ಕೆ ಬಂದು ಮುಟ್ಟಿದ್ದನು.

ದುರಾಶಯ ದುಷ್ಪರಿಣಾಮ

ಪ್ರಿಯ ವಾಚಕರೇ, ಮಹತ್ವವನ್ನು ಇಚ್ಛಿಸುವದು ಮನುಷ್ಯಪ್ರಾಣಿಯ ಸ್ವಭಾವವಾಗಿರುವದು. ಆ ಮಹತ್ವ ಪ್ರಾಪ್ತಿಯ ಆಶೆಯಿಂದಲೇ ಭಿಕ್ಷುಕರಿಂದ ರಾಜರವರೆಗೆ ಮನುಷ್ಯನು ಈ ದುಃಖಮಯ ಸಂಸಾರವನ್ನು ಸುಖಮಯವಾಗಿ ಭಾವಿಸುವನು. ಇಂದು ನಾವು ಒಂದಿಲ್ಲೊಂದು ಬಗೆಯ ಅನನುಕೂಲತೆಯ ತಾಪಕ್ಕೆ ಗುರಿಯಾಗಿದ್ದರೂ, ಮುಂದೆ ನಾವು ಇಂಥ ಇಂಥ ಅನುಕೂಲತೆಗಳನ್ನು ಪಡೆದೇವೆಂಬ ಆಶೆಯಿಂದ ಆ ಅನನುಕೂಲತೆಗಳ ನಮ್ಮ ತಾಪವನ್ನು ಸಹಿಸುತ್ತಿರುವೆವು. ಹೀಗೆ ದೇವರು ಆಶೆಯ ಸವಿಯಲ್ಲಿ ಎದ್ದಿ ಸಂಸಾರವನ್ನು ರಚಿಸಿರುವದರಿಂದ ಜಗತ್ತು ಆಶಾಪಾಶಬದ್ಧವಾಗಿ ಸಂಸಾರದಲ್ಲಿ ತೊಳಲಾಡುತ್ತಿರುವದು; ಆದರೆ ದೇವರ ಸಂಕೇತವೇ ಹೀಗಿದ್ದ ಬಳಿಕ ಸಂಸಾರದ ಅಸ್ತಿತ್ವದ ಆಧಾರವಾದ ಈ ಆಶಾಪಾಶವನ್ನು ನಾವು ಹೇಗೆ ಹರಿದೇವು? ದೇವರ ಸಂಕೇತಕ್ಕೆ ವಿರೋಧವಾಗಿ ನಡೆಯುವದು ಶಕ್ಯವೋ? ಅಲ್ಲ, ಸರ್ವಥಾ ಶಕ್ಯವಲ್ಲ; ಆದರೆ ನಾವು ಧಾರ್ಮಿಕ ಆಶಾಪಾಶ ಬದ್ಧರಾಗಿ ಸಂಸಾರ ಮಾಡುವದು ದೇವರ ಸಂಕೇತಕ್ಕೆ ವಿರೋಧವಲ್ಲ, ಅದು ದೇವರ ಕ್ಷೋಭಕ್ಕೆ ಕಾರಣವಾಗದು. ಅಂತೇ ಭಗವಂತನು ಗೀತೆಯಲ್ಲಿ ''ಧರ್ಮಾವಿರುದ್ಧೋ ಭೂತೇಷು ಕಾಮೋಸ್ಮಿಭರತರ್ಷಭ'' ಎಂದು ಹೇಳಿರುವನು. ಇನ್ನು ನಾವು ನಿಜವಾದ ಸುಖವನ್ನು ಬಯಸುತ್ತಿದ್ದರೆ ಆಶಾಪರಿತ್ಯಾಗವನ್ನೇ ಮಾಡಬೇಕು. ಈ ಸಂಸಾರವು ಪ್ರವಾಹರೂಪದಿಂದ ಶಾಶ್ವತವಾಗಿ ನಡೆಯಬೇಕೆಂದು ದೇವರು ಮೂರು ಸಂಕೇತಗಳ ಸೂತ್ರದಿಂದ ಅದನ್ನು ದೃಢೀಕರಿಸಿರುವನು. ನಿರಾಶಾ ಪರಮಂ ಸುಖಂ'' ಎಂಬಂತೆ ದೇವರಲ್ಲಿ ಲಕ್ಷವಿಟ್ಟು ಆಶಾ ಪರಿತ್ಯಾಗಮಾಡಿ ಆತನನ್ನು ಹೊಂದಿ ಪರಮ ಸುಖವನ್ನು ಪಡೆಯಬೇಕೆಂಬದು ಆತನ ಒಂದನೆಯದಾದ ಶ್ರೇಷ್ಠ ಸಂಕೇತವು. ಧರ್ಮ, ಅಧರ್ಮಗಳೆಂಬ ದ್ವಂದ್ವದಿಂದ ಯುಕ್ತವಾದ ಆ ಪರಮಾತ್ಮನ ತಂತ್ರರೂಪವಾದ ಮಾಯಾ ವ್ಯವಹಾರವನ್ನು ಲಕ್ಷಿಸಿ, ಪರಮಾತ್ಮನ ಭಯದಿಂದ ಧರ್ಮದಿಂದ ಆಚರಿಸಿ ಸ್ವರ್ಗಾದಿ ಉಚ್ಚ ಭೋಗಗಳನ್ನು ಪಡೆಯಬೇಕೆಂಬದು ಆ ಪರಮಾತ್ಮನ ಸಾಮಾನ್ಯವಾದ ಎರಡನೆಯ ಸಂಕೇತವು. ದೇವರ ಲಕ್ಷವಿಲ್ಲದೆ ಐಹಿಕ ವಿಷಯ

ಭೋಗಕ್ಕೆ ಮಹತ್ವ ಕೊಟ್ಟು ಧರ್ಮಾ–ಧರ್ಮಗಳ ವಿವೇಚನವಿಲ್ಲದೆ ಮನಸ್ಸಿಗೆ ಬಂದಂತೆ ನಡೆದು ನರಕಾದ್ಯನರ್ಥಗಳನ್ನು ಭೋಗಿಸಬೇಕೆಂಬದು ದೇವರ ಮೂರನೆಯ ಅಧರ್ಮಸಂಕೇತವು. ಈ ಮೂರೂ ಸಂಕೇತಗಳಲ್ಲಿ ಮೊದಲನೆಯ ಸಂಕೇತದಂತೆ ನಡೆಯುವವರನ್ನು ಮುಕ್ತರೆಂತಲೂ, ಎರಡನೆಯ ಸಂಕೇತದಂತೆ ನಡೆಯುವವರನ್ನು ಭೋಗಿಗಳೆಂತಲೂ, ಮೂರನೆಯ ಸಂಕೇತದಂತೆ ನಡೆಯುವವರನ್ನು ಪತಿತರೆಂತಲೂ ಕರೆಯಬಹುದು. ಈ ಮೂರೂ ಬಗೆಯ ಜೀವರು, ಅಂದರೆ ಮುಕ್ತರು, ಭೋಗಿಗಳು, ಪತಿತರು. ದೇವರ ಇಚ್ಛೆಯಿಂದ ಈ ಸೃಷ್ಟಿಯು ನಡೆಯುವವರೆಗೆ ಇರತಕ್ಕವರೇ; ಆದರೆ ಯುಗಭೇದದಿಂದ ಇವರ ಮಾನವು ಮಾತ್ರ ಹೆಚ್ಚು ಕಡಿಮೆಯಾಗ ಬಹುದು. ಅಂದರೆ, ಕೃತಯುಗದಲ್ಲಿ ಮುಕ್ತರ ಸಂಖ್ಯೆಯು ಹೆಚ್ಚು ಇದ್ದರೆ, ತ್ರೇತಾ–ದ್ವಾಪರಗಳಲ್ಲಿ ಈ ಮುಕ್ತರ ಸಂಖ್ಯೆಯು ಕಡಿಮೆಯಾಗುತ್ತ ಭೋಗಿಗಳ ಸಂಖ್ಯೆಯು ಹೆಚ್ಚುತ್ತಲೂ, ಕಲಿಯುಗದಲ್ಲಿ ಪ್ರಾಮುಖ್ಯವಾಗಿ ಮುಕ್ತರ ಮಾನವೂ, ಸರ್ವಸಾಧಾರಣವಾಗಿ ಭೋಗಿಗಳ ಮಾನವೂ ಕಡಿಮೆಯಾಗುತ್ತ, ಪತಿತರ ಸಂಖ್ಯೆಯು ಭರದಿಂದ ಹೆಚ್ಚುತ್ತಲೂ ಹೋಗಬಹುದು. ಆದರೆ ಇವರಲ್ಲಿ ಯಾರ ಸರ್ವಶೂನ್ಯವೂ ಸೃಷ್ಟಿಯಿರುವತನಕ ಯಾವ ಕಾಲಕ್ಕೂ ಆಗುವದಿಲ್ಲ. ಅದರಂತೆ, ಮನುಷ್ಯನು ಕೇವಲ ಧರ್ಮದಿಂದಾಗಲೀ, ಕೇವಲ ಅಧರ್ಮದಿಂದಾಗಲಿ ನಡೆಯಬೇಕೆಂತಲೂ ದೇವರ ಸಂಕೇತವಿರುವದಿಲ್ಲ; ಯಾಕಂದರೆ ಕೇವಲ ಸುಖವು, ಕೇವಲ ದುಃಖವು ಸಂಸಾರದ ಧರ್ಮವಾಗಿರದೆ, ಸುಖ–ದುಃಖ ಮಿಶ್ರಣವು ಸಂಸಾರದ ಧರ್ಮವೂ, ಸ್ವಾರಸ್ಯವೂ ಆಗಿರುವದು. ಶ್ರೇಷ್ಠತರ ಧರ್ಮಾಚರಣೆಯಿಂದ ಇಂದ್ರಪದವಿಯನ್ನು ಹೊಂದಿದವನು ಕೂಡ ಅಹಲ್ಯಾಗಮನದಂಥ ಪಾಪವನ್ನೂ, ದೂರ್ವಾಸರ ವರಪ್ರದಾನವನ್ನು ದುರ್ಲಕ್ಷಿಸುವಂಥ ಔದ್ಧತ್ಯವನ್ನೂ ಅಪ್ಪಿ ತಪ್ಪಿಯಾದರೂ ಮಾಡುವದುಂಟು. ಅದರಂತೆ ಅಜಾಮಿಳನಂಥ ಪಾಪಿಯು ಹೇಗಾದರೂ ಭಗವನ್ನಾಮವನ್ನು ಉಚ್ಚರಿಸುವ ಧಾರ್ಮಿಕ ವ್ಯವಹಾರವನ್ನು ಯಾವ ಯೋಗದಿಂದಲೇ ಆಗಲಿ ಮಾಡುವದುಂಟು. ಬಹಳವೇಕೆ, ಸೃಷ್ಟಿಯ ವ್ಯವಹಾರಕ್ಕೆ ಔಪಚಾರಿಕ ರೀತಿಯಿಂದಲೇ ಆಗಲಿ ಒಳಗಾಗಿದ್ದ ತ್ರಿಮೂರ್ತಿಗಳೂ ಶಾಪ ಗ್ರಸ್ತರಾಗುವ ಆಚರಣೆಯನ್ನು ಆಚರಿಸಿದರೆಂದಬಳಿಕ ಸಾಂಸಾರಿಕ ಈ ಮಿಶ್ರಾಚರಣೆಯ ಮಹತ್ವವನ್ನು ಎಷ್ಟೆಂದು ವರ್ಣಿಸಬೇಕು? ಆದ್ದರಿಂದಲೇ ಈ ಸಂಸಾರದಲ್ಲಿ ಅತ್ಯಂತ ಧಾರ್ಮಿಕರು ದುಃಖಪಡುವದನ್ನೂ, ಅತ್ಯಂತ ಪತಿತರು ಸುಖ ಪಡುವದನ್ನೂ ನೋಡುತ್ತಿರುವೆವು! ಅಂತೇ ಆಶಾಮೂಲವಾದ ಕರ್ಮಪಾಶವು ಜನ್ಮಜನ್ಮಾಂತರಕ್ಕೂ ಬಿಡುವದಿಲ್ಲೆಂದು ಜ್ಞಾನಿಗಳು ಸಾರುತ್ತಿರುವರು.

ಈ ದೃಷ್ಟಿಯಿಂದ ಈ ಕಾದಂಬರಿಯೊಳಗಿನ ಮುಖ್ಯ ಪಾತ್ರಗಳ ವಿಚಾರಮಾಡಿದರೆ, ಈ ಜನ್ಮದಲ್ಲಿ ಸ್ಪಷ್ಟವಾದ ಅಧಾರ್ಮಿಕಾಚರಣೆಮಾಡುವ ಸೇಲೀಮು, ಖುಸ್ರು, ಮಾನಸಿಂಹ, ಅಜೀಮಖಾನ ಮೊದಲಾದವರು ಶ್ರೇಷ್ಠ ಭೋಗಿಗಳಾಗಿರುವದಕ್ಕೆ ಅವರ ಪೂರ್ವಜನ್ಮದ ಹಾಗು ಈ ಜನ್ಮದ ಪ್ರಬಲ ಧಾರ್ಮಿಕಾಚರಣೆಯು ಕಾರಣವಾಗಿರುವದೆಂದು ಹೇಳಬೇಕಾಗು ವಂತೆ, ಅವರ ಈ ಜನ್ಮದ ಅಧರ್ಮಾಚರಣೆಯೂ, ಧರ್ಮಾಚರಣೆಯೂ, ಅವವುಗಳ

ಮಾನದಿಂದ ಮುಂದಿನ ಜನ್ಮದ ಅವರ ಪತಿತತ್ವಕ್ಕಾಗಲಿ, ಭೋಗಕ್ಕಾಗಲಿ ಕಾರಣವಾಗುವ ದೆಂದೂ ಹೇಳಬೇಕಾಗುವದು. ಇನ್ನು ಈ ಜನ್ಮದಲ್ಲಿ ಉಚ್ಚ ಭೋಗವನ್ನು ಭೋಗಿಸುತ್ತ ಈ ಜನ್ಮದಲ್ಲಿಯೂ ವಿಶೇಷವಾಗಿ ಧಾರ್ಮಿಕನಾಗಿಯೇ ನಡೆಯುವವನು ಪುರುಷ ಶ್ರೇಷ್ಠರಲ್ಲಿ ಗಣಿಸಲ್ಪಡುವನು. ಅಂಥ ಪುರುಷಶ್ರೇಷ್ಠನು ಈ ಕಾದಂಬರಿಯಲ್ಲಿ ಅಕಬರ ಬಾದಶಹನೆಂದು ತಿಳಿಯತಕ್ಕದ್ದು; ಆದರೆ ಅಕಬರ ಬಾದಶಹನಿಂದ ಅಧಾರ್ಮಿಕಾಚರಣೆಗಳು ಆಗಿರುವದಿಲ್ಲವೆಂದು ಮಾತ್ರ ತಿಳಿಯ ಬಾರದು. ಪ್ರಾಮುಖ್ಯವಾಗಿ ಆತನ ಮಹತ್ವಾಕಾಂಕ್ಷೆಯ ಮೊದಲ ಚುಣಿಯಲ್ಲಿ ಆತನಿಂದಾದ ಹಿಂಸಾಕರ್ಮವೂ, ಸಾಧಾರಣವಾಗಿ ಆತನ ಇಡಿಯ ಆಯುಷ್ಯದಲ್ಲಿ ಆತನನ್ನು ಮುತ್ತಿಮುಸುಕಿದ ಪರಸ್ತ್ರೀಗಮನಲಾಲಸೆಯೂ ಇತಿಹಾಸಜ್ಞರಿಗೆ ಅರಿಯದ ಮಾತಲ್ಲ; ಆದ್ದರಿಂದ ಯಾರ ಆಚರಣೆಗಾಗಿ ಯಾರೂ ಹೆಸರಿಡದೆ, ವಿವೇಕಿಗಳಾದವರು ಆಶಾ ಪರಿತ್ಯಾಗಮಾಡುವದು ತಮ್ಮಿಂದಾಗದಿದ್ದರೂ ಧಾರ್ಮಿಕಾಶೆಯನ್ನಾದರೂ ತಾಳಬೇಕು. ಈ ಕಾದಂಬರಿಯೊಳಗಿನ ಸೇಲೀಮನು ಆಶಾಪರಿತ್ಯಾಗ ಮಾಡದಿದ್ದರೂ, ತಂದೆಯಿರುವತನಕ ಆತನನ್ನು ಸೇವಿಸಿ, ಅಂದರೆ ಆತನ ಮನಸ್ಸಿಗೆ ಸಮಾಧಾನವಾಗುವಂತೆ ನಡೆದು, ಆತನ ಪಶ್ಚಾತ್ ತನಗೆ ಹಕ್ಕಿನಿಂದ ಪ್ರಾಪ್ತವಾಗತಕ್ಕ ಸಿಂಹಾಸನವನ್ನು ಪಡೆದಿದ್ದರೆ ದೋಷಿಯಾಗುತ್ತಿದ್ದಿಲ್ಲ. ಇದೇ ದೃಷ್ಟಿಯಿಂದ ವಿಚಾರ ಮಾಡಿದರೆ ಕೇವಲ ಸ್ವಾರ್ಥ ಪರಾಯಣರಾದ ಮಾನಸಿಂಹ, ಅಜೀಮಖಾನ, ಖುಸ್ರು ಇವರ ಸ್ವಾಮಿದ್ರೋಹ–ಪಿತೃದ್ರೋಹಾದಿಗಳ ಆಚರಣೆಗಳು ದೋಷಯುಕ್ತಗಳೆಂತಲೂ, ಅವರ ಪಾತಿತ್ಯಕ್ಕೆ ಕಾರಣವಾದವುಗಳೆಂತಲೂ ಹೇಳಬೇಕಾಗುವದು. ಇರಲಿ, ಇನ್ನು ಕಾದಂಬರಿಯ ಕಡೆಗೆ ಹೊರಳೋಣ.

ಪ್ರಿಯವಾಚಕರೇ, ಈ ಅಧಾರ್ಮಿಕ ದುರಾಶೆಯಿಂದಾಗುವ ದುಷ್ಪರಿಣಾಮವು ಮನಸ್ಸಿನ ಮೇಲೆ ಎಷ್ಟುಬೇಗನೆ ಆಗುತ್ತದೆಂಬದಕ್ಕೆ ಸಾಧ್ವಿಪ್ಯಾರಿಬಾನುವೇ ಸಾಕ್ಷಿಯಾಗಿರುವಳು. ಮಾನಸಿಂಹನ ತಂತ್ರಕ್ಕೊಳಗಾಗಿದ್ದ ಚಾರಿಣಿಯ ಬೋಧದಿಂದ ''ತಾನು ರಾಜರಾಜೇಶ್ವರಿ ಯಾಗಬಹುದಲ್ಲವೆ'' ಎಂಬ ದುರಾಶಾ ಬೀಜವು ಹೃದಯದಲ್ಲಿ ಬಿತ್ತುವವರೆಗೆ ಆಕೆಯು ಎಷ್ಟು ಪತಿಪ್ರಾಣಳು, ಎಷ್ಟು ಉಲ್ಲಾಸ ವೃತ್ತಿಯವಳು ಇದ್ದಳೆಂಬದನ್ನು ವಾಚಕರಿಗೆ ಮತ್ತೆ ವಿವರಿಸಿ ಹೇಳುವ ಕಾರಣವಿಲ್ಲ; ಆದರೆ, ಆ ದುಷ್ಟ ಬೀಜವು ಮೊಳೆತು ಮರವಾಗುತ್ತ ಹೋದಂತೆ, ಆ ಸುಂದರಿಯ ಉಲ್ಲಾಸವೃತ್ತಿಯು ಕಡಿಮೆಯಾಗುತ್ತ ಹೋಯಿತು; ಶಾಂತಿಯು ಹಾಳಾಗುತ್ತ ಹೋಯಿತು; ಪತಿಸೇವೆಯು ಚಂಚಲವೂ, ದೋಷಯುಕ್ತವೂ ಆಗುತ್ತ ಹೋಯಿತು; ಅನುಪಮೆಯ ಸಂಸಾರ ಸುಖವು ಪ್ರಾಪ್ತವಾಗಿದ್ದರೂ ಅದರಿಂದ ಆಕೆಗೆ ಸುಖಾನುಭವವು ಆಗದಂತಾಯಿತು! ಅದರಲ್ಲಿ ಆಕೆಯ ತಂದೆಯಾದ ಅಜೀಮಖಾನನು—''ಬಾದಶಹರ ಅತ್ಯಂತ ಪ್ರೀತಿಗೆ ಪಾತ್ರನಾಗಿದ್ದ ನಿನ್ನ ಗಂಡ ಖುಸ್ರುವು ಬಾದಶಹನಾಗುವದು ತೀರ ಶಕ್ಯವಾಗಿರುವದರಿಂದ ನೀನು ನಿನ್ನ ಗಂಡನನ್ನೂ ಪರಾಕ್ರಮಿಯಾಗಮಾಡು'' ಎಂದು ಉತ್ತೇಜನಗೊಳಿಸಿದಾಗಿನಿಂದಂತು ಪ್ಯಾರಿಬಾನುವಿಗೆ ಏನು ಮಾಡಲಿ, ಏನು ಬಿಡಲಿ ಅನ್ನುವಹಾಗೆ ಆಯಿತು. ಆಕೆಗೆ ಊಟ–ಉಡಿಗೆಗಳು ಸೇರದಾದವು; ಆಕೆಯ ನಿದ್ರೆಯು ಹಾರಿಹೋಯಿತು; ಆಕೆಯು ತನ್ನ ಗಂಡನನ್ನು ಬೋಧಿಸಿ ತಂದೆಯ ವಿರುದ್ಧವಾಗಿ ಆತನು ಸಿಂಹಾಸನಪ್ರಾಪ್ತಿಗಾಗಿ

ಯತ್ನಿಸಲು ಸಿದ್ಧವಾಗುವಂತೆ ಏನು ಉಪಾಯ ಮಾಡಲೆಂದು ಆಕೆಯು ಸದಾ ಚಿಂತಿಸ ತೊಡಗಿದಳು; ಒಟ್ಟಿಗೆ ದುರಾಶಾಪ್ರೇರಿತವಾದ ಅಸುರೀ ಮಹತ್ವಾಕಾಂಕ್ಷೆಯ ರೋಗದಿಂದ ಆಕೆಯು ನಿಸ್ತೇಜಳೂ, ಉದಾಸೀನಳೂ ಆಗಿ ದಿನದಿನಕ್ಕೆ ಕ್ಷೀಣವಾಗಹತ್ತಿದಳು.

ಈ ಮೇರೆಗೆ ತನ್ನ ತಂದೆಯು ಕುಡಿಸಿದ ಅಸುರೀ ಮಹತ್ವಾಕಾಂಕ್ಷೆಯ ವಿಷದಿಂದ ಅಸ್ಥಿರಳಾದ ಪ್ಯಾರಿಬಾನುವು ಒಂದು ದಿನ ರಾತ್ರಿ ತನ್ನ ಗಂಡನನ್ನು ಬೋಧಿಸಲು ಆತುರಪಟ್ಟು, ಆತನನ್ನು ಅತ್ತಿತ್ತ ಹುಡುಕಿದಳು; ಆದರೆ ಎಷ್ಟು ಹುಡುಕಿದರೂ ಆತನಗೊತ್ತು ಹತ್ತಲಿಲ್ಲ. ಕಡೆಗೆ ಆಕೆಯು ತನ್ನ ಸಖಿಯಾದ ಅಮೀರೆಯನ್ನು ಕರೆಸಿ—''ಅಮೀರೇ, ಹೋಗು, ಶಹಾಜಾದೇ ಸಾಹೇಬರು ಎಲ್ಲಿ ಇದ್ದಾರೆ ನೋಡು ಹೋಗು. ಅವರು ಎಲ್ಲಿ ಇದ್ದರೂ, ಏನು ಮಾಡುತ್ತಿದ್ದರೂ ನಾನು ಅಗತ್ಯವಾಗಿ ಈಗಲೇ ಕರೆದಿರುವೆನೆಂದು ಹೇಳಿ ಅವರನ್ನು ಕರೆದುಕೊಂಡು ಬಾ'' ಎಂದು ಹೇಳಿ, ತಾನು ಒಂದು ಬಗೆಯಿಂದ ಪತಿಯ ಮೇಲೆ ಅಧಿಕಾರ ನಡಿಸುವ ಅಧರ್ಮ ಮಾಡುತ್ತೇನೆಂಬದರ ಅರಿವಿಲ್ಲದೆ ಆಕೆಯನ್ನು ಕಳಿಸಿದಳು. ಅಸುರೀ ಮಹತ್ವಾಕಾಂಕ್ಷೆಯಿಂದ ಪೀಡಿತರಾದವರಿಂದ ಇಂಥ ಪ್ರಮಾದಗಳಾಗುತ್ತಿರುವದು ಆಶ್ಚರ್ಯವಲ್ಲ. ಅಮೀರೆಯು ಎಷ್ಟು ಹುಡುಕಿದರೂ ಶಹಾಜಾದಾ ಖುಸ್ರುವು ಸಿಗದ್ದರಿಂದ ಆಕೆಯೂ ಪ್ಯಾರೀಬಾನುವಿನ ಬಳಿಗೆ ಹಾಗೇ ಕೈಬೀಸುತ್ತ ಬಂದಳು; ಆದರೆ ಪ್ಯಾರೀಬಾನುವಿಗೆ ಸಮಾಧಾನವಾಗಲಿಲ್ಲ. ಈ ಕಾಲದಲ್ಲಿ ಪತಿಯು ಎಲ್ಲಿ ಇರಬಹುದೆಂದು ಆಕೆಯು ಯೋಚಿಸತೊಡಗಿದಳು. ಮತ್ತೆ ನಾಲ್ಕಾರು ಜನರನ್ನು ನಾಲ್ಕೂ ಕಡೆಗೆ ಹುಡುಕಲಿಕ್ಕೆ ಕಳಿಸಲಾ, ಅನ್ನುವಷ್ಟರಲ್ಲಿ ಆಕೆಗೆ ಖುಸ್ರುವಿನ ಪ್ರೀತಿಯ ಕುಂಜವನದೊಳಗಿನದೊಂದು ಲತಾಮಂಟಪದ ನೆನಪಾಯಿತು. ಕೂಡಲೆ ಆಕೆಯು ಕುಂಜವನಕ್ಕೆ ಸಾಗಿ ಲತಾಮಂಟಪದ ಬಳಿಗೆ ಹೋಗುತ್ತಿರಲು, ಅಲ್ಲಿ ಖುಸ್ರುವು ಒಂದು ಪತ್ರವನ್ನು ಕೈಯಲ್ಲಿ ಹಿಡಕೊಂಡು ದೀರ್ಘವಾಗಿ ಆಲೋಚಿಸುತ್ತ ಕುಳಿತುಕೊಂಡಿದ್ದನು. ಆಗ ಪ್ಯಾರೀಬಾನುವು ಕಾಲಸಪ್ಪಳವಾಗದಂತೆ ಮೆಲ್ಲಗೆ ಹೋಗಿ ಆ ಲತಾ ಮಂಟಪದಲ್ಲಿ ಒತ್ತಟ್ಟಿಗೆ ಮರೆಗೆ ನಿಂತು ಕೊಂಡು ಪತಿಯ ಆಲೋಚನೆಯ ಗೂಢವನ್ನು ತಿಳಿಯಲು ಇಚ್ಛಿಸಿದಳು. ಹೀಗೆ ಪ್ಯಾರಿಬಾನುವು ಪತಿಯನ್ನು ವಂಚಿಸತೊಡಗಿದ್ದೊಂದು ಅಪರಾಧವೇ ಸರಿ. ಖುಸ್ರುವು ಚಿಂತಾಭಾರವನ್ನು ವಹಿಸಲಾರದೆ ದೀರ್ಘಶ್ವಾಸಬಿಟ್ಟು ತನ್ನೊಳಗೆ—''ಖುದಾ, ನಾನು ಈ ಪ್ರಸಂಗದಲ್ಲಿ ಏನು ಮಾಡಲಿ, ನನಗೆ ಹಾದಿಯನ್ನು ತೋರಿಸು. ನಾಲ್ಕೂ ಕಡೆಗೆ ನನಗೆ ಕಗ್ಗತ್ತಲೆಯು ಮುಸುಕಿರುವದು. ಒಂದು ಕಡೆ ಬಾದಶಹರ ಅಪ್ಪಣೆಯು ನನಗೆ ಇಲ್ಲಿಯೇ ಇರೆಂದು ಹೇಳುತ್ತಿರುವದು; ಮತ್ತೊಂದು ಕಡೆಗೆ ಸುಲ್ತಾನಸೇಲೀಮರವರ ಅಪ್ಪಣೆಯು ಅತ್ತಕಡೆಗೆ ಬಾರೆಂದು ಕರೆಯುತ್ತಿರುವದು. ಅತ್ತ ಅವನು ನನಗೆ—''ತಂದೆಯೇ ಎಲ್ಲರಲ್ಲಿ ಶ್ರೇಷ್ಠನೂ, ಪೂಜ್ಯನೂ ಆಗಿದ್ದು, ತಂದೆಯ ಅಪ್ಪಣೆಯನ್ನು ಮೀರುವವನು ಪಾಪಿಯಾಗಿ ನರಕಕ್ಕೆ ಇಳಿಯುವನೆಂದು ಹೇಳಿರುವಳು. ಇತ್ತ ಅಕಬರ ಬಾದಶಹರು ನನಗೆ—''ಖುಸ್ರೂ, ನಾನು ಕೆಲವೊಂದು ಮಹತ್ವದ ರಾಜಕಾರಣದ ಸಲುವಾಗಿ ಆಗ್ರಾಕ್ಕೆ ಹೋಗುತ್ತಿರುವೆನು; ಆದ್ದರಿಂದ ನಾನು ಅಲ್ಲಿಂದ ತಿರುಗಿ ಬರುವವರೆಗೆ ಸಿಕ್ರಿಯ ಸಂರಕ್ಷಣದ ಭಾರವನ್ನು ನಿನ್ನಮೇಲೆ ಹಾಕಿರುತ್ತೇನೆ. ನನ್ನಿಂದ

ಎರಡನೆಯ ಅಪ್ಪಣೆಯು ಆಗುವವರೆಗೆ ಎರಡನೆಯ ಕಡೆಗೆ ನೀನು ಒಂದು ಹೆಜ್ಜೆಯನ್ನೂ ಎತ್ತಿ ಇಡಬೇಡ'' ಎಂದು ಹೇಳಿರುವರು. ಅಂದಬಳಿಕ ಈಗ ನಾನು ಏನು ಮಾಡಲಿ? ಎಂದು ಪ್ರಶ್ನಮಾಡಿಕೊಂಡು ಪುನಃ ಪತ್ರವನ್ನು ಓದಿಕೊಂಡು—''ಆಲಹಾಬಾದಕ್ಕೆ ನನ್ನ ತಂದೆಯ ಬಳಿಗೆ ಹೋಗಲಿಕ್ಕೆ ನನಗೆ ಅಂಜಿಕೆ ಯಾಕೆ ಬರಬೇಕು? ಮೇಲಾಗಿ ಅಲ್ಲಿ ನನ್ನ ಪ್ರೇಮಲ ಸ್ವಭಾವದ ಅವ್ವನು ಇರುವಳು. ನಮ್ಮ ಅವ್ವನು ದೇವಿಯ ಸ್ವರೂಪಳಿದ್ದು, ನನ್ನ ಕಲ್ಯಾಣ ಮಾಡುವವಳಿರುವಳು. ಆಕೆಯು ನನಗೆ ನಾಲ್ಕು ಹಿತದ ಮಾತುಗಳನ್ನು ಹೇಳುವಳು; ಆದ್ದರಿಂದ ನಾನು ನನ್ನ ತಂದೆಯ ಬಳಿಗೆ ಹೋಗುವದೇ ಒಳ್ಳೆಯದು, ಅನ್ನುತ್ತಿರಲು, ಕೂಡಲೆ ಮರೆಗೆ ನಿಂತಿದ್ದ ಪ್ಯಾರೀಬಾನುವು—''ಬೇಡ, ಅಲಹಾಬಾದಕ್ಕೆ ಹೋಗುವದು ಬೇಡ; ಯಾಕಂದರೆ ಅಲ್ಲಿಗೆ ಹೋಗುವದರಿಂದ ನೀವು ಮಹಾ ಸಂಕಟಕ್ಕೆ ಗುರಿಯಾಗುವಿರಿ'' ಎಂದು ಹೇಳಿದಳು.

ಹೀಗೆ ಅಕಲ್ಪಿತವಾಗಿ ಯಾರೋ ನುಡಿದದ್ದನ್ನು ಕೇಳಿ ಖುಸ್ರುವು ಚಕಿತನಾಗಿ ಅತ್ತಿತ್ತ ನೋಡುತ್ತಿರಲು, ಪ್ಯಾರಿಬಾನುವು ಪತಿಯ ಬಳಿಗೆ ಬಂದು ಪ್ರೇಮದಿಂದ—

ಪ್ಯಾರಿಬಾನು—ನಾಥ, ತಮ್ಮ ವಿಚಾರಗಳಿಗೆ ನಾನು ಪ್ರತಿಬಂಧವನ್ನುಂಟು ಮಾಡಿದ್ದಕ್ಕಾಗಿ ನನ್ನನ್ನು ಕ್ಷಮಿಸಬೇಕು. ಈಗಿನ ನಮ್ಮ ಪ್ರತಿಕೂಲ ಪರಿಸ್ಥಿತಿಯ ವಿಷಯವಾಗಿ ನಾನು ಪೂರ್ಣ ವಿಚಾರಮಾಡಿದ್ದೇನೆ, ತಾವು ಈಗ ಅಲಹಾಬಾದಕ್ಕೆ ಹೋಗುವದು ಬೇಡ ಬಾದಶಹರ ಅಪ್ಪಣೆ ಯನ್ನು ಮೀರುವದು ನೆಟ್ಟಗಲ್ಲ; ಆದ್ದರಿಂದ ನೀವು ಇಲ್ಲಿಯೇ ಇರಬೇಕು.

ಖುಸ್ರು—ಹಾಗಾದರೆ ತಂದೆಯ ಅಪ್ಪಣೆಯನ್ನು ಮೀರುವದು ಯೋಗ್ಯವಾಗಬಹುದೆ?

ಪ್ಯಾರಿಬಾನು—ಅದನ್ನಾದರೂ ನಾನು ಯೋಗ್ಯವೆಂದು ಹೇಳುವದಿಲ್ಲ; ಆದರೆ ಈ ಪ್ರಸಂಗದಲ್ಲಿ ಅಲಹಾಬಾದದಿಂದ ಬಂದ ಅಪ್ಪಣೆಯನ್ನು ತಾವು ಬಾದಶಹರವರಿನ ಪತ್ರ ಮುಖದಿಂದ ತಿಳಿಸಿ, ಅವರು ಹೇಳಿದಂತೆಯಾದರೂ ಮಾಡುವದು ನನಗೆ ನೆಟ್ಟಗೆ ಕಾಣುತ್ತದೆ. ಆಗ್ರಾ ಪಟ್ಟಣವೇನು ಇಲ್ಲಿಂದ ಬಹಳ ದೂರ ಇರುವದಿಲ್ಲ.

ಖುಸ್ರು—(ಸ್ವಲ್ಪ ಹೊತ್ತು ಆಲೋಚಿಸಿ) ಪ್ಯಾರೀ, ನಿನ್ನ ಆಲೋಚನೆಯು ಬಹು ಯೋಗ್ಯವಾದದ್ದು. ನಿನ್ನ ಸಮಂಜಸತನವನ್ನು ನೋಡಿದರೆ ನೀನು ರಾಜರಾಜೇಶ್ವರಿಯಾಗಲಿಕ್ಕೆ ಯೋಗ್ಯಳಿರುವೆಯೆಂದು ಹೇಳಬೇಕಾಗುತ್ತದೆ.

ಪ್ಯಾರಿ—ನಾಥ, ತಾವು ಅಕಬರ ಬಾದಶಹರ ಪಶ್ಚಾತ್ ಬೇಗನೆ ದಿಲ್ಲಿಯ ಸಿಂಹಾಸನ ವೇರುವ ಸಂಭವವಿರುವದರಿಂದ, ನಾನು ರಾಜರಾಜೇಶ್ವರಿಯಾಗುವ ಸಂಬಂಧದ ತಮ್ಮ ಮಾತು ಬೇಗನೆ ಸತ್ಯವಾಗುವದರಲ್ಲಿ ಸಂಶಯವಿಲ್ಲ.

ಖುಸ್ರು—(ಆಶ್ಚರ್ಯ ಮಗ್ನನಾಗಿ) ಏನಂದಿ ಪ್ಯಾರೀ, ಸುಲ್ತಾನಸೇಲೀಮರವರು ಬಾದಶಹರಾಗುವ ಮೊದಲೇ ನಾನು ಬಾದಶಹನಾಗುವೆನೆ? ನಿನಗೆ ಹುಚ್ಚು ಹಿಡಿಯಿತೋ ಏನು? ಅಥವಾ ವಿನೋದಕ್ಕಾಗಿ ಹೀಗೆ ನೀನು ಹೇಳುವೆಯೋ? ಪ್ಯಾರೀ, ಇಂಥ ದ್ರೋಹದ ಕಲ್ಪನೆಯನ್ನು ಮನಸ್ಸಿನಲ್ಲಿ ತರಬಾರದು ಕಂಡೆಯಾ? ನನ್ನ ತಾಯಿಯ ಉಪದೇಶದಿಂದ ನಾನು ಅತ್ಯಂತ ಪಿತೃಭಕ್ತನಾಗಿರುವೆನು. ಪಿತೃದ್ರೋಹದ ಪಾಪಕ್ಕೆ ನಾನು ಬಹಳವಾಗಿ ಅಂಜುತ್ತೇನೆ. ನೀನು ಇಂಥ ಘಾತಕವಾದ ಮಹತ್ವಾಕಾಂಕ್ಷೆಯ ಬಲೆಗೆ ಬೀಳುವದು ಯೋಗ್ಯವಲ್ಲ.

ಪ್ಯಾರಿಬಾನು—ನಾಥ, ಇದು ನನ್ನಂಥ ಒಬ್ಬ ಕ್ಷುದ್ರ ಹೆಂಗಸಿನ ಮಹತ್ವಾಕಾಂಕ್ಷೆಯೆಂದು ತಾವು ಸರ್ವಥಾ ತಿಳಿಯಬಾರದು. ನನ್ನ ತಂದೆಯ ಮುಖಾಂತರವಾಗಿ ನನಗೆ ಇಂದು ಎಷ್ಟೋ ಮಹತ್ವದ ರಾಜಕಾರಣದ ಸಂಗತಿಗಳು ತಿಳಿದಿರುವವು. ರಾಜಕಾರಣ ಪಟುಗಳಾದ ನಿಮ್ಮ ಸೋದರಮಾವ ಮಾನಸಿಂಹ ಮಹಾರಾಜರವರೇ ನನ್ನ ತಂದೆಯ ಮುಂದೆ ಈ ಮಾತನ್ನು ಸ್ಪಷ್ಟವಾಗಿ ಆಡಿತೋರಿಸಿದರಂತೆ!

ಖುಸ್ರು—ಪ್ಯಾರೀ, ಈ ಮಾತಿಗೆ ಪ್ರಮಾಣಗಳೇನು ಹೇಳು ನೋಡವಾ!

ಪ್ಯಾರಿ—ನಾಥ, ಸುಲ್ತಾನ ಸೇಲೀಮರವರು ಅಲಹಾಬಾದದಿಂದ ಬಿಹಾರದವರೆಗೆ ಯಾವತ್ತೂ ಪ್ರದೇಶವನ್ನು ಸ್ವಾಧೀನಪಡಿಸಿಕೊಂಡು ಅಲ್ಲಿ ತಮ್ಮ ಅಧಿಕಾರವನ್ನು ಸ್ಥಾಪಿಸಿರುವರಲ್ಲದೆ, ದೊಡ್ಡ ಸೈನ್ಯದೊಡನೆ ಆಗ್ರಾ ಪಟ್ಟಣವನ್ನು ಮುತ್ತಿ ವಶಮಾಡಿಕೊಂಡು ಅದನ್ನು ಸುಲಿಯಬೇಕೆಂದು ಹೊರಟಿರುವರಂತೆ!

ಖುಸ್ರು—(ಅತ್ಯಂತ ಆಶ್ಚರ್ಯದಿಂದ) ಏನಂದಿ ಪ್ಯಾರೀ? ನೀನು ಎಂಥ ಅಸಂಭವ ಮಾತು ಹೇಳುವೆ? ನಮ್ಮ ಅಜ್ಜಂದಿರ ತರುವಾಯದಲ್ಲಿ ಹಕ್ಕಿನಿಂದ ದಿಲ್ಲಿಯ ಬಾದಶಹರಾಗುವ ನಿಶ್ಚಯವುಳ್ಳ ನನ್ನ ತಂದೆ ಸುಲ್ತಾನ ಸೇಲೀಮರು ಬಂಡುಗಾರರಾಗುವ ಸಂಭವವಾದರೂ ಇರುವದೆ? ಆದರೆ ನಿನ್ನ ತಂದೆಯು ಹೇಳುತ್ತಿರುವ ಮಾತಾದರೂ ನಾನು ಸುಳ್ಳೆಂದು ಹೇಗೆ ತಿಳಿಯಲಿ?

ಪ್ಯಾರಿ—ನಾಥ, ಈ ಮಾತನ್ನು ಸರ್ವಥಾ ಸುಳ್ಳೆನ್ನಲಿಕ್ಕೆ ಬರುವಹಾಗಿಲ್ಲ. ಹೀಗಿದ್ದದ್ದರಿಂದಲೇ ಬಾದಶಹರು ಇಂಥ ಬೇಸಿಗೆಯಲ್ಲಿ ಆಗ್ರಾ ಪಟ್ಟಣಕ್ಕೆ ಹೋಗಿರುವರು. ನಿಮ್ಮ ಮೇಲೆ ಬಾದಶಹರ ಪ್ರೀತಿಯು ವಿಶೇಷವಾಗಿ ಇದ್ದು, ನಿಮ್ಮನ್ನು ಅವರು ಒಂದು ಕ್ಷಣವಾದರೂ ಅಗಲದೆಯಿರುವದರಿಂದ, ಬಂಡುಗಾರರಾದ ಮಾವಂದಿರಿಗೆ ಪಟ್ಟಕೊಡದೆ, ನಿಮಗೆ ಪಟ್ಟ ಕೊಡುವರೆಂದು ಶ್ರೇಷ್ಠ ಮುತ್ಸದ್ದಿಗಳು ಪಡುತ್ತಿರುವ ಅಭಿಪ್ರಾಯವನ್ನೇ ನಾನು ತಮ್ಮ ಮುಂದೆ ಆಡಿತೋರಿಸಿದೆನು; ಆದರೆ ಈ ಪ್ರಸಂಗದಲ್ಲಿ ತಾವು ಸುಮ್ಮನೆ ಕೈಮುಚ್ಚಿಕೊಂಡು ದೈವವಾದಿಗಳಾಗಿ ಕುಳಿತುಕೊಳ್ಳದೆ, ಮನಃಪೂರ್ವಕವಾಗಿ ಪರಾಕ್ರಮವನ್ನು ತೋರಿಸಬೇಕು. ನಾಥ, ನನ್ನ ಮಾತನ್ನು ತಾವು ದುರ್ಲಕ್ಷಿಸಬಾರದು. ನನಗೆ ತಮ್ಮ ಹೊರತು ಎರಡನೆಯ ಆಧಾರವಿಲ್ಲದ್ದರಿಂದ, ಅವಿಚಾರದಿಂದ ನಾನು ಏನಾದರೂ ಹೇಳಿ ತಮ್ಮನ್ನು ಸಂಕಟಕ್ಕೆ ಗುರಿ ಮಾಡಲಾರೆನು. ನೀವು ಬಾದಶಹರಿಗೆ ಇಷ್ಟು ಪ್ರಿಯರಾಗಿರುವದನ್ನು ನೋಡಿ ಮಾವನವರು, ತಮ್ಮ ಸಿಂಹಾಸನದ ಪ್ರಾಪ್ತಿಗೆ ನೀವೊಬ್ಬರೇ ಬಾಧಕರಾಗಿರುವಿರೆಂದು ತಿಳಿದು, ಆ ಬಾಧೆಯನ್ನು ದೂರಮಾಡುವದಕ್ಕಾಗಿಯೇ ನಿಮ್ಮನ್ನು ಈಗ ಅಲಹಾಬಾದಕ್ಕೆ ಕರೆಸಿರುವರೆಂದು ಊಹಿಸಬೇಕಾಗುತ್ತದೆ. ಮೇಲಾಗಿ ಹಿಂದುಚಾರಿಣಿಯರ ಭವಿಷ್ಯವು ಎಂದೂ ಸುಳ್ಳಾಗುತ್ತಿರುವದಿಲ್ಲ. ನನಗೆ ಒಬ್ಬ ಚಾರಿಣಿಯು ಸತತವಾಗಿ ತಾವು ದೀರ್ಘಪ್ರಯತ್ನ ಮಾಡಿದರೆ ಮಾತ್ರ ತಮಗೆ ಸಿಂಹಾಸನ ಪ್ರಾಪ್ತಿಯಾಗುವದೆಂದು ಭವಿಷ್ಯ ಹೇಳಿರುವಳು!

ಈ ಮೇರೆಗೆ ನುಡಿದು ಪ್ಯಾರಿಬಾನು ಚಾರಿಣಿಯ ಭವಿಷ್ಯವಾದನದ ವೃತ್ತಾಂತವನ್ನೆಲ್ಲ ಉಪ್ಪುಕಾರ ಹಚ್ಚಿ ಖುಸ್ರುವಿಗೆ ಹೇಳಿದಳು! ಅಸುರೀ ಮಹತ್ವಾಕಾಂಕ್ಷೆಯ ಪ್ರಭಾವವೇ ಅಂತಹದು! ತನ್ನ ಗಂಡನು ಪಿತೃದ್ರೋಹಿಯಾಗಿಯಾದರೂ ದಿಲ್ಲಿಯ ಸಿಂಹಾಸನವೇರಬೇಕೆಂದು ಪ್ಯಾರಿಬಾನುವು ಇಚ್ಛಿಸತೊಡಗಿದ್ದಳು; ಆದರೆ ಖುಸ್ರುವು ಆಕೆಯ ಮಾತಿಗೆ ಉತ್ತರಕೊಡದೆ ದೀರ್ಘ ವಿಚಾರಕ್ಕೊಳಗಾಗಿ ಸುಮ್ಮನೆ ಕುಳಿತುಕೊಂಡನು. ಬಹಳ ಹೊತ್ತಾದರೂ ಪತಿಯು ಮಾತಾಡದಿರುವದನ್ನು ನೋಡಿ ಪ್ಯಾರಿಬಾನುವು—"ನಾಥ, ಅಂಥ ದೀರ್ಘವಿಚಾರಮಾಡುವ ದೇನದು? ತಮ್ಮ ಮನಸ್ಸಿಗೆ ಬಾರದಿದ್ದರೆ ಈ ವಿಚಾರವನ್ನು ಬಿಟ್ಟುಬಿಡಿರಿ. ತಾವು ಪಿತೃದ್ರೋಹಿ ಗಳಾಗಬೇಕೆಂದು ನಾನು ಹೇಳುವದಿಲ್ಲ, ನಿಮ್ಮ ಸಂರಕ್ಷಣ ಮಾಡಿಕೊಳ್ಳಿರೆಂದು ಹೇಳುವೆನು. ದೈವವೆಂದು ಕುಳಿತು ಕಾರಾಗೃಹವಾಸಿಗಳಾಗಿ ಗುಪ್ತ ಶತ್ರುವಿಗೆ ಕುತ್ತಿಗೆ ಕೊಡುವದಕ್ಕಿಂತ, ಪರಾಕ್ರಮದಿಂದ ಉದ್ದಿಷ್ಟ ಹೇತುವನ್ನು ಸಾಧಿಸುವದು ಯೋಗ್ಯವೆಂದು ನನಗೆ ತೋರುತ್ತದೆ. ನೋಡಿದತ್ತ ಗುಪ್ತ ಕಾರಸ್ಥಾನಗಳು ನಡೆದಿರುವವು. ಒಬ್ಬರು ಒಬ್ಬರನ್ನು ನಂಬುವಹಾಗಿಲ್ಲ. ಇಂಥ ಪ್ರಸಂಗದಲ್ಲಿ ಹೀಗೆ ನೀವು "ದೈವವು ದೈವವು" ಎಂದು ಸುಮ್ಮನೆ ಕೈಮುಚ್ಚಿಕೊಂಡು ಉದಾಸೀನರಾಗಿ ಕುಳಿತುಕೊಂಡರೆ, ಪರಿಣಾಮವು ಹೇಗಾಗಬೇಕು? ಇತ್ತಿತ್ತ ನೀವು ಬಹಳ ತೇಜೋಹೀನರಾಗಿರುವಿರಿ. ರಾತ್ರಿ ನಿಮಗೆ ಕಣ್ಣುತುಂಬ ನಿದ್ರೆಯಿಲ್ಲ, ಮೊದಲಿನ ಹಾಗೆ ನೀವು ಊಟ ಮಾಡುವದಿಲ್ಲ. ನಿಮ್ಮ ಈ ಕ್ಷೀಣ ದೇಹವನ್ನು ನೋಡಿದರೆ ನನ್ನ ಎದೆಬಿಚ್ಚಿ ಹೋಳಾಗುತ್ತದೆ. ನಾಥ, ನಿಮ್ಮ ಸ್ಥಿತಿಯು ಹೀಗೆ ಏಕಾಯಿತು?

ಹೆಂಡತಿಯ ಈ ಮಾತುಗಳನ್ನು ಕೇಳಿ ಖುಸ್ರುವು ನಿಟ್ಟುಸಿರು ಬಿಟ್ಟು ಆಕೆಯನ್ನು ಕುರಿತು—ಪ್ರೀಯೆ, ದಿಲ್ಲೀಪತಿಯ ವಂಶದಲ್ಲಿ ಜನ್ಮತಾಳುವದು ಇಷ್ಟು ದೊಡ್ಡ ಭಯಂಕರ ಪಾಪವಿರುತ್ತದೆಂಬದನ್ನು ನಾನು ಅರಿತಿದ್ದಿಲ್ಲ. ಸಿಂಹಾಸನ ಬಾಧ್ಯತೆಯುಳ್ಳವನು ಇಷ್ಟು ಭೀಷಣ ಜ್ವಾಲೆಯಲ್ಲಿ ತಳಮಳಿಸಬೇಕಾಗುವದೆಂಬದು ಈ ಮೊದಲೆ ನನಗೆ ಗೊತ್ತಾಗಿದ್ದಿಲ್ಲ. ಕ್ಷಣಕ್ಷಣಕ್ಕೆ ನನ್ನ ದೇಹವು ದಗದಗಿಸಿ ಉರಿಯುತ್ತಿರುವದು! ಆದರೆ ಇದರ ಕಾರಣವೇನೆಂಬದನ್ನು ಖುದಾನೇ ಬಲ್ಲನು! ಹೀಗೆ ಈ ರಾಜಕಾರಣದ ಗೊಂದಲದ ವಿಚಾರಮಾಡುತ್ತ ಮಾಡುತ್ತ ಕಡೆಗೆ ನನಗೆ ಹುಚ್ಚು ಎಲ್ಲಿ ಹಿಡಿಯುತ್ತದೋ ಏನೋ? ಪ್ರಿಯೇ, ನೀನು ನನ್ನವಳಿರುತ್ತೀ; ನಾನು ನಿನ್ನವ ನಿರುತ್ತೇನೆ. ನನಗೆ ಸಂತಾಪವಾಗುತ್ತಿರುವಾಗೆಲ್ಲ ನಿನ್ನ ಸುಖ ಸ್ಪರ್ಶದಿಂದ ನನಗೆ ಬಹುಮಟ್ಟಿಗೆ ಸಮಾಧಾನವಾಗುತ್ತಿತ್ತು; ಆದರೆ ಖುದಾನು ಇಂದು ನಿನ್ನ ಬುದ್ಧಿಯಲ್ಲಿಯೂ ವಿಕಾರವನ್ನುಂಟು ಮಾಡಿದಹಾಗೆ ಕಾಣುತ್ತದೆ. ನಿನ್ನ ಹೃದಯದಲ್ಲಿಯೂ ಯಾರೋ ದುಷ್ಟರು ಆ ಅಸುರೀ ಮಹತ್ವಾಕಾಂಕ್ಷೆಯ ವಿಷವನ್ನು ಸುರುವಿದ ಹಾಗೆ ಕಾಣುತ್ತದೆ; ಯಾರು ಸುರವುವದೇನು? ಆ ದುಷ್ಟ ಹಿಂದೂ ತಾಪಸಿಯೇ ನಿನ್ನ ಹೊಟ್ಟೆಯಲ್ಲಿ ಆ ವಿಷವನ್ನು ಸುರುವಿರುವಳು. ನಿನ್ನ ತಂದೆಯ ಉತ್ತೇಜನದಿಂದ ನಿನ್ನಲ್ಲಿಯ ಆ ವಿಷಯ ತೀವ್ರತೆಯು ಮತ್ತಿಷ್ಟು ಹೆಚ್ಚಾಗಿರುವದು. ನಿನ್ನ ಸುಖದ ಜೀವನದಲ್ಲಿ ಅವರಿಬ್ಬರೂ ವಿಷವನ್ನು ಕಲಿಸಿರುವರು. ಪ್ರಿಯೇ, ನೀನು ಗುಪ್ತರೀತಿ ಯಿಂದ ಆ ವಿಷಪಾನಮಾಡಿ ಅದನ್ನು ನನಗೂ ಕುಡಿಸಿ ತಳಮಳವನ್ನುಂಟುಮಾಡತೊಡಗಿರುತ್ತೀ.

ಹಾಯ್! ಪ್ಯಾರೀ, ಇಷ್ಟೇಕೆ ನೀನು ನಿಷ್ಠುರಳಾದೆ? ನಿನ್ನ ಮೊದಲಿನ ಸೌಜನ್ಯವು ಎಲ್ಲಿ ಹೋಯಿತು? ವಿನಯವು ಎಲ್ಲಿ ಮರೆಯಾಯಿತು? ಈಗ ನೀನು ನನ್ನ ಇಚ್ಛೆಯಿಲ್ಲದಿದ್ದರೂ ಒತ್ತಾಯದಿಂದ ಅಸುರೀ ಮಹತ್ವಾಕಾಂಕ್ಷೆಯ ವಿಷವನ್ನು ಕುಡಿಸತೊಡಗಿರುವೆಯಲ್ಲ! ನೀನು ಮೊದಲಿನ ನನ್ನ ಪ್ರಿಯ ಪ್ಯಾರಿಬಾನುವೇ ಇರುವೆಯೋ? ನಿನ್ನ ಉಪದೇಶವನ್ನು ಕೇಳಿದ ಕ್ಷಣದಲ್ಲಿ ನನ್ನ ಮನಸ್ಸಿನೊಳಗೆ—''ಪ್ರಯತ್ನದಿಂದ ಏನಾಗಲಿಕ್ಕಿಲ್ಲ? ಕರ್ಮಶಕ್ತಿಯ ಬಲದಿಂದ ಶತ್ರು–ಮಿತ್ರರೆಲ್ಲರನ್ನು ತನಗೆ ಅಂಕಿತರನ್ನಾಗಿ ಮಾಡಿಕೊಳ್ಳಲಿಕ್ಕೆ ಬರಲಿಕ್ಕಿಲ್ಲವೇ? ಇಂದು ಕಂಟಕ ಮಯವಾಗಿ ತೋರುತ್ತಿರುವ ಹಾದಿಯ ಪ್ರಯತ್ನದಿಂದ ನಾಳೆ ನಿಷ್ಕಂಟಕವು ಯಾಕೆ ಆಗಲಿಕ್ಕಿಲ್ಲ?'' ಎಂಬ ವಿಚಾರಗಳು ಉತ್ಪನ್ನವಾಗಿ ''ಇನ್ನು ಏನು ಮಾಡಲಿ, ಹೇಗೆ ಮಾಡಲಿ'' ಎಂಬ ವಿಚಾರದಿಂದ ಚಿತ್ತವು ತಳಮಳಿಸತೊಡಗಿತು! ಪ್ರೀಯೆ, ನನಗೆ ಈಗ ಸಿಂಹಾಸನವು ದೊರೆಯಬೇಕಾದರೆ ಮೊಟ್ಟಮೊದಲು, ನಾನು ನನ್ನ ತಂದೆಯ ವಿರುದ್ಧವಾಗಿ ನಡೆದು, ಅದರಿಂದ ತಾಯಿಯ ಮನಸಿಗೂ ದುಃಖವನ್ನುಂಟುಮಾಡಬೇಕಾಗುವದು. ಮೇಲಾಗಿ ಅಜ್ಜ ಅಕಬರ ಬಾದಶಹರವರ ಮನಸ್ಸಿನಲ್ಲಿ ಯಾರಿಗೆ ಪಟ್ಟವನ್ನು ಕೊಡಬೇಕೆಂಬದು ಯಾರಿಗೂ ಸ್ಪಷ್ಟವಾಗಿ ಗೊತ್ತಾಗಿರುವದಿಲ್ಲ, ಪ್ರಿಯೇ, ನನ್ನ ತಂದೆ ಸುಲ್ತಾನ ಸೇಲೀಮರವರು ಬಾದಶಹರಿಗೆ ಒಬ್ಬರೇ ಒಬ್ಬ ಮಗನಾಗಿ ಉಳಿದಿರುವದಿಲ್ಲವೆ? ಇಂಥವರ ಮೇಲೆ ಪುತ್ರ ವತ್ಸಲರಾದ ಮುಪ್ಪಿನ ಬಾದಶಹರು, ಮುನಿದು ನಿಷ್ಠುರರಾಗಿ ಅವರಿಗೆ ಪಟ್ಟಕೊಡದೆ ನನಗೆ ಪಟ್ಟ ಕೊಟ್ಟಾರೆಂದು ನನಗಂತು ತೋರುವದಿಲ್ಲ; ಅಂದಬಳಿಕ ನಾನು ದೀರ್ಘ ಪ್ರಯತ್ನಮಾಡಿ ನಿನ್ನ ತಂದೆಯ ಹಾಗು ನನ್ನ ಮಾವನ ಸಹಾಯದಿಂದ ದಿಲ್ಲಿಯ ಪಟ್ಟವನ್ನು ಸಂಪಾದಿಸಿದರೆ ಅಜ್ಜನದ್ರೋಹವನ್ನೂ ಕಟ್ಟಿಕೊಂಡಂತಾಗುವದಿಲ್ಲವೆ? ಇಂಥ ದ್ರೋಹಿಯಾದ ನನಗೆ ಬಾದಶಾಹಿಯ ಉಪಭೋಗವು ದಕ್ಕಬಹುದೆ? ದಕ್ಕಿದರೂ ಅದು ಸುಖಕರವಾಗಬಹುದೇ? ಪ್ರಿಯೇ, ಇಂಥ ಭಯಂಕರ ವಿಚಾರದ ಬಲೆಯಲ್ಲಿ ನನ್ನನ್ನು ಸಿಲುಕಿಸಿ ತ್ರಾಸಗೊಳಿಸುವಷ್ಟು ನಿಷ್ಠುರಳು ನೀನು ಹೇಗೆ ಆದೆ?

ಈ ಮೇರೆಗೆ ನುಡಿಯುತ್ತಿರುವ ಕೋಮಲ ಹೃದಯದ ಖುಸ್ರುವಿನ ಹೃದಯವು ಕರಗಿ ಆತನ ಕಣ್ಣೀರುಗಳು ಧಾರೆಯಿಟ್ಟು ಸುರಿಯಹತ್ತಿ, ಅವು ಪ್ಯಾರಿಬಾನುವಿನ ಗಲ್ಲಗಳ ಮೇಲೆ ಬೀಳಹತ್ತಿದವು. ಪತಿಯ ಈ ದುಃಖವನ್ನು ನೋಡಿ ಸಾಧ್ವೀ ಪ್ಯಾರಿಬಾನುವಿನ ಹೃದಯವೂ ಕರಗಿ, ಆಕೆಯ ಕಣ್ಣೀರುಗಳೂ ಸೋರಹತ್ತಲು, ಆ ನೀರಿನ ಪ್ರವಾಹದಲ್ಲಿ ಆಕೆಯ ಅಸುರೀ ಮಹತ್ವಾಕಾಂಕ್ಷೆಯೂ, ಭವಿಷ್ಯತ್ಕಾಲದ ಸುಖದ ಕಲ್ಪನೆಯೂ ತೇಲಿಹೋದವು. ಆಕೆಯು ತನ್ನ ಪ್ರಿಯಕರನ ಕಣ್ಣು ಒರಿಸುತ್ತ ಆತನನ್ನು ಆಲಿಂಗಿಸಿ—''ನಾಥ! ನಮಗೆ ಸಿಂಹಾಸನವೂ ಬೇಡ, ಐಶ್ವರ್ಯವೂ ಬೇಡ; ಅದರಂತೆ ರಾಜಸಂಸಾರದೊಳಗಿನ ದೊಡ್ಡ ದೊಡ್ಡವರ ವಿಲಾಸದ ಭೋಗಗಳಂತು ನಮ್ಮ ನೆರಳಿಗೇ ಬೇಡ? ತಮ್ಮ ಮುಂದೆ ನನಗೆ ಬಾದಶಾಹೀ ಸಿಂಹಾಸನವೂ, ಹಿಂದುಸ್ಥಾನದ ಅಧಿಪತ್ಯವೂ ತುಚ್ಛವಾಗಿರುವವು. ನಿಮಗೆ ದುಃಖವಾಗುವಂಥ ಯಾವ ಕೆಲಸವೂ ಇನ್ನು ನನ್ನ ಕೈಯಿಂದೆ ಆಗಲಿಕ್ಕಿಲ್ಲ. ನಡೆಯಿರಿ, ಈ ಫತ್ತೇಪುರವೂ, ಅರಮನೆಯನ್ನೂ ಬಿಟ್ಟು ಎಲ್ಲಿಗಾದರೂ ಅರಣ್ಯಕ್ಕೆ ಹೋಗಿ ಹುಲ್ಲುಗುಡಿಸಿಲಿನಲ್ಲಿದ್ದು ಶಾಂತಿಸುಖವನ್ನು ಅನುಭೋಗಿಸುವಾ.

ಆಗ್ರಾಪಟ್ಟಣಕ್ಕೆ ಇರುವ ನಮ್ಮ ಸಂಬಂಧವನ್ನೆಲ್ಲ ಬಿಟ್ಟುಬಿಡೋಣ. ಕನಕ–ಕಾಮಿನಿಯರಿಗೆ ಇಷ್ಟು ಮಹತ್ವವಿರುವ, ಹಾಗು ಸ್ನೇಹ–ಪ್ರೇಮ–ಭಕ್ತಿಗಳಿಗೆ ಯೋಗ್ಯ ಪ್ರತಿಫಲ ದೊರೆಯ ದಿರುವ, ಅದರಂತೆ ವಿಶ್ವಾಸಕ್ಕೆ ಪಾತ್ರರಾದ ಮಿತ್ರರೇ ಇಲ್ಲದಿರುವ, ಮತ್ತು ತನ್ನವರಾರು ಅನ್ಯರಾರು ಎಂಬದನ್ನು ತಿಳಿಯುವದೇ ಕಠಿಣವಾಗಿರುವ, ಹಾಗೆಯೇ ಹಿಂಸೆ, ದ್ವೇಷ, ಸಂಶಯ, ಅವಿಶ್ವಾಸಗಳು ಕಾರಣವಿಲ್ಲದೆ ಬಾಧಿಸುತ್ತಿರುವ ಈ ಸ್ಥಳದಲ್ಲಿ ಅಥವಾ ರಾಜಸಂಸಾರದಲ್ಲಿ ನಾಥ, ಇನ್ನು ನಾವು ಯಾಕೆ ಇರಬೇಕು? ನಾವು ಇಂಥ ಈ ವಿಷಮಯ ಜಗತ್ತನ್ನು ಬಿಟ್ಟು ಎಲ್ಲಿಗಾದರೂ ದೂರ ದೂರ ಹೋಗಿ ಇದ್ದುಬಿಡೋಣ! ಹೃದಯವನ್ನು ಸಾಮರ್ಥ್ಯ ಸಂಪನ್ನವಾಗ ಮಾಡಿ, ಶಾಂತಿಯನ್ನುಂಟುಮಾಡುವ ನಿರ್ಜನ ಪ್ರದೇಶವನ್ನೇ ನಾವು ಇನ್ನು ಸೇರೋಣ. ಹುಲ್ಲ ಗುಡಿಸಿಲಿನಲ್ಲಿರುವದು ನಮಗೆ ಬಹಳ ಆನಂದದಾಯಕವಾದೀತು. ಅಲ್ಲಿ ದಾಸ–ದಾಸಿಯರಾರೂ ಬೇಡ. ಫಕ್ತ ನಾನು ನೀವು; ನಿಜವಾಗಿಯೇ ನಾವು ಇಬ್ಬರೇ ಇದ್ದ, ಸುಖಮಯ ವಾದ ಜಗತ್ತನ್ನು ಮಾಡಿಬಿಡೋಣ! ಪ್ರಿಯಕರಾ, ನಾವು ಈಗ ತಾಪಕ್ಕೆ ಗುರಿಯಾಗಿರುವದರಿಂದ ನಮಗೆ ಜಗತ್ತೇ ತಾಪದಾಯಕವಾಗಿ ತೋರುತ್ತದೆ. ಅದೇ ನಾವು ಸುಖಸಂಪನ್ನರಾದರೆ ಜಗತ್ತೇ ನಮಗೆ ಸುಖಮಯವಾಗಿ ತೋರುವದು. ನಿಜವಾಗಿಯೇ ದುಃಖರೂಪವಾದ ಅರಸೊತ್ತಿಗೆ, ಸಿರವಂತಿಕೆ, ಅಧಿಕಾರ ಸಂಪನ್ನತೆ, ಕೀರ್ತಿಶಾಲಿತ್ವ ಮುಂತಾದವುಗಳನ್ನು ಕಲ್ಪನೆಯಿಂದ ಸುಖರೂಪಗಳೆಂದು ಭಾವಿಸಿ, ಏನೇನೋ ಯೋಚಿಸುತ್ತ, ಏನೇನೋ ಮಾಡುತ್ತ ಧರ್ಮಾ ಧರ್ಮಗಳ ವಿಚಾರವಿಲ್ಲದೆ ಪೇಚಾಡುತ್ತಿರುವದರಿಂದ ನಮ್ಮ ಬಾಳು ದುಃಖಮಯವಾಗಿರುವದು; ಆದರೆ ಪ್ರಿಯಾ, ಅರಣ್ಯದಲ್ಲಿ ಈ ಪೇಚಾಟಕ್ಕೆ ಆಸ್ಪದವೇ ಇಲ್ಲ ನೋಡಿರಿ. ಅಲ್ಲಿ ಪ್ರೇಮ–ಆನಂದಗಳ ಹೊರತು ಎರಡನೆಯದರ ಅಸ್ತಿತ್ವಕ್ಕೆ ಅನುಕೂಲತೆಯೇ ಇರುವದಿಲ್ಲ. ಅಲ್ಲಿ ಮತ್ಸರ–ದ್ವೇಷಗಳಿಗೆ ಅಷ್ಟು ಆಸ್ಪದವಿಲ್ಲವು; ಹೃದಯವನ್ನು ಕೊರೆಯುವ ಸ್ವಾರ್ಥದ ಸಂಗ್ರಾಮಕ್ಕೆ ಅಲ್ಲಿ ಪ್ರಬಲ ಕಾರಣಗಳಿಲ್ಲವು. ಇನ್ನು ಅಲ್ಲಿ ಇದ್ದರೆ, ಖುದಾನು ನಿರ್ಮಿಸಿರುವ ಅಕೃತ್ರಿಮ ಸೃಷ್ಟಿ ಸೌಂದರ್ಯ ವೊಂದು ಇರುವದು. ಆದ್ದರಿಂದ ಪ್ರಿಯಕರಾ, ನಡೆಯಿರಿ, ನಾವು ಅಲ್ಲಿಗೇ ಹೋಗೋಣ? ನಿಮಗೆ ತಾಪವಾಗುವ ಕೆಲಸಕ್ಕೆ ಕೈಹಾಕಿ ನಾನು ಕಟ್ಟಿಕೊಳ್ಳುವದಾದರೂ ಏನು?

ಪ್ಯಾರಿಬಾನುವು ಒಬ್ಬ ತತ್ವಜ್ಞಳಂತೆ ಮನಃಪೂರ್ವಕ ಹೀಗೆ ಮಧುರ ಭಾಷಣ ಮಾಡಿದ್ದನ್ನು ಕೇಳಿ, ಖುಸ್ರುವಿನ ಹೃದಯವು ಬಹುಮಟ್ಟಿಗೆ ಶಾಂತವಾಯಿತು. ಆತನು ನಕ್ಕು ಮನ್ಸಸಿನಲ್ಲಿ— ''ನಿಜವಾಗಿಯೇ ಈ ಮಾಯಾವಿನೀ ಪ್ಯಾರಿಯು ಕ್ಷಣದಲ್ಲಿ ಹೊಸ ಸ್ವರ್ಗವನ್ನು ಉಂಟುಮಾಡ ಬಹುದು. ಈಕೆಯ ಮಾತು ಅತ್ಯಂತ ಹಿತಕರವಾಗಿರುವದು. ನನಗೆ ಸಿಂಹಾಸನವೂ ಬೇಡ; ಆ ಪಿತೃದ್ರೋಹದ ಕೆಲಸದಲ್ಲಿ ನಾನು ಪರಾಕ್ರಮ ತೋರಿಸಿ ನರಕಕ್ಕೆ ಹೋಗುವದೂ ಬೇಡ; ನನ್ನ ಪೂಜ್ಯ ತಾಯಿಯು ಮಾಡಿದ ಉಪದೇಶಕ್ಕೆ ವಿರುದ್ಧವಾಗಿ ನಡೆದು ಮಾತೃದ್ರೋಹಿಯಾಗುವದೂ ಬೇಡ; ನಾನು ಪ್ಯಾರಿಬಾನುವು ಹೇಳಿದಂತೆ ಆಕೆಯೊಡನೆ ಅರಣ್ಯವಾಸಮಾಡಿಯಾದರೂ ಸರಿಯೆ; ಅಥವಾ ಈಗ ಈದ್ದ ಹಾಗೆಯೇ ತಳಮಳಿಸುತ್ತ ಇದ್ದು, ಕಾಲಗತಿಯಿಂದ ನಿರ್ಜನವಾದ

ಕಬರಸ್ಥಾನದಲ್ಲಿ ಹೋಗಿ ನಾನು ಶಾಂತರೀತಿಯಿಂದ ಶಯನಮಾಡಿದರೂ ಸರಿಯೇ; ಆದರೆ ಇದೇ ಪ್ಯಾರಿಬಾನುವೇ ಮೊದಲು ಮಾಡಿದ ಉಪದೇಶದಂತೆ ಕಲಂಕಕಾರಕ ಕೃತಿಯನ್ನು ಮಾಡಿ ಕಡೆಗೆ ಅಪಮೃತ್ಯುವಿಗೆ ಗುರಿಯಾಗುವದು ಮಾತ್ರ ಯೋಗ್ಯವಲ್ಲವು, ಎಂದು ಆಲೋಚಿಸ ತೊಡಗಿದನು. ಪತಿಯ ಈ ವಿಚಾರತನ್ಮಯತೆಯನ್ನು ನೋಡಿ ಪ್ಯಾರಿಯು ತನ್ನ ವೇಣಾವಿನಿಂದಿತ ಸ್ವರದಿಂದ—''ನಾಥ, ರಾತ್ರಿಯು ಬಹಳವಾಯಿತು, ಮಂದಿರಕ್ಕೆ ಬರುವದಿಲ್ಲವೇ?'' ಎಂದು ಕೇಳಲು, ಖುಸ್ರುವು ಸ್ವಪ್ನಮಯ ಸೃಷ್ಟಿಯಿಂದ ಎಚ್ಚತ್ತವನಂತೆ ನನ್ನ ಪ್ರಿಯಳನ್ನು ನೋಡಿ, ಆಕೆಯ ಮಂಜುಲ ಸ್ವರದಿಂದ ಹೃದಯದ ವೇದನಗಳನ್ನು ಮರೆತು ಆಕೆಯನ್ನು ಆಲಿಂಗಿಸಿ— ''ನಡೆ ಪ್ಯಾರೀ, ಮಂದಿರಕ್ಕೆ ಹೋಗುವಾ ನಡೆ; ಆದರೆ ಮಂದಿರಕ್ಕೆ ಹೋದಬಳಿಕ ಮೊದಲಿನ ಶಾಂತಿಯ ಲಾಭವು ನನಗೆ ಆಗಬಹುದೆ?'' ಎಂದು ಕೇಳಲು, ಪ್ಯಾರಿಯು ಏನೂ ಉತ್ತರ ಕೊಡದೆ ಖಿನ್ನಳಾಗಿ ಪತಿಯೊಡನೆ ಮಂದಿರದ ಕಡೆಗೆ ಸಾಗಿದಳು. ಅಹಹ! ದುರಾಶೆಯ ದುಷ್ಪರಿಣಾಮವು ಎಂತಹದಿದು! ಅವರು ಇನ್ನು ಮಂದಿರದ ದ್ವಾರವನ್ನು ಪ್ರವೇಶಿಸತಕ್ಕವರು, ಅಷ್ಟರಲ್ಲಿ ಒಬ್ಬ ತಾರ್ತರ ರಮಣಿಯು ಸಣ್ಣದೊಂದು ಚೀಟಿಯನ್ನು ಖುಸ್ರುವಿನ ಕೈಯಲ್ಲಿ ಕೊಟ್ಟಳು.

ಉಜ್ವಲ ಮಾತಾ–ಪಿತೃ ಭಕ್ತಿ

ಈ ಮೇರೆಗೆ ನೀಚ ಸ್ವಾರ್ಥಾಭಿಲಾಷೆಯಿಂದ ಪಿತೃದ್ರೋಹಿಯಾಗಲು ಹೇಸುತ್ತಿದ್ದ ಖುಸ್ರುವು ಆ ಸಣ್ಣ ಚೀಟಿಯನ್ನು ಉಚ್ಚಿ ಓದಲು, ಅದರಲ್ಲಿ ಮಾನಸಿಂಹನು ಆತನನ್ನು ಕುರಿತು—''ಪ್ರಿಯ ಖುಸ್ರೂ, ನೀನು ಗುಪ್ತ ರೀತಿಯಿಂದ ಏಕಾಂತದಲ್ಲಿ ನನ್ನನ್ನು ಅಗತ್ಯವಾಗಿ ಕಾಣಬೇಕೆಂ''ದು ಅತ್ಯಾಗ್ರಹದಿಂದ ಬರೆದಿದ್ದನು; ಆದರೆ ಕಾರಣವನ್ನು ಮಾತ್ರ ಬರೆದಿದ್ದಿಲ್ಲ. ಆಗ ಖುಸ್ರುವು ಮನಸ್ಸಿನಲ್ಲಿ—''ರಾಜಾ ಮಾನಸಿಂಹನನ್ನು ಕಾಣುವದರಲ್ಲಿ ನನ್ನ ಹೃದಯಕ್ಕೆ ಮತ್ತೆ ಎಂತಹ ವೇದನೆಯಾಗುತ್ತದೋ ಯಾರಿಗೆ ಗೊತ್ತು!! ಖುದಾ! ಖುದಾ! ನನ್ನ ಈ ಸ್ವಾರ್ಥಪರ ಹಿತಕರ್ತೃಗಳಾದ ಆಪ್ತರ ತೀವ್ರ ಪ್ರಭಾವದಿಂದ ನನ್ನನ್ನು ಮುಕ್ತನಾಗಮಾಡು. ಹಾಗಾದರೆ ಮಾತ್ರ ನಾನು ಅತ್ಯಂತವಾದ ಶಾಂತಿಯ ಉಪಭೋಗಕ್ಕೆ ಪಾತ್ರನಾದೇನು. ಮಾನಸಿಂಹನು ಈವರೆಗೆ ನನ್ನ ಮುಂದೆ ಆಡಿತೋರಿಸದಿದ್ದರೂ, ನಾನು ಪಿತೃದ್ರೋಹಿಯಾಗಿ ತಂದೆಯ ಸಿಂಹಾಸನವನ್ನು ಆಕ್ರಮಿಸಬೇಕೆಂದು ಆತನು ಮನಃಪೂರ್ವಕವಾಗಿ ಇಚ್ಛಿಸುತ್ತಿರುವದು. ನನಗೆ ಗೊತ್ತಾಗಿರುವದು; ಆದರೆ ತಾಯಿಯ ಉಪದೇಶದಿಂದ ನನ್ನ ಮನಸ್ಸು ತಿರುಗಿ ಹೋಗಿರುವದರಿಂದ, ನಾನು ಇಂಥ ಪಾಪಕೃತ್ಯಕ್ಕೆ ಕೈಹಾಕುವಹಾಗಿಲ್ಲ; ಹಾಗೆ ಕೈಹಾಕದಿದ್ದರೆ ಮಾನಸಿಂಹನಿಗೆ ಸಮಾಧಾನವಾಗುವ ಹಾಗಿಲ್ಲ; ಆಂದಬಳಿಕ ಈ ಪ್ರಸಂಗದಲ್ಲಿ ನಾನು ಹೇಗೆ ನಡೆಯಬೇಕು? ಏನೇ ಆಗಲಿ, ಏಕಾಂತದಲ್ಲಿ ಮಾನಸಿಂಹನನ್ನು ಕಂಡು ಆತನು ವಿಚಾರ

ವನ್ನಾದರೂ ಕೇಳಿಕೊಳ್ಳೋಣ, ಎಂದು ಆಲೋಚಿಸಿ ಮಾವನನ್ನು ಕಾಣುವದಕ್ಕಾಗಿ ಹೊರಟನು. ನಿಜವಾಗಿ ಖುಸ್ರುವು ಕೈಲಾಗದವ ನಿದ್ದಿಲ್ಲ; ಆತನ ತೋಳುಗಳಲ್ಲಿ ಸಾಮರ್ಥ್ಯವಿತ್ತು; ಆತನ ವಶದಲ್ಲಿ ದೊಡ್ಡ ಸೈನ್ಯವಿತ್ತು; ಇದಲ್ಲದೆ ಸೈನ್ಯವನ್ನು ಸಾಗಿಸುವ ಚಾತುರ್ಯವನ್ನೂ ಆತನು ಮರೆತಿದ್ದಿಲ್ಲ; ಆದರೆ ಆತನ ಹೃದಯದಲ್ಲಿ ತಾತ್ಕಾಲಿಕ ಉತ್ತೇಜನಕ್ಕೆ ಬಲಿಯಾಗಿ ಯಾವದೊಂದು ಆಸುರೀ ಮಹತ್ವಾಕಾಂಕ್ಷೆಯ ಬೆನ್ನು ಹತ್ತುವ ಸಾಹಸ ಗುಣವೊಂದು ಇದ್ದಿಲ್ಲ. ಮತ್ತು ತಾಯಿಯ ಉಪದೇಶದಿಂದ ಆತನು ತಂದೆಯ ವಿರುದ್ಧವಾಗಿ ಶಸ್ತ್ರವನ್ನೂ ಎತ್ತುವಹಾಗಿದ್ದಿಲ್ಲ. ಇಲ್ಲದಿದ್ದರೆ ಜಂಗೀಜಖಾನನ ವಂಶಜರಾದ ಮೊಗಲರು ರಾಜ್ಯಪ್ರಾಪ್ತಿಗಾಗಿ ಬೇಕಾದ ಪಾಪಕೃತ್ಯ ಮಾಡಲಿಕ್ಕೆ ಹಿಂಜರಿಯುವವರಲ್ಲವೆಂಬದಕ್ಕೆ ಅಕಬರನ ಸಂತತಿಯವರ ಕೃತಿಯೇ ಸಾಕ್ಷಿಯಾಗಿರುವದು. ರಜಪೂತ ರಾಜವಂಶಜಳಾದ ಆರ್ಯಸ್ತ್ರೀ—ಜೋಧಬಾಯಿಯ ಸದುಪದೇಶದಿಂದ ಲಾಭವಾಗದಿದ್ದರೆ, ಖುಸ್ರುವು ಸಿಂಹಾಸನ ಪ್ರಾಪ್ತಿಗಾಗಿ ಎಂಥ ನೀಚ ಕೆಲಸ ಮಾಡಲಿಕ್ಕೂ ಹಿಂದೆ ಮುಂದೆ ನೋಡುವ ಹಾಗಿದ್ದಿಲ್ಲ; ಅಂತೇ ಆತನು ಹಿಂದಕ್ಕೆ ದುರ್ಜಯಸಿಂಹನಿಂದ ತನ್ನ ತಂದೆಯ ಖೂನು ಮಾಡಲು ವಚನ ತಕ್ಕೊಂಡಿದ್ದನು; ಆದರೆ ಮುಂದೆ ತಾಯಿಯ ಉಪದೇಶದಿಂದ ಅದು ಮನಸ್ಸಿಗೆ ಬಾರದಂತಾಗಲು, ಸೋದರಮಾವನ ಖೂನು ಮಾಡಲು ಅದೇ ದುರ್ಜಯಸಿಂಹನಿಗೆ ಆತನು ಹೇಳಿದನು. ಇಂಥ ಚಂಚಲಸ್ವಭಾವದ ಅನನುಭವಿಕ ತರುಣರು ತಮ್ಮ ಸ್ವಚ್ಛಂದ ವೃತ್ತಿಯಿಂದ ಯಾವ ಕಾಲಕ್ಕೆ ಎಂಥ ಕೆಲಸ ಮಾಡಿಯಾರೆಂಬದನ್ನು ಹೇಳಲಾಗುವದಿಲ್ಲ.

ಒಂದು ದಿನ ಖುಸ್ರುವು ಮಾವನನ್ನು ಕಾಣುವದಕ್ಕಾಗಿ ಸಿಕರಿಯೊಳಗಿನ ಏಕಾಂತ ಗೃಹಕ್ಕೆ ಹೋಗಲು, ಮಾನಸಿಂಹನು ನಗನಗುತ್ತ ಮುಂದಕ್ಕೆ ಬಂದು ಒಳ್ಳೇ ಪ್ರೇಮದಿಂದ ಆತನನ್ನು ಆಲಿಂಗಿಸಿದನು. ಕುಶಲ ಪ್ರಶ್ನೆಗಳಾದ ಮೇಲೆ ಆತನು ಖುಸ್ರುವನ್ನು ಕುರಿತು—

ಮಾನಸಿಂಹ—ನಿಮ್ಮ ಅಜ್ಜಂದಿರು ಇಷ್ಟು ಅವಸರದಿಂದ ಫತ್ತೇಪುರ ಸಿಕ್ರಿಯನ್ನು ಬಿಟ್ಟು ಆಗ್ರಾಕ್ಕೆ ಹೋಗಲಿಕ್ಕೆ ಏನು ಕಾರಣ ಖುಸ್ರೂ!

ಖುಸ್ರು—ಯಾಕೆ ಹೋದರೆಂಬದು ನನಗೆ ಗೊತ್ತಿಲ್ಲ; ಅವಸರದಿಂದ ಹೋಗುತ್ತಿರುವಾಗ ನನಗೆ ಕೇಳಲಿಕ್ಕೆ ಅವಕಾಶವೂ ದೊರೆಯಲಿಲ್ಲ. ಅವರು ಹೋಗುವಾಗ ನನಗೆ—"ಖುಸ್ರೂ, ಈ ಫತ್ತೇಪುರದ ಪ್ರಾಸಾದದಲ್ಲಿ ಆಗ್ರಾದ ರಾಜಭಾಂಡಾರದ ಬಂಗಾರದ ಕೀಲಿಯ ಕೈಯು ಇರುತ್ತಿದ್ದು, ಅದನ್ನು ರಕ್ಷಿಸುವ ಜವಾಬುದಾರಿಯನ್ನು ನಾನು ನಿನಗೆ ಒಪ್ಪಿಸಿರುತ್ತೇನೆ; ಆದ್ದರಿಂದ ಪ್ರಾಣಕ್ಕಿಂತಲೂ ಹೆಚ್ಚೆಂದು ತಿಳಿದು ಅದನ್ನು ರಕ್ಷಿಸು. ನನ್ನಿಂದ ಎರಡನೆಯ ಅಪ್ಪಣೆ ಯಾಗುವವರೆಗೆ ನೀನು ಯಾವ ಕಾರಣದಿಂದಲೂ ಅರಮನೆಯನ್ನು ಬಿಟ್ಟು ಹೋಗಬೇಡ" ಎಂದು ಹೇಳಿದರು.

ಮಾನಸಿಂಹ—(ಒಳ್ಳೇ ಪ್ರೇಮದಿಂದ ಖುಸ್ರುವಿನ ಬೆನ್ನಮೇಲೆ ಕೈಯಾಡಿಸುತ್ತ) ತಮ್ಮಾ ಬಾದಶಹರು ಒಮ್ಮಿಂದೊಮ್ಮೆಲೆ ಹೋದಕಾರಣವನ್ನು ನೀನು ಅರಿಯದಿದ್ದರೂ ನಾನು ಅರಿತಿರುವೆನು. ಸುಲ್ತಾನ ಸೇಲೀಮನು ಸೈನ್ಯವನ್ನು ಕೂಡಿಸಿ ಆಗ್ರಾಪಟ್ಟಣವನ್ನು ತಕ್ಕೊಳ್ಳುವದಕ್ಕಾಗಿ ಭರದಿಂದ ಸಾಗಿ ಬರುತ್ತಿರುವನೆಂಬದು, ಆತನ ಮಗನಾದ ನಿನಗೆ

ಕದಾಚಿತ್‌ಗೊತ್ತಾಗಿರಲಿಕ್ಕಿಲ್ಲ; ಆದರೆ ಆ ಮಾತು ಅರ್ಧ ಹಿಂದುಸ್ಥಾನಕ್ಕೇ ಗೊತ್ತಾಗಿರುವದು. ಅಲಹಾಬಾದದ ಭಾಂಡಾರವನ್ನು ಆತನು ಸ್ವಾಧೀನಪಡಿಸಿಕೊಂಡನು. ಯಾವತ್ತು ಬಿಹಾರ ಪ್ರಾಂತದಲ್ಲಿಯೂ, ಅಯೋಧ್ಯಾ ಪ್ರಾಂತದಲ್ಲಿಯೂ ತನ್ನ ಹೆಸರಿನಿಂದ ರಾಜ್ಯಕಾರಭಾರವನ್ನು ಆರಂಭಿಸಿರುವನು. ಇನ್ನು ಮೇಲೆ ಆತನು ಆಗ್ರಾ ಪಟ್ಟಣವನ್ನು ಮುತ್ತಿ ರಾಜಭಾಂಡಾರವನ್ನು ಸ್ವಾಧೀನಪಡಿಸಿಕೊಂಡು ಕುಳಿತರೆ, ಮಹಾ ಪ್ರಳಯವು ಉಂಟಾಗಿ, ಆ ಪ್ರಳಯದ ತೀವ್ರ ಪ್ರವಾಹದಲ್ಲಿ ನೀನು ಎತ್ತ ತೇಲಿ ಹೋಗುವೆಯೋ ಎಂಬದು ಗೊತ್ತೇ ಆಗಲಿಕ್ಕಿಲ್ಲ. ನಿನ್ನ ತಂದೆಯ ತರುವಾಯ ನೀನು ಪಟ್ಟಕ್ಕೆ ಹಕ್ಕುದಾರನೆಂಬುದು ನಿಜವಿದ್ದರೂ, ನಿನ್ನನ್ನು ಕಂಡರೆ ಸೇರದೆಯಿದ್ದ ನಿನ್ನ ತಂದೆಯು ನಿನಗೇ ಪಟ್ಟ ಕೊಡುವನೆಂಬದು ಹೇಗೆ ಹೇಳಬೇಕು? ನಿನ್ನ ಹಾಗೆ ''ಖುರಂ'' ರಾಜಪುತ್ರನೂ ಪಟ್ಟಕ್ಕೆ ಬಾಧ್ಯಸ್ಥನೇ ಇರುವನು. ಆತನ ಮೇಲಿನ ಪ್ರೇಮದಿಂದ ಪಟ್ಟಾಭಿಷಕ್ತನಾದ ಸೇಲೀಮನು ನಿನ್ನನ್ನು ಸೆರೆಯಲ್ಲಿಡಿಸಿದರೆ, ಅಥವಾ ವಿಷಪಾನ ಮಾಡಿಸಿ ಕೊಲ್ಲಿಸಿದರೆ, ಅಥವಾ ಗುಪ್ತ ರೀತಿಯಿಂದ ನಿನ್ನ ಕೊಲೆ ಮಾಡಿಸಿದರೆ ಏನು ಮಾಡುವೆ? ಅದರಂತೆ ಆ ಮಹಾ ಪ್ರಲಯದಲ್ಲಿ ನಿನ್ನ ಹಾಗು ನಿನ್ನ ಮಾವ ಅಜಿಮುಖಾನರ ಸ್ಥಿತಿಯು ಎಷ್ಟು ಶೋಚನೀಯವಾಗ ಬಹುದೆಂಬದನ್ನು ನೆನಿಸಿದರೆ, ಮೈಮೇಲಿನ ಕೂದಲುಗಳು ನೆಟ್ಟಗಾಗುವವು.

ಖುಸ್ರು—(ಮಂದಸ್ವರದಿಂದ) ಹೀಗಾಗುವ ಸಂಭವವಾದರೂ ಇರುವದೆಯೇ? ಪ್ರಬಲ ಪರಾಕ್ರಮಿಯಾದ ಅಕಬರ ಬಾದಶಹನು ಇನ್ನೂ ಜೀವದಿಂದಿರುವನು ಮಹಾರಾಜ! ಈ ಮಾತು ಶಕ್ಯವು ಹೇಗಾದೀತು?

ಮಾನಸಿಂಹ—(ಶಾಂತಸ್ವರದಿಂದ) ನಿನ್ನ ಮಾತು ನಿಜವು ಖೂಸ್ರೂ! ಆದರೆ ಸದ್ಯಕ್ಕೆ ಬಾದಶಹನು ರೋಗದಿಂದಲೂ, ಮನಸ್ತಾಪದಿಂದಲೂ ತೀರಾ ಅಶಕ್ತನಾಗಿ ಹೋಗಿರುವನು. ನಿಜವಾಗಿಯೆಂದರೆ ಅಕಬರ ಬಾದಶಹನು ಈಗ ಬಹುದಿವಸಗಳ ಹಿಂದೆಯೇ ಹೊರಟು ಹೋಗಿದ್ದು, ಈಗ ಇರುವವನು ಅಕಬರ ಬಾದಶಹನ ಕೇವಲ ನೆರಳಾಗಿರುವನು. ಹಿಂದಕ್ಕೆ ಯಾವ ಸಾಮರ್ಥ್ಯದಿಂದ ಬಾದಶಹರು ಚಿತ್ತೂರ ಕೋಟೆಯನ್ನು ಸ್ಮಶಾನ ಭೂಮಿಯಾಗ ಮಾಡಿದರೋ, ಯಾವ ಸಾಮರ್ಥ್ಯದಿಂದ ಮಾಲವ–ವಂಗದೇಶಗಳೊಳಗಿನ ಪಠಾಣರನ್ನು ಹೊಡೆದೋಡಿಸಿದರೋ ಆ ಸಾಮರ್ಥ್ಯವು ಈಗ ಬಾದಶಹರಲ್ಲಿ ಎಲ್ಲಿರುವದು! ಅವರ ಈ ಉಜ್ವಲ ರಣಚಾತುರ್ಯವು ಈಗ ಎಲ್ಲಿರುವದು? ಖುಸ್ರೂ, ಈಗಿನ ಕಠಿಣ ಪ್ರಸಂಗದಲ್ಲಿ ಅಕಬರಬಾದಶಹರು ಪಟ್ಟದ ಸಲುವಾಗಿ ತನ್ನ ಮಗನೊಡನೆ ವಾದವಿವಾದ ಮಾಡುತ್ತ ಕುಳಿತುಕೊಳ್ಳಲಾರನೆಂಬುದನ್ನು ನೀನು ಲಕ್ಷದಲ್ಲಿಡು. ತನ್ನ ವಿರುದ್ಧ ಬಂಡಾಯ ಮಾಡಿದ ಮಗನಿಗೆ ಪಟ್ಟಕೊಡುವದಕ್ಕಿಂತ, ಮತ್ತೊಬ್ಬ ಯೋಗ್ಯ ಹಕ್ಕುದಾರನಾದ ರಾಜಪುತ್ರನಿಗೆ ಪಟ್ಟಕೊಡುವ ಸಂಭವವುಂಟು. ಖುಸ್ರೂ, ನೀನು ದಿಲ್ಲಿಯ ಸಿಂಹಾಸನದ ಹಕ್ಕುದಾರನಿದ್ದು, ನಿನ್ನ ಮೇಲೆ ಬಾದಶಹರ ಪ್ರೀತಿಯು ಎಷ್ಟು ಇರುತ್ತದೆಂಬದನ್ನು ಮನಸ್ಸಿನಲ್ಲಿ ತಂದುಕೊಂಡು ಈ ಪ್ರಸಂಗದಲ್ಲಿ ಪ್ರಯತ್ನಮಾಡು.

ಖುಸ್ರು—(ದೃಢಸ್ವರದಿಂದ) ರಾಜೇಸಾಹೇಬ, ತಮ್ಮ ಯಾವತ್ತು ಭಾಷಣದ ಆಶಯವು ನನ್ನ ಮನಸ್ಸಿನಲ್ಲಿ ಬಂದಿತು; ಆದರೆ ಮಹಾರಾಜ, ನನ್ನ ಹಿತಕ್ಕಾಗಿ ನೀವು ಇಷ್ಟು ಏಕೆ ಶ್ರಮಪಡುತ್ತಿರುವಿರಿ? ನಾನು ಕೇವಲ ಈ ಸಿಂಹಾಸನಕ್ಕಾಗಿ ಎಂದೂ ಪಿತೃದ್ರೋಹಿ ಯಾಗುವವನಲ್ಲ; ಯಾಕಂದರೆ ಆ ಕಲಂಕವು ನನಗೆ ಸದಾ ತಾಪದಾಯಕವಾದೀತು! ನನಗೆ ತಾವು ಕಡೆಯ ಆಲಿಂಗನವನ್ನು ಕೊಟ್ಟು ನನಗೆ ಅಪ್ಪಣೆ ಕೊಟ್ಟು ಬಿಡಿರಿ; ನಾನು ತಂದೆಯ ಚರಣಗಳಿಗೆ ಸರ್ವಸ್ವವನ್ನು ಅರ್ಪಿಸಿ ಅವರ ಕ್ಷಮೆ ಬೇಡಿಕೊಂಡು ಸಮಾಧಾನದಿಂದಿರುವೆನು. ಹೀಗೆ ಮಾಡುವದರಿಂದ ನಾನು ಅವ್ವನ ಮುಂದೆ ಮಾಡಿರುವ ಪ್ರತಿಜ್ಞೆಯನ್ನು ಪಾಲಿಸಿ ದಂತಾಗುವದು. ಮಹಾರಾಜ, ನೀವೂ ನಿಮ್ಮ ಅಭಿಮಾನವನ್ನು ಬಿಟ್ಟು ನನ್ನ ತಂದೆಯ ಬಳಿಗೆ ಹೋದರೆ, ಅವರು ನಿಮ್ಮ ಭಾರತ ಮಂತ್ರಿಯ ಅಧಿಕಾರವನ್ನು ಸ್ಥಿರವಾಗಿ ಇಡುವರಲ್ಲದೆ, ಹೆಚ್ಚಿನ ಅಧಿಕಾರವನ್ನೂ ಕೊಡಬಹುದು. ಯಾರು ಹಿಂದುಸ್ಥಾನದ ಭಾವೀ ಬಾದಶಹ ರಿರುವರೋ, ಯಾರ ನೇತ್ರ ಸಂಕೇತದಿಂದ ಅಸಂಖ್ಯ ಸೈನ್ಯಗಳು ಚಲನವಲನವನ್ನು ಹೊಂದುತ್ತಿರುವವೋ, ರಣಕೌಶಲ್ಯವು ಯಾರ ಕೈಕೂತ ಲೀಲೆಯಾಗಿರುವದೋ, ಆಗ್ರಾ ಪಟ್ಟಣವನ್ನು ಸ್ವಾಧೀನಪಡಿಸಿಕೊಳ್ಳುವದರಿಂದ ಮೊಗಲರ ವಂಶ ಪರಂಪರಾಗತವಾದ ಸರ್ವ ಸಂಪತ್ತು ಯಾರ ಕೈಸೇರುವದೋ, ಹಿರಿಯ ಮಗನಾದದ್ದರಿಂದ ಯಾರ ಪಶ್ಚಾತ್ ನಾನು ಸಿಂಹಾಸನಕ್ಕೆ ಬಾಧ್ಯಸ್ಥನಾಗಿರುವೆನೋ ಅಂಥ ನನ್ನ ತಂದೆ ಸುಲ್ತಾನ ಸೇಲೀಮರೊಡನೆ ಸಿಂಹಾಸನದ ಸಲುವಾಗಿ ನಾನು ಜಗಳವಾಡುತ್ತ ಕುಳಿತುಕೊಳ್ಳಲಾ? ಮಹಾರಾಜ, ಬೇಡ, ಇಂಥ ಸೈತಾನೀ ವಿಚಾರಗಳನ್ನು ನನ್ನ ಹೃದಯದಲ್ಲಿ ಬಿತ್ತಬೇಡಿರಿ. ನನಗೆ ಹೋಗಲು ಅಪ್ಪಣೆ ಕೊಡಿರಿ; ನನಗೆ ಸ್ವಾತಂತ್ರ್ಯವನ್ನು ಕೊಡಿರಿ; ನನ್ನ ದುರ್ಬಲ ಮನಸ್ಸನ್ನು ಈ ಪಾಶದೊಳಗಿಂದ ಮುಕ್ತ ಮಾಡಿರಿ; ಈ ಭಯಂಕರ ಪಾಶವು ನನ್ನ ಸಂಹಾರ ಮಾಡೀತು!! ಆದ್ದರಿಂದ ನಾನು ನನ್ನ ತಂದೆಯ ಬಳಿಗೆ ಹೋಗಿ ಅವರ ಚರಣಕ್ಕೆರಗಿ ಕ್ಷಮೆಬೇಡಿ ಶಾಂತನಾಗುವೆನು. ಮಹಾರಾಜ, ಈ ವಿಚಾರಗಳು ಯಾರಿಂದಲೇ ಆಗಲಿ, ಈ ಮೊದಲೆಯೇ ನನ್ನ ಮನಸ್ಸಿನಲ್ಲಿ ಸೇರಿರುವದರಿಂದ ನನ್ನ ಮನಸ್ಸಿಗೆ ಶಾಂತಿಯಿಲ್ಲ, ಸ್ವಸ್ಥೆಯಿಲ್ಲ, ಯಾವ ವಿಷಯದಲ್ಲಿಯೂ ನನಗೆ ಉತ್ಸಾಹವಿಲ್ಲ; ಆದರೆ ಮಹಾರಾಜ, ಅಕಬರ ಬಾದಶಹನ ಮೊಮ್ಮಗನಾದ ನನ್ನ ಗತಿಯು ಹೀಗೆ ಯಾಕಾಗಬೇಕು?

ಈ ಮೇರೆಗೆ ಖುಸ್ರುವು ಮಾನಸಿಂಹನ ವಿಚಾರಗಳನ್ನು ನಿರಾಕರಿಸುತ್ತಿರಲು, ಆತನ ಮಾವನಾದ ಅಮೀರ-ಉಲ್-ಉಮರಾವ-ಅಜೀಮಖಾನನು ಅಲ್ಲಿಗೆ ಬಂದು ಖುಸ್ರುವನ್ನು ಕುರಿತು—''ಎಲೈ ಮೂಢತರುಣನೇ, ನೀನು ಹೀಗೆ ನಿನ್ನ ತಂದೆಗೆ ಆತ್ಮಾರ್ಪಣ ಮಾಡುವದ ರಿಂದೇನು ದುಷ್ಪರಿಣಾಮವಾಗುವದೆಂಬದನ್ನು ಕುರಿತು ವಿಚಾರ ಮಾಡಿರುವೆಯಾ? ಗುಪ್ತ ಘಾತಕರ ಕೈಯಿಂದ ನಿನಗೆ ಭಯಂಕರ ಮರಣ ಒದಗುವದೇ ಇದಕ್ಕೆ ಫಲವೆಂದು ತಿಳಿದುಕೋ; ಅಥವಾ ವಿಷಪಾನದಿಂದ ನೀನು ಜೀವ ಕೊಡಬೇಕಾಗುವದೆಂಬದನ್ನು ಮರೆಯಬೇಡ; ಆದ್ದರಿಂದ ಖುಸ್ರು ಈಗ ಸ್ವಲ್ಪ ಶ್ರಮಬಟ್ಟು ಈ ಅಪಮೃತ್ಯುವನ್ನು ನೀನು ತಪ್ಪಿಸಿಕೊಂಡರೆ,

ಆದರಲ್ಲಿ ಆಗುವ ನಿನ್ನ ಹಾನಿಯೇನು? ನೀನು ರಾಜೇಸಾಹೇಬರನ್ನಾದರೂ ಇಷ್ಟು ನಿರಾಕರಿಸಿ ಯಾಕೆ ಮಾತಾಡುವೆ?

ಖುಸ್ರು—ಖಾನಸಾಹೇಬ, ಕ್ಷಣಕ್ಷಣಕ್ಕೆ ನನ್ನನ್ನು ಹೀಗೆ ಯಾಕೆ ಛಲಿಸುವಿರಿ? ನಿಮಗೆ ಖುದಾನ ಆಣೆಯಿರುವದು, ನಿಮ್ಮ ಮನಸ್ಸಿನಲ್ಲಿ ಏನಿರುವದೆಂಬದನ್ನು ಸ್ಪಷ್ಟವಾಗಿ ಹೇಳಿಬಿಡಿರಿ.

ಅಜೀಮಖಾನ—ಕೇಳು ಹಾಗಾದರೆ, ಎಲ್ಲವನ್ನು ನಾನು ಈಗ ಬಿಚ್ಚಿಹೇಳುವೆನು. ನಾವಿಬ್ಬರೂ ನಿನ್ನ ಕಲ್ಯಾಣಕ್ಕಾಗಿ ಒಮ್ಮನಸ್ಸಿನಿಂದ ಹೀಗೆ ನಿರ್ಧರಿಸಿರುವೆವು; ಅತ್ಯಂತ ರಣಕುಶಲರೂ, ಸದಾ ವಿಜಯಿಗಳೂ ಆದ ಮೊಗಲರ ಇಪ್ಪತ್ತುಸಾವಿರದ ಗುಪ್ತಸೈನ್ಯವು ನನ್ನ ಬಳಿಯಲ್ಲಿರುವದು; ಅದರಂತೆ ಶೂರರಾದ ರಜಪೂತರ ಇಪ್ಪತ್ತು ಸಾವಿರ ರಾವುತರ ಖಾಸಗೀ ಸೈನ್ಯವು ರಾಜೇಸಾಹೇಬರ ಕೈಯಲ್ಲಿರುವದು. ಇವಲ್ಲದೆ ರಾಜಭಂಡಾರದ ಕೀಲಿಯ ಕೈಯಂತು ಈಗ ನಿನ್ನ ಕೈಯಲ್ಲಿ ಇದ್ದೇ ಇರುತ್ತದೆ; ಆದ್ದರಿಂದ ನಿನ್ನ ತಂದೆಯು ಆಗ್ರಾಪಟ್ಟಣವನ್ನು ಸ್ವಾಧೀನಪಡಿಸಿಕೊಳ್ಳುವದಕ್ಕಿಂತ ಮೊದಲು ನೀನು ಆ ರಾಜಧಾನಿಯನ್ನು ಏನಾದರೂ ಉಪಾಯಮಾಡಿ ಸ್ವಾಧೀನಪಡಿಸಿಕೊಂಡರೆ, ಈ ಸುವರ್ಣ ಭಾರತವು ನಿನ್ನದಾಗುವದೆಂದು ನಿಶ್ಚಯವಾಗಿ ನಂಬು. ಖುದಾನು ನಿನಗೆ ಸಾಹಸ ಕೊಟ್ಟಿರುವನು, ಸಾಮರ್ಥ್ಯ ಕೊಟ್ಟಿರುವನು, ನಮ್ಮಂಥ ಸಹಾಯಕ ವೀರರನ್ನೂ ಒದಗಿಸಿಕೊಟ್ಟಿರುವನು; ಆದ್ದರಿಂದ ನೀನು ಸ್ವಸ್ಥವಾಗಿ ಕುಳಿತುಕೊಳ್ಳುವದು ಯೋಗ್ಯವಲ್ಲ. ನಿನ್ನ ಮೇಲೆ ನಿನ್ನ ಅಜ್ಜನ ಅತ್ಯಂತ ಪ್ರೇಮವಿರುವದನ್ನೂ, ನಿನ್ನ ತಂದೆಯನ್ನು ನಿನ್ನ ಅಜ್ಜನು ತಿರಸ್ಕರಿಸುತ್ತಿರುವದನ್ನೂ ನೀನುಬಲ್ಲೆ; ಅಂದಬಳಿಕ ನಿನ್ನ ಹಿತವನ್ನು ನೀನು ಅರಿತು ನಡೆಯದೆ ಭ್ರಾಂತಿಯಲ್ಲಿ ಕಾಲಹರಣ ಮಾಡುತ್ತಿರುವೆಯಲ್ಲ! ಇದು ಯೋಗ್ಯವೆ? ನನಗಂತು ನಿನ್ನ ಭವಿಷ್ಯಕಾಲವು ಅತ್ಯಂತ ಉಜ್ವಲವಾಗಿ ತೋರುವದು.

ತನ್ನ ಮಾವನ ಈ ಮಾತುಗಳನ್ನು ಕೇಳಿ ಪಿತೃಭಕ್ತನಾದ ಖುಸ್ರುವಿನ ಮೈಮೇಲಿನ ಕೂದಲುಗಳು ನೆಟ್ಟಗಾದವು! ಆತನು ಕೆಲಹೊತ್ತು ಸುಮ್ಮನಿದ್ದು ಖಿನ್ನ ಸ್ವರದಿಂದ—

ಖುಸ್ರು—ಜನಾಬ! ಖಾನಸಾಹೇಬ! ಸೇಲೀಮನ ಮಗನೆಂತಲೇ ನಾನು ಬಾದಶಹರಿಗೆ ಪ್ರಿಯನಾಗಿರುವೆನು; ಎರಡನೆಯವನಾವನಾದರೂ ಆಗಿದ್ದರೆ ಅವರು ನನ್ನ ಮೇಲೆ ಇಷ್ಟು ಪ್ರೀತಿಯನ್ನು ಮಾಡುತ್ತಿದ್ದರೆಯೇ? ಆದ್ದರಿಂದ ಬಾದಶಹರ ಅಪ್ಪಣೆಯಿಲ್ಲದೆ ಅವರ ಮಗನ ವಿರುದ್ಧವಾಗಿ ನಾನು ಬಂಡಾಯ ಮಾಡಿದರೆ, ಅವರು ನನಗೆ ಏನು ಅಂದಾರು?

ಖಾನ—ಒಳ್ಳೆಯದು, ಸಾಮ್ರಾಟರ ಇಂಥ ವಿಪನ್ನಸ್ಥಿತಿಯಲ್ಲಿ ನೀನು ಏನೂ ಪ್ರಯತ್ನ ಮಾಡದೆ ಸ್ವಸ್ಥವಾಗಿ ಕುಳಿತುಕೊಂಡರೆ ಅವರಿಗೆ ಹೇಗಾದೀತು ಖುಸ್ರು? ಬಾದಶಹರ ಬಾಹುಗಳಲ್ಲಿ ಮೊದಲಿನ ಸಾಮರ್ಥ್ಯವು ಈಗ ಉಳಿದಿರುವದಿಲ್ಲ. ಅದರಂತೆ, ಅವರ ಸಂಗಡ ಯಾವಾಗಲೂ ಇರುತ್ತಿದ್ದ ಅವರ ಅತ್ಯಂತ ಜೀವದ ಗೆಳೆಯರಾದ ಅಬುಲ ಫಜಲರೂ ಬಹುದೂರ ದಕ್ಷಿಣದಲ್ಲಿರುವರು; ಅದರಿಂದ ಬಾದಶಹರಿಗೆ ಯೋಗ್ಯ ಆಲೋಚನೆ ಹೇಳುವವರೂ ಇಲ್ಲದಾಗಿದೆ. ಆದರಂತೆ, ಬಾದಶಹರಿಗೆ ಸೇನಾಪತಿಗಳೇ ಮೊದಲಾದ ವಿಶ್ವಾಸದ ಜನರು ದ್ರವ್ಯಕ್ಕಾಗಿ ಸೇಲೀಮರು ತಮ್ಮನ್ನು ಮಾರಿಕೊಂಡು, ಆತನಿಗೆ ಅಂತರಂಗದಲ್ಲಿ ಅನುಕೂಲವಾಗಿರುವರು.

ಈ ಪ್ರಸಂಗದಲ್ಲಿ ಸೇಲೀಮನಿಗೆ ಎದುರಾಗಿ ಹೋಗಿ ಆತನನ್ನು ಹಿಂದಕ್ಕೆ ಓಡಿಸಬೇಕಾದರೆ, ಸ್ವತಃ ಅಕಬರ ಬಾದಶಹರೇ ಈಗ ದಂಡೆತ್ತಿ ಹೋಗಬೇಕಾಗಿರುವದು. ಖುಸ್ರೂ, ಬಾದಶಹರ ಮನಸ್ಸಿನಲ್ಲಿ ಸೇಲೀಮನು ಆಗ್ರಾ ಪಟ್ಟಣವನ್ನು ಸ್ವಾಧೀನ ಪಡಿಸಿಕೊಂಡು ಸಿಂಹಾಸನವೇರಲೊಲ್ಲ ನೇಕೆಂಬದು ಇದ್ದರೆ, ಅವರು ಇಂಥ ಬೇನೆಯಲ್ಲಿ ಆಗ್ರಾ ಪಟ್ಟಣಕ್ಕೆ ಏಕೆ ಹೋಗುತ್ತಿದ್ದರು? ಅಂದಬಳಿಕ ತಮ್ಮ ಬಂಡುಖೋರನಾದ ಮಗನಿಗೆ ಸಿಂಹಾಸನವಾಗ ಬೇಕೆಂಬದು ಸರ್ವಥಾ ಅವರ ಮನಸ್ಸಿನಲ್ಲಿರುವದಿಲ್ಲ. ತಾವೇ ಸ್ವತಃ ಹೋಗಿ ಮಗನ ಪಾರುಪತ್ಯಮಾಡಬೇಕೆಂದರೆ ಅವರ ಮೈಯಲ್ಲಿ ಸಾಮರ್ಥ್ಯವಿಲ್ಲ; ಬೇರೆಯವರನ್ನಾರನ್ನಾದರೂ ಕಳಿಸಬೇಕೆಂದರೆ ವಿಶ್ವಾಸದ ಜನರಿಲ್ಲ. ನನಗೂ, ಮಹಾರಾಜರಿಗೂ ಈ ಕೆಲಸ ಹೇಳಬೇಕೆಂದರೆ, ನಾವು ನಿನ್ನ ಪಕ್ಷದವರೆಂಬದು ಜನರಲ್ಲಿ ಪ್ರಸಿದ್ಧವಾಗಿರುವದರಿಂದ, ಮಗನ ವಿರುದ್ಧ ತಾವಾಗಿ ಪ್ರಯತ್ನ ಮಾಡಿದರೆಂಬ ಅಪಕೀರ್ತಿಗೆ ಗುರಿಯಾಗುವ ಇಚ್ಛೆಯೂ ಬಾದಶಹರಿಗೆ ಇರುವದಿಲ್ಲ; ಆದ್ದರಿಂದ ಈಗಿನ ಕಠಿಣ ಪ್ರಸಂಗದಲ್ಲಿ ನೀನು ಆಗ್ರಾಪಟ್ಟಣವನ್ನು ಸ್ವಾಧೀನಪಡಿಸಿಕೊಂಡರೆ ಬಾದಶಹರಿಗೆ ಸಂತೋಷವೇ ಆಗುವದು. ಅವರು ತೋರಿಕೆಗಾಗಿ ನಿನ್ನ ಮೇಲೆ ಸಿಟ್ಟಾದಂತೆ ತೋರಿಸಿದರೂ, ಅಂತರಂಗದಲ್ಲಿ ನಿನ್ನ ಕೃತಿಯಿಂದ ಅವರಿಗೆ ಸಮಾಧಾನವೇ ಆಗುವದು. ನಿನ್ನಿಂದ ಅಕಲ್ಪಿತವಾಗಿ ಅವರಿಗೆ ಆಗುವ ಅನುಕೂಲ ಸಹಾಯಕ್ಕಾಗಿ ಅವರು ನಿನ್ನನ್ನು ಗೌರವಿಸದೆ ಇರಲಿಕ್ಕಿಲ್ಲ! ಖುಸ್ರೂ, ಬಾದಶಹರು ಅತ್ಯಂತ ಶ್ರಮದಿಂದ ಸಂಪಾದಿಸಿರುವ ಈ ಮೊಗಲ ಸಾಮ್ರಾಜ್ಯವು ಪಿತೃದ್ರೋಹಿಯೂ, ವಿಷಯಾಸಕ್ತನೂ, ಸೆರೆಗುಡಕನೂ ಆದ ಸೇಲೀಮನ ಕೈಯಲ್ಲಿ ಹೋಗು ವದರಿಂದ ಅದು ಸುರಕ್ಷಿತವಾಗಿ ಇರಬಹುದೆ? ಅದರ ಚಿಂತೆಯು ಬಾದಶಹರಿಗೆ ಇರಲಿಕ್ಕಿಲ್ಲವೆ? ಆದ್ದರಿಂದ ಏಳು, ಪರಾಕ್ರಮದಿಂದ ಆಗ್ರಾ ಪಟ್ಟಣವನ್ನು ಸ್ವಾಧೀನಪಡಿಸಿಕೋ. ಖುಸ್ರೂ, ಬಹಳ ಪುಣ್ಯ ಮಾಡಿದಾಗ ಮನುಷ್ಯಜನ್ಮವು ಬರುವದು; ಅದರಲ್ಲಿಯೂ ಅತ್ಯುತ್ಕಟ ಪುಣ್ಯ ಮಾಡಿದವರಿಗೆ ಮಾತ್ರ ರಾಜಕುಲದಲ್ಲಿ ಹುಟ್ಟುವ ಯೋಗವು ಒದಗುವದು; ಆ ರಾಜ ಕುಲ ದಲ್ಲಿಯೂ ಮೊಗಲ ಬಾದಶಹರ ವಂಶವೂ ಅತ್ಯಂತ ಶ್ರೇಷ್ಠ ತರದ್ದಾಗಿರುವದರಿಂದ ಅದರಲ್ಲಿ ಜನ್ಮತಾಳಬೇಕಾದರೆ ಎಂಥ ಪುಣ್ಯಮಾಡಬೇಕಾಗುವದೆಂಬದನ್ನು ನೀನೇ ವಿಚಾರಮಾಡಿ ನೋಡು. ನಿನ್ನ ಪ್ರಾಚೀನ ಕರ್ಮಫಲವು ಅತ್ಯಂತ ಶಕ್ತಿಸಂಪನ್ನವಾಗಿರುವದರಿಂದ ಸುದೈವಿಯಾದ ವೀರನು ನೀನು ಮೊಗಲ ಬಾದಶಹರ ವಂಶದಲ್ಲಿ ಪಟ್ಟಕ್ಕೆ ಬಾಧ್ಯಸ್ಥನಾಗಿ ಹುಟ್ಟಿರುತ್ತೀ; ಆದರೆ ಏನೂ ಯತ್ನ ಮಾಡದೆ ನಿನ್ನ ಮಸ್ತಕವನ್ನು ರತ್ನಖಚಿತವಾದ ಮುಕುಟವು ಅಲಂಕರಿಸಿ, ನಿನ್ನ ಮಾನವ ಜನ್ಮವು ಹೇಗೆ ಸಾರ್ಥಕವಾದೀತು? ಪ್ರಯತ್ನದಿಂದಲೇ ಮಹಾ ವೈಭವವು ಪ್ರಾಪ್ತವಾಗು ತ್ತದೆಂಬದಕ್ಕೆ ನಿನ್ನ ಅಜ್ಜ ಅಕಬರನೇ ಪ್ರಬಲ ಸಾಕ್ಷಿಯಾಗಿರುವನು. ನಿರ್ಜಲ ಮರುಭೂಮಿಯಲ್ಲಿ ಜನ್ಮತಾಳಿದ ಆ ನಿನ್ನ ಅಜ್ಜನು ಚಿಕ್ಕಂದಿನಿಂದ ಪರಿಪರಿಯ ಕಷ್ಟಗಳನ್ನು ಅನುಭವಿಸಿ ಪೂರ್ವಪುಣ್ಯದ ಬಲದಿಂದ ಸ್ವಾವಲಂಬಿಯಾಗಿ, ವೈಭವದ ಶಿಖರವನ್ನೇರಿ ''ದಿಲ್ಲೀಶ್ವರೋವಾ ಜಗದೀಶ್ವರೋವಾ'' ಎಂದು ಹೊಗಳಿಸಿಕೊಂಡು, ಯಾವತ್ತು ಹಿಂದುಸ್ತಾನಕ್ಕೆ ಪೂಜ್ಯನಾಗಿ ಕುಳಿತಿರುವದನ್ನು ನೀನು ವಿಚಾರ ಮಾಡತಕ್ಕದ್ದು. ಖುಸ್ರೂ, ಜಂಗೀಜಖಾನನ ವಂಶಜರ ಪಟ್ಟ

ದೊರಕಿಸುವ ಶಾಶ್ವತ ಪದ್ಧತಿಯನ್ನು ನೀನು ಬಿಡಬೇಡ. ಸ್ನೇಹ, ಮಾಯಾ, ದಯಾ, ಪಿತೃಭಕ್ತಿ ಮೊದಲಾದವುಗಳನ್ನೆಲ್ಲ ಮರೆತು ಬಿಟ್ಟು, ಒರೆಯೊಳಗಿಂದ ಕತ್ತಿಯನ್ನು ಹಿರಿದು ಕಾರ್ಯಕ್ಕೆ ಉದ್ಯುಕ್ತರಾಗುವ ಆ ಪದ್ಧತಿಯನ್ನು ಈಗ ನೀನು ಅನುಸರಿಸು; ಮತ್ತು ಮೊಗಲ ವೀರನಾದ ನಿನ್ನ ಪರಾಕ್ರಮವನ್ನು ಜಗತ್ತಿನಲ್ಲಿ ಪ್ರಕಟಿಸಿ, ಆ ಜಗತ್ತನ್ನು ಆಶ್ಚರ್ಯಮಗ್ನವಾಗಿ ಮಾಡು.

ಮಂತ್ರಮುಗ್ಧನಂತೆ ಸುಮ್ಮನಿದ್ದು, ಶಹಾಜಾದಾ ಖುಸ್ರುವು ಖಾನನ ಈ ಮಾತುಗಳನ್ನು ಕೇಳುತ್ತಿದ್ದನು. ಆತನಲ್ಲಿ ತಂದೆಯ ಕಡೆಯಿಂದ ಮೊಗಲರ ರಕ್ತದಗುಣವೂ, ತಾಯಿಯ ಕಡೆಯಿಂದ ರಜಪೂತರ ರಕ್ತದಗುಣವೂ ಮಿಶ್ರವಾಗಿಯೇ ಇರುತ್ತಿದ್ದವು. ಅಜೀಮಖಾನನ ಆವೇಶದ ರಾಜಸವೃತ್ತಿಯ ಮಾತುಗಳನ್ನು ಕೇಳಿ ಖುಸ್ರುವಿನಲ್ಲಿ ಮೊಗಲರ ಸ್ವಾರ್ಥ ಪರಾಯಣತೆಯ ಪಿತೃದ್ರೋಹಗುಣವು ಜಾಗ್ರತವಾಗುತ್ತಿರುವಷ್ಟರಲ್ಲಿ, ಆತನಿಗೆ ತನ್ನ ತಾಯಿಯ ಉಪದೇಶದ, ಹಾಗು ತಂದೆಯು ತನ್ನನ್ನು ಚಿಕ್ಕಂದಿನಲ್ಲಿ—''ಖುಸ್ರೂ'' ಎಂದು ಪ್ರೇಮದಿಂದ ಕರೆಯುತ್ತಿದ್ದದ್ದರ, ಅದರಂತೆ ಖುರಮನನ್ನು ಹಿಂದಕ್ಕೆ ಸರಿಸಿ ತನ್ನನ್ನು ಅಪ್ಪಿಕೊಳ್ಳುವದರ ನೆನಪಾಗಿ, ಆತನಲ್ಲಿ ರಜಪೂತರ ಪಿತೃಭಕ್ತಿಯು ಜಾಗ್ರತವಾಯಿತು. ಅದರಿಂದ ಆತನು ತಂದೆಯ ವಿರುದ್ಧವಾಗಿ ಶಸ್ತ್ರಹಿಡಿಯಲಿಕ್ಕೆ ಹಿಂದೆ ಮುಂದೆ ನೋಡಹತ್ತಿದನು. ತನ್ನ ತಂದೆಯು ಸದ್ಯಕ್ಕೆ ಬಂಡು ಮಾಡಿದ್ದರೂ, ಆತನು ಪಶ್ಚಾತ್ತಾಪದಿಂದ ಅಕಬರ ಬಾದಶಹರ ಚರಣಕ್ಕೆ ಎರಗಿದರೆ, ಆ ಉದಾರಾಂತಃಕರಣದ ಬಾದಶಹನು ತನ್ನ ಆ ಒಬ್ಬನೇ ಒಬ್ಬ ಮಗನ ಅಪರಾಧವನ್ನು ಕ್ಷಮಿಸಿ, ಆತನನ್ನು ಅಪ್ಪಿಕೊಳ್ಳದೆ ಇರನೆಂಬದು ಖುಸ್ರುವಿಗೆ ಗೊತ್ತಿತ್ತು; ಆದ್ದರಿಂದ ತನಗೆ ಅನಾಯಾಸ ದಿಂದ ತಂದೆಯ ತರುವಾಯ ಸಿಗತಕ್ಕ ಪಟ್ಟಕ್ಕಾಗಿ ಈಗ ದ್ರೋಹವನ್ನು ಚಿಂತಿಸಿ ಅಕಸ್ಮಾತ್ ಗಂಡಾಂತರಕ್ಕೆ ಒಳಗಾಗಲಿಕ್ಕೆ ಆತನ ಮನಸ್ಸು ಹಿಂಜರಿಯಹತ್ತಿತು. ತನ್ನ ತಂದೆಯು ಸದ್ಯಕ್ಕೆ ಪಿತೃದ್ರೋಹ ಮಾಡಿ ಅಪಕೀರ್ತಿಗೆ ಗುರಿಯಾಗಿ ನಿಂದಿತನಾಗಿರಲು, ತಾನೂ ಅಂಥ ನಿಂದೆಗೆ ಗುರಿಯಾಗಿ ಅಕಬರನ ವಂಶಜರ ಪಿತೃದ್ರೋಹದ ಪಾತಕವನ್ನು ಹೆಚ್ಚಿಸಲು ಆತನು ಹೇಸಿದನು. ಹೀಗೆ ಆತನು ವಿಚಾರ ಮಾಡುತ್ತ ಏನೂ ಮಾತಾಡದಿರಲು, ಮಾನಸಿಂಹನು ಆತನನ್ನು ಕುರಿತು—ಪ್ರಿಯ ಖುಸ್ರೂ, ಬಹಳಹೊತ್ತು ವಿಚಾರಮಾಡಲಿಕ್ಕೆ ಅವಕಾಶವಿಲ್ಲವು. ಶುಭಕಾರ್ಯಕ್ಕೆ ಹೀಗೆ ವಿಲಂಬ ಮಾಡುವದರಿಂದ ಅಕಸ್ಮಾತ್ ಸರ್ವಸ್ವದ ಘಾತವಾಗುವ ಸಂಭವವಿರುತ್ತದೆ. ನಿನ್ನ ಹಿತಕ್ಕಾಗಿ ನಾವಿಬ್ಬರೂ ಬೇಕಾದ ಕಲಂಕಕ್ಕೆ ಗುರಿಯಾಗಲಿಕ್ಕೂ ಹಿಂದೆ-ಮುಂದೆ ನೋಡುವಹಾಗಿಲ್ಲ. ಪ್ರಸಂಗ ಒದಗಿದರೆ ನಿನ್ನ ಸಲುವಾಗಿ ಪ್ರಾಣವನ್ನಾದರೂ ಅರ್ಪಿಸುವೆವು. ಅಂದಬಳಿಕ ನಿನಗೆ ಇನ್ನು ಸಂಶಯವೇತರದು? ಖುಸ್ರೂ, ನಾನು ಹೇಳುವದನ್ನು ಲಕ್ಷಪೂರ್ವಕವಾಗಿ ಕೇಳಿದೆಯಷ್ಟೇ? ಈಗ ನಿನ್ನ ಬಳಿಯಲ್ಲಿಯದೊಂದು ವಸ್ತುವು ನನಗೆ ಬೇಕಾಗಿದೆ; ಅದನ್ನು ಕೊಡಲಿಕ್ಕೆ ನಿನಗೆ ಏನಾದರೂ ತೊಂದರೆಯಿರುವದೋ?

ಖುಸ್ರು—(ಆಶ್ಚರ್ಯದ ಮುದ್ರೆಯಿಂದ) ತಮಗೆ ಕೊಡುವಂತಹ ವಸ್ತುವು ನನ್ನಲ್ಲಿ ಯಾವದಿರುವದು ಮಹಾರಾಜ? ಹೇಳಬೇಕು, ನಾನು ಏನು ಕೊಡಬೇಕೆಂಬದನ್ನು ಆಜ್ಞಾಪಿಸಬೇಕು.

ಮಾನಸಿಂಹ—ನಿನ್ನ ಬಳಿಯಲ್ಲಿ ಬಾದಶಹರು ಇಟ್ಟಿರುವ ಆಗ್ರಾದ ರಾಜ ಭಾಂಡಾರದ ಕೀಲಿಯ ಕೈಯು ಇರುತ್ತದಷ್ಟೇ? ಅದನ್ನು ಈ ಕ್ಷಣದಲ್ಲಿ ನನಗೆ ಒಪ್ಪಿಸು.

ಈ ಮಾತು ಕೇಳಿದ ಕೂಡಲೆ ಖುಸ್ರುವಿನ ದೃಷ್ಟಿಯು ರುಷ್ಟವಾಯಿತು. ಆತನು ತಿರಸ್ಕಾರ ಪೂರ್ಣ ನೇತ್ರಗಳಿಂದ ಮಾನಸಿಂಹನ ಕಡೆಗೆ ನೋಡುತ್ತ ದೃಢ ಸ್ವರದಿಂದ –ನಾನು ಎರಡನೆಯ ಬೇಕಾದದ್ದನ್ನು ಮಾಡೇನು; ಆದರೆ ಹಿಂದುಸ್ಥಾನದ ಬಾದಶಾಹೀ ಶಹಾನಶಹಾ ಅಕಬರ ಬಾದಶಹರೊಡನೆ ಕಪಟವನ್ನು ಆಚರಿಸಲಾರೆನು; ಅವರ ವಿಶ್ವಾಸಘಾತವಂತು ನನ್ನ ಕೈಯಿಂದ ಎಂದೂ ಆಗಲಾರದು. ರಾಜೇಸಾಹೇಬ, ತಮ್ಮ ಮುಂದೆ ಮಾತಾಡುವ ಯೋಗ್ಯತೆಯು ನನ್ನದಲ್ಲ; ಆದರೆ ನನ್ನ ಪ್ರೇಮಲ ಸ್ವಭಾವದ ಅಜ್ಜನ ಅಪ್ಪಣೆಯ ಮುಂದೆ ರಾಜಸಿಂಹಾಸನವು ನನಗೆ ತುಚ್ಛವಾಗಿರುವದೆಂದು ಸ್ಪಷ್ಟವಾಗಿ ಹೇಳುವೆನು! ಮಹಾರಾಜ, ಅಕಬರ ಬಾದಶಹರ ಬಲಗೈಯೆಂದು ಪ್ರಸಿದ್ಧರಾಗಿರುವ ತಮ್ಮ ಮುಖದಿಂದ ಈ ಸ್ವಾಮಿ ದ್ರೋಹದ ಮಾತು ಹೊರಟದ್ದಕ್ಕಾಗಿ ನನಗೆ ಬಹಳ ಆಶ್ಚರ್ಯವಾಗುತ್ತದೆ. ನಮ್ಮ ಮಾವಂದಿರಾದ ಅಮೀರ–ಉಲ್–ಉಮರಾವ–ಅಜೀಮಖಾನರವರ ಮುಂದೆಯೂ ನಾನು ಮಾತಾಡತಕ್ಕದ್ದಲ್ಲ; ಆದರೆ ಅವರು ತಮ್ಮನ್ನು ಹೀನ ಸ್ಥಿತಿಯಿಂದ ಉಚ್ಚ ಪದವಿಗೇರಿಸಿದ ಬಾದಶಹರ ವಿಷಯವಾಗಿ ಹೀಗೆ ದ್ರೋಹ ಚಿಂತಿಸುವದನ್ನು ನೋಡಿ ಸುಮ್ಮನಿರಲಾರದೆ ನಾನು ಮಾತಾಡುವೆನು. ನಿಮ್ಮಿಬ್ಬರ ಶೌರ್ಯ–ಧೈರ್ಯ–ಪ್ರತಾಪಗಳು ಲೋಕ ವಿಶ್ರುತವಾಗಿರುವವು; ನಿಮ್ಮ ರಾಜಕಾರಣ ಪಟ್ಟುತ್ವವನ್ನು ಲೋಕವು ಹೊಗಳುತ್ತಿರುವದು; ಆದರೆ ನಿಮ್ಮಂಥ ಸ್ವಾಮಿನಿಷ್ಠ ವೀರಶಿಖಾ ಮಣಿಗಳು ಹೀಗೆ ಬಾದಶಹರ ಒಪ್ಪಿಗೆ ಪಡೆಯದೆ ನನಗೆ ಏನೇನೋ ಹೇಳುತ್ತಿರುವದನ್ನು ನೋಡಿ, ಹುಡುಗನಾದರೂ ನಾನು ನಿಮ್ಮನ್ನು ತಿರಸ್ಕರಿಸದೆ ಇರಲಾರೆನು. ಮಹಾರಾಜ, ನಾನು ಹಿಂದಕ್ಕೆ ಸಿಂಹಾಸನದ ಭ್ರಾಂತಿಯಿಂದ ತಂದೆಯನ್ನು ಕೊಲ್ಲಿಸಲು ಯತ್ನಿಸಿದ್ದು ನಿಜವು, ಅದರಂತೆ ದುಷ್ಟತನದಿಂದ ನಿಮ್ಮನ್ನು ಕೊಲ್ಲಲು ಯತ್ನಿಸಿದ್ದೂ ನೀವು ಅರಿಯದ ಮಾತಲ್ಲ; ಆದರೆ ಈಗ ಆ ಎಲ್ಲ ದ್ರೋಹಗಳಿಗಾಗಿ ನಾನು ಹೇಸುವೆನು. ನನ್ನ ತಾಯಿಯ ಸದುಪದೇಶದಿಂದ ನನ್ನ ಕಣ್ಣುಗಳು ಚನ್ನಾಗಿ ತೆರೆದಿರುವವು; ಆದ್ದರಿಂದ ಆಕೆಯ ಉಪದೇಶಕ್ಕೆ ವಿರುದ್ಧವಾಗಿ ನಾನು ಸರ್ವಥಾ ಆಚರಿಸಲಾರೆನು.

ಎಂದು ನುಡಿದು, ಅಲ್ಲಿ ನಿಲ್ಲದೆ ಆತನು ತಟ್ಟನೆ ಹೊರಟುಹೋದನು.

ಶಾಂತಿಹೀನರಿಗೆ ಸುಖವೆಲ್ಲಿ?

ಪ್ರಿಯ ವಾಚಕರೇ, ಅಕಬರ ಬಾದಶಹನ ಘನವಂತಿಕೆಯನ್ನು ಕುರಿತು, ನಾವು ನಿಮಗೆ ಸ್ವತಃ ಹೇಳಬೇಕೆನ್ನುವಹಾಗಿಲ್ಲ. ಆ ಮಾತು ಇತಿಹಾಸ ಪ್ರಸಿದ್ಧವಾಗಿರುತ್ತದೆ. ''ಅಕಬರ ಬೀರಬಲರ ಕಥೆ''ಗಳ ಯೋಗದಿಂದ ಆ ಸುಪ್ರಸಿದ್ಧ ಬಾದಶಹನು, ಗೊತ್ತಾಗದಂಥ ಕಗ್ಗ ಹಳ್ಳಿಯ ಜನರಿಗೂ ಗೊತ್ತಾಗಿ ಹೋಗಿರುವನು. ಸ್ವತಃ ಆತನು ತನ್ನ ಘನವಂತಿಗೆಯ ಮಿತಿಮೀರಿದ ಅಭಿಮಾನದಿಂದ—''ನಾನು ಪೈಗಂಬರನು'' ''ನಾನು ಧರ್ಮಸ್ಥಾಪಕನು'' ಎಂಬ ಭಾವನೆಗೆ

ಒಳಗಾಗಿದ್ದನೆಂದೂ ಹೇಳುವದುಂಟು; ಆದರೆ ಇಂಥ ಅದ್ವಿತೀಯ ಪುರುಷನ ಸಂಸಾರದಲ್ಲಿ ನಿಜವಾದ ಸುಖವು ಎಷ್ಟರ ಮಟ್ಟಿಗೆ ಇರುತ್ತದೆಂಬದನ್ನು ಲೋಕದೃಷ್ಟಿಯಿಂದಲ್ಲ, ತಾತ್ವಿಕ ದೃಷ್ಟಿಯಿಂದ, ಅಥವಾ ಅಕಬರ ಬಾದಶಹನ ಅನುಭವದ ದೃಷ್ಟಿಯಿಂದ ವಿಚಾರಿಸಿದರೆ, ಆತನ ಸಂಸಾರ–ಸುಖವೂ ಭ್ರಾಮಕವಾದದ್ದೋ ಎಂದು ಹೇಳಬೇಕಾಗುವದು. ಸಂಸಾರರೂಪವಾದ ಹೋಕಾಯಂತ್ರದಲ್ಲಿ ಸುಖ–ದುಃಖರೂಪ ತುದಿಗಳುಳ್ಳ ಮನಸ್ಸೆಂಬ ಲೋಹ ಚುಂಬಕದ ಮುಳ್ಳು, ಕರ್ಮಾಕರ್ಷಿತವಾಗಿ ಯಾವಾಗಲೂ ಹೊಯ್ದಾಡುತ್ತಿರುವದರಿಂದ, ಆ ಮನಸ್ಸೆಂಬ ಮುಳ್ಳಿಗೆ ಸ್ಥಿರತೆಯಿಂದ ಉತ್ಪನ್ನವಾಗುವ ಶಾಂತಿಸುಖವು ದೊರೆಯುವದೇ ಇಲ್ಲ. ಸಾಂಸಾರಿಕರು ತಮಗೆ ಸುಖವು ಒದಗಿದ ಕೂಡಲೆ ಇನ್ನು ತಮಗೆ ದುಃಖದ ಯೋಗವು ಇರುವದೆಂದು ತಿಳಿದು ಪ್ರಾಪ್ತ ಸುಖಕ್ಕಾಗಿ ಉಬ್ಬದೆ ಧರ್ಮದಲ್ಲಿ ದೃಷ್ಟಿಯನ್ನಿಟ್ಟು ತಮ್ಮ ನೆರಳಿಗೆ ತಾವು ಅಂಜುತ್ತ ಎಚ್ಚರದಿಂದ ಇರಬೇಕಾಗುವದು. ಸುಖಾನುಭವವಿಲ್ಲದೆ ದುಃಖಾನುಭವವೂ, ದುಃಖಾನುಭವ ವಿಲ್ಲದೆ ಸುಖಾನುಭವವೂ ಆಗದಿರುವದರಿಂದ ಅವೆರಡೂ ವಿಕಾರಗಳು ಕ್ಷಣಿಕಗಳಾಗಿ ಸಂಸಾರದಲ್ಲಿ ಮನುಷ್ಯರನ್ನು ಆಗಾಗ್ಗೆ ತಡೆಹಾಯುತ್ತ ಗಾಸಿಮಾಡುತ್ತಿರುವವು. ಪುತ್ರೋತ್ಸವ ವಾದ ಸುಖದ ಸಂಗಡಲೆ ಪುತ್ರಸಂಗೋಪನ–ಕುಪುತ್ರಯೋಗ– ಪುತ್ರವಿಯೋಗಾದಿಗಳ ದುಃಖಗಳು ಅವರವರ ಕರ್ಮದಂತೆ ಸಾಂಸಾರಿಕರು ಬಡಿಸಿ ಇಟ್ಟಿರುವ ಎಲೆಗಳಾಗಿರುವವು; ಆದರೆ ನಾಚಿಕೆಗೇಡಿಗಳಾದ ಸಾಂಸಾರಿಕರು ನಾವು ಸುಖದ ಆಶೆಯಿಂದಲೂ, ದುಃಖದ ವಿಸ್ಮೃತಿ ಯಿಂದಲೂ ಕೇವಲಸುಖ ಸಂಪಾದಿಸಬೇಕೆಂಬ ಭ್ರಾಂತಿಗೆ ಬಿದ್ದು ನ್ಯಾಯಾನ್ಯಾಯ, ಧರ್ಮಾಧರ್ಮಗಳ ವಿಚಾರವಿಲ್ಲದೆ ಬಗೆಬಗೆಯಾಗಿ ಆಯಾಸಪಟ್ಟು ಮತ್ತಿಷ್ಟು ಗಾಸಿ ಯಾಗುತ್ತಿರುವೆವು. ಭಗವದ್ಗೀತೆಯಲ್ಲಿ ಭಗವಂತನು ಸುಖ ದುಃಖಗಳನ್ನು "ಆಗಮಾಪಾಯಿಗಳು" ಅಂದರೆ ಮಿಂಚಿನಂತೆ ತೋರಿ ಅಡಗುವಂತಹವು ಆಗಿರುವದರಿಂದ ಅನಿತ್ಯಗಳೆಂದು ಹೇಳಿ, ಧರ್ಮಾಶ್ರಯದಿಂದ ಅವನ್ನು ಸಹಿಸುತ್ತ ಶಾಂತಿಯನ್ನು ಪಡೆಯಬೇಕೆಂದು ಹೇಳಿರುವನು. "ಆಗಮಾಪಾಯಿನೋಽನಿತ್ಯಾಂಸ್ತಾಂಸ್ತಿತಿಕ್ಷಸ್ವ ಭಾರತ" ಎಂಬುದೇ ಆ ಭಗವಂತನ ಉಕ್ತಿಯಾಗಿರುವದು. ಈ ಉಕ್ತಿಯಂತೆ ಘನವಂತನಾದ ಅಕಬರನು ಎಷ್ಟು ದುಃಖಗಳನ್ನು ಸಹಿಸ ಬೇಕಾಯಿತೆಂಬದನ್ನು ಕುರಿತು ವಿಚಾರಿಸುವದಕ್ಕಾಗಿ ಆತನು ಬಾಲ್ಯದಿಂದ ಅಲ್ಪ ಸ್ವಲ್ಪ ಇತಿಹಾಸವನ್ನು ನೋಡುವಾ.

ಅಕಬರನ ಬಾಲ್ಯವೂ, ವೃದ್ಧಾಪ್ಯವೂ ಕೇವಲ ದುಃಖದ ತಾಪದಲ್ಲಿ ಬೆಂದು ಬೆಂಡಾದವೆಂದು ಇತಿಹಾಸವು ಹೇಳುತ್ತಿರುವದು. ಅದರಲ್ಲಿ ಆತನ ಮುಪ್ಪಿನ ಕಾಲವಂತು ದುಃಖಪರಂಪರೆಯಿಂದ ಅತ್ಯಂತ ತಾಪದಾಯಕವಾಗಿ, ಆತನು ಒಬ್ಬ ಪಾಮರನಂತೆ ಶಾಂತಿಹೀನನಾಗಿ ದೇಹತ್ಯಾಗ ಮಾಡಿದ್ದನ್ನು ಸಾಂಸಾರಿಕರು ವಿಚಾರಿಸದೆ, ಇರತಕ್ಕದ್ದಲ್ಲ. ತಂದೆ ಹುಮಾಯೂನನು ದಿಲ್ಲಿಯನ್ನು ಬಿಟ್ಟು ಓಡಿ ಹೋಗುವಾಗ ಹಾದಿಯಲ್ಲಿ ನಿರ್ಜಲವಾದ ಮರಭೂಮಿಯಲ್ಲಿ ಹುಟ್ಟಿದ ಅಕಬರನು, ಒಮ್ಮೊಮ್ಮೆ ಪ್ರಾಣಾಂತಿಕ ಗಂಡಾಂತರಗಳಿಗೂ ಗುರಿಯಾಗಿ ಪರಿಪರಿಯ ಕಷ್ಟಗಳನ್ನು ಹೇಗೆ ಅನುಭವಿಸಿದನೆಂಬದನ್ನೂ, ಆತನು ಪ್ರೌಢನಾಗುತ್ತ ಹೋದಂತೆ ಸಾಮ್ರಾಜ್ಯಸ್ಥಾಪನೆಯ ಮಹತ್ವಾಕಾಂಕ್ಷೆಯಿಂದ ಅಂಧನಾಗಿ, ಪ್ರಾತಃಸ್ಮರಣೀಯನಾದ ರಾಣಾ ಪ್ರತಾಪಸಿಂಹನಂಥ

ಕುಲದೀಪಕ ಭಾರತ ಪುತ್ರರ ಸ್ವಾತಂತ್ರ್ಯಹರಣದ ಮಹತ್ಪಾಪ ಸಂಪಾದನೆಯಲ್ಲಿ ತೊಡಗಿ, ತನ್ನ ಮುಪ್ಪಿನ ಕಾಲದ ಕಟುತರ ದುಃಖಪರಂಪರಾರೂಪವಾದ ಅಡಿಗೆಯನ್ನು ಹೇಗೆ ಸಿದ್ಧಮಾಡಿ ಇಟ್ಟನೆಂಬದನ್ನೂ ಇತಿಹಾಸಜ್ಞರಿಗೆ ಇಲ್ಲಿ ಹೇಳುವ ಕಾರಣವಿಲ್ಲ. ಮನುಷ್ಯನು ಮನಸ್ಸಿನಲ್ಲಿ ಸ್ವಾರ್ಥವನ್ನು ಮುಚ್ಚಿಕೊಂಡು ಹೊರಗೆ ಪರೋಪಕಾರದ ಸೋಗು ತೋರಿಸುತ್ತ, ಮೊದಲು ತನ್ನನ್ನು ತಾನು ತಿದ್ದಿಕೊಳ್ಳದೆ ಮಂದಿಯನ್ನು ತಿದ್ದಲಿಕ್ಕೆ ಹೋದ ಹೋದಂತೆ ಮಂದಿಯ ದುಃಖವನ್ನು ಮತ್ತಿಷ್ಟುಹೆಚ್ಚಿಸಿ, ತಾನೂ ದುಃಖರೂಪವಾದ ತಗ್ಗಿನಲ್ಲಿ ಬಿದ್ದು ನರಳುವನೆಂಬದನ್ನು ಮರೆಯಲಾಗದು. ಈ ಜಗತ್ತಿನ ವ್ಯವಹಾರಗಳು ಈಶ್ವರೀ ತಂತ್ರದಿಂದ ನಡೆಯುತ್ತಿರುವದರಿಂದ, ಜಗತ್ತನ್ನು ನಮ್ಮಂಥ ಸ್ವಾರ್ಥಪರಾಯಣರು ತಿದ್ದಿದರೆ ಅದು ತಿದ್ದುವದಿಲ್ಲ, ಕೆಡಿಸಿದರೆ ಅದು ಕೆಡುವದಿಲ್ಲ. ಶುದ್ಧ ಪರಿಸ್ಥಿತಿಯಿಂದ ಉತ್ಪನ್ನವಾಗಿದ್ದ ಈ ಜಗತ್ತು ಕೃತ–ತ್ರೇತಾ–ದ್ವಾಪರ–ಕಲಿ ಎಂಬ ಸಾಂಕೇತಿಕ ಕ್ರಮದಿಂದ ಸಾವಕಾಶ ಅಧಃಪತನ ಹೊಂದುತ್ತ ಹೊಂದುತ್ತ ಹೋಗಿ, ಪುನಃ ಪರಿಶುದ್ಧ ಸ್ಥಿತಿಯನ್ನು ಹೊಂದುತ್ತಿರುವದೂ, ಆ ಪರಿಶುದ್ಧ ಸ್ಥಿತಿಯಿಂದ ಪುನಃ ಕೆಡುತ್ತ ಕೆಡುತ್ತ ಹೋಗುವದೂ ಕಲ್ಪಾಂತರದವರೆಗೆ ಆ ಜಗತ್ತಿನ ಅಪರಿಹಾರ್ಯ ಸಿದ್ಧಾಂತವೇ ಆಗಿರುವದು. ಒಮ್ಮೆ ಇಚ್ಛಾ ಮಾತ್ರದಿಂದ ಸೃಷ್ಟಿಯನ್ನು ರಚಿಸಿರುವ ಪರಮಾತ್ಮನು, ಈ ಸಿದ್ಧಾಂತಕ್ಕೆ ಬಾಧೆ ಬಾರದಂತೆ ಆಗಾಗ್ಗೆ ಸ್ವಾರ್ಥರಹಿತರಾದ ಮಹಾತ್ಮರ ರೂಪದಿಂದ ಅವತರಿಸಿ, ಸೃಷ್ಟಿಯ ಅಸ್ತಿತ್ವವನ್ನು ಮಾತ್ರ ಕಾಯುತ್ತಿರುವನಲ್ಲದೆ, ತನ್ನ ಸಂಕೇತಕ್ಕೆ ತಪ್ಪಿ ಯುಗಾಂತರವನ್ನು ಮಾತ್ರ ಎಂದೂ ಮಾಡುವದಿಲ್ಲ. ಇಂಥ ಆಗಬಾರದ ಕೆಲಸವನ್ನು ಮಾಡಹೋಗಿ, ಅಂದರೆ ತಾವು ಕಲಿಯುಗದ ಆಚರಣೆಯವರಾಗಿದ್ದು ಕಲಿಯುಗವನ್ನು ಕೃತಯುಗವಾಗ ಮಾಡುವೆವೆಂದು ಸೋಗು ತೋರಿಸಿ ಇದ್ದ ಸ್ಥಿತಿಯನ್ನು ಸಿಕ್ಕಹಾಗೆ ಕೆಡಿಸಿ ಪರಮಾತ್ಮನ ಅವತಾರಕ್ಕೆ ಮತ್ತೆ ಆಸ್ಪದವನ್ನುಂಟುಮಾಡುವವರು ಅಸುರೀ ಮಹತ್ವಾಕಾಂಕ್ಷೆಯ ಅಹಂಕಾರಿಗಳೇ ಸರಿ. ಈ ದೃಷ್ಟಿಯಿಂದ ವಿಚಾರಿಸಿದರೆ, ಅಕಬರನಂಥ ಸಾರ್ವಭೌಮರಲ್ಲಿ ಎಷ್ಟು ಜನರು ಜಗತ್ತಿನ ಸುವ್ಯವಸ್ಥೆಗೂ, ಎಷ್ಟು ಜನರು ಜಗತ್ತಿನ ಅವ್ಯವಸ್ಥೆಗೂ ಕಾರಣರಾಗುವರೆಂಬದನ್ನು ಸ್ಪಷ್ಟವಾಗಿ ಹೇಳುವದು ತೊಡಕಿನ ಕೆಲಸವಾಗಿದ್ದು, ಈ ರೀತಿಯ ಸೃಷ್ಟಿಯು ಇರುವತನಕ ಅವ್ಯಾಹತವಾಗಿ ನಡೆಯತಕ್ಕದ್ದಾಗಿರುವದರಿಂದ ಅದನ್ನು ತಪ್ಪಿಸುವದು ಯಾರಿಗೂ ಶಕ್ಯವಲ್ಲವು.

ಹೀಗೆ ಸೃಷ್ಟಿರೂಪವಾದ ಈಶ್ವರನ ಸಂಸಾರವು, ಈಶ್ವರೀ ಸಂಕೇತದ ಹೊರತು ಒಬ್ಬರು ಕೆಡಿಸಿದರೆ ಕೆಡುವಂತಹದೂ, ಒಬ್ಬರು ನೆಟ್ಟಗೆ ಮಾಡಿದರೆ ನೆಟ್ಟಗಾಗುವಂತಹದೂ ಆಗಿರದಿದ್ದರೂ, ಅಹಂಕಾರಿಗಳಾದ ನಾವು ಯಾವದೊಂದು ಕಾರ್ಯವನ್ನು ''ನಾವು ಮಾಡಿದೆವೆಂ''ದು ಅಭಿಮಾನಪಡುವದರ ಕಾರಣವು ಏನಿರಬಹುದು? ಈ ಅಭಿಮಾನವು ನಮ್ಮಲ್ಲಿ ಹೆಚ್ಚು ಹೆಚ್ಚು ಕಸುವಿನದಾಗಿ ಇದ್ದಂತೆ ನಾವು ನಮ್ಮ ಸಂಸಾರವನ್ನು ಹೆಚ್ಚು ಹೆಚ್ಚು ಬಿಗಿಯಾಗಿ ಆಸ್ಥೆಯಿಂದ ಅಪ್ಪಿಕೊಳ್ಳುವೆವು. ಸಂಸಾರ ಮೂಲವಾದ ಈ ಅಭಿಮಾನವು ಸೃಷ್ಟಿಯಿರುವತನಕ ಸಂಸಾರಿ ಜೀವರನ್ನು ಆವರಿಸಿ ಇರತಕ್ಕದ್ದೇ ಸರಿ. ಸೃಷ್ಟಿ ಕರ್ತೃವಾದ ದೇವರು ಅಭಿಮಾನಿ ಜೀವರಂತೆ ತಾನೇ ಸೃಷ್ಟಿಕರ್ತೃವೆಂದು ಅಭಿಮಾನದಿಂದ ಹೇಳಿ, ಎಲ್ಲರ ಕಣ್ಣೆದುರಿಗೆ ನಿಂತುಬಿಟ್ಟು ತನ್ನ

ಪ್ರಭಾವದಿಂದ ಎಲ್ಲ ಜೀವರ ಪಾಮರತ್ವವನ್ನು ಅನುಭವಕ್ಕೆ ತಂದು ಕೊಟ್ಟಿದ್ದರೆ ಎಲ್ಲ ಜೀವರ ಅಭಿಮಾನದ ಪರಿತ್ಯಾಗವಾಗಿ ಅವರು ತಮ್ಮ ಯೋಗಕ್ಷೇಮದ ಭಾರವನ್ನು ದೇವರ ಮೇಲೆ ಹಾಕಿ ತಾವು ಕೈಮುಚ್ಚಿಕೊಂಡು ಕುಳಿತುಬಿಡುತ್ತಿದ್ದರು; ಆದರೆ ಇದರಿಂದ ಜೀವರ ಬಂಧ ಮೋಕ್ಷಗಳ ಸಂಪಾದನೆಯ ಸ್ವಾತಂತ್ರ್ಯವು ನಷ್ಟವಾಗಿ ಸಂಸಾರದ ಸವಿಯೇ ಕೆಟ್ಟು ಹೋಗಲು, ದೇವರು ಸಪ್ಪನ್ನ ಸಂಸಾರಮಾಡಿದನೆಂಬ ಆರೋಪಕ್ಕೆ ಗುರಿಯಾಗಬೇಕಾಗುತ್ತಿತ್ತು? ಆದ್ದರಿಂದ ದೇವರು ತನ್ನ ನಿಜವಾದ ನೆಲೆಯನ್ನು ಯಾರಿಗೂ ಹತ್ತಗೊಡದೆ, ತನ್ನ ಮೂಲಸ್ವರೂಪದ ಜ್ಞಾನವನ್ನು ಯಾರಿಗೂ ಆಗಗೊಡದೆ ''ಯೇ ಯಥಾಮಾಂ ಪ್ರಪದ್ಯಂತೆ ತಾಂಸ್ತಥೈವ ಭಜಾಮ್ಯಹ'' ಎಂಬ ಸಿದ್ಧಾಂತವನ್ನು, ಅಂದರೆ ''ಯಾರು ಹೇಗೋ ಹಾಗೆ ನಾನು'' ಎಂಬ ಸಿದ್ಧಾಂತವನ್ನು ಅವಲಂಬಿಸಿ ಈ ಸೃಷ್ಟಿಯ ವ್ಯವಸ್ಥೆಯನ್ನು ಸುಂದರವಾಗಿಯೂ, ಸವಿಯಾಗಿಯೂ ಸಾಗಿಸಿರುವನು; ಆದ್ದರಿಂದಲೇ ಈ ಜಗತ್ತಿನಲ್ಲಿ ಮುಮುಕ್ಷುಗಳಿಗಿಂತ ಸಂಸಾರಾಸಕ್ತರೇ ವಿಪುಲ ವಾಗಿರುವರು. ಈ ಗೌರವದ ಸೃಷ್ಟಿರೂಪ ಸಂಸಾರವು ಯಜಮಾನನಾದ ಈಶ್ವರನ ದರ್ಶನಾ ಭಾವದ ಮೂಲಕ, ವಾರಸದಾರರಿಲ್ಲದ ವಿಪುಲ ಇಷ್ಟೇಟಿನಂತೆ ಅಹಂಕಾರಿ ಜೀವಕೋಟಿಯ ಕೈಯಲ್ಲಿ ಅದು ಸಿಕ್ಕಹಾಗೆ ಭ್ರಾಂತಿಯುಂಟಾಗುತ್ತಿರಲು, ಆ ಜೀವಕೋಟಿಯೊಳಗಿನ ಪ್ರತಿ ಒಂದು ಜೀವವು ತನ್ನ ತಿಳುವಳಿಕೆ, ಅಭಿಮಾನ, ಸಾಮರ್ಥ್ಯಗಳ ಮಾನದಂತೆ ''ಇದು ನನ್ನದು'' ''ಇದನ್ನು ನಾನು ಮಾಡಿದೆನು'' ಎಂದು ಅಹಂಕಾರಕ್ಕೆ ಒಳಗಾಗಿ ದೇವರ ಹಕ್ಕನ್ನೇ ಹಾರಿಸುವ ನೀಚತನಕ್ಕೆ ಬೀಳುತ್ತಿರುವದು ಆಶ್ಚರ್ಯವಲ್ಲ. ಹೀಗೆ ಈಶ್ವರ ಜ್ಞಾನಶೂನ್ಯತೆಯ ಭ್ರಾಂತಿಯು ಈ ಸೃಷ್ಟಿರೂಪ ಸಂಸಾರದಲ್ಲಿ ಜೀವರಿಗೆ ಇರುತ್ತಿದ್ದರೂ, ಅದೇ ಸೃಷ್ಟಿರೂಪ ಸಂಸಾರದಲ್ಲಿ ಈಶ್ವರನು ಸೃಷ್ಟಿಪೋಷಕವಾದ ಧರ್ಮವೆಂಬ ಪಂಥವನ್ನೂ, ಸೃಷ್ಟಿ ಮಾರಕವಾದ ಅಧರ್ಮ ವೆಂಬ ಪಂಥವನ್ನೂ ಜೀವರು ನಡೆದುಹೋಗುವದಕ್ಕಾಗಿ ನಿರ್ಮಿಸಿ ಇಟ್ಟಿರುವನು; ಅದರಂತೆ ಬಾಲ್ಯದಿಂದ ಸತ್ಸಂಗಮಾಡಿ ಧರ್ಮಮಾರ್ಗದಿಂದ ಕ್ರಮಿಸಿ ಹೋಗಿ ಉತ್ತರೋತ್ತರ ಸ್ವರ್ಗಾದಿ ಉನ್ನತ ಪುರುಷಾರ್ಥಗಳನ್ನು ಪಡೆಯಲಿಕ್ಕೂ, ಬಾಲ್ಯದಿಂದ ದುಸ್ಸಂಗಮಾಡಿ ಅಧರ್ಮ ಮಾರ್ಗದಿಂದ ಕ್ರಮಿಸಿ ನರಕಾದಿ ಅನರ್ಥ ಪರಂಪರೆಗಳನ್ನು ಹೊಂದಲಿಕ್ಕೂ, ಸದ್ಗುರು ಕೃಪೆಯಿಂದ ಸರ್ವಸಂಗ ಪರಿತ್ಯಾಗಮಾಡಿ ತನಗೆ ಶರಣುಬಂದು ಮೋಕ್ಷವನ್ನು, ಅಥವಾ ಸಂಸಾರದಲ್ಲಿದ್ದೂ ಶಾಂತಿಯನ್ನು ಪಡೆಯಲಿಕ್ಕೂ ಅದೇ ಈಶ್ವರನೇ ಜೀವರಿಗೆ ಸಂಪೂರ್ಣ ಆಸ್ಪದವಿಟ್ಟಿರುವನು, ಅಥವಾ ಒಂದೇ ಬಗೆಯ ಸ್ವಾತಂತ್ರ್ಯವನ್ನು ಕೊಟ್ಟಿರುವನು. ದೇಶ–ಕಾಲ ಪರಿಸ್ಥಿತಿಗನುಸರಿಸಿ ಬೇರೆ ಬೇರೆ ಮಹಾತ್ಮರಾದ ಧರ್ಮಸ್ಥಾಪಕರು ಬೇರೆ ಬೇರೆ ಧರ್ಮಪಂಥಗಳನ್ನು ಸ್ಥಾಪಿಸಿ ಇಟ್ಟಿದ್ದರೂ, ಅವವುಗಳನ್ನು ಅನುಸರಿಸಿ ಹೋಗುವವರು ಒಂದೇ ಸ್ಥಳಕ್ಕೆ ಮುಟ್ಟುವರೆಂಬ ನಂಬಿಗೆಯು ನಿಜವಾದ ಧರ್ಮಿಷ್ಠರಲ್ಲಿ ಇರುತ್ತಿರುವದು. ಈ ದೃಷ್ಟಿಯಿಂದ ವಿಚಾರಿಸಿದರೆ, ಅಕಬರನ ಮೊದಲ ಚೂಣಿಯ ರಾಜತೃಷ್ಣೆಯಲ್ಲಿ ಚಿತ್ತೂರ ಉಧ್ವಸ್ತದಂಥ ಘೋರಕರ್ಮ ಮಾಡುವಾಗ ಸತ್ಸಂಗ ಹೀನನಂತೆ ಆತನು ತೋರಿಸಿದ ಕ್ರೂರತನವನ್ನೂ, ಅಧರ್ಮದ ದುರಭಿಮಾನವನ್ನೂ ಮನಸ್ಸಿನಲ್ಲಿ ತರಲು, ಆತನ ಆ ಕ್ರೂರಕರ್ಮಗಳು ಆತನ ಅಂತ್ಯಕಾಲದಲ್ಲಿ

ಫಲಿಸಿದವೆಂತಲೇ ಹೇಳಬೇಕಾಗುವದು; ಯಾಕಂದರೆ ಆ ಸುಪ್ರಸಿದ್ಧ ಬಾದಶಹನ ಹೊಟ್ಟೆಯ ಪ್ರೀತಿಯ ಮಾಗನಾದ ಸೇಲೀಮನೇ ಆತನ ಚಿಂತಾಗ್ನಿಯನ್ನು ಹೊತ್ತಿಸುವ ಮುಖ್ಯ ಕಾರಣವಾಗಿದ್ದನು.

ಈ ಸಂಸಾರದಲ್ಲಿ ಶ್ರೇಷ್ಠ ಸುಖವೆಂದರೆ ಸುಪುತ್ರ ಪ್ರಾಪ್ತಿಯೇ ಸರಿ. ಸುಪುತ್ರನು ತನ್ನ ಸುಚರಿತಗಳಿಂದ ತಾನು ಧನ್ಯನಾಗುವನಲ್ಲದೆ, ತನ್ನ ವಂಶವನ್ನೂ ಧನ್ಯವಾಗಮಾಡುವನು; ಆದರೆ ಇಂಥ ಧನ್ಯತೆಯು ಅಕಬರ ಬಾದಶಹನಿಗೆ ಪ್ರಾಪ್ತವಾಗದ್ದರಿಂದ ಆತನು ಎಷ್ಟು ಪುಣ್ಯಶಾಲಿಯಾದರೂ, ಎಷ್ಟು ಘನವಂತನಾದರೂ ಒಂದು ಬಗೆಯಿಂದ ಅಧನ್ಯನೇ ಸರಿ. ಸೇಲೀಮನು ದುರಾಚಾರಿಯಾಗಲಿಕ್ಕೆ ಬಾಲ್ಯದಿಂದ ಆತನಿಗಾದ ದುಸ್ಸಂಗವೇ ಕಾರಣವು. ನಮ್ಮ ನೀತಿಶಾಸ್ತ್ರವು ಮನುಷ್ಯನ ಅಪಮಾರ್ಗ ಗಮನಕ್ಕೆ ತಾರುಣ್ಯ, ಐಶ್ವರ್ಯ, ಪ್ರಭುತ್ವ, ಅವಿವೇಕತೆ ಇವು ಬೇರೆ ಬೇರೆ ಒಂದೊಂದೇಯಾದರೂ ಕಾರಣವಾಗುವವೆಂದು ಹೇಳುವದು. ಸೇಲೀಮನಲ್ಲಿಯಂತು ಈ ನಾಲ್ಕೂ ಒಟ್ಟುಗೂಡಿರುವಾಗ ಆತನಿಗೆ ದುಸ್ಸಂಗತಿಯ ಯೋಗವು ಒದಗಲು, ಆತನು ಅಮಾರ್ಗಗಾಮಿಯಾದದ್ದರಲ್ಲಿ ಆಶ್ಚರ್ಯವೇನು? ಈ ಪರಿಯ ಆತ್ಮಘಾತವು ಆಗಬಾರದೆಂತಲೇ ನಮ್ಮ ಪ್ರಾಚೀನ ರಾಜರು ಬಿಟ್ಟದ್ದ ಬಿಟ್ಟು ತಮ್ಮ ಮಕ್ಕಳಿಗೆ ಚಿಕ್ಕಂದಿನಿಂದ ಬಹುಕಾಲ ಗುರುಕುಲವಾಸದ ಯೋಗವನ್ನು ಒದಗಿಸಿ ಕೊಟ್ಟು, ಮೇಲಿನ ನಾಲ್ಕು ಬಾಧೆಗಳ ಕಸುವೂ, ವಿಷವೂ ಕಡಿಮೆಯಾಗುವಂತೆ ಮಾಡಿ, ಸತ್ಸಮಾಗಮದ ಮಹತ್ವವನ್ನು ಅರಿತುಕೊಳ್ಳುವಂತಹ ವಿವೇಕವನ್ನು ಅವರಲ್ಲಿ ಉಂಟುಮಾಡುತ್ತಿದ್ದರು; ಆದರೆ ಅಂಥ ಪವಿತ್ರ ಕರ್ತವ್ಯವನ್ನು ಮಾಡಿದ ಶ್ರೇಯಸ್ಸಿಗೆ ಅಕಬರಬಾದಶಹನು ಪಾತ್ರನಾಗದೆ, ನಮ್ಮಲ್ಲಿಯ ಮೋಹಹತನಾದ ಪೌರಾಣಿಕ ದೃತರಾಷ್ಟ್ರನಂತೆ ಅಚ್ಚೆಯಿಂದ ಮಕ್ಕಳ ಸ್ವಚ್ಛಂದವೃತ್ತಿಗೆ ಉತ್ತೇಜನವನ್ನು ಕೊಟ್ಟದ್ದರಿಂದ, ಕಾಲಕ್ಕನುಸರಿಸಿ ಏನಾಗುವದು ಆಗುತ್ತಿದ್ದರೂ ಮಕ್ಕಳನ್ನು ಕುಮಾರ್ಗ ರೂಪದಲ್ಲಿ ಕೆಡವಿದ ಆರೋಪಕ್ಕೆ ಆ ಬಾದಶಹನು ಗುರಿಯಾಗಬೇಕಾಯಿತು. ಹೀಗೆ ಸತ್ಸಮಾಗಮ ಹೀನನಾದ ಸೇಲೀಮನು ತನ್ನ ಅಯೋಗ್ಯವಾದ ಆಚರಣೆಯಿಂದ ತನ್ನ ತಂದೆಯ ದುಃಖಕ್ಕೆ ಹೇಗೆ ಕಾರಣನಾದನೆಂಬದನ್ನು ಕೆಳಗಿನ ಸಂಗತಿಗಳಿಂದ ವಾಚಕರು ಅರಿತುಕೊಂಡು, ತಮ್ಮ ಮಕ್ಕಳಿಗೆ ಈಗಿನ ಪರಿಪಾಠದಂತೆ ಚಹಾ-ಚುಟ್ಟಾಗಳಂಥ ಹಲವು ದುಷ್ಟ ವಿಷಯಗಳ ಹಾಗು ಧರ್ಮಹೀನ ಜನರ, ಸಂಗವಾಗಗೊಡದೆ ವಿವೇಕದಿಂದ ಸತ್ಸಮಾಗಮದ ಯೋಗವನ್ನು ಒದಗಿಸಿಕೊಡಲಿಕ್ಕೆ ಯತ್ನಿಸತಕ್ಕದ್ದು; ಮತ್ತು ಅದಕ್ಕಿಂತ ಮೊದಲು ಈ ಸಂಬಂಧವಾಗಿ ತಮ್ಮನ್ನು ತಿದ್ದಿಕೊಳ್ಳುವ ಯತ್ನವನ್ನು ಮಾಡತಕ್ಕದ್ದು; ಇಲ್ಲದಿದ್ದರೆ ಆತ್ಮೋದ್ಧಾರದ, ಅಥವಾ ದೇಶೋದ್ಧಾರದ ಹುರುಳಿಲ್ಲದ ನೂರಾರು ಯತ್ನಗಳು ನಿಷ್ಫಲವಾಗುವದೇ ಸರಿ.

ಅಕಬರ ಬಾದಶಹನ ರಾಜಕಾರಣದೊಳಗಿನ ಪ್ರಸಿದ್ಧ ಪುರುಷರಾದ ರಾಜಾ ಮಾನಸಿಂಹ, ಅಬುಲಫಜಲ, ಅಜೀಮಖಾನ, ಶೇರಅಫಗಾಣ ಎಂಬ ನಾಲ್ವರನ್ನು ಸೇಲೀಮನು ತನ್ನ ಶತ್ರುಗಳೆಂದು ತಿಳಿಯುತ್ತಿದ್ದನು. ಅವರಲ್ಲಿಯೂ ಮಾನಸಿಂಹನೂ, ಅಬುಲಫಜಲನೂ ಮುಖ್ಯ ಶತ್ರುಗಳು. ಮಾನಸಿಂಹನಂತು ಸೇಲೀಮನು ಸಮೀಪದ ಆಪ್ತನೆಂಬದನ್ನು ವಾಚಕರು ಬಲ್ಲರು. ಅಬುಲ ಫಜಲನೆಂಬ ವಿದ್ವಾಂಸನು ಅಕಬರನ ಜೀವದ ಗೆಳೆಯನಾಗಿದ್ದು, ಆತನ

ನಂಬಿಗೆಯ ಶ್ರೇಷ್ಠ ಮಂತ್ರಾಲೋಚಕನಾಗಿದ್ದನು. ಇವರಿಬ್ಬರೂ ಸೇಲೀಮನ ನಡತೆಗೆ ಸೇರದೆ, ಆತನ ಅಯೋಗ್ಯ ಆಚರಣೆಗಳನ್ನು ಪ್ರಸಂಗನೋಡಿ ಬಾದಶಹನ ಮುಂದೆ ಆಡಿತೋರಿಸಿ, ಖುಸ್ರುವಿನ ಗುಣಗಳನ್ನು ವರ್ಣಿಸುತ್ತಿದ್ದರು; ಆದ್ದರಿಂದ ಅಕಬರ ಬಾದಶಹನು ಇವರಿಬ್ಬರೂ, ಹಾಗು ಖುಸ್ರುವಿನ ಮಾವನಾದ ಅಜಿಮಖಾನನೂ ಸೇಲೀಮನ ವಿಷಯವಾಗಿ ದುರಭಿ ಪ್ರಾಯವುಳ್ಳವ ರಾಗಿರುವರೆಂಬದನ್ನು ಅರಿತು, ಅವರ ಮಾತುಗಳಿಗೆ ಮಹತ್ವ ಕೊಡತಕ್ಕಷ್ಟೇ ಕೊಡುತ್ತಿದ್ದನು. ಆತನಿಗೆ ಮಗನ ದುರಾಚರಣೆಯು ಸಂಪೂರ್ಣವಾಗಿ ಗೊತ್ತಿತ್ತು; ಆದರೂ ಈ ಮೂವರು ಖುಸ್ರುವನ್ನು ಪಟ್ಟಕ್ಕೆ ಕುಳ್ಳಿರಿಸುವದಕ್ಕಾಗಿ ಯತ್ನಿಸುವವರಾದದ್ದರಿಂದ, ತಮ್ಮ ಕಾರ್ಯಸಾಧನಕ್ಕಾಗಿ ಏನಾದರೂ ಬೆಳಿಸಿ ಹೇಳುತ್ತಿದ್ದರೂ ಹೇಳುತ್ತಿರಬಹುದೆಂದು ಆತನು ತಿಳಿಯುತ್ತಿದ್ದನು. ಮಗನ ಮೇಲಿನ ಮೋಹದಿಂದ ಬಾದಶಹನು ಆತನಿಗೆ ಕಠೋರ ಶಾಸನ ಮಾಡಲಿಕ್ಕೂ, ಆತನನ್ನು ದೂರಕ್ಕೆ ಕಳಿಸಲಿಕ್ಕೂ ಸಿದ್ಧನಾಗಿದ್ದಿಲ್ಲ. ಒಮ್ಮೆ ಮಾನಸಿಂಹನು— ''ಸೇಲೀಮನನ್ನು ಶೂರರಾದ ಬಂಗಾಲದ ಪಠಾಣರ ಶಾಸನ ಮಾಡುವದಕ್ಕಾಗಿ ಬಂಗಾಲದ ಅಧಿಪತ್ಯವನ್ನು ಕೊಟ್ಟು ಕಳಿಸಿದರೆ, ಆತನ ದುರಾಚರಣೆಗಳಿಗೆ ಪ್ರತಿಬಂಧವಾಗುವದೆಂ''ದು ಬಾದಶಹನಿಗೆ ಆಲೋಚನೆ ಹೇಳಿದನು; ಆದರೆ ಬಾದಶಹನು ಅದರ ಅರ್ಥವನ್ನು ವಿಪರೀತವಾಗಿ ಮಾಡಿ, ಮಗನನ್ನು ಬಂಗಾಲಕ್ಕೆ ಕಳಿಸದೆ, ತಿರುಗಿ ಮಾನಸಿಂಹನನ್ನು ಬಹಳವಾಗಿ ಗೌರವಿಸಿ, ಆತನನ್ನೇ ಬಂಗಾಲದ ಸುಬೇದಾರನನ್ನಾಗಿ ಮಾಡಿ ಕಳಿಸಿದನು. ಸೇಲೀಮನನ್ನು ಮೇವಾಡದ ರಾಣಾ ಪ್ರತಾಪಸಿಂಹನ ಮಗನಾದ ಅಮರಸಿಂಹನನ್ನು ಸ್ವಾಧೀನಪಡಿಸಿ ಕೊಳ್ಳುವದಕ್ಕಾಗಿ ಕಳಿಸುವದರಿಂದ ಆತನು ರಜಪೂತ ವೀರರನ್ನು ಸೋಲಿಸಿದ ಕೀರ್ತಿಗೆ ಪಾತ್ರನಾಗುವನೆಂದು ತಿಳಿದು ಬಾದಶಹನು ಆತನನ್ನು ಆ ರಜಪೂತ ವೀರನ ಮೇಲೆ ಕಳಿಸಿದನು; ಆದರೆ ಶೂರರಾದ ರಜಪೂತರೊಡನೆ ಕಾದುವದು ಸುಲಭವಾಗಿದ್ದಿಲ್ಲ. ಅದಕ್ಕಾಗಿ ಅಪರಿಮಿತ ಸೈನ್ಯವೂ, ಅಪಾರ ದ್ರವ್ಯವೂ ಅವಶ್ಯವಾಗಿದ್ದವು. ಅದರಂತೆ ಸೇಲೀಮನು ದ್ರವ್ಯ–ಸೈನ್ಯಗಳ ಸಹಾಯವನ್ನು ಹಟದಿಂದಬೇಡಲು, ಅಕಬರನು ಸಂತೋಷದಿಂದ ಅವನ್ನು ಮಗನಿಗೆ ಒದಗಿಸಿಕೊಟ್ಟನು. ಇದರಿಂದ ಕಾರ್ಯವೇನು ಆಗದೆ ಸೇಲೀಮನು ಅತ್ಯಂತ ಬಲಿಷ್ಠನು ಮಾತ್ರ ಆದನು.

ಮನುಷ್ಯನು ಬಡವನಿರಲಿ, ಸಾರ್ವಭೌಮನಿರಲಿ ಆತನಿಂದ ತಪ್ಪುಗಳು ಆಗಿಯೇ ಆಗುವದರಿಂದ, ಮನುಷ್ಯ ಪ್ರಾಣಿಯು ಸದಾ ತಪ್ಪುಗಳಿಗೆ ಪಾತ್ರನೆಂದು ಹೇಳಬೇಕಾಗುವದು. ಅಕಬರ ಬಾದಶಹನು ಸೇಲೀಮನನ್ನು ಬಂಗಾಲಕ್ಕೆ ಕಳಿಸದೆ ರಜಪೂತ ಸ್ಥಾನಕ್ಕೆ ಕಳಿಸಿ ಆತನನ್ನು ಬಲಿಷ್ಠನಾಗ ಮಾಡಿದ್ದು, ಸೇಲೀಮನ ಪಿತೃದ್ರೋಹ–ಬುದ್ಧಿಯ ಮೂಲಕ ತಪ್ಪೇ ಆಯಿತು. ಸೇಲೀಮನ ದುಷ್ಟ ಪರಿವಾರವು ಈ ಕಾಲದಲ್ಲಿ ಸೇಲೀಮನ ಮನಸ್ಸಿನಲ್ಲಿ ತಂದೆಯ ವಿರುದ್ಧ ಬಂಡಾಯ ಹೂಡುವ ದುರ್ಬುದ್ಧಿಯ ಬೀಜವನ್ನು ಬಿತ್ತತೊಡಗಿತು. ಈ ಕಾಲದಲ್ಲಿ ಮಾನಸಿಂಹ ನೊಡನೆ ಕೆಲವು ಬಾದಶಾಹೀ ಸೈನ್ಯವು ಬಂಗಾಲದಲ್ಲಿಯೂ, ಸ್ವತಃ ಅಕಬರ ಬಾದಶಹನೊಡನೆ ಕೆಲವು ಸೈನ್ಯವು ದಕ್ಷಿಣದಲ್ಲಿಯೂ ವಿಜಯವನ್ನು ಸಂಪಾದಿಸುವ ಕಾರ್ಯವನ್ನು ನಡಿಸಿದ್ದವು.

ಹೀಗೆ ಬಾದಶಾಹಿಯ ಸೈನ್ಯವು ಅಲ್ಲಲ್ಲಿ ವಿಭಾಗಿಸಿ ಹೋಗಿರುವದನ್ನು ನೋಡಿ ಸೇಲೀಮನ ದುಷ್ಟ ಮಿತ್ರರು ಆತನನ್ನು ಕುರಿತು—''ಹುಜೂರ, ಹೀಗೆಯೇ ಅಧಿಕಾರ ಹೀನರಾಗಿ ತಾವು ಎಷ್ಟುದಿನ ಹಾದಿಯ ನೋಡತಕ್ಕವರು? ರಾಜಾ ಮಾನಸಿಂಹ, ಹಾಗು ಅಬುಲ ಫಜಲನ ದುರ್ಬೋಧದಿಂದ ಬಾದಶಹರು ನಿಮ್ಮ ಮೇಲಿನ ಮನಸ್ಸು ತೆಗೆಯುತ್ತ ಹೋಗಿರುವರು. ಹೀಗೆಯೇ ನೀವು ಉದಾಸೀನರಾಗಿ ಕಾಲಹರಣ ಮಾಡಹತ್ತಿದರೆ, ದಿಲ್ಲಿಯ ಸಿಂಹಾಸನಕ್ಕೆ ಎರವಾಗಬೇಕಾದೀತು. ಈಗ ಬಾದಶಾಹೀ ಸೈನ್ಯವು ಬಂಗಾಲ ಪ್ರಾಂತದಲ್ಲಿಯೂ, ದಕ್ಷಿಣ ದಲ್ಲಿಯೂ ವಿಭಾಗಿಸಿ ಹೋಗಿರುವದರಿಂದ, ನೀವು ನಿಮ್ಮ ಶಕ್ತಿಯ ಉಪಯೋಗ ಮಾಡಿದರೆ ಇಡಿಯ ಹಿಂದುಸ್ಥಾನ ವಿಲ್ಲದಿದ್ದರೂ, ಅರ್ಧ ಹಿಂದುಸ್ಥಾನವಂತು ನಿಮ್ಮ ಕೈಸೇರುವದು. ಇಂಥ ಸಂಧಿಯು ಪುನಃ ದೊರೆಯಲಿಕ್ಕಿಲ್ಲ'' ಎಂದು ಉಪದೇಶಿಸಲು, ಅವರ ಆ ದುರುಪದೇಶವು ಸೇಲೀಮನ ಮನಸ್ಸಿಗೆ ಬಂದು, ಆತನು ಸೈನ್ಯದೊಡನೆ ಆಗ್ರಾಪಟ್ಟಣದ ಮೇಲೆ ಸಾಗಿ ಹೋದನು. ಅಕಬರ ಬಾದಶಹನು ದಕ್ಷಿಣಕ್ಕೆ ಹೋಗುವಾಗ ಶೂರನೂ, ಪ್ರಾಮಾಣಿಕನೂ ಆದ ಕುಲೀಜಖಾನನನ್ನು ಆಗ್ರಾ ರಾಜಧಾನಿಯ ಸಂರಕ್ಷಣಕ್ಕಾಗಿ ನಿಯಮಿಸಿ, ಯೋಗ್ಯ ವ್ಯವಸ್ಥೆ ಮಾಡಿಹೋಗಿದ್ದನು. ಸೇಲೀಮನು ರಾಜಭಂಡಾರವನ್ನು ಸ್ವಾಧೀನಪಡಿಸಿಕೊಳ್ಳುವದಕ್ಕಾಗಿ ದೊಡ್ಡ ಸೈನ್ಯದೊಡನೆ ರಾಜಧಾನಿಯ ಮೇಲೆ ಸಾಗಿಬರುತ್ತಿರಲು, ಈ ವರ್ತಮಾನವನ್ನು ಕೇಳಿ ಕುಲೀಜಖಾನನು ಕೋಟೆಯೊಳಗಿಂದ ಹೊರಗೆ ಬಂದು ಸೇಲೀಮನನ್ನು ಯೋಗ್ಯರೀತಿಯಿಂದ ಸತ್ಕರಿಸಿದನು. ಯೋಗಕ್ಷೇಮದ ವಿಚಾರವಾದನಂತರ ಕುಲೀಜಖಾನನು ಸುಲ್ತಾನ ಸೇಲೀಮನನ್ನು ಕುರಿತು—ಹುಜೂರ, ಇಷ್ಟು ದೊಡ್ಡ ಸೈನ್ಯವನ್ನು ನಾಶಗೊಳಿಸಿ ದೊರಕಿಸಿಕೊಳ್ಳುವಂತಹದು ಆಗ್ರಾದ ರಾಜಭಾಂಡಾರದಲ್ಲಿ ಏನೂ ಇರುವದಿಲ್ಲ, ತಮ್ಮ ಮನಸ್ಸಿನಲ್ಲಿ ಸಾಮರ್ಥ್ಯ ಸಂಚಯವನ್ನೂ, ದ್ರವ್ಯ ಸಂಚಯವನ್ನೂ ಮಾಡುವದಿದ್ದರೆ ತಾವು ಅಲಹಾಬಾದದ ಕೋಟೆಯನ್ನು ಸ್ವಾಧೀನಪಡಿಸಿಕೊಳ್ಳಬೇಕು. ಅಲ್ಲದೆ, ಅಯೋಧ್ಯಾ ಬಿಹಾರ ಪ್ರಾಂತಗಳೆರಡೂ ಸದ್ಯಕ್ಕೆ ಯಾರ ಸಂರಕ್ಷಣದಲ್ಲಿಯೂ ಇರದೆ ಇರುವದರಿಂದ, ಅವನ್ನು ತಾವು ಸಹಜವಾಗಿಯೇ ಸ್ವಾಧೀನಪಡಿಸಿಕೊಳ್ಳಬಹುದು. ಈಗ ಬಾದಶಹರು ದಕ್ಷಿಣದಲ್ಲಿ ದೊಡ್ಡ ವಿಜಯವನ್ನು ಸಂಪಾದಿಸಿ ಅಸಂಖ್ಯ ಸೈನ್ಯದೊಡನೆ ಇತ್ತಕಡೆಗೆ ಬರುತ್ತಿರುವ ಸುದ್ದಿಯು ಬಂದಿದೆ. ಅಂದಬಳಿಕ ಈ ಪ್ರಸಂಗದಲ್ಲಿ ತಾವು ಶತ್ರುತ್ವದಿಂದ ಇಲ್ಲಿ ಇರುವದು ಘಾತಕವಾಗಿರುವದು ಎಂದು ಹೇಳಿದನು.

ದುರ್ಗಾಧಿಪತಿಯಾದ ಕುಲೀಜಖಾನನ ಯೋಗ್ಯತೆಯನ್ನೂ, ಸಾಮರ್ಥ್ಯವನ್ನೂ ಸೇಲಿಮನು ಚನ್ನಾಗಿ ಅರಿತಿದ್ದನು; ಇದಲ್ಲದೆ ಕುಲೀಜಖಾನನನ್ನು ಸೇಲೀಮನು ತನ್ನ ಮಿತ್ರನೆಂದು ತಿಳಿದಿದ್ದನು; ಆದ್ದರಿಂದ ಆತನ ಈ ಆಲೋಚನೆಯು ಯೋಗ್ಯವಾದದ್ದೆಂದು ತಿಳಿದು ಆ ಪಿತೃದ್ರೋಹಿ ರಾಜಪುತ್ರನು ಅಲಹಾಬಾದದಕಡೆಗೆ ಹೊರಳಿದನು. ಅಯೋಧ್ಯಾ–ಬಿಹಾರ ಪ್ರಾಂತಗಳೆರಡೂ ಅನಾಯಾಸವಾಗಿ ಆತನ ಕೈಸೇರಿದವು. ಬಳಿಕ ಆತನು ಅಲಹಾಬಾದದ ಕೋಟೆಯಮೇಲೆ ತನ್ನ ನಿಶಾನೆಯನ್ನು ಏರಿಸಿ, ತನ್ನ ಹೆಸರಿನ ನಾಣ್ಯಗಳನ್ನು ಮುದ್ರಿಸಿ, ಕೆಲವು ನಾಣ್ಯಗಳನ್ನು ದುಷ್ಟತನ ದಿಂದ ಬಾದಶಹನಿಗೆ ಕಾಣಿಕೆಯಾಗಿ ಕಳಿಸಿದನು. ದಕ್ಷಿಣದಲ್ಲಿ ವಿಜಯಶಾಲಿಯಾಗಿ ಆಗ್ರಾದ

ಕಡೆಗೆ ಸಾಗಿಬರುತ್ತಿದ್ದ ಬಾದಶಹನಿಗೆ ಹಾದಿಯಲ್ಲಿಯೇ ಆ ನಾಣ್ಯಗಳು ಮುಟ್ಟಿ, ತನ್ನ ಕೃತಘ್ನ ಮಗನ ಬಂಡಾಯದ ಸುದ್ದಿಯು ಆತನಿಗೆ ಹತ್ತಿತು. ಈ ಎಲ್ಲಾ ಅನಾಯಕತ್ವವನ್ನು ನೋಡಿ ಬಾದಶಹನು ಸಿಟ್ಟು ಬೆಂಕಿಯಾದನು. ಒಂದು ಹಿಂದುಸ್ಥಾನದಲ್ಲಿ ಇಬ್ಬರು ಬಾದಶಹರಿರುವದು ತಕ್ಕವಲ್ಲವೆಂದು ತಿಳಿದು, ಬಾದಶಹನು ಸೈನ್ಯದೊಡನೆ ಅಲಹಾಬಾದದ ಕಡೆಗೆ ಸಾಗಿದನು. ಆದರೆ ಪುತ್ರಸ್ನೇಹದಿಂದ ಆತನ ಹೃದಯವು ಉಕ್ಕಿಬಂದದ್ದರಿಂದ ಆತನು ಮಗನಿಗೆ ತಿರಸ್ಕಾರವಾದದ್ದೊಂದು ಪತ್ರವನ್ನು ಬರೆದನು. ಆ ಪುತ್ರದಲ್ಲಿ ಆತನು—''ಸೇಲೀಮಾ, ನಿನ್ನ ಸಾಮರ್ಥ್ಯವೆಂದರೆ ಎಷ್ಟು? ನಿನ್ನ ತಂದೆಯಾದ ಅಕಬರನು ಹಿಂದುಸ್ಥಾನದ ಬಾದಶಹನಾಗಿರುವನು; ಅಂದಬಳಿಕ ಆತನ ವಿರುದ್ಧವಾಗಿ ನಿನ್ನ ಸಾಮರ್ಥ್ಯವು ಎಷ್ಟು ಹೊತ್ತು ನಡೆಯಬಹುದು? ನೀನು ಈಗ ಮಾಡಿರುವದನ್ನು ಸಣ್ಣ ಹುಡುಗರ ಕಿಡಿಗೇಡಿತನವೆಂದು ನಾನು ತಿಳಿದಿರುವೆನು. ನಿನ್ನ ಪ್ರೇಮದ ತಂದೆಯಾದ ನನಗೆ ನಿನ್ನ ಈ ಅಪರಾಧವು ಇನ್ನೂ ಕ್ಷಮ್ಯವಾಗಿ ತೋರುತ್ತಿರುವದು. ಈ ಪತ್ರವನ್ನು ಓದಿದಕೂಡಲೆ, ದುಷ್ಟರೂ, ಸ್ವಾರ್ಥಪರಾಯಣರೂ ಆದ ನಿನ್ನ ಮಿತ್ರರಿಗೆ ಅಪ್ಪಣೆಯನ್ನು ಕೊಟ್ಟು, ವಿಚಾರಪೂರ್ವಕವಾಗಿ ನಿನ್ನ ಅವಿಚಾರದ ಬುದ್ಧಿಯ ಸಂಶೋಧನವನ್ನು ಮಾಡು. ಸೇಲೀಮಾ, ನಾನು ಇನ್ನು ಎಷ್ಟು ದಿವಸ ಬದುಕಿ ಇರುವೆನು? ಸಿಂಹಾಸನವಂತು ನಿನ್ನದೇ ಇರುವದು. ಅಂದಬಳಿಕ ಇಂಥ ದುಷ್ಟತನವೇಕೆ ನೀನೇ ಹೇಳು? ಇನ್ನೂವರೆಗೆ ನನ್ನ ಸ್ನೇಹಮಯ ಹೃದಯವು ಕ್ಷಮಾಪೂರ್ವಕವಾಗಿ ನಿನ್ನನ್ನು ಆಲಿಂಗಿಸಲಿಕ್ಕೆ ಆತುರ ಪಡುತ್ತಿರುವದು. ನನ್ನ ಒರೆಯೊಳಗಿನ ಖಡ್ಗವು ನಿನ್ನ ವಿರುದ್ಧವಾಗಿ ಎಂದೂ ಹೊರಬೀಳಲಾರದು. ನಿನ್ನ ತಿರಸ್ಕೃತ ಕಾರ್ಯದ ಪಶ್ಚಾತ್ತಾಪವು ಸ್ವಲ್ಪವಾದರೂ ನಿನಗೆ ಆಗಿದ್ದರೆ, ಭ್ರಮೆಯಿಂದ ನಿನ್ನ ತಿಳುವಳಿಕೆಯು ತಪ್ಪಾದದ್ದು ನಿನ್ನ ಲಕ್ಷದಲ್ಲಿ ಬಂದಿದ್ದರೆ ಈ ಪತ್ರವನ್ನು ಓದಿದಕೂಡಲೆ ನೀನು ಆಗ್ರಾಕ್ಕೆ ಹೊರಟುಬಾ, ನಿಲ್ಲಬೇಡ.

ತಂದೆಯ ಈ ಪತ್ರ ಮುಟ್ಟಿದ ಕೂಡಲೆ ಸೇಲೀಮನಿಗೆ ಬಹಳ ಪಶ್ಚಾತ್ತಾಪವಾಯಿತು. ಆತನ ಹೃದಯದಲ್ಲಿ ಅಲ್ಪಸ್ವಲ್ಪ ಸಾತ್ವಿಕ ಸಾಮರ್ಥ್ಯವೂ ಉಂಟಾಯಿತು. ಆತನು ಪಶ್ಚಾತ್ತಾಪದಿಂದ—''ಉದಾರ ಹೃದಯದ ಪ್ರೇಮಲ ಸ್ವಭಾವವುಳ್ಳ ನನ್ನ ತಂದೆ ಸಾಮ್ರಾಟರವರು ಕದಾಚಿತ್ ನನ್ನನ್ನು ಕ್ಷಮಿಸಲೂಬಹುದು. ಅವರು ಬರೆದಿರುವಂತೆ ಇನ್ನಾದರೂ ಅವರು ಈ ಭೂಮಿಯಲ್ಲಿ ಎಷ್ಟು ದಿವಸ ಬಾಳಿ ಇರುವರು? ಅವರ ತರುವಾಯ ಹಿಂದುಸ್ಥಾನದ ಸಿಂಹಾಸನವು ನನ್ನದೇ ಇರುತ್ತದೆ. ನಿಜವಾಗಿಯೇ ನಾನು ಹತಭಾಗ್ಯನು, ರಾಜಕುಲದಲ್ಲಿ ಉತ್ಪನ್ನವಾಗಿ ಕಲಂಕವನ್ನುಂಟುಮಾಡಿದೆನು! ಕ್ಷಮಾಶೀಲನೂ ಸ್ನೇಹಮಯನೂ ಆದ ತಂದೆಯ ವಿರುದ್ಧವಾಗಿ ನಾನು ಶಸ್ತ್ರವನ್ನೆತ್ತಿದ್ದು ಎಂಥ ತಪ್ಪು! ಈ ಪಾಪದೊಳಗಿಂದ ನಾನು ಎಂದಾದರೂ ಮುಕ್ತನಾಗಬಹುದೋ?'' ಎಂದು ವಿಚಾರಿಸಿ, ತಂದೆಗೆ ಶರಣುಹೋಗುವದನ್ನು ನಿಶ್ಚಯಿಸಿದನು. ಈ ಕಾಲದಲ್ಲಿ ಸೇಲೀಮನ ಸ್ವಾರ್ಥಪರಾಯಣವಾದ ಮಿತ್ರಮಂಡಲವು ಅವನ ಬಳಿಯಲ್ಲಿಯೇ ಇತ್ತು, ಅದು ಸೇಲೀಮನ ಈ ಪಶ್ಚಾತ್ತಾಪಯುಕ್ತ ಉದ್ಗಾರಗಳನ್ನು ಕೇಳಿ, ಸ್ವಲ್ಪ ಚಿಂತಾತುರವಾಯಿತು; ಯಾಕಂದರೆ ಸೇಲೀಮನು ಅವರ ಕೈಯಲ್ಲಿರುವವರೆಗೆ ಅವರಿಗೆ

ಯಾವ ತರದ ಕೊರತೆಯೂ ಬರುವಹಾಗಿದ್ದಿಲ್ಲವೆಂಬದು ಸ್ಪಷ್ಟವಾದದ್ದು. ಸುಲ್ತಾನ ಸೇಲೀಮನ ಖಿನ್ನವಾದ ಮುಖಮುದ್ರೆಯನ್ನು ನೋಡಿ ಆ ಮಿತ್ರರು ಆತನಿಗೆ ತಿಳಿಯಹೇಳುವದಕ್ಕಾಗಿ ಆತನನ್ನು ಕುರಿತು—''ಇಂಥ ಹೇಡಿತನದ ಕೆಲಸ ಮಾಡಬಾರದು ಹುಜೂರ! ಯಾವ ರಾಜಕೀಯ ಬಂಡುಗಾರನನ್ನೂ ಅಕಬರ ಬಾದಶಹರು ಕ್ಷಮಿಸುತ್ತಿರುವದಿಲ್ಲ. ನೀವು ಅವರನ್ನು ಕಾಣುವದಕ್ಕೆ ಹೋದರೆ, ನಿಶ್ಚಯವಾಗಿ ಅವರು ನಿಮ್ಮನ್ನು ಸೆರೆಯಲ್ಲಿಡುವರು. ಬಳಿಕ ನಿಮ್ಮ ಮಗನಾದ ಖುಸುರುವಿಗೆ ಅನಾಯಾಸವಾಗಿ ಹಿಂದುಸ್ಥಾನದ ಸಿಂಹಾಸನದ ಪ್ರಾಪ್ತಿಯಾಗುವದು. ಇದರ ಮೇಲೆಯೂ ತಂದೆಯಬಳಿಗೆ ಹೋಗುವದೇ ನಿಮ್ಮ ನಿಶ್ಚಯವಿದ್ದರೆ, ಸಂಗಡ ದೊಡ್ಡ ಸೈನ್ಯವನ್ನಾದರೂ ತಕ್ಕೊಂಡು ಹೋಗಿರಿ. ನಾವು ತಮ್ಮ ಸೇವಕರ ಸೇವಕರಾಗಿರುವೆವು; ಆದ್ದರಿಂದ ಒಡೆಯನ ಕಲ್ಯಾಣವಾಗುವಂತೆ ಹೇಳುವದು ನಮ್ಮ ಮನಸ್ಸಿನ ವಿಚಾರವಿರುವದು; ನಮ್ಮ ಈ ಆಲೋಚನೆಯ ವಿಚಾರವನ್ನು ಖಾವಂದರವರು ಮಾಡುವಿರೆಂದು ನಾವು ಆಶಿಸುವೆವು.'' ಎಂದು ಹೇಳಿದರು. ಅವ್ಯವಸ್ಥಿತಚಿತ್ತನಾದ ಸ್ತೋತ್ರ ಪ್ರಿಯ ಸೇಲೀಮನು ತನ್ನ ಮಿತ್ರರ ಈ ಆಲೋಚನೆಗಾಗಿ ತಲೆದೂಗತೊಡಗಿದನು. ಆತನಿಗೆ ಅವರ ಮಾತು ಸಮರ್ಪಕವಾಗಿ ತೋರಿತು. ಕೂಡಲೆ ಆತನು ಅಗಣಿತ ಸೈನ್ಯದೊಡನೆ ಅಲಹಾಬಾದದಿಂದ ಹೊರಟು ಆಗ್ರಾದ ಕಡೆಗೆ ಸಾಗತೊಡಗಿದನು. ಈ ಸುದ್ದಿಯು ಕೂಡಲೆ ಬಾದಶಹರಿಗೆ ಗೊತ್ತಾಗಲು, ಅವರು ತಡಮಾಡದೆ ಸೇಲೀಮನಿಗೆ ಒಂದು ಪತ್ರವನ್ನು ಬರೆದು—''ಅಪರಿಮಿತ ಸೈನ್ಯದೊಡನೆ ಜಂಗೀಜಖಾನನ ಯಾವ ರಾಜಪುತ್ರನೂ ತಂದೆಯನ್ನು ಕಾಣಲಿಕ್ಕೆ ಬಂದದ್ದು ಯಾರಿಗೂ ಗೊತ್ತಿರುವದಿಲ್ಲ; ಸಾಮಾನ್ಯರಾದ ನಾಲ್ಕಾರುಜನ ಶರೀರ ರಕ್ಷಕ ಸೈನಿಕರನ್ನೂ, ಕೆಲವು ಜನ ಗುಲಾಮರನ್ನೂ ಸಂಗಡ ಕರಕೊಂಡು ನೀನು ಆಗ್ರಾದ ದರ್ಬಾರಕ್ಕೆ ಹಾಜರಾಗು. ಹೀಗೆ ಮಾಡುವದು ಕಠಿಣವಾಗಿ ತೋರುತ್ತಿದ್ದರೆ, ಅಥವಾ ಹೀಗೆ ಬರುವದು ನಿನ್ನ ಮನಸ್ಸಿಗೆ ಬಾರದಿದ್ದರೆ ಅಲಹಾಬಾದವನ್ನು ಬಿಟ್ಟು, ಹೊರಗೆ ಬರಲಿಕ್ಕೆ ನಿನಗೆ ಯಾವ ಕಾರಣವೂ ಇರುವದಿಲ್ಲ!! ಎಂದು ತಿಳಿಸಿದನು. ತಂದೆಯ ಈ ಪತ್ರವನ್ನು ಓದಿದಕೂಡಲೆ ಸೇಲೀಮನು ಎಚ್ಚತ್ತು ತಾನು ಅಲಹಾಬಾದಕ್ಕೇ ತಿರುಗಿ ಹೋಗುವದನ್ನು ನಿಶ್ಚಯಿಸಿ, ತನ್ನ ಉದ್ಧಟತನದ ಪಶ್ಚಾತ್ತಾಪ ದರ್ಶಕವಾದ ಒಂದು ಪತ್ರವನ್ನು ಬಾದಶಹನಿಗೆ ಕಳಿಸಿ, ಕ್ಷಮೆಯನ್ನು ಬೇಡಿಕೊಂಡನು. ಅಷ್ಟರಿಂದಲೇ ಬಾದಶಹನು ಸಂತುಷ್ಟನಾಗಿ ಸೇಲೀಮನಿಗೆ ಬಂಗಾಲ–ಬಿಹಾರ ಪ್ರಾಂತಗಳೆರಡರ ಸುಬೇದಾರಿಯನ್ನು ಕೊಟ್ಟು, ಅದರಂತೆ ರಾಜಕೀಯ ಸನದನ್ನು ಕಳಿಸಿಕೊಟ್ಟನು. ಹೀಗೆ ತನ್ನ ತಂದೆಯು ತನ್ನ ತಪ್ಪನ್ನು ಕ್ಷಮಿಸಿ, ತನ್ನ ಮೇಲೆ ಸಿಟ್ಟಾಗುವದರ ಬದಲು ತನ್ನ ಮೇಲೆ ಪ್ರೇಮ ಮಾಡುವದನ್ನೂ, ತನ್ನನ್ನು ಕಾರಾಗೃಹದಲ್ಲಿರಿಸುವ ಬದಲು ತನಗೆ ಎರಡು ಪ್ರಾಂತಗಳ ಸುಬೇದಾರಿಯ ಕೊಟ್ಟದ್ದನ್ನೂ ನೋಡಿ ಸೇಲೀಮನು ತನ್ನ ನೀಚ ಕೃತ್ಯಕ್ಕಾಗಿ ನಾಚಿದನು. ಇಂದಿನಿಂದ ಕೆಲ ದಿವಸಗಳವರೆಗೆ ತಂದೆಮಕ್ಕಳಿಬ್ಬರೂ ಪ್ರೇಮದಿಂದ ಇರತೊಡಗಿದರು.

ಇಷ್ಟಾದರೂ ಸೇಲೀಮನ ದುಷ್ಟ ಮಿತ್ರರು ಆತನ ಕೈಬಿಟ್ಟು ಹೋಗಿದ್ದಿಲ್ಲ. ಆ ಮಿತ್ರ ವರ್ಗದೊಳಗಿನವನಾದ ಒಬ್ಬ ದೊಡ್ಡ ಮಿತ್ರನು, ಅಬುಲಫಜಲನ ರೋಷಕ್ಕೆ ಪಾತ್ರನಾಗಿ

ಸೇಲೀಮನ ಬಳಿಗೆ ಬಂದವನಾಗಿದ್ದನು. ಆತನ ಮೇಲೆ ಸೇಲೀಮನ ಅತ್ಯಂತ ವಿಶ್ವಾಸವಿದ್ದದ್ದು ದುರ್ದೈವದ ಸಂಗತಿಯಾಗಿತ್ತು. ಆ ಮಿತ್ರನು ಸೇಲೀಮನನ್ನು ಕುರಿತು ಮಧುರ ಭಾಷಣ ದಿಂದ—"ಹುಜೂರ, ತಮ್ಮ ಸಿಂಹಾಸನ ಪ್ರಾಪ್ತಿಗೆ ಇಬ್ಬರು ದೊಡ್ಡ ಪ್ರತಿಬಂಧವಾಗಿರುವರು. ಅವರಲ್ಲಿ ಒಬ್ಬನಾದ ಮಾನಸಿಂಹನು ಬಂಗಾಲದ ಬಂಡಾಯವನ್ನು ಮುರಿಯುವದಕ್ಕಾಗಿ ಹೋಗಿರುವದರಿಂದ, ಆತನು ತಿರುಗಿ ಬರುವನೋ ಇಲ್ಲವೋ ಎಂಬುದು ಸಂಶಯದ ಸಂಗತಿಯಾಗಿರುತ್ತದೆ. ಮೇಲಾಗಿ ಆತನು ಬಾದಶಹರ ಅಪ್ಪಣೆ ಪಾಲಿಸುವ ಸೇವಕನಾಗಿರು ವನಲ್ಲದೆ ಮಿತ್ರನಾಗಿರುವದಿಲ್ಲ. ಆದ್ದರಿಂದ ಆತನಿಂದಾಗುವ ಪ್ರತಿಬಂದಕ್ಕಿಂತ, ಬಾದಶಹರ ನಂಬಿಗೆಯ ಮಿತ್ರನಾದ ಅಬುಲಫಜಲನಿಂದಲೇ ತಮ್ಮ ಸಿಂಹಾಸನ ಪ್ರಾಪ್ತಿಗೆ ದೊಡ್ಡ ಪ್ರತಿಬಂದ ಉಂಟಾಗುತ್ತಿರುವದು. ಬಾದಶಹರಿಗೆ ಅಬುಲಫಜಲನು ಬಹು ದೊಡ್ಡ ಯೋಗ್ಯತೆಯವನಾಗಿ ತೋರುವನು. ಅಬುಲಫಜಲನು ತಮ್ಮ ವಿಷಯವಾಗಿ ಮೇಲಿಂದಮೇಲೆ ಬಾದಶಹರ ಮನಸ್ಸು ಕೆಡಿಸುವದು ತಾವು ಅರಿಯದ ಮಾತಲ್ಲ. ಈಗ ಬಾದಶಹರು ಮುಪ್ಪಿನಿಂದಲೂ, ರೋಗದಿಂದಲೂ ಹಣ್ಣಾಗಿರುವದರಿಂದ, ತಮ್ಮ ಪಶ್ಚಾತ್ ಸಿಂಹಾಸನವನ್ನು ಯಾರಿಗೆ ಕೊಡ ಬೇಕೆಂಬದನ್ನು ಆಲೋಚಿಸುವದಕ್ಕಾಗಿಯೇ ದಕ್ಷಿಣದೇಶದೊಳಗಿಂದ ಅಬುಲಫಜಲನನ್ನು ಬೇಗನೆ ಬರಬೇಕೆಂದು ಬುದ್ಧಿಪೂರ್ವಕವಾಗಿ ಕರೆಯಕಳಿಸಿರುವರು. ಈ ಪ್ರಸಂಗದಲ್ಲಿ ನೀವು ಉದಾಸೀನ ಮಾಡಿದರೆ ಕೆಲಸವು ಕೆಡುವ ಸಂಭವವಿರುವದು; ಆದ್ದರಿಂದ ಸರ್ವಾರಿಷ್ಟಗಳಿಗೂ ಮೂಲ ಕಾರಣನಾದ ಅಬುಲಫಜಲನನ್ನು ಈ ಲೋಕದಲ್ಲಿ ಇಲ್ಲದಂತೆ ಮಾಡಿದರೆ, ತಮ್ಮ ಕಾರ್ಯವಾಗುವದು ಬಹುಮಟ್ಟಿಗೆ ಸುಲಭವಾಗುವದು. ಆದ್ದರಿಂದ ಏನಾದರೂ ಹಂಚಿಕೆ ಮಾಡಿ ಹಾದಿಯಲ್ಲಿ ಅಬುಲಫಜಲನ ಖೂನು ಮಾಡಿಸಿಬಿಡಬೇಕು; ಅಂದರೆ ನಿಮ್ಮ ಮೇಲೆ ಯಾವ ಆರೋಪವೂ ಬಾರದೆ, ಹಾದಿಯಲ್ಲಿ ಯಾರೋ ಕೊಲೆಗಡಕರು ಖೂನು ಮಾಡಿದ ರೆಂದು ಜನರು ತಿಳುವಳಿಕೆಯಾಗಿ, ನೀವು ಅಪರಾಧಮುಕ್ತರಾಗುವಿರಿ, ಎಂದು ಹೇಳಿದನು. ಮಿತ್ರನ ಈ ಆಲೋಚನೆಯು ಸೇಲೀಮನಿಗೆ ಯೋಗ್ಯವಾಗಿ ತೋರಿ, ಆತನು ವಿವೇಕ, ಧರ್ಮ, ನ್ಯಾಯಗಳನ್ನೆಲ್ಲ ಬದಿಗಿಟ್ಟು, ತನ್ನ ಪ್ರಿಯ ಮಿತ್ರನಾದ ಬುಂದೇಲಿಯ ರಾಜಾ ವೀರಸಿಂಹ ದೇವನ ಸಹಾಯದಿಂದ ಅಬುಲಫಜಲನನ್ನು ಕೊಲ್ಲುವ ಕಾರ್ಯವನ್ನು ಪೂರ್ಣಮಾಡಿದನು. ಯೋಗ್ಯ ಪ್ರಸಂಗದಲ್ಲಿ ಸ್ವಾಮಿನಿಷ್ಠ ಅಬುಲಫಜಲನ ತುಂಡರಿಸಿದ ತಲೆಯು ಅಲಹಾಬಾದಕ್ಕೆ ಬಂದುಮುಟ್ಟಿತು. ಈ ಭಯಂಕರ ವರ್ತಮಾನವನ್ನು ಕೇಳಿ ಯಾವತ್ತು ಅಮೀರ ಉಮರ ಉಮರಾವರು ಬೆದರಿಬಿದ್ದರು. ಬಾದಶಹರ ಕಿವಿಗೆ ಈ ಸುದ್ದಿಯು ಮುಟ್ಟಿದರೆ ಪರಿಣಾಮವೇ ನಾದೀತೆಂಬದರ ಅನುಮಾನವು ಯಾರಿಗೂ ಆಗದೆ, ಅವರು ಶಾಂತಿತ ಹೃದಯರಾದರು. ಬಾದಶಹರಿಗೆ ಈ ಸುದ್ದಿಯನ್ನು ಮುಟ್ಟಿಸುವ ಧೈರ್ಯವು ಯಾರಿಗೂ ಆಗಲೊಲ್ಲದು. ಮೊಗಲ ರಾಜವಂಶದೊಳಗಿನ ಯಾವನೊಬ್ಬ, ರಾಜಪುತ್ರನ ಮರಣದ ಸುದ್ದಿಯನ್ನು ತಿಳಿಸುವದಾದರೆ, ಆ ರಾಜಪುತ್ರನ ವಕೀಲನ ಬಲ ಮುಂಗೈಗೆ ಒಂದು ರೇಶಮಿಯ ರುಮಾಲವನ್ನು ಕಟ್ಟಿ ಬಾದಶಹರ ಕಡೆಗೆ ಕಳಿಸುವ ಪರಿಪಾಠವಿತ್ತು. ಅದರಂತೆ ಹೀಗೂ ಮಾಡಿ ಅಬುಲಫಜಲನ

ವಕೀಲನನ್ನು ಬಾದಶಹರ ಕಡೆಗೆ ಕಳಿಸಿದರು. ತನ್ನ ಪ್ರಿಯ ಮಿತ್ರನ ಮರಣವಾರ್ತೆಯನ್ನು ಕೇಳಿ ಬಾದಶಹನು ಅತ್ಯಂತ ದುಃಖಿತನಾದನು. ಹೀಗೆ ಬಾದಶಹನು ಬಹುದಿನ ದುಃಖಮಗ್ನ ನಾಗಿದ್ದರೂ, ಆತನ ಕಣ್ಣುಗಳೊಳಗಿಂದ ಮೊದಮೊದಲು ಒಂದು ಅಶ್ರುಬಿಂದುವೂ ಉದುರಲಿಲ್ಲ; ಆದರೆ ಮುಂದೆ ಬರಬರುತ್ತ ಬಾದಶಹನ ಈ ಅನಿವಾರ್ಯ ದುಃಖವು ಹೊಟ್ಟೆಯಲ್ಲಿ ಹಿಡಿಸಲಾರದೆ ಹೊರಬಿದ್ದು, ಅವನು ಒಂದೇಸವನೆ ಕಣ್ಣೀರು ಸುರಿಸಹತ್ತಿದನು. ರಜಪೂತ ಆಸದಖಾನನು ಅಬುಲಫಜಲನ ಮರಣದ ಹೃದಯದ್ರಾವಕ ವರ್ತಮಾನವನ್ನು ಸಾದ್ಯಂತ ವಾಗಿ ತನ್ನ ಹೃದಯಭೇದಕ ಶೋಕವಿಹ್ವಲ ಭಾಷೆಯಿಂದ ಸವಿಸ್ತಾರವಾಗಿ ಹೇಳಲು, ಅದನ್ನು, ಕೇಳಿ ಬಾದಶಹನು ತನಗಾಗುವ ಕಸಿವಿಸಿಯನ್ನು ತಾಳಲಾರದೆ ದುಃಖಾವೇಶದಲ್ಲಿ ಕೂಗಿ— ''ಹಾಯ! ಸೇಲೀಮಾ!! ಬಾದಶಹನಾಗುವ ನಿನ್ನ ಇಚ್ಛೆಯು ಇಷ್ಟು ಪ್ರಬಲವಾಗಿದ್ದರೆ, ಹೀಗೆ ನನ್ನ ಪ್ರೀಯ ಅಬುಲಫಜಲನ ಕೊಲೆಮಾಡದೆ ನೀನು ನಿನ್ನ ತಂದೆಯ ಕೊಲೆಯನ್ನು ಯಾಕೆ ಮಾಡಲಿಲ್ಲ? ಹಾಗೆ ಮಾಡಿದ್ದರೆ ನಿನ್ನ ಇಚ್ಛೆಯು ಬೇಗನೆ ಪೂರ್ಣವಾಗುತ್ತಿತ್ತು'' ಎಂದು ನುಡಿದನು.

ಈ ಕ್ರೂರತನಕ್ಕಾಗಿ ಬಾದಶಹನು ಸೇಲೀಮನ ಮೇಲೆ ಬಹಳ ಸಿಟ್ಟಾದನು. ಈ ಸಿಟ್ಟಿನ ಪರಿಣಾಮವು ಬಹಳ ಭಯಂಕರವಾದೀತೆಂದು ತಿಳಿದು, ಒಬ್ಬ ಉದಾತ್ತ ಹೃದಯದ ಸ್ತ್ರೀಯು ಆ ತಂದೆಮಕ್ಕಳ ನಡುವೆಯಾಗಿ ಅವರ ವಿತುಷ್ಟತೆಯನ್ನು ದೂರ ಮಾಡುವದಕ್ಕಾಗಿ ಬಂದಳು. ಆಕೆಯ ಹೆಸರು ''ಸುಲ್ತಾನಾ ಸೇಲೀಮಾ ಬೇಗಮ'' ಎಂಬದಾಗಿತ್ತು, ಈಕೆಯು ಅಕಬರ ಬಾದಶಹನ ಅತ್ಯಂತ ಸುಂದರಳಾದ ಪ್ರೀಯ ಬೇಗಮೆಯಾಗಿದ್ದಳು. ಸುಲತಾನ ಸೇಲೀಮನಿಗೆ ಮಾತೃವಿಯೋಗವಾದನಂತರ ಆತನು ಈಕೆಯನ್ನೇ ತಾಯಿಯೆಂದು ತಿಳಿದು ನಡೆದು ಕೊಂಡದ್ದರಿಂದ, ಈಗ ಆ ಬೇಗಮೆಯು ಪುತ್ರ ಪ್ರೇಮದಿಂದ ಮಧ್ಯಸ್ತಿಕೆಯ ಕೆಲಸವನ್ನು ಮಾಡಿದಳು. ''ಅಂಗಾಲಿಗೆ ಹೇಸಿಗೆಯಿಲ್ಲ, ಕರಳಿಗೆ ನಾಚಿಕೆಯಿಲ್ಲ'' ಎಂಬಂತೆ ಅಕಬರ ಬಾದಶಹನು ಪುನಃ ಸೇಲೀಮನನ್ನು ಪ್ರೀತಿಸತೊಡಗಿದನು. ಅವರಿಬ್ಬರ ಆ ಪ್ರೇಮದ ವ್ಯವಹಾರವನ್ನು ನೋಡಿದರೆ, ಇನ್ನುಮೇಲೆ ಈ ತಂದೆ ಮಕ್ಕಳಲ್ಲಿ ಎಂದೂ ವಿತುಷ್ಟತೆ ಯುಂಟಾಗದೆಂದು ಯಾರಿಗಾದರೂ ತೋರುವಹಾಗಿತ್ತು; ಆದರೆ ಅಕಬರ ಬಾದಶಹನು ಅಂಥ ಸುದೈವಿಯಾಗಿದ್ದಿಲ್ಲ. ಯುದ್ಧಕಾರ್ಯದಲ್ಲಿ ತೊಡಗಿಹೋದರೆ ದುಷ್ಟ ಮಿತ್ರರ ತೆಕ್ಕೆಯೊಳಗಿಂದ ಸೇಲೀಮನು ಬಿಡುಗಡೆ ಹೊಂದಿಯಾನೆಂದು ತಿಳಿದು, ಅಕಬರನು ಪುನಃ ಮಗನನ್ನು ಉದೇಪುರದ ರಜಪೂತರ ಮೇಲೆ ಸಾಗಿ ಹೋಗಲು ಆಜ್ಞಾಪಿಸಿದನು. ಆದರೆ ಸುಖವಿಲಾಸ ಮಗ್ನನಾದ ಸೇಲೀಮನು ಈಗೂ ಮೊದಲಿನಂತೆಯೇ ಬೇರೆ ಬೇರೆ ಬಗೆಯ ತೊಂದರೆಯ ಕಾರಣಗಳನ್ನು ಬಾದಶಹನ ಮುಂದೆ ಓದಿಕೊಳ್ಳಹತ್ತಿದನು; ಆದ್ದರಿಂದ ಬಾದಶಹನು ಪುನಃ ಅಲಹಾಬಾದಕ್ಕೆ ಹೋಗಲು ಆಜ್ಞಾಪಿಸಿದನು. ಸೇಲೀಮನು ಅಲಹಾಬಾದಕ್ಕೆ ಬಂದಬಳಿಕ ಪೂರ್ಣ ಸ್ವಾತಂತ್ರ್ಯದಿಂದ ನಡೆಯತೊಡಗಿದನು. ದುಷ್ಟರೂ, ಸ್ವಾರ್ಥಪರಾಯಣರೂ ಆದ ಮಿತ್ರರು ನಾಲ್ಕೂ ಕಡೆಯಿಂದ ಅವನನ್ನು ಸುತ್ತಿಕೊಂಡರು. ಮತ್ತೆ ಮದ್ಯ–ಅಫುಗಳ ಸೇವನವು

ಮಿತಿಮೀರಿ ಆಗತೊಡಗಿತು. ದಿನದಿನಕ್ಕೆ ಸೇಲೀಮನು ಅಧಃಪತನವನ್ನು ಹೊಂದುತ್ತ ಹೊಂದುತ್ತ ಕೆಳಕೆಳಗೆ ಹೋಗತೊಡಗಿದನು. ಈ ಎಲ್ಲ ವರ್ತಮಾನವು ಗುಪ್ತಚಾರರ ಮುಖಾಂತರ ಪ್ರತಿದಿನ ಬಾದಶಹರ ಕಿವಿಗೆ ಮುಟ್ಟಿ, ಅವರು ಶೋಕವಿಹ್ವಲರಾಗಿ ಉಸುರ್ಗರೆದು ಒಳ ಒಳಗೇ ಸಣ್ಣಾಗತೊಡಗಿದರು.

ಮಗನ ಈ ಅಧಃಪತನವನ್ನು ನೋಡಿ ಈತನನ್ನು ಹೀಗೆಯೇ ಬಿಟ್ಟರೆ ಈತನು ಕೆಲಸಕ್ಕೆ ಬಾರದೆ ಹೋಗುವನೆಂದು ತಿಳಿದು, ಅಕಬರಬಾದಶಹನು ಅಂಜಿಕೆ ತೋರಿಸಿ ಮಗನನ್ನು ಹಾದಿಗೆ ತರುವದಕ್ಕಾಗಿ ಸೈನ್ಯದೊಡನೆ ಅಲಹಾಬಾದದ ಕಡೆಗೆ ಸಾಗಿದನು. ಆತನು ದೊಡ್ಡ ಸೈನ್ಯದೊಡನೆ ಯಮುನಾ ನದಿಯನ್ನು ದಾಟಿ ಸ್ವಲ್ಪದೂರ ಹೋಗುತ್ತಿರುವದರೊಳಗೆ, ತನ್ನ ತಾಯಿಯಾದ ಹಮೀದಾಬಾನುವು ಅತ್ಯಂತ ರೋಗಪೀಡಿತಳಾಗಿರುವಳೆಂಬ ಸುದ್ದಿಯು ಆತನಿಗೆ ಹತ್ತಿತು. ಅಕಬರನು ಕೇವಲ ಮಾತೃಭಕ್ತನಾಗಿದ್ದು, ತಾಯಿಯನ್ನು ಸಾಕ್ಷಾತ್ ದೇವಿಯೆಂದು ತಿಳಿದು ಆಕೆಯನ್ನು ಪೂಜಿಸುತ್ತಿದ್ದನು. ತನ್ನ ತಾಯಿಯು ಮರಣೋನ್ಮುಖಳಾಗಿರುವದನ್ನು ಕೇಳಿ ಖಿನ್ನನಾಗಿ ಜಡ ಮನಸ್ಸಿನಿಂದ ಆತನು ತಿರುಗಿ ಆಗ್ರಾ ಪಟ್ಟಣಕ್ಕೆ ಬಂದನು; ಆದರೆ ಎಷ್ಟು ಪ್ರಯತ್ನ ಮಾಡಿದರೂ ತಾಯಿಯನ್ನು ಬದುಕಿಸಿಕೊಳ್ಳುವದು ಆತನಿಂದಾಗಲಿಲ್ಲ. ತಾಯಿಯ ವಿಯೋಗದಿಂದ ಕಣ್ಣೀರು ಸುರಿಸುವ ಬಾಲಕನಂತೆ ಅಕಬರಬಾದಶಹನು ಶೋಕವಿಹ್ವಲ ನಾಗಿ, ಅಂತ್ಯಸಂಸ್ಕಾರಕ್ಕಾಗಿ ತಾಯಿಯ ಶವಹಾಕಿದ ಪೆಟ್ಟಿಗೆಯನ್ನು ಹೊತ್ತುಕೊಂಡು ಬರಿಗಾಲು ಬಕ್ಕನೆತ್ತಿಯಿಂದ ತನ್ನ ತಂದೆಯಾದ ಹುಮಾಯೂನನ ಕಬರಸ್ಥಾನದ ಹಾದಿಯನ್ನು ಹಿಡಿದನು. ಅಸಂಖ್ಯ ಅಮೀರ ಉಮರಾವರು ಆತನಂತಹ ಉಡಿಗೆ ತೊಡಿಗೆಗಳಿಂದ ಆತನನ್ನು ಹಿಂಬಾಲಿಸಿ ನಡೆದಿದ್ದರು. ಇರುವೆಯಂತೆ ಅಗಣಿತ ಸೈನ್ಯವು ಆಗ್ರಾ ಪಟ್ಟಣದ ರಾಜಬೀದಿಯನ್ನು ಹಿಡಿದು ನಿಂತುಕೊಂಡು, ಆ ಮೃತ ಸಾಮ್ರಾಟ್ ಜನನಿಯನ್ನು ಸನ್ಮಾನಿಸುತ್ತಲಿದ್ದಿತು. ಬಾದಶಹನು ಮೃತದೇಹವನ್ನು ಸಮಾಧಿಸ್ಥವಾಗಿ ಮಾಡಿ ಆಗ್ರಾದ ಅರಮನೆಗೆ ಬಂದನು. ಆತನು ಯಾವತ್ತು ಸುಖವಿಲಾಸಗಳನ್ನೂ, ಮುತ್ತು ರತ್ನಗಳ ಹಾರಗಳನ್ನೂ, ಅಂಗಾಂಗಗಳಲ್ಲಿ ಶೋಭೆಯನ್ನುಂಟು ಮಾಡುವ ಬೇರೆ ವಸ್ತು ವ್ಯವಹಾರಗಳನ್ನೂ ಬಿಟ್ಟು, ಶೋಕಮಯ ಹೃದಯದಿಂದ ದಿನಗಳನ್ನು ಕಳೆಯಹತ್ತಿದನು. ಮೊದಲೇ ಮಗನ ಉದ್ಧಟತನದ ನಡಾವಳಿಯಿಂದ ಚಿಂತಾತುರನಾಗಿದ್ದ ಬಾದಶಹನಿಗೆ ಈ ಮಾತೃವಿಯೋಗ ದುಃಖವು ಅತ್ಯಂತ ದುಸ್ಸಹವಾಯಿತು. ಅತ್ತ ಸೇಲೀಮನಿಗೆ ತನ್ನ ಅಮ್ಮನ ಈ ಮರಣ ವಾರ್ತೆಯು ಹತ್ತಲು, ಆತನು ದುಃಖಿತನಾಗಿ ಹೃದಯ ಕರಗಿ ತಂದೆಯ ಮೇಲಿನ ಸಿಟ್ಟುಬಿಟ್ಟು, ನೆಟ್ಟಗೆ ಆಗ್ರಾ ಪಟ್ಟಣಕ್ಕೆ ಬಂದು ತಂದೆಯ ಚರಣಕ್ಕೆರಗಿ ಪುನಃ ತಂದೆಯ ಕ್ಷಮೆಬೇಡಿ ಅಮ್ಮನ ಮರಣಕ್ಕಾಗಿ ಕಣ್ಣೀರು ಸುರಿಸಿದನು. ಸೇಲೀಮನ ಈ ಅಶ್ರುಪ್ರವಾಹದಲ್ಲಿ ಬಾದಶಹನ ಸಿಟ್ಟು–ವೈರಾಗ್ಯ–ಔದಾಸೀನ್ಯಗಳೆಲ್ಲ ತೇಲಿಹೋಗಿ, ಈ ವಿಲಕ್ಷಣ ಯೋಗದಿಂದ ಪುನಃ ತಂದೆ ಮಕ್ಕಳು ಕೂಡಿಕೊಂಡರು; ಆದರೂ ಬಾದಶಹನ ಹೃದಯಕ್ಕೆ ಮಗನ ಅಯೋಗ್ಯಾಚಾರಣೆಗಳಿಂದ ಪುನಃ ಪುನಃ ಆಗುತ್ತ ಬಂದಿದ್ದ ಆಘಾತಗಳಿಂದ ಅವನು ತೀರ ಜರ್ಜರನಾದನು.

ಅಕಬರಬಾದಶಹನು ಎಂಥ ದೊಡ್ಡ ಸಾರ್ವಭೌಮನಾದರೂ, ಆತನು ಸಾರ್ವಭೌಮರ ಸಾರ್ವಭೌಮನಾದ ಪರಮೇಶ್ವರನ ತಂತ್ರಕ್ಕೆ ಹೊರಗಾದವನಿದ್ದಿಲ್ಲ. ಸಂಸಾರ ಧರ್ಮದಂತೆ ಆ ಬಾದಶಹನ ಉತ್ಕರ್ಷದ ಹಾಗು ಸುಖದ ಕಾಲವು ಮುಗಿದಕೂಡಲೆ ಆತನ ಅಪಕರ್ಷದ ಹಾಗು ದುಃಖದ ಕಾಲಕ್ಕೆ ಆರಂಭವಾಗಿ, ಇಲ್ಲದ ಚಿಂತಾ–ಕ್ಲೇಶಗಳಿಂದ ಮುಪ್ಪಿನ ಕಾಲದಲ್ಲಿ ಆತನು ಕೊರಗಹತ್ತಿದನು. ಸಿಂಹಾಸನದ ಭಾವೀ ಅಧಿಕಾರಿಯಾದ ಮಗ ಸೇಲೀಮನು ಉದ್ಧಟನಾದ ದುಃಖವೊಂದು, ತನ್ನ ತಂದೆಯ ಸಮಾನವೆಂದು ತಿಳಿದುಕೊಂಡಿದ್ದ ಪ್ರೀಯ ಮಿತ್ರ ಅಬುಲಫಜಲನ ಅಕಾಲದ ಕೊಲೆಯ ದುಃಖವೊಂದು, ದಾರುಣವಾದ ಮಾತೃವಿಯೋಗದ ದುಃಖವೊಂದು ಈ ಬಗೆಯ ಹಲವುಬಗೆಯ ದುಃಖಗಳಿಂದ ತಳಮಳಿಸುತ್ತಿರುವಾಗ, ಬಾದಶಹನ ಪ್ರೀಯ ಪುತ್ರನಾದ ದಾನಿಯಲನ ಮರಣವಾರ್ತೆಯ ದುಃಖವು ಬಾದಶಹನನ್ನು ಇರಿಯ ಹತ್ತಿತು! ಈಗಿನ ಅಕಬರಬಾದಶಹನ ದುಃಖವನ್ನು ನೋಡಿ ಪಾಷಾಣ ಹೃದಯವೂ ಕರಗಬಹುದಾಗಿತ್ತು. ಮಕ್ಕಳಲ್ಲಿ ಮುರಾದನು ಹೋದನು, ಬಾನಿಯಲನು ಹೋದನು, ಉಳಿದಿದ್ದ ಸೇಲೀಮನು ಉದ್ಧಟನಾಗಿ ಯಾವಾಗಲೂ ತ್ರಾಸ ಕೊಡತೊಡಗಿದನು. ಆದರೂ ಎಲ್ಲ ಮಕ್ಕಳನ್ನು ಕಳಕೊಂಡಿದ್ದ ಬಾದಶಹನು ಆ ಕೃತಘ್ನ ಸೇಲೀಮನನ್ನೇ ಅಂತರಂಗದಲ್ಲಿ ಪ್ರೀತಿಸತೊಡಗಿದನು; ಆದ್ದರಿಂದ ಸಾಂಸಾರಿಕ ವ್ಯಾಮೋಹಗಳು ಬಹು ಬಲಿಷ್ಠವಾದವೆಂದು ಹೇಳಬೇಕಾಗುವದು!

ಹೀಗೆ ಹಲವು ಬಗೆಯ ಚಿಂತೆಗಳಿಂದ ಹಣ್ಣಾಗಿದ್ದ ಬಾದಶಹನನ್ನು ತೀರ ನೆಲಪಟ್ಟು ಮಾಡಿದ್ದೊಂದು ಪ್ರಸಂಗವನ್ನು ವಾಚಕರಿಗೆ ಹೇಳಿ ಈ ಐತಿಹಾಸಿಕ ಸಂಗತಿಗಳನ್ನು ಮುಗಿಸಿ ಕಾದಂಬರಿಯ ಕಡೆಗೆ ಹೊರಳೋಣ. ಪ್ರಸಂಗವೆಂದರೆ, ಸೇಲೀಮನಿಗೂ ಆತನ ಮಗ ಖುಸ್ರೂವಿಗೂ ಬದ್ಧದ್ವೇಷ ಉಂಟಾದದ್ದು. ರೋಗ ಪೀಡಿತನಾದ ಬಾದಶಹನು ತನ್ನ ಮನಸ್ಸು ರಮಿಸುವದಕ್ಕಾಗಿ ಹಲವು ಮನೋರಂಜಕ ಆಟನೋಟಗಳನ್ನು ಆಗಾಗ್ಗೆ ಮಾಡಿಸುತ್ತಿದ್ದನು. ಆನೆಗಳ, ಹುಲಿಗಳ, ಚಿರ್ಚುಗಳ ಕಾದಾಟ ನೋಡುವದರಲ್ಲಿ ಬಾದಶಹನ ಪ್ರೀತಿ ಬಹಳ. ಬಹಳ ಹೇಳುವದೇನು? ಜೇಡ ಹುಳಗಳ ಕಾದಾಟ ನೋಡಿಯೂ ಬಾದಶಹನು ಆನಂದಪಡುತ್ತಿದ್ದನು. ಒಮ್ಮೆ ಆತನು ರಾಜಪುತ್ರರ ಆನೆಗಳ ಕಾದಾಟವನ್ನು ನೋಡಲಿಚ್ಛಿಸಿ ಅದರ ಸಿದ್ಧತೆಯನ್ನು ಮಾಡಲು ಆಜ್ಞಾಪಿಸಿದನು. ಕರ್ಮಧರ್ಮ ಸಂಯೋಗದಿಂದ ಈ ಕಾಲದಲ್ಲಿ ಖುಸ್ರುವು ಪ್ಯಾರೀಬಾನುವಿನೊಡನೆ ಆಗ್ರಾಕ್ಕೆ ಬಂದಿದ್ದನು; ಸೇಲೀಮನೂ ಆಗ್ರಾದಲ್ಲಿಯೇ ಇದ್ದನು. ದುರ್ದೈವದಿಂದ ಇವರಿಬ್ಬರ ಆನೆಗಳೇ ಕಾದಾಡಬೇಕೆಂದು ಬಾದಶಹನ ಅಪ್ಪಣೆಯಾಯಿತು. ಖುಸ್ರುವಿನ ಕಾದಾಟದ ಆನೆಯ ಹೆಸರು ''ಅಪರೂಪ'' ಎಂಬದಾಗಿತ್ತು, ಇತಿಹಾಸಕಾರರು ಆ ಆನೆಯ ಹೆಸರು ''ಚಂಚಲ'' ಎಂದು ಇತ್ತೆಂತಲೂ ಬರೆದಿರುವರು. ಅದರಂತೆ ಸೇಲೀಮನ ಪರಾಕ್ರಮಿಯಾದ ಆನಯೆ ಹೆಸರು ''ಜಿರಾನಬಾರ'' ಎಂಬದಾಗಿತ್ತು, ಬಾದಶಹನ ಅಪ್ಪಣೆಯಂತೆ ಇವೆರಡೂ ಆನೆಗಳನ್ನು ಕಾದಾಡಲು ಸಜ್ಜುಮಾಡಿದರು. ಈ ಆನೆಗಳ ಕಾದಾಟವು ಬಹು ಭಯಂಕರವಾದದ್ದು. ಬಲಿಷ್ಠ ಆನೆಯು ತನ್ನ ಶತ್ರುವನ್ನು ಸಂಹರಿಸದೆ ಇರುತ್ತಿದ್ದಿಲ್ಲ. ಆನೆಗಳು ಕಾದಾಡುತ್ತಿರುವಾಗ ಯಾವದೊಂದು ಆನೆಯು ಸೋತರೆ, ಕೂಡಲೆ ಆ ಆನೆಗಳ ಕಾದಾಟವನ್ನು

ನಿಲ್ಲಿಸುವದಕ್ಕಾಗಿ ಬೇರೊಂದು ಮೂರನೆಯ ಆನೆಯನ್ನು ಸಿದ್ಧಮಾಡಿ ಇಟ್ಟಿರುವರು. ಅದಕ್ಕೆ ''ತವಂಚಾ'' ಎಂಬ ಹೆಸರು. ಆಮಧ್ಯಸ್ಥ ಆನೆಯು ಆ ಎರಡೂ ಆನೆಗಳ ನಡುವೆಯಾಗಿ ಕಾದಾಟವನ್ನು ನಿಲ್ಲಿಸುವದು. ಈ ಯಾವತ್ತೂ ಸಮರ–ಕುಂಜರಗಳು ಅತ್ಯಂತ ಸುಶಿಕ್ಷಿತ ವಾಗಿದ್ದು, ಅವುಗಳ ಬೆಲೆಯಾದರೂ ಬಹಳ ಇರುತ್ತಿತ್ತು. ಬಾದಶಹನು ಯಾವತ್ತು ಪರಿವಾರ ದೊಡನೆ ಸಿದ್ಧಮಾಡಿದ್ದ ರಣರಂಗದಲ್ಲಿಯ ಆಸನಗಳ ಮೇಲೆ ಕುಳಿತಿರುವಾಗ ಇಬ್ಬರು ರಾಜಪುತ್ರರ ಆನೆಗಳ ಕಾದಾಟಕ್ಕೆ ಆರಂಭವಾಯಿತು. ಆ ಸೊಕ್ಕಿದ ಆನೆಗಳು ರಭಸದಿಂದ ಕಾದುತ್ತಿರುವಾಗ ಸೇಲೀಮನ ಆನೆಯು ಖುಸ್ರುವಿನ ಆನೆಯನ್ನು ಹಣ್ಣಿಗೆ ತಂದು ಸೋಲಿಸುತ್ತಿರಲು, ಬಾದಶಹನ ಅಪ್ಪಣೆಯಿಂದ ಮಧ್ಯಸ್ಥ ಆನೆಯನ್ನು ಕಾದಾಟ ನಿಲ್ಲಿಸುವದಕ್ಕಾಗಿ ಬಿಟ್ಟರು. ಆಗ ಸೇಲೀಮನ ಕಡೆಯವರು ಆ ಮಧ್ಯಸ್ಥ ಆನೆಯನ್ನು ಕಲ್ಲು ಒಗೆದು ಹಿಂದಕ್ಕಟ್ಟ ಹತ್ತಿದರು. ಇದನ್ನು ನೋಡಿ ಖುಸ್ರುವು ಅಭಿಮಾನದಿಂದ ಸಿಟ್ಟಿಗೆದ್ದು, ತನ್ನ ತಂದೆಯ ಹಂಗು ಇಡದೆ ಬಾಯಿಗೆ ಬಂದಂತೆ ಮಾತಾಡತೊಡಗಿದನು. ಹೀಗೆ ತಂದೆಮಕ್ಕಳ ನಡುವೆ ವಾದಿಸಾಟವಾಗಿ ಉಭಯರ ಮನಸ್ಸು ಕಲುಷಿತವಾದದ್ದು ಬಾದಶಹನ ದುಃಖಕ್ಕೆ ಕಾರಣವಾಯಿತು. ಮನೋರಂಜನಕ್ಕಾಗಿ ಹೂಡಿದ ಆಟದಿಂದ ಮನಸ್ತಾಪವಾದದ್ದಕ್ಕಾಗಿ ಬಾದಶಹನು ವಿಷಾದಪಟ್ಟು, ಯುದ್ಧಭೂಮಿ ಯಿಂದ ಎದ್ದು ಹೋಗಿ ಬಿಟ್ಟನು. ಕೂಡಿದ ಜನರಲ್ಲಿ ತನ್ನ ಮಗ ಖುಸ್ರುವು ತನ್ನ ಅಪಮಾನ ಮಾಡಿದ್ದಕ್ಕಾಗಿ ಸೇಲೀಮನು ಕ್ಷುಬ್ಧನಾಗಿ ಮಗನನ್ನು ದ್ವೇಷಿಸಹತ್ತಿದನು. ಈ ಆನೆಯ ಕಾದಾಟದ ಅಲ್ಪ ಕಾರಣವೇ ಅಕಬರಬಾದಶಹನನ್ನು ಹಾಸಿಗೆ ಹಿಡಿಸಿತು. ಹೀಗೆ ಒಮ್ಮೆ ಹಾಸಿಗೆ ಹಿಡಿದ ಬಾದಶಹನು ತಿರುಗಿ ಏಳಲೇ ಇಲ್ಲ. ಆನೆಯ ಕಾದಾಟದ ಪರಿಣಾಮವೇ ಹೀಗೆ ಗೃಹಕಲಹವನ್ನು ಹೆಚ್ಚಿಸಲಿಕ್ಕೆ ಕಾರಣವಾಯಿತು. ಬಲವಿಲ್ಲದಾಗ ನೆಲವೆದ್ದು ಬಡಿಯಿತೆಂಬ ಮಾತು ಸುಳ್ಳಲ್ಲ. ಬಾದಶಹನಿಗೆ ಬಲವಿಲ್ಲದಾಗಲು, ಹೀಗೆ ಒಂದಿಲ್ಲೊಂದು ಕಾರಣಗಳು ಆತನ ಶಾಂತಿಯ ಭಂಗಕ್ಕೆ ಕಾರಣವಾದವು. ಅಂದಬಳಿಕ ಆ ಶಾಂತಿಹೀನನಿಗೆ ಸುಖವೆಲ್ಲಿಂದ ದೊರೆಯಬೇಕು?

ಕೆಟ್ಟ ಚಟದ ಸುಂಕ

ಮಾನಸಿಂಹನ ಉಪದೇಶದಂತೆ ಚಾರಣೆಯ ವೇಷದಿಂದ ಮಂದಾಕಿನಿಯು ಪ್ಯಾರಿ ಬಾನುವಿನ ಹೃದಯದಲ್ಲಿ ಅಸುರೀ ಮಹತ್ವಾಕಾಂಕ್ಷೆಯ ವಿಷವನ್ನು ಸುರವುವ ತನ್ನ ಕಾರ್ಯವನ್ನು ಮಾಡಿದಬಳಿಕ ಆಕೆಯು ಅಂಬರ ರಾಜಧಾನಿಗೆ ಬಂದಳು. ಆಕೆಯ ಗಂಡನಾದ ದುರ್ಜಯ ಸಿಂಹನನ್ನು ಬಂಧಮುಕ್ತಮಾಡುವ ವ್ಯವಸ್ಥೆಯನ್ನು ಮಾನಸಿಂಹನು ಇನ್ನೂ ಮಾಡಿದ್ದಿಲ್ಲ; ಆದರೆ ಅಂಬರಾಧೀಶ್ವರನು ದುರ್ಜಯಸಿಂಹನಿಗೆ ಕಾರಾಗೃಹವಾಸದ ಯಾವ ಬಗೆಯ ಕಷ್ಟವೂ ತಗಲದಂತೆ ವ್ಯವಸ್ಥೆ ಮಾಡಿದ್ದನಲ್ಲದೆ, ಮಂದಾಕಿನಿಗೆ ಗಂಡನನ್ನು ಕಾಣಲಿಕ್ಕೆ ಬೇಕಾದಾಗ ಹೋಗಲು ಮುಕ್ತದ್ವಾರ ಮಾಡಿದ್ದನು. ಅಂಬರ ರಾಜಧಾನಿಯಿಂದ ರತನಗಡವು ಎರಡು

ಹರದಾರಿಯಿದ್ದದ್ದರಿಂದ, ದಿನಾಲು ಮಂದಾಕಿನಿಯು ಅಲ್ಲಿಗೆ ಹೊಗದಿದ್ದರೂ, ಆಗಾಗ್ಗೆ ಪತಿಯ ದರ್ಶನಕ್ಕಾಗಿ ಹೋಗುತ್ತಿದ್ದಳು. ಮಾನಸಿಂಹನು ಪತ್ತೇಪುರ ಸಿಕ್ರಿಗೆ ಹೋದಬಳಿಕ ಒಂದು ದಿನ ಮಂದಾಕಿನಿಯು ರತನಗಡಕ್ಕೆ ಹೋಗಲು, ದುರ್ಜಯಸಿಂಹನು ಕಾರಾಗೃಹದಲ್ಲಿದ್ದಿಲ್ಲ. ಅದನ್ನು ನೋಡಿ ಮಂದಾಕಿನಿಗೆ ಆಶ್ಚರ್ಯವಾಯಿತು. ಅತ್ತಿತ್ತ ಆಕೆಯು ಪತಿಯ ವರ್ತಮಾನವನ್ನು ಕೇಳಲು, ಆತನು ಎಲ್ಲಿಯೋ ಓಡಿಹೋದನೆಂದು ಜನರು ಆಕೆಗೆ ಹೇಳಿದರು; ಕಾರಾಗೃಹದ ಕಾವಲುಗಾರರೂ ಆಕೆಗೆ ಹೀಗೆಯೇ ಹೇಳಿದರು; ಆದರೆ ಸ್ವಾಭಿಮಾನಿಯಾದ ದುರ್ಜಯಸಿಂಹನು ಹೀಗೆ ಕಳ್ಳನಂತೆ ಓಡಿಹೋಗಿರಬಹುದೆಂಬದು ಮಂದಾಕಿನಿಗೆ ವಿಶ್ವಾಸನೀಯವಾಗಿ ತೋರ ಲೊಲ್ಲದು. ಹಿಂದಕ್ಕೆ ತಾನು ಮುದ್ರಿಕೆಯನ್ನು ಒಯ್ದು ಓಡಿಸಬೇಕೆಂದು ಯತ್ನಿಸಿದಾಗ ತನ್ನ ಪತಿಯ ಸ್ವಾಭಿಮಾನದ ನಿರ್ಧಾರವನ್ನು ಆಕೆಯು ಚನ್ನಾಗಿ ಅರಿತಿದ್ದಳು; ಆದ್ದರಿಂದ ಆಕೆಯು ತನ್ನ ಪತಿಯು ಅದೃಶ್ಯನಾದ ಬಗ್ಗೆ ಬಗೆಬಗೆಯ ದುರಾಲೋಚನೆಗಳನ್ನು ಮಾಡತೊಡಗಿದಳು. ಆದರೆ ಅವುಗಳಲ್ಲಿ ಒಂದೂ ಸಮರ್ಪಕವಾಗಲೊಲ್ಲವು. ಆ ದುರಾಲೋಚನೆಗಳ ಕಟ್ಟ ಕಡೆಯಲ್ಲಿ ಆಕೆಯು ತನ್ನ ಪತಿಯ ಮರಣವನ್ನೇ ಹೊಂದಿರುವನೆಂದು ನಿಶ್ಚಯಿಸಿದಳು! ಆದರೆ ಯಾರಿಂದ ತನ್ನ ಪತಿಯು ಮರಣಹೊಂದಿರಬಹುದೆಂಬದರ ನಿಶ್ಚಯವಾಗಲಿಕ್ಕೆ ಆಕೆಗೆ ಮಾರ್ಗವಿದ್ದಿಲ್ಲ. ಆಕೆಯ ಸಂಶಯವು ಸಂಪೂರ್ಣವಾಗಿ ಮಾನಸಿಂಹನ ಮೇಲೆ ಇತ್ತು; ಯಾಕಂದರೆ, ಖುಸ್ರುವು ಸೇಲೀಮನನ್ನು ಕೊಲ್ಲಿಸಹೋದ ಸಂಗತಿಯನ್ನು ಸೇಲೀಮನ ಮುಂದೆ ಸಪ್ರಮಾಣವಾಗಿ ಸಿದ್ಧಮಾಡಿಕೊಡುವದಕ್ಕೆ ದುರ್ಜಯಸಿಂಹನೊಬ್ಬನೇ ಸಮರ್ಥನೆಂಬದು ಮಾನಸಿಂಹನಿಗೆ ಗೊತ್ತಿತ್ತು; ಆ ಸಂಬಂಧದ ಯಾವತ್ತು ಸಂಗತಿಗಳ ಸಾಕ್ಷಿಗಳು ದುರ್ಜಯಸಿಂಹನ ಬಳಿಯ ಲ್ಲಿದ್ದವು; ಆದ್ದರಿಂದ ದುರ್ಜಯಸಿಂಹನೊಬ್ಬನನ್ನು ಈ ಲೋಕದೊಳಗಿಂದ ಇಲ್ಲದಂತೆ ಮಾಡಿಬಿಟ್ಟರೆ, ಒಂದು ಅರಿಷ್ಟವೇ ಹೋದಹಾಗಾಗುವದೆಂದು ಮಾನಸಿಂಹನು ಭಾವಿಸಬಹು ದಾಗಿತ್ತು; ಇದಲ್ಲದೆ ಒಮ್ಮೆ ಮಾನಸಿಂಹನು ಮಂದಾಕಿನಿಗೆ ''ನಿನ್ನನ್ನು ವಿಧವೆಯಾಗಮಾಡುವೆನೆಂ'' ಬರ್ಥದಿಂದ ಅಂಜಿಕೆ ಹಾಕಿದ್ದನು. ಆದರೆ ರಜಪೂತನಾದ ಮಾನಸಿಂಹನಂಥ ಘನವಂತನು ವಚನಭ್ರಷ್ಟನಾಗುವದೂ ಮಂದಾಕಿನಿಗೆ ಒಮ್ಮೆಲೆ ಶಕ್ಯವಾಗಿ ತೋರಲೊಲ್ಲದು. ಹೀಗೆ ಆಕೆಯು ತನ್ನ ಗಂಡನ ಮರಣದ ವಿಷಯವಾಗಿ ಸಂಶಯಗ್ರಸ್ತಳಾಗಿ ವಿಚಾರ ಮಾಡುತ್ತಿರುವಾಗ, ಆಕೆಯ ಮನಸ್ಸು ಅತ್ಯಂತ ಚಂಚಲವಾಯಿತು. ನಿರಾಶಯ ದುಃಖದಿಂದ ಆಕೆಯ ಕಣ್ಣುಗಳು ನೀರಿನಿಂದ ತುಂಬಿದವು. ಆಕೆಯು ದುಃಖವೇಗವನ್ನು ತಾಳಲಾರದೆ ಗಟ್ಟಿಯಾಗಿ—''ದುರ್ಜಯಸಿಂಹ, ನೀವು ಎಲ್ಲಿರುವಿರಿ? ನಿಜವಾಗಿಯೇ ನಿಮಗೆ ವಿಷಪಾನದಿಂದ ಮರಣವು ಪ್ರಾಪ್ತವಾಯಿತೇ? ಹಾಗೆ ಮರಣವು ಪ್ರಾಪ್ತವಾಗಿದ್ದರೆ, ನಿಮ್ಮ ಶರೀರರಹಿತವಾದ ಆತ್ಮವು ನಿಮಗೆ ಮರಣ ವನ್ನೊದಗಿಸಿಕೊಟ್ಟವನ ಹೆಸರನ್ನು ಹೇಳಬಹುದೇ?'' ಎಂದು ಕೂಗಿದಳು. ಅದೇ ಕಾಲಕ್ಕೆ ಆಕೆಯ ಹಿಂದಿನಿಂದ ಯಾರೋ—''ಅಶರೀರಿಯಾದ ಆತ್ಮವು ಹೇಳಲಿ ಹೇಳದಿರಲಿ; ಈ ಶರೀರಿಯಾದ ಆತ್ಮನು ದುರ್ಜಯ ಸಿಂಹನನ್ನು ಕೊಂದವನ ಹೆಸರು ಹೇಳಲು ಸಿದ್ಧನಾಗಿರುವನು'' ಎಂದು ನುಡಿದರು.

ಈಗ ಮಂದಾಕಿನಿಯು ಜನಸಂಚಾರವಿಲ್ಲದ ದುರ್ಗದ ಒಂದು ನಿಟ್ಟಿನಲ್ಲಿ ನಿಂತಿದ್ದಳು. ಆಗ ಹೊತ್ತು ಮುಣಗಲಿಕ್ಕೆ ಒಂದು ತಾಸಿನ ಅವಕಾಶವಿರಬಹುದು. ಆಗ ಮೋಡವಾಗಿ ಮಳೆ ಬರುವಂತೆ ಆದದ್ದರಿಂದ ಹೊತ್ತು ಇದ್ದೂ ಹೊತ್ತು ಮುಣುಗಿದಹಾಗೆ ತೋರುತ್ತಿತ್ತು. ಇಂಥ ಎಡಹೊತ್ತಿನಲ್ಲಿ ಅಕಸ್ಮಾತ್ ಯಾರೋ ಹೀಗೆ ಹೇಳಿದ್ದನ್ನು ಕೇಳಿ ಮಂದಾಕಿನಿಯು ಮೆಟ್ಟಿಬಿದ್ದು ಎಚ್ಚತ್ತಳು. ಆಕೆಯು ಕಣ್ಣು ಒರಿಸಿಕೊಳ್ಳುತ್ತ ನಾಲ್ಕೂಕಡೆಗೆ ನೋಡಲು, ಮರೆಗೆ ನಿಂತಿದ್ದ ಲಜಪತಸಿಂಗನು ಆಕೆಯಮುಂದೆ ನಿಂತುಕೊಂಡನು. ಕೂಡಲೆ ಕೃಷ್ಣಸರ್ಪವನ್ನು ನೋಡಿ ಬೆದರಿದವರಂತೆ ಮಂದಾಕಿನಿಯು ಬೆದರಿ ದೂರ ಸರಿದು ನಿಂತಳು. ಆಕೆಯು ಅತ್ಯಂತ ಕ್ರುದ್ಧಳಾಗಿ ಲಜಪತನನ್ನು ಕುರಿತು –

ಮಂದಾಕಿನಿ—ಲಜಪತ, ನಾನಾಡಿದ ಶಬ್ದಗಳನ್ನು ನೀನು ಕೇಳಿದೆಯೋ?

ಲಜಪತ—ಹೌದು, ಕೇಳಿದೆನು. ಕೆಲವೊಂದು ಕಾರಣದಿಂದ ದುರ್ಗದ ಹೊರಗೆ ಹೋಗಬೇಕೆಂದು ಹೊರಟಿದ್ದ ನಾನು, ಇಂಥ ನಿರ್ಜನ ಪ್ರದೇಶದಲ್ಲಿ ನೀನು ನಿಂತಿರುವದನ್ನು ನೋಡಿ ಈ ಗೋಡೆಯಮರೆಗೆ ನಿಂತುಕೊಂಡಿರಲು, ನನ್ನ ಇಚ್ಛೆಯಿಲ್ಲದಿದ್ದರೂ ನೀನಾಡಿದ ಶಬ್ದಗಳು ನನ್ನ ಕಿವಿಗೆ ಬಿದ್ದವು. ಪ್ರೀಯ ಮಂದಾಕಿನೀ, ನಿನ್ನ ಪತಿಯ ಮರಣದ ವಿಷಯವಾಗಿ ಸಂಶಯಗ್ರಸ್ತಳಾಗಿರುವ ನಿನ್ನ ಸಂಶಯವನ್ನು ದೂರ ಮಾಡುವದಕ್ಕಾಗಿ ದೇವರೇ ನನ್ನನ್ನು ಇಲ್ಲಿಗೆ ಕರತಂದಿರುವನೆಂದು ತಿಳಿ. ನಾನು ಇಲ್ಲಿಂದ ನಾಳೆಯಾದರೂ ಈ ಸುದ್ದಿಯನ್ನು ನಿನಗೆ ತಿಳಿಸಲೇಬೇಕಾಗಿರುವಾಗ, ನನಗೆ ಅನಾಯಾಸವಾಗಿ ಇಂದು ಅದನ್ನು ತಿಳಿಸುವ ಪ್ರಸಂಗ ಒದಗಿದ್ದೊಂದು ಅನುಕೂಲವೇ ಆಯಿತೆಂದು ತಿಳಿಯಬೇಕಾಗುವದು.

ಮಂದಾಕಿನಿ—ಏನು, ನನ್ನ ಪತಿಯು ಮರಣಹೊಂದಿದ್ದೇ ನಿಜವೋ? ನನ್ನ ಪ್ರೀಯ ಪತಿಯ ಮರಣಕ್ಕೆ ಕಾರಣನಾದ ನೀಚನ ಹೆಸರನ್ನು ನೀನು ಹೇಳುವೆಯಾ?

ಲಜಪತ—ಪ್ರೀಯ ಮಂದಾಕಿನೀ, ನಿನ್ನ ಪತಿಯು ಮರಣ ಹೊಂದಿದ್ದೇ ನಿಜವು; ಆತನನ್ನು ಕೊಂದವನ ಹೆಸರನ್ನು ನಾನು ಹೇಳಬಲ್ಲೆನು; ಆದರೆ ನೀನು ಹೆಸರು ಕೇಳಿ ಮಾಡುವದೇನು? ನಿನ್ನ ಪತಿಯನ್ನು ಕೊಂದವನು ಮಹಾಬಲಿಷ್ಠನು. ಆತನ ಕೂದಲು ಕೊಂಕಿಸುವದು ಕೂಡ ನಿನ್ನಿಂದ ಆಗದು; ಅಂದಬಳಿಕ ಹೆಸರು ಕೇಳಲು ಇಷ್ಟು ಏಕೆ ಆತುರಪಡುವೆ?

ಮಂದಾಕಿನಿ—ಲಜಪತ, ತಿಳಿಯಿತು, ನನ್ನ ಪತಿಯನ್ನು ಕೊಂದವರು ಯಾರೆಂಬದು ನನ್ನ ಮನಸ್ಸಿಗೆ ಹೊಳೆಯಿತು. ಆದರೆ ಆ ದುಷ್ಟನು ಎಷ್ಟು ಬಲಿಷ್ಠನಿದ್ದರೂ ಸತಿಯು ಹಾಕಿದ ದುಃಖದ ಉಸುರಿನ ಬೆಂಕಿಯಿಂದ ಆತನ ನಾಶವು ತಪ್ಪದೆ ಆಗುವದೆಂಬದನ್ನು ನೀನು ನಿಶ್ಚಯವಾಗಿ ನಂಬು.

ಲಜಪತ—ನಿನ್ನ ಗಂಡನ ಕೊಲೆ ಮಾಡಿದವನು ಯಾರೆಂದು ತಿಳಿದಿರುವೆ ಮಂದಾಕಿನೀ? ಸುಳ್ಳೇ ಒಬ್ಬರಿಗೆ ದೋಷವಿಟ್ಟು ದ್ವೇಷಿಸುವದು ಯೋಗ್ಯವಲ್ಲ. ಹೇಳು, ನಿನ್ನ ಗಂಡನನ್ನು ಕೊಂದವನ ಹೆಸರನ್ನು ನನ್ನ ಮುಂದೆ ಸ್ಪಷ್ಟವಾಗಿ ಹೇಳು.

ಮಂದಾಕಿನಿ—ಸ್ಪಷ್ಟಹೇಳುವದೇನು? ಮಾನಸಿಂಹನೇ ನನ್ನ ಗಂಡನ ಮರಣಕ್ಕೆ ಕಾರಣವಾಗಿರುವನು.

ಲಜಪತ—ತಪ್ಪಿದೆ, ಮಂದಾಕಿನೀ, ಮಾನಸಿಂಹನ ಅಪ್ಪಣೆಯಿಂದ ದುರ್ಜಯನ ಕೊಲೆಯಾಗಿರುವದಿಲ್ಲ.

ಮಂದಾಕಿನಿ—ಹಾಗಾದರೆ ಆತನ ಹೊರತು ಇಂಥ ದುಷ್ಟನು ಬೇರೆಯಾವನಿರುವನು?

ಲಜಪತ—ಬೇರೆ ಯಾವನೇಕೆ? ಶಹಾಜಾದಾ ಖುಸರುವನ್ನು ನೀನು ಮರೆತೆಯಾ?

ಮಂದಾಕಿನಿ—ಆದರೆ ಮಾನಸಿಂಹನ ಸೆರೆಯಾಳಿನ ಮೇಲೆ ಖುಸ್ರುವಿನ ಅಪ್ಪಣೆ ಹೇಗೆ ನಡೆಯುವದು?

ಲಜಪತ—ಈ ಕಾಲದಲ್ಲಿ ಶಹಾಜಾದಾ ಖುಸ್ರುವು ಮಾನಸಿಂಹನ ಸರ್ವಸ್ವ ವಾಗಿರುವನು. ಆತನು ಮಾಡಿದ ನ್ಯಾಯಾನ್ಯಾಯಗಳನ್ನು ಮುಚ್ಚಿ ಇಡಲಿಕ್ಕೆ ಮಾನಸಿಂಹನು ಹಿಂದೆಮುಂದೆ ನೋಡುವದಿಲ್ಲ.

ಮಂದಾಕಿನಿ—ಲಜಪತ, ನನ್ನ ತಿಳುವಳಿಕೆಯು ನಿಜವಿರದಿದ್ದರೂ, ನಿನ್ನ ಮಾತಿನ ಸತ್ಯತೆಗಾಗಿ ನನಗೆ ಆಧಾರವು ಬೇಕು. ನಿರಾಧಾರವಾಗಿ ನಾನು ಯಾರ ಮೇಲೆಯೂ ನಿಶ್ಚಿತವಾದ ಆರೋಪವನ್ನು ಹೊರಿಸಿ ಸೇಡು ತೀರಿಸಿಕೊಳ್ಳಲಾರೆನು.

ಲಜಪತ—ಮಂದಾಕಿನಿ, ನೀನು ಸೇಡುತೀರಿಸಿಕೊಳ್ಳು, ಏನಾದರೂ ಮಾಡು. ನಾನು ಇದ್ದ ಸಂಗತಿಯನ್ನು ಹೇಳುವೆನು ಕೇಳು. ನನ್ನ ಹಿಂದಿನ ಅಪರಾಧಕ್ಕಾಗಿ ಪಶ್ಚಾತ್ತಾಪಪಟ್ಟು ನಿನ್ನ ಗಂಡನಾದ ದುರ್ಜಯಸಿಂಹನಿಗೆ ಕಾಲುಬಿದ್ದು ಕ್ಷಮೆ ಬೇಡಲು, ನಮ್ಮಿಬ್ಬರಲ್ಲಿ ಅಕೃತ್ರಿಮ ಪ್ರೇಮವುಂಟಾಯಿತು. ಪ್ರೀಯ ಮಂದಾಕಿನೀ, ಇತ್ತಿತ್ತ ನಾವಿಬ್ಬರೂ ಆಕೃತ್ರಿಮ ಸ್ನೇಹಿತರಾಗಿ ನಡೆಯುತ್ತಿದ್ದದ್ದು ನಿನಗೆ ಗೊತ್ತಿಲ್ಲದ್ದಕ್ಕಾಗಿ ನನಗೆ ಬಹಳ ದುಃಖವಾಗುತ್ತದೆ. ನಮ್ಮಿಬ್ಬರಲ್ಲಿ ಸ್ನೇಹಸಂಬಂಧವು ಬೆಳೆದು ಬಹಳ ದಿವಸಗಳೂ ಆಗಿಲ್ಲ, ನೀನು ಇಲ್ಲಿಗೆ ಬಾರದಿರುವ ತಿಂಗಳೊಪ್ಪತ್ತಿನ ಅವಧಿಯಲ್ಲಿಯೇ ನಾವಿಬ್ಬರು ಜೀವದ ಗೆಳೆಯರಾದೆವು. ಮಂದಾಕಿನೀ, ಬಹಳ ಮಾತುಗಳೇಕೆ? ನೀನು ಇಲ್ಲಿ ಸ್ವಲ್ಪ ಹೊತ್ತು ನಿಂತುಕೊಳ್ಳು. ಈಗ ಹೋಗಿ ದುರ್ಜಯನು ಮರಣಕಾಲದಲ್ಲಿ ನನಗೆ ಕೊಟ್ಟಿರುವದೊಂದು ಗುರುತನ್ನು ನಿನಗೆ ತಂದುಕೊಡುವೆನು.

ಮಂದಾಕಿನಿಯು ಏನೂ ಉತ್ತರಕೊಡದೆ ಆಶ್ಚರ್ಯದಿಂದ ನೋಡುತ್ತಿರಲು, ಲಜಪತನು ತಟ್ಟನೆ ಅಲ್ಲಿಂದ ಹೊರಟು ಓಡುತ್ತ ತನ್ನ ಕೋಣೆಗೆ ಹೋಗಿ ದುರ್ಜಯಸಿಂಹನ ಮರಣದ ಚಿಹ್ನವನ್ನು ತಕ್ಕೊಂಡು ಮಂದಾಕಿನಿಯು ನಿಂತಲ್ಲಿಗೆ ಬಂದು ಆಕೆಯ ಕೈಯಲ್ಲಿ ಅದನ್ನು ಕೊಟ್ಟು—''ನೋಡು, ಈ ಲಕಲಕಿಸುವ ಮುದ್ರಿಕೆಯು ಯಾರದೆಂಬದನ್ನು ಗುರುತಿಸು'' ಎಂದು ಹೇಳಿದನು. ಮಂದಾಕಿನಿಯು ಕೂಡಲೆ ಆ ಉಂಗುರವನ್ನು ಗುರಿತಿಸಿದಳು. ತಾನು ವಿವಾಹ ಕಾಲದಲ್ಲಿ ಪ್ರೇಮದ ಚಿಹ್ನವೆಂದು ತನ್ನ ಪತಿಗೆ ಅದನ್ನು ಅರ್ಪಿಸಿದ್ದಳು. ಸಿಸೋದೀ ರಜಪೂತರ ಪವಿತ್ರ ಕುಲದೇವತೆಯಾದ ಏಕಲಿಂಗಜಿಯ ಚಿಹ್ನವು ಆ ಉಂಗುರದಮೇಲೆ ಕೊರೆದಿತ್ತು, ವೈವಾಹಿಕ ಮಂತ್ರಗಳಿಂದ ಇದು ಪವಿತ್ರವಾಗಿರುವದೆಂಬ ನಂಬಿಗೆಯಿರುವದರಿಂದ,

ದುರ್ಜಯಸಿಂಹನು ಯುದ್ಧಕ್ಕೆ ಹೋಗುವಾಗ ಇದನ್ನು ಕೈಯಲ್ಲಿ ಇಟ್ಟುಕೊಂಡು ಹೋಗುತ್ತಿದ್ದನು. ಆತನ ಈ ಸದ್ಭಾವದಂತೆ ಆತನಿಗೆ ಯುದ್ಧದಲ್ಲಿ ಜಯವಾಗುತ್ತಲೇ ಬಂದದ್ದರಿಂದ, ಆತನು ಆ ಉಂಗುರವನ್ನು ಪ್ರಾಣಕ್ಕಿಂತ ಹೆಚ್ಚೆಂದು ಕಾಯುತ್ತ ಬಂದಿದ್ದನು. ಮಂದಾಕಿನಿಯು ಆ ಉಂಗುರವನ್ನು ಅತ್ತಿತ್ತ ಹೊರಳಿಸಿ ನೋಡಿ ಅದನ್ನು ಭಕ್ತಿಯಿಂದ ಚುಂಬಿಸಿ—''ನಾಥ, ಹೃದಯೇಶ್ವರ, ಇಂದು ನನಗೆ ನಿಮ್ಮ ಮರಣದ ಗುರುತು ಸಿಕ್ಕಿತು. ನೀವು ದುಷ್ಟರ ನೀಚ ಸ್ವಾರ್ಥದ ವ್ಯವಹಾರದ ಬಲೆಯಲ್ಲಿ ಸಿಕ್ಕು ಸ್ವರ್ಗದ ಹಾದಿಯನ್ನು ಹಿಡಿದಿರಿ. ನೀವು ಹಿಡಿದ ಹಾದಿಯು ನನಗೆ ಗೊತ್ತಿರುವದು; ಆ ಹಾದಿಯನ್ನು ಹಿಡಿದು ನಿಮ್ಮ ಬಳಿಗೆ ಬರಲಿಕ್ಕೆ ನಾನು ಸಿದ್ಧಳೂ ಇರುವೆನು; ಆದರೆ ನನ್ನ ಕಣ್ಣುಗಳಿಂದ ಅಶ್ರುಗಳನ್ನು ಧಾರೆಯಿಟ್ಟು ಸುರಿಸಿದವನ ಕಣ್ಣುಗಳಿಂದ ರಕ್ತವು ಧಾರೆಯಿಟ್ಟು ಸುರಿಯುವದನ್ನು ನೋಡದ ಹೊರತು ನಿಮ್ಮ ಬಳಿಗೆ ಬರಲಿಕ್ಕೆ ಈ ರಜಪೂತ ವೀರ ಪತ್ನಿಗೆ ಮೋರೆಯಿಲ್ಲವು,'' ಎಂದು ನುಡಿದು ಲಜಪತನನ್ನು ಕುರಿತು—

ಮಂದಾಕಿನಿ—ಲಜಪತ, ಈ ಉಂಗುರವು ನನ್ನ ಬಳಿಯಲ್ಲಿಯೇ ಇರಲಿ. ನನ್ನ ವ್ರತಧಾರಣಕ್ಕೂ, ಪೂಜೆಗೂ ಇದು ಅವಶ್ಯವಾಗಿರುವದು.

ಲಜಪತ—ಇದನ್ನು ನಿನಗೇ ಕೊಡಬೇಕೆಂದು ದುರ್ಜಯಸಿಂಹನು ನನ್ನ ಮುಂದೆ ಹೇಳಿರುವದರಿಂದ, ನೀನು ಅವಶ್ಯವಾಗಿ ಇದನ್ನು ತೆಗೆದುಕೋ; ಆದರೆ ಮಂದಾಕಿನೀ, ಮಳೆ ಬರುವಹಾಗಾಯಿತು, ಹೊತ್ತು ಮುಣುಗಿತು. ಇಂದು ನನ್ನ ಮನೆಯಲ್ಲಿಯೇ ಇದ್ದು ನಾಳೆ ಬೆಳಗಾಗುತ್ತಲೇ ನೀನು ಬೇಕಾದಲ್ಲಿಗೆ ಹೋಗು. ನನ್ನದಿಷ್ಟು ಪ್ರಾರ್ಥನೆಯನ್ನು ನೀನು ನಡಿಸಲೇಬೇಕು. ಇಂಥ ಕಗ್ಗತ್ತಲೆಯ ರಾತ್ರಿಯಲ್ಲಿ ನಿರ್ಜನ ಪ್ರದೇಶದೊಳಗಿಂದ ನಿನ್ನಂಥ ಒಬ್ಬಳೇ ಸ್ತ್ರೀಯು ಹೋಗುವದು ಯೋಗ್ಯವಲ್ಲ.

ಮಂದಾಕಿನಿ (ನಿರ್ಭಯದಿಂದ)—ನನಗೆ ಮಳೆಯ ಅಂಜಿಕೆಯಿಲ್ಲ; ಅದರಂತೆ ಈ ರಜಪೂತರ ದೇಶದಲ್ಲಿ ನನ್ನಂಥ ರಜಪೂತ ಸ್ತ್ರೀಗೆ ಅಂಜಿಕೆ ಬರುವದು ತೀರ ಅಶಕ್ಯವಾಗಿರುವದು.

ಹೀಗೆಂದು ನುಡಿದು ಮಂದಾಕಿನಿಯು ಹೆಚ್ಚಿಗೆ ಏನೂ ಮಾತಾಡದೆ, ಬಡಬಡ ಕಾಲು ಹಾಕುತ್ತ ಕೋಟೆಯೊಳಗಿಂದ ಹೊರಬಿದ್ದು ಹೋಗಿಬಿಟ್ಟಳು. ಲಜಪತಸಿಂಹನು ಸುಮ್ಮನೆ ಆಕೆಯನ್ನು ನೋಡುತ್ತ ನಿಂತುಕೊಂಡನು. ಕಡೆಗೆ ಆತನು ಒಮ್ಮೆ ನಿಟ್ಟುಸಿರುಬಿಟ್ಟು—ಹಾಯ! ಪಾಷಾಣ ಹೃದಯದ ಸ್ತ್ರೀಯೇ, ನಿನ್ನ ಸಲುವಾಗಿ ನಾನು ಎಷ್ಟು ಕಷ್ಟಪಟ್ಟೆನೆಂಬದು ನಿನಗೇನು ಗೊತ್ತು? ನೀನು ಹೀಗೆ ನನ್ನನ್ನು ಕಾಲಿಲಿ ಒದ್ದು ಹೋಗುವದು ಯೋಗ್ಯವೇ? ಆದರೆ ನಾನು ಮಾತ್ರ ನಿನ್ನನ್ನು ಬಿಟ್ಟವನಲ್ಲ. ಪಿಶಾಚದ ಹಾಗೆ ಹೀಗೆಯೇ ನಿನ್ನ ಬೆನ್ನಹತ್ತಿ ಬರುವೆನು, ಎಂದು ನುಡಿದು ಸುಳುವು ಹತ್ತಗೊಡದೆ ಆತನು ಮಂದಾಕಿನಿಯ ಬೆನ್ನುಹತ್ತಿ ನಡೆದನು.

ಹಾದಿಯಲ್ಲಿ ಮಂದಾಕಿನಿಯು ತನ್ನ ಪತಿಯ ಮರಣದ ವಿಷಯವಾಗಿ ವಿಚಾರಮಾಡುತ್ತ ದುಃಖದಿಂದ ಕಣ್ಣೀರು ಸುರಿಸುತ್ತ ಅಂಬರರಾಜಧಾನಿಯ ಹಾದಿಯನ್ನು ಹಿಡಿದು ಒತ್ತರದಿಂದ ಸಾಗಿದಳು. ಬರಬರುತ್ತ ಮಳೆಯು ನಿಂತಿತು; ಗಾಳಿಯೂ ಕಡಿಮೆಯಾಯಿತು; ಅವುಗಳೊಡನೆ ಮಂದಾಕಿನಿಯ ಶೋಕವೇಗವೂ ಕೆಲಮಟ್ಟಿಗೆ ಕಡಿಮೆಯಾಗಲು, ಆಕೆಯು ಮನಸ್ಸಿನಲ್ಲಿ—

''ನನ್ನಂಥ ಸತಿಗೆ ಹೀಗೆ ಅಕಾಲ ವೈಧವ್ಯವು ಪ್ರಾಪ್ತವಾಗಬಹುದೇ? ಅಥವಾ ನನ್ನ ಪತಿಯು ಜೀವದಿಂದಿದ್ದು ಲಜಪತಸಿಂಹನು ಹೀಗೆ ಸುಳ್ಳೇ ಹೇಳಿರಬಹುದೇ? ಸುಳ್ಳು ಆಗಿದ್ದರೆ ಈ ಉಂಗುರವು ಲಜಪತನ ಕೈಗೆ ಹೇಗೆ ಬಂದಿದ್ದೀತು? ಛೀ ಛೀ! ಪತಿಯು ಮರಣಹೊಂದಿದ್ದೇ ನಿಜವು. ಕೆಟ್ಟ ಸುದ್ದಿಗಳು ಸುಳ್ಳಾಗುವದಿಲ್ಲ. ದುಷ್ಟ ಖುಸ್ರುವು ದುಷ್ಟ ಬುದ್ಧಿಯಿಂದ ನನ್ನ ಪತಿಯ ಕೊಲೆ ಮಾಡಿಸಿದ್ದರೂ ಮಾಡಿಸಿರಬಹುದು. ಇಲ್ಲದಿದ್ದರೆ ಲಜಪತಸಿಂಹನಾದರೂ ಸುಳ್ಳೇ ಏಕೆ ಹೇಳಿಯಾನು?'' ಎಂದು ಆಲೋಚಿಸುತ್ತ ಸಾಗಿರಲು, ತನ್ನ ಹಿಂದೆ ಯಾರೋ ಬರುತ್ತಿರುವಂತೆ ಕಾಲಸಪ್ಪಳವು ಆಕೆಗೆ ಕೇಳಿಸಹತ್ತಿತು. ಆಗ ಆಕೆಯು ಅಂಜಿ ನಿಂತುಕೊಂಡು ಹಿಂದಿರುಗಿ ನೋಡುತ್ತಿರಲು, ಒಂದು ಕಪ್ಪು ಬಣ್ಣದ ಮನುಷ್ಯಾಕೃತಿಯು ಆಕೆಯ ಕಡೆಗೆ ಸಾಗಿ ಬರತೊಡಗಿತು. ಆಗ ಮಂದಾಕಿನಿಯು ತಾನು ನಿಂತುಕೊಂಡಿದ್ದ ಗಿಡದ ಬುಡದಲ್ಲಿಯೇ ಉಲುಕಾಡದೆ ಧೈರ್ಯದಿಂದ ನಿಂತುಕೊಂಡುಬಿಟ್ಟಳು. ಆಗ ಬೆನ್ನುಹತ್ತಿ ಬರುತ್ತಿದ್ದ ಆಕೃತಿಯು ಹತ್ತರಬರಲು ಮಂದಾಕಿನಿಯು ದಿಟ್ಟತನದಿಂದ –

ಮಂದಾಕಿನಿ—ಯಾರು ನೀನು?

ಆಕೃತಿ—ನನ್ನ ಗುರುತು ನಿನಗೆ ಹತ್ತಲಿಲ್ಲವೆ? ನಾನು ಲಜಪತ ಸಿಂಹನು!

ಮಂದಾಕಿನಿ—ನನ್ನ ಬೆನ್ನಹತ್ತಿ ಇಷ್ಟು ರಾತ್ರಿ ಇಷ್ಟುದೂರ ಯಾಕೆ ಬಂದಿರಿ ಲಜಪತ?

ಲಜಪತ—ನೀನು ಇಂಥ ಕಗ್ಗತ್ತಲೆಯ ರಾತ್ರಿಯಲ್ಲಿ ಸಂಗಡ ಯಾರನ್ನೂ ಕರಕೊಳ್ಳದೆ ಒಬ್ಬಳೇ ಹೋದದ್ದು ನನಗೆ ಸಮಾಧಾನವಾಗದ್ದರಿಂದ, ನಾನು ನಿನ್ನ ಬೆನ್ನುಹತ್ತಿ ಬಂದೆನು. ಇದಲ್ಲದೆ ನಿನ್ನನ್ನು ಒಂದು ಮಾತು ಕೇಳುವದು ನನ್ನ ಮನಸ್ಸಿನಲ್ಲಿ ಇತ್ತು.

ಮಂದಾಕಿನಿ (ಸರಳತನದಿಂದ)—ಏನು ಕೇಳುವದನ್ನು ನೀವು ರತನ ಗಡದ ಮೇಲೆಯೇ ಏಕೆ ಕೇಳಲಿಲ್ಲ? ಅಷ್ಟಕ್ಕಾಗಿ ನೀವು ಇಲ್ಲಿಯವರೆಗೆ ಯಾಕೆ ಬಂದಿರಿ?

ಲಜಪತ—ಮಂದಾಕಿನೀ, ನಿನ್ನನ್ನು ಅಲ್ಲಿ ಕೇಳುವದು ಆಗಲಿಲ್ಲ. ಇನ್ನು ಕೇಳಬೇಕೆನ್ನುವದ ರೊಳಗೆ ನೀನು ನಿಲ್ಲದೆ ತಟ್ಟನೆ ಹೊರಟುಬಂದು ಬಿಟ್ಟೆ. ಈಶ್ವರನು ನಿನಗೆ ಅಲಭ್ಯ ಸೌಂದರ್ಯ ಕೊಟ್ಟಿರುವನು; ಆದರೆ ಮಂದಿಯ ಮನಸ್ಸಿನ ಭಾವವನ್ನು ತಿಳಿಯುವ ಸಾಮರ್ಥ್ಯವನ್ನು ಕೊಟ್ಟಿರುವದಿಲ್ಲ. ನೀನು ಹೂವಿನಂತೆ ಸುಕುಮಾರಿಯಾದ ಸ್ತ್ರೀಯಿದ್ದರೂ, ಪಾಷಾಣ ಹೃದಯ ದವಳಾಗಿರುತ್ತೀ.

ಮಂದಾಕಿನಿ—ಏನನ್ನುವಿರಿ ಲಜಪತಸಿಂಹ? ನೀವು ರಜಪೂತರೇ ಇರುವಿರಲ್ಲವೆ? ರಮಣಿಯರ ಮಾನವನ್ನು ಕಾಯುವದು ಪ್ರತಿಒಬ್ಬ ರಜಪೂತ ವೀರನ ಕರ್ತವ್ಯವಾಗಿರುವದು; ಆದರೆ ಈಗ ನೀವು ಆಡಿದ ಮಾತುಗಳು ಸಭ್ಯತನಕ್ಕೆ ಸಲ್ಲದವೆಂದು ಯಾರಾದರೂ ಹೇಳಬಹುದು.

ಲಜಪತ—ನೀನು ನಿಜವಾಗಿ ಮಾತಾಡಿದೆ. ನಾನು ಸಭ್ಯತನವನ್ನು ಬಿಟ್ಟುಕೊಟ್ಟಿರು ವೆನಲ್ಲದೆ ಧರ್ಮವನ್ನೂ ಮರೆತಿರುವೆನು. ಕರ್ತವ್ಯ ಪರಾಙ್ಮುಖನಂತು ನಾನು ಯಾವಾಗೋ ಆಗಿರುವೆನು. ನಿನ್ನ ಸ್ವರ್ಗೀಯ ಸೌಂದರ್ಯಕ್ಕಾಗಿ ಮರುಳಾಗಿರುವ ನನ್ನ ಮನಸ್ಸು ನನ್ನನ್ನು ಅಡ್ಡಹಾದಿಗೆ ಎಳೆದೊಯ್ಯುತ್ತಿರುವದು; ಆದರೆ ಪ್ರೀಯ ಮಂದಾಕಿನೀ, ಇನ್ನು ನೀನು ನನ್ನವಳಾಗುವದಿಲ್ಲವೆ?

ಲಜಪತಸಿಂಹನು ಹೀಗೆ ಅಕಲ್ಪಿತ ಮಾತಾಡಿದ್ದನ್ನು ಕೇಳಿ ಮಂದಾಕಿನಿಯ ಮೈಮೇಲಿನ ಕೂದಲುಗಳು ನೆಟ್ಟಗಾದವು. ಆಕೆಯ ಬಳಿಯಲ್ಲಿ ಆತ್ಮರಕ್ಷಣದ ಯಾವ ಸಾಧನಗಳೂ ಇಲ್ಲದ್ದರಿಂದ ಆಕೆಯು ಲಜಪತನ ನೀಚತನಕ್ಕಾಗಿ ಮನಸ್ಸಿನಲ್ಲಿ ಬಹಳವಾಗಿ ಅಂಜಿದಳು; ಆದರೆ ಈಗ ಹೀಗೆ ಅಂಜಿ ಕೈಕಾಲು ಬಿಟ್ಟರೆ ಮತ್ತಿಷ್ಟು ಅನರ್ಥವಾದೀತೆಂದು ತಿಳಿದು ಆಕೆಯು ದಿಟ್ಟತನವನ್ನು ಮುಂದೆಮಾಡಿ—''ಲಜಪತಸಿಂಹ, ನನ್ನಂಥ ಅನಾಥ ವಿಧವೆಯ ಸಂಗಡ ಹೀಗೆ ನೀನು ನಡೆದುಕೊಳ್ಳುವದು ಯೋಗ್ಯವಲ್ಲ. ಈ ನಿರ್ಜನವಾದ ಕಗ್ಗತ್ತಲೆಯ ರಾತ್ರಿಯಲ್ಲಿ ನನ್ನ ಸಹಾಯಕರು ಯಾರೂ ಇಲ್ಲವೆಂದು ನೀನು ನಿರ್ಭಯದಿಂದ ನಿರ್ಲಜ್ಜನಾಗಬೇಡ. ರಜಪೂತ ಸ್ತ್ರೀಯರು ಆತ್ಮರಕ್ಷಣದ ಸಾಧನವಿಲ್ಲದೆ ಹೊರಬೀಳರೆಂಬ ಮಾತು ನಿನಗೆ ಗೊತ್ತಿರುತ್ತದಷ್ಟೇ? ಆದರೂ ನಿನಗೆ ನಾನು ಸೆರಗೊಡ್ಡಿ ಬೇಡಿಕೊಳ್ಳುತ್ತೇನೆ. ನಿನ್ನ ಒಡಹುಟ್ಟಿದ ತಂಗಿಯೆಂದು ತಿಳಿದು ನನ್ನ ಮಾನವನ್ನು ಕಾಯು. ಅನಾಥ ರಕ್ಷಕನಾದ ದೇವರು ನನ್ನ ವಿಪತ್ಕಾಲದಲ್ಲಿ ಯಾವದೊಂದು ಬಗೆಯಿಂದ ನನಗೆ ಸಹಾಯ ಮಾಡಿಯೇ ಮಾಡುವನು; ಆದರೆ ನೀನು ಮಾತ್ರ ಆ ಈಶ್ವರೀ ಕ್ಷೋಭದಿಂದ ನಾಶ ಹೊಂದೀ; ಅಥವಾ ನನ್ನ ಬಳಿಯಲ್ಲಿರುವ ಗುಪ್ತ ಕಠಾರಿಯಿಂದ ಇರಿತುಕೊಂಡು ನಾನು ಪ್ರಾಣತ್ಯಾಗ ಮಾಡಿಕೊಂಡರೆ, ನೀನು ಸ್ತ್ರೀ ಹತ್ಯೆಯ ದೋಷಕ್ಕೆ ಗುರಿಯಾದೀ'' ಎಂದು ನುಡಿಯುತ್ತ ಮಂದಾಕಿನಿಯು ಹಿಂದಕ್ಕೆ ಸರಿಯಹತ್ತಿದಳು; ಆದರೆ ಕಾಮಾಂಧನಾದ ನಿರ್ಲಜ್ಜ ಲಜಪತನು ಆಕೆಯ ಧರ್ಮಶ್ರವಣವನ್ನು ಲಕ್ಷಿಸದೆ ಮುಂದುವರಿದು ಹೋಗಿ ಆಕೆಯ ಸೆರಗು ಹಿಡಿದನು. ಆಗ ಮಂದಾಕಿನಿಯು ಲಜಪತನನ್ನು ಒದ್ದು ಹಿಂದಕ್ಕೆ ಕೆಡವಿ—''ಸತಿಯ ಸಂರಕ್ಷಕರೇ, ಯಾರಾದರೂ ಎಲ್ಲಿಯಾದರೂ ಇದ್ದರೆ ಬೇಗನೆ ಬರ್ರಿ. ಈ ದುಷ್ಟನು ನನ್ನ ಸತೀತ್ವವನ್ನು ಭಂಗ ಪಡಿಸುವನು'' ಎಂದು ಒಂದೇಸವನೆ ಕೂಗಿ ಕೂಗಿ ಕರೆಯಹತ್ತಿದಳು. ಆಗ ಆಕಸ್ಮಾತ್ ಓಡುತ್ತ ಬರುವ ಕೊಳಗಗಳ ಸಪ್ಪಳವು ಆಕೆಗೆ ಕೇಳಿಸ ತೊಡಗಿತು. ಆಗಂತು ಮಂದಾಕಿನಿಯು ಗಂಟಲು ಹರಿಯುವಂತೆ ಒಂದೇ ಸವನೆ ಒದರಿ ಒದರಿ ಕರೆಯತೊಡಗಿದಳು. ಅಷ್ಟರಲ್ಲಿ ನಾಲ್ವರು ಜನ ರಾವುತರು ಮಂದಾಕಿನಿಯೇ ಇದ್ದಲ್ಲಿಗೆ ಬಂದರು. ಆಗ ಪಾಪಿಷ್ಟನಾದ ಲಜಪತನು ಅಂಜಿ ಓಡಿ ಹೋಗಬೇಗನ್ನುತ್ತಿರಲು, ಆ ರಾವುತರ ಮುಖ್ಯನು ಅದನ್ನು ಅರಿತು ಲಜಪತನನ್ನು ಕುರಿತು—ಏ ಬದಮಾಷ, ನಿನ್ನ ದುಷ್ಟ ವಿಚಾರವನ್ನು ನಾನು ಅರಿತಿರುವೆನು. ನೀನು ಒಂದು ಹೆಜ್ಜೆಯನ್ನು ಕಿತ್ತಿ ಇಟ್ಟರೆ ನಿನ್ನನ್ನು ಇಲ್ಲಿಯೇ ತುಂಡರಿಸುವೆನು'' ಎಂದು ಗದ್ದರಿಸಿ ತನ್ನ ಸೇವಕನನ್ನು ಕುರಿತು—''ಇನಾಯತ ಉಲ್ಲಾಖಾನ, ಈ ದುಷ್ಟನನ್ನು ಬಂಧಿಸು'' ಎಂದು ಆಜ್ಞಾಪಿಸಿ, ಮಂದಾಕಿನಿಯ ಬಳಿಗೆ ಹೋದನು; ಆದರೆ ಮಂದಾಕಿನಿಯು ಭಯದಿಂದ ಮೂರ್ಛೆ ಹೊಂದಿ ನೆಲಕ್ಕೆ ಬಿದ್ದಿದ್ದಳು. ಆ ಮುಖ್ಯನು ತನ್ನ ಸೇವಕರಿಗೆ—ಒಬ್ಬೊಬ್ಬರು ಒಬ್ಬೊಬ್ಬರನ್ನಂತೆ ಇವರಿಬ್ಬರನ್ನೂ ನಿಮ್ಮ ಕುದುರೆಯ ಮೇಲೆ ಹಾಕಿಕೊಂಡು ಬರಬೇಕೆಂದು ಆಜ್ಞಾಪಿಸಿ, ತಾನು ತನ್ನ ಕುದುರೆಯನ್ನು ಹತ್ತಿ ಎಲ್ಲರೊಡನೆ ಪತ್ತೇಪುರ ಸಿಕರಿಯ ಕಡೆಗೆ ಸಾಗಿದನು. ಮಂದಾಕಿನಿಯನ್ನು ಹೀಗೆ ಲಜಪತನ ಕೈಯೊಳಗಿಂದ ಆಕಸ್ಮಾತ್ ಬಿಡಿಸಿದವನು ಬೇರೆ ಯಾವನೂ ಆಗಿರದೆ, ಶಹಾಜಾದಾ ಖುಸ್ರುವೇ

ಆಗಿದ್ದನು. ಹಿಂದೆ ಹೇಳಿದಂತೆ ಖುಸ್ರುವು ಆನೆಯ ಕಾಳಗದಲ್ಲಿ ಅಭಿಮಾನಕ್ಕೆ ಬಿದ್ದು ತಂದೆಯಾದ ಸುಲ್ತಾನ ಸೇಲೀಮನಿಗೆ ಬಾಯಿಗೆ ಬಂದಹಾಗೆ ಅಂದು ತನ್ನ ತಂದೆಯ ಸಿಟ್ಟಿಗೆ ಗುರಿಯಾದದ್ದು ವಾಚಕರಿಗೆ ಗೊತ್ತಿರುವದು. ಈ ಸುದ್ದಿಯು ಖುಸ್ರುವಿನ ತಾಯಿಯಾದ ಶಾಹೀಬೇಗಮೆಗೆ, ಅಥವಾ ಜೋಧಬಾಯಿಗೆ ಗೊತ್ತಾಗಲು, ಆಕೆಯು ಮಗನಿಗೆ ಬಾಯಿಗೆ ಬಂದಹಾಗೆ ಅಂದಳು. ಅತ್ತ ಅಕಬರ ಬಾದಶಹನೂ ಖುಸ್ರುವನ್ನು ಕರೆಸಿ—''ಖುಸ್ರೂ, ನೀನು ಇಷ್ಟು ದೊಡ್ಡವನಾದರೂ ನಿನ್ನ ಹಿತಾಹಿತಗಳು ನಿನಗೆ ತಿಳಿಯುವದಿಲ್ಲವಲ್ಲ! ನಾನು ಇನ್ನು ಎಷ್ಟು ದಿವಸ ಬದುಕಿ ಇರುವೆನು? ನನ್ನ ತರುವಾಯ ನಿನ್ನ ತಂದೆಯಾದ ಸೇಲೀಮನೇ ದಿಲ್ಲಿಯ ಸಿಂಹಾಸನವನ್ನು ಏರುವವನಿದ್ದು, ಆತನ ಸಿಟ್ಟಿಗೆ ನೀನು ಈ ಪರಿ ಗುರಿಯಾಗಬಹುದೇ? ಬಾದಶಹನಾದ ಸೇಲೀಮನು ನಿನ್ನನ್ನು ಕಾರಾಗೃಹದಲ್ಲಿರಿಸಿದರೆ, ಕಬರಸ್ಥಾನದಲ್ಲಿ ಶಾಂತ ರೀತಿಯಿಂದ ಶಯನ ಮಾಡಿದ ನಾನು ನಿನಗೇನು ಸಹಾಯ ಮಾಡುವೆನು? ಈಗ ನೀನು ಈ ಆಗ್ರಾ ಪಟ್ಟಣದಲ್ಲಿರಬೇಡ, ಫತ್ತೇಪುರ ಸಿಕರಿಗೆ ಹೋಗು. ನಾನು ನಿನ್ನ ತಂದೆಗೆ ಸಮಾಧಾನ ಹೇಳಿ ಕ್ರಮವಾಗಿ ಆತನ ಸಿಟ್ಟು ಇಳಿಸುವೆನು. ನನ್ನ ಪತ್ರ ಬಂದಬಳಿಕ ಪುನಃ ನೀನು ಆಗ್ರಾ ಪಟ್ಟಣಕ್ಕೆ ಬರುವೆಯಂತೆ.'' ಎಂದು ಹೇಳಿದನು. ಅದರಂತೆ ಖುಸ್ರುವು ರಾವುತರನ್ನು ಸಂಗಡ ಕರಕೊಂಡು ಬಾದಶಹನಾದ ಅಜ್ಜನ ಅಪ್ಪಣೆಯಂತೆ, ಪತ್ತೇಪುರ ಸಿಕರಿಗೆ ಬರುತ್ತಿದ್ದನು. ಆತನೇ ಈಗ ಹಾದಿಯಲ್ಲಿ ಮಂದಾಕಿನಿಯ ಕಷ್ಟವನ್ನು ದೂರ ಮಾಡಿದನು.

ಖುಸ್ರುವು ಅರಮನೆಯಲ್ಲಿ ಮುಟ್ಟಿದಕೂಡಲೆ ತಾರ್ತರಿ ರಮಣಿಯರನ್ನು ಕರೆದು—''ನೀವು ಈ ಮೂರ್ಛಿತ ಸ್ತ್ರೀಯನ್ನು ಇಸ್ತಂಬುಲಿಬೇಗಮ ಸಾಹೇಬರ ಮಂದಿರಕ್ಕೆ ಕರಕೊಂಡು ಹೋಗಿರಿ.'' ಎಂದು ಹೇಳಿ ಮಂದಾಕಿನಿಯನ್ನು ಅವರಿಗೆ ಒಪ್ಪಿಸಿದನು. ಇಸ್ತಂಬುಲಿ ಅಥವಾ ರುಮಿಬೇಗಮೆಯು ಅಕಬರಬಾದಶಹನ ಒಬ್ಬ ಅತ್ಯಂತ ಪ್ರೀತಿಯ ಬೇಗಮೆಯಾಗಿದ್ದಳು. ಈಕೆಯು ಖುಸ್ರುವನ್ನೂ ಆತನ ಹೆಂಡತಿಯಾದ ಪ್ಯಾರಿ ಬಾನುವನ್ನೂ ಬಹಳವಾಗಿ ಪ್ರೀತಿಸುತ್ತಿದ್ದಳು. ಬಾದಶಹನ ಮುಂದೆಯಾದರೂ ಈ ಬೇಗಮೆಯು ಖುಸ್ರುವನ್ನು ಆಗಾಗ್ಗೆ ಶ್ಲಾಘಿಸುತ್ತಿದ್ದಳು. ತುರ್ಕಸ್ಥಾನದೊಳಗಿನ ಇಸ್ತಂಬೂಲ ಪಟ್ಟಣದಲ್ಲಿ ಈಕೆಯ ಜನ್ಮವಾದದ್ದರಿಂದ, ಈಕೆಯನ್ನು ಇಸ್ತಂಬುಲೀ ಬೇಗಮೆಯೆಂದು ಕರೆಯುತ್ತಿದ್ದರು. ಈಕೆಯಂಥ ಗಾಯನ ಕುಶಲರು ಆಗಿನ ಜನಾನಖಾನೆಯಲ್ಲಿ ಮತ್ತೊಬ್ಬರಿದ್ದಿಲ್ಲವೆಂದು ಹೇಳಬಹುದು. ಈಕೆಯು ಬಹುದೊಡ್ಡ ಮನಸ್ಸಿನವಳು; ಹಿಂದು ಮುಸಲ್ಮಾನರಲ್ಲಿ ಭೇದವನ್ನು ಎಣಿಸುತ್ತಿದ್ದಿಲ್ಲ. ಆಗ್ರಾ ರಾಜಧಾನಿಯ ಕೋಲಾಹಲದಲ್ಲಿ ಇರಲಾರದೆ ತನಗೆ ಏಕಾಂತಸ್ಥಾನವು ಬೇಕೆಂದು ಹೇಳಿದ್ದರಿಂದ ಕಬರ ಬಾದಶಹನು ಈಕೆಯ ಸಲುವಾಗಿಯೇ ಫತ್ತೇಪುರ ಸಿಕ್ರಿಯಲ್ಲಿ ಒಂದು ಸುಂದರ ಮಂದಿರವನ್ನು ಕಟ್ಟಿಸಿದ್ದನು. ಈಗಲೂ ಆ ಮಂದಿರದ ಭಗ್ನಾವಶೇಷವನ್ನು ಅಲ್ಲಿ ಕಾಣಬಹುದು. ಇಸ್ತಂಬುಲೀ ಬೇಗಮೆಯು ಮಂದಾಕಿನಿಯ ಉಡಿಗೆತೊಡಿಗೆಗಳನ್ನು ನೋಡಿ ಈಕೆಯು ಹಿಂದುವೆಂದು ತಿಳಿದುಕೊಂಡು ಮಮತೆಯಿಂದ ಆಕೆಯ ಶುಶ್ರೂಷೆಯನ್ನು ಮಾಡಿಸತೊಡಗಿದಳು. ಮಂದಾಕಿನಿಯ ಸೌಂದರ್ಯವನ್ನು ನೋಡಿ ಬೇಗಮೆಗೆ ಆಶ್ಚರ್ಯವಾಯಿತು. ಅಷ್ಟರಲ್ಲಿ

ಖುಸ್ರುವು ಕಳಿಸಿಕೊಟ್ಟ ಹಕೀಮನು ಅಲ್ಲಿಗೆ ಬರಲು, ಆತನ ಉಪಚಾರದಿಂದ ಮಂದಾಕಿನಿಯು ಎಚ್ಚತ್ತಳು. ತಾನು ಒಂದು ಭವ್ಯ ಮಂದಿರದಲ್ಲಿ ಇರುವದನ್ನು ನೋಡಿ ಆಕೆಯು ಆಶ್ಚರ್ಯ ಪಟ್ಟಳು! ಅಡವಿಯಲ್ಲಿ ಇದ್ದ ತಾನು ಇಲ್ಲಿಗೆ ಹೇಗೆ ಬಂದೆನೆಂಬದು ಆಕೆಗೆ ತಿಳಿಯದಾಯಿತು. ಆಕೆಯು ಹೀಗೆ ಆಶ್ಚರ್ಯಮಗ್ನಳಾಗಿರುವದನ್ನು ನೋಡಿ ಇಸ್ತಂಬುಲಿಯು ಆಕೆಗೆ ತನ್ನ ಪರಿಚಯವನ್ನು ಮಾಡಿಕೊಟ್ಟು, ನೀನು ಯಾವ ಚಿಂತೆಯನ್ನೂ ಮಾಡಬೇಡವೆಂದು ಮಂದಾಕಿನಿಗೆ ಧೈರ್ಯ ಹೇಳಿದಳು. ತಾನು ಮೂರ್ಛಿತಳಾಗಿದ್ದಾಗ ಖುಸ್ರುವು ತನ್ನನ್ನು ಇಲ್ಲಿಗೆ ಕರತಂದನೆಂದು ರೂಮಿ ಬೇಗಮೆಯು ಹೇಳಿದ್ದನ್ನು ಕೇಳಿ ಮಂದಾಕಿನಿಯು ಅಸಮಾಧಾನ ಪಟ್ಟಳು. ತನ್ನ ಪತಿಯನ್ನು ಕೊಂದ ಖುಸ್ರುವಿನ ಉಪಕೃತಿಯು ಆ ಪತಿವ್ರತೆಗೆ ಹೇಗೆ ಸಹನವಾಗಬೇಕು? ಮೇಲಾಗಿ ಖುಸ್ರುವು ಪಾಪ ಬುದ್ಧಿಯವನೆಂಬದು ಆಕೆಗೆ ಪೂರ್ಣ ಗೊತ್ತಿತ್ತು; ಆದ್ದರಿಂದ ಆಕೆಯು ಸಮಾಧಾನಪಟ್ಟು ಕಣ್ಣುಗಳನ್ನು ಮುಚ್ಚಿಕೊಂಡಳು. ಆಗ ರೂಮಿ ಬೇಗಮೆಯು ಈ ತರುಣಿಗೆ ವಿಶ್ರಾಂತಿಯ ಅವಶ್ಯಕತೆಯಿರುವದೆಂದು ತಿಳಿದು, ಪೂರ್ವೋತ್ಕೃಷ್ಟ ವಾದದ್ದೊಂದು ಮಾದಕ ಪೇಯವನ್ನು ಮಂದಾಕಿನಿಗೆ ಕುಡಿಸಿದಳು. ಅದರಿಂದ ಮಂದಾಕಿನಿಗೆ ಗಾಢ ನಿದ್ರೆಹತ್ತಿ ಆಕೆಯು ಮಲಗಿಕೊಳ್ಳಲು, ಇಸ್ತಂಬುಲೀ ಬೇಗಮೆಯೂ ಮಲಗಿಕೊಳ್ಳುವದಕ್ಕಾಗಿ ಹೊರಟುಹೋದಳು.

ಬೇಗಮೆಯು ಹೋದ ಸ್ವಲ್ಪ ಹೊತ್ತಿನಲ್ಲಿಯೇ ಖುಸ್ರುವು ಅಲ್ಲಿಗೆ ಬಂದು, ಆ ಸ್ತ್ರೀಯ ಪ್ರಕೃತಿಯು ಹೇಗಿರುವದೆಂದು ದಾಸಿಯರನ್ನು ಕೇಳಿದನು. ಒಬ್ಬ ದಾಸಿಯು ನಡೆದ ಸಂಗತಿಯನ್ನೆಲ್ಲ ಹೇಳಲು, ನಿದ್ದೆ ಹತ್ತಿದ ಮಂದಾಕಿನಿಯನ್ನು ನೋಡುವದಕ್ಕಾಗಿ ಖುಸ್ರುವು ಆಕೆಯು ಮಲಗಿಕೊಂಡಿದ್ದ ಕೋಣೆಯೊಳಗೆ ಹೋದನು. ಕಗ್ಗತ್ತಲೆಯ ರಾತ್ರಿಯಲ್ಲಿ ಅವಸರ ದೊಳಗೆ ಕರಕೊಂಡು ಬರುವಾಗ ಮಂದಾಕಿನಿಯ ಗುರುತು ಖುಸ್ರುವಿಗೆ ಹತ್ತಿದ್ದಿಲ್ಲ. ಆತನು ಒಳಗೆ ಹೋಗಿ ಶುಭ್ರ ಹಾಸಿಗೆಯ ಮೇಲೆ ನಿದ್ದೆಹತ್ತಿ ಮಲಗಿಕೊಂಡಿದ್ದ ಮಂದಾಕಿನಿಯ ಗುರುತು ಹಿಡಿದು ಪರಮಾಶ್ಚರ್ಯಪಟ್ಟನು. ನನ್ನ ಮನಸ್ಸನ್ನು ಹರಣ ಮಾಡಿದ್ದ ಈ ಸುಂದರಿಯು ಹೀಗೆ ಅಕಸ್ಮಾತ್ ನನ್ನ ಕೈಗೆ ಸಿಕ್ಕದ್ದು ವಿಲಕ್ಷಣ ಯೋಗವೆಂದು ತಿಳಿದು ಆತನಿಗೆ ಒಂದು ಬಗೆಯ ಸಮಾಧಾನವಾಯಿತು. ನಿದ್ದೆಯಲ್ಲಿ ಅಸ್ತವ್ಯಸ್ತವಾಗಿದ್ದ ಆಕೆಯ ಅವಯವಗಳ ಸೌಂದರ್ಯ ನೋಡಿಯಂತು ಆತನ ಚಿತ್ತಭ್ರಮವಾಗಿ ಹೋಯಿತು. ತಾನು ಹೀಗೆ ಭ್ರಾಂತ ನಾದದ್ದು ದಾಸಿಯರಿಗೆ ತಿಳಿದು ಅವರ ರೂಮಿ ಬೇಗಮೆಯ ಮುಂದೆ ಹೇಳಿದರೆ, ತನ್ನ ನೀಚ ತನಕ್ಕಾಗಿ ಬೇಗಮೆಯು ತನ್ನನ್ನು ತಿರಸ್ಕರಿಸಬಹುದೆಂದು ತಿಳಿದು, ಮಹಾಸಮರ್ಥನಂತೆ ಮನೋನಿಗ್ರಹ ಮಾಡಿ ಆತನು ದಾಸಿಯನ್ನು ಕುರಿತು—''ಈ ಹಿಂದೂ ರಮಣಿಯ ಪ್ರಕೃತಿಯು ಹೇಗೆ ಇರುವದೆಂಬದನ್ನು ನಾಳೆ ಬೆಳಗಿನಲ್ಲಿ ನನಗೆ ತಿಳಿಸು'' ಎಂದು ಹೇಳಿ ಹೊರಟು ಹೋದನು. ಏನು ಮಾಡಿದರೂ ಒಮ್ಮೆ ಹತ್ತಿದ ಆತನ ಕೆಟ್ಟ ಚಟದ ಸುಂಕವು ಹೋಗಲೊಲ್ಲದು!

ಸತಿಯ ಶಾಪ!

ಈ ವಿಚಿತ್ರವಾದ ಸಂಸಾರದಲ್ಲಿ ಮನುಷ್ಯನು ಒಮ್ಮೊಮ್ಮೆ ಹೊಂದಬಾರದ ಸಂತೋಷವನ್ನು ಅಕಸ್ಮಾತ್ ಹೊಂದುತ್ತಿರುತ್ತಾನೆ; ಒಮ್ಮೊಮ್ಮೆ ಮಾಡಬಾರದ ಚಿಂತೆಯನ್ನು ಮಾಡುತ್ತಿರುತ್ತಾನೆ; ಒಮ್ಮೊಮ್ಮೆ ಪಡಬಾರದ ದುಃಖವನ್ನು ಪಡುತ್ತಿರುತ್ತಾನೆ; ಆದರೆ ಅವನ ಈ ಯಾವ ಸ್ಥಿತಿಗೂ ಸಂಬಂಧವಿಲ್ಲದಂತೆ ಒಮ್ಮೊಮ್ಮೆ ಅಕಸ್ಮಾತ್ತಾಗಿ ಆಗುವದು ತಟ್ಟನೆ ಆಗಿಯೇ ಹೋಗುತ್ತಿರುತ್ತದೆ. ಅದರಂತೆ ಅಕಸ್ಮಾತ್ತಾಗಿ ಒದಗಿದ ಆನೆಗಳ ಕಾಳಗದ ನೆವದಿಂದ ಸೇಲೀಮನಿಗೂ, ಖುಸ್ರುವಿಗೂ ಆದ ಜಗಳವನ್ನು ರೂಮಿ ಬೇಗಮೆಯು ಖುಸ್ರುವಿನ ಮುಖದಿಂದಲೇ ಕೇಳಿ ಬಹಳವಾಗಿ ಅಂಜಿದಳು. ಖುಸ್ರುವಿನ ಮೇಲೆ ಆಕೆಯ ಪ್ರೇಮವು ಬಹಳ. ಸೇಲೀಮನಿಂದ ತನ್ನ ಪ್ರೀಯ ಖುಸ್ರುವಿಗೆ ಏನಾದರೂ ತ್ರಾಸವಾದೀತೆಂದು ತಿಳಿದು ಸೇಲೀಮನ ಸಿಟ್ಟು ಇಳಿಸುವದಕ್ಕಾಗಿ ಆಕೆಯು ಆಗ್ರಾಕ್ಕೆ ಹೋಗಬೇಕೆಂದು ನಿಶ್ಚಯಿಸಿದಳು. ರೂಮಿಬೇಗಮೆಯೂ ಸೇಲೀಮನನ್ನು ಹೊಟ್ಟೆಯ ಮಗನಂತೆ ನೋಡುತ್ತಿದ್ದದ್ದರಿಂದ, ತನ್ನ ಮಾತನ್ನು ಸೇಲೀಮನು ಮೀರಲಿಕ್ಕಿಲ್ಲವೆಂದು ಆಕೆಯು ತಿಳಿದುಕೊಂಡಿದ್ದಳು. ಆಕೆಯು ಖುಸ್ರುವನ್ನು ಕುರಿತು—"ಖುಸ್ರೂ, ನೀನು ತಂದೆಯ ದ್ವೇಷವನ್ನು ಕಟ್ಟಿಕೊಂಡದ್ದು ಒಳಿತಾಗಲಿಲ್ಲ. ಈ ಪ್ರಸಂಗದಲ್ಲಿ ಆದಷ್ಟು ಬೇಗನೆ ನಿನ್ನ ತಂದೆಯ ಸಿಟ್ಟು ಇಳಿಸದಿದ್ದರೆ ಪರಿಣಾಮವು ನೆಟ್ಟಗಾಗಲಿಕ್ಕಿಲ್ಲ; ಆದ್ದರಿಂದ ನಾನು ಆಗ್ರಾಕ್ಕೆ ಇಂದೇ ಹೋಗುವೆನು. ನನ್ನ ಬಳಿಯಲ್ಲಿರುವ ಹಿಂದೂ ರಮಣಿಯ ಯೋಗಕ್ಷೇಮದ ಕಡೆಗೆ ನಿನ್ನ ಲಕ್ಷವಿರಲಿ. ನಾನು ಆಗ್ರಾಕ್ಕೆ ಹೋದಬಳಿಕ ನೀನು ಏನೇನು ಮಾಡಬೇಕೆಂಬದನ್ನು ಹೇಳಿಕಳಿಸುವೆನು, ಅದರಂತೆ ನೀನು ಹಟಮಾಡದೆ ನಡೆಯುತ್ತಿರು." ಎಂದು ಹೇಳಿ, ಆ ಉದಾರ ಹೃದಯದ ಬೇಗಮೆಯು ಮಂದಾಕಿನಿಯ ಬಳಿಗೆ ಹೋದಳು. ಮಂದಾಕಿನಿಯು ಬೇಗಮೆಯ ವಿಷಯವಾಗಿ ಅತ್ಯಂತ ಭಕ್ತಿಯುಳ್ಳವಳಾಗಿದ್ದಳು. ಆ ಘನವಂತಳಿಂದಾದ ಉಪಕೃತಿಗಾಗಿ ತಾನು ಆಜನ್ಮ ಆಕೆಯ ವಿಷಯವಾಗಿ ಕೃತಜ್ಞಳಾಗಿರಬೇಕೆಂದು ಆಕೆಯು ನಿಶ್ಚಯಿಸಿದ್ದಳು. ಹೀಗೆ ಮಂದಾಕಿನಿಯು ಸದ್ಭಾವ ತಾಳಿದವಳಾಗಿರುವಾಗ ಬೇಗಮೆಯು ಆಕೆಯನ್ನು ಕುರಿತು– ಮಂದಾಕಿನೀ, ನಾನು ಒಂದು ಕೆಲಸದ ಸಲುವಾಗಿ ನಾಲ್ಕುದಿನ ಆಗ್ರಾಕ್ಕೆ ಹೋಗಿಬರುವೆನು. ಅಲ್ಲಿಯವರೆಗೆ ಈ ರೆಝಿಯಾ ದಾಸಿಯು ನಿನ್ನ ಯಾವತ್ತು ಯೋಗಕ್ಷೇಮವನ್ನು ಯಥಾಸ್ಥಿತವಾಗಿ ನೋಡಿಕೊಳ್ಳುತ್ತಿರುವಳು. ಹೇಗೂ ನಿನ್ನ ಊಟಉಡಿಗೆಯ ಸಂಬಂಧದಿಂದ ನಿನ್ನ ಧರ್ಮಕ್ಕೆ ಬಾಧೆ ಬಾರದಂತೆ ಹಿಂದೂ ಸ್ತ್ರೀಯನ್ನು ಇಟ್ಟು ವ್ಯವಸ್ಥೆ ಮಾಡಿರುತ್ತದೆ. ಈ ಮಂದಿರದಲ್ಲಿ ಯಾವ ಪುರುಷರಿಗೂ ಬರಲಿಕ್ಕೆ ಪರವಾನಿಗೆಯಿಲ್ಲ, ನೀನು ನಿಶ್ಚಿಂತಳಾಗಿರು. ನಿನಗೆ ಬೇಸರ ಬಂದರೆ ಈ ಹಿಂದಿನ ಗುಲಾಬಿಯ ಉದ್ಯಾನದಲ್ಲಿ ಯಥೇಚ್ಛವಾಗಿ ವಿಶ್ರಾಂತಿಯನ್ನು ಹೊಂದು. ಅಲ್ಲಿ ನಿನಗೆ ಯಾವ ಬಗೆಯಿಂದಲೂ ತೊಂದರೆಯಾಗಲಾರದು. ನಾನು ಬರುವವರೆಗೆ ಮಾತ್ರ ನೀನು ಹೋಗಬೇಡ. ನಾನು ಬಂದ ಬಳಿಕ ನಿನ್ನ ಹೇಳಿಕೆಯಂತೆ ನಿನ್ನ ಆಪ್ತರಬಳಿಗೆ ನಿನ್ನನ್ನು ಕಳಿಸಿಕೊಡುವೆನು, ಎಂದು ಹೇಳಿದಳು.

ಇಸ್ತಂಬೂಲೀ ಬೇಗಮೆಯು ಆಗ್ರಾಕ್ಕೆ ಹೋಗಲು, ಮಂದಾಕಿನಿಗೆ ಬಹಳ ಚಡಪಡಿಕೆಯಾಯಿತು. ಪತಿಯ ಮರಣವಾರ್ತೆಯಿಂದ ಮೊದಲೇ ಆಕೆಯ ಹೃದಯಕ್ಕೆ ಬಲವಾದ ಗಾಯವಾಗಿತ್ತು, ಅದರಲ್ಲಿ ತನ್ನ ಪತಿಯ ಮರಣಕ್ಕೆ ಕಾರಣನಾದ ಖುಸ್ರುವಿನ ಮನೆಯಲ್ಲಿ ನಾನು ಇರುತ್ತಿದ್ದದ್ದರಿಂದ, ಆ ಘಾಯಕ್ಕೆ ಉಪ್ಪು ತೊಡೆದಂತೆ ಆಕೆಗೆ ವಿಶೇಷ ವ್ಯಥೆಯುಂಟಾಗಿತ್ತು. ಬೇಗಮೆಯು ಹೋದದ್ದರಿಂದಂತು ಆಕೆಯ ಮನಸ್ಸಿನಲ್ಲಿ ಇಲ್ಲದ ವಿಚಾರಗಳು ಬರತೊಡಗಿ, ಆಕೆಯ ಮನಸ್ಸು ಅತ್ಯಂತ ಅಸ್ವಸ್ಥವಾಯಿತು. ರಾತ್ರಿ ಏನು ಮಾಡಿದರೂ ಆಕೆಗೆ ನಿದ್ದೆ ಬರಲೊಲ್ಲದು. ಆಗ ಆಕೆಯು ತನ್ನ ಕೋಣೆಯಿಂದ ಹೊರಬಿದ್ದು ಹಿಂದಿನ ಗುಲಾಬಿಯ ಉದ್ಯಾನದೊಳಗೆ ಹೋದಳು. ಆ ಮನೋಹರವಾದ ಉದ್ಯಾನದಲ್ಲಿಯ ಸುಗಂಧದ ಸುಳಿಗಾಳಿಯ ಪರಿಚರ್ಯದಿಂದ ಆಕೆಯ ಮನಸ್ಸು ಸ್ವಲ್ಪ ವಿಶ್ರಮಿಸಿ ಆಕೆಗೆ ನಿದ್ದೆ ಬರಲು, ತಾನು ಕುಳಿತಿರುವ ಕಟ್ಟೆಯ ಮೇಲೆಯೇ ಆಕೆಯು ಸ್ವಲ್ಪ ಅಡ್ಡಾದಳು. ಸ್ವಲ್ಪ ಹೊತ್ತಿನಲ್ಲಿಯೇ ಮಂದಾಕಿನಿಗೆ ಗಾಢವಾದ ನಿದ್ದೆಯು ಹತ್ತಿತು. ಆ ಬೆಳದಿಂಗಳ ರಾತ್ರಿಯಲ್ಲಿ ಆ ಶುಭಸಂಗಮರವರಿಯ ಕಲ್ಲಿನ ಕಟ್ಟೆಯ ಮೇಲೆ ಮಲಗಿದ್ದ ಮಂದಾಕಿನಿಯ ಸೌಂದರ್ಯವು ಅತ್ಯಂತ ಮೋಹಕವಾಗಿದ್ದರೂ, ಅದನ್ನು ನೋಡಿ ಮೋಹಿತರಾಗಲಿಕ್ಕಲ್ಲಿಗೆ ಯಾರೂ ಬರುವ ಹಾಗಿದ್ದಿಲ್ಲ; ಆದರೆ ಮಂದಾಕಿನಿಗೆ ಮೋಹಿತನಾಗಿದ್ದ ಖುಸ್ರುವು, ರೂಮಿ ಬೇಗಮೆಯು ಆಗ್ರಾಕ್ಕೆ ಹೋದದ್ದರಿಂದ ನಿರ್ಭಯನಾಗಿ ಮಂದಾಕಿನಿಯ ಪ್ರಾಪ್ತಿಯು ಹೇಗಾದೀತೆಂದು ಚಿಂತಿಸತೊಡಗಿದ್ದನು. ಮನುಷ್ಯನ ಮನಸ್ಸು ಒಮ್ಮೆ ವ್ಯಸನಾಸಕ್ತವಾಯಿತೆಂದರೆ, ಅದನ್ನು ಆ ವ್ಯಸನದಿಂದ ಹಿಂದಕ್ಕೆ ತಿರುಗಿಸುವದು ಅಶಕ್ಯವೆಂತಲೇ ಹೇಳಬೇಕಾಗುವದು. ರೂಮಿ ಬೇಗಮೆಯ ಭಯದಿಂದ ಖುಸ್ರುವು ಮಂದಾಕಿನಿಯ ಮೇಲಿನ ತನ್ನ ಮನಸ್ಸನ್ನು ಬಿಗಿ ಹಿಡಿಯಲು ವಿಶ್ವಪ್ರಯತ್ನ ಮಾಡಿದನು; ಆದರೆ ಆ ವಿಷಯಾಸಕ್ತ ತರುಣನ ಮನಸ್ಸು ಆ ತರುಣಿಯ ಕಡೆಗೆ ಹರಿಯದೆ ನಿಲ್ಲಲಿಲ್ಲ. ಮನಸ್ಸು ಹರಿದರೂ ತನ್ನ ದೇಹವನ್ನು ಅದಕ್ಕೆ ಅಧೀನವಾಗಿ ಮಾಡದೆ, ಖುಸ್ರುವು ತಾನು ಕುಳಿತುಕೊಂಡಿದ್ದಲ್ಲಿ ಕುಳಿತುಕೊಂಡುಬಿಟ್ಟಿದ್ದರೆ, ಆತನು ದೈಹಿಕ ಪಾಪದಿಂದಾದರೂ ಮುಕ್ತನಾಗಿ, ಆತನ ಮನಸ್ಸಿನ ದುರ್ವಿಚಾರದ ಕಸುವೂ ಕಡಿಮೆಯಾಗಬಹುದಾಗಿತ್ತು; ಆದರೆ, ಹೀಗೆ ದೇಹವನ್ನು ಮನಸ್ಸಿಗೆ ಒಪ್ಪಿಸದಿರುವ ದುರ್ಧರ ಕೆಲಸವು ಖುಸ್ರುವಿನಂಥ ಸುಖ ಪುರುಷರಿಂದಂತು ಆಗುವದೇ ಇಲ್ಲ. ಅಂತೇ ಈ ಜಗತ್ತಿನಲ್ಲಿ ಪ್ರತ್ಯಕ್ಷವಾದ ಪಾಪದ ಕೃತಿಗಳು ಎಲ್ಲರಿಂದಲೂ ಆಗುತ್ತಿರುತ್ತವೆ. ಇವು ಪಾಪದ ಕೃತಿಗಳೆಂದು ಯಾರಿಗೆ ಗೊತ್ತಿರುವದಿಲ್ಲ? ಆದರೆ ಕೆಟ್ಟ ಮನಸ್ಸು ಪಾಪ ಮಾಡುವದಕ್ಕೆ ಹರಿದು ಹೋಗಲು, ಮನುಷ್ಯನು ಅದರ ಕೈಯಲ್ಲಿ ಸಿಕ್ಕು ಅದು ಎಳೆದತ್ತ ಹೋಗಿಬಿಡುವನು. ಅದರಂತೆಯೇ ಖುಸ್ರುವು ಮಂದಾಕಿನಿಯ ಕಡೆಗೆ ಹರಿಯಹತ್ತಿದ ತನ್ನ ಮನಸ್ಸಿನ ಕೈಯಲ್ಲಿ ಸಿಕ್ಕು ತನ್ನ ದೇಹವನ್ನು ಅದಕ್ಕೆ ಒಪ್ಪಿಸಿದನು. ಆಗ ಆತನು ಗುಪ್ತ ರೀತಿಯಿಂದ ಒಬ್ಬ ದಾಸಿಯ ಮುಖಾಂತರ ಮಂದಾಕಿನಿಯು ಗುಲಾಬಿಯ ತೋಟದಲ್ಲಿರುವದನ್ನು ತಿಳಿದು, ಅಂಜುತ್ತಂಜುತ್ತ ಅತ್ತ ಕಡೆಗೆ ನಡೆದನು. ಒಬ್ಬ ಅಬಲೆಗೆ ಅಂಜುವಷ್ಟು ಖುಸ್ರುವು ಹೇಡಿಯಿದ್ದಿಲ್ಲ; ಆ ತರುಣ ಶೂರನು ಯುದ್ಧದಲ್ಲಿ ತನ್ನ ಜೀವವನ್ನು

ತೃಣಕ್ಕೆ ಬಗೆಯುವ ಎದೆಗಾರನಾಗಿದ್ದನು; ಆದರೆ ಆತನ ಕೃತಿಯು ಪಾಪಮಯವಾದದ್ದರಿಂದ, ತನ್ನನ್ನು ಯಾರು ನೋಡುವರೋ ಎಂಬ ಭಯದಿಂದ ಆ ತರುಣನ ಹೃದಯವು ನಡುಗ ತೊಡಗಿತು. ಪಾಪಕ್ಕೆ ಅಂಜದವನು ಎಲ್ಲರಿಗೂ ಅಂಜುತ್ತಾನೆಂಬ ಮಾತು ಸುಳ್ಳಲ್ಲ. ಖುಸ್ರುವು ಕಳ್ಳನಂತೆ ಆ ಉದ್ಯಾನದಲ್ಲಿ ಮಂದಾಕಿನಿಯನ್ನು ಹುಡುಕುತ್ತಿರಲು, ಸುಂದರವಾದ ಕಟ್ಟೆಯಮೇಲೆ ನಿದ್ದೆಹೋಗಿದ್ದ ಆ ಸುಂದರಿಯು ಆತನ ಕಣ್ಣಿಗೆ ಬಿದ್ದಳು.

ಅಪೂರ್ವ ಸೌಂದರ್ಯಶಾಲಿನಿಯಾದ ಮಂದಾಕಿನಿಯ ನಿದ್ದೆಹೋದ ಶಾಂತ ಮುಖ ಮುದ್ರೆಯ ಮೇಲೆ ಚಂದ್ರನ ಸ್ವಚ್ಛ ಪ್ರಕಾಶವು ಬಿದ್ದದ್ದರಿಂದ, ನೋಡುವವರಿಗೆ ಆ ಪ್ರಮದೆಯು ಸ್ವರ್ಗಾಂಗನೆಯಂತೆ ತೋರುತ್ತಿದ್ದಳು; ಅದರಲ್ಲಿ ಮೋಹಿತನಾದ ಖುಸ್ರುವಿಗಂತು ಆಕೆಯ ಸೌಂದರ್ಯರಾಶಿಯು ಅಪಾರವಾಗಿ ತೋರುತ್ತಿತ್ತು. ಶಾಂತವಾದ ನಿರ್ಜನಪ್ರದೇಶವು, ಮೇಲೆ ಏಕಾಂತವು; ಆದ್ದರಿಂದ ಖುಸ್ರುವಿನ ವಿಕೃತ ಹೃದಯವು ಕ್ಷುಬ್ಧವಾಯಿತು. ಆತನು ಆಶಾ ಪೂರ್ಣವಾದ ಮನಸ್ಸಿನಿಂದ ಗಟ್ಟಿಯಾಗಿ ಕೂಗಿ—''ನೀನು ಇಷ್ಟು ಹತ್ತರ ಇದ್ದು ನಿನ್ನ ಈ ಸೌಂದರ್ಯವನ್ನು ನೋಡಲಿಕ್ಕೆ ನನಗೆ ಅವಕಾಶವೇ ದೊರೆಯಲಿಲ್ಲ! ಮಂದಾಕಿನೀ, ನೀನು ಎಷ್ಟು ಸುಂದರಿಯಿರುವೆಯಲ್ಲ! ಆಹಾ! ನನ್ನ ಪ್ಯಾರೀಬಾನುವು ಇಷ್ಟು ಸುಂದರಿಯಾಗಿದ್ದರೆ''—ಎಂದು ನುಡಿಯುತ್ತಿರಲು, ಆತನು ಹೀಗೆ ಬೇಕಂತ ಗಟ್ಟಿಸಿಗಟ್ಟಿಸಿ ಆಡಿದ ಮಾತುಗಳಿಂದ ಮಂದಾಕಿನಿಗೆ ಎಚ್ಚರವಾಯಿತು. ಆಕೆಯು ತಟ್ಟನೆ ಕಟ್ಟೆಯಿಂದ ಕೆಳಿಗೆ ಇಳಿದು ದುಷ್ಟಸ್ವರದಿಂದ ಖುಸ್ರುವನ್ನು ಕುರಿತು—''ಶಹಾಜಾದೇಸಾಹೇಬ, ನಿಮ್ಮ ಹೃದಯದ ದೊಡ್ಡಿಸ್ತನವು ಇದೇ ಏನು? ನನ್ನನ್ನು ಅಕಾಲದಲ್ಲಿ ವಿಧವೆಯಾಗಿ ಮಾಡಿಯೂ ನಿಮಗೆ ಸಮಾಧಾನವಾಗಿಲ್ಲವೆನ್ನುವ ಹಾಗೆ ತೋರುತ್ತದೆ. ನಿಮ್ಮ ಆಗಿನ ಪರೋಪಕಾರದ ವೃತ್ತಿಯು ಈಗ ಎಲ್ಲಿ ಹೋಯಿತು? ನನ್ನ ಪತಿಯ ಬಂಧವಿಮೋಚನಕ್ಕಾಗಿ ನಿಮ್ಮ ಬೆರಳೊಳಗಿನ ಉಂಗುರವನ್ನು ನೀವೇ ನನಗೆ ಕೊಟ್ಟಿದ್ದಿರಲ್ಲವೇ? ಅದರಂತೆ ಹಾದಿಯಲ್ಲಿ ಮೂರ್ಛಿತಳಾಗಿ ಬಿದ್ದುಕೊಂಡಿದ್ದ ನನ್ನನ್ನು ನೀವೇ ಕರತಂದು ನನ್ನ ಮರ್ಯಾದೆಯನ್ನು ಉಳಿಸಿದಿರಲ್ಲವೇ? ಹುಜೂರ, ಅಕಬರ ಬಾದಶಹರ ಮೊಮ್ಮಕ್ಕಳಾದ ನಿಮ್ಮ ಘನವಂತಿಕೆಗೆ ಈ ಉಪಕಾರದ ಕೃತಿಗಳು ಒಪ್ಪುತ್ತಿದ್ದರೂ, ನೀವು ನನ್ನ ಪತಿಯ ಮರಣಕ್ಕೆ ಕಾರಣವಾದದ್ದೂ, ಮೇಲೆ ಈಗ ನನ್ನ ವಿಷಯವಾಗಿ ಪಾಪವಾಸನೆಯನ್ನು ತಾಳಿದ್ದೂ ತೀರ ಲಾಂಛನಾಸ್ಪದವಾಗಿರುವವು. ಆದರೆ ಖಾವಿಂದ, ನಾನು ಅನಾಥ ವಿಧವೆಯೆಂದು ತಿಳಿದು ನನ್ನನ್ನು ಕರುಣಿಸಬೇಕು! ತಮ್ಮ ಘನವಾದ ದೈವಶಾಲಿತ್ವದ ವೈಭವದ ಮುಂದೆ ನನ್ನಂಥ ಪಾಪಿಷ್ಠ ಕ್ಷುದ್ರ ವಿಧವೆಯ ಬೆಲೆಯೇನು?

ಹೀಗೆ ಮಂದಾಕಿನಿಯು ಮಾತಾಡುತ್ತಿರಲು, ಖುಸ್ರುವು ಆಶ್ಚರ್ಯಮಗ್ನನಾಗಿ ನಡುವೇ ಬಾಯಿ ಹಾಕಿ—ಮಂದಾಕಿನೀ, ನಿನ್ನ ವಿವೇಕದ ಮಾತುಗಳನ್ನು ನಾನು ಸಂಪೂರ್ಣವಾಗಿ ಒಪ್ಪಿಕೊಳ್ಳುವೆನು; ಆದರೆ ವಿಕಾರಹತನಾಗಿರುವ ನನ್ನ ವಿವೇಕವು ಕೆಲಸಕ್ಕೆ ಬಾರದ್ದಾಗಿರುವದರಿಂದ, ನಾನು ಅತ್ಯಂತ ಕ್ಷುದ್ರರಲ್ಲಿ ಗಣಿಸಲು ತಕ್ಕವನಾಗಿರುವೆನು; ವಿಕಾರದ ಮುಂದೆ ವಿಚಾರದ ಆಟವು ನಡೆಯುವದಿಲ್ಲವಾದದ್ದರಿಂದ, ಈಗ ನಾನು ಕ್ಷುದ್ರನಂತೆಯೇ ಆಚರಿಸುತ್ತಿರುವೆನು, ಅದಿರಲಿ;

ಆದರೆ ನಾನು ನಿನ್ನ ಪತಿಯನ್ನು ಕೊಂದ ಆರೋಪವನ್ನು ನೀನು ನನ್ನ ಮೇಲೆ ಹೊರಿಸಿದೆಯಲ್ಲ! ಹೀಗೆ ನಿನ್ನ ಮುಂದೆ ಯಾರು ಹೇಳಿದರು? ಪ್ರೀಯ ಮಂದಾಕಿನೀ, ನಾನು ಖುದಾನ ಆಣೆ ಮಾಡಿ ಹೇಳುವೆನು, ಈವರೆಗೆ ನಿಷ್ಕಲಂಕವಾಗಿರುವ ನನ್ನ ಈ ಕೈಗಳು ಮನುಷ್ಯರ ರಕ್ತದಿಂದ ಕಲಂಕಿತವಾಗಿಲ್ಲ; ಅದರಂತೆ, ನನ್ನ ತಾಯಿಯು ಸದುಪದೇಶವಾದಂದಿನಿಂದ ಈ ವರೆಗೆ ನಾನು ಯಾರ ಪ್ರಾಣಹರಣ ಮಾಡಲಿಕ್ಕೂ ಆಜ್ಞಾಪಿಸಿರುವದಿಲ್ಲ, ಅನ್ನಲು, ಮಂದಾಕಿನಿಯು— ''ಸರಕಾರ, ಈ ಸುದ್ದಿಯನ್ನು ಲಜಪತನು ನನ್ನ ಮುಂದೆ ಹೇಳಿದನು. ನಿಮ್ಮ ಅಪ್ಪಣೆಯಿಂದಲೇ ನನ್ನ ಪತಿಯು ವಿಷಪ್ರಯೋಗದಿಂದ ಕೈಲಾಸವಾಸಿಯಾದನಂತೆ'' ಎಂದು ಹೇಳಿದಳು. ಆಗ ಖುಸ್ರುವು ಕೆಲಮಟ್ಟಿಗೆ ಆವೇಶಪೂರ್ಣ ಸ್ವರದಿಂದ—ಮಂದಾಕಿನೀ, ಇದು ತೀರ ಸುಳ್ಳು! ನೀನು ಯಾವದೋ ಭಯಂಕರವಾದ ಕೃಷ್ಣ ಕಾರಸ್ಥಾನದಲ್ಲಿ ಸಿಕ್ಕಿರುವದರಿಂದ ಹೀಗೆ ಏನೇನೋ ಹರಟುತ್ತಿರುವೆ. ನಿನ್ನ ಪ್ರೀಯಕರ ದುರ್ಜಯಸಿಂಹನು ಇನ್ನೂ ಜೀವದಿಂದಿರುವನೆಂದು ನಂಬು. ಇಗೋ ನೋಡು, ನಿನ್ನ ಪತಿಯು ನಿನ್ನ ಕೈಯಲ್ಲಿ ಕೊಡುವದಕ್ಕಾಗಿ ಲಜಪತನ ಕೈಯಲ್ಲಿ ಕೊಟ್ಟಿದ್ದ ಪತ್ರವಿದು. ಇದು ಇಂದು ಲಜಪತನ ಶೋಧ ಮಾಡುವಾಗ ಆತನ ಬಳಿಯಲ್ಲಿ ನನಗೆ ಸಿಕ್ಕದ್ದೊಂದು ಲಾಭವೇ ಆಯಿತು. ಈ ಪತ್ರವಿಲ್ಲದಿದ್ದರೆ, ನಿನ್ನ ಪತಿಯು ಜೀವದಿಂದದ್ದ ಬಗ್ಗೆ ನಿನ್ನ ನಂಬಿಗೆಯಾಗುತ್ತಿದ್ದಿಲ್ಲ, ನಾನು ಅಪವಾದದಿಂದ ಮುಕ್ತನಾಗುತ್ತಿದ್ದಿಲ್ಲ. ದುಷ್ಟ ವಾಸನೆಯಿಂದ ಲಜಪತನು ಹೀಗೆ ಸುಳ್ಳು ಹೇಳಿ ನನ್ನನ್ನು ಅಪವಾದಕ್ಕೆ ಗುರಿಮಾಡಿದ್ದರ ಫಲವನ್ನು ಆತನು ಇನ್ನು ಉಣ್ಣುವನು; ಆದರೆ ಮಂದಾಕಿನೀ, ಮೊದಲು ಈ ಪತ್ರವನ್ನು ನೋಡು, ಎಂದು ಹೇಳಿ ಖುಸ್ರುವು ಒಂದು ಚೀಟಿಯನ್ನು ಮಂದಾಕಿನಿಯ ಕೈಯಲ್ಲಿ ಕೊಟ್ಟನು. ತನ್ನ ಪತಿಯ ಹಸ್ತಾಕ್ಷರದ ಆ ಪತ್ರವನ್ನು ನೋಡಿ ಮಂದಾಕಿನಿಯ ಸಂಶಯ ನಿವೃತ್ತಿಯಾಗಿ ಲಜಪತನ ದುರಾಚಾರಪ್ರವೃತ್ತಿಯನ್ನು ನೆನಿಸಲು, ಆತನು ಹೀಗೆ ಸುಳ್ಳು ಹೇಳಿದ್ದರ ಕಾರಣವು ಆಕೆಗೆ ಮನದಟ್ಟಾಯಿತು. ಆಕೆಯು ಪಶ್ಚಾತ್ತಾಪದಿಂದ ಖುಸ್ರುವಿಗೆ ಕೈಜೋಡಿಸಿ— ''ಶಹಾಜಾದೇಸಾಹೇಬ, ನಾನು ನಿಷ್ಕಾರಣ ನಿಮ್ಮ ಮೇಲೆ ಅಪವಾದ ಹೊರಿಸಿದ್ದಕ್ಕಾಗಿ ನನ್ನನ್ನು ಕ್ಷಮಿಸಬೇಕು'' ಎಂದು ಪ್ರಾರ್ಥಿಸಿದಳು.

ಮಂದಾಕಿನಿಯ ಈ ವಿನಯೋಕ್ತಿಯನ್ನು ಕೇಳಿ ಖುಸ್ರುವು ಮನಸ್ಸಿನಲ್ಲಿ—''ಇದು ಒಳ್ಳೇ ಸುಪ್ರಸಂಗವಾಗಿರುತ್ತದೆ. ಇದೇ ಕಾಲದಲ್ಲಿ ನನ್ನ ಹೇತುವು ಸಾಧಿಸಿದರೆ ನೋಡಬೇಕು'' ಎಂದು ಯೋಚಿಸಿ ಅವಸರದಿಂದ ಮಂದಾಕಿನಿಯನ್ನು ಕುರಿತು—''ಮಂದಾಕಿನೀ, ನಿನ್ನನ್ನು ಬರಿಯ ಕ್ಷಮಿಸುವದಕ್ಕೇ ಏಕೆ, ನಿನ್ನ ಸಮಾಧಾನಕ್ಕಾಗಿ ಬೇಕಾದದ್ದನ್ನು ಮಾಡಲು ನಾನು ಸಿದ್ಧನಿರುವೆನು; ಆದರೆ ನೀನು ನನ್ನ ಬೇಗಮೆಯಾಗಬೇಕೆಂದು ಮಾತ್ರ ಸ್ಪಷ್ಟವಾಗಿ ಹೇಳುವೆನು. ಹಿಂದಕ್ಕೆ ನೀನು ಆ ಗುಹೆಯಲ್ಲಿ ನನ್ನ ಚಿತ್ತಹರಣ ಮಾಡಿದಾಗ ನಾನು ನನ್ನ ಮನಸ್ಸನ್ನು ಬಿಗಿಹಿಡಿದು ನಿನ್ನನ್ನು ಬಿಟ್ಟು ಹಾಗೆಯೇ ಬಂದೆನು; ಅದರಂತೆ, ನೀನು ನನ್ನ ಬೆರಳೊಳಗಿನ ಉಂಗುರವನ್ನು ಕೇಳಲಿಕ್ಕೆ ಬಂದಾಗ, ನಿನ್ನ ಉದಾತ್ತ ಉಪದೇಶಕ್ಕೆ ಮಾನಕೊಟ್ಟು ನಿನ್ನನ್ನು ಹಾಗೆಯೇ ಹೋಗಗೊಟ್ಟೆನು; ಆದರೆ ಈಗ ಮಾತ್ರ ನನ್ನ ಮನಸ್ಸಿನ ಸಯ್ಯಮನವಾಗುವದಿಲ್ಲವೆಂದು ಸ್ಪಷ್ಟವಾಗಿ

ಹೇಳಿಬಿಡುವೆನು. ಇನ್ನು ನೀನು ದುರ್ಜಯಸಿಂಹನ ಆಶೆಯನ್ನು ಬಿಟ್ಟು ಬಿಟ್ಟು ದಿಲ್ಲೀಶ್ವರನ ಮನೆತನದವಳಾಗು. ನನ್ನಿಂದಾಗಿರುವ ಉಪಕೃತಿಗಳನ್ನು ನೀನು ಈಗ ಸ್ಮರಿಸತಕ್ಕದ್ದು. ಇನ್ನು ಮೇಲಾದರೂ ನಿನ್ನ ಸಲುವಾಗಿ ನಾನು ಏನು ಮಾಡಲೆಂಬದನ್ನು ಸ್ಪಷ್ಟವಾಗಿ ಹೇಳು. ಈಗ ನೀನು ನನ್ನ ಸಂಗಡ ನನ್ನ ಮಂದಿರಕ್ಕೆ ನಡೆ. ನಿನಗೆ ರತ್ನಾಲಂಕಾರಗಳು ಬೇಕಾಗಿದ್ದರೆ, ಗೋವಳಕೊಂಡದ ರತ್ನಗಳ ಅಲಂಕಾರಗಳಿಂದ ನಿನ್ನ ಸರ್ವಾಂಗವನ್ನು ಮುಚ್ಚಿಬಿಡುವೆನು. ನೀನು ರಾಜರಾಜೇಶ್ವರೀಯಾಗಬೇಕೆಂದು ಇಚ್ಛಿಸುತ್ತಿದ್ದರೆ, ನಾನು ಪಿತೃದ್ರೋಹಿಯಾಗಿ ನನ್ನ ತಂದೆಯ ಮಸ್ತಕದ ಮೇಲಿನ ರತ್ನಖಚಿತವಾದ ರಾಜಮುಕುಟವನ್ನು ನಿನ್ನ ಮಸ್ತಕದ ಮೇಲೆ ಇಡುವೆನು, ಎಂದು ನುಡಿಯುತ್ತ ಮಂದಾಕಿನಿಯನ್ನು ಆಲಿಂಗಿಸುವದಕ್ಕಾಗಿ ಮುಂದಕ್ಕೆ ಬಂದನು; ಆದರೆ ಅತ್ಯಂತ ಜಾಗರೂಕತೆಯಿಂದ ಇರುತ್ತಿದ್ದ ಮಂದಾಕಿನಿಯು ಹಿಂದಕ್ಕೆ ಸರಿದು, ಕೆಂಪಡರಿದ ಕಣ್ಣುಗಳಿಂದ ಖುಸ್ರುವನ್ನು ನೋಡುತ್ತ—ಖುಸ್ರೂ, ಮೊಗಲ ರಾಜವಂಶದಲ್ಲಿ ಇಂಥ ದುಷ್ಟ ಪ್ರಾಣಿಯು ಉತ್ಪನ್ನವಾಗಬಹುದೆಂದು ಯಾರೂ ಎಣಿಸಿರಲಿಕ್ಕಿಲ್ಲ! ರಾಜಪುತ್ರಾ, ನಿನ್ನ ಹೃದಯವು ಎಷ್ಟು ಕ್ಷುದ್ರವಾದದ್ದು! ನಿನ್ನ ಗೋವಳಕೊಂಡದ ರತ್ನಗಳು ನಮ್ಮಂಥ ರಜಪೂತ ಸ್ತ್ರೀಯರಿಗೆ ಬೀದಿಯೊಳಗಿನ ಕಾಡು ಕಲ್ಲುಗಳಾಗಿರುವವು. ರಕ್ತದಿಂದ ನೆನೆದಿದ್ದ ನಿಮ್ಮ ಆಗ್ರಾದ ಸಿಂಹಾಸನವನ್ನು ನಿನ್ನಂಥ ದುಷ್ಟರಲ್ಲದೆ ಧರ್ಮಿಷ್ಠರು ಇಚ್ಛಿಸಬಹುದೇ? ನೀಚ ಸ್ವಾರ್ಥಪ್ರೇರಿತ ವಾದ ನಿನ್ನ ಪರೋಪಕಾರ ಗುಣಕ್ಕೆ ಧಿಕ್ಕಾರವಿರಲಿ! ಖುಸ್ರೂ, ಯಾವತ್ತು ರಜಪೂತ ಸ್ತ್ರೀಯ ರೆಂದರೆ ಅಂಬರರಾಜ–ಕನ್ಯೆಯರೆಂದು ತಿಳಿದಿರುವಿಯೋ? ಯಾವತ್ತು ರಜಪೂತ ಪುರುಷ ರೆಂದರೆ ಮಾನಸಿಂಹರಿರುವರೇ? ನಿಮ್ಮ ಯವನ ವೈಭವಕ್ಕೆ ಮರುಳಾಗುವ ಸ್ತ್ರೀ–ಪುರುಷರು ನಮ್ಮ ಆರ್ಯ ಸಮುದಾಯದಲ್ಲಿ ಬಹು ಸ್ವಲ್ಪ ಜನರು ದೊರೆಯಬಹುದೆಂದು ತಿಳಿ. ಏನೇ ಇರಲಿ, ಇನ್ನು ನಾನು ನಿನ್ನ ಸಂಗಡ ಹೆಚ್ಚಿಗೆ ಮಾತಾಡಲಾರೆನು, ಬೇಗಮ ಸಾಹೇಬರು ಇಲ್ಲದಿರುವ ಸಂಧಿಯನ್ನು ನೋಡಿ ನೀನು ಹೀಗೆ ನೀಚತನ ಮಾಡುವದರಿಂದ ನಿಮ್ಮವರಾರಿಗೂ ಗೌರವವುಂಟಾಗಲಾರದು, ಹಾದಿಯ ಬಿಡು, ನಾನು ನನ್ನ ಮಂದಿರಕ್ಕೆ ಹೋಗುವೆನು.

ಎರಡನೆಯದಾವದಾದರೊಂದು ಪ್ರಸಂಗದಲ್ಲಿ ಮಂದಾಕಿನಿಯು ಈ ಮಾತುಗಳನ್ನು ಖುಸ್ರುವಿಗೆ ಆಡಿದ್ದರೆ, ಅಭಿಮಾನಿಯಾದ ಆ ಶೂರ ಖುಸ್ರುವು ಆಕೆಯನ್ನು ಆಜನ್ಮ ಕಾರಾಗೃಹ ದಲ್ಲಿರಿಸಲಿಕ್ಕೂ ಹಿಂದೆಮುಂದೆ ನೋಡುತ್ತಿದ್ದಿಲ್ಲ; ಆದರೆ ಈ ಕಾಲದಲ್ಲಿ ಸೈತಾನನು ಖುಸ್ರುವನ್ನು ಪೂರಾ ಅಂಧನಾಗಮಾಡಿದ್ದರಿಂದ ಆ ಶಹಾಜಾದಾನ ಹೃದಯದ ಸ್ವಾಭಾವಿಕವಾದ ದೊಡ್ಡಸ್ತನವೂ, ಶೀಲವೂ, ಮರ್ಯಾದೆಯೂ, ಜ್ಞಾನವೂ ಲೋಪವಾಗಿ ಹೋಗಿದ್ದವು. ಸೌಂದರ್ಯದ ಉನ್ಮಾದದಿಂದ ಹುಚ್ಚನಾಗಿದ್ದ ಆತನು ಮಂದಾಕಿನಿಯ ಈ ಮರ್ಮಭೇದಕ ಮಾತುಗಳನ್ನು ಕೇಳದವನಂತೆ ಅಧೀರತೆಯಿಂದ ಮುಂದಕ್ಕೆ ಸರಿದು ಮಂದಾಕಿನಿಯ ಕೈಯನ್ನು ಹಿಡಿದನು. ಆಗ ಮಂದಾಕಿನಿಯು ಕೆರಳಿದ ಕರಿ ನಾಗರ ಹಾವಿನಂತೆ ಖುಸ್ರುವಿನ ಮೇಲೆ ವಿಷಕಾರುತ್ತ ಕೈ ಕೊಸರಿ ದೂರಸರಿದು ನಿಂತು ತನ್ನ ಶಾಪ ವಾಣಿಯಿಂದ ಆತನನ್ನು ಕುರಿತು—''ದುಷ್ಟಾ, ಪತಿವ್ರತೆಯ ಅಭಿಮಾನಕ್ಕೆ ಏನಾದರೂ ಬೆಲೆಯಿದ್ದರೆ, ಪತಿವ್ರತೆಯ ತೇಜಸ್ಸಿನಲ್ಲಿ

ಯೇನಾದರೂ ಸಾಮರ್ಥ್ಯವಿದ್ದರೆ, ದುರ್ಜಯಸಿಂಹನ ಚರಣಗಳ ಹೊರತು ಅನ್ಯತ್ರ ನನ್ನ ದೃಷ್ಟಿಯು ಹೋಗದಿರುವದು ನಿಜವಿದ್ದರೆ ನಾನು ನಿನಗೆ ಈಗ ಕೊಡುವ ಶಾಪವು ನಿಜವಾಗಲಿ! ನನ್ನನ್ನು ಪೀಡಿಸುವ ಕಾಮಾಂಧನಾದ ಎಲೈ ನರಾಧಮನೇ, ನೀನು ರಾಜಪುತ್ರನಿರು, ಬೇರೆ ಯಾವನಾದರೊಬ್ಬ ಶ್ರೇಷ್ಠನೆಂದು ಭಾವಿಸಿದ್ದ ಪ್ರಾಣಿಯಿರು; ಆದರೆ ಒಂದಾನೊಂದು ದಿನ ನಿನ್ನ ದೋಷಯುಕ್ತ ನೇತ್ರಗಳಿಂದ ರಕ್ತಸೋರಿ ಅವು ಸೇದಿಹೋಗಿ ನೀನು ಅಂಧನಾಗುವೆ! ಇಂದು ನನ್ನ ಕಣ್ಣೀರು ಸುರಿಸಿದ ನೀನು ಒಂದಿಲ್ಲೊಂದು ಕಾರಣದಿಂದ ನಿರಾಧಾರನಾಗಿ ಅಳುತ್ತ ಕುಳಿತುಕೊಂಡಾಗ ಇಂದಿನ ಪ್ರಸಂಗದ ನೆನಪು ನಿನಗೆ ಆದೀತು. ಸಂತೋಷ ಪಟ್ಟವನ ಆಶೀರ್ವಾದವೂ, ದುಃಖಪಟ್ಟವನ ಶಾಪವೂ ಎಂದೂ ಸುಳ್ಳಾಗಲಾರವೆಂದು ಈ ಅನಾಥ ಪತಿವ್ರತೆಯು ಕಟ್ಟಕಡೆಯಲ್ಲಿ ನಿನಗೆ ಸ್ಪಷ್ಟವಾಗಿ ಹೇಳುವೆನು.'' ಎಂದು ದುಃಖಾವೇಗದಿಂದ ಮಂದಾಕಿನಿಯು ಇನ್ನೂ ಏನೇನೋ ಮಾತಾಡುತ್ತಿರಲು, ಅಷ್ಟರಲ್ಲಿ ಒಬ್ಬ ದೀರ್ಘಕಾಯದ ಪುರುಷನು ವೇಗದಿಂದ ಬಂದು ಖುಸ್ರುವನ್ನು ಭರದಿಂದ ಹಿಂದಕ್ಕೆ ದೂಡಿದನು. ಆಗ ಜೋಲಿಹೋಗಿ ಖುಸ್ರುವು ಹಿಂದಕ್ಕೆ ಒಂದು ಕಾರಂಜಿಯ ಕಟ್ಟೆಗೆ ಬೀಳಲು, ಮೂರ್ಛೆಬಂದು ಆತನು ಮೈಮರೆತನು. ಆಗ ಮಂದಾಕಿನಿಯು ಆಶ್ಚರ್ಯಮಗ್ನಳಾಗಿ ತನಗೆ ಸಹಾಯ ಮಾಡಿದವನ ಕಡೆಗೆ ನೋಡುತ್ತಿರುವಾಗ ಒಬ್ಬ ಭವ್ಯಾಕಾರದ ಫಕೀರನು ಆಕೆಯ ಕಣ್ಣಿಗೆ ಬಿದ್ದನು. ಆತನ ಮುಖವು ಉದ್ದವಾದ ಗಡ್ಡ ಮೀಸೆಗಳಿಂದ ಮುಚ್ಚಿಹೋಗಿದ್ದರೂ, ಸಿಟ್ಟಿನಿಂದ ಕೆಂಪಾದ ಆತನ ಮುದ್ರೆಯು ಸೂಕ್ಷ್ಮ ರೀತಿಯಿಂದ ನೋಡುವವರಿಗೆ ಸ್ಪಷ್ಟವಾಗಿ ಕಾಣುತ್ತಿತ್ತು. ಆತನ ಕಣ್ಣುಗಳಿಂದಂತು ಕಿಡಿಗಳು ಹಾರುತ್ತಿರುವಂತೆ ಭಾಸವಾಗುತ್ತಿತ್ತು. ಮಂದಾಕಿನಿಗೆ ಮಾತಾಡಲು ಏನೂ ಅವಕಾಶ ಕೊಡದೆ ಫಕೀರನು ಆಕೆಯನ್ನು ಕುರಿತು ಗಂಭೀರ ಸ್ವರದಿಂದ– ನೀನು ಪಿಟ್ಟೆಂದು ಮಾತಾಡದೆ ನನ್ನ ಸಂಗಡ ನಡೆ; ಯಾಕಂದರೆ ಈಗ ನಿನ್ನ ಮೇಲೆ ಭಯಂಕರ ಸಂಕಟಬರುವ ಸಂಭವವಿದೆ.'' ಎಂದು ನುಡಿದು, ಉದ್ಯಾನದಿಂದ ಸಾಗಹತ್ತಿದನು. ಮಂದಾಕಿನಿಯೂ ಆತನನ್ನು ಹಿಂಬಾಲಿಸಿ ನಡೆದಳು. ಫಕೀರನ ಬಲಿಯಲ್ಲಿ ಶಹಾಜಾದಾನ ಹೆಸರಿನ ಮುದ್ರಿಕೆಯಿದ್ದದ್ದರಿಂದ ಬಾಗಿಲ ಕಾವಲುಗಾರರು ಬಾಗಿಲು ತೆರೆದು ಸನ್ಮಾನ ಪೂರ್ವಕವಾಗಿ ಅವರನ್ನು ಹೋಗಗೊಟ್ಟರು. ಫತ್ತೇಪುರವನ್ನು ಬಿಟ್ಟು ಅರ್ಧ ಹರದಾರಿ ಹೋಗುವವರೆಗೆ ಯಾರೂ ಮಾತಾಡಲಿಲ್ಲ; ಆದರೆ, ತನ್ನನ್ನು ಸಂಕಟದಿಂದ ಮುಕ್ತಮಾಡಿದ ಈತನು ಯಾರಿರಬಹುದೆಂದು ತಿಳಿಯುವ ಆತುರತೆಯಿಂದ ಮಂದಾಕಿನಿಯು ಫಕೀರನನ್ನು ಕುರಿತು—ಮಹಾತ್ಮನ್, ಅಭಾಗಿನಿಗೆ ತಮ್ಮ ಪರಿಚಯವಾಗುವದು ಶಕ್ಯವಿರುವದೋ, ಎಂದು ಕೇಳಲು, ಫಕೀರನು—ಮಂದಾಕಿನೀ, ಅವಸರ ಮಾಡಬೇಡ. ನಾನು ನಿನಗೆ ಅಪರಿಚಿತನಲ್ಲ, ನನ್ನಿಂದ ನಿನಗೆ ಯಾವ ಬಗೆಯ ತೊಂದರೆಯೂ ಆಗಲಾರದು. ಈಗ ಸುಮ್ಮನೆ ನಡೆ. ನಿರ್ಭಯ ಸ್ಥಳಕ್ಕೆ ಮುಟ್ಟಿದಬಳಿಕ ನಾನು ನಿನಗೆ ಎಲ್ಲ ಸಂಗತಿಯನ್ನು ಹೇಳುವೆನು.

ಫಕೀರನು ಹೀಗೆ ತನ್ನನ್ನು ಹೆಸರುಗೊಂಡು ಕರೆದದ್ದಕ್ಕಾಗಿಯಂತು ಮಂದಾಕಿನಿಗೆ ಪರಮಾಶ್ಚರ್ಯವಾಯಿತು. ಸಾಧು–ಸತ್ಪುರುಷರೂ, ಫಕೀರರು, ಸನ್ಯಾಸಿಗಳು ಮೊದಲಾದ

ದೇವಭಕ್ತ ಮಹಾಪುರುಷರೂ ಅಂತರ್ಜ್ಞಾನಿಗಳಿರುವರೆಂದು ತಿಳಿದು ಆಕೆಯು ಸಮಾಧಾನ ಮಾಡಿಕೊಂಡಳು. ಫಕೀರನು ಮಂದಾಕಿನಿಯೊಡನೆ ಒಂದೆರಡು ಹರದಾರಿ ಹೋದಬಳಿಕ ಒಂದು ಹಳ್ಳಿಯೊಳಗಿನದೊಂದು ಮನೆಯನ್ನು ಹೊಕ್ಕನು. ಆಗ ಬೆಳಗಾಗಲಿಕ್ಕೆ ಇನ್ನು ಮೂರು ತಾಸು ರಾತ್ರಿ ಇರಬಹುದು. ಫಕೀರನು ಮನೆಯೊಳಗೆ ಹೋದಬಳಿಕ ತನ್ನ ಉಡಿಗೆ ತೊಡಿಗೆಗಳನ್ನಷ್ಟೇ ಅಲ್ಲ ಉದ್ದವಾದ ತನ್ನ ಗಡ್ಡಮೀಸೆಗಳನ್ನೂ ತೆಗೆದು ಮಂದಾಕಿನೀಯ ಮುಂದೆ ನಿಂತುಕೊಂಡನು. ಆಗ ಮಂದಾಕಿನಿಯು ''ಮರಣ ಹೊಂದಿದೆನೆಂ''ದು ತಾನು ದುಃಖಿಸುತ್ತಿದ್ದ ತನ್ನ ಪತಿಯೇ ತನ್ನ ಮುಂದೆ ನಿಂತುಕೊಂಡದ್ದನ್ನು ನೋಡಿ ಪರಮಾಶ್ಚರ್ಯಪಟ್ಟಳು. ಆಕೆಯು ತನ್ನ ಪತಿಯನ್ನು ಕುರಿತು—''ಆಗ ತಮ್ಮ ದನಿಯ ಗುರುತು ನನಗೆ ಹತ್ತಿದಹಾಗೆಯಾದರೂ, ತಮ್ಮ ವೇಷವನ್ನೂ, ತಾವು ಅಲ್ಲಿಗೆ ಬರುವದರ ಅವಶ್ಯಕತೆಯನ್ನೂ ಮನಸ್ಸಿನಲ್ಲಿ ತಂದು, ತಾವೇ ಫಕೀರನ ವೇಷ ಹಾಕಿಕೊಂಡು ಬಂದಿರಬಹುದೆಂಬ ತರ್ಕವು ತನ್ನ ಮನಸ್ಸಿನಲ್ಲಿ ಉತ್ಪನ್ನವಾಗಲೇ ಇಲ್ಲ; ಆದರೆ ತಾವು ಈ ವೇಷದಿಂದ ಆ ಬಾದಶಾಹೀ ಜನಾನಖಾನೆಯಲ್ಲಿ ಹೇಗೆ ಬಂದಿರಬಹುದು? ನನ್ನ ಅನುಭವಕ್ಕೆ ಬರುತ್ತಿರುವ ಈ ಎಲ್ಲ ಸಂಗತಿಯು ಸ್ವಪ್ನವಿರಬಹುದೇ ಎಂಬ ಸಂಶಯವು ಈಗಲೂ ನನ್ನಲ್ಲಿ ಉತ್ಪನ್ನವಾಗುತ್ತದೆ, ಎಂದು ಹೇಳಿದಳು. ತನ್ನ ಹೆಂಡತಿಯ ಈ ಮಾತುಗಳನ್ನು ಕೇಳಿ ದುರ್ಜಯಸಿಂಹನು—ಪ್ರೀಯೇ, ನನ್ನ ವೃತ್ತಾಂತವನ್ನು ಸ್ವಲ್ಪದರಲ್ಲಿ ಹೇಳುವೆನು ಕೇಳು. ಹಿಂದಕ್ಕೆ ನಿನ್ನ ಮುಂದೆ ಹೇಳಿದಂತೆ ಕಾರಾಗೃಹದಿಂದ ಎಂದೂ ಓಡಿಹೋಗಲಿಕ್ಕಿಲ್ಲವೆಂಬ ನಿಶ್ಚಯದಿಂದ ನಾನು ಕಾರಾಗೃಹದಲ್ಲಿಯೇ ಇರುತ್ತಿದ್ದೆನು; ಆದರೆ ಒಂದು ದಿವಸ ನಮ್ಮ ಗುರುಗಳಾದ ಬೋಧಾನಂದ ಮಹಾರಾಜರು ನನ್ನ ಕನಸಿನಲ್ಲಿ ಬಂದು—''ದುರ್ಜಯ, ನೀನು ಇಂದು ಬೆಳಗಾಗುವದರೊಳಗೆ ಕಾರಾಗೃಹದಿಂದ ಹೊರಟು ಹೋಗಿ ನಾಳೆ ರಾತ್ರಿ ಫತ್ತೇಪುರ ಸಿಕರಿಯೊಳಗಿನ ಖುಸ್ರುವಿನ ಮಂದಿರದಲ್ಲಿ ಇರತಕ್ಕದ್ದು. ನನ್ನ ಈ ಅಪ್ಪಣೆಯನ್ನು ಮೀರಬೇಡ. ಈ ಮಾತು ನನ್ನ ಮನಸ್ಸಿಗೆ ಬಂದಿರುವದೆಂಬದಕ್ಕೆ ಸಾಕ್ಷಿಯನ್ನು ಹೇಳುವೆನು ಕೇಳು. ನೀನು ಈಗಲೇ ಎದ್ದು ಕಾರಾಗೃಹದ ಬಾಗಿಲಿಗೆ ಹೋಗು, ಅದು ತೆರೆದಿರುವದು, ಎಂದು ಹೇಳಿ, ನನ್ನನ್ನು ಕೈಹಿಡಿದು ಎಬ್ಬಿಸಿದಂತಾಗಿ ನನಗೆ ಎಚ್ಚರವಾಯಿತು. ಕೂಡಲೆ ನಾನು ಬಾಗಿಲಿಗೆ ಹೋಗಲು, ಅದು ನಿಜವಾಗಿಯೇ ತೆರೆದಿತ್ತು, ಸದ್ಗುರುಗಳ ಈ ಕರುಣಾಶಾಲಿತ್ವವನ್ನೂ, ಮಹಾಮಹಿಮೆಯನ್ನು ನೋಡಿ ಆಶ್ಚರ್ಯಪಟ್ಟು, ಭಕ್ತಿಪರವಶನಾಗಿ ನಾನು ಅದೇ ಕಾಲಲ್ಲಿ ಎದ್ದು ಹಾಗೆಯೇ ಹೊರಟು ಬಂದು ಬಿಟ್ಟೆನು. ನಾನು ಬರುವಾಗ ಕಾರಾಗೃಹದ ಒಂದು ಮಾಡದಲ್ಲಿ ಇಟ್ಟಿದ್ದ ನಿನ್ನ ವಿವಾಹ ಕಾಲದ ಉಂಗುರವನ್ನು ಮರೆತುಬಂದೆನು. ಮಂದಾಕಿನೀ, ನೀನು ಫತ್ತೇಪುರ ಸಿಕ್ರಿಯಲ್ಲಿ ಇದ್ದೀ ಎಂಬದರ ಗಂಧವಾದರೂ ನನಗೆ ಹತ್ತುವ ಸಂಭವವಿರುವದೆಯೇ? ಆದರೆ ನಾನು ಕೇವಲ ಗುರ್ವಾಜ್ಞೆಯೆಂದು ತಿಳಿದು ಫಕೀರನ ವೇಷದಿಂದ ಫತ್ತೇಪುರದೊಳಗಿನ ಖುಸ್ರುವಿನ ಮಂದಿರವನ್ನು ಪ್ರವೇಶಿಸಿದೆನು. ಖುಸ್ರುವಿನ ಈ ಉಂಗುರವು ನನಗೆ ಬಹಳ ಉಪಯೋಗವಾಯಿತು. ಇದು ನನ್ನ ಬಳಿಯಲ್ಲಿ ಇದ್ದದ್ದರಿಂದ ಎಲ್ಲಿಯೂ, ಯಾವ ಬಗೆಯ

ಪ್ರತಿಬಂಧವೂ ಆಗಲಿಲ್ಲ. ಖುಸ್ರುವಿನ ಮಂದಿರವನ್ನು ನಾನು ಪ್ರವೇಶಿಸಿ, ಆತನು ಕುಳಿತು ಕೊಳ್ಳುತ್ತಿರುವ ಕೋಣೆಯೊಳಗೂ ಹೋದೆನು; ಆದರೆ ಆತನು ಆಗ ನಿನ್ನ ಬಳಿಗೆ ಬಂದಿರಲು, ನನಗೆ ಹೇಗೆ ಭೆಟ್ಟಿಯಾಗುವನು? ನಾನು ಅಲ್ಲಿ ಇರುವ ಕಾಗದಪತ್ರಗಳನ್ನು ಶೋದಿಸುತ್ತಿರುವಾಗ, ಖುಸ್ರುವಿನ ನಾಶಕ್ಕೆ ಕಾರಣವಾದ ಖುಸ್ರುವಿನ ಹಸ್ತಾಕ್ಷರದ ಒಂದು ಪತ್ರವು ನನಗೆ ಸಿಕ್ಕಿತು. ನಮ್ಮಿಬ್ಬರ ವಿಯೋಗಕ್ಕೆ ಕಾರಣನಾದ ಖುಸ್ರುವಿನ ನಾಶದ ಆ ಪತ್ರವು ಸಿಕ್ಕದ್ದರಿಂದ ನನಗೆ ಬಹಳ ಸಮಾಧಾನವಾಯಿತು. ಇದಕ್ಕಾಗಿಯೇ ಶ್ರೀ ಗುರುಗಳು ನನಗೆ ಇಲ್ಲಿಗೆ ಬರಹೇಳಿದ್ದರೆಂದು ತಿಳಿದು, ನನ್ನ ಬಂದ ಕೆಲಸವಾಯಿತೆಂದು ನಾನು ಇನ್ನು ಆ ಮಂದಿರದಿಂದ ಹೊರಟು ಹೋಗತಕ್ಕವನು; ಅಷ್ಟರಲ್ಲಿ ಆ ಮಂದಿರದ ಬಳಿಯಲ್ಲೇನೋ ಮನುಷ್ಯರ ಬಾಯಿಯಾದಂತೆ ನನಗೆ ಕೇಳಿತು. ಮಂದಾಕಿನೀ, ಶ್ರೀ ಗುರುಗಳ ಸಂಕೇತದ ನೆಲೆಯು ಯಾರಿಗೆ ಹತ್ತಬೇಕು? ಆ ಗುಲಾಬಿಯ ಉದ್ಯಾನಕ್ಕೆ ಹೋಗಲು ನನ್ನ ಮನಸ್ಸು ತವಕಿಸಹತ್ತಿದ್ದರಿಂದ, ನಾನು ತಟ್ಟನೆ ಎದ್ದು ಅಲ್ಲಿಗೆ ಬಂದೆನು. ಆಗ ನಿನ್ನ ದನಿಯ ಗುರುತು ಹತ್ತಿ ನನಗೆ ಬಹಳ ಆಶ್ಚರ್ಯವಾಯಿತು. ನಾನು ಇದೇನು ಆಶ್ಚರ್ಯವೆಂದು ಮೆಲ್ಲನೆ ಸಪ್ಪಳಾಗದಂತೆ ಹೆಜ್ಜೆಗಳನ್ನಿಡುತ್ತ ನಿಮ್ಮ ಸಮೀಪಕ್ಕೆ ಬಂದು ಗಿಡಗಳ ಮರೆಯಲ್ಲಿ ನಿಮ್ಮ ಮಾತುಗಳನ್ನು ಕೇಳುತ್ತ ನಿಂತುಕೊಂಡೆನು; ಆದರೆ ಪ್ರೀಯ ಮಂದಾಕಿನೀ, ನೀನು ಪರಮ ಧನ್ಯಳು. ಅಂಥ ವಿಪತ್ಕಾಲದಲ್ಲಿಯೂ ನೀನು ನಿನ್ನ ಪಾತಿವ್ರತ್ಯದ ತೇಜಸ್ಸನ್ನು ಪ್ರಕಟಮಾಡಿದೆ! ನಿನ್ನ ಆ ಸಾಧ್ವೀತ್ವವನ್ನು ನೋಡಿ ನಾನು ನನ್ನನ್ನು ಧನ್ಯನೆಂದು ಭಾವಿಸಿದೆನು. ಪ್ರೀಯೆ, ನಿಮ್ಮಂಥ ಕುಲಸ್ತ್ರೀಯರ ಕೈಹಿಡಿಯಬೇಕಾದರೆ ಅಪಾರವಾದ ಪ್ರಾಚೀನ ಪುಣ್ಯರಾಶಿಯು ಬೇಕು ಕಂಡೆಯಾ? ಆಗಿನ ಕಾಲದ ಖುಸ್ರುವಿನ ನೀಚವೃತ್ತಿಯನ್ನು ನೋಡಿ ನನಗೆ ಪರಮ ಸಂತಾಪವಾಯಿತು. ಆ ಸಂತಾಪದ ಭರದಿಂದಲೇ ನಾನು ಆತನನ್ನು ಭರದಿಂದ ಹಿಂದಕ್ಕೆ ದೂಡಿದೆನು. ಅಲ್ಲಿಂದ ಮುಂದೆ ನಡೆದ ಸಂಗತಿಯು ನಿನಗೆ ಗೊತ್ತೇ ಇರುವದು.

ತನ್ನ ಪತಿಯ ಈ ಮಾತುಗಳನ್ನು ಕೇಳಿ ಮಂದಾಕಿನಿಯು ಆಶ್ಚರ್ಯಪಡುತ್ತ ಸದ್ಗುರುವಿನ ಮಹಿಮೆಯನ್ನೂ, ತಮ್ಮ ಮೇಲಿನ ಆತನ ದಯಾ ವಿಶೇಷವನ್ನೂ ಮನಸ್ಸಿನಲ್ಲಿ ತಂದು, ಶ್ರೀಗುರು ಚರಣದಲ್ಲಿಯ ತನ್ನ ಭಕ್ತಿಯನ್ನು ಮತ್ತಿಷ್ಟು ಧೃಡೀಕರಿಸಿ ಸದ್ಗುರುವನ್ನು ಮನಸಾ ಶತಶಃ ವಂದಿಸಿದಳು. ಆಕೆಯು ತನ್ನ ಪತಿಯನ್ನು ಪ್ರೇಮದೃಷ್ಟಿಯಿಂದ ನೋಡುತ್ತ— "ಅಪ್ಪಯ್ಯಾ! ಈ ಸಂಸಾರದಲ್ಲಿ ತಾರಕವಾದದ್ದೇನಾದರೂ ಇದ್ದರೆ ಅದು ಸದ್ಗುರು ಚರಣದ್ವಯವೇ ಸರಿ! ಈ ಕಲಿಯುಗದಲ್ಲಿಯೂ ಇಂಥ ಸಾಕ್ಷಿಯು ಪ್ರತ್ಯಕ್ಷ ಅನುಭವಕ್ಕೆ ಬರುವದನ್ನು ನೋಡಿದಳು, ಜಗತ್ತಿಗೆ ಆಧಾರವಾದದ್ದೊಂದು ಅಲೌಕಿಕ ಶಕ್ತಿಯು ಇದ್ದೇ ಇದ್ದು ಜಗದ್ವ್ಯವ ಹಾರಕ್ಕೆಲ್ಲ ಒಂದಿಲ್ಲೊಂದು ಬಗೆಯಿಂದ ಅದೇ ಶಕ್ತಿಯು ಕಾರಣವಾಗಿರುತ್ತದೆಂದು ಹೇಳಬೇಕಾಗುವದು. ನಾವು ಅಂಥ ಆ ಅದ್ಭುತಶಕ್ತಿಯ ಸದ್ಗುರುರೂಪ ವಿಭೂತಿಯನ್ನು ದುರ್ಲಕ್ಷಿಸಿ, ಬಗೆಬಗೆಯ ಅಜ್ಞಾನದ ಯಾತನೆಗಳಿಗೆ ಗುರಿಯಾಗುತ್ತಿರುವೆವು; ಆದರೆ ಪತಿದೇವಾ, ನಡೆಯಿರಿ, ನಾವು ಮೊದಲು ಸದ್ಗುರುಚರಣ ದರ್ಶನವನ್ನು ಮಾಡಿಕೊಳ್ಳೋಣ. ಆ

ಕರುಣಾಮಯನ ದಯವು ನಮ್ಮ ಮೇಲೆ ಆಗದಿದ್ದರೆ ಈ ವಿಪತ್ತಿನ ಪ್ರಸಂಗದಲ್ಲಿ ನಾವು ಏನಾಗಿ ಹೋಗುತ್ತಿದ್ದೆವೋ ಯಾರಿಗೆ ಗೊತ್ತು! ನಡೆಯಿರಿ, ಇದೇ ಕಾಲದಲ್ಲಿ ಹೀಗೆಯೇ ಹೋಗಿ ನಾವಿಬ್ಬರೂ ಶ್ರೀ ಗುರುಚರಣಗಳಲ್ಲಿ ಮಸ್ತಕವನ್ನಿಡೋಣ! ಎಂದು ಹೇಳಲು, ದುರ್ಜಯ ಸಿಂಹನು—ಮಂದಾಕಿನೀ, ನೀನಂದಂತೆಯೇ ಮಾಡೋಣ. ನಮ್ಮಂಥ ಸಂಸಾರಾಸಕ್ತರ ಸಂಸಾರಾಸಕ್ತಿಯು ಬಲವತ್ತರವಾದದ್ದರಿಂದ, ನಮ್ಮ ಮನಸ್ಸು ಶ್ರೀ ಗುರುಚರಣದ ನಿಷ್ಠೆಯನ್ನು ಆಗಾಗ್ಗೆ ಕಳೆದುಕೊಳ್ಳುತ್ತಿರುವದು; ಹೀಗಾಗಬಾರದೆಂತಲೇ ಭಯಕೃದ್ಭಯ ನಾಶಕನಾದ ಸದ್ಗುರುವು ನಮ್ಮ ಕರ್ಮವನ್ನು ನೆವಮಾಡಿ ಆಗಾಗ್ಗೆ ಭಯವನ್ನು ತೋರಿಸಿ, ಆ ಭಯವನ್ನು ತನ್ನ ಮಹಿಮೆಯಿಂದ ದೂರಮಾಡಿ ಪುನಃ ಪುನಃ ನಮ್ಮ ಮನಸ್ಸನ್ನು ತನ್ನ ಚರಣಗಳ ಕಡೆಗೆ ಎಳೆದುಕೊಳ್ಳುತ್ತಿರುವನು; ಈ ಅನುಭವವನ್ನು ಮನಸ್ಸಿನಲ್ಲಿ ಸ್ಥಿರವಾಗಿ ಇಟ್ಟುಕೊಂಡು ಶ್ರೀ ಗುರುಚರಣದಲ್ಲಿ ನಿಷ್ಠೆಯನ್ನೂ, ಆತನ ಅಲೌಕಿಕ ಸಾಮರ್ಥ್ಯದಲ್ಲಿ ವಿಶ್ವಾಸವನ್ನೂ ಇಟ್ಟು, ಎಚ್ಚರಗೇಡಿಗಳಾಗದೆ ನಾವು ನಡೆದುಕೊಳ್ಳತಕ್ಕದ್ದು. ನಡೆ, ನೀನು ಹೇಳಿದಂತೆ ಈಗಲೇ ಶ್ರೀಗುರುಗಳ ಸನ್ನಿಧಿಗೆ ಹೋಗುವಾ ನಡೆ, ಸದ್ಗುರು ಕೃಪಾರೂಪವಾದ ಭದ್ರ–ಕವಚಯನ್ನು ತೊಟ್ಟಿರುವ ನಮ್ಮನ್ನು ಯಾವ ವಿಪತ್ತು ಸೋಂಕಿ ಏನು ಮಾಡೀತು? ಬೆಳಕಿನ ಮುಂದೆ ಕತ್ತಲೆಯು ನಿಲ್ಲಬಹುದೇ?'' ಅನ್ನಲು, ಮಂದಾಕಿನಿಯು ತನ್ನ ಬೆರಳಲ್ಲಿ ಇಟ್ಟುಕೊಂಡಿದ್ದ ವಿವಾಹ ಕಾಲದ ಉಂಗುರವನ್ನು ತನ್ನ ಪತಿಯ ಕೈಯಲ್ಲಿ ಕೊಟ್ಟು, ಲಜಪತನ ನೀಚತನವನ್ನೂ, ಅಕಸ್ಮಾತ್ ತನಗೆ ಖುಸ್ರುವಿನಿಂದಾದ ಸಹಾಯವನ್ನೂ, ಇಸ್ತಾಂಬೂಲಿ, ಅಥವಾ ರೂಮಿಬೇಗಮೆಯಿಂದ ತನಗಾದ ಸೌಜನ್ಯದ ಉಪಕೃತಿಯನ್ನೂ, ಕಾಮುಕನಾದ ಖುಸ್ರುವು ಕಡೆಗೆ ಪ್ರಕಟಗೊಳಿಸಿದ ಕ್ಷುದ್ರ ಹೃದಯದ ಕೃತಿಯನ್ನೂ ಸಾದ್ಯಂತವಾಗಿ ಹೇಳಿದಳು. ಬಳಿಕ ಅವರು ಎಲ್ಲಿಯೂ ನಿಲ್ಲದೆ ತಮ್ಮ ಗುರುಗಳ ಪವಿತ್ರವಾದ ಆಶ್ರಮವನ್ನು ಕುರಿತು ತೆರಳಿದರು; ಆದರೆ ಸದ್ಗುರುಗಳಾದ ಬೋಧಾ ನಂದರು ಆಶ್ರಮದಲ್ಲಿರದೆ, ಎಲ್ಲಿಯೋ ಹೋಗಿಬಿಟ್ಟಿದ್ದರು!

ತಾಯಿಯ ಕರಳು!

ಯಮುನಾನದಿಯ ಎರಡನೆಯ ದಂಡೆಯಮೇಲೆ ಸೇಲೀಮನದೊಂದು ಮನೋಹರ ವಾದ ಉದ್ಯಾನ ಪ್ರಾಸಾದವಿದ್ದಿತು. ಆ ಪ್ರಾಸಾದದ ಹೆಸರು ''ಶಾಹಿಮಂಜಿಲ'' ಎಂಬದಾಗಿತ್ತು. ಸೇಲೀಮನ ಪಟ್ಟದರಸಿಯಾದ ಶಾಹಿಬೇಗಮೆಯು, ಅಥವಾ ಜೋಧಬಾಯಿಯ ಹೆಸರನ್ನು ಆ ಪ್ರಾಸಾದಕ್ಕೆ ಇಟ್ಟಿದ್ದರು. ಅಜ್ಜಿಯು ಮರಣಹೊಂದಿದಬಳಿಕ ತಂದೆಯ ಸಂಗಡ ಪ್ರೇಮದಿಂದ ನಡೆಯಹತ್ತಿದ್ದ ಸೇಲೀಮನು, ಹಲವು ತಿಂಗಳು ಆಗ್ರಾದ ರಾಜಮಂದಿರದಲ್ಲಿಯೇ ಇರುತ್ತಿದ್ದನು; ಆದರೆ ಕೃಷ್ಣಕಾರಸ್ಥಾನದಿಂದ ತುಂಬಿ ಹೋಗಿದ್ದ ರಾಜಪ್ರಾಸಾದದಲ್ಲಿ ಹೀಗೆ ಹೆಚ್ಚು ದಿವಸ ನಿಃಸಹಾಯ ಸ್ಥಿತಿಯಲ್ಲಿರುವದು ಆತನಿಗೆ ಸಾಹಸದ ಕೆಲಸವಾಗಿ ತೋರಹತ್ತಿತು. ಇಂಥ ಸಾಹಸ

ಮಾಡುವದು ಯೋಗ್ಯವಲ್ಲೆಂದು ಸೇಲೀಮನ ಮಿತ್ರರೂ ಆತನಿಗೆ ಆಗಾಗ್ಗೆ ಉಪದೇಶಿಸ ತೊಡಗಿದರು. ಮಾನಸಿಂಹ–ಅಜೀಮಖಾನರು ತನಗೆ ಯಾವ ಕಾಲದಲ್ಲಿ ಏನು ಮಾಡಿಯಾ ರೆಂಬ ನಂಬಿಗೆಯು ಸೇಲೀಮನಿಗೆ ಇದ್ದಿಲ್ಲ, ಅದರಲ್ಲಿ, ಅಕಬರಬಾದಶಹನು ತಾನು ಬೇನೆ ಬಿದ್ದಾಗಿನಿಂದ ತನ್ನ ಬಾಲಮಿತ್ರನಾದ ಅಜೀಮಬಾದಶಹನು ಕೈಯಲ್ಲಿಯೇ ಬಹುತರ ಯಾವತ್ತು ರಾಜ್ಯಸೂತ್ರಗಳನ್ನು ಕೊಟ್ಟಿದ್ದನು. ಇಂಥ ಹಲವು ಪ್ರತಿಕೂಲ ಸಂಗತಿಗಳನ್ನು ಮನಸ್ಸಿನಲ್ಲಿ ತಂದು ಸೇಲೀಮನು ಇತ್ತಿತ್ತ ಆಗ್ರಾದ' ಅರಮನೆಯನ್ನು ಬಿಟ್ಟು ಮೇಲೆ ಹೇಳಿದ ಶಾಹೀ ಮಂಜಿಲಿನಲ್ಲಿ ಇರತೊಡಗಿದ್ದನು. ಆಗ್ರಾ ಪಟ್ಟಣದೊಳಗಿದ್ದ ದೊಡ್ಡ ದೊಡ್ಡ ಅಮೀರ ಉಮರಾವರು ಸೇಲೀಮನ ಪಕ್ಷದವರಾಗಿದ್ದರು. ಅವರೆಲ್ಲರ ಆಲೋಚನೆಯಿಂದಲೇ ಆತನು ಆಗ್ರಾದ ಅರಮನೆಯನ್ನು ಬಿಟ್ಟಿದ್ದನೆಂದು ಹೇಳಬಹುದು. ಆ ಶಾಹೀಮಂಜಿಲಿನಲ್ಲಿ ಇರುವದರಿಂದ ದಿನಾಲು ಬಾದಶಹರ ದರ್ಶನಕ್ಕೆ ಬರಲು ಸೇಲೀಮನಿಗೆ ತೊಂದರೆಯೂ ಆಗುತ್ತಿದ್ದಿಲ್ಲ, ಒಟ್ಟಿಗೆ, ಸೇಲೀಮನು ಶಾಹೀಮಂಜಿಲಿನಲ್ಲಿ ಇರಹತ್ತಿದಾಗಿನಿಂದ ಒಳಿತಾಗಿ ಮನಃಶಾಂತಿಯನ್ನು ಪಡೆದಿದ್ದನೆಂದು ಹೇಳಬಹುದು.

ಈ ಶಾಹೀಮಂಜಿಲಿನಲ್ಲಿ ಸೇಲೀಮನೂ, ಆತನ ಪ್ರೀಯತಮ ಪತ್ನಿಯಾದ ಜೋಧ ಬಾಯಿಯೂ ಇಬ್ಬರೇ ಇರುತ್ತಿದ್ದರು. ಇವರಿಬ್ಬರಿಂದ ಹೊರತಾದ ಜನರೆಂದರೆ, ಅವಶ್ಯದ ಗುಲಾಮರೂ, ದಾಸಿಯರೂ ಅವರ ಬಳಿಯಲ್ಲಿ ಇರುತ್ತಿದ್ದರು. ಆನೆಯ ಕಾಳಗವಾದಬಳಿಕ ಬಾದಶಹನ ಅಪ್ಪಣೆಯಂತೆ ಖುಸ್ರುವು ಕೂಡಲೆ ಫತ್ತೇಪುರಸಿಕರಿಗೆ ಹೊರಟುಹೋದ ಸುದ್ದಿಯು ಸೇಲೀಮ–ಜೋಧಬಾಯಿಯರಿಬ್ಬರಿಗೂ ಗೊತ್ತಾಗಿತ್ತು, ಸುಲ್ತಾನ ಸೇಲೀಮನಿಗೆ ಅದಕ್ಕಾಗಿ ಸ್ವಲ್ಪವಾದರೂ ವಿಷಾದವಾಗಲಿಲ್ಲ; ಆದರೆ ಖುಸ್ರುವಿನ ತಾಯಿಯಾದ ಶಾಹಿ ಬೇಗಮೆಗೆ, ಅಥವಾ ಜೋಧಬಾಯಿಗೆ ಅತ್ಯಂತ ದುಃಖವಾಗಿ, ದುಸ್ಸಹಮರ್ಮ ವೇದನೆಯಿಂದ ಆಕೆಯು ತಳಮಳಿಸತೊಡಗಿದಳು; ಆನೆಯ ಕಾಳಗದಲ್ಲಿ ಮನಸ್ಸು ನೊಂದುಹೋಗಿದ್ದ ತನ್ನ ಪತಿಯು ತನ್ನ ಮಗನನ್ನು ಪುನಃ ಪ್ರೀತಿಸುವದು ಅಶಕ್ಯವೆಂದು ಆಕೆಯ ಭಾವನೆಯಾಗಿತ್ತು, ತನ್ನ ಅಣ್ಣನಾದ ಮಾನಸಿಂಹನ ಮೇಲೆ ಜೋಧಬಾಯಿಯ ನಿಜವಾದ ವಿಶ್ವಾಸವಿದ್ದಿಲ್ಲ, ತನ್ನ ಮಗನ ಮನಸ್ಸನ್ನು ಕೆಡಿಸಿದವನೇ ತನ್ನ ಅಣ್ಣನೆಂದು ಆಕೆಯು ತಿಳಿದಿದ್ದಳು. ಸೇಲೀಮನ ಹಲವು ಜನ ಬೇಗಮೆಯರಲ್ಲಿ ಇನ್ನೊಬ್ಬ ''ಜಗತ್‌ಬಾಯಿ'' ಎಂಬ ರಜಪೂತ ಬೇಗಮೆಯೊಬ್ಬಳಿದ್ದಳು. ಆಕೆಯು ಮಾರವಾಡದ ಅರಸನಾದ ಉದೇಸಿಂಗನ ಮಗಳಿದ್ದು, ಮುಂದೆ ಸೇಲೀಮನ ತರುವಾಯ ಪಟ್ಟಕ್ಕೆ ಬಂದು ಶಹಾಜಹಾನನೆಂದು ಕರೆಯಲ್ಪಟ್ಟ ''ಖುರುಮ'' ಎಂಬ ಶಹಾಜಾದನ ತಾಯಿಯಾಗಿದ್ದಳು; ಆದರೂ ಜೋಧಬಾಯಿಯಷ್ಟು ಪ್ರೀತಿಪಾತ್ರಳಾದ ಬೇಗಮೆಯು ಸೇಲೀಮನಿಗೆ ಮತ್ತೊಬ್ಬಳಿದ್ದಿಲ್ಲ. ಅಕಬರಬಾದಶಹನ ತರುವಾಯ ಜೋಧ ಬಾಯಿಯೇ ಹಿಂದುಸ್ಥಾನದ ಸಾಮ್ರಾಜ್ಞಿಯಾಗುವಳೆಂದು ಎಲ್ಲರ ನಂಬಿಗೆಯಾಗಿತ್ತು; ಆದರೆ ಮಗನಾದ ಖುಸ್ರುವಿನ ಉದ್ಧಟ ಕೃತಿಗಳಿಂದ ಜೋಧಬಾಯಿಯು ಯಾವಾಗಲೂ ದುಃಖಿತ ಳಾಗಿಯೇ ಇರುತ್ತಿದ್ದಳು. ಆ ಸಾಧ್ವಿಯ ಸೌಂದರ್ಯ, ಸದ್ಗುಣ, ಪತಿಪ್ರೇಮ ಇವು ಅವರ್ಣ

ನೀಯವಾದದ್ದರಿಂದ, ಎಲ್ಲ ಸೊಸೆಂದಿರಿಗಿಂತಲೂ ಈ ಜೋಧಬಾಯಿಯನ್ನೇ ಅಕಬರ ಬಾದಶಹನು ವಿಶೇಷವಾಗಿ ಪ್ರೀತಿಸುತ್ತಿದ್ದನು; ಆದರೆ ಏನಿದ್ದು ಏನು ಮಾಡಬೇಕು? ಅವ್ಯವಸ್ಥಿತ ಚಿತ್ತನಾದ ಮಗನ ಕಾಲಲ್ಲಿ ಜೋಧಬಾಯಿಯ ಜೀವನವು ಬಹು ದುಃಖಮಯವಾಯಿತು!

ಜೋಧಬಾಯಿಯು ಅತ್ಯಂತ ಪತಿನಿಷ್ಠಳಾಗಿದ್ದಳೆಂಬದನ್ನು ಆಗಾಗ್ಗೆ ನಾವು ಹೇಳಿರುವೆವು; ಆಕೆಯ ಈ ಅತ್ಯಂತ ನಿಷ್ಠೆಯ ಮೂಲಕವಾಗಿ ರಾಜಕಾರಣದ ಕುಟಿಲ ತಂತ್ರದಿಂದ ತನ್ನ ಪತಿಗೆ ಎಲ್ಲಿ ಅಪಾಯವಾಗುವದೋ ಎಂಬ ಚಿಂತೆಯೊಂದು ಆಕೆಯನ್ನು ಯಾವಾಗಲೂ ಬಾಧಿಸುತ ಲಿತ್ತು. ಪತಿಯು ಬೇಗನೆ ಮನೆಗೆ ಬಾರದಿದ್ದರೆ ಚಿಂತೆ, ಬೇಗನೆ ಬಂದರೆ ಚಿಂತೆ; ನಿತ್ಯದಲ್ಲಿ ಬಾದಶಹನ ಪ್ರಕೃತಿಯನ್ನು ನೋಡಲಿಕ್ಕೆ ಹೋಗುವ ಪತಿಯು ಎಂದಾದರೊಂದು ದಿನ ಹೋಗದಿದ್ದರೆ ಚಿಂತೆ, ನಡುವೆ ಮತ್ತೊಮ್ಮೆ ಹೋದಗೀದರೆ ಚಿಂತೆ! ಹೀಗೆ ಜೋಧಾಬಾಯಿಯು ಯಾವಾಗಲೂ ಸಣ್ಣಪುಟ್ಟ ಮಾತಿನಿಂದಲೂ ಚಿಂತೆಯಿಂದ ಕೊರಗುತ್ತಿದ್ದಳು. ಒಂದುದಿನ ಸೇಲೀಮನು ಬಾದಶಹರ ಪ್ರಕೃತಿಯನ್ನು ನೋಡಲಿಕ್ಕೆ ಹೋಗಿ ಬಹಳ ಹೊತ್ತಾದರೂ ಬರಲಿಲ್ಲ; ಆಗ ಜೋಧಬಾಯಿಯ ಮನಸ್ಸು ಅಸ್ವಸ್ಥವಾಗಿ ಆಕೆಗೆ ಏನೂ ತೋಚದಾಯಿತು. ಆಕೆಯ ಹೃದಯವು ಇಲ್ಲದ ಭಯಂಕರ ವಿಚಾರಗಳಿಂದ ತಳಮಳಿಸಹತ್ತಿತು. ''ಮನಸ್ಸು ಚಿಂತಿಸುವಷ್ಟು ಕೆಡಕನ್ನು ವೈರಿಯೂ ಚಿಂತಿಸಲಿಕ್ಕಿಲ್ಲೆಂದು'' ಹೇಳುವ ಮಾತು ಸುಳ್ಳಲ್ಲ. ಚಿಂತೆಯಿಂದ ಆಕೆಯ ಮುಖವು ಬಾಡಿತು. ಆಕೆಯ ಮುಖವನ್ನು ಪುಪುಲ್ಲಿತವಾಗಿ ಮಾಡುವದಕ್ಕಾಗಿ ದಾಸಿಯು ವೀಣಾ–ಸಾರಂಗಿಗಳ ಮಧುರ ಸ್ವರದಲ್ಲಿ ಮಾಡಿದ ಸಂಗೀತದ ಮಧುರಾಲಾಪವು ವ್ಯರ್ಥವಾಯಿತು; ಯಮುನಾನದಿಯ ಮೇಲಿನ ಸೀತಲವಾಯುನ ಸೋಂಕಿನಿಂದಲೂ ಆಕೆಯ ಹೃದಯವು ಶಾಂತವಾಗಲಿಲ್ಲ. ಆಕೆಯು ತನ್ನ ಮನಸ್ಸಿನಲ್ಲಿ —ಹಾಯ್! ನಾನು ಅಂಬರರಾಜ ವಂಶದಲ್ಲಿ ಯಾಕೆ ಉತ್ಪನ್ನವಾಗಿರಬಹುದು? ಅಕಬರಬಾದಶಹನ ಸೊಸೆಯಾಗಬೇಕೆಂದು ನನ್ನ ಹಣೆಬರಹದಲ್ಲಿ ವಿಧಿಯು ಯಾಕೆ ಬರೆದಿರಬಹುದು? ಏನೋ ಆದದ್ದಾಗಿ ಹೋಯಿತು, ಇಂಥ ಕುಲಕಲಂಕ ಮಗನು ಯಾಕೆ ಉತ್ಪನ್ನವಾಗಿರಬಹುದು? ಅದರಂತೆ ಈ ಕೃಷ್ಣ ಕಾರಾಸ್ಥಾನದ ಮಾನಸಿಂಹನ ತಂಗಿಯಾದರೂ ನಾನು ಯಾಕೆ ಆಗಿರಬಹುದು? ಹಾಯ! ಹಾಯ! ಈ ಎದುರಿಗೆ ದೀಪಜ್ಯೋತಿಗಳಿಂದ ಪ್ರಕಾಶಿಸುವ ಬಾದಶಹನ ಅರಮನೆ, ಆ ಅರಮನೆಯ ದೀಪಪ್ರಕಾಶಗಳು ಪ್ರತಿಬಿಂಬಿಸಿರುವ ಈ ಯಮುನೆಯ ಪ್ರವಾಹ ಇವುಗಳಾವವೂ ನನ್ನ ಹೃದಯದ ತಾಪವನ್ನು ಕಡಿಮೆ ಮಾಡಲೊಲ್ಲವಲ್ಲ! ಹೀಗೆ ಯಾಕಾಗುತ್ತಿರಬಹುದು! ನನ್ನ ಸರ್ವಸ್ವದ ಘಾತವಾಯಿತೆಂದು ನಾನು ತಿಳಿದುಕೊಳ್ಳಬೇಕೇನು! ಕೃಷ್ಣ ಕಾರಸ್ಥಾನದ ನೀಚರ ಬಲೆಯಲ್ಲಿ ಸಿಕ್ಕು ಸುಲ್ತಾನ ಸೇಲೀಮರು ಸೆರೆಯಾಳಾಗಿರಲಿಕ್ಕಿಲ್ಲವಷ್ಟೆ?. ಅಥವಾ ನನ್ನ ಅಡ್ಡಹಾದಿಯ ಎಟ್ಟೆ ಹುಡುಗನು–ಮೊಗಲ ರಾಜಕುಲಕಲಂಕ ಖುಸ್ರುವು ತನ್ನ ತಾಯಿಗೆ ಅಕಾಲದಲ್ಲಿ ವೈಧವ್ಯವನ್ನುಂಟುಮಾಡಬೇಕೆಂದು ರಕ್ತದಿಂದ ಕೆಂಪಾಗಿರುವ ತನ್ನ ಕೈಗಳಿಂದ ರಾಜಮುಕುಟವನ್ನು ತನ್ನ ಮಸ್ತಕದಲ್ಲಿ ಧರಿಸಿರಲಿಕ್ಕಿಲ್ಲವಷ್ಟೆ? ಹಾಯ! ಹತಭಾಗ್ಯನಾದ ಪೋರನೇ! ಘಾತ ಮಾಡಿದೆ! ಸರ್ವಸ್ವದ ಘಾತ ಮಾಡಿದೆ!!

ಈ ಮೇರೆಗೆ ನುಡಿಯುತ್ತಿರಲು, ಹಿಂಬದಿಯ ಕತ್ತಲದ ಖಂಬದ ಮರೆಯಿಂದ ಯಾರೊ—''ಹತಭಾಗ್ಯನಾದ ಖುಸ್ರೂ, ನಿಜವಾಗಿಯೇ ನೀನು ಸರ್ವಸ್ವದ ಘಾತ ಮಾಡಿದೆಯೇನು?'' ಎಂದು ಉಚ್ಚರಿಸಿದ ಶಬ್ದಗಳು ಜೋಧಬಾಯಿಯ ಕಿವಿಗಳಿಗೆ ಬಿದ್ದವು. ಆಗ ಆಕೆಯು ಚಕಿತ ನೇತ್ರಗಳಿಂದಲೂ, ಕಂಪಿತ ಹೃದಯದಿಂದಲೂ ಹಿಂದಿರುಗಿ ನೋಡುತ್ತಿರಲು, ಹತ್ತರದ ಕೆಂಪು ಸಂಗಮರವರಿಯ ಕಲ್ಲಿನ ಖಂಬದ ಮರೆಯಿಂದ ಒಂದು ವ್ಯಕ್ತಿಯು ಮೆಲ್ಲಮೆಲ್ಲನೆ ಆಕೆಯ ಕಡೆಗೆ ಸಾಗಿ ಬರತೊಡಗಿತು. ಶಾಹಿಯು ಸಂಶಯಿತ ಮನಸ್ಸಿನಿಂದಲೂ, ಭಯಕಂಪಿತ ಸ್ವರದಿಂದಲೂ ಆ ವ್ಯಕ್ತಿಯನ್ನು ಕುರಿತು—''ಯಾರಿರುವಿರಿ ಮಾತಾಡಿರಿ'' ಎಂದು ನುಡಿಯುತ್ತ ಸ್ವಲ್ಪ ಮುಂದಕ್ಕೆ ಹೋಗಲು, ಸ್ವತಃ ಸುಲ್ತಾನ ಸೇಲೀಮನೇ ಆಕೆಯ ಕಡೆಗೆ ಸಾಗಿ ಬರುತ್ತಲಿದ್ದನು. ಆತನು ಶಾಹಿಯ ಆ ಸ್ಥಿತಿಯನ್ನು ನೋಡಿ—''ಶಾಹೀ, ನೀನು ಅಂಜಿದೆಯೋ ಏನು?'' ಎಂದು ಕೇಳಲು, ಶಾಹೀಬೇಗಮೆಯು ಆನಂದದಿಂದ ಸೇಲೀಮನನ್ನು ಅಪ್ಪಿಕೊಂಡು ಪ್ರಸನ್ನ ಮುದ್ರೆಯಿಂದ —

ಶಾಹಿ—ಅಹಹ! ಈಗ ನನ್ನ ಹೃದಯವು ಶಾಂತವಾಯಿತು. ತಾವು ಬಂದದ್ದರಿಂದ ನನ್ನ ಅಂಜಿಕೆಯೆಲ್ಲ ದೂರವಾಯಿತು. ನೀವು ಬರುವದಕ್ಕೆ ವಿಲಂಬವಾಗಲು ಇಲ್ಲದ ಕುಕಲ್ಪನೆಗಳಿಂದ ನನ್ನ ಹೃದಯವು ಸುಡತೊಡಗಿತ್ತು, ಪ್ರೀಯತಮ! ನಿಜವಾಗಿಯೇ ನಾನು ಆ ಕಲ್ಪನಾಮಯ ವಾತಾವರಣದಲ್ಲಿ ಸಿಕ್ಕು ಪೂರಾ ಅಂಜಿ ಹೋಗಿದ್ದೆನು.

ಸೇಲೀಮ — ಶಾಹೀ, ಕದಾಚಿತ್ ನೀನು ಹೀಗೆ ತಿಳಕೊಂಡಿರಬಹುದು.—''ಮಾನಸಿಂಹ ಅಜೀಮಖಾನರ ಕಾರಸ್ಥಾನದಲ್ಲಿ ಸಿಕ್ಕು ನಾನು ಸೆರೆಯಾಳಾಗಿರಬಹುದು; ಇಲ್ಲವೆ ನಿನ್ನ ಹೊಟ್ಟೆಯ ಅಚ್ಚೆಯ ಮಗನಾದ ಖುಸ್ರುವು ತನ್ನ ತಂದೆಯ ರಕ್ತದಿಂದ ಕಲಂಕಿತವಾದ ಕೈಯಿಂದ ತನ್ನ ಮಸ್ತಕದ ಮೇಲೆ ರಾಜಮುಕುಟವನ್ನು ಧರಿಸಬಹುದು'' ಯಾಕೆ ಶಾಹೀ, ಹೀಗೆಯೇ ಅಲ್ಲವೇ ನೀನು ಕಲ್ಪಿಸಿದ್ದು?

ಶಾಹಿ—(ಏನೂ ಮುಚ್ಚಿ ಇಡದೆ) ಹೌದು ನಾಥ, ನನಗೆ ಅಕ್ಷರಶಃ ಹೀಗೆಯೇ ತೋರಿತ್ತು! ಹಾಯ! ಹೀಗೆ ನನ್ನ ಮನಸ್ಸಿನ ಸ್ಥಿತಿಯು ಯಾಕಾಗಿರಬಹುದು! ಖುದಾ, ನನ್ನನ್ನು ಈ ವೇದನೆಯಿಂದ ಮುಕ್ತಳಾಗಮಾಡು!! ನನ್ನಿಂದ ಈ ತಾಪವನ್ನು ಸಹಿಸುವದು ಇನ್ನು ಆಗದು.

ಸೇಲೀಮ (ಶಾಹಿಯ ಮನಸ್ಸಿಗೆ ಹತ್ತುವದಕ್ಕಾಗಿ ಕಠೋರ ಸ್ವರದಿಂದ)—ಇಲ್ಲ ಶಾಹೀ, ನಿನ್ನ ಈ ಅಂಜಿಕೆಯು ಇಷ್ಟರಲ್ಲಿ ಕಡಿಮೆಯಾಗುವದಿಲ್ಲ. ಮೊಗಲ ಸಿಂಹಾಸನದ ಸಲುವಾಗಿ ನನಗೂ, ಖುಸ್ರುವಿಗೂ ಉಂಟಾಗಿರುವ ವಿತುಷ್ಟತೆಯ ಕಡೆಯ ನಿರ್ಣಯವಾಗುವವರೆಗೆ ನೀನು ಹೀಗೆಯೇ ತಳಮಳಿಸುತ್ತಿರುವದೇ ಸರಿ. ಖುಸ್ರುವನ್ನು ಸೆರೆಹಿಡಿದು ಗ್ವಾಲ್ಹೇರಿಯ ಕೋಟೆಗೆ ಕಳಹುವವರೆಗೆ ನಿನ್ನ ಈ ಅಂಜಿಕೆಯು ಕಡಿಮೆಯಾಗಲಾರದು. ಕದಾಚಿತ್ ಅಕಬರಬಾದಶಹರ ಮರಣದವರೆಗೆ ನೀನು ಭಯಭೀತವಾದ ಅಂತಃಕರಣದಿಂದ ಪ್ರತಿಒಂದು ದಿವಸವನ್ನು ಕಳೆಯಬೇಕಾದೀತು. ಒಳ್ಳೆಯದು, ಅದೆಲ್ಲ ಒತ್ತಟ್ಟಿಗಿರಲಿ; ಆದರೆ ಜೋಧಾ, ನಿಜವಾಗಿ ಹೇಳು, ಸಾಮ್ರಾಟ್–ಪತ್ನಿಯಾಗುವದರಲ್ಲಿ ನಿನಗೆ ಹೆಚ್ಚು ಆನಂದವೂ, ಸುಖವೂ, ಜೀವನ

ಸಾರ್ಥಕತೆಯೂ ಇರುವದೋ? ಅಥವಾ ರಾಜಮಾತೆಯಾಗುವದರಲ್ಲಿ ಹೆಚ್ಚು ಆನಂದವಿರುವದೋ?

ಶಾಹೀಬೇಗಮೆ (ಕಂಪಿತ ಸ್ವರದಿಂದ)—ಅಲ್ಲ, ನನಗೆ ಯಾರು ಆಗುವ ಮನಸ್ಸೂ ಇಲ್ಲ. ನನಗೆ ಕೇವಲ ತಮ್ಮ ಶಾಂತಿಮಯ—ವಿಪತಶೂನ್ಯ,—ಉತ್ಸಾಹಯುಕ್ತ ಜೀವನವು ಬೇಕಾಗಿರುವದು. ಅಕಬರಬಾದಶಹನ ಸೊಸೆಯಾಗಿ, ತಮ್ಮ ಶಾಹೀಬೇಗಮಳಾಗಿ ಯಾವ ಸುಖ, ಯಾವ ಸನ್ಮಾನ, ಯಾವ ಐಶ್ವರ್ಯಗಳನ್ನು ನಾನು ಭೋಗಿಸುತ್ತ ಬಂದಿರುವೆನೋ, ಅದೇ ಸುಖ, ಅದೇ ಸನ್ಮಾನ, ಅದೇ ಐಶ್ವರ್ಯಗಳು ನನ್ನ ಜನ್ಮವಿರುವತನಕ ನನಗೆ ಬೇಕಾಗಿರುವವು; ನನಗೆ ಬೇರೆ ಯಾತರ ಅಪೇಕ್ಷೆಯೂ ಇರುವದಿಲ್ಲ. ನಾಥ, ಖುದಾನು ತಮ್ಮ ಜೀವನವನ್ನು ನಿಷ್ಕಂಟಕವಾಗಿ ಮಾಡಲಿ. ಇದನ್ನೇ ಆತನ ಬಳಿಯಲ್ಲಿ ನಾನು ನಿತ್ಯದಲ್ಲಿ ಪ್ರಾರ್ಥಿಸುತ್ತಿರುವೆನು.

ತನ್ನ ಪ್ರೀಯಳ ಈ ಮಾತುಗಳನ್ನು ಕೇಳಿ ಸೇಲೀಮನು ಮೇಘಾವೃತವಾದ ಚಂದ್ರ ಪ್ರಕಾಶಯುಕ್ತ ವಿಸ್ತೀರ್ಣ ಆಕಾಶದ ಕಡೆಗೂ, ಶ್ಯಾಮಸಲೀಲೆಯೂ, ಮೃದುತರಂಗಯುಕ್ತಳೂ ಆದ ಯಮುನೆಯ ಕಡೆಗೂ ನೋಡಿ ಒಮ್ಮೆ ನಿಟ್ಟುಸಿರು ಬಿಟ್ಟು –

ಸೇಲೀಮ —ಇಲ್ಲ ಶಾಹೀಬೇಗಮ ಖುದಾನು ನಿನಗೆ ಭವಿಷ್ಯಕಾಲದಲ್ಲಿ ಇಷ್ಟು ಸುಖವನ್ನು ಕೊಡುವನೋ ಇಲ್ಲವೋ ಎಂಬ ಬಗ್ಗೆ ನನಗೆ ಸಂಶಯವೇ ಉಂಟಾಗುತ್ತಲಿದೆ. ನನ್ನ ಎಟ್ಟೆ ಮಗನು ಎಲ್ಲರ ಕಣ್ಣೆದುರಿಗೆ ನನ್ನನ್ನು ಅವಮಾನಗೊಳಿಸಿ ಹೆಚ್ಚು ಗರ್ವಿಷ್ಠನಾಗಿರುವನೆಂದು ನೀನು ಕೇಳಿರಬಹುದು. ಆತನು ತನ್ನ ಈ ಅಪರಾಧಕ್ಕಾಗಿ ನನ್ನ ಬಳಿಗೆ ಕ್ಷಮೆ ಬೇಡಿಕೊಳ್ಳಲಿಕ್ಕೆ ಬಾರದಿರುವದರಿಂದ, ಆತನು ರಾಜಾ ಮಾನಸಿಂಗನನ್ನೂ, ಅಜೀಮ ಖಾನನನ್ನೂ ಕೂಡಿಕೊಂಡಿರಬಹುದೆಂದು ನಾನು ತರ್ಕಿಸುತ್ತಿರುವೆನು. ಅಜೀಮಖಾನ ಕೋಕೋನೇ ಈಗ ರಾಜಭಾಂಡಾರದ ಮಾಲಕನಾಗಿದ್ದು, ಅದರ ಕೀಲೀಯ ಕೈಯೂ ಅವನ ಕೈಸೇರಿರುತ್ತದೆ. ತಂದೆಮಕ್ಕಳೊಳಗಿನ ನಮ್ಮ ಈ ತಿಕ್ಕಾಟದ ಕಟ್ಟಕಡೆಯ ಪರಿಣಾಮದ ಸುದಿವಸದ ಹಾದಿಯನ್ನೇ ನಾನು ನೋಡುತ್ತಿರುವೆನು. ಪ್ರೀಯೇ ನಾನು ನನ್ನ ಪಿತೃದ್ರೋಹದ ಪಾಪಕೃತ್ಯದ ಫಲವನ್ನು ಭೋಗಿಸುತ್ತಿರುವನೆಂಬದರಲ್ಲಿ ಸಂಶಯವಿಲ್ಲ; ಆದರೆ ನನ್ನ ಆ ಉದಾರ ಹೃದಯದ ಪ್ರೇಮಲ ಸ್ವಭಾವದ ತಂದೆಯ ಚರಣಗಳಿಗೆರಗಿ ಕೃತಾಪರಾಧಕ್ಕಾಗಿ ನಾನು ಕ್ಷಮೆಯನ್ನು ಬೇಡಿಕೊಂಡದ್ದರಿಂದ ಈಗ ಆತನು ನನ್ನನ್ನು ಸಂಪೂರ್ಣವಾಗಿ ಕ್ಷಮಿಸಿರುವನು; ಆದರೆ ಶಾಹೀ, ಬಾದಶಹರ ಅಂತಃಕರಣದಲ್ಲಿರುವಷ್ಟು ಕ್ಷಮಾಗುಣವು ನನ್ನ ಹೃದಯದಲ್ಲಿ ಸರ್ವಥಾ ಇರುವದಿಲ್ಲವೆಂಬದನ್ನು ನೀನು ಚನ್ನಾಗಿ ಲಕ್ಷದಲ್ಲಿಡು.

ತನ್ನ ಪ್ರೀಯಕರನ ಮುಖದಿಂದ ಹೊರಟ ಈ ಯಾವತ್ತು ಭಯಾನಕ ಮಾತುಗಳನ್ನು ಕೇಳಿ ಶಾಹೀಬೇಗಮೆಯ ಅಂತಃಕರಣವು ಖುಸ್ರುವಿನ ಸಲುವಾಗಿ ಕಳವಳಗೊಂಡಿತು. ಆಕೆಯು ಕೆಲಹೊತ್ತು ಸುಮ್ಮನೆಯಿದ್ದು, ಬಳಿಕ ತನ್ನ ಪತಿಯನ್ನು ಕುರಿತು—''ನಾಥ, ಹಾಗಾದರೆ ಅಪರಾಧಿಯಾದ ನನ್ನ ಹುಚ್ಚ ಖುಸರುವು ತಮ್ಮ ಚರಣಗಳಿಗೆರಗಿ ಕ್ಷಮೆಯನ್ನು ಬೇಡಿಕೊಂಡರೆ

ತಾವು ಕ್ಷಮಿಸುವದಿಲ್ಲವೆ?'' ಎಂದು ಕೇಳಲು, ಸೇಲೀಮನು ಒಮ್ಮೆ ನಿಟ್ಟುಸಿರು ಬಿಟ್ಟು— ''ಇಲ್ಲ ಪ್ರೀಯೇ, ನನ್ನ ಮನಸ್ಸಿನಲ್ಲಿ ಕ್ಷಮಿಸುವದಿದ್ದರೂ ನಾನು ಆತನನ್ನು ಕ್ಷಮಿಸುವದು ಶಕ್ಯವಿಲ್ಲವು,'' ಎಂದು ಹೇಳಿದನು. ಭಾಗ್ಯಹೀನಳಾದ ಬೇಗಮೆಯು ತನ್ನ ಪ್ರೀಯಕರನ ಮುಖದಿಂದ ಹೊರಟ ಈ ವಾಕ್ಯಗಳನ್ನು ಕೇಳಿ ಬಹಳವಾಗಿ ಅಂಜಿದಳು. ತನ್ನ ಅಚ್ಛೆಯ ಖುಸ್ರುವು ಈಗ ತೀರ ನಿರಾಧಾರನಾದನೆಂದು ಆಕೆಯು ತಿಳಿದಳು. ಸ್ವಲ್ಪ ಹೊತ್ತಿನ ಮೊದಲು ತನ್ನ ಪತಿಯ ಸುರಕ್ಷಿತತೆಯ ಸಲುವಾಗಿ ಚಿಂತಿಸುತ್ತಿದ್ದ ಜೋಧಬಾಯಿಯು, ಈಗ ಮಗನ ಸುರಕ್ಷಿತತೆಯ ಸಲುವಾಗಿ ಚಿಂತಿಸತೊಡಗಿದಳು. ಆಕೆಯು ಮನಸ್ಸಿನಲ್ಲಿ ಇಲ್ಲದ ಕೆಟ್ಟ ವಿಚಾರಗಳು ಬರತೊಡಗಿದವು. ಅದನ್ನು ಹೇಳಲಿಕ್ಕೆ ವಿಲಂಬವಾದರೂ, ಕ್ಷಣಮಾತ್ರದಲ್ಲಿ ಅವು ಆಕೆಯ ಮನಸ್ಸಿನಲ್ಲಿ ಹೊಲೆದು ಹೋಗುತ್ತಿದ್ದವು. ಆಕೆಯ ಭಯದಿಂದ ಕಣ್ಣುಮುಚ್ಚಿಕೊಂಡು ಹೀಗೆ ಭಯಂಕರ ಕಲ್ಪನೆಗಳನ್ನು ಕಲ್ಪಿಸುತ್ತಿರುವಾಗ ಆಕೆಯ ಮನಸ್ಸಿನಲ್ಲಿ—''ತನ್ನ ಪತಿಯು ದಿಲ್ಲಿಯ ಸಿಂಹಾಸನದ ಮೇಲೆ ಕುಳಿತಂತೆಯೂ, ತನ್ನ ಅಪರಾಧಿಯಾದ ಮಗನು ಆತನ ಮುಂದುಗಡೆಯಲ್ಲಿ ನಿಲ್ಲಿಸಲ್ಪಟ್ಟಂತೆಯೂ, ಆ ಅಪರಾಧಿಯಾದ ಮಗನ ಸುತ್ತುಮುತ್ತು ಆತನ ಶಿರಚ್ಛೇದ ಮಾಡುವದಕ್ಕಾಗಿ ತೀಕ್ಷ್ಣಧಾರೆಯ ಚಪ್ಪಕೊಡಲಿಗಳನ್ನು ಹಿಡಕೊಂಡು ಕ್ರೂರರಾದ ಸೇವಕರು ಅಪ್ಪಣೆಯ ಹಾದಿಯನ್ನು ನೋಡುತ್ತ ನಿಂತಂತೆಯೂ, ಎಲ್ಲ ಸಭಾಸದರು ಭಯವಿಹ್ವಲ ರಾಗಿರಲು, ಸೇಲೀಮನು ಅಪ್ಪಣೆಯಿಂದ ಖುಸ್ರುವಿನ ರಕ್ತಮಯ ಶಿರಸ್ಸು ದಿವಾಣ ಆಮದ ದರ್ಬಾರದ ಶಿಲಾತಲದಲ್ಲಿ ತುಂಡರಿಸಿ ಬಿದ್ದಂತೆಯೂ ಕಲ್ಪನೆಯಾಗಲು, ಆಕೆಯು ತನ್ನ ಕೈಗಳಿಂದ ಕಣ್ಣುಗಳನ್ನು ಮತ್ತಿಷ್ಟು ಗಟ್ಟಿಯಾಗಿ ಮುಚ್ಚಿಕೊಂಡು ತನ್ನ ಪತಿಯನ್ನು ಕುರಿತು ಕನಿಕರದಿಂದ ಕೂಗಿ—ಹಾ! ನಾಥ, ತಾವು ಪ್ರಭುಗಳಿರುವಿರಿ, ಸಾಮರ್ಥ್ಯಸಂಪನ್ನರೂ ಇರುವಿರಿ. ತಮ್ಮ ಮುಂದೆ ಯಃಕಶ್ಚಿತ ಸ್ತ್ರೀಯಾದ ನಾನು ಏನು ಮಾಡಲಿ? ಆದರೆ ನನಗೆ ಸುಖವನ್ನಾಗಲಿ–ದುಃಖವನ್ನಾಗಲಿ ಕೊಡುವದು ನಿಮ್ಮ ಕೈಯಲ್ಲಿಯೇ ಇರುತ್ತದೆ. ನಾನು ಸಂಕಟದಲ್ಲಿರುವಾಗ ಶಾಂತಿಯನ್ನುಂಟುಮಾಡುವವರು ನೀವೇ ಇರುತ್ತೀರಿ. ಸ್ವಾಮಿ, ದಯಾಲು ಪ್ರೀಯಕರಾ, ನನ್ನನ್ನು ರಕ್ಷಿಸಿರಿ ರಕ್ಷಿಸಿರಿ!! ನನ್ನಿಂದ ಈ ದುಃಖವನ್ನು ಸಹಿಸುವದು ಆಗುವದಿಲ್ಲ, ನನ್ನ ಹೃದಯವು ತೀರ ಭಿನ್ನವಿಭಿನ್ನವಾಗಿ ಹೋಗಿರುವದು. ನನ್ನ ಸರ್ವಾಂಗದಲ್ಲಿ ಪ್ರಖರವಾದ ಜ್ವಾಲಾಮಯ ವಿದುಜ್ಜ್ಯೋತಿಯು ಸಂಚರಿಸತೊಡಗಿದ್ದು, ನಾನು ಅದರ ಉಷ್ಣತೆಯಿಂದ ಕ್ಷಣಕ್ಷಣಕ್ಕೆ ಹೆಚ್ಚು ಹೆಚ್ಚು ಕ್ಷೀಣವಾಗತೊಡಗಿರುವೆನು. ಪ್ರೀಯಕರ, ನನ್ನ ಈ ಅಂಜಿಕೆಯನ್ನು ದೂರಮಾಡಿ ನನ್ನನ್ನು ರಕ್ಷಿಸಿರಿ!

ಈ ಮೇರೆಗೆ ನುಡಿದು ಶಾಹೀಬೇಗಮೆಯು ಕಣ್ಣುತೆರೆದು ಸುತ್ತುಮುತ್ತು ನೋಡಲು, ಆಕೆಗೆ ಸೇಲೀಮನು ಎಲ್ಲಿಯೂ ಕಾಣಲಿಲ್ಲ. ಆತನು ಕಾಲಸಪ್ಪಳವೂ ಆಗದಂತೆ ಯಾವಾಗ ಹೊರಟು ಹೋಗಿದ್ದನೆಂಬದು ಬೇಗಮೆಗೆ ಗೊತ್ತಾಗಿದ್ದಿಲ್ಲ ಸಹ! ಆಕೆಯು ಒಮ್ಮೆ ಮರ್ಮಭೇದಕ ವಾದ ನಿಟ್ಟುಸಿರು ಬಿಟ್ಟು—''ಹಾ ನಾಥ, ನನ್ನ ವಿಷಯದಲ್ಲಿ ಅತ್ಯಂತ ಕರುಣಾಮಯರಾಗಿದ್ದ ನೀವು ಇಂದು ಇಷ್ಟು ನಿಷ್ಠುರರು ಯಾಕೆ ಆದಿರಿ? ನಿಮ್ಮ ಪ್ರೇಮವನ್ನೂ, ಆದರವನ್ನೂ,

ಗೌರವವನ್ನೂ ನೋಡಿ ನಾನು ರಜಪೂತ ಸ್ತ್ರೀಯರಲ್ಲಿಯ ತೇಜಸ್ಸನ್ನೂ, ಅಕಬರಬಾದಶಹರ ಸೊಸೆಯಾದ ಹೀನತನವನ್ನೂ ಮರೆತಿದ್ದೆನು; ಆದರೆ ಪ್ರೀಯಾ, ಇಂಥ ನೀವು ಹೀಗೆ ಶೋಕ ಜರ್ಜರಳಾದ ನನ್ನನ್ನು ಬಿಟ್ಟು ಹೋಗುವ ಕಠಿಣ ಹೃದಯದವರು ಆಗಬಹುದೇ? ನಾನು ನಿಮ್ಮನ್ನು ಹೆಚ್ಚಿಗೆಯೇನು ಬೇಡಿಕೊಳ್ಳುತ್ತಿದ್ದಿಲ್ಲ, ಈಗಾದರೂ ಬೇಡಿಕೊಳ್ಳುವದಿಲ್ಲ! ನೀವೇ ಮೊಗಲಬಾದಶಹರಾಗಿರಿ; ಹಿಂದುಸ್ಥಾನವು ನಿಮ್ಮದೇ ಆಗಲಿ; ಸುವರ್ಣ ವೃಷ್ಟಿಯು ನಿಮ್ಮ ರಾಜ್ಯದ ಮೇಲೆಯೇ ಆಗಲಿ; ಆದರೆ ಅವುಗಳಲ್ಲಿ ಯಾತರ ಆಶೆಯನ್ನೂ ನಾನು ಮಾಡದೆ, ನನ್ನ ಖುಸ್ರುವನ್ನು ಗ್ವಾಲ್ಹೇರಿಯ ಕೋಟೆಯಲ್ಲಿ ಪ್ರತಿಬಂಧದಲ್ಲಿರಿಸದೆ ನನ್ನ ವಶಕ್ಕೆ ಒಪ್ಪಿಸಿ ರೆಂದು ಬೇಡಿಕೊಳ್ಳುವೆನು. ತನ್ನ ಮರಿಯ ಸಲುವಾಗಿ ಬೇಡನಿಗೆ ಬೆದರಿ ಬೆಂಡಾಗಿದ್ದ ಹೆಣ್ಣು ಚಿಗರೆಯಂತೆ ಪ್ರಾಣನಾಥ, ನಾನು ಬೇಕಾದರೆ ಈ ಉಟ್ಟ ವಸ್ತ್ರದಿಂದಲೇ ಮಗನನ್ನು ಕಟ್ಟಿಕೊಂಡು ಎಲ್ಲಿಗಾದರೂ ಹೋಗುವೆನು. ನನ್ನ ಮಗನ ಹೊಟ್ಟೆಯನ್ನು ನಾನು ಭಿಕ್ಷೆಬೇಡಿ ತುಂಬುವೆನು ನಾಥ! ಆದರೆ ನಿಷ್ಠುರರಾಗಿ ಆತನನ್ನು ಗ್ವಾಲ್ಹೇರದ ಕೋಟೆಯಲ್ಲಿ ಪ್ರತಿಬಂಧಿಸಿ ಇಡಬೇಡಿರಿ; ಒಂದು ಪಕ್ಷದಲ್ಲಿ ಪ್ರತಿಬಂಧಿಸಿ ಇಟ್ಟರೂ ಇಡಿರಿ, ಆದರೆ ಆತನ ಶಿರಚ್ಛೇದನ ವನ್ನಂತು ಸರ್ವಥಾ ಮಾಡಬೇಡಿರಿ. ನಮ್ಮಿಬ್ಬರನ್ನು ಒಮ್ಮೆ ಹೊರಗೆ ಹಾಕಿಬಿಡಿರಿ, ತಿರುಗಿ ನಾವು ನಿಮ್ಮ ಕೃಪೆಯ ಯಾಚನೆ ಮಾಡುವದಕ್ಕಾಗಿ ನಿಮ್ಮ ರಾಜ್ಯದಲ್ಲಿ ಕಾಲು ಹಾಕುವದಿಲ್ಲ!

ಹೀಗೆ ಶಾಹೀಬೇಗಮೆಯು ಹಂಬಲಿಸಿ ಹಂಬಲಿಸಿ ಹಣ್ಣಾಗಿ ಮನಸ್ಸಿನಲ್ಲಿ—''ಇನ್ನು ಈ ರಾತ್ರಿ ಪ್ರಾಣೇಶ್ವರನ ದರ್ಶನವಾಗುವ ಸಂಭವವಿಲ್ಲ; ಯಾಕಂದರೆ, ಏಕಾಂತ ಗೃಹದಲ್ಲಿ ಮಿತ್ರರ ಹಾಗು ಗುಪ್ತಚಾರರ ಸಮ್ಮೇಳನದಿಂದ ಗುಪ್ತ ಆಲೋಚನೆ ಮಾಡುವ ಕೆಲಸವು ಮುಗಿದ ಬಳಿಕ ಮದ್ಯಪಾನ, ರಮಣೀಯರ ವಿಲಾಸಗಳ ಸಹಾಯದಿಂದ ನಿದ್ದೆಹೋಗುವ ಪ್ರಾಣೇಶ್ವರನ ಪರಿಪಾಠದಂತೆ ಇಂದಿನ ಅವರ ಕಾರ್ಯಕ್ರಮವಿರಬಹುದು. ಇಲ್ಲದಿದ್ದರೆ ಹೀಗೆ ಅವರು ಅಕಸ್ಮಾತ್ ಹೊರಟುಹೋಗುವ ಸಂಭವವಿದ್ದಿಲ್ಲ; ಆದ್ದರಿಂದ ಹೀಗೆ ನಿದ್ದೆಗೆಟ್ಟು ಕುಳಿತು ಕೊಳ್ಳುವದಾದರೂ ಏಕೆ?'' ಎಂದು ಆಲೋಚಿಸಿ ಒಳಗೆ ಹೋಗಿ ಹಾಸಿಗೆಯ ಮೇಲೆ ಮಲಗಿ ಕೊಂಡಳು; ಆದರೆ ಏನು ಮಾಡಿದರೂ ನಿದ್ದೆ ಬಾರದಾಗಲು, ಮತ್ತೆ ಎದ್ದುಬಂದು ಗವಾಕ್ಷದ ಬಳಿಯಲ್ಲಿ ನಿಂತುಕೊಂಡಳು. ಆಕೆಯು ಯಮುನಾ ನದಿಯನ್ನು ನೋಡಿ ಮತ್ತೆ ಮನಸ್ಸಿನಲ್ಲಿ— ನಾನು ದುಃಸಹ ದುಃಖವನ್ನು ಅನುಭವಿಸುವದಕ್ಕಿಂತ ಈ ಯಮುನಾ ನದಿಯಲ್ಲಿ ದುಡುಮ್ಮನೆ ಹಾರಿಕೊಂಡು ಬಿಡಲಾ! ಈ ಹೃದಯ ಶೂನ್ಯ ಪತಿಯು, ಆ ಸ್ವಚ್ಛಂದ ವೃತ್ತಿಯ ಮಗನು, ಇಂಥವರ ಮೋಹದಲ್ಲಿ ಸಿಕ್ಕು ಒದ್ದಾಡುವದರಿಂದ ನನಗೆ ಆಗುವ ಲಾಭವಾದರೂ ಏನು? ಛೀ ಛೀ! ಮೃತ್ಯುವು ಇಷ್ಟು ಸಮೀಪದಲ್ಲಿ ಸುಲಭ ಸಾಧ್ಯವಾಗಿ ಇರುತ್ತಿರಲು, ನಾನು ತಳಮಳಿಸುವದು ವ್ಯರ್ಥವೇ ಸರಿ! ನಾನು ಈ ಜಗತ್ತಿನಲ್ಲಿ ಬಂದು ಸಂಸಾರ ಮಾಡಿದೆನು. ಉಂಡೆನು–ತಿಂದೆನು– ವೈಭವವನ್ನು ಭೋಗಿಸಿದೆನು–ಅಧಿಕಾರ ನಡಿಸಿದೆನು; ಆದರೆ ಕಡೆಗೆ ಈ ದುಃಸಹ ದುಃಖವನ್ನು ಭೋಗಿಸುವದು ನನ್ನ ಪಾಲಿಗೆ ಬಂದಿತು; ಆದ್ದರಿಂದ ಈಗ ದುಃಖವ ಅನುಭವಿಸುವದಕ್ಕಿಂತ ದೇಹತ್ಯಾಗ ಮಾಡುವದೇ ಲೇಸು. ದೇವರೇ, ಇಂಥ ವಿಪತ್ಕಾಲದಲ್ಲಿ ಮರಣವೇ ಒಳ್ಳೆಯದಲ್ಲವೆ?

ಹೀಗೆ ವಿಚಾರಮಾಡುತ್ತಿರಲು, ಪುನಃ ಆಕೆಯ ಮನಸ್ಸು ತಿರುಗಿತು. ಆಕೆಯು ತನ್ನ ವಿಚಾರದ ದಿಶೆಯನ್ನು ತಿರುಗಿಸಿ ಮತ್ತೆ ಮನಸ್ಸಿನಲ್ಲಿ—ಛೀ ಛೀ! ಹೀಗೆ ನಾನು ಹೊಳೆ ಮುಣುಗಿ ಸತ್ತರೆ ನನ್ನ ಪ್ರೀಯ ಖುಸ್ರುವಿನ ಗತಿಯೇನು? ಆತನು ಹೇಗಿದ್ದರೂ, ಎಷ್ಟು ಎಟ್ಟಿಯಿದ್ದರೂ ನನ್ನ ಮಗನಲ್ಲವೇ? ನಾನು ಮರಣ ಹೊಂದುವದರಿಂದ ಆತನು ಪರದೇಶಿಯಾಗಿ ತೀರ ನಿರಾಧಾರನಾಗಿ ಹೋಗುವನಲ್ಲ! ನಾನಿರುವದೊಂದು ಆತನಿಗೆ ದೊಡ್ಡ ಆಧಾರವಾಗಿರುವದು. ಹೊತ್ತು ಬಿದ್ದರೆ ಏನಾದರೂ ಮಾಡಿ ಆತನ ವಿಪತ್ತನ್ನು ನಾನು ದೂರ ಮಾಡಬಹುದು. ನಾನೇ ಇಲ್ಲದಿದ್ದರೆ ಆತನ ಗ್ವಾಲ್ಹೇರಿಯ ಕಾರಾಗೃಹವಾಸವನ್ನಾಗಲಿ, ವಿಷಪಾನದಿಂದುಂಟಾಗುವ ಆತನ ಮರಣವನ್ನಾಗಲಿ ಗುಪ್ತ ಕೊಲೆಗಡಕರಿಂದ ಆಗಬಹುದಾದ ಆತನ ಕೊಲೆಯನ್ನಾಗಲಿ ಯಾರು ತಪ್ಪಿಸುವರು? ನಾನು ಸತ್ತು ನನ್ನ ಮಗನನ್ನು ಹೀಗೆ ಗತಿಗೇಡಾಗಿ ಮಾಡುವದು ಯೋಗ್ಯವಾಗ ಬಹುದೆ? ನನ್ನ ಮೇಲೆ ಈಗ ಬಂದಿರುವ ಅಂಥ ಪ್ರಸಂಗವಾದರೂ ಏನು? ನಾನು ಯಃಕಶ್ಚಿತ ಮನುಷ್ಯಳಲ್ಲ; ಅಕಬರಬಾದಶಹನ ಸೊಸೆಯು; ನಾಳೆ ಸುಲ್ತಾನ ಸೇಲೀಮರವರು ದಿಲ್ಲಿಯ ಸಿಂಹಾಸನವನ್ನೇರಲು, ನಾನು ರಾಜರಾಜೇಶ್ವರಿಯಾಗತಕ್ಕವಳು! ಇಂಥ ನಾನು ಒಬ್ಬ ಸಾಮಾನ್ಯಳಾದ ಗ್ರಾಮ್ಯ ಸ್ತ್ರೀಯಂತೆ ಹೊಳೆಮುಣುಗಿ ಸಾಯಬಹುದೇ? ನಾನು ಸಾಮ್ರಾಜ್ಞಿ ಯೆಂಬ ಹಕ್ಕಿನಿಂದ ಖುಸ್ರುವನ್ನು ಸಹಜವಾಗಿ ಸಂರಕ್ಷಿಸಬಹುದು.'' ಎಂದು ಆಲೋಚಿಸಿದಳು. ಹೀಗೆ ಸುಷ್ಟ, ದುಷ್ಟ ವಿಚಾರಗಳಿಂದ ಹಣ್ಣಾಗಿದ್ದ ಜೋಧಬಾಯಿಯು ಮತ್ತೆ ಹೋಗಿ ಹಾಸಿಗೆಯ ಮೇಲೆ ಮಲಗಿಕೊಳ್ಳಲು, ಕೆಲ ಹೊತ್ತಿನಮೇಲೆ ಆಕೆಗೆ ಗಾಢವಾದ ನಿದ್ರೆಯು ಹತ್ತಿ ಆಕೆಯ ತಪ್ತ ಹೃದಯವು ಶಾಂತವಾಯಿತು. ಮರುದಿವಸ ಆಕೆಯು ಎದ್ದಕೂಡಲೆ ಮಗನಿಗೊಂದು ಪತ್ರಬರೆದು ಸೇಲೀಮನಿಗೆ ಗೊತ್ತಾಗದಂತೆ ಅದನ್ನು ಒಬ್ಬ ನಂಬಿಗೆಯ ರಜಪೂತ ಸೈನಿಕನ ಸಂಗಡ ಫತ್ತೇಪುರ ಸಿಕರಿಯ ಕಡೆಗೆ ಕಳಿಸಿದಳು. ಆ ಪತ್ರದಲ್ಲಿ ಆಕೆಯು ಖುಸ್ರುವಿಗೆ—''ಪ್ರೀಯ ಖುಸ್ರೂ, ನಿನ್ನ ಅಜ್ಜನು ಬೇನೆಯಿಂದ ತೀರ ಹಣ್ಣಾಗಿರುವನು. ನೀನು ಕೂಡಲೆ ಹೊರಟು ಬಾರದಿದ್ದರೆ ಆತನ ಮೋರೆಯನ್ನು ಕಾಣಲಿಕ್ಕಿಲ್ಲ. ಆದ್ದರಿಂದ ಈ ಪತ್ರವನ್ನು ಓದಿದ ಕೂಡಲೆ ಆಗ್ರಾಕ್ಕೆ ಹೊರಟು ಬಾ. ತಾಯಿಯ ಅಪ್ಪಣೆಯನ್ನು ಮೀರಬೇಡ. ಪಟ್ಟಣದಲ್ಲಿ ಬಂದಬಳಿಕ ನನ್ನ ಮಂದಿರಕ್ಕೆ ಬಾ. ಅಲ್ಲಿ ನಾನು ನಿನ್ನನ್ನು ಕಾಣುವೆನು.'' ಎಂದು ಬರೆದಿದ್ದಳು. ಪತ್ರವನ್ನು ಕಳಿಸಿದ್ದರಿಂದ ಆಕೆಗೆ ಬಹುಮಟ್ಟಿಗೆ ಸಮಾಧಾನವಾಯಿತು. ಪಾಪ! ಎಷ್ಟಾದರೂ ತಾಯಿಯ ಕರಳು; ಮಗನು ಎಷ್ಟು ಅಯೋಗ್ಯನಾದರೂ ಆ ಕರಳು ಕರಗದೆ ಹೇಗೆ ಹೋದೀತು? ಆದರೆ ಜೋಧಬಾಯಿಯ ಈ ಕರೆಸೋಣವೇ ಅನರ್ಥಕ್ಕೆ ಹೇಗೆ ಕಾರಣವಾಯಿತೆಂಬದನ್ನು ಮುಂದಿನ ಪ್ರಕರಣಗಳಿಂದ ವಾಚಕರಿಗೆ ತಿಳಿಯಬಹುದು.

ಮರಣೋನ್ಮುಖ ಬಾದಶಹನು

ಫಕೀರನ ದೂಡುವಿಕೆಯಿಂದ ಹಿಂದಕ್ಕೆ ಬಿದ್ದು ಮೂರ್ಛಿತನಾಗಿದ್ದ ಖುಸರುವು, ಕೆಲ ಹೊತ್ತಿನಮೇಲೆ ಚೇತರಿಸಿ ದಿಗಿಲುಬಿದ್ದು ತನ್ನ ಮಂದಿರಕ್ಕೆ ಹೋಗಿ ಆಶ್ಚರ್ಯಚಕಿತನಾಗಿ ವಿಚಾರಮಾಡತೊಡಗಿದನು. ಫಕೀರನು ಯಾರು? ಆತನು ಅಲ್ಲಿಗೆ ಹೇಗೆ ಬಂದನು? ತನ್ನನ್ನು ಆತನು ಹೀಗೆ ದೂಡಿದ ಕಾರಣವೇನು? ಮಂದಾಕಿನಿಯು ಎಲ್ಲಿಗೆ ಹೋಗಿರಬಹುದು? ಅವರನ್ನು ಕಾವಲುಗಾರರು ಹೇಗೆ ಬಿಟ್ಟಿರಬಹುದು? ಎಂಬಿವೇ ಮೊದಲಾದ ಸಂಗತಿಗಳನ್ನು ಕುರಿತು ಎಷ್ಟು ವಿಚಾರಮಾಡಿದರೂ ಆತನಿಗೆ ಏನೂ ತಿಳಿಯದಾಯಿತು. ಆತನು ಕೋಟೆಯ ದ್ವಾರಗಳ ಕಾವಲುಗಾರರನ್ನು ಕರೆಸಿ ಕೇಳಲು, ಅವರು ಖುಸರುವಿಗೆ—ಖಾವಿಂದ, ಹುಜೂರಿನ ಹೆಸರಿನ ಉಂಗುರವನ್ನು ತೋರಿಸಿ ಒಬ್ಬ ಫಕೀರನೂ, ಒಬ್ಬ ಗೋಷೆಯ ಹೆಣ್ಣುಮಗಳೂ ಹೋದರೆಂದು ಹೇಳಿದರು. ತಾನು ಕೊಟ್ಟಿದ್ದ ಉಂಗುರವೇ ಇಷ್ಟೆಲ್ಲ ಅನರ್ಥಕ್ಕೆ ಕಾರಣ ವಾಯಿತೆಂದು ತಿಳಿದು ಖುಸರುವು ಸಂತಾಪಗೊಂಡನು. ಇದೆಲ್ಲ ಮಂದಾಕಿನಿಯ ತಂತ್ರವಿದ್ದು, ಆ ದುಷ್ಟಳನ್ನು ಹಿಡತಂದು ಜನಾನಖಾನೆಯಲ್ಲಿ ದಾಸಿಯರ ದಾಸಿಯನ್ನಾಗಿ ಮಾಡದ ಹೊರತು ತನ್ನ ಸಮಾಧಾನವಾಗದೆಂದು ಚಡಪಡಿಸಿದನು. ಈ ಪ್ರಸಂಗದಲ್ಲಿ ಅಭಿಮಾನಿಯಾದ ಆ ರಾಜಪುತ್ರನು ಬಹಳವಾಗಿ ನೊಂದುಕೊಂಡನು. ಆಗಿನ ಮಟ್ಟಿಗಾದರೂ ಮಂದಾಕಿನಿಯ ಮೇಲಿನ ಆತನ ಮೋಹ ಪಟಲವು ದೂರವಾಯಿತು. ಆತನು ಈಗಲೆ ರಾವುತರನ್ನು ನಾಲ್ಕೂ ಕಡೆಗೆ ಕಳಿಸಿ ಓಡಿಹೋಗಿದ್ದ ಅವರಿಬ್ಬರನ್ನು ಹಿಡತರಿಸಬೇಕೆಂದು ನಿಶ್ಚಯಿಸಿದನು; ಆದರೆ ಅಷ್ಟರಲ್ಲಿ ಒಬ್ಬ ದಾಸಿಯು ಅಲ್ಲಿಗೆ ಬಂದು ಜೋಧಬಾಯಿಯು ಆಗ್ರಾದಿಂದ ಬರೆದಿದ್ದ ಪತ್ರವನ್ನು ತಂದು ಆತನ ಕೈಯಲ್ಲಿ ಕೊಟ್ಟಳು. ಖುಸರುವು ಆ ಪತ್ರವನ್ನು ಆತುರತೆಯಿಂದ ಒಡೆದು ನೋಡಲು, ಅದರಲ್ಲಿ ಆತನ ತಾಯಿಯು—''ಕೂಡಲೆ ನೀನು ಆಗ್ರಾಕ್ಕೆ ಹೊರಟು ಬರಬೇಕೆಂ''ದು ಆತನನ್ನು ಆಜ್ಞಾಪಿಸಿದ್ದಳು. ತನ್ನ ಅಜ್ಜನು ಮರಣೋನ್ಮುಖನಾಗಿರುವ ನೆಂಬದನ್ನು ಓದಿದ ಕೂಡಲೆ ಆತನ ಚಿತ್ತವು ಅಸ್ವಸ್ಥವಾಯಿತು. ಬಾದಶಹನು ತನ್ನನ್ನು ಕುರಿತು— ''ನೀನು ನನ್ನ ಅಪ್ಪಣೆಯ ಹೊರತು ಸಿಕರಿಯನ್ನು ಬಿಟ್ಟು ಬರಬೇಡವೆಂ''ದು ತನ್ನನ್ನು ಆಜ್ಞಾಪಿಸಿದ್ದು, ಈಗ ತನ್ನ ತಾಯಿಯು ತನ್ನನ್ನು ಕುರಿತು—''ಖುಸರೂ, ನೀನು ನನ್ನ ಅಪ್ಪಣೆಯನ್ನು ಮೀರದೆ ಕೂಡಲೆ ಆಗ್ರಾಕ್ಕೆ ಹೊರಟು ಬಾರೆಂ''ದು ಆಜ್ಞಾಪಿಸಿರುವದರಿಂದ ಈಗ ಏನು ಮಾಡಲೆಂಬ ಗಹನ ವಿಚಾರವು ಆತನಲ್ಲಿ ಉತ್ಪನ್ನವಾಯಿತು. ಈ ವಿಚಾರದ ತೊಡಕು ಬಿಡಿಸುವ ಅವಸರದಲ್ಲಿ ಆತನು ಮಂದಾಕಿನಿಯ ವಿಚಾರವನ್ನು ಪೂರಾ ಮರೆತು ಬಿಟ್ಟನು.

ಇತ್ತ ಆಗ್ರಾದಲ್ಲಿ ಅಕಬರಬಾದಶಹನ ಬೇನೆಯ ಸ್ಥಿತಿಯು ಅತ್ಯಂತ ಚಿಂತಾಜನಕ ವಾಗಿತ್ತು; ಆದರೆ ಹೇಳಿಕೊಳ್ಳುವಷ್ಟು ಆತನ ಶಕ್ತಿಪಾತವಾಗದ್ದರಿಂದ ಹಕೀಮರ ನಿರಾಶೆಯಲ್ಲಿ ಆಶೆಯ ಅಂಕುರವು ತೋರಿದಂತಾಗುತ್ತಿತ್ತು. ಬಾದಶಹರ ಪ್ರಕೃತಿಯನ್ನು ನೋಡುವ ಮುಖ್ಯ

ಹಕೀಮನಾದ ಅಲ್ಲಿ ಮಿರ್ಝಾನು ತೀರ ನಿರಾಶೆಪಟ್ಟಿದ್ದರೂ, ತನ್ನ ಜವಾಬುದಾರಿಯನ್ನು ಅರಿತು ಆತನು ಬಗೆಬಗೆಯ ಉಪಾಯಗಳನ್ನು ಯೋಚಿಸುವಲ್ಲಿ ತೊಡಗಿ ಹೋಗಿದ್ದನು. ಆತನು ಬಾದಶಹರನ್ನು ಕುರಿತು—''ಜಹಾಪನಾಹ! ತಾವು ಒಪ್ಪಿಗೆಯನ್ನಿತ್ತರೆ ವಿಶೇಷತರದ ಉಪಚಾರ ಮಾಡಬೇಕೆಂದು ಮಾಡಿದ್ದೇನೆ. ಮುಪ್ಪಿನ ಕಾಲದಲ್ಲಿ ಕ್ರಮವಾಗಿ ಹೆಚ್ಚುತ್ತಿರುವ ಬೇನೆಯನ್ನು ದುರ್ಲಕ್ಷಿಸುವದು ಹಿತಕರವಲ್ಲ'' ಎಂದು ಹೇಳಿದನು. ಹಕೀಮನ ಈ ಆಲೋಚನೆಯು ಬಾದಶಹನಿಗೆ ಒಪ್ಪಿಗೆಯಾಯಿತು. ತನ್ನ ಶಕ್ತಿಯು ದಿನದಿನಕ್ಕೆ ಕ್ಷೀಣವಾಗುತ್ತಿರುವದು ಬಾದಶಹನ ಅನುಭವಕ್ಕೆ ಬರತೊಡಗಿತ್ತು; ಆದ್ದರಿಂದ ಆತನು ಹಕೀಮನ ಅಭಿಪ್ರಾಯಕ್ಕೆ ಪ್ರತಿಕೂಲನಾಗದ್ದರಿಂದ ಅಲ್ಲಿ ಮಿರ್ಝಾನು ಹೊಸ ಔಷಧದ ಯೋಜನೆಯನ್ನು ಮಾಡಿದನು; ಅದರಿಂದ ಬಾದಶಹನ ಆಮಾಶಯವು ಗುಣವಾಯಿತು. ಆದರೆ ಭಯಂಕರವಾದ ಜ್ವರದಿಂದ ಬಾದಶಹನ ಸರ್ವಾಂಗವು ತಪ್ತವಾಯಿತು; ಇದನ್ನು ನೋಡಿ ಹಕೀಮನು ಬಹಳ ಖಿನ್ನನಾದನು. ಇನ್ನು ಬಾದಶಹರು ಈ ಜ್ವರದಿಂದ ಮುಕ್ತರಾಗುವದಿಲ್ಲವೆಂದು ಅಲ್ಲಿಯು ನಿಶ್ಚಯಿಸಿದನು. ತನ್ನ ಜವಾಬದಾರಿಯನ್ನು ಅರಿತು ಆತನು ಈ ಸಂಗತಿಯನ್ನು ಬಾದಶಹರ ಅತ್ಯಂತ ವಿಶ್ವಾಸದ ಇಬ್ಬರಿಗೆ ತಿಳಿಸಿದನು. ಅವರಲ್ಲಿ ಒಬ್ಬನು ಅಜೀಮಖಾನ ಕೋಕೋ ಎಂಬವನು ಇದ್ದದ್ದರಿಂದ ಆತನ ಮುಖಾಂತರವಾಗಿ ಮಾನಸಿಂಗನಿಗೆ ಈ ಸಂಗತಿಯು ಗೊತ್ತಾಯಿತು. ಖುಸರುವನ್ನು ಪಟ್ಟಕ್ಕೆ ಕುಳ್ಳಿರಿಸಿರುವ ಸಂಬಂಧದಲ್ಲಿ ಇವರಿಬ್ಬರು ಮಿತ್ರರಾಗಿದ್ದದ್ದನ್ನು ವಾಚಕರು ಅರಿತಿರುವರು.

ಬಾದಶಹರ ಈ ಅತ್ಯವಸ್ಥೆಯನ್ನರಿತು ಅಜೀಮಖಾನನೂ, ಮಾನಸಿಂಹನೂ ತನ್ನ ಉದ್ಯೋಗವನ್ನು ಒತ್ತರದಿಂದ ನಡೆಸಿದರು. ಅವರ ವರ್ಚಸ್ಸು ರಾಜಕಾರಣದಲ್ಲಿ ವಿಶೇಷವಾಗಿ ಇದ್ದದ್ದರಿಂದ, ಒಂದು ಗುಪ್ತಸಭೆ ನೆರೆಸುವದನ್ನು ನಿಶ್ಚಯಿಸಿ ಅವರು ಮುಖ್ಯ ಮುಖ್ಯ ಅಮೀರ ಉಮರಾವರನ್ನೂ, ಅಕಬರನ ಮಾಂಡಲಿಕರಾದ ರಾಜರು–ಮಹಾರಾಜರನ್ನೂ ಸಭೆಗೆ ಕರಿಸಿದರು. ಸಭಾಸದರು ತಮ್ಮ ತಮ್ಮ ಮಾನಮರ್ಯಾದೆಯಂತೆ ತಮ್ಮ ತಮ್ಮ ಸ್ಥಳಗಳಲ್ಲಿ ಕುಳಿತಿರಲು, ಮಾನಸಿಂಗನೂ, ಅಜೀಮಖಾನನೂ ಸೇಲೀಮನ ದುರ್ಗುಣಗಳನ್ನು ವರ್ಣಿಸಿ, ಮಹಾವಿದ್ವಾಂಸನಾದ ಅಬುಲ ಫಜಲನ ಕೊಲೆಯ ನೆನಪು ಮಾಡಿಕೊಟ್ಟು, ಸೇಲೀಮನ ಕ್ರೂರತನವನ್ನು ಬೈಲಿಗಿಟ್ಟರು. ಇಂಥ ದುರ್ವ್ಯಸನಿಯೂ, ಕ್ರೂರನೂ ಆದವನು ಬಾದಶಾಹಿಯ ಪಟ್ಟವೇರಲು ಯೋಗ್ಯನಲ್ಲದ್ದರಿಂದ, ಬಾದಶಹರ ತರುವಾಯದಲ್ಲಿ ಖುಸರುವನ್ನು ಪಟ್ಟಕ್ಕೆ ಕುಳ್ಳಿರಿಸುವದು ಯೋಗ್ಯವೆಂದು ಪ್ರತಿಪಾದಿಸಿದರು. ಇವರ ಈ ಪ್ರತಿಪಾದನದಿಂದ ಸಭೆಯಲ್ಲಿ ಸ್ವಾಭಾವಿಕವಾಗಿಯೇ ಇಬ್ಬಣಗಳಾದವು. ಕೆಲವರು–ಖುಸರುವನ್ನು ಪಟ್ಟಕ್ಕೆ ಕುಳ್ಳಿರಿಸುವದು ಹಿತಕರವೆಂದು ಭಾವಿಸಿದರು. ಕೆಲವರು–ಸೇಲೀಮನು ಪಟ್ಟವೇರುವದು ನ್ಯಾಯವೆಂದು ಅಭಿಪ್ರಾಯಪಟ್ಟರು. ಆದರೆ ಬಹು ಸೂಕ್ಷ್ಮವಾದ ಈ ಸಂಗತಿಗಳನ್ನು ಒಡನುಡಿಯುವ ಧೈರ್ಯವು ಯಾರಿಗೂ ಆಗಲೊಲ್ಲದು. ಅಜೀಮಖಾನನು ಖುಸರುವಿನ ಹೆಣ್ಣುಕೊಟ್ಟ ಮಾವನೂ, ಮಾನಸಿಂಹನು ಖುಸರುವಿನ ಸೋದರಮಾವನೂ ಆಗಿದ್ದು, ಇವರಿಬ್ಬರೂ ಖುಸರುವನ್ನು ಮುಂದೆ ಮಾಡಿ ತಮ್ಮ ತಮ್ಮ ವರ್ಚಸ್ಸನ್ನು ಹೆಚ್ಚಿಸಿಕೊಳ್ಳಲು ಯತ್ನಿಸುತ್ತಿರುವದು ಬಹುತರ ಎಲ್ಲರ ಮನಸ್ಸಿನಲ್ಲಿಯೂ ಬಂದುಹೋದ ಸಂಗತಿಯಾಗಿತ್ತು;

ಆದ್ದರಿಂದಲೇ ಸ್ವಾರ್ಥಮೂಲವಾದ ಇವರ ವಿಚಾರವು ನಿಷ್ಪೃಹಿಗಳ ಮನಸ್ಸಿಗೆ ಬರುತ್ತಿದ್ದಿಲ್ಲ. ಈ ಇಬ್ಬರು ಮಾವಂದಿರ ಕಾರಸ್ಥಾನಗಳು ಬಹುದಿವಸಗಳಿಂದ ನಡೆದದ್ದನ್ನು ಬಾದಶಹನೇ ಮೊದಲಾಗಿ ಎಲ್ಲರೂ ಅರಿತಿದ್ದರು; ಆದ್ದರಿಂದ ಈಗ ನೆರೆದ ಸಭೆಯಲ್ಲಿ ಯಾವದೊಂದು ಮಾತಿನ ನಿಷ್ಕರ್ಷವಾಗುವದು ಅತ್ಯಗತ್ಯವಾಗಿತ್ತು. ಆದರೆ, ತಮ್ಮ ತಮ್ಮ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ನೆರೆದ ಸಭೆಯಲ್ಲಿ ಆಡಿ ತೋರಿಸಲಿಕ್ಕೆ ಯಾರೂ ಮುಂದುವರಿಯದ್ದರಿಂದ ಸಭೆಯು ಸ್ತಬ್ಧವಾಯಿತು.

ಹೀಗಿರುವಾಗ ಮಾನಸಿಂಹನು ಮತ್ತೆ ಸಭಿಕರನ್ನು ಕುರಿತು—"ಘನವಂತರೇ, ನಾವೆಲ್ಲರೂ ಮೊಗಲ ಸಾಮ್ರಾಜ್ಯದ ಅಭಿಮಾನಿಗಳೂ, ಹಿತಕರ್ತೃಗಳೂ ಒಟ್ಟುಗೂಡಿರುವಾಗ, ಈ ಮಹತ್ವದ ಸಂಗತಿಯ ವಿಷಯವಾಗಿ ಹೀಗೆ ಮೌನಧಾರಣ ಮಾಡುವದು ಯೋಗ್ಯವಲ್ಲ. ಅಯೋಗ್ಯರಾದ ರಾಜರಿಂದ ರಾಜ್ಯಕ್ಕೊದಗುವ ಕೇಡನ್ನು ವರ್ಣಿಸಿ ಹೇಳುವ ಕಾರಣವಿಲ್ಲ. ಸುಲ್ತಾನ ಸೇಲೀಮರು ಸಿಂಹಾಸನವೇರಲು ಹಕ್ಕುದಾರರೆಂಬದೇನೋ ನಿಜ; ಆದರೆ, ಸಿಂಹಾಸನವೇರಲು ಅವರು ಯೋಗ್ಯರಿರುವರೋ ಎಂಬದನ್ನು ನೀವು ವಿಚಾರ ಮಾಡತಕ್ಕದ್ದು. ಪ್ರತ್ಯಕ್ಷ ಬಾದಶಹರ ಮೇಲೆ ತಿರುಗಿ ಬೀಳಲಿಕ್ಕೂ ಹಿಂದೆಮುಂದೆ ನೋಡದಿರುವವರ ಸಂಬಂಧದಿಂದ ಹೆಚ್ಚಿಗೆ ನಾವು ಏಕೆ ಹೇಳಬೇಕು? ಸಾಮ್ರಾಜ್ಯದ ಹಿತವನ್ನು ಲಕ್ಷಿಸಿದರೆ, ಅಜೀಮಖಾನರ ಅಭಿಪ್ರಾಯದಂತೆ ಖುಸರುವನ್ನೇ ಸಿಂಹಾಸನದಲ್ಲಿ ಕುಳ್ಳಿರಿಸುವದು ನನಗೆ ಯೋಗ್ಯವಾಗಿ ತೋರುತ್ತದೆ. ಈ ಸೂಕ್ಷ್ಮ ಮಾತನ್ನು ಸಭೆಯಲ್ಲಿ ಸ್ಪಷ್ಟ ಆಡಲು ಬಹುಜನರಿಗೆ ಸಂಕೋಚವಾಗುವದು ಸ್ವಾಭಾವಿಕವು; ಒಂದು ರೀತಿಯಿಂದ ಹೀಗೆ ಸ್ಪಷ್ಟ ಹೇಳುವದು ಭಯಪ್ರದವೂ ಆಗಿರುವದು; ಆದರೆ ನಿಮ್ಮ ಈ ಮೌನವನ್ನೇ ನಿಮ್ಮ ಸಮ್ಮತಿಯೆಂದು ತಿಳಿದು ನಾವಿಬ್ಬರು ನಮ್ಮ ಅಭಿಪ್ರಾಯದಂತೆ ಕಾರ್ಯ ಸಿದ್ಧಿಯನ್ನು ಮಾಡುವಾಗ ನೀವು ನಮಗೆ ಸಹಾಯಕರಾಗುವಿರೆಂದು ನಂಬುವೆವು. ಸ್ವತಃ ನಾನು ಸೇಲೀಮನ ಬೀಗನಾಗಿರಲು, ನನ್ನ ತಂಗಿಯ ಅಹಿತ ಚಿಂತನ ಮಾಡತೊಡಗಿರುವದು ವಿಲಕ್ಷಣ ವಾಗಿಯೇ ಇರುವದು; ಆದರೆ ತಂಗಿಯ ಹಿತಕ್ಕಿಂತ ಮೊಗಲ ಸಾಮ್ರಾಜ್ಯದ ಹಿತವು ನನಗೆ ಮಹತ್ವದ್ದಾಗಿರುವದು; ಅಂದಬಳಿಕ ಮೊಗಲ ಸಾಮ್ರಾಜ್ಯದ ಆಧಾರ ಸ್ತಂಭವಾಗಿರುವ ನೀವು ನನ್ನ ಮಾತಿಗೆ ಒಪ್ಪಿಕೊಳ್ಳುವದರಲ್ಲಿ ಆಶ್ಚರ್ಯವೇನು?

ಈ ಮೇರೆಗೆ ನುಡಿದು ಮಾನಸಿಂಹನು ಕುಳಿತುಕೊಳ್ಳಲು, ವೀರ ಸಯ್ಯದಖಾನನು ಎದ್ದು ನಿಂತು ಚಾತುರ್ಯದ ಯುಕ್ತಿಯಿಂದ ಆತನನ್ನೂ, ಅಜೀಮಖಾನನ್ನೂ ಕುರಿತು—"ರಾಜೇ ಸಾಹೇಬ, ಖಾನಸಾಹೇಬ, ನಿಮ್ಮ ಪ್ರತಿಪಾದನವನ್ನು ಅಲ್ಲಗಳೆಯುವದಿಲ್ಲ. ಇರಬಹುದು, ಸುಲ್ತಾನ ಸೇಲೀಮರು ಸ್ವೇಚ್ಛಾಚಾರಿಗಳಿರಬಹುದು, ಉಚ್ಛೃಖಲರ—ಉದ್ಧಟರೂ ಇರಬಹುದು; ಆದರೆ ಬಾದಶಹರನನಾಗಿ ಮಾಡುವವರು ನಾವಲ್ಲ. ಅವರು ಅಕಬರ ಬಾದಶಹರ ಹಿರಿಯ ಮಕ್ಕಳಾದದ್ದರಿಂದ ಅವರೇ ನಮ್ಮೆಲ್ಲರ ಭಾವೀ ಬಾದಶಹರಾಗಿರುವರು. ನ್ಯಾಯ, ಧರ್ಮ, ಕರ್ತವ್ಯಗಳನ್ನನುಸರಿಸಿ, ಅಕಬರ ಬಾದಶಹರಿಗೆ ದ್ರೋಹಿಗಳಾಗದೆ ಅವರ ಹಿರಿಯ ಮಕ್ಕಳಿಗೇ ನಾವು ಅನುಕೂಲರಾಗಿ ಸಹಾಯ ಮಾಡತಕ್ಕದ್ದು. ನಾನು ಬಾದಶಹರ

ಸೇವಕನಿದ್ದು ಸೇನಾಪತಿಯಿರುವೆನು. ನನ್ನ ಮಾತು ನಿಮಗೆ ಒಪ್ಪಿಗೆಯಿಲ್ಲದ ಪಕ್ಷದಲ್ಲಿ ಉಪೇಕ್ಷೆ ಮಾಡದೆ ನಾನು ಕೂಡಲೆ ಬಾದಶಹರಿಗೆ ಅದನ್ನು ತಿಳಿಸಬೇಕಾಗುವದು. ಹಾಗೆ ನಾನು ತಿಳಿಸಿದ ಪಕ್ಷದಲ್ಲಿ ನೀವೆಲ್ಲರೂ ರಾಜದ್ರೋಹಿಗಳಾಗಿ ಭಯಂಕರ ಶಿಕ್ಷೆಗೆ ಗುರಿಯಾಗಬೇಕಾದೀತೆಂಬದನ್ನು ನಾನು ಮೊದಲೇ ಹೇಳಿರುವೆನು. ಈ ಮಾತನ್ನು ಯಾವತ್ತು ಸಭಾಸದರಿಗೂ ಹೇಳುವೆನಲ್ಲದೆ, ರಾಜಾ ಮಾನಸಿಂಹರವರಿಗೂ, ಅಜೀಮಖಾನರಿಗೂ ಸ್ಪಷ್ಟವಾಗಿ ಹೇಳುವೆನು. ನೀವಿಬ್ಬರೂ ನನ್ನ ವಿರುದ್ಧವಾಗಿ ಅನ್ಯಾಯ ಮಾಡುವ ಸಾಹಸಕ್ಕೆ ಹೋದರೆ, ನಾನು ಯಾವತ್ತು ಅಮೀರ ಉಮರಾವರ ಸಹಾಯದಿಂದ ಪ್ರಾಣವಿರುವತನಕ ನಿಮ್ಮ ಸಂಗಡ ಯುದ್ಧ ಮಾಡುವೆನು. ಒಟ್ಟಿಗೆ, ಬಾದಶಹನ ಮಗನು ಗಾದಿಯ ಒಡೆಯನಾಗಬೇಕು, ಮಗನಿರುವಾಗ ಮೊಮ್ಮಗನಿಗೆ ಸಿಂಹಾಸನವು ದೊರೆಯಲಾರದು'' ಎಂದು ಹೇಳಲು, ಸೈಯ್ಯದಖಾನನ ಈ ನಿಸ್ಪೃಹ ಮಾತು ಗಳಿಗಾಗಿ ಅಂಜಿ ಬಹುಜನ ಅಮೀರಉಮರಾವರು ಮಾನಸಿಂಹನು ಕೂಡಿಸಿದ ಆ ಗುಪ್ತ ಸಭೆಯಿಂದ ಹೊರಟು ಹೋದರು. ಅದರಿಂದ ಮಾನಸಿಂಹನ ಪಕ್ಷವು ದುರ್ಬಲವಾಗಿ ಆತನು ಸುಮ್ಮನಾಗಬೇಕಾಯಿತು. ಸೈಯದಖಾನನ ಅಪ್ಪಣೆಯಿಂದ ರಾಜಾರಾಮದಾಸ ಕಚ್ಛವಹಾ ಎಂಬವನು ಕೂಡಲೆ ತನ್ನ ಸೈನ್ಯದೊಡನೆ ರಾಜಭಾಂಡಾರವನ್ನು ರಕ್ಷಿಸುವದಕ್ಕಾಗಿ ಹೊರಟು ಹೋದನು.

ಈ ಯಾವತ್ತು ವರ್ತಮಾನವು ಹೇಗೆ ಹೇಗೋ ಜೋಧಬಾಯಿಗೆ ಗೊತ್ತಾಗಲು, ತನ್ನ ಮಗನ ಸುರಕ್ಷಿತತೆಯ ಸಲುವಾಗಿ ಆಕೆಯು ತೀರ ಶಂಕಿತಳಾದಳು. ತನ್ನ ಪತಿಯು ಮಗನನ್ನು ಕ್ಷಮಿಸದಿದ್ದರೆ ಮುಂದೆ ಗತಿಯೇನೆಂದು ಆಕೆಯು ಚಿಂತಿಸತೊಡಗಿದಳು. ಏನು ಮಾತಾಡಿದರೂ ಆಕೆಗೆ ಸಮಾಧಾನವಾಗಲೊಲ್ಲದು. ಬಾದಶಹನು ತೀರ ಮರಣೋನ್ಮುಖನಾದದ್ದರಿಂದ ತಾನೂ, ತನ್ನ ಮಗ ಖುಸರುವೂ ಕೇವಲ ನಿರಾಧಾರರಾದೆವೆಂದು ಆಕೆಯು ತಿಳಿದಳು. ಈಗಲೇ ಬಾದಶಹರಬಳಿಗೆ ಹೋಗಿ ತನ್ನ ಮಗನ ಪ್ರಾಣರಕ್ಷಣದ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕೆಂದು ಆಕೆಯು ಆಲೋಚಿಸಿದಳು. ಹೇಗೂ ಬಾದಶಹನ ದರ್ಶನಕ್ಕೆ ಆಕೆಯು ಹೋಗಲೇಬೇಕಾಗಿತ್ತು, ಆಕೆಯು ತನ್ನ ಸದ್ಗುಣಸಮುಚ್ಚಯದಿಂದ ಎಲ್ಲ ಸೊಸೆಯಂದಿರಲ್ಲಿ ಬಾದಶಹರಿಗೆ ಕೇವಲ ಪ್ರೀಯಳಾಗಿದ್ದಳೆಂಬದನ್ನು ವಾಚಕರು ಅರಿತಿರುವರು. ಈ ವಿಚಾರವು ಮನಸ್ಸಿನಲ್ಲಿ ಬಂದಕೂಡಲೆ ಆಕೆಗೆ ಒಂದುಬಗೆಯ ಸಮಾಧಾನವಾದಂತಾಗಿ, ತಡಮಾಡದೆ ಬಾದಶಹರಬಳಿಗೆ ಹೋಗುವದ ಕ್ಕಾಗಿ ಆಕೆಯು ಹೊರಟಳು. ಆಕೆಯು ಬಾದಶಹರು ಮಲಗಿರುವ ಕೋಣೆಯ ಬಾಗಿಲಿಗೆ ಹೋದಾಗ ಬಾದಶಹರು ಬೇನೆಯ ವ್ಯಥೆಯಿಂದ ತಳಮಳಿಸುತ್ತಿದ್ದರು. ಅವರ ಜ್ವರದ ಮಾನವು ಲೇಶವಾದರೂ ಕಡಿಮೆಯಾಗಿದ್ದಿಲ್ಲ. ಹಕೀಮನು ಅತ್ಯಂತ ಚಿಂತಾತುರನಾಗಿದ್ದನು. ರಾಜಕಾರಣದ ಹಲವು ತೊಡಕುಗಳು ಮನಸ್ಸಿನಲ್ಲಿ ಬಂದದ್ದರಿಂದಂತು ಬಾದಶಹರ ಜೀವಕ್ಕೆ ಏನೂ ಬೇಡಾಗಿತ್ತು, ಎರಡನೆಯವರ ಸಂಗಡ ಮಾತು ಬೇಡ–ಕಥೆ ಬೇಡ, ಒಬ್ಬರೇ ಏಕಾಂತದಲ್ಲಿ ಮಲಗಿಕೊಳ್ಳಲು ಅವರು ಇಚ್ಛಿಸಿದರು. ಆದ್ದರಿಂದ ಕಾವಲುಗಾರರಾದ ತಾರ್ತರಿ ದಾಸಿಯರ ಹೊರತು ಬೇರೆ ಯಾರೂ ಒಳಗೆ ಇರಲಾಗದೆಂದು ಎಲ್ಲರನ್ನು ಹೊರಗೆ ಕಳಿಸಿದ್ದರು. ಇಂಥ

ಅಸಮಾಧಾನದ ಸ್ಥಿತಿಯಲ್ಲಿ ದುರ್ದೈವಿಯಾದ ಜೋಧಬಾಯಿಯು ಬಾದಶಹರನ್ನು ಕಾಣಲಿಕ್ಕೆ ಬಂದಿದ್ದಳು. ಆಕೆಯು ಕಾಣಲಿಕ್ಕೆ ಬಂದ ವರ್ತಮಾನವನ್ನು ದಾಸಿಯು ಅಂಜುತ್ತಂಜುತ್ತ ಹೇಳಲು, ಬಾದಶಹರು ಆ ಶಹೀಬೇಗಮೆಯನ್ನು ಕರತರಲು ದಾಸಿಯನ್ನು ಆಜ್ಞಾಪಿಸಿದರು.

ಜೋಧಬಾಯಿಯ ಹೊರತು ಮತ್ತೊಬ್ಬರಾರಾದರೂ ಬಂದಿದ್ದರೆ ಬಾದಶಹರು ಸರ್ವಥಾ ಅವರನ್ನು ಕಾಣುತ್ತಿದ್ದಿಲ್ಲ, ಅವರು ನಿಜವಾಗಿಯೇ ಶಾಹೀಬೇಗಮೆಯ ಮೇಲೆ ಅಷ್ಟು ಲೋಭವನ್ನು ಮಾಡುತ್ತಿದ್ದರು. ರತ್ನಾಲಂಕಾರಗಳಿಂದ ಅಲಂಕೃತಳಾದ ಅಪೂರ್ವ ಲಾವಣ್ಯಮಯೀ ಜೋಧಬಾಯಿಯು ಒಳಗೆ ಬಂದು ದಾಸಿಗೆ ಹೊರಗೆ ಹೋಗಲು ಸನ್ನೆಮಾಡಿದಳು. ಪರಿಜನರಾರೂ ಇಲ್ಲದ್ದನ್ನು ನೋಡಿ ಶಾಹೀಬೇಗಮೆಯು ಯಥಾಯೋಗ್ಯವಾಗಿ ಬಾದಶಹರಿಗೆ ಕುರ್ನಿಸಾತಮಾಡಿ ಖಿನ್ನ ಸ್ವರದಿಂದ—''ದಯಾಮಯನಾದ ಖುದಾ, ಹಿಂದುಸ್ಥಾನದ ಬಾದಶಹನನ್ನು ಚಿರಂಜೀವಿಯಾಗ ಮಾಡು'' ಎಂದು ಪ್ರಾರ್ಥಿಸಿದಳು. ತನ್ನ ಸೊಸೆಯ ಖಿನ್ನವಾದ ಮುಖಮುದ್ರೆಯನ್ನು ನೋಡಿ ಬಾದಶಹನು ಸ್ನೇಹಪೂರ್ಣ ಸ್ವರದಿಂದ—''ಬಂದೆಯಾ ತಂಗೀ, ಒಳಿತಾಯಿತು ಕುಳಿತುಕೋ ನಿನ್ನೊಡನೆ ಒಂದು ಮಹತ್ವದ ಮಾತಿನ ಸಲುವಾಗಿ ಮಾತನಾಡಲು ನಾನು ಅತ್ಯಂತ ಉತ್ಸುಕನಾಗಿದ್ದೇನೆ. ನನ್ನ ಸಲುವಾಗಿ ನೀನು ಖುದಾನನ್ನು ಕುರಿತು ಪ್ರಾರ್ಥಿಸಿದ್ದು ಬಹಳ ಮಾಡಿ ಖುದಾನಿಗೆ ಸಮ್ಮತವಾಗಲಿಕ್ಕಿಲ್ಲ. ತಂಗೀ ಜೋಧಾ, ಈ ಜಗತ್ತಿನಲ್ಲಿ ಎಷ್ಟು ದಿನ ಬಾಳಿದರೂ ಒಂದು ದಿನ ಪ್ರಾಣಗಳು ಇದನ್ನು ಬಿಟ್ಟು ಹೋಗಲೇಬೇಕಾಗಿರುವದು ಖುದಾನ ವಿಶಾಲವಾದ ಈ ವಿಶ್ವರೂಪಮಂದಿರದಲ್ಲಿ ನಮ್ಮ ನಮ್ಮ ಕರ್ಮದಂತೆ ಖುದಾನ ತಂತ್ರಕ್ಕೊಳಗಾಗಿ ಕೆಲದಿನ ಸುಖದುಃಖಗಳನ್ನು ಭೋಗಿಸುತ್ತ ನಾವು ಇರುವೆವು. ಆತನ ಈ ವಿಶ್ವರೂಪ ಮಂದಿರದೊಳಗಿನ ಎಲ್ಲ ವ್ಯವಹಾರಗಳು ಖುದಾನ ಆ ತಂತ್ರಕ್ಕೊಳಗಾಗಿ ಆಗುವವಲ್ಲದೆ, ನಿಜವಾದ ಸ್ವಾತಂತ್ರ್ಯವು ಎಳ್ಳಷ್ಟಾದರೂ ಯಾರಿಗೂ ಇರುವದಿಲ್ಲ. ಈ ಮಾತನ್ನು ಮರೆತು ತಮತಮಗೆ ಪ್ರಾಪ್ತವಾಗಿದ್ದ ಸುಖದುಃಖಾದಿಗಳಿಗೆ ತಾವೇ ಕಾರಣರೆಂತಲೂ, ಖುದಾನದಾಗಿರುವ ಸೊತ್ತು ತಮ್ಮದೇ ಎಂತಲೂ ತಿಳಿದು ನಾವು ಸುಖ ಬಂದಾಗ ಹಿಗ್ಗುತ್ತಲೂ, ದುಃಖ ಬಂದಾಗ ಕುಗ್ಗುತ್ತಲೂ ಇರುವೆವು; ಆದರೆ ಇದು ನ್ಯಾಯವಲ್ಲ. ಕಡೆಗೆ ದೇವರ ಸಂಕೇತದಂತೆ ಆತನ ಮನೆಯನ್ನು ಬಿಟ್ಟು ಹೋಗುವಾಗ ಅದರ ವಿಷಯವಾಗಿ ಯಾವ ವಾಸನೆಯನ್ನೂ ಇಡದೆ ಶಾಂತಿಯನ್ನು ತಾಳುವದು ಜ್ಞಾನಿಗಳ ರೀತಿಯು. ಅಂಥವರು ಮರಮದ ಸಲುವಾಗಿಯಾಗಲಿ—ಹಿಂದುಮುಂದಿನ ವ್ಯವಸ್ಥೆಯ ಸಲುವಾಗಿಯಾಗಲಿ ಯಾವ ಚಿಂತೆಯನ್ನೂ ತಾಳುವದಿಲ್ಲ; ಯಾಕಂದರೆ ಈ ಸೃಷ್ಟಿಯ ಚಾಲಕತ್ವದ ಅಗಾಧ ಜ್ಞಾನವು ದೇವರಲ್ಲಿಮಾತ್ರ ಇರುವದೆಂದು ಅವರು ಸಂಪೂರ್ಣವಾಗಿ ಅರಿತಿರುವರು. ಪ್ರೀಯ ಜೋಧಾ, ನಿನ್ನ ಮಾವನು ನಾನು ಮುಪ್ಪಿನವನಾಗಿರುವೆನು; ಖುದಾನ ಕೃಪೆಯಿಂದ ಈ ವರೆಗೆ ನಾನು ಮಹತ್ವೈಭವವನ್ನೂ, ಕೀರ್ತಿಯನ್ನೂ ಪಡೆದು ಅಪೂರ್ವ ಸುಖವನ್ನು ಭೋಗಿಸಿದೆನು. ಅಂದಬಳಿಕ ಹಳಬನಾದ ನಾನು ಇನ್ನು ಹೊಸಬರ ಸಲುವಾಗಿ ನನ್ನ ಸ್ಥಳವನ್ನು ಬಿಟ್ಟು ಹೋಗುವದು ಯೋಗ್ಯವಲ್ಲವೆ? ಅದು ಯೋಗ್ಯವಿರಲಿ, ಅಯೋಗ್ಯವಿರಲಿ ಹೀಗೆ ಹಳಬರು ಹೊಸಬರ

ಸಲುವಾಗಿ ತಮ್ಮದೆಂದು ತಿಳಿದುಕೊಂಡದ್ದನ್ನು ಬಿಟ್ಟು ಹೋಗಲೇಬೇಕಾಗುವದೆಂಬದು ಖುದಾನ ಸಂಕೇತವಾಗಿರುವದು. ಆದ್ದರಿಂದ ಇನ್ನು ನಾನು ಬದುಕಲು ಇಚ್ಛಿಸುವದಿಲ್ಲ. ಖುದಾನು ತನ್ನ ಮನಸ್ಸಿಗೆ ಬಂದಂತೆ ಮಾಡಲಿ. ಈವರೆಗೆ ರಾಜ್ಯಮಂದಿರದಿಂದ ಮತ್ತನಾಗಿ ನಾನು ಖುದಾನನ್ನು ಲೆಕ್ಕಿಸದಿರುವ ಅಪರಾಧಕ್ಕಾಗಿ ಆತನಲ್ಲಿ ಕ್ಷಮೆಯನ್ನು ಯಾಚಿಸುವೆನು; ಆದರೆ ಪ್ರೀಯ ಜೋಧಾ, ನೀನೂ ಅದರಂತೆ ಖುದಾನನ್ನು ಮನಸ್ಸಿನಿಂದ ಪ್ರಾರ್ಥಿಸು. ನೀನು ಇನ್ನು ನಿಃಸಂಶಯವಾಗಿ ಹಿಂದುಸ್ಥಾನದ ರಾಜರಾಜೇಶ್ವರಿಯಾಗುವೆ. ನಿನ್ನ ಪತಿಯಾದ ಸೇಲೀಮನು ಹಿಂದುಸ್ಥಾನದ ಸಾರ್ವಭೌಮನಾಗುವನು. ಬಹಳ ಹೇಳುವದೇನು, ಇದೇ ವಾರದಲ್ಲಿ ಈ ಪರಿವರ್ತನವು ಆಗುವ ಸಂಭವವಿರುವದು. ಪ್ರೀಯ ಜೋಧಾ, ಗೌರವದ ಅಂಬರ ರಾಜಕುಮಾರಿಯಾದ ನಿನ್ನನ್ನು ರಾಜರಾಜೇಶ್ವರಿಯಾಗಮಾಡಬೇಕೆಂತಲೇ ನಾನು ಸುಲ್ತಾನ ಸೇಲೀಮನೊಡನೆ ನಿನ್ನ ಲಗ್ನಮಾಡಿರುವೆನು. ನನ್ನ ಆ ಮನೋದಯವು ಈಗ ಪೂರ್ಣ ವಾಗುವದರಿಂದ ನನಗೆ ಬಹಳ ಸಂತೋಷವಾಗಿರುತ್ತದೆ.

ಬಾದಶಹರ ಪ್ರೇಮದ ಈ ಅನುಕೂಲ ಭಾಷಣದಿಂದ ಜೋಧಬಾಯಿಯು ಸಂತುಷ್ಟಳಾಗಿ ಸುಮ್ಮನಿದ್ದರೆ, ಬಹಳ ನೆಟ್ಟಗಾಗುತ್ತಿತ್ತು; ಆದರೆ ಆಕೆಯ ದುರ್ದೈವವು ಹಾಗೆ ಸುಮ್ಮನಿರಗೊಡಲಿಲ್ಲ. ತನ್ನ ಪತಿಯು ಬಾದಶಹನಾದರೂ ತನ್ನ ಮಗನ ಜೀವವು ಸುರಕ್ಷಿತ ವಾಗದೆಂಬ ದುಃಖವು ಆಕೆಯ ಹೊಟ್ಟೆಯಲ್ಲಿ ತುಂಬಿತ್ತು. ಆ ದುಃಖವು ಬಾದಶಹನ ಪ್ರೇಮದ ಮಾತುಗಳಿಂದ ಉಕ್ಕಿಬಂದು ಹೊಟ್ಟೆಯಲ್ಲಿ ಹಿಡಿಸಲಾರದೆ ಅಶ್ರುರೂಪದಿಂದ ಹೊರಬಿದ್ದು, ಆ ಅಶ್ರುವಿನದೊಂದು ಬಿಸಿ ಹನಿಯು ಬಾದಶಹನ ಕೈಮೇಲೆ ಬಿದ್ದಿತು. ಆಗ ಬಾದಶಹನು ಆಕೆಯ ಕಡೆಗೆ ನೋಡಿ—ತಂಗೀ ನೀನು ಅಳುವೆಯೇಕೆ? ನೀನು ಸಮಗ್ರ ಹಿಂದುಸ್ಥಾನದ ರಾಜರಾಜೇಶ್ವರಿಯಾಗಿರುವೆ. ಅಂದಬಳಿಕ ನಿನ್ನ ಕಣ್ಣುಗಳಲ್ಲಿ ಅಶ್ರುಗಳುದುರಬಹುದೆ? ಜೋಧಾ, ಅಳಬೇಡ, ನನ್ನನ್ನು ಸಮಾಧಾನದಿಂದ ಸಾಯಗೊಡು! ನಿನ್ನ ಈ ಅಶ್ರುಪೂರ್ಣ ನೇತ್ರಗಳನ್ನು ನೋಡುವ ನಾನು, ಸ್ವರ್ಗದಲ್ಲಿ ಹೋದರೂ ಸುಖಿಯಾಗಲಾರೆನು. ಮೊಗಲ ವಂಶದ ಐಶ್ವರ್ಯಕ್ಕೆ ನೀನು ದೀಪಪ್ರಾಯಳಾಗಿರುವೆ. ನಾನು ಆಗಲೆ ಹೇಳಿದಂತೆ ಈ ಜಗತ್ತಿನ ಸಂಸಾರವು ನಶ್ವರವಾಗಿದ್ದು, ಇದರಲ್ಲಿ ಸಂಯೋಗವಿಯೋಗಗಳು ಆಗಾಗ್ಗೆ ಆಗುತ್ತಲೇ ಇರುವವು. ಆದ್ದರಿಂದ ನೀನು ನನ್ನ ಸಲುವಾಗಿ ದುಃಖವನ್ನಾಗಲಿ—ಚಿಂತೆಯನ್ನಾಗಲಿ ಮಾಡಬೇಡ. ನಿನ್ನ ಮನಸ್ಸನ್ನು ಸಮರ್ಥವಾಗಮಾಡು. ರಜಪೂತರ ಚಿರಸಹಚಾರಣಿಯಾದ ದೃಢತೆಯನ್ನು ತಾಳಲು ನೀನು ಪ್ರಯತ್ನ ಮಾಡು.'' ಎಂದು ಹೇಳಿದನು. ಆಗ ಜೋಧ ಬಾಯಿಯು ಒಮ್ಮೆ ನಿಟ್ಟುಸಿರುಬಿಟ್ಟು ಕರುಣಾ ವಾಣಿಯಿಂದ—

ಜೋಧಬಾಯಿ—ಭಾರತೇಶ್ವರ! ಶಹಾನಶಹಾ!! ತಾವು ಹಿಂದುಸ್ಥಾನದ ದಯಾಳು ಬಾದಶಹರಿರುವದರಿಂದ ನನ್ನದೊಂದು ಸಣ್ಣ ಪ್ರಾರ್ಥನೆಯನ್ನು ನಡೆಸಿಕೊಡುವಿರಾ?

ಅಕಬರ (ಆಶ್ಚರ್ಯದಿಂದ ನೋಡುತ್ತ)—ತಂಗೀ, ನನ್ನ ಬಳಿಯಲ್ಲಿ ನಿನ್ನ ಪ್ರಾರ್ಥನೆ ಯೇನಿರುವದು? ಕೋಟ್ಯವಧಿ ರೂಪಾಯಿಗಳ ವಸ್ತ್ರ—ಒಡವೆಗಳನ್ನು ನಿಮ್ಮಿಬ್ಬರಿಗೆ ನಾನು

ಕೊಟ್ಟಿರುವೆನು. ಈಗ ಈ ದಿಲ್ಲಿಯ ಸಿಂಹಾಸನವನ್ನು ನಾನು ಸೇಲೀಮನಿಗೆ ಕೊಡಬೇಕೆಂದಿರುವೆನು; ಅಂದಬಳಿಕ ಜೋಧಾ, ನಾನು ಇನ್ನೇನು ಕೊಡಲಿ! ಆದರೆ ಹೌದು, ಇನ್ನೊಂದು ಅಮೂಲ್ಯ ವಸ್ತುವನ್ನು ಇನ್ನೂ ನಾನು ನಿನಗೆ ಕೊಟ್ಟಿರುವದಿಲ್ಲ.

ಈ ಮೇರೆಗೆ ನುಡಿದು ಅಕಬರಬಾದಶಹನು ತನ್ನ ಹಾಸಿಗೆಯಿಂದ ಅರ್ಧ ಎದ್ದು, ತನ್ನ ಗಾದಿಯ ಬುಡದಲ್ಲಿರುವ ಸಣ್ಣದೊಂದು ಕೀಲಿಯ ಕೈಯನ್ನು ಹೊರಗೆ ತೆಗೆದು ಜೋಧಬಾಯಿಯ ಕೈಯಲ್ಲಿ ಕೊಟ್ಟು "ಹಿಂದಿನ ಖಾಸಮಹಾಲಿನಲ್ಲಿ ಆನೆಯ ಜಂತದ್ದೊಂದು ಪೆಟ್ಟಿಗೆಯಿರುವದು, ಅದನ್ನು ಈ ಕೀಲಿಯಕೈಯಿಂದ ತೆಗೆದಕೂಡಲೆ ಅದರೊಳಗೊಂದು ಸಣ್ಣ ಪೆಟ್ಟಿಗೆ ಇದ್ದದ್ದು ನಿನಗೆ ಕಾಣಬಹುದು. ಆ ಸಣ್ಣ ಪೆಟ್ಟಿಗೆಯನ್ನು ನನ್ನ ಕಡೆಗೆ ತಕ್ಕೊಂಡು ಬಾ ಹೋಗು, ಎಂದು ಹೇಳಲು, ಕೂಡಲೆ ಶಾಹೀಬೇಗಮೆಯು ಎದ್ದು ಸಮೀಪದಲ್ಲಿರುವ ಕೋಣೆಯೊಳಗೆ ಹೋಗಿ ಆ ಪೆಟ್ಟಿಗೆಯನ್ನು ತಕ್ಕೊಂಡುಬಂದು ಬಾದಶಹನ ಕೈಯಲ್ಲಿ ಕೊಟ್ಟಳು. ಬಾದಶಹನು ಅದರೊಳಗಿಂದ ಒಂದು ರತ್ನಹಾರವನ್ನೂ, ಒಂದು ಮುತ್ತಿನ ಹಾರವನ್ನೂ ತೆಗೆದು ಅವನ್ನು ಶಾಹೀಬೇಗಮೆಯ ಕೈಯಲ್ಲಿ ಕೊಟ್ಟು—"ನೀನು ಭಾರತ ವರ್ಷದ ಭಾವೀ ಸಾಮ್ರಾಜ್ಞಿಯಿರುತ್ತೀ. ನೀನು ಪ್ರಥಮದಲ್ಲಿ ಸಿಂಹಾಸನವೇರುವಾಗ ಈ ನನ್ನ ಆಶೀರ್ವಾದ ಮಯವಾದ ಮಂಗಲ ಹಾರವನ್ನು ಕೊರಳಲ್ಲಿ ಹಾಕಿಕೋ. ಗೋವಳಕೊಂಡವನ್ನು ಗೆದ್ದಬಳಿಕ ಅಲ್ಲಿಯ ಬೆಲೆಯುಳ್ಳ ರತ್ನಗಳ ಈ ಹಾರವನ್ನು ನಿನ್ನ ಸಲುವಾಗಿ ಮಾಡಿಸಿ ಇಟ್ಟಿದ್ದೆನು. ಇದರ ಬೆಲೆಯು ಒಂದು ಕೋಟಿ ರೂಪಾಯಿ ಇರುವದು. ಅದರಂತೆ, ಈ ಮುತ್ತಿನ ಹಾರವಾದರೂ ಕಡಿಮೆ ಬೆಲೆಯದಿರುವದಿಲ್ಲ. ಇದನ್ನು ನಿನ್ನ ಸೊಸೆಯಾದ ಪ್ಯಾರೀಬಾನುವಿಗೆ ಕೊಡು; ಯಾಕಂದರೆ ಆಕೆಗೆ ಮುತ್ತಿನ ಹಾರಗಳು ಬಹಳ ಸೇರುವವು" ಎಂದು ಹೇಳಿದನು. ಶಾಹೀಬೇಗಮೆಗೆ ಆ ಹಾರಗಳ ಇಚ್ಛೆಯಿಲ್ಲದಿದ್ದರೂ ಬಾದಶಹನ ಅಪ್ಪಣೆಯನ್ನು ಮೀರಲಾರದೆ ಆದರ ಪೂರ್ವಕವಾಗಿ ಅವನ್ನು ಇಸಕೊಂಡಳು. ಆ ಮೇಲೆ ದೃಢ ಸ್ವರದಿಂದ ಆಕೆಯು ಮತ್ತೆ ಬಾದಶಹನನ್ನು ಕುರಿತು—

ಜೋಧಬಾಯಿ—ಪ್ರೀಯ ಮಾವನವರೆ, ನಾನು ಈ ರತ್ನಹಾರದ ಆಶೆಯಿಂದ ತಮ್ಮ ಚರಣಸನ್ನಿಧಿಗೆ ಬಂದಿದ್ದಿಲ್ಲ. ಸ್ತ್ರೀ ಜನ್ಮದ ಸಾರ್ಥಕತೆಯ ಲಕ್ಷಣವಾಗಿರುವದೊಂದು ಅಮೂಲ್ಯ ರತ್ನವು ಭಿಕ್ಷಾರೂಪವಾಗಿ ನನಗೆ ಬೇಕಾಗಿರುವದು. ಅದು ತಮ್ಮ ಕಡೆಯಿಂದ ದೊರೆಯುವದೆಂಬ ನಂಬಿಗೆ ಇದ್ದದ್ದರಿಂದ ನಾನು ಧಾವಿಸಿ ಬಂದಿರುವೆನು, ಅನ್ನಲು, ಅಕಬರಬಾದಶಹನು ಒಳ್ಳೇ ಗೂಢ ವಿಚಾರಕ್ಕೊಳಗಾಗಿ ಜೋಧಬಾಯಿಯನ್ನು ಕುರಿತು ಮತ್ತೆ—ತಂಗೀ, ಇಷ್ಟು ದೊಡ್ಡ ಹಿಂದುಸ್ಥಾನವನ್ನು ನಿನಗೆ ಕೊಟ್ಟಿದ್ದು, ನೀನು ಮತ್ತೆ ಏನನ್ನು ಅಪೇಕ್ಷಿಸುವೆಯೋ ನನಗೆ ತಿಳಿಯದು! ಆದರೆ ಹೇಳು, ಏನು ಬೇಕೆಂಬುದನ್ನು ಸ್ಪಷ್ಟವಾಗಿ ಹೇಳು. ಮಾನವ ಪ್ರಾಣಿಗೆ ಕೊಡಲು ಶಕ್ಯವಾಗಿರುವ ಎಂತಹ ಉಚ್ಚ ಫಲವನ್ನಾದರೂ ಕೊಡಲು, ಹಿಂದುಸ್ಥಾನದ ಬಾದಶಹನು ನಾನು ಇನ್ನೂ ಸಮರ್ಥನಿರುವೆನು, ಎಂದು ಹೇಳಿದನು. ಬಾದಶಹನ ಈ ಪ್ರೇಮಲ ಮಾತುಗಳನ್ನು ಕೇಳಿಯಾದರೂ ಜೋಧಬಾಯಿಯು ಸಂತುಷ್ಟಳಾಗಿ ಬಾದಶಹನ

ಮನಸ್ಸನ್ನು ನೋಯಿಸುವ ಗೊಡವಿಗೆ ಹೋಗಬಾರದಾಗಿತ್ತು, ಯಾಕಂದರೆ, ತಾನು ಹಿಂದುಸ್ಥಾನದ ರಾಜರಾಜೇಶ್ವರಿಯಾದ ಬಳಿಕ ತನ್ನ ಪತಿಯಾದ ಸುಲ್ತಾನ ಸೇಲೀಮನ ಮನಸ್ಸನ್ನು ಪ್ರೇಮದ ಬಲದಿಂದ ತನ್ನ ಕಡೆಗೆ ಎಳೆದುಕೊಂಡು, ತನ್ನ ಮಗನ ಅಪರಾಧವನ್ನು ಕ್ಷಮಿಸುವಂತೆ ಮಾಡಿಕೊಳ್ಳುವದು ಆಕೆಗೆ ಅಶಕ್ಯವಾಗಿದ್ದಿಲ್ಲ. ಆಕೆಯು ಹಿಂದಕ್ಕೆ ಒಂದು ಪ್ರಸಂಗದಲ್ಲಿ ಯಮುನೆಯಲ್ಲಿ ಹಾರಿಕೊಳ್ಳುವದನ್ನು ನಿಷೇಧಿಸಿ, ತಾನು ಬದುಕಿ ಇದ್ದು ರಾಜರಾಜೇಶ್ವರಿಯಾಗಿ ಹೀಗೆ ಮಗನನ್ನು ಉಳಿಸಿಕೊಳ್ಳಬಹುದೆಂದು ಯೋಚಿಸಿದ್ದು ವಾಚಕರ ಲಕ್ಷದಲ್ಲಿರಬಹುದು. ಆದರೆ ''ವಿನಾಶಕಾಲೇ ವಿಪರೀತಬುದ್ಧಿಃ'' ಎಂಬಂತೆ, ಆ ಬೇಗಮೆಯ ಮನಸ್ಸಿನಲ್ಲಿ ತನ್ನ ಪತಿಯು ಏನು ಮಾತಾಡಿದರೂ ತನ್ನ ಮಗನನ್ನು ಕ್ಷಮಿಸಲಾರನೆಂಬ ಹುಚ್ಚು ಹೊಕ್ಕುಬಿಟ್ಟಿತು. ''ಭವಿತವ್ಯಂ ಭವತೇವ ನಾರಿಕೇಲ ಫಲಾಂಬುವತ್'' ಎಂಬಂತೆ, ಅವರವರ ಪ್ರಾಚೀನ ಭವತೇವ ನಾರಿಕೇಲ ಫಲಾಂಬುವತ್'' ಎಂಬಂತೆ, ಅವರವರ ಪ್ರಾಚೀನ ಕರ್ಮಕ್ಕನುಸರಿಸಿ ಅಕಸ್ಮಾತ್ ಆಗುವದು ಆಗಿಯೇ ಹೋಗುತ್ತಿರುತ್ತದೆ. ಅದರಂತೆ ಜೋಧಬಾಯಿಯ ಪ್ರಾರಬ್ಧದಲ್ಲಿ ರಾಜರಾಜೇಶ್ವರಿಯಾಗುವ ಯೋಗವು ಇಲ್ಲದ್ದರಿಂದ, ಆಕೆಗೆ ತನ್ನ ಪತಿಯ ವಿಷಯವಾಗಿ ಈ ಬಗೆಯ ಕೆಟ್ಟ ಕಲ್ಪನೆಯು ಆಗಿಹೋಯಿತು. ಹೀಗೆ ಕಲ್ಪನೆಯಾಗಲಿಕ್ಕೆ ಬೇರೊಂದು ಕಾರಣವೂ ಇತ್ತೆಂಬದನ್ನು ಮಾತ್ರ ನಾವು ಇಲ್ಲಿ ಹೇಳದೆ ಇರಲಾರೆವು. ಇತ್ತಿತ್ತ ಸೇಲೀಮನು ನೂರಜಹಾನಳಿಗೆ ಮನಸೋತು ಆಕೆಯ ಪ್ರಾಪ್ತಿಗಾಗಿ ವಿಶ್ವಪ್ರಯತ್ನ ಮಾಡತೊಡಗಿದ್ದನು; ಆದರೆ ಜೋಧಬಾಯಿಯಂಥ ಅಭಿಮಾನದ ಪತಿವ್ರತಾ ಸ್ತ್ರೀಯರಿಗೆ ಈ ಮಾತು ವಿಷಾದಕಾರಕವಾಗಿದ್ದರೆ ಆಶ್ಚರ್ಯವಲ್ಲ. ತನ್ನ ಪತಿಯು, ನೂತನ ರಾಣಿಯಾಗಬೇಕೆಂದಿರುವ ನೂರಜಹಾನಳ ಅಧೀನನಾದರೆ, ನನ್ನ ಮಾತು ಯಾಕೆ ಕೇಳುವನೆಂಬ ಮಾತ್ಸರ್ಯವೂ, ಅಪನಂಬಿಗೆಯೂ ಆಕೆಯಲ್ಲಿ ಉತ್ಪನ್ನವಾಗತೊಡಗಿದ್ದವು. ಈ ಎಲ್ಲ ಕಾರಣಗಳಿಂದ ಆಕೆಯು ಒಂದು ಬಗೆಯ ವೈರಾಗ್ಯವನ್ನು ತಾಳಿ, ತನ್ನ ಮಗನ ಜೀವವಷ್ಟು ಉಳಿದರೆ ಸಾಕೆಂಬ ಔದಾಸೀನ್ಯದಿಂದ ಬಾದಶಹನನ್ನು ಕುರಿತು—''ಯಾವತ್ತು ಹಿಂದುಸ್ಥಾನದ ಅಧಿಕಾರದ ಅವಶ್ಯಕತೆಯು ನನಗೆ ಇಲ್ಲವೇ ಇಲ್ಲ ಜಹಾಪನಾ! ದಕ್ಷಿಣದಲ್ಲಾಗಲಿ, ಬಂಗಾಲದಲ್ಲಾಗಲಿ ಎಲ್ಲಿಯೇ ಆಗಲಿ ನನಗೊಂದು ಸಣ್ಣ ಜಹಗೀರು ಹಾಕಿಕೊಡುವ ವ್ಯವಸ್ಥೆ ಮಾಡಿರಿ; ಅಂದರೆ ನಾನು ಖುಸರುವನ್ನು ಕರಕೊಂಡು ಅಲ್ಲಿ ಹೋಗಿ ಇದ್ದುಬಿಡುವೆನು.'' ಎಂದು ಹೇಳಿಬಿಟ್ಟಳು.

ಜೋಧಬಾಯಿಯ ಈ ಮಾತುಗಳನ್ನು ಕೇಳಿ ಬಾದಶಹನ ನಿಸ್ತೇಜ ಮುಖದೊಳಗಿನ ಹುಬ್ಬುಗಳು ವಕ್ರವಾದವು. ಜೋಧಬಾಯಿಯು ಹೀಗೆ ಕೇಳಿಕೊಳ್ಳುವದರ ಕಾರಣವನ್ನು ಶಾಂತ ರೀತಿಯಿಂದ ವಿಚಾರಿಸುವದು ಮರಣೋನ್ಮುಖ ಬಾದಶಹನಿಗೆ ಶಕ್ಯವೂ ಇದ್ದಿಲ್ಲ. ತನ್ನ ಮಗ ಸೇಲೀಮನಿಗೆ ಪಟ್ಟವಾಗುವದು ಜೋಧಬಾಯಿಯ ಮಾತ್ಸರ್ಯಕ್ಕೆ ಕಾರಣವಾಗಿರುವದೆಂಬ ಭಾವನೆಯು ಬಾದಶಹನದಾಗಿ ಬಿಟ್ಟಿತು. ಅಷ್ಟಕ್ಕೇ ಬಾದಶಹನ ರೋಗಗ್ರಸ್ತಹೃದಯವು ಕ್ಷುಬ್ಧವಾಗಿ ಆತನು ಜೋಧಬಾಯಿಯನ್ನು ಕುರಿತು ತೀವ್ರಸ್ವರದಿಂದ—''ಏನಂದಿ ಜೋಧಾ, ನಿನಗೊಂದು ಸಣ್ಣ ಜಹಗೀರು ಬೇಕೆ? ಶಾಹೀಬೇಗಮು! ಇಷ್ಟು ಹೊತ್ತಿನ ಮೇಲೆ ನಿನ್ನ ಮನಸ್ಸಿ

ನೊಳಗಿನ ಮಾತು ನನಗೆ ಗೊತ್ತಾಯಿತು? ಮಾನಸಿಂಹನ ಕಾಪಟ್ಯದ ನಡತೆಯ ಬಲೆಯಲ್ಲಿ ನೀನೂ ಸಿಕ್ಕಿರುವಂತೆ ತೋರುತ್ತದೆ. ಮಾನಸಿಂಹನ ಬಲವು ತನಗಿರುವದೆಂಬ ಹೆಮ್ಮೆಯಿಂದಲೇ ನಿನ್ನ ಮಗನಾದ ಖುಸ್ರುವು ತನಗೆ ಜನ್ಮಕೊಟ್ಟ ತಂದೆಯ ಅಪಮಾನವನ್ನು ಮೊನ್ನೆ ನನ್ನ ಕಣ್ಣೆದುರಿಗೆ ಮಾಡಿದನು. ಆನೆಯ ಕಾಳಗವೆಂದರೇನು, ಎಲ್ಲರ ಸಮಕ್ಷ ತನ್ನ ತಂದೆಗೆ ಬಾಯಿಗೆ ಬಂದ ಹಾಗೆ ಅನ್ನುವದೆಂದರೇನು? ಆಡಬಾರದು; ಆದರೆ ನಿನ್ನ ಮುಂದೆ ಇಂದು ಸ್ಪಷ್ಟವಾಗಿ ಆಡಿಬಿಡುತ್ತೇನೆ. ನನ್ನ ರೋಗವು ಇಷ್ಟು ವಿಕೋಪಕ್ಕೆ ಹೋಗಲಿಕ್ಕೆ ನಿಮ್ಮ ಈ ಬಗೆಯ ಗೃಹಕಲಹಗಳೇ ಮುಖ್ಯ ಕಾರಣಗಳಾಗಿರುತ್ತವೆ. ಶಾಹೀ, ಕೇವಲ ನಿನ್ನ ಮೋರೆಯನ್ನು ನೋಡಿಯೇ ತಾನು ಖುಸ್ರುವಿನ ಅಪರಾಧವನ್ನು ಕ್ಷಮಿಸಿದೆನು. ಈಗಾದರೂ ನಾನು ಹಿಂದುಸ್ಥಾನ ಬಾದಶಹನಾಗಿರುವದಿಂದ ಬೇಕಾದವರನ್ನು ಶಿಕ್ಷಿಸುವ, ಅಥವಾ ಕ್ಷಮಿಸುವ ಅಧಿಕಾವು ನನಗಿರುತ್ತದೆ. ನೀನು ಸೆರಗಿಗೆ ಗಂಟುಹೊಡೆದುಕೊಳ್ಳು; ಮೊಗಲ ಸಿಂಹಾನವು ನನ್ನ ಪಶ್ಚಾತ್ ನನ್ನ ಹಿರಿಯ ಮಗ ಸೇಲೀಮನಿಗೆ ದೊರೆಯುವದು. ಖುಸ್ರುವಿಗಂತು ಅದು ಸಿಗುವದೇ ಇಲ್ಲ; ಮತ್ತು ಮಾನಸಿಂಹನಂಥ ರಾಜದ್ರೋಹಿಯ ಸ್ಪರ್ಶವೂ ಆ ಸಿಂಹಾನಕ್ಕೆ ಆಗಲಾರದು.'' ಎಂದು ನುಡಿದು ಬಾದಶಹನು ಅತ್ಯಂತ ತ್ರಸ್ತನಾಗಿ ಉಸುರ್ಗಳೆಯುತ್ತಿರಲು, ಅಷ್ಟರಲ್ಲಿ ಖುಸ್ರುವು ತಾಯಿ ಪತ್ರದಂತೆ ಫತ್ತೆಪುರ ಸಿಕರಿಯಿಂದ ಅಲ್ಲಿಗೆ ಬಂದು ಬಿಟ್ಟನು. ಅಭಿಮಾನಿಗಳಾದ ರಜಪೂತರ ರಕ್ತವು ಮಿಶ್ರವಾಗಿದ್ದ ಆ ತರುಣ ಖುಸ್ರುವು ಮರೆಗೆ ನಿಂತು ತನ್ನ ತಾಯಿಯ, ಹಾಗು ಅಜ್ಜನ ಸಂವಾದವನ್ನು ಈ ಮೊದಲೇ ಕೇಳಿದ್ದನು; ಆದ್ದರಿಂದ ಪ್ರತಿಕೂಲಕಾಲಕ್ಕನುಸರಿಸಿ ಆತನು ಕ್ಷುಬ್ಧನಾಗಿ ಬಾದಶಹನನ್ನು ಕುರಿತು—''ಭಾರತೇಶ್ವರ, ತಮ್ಮ ಮಾತೇ ನಿಜವಾಗಿರುವದು; ಆದರೆ ಸಾಮ್ರಾಟ, ಈ ಅಧಮನಾದ ಖುಸ್ರುವು ಹಿಂದುಸ್ಥಾನದ ಸಿಂಹಾಸನವನ್ನು ಇಚ್ಛಿಸುವದಿಲ್ಲ, ನನ್ನ ಅಧಿಕಾರದೊಳಗಿಲ್ಲದ ಮಾತಿನ ಸಲುವಾಗಿ ನಾನು ಎಂದು ಮುಂದುವರಿಯಲಾರೆನು; ಆದರೆ ನನ್ನನ್ನು ಹಿಂದುಸ್ಥಾನದ ಬಾದಶಹನಾಗ ಮಾಡಬೇಕೆಂಧು ರಾಜದ್ರೋಹಿಯಾದ ಮಾನಸಿಂಹನು ಯತ್ನಿಸುತ್ತಿರಬಹುದು; ಅದರಂತೆ ಜಹಾಪನಾಹ, ತಮ್ಮಂತೆ ಬೇರೆಯವರೂ ನನ್ನನ್ನು ಪಿತೃದ್ರೋಹಿಯೆಂದು ತಿಳಿಯುತ್ತಿರಬಹುದು; ಆದರೆ ತನ್ನ ತಾಯಿಯ ಸದುಪದೇಶವಾದಂದಿನಿಂದ ನಾನು ತಂದೆಯ ದ್ರೋಹವನ್ನು ಎಂದು ಚಿಂತಿಸಿರುವದಿಲ್ಲ, ನನ್ನ ಹೃದಯವು ಪಿತೃಭಕ್ತಿಯಿಂದ ಪೂರ್ಣವಾಗಿರುವದೆಂಬದನ್ನು ಖುದಾನು ಅರಿತಿರುವನು; ಆದರೆ ಜಹಾಪನ್ನಾಹ! ನನ್ನ ಮೇಲಿನ ಪ್ರೇಮದಿಂದ ಕಣ್ಣೀರು ಸುರಿಸುತ್ತಿರುವ ನನ್ನ ಈ ತಾಯಿಯ ಕಣ್ಣೀರು ಒರಿಸಿ, ಆಕೆಯನ್ನು ಶಾಂತಳಾಗಮಾಡಿರೆಂದಿಷ್ಟೇ ನಾನು ಬೇಡಿಕೊಳ್ಳುವೆನು. ಆಕೆಯ ಖಿನ್ನವಾದ ಮುಖಮುದ್ರೆಯು ಪ್ರಫುಲ್ಲಿತವಾಗಬೇಕೆಂಬದನ್ನಲ್ಲದೆ ಬೇರೆ ಯಾವದನ್ನು ನಾನು ಇಚ್ಛಿಸುವದಿಲ್ಲ.

ಈ ಮೇರೆಗೆ ಬಾದಶಹನ ಹಾಸಿಗೆಯ ಬಳಿಯಲ್ಲಿ ಮೊಣಕಾಲೂರಿ ಕುಳಿತುಕೊಂಡು ಮಾತಾಡುವ ಖುಸ್ರುವನ್ನು ಬಾದಶಹನು ನೋಡಿದನು; ಆದರೆ ಆ ಅಚ್ಛೆಯ ಸುಂದರನಾದ ಮೊಮ್ಮಗನನ್ನು ನೋಡಿ ಎಂದಿನಂತೆ ಬಾದಶಹನು ಅಂದು ಹರ್ಷಿತನಾಗಲಿಲ್ಲ; ಆತನ

ಕಳವಳಿಕೆಯ ಮಾತುಗಳನ್ನು ಕೇಳಿ ಆತನು ಕನಿಕರಪಡಲೂ ಇಲ್ಲ. ಖುಸ್ರುವಿನ ದುರ್ದೈವದಿಂದಲೋ, ಅಥವಾ ರಾಜಕಾರಣದ ಬೇರೆ ಯಾವದೊಂದು ಗೂಢ ತಂತ್ರದಿಂದಲೋ ಬಾದಶಹನು ಖುಸ್ರುವಿನ ಮೇಲೆ ಕ್ಷೋಭಿಸಿ ಸಿಟ್ಟಿನಿಂದ ಆತನನ್ನು ಕುರಿತು ಕ್ರುದ್ಧ ಸ್ವರದಿಂದ—

ಬಾದಶಹ—ಖುಸ್ರೂ, ಯಾರ ಅಪ್ಪಣೆಯಿಂದ ಫತ್ತೇಪುರ ಸಿಕರಿಯನ್ನು ಬಿಟ್ಟು ನೀನು ಇಲ್ಲಿಗೆ ಬಂದೆ? ಮಾತಾಡು.

ಖುಸ್ರು—(ಸ್ವಾಭಿಮಾನಪೂರ್ಣ ಸ್ವರದಿಂದ) ಈ ನನ್ನ ಜನ್ಮದಾತೃವಾದ ತಾಯಿಯ ಅಪ್ಪಣೆಯಿಂದ ನಾನು ಇಲ್ಲಿಗೆ ಬಂದೆನು ಹುಜೂರ! ಯಾವಾಕೆಯ ಸ್ತನಪಾದನದಿಂದ ಈ ದೇಹವು ಬೆಳೆದಿರುವದೋ, ಯಾವಾಕೆಯ ಹೊಟ್ಟೆಯಲ್ಲಿ ಹುಟ್ಟಿದ್ದರಿಂದ ಇಂದು ನಾನು ಮೊಗಲ ಚಕ್ರವರ್ತಿಯ ಅಕಬರರವರ ಮೊಮ್ಮಗನಾಗಿರುವೆನೋ, ಯಾವಾಕೆಯ ಉಪದೇಶದಿಂದ ನಾನು ಅಪಮಾರ್ಗದಿಂದ ಹೋಗಲಿಕ್ಕೆ ಅಂಜುತ್ತಿರುವೆಯೋ ಇಂಥ ನನ್ನ ಗುರುಸ್ವರೂಪಳಾದ ಈ ನನ್ನ ತಾಯಿಯ ಅಪ್ಪಣೆಯನ್ನು ನಾನು ಹೇಗೆ ಮೀರಲಿ?

ಬಾದಶಹ—(ಮತ್ತಿಷ್ಟು ಸಿಟ್ಟಾಗಿ) ರಾಜಕಾರಣದಲ್ಲಿ ವ್ಯಕ್ತಿಯ ಸಂಬಂಧದ ಯಾವ ಸಂಗತಿಯನ್ನೂ ಲಕ್ಷಿಸಲಾಗುವದಿಲ್ಲ. ರಾಜಕಾರಣದ ಗೂಢವಾದ ಉದ್ದೇಶದಿಂದಲೇ ನಾನು ನಿನ್ನನ್ನು ಫತ್ತೇಪುರ ಸಿಕರಿಗೆ ಕಳಿಸಿದ್ದೆನು. ಹೋಗುವಾಗ ನಿನ್ನನ್ನು ಕುರಿತು ಬುದ್ಧಿಪೂರ್ವಕವಾಗಿ—"ನನ್ನ ಎರಡನೆಯ ಅಪ್ಪಣೆಯಾಗುವವರೆಗೆ ನೀನು ಫತ್ತೇಪುರದ ರಾಜಮಂದಿರವನ್ನು ಸರ್ವಥಾ ಬಿಟ್ಟು ಬರಲಾಗದೆಂ"ದು ನಾನು ಆಜ್ಞಾಪಿಸಿದ್ದಿಲ್ಲವೆ? ಭಾರತ ಸಾಮ್ರಾಟನ ಆಜ್ಞೆಯನ್ನುಲ್ಲಂಘಿಸಿದವರಿಗೆ ಯಾವ ಶಿಕ್ಷೆಯಾಗುವದೆಂಬದು ನಿನಗೆ ಗೊತ್ತಿರುವದೇನು ಖುಸ್ರೂ!

ಖುಸ್ರು—(ಉತ್ತೇಜಿತ ಸ್ವರದಿಂದ) ಈ ಆಜ್ಞಾಭಂಗಕ್ಕೆ ಮೃತ್ಯುವಿನ, ಅಥವಾ ಕಾರಾಗೃಹವಾಸದ ಶಿಕ್ಷೆಯಾಗುವದೆಂಬ ಮಾತು ನನಗೆ ಗೊತ್ತಿರುವದು ಹುಜೂರ! ಈ ಮಾತು ನನಗೆ ಗೊತ್ತಿದ್ದದ್ದರಿಂದಲೇ ನಾನು ಫತ್ತೇಪುರ ಸಿಕರಿಯ ಅರಮನೆಯನ್ನು ಬಿಟ್ಟು ಇಲ್ಲಿ ನಿಮ್ಮ ಬಳಿಗೆ ಬರುವ ಸಾಹಸವನ್ನು ಮಾಡಿದ್ದೇನೆ; ಆದರೆ ರಾಜರಾಜೇಶ್ವರ, ತಾವೂ ಅತ್ಯಂತ ಮಾತೃಭಕ್ತರಿರುವಿರೆಂಬ ಮಾತು ಲೋಕವಿಖ್ಯಾತವಾಗಿರುವದು. ಬಂಡುಗಾರರಾದ ನನ್ನ ತಂದೆ ಸುಲ್ತಾನ ಸೇಲೀಮರವರನ್ನು ಶಿಕ್ಷಿಸುವದಕ್ಕಾಗಿ ಅವರ ಮೇಲೆ ತಾವು ಹಿಂದಕ್ಕೆ ಅಲಹಾಬಾದಕ್ಕೆ ದಂಡೆತ್ತಿ ಹೋಗುತ್ತಿದ್ದಿರಿ. ಅದೊಂದು ಆಗಿನ ದೊಡ್ಡ ರಾಜಕಾರಣವೇ ಆಗಿತ್ತು; ಆದರೆ "ನಿಮ್ಮ ತಾಯಿಯವರು ತೀರ ಮರಣೋನ್ಮುಖರಾಗಿರುವರೆ"ಂಬ ಸುದ್ದಿಯು ಹಾದಿಯಲ್ಲಿ ನಿಮಗೆ ಮುಟ್ಟಿದ ಕೂಡಲೆ, ಮುಂದಕ್ಕೆ ಸಾಗಿ ಹೋಗದೆ ಅವಸರದಿಂದ ಹಿಂದಿರುಗಿ ಆಗ್ರಾಕ್ಕೆ ಯಾಕೆ ಬಂದಿರಿ ಜಹಾಪನಾಹ! ರಾಜನೀತಿಯ ಕುಟಿಲ ಮಾರ್ಗವನ್ನು ಬಿಟ್ಟು, ಕೌಟುಂಬಿಕವೂ, ವ್ಯಕ್ತಿವಿಷಯಕವೂ ಆದ ಸುದ್ದಿಯಿಂದ ಸ್ವಸ್ಥರಾಗಿ ಮಮತೆಯ ಸಮುಜ್ವಲ ರಾಜ್ಯದಲ್ಲಿ ಯಾಕೆ ಪ್ರವೇಶ ಮಾಡಿದಿರಿ ಖಾವಿದ! ಇಂಥ ಮುಪ್ಪಿನ ಕಾಲದಲ್ಲಿಯೂ ತಾಯಿಯ ಮರಣಕ್ಕಾಗಿ ಏಳುದಿನ ಏಕಾಂತ ವಾಸಮಾಡಿ ಕಣ್ಣೀರು ಸುರಿಸುವದರಲ್ಲಿ ಯಾವ ಗೂಢ ರಾಜಕಾರಣವ

ಸಾಧಿಸುವದಿತ್ತು ಸರಕಾರ! ಇಂದಿಗೆ ತಮ್ಮ ಕೈಯಲ್ಲಿ ಅಧಿಕಾರವಿದ್ದು, ತಾವು ರಾಜರಾಜೇಶ್ವರ ರಿರುವವಿರೆಂಬ ಮಾತು ನನಗೆ ಒಪ್ಪಿಗೆಯಾಗಿರುವದು; ಅದರಂತೆ ನಾನೆಂದರೆ ತಮ್ಮ ಒಬ್ಬ ಬಡ ಪ್ರಜೆಯಿರುವೆನೆಂಬ ಮಾತನ್ನೂ ನಾನು ಮರೆತಿರುವದಿಲ್ಲ. ಇದರ ಮೇಲೆಯೂ ನಾನು ತಮಗೆ ಅಪರಾಧಿಯಾಗಿಯೇ ಆಗಿ ತೋರಿದರೆ ತಾವು ಕಾಯದೆಯಂತೆ ನನ್ನನ್ನು ಶಿಕ್ಷಿಸಬೇಕು. ಅದನ್ನು ಭೋಗಿಸಲು ನಾನು ಸಿದ್ಧನಿರುವೆನು.

ಬಾದಶಹನು ರೋಗದಿಂದ ತ್ರಸ್ತನಾಗಿರದಿದ್ದರೆ ತನ್ನ ಮೊಮ್ಮಗನ ಈ ಉದ್ಧಟವೃತ್ತಿಯ ಮಾತುಗಳಲ್ಲಿಯೂ ಇರುವ ಸ್ವಾರಸ್ಯವನ್ನು ಹೀರಿಕೊಂಡು ಖುಸ್ರುವನ್ನು ಪ್ರೇಮಭರದಿಂದ ಆಲಿಂಗಿಸಬಹುದಾಗಿತ್ತು. ಆದರೆ ಇಂದಿನ ವೇಳೆಯು ವಿಷವೇಳೆಯಾದದ್ದರಿಂದ ಬಾದಶಹನ ಭಾವನೆಯು ಖುಸ್ರುವಿನ ದುರ್ದೈವದಿಂದ ವಿಪರೀತವಾಯಿತು. ರೋಗ ಪೀಡಿತನ ನಾಲಿಗೆಯ ರುಚಿಗ್ರಹಣ ಶಕ್ತಿಯು ನಷ್ಟವಾಗಿ ಎಲ್ಲ ಪದಾರ್ಥಗಳೂ ಆತನಿಗೆ ಕಹಿ ಹತ್ತುವಂತೆ, ಖುಸ್ರುವಿನ ಮಾತಿನೊಳಗಿನ ಸ್ವಾರಸ್ಯವು ಬಾದಶಹನ ಮನಸ್ಸಿನಲ್ಲಿ ಬಾರದೆ ಆತನ ಔಧತ್ಯವನ್ನಷ್ಟು ಬಾದಶಹನ ಮನಸ್ಸಿನಲ್ಲಿ ಬಂದಿತ್ತು. ಆಗ ಬಾದಶಹನು ತನ್ನ ಮನಸ್ಸಿನಲ್ಲಿ—"ನನ್ನ ಮೊಮ್ಮಗನು ಅತ್ಯಂತ ಉದ್ಧಟನೂ, ವಾಚಾಲನೂ, ಉಚ್ಛೃಂಖಲನೂ ಆಗಿದ್ದು, ಆತನು ಇಂದು ಪ್ರತಿ ಶಬ್ದದಿಂದ ರಾಜಸತ್ತೆಯನ್ನು ವಿರೋಧಿಸಿ, ಅದನ್ನು ಅವಮಾನಗೊಳಿಸುತ್ತಿರುವನು; ಹಾಗಲ್ಲದಿದ್ದರೆ ಅಕಬರ ಬಾದಶಹನ ಮುಂದೆ ಇಷ್ಟು ಮಾತುಗಳಾಡುವ ಸಾಹಸವನ್ನು ಯಾವನು ಮಾಡಬಹುದು?" ಎಂದು ವಿಚಾರಿಸಿ ಬಾದಶಹನು ಅತ್ಯಂತ ಕ್ರುದ್ಧನಾಗಿ ಖುಸ್ರುವನ್ನು ಕುರಿತು—ಖುಸ್ರೂ, ನೀನು ಬಹಳ ಉದ್ಧಟನೂ, ಗರ್ವಿಷ್ಠನೂ ಆಗಿರುವೆ. ನಿನಗೆ ಮಾನ ಮರ್ಯಾದೆಗಳ ಪರಿವೆಯಂತು ಇರುವದೇ ಇಲ್ಲ. ಸಿಕ್ಕವರ ಸಂಗಡ ಸಿಕ್ಕ ಹಾಗೆ ಮಾತಾಡುವ ದೊಂದು ಕೆಟ್ಟ ಚಾಳಿಯು ನಿನಗಿರುತ್ತದೆ. ನಿನ್ನ ಈ ಉದ್ಧಟತನಕ್ಕೆ ತಕ್ಕದ್ದಾದ ಉಚಿತವನ್ನು ನಾನು ಈಗಲೇ ಕೊಡುವೆನು, ಎಂದು ಹೇಳಿ ಅಜೀಮಖಾನನನ್ನು ಗಟ್ಟಿಯಾಗಿ ಕೂಗಿ ಕರೆದನು. ರಾಜಕಾರಣದ ಜವಾಬುದಾರಿಯು ಮೈಮೇಲೆ ಇದ್ದದ್ದರಿಂದ ಯಾವಾಗ ಏನು ಮಾತಾಡ ಬೇಕಾದೀತೆಂಬದರ ನಿಯಮವಿಲ್ಲದಿರಲು, ಖುಸ್ರುವಿನ ಮಾವನಾದ ಅಜೀಮಖಾನನು ಖಾಸ ಮಹಾಲಿಗೆ ಹೊಂದಿಯೇ ಇರುವ ದೊಡ್ಡ ದಿವಾಣ ಖಾನೆಯಲ್ಲಿ ಹಗಲು ರಾತ್ರಿ ಕಾದು ಇರುತ್ತಿದ್ದನು. ಅಕಬರ ಬಾದಶಹನು ಹೀಗೆ ಗಟ್ಟಿಯಾಗಿ ಕೂಗಿ ಕರೆದದ್ದನ್ನು ಕೇಳಿ ಪಾಪ! ಅಜೀಮಖಾನನು ಬೆದರಿಬಿದ್ದು ಓಡುತ್ತಲೇ ಒಳಗೆ ಬಂದು ಆಶ್ಚರ್ಯಮಗ್ನನಾಗಿ ಅತ್ತಿತ್ತ ನೋಡುತ್ತ ಕುರ್ನಿಸು ಮಾಡಿ—"ಬಾಂದಾ ಹಾಜರ ಇರುವನು, ಅಪ್ಪಣೆಯಾಗಬೇಕು" ಎಂದು ಬೇಡಿಕೊಳ್ಳಲು, ಅಕಬರ ಬಾದಶಹನು ದೃಢಸ್ವರದಿಂದ—ಈ ಎದುರಿಗೆ ನಿಂತಿರುವ ಶಹಾಜಾದಾ ಖುಸ್ರುವು ರಾಜಾಜ್ಞೆಯನ್ನು ಉಲ್ಲಂಘಿಸಿರುವದರಿಂದ ಅವನು ಅಪರಾಧಿ ಯೆಂದು ನಿರ್ಣಯಿಸಲ್ಪಟ್ಟಿರುವನು; ಆದ್ದರಿಂದ ಇವನ ಮಹಾಲಿನಲ್ಲಿಯೇ ಇವನಿಗೆ ಇವರ ಇತಮಾಮಿಗೆ ತಕ್ಕಂತೆ ನಡೆಯುವ ಪರವಾನಿಗೆ ಕೊಟ್ಟು ಇವನನ್ನು ನಜರ-ಬಂದಿಯಲ್ಲಿ ಇಡಿರಿ. ನನ್ನ ಅಪ್ಪಣೆಯಿಲ್ಲದೆ ಇವನು ಅರಮನೆಯನ್ನು ಬಿಟ್ಟು ಹೋಗಲಾಗದು; ಮತ್ತು ಖಾನ

ಅಜೀಮು, ಈತನ ಸಂರಕ್ಷಣದ ಸಂಬಂಧದಿಂದ ಎಲ್ಲ ಜವಾಬದಾರಿಯನ್ನು ನಾನು ನಿಮ್ಮ ತಲೆಯಮೇಲೆ ಹೊರಿಸಿರುವೆನು, ಎಂದು ಹೇಳಿದನು. ಆಗ ಅಜೀಮುಖಾನನು ಒಂದು ಶಬ್ದವನ್ನೂ ಉಚ್ಚರಿಸದೆ ತನ್ನೊಳಗೇ ಆಶ್ಚರ್ಯಮಗ್ನನಾಗಿ ಅಳಿಯನಾದ ಖುಸ್ರುವಿನೊಡನೆ ಅರಮನೆಯಿಂದ ಹೊರಬಿದ್ದನು. ಇತ್ತ ಶಾಹೀ ಬೇಗಮೆಯು ತನ್ನ ಮಗನ ಈ ಸೌಭಾಗ್ಯವನ್ನು ನೋಡಿ ಆನೆಯ ದಂತದ ಆ ಪೆಟ್ಟಿಗೆಯನ್ನು ಅಲ್ಲಿಯೇ ಚಲ್ಲಿಕೊಟ್ಟು ಒತ್ತರಿಸುವ ದುಃಖದಿಂದ ಹೊರಟುಹೋದಳು.

ಸಂಸಾರವು ಅಸಾರವು!

ಶಾಹೀ ಬೇಗಮೆಯು ನಿರಾಶೆಯಿಂದ ತನ್ನ ಶಾಹಿಮಂಜಿಲಿಗೆ ಬಂದುಬಿಟ್ಟಳು. ಆಕೆಯು ಕಟ್ಟಕಡೆಯ ಆಧಾರವೆಂದು ಬಾದಶಹನಿಗೆ ಶರಣು ಹೋಗಿದ್ದಳು; ಆದರೆ ಎಂದೂ ಆಕೆಯ ಮಾತನ್ನು ನಿರಾಕರಿಸದ ಬಾದಶಹನು ಇಂದು ಆಕೆಯನ್ನು ಸಂಪೂರ್ಣ ತಿರಸ್ಕರಿಸಿ, ತೀರಾ ನಿರಾಶೆಗೊಳಿಸಿದನು. ವಿಪರೀತ ಕಾಲ ಒದಗಲು ಅತ್ಯಂತ ಪ್ರೀತಿಯ ಜನರೂ ವಿರೋಧಿಗಳಾಗುವರೆಂಬ ಮಾತು ಸುಳ್ಳಲ್ಲ. ಇನ್ನು ಜೋಧಬಾಯಿಗೆ ಶರಣು ಹೋಗಲಿಕ್ಕೆ ಸ್ಥಳವೇ ಇಲ್ಲದಾಯಿತು. ಒಬ್ಬ ಸಾಮಾನ್ಯ ಮನುಷ್ಯನಂತೆ ಬಾದಶಹನು ತನ್ನ ಮಗನನ್ನು ನಜರಬಂದಿಯಲ್ಲಿ ಇಟ್ಟದ್ದು ಆಕೆಯ ಮನಸ್ಸಿಗೆ ಬಹಳವಾಗಿ ಹತ್ತಿತು. ತನ್ನ ಮಗನ ಅಪರಾಧವು ಕ್ಷಮಿಸಲಿಕ್ಕೆ ಯೋಗ್ಯವಾದದ್ದಿದ್ದು, ಬಾದಶಹನು ಕ್ಷಮಿಸದೆಯಿದ್ದದ್ದರಿಂದ ಆಕೆಯು ಬಹಳವಾಗಿ ನೊಂದುಕೊಂಡಳು. ಆಕೆಗೆ ಮರಣದ ಹೊರತು ಎರಡನೆಯ ಶಾಂತಿಯ ಉಪಾಯವು ತೋಚದಾಯಿತು. ಬದುಕುವ ಆಶೆಯು ಆಕೆಗೆ ಸರ್ವಥಾ ಉಳಿಯಲಿಲ್ಲ. ಪಾಪ! ಇತ್ತ ಗಂಡನು ನಿರ್ದಯನಾದನು; ಅತ್ತ ಮಾವನು ನಿರಾಕರಿಸಿ ದೂಡಿಬಿಟ್ಟನು; ಮಗನ ಉತ್ಕರ್ಷದ ಆಶೆಯಂತು ಉಳಿಯಲೇ ಇಲ್ಲ, ಅಂದಬಳಿಕ ಯಾವ ಆಶೆಯಿಂದ ಆಕೆಯು ಸಂಸಾರ ಮಾಡಬೇಕು? ಈ ಸಂಸಾರದಲ್ಲಿ ಸಂತತಿಯ ಸುಕ್ಷೇಮ–ಸುಸ್ಥಿತಿಗಳ ಸವಿಯ ಆಶೆಯಿಂದಲೇ ಮನುಷ್ಯನು ತೊಳಲಾಡುತ್ತಿರುವನು; ಆದರೆ ಜೋಧಬಾಯಿಗೆ ಆ ಆಶೆಯೇ ಕಡಿದುಹೋದದ್ದರಿಂದ, ಇನ್ನು ನಾನು ಯಾವ ಆಶೆಯಿಂದ ಬದುಕಿ ಇರಬೇಕೆಂದು ಆಕೆಯು ಜೀವಕ್ಕೆ ಬೇಸತ್ತಳು. ಆ ಪುತ್ರವತ್ಸಲ ಜನನಿಗೆ ಸಂಸಾರವು ಅಸಾರವಾಗಿಯೂ, ಭಯಪ್ರದವಾಗಿಯೂ ತೋರಹತ್ತಿತು. ಈ ಸಂಸಾರದಲ್ಲಿ ಉತ್ತಮ ಮಧ್ಯಮ ಅಧಮರೆಂಬ ಮೂರು ವರ್ಗದ ಜನರು ಇರುವರು. ಸಂಸಾರವು ಪರಮಾರ್ಥಸಾಧನವೆಂದು ತಿಳಿದು, ಎಲ್ಲ ಭಾರವನ್ನು ದೇವರ ಮೇಲೆ ಹಾಕಿ ಯದೃಚ್ಛಾಲಾಭ ಸಂತುಷ್ಟತೆಯಿಂದ ಅನಾಸಕ್ತರಾಗಿ ಸಂಸಾರದಲ್ಲಿ ಇದ್ದೂ ಇಲ್ಲದಂತೆ ಧರ್ಮದಿಂದ ಆಚರಿಸುವವರೇ ಈಶ್ವರ ಪ್ರೀತಿಗೆ ಪಾತ್ರರಾಗುವರು; ಇವರನ್ನು ಉತ್ತಮ ವರ್ಗದವರೆಂದು ಕರೆಯಬೇಕು. ಹೊಲಮನೆ—ದುಡ್ಡುಕಾಸು ಮೊದಲಾದ ಜಡ ಪದಾರ್ಥಗಳಿಗಿಂತ ಚೇತನದ ಯೋಗ್ಯತೆಯು ಹೆಚ್ಚು ಎಂದು

ತಿಳಿದು, ತನ್ನ ಆಪ್ತೇಷ್ಟರ, ಹಾಗು ಇಷ್ಟಮಿತ್ರರ ಉತ್ಕರ್ಷದ ಕಾಲಲ್ಲಿ ಸರ್ವಸ್ವವನ್ನೂ ಕಳೆದು ಕೊಳ್ಳಲು ಸಿದ್ಧರಾಗುವ ಉತ್ಕರ್ಷ–ಕೀರ್ತಿಗಳ ಕಾಮುಕರು, ಧರ್ಮಕ್ಕೂ ದೇವರಿಗೂ ಔಪಚಾರಿಕ ಮಹತ್ವವನ್ನು ಕೊಡುತ್ತ ತಮ್ಮ ಕರ್ಮಜಾಲದಲ್ಲಿ ಸಿಕ್ಕು ಅದರ ಗತಿಯನ್ನನುಸರಿಸಿ ಉತ್ಕರ್ಷಾಪ ಕರ್ಷಗಳನ್ನು ಹೊಂದುತ್ತ ಪುನಃ ಪುನಃ ಹುಟ್ಟುತ್ತಲೂ ಸಾಯುತ್ತಲೂ ಇರುವರು; ಇವರನ್ನು ಮಧ್ಯಮ ವರ್ಗದಲ್ಲಿ ಎಣಿಸತಕ್ಕದ್ದು. ಇನ್ನು ಮೂರನೆಯ ಅಧಮ ವರ್ಗದವರೆಂದರೆ, ಚೇತನ ಕ್ಕಿಂತಲೂ ಜಡಕ್ಕೇ ಮಹತ್ವ ಕೊಟ್ಟು, ಒಂದು ಸಗಣಿಯ ಹೊತಲಕ್ಕಾಗಿ ಪ್ರಾಣಕ್ಕೆ ಪ್ರಾಣ ಕೊಡುವ ಚಂದದಿಂದ ಹೊಲಮನೆ, ದುಡ್ಡುಕಾಸು ಮೊದಲಾದ ಜಡಪದಾರ್ಥಗಳ ಸಂಪಾದನ ದಲ್ಲಿಯೂ, ಸಂರಕ್ಷಣದಲ್ಲಿಯೂ ಸದಾ ತೊಡಗಿ, ಅದರ ಚಿಂತೆಯಲ್ಲಿಯೇ ಕೊರಗಿ ಪಿಶಾಚಿ ಗಳಂತೆ ಆಚರಿಸುವವರು; ಇವರು ಅಧಃಪತನವನ್ನೇ ಹೊಂದುವರು. ಈ ಮೂರು ವರ್ಗಗಳಲ್ಲಿ ಜೋಧಬಾಯಿಯು ಒಂದನೆಯ ವರ್ಗದವಳಾಗಿರದಿದ್ದರೂ, ಎರಡನೆಯ ವರ್ಗದವಳಂತು ನಿಶ್ಚಯದಿಂದ ಆಗಿದ್ದಳು. ಅಂತೇ ಆಕೆಯು ಹಿಂದುಸ್ಥಾನದ ರಾಜರಾಜೇಶ್ವರಿಯಾಗುವ ಆಶೆಯನ್ನು ಬಿಟ್ಟುಕೊಟ್ಟದ್ದಲ್ಲದೆ, ಬಾದಶಹನು ಕೊಟ್ಟಿರುವ ಕೋಟಿ ರೂಪಾಯಿ ಬೆಲೆಯ ಕಣ್ಣಮುಂದಿನ ರತ್ನಹಾರವನ್ನು ಕಾಡುಗಲ್ಲಿಗೆ ಸರಿಮಾಡಿ ಚಲ್ಲಿಕೊಟ್ಟು ಹೋದಳು; ಇಲ್ಲದಿದ್ದರೆ ಪತಿಯ ಮರಣಕ್ಕಾಗಿ ಚಂದಕಾಣಬೇಕೆಂದು ಅತ್ತು ರಂಬಾಟ ಮಹಾಡುತ್ತ, ಪತಿಯ ಅಸ್ತ್ರಯ ಕೀಲಿಯಕೈಯನ್ನು ಉಡಿಯಲ್ಲಿ ಸಿಕ್ಕಿಸಿಕೊಳ್ಳುವ, ಪತಿಯ ಕಿವಿಯೊಳಗಿನ ದೊಡ್ಡ ಮುತ್ತಿನ ಬಾವುಲಿಯನ್ನು ಮೇಲೆಬಿದ್ದು ಅಳಅಳುತ್ತ ಹಲ್ಲುಗಳಿಂದ ಕಡಿದುಕೊಳ್ಳುವ ಅಧರ್ಮ ವರ್ಗದ ಸ್ತ್ರೀಯರಂತೆ, ಅಧಿಕಾರ—ದ್ರವ್ಯಗಳ ಆಶೆಗೆ ಬಿದ್ದು ಆಕೆಯು ಮಗನ ವಿಷಯವಾಗಿ ಔದಾಸೀನ್ಯ ಭಾವವನ್ನು ತಾಳುತ್ತಿದ್ದಳು.

ದಾರುಣ ಮನಸ್ತಾಪದಲ್ಲಿಯೂ, ಪ್ರಚಂಡವಾದ ನಿರಾಶೆಯ ಅಗ್ನಿಯಲ್ಲಿಯೂ ಬೇಯು ತ್ತಿರುವಾಗ, ಶಾಹೀ ಬೇಗಮೆಯು ಬಾಯಿಗೆ ಬಂದಂತೆ ಬಡಬಡಿಸಹತ್ತಿದಳು. ಪ್ರಾಣತ್ಯಾಗದ ಒಂದೊಂದೇ ಉಪಾಯಗಳು ಆಕೆಯ ಮನಸ್ಸಿನಲ್ಲಿ ಬರತೊಡಗಿದವು, ಆದಿನ ಜೋಧ ಬಾಯಿಯ ದೈವಕ್ಕನುಸರಿಸಿ ಕಾರ್ಮೋಡಗಳು ಕವಿದು ಭಯಂಕರವಾದ ಮಳೆಯು ಬರ ತೊಡಗಿತ್ತು, ಗುಡುಗು ಸಿಡಿಲುಗಳ ಅರ್ಭಟದಿಂದ ಭೂಮಂಡಲವು ಕಂಪಾಯಮಾನವಾಗ ತೊಡಗಿತ್ತು. ಹೀಗೆ ಪ್ರಚಂಡವಾದ ಗಾಳಿಯಿಂದಲೂ, ಕಟ್ಟಿಕರೆಯುವ ಮಳೆಯಿಂದಲೂ ಜಗತ್ತಿಗೆ ಒಂದು ಬಗೆಯ ಬಧಿರತ್ವವು, ಬಂದಿರುವಾಗ, ಜೋಧಬಾಯಿಯು ಇಹಲೋಕದ ಯಾತ್ರೆಯನ್ನು ಮುಗಿಸಬೇಕೆಂದು ನಿಶ್ಚಯಿಸಿದಳು. ಆಗ ಯಾವತ್ತು ದಾಸಿಯರೂ, ಗುಲಾಮರೂ ಗಾಢವಾದ ನಿದ್ರಾಸುಖವನ್ನು ಅನುಭವಿಸುತ್ತಿದ್ದರು. ಅಂದು ಬಾದಶಹನ ಬೇನೆಯು ವಿಕೋಪಕ್ಕೆ ಹೋದದ್ದರಿಂದ, ತನ್ನ ಪತಿಯು ತನ್ನ ಬಳಿಗೆ ಬರುವ ಸಂಭವವಿಲ್ಲವೆಂಬದು ಜೋಧಬಾಯಿಗೆ ಗೊತ್ತಿತ್ತು, ಮಗ ಖುಸ್ರುವಂತು ನಜರ ಬಂದಿಯಲ್ಲಿ ಇಡಲ್ಪಟ್ಟಿದ್ದನು. ಅಂದಿನ ದಿನವು ತಾನು ನಿರ್ಬಾಧವಾಗಿ ಪ್ರಾಣಬಿಡಲಿಕ್ಕೆ ಅನುಕೂಲವಾಗಿರುವದೆಂದು ಆಕೆಯು ಭಾವಿಸಿದಳು. ರಾತ್ರಿ ಆರುತಾಸು ಮೀರಿ ಏಳರ ಅಮಲು ಬಂದಿರಬಹುದು. ಆಗ ಜೋಧಬಾಯಿಯು ತಾನು ಹೇಗೆ

ಜೀವ ಕೊಡಬೇಕೆಂದು ಯೋಚಿಸತೊಡಗಿದಳು. ಯಮುನೆಯಲ್ಲಿ ಹಾರಿಕೊಂಡು ಪ್ರಾಣ ಕೊಡುವದು ಅಪಮಾನಕರವೆಂತಲೂ, ತನ್ನಂಥ ಬುರುಕೆಯ ಬಾದಶಹನ ಸೊಸೆಯ ದೇಹವು ಸಿಕ್ಕವರ ಕಣ್ಣಿಗೆ ಬೀಳುವದು ಕೇವಲ ಲಜ್ಜೆಗೇಡಿತನವೆಂತಲೂ ತಿಳಿದು ಆ ಉಪಾಯವನ್ನು ನಿಷೇಧಿಸಿದಳು. ಅಷ್ಟರಲ್ಲಿ ತಾನು ಅಂಬರ ರಾಜಧಾನಿಯಿಂದ ಬರುವಾಗ ಆತ್ಮರಕ್ಷಣದ ಸಾಧನವೆಂದು ತಿಳಿದು ತಂದಿದ್ದ ತೀಕ್ಷ್ಣ ವಿಷದ ನೆನಪು ಆಕೆಗೆ ಆಯಿತು. ಆಕೆಯು ತನ್ನ ಹೊತ್ತಿಗೆ ಉಪಯೋಗವಾಗಬೇಕೆಂದು ಒಂದು ಸಣ್ಣ ಕುಪ್ಪಿಯಲ್ಲಿ ಹಾಕಿ ಅದನ್ನು ತನ್ನ ಪೆಟ್ಟಿಗೆಯಲ್ಲಿಯೇ ಇಟ್ಟಿದ್ದಳು. ಕೂಡಲೆ ಆಕೆಯು ಎದ್ದು ಆ ಸಣ್ಣ ಸಿಸೆಯನ್ನು ತಕ್ಕೊಂಡು ಅದರೊಳಗಿನ ತೀಕ್ಷ್ಣ ವಿಷವನ್ನು ಸ್ವಾದಿಷ್ಟವಾದ ಒಂದು ಸರಬತ್ತಿನಲ್ಲಿ ಹಾಕಿ ಕುಡಿಯಬೇಕೆಂದು ಸಿದ್ಧಮಾಡಿ ಇಟ್ಟಳು; ಆದರೆ ''ಜೀವವು ಬೆಲ್ಲಕ್ಕಿಂತ ಸವಿಯೆಂ''ಬ ನಾಣ್ಣುಡಿಯಂತೆ, ಒಮ್ಮೆಲೆ ಆ ವಿಷವನ್ನು ತಕ್ಕೊಳ್ಳಲಾರದೆ ಶಾಹಿಯು ಅಂಜಿ ದೂರ ಸರಿದು ನಿಂತುಕೊಂಡಳು.

ಈ ಮೇರೆಗೆ ಶಾಹೀ ಬೇಗಮೆಯು ದೂರ ಸರಿದುನಿಂತು ಆ ವಿಷಮಿಶ್ರಿತವಾದ ಸರಬತ್ತಿನ ಸುವರ್ಣದ ಪಾತ್ರೆಯನ್ನು ನೋಡುತ್ತ ಖುಸರುವನ್ನು ನೆನಸಿ—''ಹಾಯ ಖುಸರು! ನನ್ನ ಮರಣದಿಂದ ನೀನು ತೀರ ಪರದೇಶಿಯಾಗಿ ಹೋಗುವೆಯಲ್ಲ! ನಿನ್ನ ಗತಿಯೇನು? ಬದುಕಿ ಉಳಿದು ನಿನ್ನ ಕಷ್ಟವನ್ನು ಕಣ್ಣಿನಿಂದ ನೋಡುವದೂ ನನ್ನಿಂದಾಗುವದಿಲ್ಲ; ಸತ್ತು ನಿನ್ನನ್ನು ಪರದೇಶಿಯಾಗಮಾಡುವದೂ ನನ್ನಿಂದಾಗುವದಿಲ್ಲ; ಆದರೆ ಈ ಪ್ರಸಂಗದಲ್ಲಿ ನಾನೇನು ಮಾಡಲಿ? ಎಂದು ಯೋಚಿಸುತ್ತಿರುವಾಗ, ''ಸಾಯುವವರಿಗೆ ಸುಳಿದಾಡುವವರೇ ಜವನ ದೂತರೆಂ''ಬಂತೆ ಮರಣೋನ್ಮುಖಳಾದ ಮರಣಭೀತ ಜೋಧಬಾಯಿಗೆ ಖುಸ್ರುವಿನ ಅಸ್ಪಷ್ಟ ಮೂರ್ತಿಯು ದೂರದಲ್ಲಿ ನಿಂತುಕೊಂಡು ತನ್ನ ಕಡೆಗೆ ನೋಡುತ್ತಿರುವಂತೆ ಭಾಸವಾಯಿತು. ಬಿಳಿಯ ವಸ್ತ್ರದಿಂದ ಆಚ್ಛಾದಿತವಾದ ಆ ಅಸ್ಪಷ್ಟ ಮೂರ್ತಿಯ ಮೈಮೇಲೆ ರಕ್ತದ ಹನಿಗಳು ಸಿಡಿದಿದ್ದವು. ಆ ಮೂರ್ತಿಯ ಕಣ್ಣುಗಳು ಒಳನಟ್ಟಿದ್ದು, ಅದರ ಗಲ್ಲಗಳು ಪಚ್ಚ ಬಿದ್ದಿದ್ದವು. ಇಂಥ ವಿಕಾರ ಮುಖಮುದ್ರೆಯ ಆ ಕೃಶವಾದ ಮೂರ್ತಿಯನ್ನು ಜೋಧಬಾಯಿಯು ದುಃಖದಿಂ ನೋಡುತ್ತಿರಲು, ಆ ಮೂರ್ತಿಯು ಆಕೆಯನ್ನು ಕುರಿತು—''ಅವ್ವಾ, ನನ್ನ ಇಹಲೋಕದ ಯಾತ್ರೆಯು ಮುಗಿದು ಹೋಗಿದ್ದು, ನಾನು ಇನ್ನು ಕಬರಸ್ಥಾನದಲ್ಲಿ ಶಾಂತರೀತಿಯಿಂದ ಶಯನ ಮಾಡುವದಕ್ಕಾಗಿ ಹೋಗುವೆನು. ಇನ್ನುಮೇಲೆ ನೀನಾದರೂ ಈ ದುಃಖಮಯ ಸಂಸಾರದಲ್ಲಿ ಯಾಕೆ ಇರುವೆ? ನಡೆ, ನನ್ನೊಡನೆ ನೀನೂ ಶಾಂತವಾದ ಕಬರಸ್ಥಾನಕ್ಕೆ ನಡೆ'' ಎಂದು ನುಡಿದಂತೆ ಆಕೆಗೆ ಭಾಸವಾಯಿತು! ಆಗ ಆಕೆಯು ತನ್ನ ಪ್ರೀಯ ಖುಸ್ರುವು ಮರಣ ಹೊಂದಿದ್ದೇ ನಿಶ್ಚಯವೆಂದು ತಿಳಿದು, ಪುನಃ ಆ ವಿಷಮಿಶ್ರಿತ ಸರಬತ್ತು ತುಂಬಿದ್ದ ಪಾತ್ರೆಯ ಕಡೆಗೆ ನೋಡಿ—''ಎಲೈ ಮೃತ್ಯುದಾಯಕ ವಿಷವೇ, ಇನ್ನು ನೀನೇ ನನಗೆ ಶರಣ್ಯನು. ನಿನ್ನ ಹೊರತು ನನಗೆ ಎರಡನೇ ಗತಿಯೇ ಇಲ್ಲೆಂದು ನುಡಿದು, ಆ ವಿಷದ ಪಾತ್ರೆಯನ್ನು ಕೈಯಲ್ಲಿ ತಕ್ಕೊಂಡು ಅದರೊಳಗಿನ ವಿಷವನ್ನು ಗಟಗಟ ಕುಡಿದುಬಿಟ್ಟಳು! ಆಗ ತನ್ನ ಶುಭ್ರವಾದ ಮೆತ್ತಗಿನ ಹಾಸಿಗೆಯಮೇಲೆ ಮಲಗಿಕೊಂಡ ಅವಳು ಮಲಗಿಯೇ ಬಿಟ್ಟಳು. ಬಾದಶಹನ ಜನಾನ

ಖಾನೆಯಲ್ಲಿ ಹೀಗೆ ವಿಷಪಾನದಿಂದ ಪ್ರಾಣತ್ಯಾಗ ಮಾಡುವದು ಅಪರೂಪವಾಗಿದ್ದಿಲ್ಲ. ಮರುದಿವಸ ದಾಸಿಯರು ಎದ್ದು ನೋಡಲು, ಶಾಹೀ ಬೇಗಮೆಯು ಕಣ್ಣು ಮುಚ್ಚಿಕೊಂಡು ಹಾಸಿಗೆಯ ಮೇಲೆ ಮಲಗಿಯೇ ಇದ್ದಳು. ಬೇಗಮೆಯು ನಿದ್ರೆಪತ್ತಿ ಮಲಗಿರುವಳೆಂದು ತಿಳಿದು ದಾಸಿಯರು ಒಂದು ತಾಸು ಹಾದಿಯ ನೋಡಿದರು, ಎರಡು ತಾಸು ಹಾದಿಯ ನೋಡಿದರು, ಮೂರು ತಾಸು ಹೊತ್ತು ಏರಿದರೂ ಜೋಧಬಾಯಿಯು ಏಳಲಿಲ್ಲ. ಆಗ ಮುಖ್ಯ ದಾಸಿಯು ಬೇಗಮೆಯ ಬಳಿಗೆ ಹೋಗಿ ನಿಜವಾದ ಪ್ರಕಾರವನ್ನು ಅರಿತುಕೊಂಡು, ಕೂಡಲೆ ಬಾದಶಹನ ವಿಶ್ವಾಸದ ಸಹಚರನಾದ ಸೇನಾಪತಿ ಫರೀದಬೇಗನಿಗೆ ಈ ಸುದ್ದಿಯನ್ನು ಹೇಳಿದಳು. ಶಾಹೀಬೇಗಮೆಯ ಈ ಆಕಸ್ಮಿಕ ಮರಣಕ್ಕಾಗಿ ಆತನಿಗೂ ಬಹಳ ದುಃಖವಾಯಿತು; ಆದರೂ ಸಂಕಟ ಸಮಯದಲ್ಲಿ ಧೈರ್ಯ ತಾಳುವವನೂ, ಸುಜ್ಞನೂ ಆದ ಫರೀದಬೇಗನು ಈ ಸುದ್ದಿಯನ್ನು ಬೇರೆ ಯಾರಿಗೂ ಹೇಳದಂತೆ ಸೂಚಿಸಿ, ತಾನು ಕೂಡಲೆ ಆಗ್ರಾದ ಅರಮನೆಗೆ ಬಂದು ಸೇಲೀಮನಿಗೆ ಈ ಸುದ್ದಿಯನ್ನು ಅತ್ಯಂತ ಗುಪ್ತವಾಗಿ ಹೇಳಿದನು. ಅದನ್ನು ಕೇಳಿದ ಕೂಡಲೆ ಸೇಲೀಮನಿಗೆ ವಜ್ರಾಘಾತವಾದಂತಾಗಿ, ಅವನು ಮೂಢನಾಗಿ ಹೋದನು. ಆತನ ಕಣ್ಣಿಗೆ ಜಗತ್ತು ಗರಗರ ತಿರುಗುತ್ತಿರುವಂತೆ ಭಾಸವಾಯಿತು. ಕೆಲಹೊತ್ತು ತಟಸ್ಥನಾಗಿ ಫರೀದಬೇಗನನ್ನು ನೋಡುತ್ತ ನಿಂತಿದ್ದ ಆತನು ಆ ಸೇನಾಪತಿಯನ್ನು ಕುರಿತು—ಏನನ್ನುವೆ ಫರೀತಬೇಗ? ಹೀಗಾಗುವ ಸಂಭವವಾದರೂ ಇರುವದೋ? ಆದರೆ ಹಾಗಾದ ಹೊರತು ನೀನು ನನಗೆ ಸುಳ್ಳಾದರೂ ಯಾಕೆ ಹೇಳಿ? ಖುದಾ, ನನ್ನ ಹೃದಯಕ್ಕೆ ಇಂಥ ತೀಕ್ಷ್ಣ ಬಾಣ ಪ್ರಯೋಗವನ್ನು ಹೇಗೆ ಮಾಡಿದೆ? ನನ್ನ ಪ್ರೀಯಳ ವಿಷಯವಾಗಿ ನಾನು ತಾಳಿದ ಉದಾಸೀನತೆಗಾಗಿಯೇ ನೀನು ಆಕೆಯನ್ನು ನಿನ್ನ ಬಳಿಗೆ ಕರೆದುಕೊಂಡು ಹೋಗಿಬಿಟ್ಟಿಯೇನು?

ಈ ಮೇರೆಗೆ ಸೇಲೀಮನು ಶೋಕಿಸುತ್ತಿರುವಾಗ ಆತನನ್ನು ಸಮಾಧಾನಗೊಳಿಸುತ್ತ ಫರೀದಬೇಗನು—ಸುಲ್ತಾನ, ಇಂದು ಬಾದಶಹರ ಪ್ರಕೃತಿಯು ನೆಟ್ಟಗಿರುವದರಿಂದ ತಾವು ಈಗ ಶಾಹಿಮಹಾಲಿಗೆ ನಡೆಯಿರಿ. ಮನಸ್ಸನ್ನು ಕಲ್ಲು ಮಾಡಿದ ಹೊರತು ಇಂಥ ಪ್ರಸಂಗದಲ್ಲಿ ಧೈರ್ಯವು ಬರಲಾರದು. ಈಗ ತಮಗೆ ದುಃಖಕಾರ ಪ್ರಸಂಗವು ಒದಗಿಬಿಟ್ಟಿದೆ, ಅದನ್ನು ಅನುಭವಿಸುವದಕ್ಕಾಗಿ ನೀವು ಸಿದ್ಧರಾಗಿರಲೇಬೇಕು. ಆದದ್ದು ಆಗಿ ಹೋಯಿತು; ಅದೇನು ತಿರುಗಿ ಬರುವಹಾಗಿಲ್ಲ; ಅಂದಬಳಿಕ ಶೋಕಗ್ರಸ್ತರಾಗಿ ಮನಸ್ಸಿನ ಯಾತನೆಯನ್ನಾದರೂ ಯಾಕೆ ಹೆಚ್ಚಿಸಬೇಕು? ಇದಲ್ಲದೆ, ಈ ಸುದ್ದಿಯು ಆಗ್ರಾ ಪಟ್ಟಣದಲ್ಲಿ ಪಸರಿಸಿದರೆ ಅನರ್ಥವಾದೀತು. ನಿಮ್ಮ ಭಾವೀ ಪರಿಸ್ಥಿತಿಯು ಸಂಕಟಮಯವಾಗಿರುವಾಗ, ಈಗ ನೀವು ಶೋಕಮಗ್ನರಾಗಿ ಕಣ್ಣೀರು ಹಾಕುತ್ತ ಕುಳಿತುಕೊಳ್ಳುವದರಿಂದ ಹಿತವಾಗಬಹುದೆ?'' ಎಂದು ನುಡಿಯಲು, ಸೇಲೀಮನು ವಿವೇಕವನ್ನು ತಾಳಿ ದುರ್ನಿವಾರವಾದ ದುಃಖವೇಗವನ್ನು ಬಹು ಕಷ್ಟದಿಂದ ನುಂಗಿಕೊಂಡು ಖಿನ್ನನಾಗಿ ಶಾಹಿಮಂಜಿಲಿಗೆ ಬಂದನು. ಆಗ ಮಾತ್ರ ಆತನ ಮನಸ್ಸಿನ ಸ್ಥಿತಿಯು ಬಹು ಕನಿಕರದ್ದಾಗಿತ್ತು; ತನ್ನ ಕಣ್ಣಿಗೆ ಬೀಳುವ ಯಾವತು ಜಗತ್ತೇ ತಿರವುಮುರುವಾಗಿ ಹೋಗಿರುವಂತೆ ಆತನಿಗೆ ತೋರಿತು; ಆದ್ದರಿಂದ ಶಾಹಿಯು ಶಯನ ಮಾಡಿರುವ ಖಾಸ

ಮಹಾಲಿನೊಳಗೆ ಆಕೆಯ ಹಾಸಿಗೆಯ ಬಳಿಯಲ್ಲಿ ಹೋಗಲಿಕ್ಕೆ ಆತನ ಕಾಲುಗಳೇ ಏಳಲೊಲ್ಲವು. ಸೇಲೀಮನಿಗೆ ಹಲವು ಜನ ಬೇಗಮರಿದ್ದರೂ, ಶಾಹೀಬೇಗಮೆಯ ಮೇಲೆಯೇ ಆತನ ಪ್ರೇಮವು ವಿಶೇಷವಾಗಿ ಇದ್ದಿತು; ಯಾಕಂದರೆ ಆಕೆಯು ರೂಪದಿಂದ ಅಪ್ರತಿಮಳಾಗಿರುವಂತೆ, ಸದ್ಗುಣ ಖನಿಯೂ ಆಗಿದ್ದಳು. ರಜಪೂತರ ತೇಜಸ್ಸೂ, ಸ್ವಾಭಿಮಾನವೂ ಆಕೆಯ ಮುಖದಲ್ಲಿ ಮಿನುಗುತ್ತಿದ್ದವು. ಆಕೆಯ ಪ್ರತಿಒಂದು ರಕ್ತದ ಬಿಂದುವು ಪತಿಕಾರ್ಯಕ್ಕಾಗಿಯೂ, ಪತಿ ಸೇವೆಗಾಗಿಯೂ ಚಲನವಲನವನ್ನು ಹೊಂದುತ್ತಿತ್ತು. ಆಕೆಯು ಆರ್ಯ ಸ್ತ್ರೀಯಿದ್ದದ್ದರಿಂದ ಆತ್ಮಸಮರ್ಪಣಯುಕ್ತ ಪಾತಿವ್ರತ್ಯವು ಶ್ರೇಷ್ಠ ರೀತಿಯಿಂದ ಆಕೆಯನ್ನು ಕಂಡುಬರುತ್ತಿತ್ತು. ಬಹಳ ಹೇಳುವದೇನು? ಪತಿಯಿಂದ ಹೊರತಾದ ಯಾವತ್ತು ಸುಖಗಳು ಆಕೆಗೆ ತುಚ್ಛವಾಗಿ ತೋರುತ್ತಿದ್ದವು. ಸೇಲೀಮನಿಗೆ ಇಂಥ ಅಮೂಲ್ಯ ರತ್ನವು ಎಂದೂ ದೊರೆತಿದ್ದಿಲ್ಲ; ಮುಂದೆಯೂ ದೊರೆಯಲಿಲ್ಲ. ನಿಜವಾಗಿಯೆಂದರೆ ಹೆಂಡಿರಸಂಬಂಧದಿಂದ ಶಾಹಿಯ ತರುವಾಯದಲ್ಲಿ ಸೇಲೀಮನು ಹತಭಾಗ್ಯನಾದನೆಂತಲೇ ಹೇಳಬೇಕಾಗುವದು. ಈ ಸಂಸಾರದಲ್ಲಿ ಒಟ್ಟುಗೂಡಿರುವ ಸಂಬಂಧಿಕರೆನಿಸಿಕೊಳ್ಳುವವರಿಗೆ, ಇರುವತನಕ ಒಬ್ಬರ ಮಹತ್ವವು ಒಬ್ಬರಿಗೆ ತೋರುತ್ತಿರುವದಿಲ್ಲ; ಸತ್ತಬಳಿಕ ಮಾತ್ರ ಅತ್ತು ಅತ್ತು ಕಣ್ಣು ಕೆಡಿಸಿಕೊಳ್ಳುವರು. ಸಂಸಾರದಲ್ಲಿ ಪರಸ್ಪರರು ಪರಸ್ಪರರ ದೋಷಗಳನ್ನು ದುರ್ಲಕ್ಷಿಸಿ, ಗುಣದೃಷ್ಟಿಯವರಾಗಿ, ಒಬ್ಬರನ್ನೊಬ್ಬರು ಪ್ರೀತಿಸುತ್ತ ಒಬ್ಬರನೊಬ್ಬರು ಆದರಿಸುತ್ತ- ಕ್ಷಮಾಶೀಲರೂ, ಉದಾರ ಹೃದಯದವರೂ ಆಗಿ ಇದ್ದರೆಯೇ ಸಂಸಾರ ಸುಖದ ಮಾನವು ಹೆಚ್ಚುತ್ತಿರುತ್ತದೆ. ಹಾಗೆಮಾಡದೆ, ಸಾಂಸಾರಿಕರು ಕೇವಲ ದೋಷ ದೃಷ್ಟಿಯವರಾಗಿ ತಮ್ಮಲ್ಲಿಯ ದೋಷಗಳನ್ನು ತಾವು ನೋಡದೆ ಪ್ರಸಂಗವಶಾತ್ ತಮ್ಮ ಮನಸ್ಸಿಗೆ ವಿರುದ್ಧವಾಗಿ ನಡೆದರೆಂಬ ಕಾರಣದಿಂದ ದುರಭಿಮಾನ ತಾಳಿ ಪರಸ್ಪರರು ಪರಸ್ಪರರ ಮನಸ್ಸು ನೋಯಿಸಿ ಹಿಂಸೆಪಡಿಸಹತ್ತಿದರೆ, ಸಂಸಾರದ ಸವಿಯೇ ಕೆಟ್ಟುಹೋಗಿ, ಸಂತಾಪ, ಚಿಂತೆ, ಕ್ಷೋಭ ಮೊದಲಾದ ದುಃಖಮೂಲ ವಿಕಾರಗಳಿಗೆ ಆಸ್ಪದ ದೊರೆತು, ದುಃಖದ ಮಾನವು ಹೆಚ್ಚಾಗುವದು. ಮತ್ತು ಪ್ರಸಂಗವಶಾತ್ ಆ ಸಂಬಂಧಿಕರಲ್ಲಿ, ಯಾರೊಬ್ಬರ ವಿಶೇಷವಾಗಿ ಗುಣಿಜನರ ವಿಯೋಗವಾದಾಗ ''ಸತ್ತ ಎಮ್ಮೆಗೆ ಸೇರು ತುಪ್ಪ''ವೆಂಬ ಗಾದೆಯಂತೆ ಗುಣದೃಷ್ಟಿಯವರಾಗಿ, ಈ ಮೊದಲೇ ಅವರೊಡನೆ ಅಯೋಗ್ಯ ರೀತಿಯಿಂದ ನಡೆದುಕೊಂಡು ಅವರನ್ನು ಹಿಂಸೆ ಪಡಿಸಿದೆವೆಂಬ ಪಶ್ಚಾತ್ತಾಪದಿಂದ ಜನ್ಮವಿರುವತನಕ ಕುದಿಯಬೇಕಾಗುವದು; ಆದ್ದರಿಂದ ಸಾಂಸಾರಿಕರಿಗೆ ಪ್ರಾಮುಖ್ಯವಾಗಿ ಸಂಯಮನಶಕ್ತಿ ಕ್ಷಮಾಗುಣ, ಔದಾರ್ಯ, ಹಿಂಸೆಯ ಹೇಸಿಗೆ, ಸಂಸಾರದ ನಶ್ವರತ್ವದ ಸ್ಮರಣ ಇವು ಅವಶ್ಯವಾಗಿ ಬೇಕಾಗುವವೆಂಬದನ್ನು ಸಾಂಸಾರಿಕರಾದ ನಾವು ಮರೆಯತಕ್ಕದ್ದಲ್ಲ.

ಸೇಲೀಮನು ತನ್ನ ವೇದನಾಯುಕ್ತ ಹೃದಯವನ್ನು ಹೇಗಾದರೂ ಹತ್ತಿಕ್ಕಿಕೊಂಡು, ಮೃತ್ಯುಛಾಯೆಯಿಂದ ಮಬ್ಬಾಗಿರುವ ಶಾಹೀ ಬೇಗಮೆಯ ಮಹಾಲಿನಲ್ಲಿ ಹೊಕ್ಕನು. ಆಗ ಪುನಃ ಪುನಃ ಆತನ ಮೈಮೇಲಿನ ಕೂದಲುಗಳು ನೆಟ್ಟಗಾಗುತ್ತಿದ್ದವು; ಆತನ ಹೃದಯದಲ್ಲಿಯ ಶೋಕವು ಉಕ್ಕಿ ಬರತೊಡಗಿತ್ತು. ಪಲ್ಲಂಗದ ಮೇಲಿನ ಶುಭ್ರಶಯ್ಯೆಯ ಮೇಲೆ ರತ್ನಾಲಂಕಾರ

ಗಳಿಂದ ಮಂಡಿತಳಾಗಿದ್ದ ಅಪೂರ್ವ ಸೌಂದರ್ಯದ ಜೋಧಬಾಯಿಯ ಮೃತಶರೀರವನ್ನು ನೋಡಿ ಸೇಲೀಮನ ಮನಸ್ಸಿನ ಸ್ಥಿತಿಯು ಹೇಗಾಗಿರಬಹುದೆಂಬದರ ನಿಜವಾದ ಅನುಭವವು ಪತ್ನೀಪ್ರಾಣರಾದ ವಿಧುರರಿಗೆ ಮಾತ್ರ ಆಗಬಹುದಲ್ಲದೆ, ನಮ್ಮಂಥ ಕ್ಷುದ್ರ ಲೇಖಕರು ಬಿಳಿಯ ಕಾಗದದ ಮೇಲೆ ಕರಿಯ ಗೆರೆಗಳನ್ನು ಸಾಲು ಸಾಲಾಗಿ ಕೊರೆಯುವದರಿಂದ ಸರ್ವಥಾ ಆಗಲಾರದು! ಸೇಲೀಮನು ಆತುರದಿಂದ ಶಾಹಿಯ ಬಳಿಗೆ ಹೋದನು. ಆಕೆಯ ಮುಖದಲ್ಲಿ ಮೃತ್ಯುವಿನ ಛಾಯೆಯು ಏನೂ ತೋರುತ್ತಿದ್ದಿಲ್ಲ. ನಿದ್ದೆ ಹತ್ತಿ ಮಲಗಿದಂತೆ ಆಕೆಯು ಮಲಗಿ ಬಿಟ್ಟಿದ್ದಳು. ಆಗ ಸೇಲೀಮನು ಆಕೆಯು ಬದುಕಿಯೇ ಇರುವಳೆಂದು ತಿಳಿದು ಆಕೆಯನ್ನು ಕುರಿತು—''ಪ್ರೀಯೆ, ನೀನು ನನ್ನ ಮೇಲೆ ಸಿಟ್ಟಾಗಿರುವೆಯೇನು? ನಾನು ನಿನ್ನೆ ಬರಲಿಲ್ಲವೆಂದು ಮುನಿಸಿಕೊಂಡಂತೆ ತೋರುತ್ತದೆ. ನಾನು ನಿನ್ನನ್ನು ಪೀಡಿಸಿದೆನೆಂತಲೂ, ನಿನ್ನ ವಿನಂತಿಯನ್ನು ಕಿವಿಯಮೇಲೆ ಹಾಕಿಕೊಳ್ಳಲಿಲ್ಲವೆಂತಲೂ ನೀನು ನಿದ್ದೆಯ ಸೋಗಿನಿಂದ ನನ್ನನ್ನು ಮೋಸ ಗೊಳಿಸುತ್ತಿರುವೆಯಾ?'' ಮಾತಾಡುತ್ತಾಡುತ್ತ ಆತನು ಶಾಹಿಯ ಮೈಮೇಲೆ ಬಿದ್ದನು; ಆದರೆ ಆತನು ಅಂಜಿ ಕೂಡಲೆ ಎದ್ದು ದೂರಸರಿದು ನಿಂತು ನಿರಾಶೆಯಿಂದ ಹುಚ್ಚನಹಾಗೆ ಕೂಗುತ್ತ ಗಟ್ಟಿಯಾಗಿ—ಇಲ್ಲ, ಈಕೆಯು ಬದುಕಿರುವದಿಲ್ಲ. ಈಕೆಯ ಈ ದೇಹವು ಪ್ರೇತರೂಪ ವಾಗಿರುವದು; ಆದರೆ ಈಕೆಯು ಸ್ವಾಭಾವಿಕವಾಗಿ ಸತ್ತಿರದೆ ಆತ್ಮಹತ್ಯ ಮಾಡಿಕೊಂಡಿರುವಳು. ಶಾಹೀ! ನನ್ನ ಪ್ರೀಯೆ ನೀನು ಕಡೆಗೆ ನನ್ನನ್ನು ಬಿಟ್ಟು ಹೋದೆಯಲ್ಲವೆ? ಇನ್ನು ನಿನ್ನ ಅಭಾವದಲ್ಲಿ ಈ ರಾಜಸಂಸಾರವು ನನಗೆ ಹೇಗೆ ಸುಖಾವಹವಾಗುವದು? ದಯಾಳುವಾದ ಪರಮೇಶ್ವರನು ನಿನ್ನಂಥ ಅಮೂಲ್ಯ ರತ್ನವನ್ನು ದೊರಕಿಸಿಕೊಟ್ಟಿದ್ದನು; ಆದರೆ ಮೂರ್ಖನು ನಾನು ಆ ರತ್ನವನ್ನು ಕಾಜಿನ ತುಣುಕೆಂದು ತಿಳಿದು ತಿಪ್ಪೆಯಮೇಲೆ ಚಲ್ಲಿಕೊಟ್ಟಂತಾಯಿತು. ಹಾಯ! ಹಾಯ! ಇನ್ನು ಮರಣಪರ್ಯಂತವಾಗಿ ನನಗೆ ಶಾಂತಿಯು ದೊರೆಯಲಾರದು. ಖುದಾ! ನನ್ನ ಮೇಲೆ ದಯಮಾಡಿ ನನ್ನ ಶಾಹೀಬೇಗಮೆಯನ್ನು ನನಗೆ ತಿರುಗಿಕೊಡು. ಇನ್ನು ಮೇಲೆ ನಾನು ನನ್ನ ಶಾಹೀ ಬೇಗಮೆಯ ಮಾತನ್ನು ಉಗುಳು ಹಾಕಿ ದಾಟುವದಿಲ್ಲ! ನಾನು ಅತ್ಯಂತ ಕ್ಷಮಾಶೀಲ ನಾಗುವೆನು. ನನಗೆ ದಿಲ್ಲಿಯ ಸಿಂಹಾಸನವೂ ಬೇಡ, ಜಗತ್ತಿನ ಐಶ್ವರ್ಯವೂ ಬೇಡ, ಅಧಿಕಾರವೂ ಬೇಡ, ಆ ಅಧಿಕಾರದ ಇಲ್ಲದ ಗರ್ವವೂ ಬೇಡ; ಬಹಳ ಹೇಳುವದೇನು, ನನ್ನ ಶಾಹಿಯ ಸಲುವಾಗಿ ರಾಜಭಾಂಡಾರವನ್ನು ಕಾಲಲ್ಲಿ ಒದ್ದು ಅದನ್ನು ಯಮುನೆಯಲ್ಲಿ ಸುರುವಿ ನಾನು ಶಾಹಿಯೊಡನೆ ಪ್ರೇಮದಿಂದ ಆಕೆಯ ಅಪ್ಪಣೆಯನ್ನು ಪಾಲಿಸುತ್ತ ಇರಲು ಸಿದ್ಧನಾಗಿರು ವೆನು; ಆದರೆ ಖುದಾ, ನನ್ನ ಶಾಹಿಯನ್ನು ನನಗೆ ತಿರುಗಿ ಕೊಡು, ಎಂದು ಬಗೆಬಗೆಯಾಗಿ ಶೋಕಿಸಿದನು. ಪ್ರೀಯ ವಾಚಕರೇ, ನಾಚಿಕೆಗೇಡಿ ಸಾಂಸಾರಿಕರ ರೀತಿಯು ಹೀಗೆಯೇ ಸರಿ! ಇರುವತನಕ ಸೌಜನ್ಯದಿಂದ ನಡೆದುಕೊಳ್ಳುವಹಾಗಿಲ್ಲ, ಸತ್ತಬಳಿಕ ಮಾತ್ರ ''ಸತ್ತ ಎಮ್ಮೆಗೆ ಸೇರು ತುಪ್ಪವೆಂ''ಬಂತೆ ಹಾಡಿ ಹಾಡಿಕೊಂಡು ಅಳುವದು! ಇರುವತನಕ ತಾಯಿತಂದೆಗಳನ್ನು ಬಡಿದು—ಹೊಡೆದು ಪ್ರಸಂಗಬಂದರೆ ಅವರ ಪ್ರಾಣ ತಕ್ಕೊಳ್ಳುವದಕ್ಕೂ ಹಿಂದೆಮುಂದೆ ನೋಡುವಹಾಗಿಲ್ಲ; ಆದರೆ ಸತ್ತಬಳಿಕ ಅವರ ಶ್ರಾದ್ಧ ಮಾಡುವಾಗ ''ನಮ್ಮ ತಂದೆಗೆ ಉಂಡಿ

ಖೀರುಗಳ ಮೇಲೆ ಪ್ರೀತಿ ಬಹಳ'' ಎಂದು ಅನ್ನುತ್ತ ನಾಚಿಕೆಯಿಲ್ಲದೆ ತಮ್ಮ ನಾಲಿಗೆಯ ಸವಿಯನ್ನು ತೀರಿಸಿಕೊಳ್ಳುವದು! ಇಂಥ ನೀಚ ಸಂಸಾರಿಕರನ್ನು ಶಿಕ್ಷಿಸಲು ಯಮನೇ ಸಮರ್ಥ ನಲ್ಲದೆ ಅನ್ಯರ ಭಯವು ಇಂಥವರಿಗೆ ಎಂದೂ ತೋರಲಾರದು.

ಹೀಗೆ ಸೇಲೀಮನು ಶಾಹಿಯ ಸಲುವಾಗಿ ಶೋಕಮಾಡುತ್ತಿರಲು, ಹೊರಗೆ ಯಾರದೋ ಕಾಲ ಸಪ್ಪಳವಾದಂತಾಯಿತು. ಕೂಡಲೆ ಆತನು ಮೆಟ್ಟಿಬಿದ್ದು ಅತ್ತಕಡೆಗೆ ನೋಡಲು, ಆತನಿಗೆ ತನ್ನ ಶಾಹಿಯೇ ಬಂದಂತೆ ತೋರಿತು; ಆದರೆ ನೋಡುತ್ತಾನೆ, ಎರಡನೆಯದೇ ಒಂದು ವ್ಯಕ್ತಿಯು! ಆಗ ಸೇಲೀಮನು ತ್ವೇಷದಿಂದ ಗದ್ದರಿಸಿ ಆ ವ್ಯಕ್ತಿಯನ್ನು ಕುರಿತು ಕರ್ಕಶ ಸ್ವರದಿಂದ—

ಸೇಲೀಮ—ಯಾರು ನೀನು?

ವ್ಯಕ್ತಿ—ಜನಾಬಅಲಿ! ನಾನು ದಾಸಿಯ ದಾಸಿಯಿರುವೆನು, ನನ್ನ ಹೆಸರು ರುಬಿಯಾ. ನಾನು ಶಾಹೀ ಬೇಗಮೆಯ ದಾಸಿಯು!

ಸೇಲೀಮ—ರುಬಿಯಾ? ನೀನೆಂಥ ರುಬಿಯಾ? ನೀನು ಸೈತಾನಳಿರುತ್ತೀ. ನನಗೆ ಚೇಷ್ಟೆ ಮಾಡಲಿಕ್ಕೆ ಇಲ್ಲಿಗೆ ಬಂದಿರುತ್ತೀ!

ರುಬಿಯಾ—ಅಂಥ ಸಾಹಸವು ಈ ಕ್ಷುದ್ರ ದಾಸಿಯಿಂದ ಹೇಗಾದೀತು ಶಹಾಜಾದೇ ಸಾಹೇಬ!

ಈ ಉತ್ತರದಿಂದ ಸೇಲೀಮನು ಸಮಾಧಾನವಾಗಲಿಲ್ಲ. ಆತನು ಅತ್ಯಂತ ಕ್ರುದ್ಧ ಸ್ವರದಿಂದ ಒಬ್ಬ ತಾರ್ತರ ಸ್ತ್ರೀಯನ್ನುದ್ದೇಶಿಸಿ ''ಜುಮರಾನ'' ಎಂದು ಕೂಗಿದನು. ಕೂಗಿನ ಕಡೆಯ ಅಕ್ಷರದ ಉಚ್ಚಾರವು ಮುಗಿಯುವದರೊಳಗೆ ಒಬ್ಬ ಇದ್ದಲಿಯ ಮೈಬಣ್ಣದ ಬೆಕ್ಕಿನ ಕಣ್ಣಿನ ತಾರ್ತರಿ ಸ್ತ್ರೀಯೊಬ್ಬಳು ಬಂದು ಕುರ್ನಿಸಮಾಡಿ ನಿಂತುಕೊಂಡಳು. ಆಗ ಸೇಲೀಮನು ಆಕೆಯನ್ನು ಕುರಿತು ಕರ್ಕಶ ಸ್ವರದಿಂದ—ಈ ರುಬಿಯಾ ದಾಸಿಯು ನಾನು ಹೀಗೆ ದುಃಖಿಸುತ್ತಿರುವದನ್ನು ನೋಡಿ ನನ್ನ ಚೇಷ್ಟೆ ಮಾಡಲಿಕ್ಕೆ ಇಲ್ಲಿಗೆ ಬಂದಿರುವಳು; ಆದ್ದರಿಂದ ಈಕೆಯನ್ನು ನಿನ್ನ ಕೋಣೆಗೆ ಕರಕೊಂಡು ಹೋಗಿ ಹತ್ತು ಬಾರಕೋಲಿನ ಪೆಟ್ಟುಗಳನ್ನು ಹಾಕಿ ಜನಾನ ಖಾನೆಯಿಂದ ಈಕೆಯನ್ನು ಹೊರಗೆ ಹಾಕಿಬಿಡು, ಎಂದು ಆಜ್ಞಾಪಿಸಿದನು. ಸೇಲೀಮನ ಈ ಅಪ್ಪಣೆಯನ್ನು ಕೇಳಿ ಆ ತಾರ್ತರಿ ಸ್ತ್ರೀಯು ಬೆಪ್ಪಾಗಿ ಸೇಲೀಮನ ಮೋರೆಯ ಕಡೆಗೆ ನೋಡುತ್ತ ನಿಂತುಕೊಂಡಳು. ರುಬಿಯಾನಿಗಂತು ಸೇಲೀಮನಿಗೆ ನಿಜವಾಗಿ ಹುಚ್ಚು ಹಿಡಿದಿರುವದೆಂಬಂತೆ ತೋರಿತು. ಆಕೆಯು ಕೈಜೋಡಿಸಿ ಸೇಲೀಮನನ್ನು ಕುರಿತು—ಶಾಹಾಜಾದೇಸಾಹೇಬ, ತಮ್ಮ ಕಲ್ಯಾಣದ ಸಲುವಾಗಿ ನಾನು ಸಾಯಲಿಕ್ಕೂ ಸಿದ್ಧಳಾಗಿರುವೆನು. ಈಗ ನಾನು ಮೂರ್ತಿಜಖಾನರ ಹೇಳಿಕೆಯಂತೆ ತಮ್ಮ ಕಡೆಗೆ ಬಂದಿದ್ದೇನೆ. ಅವರು ಒಂದು ಜರೂರಿಯ ಸುದ್ದಿಯನ್ನು ತಂದಿದ್ದು ದಿವಾಣಖಾನೆಯಲ್ಲಿ ನಿಮ್ಮ ಹಾದಿಯನ್ನು ನೋಡುತ್ತ ಕುಳಿತುಕೊಂಡಿರುವರು, ಎಂದು ಹೇಳಿದಳು.

ಮೂರ್ತಿಜಖಾನನ ಹೆಸರು ಕೇಳಿದ ಕೂಡಲೆ ಸೇಲೀಮನು ಎಚ್ಚತ್ತನು. ಕೂಡಲೆ ಆತನು ದಿವಾಣಖಾನೆಗೆ ಹೋಗಿ ನೋಡಲು, ಬಾದಶಹನ ಸೇನಾಪತಿಯೂ, ತನ್ನ ಜೀವದ ಗೆಳೆಯನೂ

ಆದ ಮೂರ್ತಿಜಖಾನನು ತನ್ನ ಹಾದಿಯನ್ನು ನೋಡುತ್ತ ಕುಳಿತುಕೊಂಡಿದ್ದನು. ಆತನ ಬಾಡಿದ ಮೋರೆಯನ್ನು ನೋಡಿ ಸೇಲೀಮನ ಶೋಕಮಗ್ನ ಹೃದಯಕ್ಕೆ ಬಲವಾದ ಆಘಾತವಾಯಿತು. ಆತನು ಅಸ್ವಸ್ಥತೆಯಿಂದ ಮೂರ್ತಿಜದಖಾನನನ್ನು ಕುರಿತು—

ಸೇಲೀಮ—ಖಾನ, ಏನು ಸುದ್ದಿಯು?

ಮೂರ್ತಿಜಖಾನ—ಸುದ್ದಿಯೇತರದು? ನಾಲ್ಕೂ ಕಡೆಗೂ ಅಮಂಗಲ ಸ್ಥಿತಿಯೇ ಪಸರಿಸಿರುವಂತೆ ತೋರುತ್ತಿರುವದು. ಬಾದಶಹರ ಬೇನೆಯು ವಿಕೋಪಕ್ಕೆ ಹೋಗಿದ್ದು, ಖುಸ್ರುವಿಗೆ ಸಿಂಹಾಸನವು ಪ್ರಾಪ್ತವಾಗಬೇಕೆಂದು ಮಾನಸಿಂಹನೂ, ಅಜಮಖಾನನೂ ಕೃಷ್ಣಕಾರಸ್ಥಾನಗಳನ್ನು ನಡೆಸಿರುವರು. ನೀವು ಆಗ್ರಾದ ಅರಮನೆಗೆ ಬಾದಶಹರನ್ನು ನೋಡಲಿಕ್ಕೆ ಹೋದರೆ, ಅವರು ನಿಶ್ಚಯವಾಗಿ ನಿಮ್ಮನ್ನು ಸೆರೆ ಹಿಡಿಯುವರು; ಅಂದಬಳಿಕ ಇದಕ್ಕಿಂತಲೂ ಅಮಂಗಲವಾದ ಸುದ್ದಿಯು ಮತ್ತೇನಿರಬೇಕು?

ಸೇಲೀಮ (ಚಿಂತಾಯುಕ್ತಸ್ವರದಿಂದ)– ಹೌದು, ನೀನನ್ನುವದು ನಿಜವಿರುತ್ತದೆ.

ಮೂರ್ತಿಜ—ಆದರೂ ಸುಲ್ತಾನ, ನೀವು ಇಷ್ಟು ಖಿನ್ನರಾಗುವ ಕಾರಣವಿಲ್ಲ. ಶಾಹಿ ಮಂದಿರದ ಛಾವಣಿಯಲ್ಲಿ ನಿಮ್ಮ ಅನ್ನವನ್ನು ಉಂಡು ಚಕ್ಕಂದವಾಡುತ್ತಿದ್ದ ಐದು ಸಾವಿರ ಮೊಗಲ ಸೈನ್ಯವಿರುತ್ತದಷ್ಟೇ? ಅವರಿಗೆ ಈಗಲೇ ಸಿದ್ಧವಾಗಬೇಕೆಂದು ಆಜ್ಞಾಪಿಸಿರಿ. ಅಂದರೆ ಅವರು ದೌಲತಬಾಗೆಯ ಘಾಟನ್ನು ದಾಟಿಹೋಗಿ ಆಗ್ರಾದಿಂದ ಒಂದು ಹರದಾರಿಯಮೇಲೆ ತಳವೂರಿ ಕುಳಿತುಕೊಳ್ಳುವರು. ನಾನೂ ನನ್ನ ಸೈನ್ಯದೊಡನೆ ಸಿದ್ಧವಾಗಿರುವೆನು. ಸೈಯ್ಯದ ಖಾನರೂ ನಿಮ್ಮ ಪಕ್ಷದವರಿರುವರು. ಅಂದಬಳಿಕ ಅಂಜುವದೇಕೆ? ನಿಮಗೆ ಹೇಳತಕ್ಕ ಇನ್ನೊಂದು ಮಹತ್ವದ ಮಾತೆಂದರೆ, ಶಾಹೀಬೇಗಮೆಯ ಶೋಚನೀಯ ಮೃತ್ಯುವಿನ ಸುದ್ದಿಯನ್ನು ಎಲ್ಲಿಯೂ ಒಡೆಯಗೊಡಬೇಡಿರಿ. ಸುಲ್ತಾನಸಾಹೇಬ ಅಳಲಿಕ್ಕೆ ಮುಂದೆ ಹೊತ್ತು ಇರುತ್ತದೆ; ಆದರೆ ಈಗಿನ ಕಾಲವು ಹೀಗೆ ಅಳುತ್ತ ಕುಳಿತುಕೊಳ್ಳತಕ್ಕದ್ದಲ್ಲ. ಈಗ ಅಳುತ್ತ ಕುಳಿತುಕೊಂಡರೆ ನೀವು ಕಡೆತನಕ ಅಳುತ್ತಲೇ ಕುಳಿತುಕೊಳ್ಳಬೇಕಾದೀತು.

ಈ ಮೇರೆಗೆ ನುಡಿದು ಮೂರ್ತಿಜಖಾನನು ಅವಸರದಿಂದ ಹೊರಟುಹೋದನು. ಇತ್ತ ಸೇಲೀಮನಾದರೂ ತನ್ನ ಎದೆಯನ್ನು ಕಲ್ಲುಮಾಡಿ ಕೂಡಲೆ ಶಾಹೀ ಬೇಗಮೆಗೆ ದೌಲತಾ ಬಾದದಲ್ಲಿ ಗುಪ್ತ ರೀತಿಯಿಂದ ಮಣ್ಣುಕೊಟ್ಟನು.

ಅರಸನಾಗುವವನು ಅಂಧನಾದನು!

ಮಖಮಲಿನಿಂದ ಹೊದಿಸಿದ ಸುವರ್ಣಖಚಿತವಾದ ಪಲ್ಲಂಗದಮೇಲೆ ಬೇನೆಯಿಂದ ಜರ್ಜರನಾಗಿದ್ದ ಅಕಬರ ಬಾದಶಹನು ನಿದ್ದೆ ಹೋಗಿದ್ದನು. ಈಗ ಬಹು ದಿವಸಗಳಲ್ಲಿ ಇಷ್ಟು ಗಾಢವಾದ ನಿದ್ದೆಯು ಆತನಿಗೆ ಹತ್ತಿದ್ದಿಲ್ಲ; ಆದ್ದರಿಂದ ಆತನಿಗೆ ಎಚ್ಚರವಾಗಬಾರದೆಂದು ಎಲ್ಲರೂ

ಮಿಸಿಕಾಡದೆ, ಪಿಟ್ಟೆಂದು ಮಾತಾಡದೆ ಸ್ತಬ್ಧವಾಗಿ ಕುಳಿತಿದ್ದರು; ಆದರೂ ಬಾದಶಹನ ನಾಡಿಗಳು ಮಂದವಾಗಿ, ಶ್ವಾಸೋಚ್ಛ್ವಾಸವು ಬಹುಮೆಲ್ಲಗೆ ಆಡಹತ್ತಿದ್ದರಿಂದ, ಆತನು ಬದುಕುವ ವಿಷಯ ವಾಗಿ ಎಲ್ಲರೂ ನಿರಾಶೆಪಟ್ಟು, ಚಿಂತಾಕ್ರಾಂತರಾಗಿದ್ದರು. ಇನ್ನು ಸಂಸಾರಮಗ್ನರಾಗಿದ್ದ ಅಲ್ಲಿಯ ಸ್ವಾರ್ಥಪರ ಅಮೀರ ಉಮರಾವರಲ್ಲಿಯೂ, ರಾಜರು—ಮಹಾರಾಜರಲ್ಲಿಯೂ, ವೀರರು—ಮುತ್ಸದ್ದಿಗಳಲ್ಲಿಯೂ ಬಾದಶಹರ ಮರಣದ ವಿಷಯವಾಗಿ ನಿಜವಾದ ದುಃಖವು ಯಾರಿಗೆ ಎಷ್ಟರಮಟ್ಟಿಗೆ ಆಗಿತ್ತೆಂಬದನ್ನು ಮೇಲೆಮೇಲೆ ನೋಡಿ ಹೇಳುವದು ಅಶಕ್ಯವೇ ಸರಿ. ಬಾದಶಹನು ಜೀವದಿಂದಿದ್ದರೆ ತಮ್ಮ ಹಿತಸಾಧಿಸೀತೆಂದು ತಿಳಿದಿದ್ದ ಜನರಿಗೆ, ಬಾದಶಹನು ಸತ್ತರೆ ತಮ್ಮ ಹಿತವು ಮುಣುಗುವದಲ್ಲ, ಎಂಬ ಚಿಂತೆಯಿಂದ ಸ್ವಾರ್ಥಮೂಲಕ ದುಃಖವಾಗಿತ್ತು; ಅದರಂತೆ, ಬಾದಶಹನು ಸತ್ತರೆ ತಮ್ಮ ಹಿತ ಸಾಧನಕ್ಕೆ ಅನುಕೂಲವಾಗುವದೆಂದು ತಿಳಿದವರಿಗೆ, ಇನ್ನು ತಮ್ಮ ಹಿತಸಾಧನದ ಕಾಲವು ಸಮೀಪಿಸಿತೆಂಬ ಬಾವನೆಯಿಂದ ಅಂತರಂಗದಲ್ಲಿ ಸ್ವಾರ್ಥ ಮೂಲಕ ಸಮಾಧಾನವೇ ಆಗಿತ್ತು. ಹೀಗೆ ಬಾದಶಹನ ಮರಣದ ನೆವದಿಂದ ಅಲ್ಲಿ ಕುಳಿತಿದ್ದ ಪ್ರತಿಒಬ್ಬರ ಮನಸ್ಸಿನಲ್ಲಿ ಭಿನ್ನ ಭಿನ್ನ ವಿಚಾರಗಳು, ಭಿನ್ನ ಭಿನ್ನ ಆಕಾಂಕ್ಷೆಗಳು ಸುಳಿದಾಡುತ್ತಿರಲು, ಅವರೆಲ್ಲರು, ''ಸಮುದ್ರನಾಥನು ತನ್ನಲ್ಲಿಯ ಹಲವು ಬಗೆಯ ಹುಚ್ಚು ಹುಳಕುಗಳನ್ನು ಮುಚ್ಚಿಕೊಂಡು ಜಲರಾಶಿಯನ್ನಷ್ಟೇ ತೋರಿಸಿ ಗಂಭೀರನಾಗಿರುವಂತೆ,'' ಅವರು ತಮ್ಮ ವಿವಿಧ ಮನೋವ್ಯಾಪಾರಗಳನ್ನು ಮುಚ್ಚಿಕೊಂಡು ಬಾದಶಹನ ಮರಣದ ಸಲುವಾಗಿ ದುಃಖಿಸುವವ ರಂತೆ ಮ್ಲಾನವದನವನ್ನಷ್ಟೇ ಮುಂದೆ ಮಾಡಿ ಕುಳಿತಿದ್ದರು. ಅಷ್ಟರಲ್ಲಿ ಅಕಸ್ಮಾತ್ತಾಗಿ ಬಾದಶಹನ ತುಟಿಯು ಅಲ್ಲಾಡಿತು. ಆಗ ರಾಜವೈದ್ಯನಾದ ಅಲ್ಲೀಖಾನನು ಬಾದಶಹನ ಕಿವಿಯ ಹತ್ತರ ತನ್ನ ಮುಖವನ್ನು ಒಯ್ದು ಮೃದುಸ್ವರದಿಂದ—''ಜಹಾಪನಾಹರ ಮನಸ್ಸಿನಲ್ಲಿ ಯಾವ ಅಪ್ಪಣೆ ಮಾಡಬೇಕೆನ್ನುವ ಹಾಗೆ ಆಗಿರುತ್ತದೆ?'' ಎಂದು ಕೇಳಿದನು. ಆಗ ಅಕಬರ ಬಾದಶಹನು ಕ್ಷೀಣ ಸ್ವರದಿಂದ—''ಅಲ್ಲೀ! ಇನ್ನು ಎಂಥ ಅಪ್ಪಣೆಯು!! ಈ ಮರ್ತ್ಯ ಜಗತ್ತಿನಲ್ಲಿ ನಾನು ಇರುವ ಅವಧಿಯು ಮುಗಿಯುತ್ತ ಬಂದಿತು. ಖುದಾನು ನನ್ನನ್ನು ಕರೆಯುತ್ತಿರುವನು; ಆದರೆ ಸೇಲೀಮನು ಎಲ್ಲಿರುವನು? ಇನ್ನೂ ಆತನು ಇಲ್ಲಿಗೆ ಬಂದಿಲ್ಲವೇ? ಹಾಯ! ನನ್ನ ಕಟ್ಟಕಡೆಯ ಕರ್ತವ್ಯವನ್ನು ಮಾಡುವದು ಹಾಗೆಯೇ ಉಳಿಯುವದೆನ್ನುವಹಾಗೆ ತೋರುತ್ತದೆ, ಎಂದು ನುಡಿಯುತ್ತಿರಲು, ಅದೇ ಕಾಲದಲ್ಲಿ ಸೇಲೀಮನು ಅಲ್ಲಿಗೆ ಬಂದು ಹಕೀಮನ ಅಪ್ಪಣೆಯಂತೆ ಬಾದಶಹನ ಹಾಸಿಗೆಯಹತ್ತರ ನಿಂತುಕೊಂಡನು. ಆತನು ಅಶ್ರುಪೂರ್ಣ ನೇತ್ರಗಳಿಂದ ತಂದೆಯ ಮೋರೆಯ ಕಡೆಗೆ ನೋಡುತ್ತ ಮೃದು ಸ್ವರದಿಂದ—''ಶಹಾನಜಹಾ! ನಿಮ್ಮ ಈ ನರಾಧಮನಾದ ಮಗನು ನಿಮ್ಮ ಚರಣದೆಡೆಯಲ್ಲಿ ನಿಂತಿರುವನು, ಅಪ್ಪಣೆಯಾಗಬೇಕು, ಎಂದು ಬೇಡಿಕೊಂಡನು. ಸೇಲೀಮನ ಶಬ್ದಗಳನ್ನು ಕೇಳಿದಕೂಡಲೆ ಬಾದಶಹನಿಗೆ ಆನಂದವಾಯಿತು. ಆತನು ಸ್ನೇಹಪೂರ್ಣ ಸ್ವರದಿಂದ ತನ್ನ ಆ ಮಗನನ್ನು ಕುರಿತು—''ಸೇಲೀಮಾ, ಪ್ರೇಮಲನಾದ ತಂದೆಯು ಯಾವ ಮಗನನ್ನೂ ಉದ್ಧಟನನ್ನಾಗಿಯೂ, ಬಂಡುಗಾರನನ್ನಾಗಿಯೂ ತಿಳಿಯುವದಿಲ್ಲ. ಆತನು ತನ್ನ ಹೆಸರಿಗೆ ಒಪ್ಪುವಂತೆ ಮಗನ ಯಾವತ್ತು ಅಪರಾಧಗಳನ್ನೂ ಪ್ರೇಮವಶನಾಗಿ ಕ್ಷಮಿಸಿ ಮಗನನ್ನು

ಮುಂದಕ್ಕೆ ಕರೆಯುವನು. ಸೇಲೀಮ, ನಾನು ಬಹಳ ಹೇಳುವದರಿಂದೇನು ಪ್ರಯೋಜನವು? ಮುಖ್ಯವಾಗಿ ಮೂರು ಬಗೆಯ ಚಿಂತೆಯಲ್ಲಿಯೇ ನನ್ನ ಜೀವನದ ಪರಿಸಮಾಪ್ತಿಯಾಯಿತು. ಒಂದನೆಯ ಚಿಂತೆಯೆಂದರೆ, ದಯಾಳುವಾದ ಖುದಾನು ನನಗೆ ದಯಪಾಲಿಸಿರುವ ಈ ಭರತಖಂಡದ ಸಾಮ್ರಾಜ್ಯವನ್ನು ಸರಿಯಾಗಿ ನಾನು ಆಳುವೆನೋ ಇಲ್ಲವೋ ಎಂಬದು; ಎರಡನೆಯ ಚಿಂತೆಯೆಂದರೆ, ಏನು ಮಾಡಿದರೆ ನನ್ನ ಈ ಪ್ರೀಯ ಹಿಂದುಸ್ಥಾನದ ಕಲ್ಯಾಣವಾದೀತೆಂಬದು; ಇನ್ನು ಮೂರನೆಯ ಚಿಂತೆಯೆಂದರೆ, ನಿನ್ನ ವಿಷಯದ್ದು; ನೀನು ಎಂಥವನಿದ್ದರೂ ನಿನಗೇ ಹಿಂದುಸ್ಥಾನದ ಸಿಂಹಾಸನವು ಹೇಗೆ ಪ್ರಾಪ್ತವಾದೀತೆಂಬದು; ಆದರೆ ಪ್ರೀಯ ಸೇಲೀಮ, ಈಗ ನಾನು ನಿನಗೆ ಹಿಂದುಸ್ಥಾನದ ಸಿಂಹಾಸನವನ್ನು ಕೊಟ್ಟು ಹೊರಟೆನು. ಇನ್ನು ಈ ಪೃಥ್ವಿಯಲ್ಲಿ ಇರಲಿಕ್ಕೆ ನನಗೆ ಖುದಾನ ಅಪ್ಪಣೆಯಿಲ್ಲ, ನನ್ನ ಅನುಕರಣ ಮಾಡಿ ಈ ಸಾಮ್ರಾಜ್ಯದ ಕಾರಭಾರವನ್ನು ನಡಿಸಿ ಲೋಕಕಲ್ಯಾಣವನ್ನು ಮಾಡು. ಇನ್ನು ಎಲ್ಲ ಭಾರವನ್ನು ನಿನ್ನ ಮೇಲೆ ಹೊರಿಸಿ ನಾನು ಹೊರಟೆನು. ಅಜೀಮಖಾನ, ನನ್ನ ಅಪ್ಪಣೆಯಂತೆ ಎಲ್ಲ ಅಮೀರ ಉಮರಾವರನ್ನು ಕರೆದೆಯೋ?

ಬಾದಶಹನ ಈ ಪ್ರಶ್ನವನ್ನು ಕೇಳಿ ಅಜೀಮಖಾನನು ಕೈಜೋಡಿಸಿ—ಜಹಾಪನಾಹರ ಅಪ್ಪಣೆಯಂತೆ ಯಾವತ್ತು ಜನರು ಬಂದಿದ್ದು, ಹಿಂದಿನ ಕೋಣೆಯಲ್ಲಿ ಅಪ್ಪಣೆಯ ಹಾದಿಯನ್ನೇ ನೋಡುತ್ತ ಕುಳಿತುಕೊಂಡಿರುವರು, ಎಂದು ಹೇಳಿದನು. ಆಗ ಅಕಬರ ಬಾದಶಹನು—''ಬಹೋತ ಅಚ್ಛಾ, ಅವರೆಲ್ಲರನ್ನು ನಾನು ಕರೆದಿರುವೆನೆಂದು ಹೇಳು, ತಡಮಾಡಬೇಡ. ಎಂದು ಆಜ್ಞಾಪಿಸಿದನು. ಕೂಡಲೆ ಅಜೀಮಖಾನನು ಅವರೆಲ್ಲರನ್ನು ಕರೆಯಲು, ಆ ರಾಜನಿಷ್ಠ ಮಂಡಲಿಯು ತತ್‌ಕ್ಷಣ ಒಳಗೆ ಬಂದು ಮರಣೋನ್ಮುಖ ಬಾದಶಹನನ್ನು ಅಭಿವಂದಿಸಿ ತಲೆಬಾಗಿಸಿ ನಿಂತುಕೊಂಡಿತು. ಎಲ್ಲರ ಮುಖಗಳಲ್ಲಿ ಒಂದು ಬಗೆಯ ಗಾಂಭೀರ್ಯವು ತೋರುತ್ತಿದ್ದು, ಅದರಲ್ಲಿ ಖಿನ್ನತೆಯ ಲಕ್ಷಣವು ಒಡೆದು ಕಾಣುತ್ತಲಿತ್ತು, ಅಕಬರ ಬಾದಶಹನು ಒಮ್ಮೆ ಎಲ್ಲರ ಮೋರೆಗಳ ಕಡೆಗೆ ನೋಡಿದನು. ಆಗ ಆತನ ಮುಖದಲ್ಲಿ ಒಂದು ಪ್ರಕಾರದ ದೈವೀತೇಜಸ್ಸು ಮಿನುಗುತ್ತಲಿತ್ತು, ಕೆಲ ಹೊತ್ತಿನತನಕ ಎಲ್ಲರ ಕಡೆಗೆ ನೋಡುವದಾದಮೇಲೆ ಬಾದಶಹನು ಕ್ಷೀಣ ಸ್ವರದಿಂದ, ಆದರೆ ಗಾಂಭೀರ್ಯದಿಂದ ಎಲ್ಲರನ್ನುದ್ದೇಶಿಸಿ ಮಾತಾಡತೊಡಗಿದನು.—''ಇನ್ನು ನನಗೆ ಹೆಚ್ಚು ಮಾತಾಡುವ ಸಾಮರ್ಥ್ಯವು ಉಳಿದಿರುವದಿಲ್ಲ, ನನ್ನ ನಾಲಿಗೆಯು ಕ್ರಮವಾಗಿ ಒಳಗೆ ಎಳೆಯುತ್ತಿರುವದು. ಕಣ್ಣುಗಳ ನೋಡುವ ಸಾಮರ್ಥ್ಯವು ನಷ್ಟವಾಗುತ್ತ ನಡೆದಿದ್ದು ಆದರೂ, ನಿಮ್ಮೊಡನೆ ಕಡೆಯವೆಂದು ನಾಲ್ಕು ಮಾತುಗಳನ್ನು ಆಡಬೇಕಾಗಿರುವದು; ಹಾಗೆ ಮಾತಾಡುವ ಪ್ರಯತ್ನವನ್ನೂ ನಾನು ಮಾಡುವೆನು. ನೀವೆಲ್ಲರೂ ಶೂರರೂ, ನಂಬಿಗೆಯವರೂ ಇದ್ದು, ನನ್ನ ಆಶ್ರಯದಿಂದ ಪ್ರತಿಪಾಲಿತರಾಗಿರುವಿರಿ; ಮತ್ತು ನಿಮ್ಮ ಪ್ರತಿಒಬ್ಬರ ಬಳಿಯಲ್ಲಿ ಅಪಾರ ದ್ರವ್ಯಸಂಚಯವೂ ಆಗಿರುತ್ತದೆ. ಅದರಂತೆ ನನ್ನ ಕೈಕೆಳಗಿದ್ದು ಭಯಂಕರ ರಣಕ್ಷೇತ್ರದಲ್ಲಿಯೂ ನಿಮ್ಮ ಜೀವದ ಹಂಗನ್ನಿಡದೆ ಅಪೂರ್ವ ಸಮರಕೌಶಲ್ಯವನ್ನು ತೋರಿಸುವದರಲ್ಲಿ ನೀವು ಹಿಂದೆ ಮುಂದೆ ನೋಡಿರುವದಿಲ್ಲ; ಅದ್ದರಿಂದ ಈಗ

ನೀವು ನನ್ನ ಸನ್ಮಾನಕ್ಕಾಗಿ ನಿಮ್ಮ ಖಡ್ಗಗಳನ್ನು ಒರೆಗಳಿಂದ ಹಿರಿದು ನನ್ನ ಮುಂದಿಟ್ಟು ಮೊಣಕಾಲೂರಿ ನನ್ನ ಬಳಿಯಲ್ಲಿ ಕುಳಿತುಕೊಳ್ಳಿರಿ. ಇನ್ನು ನಾನು ನಿಮ್ಮ ಬಹು ಸ್ವಲ್ಪಕಾಲದ ಸಂಗಡಿಗನಾಗಿರುವೆನು.

ಈ ಮೇರೆಗೆ ಬಾದಶಹನು ನುಡಿದಕೂಡಲೆ ಅಸಂಖ್ಯ ಖಡ್ಗಗಳು ಕೋಷಮುಕ್ತವಾಗಿ ದೀಪಪ್ರಕಾಶದಲ್ಲಿ ವಿದ್ಯುತ್ತಿನಂತೆ ಲಕಲಕಿಸಹತ್ತಿದವು. ಬಾದಶಹನು ಹೇಳಿದಂತೆ ಯಾವತ್ತು ಅಮೀರ-ಉಮರಾವರೂ, ರಾಜರು-ಮಹಾರಾಜರೂ ಮೊಣಕಾಲೂರಿ ಕುಳಿತು ಬಾದಶಹನ ಅಪ್ಪಣೆಯ ಹಾದಿಯನ್ನು ಉತ್ಕಂಠೆಯಿಂದ ನೋಡಹತ್ತಿದರು. ಈ ಕಾಲದಲ್ಲಿ ಬಾದಶಹನ ಎರಡೂ ನೇತ್ರಗಳು ಅಶ್ರುಪೂರ್ಣವಾಗಿದ್ದವು. ಎಲ್ಲರೊಡನೆ ಕಟ್ಟಕಡೆಯ ಮಾತಾಡುವ ಪ್ರಸಂಗ ಬಂದದ್ದಕ್ಕಾಗಿ ಆತನ ಕಂಠಬಿಗಿದು, ಆತನ ಮುಖದಿಂದ ಶಬ್ದಗಳು ಹೊರಡದಾದವು. ಈ ಮೇರೆಗೆ ಕೆಲಹೊತ್ತು ಮುಗ್ಧಾವಸ್ಥೆಯಲ್ಲಿಯೂ ಭೀಷಣವಾದ ಸ್ತಬ್ಧತೆಯಲ್ಲಿಯೂ ಹೋದ ಬಳಿಕ ಬಾದಶಹನು ಮಾತಾಡಲಾರಂಭಿಸಿದನು. ಆತನು ಎಲ್ಲರನ್ನುದ್ದೇಶಿಸಿ—''ಈವರೆಗೆ ನೀವು ನನ್ನ ಯಾವತ್ತು ಅಪ್ಪಣೆಗಳನ್ನು ಈಶ್ವರಾಜ್ಞೆಗಳೆಂದು ತಿಳಿದು ಆದರಪೂರ್ವಕವಾಗಿ ಪಾಲಿಸುತ್ತ ಬಂದಿರುವಿರಿ. ಇನ್ನು ನಾನು ಈ ಲೋಕವನ್ನು ಬಿಟ್ಟು ಹೋಗುವಾಗ ನನ್ನ ಹಿರಿಯ ಮಗನಾದ ಸೇಲೀಮನನ್ನು ಸಿಂಹಾಸನದ ಮಾಲಕನನ್ನಾಗಿ ಮಾಡಿಟ್ಟಿರುವೆನು. ನಮ್ಮ ರಾಜನಿಷ್ಠ ಪರಿವಾರವಾದ ನೀವು ನಿಮ್ಮ ಜನ್ಮವಿರುತನಕ ಸೇಲೀಮನನ್ನು ರಕ್ಷಿಸಿರಿ. ಇನ್ನು ನೀವೇ ನನ್ನ ಈ ಉಚ್ಛೃಂಖಲಮಗನ ತಂದೆಯಂತೆಯೂ, ಬಂಧುಗಳಂತೆಯೂ, ಮಿತ್ರರಂತೆಯೂ ಇರುವಿರಿ; ಆದ್ದರಿಂದ ''ನಾವು ಹೀಗೆಯೇ ಸೇಲೀಮನೊಡನೆ ನಡೆದುಕೊಳ್ಳುವೆವು'' ಎಂದು ನನ್ನ ಈ ಕಟ್ಟಕಡೆಯ ಹಾಸಿಗೆಯನ್ನು ಸ್ಪರ್ಶಮಾಡಿ ನೀವು ಪ್ರತಿಜ್ಞೆ ಮಾಡಿರಿ. ನಿಮ್ಮ ಈ ಪ್ರತಿಜ್ಞೆಯನ್ನು ಕೇಳಿದಕೂಡಲೆ ನನ್ನ ತಳಮಳಿಸುವ ಆತ್ಮವು ಶಾಂತವಾಗುವದು. ಇದಷ್ಟು ನನ್ನ ಕಟ್ಟಕಡೆಯ ಇಚ್ಛೆಯನ್ನು ಪೂರ್ಣಮಾಡಿರಿ. ಎಂದು ನುಡಿಯಲು, ಬಾದಶಹನ ಇಚ್ಛೆಯಂತೆ ಎಲ್ಲರೂ ಸದ್ಗದಿತ ಕಂಠಗಳಿಂದ ಪ್ರತಿಜ್ಞೆ ಮಾಡಿದರು. ಆಗ ಬಾದಶಹನು ಸೇಲೀಮನನ್ನು ಕರೆದು—ಪ್ರೀಯ ಸುಲ್ತಾನ ಸೇಲೀಮ ನಿನ್ನ ಮರಣೋನ್ಮುಖ ತಂದೆಗೆ ನೀನೂ ಒಂದು ಮಾತಿನ ಸಲುವಾಗಿ ವಚನ ಕೊಡು. ನೀನು ನಿನ್ನ ಮಗನಾದ, ಹಾಗು ನನ್ನ ಅತ್ಯಂತ ಪ್ರೀತಿಯ ಮೊಮ್ಮಗನಾದ ಖುಸ್ರುವಿನ ಸರ್ವಾಪರಾಧಗಳನ್ನು ಕ್ಷಮಿಸಿ, ಆತನನ್ನು ಪ್ರೀತಿಸುವೆನೆಂದು ನನ್ನ ಚರಣ ಸ್ಪರ್ಶಮಾಡಿ ಹೇಳು.'' ಎಂದು ನುಡಿಯುವಾಗ ಬಾದಶಹನ ಕಣ್ಣುಗಳು ಪುನಃ ಅಶ್ರುಪೂರ್ಣವಾದವು. ಆಗ ಸೇಲೀಮನೂ ಕಣ್ಣೀರು ಸುರಿಸುತ್ತ ತಂದೆಯ ಚರಣಸ್ಪರ್ಶ ಮಾಡಿ ತನ್ನ ತಂದೆಯ ಇಚ್ಛೆಯಂತೆ ಪ್ರತಿಜ್ಞೆ ಮಾಡಿದನು. ಅದರಿಂದ ಬಾದಶಹನಿಗೆ ಒಂದು ಬಗೆಯ ಭಾರವು ಇಳಿದಂತಾಯಿತು. ಅಷ್ಟರಲ್ಲಿ ಅವನ ಜೀವನ ದೀಪದ ತೇಜವು ಕಡಿಮೆಯಾಗುತ್ತ ಹೋಯಿತು. ನೇತ್ರಪಾಟವವು ತೀರ ಕಡಿಮೆಯಾಗಿ ಸುತ್ತು ಮುತ್ತು ಅಂಧಃಕಾರವು ಪಸರಿಸಿದಂತೆ ಬಾದಶಹನಿಗೆ ತೋರಹತ್ತಿತು. ಶ್ವಾಸೋಚ್ಛ್ವಾಸವು ಕಡಿಮೆ ಕಡಿಮೆಯಾಗುತ್ತ ಅಕಸ್ಮಾತ್ ಕಡೆಗೆ ನಿಂತು ಹೋಯಿತು! ಆಯಿತು, ಸಾಮ್ರಾಟನು ತಾಯಿಯ ಹೊಟ್ಟೆಯಿಂದ ಹೊರಬಿದ್ದಕೂಡಲೆ ಮೊಟ್ಟ

ಮೊದಲು ಮಾರವಾಡದ ರಣಗುಟ್ಟುವ ಮರುಭೂಮಿಯಲ್ಲಿ ಎಳೆದುಕೊಂಡ ಶ್ವಾಸವು, ಈಗ ಸ್ವರ್ಗತುಲ್ಯವಾದ ಆಗ್ರಾದ ಅರಮನೆಯಲ್ಲಿ ಒಮ್ಮೆ ಹೊರಟು ಹೋಗಿಬಿಟ್ಟಿತು! ಬಾದಶಹನು ಇದ್ದದ್ದನ್ನೆಲ್ಲ ಇಲ್ಲಿಯೇ ಬಿಟ್ಟು ಪರಲೋಕಕ್ಕೆ ತೆರಳಿದನು. ಕಟ್ಟಕಡೆಯಲ್ಲಿ ಬಾದಶಹನ ಮುಖದಿಂದ—''ಸೇಲೀಮ, ಶಾಹೀ ಬೇಗಮೆಯ ಕಡೆಗೆ ಲಕ್ಷವಿರಲಿ, ಖುಸರು, ಖು–ಸ–ರು; ಖುದಾ, ಖು–ದಾ'' ಎಂಬ ಶಬ್ದಗಳು ಕ್ಷೀಣ ಸ್ವರದಿಂದ ಹೊರಟವು!!'' ಆಯಿತು, ದೀಪವು ಶಾಂತವಾಗಿ ಹೋಯಿತು. ನಕ್ಷತ್ರವು ಪತನಹೊಂದಿತು. ಒಂದು ಪ್ರಕಾರದ ಧರಣೀಕಂಪ ವಾಯಿತೆಂತಲೂ ಹೇಳಬಹುದು. ಯಾಕಂದರೆ ಧರಣಿಯೊಳಗಿನ ಒಂದು ಅಮೂಲ್ಯವಾದ ರತ್ನವು ಕಳೆದುಹೋಯಿತು! ಈ ಕಾಲದಲ್ಲಿ ಆಕಾಶದೊಳಗಿನ ನಕ್ಷತ್ರಗಳು ನಿಸ್ತೇಜವಾಗಿ ತೋರತೊಡಗಿದವು. ಚಂದ್ರನಿಗೆ ಅತ್ಯಂತ ದುಃಖವಾದದ್ದರಿಂದ, ಆತನು ಯಾವಾಗೋ ತನ್ನ ಮೋರೆಯನ್ನು ಒಂದು ಕಪ್ಪು ಮೋಡದ ಮರೆಯಲ್ಲಿ ಅಡಗಿಸಿದ್ದನು! ಹೀಗೆ ಅಕಬರ ಬಾದಶಹನು ಮರಣಹೊಂದಲು, ಆತನ ತರುವಾಯ ಸೇಲೀಮನು ''ಅಬುಲ ಮುಜಫರ ನೂರಉದ್ದೀನ ಮಹಮ್ಮದ ಜಹಾಂಗೀರ'' ಎಂಬ ಹೆಸರನ್ನು ಧರಿಸಿ ಹಿಂದುಸ್ಥಾನದ ಬಾದಶಹನಾದನು.

ಅಕಬರನ ಮರಣದನಂತರ ಯಾವತ್ತು ಹಿಂದುಸ್ಥಾನವು, ವಿಶೇಷವಾಗಿ ಆಗ್ರಾ ರಾಜಧಾನಿಯು ಶೋಕಮಗ್ನವಾಯಿತು. ಸೇಲೀಮನೂ, ಆಗ್ರಾದೊಳಗಿನ ಯಾವತ್ತು ಮುಸಲ್ಮಾನ ಉಮರಾವರೂ ಅಕಬರ ಬಾದಶಹನ ದೇಹವಿಟ್ಟ ಪೆಟ್ಟಿಗೆಯನ್ನು ಹೆಗಲಮೇಲೆ ಹೊತ್ತುಕೊಂಡು ಬರಿಗಾಲು ಬಕ್ಕನೆತ್ತಿಗಳಿಂದ ಶಿಕಂದರಬಾದದ ಕಬರಸ್ಥಾನದ ಕಡೆಗೆ ಸಾಗಿದ್ದರು. ಅವರು ಬಾದಶಹನಿಗೆ ಕಡೆತನಕ ಶಾಂತಿಸುಖವು ದೊರೆಯುವಂತೆ ಆತನ ಶವವನ್ನು ಕಬರಸ್ಥಾನ ದಲ್ಲಿಟ್ಟು ತಿರುಗಿಬಂದರು. ಇವರೆಲ್ಲರ ಸಂಗಡ ದುರ್ದೈವಿಯಾದ ಖುಸರುವೂ ಇದ್ದನು. ತನ್ನ ಅಜ್ಜನು ಸತ್ತದ್ದರಿಂದ ಖುಸರುವು ಬಹು ದುಃಖಿತನಾಗಿದ್ದನು. ಆತನಿಗೆ ತನ್ನ ತಾಯಿಯಾದ ಶಾಹೀ ಬೇಗಮೆಯು ಸತ್ತ ಸುದ್ದಿಯು ಗೊತ್ತಾಗಿದ್ದಿಲ್ಲ; ಆತನಿಗೊಬ್ಬನಿಗೇ ಏಕೆ, ಸೇಲೀಮನ ಗೂಢ ತಂತ್ರದ ಮೂಲಕ ಆ ಸುದ್ದಿಯು ಕೆಲವು ನಿಯಮಿತ ಜನರ ಹೊರತು ಯಾರಿಗೂ ಗೊತ್ತಾಗಿದ್ದಿಲ್ಲ ವೆಂದು ಹೇಳಬಹುದು. ಇದರ ಮೇಲಿಂದ ಸೇಲೀಮನ ಗೂಢ ತಂತ್ರದ ಮಹಿಮೆಯು ಎಷ್ಟು ಬಲಿಷ್ಠವಾದದ್ದಿತ್ತೆಂಬದು ಚನ್ನಾಗಿ ವ್ಯಕ್ತವಾಗುತ್ತದೆ. ಸೇಲೀಮನು ತನ್ನ ತಂದೆಯು ಹಾಕಿಕೊಟ್ಟ ಮೇಲುಪಂಕ್ತಿಯಂತೆ ರಾಜ್ಯಕಾರಭಾರವನ್ನು ನಡಿಸಿ ಎಲ್ಲರ ಪ್ರೇಮವನ್ನು ಸಂಪಾದಿಸ ತೊಡಗಿದನು. ಜಾಹಾಂಗೀರನ ಸ್ಥಳದಲ್ಲಿ ಬೇರೆ ಯಾವನೊಬ್ಬ ಬಾದಶಹನು ಇದ್ದರೆ ಮಾನ ಸಿಂಹನನ್ನೂ, ಅಜೀಮಖಾನನನ್ನೂ ಕೊಲ್ಲಿಸದೆ ಇರುತ್ತಿದ್ದಿಲ್ಲ; ಆದರೆ ಸೇಲೀಮನು ಆಪ್ತರ ರಕ್ತದಿಂದ ತನ್ನ ಕೈಗಳನ್ನು ಕಲಂಕಿತವಾಗಿ ಮಾಡಿಕೊಳ್ಳಲಿಕ್ಕಿಲ್ಲವೆಂದು ನಿಶ್ಚಯಿಸಿದನು, ಆತನು ಎಲ್ಲರ ಅಪರಾಧಗಳನ್ನು ಉದಾರಾಂತಃಕರಣದಿಂದ ಮನಃಪೂರ್ವಕ ಕ್ಷಮಿಸಿ, ತನ್ನ ಔದಾರ್ಯದ ಗುರುತನ್ನು ಜನರಿಗೆ ಮಾಡಿಕೊಡುವದಕ್ಕಾಗಿ ರಾಜಾ ಮಾನಸಿಂಹನಿಗೆ ಮೊದಲಿಗಿಂತಲೂ ಹೆಚ್ಚು ಉಚ್ಚ ಪದವಿಯ ಸ್ಥಳವನ್ನು ಕೊಟ್ಟು, ಬಂಗಾಲದ ಜಮೀನದಾರರ ಜಗಳ ತೀರಿಸುವ ಕೆಲಸದ ಮೇಲೆ ಆತನನ್ನು ಹೊಸದಾಗಿ ನಿಯಮಿಸಿ, ಒಳ್ಳೇ ಸನ್ಮಾನದಿಂದ ಆತನನ್ನು ಅತ್ತ ಕಡೆಗೆ

ಕಳಿಸಿದನು. ಅದರಂತೆಯೇ ಖುಸರುವಿನ ಮಾವನಾದ ಅಜೀಮ ಖಾನನನ್ನು ಪಂಚನದದ ಕಾರಭಾರಿಯನ್ನಾಗಿ ನಿಯಮಿಸಿ, ಆತನನ್ನು ಸನ್ಮಾನದಿಂದ ಅತ್ತ ಕಡೆಗೆ ಕಳಿಸಿಕೊಟ್ಟನು. ಅಬುಲಫಜಲನನ್ನು ಕೊಂದ ರಾಜಾ ವೀರ ಸಿಂಹನದೇವನಿಗೂ ಸೇಲೀಮನು ವಿಪುಲ ಪಾರಿತೋಷಕವನ್ನು ಕೊಟ್ಟದ್ದಲ್ಲದೆ, ದೊಡ್ಡ ಜಹಗೀರು ಹಾಕಿಕೊಟ್ಟು ಅವನ ಮನಸ್ಸನ್ನು ಸಂತೋಷಪಡಿಸಿದನು.

ಈ ಬಗೆಯ ಉದಾರ ಚರಿತದಿಂದ ಲೋಕಪ್ರೀಯನಾಗತೊಡಗಿದ್ದ ಸೇಲೀಮನು ತನ್ನ ಅಪರಾಧಿ ಮಗನಾದ ಖುಸರುವನ್ನು ನಿರಾಕರಿಸಲಿಲ್ಲ. ಬಾದಶಹನ ಮರಣದ ಮರುದಿವಸವೇ ಖುಸರುವಿಗೆ ಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟು, ಬೇಕಾದಲ್ಲಿ ಹೋಗಿಬರಲಿಕ್ಕೆ ಆತನಿಗೆ ಆಸ್ಪದ ಕೊಟ್ಟನು. ಆತನು ಖುಸರುವಿನ ಯಾವತ್ತು ಅಪರಾಧವನ್ನು ಕ್ಷಮಿಸಿ, ಆತನನ್ನು ಅಲಹಾ ಬಾದದ ಸುಬೇದಾರನನ್ನಾಗಿ ಮಾಡಬೇಕೆಂದು ಮಾಡಿದ್ದನು; ಆದರೆ ಖುಸರುವೇ ಆ ಜವಾಬ ದಾರಿಯ ಕೆಲಸವನ್ನು ನಿರಾಕರಿಸಿದನು. ಹೀಗೆ ತನ್ನ ಮಗನು ತನ್ನ ಅಪ್ಪಣೆಯನ್ನು ಮೀರುವದಕ್ಕಾಗಿ ಸೇಲೀಮನಿಗೆ ಸಿಟ್ಟು ಬರಲಿಲ್ಲ; ಯಾಕಂದರೆ ಆತನು ಮೇಲೆ ಹೇಳಿದಂತೆ ಮಗನ ಅಪರಾಧ ಗಳನ್ನೆಲ್ಲ ಕ್ಷಮಿಸಿ ಮೊದಲಿನಂತೆಯೇ ಆತನನ್ನು ಪ್ರೀತಿಸತೊಡಗಿದ್ದನು. ತಾಯಿ ಸತ್ತ ಮಗನೆಂಬ ಅಂತಃಕರಣದಿಂದಲೂ ಸೇಲೀಮನ ಮನಸ್ಸು ತಿರುಗಿರಬಹುದು? ತಂದೆಯ ಈ ಕೃಪೆಗಾಗಿ ಖುಸರುವೂ ಸಮಾಧಾನಪಟ್ಟನು; ಆದರೆ ತನ್ನ ತಂದೆಯ ರಾಜ್ಯಾಭಿಷೇಕದ ಉತ್ಸವಗಳಾದರೂ ತನ್ನ ತಾಯಿಯು ತನ್ನ ಕಣ್ಣಿಗೆ ಬೀಳದ್ದರಿಂದ ಖುಸರುವಿಗೆ ಬಹಳ ಅಸಮಾಧಾನವಾಯಿತು. ಒಂದು ದಿವಸ ಆತನು ತನ್ನ ತಂದೆಯಾದ ಸೇಲೀಮನನ್ನು ಕುರಿತು—''ಜಹಾಪನಾಹ! ನಮ್ಮ ಅವ್ವನು ಎಲ್ಲಿ ಇರುವಳು?'' ಎಂದು ಕೇಳಿದನು. ಮಗನ ಈ ಕಾರುಣ್ಯದ ದೀನ ವಾಣಿಯನ್ನು ಕೇಳಿ ಸೇಲೀಮನ ಕಣ್ಣೊಳಗಿಂದ ನೀರುಗಳು ಸುರಿಯಹತ್ತಿದವು; ಮೋರೆಯು ಖಿನ್ನವಾಯಿತು, ತಂದೆಯು ಹೀಗೆ ದುಃಖಿತನಾದದ್ದನ್ನು ನೋಡಿ ಖುಸರುವು ಅಧೀರತೆಯಿಂದ ಅಳುವಮೋರೆ ಮಾಡಿ—''ಜಹಾಪನಾಹ, ಅವ್ವನು ಎತ್ತ ಹೋದಳು? ನೀವು ಹೀಗೆ ದುಃಖಿಸುವಿರೇಕೆ?'' ಎಂದು ಕೇಳಿದನು. ಆಗ ಸೇಲೀಮನು ಕಣ್ಣೀರು ಸುರಿಸುತ್ತ ಮಗನನ್ನು ಕುರಿತು—ನನ್ನ ಪ್ರೀಯ ಖುಸರೂ, ನಿನ್ನ ತಾಯಿಯು ಈ ಮೃತ್ಯುಲೋಕವನ್ನು ಬಿಟ್ಟು ಹೊರಟು ಹೋದಳು, ಎಂದು ಹೇಳಿ ಅಂದಿನ ಯಾವತ್ತು ಸಂಗತಿಯನ್ನು ಮಗನಿಗೆ ಹೇಳಿದನು. ಅದನ್ನು ಕೇಳಿ ಖುಸರುವು ದೊಡ್ಡ ದನಿತೆಗೆದು ಅಳುತ್ತ ತನ್ನ ತಂದೆಯನ್ನು ಕುರಿತು—''ಅಪ್ಪಾ ಇನ್ನು ನನ್ನವರೆನ್ನುವವರು ಈ ಜಗತ್ತಿನಲ್ಲಿ ಯಾರೂ ಉಳಿಯಲಿಲ್ಲ! ನನ್ನ ಗತಿಯೇನು?'' ಎಂದು ಹಂಬಲಿಸಲು, ಸೇಲೀಮನು ಮಗನನ್ನು ಪರಿಪರಿಯಿಂದ ಸಮಾಧಾನಪಡಿಸಿದನು. ತನ್ನ ತಂದೆಗೆ ತಾನು ಕೊಟ್ಟಿರುವ ವಚನದ ನೆನಪಾಗಿ ಸೇಲೀಮನು ಮಗನ ಕಣ್ಣುಗಳನ್ನು ಒರಿಸುತ್ತ—ಬಾಳಾ, ಹೀಗೇಕೆನ್ನುವೆ? ನಾನು ಇದ್ದೇನಲ್ಲವೇ? ಈ ಯಾವತ್ತು ಹಿಂದುಸ್ಥಾನದ ಬಾದಶಾಹಿಯು ಒತ್ತಟ್ಟಿಗೆ, ನೀನು ಒತ್ತಟ್ಟಿಗೆ! ನಿನಗೆ ನಾನು ಯಾತರ ಕೊರತೆಯನ್ನೂ ಉಂಟುಮಾಡಲಿಕ್ಕಿಲ್ಲ, ಎಂದು ನುಡಿಯಲು, ಖುಸರುವು ತಂದೆಯ ಚರಣಗಳಿಗೆರಗಿ—ಅಪ್ಪಾ, ನಾನು ಅತ್ಯಂತ ಕೃತಘ್ನನು.

ನನ್ನ ಯಾವತ್ತು ಅಪರಾಧಗಳನ್ನು ಕ್ಷಮಿಸಬೇಕು; ಮತ್ತು ಕೆಲದಿನ ದೌಲತ್ತಾಭಾಗದೊಳಗಿನ ಮಹಾಲಿನಲ್ಲಿ ಇರಲಿಕ್ಕೆ ನನಗೆ ಅಪ್ಪಣೆ ಕೊಡಬೇಕು ಅಂದರೆ, ನಾನು ದಿನಾಲು ತಾಯಿಯ ಹಾಗು ಅಜ್ಜನ ಕಬರಸ್ಥಾನಗಳ ದರ್ಶನ ಮಾಡಿಕೊಂಡು ಅವುಗಳ ಮೇಲೆ ಕಣ್ಣೀರು ಸುರಿಸಿ ನನ್ನ ಮನಸ್ಸನ್ನು ಶಾಂತವಾಗಿ ಮಾಡಿಕೊಳ್ಳುವೆನು, ಎಂದು ಬೇಡಿಕೊಂಡನು. ಮಗನ ಈ ಯೋಗ್ಯಪ್ರಾರ್ಥನೆಯನ್ನು ನಡೆಸಲು ಒಪ್ಪಿ, ಆತನಿಗೆ ಯಾವ ವೈಭವಕ್ಕೂ ಕೊರತೆ ಬಾರದಂತೆ ಸೇಲೀಮನು ಎಲ್ಲ ಅನುಕೂಲತೆಯನ್ನು ಮಾಡಿಕೊಟ್ಟನು. ಯಮುನೆಯ ಆಚೆಯ ದಂಡೆಯಲ್ಲಿ ಶಾಹಿ ಮಂಜಿಲಿನಿಂದ ಎರಡು ಹರದಾರಿಯ ಮೇಲೆ ದೌಲತ್ತಾಭಾಗು ಇದ್ದಿತು. ಅಲ್ಲಿಗೆ ಖುಸರುವು ತನ್ನ ಹೆಂಡತಿಯಾದ ಪ್ಯಾರಿಬಾನುವನ್ನೂ, ನಿಯಮಿತ ಪರಿವಾರವನ್ನೂ ಕರಕೊಂಡು ಹೋಗಿ ಇರತೊಡಗಿದನು.

ಖುಸರುವು ಹೀಗೆಯೇ ವಿವೇಕಿಯಾಗಿ ತಂದೆಯ ಅಜ್ಞಾಪಾಲನ ಮಾಡುತ್ತ ಇದ್ದದ್ದಾಗಿದ್ದರೆ ಸೇಲೀಮನ ತರುವಾಯದಲ್ಲಿ ಆತನೇ ಹಿಂದುಸ್ಥಾನದ ಬಾದಶಹನಾಗಬಹುದಾಗಿತ್ತು; ಆದರೆ, ಅಂಥ ಸುಯೋಗವು ಖುಸರುವಿಗೆ ಒದಗತಕ್ಕದ್ದಾಗಿದ್ದಿಲ್ಲ. ಕೇವಲ ಸ್ವತಂತ್ರದಿಂದ ಇರಹತ್ತಿದ ಖುಸರುವಿಗೆ ದುಷ್ಟರೂ, ದುರ್ವ್ಯಸನಿಗಳೂ ಆದ ಮಿತ್ರರ ಸಹವಾಸವಾಗಿ, ಆತನು ಮಿತಿಮೀರಿ ಸೆರೆ ಕುಡಿದು ವಾರಾಂಗನೆಯರ ಸಹವಾಸದಲ್ಲಿ ಕಾಲ ಕಳೆಯಹತ್ತಿದನು. ಈ ಎಲ್ಲ ಸಂಗತಿಗಳು ಸೇಲೀಮನ ಕಿವಿಗೆ ಗುಪ್ತಚಾರರ ಮುಖಾಂತರ ಮುಟ್ಟುತ್ತಲೇ ಇದ್ದವು. ಖುಸರುವಿನ ದುಷ್ಟ ಮಿತ್ರರ ದುಷ್ಟ ಸಹವಾಸದ ದುಷ್ಪರಿಣಾಮದ ಮೇರೆಯು ಇಷ್ಟಕ್ಕೇ ಮುಗಿಯದೆ, ಸೇಲೀಮನ ವಿರುದ್ಧವಾಗಿ ಬಂಡಾಯ ಮಾಡಲು, ಅವರು ಖುಸರುವನ್ನು ಹುರಿದುಂಬಿಸಿದರು. ಅವರ ದುರ್ಬೋಧಕ್ಕೆ ಕಿವಿಗೊಟ್ಟು, ತಂದೆಯನ್ನು ದೂಡಿ ತಾನೇ ಹಿಂದುಸ್ಥಾನದ ಬಾದಶಹನಾಗಬೇಕೆಂದು ಖುಸರುವು ಯತ್ನಿಸತೊಡಗಿದನು. ಆತನು ಪಂಜಾಬ ಪ್ರಾಂತಕ್ಕೆ ಹೋಗಿ ಅದನ್ನು ಸ್ವಾಧೀನಪಡಿಸಿಕೊಳ್ಳುವ ಯತ್ನ ನಡಿಸಿದನು. ಈ ಬಗೆಯ ಮಗನ ದ್ರೋಹದ ಕೆಲಸಗಳಿಂದ ಸೇಲೀಮನ ಚಿತ್ತಕ್ಕೆ ಸಮಾಧಾನವಿಲ್ಲದಾಯಿತು. ಮೊದಲೇ ಮಗನನ್ನು ಕಂಡರೆ ಆಗದೆ ಇದ್ದ ಆತನು ತಂದೆಗೆ ಕೊಟ್ಟ ವಚನವನ್ನು ಪಾಲಿಸುವದಕ್ಕಾಗಿ ಆತನನ್ನು ಪ್ರೀತಿಸುತ್ತಿದ್ದನು. ಆದರೆ ಖುಸರುವಿನ ಈ ಕೃತಘ್ನತೆಯ ಕಾರ್ಯಗಳಿಗಾಗಿ ಆತನು ಸಂತಾಪಗೊಂಡು ಆತನನ್ನು ಶಿಕ್ಷಿಸಲು ಯತ್ನಿಸತೊಡಗಿದನು. ಮರಣೋನ್ಮುಖನಾದ ತನ್ನ ತಂದೆಗೆ ಕೊಟ್ಟ ವಚನವನ್ನು ಕಡೆತನಕ ಪಾಲಿಸುವಷ್ಟು ಶಾಂತಗುಣವೂ, ಔದಾರ್ಯವೂ, ಸೇಲೀಮನಲ್ಲಿ ಇದ್ದಿಲ್ಲ; ಮೇಲಾಗಿ ಖುಸರುವು ಹಾದಿಗೆ ಬರುವದಕ್ಕಾಗಿ ಮಾಡಿದ ಸೇಲೀಮನ ಯತ್ನಗಳೆಲ್ಲ ನಿಷ್ಫಲವಾದವು. ಈ ಸಂಸಾರದಲ್ಲಿ ಕೇವಲ ಸ್ವಾರ್ಥಪರಾಯಣರಾದ ಬಂಧುಬಾಂಧವರು ಪರಸ್ಪರರ ಮೇಲೆ ಮಾಡುತ್ತಿರುವ ಪ್ರೇಮವು ಹೀಗೆ ಚಂಚಲವಾಗಿರತಕ್ಕದ್ದೇ ಸರಿ. ತಮ್ಮ ಹಿತಕ್ಕೆ ಅನುಕೂಲರಾಗಿರುವಾಗ ಅವರು ಪರಸ್ಪರರನ್ನು ಪ್ರೀತಿಸುವರು, ಪ್ರತಿಕೂಲವಾದ ಕೂಡಲೆ ಪರಸ್ಪರರನ್ನು ದ್ವೇಷಿಸುವರು. ತಾಯಿ, ತಂದೆ, ಮಕ್ಕಳು, ಹೆಂಡತಿ, ಗಂಡ, ಬಂಧುಗಳು ಮೊದಲಾದ ಸಂಬಂಧಿಕರು, ತಮ್ಮ ತಮ್ಮ ಸಂಬಂಧಗಳಿಗನುಸರಿಸಿ ಆಯಾ ಸಂಬಂಧಗಳ ಧರ್ಮದಂತೆ ಪರಸ್ಪರರೊಡನೆ ನಿಸ್ಪೃಹರಾಗಿ

ತಮ್ಮ ಕರ್ತವ್ಯವೆಂದು ತಿಳಿದು ನಡೆದುಕೊಳ್ಳುವದಿಲ್ಲ. ಆದರೆ ಸ್ವಹಿತಕ್ಕೆ, ಅರ್ಥಾತ್ ಸ್ವಾರ್ಥಕ್ಕೆ ಮಹತ್ವಕೊಟ್ಟು ಅದನ್ನು ಸಾಧಿಸಿಕೊಳ್ಳುವದಕ್ಕಾಗಿಯೇ ಆ ಬೇರೆಬೇರೆ ಸಂಬಂಧಗಳನ್ನು ಮುಂದೆ ಮಾಡಿ ಪರಸ್ಪರರನ್ನು ಮೋಸಗೊಳಿಸಲು ಯತ್ನ ಮಾಡುತ್ತಿರುವರು; ಆದ್ದರಿಂದ ವಾಡಿಕೆಯಾಗಿ ಸಾಂಸಾರಿಕರು ಪರಸ್ಪರರನ್ನು ಪ್ರೀತಿಸುವದರಲ್ಲಿ, ಅಥವಾ ದ್ವೇಷಿಸುವದರಲ್ಲಿ ಸ್ವಾರ್ಥವಿರುತ್ತದಲ್ಲದೆ ಧರ್ಮವಿರುವದಿಲ್ಲವೆಂಬದನ್ನು ಸ್ಪಷ್ಟವಾಗಿ ತಿಳಿದುಕೊಂಡು, ಧರ್ಮಕ್ಕೆ ಬಾಧೆಬರದಂತೆ ನಡೆದುಕೊಳ್ಳಬೇಕು. ಶ್ರೀರಾಮನು ತನ್ನ ತಂದೆ—ದಶರಥನನ್ನು ಪ್ರೀತಿಸಿದ್ದೂ, ಜಾನಕಿಯು ತನ್ನ ಪತಿ–ಶ್ರೀರಾಮನನ್ನು ಪ್ರೀತಿಸಿದ್ದೂ, ರಾಮ–ಲಕ್ಷ್ಮಣ–ಭರತ–ಶತ್ರುಘ್ನರು ಪರಸ್ಪರರಲ್ಲಿ ಬಂಧು–ಪ್ರೇಮವ ತಾಳಿದ್ದೂ, ಗುಹನು ತನ್ನ ಸ್ವಾಮಿ–ಶ್ರೀರಾಮನಲ್ಲಿ ಭಕ್ತಿಯ ವಹಿಸಿದ್ದೂ ಕೇವಲ ಧರ್ಮಕ್ಕಾಗಿಯಲ್ಲದೆ, ಸುಖಕ್ಕಾಗಿಯಲ್ಲವೆಂಬದನ್ನು ಲಕ್ಷದಲ್ಲಿಟ್ಟು, ನಾಚಿಕೊಂಡು ಎಚ್ಚರದಿಂದ ನಡೆದುಕೊಳ್ಳಬೇಕು; ಯಾಕಂದರೆ, ''ಧರ್ಮೋ ರಕ್ಷತಿ ರಕ್ಷಿತಃ'' ಅಂದರೆ ''ನಾವು ಧರ್ಮವನ್ನು ರಕ್ಷಿಸಿದರೆ ಧರ್ಮವು ನಮ್ಮನ್ನು ರಕ್ಷಿಸುವದೆಂ''ಬ ಉಕ್ತಿಯು ಪ್ರಸಿದ್ಧವಿರುವದು.

ಖುಸರುವಿಗೆ ಮೇಲಿನ ಉದಾತ್ತವಾದ ಧಾರ್ಮಿಕ ಪ್ರೇಮದ ಪರಿಚಯವೇ ಇದ್ದಿಲ್ಲವೆಂದು ಹೇಳಬಹುದು. ಆತನು ಮದ್ಯಪಾನ–ವೇಶ್ಯಾಸಂಗಗಳ ಯೋಗದಿಂದ ಶ್ರೇಷ್ಠ ಪತಿವ್ರತೆಯಾದ ತನ್ನ ಹೆಂಡತಿ ಪ್ಯಾರಿಬಾನುವನ್ನು ತಿರಸ್ಕರಿಸಿ ಬಿಟ್ಟುಕೊಟ್ಟನು. ಆತನು ರಾಜ್ಯತೃಷ್ಣೆಯ ಎಳತಕ್ಕೆ ಸಿಕ್ಕು ತನ್ನ ತಂದೆಯನ್ನು ಪ್ರಸಿದ್ಧರೀತಿಯಿಂದ ವಿರೋಧಿಸತೊಡಗಿದನು. ಇದನ್ನೆಲ್ಲ ನೋಡಿ ಸೇಲೀಮನು ಬೇಸತ್ತು ಈ ದುಷ್ಟ ಮಗನನ್ನು ದಂಡಿಸಲು ಉಪಾಯವೇನು ಮಾಡಬೇಕೆಂದು ಯೋಚಿಸತೊಡಗಿದನು. ಇದೇ ಸಂಧಿಯಲ್ಲಿ ದುರ್ಜಯಸಿಂಹನು ಸೇಲೀಮನನ್ನು ಕಂಡು, ಖುಸರುವು ಮಾನಸಿಂಹನಿಗೆ ಹಿಂದಕ್ಕೆ ಬರೆದಿದ್ದ ಹಲವು ಪತ್ರಗಳನ್ನು ಆತನಿಗೆ ತೋರಿಸಿದನು. ಆ ಪತ್ರಗಳೊಳಗಿನದೊಂದು ಪತ್ರದಲ್ಲಿ ಖುಸರುವು ಮಾನಸಿಂಹನಿಗೆ—''ನೀವು ನನ್ನ ತಂದೆಯನ್ನು ಸೆರೆ ಹಿಡಿಯಲು ಸಮರ್ಥರಾದರೆ ನಾನು ಆತನನ್ನು ಕೊಲ್ಲದೆ, ಆತನ ಕಣ್ಣುಮಾತ್ರ ಕಿತ್ತಿಸುವೆನು. ಈ ಕೆಲಸ ಮಾಡಿದ್ದಕ್ಕಾಗಿ ಪಾರಿತೋಷಕವೆಂದು ಅರ್ಧ ಹಿಂದುಸ್ಥಾನವನ್ನು ನಿಮಗೆ ಕೊಡುವೆನು.'' ಎಂದು ಬರೆದಿದ್ದನು. ಬಹುದಿವಸಗಳ ಹಿಂದೆ ಬರೆದಿರುವ ತನ್ನ ಮಗನ ಈ ಪತ್ರದ ವಿಷಯವಾಗಿ ಜಹಾಂಗೀರನು ದುರ್ಜಯಸಿಂಹನನ್ನು ಕುರಿತು ಕೇಳಬಾರದ್ದನ್ನು ಕೇಳಿ ತನ್ನ ನಂಬಿಗೆ ಮಾಡಿಕೊಂಡನು. ಆಗ ಉರಿಯಲ್ಲಿ ತುಪ್ಪವನ್ನು ಸುರವಿದಂತಾಯಿತು. ಮೊದಲೇ ಮಗನಮೇಲೆ ಸಿಟ್ಟಾಗಿ ಆತನನ್ನು ಸೆರೆ ಹಿಡಿಯಬೇಕೆಂದು ಮಾಡಿದ್ದ ಜಹಾಂಗೀರನು, ದುರ್ಜಯಸಿಂಹನು ತೋರಿಸಿದ ಈ ಪತ್ರದಿಂದ ಮತ್ತಿಷ್ಟು ಸಿಟ್ಟಾಗಿ, ನಾಳೆ ಮಾಡುವದನ್ನು ಈ ದಿನವೇ ಮಾಡಿಬಿಡಬೇಕೆಂದು ಆತುರಪಟ್ಟನು. ಆಗ ಖುಸರುವು ಪಂಜಾಬ ಪ್ರಾಂತಕ್ಕೆ ಹೋಗಿ ಲಾಹೋರವನ್ನು ಮುತ್ತಿ ಸುತ್ತುಮುತ್ತಲಿನ ಪ್ರದೇಶದಲ್ಲಿ ಸುಲಿಗೆಯ ಕೆಲಸ ನಡಿಸಿ ದುಡ್ಡು ಕೂಡಿಸತೊಡಗಿದ್ದನು. ಅಷ್ಟರಲ್ಲಿ ಸ್ವತಃ ಜಹಾಂಗೀರನೇ ದಂಡೆತ್ತಿಹೋಗಲು, ಮೊದಲು ಚುಣಿಯಲ್ಲಿಯೇ ಖುಸರುವಿನ ಸೈನ್ಯವು ಸೋತು ಅವನು ಜಹಾಂಗೀರನ ಸೆರೆಯಾಳಾದನು.

ಇನ್ನು ಮುಂದಿನ ದುಃಖಕಾರಕ ಸ್ಥಿತಿಯನ್ನು ಕಾದಂಬರಿಯಲ್ಲಿ ವರ್ಣಿಸಲು ನಾನು ಇಚ್ಛಿಸುವದಿಲ್ಲ. ಅಕಬರನಷ್ಟು ಉದಾರ ಹೃದಯದವನು ಸೇಲೀಮನು ಅಲ್ಲವೇ ಅಲ್ಲ; ಆದ್ದರಿಂದ ಆತನು ಮಗನ ವಿಷಯವಾಗಿ ತ್ವೇಷಗೊಂಡು ಆತನ ಕಣ್ಣುಗಳನ್ನು ಕಿತ್ತಿಸಿದನು. ಹೀಗೆ ತನ್ನ ಕಣ್ಣುಗಳೊಳಗಿಂದ ರಕ್ತವು ಸೋರುವಾಗ ಖುಸರುವಿಗೆ ಮಂದಾಕಿನಿಯ ಶಾಪವಾಣಿಯ ಸ್ಮರಣವಾಗಿ ಆತನು ಪಶ್ಚಾತ್ತಾಪಪಡತೊಡಗಿದನು. ಸಾಂಸಾರಿಕ ರೀತಿಯು ಹೀಗೆಯೇ ಸರಿ! ಮೊದಲು ಅಹಂಕಾರದಿಂದ ಪಾಪಕೃತ್ಯಗಳನ್ನು ಮಾಡುವದು, ಹಿಂದುಗಡೆ ಅವುಗಳ ಫಲಗಳನ್ನು ಭೋಗಿಸುವಾಗ ಅಳುವದು! ಖುಸರುವಿನ ದುರ್ದೆಸೆಯು ಇಲ್ಲಿಗೇ ಮುಗಿಯಲಿಲ್ಲ. ಮುಂದೆ ಸೇಲೀಮನು ನೂರಜಹಾನಳನ್ನು ಲಗ್ನವಾದ ಬಳಿಕ ಆಕೆಯು, ಪಟ್ಟದ ಬಾಧ್ಯಸ್ಥಿತೆಯನ್ನು ತೋರಿಸುವ ಈ ಕುರುಡನೂ ಜೀವದಿಂದಿರಲಾಗದೆಂದು ಕೊಲೆಗಡಕರಿಂದ ಖುಸರುವಿನ ಕೊಲೆಮಾಡಿಸಿದಳಂತೆ! ಪ್ರೀಯ ವಾಚಕರೇ, ನೋಡಿರಿ, ರಾಜಸಂಸಾರದ ಸುಖವು ಹೇಗಿರುತ್ತದೆ! ರಾಜಸಂಸಾರದಲ್ಲಿ ಇಂಥ ಕಲಹ ಕೊಲೆಗಳು, ಮರೆ—ಮೋಸಗಳು ದೊಡ್ಡ ಪ್ರಮಾಣದಿಂದ ಕಂಡುಬಂದರೆ ನಮ್ಮ ಬಡವರ ಸಂಸಾರದಲ್ಲಿ ಅವು ಸಣ್ಣ ಪ್ರಮಾಣದಿಂದ ಕಂಡುಬರುತ್ತವೆ; ಆದ್ದರಿಂದ ತತ್ವತಃ ಸಂಸಾರವು ದುಃಖಮಯವೆಂದು ತಿಳಿದು, ಯಾವನದೇನು, ಯಾವಳದೇನು, ಅನ್ನುತ್ತ ಮನಸ್ಸಿಗೆ ಬಂದಂತೆ ನಡೆದುಕೊಳ್ಳದೆ ಧರ್ಮಕ್ಕೂ, ಪಾಪ–ಪುಣ್ಯಗಳಿಗೂ, ದೇವರಿಗೂ, ಲೋಕಕ್ಕೂ, ಬಹಳವೇಕೆ ತನ್ನ ನೆರಳಿಗೂ ಅಂಜಿ ತಾನು ಸಂಸಾರ ಮಾಡಬೇಕು. ಅಂದರೆ ಈ ಅಸಾರ ಸಂಸಾರವೇ ಸಾರವುಳ್ಳದ್ದಾಗಿ ಇಹಪರ ಸುಖಕ್ಕೂ ಕೀರ್ತಿಗೂ ಕಾರಣವಾಗುವದು.

ಸಮಾಪ್ತ

ಗಳಗನಾಥ ಸಮಗ್ರ ಸಾಹಿತ್ಯ

ನಿಮ್ಮ ನೆನೆದಾಗಲೆ ಉದಯ

'ಗಳಗನಾಥ' ಹಾವೇರಿ ಜಿಲ್ಲೆಯ ಒಂದು ಹಳ್ಳಿ. ವೆಂಕಟೇಶ ತಿರಕೋ ಕುಲಕರ್ಣಿಯವರು ತಮ್ಮ ಈ ಹಳ್ಳಿಯ ಹೆಸರನ್ನು ಕಾವ್ಯನಾಮವಾಗಿ ಬಳಸುವ ಮೂಲಕ, ಅದನ್ನು ಸಾಹಿತ್ಯದಲ್ಲಿ ಚಿರಸ್ಥಾಯಿಗೊಳಿಸಿದರು.

ಧಾರವಾಡದ ಗಂಡುಮಕ್ಕಳ ಟ್ರೇನಿಂಗ್ ಕಾಲೇಜು ಇವರ ಸಾಹಿತ್ಯಿಕ ವ್ಯಕ್ತಿತ್ವವನ್ನು, ಅಗಡಿ ಆನಂದಾಶ್ರಮ ಇವರ ಆಧ್ಯಾತ್ಮಿಕ ವ್ಯಕ್ತಿತ್ವವನ್ನು ರೂಪಿಸಿದವು. ಈ ಎರಡೂ ಆಯಾಮಗಳಿಗೆ ಆಧಾರವಾದುದು ಅವರ ಕನ್ನಡ ಶಾಲೆಯ ಶಿಕ್ಷಕವೃತ್ತಿ. ಹೊಸಗನ್ನಡ ಸಾಹಿತ್ಯಿಕ ಪರಿಸರವನ್ನು ಮೈಸೂರು ಪ್ರದೇಶದಲ್ಲಿ ರಾಜರ ಆಸ್ಥಾನ ವಿದ್ವಾಂಸರು ಸೃಷ್ಟಿಸಿದರೆ, ಉತ್ತರ ಕರ್ನಾಟಕದಲ್ಲಿ ಅಂತಹ ಪರಿಸರವನ್ನು ಕನ್ನಡ ಶಾಲೆಯ ಮಾಸ್ತರರು ಸೃಷ್ಟಿಸಿದರು. ಇವರಲ್ಲಿ ಎದ್ದು ಕಾಣುವ ಹೆಸರು, ಗಳಗನಾಥ ಮಾಸ್ತರು.

೨೦ನೆಯ ಶತಮಾನದಲ್ಲಿ ಗದ್ಯಯುಗವನ್ನು ಆಳಿದುದು ಕಾದಂಬರಿ. ಹೀಗಾಗಿ ಈ ಶತಮಾನವನ್ನು "ಕಾದಂಬರಿ ಪ್ರಧಾನಯುಗ"ವೆಂದು ಕರೆಯಬಹುದಾಗಿದೆ. ಇದು ನವೋದಯ, ಪ್ರಗತಿಶೀಲ, ನವ್ಯವೆಂಬ ಮೂರು ಹಂತಗಳಲ್ಲಿ ಸಾಗಿ ಬಂದಿದೆ. ಇವುಗಳಲ್ಲಿ ಪ್ರಗತಿಶೀಲವೆಂಬುದು ಒಂದು ಪ್ರಯೋಗವಾಗಿ ಉಳಿಯಿತೇ ಹೊರತು, ಪರಂಪರೆಯಾಗಿ ಬೆಳೆಯಲಿಲ್ಲ. ಇತ್ತೀಚೆಗೆ ನವ್ಯ ಕಾದಂಬರಿ ಬಂದು ಪರಂಪರೆಯಾಗಿ ಬೆಳೆಯುತ್ತಲಿದ್ದರೂ ಅದರ ಸಂಖ್ಯೆ ಕಡಿಮೆ. ಆದುದರಿಂದ ಇಂದಿಗೂ ಕಾದಂಬರಿ ಕ್ಷೇತ್ರವನ್ನು ಬಹುಪಾಲು ವ್ಯಾಪಿಸಿದುದು ನವೋದಯಪ್ರಜ್ಞೆಯ ಕಾದಂಬರಿ. ಈ ಪ್ರಜ್ಞೆಯ ಮೂಲಪುರುಷರಲ್ಲಿ ಮುಖ್ಯವೆನಿಸಿದ್ದಾರೆ, ಕಾದಂಬರಿ ಪಿತಾಮಹ ಗಳಗನಾಥರು.

ಸಾಹಿತ್ಯವನ್ನು ಸೃಷ್ಟಿಸುವವನು ಸಾಹಿತಿಯಾದರೂ ಅದರ ವಾರಸುದಾರರು ಸಹೃದಯರು. ಈಗಿನಂತೆ ಪುಸ್ತಕದ ಉತ್ಪಾದನೆಗೆ ಅನುಕೂಲವಿಲ್ಲದ ಪ್ರಾಚೀನಕಾಲದಲ್ಲಿಯೂ ಇವರು ಉತ್ತಮ ಸಾಹಿತ್ಯ ಕೃತಿಗಳನ್ನು ತಲೆಮಾರಿನಿಂದ ತಲೆಮಾರಿಗೆ ಪ್ರತಿಮಾಡುತ್ತ - ಮಾಡಿಸುತ್ತ ಬಂದಿದ್ದಾರೆ. ಹೀಗಿರುವಾಗ ಎಲ್ಲ ಬಗೆಯ ಅನುಕೂಲತೆಗಳನ್ನು ಹೊಂದಿರುವ ಇಂದಿನ ಕಾಲದವರಾದ ನಾವು ಅವುಗಳ ಮರುಮುದ್ರಣ ವಿಷಯದಲ್ಲಿ ಹೆಚ್ಚು ಆಸಕ್ತಿವಹಿಸುವದು ತೀರ ಸಹಜ. ಆದುದರಿಂದ, ಪ್ರಾಚೀನ ಹಸ್ತಪ್ರತಿಗಳ ಪರಿಷ್ಕರಣ - ಮುದ್ರಣ - ಮರುಮುದ್ರಣದಂತೆ ನವೋದಯಕಾಲೀನ ಯಂತ್ರಪ್ರತಿಗಳನ್ನೂ ಮತ್ತೆ ಮತ್ತೆ ಅಚ್ಚಿಸಿ ಓದುಗರಿಗೆ ಒದಗಿಸುತ್ತಲಿದ್ದೇವೆ.

ಎಂ. ಎಂ. ಕಲಬುರ್ಗಿ
ಪ್ರಧಾನ ಸಂಪಾದಕರು

Rs. 2000/- (Set of 6 Volumes)
ಗಳಗನಾಥರ ವರ್ಣಚಿತ್ರ ಕೃಪೆ : ಎನ್.ಸಿ. ದೇಸಾಯಿ